ಸ್ವದೇಶಾಭಿಮಾನಿ

ಸಂ[illegible]] ತಾರೀಕು ೧ನೇ ಜುಲಾಯಿ ೧೯೩೮ (1-7-1938.) [ಸಂಚಿಕೆ [illegible]

★

4 ಪುಟಗಳು 24

ಅನುಕ್ರಮಣಿಕೆ

ದಯಾಪ್ತ ಚಾರದ ಪಿಡಿ ಗುಂಡುಗಳು!

ಇಂಗ್ಲಿಷನ್ನು [illegible]ಯುವ ಭೇದ[illegible]!

[illegible]ಗಳ[illegible]

[illegible]ದ ಅನಾ[illegible] ಮಹಾತ್ಮ ಗಾಂಧಿ [illegible]!

[illegible]ದಿನ [illegible] ಜಿರುಗಾಳಿಯು [illegible] ಆಗಬಹುದೆ?

[illegible]ದ ಅಕ್ಕನ್ನು [illegible]ಗಿದೆ.

[illegible]ದ್ರಾಸಿನಲ್ಲಿ ಮಹಾಜನ[illegible]! ಜೀವಕ್ಕೆ ಕಟ್ಟಿರುವ [illegible]ಕಿಗೆ ಸಂಜೀವನ ದಾನ.

★

ಮುಸ್ಸೊಲಿನಿಯು ಮನೆ ಕಾಯುತ್ತಿದ್ದಾರೆ!

ಶ್ರೀಮತಿ ಪದ್ಮಾದೇವಿ

CONSTRUCTIVE BANKING.

An understanding of how a modern Bank c[illegible] useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE

ESTD. 1906.
CANARA BANK LIMITED

ವಿಚಿತ್ರ ಪ್ರಪಂಚ

ಒಡೆಯದ ಗಾಜು.

ಜರ್ಮನಿಯ ನೂತನ ಶೋಧನೆಯಿದು. ಇಂತಹ ಒಡೆಯದ ಗ್ಲಾಸುಗಳನ್ನೂ ಪ್ಲೇಟುಗಳನ್ನೂ ಉಪಯೋಗಿಸುವ ಸುಯೋಗವು ಬರಲಿದೆ

ಸಾಮಾನ್ಯ ಗಾಜಿಗಿಂತ ಇದು ಬಹಳ ಬಾಳಿಕೆ ಬರುತ್ತದೆ. ನೆಲದ ಮೇಲೆ ಬಿದ್ದರೆ, ಪೆಟ್ಟಾದರೆ ಒಡೆಯುವಂತೆಯೂ ಇಲ್ಲ ಮಾತ್ರ ಇದರಲ್ಲಿ ಬೇಕಾದ ರಂಗಿನ ಗಾಜನ್ನೂ ತಯಾರಿಸಲು ಸಾಧ್ಯವಿದೆ.

ಅಸ್ವಸ್ಥದ ಪುಸ್ತಕಗಳಿಗೊಂದು ಆಸ್ಪತ್ರೆ.

ಕೇಳಿದಿರಾ ಇದನ್ನು? ಪುಸ್ತಕಗಳಿಗೂ ಅಸ್ವಸ್ಥವುಂಟಾಗುತ್ತದೆ ಹೀಗೆ ಬೇನೆ ಬಿದ್ದ ಪುಸ್ತಕಗಳ ಆರೈಕೆಯನ್ನು ನೋಡಲು ರೋಮಿನ ವಿದ್ಯಾ ಇಲಾಖಾ ಮಂತ್ರಿಗಳು ಒಂದು ಚಿಕಿತ್ಸಾಲಯವನ್ನು ತೆರೆದಿರುವರು

ಈ ಸಂಸ್ಥೆಯಲ್ಲಿ ಶೋಧನೆಗಳನ್ನು ನಡೆಸಲು, ಬಯೊಲೊಜಿಕಲ್ ಕೆಮಿಕಲ್, ಮತ್ತು ಫಿಜಿಕಲ್ ಲೆಬೊರೆಟರಿಗಳೂ ಇವೆ. ಮಾತ್ರವಲ್ಲ ಪುಸ್ತಕಗಳು ಯಾವ ಯಾವ ರೀತಿಯಲ್ಲಿ ಹಾಳಾಗುತಿವೆಯೆಂದು ತೋರಿಸಲು ಒಂದು ಪ್ರದರ್ಶನ ಶಾಲೆಯೂ ಇರುವುದು

ಈ ಸಂಸ್ಥೆಯ ಚಿಕಿತ್ಸೆಮಾಡಬೇಕೆಂದಿರುವ ಪ್ರಥಮ ರೋಗಿಯು ಯಾರೆಂದರೆ ಬೂಜು ಹಿಡಿತವಾದ ಬೊಸೆರ್ ಡಿ ಎಸ್ಟ್ಯಾ ಎಂಬವರ ಪ್ರಖ್ಯಾತವಾದ ಬ್ಯಾಬಲಿನ ಹಳೆ ಪ್ರತಿಯೊಂದು'

ತ್ವರಿತ ಬೆಳವಣಿಗೆ

ಹಿಂದೆ ಕನಸಿನಲ್ಲಿಯೂ ನೆನೆಸಲಾರದಷ್ಟು ತ್ವರೆಯಲ್ಲಿ ಮರಗಿಡಗಳು ಬೆಳೆಯುವಂತೆ ಮಾಡಲು ಇಂದು ಸಾಧ್ಯವಿದೆ

ಒಕ್ಸಿಲಿನ್ ಎಂಬ ರಸಾಯನದ ಪ್ರಯೋಗದಿಂದ ಮಾತ್ರ ಇದು ಸಾಧ್ಯ 24 ತಾಸುಗಳ ತನಕ ಯಾವ ಗಿಡವಾದರೂ ಸರಿ ಈ ರಸಾಯನದಲ್ಲಿ ಮುಳುಗಿಸಿಟ್ಟು ನಂತರ ಅದನ್ನು ಯಥಾಕ್ರಮದಲ್ಲಿ ನೆಟ್ಟರಾಯಿತು ... ಯಲ್ಲಿ ರಸಾಯನ ಪ್ರಯೋಗ ಮಾಡಿದ ಜಪಾನಿನ ಗಿಡದ ... ಗಳಲ್ಲಿ ಬೀಜಗಳನ್ನು ಬಿಟ್ಟಿತು ಇದಿಲ್ಲದಿದ್ದರೆ ಸರ್ವ ಸಾಧಾರಣವಾಗಿ ಅದಕ್ಕೆ ... ಒಂದು ವರ್ಷ ತಗಲುತ್ತದೆ

ಪರಂತು ಈ ಒಕ್ಸಿಲಿನ್ ... ರಸಾಯನವು ಬೆಳವಣಿಗೆಯನ್ನು ತ್ವರಿತಗೊಳಿಸುವಲ್ಲದಲ್ಲದೆ, ಸಾಯುತಿರುವ ಗಿಡಗಳಲ್ಲಿ ಜೀವಕಳೆಯನ್ನು ತುಂಬಲು ಶಕ್ತವಾಗಿರುವುದು

ಆನೆಗೆ ಮರಣದಂಡನೆ

ಸಿಂಹಳದಲ್ಲಿ 'ಹೋರದಲ'ವೆಂಬ ದೊಂದು ಆನೆ ಅದು ಬಹಳ ಹಾನಿಯನ್ನು ಉಂಟುಮಾಡುತ್ತಿದ್ದುದರಿಂದ ಮುಂದೆ ಮಾನವ ಜೀವಕ್ಕೂ ಅದು ಅಪಾಯವನ್ನು ಉಂಟುಮಾಡಬಹುದೆಂಬ ಬೆದರಿಕೆಯಿಂದಾಗಿ ಅದನ್ನು ಕೊಲ್ಲಬೇಕೆಂದು ಕೋರ್ಟಿನವರು ಹುಕುಂ ಕೊಟ್ಟರು ಕೊಲ್ಲಬಾರದೆಂದು ಅನೇಕ ಮಂದಿ ವಾದಿಸಿ, ಗವರ್ನರರ ತನಕ ತಮ್ಮ ಮನವಿಯನ್ನು ಕೊಂಡು ಹೋದರು ಏನೂ ಫಲಕಾರಿಯಾಗಲಿಲ್ಲ ಆನೆಗೆ ಮರಣದಂಡನೆಯಾಗಲೇಬೇಕೆಂದು ಹುಕುಂ ಆಯಿತು

ಹುಲಿಯನ್ನು ಓಡಿಸಿದ ಧೀರ

ಒಂದು ದಿನ ಒಂದು ರಬ್ಬರ ತೋಟದ ಯುರೋಪಿಯನನ, ಅಕಸ್ಮಾತಾಗಿ ಒಂದ ಹುಲಿಯನ್ನು ಸಂಧಿಸಿದನು. ಆತನ ಕೂಡೆ ಆಯುಧವೇನೂ ಇರಲಿಲ್ಲ ಹುಲಿಯನ್ನು ನೋಡಿ ಬೆದರಿದ ಆತನಿಗೆ ಸಿಂಕಲ್ಲಿಂದ ಅತ್ತಿತ್ತ ಚಲಿಸಲಾಗಲಿಲ್ಲ ಹುಲಿಯು ಆತನಿದ್ದಲ್ಲಿಗೆ ಬಂದು ಮೂಸಿ ನೋಡಿ, ಒಂದು ಸುತ್ತು ತಿರುಗಿ, ತನ್ನಷ್ಟಕ್ಕೆ ಹೊರಟು ಹೋಯಿತು.

ನೆಸೆಟ್ ಧರ್ಮಾರ್ಥ ಬಹುಮಾನ ಯೋಜನೆ!



ಈಗ ಉಪಯೋಗಿಸಲ್ಪಟ್ಟ ಬ್ಲೇಡುಗಳು ಬಹುಮಾನ ಪಡೆಯುವವು



ಅವುಗಳು ಉಪಯೋಗಿಸಲ್ಪಟ್ಟ ಮೇಲೂ ನೆಸಟ್ ಬ್ಲೇಡುಗಳು ಬೆಲೆವುಳ್ಳವುಗಳಾಗುವುದರ ಕುರಿತು ವಿವರಗಳು ಇಲ್ಲಿ ಕೊಡಲಾಗಿದೆ

... ನೆಸಟ್ ಬ್ಲೇಡುಗಳಲ್ಲಿದ್ದು ಅವುಗಳು ನಿಮಗೆ ಅನೇಕ ವರ್ಷಗಳ ... ನಿಮಗೊಂದು ಧರ್ಮಾರ್ಥ ಬಹುಮಾನ ಕೊಡುವ ಗುಣವು ಅವುಗಳಲ್ಲಿ ... ನೀವು ನೆಸಟ್ ಬ್ಲೇಡುಗಳನ್ನು ಪಡೆದುಕೊಳ್ಳುತ್ತಿರುವಾಗ ಅದರಲ್ಲಿ ... ನೆಸಟ್ ಬ್ಲೇಡು Nacet blade ಎಂಬ ಶಬ್ದಗಳನ್ನು ...

ಬದಲಿಗೆ ಬಡನೆ ಅತ್ಯಂತ ಸುಂದರವಾದ, ಒಂದು ರೂಪಾಯಿ ಕ್ರಯ ಬಾಳುವ

ಇಸ್ಪೀಟು ಪೆಟ್ಟಿಗೆಯೊಂದನ್ನು ಪಡೆಯುವಿರಿ

... ನೆಸಟ್ ಕಾರ್ಡ ... ಧರ್ಮಾರ್ಥ ...

ಇಂತಹ ಇಸ್ಪೀಟು ಪೆಟ್ಟಿಗೆಗಳನ್ನು ಬಹುಮಾನವಾಗಿ ಪಡೆಯಬಹುದೆಂಬ ಮಿತಿಯು ಇರುವದಿಲ್ಲ ಆದ್ದರಿಂದ ಈಗಲೇ ಬ್ಲೇಡುಗಳನ್ನು ಕೂಡಿಸಲಾರಂಭಿಸಿ ...

... ಪೆಟ್ಟಿಗೆಯನ್ನು ಪಡೆಯಿರಿ

7 ಆಣೆಗಳಿಗೆ ಬ್ಲೇಡು 10

ನೆಸಟ್ ಬ್ಲೇಡುಗಳು ಮೂರು ಗೂಟದ ರೇಜರುಗಳಿಗೆ ಫಿಟ್ ಆಗುತ್ತದೆ.

ಅದರ ಸೆಲೊಫೆನ್ ಕವಚವು ಭದ್ರವಾಗಿರುವಂತೆ ನೋಡಿರಿ

ಮುಲ್ಲರ್ ಮತ್ತು ಫಿಪ್ಸ್, (ಇಂಡಿಯಾ) ಲಿಮಿಟೆಡ್,

ಕಂಟ್ರ್ಯಾಕ್ಟರ್ ಬಿಲ್ಡಿಂಗ್ ಬಲಾರ್ಡ್ ಎಸ್ಟೇಟ್ ಬೊಂಬಾಯಿ ★ ಎವರೂ ಹೌಸ್, ಚೌರಂಗಿ ಸ್ಕ್ವೇರ್ ಕಲ್ಕತ್ತಾ ★ ... ★ ... ನೆಪಿಯರ್ ರೋಡ್ ಕರಾಚಿ ★ ... ★ ...

"NACET" BLADES

ಗಾಜಿನ ವಸ್ತ್ರ

ಯೋರ್ಕ ... ಗಾಜಿನ ನೂಲನ್ನು ತಯಾರಿಸಿ ... ಹೊಸ ... ನೂತನ ಶೋಧನೆ ... ಮಾಡಿ ... ಗಾಜಿನ ನೂಲಿನ ತಯಾರಿಸಲಾಗ ... ಬಹಳ ... ಪುಳ್ಳದ್ದಾಗಿರುತ್ತದೆ ಈ ವಸ್ತ್ರವು ಇತರ ವಸ್ತ್ರಗಳಂತೆ ಇದನ್ನು ಕತ್ತರಿಸಲೂ ಹೊಲಿಯಲೂ ಸಾಧ್ಯವಿದೆ

ಇಂತಹ ಈ ನೂತನ ಗಾಜಿನ ವಸ್ತ್ರದಿಂದ ತುಂಬಾ ಪ್ರಯೋಜನವಿದೆ ಬಹಳ ಹಗುರವಾಗಿರುವುದರಿಂದ ಇದರಿಂದ ಒಳಅಂಗಿಗಳನ್ನು ತಯಾರಿಸಬಹುದ ಮಾತ್ರವಲ್ಲ ಬೇರೆ ... ಗಳ ಬದಲಾಗಿ ಇದನ್ನು ಉಪಯೋಗಿಸಬಹುದಾಗಿದೆ — ... ಗಾಜ ... ವಾಗಿರುವುದು

ಪ್ರೇಮ ಪ್ರಭಾವ

ಸ್ಕಾಂಡಿನೇವಿಯಾ ದೇಶದ ... 80 ವರ್ಷಗಳ ವೃದ್ಧನೋರ್ವನು ತನ್ನ ಪ್ರಿಯತಮೆಯನ್ನು ಪಾಣಿಗ್ರಹಣಮಾಡಿಕೊಳ್ಳುವುದಕ್ಕಾಗಿ 28 ದಿನಗಳಲ್ಲಿ 250 ಮೈಲಗಳನ್ನು ನಡೆದನು

ಅದೃಷ್ಟ

ಅಮೇರಿಕದಲ್ಲಿ ಜೋರ್ಜಸ್ಟೀವನ್ಸ್ ಎಂಬ ನಾಟಕ ಕಂಪನಿಯ ಮಾಲಕನೊಬ್ಬನು ಒಂದು ಹೊಟೇಲನ್ನು ಪ್ರವೇಶಿಸಿ ಒಂದೆಡ್ಯಕುಳಿತನ ... ಪೇಡಿ ಮಾರಿ ... ಹೋದ ... ತನ್ನ ... ತನ ಅದನ್ನು ... ಅದರ ... 180 ಪವನು ... ದೊರಕಿತು

30,000 ರೂಪಾಯಿಯ ವಾದ್ಯ

... ಹಳೆ ವಾದ್ಯ ಪ್ರಪಂಚದಲ್ಲಿರುವ ವಾದ್ಯಗಳಲ್ಲಿ ಇದರಷ್ಟು ಕ್ರಯ ಬಾಳುವ ವಾದ್ಯ ಇನ್ನೊಂದಿಲ್ಲ, ಇದರ ಕ್ರಯವು 30,000 ರೂಪಾಯಿಗಳು

ರತ್ನೈರ್ಮಹಾರ್ಹೈಸ್ತುತುಷುರ್ನ
ದೇವಾ ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲಮ್ಮನಮ ರತ್ನಗಳು
ಸಾ । ಗರವ ಮಥಿಸಲು ಸುರಂ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥
ಗರಳಕವರಂಜಿದರೆ! ಸುಧೆಯನು।
ಮಡೆಕು ಕ್ಕನ್ನದ್ದುರ
ಕೆರದ ಕುಳಿತರೆ । ತೆರಳ ಬಲ್ಲರೆ!
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೧-೭-೧೯೩೮ ತಾರೀಕು 1-7-1938

ಸ್ಪೈಯಿನಿನಲ್ಲಿ

ಪ್ರತಿದಿನವೂ ಎನ್ನುವಂತೆ ಫ್ರೆಂಕೋ ಪಕ್ಷದ ವಿಮಾನಗಳು ಸ್ಪೈಯಿನಿನಲ್ಲಿ ಇನ್ನೂ ಸರಕಾರದ ವಶವಿರುವ ಪಟ್ಟಣಗಳ ಮೇಲೆ ಬೋಂಬು ಚೆಲ್ಲುತ್ತಲಿವೆ. ನಿರಸ್ತ್ರರಾಗಿರುವ ಪ್ರಜೆಗಳನ್ನು ಕೊಂದಿಕ್ಕಿ, ನಗರವನ್ನು ಪುಡಿ ಮಾಡುತ್ತವೆ. ತಾ ೨೦ರಲ್ಲಿ ಹನ್ನೆರಡು ಮಂದಿ ಮಡಿಯುವ ಹಾಗೂ ೫೦ ಮಂದಿಗೆ ಗಾಯವಾಗುವ ಹಾಗೂ ಐವತ್ತು ಬೋಂಬುಗಳನ್ನು ಎಲಿಕಾಂಟೆ ಎಂಬಲ್ಲಿ ದುಗಗುಂದು ಚೆಲ್ಲಿದರು ಹತ್ತಿ ಸೃತ್ತು ಕಟ್ಟಡಗಳೂ ಪುಡಿಯಾದವು. ವಿಮಾನಗಳನ್ನು ಸರಕಾರೀ [illegible] ಬನ್ನಟ್ಟಿ ಓಡಿಸಿದವು

ಬಾರ್ಸೆಲೋನಾ ಸರಕಾರವು ಯುದ್ಧ ಪ್ರ[illegible]ರಗಳನ್ನು [illegible]ರಿಸುವುದು ವಿಹಿತವಲ್ಲದಿಂದ, ಅ[illegible] ಯುದ್ಧ [illegible]ಡಿದರೆ [illegible]ದರಂತೆಯೆ ಹಿಂಸೆಗೆ [illegible] ಎಂದು ಇಟಲಿಯ ರಾಯಭಾರಿಯು ಫ್ರೆಂಚ ಮಂತ್ರಿಗೆ ತಿಳಿಸಿರುವನು

ಬ್ರಿಟಿಷರೂ ಫ್ರೆಂಚರೂ ಪ್ರತ್ಯ[illegible]ತ್ನಮಾಡಿ, ಇಟಲಿಯವರು ಎಣಿಸಿರುವುದೊಂದೂ ಆಗದಂತೆ ನೋಡಿಕೊಳ್ಳುತ್ತೇವೆಂದು ಫ್ರೆಂಚ ಮಂತ್ರಿ ತಿಳಿಸಿರುವನು

ಬಾರ್ಸೆಲೋನಾ ಸರಕಾರವು ತಿಳಿಸಿದ್ದೇನು? ಇಟಲಿಯ ವೈಮಾನಿಕರು ಫ್ರೆಂಕೋವಿನ ಪಕ್ಷವಾಗಿದ್ದು, ಅನ್ಯಾಯವಾಗಿ ನಿರಸ್ತ್ರರನ್ನು ಸ್ಪೈಂಟಿನ್ ನಗರಗಳಲ್ಲಿ ಕೊಲ್ಲುವ ಹಾಗೆಯೆ, ಜಿನೋವಾ ನೇಪಲ್ಸ್, ರೋಮ್ ನಗರಗಳ ಮೇಲೆ ನಾನಾ ಹಾವಳಿಯನ್ನು ಮಾಡದಿರೆವು ಎಂದು ಸೂಚಿಸಿತ್ತಂತೆ

ನಿರಸ್ತ್ರ ಪ್ರಜೆಗಳಿರುವ ಊರುಗಳ ಮೇಲೆ ಫ್ರೆಂಕೋವಿನ ವಿಮಾನಗಳು ಬೋಂಬು ಚೆಲ್ಲಿದರೆ ಇದೇ ಪ್ರಕಾರದ ಪ್ರತೀಕಾರವಿದೆ ಎಂದು ಸೂಚಿಸಿದುದನ್ನು ಕೇಳಿಯೆ, ಇಟಲಿಯು ಉದ್ವಿಗ್ನವಾಗಿದೆ, ಬಾರ್ಸೆಲೋನಾ ಸರಕಾರಕ್ಕೆ ಫ್ರೆಂಚ ಸರಕಾರವು ಕೈಕಡೆಯುವಂತೆ ಬೋಧಿಸಿ, ಸ್ಪೈಂಸಬೇಕಾಗಿ ಬುದ್ಧಿ ಹೇಳಿದಂತೆ, ಬ್ರಿಟಿಷ ಸರಕಾರವೂ ತಿಳಿಸಿರಬೇಕಾಗಿ ಊಹಿಸಲಾಗಿದೆ

'ಭಾಷಾನ್ವಯ ಪ್ರಾಂತ್ಯಗಳು ಸದ್ಯದಲ್ಲಿ ಆದರೆ ಹಿತವಲ್ಲ'

ಶ್ರೀ। ಸತ್ಯಮೂರ್ತಿಯವರ ವೇದವಾಕ್ಯ.

'ನಾನು ತಮಿಳನು, ಆದರೂ ತಮಿಳರಾಗಿ ಪ್ರತ್ಯೇಕವೊಂದು ಪ್ರಾಂತ್ಯವಿರಬೇಕೆಂದು ನಾನೆನ್ನುವವನಲ್ಲ. ಆದರೆ ಜನತೆಗೆ ಸಂಬಂಧಿಸು[illegible] ಇದ್ದ[illegible] ಭಾರತದ ರಾಜ್ಯ[illegible]ಕೆಗೆ ಯುಕ್ತವಾಗುವ [illegible] ಯಾವುದೊಂದು ಭಾಷೆಯನ್ನಾ[illegible]ವರ್ು ತಮ್ಮವರೆಲ್ಲ ಒಂದೆ ಪ್ರಾಂತ್ಯದಲ್ಲಿರುವುದು ವಿಹಿತ, ಆದರೆ ಅದ ನಿಶ್ಚಿತವಾಗದ [illegible] ಆಂಧ್ರರಾಗಲಿ, ಕನ್ನಡಿಗರಾಗಲಿ ಈ ಪ್ರಶ್ನೆಯನ್ನು ಸುಚಿ[illegible] [illegible]ಬೇಕಾದರೆ ಮೊತ್ತಮೊದಲು ಇಡೀ ದೇಶವು ಸಂಪೂರ್ಣ ಸ್ವತಂತ್ರವಾಗಬೇಕು ಆಗ ಆಂಧ್ರರು, ಕನ್ನಡಿಗರು, ಮಲಯಾ[illegible] [illegible] [illegible] [illegible] [illegible] [illegible] [illegible] [illegible] [illegible] ಅದ[illegible] [illegible] ಹಿತವಲ್ಲ

[illegible]ಕೆಂದರೆ, ಹೀಗೆ ಮಾಡುವುದರಿಂದ ಇನ್ನೂ ಹೆಚ್ಚಾಗಿ ನಗರಗಳನ್ನು [illegible] ಮತ್ತು ಬಂಗಗಳಾಗುವ ಕಾರಣ, [illegible] ಮುಖ್ಯ [illegible] ಬಂಗಗಳಾಗುವುದೆಂಬ ಭಯವೂ ಇದೆ ಎಂದು ಸೂಚಿಸಲಾಗಿದೆ

ಇಟಲಿಯನ್ ಮತ್ತು ಫ್ರೆಂಕೋ ಬಂದರುಗಳಿಗೆ ಹೋಗುವ ಹಡಗುಗಳನ್ನು ಸ್ಪೈಯಿನ್ ಸರಕಾರವು ಬೋಂಬುಗಳಿಂದ ಧ್ವಂಸಮಾಡುವುದಾಗಿ ಫ್ರೆಂಕೋ ಇಟಲಿಗೆ ತಿಳಿಸಿಯೇ ಬಿಟ್ಟಿದ್ದಾನೆ. ಹೀಗೆ ಮಾಡಿದರೆ, ಇನ್ನು ಪತ್ರ ವ್ಯವಹಾರ ಮೂಲಕ ಆಕ್ಷೇಪಿಸದೆ ಬಾಂಬುಗಳ ಮೂಲಕವಾಗಿಯೇ ಪ್ರತ್ಯುತ್ತರ ಕೊಡಲಿರುವೆವೆಂದು ಎಚ್ಚರಿಸಿ ಇಟಾಲಿಯ ಪತ್ರಿಕೆಗಳಲ್ಲಿ ಇಟಾಲಿಯನ್ ಅಧಿಕಾರಿಗಳು ಬರೆಯಿಸಿರುವರು

ಇನ್ನಾದರೂ ಇತರ ರಾಷ್ಟ್ರಗಳ ಪ್ರತಿನಿಧಿಗಳು ಸ್ಪೈಯಿನಿನಲ್ಲಾಗುವ ಅತ್ಯಾಚಾರಗಳನ್ನು ಸ್ವತಃ ಕಂಡು ತಿಳಿಯುವಂತೆ ಅವರನ್ನು ಕಳುಹಬೇಕೆಂದು ಬ್ರಿಟಿಷರಿಗೆ ಸ್ಪೈಯಿನ್ ತಿಳಿಸಿಯದೆ. ಈ ಮಹಾರಾಯರುಗಳು ಇನ್ನೂ ಹೊರಡುವ ಮುಹೂರ್ತ ನೋಡುತಿದ್ದಾರೆ ಅಷ್ಟೆ. ಅಂತೂ ಪರಿಸ್ಥಿತಿಯು ಕ್ಲೈಮಾರುವಂತಿದೆ. ಸ್ಪೈಯಿನಿಗೆ ಸಮೀಪವಿದ್ದು, ಇಟಾಲಿಯಾನರು ನೆಲೆನಿಂತಿರುವ ಬೆಲಿಯಾರಿಕ್ ದ್ವೀಪ ಸಮುದಾಯವನ್ನು ಸ್ಪೈಯಿನ್ ಸರಕಾರವು ಬಾಂಬಿನ ಪ್ರತೀಕಾರಕ್ಕೆ ಒಳಪಡಿಸಿ ಜನಾಂಗಗಳೊಳಗೆ ಮತ್ತೊಂದು ಶಾಂತಿಭಂಗಕ್ಕೆ ಕಾರಣವಾಗಬಹುದು

ಭೂಲಾಭಾಯಿಯವರು ಬೊಂಬಾಯಲ್ಲಿ ಧ್ವಜಾರೋಹಣ ಭಾಷಣ.

ವಿಲಾಯತಿಯಿಂದ ಇತ್ತೀಚೆಗೆ ಸಂಚಾರ ಮಾಡಿ ಬಂದ ಇವರು, [illegible]ತರ ದೇಶಗಳಲ್ಲಿ ರಾಜಕೀಯ ಮಾಯಾಜಾಲದಿಂದ ಯಾರ[illegible] ಈ ದೇಶದಲ್ಲಿ ಪ್ರವೇಶಗೊಳ್ಳುವಂತಿಲ್ಲವೆ ದ್ಧ[illegible] ತಿಳಿದಿರುವರೆಂದರು

ಜನತೆಯು ಅಂತರಂಗಗಳು ರಾಜಕೀಯ ವಿಚಾರಗಳಿಂದ ಜಾಗ್ರತವಾಗಿ ಉದ್ವಿಗ್ನವಾಗಿವೆ ಸ್ವತಂತ್ರ ರಾಜ್ಯಗಳಲ್ಲಿ ಎಷ್ಟೋ ರಕ್ತ ಸುರಿದು ಅಲ್ಲಲಿನ ಧ್ವಜಗಳನ್ನು ಮೇಲೇರಿಸಿರುವರು ನಮ್ಮ ರಾಷ್ಟ್ರಧ್ವಜಕ್ಕಾಗಿ ನಾವು ರಕ್ತ ಸುರಿವ ಸೆತರ[illegible]

ಆತ್ಮಬಲಿಯಾದ ಆ ರಾಜ್ಯಗಳೊಡನೆ ಹೋಲಿಸಿದಲ್ಲಿ ತಿಳಿಯಬಹುದು. ಅದಲ್ಲದೆ ಹಿಂದೀಯರ ಕ್ರಮಗಳು ಬಲಿದಾನದ ಪದ್ಧತಿಯೂ ಅಲ್ಲಿನವರದಂತಿಲ್ಲ. ಇತರರ ರಕ್ತ ಸುರಿಸಿ ಅಲ್ಲಿ ಧ್ವಜ ಏರಿಸುವರು, ಇಲ್ಲಿ ಜನರು ತಮ್ಮ ಅಹಿಂಸಾತ್ಮಕವಾದ ಚಳವಳಿಯಿಂದ ತಾವೇ ತ್ಯಾಗಬುದ್ಧಿಯಿಂದ ಸ್ವೈರಣೆಯಿಂದ ಆತ್ಮಬಲಿಯನ್ನೀವರು

ಹಿಂದೀಯರು ಸ್ವಾತಂತ್ರ್ಯಸಾಧನೆಯ ಪ್ರಯತ್ನಮಾಡುವುದರಲ್ಲಿ ಎರಡು ಮೆಟ್ಟಲುಗಳಿವೆ. ಸ್ವತಂತ್ರರಾಗಲು ಸಾಧಿಸುವುದೊಂದು ಚಳವಳದ ಪ್ರಕಾರ, ಪಡೆದ ಸ್ವಾತಂತ್ರ್ಯವನ್ನು ಊರ್ಜಿತವಿರಿಸಿಕೊಳ್ಳುವುದು. ಎರಡನೆ ಚಳವಳದ ಪ್ರಕಾರ ಜನತೆಯು ಇವೆರಡೂ ಬಗೆಯ ಚಳವಳದಲ್ಲಿ ಭಾಗವಹಿಸಲು ಕಲಿತುಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ದೊರೆತರೇ ಸಾಲದು, ಅದನ್ನು ಇಟ್ಟುಕೊಳ್ಳುವ ಯೋಗ್ಯತೆಯನ್ನೂ ಗಳಿಸಿಕೊಳ್ಳಬೇಕಲ್ಲವೆ?

ಕಾಂಗ್ರೆಸಿಗೆ ವಿರುದ್ಧವಾಗಿ ಚಳವಳಿಸುವವರೊಡನೆ ಹೋರಾಟವಿಲ್ಲ, ಹಗೆಯಿಲ್ಲ. ಅವರು ನಿಷ್ಪಕ್ಷವಾಗಿ ಕಾಂಗ್ರೆಸಿನ ತತ್ವಗಳನ್ನು ತಿಳಿದುಕೊಳ್ಳಲು ಯತ್ನಿಸಲೆಂದೇ ಪ್ರಾರ್ಥನೆ

ಇಂಡಿಯಾ ಸರಕಾರದ ಆಕ್ಟನ್ನು ಕೂಡಲೆ ತಿದ್ದಬೇಕಾಗಿದೆ.

ಹಿಂದೀ ವ್ಯಾಪಾರೀ ಸಂಘದ ಕಮಿಟಿಯ ನಿರ್ಧಾರ.

ವ್ಯಾಪಾರವಾಡುವುದರಲಿ ಸಹ ಸ್ವದೇಶಿಯರ ಪರಕೀಯರು ಎಂಬ ಬೇದವಿಲ್ಲದೆ, ನಡೆದುಕೊಳ್ಳಬೇಕೆಂದು ಇಂಡಿಯಾ ಆಕ್ಟನಲ್ಲಿರುವುದನ್ನು [illegible], ಸ್ವದೇಶದ ಸಾಂಪತ್ತಿಕ ಅಭಿವೃದ್ಧಿ[illegible] ಮಾಡಲು ಅಗತ್ಯಕಂಡ ತಿದ್ದುಪಡಿಮಾಡಿಕೊಳ್ಳಲು ಈ ಆಕ್ಟ ಪ್ರತಿಬಂಧಿಸುವ ಕಾರಣ, ವ್ಯಾಪಾರಕ್ಕೆ ಒಂದು [illegible] ಕವಚವಿದ್ದು [illegible] ಸ್ವರಾಜ್ಯವಾಗದಂತೆ ತಡೆವ ಕಾರಣ ತತ್ತ[illegible] ಎಲ್ಲ [illegible]ಗಳನ್ನು [illegible] [illegible] [illegible] [illegible] [illegible] [illegible]

ತಮ್ಮ ದೇಶದ ವ್ಯಾಪಾರದ ಅಭಿವೃದ್ಧಿಗೆ ಸಾಧಕವಾಗಿರ[illegible] [illegible] ವೃದ್ಧಿಗೆ [illegible] ತಮ್ಮ [illegible] [illegible] [illegible], [illegible] [illegible] [illegible], ತಮ್ಮ ಜನಾಂಗಕ್ಕೆ ನಿಹಿತವಾಗುವ [illegible]ಗಳಲ್ಲಿ ಇತರರ [illegible] [illegible] ಬಾ[illegible]ಕಾಗಿದೆ

[illegible] ರೂಪಾಯಿಗೆ ಇದ್ದ [illegible] ಮುಂದೆ [illegible] ಜ್ಯಾರಿಗ ತರಬೇಕಾಗಿರುವುದ ಈಗಲೇ ಕೈಗೊಳ್ಳಬೇಕಾಗಿರುವ ವ್ಯವಸ್ಥೆ ಅಂತೆಯೇ ನಮ್ಮ ದೇಶದ ಉಪ್ಪಿನ ತಯಾರಿಗೂ ಇತರೆ ಪ್ರತಿಬಂಧಕಗಳಿರಬಾರದೆಂಬ [illegible] ಸಮಿತಿಯು ಇತರ ಸೂಚನಗಳಾಗಿವೆ.

ಕಡ್ಡಾಯದ ಹೊಸ್ಪರೀತಿಯ ಶಿಕ್ಷಣ.

ಮಧ್ಯಪ್ರಾಂತ್ಯದ ಸರಕಾರವು ಕಡ್ಡಾಯ ಶಿಕ್ಷಣದ ನೂತನ ಸೂತ್ರಗಳನ್ನು ಪ್ರಕಟಿಸಿಯದೆ ಯಾವುದೊಂದು ಮಗುವು ಮಂಜೂರಾದ ಯಾವ ಶಾಲೆಯಲ್ಲಿ ಓದುತ್ತಿದ್ದರೂ, ಅದು ಮೂರು ವರ್ಷಗಳ ತನಕ ಮುಂದೆ ಪ್ರಾಥಮಿಕ ಶಾಲೆಯಲ್ಲಿ ಗನಕ್ಕೆ ಒಂದು ತಾಸಿಗಾದರೂ ಅಥವಾ ವಾರದಲ್ಲಿ [illegible] ಹಿಡಿಯುತ್ತಿರಬೇಕೆಂದು ಸರಕಾರದ ಒತ್ತಾಯವಿದೆ. ಐದನೆ ಕ್ಲಾಸಿನವರೆಗೆ ಕಡ್ಡಾಯ[illegible] ಕಲಿತು. ಶಾಲೆ ಬಿಟ್ಟ ಮಕ್ಕಳು ಮುಂದೆ ವಿದ್ಯಾಗಂಧವೇ ಇಲ್ಲದವರನ್ನು ನಿರಕ್ಷರರಾಗಿ ಬಾಳುತ್ತಿರುವರೆಂದು ಸರಕಾರವು ತಿಳಿದು ಹಿಂದೆ ಐದು ವರ್ಷ ಕಲಿತವರು ಮುಂದೆ ಮೂರು ವರ್ಷ ಹೇಗಾದರೂ ಶಾಲಾ ಸಂಬಂಧವನ್ನು ಇಟ್ಟುಕೊಳ್ಳಲೇಬೇಕಾಗಿದೆ ಎಂದು ವಿಧಾಯಿಸಿದೆ. ಅಕ್ಷರಸ್ಥರು ಅನಕ್ಷರರಾಗದಂತೆ ಇದೊಂದು ತಂಟೆ

★ ಅತ್ಯಂತ ಸತ್ಯವಂತರು ★

ಅನಾಗರಿಕ ಲೆಪ್ಪರು

ಲೆಕ್ಕ ಬರೆದಿಡದಿದ್ದರೂ, ಸಾಲ ತೀರಿಸುತ್ತಿದ್ದಾರೆ.

ಡಾ| ಹೊಲ್ಲಿಡೇ ಸದರ್‌ಲೆಂಡ್ ಎಂಬವರು ಲೆಪ್‌ಲೆಂಡ್ ಜರ್ನಿ(ಲೆಪ್ ದೇಶದ ಪ್ರವಾಸ) ಎಂಬದೊಂದು ಗ್ರಂಥದಲ್ಲಿ, ನವನಾಗರೀಕತೆಯ ಹೊರಗಿರುವ ಲೆಪ್‌ಲೆಂಡಿನ ಪ್ರವಾಸದ ಅನುಭವವನ್ನು ಚಿತ್ರಿಸಿರುವರು.

ಲೆಪ್‌ಲೆಂಡಿನಲ್ಲಿ ಕ್ರಮಗಳೇನುಯಿಲ್ಲ. ಕಾಡಿನ ಕ್ರಮಗಳೆ ಲೆಪ್ ಜನರ ಕ್ರಮಗಳು. ಲೆಪ್‌ಲೆಂಡು ಸ್ಕಾಟ್‌ಲೆಂಡಿನಷ್ಟು ವಿಸ್ತಾರವಾಗಿರುವುದಾದರೂ, ಅಲ್ಲಿರುವುದು ೩೦ ಮಂದಿ ಪೊಲೀಸರು ಮಾತ್ರ. ಮರಗಳನ್ನು ಕಡಿಯುವುದು ಅಲ್ಲಿನ ಜನರ ಮುಖ್ಯ ವೃತ್ತಿ. ಮರ ಕಡಿಯುವ ಸಮಯದಲ್ಲಿ ಕಾಡುಗಳಲ್ಲಿ ಸಾಧಾರಣ ೧॥ ಲಕ್ಷ ಲೆಪ್ ಜನರು ಕೂಡುತ್ತಾರೆ.

ಶಿಲುಬೆಗೇರುಸುತ್ತಾರೆ.

ಎಲ್ಲರೂ ಒಟ್ಟಾಗಿರುವುದು ಲೆಪ್ ಜನರ ಕ್ರಮ. ಬೆಳಗಾತ ಎದ್ದಾಗ ಯಾವಾತನೊಬ್ಬನು ತನ್ನಲ್ಲಿರುವ ಹಣವನ್ನು ಕಳಕೊಂಡಿರುವೆನಾದರೆ, "ನನ್ನಿಂದ ಯಾರೊ ಕದ್ದಿರುವರು" ಎಂಬ ಕೂಗು ಆತನಿಂದ ಹೊರಬಿದ್ದಾಕ್ಷಣ, ಎಲ್ಲರೂ ಮಲಗಿಕೊಂಡಿರುವ ಕೋಣೆಯ ಬಾಗಿಲನ್ನು ಮುಚ್ಚಿ ಎಲ್ಲರನ್ನೂ ಶೋಧಿಸಿ ಕಳ್ಳನನ್ನು ಕಂಡು ಹಿಡಿಯುವುದು ಅವರ ಕ್ರಮ. ಇಪ್ಪರಿಂದ ನಾಲ್ಕು ನೂರು ಜನರ ವರೆಗೆ ಒಟ್ಟಾಗಿ ವಾಸವಾಗಿರುವುದು ಅವರ ಕ್ರಮ.

ಕಳ್ಳನು ದೊರಕಿದ ಕೂಡಲೆ ಆತನನ್ನು ಚೆನ್ನಾಗಿ ಬಡೆಯುವರು. ಆತನ ಉಪಯೋಗದ ಗಾಡಿಯಾದ 'ಸಿಶ್' ಗಾಡಿಯು ಆತನಿಂದ ಕಸಗೊಳ್ಳಲಾಗುವುದು. ಆತನನ್ನು ಮೂರು ದಿವಸಗಳಿಗೆ ಬೇಕಾದ ಆಹಾರ ಸಾಮಾಗ್ರಿಗಳನ್ನು ಒದಗಿಸಿ ಕೊಟ್ಟು, ಒಂದು ದೋಣಿಯ ಮೇಲೆ ಹಾಕಿ ದೋಣಿಯನ್ನು ತೇಲಲು ಬಿಡುವರು.

ಕಳ್ಳಾಟಿಕೆಯು ಬಹಳ ಮಹತ್ತರದಾದರೆ ಆತನನ್ನು ಶಿಲುಬೆಗೆ ಏರಿಸುವುದುಂಟು. ಅಲ್ಲಿ ಒಮ್ಮೊಮ್ಮೆ ಕಳ್ಳನು ಸಾಯುವುದು ಉಂಟು. ಶಿಕ್ಷೆಯನ್ನನುಭವಿಸಿದಾತನಿಗೆ ಮತ್ತೊಮ್ಮೆ ತಮ್ಮ ಕೂಟಕ್ಕೆ ಕೂಡಿಸಿಕೊಳ್ಳಲಾರರು.

ಅಲ್ಲಿ ಮೋಸಗಾರರೆಯಿಲ್ಲ.

ಈ ಮರ ಕಡಿಯುವವರು, ತಮ್ಮೊಡನೆ ಒಂದು ಪೈಯನ್ನು ಕೂಡ ಇಡದೆ ಪ್ರಯಾಣ ಮಾಡುತ್ತಿದ್ದಾರೆ. ಅಲ್ಲಲ್ಲಿ ಹೊಟೇಲುಗಳಲ್ಲಿ ಅವರಿಗೆ ಬೇಕಾದ ಆಹಾರ ಇತ್ಯಾದಿ ಸಾಮಾನುಗಳು ದೊರಕುತ್ತವೆ. ಈ ಹೊಟೇಲುಗಳಲ್ಲಿ ಅವರ ವಿಳಾಸ ಬರೆದಿಡುವ ಕ್ರಮವಿಲ್ಲ. ಅವರಿಗೆ ಬೇಕಾದಷ್ಟು ತಿಂದ ಸಾಮಾನಿನ ವಿವರ ಮಾತ್ರ ಅಲ್ಲಿ ಬರೆದಿಡಲಾಗುತ್ತದೆ. ಮರ ಕಡಿಯುವ ಕೆಲಸ ಮುಗಿದೊಡನೆ, ಅವರು ಹೊಟೇಲಿಗೆ ಬಂದು, ಇನ್ನೂ ಹೆಚ್ಚಿನ ಆಹಾರ ಸಾಮಾಗ್ರಿಗಳನ್ನು ಪಡಕೊಂಡು, ಬಾಕಿಯುರುವ ಸಾಲವನ್ನು ಸಂದಾಯ ಮಾಡುವರು. ಒಂದೇ ಒಂದು ಪೈಯನ್ನು ಕೂಡ ಬಾಕಿಯಿಡದೆ ಎಲ್ಲವನ್ನೂ ಸಲ್ಲಿಸುವುದು ಅವರ ಕ್ರಮ.

ಒಬ್ಬರ ಅನುಭವ.

ಈ ಗ್ರಂಥಕರ್ತರೊಡನೆ ಓರ್ವ ಫಿನಿಶ್ ಇಂಜಿನಿಯರರು ಪ್ರವಾಸ ಮಾಡಿದ್ದರು, ಅವರು ತಮ್ಮದೊಂದು ಅನುಭವವನ್ನು ಹೀಗೆಂದು ವಿವರಿಸಿರುವರು.

ಒಂದು ಬಾರಿ ಅವರು ಲೆಪ್‌ಲೆಂಡಿನಲ್ಲಿ ಪ್ರಯಾಣ ಮಾಡುತ್ತಿರುವಾಗ, ಅವರೊಡನೆ ತಂಬಾಕು ಮುಗಿದಿರಲು ಅದನ್ನು ಹುಡುಕಾಡಿ ಹೋಗುತ್ತಿರುವಾಗ, ಓರ್ವ ಲೆಪ್‌ನಲ್ಲಿ ಅವರಿಗೆ ಒಂದು ತಂಬಾಕು ಪೆಟ್ಟಿಗೆಯು ದೊರಕಲು, ಆತನೊಡನೆ ಚಿಲ್ಲರೆಯಿಲ್ಲದಿರಲು, ಅವರು ಅವನಿಗೆ ಒಂದು ನೋಟನ್ನೆ ಕೊಟ್ಟುಬಿಟ್ಟರು,- ತಂಬಾಕು ಅವಶ್ಯವಾಗಿ ಬೇಕಾದುದರಿಂದ.

ಆದರೆ ಬಹಳ ಸಮಯದ ನಂತರ ಓಸ್ಲೊನಲ್ಲಿ ಒಂದೆಡೆ ಸಂಚಾರ ಮಾಡುತ್ತಿರುವಾಗ, ಅದೇ ಲೆಪ್ಪನು ಆತನಿದ್ದಲ್ಲಿಗೆ ಬಂದು ಬಾಕಿಯಿದ್ದ ಚಿಲ್ಲರೆಯನ್ನು ಕೊಟ್ಟುಬಿಟ್ಟನಂತೆ.

ಜಮೇಯಿಕಾ, (ವೆಸ್ಟ್ ಇಂಡೀಸ್) ಪ್ರಸಂಗ ತರ್ಕ.

ಪಾರ್ಲಿಮೆಂಟಿನಲ್ಲಿ ಇದೂ ಚರ್ಚೆಗೆ ಬಂತು. ಇಲ್ಲಿ ಹಿಂದೀಯರು ದೊಡ್ಡ ಸಂಖ್ಯೆಯಲ್ಲಿರುವರಷ್ಟೆ. ಅದು ಕಾರಣ ಚರ್ಚೆಗೆ ಸ್ವಲ್ಪ ಬೆಲೆ ಕೊಡಬೇಕಾಗಿದೆ. ಜಮೇಯಿಕಾ ತ್ರಿನಿದಾದಗಳಲ್ಲಿನ ವಿದ್ಯಮಾನಗಳನ್ನು ಕಂಡರೆ, ಅಲ್ಲಿರುವ ಭಾರತೀಯರ ದುಸ್ಥಿತಿಯನ್ನು ಪರಾಂಬರಿಸಿದರೆ, ಈಗಲೇ ಆಗುತ್ತಿರುವ ದಂಗೆಗಳಿಂದ ಅದಿನ್ನೂ ಹಾಳಾಗಿದೆ ಎಂದೇ ಖಂಡಿತ ತಿಳಿಯುವುದಾಗಿ ವಸಾಹತುಗಳ ಕರಣೀಕರು ತಿಳಿಸಿದರು. ಕೂಡಲೆ, ತಲೆಯಿಂದ ಬುಡದ ವರೆಗೂ ಹಾಳಾಗಿ ಹೋಗಿರುವ ಅಲ್ಲಿನ ಆಡಳಿತವನ್ನು ಸರಿಗೊಳಿಸಬೇಕೆಂದು ಕರಣೀಕರೇ ತಿಳಿದಿರುವರಾಗಿ ವಿವರಿಸಿದರು. ಹಾಗೆ ಮಾಡುವುದೂ ನಿಶ್ಚಿತವಾಗಿದೆಂದು ಮೇಕ್‌ಡೊನಲ್ಡರು ಸೂಚಿಸಿದುದರಿಂದ, ನಮ್ಮವರ ಸ್ಥಿತಿಯು ಅಲ್ಲಿ ಬದಲಾಗಬಹುದೇನೋ ಎನ್ನಬಹುದು.

ರಾಜಕೀಯ ವಿಚಾರಗಳಲ್ಲಿ ವಿದ್ಯಾರ್ಥಿಗಳಾಗಿರುವವರಿಗೆ ಸಂಬಂಧವೆಷ್ಟಿರಬೇಕು?

ಬಿಹಾರದ ಮಂತ್ರಿಗಳು (ಡಾ| ಸಯ್ಯದ್ ಮಾಮೂದ್‌ರವರು) ಪಾಟ್ನಾ ಕೊಲೆಜಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುವಾಗ,—ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು, ಅಂತಹ ಕರ್ತವ್ಯಗಳಲ್ಲಿ ಸೇರಿ ನಡೆವುದು ತನಗೆ ಆಕ್ಷೇಪಕರವೆನಿಸುವುದಿಲ್ಲ; ಅದು ಅವರದೇ ಹಕ್ಕಿನ ಕರ್ತವ್ಯ ಮಾತ್ರವಲ್ಲ ಜವಾಬುದಾರಿಯೂ ಸಹ ಆಗಿದೆ ಎಂದಿದ್ದರು. ಮಹಾತ್ಮಾಜಿಯವರು—ವಿದ್ಯಾರ್ಥಿಗಳು ತಾವು ಮೆಚ್ಚುವ ಯಾವುದೊಂದು ರಾಜಕೀಯ ಪಂಗಡದೊಡನೆ ಪ್ರತ್ಯಕ್ಷ ಸಹಾನುಭೂತಿ ತೋರಿಸ ಬಹುದಾಗಿದೆ. ಆದರೆ ವಿದ್ಯಾರ್ಥಿಗಳಾಗಿರುವಷ್ಟು ಕಾಲ ಅವರು ಮಾತ್ರ ಸ್ವತಂತ್ರರಾಗಿ ವರ್ತಿಸಬಾರದು. ವಿದ್ಯೆಕಲಿಯುವುದೂ ರಾಜಕೀಯ ಪುರುಷರಾಗುವುದು ಒಂದೇ ಕಾಲದಲ್ಲಿ ಸರಿಯಾಗುವುದಿಲ್ಲ ಎಂದು 'ಹರಿಜನ ಪತ್ರಿಕೆ'ಯಲ್ಲಿ ಬರೆದಿರುವರು. ಇವೆರಡು ಟೀಕೆಗಳನ್ನು ಎತ್ತಿ, ಬಿಹಾರದ ಎಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳಾದುವು.

ಡಾ| ಮಾಮೂದರ (ವಿದ್ಯಾಇಲಾಖಾ ಮಂತ್ರಿ)—ವಿದ್ಯಾರ್ಥಿಗಳು ಪ್ರತ್ಯಕ್ಷದಲ್ಲಿ ರಾಜಕೀಯ ವಿಚಾರಗಳನ್ನು ಅಂಗೀಕರಿಸಿ ವರ್ತಿಸಬೇಕೆಂದೇನೂ ನನ್ನ ಸೂಚನೆಯಲ್ಲ. ಆದರೆ, ರಾಜಕೀಯ ವಿಷಯಗಳನ್ನು ಅವರು ತಿಳಿದುಕೊಳ್ಳಬೇಕೆಂದೇ ನನ್ನ ಸೂಚನೆ. ಶಿಸ್ತಿನ ಮೌಲ್ಯವು ಅತ್ಯಂತ ಅಗತ್ಯವಾಗಿಯೂ ವಿದ್ಯಾರ್ಥಿಗಳಿಗೆ ತಿಳಿದಿರಬೇಕೆಂದೂ, ಯಾವುದೊಂದು ಶಿಸ್ತಿಗೆ ಸರಿಯಾಗಿ, ವಿವೇಕದಿಂದ ಮಾನುಷಿಕವಾಗಿ ವಿಧಿಸಲಾಗುವ ಶಾಸನಾಗಳಿಗೆ ಅವರು ವಿಧೇಯರಾಗಿ ನಡೆದುಕೊಳ್ಳುವುದು ಆತ್ಯಾವಶ್ಯಕವೆಂದೂ ನಾನು ಸೂಚಿಸಿದ್ದೇನೆ. ಸುಮ್ಮನೆ ತಂಟೆಮಾರಿಗಳಾಗಿ ಸುಲಭದಲ್ಲಿ ವೀರರೆನಿಸುವ ಉದ್ದೇಶದಿಂದ ಅಧಿಕಾರಿಗಳನ್ನು ಎದುರಿಸುವುದು ಅನ್ಯಾಯವೆಂದು ಸಾರಿದ್ದೇನೆ. ವಿದ್ಯಾರ್ಥಿಗಳ ಚಟುವಟಿಕೆಗಳನ್ನು ತಡೆದು ಅವರಿಗೆ ನಾನಾ ನಿರ್ಬಂಧಗಳನ್ನು ಹಾಕಿ, ನಿರ್ಜೀವ ಯಂತ್ರಗಳನ್ನಾಗಿ ಮಾಡಿಡುವುದು ಮಾತ್ರ ನಾನು ಮೆಚ್ಚದ ವಿಷಯವಾಗಿದೆ. ಧೈರ್ಯ, ಆತ್ಮನಿರ್ಧಾರ ಮೊದಲಾದ ಗುಣಗಳು ವಿದ್ಯಾರ್ಥಿಗಳಲ್ಲಿ ಉಂಟಾಗಲೇ ಬೇಕು; ಇವನ್ನು ರೂಲ್ಸುಗಳಿಂದ ಬಡಿದಿಕ್ಕಿ, ಈ ಕಾಲಕ್ಕೆ ಸಲ್ಲದ ಪುರಾತನ ಕ್ರಮಗಳಿಂದ ನಿರ್ಮೂಲನಗೊಳಿಸುವುದು ಮಾತ್ರ ನನಗೆ ಬಲ್ಲದು,—ಎಂದರು.

ವಸಾಹತುಗಳ ಆಫೀಸು, ಇತರ ಎಲ್ಲ ಬ್ರಿಟಿಷ ಆಫೀಸುಗಳಲ್ಲಿ ಕನಿಷ್ಠ ಪ್ರಗತಿಯದು. ಹದಿನೈದು ವರ್ಷಗಳಿಂದಲೂ ವಸಾಹತುಗಳು ಹಾಳಾಗುತ್ತ ಬರಲು ಈ ಆಫೀಸು ಕಾರಣವಾಗಿದೆ. ಒಬ್ಬರ ತರುವಾಯ ಮತ್ತೊಬ್ಬರಾಗಿ, ಅತಿ ಅನುಪಯುಕ್ತ ಅಯೋಗ್ಯಮಂತ್ರಿಗಳೇ ಈ ಆಫೀಸಿನ ಕರ್ತರಾಗಿಯೇ ನೇಮಕ ಹೊಂದಿ ಬಾಳಿದವರು.

ಲೋಯ್ಡ ಜೋರ್ಜರು ಈ ವಿಷಾದಮಯ ಪರಿಸ್ಥಿತಿಯನ್ನು ಕಂಡು ಬ್ರಿಟಿಷ ಸಾಮ್ರಾಜ್ಯವೆಂಬುದು "ಕೂಲೀಗುಡಿಗಳ ಸಾಮ್ರಾಜ್ಯ" ಎಂದೇ ಪಾರ್ಲಿಮೆಂಟಿನಲ್ಲೂ ತಿಳಿಸಿದರು. ಪ್ರಜೆಗಳು ಅರೆಹೊಟ್ಟೆಯಿಂದ ಜೀವಿಸುವುದಕ್ಕೂ ಮುರುಕುಗುಡಿಸಲುಗಳು ತುಂಬಿರುವ ಈ ಸಾಮ್ರಾಜ್ಯದ ವೈಭವವನ್ನು ಬಣ್ಣಿಸುವುದಕ್ಕುಂಟೆ? ಇಲ್ಲಿರುವ ಶಿಕ್ಷಣಕ್ರಮದ ಸಂಭ್ರಮ ತಿಳಿಯಬೇಕಾದರೆ, ಈಗಣ ಪ್ರಗತಿಯಂತೆ! ಇಡೀ ವಸಾಹತುಗಳಲ್ಲಿನ ಜನರು ಅಕ್ಷರಸ್ಥರಾಗಲು ಮೂರು ಸಾವಿರ ವರ್ಷಗಳಾದರೂ ಬೇಕಾಗುವುದಂತೆ! ಅದು ವರೆಗೆ ಎಷ್ಟು ಸಾಮ್ರಾಜ್ಯಗಳಾಗುವುವೋ ದೇವರಿಗೇ ಗೊತ್ತು.

ಐರ್ಲೆಂಡಿನಲ್ಲಿ ಹೊಸ ಚುನಾವಣೆ

ಡಿವೇಲೆರರ ಪಕ್ಷದ ದಿಗ್ವಿಜಯ.

ಡಿವೇಲೆರರು ಅತ್ಯಪೂರ್ವವಾದ ಮಹಾಮತ ಪಡೆದು, ಎದುರು ಪಕ್ಷಗಳೆಲ್ಲವನ್ನೂ ಸೋಲಿಸುವ ಸಂದರ್ಭ ಒದಗಿದೆ. ಇದುವರೆಗೆ ವೋಟು ಕೂಡಿಸಲಾಗಿ 90 ಮಂದಿಯ ಚುನಾವಣೆಯು ನಿಶ್ಚಿತವಾಗಿರಲು, ಡಿವೇಲೆರರಿಗೆ 14 ವೋಟುಗಳ ಅಧಿಕ ಬೆಂಬಲ ದೊರೆತಿದೆ.

ಐರ್ಲೆಂಡಿನ ಲೇಬರ್ ಪಕ್ಷವು ಹಿಂದೆ ಹಿಂದೆಯೇ ಬಿದ್ದಿರುವುದು ವಿಚಿತ್ರ. ಈ ಪಕ್ಷದ 80 ಮಂದಿ ಉಮೇದ್ವಾರರಲ್ಲಿ ಐದು ಜನ ಚುನಾವಣೆ ಹೊಂದಿರುವರು. ಇದು ವರೆಗೆ ಡಿಪ್ಯೂಟಿಸ್ಪೀಕರರಾಗಿ ಬಹು ವರ್ಷಗಳಿಂದ ಆಳಿದ ಲೇಬರ ಮುಖಂಡರ ಜನರೇ ಮುಂದೆ ಬಂದಿಲ್ಲದಿರುವುದು ವಿಚಿತ್ರ.

ಡಿವೇಲೆರರು ಐರ್ಲೆಂಡ್ ಇಂಗ್ಲೆಂಡುಗಳೊಳಗೆ ಕರಾರುಮಾಡಿದ ಪ್ರಭಾವದಿಂದ ಸರ್ವರೂ ಅವರ ಚುನಾವಣೆಯನ್ನು ಅನುಮೋದಿಸಿ ಅವರ ಪಕ್ಷಕ್ಕೆ ಬಹಳ ಬೆಂಬಲ ಕೊಡುತ್ತಿರುವರು. ಇನ್ನು ಅವರ ಮುಖಂಡತನಕ್ಕೆ ಹಾನಿಯಿಲ್ಲದ ಕಾರಣ, ಇಂಗ್ಲೆಂಡಿನ ಸರಕಾರದಿಂದ ಐರ್ಲೆಂಡಿಗೆ ಇನ್ನೂ ಸ್ವಾತಂತ್ರ್ಯ ಸಿಗುವಂತೆ ಇವರು ಪ್ರಯತ್ನಗಳನ್ನು ಮುಂದರಿಸಬಹುದಾಗಿದೆ.

ಫ್ರೆಂಚ ಜನಾಂಗಕ್ಕೆ

ಪಂಡಿತ ನೆಹರುರವರು ಪಾರಿಸಿನಲ್ಲಿ ಆದೇಶಕ್ಕೆಲ್ಲ ತಿಳಿಸಿದುದೇನು?

ಫ್ರಾನ್ಸ್ ದೇಶದಲ್ಲಿರುವ ನಮ್ಮ ಸ್ನೇಹಿತರಿಗೆ ಇವೇ ಕೆಲವು ಮಾತುಗಳನ್ನಾಡಲು ನನಗೆ ಸಂದರ್ಭ ದೊರೆತುದಕ್ಕೆ ನಾನು ಸಂತೋಷಪಡುತ್ತೇನೆ. ಇಂಡಿಯದಲ್ಲಿ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ, ಫ್ರಾನ್ಸು ಬಹುದಿನಗಳಿಂದಲೂ ನಮ್ಮ ಧೈರ್ಯದ ಕೋಟೆಯಾಗಿದೆ. ಫ್ರಾನ್ಸನ್ನು ಫ್ರೆಂಚ ಇತಿಹಾಸವನ್ನೂ ನಮಗೆ ಹೊಸ ಭಾವನೆಗಳು ಹುಟ್ಟುವಂತೆ ನಾವು ಎಲ್ಲಾ ಬಾರಿಗೂ ನಿರೀಕ್ಷಿಸಿದ್ದೇವೆ.

ಯುರೋಪ್ಪು ಈಗ ಮಹಾ ಸಂದಿಗ್ಧ ಕಾಲದಲ್ಲಿದೆ; ಅತಿ ಭಯಂಕರವೂ ವಿನಾಶಕರವೂ ಆಗಿರುವ ಯುದ್ಧದ ಮೋಡವು ನಮ್ಮೆಲ್ಲರ ಮೇಲೆ ತೂಗುತ್ತಿದೆ. ಯುರೋಪಿನ ಜನಾಂಗಗಳು ತಮ್ಮ ಸಮಸ್ಯೆಗಳಲ್ಲೇ ನಿರತರಾಗಿದ್ದಾರೆ, ಭಾರತವರ್ಷವನ್ನೂ ಪೌರ್ವಾತ್ಯರಾಷ್ಟ್ರಗಳನ್ನೂ ಮರೆಯಲು ಅವರಿಗೆ ಅವಕಾಶವುಂಟು. ಆದರೂ, ನನ್ನ ದೇಶ, ಅದರ ಸ್ವಾತಂತ್ರ್ಯ ಇವೆರಡೂ ಜಗತ್ತಿನ ಸಮಸ್ಯೆಗೇ ಸೇರಿದುವು. ಸಾಮ್ರಾಜ್ಯಶಾಹಿಯ ಕೈಯಿಂದ ಇಂಡಿಯವು ಮುಕ್ತವಾಗುವ ತನಕ ಜಗತ್ತಿನಲ್ಲಿ ಬಹುಕಾಲ ಬಾಳ ಬಹುದಾದ ಶಾಂತಿಗೆ ಅವಕಾಶವಿರದು.

ಜಗತ್ತಿನ ಸ್ವಾತಂತ್ರ್ಯ ಸಾಧನೆಯನ್ನು ಮುಂದಾಳಾಗಿರುವ ಫ್ರೆಂಚರ ಮೈತ್ರಿಸಹಾಯಗಳು ನಮ್ಮ ವಿಮೋಚನೆಯ ಹೋರಾಟದಲ್ಲೂ ನಮಗೆ ದೊರೆವುವಾಗಿ ನಾವು ಕೇಳಿಕೊಂಡು ನಿರೀಕ್ಷಿಸುತ್ತಿದ್ದೇವೆ.

ಸ್ಪೆಯಿನಿನ ವಿಚಾರದಲ್ಲಿ, — ಅಜೇಯವಾದ ಸ್ಪೆಯಿನಿನ ಜನಾಂಗದ ತೇಜಸ್ಸನ್ನು ಎಂದೂ ಕುಂದಿಸ ಬರುವಂತಿಲ್ಲ. ಪರದೇಶೀಯ ಸೈನ್ಯಗಳು ಸ್ಪೆಯಿನನ್ನು ಜಯಿಸಲಾರವು,— ಯುದ್ಧವು ಎಷ್ಟು ದಿನ ದೀರ್ಘವಾಗಿ ನಡೆದರೂ ಅದಾಗದು.

ಇಂಡಿಯವು ಸ್ಪೆಯಿನಲ್ಲಾಗುವ ಹೋರಾಟವನ್ನು ಬಲುದಿನಗಳಿಂದಲೂ ಮನಕೊಟ್ಟು ನೋಡುತ್ತಿದೆ. ತನ್ನ ಸಹಾನುಭೂತಿಯನ್ನೆಲ್ಲ ಪ್ರಜಾಸತ್ತೆಯ ಸರಕಾರಕ್ಕೆ ಒಪ್ಪಿಸಿಯದೆ. ಜಗತ್ತಿನ ಸ್ವಾತಂತ್ರ್ಯ ಸಾಧನೆಯಲ್ಲಿ ಈ ಸ್ಪೆಯಿನಿನ ಹೋರಾಟವು ಮುಖ್ಯವಾದೊಂದು ಪಂಚ್ಛೇದವಾಗಿದೆ ಎಂದೆಣಿಸುತ್ತೇವೆ.

MIRA TOILET ARTICLES

"MIRA PRODUCTS" are of such excellence that they could compare favourably with the famous perfumes and toilet articles used by Indian Rulers in the glourious past.

H. H. The Maharajah of Sonepur

The Hon'ble Mr. B. K. Basu, C. I. E.

"MIRA" Products are in no way inferior to similar oreign products.

Sole Agents:

The Modern Trading Company,

Opp. City Press, MANGALORE.

Wanted a Canvassar to Book orders for Mira Products on pay or commission.

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ವ ವಿಮರ್ಶೆಗಳು ಬ್ರಿಟಿಷ ಸರಕಾರದ ಅಂತ ಗವನ್ನು ಬಹಿರಂಗಗೊಳಿಸುವುವಾಗಿವೆ. ರ್ವತ್ರವೂ ಯುದ್ಧಭಯದ ಪೋಟವು ಕವಿ ಗ, ಬ್ರಿಟಿಷರು ಇದುವರೆಗೆ ಮಾಡಿರದ ಧ್ಧತೆಯನ್ನು ಬೇಗನೆ ಮುಗಿಸಬೇಕಾಗಿ ಬಂದಿ ವ ಕಾಲದಲ್ಲಿ, ಪ್ರಪಂಚದ ಇತರ ಭಾಗಗ ದ ಬ್ರಿಟಿಷರ ಅವಹೇಳನಕ್ಕೆ ಕಾರಣವಾಗಿ ವ ಪ್ರಸಂಗಗಳು ನಡೆದುಹೋಗುತ್ತಲೇ ಇವೆ ನ್ನು ಕುರಿತಾಗಿ, ಪಾರ್ಲಿಮೆಂಟಿನಲ್ಲಿ ಚರ್ಚೆ ಗುವುದು ಆಗತಾನೆ ಬ್ರಿಟಿಷ ಮುಖ್ಯ ಂತ್ರಿಗಳು ತಮ್ಮ ಮಾನರಕ್ಷಣೆಗಾಗಿ ಉದಾ ರಣೆ ಹೇಳುವರು ಇದು ಬರೇ 'ಉತ್ತರ' ಕ್ರಿಯೇ ಹೇಳುವ ಮಾತಲ್ಲದೆ, ಖಂಡಿತವಾಗಿ ಕ್ಷವಾಗಿಲ್ಲ ಎಂದು ಆಗ ಸ್ಪಷ್ಟವಾಗುವುದು

ಚೀನಾ ಸ್ಪೈಯಿನುಗಳಲ್ಲಿ, ಸಿವಿಲಿಯನ್ ಜೆಗಳನ್ನು ಶತ್ರುಗಳು ವ್ಯರ್ಥವಾಗಿ ಬಾಂಬು ಲ್ಲಿ ಕೊಲ್ಲುತ್ತಿರುವುದು ನಾಗರಿಕರ ದೃಷ್ಟಿ ಂದ ತಿರಸ್ಕಾರಯೋಗ್ಯವೇ ಮಾತ್ರವಲ್ಲದೆ, ಹಾಪರಾಧವೆಂದು ಗಣನೆಗೆ ಬರುವ ತಪ ಎಂದು ಸರ್ವತ್ರವೂ ಇಂಗ್ಲೆಂಡಿನಲ್ಲಿ ವಹಾ ಭೆಗಳಲ್ಲಿ ನಿರ್ಧಾರವಾಗಿದೆ ಇತ್ತ, ಇಂದಿ ಂದ ವಾಯುವ್ಯ ಗಡಿನಾಡಿನಲ್ಲಿ ಬಾಂಬುಗಳ ಸೆದು ಜನರನ್ನೂ ವಸತಿಗಳನ್ನೂ ಧ್ವಂಸಮಾ ತ್ತಿರುವುದು ಕೇವಲ ಅನ್ಯಾಯವೆಂದು ನೂ ರು ಸಲ ಸಭೆಗಳಲ್ಲಿ ಸಾರಿದ್ದಾಗಿದೆ ಇವೆ ರಡೂ ವಿಷಯುಗಳು ಕಳೆದ ವಾರ ಪಾರ್ಲಿಮೆಂ ನಲ್ಲಿ ಚರ್ಚೆಗೆ ಬಂದುವು

ಬ್ರಿಟಿಷ ಮುಖ್ಯ ಮಂತ್ರಿಗಳ ಚೀನ ಯಿನುಗಳಲ್ಲಾಗುವ ಒನತೆಯ ಸಿಷ್ಕರಣ ಸೆಯ ಅನ್ಯಾಯವೆಂದು ತಿಳಿವೂ ಒಪ್ಪಿ ತ್ತಲೇ ... ದಲೇ ನಮ್ಮ ಶದ ವಾಯವ್ಯ ಗಡಿನಾಡಿನಲ್ಲಿ ಬಾಂಬು ದಾಗುವ ಹಾವಳಿಯೆಲ್ಲ ಧರ್ಮಯುತವಾ ದುದೆಂದು ತಮ್ಮ ಕಾಂಗ್ರೆಸ ಯಿವಾದ ಜತೆ ಂಗೆಗೆನ್ನು ಪ್ರದರ್ಶಿಸಿದರು

ಆದರೆ ಪಾರ್ಲಿಮೆಂಟಿನಲ್ಲಿ ನಿರಸ್ತ್ರರನ್ನು ಲಿಗೊಳ್ಳುವ ವಿಚಾರಗಳನ್ನು ಅಪೇಕ್ಷಿಸಿ ಒಂದೇ ಗೆಯ ನಿರ್ಣಯವಾಗುವುದುತ್ತವೆಂದೂ ಷೇತ್ರದ ಕೆಲವರಾದರೂ ಅಚ್ಚ ಬ್ರಿಟಿಷರಿದ್ದ ಂಬುದು ಕೃತಜ್ಞಕರವಾಗಿದೆ ಯತಾರ್ಥ ವರ್ತ ಯ ಗಂಧವೂ ಇಲ್ಲದೆ, ತಲೆ ಹಾಳಾದವರ ಾತಿನಂತೆ ಭ್ರಾಂತಿಕವಾದ ತತ್ವ ಸಾರಿದವರೆಂ ರೆ ಬ್ರಿಟಿಷ ಮುಖ್ಯ ಮಂತ್ರಿ ಚೆಂಬರಲೇನರ ತ್ರ ಇವರ ಈ ಮಾತುಗಳನ್ನು ಕೇಳಿದಲ್ಲಿ ಟಿಷರು 'ನೋನ್ಸೆನ್ಸ್' ಎಂದು ಯಾವುದನ್ನು ರೆಯುವರೋ ಅದಕ್ಕೆ ಯೋಗ್ಯ ದೃಷ್ಟಾಂತ ಾಗುವುದಾಗಿ ಪಾರ್ಲಿಮೆಂಟಿನ ಸದಸ್ಯರ ಅಭಿ ್ರಾಯ ಮಾಡಿಕೊಂಡರು

ಚೆಂಬರಲೇನರಿಗೆ ಕಾಕ ಆಸನವು ಬಿಸಿ ಏರುತ್ತ ಬಂದಿದೆ ಹೀಗಾಗಿ ಆಸನ ಬಿಡಲು ಮೈಯಿಲ್ಲದೆ ಕೂತಿರಲೂ ಆಗದೆ, ಚಡಪಡಿಸು ರಬೇಕಾಗಿದೆ 'ಮಾನವ ಧರ್ಮವೇ ಕೆಡು ಂತಾಯಿತಲ್ಲ ಈ ಕಲಿಯುಗದಲ್ಲಿ!' ಎಂದು ರ್ಧೆಹೊಂದಿದವನಂತೆ ಗೋಳಾಡುತ್ತ ಚೀನ ಯಿನುಗಳಲ್ಲಾಗುವ ಪೈಶಾಚಿಕ ಯುದ್ಧ ನ್ನು ಖಂಡಿಸುವ ಈ ಮಂತ್ರಿವರರನ್ನು— ರ್ಮನರೂ ಇಟೆಲಿಯಾನರೂ ಜಪಾನೀಯರೂ ಇಂಡಿಯಾ ಅರೇಬಿಯಗಳಲ್ಲಿ ಬ್ರಿಟಿಷರು ಮಾಡುತ್ತಿರುವ ಅಧರ್ಮ ಯುದ್ಧವನ್ನು ನಾವೆಂದೂ ಮರೆಯುವವರಲ್ಲ' ಎಂದು ಹಿಯ್ಯಾಳಿಸುತ್ತಿರುವಾಗ, ಮಂತ್ರಿಗಳ ಮುಖ ಕೆಂಪಾಗಿ ಬಾಡಿ, ಕೂತ ಕುರ್ಚಿಯೇ ಮುಸಿದು ಹೋಗುವ ಹಾಗೆ ಕಾಣುತ್ತಿರುವುದಲ್ಲವೆ?

'ಈ ಸಿಡಿಗುಂಡಾಟದ ಪ್ರಶ್ನೆಯ ಉತ್ತ ರವು ನಮ್ಮ ಬಾಯಿಂದ ಹೊರಡುವಾಗ ನಮ್ಮ ಲ್ಲಿನ ಕಾಪಟ್ಯವು ವ್ಯಕ್ತವಾಗುವುದಲ್ಲವೆ?' ಎಂದು ಇವರ ಕೂಟದವರೇ ಆಗಿರುವ ಮೂರ್ ಸಾಹೆಬರು ಟೈಮ್ಸ ಪತ್ರಿಕೆಗೆ ಬರೆದಿರುವರು.

ದಯಾ ಪ್ರಚಾರದ ಸಿಡಿಗುಂಡುಗಳು

'ಬ್ರಿಟಿಷ ಮುಖ್ಯ ಮಂತ್ರಿಗಳು ಯಾವುದನ್ನು ಇತರರಲ್ಲಿ ಆಕ್ಷೇಪಿಸುವರೋ, ಅದನ್ನೇ ತಾವು ಆಚರಿಸುತ್ತಾರೆ. ಸ್ವಲ್ಪವೂ ಸ್ಪಷ್ಟವಾಗಿ ಮಾತಾಡಬಹುದಾದರೆ, ಇವರಂಥ ಕಪಟ ಶಾಂತಿಕನೂ ಪರವಿಮರ್ಶಕ ಟಿಕ್ಕನೂ ಮತ್ತೊಬ್ಬನಿಲ್ಲ' ಎಂಬುದು ನಿರ್ವಿವಾದ.

ಹೀಗೆಲ್ಲ ಈ ಸಿಡಿಗುಂಡುಗಳ ಪ್ರಶ್ನೆ ಉಂಟಾಗಿರಲು ಕಾರಣವೇನು?

ಇಂಗ್ಲೆಂಡಿನಲ್ಲಿ ಹಿಂದಣ ಮುಖ್ಯ ಮಂತ್ರಿ ಬಾಲ್ಡ್ವಿನ್‌ರು, ಮುಂದಣ ವಿಮಾನ ಯುದ್ಧ ಗಳಲ್ಲಿ ಶತ್ರುವು ನಮ್ಮಲ್ಲಿ ನುಗ್ಗಿ ಕೊಲ್ಲುವುದ ಕ್ಕಿಂತ ಅಧಿಕ ಸಂಖ್ಯೆಯಲ್ಲಿ ಸ್ತ್ರೀ ಪುರುಷರನ್ನೂ ಬಾಲಕರನ್ನೂ ಶತ್ರುವಿನ ರಾಜ್ಯದಲ್ಲಿ ಕೊಂದಿಕ್ಕು ವುದು ನಮ್ಮ ಕರ್ತವ್ಯ ಎಂದಿದ್ದರು ಹೀಗೆಂ ದರೆ,—ಈಗ ಫ್ರೆಂಕೋ ನಡೆಸುತ್ತಿರುವ ಕೃತಿಯು ಅತ್ಯಾಚಾರವೆನ್ನುವ ಬ್ರಿಟಿಷರೇ ನಾಳಿನ ಯುದ್ಧ ದಲ್ಲಿ ಫ್ರೆಂಕೋವನ್ನು ಮೀರಿ ಕೃತಿಗಳನ್ನು ಮಾಡಬೇಕಾಗುವುದು ಎಂದರ್ಥ ಇದಕ್ಕಾಗಿ ಯೆ, ವಿಮಾನ ಯುದ್ಧಗಳ ಕಾಲದಲ್ಲಿ ಜನರು ಹೇಗೆ ವರ್ತಿಸಬೇಕೆಂಬುದನ್ನು ಪ್ರತ್ಯಕ್ಷ ಪಾಠ ವಾಗಿ ಇಂಗ್ಲೆಂಡಿನಲ್ಲೀಗ ಕಲಿಸುವ ಏರ್ಪಾಡಾ ಗಿರುವುದೆಂದು, ವಿಮಾನಗಳನ್ನು ಸ್ವದೇಶ ದಲ್ಲಿ ಮಾತ್ರವೇ ಅಲ್ಲದೆ ಇತರರಿಂದಲೂ ಕೊಂಡು ಕೊಳ್ಳುವುದೆಂದು—ಹೀಗೆ ಎರಡು ವಿಶೇಷ ಕಾರ್ಯ ಗಳನ್ನೀಗ ಬ್ರಿಟಿಷ ಮಂತ್ರಿಗಳು ಮಾಡಿಸುತ್ತಿದ್ದಾರೆ

ಆಧುನಿಕ ಯುದ್ಧಕ್ರಮಗಳಲ್ಲಿ ಅತಿ ಹೀನವೂ ಅತಿ ಕ್ರೂರವೂ ಆಗಿದ್ದ ಹಗೆಗಳನ್ನು ಅತಿ ಬೇಗದಲ್ಲಿ ಧ್ವಂಸಮಾಡುವ ನಾನಾ ಚಮ ತ್ಕಾರಗಳನ್ನು ಜಪಾನೀಯರು ಕಲಿತ ಕೊಂಡಿ ರುವರು ಮಾತ್ರವಲ್ಲದೆ ಉಪಯೋಗಿಸುತ್ತಲೂ ಇರುವರು ಅಸ್ತ್ರಧಾರಿಗಳನ್ನೆ ಮಾತ್ರವಲ್ಲದೆ ನಿರಸ್ತ್ರರನ್ನು ಕೂಡ ಶತ್ರುವಿನ ದೇಶದ ಮೇಲೆ ಎರಗಿ ಬಡಲೆತ್ತಿ ಧ್ವಂಸಮಾಡುವುದು ಆಗ ತ್ಯವೆಂದೂ ನ್ಯಾಯವೆಂದು ಬಗೆಯುವ ಯುದ್ಧ ಕ್ರಿಯೆ ಯುದ್ಧಭಾವಗಳು ಶತ್ರುವಿನ ರಾಜ್ಯದಲ್ಲಿ ಖಂಡಿತ ಇರುವ ಕಾರಣ, ಅದೇ ಕಾರಣದಿಂದ ನಿರಸ್ತ್ರರನ್ನೂ ನಿರಾಕ್ಷೇಪವಾಗಿ ಭಯಾಕ್ರಾಂತ ರನ್ನಾಗಿ ಮಾಡುವುದರಲ್ಲಿ ಯಾರ ಅತಂಕವೂ ಇರಬಾರದೆಂದೂ ಹಾಗೆ ಮಾಡಿದಲ್ಲಿ ಜಯವು ನಿಶ್ಚಿತವೆಂದೂ ಜಪಾನಿನ ವಿಶ್ವಾಸವಾಗಿದೆ ಧರ್ಮವೆಂದು ಕಾತರಿ ಯುದ್ಧವು ಸಾಗಲಾ ರದು ಎನ್ನುವವರು

ಹೀಗಾಗಿ ಕೆಂಟನ್ ನಗರದಲ್ಲಿ ಕಳೆದ ವಾರ ಮತ್ತು ಇನ್ನೂ ನಿರಸ್ತ್ರರನ್ನು ಜಪಾನಿನ ವಿಮಾನಗಳು ಕೊಲ್ಲುತ್ತಿರುವುದು ಅಧರ್ಮವೆಂ ದು ಬ್ರಿಟಿಷ ಮಂತ್ರಿಗಳಿತ್ತಿರುವ ಆಕ್ಷೇಪಕ್ಕೆ,— ಅದೇನೂ ವಿಶೇಷ ವಿಷಯುವಲ್ಲ, ಜನರಲ್ಲಿ ಭಯ ಹುಟ್ಟಿಸಿ ಅವರನ್ನು ದಿಗ್ಭ್ರಾಂತರನ್ನಾಗಿ ಮಾಡುವುದಕ್ಕಾಗಿ ಮಾತ್ರ ಹೀಗೆ ಬಾಂಬು ಎಸೆ ಯುವುದು, ಎಂದುತ್ತರ ಬಂತು ಬೋಲ್ಡ್ ವಿನ್ ಮಂತ್ರಿಗಳ ಸೂತ್ರವನ್ನು ಮೀರಿದ್ದು ಜಪಾನು ಏನೂ ಮಾಡಿದ್ದಿಲ್ಲವೆಂದಾಯಿತು ಇದಕ್ಕೇಕೆ ಆಕ್ಷೇಪ? ಎಂದೇ ಜಪಾನಿನ ಉತ್ತ ರದ ಇಂಗಿತವಾಗದೆ? ಇದು ನ್ಯಾಯವಾದ ಮಾತಲ್ಲವೆ? ಕೆಂಟನ್ ಬಾರ್ಸೆಲೋನಗಳಲ್ಲಿ ಈಗ ನಡೆಯುತ್ತಿರುವುದೇ ನಾಳೆ ಬರ್ಲಿನ್ ಲಂಡನ್‌ಗಳಲ್ಲಿ ನಡೆವುದು, ನಮ್ಮ ವಾಯುವ್ಯ ಗಡಿನಾಡಿನಲ್ಲಿ ಜರಗುತ್ತಿರುವ ಯುದ್ಧೋತ್ಸ ವವೂ ಇದೇ!

ಇದೇಕೆ, ನಿರಸ್ತ್ರರ ಮೇಲೆ ಸಿಡಿಗುಂಡುಗಳು?

ವಿಮಾನ ಯುದ್ಧವನ್ನು ಮಾಡುವ ಕ್ರಮ ದಲ್ಲಿ ಸೈನಿಕರನ್ನೆ ತರಬೇತು ಮಾಡಬೇಕಾಗಿದೆ, ಹೀಗಾಗಿ, ಸ್ಪೈಯಿನಿನಲ್ಲಾಗುವ ಯುದ್ಧದಲ್ಲಿ ಇಟೆಲಿ, ಜರ್ಮನಿ ಮೊದಲಾದ ದೇಶಗಳ ವಿಮಾ ನಗಳು ಯುದ್ಧಮಾಡುವ ಉದ್ದೇಶವೂ ತಿಳಿದು ಬರುವುದಾಗಿದೆ ಬ್ರಿಟಿಷ ನಾವೆಗಳನ್ನು ಸಿಡಿ ಗುಂಡುಗಳಿಂದ ಧ್ವಂಸಮಾಡಿ, ವಿಮಾನಗಳ ನಾವೆಗಳನ್ನು ಗುರಿಯಟ್ಟು ಚಮತ್ಕಾರವಾಗಿ ಮುಳುಗಿಸುವ ಕ್ರಮ ಕಲಿಯುತ್ತಿವೆ, ತರಬೇ ತಾಗುತ್ತವೆ ಈ ಭಾಗದಲ್ಲಿ ಇಂಗ್ಲೆಂಡು 'ಸಾಮುದಾಯಿಕ ಭದ್ರತೆ' ಎಂದೆಷ್ಟು ತತ್ವ ಸಾರುತ್ತಿರುವುದು ಮಾತ್ರ, ಸಿದ್ಧತೆ ಇಲ್ಲದಿರುವು ದರ ಸೂಚನೆಯೇ ವಿನಾ, ಸಿದ್ಧನಾಗಿದ್ದಲ್ಲಿ ಈ ಸಮುದಾಯದ ಮಾತು ಎಂದೂ ಏಳದೆ, ಇಂ ಗ್ಲೆಂಡು ಭದ್ರತೆ ಮಾತ್ರ ಕೂಡಲೆ ನೋಡುತ್ತಿತ್ತು

ಇನ್ನೂ ವಿಚಿತ್ರವಿದೆ ಜರ್ಮನಿಯ ವೈಮಾನಿಕರು ಫ್ರೆಂಕೋವಿನ ಸಹಾಯಕ್ಕೆ ಬರು ವಾಗ, ಮೂರು ತಿಂಗಳ ಕನಕ ಮಾತ್ರ ಸಹಾಯ ಮಾಡಿ ಜರ್ಮನಿಗೆ ಹಿಂತೆರಳಬೇಕೆಂದು ಅಪ್ಪಣೆ ಹೊಂದುತ್ತಾರೆ ಎಂದರೆ ಪ್ರತಿ ಮೂರು ತಿಂಗ ಳಿಗೆ ಒಂದೊಂದು ಪಂಗಡವು ತರಬೇತಿಹೊಂ ದುವ ಹಾಗಾಗಿದೆ ಇಟೆಲಿ ರಷ್ಯಗಳ ಕರ್ತ ಗಳೇ ಹೀಗೆ ಅತ್ಯಧಿಕ ಸಂಖ್ಯೆಯಲ್ಲಿ ಅತಿ ಕಡಮೆ ಸಮಯದೊಳಗಾಗಿ ವೈಮಾನಿಕರನು ತರಬೇತುಗೊಳಿಸುವುದೇ ಈ ಪರಕೀಯರ ಉದ್ದೇಶವಾಗಿದೆ ಮತ್ತೊಬ್ಬರಿಗೆ ಸಹಾಯ ವಾಯಿತು, ತಮಗೆ ತರಬೇತಾಯಿತು ಅಯಾ ಚಿತವಾಗಿ ಯುದ್ಧರಂಗವೊಂದು ದೊರೆಯಿತು ಎಂದೇ ಇವರೆಲ್ಲ ಎಣಿಸುವರು ಇವರ ಅನು ಭವವನ್ನು ಎಲ್ಲ ಸರಕಾರಗಳೂ ತಿಳಿದುಕೊಳ್ಳು ವುವು ರಷ್ಯದ ವಿಮಾನಗಳು ಅತ್ಯುತ್ತಮ, ಜರ್ಮನ ನಾವಿಕರು ಅತ್ಯುತ್ತಮ ಎನ್ನುವ ತೀರ್ಮಾನವಾಗಿರಲು ಇದೇ ಕಾರಣವು ಸ್ಪೈಯಿನ್ ಚೀನಾಗಳಲ್ಲಾಗುವ ಯುದ್ಧದಿಂದ ಇತರ ರಾಷ್ಟ್ರೀಯರಿಗೆ ದೊರೆತ ಲಾಭವಿದು.

ನಾಳಿನ ಯುದ್ಧದಲ್ಲಿ ಬ್ರಿಟಿಷ ವೈಮಾನಿಕರು ಯಾರು?

ನಾಳೆ ಯುದ್ಧವಾದಲ್ಲಿ, ನಾವು ಖಚಿತ ತಿಳಿಯಬಹುದಾದ ಒಂದು ವಿಷಯವಿದೆ ಯುದ್ಧರಂಗಕ್ಕಿಳಿದು ವಿಮಾನ ಯುದ್ಧವನ್ನು ಮಾಡುವುದಕ್ಕಾಗಿ ಸೈನಿಕರು ಅರಬಿಸ್ತಾನದಿಂದ ಲೂ ಇಂಡಿಯದ ವಾಯುವ್ಯ ಭಾಗದಿಂದಲೂ ಒದಗುವರೆಂಬುದು ನಿಶ್ಚಯವಾಗಿದೆ ಇವರಿ ಗೆಲ್ಲ ಇಷ್ಟರಲ್ಲಿ ಬೇಕಾದಷ್ಟು ತರಪೇತು ದೊರೆ ತೇ ಇದೆ ಸ್ಪೈಯಿನ್ ಚೀನಾಗಳಲ್ಲಿ ಇತರ ರಾಷ್ಟ್ರೀಯ ವೈಮಾನಿಕರು ನಿರಸ್ತ್ರರನ್ನು ಕೊಂ ದಿಕ್ಕಿ ಹೇಗೆ ಯುದ್ಧ ತರಬೇತು ಹೊಂದಿರು ವರೋ ಅದರಂತೆ ಇವರೂ ತರಬೇತಾಗಿದ್ದಾರೆ. ಎಂದರೆ, ಈ ಬಗೆಯಾಗಿ ನಿರಸ್ತ್ರರ ಮೇಲೆ ಗುಂಡೆಸೆವ ಕ್ರಮವೇ ಇಲ್ಲದಂತೆ ಶಾಸನವುಂಟಾ ದರೆ,—ಯುದ್ಧಕಾಲದಲ್ಲಿ ಸರಿಯಾಗಿ ಯುದ್ಧ ಮಾಡಲು ನಮ್ಮ ವೈಮಾನಿಕರಿಗೆ ತರಬೇತು ಹೇಗೆ ದೊರೆಯಬಹುದೆಂದು ಯುದ್ಧ ಇಲಾ ಖೆಯ ಗೋಳಾಟವೇ ಏಳಬಹುದು!

ನೂರೈವತ್ತು ವರ್ಷಗಳ ಹಿಂದೆ

ಇಂಗ್ಲೆಂಡಿನಲ್ಲಿ ಫ್ರೆಂಚರಿಗೂ ಇಂಗ್ಲಿಷ ರಿಗೂ ಯುದ್ಧಪ್ರಸ್ತಾಪವೆದ್ದಾಗ, ಇಂಗ್ಲೆಂಡಿ ನಲ್ಲಿ ಬಂದೂಕುಗಳನ್ನು ಉಪಯೋಗಿಸುತ್ತಿರ ಲಿಲ್ಲ, ಕತ್ತಿಗಳನ್ನೆ ಬಳಸುತ್ತಿದ್ದರು ಫ್ರೆಂಚರು ಕೋವಿಗಳನ್ನು ಧರಿಸಿ ಯುದ್ಧಕ್ಕೆ ಬಂದರು. ಈ ಕತ್ತಿಗಳು ಅವಕ್ಕೆ ಈಡೇ? ಆಗ ಪತ್ರಿಕೆಗ ಳಲ್ಲಿ—ಹಾಳು ಫ್ರೆಂಚರು ಕೋವಿ ಧರಿಸಿದ ಕಾರಣ, ಪುಣ್ಯವುಳ್ಳ ಬ್ರಿಟಿಷರೂ ಕೋವಿಗಳನ್ನೆ ಬಳಸಬೇಕಾಯಿತಲ್ಲಾ! ಎಂದು ಪ್ರಲಾಪವೆ ದ್ದಿತು! ಈಗ ಬ್ರಿಟಿಷರು ಯುದ್ಧಸನ್ನಾಹ ಹೆಚ್ಚಿ ಸುವುದಕ್ಕೂ ಇದೇ ಮುಖ್ಯ ಕಾರಣವಾಗಿ ಪ್ರಕಟವಾಗುತ್ತಲೇ ಇದೆ

ವಾಯುವ್ಯ ಗಡಿನಾಡಿನಲ್ಲಿ

ಎಷ್ಟೋ ದಿನಗಳಿಂದ ಈ ಸಿಡಿಗುಂಡು ಚೆಲ್ಲುವ ಯುದ್ಧಕ್ರಮದ ತರಬೇತು ನಡೆಯು ತ್ತಲೇ ಇದೆ ಇವರಿಗೆ ದೊರೆತಿರುವ ತರಬೇ ತಿನ ಅವಧಿ, ಇತರ ಯಾವ ರಾಷ್ಟ್ರಕ್ಕಿಂತಲೂ ಹೆಚ್ಚಾಗಿದೆ ಆದರೂ ಈ ಕ್ರಮವನ್ನು ನಿಲ್ಲಿಸಿ ರೆಂದರೆ, ಇತರರೆಲ್ಲರೂ ಒಪ್ಪಲಿ ಎನ್ನುತ್ತಾರೆ ಇತರರೆಲ್ಲರೂ ಒಪ್ಪುವ ಹಾಗೆ,—'ಪೊಲೀಸ' ಕ್ರಮಕ್ಕಾಗಿ ಈ ವಿಧಾನವು ಆಗತ್ಯವೆಂದು ಇವರ ಗವಿಸ್ಕುವುದನ್ನು ತಡೆವುದಲ್ಲ ಅದಾ ದರ ಪರದೇಶಗಳಲ್ಲಿ ದೂರದ ಜನರಿರುವಾಗ, ಪೊಲೀಸ್ ಕ್ರಮವೆಂದು ಗಣಿಸ್ಯಬಾರದೇಕೆ? ಎಂದು ಪ್ರಶ್ನೆಯಾಗಿದೆ

'ವಿಮಾನಗಳಿಂದ ಸಿಡಿಗುಂಡು ಚೆಲ್ಲುವು ದರು. ಎಂಬ ಸೂಚನೆಯನ್ನು ಎಲ್ಲ ಸರಕಾರಗಳು ಒಪ್ಪುವ ತನಕ ಬ್ರಿಟಿಷ ಸರಕಾರವು ಈ ಬಗೆಯ ಭಯಂಕರ ಹಕ್ಕನ್ನು ಬಿಟ್ಟುಕೊಡಲಾರದು ಅದೂ ಸಾಲದಕ್ಕೆ ಗಡಿಪ್ರಾಂತ್ಯದ ಮೊದಲು ಕಳ ತಿಂಗಳ ಸ ವಿನೆ ಕೊಡುತಲಿದ್ದೇವೆ ಎಂದೂ, ವಿನಗಳ ಮಾತ್ರ ನಿಲ್ಲಿಸುವ ನಾವು ತೇವೆ, ಜನರು ಒಡಿದೆಗಿ ಒಡಕುತೊಳ್ಳೀ ಗವಿ ಗಳ ಇರವ ... ಜನರನ್ನು ... ಹಾಗಿಲ್ಲ ಎಂದು ಅದಕ್ಕ ಸ್ವಾಧಾನ ತಿಳಿಸ ಲಾಗಿದೆ ಒಡಿದ ಗುಂಪಿನವರಿದ್ದ ಬೀಡುಗಳ ಗಳ ... ಅವರು ಮಾತ್ರ ಗುಡಿಗ ಳೆ... ಹೋಗುವರು ಎಂಬಷ್ಟು ಕರು ಣೆಯನ್ನು ಸರಕಾರವು ಇಟ್ಟಿದೆ

THE

Canara Banking Corporation, Udipi, Ltd.

INCORPORATED IN BRITISH INDIA
ESTD 1906

Head Office: UDIPI, South Canara.

ANNOUNCEMENT.

A Branch of the CORPORATION
will be opened
at

ARNI
(N. Arcot Dt.)
Shortly

Total Resources Exceed Rs. 62 Lakhs.

ಹಕ್-ಅಲಿಗಳೊಳಗೆ ತಿಕ್ಕಾಟ

ಬಂಗಾಳದ ಮಂತ್ರಿಮಂಡಲದ ಅಂತಃಕಲಹಗಳ ಪ್ರಕಟಸ್ವರೂಪವಾದ ಪತ್ರವ್ಯವಹಾರ

ಮಂತ್ರಿ ಅಲಿಯವರು ಹೊರಗಾದರು

...ದ ಮುಖ್ಯ ಮಂತ್ರಿ ಫಜಲುಲ್ ಹುಕ್ಕರವರಿಗೂ, ಮತ್ತೊಬ್ಬ ಮಂತ್ರಿ ನವಶೇರ ಅಲಿಯವರಿಗೂ ಮೂರು ತಿಂಗಳುಗಳಿಂದಲೂ ಮನಸ್ತಾಪವುಂಟಾದುದನ್ನು ವೊದಲು ಪ್ರಕಟವಾದಾಗ, ಮೊದಲು ಹುಕ್ಕರೇ ಅಲ್ಲಗಳೆದು ಪತ್ರಿಕೆಗಳು ತನಗೆ ಯಾವಾಗಲು ವಿರುದ್ಧವಾಗಿ ಬರೆವವರೆಂದೇ ದೂರಿದರೂ, ಕಳೆದ ವಾರ, ಅಲಿಯವರು ಎಲ್ಲ ಮಂತ್ರಿಗಳ ಜತೆಯಲ್ಲಿ ರಾಜೀನಾಮೆ ಕೊಟ್ಟುದೂ, ಹುಕ್ಕರು ಪುನಃ ಮಂತ್ರಿಮಂಡಲ ರಚಿಸಿ, ಅಲಿಯವರೊಬ್ಬರನ್ನು ಮಾತ್ರ ಹೊರಕ್ಕಿಟ್ಟು, ಇತರರೆಲ್ಲರನ್ನು ಮಂಡಲಿಯಲ್ಲಾಗಿ ರಚಿಸಿಕೊಂಡುದೂ ಸರ್ವವಿದಿತವಾಗಿದೆ. ಈ ಸಂದರ್ಭದಲ್ಲಿ ಹುಕ್-ಅಲಿಯವರೊಳಗಣ ತಿಕ್ಕಾಟದ ಪತ್ರವ್ಯವಹಾರವು ಪ್ರಕಟವಾಗಿದೆ.

ಮೇ ತಾ. ೧೯ರಲ್ಲಿ, ಹುಕ್ಕರು ಅಲಿಯವರಿಗೆ ಬರೆದ ಪತ್ರದಲ್ಲಿ ಅಲಿಯವರ ವರ್ತನೆಯನ್ನು ಕುರಿತಾಗಿ ಆಕ್ಷೇಪಿಸಿರುವರು.

(೧) ಈಗಣ ಮಂತ್ರಿಮಂಡಲವನ್ನು ರದ್ದುಮಾಡಿ, ಸರ್ವ ಪಕ್ಷಗಳವರನ್ನು ಸೇರಿಸುವ ಇರಾದೆಯಿಂದ ಉದ್ದೀಪ್ತರಾಗಿ ಅಲಿಯವರು ಕಾಂಗ್ರೆಸಿನೊಡನೆ ಈಗ ಸಂಧಾನ ಬೇಡವೆಂದರೂ, ಕಾಂಗ್ರೆಸು ಮುಖಂಡರನ್ನು ಕಂಡು ಅವರು ಸರ್ವ ಪಕ್ಷೀಯ ಮಂತ್ರಿಮಂಡಲವನ್ನು ಪ್ರೋತ್ಸಾಹಿಸುವಂತೆ ವ್ಯವಹರಿಸಿದುದೇ ಮಾತ್ರವಲ್ಲದೆ, ಈಗಣ ಮಂತ್ರಿಮಂಡಲವು ಬೇಗನೆ ಸೋತು ಬೀಳುವುದೆಂದೂ, ಹಾಗೆ ಸೋಲುವ ಕೂಡಲೇ ಕಾಂಗ್ರೆಸನ್ನು ಸೇರಿಸಿಕೊಳ್ಳುವುದುತ್ತಮವೆಂದೂ ಸಾರಿದ್ದು ಅನ್ಯಾಯ. (೨) ಈಗಣ ಮಂತ್ರಿಮಂಡಲದ ವಿಷಯ ಅಲಿಯವರು ನಾನಾ ಆಕ್ಷೇಪಗಳನ್ನು ಇತರರೊಡನೆ ಸಾರಿದ್ದಾರೆ; ಅಲಿಯವರು ಮಾಡಬೇಕೆಂದ ಹಿತಕಾರ್ಯಗಳನ್ನು ಮಾಡಲು ಮಂತ್ರಿಗಳು ಬಿಡುತ್ತಿಲ್ಲದರಿಂದ ಯಾವಾಗ ಬೇಕೋ ಆಗ ರಾಜಿನಾಮೆ ಕೊಡಲು ಅಲಿಯವರು ಸಿದ್ಧರು, ಇತರ ಮಂತ್ರಿಗಳು ಪ್ರಗತಿಗೆ ಸಹಾನುಭೂತಿಯುಳ್ಳದವರೆಂದು ಅಲಿಯವರು ಸಾರಿದ್ದುದು, ಅನ್ಯಾಯ. (೩) ...ನಡದಿಂದ ಸರ್ ಫ್ರಾನ್ಸಿಸ್ ಫ್ಲೌಡರನ್ನು ಇಲ್ಲಿ ...ಮಿಸುವಾಗ, ಅದಾಗದಂತೆ, ಅದನ್ನು ಆಕ್ಷೇಪಿಸುವಂತೆ ಸ್ವಪಕ್ಷದ ಮೆಂಬರರನ್ನು ಪ್ರೋತ್ಸಾಹಿಸಿದುದೂ ಅಲಿಯವರ ಅಪರಾಧ. ಅವರ ...ಮಕವನ್ನು ಎದುರಿಸಿದ್ದೆಂದೂ ಅದನ್ನು ಇತರ ಮಂತ್ರಿಗಳು ಆಕ್ಷೇಪಿಸಿದರೆಂದೂ ಅಲಿಯವರು ಸಾರಿದ್ದು ತಪ್ಪು. (೪) ಸ್ವಪಕ್ಷ ವಿರುದ್ಧರೊಡನೆ ಅನುದಿನವೂ ನಾನಾ ಸಂಭಾಷಣೆ ಗೈದು, ಅವರನ್ನು ಸ್ವಪಕ್ಷಕ್ಕೆ ತರುವ ಬದಲಾಗಿ ಅವರು ವಿರೋಧಿಸುವಂತೆ ಇನ್ನೂ ಪ್ರೋತ್ಸಾಹವಿತ್ತುದು ಅನ್ಯಾಯ. (೫) ಎಮಂತ್ರಿಮಂಡಲದೊಡನೆ ಸಹಕರಿಸುವುದು ಅತಿ ಕಷ್ಟ. ಅವರೇನೂ ಬಂಗಾಳದ ಹಿತಕ್ಕಿಲ್ಲ, ತಾನೂ ಹಿತಮಾಡ ಬಿಡುವಲ್ಲ ಎಂದು ಅಲಿಯವರು ಅಭಿಪ್ರಾಯ ಹೇಳುತ್ತಿದ್ದುದು—ಇವೆಲ್ಲವೂ ಹುಕ್ಕರು ಬರೆದುದರಲ್ಲಿದೆ.

ಅಲಿಯವರೇನಂತೆ?

ಇದೆಲ್ಲ ಆಪಾದನೆಗಳನ್ನು ಮೂಲೆಗೊತ್ತಿ, ಒಂದೊಂದನ್ನೆ ಖಂಡಿಸಿ ಅಲಿಯವರು ಪ್ರತ್ಯುತ್ತರ ಬರೆದಿರುವರು:—

(೧) ಯಾವುದೊಂದು ಪಕ್ಷದವರೊಡನೆ ನಾನು ಮಾತಾಡಿದ್ದೇ ಇಲ್ಲ. ಹುಕ್ಕರೇ ಸೂಚನೆ ಕೊಟ್ಟ ಬಳಿಕ ಮಾತ್ರ ಹಾಗೆ ಮಾತಾಡಿದ್ದೆ. ಇದಕ್ಕೆ ಹುಕ್ಕರ ಒಪ್ಪಿಗೆಯೂ ದೊರೆತಿದೆ. ಇದಕ್ಕೆ ವಿರುದ್ಧ ಬರೆವರೆ ಹುಕ್ಕರಿಗೆ ತಕ್ಕಲ್ಲ.

(೨) ನನ್ನ ಹಿಂದೀ ಬಾಂಧವರ ಕಾಲಿಗಾದರೂ ಬಿದ್ದೇನು, ಯುರೋಪಿಯರ ಬಾಗಿಲಿಗೆ ಹೋಗಲಾರೆನು ಎಂದು ನಾನು ತಿಳಿಸಿ, 'ಸಲಾಮಿ'ಯ ಬದಲಾಗಿ 'ಬರ್ತರಫನ್ನು' ಸೂಚಿಸಿದರೆ ನಾನು ರಾಜೀನಾಮೆ ಕೊಡುವೆನೆಂದು ಮಂತ್ರಿಮಂಡಲದಲ್ಲಿ ಸೂಚಿಸಿದ ತರುವಾಯ, ಹುಕ್ಕರನ್ನೆ ಕಂಡು, ಈಗಣ ಮಂತ್ರಿಗಳೆಲ್ಲ ಶ್ರೀಮಂತ ಪಕ್ಷದವರಾಗಿದ್ದುದರಿಂದ ಜನತೆಯ ಹಿತವಿರೋಧಿಗಳಾಗದೆ ಇರಲು ಅವರಿಗೆ ಉಪಾಯವಿಲ್ಲದ ಕಾರಣವೂ ನಾವೆಲ್ಲ ಯುರೋಪೀಯ ಮೆಂಬರರ ಸಹಾಯದಿಂದಲೇ ಆಳಬೇಕಾಗಿರುವ ಕಾರಣವೂ ಈ ಮಂತ್ರಿಮಂಡಲದಿಂದ ಜನತೆಗೆ ಸುಖವಿಲ್ಲೆಂದು ನಾನು ತಿಳಿಸಿದೆ. ಹಾಗಿದ್ದಲ್ಲಿ ಮಂತ್ರಿಗಳನ್ನು ಬದಲಾಯಿಸಿ, ಕಾಂಗ್ರೆಸಿನವರೊಡನೆ ಒಂದು ಕಾರ್ಯಕ್ರಮಕ್ಕೆ ತಕ್ಕಂತೆ ನಾವು ಪ್ರತ್ಯೇಕ ಮಂತ್ರಿಗಳನ್ನೂ ಸೇರಿಸಿಕೊಳ್ಳಬಹುದಾಗಿ ಹುಕ್ಕರೆಂದ ಕಾರಣವೇ, ಹುಕ್ಕರೇ ಸ್ವಯಂ ಕಾಂಗ್ರೆಸಿನೊಡನೆ ಸಂಭಾಷಣೆಗೆ ತೊಡಗುವ ಮೊದಲು ನಾನು ಸ್ವಲ್ಪ ಮೂಲಪೀಠಿಕೆ ಹಾಕುವಂತೆ ಅಭಿಪ್ರಾಯವಾದುದರಿಂದಲೂ ಹುಕ್ಕರೇ ಅಬುಲ್ ಕಲಮ್ ಆಜದರನ್ನೂ ಇತರರನ್ನೂ (ಕಾಂಗ್ರೆಸಿನವರು) ಕಂಡಾಗಿದೆ ಎಂದುದರಿಂದಲೂ, ನಾನು ಕಾಂಗ್ರೆಸಿನ ಮುಂದಾಳುಗಳಲ್ಲಿ ಹಲವರೊಡನೆ ಈ ವಿಚಾರ ಸಂಭಾಷಿಸಿದ್ದೆ. ಮಾತ್ರವಲ್ಲದೆ, ಹುಕ್ಕರೆಂದಂತೆ, ಮುಂದಾಳುಗಳಲ್ಲಿ ಮೂವರೊಡನೆ, ಹುಕ್ಕರೊಡನೆ ಸಂಭಾಷಿಸಲು ದಿನಸಿದ್ಧಯ ಮಾಡಿ ಬಂದುದೂ ಇದೆ. ಆ ದಿನ ಮಾತ್ರ, ಸದ್ಯಕ್ಕೆ ಸಾಧ್ಯವಿಲ್ಲೆಂದು ಹುಕ್ಕರೆಂದು ಸಂಭಾಷಣೆ ಮುರಿದಿಕ್ಕಿದರು. ಇಷ್ಟೆ ಹೊರತು ನಾನು ಯಾವ ಕಾಂಗ್ರೆಸಿನವರೊಡನೆಯೂ ಎಂದೂ ಮಾತಾಡಿದ್ದಿಲ್ಲ.

(೩) ನನ್ನ ಬಜೆಟು ಭಾಷಣವನ್ನು ಸಮರ್ಥಿಸಿ ಕಾಂಗ್ರೆಸಿನವರು ಮಾತಾಡಿದ್ದುದು ನನ್ನ ದುರಾದೃಷ್ಟಕ್ಕೆ ಕಾರಣವಾಯಿತು! ನಾನೇ ಅವರು ಹಾಗೆ ಸಮರ್ಥಿಸಿ ಕೊಂಡಾಡುವಂತೆ ಪ್ರೇರೇಪಿಸಿದ್ದೆನೆಂದು ವಾದಿಸಿ ಮುಂದಣ ಬಜೇಟಿನಲ್ಲಿ ಇಷ್ಟೆ ಚೆನ್ನಾಗಿ ಪ್ರಜಾಹಿತದ ಕಾರ್ಯ ನಿರ್ವಹಿಸಲು ನನಗೆ ಹಣವೆಲ್ಲಿಂದ ದೊರೆಯುವುದೋ ನೋಡೋಣ ಎಂದು ಇತರ ನಮ ಮಂತ್ರಿಗಳು ಕೆಲವರೆಂದುದೂ ನಮಗೆಲ್ಲರಿಗೆ ಗೊತ್ತಿದೆ. ಇದನ್ನು ಗವರ್ನರರ ಕಿವಿಗೂ ಒಯ್ದರು. ನಾನು ನಿಜಸ್ಥಿತಿಯನ್ನು ಗವರ್ನರರಿಗೆ ತಿಳಿಸಿದೆನು.

(೪) ಇಸ್ಲಮಿನ ಹೆಸರೆತ್ತಿಕೊಂಡು ಮುಸ್ಲಿಮರ ಸಲುವಾಗಿ ಐಕ್ಯವಾಗಬೇಕೆಂದು ಕೂಗುತ್ತ ಸ್ವಾರ್ಥಸಾಧನೆ ಮಾಡುತ್ತಿರುವುದರಿಂದ ಜನತೆ ಕೆಡುವಂತಾಗಿದೆ. ಏಕೆಂದರೆ, ನಮ್ಮನ್ನು ಬಿಟ್ಟು ಸ್ವತಂತ್ರರಾಗಿರುವ ಎಸೆಂಬ್ಲಿ ಮೆಂಬರರೊಳಗಿನ ಮುಸ್ಲಿಮರನ್ನು ನಮ್ಮ ಕಡೆಗೆ ಕೂಡಿಸಿಕೊಳ್ಳೋಣವೆಂದು ಪ್ರಯತ್ನಿಸಿದಾಗೆಲ್ಲ, ಮುಸ್ಲಿಮ್ ಲೀಗಿನ ಮೆಂಬರರೇ ಹೆಚ್ಚಾಗಿ ಹಾಗೆ ಕೂಡಿಸಿಕೊಳ್ಳಬಾರದೆಂದು ಆಕ್ಷೇಪವೆತ್ತಿದುದನ್ನು ನಾನು ಪ್ರತಿ ಸಲವೂ ನೋಡಿದ್ದೇನೆ. ಹೀಗೆ ಎಲ್ಲ ಬಗೆಯ ಮುಸ್ಲಿಮರೂ ಒಂದಾದಲ್ಲಿ ಪಾರ್ಟಿ ಕೆಡುವುದೆಂದು ಅವರ ಅಭಿಪ್ರಾಯ ಹೇಳಿದ್ದನ್ನು ಹುಕ್ಕರೂ ಬಲ್ಲವರೇ.

(೫) ಈಗಣ ಮಂತ್ರಿಮಂಡಲವು, ಪ್ರಜೆಗಳ ಪ್ರತಿನಿಧಿಯಾಗಿರದೆ, ಧನಿಗಳ ಕೂಟ, ಶ್ರೀಮಂತರ ಮಂಗಡವಾಗಿದೆ. ಹಳ್ಳೀ ಜನರ ಪ್ರತಿನಿಧಿಗಳಲ್ಲದವರೂ ಮಂತ್ರಿಗಳು! ಯಾವುದೊಂದು ನಿಶ್ಚಿತ ಕಾರ್ಯಕ್ರಮವಿಲ್ಲದೆ ಈ ಮಂತ್ರಿಗಳು ಇನ್ನೂ ಕೆಲಸಮಾಡುತ್ತಿರುವುದರಿಂದಲೂ, ಜನತೆಗೆ ವಿಹಿತವೆನಿಸುವ ಯಾವ ಸುಧಾರಣೆ ಮಾಡುವುದೂ ಈ ಮಂತ್ರಿಗಳಿಗೆ ಒಪ್ಪದರಿಂದಲೂ, ಎಲ್ಲ ಪಕ್ಷಗಳ ಪ್ರತಿನಿಧಿಗಳಿಂದ ಕೂಡಿರುವ ಮಂತ್ರಿಮಂಡಲವಿಲ್ಲದೆ ಯಾವ ಉಪಯೋಗವೂ ಇರದೆಂದು ಅಲಿಯವರು ಒತ್ತಿ ಹೇಳಿದ್ದಾರೆ.

ಕಾಂಗ್ರೆಸನ್ನು ಮುರಿಯುವ ಭೇದೋಪಾಯ

★ ★ ★

ದೇಶದ ಹಿತಶತ್ರುಗಳ ತಂತ್ರ ಮಂತ್ರ

ಆಳುವ ರಾಜಕುಮಾರರಿಗೆ ಜೆಂಕಿನ್ಸರು ಬರೆದ ವಿಚಿತ್ರ ಪತ್ರ

★

ದೇಶದ ಏಕ ಮಾತ್ರ ರಾಜಕೀಯ ಸಂಸ್ಥೆಯಾಗಿರುವ ಕಾಂಗ್ರೆಸಿನಲ್ಲಿ ಭೇದೋಪಾಯದ ಮೂಲಕ ಒಡಕನ್ನು ಹುಟ್ಟಿಸಿ ಅದರ ಪ್ರಬಲ ಶಕ್ತಿಸಾಮರ್ಥ್ಯಗಳನ್ನು ಕುಗ್ಗಿಸುವ ಒಂದು ಮಹತ್ಪ್ರಯತ್ನವು ಈಚೆಗೆ ನಡೆಯಿತು. ಹಿಂದುಸ್ಥಾನ ಸ್ಟೆಂಡಾರ್ಡ ಎಂಬ ಕಲ್ಕತ್ತೆಯ ಒಂದು ಪತ್ರಿಕೆಯು ಈಚೆಗೆ ಪ್ರಕಟಿಸಿರುವ, ಹಿಂದೆ ಲೆಜಿಸ್ಲೇಟಿವ್ ಎಸೆಂಬ್ಲಿಯ ಸದಸ್ಯರಾಗಿದ್ದ ಜೆ. ಡಿ. ಜೆಂಕಿನ್ಸ ಎಂಬವರು ಹಿಂದುಸ್ಥಾನದ ರಾಜಕುಮಾರರು ಮತ್ತು ಬಂಡವಾಳಗಾರರು ಮೊದಲಾದ ಶ್ರೀಮಂತರ ಹೆಸರಿಗೆ ಬರೆದದ್ದೆಂಬ ಆ ಒಂದು ಪತ್ರದ ಮೂಲಕ ಈ ಒಳಸಂಚಿನ ಸಂಗತಿಗಳೆಲ್ಲ ಈಗ ಚೆನ್ನಾಗಿ ಗೊತ್ತಾಗಿವೆ. ಇಂಡಿಯಾ ಪ್ರೊಗ್ರೆಸ್ಸಿವ್ ಲೀಗ್ ಎಂದರೆ ಭಾರತಾಭ್ಯುದಯ ಸಂಘ ಎಂಬ ಯಾವದೋ ಒಂದು ಸಂಸ್ಥೆಯವರನಾಗಿ ಈ ಪತ್ರವನ್ನು ಬರೆದು ಜೆಂಕಿನ್ಸರು ಪ್ರಸಿದ್ಧರಾಗಿದ್ದಾರೆ. ಸರ್ ತೇಜ ಬಹಾದೂರ್ ಸಪ್ರು, ಸರ್ ಕಾವಾಸ್ಜೀ ಜಹಾಂಗೀರ ಮೊದಲಾದ ದೊಡ್ಡ ದೊಡ್ಡ ಬಿರುದಾಂಕಿತ ಶ್ರೀಮಂತ/ವರ್ಗದವರು ಈ ಸಂಸ್ಥೆಗೆ ಸೇರಿ ಸಹಾನುಭೂತಿಯನ್ನು ತೋರಿಸುತ್ತಿರುವರೆಂಬುದರಿಂದ ಅದು ಎಷ್ಟು ಅಪ್ರಾಗ್ರತಿಕವರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸ್ವಾತಂತ್ರ್ಯಪಥದಲ್ಲಿ ವೇಗವಾಗಿ ನಡೆಯುತ್ತಿರುವ ಭಾರತದ ಮುನ್ನಡೆಯನ್ನು ಯಾವಾ ಉಪಾಯದಿಂದಾದರು ಸರಿಯೆ, ಅದನ್ನು ತಡೆಯುವದು ಈ ಸಂಘದ ಏಕ ಮಾತ್ರ ಉದ್ದೇಶವಾಗಿರುತ್ತದೆಂಬುದು ಕಾಣುತ್ತದೆ.

ಕುಟಿಲ ನೀತಿಯಿಂದ ಕಾರ್ಯ ಸಾಧನೆ.

ಹೇಗಿದ್ದರೂ, ಸಂಘವು ಕುಟಿಲ ನೀತಿಯಿಂದ ಕಾರ್ಯ ಸಾಧಿಸುವ ಪ್ರಯತ್ನ ನಡೆದಿದೆ. ಬೋಂಬಾಯಿ ಕಾಂಗ್ರೆಸ ಮಂತ್ರಿಮಂಡಲ ತನ್ನ ಪೂರ್ವಸೂಚನೆಯನ್ನು ಅನುಸರಿಸಿ ಭಂಡವಾಲಗಾರರಿಗೆ ಅನುಕೂಲವಾದ ಮತ್ತು ಮಜೂರರಿಗೆ ಪ್ರತಿಕೂಲವಾದ ಒಂದು ಮಸೂದೆಯನ್ನು ತಯಾರಿಸಿದೆ. ಸಂಘದ ಪ್ರಯತ್ನಗಳಿಂದ ಇತರ ಪ್ರಾಂತ್ಯಗಳಲ್ಲಿಯೂ ಇದೇ ಪ್ರಕಾರದ ಮಸೂದೆಗಳು ಆಗಲಿಕ್ಕಿವೆ. ಕಾಂಗ್ರೆಸಿನೊಳಗಿನ ಮಂದಗಾಮಿಗಳನ್ನೂ ಉದಾರ ಪಕ್ಷದವರನ್ನೂ ಸಹಾಯಕೊಟ್ಟು ಪ್ರೋತ್ಸಾಹಿಸುವದು ಸಂಘದ ಹೆಗ್ಗುರಿಯಾಗಿದೆ. ಈ ಎಲ್ಲ ಪ್ರಯತ್ನಗಳಿಂದ ಸೋಶಿಯಾಲಿಸ್ಟರು ರೇಗಿ ಬಿದ್ದಿದ್ದಾರೆ. ರೈತಾಪೀ ಮತ್ತು ಮಜೂರ ಜನರೊಳಗಿನ ಅತೃಪ್ತಿ, ಹಿಂದೂಮುಸಲ್ಮಾನರೊಳಗಿನ ಅಸಂತೋಷ, ಮುಂತಾದ ಕಾರಣಗಳಿಂದ ದೇಶದಲ್ಲಿ ಕ್ಷೋಭೆ ಎದ್ದಿದೆ. ಸಮೂಹ ಸತ್ತಾವಾದಿಗಳನ್ನು ಸ್ವೇಚ್ಛೆಯಾಗಿ ನಡೆಯಬಿಟ್ಟರೆ ಅದರಿಂದ ಕಾಂಗ್ರೆಸಿಗೆ ಕೇಡಿದೆ ಎಂದು ಕಾಂಗ್ರೆಸ ಸೂತ್ರಧಾರರು ಚೆನ್ನಾಗಿ ಮನಗಂಡಿದ್ದಾರೆ. ಆದ್ದರಿಂದ ಕಾಂಗ್ರೆಸಿನೊಳಗಿನ ದೊಡ್ಡ ದೊಡ್ಡ ಮುಖಂಡರು ಈ ಸಂಘವನ್ನು ಸ್ನೇಹದಿಂದ ಕಾಣತೊಡಗಿದ್ದಾರೆ. ಪತ್ರಪತ್ರಿಕೆಗಳ ಸಹಾಯ ಪ್ರೋತ್ಸಾಹಗಳೂ ಸಂಘಕ್ಕೆ ಸಿಕ್ಕಿವೆ. ಕಮ್ಯುನಿಸ್ಟರನ್ನು ಕಲಿಎತ್ತದಂತೆ ಮಾಡುವನವ್ವು ಈ ಸತ್ಪ್ರಯತ್ನದಲ್ಲಿ ಎಲ್ಲ ಪಂಗಡಗಳೂ ನಮಗೆ ಸಹಾಯ ಮಾಡುವ ಮಾತು ಕೊಟ್ಟಿವೆ. ಆದ್ದರಿಂದ ರಾಜಕುಮಾರರು, ಜಮೀನದಾರರು, ಭಂಡವಾಲಗಾರರೂ ಸಹ ಸಹಾಯ ಮಾಡಬೇಕೆಂದು ಈ ಪತ್ರದಲ್ಲಿ ಬರೆದಿರುವದು.

ಚೆನ್ನಾಗಿ ಆಲೋಚಿಸಿದರೆ ಪತ್ರದ ಭೇದನೀತಿಯು ಯಾರ ಮನಸ್ಸಿಗಾದರೂ ಹೊಳೆಯುವದು. ಕಾಂಗ್ರೆಸ ಮಂತ್ರಿಮಂಡಲಿಗಳಾಗಲೀ, ಕಾಂಗ್ರೆಸಿನ ಅಖಂಡ ಮುಖಂಡರಾಗಲೀ ಈ ಸಂಘವನ್ನು ಸ್ನೇಹದಿಂದ ಕಾಣುವದಂತಿರಲಿ, ಅದರ ಹೆಸರನ್ನು ಕೂಡ ಇವರಿಗೆ ಕೇಳಿಲ್ಲ. ಹಿಂದುಸ್ಥಾನ ಸ್ಟೆಂಡಾರ್ಡದಲ್ಲಿ ಈ ಪತ್ರದ ಒಂದು ಪ್ರತಿಯು ಪ್ರಕಟವಾದ ಬಳಿಕ ಸರದಾರ ವಲ್ಲಭ ಭಾಯಿ ಪಟೇಲರು, ಆ ಸಂಘಕ್ಕೆ ಸೇರಿದವರೆಂಬ ಮಹಾನುಭಾವರೊಡನೆ ಚೌಕಸಿಮಾಡಿದಲ್ಲಿ ಹೆಚ್ಚಿನವರು ತಮ್ಮ ಹೆಸರುಗಳು ತಮಗೆ ತಿಳಿಯದೇನೇ ಸಂಘದಲ್ಲಿ ಸೇರಿಕೊಂಡಿರುವದನ್ನು ಕೇಳಿ ಬೆಸ್ತಾದರು. ಅವರು ತಮ್ಮ ಖೇದಾಶ್ಚರ್ಯಗಳನ್ನು ಸೂಚಿಸಿದರು. ಕಾಂಗ್ರೆಸಿನೊಳಗೆ ಇರುವ ಗಾಂಧಿಪಕ್ಷ, ಸೋಶಿಯಾಲಿಸ್ಟ ಪಕ್ಷ ಮೊದಲಾದ ಬೇರೆ ಬೇರೆ ಪಕ್ಷಗಳೊಳಗೆ ಒಡಕನ್ನು ಉಂಟುಮಾಡಿ ಕಾಂಗ್ರೆಸಿನ ಶಕ್ತಿಸಾಮರ್ಥ್ಯಗಳನ್ನು ಮುರಿಯಲಿಕ್ಕಾಗಿಯೇ ಸಂಘವು ಅಪಪ್ರಚಾರಮಾಡುತ್ತಲಿದೆ.

ಸೋಶಿಯಾಲಿಸ್ಟರ ವಿರೋಧ ಪ್ರಚಾರವನ್ನು ತಡೆಯಲಿಕ್ಕೆ ಕಾಂಗ್ರೆಸು ಬೇರೆ ಯಾವ ಸಂಘದೊಡನೆಯಾದರೂ ಕೂಡಿದುದಿಲ್ಲ. ಅಂಥ ಆವಶ್ಯಕತೆಯು ಅದಕ್ಕೆ ಇರುವದಿಲ್ಲ ಎಂಬುದನ್ನು ಈ ಪತ್ರವು ಪ್ರಕಟವಾದ ಮೇಲೆ ಕಾಂಗ್ರೆಸ ಮುಖಂಡರು ಸ್ಪಷ್ಟ ಮಾಡಿರುತ್ತಾರೆ. ಮಾತ್ರವಲ್ಲ, ಸಂಘದ ಕುಟಿಲ ನೀತಿಯನ್ನು ಅವರು ಚೆನ್ನಾಗಿ ಖಂಡಿಸಿದ್ದಾರೆ. ಭಾರತಭ್ಯುದಯ ಸಂಘವೆಂಬ ಅದೊಂದು ಭಾರತಸ್ವಾತಂತ್ರ್ಯ ವಿರೋಧಿಸಂಘವು ಪ್ರಕಟಿಸುವ ಅಥವಾ ಈ ಮೊದಲು ಪ್ರಕಟಿಸಿದ ಪತ್ರ ಪತ್ರಿಕೆಗಳೊಳಗಿನ ಮಾತುಗಳನ್ನು ನಂಬುವ ಮೊದಲು ಜನರು ಆ ಮಾತುಗಳ ಯಥಾರ್ಥತೆಯನ್ನು ಚೆನ್ನಾಗಿ ಪರೀಕ್ಷಿಸಿ ತಿಳಿಯುವದು ಆವಶ್ಯಕವಾಗಿದೆ.

ಢಿಲ್ಲಿಯಲ್ಲಿ ಮೂವರ ಮರಣ ವೈಚಿತ್ರ್ಯ!

ಢಿಲ್ಲಿಯಲ್ಲಿ (ತಾ. ೨೦) ಮುಸ್ಲಿಮನೊಬ್ಬನ ಮನೆಯಲ್ಲಿ ಮೂವರು ಸೋದರರು ಸತ್ತ ಹೃದಯದ್ರಾವಕ ವೃತ್ತಾಂತವು ತೀರ ಕಠಿಣವಿದೆ.

ಇಬ್ಬರು ಎಳೆ ವಯಸ್ಸಿನ ಬಾಲಕರು, ಅಣ್ಣ ತಮ್ಮಂದಿರು. ಆಡ್ವಾಡಹೋದರು. ಇವರಿಬ್ಬರೊಳಗೆ ಜಗಳವೆದ್ದಿತು. ಅಣ್ಣನು ತಮ್ಮನನ್ನು ಚೂರಿಯಿಂದ ತಿವಿದನು. ಅಣ್ಣನು ಕೂಡಲೆ ಅಲ್ಲಿಂದೋಡಿ ಬಂದು ಮನೆಯೊಳಗೆ ಅಡಗಿ ಕೂತನು. ಅವನಿಗೆ ಮನೆಯವರು ಬಡೆದಾರು ಎಂಬ ಭಯ. ತಮ್ಮನು ಕೂಗುತ್ತ ಮನೆ ಸೇರಿದನು; ತಾಯಿಗೆ ಎಲ್ಲವನ್ನೂ ತಿಳಿಸಿದನು. ತಾಯಿ ಆಗ ಎಳೆಕೂಸನ್ನು ಮೀಯಿಸುತ್ತಿದ್ದಳು.

ತಾಯಿ ಅಣ್ಣನನ್ನು ಹುಡುಕಿದಳು. ಅವನು ಅವಳ ಕೈಯಿಂದ ತಪ್ಪಿಸಿಕೊಳ್ಳಲು, ತಮ್ಮ ಮನೆ ಮಾಡಿನಿಂದ ಹತ್ತಿರದ ಮನೆಯ ಮಾಡಿಗೆ ಹಾರಿದನು. ಕಾಲು ಜಾರಿ ಕೆಳಬಿದ್ದನು. ಅಲ್ಲೇ ಸತ್ತನು!

ತಮ್ಮನು ಇಷ್ಟರಲ್ಲಿ, ತಿವಿದ ಗಾಯದಿಂದ ರಕ್ತ ಸುರಿದು ಸತ್ತುಬಿದ್ದನು!

ತಾಯಿ ಮರಳಿ ಸ್ನಾನಾಗಾರಕ್ಕೆ ಬರುವಾಗ ಕೂಸು ಸ್ನಾನದ ಹಂಡೆಯಲ್ಲೇ ಮುಳುಗಿ ಸತ್ತಿತು! ಯಾರು ಯಾರನ್ನು ಕೊಂದಂತಾಯಿತು? ಮೂವರೂ ಸತ್ತರು. ತಾಯಿ ಏನು ಮಾಡಿದಳೊ!

THE

Bank of Mangalore Ltd.,

MANGALORE.

ESTD 1931

Branches -

Panemangalore, Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% on daily balances.

All kinds of banking business transacted

ಮಳೆಗಾಲದಲ್ಲಿ ನಿಮ್ಮ ಎದೆಯನ್ನು ರಕ್ಷಿಸಿರಿ.

ನಿಮ್ಮ ಕಂಠದಲ್ಲಿ ಮತ್ತು ಎದೆಯಲ್ಲಿ 'ಅಶಕ್ತ ಸ್ಥಳ'ವೊಂದು ಇದ್ದರೆ ಮಳೆಗಾಲದಲ್ಲಿ ಅದರ ಅರಿವು ಉಂಟಾಗುವುದು. ಆದುದರಿಂದಲೇ ಶೀತ, ಕೆಮ್ಮು ಮತ್ತು ಚಳಿಯು ಹೆಚ್ಚಾಗಿ ಮಳೆಗಾಲದಲ್ಲಿ ಕಾಣಿಸಿಕೊಳ್ಳುವುದು, ಆದುದರಿಂದ ಪೆಪ್ಸ್ ಶ್ವಾಸನೀಯ ಪರಿಹಾರಿ ಗುಳಿಗೆಗಳನ್ನುಪಯೋಗಿಸಿ, ರೋಗಬಾರದಂತೆ ರಕ್ಷಿಸಿಕೊಳ್ಳಿರಿ.

ಪೆಪ್ಸ್ ಗುಳಿಗೆ ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಹೊರಡುವ ಔಷಧೀಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು. ಆದರಿಂದ ನಿಮ್ಮ ಶ್ವಾಸಕೋಶವು ರೋಗಗಳನ್ನು ತಡೆಯುವ ಸಾಮರ್ಥ್ಯವನ್ನು ಹೊಂದುವುದು. ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಿಮೆಯಾಗುವುದು, ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು, ಕಫವನ್ನು ಕಡಿಮೆ ಮಾಡುವುದು. ಯಾವತ್ತು ಶೀತ ಸಮ್ಬಂಧ ರೋಗಗಳನ್ನು ಎದುರಿಸುವುದಕ್ಕೆ ನಿಮಗೆ ಚೈತನ್ಯ ಬಲವನ್ನು ಕೊಡುವುದು.

ಎಲ್ಲಾ ದವಾಖಾನೆಗಳಲ್ಲಿ ದೊರೆಯುವುದು

ಏಜಂಟರು

ಮೆಸರ್ಸ್ ದಾದಾ ಎಂಡ್ ಕೊ, ಪಾರ್ಕ್ ಟೌನ್, ಮದರಾಸು.

PEPS

S. U. N.& Co.,

Silk Merchants,

Chaukhamba, BENARES CITY

ಈಗಿನ ಕರಹ(ಕಾಶಿ) ಬೆನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ ಕ್ರಯ ತುಂಬಾ ಸುಲಭ ಖಾತ್ರಿ ಮಾಲು 18 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟ ಶೀರೆಗಳು ರೂ 35ರಿಂದ ರೂ 65 ಪಡೂ ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ 20 ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು

ವಿಳಾಸ –

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಿಸ್ ಸಿಟಿ

ಎಲ್ಲೆಲ್ಲಿಯೂ ಲಿಮ್ಡಾ ಸಾಬೂನನ್ನೇ ಉಪಯೋಗಿಸುತ್ತಾರೆ—ಕಾರಣ,

ನಿಮ್ಮ ಸೌಂದರ್ಯವನ್ನೂ ಮೈಬಣ್ಣವನ್ನೂ ವೃದ್ಧಿಸುವ ಗುಣಗಳು ಇದರಲ್ಲಿವೆ

ಲಿಮ್ಡಾ ಸೋಪು

ಉಪಯೋಗಿಸಿರಿ

ವೆಜಿಟೆಬಲ್ ಸೋಪು ವರ್ಕ್ಸ್ ಕಲ್ಲಿಕೋಟೆ - ಬೊಂಬಾಯಿ & ಮದ್ರಾಸು

ಒದಗಿಸಿಕೊಡುವವರು—

ಸೇಠ್ ನಾಗಜೀ ಪುರುಷೋತ್ತಮ ಕಂಪೆನಿ,

ಕಲ್ಲಿಕೋಟೆ (ಮಲಬಾರು)

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(*Sd*) **V. V. Giri,**
Minister of Labour

4-10-1937

Bhuvanendra Products Ltd, Katapady, S. Kanara

ಯುರೋಪಿನ ಇಂದಿನ ಶಾಂತ ವಾತಾವರಣವು ಮುಂಬರುವ ಬಿರುಗಾಳಿಯ ಪೂರ್ವಸೂಚನೆ ಆಗಬಹುದೆ?

★

"ಯುರೋಪಿನ ರಾಜಕೀಯ ವಾತಾವರಣವು ಶಾಂತವಾಗಿದೆ. ಅದು ಎಷ್ಟು ಕಾಲದ ತನಕ ಹೀಗೆಯೇ ಇದ್ದೀತೆಂಬುದು ಯಾರಿಂದಲೂ ಹೇಳಬರುವದಿಲ್ಲ. ಅಡೊಲ್ಫ ಹಿಟ್ಲರ ಅಥವಾ ಬೆನಿಟೋ ಮುಸಲೋನಿ ಮಾತ್ರ ಇದನ್ನು ಹೇಳಲಿಕ್ಕೆ ಸಮರ್ಥರಾಗಿದ್ದಾರೆ" ಎಂದು ಬೊಂಬೇ ಕ್ರಾನಿಕಲ್ದಲ್ಲಿ ಕೆಪ್ಟನ್ ಸ್ಟೋನರು ಬರೆಯುತ್ತಾರೆ. "ಪರಸ್ಪರ ದ್ವೇಷಾಸೂಯೆಗಳ ಲೀಲಾಭೂಮಿಯಾದ ಯುರೋಪಿನ ರಣರಂಗದ ಸಿಂಹಾವಲೋಕನ ಮಾಡಲಿಕ್ಕೆ ಇದು ಅನುಕೂಲ ಸಮಯವಾಗಿದೆ. ಮುಂದೇನಾಗಬಹುದೆಂಬುದರ ಯಥಾರ್ಥವನ್ನು ತಿಳಿಯಬೇಕಾದರೆ ಕೆಳಗಿನ ಹತ್ತು ಸಂಗತಿಗಳನ್ನು ಪರ್ಯಾಲೋಚಿಸುವುದು ಅಗತ್ಯ"ವೆಂದು ಸ್ಟೋನು ಹೇಳುತ್ತಾರೆ.

★ ★

ಹಿಟ್ಲರನ ಮಹತ್ವಾಕಾಂಕ್ಷೆ

ಹಿಟ್ಲರನ ವಿದೇಶಗಳ ವ್ಯವಹಾರ ನೀತಿಯು ಒಂದು ದೊಡ್ಡ ಸಮಸ್ಯೆಯಾಗಿದೆ. ಜರ್ಮನಿಯನ್ನು ಸರ್ವತೋಮುಖ ಸ್ವತಂತ್ರ ಮಾಡಿದ ಬಳಿಕ ಅವನೀಗ ಜರ್ಮನ ಸಾಮ್ರಾಜ್ಯಸ್ಥಾಪನೆಯ ಭಗೀರಥ ಪ್ರಯತ್ನ ಮಾಡುತಿದ್ದಾನೆ. ಮೊದಲು ಮಧ್ಯ ಯುರೋಪನ್ನು ತನ್ನ ಅಂಕಿತಕ್ಕೆ ಒಳಪಡಿಸುವ ವಿಚಾರವನ್ನಿಟ್ಟುಕೊಂಡಿದ್ದಾನೆ. ಆಸ್ಟ್ರಿಯವು ಈಗಾಗಲೇ ಜರ್ಮನಿಯ ಒಂದಂಗವಾಗಿ ಅದರೊಳಗೆ ಸೇರಿ ಹೋಗಿದೆ. ಈಗ ಝೆಕೊಸ್ಲೊವೇಕಿಯದ ಕಡೆಗೆ ಅವನ ವಕ್ರದೃಷ್ಟಿ ಬಿದ್ದಿದೆ. ಆ ಮೇಲೆ ಬಾಲ್ಟಿಕ ಸಮುದ್ರ ಕಿನಾರೆಯ ಪ್ರದೇಶಗಳನ್ನು ಅವನು ಕೇಳಬಹುದು. ಅಲ್ಲಿರುವ ಡಾಂಜಿಂಗ್, ಮೇಮೆಲ್, ಪಟ್ಟಣಗಳು ತನಗೆ ಬೇಕೆನ್ನಬಹುದು. ಅಡ್ರಿಯಾಟಿಕ್ ಸಮುದ್ರದಿಂದ ಭೂಮಧ್ಯ ಸಮುದ್ರದ ವರೆಗೆ ಇರುವ ನೈಋತ್ಯ ಭೂಪ್ರದೇಶ, ಕಪ್ಪು ಸಮುದ್ರದ ವರೆಗಿರುವ ಆಗ್ನೇಯ ಭೂಪ್ರದೇಶ, ರಷ್ಯದ ವರೆಗಿರುವ ಪೂರ್ವ ಭೂಪ್ರದೇಶಗಳು ತನ್ನ ಅಧಿಕಾರಕ್ಕೆ ಒಳಪಟ್ಟ ಮೇಲೆ ಅವನ ದೃಷ್ಟಿಯು ಪೂರ್ವದಲ್ಲಿ ರಷ್ಯದ ಮೇಲೂ, ದಕ್ಷಿಣದಲ್ಲಿ ಆಫ್ರಿಕದ ಕಡೆಗೂ ಹೋಗಿ ಅವನ್ನೂ ವಶಮಾಡಿಕೊಳ್ಳುವ ಮಹತ್ಪ್ರಯತ್ನಗಳು ನಡೆಯುವವು. ಮುಖ್ಯ ಜರ್ಮನರು ಬಹು ಸಂಖ್ಯಾಕರಾಗಿ ವಾಸವಾಗಿರುವ ಪ್ರದೇಶಗಳನ್ನೆಲ್ಲ ಒಂದು ಕೂಡಿಸಿ ಜರ್ಮನಿಯನ್ನು ಒಂದು ಮಹಾರಾಷ್ಟ್ರವನ್ನಾಗಿ ಮಾಡುವದು ಮಾತ್ರವಲ್ಲದೆ, ಆಫ್ರಿಕದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯೂ ಹಿಟ್ಲರನಿಗೆ ಇರುತ್ತದೆ.

ಮುಸಲೋನಿಯ ರೋಮ ಸಾಮ್ರಾಜ್ಯದ ಕನಸು.

ಹಿಟ್ಲರನಂತೆ ಮುಸಲೋನಿಯೂ ಪ್ರಾಚೀನ ರೋಮ ಸಾಮ್ರಾಜ್ಯದ ಕನಸು ಕಾಣುತಿದ್ದಾನೆ. ಒಂದಾನೊಂದು ಕಾಲದಲ್ಲಿ ರೋಮವು ಮಹಾಶಕ್ತಿ ಸಂಪನ್ನ ಸಾಮ್ರಾಜ್ಯವಾಗಿ ಮೆರೆದಿತ್ತು. ಈಗಲೂ ಅದು ಹಾಗೆ ಮೆರೆಯಬೇಕೆಂದು ಮುಸಲೋನಿಯು ಆಶಿಸುತ್ತಾನೆ. ಬ್ರೆನ್ನರ ಕಣಿವೆಯಿಂದ ಆರಂಭಿಸಿ ಆಫ್ರಿಕದಲ್ಲಿ ಎಥಿಯೋಪಿಯ (ಅಬಿಸೀನಿಯದ) ತನಕ, ಪೂರ್ವ ಎಡ್ರಿಯಾಟಿಕದಿಂದ ಆರಂಭಿಸಿ ಫ್ರೆಂಚ ಅಲ್ಜೀರಿಯದ ತನಕ ಇರುವ ಭೂಪ್ರದೇಶಗಳ ಮೇಲೆ ಅವನ ಕಣ್ಣಿದೆ. ಮಾತ್ರವಲ್ಲ ಹಿಟ್ಲರನು ಜಯಶೀಲನಾಗುತ್ತಾ ಫ್ರೆಂಚ ರಾಜ್ಯಶಕ್ತಿಯು ಕುಗ್ಗಿದರೆ, ಹಿಟ್ಲರನ ಸಹಾಯ ತೆಗೆದುಕೊಂಡು ಈಗ ಫ್ರಾನ್ಸಿನ ಅಧೀನವಿರುವ ಉತ್ತರ ಆಫ್ರಿಕದ ಭಾಗಗಳನ್ನೂ ಇಟಲಿಗೆ ಸೇರಿಸಿಬಿಡುವ ಆಲೋಚನೆಯನ್ನು ಮುಸಲೋನಿಯು ಮಾಡಿದ್ದಾನೆ. ಭೂಮಧ್ಯ ಸಮುದ್ರದಲ್ಲಿ ಇಟಲಿಯ ವರ್ಚಸ್ಸು ಬೆಳೆಯುತ್ತ ಇದೆ. ಮುಂದಿನ ಯುದ್ಧಪ್ರಸಂಗದಲ್ಲಿ ಪೂರ್ವದಲ್ಲಿ ಜರ್ಮನಿ ದಕ್ಷಿಣದಲ್ಲಿ ಸ್ಪೈನ, ಉತ್ತರ ಆಫ್ರಿಕದಲ್ಲಿ ಇಟಲಿಗೆ ಸೇರಿದ ಭೂಪ್ರದೇಶಗಳೊಳಗೆ ಫ್ರಾನ್ಸು ಸಿಕ್ಕಿಬಿದ್ದು ನುಚ್ಚು ನೂರಾಗಿ ಹೋಗಬಹುದು.

ಸ್ಪೈನಿನ ಅಂತಃಕಲಹ.

ಸ್ಪೈನಿನಲ್ಲಿ ಕೊಮ್ಯುನಿಷ್ಟರನ್ನು ಪಾದಾಕ್ರಾಂತ ಮಾಡುವದೊಂದೇ ಸ್ಪೈನಿನ ಅಂತಃಕಲಹದಲ್ಲಿ ಜರ್ಮನಿಯೂ ಇಟಲಿಯೂ ಭಾಗ ತೆಗೆದುಕೊಂಡಿರುವ ಕಾರಣವಾಗಿರುವದಿಲ್ಲ. ಸ್ಪೈನು ಇಟಲಿ ಮತ್ತು ಜರ್ಮನಿಯ ಅಂಕಿತಕ್ಕೆ ಒಳಗಾದರೆ ಅದರಿಂದ ಫ್ರಾನ್ಸಿನ ಅಸ್ತಿತ್ವಕ್ಕೆ ಕುಂದಾಭಂಗವಾಗುವದು. ಹೀಗಿದ್ದರೂ ಕೂಡ ಸ್ಪೈನಿನ ಅಂತಃಕಲಹದಲ್ಲಿ ಜನರಲ್ ಫ್ರೆಂಕೋ ಜಯಶೀಲನಾದರೂ ಅಲ್ಲಿ ಹಿಟ್ಲರ ಮುಸಲೋನಿಯರ ಆಟಗಳು ನಡೆಯಲಿಕ್ಕಿಲ್ಲ. ಯಾಕಂದರೆ ಪೂರ್ವಕಾಲದಿಂದ ನಡೆದು ಬಂದ ಕಟ್ಟು ಕಟ್ಟಳೆಗಳನ್ನು ಅನುಸರಿಸುವದಾದರೆ ಫ್ರೆಂಕೋ ಅಧಿಕಾರಕ್ಕೆ ಬಂದ ಕೂಡಲೆ ಎಲ್ಲಾ ವಿದೇಶಿಯರನ್ನು ಸ್ಪೈನಿನಿಂದ ಹೊರಗೆ ಕಳುಹಿಸಬೇಕಾಗುತ್ತದೆ. ಅಲ್ಲದೆ ಸ್ಪೈನಿನ ಪುನರಚನೆಗೆ ಬೇಕಾದ ಹಣವು ಫ್ರೆಂಕೋವಿಗೆ ಇಂಗ್ಲೆಂಡಿನ ಹೊರತು ದೊರೆಯುವದು ಸಾಧ್ಯವಲ್ಲದೆ ಬೇರೆ ಕಡೆಗಳಿಂದಲ್ಲ. ಹಾಗಾದಾಗ ಸ್ಪೈನಿನಲ್ಲಿ ಹಿಟ್ಲರ ಮುಸಲೋನಿಯರ ವರ್ಚಸ್ಸು ಕಡಿಮೆಯಾಗಿ ಇಂಗ್ಲಿಷರ ವರ್ಚಸ್ಸು ಬೆಳೆಯುವದು. ಸ್ಪೈನಿನ ಅಂತಃಕಲಹದ ಪರಿಣಾಮವು ಬ್ರಿಟಿಷರಿಗೆ ಅನುಕೂಲವಾಗಿ ಹಿಟ್ಲರ ಮುಸಲೋನಿಯರ ಆಶಾಭಂಗವಾಗುವದು.

ಪೋಲೆಂಡಿನ ಪ್ರಬಲರಾಷ್ಟ್ರವಾಗುವ ಆಶೆ

ಜರ್ಮನಿಗೂ ರಷ್ಯಕ್ಕೂ ನಡುವೆ ಪೋಲೆಂಡ ಎಂಬ ಚಿಕ್ಕ ರಾಷ್ಟ್ರವಿದೆ. ಇದಕ್ಕೆ ಅವುಗಳೆರಡರ ಬಹಳ ಭಯವಿದೆ. ಜರ್ಮನಿ ಮತ್ತು ರಷ್ಯ ಇವುಗಳಲ್ಲಿ ಯಾವುದು ಗೆದ್ದರೂ ಪೋಲೆಂಡಿಗೆ ಕೆಟ್ಟದುಂಟು. ಆದ್ದರಿಂದ ಬಾಲ್ಟಿಕ ಸಮುದ್ರದಿಂದ ಕಪ್ಪು ಸಮುದ್ರದ ವರೆಗಿರುವ ಫಿನ್ಲೆಂಡ, ಎಸ್ಟೋನಿಯ, ಲಿಟವಿಯಾ, ಲಿಥುನಿಯಾ, ಪೋಲೆಂಡ ಮತ್ತು ರುಮೇನಿಯಾ ಇವು ಒಂದಾಗಿ ನಿಂತು ಜರ್ಮನಿ ಮತ್ತು ರಷ್ಯಗಳನ್ನು ಸಾಮ್ರಾಜ್ಯ ವಿಸ್ತರಣದ ಪ್ರಯತ್ನಗಳಿಂದ ತಡೆಯಬೇಕೆಂದಿರುವವು. ಆದರೆ ಪೋಲ್ ಜನರು ಬಹಳ ಗರೀಬರಾಗಿದ್ದಾರೆ. ಇದಕಾರಣ ಪೋಲೆಂಡಿನಲ್ಲಿ ಬಹಳ ಅಶಾಂತಿ ಇದೆ. ಪೋಲೆಂಡಿನ ಒಂದು ಚಿಕ್ಕ ಭೂಭಾಗವು ಜರ್ಮನಿಯನ್ನು ಪೂರ್ವಪ್ರಶ್ಯದಿಂದ ವಿಂಗಡಿಸುತ್ತದೆ. ಅದನ್ನು ತನಗೆ ಕೊಟ್ಟರೆ ತಾನು ಪೋಲೆಂಡಿಗೆ ಲಿಥುನಿಯವನ್ನು ತೆಗೆಸಿಕೊಡುತ್ತೇನೆಂದು ಜರ್ಮನಿ ಹೇಳುತ್ತದೆ. ಆದರೆ ಪೋಲೆಂಡ ಆ ಮಾತನ್ನು ಕೇಳುವುದಿಲ್ಲ. ಆದ್ದರಿಂದ ಜರ್ಮನಿಯು ತತ್ಕಾಲಕ್ಕೆ ವಿಭಜಿತವಾಗಿ ಇರಬೇಕಾಗಿದೆ. ಪ್ರಕಟವಾಗಿ ಪೋಲೆಂಡ ಮತ್ತು ಜರ್ಮನಿಯೊಳಗೆ ಸ್ನೇಹವಿದ್ದರೂ, ಅಂತರಂಗದಲ್ಲಿ ಜರ್ಮನಿಯು ಪೋಲೆಂಡಿನ ಮೇಲೆ ಸಿಟ್ಟಿನಿಂದ ಸಂತಪ್ತವಾಗಿದೆ.

ಹಂಗೇರಿಯಾ ತಾನು ದೊಡ್ಡದಾಗಬೇಕೆನ್ನುತ್ತದೆ

ರಾಜ್ಯ ವಿಸ್ತರಣದ ಆಸೆ ಹಂಗೇರಿಗೂ ಇದೆ. ಅದರ ಗಡಿನಾಡಿನ ಕೆಲವು ಪ್ರದೇಶಗಳು ಝೆಕೊಸ್ಲೊವೇಕಿಯ, ರುಮೇನಿಯ ಮತ್ತು ಯುಗೋಸ್ಲೇವಿಯ ಗಳೊಳಗೆ ಸೇರಿಹೋಗಿವೆ. ಹಂಗೇರಿಯು ಜರ್ಮನಿಯೊಡನೆ ಸ್ನೇಹದಿಂದಿದೆ. ಝೆಕೊಸ್ಲೊವೇಕಿಯವು ಜರ್ಮನಿಯ ಕೈಗೆ ಬಂದರೆ ತಾನೂ ತನ್ನ ಕಳಕೊಂಡ ಭೂಭಾಗಗಳನ್ನು ಮರಳಿ ಪಡೆಯಬಹುದೆಂದು ಹಂಗೇರಿಯು ಆಶಿಸಿದೆ.

ಝೆಕೋಸ್ಲೊವೇಕಿಯ ಮತ್ತು ಜರ್ಮನಿ

ಝೆಕೋಸ್ಲೊವೇಕಿಯದಷ್ಟು ಅಭಾಗ್ಯ ಪ್ರಜಾಸತ್ತಾತ್ಮಕ ದೇಶವು ಮತ್ತೊಂದಿರುವುದಿಲ್ಲ. ಅದರ ಮೂರು ಕಡೆಗಳಲ್ಲಿ ಹಿಟ್ಲರನ ಜರ್ಮನಿ ಇದೆ. ಹಂಗೇರಿ ಮತ್ತು ಪೋಲೆಂಡುಗಳು ಅದನ್ನು ದ್ವೇಷಿಸುತ್ತವೆ. ಆರ್ಥಿಕ ದೃಷ್ಟಿಯಿಂದ ಅದು ಆಸ್ಟ್ರಿಯ ಜರ್ಮನಿಗಳನ್ನು ಅವಲಂಬಿಸಿರಬೇಕು. ಅದರ ವಿದೇಶ ವ್ಯಾಪಾರಮಾರ್ಗಗಳು ಜರ್ಮನಿಯ ಕೈಯ್ಯಲ್ಲಿವೆ. ರಾಜಕೀಯ ದೃಷ್ಟಿಯಿಂದಲೂ ಅದು ಪರಾವಲಂಬಿಯಾಗಿರಬೇಕು. ಫ್ರಾನ್ಸ ಮತ್ತು ರಷ್ಯದ ಸ್ನೇಹವು ಅದಕ್ಕೆ ಪ್ರಾಪ್ತವಾಗಿರುವದಾದರೂ, ಆಪತ್ಕಾಲದಲ್ಲಿ ಅವುಗಳ ಸಹಾಯವು ಅದಕ್ಕೆ ಸಿಕ್ಕೀತೆಂದು ಭರವಸೆ ಕೊಡಲಿಕ್ಕಾಗುವದಿಲ್ಲ. ಎಂಥ ಕಷ್ಟವು ಬಂದರೂ ತನ್ನ ಸ್ವಾತಂತ್ರ್ಯವನ್ನು ಮಾರುವುದಿಲ್ಲವೆಂದು ಅದು ಹೇಳಿದೆ. ಜರ್ಮನಿಯು ಅದನ್ನು ಆಕ್ರಮಿಸಿದರೆ ಇನ್ನೊಂದು ಮಹಾಯುದ್ಧವು ಆರಂಭವಾಗುವುದು ಖಂಡಿತ.

ಫ್ರಾನ್ಸಿನ ದುರ್ಬಲತೆ

ಫ್ರಾನ್ಸಿನಲ್ಲಿ ರಾಜಕೀಯ ಮತ್ತು ಆರ್ಥಿಕ ಕಲಹಗಳಿವೆ. ಒಂದು ಕಡೆಯಿಂದ ಹಿಟ್ಲರನು ಒಂದೇ ಸಮನೆ ತನ್ನ ಕಾರ್ಯಯೋಜನೆಗಳನ್ನು ತೆಗೆದುಕೊಂಡು ಮುಂದರಿಯುತಿದ್ದಾನಾದರೂ ಈ ಅಂತಃಕಲಹಗಳ ಮೂಲಕ, ಹಿಟ್ಲರನನ್ನು ತಡೆಯಲಿಕ್ಕೆ ಫ್ರಾನ್ಸು ಸಮರ್ಥವಾದಿರುವದಿಲ್ಲ. ಫ್ರಾನ್ಸಿಗೆ ತೊಂದರೆ ಬಂದರೆ ತಾನು ಸಹಾಯಕ್ಕಿದ್ದೇನೆಂದು ಇಂಗ್ಲೆಂಡು ಹೇಳಿದೆ. ಆದರೆ ಝೆಕೊಸ್ಲೊವೇಕಿಯದ ಸಹಾಯಕ್ಕೆ ಹೋದರೆ ನೀವೂ ನಮ್ಮ ಸಹಾಯಕ್ಕೆ ಬರುತ್ತೀರಾ ಎಂದು ಕೇಳಿದಾಗ ಇಂಗ್ಲೆಂಡು ಮೌನವನ್ನು ತಳೆದು ಕೊಂಡಿತು. ಜರ್ಮನಿಯ ಪ್ರಜೋತ್ಪತ್ತಿ ಬೆಳೆದರೆ ಫ್ರಾನ್ಸಿನ ಸಂತತಿಯು ಕಡಿಮೆ ಆಗುತ್ತದೆ. ಇಂದು ಫ್ರಾನ್ಸಿನ ಭಾಗ್ಯವು ಚಿಂತಾಜನಕವಾಗಿದೆ. ಕಡೆಕಡೆಗೆ ಫ್ರಾನ್ಸಿನ ಪಾರ್ಟಿಗಳು ತಮ್ಮೊಳಗಿನ ಕಲಹಗಳನ್ನು ಬದಿಗೆ ಹಾಕಿ ಒಂದಾಗಿ ಹಿಟ್ಲರನನ್ನು ವಿರೋಧಿಸಲು ಬದ್ಧವಾಗಲಿಕ್ಕೂ ಸಾಕು.

ಇಂಗ್ಲಂಡಿನ ಧೋರಣೆ

ಮಧ್ಯಯುರೋಪಿನ ಪ್ರಕರಣದಿಂದ ಮಹಾಯುದ್ಧವಾಗುವ ಸಂಭವವಿದೆ. ಪರಂತು ಅದು ಜಗತ್ತಿನ ಒಂದು ಚಿಕ್ಕ ಪ್ರದೇಶವಷ್ಟೆ. ಅಲ್ಲಿ ಏನು ನಡೆದರೂ ತಾವು ಆ ಪ್ರಕರಣದಿಂದ ದೂರದಲ್ಲಿದ್ದರೆ ತಮ್ಮ ಸಾಮ್ರಾಜ್ಯಕ್ಕೆ ಬಾಧಕವಾಗಲಾರದೆಂದು ಇಂಗ್ಲಿಷರು ಆಲೋಚಿಸಿದ್ದಾರೆ. ಯುರೋಪಿನಲ್ಲಿ ಏನು ನಡೆದರೂ ಅದರಿಂದ ತಮ್ಮ ಸಾಮ್ರಾಜ್ಯದ ಮೇಲೆ ಅಂದರೆ ಹಿಂದುಸ್ಥಾನ, ಕೆನಡಾ, ಆಫ್ರಿಕಗಳ ಮೇಲೆ ಎಂಥ ಪರಿಣಾಮವಾಗುತ್ತದೆ ಎಂಬುದನ್ನು ಆಲೋಚಿಸಿ ಅವರು ಮುಂದಿನ ಕಾರ್ಯಕ್ರಮವನ್ನು ರಚಿಸುತ್ತಾರೆ. ಆದ್ದರಿಂದ ಎಷ್ಟರ ತನಕ ತಮ್ಮ ಸಾಮ್ರಾಜ್ಯಕ್ಕೆ ಅಳಿಗಾಲವು ಪ್ರಾಪ್ತವಾಗುವುದಿಲ್ಲವೊ ಅಷ್ಟರ ತನಕ ಯುರೋಪಿನ ಗೊಂದಲದಿಂದ ದೂರ ಸರಿದು ಇರಲಿಕ್ಕೆ ಇಂಗ್ಲಿಷರು ನಿರ್ಣಯಿಸಿದ್ದಾರೆ. ಹಿಟ್ಲರನು ಆಸ್ಟ್ರಿಯವನ್ನು ಪಡೆದೂ ಮುಸಲೋನಿಯು ಅಬಿಸೀನಿಯವನ್ನು ಪಡೆದು ತೃಪ್ತರಾಗಬಹುದೆಂದು ಅವರು ಎಣಿಸಿದ್ದರು. ಆದರೆ ಮುಂದೆ ನಡೆದ ಘಟನೆಗಳಿಂದ ಅವರ ಎಣಿಕೆಯು ತಪ್ಪಾಯಿತೆಂದು ಅವರಿಗೆ ಗೊತ್ತಾಗಿದೆ. ಒಂದು ಯುದ್ಧವಾಗದೆ ಗತ್ಯಂತರವಿಲ್ಲವೆಂದು ಅವರು ತಿಳಿದಿದ್ದಾರೆ. ಆದ್ದರಿಂದ ಇಂಗ್ಲಂಡಿನಲ್ಲಿ ಯುದ್ಧಸಿದ್ಧತೆಯು ಜೋರಿನಿಂದ ನಡೆದಿದೆ. ಒಂದಲ್ಲ ಒಂದು ಸಮಯ ತಮ್ಮ ಸ್ವಾರ್ಥಕ್ಕೆ ನಷ್ಟವಾಗುವದು ಖಂಡಿತವೆಂದೂ, ತಮ್ಮನ್ನು ತಮ್ಮ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಲಿಕ್ಕಾಗಿಯಾದರೂ ಮುಂದಿನ ಯುದ್ಧದಲ್ಲಿ ಫ್ರಾನ್ಸಿನೊಂದಿಗೆ ಭಾಗ ತೆಗೆದುಕೊಳ್ಳುವದು ಅಗತ್ಯವಾಗುವದೆಂದೂ ಅವರು ಖಂಡಿತ ಮಾಡಿಬಿಟ್ಟಿದ್ದಾರೆ. ಹಿಟ್ಲರ ಮುಸಲೋನಿಯರನ್ನು ತೃಪ್ತಿಪಡಿಸಲಿಕ್ಕೆ ಹೋಗಿ ತಮ್ಮ ಸ್ವಾಭಿಮಾನಕ್ಕೆ ಕುಂದುಬಂದುದಕ್ಕಾಗಿ ಇಂಗ್ಲಿಷರಿಗೆ ಈಗ ಪಶ್ಚಾತ್ತಾಪವಾಗಿದೆ.

ರಷ್ಯದ ಸಮಸ್ಯೆ

1914ರಲ್ಲಿ ಇದ್ದಂತೆ ಈಗಲೂ ರಷ್ಯವು ಒಂದು ಅದ್ಭುತ ಸಮಸ್ಯೆಯಾಗಿದೆ. ಇತರ ಜನಾಂಗಗಳ ಆಕ್ರಮಣಗಳಿಂದ ಫ್ರಾನ್ಸು ಮತ್ತು ಝೆಕೋಸ್ಲೊವೇಕಿಯಗಳನ್ನು ಕಾಪಾಡಲಿಕ್ಕೆ ರಷ್ಯವು ಪ್ರತಿಜ್ಞಾಬದ್ಧವಾಗಿದೆ. ರಷ್ಯದ ಸೇನೆಯು ಬಹು ದೊಡ್ಡದಾಗಿರುವದಾದರೂ ಸೇನೆಯ ಅಧಿಕಾರಿಗಳು ದುರ್ಬಲರಾಗಿದ್ದಾರೆ. ಮೊನ್ನೆ ನಡೆದ ಕ್ರಾಂತಿಯಲ್ಲಿ ಅನೇಕಾನೇಕ ಉತ್ತಮ ಅಧಿಕಾರಿಗಳು ಸ್ಟಾಲೀನನ ವಕ್ರದೃಷ್ಟಿಗೆ ಬಿದ್ದು ಕೊಲೆಗಡುಕರ ಕತ್ತಿಗೆ ಬಲಿಯಾಗಿದ್ದಾರೆ. ಅವರ ಸ್ಥಾನಗಳನ್ನು ತುಂಬಿಸಲಿಕ್ಕೆ ಕೀಳುನೌಕರರಾಗಿದ್ದವರನ್ನು ಮೇಲಾಫೀಸರರನ್ನಾಗಿ ನೇಮಿಸಲಾಗಿದೆ. ಆದರೂ ಕೂಡ ರಷ್ಯವು ಒಂದು ಶಕ್ತಿಸಂಪನ್ನರಾಷ್ಟ್ರವಾಗಿರುವದು. ಅದರ ಸಹಾಯ ಸಹಾನುಭೂತಿಗಳೆ ಜರ್ಮನವಿರೋಧಿ ರಾಷ್ಟ್ರಗಳಿಗೆ ದೊರೆತರೆ ಜರ್ಮನಿಯ ಮೇಲೆ ಅದರ ಪರಿಣಾಮವು ಹೇಗಾದೀತೆಂದು ಹೇಳಬರುವುದಿಲ್ಲ. ಹಿಟ್ಲರನ ಆಸೆ ಮಹತ್ವಾಕಾಂಕ್ಷೆಗಳೆಲ್ಲ ಕೈಗೂಡದೆ ಅವನ ಪದಚ್ಯುತನಾಗುವ ಸಂದರ್ಭಗಳು ಬರಲಿಕ್ಕೂ ಸಾಕು.

ಕಮ್ಯೂನಿಷ್ಟರ ವಿರೋಧ ಪ್ರಚಾರ

ಪ್ರಪಂಚದಲ್ಲೆಲ್ಲ ಉಗ್ರಸಮಾಜಸತ್ತಾವಾದದ ಪ್ರಚಾರ ಮಾಡಬೇಕೆಂಬ ಧೋರಣವು ರಷ್ಯಕ್ಕಿರುವುದು. ಜಗತ್ತಿನಲ್ಲಿ ಎಲ್ಲ ಕಡೆ ದರೂ ತಾನು ಸಮಾಜಸತ್ತಾವಾದಿಯಾಗಿ ಇದ್ದರೆ ಸಾಕೆಂದು ಅದಕ್ಕೆ ಇದೆ. ಆದರೂ ಕೂಡ ರಷ್ಯದ ಸಹಾಯ ಪ್ರತ್ಯೇಕಗಳಿಲ್ಲದೇ ಪ್ರಪಂಚದಲ್ಲಿ ಉಗ್ರಸಮಾಜಸತ್ತಾವಾದ ಅಥವಾ ಕಮ್ಯೂನಿಜಮ ಪ್ರಚಾರವಾಗುತ್ತದೆ. ಫೆಸಿಸ್ಟ ನಾಜೀ ಪಂಥದ ಪ್ರಬಲ ನಿರಂಕುಶಾಹಿ ಸರಕಾರಗಳು ಅದನ್ನು ವಿರೋಧಿಸಲಿಕ್ಕೆ ಸೊಂಟಕಟ್ಟಿನಿಂತಿವೆ. ಈ ಕಾರಣದಿಂದ ಯುರೋಪಿನಲ್ಲಿ ನಿರಂಕುಶಾಹೀ ಮತ್ತು ಉಗ್ರಸಮಾಜಸತ್ತಾವಾದಿ ಶಕ್ತಿಗಳೊಳಗೆ ಘರ್ಷಣ ನಡೆಯುವದು ಖಂಡಿತ. ಉಗ್ರಸಮಾಜಸತ್ತಾವಾದದ ಪ್ರಚಾರವಾಗುವದಕ್ಕಿಂತಲೂ ಹಿಟ್ಲರ ಮುಸಲೋನಿವಾದ ಅಥವಾ ಫೆಸಿಜಮ್ಮಿನ ಪ್ರಚಾರವಾದರೂ ಆಗಬಹುದೆಂದು ಅನೇಕ ರಾಷ್ಟ್ರಗಳು ನೆನಸಿವೆ. ಕ್ರೈಸ್ತ ಪಾದರಿಗಳೂ ಹೀಗೆಯೇ ಅನ್ನತೊಡಗಿದ್ದಾರೆ. ಹಿಟ್ಲರ ಮುಸಲೋನಿಯರು ತಮಗೆ ಅಯಾಚಿತವಾಗಿ ಉಂಟಾದ ಈ ಅನುಕೂಲಕ್ಕಾಗಿ ಒಳಗಿಂದೊಳಗೆ ನಗುತಿದ್ದಾರೆ. ಹಿಟ್ಲರ ಮುಸಲೋನಿಯರ ಕೈ ಇತ್ತೀಚೆಗೆ ಬಲವಾಗಲಿಕ್ಕೆ ಇದೂ ಒಂದು ದೊಡ್ಡ ಕಾರಣವಾಗಿರುವುದು.

ಬಿರುಗಾಳಿಯ ಸೂಚನೆ

ಆದ್ದರಿಂದ ಯುರೋಪಿನ ಇಂದಿನ ರಾಜಕೀಯ ವಾತಾವರಣವು ಶಾಂತವಾಗಿರುವ ಹಾಗೆ ತೋರುತ್ತಿರುವದಾದರೂ, ಒಳಗಿಂದೊಳಗೆ ಶಾಂತತೆಯ ಭಂಗಮಾಡುವ ಅನೇಕಾನೇಕ ಪರಸ್ಪರ ವಿರೋಧಶಕ್ತಿಗಳು ಕೆಲಸ ಮಾಡುತ್ತವೆ. ಈ ಶಾಂತ ವಾತಾವರಣವು ಮುಂಬರುವ ಬಿರುಗಾಳಿಯ ಪೂರ್ವಸೂಚನೆ ಎಂದು ಖಂಡಿತವಾಗಿಯೂ ಹೇಳಬಹುದು. ಸದ್ಯದಲೇ ಯುರೋಪಿನಲ್ಲಿ ಒಂದು ಮಹಾಯುದ್ಧವು ಪುನಃ ಆರಂಭವಾಗುವುದು. ಅದರಲ್ಲಿ ಮನಸ್ಸಿಲ್ಲದಿದ್ದರೂ ಕೂಡ, ಇಂಗ್ಲಂಡು ಭಾಗ ತೆಗೆದುಕೊಳ್ಳಲೇಬೇಕಾಗುವುದು. ಹಿಂದೂದೇಶದ ಸ್ವಾತಂತ್ರ್ಯ ಸಂಪಾದನೆಗೆ ಅದುವೇ ಒಂದು ಅನುಕೂಲ ಸಂದರ್ಭವಾಗಬಹುದೆಂದು ಅನೇಕ ರಾಜಕಾರಣಪಟುಗಳು ಊಹಿಸಿದ್ದಾರೆ.

'ಕೂ–ಕೂ'

ಬರೆದವರು — ಬಿ. ಆರ್. ಕಾಮತ್

ಗಂಗಪ್ಪನಿಗೆ ಮಕ್ಕಳು ಹುಟ್ಟಿದವೆಂದರೆ ಎರಡನೇ ಸ್ವರ್ಗವು ಲಭಿಸಿದಂತೆಯೇ ಸರಿ ತ್ತಿದ್ದರಲ್ಲೂ ವರ್ಷ ಹೋಗಿ ಕಾದು ಕಾದು, ವೃದ್ಧಾಪ್ಯದ ದಿನಗಳಲ್ಲಿ ಸಂತಾನ ಲಾಭ ವಾಯಿತೆಂದರೆ ಅದರ ಆನಂದವನ್ನು ಅಷ್ಟಿ ಷ್ಟೆಂದು ಹೇಳ ತೀರದು ಗಂಗಮ್ಮನಿಗೆ ಅನೇಕ ವರ್ಷಗಳಿಂದ ಮಕ್ಕಳೇ ಹುಟ್ಟಿಲ್ಲ ಎಷ್ಟೋ ಹರಕೆಗಳನ್ನು ಹೆತ್ತುದಾಯಿತು. ದಾನಧರ್ಮ ವ್ರತಾದಿಗಳನ್ನು ಮಾಡಿದುದಾಯಿತು ಕುದಿಗೆ ಅವಳ ವೃದ್ಧಾಪ್ಯದ ದಿನಗಳನ್ನು ಬೆಳಗಲೊ ಎಂಬಂತೆ ಒಂದು ಹೆಣ್ಣು ಶಿಶು ಹುಟ್ಟಿತು

ವರ್ಷ ಹೋಗಿ ಹುಟ್ಟಿದ ಮಗುವಲ್ಲವೆ? ಸಹಜವಾಗಿ ಅದು ತಂದೆ ತಾಯಿಗಳ ಅಕ್ಕರೆಯ ಗೊಂಬೆಯಂತಾಯಿತು ಏನು ಆಭರಣಗಳ ವಕ್ಕೆ? ಏನು ವಸನಭೂಷಣಗಳದಕ್ಕೆ? ಗಂಗ ಮ್ಮಳಿಗೆ ಸಿಕ್ಕವರ ಕೂಡೆ ತನ್ನ ಗಿರಿಜೆಯ ಬಾಲ್ಯದ ಆಟ ಪಾಟಗಳನ್ನು ಹೇಳಿ ಸಂತೋಷ ಪಟ್ಟಷ್ಟು ಸಾಲದು ಗಂಡನನ್ನು ಕೂಡ ಮರೆತು—ಆಕೆ ಕೇವಲ ಗಿರಿಜೆಯ ಆಕ್ಕರೆ ಯಲ್ಲಿಯೇ ಮೈಮರೆಯ ತೊಡಗಿದಳು

ಒಂದು ದಿನ ಗಂಗಮ್ಮಳು ತನ್ನ ಮಗ ಳನ್ನು ತೊಡೆಯ ಮೇಲೇರಿಸಿ, ಮನೆಯ ಜಗ ಲಿಯ ಮೇಲೆ ಕುಳಿತಿದ್ದಳು

'ಅಮ್ಮಾ ಕೂ—ಕೂ ಆಡೋಣವೆ?' ಎಂದು ಗಿರಿಜೆಯು ತನ್ನ ತೊದಲ್ನುಡಿಗಳಿಂದ ವಿಚಾರಿಸಿದಳು. ಯಾವಾಗಲೂ ಗಿರಿಜೆಯು ಮೃದು ಮಧುರ ಕಂಠವನ್ನು ಕೇಳಿದೊಡನೆ ಗಂಗಮ್ಮಳಿಗೆ ಹಿಡಿಯಲಾರದಷ್ಟು ಹಿಗ್ಗು. ಗಿರಿಜೆಯು ತನ್ನ ಮಾತುಗಳನ್ನಾಡಿ ಮುಗಿಸು ವಷ್ಟರಲ್ಲಿ ತನ್ನ ಚಿಕ್ಕ ಕಾಲುಗಳಿಂದ ಹಾರ ಹಾರುತ್ತ ಅಂಗಳಕ್ಕಿಳಿದು, ಒಂದು ಪೊದೆಯ ಹಿಂದೆ ಅವಿತುಕೊಂಡಳು

'ಕೂ' ಎಂದು ಅವಿತುಕೊಂಡ ಸ್ಥಳದಿಂದ ಆಕೆಯ ಸ್ವರ ಹೊರಟಿತು

'ನನ್ನ ಗಿರಿಜೆಯು ಎಲ್ಲಿರುವಳು?' ಎಂದು ಹೇಳುತ್ತಾ ಗಂಗಮ್ಮಳು ತನಗೆ ಗೊತ್ತಿಲ್ಲದಂತೆ ನಟಿಸಿ, ಆಕೆಯನ್ನು ಹುಡುಕಲು ಹೊರಟಳು

ಗಿರಿಜೆಯು ತಾನು ಅವಿತುಕೊಂಡಲ್ಲಿ ಯೇ ಮೃದುವಾಗಿ ನಕ್ಕಳು ಒಳಕೆ ಹೊರಗೆ ... ... ತಾಯಿ ಆಕೆಯನ್ನು ಕಂಡತೆ ನಟಿಸಿ, ಓಡಿಹೋಗಿ, ಎತ್ತಿ ಮುದ್ದಿಟ್ಟು, 'ನನ್ನ ಗಿಣ್ಣಿ ಇಲ್ಲಿ ... ವಳೆ?' ಎಂದು ಅದರೊಂದು ಬಗೆಯ ಹಿಗ್ಗಿನ ನುಡಿ ನೆಳು.

ಗಿರಿಜೆಯು ತನ್ನ ತಲೆಯನ್ನು ತಾಯಿಯ ತೊಡೆಗಳಲ್ಲಿ ಅಡಗಿಸಿ ಆನಂದವಾದ ನಕ್ಕಳು ಮಗಳ ನಿರ್ಲಿಪ್ತ ಮುಖವನ್ನು ನೋಡಿ ಗಂಗ ಮ್ಮಳ ಹರ್ಷಿಯ ಕಳಾಗಿ ಕಣ್ಣುಗಳು ಕಾಂತಿ ಯುಕ್ತವಾದವು

'ಅಮ್ಮಾ' ಈಗ ನೀನು ಅವಿತುಕೊಳ್ಳ ಬೇಕು' ಎಂದು ಗಿರಿಜೆ ನಗ ವುದನ್ನು ನಿಲ್ಲಿಸಿ, ತಾಯಿಯನ್ನು ಕುರಿತು ಹೇಳಿದಳು

ಗಂಗಮ್ಮಳು ಎದ್ದು ನಿಂತುಕೊಂಡಳು ಗಿರಿ ಜೆಯು ಕ್ಷಣ ಕ್ಷಣಕ್ಕೆ ಸಾರವಾಗಿ ತನ್ನೆರಡು ಕೈ ಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡಳು – ಆದರೂ, ಬೆರಳಿನ ಸಂಧಿಗಳ ದ ಆಕೆ ನೋಡು ತ್ತಲೇ ಇದ್ದಳು ತಾಯಿ ಬಾ ಒಳಗೆ ಹೋಗಿ ಒಂದು ಬಾಗಿಲಿನ ಹಿಂದೆ ಅವಿತುಕೊಂಡು, ಕೂ ಎಂದಳು

ಗಿರಿಜೆಯು ಮನೆಯ ಒಳಗಡೆ ಓಡಿ, ತಾಯಿ ಯು ಎಲ್ಲಿ ಅವಿತುಕೊಂಡಿರುವಳೆಂದು ತನಗೆ ಗೊತ್ತಿಲ್ಲ, ಮೂಲೆ ಮೂಲೆಗಳಲ್ಲಿ ಹುಡುಕಾಡತೊಡಗಿದಳು

"ನನ್ನ ತಾಯಿಯು ಎಲ್ಲಿರುವಳು?" ಎಂದು ಅಂಗಳ್ಳೆ ಗಾಲಿಯ ದ ಮೂಲೆಗೋ ಉತ್ತರ ಹೇಳತೊಡಗಿದಳು

"ಇಲ್ಲಿಲ್ಲ ಇಲ್ಲಿ ಇಲ್ಲ' ಗಂಗಮ್ಮ ಉಟ್ಟು ತನ್ನ ನೈಜಸ್ಥಿತಿ ಯನ್ನು ಮರೆತು, ತಾನೂ ಒಬ್ಬ ಚಿಕ್ಕ ಹುಡುಗಿ ಯಂತೆ ಗೋಡೆಗೆ ಆತು ನಿಂತುಕೊಂಡಳು ಅದೊಂದು ಬಗೆಯ ಪೂರ್ಣಾನಂದದ ನಗೆಯು ಆಕೆಯ ಅಧರಗಳ ಮೇಲೆ ನಲಿಯುತ್ತಿತ್ತು

ಗಿರಿಜೆಯು ತನ್ನ ತಾಯಿಯ ಅವಿತುಕೊಂಡ ಸ್ಥಳದ ಸಮೀಪ—ಸಮೀಪ ಬರುತ್ತಿದ್ದಳು ಗಂಗಮ್ಮಳ ಮನಸ್ಸು ಸಮಯ ಹೋಗುತ್ತಾ ಆಟದಲ್ಲಿಯೇ ಲೀನವಾಗುತ್ತಿತ್ತು ಎಳೆಯ ಮಕ್ಕಳ ಹೃದಯದಂತೆ ಆಕೆಯ ಮನಸ್ಸು ಬಹಳ ಮೃದುವಾದುದು, ನಿಷ್ಕಲಂಕವಾದುದು ಆಡುತ್ತಿರುವಾಗ ಇತ್ತಣ ಅರಿವೇ ಆಕೆಗಿದ್ದಿಲ್ಲ ಪಕ್ಕನೆ ಗಿರಿಜೆಯು ಆಕೆಯೆಡೆಗೆ ನೋಡಿ ಆನಂದದಿಂದ ಕೂಗಿಬಿಟ್ಟಳು

"ಸಿಕ್ಕಿದಳು ಚೋರಿ ಸಿಕ್ಕಿದಳು' ಎಂದ ಆಕೆ ಆನಂದದಿಂದ ಕೈ ಚಪ್ಪಾಳೆ ತಟ್ಟಿ ನಲಿದು ತೊದಲ್ನುಡಿಯತೊಡಗಿದಳು ಗಂಗ ಮ್ಮಳಿಗೆ ಆಕೆಯ ಮಾತುಗಳನ್ನು ಕೇಳಿದೊಡನೆ ಆನಂದವು ಉಕ್ಕಿ ಒಮ್ಮೆ ಮೈಯೆಲ್ಲಾ ಪುಲಕಿತ ವಾಯಿತು

ಗಿರಿಜೆಯು ತಾಯಿಯ ಕೈಗಳನ್ನು ಹಿಡಿದು ಕೋಣೆಯ ಮಧ್ಯಕ್ಕೆ ಎಳೆತಂದಳು ಇಬ್ಬರೂ ಪರಸ್ಪರ ಆನಂದದಿಂದ ನಕ್ಕರು ಪುನಃ ಗಿರಿಜೆಯು ತಾಯಿಯ ತೊಡೆಗಳೆಡೆಯ ಲ್ಲಿ ತನ್ನನಡಗಿಸಿ, ತಡೆಯಿಲ್ಲದೆ ನಗತೊಡಗಿದಳು

೨

ಗಿರಿಜೆಯು ಮಲಗಿದ್ದಳು ಗಂಗಮ್ಮಳು ಕೋಣೆಯಲ್ಲಿ ಆಕೆಯು ಏನನ್ನು ಆಲೋಚಿಸು ತ್ತಾ ಕುಳಿತಿದ್ದಳು ಒಬ್ಬಂಟಿಗಳಾಗಿದ್ದಾಗ ಹೀಗೆ ಆಲೋಚಿಸುತ್ತಾ ಕುಳಿತುಕೊಳ್ಳುವುದು ಅವಳ ಅಭ್ಯಾಸ ಗಿರಿಜೆಯ ಆಟಪಾಟಗಳು, ಹಾವ ಭಾವಗಳ ಸವಿಯ ಬಗೆಗಳ ವಿಷಯ ಮನಸ್ಸಿನಲ್ಲಿ ನೆನೆನೆನೆದು ಒಮ್ಮೊಮ್ಮೆ ಆಕೆಗೆ ಜೀವನ ಧನವಾದ ದಂತೆ ಇಂದು ಏನೋ ಒಂದು ಆನಂದದ ಸವಿಯನ್ನು ಸ್ವೀಕರಿಸುತ್ತಿದ್ದಾಗ ಮನೆ ಕೆಲಸದ ಆಳು ಕೋಣೆಯನ್ನು ಪ್ರವೇಶಿಸಿದುದು ಆಕೆಗೆ ತಿಳಿಯಲೇ ಇಲ್ಲ ಅಂಬೆಯ ಮುಖದ ಮೇಲೆ ಭಯದ ಚಿಹ್ನೆಗಳ ಎದ್ದು ಕಾಣ ವಂತಿದ್ದವು

ಅಂಬೆಯು ತೀರ ಸಮೀಪ ಬಂದು ನಿಂತ ಳು ತನಕ ಗಂಗಮ್ಮಳಿಗೆ ಅದು ಬೇಡ ಇಲ್ಲ ಕಣ್ಣೆತ್ತಿ ಅಂಬೆಯ ಮುಖ ನೋಡಿದೊಡನೆ ಗಂಗಮ್ಮಳ ಎದೆಯೊಮ್ಮೆ ಧಸಕ್ಕೆಂದಿತು

'ಏನು ಅಂಬಾ ... ದ ಸುದ್ದಿ ಬಲಿಯೊಂದ ವಿಚಾರಿಸಿದಳು ಗಿರಿಜೆ, ಸೌಖ್ಯದಿಂದಿರುವಳಲ್ಲವೆ?'

ಕೊಡದಮ್ಮಾ ಎಂದು ... ಕೈಯ ಸನ್ನೆಯಿಂದ ತನ್ನ ಒಡತಿಯು ... ಸೂಚಿಸಿ 'ಗಿರಿಜೆಯ ... ನಿದ್ರಿಸುತ್ತಿ ರುವಳು. ಆದರೆ, ಬೇರೊಂದು ವಿಷಯವನ್ನು ನಿಮ್ಮ ಕೂಡೆ ಹೇಳಬೇಕೆಂದು ಬಂದಿರುವೆನು'' ಎಂದಳು

ಅಂಬೆಯ ಮುಖದ ಮೇಲಿನ ಪೂರ್ಣ ... ಲಿನ ಸ್ಥಿತಿಯ ... ಸಿಕಾಸಗೊಂಡಿಪ್ಪಿತು ಅವಳಲ್ಲಿ ಏ ಚಿಂತೆಯೊ? ನಿರೀಕ್ಷೆಯೊ?

ನೀನನ್ನು ಗಿರಿಜೆಯೊಡನೆ ಆಡುವುದು ಉತ್ತರವಲ್ಲ ನೈರಾಶ್ಯ ನನಗೊಂದ ಕೆಟ್ಟ ಸ್ವಪ್ನಬಿದ್ದಿತ್ತು ಆಕೆಯೊಡನೆ ಆಡುವುದನ್ನು ನೀವು ಬಿಡದಿದ್ದರೆ ಎಂದರಲ್ಲಿಂದ ಬಗೆಯ ಹಾಸಿಯ ಆಕೆಗೆ ತಟ್ಟಿಬಹುದು

' ಅಂಬಾ ಹೀಗೆಲ್ಲ ಇಲ್ಲದ್ದನ್ನು ಕಟ್ಟಿ ಕೊಂಡು ಸುಮ್ಮನೆ ಭಯಪಡಬೇಡ '

'ಹಾಗಲ್ಲವಮ್ಮಾ ನನಗೆ ಈ ಸ್ವಪ್ನವು ಬಹಳ ವಿಶೇಷವೆಂದ ತೋರುತ್ತದೆ ನೀವು ಎಲ್ಲೆಂದಿಲ್ಲ ಯಾವಾಗೆಂದಿಲ್ಲ, ಆಕೆಯೊಡನೆ ಆಡುತ್ತಿರುವಿರಿ ಎಲ್ಲಿಯಾದರೂ ಗ್ರಹಚಾರ ದೋಷದಿಂದ ಏನಾದರೂ ಆದರೆ? ಮಗು ಎಲ್ಲಿ ಯಾದರೂ ಕತ್ತಲಲ್ಲಿ ಹೆದರಿದರೆ? ಈಗಿನ ದಿನ ಗಳು ಬಹಳ ಕೆಟ್ಟವು' ಎಂದು ಅಂಬೆಯು ಅವನತ ಶಿರಸ್ಕಳಾಗಿ ನುಡಿದಳು

'ಯಾಕಂಬಾ, ನಾನು ಆಡಕೂಡದು? ನನ್ನ ಸರ್ವಸ್ವವೇ ಆಕೆಯಾಗಿರುವಳ ನಾನೇ ನು ಆಕೆಗೆ ಒಬ್ಬಳನ್ನೇ ಬಿಡುವೆನೇ? ಗಂಗಮ್ಮ ಳು ವಿಹ್ವಲ ಚಿತ್ತಳಾಗಿ ವಿಚಾರಿಸಿದಳು

'ಅಮ್ಮಾ' ನಾನ ಹೇಳಿದುದು ನಿಮಗೆ ತಿಳಿಯಲಿಲ್ಲ. ಗ್ರಹಚಾರ ಕೆಟ್ಟಿದ್ದರೆ ತಿಂದು ದ್ದೇ ಅಮೃತವೂ ವಿಷವಾಗುವುದು ನಾನು ಹೇಳುವುದಾದರೆ ನೀನಿನ್ನು ಗಿರಿಜೆಯೊಡನೆ ಆಡ ಕೂಡದು ಎಂದ ಅಂಬೆ ಒತ್ತಿನುಡಿದಳು

ಹುಚ್ಚಿ ಅಂಬೆ ಎಂದು ಗಂಗಮ್ಮಳು ನಿಂತುಕೊಂಡಳು

ಇನ್ನು ಮುಂದೆ ಅಂಬೆಯ ಆಡಿಸಿದ್ದ ಮಾತುಗಳೆಯ ... ... ಆಕೆಗೆ ಇಚ್ಛೆ ಯಿದ್ದಿಲ್ಲ ಆದರೆ ... ಬಗೆಯ ಮಬ್ಬು ಭಯವು ಆಕೆಯ ಮನಸ್ಸನ್ನು ಸ್ಥಿರಮಾಡಿಸಿ ಕೊಂಡು,

ಇನ್ನು ಮುಂದೆ ಇಂತಹ ಹಾಳು ಕತೆ ಗಳನ್ನು ನನ್ನ ಮುಂದೆ ತರಬೇಡ ಈಗ ನೀನು ಹೋಗಬಹುದು ... ... ಅಧೋವದನಳಾಗಿ ನೊಂದ ಮನಸ್ಸಿನಿಂದ ಅಲ್ಲಿಂದ ಹಿಂತೆರಳಿದಳು

ಆದರೆ ಗಂಗಮ್ಮಳ ಮನಸ್ಸು ಮಾತ್ರ ಸಮಾಧಾನವಾಗಲಿಲ್ಲ ಎಷ್ಟು ಮರೆಯಲೆತ್ನ ವಟ್ಟರೂ ಪದೇಪದೇ ಅಂಬೆಯ ಮಾತುಗಳ ... ... ಆಕೆಯ ಹೃದಯವನ್ನು ಕೊರೆದು ಕಾತರಗೊಳಿಸುತ್ತಿದ್ದವು ... ... ಗಿರಿಜೆಯು ಏಳಲಿ, ಆಕೆಯು ... ಬಗೆಯ ಸಂಬಂಧವು ... ಗಿರಿಜೆಯು 'ಕೂ' ... ಆಕೆಗೆ ಮೈಯೆಲ್ಲಾ ... ...

೩

... ಗಂಗಮ್ಮಳು ಏಳುವಾಗ ... ವಿಚಾರವೊಂದೂ ... ... ಮುಖವನ್ನು ... ... ಈ ತರದ ... ... ಮನಸ್ಸಿನಲ್ಲಿ ... ... ಗಿರಿಜೆಯೊಡನೆ ಆಡಲು ಆಕೆ ಹಿಂಜರಿದುದು ಮಾತ್ರವಲ್ಲದೆ,—ಆಕೆಗಾ ಇನ್ನು ಅವಳೊಡನೆ ಆಡಕೂಡದೆಂದು ಕಟ್ಟಪ್ಪಣೆಯಿತ್ತಳು

ಗಿರಿಜೆಯು ಗಮಲಿಂಪಿಯರಿಗೆ ವಿಧೇಯ ಳಾಗಿ ನಡೆಯುವ ಹುಡುಗಿ. ಆದುದರಿಂದ ಆಕೆಯ ತಾಯಿಯ ಇಚ್ಛಾನುಸಾರವಾಗಿ ನಡೆ ಸತೊಡಗಿದಳು. ಆದರೆ ಬಾಲ್ಯದಿಂದಲೂ ಆಡಿಕೊಂಡಿದ್ದವಳಲ್ಲವೆ? ಎಷ್ಟೋ ಸಲ್ಲ ಆಕೆಯು ತಾಯಿಯನ್ನ ಕಂಡೊಡನೆ ಸ್ಮರಿಸಿ, ಅವಿತು ಕೊಂಡು 'ಕೂ ಕೂ' ಎಂದು ಕೂಗಿದುದುಂಟು.

'ಕೂ' ಎಂಬ ಶಬ್ದವನ್ನು ಕೇಳಿದೊಡನೆ ಗಂಗಮ್ಮಳಿಗೆ ಕಣ್ಣು ಕತ್ತಲೆ ಬಂದಹಾಗಾಗು ತ್ತಿತ್ತು ಆಗಳಾಕೆ ಮಗಳ ಮನಸ್ಸನ್ನು ಬೇರೆ ವಿಷಯಗಳಿಗೆ ಎಳೆದು ಸಂತೋಷಗೊಳಿಸಲು ಸಾಧಿಸುವಳು. ಪರಂತು, ಆಗಾಗ್ಗೆ ಆಕೆಯ ಮನಸ್ಸು ಚಂಚಲ—ಭೀಕರ ವಿಚಾರಗಳ ಸ್ಪರ್ಧೆ ಯಿಂದ ಕಲ್ಲಣಗೊಳ್ಳುತ್ತಿತ್ತು

'ಗಿರಿಜೆಯು ಸದಾಕಾಲ 'ಕೂ-ಕೂ' ಎನ್ನುವಳೇಕೆ? ಯಾವಾಗಲೂ ಕಣ್ಣುಗಳನ್ನು ಮುಚ್ಚಿ ಮುಖವನ್ನು ಮರೆಮಾಡುವಳೇಕೆ?' ಎಂದು ಗಂಗಮ್ಮಳು ಆಲೋಚಿಸತೊಡಗಿದಳು. 'ಆಕೆಯು ಎಲ್ಲ ಮಕ್ಕಳಂತಲ್ಲವೆ? ಅಂಬೆಯು ಹೇಳಿದ ಮಾತುಗಳಲ್ಲಿ ನಿಜಾಂಶವೇನಾದರೂ ಇರಬಹುದೆ? ... ಛೀ! ಹೀಗೆಲ್ಲ ಆಲೋಚಿಸು ವುದಕ್ಕೆ ನಾನೆಂತಹ ಹುಚ್ಚಿಯು ನನ್ನ ಗಿಣ್ಣಿ ನನ್ನನ್ನು ಬಿಟ್ಟು ಹೋಗುವಳೆ? ಅವಳನ್ನು ಬಿಟ್ಟು ನಾನು ಬದುಕಬಲ್ಲೆನೆ? ಇಲ್ಲ. ಎಂದಿ ಗೂ ಇಲ್ಲ.'

ಇತ್ಯಾದಿ ... ಬಗೆಯ ಆಲೋಚನೆ ಗಳಿಂದ ಗಂಗಮ್ಮಳಿಗೆ ಮನಸ್ಸಿಗೆ ಸ್ವಾಸ್ಥ್ಯವೇ ತಪ್ಪಿತು. ಗಿರಿಜೆಯೊಡನೆ ಆಟವಾಡುವುದಕ್ಕೆ ಹಿಂಜರಿದುದಕ್ಕೆ ಆಕೆಗೆ ತನ್ನಲ್ಲಿಯೇ ಬಹಳ ನಾಚಿಕೆಯಾಯಿತು ಆಕೆಗೆ ಆಡಬೇಕೆಂಬ ಆಶೆಯೂ ಬಹಳ ಆದರೆ ಮನಸ್ಸು ಮಾತ್ರ ಹಿಂಜರಿಯುವುದು ಇದರಿಂದ ಆಕೆಯ ಮನೋ ವೇದನೆಯು ಇಮ್ಮಡಿಯಾಗುತ್ತಿತ್ತು ಒಮ್ಮೊ ಮ್ಮೆ ಗಂಗಮ್ಮಳೇ ಆಟವನ್ನು ಪ್ರಾರಂಭಿಸು ವಳು—ಪುನಃ ಹಿಂಜರಿಯುವಳು ... ಪಾಪ ವನ್ನು ಮಾಡಬೇಕೆಂದು ತಿಳಿದಿದ್ದರೂ ಮುಂಬ ರಿವ ತಪ್ಪುಗಾರನಂತೆ ಆಕೆಯ ಮನಸ್ಸು ಹೇಸು ವುದು ಈಗಿನ ಆಕೆಯ ಮನಸ್ಸಿನ ಕಳವಳವು ಎಷ್ಟಿರಬಹುದು?

೪

ರಾತ್ರಿ ಗಿರಿಜೆ ಮಲಗಿದ್ದಳು. ಕಣ್ಣಿನ ರೆಪ್ಪೆಗಳ ನಿದ್ರೆಯ ಭಾರದಿಂದ ತೂಕಡಿಸು ತ್ತಿದ್ದವು ಗಂಗಮ್ಮಳು ಒಂದು ಪಲ್ಲವಿಯನ್ನು ತೆರೆದು ಮಗಳ ಮೈಯನ್ನು ಅಪ್ಪಾಡಿಸಿದಳು. ಗಿರಿಜೆಯು ಅವಳಿಗೆ ಎಡೆಯಿಂದ ತನ್ನ ಕೈಗ ಳನ್ನು ಹೊರಗೆ ನೆಗಚಿ ತಾಯಿಯ ತೊಡೆ ಗಳನ್ನು ಸುತ್ತಿಕೊಂಡಳು ಗಂಗಮ್ಮಳು ಒಗ್ಗಿ ಪ್ರೇಮದಿಂದ ಆಕೆಯ ಅಧರಗಳನ್ನು ಮುತ್ತಿಟ್ಟಳು ಗಿರಿಜೆಯು ... ಮುಖದ ಮೇಲೆ ಎಳೆದುಕೊಂಡು 'ಕೂ-ಕೂ' ಎಂದು ಕೂಗಿದಳು

ಒಡನೆ ಗಂಗಮ್ಮಳಿಗೆ ಎದೆಯ ನಡುಗಿ ದಂತಾಯಿತು ... ... ಗಿರಿಜೆಯು ಸುಮ್ಮನೆ ಮಲಗಿದ್ದಳು ಪಾಪ! ... 'ಲ್ಲವೆ' ತನ್ನ ಆಟದ ಮಾತುಗಳು ತಾಯಿಯ ಎದೆಯಲ್ಲಿ ಅದೆಂತಹ ಕುದಿಯನ್ನೆಬ್ಬಿಸುವ ವೆಂದು ಅವಳಿಗೆ ಹೇಗೆ ಗೊತ್ತು? ... ಆಕೆ ಮುಗುಳ್ನಕ್ಕು, ಕಣ್ಣುಗಳನ್ನು ಮುಚ್ಚಿ ... "ಕಣ್ಣುಗಳ ... ... " ಎಂದಳು.

ಒಳಗೆ ಗಿರಿಜೆ "ಕೂ-ಕೂ"

ಹೀಗೆಂದು ಆಡಾಡುತ್ತ ಗಿರಿಜೆಯು ಅಲ್ಲಿಯೆ ನಿದ್ದೆಹೋದಳು ... ಅಷ್ಟರ ವರೆಗೆ ಗಂಗಮ್ಮಳು ನೀರವವಾಗಿ ಉಸಿರೆತ್ತದೆ ಕುಳಿ ತಿದ್ದಳು. ಗಿರಿಜೆಯು ನಿರ್ಲಿಪ್ತ ಮಾತುಗಳನ್ನು ಕೇಳಿ ಆಕೆಯ ಮನಸ್ಸು ದುಃಖಾತಿರೇಕದಿಂದ ಕದಡಿದಂತಾಗಿತ್ತು. ಬಹು ಹೊತ್ತಿನ ತನಕ ಆಕೆಯು ಗಿರಿಜೆಯ ಹಾಸಿಗೆ ಬಳಿ ಕುಳಿತು ... ಹೃದಯವೇದನೆಯು ಕಣ್ಣುಗಳಿಂದ ... ಸುರಿಸುತ್ತಿದ್ದರೋ ಎಂಬಂತೆ, ನಿರಂತರ ಕರ... ಮಯ ದೃಷ್ಟಿಯಿಂದ ಆಕೆಯನ್ನೇ ... ನೋಡತೊಡಗಿದಳು.

'ನಾನು ತಾಯಿ! ತಾಯಿಯಾಗಿ ... ಕರುಳನ್ನು ... ಯಿಂದ ... ... ತಾಯಿಯನ್ನೇ ... ... ' ಎಂದು ನಾನಾ ... ... ಪ್ರಲಾಪಿಸಿದಳು.

ಅಂದು ರಾತ್ರಿ ಬಹು ಹೊತ್ತಿನ ತನಕ ತನ್ನ ಮಗುವನ್ನು ಕಾಪಾಡುವ ... ...

[illegible]

ಡಾಕ್ಟರರು [illegible] ಅಸ್ವಸ್ಥದ ಸಮಯದಲ್ಲಿ [illegible] ವೀ ಪ್ರಯತ್ನಗಳೆಲ್ಲ ವನ್ನೂ ಮಾಡಿದುದಾಯಿತು. ಆದರೂ ಗಿರಿಜೆಗೆ ಗುಣಮುಖ ತೋರಲಿಲ್ಲ. ಗಂಗಮ್ಮಳು ಗಳಿಗೆಗೊಮ್ಮೆ ಗಿರಿಜೆಯು ಗುಣ ಹೊಂದುವಳು, ಎಂದಿನಂತೆ ತನ್ನೊಡನೆ ಆಡುವಳು, ನಗಾಡುವಳು, ಎಂದು ತನ್ನನೊಂದ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುವಳು. ಪರಂತು ದಿನಹೋಗುತ್ತಾ ಗಿರಿಜೆಯು ಕಳೆಗುಂದಿ ಹಾಸಿಗೆಯ ಸಮನಾದಳು.

ಜ್ವರವು ಗಿರಿಜೆಯನ್ನು ಒಳಗೊಳಗೆ ಕೊರೆಯುತ್ತಿತ್ತು. ಆಕೆಗೆ ಸ್ವಯತಪ್ಪಿ ಆಗಾಗ್ಗೆ ಏನೇನೂ ಮಾತನಾಡತೊಡಗಿದಳು. ಆದರೆ ಸ್ವಯವಿದ್ದಾಗ ಎಂತಹ ವೇದನೆಯನ್ನಾದರೂ ಆಕೆ ಕಷ್ಟದಿಂದ ಸಹಿಸಿಕೊಂಡು, ಮರೆಮಾಚಿ ತಾಯಾರನ್ನು ಕಂಡರೂ ಸೌಖ್ಯದಿಂದ ಇದ್ದ ಹಾಗೆ ಮುಗುಳ್ನಗುವಳು. ಬಹಳ ಕಷ್ಟದಿಂದ, ಕಾತರತೆಯಿಂದ ಮೂರು ದಿನಗಳು ಸಂದುವು. ದಿನ ಹೋಗುತ್ತಾ ಗಿರಿಜೆಯು ಬಹಳ ಅಶಕ್ತಳಾದಳು.

ತುರುಹಾಸ್ಪೂರಿತವಾದ ನೋಟದಿಂದ ತನ್ನ ತಾಯಿಯನ್ನೀಕ್ಷಿಸಿ, ಅಸ್ಪಷ್ಟವಾಗಿ ತೊದಲ್ನುಡಿಯತ್ತ [illegible] ಅಮ್ಮಾ! [illegible] ಆಹೋ [illegible]

ಮಗಳ ಮಾತುಗಳನ್ನು ಕೇಳಿದೊಡನೆ ಗಂಗಮ್ಮಳು ಸಹಿಸಲಾರದೆ ಎರಡೂ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡಳು.

'ಅಮ್ಮಾ! ಗಿರಿಜೆ' ಅಸ್ಪಷ್ಟವಾಗಿ ಕರೆದಳು.

[illegible] ಗಂಗಮ್ಮಳು ಮೆಲ್ಲನೆ ಗಿರಿಜೆಯ ಹಾಸಿಗೆಯ [illegible] ಮೇಲೆ ಬಗ್ಗಿ ನೋಡಿದಳು. ಬಿಳುಪು ತಿರುಗಿದ [illegible] ತಾಯಿಯ ಮೊಗವನ್ನು ನೋಡಿ ಗಿರಿಜೆಯು ಮೆಲ್ಲನೆ, ಬಹು ಮೆಲ್ಲನೆ 'ಅ...... ಮ್ಮಾ [illegible] ಮ್ಮಾ' ಎಂದಳು. ಗಿರಿಜೆಯ ಕಣ್ಣುಗಳ ಕಾಂತಿಯು ನಸುಗುಂದಿತ್ತು. ಕ್ಷಣ ಹೋಗುತ್ತಾ ಆಕೆಗೆ ತಾಯಿಯ ಮೊಗವು ಮಂದವಾಗಿ ಕಾಣಿಸ ತೊಡಗಿತು. ಹೊದ್ದುಕೊಂಡು ವಸ್ತ್ರದ ಅಂಚನ್ನು ಹಿಡಿದು ಆಕೆ ಅತಿ ಕ್ಷೀಣ ಸ್ವರದಿಂದ 'ಕೂ' ಎಂದಳು.

ಬಾಯಿಯಿಂದ ಅಕ್ಷರಗಳು ಸರಿ ಹೊರಡದ [illegible] ಆಕೆಗೆ ಗಂಟಲು ಕಟ್ಟಿದಂತಾಯಿತು; ಮೆಲ್ಲನೆ ಕಣ್ಣುಗಳನ್ನು ತೆರೆದು, ಬಾಯಿ ಮುಚ್ಚಿ, ಕುತ್ತಿಗೆ ಜೋಲು ಹಾಕಿ, ಕಟಸ್ಥವಾಗಿ ಬಿದ್ದು ಬಿಟ್ಟಳು.

ಗಂಗಮ್ಮಳು ದುಃಖವನ್ನು ಸಹಿಸಲಾರದೆ [illegible] ಅಲ್ಲಿಯೇ ತನ್ನ ಮಗುವನ್ನು ಅಪ್ಪಿಕೊಂಡು ಬಿದ್ದು ಬಿಟ್ಟಳು.

೩.

ಗಂಗಮ್ಮಳ ಗಂಡನು ಮೆಲ್ಲನೆ ಮುಂದೆ ಬರದು ಆಕೆಯನ್ನು ಬರಿಯ ಒಣ ಶಬ್ದಗಳಿಂದ ಸಂತೈಸತೊಡಗಿದನು. ಗಂಗಮ್ಮಳು ಮಗಳ ಮೃತ ಶರೀರವನ್ನು ಹಾಸಿಗೆಯ ಮೇಲೆ ಮಲಗಿಸಿ, ತಾನು ಬಳಿಯಲ್ಲ ಕುಳಿತುಕೊಂಡಿದ್ದಳು. ಗಂಡನು ಬಂದು ಮೈಯನ್ನು ಮುಟ್ಟಿದೊಡನೆ,—

'ನೀವು ಹೋಗಿ' ಎಂದಳಾಕೆ 'ಆಕೆ ಕುಶಾಲಾಡುತ್ತಿರುವಳು. ಈಗ ಏಳುವಳು, ನೋಡಿ'

'ಪ್ರಿಯೆ! ಇನ್ನು ಹೆಚ್ಚು ದುಃಖಿಸಿ ಫಲವಿಲ್ಲ. ಆದದ್ದಾಯಿತು—ದೇವರ ಇಚ್ಛೆ. ಇನ್ನು ನೀನು ಒಳಗೆಹೋಗು.' 'ಆಕೆ ಈಗ ಏಳುವಳು!' ನೆಟ್ಟ ದೃಷ್ಟಿಯಿಂದ ಗಂಗಮ್ಮಳು ನುಡಿದಳು.

ಗಂಡನು ಒಮ್ಮೆ ಮೆಲ್ಲನೆ ಅತ್ತಿತ್ತ ನೋಡಿದನು. ಇನ್ನು ಹಾಗೆಯೇ ಬಿಟ್ಟರಾಗದು.

ಸುಮ್ಮನೆ ಇನ್ನು ದುಃಖಿಸಿ ಕೊರಗ ಬೇಡ. ಸತ್ತವಳು ಪುನಃ ಬದುಕುವುದೆಂದರೆ ಅಸಾಧ್ಯ. ಏಳು!' ಗಂಡನು ಪುನಃ ಸಮಾಧಾನ ಹೇಳಿದನು.

ಗಂಡನು ಎಷ್ಟು ಹೇಳಿದರೂ ಗಂಗಮ್ಮಳು ಕೂತಲ್ಲಿಂದ ಕದಲಲಿಲ್ಲ. ಗಿರಿಜೆಯ ಮೃತ ಶರೀರದ ಮೇಲೆ ನೆಟ್ಟ ದೃಷ್ಟಿಯನ್ನು ಬೇರೆ ತೆಗೆಯಲಿಲ್ಲ.

ಗಂಡನು ಮೆಲ್ಲನೆ ಆಕೆಯ ಕೈಗಳನ್ನು ಹಿಡಿದು ಎಬ್ಬಿಸಿದನು. ಆಕೆ ಪ್ರತಿಭಟಿಸದೆ ಆತನೊಡನೆ ಹೊರಟಳು.

ಆಕೆಯ ಮುಖಭಾವವು ಗಂಭೀರವಾಗಿತ್ತು. ಕಣ್ಣುಗಳಲ್ಲಿ ಕಟಕು ನೀರು ಸಹ ಇರಲಿಲ್ಲ. ಹೊರಗಿನ ಕೋಣೆಗೆ ಹೋಗಿ, ಗಿರಿಜೆಯು ಅಡಿತುಕೊಳ್ಳುವ ಮೂಲೆ ಮೂಲೆಗಳಲ್ಲಿ ಹುಡುಕಾಡ ತೊಡಗಿದಳಾಕೆ. ಒಮ್ಮೆ ಬಗ್ಗಿ ಮೇಜಿನೆಡೆಯಲ್ಲಿ ನೋಡುವಳು; ಇನ್ನೊಮ್ಮೆ ಬಾಗಿಲಿನ ಎಡೆಯಲ್ಲಿ ನೋಡುವಳು. ನೋಡಿ ಆಕೆಯು ಕಣ್ಣಿಗೆ ಕಾಣದಿರಲು 'ನನ್ನ ಗಿಜ್ಜು ಎಲ್ಲಿರುವಳು? ಗಿರಿಜಾ! ಗಿರಿಜಾ!' ಎಂದು ಎದೆಯುಬ್ಬಿ ಕರೆಯುವಳು.

ಗಂಗಮ್ಮಳನ್ನು ಅತ್ತ ಕಳುಹಿಸಿ, ಗಂಡನು ಗಿರಿಜೆಯ ಶವವನ್ನು ತೆಗೆಸಿದನು. ಗಿರಿಜೆಯ ಮರಣದ ನಿಮಿತ್ತ ಗಂಗಮ್ಮಳಿಗೆ ಭಯಂಕರ ಹೃದಯ ಕಂಪನವಾಗಿದೆಯೆಂದು ಆತನಿಗೆ ಗೊತ್ತು. ಆದರೆ, ಒಮ್ಮೆ ಆಕೆಯನ್ನು ಕಣ್ಣ ಮುಂದಿನಿಂದ ತಪ್ಪಿಸಿದರೆ, ತಾನಾಗಿ ದುಃಖವು ಉಪಶಮನವಾಗಬಹುದೆಂದು ಆತನು ಗ್ರಹಿಸಿದ್ದನು.

ಮಗಳ ಹೆಣವನ್ನು ಕೊಂಡುಹೋಗುವಾಗ, ಒಳಕೋಣೆಯಲ್ಲಿದ್ದ ಗಂಗಮ್ಮಳು ನೋಡಿದಳು. ಬಾಗಿಲಿನ ತನಕ ಓಡಿ ಬಂದು ಒಂದು ದೀರ್ಘನಿಶ್ವಾಸವನ್ನು ಬಿಟ್ಟು 'ಗಿಜ್ಜು' ಎಂದು ಕೂಗಿದಳಾಕೆ.

ಆದರೆ, ಗಿರಿಜೆಯನ್ನು ಕೊಂಡುಹೋಗುವವರು ನಿಲ್ಲಲಿಲ್ಲ. ಗಂಗಮ್ಮಳು ಹಿಂದೆಯೇ ಓಡಿದಳು. ಒಳಗಿದ್ದ ಕೆಲವರು ಅಡ್ಡಗಟ್ಟಿ ತಡೆದರು. ಒಡನೆ ಆಕೆ ಕಟ್ಟನೆ ಹಿಂದೆ ಹಾರಿ, ಕಿಟಿಕಿಯ ಬಳಿಗೆ ಓಡಿ, ಸಿಕಳುಗಳೆಡೆಯಿಂದ ಇಣಿಕಿ 'ಗಿಜ್ಜು! ಕೂ-ಕೂ' ಎಂದು ಕೂಗಿದಳು. ಬಳಿಕ ಹಾಗೆಯೇ ಶೂನ್ಯದೃಷ್ಟಿಯಿಂದ ಹೊರಗೆ ನೋಡುತ್ತ, ಎರಡೂ ಕೈಗಳಿಂದ ಕಿಟಕಿಯ ಸರಳುಗಳನ್ನು ಗಟ್ಟಿಯಾಗಿ ಹಿಡಿದು ಗಹಗಹಿಸಿ ನಕ್ಕಳು!

ಸೆರೆಮನೆಯಿಂದ ತಪ್ಪಿಸಿಕೊಂಡನು

ತಾನು ನಿರಪರಾಧಿಯೆಂದು ವ್ಯಕ್ತಪಡಿಸುವರೆ ಸಾಕ್ಷ್ಯವನ್ನು ಕೂಡಿಸಿದನು.

ಲಂಡನಿನ ಮಾರ್ಲ್‌ಬೋನ್ ಎಂಬಲ್ಲಿ, ಜೊನ್ ಡೇಲಿ ಎಂಬ ಗುಮಾಸ್ತನನ್ನು ಕೆಲವು ಸಾವಿರ ಪವನುಗಳನ್ನು ದುರ್ವ್ಯಯ ಮಾಡಿದ ಅಪವಾದನೆಯ ಮೇಲೆ, ರೊಯ್ ಸ್ಪಿಡ್‌ವರ್ತ್ನೆಂಬವನ ದೂರು ಪ್ರಕಾರ ಸೆರೆಯಲ್ಲಿಡಲಾಯಿತು.

ಒಂದಾನೊಂದು ದಿನ ಜೊನನು ಹೊಟ್ಟೆ ನೋವಿನ ನೆವದಿಂದ ಆಸ್ಪತ್ರೆ ಕೊಂಡೊಯ್ಯಲ್ಪಟ್ಟವನಾಗಿ ಅಲ್ಲಿಂದ ತಲೆತಪ್ಪಿಸಿಕೊಂಡನು. ಪೋಲೀಸರು ಎಷ್ಟು ಹುಡುಕಿದರೂ ಆತನು ದೊರಕಲಾರದವನಾದನು.

ಒಂದುದಿನ 'ನಾನು ತಪ್ಪಿಸಿಕೊಂಡುದಲ್ಲ, ನಾನು ಅಪರಾಧಿಯಲ್ಲವೆಂದು ವ್ಯಕ್ತಪಡಿಸಲು ಬೇಕಾದ ಸಾಕ್ಷವನ್ನು ಕೂಡಿಸಲು ಹೊರಟಿರುವೆನು.' ಎಂಬುದಾಗಿ ಪೋಲಿಸ್ ಅಧಿಕಾರಿಗಳಿಗೆ ಆತನ ಪತ್ರವು ಬಂತು.

ಮರುಳಿ ಡೇಲನು ಕಾಣಿಸಿಕೊಂಡಾಗ ಆತನು ಸಾಕ್ಷವನ್ನು ಕೂಡಿಸಲು, ಸಂಯುಕ್ತ ಅಮೇರಿಕಾ, ಆಫ್ರಿಕಾ ದೇಶಗಳನ್ನು ಸುತ್ತಾಡಿ ಬಂದಿರುವನಾಗಿಯೂ, ತಾನು ನಿರಪರಾಧಿ ಎಂಬುದರ ಕುರಿತು ಸಾಕ್ಷವನ್ನು ಕೂಡಿಸಿರುವನೆಂದು ಮೆಜಿಸ್ಟ್ರೇಟರಿಗೆ ತಿಳಿಸಿದನು.

ಆದರೆ ರೊಯ್ ಸ್ಪಿಡ್‌ವರ್ತನು ಆಗ ಮಾಯವಾಗಿದ್ದನು.

ನ್ಯೂಯೋರ್ಕಿನ ಧರ್ಮಶಾಲೆ

ದಿವಾಳಿಯಾದ ಧನಾಢ್ಯರಿಗಾಗಿ.

ಅಮೃತಶಿಲೆಯಿಂದ ರಚನೆಯಾದ ಅರಮನೆಯಂತಿರುವ ಅತ್ಯಂತ ಅಮೋಘವಾದ ಸದನವಿರುವುದು ನ್ಯೂಯೋರ್ಕಿನ ಬ್ರೊಂಕ್ಸ್ ಎಂಬಲ್ಲಿ. ಅದು ಎಂಡ್ರ್ಯೂ ಪೀಟರ್ ಮೋನ್ ಎಂಬಾತನು ತನ್ನ ವೀಲುನಾಮೆಯಲ್ಲಿ ಬಿಡಲಾದ 15,00,000 ಪವನುಗಳನ್ನು ವ್ಯಯಿಸಿ ರಚಿಸಿದಾಗಿರುತ್ತದೆ. 25 ವರ್ಷಗಳ ಹಿಂದೆ ದಿವಾಳಿ ಹೊಂದಿದ ಹಿಂದೆ ಸಿರಿಯ ತೊಡೆಯ ಮೇಲೆ ಆಡಿದ, ವೃದ್ಧ ಮಿಲಿಯಾಧಿಪತಿಗಳಿಗಾಗಿ. ಈ ಸಂಸ್ಥೆಯ ರಜತೋತ್ಸವವು ಸದ್ಯದಲ್ಲಿ ನಡೆಯುವುದು. ದಿವಾಳಿ ಹೊಂದಿದ ವೃದ್ಧ ಮಿಲಿಯಾಧಿಪತಿಗಳ ಆರೈಕೆಯು ಅಲ್ಲಿ ಮಾಡಲಾಗುತ್ತದೆ. ಈ ಸದನವನ್ನು ಸೇರಬೇಕಾದರೆ, ಒಬ್ಬನ ಪ್ರಾಯವು 60ಕ್ಕೆ ಮಿಕ್ಕಿರಲೇಬೇಕು, ಆತನೊಡನೆ ಆಗ ಒಂದು ಚಿಕ್ಕಾಸು ಕೂಡ ಇರಬಾರದು, ಹಿಂದೆ ಆತನು ಮಹಾಸಿರಿವಂತನಾಗಿ ಆಡಂಬರದಲ್ಲಿ ದಿನ ಕಳೆದವನಾಗಬೇಕು. ಒಂದು ದಿನ ಮಿಲಿಯಾಧಿಪತಿಗಳಾಗಿದ್ದವರು ಭಿಕ್ಷುಕರಾಗಿ ತಿರುಗದಂತೆ ನೋಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಂತೆ.

ಸಾವಿತ್ರೀ ಮಾತೆಯ
ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ.

ತಲೆನೋವನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ. [illegible] ಗಳು ಉಂಟಾಗುವ ಪ್ರಕಾರಗಳನ್ನು [illegible] ಮೇಲೆ ತಂಪನ್ನು ಕೊಟ್ಟು [illegible] ಮೊದಲಾದುವು) ದೊರಕಿಸಿ [illegible] ಗಿಸಿ, ತಲೆಯಲ್ಲಿ ಕೂದಲು [illegible] ಗಟ್ಟುವ ದುರ್ದಶೆಗೆ ಅವಕಾಶಕೊಡದೆ, ಸುಖ ನಿದ್ರೆಯೂ ಗುವಂತೆಯೂ ನಿದ್ರಾಭಂಗ ಆದಿ [illegible] ಏಳುವಂತೆಯೂ ಪರಿಣಮಿಸಿ, ಮನಸ್ಸಿಗೆ [illegible] ನ್ನುಂಟುಮಾಡುವುದಾಗಿದೆ.

[illegible] ಅರ್ಧ ಶಾಸು ಮೊದಲು ತಲೆಗೆ ಹಚ್ಚಿ [illegible] 2 ಔನ್ಸು ತೈಲವಿರುವ ಸೀಸೆಗೆ ರೂ. 1 [illegible]

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ [illegible] ಶೇಷಯ್ಯ, ಎಮ್. ಡಿ., ಪಿ. ಹೆಚ್. ಡಿ. ಅಭಿಪ್ರಾಯ:
[illegible] ಬಾಳಿಗರೇ,
[illegible] ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋಗಿಸುತ್ತಿರುವೆನು. ಅದು ತಲೆಗೆ ತಂಪನ್ನುಂಟುಮಾಡುವ ಗುಣವುಳ್ಳದು. ಎಷ್ಟೋ ವರ್ಷಗಳಿಂದ ಆಗಾಗ ನನಗೆ ನಿದ್ರಾಭಂಗದ ಬಾಧೆಯಿತ್ತು; ಕಳೆದ ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನಿಮ್ಮ ಈ ತೈಲವು ನನಗೆ ತುಂಬ ಗಾಢನಿದ್ರೆಯನ್ನು ಅನುಗ್ರಹಿಸಿದೆ. ಇದರಿಂದ, ನನ್ನಂತೆ [illegible] ನಿದ್ರೆಯಿಂದ ಬಾಧೆ [illegible] ಇತರರೂ ಇದ [illegible] ಉಪಯೋಗಿಸಬಹುದೆಂದು ನನ್ನ [illegible] ಶಿಫಾರಸು.

ಶ್ರೀ. ಎಮ್. ಸುಂದರರಾವ್, ಬಿ. ಎ., ಎಲ್. ಟಿ., ಸೆಕ್ರೆಟರಿ ಡಿ. ಬೋ. ಇವರ ಅಭಿಪ್ರಾಯ:

ಒಂದು ಕಡ್ಡಿ ದನವಿನ ಹಾಲು ತೆಗೆದುಕೊಂಡು ಬಂದಲ್ಲಿ ಅದೇ ಹಾಲಿನಲ್ಲೆ ಮೇಹದ ಮದ್ದು ಹಾಕಿ ಧ [illegible] ಮಾರ್ಗ ಕೊಡೋ [illegible] ಸಾಗುವದು.

ಶ್ರೀ। ಬಿ. ವೈಕುಂಠ ಬಾಳಿಗ.

ಜನನ: 24ನೇ ಜೂನ್ 1858

ನಿಮ್ಮ ಈ ಮಾರುತೀ ಲೇಹ್ಯವು ನಿಜವಾಗಿಯೂ ಅಮೋಘವಾಗಿದೆ. ಅದನ್ನು ನಾನು ಕ್ಲಪ್ತ ಕ್ರಮದಲ್ಲಿ ಸೇವಿಸಿಲ್ಲವಾದರೂ, ನಾನೀಗ ತುಂಬ ಸುಖಿಯಾಗಿರುವಷ್ಟು ಉತ್ತಮ ಫಲಗಳು ನನ್ನ ದೊರೆತಿವೆ. ನನ್ನ ಮಕ್ಕಳಿಗೆ ಇದು ಇಷ್ಟವಾಗಿದೆ. ಅವು ತಾವಾಗಿ ಈ ಲೇಹ್ಯವನ್ನು ಕೊಡೆಂದು ಕಾಡುತ್ತವೆ. ದೇಹವನ್ನೂ ಮನಸ್ಸನ್ನೂ ಉತ್ತೇಜನಗೊಳಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು.

ತಿದ್ದುಪಡಿ

ಕಳೆದ ಸಲ ಮಾರುತೀ ಲೇಹ ಅರ್ಧ ರಾತ್ತಲಿಗೆ ರೂ. 1-4-0 ಅದನ್ನು ರೂ. 1-12-0 ಯಾಗಿ ತಿದ್ದಿರಿ.

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಸರ್
ಸಾವಿತ್ರೀ ಮಾತೆಯ ಔಷಧಗಳ ಮ್ಯಾಲಿಕರು,
ಕೊಂಗರಕೇರಿ ರಸ್ತೆ ಮಂಗಳೂರು, ದಕ್ಷಿಣ ಕನ್ನಡ.

ಸಾವಿತ್ರೀ ಮಾತೆಯ
ಮಾರುತೀ ಲೇಹ್ಯ
(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1937ನೆ ಇಸ್ವಿ ಎಪ್ರಿಲ್ ತಾ. ೬ರಲ್ಲಿ ಮೊದಲು ತಯಾರಿಸಿದುದಾಗಿದೆ.

ಇದರಲ್ಲಿ ಅಮೋಘವಾದದಿವ್ಯ ಗಿಡಮೂಲಿಕೆಗಳೂ, ಪುಷ್ಟವಾದ ದನದ ಹಾಲು, ಬೆಣ್ಣೆ, ಕುಂಕುಮ, ಜೇನು, ಸಕ್ಕರೆ ಸೇರಿವೆ. ದುಷ್ಟವಾದ ಮಾದಕ ಪದಾರ್ಥಗಳಾಗಲಿ, ಧರ್ಮವಿರುದ್ಧವಾಗಿರುವ ಯಾವ ಬಗೆಯ ಕೊಬ್ಬಾಗಲೀ ಇರುವುದಿಲ್ಲ. ಯಾವನೂ ಎಷ್ಟೇ ವಯಸ್ಸಿನವನಿದ್ದರೂ - ಬಾಲಕರು ಸಹ ಇದನ್ನು ಸೇವಿಸ ಬಹುದು. ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು ಆರೋಗ್ಯ ಚೇತನಗಳನ್ನು ವರ್ಧಿಸುವುದು. ದೇಹದ ಉಷ್ಣವನ್ನು ಹೋಗಲಾಡಿಸಿ, ಬಹುಮೂತ್ರ, ಸಿಹಿಮೂತ್ರ ಮೊದಲಾದುವನ್ನು ಗುಣಪಡಿಸಿ, ಹಸಿವನ್ನು ಹೆಚ್ಚಿಸಿ, ಕಂಠಿಣ ಮನುಷ್ಯನನ್ನು ಶೀಘ್ರ ಬಲಾಢ್ಯಗಳಿಂದ ಸಂಪೂರ್ಣ ಪುರುಷನನ್ನಾಗಿ ಘಟಿಸಿ ತರುತ್ತದೆ.

ಬೆಲೆ: - ಅರ್ಧ ರಾತ್ತಲು ಸೀಸೆಗೆ ರೂ. 1-12-0
ಒಂದು ರಾತ್ತಲು " ರೂ. 3-0-0

ವಿಶೇಷ: ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದನ ಕೇಶ ತೈಲವನ್ನು ಉಪಯೋಗಿಸುವಾಗಲೆ ಸೇವಿಸಿದಲ್ಲಿ ಉನ್ಮಾದ ರೋಗವು ಕೂಡ ಗುಣವಾಗುವುದು.

ವಿ. ಸೂ: ಐದು ರೂಪಾಯಿಗೆ ಕಡಿಮೆಯಾದ ಬೆಲೆಯ ಔಷಧಗಳನ್ನು ವಿ. ಪಿ. ಮೂಲಕ ರವಾನಿಸುವುದಿಲ್ಲ. ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯ ಕಾಲಂಶವನ್ನು ಮುಂಗಡ ತರಬೇಕಾಗಿದೆ. [illegible] ವಾಗಿ ಕಟ್ಟಿ ಕಳುಹುವ, ರೈಲ್ವೆ ಯಾ ಇತರ ರವಾನೆ ಖರ್ಚು ಪ್ರತ್ಯೇಕ.

ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ವಿಳಾಸ, ರವಾನಾ ಕ್ರಮ, ಅತಿ ಸಮೀಪದ ಪೋಸ್ಟ್ ಅಥವಾ ರೈಲ್ವೆ ಆಫೀಸು ಮೊದಲಾದುವನ್ನು ಪ್ರತಿ ಸಲ ಔಷಧ ಗಿರಾಕಿಗಳು ಶುದ್ಧಾಕ್ಷರಗಳಿಂದ ಬರೆಯಬೇಕಾಗಿದೆ.

★ ಮಂಗಳೂರು ವಾರ್ತೆ ★ ★ ತಾಲೂಕುಗಳಿಂದ ★

ಉಡುಪಿಯ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಸಂಸ್ಥೆಯಿಂದ ರಿಜರ್ವ್ ಬೇಂಕಿನ ಡೆಪ್ಯುಟಿ ಗವರ್ನರರಿಗೆ ಒಂದು ತಂತೀ ವಾರ್ತೆ ಕಳುಹಲಾಗಿದೆಯೆಂದು ನಮಗೆ ತಿಳಿಸಲಾಗಿದೆ: "ಮದ್ರಾಸು ಮುಖ್ಯ ಮಂತ್ರಿಯವರ ಸೂಚನೆಗೆ ಅನುಗುಣವಾಗಿ, ಈ ಬೇಂಕಿಂಗ್ ಕೂರ್ಪೊರೇಶನಿನ ಆಡಳಿತದವರು, ರಿಜರ್ವ ಬೇಂಕಿನವರು ನೇಮಿಸುವ ಅಧಿಕಾರಿಯಿಂದ ತಮ್ಮ ಲೆಕ್ಕಪತ್ರಾದಿಗಳನ್ನು ಪರೀಕ್ಷಿಸಿಕೊಳ್ಳಲು ಒಪ್ಪಿಕೊಳ್ಳುವವರಾಗಿದ್ದಾರೆ." ಈ ವಿಷಯದಲ್ಲಿ ಶ್ರೀಮಾನ್ ಮುಖ್ಯ ಮಂತ್ರಿಯವರಿಗೂ ಸದರಿ ಬೇಂಕಿನವರು ಪತ್ರ ಬರೆದುಕೊಂಡು, ಜನತೆಯಲ್ಲಿರಬಹುದಾದ ಭಯವನ್ನು ಹೋಗಲಾಡಿಸಲು ಮುಖ್ಯ ಮಂತ್ರಿಯವರ ಭಾಷಣವು ಯಾವತ್ತು ಬೇಂಕುಗಳಿಗೆ ಉತ್ತಮ ಸಂದರ್ಭವನ್ನು ಕೊಟ್ಟಿದೆ ಎಂದೂ, ಮೇಲಣ ವಾರ್ತೆಯ ವಿಷಯವನ್ನು ತಿಳಿಸಿದ್ದಾರೆ.

ನೋಟೀಸು

O. S. 298/95. R. I. A. 373/38.

ಕಾರ್ಕಳ ಡಿ. ಮುನ್ಸಿಫ ಕೋರ್ಟಿನಲ್ಲಿ

ಅನಂತಭಟ್ಟ — ವಾದಿ-ಅರ್ಜಿದಾರ

ಚಿನ್ನಪ್ಪ ಕದಂಬಾ — 2ನೇ ಪ್ರತಿವಾದಿ-ಎದ್ರಿ

ಎದ್ರಿ—ಚಿನ್ನಪ್ಪ ಕದಂಬಾ, ಕಾಂತು ಕೆದಂಬರ ಅಳಿಯ ರೈತ, ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಕೊಲ್ಲೆ ಎಂಬಲ್ಲಿರುವವ.

ಇವರಿಗೆ ಈ ಮೂಲಕ ತಿಳಿಸುವದೇನೆಂದರೆ—

ಮೇಲ್ಕಂಡ ವ್ಯಾಜ್ಯದಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಯು ಬರಕೊಂಡ ಅರ್ಜಿ. ತಾ. 6—7—38ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ತಾರೀಕಿಗೆ ಬೆಳಿಗ್ಗೆ ಘಂಟೆ 10ಕ್ಕೆ ನೀವು ಕೋರ್ಟ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪವನ್ನು ಹೇಳದಿದ್ದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಮೊಕ್ಕಾಂ ಕಾರ್ಕಳ } K. B. JOISHI,
ತಾ. 24—6—38. } Pleader for Petitioner.

ಮದ್ರಾಸಿನಲ್ಲಿ ಜರಗಲಿರುವ ದ್ರಾವಿಡ ವೈದ್ಯಕೀಯ ಸಮ್ಮೇಲನದ ಅಧ್ಯಕ್ಷರನ್ನು ಬೀಳ್ಕೊಳ್ಳುವುದಕ್ಕಾಗಿ ಜರುಗಿಸಿದ ಸತ್ಕಾರ ಕೂಟ.

ಸದ್ಯದಲ್ಲಿಯೇ ವ್ಯವಸ್ಥಾಪೂರ್ವಕವಾಗಿ ಸಂಘಟಿಸಲಿರುವ, ದ. ಕ ಜಿಲ್ಲಾ ರಿಜಿಸ್ಟರ್ಡ್ ಇಂಡಿಯನ್ ಮೆಡಿಕಲ್ ಪ್ರಾಕ್ಟೀಶನರ ಸಂಘದವರು ಇದೇ ತಿಂಗಳ ತಾ 26-27ರಲ್ಲು ಮದ್ರಾಸಿನಲ್ಲಿ ಜರುಗಿದ 9ನೇ ದ್ರಾವಿಡ ವೈದ್ಯಕೀಯ ಸಮ್ಮೇಲದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಶ್ರೀಯುತ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಯವರನ್ನು ಬೀಳ್ಕೊಳ್ಳುವರೇ ಒಂದು ಚಿಲ್ಲೋ ಸತ್ಕಾರ ಕೂಟವನ್ನು ಕಳೆದ ಗುರುವಾರ ತಾರೀಕು 23ನೇ ಸಾಯಂಕಾಲ ಗಂಟೆ 6ಕ್ಕೆ ಮಂಗಳೂರಿನ ಶ್ರೀಯುತ. ವೈದ್ಯ ಬಿ. ಆರ್ ಹರಿದಾಸರ ಶ್ರೀ ಸಮರ್ಥ ಆಯುರ್ವೇದ ಔಷಧಾಲಯ ಮಾಳಿಗೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಈ ಕೂಟದಲ್ಲಿ ಹಿಂದು, ಮುಸಲ್ಮಾನ, ಕ್ರಿಶ್ಚನ್ಸ್ ಎಂಬ ಭೇದಭಾವವಿಲ್ಲದೆ ಅನೇಕ ಪ್ರಮುಖ್ಯ ದೇಶಿಯ ವೈದ್ಯರು ನೆರೆದಿದ್ದರು.

ಪ್ರಥಮದಲ್ಲಿ ವೈದ್ಯ ಜಿ. ಯಸ್, ಪ್ರಭುಗಳು ಈ ಸಮಾರಂಭದ ಉದ್ದೇಶವನ್ನು ವಿವರಿಸಿ ಅತಿಥಿ ಮಹಾಶಯರುಗಳಿಗೆಲ್ಲಾ ಅಭಿವಂದನೆಯನ್ನರ್ಪಿಸಿದ ಬಳಿಕ, ಶ್ರೀ. ಕವಿರಾಜ ಯನ್. ಎಂ. ಶೆಟ್ರು, ಮುನ್ಸಿಪಲ್ ಸದಸ್ಯರಾದ ಶ್ರೀ. ಎಂ. ಆರ್. ಭಟ್ರು, ಶ್ರೀ. ಬಿ. ಆರ್. ಹರಿದಾಸ್ ಮೊದಲಾದವರು ಆಯುರ್ವೇದದ ಮಹತ್ವ ಮತ್ತು ದ್ರಾವಿಡ ದೇಶಿಯ ವೈದ್ಯಮಂಡಲದವರು ಈ ಪ್ರಾಂತ್ಯದ ಒಂದು ಮೂಲೆಯಲ್ಲಿರುವ ದ. ಕ. ಜಿಲ್ಲಾ ಮಂಗಳೂರಲ್ಲಿರುವ ಆಯುರ್ವೇದ ಭೂಷಣ ಶ್ರೀ. ಯಂ. ವಿ. ಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದುದು ಅಧ್ಯಕ್ಷರ ವಿದ್ವತ್ ಮತ್ತು ಸೌಜನ್ಯವನ್ನು ಸೂಚಿಸುತ್ತದಲ್ಲದೆ ಇದು ನಮ್ಮ ಜಿಲ್ಲೆಗೆ ಒಂದು ಭೂಷಣವಾಗಿರುವುದೆಂದು ಹೇಳಿ ಶ್ರೀಯುತ ಶಾಸ್ತ್ರಿಯವರ ಅಧ್ಯಕ್ಷತನದಲ್ಲಿ ನಡೆಯಲಿರುವ ಪರಿಷತ್ತು ಯಶಸ್ವಿಯಾಗಿ ಜರುಗಲೆಂದು ಹಾರೈಸಿದರು.

ಅಂದಿನ ಅತಿಥಿಗಳಲ್ಲಿ ಮುಖ್ಯರಾದ ಶ್ರೀ. ಶಾಸ್ತ್ರಿಗಳು ತನ್ನನ್ನು ಈ ರೀತಿ ಪ್ರೋತ್ಸಾಹಿಸಿ ಸತ್ಕರಿಸಿದಕ್ಕಾಗಿ ತಾನು ತುಂಬಾ ಕೃತಜ್ಞನಾಗಿದ್ದೇನೆಂದೂ ಈ ಸಮಾರಂಭವನ್ನೇರ್ಪಡಿಸಿದ ಶ್ರೀ. ಎಂ. ಆರ್. ಭಟ್ ಶ್ರೀ. ಬಿ. ಆರ್. ಹರಿದಾಸ್ ಮೊದಲಾದ ಮಹನೀಯರಿಗೆ ಅಭಿನಂದನೆಗಳನ್ನರ್ಪಿಸಿ ಸುಮಾರು ½ಗಂಟೆಯ ವರೆಗೆ ಆಯುರ್ವೇದ ಚಿಕಿತ್ಸೆಯ ವಿಷಯ ಭಾಷಣ ಮಾಡಿದರು. ತರುವಾಯ ತಾಂಬೂಲಾದಿ ಉಪಹಾರಗಳ ನಂತರ ಸಭೆಯು ವಿಸರ್ಜನವಾಯಿತು.

ಶ್ರೀ. ಜಿನರಾಜ ಹೆಗಡೆ.
ಕೇಂದ್ರ ಅಸೆಂಬ್ಲಿಯ ಸದಸ್ಯರು

ಕೇಂದ್ರ ಅಸೆಂಬ್ಲಿಯ ಸದಸ್ಯರಾದ ಶ್ರೀ ಸಾಮುವೆಲ್ ಆರನರು ರಾಜಿನಾಮೆ ಕೊಟ್ಟದ್ದರಿಂದ ಖಾಲಿಯಾದ ಆಸ್ಥಾನಕ್ಕೆ ಕಲ್ಲಿಕೋಟೆಯ ಶ್ರೀ. ಎಂ. ಪಿ. ನಾರಾಯಣ ಮೇನೋನರು, ನಮ್ಮ ಜಿಲ್ಲೆಯ ಶ್ರೀ. ಕೆ. ಬಿ. ಜಿನರಾಜ ಹೆಗಡೆಯವರೂ ನಾಮ ಪತ್ರವನ್ನು ಹಾಗಿದ್ದರು. ಶ್ರೀ ನಾರಾಯಣ ಮೇನೋನರ ನಾಮಪತ್ರವು ರಿಟರ್ನಿಂಗ ಆಫೀಸರರಿಂದ ನಿರಾಕರಿಸಲ್ಪಟ್ಟಿತು. ಯಾಕೆಂದರೆ ಅವರು ನಾಮಿನೇಶನ್ನು ಮಾಡಲು ಮೊದಲೇ [illegible] ಸರಕಾರದವರ ಅಪ್ಪಣೆ ಕೊಟ್ಟಿದ್ದ ಆ ಅಪ್ಪಣೆಯನ್ನು ಸರಕಾರದವರು ಹಿಂದಕ್ಕೆ ತೆಗೆದುಕೊಳ್ಳದೇ ಶ್ರೀ. ನಾರಾಯಣ ಮೇನೋನರು ಉಮೇದ್ವಾರರಾಗಲಾರರೆಂಬ ಆಕ್ಷೇಪವು ಸಮರ್ಥಿಸಲ್ಪಟ್ಟಿತು. ಶ್ರೀ ಹೆಗಡೆಯವರು ಪ್ರತಿಸ್ಪರ್ಧಿಗಳಿಲ್ಲದೇ ಕೇಂದ್ರ ಅಸೆಂಬ್ಲಿ ಸದಸ್ಯರಾಗಿ ಚುನಾಯಿಸಲ್ಪಟ್ಟದು ತುಂಬಾ ಸಂತೋಷದ ಸಂಗತಿಯಾಗಿದೆ.

NOTICE.

Tenders are invited from persons desirous of obtaining on annual lease the premises together with the yard, compound, out house, etc., well known as Varthaka Vilas, situated in Bunder. Persons desirous of obtaining on lease these premises are requested to put themselves in communication in writing with the undersigned, so as to reach him before the 27th July, 1938.

B. Vaikunta Baliga, B. A., B. L.,

Vakil for the power of attorney,

Holder from Mulji Laxmidas & Co.

ಬಂಟವಾಳ

ಇಲ್ಲಿ ಕಳೆದ ತಾ. ೨೬ನೇ ಆದಿತ್ಯವಾರ ಶ್ರೀ. ಬಿ. ನಾರಾಯಣ ಕಾಮತರು ಶ್ರೀ ಕೃಷ್ಣ ಗಾಯನ ಮಂದಿರವೆಂಬುದೊಂದು ಸಂಗೀತ ಶಾಲೆಯ ಪ್ರವೇಶ ಸಮಾರಂಭವನ್ನು ಬೆಳಿಗ್ಗೆ ಶ್ರೀ. ಡಾ. ಉಮೇಶರಾಯರು ಜರಗಿಸಿರುವರು. ಮಧ್ಯಾಹ್ನದ ನಂತರ ಶ್ರೀ. ಬಿ. ನಾಗೇಂದ್ರನಾಥ ಬಾಳಿಗರ ಅಧ್ಯಕ್ಷತೆಯಲ್ಲಿ ಸಭೆಯು ಜರಗಿ ಸಂಗೀತದ ಕುರಿತು ಶ್ರೀ. ಉಮೇಶರಾಯರೂ, ಬಿ. ಕೇಶವ ಬಾಳಿಗರೂ ಮಾತಾಡಿದರು. ಈ ಸಮಯದಲ್ಲಿ [illegible] ಅತಿಥಿಗಳಿಗೆ ಉಪಹಾರವೂ ಇದ್ದಿತು. [illegible] ಶ್ರೀ. ನಾರಾಯಣ ಕಾಮತಿಯವರು ತಾನು ಸಂಗೀತ ಶಾಲೆಯನ್ನು ತೆರೆದ ಉದ್ದೇಶವನ್ನು ವಿವರಿಸಿ ಹೇಳಿ, ದಕ್ಷಿಣ ಕನ್ನಡದ ಕುರಿತು ಸಂಗೀತದ ವಿಷಯದಲ್ಲಿ ಮೈಸೂರರತ್ತ ಕಡೆ ಬಹಳ ಕೀಳು ಅಭಿಪ್ರಾಯವಿರುವುದೆಂದೂ ತಿಳಿಸಿದರು. ಆದರೆ ಇತ್ತೀಚೆಗೆ ಈ ಅಭಿಪ್ರಾಯವು ಸ್ವಲ್ಪ ತಿದ್ದಲ್ಪಟ್ಟಿದೆಯೆಂದೂ, ದ. ಕನ್ನಡದವರು ಪ್ರೋತ್ಸಾಹವನ್ನಿತ್ತರೆ ತಾನು ಬಂಟವಾಳದಲ್ಲಿ ಮಾತ್ರವಲ್ಲ, ಈ ಜಿಲ್ಲೆಯ ಪ್ರತಿಯೊಂದು ದೊಡ್ಡ ಊರಿನಲ್ಲೊಂದು ಸಂಗೀತ ಶಾಲೆಯನ್ನು ತೆರೆಯಬೇಕೆಂದಿರುವೆನೆಂದೂ, ದ. ಕನ್ನಡವು ಸಂಗೀತ ವಿಷಯದಲ್ಲಿ ಹಿಂದಿಲ್ಲವೆಂದು ತೋರಿಸಿಗೊಡಬೇಕೆಂಬ ಉಚ್ಚ ಧ್ಯೇಯವನ್ನು ತಾನು ಇಟ್ಟುಕೊಂಡಿರುವೆನೆಂದೂ ತಿಳಿಸಿ, ತನ್ನ ಆಮಂತ್ರಣವನ್ನು ಮನ್ನಿಸಿ ನೆರೆದು ಬಂದ ಅತಿಥಿಗಳಿಗೆ ಆಭಾರ ಸೂಚನೆಯನ್ನು ಮಾಡಿ, ತನ್ನ ಭಾಷಣವನ್ನು ಮುಗಿಸಿದರು.

ಎಯಿಡೆಡ್ ಎಲಿಮೆಂಟರಿ ಶಾಲೆಗಳ ಮೆನೇಜರರ ಸಂಘ:—ತಾ. 25—6—'38ರಲ್ಲಿ ಈ ಸಂಘದ ಸಭೆಯು ಕೆನರಾ ಹೈಸ್ಕೂಲಿನಲ್ಲಿ ಶ್ರೀ. ಯಂ. ಯಸ್. ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಥೋಲಿಕ್ ಬೋರ್ಡಿನ ಸೆಕ್ರೆಟರಿಗಳಾದ ರೆವರೆಂಡ್ ಫಾದರ್ ಯಂ. ಪಿಂಟೊ ಬಜ್ಪೆ ಹಾಯರ್ ಎಲಿಮೆಂಟರಿ ಶಾಲೆ; ಉರ್ವ ಹಾಯರ್ ಎಲಿಮೆಂಟರಿ, ಸಿಟ್ಲ ಹ್ಯಾ. ಎಲಿಮೆಂಟರಿ, ಫರಂಗಿಪೇಟೆ ಕ್ರಿಶ್ಚಿಯನ್ ಹ್ಯಾ. ಎಲಿಮೆಂಟರಿ; ಮಿಶನ್ ಶಾಲೆಗಳ ಮೆನೇಜರ್ [illegible] ಗಳಿಯ ಪ್ರತ್ಯೇಕವಂದು, [illegible] ಮತ್ತು [illegible] ಶಾಲೆಗಳ [illegible] ಹಾಜರಿದ್ದರು. [illegible] ಅಗತ್ಯವಾದ [illegible] ನಿಬಂಧನೆಗಳನ್ನು [illegible]. 2 ಸಾವಿರಕ್ಕೆ ಮೇಲ್ಪಟ್ಟ ಗ್ರಾಂಟು [illegible] ಮೆನೇಜರರು ವರ್ಷ 1ರ ರೂ. 2[illegible] ಕಡಿಮೆ ಗ್ರಾಂಟು ದೊರಕುವವರು, ರೂ. 1ರಂತೆಯೂ ಪ್ರತ್ಯೇಕ 8 ಆಣೆಯೊಂದಿಗೆ ಕೊಟ್ಟು ಈ ಸಂಘದ ಮೆಂಬರರಾಗಬೇಕು [illegible] ನಿರ್ಣಯಿಸಲಾಯಿತು. ಆದರೆ ಇದೇ 38ನೇ ಇಸವಿ ಬಗ್ಗೆ ಮೇಲಿನ ನಂತ್ರಿಗೆಯ ಅರೆವಾಸಿ ಹಣವನ್ನು ಕೊಟ್ಟು ಮೆಂಬರರಾಗಬೇಕೆಂದು ಸಹಾ ನಿರ್ಣಯವಾಯಿತು. ಸಂಘದ ಕಾರ್ಯನಿರ್ವಾಹಕದ ಬಗ್ಗೆ ಈ ಕೆಳಗಿನ 5 ಮಂದಿ ಮೆಂಬರರ ಒಂದು ಕಮಿಟಿಯು ಏರ್ಪಟ್ಟಿತು.

1. ಶ್ರೀ. ಯಂ. ಎಸ್. ಕಿಣಿ,
2. ರೆವರೆಂಡ್ ಫಾದರ್ ಯಂ. ಪಿಂಟೊ,
3. ಎ. ರಾಮಚಂದ್ರ ಹೆಗಡೆ,
4. ರೆವರೆಂಡ್ ಸೋಜ್ಸ್,
5. ರೆವರೆಂಡ್ ಪಿ. ಡಿ. ಸೋಜಾ.

ಈ ಪೈಕಿ ಮೊದಲಿನ ಇಬ್ಬರು ತಾತ್ಕಾಲಿಕ ಜತೆ ಕಾರ್ಯದರ್ಶಿಗಳಾಗಿಯೂ ಕಾರ್ಯಗಳನ್ನು ಪ್ರಾರಂಭಿಸಬೇಕಾಗಿಯೂ ಕಮಿಟಿಯವರು ಪ್ರತಿ ತಿಂಗಳಲ್ಲಿ ಮಂಗಳೂರಲ್ಲಿ ಸಭೆಸೇರಿ ಅಗತ್ಯವುಳ್ಳ ಕೆಲಸಗಳನ್ನು ನಿರ್ವಹಿಸಬೇಕಾಗಿಯೂ ಗೊತ್ತುಮಾಡಲ್ಪಟ್ಟಿರುವುದು. ಎಲ್ಲಾ ಎಯಿಡೆಡ್ ಎಲಿಮೆಂಟರಿ ಶಾಲೆಗಳ ಮೆನೇಜರುಗಳು ಒಟ್ಟಾಗಿ ಸೇರಿ ಈ ಸಂಘವನ್ನು ಬಲಪಡಿಸಿ, ಮುಂದೆ ಎಯಿಡೆಡ್ ಎಲಿಮೆಂಟರಿ ಶಾಲೆಗಳ ಸ್ಥಿತಿಯು ಉತ್ತಮ ತರಗತಿಗೆ ಬರುವಂತೆ ಪ್ರಯತ್ನಿಸಬೇಕೆಂಬುದೇ ಈ ಸಂಘದ ಮುಖ್ಯ ಉದ್ದೇಶವಾಗಿದೆ. ಮೆಂಬರರಾಗಿ ಸೇರತಕ್ಕವರು ಅರ್ಜಿ ವ ಮೊತ್ತದ ಹಣವನ್ನು ರೆವರೆಂಡ್ ಫಾದರ್, ಯಂ. ಪಿಂಟೊ, ಬಿಶೊಪ್ ಹೌಸ್ ಮಂಗಳೂರು, ಇವರಿಗೆ ಕಳುಹಿಸುವವಲ್ಲದೆ ಶಾಲೆಗಳ ಸಂಬಂಧವಾಗಿ ಎಲ್ಲಾ ಪತ್ರವ್ಯವಹಾರಗಳನ್ನು ಸದ್ರಿಯವರ ಹೆಸರಿಗೆ ಮಾಡತಕ್ಕದೆಂದು ನಿರ್ಣಯಿಸಲಾಗಿದೆ.

ಕಾರ್ಕಳ

ಕಾರ್ಕಳ [illegible] ಪಂಚಾಯತ ಬೋರ್ಡು ಚುನಾವಣೆಯು ತಾ. 20—6—38ರ [illegible] ಮತ್ತು ಓಟುಗಳ ಎಣಿಕೆಯು ಅದರ ಮರುದಿನ ನಡೆದು ಉಮೇದ್ವಾರರಾಗಿ ನಿಂತ [illegible] ಲಾದ ಕೆ. ಶ್ರೀನಿವಾಸ ಹೆಗ್ಡೆ 341, [illegible] ಪಾಂಡುರಂಗ ಪೈ 332, ಕಟಪಾಡಿ ಶ್ರೀನಿವಾಸ ಶೆಣೈ 331, ಯೂಸಫ್. ಎ. ಸುಕೂರ್ 312, ಯಪತ್. ಜನಾರ್ದನ ಕಾಮತ 312, [illegible] ಜನಾರ್ದನ ಶೆಣೈ 309, ಯಚ್. ಯಾಸೀನ್ ಹುಸ್ಸೇನ 308, ಸಿ. ಯಚ್. ಮಂಜುನಾಥ ಕಾಮತ್ 294, [illegible] ಭವಾನಿ ಶಂಕರ [illegible] 289, ಕೆ. ಸಂಜೀವ ಹೆಗ್ಡೆ 278, ಕೆ. ವಿಶ್ವನಾಥ ಕಾಮತ್ 248, ಪಿ. ಸುಬ್ಬಣ್ಣ ಭಟ್ಟ 238, ಕೆ. ಸಂಜೀವ ನಾಯ್ಕ 224, ತಿಮ್ಮಪ್ಪ ರಾವ್ 206, ಬಿ. ಅಚ್ಯುತ ಪೈ 206, ದುಮಿಂಗ ಆಶಲ್ಕಿ ಸಿಲ್ವ 206, ಯಮ್. ಯಸ್. ಅಧಿಕಾಂ 205, [illegible] ಕಾಮತ್ 177, ಅಮ್ಮಣ್ಣ ರಾವ್ 165, ದೇವಪ್ಪ ಪ್ರಭು 126, ವಾಸುದೇವ ಶೆಣೈ 96 ಮತ್ತು ಕೆ. ರಾಮು ಇವರಿಗೆ 84, ಓಟುಗಳು ಸಿಕ್ಕಿ ಮೊದಲಿನ 14 ಮಂದಿ ಜನರಲ್ ಸೀಟುಗಳಿಗೂ, ಶ್ರೀ. ಕೆ. ಕೊರಗ ಸಮಗಾರರು ಪ್ರತಿಸ್ಪರ್ಧಿಯಿಲ್ಲದೆ ಹರಿಜನರ ಕಾದಿಟ್ಟ ಸೀಟಿಗೂ ಆರಿಸಿಬಂದಿರುತ್ತಾರೆ. ಹೊಸ ಸದಸ್ಯರು ತಾ. 30—6—38ರ ಮಧ್ಯಾಹ್ನದಿಂದ ಅಧಿಕಾರಕ್ಕೆ ಬರುವರು.

ಉಡುಪಿಯಲ್ಲಿ ಮೋಟಾರು ಅಪಘಾತ

ತಾ. ೨೨ನೆ ಪ್ರಾತಃ 7 [illegible] ಸಂತೆಕಟ್ಟೆ ಬಳಿ [illegible] ಮೋಟಾರು [illegible] ಪಡುಪು ಅಶ್ವತ್ಥ ಮರದ ಕಟ್ಟೆಗೆ [illegible] 1491 ನಂಬರಿನ ಕಾರ್ಕಳದ ಮೋಟಾರು ಕಾರು ಢಕ್ಕೆ ಬಡಿದು, ಸುಮಾರು ೨೫ ವರ್ಷ ಪ್ರಾಯದ ಕಡೆಕಾರಿನ ನೊಗೇರ ಜಾತಿಯ ಹೆಂಗಸೊಬ್ಬಳ ಪ್ರಾಣಹಾನಿಯಾಯಿತು. [illegible] ನೆರೆಮನೆಯವರ ಹೊರೆ ಹೊತ್ತುಕೊಂಡು [illegible] ಟೌನಿನಲ್ಲಿ ಹೋಗುವವರೊಂದಿಗೆ [illegible] ಹೆಸರಿನವಳು ಇಳಿಸಿ ಕಟ್ಟೆಯ ಹತ್ತಿರ [illegible] ಕಾಲುಗಳನ್ನು ಇಳಿಯ ಬಿಟ್ಟು ದಣಿವಾರಿಸುತ್ತಿದ್ದಳು. ಅಗಲ್ಡೆ ಪಳಿಮಾರು ಮಡಿಕೇರಿ (ಪಡು ಪೇಟೆ ರಸ್ತೆ)ಯ ಕಡೆಯಿಂದ [illegible] ಅಶ್ವತ್ಥ ಮರದ ಸಂದಿಯಲ್ಲಿ [illegible] ಕಡಿದಾದ ದೊಂಕಿನ ಜಾಗದಲ್ಲಿ [illegible] ಮುಂದರಿಸಿ ಕಟ್ಟೆಗೆ ಢಕ್ಕೆ ಬಡಿಯಿತು. [illegible] ಬಾಚಿ ಕುಳಿತದ್ದ ಸದ್ರಿ ಹೆಂಗಸಿನ ಕಾಲುಗಳೆರಡೂ ಕಾರಿನ ಮುಂಭಾಗಕಸ್ಯ ಕಲ್ಲಿನ ಕಟ್ಟೆಗೆ ಜಜ್ಜಿಹೋದವು. ಕಟ್ಟೆಯೂ ಪುಡಿ ಪ್ರಡಿಯಾಯಿತು. ಆದರೆ ಅವಳೊಂದಿಗಿದ್ದ [illegible] ಜನರಿಗೆ ನೆಂಪನು ಮಕ್ಕಳಿಗೇನೂ [illegible] ವಾಗಲಿಲ್ಲ, ಅಗ್ಗ ಜನವರ್ಗ[illegible] ದಿದ್ದರೂ ಮೋಟಾರು ಆಫೀಸಿನೊಳಗಿದ್ದ ಹೋಟೇಲುಗಳೊಳಗಿಂದ ಜನರು ಓಡಿ ಬಂದು ಕ್ರಮದಿಂದ ಕಾರನ್ನು ಸ್ವಲ್ಪ ಹಿಂದಕ್ಕೆ [illegible] ಅವಳನ್ನು ಎತ್ತಿಕೊಂಡು, ಬಳಿಯಲ್ಲಿದ್ದ [illegible] ಆಸ್ಪತ್ರೆಗೊಯ್ಯಲಾಯಿತು; ಆದರೆ [illegible] ಯು ಅರ್ಧ ತಾಸಿನೊಳಗಾಗಿ [illegible] ಆ ನೋಟವು ಭಯಾನಕವಾಗಿತ್ತು. [illegible] ಸಂದಿಗಳು, [illegible] ಜಜ್ಜಿಹೋದ [illegible] ವೆಡೆಗಳು ಕಾರು, [illegible] ಇತರ [illegible] ಹಾಗೂ ಜನರ ಬಿಲಾವದೆಯ [illegible] ಈ ಸುಮಯದಲ್ಲಿ ಸದ್ರಿ ಅಶ್ವತ್ಥ [illegible] ಜನಿಸುವ [illegible] ಸಂಬಂಧಪಟ್ಟ [illegible] ಈ ಸಂದಿಯಲ್ಲಿ [illegible] ಕ್ರಮವನ್ನಾಗಲಿ [illegible] ಪೋಲೀಸು ಇಲಾಖೆಯವರ [illegible] ಯತ್ತ ಕರೆದೇಸುವುದು.

...ಸಿನಲ್ಲಿ ಮಹಾಜನ ಸಭೆ. [illegible] ಸಂಜೀವನ ದಾನ.

ಶ್ರೀ [illegible] ಮುತ್ತುರಂಗ ಮುದಲಿಯಾರರು ಮುಳನಾಡು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಇವರು ಇವರೊಡನೆ ಒಂದು ಕಮಿಟಿಯನ್ನು ಮಾಡಿಕೊಂಡು, ಅಗತ್ಯಕಂಡಂತೆ ಇತ[illegible] ರ ಸಹಕಾರ ಪಡೆದು, ತ್ರಿವಾಂಕೂರು ನೆಶನಲ್ [illegible] ಬೇಂಕಿನ ಯಾವತ್ತು ಪಾಲುಗಾರರೂ ಠೇವಣಿದಾರರೂ ಮೊದಲಾದವರ ಹಿತಕ್ಕಾಗಿ ಯಾವ ಸಾಧನ ಪ್ರಯತ್ನಗಳನ್ನು ನಡಿಸಬೇಕೋ ಅವನ್ನು ನಡಿಸುವಂತೆ ಅಧಿಕಾರ ಕೊಡುವದರ [illegible] ಕು ಮಹಾಜನ ಸಭೆಯು ಮದ್ರಾಸಿನಲ್ಲಿ [illegible]ರಿತು.

ಬೇಂಕು ಕೆಲಸ ನಡೆಯದಿರಬೇಕು [illegible] ಯಾವತ್ತೂ ವಿಧಾನಗಳ ಮೂಲಕ ಬೇಂಕನ್ನು ಊರ್ಜಿತಗೊಳಿಸಬೇಕು ಎಂಬುದು ಈ ಸಭೆಯ ಉದ್ದೇಶವಾಗಿತ್ತು. ಲಿಕ್ವಿಡೇಶನಿಗೆ ಒಪ್ಪಿಸಿದರೆ, ಅಥವಾ ಬೇಂಕನ್ನು ಮುಕ್ತಾಯಗೊಳಿಸಿದರೆ ಠೇವಣಿದಾರರಿಗೆ ಅಪಾರವಾದ ನಷ್ಟ; ಆಗುವಷ್ಟು ಚೇತನ ತುಂಬಬಂದೀತೋ ನೋಡಿ, ಅದಾಗದಿದ್ದಾಗ ಹೇಗೂ ಮುಕ್ತಾಯದ ಉಪಾಯವುಂಟೆಂದೂ ಪ್ರಕಟವೇ ಇದೆ.

ವೈಸ್ರಾಯರೂ, ಗವರ್ನರರೂ, ತ್ರಿವಾಂಕೂರು ಸರಕಾರವೂ ಬೇಂಕನ್ನು ಮುಕ್ತಾಯಗೊಳಿಸುವ ಪ್ರಯತ್ನಗಳನ್ನು ಆತಂಕಿಸಬೇಕಾಗಿ ಸೂಚಿಸಿ ತಂತೀವಾರ್ತೆ ಕಳುಹಲಾಗಿದೆ. ಒಂದು ಲಕ್ಷ ಜನರು ಎರಡು ಕೋಟಿ ರೂಪಾಯಿ ಕಳೆದುಕೊಳ್ಳುವ ಮಹಾಸಂಕಟದ ಉತ್ಪಾತವಿದು!

ಪಾಲುಗಾರರ ಮನವಿಯಿಲ್ಲದೆ ಸರಕಾರ [illegible] ಯಾವ ತೆರದ ವಿಚಾರಣೆಯನ್ನೂ [illegible] ಕಾಶ ಪಡೆಯುವುದಿಲ್ಲ. [illegible] ಗೆ ಸಹಬಾಧ್ಯತೆಬಾದುದಕ್ಕೆ ಯಾರನ್ನು ದೂರಿಯೂ ಫಲವೂ ಇಲ್ಲ; ಆದರೂ ವಿಚಾರಣೆಮಾಡದೆ ಮುಕ್ತಿಯೂ ಇಲ್ಲ. ತ್ರಿವಾಂಕೂರು ಮತ್ತು ಮದ್ರಾಸು ಸರಕಾರಗಳು ಒಂದಾಗಿ ನಿರ್ಧರಿಸಿದಲ್ಲಿ, ಜನತೆಗೆ ವಿಹಿತವಾಗುವುದನ್ನೇನೋ ಮಾಡಬಹುದು. ಮುಕ್ತಾಯಗೊಳಿಸಬೇಕೆಂದು ಸಲ್ಲಿಸಿದ್ದ ಅರ್ಜಿಗಳನ್ನು ಕಂಪೆನಿ ಆಕ್ಟಿನ [illegible](N) ಸೆಕ್ಷನ್ ಪ್ರಕಾರ ಎದುರಿಸಿ,-ಬೇಂಕಿನ [illegible]ವತ್ತು ಸೊತ್ತು ಲೆಕ್ಕಪತ್ರ ಮೊದಲಾದುವುಗಳನ್ನು ಉಭಯ ಸರಕಾರಗಳೂ ನೇಮಿಸುವ [illegible] ಕಮಿಟಿಯು ವಹಿಸಿಕೊಂಡು, ಬೇಂಕಿನ ಸಧ್ಯಸ್ಥಿತಿಯನ್ನು ಕುರಿತು ವಿಮರ್ಶಿಸಿ, ಇನ್ನು ಬೇಂಕು ಊರ್ಜಿತವಿರಬೇಕೆ? ಮುಗಿಸಬೇಕೆ? ಎಂದು ಸರಕಾರಗಳಿಗೆ ಬರೆದುಕೊಳ್ಳುವಂತಾಗಬೇಕು. ಮುಗಿಸುವುದೆಂದರಾದರೂ, ಈ ಬೇಂಕನ್ನು ಮತ್ತೊಂದು ಬಹುಶಾಖೆಗಳುಳ್ಳ ಬೇಂಕಿಗೆ ವಹಿಸಿಕೊಟ್ಟು ಅದರ ಮೂಲಕವಾದರೂ ಉತ್ತರಕ್ರಿಯೆಗಳಾಗಬೇಕಲ್ಲದೆ ಅಲ್ಲ [illegible] ಕ್ವಿಡೇಟರನನ್ನು [illegible] ಎಲ್ಲವನ್ನೂ ಛಿನ್ನಾಭಿನ್ನಗೆಡಿಸಬಾರದು. 178ನೆ ಸೆಕ್ಷನು ಪ್ರಕಾರ ಕೋರ್ಟಿನವರು ಎಲ್ಲ ಮುಕ್ತಾಯದ ವಿಚಾರಣೆಗಳನ್ನು ತಡೆಯಬಹುದು. ಅಥವಾ ಎಲ್ಲ ಸಾಲಗಳನ್ನು ಕೂಡಲೆ ತೆರಲಾರದಾದಲ್ಲಿ 277N ಸೆಕ್ಷನಿನಂತೆ ಹೈಕೋರ್ಟಿಗೆ ಬರೆದುಕೊಂಡು ಎರಡು ವರ್ಷ [illegible] ಯಿದೆಯನ್ನು ಸಾಲಸಲ್ಲಿಸಲು ಪಡೆಯ[illegible]ಹುದಾಗಿದೆ.

ಬೇಂಕಿನ ಡೈರೆಕ್ಟರರ ಬೋರ್ಡಿನವರ ಚಿಯ [illegible] ನರು—ಈಗ ನಗದು 15 ಲಕ್ಷವಿದೆ; [illegible] ಭರಣ ಸೊತ್ತುಗಳೇ ಮೊದಲಾಗಿ ಇನ್ನೆ [illegible] ಹತ್ತಿಗಳೊಳಗೆ ವಸೂಲಾಗುವ 75 ಲಕ್ಷ [illegible]; ಬೇಂಕು ಅಡವಿಟ್ಟ ಅಥವಾ ಭದ್ರತೆಗಿಟ್ಟ [illegible] ಕೋಟಿ ರೂಪಾಯಿ ಮೌಲ್ಯದ ಪತ್ರಗಳಿವೆ. [illegible]ದರೆ, ಎಲ್ಲರೂ ಒಮ್ಮೆಲೇ ಹಣ ಪಾವತಿಗೆ [illegible]ದರೆ ಯಾವ ಬೇಂಕು ತಾನೆ ಬರಿದಾಗದೆ [illegible]) ಇವನ್ನು ಒಂದಾಗಿಸಿ, ರಿಜರ್ವ ಬೇಂಕಿನ ಸಹಾಯದಿಂದ ಎಲ್ಲ ಸಾಲಗಳನ್ನೂ ಪಾವತಿಮಾಡಬರುವಷ್ಟು ಚೆನ್ನಾಗಿ ಬೇಂಕನ್ನು ಊರ್ಜಿತವಿರಿಸಬಹುದು ಎಂದು ಸೂಚಿಸಿ ಸಭೆಗೆ ತಿಳಿಸಿದ್ದಾರೆ.

ಪ್ರತ್ಯಕ್ಷ ಡೈರೆಕ್ಟರರನ್ನು ಕಂಡು ಅಂಕೆ ಸಂಖ್ಯೆ ಸಂಗ್ರಹಿಸಿದವರೊಬ್ಬರು—ಬೇಂಕಿನಿಂದ ಹೊರಸಲತಕ್ಕದು 248 ಲಕ್ಷ ರೂಪಾಯಿ; ಬೇಂಕಿನ ಸೊತ್ತು ಮೊದಲಾದುವು 315 ಲಕ್ಷ ರೂಪಾಯಿ ಇದೆ. 16 ಲಕ್ಷ ರೂಪಾಯಿ ನಗದು ಇದೆ, ಸೆಕ್ಯೂರಿಟಿಗಳಲ್ಲಿ 6 ಲಕ್ಷ, ಚಿನ್ನ 28 ಲಕ್ಷ, ಸರಕು ಜಾಮೀನು ಬೆಲೆ 23 ಲಕ್ಷ, ಸಾಲಕೊಟ್ಟದು 20 ಲಕ್ಷ; ಕೊಡಿಸಬೇಕಾಗಿರುವ ಹುಂಡೀ ಹಣ 18 ಲಕ್ಷ— ಇಷ್ಟು ಸೊತ್ತಾಗಿದೆ.

ಈ ಬೇಂಕಿನ ದಾವಳಿಯ ಗಾಳಿ ತಾಗದ ಇಂಡೋ ಕೊಮರ್ಶಿಯಲ್ ಬೇಂಕ್, ಬೇಂಕ್ ಒಫ್ ಹಿಂದುಸ್ತಾನ್, ದಿ ಇಂಡಿಯನ್ ಬೇಂಕ್ ಇವುಗಳಿಂದಲೂ ಠೇವಣೆದಾರರು ಹಣಪಡೆವ ಬಡಾಟದಲ್ಲಿದ್ದಾರೆ. ಹಣ ನಷ್ಟವಾಗುವ ಭಯದಿಂದ ಈ ಬೇಂಕುಗಳನ್ನೂ ನುಗ್ಗಿ ಅವುಗಳಿಗೆ ಇಲ್ಲದ ಸಂಕಟ ಉಂಟುಮಾಡಿರುವರು. ಈ ಬೇಂಕುಗಳು ತಮ್ಮ ಲೆಕ್ಕಪತ್ರಗಳನ್ನು ಯಾರೂ ಅಧಿಕಾರಿಗಳು ಪರೀಕ್ಷಿಸಬಹುದೆಂದೂ ಹೇಳಿವೆ; ರಿಜರ್ವ ಬೇಂಕೂ ಅವುಗಳಿಗೆ ಸಹಾಯಮಾಡಿ ಸದ್ಯದ ತುಫಾನಿಂದ ಪಾರಾಗಿಸುವುದಾಗಿ ನಂಬಲಾಗಿದೆ.

ಬೊಂಬಾಯಿಂದ ರಿಜರ್ವ್ ಬೇಂಕಿನ ಡಿಪ್ಯುಟಿ ಡೈರೆಕ್ಟರರು ಮದ್ರಾಸಿಗೆ ಬಂದಿದ್ದು, ~~ಅಲ್ಲಿನ ವರ್ತಕಶಿರೋಮಣಿಗಳನ್ನು ಕಂಡು,~~ ಶ್ರೀ॥ ಛರಿಯವರೊಡನೆಯೂ ಫೈನೆನ್ಸ್ ಇಲಾಖೆಯವರೊಡನೆಯೂ ವಿಮರ್ಶಿಸಿದ್ದಾರೆ.

ಇದ್ದ ಬೇಂಕುಗಳೆಲ್ಲ ನಾಳೆ ಮುಚ್ಚಬಹುದೆಂಬ ಭಯದಿಂದ ಕಂಗೆಟ್ಟ ಜನರು ಕೂಡಲೆ ಹಣ ವಸೂಲ್ಮಾಡಲು ಬೇಂಕಿಗೆ ಬಂದು ಕೊಡುತ್ತಿದ್ದ ಬಾಧೆಯನ್ನು ಈಗ ತಡೆಯಲಾಗಿದೆ.

ಸರಕಾರವು ಈ ವಿಷಯದಲ್ಲಿ ಏನು ಮಾಡಬೇಕೆಂಬುದನ್ನು ಸದ್ಯದಲ್ಲೇ ನಿರ್ಧರಿಸುವುದು. ಮುಖ್ಯ ಮಂತ್ರಿಗಳನ್ನು ರಿಜರ್ವ ಬೇಂಕಿನ ಪ್ರತಿನಿಧಿಗಳು ಕಂಡು, ಅನಂತರವೇ ಪ್ರಯತ್ನಮಾಡುವರು.

ಮುಸ್ಸೋಲಿನಿಯು ಮನೆ ಕಾಯುತ್ತಿದ್ದಾರೆ!

ಅಲ್ಲಿಗೆ ಬಂದಿದೆ, ಪ್ರತಿಹಿಂಸೆಯ ಭಯ!

ಸ್ಪೈಯಿನಿನ ರಣರಂಗದಲ್ಲಿರುವ ಎರಡೂ ಪಕ್ಷಗಳಿಗೆ ಪರರಾಷ್ಟ್ರೀಯರ ಸಹಾಯವು ಒದಗುತ್ತಲಿದೆ ಎಂಬುದು ಈಗ ವಿದಿತವೇ ಆಗಿದೆ. ಇಲ್ಲದಿರುವಲ್ಲಿ, ಇಟಲಿ ಜರ್ಮನಿಗಳು ಫ್ರೆಂಕೊವಿನ ಸಹಾಯಕ್ಕೆ ನೆರೆದು ಬಂದಂತೆಯೇ, ನಮಗೆ ತಿಳಿದು ಬರುತ್ತಿರುವ ವಾರ್ತೆಯು ಸುಳ್ಳೆಂದು ಹೇಳಬರುವಂತಿರುವಾಗ,—ರಷ್ಯವು ಸಾಕಷ್ಟು ಸಹಾಯವನ್ನು ಮಾಡುತ್ತ ಸರಕಾರಿ ಪಕ್ಷವನ್ನು ಬಲಗೊಳಿಸುತ್ತಿರುವುದೂ ನಿಜವೆನ್ನಬೇಕು. ವಿಮಾನಗಳೂ ಮದ್ದುಗುಂಡುಗಳೂ ಕೋವಿಗಳೂ ರಷ್ಯದವಾಗಿ ಇಲ್ಲಿಗೆ ತಲಪಿವೆ. ನಿಜವಾಗಿಯೂ ಸ್ಪೈಯಿನ್ ಸರಕಾರವು ಇಟಲಿಗೆ ಅದರ ನಗರಗಳನ್ನು ಪುಡಿಗೈದು ಬುಧ್ಧಿಗಲಿಸುವಂತೆ ಪ್ರತಿಹಿಂಸೆಮಾಡಲಿಳಿಸಿದರೆ, ಅದೆಂದೂ ಕಷ್ಟವಾಗದೆಂದೇ ಹೇಳಬಹುದು. ಇಟಲಿಯು ಈ ಪ್ರಸ್ತಾಪವನ್ನು ಪರಿಹಾಸ್ಯಮಾಡಿ, ಪ್ರತೀಕಾರವನ್ನು ತಾನೂ ಮಾಡುವುದಾಗಿ ಮತ್ತು ಹೇಳಿದೆಯಾದರೂ, ಕಳೆದ ಶನಿವಾರ ರಾತ್ರಿ—ಸ್ಪೈಯಿನಿನ ಪ್ರತಿಭಯ ಸೂಚನೆ ತಿಳಿದ ಕೂಡಲೆ—ಮುಸ್ಸೋಲಿನಿಯ ಮಂದಿರವನ್ನು ಬಹಳ ಜೋರಾಗಿ ಕಾಯುತ್ತ ರಕ್ಷಣೋಪಾಯಗಳನ್ನು ಮಾಡಿದ್ದೇಕೆ? ತನ್ನ ವಾರ್ತಾಪತ್ರಿಕೆಗಳಲ್ಲಿ ದರ್ಪದಿಂದ ಸ್ಪೈಯಿನ್ ಸರಕಾರವನ್ನು ಬೆದರಿಸಿತಾದರೂ, ಮನೆಯನ್ನು ಕಾಪಾಡುವುದಕ್ಕೂ ಹಿಂತೆಗೆಯಲಿಲ್ಲವಷ್ಟೆ!

ಬ್ರಿಟಿಷ ಸರಕಾರವು ಇದುವರೆಗೂ ನೊಂದಾಗಲಿಲ್ಲ, ಕಾಗದ ಪತ್ರಗಳ ಮೂಲಕ ಸಮಾಧಾನ ಕೇಳುತ್ತ ಪಾರ್ಲಿಮೆಂಟಿನಲ್ಲಿ ಹಾಗೆ ಹೀಗೆ [illegible] ದರ್ಪ ಪ್ರಕಟಿಸುತ್ತಲಿದೆಯಷ್ಟೆ. ಇಟಲಿಯು, ತಾನು ಪತ್ರದ್ವ[illegible] ಸ್ಪೈಯಿನಿನ ಜೀವನವು ಇನ್ನು ದಿನಗಳಲ್ಲಿ ಮುಗಿವುದೆಂದು ಎಣಿಸುವ ಬದಲಾಗಿ ನಿಮಿಷಗಳಲ್ಲೇ ಮುಗಿದಂತಾದೀತು ಎಂದು ಪತ್ರಿಕೆಗಳಲ್ಲಿ ಪ್ರಚಾರಮಾಡಿರುವುದು. 'ಯುದ್ಧಕ್ಕೆ ಪ್ರತಿಯುದ್ಧ' ಎಂದೇ ಇಟಲಿಯ ರಾಜಪ್ರತಿನಿಧಿಯು ಉತ್ತರವೆಂದು ಫ್ರೆಂಚ್ ಮಂತ್ರಿ ತಿಳಿಸಿರುವನು. ಯಾವ ನೊಬ್ಬನ ಗೌರವವು ಇನ್ನು ಕೆಡುವುದಕ್ಕೆ ಸಾಕಷ್ಟು ಉಳಿದಿಲ್ಲವೆಂದಾಗಿ, ಆ ಪರಿಸ್ಥಿತಿಯಿಂದಲೂ ಪ್ರಯೋಜನ ಹೊಂದುವವರೇ ಇರುವರು. ಸ್ವಲ್ಪವಾದರೂ ಧರ್ಮಕ್ರಮವನ್ನು ಯುದ್ಧಗಳಲ್ಲಿ ಆಚರಿಸಲಾದೀತೇ ನೋಡೋಣವೆಂದು ಬ್ರಿಟಿಷ ಸರಕಾರವು ನೀತಿ ಹೇಳುತ್ತ ಬರುವಷ್ಟಕ್ಕೆ, ನೀತಿತಪ್ಪಿದ ಬಳಿಕ ಭೀತಿಯೇನಿದೆ ಎಂದೇ ಇಟಲಿಯು, ಇನ್ನೂ ಜೋರಾಗಿ ಗರ್ಜಿಸುವುದರಿಂದ ಇಟಲಿಗೆ ಗೌರವ ಕೆಡುವಷ್ಟು ಗೌರವವು ಇನ್ನೂ ಉಳಿದಿರುವುದೆ? ಎಂದು ವಿಚಾರಿಸಬೇಕಾಗುವುದು.

ಬ್ರಿಟನ್ನೂ, ಕೆಲವು ಫ್ರೆಂಕೋವಿನ ವಶದಲ್ಲಿರುವ ಹಡಗುಗಳನ್ನು ಹಾಳಾಗಿಸಿ, ಸಿಡಿಗುಂಡುಗಳಿಂದ ಕೆಲವು ನಗರಗಳನ್ನೂ ಹಾಳುಗೆಡದಿದ್ದರೆ, ಬ್ರಿಟಿಷರಲ್ಲಿ ಅರೆವಾಸಿ ಜನರಾದರೂ ವ್ಯಥೆಪಟ್ಟು ಈ ರೀತಿಯನ್ನು ಬಹಿಷ್ಕರಿಸಿ ಸಿಪೇಧಿಸುತ್ತಿದ್ದರು. ಶಾಂತಿಪ್ರಿಯವಾದ ಯಾವ ರಾಷ್ಟ್ರವೂ ಇದಕ್ಕೆ ಒಪ್ಪಲಾರದಷ್ಟೆ. ಜರ್ಮ[illegible] ಹೀಗೆಯೇ ಮಾಡಿಯದೆ; ಇಟಲಿಯು ಹೀಗೆ ಮಾಡಲು ಹಿಂದೆಗೆವುದಿಲ್ಲೆಂದಿದ. ಯುದ್ಧವೆಂಬುದು ಯಾವಾಗ ತೊಡಗುವುದು? ಯುದ್ಧಕ್ರಿಯೆಗೆ ಪ್ರಾರಂಭವಾವುದು? ಇಟಲಿಯೇ ಹೇಳಬೇಕು. ಜಪಾನು ಈಗ ನಡೆಸುತ್ತಿರುವುದು (ಚೀನದಲ್ಲಿ) ಯುದ್ಧವಲ್ಲವಂತೆ; ಅದು ಒಂದು ಪ್ರಸಂಗ! ಅಬಿಸೀನಿಯದಲ್ಲಿ ನಡೆದುದೂ ಮತ್ತೊಂದು ಪ್ರಸಂಗ! ಫ್ರೆಂಕೊಗೆ ಸಹಾಯಮಾಟ ಆಗುತ್ತಿರುವುದೆಲ್ಲ ಅಲ್ಲಿನ ಪ್ರಸಂಗದಲ್ಲಿ! ಬ್ರಿಟಿಷ ವ್ಯಾಪಾರೀ ಜಹಜನ್ನು ಮುಳುಗಿಸಿದುದು ಯುದ್ಧಕ್ರಿಯೆಯೆ, ? ಪ್ರಸಂಗವೆ? ಅದು—ನಾಚಿಕೆಗೇಡು.

ಸಂಯುಕ್ತ ಪ್ರಾಂತ್ಯದಲ್ಲಿ ವಿಚಿತ್ರ ಡಕಾಯತಿ.

ಡೆಹರಾಡುನ್ ಬಳಿಯಲ್ಲಿ ಒಬ್ಬ ಜಮೀನ್ದಾರನ ಮನೆಯನ್ನು ರಾತ್ರಿಕಾಲದಲ್ಲಿ ಹೊಕ್ಕು, ಅಲ್ಲಿ ಒಬ್ಬಂಟಿಗಳಾಗಿ ನಿದ್ರಿಸಿದ್ದ ಬಾಲಿಕೆಯೊಬ್ಬಳ ಮೈಯಿಂದ 1000 ರೂಪಾಯಿ ಬೆಲೆಯ ಚಿನ್ನಾಭರಣಗಳನ್ನು ಎತ್ತಿಕೊಂಡು ಡಕಾಯಿತರು ಮುಂದೆ ನುಗ್ಗುವುದರೊಳಗೆ, ಆ ಬಾಲಿಕೆಯು ಕೂಗಲು, ಸಮೀಪದ ಕೋಣೆಯಿಂದ ಅವಳ ಮಾವ ಜಮೀನ್ದಾರನು ಅತ್ತ ಬರುತ್ತಲೇ ಡಕಾಯಿತರು ಅವನನ್ನು ಲಾಠಿಗಳಿಂದ ಪ್ರಹಾರಮಾಡಿದರು. ಮನೆಯ ಇತರ ಮಂದಿಯೆಲ್ಲ ಗ್ರಾಮದ ಒಂದು ಹಬ್ಬಕ್ಕಾಗಿ ತೆರಳಿದ್ದರು. ಪೋಲೀಸರು ಎಷ್ಟು ಪ್ರಯತ್ನಮಾಡಿ ಶೋಧಿಸಿದರೂ ಡಕಾಯಿತರ ಪತ್ತೆಯಾಗಲಿಲ್ಲ. ಮುದಿಯನು ಮೋದಂಡ ಸ್ಥಿತಿಯಲ್ಲಿರುವನು.

ಜಾವಾ ದ್ವೀಪದಲ್ಲಿ ಅಗ್ರೇಸರರು.

ಹಿಂದಾನೊಂದು ಕಾಲದಲ್ಲಿ ಸಿಂಕೊನಾ ವ್ಯವಸಾಯವು ಡಚ್ ಈಸ್ಟ್ ಇಂಡಿಸ್ ದ್ವೀಪಗಳಲ್ಲಿ ನಾಶವಾಗುವ ಅಪಾಯಕ್ಕೆ ಒಳಗಾದಾಗ, ಮಿಲಿಟರಿ ರಸಾಯನಿಕರಾಗಿ ಅತ್ತಕಡೆಗೆ ತೆರಳಿದ ಕೆ. ಡಬ್ಲ್ಯು. ವಾನ್ ಗೋರ್ಕೋಮ್ರಿಗೆ ಅಲ್ಲಿರುವ ಸಿಂಕೊನಾ ತೋಟಗಳ ಆಡಳಿತವು ವಹಿಸಲಾಯಿತು. ವಾನ್ ಗೋರ್ಕೋಮರು 1856ರಿಂದ ಸಿಂಕೊನಾ ವ್ಯವಸಾಯದಲ್ಲಿ ನುರಿತವರು.

1864ರಲ್ಲಿ ಅವರು ಹಿಂದೆ ಆಡಳಿತವನ್ನು ನೋಡುವವರ ಕ್ರಮಗಳನ್ನು ತೊರೆದುಬಿಟ್ಟು, ಆ ಸಿಂಕೊನಾ ತೋಟಗಳಲ್ಲಿ ಅತಿ ಉತ್ತಮವಾಗಿರುವ ಗಿಡಗಳನ್ನು ಆರಿಸಿದರು. ವಾನ್ ಬೋರ್ಕೋಮರು ರಸಾಯನ ಶಾಸ್ತ್ರಜ್ಞರಾಗಿರುವುದರಿಂದ ಹಾಳಾಗುತ್ತಿದ್ದ ತೋಟದಿಂದ, 20,000 ಉತ್ತಮ ತರದ ಸಿಂಕೊನಾ ಗಿಡಗಳು ಅತ್ಯಂತ ಜಾಗರೂಕತೆಯಿಂದ ಆರಿಸಿ ತೆಗೆಯಲ್ಪಾಯಿತು. ಸ್ವಲ್ಪ ಸಮಯದಲ್ಲಿ ವಾನ್ ಗೋರ್ಕೋಮರಿಗೆ ಜೆ. ಸಿ. ಬಾರ್ನೆಲೋಟ್ ಎಂಬ ಇನ್ನೊಬ್ಬರು ಸಹಾಯಕರಾಗಿ ದೊರೆತರು. ಅವರು 1875ರಲ್ಲಿ ಗೋರ್ಕೋಮರ ಸ್ಥಳದಲ್ಲಿ ನೇಮಕಹೊಂದುವವರಾದರು. ಅವರು ಸ್ವಲ್ಪ ಸಮಯ ಸಿಂಕೊನಾ ತೋಟಗಳಲ್ಲಿ ಹೆಚ್ಚಿನ ಪ್ರತಿಫಲವಿಲ್ಲದೆ ಕೆಲಸಮಾಡಿ, ಸಿ. ವಾನ್ ಅರ್ಸವ್ ಎಂಬವರು ಅವರನ್ನು ಅನುಸರಿಸುವವರಾದರು. ಇವರು ಆ ಸಿಂಕೊನಾ ತೋಟಗಳ ಆಡಳಿತವನ್ನು ಪ್ರಕೃತ ಸಿಂಕೊನಾ ತೋಟಗಳ ಡೈರೆಕ್ಟರರಿಗೆ ವಹಿಸಿಕೊಡುವವರಾದರು.

ಸಿಂಕೊನಾ ವ್ಯವಸಾಯವು ಡಚ್ ವಸಾಹತುಗಳ ಚರಿತ್ರೆಯಲ್ಲಿ ಯಶಸ್ಸಿನ ಸ್ಥಾನವನ್ನು ಪಡೆದಿರುವುದು. ಅದು ವ್ಯವಸಾಯಿಕ ಮತ್ತು ಸಾಂಪತ್ತಿಕ ದೃಷ್ಟಿಯಿಂದ ಮಾತ್ರವಲ್ಲ, ಮಲೇರಿಯಾ ಹಾವಳಿಯಿರುವ ಕಡೆಗಳಲ್ಲಿ ಈ ಸಿಂಕೊನಾ ತೋಟದಿಂದ ತೆಗೆಯುವ ಕ್ವಿನೀನು ಮಲೇರಿಯಾ ನಿವಾರಣೆಗೆ ಒಂದು ಮಹಾವರದಂತಿರುವುದು.

ಶೀತಪ್ರದೇಶಗಳಲ್ಲಿ ಇನ್‌ಫ್ಲುಯೆಂಜಾ ಜ್ವರವನ್ನು ತಡೆಯಲು ಕ್ವಿನೀನು ಅತ್ಯುತ್ಕೃಷ್ಟ ಔಷಧಿಯು. ದಿನಾಲೂ 3 ಗ್ರೇನ್ ಪ್ರಕಾರ ಕ್ವಿನೀನು ಸೇವಿಸಿದರೆ ಸಾಕು, ಆಗ ಇನ್‌ಫ್ಲುಯೆಂಜಾದ ಕುರಿತು ಹೆದರಬೇಕಾಗಿಲ್ಲ.

ಇನ್‌ಫ್ಲುಯೆಂಜಾ ಹಾವಳಿಯು ನಡೆದ ಕಡೆಗಳಲ್ಲಿ, ಕ್ವಿನೀನಿನಿಂದ ಮಹದುಪಕಾರವಾಗಿರುತ್ತದೆ; ಈ ಕಾರಣದಿಂದಲೆ ಎಲ್ಲೆಲ್ಲೂ ಡಾಕ್ಟರರು ಶೀತಸಂಬಂಧದ ಜ್ವರಗಳಿಗೆ ಕ್ವಿನೀನನ್ನು ಪ್ರಯೋಗಿಸುತ್ತಿರುವುದು.

ಸಿರ್ಮೂರು ರಾಜ್ಯದ ಲಂಚಕೋರರು.

ಯಾವನೊಬ್ಬ ರಾಜ್ಯದ ನೌಕರನು ಎಂತಹ ಕಾಣಿಕೆಯನ್ನಾದರೂ ಪಡೆಯಕೂಡದು; ನಗದಾಗಿ ಅಥವಾ ಒಡವೆ ವಸ್ತುಗಳನ್ನು ತೆಗೆದುಕೊಂಡಲ್ಲಿ ಅದನ್ನು ಲಂಚವೆಂದೇ ಎಣಿಸಲಾದೀತು; ಕ್ಲಪ್ತಕಾಲದಲ್ಲಿ ಖಂಡಿತ ತೆರಲಾರದಂತಹ ಯಾವ ಸಾಲವನ್ನೂ ನೌಕರರು ಮಾಡಬಾರದು; ಸಾಲದ ಜವಾಬ್ದಾರಿಯನ್ನೂ ಹೊರಬಾರದು; ರಾಜ್ಯದೊಳಗೆ ಅಥವಾ ಹೊರಗೆ ಅವರು ಹಣಕಾಸುಗಳನ್ನು ಬಡ್ಡಿಗೆ ಕೊಡಬಾರದು; ಸರಕಾರದ ಅಪ್ಪಣೆಯಿಲ್ಲದೆ ಜಮೀನು ಸೊತ್ತುಗಳನ್ನು ಕೊಂಡುಕೊಳ್ಳಕೂಡದು; ಯಾವುದೊಂದು ಲಿಮಿಟೆಡ್ ಸಂಘವನ್ನೂ, ಪಾಲುಗಳನ್ನೂ ಪಡೆಯಬಾರದು; ಡೈರೆಕ್ಟರರಾಗಬಾರದು; ಸರಕಾರವು ಕೇಳಿದಾಗ ಸಾಲ ಮೂಲಗಳ ಪತ್ರಗಳನ್ನು ಸರಕಾರಕ್ಕೆ ಒಪ್ಪಿಸಬೇಕು;— ಇವೇ ಈ ರಾಜ್ಯದಲ್ಲಿ ಹೊಸತಾಗಿ ಹೊರಟಿರುವ ಹುಕುಮುಗಳು.

ಲಂಡನಿನಲ್ಲಿ ನೆಹರುರವರು

ಲಂಡನ್, ತಾ ೨೮—೬—೩೮.

ಪಂಡಿತ ಜವಾಹರಲಾಲ ನೆಹರುರವರು ಲಂಡನಿನಲ್ಲಿ ಸ್ಯೆಂಟ್ ಪೆಂಕ್ರಾಸ್ ನಗರಭವನದಲ್ಲೊಂದು ಪ್ರಚಂಡ ಸಭೆ ಸೇರಿದಾಗ ಯುರೋಪಿನ ಸ್ಥಿತಿಯನ್ನು ಕುರಿತಾಗಿ ಭಾಷಣಮಾಡಿದರು. ಸಭೆಗೆ ಬಂದವರಿಗೆ ಸ್ಥಳವಿಲ್ಲದೆ, ಸಾವಿರಾರು ಜನರು ಹೊರಗೆ ನಿಂತೇ ಭಾಷಣ ಕೇಳಬೇಕಾಯಿತು. ಮುಸ್ಲಿಮ ಜನಗಳ ಕೂಟ ಸೇರಿದಾಗಿತ್ತು. ಆಫ್ರಿಕದ ಮತ್ತಿತರ ನಿಗ್ರೋ ಜನಗಳ ಹಿಂಡು ಪ್ರಬಲವಾಗಿತ್ತು. ಕಿಂಗ್ಸ್ವೇ ಹೋಲಿನಲ್ಲೂ ಹೀಗೆಯೇ.

ಶ್ರೀ ಜವಹರಲಾಲ ನೆಹರೂರವರು.

ನೆಹರುರವರು ಭಾಷಣಮಾಡಲು ಎದ್ದು ನಿಲ್ಲುತ್ತಲೆ, ಹಲವು ನಿಮಿಷಗಳ ತನಕ ಸಭೆಯಲ್ಲಿ ಬಹಳವಾಗಿ ಕೋಲಾಹಲವಾಯಿತು. ಚಪ್ಪಾಳೆಗಳಿಗೆ ಮಿತಿ [illegible] ಇಲ್ಲ.

ಇಂಡಿಯದಲ್ಲಿ ಕೊಂಗ್ರೆಸಿನ ಚಳವಳಿಯು ಜಗತ್ತಿನ ಸ್ವಾತಂತ್ರ್ಯ ಚಳವಳಿಯೊಡನೆ ಸಮ್ಮಿಳಿತವಾಗ ಹತ್ತಿದೆ. ಜಾತೀಯತೆ ಅಥವಾ ರಾಷ್ಟ್ರೀಯತೆ ಮಾತ್ರ ತಾನಾಗಿ ಅಷ್ಟು ಹಿತ ನಾದುದಲ್ಲ. ಬ್ರಿಟಿಷ ಸಾಮ್ರಾಜ್ಯಶಾಹಿಯ ಇತಿಹಾಸದ ರೀತಿಯಂತೆ ಇಂಡಿಯದ ವಾತಾವರಣವಿದ್ದರೂ, ಕೊಂಗ್ರೆಸು ಜಾತೀಯ ಮಾತನ್ನು ದೂರವಿಟ್ಟು ಎಂಂಶಿಕ [illegible] ರಾದಿಗಳನ್ನು ಗಣನೆಗೇ ತಾರದೆ [illegible] ವಾಗಿ ವರ್ತಿಸಿರುವುದು ವಿಶೇಷ ಮಾತಾಗಿದೆ. ಇಂಡಿಯದ ಈಗಣ ಸಮಸ್ಯೆಯನ್ನು ಸರಿಯಾಗಿ ತಿಳಿದುಕೊಂಡ [illegible] ತ್ತಲಿದ್ದರೆ, ಕುಲಜಾತಿಗಳ ಮಾತನ್ನೇ ಮರೆತು, ಇಡೀ ಪ್ರಪಂಚದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆವ ಪ್ರಯತ್ನಗಳಾವುವೂ ಅವುಗಳ ಕಡೆಗೇ ಮನಸ್ಕೊಡಬೇಕಾಗಿ ಬರುವಂತಾಗಿದೆ. ಇಂತಹ ಚಳವಳಿಗಳು ಯುರೋಪಿನಲ್ಲೂ ಇವೆ, ಅವುಗಳೊತನೆ ಕೊಂಗ್ರೆಸು ಸಹಾನುಭೂತಿಯಿಂದಲೇ ಇರುವುದು. ಆದರೆ, ಯುರೋಪು ಈ ಸಮಸ್ಯೆಯನ್ನು ಇತ್ಯರ್ಥಿಸುವ ವಿಚಾರದಲ್ಲಿ ಮಾತ್ರ ಸಮಾಧಾನಕರವಾಗಿ ನಡೆಯುತ್ತಿಲ್ಲವೆಂದೇ ಹೇಳಬೇಕು. ಬಾರ್ಸೆಲೋನಾ ಚೀನಾಗಳಲ್ಲಿ ಬಾಂಬುಚೆಲ್ಲುತ್ತಲಿರುವುದನ್ನು ಖಂಡಿಸುವ ಸರಕಾರಗಳು, ಇಂಡಿಯದ ವಾಯವ್ಯ ಭಾಗದಲ್ಲಿ ಬೊಂಬಿನ ಚೆಲ್ಲಾಟವನ್ನು ಮಾತ್ರ ಖಂಡಿಸದೆ, ಆ ಬಗೆಯ ರೀತಿಯನ್ನು ಅಂಗೀಕರಿಸುತ್ತಿರುವದು ವಿಚಿತ್ರವಲ್ಲವೇ? ಇವೆರಡರ ಹಾನಿಯಲ್ಲಿ ಭೇದವಿರಬಹುದು ಹೊರತು, ನೀತಿಸೂತ್ರವು ಒಂದೇ ಸಮಾನ.

ಇಂಡಿಯದ ಸಮಸ್ಯೆಯ ಮೂಲದಲ್ಲಿರುವುದು, ಜನತೆಯ ಬಡತನ, ರೈತರ ಮತ್ತು ಶ್ರಮಜೀವಿಗಳ ದಾರಿದ್ರ್ಯ. ಇದೊಂದು ಪಕ್ಷದಿಂದ ಪರಿಹರಿಸಲಾಗುವ ಸಮಸ್ಯೆಯೇ ಅಲ್ಲ. ಇಂಡಿಯಾ ಒಕ್ಕಲಿಂದ ಇದರ ನಿವಾರಣೆ ಅಸಾಧ್ಯವಾಗಿದೆ. ಬ್ರಿಟಿಷ್ ಅಥವಾ ಇನ್ನಿತರ ಸಾಮ್ರಾಜ್ಯಶಾಹಿಯ ಮೂಲಕ ಈ ಸಮಸ್ಯೆಯನ್ನು ಇತ್ಯರ್ಥಿಸಲಾರದು. ಕೊಂಗ್ರೆಸು (ಸಾಮ್ರಾಜ್ಯಶಾಹಿಯು ಕರುವಾಯದಲ್ಲಿ) ದರಿದ್ರರ ಹಸಿವಿನ ಬಲಪಡೆದೇ ಇದನ್ನು ಸಮಾಜವಾದದಂತೆ ತೀರ್ಮಾನಿಸಬಹುದು.

ಹಳದೀ ನದಿಯಿಂದ ಜಲಪ್ರಳಯ

ಚೀನದಲ್ಲಾದ ನೆರೆಹಾವಳಿ:

ಕೆಸರು ಕಟ್ಟಿರುವ ನೀರು ಸಾವಿರಾರು ಚದರಮೈಲುಗಳ ವಿಸ್ತೀರ್ಣಕ್ಕೆ ರಭಸದಿಂದ ಹರಿದೋಡುತ್ತಲಿದೆ. ಒಕ್ಕಲು, ಮನೆ ಹೊಲ, ಮಿತ್ರ ಶತ್ರು, ಯುದ್ಧೋಪಕರಣ ನೇಗಿಲು ಕುಂಟೆ ಯಾವುದೊಂದನ್ನೂ ಈ ನೀರು ಗಣನೆಗೆ ತರುವುದಿಲ್ಲ. ನೀರು ಗೋಡೆಯಂತೆ ಭಿನ್ನವಾದ ಆಕಾರ ತಳೆದು ಎತ್ತಲೂ ವಿನಾಶವನ್ನೆ ಸಾಧಿಸುತ್ತಲಿದೆ.

ನೆರೆಯ ಬೆನ್ನಿಗೆ ಉಪವಾಸ, ರೋಗರುಜಿಗಳು, ಕ್ಷಾಮ ಒಂದೂವರೆ ವರ್ಷದ ವರೆಗೆ ಇನ್ನಾವ ಕೃಷಿಯೂ ಆಗುವ ಹಾಗಿಲ್ಲ. ಕೆಲವು ಕಡೆಗಳಲ್ಲಿ ಇನ್ನು ಕೃಷಿಯೇ ಆಗುವಂತಿಲ್ಲ. ಏಕೆ? ನೆರೆ ನೀರು ದಡ ಮುಟ್ಟಿ ಹರಿದು, ಮುಂದೆ ದಾವಿ, ಎಲ್ಲ ಕಡೆಯಲ್ಲೂ ಕೆಸರು ಮಣ್ಣನ್ನು ತಂದೊತ್ತಿದೆ. ಹಳದಿ ನದಿಯೂ ಅವರ ಉಪನದಿಯೂ ಸೇರಿ ಚಿಕ್ಕದೊಂದು ಸಮುದ್ರದಷ್ಟು ದೊಡ್ಡ ಜಲಾಶಯವಾಗಿದೆ. ಈ ನದಿಯು ಪುನಃ ಉಪನದಿಗಳೊಡನೆ ಸೇರಿ, ಬೆಳೆದು, ಮತ್ತಾವ ಕಡೆಗೋ ಹರಿದು, ಸಮುದ್ರವನ್ನು ಸೇರುವ ಹೊಸದೊಂದ ಅಳಿವೆಯನ್ನು ಸೃಷ್ಟಿಸಬಹುದು. ಒಂಭತ್ತು ಸಲ ಹೊಸ ಅಳಿವೆಗಳನ್ನು ಕಡಿದುದುಂಟು. [illegible] ಈ ಬಗೆಯ ಹಾವಳಿಯನ್ನು ಜನರು [illegible] ಸೆಕುಂಡಿಗೆ ಸಾವಿರದಂತೆ [illegible] ಆಗ ಮಡಿದೇ ಹೋಗಿದ್ದರು.

ಜಪಾನಿನವರು ಭಯಪಡುವುದು ಭೂಕಂಪಗಳಿಗೆ. ಚೀನಿಯರು ಈ ಹಳದೀ ನದಿಯು ನೆರೆ ನೀರಿಗೆ!

ನಾಲ್ಕು ಸಾವಿರ ವರ್ಷಗಳಿಂದಲೂ ಈ ನದಿಯನ್ನು ಹತೋಟಿಗೆ ತರಲು ಮಾಡಿದ ಯತ್ನಗಳು ಸಫಲವಾಗಿಲ್ಲ. ಈ ನದಿಯ ನೀರನ್ನು ಹಾವಳಿ ಮಾಡದಂತೆ ಯಾವನ ಉಪಾಯ ತೋರಿಸುವನೋ ಅತನಿಗೆ [illegible] ರಾಜಪುತ್ರಿಯನ್ನೇ ವಿವಾಹ ಮಾಡಿಕೊಡುವುದಾಗಿ 'ಯಾವು ಸಮ್ರಾಜನು' [illegible] ೨೦೦೦ ವರ್ಷಗಳ ಹಿಂದೆಯೆ [illegible] ದುದಿಲ್ಲ. ಅ ದಿನ ಹೇಳಿ ಇಂದಿಗ ಹಾಗೆಯೆ ಇದೆ.

ಈ ಹೊಳೆ ಹರಿದ [illegible] ಯಲ್ಲಿರುವ ಹಳದೀ [illegible] ಅತಿ ಫಲವತ್ತಾಗಿದೆಯಾದರೂ, [illegible] ಹೋಗುವುದು. ಗಾಡಿಗಳ ಹೋಗುವ ದಾರಿಗಳು ೩೦ ಅಡಿ ಆಳವಾಗಿ [illegible] ವಾಗಿವೆ. ಎಷ್ಟೋ ಕಾಲುವೆಗಳ ಮೂಲಕ ಈ ನದಿಯ ನೀರನ್ನು ದೂರದೂರಕ್ಕೆ ಒಯ್ದರೂ ಇದಿಗೂ ಹೊಳೆ ನೀರಿನ ಹಾವಳಿ ತಡೆಯಲಾಗಿಲ್ಲ. ಹಿಮಾಲಯದಾಚೆಯ ಟಿಬೇಟಿನ ಸುತ್ತಲ ಪರ್ವತಾವಳಿಯ ಹಿಮಕರಗಿದ ನಂತರ, ಈ ಹೊಳೆ ನೀರಿನ ಪ್ರವಾಹಕ್ಕೆ ಪ್ರಾರಂಭ. ಡಿಸೆಂಬರಿನಲ್ಲಿ ೧೦೦ ಯಾರ್ಡು ಅಗಲವಿರುವ ಹೊಳೆ, ಜೂನಿನಲ್ಲಿ ಎರಡು ಮೈಲು ಅಗಲವಾಗುವುದು. ಹೊಳೆಯ ತಲಕ್ಕೂ ಕೆಳಗಾಗಿ ಪಟ್ಟಣಗಳಾಗುವಂತಾಗಿವೆ, ಅಷ್ಟು ಜೋರಾಗಿ ಹೊಳೆಯ ತಳವು ಕರಗಿ ಕೆಳಕ್ಕಿಳಿಯುವುದು. ಆಗ, ನೀರು ದಡಗಳನ್ನೊಡೆದು ಹಂದರೆ, ಆ ಜಲಪ್ರಪಾತವನ್ನು ತಡೆಯುವರಾರು? ಚಳಿಗಾಲದಲ್ಲಿ ನೀರು ಗಡ್ಡೆ ಕಟ್ಟುವ ತನಕ, ಪರ್ವತಗಳಿಂದ ನೀರಿಳಿಯದಂತಾಗುವ ವರೆಗೆ, ಈ ಹೊಳೆಯ ಬಾಧೆ ತಪ್ಪಲಾರದು.

ಜಪಾನಿಗೆ ಅಪಜಯ.

ಈಗ ಹೆಂಕೋವಿಗೆ ಜಪಾನು ಸೇನೆಗಳನ್ನು ಕಳುಹಿದೆ. ಇವರ ಸೇನೆಗಳ ನಷ್ಟ, ಯುದ್ಧ ಸಾಮಗ್ರಿಗಳ ನಷ್ಟ ಯಾರೂ ಹೇಳುವ ಹಾಗಿಲ್ಲ. ಚೀನವನ್ನು ನುಗ್ಗಿ ಧ್ವಂಸಮಾಡುವ ಸೇನೆಗಳು ಹಿಮ್ಮೆಟ್ಟಿದುದೇ ಅಲ್ಲ, ನೀರ ನೆರೆಯಲ್ಲಿ ತೇಲಿಹೋಗಿವೆ. ನೆರೆ, ವೈರಿಗಳನ್ನು ಅಪಜಯಗೊಳಿಸಿ ನಿರ್ನಾಮಮಾಡಿದೆ.

ಯಂಗ್ಟ್ಸೆ ನದಿಯ ಮೂಲಕ ಈಗ ಮುಂದರಿವರಂತೆ [illegible] ಗರಲ್ಲಿ ಇದೂ ನೆರೆಯೇರಿ, ಇಂಗ್ಲೆಂಡಿನಷ್ಟು ದೊಡ್ಡದೊಂದು ಕೆರೆಯನ್ನೆ ಯಾಂಕೋ ನಗರದ ಬಳಿಯಲ್ಲಿ ನಿರ್ಮಾಣ ಮಾಡಿದ್ದಿತು! ಇಂಥ ಸಂದರ್ಭಗಳಲ್ಲಿ ಯಾರು ತಾನೇ ಯುದ್ಧಮಾಡುವರಂತೆ? ಚೀನದ ಬೇಸಾಯಗಾರರಾದರೂ ಬದುಕುವುಂಟೆ? ಈ ದಡದಲ್ಲೆ ನೀರು ಮಿಲ್ಲಿಯ ಚೀನಿಯರಿರುವರು! ಏನೂ ಮಾಡಿ ತಡೆಯಲಾರದೆ, ಚೀನಿಯರು ನಸಿಗಳಂತೆ ಸಾಯುವರು.

ಜಾತಿವಾರು ಹೊಟೆಲುಗಳು.

ಹೊಟೆಲುಗಳು ಈ ಜಾತಿಯವು ಆ ಜಾತಿಯವು ಎಂದಿರುವುದು ತಪ್ಪು. ಸರಕಾರವು ಈಗ ಜಾತಿಭೇದ ನಿವಾರಕ ಮಸೂದೆಯನ್ನು (ಶ್ರೀ ಎಮ್. ಸಿ. ರಾಜಾರವರ) ಎಸೆಂಬ್ಲಿಯು ಮುಂದೆ ತರ ಪುದರಲ್ಲಿರುವ ಕಾರಣ ಅದರಲ್ಲಿ —ಹರಿಜನರಿಗೆ [illegible] ಜಾತಿಗಳಿಗಾಗಿಯೆ ಪ್ರತ್ಯೇಕವೆಂದ [illegible] ಹೊಟೆಲುಗಳಿಗ [illegible] ಕೊಡದ [illegible] ಯಲ್ಲಿ [illegible] ವುದು.

ದ್ರಾವಿಡ ವೈದ್ಯಮಂಡಲ ಸಮ್ಮೇಲನ

ಮದ್ರಾಸಿನಲ್ಲಿ ಶ್ರೀಮಾನ್ ವೈದ್ಯ ಎಂ ವಿ ಶಾಸ್ತ್ರಿಯವರು ಅಧ್ಯಕ್ಷರು

ಇಂಡಿಯನ್ ಮೆಡಿಕಲ್ ಸ್ಕೂಲಿನ [illegible] ಕೆಪ್ಟನ್ ಶ್ರೀ ಜಿ. ಶ್ರೀನಿವಾಸಮೂರ್ತಿಯವರು, ಆಯುರ್ವೇದಕ್ಕಾಗಿ ಮಾಡಿರುವ ಮಹೋಪಕಾರವನ್ನು [illegible] ವಂದಿಸಿ [illegible] ಈ ದೇಶೀಯ ವೈದ್ಯವನ್ನು [illegible] ತಿರಸ್ಕಾರ ಭಾವನೆ [illegible], ಸರಕಾರವು ಬೇಕಾದಷ್ಟು ಪ್ರೋತ್ಸಾಹ ಕೊಡುವಂತೆ ಕೋರಿಯೂ, ಪ್ರಧ್ವನಿ ದೇಶೀಯ ಔಷಧಿಗಳ ಸಂಗ್ರಹವನ್ನು ಸ್ಥಾಪಿಸುವಂತೆ ಸೂಚಿಸಿಯೂ, ಆಯುರ್ವೇದ, ಸಿದ್ಧ, ಯುನಾನಿ ವೈದ್ಯರದೊಂದು ಸಮಿತಿಯ ಮೂಲಕ ನಾನಾ ಔಷಧಿಗಳು ಶುದ್ಧರೂಪದಲ್ಲಿ ಸಿಗುವಂತೆ ಮಾಡಲೂ ಎಲ್ಲ ಬಗೆಯ ದೇಶೀಯ ವೈದ್ಯಕೀಯ ಪ್ರಚಾರ ಮಾಡುವವರನ್ನು ಸಂಘರೂಪವಾಗಿ ಘಟಿಸಿ ತರಲೂ, ಇವರೊಳಗೆ ಅನಾವಶ್ಯಕವಾಗ A ಮತ್ತು B ಕರಗತಿಗಳನ್ನುಂಟು ಮಾಡಿದುದನ್ನು ರದ್ದುಮಾಡಲೂ, ಈ ವರ್ಗೀಕರಣದಿಂದಾಗುವ ಮತ್ಸರಕ್ಕೆ ಎಡೆಗುಡದಂತೆ, (ಎಲೋಪಥಿಕ್ ವೈದ್ಯರೊಳಗೂ ಭೇದಗಳಿಲ್ಲದಂತೆ ಮಾಡಿದುದನ್ನು ಅನುಸರಿಸುವಂತೆ) ನೋಡಲೂ, ಇಂಡಿಯನ್ ಮೆಡಿಕಲ್ ಆಸ್ಪತ್ರೆಯ ಮುಂದಣ ಶೋಧನೆಗಳನ್ನು ಮಾಡಲು ಏರ್ಪಾಡಾಗುವಂತೆ ಸರಕಾರವು ದಯೆ ಇಡಲೂ, ರಿಜಿಸ್ಟ್ರೇಶನ್ ಫೀಸಿನಿಂದ ಪಡೆವ ಹಣಗಳನ್ನು ಈ ಮೆಡಿಕಲ್ ಸ್ಕೂಲನ್ನು ಕಾಲೇಜಾಗಿ ಅಭಿವೃದ್ಧಿಗೆ ತರುವಂತೆ ಮಾಡಲೂ,—ನಾನಾ ಯೋಗ್ಯ ಠರಾವುಗಳಾದುವು.

ಮಕ್ಕಳಿಗೆ ವಿಷವಿಕ್ಕಿಕೊಂದವನ ಕೇ[illegible]

ಲಾಹೋರು. ಮೆಜಿಸ್ಟ್ರೇಟರ ಮುಂ[illegible] ವಿಚಾರಣೆಗೆ ಬಂದ ಮೊಕದ್ದಮೆಯಿದು. ವಿಜರಾಜುದ್ದೀನನೆಂಬವನು ಲಾಹೋರಿ[illegible] ಉಪಾಧ್ಯಾಯರೊಬ್ಬರ ಮೂವರು ಮಕ್ಕಳಿ[illegible] ಪಾಶಾಣವನ್ನಿಕ್ಕಿ ಕೊಂಡನೆಂದು ದಾವೆ.

ಆ ಉಪಾಧ್ಯಾಯರ ಮನೆಯಲ್ಲಿ ಕಳವು ಮಾಡಿದ್ದನೆಂದು ಈ ಅಸಾಮಿಯ ಮೇಲೆ [illegible] ರೋಪವಿತ್ತು. ಇವನೂ ತಪ್ಪೊಪ್ಪಿಕೊಂಡು ಕದ್ದುದನ್ನು ವಾಪಾಸು ಕೊಡಲು ವಾಗ್ದಾನ ಮಾಡಿದ್ದನು. ಇದಕ್ಕೆ ಪ್ರತಿಯಾಗಿ, ಉಪಾಧ್ಯಾಯರ ಮಕ್ಕಳನ್ನು ಕೊಲ್ಲಲೂ ಅವನು ಪ್ರಮಾಣ ಮಾಡಿಕೊಂಡನು. ಬಂದ ಮಗು ವಾಂತಿಭೇದಿಯ ವಿಕಾರ ತೋರಿ ಮೃತವಾಯಿತು. ಅನಂತರ ಎರಡನೆಯ, ಮೂರನೆಯ ಮಕ್ಕಳೂ ಹಾಗೆಯೆ ಮಡಿದುವು.

ಈ ವಿಷಯವನ್ನು ಪೋಲೀಸರಿಗೆ ತಿಳಿಸಲು, ಅವರು ಶವವನ್ನು ಸಮಾಧಿಯಿಂದ ಎತ್ತಿ, ವೈದ್ಯಕೀಯ ಪರೀಕ್ಷೆಗೆ ಹಾಜರು ಮಾಡಲು, ಮೂವರೂ ಮಕ್ಕಳು ಪಾಶಾಣಮಿಶ್ರಿತಾಹಾರ ತಿಂದು ಸತ್ತುದಾಗಿ ವರದಿ ತಲುಪಿತು.

ಈಗ ವಿಚಾರವಾಗುತ್ತದೆ.

ಆಂಧ್ರ ಮತ್ತು ಕರ್ನಾಟಕ ಪ್ರಾಂತ್ಯಗಳ ರಚನೆ

ಶ್ರೀ। ಸಾಂಬಮೂರ್ತಿಯವರೊಡನೆ ಪ್ರತಿನಿಧಿಗಳ ಪರಾಮರ್ಶೆ

ಶ್ರೀ। ಎಚಿ [illegible] ಮಂತರಾವ್ ದಾದಾರ, ಮತ್ತು ಶ್ರೀ। ಪ [illegible] ರವರು, ಶ್ರೀ। ಸಾಂಬಮೂರ್ತಿಯವರೊಡನೆ ಈ ವಿಷಯ ಪರಾಮರ್ಶಿಸ[illegible] ದ್ದರು. (ಇವರು [illegible] ಪ್ರಾಂತ್ಯರಚನ ಎಂಬ ವಿಷಯದಲ್ಲಿ ಒಂದು ಗ್ರಂಥವನ್ನು ಈಗ ಬರೆಯುತ್ತಲಿದ್ದಾರೆ. ಇನ್ನೆರಡು ಮೂರು ತಿಂಗಳಲ್ಲಿ ಈ ಪುಸ್ತಕವು ಪ್ರಕಟವಾಗುವುದು.)

ಆಂಧ್ರ [illegible] ಮದ್ರಾಸಿನಲ್ಲಿ ಸೇರಿ (ಶ್ರೀ [illegible] ರೆಡ್ಡಿಯವರು ಅಧ್ಯಕ್ಷರು) ಆಂಧ್ರ ಪ್ರಾಂತ್ಯದ ನಿರ್ಮಾಣವನ್ನು ಕುರಿತು ಚರ್ಚಿಸಿದರು. [illegible] ಪ್ರತ್ಯೇಕವಾಗಬೇಕೆಂದ ಕೆಲವರು ಸ್ವಾರ್ಥಕ್ಕಾಗಿ [illegible] ಒಬ್ಬರ [illegible] ಎಸೆ [illegible] ವಾಡ [illegible] ದರೊಬ್ಬರು [illegible] ಗಳಿಗಾಗಿ [illegible] ವಾಗಬೇಕೆ [illegible] ದಿನ [illegible] ಇಂಗ್ಲೆಂಡಿನ [illegible] ಗಳು [illegible] ಆಂಧ್ರರು ತಮ್ಮ ದೊಡ್ಡ ಪ್ರಾಂತ್ಯ ಮಾಡಿಕೊಳ್ಳಲು ಒಪ್ಪಿಗೆ [illegible] ಪ್ರಾಂತ್ಯವನ್ನೂ ಪ್ರತ್ಯೇಕಿಸಲು [illegible] ಈಗ ಕೊಂಗ್ರೆಸು [illegible] ಕಾರಣ ಇವೆರಡೂ ಪ್ರಾಂತ್ಯಗಳು ಈ ಕೂಡಲೆ ಎಂದು ಮುಕ್ತೇ [illegible] ಆಂಧ್ರರೂ ಕನ್ನಡಿಗರೂ ಈ ಬಗೆಗೆ ಒಂದಾಗಿ ಕೌನ್ಸಿಲುಗಳಲ್ಲಿ ವಾದಿಸಬೇಕೆಂದು ರಾಕಾವರಿ [illegible] ಸಭೆಯಲ್ಲಿ [illegible] ವುಗಿಯಿತು.

ವಿದ್ವಾನ್ ಸಿ. ಸೀತಾರಾಮಾಚಾರ್ಯರಿಗೆ

ಮಂಗಳೂರು, ಗವರ್ನಮೆಂಟ್ ಕಾಲೇಜಿನ ವಿದ್ವಾನ್ ಶ್ರೀ ಸಿ. ಸೀತಾರಾಮಾಚಾರ್ಯರಿಗೆ ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿ[illegible] ಕನ್ನಡ ಪಂಡಿತರ ಸ್ಥಾನಕ್ಕೆ ವರ್ಗಾಯಿಸಿರುವ ಪ್ರಯುಕ್ತ, ಸ್ಥಳೀಯ ವಿದ್ಯಾಮಂಡಳದ ಸದಸ್ಯರ ಬುಧವಾರ ಸಾಯಂಕಾಲ ಕೆನರಾ ಹೈಸ್ಕೂಲಿನಲ್ಲಿ ಶ್ರೀ ಎಮ್. ಎನ್. ಕಾಮತರ ಅಧ್ಯಕ್ಷತೆಯಲ್ಲಿ ಸೇರಿ, ವಿದ್ವಾನ್ ಆಚಾರ್ಯರನ್ನು ಬೀಳ್ಕೊಳ್ಳಲು, ಉಪಾಹಾರಾನಂತರ, ಭಾಷಣಾದಿಗಳಿಂದ ಉಪಚರಿಸಿದರು. ಈ ಸಂದರ್ಭದಲ್ಲಿ ಮಿತ್ರಮಂಡಲಿಯ ಕಡೆಯಿಂದ ಅವರಿಗೆ ವಂದನಪತ್ರಿಗಳ ಪಠಾವನ್ನು, [illegible] ದಿನ ಕಾರ್ಯಕಾರೀ ಮಂಡಲವು ನಿರ್ಧರಿಸಿದ [illegible] ಒಪ್ಪಿಸಲಾಯಿತು. ವಿದ್ವಾನರು [illegible] ಮದ್ರಾಸಿಗೆ ಸಕುಟುಂಬರಾಗಿ [illegible] ಮಾಡಿದರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ನಮ್ಮ ಜಿಲ್ಲೆಗೆ ಈ ಸ್ಥಾನವು ಎರಡನೆಯ ಸಲ ದೊರೆತಂತಾಯಿತು. ಇವರ ಸ್ಥಾನದಲ್ಲಿ ಇದುವರೆಗೆ ಕೆಲಸ ನೋಡುತ್ತಿರುವವರು ನವಾಪ್ಪರ ಶ್ರೀ. ಸಾಭಾಜಿ ಶ್ರೀನಿವಾಸಾಚಾರ್ಯರು, ಇದ[illegible] ರೀಗ ನಿವೃತ್ತರಾಗುವರು.

ದೇಶಾಭಿಮಾನಿ

ಹೊಸ ತೆರಿಗೆಗಳುಂಟೆ?

...ಶಾಖೆಯ ಮಂತ್ರಿಯವರು (ಶ್ರೀ ...) ...ದಲ್ಲಿ ಭಾಷಣಮಾಡು ... ಲ್ಲಿ ಮದ್ಯಪಾನ ನಿವಾರಣೆ ... ಕಾರಣದಿಂದ ಸರಕಾರಕ್ಕೆ ನಷ್ಟವಾದ ...ದಾಯವನ್ನು ಕುರಿತು ಪ್ರಸ್ತಾಪಿಸಿ, ಬಜೆಟಿಗೆ ...ದಾಗುವ ಹಾಗೆ ಇನ್ನೂ ಮದ್ಯಪಾನ ನಿವಾ...ಧರ್ಮವನ್ನು ವಿಸ್ತರಿಸಿ, ಕಂದಾಯವನ್ನು ...ಸುವ ವಿಚಾರಕ್ಕೂ ಕೈಯಿಕ್ಕ ಬೇಕಾಗಿದೆ ...ಂದರು:

ಹೊಸ ತೆರಿಗೆಗಳು ರೈತರನ್ನು ಬಾಧಿಸ...ಕೆ ಜಾಗ್ರತೆಯುಡಲಾಗುವುದೆಂದೂ, ಭರವಸೆ ...ಡಲಾಗಿದೆ.

ವಿದ್ಯುಚ್ಛಕ್ತಿಯ ಉಪಯೋಗ, ಹೊಗೆ ...ಪ್ಪು ವಿವಾಹಗಳು – ಇವು ಮೂರು ತೆರಿಗೆಗೆ ...ಳಪಡಬಹುದಾಗಿರುವ ವಿಷಯಗಳೆಂದೂ ...ನಿಸಿದೆ. ಇವಲ್ಲದೆ, ಪ್ರಕಟಣೆಗಳು, ...ಲು, ವಿನೋದಗಳು, ಮತ್ತು ಉತ್ತರಾ...ರ—ಇವುಗಳ ಮೇಲೂ ತೆರಿಗೆ ಹಾಕುವ ...ಎಂದೂ ಊಹನೆಗಳಿವೆ.

ಹೊಗೆಸೊಪ್ಪಿನ ಮೇಲಣ ತೆರಿಗೆಯ ...ಕ ಬಾಧಕಗಳನ್ನು ಕುರಿತು ಹಿಂದೆ ಬರ...ದ್ದೇವೆ ಈ ತೆರಿಗೆ ವಿಧಿಸುವ ಅಧಿಕಾ...ಇಲ್ಲದ ಪ್ರಾಂತಿಕ ಸರಕಾರವು, ಇದೊಂ...ದು ವಿಷಯ ಚರ್ಚಿಸುವಲ್ಲಿ, ಫೆಡರಲ್ ಕೋ...ಗೆ ಸ್ವಲ್ಪ ಕೆಲಸಕೊಡುವಷ್ಟೇ ಮಾತ್ರ ಪರಿ...ಣಾಮ ಉಂಟಾಗಬಹುದು

ವಿದ್ಯುಚ್ಛಕ್ತಿಯನ್ನು ಜನರು ಹಳ್ಳಿಗಳಲ್ಲಿಯೂ ...ಧಿಕಾಧಿಕವಾಗಿ ಉಪಯೋಗಿಸುವಂತಾಗ...ಲೆಂದು ಅಲ್ಲಲ್ಲಿನ ಸರಕಾರಗಳು ಪ್ರಯತ್ನ ಮಾಡುತ್ತಲಿವೆ. ಹೊಸ ಕಾರ್ಖಾನೆಗಳ ಮೂ...ಲಕ ಸರಕಾರವು ವಿದ್ಯುದುತ್ಪಾದನವನ್ನು ...ಸುತ್ತಿರುವಾಗಲೂ, ಜನರು ವಿದ್ಯುಚ್ಛಕ್ತಿ...ಯನ್ನು ಬಹಳವಾಗಿ ಉಪಯೋಗಿಸುವ ಕಾ...ರಣ, ಉತ್ಪಾದನವು ಕಡಮೆಯಾಗಬಹುದೇ ...ಎಂಬ ಬೆದರಿಕೆ ಸರಕಾರಕ್ಕಿರಬಹುದು ...ದಲ್ಲಿ ತೆರಿಗೆ ವಿಧಿಸಿ, ವಿದ್ಯುತ್ತನ್ನು ಉಪ...ಯೋಗಿಸುವುದನ್ನೇ ಕಡಮೆಮಾಡಬಹುದು ...ಎಂದು ಸರಕಾರಕ್ಕೆ ತೋರಿರುವುದೇ?

ವಿವಾಹಗಳ ಮೇಲೆ ತೆರಿಗೆ ವಿಧಿಸುವುದಾ...ಗಿದ್ದಾರೆ, ವಿವಾಹಾದಿಗಳ ಮೂಹೂರ್ತಕಾಲ...ಗಳು ಮುಗಿಯುವ ತನಕ ಆ ತೆರಿಗೆಯ ಪ್ರಸ್ತಾ...ಪ ಎತ್ತದಿದ್ದುದೇಕೋ ತಿಳಿಯದು. ಈ ...ಯಾದರೋ ಶ್ರೀಮಂತರ ಮೇಲೆ ಬೀಳ...ಲೆಂದು ವಾರ್ತೆಯಿದೆ ವರದಕ್ಷಿಣೆಯ ...ನೋಡಿ ತೆರಿಗೆ! ಮದ್ಯಪಾನ ನಿವಾರಣೆ...ಯಿಂದ ಬಡವರಿಗೆ ದೊರೆತ ಉಪಕಾರಕ್ಕಿಂತ, ಈ ತೆರಿಗೆಯನ್ನು ವಿಧಿಸಿದಲ್ಲಿ ಅನಾವಶ್ಯಕವಾದ ...ವಿವಾಹಗಳ ಖರ್ಚಿನ ವೈಪರೀತ್ಯವು ಇಳಿದು ...ದರಿಂದ ಉಪಕಾರವು ರೈತರಿಗೆ ಹೆಚ್ಚಿನ ...ದಾಗುತ್ತದೆನ್ನಬೇಕು. ಮಗಳ ಕೈಯನ್ನಿತ್ತಿ ...ಯುವ ಪುಣ್ಯಾತ್ಮನಿಗೆ ಧಾರಾಳ ಹಣದ ...ವನ್ನು ಎತ್ತಿಕೊಡುವ ಕನ್ಯಾಪಿತರು, ಇನ್ನಿ...ಷ್ಟು ಸರಕಾರಕ್ಕೆ ದಕ್ಷಿಣಾರೂಪವಾಗಿ ...ಕೊಡು ಹಿಂಜರಿದರೆ, ಕನ್ಯಾದಾನದ ಪುಣ್ಯವು ...ಲಭಿಸಿಯಾರದೇ? ಈ ಲಗ್ನ ತೆರಿಗೆ ಎಷ್ಟು ...ಗಿ ಕೊಡುವನೊ, ಆತನೆ ಸಮಾಜದಲ್ಲೂ ...ಗೌರವಾರ್ಹನಾಗುವನು. ಇನ್ಕಂಟೇಕ್ಸನ್ನು ಹೆಚ್ಚಾ...ಗಿ ... ಕೋರ್ಟುಗಳಲ್ಲಿ ಈ ಸಂಖ್ಯೆಪ್ರಸ್ತಾ...ಪ ...ಸಾಕ್ಷಿಗಾರರಿಲ್ಲವೇ? ...ಗೆ ಈ ಲಗ್ನ ತೆರಿಗೆದಾರನೂ ಬರು...ವನು.

...(ಹಿಂದುಗಳ ಮರಣಾನಂತರದಲ್ಲಿ) ಉತ್ತ...ರಿಗೆ ಇವರು ಪಡೆವ ಜಮೀನಿನ ಅಧವಾ ...ದಂತವಾಗಿ ತೆರಿಗೆಯನ್ನು ವಿಧಿ...ಸಿದರೆ, ಕೃಷಿಯ ಉತ್ಪನ್ನಗಳ ಮೇಲೆ ಮಾತ್ರ ಅಂದಾಜು ಕಟ್ಟಿ ಈ ತೆರಿಗೆ ವಿಧಿಸಬೇಕಾಗಿದೆ. ಹೊರಕು, ಯಾವಕಷ್ಟು ಸಂಪತ್ತಿನ ಮೇಲೆ ತೆರಿಗೆ ಹೊರಿಸಲು ಪ್ರಾಂತಿಕ ಸರಕಾರಕ್ಕೆ ಅಧಿಕಾರವಿಲ್ಲ.

ಮದ್ಯಪಾನನಿವಾರಣೆಯಿಂದಾಗುವ ಕಂದಾಯ ನಷ್ಟಕ್ಕೆ ಬದಲಾಗಿ, ಈ ತೆರಿಗೆಗಳನ್ನು ವಿಧಿಸುವುದೆಂಬ ಮಾತನ್ನು ಬಿಟ್ಟು, ತೀರ್ವೆಯ ಸ್ಥಳಿಸಿ ತೆರಿಗೆಗಳನ್ನು ವಿಧಿಸುವೆನೆಂದರೆ ಮಂತ್ರಿಗಳಿಗೆ ಬೆಂಬಲ ಹೆಚ್ಚಿನದಿದೆ

ಬೇಂಕುಗಳಲ್ಲಿ

ಜನತೆಯ ಭರವಸೆ ಮರಳಿದೆ.

ಜೂನ್ ೨೫ನೇ ತಾರೀಕಿನಲ್ಲಿ, ಮುಖ್ಯ ಮಂತ್ರಿಯವರು, 'ಸಂಸ್ಥಾನದೊಳಗಣ ಪ್ರಾಮುಖ್ಯ ಎಲ್ಲ ಬೇಂಕುಗಳ ಲೆಕ್ಕಪತ್ರಗಳನ್ನು ತನಿಖೆ ಮಾಡಿಸಲು ಬೇಕಾದ ವ್ಯವಸ್ಥೆ ಮಾಡುತ್ತೇವೆ. ಸರಕಾರವೋ ಅಥವಾ ರಿಜರ್ವ್ ಬೇಂಕೋ ಈ ತನಿಖೆ ನಡಿಸುವುದು' ಎಂದು ತಿಳಿಸಿದ್ದರು. ಸರಕಾರದ ಮುಖ್ಯ ಮಂತ್ರಿಗಳೇ ಹೀಗೆ ಸಾರ್ವಜನಿಕವಾಗಿ ತಿಳಿಸಿದ್ದರಿಂದ, ಮದ್ರಾಸಿನಲ್ಲಿ ಬೇಂಕುಗಳ ಭದ್ರತೆಯ ವಿಷಯವಾಗಿ ಉಂಟಾಗಿದ್ದ ಭಯವೆಲ್ಲ ಮಾಯವಾಗಿ, ಜನರಲ್ಲಿ ಭರವಸೆಯುಂಟಾಗಿದೆ.

ಆದರೆ, ಕಾನೂನು ಪ್ರಕಾರ, ಆಯಾ ಬೇಂಕಿನ ಆಡಳಿತದವರು ಸ್ವೇಚ್ಛೆಯಿಂದ, ಈ ರೀತಿಯಾಗಿ ತಮ್ಮ ಬೇಂಕುಗಳ ಲೆಕ್ಕಪತ್ರ ತನಿಖೆ ಮಾಡಬಹುದಾಗಿ ಸರಕಾರಕ್ಕೆ ಸೂಚಿಸಿಕೊಳ್ಳುವ ತನಕ ಮಾತ್ರ ಸರಕಾರವೇ ತಾನಾಗಿ ಯಾವ ತನಿಖೆಯನ್ನೂ ಮಾಡಬರುವುದಿಲ್ಲ ಮುಖ್ಯ ಮಂತ್ರಿಯವರು ಬೇಂಕುಗಳಿಂದ ಇಷ್ಟರ ಅಪೇಕ್ಷೆಯನ್ನು ನಿರೀಕ್ಷಿಸಿರುವಂತೆ ತೋರುತ್ತದೆಂಬುದು ನಿಸ್ಸಂಶಯ

ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಮುಖ್ಯ ಬೇಂಕಿಂಗ್ ಸಂಸ್ಥೆಗಳಾದ ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು, ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್, ಇವರು ರಿಜರ್ವಬೇಂಕಿನ ಗವರ್ನರರಿಗೆ ತಂತೀಮೂಲಕವಾಗಿ ಮುಖ್ಯಮಂತ್ರಿಗಳ ಭಾಷಣದಲ್ಲಿ ನಿರೀಕ್ಷಿಸಲಾದಂತೆ ತಮ್ಮ ಲೆಕ್ಕಪತ್ರಗಳನ್ನು ತನಿಖೆಮಾಡಿಸಿಕೊಳ್ಳಲು ಸಿದ್ಧರಿದ್ದೇವೆ ಎಂದು ವಾರ್ತೆ ತಿಳಿಸಿರುವರು

ಮುಖ್ಯ ಮಂತ್ರಿಯವರ ಭಾಷಣವನ್ನರಿತೆ ಹಲವು ಬೇಂಕುಗಳೆಲ್ಲ ಇದೇ ರೀತಿ ವರ್ತಿಸುವುವೆಂದು ನಾವು ನಂಬಿದ್ದೇವೆ ಯಾವುದೊಂದು ಬೇಂಕಿನ ಸ್ಥಿತಿಯ ವಿಷಯವಾಗಿ ಸಂದೇಹವೇ ಇಲ್ಲವಾದರೂ, ಜನರಲ್ಲಿ ಉಂಟಾಗಿರುವ ತಲ್ಲಣ ಸ್ಥಿತಿಯ ನಿವಾರಣೆಗೆ ಪುನಃ ಜನರಲ್ಲಿ ವಿಶ್ವಾಸವು ಉದಯಿಸಿ ಆರ್ಥಿಕ ಸ್ಥಿತಿಯು ಉತ್ತಮವಾಗುವ ಹಾಗೂ, ಇಂತಹ ವರ್ತನವೇ ಅಗತ್ಯವೆಂದು ತೋರುತ್ತದೆ ತಾವೇ ಸುರಕ್ಷಿತವಾಗಿ ಭರವಸೆ ಕೊಡಬಲ್ಲ ಯಾವ ಬೇಂಕಾದರೂ, ಇಂತಹ ಪರಿಶೋಧನೆಗೆ ಬೆದರ ಬೇಕಾಗಿಲ್ಲ ಅದೂ ಅಲ್ಲದೆ, ಹಾಗೆ ಪರಿಶೋಧಿತವಾದಲ್ಲಿ ಯಶಸ್ಸನ್ನೂ ದಕ್ಷತೆಯನ್ನೂ ಮೆರೆಯಿಸಬಹುದಾಗಿದೆ

ಹೈದರಾಬಾದು ಸಂಸ್ಥಾನದಲ್ಲಾದ ದಂಗೆ

ಹುಪ್ಲಾದಂಗೆಯ ವಿಚಾರಣೆಯ ಫಲಿತಾಂಶ

ಒಬ್ಬ ಹಿಂದೂ ಹೆಂಗಸನ್ನು ಹುಪ್ಲಾ ಎಂಬಲ್ಲಿ ಮತಾಂತರಗೊಳಿಸಿ, ಶಹಾಬುದ್ದೀನ ನೆಂಬಾತನೊಡನೆ ವಿವಾಹ ಮಾಡಿಸಿದರು ಆ ಊರ ಹಿಂದುಗಳು ಆ ಹೆಂಗಸನ್ನೇ ಕದ್ದೊಯ್ದರೆಂದು ಮಾತು ಹೊರಟಿತು, ಅವಳನ್ನು ಆರ್ಯ ಸಮಾಜ ಮಂದಿರಕ್ಕೊಯ್ದು ಅವಳನ್ನು ಪುನಃ ಹಿಂದುವಾಗಿ ಮಾಡಿ, ಹಿಂದುವಿನೊಡನೆ ಮದುವೆ ಮಾಡಿದರಂತೆ 'ಹಿಂದುಗಳು ಹೀಗೆ ಮಾಡಿದುದಕ್ಕೆ ಮುಸ್ಲಿಮ ಗಂಡನು ಸರಕಾರಕ್ಕೆ ದೂರಿದನು ಇತ್ತ ಹಿಂದೂ ಮುಸ್ಲಿಮರೊಳಗೆ ಕಲಹವುಂಟಾಯಿತು ಜೂನ್ 29ರಲ್ಲಿ (ಕಳೆದ ವರ್ಷ) ಮಾರಾಮಾರಿಯಾಗಲು, ಪೊಲೀಸ್ ಪಟೇಲನೂ ಕೂಡಿ ಮೂವರು ಹಿಂದುಗಳನ್ನು ಕೊಂದು ಮುಸ್ಲಿಮರು ಅವರನ್ನು ಸುಟ್ಟು 19 ಇತರ ಹಿಂದುಗಳಿಗೂ ಗಾಯಪಡಿಸಿದ್ದರು ಹದಿನಾಲ್ಕು ಮಂದಿಯನ್ನು ಪೊಲೀಸರು ಕೈದು ಮಾಡಬೇಕಾಯಿತು ಗುಲ್ಬರ್ಗೆಯ ಸೆಶನ್ಸ್ ಜಡ್ಜರು ಒಬ್ಬನಿಗೆ ಫಾಸೀ ಶಿಕ್ಷೆಯನ್ನೂ 13 ಮಂದಿಗೆ ಜೀವಾಂತ್ಯದ ವರೆಗೆ ಸೆರೆಮನೆಯನ್ನೂ ವಿಧಿಸಿದರು

ನೋಟಿಗಳು.—Notes

ಕರ್ಣನು ಕವಚಕುಂಡಲಗಳನ್ನು ದಧೀಚಿಯು ತನ್ನ ಅಸ್ಥಿಗಳನ್ನು ಪರೋಪಕಾರಕ್ಕಾಗಿ ಕೊಟ್ಟು ಸತ್ತರೂ ಕೀರ್ತಿವಂತರಾದರು. ನಮ್ಮಲ್ಲಿ ಸ್ಟೆಲಿನ್ ಜಗದೀಶನ್ (ಪುಣ್ಯಮಯನಾಮ!) ಉಪವಾಸ ಹೊತ್ತು ಉಪಕಾರಮಾಡಿ ಸಾಯದೆ (ಸಾಯಲಾರದೆ) ಕೀರ್ತಿವಂತರಾಗಿ ಬರುತಿದ್ದಾರೆ!

ಕೆಲವು ಶಾಲೆಗಳಲ್ಲಿ, ಒಟ್ಟಿನ ಮೇಲೆ ಸುಮಾರು 20,000 ಮಕ್ಕಳಿಗೆ ಹಿಂದೀ ಪಾಠಗಳನ್ನು ಕಲಿಸುವರೆ ಸರಕಾರವು ಅಪ್ಪಣೆ ಕೊಟ್ಟು, ಅದರಲ್ಲಿ ಹುಡುಗರು ಮುಂದರಿಸದಿದ್ದರೆ ಅದೊಂದು ಮಕ್ಕಳ ಪರೀಕ್ಷೆಗೆ ಕುಂದಲ್ಲವೆಂದೂ, ಮಾತೃಭಾಷೆಯಲ್ಲಿ ಕಿಂಚಿತ್ತು ಹಿಂದಾದರೆ ಮಕ್ಕಳು ಮುಂದಣ ತರಗತಿಗೆ ಹೋಗಬಾರದೆಂದೂ ವಿಧಿಸಿದ್ದುದು, ಕೆಲವರಿಗೆ ಆಕ್ಷೇಪಕರವಾಗಿ ತೋರಿತು ಅದಕ್ಕಾಗಿ ದಿನೇ ದಿನೇ ನಾಲ್ವರು ಮಂದಿ ಸತ್ಯಾಗ್ರಹ ಹೂಡುವುದೆಂದಾಯಿತು ಆದರೆ ಅದರ ಕೀರ್ತಿ ಹರಡುವ ಹಾಗೆ ಏನು ಮಾಡೋಣ ಎಂದು ಸತ್ಯಾಗ್ರಹಿಗಳಲ್ಲಿ ಅವರ ಪಕ್ಷದಲ್ಲಿ ನಿಂತು ಅವರನ್ನು ಪ್ರೋತ್ಸಾಹಿಸಿದ ಇತರರು ಆಲೋಚನೆ ಮಾಡಿ–ಹೂಂ, ಸ್ಟೆಲಿನ್ ಜಗದೀಶನ್ ನನ್ನು ಕೇಳಿಕೊಳ್ಳೋಣ ಎಂದರು

ಕ್ಷೀರಸಾಗರದ ಬಳಿಗೆ ಬಂದು, ದೇವಾಧಿದೇವತೆಗಳು ಲೋಕಕಂಟಕವಾಗಿದ್ದ ಹಿಂದೀ ಕಡ್ಡಾಯ ಶಿಕ್ಷಣದಿಂದ ಕೆಲವು ಮುಖಂಡರ ಮನಸ್ಸು ಜ್ವಲಿಸುತ್ತಿದ್ದುದರಿಂದ ಭಕ್ತಾದಿಗಳನ್ನು ಕಾಪಾಡಿ, ತಮಿಳೋದ್ಧಾರ (ಅಗತ್ಯವೇನೂ ಇಲ್ಲ, ಉದ್ಧಾರವಾಗಿಯೇ ಸನಾತನವಾಗಿದೆಯಾದರೂ)ಮಾಡಬೇಕೆನ್ನಲು, ಶ್ರೀ (ಸ್ಟೆಲಿನ್) ಜಗದೀಶನು ಅವರ ಅಭಯ ಹಸ್ತನಂ ತೋರಿ ಉಪವಾಸಾವತಾರಿಯಾದನು

ಮೇ ತಾ 10ರಿಂದಂತೆ, ಜೂನ್ ತಾ 10ರಿಂದ ಖಂಡಿತ, ಮೊನ್ನೆ ತಾ 26ರಲ್ಲಿ ಸತ್ಯವಾಗಿ ಜಗದೀಶನ ಉಪವಾಸಾವತಾರವು ಮದ್ರಾಸ್ ಮೆರಿನ್ ಮೈದಾನಿನಲ್ಲಿ ಮಹಾಸಭೆಯಲ್ಲಿ ನೆರೆದ 1600(0) ಮಂದಿಗೆ ಕಾಣಿಸಿಕೊಂಡು, ಬಾಯಿಂದ ಏನೂ ಆಡದೆ, ಪತ್ರಮುಖೇನ ಸಂದೇಶ ಆಕಾಶವಾಣಿಯಂತೆ ಕಳಿಸಿಯದೆ

ನಿಮ್ಮನ್ನೆಲ್ಲ ಕಾಣುವುದು ಬಹುಶಃ ಕೊನೆಯ ಬಾರಿ ಇನ್ನು ಕಠಿನಾವಸ್ಥೆಯಲ್ಲಿದ್ದೇನೆ ಅಲ್ಲಲ್ಲಿ ತೋರುವ ಹಿಂದೀ ವಿರುದ್ಧೋತ್ಸಾಹವೇ ನನ್ನ ಆಹಾರ ಹಿಂದುಸ್ಥಾನಿಯನ್ನು ತಮಿಳು ಭಕ್ತರು ಎದುರಿಸಿರಿ ಆದಿದ್ರಾವಿಡರೂ ಮುಸ್ಲಿಮರೂ ಸೇರಿರಿ ಕೊಂಗ್ರೆಸಿನವರೇ ಆದರೂ ಸೇರಬಾರದೆಂದಿಲ್ಲ ಕೊನೆಗಾಣುವ ತನಕ ಹೋರಾಡಿರಿ '–ಇಷ್ಟೇ ಈ ಪ್ರಕಾಶವಾಗಿ ತಿಳಿದ ಆಕಾಶವಾಣಿ.

ಅತ್ತ ಸತ್ಯಾಗ್ರಹ ಹೂಡಿ, ಕಚೇರಿಗೂ ಹೋದವರಿದ್ದಾರೆ ಅವರ ವಿಧಾನವೇ ಬೇರೆ. 'ತಮಿಳು ಕೆಡುವ ಕಾರಣ ಈ ಸತ್ಯಾಗ್ರಹ' ವೆನ್ನುವರು ಪ್ರಮಾಣವಾಗಿ ತಮಿಳು ಬರುವುದಿಲ್ಲವೆಂದೂ ಇವರ ಬಾಯಿಂದ ಹೊರಡುತ್ತದೆ. ಊರಿಗೆ ಹಿಂತೆರಳದೆ ಹಲವು ದಿನವಾಯಿತು, ಬಡವರಾದ ನಮಗೆ ಜಾಮೀನು ನಿಲ್ಲುವವರಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟು ಪಾರಾಗುವವರೂ ಇದ್ದಾರೆ ಹಲವರು ಒಂದು ತಿಂಗಳಿಂದ ನಾಲ್ಕು ತಿಂಗಳ ತನಕ ತಾತ್ಕಾಲಿಕ ಆಹಾರವನ್ನು ಸರಕಾರದ ಆತಿಥ್ಯದಲ್ಲಿ ಪಡೆಯುತ್ತಾರೆ.

ಇತ್ತ ಮುಖಂಡರೆನಿಸಿ, ನಿರ್ದೇಶಕರೆನಿಸಿ, ಸರ್ ಪನ್ನೀರಸೆಲ್ವಂ, ಶ್ರೀ ಖಲೀಫುಲ್ಲಾ ಸಾಹೆಬ್, ಶ್ರೀ ರಾಮಸಾಮಿನಾಯಕರ್ ಶ್ರೀ ಮೀನಾಂಬಾಳ್ ಇವರೆಲ್ಲ ಸಭೆಕೂಡಿಸಿ ತಮಗೇ ಬರಲಾರದ ಹಿಂದುಸ್ಥಾನಿಯ ವಿಷಯ ಇತರರನ್ನು ವಿರೋಧಿಸಲು ತಮಿಳು ಬಾರಲ್ಲೆಂದು ಸಾಕಷ್ಟು ಚೆನ್ನಾಗಿ ರಾತ್ರಿ 11 ಗಂಟೆಯ ವರೆಗೂ ತಮಿಳು ಅಲ್ಲದ ಇಂಗ್ಲಿಷು ಭಾಷಾ ನಿರತರಾಗಿದ್ದಾರೆ!

ಇನ್ನೊಂದು ಸಂದೇಶ ಮಾಜಿ ಮಂತ್ರಿ ಸರ್ ಪಿ ಟಿ ರಾಜನ್‌ರಿಂದ ಶ್ರೀ ಸ್ಟೆಲಿನ ಜಗದೀಶನ್‌ರಿಗೆ–ನನಗೆ ಅತ್ತ ಬರಲು ದೇಹಲಕ್ಷ್ಯ ... ಬಂದ ... ತೆಗ ದೇವರ ... ಅದರಲ್ಲೂ ಉಪವಾಸ... ಯೆಂಬಾತಗೆ!

ಶ್ರೀ ಖಲೀಫುಲ್ಲರ ಸ್ವರ ಬರೆಯೆ ಹಿಂದುಸ್ಥಾನಿಯು ... ರಾಷ್ಟ್ರಭಾಷೆಯಾಗಲಾರದು ಅದರಲ್ಲಿ ಅಷ್ಟು ಯೋಗ್ಯತೆ ಇಲ್ಲ ಜಿನ್ನಾ ... ಮುಸ್ಲಿಮ ಲೀಗಿನ ಅಧಿನಾಯಕರು ಅವರು ಹಿಂದುಸ್ಥಾನಿಯನ್ನು ಕಲಿಸಬಾರದೆಂದು ಖಂಡಿತ ವಿರೋಧಮಾಡಿದ್ದಾರೆ ಹಿಂದು ರಾಜತ್ವ ಬೆಳಸಿ ಮುಸ್ಲಿಮರ ಸಂಸ್ಕೃತಿ ಕೆಡಿಸಲು ಈ ಹಿಂದುಸ್ಥಾನಿಯನ್ನು ಬ್ರಾಹ್ಮಣ ಪಂಗಡ ಶಾಲೆಗಳಲ್ಲಿ ಕಲಿಸಬೇಕೆಂದಿದೆ!

ಬ್ರಾಹ್ಮಣಪಂಗಡದಲ್ಲಿ ಶ್ರೀ ಯಾಕೂಬ ~~ಹುಸೇನರೂ ಸೇರಿರುವ ಕಾರಣ, ಈ ಮಾತೇ~~ ಕಲಿಯುಗದ ಬಿರುದೇ ಕೆಡುವ ಹಾಗೆ ಮೆನೊನ್, ರೆಡ್ಡಿ ಪಿಳ್ಳೆ, ನಾಯುಡು ಎಲ್ಲರ ಬ್ರಾಹ್ಮಣರಾಗಿ ಆಳತೊಡಗಿದ್ದಾರೆಂದು ಖಲೀಫುಲ್ಲರ ಕಣ್ಣಿಗೆ ಹೊಳೆದಿದೆ

ಮತ್ತೊಂದು, ಈ ಬ್ರಾಹ್ಮಣ ಸರಕಾರ ಅಪರಾಧ ಸತ್ಯಾಗ್ರಹಿಗಳನ್ನು ಕೈದುಮಾಡು ಜೈಲಿಗೆ ಕಳುಹುವುದು ನಮ್ಮ ಪ್ರಾತಿನಿಧ್ಯವಿಲ್ಲದ ಸರಕಾರ, ವಿರೋಧಭಾವ ತೋರಿಸಲು ಇತರ ಮಾರ್ಗವಿಲ್ಲದಾಗ ಸತ್ಯಾಗ್ರಹ, ಈ ಜನತೆ ಆರಿಸಿರುವ ಮಂದಿಯ ಸರಕಾರ ವಿರೋಧವೆಂದರೆ ಅವರನ್ನು ಪುನಃ ಚುನಾವಣೆಯಲ್ಲಿ ಸೋಲಿಸುವುದು ಹೊರತು, ನ... ಮಂದಿಯ ಮೇಲೆ ಈ ಸತ್ಯಾಗ್ರಹ ಪೀಡೆಯು ಕೀರ್ತಿಗಾಗಿ ಉಪವಾಸವೂ ಅಲ್ಲ ಹಿಂ... ವಿರೋಧದ ನೆವವೇಕೆ? ನಿಜವಾಗಿರುವ ಸಾ...ಕಾರಲಾಲಸೆಗೆ ಉಂಟಾದ ಅತೃಪ್ತಿಯ ... ನಾದ ಮಾತ್ಸರ್ಯದ ಕಾರಣವನ್ನೇ ಎದು... ಬಾರದೆಂದಿದೆಯೊ? ನಿರ್ದೇಶಕರೇ ಹೇಳಲಿ

ಹಾಗೂ, ಶಾಲೆಗಳಲ್ಲಿ ಹಿಂದೀ ಪ್ರ...ರವು ಚೆನ್ನಾಗುತ್ತಲೇ ಇದೆ ಸತ್ಯಾಗ್ರಹ...ಜೈ! ಸ್ಟೆಲಿನ್ ಜಗದೀಶನಿಗೇ ಉಪವಾಸಕೀ!

★ ಬೇಂಕು 'ಬಂದ್' ★

ಮದ್ರಾಸು ಅಧಿಪತ್ಯದೊಳಗಣ ಎಲ್ಲಾ ಬೇಂಕುಗಳಿಗೂ ಸಂಕಟವನ್ನುಂಟುಮಾಡುವ ರೀತಿಯಲ್ಲಿ ಜನರು ಬಹಳವಾಗಿ ಬೆದರಿ, ಪ್ರತಿಯೊಂದು ಬೇಂಕಿಗೂ ಅಡಚಣೆಯುಂಟಾಗುವಂತೆ ಮಾಡಕೂಡದಿರುವರೆಂದು ಸರಕಾರವು ಕಳೆದ ವಾರವೇ ತಿಳಿದುಕೊಂಡಿದೆ. ಈ ಬೆದರಿಕೆ ಇನ್ನೂ ಹೆಚ್ಚಿದರೆ ಅಥವಾ ಹಬ್ಬಿದರೆ, ಬೇಂಕುಗಳಿಗೆಲ್ಲ ವಿಶೇಷ ಕಷ್ಟವೇ ಮಾತ್ರವಲ್ಲದೆ, ಹಣವನ್ನು ಬೇಂಕುಗಳಲ್ಲಿಡುವ ಭರವಸೆ ಕೂಡ ಮಾಯವಾಗಬಹುದು.

ಒಂದು ಬೇಂಕು, ಲೇವಾದೇವಿಯನ್ನು ಕಡಿದಿದೆ ಎಂದ ಕೂಡಲೆ, ಜಗತ್ತಿನ ಬೇಂಕುಗಳೆಲ್ಲ ಉತ್ಪಾತಕೊಳ್ಳಪಡುವುದೆಂಬ ಭಯವೇಕೆ ಹರಡಬೇಕು? ಬೇಂಕುಗಳಲ್ಲೀಗ ಡಿಪಾಜಿಟ್ಟಾಗಿರುವ ಹಣವು ಹತ್ತು ಕೋಟಿ ರೂಪಾಯಿಯಷ್ಟಾಗಿದೆ ಎಂದು ಅಂದಾಜು ಇದೆ, ಇದಕ್ಕೂ ಮಾತ್ರವಲ್ಲದೆ, ಎಲ್ಲ ವ್ಯಾಪಾರ ವಹಿವಾಟುಗಳಿಗೂ ಈ ಬೆದರಿಕೆಯ ಫಲವಾಗಿ ದುಃಸ್ಥಿತಿಯೊದಗುವುದು ವ್ಯಾಪಾರವು ಮೇಲ್ಮುಖವಾಗಿ ತೋರುವಷ್ಟರೊಳಗೆಯೆ ಈ ಗಡಿಬಿಡಿಯು ಅದನ್ನು ರಸಾತಲಕ್ಕಿಳಿಸ ಬಹುದಲ್ಲವೆ? ಹೀಗಾದರೆ, ಮುಂದೆ ಕಾಲು ಶತಮಾನವಾದರೂ ದಾಟುವ ಮೊದಲು ಇಂದಿನಷ್ಟು ಸಂಪನ್ನತೆ ಪುನಃ ಉಂಟಾಗಲಾರದು

ಮಂತ್ರೀಶ್ವರರು ಹೀಗೆ ಪ್ರಕಟಿಸಿರುವರು — ಮದ್ರಾಸಿನಲ್ಲಿರುವ ಎಲ್ಲ ಬೇಂಕುಗಳ ವಹಿವಾಟುಗಳನ್ನು ಕುರಿತಾದ ತನಿಖಿ ನಡೆಯಿಸ, ಅದರ ವಿಮರ್ಶೆಯನ್ನು ಸರಕಾರವು ಕೂಲಂಕಷವಾಗಿ ಪ್ರಕಟಿಸುವುದು ಇದಲ್ಲದೆ, ರಿಜರ್ವ ಬೇಂಕು ಎಲ್ಲ ಶೆಡ್ಯೂಲ್ಡ ಬೇಂಕುಗಳಿಗೆ ತನ್ನ ಸಹಾಯವನ್ನು ಮಾಡದಿರದು ಹೀಗೆ ಜನರಲ್ಲಿ ಭರವಸೆಯನ್ನುಟುಮಾಡುವ ವ್ಯವಸ್ಥೆ ಉಂಟಾಗುವುದು. ಹೀಗಾಗುವಾಗ ಸುಮ್ಮನೆ ಇಲ್ಲದ ದಿಗಿಲನ್ನು ಉಂಟುಮಾಡಿಕೊಂಡು, ಸ್ವಸ್ಥವಾಗಿರುವ ಬೇಂಕುಗಳಿಗೂ ಅಸ್ವಸ್ಥವನ್ನುಂಟುಮಾಡದು ಯಾರಿಗೂ ಹಿತವಾಗಿಲ್ಲ ತನ್ನ ಹಣವಿರುವ ಬೇಂಕಿನ ವಿಷಯ ಕೂಲಂಕಷ ವಿಚಾರ ತಿಳಿದಾಗ ತನಗೆ ತಾನಾಗಿ ಭರವಸೆಯುಂಟಾಗುವುದು. ಅದುವರೆಗೆ ಎಣಿಸದಿರೆ ಸಾಕು, ಸರಕಾರದ ವಿಮರ್ಶೆ ಹೊರಡುವ ತನಕ ಸುಮ್ಮನಿದ್ದರೆ ಚೆನ್ನಾಗುವುದು.

ಬೇಂಕುಗಳಲ್ಲಿ ಲೇವಣಾತಿಯಾಗಿ ದೊರೆವ ಹಣವೆಲ್ಲ ಹೊರಗೆ ಸಾಲವಾಗಿ ಕೊಡಲಾಗುವುದು ಲೇವಣಾತಿಯಿಟ್ಟವರು ತಮ್ಮ ಹಣವನ್ನೆಲ್ಲ ಒಮ್ಮೆಲೇ ಹಿಂದಕ್ಕೆ ಪಡೆವ ಆತುರಗೊಂಡರೆ, ಹೊರ ಸಾಲಗಳು ಹಿಂದೆ ದೊರೆಯದೆ ಬೇಂಕು ಎಲ್ಲಿಂದ ಹಣ ಪಾವತಿ ಮಾಡಬಹುದು? ಎಂಬುದು ಸರ್ವರಿಗೂ ತಿಳಿದೇ ಇರುವ ವಿಷಯವಾದರೂ, ನಾನಾ ಜನರ ಉಪಟಳಗಳಿಂದಾಗಿ ಯಾವುದೊಂದು ಬೇಂಕನ್ನು ಜನರೆಲ್ಲ ಮರುಪಾವತಿ ಮಾಡಲು ಬಾಧಿಸಿದರೆ, ಅಡಚಣೆಯುಳ್ಳ ಆ ಬೇಂಕು ಕೂಡಲೇ ಲೇವಾದೇವಿ 'ಬಂದ್' ಮಾಡದಿರಲಾಗುವುದಿಲ್ಲ ಅದರಂತೆ, ಆಗಾಗ ನಾನಾ ವಿಚಾರಗಳ ಮೂಲಕ ಅಧಿಕ ಸಂಖ್ಯಾಕ ಶಾಖೆಗಳನ್ನು ತೆರೆದು, ಅಲ್ಲಲ್ಲಿ ಹಣ ಬಿತ್ತಿದ ಬಳಿಕ, ಕೊಯ್ಲು ಕಾಲ ಬರುವ ತನಕ ಬೇಂಕು ಟಂಕಸಾಲೆಯಲ್ಲವಾದ ಕಾರಣ, ಸರ್ವ ಅಡಚಣೆಗಳಿಂದ ಒಮ್ಮೆಲೇ ದೂರವಾಗುವುದೂ ಇಲ್ಲ

ಸರಕಾರವಾದರೂ ಅತಿ ತ್ವರಿತದಲ್ಲಿ ಯಾವ ಬಗೆಯ ಸಲಕರಣೆಗಳನ್ನೂ ಒದಗಿಸಿ ಕೊಡಲಾರದು

'ಬಂದ್' ಆದ ಬೇಂಕು, ತನ್ನಲ್ಲಿ ಹಣವಿಟ್ಟವರಿಗೆಲ್ಲ ಶಾಂತಿಕರವಾದ ರೀತಿಯಲ್ಲಿ ವರ್ತಿಸಿದರೇ ತೃಪ್ತಿಯುಂಟು ಮಾಡಬಹುದು ಅಲ್ಲಲ್ಲಿನ ಸರಕಾರದ ಅಧೀಶರೂ, ನ್ಯಾಯಾಧೀಶರು, ಪರಿಸ್ಥಿತಿಯು ಇನ್ನೂ ಕೆಟ್ಟು ದಿಗಿಲು ಹಬ್ಬದ ಹಾಗೆ ಬೇಕಾದ ವ್ಯವಸ್ಥೆ ಮಾಡಲು ಅಧಿಕಾರವುಳ್ಳವರು ಬೇಂಕನ್ನ ದಿವಾಳಿಯೆಂದು ನಿರ್ಧರಿಸಿ, ಲಿಕ್ವಿಡೇಟರಿಗೆ ಕೂಡಲೆ ಒಪ್ಪಿಸುವುದು ಕೆಲವರಿಗೆ ಹಾಯಾಗಿ ತೋರಬಹುದಾದರೂ, ಅಧಿಕಾರಿಗಳು ಕೂಡಲೆ ಹಾಗೆ ನಿರ್ಧಾರವಾಗದಂತೆ ನೋಡಿಕೊಳ್ಳಬಹುದು

ದೇವಸ್ಥಾನದಲ್ಲಿ ಸರ್ಪಗಳು.

ಬೇಗಂ ಗಂಜಿನ ಪಂಡಿತ ರಜನೀಕಾಂತ ತರ್ಕತೀರ್ಥರ ಮನೆಯಲ್ಲಿ ಮಾನಸಾದೇವಿಯ ವಿಗ್ರಹವಿದೆ ಮೇ ತಾ. 31ರಲ್ಲಿ, ಮೂರು ಸರ್ಪಗಳು ಆ ದೇವಾಲಯದೊಳಕ್ಕೆ ನುಳಿದುವು ವಿಗ್ರಹದ ಸುತ್ತಲೂ ಸುತ್ತಿದುವು. ಅವನ್ನು ಯಾವನೂ ಪೀಡಿಸಲಿಲ್ಲ, ಅವು ಹೊರಡಲೂ ಇಲ್ಲ

ಅವು ಯಾವ ಬಾಧೆಯನ್ನೂ ಕೊಡುತ್ತಿಲ್ಲ, ಹೊರಗೆ ಸುಳಿವುದೂ ಇಲ್ಲ. ಅವುಗಳಿಗೆ ಹಾಲು ಬಾಳೆಹಣ್ಣುಗಳ ನೈವೇದ್ಯ ಚೆನ್ನಾಗಿ ಒಪ್ಪಿಯುದೆ ಭಕ್ತಾದಿಗಳು ಬಹಳವಾಗಿ ಅಲ್ಲಿಗೆ ಹಿಂಡುಕಟ್ಟಿ ಬರುತಿದ್ದಾರೆ.

ಕಳೆದ ದೀಪಾವಳಿಯ ತರುವಾಯ, ನಂದನಪುರದ ರೇವತೀಕಾಂತಶರ್ಮರಲ್ಲಿ ಹುಟ್ಟಿದ ಮಗುವನ್ನು ಹಲವು ಸರ್ಪಗಳು ಕಾಯುತಿದ್ದುವೆಂದೂ, ಮಗುವಿನ ಮೇಲೆ ಜಡೆ ಹರಡಿ ತೂಗುತಿದ್ದುವೆಂದೂ, ಮಗುವನ್ನು ಹದಿನೈದು ಮೈಲು ದೂರದ ಹಳ್ಳಿಮನೆಗೆ ಒಯ್ದರೂ ಸರ್ಪಗಳು ಅಲ್ಲಿಯೂ ಅದೇ ಸೇವೆಯಲ್ಲಿದ್ದುವೆಂದೂ ಎಲ್ಲರಿಗೂ ತಿಳಿದಿದ್ದ ವಿಷಯ

ಈ ಸರ್ಪಗಳು ಹಿಂದಣ ಜನ್ಮದಲ್ಲಿ ಕೊಡೆಗಳಾಗಿದ್ದುವೆಂದು ನಾಸ್ತಿಕರು ಎನ್ನುವರು

'ಬಂದ್' ಆದ ಬೇಂಕು,—ಕೆನ್ನೆಸ್ಥಿತಿ ಸರಿಯಿದೆ ಬೇಕೆಂದೇ ಹೀಗೆ ಸೇಡಿಸಲಾಗಿದೆ ಎನ್ನುವುದು 'ಜನಾಗಿರುವಲ್ಲಿ, ಆ ಬೇಂಕು ತನ್ನ ವಹಿವಾಟು ಮುಂದರಿಸುವಂತೆ ಅಗತ್ಯ ಸಹಾಯವು ಅದಕ್ಕೆ ದೊರೆಯಲೇ ಬೇಕು ಎಲ್ಲ ಲೇವಣೆದಾರರಿಗೆ ಎಲ್ಲ ಹಣಗಳನ್ನು ಕೂಡಲೆ ತೆರಲಾರದ ಕಾರಣ 'ಬಂದ್' ಆಗಿದ್ದಾದಲ್ಲಿ, ಅಂತಹ ಲೇವಣೆದಾರರಿಗೆ ಸಂಕಷ್ಟ ತೃಪ್ತಿಯನ್ನುಂಟುಮಾಡುವಂತೆ ವರ್ತಿಸುವುದುತ್ತಮ.

ಎಲ್ಲ ಲೇವಣೆದಾರರಿಗೆ ರೂಪಾಯಿಯಲ್ಲಿ ನಾಲ್ಕಾಣೆಯಷ್ಟನ್ನು ಈಗಲೆ ತೆರುವ ವ್ಯವಸ್ಥೆ ಮಾಡಬಾರದೇಕೆ? ಉಳಿದ ಹನ್ನೆರಡಾಣೆಗಳನ್ನು ಎರಡು ವರ್ಷಗಳ ವಾಯಿದೆ ಲೇವಣಾತಿಯೆಂದು ಅಂಗೀಕರಿಸಬಾರದೇಕೆ? ಹೀಗೆ ಮಾಡಿದಲ್ಲಿ ಎರಡು ವರ್ಷಗಳೊಳಗೆ ಬೇಂಕು ಹೊರ ಸಾಲಗಳನ್ನು ವಸೂಲ್ಮಾಡಿಕೊಳ್ಳಲು ಅನುಕೂಲ ರೂಪಾಯಿಗೆ ಹದಿನಾರಾಣೆ ಲೇವಣೆದಾರರಿಗೆ ದಲೂ ಅನುಕೂಲ

ಬ್ರಿಟನ್ನು, ಇಟೆಲಿ, ಸ್ಪೈಯಿನು. ಕರಾರು ಸಿಂಧುವಾಗಿರದ, ಗೊಂದಲವೆದ್ದಿದೆ.

ಬ್ರಿಟಿಷ ಸರಕಾರವು ಇಟೆಲಿಯೊಡನೆ ಮಾಡಿದ್ದ ಕರಾರು, ಸ್ಪೈಯಿನಿಂದ ಇಟೆಲಿಯ ಸಿಪಾಯರು ಇನ್ನೂ ಹಿಂದೆ ಬಂದಿರದ ಕಾರಣ ಹಾಗೆಯೇ ಉಳಿದಿದೆ; ಸಿಂಧುವಾಗಿಲ್ಲ. ಅದು ಬೇಗನೆ ಸಿಂಧುವಾಗುವ ಹಾಗೆ ಇಂಗ್ಲೆಂಡಿಗೆ ಮನಸ್ಸಿದೆಯೆಂದು ಇಟೆಲಿಯ ಸಿಪಾಯರು ಸ್ಪೈಯಿನಿನ ಸರಕಾರಕ್ಕೆ ವಿರುದ್ಧ ಹೋರಾಡುವುದನ್ನು ಕಂಡೂ ಕಣ್ಣು ಮುಚ್ಚಬಹುವುದೆ? ಕೂಡದೆಂದು ಧರ್ಮಯುದ್ಧ ಬಲ್ಲವರು ಹೇಳುವರಲ್ಲವೆ? ಈಗ ಮಾತ್ರ ಬ್ರಿಟಿಷರ ಪಕ್ಷವಾಗಿ ಲೋರ್ಡ ಪರ್ಥರೂ ಇಟೆಲಿಯ ಪರವಾಗಿ ಕೌಂಟ್ ಕಿಯಾನೊಕವರೂ ಹೀಗಾಗಲೆಂಬ ಅರ್ಥಕ್ಕೆ ಸಂಭಾಷಣೆ ಮಾಡುತ್ತಿರುವರಂತೆ. ಆದರೂ ಇಂಗ್ಲೆಂಡು ಹೆಚ್ಚಿನ ಭರವಸೆಕೊಟ್ಟಂತೆ ಪ್ರಕಟವಾಗಿಲ್ಲ. ಇಟೆಲಿಯು ತನ್ನ ವಾಗ್ದಾನ ಪೂರಯಿಸಿಲ್ಲ, ಬದಲಾಗಿ—ಫ್ರೆಂಚರು ಸ್ಪೈನಿನ ಸರಕಾರಕ್ಕೆ ಸಹಾಯ ಮಾಡುತ್ತಿರುವುದರಿಂದ ತಾನೇನೂ ಮಾಡಲಾಗಿಲ್ಲವೆಂದು ತಿಳಿಸಿದೆಯಂತೆ.

ಬ್ರಿಟಿಷರು—ಜನತೆ-ಸ್ಪೈಯಿನ್ ಸರಕಾರದ ಪಕ್ಷವಾಗಿದ್ದು, ಇಟೆಲಿಗೆ ಇನ್ನೂ ರಿಯಾಯಿತಿ ಮಾಡಬಾರದೆನ್ನುವರು ಮುಖ್ಯಮಂತ್ರಿ ಚೆಂಬರ್ಲೇನರಾಗಲಿ ಲೋರ್ಡ ಹೆಲಿಫೆಕ್ಸರಾಗಲಿ ಮುಸೊಲಿನಿಯ ಮಾತಿಗೆ ಒಡಂಬಡಲಿಲ್ಲ ಅವರು ಒಡಂಬಟ್ಟರೆ ಬ್ರಿಟಿಷ ಜನತೆಯು ಅವರ ಬೆಂಬಲಕ್ಕಿರಲಾರದೆಂದು ಊಹಿಸಬಹುದಾಗಿದೆ ಇಟೆಲಿಗೆ ತಾನು ಮಾಡಿದ್ದ ಕರಾರು ಬೇಗನೆ ಜಾರಿಗೆ ಬರಬೇಕೆಂಬ ಆತುರವು ತುಂಬ ಇದೆ ಸ್ಪೈಯಿನಲ್ಲಿ ಇತ್ತಂಡಗಳೂ ತಾವೇ ಯುದ್ಧವನ್ನು ಇತ್ಯರ್ಥಿಸಲಿ ಹೊರತು ಅದರಲ್ಲಿ ಇತರರು ಕೈಹಾಕಬಾರದೆಂದು ಬ್ರಿಟಿಷ ಸರಕಾರದ ಮಾತಿದೆ ಹೀಗೆ ಇಟೆಲಿ ಮಾಡಲೊಪ್ಪದಿರುವಲ್ಲಿ ಕರಾರನ್ನು ರದ್ದುಮಾಡುವುದಾಗಿ ಮೊದಲೇ ಸೂಚಿಸಲಾಗಿದೆ, ಹೀಗಿರುವ ಕಾರಣ "ಕರಾರನ್ನು ಊರ್ಜಿತವಿರಿಸುವುದೂ, ಹರಿದು ಹಾಕುವುದೂ ಇಟೆಲಿಯ ಕೈಯಲ್ಲೇ ಇದೆ ಹೊರತು ಅದಕ್ಕೇಕೆ ಫ್ರೆನ್ಸಿನ ವರ್ತನದ ನೆವದ ಆತಂಕ ಹೇಳಬೇಕು"

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು.

~~1 ಕಛೇರಿ~~
ಮಂಗಳೂರು

2 ಪುತ್ತೂರು
ಕಲ್ಲಿಕೋಟೆ

3. ಪಿ ಬಿ 337
ಮೌಂಟ ರೋಡ್
ಮದ್ರಾಸು
(ಟೆಲಿಫೋನ್ ನಂಬ್ರ 8945)

4 ವಿಶ್ವೇಶ್ವರಪುರಂ ಸರ್ಕಲ್
ಬೆಂಗಳೂರು ಸಿಟಿ
~~(ಟೆಲಿಫೋನ್ ನಂಬ್ರ 2182)~~

5 ಗಾಣಿತನು ನಿವಾಸ್,
ಚಾರ್ನಿ ರೋಡ್,
ಗಿರ್ಗಾಂವ್, ಬೊಂಬಾಯಿ
(ಟೆಲಿಫೋನ್ ನಂಬ್ರ 26314)

ಇನ್ಸ್‌ಪೆಕ್ಟೊರೇಟ್ ಆಫೀಸು.

6. ಒಟ್ಟಪಾಲ,
ದಕ್ಷಿಣ ಮಲಬಾರು.

7. ಸೆಂಟ್ರಲ್ ಸ್ಟೇಶನ್ ರೋಡ್,
ಟ್ರಿವೆಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು.
~~ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,~~
(ಕೊಚ್ಚಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)
ರಿಜಿಸ್ಟರ್ಡ್ ಆಫೀಸು ಉಡುಪಿ

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯು ಪ್ರಖ್ಯಾತಿಯನ್ನು ಸೂಚಿಸುತ್ತದೆ

ನೂತನ ವಹಿವಾಟು	ರೂ 140,08,725
ವಿಮಾಕಂತುಗಳಿಂದ ಆದಾಯ	ರೂ 30,00,000ಕ್ಕೆ ಮಿಕ್ಕುತ್ತದೆ
~~ಒಟ್ಟು ಆಸ್ತಿಪಾಸ್ತಿಯು~~	ರೂ 100,00,000ಕ್ಕೆ ಮಿಕ್ಕುತ್ತದೆ
ಈ ವರೆಗೆ ಕ್ಲೇಮುಗಳಿಗೆ ಸಂದದ್ದು	ರೂ. 50,00,000ಕ್ಕೆ ಮಿಕ್ಕುತ್ತದೆ.

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ
ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,
ಬೊಂಬೆ ಲ್ಯಾಫ್ ಕಟ್ಟಡ,
ಸೆಂಟ್ರಲ್ ಆಫೀಸ: ಉಡುಪಿ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಕಟಣೆ

ಶ್ರೀ ಆರ್. ಆರ್. ತಲಚೇರಿಕರರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿರುತ್ತಾ, ಅವರ ಮೇಲೆ 'ಶಿಸ್ತು' ಜಾರಿ ಮಾಡಲು ಜಿಲ್ಲಾ ಕಮಿಟಿಗೆ ಎಲ್ಲಿಯ ಅಧಿಕಾರವಿದೆ ಎಂಬುದರ ಕುರಿತು ಸಂಶಯಗಳು ಜನರಲ್ಲಿ ಉಂಟಾಗಿವೆಯೆಂದು ತಿಳಿಯುತ್ತೇನೆ. ಈ ವಿಷಯದಲ್ಲಿ ಜನರಲ್ಲಿ ಹೀಗೆಲ್ಲಾ ಉಂಟಾಗಿರಬಹುದಾದ ತಪ್ಪು ಅಭಿಪ್ರಾಯವನ್ನು ದೂರೀಕರಿಸುವ ನಿಮಿತ್ತ ಈ ಪ್ರಕಟಣೆಯನ್ನು ಹೊರಡಿಸಿರುವೆನು.

ಪ್ರ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ನಿಬಂಧನೆಗಳೂ ನಿಯಮಾವಳಿಯ ಸೂತ್ರ 10 ರ ನಿಬಂಧನೆ ೬ ಮತ್ತು ೮ ಗಳನ್ವಯ ಜಿಲ್ಲಾ ಕಮಿಟಿಯ ಅಧೀನವಿರುವ ಕಮಿಟಿಗಳು, ಕಾರ್ಯಕಾರಿ ವ ಮಹಾಸಭೆಯ ಸದಸ್ಯರು ಮತ್ತು ಸಾಮಾನ್ಯ ಸದಸ್ಯರುಗಳ ಮೇಲೆ ಶಿಸ್ತು ಜಾರಿ ಮಾಡುವ ಸಂಪೂರ್ಣ ಅಧಿಕಾರವು ಜಿಲ್ಲಾ ಕಾಂಗ್ರೆಸ್ ಕಮಿಟಿಗಿದೆ.

ಈ ಘಟನೆಯನ್ನು ಪ್ರಾಂತಿಕ ಕಮಿಟಿಯವರೇ ಅನುಮೋದಿಸಿ ಕಳುಹಿಸಿದಾಗಿದೆ. ಶ್ರೀ ರಂಗರಾವ್ ತಲಚೇರಿಕರರು ಈ ಜಿಲ್ಲಾ ಕಮಿಟಿಯ ಅಧಿಕಾರಕ್ಕೊಳಪಟ್ಟ ಕ್ಷೇತ್ರದಲ್ಲಿ ಕಾಂಗ್ರೆಸ್ ಸಾಮಾನ್ಯ ಸದಸ್ಯರಾಗಿರುವುದರಿಂದ ಇವರ ಹೆಸರನ್ನು ಕಾಂಗ್ರೆಸ್ ರಿಜಿಸ್ಟರಿನಿಂದ ತೆಗೆದು ಹಾಕುವ ಅಥವಾ ತಾತ್ಕಾಲಿಕವಾಗಿ ಇವರನ್ನು ಕಾಂಗ್ರೆಸ್ಸಿಂದ ಹೊರಗಿರಿಸುವ ಅಧಿಕಾರವು ಜಿಲ್ಲಾ ಕಮಿಟಿಗೆ ಇರುತ್ತದೆ.

ಕಳೆದವರುಷ ಪ್ರಚುರಪಡಿಸಲಾದ ಪ್ರಾಂತಿಕ ಕಮಿಟಿಯ ಹೊಸತಿದ್ದಿದ ನಿಯಮಾವಳಿಗಳ ಕಡೆ ಜಿಲ್ಲಾ ಕಮಿಟಿಯು ಲಕ್ಷವನ್ನು ಕೊಡಬೇಕಾಗಿ ಪ್ರಾಂತಿಕ ಕಮಿಟಿಯವರು ಅಪ್ಪಣೆ ಕೊಡಿಸಿದ್ದಾರೆ. ಆದರೆ ಅಂಥಾ ನಿಯಮಾವಳಿ ಯೂ ಅದಕ್ಕೆ ಸಂಬಂಧ ಪಟ್ಟ ಯಾವುದೇ ತಾಕೀತು 'ಶಿಸ್ತು' ಜಾರಿ ಮಾಡುವ ದಿನದ ವರೆಗೆ ನಮ್ಮ ಜಿಲ್ಲಾ ಕಮಿಟಿಗೆ ಬಂದಿರಲಿಲ್ಲ. ಕಳೆದ ವರುಷ ಮಂಜೂರಾದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ನಿಯಮಾವಳಿಗಳನ್ನು ಈಗ ಅವರು ಜಿಲ್ಲೆಗೆ ಕಳುಹಿಸದುದೇ ಆಗಿದ್ದರೆ ಈಗಿನ ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯು ಅದಕ್ಕನುಸಾರ ತನ್ನ ನಿಯಮವನ್ನು ತಿದ್ದಿಕೊಳ್ಳಬೇಕಿತ್ತು. ಆದರೆ ಜಿಲ್ಲಾ ಕಾಂಗ್ರೆಸ್ ಘಟನೆಯಲ್ಲಿ ಅಂಥಾ ಯಾವ ತಿದ್ದುಪಡಿಯೂ ಇಲ್ಲದಿರುವುದರಿಂದ, ಅಥವಾ ಅಂಥ ಬದಲಾವಣೆ ಯಾಗ ಬೇಕೆಂಬುವರ ಬಗ್ಗೆ ಯಾವ 'ರೆಕಾರ್ಡೂ' ಆಫೀಸಿನಲ್ಲಿ ಇಲ್ಲದಿರುವುದರಿಂದ ಈಗಿನ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಳವು ತನ್ನ ಘಟನೆಯಲ್ಲಿ ಕಾಣಿಸಲಾದ ನಿಬಂಧನೆಗಳನ್ವಯ ನಡೆದುಕೊಂಡು, ತಮಗಿರುವ ಅಧಿಕಾರದಂತೆ 'ಶಿಸ್ತು' ಜ್ಯಾರಿಮಾಡಿದುದಾಗಿರುತ್ತದೆ.

ನಿಯಮಾವಳಿಯು ತಿದ್ದಿದ ಅನ್ವಯ ಪ್ರಕಾರ ಪ್ರಾಂತ್ಯದೊಳಗಿನ ಯಾವುದೇ ಕಮಿಟಿ ಕಮಿಟಿಯ ಸದಸ್ಯರ, ವ, ಸಾಮಾನ್ಯ ಸದಸ್ಯರುಗಳ ಮೇಲೆ ಶಿಸ್ತು ಜ್ಯಾರಿಮಾಡುವ ಅಧಿಕಾರವು ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಗೆ ಮಾತ್ರ ಇದೆ.

ಶಿಸ್ತು ಜ್ಯಾರಿಮಾಡುವ ಅಧಿಕಾರವಿರುವಲ್ಲಿ ಅದು ಆಯಾ ಕಮಿಟಿಯ ಅಧೀನ ಇರುವ ಎಲ್ಲಾ ಕಮಿಟಿಯ, ಸದಸ್ಯರುಗಳ ಮೇಲೆ ಕಮಿಟಿಗಿರುವ ಅಧಿಕಾರವಾಗಿದೆ. ಅಲ್ಲಿ ಪ್ರಾಂತಿಕ ಮತ್ತು ಸಾಮಾನ್ಯ ಸದಸ್ಯರೆಂಬ ತಾರತಮ್ಯವಿಲ್ಲ. ಪ್ರಾಂತಿಕ ಕಮಿಟಿಯ ಸದಸ್ಯರ ಮೇಲೆ ಜಿಲ್ಲಾ ಕಮಿಟಿಗೆ ಶಿಸ್ತು ಜಾರಿ ಮಾಡುವ ಅಧಿಕಾರವಿಲ್ಲವೆಂದು ಹೇಳ ವುದು ಸರಿಯಲ್ಲ. ಪ್ರಾಂತಿಕವಿರಲಿ, ಅಖಿಲಭಾರತ ವಿರಲಿ ಎಲ್ಲರೂ ಸಾಮಾನ್ಯ ಸದಸ್ಯರಾಗಿಯೇ ಆ ಎಲ್ಲಾ ಪ್ರಾತಿನಿಧ್ಯ ಸ್ಥಾನಗಳನ್ನು ಹೊಂದಿರುವರು—ಆದುದರಿಂದ ಜಿಲ್ಲಾ ಕಮಿಟಿಗೆ ಶಿಸ್ತು ಜ್ಯಾರಿಮಾಡಲು ಸಂಪೂರ್ಣ ಅಧಿಕಾರವುಳ್ಳದ್ದಾಗಿದೆ. ಹೊಸ ನಿಬಂಧನೆಗಳನ್ವಯ ಜಿಲ್ಲಾ ಕಮಿಟಿಗೆ ಅಧಿಕಾರವಿಲ್ಲವೆಂದಾದರೆ ಜಿಲ್ಲಾ ಕಮಿಟಿಯು ಒಬ್ಬ ಸಮಾನ ಸದಸ್ಯನ ಮೇಲೆ ಕೂಡಾ ಶಿಸ್ತು ಜಾರಿ ಮಾಡಲು ಶಕ್ತವಲ್ಲ. ಪ್ರಾಂತಿಕ ಕಮಿಟಿಯು ಅಧಿಕಾರದೊಳಗೆ ಅಖಿಲ ಭಾರತ ಕಮಿಟಿಯ ಸದಸ್ಯರಿರಬಹುದು. ಅವರು ತಪ್ಪುಮಾಡಿದಲ್ಲಿ ಶಿಸ್ತು ಜಾರಿಮಾಡಲು ಆಯಾ ಪ್ರಾಂತ್ಯದ ಕಮಿಟಿಗಳಿಗೆ ಅಧಿಕಾರವಿದೆ. ಹಾಗೆಯೇ ಶಿಸ್ತು ಜ್ಯಾರಿಮಾಡುವ ಅಧಿಕಾರವು ಪ್ರಾಂತಿಕ ಕಮಿಟಿಯವರಿಂದ ಅನುಮೋದಿತವಾದ ಜಿಲ್ಲಾ ಘಟನೆಯ ಪ್ರಕಾರ ಜಿಲ್ಲಾ ಕಮಿಟಿಗೆ ಇದ್ದುದರಿಂದಲೇ ಜಿಲ್ಲಾ ಕಮಿಟಿಯು ಶ್ರೀ ರಂಗರಾಯರ ಮೇಲೆ ಶಿಸ್ತು ಜಾರಿಮಾಡಿದುದಾಗಿದೆ.

(ಸಹಿ) ಯು ಶ್ರೀನಿವಾಸ ಮಲ್ಯ
ಅಧ್ಯಕ್ಷ
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ಗಡಿನಾಡಿನಲ್ಲಿ ಸಿಡಿಗುಂಡುಗಳು

ಮಂಚೆಸ್ಟರ್ ಗಾರ್ಡಿಯನ್ ಪತ್ರದಲ್ಲಿ, ಶ್ರೀ ಅಬ್ದುಲ್ ಖಯ್ಯಾಮ್ (ಗಡಿನಾಡಿನ ಪ್ರತಿನಿಧಿಯಾಗಿ ಎಸೆಂಬ್ಲಿಯಲ್ಲಿರುವವರು) ಗಡಿನಾಡಿನಲ್ಲಿ ಸಿಡಿಗುಂಡುಗಳ ಚೆಲ್ಲಾಟವನ್ನು ಕುರಿತಾಗಿ ವಿವರಿಸಿ ಬರೆದಿರುವರು.

ಗಡಿನಾಡಿನಲ್ಲಿರುವ ನಾನಾ ಕುಲಗಳನ್ನು ಭಯಗೊಳಿಸಿ, ಅವರು ವಿಧೇಯರಾಗುವ ಹಾಗೆ ಮಾಡುವ ಸಾಧನೆಯದು. ಯಾವ ಹಳ್ಳಿಯಲ್ಲಿ ಬಾಂಬು ಚೆಲ್ಲುವರೋ ಅಲ್ಲಿ ಘೋಷಣಾಪತ್ರಗಳನ್ನು ಮೊದಲು ಚೆಲ್ಲುವರು. ಆದರೆ, ಅವನ್ನು ಓದಲು ಬಲ್ಲ ಜನವೆಷ್ಟಿದೆ ಆ ಗ್ರಾಮಗಳಲ್ಲಿ? ಅದೂ ಅಲ್ಲದೆ, ಪಠಾಣರನ್ನು ಭಯಗೊಳಿಸಿಯೆ ಗೆಲ್ಲಲಾಗುವಂತಿಲ್ಲ ಎಂಬುದನ್ನು ಬ್ರಿಟಿಷರು ಇನ್ನೂ ಕಲಿತುಕೊಳ್ಳಬೇಕಾಗಿದೆ. ಗುಡಿಸಲುಗಳನ್ನೂ ಮಜೀದಿಗಳನ್ನೂ ಹಾಳುಗೆಡುವುದರಿಂದಲೂ, ಗಂಡಸರು ಹೆಂಗಸರು ಮಕ್ಕಳು ಮುದುಕರು ಮೊದಲಾದವರನ್ನು, ಅವರು ನಿರಪರಾಧಿಗಳಾದರೂ ಕೊಂದಿಕ್ಕುವುದರಿಂದಲೂ ಪಠಾಣರ ಮನಸ್ಸು ಇನ್ನಷ್ಟು ಕಠಿಣವಾಗಿ ಅವರು ಸುಲಭದಲ್ಲಿ ಗೆಳೆಯರಾಗದೆ ಇನ್ನೂ ಕೊನೆಯ ತನಕ ಕಾದಾಡುವುದೇ ನಿಶ್ಚಯವೆನ್ನುವಂತಾಗುವುದು.

ಈ ಮುಸೀದಿ ಧ್ವಂಸವನ್ನು ಅಫಘಾನಿಸ್ತಾನವೂ ಕೇಳಿದೆ. ಭಾಷೆ ಮತ ವಂಶಗಳು ಒಂದಾಗಿರುವ ಈ ಕುಲದವರ ಈ ರೀತಿ ಹಾವಳಿಗೆ ಒಳಪಡತ್ತಿರುವುದರಿಂದ ತಿಳಿದೇ ಇಡೀ ಜನ [illegible] ಅದೂ ಅಲ್ಲದೆ ರಕ್ಷಣೆಯೊಂದು ವಿಲ್ಲದವರ ಮೇಲೆ ಕಾದಾಡತ್ತ ಅಧರ್ಮ ಯುದ್ಧವನ್ನು ಹೂಡಿದುದು ಸರಿಯಲ್ಲ. [illegible] ಈ ಬಾಂಬು ಚೆಲ್ಲಾಟವು ಒಪ್ಪದಾಗಿದೆ.

ಎಲ್ಲೆಲ್ಲೂ ಭಯ, ಸರ್ವತ್ರ ಭಯ

ಭಯದ ಭೂತವು ಈಗ ಸರ್ವತ್ರ ಮನೆ ಮಾಡಿಕೊಂಡಿದೆ. ಆಗುವಂಥ ಆಗದಂಥ ಎಲ್ಲಾ ವಿಷಯಗಳನ್ನು ಕಲ್ಪಿಸಿಕೊಂಡು ಪ್ರಪಂಚವು ಭಯದಿಂದ ತತ್ತರಿಸುತ್ತಲಿದೆ. ಯೂರೋಪಿನಲ್ಲಂತೂ ಭಯದ ಭೂತವು ಸುಳಿಯದ ಪ್ರದೇಶವೇ ಇರುವದಿಲ್ಲ. ನಡೆಯಲ್ಲಿ, ನುಡಿಯಲ್ಲಿ, ಪ್ರತಿಯೊಂದು ಕೆಲಸದಲ್ಲಿ, ಕಾರ್ಯದಲ್ಲಿ ಒಬ್ಬರನ್ನೊಬ್ಬರು ಭಯದೃಷ್ಟಿಯಿಂದ ನೋಡುತಿದ್ದಾರೆ.

'ಜರ್ಮನಿಯಲ್ಲಿ, ರಶ್ಯದಲ್ಲಿ, ಇಟೆಲಿಯಲ್ಲಿ, ಪ್ರತಿಯೊಂದು ರಾಜ್ಯದಲ್ಲಿ ಭಯದ ರಾಜ್ಯವು ಇದೆ. ಗೋರಿಂಗನು ಗೋಬೆಲ್ಸನನ್ನು ಹೆದರುತ್ತಾನೆ, ಆದ್ದರಿಂದ ಅವನನ್ನು ದ್ವೇಷಿಸುತ್ತಾನೆ. ಗೋಬೇಲ್ಸನು ಶಾಟನನ್ನು ಹೆದರುತ್ತಾನೆ, ದ್ವೇಷಿಸುತ್ತಾನೆ. ಪ್ರಿನ್ಸನು ರೋಜನಬರ್ಗನನ್ನು ಹೆದರುತ್ತಾನೆ, ದ್ವೇಷಿಸುತ್ತಾನೆ. ಹಿಟ್ಲರನು ಹೆದರದ ದ್ವೇಷಿಸದ ಜನವೇ ಇಲ್ಲ. ೧೯೩೪ನೇ ಇಸವಿಯಲ್ಲಿ ನಡೆದ ರಕ್ತರಂಜಿತ ಕ್ರಾಂತಿಯ ಕಾಲಕ್ಕೆ ಅವನು ಗೋಬೆಲ್ಸನನ್ನು ಮ್ಯೂನಿಚ್ಚಿಗೆ ತನ್ನ ಸಂಗಡ ಕರಕೊಂಡ ಹೋದ ಕಾರಣ ಮತ್ತಾವುದು ಅಲ್ಲ, ಗೋಬೆಲ್ಸನು ಬರ್ಲಿನಿನಲ್ಲಿ ಇದ್ದು ಬಿಟ್ಟರೆ ಗೋರಿಂಗನು ತನ್ನ ಸರ್ವನಾಶಮಾಡಿಬಿಟ್ಟಾನು ಎಂಬ ಹೆದರಿಕೆಯೇ.'

ಹೀಗೆಂದು ಯೂರೋಪದ ಸಂಚಾರವನ್ನು ಮುಗಿಸಿ ಬಂದ ಕೆನಡದ ಪತ್ರಕರ್ತ ಮರ್ನನ ಮೇಕೆಂಜಿಯವರು ಪ್ರಪಂಚದ ಇಂದಿನ ಸ್ಥಿತಿಯ ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಜರ್ಮನಿಯಲ್ಲಿ ಒಬ್ಬರೊಬ್ಬರ ಭಯವು ಎಷ್ಟು ಹೆಚ್ಚಾಗಿದೆಯೋ ರಶ್ಯದಲ್ಲಿ ಅದು ಕಡಿಮೆಯಾಗಿರುವದಿಲ್ಲ ಎಂದು ಮೆಕೆಂಜಿಯವರು ಹೇಳುತ್ತಾರೆ. ಒಮ್ಮೆಗೆ ರಶ್ಯದ ಸರ್ವಾಧಿಕಾರಿ ಸ್ಟಾಲೀನನ ದೇಹ ಪರೀಕ್ಷೆ ಮಾಡಬೇಕಾದ ಅಗತ್ಯ ಬಿದ್ದಿತು. ವಿಯನ್ನಾದಿಂದ ಮಾತ್ರ ೧೦ ತಿಂಗಳ ಒಬ್ಬ ಸುಪ್ರಸಿದ್ಧ ತಜ್ಞನು ಮಾಸ್ಕೋ ನಗರಕ್ಕೆ ಕರೆಸಲ್ಪಟ್ಟನು. ಆ ಡಾಕ್ಟರನ ಎದುರಿಗೆ 18 ಮಂದಿ ರಶ್ಯನರು ನಿಂತಿದ್ದರು. ಅವರು ಪ್ರತಿಯೊಬ್ಬರು ಪ್ರತಿಯೊಂದು ಸಂಗತಿಯಲ್ಲಿ ಪ್ರತಿಯೊಬ್ಬನನ್ನು ಹೋಲುತಿದ್ದರು. ಎಲ್ಲರ ಉಡಿಗೆ ತೊಡಿಗೆ ಮಾತುಗಾರಿಕೆ ಏಕಪ್ರಕಾರವಾಗಿದ್ದಿತು. ಡಾಕ್ಟರನು ಅವರನ್ನು ಪರೀಕ್ಷಿಸಿ ಯಾರಾರಲ್ಲಿ ಯಾವ್ಯಾವ ಶಾರೀರಿಕ ಕುಂದುಕೊರತೆಗಳಿರುವವೆಂದು ಹೇಳಬೇಕಾಗಿದ್ದಿತು. ಆ ಹದಿನಾರು ಮಂದಿಯಲ್ಲಿ ಒಬ್ಬನು ಸ್ಟಾಲೀನನಾಗಿದ್ದ. ಪರೀಕ್ಷಿಸುವಾಗ ಒಬ್ಬನ ತನ್ನ ಕೋಟನ್ನು ತೆಗೆದು ಕೆಳಗಿಡಬೇಕಾಯಿತು. ಆಗ ಅದರೊಳಗಿಂದ ಏನೋ ಒಂದು ನೆಲಕ್ಕೆ ಬಿದ್ದ ಶಬ್ದವಾಯಿತು. ನೋಡಿದರೆ ರಿವಾಲ್ವರು. ಯಾರನ್ನು ಅನಾವಶ್ಯಕವಾಗಿ ಪ್ರಶ್ನಿಸಬಾರದೆಂದು ಡಾಕ್ಟರನಿಗೆ ಕಟ್ಟಾಜ್ಞೆಯಾಗಿದ್ದಿತು. ಅವರ ಪರೀಕ್ಷೆ ಮಾಡಿ ತನ್ನ ಅಭಿಪ್ರಾಯವನ್ನು ಕೊಡಬೇಕಾದರೆ ತನಗೆ ಸಾಕೋಸಾಕಾಯಿತೆಂದು ಆ ಡಾಕ್ಟರನು ಹೇಳಿದನಾಗಿ ಮೇಕೆಂಜಿಯವರು ತಮ್ಮ ಅನುಭವವನ್ನು ಪ್ರಕಟಮಾಡಿದ್ದಾರೆ. ಸ್ಟಾಲೀನನನ್ನು ಯಾರು ಗುರುತಿಸಬಾರದೆಂದೇ ಈ ವ್ಯವಸ್ಥೆ ಮಾಡಿದ್ದರು. ಗುರುತಿಸಿದರೆ ಮೋಸವಾದೀತೆಂಬ ಭಯವು ಸ್ಟಾಲೀನನಿಗೆ ಅಷ್ಟು ಇದ್ದಿತು!

ಯೂರೋಪಿನಲ್ಲಿ ಮಾತ್ರ ಈ ಭಯವು ಇರುವುದೆಂದಲ್ಲ. ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಈ ಭಯವು ಇರುವದೆಂದಲ್ಲ. ಸರ್ವತ್ರ ಸರ್ವಕ್ಷೇತ್ರಗಳಲ್ಲಿ ಈಗ ಭಯವು ಕಾಣಿಸಿಕೊಂಡಿದೆ. ವಿಚಾರಿಸಿ ನೋಡಿ. ಕೈ ಹಿಡಿದ ಕಾರ್ಯವು ಸಫಲವಾಗದಿರಲಿಕ್ಕೆ ಪರಸ್ಪರ ಭಯವೇ ಒಂದು ಕಾರಣವಾಗಿದೆ. ಭಯವನ್ನು ದೂರಮಾಡದಿದ್ದರೆ ಪ್ರಪಂಚದ ಪತನವಾಗುವ ಸಮಯವು ಪ್ರಾಯಶ ಇನ್ನು ಬಹುದೂರದಲ್ಲಿರುವದಿಲ್ಲ.

ನೂರು ವರ್ಷ ಬದುಕಬೇಕೆ?

ಯೋಗಾಭ್ಯಾಸವನ್ನು ಮಾಡಿರಿ

ಒಂದು ರೇಡಿಯೋ ಭಾಷಣ

ಪ್ರತಿನಿತ್ಯವೂ ಯೋಗಾಭ್ಯಾಸವನ್ನು ಮಾಡಿ, ಒಂದು ನೂರು ವರ್ಷ ಪ್ರಾಯವಾದರೂ, ಈಗಲೂ ಅತ್ಯಂತ ಆರೋಗ್ಯವಂತನಾಗಿರುವ ಲಂಡನಿನ ವಿಚಿತ ವ್ಯಕ್ತಿಯಾದ ಚಾರ್ಲ್ಸ ಅರ್ನ್ಸಲ್ಡನು ತನ್ನ ಜೀವನದ ಕುರಿತು ಒಂದು ರೇಡಿಯೋ ಭಾಷಣವನ್ನಿತ್ತನು.

ಆರ್ನ್ಸಲ್ಡನ ಜನಿಸಿದುದು ೧೮೩೮ರಲ್ಲಿ. ವಿಕ್ಟೋರಿಯಾ ರಾಣಿಯ ಅಳ್ವಿಕೆಯ ನೆನಪು ಆತನಿಗಿರುತ್ತದೆ. ಡಿಕ್ಕನ್ಸ್ ಕವಿಗಳೊಂದಿಗೆ ಆತನು [illegible] ಮೂರು ಬಾರಿ ಆತನಿಗೆ [illegible] ಸಂಭವ [illegible]

[illegible] ಆತನ ವೈರಿಗಳ [illegible] ಸವರಿ [illegible] ಗಾಢವಾಗಿ ಬಂದ ಗೂಟಕ್ಕೆ [illegible]

ಬೆಳಗಿನ ಏಳುವುದ, ಬಂದ [illegible] ನಂತರ ವ್ಯಾಯಾಮ [illegible] ಒಂದೇ ಬಂದಾದ ಭೋಜನ [illegible] ಕ್ರಮ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೋಕಿಲರ್ (ರಿಜಿಸ್ಟರ್ಡ)
ವ್ಯಾಧಿಗೆ ಸಿದ್ಧೌಷಧ
ORIGINAL KILLER
ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೂ ದೂ ಫಲಕಾರಿಯಾಗದೇ ಇಂಜೆಕ್ಷನ್ ವ ಅಂತಹ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದ ಅನುಭವಿ [illegible] ಗೊನೋಕಿಲ್ಲರ್ ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ [illegible] ಪ್ರಮೇಹ ಎಷ್ಟೇ [illegible] ಯಾವದೇ ಸ್ಥಿತಿಯಲ್ಲಿರಲಿ, ನೋವು ಮೂತ್ರದಲ್ಲಿ ಉರಿ ಮತ್ತು ಕೀವು [illegible] ಮೂತ್ರ [illegible] ಸ್ರಾವ ದಿಳುವು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.
ಬೆಲೆ 50 ಮಾತ್ರೆಗಳ ಬಾಟ್ಲಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು ಬೇರೆ
ನಕಲಿ ಮದ್ದುಗಳಿಗೆ ಬಲಿಯಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ
ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್ ಮುಂಬಯಿ 4
Sole Manufacturer Dr. D. N JASANI, Vithalbhai Patel Road, BOMBAY

ಸಿಗರೇಟಿನ ಸ್ವರ್ಣೋತ್ಸವ

"ಐವತ್ತು ವರ್ಷಗಳ ಮೊದಲು ಸಿಗರೇಟು ಸೇದುವುದು ಅಸಭ್ಯವಾಗಿದ್ದಿತು. ಪ್ಯಾಪು-ಚುಟ್ಟಗಳನ್ನು ಸೇದುವದು ಆ ಕಾಲದ ಸಭ್ಯತೆಯ ಲಕ್ಷಣವಾಗಿತ್ತು. ಆದರೆ ಸಮಯವು ಬದಲಾದಂತೆ ಸಭ್ಯತೆಯ ಲಕ್ಷಣಗಳೂ ಬದಲಾಗಿವೆ" ಎಂದು 'ಹಿಂದೂ' ಹೇಳುತ್ತದೆ.

ನಿಜ. ಈಗ ಸಿಗರೇಟು ಸೇದದವನನ್ನು ನರು ಸಭ್ಯನೆಂದು ತಿಳಿಯುತ್ತಾರೆ. ಇಂಗ್ಲಿಷರಷ್ಟೇ ವರ್ಷಕ್ಕೆ 50,000,000,000 ಸಿಗರೇಟುಗಳನ್ನು ಸೇದುತ್ತಾರೆ. ಇತರ ಜನಾಂಗದವರು ಸೇದುವ ಸಿಗರೇಟುಗಳ ಸಂಖ್ಯೆ ಕಡಿಮೆಯಾಗಿರುವುದಿಲ್ಲ. ಈ ಸಂಬಂಧ 'ನೋಯೆಲ್ ಲೌಂಡೆಸ್' ಎಂಬವರು ಬರೆದ ಲೇಖನವು ಸ್ವಾರಸ್ಯವಾಗಿದೆ.

ಒಂದಾನೊಂದು ಯುದ್ಧಪ್ರಸಂಗದಲ್ಲಿ ಇಂಗ್ಲಿಷರಿಗೆ ಸಿಗರೇಟು ಸೇದುವುಚಟವು ಹತ್ತಿತ್ತು. ಮತ್ತೆ ಅದು ಮೆಲ್ಲಮೆಲ್ಲನೆ ಇತರರಿಗೆ ಬಂದಿತು. ಹೊಗೆಸೊಪ್ಪನ್ನು ಉಪಯೋಗಿಸಲಾರಂಭಿಸಿ ಮೂರು ಶತಮಾನಗಳು ಕಳೆದಿವೆ. ಪರಂತು ಯೂರೋಪಿಯನರು ಸಿಗರೇಟು ಸೇದಲಾರಂಭಿಸಿ 50 60 ವರ್ಷಗಳು ಕೂಡ ಆಗಿರುವುದಿಲ್ಲ.

ಕಳೆದ ಶತಮಾನದ ಮಧ್ಯಕಾಲವು ಕಳೆದು ಹೋಗುವ ತನಕ ಸಿಗರೇಟು ಸೇದುವುದನ್ನು ಯೂರೋಪಿಯನರು ಅಸಭ್ಯವೆಂದ ತಿಳಿಯುತಿದ್ದರು. ಆಗ್ಯೆ ಅವರು ಪ್ಯಾಪು-ಚುಟ್ಟಗಳನ್ನು ಸೇದುತಿದ್ದರು. ಹೊಗೆಸೊಪ್ಪಿನ ಪ್ರಚಾರವಾಗುವ ಮೊದಲು ಕೆಲವೊಂದು ಜಾತಿಯ ಒಣಗಿದ ಎಲೆಗಳನ್ನು ಸುರುಳಿ ಸುತ್ತಿ ಸೇದುವುದು ಕ್ರಮವಾಗಿದ್ದಿತು. ಈ ಕ್ರಮವು ಬಹು ಪುರಾತನ ಕಾಲದಿಂದ ಯೂರೋಪಿನಲ್ಲಿ ನಡೆದು ಬಂದಿದ್ದಿತು. ಕಳೆದ ಶತಮಾನದ ಅಂತ್ಯಭಾಗದಲ್ಲಿ ಇಂಗ್ಲೀಷರ ಒಂದು ಸೇನೆಯು ಸುಡಾನನಲ್ಲಿ ಅಧಿಕಾರಮಾಡುವುದಕ್ಕೋಸ್ಕರ ಈಜಿಪ್ಟಿಗೆ ಬಂದಿತು. ಈಜಿಪ್ಟಿನ ಜನರು ಆಗ ಸಿಗರೇಟು ಸೇದುತಿದ್ದರು. ಒಂದು ಕಡೆಯಿಂದ ಒಂದು ಕಡೆಗೆ ಹೋಗುವಾಗ ಅಲ್ಲಲ್ಲಿನ ಜನರ ಕೆಲಕೆಲವು ಸಂಪ್ರದಾಯ ವಿಶೇಷಗಳನ್ನು ಕಲಿತುಹೋಗುವುದ ಇಂಗ್ಲೀಷರ ಒಂದು ಸ್ವಭಾವ. ಅದರಂತೆ ಅವರು ಈಜಿಪ್ಟಿನ ಜನರಿಂದ ಸಿಗರೇಟು ಸೇದುವ ಕ್ರಮವನ್ನೂ ಕಲಿತುಕೊಂಡರು.

1888ರಲ್ಲಿ ಈಜಿಪ್ಟಿಗೆ ಹೋದ ಇಂಗ್ಲೀಷರ ದಂಡು ಸ್ವದೇಶಕ್ಕೆ ಮರಳಿತು. ಅದು ಬರುವಾಗ ತನ್ನೊಂದಿಗೆ ಸಿಗರೇಟನ್ನು ತಂದಿತು. ಮೆಲ್ಲಮೆಲ್ಲಗೆ ಜನರಿಗೆ ಸಿಗರೇಟಿನ ರುಚಿ ಹತ್ತಿ ಅದರ ಪ್ರಚಾರವಾಗಲಾರಂಭಿಸಿತು. ಸಿಗರೇಟಿನ ಪ್ರಚಾರವು ಹೆಚ್ಚಿದಂತೆ ಹೊಗೆಸೊಪ್ಪಿನ ಮೇಲಿನ ಸುಂಕದ ಹಣವೂ ಹೆಚ್ಚಿ ಸರಕಾರಕ್ಕೆ ಲಾಭವಾಗತೊಡಗಿತು. ಹೊಸ ಹೊಸ ನಮೂನೆಯ ತರಹವಾರು ಸಿಗರೇಟುಗಳು ಬಳಕೆಗೆ ಬರಲಾರಂಭವಾದುವು.

ದಿಗ್ವಿಜಯಕ್ಕೆ ಆರಂಭ.

ಸಿಗರೇಟಿನ ಪ್ರಚಾರವು ಹೆಚ್ಚೆಚ್ಚಾಗುತ್ತ ಹೋದ ಹಾಗೆ ಪ್ಯಾಪು ಚುಟ್ಟಗಳು ತಮ್ಮ ಕ್ಷೇತ್ರದಿಂದ ಹಿಮ್ಮೆಟ್ಟಿದುವು. ಕಳೆದ ಮಹಾಯುದ್ಧವು ಮಿಲಿಯಾಂತರ ಮಂದಿ ಹೆಂಗಸರಿಗೆ ಸಿಗರೇಟಿನ ಅಭ್ಯಾಸ ಮಾಡಿಕೊಟ್ಟಿತು. ಅವರಿಗೆ ಪ್ಯಾಪು ಚುಟ್ಟಗಳು ಶೋಭಿಸುತ್ತಿರಲಿಲ್ಲ. ಲಾವಣ್ಯವತಿಯರ ಮುಖಕಮಲದಲ್ಲಿ ಸಿಗರೇಟು ಅಲಂಕಾರಪ್ರಾಯವಾಗಿ ಶೋಭಿಸತೊಡಗಿತು.

ಈಗ ಪ್ರತಿವರ್ಷ 150,000,000 ರಾತಲು ಹೊಗೆಸೊಪ್ಪು ಸಿಗರೇಟು ತಯಾರಿಸಲಿಕ್ಕೆ ಉಪಯೋಗಿಸಲ್ಪಡುತ್ತದೆ. ಬ್ರಿಟನಿನಲ್ಲಿ ಉಪಯೋಗವಾಗುವ ಹೊಗೆಸೊಪ್ಪಿನ ಮುಕ್ಕಾಲಂಶವು ಸಿಗರೇಟುಗಳಿಗಾಗಿಯೇ ಖರ್ಚಾಗುತ್ತದೆ. ಇಂಗ್ಲೀಷರು ವರ್ಷಾವಧಿ ಉಪಯೋಗಿಸುವ 50,000,000,000 ಸಿಗರೇಟುಗಳೆಂದರೆ ಭೂಮಿಯಿಂದ ಚಂದ್ರಮಂಡಲಕ್ಕೆ 10 ಸಿಗರೇಟು ಅಗಲದ ಸಿಗರೇಟಿನ ದಾರಿಯಾಗುವುದು.

ಅಮೇರಿಕವಾದರೋ ಈಗ ಇಂಗ್ಲೆಂಡಿಗಿಂತ ಮುಂದಾಗಿರುವದು. 1928ರ ತನಕ ಅಮೇರಿಕನರು 97,000,000,000 ಸಿಗರೇಟುಗಳನ್ನು ಪ್ರತಿವರ್ಷ ಸೇದುತಿದ್ದರು. ಈಗ ಅದು ಇನ್ನೂ ಏರುತ್ತ ಇದೆ. ಯೂರೋಪಿನಲ್ಲಿ ಕೂಡ ಸಿಗರೇಟಿನ ಉಪಯೋಗವು ಬಹಳ ಬೆಳೆದಿದೆ. ಹತ್ತು ಹದಿನೈದು ವರ್ಷಗಳ ಮೊದಲು ಜರ್ಮನಿಯಲ್ಲಿ ಸಿಗರೇಟು ಸೇದುವವರು ಒಬ್ಬರಾದರೂ ಇದ್ದಿರಲಿಲ್ಲ. ಎಲ್ಲರೂ ಪ್ಯಾಪು ಚುಟ್ಟಗಳನ್ನು ಸೇದುತಿದ್ದರು. ಈಗ ಅದೇ ಜರ್ಮನಿಯಲ್ಲಿ ವರ್ಷಾವಧಿ 40,000,000 000 ಸಿಗರೇಟುಗಳ ಖರ್ಚಾಗುತ್ತದೆ. ಅಂದರೆ ಪ್ರತಿಯೊಬ್ಬನು ಒಂದು ವರ್ಷದಲ್ಲಿ ಸರಾಸರಿ 600 ಸಿಗರೇಟುಗಳನ್ನು ಸೇದಿದ ಹಾಗಾಯಿತು. ಈ ಪ್ರಮಾಣವು ಮಹಾಯುದ್ಧದ ಮೊದಲಿಗಿಂತ ಮೂರು ಪಾಲಷ್ಟು ಹೆಚ್ಚಾಗಿದೆ. ಏಳು ವರ್ಷದ ಮೊದಲಿಗಿಂತ ಸೇಕಡಾ 33ರಷ್ಟು ಹೆಚ್ಚಾಗಿದೆ.

ಸಿಗರೇಟು ಸೇದುವುದನ್ನು ಅಭ್ಯಾಸ, ಸಹವಾಸದೋಷ, ಸಭ್ಯತೆಯ ಲಕ್ಷಣ ಎಂದು ಯಾವ ಹೆಸರಿನಿಂದ ಕರೆದರೂ ಸರಿಯೇ, ಅದು ಈಗ ಜೀವನದ ಒಂದು ಆವಶ್ಯಕ ಸಾಮಗ್ರಿಯಾಗಿದೆ.

ಯಾರು ಸಹಾಯಮಾಡಿದರು?

ಮನುಷ್ಯನ ಅನುಕರಣ ಬುದ್ಧಿಯು ಸಿಗರೇಟಿನ ಪ್ರಚಾರಕ್ಕೆ ಬಹಳ ಸಹಾಯ ಮಾಡಿತು. ಅವನು ಸೇದುತ್ತಾನಾದರೆ ನಾನ್ಯಾಕೆ ಕೂಡದು? ಎಂಬುದರಿಂದ ಒಬ್ಬನನ್ನು ಕಂಡು ಎಲ್ಲರೂ ಸೇದಲಾರಂಭಿಸಿದರು. ಆದರೆ ಬೇರೆ ಕಾರಣಗಳಿಂದ ಸಿಗರೇಟು ಸೇದಲಾರಂಭಿಸಿದವರೂ ಇದ್ದಾರೆ. ಮನುಷ್ಯನ ವಿರೋಧ ಬುದ್ಧಿಯೂ ಸಿಗರೇಟು ಪ್ರಚಾರಕ್ಕೆ ಕಾರಣವಾಗಿದೆ. 'ಸಿಗರೇಟು ಸೇದಕೂಡದು' ಎಂದ ನಿರ್ಬಂಧಿಸಿದಾಗ 'ಅದನ್ನು ಸೇದಿಯೇ ಬಿಡಬೇಕು' ಎಂಬ ಹಠವು ಪ್ರತಿಯೊಬ್ಬನಿಗೆ ಬರುತ್ತದೆ. ಈ ಹಠಬುದ್ಧಿಯಿಂದಾಗಿ ಸೇಕಡಾ 13ರಷ್ಟು ಸಿಗರೇಟಿನ ಪ್ರಚಾರವಾಗಿದೆ.

ಮೊನ್ನೆ ಒಂದು ತನಿಖೆಯಾಯಿತು. ಸಿಗರೇಟು ಸೇದುವವರ ಮತ್ತು ಸೇದದವರ ಪರಸ್ಪರ ಮನೋಭಾವವು ಹೇಗಿರುತ್ತದೆ ಎಂಬುದರ ಒಂದು ಚಿಕ್ಕ ಪರೀಕ್ಷೆಯು ನಿಲಾಯಿತಿಯಲ್ಲಿ ನಡೆಯಿತು. ಸೇಕಡಾ 14ರಷ್ಟು ಸೇದುವವರು ಸೇದದವರನ್ನು ಕಂಡು ಕನಿಕರಪಡುತ್ತಾರೆ. 21%ರಷ್ಟು ಆಶ್ಚರ್ಯಪಡುತ್ತಾರೆ. 17% ದ್ವೇಷಿಸುತ್ತಾರೆ. ಆದರೆ ಸೇಕಡಾ 28ರಷ್ಟು ಸೇದದವರು ಸೇದುವವರನ್ನು ಕಂಡು ಕನಿಕರಪಡುವರು. 13%ರಷ್ಟು ಆಶ್ಚರ್ಯಪಡುವರು, 11% ದ್ವೇಷಿಸುತ್ತಾರೆ. ಇದರಿಂದ ಸೇದುವವರಿಗಿಂತ ಸೇದದವರಲ್ಲಿ ಸದ್ಭಾವವು ಹೆಚ್ಚಾಗಿರುತ್ತದೆಂದು ತಿಳಿಯುತ್ತದೆ.

ಇಂಥ ಇನ್ನೂ ಕೆಲವು ಮನೋರಂಜಕವಾದ ಸಂಗತಿಗಳು ಈ ಪರೀಕ್ಷೆಯಿಂದ ತಿಳಿದು ಬಂದಿವೆ. ಸಿಗರೇಟು ಸೇದುವವರು ಒಬ್ಬಂಟಿಗರಾಗಿದ್ದಾಗ ಸೇದುವದು ಕಡಿಮೆ. ಇತರರ ಜತೆಯಲ್ಲಿ ಸೇದುವದು ಹೆಚ್ಚು. ಆದರೆ ಪ್ಯಾಪು-ಚುಟ್ಟಗಳನ್ನು ಸೇದುವವರ ಇತರರ ಜತೆಯಲ್ಲಿ ಸೇದುವದು ಕಡಿಮೆ, ಒಬ್ಬಂಟಿಗರಾಗಿದ್ದಾಗ ಸೇದುವದು ಹೆಚ್ಚು.

ಸಿಗರೇಟಿನ ಅಭ್ಯಾಸವು ಈಗ ಶ್ರೀಮಂತರ ಮೊದಲುಗೊಂಡ ಬಡವರ ತನಕ, ಬಲ್ಲಿದರ ಮೊದಲುಗೊಂಡ ಅಜ್ಞಾನಿಗಳ ತನಕ ಆಗುತ್ತಿದೆ. ದೃಢ ಆರೋಗ್ಯವಿದ್ದವರೂ ಬಹಳ ಜನರು ಸಿಗರೇಟು ಸೇದುವ ಪ್ರವೃತ್ತಿಯವರಾಗಿರುವರು.

ಇಂಥ ವಿಚಿತ್ರ ಸನ್ನಿವೇಶದಲ್ಲಿ ನಾವು ಎಚ್ಚರಿಕೆಯಿಂದ ಒಗೆ ಮಾರ್ಗದರ್ಶಕರಾಗಬೇಕು. ಏಕೆ? ಎಂದರೆ ಸಿಗರೇಟು ಸೇದದವರು ಅಲ್ಲಿ ಹುಟ್ಟಿರುವರೆ? ಹಾಗಾದರೆ ಮುಂದಿನ ಕಾರ್ಯಕ್ಕೆ ಈಗಿನಿಂದಲೇ ಪ್ರವೃತ್ತರಾಗಿ.

ವಿದುರಾಶ್ವತ್ಥದಲ್ಲಾದ ಅನಾಹುತಕ್ಕೆ ಮಹಾತ್ಮಾ ಗಾಂಧಿಯವರೇ ಕಾರಣರು!

ಮೈಸೂರು ಕೌನ್ಸಿಲಿನಲ್ಲಿ ಒಬ್ಬ ಸದಸ್ಯರ ಸೂಚನೆ

ಮೈಸೂರು ಕೌನ್ಸಿಲಿನಲ್ಲಿ ಬಜೇಟು ಚರ್ಚೆ ನಡೆಯುತ್ತಿದೆ. ಆಗ ಶ್ರೀ| ಪುಟ್ಟಸ್ವಾಮಿಯವರು ಅದೇ ಸಂದರ್ಭವೆಂದು, ರಾಜಕೀಯ ಪರಿಸ್ಥಿಯನ್ನು ಕುರಿತಾಗಿ ಟೀಕಿಸುವರಾದರು. ಮೈಸೂರು ಕಾಂಗ್ರೆಸು ಬ್ರಿಟಿಷ ಇಂಡಿಯದಲ್ಲಾಗುವುದೆಲ್ಲವನ್ನೂ ಅನುಕರಣ ಮಾಡುತ್ತಲಿದೆ, ಸ್ಥಳ ಮಹಾತ್ಮೆಯನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ರಾಜ್ಯಭಾರದಲ್ಲಿ ಜನರನ್ನು ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳಬೇಕೆಂಬ ಆಸೆಯನ್ನು ತಿಳಿದುಕೊಳ್ಳಬರುವುದು ಸಜ. ಈ ರಾಜ್ಯದಲ್ಲಿ ನಮಗೆ ಮಹಾರಾಜರಿದ್ದಾರೆ, ಆಡಳಿತರಲ್ಲಿ ಜನತೆಗೆ ಹೆಚ್ಚಿನ ಜವಾಬುದಾರಿಯನ್ನು ಕೊಡುವರಿ ಅವರು ಆತುರಗೊಂಡಿರುವರು. ಹೀಗಿರುವಾಗ, ಹೊರಗಣವರನ್ನು ಇಲ್ಲಿಗೆ ತಂದು ನಾನಾಚಳವಳಿಗಳನ್ನು ಎಬ್ಬಿಸುವ ಈ ಹವ್ಯಾಸ ವೇಕೋ ತಿಳಿಯದಾಗಿದೆ. ಇತ್ತೀಚೆಗೆ, ಈ ರಾಜ್ಯದ ಹೊರಗಣವರು ಬಂದು ಬಲತ್ಕಾರ ನಡಿಸಿದಂತಾದಾಗ್ಯ, ಸರಕಾರವೇತಕ್ಕೋ ಕಾಂಗ್ರೆಸಿನೊಡನೆ ರಾಜೀ ಸಂಬಂಧ ಬೆಳಸಿತೋ ನನಗೆ ಬಹಳ ಅತೃಪ್ತಿಕರವೆನಿಸಿಯದೆ. ಶ್ರೀ ಮನ್ಮಹಾರಾಜರ ಗೌರವಕ್ಕೆ ಇದೊಂದು ಕುಂದು ತರುವ ವಿಷಯ. ರಾಜ್ಯದ ಧ್ವಜವೊಂದಿರುವಾಗ, ಇನ್ನೊಂದು ಧ್ವಜವು ಅದರ ಜತೆಯಲ್ಲಿ ಹೊರಾಡುತ್ತಿರುವುದೆಂದರೇನು?

ಶ್ರೀ| ನಾಗಲಿಂಗಪ್ಪನವರು — ಈ ವಿಷಯವನ್ನು ಇದಿರಲ್ಲಿಟ್ಟುಕೊಂಡು, ನಿಮ್ಮ ಸ್ಥಾನವನ್ನು ತ್ಯಜಿಸಿ, ಪುನಃ ಚುನಾವಣೆಗೆ ನಿಲ್ಲಬಹುದಲ್ಲ ಸ್ವಾಮಿ!

ಶ್ರೀ ಪುಟ್ಟಸ್ವಾಮಿಯವರು —ಚುನಾವಣೆಯೇ ಸರ್ವಸ್ವವಲ್ಲಯ್ಯ. ನಮ್ಮ ದೇಶದೊಳಗಣ ವಿಚಾರಗಳೆಲ್ಲಿಲ್ಲ ಹೊರಗಣವರು ಕೈಯಿಕ್ಕುವುದು ನನಗೆ ಆಕ್ಷೇಪಕರ. ಮಹಾತ್ಮಾಗಾಂಧಿಯೊಬ್ಬ ದೊಡ್ಡ ಪುರುಷನಹುದು, ಸಂದೇಹವಿಲ್ಲ. ಆದರೆ, ನಮ್ಮ ವಿಚಾರಗಳಲ್ಲಿ ಆತನೂ ಕೈಯಿಕ್ಕುವುದು ಅಗತ್ಯವೇ? ನಮ್ಮ ರಾಜ್ಯದಲ್ಲಿ ರಾಷ್ಟ್ರಧ್ವಜಕ್ಕೆ ಅವರು ಪ್ರಥಮ ಸ್ಥಾನ ಕೊಡಲು ಚಳವಳಿಸುವುದೇಕೆ? ನಮಗೆ ನಮ್ಮದೇ ಧ್ವಜವೊಂದಿಲ್ಲವೆ? ವಿದುರಾಶ್ವತ್ಥದಲ್ಲಾದ ಅನಾಹುತಗಳಿಗೆ ಮಹಾತ್ಮಾಗಾಂಧಿಯೇ ಕಾರಣನೆನ್ನುತ್ತೇನೆ.

ಹಲವರು — ಓ,! ಹೋ!!

ಶ್ರೀ ಪುಟ್ಟಸ್ವಾಮಿಯವರು — ನಾನು ಹಾಗೆಯೇ ಎನ್ನುವೆನು. ನಿಮ್ಮ ಪಟ್ಟಾಭಿ ಸೀತಾರಾಮಯ್ಯ, ಜವಾಹರಲಾಲನವರು ನಮ್ಮ ರಾಜ್ಯವು ಸಿಕ್ಕರೆ ... ಒಂದು ಸಾರಿಯಾದರೂ ನಾವು ಕೊಡುವ ಕಷ್ಟವನ್ನು ಕುರಿತು ಆಕ್ಷೇಪಿಸಿ, ತಮ್ಮ ಕಿರು ಬೆರಳನ್ನಾದರೂ ಎತ್ತಿದ್ದುಂಟೆ?

ಇನ್ನು ಗಾಂಧೀಜಿಯವರನ್ನೇ ಏಕೆ? ದೂರಬೇಕು ಬ್ರಹ್ಮನನ್ನು!

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು. ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು. ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಆದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಲೋಧ್ರದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ಗೇರುಬೀಜದ ಬೇಸಾಯವನ್ನು ವೃದ್ಧಿಪಡಿಸುವ ಅವಶ್ಯಕತೆಯ ಕುರಿತು ಟಿಪ್ಪಣಿ.

ಗೇರುಬೀಜದ ಉತ್ಪತ್ತಿಯಿಂದುಂಟಾಗುವ ಲಾಭವನ್ನು ಈ ಸಂಸ್ಥಾನದ ಜನರು ಆರ್ಥಿಕ ದೃಷ್ಟಿಯಿಂದ ವಿಚಾರಿಸಲಿಲ್ಲವೆಂದು ಊಹಿಸಿ ಸರಕಾರದವರು ಈ ಕೆಳಗಿನ ವಿಷಯಗಳನ್ನು ಸರ್ವರ ಅನುಭವಕ್ಕಾಗಿ ಪ್ರಕಟಿಸಿರುವರು.

ರಫ್ತಾದ ಮಾಲಿನ ಮಹತ್ವ

1935–36ನೇ ವರುಷದಲ್ಲಿ ಮದರಾಸು ಸಂಸ್ಥಾನದಿಂದ ಎರಡು ಕೋಟಿ ಎಂಟು ಲಕ್ಷ ರೂಪಾಯಿಗೆ ಮಿಕ್ಕಿದ ಮೌಲ್ಯ ಬಾಳುವಷ್ಟು ಸುಲಿದ ಗೇರುಬೀಜವು ರಫ್ತು ಆಗಿತ್ತು. ಅದೇ ವರುಷದಲ್ಲಿ ಬೊಂಬಾಯಿ ಬಂದರುಗಳಿಂದಲೂ 22 ಲಕ್ಷ ರೂಪಾಯಿ ಕ್ರಯಬಾಳುವಷ್ಟು ಗೇರುಬೀಜವು ರಫ್ತು ಮಾಡಿತ್ತು. ಹಿಂದೂಸ್ಥಾನದ ಗೇರುಬೀಜ ಸಾಹುಕಾರರ ಸಂಘ (The All India Cashewnut Merchant's Association)ದವರು ಸಂಗ್ರಹಿಸಿದ ಈ ಕೆಳಗಣ ಅಂಕೆಸಂಖ್ಯೆಯಿಂದೊಡಗೂಡಿದ ಅನುಭವದ ಪ್ರಕಾರ ಯುನೈಟೆಡ್ ಸ್ಟೇಟ್ಸ್ ಓಫ್ ಅಮೇರಿಕಾ ಮತ್ತು ಯುರೋಪ ದೇಶಗಳಲ್ಲಿ ಗೇರುಬೀಜದ ಖರ್ಚು ಏರುತ್ತಾ ಇರುವ ಕಾರಣ ಆ ದೇಶಗಳಲ್ಲಿ ಇದರ ವ್ಯಾಪಾರವನ್ನು ವೃದ್ಧಿಪಡಿಸುವರೆ ತುಂಬಾ ಆಸ್ಪದವಿದೆ ಎಂತ ತಿಳಿಯಬೇಕಾಗಿದೆ.

1ನೇ ಪಟ್ಟಿ.

ರಫ್ತಾದ ಸುಲಿದ ಗೇರುಬೀಜದ ತೂಕ (ಮಿಲಿಯ ಪಾತಲುಗಳಂತೆ)

ವರುಷ	ಯುನೈಟೆಡ್ ಸ್ಟೇಟ್ಸ್ ಓಫ್ ಅಮೇರಿಕಾಕ್ಕೆ	ಯುರೋಪ ಮತ್ತು ಇತರ ದೇಶಗಳಿಗಲ್ಲದೆ ಹಿಂದೂಸ್ಥಾನದಲ್ಲಿ ಉಪಯೋಗಿಸಿದುದು.		ಜುಮಲಾ
	ಸ್ವೀಮರಿಗೆ ಸಾಗಿಸಲು ಸಾಧ್ಯವಾದುದು	ಸ್ಟೀಮರಿಗೆ ಸಾಗಿಸಲು ಸಾಧ್ಯವಾದುದು.	ಸ್ಟೀಮರಿಗೆ ಸಾಗಿಸಲು ಅಸಾಧ್ಯವಾದುದು	
1925	1.5	1.0	0.25	2.75
1926	2.5	1.25	0.37	4.12
1927	4.0	1.50	0.55	6.05
1928	5.0	1.25	0.67	6.92
1929	7.5	2.00	0.95	10.45
1930	8.5	2.00	1.05	11.55
1931	9.0	2.50	1.15	12.65
1932	9.7	2.80	1.25	13.95
1933	11.3	2.70	1.40	15.40
1934	15.0	3.50	1.85	20.35
1935	23.0	5.50	2.85	31.35
1936	30.0	5.00	3.50	35.50

ಸುಲಿಯದ ಗೇರುಬೀಜದ ಆಮದು

ಹಿಂದೂಸ್ಥಾನದಲ್ಲಿ ಗೇರುಬೀಜದ ವ್ಯವಸಾಯವು ತುಂಬಾ ಇರುತ್ತಾ ಇದನ್ನು ಸುಲಿದು ವ್ಯಾಪಾರಕ್ಕೆ ತಯಾರಿಸುವ ಇಲ್ಲಿಯ ಫೈಗಾರಿಕೆಗೆ ನಮ್ಮ ಉತ್ಪತ್ತಿಯು ಬಹಳ ಅಲ್ಪವಾಗಿದೆ. ಆದುದರಿಂದಲೇ ಪೋರ್ಚುಗೀಸ್, ಆಫ್ರಿಕಾ, ಯುನಿಯನ್ ಓಫ್ ಸೌತ್ ಆಫ್ರಿಕಾ ಮತ್ತು ಕೆನ್ಯಕೊಲೊನಿ ಮುಂತಾದ ಪರದೇಶಗಳಿಂದ ಸುಲಿಯದ ಗೇರುಬೀಜವನ್ನು ಹಿಂದೂಸ್ಥಾನಕ್ಕೆ ತರಿಸುವ ಅವಶ್ಯಕತೆಯುಂಟಾಗಿಯದೆ. ಈ ರೀತಿ ಪರದೇಶಗಳಿಂದ ವರುಷಾವಧಿ ತರಿಸುವ ಸುಲಿಯದ ಗೇರುಬೀಜದ ಒಟ್ಟು ಮೌಲ್ಯವಾದ 20 ಲಕ್ಷ ರೂಪಾಯಿಗಳ ಪೈಕಿ ಪ್ರಾಯಶಃ 15 ಲಕ್ಷ ರೂಪಾಯಿಯಷ್ಟು ಬೆಲೆಬಾಳುವ ಮಾಲನ್ನು ನಮ್ಮ ಮದರಾಸು ಸಂಸ್ಥಾನದವರೇ ಪಡಕೊಳ್ಳುತ್ತಾರೆ. ಈ ಪ್ರಕಾರ ನಾವು ಹೊರ ದೇಶಗಳಿಂದ ತರಿಸುವ ಮಾಲು ವರುಷ ಹೋಗುತ್ತ ಹೆಚ್ಚಾಗುತ್ತಾ ಬರುವುದೆಂದು ಈ ಕೆಳಗಣ ಪಟ್ಟಿಯಿಂದ ತೋರುವುದರಿಂದ ನಮ್ಮಲ್ಲಿ ಇದರ ಬೇಸಾಯವನ್ನೇ ಹೆಚ್ಚಿಸುವ ಅವಶ್ಯವಿದೆಯೆಂದು ಖಚಿತವಾಗುವುದು.

2ನೇ ಪಟ್ಟಿ

ಅನ್ಯ ದೇಶಗಳಿಂದ ತರಿಸುವ ಗೇರುಬೀಜದ ಲೆಖ್ಖ

ವರುಷ	ಮದರಾಸು ಸಂಸ್ಥಾನದಲ್ಲಿ		ಬೊಂಬಾಯಿ ಸಂಸ್ಥಾನದಲ್ಲಿ		ಜುಮಲಾ	
	ಟನ್ಸ್	ಮೌಲ್ಯ ರೂ	ಟನ್ಸ್	ಮೌಲ್ಯ ರೂ	ಟನ್ಸ್	ಮೌಲ್ಯ ರೂ
1934–35	11 925	13 33,640	ಅಂದಾಜು ದೊರೆಯಲಿಲ್ಲ			
1935–36	12,764	16 80 836	3 532	4 43,846	16 296	21,24 682
1936–37	11 035	14 48 660	6 278	8 06 058	17,313	22 54 718

ಸುಲಿದ ಗೇರುಬೀಜ—ಪೌಷ್ಟಿಕ ಆಹಾರ

ಅವಶ್ಯವೆಂದು ಕಂಡುಬಂದರೆ ನಮ್ಮ ಹಿಂದೂಸ್ಥಾನದಲ್ಲಿ ಸುಲಿದ ಗೇರುಬೀಜವನ್ನು ಹೆಚ್ಚಾಗಿ ಉಪಯೋಗಿಸುವರೆ ತುಂಬಾ ಆಸ್ಪದವಿದೆ. ಈ ಬೀಜದಲ್ಲಿ 52% ಎಣ್ಣೆ ಪದಾರ್ಥ 25% ಟೂದಿಸತ್ವ ಮತ್ತು 215 % ಪ್ರೊಟೀನ್ ಸತ್ವವೂ ಕೂಡಿರುವ ಕಾರಣ ಅದು ಒಂದು ಉತ್ಕೃಷ್ಟವಾದ ಆಹಾರ ಪದಾರ್ಥವಾಗಿರುತ್ತದೆ. ಇದರಲ್ಲಿ ಸುಲಭವಾಗಿ ಜೀರ್ಣವಾಗುವಂತಹ ಪ್ರೊಟೀನ್ ಧಾತುವು ಸೇಕಡ 96 23 ರಂತೆಯೂ ಪ್ರಕೃತಿ ಗುಣವು ನೆಲಗಡಲೆ ಬೀಜದಲ್ಲಿ ಸೇಕಡಾ 67·9 ಮಾತ್ರ ಇರುವಾಗ ಈ ಬೀಜದಲ್ಲಿ 72 5ರಂತಿರುವುದು. ಇಷ್ಟೇ ಅಲ್ಲದೆ ಇದರಲ್ಲಿ ವ್ಹಾಟಮಿನ್ ಎ ಮತ್ತು ಬಿ ಎರಡು ಕೂಡ ಇರುವುದರಿಂದ ಇದು ಉತ್ತಮವಾದ ಆಹಾರಪದಾರ್ಥವೆಂದೂ ತಿಳಿಯಬೇಕು.

ಇದರ ಬೇಸಾಯದ ಅಭಿವೃದ್ಧಿಯ ಕುರಿತು ಸೂಚನೆ

ಪ್ರಕೃತ ಗೇರುಮರದ ಬೇಸಾಯವನ್ನು ತಿರುವಾಂಕೂರು, ಕೊಚ್ಚಿ, ಮಲಬಾರು ದಕ್ಷಿಣ ಮತ್ತು ಉತ್ತರಕನ್ನಡ ರತ್ನಾಗಿರಿ ಮತ್ತು ಮದರಾಸು ಪ್ರಾಂತ್ಯದ ಪೂರ್ವ ಜಿಲ್ಲೆಗಳಲ್ಲಿ ಮಾಡುತ್ತಾರೆ. ಇದು ಮರಳಲ್ಲಿ ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯುವ ಜೀರು ತರದ ಮರವಾಗಿ ಹೆಚ್ಚಿನ ಗೊಬ್ಬರವನ್ನೂ ವ್ಯವಸಾಯ ಕ್ರಮವನ್ನೂ ಅಪೇಕ್ಷಿಸದೆ ಬೆಳೆಯುತ್ತದೆ. ಬಸುಬು ಮಣ್ಣುಗಳಲ್ಲಿಯೂ ಹರಳು ಮಿಶ್ರಿತ ಕೆಂಪು ಮಣ್ಣುಗಳಲ್ಲಿಯೂ ಇದನ್ನು ಬೆಳೆಸಬಹುದು. ನಿಸ್ಸಾರವಾಗಿದ್ದು ವರುಷಾವಧಿ ಇತರ ಯಾವುದೊಂದು ಬೇಸಾಯ ಮಾಡುವರೆ ಅಸಾಧ್ಯವೆಂದು ಖಾಲಿ ಬಿಟ್ಟಿರುವ ಪುಂಜ ಸ್ಥಳಗಳಲ್ಲಿ ಇದರ ಕೃಷಿಯನ್ನು ಯೋಗ್ಯವಾಗಿ ಮಾಡಬಹುದು. ಗೇರುಮರದ ಬೇಸಾಯಕ್ಕೆ ಮಳೆಗಾಲದ ಆದಿಯಲ್ಲಿ 1×1×1' ಹೊಂಡಗಳನ್ನು 10 ಅಡಿ ದೂರಕ್ಕೊಂದರಂತೆ ಮಾಡಿ ಸಸಿ ಬೆಳೆಸಿ ಕ್ರಮೇಣ ಅವುಗಳು ಎತ್ತರ ಬೆಳೆಯುತ್ತಾ ಅಶಕ್ತವೆಂದು ಕಂಡುಬಂದ ನಡುನಡುವಿನ ಸಸಿಗಳನ್ನು ಕಿತ್ತು ಕೊನೆಗೆ ಎಕ್ರೆ ಒಂದರ 100 ಮರಗಳಂತೆ (ಅಂದರೆ ಮರದಿಂದ ಮರಕ್ಕೆ 20 ಅಡಿ ಸ್ಥಳ ಸಿಕ್ಕುವಂತೆ ಬಿಟ್ಟು) ಉಳಿಯ ಬಿಡಬೇಕು. ಈ ಹೊಂಡಗಳಲ್ಲೇ ಬೀಜಹಾಕಿ ಮೊಳಕೆ ಬರುವ ಸಮಯ ಕ್ಕಾಗಿ ಮುಂತಾದ ಪಕ್ಷಿ ಪ್ರಾಣಿಗಳಿಂದ ತೊಂದರೆಯುಂಟಾಗುವ ಸಂಭವವಿದ್ದಲ್ಲಿ ಈ ಬೀಜಗಳನ್ನು ಒಂದೆಡೆಯಲ್ಲಿ ಬಿತ್ತಿಹಾಕಿ ನಂತರ ಒಂದು ತಿಂಗಳ ಪ್ರಾಯದ ಸಸಿಗಳನ್ನು ಕಿತ್ತು ನೆಡಬಹುದು. ಅಥವಾ ಒಂದು ಹೊಂಡದಲ್ಲಿ 2 ಯಾ 3 ಬೀಜಗಳನ್ನು ಬಿತ್ತಿ ಅವು ಬೆಳೆಯುತ್ತಾ ಇರುವಾಗ ಅವುಗಳಲ್ಲಿ ಸಶಕ್ತ ಗಿಡಗಳನ್ನು ಮಾತ್ರ ಬಿಟ್ಟು ಉಳಿದವುಗಳನ್ನು ಕಿತ್ತು ತೆಗೆಯಬಹುದು. ಪ್ರಥಮ ಮೂರು ವರುಷಗಳ ತನಕ ಸಸಿಗಳನ್ನು ಜಾನುವಾರುಗಳು ಹಾಳುಮಾಡದಂತೆ ಬೇಲಿ ಕಟ್ಟಿ ರಕ್ಷಣೆ ಮಾಡಬೇಕಾಗುವುದು. 4ನೇ ಅಥವಾ 5ನೇ ವರುಷಗಳಲ್ಲಿ ಮರಗಳು ಹೂ ಬಿಡುತ್ತವೆಯಾದರೂ 12ನೇ ವರುಷದ ಮೊದಲಿನಿಂದು ಯೋಗ್ಯ ರೀತಿಯಲ್ಲಿ ಫಲವನ್ನು ಕೊಡುವುವು. ಅತಿರೇಕವಾಗಿ ಬೆಳೆದ ಗೆಲ್ಲುಗಳನ್ನು ಕಡಿದು ಕಟ್ಟಿಗೆಗಾಗಿ ಉಪಯೋಗಿಸಿಕೊಳ್ಳಲೂ ಬಹುದು. ಸಾಮಾನ್ಯವಾಗಿ ಬೆಳೆಸಿದ ಒಂದು ಎಕ್ರೆ ಗೇರು ಮರದ ವ್ಯವಸಾಯದಲ್ಲಿ ವರುಷ ಒಂದರ ಸರಾಸರಿ ರೂ.50 ಕ್ರಯಬಾಳುವ ಗೇರುಬೀಜವನ್ನು ಪಡೆಯಬಹುದೆಂಬುದರಲ್ಲಿ ಸಂದೇಹವಿಲ್ಲ.

ವ್ಯವಸಾಯ ಇಲಾಖಾ ಉದ್ಯೋಗಸ್ಥರು ಯಾರಿಗಾದರೂ ಬೇಕಾದರೆ ಉತ್ತಮ ಜಾತಿಯ ಬೀಜವನ್ನು ಒದಗಿಸಿಕೊಡುವುದಕ್ಕೂ ಗೇರುಬೀಜದ ಬೇಸಾಯದ ಕುರಿತು ಬೇಕಾದ ಸಕಲ ಅನುಭವವನ್ನು ಕೊಡುವರೆ ಯಾವಾಗಲೂ ಸಿದ್ಧರಾಗಿಯೇ ಇರುವರು.

ಸ್ವಚ್ಛವಾದ ಉದರಗಳು ಬೇನೆರಹಿತವಾಗಿವೆ

ಉದರ ತೊಡಕುಗಳಿಂದ ಉಂಟಾಗಬಹುದಾದ, ಅಜೀರ್ಣತೆ, ಅಸೌಖ್ಯ, ವಾಯು ಇತ್ಯಾದಿಗಳನ್ನು ಅಲಕ್ಷಿಸಲಾಗದು. ಉದರದೊಳಗಿನ ಕರುಳುಗಳ ಕಾರ್ಯವು ಸರಾಗವಾಗಿ ನಡಿಯದಿಯೂ—ಕೆಡುಕಾದ ಜೀರ್ಣರಸಗಳಿಂದಲೂ, ನಿಮಗೆ ಸಹಿಸಲಾಗದ ಹೊಟ್ಟೆನೋವಿಗೆ ಕಾರಣವಾಗಬಹುದು ಇಂಥ ಅಸ್ವಚ್ಛ ಪದಾರ್ಥಗಳನ್ನು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಮಾತ್ರ ಹೊರಗೆಡಬಹುದು. ಇನೊಸನ್ನು ಇಂದಿನಿಂದಲೇ ಕುಡಿಯಲು ಪ್ರಾರಂಭಿಸಿ, ನಿಮ್ಮ ಉದರ ಅಸೌಖ್ಯಗಳಿಂದ ಪಾರಾಗಿರಿ.

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ. ಪಂಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳನ್ನು ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ. ಇನೋವಿನ ಪ್ರತಿಯೊಂದು ಗುಟುಕು ಅದರ ಬೆಲೆಯನ್ನು ಇಳಿಸಬಲ್ಲುದು. ಎಲ್ಲಾ ಕಡೆಗಳಲ್ಲಿಯೂ ಮೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ.

EVK 3 ನಮ್ಮ ಎಪ್ಪತ್ತು ವರ್ಷಗಳ ಅನುಭವದಲ್ಲಿ ಈ ಮಾದರಿಯು ಜನರಿಗು ತೀರಾ ಸಮಾಧಾನಕರವೆಂದು ಖಚಿತಪಡಿಸಿದೆ"

ಬರೆ ಸ್ಪರ್ಶ ಮಾತ್ರದಿಂದ ಗುಣಪಡಿಸುವ ಮಾಯಾವಿ ಮನುಷ್ಯನು

ಆದರೆ ತನ್ನಪರವನ್ನು ಮಾರಾಟಮಾಡಲೊಲ್ಲನು

ಲಂಡನಿನ ಒಂದು ಬೀದಿಯಲ್ಲಿ ಈ ವಿಚಿತ್ರ ವ್ಯಕ್ತಿಯು ವಾಸವಾಗಿರುವನು. ಆತನು ಗಾರೆಯ ಕೆಲಸ ಮಾಡುವ ಓರ್ವ ಮೇಸ್ತ್ರಿಯು ತನ್ನ ಸ್ಪರ್ಶ ಮಾತ್ರದಿಂದಲೇ ಆತನು ಅನೇಕರನ್ನು ಗುಣ ಮಾಡಿರುವನು. ಅನೇಕ ಡಾಕ್ಟರರು ಆತನಿಂದ ಆತನ ವಿಚಿತ್ರ ಗುಣಗಳ ಕುರಿತು ರಹಸ್ಯಗಳನ್ನು ತಿಳಿಯುವರೆ ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ.

ಪಕ್ಷವಾತ, ಇತ್ಯಾದಿ ದೀರ್ಘಕಾಲದ ರೋಗಗಳನ್ನು ಅನುಭವಿಸ ಪವರು ಅವನ ಸ್ಪರ್ಶದಿಂದ ಗುಣ ಲಾಭ ಪಡೆದಿರುವರು. ಮೊನ್ನೆ ಈಚೆಗೆ ೧೩ ವರ್ಷದ ಬಾಲಕನೊಬ್ಬನು ಅವನಲಿ ಚಿಕಿತ್ಸೆ ತೊಗಿದನು. ಆ ಹುಡುಗನು ಹುಟ್ಟಿದಂದಿನಿಂದ ಸೊಂಟದ ಕೆಳಗೆ ಇಡಿ ಭಾಗಕ್ಕೆ ಪಕ್ಷವಾತವಿದ್ದವನು. ಪಿ.ನಿಜಾಯಟಿಸ್ ಎಂಬ ಮಹಾ ರೋಗ ಬಾಧೆಯಿಂದ ಆತನಿಗೆ ಆ ಸ್ಥಿತಿಯು ಒದಗಿದ್ದಿತಂತೆ. ಈ ಮಾಯಾವಿಯು ಆ ಹುಡುಗನನ್ನು ಒಂದು ಬೆಂಚಿನ ಮೇಲೆ ಮಲಗ ಹೇಳಿ ಆತನ ಕಾಲಿನ ಮೇಲಿಂದ ಕೈಗಳನ್ನು ತೆಗೆದು, ಆತನ ಹಣೆಗೆ ಎರಡು ಬಾರಿ ಹೊಡೆದು, ಆತನಿಗೆ ನಡೆಯಲು ಹೇಳಿದನಂತೆ. ಇಷ್ಟರ ವರೆಗೆ ನಡಿಯಲಾಗದ ಹುಡುಗನು ಎದ್ದು ನಡೆದುಹೋದನಂತೆ.

ರೋಗಗಳನ್ನು ಗುಣಪಡಿಸುವುದು, ಈ ಮಾಯಾವಿಯ ಕುಟುಂಬವು ಬಹಳ ಸಮಯದಿಂದ ನಡೆಸಿ ಬಂದ ಉದ್ಯಮವಂತೆ. ಆತನ ಕೈಗಳನ್ನು ಒಂದು ಗಾಜಿನ ಪೆಟ್ಟಿಗೆಯಲ್ಲಿ ಹಾಕಿದರೆ ಅವುಗಳಿಂದ ನೀಲವರ್ಣದ ಒಂದು ಧೂಮವು ಹೊರಡುವುದು ಕಾಣಬಹುದಂತೆ.

ವಾರ್ಧಾ-ವಿದ್ಯಾಮಂದಿರದಲ್ಲೊಂದು ದಿನ

[ವಾರ್ಧಾ ಶಿಕ್ಷಣ ಯೋಜನೆ' ತೀರ ನೂತನವಾಗಿದೆ. ಭಾರತ ವರ್ಷದಲ್ಲಿ ಇದು ಕಾರ್ಯಗತವೆನಿಸುವುದಾದರೆ, ಇಡೀ ಪ್ರಪಂಚದಲ್ಲೇ ಶಿಕ್ಷಣ ಕ್ರಮವನ್ನು ಬದಲಾಯಿಸಲು ಇದೊಂದು ನೂತನ ರೀತಿ ನಿರ್ದೇಶಿಸುವಂತಾಗಿದೆ. ಆದುದರಿಂದ ಈಗ ಪ್ರಾಥಮಿಕ ತರಬೇತನ್ನು ಪಡೆವವರ ಮೇಲಿರುವ ಜವಾಬ್ದಾರಿಯು ಅತ್ಯಧಿಕವೆನ್ನುವುದರಲ್ಲಿ ಸಂದೇಹವಿಲ್ಲ

ವಾರ್ಧಾಗಂಜವನ್ನು ಒಮ್ಮೆ ಸಂದರ್ಶಿಸಬೇಕು. ಆ ಊರೇ ಗಾಂಧಿಜಿಯವರು ಅಲ್ಲಿ ವಸತಿಮಾಡಿದ ಬಳಿಕ ಬೇರೆಯೆ ಆಗಿದೆ. ರಾಜಕೀಯ ಗಂಧ ಗಾಳಿ ಕೂಡ ಇಲ್ಲಿ ಬೀಸುತ್ತಿಲ್ಲ. ಕೇವಲ ಶಿಕ್ಷಣ ಪ್ರಚಾರಗಳ ಚರ್ಚೆಯೆ ಮಾತ್ರ ಬಹಳ ವಿಶೇಷವಾಗಿದೆ. ಮಧ್ಯಪ್ರಾಂತ್ಯದ ಸರಕಾರವು ಈ ಯೋಜನೆಯನ್ನು ಅಂಗೀಕರಿಸಿ ಈಗ ಪ್ರಬಲವಾಗಿ ವ್ಯವಹಾರಮಾಡತೊಡಗಿದೆ. ೧೬೬ ಹೊಸ ಶಾಲೆಗಳು ಇದಕ್ಕಾಗಿ ಉಂಟಾಗುವುವಷ್ಟೆ; ಇವು ೮೬ ತಹಸೀಲುಗಳ ಸಲುವಾಗಿವೆ. ಐದೂವರೆ ತಿಂಗಳಲ್ಲಿ ತರಬೇತು ಕೊಂದಲು ಆಸಕ್ತರಾಗಿ ಕಾರ್ಯನಿರತರಾಗಿರುವ ಉಪಾಧ್ಯಾಯರು ಇಲ್ಲಿರುವರು. ಇವರಿಗೆ ವಿಶೇಷ ಚಾತುರ್ಯ ಅನುಭವಾದಿಗಳಿಂದ ಕೂಡಿರುವ ಪ್ರತ್ಯೇಕ ಶಿಕ್ಷಕರು ಇಲ್ಲಿ ನೆರೆದಿರುವರು. ಇವರೇ ಅಲ್ಲದೆ! ಇತರ ಸರಕಾರಗಳು ಅತಿ ತ್ವರೆಯಲ್ಲಿ ಆಮೂಲಾಗ್ರವಾಗಿ ತರಬೇತಿನ ವಿಚಾರವೆಲ್ಲವನ್ನು ಕಲಿತು ಬರಲು ಕಳುಹಿದ ಚುನಾಯಿತ ಶಿಕ್ಷಕರ ಪಂಗಡಗಳು ಬೇರೆಯೆ ಇವೆ. ಇವರು ಇಲ್ಲಿಂದ ಮರಳುತ್ತಲೇ ತಂ ತಮ್ಮ ಸರಕಾರಗಳಿಗೆ ಅತ್ಯಾವಶ್ಯಕವಾಗಿರುವ ಅನುಭವ ಕಳುಹುವರು. ಪೆಶಾವರದಿಂದ ಇಬ್ಬರು ಪಠಾಣರೂ ಕೂಡಿ ಈ ಪಂಗಡಗಳು ನಾನಾ ಶಾಲೆಗಳನ್ನೂ ಸಂದರ್ಶಿಸಿ, ತಮಗೆ ಬೇಕಾಗುವ ಅನುಭವಾದಿಗಳನ್ನು ಸಂಗ್ರಹಿಸುತ್ತಿದ್ದಾರೆ

ಸುಮಾರು ೨೦೦ ಗ್ರಾಮಗಳಿಂದ ಜನರು ಈ ವಿದ್ಯಾಮಂದಿರಗಳಿಗೆ ಆಸ್ತಿಪಾಸ್ತಿಗಳನು ಬಿಟ್ಟುಕೊಟ್ಟಿರುವರು. ಇವನ್ನು ಕೃಷಿ ಇಲಾಖಾ ಅಧೀಸರರು ಸಂದರ್ಶಿಸಿ, ಯುಕ್ತ ಕಂಡವನ್ನು ಆರಿಸಿಕೊಳ್ಳುತ್ತಿದ್ದಾರೆ. ಜನರಿಗೆಲ್ಲ ಈ ಹೊಸ ಬಗೆಯ ಶಾಲೆಗಳ ವಿಷಯ ಸಾಕಾಗುವಷ್ಟು ತಿಳುವಳಿಕೆಯನ್ನ ಕೊಡುತ್ತ ಸಂಚಾರ ಮಾಡುತ್ತಿರುವ ಹಲವು ಬೇರೆ ಅಧೀಸರರು ಇರುವರು. ಇವರು ಇನ್ನೂ ಹೆಚ್ಚಾಗಿ ಗ್ರಾಮಗಳಿಂದ ಜಮೀನನ್ನು ಈ ಶಾಲೆಗಳಿಗೆ ಪಡೆವ ಪ್ರಯತ್ನ ನಡೆಸುತ್ತಿರುವರು. ವಿದ್ಯಾ ಇಲಾಖಾ ಅಧೀಸರರನ್ನೂ ಬಹಳವಾಗಿ ಈ ಯೋಜನೆಯ ವಿಷಯ ಚೆನ್ನಾಗಿ ಬೋಧಿಸುತ್ತಿದ್ದಾರೆ.

ಬಿಹಾರ ಸರಕಾರವೂ ಈ ಬಗೆಯ ಶಾಲೆಗಳನ್ನು ಪ್ರತಿ ಜಿಲ್ಲೆಯಲ್ಲಿ ಒಂದರಂತೆ ತೆರೆವುದಾಗಿ ಇಂಡಿಯಾ ಸರಕಾರಕ್ಕೆ ತಿಳಿಸಿರುವುದು

[ಈ ಸರಕಾರವು ಎಲ್ಲ ಶಿಕ್ಷಣವನ್ನೂ ವಿಮರ್ಶಿಸುವ ಒಂದು ಕಮಿಟಿಯನ್ನು ನೇಮಿಸಿದೆ]

ವಿದ್ಯಾಮಂದಿರ ತರಬೇತಿನ ಶಾಲೆಯನ್ನು ಬೇಸಿಗೆಯ ರಜಾ ಕಾಲದಲ್ಲೇ ಪ್ರಾರಂಭಿಸಬೇಕಾಯಿತು. ಆಗುವಷ್ಟು ಬೇಗನೆ ಈ ಶಿಕ್ಷಣ ಕ್ರಮವು ರೂಢಿಗೆ ಬರಲೇ ಬೇಕೆಂಬ ಆತುರವು ಸರಕಾರಕ್ಕೆ ಅಷ್ಟಾಗಿದ್ದಿತು. ಇಲ್ಲೀಗ ೧೬೦ ಮಂದಿ ಶಿಕ್ಷಕರನ್ನು ತರಬೇತು ಮಾಡುತ್ತಿರುವರು.

ನನ್ನಂತಹನು ಇಲ್ಲಿಗೆ ನಡೆದು ಅಲ್ಲಿ ನಡೆವ ಕಾರ್ಯಕ್ರಮಗಳನ್ನು ನೋಡಬೇಕೆಂದಿದ್ದರೆ, ನನಗೆ ಅಲ್ಲಿ ಸ್ವಾಗತವಿದ್ದೀತೊ' ಇವನೇಕೆ ರಗಳೆ? ಎನ್ನುವರೋ ಎಂದಿದ್ದೆ. ಅಲ್ಲಿನ ಕಾರ್ಯಕ್ರಮ ನೋಡಬಂದವನೆಂದು ಅವರು ತಿಳಿಯುತ್ತಲೇ, ನನ್ನನ್ನು ಆತ್ಮಾದರದಿಂದ ಎಲ್ಲ ಕೆಲಸಗಳನ್ನೂ ನೋಡಲು ಬಿಟ್ಟುದಲ್ಲದೆ, ಅಲ್ಲಲ್ಲಿಗೆ ತಾವಾಗಿ ಕರೆದೊಯ್ದರು. ಅವರ ಚರ್ಚಾದಿಗಳಲ್ಲಿ ನಾನೂ ಭಾಗವಹಿಸಲೇಬೇಕೆಂದರು. ಈ ಬಗೆಯಿಂದಲೇ ಈ ಶಾಲೆಯು ಜನಸಾಮಾನ್ಯರ ಪ್ರೀತಿಗೆ ಪಾತ್ರವಾಗುತ್ತಲಿದೆ. ನನ್ನಿಂದಲೂ ನಾನಾ ರೀತಿಯಾಗಿ ಬೇಕಾದ ಅಭಿಪ್ರಾಯಗಳನ್ನು ಪಡೆದರು. ಇತರ ಶಾಲೆಗಳಿಗೂ ಈ ಶಾಲೆಗೂ ಇರುವ ಮೊದಲನೆ ಕಾರಣವಿದು.

ನಾನು ಇಲ್ಲಿ ಒಂದು ತಿಂಗಳ ವರೆಗೆ ಇದ್ದೆನು. ಅವರು ಅಲ್ಲಿ ಮಾಡುತ್ತಿರುವ ಕಾರ್ಯ ವಿಚಾರಗಳನ್ನು ನೋಡಿಯೂ, ನನಗೆ ತಿಳಿದಂತೆ ವಿಮರ್ಶಿಸುತ್ತಲೂ, ವಿಚಾರಿಸುತ್ತಲೂ ಇದ್ದೆನು. ದಿನದಿನಕ್ಕೆ ವಿದ್ಯಾರ್ಥಿಗಳು ಹೇಗೆ ಬೆಳೆದು ಬರುತ್ತಿದ್ದರೆಂಬುದನ್ನು ತಿಳಿದುಕೊಂಡೆನು. ಮೊದಲು ಇವರು, ಒಂದು ಹಿಂಡಾಗಿ ನಡೆಯುತ್ತಿದ್ದು, ಸಿಕ್ಕಾಬಟ್ಟೆ ಚರ್ಚಿಸುತ್ತಲೂ ಅತ್ತಿತ್ತ ಓಡಾಡುತ್ತಲೂ, ಉಪಕರಣಾದಿಗಳನ್ನು ಬೇಕಾದಂತೆ ಬಳಸುತ್ತಲೂ ಇರುತ್ತಿದ್ದರು. ಕೆಲವೇ ದಿನಗಳಲ್ಲಿ ಇವರಲ್ಲಿ ಜಾಗರೂಕತೆ ಉಂಟಾಯಿತು. ಶಿಸ್ತಿನ ಪ್ರಕಾರ ನಡೆದುಕೊಂಡರು, ಬೇಕಾದ ಉಪಕರಣವನ್ನೆತ್ತಿಕೊಂಡು, ಅಗತ್ಯ ಕಂಡಂತೆ ಬಳಸಲು ಕಲಿತರು. ಹಾಗೆಂದು ಇವರನ್ನು ಕಠಿನವಾಗಿ ಬೆದರಿಸಿ ದಂಡನೆಯ ಭಯ ತೋರಿಸಿ ಹೀಗೆ ತಿದ್ದಿದುದಲ್ಲ. ಅವರವರಿಗೆ ಅವರ ಕೆಲಸದಲ್ಲಿ ಆತುರ ಕಂಡಂತೆ, ಅವರು ತಾವಾಗಿಯೆ ಕಲಿತುಕೊಂಡರು. ತಾವು ಮೊದಲನೆ ಶಿಕ್ಷಕರು, ತಮ್ಮ ಮೇಲೆ ಜವಾಬ್ದಾರಿ ಬಹಳವಿದೆ ಎಂಬುದನ್ನು ಅವರು ಮರೆತಿಲ್ಲ. ಕೈಕೆಲಸಕ್ಕೂ ಶಿಕ್ಷಣ ವಿಷಯಕ್ಕೂ ಇರುವ ಸಂಬಂಧವನ್ನು ಅವರು ಎಷ್ಟು ಬೇಗನೆ ತಿಳಿದುಕೊಂಡು ವರ್ತಿಸುತ್ತಿದ್ದಾರೆ! ಈ ವಿಷಯವಾಗಿ ಅವರಿಗೆ ಉಪಾಧ್ಯಾಯರು ತಿಳಿಸಿದ ಕೂಡಲೆ, ಇದರಿಂದ ಮಕ್ಕಳು ಎಷ್ಟು ಬೇಗನೆ ಕಲಿತುಕೊಳ್ಳುವರು ಎಂಬುದು ಅವರಲ್ಲಿ ತಾನಾಗಿ ಮೂಡಿಬರುತ್ತದೆ. ಹೀಗೆ ಉಪಾಧ್ಯಾಯರಾಗುವವರಲ್ಲಿ, ಮಕ್ಕಳು ಬೇಗನೆ ಚೆನ್ನಾಗಿ ತಿಳಿದುಕೊಳ್ಳುವ ಕ್ರಮವನ್ನು ಅರಿತುಕೊಳ್ಳುವ ಆಸಕ್ತಿಯೂ ಹೆಚ್ಚುತ್ತ ಬರುತ್ತಲಿದೆ.

ಈ ಯೋಜನೆಯಿಂದ ಮುಂದೆ ತಾನಾಗಿ ಹೊರಡತಕ್ಕ ಉಪಕಾರ ಕೋಟಿಯು ಬಹಳವಿದೆ. ವಿದ್ಯಾರ್ಥಿಗಳು ತುಂಬ ಲವಲವಿಕೆಯಿಂದ ಹೊಸ ರೀತಿಗಳನ್ನು ತಾವಾಗಿ ಕಲ್ಪಿಸಿಕೊಂಡು ಮುಂದುವರಿಯುತ್ತಿರುವುದೂ ಅವರಲ್ಲಿರುವ ದೃಢ ವಿಶ್ವಾಸಾದಿಗಳನ್ನು ಸೂಚಿಸುತ್ತಿದೆ. ಕೈಕೆಲಸದಲ್ಲಿ ಅವರಿಗೆ ತುಂಬ ಮೆಚ್ಚುಗೆ ಇದೆ. ಈ ಕೆಲಸದೊಡನೆಯೆ, ಇತರ ಪಠ್ಯ ವಿಷಯಗಳನ್ನೂ ಸುಲಭವಾಗಿ ಗ್ರಹಿಸಿಕೊಳ್ಳುತ್ತಿದ್ದಾರೆ. ಇದೇ ರೀತಿಯಾಗಿ ಮಕ್ಕಳೂ ಕೈಕೆಲಸದೊಡನೆಯೆ ಪಠ್ಯ ವಿಷಯಗಳನ್ನು ಕಲಿತುಕೊಳ್ಳುವುದು ಸುಲಭವೆಂದು ಈಗ ಹೇಳಬರುತ್ತದೆ

ಈ ಕೈಕೆಲಸದಿಂದ ಉಂಟಾಗುವ ಉತ್ಪನ್ನಗಳನ್ನು ಕೊಳ್ಳುವ ಮಾರುವ ವಿಷಯವಾಗಿ ಹಲವು ಟೀಕೆಗಳನ್ನು ಕೇಳಿದ್ದೇನೆ. ಆದರೆ, ಈ ಮಂದಿರದಲ್ಲಾಗುವ ಉತ್ಪನ್ನಗಳನ್ನು ಮೊದಲಿಂದಲೂ ಮಾರಾಟಮಾಡುವುದು ಕಷ್ಟವಾಗಲಾರದು ಎಂದೇ ಹೇಳಬಹುದು. ರಟ್ಟಿನ ಕೆಲಸವನ್ನು ಇಲ್ಲಿ ಮೊದಲು ಕಲಿಸುವರು, ಇದರಿಂದ ಇಷ್ಟರಲ್ಲೇ ತುಂಬ ಲಾಭ ದೊರೆಯುತ್ತಲಿದೆ. ತಕಲಿಯಿಂದಾಗುವ ಉತ್ಪನ್ನಗಳನ್ನು ಬಹು ಬೇಗನೆ ಮಾರಾಟಮಾಡಿರುವರು. ಮಕ್ಕಳಾದರೂ ಇಂತಹ ಸಾಮಾನುಗಳನ್ನು ತಯಾರಿಸುವಾಗ, ಅವುಗಳ ಮೊತ್ತವು ಕಡಮೆಯಾಗಬಹುದಾದರೂ, ಲಕ್ಷಣವು ಇಷ್ಟೇ ಚೆನ್ನಾಗಿರಬಹುದು ಎಂದು ಊಹಿಸಬರುತ್ತದೆ. ಮಕ್ಕಳ ಕೈಗಳು ನಿಪುಣತೆಯಲ್ಲಿ ಹಿರಿಯರ ಕೈಯ ನಿಪುಣತೆಗಿಂತ ಕಡಮೆಯಾಗಿರುವುದಿಲ್ಲ.

ವಿದ್ಯಾರ್ಥಿಗಳ ನಡತೆಯೂ ಉತ್ತಮವಾಗಿದೆ. ಕ್ರಮ, ಶಿಸ್ತು ಪ್ರಕಾರ ಕೆಲಸ ಮಾಡೋಣ, ಸಹಕಾರ ಇವನ್ನು ಬಲು ಚೆನ್ನಾಗಿ ಕಲಿತುಕೊಂಡಿರುವರು. ೧೬೦ ವಿದ್ಯಾರ್ಥಿಗಳೂ ಒಂದಾಗಿ ಭೋಜನಮಾಡುವರು, ದೊಡ್ಡ ಕೊಟಡಿಗಳಲ್ಲಿ ಪಂಗಡವಾಗಿ ಬಾಳುವರು, ಕಿಂಚಿತ್ತು ಕಚ್ಚಾಟವಿಲ್ಲವಾಗಿದೆ. ಒಂದಾಗಿ ಕೆಲಸಮಾಡಲೂ, ಸಹಕರಿಸಲೂ ಬಲು ಚೆನ್ನಾಗಿ ತರಬೇತಾಗಿದ್ದಾರೆ. ತಮ್ಮ ಯಾವತ್ತು ಕಾರ್ಯಗಳನ್ನು ತಾವೇ ಮಾಡಿಕೊಳ್ಳುತ್ತಿರುವರು. ಸಾಮಾನ್ಯ ಆಹಾರ ಪಡೆಯುತ್ತಿದರೂ, ತುಂಬ ಚಟುವಟಿಕೆಯುಳ್ಳವರಾಗಿ ಆರೋಗ್ಯವಾಗಿದ್ದಾರೆ. ಅವರು ಒಂದೇ ಕಂಠವಾಗಿ ಹಾಡುತ್ತಿರುವ ಕ್ರಮ ಎಷ್ಟು ಸೊಗಸಾಗಿದೆ! ಇದನ್ನು ನಾವು ಬಲ ಮಟ್ಟಿಗೆ ಹೆಚ್ಚಿನ ಶಾಲೆಗಳಲ್ಲಿ ನೋಡುತ್ತಿಲ್ಲ. ವಿದ್ಯಾಮಂದಿರದಲ್ಲಿ ಇದು ಅತ್ಯಾವಶ್ಯಕವಾಗಿದೆ. ಗಾಯನ ಶಿಕ್ಷಕರು ಪ್ರತಿ ದಿನ ಭಜನಾದಿಗಳನ್ನು ಕಲಿಸುತ್ತಿದ್ದಾರೆ, ಒಂದೇ ಕಂಠವಾಗಿ ಎಲ್ಲರೂ ಹಾಡುವರು, ಇಷ್ಟು ಬೇರೆ ಜನರು ಹಾಡುತ್ತಿರುವಾಗಲೂ ಕೇಳುವವರಲಿ ಅತ್ಯುತ್ಸಾಹ ಉಂಟಾಗುವಂತಿದೆ. ಕೈಕೆಲಸದ ಬೇಸರವು ಈ ಗಾಯನದಿಂದ ಮಾಯವಾಗುವುದು. ಇದನ್ನು ಕೇಳುವಾಗ, ನಮ್ಮ ಮನಸ್ಸು ಪುರಾತನ ಗ್ರಾಮಜೀವನದ ಕಡೆಗೆ ಓಡುತ್ತಿದೆ. ನವನಾಗರಿಕ ವಾತಾವರಣದ ನಾನಾ ಗರ್ಜನೆಗಳಿಗೆ ಇಲಿ ಸ್ಥಾನವಿಲ್ಲ, ಅತ್ಯಾಸೆಯಿಂದ ಹಣದ ವಿಷಯವುದಕ್ಕಾಗಿಯೇ ಇಲ್ಲಿ ಕೈಕೆಲಸ ಮಾಡುತ್ತಲೂ ಇಲ್ಲ. ನಿಜವಾದ ಹಿಂದೀ ಗ್ರಾಮಾಂತರಗಳ ಸಂಸ್ಕೃತಿಯು ಇನ್ನೊಮ್ಮೆ ಸ್ಥಾಪನೆ ಹೊಂದುತ್ತಿರುವುದಕ್ಕೆ ಇನ್ನು ಆತಂಕವಿರಲಾರದೆಂದು ತೋರುತ್ತದೆ

ಈ ಶಾಲೆಯನ್ನು ಪ್ರಾರಂಭಿಸಿ ಎರಡು ತಿಂಗಳು ದಾಟಿಲ್ಲ. ಯೋಜನೆ ಹೊಸದು; ಆದರೂ ಇಲ್ಲಿ ನಡೆವುದರಲ್ಲೆಲ್ಲ ತೀರ ನೂತನ ಭಾವವೇ ಮೂಡಿಬಂದಿದೆ. ಪರೀಕ್ಷಾ ಪ್ರಯೋಗಗಳ ಕಾಲ ದಾಟಿದೆ, ಈಗ ಕೆಲಸಗಾರರೂ ಕೆಲಸವೂ ಹೊಂದಿಕೊಂಡು ನಡೆವಂತೆ ತೋರುವ ನಿತ್ಯ ನಿಯಮಿತ ಕೆಲಸಕ್ಕೆ ಪ್ರಾರಂಭವಾಗಿದೆ. ಕಾಂಗ್ರೆಸ್ ಸರಕಾರಗಳು ಇನ್ನು ಈ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಲು ಹಿಂತೆಗೆವುದೇ ಬೇಡ. ಈ ಶಾಲೆಗಳೂ ಮಾದರಿಗಳಾಗಿರುವುದು ಸಹಜವೆನ್ನುವುದಕ್ಕೂ ಆಕ್ಷೇಪವಿರದು.

—ಎಲ್. ರಾಜಗೋಪಾಲರಾವ್,
ಹಿಂದೂ ಕಾಲೇಜ್

ಪಿಶಾಚಿಗಳನ್ನು ಕೈದುಮಾಡಿರಿ!

ಪೋಲೀಸರಿಗೆ ಒಂದು ಮನವಿ.

ಕಲ್ಕತ್ತದ ಉತ್ತರ ಭಾಗದ ಪೋಲೀಸ್ ಕಚೇರಿಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು, ಸ್ಟೇಶನಿನ ಪೋಲೀಸರಿಗೆ—"ಈ ಮನೆಯಲ್ಲಿರುವ ಪಿಶಾಚಿಗಳನ್ನು ತಲಾಸಿ ಮಾಡಿ ಕೈದು ಮಾಡುವಿರಾ?" ಎಂದು ಕೇಳಿಬಿಟ್ಟಿದ್ದಾರೆ.

ಯಾವ ಮನೆ? ಅದೇ ಭಾಗದಲ್ಲಿರುವ ಒಂದು ಮನೆಯಲ್ಲಿರುವ ಇಬ್ಬರು ಸ್ತ್ರೀಯರು, ಪ್ರತಿರಾತ್ರಿಯೂ ಆ ಮನೆಯಲ್ಲಿ ಸುಳಿದಾಡುತ್ತಿದ್ದ ಪಿಶಾಚಿಗಳನ್ನು ಕಂಡು ಭಯಗೊಂಡು, ಅಲ್ಲಿಂದ ಮತ್ತೊಂದು ಬಿಡಾರಕ್ಕೆ ಹೋಗಬೇಕೆಂದಿದ್ದರಂತೆ. ಆದರೆ ಮನೆಯ ಯಜಮಾನಿಯು ತನ್ನೊಬ್ಬಳನ್ನೆ ಬಿಟ್ಟು ಹೋಗಬೇಡಿರೆಂದು ಅವರನ್ನು ತಡೆದಳಂತೆ

ಇದರಿಂದ ಅವರಿಗೆ ಭಯವಾಗಿದೆ. ಪಿಶಾಚಿಗಳ ಭಯವೊಂದು, ತಮ್ಮೊಳಗೆ (ಧನಿ ಒಕ್ಕಲುಗಳೊಳಗೆ) ಕಲಹವಾಗಿ ಮಾರಾಮಾರಿಯಾದೀತೂ ಎಂಬ ಭಯವೊಂದು. ಈ ದೆಸೆಯಿಂದ, ಆತಂಕವಿಲ್ಲದೆ ಧನಿಯ ಬಾಯಿಂದ ತಮ್ಮನ್ನು ಪೋಲೀಸರು ಸಹಾಯ ಮಾಡಿ ಅಲ್ಲಿಂದ ಮತ್ತೊಂದು ಕಡೆಗೆ ಹೋಗಲು ಬಿಡಬೇಕಾಗಿ ಅವರ ಅರ್ಜಿ

ಮೆಜಿಸ್ಟ್ರೇಟರ ಅಪ್ಪಣೆ—(ಪೋಲೀಸ್ ರಾಣ್ಯದವರಿಗೆ) ಈ ಮನೆಯಿಂದ ಪಿಶಾಚಿಗಳನ್ನು ಹೊರಡಿಸುವಿರಾ? ಸತ್ಯ ಸ್ಥಿತಿಯೇನು? ತಾ 23ರ ಒಳಗೆ ರಿಪ್ರೋರ್ಟ್ ಮಾಡತಕ್ಕದ್ದು!

ಪಿಶಾಚಿಗಳು ಪೋಲೀಸರನ್ನ ಭಯಗೊಳಿಸದಿದರೆ ಸಾಕು. ಅಥವಾ ಧನಿಯೇ ಪಿಶಾಚವಾಗದಿದ್ದರೆ ಸಾಕು. ಪಿಶಾಚವು ಧನಿಯನ್ನು ಹಿಡಿದು ಪೋಲೀಸರನ್ನು ಓಡಿಸೀತೇ?

ಮದನಕಾಮೇಶ್ವರಿ ಲೇಹ.

ಆಯುರ್ವೇದ [illegible]

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ. ಚಾರ್ಜು ಪ್ರತ್ಯೇಕ)

ಟಿ. ಸಿ. ಎ. ಅಂಡ್ ಕೋ.,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಡಿ.)

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದ ಲೇಶ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಅಪೇಕ್ಷಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು, ಶರೀರಕ್ಕೆ ಏನೂ ಅಪಾಯವಾಗದ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರಮಾಡಿ. ಔಷಧ ಬೇಡಿರಿ. ಮುಂಬೈ ಸರ್ಟಿಫಿಕೇಟು—(ಡಾ. [illegible] ಎಲ್. ಸಿ. ಪಿ. ಎಸ್. [illegible], ಈಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. [illegible] ವಿ. ಪಿ. [illegible]

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.)

The

Agricultural & Industrial Bank, Ltd.,

(Incorporated in British India.)

Head Office "LAXMINIVAS BUILDINGS" *Coondapoor.*

BRANCHES:—

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARI KERE & KADUR

Deposits are accepted at following rates:-

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS. 10, 25, 50, 100, 250, 500 & 1000, REDEEMABLE AT ANY TIME. CUMULATIVE DEPOSITS ARE ACCEPTED

Current Deposits

From January to June 2%
and
From July to December 1%

Savings Bank Deposits

3½ per cent per annum

Fixed Deposits

for 6 Months 3½%
„ 1 Year 4%
„ 2 Years & above 4½%

For Further Particulars Apply to:—

HEAD OFFICE or BRANCHES

Buy Advertised Goods

DRINK

Delicious

WATERFALL

AND

PYKARA TEAS.

unrivlled for Taste & Aroma.

ಅತ್ಯುತ್ತಮವಾದ

ವಾಟರ್ ಫೋಲ್

ಮತ್ತು

ಪೈಕರಾ ಚಹಾವನ್ನು

ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:

Panchmal Krishnaya Shenoi & Son,
Bunder, Mangalore.

USE

365 BAR SOAPS

SOLD

EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE

ದೇವರು ಎಂದರೆ ಯಾರು?

ಸತ್ಯ ಎಂಬುದೇ ದೇವರು. ಶ್ರೀಶಿವಂ [illegible]ದೇ ದೇವರು. ಪ್ರಕಾಶ ಎಂಬುದೇ [illegible]ವರು. ನಿತ್ಯಸುಖ, ಪರಮಶಾಂತಿ ಮತ್ತು [illegible]ಜ್ಞಾನ ಇವುಗಳಿಂದ ಕೂಡಿದವನೇ ದೇವರು. [illegible]ವನು ಬಹಳ ಕರುಣಾಳುವೂ, ಸರ್ವಶಕ್ತಿ[illegible]ಯನೂ, ಸರ್ವವ್ಯಾಪಿಯೂ, ಸರ್ವಜ್ಞನೂ [illegible]ಗಿರುತ್ತಾನೆ ಆತನೇ ಪರಮಾತ್ಮನು ಮತ್ತು [illegible]ರುಷೋತ್ತಮನು ಭೂಲೋಕ, ದೇಹ, [illegible]ನಸ್ಸು, ಇಂದ್ರಿಯ ಮತ್ತು ಪ್ರಾಣ ಇವು[illegible]ಗೆ ಆಧಾರ ಭೂತನಾಗಿರುವವನೇ ದೇವರು [illegible]ವನು ಅಣುರೇಣುತೃಣಕಾಷ್ಠದಲ್ಲಿದ್ದಾನೆ. [illegible]ವನ ಆಧಾರವಿಲ್ಲದೆ ಒಂದು ಅಣು ಕೂಡಾ [illegible]ಲಿಸಲಾರದು. ವೇದಗಳ ಅಂತ್ಯನೂ [illegible]ವನೇ. ಇಂದ್ರ ಯಮವಾಯು ಮೊದಲಾದ [illegible]ದೇವತೆಗಳು ಅವನ ಆಜ್ಞಾಧಾರಕರು ಭೂ[illegible], ನೀರು, ಬೆಂಕಿ ಗಾಳಿ ಮತ್ತು ಆಕಾಶ ಇವು [illegible]ವನ ಶಕ್ತಿಗಳು. ಮಾಯೆ ಎಂಬುದೇ ಅವನ [illegible]ಣ್ಣುಕಟ್ಟಿನ ಶಕ್ತಿಯು ಅವನು ಚಿನ್ಮಯನು, [illegible]ದ್ರೂಪನು ಮತ್ತು ಚಿದಾತ್ಮನು

ದೇವರು ಸೃಷ್ಟಿ ಸ್ಥಿತಿ, ಲಯ ಇವುಗಳ [illegible]ರ್ತನು ಆದದರಿಂದ ಅವನನ್ನು ಬ್ರಹ್ಮ, [illegible]ಷ್ಣು, ಶಿವ ಎಂಬ ಮೂರು ಅವಲೋಕನೆಗಳಿಂ[illegible]ದ ಕಾಣುತ್ತೇವೆ. ಬ್ರಹ್ಮನು, ಸೃಷ್ಟಿಕರ್ತನೂ, [illegible]ಷ್ಣುವು ಸ್ಥಿತಿಕರ್ತನೂ ಶಿವನ ಲಯಕರ್ತನೂ [illegible]ಗಿರುವುದರಿಂದ ಇವರಲ್ಲಿ ಭೇದ ಬುದ್ಧಿಯನ್ನು [illegible]ತೋರಿಸಲಾಗದ [illegible] ಕೆಲವರು ಜಲ [illegible]ಲವರು ಅಂಬು, ಕೆಲವರು ಸಲಿಲ ಎಂದು [illegible]ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ [illegible]ದರೆ ಹೇಗೆ ಕರೆದರೂ ನೀರೆಂದೇ ಅರ್ಥವಾಗು[illegible]ದೆ ಹಾಗೆಯೇ ಯಾವ ನಾಮಧೇಯದಿಂದ [illegible]ದರೂ ಆ ಸರ್ವವ್ಯಾಪಿಯಾದ ದೇವ[illegible] [illegible]ಟ್ಟನೆ ಆಗಿರುತ್ತಾನೆ ಜ್ಞಾನ, ವೈರಾಗ್ಯ [illegible], ಬಲ ಐಶ್ವರ್ಯ [illegible] ಕೀರ್ತಿ ಇವು [illegible]ವನ ಆರು ಗುಣಗಳಾಗಿರ[illegible] ಆದ[illegible]ಯುಕ್ತ ಅವನನ್ನು ಭಗವಾನ್ ಎಂದು [illegible]ರೆಯುತ್ತಾರೆ

ದೇವರು ಸಗುಣನ[illegible] [illegible] [illegible]ನು ಶ್ರೀ ರಾಮಕೃಷ್ಣ[illegible] [illegible] ಈ [illegible]ಟಣಗಳ [illegible] ಹೀಗೆನ್ನುವ — [illegible]ದೇವರು ಸಗುಣನೇ? ಅಥವಾ ನಿರ್ಗುಣನೇ [illegible]ನಂತನಾದ ನಿರ್ಗುಣನ[illegible] ದೇವರು ಒಬ್ಬ [illegible]ವ್ಯಕ್ತಿಯಂತೆ ತೋರಬಹುದೇ? ಅನಂತ [illegible]ನಂತತೆ ಕೆಡಲಾರದೆ? ಗುಣವೆಂದೊಡನೆ ದೋ[illegible]ವು ಸೇರಬೇಕಲ್ಲವೇ? ಎಂದು [illegible] [illegible]ವಾದ ಮಾಡುತ್ತಾರೆ ದೇವರ ಸಗು[illegible]ನೂ, ನಿರ್ಗುಣನೂ ಆಹುದು ತನ್ನಲ್ಲಿ [illegible]ನು ನಿರ್ಗುಣನಾಗಿರ ತಕ್ಕ ಇವನ ಸೃಷ್ಟಿಗಾಗಿ [illegible]ಗುಣವನ್ನು ಅಳವಡುತ್ತಾನೆ ವ್ಯಕ್ತಿಯಾಗ[illegible]ತ್ತಾನೆ ಭಕ್ತರಿಗಾಗಿ ಅವನು ಆಕಾರವನ್ನು [illegible]ರಿಸುತ್ತಾನೆ ನೀರಿಗೆ ತನ್ನ ಎಂಬ ಪ್ರತ್ಯೇಕ [illegible]ಕಾರವಿಲ್ಲ ಯಾವ ಪಾತ್ರೆಯಲ್ಲಿ ಇದೆಯೋ [illegible]ದರ ಆಕಾರವನ್ನು ಪಡೆಯುತ್ತದೆ ಅದೇ [illegible]ನೀರು [illegible]ಗಟ್ಟಿಯಾದಾಗ ಆಕಾರವನ್ನು [illegible]ರಿಸುತ್ತದೆ ಅಗ್ನಿ ಉರಿಯುವಾಗ ಅದಕ್ಕೆ [illegible]ಕಾರವಿಲ್ಲ, [illegible] ದವಾದಾಗ ಆಕಾರ ಬರು[illegible]ತ್ತದೆ ಸಾಕಾರನಾದ ದೇವರು ಆ ಕೆಂಡದಂತೆ, [illegible]ರಾಕಾರನಾಗಿರುವ ದೇವರು ಆ ಉರಿಯಂತೆ [illegible]ದ ದರಿಂದ ಅವನು ಸಾಕಾರನೂ, ನಿರಾಕಾರ[illegible]ನೂ ಆಹುದು ಇವೆರಡಕ್ಕೂ ಮೀರಿ ಅವನಿಗೆ [illegible]ಬೇರೆ ಯಾವ ಸ್ಥಿತಿ ಉಂಟೋ ಅದನ್ನು ಅವನೇ [illegible]ಬಲ್ಲನು. ಸಮುದ್ರವನ್ನೂ, ಆಕಾಶವನ್ನೂ [illegible]ವರ್ಣಿಸಲು ಹೇಗೆ ಅಸಾಧ್ಯವೋ ಹಾಗೆಯೇ [illegible]ದೇವರನ್ನು ವರ್ಣಿಸಲೂ ಅಸಾಧ್ಯ ದೇವ[illegible]ರನ್ನು ವರ್ಣಿಸುವವನು ದೇವರನ್ನು ಕಾಣಲಿಲ್ಲ[illegible]ನೆಂದೇ ಹೇಳಬಹುದು ಉಪ್ಪಿನಗೊಂಬೆಯ[illegible] [illegible]ಸಮುದ್ರದ ಆಳವನ್ನು ಕಂಡುಹಿಡಿಯುವೆನೆಂದು [illegible]ಮುಳುಗಿ ನೀರಾದ ಹಾಗೆ ಮನುಷ್ಯನ ಆತ್ಮವು [illegible]ಪರಮಾತ್ಮನಲ್ಲಿ/ ಐಕ್ಯವಾದ ಮೇಲೆ ಅವನನ್ನು [illegible]ವರ್ಣಿಸುವವರಾರು?

ದೇವರು ಎಲ್ಲಾ ಜೀವಿಗಳ ಸೂತ್ರ[illegible]ಧಾರಿಯೂ, ಅಂತರ್ಯಾಮಿಯೂ ಆದುದರಿಂದ ಎಲ್ಲಾ ಜೀವಿಗಳ ಹೃದಯದಲ್ಲಿ ವಾಸಿಸುತ್ತಾನೆ ಮನುಷ್ಯನು ಚಿಕ್ಕಂದಿನಿಂದಲೇ ದೇವರ ಶ್ರವಣ, ಕೀರ್ತನಾದಿ ನವವಿಧ ಭಕ್ತಿಯಿಂದ ಕ್ರಮೇಣ ಪಾರಮಾರ್ಥಿಕ ಜ್ಞಾನಹೊಂದುತ್ತಲೇ ಆತನಿಗೆ ತನ್ನ ದೇಹವು ದೇವಸ್ಥಾನವೆಂದೂ, ಹೃದಯವು ಗರ್ಭಗುಡಿಯೆಂದೂ ಅದರೊಳಗೆ ದೇವರು ವಾಸವಾಗಿರುತ್ತಾನೆಂದೂ ಭಾವನೆಗಳು ಪ್ರಾಪ್ತವಾಗುತ್ತವೆ ಹೀಗೆಯೇ ಎಲ್ಲಾ ಜೀವಿಗಳ ಹೃದಯಗಳಲ್ಲಿ ದೇವರು ಇದ್ದಾನೆಂಬ ಜ್ಞಾನವು ಹುಟ್ಟಿ ಪ್ರೇಮವು ಹುಟ್ಟುತ್ತದೆ ಮತ್ತು ಈ ಸಂಸಾರ ಚಕ್ರದಿಂದ ಹೊರಬೀಳುತ್ತಾನೆ ಅನಾದ್ಯಂತ ಸುಖವು ದೇವರಿಂದ ಅಲ್ಲದೇ ಮತ್ತಾರಿಂದಲೂ ಸಿಕ್ಕಲಾರದು ಆದಕಾರಣವಲ್ಲವೇ ವೇದವೇದಾಂತಗಳು ಮತ್ತು ಮಹರ್ಷಿಗಳು ಈ ಪಾರಮಾರ್ಥಿಕ ಜ್ಞಾನವು ಮನುಷ್ಯನಿಗೆ ಅಗತ್ಯವೆಂದ ಹೇಳಿರುವರ

ಈ ಸೃಷ್ಟಿಯನ್ನು ಕಂಡರೆ ಇದಕ್ಕೆ ಒಬ್ಬ ಕರ್ತನ ಇದ್ದಾನೆ ಎಂಬುದ ಮನಸ್ಸಿನಲ್ಲಿ ಖಚಿತವಾಗುತ್ತದೆ [illegible] ಮನುಷ್ಯನನ್ನು ಉಂಟು ಮಾಡಿದವನಾರು? ಅವನಿಗೆ ಪಂಚೇಂದ್ರಿಯಗಳನ್ನು ಕೊಟ್ಟವನಾರು? ಅವನಲ್ಲಿ ಬುದ್ಧಿ, ಜ್ಞಾನ ಮೊದಲಾದುವು ಹುಟ್ಟುವುದು ಯಾರಿಂದ? ಸೂರ್ಯ ಚಂದ್ರ ನಕ್ಷತ್ರಗಳನ್ನು ರಚಿಸಿ ಇವುಗಳಿಗೆ [illegible] ಕೂಡಿಸುವವನಾರು? ಸಣ್ಣ ಬೀಜದಿಂದ ದೊಡ್ಡ ಮರವಾಗುವುದು ಯಾವಾತನ ಶಕ್ತಿಯಿಂದ? ಅರಣ್ಯದಲ್ಲಿ ನೀರು ಹೊಯ್ಯದೆ [illegible]ಗಳ ಬೆಳೆಯುವುದು ಯಾರ ಕರುಣೆಯಿಂದ? ಅಲ್ಲಿ ಇದ್ದ ಮೃಗ ಪಕ್ಷಿಗಳ ಇತರ ಜಂತುಗಳಿಗೆ ಆಹಾರವನ್ನು ಒದಗಿಸಿ ಕೊಡುವವನು ಯಾರು ಮನುಷ್ಯನಿಗೆ [illegible]ಲಿಕ್ಕೆ ಗಾಳಿಯನ್ನು ಉಂಟು ಮಾಡಿದವನಾರು? ಮಳೆ [illegible] [illegible]? ಹೀಗೆ ಇನ್ನೂ ಅನೇಕ ವಿಧವಾಗಿ ವಿಚಾರಿಸಿದರೆ ಇದಕ್ಕೆ ಒಬ್ಬ ಕರ್ತ[illegible] ಇರುವ[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]ಗುತ್ತದೆ ಹೀಗಾದರೆ [illegible] ದೇವನ್ನು ಸೃಷ್ಟಿಗೆ ಒಬ್ಬ ಕರ್ತ[illegible] [illegible] [illegible]ವಾಗಿಯೂ ಇದ್ದಾನೆ [illegible] [illegible] ಅವನು ತನ್ನ ಲೀಲೆಗಳನ್ನು [illegible] [illegible]ಕ್ಕಾಗಿ ಈ ಸೃಷ್ಟಿಯನ್ನು [illegible] [illegible] [illegible] ಈ [illegible] ದೇವ[illegible] [illegible]

[illegible] [illegible] [illegible], ದೇವರ ಇದ್ದಾನೆ ಎಂಬ[illegible] [illegible] ಅದಕ್ಕೆ ಏನೂ ಸಂದೇಹವಿಲ್ಲ ಹಗಲಲಿ ನಕ್ಷತ್ರಗಳು ಕಾಣವದಿಲ್ಲ ಎಂಬ ಮಾತ್ರಕ್ಕೆ ಅವು ಇಲ್ಲವೆನ್ನಲಾಗುವುದೇ? ಹಾಲಿನಲ್ಲಿ ಬೆಣ್ಣೆ ಕಣ್ಣಿಗೆ ಕಾಣುವುದಿಲ್ಲ [illegible] ಕಡೆದ [illegible] ಬೆಣ್ಣೆ ಸಿಕ್ಕದಿರಲು ಅಮೇರಿಕವನ್ನು ಕಾಣದೆ ಇದ್ದವನು ಅಮೇರಿಕ ಇಲ್ಲವೆನ್ನಬಹುದೇ? ನಾವೆಗಳ ಅಥವಾ ವಿಮಾನಗಳ ಮುಖಾಂತರ ಹೋಗಿ ಕಾಣಬೇಕು ಯತ್ನಮಾಡದೆ ದೇವರು ಕಾಣುವದಿಲ್ಲ ಅಂಥಾ ಕರುಣಾಳುವಾದ ಆ ಪರಮಾತ್ಮನನ್ನು ನಾವು ಸದಾ ಸ್ಮರಿಸಿ ಶರಣು ಹೋಗಬೇಕು "ಸಂಕಟ ಬಂದಾಗ ವೆಂಕಟರಮಣ" ಎಂಬ ಗಾದೆಯಂತೆ ನಾವು ಸಂಕಟ ಪಡುವಾಗ ಮಾತ್ರ ಆತನನ್ನು ಸ್ಮರಿಸುವದಲ್ಲ. ಸುಖದುಃಖಗಳು ಸರಿ ಸಮಾನವೆಂದು ಭಾವಿಸಿ ಸದಾ ಅವನನ್ನು ಸ್ಮರಿಸಿ, ತಾನು ಮಾಡುವ ಸಕಲ ಕರ್ತವ್ಯಗಳು ಅವನ ಪ್ರೇರಣೆಯಿಂದಲೇ ನಡಿಯುತ್ತವೆಂದು ಬಗೆದು. ತನ್ನ ಸಕಲವನ್ನು ಅವನ ಚರಣ ಕಮಲಗಳಲ್ಲಿ ಸಮರ್ಪಿಸಬೇಕು, ಒಂದು ಕ್ಷಣವಾದರೂ ಅವನನ್ನು ಮರೆಯಬಾರದು. ಹೀಗೆ ಮಾಡುವುದರಿಂದಲೇ ಮನುಷ್ಯನು ಈ ಸಂಸಾರ ಸಾಗರದಿಂದ ಬಿಡುಗಡೆ ಹೊಂದಿ ಮುಕ್ತಿಯನ್ನು ಹೊಂದುವನು

ಓಂ ತತ್ ಸತ್

ರಾಮದಾಸ.

ಜಿಂಜರ್ ರೋಜರ್ಸ್.

ಇವಳು ಯಾವಾಗಲೂ ಸ್ವತಃ ಲೋಕಸುಂದರಿಯಾಗಿದ್ದಾಳೆ

ಲಕ್ಸ್ ಟಾಯಿಲೆಟ್ ಸಾಬೂನು



LUX TOILET SOAP

LEVER BROTHERS (INDIA) LIMITED

KANARESE

ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಜಿಲ್ಲಾ [illegible] [illegible] [illegible] ಪ್ರದೇಶ ಕಾಂಗ್ರೆಸ್ [illegible] ಕಾಂಗ್ರೆಸ್ ಪಾರ್ಟಿಯ ಸಭೆಗಳಲ್ಲಿ [illegible] [illegible] ದಲ್ಲಿದವೇಕೆಂದ ಮಾಡದಿಂದ [illegible] [illegible] ದೊರೆಯ ಲಿಸ್ಟಿನ [illegible] ಅಭಿಪ್ರಾಯ [illegible] ಅರ್ಜಿ [illegible] [illegible] [illegible] ಯಂತೆ ಬೋರ್ಡಿಗೆ [illegible] [illegible] ಸ್ [illegible] ಕೆಂಡು [illegible] ಆ ಎಲ್ಲಾ [illegible] ಮನವಿ ಕರೆಕರೆಗಳನ್ನು [illegible] ಜಿಲ್ಲಾ [illegible] ಗ್ರೆಸ್ ಪಾರ್ಟಿಯ [illegible] ಇಷ್ಟಪಡುವವರು ತೆರಬಹುದು ಪ್ರತ್ಯಕ್ಷ [illegible] ಜನ ಹಿತಕ್ಕೆ ಹೇಗೆ ಎಲ್ಲಿ [illegible] ಮತ್ತು ಆಗಬಾರದು ಎಂಬುದರ ಬಗ್ಗೆ ನಿಜಾಭಿಪ್ರಾಯವನ್ನು ಸಹ ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಜಿಲ್ಲಾ ಮಹಾಜನರ ಸೇವಕ

ಯಸ್. ಯನ್ ಪೊಳ್ಳ,

ಕಾರ್ಯದರ್ಶಿ

ದ. ಕ. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿ

Dt Bd Congress Party office

Congress House

Felix Pai Bazaar Mangalore

Date 24—6—1938

[ಪಾರ್ಟಿಯ ಲೀಡರ್ ಶ್ರೀ ಪೈಕುಂಡೆ ಬಾರೆಗರು, ಬಿ. ಎ ಬಿ ಎಲ್ ಇವರು ಡೆಪ್ಯುಟಿ ಲೀಡರ್ ಶ್ರೀ ರಾಮಕೃಷ್ಣ ಪ್ರಭು, ಇವರು, ಕೋಶಾಧ್ಯಕ್ಷ—ಶ್ರೀ ಫೆಲಿಕ್ಸ್ ಅಲ್ವಾರಿಸ್ ಇವರು, ಕಾರ್ಯದರ್ಶಿ ಮತ್ತು ವಿಪ್—ಶ್ರೀ ಯಸ್ ಯನ್, ಪೊಳ್ಳ ಇವರು]

ಸಾಧಾರಣ ಥಂಡಿ ಮತ್ತು ಕಿರುಕೆಳೆ ಜ್ವರವು ಕೋಡಿಗ ಕೆಮ್ಮಿನಲ್ಲಿ ರೂಪಾಂತರವಾಗುತ್ತದೆ

[illegible] ಥಂಡಿ [illegible] ಕೆಮ್ಮಿನಲ್ಲಿ [illegible] ರೂಪಾಂತರ ಹೊಂದುವದೇ [illegible] [illegible] [illegible] ಜೀವವು [illegible] [illegible] ದಿನದಿನಕ್ಕೆ [illegible] [illegible] "ಪುರೋಹಿತ ಶ್ವಾಸಹಾರಿ" [illegible] ಇದರ ಮೇಲೆ ಅತ್ಯಂತ ವಿಶ್ವಸನೀಯ ಮತ್ತು ಉತ್ತಮ ಉಪಾಯವಿರುವದು ಇದನ್ನು ಸೇವಿಸಿದ ಕೂಡಲೇ ಕೋಡಿಗೆ [illegible] [illegible] [illegible] [illegible] ಕೂಡಲೇ ಕಡಿಮೆ [illegible] ಜ್ವರವು [illegible] ಮತ್ತು [illegible] [illegible] [illegible] [illegible] ಬಾಟ್ಲಿಗಳಲ್ಲಿ [illegible] ರೂ, [illegible] ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ

ಮಂಗಳೂರು ಏಜಂಟ್ಸ್ ಪ್ರೊವಿನ್ಶಿಯಲ್ ಸ್ಟೋರ್ಸ್ ರಥಬೀದಿ ಮಂಗಳೂರು.

ಡಾ ಪುರೋಹಿತ ಫಾರ್ಮಸಿ

WANTED

Agents for Silk Shirting, Coating, Sarees, etc. Pay Rs. 100 T. A. Extra. Ask free samples and particulars.

Oirson Knitting Works,
Ludhiana.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	[illegible]	[illegible]
	ರೂ. ಆ.	ರೂ. ಆ.
[illegible]	1—14	1—14
[illegible]	3—8	4—0
[illegible]	3—14	4—3
[illegible]	4—8	4—8
[illegible]	4—7	4—7
ದಂಗಾಜಾ ಬಿ. ಗೋ. ಒಳ್ಳೆ	7—2	7—4
ಎಲ್ಲೂರು ಬಿ. ಮು. ಒಳ್ಳೆ	3—14	4—0
ಗೋದಿ ಗೋಣಿ ಒಳ್ಳೆ	13—0	14—8
ಕಡಲೆ ಗೋಣಿ ಒಳ್ಳೆ	11—8	18—8
ಹುರುಳಿ ಗೋಣಿ ಒಳ್ಳೆ	6—0	6—2
ಕಡಲೆ ಗೋಣಿ ಒಳ್ಳೆ	9—8	10—8
ತೊಗರಿಬೇಳೆ ಗೋಣಿ ಒಳ್ಳೆ	17—8	18—0
ಉದ್ದು ಗೋಣಿ ಒಳ್ಳೆ	9—0	9—8
ಹೆಸರು ಗೋಣಿ ಒಳ್ಳೆ	9—12	10—8
ಊರುಬೆಲ್ಲ ಖಂಡಿ ಒಳ್ಳೆ	36—0	40—0
ಉಪ್ಪು ಗೋಣಿ ಒಳ್ಳೆ	4—8	5—4
ಕೊಬ್ಬರಿ ಖಂಡಿ ಒಳ್ಳೆ	46—8	46—8
ಎಳ್ಳಿಂಡಿ ಖಂಡಿ ಒಳ್ಳೆ	25—	26—0
ತೆಂಗಿನ ಎಣ್ಣೆ ಮಣ ಒಳ್ಳೆ	3—5	3—6
ಎಳ್ಳೆಣ್ಣೆ ಮಣ ಒಳ್ಳೆ	6—0	7—0
ಚಿಮಣಿ ಎಣ್ಣೆ ಪೆಟ್ಟಿಗೆ ಒಳ್ಳೆ	6—5	7—5
ಮೋರಿಸ ಸಕ್ಕರೆ ಮ. ಒಳ್ಳೆ	2—13	2—14
ಮೆಣಸು	4—8	6—0
ಸಾಸಿವೆ ಮುಡಿ ಒಳ್ಳೆ	5—8	6—8
[illegible] ಹ. ಪೇ. ಗೆ	16—0	17—8
ಯಾಲಕ್ಕಿ ಬೀಜ ಮಣ ಒಳ್ಳೆ	80—0	85—0
ಗೇರುಬೀಜ ಮ. ಒಳ್ಳೆ	3—14	3—15
[illegible] ಖಂಡಿ ಒಳ್ಳೆ	50—0	55—0
[illegible] ಮ. ಒಳ್ಳೆ	14—12	15—0
[illegible] ಮ. ಒಳ್ಳೆ	14—8	15—0
[illegible] ಸೇರು ಒಳ್ಳೆ	13—8	14—0
[illegible] ಮ. ಒಳ್ಳೆ	12—0	12—0
ಪವನು ಒಳ್ಳೆ	22—8	23—0
ಹುಣಸೆ ಹುಳಿ ಖಂಡಿ ಒಳ್ಳೆ	40—0	45—8
ನೇಟಿವ್ ಕಾಫಿ ಖಂಡಿ ಒಳ್ಳೆ	140—0	148—0
[illegible] ಕಾಫಿ ಖಂಡಿ ಒಳ್ಳೆ	186—0	198—0
[illegible] ಏಲಕ್ಕಿ ಮಣ	35—0	39—0

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದ್ದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚೊಕ್ಕಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಜಗತ್ಪ್ರಸಿದ್ಧ ಆಯುರ್ವೇದೀಯ ಔಷಧಗಳು.

Change

ಶ್ರೀಕರ ಕಸ್ತೂರಿ ಮಾತ್ರೆ

ಮಕ್ಕಳಿಗೆ ಸಂಜೀವನ, ಯುವಕರಿಗೆ ಮಿತ್ರ, ವೃದ್ಧರಿಗೆ ಆರೋಗ್ಯಪ್ರದ. ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳನ್ನು ತಾಂಬೂಲದೊಡನೆ ಸೇವಿಸಿದರೆ ಎಲ್ಲಾ ದೇಶಗಳಲ್ಲೂ, ಎಲ್ಲಾ ಹವೆಗಳಲ್ಲೂ ಶರೀರವನ್ನು ರಕ್ಷಿಸುತ್ತದೆ. ಅಜೀರ್ಣವನ್ನು ಪರಿಹರಿಸುತ್ತದೆ. ಸೋಂಕುರೋಗಗಳನ್ನು ನಿವಾರಣೆ ಮಾಡುತ್ತದೆ. ಆಬಾಲವೃದ್ಧರಿಗೂ ಕೆಮ್ಮು, ವಿಧವಿಧ ಜ್ವರ, ನೆಗಡಿ, ಹಲ್ಲುನೋವು, ಉಬ್ಬಸ, ಅರೋಚಕ, ಆಲಸ್ಯ ಮುಂತಾದ ಶೀತವಾತದಿಂದುಂಟಾಗುವ ಸಮಸ್ತ ರೋಗಗಳನ್ನೂ ಜಾಗ್ರತೆ ಗುಣಪಡಿಸುತ್ತದೆ. ಬಾಣಂತಿಯರಿಗೆ ಅಮೃತತುಲ್ಯವಾದುದು. ಎಲ್ಲಾ ಕಾಲದಲ್ಲೂ ನಿಮ್ಮನ್ನು ಕಾಪಾಡುವುದು. ಬೆಲೆ:—2 ಮತ್ತು 4 ಆಣೆ.

ಬಾಲಸಂಜೀವಿನಿ

ಈ ಅಮೃತವು ಮಕ್ಕಳಿರುವ ಮನೆಯಲ್ಲಿ ಸರ್ವದಾ ಇರಬೇಕಾದುದು. 1 ವರ್ಷದ ಲಾಗಾಯತು 10 ವರ್ಷದ ವರೆಗೆ ಉಪಯೋಗಿಸಬಹುದು. 1-2 ಮಾತ್ರೆಗಳನ್ನು ವಯೋಗುಣವಾಗಿ ಆಗಾಗ್ಯೆ ಉಪಯೋಗಿಸಿದರೆ ಸುಖವಾಗಿ 2-3 ವೇಳೆ ಭೇದಿಯಾಗಿ ಮಕ್ಕಳಿಗೆ ಯಾವ ರೋಗವೂ ಬರಲಾರದು. ಅಸಾಧ್ಯವಾದ ಪಕ್ಕೆ ಶೆಳತ. ವಿಧವಿಧ ವಾಯು, (Convulsions and fits), ಹೊಟ್ಟೆಯುಬ್ಬರ, ಮಂದಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ಮಲಬಂಧಗಳಲ್ಲಿ ಒಂದು ಹೊತ್ತಿನ ಔಷಧದಿಂದಲೇ ಅದ್ಭುತ ಗುಣವು ತೋರುವುದು. 50 ಮಾತ್ರೆ 4 ಆಣೆ.

ಗೋರೋಚನ ಮಾತ್ರೆ

ಈಗ ಹುಟ್ಟಿದ ಮಗುವಿನಿಂದ ಐದು ವರ್ಷಗಳ ವರೆಗೆ ಉಪಯೋಗಿಸಬಹುದು. ಬಹಳ ಸೂಕ್ಷ್ಮ ಪ್ರಕೃತಿಯುಳ್ಳ ಮಕ್ಕಳಿಗೆ ಸುಖವಾಗಿ 1-2 ವೇಳೆ ಮಾತ್ರ ಭೇದಿ ಮಾಡಿಸುವುದರಲ್ಲಿ ಈ ಮಾತ್ರೆಗಳು ಕೈಗೊಂಡ ಸಿದ್ಧಾಮೃತ. ಯಾವ ಮಕ್ಕಳಿಗೆ ಗೋರೋಚನ ಮಾತ್ರೆಯಿಂದ ಭೇದಿಯಾಗುವುದಿಲ್ಲವೋ ಅಂಥಾ ಮಕ್ಕಳಿಗೆ 'ಬಾಲಸಂಜೀವಿನಿ ಮಾತ್ರೆ'ಯನ್ನು ಉಪಯೋಗಿಸಬಹುದು. 24 ಮಾತ್ರೆ 6 ಆಣೆ.

ಜ್ವರ ಕೇಸರಿ

ಸಮಸ್ತ ವಿಧವಾದ ಛಳಿಜ್ವರ, ಮಲೇರಿಯಾಜ್ವರ, ಪ್ಲೇಗುಜ್ವರ, ಇನ್‌ಫ್ಲುಯಾನ್‌ಜಾಜ್ವರ, ವಾಯುದೇ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ:—8 ಆಣೆ.

ಆಮೋದಿನಿ

ಘಮಘಮಿಸುವ ಸುವಾಸನೆಯುಳ್ಳ ಈ ಮಾತ್ರೆಗಳು 25 ವರ್ಷಗಳಿಂದಲೂ ಜನರ ಪ್ರೀತಿಯನ್ನು ಸಂಪಾದಿಸಿರುವುದು. ಸಂಗೀತಗಾರರಿಗೆ ಸುಖವಾಗಿ ಹಾಡಲು ವಿಶೇಷ ಸಹಾಯ ಮಾಡುವುದು, ಬಾಯಾರಿಕೆಯನ್ನು ಶಮನಮಾಡುವುದು. ಸೋಂಕು ರೋಗಗಳು ಶರೀರಕ್ಕೆ ಅಂಟದಂತೆ ಶರೀರವನ್ನು ಕಾಪಾಡುವುದು. ಮಕ್ಕಳ ಮತ್ತು ದೊಡ್ಡವರ ಕೆಮ್ಮನ್ನು ತಕ್ಷಣ ಪರಿಹರಿಸುವುದು. ಆಬಾಲವೃದ್ಧರೂ ಪ್ರೀತಿಯಿಂದ ಸೇವಿಸಲು ಅರ್ಹವಾಗಿದೆ. ಬೆಲೆ: 0—4—0, 0—2—0

ನಮ್ಮ ನಂಜನಗೂಡು ಸದ್ವೈದ್ಯಶಾಲಾದಲ್ಲಿ ತಯಾರಾಗುವುದೇ "ನಂಜನಗೂಡು ಟೂತ್-ಪೌಡರ್" ಎಂಬುದು ಜ್ಞಾಪಕದಲ್ಲಿರಲಿ. ನಕ್ಕಲ್ ಮಾಲನ್ನು ಕೊಂಡು ಮೋಸಹೋಗಬೇಡಿರಿ. ಕ್ಯಾಟಲಾಗನ್ನು ಬರೆದು ತರಿಸಿರಿ.

ಸದ್ವೈದ್ಯಶಾಲಾ, ನಂಜನಗೂಡು.

ಶಾಲಿವಾಹನ ಶಕ ೧೮೬೫ನೆಯ ಬಹುಧಾನ್ಯ ಸಂವತ್ಸರದ ಆಷಾಢ ಶು| ೫ ಶನಿವಾರದಿಂದ ಆಷಾಢ ಶು| ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೪೩ನೇಯ ಇಂಗ್ಲಿಷ್ ಕಾಲೆಂಡರ್)

2	ಶನಿ	೩	೨೧॥	ಮಘಾ	೭॥	೧೮	[illegible]
3	ರವಿ	೪	೧೭॥	ಹುಬ್ಬ	೬	೧೯	
4	ಸೋ.	೫	೧೪॥	ಉತ್ತರಾ	೪	೨೦	
5	ಕುಜ	೬	೧೨॥	ಹಸ್ತಾ	೪	೨೧	
6	ಬುಧ	೭	೧೨	ಚಿತ್ರಾ	೪॥	೨೨	
7	ಗುರು	೮	೧೨॥	ಸ್ವಾತೀ	೭	೨೩	
8	ಶುಕ್ರ	೯	೧೪॥	ವಿಶಾಖಾ	೧೦	೨೪	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—**K. R. GURU**, *Managing Director*

Use the soaps
KNOWN ALL OVER
WISICO'S,
MINAR
&
TAJAMAHAL 'Red'
Bar Soaps.
POPULAR IN THE MARKET
Sole Distributer—
P. G. KAMATH,
Kashmir House,
Marnamikatta, MANGALORE.

'DILROZ' Regd

'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1. ಮಂಗಳೂರಿನಿಂದ ಉಡುಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ
2. ಕುಂದಾಪುರದಿಂದ ಬಾಳೆಬರೆಗಾಗಿ ಶಿಮೊಗ್ಗಾ.
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಹಳ್ಳಿ, ಶಿಮೊಗ್ಗಾ ಹರಿಹರ ವರೆಗೆ.
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

THE

Canara Industrial & Banking Syndicate Ltd.,

(Incorporated in British India)

Ested 1925.

Head Office: UDIPI, (S. India.)

Member:

RESERVE BANK OF INDIA.
BANKERS CLEARING HOUSE, BOMBAY

Authorised Capital	Rs 10,00,000/
Issued Capital	Rs 8,00,000 —
Subscribed Capital	Rs 7,74,[illegible]00/—
Paid Up Capital	Rs 3,86,860/—
Reserves	Rs 2,16,700/—

Total Resources exceed 51 Lakhs.

A BRANCH OF THE BANK
Will be opened shortly at
FELIX PAI BAZAAR, MANGALORE

(Block No 1)

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು; ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇವೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲದೆ, ಗ್ರಹಶಾಂತಿಯೊಂದೇ ಎಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ಜನಗಳಿಂದಲೂ ಲಾಭವಾಗುತ್ತ ಬಂದಿದೆ. ... ಇಂಥ ವಸ್ತುವನ್ನು ... ಈ ವಸ್ತುವಿನಿಂದ ... ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ... ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ...



ಈ ನವಗ್ರಹ ಯಂತ್ರವು ...

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಮಂ)ಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸ್ವದೇಶಾಭಿಮಾನಿ

ಸಂಪುಟ ೨೨] ತಾರೀಖು ೫ನೇ ಆಗೋಸ್ಟು ೧೯೩೮ (5-8-1938.) [ಸಂಚಿಕೆ ೪೦

★

24 ಪುಟಗಳು **24**

ಅನುಕ್ರಮಣಿಕೆ

ವಿದುರಾಶ್ವತ್ಥದಲ್ಲಿ ಗುಂಡಿನೇಟು ತಗಲಿ ಸತ್ತುದು ಹೊರತು ಬಾವಿಗೆ ಬಿದ್ದು ಸತ್ತುದಲ್ಲ

★

ಮಹಿಳಾ ಶಕ್ತಿ

★

ರೈತನ ಹಿತಸಾಧನೆ ಮತ್ತು ರಕ್ಷಣೆಯಾಗುವುದಾದರೆ ಅದು ಕಾಂಗ್ರೆಸ್ಸಿನಿಂದ

★

[illegible]ಷರಿನಿಂದ ಹಾಗೆ [illegible]ಡರಾಗಬಹುದೆ? [illegible]ಲಾಯನ

★

ಅರೆ ನೋಟಗಳು

★

ಜನಾಪ್ವದ ರಹಸ್ಯಗಳು

★

ಕೇಂಟನ್ ಚೀನೀ ಕ್ರಾಂತಿಗಳ ಕೇಂದ್ರ!

★

ನಿಮಗೆ ತಿಳಿದಿರುವುದು ಎಷ್ಟು

★

ಚಂದ್ರಯಾತ್ರೆ— ವಿಜ್ಞಾನಿಗಳು ಏನಂತೆ?

ಬರ್ಮ[illegible] ಭಾರತೀಯರ ದ್ವೇಷ!

★

ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು

★

ಕಾಂಗ್ರೆಸಿಗೆ ಮುಸ್ಲಿಂ ಲೀಗಿನ ಕೊನೆಯ ಮಾತು

★



ನ್ಯೂ ಥಿಯೇಟರ್ಸನವರು ತಯಾರಿಸಿದ 'ಧರತೀ ಮಾತಾ'ದಲ್ಲಿ

ಶ್ರೀಮತಿ ಉಮಾಶಶಿ

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank with plenty of enthusiasm for our work plus plenty of solid experience with which to tackle the work successfully.

RESOURCES OVER A CRORE.

ANARA BANK LIMITED

ಚಿತ್ರ-ವಿಚಿತ್ರ

"ನಗ್ನ ಸಿಗರೇಟು."

ಹಂಗೇರಿಯ ಸಾಹಸಿಗಳಲ್ಲೊಬ್ಬರಾದ ಸ್ಟೀಫನ್ ಟಾಮಸ್ ಎಂಬವರು ನಡೆಸಿದ ಒಂದು ಶೋಧನೆಯಿಂದಾಗಿ ಸಿಗರೇಟು ಕೈಗೆ ಕೈಯಲ್ಲಿ ಕ್ರಾಂತಿಯುಟಾಗುವಂತಿದೆ ಸಿಗರೇಟು ಸೇದುವವರಿಗೆ ಹೆಚ್ಚಿನ ಹಾನಿಯುಂಟು ಮಾಡುವುದು ಅದರ ಹೊರಗಿರುವ ಕಾಗದದ ಹೊಗೆಯಂತೆ — ಇದೀಗ ಆಶ್ಚರ್ಯ! ಇಂತಹ ಬೀಡಿ ಸೇದುವವರಿಗೆ ಈ ಹಾನಿಯಾಗುವುದಿಲ್ಲವೆನ್ನಿ) ಆದುದರಿಂದ ಕಾಗದವಿಲ್ಲದ ಸಿಗರೇಟನ್ನು ಗೊತ್ತು ಹಚ್ಚಿರುವವರು ಮಿ ಸ್ಟೀಫನ್ ಟಾಮಸರು, ಅದನ್ನು ಅವರು "ನಗ್ನ ಸಿಗರೇಟು" ಎಂದು ಕರೆಯುತ್ತಿರುವರು

ಸಿಗರೇಟನ್ನು ಕಾಗದದಲ್ಲಿ ಕಟ್ಟುವ ಬದಲಾಗಿ — ಹೊಗೆಸೊಪ್ಪಿನ ಸತ್ವದಿಂದಲೇ ಅದೊಂದು ಬಗೆಯ ಪಾರದರ್ಶಕ (transparent) ವಸ್ತುವನ್ನು ತಯಾರಿಸಿ ಅದರಲ್ಲಿ ಕಟ್ಟಬಹುದಂತೆ ಈಗ ಸಿಗರೇಟಿಗೆ ಬರುವ ಕಾಗದದಂತಲೂ ತೆಳು ಇರುತ್ತದಂತೆ ಅದು. ಈ ಹೊಗೆಸೊಪ್ಪಿನ ಫಿಲ್ಮು ಒಳಗಿದ್ದ ಟೊಬೆಕೊದಂತೆ ಉರಿಯುತ್ತದಂತೆ, ಪರಿಮಳವೂ ಅದೇ ರೀತಿ.

ಅಡಿಮೇಲಾದ ಸ್ನಾಯುಗಳು.

ಬೂರ್ಡೆಕ್ಸ್ ಎಂಬಲ್ಲಿ ಒಬ್ಬ ತರುಣಿಯೀಕೆಯ ಮುಖದ ಸ್ನಾಯುಗಳೆಲ್ಲ ಅಡಿಮೇಲಾಗಿರುವವು ಆದುದರಿಂದ ಆಕೆಯು ಕೂಗಿರೆ ನಗುವಂತೆಯೂ, ನಕ್ಕರೆ ಕೂಗಿದಂತೆಯೂ ತೋರುತ್ತದೆ.

ಅರಬ ಶಬ್ದ ಬಂಢಾರ

ಅರಬರ ಶಬ್ದ ಬಂಢಾರವು ಬಹಳ ದೊಡ್ಡದು, 'ಗೀಟು' ಎಂಬ ಅರ್ಥವನ್ನು ಕೊಡುವ 450 ಶಬ್ದಗಳೂ 'ಒಂಟೆ' ಎಂದರ್ಥ ಕೊಡುವ ೮೩೭ ಶಬ್ದಗಳೂ, 'ಖಡ್ಗ'ವೆಂಬರ್ಥ ಕೊಡುವ ೧೦೩೭ ಶಬ್ದಗಳೂ ಅವರ ಭಾಷೆಯಲ್ಲಿವೆ

ಅಂಚೆ ಚೀಟಿನ ಅಲಂಕಾರ

ಎಡಿನ್‌ಬರ್ಗಿನ ಜೇಮ್ಸ್ ಡೊನಾಲ್ಡನ್ ಎಂಬಾತನು ತನ್ನ ಮನೆಯಲ್ಲಿದ್ದ ಅದೊಂದು ಸಣ್ಣ ಕೋಣೆಯನ್ನು ೭೮,೭೭೧ ಅಂಚೆ ಚೀಟುಗಳನ್ನು ಅದರ ಗೋಡೆಗಳಿಗೆ ಅಂಟಿಸಿ, ಅಲಂಕರಿಸಿರುವನು.

ಮಂಜಿನ ಮನೆ

ಉತ್ತರ ಧ್ರುವದಲ್ಲಿ ಓರ್ವ ಕ್ರೈಸ್ತ ಪಾದ್ರಿಯು ಮಂಜಿನಿಂದಲೇ ಒಂದ ಇಂಗ್ರೇಜಿಯನ್ನು ಕಟ್ಟಿರುವನು

ಆನೆಗಳ ಮರಣ

ಆನೆಗಳು ಮುದಿಯಾಗಿ ಸಾಯುವ ಸಮಯದಲ್ಲಿ, ಅದೊಂದು ನಿಗದಿತ ಸ್ಥಳಕ್ಕೆ ಹೋಗಿ ಅಲ್ಲಿ ಪ್ರಾಣಬಿಡುವುವು. ಆದುದರಿಂದ ಅನೇಕಾನೇಕ ಆನೆಗಳ ಎಲುಬು ಮೊದಲಾದುವುಗಳು ಒಂದೇ ಕಡೆಯಲ್ಲೇ ಇರುತ್ತವೆ.

ಅದೃಶ್ಯ ವಿಮಾನ

— ಬ್ರಿಟಿಷ್ ವಿಜ್ಞಾನಿಗಳು ಅದೊಂದು ಬಗೆಯ ಪಾರದರ್ಶಕ ವಸ್ತುವಿನಿಂದ ವಿಮಾನಗಳನ್ನು ತಯಾರಿಸಲು ಪ್ರಯತ್ನಿಸುತ್ತಿರುವರು ಅವರ ಪ್ರಯತ್ನಗಳು ಫಲಕಾರಿಯಾದರೆ, ಇನ್ನು ಮುಂದಿನ ವಿಮಾನಗಳು ಮೇಲಿದ್ದಾಗ ಪ್ರಾಯಃ ಕಣ್ಣಿಗೇ ಕಾಣಸಲಿಕ್ಕಿಲ್ಲ

ಆ ವಸ್ತುವು ಕನ್ನಡಿಯಂತೆ ಪಾರದರ್ಶಕವಾಗಿರುವುದಲ್ಲದೆ, ಈಗ ವಿಮಾನಗಳನ್ನು ತಯಾರಿಸುತ್ತಿರುವ ವಸ್ತುಗಳಂತೆ ಗಟ್ಟಿಯೂ ಬಲವೂ ಆಗಿರುವುದು. ಅಂತು ಇನ್ನುಮುಂದೆ ಅದೃಶ್ಯವಾಗಿ ಬಂದು, ನಗರಗಳ ಮೇಲೆ ಬಾಂಬೆಸೆದು ಹೋಗಲು ಸುಲಭವಾಯಿತೆನ್ನಿ!

211 ವರ್ಷಗಳ ಶಿಕ್ಷೆ

ಜರ್ಮನಿಯ ಒಬ್ಬ ಕಳ್ಳನನ್ನು ಆತನು ಮಾಡಿದ 607 ಕಳವುಗಳಿಗಾಗಿ, ಆತನಿಗೆ 211 ವರ್ಷಗಳ ಸಜೆಯನ್ನು ವಿಧಿಸಲಾಗಿದೆ.

ರಾಕ್ಷಸ ನಾಯಿಕೊಡೆ

ಸೆಕ್ಸನಿಯಲ್ಲಿ ಹುಟ್ಟಿದ ಅನೊಂದು ನಾಯಿಕೊಡೆಯು ವ್ಯಾಸವು 8 ಅಡಿ 7 ಅಂಗುಲವಿತ್ತು. ಎತ್ತರ 17 ಅಂಗುಲ. ಭಾರ 25 ರಾತ್ತಲ.

ಕಣ್ಣು ಮುಚ್ಚು.

ಈಸ್ಟ್ ಇಂಡಿಸಿನ ಟಿಮೋರ್‌ಲೊಟ್ ಎಂಬ ಪ್ರದೇಶದ ಸ್ತ್ರೀಯರು ಪರಪುರುಷರ ಇದಿರಿನಲ್ಲಿ ಒಂದು ಕಣ್ಣನ್ನು ಮುಚ್ಚಿಕೊಂಡು ನಿಲ್ಲಬೇಕಂತೆ ನಮ್ಮಲ್ಲಿ ಈ ಸಂಕೇತವು ಏನನ್ನು ಸೂಚಿಸುತ್ತದೆ? ಗೊತ್ತೇ?

ಪ್ರಾಣಾಪಹಾರಕಾರಿ

ಪನಾಮಾ ದೇಶದಲ್ಲಿ ಫ್ಲಾಕನ್ ಎಂಬುದೊಂದು ಬಳ್ಳಿ ಇದೆ ಅದು ತಾನು ಹತ್ತಿದ ಮರವನ್ನು ಮೆಲ್ಲಮೆಲ್ಲನೆ ಹಿಸುಕಿ ಅದರ ಪ್ರಾಣವನ್ನು ಕಾಲಕ್ರಮದಲ್ಲಿ ಅಪಹರಿಸುತ್ತದೆ

ಭೂತವು ಹಿಂಬಾಲಿಸದಂತೆ.

ಗಿಯಾಲೊ ದೇಶದ ಸ್ತ್ರೀಯರು ಒಂದು ಕಪ್ಪು ವಸ್ತ್ರವನ್ನು ಅವರ ಬೆನ್ನ ಹಿಂದೆ ಬಿಟ್ಟುಬಿಡುತ್ತಾರೆ. ತಮ್ಮ ಹೆಜ್ಜೆಗಳನ್ನು ಹಿಂಬಾಲಿಸಿ ಭೂತವು ತಮ್ಮನ್ನು ಪಿಲೋಭಗೊಳಿಸದಂತೆ ಅವರು ಬೆನ್ನ ಹಿಂದೆ ನೇಲಬಿಟ್ಟ ವಸ್ತ್ರಕ್ಕೆ ಪ್ರತಿಯೊಂದು ಅಡಿ ಇಡಬೇಕಾದರೆ ಕಾಲುಜ್ಜಿ ನಡೆಯುವರು.

ಲೀಗಿನವರಿಗೆ ಫೆಜ್ ಟೊಪ್ಪಿ.

ಕೇಂದ್ರ ನ್ಯಾಯವಿಧಾಯಕ ಸಭೆಯ ಕೊಂಗ್ರೆಸ್ ಸದಸ್ಯರೆಲ್ಲರೂ ಗಾಂಧಿ ಟೊಪ್ಪಿಯನ್ನು ಇಟ್ಟುಕೊಳ್ಳುತ್ತಾರೆ. ಕೊಂಗ್ರೆಸ್ ಸದಸ್ಯರ ಮಂಗಲಸೂತ್ರವದು. ತಾವೂ ಇಂತಹ ಏನಾದರೊಂದು ಕುರುಹನ್ನು ಏರ್ಪಡಿಸಬೇಕೆಂದು ಮುಸ್ಲಿಂ ಲೀಗಿನವರಿಗೆ ಆಲೋಚನೆಯಾಗಿದೆ. ಆದುದರಿಂದ ಗಾಂಧಿಟೊಪ್ಪಿಗೆ ಎದುರಾಗಿ ತಾವು ಫೆಜ್ ಟೊಪ್ಪಿಯನ್ನು ಧರಿಸಬೇಕೆಂಬ ನಿರ್ಧಾರವಾಗಿರುವುದು. ಉಡುಪಿನ ವಿಷಯಕವಾದ ಈ ಪ್ರಭೇದವು ಕೊಂಗ್ರೆಸ್ ಮತ್ತು ಲೀಗಿನೊಳಗೆ ಇದ್ದ ಅಂತರವನು ಇನ್ನಷ್ಟು ಹೆಚ್ಚಿಸುವುದಲ್ಲದೆ ಅನ್ಯಥಾ ಅಲ್ಲ

ವಿಷಪ್ರಯೋಗದಿಂದ ರೋಗನಿವಾರಣ

ಸರ್ಪಗಳ ವಿಷವು ವಾತ, ವಾತ ಸಂಬಂಧವಾದ ಇತರ ರೋಗಗಳು ಮತ್ತು ಅರ್ಬುದಗಳನ್ನು ಗುಣಪಡಿಸಲು ಉಪಯೋಗಕಾರಿಯಾಗಿದೆಯೆಂದು ಇತ್ತೀಚೆಗೆ ಶೋಧಿಸಲಾಗಿದೆ ಹೆಮರೇಜನ್ನು ರಸೆಲ್ ಎಂಬ ಸರ್ಪದ ವಿಷದಿಂದ ಗುಣಪಡಿಸಲಾಗಿದೆ ಆದರೆ ಈ ವಿಷಗಳನ್ನು ಪ್ರಯೋಗಿಸುವಾಗ ಬಹಳ ತೆಳುಮಾಡಿ, ಹೊಟ್ಟೆಯಲ್ಲಿ ಕೊಡಲ್ಪಡುವುವು ಹಾವು ಕಚ್ಚಿದರೆ ಮರಣವುಂಟಾಗುವುದಾದರೂ, ಅದೇ ವಿಷವನ್ನು ಮಾನವನು ರೋಗಾದಿಗಳನ್ನು ಗುಣಪಡಿಸುವುದಕ್ಕಾಗಿ ಉಪಯೋಗಿಸುತ್ತಿರುವನೆಂಬುದು ಆಶ್ಚರ್ಯದ ಮಾತಲ್ಲವೆ?

ನಾಲ್ಕೂ ಮೂಲೆಗಳಿಂದ

ಕಲ್ಕತ್ತ:— ಬಂಗಾಳದ ಮಂತ್ರಿಮಂಡಲಕ್ಕೆ ದೀರ್ಘಾಯುಷ್ಯವಿದೆ ಆದರೆ ಜೀವವು ಒಂದು ನೂಲಿನ ಆಧಾರ ಉಳಿದಿರುವಂತಿದೆ ಮಂತ್ರಿಮಂಡಲಕ್ಕೆ, ಎಸೆಂಬ್ಲಿಯು ಒಟ್ಟು 248 ಮೆಂಬರರಲ್ಲಿ, ಮಾರ್ಚಿಯಲ್ಲಿ ವಿಶೇಷ ಚರ್ಚೆಗಳಾದಾಗ 131 ವೋಟುಗಳು ಸಿಕ್ಕಿವೆ, ವಿರುದ್ಧ 97 ಈಗ ವಿರುದ್ಧ ಪಕ್ಷಬೇಕೆಂದ. 122 ವೋಟುಗಳವರೆಗೆ ಕೂಡಿಸಬಹುದಾಗಿದೆ, ಎಂದರೆ ಅವರಿಗಿಂತ 5 ವೋಟು ಹೆಚ್ಚಿಗೆ ಮಂತ್ರಿಗಳಿಗೆ! ಇವೇ ಆ ಹುಕ್ಕಮಂತ್ರಿಮಂಡಲದ ಪಂಚಪ್ರಾಣಗಳು

ಬೊಂಬಾಯಿ:— ೯ ಫಿರಂಗಿಗಳ ಬಹುಮಾನದ ರಾಜ್ಯಗಳ ಪ್ರತಿನಿಧಿಗಳು (ಅರಸರೇ) ಈಗ ಬೊಂಬಾಯಿಯಲ್ಲಿ ಸೇರಿ ಫೆಡರೇಶನ್ ಚರ್ಚೆಯಲ್ಲಿ ತಮ್ಮ ಅಭಿಪ್ರಾಯ ಸೂಚಿಸುವವರಿದ್ದಾರೆ ಇಂತಹ 21 ರಾಜ್ಯಗಳುಂಟು

ಬಂಗಾಳ ಎಸೆಂಬ್ಲಿ — ಲೀಡರ್ ಮತ್ತು ಡಿಪ್ಯೂಟಿ ಲೀಡರ್ ಅಲ್ಲದೆ ಇತರ ವಿರುದ್ಧಪಕ್ಷದ ಮೆಂಬರರೆಲ್ಲ ಬಂಗಾಳಿ ಭಾಷೆಯಲ್ಲೇ ಭಾಷಣಗಳನ್ನು ಮಾಡಬೇಕಾಗಿ ನಿಶ್ಚಯ ಮಾಡಿಕೊಂಡಿದ್ದಾರೆ

ಲಾಹೋರ್:— ಗವರ್ನ್‌ಮೆಂಟ್ ಕೊಲೆಜಿನ ಕಾವಲಿನವನು ಇರುವ ಕೋಣೆಯಿಂದ 125 ತೊಲೆ ಅಫೀಮನ್ನು ಪೊಲೀಸರು ಜಪ್ತುಮಾಡಿದ್ದಾರೆ ಕೊಲೆಜ್ ಕಾವಲಿನವನು ಪೋಲೀಸು ಕೈದಿನಲ್ಲಿರುವನು

ಕರಾಚಿ:— ಸಿಂಧದ ಮುಸ್ಲಿಮ ಲೀಗಿನ ಕಾರ್ಯದರ್ಶಿ ಶ್ರೀ ಜಿ ಅಲ್ಲಾನಾ ಎಂಬವರು ಈಗ, ಕೊಂಗ್ರೆಸನ್ನು ಸೇರಿರುವರು ಇವರ ಧರ್ಮಪತ್ನಿಯುವರು ಅಲಿನ ಎಸೆಂಬ್ಲಿಯ ಸದಸ್ಯೆ, ಇವಳೂ ಕೊಂಗ್ರೆಸನ್ನು ಸೇರುವಳಾಗಿ ಸಂಬಳಾಗಿದೆ ಮುಸ್ಲಿಮ ಲೀಗಿನ ಕರ್ತಗಳಿಂದ ಕೊಂಗ್ರೆಸಿನೊಡನೆ ಸಂಧಾನವಾಗಲಿಲ್ಲ ದು ತಿಳಿದ ಕೂಡಲೆ, ಎಷ್ಟೋ ಸಿಂಧದ ಸ್ಲಿಮರು ಕೊಂಗ್ರೆಸನ್ನು ಸೇರ ತರೆ ದು ಇವರು ಪ್ರಕಟಿಸಿದ್ದಾರೆ

ಲಕ್ನೋ:— ಶ್ರೀ ವಿಜಯಲಕ್ಷ್ಮಿ ಪಂಡಿತರ - ಮಂತ್ರಿ- ಎರಡು ತಿಂಗಳ ರಜಾ ಅಪೇಕ್ಷಿಸುವರು ಕೊಲೀರಾ ಹರಡಿದ್ದ ಪ್ರಾಂತ್ಯದಲ್ಲಿ ಇವರು ಸಂಚಾರಮಾಡಿ ಈಗ ವಿಶ್ರಾಂತಿ ಪಡೆಯುವವರಾಗಿದ್ದಾರೆ

ಬೊಂಬಾಯಿ:— ವಿದ್ಯಾರ್ಥಿಗಳಿಗೂ ನಿರಕ್ಷರರಾದ ಪ್ರೌಢರಿಗೂ ಶಿಕ್ಷಣಪ್ರಚಾರ ಸಹಾಯಕ್ಕಾಗಿ ಫಿಲ್ಮುಗಳನ್ನು ಪ್ರದರ್ಶಿಸುವ ಕಂಪೆನಿಯೊಂದು ಸ್ಥಾಪನೆಹೊಂದಿದೆ

ಮಿರಜ್:— 196½ ಚದರ ಮೈಲಿನ ರಾಜ್ಯ 40ಸಾವಿರ ಜನಸಂಖ್ಯೆ ವಾರ್ಷಿಕ ಉತ್ಪನ್ನವು 2½ ಲಕ್ಷರೂಪಾಯಿ ಇಲ್ಲಿ ಕನ್ನಡವೇ ಸರಕಾರದ ಭಾಷೆಯಾಗಿ, ಪ್ರಜಾಪ್ರತಿನಿಧಿಗಳ ಸಂಖ್ಯೆಹೆಚ್ಚಿ ಒಂದು ಲಕ್ಷ ತೀರ್ವೆ ಮಾಫಿಬಿಟ್ಟು, ಹರಿಜನರಿಗೆ ಸರಕಾರಿ ನೌಕರಿ ಸಿಗುವಂತಾಗಿ, ನಾನಾ ಸುಧಾರಣೆಗಳಾಗುವುವು ಶ್ರೀ ದಿವಾಕರ ಶಂಕರರಾವ್‌ಜೀವ ಮೊದಲಾದವರ ಪ್ರಯತ್ನಗಳು — ಸಾರ್ಥಕವಾಗಿವೆ

ಲಕ್ನೋ:— ಮುಸ್ಲಿಂ ಲೀಗ್ ಎಲ್ಲ ಕಡೆ ತಮ್ಮ ಧ್ವಜವನ್ನು ಏರಿಸಬೇಕೆಂದು ಪ್ರಕಟಿಸಿಯದೆ ಈಗ ಹಿಂದೂ ಮಹಾಸಭೆಯೂ ತನ್ನ ಧ್ವಜಕ್ಕಾಗಿ ಅದೇ ಬಗೆಯ ಪ್ರಕಟಣೆ ಕೊಟ್ಟಿದೆ ನಾನಾ ಸಭೆಗಳು ನಾನಾ ವಿಧವಾಗಿ ಧ್ವಜವೇರಿಸುವ ಸಂಪ್ರದಾಯವನ್ನಿಟ್ಟರೆ — ಪ್ರತಿ ಆಫೀಸೂ ಧ್ವಜಗಳಿಂದ ಅಂದವಾಗಿ ತೋರುತ್ತ ಹೆಚ್ಚಿಗೆ ಅ ದ ೬ ೧ ದ ಕುರೂಪವಾಗುವಂತಿದೆ

ಅಹ್ಮದಾಬಾದು:— ಹೊಟೆಲುಗಳು ವಿಷಾದಮಯವಾಗಿವೆ ಹರಿಜನರನ್ನು ಪ್ರವೇಶಿಸಿಕೊಳ್ಳದೆ ಲೈಸನ್ಸು ಉಳಿಯದು ಇದ್ದ ಗಿರಾಕಿಗಳು ಈಗ ಮಾಯವಾಗಿದ್ದಾರೆ ಹೋಟ್ಲಿನ ಆಳುಗಳೂ ಹರಿಜನರಿಗೆ ಆದರಸತ್ಕಾರ ಮಾಡಲೊಪ್ಪುವುದಿಲ್ಲ ಹೋಟ್ಲು ಮುಂದೆಲ್ಲ ಹಿಂದುಗಳು ಕೂಡದಂತೆ ಪೋಲೀಸರು ಗಸ್ತುತಿರುಗುತ್ತಾರೆ

ಮೋಜಿನ ಅಂಕೆಸಂಖ್ಯೆಗಳು

4ನ್ನು ಬರೆದು ಅದರ ಹಿಂದೆ 28 ಸೊನ್ನೆಗಳನ್ನು ಬರೆದರೆ ಎಷ್ಟಾಗುವುದೋ ಅಷ್ಟು ಟನ್ನು ಅತ್ಯುತ್ತಮ ಕಲ್ಲಿದ್ದಲನ್ನು ಸುಟ್ಟರೆ ಆಗಲೇ ಸೂರ್ಯನು ಹೊರಗೆಡಹುವ ಉಷ್ಣತೆಯಷ್ಟನ್ನು ಹುಟ್ಟಿಸಬಹುದು.

ಡ ಡ ಡ ಡ ಡ

ಸೂರ್ಯನ ಸೆಕೆಯನ್ನು ಯಾವುದೊಂದು ಕಾರ್ಖಾನೆಯ ಕೆಲಸಕ್ಕೆ ಸುಲಭವಾಗಿ ಹಚ್ಚಲಾಗುವಂತೆ ಪ್ರಯತ್ನಪೂರ್ವಕ ಉಪಾಯ ಕಂಡುಕೊಳ್ಳಲು 130000 ಪವನು ವ್ಯಯಿಸಿ ಸಂಶೋಧನೆ ನಡೆಸುತ್ತಿದ್ದಾರೆ

ಡ ಡ ಡ ಡ ಡ

1800 ಪುಟವುಳ್ಳದ್ದಾಗಿ 33000 ನಕ್ಷತ್ರಗಳ ಪಟ್ಟಿ ವಿವರಣೆಗಳನ್ನುಳ್ಳ ಒಂದು ಪುಸ್ತಕ ತಯಾರಾಗಿದೆ. ಬರೀ ಕಣ್ಣಿಗೆ 10000 ನಕ್ಷತ್ರಗಳೂ ಕಾಣುತ್ತಿಲ್ಲ

ಡ ಡ ಡ ಡ ಡ

ಜಗತ್ತಿನಲ್ಲಿರುವ ಭಾಷೆಗಳು 2790 ಎರಡು ಭಾಷೆಗಳಿಗಿಂತ ಹೆಚ್ಚನ್ನು ಕಲಿಯುವವರು ಕಡಮೆ ಇಂಗ್ಲಿಷು ಭಾಷೆಯೊಳ ಏಳು ಲಕ್ಷ ಪದಗಳಿವೆ ಸುಮಾರು 24 ಮಿಲ್ಲಿಯ ಜನರು ಇದನ್ನಾಡುವರು ಜರ್ಮನ್ ಭಾಷೆಯನ್ನಾಡುವವರು 118 ಮಿಲ್ಲಿಯ ಜನರ

ಡ ಡ ಡ ಡ ಡ

ಚಿಮಿಣಿ ಎಣ್ಣೆ ಸಾಹುಕಾರನಾಗಿ ಕುಬೇರನಾದ ರೊಕ್‌ಫೆಲ್ಲರನು 13000 ಪವನಿನಿಂದ ಒಂದು ಕಾರ್ಖಾನೆಯನ್ನು ಕೊಂಡುಕೊಂಡು ವ್ಯಾಪಾರ ಪ್ರಾರಂಭಿಸಿದನು ಇದೇ ಕಂಪನಿ ಆತನಿಗೆ ೨೦ವರ್ಷ ವರ್ಷಗಳಲ್ಲಿ ಮೂವತ್ತು ಮಿಲ್ಲಿಯ ಪವನು ಗಳಿಸಿಕೊಟ್ಟಿತು ಇದಲ್ಲದೆ ನಾನಾ ಇತರ ಕಾರ್ಖಾನೆಗಳಲ್ಲಿ ಹಲವು ಪಾಲು ಪಡೆದನು. ವೃದ್ಧನಾಗಿ ಅವನು ಮುನ್ನೂರು ಮಿಲಿಯ ಪವನು ಮಡಿದನು. ಅದರೂ ಒಟ್ಟು 6 ಮಿಲಿಯವನ್ನು ಮಾತ್ರ ಸ್ವಂತಕ್ಕಾಗಿ ಇಟ್ಟುಕೊಂಡು ಹೊರತೆ, ಉಳಿದಲ್ಲವನ್ನು ದಾನಮಾಡಿದನು

ಡ ಡ ಡ ಡ

ಹೆನ್ರಿ ಫೋರ್ಡನ 40 ಮಿಲ್ಲಿಯ ಪವನು ಒಂದು ಬ್ಯಾಂಕಿನಲ್ಲಿದೆ ಜೆ ಪಿ ಮೊರ್ಗನನು 100 ಮಿಲ್ಲಿಯ ಪವನು ಬಂಡವಾಳವುಳ್ಳ ಕಂಪೆನಿಗಳನ್ನು ಆಳುತ್ತಿರುವನು. ಸರ್ ಹೆನ್ರಿ ಡೆಟರ್ಡಿಂಗ್‌ನು ಈಗಣ ಎಣ್ಣೆ ಸಾಹುಕಾರ 50 ಮಿಲ್ಲಿಯ ಪವನು ಬಂಡವಾಳದ ಕಂಪನಿಗಳು ಅವನ ಕೈಯಲ್ಲಿವೆ

ಡ ಡ ಡ ಡ ಡ

ನಾಯಿ, ಬೆಕ್ಕುಗಳನ್ನು ತಿಂದೂ ಜೀವಿಸಿದರು

ಚೀನದ ಗುರಿಲ್ಲಾ ರೀತಿಯ ಯುದ್ಧ ಮದಿಂದಾಗಿ ತಮಗೆ ತುಂಬಾ ತೊಂದರೆಯಾಗುತ್ತಿರುವುದೆಂದು ಜಪಾನೀಯರು ಈಗ ಒಪ್ಪುತ್ತಿರುವರ

ವೆನ್ಸಿ ಎಂಬಲ್ಲಿ ಜಪಾನೀಯರ ಸೈನ್ಯವೊಂದು ಸೆರೆಯಲ್ಲಿದ್ದಂತೆ ಒಂದು ಕಡೆಯು ಎರಡು ತಿಂಗಳುಗಳತನಕ ಇರಬೇಕಾಯಿತು ತನ್ನೊಡನೆ ಇದ್ದ ಆಹಾರಸಾಮಗ್ರಿಗಳೆಲ್ಲ ಮುಗಿದು ನಾಯಿ, ಬೆಕ್ಕು, ಪಾರಿವಾಳಾದಿಗಳನ್ನು ಕೊಂದು ತಿನ್ನಬೇಕಾಯಿತು ಕೊನೆಗೆ ಅನ್ನ ಇಲ್ಲದೆ ಉಪವಾಸಬಿದ್ದು ಸಾಯುವ ಪರಿಸ್ಥಿತಿಯು ಅವರಿಗೆ ಬಂದೊದಗಿತು ಹಲವೊಮ್ಮೆ ವಿಮಾನಗಳ ಮೇಲೆ ಹೋಗಿ ಮೇಲಿನಿಂದ ಆಹಾರಸಾಮಗ್ರಿಗಳನ್ನು ಬಿಸುಡುವ ಪ್ರಸಂಗವೂ ಬಂದೊದಗಿತ್ತು

ರಕ್ಷ್ಯರ್ವೋಹಾರ್ಯ್ಯಸ್ತುತುರ್ಮನ ದೇವ್ಯಾ । ನ ಭೇದಿತಃ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ

SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿಂ ಗದರಿಂ । ಹರುಷಪಾಯಿತೆ ಮಕ್ಕೆ ವಿಷ್ಪವ ಸುಡುವ ಬರುತಿರಲ್ವ ॥ ಗರಳಕಪರಂಜದರೆ ಸುಧೆಯನ । ವರೆತು ಕ್ಷ್ಯದುರ ಕೆರದ ಕೆಲೆತರೆ । ತೆರದ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಖು ೫–೮–೧೯೩೮ | ತಾರೀಖು 5–8–1938

ವಿದುರಾಶ್ವತ್ಥದಲ್ಲಿ "ಗುಂಡಿನೇಟು ತಗಲಿ ಹೆಂಗಸು ಸತ್ತಿದು, ಹೊರತು—ಬಾವಿಗೆ ಬಿದ್ದು ಸತ್ತುದಲ್ಲ"

"ಗೌರಮ್ಮನೆಂಬ ಹೆಂಗಸು ವಿದುರಾಶ್ವತ್ಥದಲ್ಲಿ ಗುಂಡಿನೇಟಿಗೆ ಬಲಿಯಾದಳು" ಎಂದು ಇಂಗ್ಲಿಷು ಹಾಗೂ ಕನ್ನಡ ಪತ್ರಿಕೆಗಳಲ್ಲಿ ಅಂದೇ (ಏಪ್ರಿಲ್ ಕೊನೆಯ ವಾರದಲ್ಲಿ) ಪ್ರಕಟವಾಗಿತ್ತು. ಗೌರಮ್ಮನೆಂಬ ಹೆಂಗಸೇ ಇದ್ದಿಲ್ಲ ಇದ್ದರೂ ವಿದುರಾಶ್ವತ್ಥಕ್ಕೆ ಹೋಗಿಲ್ಲ, ಹೋಗಿದ್ದರೂ ಪೊಲೀಸರು ಗುಂಡಿನೇಟು ಹೊಡೆದುದಿಲ್ಲ, ಹೊಡೆದಿದ್ದರೂ ಸತ್ತುದಿಲ್ಲ ಎಂದೇ ಮೊದಲಾಗಿ ನಾನಾ ಹೇಳಿಕೆಗಳಾದವು

ಸರಕಾರವೂ, ಸರಕಾರದ ಪರೇಲ ಶೀನಪ್ಪ (ಮರುಳೂರು)ನೂ, ಈಗ ನಡೆದ ವಿಚಾರಣೆಯಲ್ಲಿ ಕಮಿಟಿಯ ಮುಂದೆ, ಆಕಸ್ಮಿಕವಾಗಿ ಬಾವಿಯಲ್ಲಿ ಮುಳುಗಿ ತನ್ನ [illegible] ಸರಸ್ವತಮ್ಮ ಸತ್ತವಳೆಂದು ತಿಳಿಸಿದ್ದ ಬಳಿಕ ಈಗ [illegible] ಸಿನ್ನ ಪತಿ [illegible] — (ಪಟೇಲ ಶೀನಪ್ಪನ ಪುತ್ರ) [illegible] ನಾನು, ಅವಳ ಮರಣವು ಆಕಸ್ಮಿಕವಾಗಿ ಬಾವಿಯಲ್ಲಿ ಮುಳುಗಿದರಿಂದ [illegible] ದುದಲ್ಲ ಸರಸ್ವತಮ್ಮನೂ ನನ್ನ 1930ನೆ ಇಸ್ವಿ ಮೇ ತಾ 10ರಲ್ಲಿ ಮದುವೆಯಾದ ವ ಅವಳಿಗೆ ಗೌರಮ್ಮನೆಂಬ ಹೆಸರು [illegible] ವಿವಾಹವಾಗುವಾಗ ಅವಳ ವಯಸ್ಸು 14 ಅವಳು ಆಗಾಗ ವಿದುರಾಶ್ವತ್ಥಕ್ಕೆ [illegible] ದನೆ ಹೋಗುತ್ತಿದ್ದಳು

ಕಳೆದ ಏಪ್ರಿಲ್ ತಾ 8ರಲ್ಲಿ ನಾನು ಚೆನ್ನಪುಲ್ಲಕ್ಕೆ ಹೋಗಿದ್ದೆ– ಹೆಂಡತಿ ಮರಳೂರಿನಲ್ಲೇ ಇದ್ದಳು ತಾ 26ರಲ್ಲಿ [illegible] ತಯ್ಯನಿಂದ ತಂತೀ ವಾರ್ತೆ ನನಗೆ [illegible] "ಸರಸ್ವತಿಬಾಯಿಗೆ ಕಠಿನ ಕಾಯಿಲೆ ಹೊರಟು ಬಾ" ಎಂದಿತ್ತು ಮೈಲುಬಂಡಿ ಹೋಗಿತ್ತು [illegible] ರಾತ್ರಿ 6 ಗಂಟೆಗೆ ಮರಳೂರಿಗೆ ಒಂದು ತಲುಪಿದೆ

ಪಟೇಲ ಶೀನಪ್ಪನು (ನನ್ನ ತಂದೆ) [illegible] ವಾಗಿದ್ದು ಮಾತಾಡಲು [illegible] ನನ್ನ ಸೂಕೆ ದರಿಯುತ್ತೆ, ನನ್ನ ಹೆಂಡತಿ [illegible] ಬರುವ ಮೊದಲೇ ದಹನಕ್ರಿಯೆ ಮುಗಿದಿತ್ತೆಂದೂ ತಿಳಿದವಳು, ಅವಳು ತಾ 25ರಲ್ಲಿ ವಿದುರಾಶ್ವತ್ಥಕ್ಕೆ ಹೋಗಿದ್ದಳೆಂದೂ, ಅಲ್ಲಿಯಲ್ಲಿ [illegible] ಕೆಲವರಿದ್ದರೆಂದೂ [illegible] ಗುಂಡಿನ ಗಾಯ ವಾದಾಕೆಯನ್ನು ಮನೆಗೆ ತಂದರೆಂದೂ, ಆಕೆ ಮರ ದಿನ ಸತ್ತಳೆಂದೂ ತಿಳಿದುಬಂದು

ಮರುದಿನ ಒಬ್ಬ ಹೆಡ್ ಕೊನ್ಸ್ಟೇಬಲು, ಒಬ್ಬ ಪೊಲೀಸ್ ಇನ್ಸ್‌ಪೆಕ್ಟರು ಗ್ರಾಮಕ್ಕೆ ಬಂದಿದ್ದು, ಆಕೆ ಬಾವಿಗೆ ಬಿದ್ದು ಆಕಸ್ಮಿಕವಾಗಿ ಸತ್ತಿದ್ದಳೆಂಥು ರಿಪೋರ್ಟು ಬರೆಯಬೇಕೆಂದಿದ್ದರು ಇದನ್ನು ತಿಳಿದು ಗ್ರಾಮಸ್ಥರಿಗೆ ಸಿಟ್ಟು ಬಂದಿತ್ತು ಹೀಗಾಗಿ ಪೊಲೀಸಜವಾನನೂ [illegible] ತಾ. 28ಕ್ಕೆ ಮಾತ್ರ ಮರಣವಾಗಾಯಿತು ನನ್ನ ತಂದೆಗೆ [illegible], ಅವರೇನು ಹೇಳಬೇಕಾದದಾಗಿದರು

ತಾ 29ರಲ್ಲಿ [illegible] ಬಳ್ಳಾ [illegible] ನನ್ನ ಹೆಂಡತಿ [illegible] ಪಾರ್ಲ್ [illegible] ನನ್ನ [illegible] ನಾನು ಸರಕಾರದ [illegible] ನಾನೆ ನು ಮಾಡಲಿ!" ಎನ್ನುತಿದ್ದರು, ಅಪ್ಪ— ಎಂದವರು

ನಾನು ವಿಚಾರಿಸಲಾಗಿ, ನನ್ನ ಹೆಂಡತಿ ಗುಂಡಿನೇಟಿನ ಗಾಯಗಳಿಂದ ಸತ್ತುದಲ್ಲವೆಂದು ತಿಳಿದುಕೊಂಡೆನು.

ಇಲ್ಲಿ ನನಗೊಂದು ಸ್ಟೇಟ್ಮೆಂಟ್ [illegible] ಲಾಗಿದೆ ಮುಖ್ಯ ಅಷ್ಟು ಸ್ಪಷ್ಟವಾಗಿ ತೋರುತ್ತಿಲ್ಲ ಆದರೆ ಹೋಲಿಕೆಯಲ್ಲಿ ನನ್ನ ಹೆಂ [illegible]

"ಇನ್ನು ಅಧ್ಯಕ್ಷರವರಿಗಳು [illegible] ಮುಂದೆ ನಡೆಯುವುದು!

ಪರದೇಶಗಳಲ್ಲಿ: ಒಂದು ನಿಮಿಷ

ಇಟಲಿ:— ಯೆಹೂದ್ಯರನ್ನು ಹಿಂಸೆ ಪಡಿಸುವ ಇಟಲಿ ಸರಕಾರದ ರೀತಿಯನ್ನು ಕುರಿತು ಯುನೈಟೆಡ್ ಸ್ಟೇಟ್ಸಿನ ರಾಯಭಾರಿಗಳು ಇಟಲಿ ಸರಕಾರವನ್ನು ವಿಚಾರಿಸಿದಾಗ — ಯೆಹೂದ್ಯ ವಂಶದ ವಿರುದ್ಧವೇ ಆಗುತ್ತಿದ, ಇದರ ಪರಿಣಾಮದಿಂದ ಯೆಹೂದ್ಯರ ಮೇಲೆ ಇಟಲಿಯಲ್ಲಿ ಯಾವ [illegible] ಹೇಳಬರುತಿಲ್ಲವಾದರೂ, ಇಟಲಿಯು [illegible] ಜನ [illegible] ಶುದ್ಧತೆಯನ್ನು ಕಾಪಾಡಿಕೊಳ್ಳದಿರದೆಂದು ಉತ್ತರ ದೊರೆತಿದೆ

ಲಂಡನ:— [illegible] ವಿಮಾನವು [illegible] ಲಂಡನಿಗೆ [illegible] 170 ಮೈಲಿನಂತೆ, ನ್ಯೂಯೋರ್ಕಿನಿಂದ [illegible] 3240 ಮೈಲು ದೂರವನ್ನು 22½ ತಾಸಿನಲ್ಲಿ, [illegible] ಇದೇ [illegible] — [illegible] 1½ ಅಣೆ ದರದಲ್ಲಿ [illegible] ಒಂದು ಸಾವಿರ ಮೈಲು [illegible] ಈ ವರ್ಷ 60 [illegible]

ಒಟ್ಟಾವಾ [illegible] ರಾಜ್ಯದ [illegible] ದಕ್ಷಿಣ 14 [illegible]

ಸ್ಕೊಟ್ಲಾಂಡ್ [illegible]

ಶಂಘಾಯಿ [illegible]

ಸಲೆಂಪ್ಷನ್ [illegible]

ವೆಲೆನ್ಸಿಯಾ [illegible]

ಲಂಡನ್: [illegible] 2000 [illegible]

ಲರಕೀಶಯರು:— [illegible] ಸಂಭಾವಿತ ಪರ್ಯಟಕರಿಗಳು [illegible] ಇನ್ನು [illegible] ಸಂಭಾಷಣೆಗಳು [illegible] ತಂತಿಸಿದೆ

ಮುಸ್ಲಿಮ ಬಂಧುಗಳಿಗೆ ಶ್ರೀ ಬಶೀರ್ ಅಮದ್ ಸಯೀದ ಬೋಧನೆ

ಕನ್ನಾನೂರಲ್ಲಿ [illegible] ನಲ್ಲಿ ಸೇರಿದ ಮಹಾಸಭೆಯಲ್ಲಿ ಮುಸ್ಲಿ ಬಂಧುಗಳಿಗೆ ಈ ರೀತಿ ಬೋಧಿಸಲಾಗಿ[illegible]

ಗ್ರಾಮಗಳಲ್ಲಿ ಜನರಿಗೆ ಸರಿಯಾದ [illegible] ಕೊಡಲು ಇನ್ನು ಹೆಚ್ಚಾಗಿ [illegible] ಕೆಲಸ ಮಾಡಬೇಕಾಗಿದೆ. 53 [illegible] ಗಳ ಪ್ರಯತ್ನಗಳಿಂದ ಪ್ರಾಂತಿಕ ಸ್ವರಾಜ್ಯ [illegible] ಪೂರ್ಣ ಸಿಕ್ಕಿಲ್ಲ ಆದುದರಿಂದ ಎಲ್ಲ ಸಮು[illegible]ಗಳವರೂ ಒಂದಾಗಿ ರಾಜಕೀಯ ರಂಗ[illegible] ಪ್ರವೇಶಿಸಿ, ಸಂಪೂರ್ಣ ಸ್ವರಾಜ್ಯವನ್ನು ಸಂ[illegible]ದಿಸಬೇಕಾಗಿದೆ ಮುಸ್ಲಿಮರಿಗೆ ಸಹಾ[illegible] ಪ್ರತಿನಿಧಿ ಕಾಂಗ್ರೆಸು ಹಿಡಿ[illegible] ಮುಸ್ಲಿಮರಲ್ಲಿ ಹೆಚ್ಚಿನವರ ಅಶ್ರದ್ಧೆ[illegible] [illegible] ಮುಸ್ಲಿಮರ [illegible] ಕೀಯ ವಿಷಯಗಳಲ್ಲಿ ಅಷ್ಟು ಮುಂದಾ[illegible]ಗಳಾಗಿ ತೋರುವುದಿಲ್ಲ

[illegible]

THE

Canara Banking Corporation, Udipi, Ltd

INCORPORATED IN BRITISH INDIA

ESTD 1906

BOARD OF DIRECTORS:

Dr U Sundar Ram [illegible] *President*

M. R. Ry. R. M. Kamath Avl. *Vice President*

M. R. Ry. Kodbikar Padmanabha Pai Avl., B. A.

M. R. Ry. B Vaikunta Baliga Avl. B. A., B. L.

M. R. Ry. Kasturi Nagesh Pai Avl.,

M. R. Ry. M[illegible] Govinda Pai Avl.,

Dr. A Padmanabha Mallya, L. M. & S.,

M. R. Ry. M. Narayana Kamath, Avl.

M. R. Ry. K. N[illegible] Kamath, Avl

M. R. Ry. U K Bhujanga Nayak Avl

V. R. Kamath, B. A., LL. B.

Manager

ಮಹಿಳಾಶಕ್ತಿ

[ಶೋಭಾದೇವಿಯವರ ಲೇಖನದಿಂದ—ಡಿಲ್ಲಿ.]

...ರಾತ್ರಿಯಿಡೀ ಸಿನಿಮಾ ಸಭಾಗೃಹ... ಗಳು ಸ್ತ್ರೀಯರಿಗೆ ಬೇಕು.

...ಷಕ್ಕೆ ಸ್ತ್ರೀಯರು ಪುರುಷರ ಭೋಗ ಸುಖದ ಒಡವೆಯಾಗಿರು ಅಡುಗೆಮನೆಯಲ್ಲಿ ಅವರು ದಿವಸ ಕಳೆಯಲಾರರು.

ಸ್ತ್ರೀಯರೀಗ ಪುರುಷರೊಡನೆ ತೇಲುವ ಮುಳುಗುವ ಜೀವನಕ್ಕೊಪ್ಪರು.

ಸ್ತ್ರೀಯರಿಗೆ ನವಭಾರತದಲ್ಲಿ ಪ್ರಾಮುಖ್ಯತೆಯು ಸಿಗಬೇಕು.

...ದಿಂದ ಬಂದ ವಿಚಿತ್ರವಾರ್ತೆಯು ನಿಮಗೂ ತಲಪಿಲ್ಲವೆ? ಅಲ್ಲಿ ಗೃಹಿಣಿಯರು ಮುಷ್ಕರ ಹಿಡಿದಿರುವರಂತೆ. ಅವರೇನೂ ಮನೆಗೆಲಸ ಮಾಡುವುದಿಲ್ಲವೆಂದಲ್ಲ. ಭಾರತೀಯ ಮಹಿಳೆಯರು ಇನ್ನೂ ಇನ್ನೂ ಪ್ರಗತಿಪರರಾಗುತ್ತ ಬರುತ್ತಾರೆಂಬುದರಲ್ಲಿ ಅಲ್ಲಗಳೆಯುವುದಕ್ಕಾಗಿಯೆ ಇವರು ಹೀಗೆ ಮಾಡುತ್ತಾರೆಯೆ?

...ಕೇಳಿರಿ—ಪತಿದೇವರೆ! ಬೇಕಾದರೆ ನೀವು ...ನರ್ವಿವಾಹ ಮಾಡಿಕೊಳ್ಳಬಹುದು. ನಾವು ...ನವರೆಗೆ ನಿಮಗೆ ಹೆಂಡಿರಾಗಿರುವಂತೆ ಮುಂ...ದೂ ಹೆಂಡಿರೇ. ಆದರೆ ನಿಮಗೆ ಇನ್ನು ...ಚ್ಚು ಮಕ್ಕಳು ಬೇಕೆಂದಾದರೆ, ನಿಮ್ಮ ಮೋ...ಕ್ಕೆ ನೀವೇ ಬೇರೆ ಹಾದಿ ನೋಡಿಕೊಳ್ಳಿರಿ. ...ವು ಇನ್ನು ಬ್ರಹ್ಮಚರ್ಯ ವ್ರತ ಹಿಡಿದಿರು...ವು, ಹೀಗೆ ಪತಿದೇವರಿಗೆ ಭಕ್ತಿಪೂರ್ವಕವಾಗಿ ...ತುಸ್ಕರಿಸಿ ತಿಳಿಸಲಾಗಿದೆ. ಪತಿದೇವರು ತಮ್ಮ ...ಜಾಣಿಯರು ಇನ್ನು ಸಿಗರೆಂದು, ಬೇರೆ ...ಜಾಣಿಗಳು ದೊರೆವಂತೆ ಬೇಕಾದರೆ ಶೋ...ಧಿಸಬಹುದು, ಪಸರಿಸಬಹುದು. ಈ ಹೆಂ...ಗು ಮನೆ ಬಿಡುವವರಲ್ಲ, ಹಾಗೆಂದು ಮಕ್ಕ...ಳನ್ನು ಹೆರುವವರೂ ಅಲ್ಲ!

ಪಾಶ್ಚಾತ್ಯರಲ್ಲಿ ವಿವಾಹದ ಮೊದಲು ...ತಹ ದಾಂಪತ್ಯವಿದೆ. ನಮ್ಮ ಕುಲ ಭೂಷಿ...ಯರು ಪಾಶ್ಚಾತ್ಯರಂತಲ್ಲ. ಇವರ ವಿಧಾ...ನೆ ಬೇರೆ. ಇಷ್ಟು ಕಾಲ ಗರ್ಭಿಣಿಯರಾಗಿ ...ದಕ್ಕೆ ಇನ್ನೀಗ ಅವರಿಗೆ ರಜಾ ಬೇಕಾಗಿದೆ, ...ಷ್ಟೆ. ಸಿಂಧದ ಮಹಿಳೆಯರು ಪ್ರಪಂಚಕ್ಕೇ ...ರೆ ದಿಕ್ಕು ತೋರಿಸುವವರು!

ಹಾಗೆಂದು ಯಾರೂ ಇವರನ್ನು ಪರಿ...ಹಾಸ್ಯಮಾಡಲುಂಟೆ? ದೇಶಮಾತೆಯ ಸೇವೆ...ಗಾಗಿ ಸಿಂಧ ಮಾತೆಯರು ಹೊರಡುವಾಗ ಪರಿ...ಹಾಸ್ಯವೆ? ವಾಸ್ತವವಾದ, ಉತ್ಸಾಹಪೂರ್ಣ...ವಾದ ಚಳವಳಿ ಮೂಲಕ, ವಿಶೇಷ ಇತರ ...ಕೆಲಸಗಳಿಲ್ಲದೆ, ದೇಶವೊಂದನ್ನೇ ನಿಷ್ಕಲಂಕ...ಭಾವದಿಂದ ಸೇವೆ ಮಾಡುವುದಷ್ಟೆ ಇವರ ...ಗುರಿಯು. ಇದು ವರೆಗೆ ಪುರುಷರಿಗೇ ಇದೆಲ್ಲ ...ಸಂಬಂಧಿಸಿತ್ತು; ಇನ್ನು ಕೂಡದು. ದಾಸಿಯಾಗಿ ...ಮನೆಯಲ್ಲಿ ಚಾಕರಿ ಮಾಡಿದವಳಾಗಿದ್ದರೆ, ಕವಿ...ಗಳೆಂದಂತೆ ಗೃಹಲಕ್ಷ್ಮಿಯರಾಗಿ ಮಾತ್ರ ...ವರು ಇದು ವರೆಗೂ ಇದ್ದಿದ್ದರೆ, ಆ ದಿನ ...ಕಳೆಯಿತು. ಇದೀಗ ನವಯುಗ. ಪಾಶ್ಚಾತ್ಯ ...ಸಂಸ್ಕೃತಿಯ ಫಲವಾಗಿ, ಪುರುಷರೊಡನೆ ನೋಗ ...ಹೊರುವುದಕ್ಕಿಲ್ಲದೆ, ಸ್ತ್ರೀಯರೀಗ ಪುರುಷರೊಡನೆಯೆ ಮಾತ್ರ ತೇಲುವ ಮುಳುಗುವ ಜೀವನಕ್ಕೊಪ್ಪರು.

ಜನತೆಯ ಮುಂದೆ ಎರಡು ಮಸೂದೆಗಳುಂಟು: ಬಹು ವಿವಾಹ ವಿರೋಧವಾಗಿ ಒಂದು, ದಾಂಪತ್ಯ ವಿಚ್ಛೇದಕಾರಕವಾಗಿ ಮತ್ತೊಂದು. ಇವೆರಡು ಕುಟುಂಬ ನೀತಿಯನ್ನು ತಿದ್ದಿ ತರುವುವು. ಇವು ಕ್ರಾಂತಿಯನ್ನುಂಟುಮಾಡುವ ಮಸೂದೆಗಳಲ್ಲ. ಆದರೂ ಇವನ್ನು ಪಂಜಾಬು ಕೌನ್ಸಿಲಿನಲ್ಲಿ ಮುಂತಂದಾಗ, ಅಲ್ಲಿ ಪುರುಷಮಾತ್ರರೇ ಎದ್ದು ನಿಂತು ಮಾಡಿದ ಕೋಲಾಹಲ ಪರಿಹಾಸ್ಯವು ಕಡಮೆಯದೆ? ಈಗ ಎಲ್ಲ ಒಂದೇ ಪಕ್ಷವಾಗಿ ಹೊಂದಿರುವ ನ್ಯಾಯಕ್ರಮ; ಇದನ್ನು ಪಕ್ಕನೆ ತಿದ್ದಬಿಡಲು ಮನುಷ್ಯನಲ್ಲಿರುವ ಪಶುಬುದ್ಧಿಯ ಅಂಶವು ಆತಂಕಿಸುವುದು. ಮಾಡುವುದೇನು? ಈಗ ಬಲಗೈಯಲ್ಲಿದ್ದ ಚಬೂಕನ್ನು ಎಡಗೈಯು ಹಿಡಕೊಂಡಿದೆ. ಹೊಡೆಯಬೇಕಾಗಿ ತೋರಿದಾಗ, ಚಾಟಿಯ ಪೆಟ್ಟನ್ನು ಅನುಭವಿಸಲು ಗಂಡಸು ಸಿದ್ಧನಿರಬೇಕು. ಮುದುಕರನ್ನು ಇನ್ನೂ ಬಾಲಕಿಯರೊಡನೆ ವಿವಾಹ ಮಾಡಿದರೆಂಬ ಸುದ್ದಿ, ದುರ್ವಾರ್ತೆ ಆಗಾಗ ಕೇಳಬರುತ್ತದೆಯಾದರೂ, ಅದನ್ನು ಕೇಳಿ ಉದ್ವಿಗ್ನರಾಗದೆ ಇರುತ್ತೇನೆಯೆ? ಶಾರದಾ ಮಸೂದೆ ಹಿಂದುಗಳ ಸಮಾಜದೊಳಗೆ ನುಗ್ಗಿದೆ. ಇಲ್ಲದಿದ್ದರೆ, ಅದನ್ನು ಇನ್ನಷ್ಟು ಕಠಿನಮಾಡುವುದಕ್ಕೆ ತಿದ್ದುಪಡಿ ಮಾಡಿದಾಗ ಸಮಸ್ತ ಸದಸ್ಯರೂ ಎಸೆಂಬ್ಲಿಯಲ್ಲಿ ಒಪ್ಪಿಗೆ ಕೊಡಲಿಲ್ಲವೆ?

ಈಗ ಇದು: ಬಹುಪತ್ನೀ ವಿವಾಹವಾಗಬಾರದು; ಹೆಂಡತಿಯನ್ನು ಹಿಂಸಿಸಬಾರದು ಎನ್ನುವ ಮಸೂದೆಗಳ ತತ್ವ, ಪ್ರಾಂದಾ ಆಕ್ಟಿನ ಸಹಜ ಸಂತಾನ. ಇದು ಕೇವಲ ಸಾಮಾಜಿಕವಾಗಿಯೇ ತೋರಬಹುದು, ಹಿಂದೆ ರಾಜಕೀಯ ಕಾರಣವೂ ಇದೆ. 'ಗೃಹಿಣಿ'ಯ ಬದಲಾಗಿ 'ದೇಶಿಣಿ'ಯಾಗುವ ಆಸೆ ನಮ್ಮ ಮಹಿಳೆಯರಲ್ಲಿ. ನವಭಾರತವು ಜನನವಾಗಲಿಕ್ಕಿದೆ; ಅದರ ಹೆರಿಗೆಯ ಕಾಲ ಬಂದಿದೆ; ನಮ್ಮ ಮಹಿಳೆಯರು ಆ ಭಾರತವು ಸುಖಪ್ರಸೂತವಾಗುವಂತೆ ನೋಡಿ, ಅದನ್ನು ತೊಟ್ಟಿಲಲ್ಲಿಟ್ಟು ತೂಗಬೇಕೆಂದಿದ್ದಾರೆ. ಅದು ಬೆಳಸಿ ತಿದ್ದಿ ತರುವವರೂ ಅವರೇ. ಅವರ ಶಕ್ತಿಯೇ ದೇಶದ ನಾಳಿನ ಶಕ್ತಿ.

ಇನ್ನು ದಾಸ್ಯ ಸಾಕು, ಎರಡು ಕಾಲಿನ ಜಾನುವಾರುಗಳಾಗಿದ್ದುದು ಸಾಕು, ಊಟ ಬಟ್ಟೆಗಳಿಗಾಗಿ ಬದುಕುವವರು ನಾವಲ್ಲ, ನಾವೂ ಮುಂದರಿಸುವ ಪಂಗಡ ಎಂದು ಮಹಿಳೆಯರೆಂದ ಕೂಡಲೆ, ಹಳೆಯ ಸಂಪ್ರದಾಯದವರಲ್ಲಿ ಎಷ್ಟು ಗಡಿಬಿಡಿ! ತ್ರಿವಾಂಕೂರಿನಲ್ಲಿ ನೋಡಿರಿ. ಗ್ರೆಡ್ಯುವೇಟಿಣಿಯರೆಷ್ಟು ಮಂದಿ! ಎಷ್ಟೋ ವೇಳೆ ಸರಕಾರದ ಆಫೀಸುಗಳಿಂದ ಕೆಲಸ ಮುಗಿಸಿ ಸಂಜೆಗೆ ಮನೆಗೆ ಮರಳುತ್ತಾರೆ! ಸರಕಾರದ ಸರ್ಜನ್ ಜನರಲ್ಲರಾಗಿ ಮಹಿಳಾಮಣಿಯೊಬ್ಬಳಿರುವಳು. ಪುರುಷರಿಗೆ ಸಲ್ಲತಕ್ಕ ಹುದ್ದೆಗಳಿಗೆಲ್ಲ ಸ್ತ್ರೀಯರು ಸೇರಿದರೆಂದು ದೂರಬಾರದು. ಸ್ತ್ರೀಯರು ತಮ್ಮ ಪರಿಷತ್ತುಗಳಲ್ಲಿ ಪುರುಷರೇ ಅಡುಗೆ ಭಟ್ಟರಾಗಬೇಕೆಂದು ಸೂಚನೆ ಮುಂತಂದುದಿಲ್ಲ. ಸ್ತ್ರೀಯರು ಅಷ್ಟು, ಪುರುಷರಷ್ಟು ಹೊಟ್ಟೆಕಿಚ್ಚಿನವರಲ್ಲ. ತಮ್ಮ ಸ್ಥಾನವಾಗಿರುವ ಅಡುಗೆ ಕೋಣೆಯನ್ನು ಪುರುಷರು ಪ್ರವೇಶಿಸುವಲ್ಲಿ ಅವರು ಅಸೂಯೆ ಪಡಲಿಲ್ಲ, ಪಡುವವರಲ್ಲ. ಸ್ತ್ರೀಯರು ವೈದ್ಯವೃತ್ತಿ ಕೈಕೊಂಡ ಕೂಡಲೆ ಪುರುಷರು ಗೊಣಗುವರೇಕೆ?

ಮಹಾತ್ಮಾಜಿಯವರ ರೀತಿನೀತಿಗಳನ್ನು ಅನುಸರಿಸುವುದರಲ್ಲಿ ಮಹಿಳೆಯರೇ ಅಗ್ರಗಣ್ಯರಾಗಿರುವರು. ಸ್ವಾಭಾವಿಕವಾಗಿ ಎಷ್ಟು ಯುಗಗಳಲ್ಲಿ ಅನ್ನ ವಸ್ತ್ರ ಆಶ್ರಯ ಇಷ್ಟಕ್ಕಾಗಿಯೇ ದುಡಿದು ಜೀವನ ಮಾಡುತ್ತಿದ್ದ ಸ್ತ್ರೀಯರು, ಕಠಿನವಾಗಿ ಗೃಹಕೃತ್ಯಮಾಡಿಯೂ ಮತ್ತೇನನ್ನೂ ಬಹುಮಾನವಾಗಿ ನಿರೀಕ್ಷಿಸಿದ್ದವರೇ? ಹಾಗೆಯೆ, ಸಾಮಾಜಿಕ ಅಥವಾ ರಾಜಕೀಯ ರಂಗದಲ್ಲಿ ಇವರು ಕಠಿನವಾಗಿ ದುಡಿಯುವಾಗಲಾದರೂ ಅನ್ನ ವಸ್ತ್ರ ಆಶ್ರಯಗಳನ್ನೆ ಮಾತ್ರ ನಿರೀಕ್ಷಿಸುವರು. ಭಾರೀ ಸಂಬಳ, ಭಾರೀ ಬಿಡಾರ ಇವನ್ನು ಇವರು ಒಲ್ಲರು! ವೈಯ್ಯಾರವನ್ನು ಸ್ತ್ರೀಯರ ಸೊತ್ತೆಂದು ಹೇಳಿದರೂ, ಕೋಟ್ಯಾಧೀಶರು ಕಾಸು ವ್ಯಯವಾದದಿದ್ದರೂ ಹೆಮ್ಮಕ್ಕಳಿಗಾಗಿ ಸೀರೆ ಬಂಗಾರಗಳಿಗೆಂದು ಹಣ ಸುರಿದು ದಿವಾಳಿಯಾದದೆಂದು ಹೇಳಿದರೂ, ಆ 'ಜಾತಿ'ಯ ಸ್ತ್ರೀಯರ ವಿಷಯ ನಾವೇನೂ ಮಾತೆತ್ತುತ್ತಿಲ್ಲ. ನಾವು ಹೇಳುವ ಬಹು ಸಂಖ್ಯಾಕರು ಮಧ್ಯ ಮತ್ತು ಕನಿಷ್ಠ ತರಗತಿಯವರು. ಇವರೇ ಸಮಾಜಕ್ಕಾಗಿ ದೇಶಕ್ಕಾಗಿ ದುಡಿಯಬಲ್ಲವರು. ಗಾಂಧಿಜೀಯವರ ಸೂತ್ರಗಳನ್ನು ಇವರೇ ಮಾತ್ರ ಕೈಯಲ್ಲಿ ಹಿಡಿದುಕೊಂಡಾರು, ಅನುಷ್ಠಾನಕ್ಕೆ ತಂದುಕೊಂಡಾರು.

ಕೆಲ ದಿನಗಳಲ್ಲೇ, ಪುರುಷನ ಯಾವ ಸಹಾಯಗಳೂ ಇಲ್ಲದೆ ಸ್ತ್ರೀಯರು ತಾವಾಗಿಯೆ ಸ್ವತಂತ್ರವಾಗಿ ಎಲ್ಲ ಕೆಲಸಗಳನ್ನು ಮಾಡತೊಡಗುವರು. ಸಿಂಧದ ಸ್ತ್ರೀಯರ ಸೂಚನೆ ಭಯಂಕರವಾದುದಲ್ಲವೆ? ಪಂಜಾಬು ಎಸೆಂಬ್ಲಿಯಲ್ಲಿ ವಿವಾಹ ವಿಚ್ಛೇದ ಮಸೂದೆಗೆ ಎದುರು ನಿಂತ ಪುರುಷರನ್ನು ಅವರ ಹೆಂಡಿರು ಮನೆಯಲ್ಲಿ ಸಿಂಧದ ಮಹಿಳೆಯರ ಸೂಚನೆಕೊಟ್ಟು ಮೆತ್ತಗೆ ಮಾಡಿರುವರು. ಎಷ್ಟೆಂದರೂ ಅನ್ನಗತಪ್ರಾಣವಲ್ಲವೆ ಮನುಷ್ಯ? ಅಡುಗೆ ಕೋಣೆ ನೋಡಿಯೆ ಅವನ ಸುಖಜೀವನ. ಅದಕ್ಕೆ ಸೇರಿಯೆ ಇದೆ ಗೃಹಿಣಿಯ ಸಹಕಾರ. ಇವೆರಡೂ ತಪ್ಪಿದರೆ, ಮನುಷ್ಯನು ನುಸಿಯಾದಾನು. ಶರಣೆಂದು ಮಸೂದೆಗಳಿಗೆ ಒಪ್ಪಿಗೆಕೊಡುವನು. ಹಿಂದೆ ದಾಡಿಯರಾಗಿ ನಮ್ರರಾಗಿದ್ದವರು ಇನ್ನು ಭಾಧಿಗಳಾಗಿ ಪರಿಣಮಿಸಬಹುದು: ಯಾವಾಗ ಒರೇ ಪುರುಷನು ಸ್ತ್ರೀಯರ ಸ್ವತಂತ್ರ ಸಾಧನೆಗೆ ಅಡ್ಡಿ ಬಂದಾಗ.

ಹೊಸ ತ್ರಿಶಿರ್ಯಯನ್ನು ಹೆತ್ತವಳು ಮಹಿಳೆ: ಅವಳೊಡನೆ ಭಾರತೀಯ ಮಹಿಳೆಯನ್ನು ಪೋಲಿಸ ಬರುವುದೇ ಇಲ್ಲ! ಅವಳು ಫಲದ ಹರಿದೇ ಇದ್ದಾಳೆ, ಇವಳಿನ್ನು ಪಡೆಯ ಹೊಡ!

ಪಂತಕ್ಕಾಗಿ ಒಬ್ಬನು ಒಂದು

ಕ್ವಾಯರ್ ಕಾಗದ ತಿಂದುಬಿಟ್ಟ

ಮತ್ತು ... ಗಳ ಪಂತಕ್ಕಾಗಿ ಯೊದೊ ... ದರ್ಜಿಯ ... ಕನೊಬ್ಬನು ಒಂದು ಕ್ವಾಯರ್ ... ಕಾಗದವನ್ನು ತಿಂದುಬಿಟ್ಟನು.

ಹಾಗೆ ಇನ್ನೊಂದೆಡೆಯಲ್ಲಿ, ಒಬ್ಬನು ಬರಿ ಒಂದು ಆಣೆಯ ಪಂತಕ್ಕಾಗಿ 10 ಎರೆಹುಳಗಳನ್ನು ನುಂಗಿಬಿಟ್ಟನು. ಅವುಗಳ ರುಚಿಯು ಒಳ್ಳೇದಿತ್ತೆಂದು ಆತನು ಮತ್ತೆ ಹೇಳಿದನಂತೆ.

I visited the Office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

V. V. Giri,
Minister of Labour.

4-10-1937

Bhuvanendra Products Ltd, Katapady, S. Kanara

"ದೇಶಸೇವೆಯ ಹೆಸರಿನಿಂದ
ಕಾಗೆಗಳೂ ಗರುಡರಾಗಬಹುದೇ?

(ಶ್ರೀ ಜೆ. ಎಂ. ಗಂಗೂಲಿ, ಢಿಲ್ಲಿ)

ಕಾಂಗ್ರೆಸ್ ತತ್ವಗಳನ್ನು ಶಿರಸಾವಹಿಸಿಕೊಂಡು ದೇಶಸೇವೆ ಮಾಡಲು ಎಳಸಿದವರಿಗೆ, ಅದೇ ಸೇವೆಯ ಹೆಸರಲ್ಲಿ ನಡೆವ ಸ್ವಾರ್ಥಸಾಧನೆಗಳನ್ನು ಕಂಡು ಮನಸ್ಸು ಉದ್ವಿಗ್ನವಾದರೂ ಕೋಪವಿಲ್ಲದೆ 'ಅದೇಕೆ ಹಾಗಾಗಿದೆ' ಎಂದು ವಿಮರ್ಶೆಮಾಡಿರುದರ ಸಾರಾಂಶ.

ಮಹತ್ಕಾರ್ಯಗಳನ್ನು ಮಾಡಲೂ, ಮಹೋಜ್ವಲ ಭಾವನೆಗಳನ್ನು ಪ್ರಕಟಿಸಲೂ— ಪರಸೇವೆ, ದೇಶಸೇವೆ, ಜನಾಂಗಸೇವೆ ಮೊದಲಾದುವೇ ಪ್ರೇರೇಪಿಸಿವೆ. ಭಾರತ ಸೇವಕರ ಸಂಘ, ಶ್ರೀ ರಾಮಕೃಷ್ಣ ಮಿಶನ್, ಸೇವಾ ಸಮಿತಿ ಇವೇ ಮೊದಲಾದುವು ಈ ಪ್ರೇರೇಪಣೆಯಿಂದಲೆ ಉಂಟಾದ ಸಂಸ್ಥೆಗಳು. ಇವೇ ಧ್ಯೇಯಗಳಿಂದಾಗಿ ಹಲವರು ರಾಜಕೀಯ ಸಂಸ್ಥೆಗಳನ್ನು ಸೇರುವರು. ಜನಾಂಗದ ಮತ್ತು ದೇಶದ ಉದ್ಧಾರಕ್ಕಾಗಿ ಏನು ಮಾಡಬಹುದೋ ಅದೆಲ್ಲವನ್ನು ಮಾಡಲು ಬೇಕಾದಷ್ಟು ಅವಕಾಶವು ದೊರೆವುದೂ ಈ ಉದ್ದೇಶದಿಂದಾಗಿಯೆ. ಆದರೆ, ರಾಜಕೀಯ ರಂಗದಲ್ಲಿ ಕೆಲಸ ಮಾಡುವಾಗ ಮಾತ್ರ, ಸ್ವಂತದ ಮಹತ್ವಾಕಾಂಕ್ಷೆಗೂ ಎಡೆಕೊಡಬಹುದಾಗಿದೆ, ಬೇಕಾದಷ್ಟು ಕೀರ್ತಿ ಸಂಪಾದಿಸಲೂ, ಜನರಲ್ಲಿ ಹೆಸರುಗೊಳ್ಳಲೂ, ಸ್ವಕೀಯ ಸಂಬಂಧವುಳ್ಳ ಕರ್ತವ್ಯಗಳನ್ನು ಮಾಡಲೂ, ಇತ್ಯಾದಿಯಾಗಿ ಹೋರಾಡಲೂ ರಾಜಕೀಯ 'ಸೇವಕ'ರಿಗೆ ಎಡೆಯಿದೆ. ಇಷ್ಟು 'ಸ್ವ ಪೂಜೆ'ಗೆ ಅವಕಾಶ ಸಿಗುವ ಕಾರಣವೇ, ಎಲ್ಲೆಲ್ಲಿನ ಯಾವತ್ತೂ ಜನರು ರಾಜಕಾರಣವನ್ನು ಕೈಕೊಂಡು, ಸ್ವರಾಜ್ಯದ ಸ್ವಸಪ್ನದ ಸ್ವದೇಶದ ಸೇವೆಯನ್ನು ಮರೆತೇಬಿಡಲು [illegible] ಇಂತಹ [illegible] ರಾಜಕೀಯ ಕರ್ತವ್ಯ [illegible], ತತ್ವ [illegible] ಸೂತ್ರಗಳನ್ನು ಎದುರಿಸಿ ಸತ್ಯದ [illegible] ಮಾರ್ಗವನ್ನೇ ಓರೆಕೋರೆಯಾದ [illegible] ಮಹಾಮಂತ್ರಗಳನ್ನು ಜಪಿಸುತ್ತ [illegible] ರಾಷ್ಟ್ರದ ಅಭ್ಯುದಯದ ರಥವೇ [illegible]ಗುವುದು.

ಜವಾಬ್ದಾರಿಯುಳ್ಳ ಯಾವುದೊಂದು ಸ್ಥಾನಕ್ಕೆ ಯಾವನೊಬ್ಬನನ್ನು ನೇಮಿಸುವ ಮೊದಲೇ ಆತನನ್ನು ಸರ್ವತೋಮುಖವಾಗಿ ಪರೀಕ್ಷಿಸಬೇಕಾಗಿದೆ. ಅದನ್ನು ಮಾಡುವವರ ಮಾತ್ರ ಎಲ್ಲಿಲ್ಲಿಯೂ ಮಾಡುತ್ತಿಲ್ಲ. [illegible] ಗತಿಗೆ ಸೇರಿದವನೆಂದ ಕೂಡಲೆ, ಅವನ ವರ್ಚಸ್ಸು [illegible], ಅವನ ಹಣದ ಬೆಂಬಲಗು, ಪಡೆದಿಟ್ಟುಕೊಳ್ಳುವ ಯೋಗ್ಯತೆ, ಇವನ್ನು ನೋಡಿಯೆ ಆತನನ್ನು ಪಕ್ಷದೊಳಗಿನ ಅಂತರಂಗ ಸಭೆಗೂ ಸೇರಿಸಿಕೊಳ್ಳುವುದುಂಟು. ಇಂತಹನು ಒಂದು ಸ್ಥಾನದಿಂದ ಮತ್ತೊಂದಕ್ಕೆ ಕಾಲಿಡುತ್ತ ಮುನ್ನಡೆದು, ಕೊನೆಗೆ ಅಲ್ಲಿಂದ ತನ್ನ ಸ್ವಾರ್ಥದ ಸಾಧನೆಯನ್ನು ಮಾಡುವ ಸ್ಥಿತಿಗೆ ಬಂದನೆಂದರೆ, ಅತ್ಯುನ್ನತ ಪದವಿ, ಅತಿ ಗೌರವದ ಸ್ಥಾನ, ಜನತೆಯ ಪೂಜಾರಾಧನೆ ಮೊದಲಾದುವನ್ನು ಸೆಳೆದುಕೊಳ್ಳಲೂ ಯತ್ನಿಸುತ್ತಾನೆ. ಆಗ ತಾನೆ ಈತನ ಅಂತರಂಗವು ಬಹಿರಂಗವಾಗಿ ತೋರ್ಪಡುವುದು. ಕೂಡಲೆ ಸಾಮಾನ್ಯರೂ ಅವನ ಮೂಲೋದ್ದೇಶವನ್ನು ತಿಳಿದುಕೊಂಡು, ಇವನನ್ನು ಬಯಲಿಗೆ ತರುವುದಕ್ಕೆ ಪ್ರಾರಂಭಿಸುವರು.

ಈತನ ಮೇಲೆ ದೂರು ಹೊರಿಸುವುದರಲ್ಲಿ ಸೇರುವ ಮೊದಲೇ,— ಈ ಸ್ಥಿತಿಗೆ ಈತನು ಬರುವಂತೆ ಕಾರಣರಾರು? ಕಾರಣವಾವುದು? ಎಂಬುದನ್ನು ವಿಚಾರಮಾಡಿ ನೋಡಬೇಕಾಗಿದೆ, ಹೊರತು, ವೃಥಾ ಕೂಗಬಾರದಾಗಿದೆ. ಆತನು ಸುಲಭವಾಗಿ ಸ್ವಾರ್ಥಸಾಧಿಸಿದನೆಂದು ದೂರುವುದೇ, ಅಥವಾ ಹಾಗೆ ಸ್ವಾರ್ಥಸಾಧಿಸುವರೆ ಆತನಿಗೆ ಅನುಕೂಲತೆ ಒದಗಿಸಿಕೊಟ್ಟವರಲ್ಲಿ ದೋಷವೇ? ವಾಸ್ತವವಾಗಿಯೂ ಹಿಂದೆ ತಮಗೆಂತು ಇದೆಲ್ಲ ತಿಳಿಯಬೇಕು ಎಂದ ಮನಸಾಕ್ಷಿಗೆ ಸಮ್ಮತವಾಗುವಂತೆ, ಅವನನ್ನು ಅದುವರೆಗೆ ಹೊತ್ತವರು ನುಡಿಯಬಹುದು. ಆದರೆ, ಅದೂ ಯಥಾರ್ಥವಾಗಿಲ್ಲದಿರುವಲ್ಲಿ,— ಈ ಮಹಾದೋಷಕ್ಕೆ ಕಾರಣರು ಯಾರು?

ಸಮಾಜದಲ್ಲಿ ಹಿಂದೆ ಮಹಾಪಾತಕಗಳನ್ನು ಮಾಡಿದ್ದವನಾದರೂ, ಇಂದು ಕುಬೇರನಂತೆ ಮೆರೆವವನಿದ್ದರೆ, ಹಿಂದಣ ದರ್ನಡತೆಯನ್ನು ಕೊಂಚವೂ ತಿದ್ದದೆ ಅವನು ರಾಜಕೀಯ ರಂಗದಲ್ಲಿ ವೇಷಧಾರಿಯಾಗುವನಾದರೆ, ಹೇಗೆ? ರಾಜಕೀಯ ಪಕ್ಷವೊಂದು ಅವನನ್ನು ಕಟ್ಟಿಕೊಂಡು ಅವನ ದಕ್ಷತೆ ಹಣದ ಬಲ ಪಕ್ಷಕ್ಕೆ ಸಿಗುವಂತಾಗಲೆಂದರೆ, ಅವನು ಮತ್ತೆ ತನ್ನ ಪ್ರಭಾವದಿಂದ ಇತರ ಪಕ್ಷಗಳೊಡನೆ ಸೇರಿ, ತನ್ನ ಬಲ ಆಧ್ಯತೆಗಳನ್ನ ಹೆಚ್ಚಿಸುವವನಾದರೆ, ಆ ಮನುಷ್ಯನನ್ನು ದೂರಿ ಫಲವೇನಿದೆ? ಅವನದೆಲ್ಲಿಯ ಅಪರಾಧ? ಅವನು ಎಂದಿನಂತೆಯೆ ಇದ್ದಾನೆ. ಕಣ್ಣು ತುಂಬಾ ನೋಡಿ ನೋಡಿಯೇ [illegible] ಹಾರಿ, [illegible] ಯನ್ನು [illegible], [illegible] ಹೋರಾಡಿ [illegible] ಸಿಗಿಸಿಕೊಂಡ [illegible]ವನ್ನು ಬೈದಂತೆ ಆಗದೆ? [illegible] ಪಕ್ಷದ ತಟದಲ್ಲಿ ಆತನನ್ನು [illegible] ಪಲ?

[illegible] ಸಮಿತಿಗಳಲ್ಲಿ ಹೋಗುಗತ್ತಲೇ ಇದೆ. ದೇಶದ ಧ್ಯೇಯಗಳ [illegible] [illegible] ಇದೆ. [illegible] ವಸೆ ವಿಶ್ವಾಸಗಳು [illegible] ಯಥಾರ್ಥ ಸೇವಕರ [illegible] ಗಳಲ್ಲಿ [illegible] ವಲ.

ಮನೆಯ [illegible] ಯಾವಾಗ ನೋಡಿದರೂ ಬಿಳೀ [illegible] ಯಾವ ಪಕ್ಷವನ್ನು ಕಟ್ಟಿಕೊಳ್ಳುವನು. (ಪಕ್ಷವನ್ನು ಸೇರ ಮಹರಲ್ಲಿ ಹೆಚ್ಚಿನವರು ಅದುವರೆಗಿನ [illegible] ಕೆಲವು ಪ್ರಕಾರಗಳ ನಡತೆಯನ್ನೂ ತ್ಯಜಿಸಬೇಕಾದುದುಂಟು.) ಕಾಂಗ್ರೆಸಿನೊಳಗೆ ಸೇರಿ ಸ್ವಾರ್ಥಸಾಧನೆ ಮಾಡಲು ತುಂಬ ಅವಕಾಶ ಸಿಗುವುದೆಂದು ತಿಳಿಯುತ್ತಲೇ ಅಂತರಂಗದಲ್ಲಿ ಸ್ವದೇಶೀ ತತ್ವವನ್ನೂ ಅಂಗೀಕರಿಸದೆಯೂ (ಖಾದಿಯನ್ನ ಉಟ್ಟುಕೊಂಡೂ ಈ ತತ್ವ ಮರೆವುದು ಎಷ್ಟು ಸುಲಭ!) ವಿದೇಶೀ ಸಿಗಾರೇಟಿಲ್ಲದೆ ಬಾಳಲಾರದೆಯೂ ರಾಷ್ಟ್ರೀಯ ಚಳವಳದ ಹೆಚ್ಚಿನ ತತ್ವಗಳಿಗೆಲ್ಲ ವಿರುದ್ಧವಾಗಿ ನಡೆದೂ ಹೇಗೆ ಮೆರೆದಾಡುವನು! ಹೀಗಿರುತ್ತ ಪಕ್ಷದ್ರೋಹವು ಕಡಿಮೆಯಾಗುವುದುಂಟೆ? ಅಂಗಿ ಬದಲಾಯಿಸಿದಂತೆ ಪಕ್ಷಗಳನ್ನು ಬದಲಾಯಿಸಿದರೆನ್ನಲುಂಟೆ? ಸರಕಾರದ ನೋಕರನಾಗಿ ಬಾಳಿದನೆನ್ನಲುಂಟೆ? ಯಾವ ಪಕ್ಷವನ್ನು ಸೇರಿ ಮೇಲೆ ಬಂದನೋ ಅದನ್ನೆ ಮೆಟ್ಟಿ ನಡೆದನೆನ್ನಲುಂಟೆ?

ಜನಾಂಗಿಕ ಜೀವನದಲ್ಲಿ ಇದೇ ಕಲಂಕ. ಈ ಕಲಂಕ ನಿವಾರಣೆಯು ಮಹದುದ್ದೇಶವುಳ್ಳದು. ಅದು ಅತಿ ಕಷ್ಟ ಸಾಧ್ಯವಾಗಿದೆ. ನಿಜ, ಏಕೆ? ಯಾರನ್ನು ಹೊರಗೆಡಬೇಕಾಗುವುದೋ ಅಂತಹರಿಲ್ಲದೆ ಸ್ವತಕ್ಷವೇ ನಡೆಯಲಾರದ್ದು, ಅದರ ನಾಡಿಗಳು ನಿಲ್ಲಬಹುದು. ವ್ಯಕ್ತಿಯನ್ನು ನೋಡದೆ ತತ್ವವನ್ನೆ ನೋಡಿ ಆಗ ನಡೆಯಬೇಕಾಗುವುದು. [illegible] ವರೂ ಎನ್ನುವುದು ಇದೇ. ನಿರ್ಮಲ ಜೀವನ, ಶ್ರದ್ಧಾ ವ್ಯವಹಾರ ಎನ್ನುವವರು ಮಹಾತ್ಮಾಜಿಯೊಡನೆ ಸೇರಿ ಇಂತಹರನ್ನು ಶೋಧಿಸಲಿ. ಅವರನ್ನು ಹೊರಗೆಡವಿದರೆ ಸಾಲದು, ಅಂತಹರು ಅಷ್ಟೆತ್ತರ ಏರುವುದಕ್ಕೆ ಏಣಿ ಇಟ್ಟವರೂ ಅದರಲ್ಲಿ ತಮ್ಮ ಕಾರ್ಯಭಾಗವಿಷ್ಟಿತ್ತೆಂಬುದನ್ನು ಸರಿಯಾಗಿ ವಿವರಿಸಲಿ. ಇಂತಹರಿಗೆ ಕೈಕೊಟ್ಟುದೇಕೆಂದು ಸ್ಪಷ್ಟವಾಗಿ ಅಂತಃಕರಣಪೂರ್ವಕವಾಗಿ ತಿಳಿಸಲಿ. ನಾನೂ ಇವರ ಜತೆಗಾರನೆಂದ ಬಳಿಕ, ಇವರಿಗೂ ನನಗೂ ಅಲ್ಪಸ್ವಲ್ಪವಾದ ಸಹಜ ಸಂಬಂಧವಾದ ಗುಣವೊಂದು ಇದ್ದಿದ್ದೀತವೆ? ಯಾವುದೊಂದು ಸಾಧನೆಗಾಗಿ ಇಂತಹರು ಬೇಕಾಗುವುದುಂಟೋ? ಸರಿ, ಆದರೂ ತಿಳಿದು ಬಂದಿ ನಾನೇ ಇದಕ್ಕೆ [illegible]ಯನಾಗಿ ಹೇಳಲಾರೆನೆಂದರೆ, ಯಾರೇನು ಇದಿದರೂ ಆ ವ್ಯಕ್ತಿಯು ಹೊರಕ್ಕೆ ಹೋಗಲು ನಾನೇ ತಡೆದಂತಾಗುವುದು. ಎಂದರೆ, [illegible]ಗ್ರೆಸಿನೊಳಗಣ ಕೆಲವರಲ್ಲಿ ಅಪರಾಧ ಕಾ[illegible] ನನ್ನನ್ನೂ ಬಹಳ ಚೆನ್ನಾಗಿ ಪರಿಶೋಧನೆಗೆ ಪಡಿಸಬೇಕಾಗಿದೆ ಎಂದೂ ಅರ್ಥವಾ[illegible]ದಲ್ಲವೆ?

ಸ್ವಚ್ಛವಾದ ಉದರಗಳು
—ಬೇನೆರಹಿತವಾಗಿವೆ

ಉದರ ತೊಡಕುಗಳಿಂದ ಉಂಟಾಗಬಹುದಾದ, ಅಜೀರ್ಣತೆ, ಅಸೌಖ್ಯ, ವಾಯು ಇತ್ಯಾದಿಗಳನ್ನು ಅಲಕ್ಷಿಸಬಾರದು. ಉದರದೊಳಗಿನ ಕರುಳುಗಳ ಕಾರ್ಯವು ಸರಾಗವಾಗಿ ನಡಿಯದೆಯೂ—ಕೆಡುಕಾದ ಜೀರ್ಣರಸಗಳಿಂದಲೂ, ಸಮಗೆ ಸಹಿಸಲಾಗದ ಹೊಟ್ಟೆನೋವಿಗೆ ಕಾರಣವಾಗಬಹುದು. ಇಂಥ ಅಸ್ವಚ್ಛ ಪದಾರ್ಥಗಳನ್ನು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಮಾತ್ರ ಹೊರಗೆಡಹಬಹುದು. ಇನೊಸನ್ನು ಇಂದಿನಿಂದಲೇ ಕುಡಿಯಲು ಪ್ರಾರಂಭಿಸಿ, ನಿಮ್ಮ ಉದರ ಅಸೌಖ್ಯಗಳಿಂದ ಪಾರಾಗಿರಿ.

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ ಪರಿಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳನ್ನು ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ. ಇನೋಸಿನ ಪ್ರತಿಯೊಂದು ಗುಟುಕು ಅದರ ಬೆಲೆಯನ್ನು ಇಳಿಸಬಲ್ಲುದು. ಎಲ್ಲಾ ಕಡೆಗಳಲ್ಲಿಯೂ ಮೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ

ನಮ್ಮ ಎಪ್ಪತ್ತು ವರ್ಷಗಳ ಅನುಭವದಲ್ಲಿ ಈ ಮಾದರಿಯು ಹೆಚ್ಚಿಗೂ ಹೀಗೆ ಸಮಾಧಾನಕರದ್ದೆಂದು ಒಪ್ಪಿತವಾಗಿದೆ"

E V K 3

ಮೌನವಾಗಿ ನರಳುವರು

ಅನೇಕ [illegible] ಇನ್ನಸೇಕರಿಗೆ ಅವುಗಳು ತಿಳಿದಿದರೆ ಅವನ್ನು [illegible] ತಿಳಿಸಲು ನಾಚಿಕೆಗೊಳ್ಳುವರು [illegible]

ಜೀವಾಮೃತದಲ್ಲಿ

ಅದು ಅಶಕ್ತತೆಯನ್ನು, ಅದರ ಕಾರಣಗಳು ಯಾವವೆ ಇರಲಿ ಹೋಗಗೊಳಿಸುತ್ತದೆ. ನಿಮ್ಮ ದೇಹಕ್ಕೆ ಸಂಪೂರ್ಣ ಹೊಸ ಹುರುಪನ್ನು ಕೊಡುತ್ತದೆ. ಬಲ, ನವಚೇತನವನ್ನು ಕೊಡುತ್ತದೆ

ಪರಿಣಾಮಗಳ ಕೆಡುವ ಮೊದಲು, ಇದರ ಪರೀಕ್ಷೆಯನ್ನು ಮಾಡಿರಿ

ಎಲ್ಲಾ ದವಾಖಾನೆಗಳಲ್ಲಿ ದೊರೆಯುತ್ತದೆ

ಆಯುರ್ವೇದಾಶ್ರಮಂ, ಟಿ. ಪಿ. ನಂಬ್ರ 287 ಮದ್ರಾಸು.

ಸ್ಟಾಕಿಸ್ಟರು —
ಪೋಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

ಅರೆ ನೋಟಗಳು!

ಯ ರಾಜ್ಯಗಳಲ್ಲಿ ದೊಂದು ಪ್ರವಸ
ಸ್ಟಾರ್ ಕಾಂಗ್ರೆಸ್ಸು ಕಟಿದವರಿಗೆ
ಡು ವರ್ಷದ ಸಭೆ, ಹಲವರು ಉಪ
ಗಿರುವರು. ಕೊಲ್ಲಪುರದಲ್ಲಿ ಶಸ್ತ್ರ
ಕಾನೂನಿಕ್ಕೆ ವಿರುದ್ಧವಾಗಿ ಸತ್ಯಾಗ್ರಹಕ್ಕಾ
ಗುಗಹತ್ತಿದೆ. ತ್ರಿವೆಂದ್ರಮಿನಲ್ಲಿ ವಿದ್ಯಾ
ಸಾಯನ್ಸ್ ಕೊಲೆಜ್ ದರ್ಬಾರದೊಳ
ಛತ್ರಾಪಟಿಗೆ ವಿರುದ್ಧ ಸತ್ಯಾಗ್ರಹ, ಹರ
ನಿಷೇಧ ಸಭೆ. ನಮ್ಮ ಪ್ರಾಂತ್ಯದಲ್ಲಿ?

++ ++ ++

ಕಾಂಗ್ರೆಸ್ ಕೂಟಗಳು ಅಲ್ಲಲ್ಲಿ ತಮ್ಮೊ
ನಾನಾ ರೀತಿ ಸ್ವತಂತ್ರವಾಗತೊಡಗಿವೆ.
ಅಭಿಪ್ರಾಯ ಮತ್ತೊಬ್ಬರಿಗಾಗದು.
ಎಪಟ್ಟದಲ್ಲಿ ಮಂತ್ರಿಗಳ ಭಾಷಣಕ್ಕಡ್ಡ
ಆಗಾಗ ಕತ್ತಲನ್ನು ರಚಿಸಲಾಯಿತು,
ಎನ ಮಂತ್ರಿಗಳಲ್ಲಿ ಕ್ಷಮಾಪಣೆ ಬೇಡ
ವರು ಮಂತ್ರಿಗಳು ಮನೆಯಲಿಲ್ಲವೆಂದು
ಬರುವಂತಾಯಿತು. ಹಿಂದೀ ವಿರೋಧ
ವೊಂದು ದಕ್ಷಿಣದಿಂದ ಉತ್ತರಕ್ಕೆ ಮದ್ರಾ
ಎಂದು ವಿರೋಧ ವಾತಾವರಣದ ಸುಳಿ
ಸಂಚಾರವಮಾಡತೊಡಗುವುದು ಸತ್ಯಾ
ತತ್ವವನ್ನು ಎಲ್ಲಿ ಯಾವಾಗ ಹೇಗೆ ಎಷ್ಟು
ಗೆ ಅದು ಸದೋಷವಾಗಿ ಆಚರಿಸಬಹು
ದನ್ನು ಸೂಚಿಸಿ ಒಂದು ಕಾನೂನಾಗದೆ
ನಿರ್ವಾಹವಿಲ್ಲವೆಂಬಂತಿದೆ

++ ++ ++

ದೇಸಾಯಿಯವರೆಂದಂತೆ ವೈಟರು ಆದಿದ
ಫೆಡರೇಶನಿಗೆ ಅನುಕೂಲತೆ ಸೂಚಿಸಿದ
ಗ್ರೆಸ್ ಅಭಿಪ್ರಾಯವೆಂಬುದನ್ನು ಬೋಸರು
ಯೆ ಅದನ್ನು ವಿರೋಧಿಸಿ ಕಟುವಾಕ್ಯ
ವಾಗ, ಅದನ್ನು ಎದುರಿಸಿ ಬೋಸರಿಗೆ
ತೊಟ್ಟು ಸತ್ಯಮೂರ್ತಿಗಳೆದ್ದರು ಅದ
ಖಂಡಿಸಿ ಪ್ರತಿಬಾಣಗಳು ಅಲ್ಲಿಲ್ಲಿಂದ
ಟವು . . ತಿಸ್ತು? ಕೊನೆಗೆ ದೇಸಾ
ಯರು ಅಂಥದೇನೂ ಹೇಳಿದ್ದೇ ಇಲ್ಲವೆಂದು
ನುಡಿದ ಬಳಿಕ , ಉದ್ಧವಾದೊಂದು
ಜೆ ಪ್ರಕಟವಾಯಿತು ಅಷ್ಟು ಆಗುವ
ಮಾತ್ರ ದೇಸಾಯಿಯರೇನೂ ಎಂದು
ಕೋ?

++ ++ ++

ದೇಸಾಯಿಯವರು ಹೈದ್ರಾಬಾದಿಗೆ
ಜನಗಳು ವಿಚಾರಣೆಗೊಂಡುವಾಗ ಅವ
ಡಿಫೆಂಡ್ ಮಾಡಲು ಹೋಗಿದ್ದವರು
ವಕೀಲ ಸಂಘದಲ್ಲಿ ಇವರು ಭಾಷಣ
ಬಾರದೆಂದು ಸರಕಾರವು ತಿಳಿಸಿತೆಂದು
ಡ್ ಮಾಡುವ ಕೆಲಸ ಬಿಟ್ಟು ಒಫೆಂಡ್
ಸರಕಾರದ ವರ್ತನೆಗೆ ತಿರಸ್ಕಾರ ತಮ್ಮ
ಕಾರ ಸೂಚಿಸಲು, ಬೊಂಬಾಯಿಗೇ
ನಡೆದರಂತೆ ಪ್ರಜಾಜನಗಳಿಗೆ ಇನ್ನು

ಕ್ಷಣೆಗಾಗಿ ನಾಲ್ಕು 'ಸಂಗ್ರಾತೀ' ಜಹಜುಗಳು
ಬರುವಂತಾಗಿದೆ. ಅತ್ತ—ಇಪಿಯ ಫಕೀರನು
ಪುನಃ ಪಡೆಗೂಡಿ, ಒಬ್ಬ ಹಿಂದೀ ಬನರ್ಜಿಯರ
ನನ್ನು ಕೊಂದಿಕ್ಕಿದನು—ಇದಿಷ್ಟು ಕಳೆದ ವಾ
ರಾಂತ್ಯದ ವಾರ್ತೆ.

++ ++ ++

ಮಧ್ಯಪ್ರಾಂತ್ಯದ ರಾಜಕೀಯ ವಿಚಾರ
'ಗಳ ಸೊಬಗನ್ನು ಸಂಪೂರ್ಣವಾಗಿ ಹೊರಗೆಡವ
ಬೇಕಾದರೆ, ಈಗತಾನೆ ಅಲ್ಲಿನ ಸಿವಿಲ್ ಸರ್ವಿ
ಸನ್ನು ತ್ಯಜಿಸಿ ಕಾಂಗ್ರೆಸಿನ ರಾಷ್ಟ್ರಪತಿಗಳ ಖಾಸಗಿ
ಕರಣೀಕರಾಗಿರುವ ಶ್ರೀ ಎಚ್. ವಿ ಕಾಮತ
ರನ್ನು ಮುಖ್ಯ ಮಂತ್ರಿಗಳನ್ನಾಗಿ ಕಾಂಗ್ರೆಸ್
ಕಾರ್ಯಕಾರೀ ಮಂಡಲವು ಸೂಚಿಸದರಾಗದೆ?
ಎಂದು ಒಂದು ಇಂಗ್ಲಿಷ ವಾರಪತ್ರಿಕೆಯಲ್ಲಿ
ಲೇಖಕರೊಬ್ಬರು ಸೂಚಿಸಿರುವರು. 'ತಮ್ಮ
ಕೈಕೆಳಗಿದ್ದವರೊಡನೆ ಅಥವಾ ಅವರ ಕೈಕೆಳಗೆ,
ಐ. ಸಿ ಎಸ್ ಅಧಿಸರರು ಒಮ್ಮೆ ಹೇಗೆ ವರ್ತಿ
ಸುವರೋ ನೋಡುವಂತೆಯೂ ಆಗುವುದಲ್ಲವೆ?
ಅವರು ವಿಧೇಯರೂ ಸಹಕಾರಿಗಳೂ ಆಗಿ
ಮಾತ್ರ ಅಧಿಕಾರಿಗಳ ಕೂಟಗಳಲ್ಲಿ ವರ್ತಿಸುವ
ದೃಢ, ತರಬೇತಿನವರು! ಕೈಕೆಳಗಿದ್ದ ಅಧಿಸರ
ರನ್ನು ಗವರ್ನರರಾಗಿ ನೇಮಿಸಿದಾಗ ಕಾಂಗ್ರೆಸು
ರಾಜೀನಾಮೆ ಕೊಟ್ಟುದು ತಪ್ಪೆಂದು ಐ ಸೀ
ಎಸ್ ತಿಳಿಸಿತ್ತಲ್ಲ! ಅವರು ಶಿಸ್ತನ್ನು ಎಂದೂ
ಮರೆಯುವರಲ್ಲವೆಂದು ನೋಡಬಹುದಾಗಿತ್ತು
ಇಂಥ ಯೋಗ್ಯ ಸಂದರ್ಭ ಕಳೆದರೆ ಮತ್ತೆಂದು
ಸಿಕ್ಕೀತು?' ಎಂದೇ ಆವರ ಲೇಖನದ ಸಾರಾಂಶ

++ ++ ++

ಗಾಂಧಿಜೀ ಇನ್ನೂ ನಮ್ಮ ನಡುವೆ ಇರು
ವಾಗಲೆ, ಬ್ರಿಟಿಷ ಸರಕಾರವು ಭಾರತದ ರಾಜ
ನೀತಿಯ ಸಮಸ್ಯೆಯನ್ನು ತೀರ್ಮಾನಿಸಿಕೊಳ್ಳು
ವುದೊಳ್ಳೆಯದು ಎಂದು ಸರ್ ರಾಧಾಕೃಷ್ಣನ್
ರವರು ಭಾಷಣಮಾಡಿರುವರು ಗಾಂಧಿಜಿಯೆ
ಮಾತ್ರ ಭಾರತವರ್ಷದಲ್ಲಿ ಒಂದ ಅಪೂರ್ವ
ಮಹತ್ವದ ಶಕ್ತಿ ಸತ್ಯ ಅಹಿಂಸೆಗಳಂತೆಯೆ
ನ್ಯಾಯ ನಿಷ್ಪಕ್ಷಗಳಿಗಾಗಿ ಆ ಶಕ್ತಿಯು ಚೆನ್ನಾಗಿ
ಸಾಧಿಸುವುದು ಆ ಶಕ್ತಿಯು ಅಡಗಿದರೆ
ಮುಂದಿನ ಇಂಡಿಯಾ ಬೇರೆಯೆ' ಎಂಬುದನ್ನು
ಇಂಗ್ಲೆಂಡು ತಿಳಿದುಕೊಳ್ಳಬೇಕು ಇಂಗ್ಲೆಂಡಿ
ಗೂ ಇಂಥ ಭವಿಷ್ಯ ಭಾರತವೇ ಬೇಕಾಗಿದೆ
ಯೇನು? ನಮ್ಮೊಡನೆ ಯುದ್ಧವನ್ನು ಮಾಡಲು

ನಾವು ನಿರಸ್ತ್ರರು. ರಾಜತಂತ್ರದ ಬಲಿಯು
ನ್ನೊಡ್ಡಿ ಮತ್ತಾವ ಹೊಸ ಸುಧಾರಣೆಗಳನ್ನು
ಏರ್ಪಡಿಸಬಹುದೆಂದಿರುವರೋ ಈಗ ತಿಳಿಯದು

++ ++ ++

ಅಹಿಂಸೆಯನ್ನು ಅಕ್ಷರಶಃ ಅನುಸರಿಸು
ವುದಕ್ಕೂ, ಯುದ್ಧಶಾಸ್ತ್ರವನ್ನು ಅಭ್ಯಸಿಸಿ ಸನ್ನದ
ವಾಗಿರುವುದಕ್ಕೂ ವಿರೋಧವೇನೂ ಇಲ್ಲ.
ಜರ್ಮನಿ, ಇಟಲಿಗಳಲ್ಲಿ ಯುವಕರಿಗೆ ಯುದ್ಧ
ವಿದ್ಯೆಯನ್ನು ಕಡ್ಡಾಯವಾಗಿ ಬೋಧಿಸುತ್ತಿರು
ವುದೂ ಅದಕ್ಕಾಗಿಯೆ ಎನ್ನೋಣ—ತಪ್ಪಾದೀತೆ?
ಶಾಂತಿಗಾಗಿಯೇ ಹೋರಾಡುವ ಇಂಗ್ಲಿಷರೂ
ಯುದ್ಧಸನ್ನಾಹವನ್ನು ಬಹಳವಾಗಿ ಮಾಡುತ್ತಿ
ರುವರೇಕೆ? ಸುಮ್ಮನೆ ನಾನಾ ಕೂಗು ಕಲಿತು,
ವಿನೋದಾರ್ಥದ ಆಟಗಳನ್ನು ಆಡಿ, ಕಾಡಿಗೆ
ಸರಿಯುವ ನಾಡಿಗರಂತೆ ವಿದ್ಯಾರ್ಥಿಗಳಿರದೆ,
ಸೈನಿಕ ತರಬೇತು ಪಡೆದರೇನು ಆದಾಯವಾ
ದೀತು? 'ನಾನು ಹಿಂಸಾತುರನಲ್ಲ—ವರ್ಣ
ದ್ವೇಷವೇ ಭಯಂಕರವಾಗಿರುವ ಈ ಜಗತ್ತಿ
ನಲ್ಲಿ ಯುದ್ಧಸನ್ನದ್ಧನಾಗದೆ ಇರುವುದು ಅತಿ
ಭ್ರಮೆಯು ಹೆಗ್ಗುರುತು ಕತ್ತಲಲ್ಲಿ ನಡೆವಾಗ
ಬೆಳಕಿದ್ದರೇ ನಿಷ್ಕಂಟಕವಲ್ಲವೆ?' ಎಂದು ಶ್ರೀ
ಎಚ್ ವಿ ಕಾಮತರು ಮೊನ್ನೆ ಸ್ಕೌಟ ಸಮಿತಿಗೆ
ಉಪದೇಶವಿತ್ತಿರುವುದು ಸಾರ್ಥಕವಾಗಿದೆ

++ ++ ++

ಕಾಂಗ್ರೆಸ್ ಮಂತ್ರಿಗಳ ಮಾತು ಕೇಳಿ
ದಿರಾ? ರಾಜಕೀಯ ಕೈದಿಗಳನ್ನು ಎಲ್ಲೆಲ್ಲಿಯೂ
ಬಿಡುಗಡೆಮಾಡಿಸುವುದು ಕಾಂಗ್ರೆಸ್ ಸರಕಾರ
ಗಳ ಕಾರ್ಯಕ್ರಮ ... ರಾಜಕೀಯ
ಕೈದಿಗೆ ಚಡೀ ಹೊಡೆದಾಗ ( ) ಅದು ಜೈಲ
ಕಾನೂನು ಪ್ರಕಾರ ನ್ಯಾಯವಾಗಿ ವಿಧಿಸಿದ್ದೆಂದು
ಇವರೇ ತೀರ್ಮಾನಮಾಡಿರುವರು. ...
ಕನ್ಯೆಯ ... ಸಂಗದ ಅತಿಕ್ರಮಕ್ಕೆ ಮಾಫಿ
ಸೋದರನಿಗೆ ಬಂಧನದಲ್ಲಿ ಜೈಲುಕೋಡ
ಹಾಯುವಂತಾದರೆ!

++ ++ ++

ಅಧಿಕಾರ ದೊರೆತ ಬಳಿಕ ಕಾಂಗ್ರೆಸಿನ
... ಅಧಿಕಾರಿಗಳ ರೀತಿಯೇ ಹೊರತು ಕಾಂಗ್ರೆ
ಸಿನದಲ್ಲ ಆದರೂ ತತ್ವಜ್ಞಾನ ಬೋಧಿಸು
ವರ 'ಅತಿ ಸೊಗಸಾದ ... ಒಣ
ಎಲೆಗಳ ಇರವು ... ಅವನ್ನು ಉದುರಿಸಲು
ನನಗೆ ಹೇಳಬೇಡಿ ನಾಳಿನ ಗಾಳಿಗೆ ಸಕಾಲ

ದಲ್ಲಿ ಅವು ಉದುರುವುವು. ಸದ್ಯಕ್ಕೆ ದಯೆ,
ಕರುಣೆ, ಧರ್ಮ ಇವನ್ನು ಆರಾಧಿಸಿರಿ. 'ಕಳ್ಳ
ಕೊಲೆಗಾರರಿಗೂ ನಾವು ಕರುಣೆ ತೋರಿಸಬೇಕ
ಬಲ್ಲವೆ! ಹಾಗಾದರೆ ತಪ್ಪಿದ ಅಧಿಕಾರಿಗೆ ತೋ
ರಿಸಬೇಡವೆ?'—ಶ್ರೀ ರಾಜಗೋಪಾಲಾಚಾ
ರ್ಯರ ಮಾತು. ರಾಜಕೀಯ ಕೈದಿಗೆ?

++ ++ ++

ಮಧ್ಯ ಪ್ರಾಂತ್ಯದಲ್ಲಾದ ಮಂತ್ರಿಗಳ
ಒಡಕು ಕಾಂಗ್ರೆಸಿನಲ್ಲಾಗ ಬಹುದಾದ ಯಾವ
ದೊಂದು ಒಡಕಿನ ರೋಗದ ವಿಧಾನವಾಗಿದೆ
ಅಲ್ಲಿ ಕಾಂಗ್ರೆಸ್ ಮಂತ್ರಿಗಳೊಳಗೆ ಒಡಕ
ಎನ್ನುವವರೇ ಇಲ್ಲ ಮಹಾರಾಷ್ಟ್ರೀಯ ಮತ್ತು
ಗುಜರಾಥದವರ ಸಂಚು ಎನ್ನುತ್ತಾರಲ್ಲದೆ
ಭಾರತ ವರ್ಷ ಎಂಬ ಮಾತೇ ಅಲ್ಲಿಲ್ಲ. ಇಂದಿ
ಯಾ ಆಕ್ಟು ಕೊಟ್ಟಿರುವಷ್ಟು ಅಪೂರ್ಣ ಅಧಿ
ಕಾರ ಬಲದಿಂದಾದರೂ, ಮೂಲಧ್ಯೇಯಗಳನ
ಮರೆವುದಕ್ಕೆ ಎಷ್ಟು ಇಂಬು ದೊರೆತಿದೆ!

++ ++ ++

"ರಾಮಾಯಣವನ್ನು ಕೇಳಲು ಎಲ್ಲ
ಹಿಂದೀಯರು ಬರಬಹುದು, ಹನುಮಂತನ
ಪರಾಕ್ರಮದ ಕೃತ್ಯಗಳನ್ನು ಕೇಳಿ ಬಾಯಾಕ
ಸಲೂ ಬಹುದು" ಎಂಬಂತೆ, ಕಾಂಗ್ರೆಸ
ಪಾಳೆಯದೊಳಗೆ ಎಲ್ಲರೂ ಸೇರಬಹುದು
ಒಂದಾಗಿ ಸೇರಿ ಕಾಂಗ್ರೆಸಿನ ಧ್ಯೇಯ
ಗಳನ್ನು ಅಂಗೀಕರಿಸಿ ಮುನ್ನಡೆದ ಎಂದೊಡ
ಪಾಳೆಯದೊಳಗೆ ಕಚ್ಚಾಟ ಇದೇ ರೀ
ಯಿಂದ ತಾನೆ ಹಿಂದುಗಳು ರಾಜ್ಯಗಳನ್ನು ಹಿಂ
ಕಳೆದುಕೊಂಡರು' ಎಂದೂ ಈಗ ತೀಕ್ಷ್ಣ
ಟೀಕೆಗಳು ಉಂಟಾಗಲು ಆಸ್ಪದ ದೊರೆತಿದೆ
ಎಲ್ಲ ಪ್ರಾಂತ್ಯಗಳ ಮೇಲೂ ಕಾಂಗ್ರೆ
ಸಿನ ಕಾರ್ಯಕಾರೀ ಮಂಡಲದ ಹಾಗೂ ಪಾಲಿ
ಮೆಂಟರಿ ಕಮಿಟಿಯ ಬೇರೆ ನಿರ್ದೇಶವೆಂ
ರೇನು? ಇದಕ್ಕೂ ಡಿಕ್ಟೇಟರರಿಗೂ ಭೇ
ವೇನು? ಹಾಗೆ ಹೇಗೆ ಪ್ರಶ್ನಿಸುವವರ
ಯಥಾರ್ಥ ಕಾಂಗ್ರೆಸುವಾಲರೇ, ಅನ್ಯರಲ್ಲ
ಆಂತು ಹಿಂದೆ ಎಂದೂ ಕಾಣಬಾರದ್ದಿದ್ದ
ಕ್ರೋಧ ... ಈಗ ತೀರಿಕೆ' ಬರುತ್ತಲಿದೆ

++ ++ ++

ಜಯಪುರದಲ್ಲಾದ ಸರ್ಕಾರ ಚಳವಳಿ
ಹೊರಗಿನವರು ಕಾರಣರೆಂದು ಜಯಪುರ
ಮಹಾರಾಜರು ಹೇಳಿಕೆ ... ಸರಿಯಲ್ಲ
... ಅರಸರೂ ಹೀಗೆ ಎಲ್ಲವೂ ಹೊರ
ನವರ ಪ್ರತಾಪ ... ಅವರು ರಾ
ನನ್ನ ತ್ಯಜಿಸಬೇಕಾಯಿತು ಕಾಶ್ಮೀರ ಮಹಾ
ರಾಜರು ... ಮಾಡಿದ್ದರ ಪರಿಣಾಮ
ವಾಗಿ ... ದೇ ಮುಖ್ಯ ಪ್ರಧಾ
ರಾಗುವ ತಾಗಿತ್ತು ಅಜೀರ್ಣವಾಗುವಷ್ಟು
ತಿಂದು ನುಂಗಿ ಕೊನೆಗೆ ವಮನಮಾಡಿದ್ದಾ
ಎಂದಂತಿದೆ

++ ++ ++

ಪಂಜಾಬಿನ ಒಬ್ಬ ಜಿಲ್ಲಾ ಮೆಜಿಸ್ಟ್ರೇಟರು
ಎಮ್. ಎಲ್ ಎಗಳಿಗೆ—ಹೋಗಿ,
ಎಸೆಂಬ್ಲಿಯಲ್ಲಿ ಮಾತಾಡಿರಿ ಎಂದರಂತೆ!
ಲ್ಲಿ ತಾನೆ ಮೆಂಬರಾಗಿ ಚುನಾವಣೆಹೊಂದಿ
ವ ಮಾತಾಡಬೇಕಾಗಿದೆ? ಸಿಂಧದ ಮಂತ್ರಿ
ಪದೇ ಪದೇ 'ರಾಜೀನಾಮೆ ಕೊಡಿ'
ತ್ತಾರೆ ಅವರಂತೂ ಸ್ನಾಗುತ್ತಲೇ ಇದ್ದಾ
ಮಂತ್ರಿಗಳೇನು ಬಿಡುವುದುಂಟೆ?

++ ++ ++

ಅಹ್ಮದಾಬಾದಿನಲ್ಲಿ ಮದ್ಯನಿಷೇಧ ಕುಡಿ
ಅಫೀಮು ಗಾಂಜಾಭಕ್ತರೂ ಆಗ್ರಹ
ಗೊಂಡು, ಉಗ್ರರಾಗಿದ್ದಾರೆ ಯುಕ್ತ
ಪ್ರಾಂತ್ಯದಲ್ಲಿ ಮೈನಪುರಿಯಲ್ಲೂ ಮದ್ಯನಿಷಾ
ಧವಾಗಿದೆ ಮದ್ರಾಸಿನಲ್ಲಿ ಭಿಕ್ಷುಕರಿಗೆ
ಅನಾಥಾಲಯ ಸ್ಥಾಪನೆಯಾಗುವಂತಿದೆ.
ಕ್ಷುಕರಿಗೆ ಅಲ್ಲಿ ಕೆಲಸಮಾಡಿ ಬೆವರು ಸುರಿ
ಅನ್ನ ಸಿಗದು. ಸಿಕ್ಖ ಅಕಾಲಿಗಳು ದನೀ
ತಿರಂತೆ ಆದರೂ ಮೆರವಣಿಗೆ ಮಾಡಿ
ಹೊಸವರ್ಷದ ದಿನ ಮುಂದೆ ಆಚರಿಸುತ್ತ ಕೈದು
ಹೊಡುತ್ತಿದ್ದಾರೆ. ಸ್ವಿಕಾರ ನಾಟಕ, ಮಹಾ
ರ ಪ್ರವೇಶವಾಗುತ್ತಲೆ, ಸ್ವಾಗತ ಗೀತದೊ
ಮಂಗಲಗೀತ ಹಾಡಿ ಮುಗಿಯಿತು. ಇತ್ತ-
ಭಾರತವರ್ಷದ ಸಮುದ್ರ ತೀರಾವಳಿಯ ಸಂರ

THE

Bank of Mangalore Ltd.,

MANGALORE

ESTD 1931

Branches -

Panemangalore Mudabidri & Padubidri

Fixed Deposits will be received at following rates of interest.

For 3 months		3½%
" 6 "		4%
" 12 "		5%
" 24 "	& upwards	5½%

Interest Payable Quarterly

Saving Bank deposit* 3½% *on daily balances.

All kinds of banking business transacted.

"ಆಂಧ್ರವನ್ನು ಮದ್ರಾಸು ಪ್ರಾಂತ್ಯದಿಂ
ಪ್ರತ್ಯೇಕಿಸಬೇಕೆನ್ನುವರು ಮದ್ರಾಸು ನಗರ
ಉತ್ತರ ಭಾಗವನ್ನೂ ಆಂಧ್ರಪ್ರಾಂತ್ಯಕ್ಕೆ ಸೇರಿ
ಲಿಚ್ಛಿಸಿರುವರು ರಾಜಾಜಿಯವರ ಹಿಂ
ವಚಾರ ಚೆನ್ನಾದರೆ, ಮದ್ರಾಸನ್ನೆ ಮಹಾಕೋ
ಸಲಕ್ಕೆ ಸೇರಿಸಲಿಚ್ಛಿಸಿ ಮತ್ತೊಂದು ತಕರಾರ
ಉಂಟಾದೀತು. ಎಂದು ಉತ್ತರ ಹಿಂ
ಸ್ಥಾನದ ಪತ್ರಿಕೆಯಲ್ಲಿದೆ ಕಾಸರಗೋಡ
ತಾಲೂಕನ್ನೆ ಮಲಿಯಾಳ ಪ್ರಾಂತ್ಯಕ್ಕೆ ಈಗ
ಸೇರಿಸಬೇಕಾಗಿದೆ ಎಂದೂ, ಚಂದ್ರಗಿರಿ ಹೊ
ಯ ತರ್ಕವೇ ಮಾತ್ರವಲ್ಲವೆಂದೂ ಕೇರ
ಯರ ಸಭಾ ನಿರ್ಣಯವಾಗಿದೆ ಅದೂ ಇ

++ ++ ++

ವಿಲ್ಲಿಂಗಡನ್ ಬಹದ್ದೂರರು ಕೊನೆ
ತನಕವೂ ಗಾಂಧಿಜಿಯವರನ್ನು ಕಾಣಲೂ ಇ
ಕಾಣ ಬಿಡಲೂ ಇಲ್ಲ. ಆದರೂ, ಬ್ರಿಟಿ
ಸಾಮ್ರಾಜ್ಯವು ಇನ್ನೂ ಇಲ್ಲವೆ? ಇಂಗ್ಲೆ
ನಲ್ಲಿ ಚರ್ಚಿಹಿಲ್ಲ ಬಹದ್ದೂರರು ಅವರ
ಕಂಡರೇ, ಕಾಣ ಸಿಕ್ಕಿದರೇ? ಇಂಡಿಯ
ಇನ್ನೂ ಬ್ರಿಟಿಷರ ಅಧೀನವಾಗಿಲ್ಲವೆ? ಭಾರ
ವರ್ಷವೆಂದರೆ ಗಾಂಧಿಜಿ ಎಂದು ಪಾಶ್ಚಾತ್ಯರ
ಅಭಿಪ್ರಾಯವಿದೆ, ವಿಲ್ಲಿಂಗಡನರು ಇಂಡಿಯ
ನ್ನು ಗಾಂಧಿಜಿಗಿಂತ ಚೆನ್ನಾಗಿ ಬಲ್ಲೆ ಎನ್ನುತ್ತಾ

ಕೇಂಟನ್!

ಚೀನೀ ಕ್ರಾಂತಿಗಳ ಕೇಂದ್ರ!!

ಆಧುನಿಕ ಚೀನದ ಆರಂಭವೆಲ್ಲಿ?--ಎಂದು ಕೇಳಿದರೆ ಅದು ಕೇಂಟನ ನಗರದಲ್ಲಿ ಎಂದು ಇತಿಹಾಸಜ್ಞರು ಹೇಳುವರು. ಚೀನೀ ಕ್ರಾಂತಿಗಳ ಕೇಂದ್ರವೇ ಅದು. ಕೇಂಟನ ಸನ್ ಯತ್ ಸೇನನ ಜನ್ಮಸ್ಥಾನ. ಚೀನಿಗಳಲ್ಲಿ ರಾಷ್ಟ್ರಾಭಿಮಾನವು ಅಲ್ಲಿಂದ ಸ್ಫುರಿಸಿತು. ಚೀನದ ಹೆಬ್ಬಾಗಿಲು ಅದು.

ವಿದೇಶಿಯರ ಸ್ವಾರ್ಥ ದೃಷ್ಟಿಯು ಚೀನದ ಕಡೆಗೆ ಹೊರಳಿದಾಗ ಮೊಟ್ಟಮೊದಲು ಅವರು ಕೇಂಟನ ನಗರವನ್ನು ಪ್ರವೇಶಿಸಿ ಅಲ್ಲಿಂದ ಮೆಲ್ಲ ಮೆಲ್ಲಗೆ ತಮ್ಮ ಬೇಳೆಯನ್ನು ಬೇಯಿಸತೊಡಗಿದರು. ಸುಮಾರು ಒಂದು ಸಾವಿರ ವರ್ಷಗಳ ಮೊದಲೇ ಅರಬರು ವ್ಯಾಪಾರ ಮಾಡುವ ನಿಮಿತ್ತ ಅಲ್ಲಿಗೆ ಹೋಗಿದ್ದರು. ಅನಂತರ ಹೋದವರಲ್ಲಿ ಯುರೋಪಿಯನರು ಮುಖ್ಯರು. 1511ರಲ್ಲಿ ಪೋರ್ತುಗೀಸರೂ, 19ನೇ ಶತಮಾನದ ಆದಿಭಾಗದಲ್ಲಿ ಅಮೆರಿಕನರೂ, ಬ್ರಿಟಿಷರೂ ಕೇಂಟನಿನಲ್ಲಿ ಕಾಲಿಟ್ಟರು. ಈ ಕಾಲದಲ್ಲಿಯೇ ಚೀನೀಯರು ಪಾಶ್ಚಾತ್ಯ ದೇಶಗಳ ಸಂಪರ್ಕ ಬೆಳಸಿ ವ್ಯಾಪಾರ ವಹಿವಾಟುಗಳಿಗಾಗಿಯೋ, ಜೀವನ ನಿರ್ವಾಹಕ್ಕಾಗಿಯೋ ಸುಖಸಂಚಾರಕ್ಕಾಗಿಯೋ ಯುರೋಪ ಅಮೇರಿಕಗಳಿಗೆ ಬಂದು ಹೋಗಲಿಕ್ಕಾರಂಭಿಸಿದರು. ಕೇಂಟನ ನಗರದಿಂದಲೇ ಹೀಗೆ ಅವರು ಬಂದು ಹೋಗುತ್ತಿದ್ದರು. ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಹೊಂದಿ, ಪಾಶ್ಚಾತ್ಯ ಆಚಾರ ವಿಚಾರಗಳ ಲಾಭ ಪಡೆದು, ಹಿಂದಿರುಗುತ್ತಿದ್ದ ಚೀನೀ ವಿದ್ಯಾರ್ಥಿನಿ ವಿದ್ಯಾರ್ಥಿಗಳು ಮೊತ್ತ ಮೊದಲು ಕೇಂಟನ್ ನಗರಕ್ಕೇ ಕಾಲಿಡುತ್ತಿದ್ದರು. ಚೀನದ ಜಾಗ್ರತಿಗೆ ಪಾಶ್ಚಾತ್ಯ ವಿದ್ಯಾ ಸಂಸ್ಕೃತಿಗಳಿಂದ ಪ್ರಭಾವಿತರಾದ ಈ ವಿದ್ಯಾರ್ಥಿಗಳೇ ಕಾರಣೀಭೂತರಾಗಿದ್ದರು. ಆದ್ದರಿಂದ ರಾಷ್ಟ್ರಾಭಿಮಾನ ರಾಷ್ಟ್ರಪ್ರೇಮಿಗಳಿಗೆ ಕೇಂಟನ್ ನಗರವು ನೆಲೆಯಾಗಿದ್ದುದರಲ್ಲಿಯಾಗಲೀ ಅದು ಬೇರೆ ಬೇರೆ ಕಾಲಗಳ ರಾಜಕೀಯ ಸಾಮಾಜಿಕ ಕ್ರಾಂತಿಗಳ ಕೇಂದ್ರವಾಗಿದ್ದುದರಲ್ಲಿಯಾಗಲೀ ಯಾವ ಆಶ್ಚರ್ಯವೂ ಇಲ್ಲ. ಚೀನದಲ್ಲಿ ಹೊಸ ಹೊಸದು ಏನೇನು ಆಗುವದೋ ಅದರ ಪ್ರಾರಂಭವು ಕೇಂಟನಿನಲ್ಲಿಯೇ ಆಗುವದೆಂಬುದು ಅತಿಶಯೋಕ್ತಿಯು ಮಾತಲ್ಲ. ಅದರಲ್ಲಿ ಪೂರ್ಣ ಸತ್ಯವು ಅಡಗಿದೆ. ಆಧುನಿಕ ಚೀನದ ಸಮಸ್ತ ವಿಚಾರಗಳನ್ನು ತಿಳಕೊಳ್ಳಬೇಕಾದರೆ ಒಮ್ಮೆಗೆ ಕೇಂಟನ್ ನಗರವನ್ನು ಸಂದರ್ಶಿಸಿ, ಅಲ್ಲಿಯ ವಿಚಾರಗಳನ್ನು ತಿಳಕೊಂಡರೆ ಸಾಕು.

ಚೀನೀಯರು ದುರ್ಬಲರಾಗಿದ್ದಾಗ, ಅವರ ದುರ್ಬಲತೆಯ ದುರುಪಯೋಗ ಮಾಡಿಕೊಂಡು ವಿದೇಶಿಯರು ಕೆಲವು ವಿಶೇಷ ತರದ ಹಕ್ಕು ಅಧಿಕಾರಗಳನ್ನು ಪಡೆದ ಕೇಂಟನ್ ನಗರದ [illegible] ಭಾಗದ ಸಂಗತಿಯನ್ನು ಬಿಟ್ಟು ಬಿಡಿ. ನಿಜವಾದ ಕೇಂಟನ ನಿಮಗೆ ಅಲ್ಲಿ ನೋಡಲಿಕ್ಕೆ ಸಿಕ್ಕುವದಿಲ್ಲ. ಅಲ್ಲಿಂದ ಈಚೆಗೆ ಅದು ಇದೆ. ಚೀನೀ ಕೇಂಟನ ಅಂದರೆ ಅದು ಒಂದು ಮಿಲಿಯಕ್ಕೆ ಹೆಚ್ಚಾಗಿಯೇ ಇರುವ ಚೀನೀ ದೇಶಾಭಿಮಾನಿಗಳ ಊರು. ನೋಡಿದೊಡನೆಯೇ ಸಂತೋಷ ಆಶ್ಚರ್ಯಗಳಿಂದ ನೀವು ತಲೆ ದೂಗಿ ಬೆರಳು ಕಚ್ಚುವಿರಿ. ಒಂದು ವಾನ್ ಹೊಟೇಲಿನ ಹತ್ತನೆಯ ಮಾಳಿಗೆಯ ಕಿಟಿಕಿ ಎದುರಿಗೆ ಕೂತು ನೀವು ಇಣಿಕಿ ನೋಡಿದ್ದಾದರೆ ನಾಲ್ಕೂ ಸುತ್ತ ಈ ಚೀನೀ ಕೇಂಟನನ್ನೇ ನೋಡುವಿರಿ. ಹೆಚ್ಚಿನ ನಿವಾಸಿಗಳು ಪರ್ಲ್ ನದೀ ದಂಡೆಗಳಿಗೆ ಒತ್ತಿಕೊಂಡಿರುವ ಸಾವಿರಾರು ದೋಣಿಗಳಲ್ಲಿ ಅವುಗಳನ್ನು ಹೊರಕ್ಕೂ ಒಳಕ್ಕೂ ನಡೆಯಿಸಿ ತಮ್ಮ ಕಾಲಯಾಪನೆ ಮಾಡುವರು. ಈ ನದಿ ಎಂದರೆ, ಅರಸಿನ ಬಣ್ಣದ ನೀರಿನ ಒಂದು ದೊಡ್ಡ ಸಾಗರವೇ ಸರಿ. ಜನರು ಹೆಚ್ಚಿನವರು ಚಿಂದಿಬಟ್ಟೆಗಳನ್ನುಟ್ಟು ದಿನಕಳೆಯುವ ಬಡವರು. ಆದರೆ ಇವರೊಳಗಿಂದಲೇ ನೀವು ಕೆಲವರನ್ನು ಪ್ರಶ್ನಿಸುವಿರಾದರೆ, ಅವರಲ್ಲಿ ಎಂಥಾ ವಿಚಾರ ಕ್ರಾಂತಿ ಉಂಟಾಗುತ್ತಲಿದೆ ಎಂಬುದೂ ಅವರು ತಮ್ಮ ಕಷ್ಟ ದಾರಿದ್ರ್ಯಗಳನ್ನು, ದಾಸ್ಯ ಬಂಧನಗಳನ್ನು ದೂರಮಾಡಲಿಕ್ಕೆ ಹೇಗೆ ಆತ್ಮಂತ ಆಧುನಿಕ ಕ್ರಮಗಳಲ್ಲಿ ಪ್ರಯತ್ನಿಸುತ್ತಿರುವರೆಂಬುದೂ ಸ್ಪಷ್ಟವಾಗುವುದು. ಪುರಾತನ ಪಟ್ಟಣದಲ್ಲಿ ನವೀನತೆಯನ್ನು ಕಾಣಬೇಕಾದರೆ ಕೇಂಟನಿನಲ್ಲಿಯೇ ಕಾಣಬೇಕು.

ನಗರದಿಂದ ಹೊರಗೆ ಅಷ್ಟು ದೂರದಲ್ಲಿ ಅಮೇರಿಕನ್ ಮಿಶ್ಯನ ವಿಶ್ವವಿದ್ಯಾಲಯವೂ ಸನ್ ಯತ್-ಸೇನ್ ರಾಷ್ಟ್ರೀಯ ವಿಶ್ವವಿದ್ಯಾಲಯವೂ ಇವೆ. ಇಲ್ಲಿಯೇ ಅನೇಕ ಪ್ರಸಿದ್ಧ ಆಚಾರ್ಯರು ಕೂತು ಚೀನದ ಭವಿಷ್ಯ ನಿರ್ಮಾಣಮಾಡುವರು. ಈ ವಿಶ್ವ ವಿದ್ಯಾಲಯಗಳಲ್ಲಿ ಕಲಿಯುವ ವಿದ್ಯಾರ್ಥಿಗಳೇ ಭವಿಷ್ಯ ನಿರ್ಮಾಣದ ಆಧಾರ ಸಾಧನಗಳಾಗಿದ್ದಾರೆ. ಕೇಂಟನಿನಲ್ಲಿ ಅನೇಕ ಸ ಚಾರಿಯ. ನೋಡತಕ್ಕ ಅನೇಕ ಸಂಗತಿಗಳಿವೆ. ಅಲ್ಲಿಯ ಪೇಟೆಗಳು, ದೇವಮಂದಿರಗಳು, ಪ್ರಾಚೀನ ಕಟ್ಟಡಗಳು ಇವೆಲ್ಲ ನೋಡತಕ್ಕಂಥವುಗಳೇ ಆಗಿವೆ. ಆದರೆ ಒಬ್ಬ ಕೇಂಟನ ನಿವಾಸಿಯು [illegible] ಕೇಳಿದರೆ ಅವನು ನಿಮಗೆ ಯಾವುದನ್ನೂ ತೋರಿಸದೆ, ಆ ವಿಶ್ವ ವಿದ್ಯಾಲಯಗಳ ಕಡೆಗೆ [illegible] ಸನ್ ಯತ್ ಸೇನ ಸ್ಮಾರಕ ಭವನಾದಿಗಳ ಕಡೆಗೆ ಅಭಿಮಾನದಿಂದ ಬೆರಳು [illegible] [illegible]

[illegible]

ಅದರ ರಕ್ಷಣೆಗಾಗಿ ಚೀ[illegible] ತಮ್ಮ ಸರ್ವಸ್ವವನ್ನು ಕೊಟ್ಟು ತಾವು ತಾವಾಗಿ ಬಲಿಯಾಗಲಿಕ್ಕೆ ಸಿದ್ಧರಾಗಿದ್ದಾರೆ. ಅದ[illegible] ವಿದೇಶಿಯರಿಗಾಗಲೀ, ಜಪಾನಿಗಳಿಗಾಗಲೀ ಈಗ ಕೇಂಟನಿನಲ್ಲಿ ತಮ್ಮ ಸ್ವಾರ್ಥದ ಬೇಳೆ ಬೇಯಿಸುವದು ಎಷ್ಟು ಮಾತ್ರಕ್ಕೂ ಸಾಧ್ಯವಾಗಿರುವದಿಲ್ಲ.

ಜಪಾನಿನ ಆಕ್ರಮಣ ನೀತಿ, ಜಪಾನು ಅನ್ಯಾಯವಾಗಿ ಚೀನದ ಮೇಲೆ ಮಾಡಿದ ಅತ್ಯಾಚಾರ, ಅನಾಚಾರ ಇವುಗಳಿಂದಾಗಿ ಇಂದು ಕೇಂಟನಿನಲ್ಲಿ ಜಪಾನಿಯರ ಮೇಲಿನ ದ್ವೇಷವು ಪ್ರಬಲವಾಗಿದೆ. ಒಂದು ಮಿಲಿಯನ್ ನಾಣ್ಯಗಳನ್ನು ಲಂಚಕೊಟ್ಟು ಕೇಂಟನ ನಿವಾಸಿಗಳ ಸ್ವಾಮಿಭಕ್ತಿಯನ್ನು ತಾನು ಕೊಳ್ಳುವೆನೆಂದು ಒಂದು ದಿನ ಜಪಾನ ರಾಯಭಾರಿಯು ಕೊಚ್ಚಿಕೊಂಡಿದ್ದನು. ಆದರೆ ಇದೆಲ್ಲ ಅವನ ಭ್ರಮೆಯಾಗಿದೆ. ಇಹದಲ್ಲಿ ಅಪಕೀರ್ತಿ, ಪರದಲ್ಲಿ ನರಕ ಭಯ ಇರುವ ಯಾವ ಚೀನೀಯನೂ ಈಗ ದೇಶಕ್ಕೆ ದ್ರೋಹಿಯಾಗಲಾರನು. ಆಗ ಅಂಥ ದೇಶದ್ರೋಹಿಗಳಿಗೆ ಅವರ ಸಮೀಪದ [illegible] ಕೂಡ ಶತ್ರುಗಳು ಗುಣದ ನಿಷ್ಠುರವಾಗಿರುವುದರಿಂದ, ಯಾರಿಗೂ ಜಪಾನಿಯರ [illegible] ಸ್ವೀಕರಿಸುವ ಸಾಹಸವಾಗಲೀ ಇಚ್ಛೆಯಾಗಲೀ ಇರುವುದಿಲ್ಲ.

ಚೀನದ ಹೃದಯ, ಅದರ ಜೀವಾಳವಾಗಿರುವ ಕೇಂಟನನ್ನು [illegible] ಜಪಾನಿಯರು [illegible] ಪ್ರಯತ್ನಿಸಿದ್ದಾರೆಂದರೂ [illegible]

[illegible]

ಉತ್ಸ್ಫೂರ್ತಿಯು [illegible] ಸ್ಥೈರ್ಯ, ಹೃದಯದಧೈರ್ಯ [illegible]

ಆದರೂ [illegible] ಜಪಾನಿಯರು ತಮ್ಮ ಸರ್ವಶಕ್ತಿಗಳನ್ನು ಉಪಯೋಗಿಸಿ ಕೇಂಟನನ್ನು [illegible] ಅದರ ಮೇಲೆ [illegible] ಕುಡಿಯ ಮ ಇರಲಾರರೆಂಬ ಮಾ ಅವರ ರಾಷ್ಟ್ರ [illegible] ಮಹತ್ವಾಕಾಂಕ್ಷೆ [illegible] ಅವರ ಈಗಿನ [illegible] ಪಲನಗಳಿಂದ ಚಿಕ್ಕ ಮಗುವಿಗಾದರೂ ಬಹಳ ಚೆನ್ನಾಗಿ ತಿಳಿಯುವದು. ಜಪಾನಿಯರ ವಕ್ರ ದೃಷ್ಟಿಯು ಕೇಂಟನಿನ ಮೇಲೆ ಬಿದ್ದಿರುವದಷ್ಟೇ ಅಲ್ಲದೆ, ಅಲ್ಲಿ ನೆಲಸಿರುವ ಫ್ರೆಂಚರು, ಇಂಗ್ಲಿಷರು, ಅಮೇರಿಕನರ ಮೇಲೂ ಇರುತ್ತದೆ. ಅವರ ವ್ಯಾಪಾರ ವಹಿವಾಟುಗಳಿಗೆ ಜಪಾನಿಯರು ಭಂಗವನ್ನೂ ಲೋಪವನ್ನೂ ತಂದಿದ್ದಾರೆ. ಆದ್ದರಿಂದ ಪಾಶ್ಚಾತ್ಯರೂ ಅವರ ಮೇಲೆ ಸಂತಪ್ತರಾಗಿರುತ್ತಾರೆ.

ಆದಕಾರಣ ಜಪಾನಿಯರ ಆಕ್ರಮಣದಿಂದ ಕೇಂಟನನ್ನು ರಕ್ಷಿಸಲಿಕ್ಕೆ ಈಗ ಸರ್ವ ಶಕ್ತಿಗಳು ಒಂದುಗೂಡಿವೆ. ಕೇಂಟನ್ ಹೋದರೆ ಚೀನವೇ ಹೋಯಿತೆಂಬುದು ಪ್ರತಿಯೊಬ್ಬರಿಗೆ ಮನವರಿಕೆಯಾಗಿದೆ. ಅತ್ಯಾಧುನಿಕ ಕ್ರಮಗಳಿಂದ ಮಿಲಿಯಾಂತರ ಸೈನಿಕರಿಗೆ ಯುದ್ಧ ಶಿಕ್ಷಣವನ್ನು ಕೊಡುತ್ತಲಿದ್ದಾರೆ. ಜಪಾನಿಯರು ಎಲ್ಲ ಬಗೆಯ ಆಕ್ರಮಣಗಳನ್ನು ಎಲ್ಲ ಕಾಲಗಳಲ್ಲಿ ತಡೆಯಲಿಕ್ಕಾಗುವದೆಲ್ಲ ಸಾಧನಸಾಮಗ್ರಿಗಳನ್ನು ಸಂಗ್ರಹಿಸತೊಡಗಿದ್ದಾರೆ. ಕೇಂಟನಿನ ಸಾರ್ವಜನಿಕ ಸಂಸ್ಥೆಗಳೆಲ್ಲವೂ ರಕ್ಷಣಾಕಾರ್ಯಗಳಿಗೆ ಒದಗಿಬರುವಂತೆ ಎಲ್ಲ ಏರ್ಪಾಡುಗಳನ್ನು ಮಾಡಲಾಗಿದೆ. ಕೇಂಟನಿನಲ್ಲಿ ಜಪಾನಿಯರಿಗೆ ಏಳು ಸಮುದ್ರಗಳ ನೀರ ಕುಡಿಸಿ ಅವರ ಬಿಂಕ, ದರ್ಪಗಳನ್ನು ಸದೆಬಡಿಯಲಿಕ್ಕೆ ಸಿದ್ಧಗೊಳಿಸಿ ಅವರನ್ನು ದಾರಿಗೆ ಹಚ್ಚದೆ ಇರಲಾರೆವೆಂದು ಕೇಂಟನ್ ನಗರವಾಸಿಗಳು ಮಾತ್ರವಲ್ಲದೆ ಆ ನಗರವು ಇರುವ ಕ್ವಾಂಟುಂಗ ಪ್ರಾಂತೀಯರೂ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ. ದೇಶರಕ್ಷಣೆಯ ಈ ಪವಿತ್ರ ಕಾರ್ಯದಲ್ಲಿ ತಾವು ಪೂರ್ಣ ಸಫಲರಾಗುವುದು ಖಂಡಿತವೆಂಬ ವಿಶ್ವಾಸವು ಈ ಭಾಗದ ಚೀನೀಯರಿಗೆ ದೃಢವಾಗಿರುವುದು. ಈ ದೃಢ ವಿಶ್ವಾಸವೇ ಅವರಿಗೆ ಸಫಲತೆಯನ್ನು ತಂದುಕೊಡುವುದು.

50.000

ಕುಷ್ಠರೋಗಿಗಳು ಸಂಪೂರ್ಣ ಗುಣಮುಖರಾಗಿರುವರು!

OFFICE OF MESSRS REDDY & CO.

GOPALAPURAM (E. GODAVARY)

ಕುಷ್ಠರೋಗ ನಿಕೆತನ್ನು ಮತ್ತು ಮೇಹಾದಿ ರೋಗಗಳ ಚಿಕಿತ್ಸೆ-ಒಂದು ವಿಶೇಷತ್ವ

ಶ್ರೀ ಕೃಷ್ಣ [illegible] -- ರೆಡ್ಡಿ [illegible]

ಗೋಪಾಲಪುರಂ [illegible]

ಶ್ರೇಷ್ಠವಾದ ಕಾಂತಿಯುಂಟುಮಾಡುವ ಸೋಪು

ಪಿಯರ್ಸ್ ಸೋಪು ಕಾಂತಿಯುಂಟುಮಾಡುವುದರಲ್ಲಿ ಅದ್ವಿತೀಯವಾಯಿತೆಂಬುದಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ಅದರ ಮೂಲಕವಾಗಿ ನೊರೆ ದಟ್ಟವಾಗುವದು ಅದು ಸ್ವಚ್ಛವಾಗಿದೆ. ಎರಡನೆಯದು ಅದರ ಸುದ್ದಾಗುವ ಮತ್ತು ಸೊಗಸಾದ ನೊರೆಯು ಚರ್ಮವನ್ನು ಭೇದಿಸುವದಲ್ಲದೆ ಸರ್ವಾಂಗವನ್ನೂ ಶುದ್ಧಮಾಡುತ್ತದೆ. ಮೂರನೆಯದಾಗಿ ಚರ್ಮವೃದ್ಧಿಯನ್ನುಂಟುಮಾಡುವುದರಲ್ಲಿ ಅದು ಅದ್ಭುತಶಕ್ತಿಯುಳ್ಳದ್ದಾಗಿದೆ. ಚರ್ಮಕ್ಕೆ ಹೊಸಜೀವ, ಹೊಸರಕ್ತ, ಹೊಸಸೌಂದರ್ಯವನ್ನುಂಟುಮಾಡುತ್ತದೆ. ಪಿಯರ್ಸನ್ನು ಕೆಲವಾರ ಉಪಯೋಗಿಸಿರಿ. ಆಮೇಲೆ ಕನ್ನಡಿಯಲ್ಲಿ ನಿಮ್ಮನ್ನು ನೋಡಿರಿ.

ದೇಹಕಾಂತಿಯನ್ನುಂಟುಮಾಡುವುದರಲ್ಲಿ ಅದ್ವಿತೀಯವಾದುದು.

A. & F. PEARS LTD., ISLEWORTH, ENGLAND

[illegible]

ಬರ್ಮದಲ್ಲಿ ಭಾರತೀಯ ದ್ವೇಷ!

ಮುಸ್ಲಿಮರಿಗೂ ... ಹಿಂದು ... ಪರಿಮಾಣದಲ್ಲಿ ಬೌದ್ಧಮತೀಯರಿಗೂ ಪುನಃ ... ವಾಗಿರುವುದರಿಂದ, ಇದೊಂದು ಕಾರಣ ... ಜುಲೈ ತಾ. 26ರಿಂದ ರಂಗೂನಿನಲ್ಲಿ ಭಾರತೀಯರಿಗೂ ಬೌದ್ಧರಿಗೂ ಮನಃಕ್ಲೇಶ ... ಆಗಿ, ಅಲ್ಲಲ್ಲಿ ದಂಗೆಗಳೂ ಹೊಡೆದಾಟ ... ಆಗುತ್ತಲೇ ಇವೆ.

ನಮ್ಮ ದೇಶದಲ್ಲಿಯೇ ಮಾತ್ರವಲ್ಲದೆ, ಹೊರದೇಶಗಳಲ್ಲಿ ಎಲ್ಲೆಲ್ಲಿಯೂ ಹಿಂದೂ ಮುಸ್ಲಿಮರೆಂದಿಲ್ಲ, ಎಲ್ಲರನ್ನು ಭಾರತೀಯರೇ ಎನ್ನುತ್ತಾರೆ. ಅವರೂ ಹಾಗೆ ಒಕ್ಕಟ್ಟಿನಿಂದ ಇರುತ್ತಾರೆ. ಮುಸ್ಲಿಮ ಲೀಗ್ ಮಾತ್ರ ಬರ್ಮಕ್ಕೆ ಪ್ರಚಾರನೂಡಿಸಿ, ಭಾರತೀಯ ಮುಸ್ಲಿಮರನ್ನು ಅಲ್ಲಿರುವ ಹಿಂದುಗಳಿಂದ ಪ್ರತ್ಯೇಕಿಸನೋಡು ... ದೆ. ನೋಡಲಿ.

ಬೌದ್ಧರಿಗೆ ಸಿಟ್ಟಾದುದೇ, ಮುಸ್ಲಿಮನು ಬರೆದ ಗ್ರಂಥ ಅಥವಾ ಗ್ರಂಥ ಬರೆದವನು ಮುಸ್ಲಿಮನು ಎಂಬ ವಿಚಾರನೋಡದೆ, ಎಲ್ಲ ಭಾರತೀಯರನ್ನು ಅವರು ವಿರೋಧಿಸಲೂ ಕಾರಣವು ಇದೇ. ಹಾಗೆ ಅವರಿಗೆ ಮನಕ್ಷೋಭೆ ಮಾಡಿದವನು ಭಾರತೀಯನೆಂದೇ ಹೊರತು ಮುಸ್ಲಿಮನೆಂದಲ್ಲವೆಂದೇ) ಎಲ್ಲರ ಮೇಲೂ ಕೈನೂಡಿದರು.

ಬೌದ್ಧಮತದ ಸನ್ಯಾಸಿಗಳು—ಪೊಂಗಿಗಳು—ಹಿಂದೀಯರನ್ನು ಕಂಡಲ್ಲಿ ಹೊಡೆಯಲು ಪ್ರಕ್ರಮಿಸಿದರು. ಈಗಿನ ಬೌದ್ಧಮತದಲ್ಲಿ ಬುದ್ಧದೇವನ ಅಹಿಂಸಾ ತತ್ವದ ಮೂಲಭಾವವೇ ಇಲ್ಲವೆಂಬುದಕ್ಕೆ ಈ ಪೊಂಗಿಗಳು ಉತ್ಕೃಷ್ಟ ದೃಷ್ಟಾಂತ.

ಯುರೋಪೀಯ ಸಾರ್ಜೆಂಟನೊಬ್ಬನು ಕೂಡಿ 41 ಮಂದಿಗೆ ಗಾಯವಾಯಿತು.

ಮುಖ್ಯ ಮಂತ್ರಿ ಡಾ। ಬಾಮೊವ್‌ರವರು ದಂಗೆಯಾಗುವಲ್ಲಿ ಸಂಚರಿಸಿ, ಅಲ್ಲಿದ್ದ ಪೋಲಿಸರೊಡನೆ ಪರಾಮರ್ಶಿಸಿದರು. ಅಂಗಡಿಗಳನ್ನೆಲ್ಲ ಅಷ್ಟರಲ್ಲೇ ಮುಚ್ಚಿದ್ದರು ಜನರ ಹಿಂಡುಗಳನ್ನು ಪೋಲೀಸರು ಚದರಿಸಿದರು. ಇಲಾಖಾ ಮಂತ್ರಿಗಳು ಸರ್ವರು ಶಾಂತಚಿತ್ತರಾಗಿರಬೇಕೆಂದೂ, ಆ ಕ್ಷೋಭೆಮಾಡಿದ ಪುಸ್ತಕವನ್ನು ಮುಟ್ಟುಗೋಲು ಮಾಡುವರೆಂದೂ ಪ್ರಕಟಿಸಿದರು ರಾತ್ರಿಯಲ್ಲಿ ಶಾಂತವಾದ್ದಂತೆ ತೋರಿತು. ಸೈನಿಕರೂ ಎಚ್ಚರವಾಗಿರುವರು ಒಬ್ಬ ಹಿಂದೀ ಕೊನ್ಸಟೇಬಲನು ಗಾಯಗೊಂಡಿದ್ದು, ಸತ್ತನು

ಪತ್ರಿಕೆಗಳಲ್ಲಿ ಈ ವೃತ್ತಾಂತಗಳನ್ನೂ ಚಿತ್ರಗಳನ್ನೂ ಪ್ರಕಟಿಸಬಾರದೆಂದೂ, ಅದರಿಂದ ಇನ್ನೂ ದಿಗಿಲು ಹರಡಿ, ಕೇಡಿಗಳಿಗೆ ಆಸ್ಪದ ದೊರೆವುದೆಂದೂ ಪ್ರಕಟವಾಯಿತ.

ತಾ 27ರಲ್ಲಿ, ದಂಗೆ ಪತ್ತೆ ವಿಗಿಲಾಯಿತು ಹಿಂದೀಯರ ಅಂಗಡಿಗಳನ್ನು ಲುಟಾಯಿಸತೊಡಗಿದರು. ಪೇಟೆಯ ದೀಪಗಳನ್ನು ಕೆಡೆಬೀಳಿಸಿದರು. ಪೊಂಗಿಗಳೂ ಇತರ ಬೌದ್ಧರೂ ಘೂರು ಮುಖ್ಯ ಬೀದಿಗಳಲ್ಲಿ ಉಗ್ರರಾಗಿ, "ಬರ್ಮವು ಬರ್ಮೀಯರಿಗೆ!" ಎಂದು ಕೂಗುತ್ತ (ದೊಬಾಮಾ!) ನಡುರಾತ್ರಿಯ ತರುವಾಯ ಓಡಾಡಿದರು.

ಬಿಚ್ಚುಕತ್ತಿ ಹಿಡಿದುಕೊಂಡೇ ಬರ್ಮದ ಶುಶ್ರೂಷಾ ಸೈನಿಕರು, ಬರ್ಮೀಯರೊಡನೆ, ಅತ್ತಿತ್ತ ಸುಳಿಯುತ್ತಿದ್ದರು. ಜಲಗೋಪಾಲ ಹಡಗದ ಮೇಲಣ ಕಲಾಸಿಯೊಬ್ಬ ಹಿಂದೀ ಮುಸ್ಲಿಮನಿಂದ ಆರು ನಳಿಗೆಯ ರಿವಾಲ್ವರನ್ನು ನೂರು ತೋಟೆಗಳನ್ನೂ ಪೋಲೀಸರು ಜಪ್ತಿ ಮಾಡಿ ಹಿಡಿದರು. ಇಬ್ಬರು ಹಿಂದೀಯರಿಗೆ ಗಾಯಗಳಾಗಿವೆ. 11 ಮಂದಿ ಎಲ್ಲರೂ ಹಿಂದೀಯರೇ ಶಿವಿದಾಟಕ್ಕೆ ಒಳಗಾದರು

ತಾ. 28ರ ಬೆಳಗ್ಗೆ ಮ್ಯುನಿಸಿಪಲ್ ಚೆಯರ್ಮನರು ಶ್ರೀ। ಉ. ಬಾ. ಗ್ಲೇಯವರು ದಂಗೆ ನೋಡಹೋಗುತ್ತ, ಅವರ ಕಾರಿನ ಮೇಲೆ ಕಲ್ಲು ಮಳೆಯಾಯಿತು 'ಒಂದು ರಸ್ತೆಯಲ್ಲಿ ಬೆಂಕಿ ಹಬ್ಬಿತು ವಾಹನಗಳು ಓಡಾಡುತ್ತಿಲ್ಲ, ಹಿಂದೀಯರ ಅಂಗಡಿಗಳು ಮುಚ್ಚಿಯೇ ಇವೆ' ಎಂದು ಸಮಾಚಾರ ಹರಡಿತು

ದಂಗೆ ಮತ್ತೂ ಪ್ರಬಲವಾಯಿತು ಹಿಂಡುಗಟ್ಟಿ ರಸ್ತೆಯಮೇಲೆ ಕಾದಾಟಕ್ಕಾರಂಭವಾಯಿತು ಮೊದಲಾಗಿ ಹಿಂದೀ ಮುಸ್ಲಿಮರು ಬಸ್ಸಿನಲ್ಲಿ ಹೋಗುವ ದಾರಿಯಲ್ಲಿ ನಡೆವ ಬರ್ಮೀಯರನ್ನು ತಾರತಮ್ಯವಿಲ್ಲದೆ ಹೊಡೆಯಲುಪಕ್ರಮಿಸಿದರಂತೆ. ಮಿಲಿಟರಿಯ ಪಥ ಕೂಡಲೆ ಅತ್ತ-ಬಂದು, ಅಲ್ಲಲ್ಲಿ ಮೆಶೀನ್‌ಗನ್‌ಗಳನ್ನು ಇಟ್ಟು ರಕ್ಷಣೆಯ ಏರ್ಪಾಡು ಮಾಡಿದರೂ ಮೂವರು ಸತ್ತು, ಮೂವತ್ತು ಮಂದಿಗೆ ಗಾಯವಾಯಿತು

ಸಾಯಂ 4½ ಗಂಟೆಯ ನಂತರ ಮಾರಾಮಾರಿಗೆ ಆರು ಮಂದಿ ಸತ್ತರು, 100 ಮಂದಿಗೆ ಗಾಯಗಳಾದುವು ಕೆಳಜಾತಿಗಳ ಹಿಂದೀಯರೂ ಬರ್ಮನರೂ ಅಲ್ಲಲ್ಲಿ ಕತ್ತಿ ದೊಣ್ಣೆಗಳನ್ನು ಹಿಡಿದೇ ಬೀದಿ ತಿರುಗಾಟಕ್ಕೆ ಪ್ರಾರಂಭಿಸಿದರು. ಹಿಂದೀಯರ ಅಂಗಡಿಗಳನ್ನು ಲುಟಾಯಿಸುವುದೂ ಬೀಗ ಮುರಿದು ಒಳನುಗ್ಗುವುದೂ ಕ್ರಮವಾಯಿತು ಈ ಸಂದರ್ಭದಲ್ಲಿ ಒಬ್ಬ ಯುರೋಪೀಯ ವರ್ತಕನ ಅಂಗಡಿಯ ಕಿಟಿಕಿಗಳನ್ನೂ ಒಡೆದುಹಾಕಿದರು.

ರಸ್ತೆಗಳಲ್ಲೆಲ್ಲ ದಾರಿಗಡ್ಡಕಟ್ಟಿ ಭದ್ರಪಡಿಸಿಯೇ ಅಲ್ಲಲ್ಲಿನ ಸಿಪಾಸಿಗಳು ಕಾಲಕ್ಷೇಪ ಮಾಡಿದರು. ರಾತ್ರಿ 10 ಗಂಟೆಯೊಳಗೆ 40 ಮಂದಿ ಮರಣಪಟ್ಟಂತೆಯೂ 250ಕ್ಕೆ ಮೇಲ್ಪಟ್ಟ ಸಂಖ್ಯೆಗೆ ಗಾಯವಾದುದೆಂದೂ ವರ್ತಮಾನ ಹರಡಿತು. ಸತ್ತವರಲ್ಲಿ 36 ಮಂದಿ ಹಿಂದೀಯರು; ಇವರೊಳಗೆ ಐವರು ಸ್ತ್ರೀಯರು ಒಂದು ಮಗು ಸಹ ಲೆಕ್ಕಕ್ಕೆ ದೊರೆತಿದೆ.

ಐದು ಮಂದಿಗಿಂತ ಹೆಚ್ಚು ಜನರು ಕೂಡದ ಹಾಗೆ ಅಪ್ಪಣೆ ಹೊರಟಿತು

ಲೂಟಿ ಮಾಡಿದ ಮನೆಗಳಲ್ಲಿ ಸಾಮಾನಿನ ಅಡಿಗೆ ಹೂತುಹೋದವರೂ ಇರುವ ಕಾರಣ, ಮೃತರ ಸಂಖ್ಯೆ ಸರಿಯಾಗಿ ಸಿಕ್ಕಿಲ್ಲ.

ಈ ಮಧ್ಯೆ, ಸುಮುಹೂರ್ತವೆಂದು, ಜೈಲಿನಿಂದ ಐದು ಮಂದಿ ಬಂದಿವಾನರು ತಪ್ಪಿಸಿಕೊಂಡರು. ಒಂಭತ್ತು ಮೈಲು ದೂರದಲ್ಲಿ ಅವರನ್ನು ಪುನಃ ಕೈದು ಮಾಡಲಾಗಿದೆ. ಇವರಲ್ಲಿ ಒಬ್ಬನನ್ನು ಗುಂಡಿಟ್ಟು ಕೊಲ್ಲಬೇಕಾಯಿತು

ಅಲ್ಲಲ್ಲಿ ಇನ್ನೂ ಲೂಟಿ ನಡೆಯುತ್ತದೆ. ಮುಚ್ಚಿ ಅಂಗಡಿಗಳನ್ನು ಪೋಲೀಸರು ಕಾವಲಿದ್ದು ಕಾಪಾಡುತ್ತಿರುವರು ಎಲ್ಲ ಕಾರುಗಳನ್ನೂ ಕೇಡಿಗಳನ್ನೂ ಪೋಲೀಸರು ಝಡತಿ ಮಾಡುತ್ತಿರುವರು ಅವರ ಆಯುಧಗಳನ್ನು ಕಸಕೊಳ್ಳುವರು

ಬರ್ಮೀಯ ಹೆಂಗಸರೂ ಗಾಯಗೊಂಡವರೊಳಗೆ ಇದ್ದಾರೆ

ತಾ 29ರಲ್ಲಿ ಬೆಳಗ್ಗೆ ಇಬ್ಬರ ಮರಣ, 32 ಮಂದಿಗೆ ಗಾಯ ಆಗಿದೆ ಕೆಲಸಗಾರರು ಕ್ಷೇಮವಾಗಿ ಬಂದು ಹೋಗಲಾರದಾದ ಕಾರಣ ಯುರೋಪೀಯರು ಸಹ ಅಂಗಡಿಗಳನ್ನು ಮುಚ್ಚಿರುವರು ಸರಕಾರೀ ಮತ್ತು ಮ್ಯುನಿಸಿಪಲ್ ಆಫೀಸುಗಳನ್ನು ಎರಡು ದಿನಕ್ಕೆ ಮುಚ್ಚಿರುವಾರು.

ಸೈನಿಕರನ್ನು ಕಂಡ ಕೂಡಲೆ ಓಡುವ ನಾನಾ ಆಯುಧಪಾಣಿಗಳು ಅಲ್ಲಲ್ಲಿ ತಿರುಗುತ್ತಿರುವರು

ಹಿಂದೀಯರಿರುವಲ್ಲಿಂದ ಬರ್ಮೀಯರನ್ನೂ ಬರ್ಮೀಯರಿರುವಲ್ಲಿಂದ ಹಿಂದೀಯರನ್ನೂ ಪೋಲೀಸರು ಭದ್ರವಾದ ಕಡೆಗೆ ನಡಸುತ್ತಿರುವರು.

ನಾಲ್ಕು ಕಡೆ ಪೋಲೀಸರೂ ಸೈನಿಕರೂ ಜನರ ಮೇಲೆ ಗುಂಡು ಹಾರಿಸಬೇಕಾಯಿತು. ಇದರಿಂದ ನಾಲ್ಕು ಮಂದಿ ಸತ್ತರು, 16 ಮಂದಿಗೆ ಗಾಯ ಎಲ್ಲರೂ ಹಿಂದೀಯರೇ ತಾ 29ಕ್ಕೆ ಅಂತೂ ಒಂಬತ್ತು ಸತ್ತು, ನೂರಕ್ಕೆ ಗಾಯ

ತಾ. 30ರಲ್ಲಿ ಹಲವು ಯುರೋಪೀಯ... ಮತ್ತು ಹಿಂದೀಯರ, ಅಂಗಡಿಗಳ ಬಾಗಿ... ತೆರೆದಿದೆ. ಸಂತೆಗಳೆಲ್ಲ ಬಂದು, ದಂಗೆ ಆರಂ... ವಾದ ಇವೇ ನಾಲ್ಕು ದಿನಗಳಲ್ಲಿ 58 ಮರ... ಗಳಾಗಿವೆ, 404 ಜನರಿಗೆ ಗಾಯಗಳಾಗಿ...

ದಂಗೆ ಸಮೀಪದ ಉಪನಗರಗಳಿಗ... ಹಬ್ಬುವ ಹೆದರಿಕೆಯಿದೆ

ಅಂದಿನ ರಥಜಾತ್ರೆ ಪರಿಣಾಮವಾ... ಇಂದಿಗೆ ಮೂವರಿಗೆ ಮರಣ, 48ಕ್ಕೆ ಗಾಯ.

ಮೋಜಾಹಿದಪುರವು ಭಾಗಲಪುರ... ಜಲ್‌ಬಂದಿಗೆ ಸೇರಿದೆ. ಅಲ್ಲಿ ಕಳೆದ ... ರಥೋತ್ಸವವಾದಾಗ, ರಥವನ್ನು ಮುಸ್ಲಿಮ... ವಸತಿಯಿರುವ ಕಡೆಯಿಂದ ತರದಂತೆ ಪೋ... ಸರು ಲೈಸನ್ಸು ಹಿಂದೆಗೆದರು. ಹಿಂದುಗ... ಇದಕ್ಕೊಲ್ಲದೆ, ಅಲ್ಲೇ ಹೆದ್ದಾರಿಯಲ್ಲಿ ರಥವ... ಬಿಟ್ಟು, 'ದೇವ'ರಿಗೆ ದಾರೀಪಾಲು ಮಾಡಿದರ...

ಪ್ರಾಂತಿಕ ಹಿಂದುಸಭೆಯು ಈ ಲೈಸನ್ಸ್... ರದ್ದಿಯಾತಿಯನ್ನು ನಿಷೇಧಿಸಿ ಠರಾವುಮಾಡಿತ... ಸರಕಾರದ ಮಂತ್ರಿಗಳೇ ಮೊದಲಾದವ... ಇದನ್ನು ವಿಮರ್ಶಿಸಿ, ಸ್ಥಳೀಯ ಅಧಿಕಾರಿ... ತೀರ್ಮಾನಕ್ಕೆ ಇದನ್ನು ಒಪ್ಪಿಸಿದರು. ಮುಸ... ದರೊಡನೆ ವಿಮರ್ಶಿಸಿ ಸ್ಥಳೀಯಧಿಕಾರಿಗ... ರಥೋತ್ಸವ ಮುಂದರಿಯಲೆಂದು ಅಪ್ಪಣೆವಿ... ದಿದರು

ಈ ರಥದ ಮೆರವಣಿಗೆಯಾಗುವಾ... ಮುಸ್ಲಿಮರೂ ಹಿಂದುಗಳೂ ದಂಗೆಯೆದ್ದರ... ಮೂವರು ಹಿಂದುಗಳು ಸತ್ತರು, 46 ಮಂದಿ... ಗಾಯಗಳಾದುವು ಆಸ್ಪತ್ರೆಗೆ ತಂದವರ... 19 ಮಂದಿ ಮುಸ್ಲಿಮರಿದ್ದಾರೆ

ಕೈಲ್ಲಿ ಗುಡ್ಸ್‌ಶೆಡ್ಡನ್ನೂ ಅಂಗಡಿಗಳನ... ಮುಚ್ಚಿದ್ದಾರೆ ಅಲ್ಲಲ್ಲಿ ಹೊಡೆದಾಟ ನಡೆ... ಇದೆ ಪೋಲೀಸರ ಕಟ್ಟಪ್ಪಣೆ ಜ್ಯಾರಿಯಲ್ಲಿ...

ಡಿಲ್ಲಿಯಲ್ಲಿಯೂ ಮಾರಾಮಾರಿ! ಪಠಾಣರೂ ಮುಸ್ಲಿಮರೂ!!

ತಾ 29ರಲ್ಲಿ ಪತೇಪುರಿ ಮಸೀದಿಯ... ಸಭೆ ನಡೆದಾಗ ... ಧರ್ಮಪ್ರವರ್ತಕನ ... ಮುಸ್ಲಿಮ್ ಲೀಗಿನವರಿಗೂ ಕಾದಾಟ... ಕಾಂಗ್ರೆಸ್ ... ಅಭಿಪ್ರಾಯವುಳ್ಳವನಂತೆ ಇವರ... ಉದ್ದೇಶಿಸಿ ಅಸಹ್ಯವಾದ ಮಾತುಗಳನ್ನು ... ಭಾಷಣಕರ್ತರು ನುಡಿದರಂತೆ ಅಲ್ಲಿದ್ದ ... ಮಂದಿ ಪಠಾಣ ವಿದ್ಯಾರ್ಥಿಗಳಿಗೆ ಗಾಯ... ಳಾಗಿವೆ ಲಾಠಿಗಳಿಂದ ಹೊಡೆದಾಡಿಕ... ದರು ಮುಸ್ಲಿಮ್ ಲೀಗಿನವರು ಮುಸ್ಲಿ... ವರನ್ನು ದೂರಿದ್ದೇ ಕಾರಣವಾಯಿತು ವಿದ್ಯಾರ್ಥಿಗಳು ಮಸ್ಜಿದಯವರ ಕಡೆಗೆ ನಿ... ವರು ಪೋಲೀಸರು ಬಂದೋಬಸ್ತು ... ದ್ದಾರೆ ಯಾರನ್ನೂ ಕೈದುಮಾಡಿಲ್ಲ

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು. ಆದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು. ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಔಷಧದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

NOTICE

Applications are invited f... the post of a Manager (Parupathy...gar) for the Sri Venkatrama... Temple, Mulki, on a salary Rs 75/- per month.

The applicants should ha... completed the age of 25 years a... must belong to the Gowd Saraswa... Brahmin Community

The applicant, if selecte... should furnish before taking up h... appointment Security in cash for ... sum of Rs 2,500

Applications should be accor... panied by true copies of testimor...als if any and should reach t... trustees on or before 25—8—'38.

For further particulars apply to

27-7-'38 THE TRUSTEES SRI VENKATRAMANA TEMPL... MOOLKY.

ಭಕ್ತಿ!

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇ ರವೌ ।
ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ ॥

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಶ್ರೀ ಮದ್ಭಗವದ್ಗೀತೆಯೇ ಭಕ್ತಿ ತತ್ವದ ಪ್ರಧಾನ ಗ್ರಂಥ. ಸಕಲ ವಿಧದ ಜನರೂ ತಮ್ಮ ತಮ್ಮ ಉನ್ನತಿಯನ್ನು ಪಡೆಯಲೇ ಬೇಕೆಂಬುದರಿಂದ ಶ್ರೀಕೃಷ್ಣನು ಶ್ರೇಷ್ಠವಾದ ಈ ಗೀತಾಧರ್ಮವನ್ನು ಜಗತ್ತಿನಲ್ಲಿ ಪ್ರಚಾರ ಪಡಿಸುವ ಬಗ್ಗೆ ಅದನ್ನು ಅರ್ಜುನನಿಗೆ ರಣರಂಗದಲ್ಲಿ ಉಪದೇಶಿಸಿದನು. ಈ ಜಗತ್ತಿನಲ್ಲಿ ಅನೇಕ ತರದ ಜನರಿರುತ್ತಾರೆ. ಅವರವರ ಶಿಕ್ಷಣವೂ, ಪ್ರಕೃತಿಯೂ ಬೇರೆಯಾಗಿರುತ್ತದೆ. ಕೆಲವರು ಸಂಸಾರಿಗಳು, ಕೆಲವರಿಗೆ ಸಂಸಾರವೇ ಇಲ್ಲ, ಕೆಲವರು ಸಂಸಾರವನ್ನು ತ್ಯಾಗ ಮಾಡುತ್ತಾರೆ. ಹೀಗೆ ಅನೇಕರು ಅನೇಕ ವಿಧದಿಂದ ಇರುತ್ತಾರೆ. ಇಂಥವರಿಗೆ ಶ್ರೀಕೃಷ್ಣನು ಬೇರೆ ಬೇರೆ ಯೋಗಗಳನ್ನು ಗೀತೆಯಲ್ಲಿ ಹೇಳಿದ್ದಾನೆ. ಅವುಗಳಲ್ಲಿ ನಮ್ಮಂಥಾ ಸಂಸಾರಿಗಳಿಗೆ ಭಕ್ತಿಯೋಗವನ್ನು ಹೇಳಿರುತ್ತಾನೆ. ಭಗವಂತನಿಗೆ ಏಕಪ್ರಕಾರವಾದ ಕರುಣೆಯೂ, ಪ್ರೀತಿಯೂ ಇರುವುದರಿಂದಲೇ ಎಲ್ಲರ ಕಲ್ಯಾಣಾರ್ಥವಾಗಿ ಈ ಗೀತಾ ಧರ್ಮವು ಈ ಜಗತ್ತಿಗೆ ಕೊಡಲ್ಪಟ್ಟಿತು. ಈಶ್ವರ ಪ್ರಾಪ್ತಿಯ ಎಲ್ಲಾ ಸಾಧನೆಗಳಲ್ಲಿ ಭಕ್ತಿಯು ಅಂತರ್ಗತವಾಗಿರುತ್ತದೆ. ಆದರೆ ಭಕ್ತಿಯನ್ನು ಯಥೋಚಿತವಾಗಿ ಅನುಶೀಲಿಸಬೇಕಲ್ಲವೇ? ಆ ಭಕ್ತಿಯನ್ನು ಅನುಶೀಲಿಸುವುದಕ್ಕಾಗಿಯೇ ಭಗವಂತನು ಬೇರೆ ಬೇರೆ ಸಾಧನೆಗಳನ್ನು ಹೇಳಿರುತ್ತಾನೆ. ಜಗತ್ತಿನಲ್ಲಿ ಎಲ್ಲರ ಪ್ರಕೃತಿಯು ಒಂದೇಯಾಗಿರುವುದಿಲ್ಲ. ಒಬ್ಬ ಪಿತ್ತ ಪ್ರಕೃತಿಯ ಮನುಷ್ಯನಿಗೂ ಮತ್ತೊಬ್ಬ ಕಫ ಪ್ರಕೃತಿಯ ಮನುಷ್ಯನಿಗೂ ಜ್ವರ ಬಂದರೆ ಬುದ್ಧಿವಂತನಾದ ವೈದ್ಯನು ಈ ರೋಗಿಗಳ ಕಾಯಿಲೆಯು ಜ್ವರವೆಂದು ಇಬ್ಬರಿಗೂ ಒಂದೇ ಕ್ರಮದಿಂದ ಔಷಧವನ್ನು ಕೊಡಲೊಲ್ಲನು. ಔಷದ ಒಂದೇ ಆಗಿದ್ದರೂ ಅದನ್ನು ಪಿತ್ತ ಪ್ರಕೃತಿಗೆ ಬೇರೆ, ಕಫ ಪ್ರಕೃತಿಗೆ ಬೇರೆ ಹೀಗೆ ಅನ್ಯಾನ್ಯರಸಗಳಲ್ಲಿ ಮದ್ದನ್ನು ಕೊಡುತ್ತಾನೆ. ಹಾಗೆಯೇ ಮನುಷ್ಯನೆಂಬ ರೋಗಿಗೆ "ಈಶ್ವರ ಪ್ರಾಪ್ತಿ'' ಎಂಬ ಸೌಖ್ಯವನ್ನು ಹೊಂದಲಿಕ್ಕೆ ಭಕ್ತಿ ಎಂಬ ಒಂದೇ ಮದ್ದು ಇರುವುದಾದರೂ ಆ ಮದ್ದನ್ನು ರೋಗಿಯ ಪ್ರಕೃತಿಗೆ ಅನುಗುಣವಾದ 'ಸಾಧನ'ವೆಂಬ ಅನುಪಾನದೊಡನೆ ಕೊಡಬೇಕೆಂಬುದೇ ಧನ್ವಂತರಿ ನಾರಾಯಣನಾದ ಶ್ರೀಕೃಷ್ಣನ ಆಜ್ಞೆ. ಶ್ರೀಕೃಷ್ಣನೆಂಬ ವೈದ್ಯನು ಇತರ ವೈದ್ಯರಂತಲ್ಲ. ಜಗದ್ವೈದ್ಯನಾದ ಈತನ ಆಜ್ಞೆಯಂತೆ ನಡೆಯುವ ರೋಗಿಗಳು ಸಾಯುವುದೇ ಇಲ್ಲ.

ಶ್ರೀಕೃಷ್ಣನು ಗೀತೆಯಲ್ಲಿ ಹೀಗೆ ಹೇಳಿರುವನು—"ಯಾರು ಸರ್ವ ಕರ್ಮಗಳನ್ನು ನನ್ನಲಿಯೇ ಅರ್ಪಿಸಿ, ನನ್ನಲ್ಲಿಯೇ ತಾತ್ಪರ್ಯವುಳ್ಳವರಾಗಿರುತ್ತಾ ಮತ್ತೊಬ್ಬರನ್ನು ಅನುಸರಿಸದೆ, ನನ್ನ ವಿಷಯವಾಗಿಯೇ ಯೋಗ ಮಾಡುತ್ತಾ, ನನ್ನನ್ನು ಧ್ಯಾನಿಸುತ್ತಾ ಉಪಾಸನೆ ಮಾಡುತ್ತಾರೋ ನನ್ನಲ್ಲಿ ಮನಸ್ಸನ್ನು ಇರಿಸಿದ ಇಂಥವರನ್ನು ಸ್ವಲ್ಪಕಾಲದಲ್ಲಿಯೇ ಈ ಸಂಸಾರವೆಂಬ ಸಾಗರದಿಂದ ನಾನು ಉದ್ಧರಿಸುವೆನು. ಯಾವನು ಯಾವ ಪ್ರಾಣಿಗಳಲ್ಲಿಯೂ ದ್ವೇಷ ಮಾಡುವುದಿಲ್ಲವೋ, ಯಾವನು ಸರ್ವ ಭೂತಗಳಿಗೂ ಮಿತ್ರನೋ, ಯಾರು ಕರುಣೆಯಿಂದ ಪೂರ್ಣನಾಗಿರುವನೋ, ನಾನು ನನ್ನದು ಎಂಬ ಭಾವನೆಯಿಲ್ಲದೆ ಸುಖದುಃಖಗಳನ್ನು ಸಮತುಲ್ಯವೆಂದು ತಿಳಿದು ಸಹನಶಕ್ತಿಯುಳ್ಳವನಾಗಿ, ಸರ್ವದಾ ತೃಪ್ತನಾಗಿ, ಸ್ಥಿರಚಿತ್ತನಾಗಿ, ಮನೋನಿಗ್ರಹವುಳ್ಳವನಾಗಿ, ಮನಸ್ಸನ್ನೂ, ಬುದ್ಧಿಯನ್ನೂ ನನ್ನಲ್ಲಿ ಅರ್ಪಿಸಿ ನನ್ನ ಭಕ್ತನಾಗುತ್ತಾನೋ ಅವನೇ ನನ್ನ ಪ್ರೀತಿಗೆ ಪಾತ್ರನು. ಯಾವನ ದೆಸೆಯಿಂದ ಲೋಕವು ಅಂಜದೋ, ಯಾವನು ಲೋಕದ ದೆಸೆಯಿಂದ ಅಂಜನೋ, ಯಾವನು ಹರ್ಷ, ಕೋಪ, ಭಯ, ಆತಂಕ ಇವುಗಳಿಂದ ಮುಕ್ತನೋ ಅವನು ನನ್ನ ಪ್ರಿಯನು. ಅಪೇಕ್ಷೆಗಳಿಲ್ಲದೆ ಶುಚಿಯಾಗಿ, ಆಲಸ್ಯವಿಲ್ಲದೆ ನಿಷ್ಪಕ್ಷಪಾತಿಯಾಗಿ, ವ್ಯಥೆಪಡದೆ, ಫಲಾಪೇಕ್ಷೆ ಇಲ್ಲದೆ ಕರ್ಮವನ್ನು ಮಾಡುತ್ತಾನೋ ಆತನು ನನ್ನ ಪ್ರಿಯ ಭಕ್ತನು.

ಯಾವನು ಹರ್ಷದಿಂದ ಉಕ್ಕುವುದಿಲ್ಲವೋ, ದ್ವೇಷವನ್ನು ಮಾಡುವುದಿಲ್ಲವೋ, ಶೋಕವನ್ನು ಮಾಡದೆ ಆಕಾಂಕ್ಷೆಗಳನ್ನು ಬಿಡುತ್ತಾನೋ, ಶುಭಾಶುಭಗಳೆನಿಸುವ ಫಲಗಳೆರಡನ್ನೂ ಪರಿತ್ಯಜಿಸಿ ನನ್ನ ಭಕ್ತನಾಗಿರುವನೋ, ಶತ್ರು ಮಿತ್ರರಲ್ಲಿಯೂ, ಮಾನಾಪಮಾನಗಳಲ್ಲಿಯೂ, ಶೀತೋಷ್ಣ, ಸುಖದುಃಖಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿ ನಿಂದೆ, ಸ್ತುತಿ ಇವುಗಳನ್ನು ಸಮವಾಗಿ ಎಣಿಸುತ್ತಾ ಮೌನ ಧರಿಸಿ, ಸಿಕ್ಕಿದ ಲಾಭದಿಂದ ಸಂತುಷ್ಟನಾಗಿ, ಸ್ಥಿರ ಬುದ್ಧಿಯಿಂದ ನನ್ನ ಭಕ್ತಿಯನ್ನು ಮಾಡುತ್ತಾನೋ ಆತನು ನನಗೆ ಪ್ರಿಯನು ಮತ್ತು ನನ್ನಲ್ಲಿ ಶ್ರದ್ಧೆಯನ್ನು ಇಟ್ಟು ನಾನೇ ಜಗತ್ತಿನ ಸ್ವಾಮಿಯೆಂದೆಣಿಸಿ ಧರ್ಮಕ್ಕೆ ಅನುಕೂಲವಾದ ಅಮೃತಕ್ಕೆ ಸಮಾನವಾಗಿರುವ ನಾನು ಹೇಳಿದ ರೀತಿಯಿಂದ ಯಾರು ಉಪಾಸನೆಯನ್ನು ಮಾಡುತ್ತಾರೋ ಆ ಭಕ್ತರು ನನಗೆ ಅತ್ಯಂತ ಪ್ರಿಯರು. ಯಾವನು ಒಂದು ಪತ್ರವನ್ನೋ, ಒಂದು ಪುಷ್ಪವನ್ನೋ, ಹಣ್ಣನ್ನೋ ಅಥವಾ ಕೊನೆಗೆ ಒಂದಿಷ್ಟು ನೀರನ್ನೋ ನನಗೆ ಭಕ್ತಿಯಿಂದ ಕೊಡುವನೋ, ಶುದ್ಧಾಂತಃಕರಣನಾದ ಆತನು ಭಕ್ತಿಯಿಂದ ಕೊಡುವ ಅದನ್ನೇ ನಾನು ಸ್ವೀಕರಿಸುವೆನು.'' ಆದುದರಿಂದ ಯಾರು ಆತ್ಮವನ್ನು ಜಯಿಸಿ, ಇಂದ್ರಿಯ ಸಂಯಮವನ್ನು ಮಾಡಿ, ಸಮದರ್ಶಿಯಾಗಿ, ಪರಹಿತವನ್ನು ಆಚರಿಸುತ್ತಾನೋ ಆತನೇ ಭಕ್ತನು. ಈಶ್ವರನು ನಮ್ಮ ಹೃದಯದಲ್ಲಿ ಇರುವನೆಂಬುದನ್ನು ತಿಳಿದು ಯಾರು ತನ್ನ ಚರಿತ್ರವನ್ನೂ, ಆಚರಣೆಯನ್ನೂ ಪವಿತ್ರವಾಗಿ ಇಡಿಸುವುದಿಲ್ಲವೋ ಆತನು ಭಕ್ತನಲ್ಲ. ಯಾರ ಆಚರಣೆಯಲ್ಲಿ ಭಕ್ತಿಗೆ ಪ್ರಾಧಾನ್ಯವಿಲ್ಲವೋ ಆತನು ಭಕ್ತನಲ್ಲ. ಯಾರ ಚಿತ್ತ ವೃತ್ತಿಗಳು ಈಶ್ವರಾನುವರ್ತಿಯಾಗಿರುವುದಿಲ್ಲವೋ ಆತನು ಭಕ್ತನಲ್ಲ. ಇಂತಹ ಪ್ರಶಸ್ತವಾದ ಮತ್ತು ಉದಾರವಾದ ಭಕ್ತಿ ಮಾರ್ಗವು ಗೀತೆಯಲ್ಲಿ ಅಲ್ಲದೆ ಇನ್ನೆಲ್ಲಿಯೂ ಕಾಣಸಿಗುವುದಿಲ್ಲ. ಆದುದರಿಂದಲೇ ಗೀತೆಯು ಶ್ರೇಷ್ಠವೆಂದೆಣಿಸಲ್ಪಡುತ್ತದೆ.

ಈಶ್ವರೋಪಾಸನೆಯು ಸಕಾಮವೆಂದೂ ನಿಷ್ಕಾಮವೆಂದೂ ಎರಡು ವಿಧವಾಗಿದೆ. ಸಕಾಮ ಉಪಾಸನೆಯು ಕಾಮ್ಯ ಕರ್ಮವೆಂದೂ, ನಿಷ್ಕಾಮೋಪಾಸನೆಯು ಭಕ್ತಿ ಎಂದೂ ಕರೆಯಲ್ಪಡುತ್ತದೆ. ಇವುಗಳಿಗೆ ಭಕ್ತಶ್ರೇಷ್ಠರೆನಿಸಿಕೊಳ್ಳುವ ಧ್ರುವ ಮತ್ತು ಪ್ರಹ್ಲಾದರೇ ಉದಾಹರಣೆಗಳು. ಧ್ರುವನು ಉಚ್ಚಪದ ಪ್ರಾಪ್ತಿಗಾಗಿ ವಿಷ್ಣುವಿನ ಉಪಾಸನೆಯನ್ನು ಮಾಡಿದುದರಿಂದ ಆತನ ಭಕ್ತಿಯು ಪೂರ್ಣವಾದ ಭಕ್ತಿಯಲ್ಲ. ಆತನಿಗೆ ವಿಷ್ಣುವಿನಲ್ಲಿ ದೃಢ ವಿಶ್ವಾಸವಿದ್ದು ತನ್ನ ಮನೋವೃತ್ತಿಗಳೆಲ್ಲವನ್ನು ಆತನು ವಿಷ್ಣುವಿಗೆ ಅರ್ಪಿಸಿದರೂ ಆತನ ಉಪಾಸನೆಯು ನಿಷ್ಕಾಮವಲ್ಲವಾದುದರಿಂದ ಸಂಪೂರ್ಣವಾದ ಭಕ್ತಿಯಲ್ಲ. ಪ್ರಹ್ಲಾದನ ಭಕ್ತಿಯಾದರೋ ನಿಷ್ಕಾಮವಾದುದು. ಆತನು ಯಾವ ಫಲಾಪೇಕ್ಷೆಗೋಸ್ಕರವೂ ಭಕ್ತಿಯನ್ನು ಅನುಸರಿಸಲಿಲ್ಲ. ಈಶ್ವರನಲ್ಲಿ ಭಕ್ತಿಯುಕ್ತನಾದುದರಿಂದ ಅವನು ಅನೇಕ ಕಷ್ಟಗಳಿಗೆ ಈಡಾದನು. ಆದರೂ ಆತನು ಭಕ್ತಿಯನ್ನು ಬಿಡಲಿಲ್ಲ. ಇಂತಹ ನಿಷ್ಕಾಮ ಪ್ರೇಮವೇ ಭಕ್ತಿಯು. ಪ್ರಹ್ಲಾದನೇ ನಿಜವಾದ ಭಕ್ತನು. ಸಕಾಮೋಪಾಸನೆಯು ನಿಷ್ಫಲವಲ್ಲವೆಂದು ರಾಜಗುಹ್ಯಯೋಗದಲಿ ಹೇಳಿದೆ. ಯಾರೂ ಏನಾದರನ್ನು ಇಚ್ಛಿಸಲು ಉಪಾಸನೆಯನ್ನು ಮಾಡುತ್ತಾನೋ ಅವನು ಅದನ್ನು ಹೊಂದುತ್ತಾನೆ. ಉಚ್ಚಪದವಿಯ ಇಚ್ಛೆಯಿಂದ ಉಪಾಸನೆಯನ್ನು ಮಾಡಿದ ಧ್ರುವನಿಗೆ ಉಚ್ಚಪದವಿಯು ಸಿಕ್ಕಿತು. ಪ್ರಹ್ಲಾದನು ಯಾವ ಇಚ್ಛೆಯೂ ಇಲ್ಲದೆ ನಿಷ್ಕಾಮನಾಗಿ ವಿಷ್ಣುವಿನ ಉಪಾಸನೆಯನ್ನು ಮಾಡಿದುದರಿಂದ ಆತನು ಮುಕ್ತಿಯನ್ನು ಹೊಂದಿದನು. ಹಿಂದು ಸ್ಥಾನದಲ್ಲಿ ಅನೇಕ ಭಕ್ತರು ಜನ್ಮವೆತ್ತಿದರು. ಈ ಕಲಿಯುಗದಲ್ಲಾದರೂ ಪ್ರತಿ ಶತಮಾನದಲ್ಲಿಯೂ ಇಂಥಾ ಭಕ್ತರು ಜನ್ಮವನ್ನು ತಾಳುತ್ತಾರೆ. ತುಕಾರಾಮ, ನಾಮದೇವ, ಪುಂಡಲೀಕ, ವಿ ರಾಬ್ಯಾ, ಜ್ಞಾನದೇವ ಕಬೀರದಾಸ, ತುಲಸೀದಾಸ ಸಮರ್ಥ ರಾಮದಾಸ, ರಾಮಕೃಷ್ಣ ಪರಮಹಂಸ ಇವರೆಲ್ಲಾ ಭಕ್ತರಲ್ಲಿ ಶ್ರೇಷ್ಠರೆನಿಸಿಕೊಂಡು ಇಡೀ ಲೋಕವನ್ನು ಉದ್ಧರಿಸಿದ್ದಾರೆ. ಇಂಥವರ ಚರಿತ್ರೆಯನ್ನು ಓದಿದರೆ ನಿಜವಾದ ಭಕ್ತಿಯು ಪ್ರಾಪ್ತವಾಗುತ್ತದೆ.

ವಾಚಕ ಮಹಾಶಯರೆ, ಭಕ್ತಿಯು ಮತ್ತು ಭಕ್ತರ ವಿಷಯವಾಗಿ ಎಷ್ಟು ಬರೆದರೂ ಅದು ಮುಗಿಯುವಂತಿಲ್ಲ. ಭಕ್ತಿಗಿಂತ ಶ್ರೇಷ್ಠವಾದದ್ದು ಬೇರೊಂದಿಲ್ಲ. ಹಿಂದಿನ ಕಾಲಗಳಲ್ಲಿ ಭಕ್ತಿಗೆ ಕೊರತೆ ಇದ್ದಿಲ್ಲ. ಈ ಪಾಶ್ಚಿಮಾತ್ಯ ವಿದ್ಯೆಯಿಂದ ನಮ್ಮಲ್ಲಿ ಭಕ್ತಿಯು ಕಡಿಮೆಯಾಗಿದೆ. ನಾವು ಈಗ ಪಾಶ್ಚಾತ್ಯ ಪಂಡಿತರ ಶಿಷ್ಯರು. ಅವರ ಶಿಕ್ಷಣವೇ ಅನಿಷ್ಟಕಾರಿಯಾಗಿರುತ್ತದೆ. ಭಕ್ತರ ಹಾಗೂ ಆರ್ಯಮಹರ್ಷಿಗಳ ಮಾತನ್ನು ಈಗ ನಾವು ಮನ್ನಿಸುವುದಿಲ್ಲ. ಈಗಿನ ಶಿಕ್ಷಣದಿಂದ ಸಮಾಜದ ಐಕ್ಯವು ನಾಶವಾಗಿ ಸಮಾಜೋನ್ನತಿಯ ಬದಲಿಗೆ ಅವನತಿಯುಂಟಾಗುತ್ತದೆ. ಯಾರೊಬ್ಬನಲ್ಲಿಯೂ ಚಿತ್ತಶುದ್ಧಿ ಇಲ್ಲದಿರುವುದರಿಂದ ಸ್ವಾರ್ಥತೆಯು ತುಂಬುತ್ತದೆ. ಸ್ವಾರ್ಥವೇ ಸಮಾಜದ ನಾಶಕ್ಕೆ ಮೂಲ ಕಾರಣ. ಭಾರತ ವಾಸಿಗಳು ಭಕ್ತಿಯುಕ್ತರಾಗಿದ್ದ ಕಾಲದಲ್ಲಿ ಭಾರತ ವರ್ಷವು ಉನ್ನತಿಯ ಶಿಖರಕ್ಕೆ ಏರಿತ್ತು. ಭಕ್ತಿಯು ಕಡಿಮೆಯಾದಂತೆ ಸಮಾಜವು ಅವನತಿಯ ಕಡೆಗೆ ಇಳಿಯುತ್ತದೆ. ಆದುದರಿಂದ ಭಾರತವಾಸಿಗಳಾದ ನಾವು ಭಕ್ತಿವೃತ್ತಿಯನ್ನು ಎಂದಿಗೆ ಸಂಪೂರ್ಣವಾಗಿ ಅನುಶೀಲಿಸುವೆವೋ ಅಂದಿಗೆ ಭಾರತ ವರ್ಷವು ಸ್ವರ್ಗ ಸಮಾನವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಭಗವಂತನು ನಮಗೆ ಸದಾ ಭಕ್ತಿಯನ್ನು ದಯಪಾಲಿಸಲಿ. ಭಕ್ತರಿಗೆ ನಮ್ಮೆಲ್ಲರ ಸಾಷ್ಟಾಂಗ ವಂದನೆಗಳು.

ಭಕ್ತಿಯೇ ಮುಕ್ತಿಯನ್ನು ಕೊಡುತ್ತದೆ

ರಾಮದಾಸ

ಜಪಾನಿಗೆ ಎಚ್ಚರಿಕೆ!

"ಶ್ರೀ ಜಿನ್ನಾರವರು ಚೀನಕ್ಕೆ ಚೀನಾ ಮುಸ್ಲಿಮ್ ಮಿಶ್ಯನಿನ ಜತೆಯಲ್ಲಿ ಯಾತ್ರೆ ಮಾಡುವರೆಂದು ತಿಳಿದು ಬರುತ್ತದೆ. ಕೊಂಗ್ರೆಸಿಗೆ 14, 14ರಿಂದ 21 ಪೈಂಟುಗಳನ್ನು ಹಾಕಿಕೊಟ್ಟಿರುವ ಜಿನ್ನಾರವರು ಜಪಾನಿಗೆ ಹಲವು ನೂರು ಪೈಂಟುಗಳನ್ನು ಸೂಚಿಸದಿರರು. ಅವನ್ನೆಲ್ಲ ಬಿದ್ದರೆ, ಚೀನಾ ಮುಸ್ಲಿಮ್ ಲೀಗಿನ ಶಾಖೆಗಳಾವುವೂ ಜಪಾನಿಗೆ ಸಹಾಯಮಾಡಲಾರವು, ಅನುಕೂಲವಾಗಲಾರವು. ಮೊದಲಾಗಿ ಜಪಾನು ಹೊಯಾಂಗ್ಹೊ ನದಿಯನ್ನು ಬೇರೆ ದಾರಿಯಾಗಿ ಹರಿಯುವ ಹಾಗೆ ತಿದ್ದಬೇಕೆಂಬ ಪೈಂಟು ಬರುವುದು. ಈ ನದಿಯೊಂದು ಸರಿಯಾಗಿದ್ದರೆ, ಚೀನದ ಮುಸ್ಲಿಮರು ಸುಖವಾಗಿ ಕೃಷಿಮಾಡಿ ನೆಲೆನಿಲ್ಲಲು ಅನುಕೂಲವಾದೀತು; ಪ್ರತಿವರ್ಷದ ನೆರೆಯಿಂದ ಲಕ್ಷಾವಧಿ ಜನರೂ ಸಾವಿರ ಗ್ರಾಮಗಳೂ ಹಾಳಾಗಲಾರವು"—

ರಾಮ್ಸ್ ವೀಕ್ಲಿ

ಗಾಂಧಿ—ಹಿಟ್ಲರ್

"ಮಹಾತ್ಮಾಗಾಂಧಿಯವರು ಈ ದೇಶವನ್ನು ಹಿಟ್ಲರನಂತಹ ಡಿಕ್ಟೇಟರನಂತೆಯೆ ಆಳುತ್ತಾರೆ. ಆದರೂ ಹಿಟ್ಲರ್ ಮತ್ತು ಮುಸ್ಸೊಲಿನಿ ಇವರಿಗೂ ಗಾಂಧಿಜಿಯವರ ಡಿಕ್ಟೇಟರ ಅಧಿಕಾರಕ್ಕೂ ಭೇದವಿದೆ. ತನ್ನನಥ ಮೇಲೆ ಅತ್ಯಿಕವಾದ ಪ್ರಭಾವದಿಂದಲೆ ಗಾಂಧಿಜಿ ಆಳುವರಲ್ಲದೆ, ಅವರ ಹಿಂದೆ ಅಧಿಕಾರವಾದ ಸೈನ್ಯವು ಇರುವುದಿಲ್ಲ. ಗಾಂಧಿಜಿ ತಮ್ಮ ಧ್ಯೇಯ ಮತ್ತು ಜಿಸರು. ಡಿಕ್ಟೇಟರರಾದರೆ ಇವರಿಗೆ ಉದ್ದೇಶಸಾಧನೆಯೆ ದೊಡ್ಡದು. ಹೊರತು ಇತರ ಧ್ಯೇಯಗಳೇ ಬಾಕಿ ಇಲ್ಲ. ಇವರ ಉದ್ದೇಶಗಳೇ ಧ್ಯೇಯಗಳ ದೇಶವೊಂದು ಮುಂದರಿದರಾಯಿತು, ನೀತಿ ತತ್ವ ಬಂದರೆ ಬಂತು"

ಪ್ರೊಫೆಸರ್ ತಿರುವೆಂಕಟಸ್ವಾಮಿ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ. ಜಸಾನಿಯವರ
ಜಗತ್ಪ್ರಸಿದ್ಧ
GONO KILLER
ಗೊನೊಕಿಲರ್ (ರಜಿಸ್ಟರ್ಡ್)
ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ರೆಂಪ್ರ ಸೀಲು ಮತ್ತು ಗೊನೊಕಿಲರ್ ಇರುವುದು ಎಂಬುದನ್ನು ನೋಡಿರಿ.

ಇಂಡಿಯನ್ ಪ್ರತಿಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಿಗಳಿಂದಲೂ ಗುಣವಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಸ್ರಾವ ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಛಾರ್ಜ 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patal Road, BOMBAY 4

ಎಲ್ಲಾ ಪತ್ರವ್ಯವಹಾರಗಳು ಇಂಗ್ಲೀಷಿನಲ್ಲಿ.

ನಮ್ಮ ಸ್ತ್ರೀಯರ ಸ್ಥಿತಿ

[ಶ್ರೀ ರಾಜಗೋಪಾಲಾಚಾರ್ಯರ ಅಭಿಪ್ರಾಯ.]

ಇದಲ್ಲಿವರು 'ಲೇಡಿಸ್ ಕ್ಲಬ್' ಸಂದರ್ಶಿಸಿದಾಗ, ನಮ್ಮ ಸರಕಾರದ ಮುಖ್ಯ ಮಂತ್ರಿಯವರು ತಮಿಳಿನಲ್ಲಿ ಭಾಷಣ ಮಾಡಿ, ಮಹಿಳೆಯರು ಮಂತ್ರಿಯರಿಂದ ಕಲಿತುಕೊಳ್ಳಬೇಕಾದ್ದೇನೂ ಇಲ್ಲವೆಂದೂ, ನಮ್ಮ ದೇಶದ ಸ್ತ್ರೀಯರು ಪೂರ್ಣ ಜವಾಬ್ದಾರಿ ಹೊರಬಲ್ಲವರಾಗಿ ಹೊತ್ತಿರುವರೇ ಎಂದೂ, ಮಕ್ಕಳನ್ನು ಹೊತ್ತು ಹೆತ್ತು ಸಲಹುವ ಅತಿ ಕಠಿನವಾದ ಆ ಕಲೆಯಲ್ಲಿ ಅವರು ನಿಪುಣತನದಿಂದ ಜವಾಬ್ದಾರಿ ಹೊತ್ತಿರುವರೆಂದೂ ಸೂಚಿಸಿದರು.

ಆದರೂ ಹೊಸ ವಿಚಾರಗಳನ್ನು ತಿಳಿದುಕೊಂಡು, ನೂತನ ಜವಾಬ್ದಾರಿಗಳನ್ನು ಹೊರಲು ಇವರಲ್ಲಿ ಕೆಲವರು ಕುತೂಹಲರಾಗಿರಬಹುದು ಗಂಡಸರು ಯಾವಾಗಲೂ ಸ್ತ್ರೀಯರು ಮುಂದೆ ಬರದಂತೆ, ಸಮಾನತೆ ಹೊಂದದಂತೆ ತಡೆಹಾಕುವವರೆಂದು ಅವರೆನ್ನಲೂ ಬಹುದು

ಪ್ರಪಂಚದಲ್ಲಿ ನಮ್ಮ ಸುತ್ತಲೂ ಎಷ್ಟೋ ಬದಲಾವಣೆಗಳಾಗುತ್ತಲೇ ಇವೆ ಸ್ತ್ರೀಯರೂ ಮಾರ್ಪಡುತ್ತ ಬರುತ್ತಲಿದ್ದಾರೆ. ಆದರೆ ಪಶ್ಚಿಮ ಮತ್ತು ಪೂರ್ವ ನಾಡುಗಳೊಳಗೆ ಮೂಲತಃ ತಾರತಮ್ಯಗಳಿಗೇ ಇವೆ.

ಹಿಂದೀ ಸ್ತ್ರೀಯರು ತಾವು ಹಿಂದುಳಿದವರೆಂಬರತೆ ಭಾವಿಸುವರು ನಿಜಸ್ಥಿತಿ ಮಾತ್ರ ಹಾಗೇನೂ ಇಲ್ಲ ಹಿಂದೀ ಸ್ತ್ರೀಯರು ಅವರ ಪಾಶ್ಚಾತ್ಯ ಸೋದರಿಯರಿಗಿಂತ ಉತ್ತಮ 'ಸಂಸ್ಕೃತಿಯುಳ್ಳ ಮತ್ತು ಸಂತೋಷಕರವಾದ ರೀತಿಯ ಜೀವನ ನಡೆಸುತ್ತಿರುವರೆನ್ನಬೇಕು

ಇದು ಹೀಗಿಲ್ಲವೆಂದು, ಪ್ರಮುಖ ಮಹಿಳೆಯೊಬ್ಬರು ಹೇಳಿರುವರು ಆದರೂ, ವಾಸ್ತವವಾಗಿ ಹಿಂದೀ ಸ್ತ್ರೀಯರ ಗತಿ ಎಷ್ಟೋ ಮೇಲಿನದು ವಿದ್ಯಾಭ್ಯಾಸದಲ್ಲಿ ಮುಂದರಿಸಿ ಡಿಗ್ರಿ ಪಡೆದವರ ಸಂಖ್ಯೆ ಕಡಮೆಯಿರಬಹುದ , ಹೀಗಿದ್ದ ಮಾತ್ರಕ್ಕೆ, ಸಮಾಜದಲ್ಲಿ ಅವರ ಸ್ಥಾನಕ್ಕಾ ಮಾನಕ್ಕೂ ಕೊರತೆಯ ಒದಗಿಲ್ಲಲಾಗದು ಗೌರವ ಮತ್ತು ವೀರತೆಗಳಿಗಾಗಿ ಭಾರತೀಯ ಸ್ತ್ರೀಯರು ಪುರಾತನ ಕಾಲದಿಂದಲೂ ಖ್ಯಾತಿವಂತರೇ ಅಲ್ಲವೆ?

ವಿದ್ಯಾಭ್ಯಾಸವೆಂಬುದು ಒಂದೊಂದು ದೇಶದಲ್ಲಿ ಒಂದೊಂದು ಬಗೆಯಾಗಿದೆ, ಶಾಲಾ ವಿದ್ಯಾಭ್ಯಾಸದಿಂದ ಆತ್ಮಕ್ಕೆ ಮುಕ್ತಿಯನ್ನೂ ಜೀವನಕ್ಕೆ ಹೆಚ್ಚಿನ ಸಂತೋಷವನ್ನೂ ಕೊಡಬಲ್ಲದೆನ್ನಲಾಗುವುದಿಲ್ಲ ಎಷ್ಟೋ ಶಿಕ್ಷಿತರು ಹುಚ್ಚುತನ ತೋರಿಸಿದುದುಂಟು

ಇಲ್ಲಿನ ಮಹಿಳೆಯರ ಶಿಕ್ಷಣಕ್ರಮವೆನ್ನುವುದೇ ಬೇರೆ ಪುಸ್ತಕವನ್ನು ಓದುತ್ತ, ಮಕ್ಕಳಿಗೆ ಹೀಗೆ ಹಲ್ಲು ತೊಳೆಯಬೇಕೆಂದು ಕಲಿಸುವರೇನು? ಪುಸ್ತಕಪಾಠವೇ ಇಲ್ಲದೆ, ಭಾರತೀಯರು ಹಿಂದೆ ಅತ್ಯುತ್ತಮ ಸಂಸ್ಕೃತಿ ಪಡೆದುದಿಲ್ಲವೆ? ಆ ಸಂಸ್ಕೃತಿ ಸುಧಾರಣೆಗಳು ಕಡಮೆಯವೆ? ಆದರೆ, ಪಾಶ್ಚಾತ್ಯ ಶಿಕ್ಷಣಕ್ರಮವನ್ನು ನೋಡಿಯೂ ವಿಜ್ಞಾನದ ಸಾಗರವನ್ನು ನೋಡಿಯೂ ತಮಗೆ ತಿಳಿದಿರುವುದು ಅತ್ಯಲ್ಪವೆಂದು ಇವರಿಗೆ ಭಾಸವಾಗಿದೆ ಎನ್ನಬಹುದು ಬೇರೆ ದೇಶಗಳಲ್ಲಿನ ಕ್ರಮ ನೋಡಿದರೆ, ನಮ್ಮ ಸಂಸ್ಕೃತಿಯ ಮಹತ್ವ ತಿಳಿದೀತು

ಹಿಂದೀ ಮಾತೆಯರು ತಮ್ಮ ಮಕ್ಕಳಿಗೆ ಮನೆಯಲ್ಲಿ ಶಿಕ್ಷಣ ಕೊಡಬೇಕು ತಾಯಿಯಿಂದ ಮಕ್ಕಳು ಪಾಠಗಳನ್ನು ಲೀಲೆಯಿಂದ ಕಲಿತುಕೊಳ್ಳುವರು ತಾಯಿಯೇ ಮಗುವಿಗೆ ಮೊದಲನೆ ವಿದ್ಯಾಗುರು

ಪ್ರಪಂಚದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಮಾತ್ರ ನಮ್ಮ ಮಹಿಳೆಯರಲ್ಲಿ ಹೆಚ್ಚಿನವರು ಕಲಿತುಕೊಳ್ಳಬೇಕಾಗಿದೆಂದು ನನಗೆ ತೋರುವುದು. ಸ್ತ್ರೀಯರಲ್ಲಿ ಸ್ವರಣೆ ಬೋಧೆ ಕಡಮೆಯಿರಬೇಕೋ, ಪ್ರಪಂಚ ಜ್ಞಾನವು ಅವರಲ್ಲೇಕೆ ಕಡಮೆಯಿರಬೇಕೋ ತಿಳಿಯದು. ಈ ಲೋಪಗಳನ್ನು ಹೋಗಲಾಡಿಸಿದರೆ, ಹಿಂದೀ ಸ್ತ್ರೀಯರು ಸಮಾಜಕ್ಕೆ ಹೆಚ್ಚಿನ ಉಪಕಾರ ಮಾಡುವಂತಾಗುವುದು

ವ್ಯಾಸರಾಯರ ಕುರಿತು ಪ್ಯಾಟ್ ಹೋಲಿನ ಕೋಪ.

ಅವರನ್ನು ಹಿಂತಿರುಗಲು ಬಿಡಲಿಕ್ಕಿಲ್ಲ

ಇತ್ತೀಚೆಗೆ ವಿರಾಮಕ್ಕಾಗಿ ಸ್ವದೇಶಕ್ಕೆ ತೆರಳಿದ್ದ ಲೋರ್ಡ್ ಲಿನ್‌ಲಿತ್ಗೋರವರು ಫೆಡರೇಶನಿನ ಕುರಿತು ಉಂಟಾದ ಬಿಕ್ಕಟ್ಟನ್ನು ಪರಿಹರಿಸಲು ಸಮರ್ಪಕ ರೀತಿಯಲ್ಲಿ ಪ್ರಯತ್ನಿಸಲಿಲ್ಲವೆಂಬ ಕಾರಣದಿಂದಾಗಿ ಅವರನ್ನು ಪುನಃ ಭಾರತಕ್ಕೆ ಕಳುಹಲಾರರೆಂಬ ವಾರ್ತೆಯು ಬ್ರಿಟನಿನಲ್ಲಿ ಅಲ್ಲಲ್ಲಿ ಹಬ್ಬುತ್ತಿದೆ. ಇಷ್ಟರಲ್ಲಿಯೇ ವ್ಯಾಸರಾಯರಾದ ಅವರು ಇಲ್ಲಿಯ ಸಂಸ್ಥಾನಿಕ ಅರಸರನ್ನು ಫೆಡರೇಶನಿಗೆ ಒಪ್ಪುವಂತೆ ಮಾಡಬೇಕಿತ್ತೆಂದು ಅವರ ನಿರೀಕ್ಷೆಯಿತ್ತು ಅವರ ಉತ್ತರಾಧಿಕಾರಿಯಾಗಿ ಪ್ರಕೃತ ಮೂವರ ಹೆಸರುಗಳು ಮುಂದೆ ಬಂದಿವೆ—ಲೋರ್ಡ್ ಲೋಥಿಯನ್, ಲೋರ್ಡ್ ಸೆಮ್ಯೂಲ್ ಮತ್ತು ಕೆನಡದ ಗವರ್ನರ ಜನರಲರಾದ ಲೋರ್ಡ್ ಟ್ವೀಡ್ಸ್ ಮ್ಯುರ್.

ಧರ್ಮದ ಮೂಲ ತತ್ವಗಳನ್ನೆ ಬೋಧಿಸಿರಿ

ಗಾಂಧಿಜಿಯವರ ಹಿತವಾದ

ಬೇರೆ ಬೇರೆ ಮತದ ಮಕ್ಕಳಿಗೆ ತಮ್ಮದೇ ನಿಜವೂ ಶ್ರೇಷ್ಠವೂ ಆದ ಒಂದೇ ಒಂದು ಧರ್ಮವೆಂಬ ಬೋಧನೆಯು ಕೊಡಲ್ಪಟ್ಟರೆ, ಅವರೊಳಗೆ ಸ್ನೇಹ ಸ್ಥಾಪನೆಗೆ ಇದೊಂದು ದೊಡ್ಡ ಅಭ್ಯಂತರವಾಗಿ ಪರಿಣಮಿಸಬಿರದು

ಈ ಬಗೆಯ ಭಾವನೆಯು ಇಡೀ ಜನಾಂಗದಲ್ಲಿ ಹಬ್ಬಿಕೊಂಡರೆ ಪ್ರತಿಯೊಂದು ಮತದ ಮರಿಗೆ ಪ್ರತ್ಯೇಕ ಶಾಲೆಗಳಿರಬೇಕಾದೀತು ಒಂದು ಮತದವರು ಇನ್ನೊಂದು ಮತದವರನ್ನು ದೂರುವುದರಲ್ಲೇ ನಿರತರಾಗಬಹುದು ಈ ಬಗೆಯ ದೋರಣೆಯಿಂದುಂಟಾಗುವ ದುಷ್ಪರಿಣಾಮವು ಊಹಿಸಲು ಕೂಡ ಹೃದಯಭೇದಕವಾದುದು

ಎಲ್ಲಾ ಮತಗಳ ಮೂಲ ತತ್ವಗಳು ಒಂದೇ ಆಗಿವೆ ನಾರ್ಧಾ ವಿದ್ಯಾಯೋಜನೆಯ ಪ್ರಕಾರ ಇಂತಹ ತತ್ವಗಳನ್ನು ಮಾತ್ರ ಪಾಠಶಾಲೆಗಳಲ್ಲಿ ಮಕ್ಕಳಿಗೆ ಹೇಳಿಕೊಡಬೇಕು, ಎಂಬುದಾಗಿ ಮಹಾತ್ಮಾಜಿಯವರು ಅಭಿಪ್ರಾಯಪಡುತ್ತಾರೆ

ಜಪಾನಿನ ನಗ್ನ ನಾರಿಯರ ದಳ

ಶ್ರೀ ರಾಮನು ಮರದಡ್ಡ ನಿಂತು ವಾಲಿಯನ್ನು ಕೊಂದಿದ್ದನು ಆತನಲ್ಲಿ ಶಕ್ತಿಯಿದ್ದಿಲ್ಲವೆಂದಲ್ಲ ಆದರೆ ವಾಲಿಗೊಂದು ವರವಿತ್ತು

'ಕಾಲಚಕ್ರವು ಉರುಳುತ್ತಿದೆ— ನಿಮ್ಮ ಕೆಲಸವನ್ನೆ ನೋಡಿರಿ'

ಎಂಬುದು, ಅಧ್ಯಾತ್ಮಿಕ, ರಾಷ್ಟ್ರೀಯ ಯಾ ಅಂತರಾಷ್ಟ್ರೀಯ ವಿಚಾರಗಳಲ್ಲಿ ಬ್ರಿಟಿಷರ ಧೋರಣೆಯಾಗಿರುವುದು

ವಿಸ್ತಾರವಾದ ಸಾಮ್ರಾಜ್ಯವುಳ್ಳ ಅತ್ಯಂತ ಪ್ರಬಲವಾದ ಬ್ರಿಟನಿನ ಇಂದಿನ ಸ್ಥಿತಿಗೆ ಮೇಲಿನದು ಒಂದೆ ಒಂದಾದ ಕಾರಣವು ಈ ಕಾರ್ಯದಿಂದಲೆ ಅದಕ್ಕೆ ಎಲ್ಲಾ ಕಡೆಗಳಲ್ಲಿ ಮನ್ನಣೆಯ ಸ್ಥಾನವು ದೊರಕುತ್ತಿರುವುದು

ವ್ಯಾಪಾರ ವ್ಯವಹಾರದಲ್ಲಾಗಲಿ, ಧರ್ಮ ವಿಷಯಗಳಲ್ಲಾಗಲಿ, ರೈತನಿಂದ ಅರಸನ ವರೆಗೆ ಪ್ರತಿಯೋರ್ವ ಆಂಗ್ಲೇಯನಿಗೆ, ಮೇಲಿನದು ಮಾರ್ಗದರ್ಶಕ ಸೂತ್ರವು ಕಾಲ ವಿಳಂಬ ಮಾಡಲು ಅವರಿಂದಾಗದು ತಮ್ಮ ಕೆಲಸವನ್ನೆ ನೋಡುವವರು ಅವರು ಆಂಗ್ಲೇಯನಲ್ಲಿ ಇತರ ಯಾವತ್ತೆ ಕೊರತೆಗಳಿರಲಿ ತನ್ನ ಹಿತಕ್ಕೆ ಹಾನಿ ಬಾರದಿದ್ದರೆ, ಆತನು ಇತರರ ವಿಚಾರಗಳಲ್ಲಿ ಕೈಹಚ್ಚುವವನಲ್ಲ

ಇದೇ ಬ್ರಿಟಿಷರ ಇಂದಿನ ಅಂತರಾಷ್ಟ್ರೀಯ ಧೋರಣೆಯ ಕಾರಣವು ತಮಗೆ ಲಗಾವಾಗದ ವಿಚಾರಗಳಲ್ಲಿ ಕೈಹಾಕುವುದು, ಅವರ ವ್ಯವಹಾರ ನೀತಿಯಲ್ಲ

ಈ ಗ್ಯಾಂಡಿನಲ್ಲಿ, ವಿವಿಧ ರಾಜನೀತಿಗಳನ್ನನುಸರಿಸುವ ಅನೇಕ ಪಕ್ಷಗಳಿರಬಹುದು,

ಅದರ ಕಾರಣದಿಂದಾಗಿ ಆತನನ್ನು ಜಯಿಸುವುದು ಯಾರಿಂದಲೂ ಸಾಧ್ಯವಿದ್ದಿಲ್ಲವಷ್ಟೆ !

ಆದ್ದರಿಂದಲೆ ಮರೆಯಿಂದಲೆ ದು ಕೊಲ್ಲುವ ತನ್ನ ಬಗ್ಗೆ ... ದಿಗಳ ಮೇಲೆ ... ನಗ್ನ ನಾರಿಯರನ್ನ ... ದೀನರೇ ... ಅದರ ... ಜಪಾನಿ ... ನಿಷ್ಫಲವಾಗಿದ್ದವು

ಆದರೆ ... ನಗ್ನ ನಾರಿ ... ಕಳ್ಳರನ್ನು ... ತು. ಇತ್ತಲೆ ... ಸ್ತ್ರೀಯರನ್ನು ಕಂಡೊಡನೆ ಕಳ್ಳರೆಲ್ಲರೂ ಇನ್ನು ತಾವು ಪ್ರತಿಭಟಿಸುವ ಯೋಜನೆಯಿಲ್ಲವೆಂದ ... ಶರಣಾಗತರಾದರು

ಆದರೆ ಅವರೆಲ್ಲರ ನೀತಿಯು ಮೇಲಿನದೆ, ಕಾಲಚಕ್ರವು ಉರುಳುತ್ತಿದೆ, ತಮ್ಮ ಕೆಲಸವನ್ನೇ ಮಾತ್ರ ನಾವು ನೋಡುವ ಸ್ಪೇನಿಶ್ ಯುದ್ಧ, ಚೀನಿ-ಜಪಾನ್ ಯುದ್ಧ ಮತ್ತು ಸಾಮ್ರಾಜ್ಯ ಇತರ ರಾಜಕೀಯ ವಿಚಾರಗಳನ್ನೂ ಕೂಡ ಅವರು ಇದೇ ದೃಷ್ಟಿಯಿಂದ ನೋಡುತ್ತಿರುವುದು ತಮಗೆ ಲಾಭ ದೊರಕದೆ, ಅವರು ತಮ್ಮ ಹಣವನ್ನು ಮತ್ತು ಮನುಷ್ಯರನ್ನು ಬರಿದೆ ವಿನಿಯೋಗಿಸಲಾರರು

ಈ ತತ್ವವನ್ನೆ ಅನುಸರಿಸಿ, ಬ್ರಿಟಿಷ ಪ್ರಧಾನ ಮಂತ್ರಿ ಚೆಂಬರ್‌ಲೇನರು, ಸ್ಪೇನಿನ ನಾನ್ ಇಂಟರ್‌ವೆನ್ಶನ್ ಯೋಜನೆಯನ್ನು ಕಲ್ಪಿಸಿಬಿಟ್ಟರು ಬ್ರಿಟನಿನ ಸಹಾನುಭೂತಿಯು ಯಾವ ಪಕ್ಷಕ್ಕೂ ಇರುವುದಿಲ್ಲ ಗೆದ್ದವರು ಫ್ರೆಂಕೊನಾಗಲಿ, ರಿಪಬ್ಲಿಕ್ ಸರಕಾರವಾಗಲಿ ಅವರೊಡನೆ ಕೈಜೋಡಿಸಲು ಅವರು ಸಿದ್ಧರಿರುವರು ಬ್ರಿಟಿಷ ಹಿತಗಳಿಗೆ ಹಾನಿಬಾರದವರೆಗೆ, ಸ್ಪೇನು ಫೆಸಿಯನ್ನರ ವಶವಾಗುವು ಸೌಮ್ಯವಾದಿಯಾಗಿ ಉಳಿಯಲಿ, ಅವರಿಗೇನೂ ಬಿದ್ದುದಿಲ್ಲ

ಹೊಟ್ಟೆ ವ್ರಣ

ಬಹಳ ಸಮಯ ಈಗ ಯಾವು ದನ್ನೂ ತಿನ್ನುತ್ತಿದ್ದಾಳೆ

ಹೊಟ್ಟೆನೋವಿನಿಂದ ... ಪ್ರತಿ ಔಷಧಿಯನ್ನು ಪಯೋಗಿಸಿದ್ದಾಳೆ

... ನಿಮ್ಮ ಹೊಟ್ಟೆನೋವು ಕೂಡ ಮಾಯವಾಗುವು

... ಮೆಕ್ಲಿನ್ ... ಪೌಡರನ್ನು ಉಪಯೋಗಿಸಿದರೆ ಅದು ... ಯಾಗಿರುವಂತೆ ಖಂಡಿತ ಮಾಡಿಕೊಳ್ಳಿರಿ

ಅನೇಕ ನಕಲಿ ಮಾಲುಗಳು ಇರುವವು ಎಲೆಕ್ಸ ಮೆಕ್ಲಿನ್ ಎಂಬ ಸಹಿಯು ಇರುವಂತೆ ನೀವು ಜಾಗ್ರತೆ ವಹಿಸಿದರೆ ನಿಮಗೆ ಖಾತ್ರಿ ಮಾಲು ದೊರಕುವುದು

ಕೆಂಪು ಮುದ್ರೆಯ ಪೆಟ್ಟಿಗೆಯನ್ನು ಪಡೆದುಕೊಳ್ಳಲು ಮರೆಯದಿರಿ!

'ಮೆಕ್ಲಿನ್ ಬ್ರಾಂಡ

ಸ್ಟಮಕ್ ಪೌಡರ್

ಈ ಸಹಿಗಾಗಿ ನೋಡಿರಿ

Alex C Maclean

ಎಲ್ಲಾ ದವಾಖಾನೆಗಳಲ್ಲಿ ಮತ್ತು ಸ್ಟೋರ್‌ಗಳಲ್ಲಿ ಮಾತ್ರ ಬಾಟಲಿ ... ದೊರೆಯುತ್ತದೆ

ನಿಮಗೆ ಗಂಟು ಬೇನೆಯಿರುವುದೆ?

ಫಾರಿಂಜೈಟಿಸ್ ಟೊನ್ಸಿಲೈಟಿಸ್ ಮತ್ತು ಕ್ವಿನ್ಸಿ ಎಂಬ ಗಂಟಿನ್ನ ರೋಗಗಳಿಗೆ ಕಾರಣವಾಗುವ ರೋಗಾಣುಗಳು ನಿಮ್ಮ ದೇಹವನ್ನು ಪ್ರವೇಶಿಸುವುದು ಬಾಯಿಯ ಮೂಲಕ ಆದುದರಿಂದ ನಿಮ್ಮ ಗಂಟಿನ ಬೇನೆಗಳನ್ನು ವಿಷಹಾರಿ ಔಷಧಿಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಗುಣಪಡಿಸಿಕೊಳ್ಳಿರಿ.

ಪೆಪ್ಸ್ ಗುಳಿಗೆಗಳು ನಿಮ್ಮ ಬಾಯಿಯಲ್ಲಿ ಕರಗುತ್ತಿರುವಾಗ ಹೊರಡುವ ಔಷಧೀಯ ಧೂಮವು ನಿಮ್ಮ ಶ್ವಾಸಕೋಶದ ನಳಿಗೆಗಳನ್ನು ಪ್ರವೇಶಿಸುವುದು ಆದುದರಿಂದ ನಿಮ್ಮ ಶ್ವಾಸಕೋಶದ ರೋಗಗಳನ್ನು ತಡೆಯುವರಿ ಸಮಾರ್ಥ್ಯವನ್ನು ಹೊಂದುವುದು ಈ ಧೂಮದಿಂದ ಕಂಠನಾಳದಲ್ಲಿರುವ ಉರಿತವು ಕಡಮೆಯಾಗುವುದು ಎಲ್ಲಾ ರೋಗಾಣುಗಳನ್ನು ನಾಶಪಡಿಸುವುದು, ಸಿಂಬಳವನ್ನು ಕಡಮೆ ಮಾಡುವುದು ಯಾವತ್ತು ಶೀತ ಸಮ್ಬಂಧ ರೋಗಗಳನ್ನು ಎದುರಿಸುವ ಸುವರ ನಿಮಗೆ ಹೆಚ್ಚಿನ ಬಲವನ್ನು ಕೊಡುವುದು

ಎಲ್ಲಾ ದವಾಖಾನೆಗಳಲ್ಲಿ ರೂ ಒಂದರ ಪ್ರಕಾರ ಮಾರಾಟವಾಗುತ್ತಿದೆ ಏಜಂಟರು—

ಮೆಸರ್ಸ್ ಥಾಂಪ್ಸನ್ ಮತ್ತು ಕಂಪೆನಿ, ಪಾರ್ಕ್ ಟೌನ್ ಮದರಾಸು

ಪೆಪ್ಸನ್ನು ಸೇವಿಸಿರಿ

PEPS

ಮಂಗಳೂರು ಸಮಾಚಾರ

ಮೂವರು ಹುಡುಗರಿಗೆ ಶಿಕ್ಷೆ

ಅಲ್ಲಲ್ಲಿ ಸಣ್ಣ ಸಣ್ಣ ಕಳವುಗಳನ್ನು [illegible]ದುತ್ತಿದ್ದರೆಂಬ ಅಪವಾದನೆಗೆ ಒಳಪಟ್ಟ ಮೂರುಮಂದಿ ಹುಡುಗರನ್ನು ಸ್ಥಳೀಯ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರು, ಇವರು ತಂದೆತಾಯಿಗಳ ಆರೈಕೆ ಸರಿಯಿಲ್ಲದೆಯೂ ಮತ್ತು ಬಡತನದಿಂದಲೂ ಹೀಗೆ ಮಾಡಿದರೆಂದು ತಿಳಿದು ಒಬ್ಬನನ್ನು ಮೂರು ವರ್ಷಗಳ ವಿದ್ಯಾಭ್ಯಾಸಕ್ಕಾಗಿ ತಂಜಾವೂರಿನ ಸರ್ಟಿಫೈಡ್ ಶಾಲೆಗೂ, ಇಬ್ಬರನ್ನು ಮೂರು ವರ್ಷಗಳ ವಿದ್ಯಾಭ್ಯಾಸಕ್ಕಾಗಿ ಚೆಂಗಲ್ಪಟ್ಟಿನ ಬೋರ್ಸ್ಟಲ್ ಶಾಲೆಗೂ ಕಳುಹಿಸಿದ್ದಾರೆ

ಸಮುದ್ರದಲ್ಲಿ ಅನಾಹುತ

ಕಳೆದ ಅಮಾವಾಸ್ಯೆಯ ದಿನ ಪುಟ್ಟಪ್ಪ ಶೆಟ್ಟಿ ಎಂಬ ತರುಣನು ತನ್ನ ಮೂವರು ಸ್ನೇಹಿತರೊಡನೆ ಸುರತ್ಕಲ್ಲಿಗೆ ಹೋಗಿ ಸಮುದ್ರದಲ್ಲಿ ಸ್ನಾನಮಾಡುತ್ತಿದ್ದಾಗ ಒಂದು ದೊಡ್ಡ ಅಲೆಯಿಂದ ಒಯ್ಯಲ್ಪಟ್ಟರು. ಬೆಸ್ತರು ಸಾಹಸದಿಂದ ಮೂವರನ್ನು ರಕ್ಷಿಸಿದರು. ಆದರೆ ಪುಟ್ಟಪ್ಪ ಶೆಟ್ಟಿಯು ಮಾತ್ರ ನೀರುಪಾಲಾದನು. ಶವವು ದಡಕ್ಕೆ ತೇಲಿಬರುವುದೋ ಎಂದು ಜನರು ಎರಡು ಮೂರುದಿನಗಳ ವರೆಗೆ ಕಾದು ನಿರಾಶರಾದರು. ಮೊನ್ನೆ ಶನಿವಾರ ಬೆಳಿಗ್ಗೆ ಶವವು ದಡಕ್ಕೆ ಒಂದು ಸಿದ್ಧಿದೆ.

ಹುಡುಗಿಯರ ಶಾಲೆಯನ್ನು ಸಂದರ್ಶಿಸಲು ಆಹ್ವಾನವಿರಬೇಕು

ಜಿಲ್ಲಾಬೋರ್ಡು ಮತ್ತು ಮುನಿಸಿಪಾಲಿಟಿಗಳ ಆಧೀನವಿರುವ ಶಾಲೆಯನ್ನು ಜಿಲ್ಲಾ ಬೋರ್ಡು ಅಥವಾ ಮುನಿಸಿಪಾಲಿಟಿ ಸದಸ್ಯರಾಗಲೀ ಸಂದರ್ಶಿಸುವಾಗ ಶಾಲೆಯ ಹೆಡ್ ಮಿಸ್ಟ್ರೆಸ್ಸುಗಳ ಲಿಖಿತ ಮೂಲಕದ ಆಹ್ವಾನವಿರಬೇಕೆಂದೂ ಹಾಗೆ ಸಂದರ್ಶಿಸುವಾಗ ಇನ್ಸ್‌ಪೆಕ್ಟ್ರೆಸ್ ಅಥವಾ ಬೋರ್ಡಿನ ಯಾ ನಗರಸಭೆಯ ಸದಸ್ಯೆಯರನ್ನು ಸಂಗಡ ಕರೆದು[illegible] ಕೊಂಡು ಹೋಗಬೇಕೆಂದೂ ಸರಕಾರದ ಹುಕುಂ ಒಂದು [illegible]ಯೆಂದು ತಿಳಿದುಬರುತ್ತದೆ

ಮಂಗಳೂರಲ್ಲಿ ಚೈನಾ ದಿನಾಚರಣೆ

ತಾ 31-7-38ನೇ ಆದಿತ್ಯವಾರ ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಚೀನಾದಿನಾಚರಣೆಯು ಆಚರಿಸಲ್ಪಟ್ಟಿತು [illegible] ಪಟ್ಟಣದಲ್ಲೆಲ್ಲಾ ಸ್ವಯಂಸೇವಕರು ಸಣ್ಣ ಸಣ್ಣ ರಾಷ್ಟ್ರಧ್ವಜಗಳನ್ನು ಮಾರಾಟಮಾಡಿ ಚೀನಾನಿಧಿಗೆ ಧನ ಸಂಗ್ರಹಿಸಿದರು. [illegible] 6½ ಗಂಟೆಗೆ ಮೈದಾನಿನಲ್ಲಿ, ಕಾರವಾರ ~~[illegible] ಪ್ರೆಸಿಡೆಂಟರೂ [illegible]~~ [illegible]ಗ್ರೆಸ್ ಎಮ್. ಎಲ್. ಸಿ. [illegible] ಹಳದಿಪುಂಕರರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆಯು ಜರುಗಿತು. ಶ್ರೀಗಳಾದ [illegible]ಸ್ ಎನ್ ಹೊಳ್ಳರೂ ಯು. ಗೋಪಾಲಕೃಷ್ಣರಾಯರೂ ಚೀನಾ ದಿನಾಚರಣೆಯ [illegible] ಕುರಿತು ಮಾತಾಡಿದರು. ಅಧ್ಯಕ್ಷರ ಭಾಷಣದ ನಂತರ ವಂದನಾರ್ಪಣೆಯೊಂದಿಗೆ ಸಭೆಯು ಚದರಿತು.

ದ. ಕ ಜಿಲ್ಲಾ ಎಜುಕೇಶನಲ್ ಕೌನ್ಸಿಲಿನ ಮೀಟಿಂಗು.

ಇದೇ ಅಗೋಸ್ತು 6ನೇ ತಾರೀಕಿನ ದಿನ ಪೂರ್ವಾಹ್ನ 11 ಗಂಟೆಗೆ ಸರಿಯಾಗಿ ಕಲೆಕ್ಟರರ ಆಫೀಸಿನಲ್ಲಿ ಜರಗಲ್ಲಿದೆಯೆಂದು ತಿಳಿದುಬರುತ್ತದೆ

ಬೀಡಿ ಲೇಬರ್ ಯೂನಿಯನಿನ ಆಶ್ರಯದಲ್ಲಿ ರಾತ್ರಿ ಶಾಲೆ.

ಫೆಲಿಕ್ಸ ಪೈ ಬಜಾರಿನಲ್ಲಿರುವ ಬೀಡಿ ಲೇಬರ್ ಯೂನಿಯನಿನ ಆಫೀಸಿನಲ್ಲಿ, ಎಲ್ಲಾ ಕೆಲಸಗಾರರ ಸಲುವಾಗಿ ಒಂದು ರಾತ್ರಿಶಾಲೆಯು ತೆರೆಯಲ್ಪಡುವುದು. (ಬೀಡಿಕೆಲಸಗಾರರಲ್ಲದವರಿಗೂ ಪ್ರವೇಶವಿದೆ) ಪ್ರಾರಂಭೋತ್ಸವವನ್ನು ತಾ. 7-8-'38ನೇ ಆದಿತ್ಯವಾರ ಸಂಜೆ ಘಂಟೆ 5-30ಕ್ಕೆ ಮ್ಯುನಿಸಿಪಲ್ ಸದಸ್ಯೆಯರಾದ ಶ್ರೀಮತಿ ಲೀಲಾವತಿ ಬಾಯಿ ಏಕಾಂಬರ ರಾವ್ ಇವರು ನೆರವೇರಿಸುವರು ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಬೇಂಕಿನ ಹೊಸ ಶಾಖೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಹೊಸತೊಂದು ಶಾಖೆಯು ಮಂಗಳೂರಿನ ಫೆಲಿಕ್ಸ್ ಪೈ ಬಜಾರಿನ ಬ್ಲಾಕ್ ನಂಬ್ರ 1ರಲ್ಲಿ ಡಾ॥ ಎಲ್ ಸಿ ಫೆರ್ನಾಂಡೀಸ್ ಎಮ್. ಎ, ಎಲ್ ಎಮ್ ಎಂಡ್ ಎಸ್ ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಆರಂಭದಲ್ಲಿ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರರಾದ ಡಾ ಟಿ ಮಾಧವ ಪೈ, ಎಂ ಬಿ ಬಿ ಎಸ್ ರವರು ಬ್ಯಾಂಕಿನ ಈ ವರೆಗಿನ ಉದ್ಯಮವನ್ನು ವಿಶದವಾಗಿ ವಿವರಿಸಿದರು ಅನಂತರ ರಾವ್ ಬಹದ್ದೂರ್ ಯು. ಆನಂದರಾಯರು, ಬ್ಯಾಂಕುಗಳ ಕುರಿತಾಗಿಯೂ, ಶ್ರೀ ಬಿ ವೈಕುಂಠ ಬಾಳಿಗ, ವಕೀಲ್, ಇವರು ಬ್ಯಾಂಕುಗಳ ಶಕ್ತಿ, ರಾಜಕೀಯ ವಿಚಾರಗಳಲ್ಲಿ ಅವುಗಳ ಸಹಕಾರ ಮುಂತಾದವುಗಳ ಕುರಿತಾಗಿಯೂ, ಡಾ॥ ವಿಠ್ಠಲ್ ಶೆಟ್ಟಿ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟ್, ಇವರು ಬ್ಯಾಂಕುಗಳಿಗೆ ಮಂಗಳೂರಿನಲ್ಲಿಪತಕ್ಕ ಕಾರ್ಯಕ್ಷೇತ್ರದ ದಾರಿ ಹಾಗೂ ಜನತೆಯು ಬ್ಯಾಂಕುಗಳ ಮೇಲಿಡತಕ್ಕ ಸಹಕಾರದಿಯ ಕ್ತವಾದ ಸಹಾನುಭೂತಿ ಮತ್ತು ಮೆನೇಜಿಂಗ್ ಡೈರೆಕ್ಟರರ ಕಾರ್ಯ ನಿರ್ವಹಣ ಶ್ರೇಷ್ಠತೆಗಳ ಕುರಿತು ಮಾತನಾಡಿದರು ಅಧ್ಯಕ್ಷರ ಭಾಷಣದ ನಂತರ ಕಾರವಾರ ಜಿಲ್ಲಾ ಬೋರ್ಡು ಪ್ರೆಸಿಡೆಂಟರೂ ಎಂ ಎಲ್ ಸಿ (ಮುಂಬಯಿ)ಯವರೂ ಆದ ಶ್ರೀ [illegible] ಹಳಿಪುರ್ಕಾರ್ ಇವರ ವಂದನೋಕ್ತಿಗಳೊಂದಿಗೆ ಉಪಹಾರದೊಂದಿಗೆ ಸಭೆಯು [illegible] ವಾಯಿತು.

ಜಿಲ್ಲಾ ಆದರ್ಶ ಕೊಂಗ್ರೆಸ್ ಧುರೀಣರ ನಿಧನ

ದಕ್ಷಿಣ ಕನ್ನಡ ಜಿಲ್ಲೆಯ [illegible] ಹಾಗೂ [illegible] ಸೇವಕರಾದ [illegible] [illegible] ಕೆಲವು ತಿಂಗಳುಗಳಿಂದ ಅಸ್ವಸ್ಥರಾಗಿದ್ದು ತಾರೀಕು 1ನೇ ಸಂಜೆ 5½ಗಂಟೆಗೆ ಮಂಗಳೂರಿನಲ್ಲಿ ತನ್ನ 80ನೇ ವರ್ಷ ಪ್ರಾಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಪಡುತ್ತೇವೆ ಮೃತರ ಆತ್ಮಕ್ಕೆ ಶಾಂತಿ ದೊರಕಲಿ

ಮಹಾಜನರಿಗೂ ಮತ್ತು [illegible] ಬಿಸಿನೆಸ್ ಪುಸ್ತಕದಲ್ಲಿ, [illegible]ಗಳನ್ನು [illegible] ದಯಾಳು ಗೃಹಸ್ಥರಿಗೂ ತಿಳಿಯ ಪಡಿಸಲಿಕ್ಕಾಗಿ ನಾನು ಶ್ರೀ ವಿ ಶ್ರೀನಿವಾಸನ್, ಈ ಮೂಲಕ ಪ್ರಕಟಿಸುವುದು. ಇದೇ ಪತ್ರಿಕೆಯ ಜುಲ್ಯಾ 29ನೇ ಸಂಚಿಕೆಯಲ್ಲಿ ಶ್ರೀ ಈಶ್ವರ ಎಮ್ ಎಲ್. ಎ ಯವರು ಪ್ರಕಟಿಸಿದ ವಾರ್ತೆಯು ನಿರಾಧಾರವಾಗಿಯೂ, ಮತ್ಸರಬುದ್ಧಿಯಿಂದ ಕೂಡಿದ್ದಾಗಿಯೂ, ಮನ-ಸಾಕ್ಷಿಗೆ ತೀರಾ ವಿರುದ್ಧವಾಗಿ ಬರೆದದ್ದಾಗಿಯೂ ಇರುತ್ತದೆ. ಅತ್ತಾವರ ಪಂಚಾಯತಿ ಕೋರ್ಟಿನಲ್ಲಿ ಅವರಿಂದ ನನಗೆ ಸಲ್ಲಬೇಕಾದ ಹಣಕ್ಕಾಗಿ ಅವರ ಮೇಲೆ ಫಿರ್ಯಾದಿಮಾಡಿದ ಕಾರಣವಾಗಿ ನನ್ನ ಮೇಲೆ ಸೇಡಿನಿಂದ ಸೇಡುತೀರಿಸಲು ಪ್ರಯತ್ನಿಸಿರುತ್ತಾರೆ. ಜಾಹೀರಾತುಗಳ ಪ್ರಕಟಣೆಗಳಿಗಾಗಿ ಮಹಾಜನರಿಂದ ನಾನು ಪಡಕೊಂಡ ಮೊಬಲಗೆಲ್ಲ ಶ್ರೀ ಈಶ್ವರರಿಗೆ ಕೊಟ್ಟು ಅವರಿಂದ ಈ ಬಗ್ಗೆ ರಶೀದಿಯನ್ನು ಈ ಮೊದಲೇ ಪಡಕೊಂಡಿರುತ್ತೇನೆ. ತಾ. 18-5-38ರಿಂದ ನಾನು ಅವರ ಪುಸ್ತಕದ ವಾರಿಸುದಾರನಲ್ಲ. ಇಂತಿರುವುದರಿಂದ ನನ್ನ ಬಗ್ಗೆ ಮಹಾಜನರು ದುರಭಿಪ್ರಾಯವನ್ನು ತಳೆಯಬಾರದೆಂದು ನಾನು ಬೇಡಿಕೊಳ್ಳುವವನಾಗಿದ್ದೇನೆ.

ವಿ. ಶ್ರೀನಿವಾಸ.

ತಾಲೂಕು ಸಮಾಚಾರ

ಬಂಟವಾಳ.

ಕಳೆದ 29ನೆಯ ಶುಕ್ರವಾರ ದಿನ ಇಲ್ಲಿ ಪಂಚಾಯತ ಬೋರ್ಡಿನ ಸಭೆಯು ಜರಗಿ, ಜನರ ಮೇಲೆ ಯಾವ ರೀತಿಯಲ್ಲಿ ತೆರಿಗೆಗಳನ್ನು ಹೇರಿಸಬಹುದೆಂಬ ವಿಷಯವು ಚರ್ಚಿಸಲ್ಪಟ್ಟು ಆ ಕುರಿತು ಪರ್ಯಾಲೋಚಿಸಲು ಮೂವರಿಂದೊಡಗೂಡಿದ ಒಂದು ಸಮಿತಿಯು ಏರ್ಪಟ್ಟಿರುವುದು ಅಲ್ಲದೆ ಪೇಟೆಯವರಿಂದಲೇ ಹಿಂದೆ ವಂತಿಗೆ ಮಾಡಲ್ಪಟ್ಟು ಪಡಕೊಂಡಿದ್ದ ಪ್ರಕೃತ ಕಛೇರಿಯಲ್ಲಿದ್ದ ಒಂದು ಬೆಂಕಿನಂದಿಸುವ ಯಂತ್ರವನ್ನು ಪಂಚಾಯತ ಬೋರ್ಡಿಗೆ ಕೊಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕಾಗಿ ನಿರ್ಣಯವಾಯಿತು (ಆ ಯಂತ್ರವನ್ನು ಈಗ ತೋಟಕ್ಕೆ ನೀರು ಹಾಕಲು ಉಪಯೋಗಿಸುತ್ತಿದ್ದಾರಂತೆ.)

ಪಂಚಾಯತ ಬೋರ್ಡ್ ಆಫೀಸನ್ನು ಕಳೆದ 3ನೆಯ ಬುಧವಾರ ದಿ ಬೋರ್ಡು ಅಧ್ಯಕ್ಷರಾದ ಡಾ ವಿಟ್ಠಲ ಶೆಟ್ಟಿ ತೆರೆದರು ಆ ಸಮಯದಲ್ಲಿ ಅವರಿಗೊಂದು ಮಾನಪತ್ರವು ಬೋರ್ಡಿನವರಿಂದ ಸಮರ್ಪಿಸಲ್ಪಟ್ಟಿತು ಕಾರ್ಯಕ್ರಮದ ಅಂತ್ಯದಲ್ಲಿ ಉಪಹಾರಾದಿಗಳು ನಡೆದು ಸಭೆಯು ಕೊನೆಗೊಂಡಿತು

ಪಲಿಮಾರು:—ಇಲ್ಲಿಯ ಪೋಸ್ಟಾಫೀಸಿನಲ್ಲಿ ಟಪ್ಪಾಲು ಬರುವ ಮತ್ತು ಇಲ್ಲಿಂದ ಹೊರಡುವ ಸಮಯ ಪಕ್ಕೆ ಪ್ರತ್ಯೇಕವಿದ್ದು ಬಹು ಜನರಿಗೆ, ಆ ಪೈಕಿ ವ್ಯಾಪಾರಿಗಳಿಗೆ ಬಹು ಅನುಕೂಲವಾಗಿದ್ದುದನ್ನು ಬದಲಾಯಿಸಿ ದಿನಕ್ಕೊಂದಾವರ್ತಿಯೇ ಟಪ್ಪಾಲು ಬರುವ ಮತ್ತು ಹೊರಡುವಂತೆ ಮಾಡುವರಾಗಿ [illegible] ಸಾರ್ವಜನೋಪಯೋಗಿ ಸಂಸ್ಥೆಯನ್ನು [illegible] ನೊಟ್ಟಿನ ಸೌಕರ್ಯಕ್ಕಾಗಿ ಉಪಯೋಗಿಯನ್ನಾಗಿ ಮಾಡ [illegible] ವಿಷಯವನ್ನು [illegible] ಪೋಸ್ಟಾಫೀಸರು [illegible] [illegible] ವಾಗಿ [illegible],

ದಿವ್ಯ ಜ್ಞಾನಿ

ಕಾರ್ಕಳ:—ಸ್ಥಳೀಯ [illegible] ಕ್ರಿಕೆಟ್ ಕ್ಲಬ್ಬಿನ ವಾರ್ಷಿಕ ಸಭೆಯ [illegible] ತಾ 24-7-38ರ ದಿನ [illegible] [illegible] ಶೆಟ್ಟಿ ಅಧ್ಯಕ್ಷತೆಯಲ್ಲಿ [illegible] ಕಾರ್ಯದರ್ಶಿ [illegible] [illegible] ಓದಿದ [illegible] [illegible] [illegible] ಮತ್ತು [illegible] ಕಳೆದ [illegible] ಕಾರ್ಕಳ-ಉಡುಪಿ [illegible] ಗಳ ಕ್ರಿಕೆಟ್ ಆಟಗಾರರೊಳಗೆ ನಡೆದ ಪಂದ್ಯದಲ್ಲಿ ಇದೇ ಕ್ಲಬ್ಬು [illegible] ಬಹುಮಾನದ ಒಟ್ಟಿಲನ್ನು ಪಡೆದಿರುತ್ತದೆ ತಾ 28-7-38ರ ದಿನ [illegible] ಕಾರ್ಕಳ [illegible] ಟೆನ್ನಿಸ್ ಕ್ಲಬ್ಬಿನ ಕಾರ್ಯನಿರ್ವಾಹಕ ಸಮಿತಿಯ ಸಭೆ ಸೇರಿ ಶ್ರೀ ಕಾಮತರು ಟೆನ್ನಿಸ್ ಸೆಕ್ರೆಟರಿಗಳಾಗಿರುವಂತೆ ಅವರನ್ನು ಕೇಳಿಕೊಳ್ಳುವ ಠರಾವು ಮಂಜೂರಾಗಿದೆ.

ಕಾರ್ಕಳದ ಪ್ರಾಯಸ್ಥ ಜನರಿಗೆ ರಾಷ್ಟ್ರಭಾಷೆಯಾದ ಹಿಂದಿ ಹಿಂದುಸ್ತಾನಿಯನ್ನು ಕಲಿಸುವ ಉದ್ದೇಶದಿಂದ ಶ್ರೀ ಕೆ ಸೆಟ್ಟರು ಪ್ರಭುಗಳವರ ಅಧ್ಯಕ್ಷತೆಯಲ್ಲಿ ತಾ. 24-7-38ರ ದಿನ ರಾತ್ರಿ ಒಂದು ಸಭೆ ಕೂಡಿ ತರಗತಿಯು ತೆರೆಯಲ್ಪಟ್ಟಿತು ಸ್ಥಳೀಯ ಪ್ರಚಾರಕ ಶ್ರೀ. ಕಟಪಾಡಿ ಶ್ರೀನಿವಾಸ ಶೆಣ್ಯೆಯವರು ಹಿಂದೀ ಅಧ್ಯಾಪಕರಾಗಿ ಈ ತರಗತಿಯನ್ನು ನಡೆಯಿಸುತ್ತಿದ್ದಾರೆ.

ಶ್ರೀ ವೆಂಕಟ್ರಮಣ ಸ್ಕೂಲ್ ಆಫ್ ಕಾಮರ್ಸ್ ಎಂಬ ಹೆಸರಿನಿಂದ ಇಲ್ಲಿ ಶ್ರೀ. ಸಿ. ಮಾಧವ ಕಾಮತರು ವ್ಯವಸ್ಥಾಪಕರಾಗಿ ಇನ್ನೊಂದು ವಾಣಿಜ್ಯ ಶಾಲೆಯ ಸ್ಥಾಪನೆಯಾಗಿರುತ್ತದೆ. ಸಾರ್ವಜನಿಕ ಪ್ರೋತ್ಸಾಹವು ಬಹಳ ಚೆನ್ನಾಗಿರುತ್ತದೆ.

ಜಿಲ್ಲಾ ಬೋರ್ಡ ಪ್ರೆಸಿಡೆಂಟರಾದ ಡಾಕ್ಟರ ಕೆ. ವಿಟ್ಟಲ ಶೆಟ್ಟರು ತಾ. 28-7-38ರ ದಿನ ಸ್ಥಳೀಯ ಬೋರ್ಡ ಹ್ಯಾಸ್ಕೂಲಿಗೆ ಸಂದರ್ಶನೆಯನ್ನಿತ್ತು, ಉಪಾಧ್ಯಾಯ ವೃಂದದ ಉಪಹಾರ ಸತ್ಕಾರವನ್ನು ಸ್ವೀಕರಿಸಿ, ಶಾಲೆಯ ಆವಶ್ಯಕತೆಗಳನ್ನು ತಿಳಕೊಂಡು-ಅವುಗಳ ಪೈಕಿ ವಾಣಿಜ್ಯಶಾಸ್ತ್ರ ಮೂತ್ರಸ್ಥಾನ ಮತ್ತು ಕನ್ನಡ ಹಂಚುಗಳನ್ನು ಒದಗಿಸುವ ಕುರಿತು ಶೀಘ್ರದಲ್ಲಿ ಏರ್ಪಾಡು ಮಾಡಲಾಗುವದೆಂದೂ ಉಳಿದ ವಿಷಯಗಳ ಕುರಿತು ಸಾವಧಾನವಾಗಿ ಆಲೋಚಿಸಲಾಗುವದೆಂದೂ ಹೇಳಿ, ಹ್ಯಾಸ್ಕೂಲು ಉಪಾಧ್ಯಾಯ ವರ್ಗದವರ ಸ್ಥಿತಿಗತಿಗಳು ಇತರ ಅನೇಕ ನೌಕರ ವರ್ಗದವರದಷ್ಟು ನಿಕೃಷ್ಟವಾಗಿಲ್ಲದಿರುವದರಿಂದ, ಆರ್ಥಿಕ ದುರವಸ್ಥೆಯ ಈ ಕಾಲದಲ್ಲಿ ಅವರು ಅಷ್ಟರಿಂದಲೇ ತೃಪ್ತರಾಗಿರಬೇಕೆಂದರು.

ತಾಲೂಕು ಕಾಂಗ್ರೆಸ ಕಮಿಟಿಯು 1937ನೇ ಇಸವಿಯ ಜಮಾಖರ್ಚಿನ ಪಟ್ಟಿಯು ಪ್ರಕಟವಾಗಿದೆ. ಒಟ್ಟು ಜಮಾ 572-11-6 ಪೈಕಿ 458 [illegible] ನಾಲ್ಕಾಣೆ ಸದಸ್ಯರ ವಂತಿಗೆ ಆಗಿರುತ್ತದೆ ಒಟ್ಟು ಖರ್ಚು ರೂಪಾಯಿ 572-11-6 ಪೈಕಿ ಮಂಗಳೂರು ಸೃಷ್ಟಿ ಸಂಘದ ಹೊಳ್ಳರಿಗೆ 4-0-0 ಪ್ರವಾಸ 27-15-0 ಹರಿಜನ ಶಾಲೆ 40-0-0 ಸೂಲಿನ ಕಲೆ ಶಿಕ್ಷಣದ ಬಗ್ಗೆ ರಾಮರಾಯ ಪುರಾಣಿಕರಿಗೆ 20-0-0 ಜಿಲ್ಲಾ ಮತ್ತು ಪ್ರಾಂತಿಕ ಕಾಂಗ್ರೆಸ ಕಮಿಟಿಗಳಿಗೆ ಸದಸ್ಯ ಕನ [illegible]29-0-0 ಸದಸ್ಯರನ್ನು ಸೇರಿಸುವರೆ ಖರ್ಚು 66-10-10 ಗ್ರಾಮ ಕಮಿಟಿಗಳಿಗೆ ವಂತಿಗೆ 38-15-0 ಆಗಿರುತ್ತದೆ

ಮೂಡುಬಿದಿ:—ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಸಹಾಯಾರ್ಥ ಇಲ್ಲಿಯ [illegible] ಉತ್ಸಾಹಿ ತರುಣರು ತಾ 30-7-38ರಲ್ಲಿ "[illegible]" ಎಂಬ ನಾಟಕವನ್ನು [illegible] [illegible] [illegible] ಶಾಲೆ [illegible] [illegible] ರೂ 59-4-0 [illegible] [illegible] [illegible] 85-15-5 [illegible] [illegible] ತಾ 31-7-38 [illegible] [illegible] [illegible] ~~[illegible]~~ [illegible] [illegible] ಯುವಕರನ್ನು [illegible] ಪ್ರೋತ್ಸಾಹಕರಾಗಿ [illegible] ಹೃತ್ಪೂರ್ವಕ ಸ್ವಾಗತವನ್ನು [illegible] ನಾವು ಅವರಿಗೆ [illegible] ತಾವು ಸ್ವಯಂಸಂಸ್ಥೆಗಳ ಸದಸ್ಯರು, ಸಾರ್ವಜನಿಕ ಸೇವಕತತ್ಪರರು ಎಂದು ಹೇಳಿಕೊಳ್ಳುವವರು, ಪಕ್ಷಭೇದ, ವೈಕಿಮಹತ್ವ, ಅಧಿಕಾರದರ್ಪ ಮೊದಲಾದ ಸಂಕುಚಿತ ಭಾವನೆಗಳಿಗೆ ಆಸ್ಪದಕೊಡುವಾಗದು ಸಾಮೂಹಿಕ ಹಿತವೇ ತಮ್ಮ ಧ್ಯೇಯವಾಗಬೇಕು. ನಮ್ಮ ನಡವಳಿಕೆಯು ಸಂದೇಹಾತೀತವಾಗಿರಬೇಕು. ನಾಡಿನ ಯುವಕರ ಸಚ್ಚರಿತ್ರ, ಸೇವಾತತ್ಪರತೆ, ಐಕ್ಯತೆ ಇವೇ ಸಾರ್ವಜನಿಕ ಸಂಸ್ಥೆಗಳ ಜೀವಾಳ. ಇಂತಹ ಯುವಕರ ಸಹಾನುಭೂತಿಯನ್ನು ಲಭಿಸಿಕೊಂಡ ಈ ಸಾರ್ವಜನಿಕ ಧರ್ಮಾರ್ಥ ವಾಚನಾಲಯವು ಧನ್ಯತೆಯನ್ನು ಪಡೆಯಿತೆಂದರು ಎರಡು ವರುಷಗಳಿಂದ ಆಡಳಿತಮಂಡಳಿಯ ಸದಸ್ಯರಾಗಿದ್ದ ಶ್ರೀ ಎ. ಈಶ್ವರ ಭಟ್ಟ ವಿದ್ವಾನ್‌ರವರಿಗೆ ಒಂದು ವಿದಾಯಕೂಟವು ಏರ್ಪಡಿಲ್ಪಾಯಿತು.

ಹೈದರಾಬಾದಿನಲ್ಲಿ ಹಿಂದುಗಳ ಹೀನಾವಸ್ಥೆ

ನಿಜಾಮರ ಕಠೋರ ಶಾಸನ

ಇಂದು ಹೈದರಾಬಾದಿನಲ್ಲಿರುವ ಪ್ರಜೆಗಳಲ್ಲಿ ಸಾಧಾರಣ ಸೇಕಡಾ 89 ಮಂದಿ ಹಿಂದುಗಳು. ಹಿಂದುಗಳೇ ಹೆಚ್ಚುಮಂದಿ ಇರುವ ಆ ಸಂಸ್ಥಾನದಲ್ಲಿ ಅವರ ನಿಜಾಮರು ಅವರತ್ತ ಅದೆಂತಹ ದೃಷ್ಟಿಯನ್ನು ಬೀರುವರೆಂಬುದು ಈ ಕೆಳಗೆ ಕೊಟ್ಟ ಕೆಲವು ವಿಷಯಗಳಿಂದ ವಿಶದವಾಗದಿರದು.



ಹೈದರಾಬಾದಿನ ನಿಜಾಮರು

ಈಗಿನ ನಿಜಾಮರು ಗಾದಿಯನ್ನೇರಿದೊಡನೆ ತಾನು ಅಭಿನವ ಅವರಂಗಜೇಬನಾಗುವೆನೆಂದು ಬಹಿರಂಗವಾಗಿ ಹೇಳಿರುವರಲ್ಲದೆ, ಅಂದಿನಿಂದ ತನ್ನ ರಾಷ್ಟ್ರದ ಒಳಗೂ ಹೊರಗೂ ಇಸ್ಲಾಂಪ್ರಚಾರಕ್ಕಾಗಿ ಲಕ್ಷಾವಧಿ ರೂಪಾಯಿಗಳನ್ನು ವ್ಯಯಿಸುತ್ತಿರುವರು. ತಾನು ಇಸ್ಲಾಂ ಧರ್ಮಾಭಿಮಾನಿ ಎಂಬುದನ್ನು ಮೆರೆಸುವುದಕ್ಕಾಗಿ, ತುರ್ಕಿಯ ಕಾಲಿಫರ ಪುತ್ರಿಯರೊಡನೆ ತನ್ನಿಬ್ಬರು ಪುತ್ರರ ವಿವಾಹವನ್ನು ಜರಗಿಸಿದರು. ಅವರ ರಾಜ್ಯದಲ್ಲಿಂದು ಅನೇಕ ಅನ್ಯಾಯದ ಕಾನೂನುಗಳು ಹಿಂದುಗಳ ಮೇಲೆ ಹೊರಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ.

1 ಒಂದೇ ಸಮಯದಲ್ಲಿ ದಸರಾ ಮತ್ತು ಮೊಹರಮ್ ಬಂದರೆ, ಹಿಂದುಗಳು ಎಲ್ಲಿಯೂ ಶ್ರಾದ್ಧಾದಿಗಳನ್ನು ಮಾಡಬಾರದು. ಹ್ಯಡು ಶ್ರದ್ಧ, ಹಬ್ಬದೂಟಗಳನ್ನು ಮಾಡುವುದು ಇಂತಹ ಸಂತೋಷ ಸಮಾರಂಭಗಳನ್ನೂ ಅವರು ನೆರವೇರಿಸಕೂಡದು. ಎಲ್ಲಿಯಾದರೂ ಸ್ವಂತ ಮನೆಗಳಲ್ಲಿ ಇಂತಹ ಸಮಾರಂಭಗಳು ಜರಗುವುದಾದರೂ, ಯಾವ ಬಗೆಯ ಸದ್ದೂ ಹೊರಗೆ ಬರಿಯದಂತೆ ಮಾಡಲು ಮನೆಯ ಗೋಡೆಗಳು ಬಹಳ ಉನ್ನತವಾಗಿರಬೇಕು. ಈ ಹುಕುಮಿಗೆ ವಿರುದ್ಧವಾಗಿ ವರ್ತಿಸುವವರನ್ನು 1 ವರ್ಷ ಕಠಿಣ ಸಜೆಗೂ 1000 ರೂಪಾಯಿಗಳ ದಂಡನೆಗೂ ಒಳಪಡಿಸಲಾಗುವುದು. ಆ ಸಮಯಗಳಲ್ಲಿ ಹಿಂದುಗಳು ಹೊಸ ಉಡುಪುಗಳನ್ನೂ ಉಟ್ಟುಕೊಳ್ಳಬಾರದು.

2 ಸ್ವಂತ ಮನೆಯಲ್ಲೊಂದು ಹಬ್ಬದ ಸಮಾರಂಭವನ್ನು ಕೈಕೊಳ್ಳಬೇಕಾದರೆ, 15 ದಿನಗಳ ಮುಂಚಿತವಾಗಿ ಸರಕಾರದಿಂದ ಅನುಮತಿಯನ್ನು ಪಡೆಕೊಳ್ಳತಕ್ಕದು.

3 ಯಾವಾಗಲಾದರೂ, ಯಾವ ಸಂದರ್ಭದಲ್ಲಾದರೂ, ಪಳ್ಳಿಯ ಮುಂದುಗಡೆಯಲ್ಲಿ ಸಂಗೀತ ವಾದ್ಯಾದಿಗಳನ್ನು ಜರಗಿಸಬಾರದು.

4 ಮಹಮ್ಮದೀಯರ ವಸತಿಯು ಹೆಚ್ಚಾಗಿದ್ದ ಸ್ಥಳಗಳಲ್ಲಿದ್ದ ದೇವಾಲಯ ಗುಡಿಗಳನ್ನು ದುರಸ್ತಿಪಡಿಸುವುದು, ಅವುಗಳಿಗೆ ಸುಣ್ಣ ಬಳಿಯುವುದು, ನಿರ್ಬಂಧಿಸಲ್ಪಟ್ಟಿರುವುದು.

5 ಹಿಂದುಗಳು ಖಾಸಗಿ ಶಾಲೆಗಳನ್ನು ತೆರೆಯಬಾರದು. ಪ್ರತಿಯೊಂದು ತರಗತಿಯಲ್ಲಿ 15 ಮಂದಿಗೆ ಮಿಕ್ಕಿ ವಿದ್ಯಾರ್ಥಿಗಳಿದ್ದರೆ ಸರಕಾರದಿಂದ ಮುಂಚಿತವಾಗಿಯೇ ಅನುಮತಿಯನ್ನು ಹೊಂದತಕ್ಕದು. ಈ ಕಾನೂನು ಜಾರಿಗೆ ಬರುವ ಮುನ್ನ ಸಾಧಾರಣ 5000 ಪಾಠಶಾಲೆಗಳು ಆ ಸಂಸ್ಥಾನದಲ್ಲಿದ್ದುವು. ಈಗ ಸರಕಾರದಧೀನವಾದ ಮತ್ತು ಖಾಸಗಿ ಶಾಲೆಗಳು ಕೂಡಿ 1800 ಮಾತ್ರ ಇರುವುವು. ಹರಂತು ಅವುಗಳಲ್ಲಿ ಒಂದೂ ಹಿಂದುಗಳ ಕೈಕೆಳಗಿಲ್ಲ. ಸರ್ವಸಾಧಾರಣವಾಗಿ ಅಲ್ಲಿ ತೆಲುಗು ಮತ್ತು ಮರಾಠಿ ಭಾಷೆಯನ್ನಾಡುವವರು 65 ಲಕ್ಷಮಂದಿ ಇರುವರಾದರೂ, ಅವರು ಕಡ್ಡಾಯವಾಗಿ ಉರ್ದುವನ್ನು ಕಲಿಯಬೇಕು, ನುಡಿಯಬೇಕೆಂಬ ನಿರ್ಬಂಧವು ಹೊರಿಸಲ್ಪಟ್ಟಿರುವುದು. ಈ ಕಡ್ಡಾಯ ಶಿಕ್ಷಣವು ಜಾರಿಗೆ ಬರುವ ಮೊದಲು ಸಾವಿರಕ್ಕೆ 47ರಂತೆ ಅಕ್ಷರಜ್ಞರಿದ್ದರು; ಈಗ ಅವರ ಸಂಖ್ಯೆಯು 30ಕ್ಕೆ ಇಳಿದಿರುವುದು.

6. ಯಾರೂ ಪ್ರಾರ್ಥನಾಮಂದಿರಗಳನ್ನೂ ಹವನ ಕುಂಡಗಳನ್ನೂ ನಿರ್ಮಿಸಬಾರದಾಗಿದೆ. ಅಲ್ಲದೆ ವ್ಯಾಯಾಮಶಾಲೆಗಳ ಮೇಲೂ ನಿರ್ಬಂಧವು ಹಾಕಲ್ಪಟ್ಟಿರುವುದು.

ಈ ರೀತಿಯಲ್ಲಿ ಹಿಂದುಗಳನ್ನು ಸಂಸ್ಥಾನದವರು ಪರಂಪರೆಯಾಗಿ ಪೀಡಿಸುತ್ತಿರುವರು. ಸುಮ್ಮನೆ ಸುಳ್ಳು ಮೊಕದ್ದಮೆಗಳೂ ಅವರ ಮೇಲೆ ಹೊರಿಸಲಾಗುವುವು. ಒಮ್ಮೆ ನಿಜಾಮಾಬಾದಿನಲ್ಲಿ ಆರ್ಯಸಮಾಜದವರು ಸ್ಥಾಪಿಸಿದ್ದ ಮಂದಿರವನ್ನು ನಡೆಸಕೂಡದಾಗಿ ಅವರ ಮೇಲೆ ಒತ್ತಾಯವು ನಡೆಸಲಾಯಿತು. ಆಗ ಅದರ ಹದಿನಾರು ಮಂದಿ ಅಧಿಕಾರಿಗಳೂ ಇದಕ್ಕೊಪ್ಪದಿರಲು, ಅವರನ್ನು ಸೆರೆಮನೆಯಲ್ಲಿ ಕುರುಬಿ, ಮೂತ್ರ, ಮಾಂಸಾದಿ ಕೊಳಕು ಪದಾರ್ಥಗಳು ಬಲಾತ್ಕಾರದಿಂದ ಅವರ ಬಾಯಿಯಲ್ಲಿ ತುರುಕಿಸಲ್ಪಟ್ಟವು. ಈ ವಿಷಯವು ಮೇಲಧಿಕಾರಿಗಳ ಗಮನಕ್ಕೆ ತರಲಾಯಿತು. ಆದರೆ ಅವರು ಅತ್ತ ಲಕ್ಷ್ಯವನ್ನೇ ಕೊಡಲಿಲ್ಲ.

ಯಾವತ್ತು ಪಾಠಗಳು ಜರಗಬೇಕಾದರೆ ಅದರಲ್ಲಿ ಮುಂದಾಳುತನಕ್ಕೆ ಬರಲಿರುವ ಠರಾವುಗಳು ಮೇಲಧಿಕಾರಿಗಳಿಗೆ ಮೊದಲು ಕಳುಹಿಸಲ್ಪಟ್ಟು ಅವರ ಅನುಮೋದನೆಯು ದೊರಕಬೇಕು. ದಂಗೆಗಳು, ಕಲಹಗಳು ನಡೆದಲ್ಲಿ, ತಪ್ಪು ಯಾರದೂ ಇರಲಿ, ಹಿಂದುಗಳೇ ಅದಕ್ಕೆ ಹೊಣೆಮಾಡಲ್ಪಡುತ್ತಿರುವರು. ಮುಸಲ್ಮಾನರು ಹಿಂದೂಧರ್ಮದ ಕುರಿತು ಅಸಂಬದ್ಧ ಅಪಪ್ರಚಾರ ನಡೆಸುತ್ತಿದ್ದರೂ ಪ್ರತ್ಯುತ್ತರವನ್ನು ಕೊಡುವ ಹಕ್ಕು ಹಿಂದುಗಳಿಗಿಲ್ಲ. ಯಾರಾದರೊಬ್ಬನು ಪ್ರತ್ಯುತ್ತರ ಕೊಟ್ಟಲ್ಲಿ ಆತನನ್ನು ದಸ್ತಗಿರಿ ಮಾಡಲಾಗುತ್ತಿದೆ. 'ಅಛೂತ'ರನ್ನು ಮುಸಲ್ಮಾನರು ತುಂಬಾ ತಮ್ಮ ಧರ್ಮಕ್ಕೆ ಮತಾಂತರಗೊಳಿಸುತ್ತಿರುವರು.

ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆದ ದೊಂಬಿಗಳಿಗೆ ಹಿಂದುಗಳೇ ಮೂಲಭೂತರೆಂದು ಸರಕಾರದಿಂದ ಸಾರಲಾಗಿದೆ. ಆದರೆ ಹಲವು ಮಂದಿ ಮುಸಲ್ಮಾನ ಜಹಗೀರುದಾರರ ಪ್ರೇರೇಪಣೆಯಿಂದಾಗಿ ಮುಸಲ್ಮಾನರೇ ಹಿಂದುಗಳ ಅಂಗಡಿಗಳನ್ನು ಲೂಟಿಮಾಡಲು ಸಿದ್ಧತೆಗಳನ್ನು ಮಾಡುತ್ತಿದ್ದರಾಗಿ ತಿಳಿದುಬಂದಿದೆ. ಆ ಸಮಯದಲ್ಲಿ ಹಿಂದುಗಳಲ್ಲಿ ಕೀಳುತರಗತಿಯವರಾದ 'ಲೋಧ' ಜಾತಿಯ 4000 ಮಂದಿ; ಈ ಲೂಟಿಯು ಆಗದಂತೆ ಮಾಡಿದರು. ಇದೊಂದು ತಪ್ಪಿಗಾಗಿ ಅವರನ್ನು ಸಾವಿರಗಟ್ಟಲೆಯಿಂದ ಕೈದು ಮಾಡಿ, ತುರಂಗಗಳಲ್ಲಿ ದೊಬ್ಬಿ ಪರಂಪರೆಯಾಗಿ ಪೀಡಿಸುತ್ತಿರುವರು.

ಪ್ರಕೃತ ಆರ್ಯ ಸರ್ವದೇಶಿಕ ಸಭೆಯವರು 14 ಕೋರಿಕೆಗಳನ್ನೊಳಗೊಂಡ ಒಂದು ಬಿನ್ನವತ್ತಳೆಯನ್ನು ತಯಾರುಮಾಡಿ ಸರಕಾರಕ್ಕೆ ಒಪ್ಪಿಸಿರುವರು. ಅವು ಸರಕಾರದಿಂದ ಮನ್ನಿಸಲ್ಪಡದಿದ್ದರೆ ಶೀಘ್ರದಲ್ಲಿಯೇ ಅಲ್ಲಿ ಸತ್ಯಾಗ್ರಹವು ಹೂಡಲ್ಪಡಬಹುದಾಗಿದೆ. ಸಂಸ್ಥಾನದ ಪ್ರತಿಯೊಬ್ಬ ಹಿಂದುವು ತಮ್ಮ ಧರ್ಮರಕ್ಷಣಾರ್ಥವಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಸತ್ಯಾಗ್ರಹಸಮರವನ್ನು ಸೇರಲು ಸಿದ್ಧರಿರುವರು.

ಕೊಂಗ್ರೆಸಿಗೆ ಮುಸ್ಲಿಂ ಲೀಗಿನ ಕೊನೆಯ ಮಾತು

ಡಿಲ್ಲಿಯಲ್ಲಿ ಶ್ರೀ ಜಿನ್ನಾರವರ ಭಾಷಣ

ಈಗ ಬ್ರಿಟಿಷ ಸರಕಾರವೇ ಇದೆಯಾದರೂ; ಹಿಂದೂ ಸರಕಾರವಲ್ಲದಿದ್ದರೂ, ಕೊಂಗ್ರೆಸಿಗೆ ಅಧಿಕಾರದ ಪಿತ್ತವು ನೆತ್ತಿಗೇರಿದೆ. ಈ ಶಿರೋಭ್ರಮಣ ಹೆಚ್ಚುತ್ತ ಬಂದರೆ, ದೇಶಕ್ಕೆ ಸಂರಕ್ಷಣೆಯೇ ಇರಲಾರದು.

ಮಹಮ್ಮದ್ ಅಲಿ ಜಿನ್ನಾರವರು.

ಕೊಂಗ್ರೆಸಿನ ಭಾಷಾಪ್ರಯೋಗಗಳಲ್ಲಿ, ರಾಷ್ಟ್ರೀಯತೆ ಎಂದರೆ ಹಿಂದೂಮತ ಎಂದರ್ಥ. ಹಿಂದೂ ಮಹಾಸಭೆಯು ಬಾಯಿಬಿಟ್ಟು ಹೇಳುತ್ತಿರುವುದನ್ನು ಕೊಂಗ್ರೆಸು ಬಚ್ಚಿಟ್ಟುಕೊಳ್ಳುತ್ತದೆ.

ಮುಸ್ಲಿಮ್ ಲೀಗ್ ಎಂಬುದು ಒಂದು ಜಾತಿಯವರ ಸಂಸ್ಥೆಯೆಂದು ಲೀಗನ್ನು ಅಡಗಿಸಲು ಕೊಂಗ್ರೆಸ ಯತ್ನಿಸುತ್ತದೆ; ಆದರೆ ಅದು ಮಾತ್ರ ಸಕ್ಕ ವಿಚಾರನಲ್ಲ. ಮುಸ್ಲಿಮ್ ಲೀಗ್ ರಾಷ್ಟ್ರೀಯವಾಗಿದೆ; ಕೊಂಗ್ರೆಸ್ ಮಾತ್ರ ಒಂದು ಜಾತಿಯವರದೇ.

ತಮಗೆ ನ್ಯಾಯವಾಗಿ ಬೇಕಾಗಿರುವುದನ್ನು ಪಡೆಯುವುದರಲ್ಲಿ ಲೀಗ್ ಕೊನೆಯತನಕ ಹೋರಾಡದಿರದು. ಆದರೂ ಯಾರೊಡನೆಯೂ ಅದಕ್ಕೆ ದ್ವೇಷವಿಲ್ಲ. ಇತರರಿಗೆ ಎರಡನೆಯದಾಗಿ ಮಾತ್ರ ಲೀಗ್ ಇರಲಾರದು; ಅಡಿಯಾಳಾಗಲು ಅದು ಒಪ್ಪದು. ಸಮಾನವಾಗಿರುವ ಸಂಸ್ಥೆಗಳೊಡನೆ ಅದು ಸಮಾನವಾದ ರೀತಿಯಿಂದ ವರ್ತಿಸುವುದು.

ಜುಲೈ 27ರಲ್ಲಿ, ಕೊಂಗ್ರೆಸ್ ಅಧ್ಯಕ್ಷರನೊಂದು ಪತ್ರ ಬಂದಿದೆ. ಅದನ್ನು ಬಹಿರಂಗವಾಗಿ ಪ್ರಕಟಿಸಲಾರೆನು. ಲೀಗ್ ಸಭೆ ಏನೆನ್ನುವುದೋ ನೋಡೋಣ. ಅನಂತರ ಅದನ್ನೆಲ್ಲ ಪ್ರಕಟಿಸುವೆನು.

ಕೊಂಗ್ರೆಸಿನೊಡನೆ ಲೀಗಿಗೆ ಒಪ್ಪಂದವಾಗಲಿ, ಹೋಗಲಿ, - ಬಲಿಷ್ಠರೊಡನೆ ಬಲಹೀನರು ರಾಜಿಯಿಂದ ಇರುವಂತಿಲ್ಲ. ಒಂದು ವೇಳೆ ಒಪ್ಪಂದವೇ ಆದರೂ, ಬಲಹೀನನಾಗಿರುವ ಲೀಗ್, ಕೊಂಗ್ರೆಸು ತನ್ನ ಹೇಳಿಕೆಯಂತೆ ಕೃತಿಯಿಂದ ಪೂರೈಸೀತೆಂದು ನಂಬಲಾರದು. ಹೀಗಾಗಿ, ಒಪ್ಪಂದವು ಬರೀ ಕಾಗದದ ಚೂರಾಗಿ ಉಳಿದೀತು.

ಕೊಂಗ್ರೆಸಿನ ಸುಳ್ಳು ಶೋಧನೆಗೆ ಮರುಳಾಗಬೇಡಿರಿ. ನಿಮ್ಮಲ್ಲಿ ಒಡಕು ಇಲ್ಲದಿರಲಿ. ಇನ್ನಷ್ಟು ಹೆಚ್ಚು ಮಂದಿ ಲೀಗಿಗೆ ಸೇರಿ ಅದನ್ನು ಬಲಪಡಿಸಿರಿ!

ಲೀಗ್ ಕೌನ್ಸಿಲಿನ ಸಭೆ.

ತಾ. 30ರಲ್ಲಿ ಮಧ್ಯಾಹ್ನ,- "ಮುಸ್ಲಿ[m] ಮಹಾಜನರೊಡನೆ ಕೊಂಗ್ರೆಸಿನ ಮೈತ್ರಿಯಾ[g]ಬಾರದು." ಎಂಬುದೇ ಮುಖ್ಯ ಉದ್ದೇ[ಶ]ವುಳ್ಳದಾಗಿ ಸಭೆ ಸೇರಿ,-ಲೀಗಿಗೆ ಹಣ ಕೂ[ಡಿ]ಸಲೂ; ಲೀಗಿನ ತತ್ವಗಳನ್ನು ಪ್ರಚಾರಗೊ[ಳಿ]ಸಲೂ ಕಮಿಟಿಗಳನ್ನು ಸ್ಥಾಪಿಸಲಾಯಿತು. ಒಂದು ಮುಸ್ಲಿಮ್ ನೆಶನಲ್ ಗಾರ್ಡ್ ಎಂ[ಬ] ಸಮಿತಿಯನ್ನು ಸ್ಥಾಪಿಸಲೂ ಕಮಿಟಿಯ ನೇಮ[ಕ]ವಾಯಿತು.

ಹಿಂದೀ ಒತ್ತಾಯದಿಂದ ಕೆಡುಕು.

ಡಾ| ಪಂಡಿತ ಹೃದಯನಾಥ ಕುಂಜ್ರುರವರ ಭಾಷಣ.

ಮದ್ರಾಸು ಹಿಂದೀ ಪ್ರಚಾರಸಭೆಯ ಅಧಿವೇಶನದಲ್ಲಿ, ಡಾ| ಕುಂಜ್ರುರವರು ಭಾಷಣ ಮಾಡುತ್ತ (ಇವರು ಸರ್ವೆಂಟ್ಸ್ ಒಫ್ ಇಂಡಿಯಾ ಸೊಸಾಯಿಟಿಯ ಅಧ್ಯಕ್ಷರು)— ಹಿಂದಿಯನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸುವ ವಿಚಾರದಲ್ಲಿ ನನ್ನ ಇಂಗಿತವನ್ನು ಹೇಳಬೇಕಾದರೆ, ನಾನು ಬಲಾತ್ಕಾರಕ್ಕೆ ಪ್ರೋತ್ಸಾಹ ಕೊಡುವವನಲ್ಲವೆನ್ನುವೆನು. ಜನರ ಹೃದಯದಲ್ಲಿ ಹಿಂದೀಭಾಷೆಯ ಮೇಲೆ ಪ್ರೇಮವುಂಟಾದರೆ, ಅದರಿಂದ ಮಾತ್ರ ಹಿಂದೀಯು ಪ್ರಚಾರಗೊಂಡು ಬಾಳುವುದು. ಆದುದರಿಂದ ಹಿಂದಿ ಕಲಿಯುವವರು ಸ್ವೇಚ್ಛೆಯಾಗಿ ಅದನ್ನು ಕಲಿತುಕೊಳ್ಳುವಂತಾಗಬೇಕು. ಇಲ್ಲಿ ಹಿಂದೀ ಪ್ರಚಾರವು ಸಾಕಷ್ಟು ಚೆನ್ನಾಗಿಯೇ ಸಾಗಿದೆ. ಹಿಂದಿಯನ್ನು ಬರೀ ಕಲಿಯುವುದೇ ಮುಖ್ಯವಲ್ಲದೆ, ಅದನ್ನು ಪ್ರೀತಿಯಿಂದ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾದರೆ, ಇದು ವರೆಗೆ ನಡೆದಂತೆ ಅದರ ಪ್ರಚಾರವು ಸರಕಾರದ ಕಡೆಯಿಂದ ಆಗುವುದುತ್ತಮವಲ್ಲ. ಬದಲಾಗಿ ಪ್ರೇರೇಪಣೆಯೇ ಉತ್ತಮ ಉಪಾಯ; ಮಿಶ್-ಸರಕಾರಿ ಪ್ರಯತ್ನಗಳು ಸ್ವೇಚ್ಛಾನಿದ್ಯಾಭ್ಯಾಸವೂ ಅತ್ಯವಶ್ಯಕ- ಎಂದರುವರು.

ಸಮತಾವಾದಿಗಳು ಕೊಂಗ್ರೆಸಿನಿಂದ ಹೊರಹೋಗುವರೆ

ಸದ್ಯದಲ್ಲಿಯೇ ಸಮತಾವಾದಿಗಳು ಕಾಂಗ್ರೆಸಿನಿಂದ ಹೊರಹೋಗಬಹುದೆಂಬ ಸಂಶಯವು ಬಲವತ್ತರವಾಗುತ್ತಿದೆ. ಇತ್ತೀಚೆಗೆ ಅವರ ಪಕ್ಷದ ಮುಂದಾಳುಗಳೆನಿಸುವ ಅನೇಕರು ತಮ್ಮ ಪಕ್ಷವು ಕೊಂಗ್ರೆಸಿನ ಒಳಗಿ[ನ]ದೆಂದು ಅದೊಂದು ಸ್ವತಂತ್ರ ರಾಜಕೀಯ ಸಂಗಡವೆಂದೂ ಸಾರಿರುವರು. ಮಾರ್ಕ್ಸಿಯಂ ಇದೇ ತಮ್ಮ ತತ್ವಗಳೆಂದೂ ಸಾರುತ್ತಿರುವರು. ಆದರೆ ಅಲ್ಲಲ್ಲಿ ಸಮತಾವಾದಿಗಳು ತಾವು ಕೊಂಗ್ರೆಸಿನೊಳಗಿದ್ದೇ ಕೆಲಸ ಮಾಡುವವರೆಂದು ಪ್ರಚಾರವನ್ನು ನಡಿಸಿ, ಸದಸ್ಯರನ್ನು ಶೇಖರಿಸುತ್ತಿರುವರು. ಸಮತಾವಾದಿ ಮುಖಂಡರ ಮೇಲೆ ಹೇಳಿದ ರೀತಿಯಲ್ಲಿ ಅನ್ನುತ್ತಿರಲು ಇಂದಲ್ಲ ನಾಳೆ ಅವರು ಕೊಂಗ್ರೆಸಿನಿಂದ ಹೊರಹೋಗಬಹುದೆಂಬ ಸಂಶಯವು ಉಂಟಾಗುತ್ತಿದೆ. ಕೊಂಗ್ರೆಸಿನ ಹೆಸರಿನಲ್ಲಿ ಪ್ರಚಾರವನ್ನು ನಡೆಸಿ, ತಮ್ಮ ಪಕ್ಷದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಕೊಂಗ್ರೆಸಿನಿಂದ ಬೇರೆಯಾಗುವ ದುರಾಲೋಚನೆಯನ್ನು ಅವರು ಪ್ರಾಯಶಃ ಮಾಡಿರಬಹುದು. ಆದುದರಿಂದ ಜನರು ಎಚ್ಚರದಿಂದಿರುವುದುತ್ತಮ.

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

ವಿದ್ಯಾರ್ಥಿಗಳ ಹಕ್ಕು ಬಾಧ್ಯತೆಗಳು

ಸ್ವಾತಂತ್ರ್ಯ ಸಂಗ್ರಾಮದಲ್ಲಿ : : : : : : ಅವರ ಭಾಗ!

ಶ್ರೀ ಎಚ್. ವಿ. ಕಾಮತರ ಹಿತೋಪದೇಶ

"ನಾವು 350 ಮಿಲಿಯ ಭಾರತೀಯರಿದ್ದೇವೆ, ನಮ್ಮನ್ನು ಕೆಲವೇ ಮಂದಿ ಬ್ರಿಟಿಷರು ಆಳುತ್ತಿರುವರು ಇದು ಹೇಗೇಕಾಯಿತು? ನೀವು ಮನಮಾಡಿದುದಾದರೆ ಈ ಪರದಾಸ್ಯವನ್ನು ಕಿತ್ತೊಗೆಯಬಹುದಿತ್ತು" ಎಂಬುದಾಗಿ ಇತ್ತೀಚೆಗೆ ಬಂಗಾಲದಲ್ಲಿ ಸ್ಕಾಟಿಶ್ ಚರ್ಚ್ ಕಾಲೇಜಿನ ವಿದ್ಯಾರ್ಥಿಗಳಿಗೆ ಭಾಷಣಮಾಡುತ್ತ ಶ್ರೀ ಹುಂಡಿ ವಿಷ್ಣು ಕಾಮತರೆಂದರು.

"ಈ ಯುದ್ಧದಲ್ಲಿ ನಾವು ವಸ್ತುಸ್ಥಿತಿಯನ್ನು ಇದಿರಾಯಿಸಬೇಕು ಸ್ವಾರ್ಥಸಾಧನೆಗಾಗಿ ಅಗತ್ಯಬಿದ್ದರೆ ಯುದ್ಧೋಪಕರಣಗಳನ್ನೂ ನಮ್ಮ ಮೇಲೆ ಪ್ರಯೋಗಿಸಲು ಸಿದ್ಧರಿರುವ ವಿದೇಶಿಯರು ಇಂದು ನಮ್ಮನ್ನು ಸುಲಿಯುತ್ತಿರುವರು ಈ ಸುಲಿಗೆಯಿಂದ ಪಾರಾಗುವುದಕ್ಕಾಗಿಯೇ ಇಂದು ಈ ಹೋರಾಟವು ನಡೆಯುತ್ತಿರುವುದು. ಆದರೆ ನಾವು ಹಿಂಜರಿಯಬಾರದು ಎದೆಯೊಡ್ಡಿ ಮುಂದರಿಯಬೇಕು

"ಸಾಮುದಾಯಿಕ ಪ್ರಯತ್ನಗಳಿಂದಾಗಿ ನಿಂಬಾ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡವರನ್ನು ನಾನು ಅಭಿನಂದಿಸುತ್ತೇನೆ ರಾಜಕೀಯ ವಿಷಯಗಳತ್ತ ಗಮನಕೊಟ್ಟು, ಅವುಗಳ ಕುರಿತು ಚರ್ಚಿಸಿ ತಮ್ಮ ಸ್ವಂತ ಅಭಿಪ್ರಾಯವನ್ನು ಮಾಡಿಕೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇರುತದೆ ನೀವು ಏನು ಮಾಡುವುದಾದರೂ, ಇದಕ್ಕೊಂದು ಸಂಘವು ಬೇಕೆಂಬುದನ್ನು ನೀವು ತಿಳಕೊಳ್ಳಬೇಕು. ಸಂಘಟನೆಯಲ್ಲಿ ಶಕ್ತಿಯು ಇರುವುದು ಈ ಘಟನೆಯು ಇಲ್ಲದಿದ್ದರೆ ನಿಮ್ಮ ಯಾವ ಪ್ರಯತ್ನವಾದರೂ ಉಪಯಶಸ್ಸಿನ ಗರ್ಭದಲಿ ಲೀನವಾಗುವುವು

"ಭರತಖಂಡದ ಎಲ್ಲೆಡೆಯಲ್ಲೂ ವಿದ್ಯಾರ್ಥಿಗಳ ಚಳವಳವು ಏಕತೋಮುಖವಾಗಿ ನಡೆಯಬೇಕು ಪ್ರತಿಯೊಂದು ವಿದ್ಯಾಮಂದಿರ ವಿಶ್ವವಿದ್ಯಾಲಯಗಳೊಳಗೆ ನಂಟು ಇರಬೇಕು ಪ್ರತಿಯೊಂದು ವಿದ್ಯಾಲಯದಲ್ಲಿರುವ ಪ್ರತಿಯೊಂದು ವಿದ್ಯಾರ್ಥಿ ಸಂಘದವರು ಪ್ರತಿನಿಧಿಗಳನ್ನಾರಿಸಿ, ಅವರಿಂದೊಡಗೂಡಿದ ಒಂದು ಸಭೆಯನ್ನು ಸ್ಥಾಪಿಸಬೇಕು ಅವು ಜಿಲ್ಲೆಯೊಂದರಂತೆ, ನಂತರ ಪ್ರಾಂತಿಕ ಸಂಘಗಳಂತೆ ಇರಬಹುದು ಈ ಪ್ರಾಂತಿಕ ಸಮಿತಿಗಳು ಅಖಿಲಭಾರತ ವಿದ್ಯಾರ್ಥಿ ಸಂಘಕ್ಕೆ ಪ್ರತಿನಿಧಿಗಳನ್ನು ಕಳುಹತಕ್ಕದ್ದು ಈ ಸಮಿತಿಯವರು ಒಂದು ಕಾರ್ಯಕಾರಿ ಮಂಡಲಿಯನ್ನು ಚುನಾಯಿಸಿ, ಅಖಿಲ ವಿದ್ಯಾರ್ಥಿವೃಂದವನ್ನು ಆಗಾಗ್ಗೆ ಒಂದರೆಗಳಿಗೊಳಪಡಿಸುವ ಬಿಕ್ಕಟ್ಟುಗಳ ಪರಿಹರೋಪಾಯಗಳನ್ನು ಕೈಕೊಳ್ಳುವ ಅಧಿಕಾರವನ್ನು ಅವರಿಗೆ ಕೊಡತಕ್ಕದು. ಮಾತ್ರವಲ್ಲ ಅಖಿಲಭಾರತ ವಿದ್ಯಾರ್ಥಿ ಸಂಘದವರು ಅಮೇರಿಕಾ, ಯುರೋಪ ಖಂಡಗಳಲ್ಲಿರುವ ವಿದ್ಯಾರ್ಥಿಸಂಘಗಳೊಡನೆ ಸಂಬಂಧವನ್ನು ಇಟ್ಟುಕೊಂಡಿರಬೇಕು. ವಿಚಾರವಿನಿಮಯಕ್ಕಾಗಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಭಾಷಣಕರ್ತರುಗಳನ್ನು ಕರೆಸುವುದೂ ಕಳುಹಿಸುವುದೂ ಆಗಾಗ್ಗೆ ನಡೆಯುತ್ತಿರಬೇಕು. ಹಾಗೆ ಮಾಡಿದರೆ ಮಾತ್ರ, ಇಂದು ಹರಿದು ಹಂಚಿಹೋಗುತ್ತಿರುವ ಸಂಕಲ್ಪಹೀನವಾಗುತ್ತಿರುವ ಈ ಪ್ರಪಂಚದ ಆಗುಹೋಗುಗಳ ಪರಿಚಯವನ್ನು ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಧ್ಯವಾದೀತು

"ಪ್ರಪಂಚದಲ್ಲಿ ಈ 25 ವರ್ಷಗಳೊಳಗೆ ಕಳೆದ 500 ಸಂವತ್ಸರಗಳಲ್ಲಿ ಆದುದಕ್ಕಿಂತ ಹೆಚ್ಚಿನ ಮಾರ್ಪಾಟುಗಳಾದುದನ್ನು ನಾವು ಕಂಡಿರುವೆವು ವಿಜ್ಞಾನ ರಾಜಕೀಯ ಪ್ರಪಂಚಗಳಲ್ಲೂ ಇದೇ ಬಗೆಯ ವ್ಯತ್ಯಾಸಗಳಾಗಿರುವುವು. ಅರಸರು ಧರೆಗುರುಳಿರುವರು, ರಾಜ್ಯಗಳು ಧೂಳಿಪಾಲಾಗಿರುವುವು. ಪ್ರಗತಿಪರ, ವೈಪರೀತಿಕ ಕ್ರಾಂತಿಗಳು ಸಂಭವಿಸಿರುವುವು, ಬಹುಕಾಲದಿಂದ ಸಮಾಜವು ದಾರುಣ ಸ್ಥಿತಿಯಲ್ಲಿದೆ ಈ ಮಾರ್ಪಾಟುಗಳಿಂದಾಗಿ ಭಾರತವೂ ಕಷ್ಟಕ್ಕೊಳಗಾಗಿರುವುದು ಆದರೂ ಸ್ವಾತಂತ್ರ್ಯ ಸಂಗ್ರಾಮವನ್ನು ನಾವು ಇನ್ನೂ ಉತ್ತೇಜಿತ ಶಕ್ತಿಯಿಂದೊಡಗೂಡಿ ಮುಂದರಿಯುತ್ತಿರುವೆವು ಈ ಸಂಗ್ರಾಮದಲ್ಲಿ ವಿದ್ಯಾರ್ಥಿಗಳೂ ತಮ್ಮದೊಂದು ಒತ್ತಾಸೆಯ ಕೈಯನ್ನು ನೀಡಬಹುದಾಗಿದೆ ಇಂದು ಭಾರತವು ಹೂಡಿರುವ ಯುದ್ಧವು ಕೆಲವು ಮಂದಿಯ ಕಲಹವೆಂದು ತಿಳಿದುಕೊಳ್ಳುವುದು ತಪ್ಪು ಅದು ಜನಾಂಗಿಕ ಸಂಗ್ರಾಮ, ಅದರಲ್ಲಿ ಪ್ರತಿಯೊಬ್ಬನೂ ತನ್ನ ದಳ, ಬಿಲ್ಲುವನ್ನು ಅರ್ಪಿಸಬೇಕಾಗಿದೆ ವಿದ್ಯಾರ್ಥಿಗಳು ರಾಜಕೀಯಗಳಲ್ಲಿ ಪ್ರತ್ಯಕ್ಷಭಾಗಿಗಳಾಗಬೇಕೆಂದು ನನ್ನ ಮತವಲ್ಲ, ಪರೋಕ್ಷವಾಗಿಯೂ ಅವರು ಭಾಗವಹಿಸಿಕೊಳ್ಳಬಹುದಾಗಿದೆ ಮುಖ್ಯವಾಗಿ ದರ್ಶನಾತ್ಮಕ ರಾಜಕೀಯಗಳಲ್ಲಿ (Demonstrative politics) ಅವರು ಭಾಗಿಗಳಾಗಬಹುದು

"ಈ ಇಪ್ಪತ್ತನೆಯ ಶತಮಾನದಲ್ಲಿ ರಾಜಕೀಯವು ಒಂದು ಹೊಸ ರೂಪನನ್ನು ತಾಳಿರುವುದು ರಾಜಕೀಯಗಳಲ್ಲಿ ಸಾಮುದಾಯಿಕ ಪ್ರವೇಶವು ಪರಿಸ್ಥಿತಿಯನ್ನೇ ಬೇರ್ಪಡಿಸಿರುವುದು ಎಲ್ಲೆಲ್ಲಿಯೂ ಇಂದಿನ ಪರಿಸ್ಥಿತಿಯೇ ಬೇರೆ ಯುದ್ಧ, ಶಾಂತಿಯ ಸಮಯಗಳಲ್ಲೂ ಸಮುಷ್ಟಿ ರೂಪವನ್ನದು ಹೊಂದಿರುವುದು ಕಳೆದ ಮಹಾಯುದ್ಧವು ಎರಡು ಸಣ್ಣ ಜನಾಂಗಗಳೊಳಗೆ ಪ್ರಾರಂಭವಾಗಿ, ಕ್ರಮದಲ್ಲಿ ಸಮಸ್ತರನ್ನೂ ಆವರಿಸಿಕೊಂಡಿತು. ಜನರ ಸಂಪತ್ತಾದಿಗಳು ಯುದ್ಧಕ್ಕಾಗಿ ವಿನಿಯೋಗಿಸಲ್ಪಟ್ಟವು ಯುದ್ಧದ ನಂತರ ಯುರೋಪಿನಲ್ಲಿ ಸ್ಥಾಪಿತವಾದ ಶಾಂತಿಯು ಸಂಪೂರ್ಣವಾದುದು

ಪಾಶ್ಚಾತ್ಯದ ಕೆಲವು ದೇಶದ ಜನರಿಂದು ಜಾನುವಾರುಗಳಂತೆ ಫ್ಯಾಸಿಜ್ಮ್, ಕೊಮ್ಯೂನಿಜ್ಮ್ ಎಂಬ ತತ್ವಾನುಸಾರವಾಗಿ ವರ್ತಿಸುತ್ತಿರುವರ ಅವುಗಳ ತತ್ವಗಳು ಪರಿಶೋಧಾಭಾಸವುಳ್ಳವುಗಳಾದರೂ ಆರ್ಥ ಸ್ವಾತಂತ್ರ್ಯ, ಹಕ್ಕುಗಳನ್ನು ಅರಿಯಲು ಅವರೆಡೂ ಪ್ರಯತ್ನಿಸುತ್ತಿರುವುವು. ಜಾತ್ಯತೀತವಾದದೊಡಗೂಡಿ, ತುಸು ಉಗ್ರಗಾಮಿ ತತ್ವವುಳ್ಳದೇ ನಾಝಿಜ್ಮ್

"ಮಧ್ಯಪ್ರಾಂತ್ಯದ ಅದೊಂದು ವಿಶ್ವವಿದ್ಯಾಲಯದವರಿಗೆ ಅವರು ತಮ್ಮ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣವನ್ನು ಕೊಡಬಹುದೆಂದು ಅನುಮತಿಯು ಸರಕಾರದಿಂದ ದೊರೆತಿರುವದು ಈ ಮಾದರಿಯನ್ನು ಎಲ್ಲಾ ವಿದ್ಯಾಸಂಸ್ಥೆಗಳೂ ಅನುಕರಿಸಬೇಕಾಗಿದೆ ಎಲ್ಲಾ ವಿದ್ಯಾರ್ಥಿಗಳು ಒಂದುಗೂಡಿ ಏಕಕಂಠದಿಂದ, ತಮಗೆ ಸೈನಿಕ ಶಿಕ್ಷಣವು ಕೊಡಲ್ಪಡುವ ವ್ಯವಸ್ಥೆಯಾಗಬೇಕೆಂದು ಚಳವಳಿಸಿದರೆ, ಸರಕಾರಕ್ಕೆ ನಿರಾಕರಿಸಲು ಅವಕಾಶವೇ ದೊರಕಲಿಕ್ಕಿಲ್ಲ, ಈ ಬಂಗಾಲ ಪ್ರಾಂತದಲ್ಲಿ ಜನರ ಅವಶ್ಯಕತೆ, ಆಕಾಂಕ್ಷೆಗಳತ್ತ ಸರಕಾರದವರು ಹೆಚ್ಚಿನ ಗಮನವನ್ನು ಕೊಡುವುದಿಲ್ಲವೆಂಬುದನ್ನು ನಾನು ಬಲ್ಲೆ ಇಂತಹ ಸರಕಾರವು ಸೈನಿಕ ತರಬೇತಿಯನ್ನು ನೀಡಬಹುದೆಂದು ಎಂದೂ ಹೇಳಲಿಕ್ಕಿಲ್ಲ. ನಾನು ತಿಳಿದ ಮಟ್ಟಿಗೆ—ಬಂಗಾಲದ ಮಂತ್ರಿಮಂಡಲವು ಮತ್ತಿನನಷ್ಟು ವ್ಯಕ್ತಪಡಿಸಿಲ್ಲವಾದರೂ ಹೇಡಿತನವನ್ನು ಪ್ರದರ್ಶಿಸಿರುವುದು. ಪ್ರಧಾನಮಾತ್ಯರು ತುಕ್ಕುಧೈರ್ಯಗಳನ್ನು ತೋರಿಸಿದ ಸಮಯವೆಂದರೆ, ಟೌನ್ಹಾಲಿನ ಗೊಂದಲದ ಸಮಯದಲ್ಲಿ ಪರತು ಅದ ಬೆದರಿಕೆಯಲ್ಲಿ ಕೇಳಿಸಿ [illegible] ಇದನ್ನೇ ಅವರು ಧೈರ್ಯವೆನ್ನ[illegible]ವೆಂದರೆ, ತನ್ನ ಸಹೋದ್ಯೋಗಿಗಳ [illegible] ಗವರ್ನರರಿಂದ ಹೊರಗೆ ತಳ್ಳಿಸಲಾಗ ತಾನು 20, 30 ಸಾವಿರ ಜನರನ್ನು [illegible] [illegible] [illegible]

[illegible] ವಿದ್ಯಾರ್ಥಿಗಳು ಸೈನಿಕ ಶಿಕ್ಷಣ [illegible] ಸರ್ಕಾರದ ಅಪ್ಪಣೆಯು ಲಭಿಸದಿದ್ದಲ್ಲಿ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳು ಅದ ಜನರಿಂದ ಪೋಷಿಸಲ್ಪಡುವ ಹೊಸ ಕ್ಲಬ್ ಗಳನ್ನು ಸ್ಥಾಪಿಸಿ ಅವರು ಯುದ್ಧಶಿಕ್ಷಣವನ್ನು ಹೊಂದತಕ್ಕದ್ದು [illegible] ಕತ್ತಲೆಯಲ್ಲಿ [illegible] ನಡೆಯುವ [illegible] ಆದರೂ [illegible], ಜಾತಿವೈಷಮ್ಯದಿಂದ ಕೂಡಿದ ಈ ಪ್ರಪಂಚದಲ್ಲಿ ನಿಶ್ಶಸ್ತ್ರನಾಗಿರುವುದು ಹಿತವಾದುದಲ್ಲ

ಭಾರತ [illegible], ವೈಭವಗಳಿಗಾಗಿ ವಿದ್ಯಾರ್ಥಿಗಳಾದ ನೀವು, ನಮ್ಮಲ್ಲಿ "ಸ್ವದೇಶಪ್ರೇಮವಿಲ್ಲದಿದ್ದಲ್ಲಿ ಕೆಲಸ ಮಾಡುವುದು ಎಂದಿಗೂ ಪ್ರಯೋಜನಕಾರಿಯಾಗದು "ಸ್ವಾತಂತ್ರ್ಯವನ್ನು ಸಂಪಾದಿಸುವೆವು, ಇಲ್ಲದೆ ಸಾಯುವೆವು ಎಂಬುದೇ ನಿಮ್ಮ ಗುರಿಯಾಗಿರಬೇಕು.

★

ಕೇಳಿದಿರಾ?

ಹೈದ್ರಾಬಾದಿನಲ್ಲಿ ಸರಕಾರಿ ಬ್ಯಾಂಕು ಆಗಬೇಕೆಂಬಾಸೆ

ಕರ್ನಾಟಕ ಆಂಧ್ರಪ್ರಾಂತವೊಂದು ಪ್ರತ್ಯೇಕ ನಿರ್ಮಾಣ ಹೊಂದಬೇಕೆನ್ನುವುದಿಲ್ಲ.

ತಮಿಳಲ್ಲ ತೆಲುಗು ಭಾಷೆಯಲ್ಲಿ ಮ್ಯುನಿಸಿಪಲ್ ಮತ್ತು ಬೋರ್ಡು ಸಭೆಗಳು ನಡೆಯಲು ಅಲ್ಲಲ್ಲಿ ಪ್ರಾರಂಭವಾಗಿದೆ.

IV ಫೋರ್ಮು ಅಂತ್ಯಕ್ಕೆ ಸರಕಾರೀ ಪರೀಕ್ಷೆ ಬೇಕು, ಅಲ್ಲಿಂದ ಮುಂದೆ ವಿದ್ಯಾಭ್ಯಾಸ ದ್ವಿಮುಖವಾಗಬೇಕು, ಇಂಟರ್ ಮೀಡಿಯಟ್ ಬೇಡ; ಐದನೇ ಫೋರ್ಮಿನಿಂದ ಮುಂದೆ ಮೂರೇ ವರ್ಷದಲ್ಲಿ ಬಿ ಎ [illegible] ಬೇಕೆಂದು ಮಸಲೀಪಟ್ಟದ ಉಪಾಧ್ಯಾಯರು

ಸೋವಿಯಟ್ ಜಪಾನ್ ಸಂಘರ್ಷಣ

ಜಪಾನಿನಲ್ಲಿ ಕಂಪನ! : : ಮಹಾಯುದ್ಧವೇ?

ಮಂಚೂರಿಯಾ ಎಂಬುದು ಸೋವಿಯಟ್ ಗಡಿನಾಡಿನ ಹತ್ತಿರವಿರುವ ಜಪಾನೀಯರು ಹಿಂದೆ ವಶೀಕರಿಸಿದ ಚೀನಾ ಪ್ರದೇಶ ಅಲ್ಲಿ ಚಾಂಗ್ಕು ಫಂಗ್ ಎಂಬ ನಾಡಿನಲ್ಲಿ ಸೋವಿಯಟ್ಟಿಗೂ ಜಪಾನಿಗೂ ಕಲಹ ಪ್ರಾರಂಭವಾಗಿತ್ತು. ಈ ಕಲಹದ ಪರಿಣಾಮವಾಗಿ ಅಲ್ಲಿರುವ ಸೋವಿಯಟ್ ಸೈನ್ಯ ಮಂಡಳಿಗಳಿಗೂ, ಜಪಾನ್ ಸೈನ್ಯ ಮಂಡಳಿಗಳಿಗೂ ತಿಕ್ಕಾಟವುಂಟಾಗಿ ಕದನ ನಡೆಯುತ್ತದೆ ಸೋವಿಯಟ್ ವಿಮಾನಗಳು ಜಪಾನಿಯರ ಪ್ರದೇಶವಾದ ದಕ್ಷಿಣ ಕೊರಿಯಾದ ಮೇಲೆ ಬಾಂಬು ಗುಂಡುಗಳ ಹಾವಳಿಯನ್ನು ನಡೆಯಿಸಿಬಿಟ್ಟು ಜಪಾನಿಗೆ ಅಪಾರ ನಷ್ಟ ಸಂಭವಿಸಿರುವುದೆಂದು ತಿಳಿದುಬರುತ್ತದೆ ಚಾಂಗ್ಕುಫಂಗದಲ್ಲಿ ಜಪಾನೀಯರು ಬಲವಾದ ವಿರೋಧವನ್ನು ಕೊಟ್ಟಿರುವರಂತೆ

ಈ ತಿಕ್ಕಾಟದ ಪರಿಣಾಮವೇನಾಗಬಹುದು ಇಲ್ಲಿ ಮೊಳೆದ ಈ ರಣದುಂದುಭಿಯು ಸರ್ವಜಗತ್ತಿನಲ್ಲೇ ವ್ಯಾಪಿಸಿಬಿಡಬಹುದೇ? ಸೋವಿಯಟ್ ಸೈನಿಕರು ತಮ್ಮ ಮೇಲೆ ಅತಿಕ್ರಮಣ ನಡೆಯಿಸಿದುದಕ್ಕಾಗಿ ಟೋಕಿಯೋ ಸರಕಾರವು ಮೊಸ್ಕೊ ಸರಕಾರದೊಡನೆ ಪ್ರತಿಕೂಲಿಸಿರುವುದು. ಆದರೆ ಸ್ಟಾಲೀನನ ಮನೋಭಾವವೇನಿರಬಹುದು?

ಚೀನಾದಲ್ಲಿನ ಯುದ್ಧದ ದೆಸೆಯಿಂದ, ಜಪಾನೀಯರ ಸಾಂಪತ್ತಿಕ ಆರ್ಥಿಕ, ಇತ್ಯಾದಿ ಬಹಳವಾಗಿ ಕೆಟ್ಟಿದ್ದು, ಅದರ ಬಲವು ಬಹಳವಾಗಿ ಕುಂದಿದ್ದು ಮಂಚೂರಿಯಾದಲ್ಲಿ ತಮಗೆ ಹಿಂದೆ ಆದ ಅಪಜಯದ ಸೇಡನ್ನು ತೀರಿಸಿಕೊಳ್ಳಲು ಇದೇ ಸಮಯವೆಂದು ತಿಳಿದುಬಿಟ್ಟರೆ ಆಗ ಪೌರ್ವಾತ್ಯದಲ್ಲಿ ಸೋವಿಯಟ್–ಜಪಾನಿನ ಮಹಾಯುದ್ಧವು ಉಂಟಾಗದೆಯಿರದು ಯುದ್ಧ ಸಂಭವಗಳ ಹೆಚ್ಚಿಂದು ಜಪಾನೀಯರ ಸಂಗ್ರಾಮಾಕಾಂಗಳು ಅಡಿರುವರೆಂದೂ ತಿಳಿದುಬರುತ್ತದೆ.

ಇತ್ತ ಕಡೆಯ ಪರಿಸ್ಥಿತಿಯು ಹೀಗಿರಲು, ಜಪಾನ್–ಜರ್ಮನಾ ಒಪ್ಪಂದದ ಕಾರಣದಿಂದಾಗಿ ಹಿಟ್ಲರನು ಜೆಕೊಸ್ಲೊವಾಕಿಯಾ ಕಡೆಯಲ್ಲಿ ಅತಿಕ್ರಮಿಸಿಬಿಟ್ಟರೆ, ಆಗ ರಷ್ಯವನ್ನು ರಕ್ಷಿಸುವ ಒಪ್ಪಂದ ಮಾಡಿಕೊಂಡ ಫ್ರಾನ್ಸು ಸುಮ್ಮನಿರದೆ, ಹಿಟ್ಲರನ ಮೇಲೆ ಹಾಯಲೇಬೇಕಾಗುವುದು ಫ್ರಾನ್ಸಿನೊಡನೆ ಇಂಗ್ಲಾಂಡು ಸಹಕರಿಸಲೇಬೇಕಾಗುವುದು ಎಬಿಸೀನಿಯಾ ಯುದ್ಧದಿಂದ ಬೇಸತ್ತ ಮುಸಲೋನಿಯು ಇದರಲ್ಲಿ ಪ್ರವೇಶ ಮಾಡಲಾರನು. ಆತನು ಸಮಯ ನಿರೀಕ್ಷಿಸುತ್ತಾ ತನ್ನ ಸುತ್ತಲೂ ಎದ್ದ ಕಲಹಗಳ ಪರಿಣಾಮಗಳಿಗೆ ಸರಿಯಾಗಿ ವರ್ತಿಸಬಹುದು.

ಸ್ಪೇಯಿನಿನಲ್ಲಿ ಯುದ್ಧವು ಸಾಗುತ್ತಿದೆ ನ್ಯಾಶನಲ್ ಸರಕಾರವು ಸೋತಿಲ್ಲ ಫ್ರೆಂಕೊನ ಉತ್ಸಾಹವು ಕಡಿಮೆಯಾಗಲಿಲ್ಲ.

ಚೀನಾದಲ್ಲಿ—ಮಹತ್ತ್ವದ ವಿಜಯಗಳಾವವು ಜಪಾನಿಗೆ ದೊರಕಲಿಲ್ಲ ಚೀನಿಯರ ಗುರಿಲ್ಲಾ ಯುದ್ಧಕ್ರಮವು ಬಹಳ ಯಶಸ್ವಿಯಾಗಿ ನಡೆಯುತ್ತಿದೆ

★

ಪ್ರದುಕೋಟೆಯ ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡ ಕೈದಿಯ ಗ್ಗೆ ಪತ್ತೆಯಾದ ನಾಯಿ ನುಣಿಸಿಯೋ ಪತ್ತೆ ಮಾಡಿತ

ಕಂಭತ್ತೋಂಬದ ಮ್ಯುನಿಸಿಪಲ್ ಉಪಾಧ್ಯಾಯರಿಲ್ಲ ಹಿಂದೀ ಕಲಿಯಬೇಕಾದಾಗಿದೆ.

ಪ್ಯಾಲೆಸ್ತೀನಿನಲ್ಲಿ 20000 ಜನರು ಸೇರಿ, ಸರ್ ಎ ಟಿ [illegible] ಅಧ್ಯಕ್ಷತೆಯಲ್ಲಿ, ಹಿಂದೀ ವಿರುದ್ಧ ಘೋರ ಯುದ್ಧ ಪ್ರಾರಂಭಿಸಲು ನಿರ್ಧಾರ ಮಾಡಿದರು ಕನ್ಯಾಕುಮಾರಿಯಿಂದ ಭೂ

ಇಲ್ಲಿನ ಫ್ರೆಂಚ್ ವಸಾಹತಗಳ ಗವರ್ನರರ ಕೆಲಸದವರ ವರ್ಗವಾಗಿದೆ.

ಜುಲಾಯಿ ಅಂತ್ಯದ ದಿನದ ವರೆಗೆ—ತಾ 26ರವರ ರಂಗೂನ್ ದಂಗೆ, ಗಲಭೆಯಲ್ಲಿ 67 ಮಂದಿ ಸತ್ತರು, 420 ಮಂದಿಗೆ ಗಾಯವಾಗಿದೆ 10 ಲಕ್ಷ ರೂಪಾಯಿಗಳ ಸೊತ್ತು ನಷ್ಟವಾಗಿದೆ.

ಮಂಚೂಕೂವಿನಲ್ಲಿ ಜಪಾನು ಸೇನೆಗೂ ರಷ್ಯದ ಸೇನೆಗೂ ಆರು ತಾಸಿನ ಕಾಳಗವಾಗಿದೆ! ಕೊರಿಯದಲ್ಲಿಯೂ ಮಂಚುಕೂವದಲ್ಲಿ ಚೀನದ ಕೋಮ್ಯುನಿಷ್ಟರ ಪ್ರೇರಣೆಯಿಂದ ಜಪಾನೀಯರನ್ನು ಹೊರಗೋಡಿಸುತ್ತಾರೆ ಅಗೋಸ್ತು ಗರಲ್ಲಿ ಎಂಟು ಸಲ ಸೋವಿಯಟ್ ಸೈನಿಕರು ಜಪಾನೀಯರನ್ನು ಕಾದಾಡಿದರ.

ಸಿಂಧದ ಮಂತ್ರಿ ಮಂಡಲವು ಇನ್ನಿಷ್ಟು ದಿನ ಬಾಳುವಂತಾಗಿದೆ.

ಜಮೇಯಿಕದಲ್ಲಿ ರೈಲು ಮುರಿದು 30 ಜನ ಸತ್ತರು, 80ಕ್ಕೆ ಗಾಯವಾಗಿದೆ.

ಉಷ್ಣತೆಯ ಸೆಕಡಾ 76ರಂತೆ ಯುನೈಟೆಡ್ ಸ್ಟೇಟ್ಸಿನಲ್ಲಿ ತೆರಿಗೆಯಾಗಿದೆ.

ಮಗನ ಅತೀ ನೀಚದ ನಡತೆಗೆ ತಂದೆಯಿಂದ ಅವನಿಗೆ ಕೋರ್ಟಿನಲ್ಲಿ ಬೆಂಗಳೂರು ಜಡ್ಜರು ಛಡೀ ಹೊಡಿಸಿದರು

ಸಿಲೋನಿನಲ್ಲಿ 19000 ಚದರ ಮೈಲಿನ ವಿಸ್ತೀರ್ಣದಲ್ಲಿ ಪಿಲಾಯುತಿಯ ತ ಹೊರಗಿರಿಸಿದ ಯೆಹೂದ್ಯರು ಬಂದು ನೆಲೆಯಾಗತಕ್ಕ ಸೂಚನೆಗಳಾಗಿವೆ.

ಡಾ। ಖಾರೆಯವರ ರಾಜಕೀಯ ಕೊಲೆಗೆ ಗಾಂಧೀಜಿಯವರು ಕಾರಣವೆಂದು ನಾಗಪೂರಿನಲ್ಲೊಂದು ಸಭೆಯ ನಿರ್ಣಯ.

ಸ್ವದೇಶಾಭಿಮಾನಿ

"ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು"

ಭಾರತೀಯರ ಮನಸ್ಸಿನ ಮೇಲೆ ವಿಶೇಷ ವಿಚಾರಗಳನ್ನು ಊರಿ, ಭಾರತೀಯರ ಆಶಾ ಭಾವನೆಗಳಿಗೆ ನೂತನವಾದ ಗೊತ್ತುಗುರಿಗಳನ್ನು ನಿರ್ದೇಶಿಸಿ, ಮುಂದಣ ಸಾಧನೆಗಳನ್ನು ಪ್ರಚುರಗೊಳಿಸಿ, ಬಹಳವಾಗಿ ಕ್ಲೇಶಗಳನ್ನು ಸಹಿಸಿಕೊಂಡು, 'ಸ್ವರಾಜ್ಯವು ಒಂದು ಹಳ್ಳಿ ಕಥೆಯಾಗಿ ಮನೆಮಾತಾಗುವಂತೆ ಪ್ರಯತ್ನಿಸಿದ ಸಿನ್ನೆಯ ಲಾಲ—ಬಾಲ—ಪಾಲ ತ್ರಿಪುರುಷರೊಳಗೆ, ಶ್ರೀಮಾನ್ ಬಾಲಗಂಗಾಧರತಿಲಕರ ಜಯಂತಿಯು ಇದೇ ವಾರ ಕೃತಜ್ಞರಾಗಿರುವ ದೇಶವಾಸಿಗಳಿಂದ ವಿಜೃಂಭಣೆಯಿಲ್ಲದ ಆದರೂ ಮನ್ನಣೆಯುಳ್ಳ ಆಚರಣೆಯನ್ನು ಪಡೆಯಿತು. ಪಂಜಾಬ, ಮಹಾರಾಷ್ಟ್ರ ಬಂಗಾಳಗಳಿಂದ ಈ ಮೂರ್ತಿಗಳು ಅವತರಿಸಿದ್ದರೂ, ಪ್ರಾಂತೀಯ ಭಾವನೆ ಮೀರಿ ಅವರು ಜೀವಿಸಿದ್ದುದರಿಂದ ಯಾರೇ ಪ್ರಾಂತ್ಯವೂ ಭಿನ್ನವಾಗಿರದೆ ಇವರನ್ನು ವಂದಿಸುವುದೂ ಸಹಜವೇ

ಸ್ವರಾಜ್ಯದ ಇಂದಿನ ಪ್ರಯತ್ನಗಳಿಗೆ, ಪ್ರೋತ್ಸಾಹದೊರೆತ ಹಟ್ಟಿನ ಸಂಭವಗಳಲ್ಲಿ, ಅಸಹಕಾರ ಚಳವಳಿಯೂ ಇದೇ ವಾರದಲ್ಲಿ ಪ್ರಾರಂಭಿಸಿದ್ದುದೂ, ಗಾಂಧಿಜೀಯವರ ಮಹಾತ್ಮೆಯು ಪ್ರಕಟವಾಗಲು ಅನುಕೂಲತೆಯುಂಟಾದುದೂ ಈ ಸಪ್ತಾಹದಲ್ಲೇ ಬಂಗಾಳದ ವಿಭಜನೆಯ ಚಳವಳದ ಮೂಲ ಹರತಾಳವೂ ಈ ವಾರದಲ್ಲೇ ಮೊದಲಾದುದು ಕೊನೆಯ ಎರಡು ಚಳವಳಗಳಲ್ಲಿ ಜಯಶೀಲರಾದ ಭಾರತೀಯರು, ಈಗ ಮೊದಲನೆಯ ಚಳವಳದಲ್ಲಿ ಇನ್ನೂ ಸಹಭಾಗಿಗಳು ಸ್ವರಾಜ್ಯಸಾಧನೆಗೆಂದು ತಿಲಕರ ಹೆಸರಲ್ಲಿ ಕೂಡಿಸಲಾದ ನಿಧಿಗೆ ತಿಲಕ ಸ್ವರಾಜ್ಯ ಫಂಡು ಎಂಬ ಹೆಸರನ್ನು ಗಾಂಧಿಜಿಯವರು ಸೂಚಿಸಿಯೆ, ತಿಲಕರೆ,—ಲೋಕಮಾನ್ಯರ—ಉಪಕಾರದ ಸ್ಮಾರಕವನ್ನು ಮಾಡಿರುವರು.

ತನ್ನಲ್ಲಿದ್ದ ಸಮಸ್ತವನ್ನೂ ದೇಶೋದ್ಧಾರದ ಸೇವೆಗೆ ಒಪ್ಪಿಸಿದ ತಿಲಕರಿಗೆ, ಸ್ವರಾಜ್ಯದ ಮುಷ್ಟಿ ಎನ್ನುವುದು ಅಸಂಗತವಾಗಿಲ್ಲ. ಆಗ 'ಸ್ವರಾಜ್ಯ' ಹೆಸರನ್ನು ಉಚ್ಚರಿಸಲು ಧೈರ್ಯವನ್ನು ತಳೆದು, ಕಾರಾವಾಸದ ಭೀಕರ ಸಂಕಷ್ಟಗಳನ್ನು ಅಂಗೀಕರಿಸಿದ ದು ತಿಲಕರ ವೀರಗುಣ 'ವಾತ್ಸಲ್ಯವಿ—ವಿರುವಿಕೆಯೇ ದ್ವೇಷ' ಎಂಬ ವಿಶೇಷ ತತ್ವವನ್ನು ಜಧರಿಸಿ, ತಿಲಕರ ಭಾಷಣಗಳು ಸರಕಾರಕ್ಕೆ ವಿರುದ್ಧ ಬೋಧಿಸಿದುವೆಂದು ಜಸ್ಟಿಸ್ ದಾವರರು ಅವರನ್ನು ಕಾರಾವಾಸಕ್ಕೊಪ್ಪಿಸಿದಾಗ —'ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು' ಎಂದು ವಿಚಾರಣೆಯಲ್ಲಿ ತಿಲಿಸಿ, 'ನನ್ನ ಕಾರಾವಾಸದಿಂದ ದೇಶಹಿತವು ಸುಧಿತವಾಗುವುದಾದರೆ, ಅದೇ ನನಗೆ ಮೆಚ್ಚಿನ ಹಿತವು' ಎಂದು ತಿಲಕರು ಕಾರಾವಾಸಕ್ಕ ತಲೆಯೊಡ್ಡಿ, 'ಗೀತಾರಹಸ್ಯ'ವೆಂಬ ಕರ್ಮಯೋಗತತ್ವವನ್ನೇ ನಿಘಂಟುವಾಗಿ ರಚಿಸಿ, ಧಾರ್ಮಿಕಭಿತ್ತಿಯಮೇಲೆ ಸ್ವರಾಜ್ಯವನ್ನು ಸ್ಥಾಪಿಸಬೇಕೆಂದು ತೋರಿಸಿದರು.

ಅವರ ಆ ವಾಕ್ಯವೇ ಗಾಂಧಿಜಿ, ನೆಹರು, ಅಜಾದರವರಿಗೆಲ್ಲ ಅವರವರ ಭಾಷಣಗಳಿಗೂ ಘೀರಿಕಾಶ್ಲೋಕವಾಗಿಯೇ ಎಷ್ಟೋ ಸಲ ಒದಗಿಯೇ ಇರುತ್ತದೆಂಬುದನ್ನು ನಾವು ಮರೆನಂತಿಲ್ಲ.

ಲೋಕಮಾನ್ಯರು ಹಿಂದೂ—ಮುಸ್ಲಿಮ ಸ್ನೇಹದ ಮೂಲಸೂಚಕರು. 1916ರಲ್ಲಿ ಸೇರಿದ್ದ ಲಕ್ನೋ ಅಧಿವೇಶನದಲ್ಲಿ, ರಾಷ್ಟ್ರಸಭೆಯ ಮುಂದೆ ಪ್ರತಿಯೊಬ್ಬ ಪ್ರತಿನಿಧಿಯೂ ಶಿಷ್ಟ ಸಮಾಜದ ಸಲ್ಲಿವಾಗಿಯೂ ಸುದಿಯುತ್ತಿದ್ದುದನ್ನು ಕಂಡು, ಲೋಕಮಾನ್ಯರು ಹೊಸ ತತ್ವವನ್ನು ಸಾಂದರೆನ್ನಬೇಕು. ಶ್ರೀ ಜಿನ್ನಾರವರು ಆಗ ಸ್ವಸಮಾಜದ ಹೆಸರಿನಿಂದ ಮೇಲೆ ಬರಲೆತ್ನಿಸಲು ಕಲಿತಿರಲಿಲ್ಲ. ವಿಷಯನಿರ್ಣಯಕ ಸಭೆಗಳಲ್ಲಿ—ನ್ಯಾಯಸಭೆಗಳಲ್ಲಿ ನೂರರಲ್ಲಿ ನೂರು ಸ್ಥಾನಗಳನ್ನು ಮುಸ್ಲಿಮರಿಗೆ ಬಿಡಲು ನಾನು ಒಪ್ಪಿಕೊಳ್ಳುವೆನು—ಎಂದರವರು! ಆಗಲೆ ಮುಸ್ಲಿಮರು ಚಕಿತರಾದರು.



ದಿವಂಗತ ಬಾಲಗಂಗಾಧರ ತಿಲಕರು.

ಇದರಿಂದಾಗಲೇ, ಮುಸ್ಲಿಮರೂ ಹಿಂದೂಗಳೂ ಒಂದಾಗಿ ಮುಂದರಿಸಲು ಅನುಕೂಲವಾಗುವಂತಹ ಸೂತ್ರವೊಂದು ಇಲ್ಲಿ ನಿಶ್ಚಿತವಾಯಿತು ಈ ತತ್ವವನ್ನೆ ಮೂಲಾಧಾರವಾಗಿಟ್ಟುಕೊಂಡು ಇನ್ನೂ ಮುಂದರಿಸಿರುವರು

ತಿಲಕನು ಸಂದುಹೋದನು ಆತನ ಆತ್ಮವು ಮಾತ್ರ ಇನ್ನೂ ಭಾರತವಾಸಿಯರ ಪ್ರಯತ್ನಗಳಲ್ಲಿ ಜೀವನದಲ್ಲಿ ಸಾಹಸದಲ್ಲಿ ಸಹಕಾರಿಯಾಗಿದೆ ಎಂದರೆ, ಭಾರತೀಯರು ತಿಲಕರಿಗೆ ಚಿರಕೃತಜ್ಞರೆಂದು ಬೇರೆ ಹೇಳಬೇಕೆ?

'ದೊಡ್ಡಣ್ಣನ ದೊಡ್ಡ ಕೆಲಸ.

ದೊಡ್ಡಣ್ಣ ಶೌಕತಾಲಿಯವರು ಗಡಿನಾಡಿನಲ್ಲಿ ಪ್ರವಾಸಮಾಡುತ್ತ ಕಾಂಗ್ರೆಸ್ ವಿರೋಧ ಪ್ರಚಾರವನ್ನು ಮಾಡುತ್ತಿದ್ದಾರೆ. ಪಠಾಣರೆಲ್ಲರೂ ಅವರನ್ನು ಬಹಿಷ್ಕರಿಸಿದ್ದರೂ ತಾವಿನ್ನು ಆಶಾಪೂರ್ಣನಾಗಿರುವೆನೆಂದು ಅವರು ಹೇಳುತ್ತಿರುವರು

ಗಡಿನಾಡಿನಲ್ಲಿ ಅವರು ಕೊಟ್ಟ ಭಾಷಣಗಳ ಸಾರಾಂಶವೇನೆಂದರೆ ಕಾಂಗ್ರೆಸ ಅದೊಂದು ಅನಗತ್ಯ ಸಂಸ್ಥೆ ಪತಿಯೊಂದು ಕೋಮಿನವರು ಸಮಾನಾಧಿಕಾರಕ್ಕಾಗಿ ಪ್ರಯತ್ನಪಟ್ಟು, ಅದನ್ನು ಹೊಂದಿದನಂತರ ಆಯಾ ಕೋಮುಗಳು ಪರಸ್ಪರ ಒಡಂಬಡಿಕೆಯನ್ನು ನಡೆಸಿದರೆ ಮಾತ್ರ ಎಲ್ಲಾ ಜಾತಿಯವರಲ್ಲಿ ಸ್ನೇಹವುಂಟಾದೀತು ಎಲ್ಲ ಜಾತಿಗಳ ಪರವಾಗಿ ಮಾತನಾಡಲು ಯಾವ ರಾಜಕೀಯ ಸಂಸ್ಥೆಗೂ ಹಕ್ಕಿಲ್ಲ

ಗಡಿನಾಡಿನಲ್ಲಿ ವಾರ್ಧಾ ಸರಕಾರವನ್ನು ಕಿತ್ತುಹಾಕಲು ನಾನು ಬಂದಿರುವೆನು. ಮುಸಲ್ಮಾನರೇ ಹೆಚ್ಚಾಗಿರುವ ಈ ಪ್ರಾಂತ್ಯದಲ್ಲಿ ಮಂತ್ರಿಮಂಡಲವು ವಾರ್ಧದಿಂದ ಹೊರಟ ಆಪ್ಪಣೆಗಳಿಗೆ ಶಿರಬಾಗುವುದು ತೀರ ಶೋಚನೀಯವಾಗಿರುವುದು'

ಈ ರೀತಿಯಲ್ಲಿ ದೊಡ್ಡಣ್ಣನವರು ಗಡಿನಾಡಿನಲ್ಲಿ ಅಪಪ್ರಚಾರವನ್ನು ನಡೆಸುತ್ತಿರುವರು ಗಡಿನಾಡಿನಲ್ಲಿ ವಾರ್ಧಾ ಸರಕಾರವನ್ನು ನಿರ್ಮೂಲಮಾಡುವುದೇ ತನ್ನ ಪ್ರವಾಸದ ಮುಖ್ಯೋದ್ದೇಶವೆಂದು ಅವರು ಸಾರುತ್ತಿರುವರಷ್ಟೆ! ಪರಂತು ನಾನು ಮಹಾ ಪರಾಕ್ರಮಶಾಲಿಯೆಂಬ ಹೆಮ್ಮೆಯಿಂದ ಹನುಮಂತನ ಬಾಲವನ್ನು ಎತ್ತಲು ಪ್ರಯತ್ನಿಸಿ, ಅಪಮಾನಕ್ಕೊಳಗಾದ ಭೀಮಸೇನನ ಕಥೆಯನ್ನು ದೊಡ್ಡಣ್ಣನಿಗೆ ಯಾರಾದರೂ ಹೇಳಿಕೊಡುವುದುತ್ತಮವಲ್ಲವೆ?

ಉಚ್ಚಶಿಕ್ಷಣದ ಗತಿ: ಸ್ಪಷ್ಟ ವಿಚಾರ. ಮಹಾತ್ಮಾಜಿಯರ ವಿವರಣೆ: ಸೂಚನೆಗಳು.

ವಿದ್ಯಾಭ್ಯಾಸದಲ್ಲಿ ಶಿಕ್ಷಣದ ಭಾಷೆ ಮತ್ತು ವ್ಯವಹಾರ ಬೋಧನೆಯ ವಾಸ್ತವಿಕತೆ—ಇವೆರಡು ವಿಚಾರಗಳಲ್ಲಿ, ಮಹಾತ್ಮಾಜಿಯವರ ಕಠಿಣ ವಿಮರ್ಶಕರೂ ಅನುಮೋದನೆ ಮಾಡುತ್ತಿರುವರು. ಆದರೆ, ವಿದ್ಯಾಭ್ಯಾಸದ ನಿರ್ದಿಷ್ಟ ಉಪಯುಕ್ತತೆ ಎಂಬುದಕ್ಕೆ ಮಾತ್ರ ವಿಸ್ತಾರವಾದ ಅರ್ಥ ಕೊಡದೆ, ಮಹಾತ್ಮಾಜಿಯವರ ಅಭಿಪ್ರಾಯವು ಸ್ಪಷ್ಟವಾಗದೆಂದು. ಅವರು ಮತ್ತೊ ಹೊಸ ಧೋರಣೆಯನ್ನು ಕುರಿತು ವಿವರಿಸಿರುವರು.

"ಬಡತನದಿಂದ ಕವಿದು ಹೋಗಿರುವ ಅಜ್ಞಾನಿ ಕೋಟಿಯೇ ಇರುವ ದೇಶದಂತೆ, ಭಾರತವರ್ಷವನ್ನು ನಾನು ಬಣ್ಣಿಸಿ ಬರೆದಿಲ್ಲ. ಭಾರತವರ್ಷದ ಆತ್ಮಕ್ಕೆ ಸರಿಯಾಗಿ ಅದು ದಿನೇ ದಿನೇ ಅಭ್ಯುದಯ ಹೊಂದುತ್ತಿರುವುದಾಗಿ ಎಣಿಸಿರುವೆನು, ಭಾವಿಸಿ ಹಾಗೆಯೇ ನಂಬಿರುವೆನು ಪಾಶ್ಚಾತ್ಯರ ಮರಣೋನ್ಮುಖವಾಗಿರುವ ಸುಧಾರಣೆಯ ಮತ್ತೊಂದು ನಕಲನ್ನೆ ಭಾರತವರ್ಷವು ರೂಪಿಸಿಕೊಳ್ಳಬಹುದೆಂದೂ ನಾನು ಭಾವಿಸುವುದಿಲ್ಲ

"ನನ್ನ 'ಕನಸು' ನಿಜವಾಗುವುದಾದಲ್ಲಿ ನಮ್ಮ ಏಳು ಲಕ್ಷ ಗ್ರಾಮಗಳಲ್ಲಿನ ಪ್ರತಿಯೊಂದು ಗ್ರಾಮವು ಸಜೀವವಾಗಿರುವ ಪ್ರಜಾಸತ್ತಾತ್ಮಕ ರಾಜ್ಯದಂತಾಗಿ, ಅದರಲ್ಲಿ ನಿರಕ್ಷರರೇ ಇರದಂತಾಧೀತ ಕೆಲಸ ದೊರೆಯದ ಜನರು ಇರಲಾರರು, ಪ್ರತಿಯೊಬ್ಬನಿಗೂ ಯೋಗ್ಯ ಉದ್ಯೋಗವಿದ್ದೇ ಇರುವುದು, ಪ್ರತಿಯೊಬ್ಬನಿಗೂ ಚೇತನಕರವಾದ ಆಹಾರವೂ, ಉತ್ತಮ ಗಾಳಿ ಬೆಳಕುಗಳುಳ್ಳ ಮನೆಗಳೂ ದೊರೆತಾವು, ಪ್ರತಿಯೊಬ್ಬನಿಗೆ ಬೇಕಾಗುವಷ್ಟು ಖಾದಿ ದೊರೆದೀತು ಆರೋಗ್ಯವನ್ನೂ ಕ್ಷೇಮವನ್ನೂ ಪರಿಪಾಲನೆ ಮಾಡಲು ಪ್ರತಿಯೊಬ್ಬನೂ ತಿಳಿದುಕೊಳ್ಳುತ್ತಲಿರುವನು ಹೀಗಾದಲ್ಲಿ ಅವರ ಅಗತ್ಯಗಳು ಇನ್ನಷ್ಟು ಹೆಚ್ಚುತ್ತ ಬಂದಾವು, ಇಲ್ಲದಿದ್ದಲ್ಲಿ ಅವರ ... ಗಳ ... ಆದಾರ

'ಇದೇ ಕಾರಣದಿಂದ ... ಎಲ್ಲ ತೆರದ ವಿದ್ಯಾಭ್ಯಾಸವನ್ನೂ ಒದಗಿಸಿಕೊಡಬೇಕಾಗುವುದು ... ರಾಜ್ಯದಲ್ಲಿ ಜನರು ... ಇರಬೇಕೆಂಬುದು ನಿಜವಾದಲ್ಲಿ ಸರಕಾರವು ಇದಕ್ಕೆ ಜವಾಬ್ದಾರಿಯನ್ನು ಹೊರಬೇಕಲ್ಲವೆ?

ಆಗ ಸರಕಾರವು, ಈಗಿನಂತೆ ಇಂಗ್ಲಿಷನ್ನು ... ಬರೆಯಲು ... ಸಾಧಿಸುವುದಕ್ಕೆಂದು ಒಣಪಾರದ ಫಲವಾಗಿ ಬಣಗಿದ ಮೆದುಳಿನ ಬಿ. ಎ., ಎಮ್. ಎ.,ಗಳ ಸೈನ್ಯವು ಪೀಡಿಸುವುದು ಇವರಲ್ಲಿ ಅಧಿಕ ಮಂದಿಗೆ ಕೆಲಸವು ಇಲ್ಲ. ಉದ್ಯೋಗವೂ ಇಲ್ಲ. ಉದ್ಯೋಗವಿದ್ದರೂ ಅದ ಸಾಮಾನ್ಯವಾಗಿ ಹನ್ನೆರಡು ವರ್ಷ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಹೊಂದ ವಾಗ ಕಲಿತ ಜ್ಞಾನದ ತಿಲಾಂಶವನ್ನೂ ಉಪಯೋಗಿಸಲಾರದ ಗುಮಾಸ್ತೆಯ ಉದ್ಯೋಗವಾದೀತು

"ಈಗಿನ ಉಚ್ಚ ವಿದ್ಯಾಭ್ಯಾಸವೂ, ಅದರಂತೆ ಪ್ರಾಥಮಿಕ ಮಾಧ್ಯಮಿಕ ಮತ್ತು ವಿದ್ಯಾಭ್ಯಾಸ ಕ್ರಮವೂ ವ್ಯವಹಾರಿ ಜೀವನಕ್ಕೆ ಸಂಬಂಧವೇ ಇಲ್ಲದಂತಿರುವ ಕಾರಣ, ಇದರಿಂದ ದೇಶಕ್ಕೆ ಯಾವ ಲಾಭವೂ ಉಪಯೋಗವೂ ಇಲ್ಲವೆಂದು ನನ್ನ ವಿಮರ್ಶಕರೂ ಒಪ್ಪಿಕೊಳ್ಳುವಂತಿದೆ ವ್ಯಾವಹಾರಿಕವಾಗಿದ್ದು, ಸಂಪೂರ್ಣವಾಗಿಯೂ ದೇಶ ಭಾಷೆಯಲ್ಲೇ ವಿದ್ಯಾಭ್ಯಾಸವು ನಡೆವಂತಾದರೆ ಈಗಣ ವಿದ್ಯಾಭ್ಯಾಸ ಕ್ರಮವನ್ನಾದರೂ ನಾನು ವಿರೋಧಿಸುವಂತಿಲ್ಲ

"ವಾಸ್ತವಿಕತೆಯ ಮೇಲೆ ಆಧರಿಸುವುದೆಂದರೆ ರಾಷ್ಟ್ರೀಯತೆಯ ಮೇಲೆ ಆಧರಿಸಿದಂತಾಗುವ ಕಾರಣವೇ ಸರಕಾರವೇ ಅದರ ಖರ್ಚನ್ನು ಹೊರಬೇಕಾಗಿದೆ. ಆಗಲಾದರೂ, ಎಷ್ಟೋ ಸಂಸ್ಥೆಗಳು ಖಾಸಗಿ ಜನಗಳಿಂದ ಅವರ ಇಚ್ಛಾಪೂರ್ವಕವಾಗಿಯೇ ನಡೆವುವೆಂದು ನಾವು ತಿಳಿಯಬಹುದು. ಇವುಗಳಿಂದ ದೇಶಕ್ಕೆ ಉಪಯೋಗವಿರಬಹುದು, ಇಲ್ಲದಿರಬಹುದು. ಈಗ ವಿದ್ಯಾಭ್ಯಾಸದ ಹೆಸರಲ್ಲಿ ನಡೆವ ಹೆಚ್ಚಿನ ಉದ್ಯಮವು ಈ ತರಗತಿಗೆ ಸೇರಿದ್ದುದಾಗಿದೆ. ಅಂತಹದರ ಖರ್ಚನ್ನು ನಾನಾದರೆ ಕಂದಾಯದಿಂದ ಕೊಡುತ್ತಿರಲೇ ಇಲ್ಲ.

"ವಿಮರ್ಶಕರು ವಿದ್ಯಾಭ್ಯಾಸವು ವಾಸ್ತವಿಕವಾದುದಿರಬೇಕೆಂದೂ ದೇಶ ಭಾಷೆಗಳಲ್ಲಾಗಬೇಕೆಂದೂ ನಾನು ಸೂಚಿಸಿರುವುದನ್ನು ಒಪ್ಪಿಕೊಂಡ ಮಾತ್ರಕ್ಕೆ ನನಗೆ ವಿರಾಮ ತೋರುತ್ತಿಲ್ಲ ಇದು ವರೆಗೆ ಬಹುಕಾಲದಿಂದಲೂ ಇರುತ್ತಿರುವ ಕಾರಣ ಕಾಂಗ್ರೆಸಿನವರು ಅಸಹನೆಯನ್ನು ತೋರಿಸಬೇಕಾಗಿದೆ.

'ವಿದ್ಯಾಭ್ಯಾಸದ ಭಾಷೆಯನ್ನು ಕೂಡಲೆ ಬದಲಾಯಿಸಿದರೆ, —ನಿಧಾನವಾಗಿ ಅಲ್ಲ!— ಅತಿ ತ್ವರೆಯಾಗಿ ಅತ್ಯವಶ್ಯಕವಾದ ಪಾಠಪುಸ್ತಕಗಳೂ ಬೋಧಿಸುವ ಉಪಾಧ್ಯಾಯರೂ ಸಿದ್ಧವಾಗಿ, ಈಗ ತೋರುವ ಪ್ರಮಾದವು ಮತ್ತೆ ಮಾಯವಾಗುವಂತಾದೀತು

"ಎಂದರೆ, ನಾವೀಗಲೇ ಸಂಪೂರ್ಣೋತ್ಸಾಹದಿಂದ ಮುಂದರಿದರೆ, ಒಂದೇ ವರ್ಷದೊಳಗಾಗಿ ನಮ್ಮ ಅನುಭವಕ್ಕೇನು ಬಂದೀತು? ಇಡೀ ಜನಾಂಗದ ಸಮಯ ಮತ್ತು ಶಕ್ತಿಯ ವಿನಿಯೋಗದಿಂದ (ಸಂಸ್ಕೃತಿಯ ಪ್ರಾಮುಖ್ಯ ವಿಚಾರಗಳನ್ನು ಕಲಿಕುಕೊಳ್ಳಲು) ಶೋಚನೀಯವಾಗಿರುವ ರೀತಿಯಲ್ಲಿ ನಾವೂ ಕಾರಣರಾಗಿರಬಾರದಿತ್ತೆಂದು ತಿಳಿದೇವು ಸರಕಾರದ ಆಫೀಸುಗಳಲ್ಲೂ ನ್ಯಾಯಸ್ಥಾನಗಳಲ್ಲೂ ಪ್ರಾಂತಿಕ ಭಾಷೆಗಳನ್ನು ಕೂಡಲೇ ಉಪಯೋಗಕ್ಕೆ ತರಬೇಕಾಗಿದೆ ಎಂಬುದು ನಾವು ಕೃತಾರ್ಥರಾಗವುದಕ್ಕೆ ಮೊಲ ಶರ್ತವಾಗಿದೆ

"ಈ ಸುಧಾರಣೆಯುಂಟಾಗ ಬೇಕೆಂಬುದು ಅಗತ್ಯವೆನ್ನುವುದರಲಿ ನನಗೆ ವಿಶ್ವಾಸವಿದೆಯಾದರೆ, ಖಂಡಿತವಾಗಿ ... ಅತ್ಯಲ್ಪ ಅವಧಿಯೊಳಗೆ ನಾವದನ್ನ ಸಾಧಿಸಿಕೊಳ್ಳಬಹುದು.

ನೋಟೀಸು

ಮದ್ರಾಸು
ಜುಡಿಕೇಚರ್ ಹೈಕೋರ್ಟಿನಲ್ಲಿ
... ನಬ 15° 1938
1913ನೆ ಇಸ್ವಿ ಇಂಡಿಯನ್
ಕಂಪೆನೀಸ್ ಎಕ್ಟ್
ಮತ್ತು
ತ್ರಿವಾಂಕೂರು ನೆಶನಲ್ ಮತ್ತು
ಕ್ವಿಲೋನ್ ಬೇಂಕ್, ಲಿಮಿಟೆಡ್

ಈ ಬೇಂಕಿನ ಸಾಲಗಾರರಲೊಬ್ಬ ಎಸ್ ಬರಕತ್ ಅಲ್ಲಿ ಎಂಬವರು ~~1938ನೆ ಜೂನ್~~ ತಾ 23ರಲ್ಲಿ ಬಹುಮಾನ ಪಟ್ಟ ಮದ್ರಾಸ್ ಹೈಕೋರ್ಟಿನಲ್ಲಿ ಸದರಿ ಬೇಂಕನ್ನು ಮುಕ್ತಾಯಗೊಳಿಸಬೇಕೆಂದು ಮಾಡಿದ ಅರ್ಜಿಯ ವಿಚಾರಣೆಯ 1938ನೆ ಇಸ್ವಿ ಅಗೋಸ್ತು ತಾ 19ಕ್ಕೆ ಇಡಬೇಕೆಂದು ನಮೂದಿಸಲಾಗಿದೆ ಈ ಬೇಂಕಿಗೆ ಸಾಲಗಾರರಿರುವಲ್ಲಿ ಯಾರಾದರೂ, ಅಥವಾ ಸದ್ರಿ ಬೇಂಕಿನ ಲೇವಾದೇವಿ ಮಾಡಿದವನಾರಾದರೂ, ಮೇಲೆ ಸೂಚಿಸಿದ ಅರ್ಜಿನ ಅನುಗುಣವಾಗಿ ಸದ್ರಿ ಬೇಂಕನ್ನು ಮುಕ್ತಾಯಗೊಳಿಸಬಾರದಾಗಿ ಎದುರಿಸಿ ವ್ಯವಹರಿಸುವವರಿದ್ದಲ್ಲಿ, ಖುದ್ದಾಗಿಯಾಗಲಿ ಕೌನ್ಸೆಲ್ ಅಥವಾ ಎಡ್ವೊಕೇಟ್ ಮೂಲಕವಾಗಲಿ ವಿಚಾರಣೆಯ ಕಾಲದಲ್ಲಿ ಹಾಜರಾಗ ತಕ್ಕದು ಹೀಗೆ ಆಕ್ಷೇಪಿಸುವ ಸಾಲಗಾರ ಅಥವಾ ಇತರ ಆ ಬೇಂಕಿನ ವ್ಯವಹಾರವುಳ್ಳವರಿಗೆ ಮೇಲ್ಕಂಡ ಅರ್ಜಿಯ ನಕಲನ್ನು ನ್ಯಾಯ ಪ್ರಕಾರ ವಿಧಿಸುವ ಮೌಲ್ಯ ತೆತ್ತಲ್ಲಿ ಪಡೆಯಬಹುದಾಗಿದೆ

17, ಆರ್ಮೇನಿಯನ್ ಸ್ಟ್ರೀಟ್ ಮದ್ರಾಸು.	ಜೆ. ವಿ. ಪಿಠ್ರಿ ಸಿ ಜೆಲ್ ಪ್ರೊವಿಜನಲ್ ಅಫಿಸಿಯಲ್ ಲಿಕ್ವಿಡೇಟರರು

ಜನಾನದ ರಹಸ್ಯಗಳು

ಆಫ್ರಿಕಾ, ಅರೇಬಿಯಾ, ಮಧ್ಯ ಆಸ್ಯಾ, ಹಿಂದೂದೇಶ, — ಈ ದೇಶಗಳ.... ಜನಾನಗಳೊಳಗೆ ನಡೆಯುವುದೇನು ?

ಈ ಕೆಳಗಿನ ಲೇಖದಲ್ಲಿ ಮಧ್ಯ ಆಸ್ಯಾ, ಅರೇಬಿಯಾ, ಆಫ್ರಿಕಾ, ಹಿಂದೂದೇಶ ಮೊದಲಾದ ಈ ದೇಶಗಳಲ್ಲಿ ಜನಾನದ ಘರದೆಯು ಅನಾವರಿಸಲ್ಪಟ್ಟು ಅದರೊಳಗಿರುವ ರಹಸ್ಯಗಳು ಬಯಲುಮಾಡಲ್ಪಟ್ಟಿವೆ.

ಹೆರಮ್ ಎಂಬ ಹೆಸರು ಈ ಜನಾನಗಳಿಗಿರುವುದು

ಹೆರಮ್ ಅಂದರೆ ಮನೆಯ ಮ್ಹಾಲಿಕನು ತನ್ನ ಮಿತ್ರರನ್ನು ಭೇಟಿಮಾಡುವ ಕೋಣೆ ಹೊರತು, ಇಡೀ ಮನೆಯೇ ಹೆರಮ್ ಆಗಿರುವುದು.

★★★★★

ತರುಣಿಯರನ್ನು ಒದಗಿಸಿಕೊಳ್ಳುವುದು

ಲಂಡನ್, ಪೆರಿಸ್ ನಗರಗಳಲ್ಲಿ ವಾಸ್ತವ್ಯವಾಗಿರುವ ಶ್ರೀಮಂತ ವರ್ತಕರು, ಮತ್ತು ಪ್ರಬಲ ನಾಯಕರು, ಶೃಂಗಾರ ಶೋಭೆಯಿಂದ ಕೂಡಿದ ವೈಭವ ಆಡಂಭರಗಳಿಂದ ಕೂಡಿದ, ಅರಮನೆಗಳಂತಿರುವ ತಮ್ಮ ಮನೆಗಳಲ್ಲಿ ನೂರಾರು ಸುಂದರ ತರುಣಿಯರನ್ನು ಇಟ್ಟುಕೊಳ್ಳುವುದು ಒಂದು ಪದ್ಧತಿಯಾಗಿರುತ್ತದೆ ಈ ತರುಣಿಯರು ಹೊರಗಿನ ಜಗತ್ತಿನ ಸ್ಪರ್ಶವಿಲ್ಲದೆ, ತಮ್ಮ ಪ್ರಭುವಿನ ಭೋಗಸುಖದ ಮೇಲೆ ಜೀವಿಸುತ್ತಿದ್ದಾರೆ. ಜಗತ್ತಿನ ಪ್ರತಿಯೊಂದು ಕಡೆಯಿಂದ ಈ ತರುಣಿಯರನ್ನು ಈ ಹೆರಮ್ಮಿಗಾಗಿ ಹೆಕ್ಕಿ ತರುವುದುಂಟು ತರುಣಿ ಬಿಳಿ ವರ್ಣದವಳಾಗಲಿ, ಕಂದು ಬಣ್ಣದವಳಾಗಲಿ, ಕಪ್ಪಗಿರಲಿ, ಸೀರೆಯುಡುವವಳಾಗಲಿ, ಗವನು ಧರಿಸುವವಳಾಗಲಿ, ಹೆರಮ್ಮಿನಲ್ಲಿ ಆ ವ್ಯತ್ಯಾಸಗಳು ಪರಿಗಣಿಸಲಾಗುವುದಿಲ್ಲ ಏಜಂಟರುಗಳು ಈ ತರುಣಿಯರನ್ನು ನಾಗರೀಕ ಯಾ ಅನಾಗರೀಕ ದೇಶಗಳಿಂದ ತಂದು ಒದಗಿಸುತ್ತಿದ್ದಾರೆ.

ಎಲ್ಲಾ ರಾಷ್ಟ್ರಗಳ ಸೌಂದರ್ಯವತಿಯರು

ಕಪ್ಪು ಕೂದಲುಳ್ಳ ಓ [illegible] ಕನ್ಯೆಯರೂ, ಚಿಕ್ಕ ಪುಟ್ಟ ಕೈಕಾಲುಗಳ [illegible] ಚೀನಾದ ಸೌಂದರ್ಯವತಿಯರೂ, [illegible] ಮೊಂಗಲಿಯಾದ ಸುಂದರಿಯರೂ, ನೀಲಕಣ್ಣಿನ [illegible] ರೂಪಿಣಿಯರೂ [illegible] ಬಹಳವುಳ್ಳ ಜೋರ್ಜಿಯಾ ಲಲನೆಯರೂ, ಮುಗುಳುನಗೆಯಿಂದ ಕೂಡಿದ ಪ್ರಫುಲ್ಲವದನವುಳ್ಳ ಕೌಕಾಶಿಯಾ ಅಬಲೆಯರೂ, [illegible] ತುಂಬಿ ತುಳುಕಾಡುವ [illegible] ಬಲಿಷ್ಠ ಆಫ್ರಿಕಾದ ಸ್ತ್ರೀಯರೂ [illegible] ಚೆಲುವೆಯರೂ, ಇವರೆಲ್ಲರ ಸಂಗ್ರಹವು ಹೆರಮ್ಮುಗಳಲ್ಲಿರುವುದು

ತರುಣಿಯರ ಸಂಖ್ಯೆಯು ಬಹಳ ದೊಡ್ಡದಿರುವುದರಿಂದ ಸುರಕ್ಷಿತವಿದೆ, ಜಗ ತನ್ನ ಸ ತ್ತಲೂ ಸದಾಕಾಲ ಸುಂದರ ತರುಣಿಯರ ರಾಶಿ ಇದ್ದು, ತನ್ನ ಕಾಮೇಚ್ಛೆಯ ನಾಟಕವು ಸರಾಗವಾಗಿ ನಡೆಯುವುದೆಂದು ಆ ಹೆರಮ್ ಪ್ರಭುಗಳ ಅಭಿಪ್ರಾಯವಾಗಿರುವುದು!

ತರುಣಿಯರನ್ನು ಕ್ರಯಕ್ಕೆ ಪಡೆಯುವುದು.

ಗುಲಾಮ ಮಾರ್ಕೇಟುಗಳಿಂದ ತಮಗೆ ಬೇಕಾದ ಚೆಲುವೆಯರನ್ನು ಪಡೆಯುವುದು, ಹೆರಮ್ಮಿಗೆ ಬೇಕಾದ ತರುಣಿಯರ ಸಂಗ್ರಹಿಸುವ ಒಂದು ಕ್ರಮವಾಗಿರುತ್ತದೆ ಆಧುನಿಕವೆಂದೆಣಿಸಿಕೊಂಡು ಮುಂದುವರಿದ ಅನೇಕ ದೇಶಗಳಲ್ಲಿ ಈ ತರದ ಮಾರ್ಕೇಟುಗಳು ಈಗಲೂ ಇರುತ್ತವೆ.

ಹೆರಮ್ಮಿಗೆ ಬೇಕಾದ ಸ್ತ್ರೀಯರನ್ನು ಆರಿಸಲು, ಹೆರಮ್ಮಿನ ಪ್ರಭುವಿನ ಏಜಂಟರು ಜಗತ್ತಿನಲ್ಲಿ ಅಲ್ಲಲ್ಲಿ ಸುಳಿದಾಡುವುದುಂಟು ಅತ್ಯಂತ ಉತ್ತಮವೆನಿಸುವ ಒಡವೆಗಳನ್ನು ಎಷ್ಟು ಕ್ರಯವನ್ನಾದರೂ ತೆತ್ತು ಪಡಕೊಳ್ಳುವರು. ಅನೇಕ ಸಂದರ್ಭಗಳಲ್ಲಿ ಸುಂದರ ತರುಣಿಯರನ್ನು ತೊಟ್ಟಿಲಿನಿಂದ ಎತ್ತುವುದುಂಟು.

ಹೆರಮ್ಮಿನ ಒಳಗೆ ಈ ಸುಂದರಿಯರಲ್ಲಿ ಹೆಚ್ಚಿನವರು ಒಡೆಯನ ಭೋಗ ಸುಖಕ್ಕಾಗಿ ಇಡಲ್ಪಟ್ಟ ವೇಶ್ಯೆಯರಾಗಿರುವರು ಮಿಕ್ಕವರು ಆತನ ಪತ್ನಿಯರಾಗಿರುವರು ಆದರೆ ಹೆರಮ್ಮಿನೊಳಗೆ ಪತ್ನಿಯರಿಗೂ, ವೇಶ್ಯೆಯರಿಗೂ ಇರುವ ವ್ಯತ್ಯಾಸ ಅತಿ ಕಡಿಮೆ.

ಹೆರಮ್ಮಿನ ಅಂತರ್ಯ ನೋಟ

ಹೆರಮ್ಮಿನ ಒಳಗಿರುವ ಸುಂದರಿಯರಿಗೆ ಯಾವತ್ತು ರಹಸ್ಯಗಳಿರುವುದಿಲ್ಲ, ಕಾರಣ ಅವರೆ ಒಂದು ರಹಸ್ಯವಾಗಿರುವುದರಿಂದ ಸುಂದರಿಯೊಬ್ಬಳು ಹೆರಮನ್ನು ಪ್ರವೇಶಿಸಿಬಿಟ್ಟಳೆಂದರೆ ಆಕೆಗೆ ಮತ್ತು ಹೊರಗಿನ ಜಗತ್ತಿನ ಪ್ರಕಾಶವನ್ನೇ ನೋಡಲು ಅವಕಾಶ ದೊರೆಯದು. ಹೆರಮ್ಮಿನಿಂದ ಹೊರಗ [illegible] ಹೆರಮ್ಮಿನ ಸ್ತ್ರೀಯರನ್ನು ಆಹಾರ ಮತ್ತು ಉಡಿಗೆ ತೊಡಿಗೆ ವಿಚಾರಗಳಲ್ಲಿ ಅತ್ಯಂತ [illegible] ಆರೈಕೆಮಾಡುತ್ತಿದ್ದಾರೆ ಅತಿ ಉತ್ತಮ ತರದ ಉಡಿಗೆ [illegible] [illegible]

ಅವರಲ್ಲಿ [illegible] [illegible]

ಇಷ್ಟು ಶೋಭೆಯಲ್ಲಿ ಜೀವಿಸುತ್ತಿರುವ ಒಂದೇ ರಾತೆಯ ಒಡವೆಗಳಾಗಿರುವ ಈ ಚಿತ್ರಲ್ಲಾಗಳು, ಒಬ್ಬನಕಾಮೇಚ್ಛೆಯ ಒಡವೆಗಳು ನಿಮಿಷಾರ್ಧದಲ್ಲಿ ಪೂರ್ಣ ಲಯವನ್ನು ಹೊಂದಬಹುದು ಅವರ ಸಂಪೂರ್ಣ ಇರುವಿಕೆಯು ಭೋಗಸುಖವೆ ಜೀವನದ ಮುಖ್ಯ ಧ್ಯೇಯವಾಗುಳ್ಳ ಒಬ್ಬ ಒಡೆಯನ ಮೇಲೆ ಹೊಂದಿಕೊಂಡಿರುವುದು

ಒಂದು ದಿನದ ಪ್ರತಿಯೊಂದು ತಾಸಿನ, ಪ್ರತಿಯೊಂದು ನಿಮಿಷದಲ್ಲಿ ಹೆರಮ್ಮಿನ ಸುಂದರಿ ತನ್ನ ಒಡೆಯನಿಗೆ ಆಕರ್ಷಣೀಯಳಾಗಿರುವಳಂತೆ ಯತ್ನಿಸಬೇಕು, ಹಾಗಲ್ಲದಿದ್ದರೆ ಅಲ್ಲಿಗೆ ಅವಳ ಗತಿಯು ಕೊನೆಗೊಳ್ಳುವುದು ಅತಿ ಕ್ರೂರ ಮತ್ತು ಹೇಯ ತರದಲ್ಲಿ ಆಕೆಯು ರಕ್ಷಿಸಲ್ಪಡುವಳು. ಹೆರಮ್ಮಿನಿಂದ ತಲೆ ತಪ್ಪಿಸಿಕೊಳ್ಳಲು ಮಾಡಿದ ಪ್ರಯತ್ನಗಳು, ಮೃತ್ಯುಕಾರಿಯಾಗಿ ಪರಿಣಮಿಸುವವು. ಚಿನ್ನಾಭರಣ ಒಡವೆಗಳಂತೆ ಅವರು ಭದ್ರವಾಗಿ ಅಡಗಿಸಲ್ಪಟ್ಟು ಅವರ ಮೇಲೆ ಬಲವಾದ ಕಾವಲು ಇಡಲಾಗುತ್ತದೆ. ಒಬ್ಬಳು ಜನಾನವನ್ನು ಪ್ರವೇಶಿಸಿಬಿಟ್ಟಳೆಂದರೆ, ಆಕೆಯು ಕಾಯಂ ಆಗಿ ಕಾರಾಗೃಹವನ್ನು ಸೇರಿದಂತೆ. ಅವರ ಆರೋಗ್ಯ ನೆಟ್ಟಗಿರಲಿ, ಅಥವಾ ಅವರಲಿ ದೇಹಾಲಸ್ಯವಿರಲಿ, ತಮ್ಮ ದಿನದಿನದ ಗತಿಯು ಹೇಗಿರುವುದೆಂದು ಅವರಿಗೆ ತಿಳಿಯದು ಈ ಹುಡುಗಿಯರು ಒಡೆಯರಿಗೆ ವಿಧೇಯರಾಗಿ ಇರುವಂತೆ, ಚೆತ್ತ ಮತ್ತು ಇತರ ಶಸ್ತ್ರಗಳಿಂದ ಕೂಡಿದವರಾದ ಮುದುಕಿಯರು ಅವರ ಮೇಲೆ ಕಾವಲಿಡುವುದುಂಟು

ಪರ್ಶಿಯಾ ದೇಶದಲ್ಲಿ ಒಂದು ಹೆರಮು ದೆರೆಯು ಇಷ್ಟೊಂದು ಹೆರಮ್ಮುಗಳು ಬಹುದು. ವಿವಿಧ ದೇಶಗಳಲ್ಲಿ ಸುಂದರಿಯರನ್ನು ಹೆರಮ್ಮಿನಲ್ಲಿಡುವ ವಿವಿಧ ತರದಗಳು ಆಚರಿಸಲ್ಪಡುತ್ತಿವೆ

ಈ ತರದ ಹೆರಮ್ಮಿನ ರಹಸ್ಯಗಳನ್ನು ಬಯಲುಮಾಡಿ, ಅನೇಕ ಮುಗ್ಧ ಸ ತರುಣಿಯರನ್ನು ಈ ನರ ಪಿಶಾಚಿಗಳ ಕೈಯಿಂದ ರಕ್ಷಿಸುವುದು ಅತಿ ಅವಶ್ಯವಿದೆ

The Agricultural & Industrial Bank, Ltd.,
(Incorporated in British India)

Head Office "LAXMINIVAS BUILDINGS" *Coondapoor*

BRANCHES.-

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRAJAJENDRAPET	TARIKERE & KADUR

Deposits are accepted at following rates:-

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS 10 25 50 100 250 500 & 1000

REDEEMABLE AT ANY TIME

CUMULATIVE DEPOSITS ARE ACCEPTED

Current Deposits
From January to June 2%
and
From July to December 1%

Savings Bank Deposits
3½ per cent per annum

Fixed Deposits
for 6 Months 3½
1 Year 4
Year & above 4½

For Further Particulars Apply to—
HEAD OFFICE or BRANCHES

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

[illegible]
ದಬ್ಬಿ ರೂ 1-4-0 (ವಿ ಪಿ ಚಾರ್ಜ ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
P O Perudepu (ನೆಲ್ಲೂರು ಜಿ)

HOUNSE

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್, ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ [illegible] ಮಕ್ಕಳಾಗುವುದರಿಂದ ದರಿದ್ರವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. [illegible] ಸರ್ಟಿಫಿಕೇಟು [illegible] ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ [illegible]

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪಿಪ್ಲೋ, ಅರಜಿ, (S M.C.

ವಿಜ್ಞಾನಿಗಳು ಚಂದ್ರ ಯಾತ್ರೆ

ನಾವು ವಿಮಾನಗಳಲ್ಲಿ ಕುಳಿತು ಇಂಗ್ಲಂಡು, ತೆರಳುವಂತೆ ಇನ್ನೂ ಬರಿ ಅಲ್ಪ ಸಮಯದಲ್ಲಿ ವಿಮಾನ ಮೂಲಕ, ಚಂದ್ರಮಂಡಳವನ್ನು ಸೇರಬಹುದು ಎಂಬ ಈ ವಿಶ್ವಾಸವು ವಿಜ್ಞಾನಿಗಳಿಗಿರುವುದು.

ಏನಂತ್ರೆ?

ಸಾಧಿಸಿದರೆ ಇದು ಸಾಧ್ಯವುಂಟು!

ವಿಜ್ಞಾನವು ಪ್ರಗತಿಹೊಂದುತ್ತಾ ಬಂದದೆ. ಒಂದಾನೊಂದು ಕಾಲದಲ್ಲಿ ನಮ್ಮ ಹಿರಿಯರು ಕೇವಲ ಅಸಾಧ್ಯವೆಂದಾಗ ಪರಿಗಣಿಸಲ್ಪಟ್ಟ ಆಕಾಶವಾಣಿ, ವಿಮಾನ ಇತ್ಯಾದಿಗಳು ಇಂದಿಗೆ ನಿಜವಾಗಿಬಿಟ್ಟಿವೆ. ಮುಂದೇನು? ಸಮಸ್ತ ಖಗೋಳ ಮಂಡಳದ ಯಾತ್ರೆಗೈಯ್ಯಲು ಸಾಧ್ಯವಾಗಬಹುದೆ? ನಮ್ಮ ಈ ಭೂಮಂಡಳಕ್ಕೂ ಇತರ ಗ್ರಹಗಳಿಗೂ ವ್ಯವಹಾರ ಉಂಟಾಗಬಹುದೆ? 'ಹಿಟ್ಲರ್', ಮುಸಲೀನಿ, ಆಂಗ್ಲೇಯ ಇತ್ಯಾದಿ ಸಾರ್ವಭೌಮ ಜನಾಂಗಗಳು ತಮ್ಮ ಪ್ರಬಲತ್ವಗಳನ್ನು ಹೆಚ್ಚಿಸಲು ಚಂದ್ರಮಂಡಳದ ಕಡೆಗೆ ದೃಷ್ಟಿ ಹಾಕಬಹುದೆ?. ಈ ಶತಮಾನಾಂತ್ಯದೊಳಗೆ ಚಂದ್ರಮಂಡಳಕ್ಕೆ ಯಾತ್ರೆ ಸಾಧ್ಯವಾಗುವುದು, ಎಂಬದಾಗಿ ಧೈರ್ಯದಿಂದ ನುಡಿಯುವ ಸ್ಥಿತಿಗೆ ವಿಜ್ಞಾನದ ಪ್ರಗತಿಯು ಇಂದಿನವರೆಗೆ ಆಗಿರುವುದು.

ಚಂದ್ರಮಂಡಳಕ್ಕೆ ಯಾತ್ರೆ—ಈ ಕುರಿತು ಮೊದಲಾಗಿ ಪರಿಶೋಧನಾ ಕಾರ್ಯವನ್ನು ಪ್ರಾರಂಭಿಸಿದವರು. ಡಾ| ಗೊಡಾರ್ಡ್‌ರೆಂಬವರು 1919ರಲ್ಲಿ, ವಾಯುಮಂಡಳವನ್ನು ಹಾರಿ ನಂತರವಿರುವ ಪ್ರದೇಶವನ್ನು ಹಾಯುವ ಕುರಿತು ಅವರು ಪರಿಶೋಧನೆಯನ್ನು ನಡೆಸಿದ್ದರು.

ಚಂದ್ರಮಂಡಳ ಇತ್ಯಾದಿ ಇತರ ಗ್ರಹಗಳಿಗೆ ಹೋಗಬೇಕಾದರೆ ನಡುವಿನಲ್ಲಿ ಅಗಾಧವಾದ ಮಹಾಕಾಶ (space) ವಿರುವುದು. ಭೂಮಿಯಿಂದ ಮೇಲಕ್ಕೆ ಹೋದ ಹಾಗೆ ಆಮ್ಲಜನಕವು ಕಡಿಮೆಯಾಗುವುದು, ವಾಯುಮಂಡಳದನಂತರಇರುವ ಪ್ರದೇಶವು ಹೇಗಿರುವುದೆಂಬುದಾಗಿ ಕಂಡುಹಿಡಿದಿರುವರು. ಅಲ್ಲಿ ವಾಯು ಇರುವುದಿಲ್ಲ. ಹೀಗಾಗಿ ಆ ಅಂತರದಲ್ಲಿ ವಾಯುವಿನ ಒತ್ತಾಟದ ಮೇಲೆ ನಡೆಯುವ ವಿಮಾನಗಳಿಗೆ ಚಲಿಸಲು ಅಸಾಧ್ಯವು. ಈ ವಿಮಾನದಲ್ಲಿರುವವರಿಗೂ ಬೇಕಾದ ಆಮ್ಲಜನಕವೂ ಕೂಡ ಅಲ್ಲಿ ದೊರಕದು.

ಆದುದರಿಂದ ವಾಯುಮಂಡಳದನಂತಿರುವ ಪ್ರದೇಶದಲ್ಲಿ ಚಲಿಸಲು ಸಾಧ್ಯವಾಗುವ ತರದ ರೊಕೆಟ್ ಪ್ಲೇನುಗಳೆಂಬುವನ್ನು ಕಲ್ಪಿಸಿರುವರು. ಈ ಪ್ಲೇನಿನೊಳಗೆ ಒಬ್ಬನಿಗೆ ಅನೇಕ ದಿವಸಗಳಿಗೆ ಬೇಕಾದ ಆಮ್ಲಜನಕ ಆಹಾರ ಇತ್ಯಾದಿಗಳನ್ನು ಹಾಕಿ, ಆದರಲ್ಲಿ ಒಬ್ಬನನ್ನು ಇರಿಸಿ, ಅದು ಅಖಂಡವಾಗಿ ಮಾಡಿ ಮೇಲಕ್ಕೆ ಹಾರಿ ಕಳುಹಿಸುವ ಆಲೋಚನೆಗಳು ಈಗ ನಡೆಯುತ್ತವೆ.

ಇಷ್ಟರ ತನಕ ನಡೆದ ಪರಿಶೋಧನಾ ಕಾರ್ಯಗಳಿಂದಾಗಿ, ಚಂದ್ರಮಂಡಳದ ಯಾತ್ರೆಯು ಒಂದು ಸಾಧ್ಯ ವಿಷಯವಾಗಿ ವಿಜ್ಞಾನಿಗಳಿಗೆ ತೋರಿಬಂದಿರುವುದು. ಇನ್ನೆ ಸ್ವಲ್ಪ ಸಮಯದಲ್ಲಿ ಒಬ್ಬ ವಿಜ್ಞಾನಿಯು ಚಂದ್ರಮಂಡಳವನ್ನು ಸೇರಿದ ವಾರ್ತೆಯು ಬರುವುದು,

ಚಂದ್ರಮಂಡಳವನ್ನು ಸೇರುವುದು ಸಾಧ್ಯವಾದರೆ, ನಂತರ ಇತರ ಗ್ರಹಮಂಡಳಗಳಿಗೆ ಪ್ರಯಾಣ ಬೆಳೆಸುವುದು ಅಸಾಧ್ಯವೆನಿಸದು.

ತಟಸ್ಥಭಾವ ಸಮಿತಿ

ಜನರಲ್ ಫ್ರೆಂಕೊ—ಮುಸಲೀನಿ

ಸ್ಪೈಯಿನಿನ ಯುದ್ಧದ ಕುರಿತು ಒಂದು ತಟಸ್ಥಭಾವ ಸಮಿತಿಯು ರಚನೆಯಾಗಿತ್ತಷ್ಟೆ. ಅದು ರಚನೆಯಾಗಿ ಬಹಳ ಸಮಯವಾಗಿದ್ದರೂ ಅದು ಈ ತನಕ ಮಾಡಿದ್ದೇನಿಲ್ಲ. ತಟಸ್ಥಭಾವ ಸಮಿತಿಯ ಹೆಸರಲ್ಲಿ ಲಂಡನಿನಲ್ಲಿ ಕೆಲವೊಂದು ಸಭೆ ಕೂಟಗಳು ನಡೆದುಬಿಟ್ಟವು, ಈಗಲೂ ನಡೆಯುತ್ತಾ ಇವೆ.. ಸ್ಪೈಯಿನಿನ ರಣರಂಗದಲ್ಲಿರುವ ಅನ್ಯ ರಾಷ್ಟ್ರಗಳ ಸೈನಿಕರನ್ನು ಹಿಂತೆಗೆಯುವ ಕುರಿತು ಒಂದು ಯೋಜನೆಯಿಂದೊಡಗೂಡಿದ ಬ್ಲ್ಯೂ ಬುಕ್ ಪ್ರಕಟಣೆಯು ಆಗಿರುತ್ತಿದೆ.

ಇತ್ತ ಮುಸಲೀನಿಯು ಫ್ರೆಂಕೊನನ್ನು ವಿಜಯಿಯಾಗಿ ಮಾಡುವರೆ, ಭಗೀರಥ ಪ್ರಯತ್ನಗಳನ್ನು ಮಾಡುತ್ತಿರುವನು. ಆದರೂ, ಇಟಲಿ, ಜರ್ಮನಿ ಇತ್ಯಾದಿ ಜನಾಂಗಗಳಿದ್ದ ತಟಸ್ಥಭಾವ ಸಮಿತಿಯು ಮೇಲಿನ ಯೋಜನೆಯನ್ನು ನಡೆಯಿಸುವರೆ ಒಂತಿಗೆಯುತ್ತ, ಒಂದು ನಿಧಿಯನ್ನು ಕೂಡಿಸಿರುವರು.

ಸ್ಪೈಯಿನಿನ ರಣರಂಗದಲ್ಲಿ ಅನ್ಯರಾಷ್ಟ್ರೀಯ ಸೈನಿಕರ ಸಂಖ್ಯೆಯನ್ನು ತೆಗೆಯುವ ಕೆಲಸ ಸದ್ಯದಲ್ಲಿ ಪ್ರಾರಂಭವಾಗುವ ವ್ಯವಸ್ಥೆಯಾ ವುದು ಈ ಕಾರ್ಯಕ್ಕೆ ಅಷ್ಟರೊಳಗೆ ಯು ವು ಮುಗಿಯದಿದ್ದರೆ, ಸಾಧಾರಣ ಒಂ ವರ್ಷದ ಸಮಯವು ಬೇಕಾಗುವುದು.

ಆದರೆ ಅನ್ಯ ರಾಷ್ಟ್ರೀಯರು ಈ ಯು ದಲ್ಲಿರದಂತೆ ಕಾವಲು ನೋಡುವ ವ್ಯವಸ್ಥೆ ಧಾರಾಳ ವೆಚ್ಚಮಾಡಬೇಕಾಗಿದೆ. ಈ ವೆ ವನ್ನು ಹೊಂದುವವರಾರು? ಎಂಬ ಪ್ರಶ್ನೆ ಈಗ ಉಂಟಾಗಿರುತ್ತದೆ. ಯುದ್ಧದಲ್ಲಿ ಭಾ ಗಳಾದ ಇಕ್ಕಡೆಯವರೂ ಅದನ್ನು ಹೋ ವಂತೆ ತಟಸ್ಥಭಾವ ಸಮಿತಿಯವರು ಜ ರಲ್ ಫ್ರೆಂಕೋವಿನ ಸರಕಾರಕ್ಕೂ ರಿಪಬ್ಲಿಕ ಸರಕಾರಕ್ಕೂ ಸೂಚನೆ ಕಳುಹಿಸಿಕೊಟ್ಟು, ಅವ ಉತ್ತರವನ್ನು ನಿರೀಕ್ಷಿಸುತ್ತಿರುವರು.

ಇವೆಲ್ಲಾ ವಿಚಾರಗಳು ಶಾಂತವಾ ಲಂಡನಿನಲ್ಲಿ ಚರ್ಚಿಸಲ್ಪಡುತ್ತಿರುವ ಸಮ ಜನರಲ್ ಫ್ರೆಂಕೆನು ಸಿಡಿಗುಂಡುಗಳನ್ನು ಲ್ಲುತ್ತ ಮುಂದು ಸಾಗುವ ಯತ್ನದಲ್ಲಿದ್ದಾ ರಿಪಬ್ಲಿಕ್ ಸರಕಾರವು ಅವನಿಗೆ ಬಲವಾ ತಡೆಯನ್ನು ಕೊಟ್ಟಿರುವುದು. ಕೊನೆಯ ತನ ಹೋರಾಡಿಯೆ ನೋಡಬೇಕೆಂದು ರಿಪಬ್ಲಿಕ ಸರಕಾರದ ದೃಢ ನಿರ್ಣಯವಾದಂತೆ ಕಾಣ ತ್ತದೆ.

ತಟಸ್ಥಭಾವ ಸಮಿತಿಯು ಕುರಿತು, ಯ ಕನ್ನೊಡನಿರುವ ಇಟಲಿಯನ್ ಯಾ ಜರ್ಮ ಸೈನಿಕರು ಹೊರಟು ಹೋಗುವ ಸಂಭವ ಬ ವುದೆಂದು ಜನರಲ್ ಫ್ರೆಂಕೊನು ಹೆದರಬೇ ಗಿಲ್ಲ. ಕಾರಣ ಯುದ್ಧ ಮುಗಿದ ವಿನಾ ತಟಸ್ಥಭಾವ ಸಮಿತಿಯು ಕಾರ್ಯರಂಗ ಇಳಿಯದು.

SERVICE & PROMPTNESS

A Feature and a fact with the **POPULAR**

M. VENKATESH PAI.
BANKER.

SRI KRISHNA BHAVAN
MANGALORE.
25th July, 1938

The Managing Director,
The Popular Insurance Co., Ltd.,
MANGALORE.

POLICY No. 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father-in-law, Sri Nagar Vasudeva Shenoy who passed away on the 19th instant.

I quite appreciate too the service you rendered the claimant in voluntarily forwarding the Claim Papers and assisting in their completion. Then the cheque for Rs.2,558-7-0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be 'POPULAR'. It should naturally bring home to the public immense advantages of getting insured with a local Life Office and I would certainly recommend the Company to all.

I wish the Company a brilliant career of usefulness and prosperity.

Yours faithfully,
(Sd). *M. Venkatesh Pai.*

The Company requires influential Ladies & Gentlemen to work as Agents on most remunerative terms including hereditary renewals.

Apply to:- **THE POPULAR INSURANCE CO., LTD.,**
Head Office: MANGALORE.

ಪಲಾಯನ!

ಅದೊಂದು ದಿನ ಅದೇಕೋ, ಶ್ರೀ ಗೋವಿಂದರಾಯರು ಪ್ರಾಂಗಳೂರಿನ ಒಂದು ಸಾಮಾನ್ಯ ಹೋಟೇಲನ್ನು ಪ್ರವೇಶಿಸಿದರು, ಮಂಗಳೂರಿನಲ್ಲಿ ಪ್ರಮುಖ ಬೇಂಕರರೆಂದು ಖ್ಯಾತಿಗೊಂಡ ಅವರು, ಇಂತಹ ಸಾಮಾನ್ಯ ಉಪಾಹಾರ ಗೃಹವನ್ನು ಹೊಕ್ಕುದು ಇದೇ ಮೊದಲನೆಯ ಬಾರಿ. ತನ್ನ ಗಿರಾಕಿಗಳ ಸಾಮಾಜಿಕ ಸ್ಥಿತಿಯನ್ನು ನೋಡಿದ ಮಾತ್ರದಲ್ಲೇ ಗೊತ್ತುಹಚ್ಚುವಷ್ಟು ಪಳಗಿದ ಆ ಹೋಟೇಲಿನ ಯಜಮಾನನು ಗೋವಿಂದರಾಯರಿದ್ದಲ್ಲಿಗೆ ಸ್ವತಃ ಬಂದು ತಿಂಡಿತಿನಸುಗಳು ಏನೇನು ಬೇಕೆಂದು ವಿಚಾರಿಸಿದನು. ಕತ್ತರಿಸಿ ಒಂದೇಲೆಕ್ಕದಲ್ಲಿರಿಸಿದ ಮೀಸೆಗಳು, ಒಳ್ಳೆ ಕ್ರಯಬಾಳುವ ಉಡುಪು, ವೆಸ್ಟ್ ಕೋಟಿನ ಒಂದು ಚೀಲದಿಂದ ಇನ್ನೊಂದು ಚೀಲವನ್ನು ಹೊಕ್ಕು ನೇತಾಡುವ ಬಂಗಾರದ ಗಡಿಯಾರ ಸರಪಣಿ, ಆಂಗ್ಲ ಮರ್ಜಿ, ಇವುಗಳ ಆಧಾರದಿಂದಾಗಿ ಗೋವಿಂದರಾಯರು ಯಾರೋ ಒಬ್ಬ ಧನಾಢ್ಯ ಜಮೀನದಾರರು ಇಲ್ಲವೆ ಬೇಂಕರರಾಗಿರಬೇಕೆಂದು ಆ ಹೋಟೇಲಿನ ಯಜಮಾನನು ಅವರನ್ನು ಕಂಡೊಡನೆ ಊಹಿಸಿದ್ದನು.

ಅಂತು ಊರ ಶ್ರೀಮಂತರೊಬ್ಬರು ತನ್ನ ಹೋಟೇಲನ್ನು ಸಂದರ್ಶಿಸಿರುವರೆಂಬುದು ಆದರ ಮಾಲಕರಿಗೊಂದು ಹೆಮ್ಮೆಯ ಮಾತಾಯಿತು. ಅವರು ಇತರ ಗಿರಾಕಿಗಳಿಗೆ ತಿಂಡಿತಿನಸುಗಳನ್ನು ಕೊಡುವುದರಲ್ಲಿ ನಿರತರಾಗಿದ್ದರಾದರೂ, ಗೋವಿಂದರಾಯರು ಯಾವಾಗ ಏನು ಕೆಲಸವನ್ನು ಹೇಳುವರೋ ಎಂದು ಒಂದು ಕಣ್ಣಿನಿಂದ ಅವರತ್ತ ನೋಡುತ್ತಿದ್ದರು. ಪರಂತು ಬೇಂಕರರು ಯಾವುದೋ ಆಲೋಚನೆಯಲ್ಲಿ ತಲ್ಲೀನರಾಗಿದ್ದರು. ತಿನಸಿನ ಪ್ಲೇಟು ಹಾಗೆಯೇ ಇತ್ತು. ಕಾಫಿಯನ್ನು ಮಾತ್ರ ಕುಡಿದು ಅವರು ಸಿಗರೇಟನ್ನು ಹೊತ್ತಿಸಿದರು. ಅವರು ಹಿಂಬಾಲಿಸಿಕೊಂಡು ಬಂದಿದ್ದ ಮನುಷ್ಯನು ತಪ್ಪಿಸಿಕೊಂಡಿದ್ದನು.

ಆದುದರಿಂದ ಗೋವಿಂದರಾಯರು ಹೋಗಲೆಂದು ಎದ್ದುನಿಂತರು. ಆಗಲೇ ಯಾರೋ ಒಬ್ಬ ತರುಣನೊಡನೆ ಅವರ ಸ್ನೇಹಿತರ ಮಗಳಾದ ಮಾಲತಿಯು, ಸಮೀಪದ ಕೋಣೆಗೆ ಹೋಗುವುದನ್ನು ಅವರು ಕಂಡರು. ಗುಂಡುಸೋಕಿದಂತಾದ ಹುಚ್ಚುಹಿಡಿದವನಂತೆ ಅವರು ಕುರ್ಚಿಯ ಮೇಲೆ ಹಾರಿ ಕುಳಿತುಕೊಂಡರು. ಪ್ರಾಯಶಃ ಮಾಲತಿಯು ಅವರನ್ನು ನೋಡಿರಲಿಕ್ಕಿಲ್ಲ. ಗೋವಿಂದರಾಯರಂತಹ ಪ್ರಮುಖ ಬೇಂಕರನು ಇಂತಹ ಸಾಮಾನ್ಯ ಹೋಟೇಲಿನಲ್ಲಿ ಕಾಣಸಿಗಬಹುದೆಂದು ಅವಳು ಎಣಿಸಿರಲಿಕ್ಕೂ ಇಲ್ಲ.

ಮಾಲತಿಯು ತನ್ನ ಸಂಗಾತಿಯಾದ ತರುಣನೊಡನೆ ಹೊಕ್ಕ ಕೋಣೆಯೂ ಗೋವಿಂದರಾಯರು ಕುಳಿತಿರುವ ಕೋಣೆಯೂ ನಡುವೆ ಒಂದು ಮರದ ಹಲಗೆಯಿಂದ ವಿಭಾಗಿಸಲ್ಪಟ್ಟಿತ್ತು.

ಆ ಮರದ ಗೋಡೆಯ ಸಮೀಪಕ್ಕೆ ಕುರ್ಚಿಯನ್ನು ಎಳೆದುಕೊಂಡು ಅವರ ಕಿವಿಗೊಟ್ಟು ಆಲಿಸತೊಡಗಿದರು. ಅವರಿಗಿದ್ದವರು ಬಹಳ ಸಣ್ಣ ಸ್ವರದಿಂದ ಮಾತನಾಡುತ್ತಿದ್ದುದರಿಂದ ಹೆಚ್ಚಿನ ಮಾತುಗಳೇನೂ ಕೇಳಿಸಲಿಲ್ಲ. ಆದರೆ ಅವರು ಪ್ರೇಮದ ಕುರಿತು ಪ್ರಸ್ತಾಪಿಸುತ್ತಿದ್ದರೆಂಬುದನ್ನು ತಿಳಿದುಕೊಳ್ಳಬಹುದಾಗಿತ್ತು. ಆಗಾಗ್ಗೆ 'ಪಲಾಯನ' ಎಂಬ ಮಾತು ಗೋವಿಂದರಾಯರ ಕಿವಿಗಳಿಗೆ ಕೇಳಿಸುತ್ತಿತ್ತು.

'ಅಂತೂ ಪಲಾಯನಮಾಡುವ ಆಲೋಚನೆ ಮಾಡಿರುವಿರಿ ನೀವು, ಅಲ್ಲವೆ?' ತನ್ನಷ್ಟಕ್ಕೆ ಆಲೋಚಿಸಿದರವರು. 'ಇಂದು ನಾನು ಈ ಹೋಟೇಲಿಗೆ ಒಂದುದು ದೈವಾನುಗ್ರಹದಿಂದ ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಮಾಲತಿಯ ಗುಟ್ಟು ತಿಳಿಯುತಿತ್ತೇ? ಕೊನೆಗೆ ಅವರ ಸೋದರ ಮಗಳು ಹೇಳಿದ ಮಾತುಗಳು ಸರಿಯಾಗಿ ಅವರಿಗೆ ಕೇಳಿಸಿತು. 'ಇಲ್ಲ, ಇಲ್ಲ. ಅಂತಹ ಆಲೋಚನೆಯನ್ನೆಂದಿಗೂ ಮಾಡಬೇಡ. ಹಾಗೆ ಮಾಡಿದರೆ ಆ ವೃದ್ಧನ ಎದೆಯು ಒಡೆದುಹೋದೀತು!'

'ಆಹಾ, ನನ್ನ ಎದೆಯ ಕುರಿತು ಆಲೋಚನೆಯೆ? ತುಸು ತುಚ್ಛೀಕಾರದಿಂದ ಗೋವಿಂದರಾಯರೆಂದರು. 'ನನ್ನ ಎದೆಯ ಕುರಿತೇ ನೀನು ಚಿಂತಿಸುವುದುತ್ತಮವಷ್ಟೆ. ನನ್ನ ಎದೆಗೊಂತಲೂ ನಿನ್ನದು ಕಠಿಣವಾಗಿರಬೇಕು! ನಿನ್ನ ತಂದೆಯು ಬದುಕಿದ್ದರೆ ಪ್ರಾಯಶಃ ಅತನ ಎದೆಯನ್ನು ನೀನು ಒಡೆಯಬಹುದಿತ್ತು. ಕಾರಣ, ಆತನೊಬ್ಬ ರಸಜ್ಞನು. ಪರಂತು ಇಂತಹ ನಿನ್ನ ನೂರಾರು ಕಾಮಚಕ್ರೇಶ್ವರರನ್ನು ಒಂದುಗೂಡಿಸಿದರೂ ನನ್ನ ಹೃದಯವು ಅಚಲವಾಗಿರಬಲ್ಲದು.'

ಹೀಗೆ ಆಲೋಚಿಸುತ್ತಾ ಇದೊಂದು ವಿಷಯವು ಅವರಿಗೆ ಹೊಳೆಯಿತು. ಮಾಲತಿಯ ಬದಲಾಗಿ ಅವರ ಮಗಳಾದ ಮನೋರಮೆಯಾಗಿದ್ದರೆ ಅವರ ಹೃದಯವು ಒಡೆದುಹೋಗುತ್ತಿರಲಿಲ್ಲವೆ? ಈ ವಿಚಾರವು ಅವರ ಎದೆಯು ರಭಸದಿಂದ ಬಡೆಯುವಂತೆ ಮಾಡಿತು. 'ದೇವರ ದಯೆಯಿಂದ ಮನೋರಮೆಯು ಅಂಥವಳಲ್ಲ. ನನ್ನ ಅನುಮತಿಯಿಲ್ಲದೆ ಅವಳು ಯಾರನ್ನೂ ಮೋಹಿಸಲಿಕ್ಕಿಲ್ಲ. ವಿಚಾರಹೀನವಾದ ಕಾರ್ಯವನ್ನು ಅವಳೆಂದೂ ಮಾಡಲಿಕ್ಕಿಲ್ಲ.' ಹೀಗೆಂದು ಗೋವಿಂದರಾಯರು ಆಲೋಚಿಸುತ್ತ, ಆ ಇಬ್ಬರು ಹುಡುಗಿಯರನ್ನು ಹೋಲಿಸುತ ಕುಳಿತುಕೊಂಡರು.

ತಂದೆತಾಯಿಗಳ ಮರಣಾ ನಂತರ ಅವರ ಆಶ್ರಯದಲ್ಲಿದ್ದ ಮಾಲತಿಯು ಒಳ್ಳೆ ಹುಡುಗಿ. ಆಕೆಯ ನಡೆನುಡಿಗಳನ್ನು ಚೆನ್ನಾಗಿ ಅರಿತಿದ್ದ ಅವರು, ಇಂತಹ ಆಯೋಗ್ಯನಾದ ತರುಣನೊಡನೆ ಆಕೆಯು ಪ್ರೇಮಸಲ್ಲಾಪಗಳನ್ನು ನಡೆಸಬಹುದೆಂದು ಕನಸುಮನಸಿನಲ್ಲಿಯೂ ಎಣಿಸಲಿಲ್ಲ. ಆದರೆ ಅವರ ಹುಡುಗಿಯು ಓದುಬರಹದಲ್ಲಿ ಅಷ್ಟು ಪ್ರವೀಣಳಲ್ಲದಿದ್ದರೂ ಅವರಂತೆ ವಿಚಾರಮಾಡಿ ಕೆಲಸಮಾಡುವವಳು. ಅವಳು ತುಸು ಹಟಮಾರಿ ಸ್ವಭಾವದವಳಾದರೂ ದುಡುಕುತನವು ಅವಳಲ್ಲಿದ್ದಿಲ್ಲ. ಪರಂತು ಮಾಲತಿ ಮನೋರಮೆಯರೊಳಗೆ ನಿಸ್ಸೀಮವಾದ ಅನುರಾಗವಿದ್ದಿತು. ಆದುದರಿಂದಲೇ ಮಾಲತಿಯನ್ನು ಅವರು ತನ್ನ ಮಗಳಂತೆ ಆದರದಿಂದ ಕಾಣುತ್ತಿದ್ದರು. ಅವರ ಪ್ರೇಮಕ್ಕೆ ಆಕೆಯು ಕೊಡುವ ಪ್ರತಿಫಲವಿದು ಅಲ್ಲವೆ? ಇರಲಿ, ಈ ತನ್ನ ಕಾಮಚಕ್ರೇಶ್ವರನೊಡನೆ ಪಲಾಯನ ಗೈದು, ನನ್ನ ಕುಲಕ್ಕೂ ಸತ್ಕೀರ್ತಿಗೂ ಕಲಂಕವನ್ನು ಹಚ್ಚಬೇಕೆಂದು ಆಕೆಯು ಬಗೆದಿದ್ದರೆ ಅದನ್ನು ಆಗುವಂತೆ ಬಿಡುವವರೇ ಅವರು? ತನ್ನ ಚಿಕ್ಕತಂದೆಯನ್ನು ಅವಳಿನ್ನೂ ಅರಿತಂತೆ ತಿಳಿಯುವುದಿಲ್ಲ. ಹೀಗೆಂದು ಆಲೋಚಿಸುತ್ತ ಮಾಲತಿ ಮತ್ತು ಆಕೆಯೊಡನೆ ಇದ್ದ ತರುಣನಿಗೆ ತಿಳಿಯದಂತೆ ಗೋವಿಂದರಾಯರು ಹೋಟೇಲಿನಿಂದ ಹೊರಬಿದ್ದರು.

ಹಾದಿಯಲ್ಲಿ ಹೋಗುತ್ತ ಅವರು ಇಡೀ ಪ್ರಸಂಗವನ್ನು ಪುನರಾಲೋಚಿಸಿ ನೋಡಿದರು. ಮಾಲತಿಯ ಪಲಾಯನಾಲೋಚನೆಯನ್ನು ಭಂಗಪಡಿಸಲು ಅನೇಕಾನೇಕ ಉಪಾಯಗಳು ಅವರ ತಲೆಯಲ್ಲಿ ಬಂದುಹೋದುವು. ಆದರೆ ತನಗೆ ಏನೂ ಗೊತ್ತಿಲ್ಲದಂತೆ ನಟಿಸಿ, ಏನೊಂದು ಗೊಂದಲವನ್ನು ಮಾಡದೆ ಅದನ್ನು ಮುರಿಯಬೇಕೆಂದು ಬಗೆದರವರು. ಸುಲಭದಲ್ಲಿ ಅಪಜಯವನ್ನು ಒಪ್ಪುವವರು ಅವರಲ್ಲ. ಅವರ ಐವತ್ತು ವರ್ಷಪ್ರಾಯದಲ್ಲಿ ಅವರು ಕೈಹಚ್ಚಿದ ಯಾವ ಕಾರ್ಯವಾದರೂ ಈ ತನಕ ನಿಷ್ಫಲವಾದುದಿಲ್ಲ. ಆದುದರಿಂದ ಇಂದು ಬಹಳ ಉಪಾಯದಿಂದ ತನ್ನ ಸೋದರ ಸೊಸೆಯ ಕುಟಿಲೋಪಾಯವನ್ನು ಕೊನೆಗೊಳಿಸುವುದು ಅವರಿಗದೊಂದು ದೊಡ್ಡ ಕೆಲಸವೆ?

ಕೆಲವು ದಿನಗಳ ನಂತರ ಅದೊಂದು ದಿನ ಗೋವಿಂದರಾಯರ ಕಾರಕೂನನೊಬ್ಬನು ಬಂದು, ಯಾರೋ ಒಬ್ಬ ವ್ಯಕ್ತಿಯು ಅವರನ್ನು ಕಾಣಲಿಚ್ಛಿಸುವನೆಂದು ಹೇಳಿದನು. ಆತನಿಗೆ ಒಳಗೆ ಬರಲು ಹೇಳುವಂತೆ ಗೋವಿಂದರಾಯರು ಅಪ್ಪಣೆ ಕೊಡಲು ಸ್ವಲ್ಪ ಹೊತ್ತಿನಲ್ಲಿ ನಡುಪ್ರಾಯದ ಮನುಷ್ಯನೊಬ್ಬನು ಒಳಗೆ ಬಂದನು.

ಕೂತುಕೊಳ್ಳಿ, ಗೋವಿಂದರಾಯರು ಒಂದು ಕುರ್ಚಿಯನ್ನು ನಿರ್ದೇಶಿಸಿ ಅಂದರು.

ಆತನ ವಿಷಯ ನೀವೇನು ಗೊತ್ತುಹಚ್ಚಿರುವಿರಿ? ನಂತರ ಅವರು ಪ್ರಶ್ನಿಸಿದರು.

'ಆತನೊಬ್ಬ ಕುಂದಾಪುರದ ತರುಣನು. ವಾಸುದೇವರಾಯನೆಂದು ಆತನ ಹೆಸರು.' ಮಾಲತಿಯ ಪ್ರಿಯತಮನ ಪತ್ತೆಹಚ್ಚಲು ಗೋವಿಂದರಾಯರು ನೇಮಿಸಿದ ಗುಪ್ತ ಪೋಲೀಸನೆಂದನು. 'ಆತನೊಬ್ಬ ಸಮಾಜವಾದಿ.' 'ಏನು ಸಮತಾವಾದಿ ಪಕ್ಷದವನೇ!' ಗೋವಿಂದರಾಯರು ಎಲ್ಲವನ್ನೂ ತಿಳಿದವನಂತೆ ಅಂದರು. ಈ ಸಮತಾವಾದಿಗಳನ್ನು ನಾನು ಒಂದು ಕುರುಡು ಕವಡೆಗೂ ನಂಬಲಿಕ್ಕಿಲ್ಲ. ಸಮಾನತೆಯ ಸೋಗಿನಲ್ಲಿ ಸ್ವಾರ್ಥವನ್ನು ಸಾಧಿಸುವ ಪೋಕರಿಗಳವರು. ಪರರು ದುಡಿದ ಹಣವನ್ನು ಅಪಹರಿಸುವ ಹವ್ಯಾಸವುಳ್ಳವರು. ಅವರಿಗೆ ಯಾವುದರಲ್ಲೂ ತೃಪ್ತಿಯಿಲ್ಲ. ಚಳವಳಿ, ಚಿಲ್ಲಾಟ, ಗದ್ದಲ, ಇವೇ ಅವರ ತತ್ವಗಳು. ಅದಷ್ಟು ಬೇಗ ಅವರ ಹುಟ್ಟನ್ನಡಗಿಸಿದರೆ ಹಿಂದೂದೇಶಕ್ಕೆ ಅಷ್ಟೇ ಹಿತವುಂಟು. ಹೂಂ, ಆದಿರಲಿ, ಆತನ ಕುರಿತು ನೀವು ಏನೆಲ್ಲ ಪತ್ತೆಹಚ್ಚಿರುವಿರಿ. ಆತನ ಸಾಂಪತ್ತಿಕ ಪರಿಸ್ಥಿತಿಯು ಹೇಗಿದೆ?'

'ಹಿರಿಯರು ಮಾಡಿಟ್ಟ ಮನ್ನೇನು ಆತನಿಗಿಲ್ಲ' ಗುಪ್ತ ಪೋಲೀಸನೆಂದ. 'ಆದರೆ . . .'

'ನಾನದನ್ನು ಮೊದಲೇ ಊಹಿಸಿದ್ದೆ' ಎಂಬ ನುಡಿ ಗೋವಿಂದರಾಯರು ನಕ್ಕರು. 'ಅಂತಹ ಸ್ಪಂಡರು ತಮ್ಮ ಜೀವಮಾನದಲ್ಲಿ ಒಂದು ಕಾಸನ್ನಾದರೂ ಸಂಪಾದಿಸಲೊಲ್ಲರು. ಬೀದಿ ಬೀದಿ ತಿರುಗಾಡಿ ಜೀವನವನ್ನು ನಡೆಸುವರು. ಹೀಗೆ ಪ್ರಯೋಜನವಿಲ್ಲದ ಮರುಳರು. ಆದೇನು ನೀವಂದುದು?'

'ಮತ್ತೇನಿಲ್ಲ. ಆಗಾಗ್ಗೆ ಆತನಿಗೆ ಹಣವು ಬರುತ್ತಿದೆ. ಆದರೆ ಅದು ಎಲ್ಲಿಂದ ಬರುತ್ತದೆಂದು ನನ್ನಿಂದ ಈ ತನಕ ಕಂಡುಹಿಡಿಯಲಾಗಲಿಲ್ಲ. ಇನ್ನು ಸ್ವಲ್ಪ ಸಮಯವಿದ್ದುದಾದರೆ—

'ಆ ಕುರಿತು ಇನ್ನು ಚಿಂತೆ ಏಕೆ?' ಗೋವಿಂದರಾಯರು ನಡುವೆ ಬಾಯಿಹಾಕಿ ನುಡಿದರು. 'ಹಣವು ಎಲ್ಲಿಂದ ಬರುತ್ತದೆಂದು ನಾನು ಸುಲಭದಲ್ಲಿ ಊಹಿಸಬಲ್ಲೆ. ಪರರನ್ನು ವಂಚಿಸಿ ದ್ರವ್ಯಾರ್ಜನೆಮಾಡುವುದು ಅವನಂತವರ ಉದ್ಯೋಗವಲ್ಲವೆ? ಈ ಪಲಾಯನ ಪ್ರಸ್ತಾಪದ ಕುರಿತೇನು? ಏನೆಲ್ಲ ನೀವು ಪತ್ತೆಹಚ್ಚಿರುವಿರಿ, ಅದನ್ನು ಹೇಳಿ.'

'ಎಲ್ಲಾ ವಿಷಯಗಳಲ್ಲಿ ಅದೇ ಬಹಳ ಕಷ್ಟದ ಸಂಗತಿ ಸ್ವಾಮಿ' ತನಗೆ ಒಪ್ಪಿಸಲ್ಪಟ್ಟ ಕೆಲಸವು ಬಹಳ ಕಷ್ಟದೆಂದು ಗೋವಿಂದರಾಯರಿಗೆ ಮನದಟ್ಟಾಗುವಂತೆ ವಿನಯದಿಂದ ಆ ಗುಪ್ತ ಪೋಲೀಸನೆಂದನು. 'ಆದರೆ ಅವರ ಹಂಚಿಕೆಗಳೆಲ್ಲವನ್ನೂ ಮುರಿಯಲು ಬೇಕಾಗುವಷ್ಟನ್ನು ನಾನು ಪ್ರಯತ್ನಪೂರ್ವಕವಾಗಿ ಸಂಗ್ರಹಿಸಿರುವೆನು. ಆತನು ಒಂದು ಕಾರನ್ನು ಬರುವ ಮಂಗಳವಾರದಿಂದ ಒಂದು ವಾರದ ತನಕ ಬಾಡಿಗೆಗೆ ಕೊಂಡಿರುವನು. ಆದುದರಿಂದ ಆತನು ಪಲಾಯನಗೈಯುವ ಆಲೋಚನೆಯನ್ನು ದೃಢೀಕರಿಸಿದಂತೆ ತೋರುತ್ತದೆ.'

'ಸ್ವಲ್ಪ ತಡೆ' ಗೋವಿಂದರಾಯರೆಂದರು, 'ಬರುವ ಮಂಗಳವಾರವಲ್ಲವೆ?' ಅಂದರೆ ನಾಳ್ದು. ಕತ್ತಲೆಯ ರಾತ್ರಿ. ಒಳ್ಳೇ ದಿನವನ್ನು ಗೊತ್ತುಹಚ್ಚಿರುವರು. ನನಗೆ ಬೇಕಾದುದಷ್ಟೆ ಎಂದು ಮುಗಿಸಿ, ತನ್ನ ಕೋಶದಿಂದ ನೋಟುಗಳನ್ನು ತೆಗೆದು ಎಣಿಕೆಮಾಡಿ ಗುಪ್ತ ಪೋಲೀಸನಿಗಿತ್ತರು. ಮತ್ತು ಇನ್ನೊಮ್ಮೆ ಅಗತ್ಯ ಬೀಳಬಹುದಾದುದರಿಂದ ಆಗಾಗ್ಗೆ ಬಂದು ತನ್ನನ್ನು ಕಾಣುವಂತೆ ಹೇಳಿ ಆತನನ್ನು ಬೀಳ್ಕೊಟ್ಟರು.

ಅಂದು ಸಾಯಂಕಾಲ ತನ್ನ ಮಗಳಾದ ಮನೋರಮೆಯನ್ನು ಕರೆದು, ಮಾಲತಿಯು ವಾಸುದೇವನೆಂಬ ಸಮತಾವಾದಿಯೊಡನೆ ಪಲಾಯನಗೈಯುತ್ತಿರುವಳೆಂದು ತಿಳಿಸಿದರು. 'ಆದರಷ್ಟು, ಮಾಲತಿಯು ಹಾಗೆ ಮಾಡದಂತೆ ನೋಡಿಕೊಳ್ಳಲು ನೀನೇನು ಉಪಾಯಮಾಡಬೇಕೆಂದಿರುವೆ?' ಆಗ ಮನೋರಮೆಯು ಪ್ರಶ್ನಿಸಿದಳು.

'ಯಾವುದಾದರೊಂದು ವಿಷಯವು ಸಂಭವಿಸಬಾರದೆಂದು ನಾನು ನಿಶ್ಚಯಿಸಿದರೆ ಅದು ಮತ್ತೆ ಆಗುವುದೇ ಇಲ್ಲ' ತಂದೆ ಎಂದ.

'ಇಷ್ಟು ಬೇಗನೆ ನೀನದನ್ನು ಹೇಗೆ ಕಂಡುಹಿಡಿಯೆಂಬುದೇ ನನಗೆ ಆಶ್ಚರ್ಯದ ಸಂಗತಿಯಾಗಿದೆ. ವ್ಯಾಪಾರ ವ್ಯವಹಾರಗಳಲ್ಲೇ ಮಗ್ನನಾಗಿದ್ದ ನೀನು ನಿನ್ನ ಮೂಗಿನಡಿಯಲ್ಲೇ ಯಾರಾದರೂ ಪ್ರಣಯದಾಟಗಳನ್ನು ಮಾಡಿದರೆ, ನಿನ್ನಿಂದ ಪತ್ತೆಹಚ್ಚಲಾಗುವುದಿಲ್ಲವೆಂದು ನಾನು ಈ ತನಕ ನಂಬಿದ್ದೆ.'

ತಲೆಯಲ್ಲಾಡಿಸಿ, ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡು ಗೋವಿಂದರಾಯರು ಗಹಗಹಿಸಿ ನಕ್ಕರು ಮತ್ತು 'ನನ್ನ ಹಿರಿಮೆಯ ಗುಣಗಳನ್ನು ನೀನಿನ್ನೂ ತಿಳಿದಿಲ್ಲವೆಂಬುದು ಇದರಿಂದ ಖಚಿತವಾಗುತ್ತದೆ. ಮೂರು ಲೋಕಗಳಲ್ಲಿ ಯಾವ ಲೋಕದಲ್ಲಿಯಾದರೂ ಮಾಲತಿಯು ಪ್ರಣಯಲೀಲೆಯನ್ನು ಕೈಕೊಂಡುದಾದರೆ, ಅದನ್ನು ಸುಲಭದಲ್ಲಿ ಶೋಧಿಸುವ ಶಕ್ತಿಯು ನನಗಿದೆ.'

'ನೀನು ಬಹಳ ಬುದ್ಧಿವಂತನಪ್ಪಾ' ಆತನ ಮನೋರಮೆಯು ಹೊಗಳುವಂತೆ ನಟಿಸಿ, ಮುಂದುವರಿಸಿದಳು.

'ಮನೋರಮಾ, ನಿನಗೆ ನಾನು ಈ ವಿಷಯವನ್ನು ಹೇಳಿದುದೇಕೆಂದು ಈಗಲಾದರೂ ಗೊತ್ತಾಯಿತೆ ನಿನಗೆ?'

'ಅದೊಂದು ಒಗಟು. ಎಚ್ಚರಿಕೆಯನ್ನು ಕೊಡುವುದಕ್ಕಾಗೆಂದು ನಾನು ಭಾವಿಸುತ್ತೇನೆ.'

'ಅಲ್ಲಲ್ಲ' ಗೋವಿಂದರಾಯರೆಂದರು. 'ನೀ ಹಾಗೆಲ್ಲ ಮಾಡುವವಳಾದರೆ, ನಾನೆಂದೂ ಈ ವಿಷಯವನ್ನು ನಿನ್ನೊಡನೆ ಹೇಳುತ್ತಿರಲಿಲ್ಲ. ನನಗೀಗ ನಿನ್ನ ಸಹಾಯವು ಬೇಕಾಗಿದೆ. ಈ ಪಲಾಯನವು ನಾಳೆ ರಾತ್ರಿ ನಡೆಯಲಿಕ್ಕಿದೆ. ಆದುದರಿಂದ ಕೆಲವು ದಿನಗಳ ಮಟ್ಟಿಗೆ ಮಾಲತಿಯನ್ನು ನನ್ನ ತಮ್ಮನ ಮನೆಗೆ ಕಳುಹಬೇಕೆಂದಿದ್ದೇನೆ. ನಿಮ್ಮಿಬ್ಬರೊಳಗೆ ಪರಸ್ಪರ ಅನುರಾಗವಿದ್ದುದರಿಂದ ನನಗೆ ಗೊತ್ತಿಲ್ಲದೆ ಆಕೆಯನ್ನು ಇಲ್ಲಿಂದ ತಪ್ಪಿಸಿದರೆ, ನನಗೆ ಬೇಸರವಾಗಬಹುದೆಂದು ಇದ್ದ ಸಂಗತಿಗಳನ್ನೆಲ್ಲಾ ನನಗೆ ಮೊದಲೇ ತಿಳಿಸಬೇಕಾಯಿತು. ತಿಳಿಯಿತೇ?'

ಅಪ್ಪಾ, ಅವಳನ್ನು ಇಲ್ಲಿಂದ ತಪ್ಪಿಸಲು ಕಾರಣವೇನೆಂದು ತಿಳಿದ ನಂತರವೂ ನಾನು ಪ್ರತಿ ಹೇಳುವೆನೆಂದು ನೀನು ತಿಳಿದೆಯಾ?' ಮನೋರಮೆಯು ಉತ್ತರಿಸಿತ್ತಳು.

'ಇಲ್ಲ ಮಗಳೇ, ಅದು ಗೊತ್ತಿದ್ದೇ ನಾನು ನಿನಗೆಲ್ಲಾ ವಿಷಯಗಳನ್ನು ತಿಳಿಸಿದ್ದು. ಇನ್ನು ಹೊರಡುವ ತಯಾರಿಯನ್ನು ಬೇಗ ನಡೆಸು.' ಗೋವಿಂದರಾಯರು ತನ್ನ ಮಗಳ ಬುದ್ಧಿಯನ್ನು ಮೆಚ್ಚಿ, ಪ್ರಸನ್ನಚಿತ್ತರಾದರು.

ಮನೋರಮೆಯು ಸ್ವಲ್ಪ ಹೊತ್ತು ಆಲೋಚಿಸಿದಳು. 'ಆಗಿನ ತನಕ ದೇವರು ಒಂದಿಷ್ಟು ನೋಡಿ. ಅಪ್ಪಾ, ನಾಳೆ ಆ ತರುಣನು ಬಂದರೆ, ನೀನಾತನಿಗೆ ಏನು ಮಾಡಬೇಕೆಂದಿರುವೆ? ಆತನನ್ನು ಹೊಡೆಯುವೆಯ ಇಲ್ಲವೆ ಪೋಲೀಸರ ಕೈಗೆ ಒಪ್ಪಿಸುವೆ?' ಎಂದು ವಿಚಾರಿಸಿದಳು.

(೨೦ನೇ ಪುಟವನ್ನು ನೋಡಿ)

ಶಿಶುವಿನ ಆರೋಗ್ಯವೇ ಹೆತ್ತವರ ಸಂಪತ್ತು.

ನಮ್ಮ ಈ ನಿರ್ಭಾಗ್ಯ ದೇಶದಲ್ಲಿ ಶಿಶು ಮರಣವು ಒಂದು ಮಹಾ ಶಾಪವಾಗಿರುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಸಾಂಪತ್ತಿಕ ತರದ ಅನೇಕ ಕಾರಣಗಳಿವೆ.

ಶಿಶುಗಳ ಪೀಡೆಗಳಲ್ಲಿ, ಯಕೃತ್ತು ಸಂಬಂಧವ ಪೀಡೆಗೆ ಬಲಿಯಾಗುವ ಶಿಶುಗಳ ಸಂಖ್ಯೆಯು ಹೆಚ್ಚು. ಕೆಸರಿನ ಬಣ್ಣ ಮಲ, ಅಜೀರ್ಣ, ಹಸಿವೆಯಿಲ್ಲದಿರುವಿಕೆ, ಮಗು ಕರ್ಕಶವಾಗಿರುವುದು, ಮಲಬದ್ಧತೆ, ಜ್ವಾದಡೆ, ಹೊಟ್ಟೆ ಉಬ್ಬುವಿಕೆ, ಇವುಗಳೆಲ್ಲಾ ಈ ಪೀಡೆಯಲ್ಲಿ ಕಾಣಿಸಿಕೊಳ್ಳುವ ಚಿಹ್ನೆಗಳು. ವಿಪರೀತ ಜವಸ್ಟಿಗೆ ತೆರಳಿದ ಪೀಡೆಗಳಲ್ಲಿ, ಯಾವಾಗಲೂ ಹಳದಿ ಬಣ್ಣದ ಮೂತ್ರ, ಹಳದಿ ಬಣ್ಣದ ಕಣ್ಣುಗಳು, ಕೈಕಾಲು ಬಾತುವಿಕೆ, ಹೊಟ್ಟೆಯ ಮೇಲೆ ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆ ದೊಡ್ಡದಾಗಿರುವುದು, ಇವುಗಳು ಚಿಹ್ನೆಗಳು.

'ಲಿವರ್ ಕ್ಯೂರ್' ನ್ನೇ ಉಪಯೋಗಿಸಿರಿ—ಯಕೃತ್ತು ಮತ್ತು ಪ್ಲೀಹ ಸಂಬಂಧ ಎಲ್ಲಾ ಪೀಡೆಗಳಿಗೆ ಅದೊಂದು ಖಾತ್ರಿ ಮತ್ತು ದಿವ್ಯವಾದ ಔಷಧಿ ಎಂದು ಸರ್ವವಿದಿತವಾಗಿರುವುದು.

ನಿಮಗೆ ಸಂದೇಹಗಳಿರುವುದಾದರೆ, ಯಕೃತ್ತ ಪ್ರವೀಣರಾದ ಜಮ್ಮಿ ವೆಂಕಟ್ರಮಣಯ್ಯರವರನ್ನು ವಿಚಾರಿಸಿರಿ. ಅವರ ಅನುಭವಶಾಲಿ ಬೋಧನೆಯನ್ನು ಪಡೆದು ವರ್ತಿಸುವವರಾಗಿರಿ.

ಹೆಚ್ಚಿನ ವಿವರಗಳಿಗೆ—

ಡಾ। ಜಮ್ಮಿ ವೆಂಕಟ್ರಮಣಯ್ಯ,
ಯಕೃತ್ತು ಮತ್ತು ಪ್ಲೀಹ ಸ್ಪೆಶಲಿಷ್ಟರು,
ಮೈಲಾಪುರ, ಮದರಾಸು.

ಪಲಾಯನ

(೧೧ನೇ ಪುಟದಿಂದ)

...ಯಾಸಂಗಳಾದ ಅನೇಕ ವರ್ಷದ ಹಾಗೆಯೇ ಮಾಡಿದೆವು. 'ಗೋವಿಂದರಾಯರು ತನ್ನ ಬುದ್ಧಿ ಶಕ್ತಿಯು ಇತರರಿಗಿಂತ ಮಿಗಿಲಾದುದೆಂದು ತಿಳಿಸ ಲೋಸುಗ ಎಂತು ನಕ್ಕರು.' ಆ ದಿನ ನಾನು ಏನೂ ಗಲಾಟೆಯಿಲ್ಲದ ಸ್ವಸ್ಥ ಮಲಗುವೆನು. ನನ್ನ ಉಪಾಯಗಳೇ ಬೇರೆ. ಕಾಲಕ್ರಮದಲ್ಲಿ ನೀನದನ್ನು ತಿಳಿಯುವೆ. ಈಗ ಬೇಗನೆ ಹೋಗಿ ಮಾಲತಿಯನ್ನು ಇತ್ತ ಕಳುಹಿಸು.'

ಮಾಲತಿಯು ಬಂದಳು. ತನ್ನ ತಮ್ಮನ ಮಕ್ಕಳಿಗೆ ಅಸ್ವಸ್ಥವೆಂದೂ ಕೆಲವು ದಿನಗಳ ಮಟ್ಟಿಗೆ ಮಾಲತಿಯನ್ನು ಕಳುಹಿಸುವಂತೆ ಆತನು ತಿಳಿಸಿರುವನೆಂದೂ, ಆದ್ದರಿಂದ ಮಾಲತಿಯು ಆತನಲ್ಲಿಗೆ ಹೋಗಲು ಇಂದೇ ಹೊರಡಬೇಕೆಂದೂ ಗೋವಿಂದರಾಯರು ಆಕೆಗೆ ತಿಳಿಸಿದರು. ಮಾಲತಿಯು ಅನೇಕ ನೆವನಗಳನ್ನು ಹೇಳಿ ತಪ್ಪಿಸಿಕೊಳ್ಳಲು ನೋಡಿದಳು. ಆದರೆ ಅವಳ ಪ್ರತಿಯೊಂದು ನೆವನವು ಮಾಲತಿಯು ನಾಳಿನ ದಿನವೇ ಪಲಾಯನಮಾಡಲಿರುವಳೆಂಬ ಸಂಶಯವನ್ನು ಅವರ ಮನಸ್ಸಿನಲ್ಲಿ ಖಚಿತಪಡಿಸಿತು. ಆದುದರಿಂದ ಅವರು ಆಕೆಯನ್ನು ಬಹಳ ಒತ್ತಾಯಪಡಿಸಿ, ಗದರಿಸಿ, ಕೂಡಲೆ ಹೊರಡುವಂತೆ ಹೇಳಿ, ಸ್ವತಃ ತಾನೇ ತಮ್ಮನ ಮನೆಯಲ್ಲಿ ಬಿಟ್ಟುಬಂದರು.

ಅಂದು—ಆ ಮಂಗಳವಾರ ದಿನ—ಅವರು ಖಿಚಿತವಾಗಿಯೂ ಸೌಖ್ಯದಿಂದ ನಿದ್ದೆಹೋದರು. ಅಂದು ರಾತ್ರಿ ಏನೆಲ್ಲ ನಡೆಯಿತೆಂದು ವಿಚಾರಿಸುವ ಗೋಜಿಗೂ ಹೋಗದೆ, ಅವರು ಬೇಂಕಿಗೆ ಹೊರಟರು. ಹೋಗುವಾಗ, ಹಾದಿಯಲ್ಲಿ, ತನ್ನ ತಮ್ಮನ ಮನೆಗೆ ಹೋಗಿ, ಮಾಲತಿಯು ತನ್ನ ಆಶಾಭಂಗವಾದುದಕ್ಕಾಗಿ ಯಾವ ರೀತಿಯಲ್ಲಿರುವಳೆಂದು ನೋಡಿಯೇ ಆಫೀಸಿಗೆ ಹೋಗೋಣವೆಂದು ಬಗೆದರು. ಆಕೆಯ ಪಲಾಯನ ಪ್ರಸಂಗವನ್ನು ತಾನು ಅತಿ ಚಾತುರ್ಯದಿಂದ ಭಗ್ನಮಾಡಿರುವೆನೆಂಬ ಹಿಗ್ಗು, ಅವರ ಮುಖದಲ್ಲಿ ಮುಗುಳ್ನಗೆಯ ಛಾಯೆಯನ್ನು ಬೀರಿತ್ತು.

'ಮನೋರಮೆಯು ಸೌಖ್ಯದಲ್ಲಿರುವಳೇ ಚಿಕ್ಕಪ್ಪ?' ಗೋವಿಂದರಾಯರನ್ನು ಕಂಡೊಡನೆ ಮಾಲತಿಯು ಮೊದಲು ಕೇಳಿದಳು.

'ಹುಡುಗಿಯು ನಿಜವಾಗಿಯೂ ಚಿಂತಾಮಗ್ನಳಾದಂತೆ ತೋರುತ್ತದೆ.' ಗೋವಿಂದರಾಯರು ನೆನೆದರು. 'ಹೌದು, ಸೌಖ್ಯದಿಂದಿದ್ದಿರಬೇಕು. ನಿನ್ನೆ—'

'ಈ ದಿನ ಬೆಳಗಾತ ನೀನಾಕೆಯನ್ನು ನೋಡಿರುವೆಯಾ?' ಅವಳು ಒತ್ತಿ ಕೇಳಿದಳು.

'ಇಲ್ಲ. ನಾನು ಯಾವಾಗಲೂ ಬೆಳಗಾತ ಆಕೆಯನ್ನು ಕಾಣುವುದಿಲ್ಲ.' ಗೋವಿಂದರಾಯರೆಂದರು.

'ಎಂದಿನಂತೆ ಇಂದಿನ ದಿನವಲ್ಲ.' ಮಾಲತಿಯು ಉದ್ವಿಗ್ನತೆಯಿಂದ ಅಂದಳು. 'ಚಿಕ್ಕಪ್ಪಾ ನಾನೀಗಲೇ ಹೋಗಿ ಆಕೆಯನ್ನು ಕಾಣಲೆ?'

ಈ ಹುಡುಗಿಯು ಇನ್ನೂ ತನ್ನ ಕಣ್ಣುಗಳಲ್ಲಿ ಮಣ್ಣೆರಚಲು ನೋಡುತ್ತಿರುವಳೆಂದು ಗೋವಿಂದರಾಯರು ಭಾವಿಸಿದರೊಮ್ಮೆ. ಆದರೂ ತನ್ನ ಭಾವನೆಗಳನ್ನು ಹೊರಗೆಡಹದೆ, 'ಅವಳು ಮನೆಯಲ್ಲಿರುವಳೇ ಇಲ್ಲವೇ ಎಂದು ನೋಡುವುದಕ್ಕಾದರೆ, ನೀನಲ್ಲಿಗೆ ಹೋಗಬೇಕಾದ ಅವಶ್ಯಕತೆಯೇ ಇಲ್ಲ. ನಾನಿಲ್ಲಿಂದ ಫೋನ್ ಮಾಡಿ ತಿಳಿದುಕೊಳ್ಳುವೆನು.

ಕೆಲವು ಕ್ಷಣಗಳ ತರುವಾಯ ಫೋನಿನಲ್ಲಿ ಮಾತಾಡಿದೊಡನೆ ಆದೊಂದು ಬಗೆಯ ವ್ಯಾಕುಲಿತ ಸ್ವರದಿಂದ ಗೋವಿಂದರಾಯರು ಮಾಲತಿಯೊಡನೆ 'ಮನೋರಮೆಯು ಮನೆಯಲಿಲ್ಲವಂತೆ. ಈ ದಿನ ಪ್ರಾತಃಕಾಲ ಆಳುಗಳು ಆಕೆಯನ್ನು ಕಂಡುದೇ ಇಲ್ಲವಂತೆ' ಎಂದರು.

'ಹಾ, ಚಿಕ್ಕಪ್ಪಾ, ಆಗುವುದು ಆಗಿಯೇ ಹೋಯಿತು!' ಮಾಲತಿಯು ಕಂಪಿತ ಸ್ವರದಿಂದ ಅಂದಳು.

'ಏನದು ಮಾಲತಿ, ಆಗುವುದು ಆಯಿತು?'

'ಆವಳು ಓಡಿರುವಳು—ಪಲಾಯನ ಮಾಡಿರುವಳು.'

'ಪಲಾಯನ ಮಾಡಿರುವಳೆ? ಯಾರೊಡನೆ? ಎಲ್ಲಿಗೆ? ಹೇಗೆ?' ಗೋವಿಂದರಾಯರು ಬಹಳ ಕಷ್ಟದಿಂದ ಪ್ರಶ್ನಿಸಿದರು. ಅವರ ಕಂಠವು ಬಿಗಿದುಬಂದಿತ್ತು; ಮುಖವು ಬಿಳುಪು ತಿರುಗಿತ್ತು.

'ಆಕೆಯು ಪ್ರೀತಿಸುತ್ತಿದ್ದ ಒಬ್ಬ ತರುಣನೊಡನೆ ಪಲಾಯನಗೈದಿರುವಳು. ಸ್ವಲ್ಪ ಸಮಯದಿಂದ ನನಗಿದು ಗೊತ್ತಿದ್ದರೂ, ನಿನ್ನೊಡನೆ ಹೇಳಿದರೆ ಅದು ಎಲ್ಲರಿಗೂ ತಿಳಿದು ಅಪಮಾನಕ್ಕೆ ಗುರಿಯಾಗಬೇಕಾದೀತೆಂದು ಈ ತನಕ ನಾನು ಸುಮ್ಮನಿದ್ದೆ. ಆದರೆ ಆ ತರುಣನೊಡನೆ ಮಾತನಾಡಿ ಅವರಿಬ್ಬರೂ ಪಲಾಯನವಾಗದಂತೆ ನಾನು ಅಂದಿನಿಂದ ಪ್ರಯತ್ನಿಸುತ್ತಿದ್ದೆ. ಕಾರಣ, ಆತನೊಡನೆ ಮನೋರಮೆಯ ಲಗ್ನವಾಗುವಂತೆ ನೀನೆಂದೂ ಸಮ್ಮತಿಸಲಿಕ್ಕಿಲ್ಲವೆಂದು ನನಗೆ ಗೊತ್ತಿತ್ತು. ಆದರೆ ಈಗ ಅದು ಆಗಿಯೇ ಹೋಯಿತು.' ನಿಟ್ಟುಸಿರಿಡುತ್ತ ಮಾಲತಿಯು ಬಿಕ್ಕಿ ಬಿಕ್ಕಿ ಅಂದಳು.

ಗೋವಿಂದರಾಯರ ಕಣ್ಣುಗಳಲ್ಲೂ ಕಂಬನಿಗಳು ಉಕ್ಕೇರುತ್ತಿದ್ದುವು. ಆದರೆ ಪ್ರಯತ್ನಪೂರ್ವಕವಾಗಿ ಅವುಗಳನ್ನು ತಡೆದು 'ಆ ತರುಣನನ್ನು ಒಂದು ವಾರದ ಹಿಂದೆ ನೀನೊಂದು ಕಾಫಿಹೊಟೇಲಿನಲ್ಲಿ ಕಂಡಿದ್ದೆಯಷ್ಟೆ!' ಎಂದು ಮಾಲತಿಯೊಡನೆ ಪ್ರಶ್ನಿಸಿದರು.

'ಹೌದು, ಅಂದುಮಾತ್ರವಲ್ಲ ಆದರ ನಂತರವೂ ನಾನಾತನನ್ನು ಕಂಡು, ಮನೋರಮೆಯೊಡನೆ ಆತನು ಪ್ರೇಮಸಲ್ಲಾಪಗಳನ್ನು ನಡೆಸುವುದು ಅಯೋಗ್ಯವೆಂದೂ, ಅದಕ್ಕೆ ನಿನ್ನ ಸಮ್ಮತಿ ಎಂದೂ ಇರಲಿಕ್ಕಿಲ್ಲವೆಂದೂ ಆತನನ್ನು ಸರಿದಾರಿಗೆ ಹಚ್ಚಲು ಬಹಳ ಪ್ರಯತ್ನಪಟ್ಟಿದ್ದೆ. ಆತನು ಮನೋರಮೆಯೊಡನೆ ಪಲಾಯನ ಮಾಡುವೆನೆಂದೊಡನೆ, ಹಾಗೆಂದೂ ಮಾಡಕೂಡದೆಂದು ನಾನವನೊಡನೆ ಯಾಚಿಸಿದ್ದೆ. ಆದರಿಂದ ಉಭಯತರಿಗೂ ಅಪಮಾನವಾಗುವುದಲ್ಲದೆ ಹಿತವಾಗಲಿಕ್ಕಿಲ್ಲವೆಂದೂ ನಾನು ತಿಳಿಸಿದ್ದೆ. ಆಗ ಆತನು ಹಾಗೆಂದೂ ಮಾಡುವುದಿಲ್ಲವೆಂದು ನನಗೆ ಭಾಷೆಯನ್ನಿತ್ತಿದ್ದನು. ಆದರೂ ನನಗೆ ಅಂಜಿಕೆಯಿತ್ತು. ಆದಕ್ಕಾಗಿಯೇ ನಾನು ಮನೋರಮೆಯನ್ನು ಏರ್ವಳೇ ಬಿಟ್ಟು ಹೋಗಬೊಲ್ಲೆನೆಂದು ಅಂದು ನಿನ್ನೊಡನೆ ಹಟ ತೊಟ್ಟುದು. ಚಿಕ್ಕಪ್ಪಾ, ನನ್ನನ್ನು ನೀನು ಮನೆಯಿಂದ ತಪ್ಪಿಸದಿದ್ದರೆ ಇದೆಂದೂ ಸಂಭವಿಸುತ್ತಿದ್ದಿಲ್ಲ.' ಎಂದುಸುರಿ ಮಾಲತಿಯು ಪುನಃ ಕಣ್ಣೀರು ಸುರಿಸತೊಡಗಿದಳು.

ಸ್ವಲ್ಪ ಸಮಯದ ನಂತರ ಇಬ್ಬರೂ ಮನಸ್ಸಿಗೆ ತುಸು ಸಮಾಧಾನವನ್ನು ತಂದುಕೊಂಡು, ಮನೆಗೆ ಧಾವಿಸಿದರು. ಮನೋರಮೆಯು ಮನೆಯಲ್ಲಿ ಎಲ್ಲಿಯೂ ಇರಲಿಲ್ಲ. ಗೋವಿಂದರಾಯರ ಮೇಜಿನ ಮೇಲೆ ಮಾತ್ರ ದೊಡ್ಡ ದೊಡ್ಡ ಅಕ್ಷರಗಳಿಂದ ಅವರ ವಿಳಾಸವನ್ನು ಬರೆದ ಒಂದು ಪತ್ರವು ಇದ್ದಿತು.

'ಪ್ರಿಯ ಅಪ್ಪಾ!' ಅದರಲ್ಲಿ ಬರೆದಿತ್ತು, 'ಈ ಪತ್ರವನ್ನು ನೀನು ಓದುವ ಹೊತ್ತಿಗೆ ನಾನು ಕಮ್ಮಿಯೆಂದರೆ ಇನ್ನೂರು ಮುನ್ನೂರು ಮೈಲುಗಳ ದೂರದಲ್ಲಿರಬಹುದು. ಆದರೆ ನನ್ನ ಕುರಿತು ಚಿಂತಿಸಬೇಡ. ನನ್ನ ಮನದನ್ನನ ಆಶ್ರಯದಲ್ಲಿ ನಾನು ಸುರಕ್ಷಿತಳಾಗಿ ಇರಬಲ್ಲೆ. ನಮ್ಮನ್ನು ನೀನು ಹುಡುಕಾಡಿದರೆ ಏನೂ ಫಲಕಾರಿಯಾಗಲಿಕ್ಕಿಲ್ಲ. ಆದರೆ ಮುಂದೆ ಒಂದು ದಿನ ನಾವಿಬ್ಬರೂ ವಿವಾಹಮಾಡಿಕೊಂಡು ದಂಪತಿಗಳಾಗಿ ಪುನಃ ಮಂಗಳೂರಿಗೆ ಬರುವೆವು. ಹೇಗೆಂತು ನಮ್ಮ ಪಲಾಯನ ಪ್ರಸಂಗದಲ್ಲಿ ಒತ್ತಾಸೆಯನ್ನು ಮಾಡಿದುದಕ್ಕಾಗಿ ನಿನಗೆ ಆಭಾರವನ್ನು ಸಲಿಸದಿದ್ದರೆ ನನ್ನನ್ನು ಜನರು ಕೃತಘ್ನೆಯೆನ್ನಬಹುದು. ತಾನು ಬಹಳ ಬುದ್ಧಿವಂತನೆಂದು ನೀವು ತಿಳಿದಿದ್ದರೂ, ನಾನೂ ನಿನ್ನ ಮಗಳೆಂಬುದನ್ನು ಮಾತ್ರ ಮರೆತಂತೆ ತೋರುತ್ತದೆ.

ನಿನ್ನ ಪ್ರೀತಿಯ ಮನೋರಮೆ.'

ಪತ್ರವನ್ನು ಓದಿಯಾದೊಡನೆ ಗೋವಿಂದರಾಯರ ಕೈಯಿಂದ ಅದು ತಾನಾಗಿ ಕಳಚಿ ಬಿತ್ತು. ತಲೆ ತಿರುಗಿದಂತಾಗಿ ತಡವರಿಸುತ್ತ, ಅವರು ಒಂದು ಕುರ್ಚಿಯ ಮೇಲೆ ಒರಗಿ, ಒಂದಿಷ್ಟು ನೀರನ್ನು ತರುವಂತೆ ಮಾಲತಿಯೊಡನೆ ಹೇಳಿದರು. ಈ ತನಕ ತಾನು ಕೈಕೊಂಡ ಕಾರ್ಯದಲ್ಲಿ ಅಪಜಯವನ್ನು ಹೊಂದಿಲ್ಲವೆಂದು ಅವರು ಹೆಮ್ಮೆಪಟ್ಟರೂ ಇಂದು ತನ್ನ ಮಗಳಿಂದಾಗಿ ಪರಾಜಯದ ಕಹಿ ಫಲವನ್ನು ಚುಂಚಿಸಬೇಕಾಯಿತು!

ಫೆನ್ಸಿ ಶರ್ಟಿಂಗ್

ಮಂಜು ಬಣ್ಣದ್ದು ಅತಿ ನ್ಮದುವಾದುದು, ಮತ್ತು ದೀರ್ಘ ಬಾಳ್ವಿಕೆಯುದು.

9 ಗಜ×54′–6 ಶರ್ಟುಗಳಿಗೆ ಸಾಕಾಗುವುದು. ಕ್ರಯ ರೂ. 5–8–0

ಟಪ್ಪಾಲು ಖರ್ಚು ಧರ್ಮಾರ್ಥ, ಇದರೊಡನೆ 6 22×22 ಪೆನ್ಸಿ ಕರವಸ್ತ್ರಗಳು ಉಚಿತವಾಗಿ ಕೊಡಲಾಗುವವು.

ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ದಿ ನೇಶನಲ್ ಟ್ರೇಡಿಂಗ್ ಕಂಪೆನಿ

ಲೂದಿಯಾನಾ, A 211.

10,000 ರೂಪಾಯಿಗಳ ಬಹುಮಾನ

ಪ್ರತಿವಾರವೂ 100 ರೂಪಾಯಿಗಳ 4 ಬಹುಮಾನಗಳು

6 ತಿಂಗಳುಮಾತ್ರ

ನಂಬರಿನ ರ್‍ಯಾಪರುಗಳನ್ನು ಶೇಖರಿಸಿರಿ.



ದೊಡ್ಡ ಲಕ್ಸ್ ಟಾಯಿಲೆಟ್ ಸಾಬೂನಿನ ನಂಬರುಳ್ಳ ನಾಲ್ಕು ರ್‍ಯಾಪರುಗಳನ್ನು ಕಳುಹಿಸಿರಿ. ನಿಮ್ಮ ಸ್ಥಳದಲ್ಲಿ ಆ ವಾರದಲ್ಲಿ ನೀವು ಶೇಖರಿಸಿದ ನಾಲ್ಕು ರ್‍ಯಾಪರುಗಳ ಒಟ್ಟುಸಂಖ್ಯೆಯು ಎಲ್ಲರದಕ್ಕಿಂತಲೂ ಹೆಚ್ಚಾಗಿದ್ದಲ್ಲಿ ನಿಮಗೆ 100 ರೂಪಾಯಿ ನಗದು ಬಹುಮಾನವಾಗಿ ಕೊಡಲ್ಪಡುತ್ತೆ. ನಾಲ್ಕು ಗೊತ್ತಾದ ಸ್ಥಳಗಳುಂಟು. ಪ್ರತಿ ವಾರವೂ ಪ್ರತಿ ಸ್ಥಳದಲ್ಲೂ 100 ರೂಪಾಯಿಗಳ ಬಹುಮಾನವನ್ನು 1939ನೇ ಜನವರಿ ವರೆಗೂ ಕೊಡಲಾಗುತ್ತೆ.

ಈಗಲೇ ಶೇಖರಿಸುವುದಕ್ಕೆ ಪ್ರಾರಂಭಿಸಿರಿ !

★ ಬರೆಯುವವಿಧಾನ

ರ್‍ಯಾಪರುಗಳೊಂದರಲ್ಲಿ ನಿಮ್ಮ ಹೆಸರು, ಅಡ್ರೆಸ್ಸನ್ನು ಸ್ಪಷ್ಟವಾಗಿ ಬರೆಯಿರಿ. ನಿಮ್ಮ ನಾಲ್ಕು ರ್‍ಯಾಪರುಗಳನ್ನು ಕೆಳಗೆ ನಮೂದಿಸಿರುವ ಸ್ಥಳಗಳ ಅಡ್ರೆಸ್ಸುಗಳಲ್ಲಿ ಯಾವುದಾದರೊಂದಕ್ಕೆ ಕಳುಹಿಸಿರಿ —

ಬೊಂಬಾಯಿ

ಲಿವರ್ ಬ್ರದರ್ಸ್ (ಇಂಡಿಯಾ) ಲಿಮಿಟೆಡ್,
ಪೋ. ಬಾ. ನಂ. 409, ಹೇಗಲಿ ಹೌಸ್, ಗ್ರಹಾಂರೋಡು,
ಬ್ಯಾಲಾರ್ಡ್ ಎಸ್ಟೇಟು, ಬೊಂಬಾಯಿ, ಇಂಡಿಯ.

ಕರಾಚಿ

ಲಿವರ್ ಬ್ರದರ್ಸ್ (ಇಂಡಿಯಾ) ಲಿಮಿಟೆಡ್,
ಪೋ. ಬಾ. ನಂ 220, ಕೆಲ್ಲಾಕ್ ಟೆರೇಸು,
ಮಾಚಿಮಿಯಾನರೋಡು, ಕರಾಚಿ, ಇಂಡಿಯ.

ಕಲ್ಕತ್ತ

ಲಿವರ್ ಬ್ರದರ್ಸ್ (ಇಂಡಿಯಾ) ಲಿಮಿಟೆಡ್,
ಪೋ. ಬಾ. ನಂ. 358, ಸಾಪ್ಪೂರ್‌ಹೌಸ್,
4, ಲಯನ್ಸ್ ರೇಂಜ್, ಕಲ್ಕತ್ತ, ಇಂಡಿಯ.

ಮದ್ರಾಸು

ಟಿ. ಟಿ. ಕೃಷ್ಣಮಾಚಾರಿ, ಪೋ. ಬಾ. ನಂ 200,
11-14, ಆರ್ಮೇನಿಯನ್ ಸ್ಟ್ರೀಟು, ಮದ್ರಾಸು, ದ ಇಂಡಿಯ.

ಲಕ್ಸ್ ಟಾಯಿಲೆಟ್ ಸಾಬೂನು

ಇಂಡಿಯಾದಲ್ಲೇ ಸಸ್ಯಗಳ ಶೋಧಿಸಿದ ಎಣ್ಣೆಯಿಂದಲೇ ತಯಾರಿಸಿದ್ದು.

X-LTS 333-66A LEVER BROTHERS (INDIA) LIMITED
KANARESE

ಹಿಮಾಲಯದ ತುದಿಯ ಮೇಲೆ ವಾಸಿಸುವ ಜನರು

ಟಿಬೆಟ್ಟು ಲಾಮರ ಅಧಿಕಾರದಲ್ಲಿದೆ

ಅವರ ಅಪ್ಪಣೆ ವಿನಹ ಅನ್ಯರು ಯಾರೂ

ಆ ಪ್ರದೇಶವನ್ನು ಪ್ರವೇಶಿಸಬಾರದು

ಜಗತ್ತಿನಲ್ಲಿ ಅತ್ಯಂತ ಉನ್ನತವೆನಿಸುವ ಹಿಮಾಲಯದ ಅತಿ ಮೇಲಿನ ಇಳಿಜಾರಿನಲ್ಲಿರುವುದು ಹಿಮ ಮುಸುಕಿದ ಟಿಬೆಟ್ ಭೂಮಿ. ಇಂದು ಈ ದೇಶವು ಬೌದ್ಧ ಧರ್ಮದ ಕೇಂದ್ರವಾಗಿರುತ್ತದೆ. ಲ್ಹಾಸಾವೆ ಟಿಬೆಟ್ಟಿನ ರಾಜಧಾನಿ. ಅಲ್ಲಿರುವ ದಲಾಯಿ ಲಾಮನೆ ಟಿಬೆಟ್ ರಿಪಬ್ಲಿಕಿನ ಆಡಳಿತೆಗಾರನು. ಎರಡು ವರ್ಷಗಳ ಹಿಂದೆ ಮೃತನಾದ ದಲಾಯಿ ಲಾಮನು ಬುದ್ಧನ ಅವತಾರವೆಂದು ಪರಿಗಣಿಸಲ್ಪಟ್ಟಿದ್ದನು. ಅವನು ಮತ್ತೊಮ್ಮೆ ಜೀವಕ್ಕೆ ಬರುವನೆಂದು ಟಿಬೆಟ್ಟಿನ ಜನರ ನಂಬಿಕೆ. ದಲಾಯಿ ಲಾಮನು ಮೃತಪಟ್ಟ ದಿನವೆ ನೂತನ ದಲಾಯಿ ಲಾಮನು ಜನಿಸಿರುವನೆಂದು ನಂಬಿರುವ ಟಿಬೆಟ್ಟಿನ ಜನರು, ಆತನನ್ನು ಹುಡುಕಾಡುತಿದ್ದಾರೆ. ಆತನನ್ನು ಹುಡುಕಿ ತರುವ ತನಕ ದಲಾಯಿ ಲಾಮನ ಸ್ಥಳದಲ್ಲಿ ಒಬ್ಬ ರಿಜೆಂಟನಿದ್ದು ರಾಜ್ಯಾಡಳಿತವು ನಡೆಯುತ್ತಿರುವುದು.

ಟಿಬೆಟ್ಟಿನ ಈ ವಿಚಿತ್ರ ಜನರು, ಚಿಣ್ಣೆಯಿಂದ ಕೈ ಸ್ನಾನಗಯ್ಯುವವರು, ಕೈಕಾಲು ತೊಳೆಯುವವರು. ದಿನ ಒಂದರ ಕಡಿಮೆಯೆಂದರೆ 50 ಬಟ್ಲು ಚಹಾವನ್ನು ಪಾನಮಾಡುವವರು. ಟಿಬೆಟ್ಟಿನವರು ಮಂತ್ರವಾದ ಜನರೆಂದೆಣಿಸಬೇಕು. ಹಿಮಕಟ್ಟುವ ಶೀತವಿರುವ ಆ ಪ್ರದೇಶದಲ್ಲಿ ತಮ್ಮ ದೇಹದೊಳಗಿಂದಲೆ ಶಾಖವನ್ನು ಹೊರಡಿಸಿ, ನಗ್ನರಾಗಿ ದಿನ ಕಳೆಯುವ ಜನರು, ವಿಶ್ರಾಂತಿ, ಆಹಾರ, ಪಾನೀಯವಿಲ್ಲದೆನೆ ಅತಿ ದೂರಕ್ಕೆ ನಿಲ್ಲದೆ ಓಡುವ ಜನರು, ನಿಲ್ಲದೆ ರಾತ್ರೆ ಹಗಲು ಅನೇಕ ದಿನಗಳ ತನಕ ನಲಿದಾಡುವ ಜನರು, ಟಿಬೆಟ್ಟಿನ ಮಾಯಾವಿಗಳಲ್ಲಿ ಕೆಲವರು.

ಟಿಬೆಟ್ಟು ಆಶ್ರಮಗಳಿಂದ ತುಂಬಿದ್ದ ಊರು. ಈ ಆಶ್ರಮಗಳಲ್ಲಿ ಜಗತ್ತು ತ್ಯಜಿಸಿ, ಏಕಾಗಿರುವ ಸಾವಿರಾರು ಮಂದಿ ಲಾಮರು ಇರುವರು. ಈ ಸನ್ಯಾಸಿಗಳಿಗೆ ಹೊರಗಿನವರನ್ನು ನೋಡಲೆ, ಯಾ ಅವರೊಡನೆ ಮಾತನಾಡಲೆ ಬಾರದಾಗಿ ಬಲವಾದ ನಿರ್ಬಂಧಗಳಿರುವುವು. ಧ್ಯಾನ ಮತ್ತು ಏಕಾಂಗಿತನವೆ ಅವರ ಅಲ್ಲಿನ ಸ್ನೇಹಿತರು. ಸ್ತ್ರೀಯರಿಗೆ ಮತ್ತು ಪುರುಷರಿಗೆಂದು ಅಲ್ಲಿ ಬೇರೆ ಬೇರೆ ಮಠಗಳಿರುವುವು. ಈ ತರದ ಲಾಮರ ಕೆಲವು ಮಠಗಳಲ್ಲಿ 6,000ದಿಂದ 10,000ದ ವರೆಗೆ ಲಾಮರು ವಾಸವಾಗಿರುವರು. ಕುಟುಂಬದಲ್ಲಿ ಜನಿಸಿದವರಲ್ಲಿ ಒಬ್ಬರನ್ನು ಲಾಮನಾಗಿ ಈ ಲಾಮಾ ಮಠಗಳಿಗೆ ಒಪ್ಪಿಸಿಬಿಡುವುದು ಅಲ್ಲಿನ ಕುಟುಂಬಗಳಲ್ಲಿ ಒಂದು ಕ್ರಮವಾಗಿರುತ್ತದೆ. ಟಿಬೆಟ್ಟಿನ ಈ ಲಾಮಾ ಮಠಗಳು, ವಿಚಿತ್ರ ನೋಟಗಳಾಗಿವೆ.

ಚಕ್ರವ್ಯೂಹದಂತಿರುವ ಹಾದಿಗಳು, ಗಾಳಿಯಿಲ್ಲದ ಕೋಣೆಗಳು, ಅರೆ ಬೆಳಕು, ಸ್ವಾಗತೀಕರಿಸುವ ವಿಚಿತ ಪದ್ಧತಿಗಳು, ಬೆಣ್ಣೆ ಸೇರಿಸಿದ ಚಹಾ, ಬೀಯು ಬಟ್ಲುಗಳು, ಪರ್ವತಗಳಿಂದ ಪಡೆದ ಆಭರಣಗಳು, ಚೀನಾ ಜಮಖಾನಗಳು, ಇವುಗಳೆಲ್ಲಾ ಈ ಆಶ್ರಮಗಳಲ್ಲಿ ಕಣ್ಣಿಗೆ ಬೀಳುವ ವಿಚಿತ್ರ ನೋಟಗಳು.

ಪುನರ್ಜನ್ಮವು ಇದೆ ಎಂಬ ದೃಢ ವಿಶ್ವಾಸವುಳ್ಳವರು ಟಿಬೆಟ್ಟಿನ ಜನರು. ಅವರಿಗೆ ಪ್ರಕೃತ ಗಿಂತ ಭವಿಷ್ಯವೆ ಮಹತ್ವವಾದುದು. ಅನುದಿನವು ಧ್ಯಾನಸಕ್ತರಾಗಿ ಸಮಾಧಿಯನ್ನು ಅಭ್ಯಾಸಿಸಿದ ಈ ಬೌದ್ಧ ಲಾಮರು, ಕೆಲವು ಕೌತುಕಮಯ ಸಂಗತಿಗಳನ್ನು ನಡೆಯಿಸಬಲ್ಲರು. ಕೆಲವು ಪಕೀರರಂತೆ ತಮ್ಮ ಪ್ರೇಕ್ಷಕರ ಮನವನ್ನು ಆಕರ್ಷಿಸುವ ವಿಚಿತ್ರ ಶಕ್ತಿಯು ಈ ಲಾಮ ಜನರಲ್ಲಿ ಕಾಣಿಸುತ್ತದೆ.

ಹಿಮಾಲಯಾರೋಹಣಕ್ಕಾಗಿ ಮೇಲಕ್ಕೆ ಹೋದ ತಂಗಡವೊಂದು ಟಿಬೆಟ್ಟಿನ ರೊಂಗ್ಬೊಕ್ ಮಠದಲ್ಲಿರುವ ದಲಾಯಿಲಾಮಾ (ಮುಖ್ಯ ಲಾಮಾ)ರನ್ನು ದರ್ಶನಕ್ಕಾಗಿ ತೆರಳಿದವರ ಅನುಭವವು ವಿಚಿತ್ರವಿದೆ. ಈ ದರ್ಶನದಲ್ಲಿ ಗ್ರೇಂಡ್ ಲಾಮನು ಬಂದವರೊಡನೆ ಒಂದೊಂದು ಮಾತನ್ನು ಆಡಿದ್ದಿಲ್ಲ. ಮೌನವಾಗಿರುವ ಈ ಲಾಮನ ವ್ಯಕ್ತಿತ್ವವು ಅವರನ್ನು ಸಂಪೂರ್ಣ ಆಕರ್ಷಿಸಿಬಿಟ್ಟಿತಂತೆ. ತಾವು ಅತ್ಯಂತ ಪವಿತ್ರನಾದ ಒಬ್ಬನ ದರ್ಶನ ಮಾಡಿ ಹೊರಗೆ ಬಂದಿರುವೆವೆಂಬ ಅಭಿಪ್ರಾಯದಿಂದ ದಿಗ್ಮೂಢರಾಗಿ ಮಠದಿಂದ ಹೊರ ಹೊರಟರಂತೆ.

ಹಿಮಾಲಯವು ಈ ಜಗತ್ತಿನ ದೇವಿಮಾತೆ ಎಂದು ಟಿಬೆಟ್ಟಿನ ಸನ್ಯಾಸಿಗಳ ಅಭಿಪ್ರಾಯವು. ಹಿಮಾಲಯವನ್ನು ಅವರು ಒಂದು ಜೀವಿತ ವಸ್ತುವಾಗಿ ಪರಿಗಣಿಸುತ್ತಾರೆ. ಅದಕ್ಕೆ ಪ್ರಾಣ [illegible] ಉಂಟೆಂದು ಅವರು ನಂಬುತ್ತಿದ್ದಾರೆ. ಅವರು ಹಿಮಾಲಯದ ಪೂಜೆಯನ್ನು ಮಾಡುವುದಲ್ಲದೆ, ಅದಕ್ಕೆ ಚಹಾ, ಹಾಲು, ಜೇನು, ತುಪ್ಪ ಇತ್ಯಾದಿಗಳ ಅರ್ಪಣೆಯನ್ನು ಮಾಡುತ್ತಾರೆ.

ಜನ್ಮಕ್ಕೆ ಬಂದಂದಿನಿಂದ ಸಾಯುವ ತನಕ ಮೈ ತೊಳೆಯುವ ಪದ್ಧತಿಯು ಟಿಬೆಟ್ಟಿನ ಜನರಲ್ಲಿರುವುದಿಲ್ಲ. ಈ ಕಾರಣದಿಂದಾಗಿ ಅವರ ಮೈಯು ದಪ್ಪಗಾಗಿ ಕಪ್ಪಾಗಿ ಹೋಗಿರುತ್ತದೆ. ಟಿಬೆಟ್ಟಿನಲ್ಲಿ ಶೀತವು ವಿಪರೀತವಾಗಿರುವುದರಿಂದ, ಅಲ್ಲಿ ಸ್ನಾನ ಮಾಡಲು ಸಾಧ್ಯವೆ ಇಲ್ಲ. ವೈಶಾಖದಲ್ಲೂ ಅವರು ಉಣ್ಣೆಯ ವಸ್ತ್ರಗಳನ್ನೆ ತೊಟ್ಟುಕೊಳ್ಳಬೇಕಾಗಿದೆ. ಚಳಿಯಿಂದ ರಕ್ಷಿಸಿಕೊಳ್ಳುವರೆ ಮೈಗೆ ಬೆಣ್ಣೆ ಹಚ್ಚಿಕೊಳ್ಳುತ್ತಿದ್ದಾರೆ. ಈ ರೀತಿ ಮೈಗೆ ಬೆಣ್ಣೆಯನ್ನು ತಿಕ್ಕಿತಿಕ್ಕಿ ಮ್ಯಾಮೇಲೆ ಉಂಟಾದ ಪದರಿನಿಂದ ಅವರಿಗೆ ಅಲ್ಲಿನ ಕಠಿಣ ಚಳಿಯನ್ನು ಸಹಿಸಲು ಸಾಧ್ಯವಾಗುತ್ತದೆ. ಎದರೆ ಟಿಬೆಟ್ಟಿನ ಜನರು ದಪ್ಪಗಾಗಿ ಬೆಳೆಯುವುದಿಲ್ಲ. ಒಣಗಿಸಿದ ಮಾಂಸವು ಟಿಬೆಟ್ಟಿನಲ್ಲಿ ರಾಜವರ್ಗದವರ ಆಹಾರವೆಂದು ಪರಿಗಣಿಸಲ್ಪಡುತ್ತಿರುವುದು. ಟಿಬೆಟ್ಟಿನಲ್ಲಿ ಯಾವಾಗಲೂ ದೊರಕುವುದೆಂದರೆ ಬೆಣ್ಣೆ ಬೆರಸಿದ ಚಹಾ. ಸನ್ಯಾಸಿಯೂ ಗೋವಳನೂ ದಿನ ಒಂದಕ್ಕೆ 50 ಬಟ್ಲು ಚಹಾಪಾನವನ್ನು ಮಾಡುತ್ತಿರುವನು. ನಾಲಗೆಯನ್ನು ಹೊರಗೆ ತೆಗೆದಿಡುವುದು [illegible] ಟಿಬೆಟ್ಟಿನ ಪ್ರಣಾಮ ರೀತಿ, [illegible]

ಮೊಣಕಾಲಿನ ವರೆಗೆ [illegible] ಉಡುಪು. ಇದಕ್ಕೆ ಚೊಬಾ ಎಂದು ಕರೆಯುತಿದ್ದಾರೆ. ರಾತ್ರಿ ಸಮಯ ಈ ಚೊಬಾ ಅಂಗಿಯನ್ನು ಇನ್ನೂ ಕೆಳಕ್ಕೆ ಇಳಿಯಬಿಟ್ಟು ಅದನ್ನು ರಾತ್ರೆಅಂಗಿಯಾಗಿ ಮಾರ್ಪಡಿಸುತ್ತಾರೆ. ಚಿಂದಿಗಳಾಗಿ ಹೋಗುವ ತನಕ, ಟಿಬೆಟನವರು ಈ ಚೊಬಾ ಅಂಗಿಯನ್ನು ಧರಿಸುತ್ತಾರೆ.

ಪ್ರಾರ್ಥನೆಗಾಗಿ ಲಾಮಾರವರು ಮಠಗಳಲ್ಲಿ ದಿನಂಪ್ರತಿ ಪುನರಾವರ್ತಿ ಒಟ್ಟುಗೂಡುವುದುಂಟು. ಅತ್ಯಧಿಕ ಭಕ್ತಿಯಿಂದೊಡಗೂಡಿದ ಪ್ರಾರ್ಥನೆಯು ಅವರದು. ಪ್ರಾರ್ಥನೆ ಚಕ್ರ, ಡೋಲು, ಗಂಟೆ ತಾಳ, ಕೊಂಬು, ಮಣಿ ಮತ್ತು ಪತಾಕೆಗಳೂ ಉಪಯೋಗಿಸಲ್ಪಟ್ಟು ಈ ಪ್ರಾರ್ಥನೆಯು ನಡೆಯುತ್ತದೆ. ತಮ್ಮ ಮಠಗಳಲ್ಲಿ ಅವರು ಬೆಣ್ಣೆಯಿಂದ ನಿರ್ಮಿಸಲ್ಪಟ್ಟ ಬುದ್ಧನ ಪ್ರತಿಮೆಯನ್ನಿಡುತ್ತಾರೆ.

ಲಾಮರಿಂದ ಆಳಲ್ಪಡುವ ಊರು ಟಿಬೇಟು. ಅನ್ಯ ಜನರಿಗೆ ಅಲ್ಲಿ ಪ್ರವೇಶವಿಲ್ಲ. ಬಹಳ ಪ್ರಯಾಸದ ನಂತರ ಕೆಲವು ಮಂದಿ ಪ್ರಯಾಣಿಕರು ಆ ದೇಶವನ್ನು ಪ್ರವೇಶಿಸಲು ಅಪ್ಪಣೆಯು ದೊರಕಿತು. ಮೊನ್ನೆ ಬ್ರಿಟಿಷ್ ಮಿಶನ್ ಒಂದು ಟಿಬೇಟನ್ನು ಪ್ರವಾಸಗೈದು, ಆಧುನಿಕ ನಾಗರೀಕತೆಯಿಂದ ದೂರವಿದ್ದು ಜೀವಿಸುವ ಈ ವಿಚಿತ್ರ ಜನರ ಅನುಭವವನ್ನು ಈ ಜಗತ್ತಿಗೆ ಮಾಡಿಕೊಟ್ಟಿರುವರು.

S. U. N. & Co.,

Silk Merchants,

Chaukhamba, BENARES CITY.

ಈಗಿನ ಕರಪ (ಕಾಶಿ) ಬನಾರಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ [illegible] ತುಂಬಾ ಸುಲಭ ಕ್ರಯ ಮಾಲು. 18 ಮೊಳದ 2½ ಅಗಲದ ಸಣ್ಣ ಜರಿ ಸೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ 16 ಮೊಳ ಸಣ್ಣ ಬುಟ ಸೀರೆಗಳು ರೂ. 35ರಿಂದ ರೂ. 55 ವರೆಗೆ. ಸಾದಾ ಸೀರೆ 18 ಮೊಳ — 32ರಿಂದ ರೂ. 65 ಉದ್ದ ಮೊಳ 11, ಅಗಲ 2, ರೂ. 20 ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗ [illegible]

ವಿಳಾಸ —

ತಿರೋಮಲೆ ನಾರಾಯಣಾಚಾರ್ಯ, [illegible]

ಸಾವಿತ್ರೀ ಮಾತೆಯ

ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ.

ತಲೆನೋವನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ, ಅಲ್ಲದೆ ಮುಖ್ಯ ಅದಿಗಳು ಉರಿಯುವ ಪ್ರಕಾರಗಳನ್ನು ಹೋಗಲಾಡಿಸಿ, [illegible] ತಂಪನ್ನು ಕೊಟ್ಟು, ಕಣ್ಣುನೋವನ್ನು (ಕೆಂಪಾಗ್ಗುವದು) ದೂರಗೊಳಿಸಿ, ದೃಷ್ಟಿಯು ಚುರುಕಾಗಿಸಿ, ತಲೆಯಲ್ಲಿ ಕೂದಲ ಬುಡದಲ್ಲಿ ನಾನಾ ಕೊಳೆ ಗಟ್ಟುವದಕ್ಕೆ ಅವಕಾಶಕೊಡದೆ, ಸುಖನಿದ್ರೆಯಾಗುವಂತೆಯೂ ನಿದ್ರಾಭಂಗ ಅನಿದ್ರೆ ಮೊದಲಾದುವುಗಳಿಗೆ ಎಡೆಗೊಡದಂತೆಯೂ ಪರಿಣಮಿಸಿ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ.

ಸ್ನಾನಕ್ಕೆ ಅರ್ಧ ತಾಸು ಮೊದಲು ತಲೆಗೆ ಹಚ್ಚಿ ಕೊಳ್ಳುವುದು

ಬೆಲೆ:–8 ಔನ್ಸ್ ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್ ಬಹದ್ದೂರ್ ಎಂ. ಕೇಶವಪೈ, ಎಮ್. ಡಿ., ಓ. ಬಿ. ಇ. ಇವರ ಅಭಿಪ್ರಾಯ:

ಶ್ರೀಯುತ ಬಾಳಿಗರೇ,

ನೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಔಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋಗಿಸಿದೆನು, ಅದು ತಲೆಗೆ ತಂಪನ್ನುಂಟುಮಾಡುವ ಗುಣ [illegible] ಶ್ರೀ ಎನ್. ಸುಂದರರಾವ್, ಬಿ. ಎ., ಎಲ್. [illegible] ಇವರ ಅಭಿಪ್ರಾಯ.

ಹೆಳ್ಳುದು, ಎಷ್ಟೋ ವರ್ಷಗಳಿಂದ ಆಗಾಗ ನನಗೆ ನಿದ್ರಾಭಂಗದ ಬಾಧೆಯುತ್ತು [illegible] ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನೀವು ಈ ಎಣ್ಣೆಯು ನನಗೆ ತುಂಬ ಗಾಢನಿದ್ರೆಯನ್ನು ಅನುಗ್ರಹಿಸಿಯದೆ. ಇದರಿಂದ, ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಇತರರೂ ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ತಿಳುವಳಿಕೆ.

ಒಂದು ಕುಡ್ತೆ ದನದ ಹಾಲು ತೆಗೆದು ಕೊಂಡು ಬಂದಲ್ಲಿ ಅದೇ ಹಾಲಿನಲ್ಲೆ ಮೋಹದ ಮದ್ದು ಹಾಕಿ ಧರ್ಮಾರ್ಥ ಕೊಡೋಣವಾಗುವದು.

ನಿಮ್ಮ ಈ ಮಾರುತೀ ಲೇಹ್ಯವು [illegible] ಅದನ್ನು ನಾನು [illegible] ಕ್ರಮದಲ್ಲಿ ಸೇವಿಸಿ [illegible] ತುಂಬ ಸುಖವಾಗಿರುವದು ಉತ್ತಮ ಫಲಗಳು ನನ್ನ ದೊರಕಿವೆ. ನನ್ನ ಮಕ್ಕಳಿಗೆ ಇದು ಇಷ್ಟವಾಗಿದ್ದು, ಅವು ತಾವಾಗಿ ಈ ಲೇಹ್ಯವನು ಕೊಡೆಂದು ಕಾಡುತ್ತವೆ. ದೇಹವನ್ನೂ ಮನಸ್ಸನ್ನೂ ಉತ್ತೇಜನಗೊಳಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು.

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಜರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನೇಜರು,

ಬೊಕ್ಕಪಟ್ಣ ರಸ್ತೆ, ಮಂಗಳೂರು; ದಕ್ಷಿಣ ಕನ್ನಡ.

ಸಾವಿತ್ರೀ ಮಾತೆಯ

ಮಾರುತೀ ಲೇಹ್ಯ

(ದಿವ್ಯ ಸಾಧ ಪೌಷ್ಟಿಕ [illegible])

ಇದನ್ನು 19 ನೆ ಇಸ್ವಿ ಎಪ್ರಿಲ್ 30 ರಲ್ಲಿ ಮೊದಲು ತಯಾರಿಸಿದುದಾಗಿದೆ.

ಇದರಲ್ಲಿ ಅಮೋಘವಾದ ದಿವ್ಯ ಮೂಲಿಕೆಗಳೂ, ಪ್ರಶಸ್ತವಾದ ದನದ ಹಾಲು, ಬೆಣ್ಣೆ, ಕುಂಕುಮ, ಜೇನು, ಸಕ್ಕರೆ ಸೇರಿವೆ, ದುಷ್ಟವಾದ ಮಾದಕ ಪದಾರ್ಥಗಳಾಗಲಿ ಧರ್ಮವಿರುದ್ಧವಾಗಿರುವ ಯಾವ ಒಂದೂ ಕೊಬ್ಬುಗಳೇ ಇರುವುದಿಲ್ಲ. ಯಾವನೂ ಎಷ್ಟೇ ವಯಸ್ಸಿನವನಾದ್ದರೂ ಬಾಲಕರೂ ಸಹ ಇದನ್ನು ಸೇವನೆ ಮಾಡಬಹುದು. ಇದು ರಕ್ತವನ್ನು ವೃದ್ಧಿಗೊಳಿಸಿ, ಶರೀರಕ್ಕೆ ಆರೋಗ್ಯ ಚೇತನಗಳನ್ನು ವರ್ಧಿಸುವುದು. ದೇಹದ ಉಷ್ಣವನ್ನು ಹೋಗಲಾಡಿಸಿ ಬಹುಮೂತ್ರ ಸಿಹಿಮೂತ್ರ ಮೊದಲಾದುವನ್ನು ಗುಣಪಡಿಸಿ, ನರವನ್ನು ಬಿಗಿಸಿ, ಅಂತಃ ಪುರುಷತ್ವವನ್ನು ದೀರ್ಘ ಬಾಲಾದಿಗಳಿಂದ ಸಂಪೂರ್ಣ ಪುರುಷನನ್ನಾಗಿ ಘಟಿಸಿ ತರುತ್ತದೆ.

ಬೆಲೆ ಅರ್ಧ ರಾತ್ಲು ಸೀಸೆಗೆ ರೂ. 1–12–0

ಒಂದು ರಾತ್ಲು „ ರೂ. 3–0–0

ವಿಶೇಷ: ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದನ ಕೇಶ ತೈಲವನ್ನು ಉಪಯೋಗಿಸಿದಾಗಲೆ ಸೇವಿಸಿದಲ್ಲಿ, ಉನ್ನಾದ ರೋಗವೂ ಕೂಡ ಗುಣವಾಗುವುದು.

ವಿ. ಸೂ: ಅದು ರವಾನಿಗೆ ಕಡಿಮೆಯಾದ ಬೆಲೆಯ ಔಷಧಗಳನ್ನು ವಿ. ಪಿ. ಮೂಲಕ ರವಾನಿಸುವುದಿಲ್ಲ. ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯ ಖಾತೆಯನ್ನು ಮುಂಗಡ ಕಳುಹಬೇಕಾಗಿದೆ, ಧರ್ಮವಾಗಿ ಕೊಟ್ಟು ಕಳುಹುವ, ತೈಲ ಯಾ ಇತರ ರವಾನೆ, ಖರ್ಚ ಪ್ರತ್ಯೇಕ. ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ವಿಳಾಸ, ರವಾನಾ ಸ್ಥಳವು, ಅತಿ ಸಮೀಪದ ಪೋಸ್ಟ್ ಅಥವಾ ರೈಲ್ವೆ ಅಧಿಸು ಮೊದಲಾದುದನ್ನು ಪ್ರತಿ ಸಲ ಔಷಧ ಗಿರಾಕಿಗಳು ಸುವ್ಯಕ್ತಾಕ್ಷರಗಳಿಂದ ನಮೂದಿಸಬೇಕಾಗಿದೆ.

ಪಲಾಯನ

(೧೯ನೇ ಪುಟದಿಂದ)

'ಅವಿಚಾರಿಗಳಾದ ಅನೇಕ ಮಂದಿ ಹಾಗೆಯೇ ಮಾಡಬಹುದು. "ಗೋವಿಂದರಾಯರು ತನ್ನ ಬುದ್ಧಿವಂತಿಕೆಯು ಇತರರಿಗಿಂತ ಮಿಗಿಲಾದುದೆಂದು ತಿಳಿಸಲೋ ಎಂಬಂತೆ ನಕ್ಕರು' ಆ ದಿನ ನಾನು ಏನೂ ಗಲಾಟೆಮಾಡದೆ ಸ್ವಸ್ಥ ಮಲಗುವೆನು ನನ್ನ ಉಪಾಯಗಳೇ ಬೇರೆ. ಕಾಲಕ್ರಮದಲ್ಲಿ ನೀನದನ್ನು ತಿಳಿಯುವೆ. ಈಗ ಬೇಗನೆ ಹೋಗಿ ಮಾಲತಿಯನ್ನು ಇತ್ತ ಕಳುಹಿಸು.'

ಮಾಲತಿಯು ಬಂದಳು ತನ್ನ ತಮ್ಮನ ಮಕ್ಕಳಿಗೆ ಅಸ್ವಸ್ಥವೆಂದೂ ಕೆಲವು ದಿನಗಳ ಮಟ್ಟಿಗೆ ಮಾಲತಿಯನ್ನು ಕಳುಹಿಸುವಂತೆ ಆತನು ತಿಳಿಸಿರುವನೆಂದೂ, ಆದುದರಿಂದ ಮಾಲತಿಯು ಆತನಲ್ಲಿಗೆ ಹೋಗಲು ಇಂದೇ ಹೊರಡಬೇಕೆಂದೂ ಗೋವಿಂದರಾಯರು ಆಕೆಗೆ ತಿಳಿಸಿದರು ಮಾಲತಿಯು ಅನೇಕ ನೆವನಗಳನ್ನು ಹೇಳಿ ತಪ್ಪಿಸಿಕೊಳ್ಳಲು ನೋಡಿದಳು. ಆದರೆ ಆಕೆಳ ಪ್ರತಿಯೊಂದು ನೆವನವು ಮಾಲತಿಯು ನಾಳಿನ ದಿನವೇ ಪಲಾಯನಮಾಡಲಿರುವಳೆಂಬ ಸಂಶಯವನ್ನು ಅವರ ಮನಸ್ಸಿನಲ್ಲಿ ದೃಢಪಡಿಸಿತು ಆದುದರಿಂದ ಅವರು ಆಕೆಯನ್ನು ಒಮ್ಮೆ ಸಮ್ಮತಪಡಿಸಿ, ಗದರಿಸಿ, ಕೂಡಲೆ ಹೊರಡುವಂತೆ ಹೇಳಿ, ಸ್ವತಃ ತಾವೇ ತಮ್ಮನ ಮನೆಯಲ್ಲಿ ಬಿಟ್ಟುಬಂದರು.

ಅಂತು—ಆ ಮಂಗಳವಾರ ದಿನ—ಆವರು ನಿಜವಾಗಿಯೂ ಸೌಖ್ಯದಿಂದ ನಿದ್ರೆಹೋದರು ಅಂದು ರಾತ್ರಿ ಇಲ್ಲಿ ನಡೆಯಿತೆಂದು ವಿಚಾರಿಸುವ ಗೋಜಿಗೂ ಹೋಗದೆ, ಅವರು ಬೀಳ್ಕೊಳ್ಳಲು ಹೊರಟರು ಹೋಗುವಾಗ ಹಾದಿಯಲ್ಲಿ, ತನ್ನ ತಮ್ಮನ ಮನೆಗೆ ಹೋಗಿ, ಮಾಲತಿಯು ತನ್ನ ಆಜ್ಞೆಯಂತೆ ... [illegible] ... ಪಲಾಯನ ಪ್ರಸಂಗವನ್ನು ... ಅತಿ ಚಾತುರ್ಯದಿಂದ ಭಗ್ನಮಾಡಿರುವೆನೆಂಬ ... ಅವರ ಮುಖದಲ್ಲಿ ... ಭಾವವನ್ನು ... [illegible]

... ಸೌಖ್ಯದಲ್ಲಿ ... ಗೋವಿಂದರಾಯರನ್ನು ಕಂಡೊಡನೆ ಮಾಲತಿಯು ... [illegible]

[illegible]

'ಹಾ, ಅಣ್ಣಾ, ... [illegible] ...'

'ಅವರು ... [illegible] ...'

[illegible]

... ಪಲಾಯನ ... [illegible] ...

[illegible]

'ಹೌದು.' ಅಂದುಮಾತ್ರವಲ್ಲ ಆದರ ನಂತರವೂ ನಾನಾತನನ್ನು ಕಂಡು ಮನೋರಮೆಯೊಡನೆ ಆತನು ಪ್ರೇಮಸಲ್ಲಾಪಗಳನ್ನು ನಡೆಸುವುದು ಅಯೋಗ್ಯವೆಂದೂ ಅದಕ್ಕೆ ನಿನ್ನ ಸಮ್ಮತಿ ಎಂದೂ ಇರಲಿಕ್ಕಿಲ್ಲವೆಂದೂ ಆತನನ್ನು ಸರಿದಾರಿಗೆ ಹಚ್ಚಲು ಬಹಳ ಪ್ರಯತ್ನಪಟ್ಟಿದ್ದೆ ಆತನು ಮನೋರಮೆಯೊಡನೆ ಪಲಾಯನ ಮಾಡುವೆನೆಂದೊಡನೆ, ಹಾಗೆಂದೂ ಮಾಡಕೂಡದೆಂದು ನಾನವನೊಡನೆ ಚರ್ಚಿಸಿದ್ದೆ ಅದರಿಂದ ಉಭಯತರಿಗೂ ಅಪಮಾನವಾಗುವುದಲ್ಲದೆ ಹಿತವಾಗಲಿಕ್ಕಿಲ್ಲವೆಂದೂ ನಾನು ತಿಳಿಸಿದ್ದೆ ಆಗ ಆತನು ಹಾಗೆಂದೂ ಮಾಡುವುದಿಲ್ಲವೆಂದು ನನಗೆ ಭಾಷೆಯನ್ನಿತ್ತಿದ್ದನು. ಆದರೂ ನನಗೆ ಅಂಜಿಕೆಯಿತ್ತು ಅದಕ್ಕಾಗಿಯೇ ನಾನು ಮನೋರಮೆಯನ್ನು ಓರ್ವಳೇ ಬಿಟ್ಟು ಹೋಗಲೊಲ್ಲೆನೆಂದು ಅಂದು ನಿನ್ನೊಡನೆ ಹಟ ಕೊಟ್ಟಿದ್ದು. ಚಿಕ್ಕಪ್ಪಾ, ನನ್ನನ್ನು ನೀನು ಮನೆಯಿಂದ ತಪ್ಪಿಸದಿದ್ದರೆ ಇದೆಂದೂ ಸಂಭವಿಸುತ್ತಿದ್ದಿಲ್ಲ' ಎಂದುಸುರಿ ಮಾಲತಿಯು ಪುನಃ ಕಣ್ಣೀರು ಸುರಿಸತೊಡಗಿದಳು

ಸ್ವಲ್ಪ ಸಮಯದ ನಂತರ ಇಬ್ಬರೂ ಮನಸ್ಸಿಗೆ ತುಸು ಸಮಾಧಾನವನ್ನು ತಂದುಕೊಂಡು, ಮನೆಗೆ ಧಾವಿಸಿದರು ಮನೋರಮೆಯು ಮನೆಯಲ್ಲಿ ಎಲ್ಲಿಯೂ ಇರಲಿಲ್ಲ ಗೋವಿಂದರಾಯರ ಮೇಜಿನ ಮೇಲೆ ಮಾತ್ರ ದೊಡ್ಡ ದೊಡ್ಡ ಅಕ್ಷರಗಳಿಂದ ಅವರ ವಿಳಾಸವನ್ನು ಬರೆದ ಒಂದು ಪತ್ರವು ಇದ್ದಿತು.

'ಪ್ರಿಯ ಅಪ್ಪಾ!' ಅದರಲ್ಲಿ ಬರೆದಿತ್ತು, 'ಈ ಪತ್ರವನ್ನು ನೀನು ಓದುವ ಹೊತ್ತಿಗೆ ನಾನು ನಿಮ್ಮಿಂದ ಇನ್ನೂರು ಮುನ್ನೂರು ಮೈಲುಗಳ ದೂರದಲ್ಲಿರಬಹುದು ಆದರೆ ನನ್ನ ಕುರಿತು ಚಿಂತಿಸಬೇಡ ನನ್ನ ಮನದನ್ನನ ಆಶ್ರಯದಲ್ಲಿ ನಾನು ಸುರಕ್ಷಿತಳಾಗಿ ಇದ್ದಲ್ಲಿ ನಮ್ಮನ್ನು ನೀನು ಹುಡುಕಾಡಿದರೆ ಏನೂ ಫಲಕಾರಿಯಾಗಲಿಕ್ಕಿಲ್ಲ ಆದರೆ ಮುಂದೆ ಒಂದು ದಿನ ನಾವಿಬ್ಬರೂ ವಿವಾಹಮಾಡಿಕೊಂಡು ದಂಪತಿಗಳಾಗಿ ಪುನಃ ಮಂಗಳೂರಿಗೆ ಬರುವೆವು. ಪರಂತು ನಮ್ಮ ಪಲಾಯನ ಪ್ರಸಂಗದಲ್ಲಿ ಒತ್ತಾಸೆಯನ್ನು ಮಾಡಿದುದಕ್ಕಾಗಿ ನಿನಗೆ ಅಭಾರವನ್ನು ಸೂಚಿಸದಿದ್ದರೆ ನನ್ನನ್ನು ಜನರು ಕೃತಘ್ನಳೆನ್ನಬಹುದು ನಾನು ಬಹಳ ಬುದ್ಧಿವಂತನೆಂದು ನೀವು ತಿಳಿದಿದ್ದರೂ, ನಾನೂ ನಿನ್ನ ಮಗಳೆಂಬುದನ್ನು ಮಾತ್ರ ಮರೆತಂತೆ ತೋರುತ್ತದೆ

ನಿನ್ನ ಪ್ರೀತಿಯ ಮನೋರಮೆ'

ಪತ್ರವನ್ನು ಓದಿಯಾದೊಡನೆ ಗೋವಿಂದರಾಯರ ಕೈಯಿಂದ ಅದು ತಾನಾಗಿ ಕಳಚಿ ಬಿತ್ತು ತಲೆ ತಿರುಗಿದಂತಾಗಿ ತಡವರಿಸುತ್ತ, ಅವರು ಒಂದು ಕುರ್ಚಿಯ ಮೇಲೆ ಒರಗಿ, ಒಂದಿಷ್ಟು ನೀರನ್ನು ತರುವಂತೆ ಮಾಲತಿಯೊಡನೆ ಹೇಳಿದರು ಈ ತನಕ ತಾನು ಕೈಕೊಂಡ ಕಾರ್ಯದಲ್ಲಿ ಅಪಜಯವನ್ನು ಹೊಂದಿಲ್ಲವೆಂದು ಅವರು ಹೆಮ್ಮೆಪಟ್ಟರೂ ಇಂದು ತನ್ನ ಮಗಳಿಂದಾಗಿ ಪರಾಜಯದ ಕಹಿ ಫಲವನ್ನು ಉಣಿಸಬೇಕಾಯಿತು!

ಫೆನ್ಸಿ ಶರ್ಟಿಂಗ್

ಮಂಜು ಬಣ್ಣದ್ದು ಅತಿ ಮೃದುವಾದುದ್ದು, ಮತ್ತು ದೀರ್ಘ ಬಾಳ್ಕೆಯದು
9 ಗಜ 54 -6 ಶರ್ಟುಗಳಿಗೆ ಸಾಕಾಗುವುದು ಕ್ರಯ ರೂ. 5-8-0
ಟವ್ವಾಲು ಖರ್ಚು ಫ್ರಿ. ಇದರೊಡನೆ 6 22×22 ಫೆನ್ಸಿ ಕರವಸ್ತ್ರಗಳು ಉಚಿತವಾಗಿ ಕೊಡಲಾಗುವವು
ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ
ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ದಿ ನೇಶನಲ್ ಟ್ರೇಡಿಂಗ್ ಕಂಪೆನಿ
ಲೂದಿಯಾನಾ, A 211

10,000 ರೂಪಾಯಿಗಳ ಬಹುಮಾನ

ಪ್ರತಿವಾರವೂ 100 ರೂಪಾಯಿಗಳ 4 ಬಹುಮಾನಗಳು

6 ತಿಂಗಳುಮಾತ್ರ

ನಂಬರಿನ ರ್‍ಯಾಪರುಗಳನ್ನು ಶೇಖರಿಸಿರಿ.



ದೊಡ್ಡ ಲಕ್ಸ್ ಟೊಯಿಲೆಟ್ ಸಾಬೂನಿನ ನಂಬರುಳ್ಳ ನಾಲ್ಕು ರ್‍ಯಾಪರುಗಳನ್ನು ಕಳುಹಿಸಿರಿ. ನಿಮ್ಮ ಸ್ಥಳದಲ್ಲಿ ಆ ವಾರದಲ್ಲಿ ನೀವು ಶೇಖರಿಸಿದ ನಾಲ್ಕು ರ್‍ಯಾಪರುಗಳ ಒಟ್ಟುಸಂಖ್ಯೆಯು ಎಲ್ಲರದಕ್ಕಿಂತಲೂ ಹೆಚ್ಚಾಗಿದ್ದಲ್ಲಿ ನಿಮಗೆ 100 ರೂಪಾಯಿ ನಗದು ಬಹುಮಾನವಾಗಿ ಕೊಡಲ್ಪಡುವುದು ನಾಲ್ಕು ಗೊತ್ತಾದ ಸ್ಥಳಗಳುಂಟು. ಪ್ರತಿವಾರವೂ ಪ್ರತಿ ಸ್ಥಳಕ್ಕೂ 100 ರೂಪಾಯಿಗಳ ಬಹುಮಾನವನ್ನು 1935ನೇ ಜನವರಿ ವರೆಗೂ ಕೊಡಲಾಗುತ್ತದೆ

ಈಗಲೇ ಶೇಖರಿಸುವುದಕ್ಕೆ ಪ್ರಾರಂಭಿಸಿರಿ!

ಕಳುಹಿಸುವ ವಿಧಾನ

[illegible]

... 3ನೇ ... 4 ... ಇಂಡಿಯ ... ಮದ್ರಾಸು

... 200, 11 14 ... ಇಂಡಿಯ

ಲಕ್ಸ್ ಟೊಯಿಲೆಟ್ ಸಾಬೂನು

ಇಂಡಿಯಾದಲ್ಲೇ ಸಸ್ಯಗಳ ಶೋಧಿಸಿದ ಎಣ್ಣೆಯಿಂದಲೇ ತಯಾರಿಸಿದ್ದು.

X LTS 533 80A ... INDIA LIMITED
KANARESE

ಹಿಮಾಲಯದ ತುದಿಯ ಮೇಲೆ ವಾಸಿಸುವ ಜನರು

ಟಿಬೆಟ್ಟು ಲಾಮರ ಅಧಿಕಾರದಲ್ಲಿದೆ

ಅವರ ಅಪ್ಪಣೆ ವಿನಹ ಅನ್ಯರು ಯಾರೂ ಆ ಪ್ರದೇಶವನ್ನು ಪ್ರವೇಶಿಸಬಾರದು

ಜಗತ್ತಿನಲ್ಲಿ ಅತ್ಯಂತ ಉನ್ನತವೆನಿಸುವ ಹಿಮಾಲಯದ ಅತಿ ಮೇಲಿನ ಇಳಿಜಾರಿನಲ್ಲಿರುವುದು ಹಿಮ ಮುಸುಕಿದ ಟಿಬೆಟ್ ಭೂಮಿ. ಇಂದು ಈ ದೇಶವು ಬೌದ್ಧ ಧರ್ಮದ ಕೇಂದ್ರವಾಗಿರುತ್ತದೆ. ಲ್ಹಾಸಾವೆ ಟಿಬೆಟ್ಟಿನ ರಾಜಧಾನಿ. ಅಲ್ಲಿರುವ ದಲಾಯಿ ಲಾಮನೆ ಟಿಬೆಟ್ ರಿಪಬ್ಲಿಕಿನ ಆಡಳಿತಗಾರನು. ಎರಡು ವರ್ಷಗಳ ಹಿಂದೆ ಮೃತನಾದ ದಲಾಯಿ ಲಾಮನು ಬುದ್ಧನ ಅವತಾರವೆಂದು ಪರಿಗಣಿಸಲ್ಪಟ್ಟಿದ್ದನು. ಅವನು ಮತ್ತೊಮ್ಮೆ ಜೀವಕ್ಕೆ ಬರುವನೆಂದು ಟಿಬೆಟ್ಟಿನ ಜನರ ನಂಬಿಕೆ. ದಲಾಯಿ ಲಾಮನು ಮೃತಪಟ್ಟ ದಿನವೆ ನೂತನ ದಲಾಯಿ ಲಾಮನು ಜನಿಸಿರುವನೆಂದು ನಂಬಿರುವ ಟಿಬೆಟ್ಟಿನ ಜನರು, ಆತನನ್ನು ಹುಡುಕಾಡುತಿದ್ದಾರೆ. ಆತನನ್ನು ಹುಡುಕಿ ತರುವ ವರೆಗೆ ದಲಾಯಿ ಲಾಮನ ಸ್ಥಳದಲ್ಲಿ ಒಬ್ಬ ರಿಜೆಂಟನಿದ್ದು ರಾಜ್ಯಾಡಳಿತವು ನಡೆಯುತ್ತಿರುವುದು.

ಟಿಬೆಟ್ಟಿನ ಈ ವಿಚಿತ್ರ ಜನರು ಜನ್ಮದಿಂದಲೆ ಸ್ನಾನಗಯ್ಯದವರು, ಕೈಕಾಲು ತೊಳೆಯದವರು, ದಿನ ಒಂದರ ಸರಾಸರಿಯಿಂದರೆ 50 ಬಟ್ಟಲು ಚಹಾವನ್ನು ಪಾನಮಾಡುವವರು ಟಿಬೆಟ್ಟಿನವರು ಮಾತ್ರವಾದ ಜನರೆಂದೆಣಿಸಬೇಕು. ಹಿಮಕಟ್ಟಿನ ಶೀತವಿರುವ ಆ ಪ್ರದೇಶದಲ್ಲಿ ತಮ್ಮ ದೇಹದೊಳಗಿಂದಲೆ ಶಾಖವನ್ನು ಹೊರಡಿಸಿ, ನಗ್ನರಾಗಿ ದಿನ ಕಳೆಯುವ ಜನರು, ವಿಶ್ರಾಂತಿ, ಆಹಾರ, ಪಾನೀಯವಿಲ್ಲದನೆ ಅತಿ ದೂರಕ್ಕೆ ನಿಲ್ಲದೆ ಓಡುವ ಜನರು, ಸಿಲವೆ ರಾತ್ರಿ ಹಗಲು ಅನೇಕ ದಿನಗಳ ತನಕ ನಲಿದಾಡುವ ಜನರು, ಟಿಬೆಟ್ಟಿನ ಮಠಗಳಲ್ಲಿ ಕೆಲವರು.

ಟಿಬೆಟ್ಟು ಆಶ್ರಮಗಳಿಂದ ತುಂಬಿದ ಊರು. ಈ ಆಶ್ರಮಗಳಲ್ಲಿ ಜಗತ್ತು ತ್ಯಜಿಸಿ, ವಿಕ[illegible]ವಾಗಿರುವ ಸಾವಿರಾರು ಮಂದಿ ಲಾಮರು ಇರುವರು. ಈ ಸನ್ಯಾಸಿಗಳ ಹೊರಗಿನವರನ್ನು ನೋಡಲೆ, ಯಾ [illegible] ಮಾತನಾಡಲೆ ಬಾರದಾಗಿ [illegible] ರುವುವು. [illegible] ಅವರ ಅಲ್ಲಿನ [illegible] ವುವು. ಈ ತೆರದ [illegible] ಗಳಲ್ಲಿ 5,000ದಿಂದ 10,000ದ ವರೆಗ [illegible] ವಾಸವಾಗಿ [illegible] ಕುಟುಂಬ [illegible]

[illegible]

ಹಿಮಾಲಯದ [illegible] ಟಿಬೆಟ್ಟಿನ [illegible] (ಮುಖ್ಯ ಲಾಮಾ) [illegible]

[illegible]

[illegible] 5,0 [illegible] 50 [illegible]

S. U. N. & Co.,

Silk Merchants,

[illegible] CITY

[illegible] 15 [illegible] 100 [illegible] 60 [illegible] 20 [illegible] 35 [illegible]

[illegible]

ಸಾವಿತ್ರೀ ಮಾತೆಯ

ಕೇಶವರ್ಧನ ತೈಲ

[illegible] 75 [illegible]

ವಕೀಲರು, ನ್ಯಾಯಾಧಿಕಾರಿ, ವೈದ್ಯರು, ವಿದ್ಯಾರ್ಥಿಗಳು ಮಾತ್ರವಲ್ಲದೆ, [illegible] ಉಪಯೋಗಿಸಲರ್ಹವಾಗಿದೆ.

[illegible]

ಬೆಲೆ—2 ಔನ್ಸ ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ [illegible] ಎಂ. ಕೇಶವಯ್ಯ, [illegible] ಅವರ ಅಭಿಪ್ರಾಯ

[illegible]

ನೀವು ಅನುಗ್ರಹಪೂರ್ವಕ ಕಳುಹಿರುವ ಸಾವಿತ್ರಿ [illegible]

ಸಾವಿತ್ರಿ ಮಾತ್ರೆಯ [illegible]

81ನೇ ಜಯಂತಿಯ ದಿನ [illegible] ಕೃತಜ್ಞತಾರ್ಪಣೆ

[illegible]

[illegible]

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಝರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನೆಜರ್

[illegible], ದಕ್ಷಿಣ ಕನ್ನಡ

[illegible]

ಮಾಸಿಕ [illegible]

[illegible] 1-12 [illegible]

[illegible]

ರೈತನ ಹಿತಸಾಧನೆ ಮತ್ತು ರಕ್ಷಣೆಯಾಗುವುದಾದರೆ ಅದು ಕಾಂಗ್ರೆಸ್ಸಿನಿಂದ

ರೈತನ ಉದ್ಧಾರವು ಕಾಂಗ್ರೆಸ್ಸಿನ ಧ್ಯೇಯಗಳಲ್ಲಿ ಒಂದಾಗಿರುತ್ತದೆ.

★

ರೈತನ ಕುರಿತು ಅ. ಭಾ. ಕಾ. ಕ.ಯಿಂದ ಮಂಜೂರಾದ ಠರಾವುಗಳು.

ಸದ್ಯದಲ್ಲಿ ಪ್ರಾಂತದೊಳಗೆ ಮುಂಬರುವ ಟೆನನ್ಸಿ ಬಿಲ್ಲಿನ ಬಗ್ಗೆ ಹಲವು ಜನರು ಆಂದೋಲನ ನಡೆಸುತ್ತಿರುವರು. ಅದರಲ್ಲಿ ಕೆಲವು ಕಾಂಗ್ರೆಸ ಜನರೂ ಭಾಗವಹಿಸುತ್ತಿರುವರು. ಅವರಿಗೆ ಕಾಂಗ್ರೆಸ್ಸಿನ ಧೋರಣವು ಸ್ಪಷ್ಟವಾಗಿ ಗೊತ್ತಾದಂತೆ ಕಾಣುವುದಿಲ್ಲ. ಆದುದರಿಂದ ಅವರಿಗೂ ಇನ್ನುಳಿದವರಿಗೂ ಈ ವಿಷಯದಲ್ಲಿ ಕಾಂಗ್ರೆಸ್ಸಿನ ಧೋರಣವೇನಿದೆ ಎಂಬುದು ಸ್ಪಷ್ಟವಾಗಿ ತಿಳಿಯಬೇಕೆಂಬ ಉದ್ದೇಶದಿಂದ ನಾವು ೧೯೩೧ ರಿಂದ ಈಗಿನವರೆಗೆ ಆದ ಕಾಂಗ್ರೆಸ ವಾರ್ಷಿಕ ಅಧಿವೇಶನಗಳಲ್ಲಿಯೂ, ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನಗಳಲ್ಲಿಯೂ, ವರ್ಕಿಂಗ ಕಮಿಟಿಯ ಸಭೆಗಳಲ್ಲಿಯೂ ಇದರ ಬಗ್ಗೆ—ಆಗಾಗ್ಗೆ ಪಾಸಾದ ಗೊತ್ತುವಳಿಗಳನ್ನು ಈ ಕೆಳಗೆ ಕೊಟ್ಟಿರುತ್ತೇವೆ. ಕಾಂಗ್ರೆಸ್ಸಿನವರು ಅಧಿಕಾರಸ್ವೀಕಾರ ಮಾಡುವ ಪೂರ್ವದಲ್ಲಿಯೇ ಇಂಥ ಬಿಲ್ಲನ್ನು ತರುವದನ್ನು ಗೊತ್ತುಮಾಡಿದ್ದರೆಂದು ಕೆಳಗಿನ ಸಂಗತಿಗಳ ಮೇಲಿಂದ ಮನವರಿಕೆಯಾಗುವದರಲ್ಲೇನೂ ಸಂದೇಹವಿಲ್ಲ. ಇದರಿಂದ ಕಾಂಗ್ರೆಸ ಕಾರ್ಯಕರ್ತರೂ ಮತ್ತು ಕಾಂಗ್ರೆಸ ಅಸೆಂಬ್ಲಿಯ ಸದಸ್ಯರೂ ಈ ವಿಷಯದಲ್ಲಿ ಹೇಗೆ ವರ್ತಿಸಬೇಕೆಂಬ ಬಗ್ಗೆ ಯಾವ ಬಗೆಯ ಸಂದೇಹವೂ ಬರುವ ಕಾರಣವಿಲ್ಲ.

ಈಗ ಆರಿಸಲ್ಪಟ್ಟ ಕಾಯದೇ ಮಂಡಳಗಳ ಕಾಂಗ್ರೆಸ ಸದಸ್ಯರೇ ಆಗಲಿ, ಕಾಂಗ್ರೆಸ ಸಂಸ್ಥೆಯ ಅಧಿಕಾರಿ ವರ್ಗದವರೇ ಆಗಲಿ, ಕಾಂಗ್ರೆಸ್ಸು ಕಾಲಕಾಲಕ್ಕೆ ಪಾಸುಮಾಡುತ್ತ ಬಂದ ಗೊತ್ತುವಳಿಗಳನ್ನು ಮತ್ತು ಸ್ವೀಕರಿಸುತ್ತ ಬಂದ ಧೋರಣವನ್ನು ಎತ್ತಿಹಿಡಿದು ಅವುಗಳನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಬೇಕಲ್ಲದೆ ತಮ್ಮ ವೈಯಕ್ತಿಕವಾದ ಮತಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿಲ್ಲವೆಂದೇ ಹೇಳಬೇಕಾಗುತ್ತದೆ.

ಮೂಲಭೂತ ಹಕ್ಕು ಮತ್ತು 'ಕರ್ತವ್ಯಗಳು' ಈ ವಿಷಯವಾಗಿ ೧೯೩೧ರಲ್ಲಿ ಕರಾಚಿ ಕಾಂಗ್ರೆಸ್ಸಿನಲ್ಲಿ ಪಾಸಾಗಿ ಅದೇ ಸಾಲಿನ ಅಗಸ್ಟ ತಿಂಗಳು ಮುಂಬೈಯಲ್ಲಿ ಕೂಡಿದ ಅಖಿಲ ಭಾ. ಕಾಂ. ಕ. ಯ ಸಭೆಯಿಂದ ದೃಢಪಡಿಸಲ್ಪಟ್ಟ ಗೊತ್ತುವಳಿಯೊಳಗಿಂದ:—

——"ಲಾವಣಿಕೊಡುವ ಅವಧಿ, ಪಟ್ಟಿ ಮತ್ತು ಲಾವಣಿಗಳ ಪದ್ಧತಿಗಳನ್ನು ಸುಧಾರಿಸುವದು, ಹಾಗೂ ಸಣ್ಣ ಸಣ್ಣ ರೈತರಿಗೆ ಪರಿಹಾರ ಕೊಡುವದರ ಸಲುವಾಗಿ ಈಗ ಅವರು ಕೊಡುವ ಪಟ್ಟಿ ಲಾವಣಿಗಳನ್ನು ಕಡಿಮೆ ಮಾಡಿ ಅವರ ತಲೆಯಮೇಲಿರುವ ಭಾರವನ್ನು ಇಳಿಸಲು ವ್ಯವಸ್ಥೆ ಮಾಡುವದು ಮತ್ತು ಬೆಳೆಬಾರದ ಭೂಮಿಗಳ ರೈತರ ಕಷ್ಟನಷ್ಟಗಳ ಪರಿಹಾರವಾಗುವವರೆಗೆ ಅವರಿಗೆ ತುಂಬಾ ಲಾವಣಿ ಸೂಟು ಕೊಡಿಸುವದು, ಮತ್ತು ಪ್ರಸಂಗ ಬಂದರೆ ಅವರಿಗೆ ಸಹಾಯವನ್ನಾದರೂ ಕೊಡುವದು, ಹಾಗೇ ಒಂದು ನಿರ್ದಿಷ್ಟ ಉತ್ಪನ್ನಕ್ಕಿಂತ ಹೆಚ್ಚು ಬರುವ ಭೂಮಿಯ ಉತ್ಪನ್ನದ ಮೇಲೆ ತೆರಗತಿಕರ ಕೂಡಿಸುವದು."

೧೯೩೬ನೇ ಎಪ್ರಿಲ್ ತಿಂಗಳಲ್ಲಿ ಕೂಡಿದ ಲಖನೌ ಕಾಂಗ್ರೆಸದಲ್ಲಿ ಪಾಸಾದ ೧೨ನೇ ಗೊತ್ತುವಳಿ

"ರೈತರ ಕಾರ್ಯಕ್ರಮ:—ಹಳೆಯದೂ ದಬ್ಬಾಳಿಕೆಯ ಕ್ರಮವಾದದ್ದೂ ಆದ ಜಮೀನ ಲಾವಣಿ ಮತ್ತು ಪಟ್ಟಿ ಪದ್ಧತಿಗಳಿಂದುಂಟಾದ ಮತ್ತು ಇತ್ತಿತ್ತಲಾಗಿ ರೈತರು ಬೆಳೆದಮಾಲಿಗೆ ಬೆಲೆಯು ಬಹಳವಾಗಿ ಕಡಿಮೆ ಬರುವಮೂಲಕ ಉಂಟಾದ ರೈತನ ಸಾಲಗಾರಿಕತನ, ಅನುದ್ಯೋಗಿತನ ಮತ್ತು ಭಯಾನಕವಾದ ಬಡತನ ಇವು ದೇಶ ಮಹತ್ವದ ಮತ್ತು ತೀವ್ರತರ ಸಮಸ್ಯೆಗಳಾಗಿವೆಯೆಂದು ಕಾಂಗ್ರೆಸಿನ ಅಭಿಪ್ರಾಯವು. ಈ ಸಮಸ್ಯೆಗಳ ಕೊನೆಯ ಪರಿಹಾರವು, ಜಮೀನ ಲಾವಣಿ ಮತ್ತು ಪಟ್ಟಿ ಪದ್ಧತಿಗಳಲ್ಲಿ ಸಂಪೂರ್ಣ ಬದಲಾವಣೆ ಮಾಡುವದು, ಹಳ್ಳಿಗಳಲ್ಲಿನ ಅನುದ್ಯೋಗಿ ಜನರಿಗೆ ಕೆಲಸವನ್ನುಂಟು ಮಾಡಿಕೊಡುವ ಕರ್ತವ್ಯದ ಅರಿವನ್ನು ಸರಕಾರಕ್ಕೆ ಮಾಡಿಕೊಡುವದು—ಇವುಗಳಲ್ಲಿದೆ"

೧೯೩೬ನೇ ಡಿಸೆಂಬರ ತಿಂಗಳಲ್ಲಿ ಕೂಡಿದ ಫೈಜಪೂರ ಕಾಂಗ್ರೆಸ್ಸಿನಲ್ಲಿ ಪಾಸಾದ ೧೯ನೇ ಗೊತ್ತುವಳಿ

"ರೈತರ ಕಾರ್ಯಕ್ರಮ:—ಈ ಪ್ರಶ್ನೆಯ ಕೊನೆಯ ನಿರ್ಣಯವು, ಬ್ರಿಟಿಷ ಸಾಮ್ರಾಜ್ಯದ ಶೋಷಣ ಪರಿಹಾರದಲ್ಲಿಯೂ ಭೂಕಂದಾಯ ತೆರಿಗೆಯ ಪದ್ಧತಿಯಲ್ಲಿಯ ಪೂರ್ಣ ಬದಲಾವಣೆಯಲ್ಲಿಯೂ ಅಡಕವಾಗಿದೆಯೆಂದು ಕಾಂಗ್ರೆಸ್ಸಿಗೆ ಮನವರಿಕೆಯಾಗಿದೆ. ದಿನದಿನಕ್ಕೆ ಹೆಚ್ಚುತ್ತಿರುವ ಸಂಕಟಗಳು ರೈತರ ಮೇಲಿದ್ದ ಈ ಕರಭಾರವನ್ನು ತೀರ ಸಹಿಸದಂತೆ ಮಾಡಿವೆಯೆಂದೂ, ಕೂಡಲೆ ಅವರ ಕಷ್ಟಪರಿಹಾರವಾಗುವದು ಅವಶ್ಯವೆಂದೂ ಕಾಂಗ್ರೆಸ್ಸಿಗೆ ಅನಿಸುತ್ತದೆ. ಈ ಕೆಳಗಿನ ಅಖಿಲ ಭಾರತ ರೈತ ಕಾರ್ಯಕ್ರಮಗಳನ್ನು ಮಾಡುವದು ಅವಶ್ಯವಿದೆ.

(೧) ಸದ್ಯದ ಸ್ಥಿತಿಗನುಸರಿಸಿ ಕಂದಾಯ ಮತ್ತು ಪಟ್ಟಿಯನ್ನು ಪುನಃ ಗೊತ್ತುಪಡಿಸಬೇಕು. ಎರಡೂ ಸಾಕಷ್ಟು ಕಡಿಮೆಯಾಗಬೇಕು.

(೨) ಸಾಗುವಳಿಯಾಗದಿದ್ದ ಭೂಮಿಗಳ ಮೇಲೆ ಕಂದಾಯ [illegible]

(೩) ಒಕ್ಕಲತನದ ಉತ್ಪನ್ನದ ಮೇಲೆ [illegible], ಉಳಿದ ಆದಾಯದ ಮೇಲೆ ಇನ್‌ಕಮ್ ಟ್ಯಾಕ್ಸದ (ಕರದ) ಆಕರಣೆಯಾಗ[illegible] ತೆಯೇ [illegible] ತಿಯ ಪದ್ಧತಿ [illegible] ಬೇಕು.

(೪) ಕಾಲುವೆ ಮತ್ತು ಇತರ ನೀರಿನ ಕರಗಳು ಸಾಕಷ್ಟು ಕಡಿಮೆಯಾಗಬೇಕು.

(೫) ಕಪ್ಪಕಾಣಿಕೆ ಮತ್ತು ಬಿಟ್ಟಿ [illegible]ತಾದವುಗಳನ್ನು ಪೂರ್ಣವಾಗಿ ತೆಗೆದುಹಾಕಬೇಕು. ಲಾವಣಿಯ ಹೊರ[illegible] ವಸೂಲಿಗಳನ್ನು [illegible] ಬೇಕು.

(೬) ಎಲ್ಲ ರೈತರಿಗೆ ಮನೆಗಳನ್ನು ಕಟ್ಟಿಕೊಳ್ಳ ಗಿಡಗಳನ್ನು ಹಚ್ಚಲಿಕ್ಕೂ ಅಧಿಕಾರವು, ಪರಂಪರೆಯ ಅಧಿಕಾರ ಮತ್ತು ಮೂಲಗೇಣಿ ಅಧಿಕಾರದೊಡನೆ ದೊರೆಯಬೇಕು.

(೭) ಸಹಕಾರ ಪದ್ಧತಿಯಿಂದ ಸಾಗುವಳಿ ಮಾಡಲು ಪ್ರಯತ್ನಮಾಡಬೇಕು.

(೮) ಹಳ್ಳಿಗರನ್ನು ಮೆಟ್ಟುತ್ತಿರುವ ಋಣಭಾರವು ಇಲ್ಲದಂತೆ ಮಾಡಬೇಕು. ಈ ವಿಷಯವನ್ನು ವಿಚಾರಿಸುವದಕ್ಕಾಗಿ ಒಂದು ವಿಶಿಷ್ಟ ನ್ಯಾಯ ಮಂಡಲವು ನಿಯಮಿಸಲ್ಪಡಬೇಕು. ಒಕ್ಕಲಿಗರು ಕೊಡಲಾಗದಂತಹ ಸಾಲಗಳು ನಿರ್ಮೂಲವಾಗಬೇಕು. ಸ್ವಲ್ಪ ಸ್ವಲ್ಪಾಗಿ ಜಮೆ ಮಾಡಲು ಅನುಕೂಲತೆಗಳನ್ನು ಒದಗಿಸಿಕೊಡಲು ಉಪಾಯಗಳನ್ನು ಯೋಚಿಸಬೇಕು. ಕಡಿಮೆ ಬಡ್ಡಿಯ ತಹಕೂಬನ್ನು ಸಾರಬೇಕು.

(೯) ಲಾವಣಿಗಳ ಹಳೇ ಬಾಕಿಗಳನ್ನು ಸೂಟಬಿಡಬೇಕು.

(೧೦) ಸಾರ್ವಜನಿಕ ಹುಲ್ಲುಗಾವಲುಗಳು ದೊರೆಯಬೇಕು. ಕೆರೆ, ಬಾವಿ, ಅರಣ್ಯ ಮುಂತಾದವುಗಳ ಮೇಲೆ ಇರುವ ತಮ್ಮ ಅಧಿಕಾರದ ಅರಿವು ಜನರಿಗೆ ಆಗಬೇಕು. ಆ ಅಧಿಕಾರಗಳು [illegible] ಗದೆಬಾರದಂತೆ ನೋಡಿಕೊಳ್ಳಬೇಕು.

(೧೧) ಕಂದಾಯದ ಬಾಕಿ ಹಣವು ಒತ್ತಾಯ, ಜೋರು, ಜುಲುಮೆಯಿಂದ ವಸೂಲು [illegible] ಯಿಂದ ವಸೂಲ ಮಾಡಬಾರದು.

(೧೨) ಒಕ್ಕಲತನದ ಮೇಲೆ [illegible] [illegible] ಯೋಗ್ಯವಾದ [illegible], ಉಪಜೀವನಕ್ಕೆ [illegible] ಅನುಕೂಲತೆಯು ಇರಬೇಕು.

(೧೩) ಒಕ್ಕಲಿಗರ ಸಂಘಗಳು ಮಾನ್ಯವಾಗಬೇಕು.

ಅ. ಭಾ. ಕಾ. ಪಾರ್ಲಿಮೆಂಟರಿ ಕಮಿಟಿಯಿಂದ ಸಿದ್ಧಮಾಡಲ್ಪಟ್ಟು, ತಾ ೨೩-೮-೩೬ನೇ ದಿವಸ ಕೂಡಿದ ಅ. ಭಾ. ಕಾ. ಕ. ಯಿಂದ ದೃಢಪಡಿಸಲ್ಪಟ್ಟ ಕಾಂಗ್ರೆಸ ಜಾಹೀರನಾಮೆಯೊಳಗಿಂದ:—

೧೯೩೧ ರಲ್ಲಿ ಕರಾಚಿಯಲ್ಲಿ ಕೂಡಿದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಸರ್ವಸಾಧಾರಣ ಉದ್ದೇಶವು ಮೂಲಭೂತ ಹಕ್ಕುಗಳ ನಿರ್ಣಯದಲ್ಲಿ ಸ್ಪಷ್ಟ ಮಾಡಲಾಗಿದೆ. ಕಾಂಗ್ರೆಸ್ಸು ಈಗಲಾದರೂ ಆ ನಿರ್ಣಯವನ್ನು ಆಗಿನಂತೆಯೇ ಸ್ಥಿರವಾಗಿಟ್ಟುಕೊಂಡಿದೆ. ಆದರೆ ಕಳೆದ ೫ ವರ್ಷಗಳಲ್ಲಿ ಬೆಳೆಯುತ್ತ ಬಂದಿರುವ ಕಠಿಣ ಪರಿಸ್ಥಿತಿಯ ಮೂಲಕ ಬಡತನ, ನಿರುದ್ಯೋಗಿತನ ಮತ್ತು ಇತರ ಆರ್ಥಿಕ ಸಮಸ್ಯೆಗಳ ವಿಷಯವಾಗಿ ಹೆಚ್ಚಿಗೆ ವಿಚಾರಮಾಡುವ ಪ್ರಸಂಗ ಒದಗಿರುವ ಸಂಗತಿಯನ್ನು ಲಕ್ಷ್ಯಕ್ಕೆ ತಂದು ಲಖನೌ ಕಾಂಗ್ರೆಸ್ಸು ಈ ಮುಂದಿನ ಮಾತನ್ನು ಹೇಳಿ ಸಾರಿದೆ. 'ದೇಶದ ಮುಂದಿರುವ ಅತ್ಯಂತ ಮಹತ್ವದ ಪ್ರಶ್ನೆಯೆಂದರೆ—ಭಯಂಕರ ಬಡತನ, ನಿರುದ್ಯೋಗಿತನ ಮತ್ತು ರೈತರ ಸಾಲ ಇವುಗಳಿಗೆ ಸಂಬಂಧಿಸಿದ್ದಾಗಿದೆ. ರೈತರ ಈ ಕಠಿಣ ಪರಿಸ್ಥಿತಿಯು ಮುಖ್ಯತಃ ಜಟಿಲವೂ ಮತ್ತು ಕಠೋರವಾದ ಭೂಲಾವಣಿ ಕಂದಾಯ ಪದ್ಧತಿಯಿಂದಲೂ ಇತ್ತೀಚೆಗೆ ಭೂಮಿಯ ಹುಟ್ಟುವಳಿಗಳ ಧಾರಣೆಯು ಇಳಿದುಹೋದ್ದರಿಂದಲೂ ಆದದ್ದಿರುತ್ತದೆ.' ಆದುದರಿಂದ ಈ ಕಾಂಗ್ರೆಸ್ಸು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಗಳಿಗೆ ರೈತರಸಂಬಂಧದ ಸಮಸ್ಯೆಯ ಪೂರ್ಣ ಕಾರ್ಯಕ್ರಮ ಹಾಕಿಕೊಳ್ಳಲು ಹೇಳಿತ್ತು. ಈ ಪ್ರಾಂತಿಕ ಕಾರ್ಯಕ್ರಮಗಳ ಆಧಾರದ ಮೇಲೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಸಿದ್ಧಪಡಿಸಲಿರುವ ರೈತರಸಂಬಂಧದ ಕಾರ್ಯಕ್ರಮವು ಹಿಂದಿನಿಂದ ಪ್ರಸಿದ್ಧವಾಗುವದು.

ರೈತರ ಸಂಬಂಧದ ಪೂರ್ಣ ಕಾರ್ಯಕ್ರಮವು ನಿಶ್ಚಿತವಾಗುವವರೆಗೆ ಕಾಂಗ್ರೆಸ್ಸು ಕರಾಚಿಯಲ್ಲಿ ಗೊತ್ತಾದದನ್ನೇ ಪುನಃ ದೃಢಪಡಿಸುತ್ತದೆ. ಅದೇನಂದರೆ ಲಾವಣಿ ಮತ್ತು [illegible]

೧೯೩೭ನೇ ಫೆಬ್ರುವರಿ, ವರ್ಧಾದಲ್ಲಿ ಕೂಡಿದ ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯಲ್ಲಿ ಪಾಸಾದ ಗೊತ್ತುವಳಿ

ಕಾಯದೆ ಮಂಡಳಗಳ ಕಾಂಗ್ರೆಸ ಸದಸ್ಯರ ಪಾರ್ಲಿಮೆಂಟರಿ ಕರ್ತವ್ಯಗಳು — 'ಕಾಯದೇ ಮಂಡಳದ ಕಾಂಗ್ರೆಸ ಸದಸ್ಯರು ಜಾಹೀರನಾಮೆಯಲ್ಲಿ ಮತ್ತು ರೈತರ ಕಾರ್ಯಕ್ರಮದ [illegible] ಪಾಸಾದ ಗೊತ್ತುವಳಿಗಳಲ್ಲಿ ಅಡಕವಾಗಿರುವ ಕಾಂಗ್ರೆಸ ಕಾರ್ಯಕ್ರಮವನ್ನು [illegible] ದಕ್ಕಾಗಿ ಪ್ರಯತ್ನ ಮಾಡಬೇಕು.

ಮುಖ್ಯವಾಗಿ ಅವರು ಈ ಕೆಳಗಿನ [illegible]ಗಳನ್ನು ಕೈಕೊಳ್ಳಬೇಕು.

(೧) [illegible] ಲಾವಣಿ ಮತ್ತು ಪಟ್ಟಿ [illegible] ಕಡಿಮೆಮಾಡುವದು

(೨) [illegible] ಉತ್ಪತ್ತಿ [illegible] ಉತ್ಪ[illegible] (Income tax on progressive scale) [illegible]

(೩) [illegible] ಗಳನ್ನು ಗೊತ್ತುಮಾಡುವದು

(೪) ಪಟ್ಟಿ ಲಾವಣಿಗಳ ಬಾಕಿ ಮುಂತಾದವುಗಳಿಂದ ರೈತರನ್ನು ಮುಕ್ತಮಾಡುವದು

(—ಕರ್ನಾಟಕ ಕಾಂಗ್ರೆಸ್ ಕಮಿಟಿಯ ಪ್ರಸಿದ್ಧಪಡಿಸಿದ್ದು)

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ

ಕಾಮನ್ ವೆಲ್ತ್

ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ.

1937-38ನೇ ಸಾಲಿನ ಪ್ರಗತಿ

ಗಳಿಸಿದ ಉದ್ಯಮ	ರು 50 18 511
ಪೂರ್ಣವಾದ ಉದ್ಯಮ	ರು 10 30 779

ದಕ್ಷಿಣ ಕನ್ನಡದ ಎಲ್ಲ ಕಡೆಗಳಲ್ಲಿ ಗೌರವಸ್ಥರೂ, ಸಮರ್ಥರೂ ಆದ ಏಜಂಟರು ಬೇಕು

ವಿವರಗಳಿಗೆ:—

ಪಿ. ಆರ್ ನಾಯಕ್ ಆಂಡ ಸನ್ಸ್, ಸ್ಪೆಶಲ್ ಏಜಂಟ್ಸ್, ಕಾರ್ ಸ್ಟ್ರೀಟ್, ಮಂಗಳೂರು

ಗಮಾಂಕರ್ ಆಂಡ್ ಸನ್ಸ್, ಚೀಫ್ ಏಜಂಟ್ಸ್, 169 ಗಾಂಧಿ ನಗರ, ಬೆಂಗಳೂರು

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1. ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ.
2. ಕುಂದಾಪುರದಿಂದ ಬಾಳೆಬರೆಗಾಗಿ ಶಿವೊಗ್ಗ,
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪ, ಶ್ರಿಂಗೇರಿ, ತೀರ್ಥಹಳ್ಳಿ, ಶಿವೊಗ್ಗ ಹರಿಹರ ವರೆಗೆ.
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ.
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ,
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

THE
Canara Industrial & Banking Syndicate Ltd.,

(Incorporated in British India)

Estd 1925.

Head Office: UDIPI, (S. India.)

Member:

RESERVE BANK OF INDIA.
BANKERS CLEARING HOUSE, BOMBAY

Statement of Affairs of the Syndicate as on 31st May 1938.

LIABILITIES		ASSETS	
Share Capital ... Rs.	3,86,880—0—0	Loans on Valuable Securities ... Rs.	19,51,209—1—9
Reserves ... ,,	2,16,700—0—0	Loans on Land Mortgages ... ,,	2,08,500—13—0
Deposits ... ,,	30,53,216—6—5	Loans on Bills, Hundis & Promissory Notes ,,	10,36,175—11—9
Due to Bankers ... ,,	8,99,018—3—7	Investments on G. P. Notes ... ,,	10,88,703—3—7
Bills for Collection ... ,,	2,24,037—15—8	Investments on Shares of other Companies ,,	85,380—1—0
Sundries ... ,,	3,89,954—11—6	Investments on Lands & Buildings ,,	32,831—2—5
		Bills for Collection ... ,,	2,24,037—15—8
		Sundries ... ,,	1,87,829—1—8
		Cash in hand and at Bankers ... ,,	3,03,839—13—4
Total Rs.	**51,19,807—5—2**	**Total Rs.**	**51,19,807—5—2**

DEVKARAN NANJEE'S Pure Silver Bars of 10 and 20 tolas having the seal of His Majesty's Mint are available for sale at all the Branches of the Syndicate.

A Branch of the Syndicate has been opened at Felix Pai Bazaar, Mangalore, Block No. 1.

ಚಂದಾ: ರೂ. 2-0-0. Established 1906. Regd. No. M. 3406. ಟಪ್ಪಾಲು ಹಾಸಲು ಸೇರಿ ರೂ. 2-18-0.

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಷಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆ ಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲ, ಗ್ರಹಶಾಂತಿಯೊಂದೇ ಎಂದು ನವಗ್ರಹ ಯಂತ್ರ... ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯಾವಧಿ ವರ್ಗಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸ್ವೀಕರಿಸಲು ಯಾವನಿಗೂ ಇಲ್ಲ. ...ವಸ್ತುವಿನಿಂದ ಮೂರ್ಖರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಉಪಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯ ಮಾಡಿಕೊಳ್ಳ ಬಯಸಿದರೆ, ... ಸುಖ ...ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಕಸ್ತೂರಿ... ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳು, ಪಂಡಿತರು ಈ ಯಂತ್ರವನ್ನು ಏಕಸ್ವರದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ... ಬೇರೆ ... ಇಲ್ಲ. ... ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ... ...ಸೆಗಳನ್ನು ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರ್ಯಗಳಿಗಾಗಿ ... ಅಲ್ಲ, ಹನ್ನೆರಡು-ಹನ್ನೆರಡು ನವಗ್ರಹ ಯಂತ್ರಗಳನ್ನು ತರಿಸಿದ್ದಾರೆ. ...



... ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು, ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ ಎಂದು ಬೇರೆ ಬೇರೆ ... ತ್ತಾರೆ. ತಮ್ಮ ಮನಸ್ಸಿಗೆ ತೀಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ... ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ... (ಎ. ಆರ್. ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ... ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ... ಇಂಥ ವಸ್ತುವನ್ನು ... ಧನ್ಯವಾದಗಳು. ಜನತೆಯೂ ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪ್ ಕಳುಹಿಸಬೇಕು. ... ವಿ. ಪಿ. ಯಿಂದ ಬೇಡಿದಲ್ಲಿ ... ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay. No. 4.**

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

Edited, Printed & Published By A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

ಪ್ರ ಸಂಪುಟ ೪೨] ತಾರೀಕು ೮ನೇ ಜುಲಾಯಿ ೧೯೪೦ (8-7-1940) [ಸಂಚಿಕ ೨

★

24 ಪುಟಗಳು **24**

ಅನುಕ್ರಮಣಿಕೆ

ಹಳ್ಳಿಗಳಲಿ ಜನಜಾಗೃತಿ ಹೇಗಾಗಬೇಕು?

ಹೊಂಗ್‌ಕೊಂಗಿನಲ್ಲಿ

ವಿದ್ಯಾಪ್ರಚಾರಕ್ಕಾಗಿ 17 ಲಕ್ಷ ರೂಪಾಯಿ

ಕಾಂಗ್ರೆಸಿಗೆ ಮುಸ್ಲಿಮರು ಏಕೆ ಸೇರುವುದಿಲ್ಲ?

ನಿಜವಾಗಿ ನಡೆಯುವ ಸಂಗತಿಗಳು

ಶಾಂತಿ ಸ್ಥಾಪನೆಯ ಹೊಸ ಪ್ರಯತ್ನ-ಒಂದು ಅದ್ಭುತ ಯಂತ್ರದ ಶೋಧ!

ಅಮೇರಿಕವು ಜಪಾನನ್ನು ತಡೆಯಬಹುದು

★

ಇಲೆಕ್ಟ್ರೊ – ಕಲ್ಚರ್

ದ್ವಿತೀಯ ವಿದ್ಯಾಸಂಸ್ಥೆ!

★

ಪರದೇಶಗಳಲ್ಲಿ ಒಂದು ನಿಮಿಷ!

★

... 300 ...
... ನಾಟಕವಾಡಿದ



ಶ್ರೀಮಂ...ದೇವಿ

CONSTRUCTIVE BANKING.

An understanding of how a modern ... useful to the individual, to business, and ... public has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank, with plenty of enthusiasm for our work plus plenty of solid experience with which to tackle the work successfully.

RESOURCES OVER A CRORE.

ESTED 1906
CANARA BANK LIMITED.

SWADESHABHIMANI ESTD. 1906

ವಿವಿಧ ವಿಷಯ

ಇಂಗ್ಲೆಂಡು ಕೆಳಗೆ ಹೋಗುತ್ತಿದೆ

ಇಂಗ್ಲೆಂಡಿನ ಕರಾವಳಿಯ ಅನೇಕ ಕಡೆಗಳಲ್ಲಿ ಜನರು ತಮ್ಮ ಮನೆಗಳು ಸಮುದ್ರ ಪಾಲಾಗದಂತೆ ಹಗಲಿರುಳು ದುಡಿಯುತ್ತಿದ್ದಾರೆ. ಅನೇಕ ವರ್ಷಗಳಿಂದ ಅವರು ಈ ರೀತಿ ದುಡಿಯುತ್ತಿದ್ದಾರೆ ಕೆಲವೊಂದು ಬಾರಿ ಅವರು ಸಮುದ್ರದೊಡನೆ ಸೋತದ್ದುಂಟು.

ಈ ಹೋರಾಟವು ಇನ್ನೂ ಬಲವಂತರವಾಗಿ ನಡೆಯಬೇಕಾಗಿತ್ತು. ಸಮುದ್ರವು ಒಂದು ಮಹಾಜಯವನ್ನು ಪಡೆಯುವ ಸಂಬಂಧಗಳು ಉಂಟಾಗಬಹುದು.

ಇಂಗ್ಲೆಂಡಿನ ಮುಖದ ಮೇಲೆ ಅನೇಕ ಬದಲಾವಣೆಗಳಾಗುವವೆಂದು ವಿಜ್ಞಾನಿಗಳೊಬ್ಬರು ಭವಿಷ್ಯವಾಗಿ ನುಡಿದಿರುವರು ಇಂಗ್ಲೆಂಡು ಕೆಳಗೆ ಹೋಗುತ್ತಿದೆ ಕಳೆದ 5000 ವರ್ಷಗಳಿಂದ ಅದು ಕೆಳಕ್ಕೆ ಹೋಗುತ್ತಿದೆ ಎಂದು ಅವರ ಅಂಬೋಣ

ಇಂಗ್ಲೆಂಡು ಮುಳುಗಿಯೆ ಹೋಗಬಹುದು

ಪ್ರತಿ ಐದು ವರ್ಷಗಳಿಗೆ ಇಂಗ್ಲೆಂಡು ಒಂದು ಇಂಚು ಕೆಳಗೆ ಹೋಗುತ್ತಿದೆ. ಇನ್ನೊಂದು ಎರಡು ಶತಮಾನಗಳ ವರೆಗೆ ಇಂಗ್ಲೆಂಡು ಸ್ಥಿರವಾಗಿರಬಹುದು, ಕೊನೆಗೆ ಒಂದು ದಿನ ಸಮಸ್ತ ಇಂಗ್ಲೆಂಡು ಒಂದು ಮಹಾಪ್ರಳಯಕ್ಕೆ ಒಳಗಾಗಬಹುದು

ಇಂಗ್ಲೆಂಡು ಈಗ ಕೆಳಗೆ ಹೋಗುತ್ತಿರುವ ವೇಗವು ಇತ್ತೀಚೆಗೆ ಅತಿರೇಖವಾಗಿ ಹೆಚ್ಚಿರುವುದಂತೆ. ಆದರಿಂದ ಇಂಗ್ಲೆಂಡನ್ನು ರಕ್ಷಿಸಲು ಸಮುದ್ರಕ್ಕೆ ವಿರೋಧವಾಗಿ ಮಹಾ ಗೋಡೆಗಳನ್ನು ಹಾಕಿಕೊಳ್ಳಬೇಕಾಗಿ ಬರುವುದಂತೆ ಇಂಗ್ಲೆಂಡಿನ ಸಮುದ್ರಕರಾವಳಿಯಲ್ಲಿರುವ ಹಳ್ಳಿಗಳನೇಕ ನೀರುಪಾಲಾಗಿ ಈಗ ಸಮುದ್ರದಲ್ಲಿ ಅನೇಕ ಮೈಲು ದೂರದಲ್ಲಿವೆ

ಇಟಲಿಗೆ ರಷ್ಯಾದೇಶದ ಗೋಧಿ

ಇಟಲಿಗೆ ಬಹಳ ಕಡಿಮೆ ದರದಲ್ಲಿ ಗೋದಿಯನ್ನು ಒದಗಿಸಿಕೊಡುವರೆ ರಷ್ಯವು ಒಪ್ಪಿರುತ್ತದೆ ಮೊನ್ನೆ ಇಟಿಗೆ ಸಾವಿರಾರು ಗೋಣಿ ಗೋದಿಯು ಇಟಲಿಯ ಬಂದರುಗಳನ್ನು ಸೇರಿದ ಕುರಿತ ಸೋವಿಯಟ್ ಸರಕಾರದ ಪ್ರಕಟಣೆಯಾಗಿರತದೆ

ರಷ್ಯಾ – ಜಪಾನ್ ಸಂಭಂದ

ರಷ್ಯಾದೊಡನೆ ಮೈತ್ರಿಯಲ್ಲಿರಲು, ಜಪಾನು ಯತ್ನಪಡುತ್ತಿದೆಯಾಗಿ ಪಾಶ್ಚಾತ್ಯದ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ

ಜರ್ಮನಿಯಲ್ಲಿ

ಯಹೂದ್ಯರನ್ನು ಹೊರಗಿಡುವ ಚಳವಳವು ಇನ್ನಷ್ಟು ಬಲ ಹೊಂದಿಕೊಂಡು ನಡೆಯುತ್ತಿದೆ ಈ ಮೊದಲು ಯಹೂದ್ಯರು ನಡೆಯಿಸಿಕೊಂಡು ಒದುವ ವ್ಯಾಪಾರಗಳನ್ನೆಲ್ಲಾ ಶುದ್ಧ ಆರ್ಯ ವಂಶಜರಿಗೆ ವಹಿಸುವ ಕೆಲಸವು ಅಲ್ಲಿ ನಡೆಯುತ್ತಿದೆ.

○ ○ ○ ○

ಜನರಲ್ ಫ್ರೆಂಕೋವು ತಮ್ಮ ವರ್ತಕ ಹಡಗುಗಳನನ್ನೇಕ ಮುಳುಗಿಸಿಬಿಟ್ಟಿದ್ದಾಗ್ಯೂ, ಬ್ರಿಟಿಷ ಮುಖ್ಯಮಂತ್ರಿಯರ ಸಮಾಧಾನತರದ ವರ್ತನೆಯು ಬ್ರಿಟನಿನ ಶಾಂತಿಸ್ಥಾಪನಾಧೋರಣೆಗೆ ತಕ್ಕುದ್ದಾಗಿರುತ್ತದೆಂದೂ ಬರ್ಲಿನ್ ಸರಕಾರದ ಹೇಳಿಕೆ.

ಝೆಕೋಸ್ಲೋವೆಕಿಯಾದಲ್ಲಿ

ಸುಡಾಟನ್ ಜರ್ಮನ ಪಕ್ಷದವರಿಂದ ಒಪ್ಪಿಸಲಾದ ಶರ್ತಗಳ ಮೇಲೆ ಝೆಕೋಸ್ಲೋವೆಕಿಯಾದ ಸರಕಾರವು ಒಪ್ಪಂದ ಮಾತುಕತೆಗಳನ್ನು ನಡೆಯಿಸುವುದಾಗಿ ತಿಳಿದು ಬರುತ್ತದೆ

ವಾರ್ದಾ ಶಿಕ್ಷಣ ಯೋಜನೆ.

ಈ ಯೋಜನೆಯ ಕುರಿತು ವಿಚಾರಣೆ ಮಾಡಲು ನೇಮಕವಾದ ಸಮಿತಿಯು, ತನ್ನ ಕಾರ್ಯಗಳನ್ನು ಈಗ ತೀರಿಸಿರುವುದು ಮುಂಬೈ ಸರಕಾರದ ಪ್ರಧಾನ ಮಂತ್ರಿಗಳಾದ ಶ್ರೀ ಬಿ ಜೇರರು ಈ ಸಮಿತಿಯ ಅಧ್ಯಕ್ಷರಾಗಿದ್ದರು ವಾರ್ದಾ ಶಿಕ್ಷಣ ಯೋಜನೆಯನ್ನು ತಯಾರಿಸಿದ ಡಾ ಜಾಕೀರ್ ಹುಸೇನರು, ಅದನ್ನು ಸಮಿತಿಗೆ ವಿವರಿಸಿದರು ಈ ಯೋಜನೆಯ ಹಲವು ವಿಚಾರಗಳ ಕುರಿತು ಚರ್ಚೆಯು ನಡೆಯಿತು ಮಕ್ಕಳ ಕೆಲಸವನ್ನು ಮಾಡುತ್ತ ವಿದ್ಯೆ ಹೊಂದುವುದು, ತಮ್ಮ ವಿದ್ಯಾಭ್ಯಾಸಕ್ಕೆ ಬೇಕಾದ ಹಣವನ್ನು ತಾವೆ ದುಡಿಯುವುದ ಈ ಯೋಜನೆಯ ಮುಖ್ಯ ಲಕ್ಷಣ ಈ ಸಮಿತಿಯವರು ವಾರ್ದಾ ಶಿಕ್ಷಣ ಯೋಜನೆಗೆ ಸಮ್ಮತಿಯನ್ನು ಕೊಟ್ಟಿರುವರು ಸಮಸ್ತ ಹಿಂದೂದೇಶದಲ್ಲಿ ಈ ಯೋಜನೆಯನ್ನು ಜ್ಯಾರಿಗೆ ತರಲು 40 ಕೋಟಿ ರೂ ಬೇಕೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಯಲ್ಲಿ ಕೆಲವು ಅಲ್ಪ ಸಲ್ಪ ಬದಲಾವಣೆಗಳೂ ಈ ಸಮಿತಿಯಿಂದ ಸೂಚಿಸಲಾಗಿದೆ

ಅಮೇರಿಕಾದಲ್ಲಿ ಸಾಂಪತ್ತಿಕ ಮುಗ್ಗಟ್ಟು

ಅಮೇರಿಕಾವು – ಅತ್ಯಂತ ಆರೋಗ್ಯವಂತ ಶ್ರೀಮಂತ್ರ ಜನಾಂಗವಾಗಿದ್ದರೂ ಅದರ ವ್ಯಾಪಾರವು ಮೊದಲಿನ ಸ್ಥಿತಿಗೆ ಬರಲಿಲ್ಲವಂತೆ ಅದು ಮೊದಲಿಗಿಂತ ಶೇ 30ರ ಸಲಿ ಕೆಳಗೆಯಿರುವುದಂತೆ. ನಿರುದ್ಯೋಗಿಗಳ ಸಂಖ್ಯೆಯು ದಿನೆ ದಿನೆ ಹೆಚ್ಚುತ್ತಯಿದೆ ಈ ಸ್ಥಿತಿ ನಿವಾರಣೆಗೆ ಅಧ್ಯಕ್ಷ ರೂಸ್ ವೆಲ್ಟರು, ಆದಷ್ಟು ಬೇಗನೆ ಗಮನ ಕೊಡಬೇಕಾಗಿ, ಅಮೇರಿಕಾದ ಅನೇಕ ಪತ್ರಿಕೆಗಳ ಸೂಚನೆಗಳಾಗಿವೆ

ಜಗತ್ತಿನ ಅತ್ಯಂತ ಮಹಾತ್ತಾದ ಯುದ್ಧ ವಿಮಾನವು ಸಂಯುಕ್ತ ಅಮೇರಿಕಾದಲ್ಲಿ ರಚನೆ ಹೊಂದಿರುತ್ತದೆ ಅದರಲ್ಲಿ ಆರು ಇಂಜೀನುಗಳಿವೆ ಅದು ನಿಲ್ಲದೆ ನ್ಯೂಯೊರ್ಕಿಂದ ಲಂಡನಿಗೂ, ಮರಳಿ ಲಂಡನಿನಿಂದ ನ್ಯೂಯೊರ್ಕಿಗೂ ಹಾರಾಡ ಬಲ್ಲುದಂತೆ ಅದರಲ್ಲಿ ದಾರಾಳ ಬಾಂಬುಗಳನ್ನೂ, ನೂರು ಮಂದಿ ವೈಮಾನಿಕರನ್ನು ಒಯ್ಯ ಬಹುದಂತೆ

○ ○ ○ ○

ವ್ಯಾಪಾರ ವಾಣಿಜ್ಯದ ಕುರಿತು, ಸಂಯುಕ್ತ ಅಮೇರಿಕಾದೊಡನೆ ಒಪ್ಪಂದ ವೊಂದು ಬೇಗನೆ ಆಗದಿದ್ದರೆ, ಬ್ರಿಟನಿನ ಸ್ಥಿತಿಯು, ಬಹುಕಳವಾಗಿ ಕೆಡಬಹುದೆಂದು, ಆ ಒಪ್ಪಂದವು ಆದಷ್ಟು ಬೇಗನೆ ನಡೆಯ ಬೇಕೆಂದು ಬ್ರಿಟಿಷ ಪತ್ರಿಕೆಯೊಂದರ ಸೂಚನೆ

ಇತರ ಗ್ರಹಗಳಲ್ಲಿ ಜೀವಿತ ವಸ್ತುಗಳಿರುವವೆ?

ಈ ಕುರಿತು ಪ್ರಖ್ಯಾತ ಖಗೋಳ ಶಾಸ್ತ್ರಜ್ಞಾರೊಬ್ಬರು ಒಂದು ಗ್ರಂಥವನ್ನು ಬರೆದಿರುವರು ಬ್ರಹಸ್ಪತಿಯಿಂದ ಶನಿಗ್ರಹಕ್ಕೆ, ಅಲ್ಲಿಂದ ಬುಧ ಗ್ರಹಕ್ಕೆ ತೆರಳುತ್ತಿರುವಾಗ ನಾವು ಸೂರ್ಯನಿಂದ ದೂರ ದೂರಕ್ಕೆ ಸರಿಯುತ್ತಿದ್ದೇವೆ. ಗ್ರಹಗಳ ಉಷ್ಣವು ಸೂರ್ಯನಿಂದ ಬರುವುದರಿಂದ ಈ ಗ್ರಹಗಳು ಸೂರ್ಯನಿಂದದೂರಕ್ಕೆ ಇರುವುದರಿಂದ ಅಲ್ಲಿ ಅತಿರೇಖವಾದ ಶೀತವಿದೆ ಈ ತರದ ಶೀತ ಪ್ರದೇಶಗಳಲ್ಲಿ ಯಾವ ತರದ ಜೀವಿಗಳಿರಬಹುದು? ಅತಿರೇಖವಾದ ಶೀತದಿಂದ ಅದು ಅಸಾಧ್ಯವು – ಅಲ್ಲಿ ಜೀವಾಮ್ಲುವು ನ ಬದಲಾಗಿ, ವಿಷಕಾರ ವಾಯುಮಂಡಳವು ಅವುಗಳನ್ನು ಆವರಿಸಿಕೊಂಡಿರುವುದು ಆದರಿಂದ ಆ ಗ್ರಹಗಳಲ್ಲಿ ಜೀವಿಗಳಿಗೆ ಹುಟಿ ಬೆಳೆಯಲು ಅವಕಾಶವಿರುವುದಿಲ್ಲ

ರಕ್ಷೈರ್ಮಹಾರ್ಹೈಸ್ತುತುರ್ಷುರ್ನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ
SWADESHABHIMANI

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನು ಮರೆತು ಕಸ್ತುದ್ರುರ ಕೆರದ ಕುಲಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ತಾರೀಕು ೮—೭—೧೯೩೮ | ತಾರೀಕು 8—7—1938

ಸಿಕಾರ ರಾಜ್ಯದಲ್ಲಿ ಶಿಕಾರಿ

ಸಿಕಾರದ ಅಧಿನಾಯಕನನ್ನು ರಾವ್ ರಾಜಾ ಎಂಬ ಬಿರುದಿನಿಂದ ಕರೆವರು ಈ ಚಿಕ್ಕ ರಾಜ್ಯವು ಜಯಪುರ ರಾಜ್ಯದ ಆಡಳಿತದಲ್ಲಿದೆ ಸಿಕಾರಾಧಿಕಾರಿಯು ಹಿರೇ ಮಗನನ್ನು ಅವನ ವಿವಾಹದ ಮೊದಲೇ ವಿಲಾಯತಿಗೆ ಕೊಂಡೊಯ್ಯುವುದಕ್ಕಾಗಿ ಜಯಪುರದ ಮಹಾರಾಜನು ಪ್ರಯತ್ನಿಸಿದುದಕ್ಕಾಗಿ ಅಧಿಕಾರಿಯ ಮಹಾರಾಜನ ವಿರುದ್ಧ ಸಾರಿದುದರಿಂದ, ಸಿಕಾರ ರಿಕಾಣೆಯನ್ನು ಜಯಪುರದ ಸೈನ್ಯವು ಮುತ್ತಿತು. ಚತರ್ಗಳವಾಯಿತು ಬ್ರಿಟಿಷ ರೆಸಿಡೆಂಟ ಮೊದಲಾದವರ ಪ್ರಯತ್ನದಿಂದ ಈ ರಗಳೆ ಮುಂತಾ ತೀರಿತು ರಾವ್ ರಾಜನ ಹಿರೇ ಮಗನನ್ನು ಮಹಾರಾಜರು ಹಿಂದೆ ಬಿಟ್ಟು ಇಂಗ್ಲೇಡಿಗೆ ತೆರಳುವದಾಯಿತು.

ಇದು ಎಪ್ರಿಲ್ ತಿಂಗಳಲ್ಲಾದುದು ಮೇ ತಾ. ೩ರಲ್ಲಿ ಸಿಕಾರವನ್ನು ಸರಿಯಾಗಿ ಆಳಲು ರಾವ್ ರಾಜನಿಗೆ ಅಸಾಧ್ಯವೆಂದು ಜಯಪುರ ಸರಕಾರವು ಪ್ರಕಟಿಸಿತು ರಾವ್ ರಾಜನ ತಲೆಸರಿಯಿಲ್ಲ ಎಂಬದು ಪ್ರಕಟವಾಗಿ ಆತನ ಜಮೀನನೆಲ್ಲ ಸರಕಾರದ ಕೋರ್ಟ್ ಒಪ್ ವಾರ್ಡ್ಸ್ ಕೈಕೆಳಗೆ ಇಡಲಾಯಿತು

ಜಯಪುರ ದರ್ಬಾರವು ವಿಚಾರದೊಂದು ಕಮಿಟಿಯನ್ನು ಏರ್ಪಡಿಸಿ, ಅವರ ಮೂಲಕ ಸಿಕಾರದ ಸ್ಥಿತಿಯನ್ನು ವಿವರಿಸಬೇಕೆಂದಾಯಿತು ಜೂನ್ ತಾ ೩1ರಲ್ಲಿ ಸಿಕಾರದ ಮಹಾಜನರ ಪ್ರತಿನಿಧಿಗಳು ಬ್ರಿಟಿಷ ರೆಸಿಡೆಂಟರನ್ನು ಕಂಡು, ಬರೇ ಸ್ವತಂತ್ರ ಕಮಿಟಿಯಿಂದ ಈ ವಿಮರ್ಶೆ ನಡೆಯಬೇಕೆಂದರು ಮಾತ್ರವಲ್ಲದೆ, ಪ್ರತ್ಯೇಕ ನ್ಯಾಯಸ್ಥಾನಗಳನ್ನು ನಿರ್ಮಿಸಬೇಕಲ್ಲದೆ, ಜಯಪುರ ಸರಕಾರದಲ್ಲಿ ತಮಗೆ ಭರವಸೆಯಿಲ್ಲೆಂದರು ರಾವ್ ರಾಜನ ಬದಲಾಗಿ (ಪತ್ನಿ) ರಾವ್ ರಾಣಿಯನ್ನು ಅಲ್ಲಿನ ಸರಕಾರದ ಅಧ್ಯಕ್ಷೆಯನ್ನಾಗಿ ಮಾಡಬೇಕೆಂದರು

ಸಿಕಾರ ಪುರಕ್ಕೆ ಮೊನ್ನೆ ರೈಲುಹತ್ತಿ ಆಯುಧಪಾಣಿಗಳಾದ 100 ಮಂದಿ ರಜಪೂತರು ಅತ್ತ ಬಂದರು ಅವರನ್ನು ಸ್ಟೇಶನ ಬಳಿ ಸುತ್ತುಗಟ್ಟಿ, ಆಯುಧ ಕೊಡಿರೆಂದರೆ ಕೇಳದ ಕಾರಣವೂ ಗುಂಡಿಟ್ಟ ಕಾರಣವೂ, ಸೈನಿಕರು ಅವರನ್ನು ಗುಂಡಿಕ್ಕಿ ಐವರು ಸಾಯುವಂತಾದ ಬಳಿಕ, ಅವರನ್ನು ಕೈದು ಮಾಡಿ, ಆಯುಧ ಕಿತ್ತುಕೊಳ್ಳಲಾಯಿತು ಈಗ ಸ್ಥಿತಿಯು ಕೈಯೊಳಗೆ ಇದೆಯಾದರೂ, ಇನ್ನು ರಜಪೂತರು ಅತ್ತ ಬಂದಲ್ಲಿ, ಕೈಮೀರಿಹೋಗುವುದಾಗಿ ಭಾವಿಸಬೇಕಾಗಿದೆ.

ಈ ಮಧ್ಯೆ, ಊರಲ್ಲಿನ ಜಾಟರೇ 500 ಮಂದಿಯನ್ನು ಜಯಪುರ ಸೈನಿಕರು ಮುತ್ತಿದಂತೆ ವರ್ತಮಾನ ಬರಲು, ಊರವರು ಸೈನಿಕರನ್ನು ಹೊಡೆದರೆಂದೂ ತಿಳಿದೊಡನೆ, ಪೊಲೀಸರು ಎರಡು ಗಾಡಿ ತುಂಬ ಅಲ್ಲಿಗೆ ತೆರಳಿ, ಏಳು ಮಂದಿಯನ್ನು ಕೈದುಗಳೊಡನೆ ಕೈದು ಮಾಡಿದರು, ವಿಶೇಷ ಪ್ರಾಣಹಾನಿಯಾಗಲಿಲ್ಲ

ಪೊಲೀಸರು ಹಿಂದೆ ಬರುತ್ತಾ 80 ಮಂದಿ ಆಯುಧಧಾರಿಗಳು ಅವರನ್ನು ತಡೆದು, ಕಲ್ಲೆಸೆದು ಹಾವಳಿ ನಡೆಸಿದರು. ಆದಲ್ಲದೆ ಪೊಲೀಸ ಅಧಿಕಾರಿಯ ಮೋಟಾರಿನ ಗಾಜುಗಳನ್ನು ಹಾಳುಮಾಡಿದರು ಆದರೂ ಪೊಲೀಸರು ಪ್ರತಿಹಿಂಸೆ ಮಾಡಿಲ್ಲ ಮುಂದೆ ಪ್ರಸಿದ್ಧ ಹೋಗಿ ಜನರ ಗುಂಪು ಪೊಲೀಸ ಜವಾನನೊಬ್ಬನನ್ನು ಕೊಂದರು ಲಾಠಿಯವರ ಮೇಲೆ ದಾಳಿ ಮಾಡಿದರು. ಆಗ ಪೊಲೀಸರು ಗುಂಡಿಕ್ಕಿ ಇಬ್ಬರನ್ನು ಕೊಂದರು ಇವರಲ್ಲೊಬ್ಬನೆ ದಂಗೆಗೆ ಪ್ರೋತ್ಸಾಹಕನಾದ ಜಗನ್ನಾದ ಪುರೋಹಿತನು ಅಂತೂ ಹದಿನಾಲ್ಕು ಮಂದಿಯನ್ನು ಕೈದು ಮಾಡಲಾಯಿತು

ಇದಾಗುತ್ತಲೆ, ಸುತ್ತಲಿಂದ ಜನರು ಬಂದು ನೆರೆದರು. ಗುಂಡಿಕ್ಕಲಾಯಿತು, ಹಿಮ್ಮೆಟ್ಟಿದರು

ಪೊಲೀಸರ ಗಸ್ತು ತಿರುಗಿದರ ದಂಗೆಯವರೊಂದು ಲಾರಿ ಹತ್ತಿ ಬಂದರು ಸೈನಿಕರ ಮೇಲೆ ಈ ಲಾರಿಯಿಂದ ಗುಂಡುಗಳು ಬಿದ್ದವು. ಪೊಲೀಸರು ಪುನಃ ಗುಂಡು ಹೊಡೆಯಬೇಕಾಯಿತು

ರಾವ್ ರಾಜನು ಜನರು ವಿಮರ್ಶಾ ಕಮಿಟಿಗೆ ಸಹಾಯ ಮಾಡಿದರೆ ಸುಖ ಎಂದು ಸಾರಿದನು ಊರವರ ಪ್ರತಿನಿಧಿಗಳೊಡನೆ ಜಯಪುರದವರು ಮಾತಾಡಿ ಫಲವಾಗಿಲ್ಲ, ಅಹಿಂಸೆಯಿಂದ ಸುಮ್ಮನಿರಿ ಎಂದು ಸಾರಿರುವರು

ರಾವ್ ರಾಜರ ಅಧಿಕಾರವನ್ನು ಎತ್ತಿ ಸುವುದು ಜಯಪುರಕ್ಕೆ ಸಲ್ಲದೆಂದೂ, ರಾವ್ ರಾಜರಿಂದ ಮಾತ್ರ ಪ್ರಜಾಸತ್ತೆ ದೊರೆವುದೆಂದೂ ಊರವರ ಪ್ರತಿನಿಧಿಗಳ ಉತ್ತರ

ಊರ ಹೆಬ್ಬಾಗಿಲುಗಳನ್ನು ತೆರೆದಿಡಲಾಗಿದೆ, ಜನರಲ್ಲಿ ಬಹಳ ಗಲಿಬಿಲಿಯಿದೆ.

ಜನರಲ್ ಫ್ರೆಂಕೊನು ಹಿಡಿದ ಪ್ರದೇಶದಲ್ಲಿ ಬ್ರಿಟಿಷರಿಗೆ ಹೆಚ್ಚಿನ ಹಿತಗಳಿವೆಯಾಗಿ ತಿಳಿದು ಬರುತ್ತದೆ ಜನರಲ್ ಫ್ರೆಂಕೊನನ್ನು ತಡೆಯಬೇಕಾದರೆ ಸ್ಪೆನಿಶ್ ಬಂದರುಗಳಲ್ಲಿ ಬ್ರಿಟಿಷ ಯುದ್ಧ ನೌಕೆಗಳನ್ನು ಕಳುಹಿಸಿ ಕೊಡಬೇಕು. ಹಾಗೆ ಯುದ್ಧ ನೌಕೆಗಳು ಕಳುಹಿಸಿ ಕೊಟ್ಟರೆ, ಬ್ರಿಟನೆ ಇನ್ನೊಂದು ಮಹಾಯುದ್ಧಕ್ಕೆ ಕಾರಣವಾಗುವುದು,— ಆದುದರಿಂದಲೆ ಚೆಂಬರ್‌ಲೇನರು ಅಷ್ಟು ಮೌನವಾಗಿರುವುದಂತೆ— ಅಂತೂ, ಶಾಂತಿ ಪ್ರೇಮಿಗಳ ಪೋಷಾಕಿನಲ್ಲಿ ಬ್ರಿಟಿಷರು ತಮ್ಮ ಭಯವನ್ನು ಅಡಗಿಸಿಡುತ್ತಿದ್ದಾರೆ.

ಇಟೆಲಿಯ ರಾಜಶಾಸನವು ಸಂಪೂರ್ಣ ಮಾರ್ಪಡಿಸಲ್ಪಟ್ಟಿದೆ ಮುಸಲೋನಿಗೆ ಇಟೆಲಿಯ ಚಕ್ರವರ್ತಿಯರಾದ ಇಮನುವೇಲರಷ್ಟೆ ಅಧಿಕಾರವು ಕೊಡಲಾಗಿದೆ.

ಚೀನದ ಮುಸ್ಲಿಮರ ಪ್ರತಿನಿಧಿಗಳು

ವೈತ್ರಿಗಾಗಿ ಭೇಟಿ

ಮುಂಬಯಿಗೆ ಬಂದಿರುವ ಚೀನಾ ಪ್ರತಿನಿಧಿಗಳು ಚೀನದಿಂದ ಜನವರಿಯಲ್ಲಿ ಹೊರಟು ಇಜಿಪ್ತದಿಂದ ಇಲ್ಲಿನ ವರೆಗೆ ಎಲ್ಲ ರಾಜ್ಯಗಳಲ್ಲಿನ ಮುಸ್ಲಿಮರನ್ನು ಕಂಡು, ವೈತ್ರಿ ಬೆಳಸಲು ಆ ಪ್ರಚಾರ ಮಾಡುತ್ತಿರುವರು. ಕೊಂಗ್ರೆಸು ಚೀನಕ್ಕೆ ಸಹಾಯವಾಗಿ ವೈದ್ಯಕೀಯ ಸಲಕರಣೆಗಳನ್ನು ಒಪ್ಪಿಸುವುದರಲ್ಲಿ ಇವರು ತೀರಾ ತೃಪ್ತರಾಗಿರುವರು ಇಲ್ಲಿನ ಮುಸ್ಲಿಮರು ಧಾರಾಳವಾಗಿ ಸಹಾಯ ಮಾಡಬೇಕೆಂದು ಅವರ ಅರಿಕೆಯಾಗಿದೆ

ಚೀನದಲ್ಲಿ ಮುಸ್ಲಿಮರಿಗೆ ಅಲ್ಲಿನ ಸರಕಾರದವು ಸರಿಯಾಗಿ ಕೇಡು ಮಾಡುವದೆಂದು ಸುಳ್ಳು ವರ್ತಮಾನಗಳನ್ನು ಇಲ್ಲಿ ಹಬ್ಬಿಸಿದವರೆಂದೂ, ಮುಸ್ಲಿಮರೂ ರಾಷ್ಟ್ರೀಯರಾಗಿದ್ದು ಚೈಯಾಂಗ್ ಕೈ ಶೇಕನ ಸಹಾಯಕ್ಕಿರುವರೆಂದೂ ಇವರು ತಿಳಿಸಿರುವರು

ಜಿನ್ನಾರವರನ್ನು ಇವರ ಕಂಡಾಗಿದೆ ವಾರ್ಧಾದಲ್ಲಿ ಸೇರುವ ಕೊಂಗ್ರೆಸ್ ಕಾರ್ಯಕಾರಿ ಮಂಡಲದ ಸಭೆಗೂ ಇವರು ಹೋಗಲಿರುವರು ಎಲ್ಲ ಇಲ್ಲಿನ ಮುಖ್ಯ ನಗರಗಳನ್ನು ಇವರು ಸಂದರ್ಶಿಸುವರು

ಗಂಡಹೆಂಡಿರ ಜಗಳ,— ಮಗುವಿಗಾಗಿ

ಫಲ — ಬಾವನ ಮರಣ

ಟ್ರಿಚಿನೊಪಲಿಯಲ್ಲಿ ರಾಮಲಿಂಗಮ್ ಪಿಳ್ಳೆಯೆಂಬವನಿಗೂ ಅವನ ಹೆಂಡತಿ ಅಗತಮ್ಮಳ್ ವಾಸುಗಿಗೂ ಜಗಳವಾಯಿತು ಗಂಡನು ಹೊಡೆದಾಗ ಹೆಂಡತಿಯು ತವರ್ಮನೆಗೆ ಹೋದಳು ಮರುದಿನ ರಾತ್ರಿ 7½ ಗಂಟೆಗೆ ಬಂದು, ಅವಳ ಕೈಯಿಂದ ಮಗುವನ್ನು ಸೆಳೆದುಕೊಳ್ಳಲು ಯತ್ನಿಸಿದನು ಆಕೆ ಚೀರಿದಳು ಅವಳ ತಮ್ಮನು ಅತ್ತ ಓಡಿಬಂದನು ಕದನವಾಯಿತು ಪಿಳ್ಳೆಯರಿಗೆ ಕಠಿಣ ಗಾಯಗಳಾದುವು. ಆತನು ಕೂಡಲೆ ಪೊಲೀಸ ಸ್ಟೇಶನಿಗೆ ಓಡಿದನು ಪೊಲೀಸರು ಬಂದು ನೋಡುವಾಗ ಅವನ ತಮ್ಮನು ಸತ್ತು ಬಿದ್ದಿದ್ದನು. ಹೆಂಡತಿಯು ತಮ್ಮನ ತಲೆಗೆ ಗಾಯಗಳಾಗಿದ್ದವು

ಸಬ್ ಇನ್ಸಪೆಕ್ಟರರು ವಾಯುಸಿಯ ತಂದೆಯನ್ನು ಮಗನನ್ನೂ ಕೈದು ಮಾಡಿರುವರು ಸತ್ತವನ ಹೆಣದ ಪರೀಕ್ಷೆಯಾಗಿದೆ, ಇನ್ನು ಮರ ವಿಚಾರಣೆ ಬಾಕಿಯಲ್ಲಿದೆ.

ಬಾಲಗ್ರಹದ ಬಾಧೆ— ಮಗುವನ್ನು ಸ್ವಜಿಸಿ ಇಷ್ಟೆಲ್ಲರಿಗೆ ಅನಾಹುತವನ್ನುಂಟುಮಾಡಿತು

ಜನರಲ್ ಫ್ರೆಂಕೊನು, ಬ್ರಿಟಿಷರ ಹಡಗುಗಳನ್ನು ಮುಳುಗಿಸಬಿಡುತಿದ್ದರೂ, ಬ್ರಿಟಿಷರು ಏನನ್ನು ಮಾಡದೆ ಸುಮ್ಮನಿರುವರಾಗಿರಲು ಕಾರಣವೇನು? ಅದು ಇನ್ನೊಂದು ಯುದ್ಧ ಸಿದ್ಧವಿಲ್ಲವೆಂಬುದೆ ತಿಳಿಯಬೇಕಾಗಿದೆ

ಪೆಲೆಸ್ತೀನದಲ್ಲಿ ಪರಿಸರದಲ್ಲಿ ನಡೆಸಿಸಿಯು ಬ್ರಿಟಿಷರಿಗೆ ವಿರುದ್ಧವಾಗಿ ನಡೆಯುತ್ತಿರುವ ಪ್ರಸಾರಣೆಯು ಇನ್ನೂ ನಿಲ್ಲಲಿಲ್ಲವಾಗಿ ತಿಳಿದುಬರುತ್ತದೆ

ಬ್ರಿಟಿಷರು ಯುದ್ಧಮಾಡಲೇ ಬೇಕಾಗಿ ಬಂದರೆ. . . !

ಮುಖ್ಯಮಂತ್ರಿ ಚೆಂಬರ್ಲೇನರ ಭಾಷಣ:

"ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು, ಯುದ್ಧ ಮಾತ್ರವೊಂದೇ ಉಪಾಯಕರದರುವುದಾದಲ್ಲಿ, ಬ್ರಿಟಿಷರು ಯುದ್ಧಮಾಡಿಯೇ ಮಾಡುವರು ಪರಂತು, ಹಿಂದಣ ಮಹಾಯುದ್ಧದಲ್ಲಾದ ಅನಾಂತರಗಳು ಮರಳಿ ಉಂಟಾಗದಂತೆ ನೋಡಿಯೇ ನೋಡಬೇಕಾಗುವುದು.

ಸ್ಪೆಯಿನು ಸದ್ಯದಲ್ಲಿ ಸ್ಪೆಯಿನನವರಿಗೇ ಬಿಡಲಾಗುವುದು ಸ್ಪೆಯಿನೊಡನೆ ಈಗ ವ್ಯಾಪಾರ ನಡಸುವ ಹಡಗುಗಳಿಗೆ ಹಿಂದಣ ನಾಲ್ಕು ಮಡಿ ಹಣ ದೊರೆಯುತ್ತದೆ (ಭಾಡಿಗೆ) ಎಂದರು

ಆದರೆ ಯುದ್ಧಕ್ಕೆ ಕಾರಣವಾಗಬಹುದಾದ್ದ ಯಾವ ಕೃತಿಯನ್ನು ಮಾಡಲು ಸರಕಾರವನ್ನು ಒತ್ತಾಯಪಡಿಸುವುದು ಸರಿಯಲ್ಲವೆಂದು, ವಿಮಾನಗಳಿಂದ ಬಾಂಬು ಚೆಲ್ಲುವುದನ್ನು ಬಂದರುಗಳನ್ನು ಮುತ್ತುವುದನ್ನು ಮಾತ್ರ ಬ್ರಿಟಿಷರು ಒಪ್ಪಲಾರರು

ಯುದ್ಧವಾದರೂ, ಇತರರಿಗೆ ಆಹಾರ ವಸ್ತುಗಳ ಕಟ್ಟು ಎಂದೂ ಒದಗಲಾರದೆಂದೂ ಮಂತ್ರಿಗಳ ಅಭಯವಚನ

ಶ್ರೀ ಕಾಲೇಶ್ವರರಾಯರು ತಮ್ಮ ಪದವಿ ತ್ಯಾಗಮಾಡಬೇಕೆಂದು

ಒತ್ತಾಯ

ಶ್ರೀ ಎ ಕಾಲೇಶ್ವರರಾಯರು ನಮ್ಮ ಸರಕಾರದ ಮುಖ್ಯ ಪಾರ್ಲಿಮೆಂಟರಿ ಸೆಕ್ರೆಟರಿಯವರು ಎಸೆಂಬ್ಲಿಯಲ್ಲಿ ಆಂಧ್ರ ಪ್ರತಿನಿಧಿಗಳ ಕೆಲವರನ್ನೆಲ್ಲ ಭಾಷಣಮಾಡಿದ ಮೂಲಕ ಆಂಧ್ರ ಪ್ರಾಂತ್ಯ ಸ್ಥಾಪನೆಯ ಕಡೆಗೆ ಸರಕಾರದ ಮನಸ್ಸು ಹರಿಯದಂತೆ ಮಾಡುವುದಗತ್ಯವೆಂದಾದ ಆಂಧ್ರರ ಸೂಚನೆಗೆ ಇವರು ವಿರೋಧವಾಗಿ ಬೋಧಿಸಿರುವ ಪ್ರಯುಕ್ತ, ಆಂಧ್ರ ಪ್ರಾಂತ್ಯದ ಕೊಂಗ್ರೆಸ್ ಕಮಿಟಿಗೆ ಈ ಬಗೆಯಾಗಿ ವಿಧಾನ ಮಾಡಿಕೊಡಲು ಹಕ್ಕಿಲ್ಲವೆಂದು ಇವರು ಹೇಳಿರುವರಾಗಿ ತಿಳಿದು, ಇವರು ತಮ್ಮ ಪದವಿ ತ್ಯಜಿಸಬೇಕಾಗಿ ಆಂಧ್ರ ಪಾರ್ಲಿಮೆಂಟ್ ಪಾರ್ಟಿನಲ್ಲಿ ಸೇರಿದ್ದ ಮಹಾಜನ ಸಭೆಯ ಸೂಚನೆಯಾಗಿದೆ!

ಬ್ರಿಟನಿನಲ್ಲಿ ಜರ್ಮನ್ ಗೂಢಾಚಾರರು

ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವೆನಿಸುವ ಮತ್ತು ಮಹತ್ತರದ ಐದು ಯುದ್ಧ ನಾವೆಗಳನ್ನು ರಚಿಸುವ ಕುರಿತು ಬ್ರಿಟನು ಯೋಜನೆಯನ್ನು ಹಾಕಿಕೊಂಡಿತ್ತಷ್ಟೆ ಈ ನಾವೆಗಳ ಕುರಿತು ಯಾವದೂ ವಿವರಗಳನ್ನು ಅತ್ಯಂತ ರಹಸ್ಯದಲ್ಲಿಡಲಾಗಿದ್ದವು.

ಆದರೆ ಈ ರಹಸ್ಯಗಳು ಈಗ ಜರ್ಮನ ನೌಕಾಧಿಕಾರಿಗಳಿಗೆ ತಿಳಿದು ಬಂದಿರುವುದಾಗಿ ಬ್ರಿಟಿಷ ನೌಕಾಧಿಕಾರಿಗಳಿಗೆ ತಿಳಿದು ಬಂದಿದೆ ಈ ರಹಸ್ಯಗಳು ಹೊರಹೋಗಲು ನಾಜಿ ಗೂಢಾಚಾರರೆ ಕಾರಣವಂತೆ.

ಈ ವಿವರಗಳು ಅಷ್ಟು ರಹಸ್ಯವಾಗಿಟ್ಟಾಗಲೂ ಹೊರ ಬಿದ್ದುದರಿಂದ, ಬ್ರಿಟಿಷ ನೌಕಾಧಿಕಾರಿಗಳಿಗೆ ಆಶ್ಚರ್ಯ ಉಂಟಾಗಿರುತ್ತದೆ ನಾಜಿ ಗೂಢಾಚಾರರನ್ನು ಹುಡುಕಿ ತೆಗೆಯಲು ಅದೀಗ ಕಠಿಣ ಪ್ರಯತ್ನಗಳನ್ನು ಮಾಡುತ್ತಿದೆ

ಸ್ವದೇಶಾಭಿಮಾನಿ

ಕೌನ್ಪುರದಲ್ಲಿ ಮುಷ್ಕರ ಮುಗಿಯಿತು

— oOo —

ಕಳೆದ ಏಳು ಹಪ್ತೆಗಳಿಂದಲೂ ಸಾವಿರಾರು ಕೂಲಿಯವರ ಕ್ಲೇಶಕ್ಕೆ ಕಾರಣವಾಗಿ, ಒಟ್ಟಿನ ಮೇಲೆ, ಇಪ್ಪತ್ತು ಲಕ್ಷ ದಿನಗಳಷ್ಟಾಗಬಹುದಾದಷ್ಟು ಕೆಲಸವು ವ್ಯಾಯವಾಗಿ, ಸಂಯುಕ್ತ ಪ್ರಾಂತ್ಯದ ಸಂಪತ್ತಿಗೆ ಅಪಾರ ಹಾನಿಯನ್ನುಂಟುಮಾಡಿದ ಕೌನ್ಪುರದ ಮಜೂರರ ಮುಷ್ಕರವು, ಮುಖ್ಯಮಂತ್ರಿಯವರ ಮಧ್ಯಸ್ಥಿಕೆಯಿಂದ ಮುಗಿಯುವಂತಾಯಿತು.

ಈಗ ಧನಿಗಳೂ ಮಜೂರರೂ ಒಪ್ಪಿಕೊಂಡಿರುವ ಶರ್ತಗಳು, ಮೊದಲೇ ಮಜೂರರ ಸ್ಥಿತಿ ವಿಚಾರಣೆ ಮಾಡಿದ ಕಮಿಟಿಯು ಶಿಫಾರಸ್ಸು ಮಾಡಿದ ಶರ್ತಗಳಿಗಿಂತ ಹೆಚ್ಚೇನೂ ಬೇರೆಯಾಗಿಲ್ಲ. ಆದರೂ, ಆಗಲೇ ಒಪ್ಪಿಕೊಂಡಿದ್ದರೆ, ಹತ್ತು ಲಕ್ಷ ರೂಪಾಯಿಗಳ ನಷ್ಟ ಉಳಿಯುತ್ತಿತ್ತು; ನಮ್ಮಲ್ಲಿನ ಮನೋಭಾವಗಳ ಮಾಟದಿಂದ ಇಷ್ಟು ಸಹಿಸಿದ ಬಳಿಕವೇ ಅವನ್ನು ಸಮ್ಮತಿಸಿ ಗ್ರಹಬಾಧೆ ನಿವಾರಣೆಯಾದಂತಾಯಿತು.

ಮಜೂರರಿಗೆ ಅವರು ಹೇಳಿಕೊಂಡ, ಮತ್ತು ಹಿಂದೆ ಕಮಿಟಿಯು ಶಿಫಾರಸು ಮಾಡಿದ್ದ ಮಜೂರಿಯ ಬಡ್ತಿ ದೊರೆಯಿತು. ಮಜೂರ ಸಭೆ—ಇದನ್ನು ಧನಿಗಳು ಅಂಗೀಕರಿಸಿರಲಿಲ್ಲ; ಇನ್ನು ಅದಕ್ಕೆ ಸೂಚಿತವಾದ ವ್ಯವಸ್ಥೆಯಾಗುತ್ತಲೇ ಅದು ಅಂಗೀಕೃತವಾಗುವುದು. ಈ ಅಂಗೀಕಾರವಾಗದೆ ಒಪ್ಪಿಗೆ ಇಲ್ಲೆಂಬ ಸಭಾನಾಯಕರನ್ನು ಸಮಾಧಾನಗೊಳಿಸಿ, ಮಂತ್ರಿಯವರು, ತಮ್ಮ ಸೂಚನೆಯಿಂದ ಅದಕ್ಕೊಂದು ಸುವ್ಯವಸ್ಥೆಯಾಗುವಂತೆ ಏರ್ಪಡಿಸಿಕೊಂಡು, ಧನಿಗಳೂ ಅದನ್ನು ಒಪ್ಪುವಂತೆ ಮಾಡಿದರು!

ಇನ್ನು? ಮುಂದೆ ಇಂತಹ ಮುಷ್ಕರಗಳಾಗದಂತೆ,—ಕೂಲೀನಿರ್ಣಯಕ ಬೋರ್ಡನ್ನು ಸ್ಥಾಪಿಸಿರುವರು. ಈ ಬೋರ್ಡು ಆಗಾಗ ಕೈಗಾರಿಕೆಗಳಲ್ಲಿ ಉಂಟಾಗುವ ಸಮಸ್ಯೆಗಳಲ್ಲಿ ಇತ್ಯರ್ಥಿಸುವುದು. ಎಲ್ಲ ಗಿರಣಿಗಳಲ್ಲಿ ಒಂದೇ ಬಗೆಯ ಕೆಲಸಕ್ಕೆ ಒಂದೇ ಮಜೂರಿ ಸಿಗುವಂತೆ ಮಾಡುವುದೇ ಈ ಬೋರ್ಡಿನ ಪ್ರಥಮ ಕರ್ತವ್ಯ. ಚಿಲ್ಲರೆ ಕಲಹಗಳನ್ನು ಲೇಬರ್ ಕಮಿಶನರರು ಸುಧಾರಿಸುವರು. ಈ ಬೋರ್ಡ್ ಈ ಕಮಿಶನರರೂ ಮಜೂರರಿಗೆ ಬುದ್ಧಿ ಸೂಚಿಸುವವರು; ಅವರು ಇತ್ಯರ್ಥಗಳನ್ನು ಮಾಡಿ ಜ್ಯಾರಿಗೆ ತರುವವರಲ್ಲ.

ಧನಿಗಳಾಗಲಿ ಕೂಲಿಗಳಾಗಲಿ, ಇನ್ನು ಇವೆರಡು ಮುಖ್ಯ ಉಪಾಯಗಳ ಮೂಲಕ ತಮ್ಮ ಸಂಕಷ್ಟಗಳಲ್ಲಿ ಸುಸೂತ್ರವಾಗಿ ಪರಿಹರಿಸುವಂತಾಗಿದೆ. ಹೀಗೆ ಇವರು ಮಾಡುವರೋ ಮಾಡದವರೋ ಯಾರು ಬಲ್ಲರು? ವಿವೇಕವಿದ್ದರೆ ಬಾಳುವರು; ಸರಕಾರವು ಇನ್ನೇನು ಮಾಡಬಹುದು? ಜಗಳವುಂಟಾಗುವ ಕಾಲಕ್ಕೆ ಮಾತ್ರ ಮೈತ್ರಿಯ ವಿಚಾರವುಂಟಾಗುವುದಲ್ಲದೆ, ಅದರ ಮೊದಲು ಅನುದಿನದ ಕೆಲಸದಲ್ಲಿ ಧನಿಗಳೂ ಕೂಲಿಯವರೂ ಒಬ್ಬರನ್ನೊಬ್ಬರು ವಾತ್ಸಲ್ಯದಿಂದ ಕಾಣುತ್ತಿರದೆ ಇಷ್ಟೆಲ್ಲ ಅಪಾಯವಾಯಿತು. ಇತ್ತಂಡಗಳೂ ಆಗಾಗ ಸೇರಿ, ಕಾರ್ಖಾನೆಗಳಲ್ಲಿನ ತೊಡಕುಗಳನ್ನು ವಿಮರ್ಶಿಸಿ ತೀರ್ಮಾನಮಾಡಿಕೊಳ್ಳುತ್ತಿದ್ದರೆ ಪರಸ್ಪರ ಮೈತ್ರಿಯು ತಾನಾಗಿ ಉಂಟಾಗುತ್ತಿತ್ತು. ಇಬ್ಬರೊಳಗೂ ಸ್ನೇಹಾಚಾರವಿಲ್ಲದೆ ಕೈಗಾರಿಕೆಯೇ ಹಾಳಾಗಿದೆ.

ಆದರೂ, ಇಷ್ಟು ದಿನದ ನರಳಿಕೆಯಿಂದ ಮುಂದೆ ಹೀಗೆ ನಡೆದುಕೊಳ್ಳಬೇಕೆಂಬ ಬುದ್ಧಿ ವಿಚಾರವು ಉಂಟಾದುದರಿಂದ ಮುಂದಕ್ಕೆ ಸುಖವುಂಟು.

ಕಲ್ಕತ್ತ ಮ್ಯುನಿಸಿಪಾಲಿಟಿಯ ಕೌನ್ಸಿಲಿನಿಂದ ರಾಷ್ಟ್ರಪತಿಗಳ ರಾಜೀನಾಮೆ.

ನ್ಯಾಯವನ್ನು ತೀರ್ಮಾನಿಸುವುದೇ ಅಲ್ಲದೆ, ಇತರರೂ ನಾವು ಮಾಡಿದುದು ನ್ಯಾಯವೆನ್ನುವಷ್ಟು ಶುದ್ಧವಾಗಿ ನಮ್ಮ ತೀರ್ಮಾನಗಳಿರುವುದು ಅಗತ್ಯ. ಜನತೆಗೆ ಕೌನ್ಸಿಲುಗಳಲ್ಲಿ ಈ ವಿಶ್ವಾಸವಿಲ್ಲದಿದ್ದಲ್ಲಿ, ಅಂತಹ ಕೌನ್ಸಿಲುಗಳು ಇದ್ದು ಫಲವಿಲ್ಲ. ಅಂತಹ ಕೌನ್ಸಿಲುಗಳ ಸದಸ್ಯತನವೂ ಘಾತುಕರ."

ಕಲ್ಕತ್ತ ಮ್ಯುನಿಸಿಪಾಲಿಟಿಯವರು, ಅಲ್ಲಿನ ಉಪಾಧ್ಯಾಯಿನಿಯರ ನೇಮಕ, ಬಡ್ತಿ, ವರ್ಗ ಮೊದಲಾದುವುಗಳನ್ನು ಕುರಿತಾಗಿ, ಇಲಾಖಾಧಿಕಾರಿಗಳು ಕೆಲವು ಕೌನ್ಸಿಲರರು ಸೂಚಿಸುವ ಹಾಗೆ, ಉಪಾಧ್ಯಾಯಿನಿಯರ ಮುಖ ನೋಡಿಯೆ ನ್ಯಾಯಾನ್ಯಾಯಗಳನ್ನು ಮಾಡುತ್ತಿರುವರೆಂದು ದೂರು ಬಂದುದನ್ನು ವಿಮರ್ಶಿಸಿ ಇಲಾಖಾ ಆಫೀಸರರನ್ನು ನಿವೃತ್ತಿಗೊಳಿಸಿದರು. ಆದರೆ, ಇದು ನ್ಯಾಯವಾಗಲಿಲ್ಲ; ಇದರಲ್ಲಿ ಪಾಪಕರ್ಮಗಳನ್ನು ಮಾಡಿದವರನ್ನು ದಂಡಿಸದೆ, ಇವರು ಸ್ಥೂಲಭವಾಗಿ ನಂಬಿ ನಿಮಿತ್ತಮಾತ್ರವಾಗಿದ್ದುದರಿಂದ ಇವರನ್ನು ನಿವೃತ್ತಿಪಡಿಸಿದ್ದು ಶೋಚನೀಯವೆಂದು ಅಗ್ರಗಣ್ಯರಾದ ಸ್ತ್ರೀಪುರುಷರು ಕೌನ್ಸಿಲಿನಲ್ಲಿಯೂ ಮಹಾಸಭೆಗಳಲ್ಲಿಯೂ ಸೂಚಿಸಿದುದನ್ನು ನೋಡಿ, ಕೌನ್ಸಿಲಿನ ತೀರ್ಮಾನವು ನ್ಯಾಯವೆಂದು ಜನತೆಯು ನಂಬಲಾರದಂತಾಯಿತೆಂದು, ಮಾತ್ರವಲ್ಲದೆ ಕೊಂಗ್ರೆಸು ಕೌನ್ಸಿಲರರೂ ಇತ್ತಂಡವಾಗಿದ್ದು ಭೇದಭಾವಗಳಿಗೆ ಕಾರಣರಾದರೆಂದು ತಿಳಿದು ಶ್ರೀ. ಸುಭಾಷ ಬೋಸರು ತಮ್ಮ ಸದಸ್ಯತೆಗೆ ರಾಜೀನಾಮೆ ಕೊಟ್ಟರು.

ಸರಿಯಾದ ಚರ್ಚೆಯಾಗದಂತೆ ಅಡ್ಡಗಟ್ಟಿ ನ್ಯಾಯ ತೀರ್ಮಾನವು ಸರ್ವಸಮ್ಮತವಾಗುವಂತೆ ಅವಕಾಶ ಕೊಡದಿದ್ದುದೂ, ಸಂಗತಿಗಳನ್ನು ಮರೆಮಾಚಿದ್ದುದೂ ಕೌನ್ಸಿಲಿಗೆ ಗೌರವವಲ್ಲ; ಹಾನಿಕರವಾಗಿದೆ. ಪುನಃ ಸಭೆಸೇರಿ, ಆದೇ ತೀರ್ಮಾನವನ್ನು ದೃಢಪಡಿಸಲೂ ಒಪ್ಪುದಾಗಿತ್ತು. ಅಂತೂ ನ್ಯಾಯವಾಗಿದೆ ಎಂದು ಸರ್ವರೂ ಒಪ್ಪಿಕೊಳ್ಳುವಷ್ಟು ಚೆನ್ನಾಗಿ ಚರ್ಚಿಸಿ ತೀರ್ಮಾನಿಸಬೇಕಾಗಿತ್ತು.

ಕೊಂಗ್ರೆಸ್ ಕಾರ್ಯಕ್ರಮವನ್ನು, ಮೊದಲು ನಿರ್ಧರಿಸಿದ್ದುದನ್ನು, ಜ್ಯಾರಿಗೆ ತರುವ ಪ್ರಯತ್ನ ಮಾಡದೆ ಇದ್ದುದೂ; ತಮ್ಮೊಳಗೆ ಪಕ್ಷಕಟ್ಟಿಕೊಂಡು ರಾಷ್ಟ್ರೀಯತೆಯ ಗೌರವಕ್ಕೆ ಹಾನಿ ಬರುವಂತಹ ಸಂದರ್ಭಗಳನ್ನುಂಟುಮಾಡಿದುದೂ; ಶಿಸ್ತಿಗೆ ಬೆಲೆಯಿಡದೆ ವರ್ತಿಸಿ ಇಡೀ ಕೊಂಗ್ರೆಸಿಗೇ ಅಪಮಾನವುಂಟಾಗುವಂತೆ ಮಾಡಿದುದೂ,—ಒಂಟೆಯ ಬೆನ್ನು ಮುರಿಯುವ ಹಾಗೆ, ಹೇರಿದ ಒಡವೆಗಳ ಮೇಲೆ ಕೊನೆಗೆ ಇಡುವ ಹುಲ್ಲುಕಡ್ಡಿಯಂತಾಯಿತು. ಅದರಿಂದಾಗಿ ತಾವು ರಾಜೀನಾಮೆ ಕೊಡಬೇಕಾಯಿತೆಂದು ಬೋಸರೆನ್ನುವರು.

ತಿಂಗಳಿಗೆ ಹತ್ತಿಪ್ಪತ್ತು ನಗರಗಳಲ್ಲಿ ಸಂಚರಿಸಿ, ಮಳೆಮುಸುಕಿದ ಗುಡ್ಡಪ್ರದೇಶಗಳಲ್ಲಿ, ಕೊಂಗ್ರೆಸ್ ವಿರುದ್ಧಪಕ್ಷದ ಹಾವಳಿಯನ್ನಾದರೂ ಅನುಭವಿಸಿ, ಇಪ್ಪತ್ತು ಸಾವಿರದ ವರೆಗಣ ಸಮೂಹಗಳಿಗೆ ಭಾಷಣ ಮಾಡಿ ಇನ್ನು ಯೆಂಬಾ ಬಾಧೆಗೆ ಗಣ್ಯಮಾಡದ ರಾಷ್ಟ್ರಪತಿಗಳು,—ತನ್ನ ಪಕ್ಷದವರು ನಗರ ಸಭೆಯಲ್ಲಿ ಮಾಡುವ ಅನ್ಯಾಯವನ್ನು, ಶಿಸ್ತುಭಂಗವನ್ನು, ಸ್ವಕರ್ತವ್ಯಾಂಧತೆಯನ್ನು ಕಂಡು ಸೇರಿಸಲಾರದಾದರು. ಕಲ್ಕತ್ತ ಕೊರ್ಪರೇಶನ್ ಎಂದರೆ, ದೇಶದಲ್ಲಿ ಅತಿ ಪ್ರಾಮುಖ್ಯ ಮ್ಯುನಿಸಿಪಲ್ ಕೌನ್ಸಿಲು. ಅಲ್ಲೇ ಹೀಗಿರುವಾಗ, ಇನ್ನಿತರ ಕೌನ್ಸಿಲುಗಳಲ್ಲಿನ ವರ್ತನಾದಿಗಳೆಂತಿದ್ದಾವು?

ಅಧಿಕಾರಿಗಳೊಳಗೆ ಮನಕ್ಲೇಶ, ಮುಖನೋಡಿ ಸ್ಥಾನಮಾನಗಳು, ಪಕ್ಷದೊಳಗೇ ಭೇದ, ಇವಿದ್ದರೆ ಎಂತಹ ಮ್ಯುನಿಸಿಪಾಲಿಟಿಯೂ ಮುರಿಯುವುದು. ನ್ಯಾಯ ತೀರ್ಮಾನಗಳನ್ನು ವೋಟರರಲ್ಲಿ ವಿವೇಕಿಗಳಾದರೂ ಮನ್ನಿಸದಿರುವಾಗ, ಅಂತಹ ತೀರ್ಮಾನ ಮಾಡುವ ಸಭೆ ಯೇಕೆ?

ನೋಟುಗಳು.—Notes

ಹುಕ್—ಆಲಿಗಳ ಪತ್ರ ವ್ಯವಹಾರದಿಂದ ಒಂದಂಶವು ಸ್ಪಷ್ಟವಾಗಿದೆ. "ಬಂಗಾಳದಲ್ಲಿನ ಮುಸ್ಲಿಮ್ ಲೀಗಿನವರೆನ್ನುವ ಬಹಳ ಮಂದಿ, ಬ್ರಿಟಿಷ ಸಾಮ್ರಾಜ್ಯಶಾಹಿ ಮತ್ತು ಬಂಗಾಳದ ಜಮೀನ್ದಾರಶಾಹಿ ಪ್ರತಿನಿಧಿಗಳಾಗಿದ್ದು, ಸ್ವಾರ್ಥ ಸಾಧಕರೇ ಆಗಿರುವರಲ್ಲದೆ, ಇಸ್ಲಾಮಿನ ಮತ್ತು ಮುಸ್ಲಿಮರ ಹೆಸರೆತ್ತಿಕೊಂಡು ಜನಾಂಗದ ಹಣದಿಂದ ತಾವೇ ಮಹಾಪುರುಷರೆಳಿಸುವವರಾಗಿದ್ದಾರೆನ್ನಲು ನನಗೆ ಸಂತಾಪವಿದೆ." ಎಂದು ಆಲಿಯವರು ಹೇಳಿರುವರು. ದೇಶವೆಂದರೆ ತನ್ನ ಜಾತಿಯಷ್ಟೆ ಎನ್ನುವ ಆಲಿಯವರೂ ಹೀಗೆ ಮುಸ್ಲಿಮ ಲೀಗನ್ನು ದೂರುವುದೆ?

ಅಸ್ಸಾಮಿನಲ್ಲಿ ಏಳು ತಿಂಗಳ ಅವಧಿಗೆ ನಾಲ್ಕು ಕೃಷಿ ಆಫೀಸಿನ ಹುದ್ದೆಗಳು ಖಾಲಿಯಿವೆ. ಸರಕಾರದ ನೋಟಿಸು, ಇವಲ್ಲಿ ಎರಡು ಮುಸ್ಲಿಮರಿಗೆ; ಹಿಂದುಳಿದ ಹಿಂದುಗಳಿಗೆ! ಮುಂದೆ ಹೋದವರಿಗೆ? ಸಂಬಳ 40 ರೂಪಾಯಿಗೆ ಅತ್ಯುತ್ತಮ ವಿದ್ವಾಂಸರೂ ಈಗ ದೊರೆಯುವಾಗ, ಗ್ರೆಜ್ಯುವೇಟರಲ್ಲದವರೇ ಮುಂದೆ ಬರಲೆಂದು ಸರಕಾರವು ಸಾರಿದ್ದೇಕೆ? ಗ್ರೆಜ್ಯುವೇಟರಿಗೆ ಹುದ್ದೆಗಳು ಸಿಗಬಾರದೇ? ಜಾತಿ; ಅರೆಜಾಣತನ ಇವೇ ಈ ಹುದ್ದೆಗಳಿಗೆ ಯೋಗ್ಯತೆಯೆ?

ಎಂಟು ಬ್ರಿಟಿಷ ಹಡಗುಗಳನ್ನು ಫ್ರೆಂಕೊನಿನ ವಿಮಾನಗಳು ಬೊಂಬಿನಿಂದ ಮುಳುಗಿಸಿದುವು. ಬ್ರಿಟಿಷ ಮುಖ್ಯ ಮಂತ್ರಿಗಳಿಗೆ ಈಗ ಸಿಟ್ಟು ವಿಪರೀತವಾಗಿದೆ. ಫ್ರೆಂಕೊನನ್ನು ದಂಡಿಸಬೇಕು, ಬ್ರಿಟಿಷ ನಾವೆಗಳ ಗೌರವ ಉಳಿಸಬೇಕು. ಹೇಗಂದೀತು? ಅದಕ್ಕಾಗಿ - ಇನ್ನು ಬ್ರಿಟಿಷನಾವೆಗಳ ಸಿಗಾನೋಟೀಸು ಬ್ರಿಟಿಷ ಸರಕಾರವು ಭರವಸೆ ಕೊಡಲಾರವು, ಅವು ತಮ್ಮ ಜವಾಬ್ದಾರಿಯ ಮೇಲೆಯ ಸ್ಪೈನಿಗೆ ಹೋಗಲಿ! ಎಂದು ಆಜ್ಞಾಪಿಸಿ ಫ್ರೆಂಕೋ ಹೀಗೇಕೆ ಮಾಡುವನೆಂದು ಅವನಿಂದ ಉತ್ತರ ಕೇಳಬೇಕು—ಎಂದು ಮತ್ತೊಂದ ಪ್ರಣೆ. ದಂಡನೆ ಪ್ರಮಾದವೆಲ್ಲ ಬ್ರಿಟಿಷ ಹಡಗುಗಳಿಗೇ ಆಯಿತು.

ಭಾರತವರ್ಷವು ಸ್ವತಂತ್ರವಾಗುವುದಕ್ಕೆ ಒಂದು ಎರಡು ತಲಾಂತರ ಸಾಕು. ಆಗ ನೀವು ಸ್ವತಂತ್ರಮಹಿಳೆಯರಾಗಿ ಮುಂದಣ ಜನಾಂಗವನ್ನು ನಿರ್ಮಿಸಿ, ಗೌರವ ಯುಕ್ತವಾದ ನಾಳಿನ ಭಾರತವನ್ನು ಸೃಜಿಸುವವರಾಗುವಿರಿ!" ಎಂದು ಮಹಿಳಾ ವಿದ್ಯಾಪೀಠದಲ್ಲಿ ಮುಂಬಾಯಿಯ ಮಂತ್ರಿಗಳು (ಶ್ರೀ। ಮುನ್‌ಶೀಯವರು) ಹೇಳಿದರು. ತಥಾಸ್ತು! ಆದರೆ ಇದೆಲ್ಲವೂ ಒಂದೆರಡು ತಲಾಂತರಗಳ ಮಾತಾದ ಕಾರಣ ಮಾತ್ರ ನಮ್ಮಲ್ಲಿ ಎಷ್ಟು ಜನರು ಆ ಸ್ವತಂತ್ರ ಪಡೆವ ಭಾರತ ನೋಡಲಿಕ್ಕಿರಬಹುದೋ ಎಂದು ಏನೇನೋ ಹೇಳಬೇಕಾಗುವುದಲ್ಲ!

ವಿಯಾನ್ನದ ಪೊಲೀಸ್ ಅಧಿಕಾರಿಗಳು "ಅಲ್ಲಿನ ಉದ್ಯಾನಗಳಲ್ಲಿ ಯೆಹೂದಿಗಳು ಸುಳಿದರೆ, ಎಷ್ಟೋ ಜನರ ತಲೆ ತಿರುಗುತ್ತದೆ" ಎಂದೊಂದು ನೋಟಿಸು ಪ್ರಕಟಿಸಿ, ಉದ್ಯಾನಗಳಲ್ಲಿ ಯೆಹೂದಿಗಳು ಬಾರದಂತೆ ಮಾಡಿರುವರು. ನಮ್ಮಲ್ಲಿ ಯೆಹೂದಿಗಳನ್ನು ಯಾರೂ ಹೀಗೆ ಬಹಿಷ್ಕರಿಸುತ್ತಿಲ್ಲ, ನಾವು ಅಷ್ಟು ಉದಾರಭಾವವುಳ್ಳವರು. ದೇಶೀಯ ರಾಜ್ಯಗಳಲ್ಲಿ ಇನ್ನಷ್ಟು ಚೆನ್ನಾದ ಉದಾರ ಭಾವವಿದೆ. ಆದರೆ ಅಲ್ಲಲ್ಲಿ ಪ್ರಜೆಗಳು ತಿಂಚಿತ್ತು ನಿದಾರ್ಕ್ಷಿಣ್ಯವಾಗಿ ಸ್ವಲ್ಪ ಹೆಚ್ಚಿನ ರಿಯಾಯತಿಗಳಿಗಾಗಿ ನ್ಯಾಯವಾಗಿ ಸೇರತೊಡಗಿದರೆ, ಅವರನ್ನು ವಿಯಾನ್ನದಲ್ಲಿನ ಯೆಹೂದಿಗಳಂತೆ ನೋಡುತ್ತಿರುವವಲ್ಲ! ಉದಾರ ಭಾವ ತೋರಿಸಿರೆಂದು ಬೇಡಿಕೊಳ್ಳುವುದೂ ಯೆಹೂದಿತನಕ್ಕೆ ಸಮಾನವೆ?

ಯೆಹೂದಿಗಳ ಮಾತೆತ್ತುವಾಗ, ಬೆನ್ ಜೊಸೇಫನ ನೆನಪಾಗುವುದು. ಬ್ರಿಟಿಷರಷ್ಟು ಉದಾರತೆಯಿಂದ ಯೆಹೂದಿಗಳನ್ನು ಕಾಣುವವರೇ ಇಲ್ಲ. ಆದರೆ ಬ್ರಿಟಿಷರು ಪೆಲೆಸ್ತೀನ ಆಳುವ ಇಷ್ಟು ವರ್ಷಗಳಲ್ಲೂ ಆಗಾಗ ಕ್ರಾಂತಿಕಾರರ ಉಪಟಳವಾಗುತ್ತಿತ್ತಲ್ಲ! ಈಗ ಅದರ ಶಾಂತಿಗೆ ವಿಚಾರಣೆ ನಡೆಸುವಾಗ ಬೆನ್ ಜೊಸೆಫನ ಕೀರ್ತಿ ಮೆರೆಯುವಂತಾಗಿದೆ. ಫಾಸೀ ಶಿಕ್ಷೆಹೊಂದಿದ ಯೆಹೂದ್ಯರಲ್ಲಿ ಇವನೇ ಅಲ್ಲಿ ಮೊದಲನೆಯವನು! ಹಾಗೆಂದು ಬರ್ಲಿನಿನಲ್ಲಿ ಯೆಹೂದಿಗಳನ್ನು ಪೀಡಿಸುವುದಲ್ಲ ಪಕ್ಕನೆ ಪಾಪಯವಾಗಿದೆ.

ಸರಕಾರದ ಹುದ್ದೆಗೆ—ಮೇಲೆ ಹೇಳಿದ್ದೇ—ಜಾತಿ ಹಿಂದುಗಳಲ್ಲಿ ಯೋಗ್ಯರನ್ನು ಬಿಟ್ಟು ಹರಿಜನರನ್ನು ಆರಿಸುವ ಚಾಟವು ಬಿಹಾರದಲ್ಲಿ ಹೆಚ್ಚಾಗಿದೆಯೆಂದು ತಿಳಿದು ಬಿಹಾರದ ಜಾತಿ ಹಿಂದುಗಳು ತಾವು ಹರಿಜನರೆಂದು ಹೇಳಿಕೊಂಡು, ಹರಿಜನರಿಗಾಗಿಟ್ಟ ಸ್ಥಾನಗಳನ್ನು ಆಕ್ರಮಿಸಲು ಉಮೇದ್ವಾರರಾಗಿ ಬರುತ್ತಿರುವರೆಂದು ಹರಿಜನ ಮುಖಂಡರು ಅಲ್ಲಿನ ಮಂತ್ರಿಗಳಿಗೆ ತಕರಾರುಮಾಡಿರುವರು.

ಶ್ರೀ। ಸತ್ಯಮೂರ್ತಿಯವರ ಅಭಿಪ್ರಾಯದಲ್ಲಿ, ಇಂಗ್ಲೆಂಡು ಭಾರತವರ್ಷವನ್ನು ತೃಪ್ತಿಗೊಳಿಸದೆ, ಸಾಮ್ರಾಜ್ಯಕ್ಕೆ ಹಾನಿಯಿದೆ ಎಂದ
ತೋರಿರುವುದು. ಇಟಲಿಯೊಡನೆ, ಫ್ರೆಂಕೋ
ನೊಡನೆ, ಜರ್ಮನಿಯೊಡನೆ ಕರಾರುಗಳಾ
ಅಲ್ಲಲ್ಲಿ ತೃಪ್ತಿ ಹರಡಿದೆಯಂತೆ. ಡಿವೇಲೇ
ರೊಡನೆ ಸಹಕಾರರಾಗಿ ಐರ್ಲೆಂಡಿಗೆ ತೃ
ಯಾಗಿದೆ. ಇನ್ನು ಮನೆಯ ಸುತ್ತಲೂ ತೃ
ಯಾದ ಬಳಿಕ, ದೂರದ ಇಂಡಿಯದಲ್ಲಿ ತೃ
ತಾನಾಗಿ ಜಗಬಾರದೇ? ಎಂದೇ ಚೇಂಬಲೇ
ನರು ಭಾವಿಸಿರುವರು. ಅದರಲ್ಲಿ ತಪ್ಪೇನು?

"ಶಾಂತನಾಗಬೇಕು" ಎಂದು ಸ್ಟೆಲೀ
ಜಗದೀಶನಿಗೆ ಹಲವು ವಿದ್ಯಾರ್ಥಿಗಳಿಂದ ವಾತೆ
ತಲುಪಿದೆಯಂತೆ. ಹಿಂದೀ ವಿರುದ್ಧ ಚಳವ
ಗಾರರೂ 'ಉಪವಾಸ ತ್ಯಜಿಸಬೇಕೆಂದು'
ಸ್ಟೆಲಿನನಿಗೆ ಅರಿಕೆಮಾಡಿಕೊಂಡಿರುವರು.
ನಾಗಿ ಉಪವಾಸಿಯು ಆಹಾರಾತುರನಾಗಿ
ವಾಗ, ಹೀಗೆ ಅರಿಕೆಗಳು ತಲುಪಿದೆ ಆಹಾ
ತಕ್ಕೊಂಡರೆ ನಗೆಗೇಡಾಗಬಹುದೆಂಬ
ಇರಬಹುದು. ಉಪವಾಸದಿಂದ ದೇಹದ
ಕವೂ ಹೆಚ್ಚುವುದುಂಟಂತೆ.

ಮುಳಪ್ಪರು ಶಾಲೆಯಲ್ಲಿ ಒಂದು
ಪಾರ್ಟಿ. ಪಾರ್ಟಿಯ ನಂತರ 150 ಮಂ
ಜಾಡ್ಯ ತಲೆದೋರಿತು. ಡಾ। ಕುಂಜ್ಞಾಂ
ವೈದ್ಯನೇ ಅಲ್ಲಿದ್ದುದರಿಂದ, ಇವರೆಲ್ಲರೂ ಗ
ಹೊಂದಿದರು. ಆಹಾರವೇ ವಿಷವಾಗಿ ಮಾ
ಟ್ಟಿತೆ?

ವಿಶಾಖಪಟ್ಣದ ಮ್ಯುನಿಸಿಪಲ್ ಸಭೆ ಸ
ದಾಗ ಪೋಲೀಸರನ್ನು ಕರೆಯಬೇಕಾಯಿ
ಕೆಲವರು ಸದಸ್ಯರು ಮಹಾತ್ಮಾಜಿಯವರ
ಯನ್ನು ನೋಡುತ್ತ, ಮಹಾತ್ಮಾ ಗಾಂಧಿಕೀ
ಎಂದು ಕೂಗುತ್ತ, ಸಭಾಕಾರ್ಯವನ್ನು ಮುಂ
ಯಬಿಡದೆಯೂ, ಅಧ್ಯಕ್ಷರು ತಮ್ಮ ತೀರ್ಮಾ
ಜ್ಯಾರಿಗೆ ತರಬಿಡದವರನ್ನು ಹೊರಗಟ್ಟ
ಪೊಲೀಸರಿಗೆ ಮೊರೆ ಇಡುತ್ತಲೂ, ರಾತ್ರಿ
ಗಂಟೆಯ ವರೆಗೂ ಸಭೆ ನಡೆಯಿತು.
ಕೆಲವು ಮೆಂಬರರು ಎದ್ದು ಹೊರನಡೆದ
ಅವಕಾಶ ದೊರೆತಂತೆ ಮರಳಿ ಬಂದು ಕೂ
ಈ ಕೌನ್ಸಿಲಿನಿಂದ ಊರಲ್ಲೆಲ್ಲ ನಾಗರೀಕ
ಪನಕ್ರಮವು ಚೆನ್ನಾಗಿ ಹರಡಬಹುದೆಂಬ
ಪಸೆಯಿದೆ.

ಭಾರತದಲ್ಲಿ ಸಮತಾವಾದದ ಪ್ರಚಾರ

ಅದು ಸಫಲವಾಗುವದೇ ಹೇಗೆ?

"ಶಕ್ತಿಗೆ ತಕ್ಕಷ್ಟು ಪರಿಶ್ರಮ—ಅವಶ್ಯಕತೆಗೆ ತಕ್ಕ ಹಾಗೆ ಪೂರೈಕೆ" ಎಂಬುದು ಸಮತಾವಾದದ ಮುಖ್ಯ ಸೂತ್ರವಾಗಿರುತ್ತದೆ ೧೯ನೇ ಶತಮಾನದ ಮಧ್ಯಭಾಗದಲ್ಲಿ ಕಾರ್ಲಮಾರ್ಕ್ಸನು ಈ ತತ್ವವನ್ನು ಪ್ರಥಮತಃ ಪ್ರಚಾರಮಾಡಿದನು ಅಂದಿನಿಂದ ಶಾಸ್ತ್ರೀಯ ಸಮತಾವಾದದ ಪ್ರಚಾರವು ಆ ದೇಶ ಈ ದೇಶ ಎಂಬುದಿಲ್ಲದೆ ಎಲ್ಲ ದೇಶಗಳಲ್ಲಿ ಪ್ರಚಾರವಾಗುತ್ತ ಇದೆ. ನಮ್ಮ ದೇಶವೂ ಈ ಪ್ರಚಾರದಿಂದ ಹೊರಗಾಗಿಲ್ಲ ಈಗೀಗ ಸಮತಾವಾದಿಗಳ ಪ್ರಭಾವವು ಎಲ್ಲ ಕಡೆಗಳಲ್ಲಿ ತೋರಿಬಂದಿದೆ. ಆದರೆ

ಸಮತಾವಾದವು ನಮ್ಮ ದೇಶದಲ್ಲಿ ಸಫಲವಾಗುವದೇ ಹೇಗೆ?

ಶ್ರೀ. ಯಸ್. ಸಿ. ಸೇನರು 'ಟ್ವೆಂಟಿಯತ್ ಸೆಂಚುರಿ' ಎಂಬ ಪತ್ರಿಕೆಯಲ್ಲಿ ಬರೆದ ಒಂದು ಲೇಖನವು ಈ ಪ್ರಶ್ನೆಗೆ ಯೋಗ್ಯವಾದ ಉತ್ತರವನ್ನು ಕೊಟ್ಟಿದೆ ಲೇಖನದ ಸಾರಾಂಶವು ಇಲ್ಲಿದೆ.

೧೯ನೇ ಶತಮಾನದ ಮಧ್ಯಭಾಗದಲ್ಲಿ ಕಾರ್ಲಮಾರ್ಕ್ಸನು ಶಾಸ್ತ್ರೀಯ ಸಮತಾವಾದದ ಪ್ರಚಾರಕ್ಕೆ ತೊಡಗಿದಂದಿನಿಂದ ಲೋಕದಲ್ಲಿ ಸಮತಾವಾದ ಸಾಹಿತ್ಯವು ನಾವು ಊಹಿಸಲಾರದಷ್ಟು ಹೆಚ್ಚಾಗಿ ಬೆಳೆದಿದೆ. ಈಗ ಸಮತಾವಾದದ ಪ್ರಚಾರವು ಕೆಲವರು ತಪ್ಪಾಗಿ ತಿಳಿಯುವ ಪ್ರಕಾರ ಸಮಾಜದಲ್ಲಿ ಗೊಂದಲವನ್ನೆಬ್ಬಿಸಿ ಅದರ ಚೆಂದ ಕಾಣಬೇಕೆನ್ನುವ ಕೆಲವು ಧೂರ್ತರ, ಅಥವಾ ಕೆಲಸವಿಲ್ಲದ ಆಚಾರಿ ಮಗುವಿನ ಕುಂಡೆ ಕಡಿಯಲಾರಂಭಿಸಿದಂತೆ, ಕೆಲವು ಜನ ನಿರುದ್ಯೋಗಿಗಳ ಒಂದು ಕಾರ್ಯಕ್ರಮವಾಗಿರುವದಿಲ್ಲ. ತತ್ವದ ಸತ್ಯವನ್ನು ತಿಳಿದು ಅದರ ಸಾಧನೆಗಾಗಿ ತನು ಮನ ಧನಗಳನ್ನು ಸಮರ್ಪಿಸುವ ಲೋಕೋದ್ಧಾರಕರು ಸಮತಾವಾದ ಪ್ರಚಾರ ಮಾಡುತ್ತಿದ್ದಾರೆ. ನ್ಯಾಯ ಮತ್ತು ನೀತಿಗನುಗುಣವಾಗಿ ಸಮಾಜದ ಆರ್ಥಿಕ ಪುನರ್ರಚನೆಯಾಗಬೇಕೆನ್ನುವದು ಇವರ ಮುಖ್ಯ ಹೇಳಿಕೆ. ಪರಸ್ಪರ ಸಹಾಯ ಸಹಕಾರಗಳಿಂದ ಅರ್ಥಸಂಪಾದನೆ ಮಾಡಿ ಅದನ್ನು ಸಮಾನತೆ ಮತ್ತು ನ್ಯಾಯನೀತಿಯ ತತ್ವವನ್ನನುಸರಿಸಿ ಹಂಚಬೇಕೆನ್ನುವದು ಇವರ ಆಶಯ. ಈ ಕಾರ್ಯವು ಸರಕಾರದ ಮೂಲಕ ಕೈಕೊಳ್ಳಲ್ಪಟ್ಟರೆ ಮಧ್ಯವರ್ತಿ ಜನರ ಸುಲಿಗೆಯು ತಪ್ಪಿ ಸಮಾಜಕ್ಕೆ ಸುಖವಾಗುತ್ತದೆ. ಪರಸ್ಪರ ಸ್ಪರ್ಧೆ ದ್ವೇಷಮೂಲಕವಾದ ದುಷ್ಪರಿಣಾಮಗಳು ಕಾಣಿಸಿಕೊಳ್ಳುವದಿಲ್ಲ. ದೇಶದ ಸಂಪತ್ತು ಕೇವಲ ಕೆಲವು ಜನ ಶ್ರೀಮಂತರನ್ನು ಸೇರಿಕೊಳ್ಳುವದಿಲ್ಲ, ಅವರವರ ಶಕ್ತಿಗೆ ತಕ್ಕ ಹಾಗೆ ಪರಿಶ್ರಮ ಮಾಡಿ ಅವರವರ ಅವಶ್ಯಕತೆಗಳಿಗೆ ತಕ್ಕ ಹಾಗೆ ಪೂರೈಸಿಕೊಡುವದು ಸಮತಾವಾದಿಗಳ ಕೊನೆಯ ಧ್ಯೇಯವಾಗಿದೆ

ಮೇಲೆ ಹೇಳಿದಂಥ ನವೀನ ಆರ್ಥಿಕ ತತ್ವವನ್ನು ಅನುಸಂಧಾನಕ್ಕೆ ತರಬೇಕಾದರೆ ರಾಜಕೀಯ ಅಧಿಕಾರವು ತಮ್ಮ ಕೈಗೆ ಬರಬೇಕಾದ್ದು ಅವಶ್ಯಕವಾಗಿದೆ ಆದ್ದರಿಂದ ಭಾಂಡವಲಶಾಹಿ ಜನರಿಂದ ಇತರರ ಮೇಲೆ ಈ ವರೆಗೆ ಆದ ಅತ್ಯಾಚಾರ ಅನಾಚಾರಗಳಿಂದ ಅವರನ್ನು ತಪ್ಪಿಸಿ ಜನರಿಗೆ ನ್ಯಾಯದಾನ ಮಾಡಬೇಕಾದರೆ ಮೊದಲು ಸಮತಾವಾದಿಗಳು ರಾಜಕೀಯ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ರಾಜಕೀಯ ಅಧಿಕಾರವು ಪ್ರಾಪ್ತವಾಗದೆ ಆರ್ಥಿಕ ಪರಿವರ್ತನೆಗಳನ್ನು ಮಾಡುವದು ಅಸಾಧ್ಯವೆಂಬುದನ್ನು ಅವರು ತಿಳಿದಿದ್ದಾರೆ ಆದರೆ ತಮ್ಮ ಕೈಗೆ ಬರುವ ರಾಜಕೀಯ ಅಧಿಕಾರದ ಸ್ವರೂಪವು ಎಂಥಹದ್ದಾಗಬೇಕೆಂಬ ಕುರಿತು ಸಮತಾವಾದಿಗಳಲ್ಲಿ ಮತಭೇದವಿದೆ ಒಂದು ಪಂಗಡದವರು—ಅಂದರೆ ಅವರೊಳಗಿನ ಮಂದಗಾಮಿಗಳು—ಪ್ರಜಾಸತ್ತಾತ್ಮಕ ಸರಕಾರ ಕ್ರಮವು ರಾಜ್ಯದಲ್ಲಿ ಇರಬೇಕೆನ್ನುತ್ತಾರೆ. ಅವರ ಅಭಿಪ್ರಾಯದ ಮೇರೆಗೆ ಬೇರೆ ಬೇರೆ ರಾಜಕೀಯ ಅಭಿಪ್ರಾಯಗಳಿರುವವರಿಗೂ, ಅವರವರ ಸಂಖ್ಯಾಮಾನವನ್ನನುಸರಿಸಿ ರಾಜ್ಯದಲ್ಲಿ ಮಾನ್ಯತೆ ಇರುತ್ತದೆ. ಪರಂತು ಇನ್ನೊಂದು ಪಂಗಡದವರು, ಅಂದರೆ ಉಗ್ರ ಸಮತಾವಾದಿಗಳು—ವರ್ಗಭೇದ ಜಾತಿಭೇದ ಇಲ್ಲದ ಸಮಾಜಕ್ಕೆ ಪೂರ್ಣ ರಾಜಕೀಯಾಧಿಕಾರವು ದೊರೆಯಬೇಕೆನ್ನುತ್ತಾರೆ. ಇವರು ಹೇಳುವ ಪ್ರಕಾರ ರಾಜ್ಯದಲ್ಲಿ ಶ್ರೀಮಂತರು, ಜಮೀನುದಾರರು, ಭಾಂಡವಲಿಗರು ಇರಲಿಕ್ಕೆ ಅವಕಾಶವೇ ಇಲ್ಲ.

ನಮ್ಮ ದೇಶದಲ್ಲಿ ಸಮತಾವಾದದ ಪ್ರಚಾರವನ್ನು ಮಾಡುವದು ತಪ್ಪಾಗಬಹುದೆಂದು ಕೆಲವರು ಹೇಳುವರು. ಬ್ರಿಟಿಷ ಸರಕಾರವೂ ಈ ದೇಶದ ಶ್ರೀಮಂತರು ಮೊದಲಾದವರೂ ಅದನ್ನು ವಿರೋಧಿಸುವರಾಗಿ ಅಧರ ಭಾವನೆ ಇದೆ. ಆದರೆ ವಿರೋಧವನ್ನು ಕಟ್ಟಿಕೊಳ್ಳದ ಯಾವ ಮಹತ್ವದ ಕೆಲಸವನ್ನೂ ಮಾಡಲಿಕ್ಕಾಗುವದಿಲ್ಲ. ಸಮತಾವಾದದ ಪ್ರಚಾರಮಾಡುವದರಿಂದ ನಮ್ಮ ದೇಶದ ಜನರಿಗೆ ಕುಂಬ ಉಪಕಾರ ಮಾಡಿದಂತಾಗುವುದು, ಅನೇಕ ಜಾತಿ, ಮತ ಸಂಪ್ರದಾಯಗಳು, ವರ್ಗಭೇದಗಳು, ಅಮಾನುಷಿಕ ವ್ಯವಹಾರಗಳು ನಡೆಯುತ್ತಿರುವ ಈ ದೇಶದಲ್ಲಿ ಸಮತಾವಾದದ ಪ್ರಚಾರ ಮಾಡುವ ಅವಶ್ಯಕತೆಯು ಇತರ ದೇಶಗಳಿಗೆ ಇಲ್ಲದಷ್ಟು ಇದೆ ಯಾವದೇ ಕಾರಣದಿಂದ ನಾವು ಇಲ್ಲಿ ಸಮತಾವಾದದ ಪ್ರಚಾರವನ್ನು ಮಾಡದೆ ಸುಮ್ಮನಿದ್ದರೂ ಕಾಲವು ಅದನ್ನು ಮಾಡಿಯೇ ಮಾಡಿಸುವುದು. ಯಾಕೆಂದರೆ ಕಾಲಧರ್ಮವನ್ನು ಮೀರುವದು ಯಾರಿಗೂ ಸಾಧ್ಯವಲ್ಲ ಇದು ಸಮತಾವಾದದ ಕಾಲವಾಗಿದೆ ಈಗ ಸಮತಾವಾದದ ಪ್ರಗತಿಯು ಇಡೀ ಪ್ರಪಂಚದಲ್ಲಿ ಒಂದೇ ಸಮನೆ ಆಗುತ್ತಲಿದೆ.

ರಷ್ಯದ ಆಧುನಿಕ ಇತಿಹಾಸದ ಅಧ್ಯಯನ ಮಾಡಿದವರಿಗೆ ಅದರಲ್ಲಿ ಮುಖ್ಯವಾದ ಎರಡು ಸಂಗತಿಗಳು ಚೆನ್ನಾಗಿ ಪ್ರಕಟವಾಗುತ್ತವೆ ಮೊದಲನೆಯದಾಗಿ ಪ್ರಜಾಸತ್ತೆಗೋಸ್ಕರ ಪ್ರಯತ್ನಿಸಿದ ಮಂದ ಸಮತಾವಾದಿಗಳು ಅಲ್ಲಿ ಅಸಫಲರಾದರು, ಉಗ್ರ ಸಮತಾವಾದಿಗಳು ಸಫಲರಾದರು ಎರಡನೆಯದಾಗಿ—ರಷ್ಯದಲ್ಲಿ ಸಮತಾವಾದಿ ಸರಕಾರದ ಸ್ಥಾಪನೆಗೆ ಕಾರಣವಾದ ೧೯೧೭ನೆ ಇಸವಿಯ ಕ್ರಾಂತಿಯು ನಡೆಯುವ ತನಕ ಮಂದಗಾಮಿಗಳೂ ಉಗ್ರಗಾಮಿಗಳೂ ಕೂಡಿಯೇ ಝಾರಶಾಹಿಯನ್ನು ಸಮೂಲ ನಷ್ಟಮಾಡುವ ಪ್ರಯತ್ನಮಾಡಿದ್ದರು, ಮತ್ತು ತಮ್ಮ ಆ ಪ್ರಯತ್ನಗಳಲ್ಲಿ ಕೊನೆಗೆ ಕೃತಕೃತ್ಯರಾದರು.

ಸಮತಾವಾದಿ ಪ್ರಜಾಸತ್ತೆಯು ರಷ್ಯದಲ್ಲಿ ಸಫಲವಾಗಲಿಲ್ಲ ಎಂಬ ಕಾರಣದಿಂದ ಅದೊಂದು ರೋಗಪೂರಿತ ಸರಕಾರ ಪದ್ಧತಿ ಎಂದು ಯಾರೂ ತಿಳಿಯಕೂಡದು. ಆ ಪದ್ಧತಿಯ ಪ್ರಚಾರ ಮಾಡಿದವರು ಅದರ ವಿಷಯವನ್ನೂ ರಷ್ಯದ ಜನತೆಯ ಮನೋಗತಿಯನ್ನೂ ಇದ್ದಕ್ಕಿದ್ದ ಹಾಗೆ ತಿಳಿಯದೆ ಇದ್ದುದರಿಂದ ರಷ್ಯದಲ್ಲಿ ಅದು ಅಸಫಲವಾಯಿತೆಂದು ಹೇಳಬಹುದು. ಸಂದಿಗ್ಧ ಸಮಯದಲ್ಲಿ ಹೇಗೆ ನಡೆಕೊಳ್ಳಬೇಕೆಂಬ ಪ್ರಸಂಗಾವಧಾನ ಮತ್ತು ಕಠಿಣ ಪ್ರಸಂಗಗಳಲ್ಲಿ ಇರಬೇಕಾದ ಧೈರ್ಯ ಸಾಹಸ ಶಕ್ತಿ ಬಲಗಳು ಅವರಲ್ಲಿ ಇರಲಿಲ್ಲ. ಆದ್ದರಿಂದ ಅವರ ಈ ದುರ್ಬಲತೆಯ ಪ್ರಯೋಜನ ತೆಗೆದುಕೊಂಡು ಉಗ್ರ ಸಮತಾವಾದಿಗಳು ಅನಂತರ ರಷ್ಯದಲ್ಲಿ ಅಧಿಕಾರಕ್ಕೆ ಬಂದರು ಅವರಿಗೆ ಪರಿಸ್ಥಿತಿ ಮತ್ತು ಜನರ ಮಾನಸಿಕತೆಯ ಸರಿಯಾದ ಜ್ಞಾನವಿದ್ದಿತು. ಆದ್ದರಿಂದ ಟ್ರಾಟ್ಸ್ಕಿ ಮತ್ತು ಲೆನಿನರ ಮುಂದಾಳುತನದಲ್ಲಿ ಅವರು ರಷ್ಯದಲ್ಲಿ ವಿಜಯಿಗಳಾದರು

ಅದು ಹೇಗಿದ್ದರೂ, ಈ ಸಂದರ್ಭದಲ್ಲಿ ನಾವು ಇನ್ನೊಂದು ವಿಷಯದ ಮನವರಿಕೆ ಮಾಡಿಕೊಳ್ಳಬೇಕು. ಮಂದಗಾಮಿಗಳು ಮತ್ತು ಉಗ್ರಗಾಮಿಗಳು ಒಂದೇ ಧ್ಯೇಯವುಳ್ಳವರಾಗಿ ಪರಸ್ಪರ ಕೈಗೆ ಕೈ ಕೊಟ್ಟು ನಡೆದುದರಿಂದ ಅವರು ಕ್ರಾಂತಿಯಲ್ಲಿ ಸಫಲರಾದರು ಅವರೊಳಗೆ ಕೆಲವು ವಿರೋಧಾಭಿಪ್ರಾಯಗಳು ಇದ್ದುವಾದರೂ, ತಮ್ಮ ಒಂದು ಧ್ಯೇಯಸಾಧನೆಗಾಗಿ ಅವರು ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಲಿಲ್ಲ. ತಾವು ಪರಸ್ಪರ ಕಚ್ಚಾಟದಲ್ಲಿ ತೊಡಗಿದರೆ ತಮಗಿಬ್ಬರಿಗೂ ಸಮಾನ ವೈರಿಯಾಗಿದ್ದವನು ಲಾಭಪಡೆಯುತ್ತಾನೆ ಎಂಬುದನ್ನು ಅವರು ಚೆನ್ನಾಗಿ ತಿಳಿದು ತಮ್ಮೊಳಗಿನ ವಿರೋಧವನ್ನು ಪ್ರಧಾನ ಕಾರ್ಯಸಾಧನೆಗೋಸ್ಕರ ತತ್ಕಾಲಕ್ಕೆ ದೂರವಿಟ್ಟರು ಈ ಬುದ್ಧಿವಂತಿಕೆಯು ಅವರಲ್ಲಿ ಇದ್ದುದರಿಂದ ಕ್ರಾಂತಿಯು ಸಫಲವಾಯಿತು.

ನಮ್ಮ ದೇಶದಲ್ಲಿ ಕಾಂಗ್ರೆಸೂ, ಒಂದು ನವೀನ ತರಹದ ಸಮಾಜ ವ್ಯವಸ್ಥೆಗೋಸ್ಕರ ಪ್ರಯತ್ನಿಸುವ ರಾಷ್ಟ್ರೀಯ ಸಂಸ್ಥೆಯಾಗಿರುತ್ತದೆ ರಷ್ಯದ ಕ್ರಾಂತಿಕಾರರ ಚಳವಳಿಗೂ ನಮ್ಮ ದೇಶದ ಕಾಂಗ್ರೆಸ ಚಳವಳಿಗೂ ಬಹಳ ಸಾಮ್ಯವಿರುತ್ತದೆ. ಎಲ್ಲಾ ವಿಷಯಗಳಲ್ಲಿ ರಷ್ಯದ ಕ್ರಾಂತಿಕಾರರನ್ನು ಅನುಸರಿಸುವದು ನಮ್ಮ ದೇಶದ ಮಟ್ಟಿಗೆ ತಪ್ಪಾಗಬಹುದಾದರೂ, ಹಲವು ವಿಷಯಗಳಲ್ಲಿ ಅವರ ಅನುಕರಣ ಮಾಡುವದರಿಂದ ಕಾಂಗ್ರೆಸಿಗೆ ಪ್ರಯೋಜನವಿದೆ ರಷ್ಯದ ಕ್ರಾಂತಿಯಿಂದ ಮತ್ತು ಅನಂತರ ಅಲ್ಲಿ ನಡೆದ ಘಟನೆಗಳಿಂದ ಅದು ಅನೇಕ ಪಾಠಗಳನ್ನು ಕಲಿಯಬಹುದು ಕಾಂಗ್ರೆಸಿನಲ್ಲಿ ಸದ್ಯ ಮಹಾತ್ಮಾ ಗಾಂಧಿಯವರದೊಂದು ಮತ್ತು ಪಂಡಿತ ನೆಹರೂ ಅವರದ್ದೊಂದು—ಹೀಗೆ ಎರಡು ದೊಡ್ಡ ಪಾರ್ಟಿಗಳಿರುತ್ತವೆ ರಷ್ಯದಲ್ಲಿ ೧೯೧೭ರ ಮೊದಲು ಮಂದಗಾಮಿ ಮತ್ತು ಉಗ್ರಗಾಮಿ ಸಮತಾವಾದಿಗಳೊಳಗಿದ್ದ ಭೇದಾಭೇದಗಳೇ ಸ್ಥೂಲ ಪರಿಮಾಣದಲ್ಲಿ ಈ ಎರಡು ಪಂಗಡಗಳೊಳಗೆ ಇರುತ್ತವೆ ರಾಷ್ಟ್ರಪಕ್ಷದವರಿಗೆ ಜನಧನ ಬಲದ ಸಹಾಯವಿದ್ದು ಲೋಕದ ಒಬ್ಬ ವಿಭೂತಿಪುರುಷರ ಮುಂದಾಳುತನವು ಪ್ರಾಪ್ತವಾಗಿದೆ ಆದರೆ ಈ ಪಂಗಡಕ್ಕೊಂದು ಸ್ಪಷ್ಟವಾದ ಧ್ಯೇಯವಿರುವದಿಲ್ಲ ಅದು ಹೇಳುವಂಥ ಸ್ವರಾಜ್ಯ-ಪ್ರಜಾಸತ್ತೆ ಎನ್ನುವಂಥಾದ್ದು ಯಾವ ಕ್ರಮದ್ದು ಎಂಬುದು ಗೊತ್ತಾಗುವದಿಲ್ಲ. ಪಂಡಿತ ಜವಾಹರಲಾಲ ನೆಹರೂ ಅವರ ಸೋಶಿಯಲಿಸ್ಟ ಅಂದರೆ ಸಮತಾವಾದಿ ಪಂಗಡದ ಸ್ಪಷ್ಟವಾದ ಗೊತ್ತುಗುರಿಗಳಿವೆ ಆದರೆ ಅದಕ್ಕೆ ಜನಧನ ಬಲಗಳು ಸಾಕಷ್ಟು ಇರುವದಿಲ್ಲ ಹಳ್ಳಿಹಳ್ಳಿಗಳಲ್ಲಿ ವಾಸಿಸುವ ಜನತೆಯ ಸ್ಥಿತಿಗತಿ ಮತ್ತು ಕಾರ್ಯದ ಅನುಭವವೂ ಇಲ್ಲ. ಈ ಎರಡೂ ಪಂಗಡಗಳು ಇನ್ನು ಕೆಲವು ವರ್ಷಗಳು ಕಳೆಯುವ ತನಕವಾದರೂ ಒಂದಾಗಿ ಸೇರಿ ಕೆಲಸ ಮಾಡಿದರೆ ಎರಡು ಪಂಗಡಗಳಿಗೂ ಒಳ್ಳೆಯದಿದೆ. ನಮ್ಮ ಆ ಧೋರಣವು ರಾಜಕೀಯವಾಗಿರುವ ತನಕ, ಅಂದರೆ ರಾಜಕೀಯ ಅಧಿಕಾರವು ಬ್ರಿಟಿಷರಿಂದ ದೇಶೀಯರ ಕೈಗೆ ಬರುವ ತನಕವಾದರೂ ಈ ಎರಡು ಪಂಗಡಗಳು ಒಂದಾಗಿ ಕೆಲಸಮಾಡುವದರಿಂದ ಪ್ರಯೋಜನವಿದೆ. ಅದರಿಂದ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯ ಚಳವಳಿಯು ಹೊಸ ಹುರುಪು, ಹೊಸ ಸ್ಫೂರ್ತಿಯಿಂದ ಕೂಡಿ, ಅದು ಯಶಸ್ವಿಯಾಗುವದನ್ನು ತಡೆಯುವ ಶಕ್ತಿಯು ಆಳರಸರಲ್ಲಿ ಕುಂದುವದು. ಆದರೆ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮತಾವಾದದ ತತ್ವಗಳನ್ನನುಸರಿಸಿ ಸಮಾಜದ ಪುನರ್ರಚನೆ ಮಾಡುವ ಪ್ರಶ್ನೆ ಬಂದಾಗ ಈ ಪಂಗಡಗಳು ತಮಗೆ ಯುಕ್ತ ಕಂಡಂತೆ ಪ್ರವರ್ತಿಸಬಹುದು ಹೀಗೆ ಮಾಡದೆ ಈ ಎರಡು ಪಂಗಡಗಳು ಪರಸ್ಪರ ಕಚ್ಚಾಟ ಕಲಹಗಳಲ್ಲಿಯೇ ಕಾಲ ಕಳೆದರೆ ಎರಡಕ್ಕೂ ಸಮಾನವಾದ ಧ್ಯೇಯ—ಅಂದರೆ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯು ದಿನವು ದೂರವಾಗುವದು ಅವೆರಡು ಪಂಗಡಗಳು ದುರ್ಬಲವಾಗುವದು ಮಾತ್ರವಲ್ಲದೆ ಕಾಂಗ್ರೆಸು ಕೂಡ ಸತ್ವಹೀನವಾಗುವದು.

ರಷ್ಯದ ಇತಿಹಾಸದಿಂದ ಕಾಂಗ್ರೆಸು ಕಲಿಯಬಹುದಾದ ಇನ್ನೊಂದು ಪಾಠವು ಯಾವುದೆಂದರೆ—ಕಾಂಗ್ರೆಸು ಕೆಲಸ ಕಾರ್ಯಗಳಿಗಾಗಿ ರಾಷ್ಟ್ರಪಕ್ಷ ಮತ್ತು ಸಮತಾವಾದಿ ಪಕ್ಷಗಳು ಒಂದಾಗಿ ಕಲೆತು ಕೆಲಸಮಾಡುವದು ಯುಕ್ತವಾಗಿರುವಾಗ, ಕಾಂಗ್ರೆಸಿನಿಂದ ಮಾಡಲಿಕ್ಕಾಗದ ಇತರ ಕಾರ್ಯಗಳನ್ನು ತಮ್ಮ ತಮ್ಮ ಸ್ಪಷ್ಟವಾದ ಗೊತ್ತುಗುರಿಗಳನ್ನು ಅನುಸರಿಸಿ ಪ್ರತ್ಯಪ್ರತ್ಯೇಕವಾಗಿ ಮಾಡಲಿಕ್ಕೆ ಇವು ಸ್ವತಂತ್ರವಾಗಿರಬೇಕು. ಈಗಿನ ಪರಿಸ್ಥಿತಿಯ ಪರ್ಯಾಲೋಚನೆ ಮಾಡುವಾಗ—ಸಮತಾವಾದ, ನವೀನ ಆರ್ಥಿಕ ರೀತಿ ನೀತಿ ಮೊದಲಾದವುಗಳ ಪ್ರಚಾರವನ್ನು ಕಾಂಗ್ರೆಸಿನ ಹೆಸರಿನಲ್ಲಿ ಮಾಡಲಿಕ್ಕಾಗದಿರುವಾಗ ಸಮತಾವಾದಿಗಳು ತಮ್ಮದೊಂದು ಪ್ರತ್ಯೇಕ ಪಂಗಡವನ್ನು ಕಟ್ಟಿಕೊಂಡಿರಬೇಕಾದ್ದು ಅಗತ್ಯ. ಬ್ರಿಟಿಷರ ಅಧಿಕಾರವನ್ನು ತಾವು ಕಿತ್ತುಕೊಳ್ಳುವ ಒಂದು ಕಾರ್ಯಕ್ರಮವು ಮಾತ್ರ ರಾಷ್ಟ್ರಪಕ್ಷದವರಲ್ಲಿ ಸ್ಪಷ್ಟವಾಗಿ ಕಂಡುಬರುವದಲ್ಲದೆ ಅದರ ಹೊರತು ಯಾವ ರಾಜಕೀಯ—ಆರ್ಥಿಕ ಕಾರ್ಯಕ್ರಮವು ಇರುವದಿಲ್ಲ ಖದ್ದರ, ಸತ್ಯಾಗ್ರಹ ಮೊದಲಾದವು ತತ್ಕಾಲದವರನ್ನು ವಿರೋಧಿಸುವ ಸಾಧನಮಾತ್ರಗಳಾಗಿರುವವು ಆದ್ದರಿಂದ ಅವರಿಗೆ ಕಾಂಗ್ರೆಸಿನ ಹೊರಗೆ ಒಂದು ಪ್ರತ್ಯೇಕ ಸಂಘದ ಅವಶ್ಯಕತೆ ಇರುವದಿಲ್ಲ. 'ನಮಗೆ ಸ್ವರಾಜ್ಯವು ಯಾಕೆ? ಬ್ರಿಟಿಷರು ಹೋದರೆ ಈ ದೇಶವನ್ನು ಮತ್ಯಾರು ಆಳುವರು?' ಎಂಬಿವೇ ಮೊದಲಾದ ಪ್ರಶ್ನೆಗಳಿಗೆ ಕೊಡುವ ಉತ್ತರಗಳ ಮೇಲೆಯೇ ಈ ಪಂಗಡದ ಭವಿಷ್ಯವಿರುತ್ತದೆ ಅದು ಗಾಳಿ ಬಂದ ಹಾಗೆ ಕೊಡೆ ಹಿಡಿದರೆ, ಕಾಲವು ಅದನ್ನು ಕೊಚ್ಚಿಕೊಂಡು ಹೋಗುವದು ಅಲ್ಲ, ನ್ಯಾಯನೀತಿಗನುಸಾರವಾಗಿ ಜನತೆಗೆ ರಾಜಕೀಯ ಸಾಮಾಜಿಕ ಆರ್ಥಿಕ ಹಕ್ಕು ಅಧಿಕಾರಗಳು ಪ್ರಾಪ್ತವಾಗಬೇಕು ಎಂದು ಹೇಳಿದರೆ ಪ್ರಾಯಃ ಅದು ಸಮತಾವಾದಿ ಪಂಗಡದ ಒಂದು ಅಂಗವೇ ಆಗಬಹುದು ಮುಂದಗಾಮಿ ಸಮತಾವಾದಿಗಳೆಂದು ಆಗ ಅವರನ್ನು ಕರೆಯಬಹುದಾಗಿದೆ ಯೇನೋ?

ಒಂದಲ್ಲ ಒಂದು ದಿನ ಸಮತಾವಾದಿಗಳ ಕೈಗೆ ನಮ್ಮ ದೇಶದ ರಾಜಕೀಯ ಅಧಿಕಾರವು ಬರಲಿಕ್ಕೇಬೇಕು, ಅದು ಬರುವದೂ ನಿಶ್ಚಯ. ಹಾಗೆ ಬಂದಾಗ ನಮ್ಮ ದೇಶದಲ್ಲಿಯೂ ತತ್ಕಾಲಕ್ಕೆ ಆಡಳಿತವು ಸರ್ವಾಧಿಕಾರಿಗಳ ಕೈಯಲ್ಲಿ ಇರಬೇಕಾದೀತು. ಆದರೆ ಇಲ್ಲಿ ಅದು ಬಹಳ ದಿನಗಳು ತನಕ ಇರಬಾರದು. ದೇಶದಲ್ಲಿ ಶಾಂತಿಯು ನೆಲೆಗೊಂಡ ತರುವಾಯ, ಇದು ವರೆಗೆ ಯಾರು ಕಂಡು, ಕೇಳಿಅರಿಯದ, ಕೆಲವು ಮಟ್ಟಿಗೆ ರಷ್ಯದ ಸರಕಾರ ಪದ್ಧತಿಯನ್ನು ಹೋಲುವ ಸ್ವತ್ವದ ವಾದ ಪ್ರಜಾಸತ್ತಾತ್ಮಕ ಸಮತಾವಾದಿ ಸರಕಾರ ಕ್ರಮವು ಇಲ್ಲಿ ಬರುವದು

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ
ಸ್ವದೇಶಾಭಿಮಾನಿ
ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ

ಕೊಂಗ್ರೆಸಿಗೆ ಮುಸ್ಲಿಮರು ಏಕೆ ಸೇರುವುದಿಲ್ಲ?

ನವಾಬ ಇಸ್ಮಾಯಿಲ್ ಖಾನರು ನೆಹರುಗಳಿಗೆ ಬರೆದ ಕಾರಣಗಳು

ಸಂಯುಕ್ತ ಪ್ರಾಂತ್ಯದಲ್ಲಿ ಮುಸ್ಲಿಮ್ ಲೀಗಿನ ಮುಖಂಡರಲ್ಲೊಬ್ಬರಾಗಿರುವ ಈ ನವಾಬರು, ಮೈನೊರಿಟಿ ಸಮಾಜಗಳೊಳಗೆ ಕೊಂಗ್ರೆಸು ಏಕೆ ವಿಶ್ವಾಸವನ್ನು ಇನ್ನೂ ಹುಟ್ಟಿಸಿಲ್ಲ ಎಂಬ ವಿಷಯ ತರ್ಕಿಸುತ್ತ, ಪಂಡಿತ ಜವಾಹರಲಾಲರಿಗೆ ಬರೆದೊಂದು ಪತ್ರದಲ್ಲಿ (ಸದ್ಯ ಪ್ರಕಟವಾಗಿದೆ)—ಅಲ್ಲಿ ನಡೆದ ಚುನಾವಣೆಗಳಲ್ಲಿ ಕೊಂಗ್ರೆಸೂ ಲೀಗೂ ಹೋರಾಡುತ್ತಿದ್ದಾಗ ನಡೆದ ನಿಜ ಮತ್ತು ಸುಳ್ಳು ವಾರ್ತೆಗಳನ್ನು ಮುಂದಿಟ್ಟು, — "ರಾಷ್ಟ್ರೀಯರು ನಾವೆಂದು ಧಾರಾಳವಾಗಿ ಹೇಳಿಕೊಳ್ಳುವ ಹಿಂದುಗಳಲ್ಲಿ ಹೆಚ್ಚಿನವರು ಇನ್ನೂ ತಮ್ಮ ಜಾತಿಯ ಕಡೆಗೇ ಬಹಳವಾಗಿ ಒಲಿದಿರುವರಿಂದೂ, ಈ ಬಗೆಯ ಸಂಕುಚಿತ ದೃಷ್ಟಿಯಾಗಲಿ ಪ್ರತ್ಯೇಕತೆಯಾಗಲಿ ರಾಷ್ಟ್ರೀಯತೆಯನ್ನು ಬೆಳಸಿತರಲಾರದೆಂದೂ ತಾವು ಭಾವಿಸಿರುವಂತೆ' ಸೂಚಿಸಿರುವರು 'ಸಮುದಾಯದ ವ್ಯಕ್ತಿಯ ಚಳವಳವನ್ನು ಕೊಂಗ್ರೆಸು ಮುಸ್ಲಿಮರ ಕಡೆಗೆ ಒತ್ತಾಯದಿಂದ ನಡೆಸದೆ ಇದ್ದಲ್ಲಿ, ಮತ್ತು, ಎಸೆಂಬ್ಲಿಗಳಲ್ಲಿ ಕೊಂಗ್ರೆಸ್ ಪಕ್ಷದವರು ಲೀಗ್ ಪಕ್ಷದವರನ್ನು ಹೆಚ್ಚಿನ ತಿರಸ್ಕಾರದಿಂದ ನೋಡದೆ ಇದ್ದಲ್ಲಿ, ಈ ದಿನ ಕೊಂಗ್ರೆಸಿಗೆ ಮುಸ್ಲಿಮರು ಹೆಚ್ಚಾಗಿ ತಾವಾಗಿಯೆ ಒಲಿಯುತ್ತಿದ್ದರೆಂದೂ ಮಾತ್ರವಲ್ಲದೆ ಇನ್ನು ಬಹುಕಾಲಕ್ಕೆ ಒಲಿಯುವಂತಿಲ್ಲವೆಂದೂ ಸಹಾ' ನವಾಬರು ಬರೆದಿರುವರು

ಪಂಡಿತ ನೆಹರು.

ಬುಂಡೇಲಖಂಡ ಬಿಜನೂರುಗಳಲ್ಲಾದ ಚುನಾವಣೆಗಳನ್ನು ಕುರಿತಾಗಿಯೂ ಸಮುದಾಯ ವ್ಯಕ್ತಿ ಮತ್ತು ಕೊಂಗ್ರೆಸ್ ಧ್ವಜದ ವಿಷಯವಾಗಿಯೂ ಚರ್ಚಿಸಿರುವರು ಜನರು ಸಂಯಮದಿಂದ ವರ್ತಿಸಿದರೆ ಎಲ್ಲರಿಗೂ ಉತ್ತಮ, ಭಾಷಣ ಲೇಖನಗಳಲ್ಲಿ ವಿಶೇಷವಾದ ಹಿಂಸಾತ್ಮಕ ವಿಚಾರಗಳಿರಬಾರದು, ಸಮ್ಮತಿಯಲ್ಲಿ, ಅಸಮ್ಮತಿಯಲ್ಲಿ ಎಂಬುದು ಸ್ಪಷ್ಟವಾಗುವಂತಿದ್ದರೆ ಸಾಕು ಸುಳ್ಳು ಭ್ರಾಮಕ ವರ್ತಮಾನಗಳನ್ನು ಹರಡಬಾರದು, 'ಇಸ್ಲಾಮಿಗೆ ಹಾನಿ' ಎಂದು ವ್ಯರ್ಥವಾಗಿ ಅನಾವಶ್ಯಕ ಕೂಗಿಡಬಾರದು, ಮುಖಂಡರಾದವರು ಸಮಾಜದ ಅನ್ಯಾಯಗಳನ್ನು ನಿಷೇಧಿಸುತ್ತಿರದೆ ಇರುವುದು ಶೋಚನೀಯವಾಗಿದೆ. ಎನ್ನುವರು

ನವಾಬರು

ಮುಸ್ಲಿಮ್ ಲೀಗಿನ ಸದಸ್ಯರ ವಿಷಯವಾಗಿ ಸಹ ಸುಳ್ಳು ಹರಡಿಸಿದ್ದಿದ್ದೆ, ಅವರನ್ನು ಬೈದು ಮೈತ್ರಿಗಾಗಿ ಪ್ರಯತ್ನ ಮಾಡತ್ತಲಿದ್ದಾರೆ, ಇದರಿಂದ ಮುಸ್ಲಿಮರಲ್ಲಿ ಬಹಳವಾದ ಕ್ಷೋಭೆಯುಂಟಾಗಿದೆ, ಅದು ಕಾರಣ, ಕೆಲವೇಳೆ ಅವರೂ ಹಿಂದೆ ಬಡೆವುದನ್ನು ಶೋಚನೀಯಬಾರದು, ಬೇಜವಾಬ್ದಾರರನ್ನು ತಡೆವುದರಲ್ಲಿ ನಾನೂ ಸಹಕಾರಿಯಾಗುವೆನು, ಲೀಗ್ ಕೊಂಗ್ರೆಸ್‌ಗಳ ಧ್ಯೇಯವಾಗಲಿ ಕಾರ್ಯಕ್ರಮವಾಗಲಿ ಹೆಚ್ಚು ಮಟ್ಟಿಗೆ ಒಂದೇ ಬಗೆಯುವಾಗಿವೆ, ಕೋಪಕೊಳ್ಳುವಂತೆ ಮಾಡಿದವರು ಅದರ ಪರಿಣಾಮ ಅನುಭವಿಸಬೇಕಾಗಿದೆ ಎನ್ನುವರು.

ಪಂಡಿತ ನೆಹರು.

ಮುಸ್ಲಿಮ್ ಲೀಗಿನ ಧ್ವಜದ ವಿಷಯ ನಾವು ಆಕ್ಷೇಪವೆತ್ತುದಿಲ್ಲ; ಆದರೆ ಹೀಗೆ ಹಲವು ಧ್ವಜಗಳಾಗುವಲ್ಲಿ ನಾನಾ ಬಗೆಯ ಗಲಿಬಿಲಿಗಳೂ ಉಂಟಾಗಲಾರವೇ ಎಂಬುದನ್ನು ಎಣಿಸಬೇಕು ಹಿಂದೂ ಮಹಾಸಭೆ, ಕ್ರೈಸ್ತರು, ಸಿಕ್ಕರು ಎಲ್ಲರೂ ಒಂದೊಂದು ಧ್ವಜವನ್ನೆತ್ತಿಕೊಂಡರೆ ಹೇಗಾದೀತು.? ಸಮಾಜಿಕ ಮೈತ್ರಿಯ ಚಳವಳವು ಲೀಗಿಗೆ ವಿರುದ್ಧವಾದುದಲ್ಲ, ಕೊಂಗ್ರೆಸಿಗೆ ಸೇರಿದ ಮುಸ್ಲಿಮರನ್ನು ನಾವು ಹಣಕೊಟ್ಟು ವಶಮಾಡಿಕೊಂಡಿಲ್ಲವೆಂದು ಲೆಕ್ಕಪತ್ರನೋಡಿ ನಿರ್ಧಾರಮಾಡಬಹುದು, ಎಂದರು.

ನವಾಬರು

ಮುಸ್ಲಿಮ ವೈದಿಕರನ್ನು ನಾನಾ ಬಗೆಯಾಗಿ ವಶಪಡಿಸಿಕೊಂಡು ಕಳೆದ ಚುನಾವಣೆ ಕಾಲದಲ್ಲಿ ಅವರಿಂದ ಮುಸ್ಲಿಮರ ವೋಟುಗಳು ಕೊಂಗ್ರೆಸ್ ಪಕ್ಷಕ್ಕೆ ಸಿಗುವ ಪ್ರಯತ್ನಗಳಾಗಿಲ್ಲವೆ? ಹಿಂದುಗಳು ಎಷ್ಟೆಂದರೂ ಸ್ವಜಾತಿಗಾಗಿ ಸಾಧನೆ ಮಾಡುವುದನ್ನು ಬಿಡಲಾರದ ಕಾರಣ, ಅಲ್ಪ ಸಂಖ್ಯಾಕರು ಕೊಂಗ್ರೆಸನ್ನು ಸೇರುವ ಭರವಸೆಯಿಲ್ಲವಾಗಿದೆ, ಎಂದರು

ಪಂಡಿತ ನೆಹರು

ಕೊಂಗ್ರೆಸು ಸಮಸ್ತರ ಸಂಸ್ಥೆಯಾಗಬೇಕೆಂದು ಮುಸ್ಲಿಮರಿಗೆಲ್ಲ ಕೊಂಗ್ರೆಸ್ ಕಕ್ಷೆ ಬೋಧಿಸುತ್ತೇವೆ ಹೊರತು, ಲೀಗಿನ ವ್ಯಾಪ್ತಿಯನ್ನು ಕಡಮೆ ಮಾಡುವುದಕ್ಕಲ್ಲ, ಲಕ್ನೌ ಕೊಂಗ್ರೆಸ್ ಕಾಲದಿಂದಲೂ ಹೀಗೆ ಯತ್ನಿಸುತ್ತಿದ್ದೇವೆ, ಕಳೆದ 17 ವರ್ಷಗಳಲ್ಲಿ ಕೊಂಗ್ರೆಸ್ ಧ್ವಜವು ರಾಷ್ಟ್ರದ ಧ್ವಜವಾಗಿದೆ, ಅದು ಎಲ್ಲ ಸಮಾಜಗಳದು, ಏಕೆಂದರೆ ಎಲ್ಲ ಸಮಾಜಗಳು ಅದನ್ನು ಪ್ರಾಣ ಅರ್ಪಿಸಿಯೂ ಕಾಪಾಡಿದ್ದಾರ, ಎಲ್ಲ ಅಲ್ಪ ಸಂಖ್ಯಾಕರನ್ನೂ ಕೊಂಗ್ರೆಸು ಒಲಿಸಿಕೊಳ್ಳುತ್ತದೆ ಹೊರತು ಮುಸ್ಲಿಮರನ್ನು ಮಾತ್ರ ಸಳೆವುದಿಲ್ಲ, ನಾಲ್ಕಣೆ ವಂತಿಗೆಯೆ ನಮಗೆ ಮುಖ್ಯ ಮೂಲಧನ ಹೊರತು, ಯಾರಿಗೂ ಬೇಕಾದಂತೆ ಹಣ ಕೊಡುತ್ತಿಲ್ಲ

ಕ್ರಾಂತಿಕಾರಿಯ ಮದುವೆಯಲ್ಲೂ ಕ್ರಾಂತಿ!

ಒಂದು ಕ್ರಾಂತಿಕಾರರ ಪಂಗಡದಲ್ಲಿ ಸೇರಿದವನೊಬ್ಬನು, ಅಲ್ಲಹಾಬಾದಿನಲ್ಲಿ ಪೋಲೀಸರಿಗೆ ದೂರುಕೊಟ್ಟಿರುವನು. ಅವನನ್ನು ಯಾರೋ ಇಬ್ಬರು ಯಮುನಾ ನದಿಯ ತೀರಕ್ಕೆ ಕರೆದುಕೊಂಡು ಹೋದರೆಂದೂ ಅಲ್ಲಿ ಅವನನ್ನು ಕೊರಳು ಹಿಸುಕಿಕೊಲ್ಲಲೂ, ಗುಂಡಿಟ್ಟು ಕೊಂದಿಕ್ಕಲೂ ಅವರ ಪ್ರಯತ್ನಮಾಡಿದರಂತೆ ಎದುರಿಸಿದವರು ಇಬ್ಬರೆಂದು ಅವನು ಸೂಚಿಸಿದ್ದಾನೆ ಅವರಿಬ್ಬರೂ ಕ್ರಾಂತಿಕಾರಿಗಳ ಹಿಂದಿನವರಂತೆ ಅದೇ ಪಂಗಡಕ್ಕೆ ದೂರಿಟ್ಟ ಇವನೂ ಸೇರಿದವನು — ~~ಇವನು ಪಂಗಡದ ಅಪ್ಪಣೆಯಿಲ್ಲದೆ~~ ವಿವಾಹಾತುರನಾಗಿದ್ದುದೇ ಅವನಲ್ಲಿ ಅವರು ಕಂಡ ಅಪರಾಧವಂತೆ

MIRA TOILET ARTICLES

MIRA PRODUCTS are of such excellence that they could compare favourably with the famous perfumes and toilet articles used by Indian Rulers in the glourious past.

H H The Maharajah of Sonepur

The Hon'ble Mr. B K. Basu, C I. E

"MIRA" Products are in no way inferior to similar foreign products

Sole Agents

The Modern Trading Company,

Opp City Press, MANGALORE.

Wanted a Canvassar to Book orders for Mira Products on pay or commission.

ಶಾಂತಿ ಸ್ಥಾಪನೆಯ ಹೊಸ ಪ್ರಯತ್ನ

ಒಂದು ಅದ್ಭುತ ಯಂತ್ರದ ಶೋಧ

ಒಂದು ಮಹಾಯುದ್ಧವು ಸದ್ಯದಲ್ಲಿಯೇ ಪ್ರಾರಂಭವಾಗುವದು ಎಂಬುದನ್ನು ಕೇಳಿ ಲೋಕವೇ ತಲ್ಲಣಗೊಂಡಿದೆ ಯಾಕೆಂದರೆ ಹೀಗೆ ಆಗಬಹುದಾದ ಮಹಾಯುದ್ಧದಿಂದ, ರಣರಂಗಕ್ಕೆ ಹೋದವರು, ಸಾಯುವರು ಮಾತ್ರವಲ್ಲದೆ, ಅವರ ಹಿಂದೆ ಉಳಿದ ನಿರಪರಾಧಿಗಳಾದ ಸ್ತ್ರೀಪುರುಷರು ಮಕ್ಕಳು ಮತ್ತು ಅವರ ಸರ್ವಸಂಪತ್ತಿಯು ನಾಶವಾಗುವರು ಆ ಒಂದು ಮಹಾಯುದ್ಧದಿಂದ ಪ್ರಳಯಾಗಿ ಎದ್ದು ಅದರಲ್ಲಿ ಪ್ರಪಂಚಕ್ಕೆ ಪ್ರಪಂಚವೇ ಸುಟ್ಟು ಭಸ್ಮೀಭೂತವಾಗುವೆಂದು ಭವಿಷ್ಯದ ಯುದ್ಧ ಕ್ರಮವನ್ನು ತಿಳಿದವರು ಹೇಳಲಾರಂಭಿಸಿದ್ದಾರೆ

ಇಂಥಾ ಮಹಾಯುದ್ಧವಾಗುವದನ್ನು ತಪ್ಪಿಸಲಿಕ್ಕೆ ಇಷ್ಟರತನಕ ಎಷ್ಟೋ ಪ್ರಯತ್ನಗಳಾದುವು, ಎಷ್ಟೋ ಸಭೆಗಳಾಗಿವೆ ಎಷ್ಟೋ ಕಾಲುಕರಾರುಗಳಾದುವು ಆದರೆ ಸ್ಪರ್ಧೆ, ಆ ಪ್ರಯತ್ನಗಳೆಲ್ಲ ನೀರಿನಲ್ಲಿ ಹೋಮಮಾಡಿದಂತಾಗಿವೆ ಯುದ್ಧಸಿದ್ಧತೆಯು ಒಂದೇ ಸಮನೆ ಆಗುತ್ತ ಇದೆ. ಅದರಿಂದ ಶಾಂತಿಸ್ಥಾಪನೆಗಾಗಿ ಪ್ರಯತ್ನಿಸಿದ ಮಹನೀಯರು ವಿಶೇಷ ಚಿಂತಾಕುಲರಾಗಿರುವರು

ಈ ಪ್ರತಿಕೂಲ ಪರಿಸ್ಥಿತಿಯಲ್ಲಿ ಈಗ ಒಂದೇ ಆಶಾಜನಕವಾದ ವಾರ್ತೆಯು ಅಮೆರಿಕದಿಂದ ಬಂದಿದೆ ಅಲ್ಲಿ ಜರ್ಸಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಾನೊಬ್ಬ ಹುಡುಗನು ಒಂದು ವಿಚಿತ್ರ ಯಂತ್ರವನ್ನು ಹುಡುಕಿತೆಗೆದಿದ್ದಾನೆ ಆ ಯಂತ್ರದಿಂದ ಹೊರಡುವ ಒಂದು ಬಗೆಯ ಪ್ರಕಾಶ ಕಿರಣವು ಅಥವಾ ನಕ್ಷತ್ರದಲ್ಲಿ ಯುದ್ಧಗಳೇ ಆಗದಂತೆ ಮಾಡುವದು

ನೇಶನಲ್ ಇನ್ಸ್ಟಿಟ್ಯೂಟ್ ಕಾಂಗ್ರೆಸ ಎಂಬ ಸಂಸ್ಥೆಯ ಪ್ರೆಸಿಡೆಂಟರಾಗಿರುವ ವಿಲಿಯಮ್ ಇ ಟ್ವಿಲರು ಇಂಥಹದೊಂದು ಶೋಧಯಾಗಿರುವದು ನಿಜವೆಂದು ಒಪ್ಪಿದ್ದಾರೆ. ಅವರು ಶೋಧವು ಅಪೂರ್ವವೂ ಅದ್ಭುತವೂ ಆಗಿರುವದೆಂದಿದ್ದಾರೆ ಪ್ರಕಾಶ ಕಿರಣವು ಬೀಳುವ ಯಾವ ಪ್ರದೇಶದಲ್ಲಿಯೂ ವಿಮಾನಗಳು, ಮೋಟರುಗಳು, ರೈಲು—ಹಡಗುಗಳು, ಯಾವುದೇ ಜಾತಿಯ ಯಂತ್ರಗಳು ಚಲಿಸಲಾರವು ಆಧುನಿಕ ಕ್ರಮದಲ್ಲಿ ಯುದ್ಧಗಳು ಈ ಯಂತ್ರಸಾಧನೆಗಳಿಲ್ಲದೆ ನಡೆಯುವದೇ ಇಲ್ಲ ಹೀಗೆ ಮನುಷ್ಯನಿಂದ ತಡೆಯಲಿಕ್ಕಾಗದ ಯಾಂತ್ರಿಕ ಯುದ್ಧವನ್ನು ತಡೆಯಲಿಕ್ಕೆ ಕಟ್ಟಕಡೆಗೆ ಒಂದು ಯಂತ್ರದ ಆವಿಷ್ಕಾರವೇ ಆಗಿದೆ ~~ಬಾಡು ಹಳೆಯ ರೇಡಿಯೋದ ಬ್ಯಾಟ~~ರಿಯೇ ಈ ಹೊಸ ಯಂತ್ರದ ಮೂಲಾಧಾರವಾಗಿದೆ ಯಂತ್ರವನ್ನು ಹಲವು ಬಗೆಯಿಂದ ಪರೀಕ್ಷಿಸಿ ಆ ಯಂತ್ರದ ಪ್ರಕಾಶ ಕಿರಣವನ್ನು ಯುದ್ಧಸಾಧನಗಳ ಮೇಲೆ ಹಾಯಿಸಿ ಅವು ಚಲಿಸದಂತೆ ಮಾಡುವದರ ಮೂಲಕ ಮುಂದಿನ ಯುದ್ಧಗಳನ್ನು ತಡೆಯುವದು ಸಾಧ್ಯವೆಂದು ತಿಳಿಯಲ್ಪಟ್ಟಿದೆ. ಯಂತ್ರದಿಂದ ಹೊರಟ ಪ್ರಕಾಶ ಕಿರಣವು ಎಂಟು ಮೈಲು ವಿಸ್ತಾರದ ತನಕ ಹರಡಿಕೊಳ್ಳುವದು. ಅಷ್ಟು ವಿಸ್ತಾರವಾದ ಪ್ರದೇಶದೊಳಗೆ ಯಾವ ಯುದ್ಧಸಾಧನವೂ ಚಲಿಸಲಾರದು.

ಈ ಸಮಾಚಾರವು ವಾಷಿಂಗ್ಟನ್ನಿನಲ್ಲಿರುವ ಸಂಯುಕ್ತ ಸಂಸ್ಥಾನಗಳ ಯುದ್ಧಖಾತೆಗೆ ತಿಳಿದುಬಂದೊಡನೆ, ಕೂಡಲೇ ಅದು ಕಳುಹಿಸಿದ ಒಂದು ಚಿಕ್ಕ ಸೇನೆಯು ಬಂದು ಹುಡುಗನ ಮನೆವದಾರವನ್ನು ಕಾವಲು ಇರಿಸಿದೆ ಯಾರು ಈ ಹೊಸ ಯಂತ್ರದ ವಿವರಗಳನ್ನು ತಿಳಿಯದಂತೆ ಅದು ಪ್ರಯತ್ನಮಾಡಿದೆ

ಅನೇಕ ವಿಜ್ಞಾನಿಗಳು ಅನೇಕ ವರ್ಷಗಳಿಂದ ಅಂಥಹದ್ದೊಂದು ಪ್ರಕಾಶಕಿರಣವನ್ನು ಹುಡುಕಿತೆಗೆಯಬೇಕೆಂದು ಮಹತ್ಪ್ರಯತ್ನಗಳಲ್ಲಿ ತೊಡಗಿದ್ದರು ಆದರೂ ಅವರು ಸಫಲರಾಗಿದ್ದಿರಲಿಲ್ಲ ಈಗ ಅದು ಕೇವಲ ಒಬ್ಬ ಬಾಲಕನಿಗೆ ಸುಸಾಧ್ಯವಾಗಿ ಪರಿಣಮಿಸಿದೆ!

---

30 ವರ್ಷಗಳಿಂದಲೂ ಮಲಬದ್ಧತೆಯ ಬಾಧೆ

ಹೆಂಗಸರ ಲಾವಣ್ಯವು ಇದರಿಂದ ಕಂಡುಹಿಡಿಯಲ್ಪಟ್ಟಿತು

ಕ್ರುಶನ್ ಲವಣದಲ್ಲಿ ಮಾತ್ರ ಗುಣಾಂಶವು ಕಂಡು ಬಂದಿತು.

ಮಲಬದ್ಧತೆಯ ಗುಣಾಂಶವು ಹಲವು ಮದ್ದುಗಳಿಂದ ಆಗುವುದಿಲ್ಲ ಸಂಪೂರ್ಣ ನಿವಾರಣೆಯೂ ಈ ಹೆಂಗಸಿನಿಂದ ಕಂಡುಹಿಡಿಯಲ್ಪಟ್ಟಂತೆ ಈ ಕ್ರುಶನ್ ಲವಣದಿಂದ ಉಂಟಾಯಿತು ಅವಳು ಹೀಗೆ ಬರೆಯುತ್ತಾಳೆ ಮೂವತ್ತು ವರ್ಷಗಳಿಂದಲೂ ನಾನು ರೋಗಕ್ಕೆ ತುತ್ತಾಗಿದೆ ಈ ಸಮಯದಲ್ಲಿ ನಾನು ಹಲವು ಮದ್ದುಗಳನ್ನು ಉಪಯೋಗಿಸಿ ಹೆಚ್ಚು ಹಣವನ್ನು ವ್ಯಯ ಮಾಡಿದೆ ಪ್ರತಿಸಲವೂ ನನಗೆ ಇದರಿಂದ ಹೆಚ್ಚಿನ ಲಾಭವೇನು ಕಂಡುಬರದೆ, ಮೊದಲಿಂದಲೂ ಹೆಚ್ಚಿನ ಅನಾಹುತಗಳಿಗೆ ಒಳಗಾದೆ ಮೂರು ತಿಂಗಳುಗಳಿಗೆ ಮೊದಲು ನಾನು ಪ್ರಥಮ ಸಲ ಬೆಳಗಾತ ಎದ್ದ ಸಮಯ ಈ ಕ್ರುಶನ್ ಲವಣವನ್ನು ಸೇವಿಸಲು ಉಪಯೋಗಿಸಿದ್ದಂದಿನಿಂದ ನಾನು ಒಬ್ಬ ನವೀನ ಹೆಂಗಸೇ ಆದೆ ನನ್ನ ಅನ್ನಕೋಶದ ಅಕ್ರಮವು ನೀಗಿ ಮಲಬದ್ಧತೆಯೇ ತೊಲಗಿಹೋಯಿತು ನನ್ನ ಈಗಿನ ಪರಿವರ್ತನೆಯನ್ನು ನೋಡಿ ನನ್ನ ಸ್ನೇಹಿತನು ಅವಾಕ್ಕಾದ ನಾನು ಈ ಲವಣವನ್ನು ಈ ಮೊದಲೇ ಸೇವಿಸದಿದ್ದುದಕ್ಕೆ ತುಂಬಾ ವಿಷಾದಪಡುತ್ತೇನೆ

ಕ್ರುಶನ್ ಲವಣವು ಸ್ವಾಭಾವಿಕವಾಗಿ ದೇಹದೊಳಗಿನ ಕಶ್ಮಲವನ್ನು ಹೋಗಲಾಡಿಸುವ ಒಂದು ಸಿದ್ಧೌಷಧ. ಈ ಲವಣದಲ್ಲಿ ಮಿಳಿತವಾಗಿರುವ ಆರು ಲವಣಗಳು ನಿಮ್ಮ ಒಳ ಅಂಗಗಳ ಚಲನವಲನಗಳು ಸರಿಯಾಗಿ ಆಗುವಂತೆ ಸಹಾಯ ಮಾಡುತ್ತವೆ

ಜೀರ್ಣಾಂಗಗಳನ್ನು ಸ್ವಚ್ಛವಾಗಿರಿಸಿ ಯಾವ ತರದ ವಿಷಕರ ಪದಾರ್ಥದ ಹಾವಳಿಯನ್ನುಂಟು ಮಾಡದೆಯೂ ರಕ್ತವನ್ನು ಶುದ್ಧೀಕರಿಸಿ ಎಂದಿಗಿಂತಲೂ ಪಡೆಯದ ನವಯೌವನವನ್ನು ಚುರುಕುತನವನ್ನೂ ಕಾಣುವಿರಿ

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮತ್ತು ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುವುವು.

ಹಳ್ಳಿಗಳಲ್ಲಿ ಜನಜಾಗೃತಿ ಹೇಗಾಗಬೇಕು?

ಹಳ್ಳಿಗಳು ದೇಶದ ಜೀವಾಳವಾಗಿರುವವು ಹಳ್ಳಿಗಳ ಜಾಗೃತಿಯಿಂದ ದೇಶದ ಜಾಗೃತಿಯಾಗುವದು ಆದ್ದರಿಂದ ಕೆಲವು ವಿಶ್ವಪ್ರೇಮಿ ಮತ್ತು ರಾಷ್ಟ್ರಪ್ರೇಮಿ ಸಜ್ಜನರ ದೃಷ್ಟಿಯು ಹಳ್ಳಿಗಳಲ್ಲಿ ಜಾಗೃತಿಯನ್ನುಂಟುಮಾಡುವದರ ಕಡೆಗೆ ಹೋಗಿರುವದು ಸಂತೋಷದ ವಿಷಯವಾಗಿದೆ ಆದರೆ ಹಳ್ಳಿಗಳಲ್ಲಿ ಜಾಗೃತಿ ಹೇಗಾಗಬೇಕು? ಯೋಗ್ಯ ಶಿಕ್ಷಣವನ್ನು ಕೊಡುವದರಿಂದ ಹಳ್ಳಿಗಳ ಜಾಗೃತಿಯಾಗುವದೆಂದು ಶ್ರೀ ಮಾಹೇಶ್ವರಸಿಂಹ ಬಿ. ಎ.ರವರು 'ವಿಶ್ವಮಿತ್ರ'ದಲ್ಲಿ ಅಭಿಪ್ರಾಯ ಪಡುತ್ತಾರೆ. ಹಳ್ಳಿಗರಿಗೆ ದೊರೆಯುವ ಶಿಕ್ಷಣದ ಸ್ವರೂಪವು ಎಂಥಹದ್ದಾಗಿರಬೇಕೆಂಬುದು ಅವರ ಈ ಲೇಖನದಿಂದ ಸ್ಪಷ್ಟವಾಗುತ್ತದೆ.

ಶಿಕ್ಷಣ ಸಮಸ್ಯೆಯನ್ನು ರಾಷ್ಟ್ರೀಯ ಮತ್ತು ಮಾನವೀಯ ದೃಷ್ಟಿಯಿಂದ ವಿಚಾರಿಸಿ ತಿಳಿಯಲಿಕ್ಕೆ ಈಗ ಪ್ರಯತ್ನಗಳಾಗತೊಡಗಿವೆ. ಆದರೆ ಹೀಗೆ ಅದರ ವಿಚಾರ ಮಾಡುವ ಮೊದಲು ಶಿಕ್ಷಣದ ಸ್ಥಾನೀಯ ಮೌಲ್ಯವು ಯಾವುದಾಗಿರಬೇಕೆಂಬುದನ್ನು ತಿಳಿಯುವದು ಆವಶ್ಯಕವಾಗಿರುವದು. ಆಗ ಮಾತ್ರ ಅದಕ್ಕೆ ರಾಷ್ಟ್ರೀಯ ಮತ್ತು ಮಾನವೀಯ ದೃಷ್ಟಿಯಿಂದ ಬೆಲೆ ಬರುವದು.

ಆಧುನಿಕ ಶಿಕ್ಷಣ ಕ್ರಮವನ್ನನುಸರಿಸಿ ನಮ್ಮ ವಿಶ್ವವಿದ್ಯಾಲಯ, ಕಾಲೇಜು ಮತ್ತು ಸ್ಕೂಲುಗಳಲ್ಲಿ ಕೊಡೋಣಾಗುವ ಶಿಕ್ಷಣದಲ್ಲಿ ಏಕೀಕರಣವಿರುತ್ತದೆ ಅದು ಪ್ರಾಣಹೀನವಾಗಿದೆ. ಅದರಲ್ಲಿ ವೈಯುಕ್ತಿಕ ಉನ್ನತಿಗೆ ಅವಕಾಶವಾಗಲೀ, ಸಾಮಾಜಿಕ, ಔದ್ಯೋಗಿಕ ಅಥವಾ ಕೃಷಿ ಸಂಬಂಧವಾದ ಅಭಿವೃದ್ಧಿಗೆ ಎಡೆಯಾಗಲೀ ಇರುವದಿಲ್ಲ. ಅಲ್ಲದೆ ಈ ಶಿಕ್ಷಣವು ಪೇಟೆ ಪಟ್ಟಣವಾಸಿಗಳಿಗೆ ಅನುಕೂಲವಾಗಿರುವದಲ್ಲದೆ, ಹಳ್ಳಿಗರಿಗೆ ಅಲ್ಲ ಆದರೂ ನಮ್ಮ ದೇಶವು ಕೃಷಿಕರ ದೇಶವಾಗಿದೆ ಕೃಷಿಕರು ಹಳ್ಳಿಗಳಲ್ಲೇ ವಾಸವಾಗಿರುವವರಾಗಿದ್ದಾರೆ. ಈಗಿನ ಶಿಕ್ಷಣವು ಅಂಥ ಕೃಷಿಕರೊಡನೆ ಯಾವ ಸಂಬಂಧವನ್ನು ಇಟ್ಟುಕೊಳ್ಳದಿರುವದು ಆಶ್ಚರ್ಯ ಸಂಗತಿಯಲ್ಲವೆ?

ಹೈಸ್ಕೂಲು, ಪ್ರೈಮರಿ ಸ್ಕೂಲುಗಳ ವೃದ್ಧಿಯಿಂದ ಶಿಕ್ಷಣ ಪ್ರಚಾರವು ಚೆನ್ನಾಗಿ ಆಗಹತ್ತಿದೆ ಎಂಬುದು ನಿಜ ಆದರೆ ಅದರಿಂದ ಜನರ ದೃಷ್ಟಿಕೋನವು ಬದಲಾಗಿದೆ ವರದಾನದೊಂದಿಗೆ ಅಭಿಶಾಪವೂ ಇದೆ ಶಿಕ್ಷಿತರಲ್ಲಿ ಸಂಭಿಕತನ ಸ್ವಾರ್ಥ ಬೆಳೆಯುತ್ತಿದೆ ಅವರು ಸಮಾಜದಿಂದ ದೂರ ಸರಿಯುತಿದ್ದಾರೆ. ಶಾರೀರಿಕ ಶ್ರಮ ತೆಗೆದುಕೊಳ್ಳುವದರಲ್ಲಿ ಲಜ್ಜೆಪಡಾಗುತಿದ್ದಾರೆ

ವರ್ತಮಾನ ಶಿಕ್ಷಣವು ಬಹಳ ಖರ್ಚಿನದ್ದು ಆಗಿದೆ ಆದ್ದರಿಂದ ಜನಸಾಮಾನ್ಯರಿಗೆ ಅದನ್ನು ಪಡೆಯುವದು ಅಸಾಧ್ಯವೆನ್ನಿಸಿದೆ ಶಾಲೆಫೀಸು ಮತ್ತು ಪುಸ್ತಕಾದಿಗಳಿಗೆ ಹಣ ಕೊಟ್ಟು ಕೊಟ್ಟು ಮಧ್ಯವಿತ್ತ ಜನರು ದಿವಾಳಿಯಾಗುತಿದ್ದಾರೆ. ಇಷ್ಟಾಗಿಯೂ ಪರೀಕ್ಷೆ ಕೊಟ್ಟು ಸಫಲರಾದರೆ, ವಿದ್ಯಾರ್ಥಿಗಳ ಹಲ್ಲು ಭ್ರಾಂತಾರಪಾಗುವರಲ್ಲದೆ, ಘೋಶನದಾಸರಾಗುವರು ಅದು ಬಿಟ್ಟು ಬೇರೆ ಏನೂ ಅವರಿಂದ ಸಾಧ್ಯವಾಗುವದಿಲ್ಲ

ವಿಶ್ವವಿದ್ಯಾಲಯಗಳ ದೊಡ್ಡ ದೊಡ್ಡ ಪದವಿಗಳನ್ನು ಪ್ರಾಪ್ತ ಮಾಡಿಕೊಂಡ ಮೇಲೆಯೂ, ಅವರು ತಮ್ಮ ಜೀವನೋದ್ದೇಶವನ್ನು ನಿರ್ಣಯಿಸಿಕೊಳ್ಳಲಿಕ್ಕೆ ಅಸಮರ್ಥರಾಗುತ್ತಾರೆ. ಅವರಲ್ಲಿ ವ್ಯವಹಾರಿಕತೆಯಾಗಲೀ ಜೀವನ ಸಫಲತೆಯಾಗಲೀ ಕಂಡುಬರುವದಿಲ್ಲ. ಆದ್ದರಿಂದ ಅವರು ನಿರುದ್ಯೋಗಿಗಳಾಗಿ ಅನೇಕಾನೇಕ ಕಷ್ಟನಷ್ಟಗಳಿಗೆ ಬಲಿಯಾಗುತ್ತಾರೆ

ಆದ್ದರಿಂದ ನಮ್ಮ ಅವಶ್ಯಕತೆಗನುಗುಣವಾಗಿ ಶಿಕ್ಷಣಕ್ರಮದ ವಿಚಾರ ಮಾಡುವದು ಅಗತ್ಯವಾಗಿದೆ ಕೃಷಿಕರ ದೇಹವಾಗಿರುವ ಭಾರತಕ್ಕೆ ಕೃಷಿ ಶಿಕ್ಷಣದ ಆವಶ್ಯಕತೆ ಇರುತ್ತದೆ ಅದರಂತೆ ನಮಗೆ ಶಿಕ್ಷಣ ದೊರತರೆ ಸಫಲತೆಯು ನಮ್ಮ ಕೈ ಮುಷ್ಟಿಯೊಳಗೆ ಬಂದು ಬಿಡುವದು.

ಮೊತ್ತಮೊದಲು ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಸುಧಾರಣೆಗಳಾಗಬೇಕು ದಿನವಹಿ ಜೀವನ ಸಮಸ್ಯೆಗಳನ್ನು ಬಿಡಿಸುವ ಉಪಾಯವನ್ನು ಅದು ಕಲಿಸಿ ಕೊಡಬೇಕು ಪುಸ್ತಕೀಯ ಶಿಕ್ಷಣದ ಬದಲಿಗೆ ವೃತ್ತಿ ಶಿಕ್ಷಣವು ಅಗತ್ಯ ಹೈಸ್ಕೂಲು ಶಿಕ್ಷಣವು ನಮ್ಮನ್ನು ಸುಧಾರಿಸುವದರ ಬದಲಿಗೆ ಹಾಳು ಮಾಡುತ್ತಲಿದೆ ಇದು ದೋಷಗಳಿಂದ ಪರಿಪೂರ್ಣವಾಗಿದೆ ಈ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಯು ತನ್ನನ್ನು ತಾನು ದೊಡ್ಡವನೆಂದು ತಿಳಿಯುತ್ತಾನಾದರೂ, ವಾಸ್ತವ್ಯವಾಗಿ ಅವನ ಪ್ರಯೋಜನವು ಬಹಳ ಕಡಿಮೆ ಇರುತ್ತದೆ ಅವರಿಗೆ ಶಾರೀರಿಕ ಶಿಕ್ಷಣವು ಅಗತ್ಯವು ತನ್ನ ಸುಖ ಮತ್ತು ಆರಾಮಕ್ಕಾಗಿ ಯಾವ ಕೆಲಸವನ್ನಾದರೂ ಮಾಡುವದು ಉಚ್ಚ ಮತ ನೀತಿಯೆಂದು ತಿಳಿಯ ಪದು ತಪ್ಪಾಗಿದೆ ಮತ್ತು ಗ್ರಾಮ ಸೇವೆ ಹಾಗೂ ಸಮಾಜಸೇವೆ ಮಾಡುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ ಎಂಬ ಭಾವನೆಯು ಪ್ರತಿಯೊಬ್ಬ ಹೈಸ್ಕೂಲು ವಿದ್ಯಾರ್ಥಿಯಲ್ಲಿ ಹುಟ್ಟಬೇಕು

ಶಿಕ್ಷಣ ಪ್ರಚಾರವು ತ್ವರಿತ ಗತಿಯಿಂದ ನಡೆಯುವಂತೆ ಹಗಲು ಶಾಲೆಗಳೊಂದಿಗೆ ರಾತ್ರಿ ಶಾಲೆಗಳೂ ಸ್ಥಾಪಿಸಲ್ಪಡಬೇಕು ಅದರಿಂದ ಹಗಲಿನಲ್ಲಿ ಶಾಲೆಗಳಿಗೆ ಹೋಗಲ್ಲಾರದವರು ರಾತ್ರಿಯಲ್ಲಿ ಓದು ಬರಹವನ್ನು ಕಲಿಯುವಂತಾಗುವದು

ಶಾಲಾ ಕಟ್ಟಡಗಳು ಜನವಸತಿಯಿಂದ ದೂರದಲ್ಲಿ ಮೈದಾನು ಸ್ಥಳಗಳಲ್ಲಿರಬೇಕು. ಕೃಷಿ ಸಂಬಂಧವಾದ ವ್ಯವಹಾರಿಕ ಶಿಕ್ಷಣವನ್ನು ಕೊಡಲಿಕ್ಕೆ ಅಲ್ಲಿ ಬೇಕಾದಷ್ಟು ಸ್ಥಳಾನುಕೂಲತೆ ಇರಬೇಕು ಆಗಾಗ್ಯೆ ಮಾಯಾ ಲಾಂದ್ರದ ಸಹಾಯ ತೆಗೆದುಕೊಂಡು ಅದವಾ ಧನ ಸಹಾಯ ಪಡೆಯುವ ಸ್ವಾಸ್ಥ್ಯ, ಸಂಘಟನ, ಸ್ವಚ್ಛತೆ ಮೊದಲಾದವುಗಳ ಮೇಲೆ ಭಾಷಣಗಳಾಗಿ ಕೃಷಿಕರಿಗೆ ತತ್ಸಂಬಂಧವಾದ ಜ್ಞಾನವನ್ನು ಕೊಡಬೇಕು

ಕಲಿತಷ್ಟು ಸ್ಥಾಯಿಯಾಗಿ ಉಳಿಯುವಂತೆ ಪ್ರದರ್ಶನ ಮೂಲಕ ಶಿಕ್ಷಣವನ್ನು ಕೊಡಬೇಕು ಹಾಗೂ ಶಿಕ್ಷಣವು ಸ್ಥಾನೀಯ ಆವಶ್ಯಕತೆಗಳಿಗೆ ಅನುಕೂಲವಾಗಿರಬೇಕು ಬರೇ ಸಿದ್ಧಾಂತ ಸೂಚನೆಗಳನ್ನು ಹೇಳಿಕೊಡುವದರಿಂದ ಪ್ರಯೋಜನವಿಲ್ಲ ವ್ಯವಹಾರಿಕತೆ ಮತ್ತು ಸಂಸ್ಕೃತಿಯ ಸಮಾವೇಶವು ಶಿಕ್ಷಣದಲ್ಲಾಗಬೇಕು. ಜಿಲ್ಲೆಯ ಆವಶ್ಯಕತೆಗನುಸಾರವಾಗಿ ವ್ಯಾಪಾರ, ಕೃಷಿ ಸಂಬಂಧವಾದ ಶಿಕ್ಷಣವು ಕೊಡಲ್ಪಟ್ಟರೆ ಅತ್ಯುತ್ತಮವಾಗುವುದು.

ಬಾಲಕರನ್ನು ಐತಿಹಾಸಿಕ ಸ್ಥಾನಗಳಿಗೆ ಕೊಂಡುಹೋಗಿ ಅವರಲ್ಲಿ ಜ್ಞಾನ ಮತ್ತು ಬುದ್ಧಿಯ ಮೇಲೆ ಪ್ರೇಮ, ಶ್ರದ್ಧೆಗಳ ಭಾವಗಳು ಬರುವಂತೆ ಮಾಡಬೇಕು. ಶಾಲೆಯೊಡನೆ ಪಂಚಾಯತಿ ಮತ್ತು ಸಹಕಾರ ಸಮಿತಿಗಳ ಸಂಬಂಧವಿದ್ದರೆ ಬಹಳ ಒಳ್ಳೇದು. ಅದರಿಂದ ಗ್ರಾಮಜೀವನದ ಬೇರೆ ಅನೇಕ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಬಹಳ ಅನುಕೂಲವಾಗುತ್ತದೆ

ಗ್ರಾಮ್ಯಗೀತ, ಗ್ರಾಮ್ಯನೃತ್ಯ, ಗ್ರಾಮ್ಯ ಕಥೆ ಗ್ರಾಮ್ಯನಾಟಕ, ಗ್ರಾಮ್ಯಆಟನೋಟಾದಿಗಳನ್ನು ಮಕ್ಕಳಿಗೆ ಕಲಿಸುವುದರಿಂದ ಮಕ್ಕಳಲ್ಲಿ ಸರಳತೆಯೂ ಬರುತ್ತದೆ. ಗ್ರಾಮ್ಯಸಂಸ್ಕೃತಿಯು ಜೀರ್ಣೋದ್ಧಾರವಾಗುತ್ತದೆ ಮತ್ತು ಮಾನವ ಜೀವನವು ಸ್ವಾಭಾವಿಕ ಕ್ರಮವನ್ನನುಸರಿಸುತ್ತದೆ.

ಈ ಎಲ್ಲಾ ಕೆಲಸಗಳನ್ನು ಗ್ರಾಮಶಾಲೆಗಳ ಉಪಾಧ್ಯಾಯರು ಮಾಡಬೇಕಾಗಿರುವದರಿಂದ ಅವರು ಯೋಗ್ಯರೂ ಅಧ್ಯವಸಾಯಶೀಲರೂ ಆಗಿರುವದಗತ್ಯ. ಅವರಿಗೆ ದೊರೆಯುವ ತರಬೇತಿಯೂ ಗ್ರಾಮಶಿಕ್ಷಣಕ್ಕೆ ಅನುಕೂಲವಾಗಿರಬೇಕು. ಈ ಉಪಾಧ್ಯಾಯರು ಗ್ರಾಮಸ್ಥರ ಅವಶ್ಯಕತೆಗಳನ್ನು ತಿಳಿದು ಅವುಗಳ ಅನುಕೂಲ ಶಿಕ್ಷಣವನ್ನು ತಮ್ಮ ಶಾಲೆಗಳಲ್ಲಿ ಕೊಡುವರಾದರೆ ಗ್ರಾಮಗಳಲ್ಲಿ ಜಾಗ್ರತಿಯುಂಟಾಗುವದು ಖಂಡಿತ ಮತ್ತು ಅವುಗಳಲ್ಲಿ ಸುಖ ಸಂಪತ್ತಿಯು ತುಂಬಿ ಸಂತೋಷದ ಶಾಂತವ್ರವಾಹವು ಹರಿಯತೊಡಗುವುದು ನಿಶ್ಚಯ. ಇದರಿಂದ ಸಮಸ್ತರಾಷ್ಟ್ರವು ನವೀನ ಮಾರ್ಗಾನುಸರಣಮಾಡತಾರಂಭಿಸುವುದು

ಚೀನಾ ಜಪಾನ್ ಯುದ್ಧದಿಂದ ಲಾಭ ಯಾರಿಗೆ?

ಚೀನಾ-ಜಪಾನ್ ಯುದ್ಧದಿಂದ ಲಾಭವಾದರೂ ಯಾರಿಗೆ? ಈ ಪ್ರಶ್ನೆಗೆ ಉತ್ತರವು ಜರ್ಮನ್ ಟೋಕಿಯೋ ನಗರದ ಮತ್ತು ಚೀನಾ ಹೊಂಗ್ ಕೊಂಗ್ ನಗರದಲ್ಲಿರುವ, ದೊಡ್ಡ ದೊಡ್ಡ ಹೊಟೇಲುಗಳನ್ನು ಸಂದರ್ಶಿಸಿದರೆ ತಿಳಿದು ಬರುವುದು. ಅಲ್ಲೀಗ, ಪಾಶ್ಚಾತ್ಯ ದೇಶಗಳ, ಯುದ್ಧ ಶಸ್ತ್ರ ಸಿಡಿಮದ್ದು ವ್ಯಾಪಾರಿಗಳ ಪ್ರತಿನಿಧಿಗಳು ತುಂಬಿರುವರಂತೆ

ಚೀನವು ಅವರಿಂದ ಸಿದ್ಧವಾದ ಯುದ್ಧ ಸಾಮಾಗ್ರಿಗಳನ್ನೆ ಪಡೆಯುತ್ತಿರುವಾಗ, ಜಪಾನು ಯುದ್ಧ ಶಸ್ತ್ರ ಸಿಡಿಮದ್ದುಗಳ ಸಿದ್ಧತೆಗೆ ಬೇಕಾದ ಕಾರಣ ಸಾಮಾಗ್ರಿಗಳನ್ನು ಪಡಕೊಳ್ಳುತ್ತಿದೆ

ಜರ್ಮನಿ ಮತ್ತು ಇಟೇಲಿ, ಚೀನಾ ದೇಶದ ಆದರಿಗಳಾಗಿರುವಾಗ, ಅಮೇರಿಕಾ, ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸು ಜಪಾನಿನ ಆದರಿಗಳಾಗಿದ್ದಾರೆ ಇದೊಂದು ವೈಚಿತ್ರ್ಯವಲ್ಲವೆ?

ಭಂಗಾರದ ಬೆಲೆ ಹೆಚ್ಚುವುದೆ?

ಇಂಗ್ಲಾಂಡು, ಫ್ರಾನ್ಸು ಇತ್ಯಾದಿ ಭಂಗಾರವನ್ನು ಕೂಡಿಸಿಟ್ಟ ಜನಾಂಗಗಳ ಸಮ್ಮತಿಯಿರುವುದಾದರೆ, ಭಂಗಾರದ ಧಾರಣೆಯನ್ನು ಏರಿಸುವ ಆಲೋಚನೆಯು ಸಂಯುಕ್ತ ಅಮೇರಿಕಾಕ್ಕೆ ಇರುವುದಾಗಿ ತಿಳಿದುಬರುತ್ತದೆ

ಸಾವಿತ್ರೀ ಮಾತೆಯ ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರ ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ.

ತಲೆನೋವನ್ನು ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ ಅಂಗೈ ಮತ್ತು ಅಡಿಗಳು ಉರಿಯುವ ಪ್ರಕಾರಗಳನ್ನು, ಹೋರಲಾಡಿಸ್ಸಿ ಮಿದುಳಿಗೆ ತಂಪನ್ನು ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ ದೃಷ್ಟಿಯು ಚುರುಕಾಗಿಸ್ಸಿ, ತಲೆಯಲ್ಲಿ ಕೂದಲ ಬುಡದಲ್ಲಿ ನಾನಾ ಕೊಳೆ ಗಟ್ಟುವ ಮುಂದಕ್ಕೆ ಅವಕಾಶಕೊಡದೆ, ಸುಖ ನಿದ್ರೆಯಾಗುವಂತೆಯೂ ನಿದ್ರಾಭಂಗ ಆನಿದ್ರೆ ಮೊದಲಾದುವುಗಳಿಗೆ ಎಡೆಸಿಗದಂತೆಯೂ ಪರಿಣಮಿಸಿ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ

ಸ್ನಾನಕ್ಕೆ ಅರ್ಧಗಂಟೆ ಮೊದಲು ತಲೆಗೆ ಹಚ್ಚಿಕೊಳ್ಳುವುದು

ಬೆಲೆ—2 ಔನ್ಸು ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್‌ಬಹದ್ದೂರ್ ಎಂ. ಕೇಶವಯ್ಯ, ಎಮ್. ಡಿ, ಓ ಬಿ ಇ. ಇವರ ಅಭಿಪ್ರಾಯ:

ಶ್ರೀಯುತ ಬಾಳಿಗರೇ,

ತಾವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋಗಿಸಿರುವೆನು ಅದು ತಲೆಗೆ ತಂಪನ್ನುಂಟುಮಾಡ ... ಶ್ರೀ ಎಮ್ ಸುಂದರರಾವ್, ಬಿ ಎ ,ಎಲ್ ... ಟಿ ಸೆಕ್ರೆಟರಿ ಬೋ ಇವರ ಅಭಿಪ್ರಾಯ

ಹಲವು ವರ್ಷಗಳಿಂದ ಆಗಾಗ ನನಗೆ ... ಭಂಗದ ಬಾಧೆಯಿತ್ತು, ಕಳೆದ ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನಿಮ್ಮ ಈ ಎಣ್ಣೆಯು ನನಗೆ ತುಂಬ ಗುಣಕೊಟ್ಟಿತು ... ಇದರಿಂದ ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಇತರರೂ ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ಶಿಫಾರಸು

ಒಂದು ಕೊಡ್ಡೆ ದನವಿನ ಹಾಲು ತೆಗೆದುಕೊಂಡು ಬಂದಲ್ಲಿ ಅದೇ ಹಾಲಿನಲ್ಲೇ ಮೇಹದ ಮದ್ದು ಹಾಕಿ ಧರ್ಮಾರ್ಥ ಕೊಡೋಣವಾಗುವದು.

ನಿಮ್ಮ ಈ ಮಾರುತೀ ಲೇಹ್ಯವು ನಿಜವಾಗಿಯೂ ಅಮೋಘವಾಗಿದೆ ಅದನ್ನು ನಾನು ಕ್ಲಿಷ್ಟ ಪ್ರಸಂಗಗಳಲ್ಲಿ ಸೇವಿಸಲ್ಪಡುವಾಗ ... ಉತ್ತಮ ಫಲಗಳು ನನ್ನ ದೊರೆತಿವೆ ... ಇದು ಕಡ್ಡಾಯವಾಗಿ ... ಈ ಲೇಹ್ಯವನ್ನು ಕೊಳ್ಳಬೇಕೆಂದು ... ದೇವರನ್ನು ... ಶ್ರೇಯಸ್ಸನ್ನು ... ಈ ದಿವ್ಯ ಔಷಧವು ಬೇಕಾಗುವುದು.

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಸರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನೇಜರು,

ಡೊಂಗರಕೇರಿ ಬಸ್ತಿ, ಮಂಗಳೂರು ದಕ್ಷಿಣ ಕನ್ನಡ

ಸಾವಿತ್ರೀ ಮಾತೆಯ ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1937ನೆ ಇಸ್ವಿ ಎಪ್ರಿಲ್ ತಾ 2ರಲ್ಲಿ ಮೊದಲು ತಯಾರಿಸಿದುದಾಗಿದೆ.

ಇದರಲ್ಲಿ ಅಪಾಯಕಾರಕವಾದ ಯಾವ ಔಷಧಿಗಳೂ ಪ್ರಸ್ತುತವಾದ ದನದ ಹಾಲು, ಬೆಣ್ಣೆ, ಕುಂಕುಮ, ಜೇನು, ಸಕ್ಕರೆ ಸೇರಿದೆ. ದುಷ್ಪರಿಣಾಮಕರ ಪದಾರ್ಥಗಳಾಗಲಿ, ದೇವ ವಿರುದ್ಧವಾಗಿರುವ ಯಾವ ಬಗೆಯ ಕೋಪ್ಯಾಗ್ರಿಯೂ ಇರುವುದಿಲ್ಲ. ... ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು ಆರೋಗ್ಯ ಚೇತನಗಳನ್ನು ವರ್ಧಿಸುವುದು ... ಸಂಪೂರ್ಣ ಪರಿಣಾಮವನ್ನು ಕೊಡುತ್ತದೆ

ಬೆಲೆ ... ಸೀಸೆಗೆ ರೂ 1-12-0

... ರೂ. 3-0-0

ವಿಶೇಷ ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದನ ಕೇಶ ತೈಲವನ್ನು ಉಪಯೋಗಿಸುವಾಗಲೇ ಸೇವಿಸಿದಲ್ಲಿ ಜ್ಯಾಸ್ತಿ ರೋಗವು ಕೂಡ ಗುಣವಾಗುವುದು

ವಿ ಸೂ ಇದು ರೂಪಾಯಿಗೆ ಕಡಿಮೆ ಯಾದ ಬೆಲೆಯ ಔಷಧಗಳನ್ನು ವಿ ಪಿ ಮೂಲಕ ರವಾನಿಸುವುದಿಲ್ಲ ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯನ್ನು ... ಮುಂಗಡ ತೆರಬೇಕಾಗಿದೆ. ಭದ್ರವಾಗಿ ಕಟ್ಟಿ ಕಳುಹುವ, ರೈಲ್ವೆ ಯಾ ಇತರ ರವಾನಾ ಖರ್ಚು ಪ್ರತ್ಯೇಕ

ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ವಿಳಾಸ, ರವಾನಾ ಕ್ರಮ ... ಪೋಸ್ಟ್ ಆಫೀಸು ರೈಲ್ವೆ ಸ್ಟೇಷನು ಮೊದಲಾದುವನ್ನು ... ಔಷಧ ಗಿರಾಕಿಗಳು ಸುವ್ಯಾಕ್ತದಿಗಳಿಂದ ಬರೆದು ಕಳುಹಬೇಕಾಗಿದೆ.

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಪಿ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆಂಡೇಟಿ,
P. O. Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಂಕಟ್ಟಾ ಬಜಾರ್, ಮಂಗಳೂರು.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಗುಣಬಾರದಿದ್ದರೆ — ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಸೇವಿಸಿದಂತೆ ಸುಲಭವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸ್ಕಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು... ವೈದ್ಯ ಎಲ್. ಸಿ. ಪಿ. ಎಸ್. ಕೆಳವಾವೂರು, ಶಾಣೇ ಈ ಚೂರ್ಣದಿಂದ ಯಾವ ಶರೀರ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ. ಪಿ. ಅಲ್ಲ.

ವಿಳಾಸ:—, ಸಂಜೀವಿನೀ ಔಷಧಾಲಯ, ಮು. ಪೋ. ಮಿಂಧಜಿ, (S. M. L.)

The

Agricultural & Industrial Bank, Ltd.,

(Incorporated in British India.)

Head Office "LAXMINIVAS BUILDINGS" *Coondapoor.*

BRANCHES:—

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:—

5 YEARS CORONATION CASH CERTIFICATES, BEARING 5 PER CENT INTEREST ARE ISSUED IN DENOMINATIONS, OF RS. 10, 25, 50, 100, 250, 500 & 1000, REDEEMABLE AT ANY TIME. CUMULATIVE DEPOSITS ARE ACCEPTED

Current Deposits

From January to June 2%
and
From July to December 1%

Savings Bank Deposits

3½ per cent per annum

Fixed Deposits

for 6 Months		3½%
„ 1 Year		4%
„ 2 Years & above		4½%

For Further Particulars Apply to:—

HEAD OFFICE or BRANCHES

Buy Advertised Goods

DRINK

Delicious

WATERFALL

AND

PYKARA TEAS.

unrivlled for Taste & Aroma.

ಅತ್ಯುತ್ತಮವಾದ
ವಾಟರ್ ಫೋಲ್
ಮತ್ತು
ಪ್ಯಾಕರಾ ಚಹಾವನ್ನು
ಸೇವಿಸಿ, ನಿಮ್ಮ ಚಹಾ ಸೇವನೆಯ ಆನಂದವನ್ನು ಹೆಚ್ಚಿಸಿರಿ.

Distributors:

Panchmal Krishnaya Shenoi & Son,
Bunder, Mangalore.

USE

365 BAR SOAPS

SOLD

EVERYWHERE.

**
**

Sole Agent:

PANCHMAL KRISHNAYA SHENOI & SON,

Bunder, MANGALORE

★ ಮಂಗಳೂರು ವಾರ್ತೆ ★

ಕಳೆದ ವಾರ ಮತ್ತು ಈ ವಾರ ಮಳೆಯು ಬಿಡದೆ ಬರುತ್ತಿದೆ ಬಿರುಗಾಳಿಯೂ ಇದೆ. ಜಿಲ್ಲೆಯ ಅನೇಕ ನದಿಗಳಲ್ಲಿ ನೆರೆಗಳು ಉಂಟಾಗಿದ್ದುವು. ಬಂಟ್ವಾಳ, ಗುರುಪುರ, ಕೂಳೂರು ಇತ್ಯಾದಿ ಕಡೆಗಳಲ್ಲಿ ನೆರೆಯು ತುಂಬಿದಕಾರಣ ನಿಂದ ಮಂಗಳೂರಿನಿಂದ ಚಾರ್ಮಾಡಿ ಮುದಿಕೇರಿಗಳಿಗೆ ಮೋಟಾರು ಚಲಾವಣೆಯು ಮೊನ್ನೆ ಎರಡು ದಿವಸ ನಿಂತುಬಿಟ್ಟಿತ್ತು.

o o o

ಕೊಡಿಯಾಲಬೈಲಿನಲ್ಲಿ ಶಾಲೆಗೆ ಹೋಗುತ್ತಿರುವ ಒಂದು ಹುಡುಗಿ ಬಿರುಗಾಳಿ ದೆಸೆಯಿಂದ, ಅಲ್ಲಿ ನೆರೆ ಎದ್ದು ಹರಿಯುವ ತೋಡಿನ ನೀರಿನಲ್ಲಿ ಬಿದ್ದು, ಹುಡುಗಿಯ ಶವವು ಕುದ್ರೋಳಿಯಲ್ಲಿ ದೊರೆತಿರುವುದು

o o o

ಕಣ್ಣೀರುಭಾವಿಯ ಬಳಿ ಒಂದು ಆಳವೆ ಬೀಳದಿರುತಿದ್ದರೆ, ಕೂಳೂರು ಇತ್ಯಾದಿಗಳಲ್ಲಿ ನೆರೆ ಹಾವಳಿಯು ಇನ್ನೂ ವಿಶೇಷ ತರದ್ದು ಆಗುತಿತ್ತು.

1923ರ ನಂತರ ಈ ತರದ ನೆರೆಯು ಬಂದಿಲ್ಲವೆಂದು ಕೆಲವರ ಅಭಿಪ್ರಾಯ

o o o

ಸ್ಥಳೀಯ ಕೆನರಾ ಹೈಸ್ಕೂಲಿನ ಎಲಿಮೆಂಟರಿ ಶಾಲೆಯ ಸಣ್ಣ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟಕ್ಕೆ ಹೋಗುವರೆ ಅನಾನುಕೂಲವಾದವರಿಗೆ, ಶಾಲೆಯಲ್ಲೆ ಊಟ ಒದಗಿಸಲು, ಪ್ರೀಪೂಷರದ ಸ್ಥಾಪನೆಯು ಆಗಿರುತ್ತದೆ ಈ ಕಾರ್ಯಕ್ಕೆ ಶ್ರೀ ಕಸ್ತೂರಿ ಪುಂಡಲೀಕ ಪೈಯವರು ತಮ್ಮ ಹಿರೀ ವ ಗಳ ಸ್ಮಾರಕಾರ್ಥವಾಗಿ ಒಂದು ಸಾವಿರ ರೂಪಾಯಿಯ ಉದಾರ ದಾನ ಕೊಟ್ಟಿರುವರಾಗಿ ತಿಳಿದು ಬರುತ್ತದೆ ಇಲ್ಲಿ ಕೆಲವರಿಗೆ ಮಾತ್ರವಲ್ಲದೆಎಲ್ಲಾ ಮಕ್ಕಳಿಗೆ ಊಟಹಾಕಲು ಅನುಕೂಲವಾಗುವಂತೆ, ನಿಧಿಗೂಡಿಸುವ ಕೆಲಸವು ನಡೆಯು ತ್ತಿದೆ.

o o o

ಮಂಗಳೂರು ಮುನಿಸಿಪಲ್ ಕಮಿಶನರ ವರ್ತನೆ ಸಾರ್ವಜನಿಕ ಖಂಡನಾ ಸಭೆಯು ಶ್ರೀ ಮೋಹನ ಸುವರ್ಣರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಕಿಣ್ಣಿಯವರು ನೆರೆದವರಿಗೆ ತುಳುವಿನಲ್ಲಿ ಭಾಷಣವಿತ್ತರು. ತೆರಿಗೆದಾರರ ವಿಷಯವಾದ ಅಲಕ್ಷ ಅಪವೃತ್ತಿ ಕುರಿತಾಗಿ ಭಾಷಣಗಳಾಗಿ ಆ ಕುರಿತು ರಠಾವುಗಳು ಪಾಸಾಗಿ ಪ್ರತಿಗಳು ಜಿಲ್ಲಾ ಕಲೆಕ್ಟರರಿಗೂ ಕಳುಹಿಸಲಾದವು

o o o

ನಮ್ಮ ಜಿಲ್ಲಾ ಬೋರ್ಡಿನ ಸಭೆಯೊಂದು ಇದೇ ತಾ. 16ರಲ್ಲಿ ಜರಗಲಿದೆ. ಈ ಸಭೆಯಲ್ಲಿ, ಮಾರ್ಗೋಪಾಯ್ಯ, ಗ್ರಾಮಾಭ್ಯುದಯ ಬಗ್ಗೆ ಇತ್ಯಾದಿಗಳ ಸಮಿತಿಗಳ ಚುನಾವಣೆಯು ನಡೆಯುವುದು

o o o

ಮಂಗಳೂರು ಮುನಿಸಿಪಲ್ ಕೌನ್ಸಿಲ್ ಮೀಟಿಂಗು, ಶ್ರೀ ವೆಂಕಟ್ರಾಯ ಬಾಳಿಗರ ಅಧ್ಯಕ್ಷತನದಲ್ಲಿ ಮೊನ್ನೆ ತಾ. 4ನೇ ಸೋಮವಾರ ಸಂಜೆ 5-30ಕ್ಕೆ ನಡೆಯಿತು ಈ ಮೀಟಿಂಗಿನಲ್ಲಿ ಮುಖ್ಯವಾಗಿ ಕಮಿಶನರಿಗೆ ಮತ್ತು ಹೆಲ್ತ ಆಫೀಸರರಿಗೆ ಸಂಬಂಧಪಟ್ಟ ಪ್ರಶ್ನೋತ್ತರಗಳಿಗೆ ಪೆಚ್ಚವಾಗಿ, ಎಜೆಂಡಾದಲ್ಲಿರುವ ಹೆಚ್ಚು ಕಡಿಮೆ ಯಾವತ್ತೂ ಇತರ ವಿಚಾರಗಳ ತೀರ್ಮಾನ ಬಾಕಿಯಾಯಿತು ಮುನಿಸಿಪಲ್ ಉದ್ಯೋಗಿಗಳ ಕೆಲಸದ ತಾಸು, ಕಮಿಶನರ ನೇಮಕ, ಅವರ ಮೂಡಬಿದರೆ ಸಂಚಾರ, ಹಂಗಾಮಿ ನೇಮಕಗಳ ಸರ್ವಿಸ್ ರಜಿಸ್ಟರ್, ಮುನ್ಸಿಪಲ್ ಫಂಡಿನ ವರ್ಗ, ಪೆಟ್ರೋಲ್ ಇಂಡೆಂಟಿನ ಪ್ರಶ್ನೆ ಗಜೆಟೆಡ್ ಆಫೀಸರರಿಗೆ ಮೆಮೊ ಕಳುಹಿಸುವ ರೂಢಿ, ಎಂಬುಲೆನ್ಸ್ ಕಾರೂ—ಕ್ಲಬ್ಬು ಮೆಂಬರರೂ ಇವೆ ಮೊದಲಾದವುಗಳ ಕುರಿತು, ಬಾರಿ ಪ್ರಶ್ನೋತ್ತರಗಳು ನಡೆದವು.

ಪ್ರಶ್ನಾಕರ್ತರುಗಳು ಒಟ್ಟಿಗೆ ಐದುಜನರಿಂದ, ಶ್ರೀಗಳಾದ ರಂಗರಾವ್ ತಲಚೇರಿಕರ, ಡಾ| ಕೆ. ಗಿರಿಧರರಾಯರು, ಶ್ರೀ. ಪಿ. ಆರ್ ಡಿಸೋಜರು, ಶ್ರೀ. ಎಂ ಆರ್. ಭಟ್ಟರು ಮತ್ತು ಶ್ರೀ ಪಾಂಡುರಂಗ ಭಂಡಾರಿಗಳವರು

ಡಾ| ವಿಠ್ಠಲಶೆಟ್ಟಿರೆ ಮೊದಲಾದ ಮಹನೀಯರು, ಇವರಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸಿದ್ದರು.

ಮುನ್ಸಿಪಲ್ ಆಫೀಸಿನ ನೌಕರರು, ನಿಯಮಿತ ಸಮಯಕ್ಕಿಂತ ಹೆಚ್ಚಿನ ಕೆಲಸ ಮಾಡುವ ಕುರಿತು ಪ್ರಶ್ನೆಗೆ, ಆ ಕುರಿತು ವಿಚಾರಣೆ ನಡೆದು, ಶಿಬಂದಿಯ ಸಾಕಾಗುವುದಿಲ್ಲ ದಿನದ ಕೆಲಸವು ಪೂರ್ತಿ ಮಾಡಲು ಹೆಚ್ಚಿನ ಸಮಯ ತಗಲುತ್ತದೆಂದು, ಅಧ್ಯಕ್ಷರ ಉತ್ತರವು ದೊರಕಿತು. ನಂತರ ಕಮಿಶನರು ಆಫೀಸಿಗೆ ಬರುವ ಸಮಯ ಪ್ರಶ್ನೆಗಳಾದವು ನಂತರ ಪಬ್ಲಿಕ್ ವರ್ಕ್ಸ್ ಶಾಖೆಯ ಡೈರಿ, ಮುನ್ಸಿಪಲ್ ಲಾರಿ ಡ್ರೈವರನೊಬ್ಬನು ಕಮಿಶನರ ಕಾರು ಡ್ರೈವ್ ಮಾಡುತ್ತಿದ್ದಾನೆ ಎಂಬ ಮೊದಲಾದ ಪ್ರಶ್ನೆಗಳು ಕೇಳಿ ಆದಮೇಲೆ, ಮಿಸ್ಟ್ರೆಸ್ಸುಗಳ ನೇಮಕ ಕುರಿತು ಪ್ರಶ್ನೆ ಕೇಳಲಾದವು. ಶ್ರೀಮತಿ ರೋಸಾ ಬಂಗೇರಾ ಎಂಬವಳಿಗೆ ಕಮಿಶನರು ಉಪಾಧ್ಯಾಯಿನಿಯ ಕೆಲಸವನ್ನು ದಯಪಾಲಿಸಿದ ವಿಧ್ಯಮಾನಗಳು ಯಾವವು, ಆ ಕೆಲಸವನ್ನು ಹಿಂದೆ ಬದಲ ನೋಡಿದ ಶ್ರೀಮತಿ ಫ್ಲೋರೆನ್ಸ್ ಎಂಬವಳಿಗೆ ಯಾಕೆ ಕೊಡಲಾಗಲಿಲ್ಲವೆಂದು ಕೇಳಲಾಗಲು ಒಂದು ತಿಂಗಳ ಮಟ್ಟಿಗೆಂದು ಕೆಲಸ ಮಾಡಲೊಲ್ಲೆನೆಂದು ಶ್ರೀಮತಿ ಫ್ಲೋರೆನ್ಸಳು ಅನ್ನಳು, ಆ ಕೆಲಸವು ರೋಸಾ ಬಂಗೇರಳಿಗೆ ಕೊಡಲಾಯಿತೆಂದು ತಿಳಿದು ಬಂತು ಇದು ರಿಕಾರ್ಡ್ ಆಗಿದೆಯೊ ಎಂಬ ಪ್ರಶ್ನೆಗೆ ಇಲ್ಲವೆಂಬ ಉತ್ತರವು ದೊರಕಿತು ಈ ಸಂದರ್ಭದಲ್ಲಿ, ನಮ್ಮ ಕಮಿಶನರೂ, ಒಬ್ಬ ಮುನಿಸಿಪಲ್ ಕೌನ್ಸಿಲರೂ, ಶ್ರೀಮತಿ ರೋಸಾ ಬಂಗೇರರವರ ಒಟ್ಟಿಗೆ ಪ ಓಡಾಟಗಳ ಬಗ್ಗೆ ದಯಮಾಡಿದ್ದರೆಂತಲೂ ಆ ಸಂಬಂಧ ಮ ಪಿ ಖಾ ಗಡಿಗಳ ಜೊತೆಗೆ ಹೋಗಲು ಕಮಿಶನರು, ಅಪ್ಪಣೆ ಪಡೆದಿರಲಿಲ್ಲವೆಂತಲೂ ಪ್ರಕಟವಾಯಿತು

ಶ್ರೀ ಶಂಭು ಶೆಟ್ಟರೆಂಬ ಹಂಗಾಮಿ ಉದ್ಯೋಗಿಗಳೊಬ್ಬರಿಗೆ ಪುನಃ ಏತಕ್ಕೆ ಕೆಲಸ ದೊರಕಲಿಲ್ಲವೆಂದು ಪ್ರಶ್ನೋತ್ತರಗಳಾದವು

ಕಂಟ್ರಾಕ್ಟಿಗೆ ಕೊಟ್ಟ ರಸ್ತೆಗಳು ಹಲವು ಹಾಳಾಗಿ ಹೋದ ಕುರಿತು ಪ್ರಶ್ನೋತ್ತರಗಳಾಗಿ, ಅವುಗಳು ಬೇಗನೆ ಹಾಳಾದ ವಿಚಾರದಲ್ಲಿ ಆಶ್ಚರ್ಯಪಡಲಾಯಿತು.

ಡಾ| ಗಿರಿಧರರಾಯರು ಮುನಿಸಿಪಲ್ ಹೆಲ್ತ್ ಆಫೀಸರರ ಕುರಿತು ಕೇಳಲಿದ್ದ ಪ್ರಶ್ನೆಗಳು ಕೆಲವನ್ನು ಅಧ್ಯಕ್ಷರು ಕೇಳಲು ಅನುಮತಿ ಕೊಡಲಿಲ್ಲ

ಮಹಾಜನರಲ್ಲಿ ವಿನಂತಿ

ಮಂಗಳೂರು ತಾಲೂಕಿನಲ್ಲಿರುವ ತಣ್ಣೀರುಬಾವಿ, ಕುದ್ರೋಳಿ ಮತ್ತು ಉರ್ವ ಗ್ರಾಮಗಳಲ್ಲಿರುವ ಹರಿಜನರು ಮಳೆಯ ನೆರೆಯಿಂದ ಅನೇಕ ಮನೆಗಳನ್ನೂ, ಕೆಲವರು ಸರ್ವಸ್ವವನು ಕಳಕೊಂಡಿರುವುದರಿಂದ ಬಹಳ ಕಷ್ಟದಲ್ಲಿದ್ದಾರೆ ಆದ್ದರಿಂದ ಮಹಾಜನರು ಬಡ ಹರಿಜನರಿಗೆ ಸಹಾಯ ಮಾಡಬೇಕೆಂದು ಹರಿಜನ ಲೇಬರ್ ಲೀಗಿನ ಕಾರ್ಯದರ್ಶಿಯ ವಿನಂತಿ.

ಕೆ. ಈಶ್ವರ ಎಂ ಎಲ್ ಎ
ಕಾರ್ಯದರ್ಶಿ

ಟ್ರಾವಂಕೂರ್ ನೆಶನಲ್ ಎಂಡ್ ಕ್ವಿಲನ್ ಬ್ಯಾಂಕ್ ಲಿಮಿಟೆಡ್—ಇದು ತನ್ನ ವಹಿವಾಟುಗಳನ್ನು ನಿಲ್ಲಿಸಿದ ದೆಸೆಯಿಂದ ಈ ಕಂಪೆನಿಗೆ ಏನಾದರೂ ಹಾನಿ ತಟ್ಟಿದೆಯೋ, ಆಹುದಾದರೆ ಎಷ್ಟುಮಟ್ಟಿಗೆ ಎಂಬೀ ವಿಷಯವಾಗಿ ನಮ್ಮ ಪೊಲಿಸಿದಾರರೂ, ಪಾಲುಗಾರರೂ, ಕಂಪೆನಿಗೆ ಸಂಬಂಧ ಪಟ್ಟ ಇತರರೂ ತಿಳಿಯಬಯಸಿರಬಹುದು, ಪ್ರಶ್ನಿಸುತ್ತಿರ ಬರ.

ಇದಕ್ಕೋಸ್ಕರವಾಗಿ ನಾವು ಅಧಿಕೃತವಾಗಿ ಹೀಗೆ ತಿಳಿಸಬಯಸುತ್ತೇವೆ ಬ್ಯಾಂಕಿನ ವಹಿವಾಟುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ದೆಸೆಯಿಂದ ಕಂಪೆನಿಯ ಸ್ಥಿತಿ ಅಥವಾ ವಹಿವಾಟುಗಳ ಮೇಲೆ ಏನು ಪ ಣಾಮವಾಗ ನಿಲ್ಲ ಈ ಕಂಪೆನಿಯು, ಅವಶ್ಯವಿರುವ ಮುಖ್ಯ ಕಾಯಿದೆಗನುಗ ಣವಾದ ಠೇವಣಾತಿಯನ್ನು ಕಂಟ್ರೋಲರ್ ಒಫ್ ಕರೆನ್ಸಿ (ಸರಕಾರಿ) ಯಲ್ಲಿ ಭದ್ರತೆಯಾಗಿಟ್ಟಿದೆ ಈ ಮೇಲಿನ ಠೇವಣಾತಿಯಲ್ಲದೆ ಕಂಪೆನಿಗೆ, ಸರಕಾರೀ ಭದ್ರತೆಗಳ ರೂಪದಲ್ಲಿ ಇತರ ಹಣದ ಜಿಸರಿಗಳೂ ಇವೆ, ಮಾತ್ರವಲ್ಲ, ಕಂಪೆನಿಯು ಕಾರ್ಯವನ್ನು ಸುಗಮವಾಗಿ ಸಾಗಿಸಲು ಬೇಕಾಗುವಷ್ಟು ಹಣವು ಇತರ ಬ್ಯಾಂಕ ಗಳಲ್ಲಿಯೂ ಠವಣಾತಿ ಇದೆ

ಆ ಬ್ಯಾಂಕು ತನ್ನ ವಹಿವಾಟುಗಳನ್ನು ನಿಲ್ಲಿಸ ಪ ದಿನದಲ್ಲಿ ಆ ಬ್ಯಾಂಕಿನ ಹೆಡ್ ಆಫೀಸು ಮತ್ತು ಇತರ ಪ್ರತಿಯೊಂದು ಶಾಖೆಯಿಂದ ಈ ಕಂಪೆನಿಗೆ ಸಲ್ಲಬೇಕಾಗಿದ್ದ ಹಣದ ಮೊತ್ತವು ರೂ. 24,847–10–8 ಎಂದು ಹೇಳಬಯಸುತ್ತೇನೆ ಆ ಬ್ಯಾಂಕಿನ ಆರ್ಥಿಕ ಸ್ಥಿತಿಯ ಕುರಿತು ತಿಳಿದು ಬರುವಂತೆ ನಮಗೆ ಬರಬೇಕಾಗಿದ್ದ ಹಣವೆಲ್ಲವನ್ನು ನಾವು ಸಾಮಾನ್ಯವಾಗಿ ಪೂರ್ಣವಾಗಿ ತಿರಿಗಿ ಹೊಂದುವೆವೆಂದು ಭರವಸೆಪಡಲು ಕಾರಣಗಳಿವೆ ಹೀಗೆಲ್ಲ ಇರುವುದರಿಂದ, "ಗಾರ್ಡಿಯನ್ ಇನ್ಶ್ಯೂರೆನ್ಸ್ ಕಂಪೆನಿಯು ತನ್ನ ಎಲ್ಲ ಅಥವಾ ಅಧಿಕಾಂಶ ಫಂಡುಗಳನ್ನು ಟ್ರಾವಂಕೂರ್ ನೆಶನಲ್ ಎಂಡ್ ಕ್ವಿಲನ್ ಬ್ಯಾಂಕ್ ಲಿಮಿಟೆಡ್–ಇದರಲ್ಲಿ ಠೇವಣಾತಿ ಇಡಿಸಿದ್ದರು, ಅದರ ಸ್ಥಿತಿಯು ದೃಢವಾಗಿಲ್ಲ" ಎಂದು ಇರುವ ಕತೆಯ ಸುದ್ದಿಗಳು ಅಸತ್ಯವಾಗಿವೆ ಈ ಕಂಪೆನಿಯ ಯಾವ ಆಸ್ತಿ ಅಥವಾ ಆದಾಯಗಳು ಇಲ್ಲ.

ಈ ಮೊದಲೇ ಸ್ಪಷ್ಟೀಕರಿಸಿದಂತೆ, ಈ ಕಂಪೆನಿಯು ಇಷ್ಟು ಹಣವು ಆ ಬ್ಯಾಂಕಿನಲ್ಲಿ ಠೇವಣಾತಿಯಾಗಿ ಪಡೆಯುದುದರಿಂದ ಈ ಕಂಪೆನಿಯ ದೃಢತೆ ಅಥವಾ ಭದ್ರತೆಯಲ್ಲಿ ಯಾವ ವಿಧದಲ್ಲೂ ಬಾಧಕವಿಲ್ಲ.

ಇ ಎ. ಪ್ಯಾಸ್, ಎಸಿಸ್ಟ್ಯೆಂಟ್,
ಮಂಗಳೂರು, ಬಿ. ಎಸ್. ಸಿ
ತಾ. 8–7–1938 ಬ್ರಾಂಚ್ ಮೆನೆಜರ್.

★ ತಾಲೂಕುಗಳಿಂದ ★

ಹೊಸಂಗಡಿ:– ಕಳೆದ ತಾರೀಕು 30–6–1938ನೇ ದಿನ ರಾತ್ರಿ ವಿಪರೀತ ಮಳೆಯ ದೆಸೆಯಿಂದ ಬೇಸಾಯಗಾರರೀಗೆ ಅಲ್ಲಲ್ಲಿ ಹೊಳೆತೋಡುಗಳಿಂದ ಬಹಳ ನಷ್ಟವಾಗಿರುತ್ತದೆ ಮಾಡಿದ ಬೇಸಾಯವೆಲ್ಲಾ ಮಣ್ಣು ಮುಚ್ಚಿ ಹಾಳಾಗಿ ಹೋಗಿದೆ ಇಲ್ಲಿಯ ಕೆರೆಯ ಕಟ್ಟಿನ ಮೇಲೆ ಸಾಧಾರಣ 2 ಫೀಟು ನೀರು 5 ಗಂಟೆಯ ಹೊತ್ತು ತೋಡಿ ಹರಿಯುತ್ತಿದ್ದ ದೃಶ್ಯವು ಬಹಳ ಭಯವಾಗಿತ್ತು.

ಈ ತಾ. 3–7–38ನೇ ಸಾಯಂಕಾಲ 6-30ಕ್ಕೆ ಗಂಟೆಯ ಸಮಯ ಇಲ್ಲಿ 8 ಸೆಕುಂಡಗಳ ತನಕ ಭೂಮಿಯು ಅದುರಿತು. ಮನೆಯ ಒಳಗಿದ್ದವರೆಲ್ಲ ಹೊರಗೆ ಓಡಿ ಬಂದು ನಿಂತರು ಅಟ್ಟದ ಮೇಲಿನ ಪಾತ್ರೆಗಳು ಕಕ್ಕಾ ಬಿಕ್ಕಿಯಾಗಿ ಹೊರಳಿದುವು ಮಾಡಿಗೆ ಹೊಚ್ಚಿದ ಹುಲ್ಲು ಸಹ ಕಂಪಿಸುತಿತ್ತು ಆ ದಿನ ತಾ 4–7–37ರ ವರ್ತಮಾನದಂತೆ ನಗರದಿಂದ ಶಂಕರನಾರಾಯಣದ ತನಕ ಇದೇ ಸಮಯ ಭೂಕಂಪವಾಗಿದೆಯಂತ ಕೇಳಿಬರುತ್ತದೆ ಈ ರೀತಿ ಈ ಕಡೆ ಭೂಕಂಪವು ನವೀನವೆಂತಲೇ ಹಳಬರನೇಕರು ಹೇಳುವರು

ಮಳೆಗಾಲ ಪ್ರಾರಂಭವಾಗಿ ಬಹಳ ದಿನಗಳಾದುವು ರಸ್ತೆಯು ಕಾಮಗಾರಿಯ ಸ್ವಲ್ಪ ಹಿಂದೆ ಬಿದ್ದಂತೆ ಕಾಣುತ್ತದೆ

ಮೂಲ್ಕಿ:– ಸ್ಥಳೀಯ ಕಿರಿಯ ಕೋಟೆದವರು ಯುವಕ ಸಂಘದವರೊಡಗೂಡಿ ತಾ. 9–7–1938ನೇ ಶನಿವಾರ "ದೇಶದ್ರೋಹಿ" ಎಂಬ ಸಾಮಾಜಿಕ ನಾಟಕವನ್ನಾಡುವರು. ಸದ್ರಿ ನಾಟಕದ ಉತ್ಪತ್ತಿಯು ಮುಲ್ಕಿ ಗೌಡ ಸಾರಸ್ವತ ಬ್ರಾಹ್ಮಣವೃಂದದ ಬಡ ವಿದ್ಯಾರ್ಥಿಗಳ ಫಂಡಿಗೆ ವಿನಿಯೋಗಿಸಲ್ಪಡುವುದರಿಂದ ವಿದ್ಯಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಮುಲ್ಕಿಯ ವಾಚಕರೊಬ್ಬರು ವಿನಂತಿಸುತ್ತಾರೆ.

ವಿ ಸುಂದರ ಕೃಷ್ಣ ಕಾಮತ್.

ಕಾಸರಗೋಡು–ಕುಂಬ್ಳಾ ಜೆ:– ಇದೇ ತಾ 2ನೇ ಶನಿವಾರ ತುಂಬಾ ಮಳೆಯಿಂದ ಏತಡ್ಕ ಹೊಳೆಯಲ್ಲಿ ಅದ್ಭುತ ನೆರೆ ಬಂದು ಏತಡ್ಕ ಸುಬ್ರಾಯ ಭಟ್ರ ಮನೆ ಬಾಗಿಲ ತೋಟದಿಂದ ಒಂದು ಖಂಡಿ ಅಡಿಕೆ ಸ್ಥಳವು ಕುಸಿದು ಬಿದ್ದು ತುಂಬಾ ನಷ್ಟವಾದ್ದಲ್ಲದೆ ತುಂಬಾ ಖರ್ಚು ತಗಲಿದ ಕಟ್ಟಿಗೆ 1 ಮತ್ತು ಇವರ ಪಕ್ಕ ಮನೆ ಒಂದು ಕೊಡಾ ನೀರು ತುಂಬಿ ಗೋಡೆ ಕುಸಿದು ಬಿದ್ದು ತುಂಬಾ ನಷ್ಟವೂ ಕಷ್ಟವೂ ಸಂಭವಿಸಿತುತ್ತದೆ ಇಬ್ಬದಿಯ ಅಡಿಕೆ ತೋಟಗಳಿಂದ ಹೈಗೆ, ಕಸ ಮೊದಲಾದವುಗಳನ್ನು ತೆಗೆಯ ಬೇಕಾದರೆ ಹೆಚ್ಚು ಸಮಯವೂ ಖರ್ಚೂ, ತಗಲುವುವು ಇಲ್ಲಿ ಇಂತಹ ನೆರೆ ಬಂದುದು ಇದೇ ಮೊದಲನೆಯ ಬಾರಿ ಎಂದು ಇಲ್ಲಿಯ ವೃದ್ಧರು ಹೇಳುವರು. ಇದಕ್ಕೆ ಸಮೀಪ ಪತ್ರೆ ಗ್ರಾಮದಲ್ಲಿ ಕೊಲ್ಲಂಗಾನ ಸ ಬ್ರಹ್ಮಣ್ಯ ಶಾಸ್ತ್ರಿಗಳ ಮನೆ ಕೊಟ್ಟಿಗೆ ಸಹ ಹೊಳೆ ನೀರು ತುಂಬಿ ಬಿದ್ದ ತುಂಬಾ ಮನೆ ಸಾಮಾನುಗಳು ಸಹ ನಷ್ಟವಾಗಿವೆ, ಮಾತ್ರವಲ್ಲದೆ ಹಾಲು ಕರೆಯುವ ದನವೂ ತುಂಬಾ ತೆಂಗಿನ ಕಾಯಿಗಳು ನೀರುಪಾಲಾದವು.

ಕಾರ್ಕಳ:–– ಇಲ್ಲಿ ಸಮಾರು ಒಂದು ವರ್ಷದಿಂದ ಲೋಕಲ್ ಬೋರ್ಡ ಆಸ್ಪತ್ರೆಯಲ್ಲಿ ಡಾಕ್ಟರರಾಗಿದ್ದ ಶ್ರೀ ಬಿ ರಾಮಭಟ್ಟೇಯವರ ರಜೆಯ ಮೇಲೆ ಇರುವುದರಿಂದ ಅವರ ಸ್ಥಾನದಲ್ಲಿ ಡಾ| ರ ಪಿ ಭವಾನಿರಾಯರು ಬಂದ ಚಾರ್ಜ ತೆಗೆದುಕೊಂಡಿದ್ದಾರೆ. ಇವರು ಬಂದ ಕೆಲವು ದಿವಸಗಳಲ್ಲಿಯೇ ತುಂಬ ಜನಪ್ರೀತಿಯನ್ನು ಸಂಪಾದಿಸಿರುವುದು ಸಂತೋಷದ ವಿಷಯವಾಗಿದೆ

ಇಲ್ಲಿಯ ಪರಸ್ಪರ ಸಹಾಯಕ ಸಂಘದ ಸದಸ್ಯರ ಮಹಾಸಭೆಯು ತಾ. 26–6–38ರ ದಿನ ಬೋರ್ಡ್‌ಮೈನ ಎಲಿಮೆಂಟರಿ ಶಾಲೆಯಲ್ಲಿ ಜರುಗಿ, ಸಹಕಾರೋನ್ನತಿಗೆ ಸಾಧಕವಾದ ಅನೇಕ ರಠಾವುಗಳು ಮಂಜೂರಾದ ಬಳಿಕ ಶ್ರೀಗಳಾದ ಡಾ| ಎಸ್ ಎಂ ಅಡ್ಯಂತಾಯ (ಅಧ್ಯಕ್ಷ ಮತ್ತು ಖಜಾಂಚಿ), ಎಂ ವಿಟ್ಠಲರಾವ್ (ಕಾರ್ಯದರ್ಶಿ) ಮತ್ತು ಕೆ ಸಾಂತಯ್ಯ ಕಾಮತ್, ಎಂ ಜನಾರ್ಧನ ಕಾಮತ್, ಎ. ಎಸ್. ಎಸ್. ಆಚಾರ್, ಪೀರ್ ಹೈದರ್ ಹಾಗೂ ಆಶಲ್ಮೆಲುವಿಸ ಅವರು ಹೊಸ ವರ್ಷದ ಡೈರೆಕ್ಟರರಾಗಿ ಆರಿಸಲ್ಪಟ್ಟರು

ಕೆಲವು ದಿನಗಳಿಂದ ಬಿರುಸಾದ ಮಳೆ ಬಂದು ಒಂದೆರಡು ಮನೆಗಳು ಜರಿದುಬಿದ್ದಿವೆ. ತಾ 3–7–38ರ ದಿನ ಬೆಳಗ್ಗೆ-ನಡುಪೇಟೆಯಲ್ಲಿ ಹೊಸದಾಗಿ ಕಟ್ಟಿಸಿದ ಒಂದು ದೊಡ್ಡ ಮನೆ ಎಡಪಾರ್ಶ್ವಭಾಗವು ಮಳೆಯ ಹೊಡೆತದಿಂದ ಕುಸಿದು ಹೋಗಿ ಒಳಗಿದ್ದ ಇಬ್ಬರು ಹುಡುಗಿಯರು ಜಖಂಪಟ್ಟುದರಿಂದ ಅವರನ್ನು ಆಸ್ಪತ್ರೆಗೆ ಸಾಗಿಸಬೇಕಾಯಿತು.

ತಾ. 8–7–1938ರ ಮಧ್ಯಾಹ್ನ ಕಾರ್ಕಳದ ಚೌಪಾಟೆ ರಸ್ತೆಯಲ್ಲಿರುವ ಭವ್ಯವಾದ ಮನೆಯಲ್ಲಿ ಮಂಗಳೂರಿನ ವಿಜಯಾ ಬೇಂಕ್ ಲಿಮಿಟೆಡ್‌ನ ಒಂದು ಶಾಖೆಯು ತೆರೆಯಲ್ಪಟ್ಟಿರುತ್ತದೆ. ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ರುವ ಶ್ರೀ. ಪಿ. ಪೋಲಾ ರೆಡ್ಡಿ ಬಿ. ಎ. ಬಿ ಎಲ್‌ರವರು ಅಂದು ನಡೆದ ಅದರ ಆರಂಭೋತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಉತ್ಸವವು ಬಹು ವಿಜೃಂಭಣೆಯಿಂದ ನಡೆಯಿತು.

ಅದ್ವಿತೀಯ ವಿದ್ಯಾಸಂಸ್ಥೆ! : : : :

ವಾರ್ಧಾ ಶಿಕ್ಷಣಯೋಜನೆ ಬರೇ ಒಂದು ಕಲ್ಪನೆ ಅದು ಕಾರ್ಯರೂಪಕ್ಕೆ ತರುವರೆ ಅನೇಕ ತೊಂದರೆಗಳಿವೆ, ಮತ್ತು ಅದು ಯಶಸ್ವಿಯಾಗಿ ನಡೆಯುವುದರ ಕುರಿತು ಸಂದೇಹ ಸೂಚಿಸುವವರಿಗೆ ಯೋಗ್ಯ ಉತ್ತರವು ಈ ಕೆಳಗಿನ ಲೇಖದಲ್ಲಿದೆ. ಮಾಡಿಸನ್ ಕಾಲೇಜಿನ ತೆರದಲ್ಲಿ ನಮ್ಮಲ್ಲಿ ಕಾಲೇಜುಗಳ ಸ್ಥಾಪನೆಯಾದರೆ, ಆಗ ಹಿಂದೂದೇಶದ ಹೆಚ್ಚಿನ ತೊಂದರೆಗಳು ನಿವಾರಣೆಯಾಗುವುದರಲ್ಲಿ ನಿಸ್ಸಂದೇಹ. ಈ ಕೆಳಗಿನ ಲೇಖವನ್ನು ಹರಿಜನ ಪತ್ರಿಕೆಯು, ಅಮೇರಿಕಾದ 'ರೀಡರ್ಸ್ ಡೈಜಸ್ಟ್' ಎಂಬ ಪತ್ರಿಕೆಯಿಂದ ಆರಿಸಿ ತೆಗೆದುದರ ಅನುವಾದವಾಗಿರುತ್ತದೆ. : : : : :

★ ★ ★

1904ರಲ್ಲಿ ಅಮೇರಿಕಾದ ಮಾಡೀಸನ್‌ನಲ್ಲಿರುವ ನೆಶವಿಲ್ಲೆ ಎಗ್ರಿಕಲ್ಚರಲ್ ನೊರ್ಮಲ್ ಇನ್ಸಿಟ್ಯೂಟ್‌ನಲ್ಲಿ ಬರೆ 11 ಮಂದಿ ವಿದ್ಯಾರ್ಥಿ,—400 ಎಕ್ರೆ ಬಂಜರು ಬಿದ್ದ ಭೂಮಿಯು ಕೆಲವು ಕುಸಿದುಬಿದ್ದ ಕಟ್ಟಡಗಳು, ಇವುಗಳನ್ನು ಡಾ. ಇ. ಸದರ್‌ಲೆಂಡರು ಮತ್ತು ಇನ್ನಿತರ ನಾಲ್ಕು ಮಂದಿ ಅಧ್ಯಾಪಕರು, ತಮ್ಮ ಎಲ್ಲಾ ಹಣವನ್ನು ವ್ಯಯಿಸಿ ಪಡಕೊಂಡರು — ಕಾಲೇಜಿಗಾಗಿ ಹಂಬಲಿಸುವ ಯಾವತ್ತೂ ಹುಡುಗನಿಗೆ 'ಯಾ ಹುಡುಗಿಗೆ ಕಾಲೇಜು ಶಿಕ್ಷಣವನ್ನು ಒದಗಿಸುವುದೆ ಡಾ। ಸದರ್‌ಲೆಂಡರ ಮುಖ್ಯ ಉದ್ದೇಶವಾಗಿತ್ತು. ಈ ಉದ್ದೇಶವೆ ಈ ಸಂಸ್ಥೆಯ ಒಂದು ಮಹಾ ಆಧಾರವಾಯಿತು

ಸದರ್‌ಲೆಂಡರ ಈ ನಿಯಮದಿಂದ, ಯಾರ ಧನಸಹಾಯವಿಲ್ಲದೆನೆ, ಒಂದು ಮಹಾ ಸಂಸ್ಥೆಯು ಬೆಳೆದುಬಂದಿರುತ್ತದೆ ಈ ಸಂಸ್ಥೆಯು 520,000 ಪವನುಗಳನ್ನು ದುಡಿದು, ತನಗೆ ಬೇಕಾದ ಕಟ್ಟಡ, ಭೂಮಿ, ಸಲಕರಣೆಗಳಿಗೆ ವ್ಯಯಿಸಿರುತ್ತದೆ ಈ ಸಂಸ್ಥೆಯಲ್ಲಿ ಈಗ, 36 ರಾಜ್ಯಗಳಿಂದ, ಒಂಭತ್ತು ದೇಶಗಳಿಂದ ಬಂದ 300 ಮಂದಿ ವಿದ್ಯಾರ್ಥಿಗಳಿರುವರು

ಮಾಡಿಸನ್ನಿನ ಪಟ್ಟಿಯಲ್ಲಿ 27 ವ್ಯವಸಾಯಿ ಕೈಗಾರಿಕೆಗಳಿವೆ ಈ ಕೈಗಾರಿಕೆಗಳು ವಿದ್ಯಾರ್ಥಿಗಳಿಂದಲೆ ನಡೆಸಲ್ಪಟ್ಟು, ಕಾಲೇಜಿಗೂ ವಿದ್ಯಾರ್ಥಿಗಳಿಗೂ ಆಧಾರಗಳಾಗಿವೆ ಪ್ರತಿಯೋರ್ವ ವಿದ್ಯಾರ್ಥಿಯು, ತನ್ನ ಕಾಲೇಜ್ ಫೀಸನ್ನು ಕಡಿಮೆ ಎಂದರೆ ಅರೆವಾಸಿಯಾದರೂ ಕೆಲಸಮಾಡಿಯೆ ತೀರಿಸಬೇಕೆಂದಿದೆ. ಅವರು ತಮ್ಮ ವಿದ್ಯಾಭ್ಯಾಸಂಗದ ಸಂಪೂರ್ಣ ಫೀಸನ್ನು ಈ ತರದಲ್ಲಿ ತೆರಲೂ ಬಹುದು. ಮಾಡಿಸನ್ ಕಾಲೇಜನ್ನು ಸೇರಬೇಕಾದರೆ 35 ಡೊಲ್ಲರುಗಳನ್ನು ಕೊಟ್ಟರೆ ಸರಿ, ವಿದ್ಯಾರ್ಥಿಯು ಅಲ್ಲಿ ನಾಲ್ಕು ವರ್ಷ ಸಮಯ ವಿದ್ಯಾಭ್ಯಾಸಂಗ ಮಾಡಿ ಬಿಡುದಿನೊಡನೆ ಆತನು ಡಿಪೋಜಿಟ್ ಮಾಡಿದ 35 ಡೊಲ್ಲರುಗಳು ಆತನಿಗೆ ಪರತು ದೊರಕುವುವು ಈ ಮಧ್ಯೆ ಆತನಿಗೆ ಹೊರಕಡೆಯಿಂದ ಧನಸಹಾಯವಾಗಬೇಕಾಗಿಲ್ಲ. ಆತನು ವ್ಯಾಸಂಗವನ್ನು ಮುಗಿಸಿದ ನಂತರ ಒಂದು ಉದ್ಯೋಗವಲ್ಲ, ಅನೇಕ ಉದ್ಯೋಗಗಳನ್ನು ನಡೆಯಿಸಲು ಅರ್ಹನಾಗುವನು. ಯಾವತ್ತೂ ವಿಧಿಯನ್ನು ಎದುರಾಡಲು ಅವನಿಗೆ ಸುಲಭಸಾಧ್ಯವಾಗುವುದು.

ಈ ಸಂಸ್ಥೆಯ ಸ್ಥಾಪಕರು, ಸಂಸ್ಥೆ ಸ್ಥಾಪನೆಯ ಮೊದಲು, ಎರಡು ಸಣ್ಣ ಕಾಲೇಜುಗಳ ಅಧ್ಯಕ್ಷರಾಗಿದ್ದರು. ಡಾ। ಸದರ್‌ಲೆಂಡರು ತಮ್ಮ ಹೊಸ ಶಾಲೆಗೆ ಉತ್ಪತ್ತಿಯನ್ನು ಒದಗಿಸುವರೆ, ಮತ್ತು ಆರೋಗ್ಯಕೆಲಸಗಾರರ ತರಬೇತಿನ ಬಗ್ಗೆ, ಮತ್ತು ತನ್ನ ಶಾಲೆಯ ವಿದ್ಯಾರ್ಥಿಗಳ ದೇಹಾಲಸ್ಯದ ಸಮಯ ಶುಶ್ರೂಷೆ ಬಗ್ಗೆ ಈ ಕಾಲೇಜಿನೊಂದಿಗೆ ಒಂದು ಸೆನಿಟೋರಿಯಮ್ಮನ್ನು ಯೋಜಿಸಿದರು. ಈ ತರದ ಸೆನಿಟೋರಿಯಮನ್ನು ಸ್ಥಾಪಿಸಬೇಕಾದರೆ ಅವರು ಡಾಕ್ಟರರಾಗಬೇಕಾಗಿತ್ತು ಟೆನ್ನೆಸ್ಸೆ ವಿಶ್ವವಿದ್ಯಾಲಯದಲ್ಲಿ ಐದು ವರ್ಷಗಳ ವ್ಯಾಸಂಗಮಾಡಿ, ಅವರು ಡಾಕ್ಟರ್ ಪದವಿಯನ್ನು ಪಡೆದರು ಆಗ ಅವರಿಗೆ ಪ್ರಾಯವು 50ಕ್ಕೆ ಮಿಕ್ಕಿತ್ತು

ಇಂದು ಮಾಡಿಸನ್ ಗ್ರಾಮ್ಯಸೆನಟೋರಿಯಮ್ಮಿನಲ್ಲಿ 100 ಹಾಸಿಗೆಗಳಿವೆ; ಅಲ್ಲಿ ಅತ್ಯಾಧುನಿಕ ಉಪಕರಣಗಳಿವೆ, 14 ಮಂದಿ ವೈದ್ಯರು ಅಲ್ಲಿರುವರು. ಇದು ಕಾಲೇಜಿನ ಒಂದು ಪ್ರಾಮುಖ್ಯ ಶಾಖೆಯಾಗಿರುತ್ತದೆ ಈ ಸೆನಿಟೋರಿಯಮ್ಮಿನಲ್ಲಿ ಇರಬೇಕಾದರೆ ವಾರ ಒಂದರ 25ರಿಂದ 35 ಡೊಲ್ಲರುಗಳ ವರೇಗೆ ತೆರಬೇಕಾಗಿ ಕ್ರಮವಿದ್ದರೂ ಬಡಬಗ್ಗರನ್ನು ಅಲ್ಲಿ ಧರ್ಮಾರ್ಥ ನೋಡಲಾಗುತ್ತದೆ ಇಲ್ಲಿ ಎಲ್ಲಾ ಕೆಲಸಗಳು ವಿದ್ಯಾರ್ಥಿಗಳಿಂದಲೆ ಪೂರೈಸಲಾಗುತ್ತಿವೆ ಅದು ಅವರ ಶಿಕ್ಷಣದ ಕಾರ್ಯಕ್ರಮದಲ್ಲಿ ಒಂದಾಗಿರುತ್ತದೆ ಇಲ್ಲಿ ವರ್ಷಂಪ್ರತಿ 25ರಿಂದ 30ರ ವರೇಗೆ ನರ್ಸುಗಳು ತರಬೇತು ಹೊಂದಿಕೊಂಡು ದೇಶದ ಉತ್ತಮ ಆಸ್ಪತ್ರೆಗಳನ್ನು ಸೇರುತ್ತಿದ್ದಾರೆ ಅಮೇರಿಕದ ಎಲ್ಲಾ ವೈದ್ಯಕೀಯ ಸಂಘಗಳು ಈ ಸಂಸ್ಥೆಗೆ ಮಹಾ ಮನ್ನಣೆಯನ್ನೀಯುತ್ತಿದ್ದಾರೆ.

ಈ ಶಾಲೆಗೆ ಸಾಂಪತ್ತಿಕ ದೃಷ್ಟಿಯಲ್ಲಿ ಸೆನಿಟೋರಿಯಮ್ ಎಷ್ಟು ಅಗತ್ಯವಾದುದೊ, ಅಷ್ಟೇ ಅಗತ್ಯದವುಗಳು ಕೃಷಿಕ್ಷೇತ್ರಗಳು, ಅಲ್ಲಿ 60 ಎಕ್ರೆ ತೋಟ, 70 ಎಕ್ರೆ ಫಲವಸ್ತುಗಳ ತೋಟ ಮತ್ತು ಎರಡು ಹೂತೋಟಗಳೂ ಇವೆ ಈ ಹೂತೋಟಗಳಲ್ಲಿ ಬೆಳೆಯುವ ಹೂವುಗಳು ಸೆನಿಟೋರಿಯಮ್ಮಿನ ಆಸ್ಪತ್ರೆಗಳಲ್ಲಿ ಉಪಯೋಗಿಸಲಾಗುತ್ತವೆ. ಬೆಳೆಯುವ ಎಲ್ಲಾ ತರಕಾರಿಯು, ಆಸ್ಪತ್ರೆಗೂ, ಕಾಲೇಜಿಗೂ ಒಂದು ವರ್ಷಕ್ಕೆ ಸಾಕಾಗುತ್ತದೆ 15 ವರ್ಷಗಳ ಸಮಯ ಆಹಾರದ ಕುರಿತು ಪರಿಶೋಧನೆ ನಡೆಯಿಸಿದುದರ ಫಲವಾಗಿ, ಈ ಸಂಸ್ಥೆಯಲ್ಲಿ ಅತ್ಯುತ್ತಮವಾದ ಅನೇಕ ಆಹಾರಗಳು ಸಿದ್ಧವಾಗುತ್ತಿವೆ ಅವುಗಳು ಸಮಸ್ತ ಅಮೇರಿಕಾದಲ್ಲಿ ಪ್ರಚಾರದಲ್ಲಿವೆ.

ಈ ಮಾಡಿಸನ್ ಆಹಾರಗಳ ಕಾಲೇಜಿನ ಬೆಳವಣಿಗೆಗೆ ಮುಖ್ಯ ಕಾರಣ ಅಮೇರಿಕದವರು ಸೋಯಾಬೀನಿನಲ್ಲಿ ರುಚಿಕಂಡಂತೆ ಮಾಡಿದುದು ಈ ಮಾಡಿಸನ್ ಕಾಲೇಜು ಈ ಶಾಲೆಯ ಆಹಾರ ರಸಾಯನಿಕರು 200 ತರದ ಸೋಯಾಬಿನ್ನುಗಳ ಮೇಲೆ ಪರಿಶೋಧನೆ ನಡೆಯಿಸಿರುವರು. ಅವುಗಳಲ್ಲಿ ಹಾಳುತರದವುಗಳನ್ನು ವಿಂಗಡಿಸಿರುವರು. ಬೆಳಗ್ಗಿನ ಆಹಾರ, ಮಧ್ಯಾಹ್ನದ ಊಟ, ಇತ್ಯಾದಿಗಳಿಗೆ ಬೇಕಾದ ಒಳ್ಳೇ ಪೌಷ್ಟಿಕ ಮತ್ತು ರುಚಿಕರವಾದ ಆಹಾರಗಳು, ಸೋಯಾಬೀನ್ನುಗಳಿಂದ, ಮಾಡಿಸನ್ ಕಾಲೇಜಿನಲ್ಲಿ ಸಿದ್ಧವಾಗುತ್ತವೆ. ಸಮಸ್ತ ಅಮೇರಿಕವು ಅವುಗಳನ್ನು ಉಪಯೋಗಿಸುತ್ತದೆ. ಈ ಸೋಯಾಬೀನ್ನುಗಳಿಂದ ಅತ್ಯಂತ ರುಚಿಕರವಾದ ಹಾಲನ್ನು ತಯಾರಿಸುತ್ತಿರುವರು. ದನದ ಹಾಲಿಗಿಂತ ಶ್ರೇಷ್ಠ ಗುಣ ಅದರಲ್ಲಿವೆ ' ಎಂದು ಕಂಡುಹಿಡಿಯಲಾಗಿದೆ. ಹಾಲನ್ನು ತೆಗೆದಾದ ನಂತರ ಉಳಿಯುವ ಹಿಂಡಿಯಿಂದ ರುಚಿಯಾದ ಮತ್ತು ಪೌಷ್ಟಿಕ ತರದ ಇನ್ನೊಂದು ತರದ ಆಹಾರವನ್ನು ತಯಾರಿಸುತ್ತಾರೆ. ಕಳೆದ ವರ್ಷ ಅಮೇರಿಕದ 27 ರಾಜ್ಯಗಳಲ್ಲಿ 6 ಲಕ್ಷ ಡೊಲ್ಲರುಗಳಿಗೆ ಮಿಕ್ಕಿದ ಮೌಲ್ಯದ ಮಾಡಿಸನ್ ಆಹಾರಗಳು ಮಾರಾಟವಾಗಿವೆ.

ಮಾಡಿಸನ್ ಶಾಲೆಯಿಂದ ಕಂಡುಹಿಡಿಯಲಾದ ಸೊಯಾಬಿನ್ ಹಾಲು, ದನದ ಹಾಲಿಗಿಂತ ಸುಲಭ ಬೆಲೆದ್ದು ಮಾತ್ರವಲ್ಲದೆ, ಅಮೇರಿಕನ್ ವೈದ್ಯಸಂಘವು ಅನ್ನುವಂತೆ, ಶಿಶುಗಳಿಗೆ ಅತ್ಯುತ್ತಮವಾದುದಾಗಿದೆಯಂತೆ. ಮಾಡಿಸನ್ ಸೊಯಾಬಿನ್ಸ್ ಹಾಲನ್ನು ತಯಾರಿಸುವ ವಿಧಾನವನ್ನು ದನಗಳೇ ಇಲ್ಲದ ಹಿಂದೂದೇಶದ ಕೆಲ ಪ್ರಾಂತ್ಯದವರು ಕಲಿತರೆ ಉತ್ತಮವಿದೆ

ಈ ಶಾಲೆಯಲ್ಲಿ ಸಿದ್ಧವಾಗುವ ಒಡವೆಗಳು, ವ್ಯವಹಾರದಲ್ಲಿರುವ ಇತರ ಒಡವೆಗಳೊಡನೆ ಪ್ರತಿಸ್ಪರ್ಧಿಸುವುದೇ ಇಲ್ಲ ಸೊಯಾಬಿನ್ ಆಹಾರಗಳಿಗೆ ಬೇರೆ ಗಿರಾಕಿಗಳಿದ್ದಾರೆ ಮಾಡಿಸನ್ ಸೆನಿಟೋರಿಯಮ್ಮು ಅಮೇರಿಕದಲ್ಲಿ ಮಹಾ ಖ್ಯಾತಿಯನ್ನು ಪಡೆದಿರುತ್ತದೆ. ಈ ಶಾಲೆಯ ಆಶ್ರಯದಲ್ಲಿ ಕಸಬರಿಕೆಗಳನ್ನು ತಯಾರಿಸುವ ಕಾರ್ಖಾನೆಯೊಂದು ಇದೆ. ಕಸಬರಿಕೆಗೆ ಬೇಕಾಗುವ ಹುಲ್ಲನ್ನು ವಿದ್ಯಾರ್ಥಿಗಳೆ ಬೆಳೆಯುತ್ತಿದ್ದಾರೆ ಅಲ್ಲಿ ದಿನ ಒಂದರ 50 ಡಜನ್ ಕಸಬರಿಕೆಗಳು ಸಿದ್ಧವಾಗುತ್ತವೆ ಇತರ ಕಸಬರಿಕೆಗಳಿಗಿಂತ ಇವುಗಳಿಗೆ ಕ್ರಯ ಹೆಚ್ಚು ಶಾಲೆಯಲ್ಲಿ ಸಣ್ಣದೊಂದು ಜಮಖಾನ ಗಿರಣಿ ಇದೆ ಕಾಲುಚೀಲದ ಕಾರ್ಖಾನೆಗಳಿಂದ ಹಾಳಾಗುವ ಚಿಂದಿಗಳನ್ನು ಪಡಕೊಂಡು, ಅವುಗಳಿಂದ ಜಮಖಾನಗಳನ್ನು ತಯಾರಿಸುತಿದ್ದಾರೆ ಚಿತ್ರಗಳಿಂದ ಅಲಂಕೃತವಾದ ಜಮಖಾನಗಳು ಅಲ್ಲಿ ಸಿದ್ಧವಾಗುತ್ತವೆ ಅಲ್ಲಿ ಒಂದು ಫೊಟೊಗ್ರಾಫಿಕ್ ಪರಿಶೋಧನಾಲಯವು ಇದೆ ಜಗತ್ತಿಗೆ ಬೇಕಾದ ಎಲ್ಲಾ ತೆರದ ಬಣ್ಣಬಣ್ಣದ ಸ್ಲೈಡುಗಳು ಅಲ್ಲಿ ಸಿದ್ಧವಾಗುತ್ತವೆ ಶಾಲೆಗೊಂದು ಛಾಪಖಾನೆಯಿದೆ ಶಾಲೆಯ ಹಣ್ಣುಗಳನ್ನು ಕೆನ್ ಮಾಡುವ ಕೆಲಸಕ್ಕೆ ಬೇಕಾದ ನಾಲ್ಕು ವರ್ಣದ ಲೇಬಲುಗಳು ಅಲ್ಲಿ ಅಚ್ಚಾಗುತ್ತವೆ

ಈ ಕೈಗಾರಿಕೆಗಳಿಂದ ಲಾಭವನ್ನು ಗಳಿಸುವುದು ಸಂಸ್ಥೆಯ ಉದ್ದೇಶವಲ್ಲ ಒದಗುವ ಉತ್ಪತ್ತಿಯನ್ನು ಶಾಲೆಯ ಆರೈಕೆಗಾಗಿ ಮತ್ತು ಬೆಳವಣಿಗೆಗಾಗಿ ವಿನಿಯೋಗಿಸುತ್ತಾರೆ ಇತರರಿಂದ ಸಹಾಯವನ್ನು ಪಡೆಯದೆ ಸ್ವಸಾವಲಂಬಿಯಾಗಿ ನಡೆಯುವುದೆ ಈ ಶಾಲೆಯ ಆದರ್ಶ ಅಲ್ಲಿನ ವಿದ್ಯಾರ್ಥಿಗಳೂ ಮುಂದಕ್ಕೆ ಈ ಆದರ್ಶಕ್ಕೆ ಸರಿಯಾಗಿ ವರ್ತಿಸುವವರು ಈ ಶಾಲೆಗೆ ದೊರಕಿದ ಒಂದೇ ಒಂದು ಸಹಾಯವೆಂದರೆ ಸೆನಿಟೋರಿಯಮ್ಮಿನಲ್ಲಿ ಕೆಲಕಾಲ ಕಳೆದ ಧನಾಢ್ಯರೊಬ್ಬರ 50 ಸಾವಿರ ಡೊಲ್ಲರುಗಳ ಸಹಾಯ.

ಹೊರಗಿನ ಪ್ರವೀಣ ಕೆಲಸಗಾರರನ್ನಿಟ್ಟು ಶಾಲೆಯ ಸಂಪಾದನೆಯನ್ನು ಹೆಚ್ಚಿಸಬಹುದು, ಹಾಗೆ ಮಾಡಿದರೆ ಕಟ್ಟಡ ಕೆಲಸ, ಕಮ್ಮಾರನ ಕೆಲಸ, ಗಾರೆ ಹಚ್ಚುವುದು, ವಿದ್ಯುಚ್ಛಕ್ತಿ ಸಂಬಂಧದ ಕೆಲಸ ಇತ್ಯಾದಿಗಳನ್ನು ಕಾರ್ಯತಃ ಕಲಿಯಲು ವಿದ್ಯಾರ್ಥಿಗಳಿಗೆ ಎಲ್ಲಿ ಅವಕಾಶ ದೊರಕುವುದು? ಆದುದರಿಂದಲೆ ಗಿರಾಕಿಗಳು ಇದ್ದಾಗ್ಯೂ, ಅದು ತನ್ನ ಆಹಾರ ಕಾರ್ಖಾನೆಯನ್ನು ಹೊರಗಿನ ಕೆಲಸಗಾರರನ್ನಿಟ್ಟು ಬೆಳೆಯಿಸದಿರುವುದು.

ವಿದ್ಯಾರ್ಥಿಗಳು ಅಲ್ಲಿ ಐದು ತಾಸುಗಳ ಸಮಯ ದುಡಿಯುತಿದ್ದಾರೆ ಇನ್ನೊಂದು ಐದು ತಾಸುಗಳ ಸಮಯ ಪಾಠವರಣದಲ್ಲಿ ಕಳೆಯುತ್ತಿದ್ದಾರೆ ಅವರು ಮಾಡಿದ ಕೆಲಸಕ್ಕೆ ಕೂಲಿ ಹಿಡಿದು ಅದನ್ನು ಅವರ ಕಾಲೇಜ್ ಫೀಸಿನ ಲೆಕ್ಕಕ್ಕೆ ವಜಾಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ತಾಸು ಒಂದರ 10 ಸೆಂಟುಗಳ ಕೂಲಿಯು ದೊರಕುತ್ತದೆ. ವಿದ್ಯಾರ್ಥಿಗಳಿಗೆ ಬೇಕಾದ ಆವಶ್ಯಕಗಳೆಲ್ಲಾ ಕಾಲೇಜಿನ ಕೈಗಾರಿಕೆಯಿಂದ ಸಿದ್ಧವಾಗುತ್ತವೆ ಅವುಗಳನ್ನು ವಿದ್ಯಾರ್ಥಿಗಳಿಗೆ ಸುಲಭ ಕ್ರಯದಲ್ಲಿ ಒದಗಿಸುತ್ತಾರೆ. ಕಾಲೇಜಿನ ವಿದ್ಯಾರ್ಥಿಯೊಬ್ಬನಿಗೆ ವರ್ಷಂಪ್ರತಿ 318 ಡೊಲ್ಲರುಗಳ ವ್ಯಯವಿದೆ ಈ ವ್ಯಯವನ್ನು ದುಡಿದೆ ಭರ್ತಿಮಾಡಲು, ಅಥವಾ ಅದರಲ್ಲಿ ಅರೆವಾಸಿಯನ್ನು ರೊಕ್ಕವಾಗಿ ಕೊಟ್ಟು, ಮಿಕ್ಕುಳಿದ ಮಟ್ಟಿಗೆ ಕೆಲಸಮಾಡಿ ವಜಾಮಾಡಬಹುದು.

ಈ ಶಾಲೆಯ ಮತ್ತು ಸಾನೆಟೋರಿಯಮ್ಮಿನ 900 ಎಕ್ರೆ ಸ್ಥಳದ ಮೇಲೆ 120 ಕಟ್ಟಡಗಳು ಶಾಲಾ ವಿದ್ಯಾರ್ಥಿಗಳಿಂದಲೆ ಕಲ್ಪಿಸಲ್ಪಟ್ಟು ರಚನೆಯಾದವುಗಳು ವಿದ್ಯಾರ್ಥಿಗಳಿಗೆ, ಬೋಧಕರಾಗಿ 19 ಮಂದಿ ಪ್ರವೀಣರಿರುವರು

ಶಾಲಾಕಟ್ಟಡದ ರಚನೆಯಾಗುತ್ತಿರುವಾಗ, ಸಾಧಾರಣ 40 ಮಂದಿ ವಿದ್ಯಾರ್ಥಿಗಳ ಪ್ರಕಾರ ಶಾಲಾ ಕಟ್ಟಡದ ಒಂದೊಂದು ಕೋಣೆಯ ನಿರ್ಮಾಣಕ್ಕೆ ಸಾಧಾರಣ ಒಂದು ಯಾ ಎರಡು ವರ್ಷ ಸಮಯ ದುಡಿದಿರಬಹುದು ಶಾಲೆಯಲ್ಲಿ ತಯಾರಾದ ಹಂಚು, ಇಟ್ಟಿಗೆಗಳು ಕಟ್ಟಡಗಳಿಗೆ ಉಪಯೋಗಿಸಲಾಗಿವೆ. ಮರದ ಕೆಲಸವೆಲ್ಲಾ ಶಾಲೆಯಲ್ಲೆ ನಡೆದುದಾಗಿರುತ್ತದೆ ಮರಗಳು ಕೂಡ ಶಾಲೆಯ ಜಮೀನಿನಲ್ಲಿ ದೊರೆತದ್ದಾಗಿರುತ್ತವೆ. ಕಾಲೇಜಿನ ಕೃಷಿಕ್ಷೇತ್ರಗಳಲ್ಲಿ ಬೆಳೆಯುವ ಕಾಯಿಪಲ್ಯದಿಂದ ಶಾಲಾ ವಿದ್ಯಾರ್ಥಿನಿಯರು ಶಾಲೆಯ ವಿದ್ಯಾರ್ಥಿಗಳಿಗೆ ಬೇಕಾದ ಬೀಜವನ್ನು ತಯಾರಿಸುತಿದ್ದಾರೆ ಶಾಲೆಯ ಮಾರ್ಗಗಳೆಲ್ಲ ವಿದ್ಯಾರ್ಥಿಗಳಿಂದಲೆ ರಚನೆಯಾದವುಗಳು ಈ ಬಗ್ಗೆ ಅವರು ಎಲ್ಲೋ ಬಿದ್ದಿದ್ದ ಒಂದು ಹಳೇ ಸ್ಟೀಮ್ ರೋಲರನ್ನು ತಂದು ದುರುಸ್ತಿ ಮಾಡಿ ಉಪಯೋಗಿಸುತ್ತಿರುವರು. ಬೆಂಕಿಯ ಅಪಾಯ ಸಂಭವದಲ್ಲಿ ಉಪಯೋಗಿಸಲು, ಶಾಲೆಗೆ ಅಲ್ಲೇ ಸಿದ್ಧವಾದ ಒಂದು ಫಾಯರ್ ಇಂಜಿನು ಮತ್ತು ಫಾಯರ್ ಬ್ರಿಗೇಡು ಇದೆ ವಿದ್ಯಾರ್ಥಿಗಳಿಂದಲೆ ರಚನೆಯಾದ ಉಗ್ಗಿಯಿಂದ ನಡೆಯುವ ಶಕ್ತಿನಿಲಯವು ಸಮಸ್ತ ಶಾಲೆಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಸಿದ್ಧಪಡಿಸುತ್ತದೆ

ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಅವರು ಆರಿಸಿದ ಕೆಲಸಗಳನ್ನೆ ಕೊಡುತಿದ್ದಾರೆ ತಮ್ಮ ಶರ್ಟುಗಳನ್ನು ಅವರೆ ಒಗೆಯುತ್ತಿರಲಿ, ಸಿಮೆಂಟನ್ನು ಹೊತ್ತುತ್ತಿರಲಿ, ವಿದ್ಯಾಭ್ಯಾಸ ಮಾಡುತ್ತಿರುವಾಗ ವಿದ್ಯೆಗೆ ಬೇಕಾದ ಹಣವನ್ನು ದುಡಿಯುತ್ತಿದ್ದೇವೆಂಬ ಸ್ವಾಭಿಮಾನವು ವಿದ್ಯಾರ್ಥಿಗಳಾಗುತ್ತದ ವಿದ್ಯಾರ್ಥಿಗಳಲ್ಲಿ ಒಂದು ತರದ ಜವಾಬ್ದಾರಿಕೆಭಾವವು ಉಂಟಾಗುತ್ತದೆ

ಅತ್ಯಂತ ಪರಿಶ್ರಮಪಟ್ಟು ದುಡಿದು ಮಾಡಿಸನ್ ಕಾಲೇಜು ಬೆಳೆದು ಬಂದೀತು. ಈ ತರದ ಬೆಳವಣಿಗೆಯಲ್ಲಿ, ಯಾವತ್ತೂ ತರದ ಕುಂದುಕೊರತೆ ಲೋಪದೋಷಗಳು ಉಂಟಾಗಲಿಲ್ಲ ಮಾಡಿಸನ್ ಕಾಲೇಜಿನ ಬಾಯೊಲೊಜಿ, (ಪ್ರಾಣಿಶಾಸ್ತ್ರ) ಶಾಖೆಯವರು ತಮಗೆ ಬೇಕಾದ ಸ್ಪೆಸಿಮೆನ್‌ಗಳನ್ನು ತಾವೇ ಸಿದ್ಧಪಡಿಸುತಿದ್ದಾರೆ ಕಾಲೇಜಿನೊಡನೆ, ಅಮೇರಿಕದಲ್ಲಿ ಶ್ರೇಷ್ಠವೆನಿಸುವ ಬೊಟೆನಿಕಲ್ (ವನಸ್ಪತಿ) ಗಾರ್ಡನುಗಳಿವೆ ಫಿಸಿಕ್ಸ್(ವಸ್ತುಶಾಸ್ತ್ರ) ಶಾಖೆಯವರು ತಮಗೆ ಬೇಕಾದ ಸಕಲ ಉಪಕರಣಗಳಲ್ಲಿ ಮುಕ್ಕಾಲು ಪಾಲು ತಾವೆ ಸಿದ್ಧಪಡಿಸಿರುವರು ಈ ಉಪಕರಣಗಳಲ್ಲಿ ಯಾವತ್ತೂ ಕುಂದುಕೊರತೆಗಳು ಕಾಣಿಸುವುದಿಲ್ಲ. ಶಾಲೆಯಲ್ಲಿ ಗ್ರಾಮಫೋನ್ ರಿಕಾರ್ಡುಗಳನ್ನೂ, ವಾಕ್ಚಲನ ಚಿತ್ರಗಳನ್ನೂ ತಯಾರಿಸುವ ಇಲಾಖೆಗಳಿವೆ. ಈ ಇಲಾಖೆಗಳು ಶಾಲೆಯಲ್ಲೆ ತಯಾರಾದ ಉಪಕರಣಗಳನ್ನು ಉಪಯೋಗಿಸುತ್ತಿವೆ. ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟ ಯಾವತ್ತೂ ಸಾಮಾನುಗಳು ಇತರ ಹೊರಗಿನ ಕಾರ್ಖಾನೆಗಳಲ್ಲಿ ತಯಾರಿಸುವ ಸಾಮಾನುಗಳಿಗೆ ಕಡಿಮೆಯೆನಿಸುವುದಿಲ್ಲ

ಅನೇಕ ವಿದ್ಯಾರ್ಥಿಗಳು ನರ್ಸಿಂಗ್, ವೈದ್ಯಕೀಯ, ಮನೆಸಂಪತ್ತು ಶಾಸ್ತ್ರ, ವ್ಯವಸಾಯ ಇತ್ಯಾದಿಗಳಲ್ಲಿ ವ್ಯಾಸಂಗಮಾಡುತ್ತಿದ್ದಾರೆ. ಮಾಡಿಸನ್ ಕಾಲೇಜಿನಿಂದ ಹೊರಟ 200 ಮಂದಿ ವಿದ್ಯಾರ್ಥಿಗಳಿಂದ ಮೂರು ಹೈಸ್ಕೂಲುಗಳೂ, 6 ಸಬ್ ಹೈಸ್ಕೂಲುಗಳೂ, 21

[13ನೇ ಪುಟವನ್ನು ನೋಡುವುದು]

ವೈಧಿಹರಮ್ಮೀನ ಬಕ್ಷೀಸು.
ಪೋಲೀಸರಿಗೆ ಜುಲುಮಾನೆ.

ಇಂಡಿಯನ್ ಪೋಲೀಸ್ ಆಕ್ಟಿನ 46ನೇ ಸೆಕ್ಷನಿನನ್ವಯ ಸೇಲಂ ಸಬ್ ಡಿವಿಜಲ್ ಆಫೀಸರರು ಮೂವರು ಪೋಲೀಸರನ್ನು ಕಳೆದ ಮೊಹರಮ್ ಕಾಲದಲ್ಲಿ ಬಕ್ಷೀಸು ಪಡೆದರೆಂಬ ಆರೋಪದ ಮೇಲೆ ವಿಚಾರ ಮಾಡಿ, ತಲಾ 5೦ ರೂಪಾಯಿಗಳ ಜುಲುಮಾನೆ ವಿಧಿಸಿದ್ದಾರೆ

ಇವರು ಬಕ್ಷೀಸು ಪಡೆದಿದ್ದರೆಂಬ ವಾರ್ತೆ ಹಬ್ಬಲು, ಪೋಲೀಸ್ ಇನ್ಸ್‌ಪೆಕ್ಟರರು ವಿಚಾರಣೆ ನಡೆಸಿ, ಮೇಲಧಿಕಾರಿಗಳಿಗೆ ಬರೆದುಕೊಂಡರು. ಇನ್ಸ್‌ಪೆಕ್ಟರ್ ಜನರಲ್‌ರವರೇ ಇವರ ಮೇಲೆ ಮೊಕದ್ದಮೆಯಾಗಬೇಕೆಂದರು

ಆಪಾದಿತರು ತಾವೇನು ಅನ್ಯಾಯಮಾಡಿಲ್ಲವೆಂದರು.

ಆದರೆ ಕೋರ್ಟಿನ ತೀರ್ಮಾನ 50 ರೂಪಾಯಿ ಜುಲುಮಾನೆ, ಅಥವಾ ಒಂದು ತಿಂಗಳ ಸಾದಾಸಜೆ.

★

ನಮ್ಮ ಸಂಸ್ಥಾನದ ಹಣ್ಣು ಹಂಪಲು.

1936–37ರಲ್ಲಿ ನಮ್ಮ ಸಂಸ್ಥಾನದಲ್ಲಿ ಹಣ್ಣು ಬೆಳಸುವ ತೋಟಗಳ ವಿಸ್ತೀರ್ಣವು 244,945 ಎಕ್ರೆ (ಮಾವು) 132,777 ಎಕ್ರೆ (ಬಾಳೆ) 18,000 ಎಕ್ರೆ (ಕಿತ್ತಳೆ) 500 ಎಕ್ರೆ (ಚಿಕ್ಕು) 820 ಎಕ್ರೆ (ದ್ರಾಕ್ಷೆ) 220 ಎಕ್ರೆ (ಅನನಾಸು) ಇವು ಹೊರತು ಇನ್ನೆಷ್ಟೋ ಬೇರೆ ಹಣ್ಣು ಬೆಳೆದ ಜಮೀನು ಇತ್ತು

ಹತ್ತು ವರ್ಷಗಳ ಹಿಂದಣಕ್ಕಿಂತ 3½ಪಾಲಷ್ಟು ಹೆಚ್ಚು ಸ್ಥಳದಲ್ಲಿ ಕಿತ್ತಳೆ ಹಿಂಬೆ ಮೊದಲಾಗಿ ಬೆಳೆದಿದೆ ಕಡಪಾ, ಗುಂಟೂರು, ಕಪ್ಪಾ, ಮಲಬಾರು ಜಿಲ್ಲೆಗಳಲ್ಲಿ ಹಣ್ಣುಗಳ ಬೆಳೆ ಹೆಚ್ಚಾಗಿದೆ

ರಫ್ತಾದುದು, (ಕೈಲ್ವೆ ಮಣಗಳಲ್ಲಿ) ಮಾವು 4 ಲಕ್ಷ, ಬಾಳೆ 2 ಲಕ್ಷ, ಲಿಂಬೆ 1¼ ಲಕ್ಷ, ಕಿತ್ತಳೆ 20,000 ಇತ್ಯಾದಿ ಇವೆಲ್ಲ ಉತ್ತರ ಹಿಂದೂಸ್ಥಾನಕ್ಕೆ ಬರ್ಮಾಕ್ಕೆ ಹೋಗಿವೆ ಕಾವೇರಿ ನದಿ ಕ್ಷೇತ್ರದಿಂದ, ಕಿತ್ತಳೆ ಬಾಳೆಗಳು ಪ್ರತಿ ವರ್ಷ ಒಂದು ಲಕ್ಷ ಮಣದಷ್ಟು ರಫ್ತಾಗುವುವು ಗೋದಾವರಿ ಕ್ಷೇತ್ರದಿಂದ 120,000 ಮಣ ರಫ್ತಾಗುವುವು

ಹೀಗಿದ್ದರೂ, ಕೊಡಗು ಮಧ್ಯಪ್ರಾಂತ್ಯಗಳಿಂದ 130,000 ಮಣ ಕಿತ್ತಳೆ, ಕ್ವೆಟ್ಟಾದಿಂದ 7000 ಮಣ ದ್ರಾಕ್ಷೆ, ಅಮೇರಿಕ ಆಸ್ಟ್ರೇಲ್ಯ ಜಪಾನುಗಳಿಂದ 18,000 ಮಣ ಎಪ್ಪಲ್ ಆಮದಾಗುತ್ತದೆ

ತಮ್ಮ ಊರಲ್ಲಾಗುವ ಹಣ್ಣುಗಳನ್ನೇ ಜನರು ಹೆಚ್ಚಾಗಿ ಉಪಯೋಗಿಸುವುದರಿಂದ ಅಲ್ಲಲ್ಲಿ ಹಣ್ಣು ಬೆಳೆಸಲು ಉತ್ತೇಜನ ದೊರೆಯುತ್ತದೆ ಪರದೇಶಗಳಿಂದ ಹಣ್ಣು ಬತ್ತಿ ಬಂದು ದಾಸ್ತಾನು ಬೀಳುವುದೂ, ಇಲ್ಲಿಯ ಹಣ್ಣಿಗೆ ಕೂಲಿ ಮಜೂರಿ ಸಹಾ ದೊರೆಯದೆ ಅವು ಕೊಳೆಯುವುದೂ ಶೋಚನೀಯ

★

ಗ್ರಾಮರ್ ಶಾಲೆಗಳೂ ಮಾಡಿಸನ್ ಸ್ವಸಾಮರ್ಥ್ಯ ಸೂತ್ರದ ಮೇಲೆ ಸ್ಥಾಪಿಸುವರೆ ಕಾರಣರಾಗಿರುವರು.

ಮಾಡಿಸನ್ ಕಾಲೇಜಿನಲ್ಲಿ ಈಗ ಸೇರಿಸುವುದಕ್ಕಿಂತ ಇಮ್ಮಡಿಯಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿರುವುದಾದರೂ ಕಾಲೇಜುಗಳಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಹೊಂದಲು ಯಾರಿಗೆ ಅನುಕೂಲವೋ, ಅವರನ್ನೆ ಆರಿಸುವುದು ಅಲ್ಲಿನ ಕ್ರಮವಾಗಿರುತ್ತದೆ. ಆದರೆ, ವಿತ್ತಾಯದ ಮೇಲೆ ಅವರು ಈವರೆಗೂ ಧನಾಢ್ಯರ ಮಕ್ಕಳನ್ನು ಸೇರಿಸಿಕೊಂಡಿದ್ದರು ಆದರೆ, ಅವರು ಶ್ರೀಮಂತರ ಮಕ್ಕಳೆಂದು ಯಾರಿಗೂ ತಿಳಿಯಲಿಲ್ಲ.

ವಿದ್ಯಾಭ್ಯಾಸಂಗದೊಡನೆ ಕೈಗಾರಿಕೆ ತರಬೇತು ಕೊಡುವ ಅನೇಕ ಮಹಾಸಂಸ್ಥೆಗಳೂ ಅಮೇರಿಕಾದಲ್ಲಿವೆ. ಆದರೆ ಸ್ವಸಾಮರ್ಥ್ಯ ಸೂತ್ರದಿಂದ ನಡೆಯುವುದೆಂದರೆ ಮಾಡಿಸನ್ ಕಾಲೇಜು ಮಾತ್ರ.

ಪರದೇಶಗಳಲ್ಲಿ : : ಒಂದು ನಿಮಿಷ!

- ★ ತುರ್ಕಿಯೊಡನೆ ಇಂಗ್ಲೆಂಡು ಕರಾರುಮಾಡಿ, ಆರು ಮಿಲ್ಲಿಯ ಪವನನ್ನು ತುರ್ಕಿಯ ದೇಶ ರಕ್ಷಣೆಯ ಏರ್ಪಾಡಿಗೆ ಸಾಲವಾಗಿ ಕೊಟ್ಟಿದೆ
- ★ ಯುನೈಟೆಡ್ ಸ್ಟೇಟ್ಸಿನೊಡನೆ ನಮ್ಮ ದೇಶದ ವ್ಯಾಪಾರವು ತುಂಬ ಹೆಚ್ಚುವ ಅನುಕೂಲತೆಗಳು ಇವೆ, ಸಂದರ್ಭಗಳನ್ನು ನೋಡಿಕೊಳ್ಳಬೇಕಾಗಿದೆ ಎಂದು ನಮ್ಮ ಟ್ರೇಡ್ ಕಮಿಶನರರ ಮಾತು
- ★ ಇಂಗ್ಲೆಂಡಿನಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಈ ಒಂದೇ ತಿಂಗಳಲ್ಲಿ 24,000 ಏರಿದೆ
- ★ ಪೆಲೆಸ್ಟೀನದಲ್ಲಿರುವ ಅರಬರ ಮಸೀದಿಗಳನ್ನು ಯೆಹೂದ್ಯರಿಗೆ ಕೊಡುವುದಿಲ್ಲೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ, ಅಲ್ಲಿ ಯೆಹೂದ್ಯರಿಗೂ ಮುಸ್ಲಿಮರಿಗೂ ಕಾದಾಟನಾಗಿ, ಏಳು ಮಂದಿ ಅರಬರು ಸತ್ತರು, 19 ಮಂದಿ ಗಾಯಹೊಂದಿದರು
- ★ ಜಪಾನಿನಲ್ಲಿ ನೆರೆಹಾವಳಿ ವಿಶೇಷವಾಗಿದೆ; ತುಫಾನೂ ಚೆನ್ನಾಗಿದೆ ಒಂದೇ ಸರ್ಕಲಿನಲ್ಲಿ 49 ಮರಣಗಳು, 295 ಮನೆಗಳು ಕುಸಿದು ಬಿದ್ದುವು, 26 ಸಂಕಗಳು ನಾಶವಾದುವು ಪಶ್ಚಿಮ ಜಪಾನಿನಲ್ಲಿ ತುಫಾನು ಜೋರಾಗಿದೆ
- ★ ಲೋರ್ಡ್ ಲಿನ್‌ಲಿತ್ ಗೋರವರು ಜುಲೈ 9ಕ್ಕೆ ಲಂಡನಿಗೆ ತಲಪುವರು
- ★ ಲಿಸ್ಬನಿನಿಂದ ನ್ಯೂಯೋರ್ಕಿಗೆ, ಜರ್ಮನ ಕಂಪೆನಿಯೊಂದು ಪ್ರತಿ ವಾರವೂ ವಿಮಾನಗಳನ್ನು ಹಾರಿಸಿ ನೋಡಿ, ಮುಂದೆ ಟಪ್ಪಾಲನ್ನೂ ಒಯ್ಯುವ ನಿರ್ಧಾರಮಾಡುವುದು
- ★ ಫ್ರೆಂಚರಿಗೂ ಟರ್ಕಿಗೂ ಸಾಂಪತ್ತಿಕ ಸಹಾಯಕ್ಕಾಗಿ ಒಪ್ಪಂದವಾಯಿತು
- ★ ಬ್ರಿಟಿಷ ಸರಕಾರದ ನೌಕೆಗಳ ವಿಷಯ ಗುಟ್ಟನ್ನು ಹೊರಗೆ ಕೊಟ್ಟನೆಂದು ಒಬ್ಬ ಪಾರ್ಲಿಮೆಂಟಿನ ಮೆಂಬರನ ವಿಚಾರಣೆಯಾಗುತ್ತಾ ಇದೆ
- ★ ಜಪಾನಿಗೆ ಸಮೀಪವಾಗಿರುವ ಕೆಲ ದ್ವೀಪಗಳನ್ನು ಫ್ರೆಂಚರು ವಶಪಡಿಸಿಕೊಂಡಿರುವರು, ಹೈನಾನ್ ದ್ವೀಪದ ಹತ್ತಿರ ಜಪಾನಿನ ಸನ್ನಾಹ ವಿಶೇಷವಿದೆಯೆಂದು ತಡೆಯಲು ಹೀಗೆ ಉಪಾಯಮಾಡಲಾಗಿದೆ
- ★ ಜನರಲ್ ಫ್ರಾಂಕೋ—ಬ್ರಿಟಿಷ್ ನಾವೆಗಳನ್ನು ಬೇಕೆಂದೇ ಮುಳುಗಿಸಿದ್ದಿಲ್ಲ ಅವಿದ್ದ ಬಂದರುಗಳನ್ನು ಮಾತ್ರ ಧ್ವಂಸಗೊಳಿಸುವ ಪ್ರಯತ್ನ ನಡೆದಿತ್ತೆಂದೇ ಬ್ರಿಟಿಷ ಸರಕಾರದ ದೂರಿಗೆ ಉತ್ತರಕೊಟ್ಟಿರುವನು!
- ★ ಚೀನದ ಇಡೀ ಜನಾಂಗವು ಹೆಂಕೋವನ್ನು ಕಾಪಾಡಲು—ಜೈಯಾಂಗ್ ಕೈ ಶೇಕ್‌ರಿಂದ ಮೊದಲ್ಗೊಂಡು ಚಿಕ್ಕಕನವರೆಗೆ ಸರ್ವರೂ—ಸನ್ನದ್ಧವಾಗಿದೆ ಈ ಯುದ್ಧದಿಂದ ಮುಂದೆ ಜಪಾನು ತಲೆಯೆತ್ತಲಾರದಂತಹ ಪಟನ್ನು ಇಲ್ಲಿಯೇ ಪಡೆವುದಂತೆ!

ಹಾವುಗಳ ಮಾರಾಟ
ಕ್ಷಯರೋಗಕ್ಕೆ ಇವು ಆಹಾರವಂತೆ!

ಸ್ಯಾಮ್‌ನಲ್ಲಿ ಮಜಿಸ್ಟ್ರೇಟರು ಬಹಿರಂಗ ಡಂಗುರಸಾರಿ, ಮಾಪಾಡಿಗರು ಬೆಳಿಸಿದ ಅದವಾ ಜೀವಂತ ಹಾವುಗಳನ್ನು ಮಾರುವುದನ್ನು ತಡೆಯಬೇಕಾಗಿ ಬಂಧಿದೆ. ಇವನ್ನು ಜನರು ವಾತ ಕ್ಷಯ ಮೊದಲಾದ ರೋಗಗಳಿಗೆ ಪರಮೌಷಧವೆಂದು ಕೊಂಡುಕೊಳ್ಳುವ ರೂಢಿಯಿದೆಯಂತೆ

ಈಗ ಮೊದಲು ಸರಕಾರಕ್ಕೆ ಬರೆದುಕೊಂಡವರು ಒಬ್ಬ ವೈದ್ಯರು ಕ್ಷಯಕ್ಕೆ ಚಿಕಿತ್ಸೆ ಸಂಜೀವನವೆಂದು ಹಾವನ್ನು ಬೇಯಿಸಿ ತಿಂದ ಎಷ್ಟೋ ರೋಗಿಗಳನ್ನು ಇವರು ಶುಶ್ರೂಷೆ ಮಾಡಬೇಕಾಗಿ ಬರಲು ಈ ಬಗೆಯ ವಿಷದಿಂದ ನರಳುವ ಜನರ ಸಂಖ್ಯೆ ಹೆಚ್ಚುತ್ತ ಬಂದ ಕಾರಣ ಇದನ್ನು ನಿವಾರಣೆ ಮಾಡಬೇಕಾಯಿತು.

ತಿಂಗಳಿಗೆ ಹನ್ನೆರಡು ಮಂದಿಯಾದರೂ ಹೀಗೆ ವಿಷಗ್ರಹಸ್ತರಾಗುತ್ತಾರೆಂದು ಲೆಕ್ಕವಿದೆ

★

ಪೋಸ್ಟಾಫಿಸಿನಲ್ಲಿರುವ ನಂಬಿಕೆ.
ಕೆಡಿಸಿದಲ್ಲಿ ದಂಡನೆ

ಅರಿಪಲಮ್ ಪೋಸ್ಟುಮಾಸ್ತರರಿಗೆ ಸಹಾಯಕವಾಗಿ ನೇಮಕ ಹೊಂದಿದ ಕೃಷ್ಣ ಕುಟ್ಟಿ ಮೆನೋನ್ ಎಂಬಾತನು, ಮಲಯದಿಂದ ತನ್ನ ತಂದೆಗೆಂದು ಮಗನು ಕಳುಹಿದ ರೂ 100ರ ಮನಿಯಾರ್ಡರನ್ನು ತೆರುವಾಗ, ತಂದೆಯ ಹೆಬ್ಬೆಟ್ಟಿನ ಮೊಹರು ಒತ್ತಿ ಅವನಿಗೆ ಮಗನು ಕಳುಹಿದ್ದೇ 50 ಎಂದು ಅಷ್ಟನ್ನೆ ಕೊಟ್ಟು ಉಳಿದುದನ್ನು ತಾನೇ ಫಲಾಹಾರಮಾಡಿದನು

ಇಂತಹ ತಪ್ಪಿತರನ್ನು ಮೌನವಾಗಿ ನೋಡಲಾಗದು. ಪೋಸ್ಟಾಫಿಸುಗಳಲ್ಲಿ ಜನತೆಯು ಇಟ್ಟ ನಂಬಿಕೆ ಕೆಡುವಂತಾದಲ್ಲಿ, ನಿರಪರಾಧಿಗಳಿಗೆ ಅನ್ಯಾಯವಾಗುವ ಸಂಭವವೆಂದು, ನ್ಯಾಯಾಧೀಶರು ತಿಳಿಸಿ, ಅಪರಾಧಿಗೆ ಮೂರು ವರುಷಗಳ ಕಠಿಣ ಸಜೆ, 100 ರೂಪಾಯಿ ಜುಲುಮಾನೆ ವಿಧಿಸಿದರು.

ಜಾವಾ ದ್ವೀಪದಿಂದ ನಾವು
ಕಲಿತುಕೊಳ್ಳಬೇಕಾದುದು

ಮ್ಯುನಿಸಿಪಾಲಿಟಿಯಲ್ಲಿ ಬಡವರಿಗೆ ಅಲ್ಲ ಶ್ರೀಮಂತರಿಗೆ ಅಧಿಕವಾಗಿ ತೆರಿಗೆಗಳನ್ನು ವಿಧಿಸಿರುವರು ಆರೋಗ್ಯವಿಧಾನಗಳ ಸಾಮಾನ್ಯರಾದವರಿಗೂ ತಿಳಿದೇ ಇವೆ ಬೀದಿಗಳಲ್ಲಿ ಒಗೆದ ಹಣ್ಣುಗಳ ಮೇಲೆ ಸಿಕ್ಕಲಲ್ಲಿ ಉಗುಳುವುದಿಲ್ಲ ದಾರಿಗಳ ಅಂಚನ್ನು ಪಾಯಿಖಾನೆಗಳೆಂದೆಣಿಸುವುದಿಲ್ಲ ಇದಕ್ಕೆ ವಿರುದ್ಧ ನಡೆದವರನ್ನು ಅಧಿಕಾರಿಗಳು ಕೂಡಲೇ ದಂಡಕ್ಕೆ ಗುರಿಮಾಡುತ್ತಾರೆ ಅಂತಹ ಸುಳಿವು ಅತ್ಯಲ್ಪವಾಗಿದೆ

ಮನೆಗಳಿಂದ ಒಡೆದ ಗ್ಲಾಸಿನ ತುಂಡುಗಳನ್ನು ಬೀದಿಗೆ ಚೆಲ್ಲುವರು, ಅದೇ ತುಂಡುಗಳನ್ನು ಮತ್ತೆ ನೋಡದೆ ಎತ್ತಿ, ದಾರಿ ರಿಪೇರಿ ಮಾಡುವುದು, ಆ ತುಂಡುಗಳಿಂದ ಗಾಯಗೊಂಡವರು ಮಳೆಗಾಲದಲ್ಲಿ ತಿಂಗಳುಗಟ್ಟಳೆಯಾಗಿ, ಆಸ್ಪತ್ರೆಯಲ್ಲಿ ನರಳಿ, ಕೆಲಸಕ್ಕೆ ಹೋಗದಂತೆ ಮಾಡುವುದು—ಇದಕ್ಕೆ ಮ್ಯುನಿಸಿಪಾಲಿಟಿಯೇ ಜವಾಬ್ದಾರಿ ಹೊರಬೇಕಲ್ಲವೇ?

★

ಗಾರ್ಡಿಯನ್ ಓಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಈ ಕಂಪೆನಿಯು ಈ ವರ್ಷದ ಕಾರ್ಯಗಳ ಫಲವಾಗಿ ಜೀವವಿಮಾ ಫಂಡು ಇಮ್ಮಡಿಯಷ್ಟಾದುದು, ಈ ಸಂಸ್ಥೆಯ ದೃಢತೆಯನ್ನು ಸೂಚಿಸುತ್ತದೆ 1937ರ ವ್ಯವಹಾರವು ಒಂದು ಕೋಟಿ ನಾಲ್ವತ್ತು ಲಕ್ಷಕ್ಕೆ ಮಿಕ್ಕಿರುತ್ತದೆ ಸರಕಾರದ ಕ್ರಮದ ಮೇರೆಗೆ ಈ ಕಂಪೆನಿಯು ರಿಸರ್ವ್ ಬ್ಯಾಂಕಿನಲ್ಲಿ 2 ಲಕ್ಷ ರೂ ಗಳನ್ನು ಠೇವಣಾತಿಯಾಗಿಟ್ಟಿದೆ ಈ ಕಂಪೆನಿ ಹಿಂದೂದೇಶದಲ್ಲಿ ಅಗ್ರಗಣ್ಯವೆನಿಸಿಕೊಂಡ ಪ್ರಥಮ 20ರಲ್ಲಿ ಒಂದು ಸ್ಥಾನ ಪಡೆದಿರುತ್ತದೆ ದಕ್ಷಿಣ ಹಿಂದೂದೇಶದಲ್ಲಿ ಜೀವವಿಮಾ ಸಂಸ್ಥೆಯಲ್ಲಿ ಇದು ಎರಡನೆ ದೊಡ್ಡ ಸಂಸ್ಥೆಯಾಗಿರುತ್ತದೆ

ಮದ್ರಾಸು ಜೈಲುಗಳು.

1937ರಲ್ಲಿ ಜೈಲುಗಳ ವರ್ಷಾಂತ್ಯದ ಜನಸಂಖ್ಯೆ 14070. ದೈನಿಕ ಸರಾಸರಿ 14718 ರಿಮಾಂಡು ಅವಧಿ— ಸೆಶನ್ಸಿನಲ್ಲಿ 86 ದಿನ, ಮೆಜಿಸ್ಟ್ರೇಟರಲ್ಲಿ 17 ದಿನ ಸಿವಿಲ್ ಕೈದಿಗಳು 143 ಎಳೆವಯಸ್ಸಿನವರು (14ಕ್ಕಿಂತ ಕಡಿಮೆ) 12. ಯುವಕರು. 2364 15 ವಯಸ್ಸಿನ 48. 21–23 ವಯಸ್ಸಿನ 3806. ಸಾದಾ ಸಜೆಯವರ ಸೇಕಡಾ 28. ಒಂದು ತಿಂಗಳ ಸಜೆಯೊಳಗಿನವರು 15,471. ಸಜಾನಂತರ ಸಹಾಯ ಪಟ್ಟವರು 1965 ಸಂದರ್ಶನದ ಸಂಖ್ಯೆ 3828, ಸಂಬಳದ ಖರ್ಚು ರೂ 16¾ ಲಕ್ಷ ತಲಾ 118–7–10. ಆಹಾರ ಖರ್ಚು 6¾ ಲಕ್ಷ ರೂಪಾಯಿ. ಕೈದಿಗಳ ತಯಾರಿಸಿದ ಒರವೆಗಳ ಬೆಲೆ 9¼ ಲಕ್ಷ ರೂಪಾಯಿ ಸೇಕಡಾ 35 ಇವನ್ನು ತಯಾರಿಸಿದವರು. ರೋಗಗಳು ಸಾವಿರದಲ್ಲಿ 13 ಮರಣಗಳು 146 ಬಿಡುಗಡೆ ಹೊಂದಿದವರಲ್ಲಿ ಸೇಕಡಾ 63 ದೇಹ ತೂಕ ಹೆಚ್ಚಿದೆ

★

ಅದ್ಭುತ ಕಾರ್ಯಗಳನ್ನು ಮಾಡುವ ಹುಡುಗ.

ಸೇಲಮ್ ಜಿಲ್ಲಾ ಚೆಲ್ಲಪ್ಪನ್ ಪಟ್ಟಿಯ ಗ್ರಾಮದಲ್ಲಿ, ಒಂದು ಗುಡ್ಡವಿದೆ ಅಲ್ಲಿ 15 ವರ್ಷ ಪ್ರಾಯದ ಕುರಬರ ಹುಡುಗನಿರುವನು ಇವನ ಕೀರ್ತಿ ಸುತ್ತಲಿನ ಗ್ರಾಮಗಳೆಲ್ಲೆಲ್ಲ ಹಬ್ಬಿರುವುದು. ಇವನ ಮನಸ್ಸು ಸ್ಥಿರವಾಗಿಲ್ಲೆಂದು, ಪಾಪ ಗದರಿಸಲು, ಇವನು ಊರುಬಿಟ್ಟು ಹೊರಟನಂತೆ ಈಗ ಇವನಿರುವಲ್ಲಿ ಜಾತ್ರೆಗೆ ಸೇರಿದಂತೆ ಜನಸ್ತೋಮ ನೆರೆದು ಬರುತ್ತದೆ ತಮ್ಮ ಆಸೆ, ಪಾಪ ಸಂಶಯ ಎಲ್ಲವನ್ನು ಈತನ ಮುಂದಿಟ್ಟು ಅಭಿಪ್ರಾಯ ಪಡೆಯುತ್ತಾರೆ

ಜನರ ಭವಿಷ್ಯಗಳನ್ನು ಈತನು ಸುಲಭವಾಗಿ ಹೇಳುತ್ತಾನೆ ಪತ್ರದ ಕೆಲವರನ್ನು ಪ್ರತಿದಿನ ಕರೆದು, ಅವರ ಮನೋಕಷ್ಟಗಳನ್ನು ನಿವಾರಿಸುತ್ತಾನೆ ಕಳ್ಳ ಹೋದ ಸಾಮಾನನ್ನು ಎಲ್ಲಿ ಹುಡುಕಿದರೆ ಸಿಗುವುದೆಂದು ಹೇಳುವುದರಿಂದ ಬಹಳ ಕೀರ್ತಿ ಸಂಪಾದಿಸಿದ್ದಾನೆ

★

ಜಿನ್ನಾರವರ ಪತ್ರವ್ಯವಹಾರದ ಫಲ.
"ಇನ್ನೀ ಸಂಭಾಷಣೆಗಳೇ ಬೇಡ."

ಬೊಂಬಾಯಿ ಪ್ರಾಂತಿಕ ಕೊಂಗ್ರೆಸ್ ಮಂಡಲವು ಶ್ರೀ ಮುನಸಿಯವರ ಸೂಚನೆಯಂತೆ ಹೀಗೆನ್ನುವುದು ಸಂಭಾಷಣೆಗಳಾದುವು ಪತ್ರವ್ಯವಹಾರವಾಯಿತು. ಇವುಗಳಲ್ಲಿ ಜಿನ್ನಾರವರು ಪ್ರಸ್ತಾಪಿಸುವ ಬಗ್ಗೆ ನೋಡಿದರೆ ಹೀಗಲ್ಲ ಐಕ್ಯಸಾಧ್ಯವಾಗುವ ಹಾಗಿಲ್ಲೆಂಬುದು ಸ್ಪಷ್ಟ. ಮುಸ್ಲಿಂ ಲೀಗಿಗೆ ಒಪ್ಪಿಗೆಯಾಗುವ ಯಾವ ವಿಚಾರವೂ ದೇಶದ ರಾಷ್ಟ್ರೀಯ ಭಾವನೆಗೆ ವಿರುದ್ಧವಾಗುವಂತೆ ತೋರುವ ಕಾರಣ, ಇದನ್ನು ಒಲಿಸನೋಡಿ ರಾಷ್ಟ್ರೀಯ ಭಾವನೆಯನ್ನು ಜನಾಂಗವು ದೂರವಿಡಬೇಕಾಗಬಹುದು ಇದನ್ನು ಮಾಡಲು ಕೊಂಗ್ರೆಸು ಎಂದಿಗೂ ಒಪ್ಪುವ ಹಾಗಿಲ್ಲ

ಮುಸ್ಲಿಂ ಲೀಗಿನೊಡನೆ ಪ್ರಸ್ತಾಪಿಸುವಾಗ ಐಕ್ಯವಾಗಲಿ ಎಂಬ ತವಕದಿಂದ ಕೊಂಗ್ರೆಸ್ ಕಾರ್ಯಕಾರೀ ಮಂಡಲವು ಪ್ರಯತ್ನಿಸಿತ್ತು ಅದು ಸಾಧ್ಯವಿಲ್ಲವೆಂದಾಗಿರುವ ಬಳಿಕ, ಇನ್ನು ಎಲ್ಲ ವಿಷಯಗಳನ್ನೊಳಕೊಂಡ ಪತ್ರಕವನ್ನಷ್ಟು ಹೊರಡಿಸಿ, ಈ ಪ್ರಸಂಗವನ್ನು ಇಲ್ಲಿಗೆ ಮುಕ್ತಾಯಗೊಳಿಸುವುದು ಉಚಿತ ಇದರ ಬದಲಾಗಿ, ಮುಸ್ಲಿಮರೊಡನೆ ಮೈತ್ರಿ ಬೆಳಸಿ ಅವರು ಹೆಚ್ಚಾಗಿ ಕೊಂಗ್ರೆಸಿಗೆ ಸೇರುವಂತೆ ಮಾಡುವುದರಿಂದಲೇ ಐಕ್ಯವು ಸಿದ್ಧವಾದೀತು

ಸಮಾಜಗಳೊಳಗೆ ಕಲಹಗಳನ್ನು ನಿವಾರಿಸುವುದಕ್ಕೂ ಜನಾಂಗವು ಒಂದಾಗುವಂತೆ ಮಾಡುವುದಕ್ಕೂ ಮಾತ್ರ ಕೊಂಗ್ರೆಸು ಪ್ರಯತ್ನಿಸಿದರೆ ಸಾಕು ಇದರಿಂದ ಎಲ್ಲ ಜನತೆಯು ರಾಜಕೀಯ ಮುಕ್ತಿ ಪಡೆವುದು. ಹೀಗೆ ಇವರ ನಿರ್ಧಾರವಾಗಿದೆ.

ಪ್ರೇಮಘರ 2

ಕೆನರಾ ಹೈಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲುಗಳ ಆಡಳಿತದೊಳಗೆ ನೂತನವಾಗಿ ತಲೆದೋರಿದೊಂದು ಸಂಸ್ಥೆಯ ಹೆಸರು ಪ್ರೇಮ ಘರ. ಶ್ರೀ ಬಾಳ್ವಳ್ಳಿ ಗಾಳಿ ಬೆಳಕುಗಳಾಗಿ, ಪ್ರೇಮದ ಭಿತ್ತಿಯ ಮೇಲೆ ನಿಂತ ಮಂದಿರ ದೊಳಗೆ, ಜಾತಿವಿಜಾತಿಯೆನ್ನದೆ ಬೇರೆ ಎಳೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಜ್ಞಾನಾರ್ಜನೆ ಮಾಡುತ್ತಿರುವಾಗ,—ದಾರಿದ್ರ್ಯದ ಅಂಧಕಾರವು ಅವರನ್ನು ಆವರಿಸಿ ಆತ್ಮವಿಕಸನಕ್ಕೆ ಎಡೆಕೊಡದೆ ತಡೆಹಾಕಿ, ಅದೃಕರ್ಶನವಾಗಿರುವ ಶರೀರದ ಬೆಳವಣಿಗೆಯನ್ನೆ ಮುರುಟಿಸುವ ದುಸ್ಥಿತಿಯು ಇನ್ನು ಅವರನ್ನು ಬಾಧಿಸದಂತೆ,—ಮಧ್ಯಾಹ್ನ ದೊಂದು ಸಲದ ಆಹಾರವಾದರೂ ಜೀವಪೋಷಕವಾಗಿ ಚೇತನದಾಯಕವಾಗಿ ಜ್ಞಾನಾರ್ಜನೆಗೆ ಅನುಕೂಲವಾಗಿ ಅವರಿಗೆ ದೊರೆಯುವಂತೆ ಸುವ್ಯವಸ್ಥೆಯಾಗ ಬೇಕೆಂದೇ, ಎಳೆಯರ ಹಿತ ಚಿಂತಕರಾಗಿರುವ ಹಿರಿಯರ ಉದ್ದೇಶದಿಂದಾಗಿ ಈ ಸಂಸ್ಥೆಯು ಸ್ಥಾಪನೆಯಾಗಿದೆ

○ ○ ○ ○

“ತಮ್ಮ ಮನೆಯಲ್ಲಿರುವ ಬದಲಾಗಿ, ನೆಲೆನಿಂತು ವಿದ್ಯಾಭ್ಯಾಸ ಮಾಡತಕ್ಕವರಿಗಂತೂ ಹೊಸ್ಟೆಲು ಇದೆ. ಹೊಸ್ಟೇಲು ಒಂದು ಬಾಡಿಗೆಯ ಮನೆ, ಇರಲು ಒಂದು ನೆಲೆ, ಗೋಷ್ಠಿಗವಕಾಶ ದೊರೆವಂತೆ ಮಿತ್ರರ ಕೂಟವಿರುವ ಸನ್ನಿವೇಶ ಮನೆಯಲ್ಲಿ ತಗಲುವ ಖರ್ಚಿಗಿಂತ ಇಲ್ಲಿ ಸ್ವಭಾವಿಕವಾಗಿ ವೆಚ್ಚಕ್ಕೆ ಹೆಚ್ಚಿಗೆ ಬೇಕಾಗುವುದು, ಅಸ್ವಾಭಾವಿಕವಾಗಿ ವೆಚ್ಚ ಮಾಡಲೂ ಅವಕಾಶವಿದೆ ಇದು ನೆಲೆನಿಲ್ಲುವುದಕ್ಕಲ್ಲ, ದೂರದ ಮನೆಯಿಂದ ಸಾಲೆಗೆ ಬಂದು, ಮಧ್ಯಾಹ್ನಕ್ಕೆ ‘ಸಮೀಪದ ದೂರ’ ವಾದರೂ ಓಡ್ಯೋಡಿ ದಣಿದು, ಅವಸರವಾಗಿ ಆಹಾರ ನುಂಗಿ, ತ್ವರೆಯಾಗಿ ಮಳೆಬಿಸಿಲುಗಳನ್ನದೆ ಸಾಲೆಗೆ ಸಮಯದೊಳಗಾಗಿ ಬಂದು ಸೇರ ಬೇಕು,—ಅಥವಾ ‘ದೂರದ ದೂರ’ವಾದರೆ ಸಾಲೆಯಿಂದ ಹೊರಡದೆ ತಿಳಿನೀರಿನಲ್ಲಿ ಹಸಿವಿನ ಬೆಂಕಿಯನ್ನು ನೊಂದಿಸಿ, ಅಥವಾ ಹತ್ತಿರದ ಹೊಟೆಲುಗಳಲ್ಲಿನ ಕೀಳಿ ಆಹಾರಗಳಿ ರೂಪದ ಜಾಡ್ಯವನ್ನು ದುಡ್ಡು ಕೊಟ್ಟು ಕೊಂಡು ಕೊಂಡು ಪುನಃ ಮಧ್ಯಾಹ್ನದ ಪಾಠಕ್ರಮಕ್ಕೆ ಮನಗೊಡುವ,—ಅಸಕ್ತಿಯ ಅಶಕ್ತಿಯಿಂದಿರುವ ಎಳೆಯರಿಗೆ (ಯಾವ ಜಾತಿಯವರೇ ಆಗಿರಲಿ) ಸಾಲೆಯಲ್ಲಿರುವಾಗ ಮನೆಯ ಸೌಕರ್ಯ ತಪ್ಪಿದ ಬಾಧೆಯ ನೆನಪು, ಮೀರಿದ ಹಣದಿಂದಾದ ಅಧಿ ಹೊಟ್ಟೆಯ ಉಪವಾಸದ ಚುಚ್ಚಾಟ—ಇವುಗಳಿಂದ ಸಾಲೆಗೆ ಬಂದುದೇ ಸಂಕಟವೆನಿಸದೆ? ದೇಹವು ದುರ್ಬಲವಾದಾಗ ಚಿತ್ತಕ್ಕೆ ಬಲವುಂಟೇ? ವಿದ್ಯಮಾನಗಳಿಂದಾಗಿರುವ ಈ ಪೀಡೆಗೇನೂ ಪರಿಹಾರವೇ ಇಲ್ಲವೇ? ಇದೀಗ, ಯಾವ ವಿದ್ಯಶಾಲೆಯ ಆಡಳಿತದಾರರಿಗೂ ಇರಬೇಕಾದ ಕಾರ್ಯಕ್ರಮದಲ್ಲಿರುವ ಒಂದು ಮುಖ್ಯ ವಿಚಾರವಲ್ಲವೆ?

○ ○ ○ ○

ವಿಚಾರಶೀಲರಾದವರಿಗೆ ಮೂಲ ತತ್ವ ಇಷ್ಟು ಅರಿತಿದೆ ಇಂದಿನ ವಿದ್ಯಾರ್ಥಿಯರು ಮುಂದಿನ ಜನಾಂಗ ಎಂದೆಲ್ಲರೂ ಹೇಳಿದರೂ, ಇಂದಿನ ವಿದ್ಯಾರ್ಥಿನಿಯರೇ ಮುಂದಿನ ಜನಾಂಗದ ಘಟಕರು ಇಂದು ವಿದ್ಯಾರ್ಥಿನಿಯಾದರೆ, ನಾಳೆ ವಿದ್ಯಾದಾಯಿನಿಯಾಗಿ ಸಂತಾನವನ್ನು ರೂಪಿಸಿ ತರುವಳು, ಕುಟುಂಬವನ್ನು ಗೃಹಿಣಿಯಾಗಿ ಪಾಲಿಸಿ ಬರುವವಳಾಗುವಳು. ಯಾವಳೇ ವಿದ್ಯಾರ್ಥಿನಿಯು, ವಿವಾಹ ವಯಸ್ಸು ಒದಗುವುದರೊಳಗೆ, ಸುಘಟಿತ ದೇಹವುಳ್ಳವಳಾದಲ್ಲಿ, ಸುವಿಕಸಿತವಾದ ಚಿತ್ತವುಳ್ಳವಳೂ ಆಗುವಳು. ಅದರಿಂದ, ವಿದ್ಯಾಭ್ಯಾಸವು ಸಾಂಗವಾಗಿ ನಡೆದು, ಅವಳು ಹುಟ್ಟಿದ ಅಥವಾ ಸೇರಿದ ಕುಲಗಳೆರಡನ್ನೂ ಅಜ್ಞಾನದಿಂದ ಹೊರಕ್ಕೆ, ಅಸಕ್ತದಿಂದ ಹೊರಕ್ಕೆ ನಡೆಯಿಸಿ, ಬಳಗದ ದೌರ್ಬಲ್ಯವನ್ನು ನಿವಾರಿಸುವವಳಾಗುವಳು. ಪರ್ಯಾಯ ಕ್ರಮವಾಗಿ, ಬಾಲಕನೂ ಹಾಗೆಯೆ. ಜೀವನ ಯುದ್ಧದಲಿ ಉತ್ಸಾಹದಿಂದ ಕರ್ತವ್ಯ ಕರ್ಮಗಳನ್ನು ಮುಗಿಸಿ ಜನಾಂಗಕ್ಕೂ ದೇಶಕ್ಕೂ ಕೀರ್ತಿಕಾರಕನಾಗುವನು. ಇಂತಹರಿಗೆ, ಸಾಲೆಯಲ್ಲಿ ಸರಿಯಾಗಿ ಕೂತು ಓದಿ ಬರೆಯಲೂ, ಪಾಠಗಳನ್ನು ಸರಿಯಾಗಿ ಬೋಧಿಸಲೂ, ಜನಾಂಗದ ಸಂಸ್ಕೃತಿ ದೇಶದ ವೈಯಕ್ತಿಕತೆಗೆ ಸರಿಯಾಗಿ ತಿದ್ದಿ ಕರೆಲೂ ಸಾಧಿಸಲೂ ಅಧಿನಾಯಕತ್ವ-ತಳೆಯಲೂ ಬೇಕಾಗಿರುವ ದೇಹ ಬಲವನ್ನು ನೈಸರ್ಗಿಕ ರೀತಿಯಲ್ಲಿ ಬೆಳೆಯಿಸಲೂ ಬೇಕಾಗಿರುವ ಸಮಸ್ತ ಅನುಕೂಲತೆಗಳನ್ನು ಒದಗಿಸುವುದು ವಿದ್ಯಾಶಾಲೆಗಳ ಆಡಳಿತಗಳ ಕರ್ತವ್ಯವಾಗಿದೆ

○ ○ ○ ○

ದೇಹ ಮೊದಲು, ಧರ್ಮಸಾಧನೆಯೆಲ್ಲ ಮುಂದೆ,—ಎಂದೆನ್ನುವರು ಶರೀರ ಶಾಸ್ತ್ರಜ್ಞರು, ಯೋಗಿಗಳು ತಲೆಯೊಂದಿದ್ದರೆ ಎಂತಹ ಬಗೆಯ ‘ಮುಂಡಾಸನ್ನೂ’ ಕಟ್ಟಿಕೊಳ್ಳ ಬರುವುದಲ್ಲವೆ? ದೇಹದೌರ್ಬಲ್ಯ ವೊಂದ್ದಿದರೆ, ಯಾವ ಜ್ಞಾನಾರ್ಜನೆ, ಪುರುಷಾರ್ಥ ಸಾಧನೆ, ದೇಶ ಸೇವೆ, ಅಧಿನಾಯಕತೆ ಇಹಪರಗಳು? ಮಿಡಿಗೆ ಹಿಡಿದ ಹುಳುವಿನಂತೆ, ಎಳೆಯ ವಯಸ್ಸಿನಲ್ಲೇ ದೌರ್ಬಲ್ಯ ನಿವಾರಣೆಯಾಗದಿರುವಲ್ಲಿ, ಮಗು ಬೆಳೆವುದಕ್ಕೆ ತಡೆ, ಅಲ್ಲಿಗೇ ಜ್ಞಾನಾರ್ಜನೆಯ ಮೇಲೊಂದು ಒತ್ತಿ ಹೊತ್ತ ಕಲ್ಲಿಟ್ಟಂತೆ ಹಿರಿಯರು / ನೂರರಲ್ಲಿ ಹತ್ತು ಮಂದಿಯೇನೋ ಮನೆಯಲ್ಲಿ ಮಕ್ಕಳ ದೌರ್ಬಲ್ಯ ನಿವಾರಣೆಯ ಕಡೆಗೆ ಲಕ್ಷ್ಯವಿಡ ಬಲ್ಲರು, ಬಲ್ಲ ಅಂತಹರಲ್ಲಿ ಅರೆವಾಸಿ ಮಂದಿಗೆ ಸಾಧನೆಗೆ ಅವಕಾಶವಿಲ್ಲ ಕಿರುಗುಡಿಯ ಸಂಕುಚಿತತೆಯಲ್ಲಿ ದೇಹಕ್ಕೇ ಅವಕಾಶವಿಲ್ಲದಿರುವಾಗ ಚಿತ್ತಕ್ಕೆಲ್ಲಿದೆ? ಕಾಳು ಚಿಂದಿಗಳೇ ಜೀವನ ನಿರ್ವಾಹಕ್ಕೊದಗುವುದೂ ಈ ಭಾರತವಾಸಿಗಳಲ್ಲಿ ಅರೆವಾಸಿಗೆ ಕಷ್ಟ, ನಮ್ಮ ಬಾಲಕರ ದೇಹದ ಮಾತೇನು? ಆ ಗೋಳನ್ನು ಹೇಳ ಬರುವುದೇ?

○ ○ ○ ○

ವಾರ್ಧಾಸ್ಕೀಮಿನ ಮುಖ್ಯ ಸೂಚನೆಗಳಲ್ಲಿ, ಮಹಾತ್ಮಾಜಿಯವರು ‘ಮಧ್ಯಾಹ್ನದ ಒಂದೂಟವಾದರೂ ಬಾಲಕರಿಗೆ ಸಾಲೆಗಳಲ್ಲಿ ದೊರೆವಂತಾಗ ಬೇಕೆ’ಂದುದೂ ಇದಕ್ಕಾಗಿಯೇ ವೈಸ್ರಾಯರು ಮಕ್ಕಳಿಗೆ ಹಾಲನ್ನು ಕೊಡಿಸಬೇಕೆಂದುದೂ, ಪಂಜಾಬಿನಲ್ಲಿ ಒಂದೂಟದ ವ್ಯವಸ್ಥೆ ಮಾಡಿರುವುದೂ ಇದೇ ಕಾರಣದಿಂದ್ಲೆ ಬಲ್ಲವರ, ಧನಿಕರ ದಕ್ಷರ ಮಾತನ್ನು ಬಿಟ್ಟು, ನಾವು ನಾವಾಗಿಯೆ ಆಲೋಚಿಸೋಣ ಹಗಲ ಊಟವಿದ್ದರೂ, ಒಂದೆರಡು ಸಲ ಕಾಫಿ ತಿಂಡಿಗೆ ಮನಸ್ಸೋಲುವ ಜನರು ಬೆಳೆದವರಲ್ಲಿಷ್ಟಿಲ್ಲ? ಊಟದ ಖರ್ಚಿಗಿಂತ ಈ ಅವಶ್ಯವಿಲ್ಲದ ಆದರೂ ಅವಶ್ಯ ತೋರುವ ‘ಕಾಫಿ’ಯ ಖರ್ಚು ಕಡಮೆಯೆ? ಇಷ್ಟೇ ಖರ್ಚಿನಿಂದ ಎಷ್ಟು ಮಕ್ಕಳ ಮಧ್ಯಾಹ್ನದ ಊಟದ ಖರ್ಚನ್ನು ಪೂರಯಿಸ ಬಹುದು ಎಂಬುದನ್ನು ಸ್ವಲ್ಪ ಆಲೋಚಿಸಿ ಗೊತ್ತು ಹಚ್ಚ ಬಹುದು.

○ ○ ○ ○

ಪಾಠಶಾಲೆಗಳ ಅಧಿಕಾರಿಗಳಂತೆಯೆ, ಮಕ್ಕಳ ಬೆಳವಣಿಗೆಯ ಚಿಂತನಾಪರರೂ ಈ ವಿಷಯವನ್ನ ಚಿಂತಿಸಿಯೆ. ಎಲ್ಲೆಲ್ಲಿಯೂ ಇರುವರು ಎಷ್ಟೋ ಕಡೆ ಇದೆಲ್ಲ ಕಾರ್ಯತ ಪರಿಣಮಿಸಿಯೇ ಇದೆ ಎನ್ನೋಣ. ಆದರೂ ಎಲ್ಲೆಲ್ಲಿಯೂ ಪರಿಣಮಿಸಿದೆಯೆ? ಎಲ್ಲ ನಿರಾಹಾರಿ ಮಕ್ಕಳಿಗೆ ಅನ್ನಶಾಂತಿ ದೊರೆಯುತ್ತಿರುವುದೆ?

○ ○ ○ ○

ಮಂಗಳೂರು ಕೆನರಾ ಹೈಸ್ಕೂಲ್ ಮತ್ತು ಗರ್ಲ್ಸ್‌ಸ್ಕೂಲುಗಳ ಅಧಿಕಾರಿಗಳು ಈ ಕಡೆಗೆ ಎಷ್ಟೋ ದಿನಗಳಿಂದ ವಿಚಾರಮಾಡುತ್ತಿದ್ದು, ಮೊನ್ನೆಮೊನ್ನೆಗೆ ಈ ಸುಧಾರಣೆಯನ್ನು ಧೈರ್ಯದಿಂದ ಜಾರಿಗೆ ತಂದೇ ತಂದರು. ಇದಕ್ಕೆ ಅವರಿಗೆ ಸಹಾಯಕರಾಗಿ ಪ್ರೋತ್ಸಾಹಕರಾಗಿ ಅಗತ್ಯವಾಗಿಯೂ ದಾನಿಗಳೂ ಒದಗಿದರು. ಈ ಕಥೆ ಬೇರೆ.

○ ○ ○ ○

ಹುಟ್ಟಿದ ಕುಲವೂ ಸೇರಿದ ಕುಲವೂ ದಾನಶೂರರ ಧರ್ಮವೀರರ ಹೆಸರುಗಳಿಂದಲೂ ಕೃತಿಗಳಿಂದಲೂ ಮೆರೆಯುವುದಾಗಿದ್ದ, ಯುವತಿಯೊಬ್ಬಳು ಅಕಾಲದಲ್ಲಿ ಎರಡೂ ಕುಲಗಳನ್ನು ಇಲ್ಲೇ ಬಿಟ್ಟು ಲೋಕಾಂತರವನ್ನೈದಿದಳು. ಹುಟ್ಟು ಹೆಸರೂ ಪ್ರೇಮ, ಪ್ರೇಮದ ಹೆಸರು ಇಲ್ಲಿ ಉಳಿಯುವ ಹಾಗೆ ಇಲ್ಲಿನವರು ಸಾಧನೆ ಮಾಡಿದಲ್ಲದೆ, ಪ್ರೇಮ ವರ್ಜಿತರಾಗಿ ಎಷ್ಟು ಕಾಲ ಶಾಂತಿಯಿಂದಿರ ಬಹುದು? ತಮ್ಮ ಕೈತಪ್ಪಿ ಮಾಯವಾದ ಪ್ರೇಮವನ್ನು, ಇಲ್ಲೇ ಬಿತ್ತಿ ಬೆಳಸಿ, ವಿಗ್ರಹವು ಇಲ್ಲದಾಗ ಅದರಲ್ಲಿ ಪ್ರತಿಷ್ಠಿತವಾಗಿದ್ದ ಪ್ರಾಣವನ್ನು ಬೆಳಗಿ, ‘ಸರ್ವಂ ಪ್ರೇಮಮಯಂ ಜಗತ್’ ಎಂದು ಪ್ರಾಚೀನರು ಸಾರಿದುದರ ಕಿಂಚಿತ್ ಪ್ರಕಾರವನ್ನಾದರೂ ಇನ್ನ ಕೈಲಾದಷ್ಟು ಸಾಧಿಸುವುದು. ಯೋಗ್ಯವೆಂದು ಕುಟುಂಬದವರು ತಿಳಿದರು. ಅವರು ಹಾಗೆ ತಿಳಿದುಕೊಂಡುದು—ಎಷ್ಟೋ ಪ್ರೇಮವಂಚಿತರಾದವರ ಪುಣ್ಯ, ದುರ್ಬಲರಾದವರ ಭಾಗ್ಯ, ಅಶಕ್ತರಾದವರ ಶಕ್ತಿ’ ಎಂದಾಯಿತು

○ ○ ○ ○

ಅದ ಹೇಗೆ?—ಹೆಣ್ಣುಮಗು ಹೆರುಗಾಗುವ ತರೆಗ ಸಾಧಾರಣವಾಗಿ ಹಿಂದೂ ಕುಟುಂಬಗಳಲ್ಲಿ ಎಷ್ಟು ಖರ್ಚಾಗುವುದು? ಸಂಸಾರದಲ್ಲಿ ಸೇರಿ, ತಾನೇ ಕುಟುಂಬಿಯಾಗಿರುವ ಹೆಂಗಸು ಎಷ್ಟು ವ್ಯಯಿಸುವಳು? ಈ ವಿಚಾರವನ್ನು ಹೆಣ್ಣುಮಗು ಇದ್ದವರು ಅಷ್ಟೇನು ಸುವುದಿಲ್ಲ, ಸಂಸಾರದ ಖರ್ಚು ಸಾಗಿಯೇ ಹೋಗುವುದಲ್ಲವೆ? ಮಗವಿಲ್ಲದಿದ್ದರೆ, ಹುಟ್ಟಿದ್ದರೂ ಮಾಯವಾಗಿದ್ದರೆ,—ಆಗ, ಮುಂದೆ ಅದಕ್ಕಾಗಿ ಏನೇನೆಲ ಸಂಭ್ರಮಮಾಡಿಸಬೇಕಾಗಿತ್ತೋ ಅದರ ನೆನಪು, ಹಾನಿಭ ಮಾಡ ಕಾನು ಪಡೆಯುತ್ತಿದ್ದ ಆಗಂದ, ಇದನ್ನೇ ಮಾತ್ರ ಆಗಾಗ ಎಣಿಸಿದೆ ಇರುವವರ ತೀರ ಕಡಮೆ

○ ○ ○ ○

ಹಾಗೆ ಎಣಿಸುತ್ತಾರೆಂದೇ, ಅದರ ಹೆಸರಲ್ಲಿ ದೇವಸ್ಥಾನಗಳಲ್ಲಿ ಬ್ರಾಹ್ಮಣಸಂತರ್ಪಣೆ ವಾರ್ಷಿಕವಾಗಿ ಪಿಂಡಪ್ರದಾನ, ಹಬ್ಬಗಳ ಕಾಲದಲ್ಲಿ ಮಕ್ಕಳಿಗೆ ಉಣ ಬಡಿಸುವುದು ವಸ್ತ್ರದಾನ ಸುವಾಸಿನೀ ಸಂತರ್ಪಣೆ, ಉತ್ಸವಾದಿಗಳಿಗೂ, ಮೌಲ್ಯ ಕಟ್ಟುವುದು,—ಮುಂತಾಗಿಯೆಲ್ಲಾ ವಿಧಾನಗಳಿಂದ ಆತ್ಮಸಮಾಧಾನ ಮಾಡಿಕೊಳ್ಳುತ್ತಾರೆ. ಇದರಿಂದ ಮಗುವಿನ ಮೇಲಿದ್ದ ಪ್ರೇಮವು, ನಾಲ್ವರೊಳಗೆ ಆಗಾಗ ಹಂಚಿದುದರಿಂದಲೇ ಬಹುಕಾಲ ಬಹುವಿಧ ಬಹುರೂಪವಾಗಿ ವಿಸ್ತಾರಕ್ಕೆ ನೆಲಸುವಂತಾಗುವುದಲ್ಲವೇ? ಆದರೆ, ಹೀಗೆ ಪರಿಣಮಿಸುವಂತೆ ಮಾಡಲು ವಿಧಾನಗಳಿಷ್ಟೆಯೇ?

○ ○ ○ ○

ಮಕ್ಕಳು ನಾಳಿನ ಜನತೆ. ದೇಶೋದ್ಧಾರಕ್ಕೂ ಗೌರವ ಪಾಲನೆಗೂ ಅವರೇ ಸಾಧಕರು ಜ್ಞಾನಾರ್ಜನೆ (ಉಚ್ಚಶಿಕ್ಷಣ) ಅವರ ಹಕ್ಕಿನದು ಇದರ ಸೌಕರ್ಯ ಒದಗಿಸುವ ಭಾರ ಹಿರಿಯರದು ಒಂದು ಮಗು ಸುಸೂತ್ರವಾಗಿ ಬೆಳೆದು ವಿದ್ಯಾವಂತವಾಯಿತೆಂದರೆ, ಒಂದು ಕುಲ, ಒಂದು ಊರು. ಒಂದು ಪ್ರಾಂತ್ಯ ಒಂದು ದೇಶ ಅದರ ಪ್ರತಿಭೆಯಿಂದ ಬೆಳಗಿ ತಲೆಯೆತ್ತಿನಿಲ್ಲುವ ಸಂದರ್ಭವಿದೆ. ಇಂತಹ ಮಗು ಹೆಣ್ಣಾದಲ್ಲಿ, ಅದರ ಸಂತತಿಯೆಲ್ಲ, ತಾಯಿಬೇರಿನ ಪರಿಣಾಮದಿಂದಾಗಿ ವಂಶವೃಕ್ಷದ ಶಾಖೋಪಶಾಖೆಗಳಲೂ ಅದರ ಪ್ರತಿಭೆ ಬೆಳಗಿ, ಪ್ರತಿಭೆಯೆಂದು ಹಣ್ಣು (ಫಲ) ಮುಂದೆ ತಾನೇ ಬೀಜ ಹರಡಿದಲ್ಲೆಲ್ಲ ಈ ಪ್ರತಿಭೆಯನ್ನು ಪಸರಿಸುವುದು. ಹೆಣ್ಣು ಜನತೆಯ ಉತ್ಕರ್ಷಕ್ಕೊಂದು ಕಣ್ಣಾಗುವುದು.

○ ○ ○ ○

ಪ್ರಾಥಮಿಕ ವಿದ್ಯಾಭ್ಯಾಸವಾದರೂ ಹೆಣ್ಣು ಮಗುವಿಗೆ ಸಿಗಬೇಕೆಂದು ಕೆನರಾ ಗರ್ಲ್ಸ್‌ಸ್ಕೂಲಿನ ಸ್ಥಾಪಕರ ಮೂಲೋದ್ದೇಶ ಸಾಲೆ ಜಿಲ್ಲೆಯ ಅಲ್ಲೊಂದು ಅಗ್ರಸ್ಥಾನವನ್ನು ಹೊಂದಿಯೇ ಇದೆ, ವಿದ್ಯಾದಾನದ ಮತ್ತು ಶಿಕ್ಷಣದ ಪಾಕು ಅಷ್ಟಾಯಿತು. ಇಲ್ಲಿಗೆ ಬಂದೂ, ಚೇತನವಿಲ್ಲದೆ ವಿದ್ಯಾದಾನ ಪಡೆಯಲಾರದವರು, ಮುಂದೆ ಜನ್ಮದ ಸಾರ್ಥಕವಮಾಡಲಾರದಾದಲ್ಲಿ, ಆ ಪ್ರಮಾದಕ್ಕೆ ಹೊಣೆ ಹಿರಿಯರೇ ಮಾತ್ರವೇ? ಶಾಲಾಧಿಕಾರಿಗಳ ಬೆಂಬಲವಾಗಿರುವ ಜನತೆಗೂ ಆ ಹೊಣೆಗಾರಿಕೆ ತಟ್ಟದೆ? ಈ ಹೊಣೆಗಾರಿಕೆಯ ಕಡೆಗೆ ಜನತೆಯ ದೃಷ್ಟಿ ಸರಿಯಾಗಿ ಎಂದಿಗೆ ತಿರುಗುವುದೋ ಅಂದಿಗೆ ದೇಶಕ್ಕೆ ಸ್ವರಾಜ್ಯ ಸ್ವಾತಂತ್ರ್ಯ ಸಿಗುವ ಗಳಿಗೆ ತುಂಬತೊಡಗುವುದು

○ ○ ○ ○

ಇದನ್ನರಿತವರಲ್ಲೊಬ್ಬರು ‘ಪ್ರೇಮ’ಪ್ರತಿಭೆಯ ಪ್ರಕಾಶನಕ್ಕಾಗಿ ಆತುರ ಪಟ್ಟರು. ಪ್ರೇಮಳ ಹೆಸರಲ್ಲಿ ಒಂದು ಸಹಸ್ರ ರೂಪಾಯಿಗಳನ್ನು ತೆಗೆದಿಟ್ಟರು ಪ್ರೇಮಳು ಇಲ್ಲೇ ಇದ್ದಿದ್ದರೆ, ಎಷ್ಟೋ ಸಹಸ್ರಗಳ ವೆಚ್ಚದಿಂದ ಪ್ರೇಮ ಸಂಭ್ರಮ ಮಾಡಬಹುದಾಗಿತ್ತು! ಈ ಸಹಸ್ರ ರೂಪಾಯಿಯಿಂದ ಪ್ರೇಮವಂಚಿತರಾದವರಿಗ ಮನಃಶಾಂತಿಯಾಗಲೆಂದರು ಸ್ಮಾರಕರೂಪವಾಗಿ ಸಂತರ್ಪಣೆಯಾಗಲೆಂದರು ಸಹಸ್ರವೆಷ್ಟಕ್ಕೆ ಎಷ್ಟುದಿನ ಬಂದೀತು? ಆದರೂ ಮೂಲಬೀಜರೂಪವಾಗಿ ಇಷ್ಟಿರಲೆಂದರು ಇದರಿಂದೀಗ, ಮೊದಲು ಹೇಳಿದಂತೆ, ಮಧ್ಯಾಹ್ನದೊಂದೂಟದ ಸೌಕರ್ಯ, ಎಸಿಲ್ಲದ ಎಳೆಯರಿಗೆ ಸದ್ಯಕ್ಕೆ ಸಿಗುವಂತಾಗಿದೆ ಬೆಳಗ್ಗಿನ ಪಾಠ ಮುಗಿಸಿ, ಸಂಪಸ್ಸರ ತಮ್ಮ ಹಿರಿಯರ ಜತೆಯಲ್ಲಿ ಮನೆಯಲ್ಲೂಟಮಾಡುವಾಗ ಈ ಬಾಲಕರು / ಬಾಲಿಕೆಯರ ಜಾತಿವಿಚಾರದ ಭೇದವನ್ನೇನೂ ಮಾಡಿಲ್ಲದಾರಣ ತಮಗೆ ತೃಪ್ತಿಕರವಾಗುವಂತೆ ಒಪಿಸಿಮುದನ್ನ ತುಷ್ಟಿಯಿಂದ ಉಂಡು, ಮಧ್ಯಾಹ್ನದ ಪಾಠಗಳಿಗೆ ಸಿದ್ಧವಾಗುವಂತೆ ದೇಹಚೇತನ ಚಿತ್ತಶಾಂತಿ ಹೊಂದುವರು ಪ್ರೇಮಸಂತರ್ಪಣೆಯಿದೇ, ದಿವಂಗತರ ಆತ್ಮಗಳಿಗೆ ಚಿರಶಾಂತಿದಾಯಕವೂ ಇದೇ, ಸ್ಮಾರಕರೂಪವಾದ ಭೋಜನಾರಾಧನೆಯೂ ಇದೇ

○ ○ ○ ○

‘ಪ್ರೇಮ’ ಬೆಳಗುವ ಈ ಮನೆಯೇ ‘ಪ್ರೇಮ ಘರ’ ಇದರ ಏರ್ಪಾಡು ಕೆನರಾ ಹೈಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲುಗಳ ಅಧಿಕಾರಿಗಳ ವಶದಲ್ಲಿದೆ. ಇದರ ಪ್ರಥಮ ಪ್ರೋತ್ಸಾಹಕರಾಗಿ, ಪ್ರೇಮ ಘರದ ಅಸ್ತಿಭಾರದ ಒಂದು ಶಾಸನಶಿಲೆಯಾಗಿರುವ ಧನಸಹಾಯ ಮಾಡಿದವರು ಶ್ರೀ ಕಸ್ತೂರಿ ಪುಂಡಲೀಕ ಪೈಯವರು ಇನ್ನು ನೂರಾರು ಮಂದಿ ಇವರ ರೀತಿಯಲ್ಲಿಯೇ ದಾನಕೊಡುವ ಪ್ರಯುಕ್ತ,ಪ್ರೇಮಘರವೇ ಚಿರಸ್ಥಾಯಿಯಾಗಿ, ಅವರ ಹಕ್ಕಿನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅನ್ನ ಕಷ್ಟವಿಲ್ಲದೆ ಎಳೆಯವರು ಪಡೆಸಂತಾಗಿ, ಜನಾಂಗವು ಸ್ವರಾಜ್ಯಯೋಗವಾದ ಸಾಧನೆ ಮಾಡುವಂತಾಗಿ ನಿಷ್ಪಾಪಿಗಳೂ ದೇವತಾಸ್ವರೂಪರೂ ಆಗಿರುವ ಬಾಲಕ ಬಾಲಿಕೆಯರ ಪ್ರೀತ್ಯರ್ಥವಾಗಿರುವ ಅನ್ನ ಸಂತರ್ಪಣೆ ನಡೆಯುತ್ತಿರಲಿ!

○ ○ ○ ○

ದೇವಾಲಯಗಳು ವಿದ್ಯಾಲಯಗಳಾಗಿಯೂ, ವಿದ್ಯಾಲಯಗಳು ದೇವಾಲಯಗಳಾಗಿಯೂ ಪ್ರವರ್ತಿಸ ಬೇಕಾಗಿರುವ ಕಾಲವಿದು; ಆಲೋಚಿತವಾಗಿರುವ ಕರ್ತವ್ಯಮಾಡಲು ಜನತೆ ಮುಂದೆ ಬರಲಿ!

ಇಲೆಕ್ಟ್ರೋ ಕಲ್ಚರ್

ಮರಗಿಡಗಳ ರೋಗ ನಿವಾರಣೆಯ ಹೊಸ ಶೋಧನೆ

ಬರೆದವರು. ಕೊಯಿಕಾಡಿ ಸುಬ್ಬರಾವ್

ಯುನೈಟೆಡ್ ಪ್ರಾವಿನ್ಸ್‌ನಲ್ಲಿಯ ಮೈನ್‌ಪುರಿ ಜಿಲ್ಲಾ ಕಲೆಕ್ಟರರಾದ ಡಾಕ್ಟರ್ ಯಸ್. ಯಸ್. ನೆಹರೂ—B A, B Sc Alld M A, Cantab Ph D, Heidelberg, L E D Brussels, I C S ರವರ ಸಂಶೋಧನೆಯ ಫಲವಾಗಿ ಪ್ರಕಟವಾದ ವಿದ್ಯುತ್ ವ್ಯವಸಾಯದ ವಿಷಯವಾಗಿ ಈ ಮೊದಲು ಮಂಗಳೂರಿನ ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯ ವಾಚಕರು ತಿಳಿದಿರಬಹುದು ಹಾಗೆ ಓದಿದವರಲ್ಲಿ ಒಬ್ಬನಾದ ನಾನು ಮೇಲ್ಕಂಡ ಮಹಾಶಯರಲ್ಲಿ ಪತ್ರವ್ಯವಹಾರ ಬೆಳೆಸಲವರ ಅಪ್ಪಣೆ ಮೇರೆಗೆ ಕಳೆದ ತಾ 14–5 38 ಲ್ಲಿ ಅಲ್ಲಿಗೆ ಹೋಗಿ ಅವರ ಭೇಟಿ ಮಾಡಿದ್ದಲ್ಲದೆ ಅವರು ಎಲೆಕ್ಟ್ರೋಕಲ್ಚರ್ ವಿಧಾನವನ್ನು ಬಹಳ ಸಂತೋಷದಿಂದ ಹೇಳಿಕೊಟ್ಟಿರುತ್ತಾರೆ. ಅಲ್ಲಿ ಈ ವಿಧಾನದಂತೆ ಹಣ್ಣುಹಂಪಲುಗಳ ತೋಟ ಬೆಳೆಸಿರುತ್ತಾರೆ ಇದರಲ್ಲಿ ಮಾವು, ದಾಳಿಂಬ, ದ್ರಾಕ್ಷಿ, ಮುಸುಂಬಿ ವಗೈರೆ ಹಲವು ಜಾತಿಯ ಮರಗಿಡಗಳಿಗೂ ಬುಡದಲ್ಲಿ ಕಬ್ಬಿಣದ ಬಲೆಯ ಜಕೇಟ್ ಮಾಡಿರುತ್ತಾರೆ ಗಿಡ್ಡ ಗಿಡಗಳಿಗೆ ಕಬ್ಬಿಣದ ಬಲೆಯ ಜಕೇಟ್ ಮಾಡಿರುತ್ತಾರೆ ಹಾಗೆ ಮುಚ್ಚಿದ ಬಲೆಗಳಿಗೆ ವಿದ್ಯುತ್ [illegible] ವದಲ್ಲದೆ ವಿದ್ಯುತ್ ಶಕ್ತಿಕೊಟ್ಟ ನೀರನ್ನು ಸದ್ರಿ ಮರಗಳಿಗೂ ಹಾಗೆಯೇ ತಾಯಿವಳ್ಳಿ, ಗೋದಿ, ಜೋಳ ಮುತಾದ ಪೈರುಗಳಿಗೆ ಕೂಡಾ ಉಪಯೋಗಿಸುತ್ತಾರೆ ಹಾಗೆ ಮಾಡಿದ ಎಲ್ಲಾ ತೋಟಗಳಲ್ಲಿರುವ ಎಲ್ಲಾ [illegible] ಗಳು [illegible] ರೋಗಭಾಧೆಯಿಲ್ಲದೆ [illegible] ದಾಳಿಂಬ [illegible] ಗಳಲ್ಲಿ ಹಣ್ಣುಗಳು [illegible] ಕೆಲವು ಮರಗಳ ಬುಡದಲ್ಲಿ ಸೂಕ್ಷ್ಮ ಜೀವಿಯದ್ದು ಹೆಚ್ಚಿನ [illegible] ಕೀಟಗಳು [illegible] ಕೊಡಲಿಕ್ಕೆ [illegible] ತಿಯಾಗಲಿರುವ ಮರಗಳನ್ನು ಈ ವಿಧಾನ [illegible] ಸದ್ರಿ ಮರಗಳ [illegible] ದಲ್ಲಿ ಪುನಃ ಚಿಗುರು ಒಂದು ಸಲ ಹೇಳಿದಂತಿದ್ದ [illegible] ಗಳ ಈಗ ಹಸುರೆಲೆಗಳಿಂದ ತುಂಬಿ [illegible] ಗೊಳಿಸುತ್ತವೆ ಯಾವತ್ತೂ ಜಾತಿಯ ಗಿಡಮರಗಳಿಗೆ ತಾಗುವ ಎಲ್ಲಾ ವಿಧದ ರೋಗಗಳನ್ನು ಎಲೆಕ್ಟ್ರೋಕಲ್ಚರ್ ವಿಧಾನದಿಂದ ಏನೂ ಸಂಶಯವಿಲ್ಲದೆ ರೋಗ ವಿರಹಿತವನ್ನಿ ಪ್ರಯೋಜನ ಹೊಂದಬಹುದಾಗಿ ಆ ಮಹಾಶಯರು ಖಾತ್ರಿಯಾಗಿ ಅಪ್ಪಣೆಕೊಟ್ಟಿದ್ದಾರೆ ಕೆಲವು ವರುಷಗಳಿಂದ ನಮ್ಮ ಜಿಲ್ಲೆಯ ಅನೇಕ ವ್ಯವಸಾಯ ಬಂಧುಗಳಿಗೆ ಅಡಿಕೆಮರಕ್ಕೆ ತಾಗುವ ಮಹಾಳಿ ಯಾನೆ ಕೊಳೆ ರೋಗಕ್ಕೆ ಈ ವರೆಗೆ ಮಾಡಿರುವ ಚಿಕಿತ್ಸೆಯಿಂದ ಅತ್ಯಂತ ಸುಲಭವೂ ಹೆಚ್ಚಿನ ಪರಿಣಾಮಕಾರಿಯೂ ಆದ ಈ ವಿಧಾನವನ್ನು ಮಾಡಿ ಸದ್ರಿ ನಷ್ಟ ಮತ್ತು ಕಷ್ಟದಿಂದ ಪಾರಾಗಲೆನ್ನುವ ಉದ್ದೇಶ್ಯದಿಂದ ಇದನ್ನು ಪ್ರಕಟಿಸಲು ತೊಡಗಿರುತ್ತೇನೆ ಪರೀಕ್ಷಾರ್ಥವಾಗಿ ಕೆಲವರಾದರೂ ಮಾಡಿನೋಡಬೇಕೆಂದು ನನ್ನ ಅರಿಕೆಯಾಗಿರುತ್ತದೆ. ರೋಗತಗಲಿದ ಮರದ ಬುಡಕ್ಕೆ ಕಬ್ಬಿಣದ ಬಲೆಯಿಂದ ಜಕೇಟುಮಾಡಿ (Iron jacketing) ಸದ್ರಿ ಬಲೆಗೆ ಸ್ಪಾರ್ಕ್ ದಿವ್ಯ ವಿದ್ಯುತ್ ಶಕ್ತಿ ಕೊಡುವುದು (giving Sparks). ಸದ್ರಿ ಮರಗಳಿಗೆ ನೀರು ಹಾಕುವಾಗ ವಿದ್ಯುತ್ ಶಕ್ತಿಕೊಟ್ಟ ನೀರನ್ನು (Electrified water) ಹಾಕುವದು. ಮಳೆಗಾಲದಲ್ಲಿ ಮರಗಳ ಬುಡದಲ್ಲಿ ನೀರು ನಿಲ್ಲುವದಿದ್ದರೆ ಆ ನೀರಿಗೆ ವಿದ್ಯುತ್ ಶಕ್ತಿಕೊಡುವದು. ನಮಗೆ ಹಳ್ಳಿಗಳಲ್ಲಿ ವಿದ್ಯುತ್ ಶಕ್ತಿಯನ್ನು ಉಂಟುಮಾಡುವರೆ ಹಾಳಾದ ಮೋಟರ್‌ಕಾರ್ ಅಥವಾ ಮೋಟಾರ್ ಬಸ್ಸುಗಳ ಮೆಗ್ನೇಟ್ ಒಂದು ಮಾತ್ರ ಬೇಕಾಗಿಯದೆ ಈಗ ಮೋಟಾರುಗಳಿಗೆ ಮೆಗ್ನೇಟ್ ಅಗತ್ಯ ಇಲ್ಲದೆ ಇರುವುದರಿಂದ ಹಳೆ ಮೆಗ್ನೇಟುಗಳು ಕಮ್ಮಿಕ್ರಯಕ್ಕೆ ಸಿಕ್ಕುವ ಸಂಭವವಿರುತ್ತದೆ. ಅದು ಕೆಲವು ವರ್ಷಗಳಿಗೆ ಸಾಕಾಗಿರುತ್ತದೆ ಇನ್ನು ಈ ವಿದಾನದಂತೆ ಭತ್ತ, ರಾಗಿ, ಹುರುಳಿ ವಗೈರೆ ಯಾವತ್ತು ಧಾನ್ಯಗಳನ್ನು ಬೆಳೆಸಿದ್ದಲ್ಲಿ ಒಂದಕ್ಕೆ ಒಂದುವರೆಯಷ್ಟು ಜಾಸ್ತಿ ಉತ್ಪತ್ತಿಯನ್ನು ಪಡೆಯಬಹುದು ಇನ್ನು ಈ ವಿಷಯವಾಗಿಯೂ ಇನ್ನು ದುನುಷ್ಯರ ಮತ್ತು ಜಾನುವಾರುಗಳಿಗೆ ಹೇಗೆ ಉಪಯೋಗಿಸಬಹುದೆಂಬಷ್ಟೆ ಕ್ರಮಶಃ ಬರಿಯುವೆನು

ಮುಂದರಿಯುವುದು

ಗಂಡಂದಿರ ಆಯಕ್ಕಿಂತ ಹೆಚ್ಚು ವ್ಯಯಮಾಡಬೆಡೀರಿ

ಸ್ತ್ರೀಯರಿಗೆ ರಾಜಾಜಿಯವರ ಸಂದೇಶ

ಮದ್ರಾಸು. ಸರಕಾರದ ಪ್ರದಾನ ಮಂತ್ರಿಗಳಾದ ಶ್ರೀ ರಾಜಾಗೋಪಾಲಚಾರ್ಯರು ತಿನ್ನವೆಲ್ಲಿಗೆ ತೆರಳಿದಾಗ, ಟ್ಯುಟಿಕೋರಿನ [illegible] ಸಂಘದ [illegible] ಯುವತಿಯರೂ [illegible] ಸಂದೇಶವನ್ನು ಕೇಳಿದರು

“[illegible] ಪತಿಯರ ಸಂಪಾದನೆಗಿಂತ ಹೆಚ್ಚು [illegible] ಮಾಡಬೇಡಿ [illegible] ಗಳ [illegible] ಗಳಲ್ಲಿ [illegible] [illegible] ಸಂಘ [illegible] ಕಲಿಸಿ”

ಟರ್ಕಿಗೂ ಫ್ರಾನ್ಸಿಗೂ ಒಪ್ಪಂದವಾಗಿರುತ್ತದೆ

ಟರ್ಕಿ [illegible] ಗಳಲ್ಲಿ [illegible] ತರದ ಒಪ್ಪಂದವಾಗಿರುತ್ತದೆ ಈ ಒಪ್ಪಂದದಿಂದ, [illegible] ಪ್ರಭುತ್ವದ [illegible] ಗಳನ್ನು ಪಡೆಯಬಹುದಾಗಿದೆ, ಅದರ [illegible] ದುಃಸ್ಥಿತಿ [illegible] ತಡೆಯಾಗಿರುತ್ತದೆ

ಟರ್ಕಿಯೊಡನೆ ಒಪ್ಪಂದದಿಂದ [illegible] ರೀಜಿಯನ್‌ದಲ್ಲಿ ತನ್ನ ಕೆಲವು [illegible] ಗಳನ್ನು ಒದಗಿಸಿಕೊಳ್ಳಬಹುದೆಂದು ಫ್ರಾನ್ಸಿನ ಅಭಿಪ್ರಾಯವಾಗಿರುತ್ತದೆ

ಇದಲ್ಲದೆ, ಟರ್ಕಿಗೆ ಬೇಕಾದ ಯುದ್ಧ ಸಾಮಗ್ರಿ ಶಸ್ತ್ರ ಹಿಡಿಮದ್ದುಗಳು. ಇಂಗ್ಲಾಂಡಿನಿಂದ ಸಾಲವಾಗಿ ಒದಗಿಸುವ ಒಪ್ಪಂದವೊಂದು ನಡೆದುಬಿಟ್ಟಿದೆ

ಜಾವಾ ಮತ್ತು ದಕ್ಷಿಣ ಇಸ್ಟ್ ಇಂಡೀಸ್ ದ್ವೀಪಗಳಲ್ಲಿ ನೂರಾರು ತರದ ಔಷಧೀಯ ವನಸ್ಪತಿ ಗಿಡಮೂಲಿಕೆಗಳಿರುವುದಾಗಿ, ಪ್ರವೀಣರು ಕಂಡುಹಿಡಿದಿರುವರು ಈ ತನಕ ಇವುಗಳಲ್ಲಿ ಕೆಲವುಗಳನ್ನು ಮಾತ್ರ ಪರೀಕ್ಷಿಸಿ ನೋಡಲಾಗಿದೆ ಇವುಗಳಲ್ಲಿ ಅನೇಕ ಮರಗಳು ಮತ್ತು ಗಿಡಗಳು ದಿವ್ಯ ಔಷದಿಗಳನ್ನು ಒದಗಿಸಿಕೊಡುತ್ತವೆ ಸಿಂಕೋನ ಮರದ ತೊಗಟೆಯು ಅವುಗಳಲ್ಲೊಂದು.

ನಮಗಾಗಿ ಈ ಸಿಂಕೋನಾ ತೊಗಟೆಯನ್ನು ಒದಗಿಸಿಕೊಡುವ ಜಾವಾನಿಸರಿಗೆ ನಾವು ಕೃತಜ್ಞರಾಗಿರಬೇಕು ಅಲ್ಲಿ ಹಾದಿಯಲ್ಲಿ ಭಾರವಾದ ಹೊರೆಗಳನ್ನು ಹೊತ್ತು ನಡೆಯುವ ಅನೇಕ ಜನರ ಬೆನ್ನಮೇಲೆ ಕಟ್ಟಿಗೆ ಕಟ್ಟಿದಂತೆ ತೋರುವ ಈ ಸಿಂಕೊನಾ ತೊಗಟೆಗಳ ಕಟ್ಟನ್ನು ನೀವು ಕಾಣಬಹುದು.

ಸಿಂಕೊನಾ ತೋಟಗಳಿಂದ ಈ ತರದ ಹೊರೆಗಳನ್ನು ಹೊತ್ತುಕೊಂಡು ಬರುವವರನ್ನು ಕಂಡಕೂಡಲೇ, ಅವರು ಹೊರುತ್ತಿರುವುದು ಬರಿ ಕಟ್ಟಿಗೆಯನ್ನು, ಸಿಂಕೊನಾ ತೊಗಟೆಯೆಂದು ನೀವು ಭಾವಿಸತಕ್ಕದು.

ಕಟ್ಟನ್ನು ಹೊರುತ್ತಿರುವವರನ್ನು ಹಿಂಬಾಲಿಸಿಕೊಂಡು ನೀವು ಹೋಗುವಿರಾದರೆ ನಿಮಗೆ ಇಡಿ ದಿವಸ ನಡೆಯುವ [illegible] ಸದ್ದು ಕೇಳಿಸುವುದು ಈ ಸದ್ದು ಕ್ರಮೇಣ ದೊಡ್ಡದಾಗುತ್ತಿರುವುದು ಈ ಸದ್ದು ಅಲ್ಲೆ ಮುಂದೆ, ಮರದ ಗದ್ದಲಿಯಿಂದ ಸಿಂಕೋನಾ ತೊಗಟೆಗಳನ್ನು ಹಗಲಿರುಳು ಒಡೆಯುವ ಸ್ತ್ರೀ ಸಮೂಹದಿಂದ ಹೊರಡುವುದಾಗಿರುತ್ತದೆ [illegible] ಗಳಿರುವ [illegible] ಗಳನ್ನು ಈ [illegible] ಈ ತೊಗಟೆಯನ್ನು [illegible] [illegible] ಅದನ್ನು [illegible] ಕಾರ್ಖಾನೆಗೆ [illegible] ವರು

[illegible] ಸಿಂಕೊನಾ ತೊಗಟೆಯನ್ನು ಔಷದಿಯಾಗಿ ಉಪಯೋಗಿಸುತ್ತಿದ್ದರು ಆದರೆ [illegible] ವಿಜ್ಞಾನದ ಸಹಾಯದಿಂದ ಈ ತೊಗಟೆಯಿಂದ [illegible] ಕ್ವಿನೀನನ್ನು [illegible] ತೆಗೆಯುತ್ತಿರುವರು.

[illegible] ಸೆಕರಿನ ಈ ಮರವು ನೋಟಕ್ಕೆ ಅಷ್ಟೊಂದು ರಮಣೀಯವಾಗಿರದಿದ್ದರೂ, ಮಲೇರಿಯಾ ಹಾವಳಿಯುಳ್ಳ ಉಷ್ಣ ಪ್ರದೇಶದವರಿಗೆ ಅಲ್ಲದೆ, ಶೀತ, ಇನ್‌ಫ್ಲುಯೆಂಜಾ ಇದ್ದ ಕಡೆಯುವರಿಗೆ ಅಮೂಲ್ಯವಾಗಿರುತ್ತದೆ ಮೇಲಿನ ರೋಗಗಳನ್ನು ಸಂಪೂರ್ಣವಾಗಿ ತಡೆಯುವ ವಿಚಾರದಲ್ಲಿ ಕ್ವಿನೀನು ಮಹಾ ಸೇವೆಯನ್ನು ಮಾಡಿರುತ್ತದೆ [illegible] ಗಾರರು ಕೆಲಸಕ್ಕೆ ಬಾರದಿರುವುದನ್ನು ಶಾಲೆಗಳಲ್ಲಿ ಮಕ್ಕಳ ಗೈರುಹಾಜರಿ, ಇವುಗಳನ್ನು ಇನ್‌ಫ್ಲುಯೆಂಜಾ ಜ್ವರವು ತಲೆದೋರಿದ ಸಮಸಲ್ಪಟ್ಟರೆ ತಡೆಯಲಾಗುವುದು.

ಈ ಕುರಿತು ಬರ್ಲಿನ್ ನಗರದ ಪ್ರಖ್ಯಾತ ಪ್ರೊಫೆಸರರೊಬ್ಬರ ಅನುಭವವು ಇಲ್ಲಿ ಕೊಡಲಾಗಿದೆ ಕಳೆದ 15 ವರ್ಷಗಳ ಸಮಯದಲ್ಲಿ ಅವರಿಗೆ ಮತ್ತವರ ಕುಟುಂಬಿಕರಿಗೆ ಇನ್‌ಫ್ಲುಯೆಂಜಾವೆ ತಗಲಲಿಲ್ಲ. ಈ ಅವಧಿಯಲ್ಲಿ ಅವರು ದಿನಾಲು ಒಂದಿಷ್ಟು ಕ್ವಿನೀನನ್ನು ಸೇವಿಸುತ್ತಿದ್ದರಂತೆ

ಗಿರಣಿ, ಕಾರ್ಖಾನೆ, ಬೇಂಕು ಇತ್ಯಾದಿ ಸಂಸ್ಥೆಗಳಲ್ಲಿ ಕ್ವಿನೀನಿನಿಂದ ಒಂದು ರೋಗಗಳನ್ನು ತಡೆಯುವ ವಿಚಾರದಲ್ಲಿ ಮಹದುಪಕಾರವನ್ನು ಮಾಡಿರುತ್ತದೆ

ನಿಮಗೆ ಬೇಕಾದುದನ್ನು ತಿನ್ನಿರಿ— ಮತ್ತೆ ವೇದನಾಮಯ ಪರಿಣಾಮಗಳುಂಟಾಗದಂತೆ

ಮತ್ತೆ ಪರಿಣಾಮಗಳ ಭಯವಿಲ್ಲದೆ ಪ್ರತಿ ದಿನಾಲೂ ಪ್ರತಿ ಊಟಕ್ಕೆ ನಿಮಗೆ [illegible] ದನ್ನು ತಿನ್ನಲು ಅನುಕೂಲವಿದ್ದ [illegible] ನಿಮ್ಮಲ್ಲಿ ಯಾವ ತರದ ಸುಖಭಾವವು ಉಂಟಾಗುವುದು!

ಹೊಟ್ಟೆ ಅನಾರೋಗ್ಯವನ್ನು ಅನುಭವಿಸುವ ಅನೇಕರಿಗೆ ಇದು ಕನಸಿನಲ್ಲೂ ಕೂಡ ಅಸಾಧ್ಯದ ವಿಷಯವಾಗಿರುತ್ತದೆ. ಆದರೆ ಸುಲಭವಾಗಿ, ಕಡಿಮೆ ಖರ್ಚಿನಲ್ಲಿ ಏನೊಂದು ಅಪಾಯವಿಲ್ಲದೆ, ಅದು ನಿಜವಾಗುವಂತೆ ಮಾಡಲು ನಿಮಗೆ ಸಾಧ್ಯವಿದೆ ಎಂಬುದು ಕೆಳಗಿನ ಪತ್ರಗಳಿಂದ ಖಚಿತವಾಗುವುದು

“ಈಗ ನನಗೆ ಬೇಕಾದುದನ್ನು ತಿನ್ನಲಿಕ್ಕಾಗುತ್ತದೆ” ಎಂದು ಒಂದರ ಸೂಚನೆ— ನನ್ನ ಹಸಿವು ಸಹಜ ಸ್ಥಿತಿಗೆ ಬಂದಿರುವುದು” ಎಂದ ಇನ್ನೊಂದರ ಅಭಿಪ್ರಾಯ, “ಯಾವುದನ್ನು ತಿನ್ನಲಿಕ್ಕೆ ಸಾಧ್ಯವಿದೆ” ಎಂದು ಇನ್ನೊಂದರ ಕೂಗು,—“ಅನೇಕ ತಿಂಗಳ ನಂತರ ಇದೆ ನನ್ನ ಮೊದಲ ರುಚಿಯಾದ ಊಟ” ಹೀಗೆ ಹೊಟ್ಟೆಯ ಅನಾರೋಗ್ಯದಿಂದ ನರಳುವ ವಿವಿಧ ಜನರಿಂದ ವಿವಿಧ ಅಭಿಪ್ರಾಯಗಳಿಂದ ಕೂಡಿದ ಪತ್ರಗಳು ಬಂದಿವೆ ಏನೊಂದು ದುಷ್ಪರಿಣಾಮಗಳ ಭಯವಿಲ್ಲದೆ ಅವರು ತಮ್ಮ ಹಸಿವನ್ನು ಪಡೆದ ಕುರಿತ ಕೃತಜ್ಞತೆಯನ್ನು ಸೂಚಿಸಲು, ಈ ಪತ್ರಗಳನ್ನು ಬರೆದುಬಿಟ್ಟಿರುವರು

ನಿಮ್ಮ ವಿಚಾರವೇನು? ಊಟದ ಸಮಯ ನಿಂವು ಊಟಕ್ಕೆ ಸಿದ್ಧರಾಗುವಿರೋ? ನೋವಿನ ಭಯವಿಲ್ಲದೆ ನಿಮ್ಮದೇ. ಇಚ್ಛಿಸುದುದನ್ನು ತಿನ್ನುವ ಧೈರ್ಯವು ನಿಮಗಿದೆಯೋ ಹಾಗಾದರೆ ಇನ್ನು ಸಮಯ ವಿಳಂಬ ಮಾಡಬೇಡಿರಿ. ಮೆಕ್ಲಿನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ಸೇವಿಸಿರಿ ಅದರುಪಯೋಗದಿಂದ ಹಸಿವು ಮರಳಿ ಬರುವುದನ್ನು ನೋಡಿರಿ ಕಾರಣ ಒಳಗಿರುವ ವಿಷಗಳನ್ನು ಹೊರಡೂಡಿ, ದ್ರವಾಧಿಕ್ಯವನ್ನು ಕಡಿಮೆ ಮಾಡುವ ಮತ್ತು ಹೊಟ್ಟೆಯ ಒಳಪಾರ್ಶ್ವದ ಉರಿತವನ್ನು ಕಡಿಮೆ ಮಾಡುವ ದಿವ್ಯ ಔಷಧವು ಅದು

ಮತ್ತೊಂದು ವಿಚಾರವನ್ನು ಗಮನದಲ್ಲಿಡಿರಿ ಮೆಕ್ಲಿನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ಸಮಯಕ್ಕೆ ಸರಿಯಾಗಿ ಸೇವಿಸಿದರೆ ಆಗ ನೀವು ಆಹಾರವನ್ನು ರುಚಿಸುವುದಲ್ಲದೆ, ಹೆಚ್ಚಿನ ಪರಿಣಾಮಗಳನ್ನು ಅನುಭವಿಸವಿರಿ ನಿಮ್ಮ ಉದರಪೀಡೆಯ ಭಯಂಕರ ರೂಪವನ್ನು ಹೊಂದುವುದನ್ನು ಅದು ತಡೆಯುತ್ತದೆ. ಕಾರಣ ಅತಿ ಕ್ಷಯವಾದ ಹೊಟ್ಟೆಯಿಂದ ಕೊನೆಗೆ ನೀವು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುವುದು

ಆದುದರಿಂದ ಮೆಕ್ಲಿನ್ ಬ್ರಾಂಡ್ ಸ್ಟಾಮಕ್ ಪೌಡರನ್ನುಪಯೋಗಿಸಲು ಈಗಲೆ ಪ್ರಾರಂಭ ಮಾಡಿರಿ

Alex. C. Maclean

ಎಂಬ ಸಹಿಯು ಬಾಟ್ಲಿಯ ಮೇಲೂ, ಪೆಟ್ಟಿಗೆಯ ಮೇಲೂ ಅದೇ ಸಹಿಯುಕೆಂಪು ಮುದ್ರೆಯು ಇರುವಂತೆ ಜಾಗರೂಕರಾಗಿರಿ. ಎಲ್ಲಾ ದವಾಖಾನೆಗಳಲ್ಲಿ ಪುಡಿಯಾ ಮಾತ್ರರೂಪದಲ್ಲಿ ದೊರೆಯುತ್ತದೆ



S. N 80



ನಿಮ್ಮ ವ್ಯಾಪಾರಿಗಳಲ್ಲಿಗೆ ಹೋಗಿ ಸೆವೆನೋಕ್ಲಾಕ್ ಷೇವಿಂಗ್ ರೇಜರ್ ಸೆಟ್ಟನ್ನು ಕೇಳಿರಿ ಅದರಲ್ಲಿ ಒಂದು ಸೆವೆನೋಕ್ಲಾಕ್ ರೇಜರೂ, ಎರಡು ಸೆವೆನೋಕ್ಲಾಕ್ ಬ್ಲೇಡುಗಳೂ ಇವೆ ಅವುಗಳಲ್ಲಿ ಕ್ಷೌರದ ಆಧುನಿಕ ಸೌಕರ್ಯಗಳೆಲ್ಲಾ ಕೂಡಿವೆ ಬೆಲೆ ಅತಿ ಕಡಿಮೆ.

ಸುಂದರವಾದ ಅಂದದ ಪೆಟ್ಟಿಗೆಯಲ್ಲಿ ಈ ಕ್ಷೌರ ಸೆಟ್ಟು ಸಂಪೂರ್ಣವಿದೆ, ಅದರ ಬೆಲೆ ಒಂದೇ

12 ಆಣೆಗಳು ಮಾತ್ರ

706

... ಅವತಾರಗಳು ...

ಪರಿತ್ರಾಣಾಯ ಸಾಧೂನಾಂ । ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ । ಸಂಭವಾಮಿ ಯುಗೇ ಯುಗೇ ॥

ದೇವರು ಈ ಭೂಲೋಕದ ಜನರನ್ನು ಉದ್ಧರಿಸುವುದಕ್ಕಾಗಿ ಮನುಷ್ಯನ ಜನ್ಮವನ್ನು ತಾಳುತ್ತಾನೆ. ಇದಕ್ಕೇ ಹೇಳುವದು ದೇವರ ಅವತಾರವೆಂದು. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೀಗೆಂದು ಹೇಳಿರುವನು:- "ನನಗೆ ಜನನಮರಣಗಳೆಂಬುದು ಇಲ್ಲ. ನಾನು ಸೃಷ್ಟಿ, ಸ್ಥಿತಿ, ಲಯ ಇವುಗಳ ಕರ್ತನು. ಲೋಕದಲ್ಲಿ ಧರ್ಮವು ಕುಂದಿ ಅಧರ್ಮವು ಹೆಚ್ಚಾದಾಗ್ಗೆ, ದುಷ್ಟಜನರನ್ನು ಸಂಹರಿಸಿ, ಭಕ್ತರನ್ನು ಕಾಪಾಡುವುದಕ್ಕೆ ಮತ್ತು ಧರ್ಮವನ್ನು ಸ್ಥಾಪಿಸುವುದಕ್ಕಾಗಿ ನಾನು ಪ್ರತಿಯುಗದಲ್ಲಿಯೂ ನನ್ನ ಸತ್ವಬಲದಿಂದ ಅವತರಿಸುತ್ತೇನೆ." ಹೀಗೆ ಕೃತಯುಗ, ತ್ರೇತಾಯುಗ ಮತ್ತು ದ್ವಾಪರಯುಗಗಳಲ್ಲಿ ದೇವರು ಅನೇಕ ಅವತಾರಗಳನ್ನು ಧರಿಸಿದನೆಂದು ನಾವು ಪುರಾಣಗಳಿಂದ ತಿಳಿಯುತ್ತೇವೆ. ಅವತಾರಗಳು ಯಾವಾಗಲೂ ಬ್ರಹ್ಮ, ವಿಷ್ಣು ಮತ್ತು ಶಿವ ಈ ಮೂವರಿಂದಲೂ ಹೊರಡುತ್ತವೆ. ಈ ಕಲಿಯುಗದಲ್ಲಿ ದೇವರು ಕಲ್ಕಿ ಅವತಾರವನ್ನು ಧರಿಸುವನೆಂದು ಪುರಾಣಗಳಿಂದ ತಿಳಿಯುತ್ತೇವೆ. ಮಹಾಭಾರತದ ವನಪರ್ವದಲ್ಲಿ ಮಾರ್ಕಂಡೇಯ ಋಷಿಗಳು ಧರ್ಮರಾಜನನ್ನು ಕುರಿತು ತನಗೆ ಪರಮಾತ್ಮನು ಹೀಗೆಂದು ಹೇಳಿರುವನು:- "ಯಾವಾಗ ದುಷ್ಟರು ಈ ಭೂಲೋಕದಲ್ಲಿ ಹೆಚ್ಚಾಗಿ, ಧರ್ಮವು ಕುಂದುತ್ತದೋ ಆ ಸಮಯದಲ್ಲಿ ನಾನು ಅವತರಿಸಿ ಅದನ್ನು ಸರಿಪಡಿಸುತ್ತೇನೆ. ಯಾವ ಕಾಲದಲ್ಲಿ ಸ್ವಾರ್ಥಮತ್ಸರಗಳಿಂದ ಕೂಡಿದ ಅಸುರರು ಮತ್ತು ರಾಕ್ಷಸರು ಜನಿಸಿ ಲೋಕವನ್ನು ಕೆಡಿಸುತ್ತಾರೋ ಆ ಸಮಯದಲ್ಲಿ ನಾನು ನನ್ನ ಭಕ್ತರಲ್ಲಿ ಜನ್ಮತಾಳಿ ದುಷ್ಟರನ್ನು ಸಂಹರಿಸಿ ಲೋಕಕ್ಕೆ ಶಾಂತಿಯನ್ನು ತರುತ್ತೇನೆ. ಕೃತಯುಗದಲ್ಲಿ ನನ್ನ ವರ್ಣವು ಬಿಳಿಯದು, ತ್ರೇತಾಯುಗದಲ್ಲಿ ಹಳದಿ, ದ್ವಾಪರಯುಗದಲ್ಲಿ ಕೆಂಪು ಮತ್ತು ಕಲಿಯುಗದಲ್ಲಿ ಕಪ್ಪು."

ಅವತಾರಗಳಲ್ಲಿ ಪೂರ್ಣ ಮತ್ತು ಅಂಶ ಅವತಾರಗಳೆಂದು ಇವೆ. ಶ್ರೀಕೃಷ್ಣನು ದೇವರ ಹದಿನಾರು ಕಲೆಗಳಿಂದ ಕೂಡಿದ ಪೂರ್ಣ ಅವತಾರಿಯು. ಶ್ರೀ ರಾಮನು ದೇವರ ಹದಿನಾಲ್ಕು ರಶ್ಮಿಗಳ ಅವತಾರವೆಂದು ಪುರಾಣಗಳು ಹೇಳುತ್ತವೆ. ಶ್ರೀ ಶಂಕರಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರು ದೇವರ ಅಂಶದ ಅವತಾರಿಗಳು. ಕೆಲವು ಅಜ್ಞಾನಿಗಳು ಜನನಮರಣರಹಿತನಾದ ದೇವರು ಜನಿಸುವುದು ಹೇಗೆ? ನಾಶರಹಿತನಾದ ದೇವರು ಈ ನಾಶವಾಗುವ ಶರೀರವನ್ನು ಧರಿಸುವುದು ಹೇಗೆ? ಎಂದು ವೃಥಾ ವಾದಮಾಡುತ್ತಾರೆ. ದೇವರು ಸರ್ವಶಕ್ತಿಮಯನು ಮತ್ತು ಸರ್ವಜ್ಞನು. ತನ್ನಲ್ಲಿ ತಾನು ನಿರ್ಗುಣನಾಗಿರತಕ್ಕ ಅವನು ಸೃಷ್ಟಿಗಾಗಿ ಗುಣವನ್ನು ಸ್ವೀಕರಿಸುತ್ತಾನೆ, ವ್ಯಕ್ತಿಯಾಗುತ್ತಾನೆ. ಭಕ್ತರಿಗಾಗಿ ಅವನು ಆಕಾರವನ್ನು ಧರಿಸುತ್ತಾನೆ. ಒಬ್ಬ ದರ್ಜಿಯು ಬೇರೆಯವರ ಬಗ್ಗೆ ಅಂಗಿಗಳನ್ನು ಹೊಲಿಯುವುದು ಮಾತ್ರವಲ್ಲ ತನಗೆ ಬೇಕಾದ ಅಂಗಿಗಳನ್ನು ಹೊಲಿಯುವಂತೆ, ಬೇರೆ ಜೀವಿಗಳಿಗೆ ದೇಹವನ್ನು ಕೊಡುವ ದೇವರಿಗೆ ತನಗೆ ದೇಹವನ್ನು ನಿರ್ಮಾಣಮಾಡಿಕೊಳ್ಳಲಿಕ್ಕೆ ಏನೂ ಕಷ್ಟವಿಲ್ಲ. ಅವನು ತನ್ನ ಮಾಯೆಯಿಂದಲೇ ದೇಹವನ್ನು ಧರಿಸಿ ಅವತರಿಸುತ್ತಾನೆ. ಮನುಷ್ಯನು ತನ್ನ ಕರ್ಮಗಳಿಗನುಸಾರವಾಗಿ ಜನಿಸುತ್ತಾನೆ. ಆದರೆ ದೇವರು ತನ್ನ ಮಾಯೆಯಿಂದಲ್ಲದೆ ಈ ಕರ್ಮಗಳಿಂದ ದೇಹವನ್ನು ಧರಿಸುವದಿಲ್ಲ. ಪ್ರಕೃತಿಯ ಕರ್ತನು ದೇವರು. ಆದ್ದರಿಂದ ಮನುಷ್ಯನಿಗೆ ಇರುವ ನಿಬಂಧನೆಗಳು ಮತ್ತು ಕರ್ಮಫಲಗಳ ಬಂಧನೆಗಳು ಅವನಿಗಿಲ್ಲ. ಅವನು ಪರಮಾತ್ಮನ ದೃಷ್ಟಿಯಲ್ಲಿಯೇ ಈ ಅವತಾರ ಧರಿಸಿದಾಗ ಕೂಡಾ ಇರುವನು.

ಒಬ್ಬ ಜೀವನ್ಮುಕ್ತನು ತನ್ನ ತಪಸ್ಸಿನ ಮತ್ತು ಸಾಧನೆಗಳ ಪ್ರಭಾವದಿಂದ ಕೆಲವು ಜನರನ್ನು ಮಾತ್ರ ಉದ್ಧರಿಸಬಲ್ಲನು. ಬಾವಿಯಲ್ಲಿದ್ದ ನೀರನ್ನು ಕೆಲವರು ಮಾತ್ರ ಹೇಗೆ ಉಪಯೋಗಿಸುತ್ತಾರೋ ಹಾಗೆಯೇ ಈ ಜೀವನ್ಮುಕ್ತನು ಕೆಲವರಿಗೆ ಮಾತ್ರ ಜ್ಞಾನಕರುವನು. ಆದರೆ ಅವತಾರಿಗಳು ಸಾವಿರಾರು ಜನರ ಅಜ್ಞಾನವನ್ನು ನಾಶಪಡಿಸುವರು ಮತ್ತು ಅವರಿಗೆ ಮುಕ್ತಿಕೊಡುವರು. ಅಂಥಾ ಅವತಾರಗಳು ದೊಡ್ಡ ನದಿಗಳು ಇದ್ದ ಹಾಗೆ. ಸಾವಿರಾರು ಜನರು ನದಿಗಳಿಂದ ಉಪಯೋಗ ಹೊಂದುತ್ತಾರೆ. ದೇವರು ಅವತರಿಸುವ ಮೊದಲು ಕೆಲವು ಮಹಾ ಪುರುಷರು ಜನಿಸಿ ಈ ಭೂಲೋಕದ ಜನರಿಗೆ ಭಜನೆ, ಕೀರ್ತನೆ, ಧ್ಯಾನ, ಯೋಗಾಭ್ಯಾಸ ಮೊದಲಾದುವುಗಳಿಂದ ಜ್ಞಾನವನ್ನು ಉಂಟುಮಾಡಿಕೊಡುತ್ತಾರೆ. ಈ ಹಿಂದುಸ್ಥಾನದಲ್ಲಿ ಇಂಥವರು ಪ್ರತಿ ಶತಮಾನದಲ್ಲಿ ಜನಿಸುತ್ತಾರೆ. ಶ್ರೀರಾಮಕೃಷ್ಣ ಪರಮಹಂಸರು, ಶ್ರೀವಿವೇಕಾನಂದ ಸ್ವಾಮಿಗಳು ಮತ್ತು ಶ್ರೀಸ್ವಾಮಿ ರಾಮತೀರ್ಥರು ಕಳೆದ ಶತಮಾನದಲ್ಲಿ ಜನಿಸಿದರು. ಈಗ ಪ್ರಕೃತ ತಿರುವಣ್ಣಾಮಲೆಯಲ್ಲಿ ಶ್ರೀರಮಣ ಮಹರ್ಷಿಗಳೂ ಪುದುಚೇರಿಯಲ್ಲಿ ಶ್ರೀಅರವಿಂದ ಘೋಷರೂ ಜೀವನ್ಮುಕ್ತರಾಗಿರುತ್ತಾರೆ. ಇವರಿಂದ ಎಷ್ಟೋ ಜನರು ಜ್ಞಾನಹೊಂದುತ್ತಾರೆ. ಅನೇಕ ಜನರಿಗೆ ಇಂಥವರ ಮಹತ್ವವು ಅವರ ಜೀವನಕಾಲದಲ್ಲಿ ಕಂಡು ಬರುವದಿಲ್ಲ.

ಈ ಕಲಿಯುಗದಲ್ಲಿ ಜನರು ತಮ್ಮ ದುರ್ಗುಣಗಳನ್ನು ಬಿಟ್ಟು ಜ್ಞಾನ ಹೊಂದಲಿಕ್ಕೆ ಶ್ರೀರಾಮನ ಹಾಗೂ ಶ್ರೀಕೃಷ್ಣನ ಅವತಾರ ಚರಿತ್ರೆಗಳು ಶ್ರೇಷ್ಠವಾದವುಗಳು. ಯಾಕೆಂದರೆ ಶ್ರೀರಾಮನು ದುಷ್ಟರನ್ನು ಸಂಹರಿಸಿ ಭಕ್ತರನ್ನು ಕಾಪಾಡಿದ್ದೂ, ಪಿತೃವಾಕ್ಯ ಪರಿಪಾಲನಾರ್ಥವಾಗಿ ಹದಿನಾಲ್ಕು ವರ್ಷಗಳ ಪರ್ಯಂತ ಅರಣ್ಯವನ್ನು ಸಂಚರಿಸಿದ್ದೂ, ಪತಿವ್ರತಾಶಿರೋಮಣಿಯಾದ ಸೀತಾದೇವಿಯು ತನ್ನ ಗಂಡನನ್ನು ಅರಣ್ಯಕ್ಕೆ ಹಿಂಬಾಲಿಸಿದ್ದೂ, ಲಕ್ಷ್ಮಣ ಮತ್ತು ಭರತರ ಭ್ರಾತೃಪ್ರೇಮವೂ, ಹನುಮಂತ ಮತ್ತು ವಿಭೀಷಣರ ಭಕ್ತಿಯೂ ಇವುಗಳನ್ನೆಲ್ಲಾ ಕೇಳಿದರೆ ನಾವು ಈ ನರಜನ್ಮದಲ್ಲಿ ಹುಟ್ಟಿ ಸಂಸಾರಿಕರಾಗಿ ಯಾವ ರೀತಿ ವರ್ತಿಸಬೇಕೆಂಬದು ನಮ್ಮ ಮನಸ್ಸಿಗೆ ಖಚಿತವಾಗುತ್ತದೆ. ಶ್ರೀಕೃಷ್ಣನ ಅವತಾರದಲ್ಲಿ ಅವನ ಲೀಲೆಗಳನ್ನು ಕೇಳಿದರೆ ಬಹಳ ಭಕ್ತಿ ಮತ್ತು ಪ್ರೇಮಗಳು ಹುಟ್ಟುತ್ತವೆ. ಆತನು ತನ್ನ ಭಕ್ತರಾದ ಪಾಂಡವರಿಗಾಗಿ ಅರ್ಜುನನ ರಥಕ್ಕೆ ಸಾರಥಿಯಾದನು. ನವವಿಧ ಭಕ್ತಿಗಳನ್ನು ತನ್ನ ಲೀಲೆಗಳಿಂದ ಜನರಿಗೆ ತೋರಿಸಿದನು. ಅಲ್ಲದೇ ಈಗ ಇದೇ ಭೂಲೋಕವೇ ಮನ್ನಣೆ ಕೊಡುವ ಶ್ರೀ. ಮದ್ಭಗವದ್ಗೀತೆಯನ್ನು ಅರ್ಜುನನಿಗೆ ರಣರಂಗದಲ್ಲಿ ಉಪದೇಶಿಸಿದನು ಮತ್ತು ಎಲ್ಲಕ್ಕೂ ತಾನು ಕರ್ತನೆಂದು ವಿಶ್ವರೂಪವನ್ನು ಧರಿಸಿ ಅರ್ಜುನನಿಗೆ ತೋರಿಸಿದನು. ಆದುದರಿಂದಲೇ ಈ ಎರಡು ಅವತಾರಗಳು ಶ್ರೇಷ್ಠವೆನಿಸಿಕೊಳ್ಳುತ್ತವೆ.

ಈ ಕಲಿಯುಗದಲ್ಲಿ ಅಧರ್ಮವು ಹೆಚ್ಚಿ ಧರ್ಮವು ಕುಂದುತ್ತಾ ಬರುತ್ತದೆ. ಅಲ್ಲದೆ ಪ್ರತಿ ಶತಮಾನದಲ್ಲಿ ಸತ್ಪುರುಷರು ಜನಿಸುತ್ತಾರೆ. ಆದುದರಿಂದ ದೇವರ ಕಲ್ಕಿ ಅವತಾರವನ್ನು ಹಾರೈಸಬಹುದು. ಯಾವ ಸಮಯದಲ್ಲಿ ದೇವರು ಈ ಅವತಾರವನ್ನು ತಾಳುವನೋ ಅವನೇ ಬಲ್ಲನು. ಆ ಕಲ್ಕಿ ಅವತಾರವು ಈ ಭೂಲೋಕಕ್ಕೆ ಆತ್ಮಾನಂದವನ್ನೂ, ಶಾಂತಿಯನ್ನೂ ತರಲಿ. ಅಂಥಾ ಕಲ್ಕಿ ಅವತಾರಕ್ಕೆ ನಮ್ಮ ಅನಂತಾನಂತ ವಂದನೆಗಳು.

ಶ್ರೀ ಕಲ್ಕಿ ಅವತಾರಕ್ಕೆ ಜಯವಾಗಲಿ.

—ರಾಮದಾಸ

ಪದೋನ್ನತಿಗೆ ನೀವು ಯೋಗ್ಯರೆ?

ನಿಮ್ಮನ್ನು ನೀವೆ ನೋಡಿ: ನಿಮ್ಮಲ್ಲಿ ಶಕ್ತಿಯಿರುವುದಿಲ್ಲ ... ನಿಮ್ಮ ಮುಖದ ಮೇಲೆ ಸಂತೋಷವಿಲ್ಲ ... ನಿಮ್ಮ ಕಣ್ಣಲ್ಲಿ ಯಾವಾಗಲೂ ನಿದ್ರೆ ಕಾಣಿಸುತ್ತದೆ. ನಿಮ್ಮ ಉದರದೊಳಗೆ ಮತ್ತು ರಕ್ತದೊಳಗೆ ವಿಷವಿರುವುದೆಂದು ಇವುಗಳೆಲ್ಲ ಚಿಹ್ನೆಗಳು. ಇನೊಸ್ 'ಫ್ರುಟ್ ಸಾಲ್ಟ್' Eno's 'Fruit Salt' ಮಾತ್ರ ಈ ವಿಷವನ್ನು ನಿಮ್ಮ ದೇಹದಿಂದ ಹೊರದೂಡಬಲ್ಲುದು. ಸಾವಿರಾರು ಮಂದಿ ಪುರುಷರು, ಸ್ತ್ರೀಯರು, ಮತ್ತು ಮಕ್ಕಳು ವೈದ್ಯರ ಬೋಧನೆ ಪಡಕೊಂಡು, ಇನೊಸ್ 'ಫ್ರುಟ್ ಸಾಲ್ಟ್'ನ್ನು Eno's 'Fruit Salt' ದಿನಾಲೂ ಸೇವಿಸುತಿದ್ದಾರೆ. ಅದರಿಂದ ಅವರು ಆರೋಗ್ಯವಂತರೂ, ಹರ್ಷಿತವಂತರೂ ಆಗಿರುವರು. ಆರೋಗ್ಯಕ್ಕಾಗಿ ಇಂದಿನಿಂದಲೇ ಇನೋವನ್ನು ತೆಗೆದುಕೊಳ್ಳಲುಪಕ್ರಮಿಸಿರಿ.

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ. ಪರಿಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳಿಂದ ಇನೊಸ್ 'ಫ್ರುಟ್ ಸೋಲ್ಟ್' 'Eno's 'Fruit Salt' ತಯಾರಿಸಲ್ಪಟ್ಟಿರುತ್ತದೆ. ಇನೋ ಡೋಜಿಗೆ ಖರ್ಚು ಕಡಿಮೆ. ಎಲ್ಲರಿಗೂ ಈ ಆರೋಗ್ಯಕರ ಪಾನೀಯ ಪಡೆಯಲು ಸಾಧ್ಯವಿದೆ. ಎಲ್ಲಾ ಕಡೆಗಳಲ್ಲಿಯೂ ಮೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ.

"ಇಮಿಟೇಶನನ್ನು ತಿರಸ್ಕರಿಸಿರಿ. ಒಳ್ಳೆಯ ಖಾತ್ರಿ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವವು ಮಾಪರಿಯ ಪಕೆಂಗು ತೀರಾ ಸಮಾಧಾನಕರದ್ದೆಂದು ಖಚಿತಪಡಿಸಿದೆ".

EVK 4



ಒರಿಸ್ಸಾ ಸರಕಾರದ ಮಂತ್ರಿಗಳು ಸಕೀರ್ಟಿನ ಭತ್ತೆ ಖರ್ಚುಗಳು ಎಷ್ಟಂತೆ?

ಕಾಂಗ್ರೆಸ್ ಮಂತ್ರಿಗಳು ಎಷ್ಟೋ ಸಹಸ್ರ ರೂಪಾಯಿಗಳನ್ನು ಪ್ರಯಾಣಕ್ಕಾಗಿಯೇ ವೆಚ್ಚ ಮಾಡುತ್ತಾರೆಂಬ ಸುಳ್ಳು ವಾರ್ತೆಗಳು ಒರಿಸ್ಸದಲ್ಲಿ ಪ್ರಕಟವಾಗುತ್ತಿರುವ ಕಾರಣ ಪಾರ್ಲಿಮೆಂಟರಿ ಸೆಕ್ರೆಟರಿಯವರು ಈ ರೀತಿಯಾಗಿ ಸತ್ಯ ವಾರ್ತೆಯನ್ನು ಅಂಕೆ ಸಂಖ್ಯೆಗಳೊಡನೆ ಪ್ರಕಟಿಸಿರುವರು.

ಈ ಮಂತ್ರಿಗಳು ಅಧಿಕಾರ ವಹಿಸಿಕೊಂಡಂದಿನಿಂದ, ಮುಖ್ಯ ಮಂತ್ರಿಯವರು ಸಂಸ್ಥಾನದೊಳಗೆ ಸಂಚಾರಕ್ಕಾಗಿ ರೂ. 156, ಹೊರಗೆ ರೂ. 570; ಎರಡನೆಯವರು ಕ್ರಮವಾಗಿ ರೂಪಾಯಿ 1957 ಮತ್ತು 549; ಮೂರನೆಯವರು ರೂಪಾಯಿ 161 ಮಾತ್ರ ಪ್ರಯಾಣ ಭತ್ತೆ ಪಡೆದಿರುವರು.

ಕಾಂಗ್ರೆಸಿನ ಕಾರ್ಯಕಾರೀ ಮಂಡಲದ ಸಭೆಗಳಿಗೆ ಮಂತ್ರಿಗಳು ಸ್ವಖರ್ಚಿನಿಂದಲೇ ತೆರಳಿ ಮರಳಿದವರು. ಸಂಸ್ಥಾನದೊಳಗೆ ಸಂಚರಿಸುವಾಗ ಮೂರನೆ ತರಗತಿಯ ರೈಲ್ವೆ ಟಿಕೇಟಿನ ಬೆಲೆ, ಮತ್ತು ಇತರ ಪ್ರಯಾಣಕ್ಕೆ 6 ಆಣೆ ಪ್ರಕಾರ ಭತ್ತೆ (ಅದೇ ದಿನ ಮರಳಿದಾಗ 4 ಆಣೆ ಮಾತ್ರ ಪಡೆದವರು. ಈ ಮಂತ್ರಿಗಳಿಗೆ ಸರಕಾರವು ಕಾರುಗಳನ್ನು ಕೊಟ್ಟಿಲ್ಲ; ಕಾರು ಪ್ರಯಾಣದ ಎಲೌನ್ಸುಗಳು ಸಹ ಇಲ್ಲ.

ದೈನಿಕ ಎಲೌವೆನ್ಸನ್ನು ರೂ. 15ರಿಂದ 10ಕ್ಕೆ ಇಳಿಸಿರುವರು. ಇದರಲ್ಲಿ ಪ್ರಯಾಣದ ಖರ್ಚು ಕೂಡಿರುವುದು. ಇಂಡಿಯಾ ಸರಕಾರವು ಕರೆದ ಸಭೆಗಳಿಗೆ ಹೋದಾಗ ಸಹ ಸೆಕೆಂಡ್ ಕ್ಲಾಸಿನ 1¼ ಚಾರ್ಜನ್ನು ಮಾತ್ರ ಪಡೆದಿರುವರಲ್ಲದೆ, ಡಬ್ಬಲ್ ಫಸ್ಟ್ ಕ್ಲಾಸನ್ನು ಕೇಳಿದ್ದಿಲ್ಲ.

ಹಿಂದಣ ಮಂತ್ರಿಗಳ ಸಂಚಾರದ ಹಣವೆಲ್ಲ, ಇಷ್ಟಪಥಿಯಲ್ಲಿ ಎಷ್ಟಾಗಿದ್ದಿತೋ! ನಾಲ್ಕು ಮಡಿ ಆಗಿದ್ದೀತೆಂದರೆ ತಪ್ಪಾಗದು.

ಮದ್ರಾಸು ಮಂತ್ರಿಗಳ ಸಂಸ್ಥಾನ ಯಾತ್ರೆಯ ಖರ್ಚು ಸಹ ಇಷ್ಟಾದ ದಾಮಾಶಾಯಿದಲ್ಲಿರುವುದೇ?

ಇಂಡಿಯಾ ಸೆಕ್ರೆಟರಿ— ಪಂಡಿತ ಜವಾಹರಲಾಲರ ಭೇಟಿ

ಫೆಡರೇಶನ್ ರಾಜಾಂಗ ನೀತಿಯಲ್ಲಿ ಬದಲಾವಣೆಗಳಾಗುವುವಂತೆ.

ಲಂಡನಿಗೆ ತೆರಳಿದ ಪಂಡಿತ ಜವಾಹರಲಾಲರಿಗೆ, ಎಲ್ಲಾ ವರ್ಗದವರಿಂದಲೂ ಉತ್ಸಾಹದ ಸ್ವಾಗತಗಳು ದೊರಕಿತವು. ಇಂಡಿಯಾ ಸೆಕ್ರೆಟರಿಯವರು ಖುದ್ದಾಗಿ ಬಂದು, ಪಂಡಿತ ಜವಾಹರಲಾಲರಿಗೆ ಫೆಡರೇಶನಿನ ವಿಷಯ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ತಿಳಿಯಲು ಸಂಭಾಷಿಸಲು ಆಹ್ವಾನಕೊಟ್ಟ ಮೇರೆಗೆ, ಪಂಡಿತರು ಇಂಡಿಯಾ ಸೆಕ್ರೆಟರಿಯವರಲ್ಲಿಗೆ ತೆರಳಿ ಮಾತುಕತೆಗಳನ್ನು ನಡೆಯಿಸುವವರಾದರು. ಬ್ರಿಟಿಷ ಬಹಿರ್ ವ್ಯವಹಾರಖಾತೆ ಮಂತ್ರಿಗಳಾದ ಲಾರ್ಡ್ ಹಾಲಿಫಕ್ಸರನ್ನು ಪಂಡಿತರು ಕಂಡು ಮಾತನಾಡಿರುವರು. ಲಂಡನಿನ ಹಲವು ಕಡೆಗಳಲ್ಲಿ ಪಂಡಿತರು ಭಾಷಣ ಮಾಡುವವರಾದರು. ಪಂಡಿತರಿಗೆ ಸ್ವಾಗತಕರಿಸಲು, ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ ಮಂದಿರದಲ್ಲಿ ಒಂದು ಸತ್ಕಾರಕೂಟ ನಡೆಯಿತು. ಬ್ರಿಟನಿನ ಪ್ರಮುಖ ಮುತ್ಸದ್ದಿಗಳು ಪಂಡಿತರ ಭೇಟಿ ಮಾಡಿ, ಅವರೊಡನೆ ಮಾತನಾಡಿರುವರು. ಪಂಡಿತರು ಹಿಂದೂದೇಶದ ಕುರಿತು ಪ್ರಸಾರಣೆಯ ಬಗ್ಗೆ, ಇಂಗ್ಲಾಂಡು, ಯುರೋಪ್, ರಷ್ಯ ಇತ್ಯಾದಿ ಕಡೆಗಳನ್ನು ಸಂದರ್ಶಿಸಿ, ಹಿಂದೂದೇಶಕ್ಕೆ ಹಿಂತೆರಳುವರಾಗಿ ತಿಳಿದುಬರುತ್ತದೆ.

ತಿರುವಾಂಕೂರು, ನೇಶನಲ್ ಮತ್ತು ಕ್ವಿಲನ್ ಬೆಂಕ್.

ರಿಜರ್ವ ಬ್ಯಾಂಕಿನಿಂದ ವಿಚಾರಣೆ.

ಮದ್ರಾಸು ಸರಕಾರದ ಮಧ್ಯವರ್ತನದಿಂದ, ಮೇಲೆ ಸಂಸ್ಥೆಯ ಬಿಕ್ಕಟ್ಟಿನ ಪರಿಸ್ಥಿತಿಯು ದೇಶಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಪರಿಹಾರಹೊಂದುವಂತಾಗಿದೆ. ಈ ಬ್ಯಾಂಕಿನ ಸ್ಥಿತಿಗತಿಯು ರಿಜರ್ವ ಬ್ಯಾಂಕಿನಿಂದ ವಿಚಾರಿಸಲಾಗುವುದು, ರಿಜರ್ವ ಬ್ಯಾಂಕಿನ ಸೂಚನೆ ಪ್ರಕಾರ ಈ ಬೆಂಕಿನವರು ವರ್ತಿಸಬೇಕೆಂದಾಗಿದೆ. ಕೋರ್ಟಿನ ಅಪ್ಪಣೆ ದೊರಕಿದೊಡನೆ ರಿಜರ್ವ ಬೆಂಕಿನವರು ಈ ಬೆಂಕಿನ ಪರಿಶೋಧನಾ ಕಾರ್ಯವನ್ನು ಪ್ರಾರಂಭಮಾಡುವರು. ಬೆಂಕನ್ನು ತೆರೆಯುವುದರ ಕುರಿತು ಆ ಮೇಲೆ ಒಂದು ಪ್ರಕಟಣೆಯಾಗುವುದು.

THE

Bank of Mangalore Ltd.,

MANGALORE.

ESTD 1931

Branches -

Panemangalore Mudabidri & Padubidri.

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly

Saving Bank deposit 3½% on daily balances.

All kinds of banking business transacted



ಈ ಮಾಜಿಕ್ ಲೇಪವು ಎಲ್ಲರಿಗೂ ಬೇಕಾಗಿದೆ

ಚರ್ಮವ್ಯಾಧಿ ಮತ್ತು ಕಡಿತಗಳಿಗೆ ಜ್ಯಾಂಬಕ್

ನಿಮಗೆ ಒಂದು ಕಡಿತ ಯಾ ಇತರ ಯಾವತ್ತೂ ತರದ ಪೆಟ್ಟುಗಳಾದರೆ—ನಿಮ್ಮ ವ್ಯೆಗಳಲ್ಲಿ ಗಜ್ಜಿ, ಬೊಕ್ಕೆ ಇತ್ಯಾದಿಗಳು ಇದ್ದರೆ ಜಾಂಬಕ್ ಲೇಪನವು ನಿಮ್ಮನ್ನು ಕೂಡಲೆ ಗುಣಪಡಿಸುವುದು [illegible] ಈ ಕಾರಣದಿಂದ ನೋವು ನಿವಾರಣೆಯಾಗುವುದು, [illegible] ಇತ್ಯಾದಿ [illegible] ಗಜ್ಜಿ, ಬೊಕ್ಕೆ ಇತ್ಯಾದಿಗಳಿಗೆ ಉಪಯೋಗಿಸಬಹುದು [illegible] 2–4 0 ಪ್ರಕಾರ ಮಾಂಟಿವಾಗುತ್ತದೆ

ಮೆಸರ್ಸ್ ದಾದಾ ಮತ್ತು ಕಂಪೆನಿ, ಪಾರ್ಕ್ ಟೌನ್, ಮದರಾಸು.

ಯಾವಾಗಲೂ ಜಾಂಬಕನ್ನೆ ಉಪಯೋಗಿಸಿರಿ

ZAM-BUK

ಇದರಲ್ಲಿ ಪ್ರಾಣಿ ಕೊಬ್ಬು ಮಿಶ್ರವಾಗಿಲ್ಲ

S. U. N. & Co.,

Silk Merchants,

Chaukhamba BENARES CITY

[illegible] 18 [illegible] 45 [illegible] 150 ಸಾಧಾರಣ [illegible] 18 [illegible] ರೂ 35 ರಿಂದ ರೂ 55 [illegible] ಸಾದಾ [illegible] 18 [illegible] ರೂ 32 ರಿಂದ ರೂ 65 [illegible] 10, [illegible] 2 [illegible] ರೂ 20 ರಿಂದ 35 ರ ವರೆಗೆ ಜೇತೆ ಮಾಲುಗಳು [illegible] ಉಚಿತವಾಗಿ ಕಳುಹಿಸಲಾಗುವುದು

ವಿಳಾಸ –

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಿಜಿಸ್ಟರ್ಡ)

ವ್ಯಾಧಿಗೆ ಸಿದ್ಧೌಷಧ

[illegible]

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, [illegible], ಮುಂಬಯಿ 4

Sole Manufacturer **Dr D. N JASANI,** Vithalbhai Patel Road BOMBAY

I visited the office of the Bhuvanendra Products Ltd I wish the same every success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**

4–10–1937 *Minister of Labour*

Bhuvanendra Products Ltd, Katapady, S. Kanara

ಹೊಂಕೊಂಗಿನಲ್ಲಿ

...ಕೆಂಟನಿಗೆ ಹಾವಳಿಯನ್ನುಂಟುಮಾಡುವ ...ಯಂತ್ರಗಳನ್ನು ದಿನನಿತ್ಯವೂ ಎಂಬಂತೆ ಬಿಟ್ಟುಕೊಡುವ ಜಪಾನು, ಮೆಲ್ಲನೆ ಹೊಂಕೊಂಗಿನ ಮೇಲೂ ಅಸ್ತ್ರಪ್ರಯೋಗ ಮಾಡಬಹುದಲ್ಲವೆ? ಎಂದು ಹಲವರಲ್ಲಿ ಭಯ, ಸಂದೇಹ, ಕುತೂಹಲಗಳು ಉಂಟಾಗಿವೆ.

ಜಪಾನಿಗೆ ವಿರುದ್ಧವಾಗಿ ನಿಂತು ತಡೆದು ಹೋರಾಡಲು ಇಂಗ್ಲಿಷರ ನೆಲಜಲವಾಯು ಪಡೆಗಳು ಸದಾಸನ್ನದ್ಧವೇ ಆಗಿವೆ. ಇದೇನೂ ಗೋಪನೀಯವಲ್ಲ; ಅವರು ಬೇಕೆಂದೇ ಪ್ರಕಟ ಮಾಡಿಯೂ ಮಾಡುತ್ತಲೂ ಇರುವರು. ಹೊಂಕೊಂಗಿನ ಸುತ್ತಲಿರುವ ಗುಡ್ಡಬೆಟ್ಟಗಳೂ ಜಲಮಾರ್ಗಗಳೂ ಭಾರೀ ಫಿರಂಗಿಗಳಿಂದಲೂ, ಯಾಂತ್ರಿಕ ಕೋವಿಗಳಿಂದಲೂ, ಬೆಟ್ಟಕುಪಾಕಿಗಳಿಂದಲೂ ತುಂಬಿವೆ. ಯಾವದಾರಿಯಾಗಿ ಹೊಂಕೊಂಗಿಗೆ ಬರಬೇಕೆಂದರೂ, ಸುತ್ತಲಿನ ಗೆದ್ದಲುಹುತ್ತಗಳಂತೆ ಮೆಶೀನ್‌ಗನ್‌ಗೂಡುಗಳೇ ಇವೆ. ಇವು ಖಂಡಿತವಾಗಿಯೂ ಎದುರಾಳಿಯ ಪ್ರಾಬಲ್ಯವೆಷ್ಟಿದ್ದರೂ ಅದನ್ನು ಹದಿನೈದು ದಿನಗಳ ವರೆಗಾದರೂ ತಡೆದು ಬಂಧಿಸಬಹುದಾಗಿದೆ. ಬೆಟ್ಟಕುಪಾಕಿಗಳು ಬಲಿಷ್ಠವಾಗಿದ್ದರೂ, ಬೇಕಾದ ಕಡೆಗೆ ಚಲಿಸಿ ತಿರುಗಬಲ್ಲಂತೆ ಮಡಗಲಾಗಿದೆ.

ಹದಿನಾರು ಇಂಚಿನ ಫಿರಂಗಿಗಳು.

ಜಪಾನಿಯರು ಸಮುದ್ರಮಾರ್ಗವಾಗಿ ಹಡಗುಗಳ ಮೂಲಕ ಯುದ್ಧಮಾಡಬಹುದಾದಲ್ಲಿ ಅವರನ್ನು ಮುರಿದಿಕ್ಕಲು ಹದಿನಾರು ಇಂಚಿನ ಫಿರಂಗಿಗಳು ಕಾದಿವೆ. ಜಪಾನಿಯರ ಯಾವ ಹಡಗುಗಳಲ್ಲಾದರೂ, ಇವುಗಳಷ್ಟು ದೂರಕ್ಕೆ ಗುಂಡುಹಾರಿಸಬಲ್ಲ ಫಿರಂಗಿಗಳೇ ಇಲ್ಲ. ಇವುಗಳ ಸಹಾಯಕ್ಕೆ ಬೇಕಾಗುವಷ್ಟು ಯುದ್ಧನಾವೆಗಳು ಸಬ್‌ಮೆರೀನುಗಳು ವಿಮಾನ ಒಯ್ಯುವ ನಿಲ್ದಾಣಗಳ ಹಡಗುಗಳೂ ತುಂಬ ಇವೆ. ಸಿಂಗಾಪುರದಿಂದ, ಆಸ್ಟ್ರೇಲ್ಯದಿಂದ ಇಂಡಿಯಾದಿಂದ ಸಹಾಯವು ಬರುವ ತನಕ ಇವು ಯಾವ ಬಲವನ್ನೂ ಕಾದಿಡಬಲ್ಲವು. ಸಿಂಗಾಪುರದಿಂದ ಮೂರೇ ದಿನಗಳಲ್ಲಿ ಹೊಂಕೊಂಗಿಗೆ ಹಡಗು ತಲಪುವುದು; ಇದೇ ಮುಖ್ಯ ಬೆಂಬಲ ಕೊಡುವುದು.

ವಿಮಾನಗಳ ಮೂಲಕವೇ ಬಹಳವಾಗಿ ಜಪಾನು ಅಣಗಿಸಬಹುದೆಂದು ತಿಳಿದು, ಹೊಂಕೊಂಗನ್ನು ಸರ್ವಪ್ರಕಾರಗಳಲ್ಲೂ ವಿಮಾನಬಲದಿಂದ ತುಂಬಲಾಗಿದೆ. ಹಣ ಖರ್ಚಾದುದಕ್ಕೆ ಮಿತಿಯಿಲ್ಲ. ಶತ್ರುನಾವೆಗಳನ್ನು ಶೋಧಿಸಲು, ನೂರಾರು ಕಡೆ ವಿದ್ಯುತ್ತಿನ ಸೂರ್ಯಗಳನ್ನೇ ಇಡಲಾಗಿದೆ. ಸುತ್ತಲಿನ ದ್ವೀಪಸಮುದಾಯದಲ್ಲೆಲ್ಲ ಈ ಬಗೆಯ ಸೂರ್ಯರೇ ಇದ್ದಾರೆ! 5 ಲಕ್ಷ ಪವನನ್ನು ವಿಮಾನದಾಳಿಯ ನಿವಾರಣೋಪಾಯಕ್ಕಾಗಿ ವ್ಯಯಿಸಲು ವಿಂಗಡಿಸಿಡಲಾಗಿದೆ. ಎಲ್ಲರಿಗೂ ವಿಮಾನಗಳ ಹಾವಳಿ ತಪ್ಪಿಸಿಕೊಳ್ಳುವ ಉಪಾಯಗಳನ್ನು ಕಲಿಸಿರುತ್ತಾರೆ. ಆಗಾಗ ತುಂಬ ಕತ್ತಲನ್ನುಂಟುಮಾಡಿ, ವಿಮಾನಗಳ ಯುದ್ಧ ನಟಿಸಿ ತೋರಿಸುವರು.

ಪ್ರಕೃತಿಯು ಹೊಂಕೊಂಗನ್ನು ಕಾಪಾಡಲು ಯೋಗ್ಯಸನ್ನಾಹವನ್ನು ಮೊದಲೇ ಮಾಡಿಟ್ಟಿದೆ. ಅಷ್ಟು ಬೆಟ್ಟಗಳಿವೆ! 160 ಹೊಸ ಬಗೆಯ ಸಿಡಿಗುಂಡು ಚೆಲ್ಲುವ ವಿಮಾನಗಳು ಇಲ್ಲಿವೆ. ಮೂರು ಸೈನ್ಯ ಪಥಕಗಳು ಇಲ್ಲಿವೆ. ವಿಮಾನದಲ್ಲಿ ಸೇನೆಗಳನ್ನು ಕಳಿಸಿದರೆ ಸಿಂಗಾಪುರದಿಂದ ಇಲ್ಲಿಗೆ ಒಂದೇ ದಿನದಲ್ಲಿ ಒಂದೊಂದು ಸೈನ್ಯ ಬರುವಂತಾಗಿದೆ. ಆಗಾಗ ರಾತ್ರಿಕಾಲದಲ್ಲಿ ಕತ್ತಲನ್ನುಂಟುಮಾಡಿ, ಜನರಿಗೆ ವಿಮಾನಯುದ್ಧಗಳ ಕ್ರಮ ತೋರಿಸುವದಾದುದರಿಂದ, ಯಾವನೊಬ್ಬನು ಅಂತಹ ವೇಳೆ ದೀಪಹಚ್ಚಿದಲ್ಲಿ 200 ಪವನು ವರೆಗೂ ಜುಲ್ಮಾನೆ ಮಾಡಲಾಗುವುದೆಂದೂ ದಂಡನೆ ವಿಧಿಸು

"ಕೊಂಗ್ರೆಸ್ ಸದಸ್ಯರಲ್ಲಿ ಶಿಸ್ತು ಲೋಪವಾಗಿದೆ"

ಇದು ಸಿವಿಲ್ ಬೋರ್ಡುಗಳ ತಪ್ಪೆಂದು ಕಾರ್ಯದರ್ಶಿಯರ ಮಾತು.

ಕರ್ನಾಟಕ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರು ಹೊಸಪೇಟೆ ಮತ್ತು ಬಳ್ಳಾರಿ ಮ್ಯುನಿಸಿಪಲ್ ಕೌನ್ಸಿಲರುಗಳ ಹಾಗೂ ಬಳ್ಳಾರಿ ಜಿಲ್ಲಾ ಬೋರ್ಡಿನ ಚುನಾವಣೆಗಳನ್ನು ಕುರಿತಾಗಿ ವಿಮರ್ಶಿಸಿ ಒಂದು ಸರ್ಕ್ಯುಲಾರನ್ನು ಹೊರಡಿಸಿರುವರು.

"ಕೆಲವು ಮಂದಿ ಕೊಂಗ್ರೆಸ್ ಮೆಂಬರರಿಗೆ ಕೊಂಗ್ರೆಸ್ ಪ್ರಮಾಣದ ಕಿಂಚಿತ್ತೂ ಪರಿಜ್ಞಾನವೂ ಇಲ್ಲ, ನೆನಪೂ ಇಲ್ಲವೆಂದು ತೋರುತ್ತದೆ. ಕೊಂಗ್ರೆಸ್ ಭಕ್ತರು ಖಾದಿಯನ್ನುಟ್ಟುಕೊಳ್ಳಬೇಕೆಂಬುದೇ ಇವರಲ್ಲಿ ಹೆಚ್ಚಿನವರಿಗೆ ತಿಳಿದಿಲ್ಲ." ಎಂದು ಸೂಚಿಸಿ, ಹೊಸಪೇಟೆ ಮ್ಯುನಿಸಿಪಾಲಿಟಿಯ ಒಟ್ಟು ಮೆಂಬರರು 20 ರಲ್ಲಿ ಕೊಂಗ್ರೆಸಿನವರಿಂದ 19ನ್ನು ಇವರು ಕಂಡು ಚೆಯರ್ಮೆನರ ಚುನಾವಣೆಯ ಪರ್ಯಾಲೋಚಿಸುವಾಗ, ಕೊಂಗ್ರೆಸಿನ ಮೂಲತತ್ವ ವಿಶ್ವಾಸಗಳೇ ಇವರಲ್ಲಿ ಹೆಚ್ಚಿನವರಿಗೆ ಇಲ್ಲವೆಂದೂ ಸೂಚಿಸಿರುವರು. ಇದರ ಪರಿಣಾಮವಾಗಿ, 19 ಮಂದಿಯೂ ಕೊಂಗ್ರೆಸ್ ಪಕ್ಷದವರಾದರೂ, ಇವರು ನಿರ್ಧರಿಸಿದ ಮೆಂಬರರು ಅಧ್ಯಕ್ಷರಾಗಿ ಚುನಾವಣೆ ಹೊಂದುವ ಸಂದೇಹವಿದೆಯೆಂದೂ, ಕೊಂಗ್ರೆಸೇತರ ಮೆಂಬರರನ್ನು ಉಪಾಧ್ಯಕ್ಷಪದವಿಗೆ ತಮ್ಮೊಳಗೆ ಸ್ಪರ್ಧೆಮಾಡಿ ಬಳ್ಳಾರಿ ಕೌನ್ಸಿಲಿನ ಕೊಂಗ್ರೆಸಿನವರು ವಿಚಿತ್ರವಾಗಿ ನಡೆದಂತೆ ಇವರೂ ನಡೆಯಬಹುದೆಂದೂ ಬರೆದಿರುವರು.

ಬಳ್ಳಾರಿ ಜಿಲ್ಲಾ ಬೋರ್ಡಿನಲ್ಲಿ 48 ಸದಸ್ಯರ ಪೈಕಿ ಕೊಂಗ್ರೆಸಿನವರು 39 ಮಂದಿ; ಆದರೂ, ಕೊಂಗ್ರೆಸು ಉಮೇದ್ವಾರನೇ ಅಧ್ಯಕ್ಷನಾಗಲು ನಿಂತಾಗ ಆತನಿಗೆ ದೊರೆತುದು 27 ವೋಟು; ಹನ್ನೊಂದು ಮಂದಿ ಕೊಂಗ್ರೆಸಿನವರು ಎದುರಾಳಿಯಾದ ಕೊಂಗ್ರೆಸೇತರನಿಗೇ ವೋಟು ಕೊಟ್ಟಿರುವರು! ಕೊಂಗ್ರೆಸೇತರರಿಬ್ಬರು ಕೊಂಗ್ರೆಸ್ ಉಮೇದ್ವಾರನಿಗೆ ವೋಟು ಕೊಟ್ಟರು.

ಒಂದೇ ರಾತ್ರಿಯೊಳಗೆ ಅಖಂಡ ಕೊಂಗ್ರೆಸ್‌ವಾಲರಾಗಿ ಮಾರ್ಪಟ್ಟು ಕೊಂಗ್ರೆಸೇತರರನ್ನು ಸಿವಿಲ್ ಬೋರ್ಡಿನವರು ಕಣ್ಣುಮುಚ್ಚಿ ಅಂಗೀಕರಿಸಿಕೊಂಡುದೇ ಇದಕ್ಕೆ ಕಾರಣವೆಂದೂ, ಇಂತಹ ಕೊಂಗ್ರೆಸ್‌ವಾಲರಿಂದ ಇಂತಹ ಪರಿಣಾಮಗಳೇ ಉಂಟಾಗುವುದು ಸಹಜವೆಂದೂ, ಇಂತಹರು ತಮ್ಮ ಹಿಂದಣ ಕೂಟವನ್ನು ತ್ಯಜಿಸಿ ಕೊಂಗ್ರೆಸಿಗೆ ಪಕ್ಕನೆ ಸೇರಿದಂತೆಯೆ, ಕೊಂಗ್ರೆಸನ್ನು ಪಕ್ಕನೆ ತ್ಯಜಿಸಿ ಇವರು ಇನ್ನಾರನ್ನೋ ಸೇರುವುದು ಸಹಜವೆಂದೂ ತೀರ್ಮಾನ ಮಾಡುವುದು ಕಷ್ಟವೇ?

ಗಾಂಧಿಜೀಯವರ ಶಾಂತಿಪಥಕ.

ಕರಾಚಿಯಲ್ಲಿ ಸ್ಥಾಪನೆ ಹೊಂದಿತು.

ಇಡೀ ಹಿಂದುಸ್ಥಾನದಲ್ಲಿ ಮೊದಲನೆದಾಗಿ, ಗಾಂಧಿಜಿಯವರು ಸೂಚಿಸಿದ ಬಗೆಯ ಶಾಂತಿಪಥಕವೊಂದನ್ನು ತಾ. ೨೭ರಲ್ಲಿ ಕರಾಚಿಯಲ್ಲಿ ನಿರ್ಮಿಸಿರುವರು. ಕರಾಚಿ ಮ್ಯುನಿಸಿಪಾಲಿಟಿಯ ಚೆಯರ್ಮೆನರೇ ಅಧ್ಯಕ್ಷರಾಗಿ, ಎರಡು ಕಾಸಿನ ತನಕ ಬಹುಮಂದಿ ಮುಂದಾಳುಗಳ ಸಭೆಯೊಂದು ಸೇರಿ, ಈ ನಿರ್ಧಾರವಾಗಿದೆ.

ಸದ್ಯಕ್ಕೆ, ನಾನಾ ರಾಜಕೀಯ ಅಥವಾ ಧಾರ್ಮಿಕ ಅಭಿಪ್ರಾಯಗಳುಳ್ಳ ೨೪ ಮಂದಿಯಿಂದ ಒಡಗೂಡಿರುವ ಒಂದು ಕಮಿಟಿ ಸ್ಥಾಪನೆ ಹೊಂದಿದೆ. ಪಥಕದ ನಾಯಕರು ಮ್ಯುನಿಸಿಪಾಲಿಟಿಯ ಮೇಯರ್ (ಅಧ್ಯಕ್ಷ)ರು ಡಾ. ತಾರಾಚಂದ್ರ ಲಾಲ್ವಾನಿ, ಮೌಲ್ವಿ ಮಹಮ್ಮದ್ ಉಸ್ಮಾನ, ಭದ್ರ ಶಂಕರ ಭಟ್ ಇವರು ಕಾರ್ಯದರ್ಶಿಗಳು. ಈ ಕಮಿಟಿಯಲ್ಲಿ ರೆವರೆಂಡ್ ಥೊಮ್ಸನ್‌ರೂ ಇರುವರು.

"ಜನಾಂಗಗಳೊಳಗೆ ಹಾಗೂ ಜಾತಿಗಳೊಳಗೆ ಉಂಟಾಗುವ ವೈಮನಸ್ಸನ್ನು ಗಾಂಧಿಜಿಯವರ ಅಭಿಮತದಂತೆ ನಾವು ನಿರ್ಮೂಲಿಸುವ" ಎಂದೇ ಭಾಷಣಾಂತ್ಯ.



ನಿಜವಾಗಿ ನಡೆಯುವ ಸಂಗತಿಗಳು!

ಇಲಿಗಳ ಊಟ!

ಸರ್ಪಗಳು ಒಂದು ತರದ ರುಚಿ ತಿಂಡಿ ಎಂದು ಭಾವಿಸಲಾಗುವುದಿಲ್ಲ. ಆದರೆ ಜಪಾನಿನ ಟೋಕಿಯೊ ಪಟ್ಟಣದಲ್ಲಿ ದಿನಂಪ್ರತಿ ವಿವಿಧ ಪ್ರಮಾಣದ ವಿಜಾತಿಯ ವರ್ಣದ ಒಂದು ಸಾವಿರ ಸರ್ಪಗಳು ಭುಂಜಿಸಲ್ಪಡುತ್ತವೆ. ಬಜ್ಜಿದ ಸರ್ಪವನ್ನು ಬೇಯಿಸಿ ತಿನ್ನುವುದು ಕ್ಷಯರೋಗ ನಿವಾರಣೆಗೆ ಒಂದು ಉಪಾಯವೆಂದು, ಜಪಾನಿಯರು, ಇವತ್ತಿಗೆ ಬಹಳ ಸಮಯದಿಂದ ನಂಬಿಬಂದಿರುವರು. ಕ್ಷಯರೋಗ ಒಂದೇ ಅಲ್ಲ—ಇತರ ಅನೇಕ ರೋಗಗಳಿಗೆ ಸರ್ಪಗಳನ್ನು ತಿನ್ನುವುದು ದಿವ್ಯ ಔಷಧಿ ಎಂದು ಅವರ ಭಾವನೆ. ಈ ಕಾರಣದಿಂದ ಜಪಾನ ರಾಜಧಾನಿಯಾದ ಟೋಕಿಯೊದಲ್ಲಿ ಸರ್ಪಗಳನ್ನು ಮಾರಾಟಮಾಡುವ ಒಂದು ನೂರು ಅಂಗಡಿಗಳಿವೆ

ಟೋಕಿಯೊ ನಗರದ ಸಮೀಪ ಒಂದೆಡೆ 'ಸರ್ಪಾಲಯ'ವೆಂಬ ಸರ್ಪಗಳ ರಖಂ ವ್ಯಾಪಾರ ಮಾಡುವ ಸಂಸ್ಥೆಯೊಂದಿದೆ. ಅಲ್ಲಿ ವರ್ಷಂಪ್ರತಿ ಒಂದು ಲಕ್ಷ ಸರ್ಪಗಳ ವ್ಯಾಪಾರ ನಡೆಯುತ್ತಿದೆ. ಅಲ್ಲಿ ಸತತವೂ ೧೦ ಸಾವಿರ ಸರ್ಪಗಳ ಶೇಖರವಿದೆ. ಸರ್ಪಗಳನ್ನು ಶೇಖರಿಸಿಡಲು, ನೆಲದೊಳಗೆ ಸರ್ಪ ಗೃಹಗಳಿವೆ

ಸರ್ಪಗಳಿಗೆ ಗಿರಾಕಿ ಹೆಚ್ಚಾದದರಿಂದ, ಈಗ ಸರ್ಪಗಳು ಸಿಕ್ಕುವುದೆ ಕಡಿಮೆಯಾಗಿದೆ. ಜಪಾನಿನ ಎರಡು ದ್ವೀಪಗಳಲ್ಲಿದೆ. ಅಲ್ಲಿನ ಇತರ ಕಡೆಗಳಲ್ಲಿ ಈಗ ಸರ್ಪಗಳೆ ದೊರಕುವುದಿಲ್ಲವಂತೆ

ಜಪಾನಿಯರು ಸರ್ಪಗಳನ್ನು ಮಾತ್ರ ತಿನ್ನುವುದಲ್ಲ. ಕಳೆದ ವರ್ಷ ಜಪಾನಿನಲ್ಲಿ 'ಇಲಿಗಳ ವರ್ಷ' ಎಂಬ ಹಬ್ಬವೊಂದ ನಡೆದು ಹೋಯ್ತು. ಅಲ್ಲಿ ವ್ಯಾಕಾಟ್ ಕಾನ [illegible] ಎಂಬ ಅಧ್ಯಕ್ಷ ವ್ಯಕ್ತಿಗಳೊಬ್ಬರ, ತನ್ನ ಮಿತ್ರರನ್ನು ಆಹ್ವಾನಿಸಿ ಜಪಾನೀಯ ದ್ವೀಪವಾದ [illegible]ದಿಂದ ಹಿಡಿದು ತಂದ ಇಲಿಗಳ ಊಟವೊಂದನ್ನು ಕೊಟ್ಟು ಸತ್ಕರಿಸಿದರು. ಈ ಇಲಿಗಳನ್ನು ಅಲ್ಲಿನ ಬೇಸಾಯಗಾರರ ತೋಟಗಳಿಂದ ಹಿಡಿದು ತರಲಾಗಿದ್ದವು

ಕಬ್ಬು ಇತ್ಯಾದಿಗಳನ್ನು ತಿಂದು ಈ ಇಲಿಗಳು ಎರಡು ಅಡಿ ಉದ್ದಕ್ಕೆ ಬೆಳೆಯುತ್ತವಂತೆ. ಹಿಂದೆ ಡಚ್ ವರ್ತಕರು ಇವುಗಳನ್ನು ರುಚಿಸಿ, ಇವು ಉತ್ತಮವಿವೆ ಎಂದು ಅಭಿಪ್ರಾಯಪಟ್ಟಿರುವರು.

ಹಿಂದೆ ಫ್ರೆಂಚರಿಗೂ ಜರ್ಮನಿಯ ಪ್ರಶ್ಯನ್ನರಿಗೂ ಜಗಳ ನಡೆದಾಗ, ಮುತ್ತಲ್ಪಟ್ಟ ನಾಗರೀಕರು ಕೆಲವರು, ಹೆಗ್ಗಣ ಮತ್ತು ಬೆಕ್ಕುಗಳನ್ನು ತಿಂದು ಜೀವಿಸಬೇಕಾಯಿತು.

o o o

ವಿವಿಧ ಪ್ರಾಣಿ, ಕ್ರಿಮಿಕೀಟಗಳನ್ನು ರುಚಿಸಿದ ಪ್ರೊಫೆಸರರು

ಇ. ಜಿ ಬೌಲೆಂಗರ್ ಎಂಬವರು, ಜಗತ್ತಿನ ವಿವಿಧ ಕಡೆಗಳಲ್ಲಿ ಭೋಜನಗಳಲ್ಲಿ ಉಪಯೋಗಿಸಲ್ಪಡುವ ಒಂದು ವಿಚಿತ್ರ ಪಟ್ಟಿಯನ್ನು ಮಾಡಿರುವರು. ಹಾರಾಡುವ ಇರುವೆ, ಹೆಗ್ಗಣ, ಹಲ್ಲಿಗಳು, ಸಮುದ್ರ ಕ್ರಿಮಿಗಳು, ವಿವಿಧ ತರದ ಇತರ ಕ್ರಿಮಿಕೀಟಗಳು, ಹಸುರು ಸರ್ಪ ಕಪ್ಪೆ ಇತ್ಯಾದಿಗಳ ಹೆಸರುಗಳು ಅದರಲ್ಲಿವೆ. ಈ ಪ್ರೊಫೆಸರರ, ಅನೇಕ ವಿಚಿತ್ರ ಭೋಜನಗಳನ್ನು ಉಣ್ಣದವರು,—ಕಾಂಗರೂ, ಟ್ರಿಪಾಂಗ ಇನ್ನಿತರ ಅನೇಕ ಪ್ರಾಣಿ ಕ್ರಿಮಿಕೀಟ, ಮೈದಾನುಗಳಲ್ಲಿ ಹಾರುವ ಕುದುರೆ ಕ್ರಿಮಿಯ ವರೆಗೆ ತಿಂದವರು.

ಲಂಡನಿನ ಪ್ರಾಣಿ ಪ್ರದರ್ಶನಾಲಯದ ಮುಖ್ಯಾಧಿಕಾರಿಗಳಾದ ಫ್ರೆಂಕ್ ಬಕ್ಲೆಂಡರೆಂಬವರು, ತನ್ನ ಪ್ರದರ್ಶನಾಲಯದಲ್ಲಿರುವ ಸಾಧಾರಣ ಎಲ್ಲಾ ತರದ ಮೃಗಗಳನ್ನೂ ರುಚಿಸಿರುವರಂತೆ—ಮೊಸಳೆಯನ್ನೂ ಕೂಡ ರುಚಿಸಿರುವರಂತೆ

o o o o

ತಿಮಿಂಗಿಲದ ಪದಾರ್ಥ.

ಬ್ರಿಟಿಷ ಚಕ್ರವರ್ತಿಯರು ಅವರ ಅನುಜರಾದ ಗ್ಲಾಸ್ಟರಿನ ಡ್ಯೂಕರು ಆಫ್ರಿಕಕ್ಕೆ ತೆರಳಿದಾಗ ಅರಣ್ಯದಲ್ಲಿ ಬೇಟೆಯಾಡಿದಾಗ ಸಿಂಹದ ಮಾಂಸವನ್ನು ರುಚಿಸಿದ್ದರಂತೆ. ಅದನು ಬಹಳವಾಗಿ ಪ್ರೀತಿಸುವವರಾಗಿದ್ದರಂತೆ.

ಪೆರಿಸ್ ನಗರದಲ್ಲಿ ವಿಚಿತ್ರತರದ ಪದಾರ್ಥಗಳನ್ನೂ ಸಿದ್ಧಪಡಿಸುವುದು ಒಂದು ರೂಢಿಯಾಗಿರುತ್ತದೆ. ಕೆಲಸಮಯದ ಹಿಂದೆ ಅಲ್ಲಿ ಹಿಂದೂಸಾಗರದಲ್ಲಿ ದೊರಕುವ ತಿಮಿಂಗಿಲದ ಪದಾರ್ಥವೊಂದು ಸಾಮಾಜಿಕ ಔತಣದಲ್ಲಿ ಬಡಿಸಲಾಗಿತ್ತಂತೆ

ಸಮುದ್ರದ ಬದಿಯಲ್ಲಿ ಬೆಳೆಯುವ ರಾವಣನ ಗಡ್ಡವನ್ನು ನೀವು ನೋಡಿರುವರಷ್ಟೆ. ಇದನ್ನೂ ಕೂಡ ತಿಂದು ರುಚಿಸುವವರಿದ್ದಾರೆ. ಇದರಿಂದ ಬಗೆಬಗೆ ತಿಂಡಿಗಳನ್ನು ಮಾಡಿ ಜಪಾನಿನ ಮಾರ್ಗಮಾರ್ಗಗಳಲ್ಲಿ ಮಾರಾಟವಾಗುತ್ತಿದೆ. ಹೀಗೆ ರಾವಣನ ಗಡ್ಡವನ್ನು ಐರ್ಲಂಡಿನಲ್ಲೂ, ಸ್ಕಾಟ್ಲೆಂಡಿನಲ್ಲೂ ತಿಂಡಿತಿನಸಾಗಿ ಉಪಯೋಗಿಸುತ್ತಾರೆ

ಈಗಲೆ ಜನಿಸಿದ ಹೆಗ್ಗಣಗಳ ಮರಿಗಳನ್ನು ತಿನ್ನುವುದೆಂದರೆ [illegible] ಒಂದು ಮಹಾ ರುಚಿಯಂತೆ. ಈ ತರದ ಹೆಗ್ಗಣದ ಮರಿಗಳನ್ನು ಒಂದು ಬಟ್ಟಲಲ್ಲಿ [illegible]ದಲ್ಲಿ ನೆನೆಸಿಟ್ಟು ಅವುಗಳನ್ನು ಇಡಿ ಇಡಿಯಾಗಿ ನುಂಗಿಬಿಡುವುದು ಒಂದು ರುಚಿ

ಎಲ್ಲಕ್ಕಿಂತ ವಿಚಿತ್ರವೆಂದರೆ—ಜಪಾನೀಯರ [illegible] ಜೀವಂತ ಹುಳಗಳನ್ನು ನುಂಗುವುದು

ಉಗಾಂಡಾದಲ್ಲಿ [illegible]ವೆಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಕೆಲವರು ಇರುವೆಯನ್ನು ಹಸಿಹಸಿಯಾಗಿ ತಿಂದುಬಿಡುತ್ತಿದ್ದಾರೆ. ಕೆಲವರು ಬೇಯಿಸಿ ತಿನ್ನುತ್ತಿದ್ದಾರೆ. [illegible] ಗಳನ್ನು ಕೊರೆಯುವ [illegible] ಅದನ್ನು ಒಂದು ರುಚಿಯಾಗಿ ತಿನ್ನುವವರಿದ್ದಾರೆ

'ಪಿಸ್ತಾನಿ'ಯ ಬಿಸಿನೀರಿನ ಬುಗ್ಗೆಗಳು

'ಪಿಸ್ತಾನಿ' ಎಂಬುದು ಯೂರೋಪದ ಝೆಕೋಸ್ಲೊವೇಕಿಯದಲ್ಲಿರುವ ಒಂದು ಪಟ್ಟಣ. ರಾಜಧಾನಿಯಾದ ಪ್ರೇಗ ನಗರದಿಂದ ಮುನ್ನೂರು ಮೈಲು ದೂರ, ಅದರ ಆಗ್ನೇಯಕ್ಕೆ ಇದೆ. ಅದರ ಸಮೀಪದಲ್ಲಿಯೇ ವಾಗ್ ಎಂಬ ನದಿಯು ಹರಿಯುತ್ತದೆ. ಈ ನಗರವು ಅದರ ಸಮೀಪದ ಬಿಸಿ ನೀರಿನ ಬುಗ್ಗೆಗಳಿಗೆ ಬಹಳ ಪ್ರಸಿದ್ಧವಾಗಿದೆ. ಕೆಲಸಕಾರ್ಯಗಳ ನಿಮಿತ್ತ, ಅಥವಾ ಆಮೋದ ಪ್ರಮೋದಕ್ಕಾಗಿ ಯೂರೋಪ ಸಂಚಾರಕ್ಕೆ ಹೊರಟ ಯಾರೂ, ಹೋದ ಹೋದಾಗಲೆಲ್ಲ ಆ ಪಟ್ಟಣವನ್ನು ಸಂದರ್ಶಿಸದೆ ಇರುವದಿಲ್ಲ

ಪ್ರತಿ ವರ್ಷ 25000ಕ್ಕೆ ಹೆಚ್ಚಾಗಿಯೇ ವಿದೇಶಿಯ ಜನರು ಪಿಸ್ತಾನಿಯನ್ನು ನೋಡಲಿಕ್ಕೆ ಅತಿಥಿಗಳಾಗಿ ಹೋಗುತ್ತಾರೆ. ಅವರಲ್ಲಿ ಕೆಲವರು ಭಾರತೀಯರು ಕೂಡ ಇರುತ್ತಾರೆ. ಯಾಕೆಂದರೆ ಪಿಸ್ತಾನಿಯ ಸಮೀಪದ ಮಣ್ಣೂ, ಬುಗ್ಗೆಗಳಿಂದ ಮೇಲಕ್ಕೆ ಹಾರುವ ಬಿಸಿ ನೀರೂ ರೋಗ ನಿವಾರಕವಾಗಿರುವವು. ಜ್ವಾಲಾಮುಖಿಗಳಿಂದ ಹೊರ ಬಿದ್ದ ಲೋಹ ಸಂಬಂಧವುಳ್ಳ ಒಂದು ತರಹದ ಕಪ್ಪು ಬಣ್ಣದ ಅಂಟು ಅಂಟಾದ ಆ ಮಣ್ಣು, ನದಿಯ ತಳದಲ್ಲಿ ಬುಗ್ಗೆಗಳಿಂದ ಹಾರುತ್ತಿರುವ ಬಿಸಿನೀರಿನೊಂದಿಗೆ ದಂಡೆಯ ಮೇಲೆ ಚೆಲ್ಲಿ ಬಿದ್ದು ದಾಸ್ತಾನಾಗಿರುತ್ತದೆ. ಅಲ್ಲಿಂದ ಆ ನೀರೂ, ಮಣ್ಣೂ ಆ ದ್ವೀಪದ ಮೇಲಿರುವ ಸ್ನಾನ ಗೃಹಗಳಿಗೆ ಸಾಗುವಂತೆ ಅನುಕೂಲತೆ ಮಾಡಿದ್ದಾರೆ. ಮಣ್ಣಿನಲ್ಲಿ ಒಂದು ವಿಚಿತ್ರ ಪ್ರಕಾರದ [illegible] ಶಕ್ತಿ ಇದೆ. ಅದನ್ನು ಶರೀರದ ಯಾವ ಭಾಗಕ್ಕಾದರೂ ಲೇಪಿಸಿದರೆ ಆ ಭಾಗದ ಚರ್ಮದ ನರನಾಡಿಗಳು ಉದ್ರೇಕವಾಗುತ್ತದೆ. ಆ ಕಾರಣದಿಂದ ಅಲ್ಲಿಗೆ ಪರಿಶುದ್ಧವಾದ ಹೊಸ ರಕ್ತದ ಸಂಚಾರವು [illegible] ಆ ಭಾಗದಲ್ಲಿ ರೋಗವಿದ್ದ ಸಂದರ್ಭದಲ್ಲಿ ಅದರ [illegible] ಉಪಶಮನವಾಗುತ್ತದೆ

ರೋಗಿಗಳಾದವರು ಪಿಸ್ತಾನಿಯ [illegible]ರಿನ ಬುಗ್ಗೆಗಳಲ್ಲಿ ಸ್ನಾನ ಮಾಡಿ ಅಥವಾ ಅಲ್ಲಿಯ ಮಣ್ಣನ್ನು ಲೇಪಿಸಿಕೊಂಡು ಚಿಕಿತ್ಸೆ ಮಾಡಿಕೊಳ್ಳಬೇಕಾದರೆ ಮೂರರಿಂದ ನಾಲ್ಕು ವಾರಗಳು ಬೇಕಾಗುತ್ತವೆ. ಪ್ರತಿಯೊಬ್ಬನು ಸುಮಾರು 20 ಬಾರಿ ಅಲ್ಲಿನ ಮಣ್ಣು ಸ್ನಾನ ಮಾಡಬೇಕಾಗುತ್ತದೆ. ಬೇರೆ ಬೇರೆ ರೋಗಗಳಿಗೆ ಬೇರೆ ಬೇರೆ ಚಿಕಿತ್ಸಾ ಕ್ರಮಗಳು ಇರುತ್ತವೆ. ಪಿಸ್ತಾನಿಯಲ್ಲಿ ಇದರ ಅನುಭವಿಕ ಚಿಕಿತ್ಸಕರೂ ಇರುತ್ತಾರೆ

ಆಸ್ಟ್ರೇಲಿಯಕ್ಕೆ ಯೆಹೂದಿ ಮಕ್ಕಳು

ಜರ್ಮನಿಯಲ್ಲಿ ಸರ್ವಾಧಿಕಾರಿ ಹಿಟ್ಲರನಿಂದ ಯಹೂದಿಯರಿಗಾಗುವ ಪೀಡೆಯು ಅಸಹನೀಯವಾಗಿದೆ. ಆದ್ದರಿಂದ ಅಲ್ಲಿಯ ಯಹೂದಿ ಸಂಘ ಸಂಸ್ಥೆಗಳು ಜರ್ಮನಿ ಯಹೂದಿಯರ ಮಕ್ಕಳನ್ನು ಬೇರೆ ದೇಶಗಳಿಗೆ ಕಳುಹಿಸುವ ಆಲೋಚನೆ ಮಾಡಿವೆ. ಆಸ್ಟ್ರೇಲಿಯದ ಸರಕಾರವು ಅಂಥ 30 ಮಕ್ಕಳನ್ನು ತಾನು ಸ್ವೀಕರಿಸುವದಾಗಿ ಒಪ್ಪಿದೆ. ಆ ಮಕ್ಕಳು ಈಗಾಗಲೇ ಬರಹತ್ತಿರುವವು. ಹಾಗೆಯೇ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರವೂ ಜರ್ಮನ ಯಹೂದಿಯರ ಮಕ್ಕಳನ್ನು ಸ್ವೀಕರಿಸುವದಾಗಿ ಒಪ್ಪಿಕೊಂಡ ಒಂದು ವರ್ಷದಿಂದ ಪ್ರತಿ ತಿಂಗಳು ಹತ್ತತ್ತು ಮಕ್ಕಳಂತೆ ಸ್ವೀಕರಿಸುತ್ತ ಬಂದಿದೆ.

ಈ ಮಕ್ಕಳು ವಿದೇಶಗಳಿಗೆ ಹೋಗಬೇಕಾದರೆ, ಅವುಗಳ ಲಾಲನೆ ಪಾಲನೆಯ ಭಾರವನ್ನು ಆ ವಿದೇಶಗಳಲ್ಲಿರುವ ಯಹೂದಿ ಸಂಬಂಧಿಕರು ಅಥವಾ ಬೇರೆ ಯಾರಾದರೂ ಪರೋಪಕಾರಿ ಶ್ರೀಮಂತರು ತಮ್ಮ ಮೇಲೆ ತೆಗೆದುಕೊಳ್ಳಬೇಕು. ಈ ಮಕ್ಕಳನ್ನು ಅವರ ದತ್ತಕ್ಕೆ ತೆಗೆದುಕೊಂಡ ಹಾಗೆಯೇ ಸರಿ. ಯಾಕೆಂದರೆ ಈ ಮಕ್ಕಳು ಪುನಃ ತಮ್ಮ ಹೆತ್ತವರನ್ನು ಕಾಣುವ ಸಂದರ್ಭಗಳೇ ತೋರುವದಿಲ

NOTICE

Tenders are invited from persons desirous of obtaining on annual lease the premises together with the yard compound out house etc., well known as Vathika Villa, situated in [illegible]. Persons desirous of obtaining on lease these premises are requested to put themselves in communication in writing with the undersigned so as to reach him before the 27th July 1938.

B Vaikunta Baliga, B.A., B.L.

Vakil for the power of attorney

Holder from Mulji Laxmidas & Co.

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು. ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು. ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಆದಕಾರಣ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಔಷಧದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ಮಹಾತ್ಮರಿಂದಾಗಿ ಕಾಂಗ್ರೆಸಿಗೆ ಮಹತ್ವ ಬಂದಿದೆ

ಕಾಂಗ್ರೆಸು ನಮ್ಮ ದೇಶದ ಒಂದೇ ಒಂದು ಪ್ರಬಲ ರಾಜಕೀಯ ಸಂಸ್ಥೆಯಾಗಿದೆ. ದೇಶದ ರಾಜಕೀಯ ಆಸೆಪ್ರತ್ಯಾಸೆಗಳು ಯಾವವೆಂದು ಅಧಿಕಾರಯುತ ವಾಣಿಯಿಂದ ಹೇಳಬಹುದಾದ ಸಂಸ್ಥೆ ಅದು ಒಂದೇ ಆಗಿದೆ. ಕಾಂಗ್ರೆಸನ್ನು ಒಪ್ಪಿಸದೆ, ಅದನ್ನು ಸಮಾಧಾನಪಡಿಸದೆ, ದೇಶದಲ್ಲಿ ಸ್ಥಿರವಾದ ರಾಜಕೀಯ ಶಾಂತಿಯು ಉಂಟಾಗಲಾರದೆಂಬುದನ್ನು ಬ್ರಿಟಿಷ ಆಳರಸರು ಕೂಡ ಚೆನ್ನಾಗಿ ಮನಗಂಡಿದ್ದಾರೆ. ಆದ್ದರಿಂದ ಕಾಂಗ್ರೆಸಿಗೆ ಇಂದು ಇಡೀ ಜಗತ್ತಿನಲ್ಲಿ ಮಾನ್ಯತೆ ಇದೆ; ಗೌರವವಿದೆ. ಕಾಂಗ್ರೆಸ್ಸ ಮುಖಂಡರು ಆಡುವ ಪ್ರತಿಯೊಂದು ಮಾತನು ಪ್ರಪಂಚವು ಲಕ್ಷಕೊಟ್ಟು ಕೇಳುತ್ತದೆ.

ಮಹಾತ್ಮಾ ಗಾಂಧಿಯವರು.

ಕಾಂಗ್ರೆಸಿಗೆ ಪ್ರಪಂಚದಲ್ಲಿ ಇಷ್ಟು ಉಚ್ಚವಾದ ಸ್ಥಾನಮಾನಗಳು ಹೇಗೆ ಪ್ರಾಪ್ತವಾದುವು? ಕಾಂಗ್ರೆಸಿಗೆ ಇರುವಷ್ಟು ದೊಡ್ಡದಾದ ಸಾಮಾನ್ಯ ಸದಸ್ಯರ ಸಂಖ್ಯೆ, ಜಗತ್ತಿನ ಬೇರೆ ಯಾವ ಸಂಘ ಸಂಸ್ಥೆಗೂ ಇರುವದಿಲ್ಲ. ಮಿಲಿಯಾಂತರ ಭಾರತೀಯರು ಕಾಂಗ್ರೆಸಿನ ಸದಸ್ಯರಾಗಿದ್ದಾರೆ. ಅವರ ಬಲದಿಂದ ಕಾಂಗ್ರೆಸಿಗೆ ಉಚ್ಚಸ್ಥಾನಮಾನಗಳು ಪ್ರಾಪ್ತವಾಗಿವೆಯೆ? ಕಾಂಗ್ರೆಸು ಜನ್ಮಕ್ಕೆ ಬಂದು 50 ವರ್ಷಗಳಾದುವು. ಅದು ದೇಶದತ್ಯಂತ ಹಳೆಯದಾದ ರಾಜಕೀಯ ಸಂಸ್ಥೆ ಎಂಬ ಕಾರಣದಿಂದ ಅದಕ್ಕೆ ಪ್ರಪಂಚದ ಗೌರವ ಪೂಜ್ಯತೆಗಳು ಸಲ್ಲುತ್ತಿವೆಯೆ? ಅಥವಾ ನೇಹರೂ, ಮಾಲವೀಯ, ಸುಭಾಷ ಮೊದಲಾದ ಮಹಾ ಮಹಾ ಪ್ರತಿಭಾ ಸಂಪನ್ನರು ಕಾಂಗ್ರೆಸಿಗೆ ಕೂಡಿದ್ದಾರೆ ಎಂಬುದರಿಂದ ಅದು ಮರ್ಯಾದಿತವಾಗಿದೆಯೆ?

ಕಾಂಗ್ರೆಸಿನ ಈಗಿನ ಉತ್ಕರ್ಷಕ್ಕೆ ಮೇಲೆ ಹೇಳಿದ ಯಾವುವೂ ಪ್ರಬಲ ಕಾರಣಗಳಾಗಿರುವುದಿಲ್ಲ. ಈ ವಿಷಯವಾಗಿ ಅಮೇರಿಕದ 'ದಿ ನ್ಯೂ ಸ್ಟೇಟ್ಸ್ ಮೇನ್ ಮತ್ತು ನೇಶನ್' ಎಂಬ ಪತ್ರಿಕೆಯು ಹೀಗೆನ್ನುತ್ತದೆ— "ಕಾಂಗ್ರೆಸಿನಲ್ಲಿ ಒಬ್ಬ ವಿಭೂತಿ ಪುರುಷನು ಇದ್ದುದು ಅಲ್ಲವಾಗಿದ್ದರೆ, ಇಂಗ್ಲಂಡಿನಲ್ಲಿ ಉಗ್ರಸಮಾಜವಾದಿ ಅಥವಾ ಕಮ್ಯುನಿಷ್ಟ ಪಾರ್ಟಿಗೆ ಇದ್ದಷ್ಟು ಪ್ರಾಮುಖ್ಯತೆ ಕೂಡ ಕಾಂಗ್ರೆಸಿಗೆ ಬರುತ್ತಿದ್ದಿಲ್ಲ. ಆದರೆ ಆ ಒಬ್ಬ ವಿಭೂತಿ ಪುರುಷನು ಕಾಂಗ್ರೆಸ ಸಂಸ್ಥೆಯನ್ನು ಸೇರಿಕೊಂಡುದೇ, ಅದರ ಇತಿಹಾಸವನ್ನು ಉಜ್ವಲವಾಗಿ ಬೆಳಗಿಸಿತು. ಆ ವಿಭೂತಿ ಪುರುಷನು ಮತ್ತಾರೂ ಅಲ್ಲ, ಜಗದ್ವಂದ್ಯ 'ಗಾಂಧಿಮಹಾತ್ಮ'ರಾಗಿರುವರು. ನೇಹರು, ಮಾಲವೀಯ, ಭೋಸ ಮೊದಲಾದವರ ಸಣ್ಣದೊಡ್ಡ ಪಂಗಡಗಳಿವೆ. ಹೆಚ್ಚಾದರೆ ಅವರು ತಮ್ಮ ಆ ಪಂಗಡಗಳ ಮೇಲೆ ಮಾತ್ರ ಅಧಿಕಾರ ನಡೆಸಲಿಕ್ಕೆ ಸಮರ್ಥರಾಗಿದ್ದಾರೆ. ಅವರು ಕೆಲವು ಸಾವಿರ ಜನರ ಮುಖಂಡರಾಗಿರುವರಾದರೆ ಮಹಾತ್ಮಾಗಾಂಧಿಯವರು ಮಿಲಿಯಾಂತರ ಜನರ ಮುಖಂಡರಾಗಿದ್ದಾರೆ. ಅವರು ಒಂದೊಂದು ರಾಜಕೀಯ ಪಂಗಡದ ಮುಖಂಡರು. ಆದರೆ ಗಾಂಧಿಯವರು ಮಹಾತ್ಮರು, ಪರಮಾತ್ಮನ ಸಂದೇಶವನ್ನು ಭಾರತಕ್ಕೆ ತಂದ ದೇವದೂತರು, ಎಲ್ಲ ಪಕ್ಷಪಂಗಡಗಳ ಅಖಂಡ ಮುಖಂಡರು ಆಗಿದ್ದಾರೆ. ಹದಿನೆಂಟನೆ ಶತಮಾನದಲ್ಲಿ ಭಾರತದಲ್ಲಿ ಬ್ರಿಟಿಷರ ಅಧಿಕಾರ ಸ್ಥಾಪನೆಯಾದಮೇಲೆ ಈ ಹೊತ್ತಿನತನಕ ಅಂಥ ಸಮರ್ಥ ವ್ಯಕ್ತಿಯು ಬೇರೆ ಹುಟ್ಟಲೇ ಇಲ್ಲ. ಕಾಂಗ್ರೆಸು ಮಹತ್ವವನ್ನು ಪಡೆಯಲಿಕ್ಕೆ ಮಹಾತ್ಮಗಾಂಧಿಯವರೊಬ್ಬರೇ ಕಾರಣರಾಗಿದ್ದಾರೆ."

ನಿಜ. ಕಾಂಗ್ರೆಸಿನೊಳಗೆ ಮಹಾತ್ಮಾ ಗಾಂಧಿಯವರ ಪ್ರವೇಶವಾಗುವ ತನಕ ಕಾಂಗ್ರೆಸು ಬ್ರಿಟಿಷ ಆಳರಸರ ಮುಂದೆ ಮೊಣಕಾಲೂರಿ ತನ್ನ ಹಕ್ಕುಬಾಧ್ಯತೆಗಳಿಗಾಗಿ ಅವರನ್ನು ಪ್ರಾರ್ಥಿಸುವ ಒಂದು ದುರ್ಬಲ, ನಿರ್ಬಲ ಸಂಸ್ಥೆಯಾಗಿದ್ದಿತು. ಆದರೆ ಅದರೊಳಗೆ ಮಹಾತ್ಮರ ಪ್ರವೇಶವಾದ ಬಳಿಕ ಕಾಂಗ್ರೆಸು ಅಭಿಮಾನದಿಂದ ಲೋಕದ ಮುಂದೆ ತಲೆಯೆತ್ತಿ ನಿಂತಿರುವ ಒಂದು ಮಹಾಸಂಸ್ಥೆಯಾಗಿ ಪರಿವರ್ತನೆ ಹೊಂದಿದೆ. ಈ ಪರಿವರ್ತನೆಗೆ ಕಾರಣರಾದ ಮಹಾತ್ಮರೇ ಧನ್ಯರು! ಅವರನ್ನು ಪಡೆದ ಕಾಂಗ್ರೆಸೇ ಧನ್ಯ!!

ವಿದ್ಯಾಪ್ರಚಾರಕ್ಕಾಗಿ ಹದಿನೇಳು ಲಕ್ಷ ರೂಪಾಯಿ

ಜಾನುವಾರುಗಳ ಉತ್ಪನ್ನಗಳ ಅಭಿವೃದ್ಧಿ ಮತ್ತು ಜಾನುವಾರುಗಳ ಕುಲವರ್ಧನೆ ಇವುಗಳನ್ನು ಚೆನ್ನಾಗಿ ವಿಮರ್ಶಿಸಿ, ಶಿಕ್ಷಣವನ್ನು ಯಾವತ್ತು ಕೃಷಕರಿಗೆ ಸಿಗುವಂತೆ ವ್ಯವಸ್ಥೆಮಾಡುವುದಕ್ಕಾಗಿ, ಗುಜರಾಥದಲ್ಲಿ ಎರಡು ಹೊಸ ವಿದ್ಯಾಲಯಗಳು ಸ್ಥಾಪನೆಹೊಂದುವುವು. ಇವು ಮುಂಬಾಯಿ ಸರಕಾರದ ಶಾಲೆಗಳಾಗುವುವು.

ಇಂತಹ ಜ್ಞಾನವನ್ನು ಜನರಲ್ಲಿ ಹರಡುವುದಕ್ಕೆ ಉಚ್ಚಶಿಕ್ಷಣ ಕೊಡುವ ಶಾಲೆಗಳಲ್ಲಿ ಆ ದೇಶದಲ್ಲಿ ಇವೇ ಮೊದಲನೆಯವು. ಇಂತಹವನ್ನು ಇನ್ನು ಡಿಲ್ಲಿಯಲ್ಲಿ ಸ್ಥಾಪಿಸಬೇಕಾಗಿ ಲೋರ್ಡ ಲಿನ್ಲಿತ್ಗೋರವರೂ ಆಲೋಚನೆಮಾಡಿದ್ದರಂತೆ

ಮತ್ತೊಂದು ಶಾಲೆಯು ಸಂಸ್ಕೃತ ಸಾಹಿತ್ಯದ ವಿಮರ್ಶೆಗಾಗಿಯೇ ಈ ಸರಕಾರದಿಂದ ನಿರ್ಮಿತವಾಗಲಿದೆ. ಅದಕ್ಕೆ ಹಣ ಕೂಡ ಬಂದಿದೆ.

ಇನ್ನೂ ನೂತನ ಶಾಲಾ ಸ್ಥಾಪನೆಗಾಗಿ, ಮುಖ್ಯ ಕಾರಣರು ಬೊಂಬಾಯಿಯ ಮಂತ್ರಿ ಶ್ರೀ ಕೆ. ಎಮ್ ಮುನಶಿಯವರು.

ಒಂಬತ್ತು ಲಕ್ಷ ರೂಪಾಯಿಗಳ ದಾನ

ದಿವಂಗತ ಮನಸುಖಲಾಲ ಛಗನಲಾಲರ ವಿಧವೆ ಶ್ರೀ ಇರವಂತಿ ಮನಸುಖಲಾಲರು ಪತಿಯು ಬಿಟ್ಟುಹೋದ ರೂಪಾಯಿ 20 ಲಕ್ಷದ ಮೊಬಲಗಿನಿಂದ,—ಒಂಬತ್ತು ಲಕ್ಷ ರೂಪಾಯಿಗಳನ್ನು—ಜಾನುವಾರಗಳ ಆರೈಕೆ, ಹೈನ ಮತ್ತು ಕೃಷಿ ಇವುಗಳ ಉತ್ತಮ ಶಿಕ್ಷಣಬೋಧನೆಗಾಗಿ ಆಯ ಶಾಲಾಸ್ಥಾಪನೆಯಾಗಲೆಂದು ದಾನವಾಗಿ ಶ್ರೀ ಮುನಶಿಯವರಿಗೆ ಒಪ್ಪಿಸಿ, ಆ ಶಾಲೆಯನ್ನು ತನ್ನ ದಿವಂಗತ ಪತಿಯ ಹೆಸರಲ್ಲಿಡಬೇಕೆಂದೂ ಸೂಚಿಸಿಕೊಂಡಿದ್ದಾರೆ.

ಈ ಶಾಲೆಯಲ್ಲಿ ಕಲಿಯುವ ಕೃಷಿಕ ಯುವಕರಿಗೆ ಒಂದು ವರ್ಷದಲ್ಲಿ ಸರ್ಟಿಫಿಕೇಟು, ನಾಲ್ಕು ವರ್ಷಗಳಲ್ಲಿ ಡಿಪ್ಲೋಮಾ ಸಿಗುವುವು.

ಆರು ಲಕ್ಷ ರೂಪಾಯಿಗಳ ದಾನ

ಸೇಟ್ ಮಗನಲಾಲ ಗಿಯೋಕಾ ಇವರು ಜಾನುವಾರಗಳ ವಂಶಾಭಿವೃದ್ಧಿಗಾಗಿ ಉತ್ತಮ ಶಿಕ್ಷಣ ಕೊಡುವ ಶಾಲಾಸ್ಥಾಪನೆಗಾಗಿ ಆರು ಲಕ್ಷ ರೂಪಾಯಿಗಳನ್ನು ದಾನವಾಗಿತ್ತು, ಉತ್ತಮ ಹಾಲುಕೊಡುವ ದನಗಳ ಸಾಕಣೆಗೆ ಯೋಗ್ಯಸ್ಥಳವೆಂದು ಒಂದು ಸಾವಿರ ಎಕ್ರೆಸ್ಥಳವನ್ನು ಸಹಾ ಸರಕಾರಕ್ಕೆ ಒಪ್ಪಿಸಿರುವರು.

ಇದಲ್ಲದೆ, ಇನ್ನೆರಡು ಲಕ್ಷ ರೂಪಾಯಿಗಳ ದಾನ

ಸಂಸ್ಕೃತ ಹಿಂದೀ ಗುಜರಾಥಿ ಮೊದಲಾದ ಒಂದು ಬಾಂಧವ್ಯವಿರುವ ಭಾಷೆಗಳು ಉನ್ನತಿಹೊಂದುವಂತೆ, ಅವುಗಳು ಉತ್ತಮ ಪ್ರಚಾರಹೊಂದುವಂತೆ ಮಾಡಲೂ ಅವರೇ ಗೊಯೆಂಕಾರವರು ಇನ್ನೆರಡು ಲಕ್ಷ ರೂಪಾಯಿ ದಾನಮಾಡಿರುವರು. ಈ ವಿದ್ಯಾಸಂಸ್ಥೆಯೂ ಸದ್ಯದಲ್ಲೇ ನಿರ್ಮಾಣಹೊಂದುವುದು.

ಬೊಂಬಾಯಿಯು ಎಲ್ಲಾ ವಿಧಗಳಲ್ಲೂ ಸಂಪನ್ನವಾಗಿರುವುದಕ್ಕೆ ಇಂತಹ ದಾನಶೂರರಿರುವುದೇ ಕಾರಣವಲ್ಲವೆ? ಹದಿನೇಳು ಲಕ್ಷರೂಪಾಯಿಗಳಿರುವ ಶ್ರೀಮಂತರು ಎಷ್ಟು ಬಡಜನಗಳ ಭೂಮಿಗಳನ್ನು ಸಾಲಕ್ಕೆ ಸಂದಾಯ ಮಾಡಿಕೊಳ್ಳುತ್ತಿದ್ದರು! ಎಂತಹ ಉಪಟಳವನ್ನು ಬೀರುತ್ತಿದ್ದರು! ಸ್ವಜಾತಿಗೆಂದೇ ಎಷ್ಟು ಹೋಗಾಡುತ್ತಿದ್ದರು! ದೇಶದಲ್ಲಿಲ್ಲದ ಬಗೆಯ ಶಿಕ್ಷಣಸಂಪತ್ತು ಹೆಚ್ಚಲೆಂದು ಮುಂದೆ ಬರುವ ಇವರಂತಹರೆಷ್ಟು ಮಂದಿ ಶ್ರೀಮಂತರಿರುವರು? ವಾಣಿಜ್ಯಸಂಪತ್ತು ಶಿಕ್ಷಣ ಸಂಪತ್ತಿನ ಬೆಂಬಲಕ್ಕಿದ್ದು ಪೋಷಿಸುತ್ತಿದ್ದರೆ, ಅದರಿಂದ ಧಾನ್ಯ-ಧನಲಕ್ಷ್ಮಿಗಳಿಬ್ಬರ ಮಹಾಪೂಜೆಯೂ ಜರಗುವಾಗ, ಅದರ ತೇಜಸ್ಸು ಹೆಚ್ಚುವಂತೆ ಸರಸ್ವತಿಯೂ ವೇದವನ್ನು ವೀಣೆಯನ್ನು ನುಡಿಸುವಳಲ್ಲವೆ? ಶ್ರೀಮಂತರಾದುದಕ್ಕೆ ಆಗ ತಾನೆ ಧನ್ಯರಾಗುವರು.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು:

1. ರಥಬೀದಿ ಮಂಗಳೂರು.
2. ಪುತ್ತಿಯಾರ ಕಲ್ಲಿಕೋಟೆ.
3. ಪಿ. ಬಿ. 337 ಮೌಂಟ್ ರೋಡ್ ಮದ್ರಾಸು. (ಟೆಲಿಫೋನ್ ನಂಬ್ರ 8245)
4. ವಿಶ್ವೇಶರಪುರಂ ಸರ್ಕಲ್ ಬೆಂಗಳೂರು ಸಿಟಿ. (ಟೆಲಿಫೋನ್ ನಂಬ್ರ 2182.)
5. ಗೌತಮ ನಿವಾಸ್, ಚಾರ್ನಿ ರೋಡ್, ಗಿರ್‌ಗಾಂವ್, ಬೊಂಬಾಯಿ. (ಟೆಲಿಫೋನ್ ನಂಬ್ರ 26814.)

ಇನ್ಸ್‌ಪೆಕ್ಟೋರೇಟ್ ಆಫೀಸು:

6. ಒಟ್ಟಪಾಲ, ದಕ್ಷಿಣ ಮಲಬಾರು.
7. ಸೆಂಟ್ರಲ್ ಸ್ಟೇಶನ್ ರೋಡ್, ಟ್ರಿವೆಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು:

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್.

(ಕೊಟ್ಟಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)

ರಿಜಿಸ್ಟರ್ಡ್ ಆಫೀಸು: ಉಡುಪಿ.

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯು ಪ್ರಖ್ಯಾತಿಯನ್ನು ಸೂಚಿಸುತ್ತದೆ.

ನೂತನ ವಹಿವಾಟು	ರೂ. 140,08,725
ವಿಮಾಕಂತುಗಳಿಂದ ಆದಾಯ	ರೂ. 30,00,000ಕ್ಕೆ ಮಿಕ್ಕುತ್ತದೆ
ಒಟ್ಟು ಆಸ್ತಿಪಾಸ್ತಿಯು	ರೂ. 100,00,000ಕ್ಕೆ ಮಿಕ್ಕುತ್ತದೆ
ಈ ವರೆಗೆ ಕ್ಲೇಮುಗಳಿಗೆ ಸಂದದ್ದು	ರೂ. 50,00,000ಕ್ಕೆ ಮಿಕ್ಕುತ್ತದೆ.

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್,

ಬೊಂಬೆ ಲ್ಯಾಫ್ ಕಟ್ಟಡ,
ಸೆಂಟ್ರಲ್ ಆಫೀಸ: ಉಡುಪಿ

ಕರ್ನಾಟಕಕ್ಕೆ ವಾಕ್ಚಲನ ಚಿತ್ರ ಸಂಸ್ಥೆಯ ಆವಶ್ಯಕತೆ

ಶ್ರೀ. ಗರೂಡ ಸದಾಶಿವರಾಯರ ಅಭಿಪ್ರಾಯ

ಸರ್ವಾಂಗ ಸುಂದರವಾದ ಟಾಕಿ ಚಿತ್ರವು ಆಶ್ಚರ್ಯಕರವಾದ ಸಂವಿಧಾನ ಚಮತ್ಕೃತಿಯಿಂದಲೂ, ಮನೋಹರವಾದ ಅನೇಕಾನೇಕ ನಿಸರ್ಗ ಮತ್ತು ಕೃತ್ರಿಮ ದೃಶ್ಯಗಳಿಂದಲೂ ಕೂಡಿದ್ದಾಗಿರಬೇಕು.

2 ಅದರಲ್ಲಿನ ಅಭಿನಯಕಾರರು ಚಟುವಟಿಕೆಯುಳ್ಳವರು, ಮತ್ತು ಆರೋಗ್ಯ ಭಾಗ್ಯವಂತರಾಗಿರಬೇಕು. ನೀತಿವಾನರಾಗಿದ್ದರೇನೇ ಅವರ ಕಲಾ ಪ್ರದರ್ಶದಲ್ಲಿ ಒಂದು ಬಗೆಯ ಆಕರ್ಶಕಲೆಯುಂಟಾದೀತು.

3 ಮುಖ್ಯ ಮುಖ್ಯ ಭೂಮಿಕೆಗಳನ್ನು ವಹಿಸುವವರು (ನಾಯಿಕೆಯಲ್ಲಿ ರಾಜಾ ರಾಣಿ ಪಾರ್ಟಿಯವರು) ಕೇವಲ ರೂಪಸಂಪನ್ನರಾಗಿರಬೇಕು. ಅವರ ಕಂಠದಲ್ಲಿ ಮಾಧುರ್ಯವಿರಬೇಕು. ರುಚಿಕಟ್ಟಾಗಿ ಗಾಯನ ವಾದನ ಮಾಡುವುದನ್ನು ಕಲಿತಿರಬೇಕು. ಮತ್ತು ಉದುರಿದ ಹಾಗೆ ಮಾತನಾಡುವ ರೂಢಿಯನ್ನಿಟ್ಟುಕೊಂಡಿರಬೇಕು. ಚಪಲಗತಿಯಿಂದ ಓಡುವ ಈಜುವ, ಖಡ್ಗ ಇತ್ಯಾದಿ ಆಯುಧಗಳನ್ನು ತಿರುಹುವ ಕಲೆಯಲ್ಲಿ ಅವಶ್ಯ ನುರಿತವನಾಗಿರುವುದಲ್ಲದೇ, ಕುದುರೆ, ಸೈಕಲ್, ಮೋಟಾರ ಇತ್ಯಾದಿ ವಾಹನಗಳನ್ನೇರಿ ನಿರ್ಭಯವಾಗಿಯೂ ವೇಗವಾಗಿಯೂ ನಡಿಸುವುದನ್ನು ಕಲಿತಿರಬೇಕು.

4 ಅಭಿನಯವು ಟಾಕಿಯ ಮುಖ್ಯ ಜೀವಾಳವು. [illegible] ಒಂದು ಭಾಗವನ್ನು ನಾಟಕದಲ್ಲಿನ ನಟನು ಅನೇಕಾನೇಕ ಗದ್ಯ ಪದ್ಯಗಳಿಂದಲೂ ಮಾತುಗಳಿಂದಲೂ ವ್ಯಕ್ತಪಡಿಸ ಅವಕಾಶವಿದ್ದಂತೆ ಟಾಕಿಯಲ್ಲಿಲ್ಲ. ಒಂದೇ ಒಂದು ಪದ್ಯದಲ್ಲಾಗಲಿ ಒಂದೆರಡು ಮಾತುಗಳಲ್ಲಾಗಲೀ ಭಾವವನ್ನು ಪೂರ್ಣ ವ್ಯಕ್ತಪಡಿಸುವುದೇ ಟಾಕಿ ನಟನ ಕೈವಾಡ. ಉದಾಹರಣೆ - ಮೃಚ್ಛಕಟಿಕ ನಾಟಕದಲ್ಲಿನ ಚಾರುದತ್ತನು ರಂಗಭೂಮಿಯಲ್ಲಿ ದಾರಿದ್ರ್ಯ ದುಃಖವನ್ನು ಪ್ರಕಟೀಕರಿಸುವುದಕ್ಕೆ ಹದಿನೈದು ಇಪ್ಪತ್ತು ಮಿನಿಟುಗಳ ಅವಕಾಶವನ್ನು ಕಲ್ಪಿಸಿಕೊಂಡರೆ, ಚಿತ್ರಪರದಲ್ಲಿನ ಚಾರುದತ್ತನು ಅರ್ಧ ಮಿನಿಟನಲ್ಲಿ ಅಥವಾ ಅಬ್ಬಾ ದಾರಿದ್ರ್ಯವೇ ಎಂಬ ಒಂದೆರಡು ಶಬ್ದಗಳಲ್ಲಿ ನುಡಿದ ಅಭಾವವನ್ನು ವ್ಯಕ್ತಗೊಳಿಸುವ ಸಮರ್ಥನಾಗಿರಬೇಕು. ಅಥವಾ ಅದಕ್ಕೂ ಮಿಗಿಲಾಗಿ ದಾರಿದ್ರ್ಯವೆಂಬ ಒಂದೇ ಶಬ್ದವನ್ನು ಉಸುರ್ಗರೆದು ಹೇಳಿ, ದೃಷ್ಟಿಯಿಂದ ಅಲಿಂತ ರಂಗಭಾವದ ಯಾತನೆಗಳನ್ನು ವ್ಯಕ್ತಗೊಳಿಸುವ ಅಭಿನಯಕಲಾವಿಶಾರದನಾಗಿರಬೇಕು.

5 ಅಂತಹ ಅಭಿನಯ ಕಲೆಯು ಕರತಲಾಮಲಕವಾಗಿರಬೇಕಾದರೆ, ನೆನೆಸಿದ ಭಾವವನ್ನು ತಕ್ಷಣವೇ ವ್ಯಕ್ತಪಡಿಸುವುದಾದರೆ, ಮನವನ್ನು ಎಷ್ಟು ಅಂಕೆಯಲ್ಲಿಟ್ಟುಕೊಳ್ಳಬೇಕಾಯಿತು. ಚಿತ್ತಸ್ಥೈರ್ಯವೆಷ್ಟು ಬೇಕಾಯಿತು. ಆ ಚಿತ್ತವು ರೋಗಿಯಾದ, ಲಂಪಟಿಯಾದ, ಉಲ್ಲಾಸ ವ್ಯಕ್ತಿವಿಹೀನನಾದ ನಟನಲ್ಲಿರುವುದು ಸಾಧ್ಯವೇ?

6 ಅಪ್ರತ್ಯಕ್ಷವಾಗಿದ್ದುಕೊಂಡು ಕೇವಲ ತನ್ನ ಛಾಯ ಚಲನ ವಲನಗಳಿಂದ ಪ್ರೇಕ್ಷಕರ ಚಿತ್ತಹರಣೆಮಾಡುವ ಆ ಟಾಕಿ ನಟನ ಅಭಿನಯ ಕೌಶಲ್ಯ ಬಲವು ಸಾಮಾನ್ಯವೇ?

7. ಟಾಕಿನಟ ವೃತ್ತಿಯನ್ನವಲಂಭಿಸಲಪೇಕ್ಷಿಸುವ ಸ್ತ್ರೀಪುರುಷರಿಗೆ ಧೈರ್ಯದ ಕೆಲ ಮಾತುಗಳನ್ನು ಹೇಳುವೆವು. ಅವರು ಆ ವೃತ್ತಿಯನ್ನು ತಮ್ಮ ಸ್ವಾವಲಂಬನ ಜೀವನ ಸಾಧನವೆಂದಿಟ್ಟುಕೊಳ್ಳತಕ್ಕದ್ದು. ಅದರಿಂದ ಜೀವಿಸಲಗತ್ಯವಿಲ್ಲದ ಅನುಕೂಲಸ್ಥ ನಟನಟಿಯರು ತಮ್ಮ ಕೌಶಲ್ಯದಿಂದ ಸಿಗುವ ಹಣದಿಂದ ಅನೇಕಾನೇಕ ಸತ್ಕಾರ್ಯಗಳನ್ನು ಮಾಡಬೇಕು.

8. ಚಿತ್ರಪ್ರಪಂಚಕ್ಕಾಗಿ ಸ್ವಲ್ಪ ಸಮಯ ಪತಿ ಪತ್ನಿಯರೆಂಬ ಭಾವವನ್ನಿಟ್ಟುಕೊಂಡ ನಟನಟಿಯರು ಪ್ರತ್ಯಕ್ಷ ಪ್ರಪಂಚದಲ್ಲಿ ಪತಿ ಪತ್ನಿಯರಾಗಿರದಿದ್ದರೆ ಚಿತ್ರಪ್ರಪಂಚದಿಂದ ಹೊರಬಂದ ಬಳಿಕ ಕೇವಲ ಸಹೋದರ ಸಹೋದರಿಯರಂತೆ ವರ್ತಿಸಬೇಕು. ಹಾಗೆ ಅವರು ಸಾಧನಮಾಡದಿದ್ದರೆ ಉಭಯರ ಮನವು ಮಲಿನವಾಗಿ ಮುಂದೆ ಅವರು ತೇಜಸ್ವಿಗಳಾದ ನಟರೆನಿಸಿಕೊಳ್ಳಲಾರರು. ಉದಾಹರಣೆ ಒಂದು ಚಿತ್ರ ಪರದಲ್ಲಿ ಪತಿ ಪತ್ನಿಯರಾಗಿ ಶೃಂಗಾರ ಭಾವಗಳನ್ನು ತೋರಿಸಿದ ನಟನಟಿಯರು ನಿಜದಲ್ಲಿ ಮಲಿನ ಮಾನಸರಾದರೆ, ಮತ್ತೊಂದು ಚಿತ್ರ ಪರದಲ್ಲಿ ಅಣ್ಣತಂಗಿಯರಾದಾಗ್ಯೆ ಅವರ ಅಭಿನಯವು ಭಾವಪೂರ್ಣವಾದೀತೇ? ಅದಕ್ಕೂ ಹೆಚ್ಚಾಗಿ ತಾಯಿ ಮಗನಾದಾಗ್ಯೆ ಅಥವಾ ತಂದೆ ಮಗಳಾದಾಗ್ಯೆ ಹೇಗಾದೀತು ಅವರ ಅಭಿನಯ? ಕೇವಲ ವಿಚಾರಮಾಡು ಪೈಶಾಚಿಕ ಅಭಿನಯ ವಾಗಲಿಕ್ಕಿಲ್ಲವೆ? ಅಪ್ರಯುಕ್ತ ಅಂತರಂಗ ಭಾವವನ್ನು ದುರ್ಬಲಮಾಡುವ ತಾಮಸ ಭಾವವನ್ನು ಬಿಡುವ ರೂಢಿಯಲ್ಲಿ ಯಾವಾಗಲೂ ಎಳಸಿಕೊಳ್ಳುತ್ತಿರಬೇಕು. ವಿಶೇಷವೇನು ದರ್ಶನ್ಯವುಳ್ಳ ಸ್ಥಿರಚಿತ್ತರ ಯಾವ ಭೂಮಿಕೆಯನ್ನು [illegible]

9 ಕಲೆಯ ಉತ್ಕರ್ಷಕ್ಕಾಗಿ ಸಾಹಸ ಪಟು ಪ ಧೈರ್ಯಶಾಲಿಗಳಾದ ನಟನಟಿಯರನ್ನು ಸಮಾಜವು ಸರ್ವಥಾ ತಿರಸ್ಕಾರ ಭಾವದಿಂದ ನೋಡಬಾರದು. ಅವರ [illegible] ವಿಚಾರದಲ್ಲಿರುವ ಜನರ ವ್ಯಥಾಸಂದೇಹವನ್ನು ನಟನಟಿಯರು [illegible] ಬೆಚ್ಚಿಸಿಕೊಳ್ಳುತ್ತಿರಬೇಕು.

10 ಶ್ರಾದ್ಧವಿಧಿಯ ಮುಟ್ಟಿಗೆ ಪಿತೃ ಸ್ಥಾನದಲ್ಲಿ ಕುಳ್ಳಿರಿಸಿದ ಬ್ರಾಹ್ಮಣನ ಬದುಕಿರುವ ಯಜಮಾನನ ತಾಯಿಯ ಗಂಡನೆಂದು ಭಾವಿಸವುದು, ಅವಿಧವಾನವಮಿಯಲ್ಲಿ [illegible] ಸ್ಥಾನದಲ್ಲಿ ಕುಳಿತ ಸುವಾಸಿನಿಯನ್ನು ಬದುಕಿದ ಕರ್ತೆಯ ಪತ್ನಿಯೆಂದು ಭಾವಿಸುವುದು ಎಷ್ಟು ಮೂರ್ಖತನವೋ ಅಷ್ಟೇ ಟಾಕಿ ನಟನಟಿಯರನ್ನು ನೋಡಿ, ನಟನಟಿಯರ ಪ್ರಾಪಂಚಿಕ ಸಮ್ಮಂಧವನ್ನು ಕಲ್ಪಿಸುವುದು ಮೂರ್ಖತನವು.

11 ಇನ್ನು ಪರಪ್ರಾಂತ್ಯ ವಿಚಾರ ಕನ್ನಡಿಗರೇ, ಬೆಂಗಾಲ, ಮಹಾರಾಷ್ಟ್ರ, ತಮಿಳು, ಆಂಧ್ರನಾಡಿನವರು ಈ ವ್ಯವಸಾಯದಲ್ಲಿ ಹೇಗೆ ರಭಸವಾಗಿ ಮುಂಬರುತ್ತಿರುವರೆಂಬುದನ್ನು ಆಲೋಚಿಸಿರಿ. ಅಲ್ಲಿ ಅನೇಕ ಗೃಹಿಣಿಯರು ಕೂಡಾ ಮುಂದೆ ಬಂದು ನಿರ್ಭಯವಾಗಿ ತಮ್ಮ ಕಲಾಚಾತುರ್ಯವನ್ನು ತೋರಿಸುತ್ತಿರುವರು. ಅವರೆಲ್ಲರನ್ನು ನೀತಿವಿಹೀನೆಯರೆಂದೂ ಮಿಕ್ಕ ಪ್ರಾಂತ್ಯದವರೆಲ್ಲರನ್ನು ನೀತಿವಂತರೆಂದೂ ಎಂದು ಸಿದ್ಧಾಂತ ಕೊಟ್ಟುವುದು ನ್ಯಾಯವಾದೀತೇ? ಜಗತ್ಪ್ರಸಿದ್ಧ ಕವಿ ಸಮ್ರಾಟರ ರವೀಂದ್ರನಾಥ ಟಾಗೋರರ ಮನೆಯ ಹೆಣ್ಣುಮಕ್ಕಳು ರಂಗಭೂಮಿಯಲ್ಲಿ ನರ್ತನ ಇತ್ಯಾದಿ ಪಾರ್ಟ ಮಾಡುವರು. ಲೋಕೋತ್ತರಗಾಯನಾಭಿನಯ ಚಾತುರ್ಯ ಮತ್ತು ಸೌಂದರ್ಯವಿದ್ದ ನಮ್ಮ ಕನ್ನಡದೇಶದ ಸಹೋದರಿಯರ ಮುಂದೆ ಬಂದು ಟಾಕಿ ಪ್ರಪಂಚವನ್ನು ಕಳೆಗಟ್ಟಿಸಬೇಕು. ರೂಪ ಯೌವನ ಮಧುರ ಕಂಠತ್ರಾಣವುಳ್ಳ ಧೈರ್ಯಶಾಲಿನಿಯರು ತಕ್ಕ ಸಿದ್ಧತೆಯನ್ನು ಮಾಡಿಕೊಂಡು ಕಲಾಚಾತುರ್ಯವನ್ನು ತೋರಿಸುವಲ್ಲಿ ದೋಷವೇನಿದೆ?

12 ಮತ್ತೊಂದು ಸಂಗತಿ. ಕೇವಲ ರೂಪ ಸಂಪನ್ನರಾದ ಉಪಜೀವನಕ್ಕೆ ಏನೂ ಇಲ್ಲದ ಅಶಿಕ್ಷಿತ ವರ್ಗದವರಲ್ಲಿ ಕೆಲವರು ತಮ್ಮ ಚೆಲುವ ಹೆಣ್ಣು ಮಕ್ಕಳನ್ನು ಕೇವಲ ತಾರುಣ್ಯ ವಿಕ್ರಯ ಕಾರ್ಯಕ್ಕೆ ಯೋಜಿಸುವರೆಂತಲೂ, ಅವರು ಬೊಂಬಾಯಿ ಮೊದಲಾದ ಪಟ್ಟಣಗಳಲ್ಲಿದ್ದುಕೊಂಡು ಅನಾಚಾರ ಪ್ರವರ್ತರಾಗಿ ನಾಲ್ಕಾರು ವರುಷಗಳಲ್ಲಿಯೇ ಅನೇಕ ರೋಗಾದಿಗಳ ಆಗರವಾಗಿ, ರೂಪವಿಹೀನೆಯರಾಗಿ, ಕಾಯಕಷ್ಟಗಳನ್ನು ಮಾಡಿ ಜೀವಿಸುವುದಕ್ಕೂ ಅಸಮರ್ಥರಾಗಿ ಹೊಟ್ಟೆಗೆ ಕೂಳು ಕಾಣದೇ ನಲಿದು ನಲಿದು ನಾಶಹೊಂದುವರಂತೆ. ಅಂತಹ ಸುಸ್ವರೂಪಿಣಿಯರಿಗೆ ಚೊಕಿಸ್ವಾರ ಎಣಿಸಿ ಜೀವಿಸುವಂತೆ ಸಲಹೆ ಕೊಟ್ಟು ಕಲಾಜೀವಿಗಳನ್ನಾಗಿ ಮಾಡುವುದು ಒಂದು ಸಂಯುಕ್ತಿಕವಾದ ವಿಚಾರವಾಗಲಿಕ್ಕಿಲ್ಲವೇ?

13 ಈ ನಮ್ಮ ದಕ್ಷಿಣ ಕನ್ನಡ ದೇಶಕ್ಕೂ ಇಲ್ಲಿಯ ನಿವಾಸಿಗಳಿಗೂ ಸೌಂದರ್ಯವು ನಿಸರ್ಗದತ್ತವಾದುದ್ದು. ಟಾಕಿ ಪ್ರಪಂಚಕ್ಕೆ ಇದ ತಕ್ಕುದಾದ ಕ್ಷೇತ್ರವೆಂದು ಯೇ ನಾವು ಶ್ರೀ ಭುವನೇಶ್ವರಿ ಟಾಕೀಸ್ ಸ್ಟುಡಿಯೋ ಎಂಬ ಸಂಸ್ಥೆಯನ್ನು ಸ್ಥಾಪಿಸುವ ಸಿದ್ಧತೆಯಲ್ಲಿದ್ದೇವೆ. ಒಂದು ದಿಕ್ಕಿನಿಂದ ಹಣವಂತರು ಹಣ ಸಹಾಯದ ವಾಗ್ದಾನ ಮಾಡುತ್ತಲಿದ್ದಾರೆ. ಮತ್ತೊಂದು ದಿಕ್ಕಿನಿಂದ ಗುಣವಂತರು ಅದರ ಯೋಜನೆ ಹೊಂದುವ ಸಿದ್ಧತೆಯನ್ನು [illegible] ಸಚ್ಚಿತ್ರ [illegible] ಪೂರೈಸಿ ಕೀರ್ತಿ [illegible] ಬೇಕು.

14 ಕನ್ನಡ ಮತ್ತು ಹಿಂದಿ [illegible] ವಿಚಾರವಿಸುವುದರಿಂದ [illegible] ಕಲಾಸೇವೆಗಾಗಲೀ [illegible] ವಾಗಲೀ [illegible] ಮಾಡಿಕೊಳ್ಳತಕ್ಕದ್ದು. ರಿಜಿಸ್ಟರ ಆದ ಸ್ವಲ್ಪ ದಿನಗಳಲ್ಲಿಯೇ ತಕ್ಕ ಗಾಯನ ಅಭಿನಯಗಳ [illegible] ಬುದ್ಧಿವಂತರಾದ ಸ್ತ್ರೀಪುರುಷರ [illegible] ಜಗತ್ಪ್ರಖ್ಯಾತವಾದ ನಟರೆಂದೆನಿಸಿಕೊಳ್ಳುವ [illegible] ವನ್ನು ಸಾಧಿಸಿ, ಕರ್ನಾಟಕ ಟಾಕಿ ಪ್ರಪಂಚದ ಆದರ್ಶವಾದದ್ದೆಂದು ಸಿದ್ಧಮಾಡಬೇಕು.

ಇತಿ

ಸದಾಶಿವರಾವ್ ಗರೂಢ,

ನಾಟಕಾಲಂಕಾರ ಅಭಿನಯಶೇಖರ

NOTICE.

In the Court of the District Munsiff of Mangalore

O S No 236/1938.

Between

Abdul Quadir Assadi   PLAINTIFF

AND

Sheik Ismail & others   DEFTS.

To

ALL WHOM IT MAY CONCERN

Take notice that the Plaintiff has filed the above suit in a representative capacity for and on behalf of all genuine creditors of the 1st Defendant and that the said suit is posted to 21-7-1938 when, such of those as are interested as creditors may appear and have their say in the matter

(BY ORDER OF THE COURT)

Mangalore, 25th June, 1938

K. B. Shanker Rao,
R. W. Bhandarkar,
Vakils for Plaintiff

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

"ಚೀನನಿಧಿ" ದಿನಾಚರಣೆ.

ಜುಲೈ ತಾ. ೬, ೭, ಮತ್ತು ೮

ಈಗಾಗಲೇ ಅಖಿಲ ಹಿಂದೂಸ್ಥಾನದೆಲ್ಲಾ ರಾಷ್ಟ್ರಪತಿಗಳ ಅಪ್ಪಣೆಯ ಮೇರೆಗೆ ತಾ ೯-೧-೩೮ ಹಾಗು ೧೨-೬-೩೮ ಹೀಗೆ ಎರಡು ಸಲ ಚೀನ ದಿನಾಚರಣೆಯನ್ನು ಮಾಡಿದ್ದು ತಕ್ಕಮಟ್ಟಿಗೆ ನಿಧಿಯನ್ನಾದರೂ ಕೂಡಿಸಲಾಗಿದೆ.

ಈಗ ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಚೀನ ದೇಶಕ್ಕೆ ಒಂದು ಶುಶ್ರೂಷಾ ಪಥಕ (ambulance unit) ವನ್ನು ಕಳಿಸಬೇಕೆಂದು ನಿಶ್ಚಯಿಸಿದ್ದು ಈ ಬಗ್ಗೆ ಇನ್ನೂ ೨೨೦೦೦ ರೂಪಾಯಿಗಳು ಬೇಕಾಗಿರುವುದರಿಂದ ರಾಷ್ಟ್ರಾಧ್ಯಕ್ಷ ಶ್ರೀ ಸುಭಾಷ ಬೋಸರು ಪುನಃ ರಾಷ್ಟ್ರಕ್ಕೆಲ್ಲಾ ಇದೇ ತಿಂಗಳು ೭, ೮ ಮತ್ತು ೯ನೇ ತಾರೀಕು—ಹೀಗೆ ಮೂರು ದಿನಗಳನ್ನು "ಚೀನನಿಧಿ" ದಿನವೆಂದು ಆಚರಿಸಿ, ಈ ಅವಧಿಯಲ್ಲಿ ಎಲ್ಲ ಕಾಂಗ್ರೆಸ್ ಕಾರ್ಯಕರ್ತರೂ ಮತ್ತು ಕಮಿಟಿಗಳೂ ಈ ನಿಧಿಯನ್ನು ಕೂಡಿಸುವ ಕೆಲಸದಲ್ಲಿಯೇ ತೊಡಗಬೇಕೆಂದು ಬಿನ್ನವಿಸಿಕೊಂಡಿರುವರು.

ನಮ್ಮ ಪ್ರಾಂತದಲ್ಲಿಯಾದರೂ ಎರಡು ಸಲ ಚೀನದಿನಾಚರಣೆಯನ್ನು ಮಾಡಿದಾಯಿತು. ಆದರೆ ಇಲ್ಲಿಯ ವರೆಗೆ ಕೇವಲ ೨೦೦ ರೂಪಾಯಿಗಳು ಮಾತ್ರ ನಮ್ಮ ಕಡೆ ಬಂದಿರುವುದನ್ನು ನೋಡಿದರೆ ವಿಷಾದವೆನಿಸುತ್ತದೆ. ಇದರಿಂದ ಪ್ರಾಂತದಲ್ಲಿಯ ಕಾಂಗ್ರೆಸ್ ಕೆಲಸಗಾರರು ಈ ಸಂಬಂಧವಾಗಿ ಮನಮುಟ್ಟಿ ಕೆಲಸ ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಆದುದರಿಂದ ಈಸಲವಾದರೂ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಮತ್ತು ಕೆಲಸಗಾರರೂ ಬೇರೆ ಎಲ್ಲ ಕೆಲಸಗಳನ್ನು ಬದಿಗೊತ್ತಿ, ಆ ಮೂರು ದಿವಸ ಚೀನನಿಧಿಯನ್ನು ಕೂಡಿಸಲು ಒಂದೇ ಸಮನೆ ಪ್ರಯತ್ನ ಮಾಡಬೇಕು. ಎಲ್ಲ ಕೆಲಸಗಾರರೂ ಮನಸ್ಸು ಮಾಡಿದರೆ ನಮ್ಮ ಪ್ರಾಂತದಿಂದ ಸುಲಭವಾಗಿ ೫೦೦೦ ರೂಪಾಯಿಗಳಾದರೂ ಕೊಡಬಹುದೆಂದು ನಮ್ಮ ಸಂಪೂರ್ಣ ನಂಬುಗೆಯಿದೆ.

ಈ ಪ್ರಕಾರವಾಗಿ ಈ ಮೂರು ದಿನ ಕೂಡಿಸಿದ ಹಣವನ್ನು ಕೂಡಲೇ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಳಿಸಿಕೊಡಬೇಕು. ಮುಂದೆ ನಾವು ಅಖಿಲಭಾರತ ಕಾಂಗ್ರೆಸ ಕಮಿಟಿ ಕಚೇರಿಗೆ ಬೇಗನೆ ಕಳಿಸಿಕೊಡುವೆವು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಕಳಿಸಬೇಕೆಂದಿರುವ ಶುಶ್ರೂಷಾಪಥಕವು ಬೇಗನೆ ಹೊರಡಲಿರುವುದು. ಈಗಾಗಲೆ ಅಂಬ್ಯುಲೆನ್ಸ್ ಕಾರಿನ ಬಗ್ಗೆ ಫೋರ್ಡ ಕಂಪನಿಗೆ ಆರ್ಡರು ಕೊಡಲಾಗಿದೆ. ಹಿಂದೂಸ್ಥಾನದ ಈ ಶುಶ್ರೂಷಾಪಥಕವು ಸಾಮ್ರಾಜ್ಯಶಾಹಿಯ ದವಡೆಯಲ್ಲಿ ಸಿಕ್ಕಿ ಸಂಕಟಗ್ರಸ್ಥರಾದ ಚೀನಿಯರಿಗೆ ಸ್ವಲ್ಪಮಟ್ಟಿಗಾದರೂ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ಈ ಎಲ್ಲ ಸಂಗತಿಗಳನ್ನರಿತು ಕರ್ನಾಟಕಸ್ಥರೆಲ್ಲರೂ ಈ ನಿಧಿಗೆ ತೊಡಗೈಯಿಂದ ಸಹಾಯಮಾಡಬೇಕೆಂದು ಪುನಃ ಬಿನ್ನವಿಸಿಕೊಳ್ಳುತ್ತೇವೆ. ಪ್ರಾಂತ್ಯದ ಕೆಲವು ಭಾಗಗಳಲ್ಲಿ ಕೆಲಸಗಾರರ ಅಭಾವದ ಮೂಲಕ ಹಣಕೂಡಿಸುವದು ದುಸ್ತರವಾಗುವುದು. ಇಂಥಲ್ಲಿ ಹಣಕೊಡಬೇಕೆನ್ನುವವರು ನೇರವಾಗಿ ನಮ್ಮ ಕಚೇರಿಗೆ ಕಳುಹಿಸಿ ಪಾವತಿ ಪಡೆಯಬೇಕು. ಪೂರ್ಣ ಹಣ ಕಳಿಸುವದಾದ ಮೇಲೆ ನಮ್ಮ ಕಚೇರಿಯಿಂದ ಈ ಸಂಬಂಧದ ಪೂರ್ಣ ಲೆಕ್ಕವು ಪ್ರಕಟಿಸಲಾಗುವುದು.

ಗುದ್ಲೆಪ್ಪ ಹಳ್ಳಿಕೇರಿ,

ಪ್ರ. ಕಾರ್ಯದರ್ಶಿ

WANTED

Agents for Silk Shirting, Coating, Sarees, etc. Pay Rs. 100 T. A. Extra. Ask free samples and particulars.

Girson Knitting Works,
Ludhiana.

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು-ಏನೊಂದೂ ಶಂಕಿಲ್ಲದೆ, ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬೆಳ್ತಿಗೆ ಗುಡ್ಡು ಮು.	1 —14	1 —14
ರಾಶಿ ಅಕ್ಕಿ ...	3— 8	4— 0
ಸುಗ್ಗಿ ...	3—14	4— 3
ಗುಡ್ಡು ...	4— 8	4— 8
ಊರ ಅವ್ವಲ್ ಬೆಳ್ತಿಗೆ ...	4— 7	4— 7
ರಂಗೂನು ಬೆ. ಗೋ. ಗೋಣಿ ...	7 — 2	7— 4
ಎಲ್ಲೂರು ಬೆ. ಮು. ಗೋಣಿ ...	3—14	4— 0
ಗೋಧಿ ಗೋಣಿ ಗೋಣಿ ...	13 — 0	14— 8
ತೊಗರಿ ಗೋಣಿ ಗೋಣಿ ...	11— 8	13— 8
ಹುರುಳಿ ಗೋಣಿ ಗೋಣಿ ...	6— 0	6— 2
ಕಡಲೆ ಗೋಣಿ ಗೋಣಿ ...	9 — 8	10 — 8
ತೊಗರಿಬೇಳೆ ಗೋಣಿ ಗೋಣಿ ...	17— 8	18— 0
ಉದ್ದು ಗೋಣಿ ಗೋಣಿ ...	9— 0	9 — 8
ಹೆಸರು ಗೋಣಿ ಗೋಣಿ ...	9—12	10— 8
ಊರುಬೆಲ್ಲ ಖಂಡಿ ಗೋಣಿ ...	36— 0	40— 0
ಉಪ್ಪು ಗೋಣಿ ಗೋಣಿ ...	4— 8	5— 4
ಕೊಬ್ರಿ ಖಂಡಿ ಗೋಣಿ ...	46 — 8	46— 8
ಎಳ್ಳಿಂಡಿ ಖಂಡಿ ಗೋಣಿ ...	25 —	26 — 0
ತೆಂಗಿನ ಎಣ್ಣೆ ಮುಡಿ ಗೋಣಿ ...	3 — 5	3— 6
ಎಳ್ಳೆಣ್ಣೆ ಮುಡಿ ಗೋಣಿ ...	6— 0	7— 0
ಹರಳೆಣ್ಣೆ ಪೆಟ್ಟಿಗೆ ಗೋಣಿ ...	6— 5	7— 5
ಮೋರಿಸ ಸಕ್ಕರೆ ಮು. ಗೋಣಿ ...	2— 13	2 —14
ಮೆಣಸು ...	4— 8	6— 0
ಸಾಸಿವೆ ಮುಡಿ ಗೋಣಿ ...	5 — 8	6— 8
ಕಾಳುಮೆಣಸು ಹವೇಲಿಗೆ ...	16 — 0	17— 8
ಮೇಲಕ್ಕಿ ಬೀಜ ಮುಡಿ ಗೋಣಿ ...	80— 0	85— 0
ಗೇರುಬೀಜ ಮುಡಿ ಗೋಣಿ ...	3—14	3—15
ಚಕ್ಕೆ ಖಂಡಿ ಗೋಣಿ ...	50— 0	55— 0
ತಾಂಬ್ರ ತಗಡು ಮು. ಗೋಣಿ ...	14— 12	15— 0
ತಾಂಬ್ರ ಪಾತ್ರಗಳು ಮು. ಗೋಣಿ	14— 8	15— 0
ಬೀಸುಬೆಳ್ಳಿ ಸೇರು ಗೋಣಿ ...	13— 8	14— 0
ಹಿತ್ತಾಳೆ ತಗಡು ಮು. ಗೋಣಿ ...	12— 0	12— 0
ಕವನು ಗೋಣಿ ...	22— 8	23— 0
ಮಣಿಕೆ ಹುಳಿ ಖಂಡಿ ಗೋಣಿ	40— 0	45— 8
ನೇಟಿವ್ ಕಾಫಿ ಖಂಡಿ ಗೋಣಿ	140— 0	148— 0
ಪ್ಲಾಂಟೇಶನ್ ಕಾಫಿ ಖಂಡಿ ಗೋಣಿ ...	185— 0	198— 0
ಮುಡಕೇಂ ಎಳಕ್ಕಿ ಮುಡಿ ...	35— 0	39 — 0

ಡೋಂಗರೆ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕೆ ೧೮೬೦ನೆಯ ಬಹುಧಾನ್ಯ ಸಂವತ್ಸರದ ಆಷಾಢ ಶು। ೧೦ ಶನಿವಾರದಿಂದ ಆಷಾಢ ಬ। ೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೮ನೇಯ ಮಿಥುನ ಕಾರ್ತೆಲ್)

ದಿನ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ದಿನ	ಪಕ್ಷ
9	ಶನಿ	೧೦	೧೬॥	ಅನುರಾಧ	೧೫॥	೨೫	
10	ರವಿ	೧೧	೩೧	ಜ್ಯೇಷ್ಠಾ	೨೧	೨೬	
11	ಸೋ.	೧೨	೨೫॥	ಮೂಲಾ	೨೭	೨೭	
12	ಕುಜ	೧೩	೩೧।	ಪೂ.ಷಾಢ	೩೪॥	೨೮	ಶುಕ್ಲ ಪಕ್ಷ
13	ಬುಧ	೧೪	೩೬	ಉ.ಷಾಢ	೩೯॥	೨೯	
14	ಗುರು	೧೫	೪೧।	ಶ್ರವಣ	೪೫॥	೩೦	
15	ಶುಕ್ರ	೧೬	೪೩॥	ಧನಿಷ್ಠಾ	೫೧	೩೧	

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ. ಬೆಲೆ: 0–4–0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0–4–0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ.
ಬೆಲೆ: 0–8–0, 0–4–0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ: 1–0–0

ಪ್ರೊಪ್ರೈಟರ್:
ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½%per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction Bhi Funds ranging from Rs. 100/ toRs. 5000/ run regularly on systematic lines. Unique Banking facilities to Businessmen and interested Public.

Apply for particulars-K. R. GURU, *Managing Director*

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರಯಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

'DILROZ' Redg

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:—

1. ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ.
2. ಕುಂದಾಪುರದಿಂದ ಬಾಳೆಬರೆಗಾಗಿ ಶಿಮೊಗ್ಗಾ.
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶೃಂಗೇರಿ, ತೀರ್ಥಳ್ಳಿ, ಶಿಮೊಗ್ಗಾ ಹರಿಹರ ವರೆ
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ.
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ,
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE
Canara Industrial & Banking Syndicate Ltd.,

(Incorporated in British India)

Ested **1925.**

Head Office: UDIPI, (S. India.)

Member:

RESERVE BANK OF INDIA.
BANKERS CLEARING HOUSE, BOMBAY

Authorised Capital	Rs. 10,00,000/—
Issued Capital	Rs. 8,00,000 —
Subscribed Capital	Rs. 7,74,500/—
Paid Up Capital	Rs. 3,86,880 —
Reserves	Rs. 2,16,700 —

Total Resources exceed 51 Lakhs.

A BRANCH OF THE BANK
Will be opened shortly at
FELIX PAI BAZAAR, MANGALORE
(Block No. 1)

ಚಂದಾ: ರೂ. ೩-೦-೦. Established 1906. Regd. No. M. 3406. ಟಪ್ಪಾಲು ಹಸಲು ಸೇರಿ ರೂ. 2-1

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ | ಲಾಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು — ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಧೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲ, ಗ್ರಹಶಾಂತಿಯೊಂದೇ ಎಂದು ನವಗ್ರಹ ಯಂತ್ರಗಳಿದಿರೆ ಈ ಜನನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಕೂಡದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹೀನ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸಕ್ಕಿಂದು ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮಹರ್ಷಿವರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಉಪಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನವ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು-ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದಾಣೆ ಟಿಕೀಟು ಕಳಿಸಿದ್ದಲ್ಲಿ ಗ್ಯಾರಂಟೀ ಬರೆದುಕೊಡುವೆವು. ಇಷ್ಟೆಲ್ಲಾ ಇದ್ದು ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸುಮ್ಮನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಜಾಹೀರಾತನ್ನು ಸುಳ್ಳೆಂದು ತಿರಸ್ಕರಿಸಿದರೆ ಜನ್ಮ ಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿಡಿರಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದು, ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ ವೃದ್ಧ-ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ ೬ ರೂಪಾಯಿ ೮ ಆಣೆ. ೩ ಪೈ ... ರಿಂದ ನಮ್ಮ ಕಾರ್ಯಗಳು ಈಗಲೇ ಬೇಕಾಗಿದ್ದರೆ ಸ್ಪೆಶಲ್ ಸರಿಪಿನ್ನು ತರಿಸಿರಿ. ಬೆಲೆ ೯ ರೂ ೧೧ ಆ ೬ ಪೈ ... ಕೆಟ್ಟ ಕೆಲಸಗಳು ಕೈಗೂಡಬೇಕಾಗಿದ್ದರೆ ... ತರಿಸಿ. ಬೆಲೆ ೯ ರೂ ೧೧ ಆ ೩ ಪೈ ... ಆಣೆ. ಅಂಚೆವೆಚ್ಚ ಪ್ರತ್ಯೇಕವಾಗಿ ... ಪ್ರತಿಯೊಂದಕ್ಕೂ ೫ ಶಿಲಿಂಗ್. ಚಾರ್ಜ್ ಬೇರೆ... ಯಂತ್ರಗಳಿಗೆ ಬೇರೆ ... ಬೇಕಾಗಿಲ್ಲ.

ಧನಪ್ರಾಪ್ತಿಸಿದ್ಧಿ — ಬೇಗನೆ ಧನಪ್ರಾಪ್ತಿಯಾಗಬೇಕೆನ್ನುವವರೂ ... ಧನಪ್ರಾಪ್ತಿಯ ... ಕವಚವನ್ನು ತರಿಸಬೇಕು. ಇದನ್ನು ... ಹತ್ತಿರ ಇಟ್ಟುಕೊಂಡ ಒಳಗೆ ಧನಪ್ರಾಪ್ತಿಯಾಗುವುದಲ್ಲದೆ ... ಬೆಲೆ ... ರೂ. ... ಹಾಕಲು ೮ ಆಣೆ.

ಹಸ್ತರೇಖೆ — ಹಸ್ತರೇಖೆಯನ್ನು ತೋರಿಸಬೇಕೆನ್ನುವವರು ಬೆಳಗಿನ ಆರಿಂದ ... ಪಡೆಯಬೇಕು. ಪರಸ್ಥಳದವರು ಪುರುಷರು ಬಲಗೈಯ ಹಾಗು ಸ್ತ್ರೀಯರು ಎಡಗೈಯ ಗುರುತನ್ನು ಕಾಗದದ ಮೇಲೆ ಕರೀ ಮಸಿಯಿಂದ ಮೂಡಿಸಿ ಕಳಿಸಿಕೊಡಬೇಕು. ಹಸ್ತರೇಖೆಯನ್ನು ನೋಡುವ ಛಾರ್ಜ್ ... ಪರಸ್ಥಳದವರು ... ಕಾಗದದೊಂದಿಗೆ ... ರೂ. ... ಆ ...

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲೀಷಿನಲ್ಲಿ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು! — ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಅದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು: — ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮುಲಾ (ಎ ಆರ್ ಜಾರಿ) ನಾನು ನಿಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವತ್ತಿರುವ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ವಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ತರಿಸಿ ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ ೩ ರೂ ೧೦ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ವಿಷ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಎಲ್ಲಾ ಅಂಗಡಿಗಳಲ್ಲಿ ಕಾ ... ಕಂಪೆನಿಯಲ್ಲಿ ದೊರೆಯುವುದು.

Reg. No. M. 341 ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. 2—13—0. ಬಿಡಿ ಸಂಚಿಕೆ ಒಂದಾಣೆ

ಸ್ವದೇಶಾಭಿಮಾನಿ

ಸಂಪುಟ ೩೨] ತಾರೀಕು ೧೫ನೇ ಜುಲಾಯಿ ೧೯೩೮ (15-7-1938.) [ಸಂಚಿಕೆ ೨೭

★

4 ಪುಟಗಳು **24**

ಅನುಕ್ರಮಣಿಕೆ

ದಿವಾನರ ಅಸೂಯಾಗ್ನಿಗೆ ಬಲಿಯಾದ ಟ್ರಿವೆಂಕೂರು [illegible]ನ ಶೋಚನೀಯ ಕತೆ!

★

ಕೊಲೆಗಡುಕನ ವಿಚಾರಣೆ ಬೇಡ—ಪಶುಪತಿನಾಥರ ಹೃದಯೋದ್ಗಾರ!

★

ಐ. ಸಿ. ಯಸ್. ಆಫೀಸರನ ಅನುಪಮ ಸಾಹಸ!

ಕ್ಷಿತಿಜ[illegible]ಗಳು.

ಎರಡರ[illegible] ಮಾತು.

★

ಹಿಂದೀ ವಿರುದ್ಧ ಚಳವಳ

★

ರಾಷ್ಟ್ರಪತಿಯವರ ಉದ್ಗಾರಗಳಿಗೆ ಸತ್ಯಮೂರ್ತಿಯವರ ಆಕ್ಷೇಪಗಳು

★

ಚೀಟಾ ಹುಲಿಯೊಡನೆ ಹೋರಾಡಿದ ಹುಡುಗ!

★

ಲೋಕಶಾಂತಿಯು ಹೇಗುಂಟಾಗಬೇಕು?

ಟೊಳ್ಳು ಗದರಿಕೆಯೋ ಅಥವಾ ನಿಜವಾದ ಗದರಿಕೆಯೋ?

★

ಇನ್ನೊಂದು ಮಹಾಯುದ್ಧವು ಯಾವ ಜನಾಂಗಗಳೊಳಗೆ?

★

ಸದ್ಯದಲ್ಲಿ ಸ್ಥಳೀಯ ಶ್ರೀ ಚಿತ್ರಾ ಟಾಕೀಸ್‌ನಲ್ಲಿ ಪ್ರದರ್ಶಿಸಲ್ಪಡುವ

'ಚಂದ್ರರಾವ್ ಮೋರೆ'ಯಲ್ಲಿಯ ಒಂದು ದೃಶ್ಯ.

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

.........: And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTED. 1906.
CANARA BANK LIMITED.

ಕ್ರಿ-ಕೆ-ಟ್!

ಅರುವತ್ತು ವರ್ಷ ಪಂದ್ಯಾಟಗಳು ಮುಗಿದುವು!

ಷಷ್ಟ್ಯಬ್ದ ಮಹೋತ್ಸವ

ಇಂಗ್ಲೆಂಡು ಆಸ್ಟ್ರೇಲ್ಯಗಳ ಕ್ರಿಕೆಟ್ ಆಟಗಾರರು ಸ್ಪರ್ಧೆಯ ಆಟಗಳನ್ನಾಡ ತೊಡಗಿ ಈಗ 60 ವರ್ಷಗಳಾಗಿವೆ. ಮೊದಲನೇ ಮೇಚನ್ನು ಇಂಗ್ಲೆಂಡಿನಲ್ಲಿ ಆಡಿದಾಗ, 500 ಮಂದಿ ಪ್ರೇಕ್ಷಕರಿದ್ದರು. ಆಗ ಆಸ್ಟ್ರೇಲ್ಯದವರು 10 ವಿಕೇಟು ಗೆದ್ದರು. ಇಂಗ್ಲೆಂಡಿಗೆ ಎರಡು ಇನ್ನಿಂಗ್ಸಿನಲ್ಲಿ ದೊರೆತ ರನ್ನು 88 ಮತ್ತು 191 ಗ್ರಿಸ್‌ರಂತಹ ಇಂಗ್ಲಿಷ ಆಟಗಾರರಿಗೆ 4 ಮತ್ತು 0! ಆಸ್ಟ್ರೇಲ್ಯದ ಬೋವ್‌ಲರರು 6 ವಿಕೆಟನ್ನು ಮುಂದು ಬರೀ 4 ರನ್ನಿನೊಳಗೆ ಇಂಗ್ಲಿಷ ಆಟಗಾರರಿಗೆ ಸೋಲಿಸಿದ್ದನು.

ಇದು ವರೆಗೆ ಒಟ್ಟು ಆಡಿದ ಟೆಸ್ಟ್ ಮೇಚುಗಳು 148, ಇವಲ್ಲಿ ಆಸ್ಟ್ರೇಲ್ಯ ಗೆದ್ದುದು 56, ಇಂಗ್ಲೆಂಡು 54

1929ರಲ್ಲಿ ಆಡಿದ ಮೇಚು ನೋಡ ಬಂದವರು 262467 ಜನ ಇದರಿಂದ ವಸೂಲಾದುದು 22600 ಪವನು ಇಷ್ಟು ಜನ ಇಷ್ಟು ಹಣ ಇದು ವರೆಗೆ ಯಾವ ಮೇಚಿನ ರಿಕಾರ್ಡಿನಲ್ಲಿಯೂ ಇಲ್ಲ.

ಇಂಗ್ಲೆಂಡಿಗೆ ಅತಿ ಹೆಚ್ಚು ರನ್ನುಗಳು 1981 ರನ್ನು ... 6 ಆಟಗಾರರ 658 ರನ್ನು, ಆಸ್ಟ್ರೇಲ್ಯ ... 729 ರನ್ನ ದಾಖಾ ... ಮೊದಲನೇ ಆ ವರ್ಷ ... 974 ರನ್ನು ಮಾಡಿದ್ದನು: ... 189 ರನ್ನು. ಹೆಮ್ಮೊಂಡನು 901, ... 42 ... 8721 ರನ್ನು ಮಾಡಿದ ದಾಖಾಲೆಯುಳ್ಳ ... ಒಟ್ಟಿನ 3636 ರನ್ನನ್ನು 71 ಇನ್ನಿಂಗ್ಸಿನಲ್ಲಿ ಮಾಡಿರುವ ಎರಡನೆಯವರು. ಆ ವರ್ಷ ಕ್ರಿಕೆಟ್ ಮೇಚನು ಒಂದೇ ಆಟದಲ್ಲಿ 884 ರನ್ನು ಮಾಡಿದ ಧೀರನು. ಇಂಗ್ಲೆಂಡಿನಲ್ಲಿ ಪೊನ್ಸ್‌ರು 287 ರನ್ನು ಹೊಡಿದನು.

ಆಟಕ್ಕೆ ಮೊದಲನೆ ಸಲ ಪ್ರವೇಶ ಮಾಡಿದ ದೇ 100 ರನ್ನು ಮಾಡಿದವರಲ್ಲಿ ಗ್ರೇಸ್, ರಣಜಿತ್ ಸಿಂಗಜಿ, ದುಲೀಪ ಸಿಂಗಜಿ ಬೆರ್ಟ್ ಬ್ರಾಡ್ಲ್ಸ್, ಪುನ್‌ಫರ್ತ್ ಮುಖ್ಯ

ಮೂರೇ ರನ್ನು ಹೆಚ್ಚಾಗಿ ಆಸ್ಟ್ರೇಲ್ಯದವರು 1902ರಲ್ಲಿ ಗೆದ್ದರು.

ಬೋವ್‌ಲರರಲ್ಲಿ ಓಟನೇ ಹೆಸರು ಹೊಂದಿದ್ದವನು ಸರಾಸರಿ ವಿಕೇಟಿಗೆ 23 ರನ್ನಿನಂತೆ 38 ವಿಕೇಟುಗಳನ್ನು ಇವನು ಹಾರಿಸಿದನು. ಆಸ್ಟ್ರೇಲ್ಯದ ಮೈಲಿ 86 ವಿಕೇಟುಗಳನ್ನು ಸರಾಸರಿ 26 ರನ್ನಿನಂತೆ ಹಾರಿಸಿದವನು. ಆಸ್ಟ್ರೇಲ್ಯದ ಟಂಬಲ್‌ನು 141 ವಿಕೇಟುಗಳನ್ನು ಸರಾಸರಿ 20 ರನ್ನಿಗೆ ಹಾರಿಸಿದನು.

ಒಂದೇ ಆಟದಲ್ಲಿ 9 ವಿಕೇಟುಗಳನ್ನು ಹಾರಿಸಿದ ಮೈಲಿ 1921ರಲ್ಲಿ ದಾಖಲೆ ಮಾಡಿರುವನು ಆಗ 121 ಮಾತ್ರ ಒಟ್ಟು ರನ್ಸ್ ಆಗಿತ್ತು.

ಚೆಂಡನ್ನು ಹಿಡಿದು ಆಟಗಾರರನ್ನು ಶಿಬಿರಕ್ಕೆ ಮರಳಿಸಿದ ಧೀರನು ಕೆಲ್ಲಿ ಒಂದೇ ಇನ್ನಿಂಗಿನಲ್ಲಿ 8 ಮಂದಿ ಇವನ ಕೈಹಿಡಿತದೊಳಗೆ ಬಿದ್ದರು

ವಿಕೇಟು ಕೀಪರರಲ್ಲಿ ಅಲ್ಲೀ ಹೆಸರುಗೊಂಡನು 84 ಆಟಗಾರರ ಚೆಂಡನ್ನು ಹಿಡಿದು, ಅವರ ವಿಕೆಟ ಗಳನ್ನ ಸಂತಲ್ಲೀ ಹಾರಿಸಿದನಿವನು

ಆಗಾಖಾನರ ಪತ್ರ!

ಹಿಂದೂ-ಮುಸ್ಲಿಂ ಐಕ್ಯತೆ.

ಮಹಾತ್ಮಾಜಿಯವರಿಗೆ ಒಂದು ಪತ್ರ ಬರೆದು ಆಗಾಖಾನು ಹಿಂದೂಮುಸ್ಲಿಮರ ಐಕ್ಯ ...

ಮಕ್ಕಳ ಕೂಗು.

(ಒಂದು ಹಾಡು)

ಮಕ್ಕಳ ಕೂಗನು ಕೇಳಿದಿರಾ? ॥ ಚಿಕ್ಕ
ಮಕ್ಕಳ ಕೂಗನು ಕೇಳಿದಿರಾ? ॥ ಪಲ್ಲ ॥

ತಾಯಿಯು ತಂದೆಯು ಕೊಟ್ಟನ್ನು ದೇವರು
ಬಾಯಿಬಾರದರ ನಾರದು ಕಾವರು? ॥
ಬಾಯಿಗೆ ತುತ್ತು, ಮೈಯಿಯ ಮುತ್ತು
ಎರಡೂ ಇಲ್ಲದೆ। ಬೇಯುವ ಹೊತ್ತು। ೧ ॥

ಆಡುವೆವೆಂದರೆ,-ಗೊಂಬೆಗಳಿಲ್ಲ।
ನೋಡುವೆವೆಂದರೆ,-ಬೆಳಕೇ ಇಲ್ಲ ॥
ಮಾಡುವ ಕೈ ಬೇಡುತ್ತಿದೆಯಲ್ಲ।
ನೋಡುವರಿಲ್ಲದೆ। ಬಾಡುವೆವಲ್ಲ! ॥ ೨ ॥

ಹೊಟ್ಟೆಗೆ ಸಾಲದೆ ತಲೆ ಬಿದ್ದಾಯ್ತು,
ಬಟ್ಟೆಗಳಿಲ್ಲದೆ ದೇಹವೆ ಕೆಟ್ಟಿತು ॥
ಹುಟ್ಟಿದೆವೇಕೋ ಯಾರಿಗೆ ಗೊತ್ತು?
ನರಳಿಹೊರಳಿಯೇ। ಕೊರಗುವ ಹೊತ್ತು ॥೩॥

ಗೆರಟೆಯನ್ನದ ನಾಯಿಯು ಲೇಸು,
ಕಿರಿಯುವ ಭಾಗ್ಯದ ಕಾಗೆಯು ಲೇಸು, ॥
ಹರಿಯುರು ಕೆಳಲ್ಲಿಕ್ಕದೆ, ಕುತ್ತದಿ
ಬರಿದೇ ಜೀವಿಸಲೆಂತಹ ಕೂಸು? ॥ ೪ ॥

ಬಾಳುವ ಹಕ್ಕಿದೆ ಬದುಕವ ವಗುವಿಗೆ,
ಬಾಳಲು, ವಿದ್ಯೆಯ ಗಳಿಸುವ ಹಕ್ಕಿದೆ, ॥
ಗಳಿಸಲು ವಿದ್ಯೆಯು,-ದುಡಿಯುವ ಹಕ್ಕಿದೆ,
ದುಡಿಯುತ ನಾಡಕಾಪಾಡುವ ಹಕ್ಕಿದೆ ॥೫॥

ಹುಟ್ಟುವ ಮೊದಲೀ ಸಾಯುದ ಕಪ್ಪಿಗೆ
ಸುಟ್ಟ ಜೀವನಕೆ ಕೊಟ್ಟಿವೆ ಒಪ್ಪಿಗೆ? ॥
ಕಷ್ಟವು ನಮಗಿರೆ ಮುಂದೀ ನಾಡಿಗೆ
ಬಾಲಾರಿಷ್ಟಪರಂಪರೆ ತಟ್ಟದೆ? ॥ ೬

ತಿಳಿಸಿರುವರೆಂದು ಪ್ರಕಟವಾಗಿದೆ. ಮುಸ್ಲಿಮ್ ಲೀಗ್ ಅಥವಾ ಜಿನ್ನಾರವರ ಸೂಚನೆಗಳಿಗೆ ತಮ್ಮ ಉದಾರಭಾವವನ್ನು ಪ್ರಕಟಿಸಿ, ಆಗುವಷ್ಟು ಶೀಘ್ರವಾಗಿ ಐಕ್ಯತೆ ಸ್ಥಾಪಿಸಬೇಕೆಂದು ಖಾನರು ನಿರೀಕ್ಷಿಸಿರುವರಂತೆ.

ಈ ಪತ್ರವನ್ನು ಈಗ್ಗೆ ಸುಭಾಷ್ ಚಂದ್ರರಿಗೂ ಅಬುಲ್ ಕಲಂ ಆಜಾದರಿಗೂ ಮಹಾತ್ಮಾಜಿಯವರಿಗೂ ತೋರಿಸಿದ್ದು ಕೆಲವು ಕಾಂಗ್ರೆಸ್ ಮುಖಂಡರೂ ಇದರ ಕೊಲಂಕಷ ತಿಳಿದಿರುವಂತೆ ಮಾಡಿರುವರಂತೆ

ಆದರೆ, ಆಗಾಖಾನರೇ ಇಲ್ಲಿದ್ದಿದ್ದರೆ, ಇದುವರೆಗೆ ವ್ಯಯಿಸಿದ್ದ ಸಮಯದೊಳಗಾಗಿ ಖಂಡಿತವಾದೊಂದು ನಿರ್ಧಾರ ಆಗ ತ್ತಿತ್ತೆಂದೂ, ಇನ್ನು ಇಷ್ಟು ತೀವ್ರವಾಗಿ ಆಳವಾಗಿ ಎಲ್ಲ ವಿಚಾರಮಾಡಲು ಕಾಂಗ್ರೆಸಿಗೆ ಮನಸ್ಸು ಒಲ್ಲದೆಂದೂ, ಆಗಾಖಾನರು ಇತ್ತ ಬರುವಂತಿದೆಯೆ ಎಂದೆಲ್ಲ ವಿಚಾರಗಳು ನಡೆಯುತ್ತವೆಂದೂ ತಿಳಿದುಬರುತ್ತದೆ

ಹೈಫಾದಲ್ಲೆಲ್ಲ 'ಅಯ್ಯಪ್ಪ'!

ಪೆಲೆಸ್ತೀನದಲ್ಲಿ ಅಶಾಂತಿ: ಕಾದಾಟವೂ ಉಂಟಾದೀತೆ?

ಹೈಫಾದಲ್ಲಿ ತಾ 6ರಲ್ಲಿ ಅತ್ಯಾಚಾರಗಳಾಗಿ, 21 ಮಂದಿ ಅರಬರು, 6 ಯೆಹೂದ್ಯರು ಮಡಿದರು, 92 ಅರಬರಿಗೂ 11 ಯೆಹೂದ್ಯರಿಗೂ ಗಾಯಗಳಾದುವು ಮೃತರ ಶವಮೆರವಣಿಗೆಯನ್ನು ಕಂಡವರಲ್ಲಿ ಯುದ್ಧಕಾಲದ ದುಸ್ಮರಣೆ ಉಂಟಾಯಿತು

ತಾ 7ರಲ್ಲಿ ಪುನಃ ವಿಪ್ಲವ ಸುಪರಿಂಟೆಂಡೆಂಟರು ಹೆರಿಂಗ್ಟನ್ ಸಾಹೆಬರ ಕಾರಿಗೆ ಒಂದು ಗುಂಡು ಬಿತ್ತು ಇವರು ಬದುಕಿದ್ದು ವಿಚಿತ್ರ. ಹೆರಿಂಗಟನರು ಕೇಡಿಯನ್ನು ಪಿಸ್ತೂಲಿನಿಂದ ಕೊಲ್ಲುತ್ತಿದ್ದರು, ಅದು ಮಾತ್ರ ಗುಂಡುಹಾರಿಸಲಿಲ್ಲ

ಎರಡು ದಿನಗಳ ಹಿಂದೆ ಇಬ್ಬರು ಯೆಹೂದ್ಯರನ್ನು ಕೊಂದಿಕ್ಕಿದ ಸ್ಥಳದಲ್ಲಿ ಪುನಃ ಒಂದು ...

ಎಷ್ಟು ತಂಪು ಮತ್ತು ದಣಿವು ಪರಿಹಾರಿಯೋ ಅಷ್ಟೇ ಪುಷ್ಟಿಕರವಾದದ್ದು

ಬೇಸಿಗೆ ಕಾಲದಲ್ಲಿ ತಣ್ಣಗಾದ ಓವಲ್ಟಿನನ್ನು ತೆಗೆದುಕೊಂಡರೆ ಅದು ತಂಪನ್ನೂ ನವಚೈತನ್ಯವನ್ನೂ ಕೊಡುವುದಲ್ಲದೆ, ದೇಹದ ಶಕ್ತಿ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಪುಷ್ಟಿಯ ಎಲ್ಲ ಅಂಶಗಳು ಅದರಲ್ಲಿ ಸಮೃದ್ಧವಾಗಿವೆ

ಪ್ರಕೃತಿಯಲ್ಲಿರುವ ಉತ್ಸಾಹಶಕ್ತಿವರ್ಧಕ ಆಹಾರಗಳಾದ ಪಕ್ವ ಬಾರ್ಲಿ ... ಹಸುವಿನ ಹಾಲು ... ಸತ್ವದಿಂದಲೂ ... ಓವಲ್ಟಿನು ತಯಾರಿಸಲ್ಪಡುತ್ತದೆ ಬೇಸಿಗೆ ಕಾಲದಲ್ಲಿ ನಿಮ್ಮ ಆರೋಗ್ಯಶಕ್ತಿಯನ್ನು ಉಳಿಸಿಕೊಳ್ಳುವ ಪೌಷ್ಟಿಕಗಳು ಓವಲ್ಟಿನಲ್ಲಿವೆ ಅಲ್ಲದೆ ಓವಲ್ಟಿನಲ್ಲಿ ಆರೋಗ್ಯಕ್ಕೆ ಬೇಕಾದ ಅತ್ಯಗತ್ಯ ವಸ್ತುಗಳ ಪಟ್ಟಿಯೂ ಇವೆ

ಓವಲ್ಟಿನ ಪಾನೀಯವನ್ನು ತೆಗೆದುಕೊಂಡ ಅದ ಕೊಡುವ ಮಾನಸಿಕ ಮತ್ತು ದೈಹಿಕ ಚೈತನ್ಯಗಳ ಸುಖವನ್ನು ಅನುಭವಿಸಿರಿ ಓವಲ್ಟಿನಿಗೆ ... ಕೃತಕ ... ಬದಲಿಯಾಗಿ ...

ಓವಲ್‌ಟಿನ್

ಇದನ್ನು ತಣ್ಣಗೆ ತೆಗೆದುಕೊಂಡರೆ, ಅದು ಬೇಸಿಗೆ ಕಾಲದ ಉತ್ತಮ ಪಾನೀಯವಾಗಿರುತ್ತದೆ

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ

ಏಜಂಟರು—ಜೇಮ್ಸ್ ರೈಟ್ ಲಿಮಿಟೆಡ್, ಕಲ್ಕತ್ತಾ ಕರಾಚಿ, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿಯೂ ಸಿಗುತ್ತದೆ.

OV/470

ಎಲ್ಲ ಮುಖ್ಯ ಶಹರುಗಳಲ್ಲಿ ಸಂಜೆಯಿಂದ ಬೆಳಗಾಗುವ ವರೆಗೂ ಹೊರಕ್ಕೆ ಕಾಲಿಡದಂತೆ ಆಜ್ಞೆಯಿದೆ ಬ್ರಿಟಿಷರ ಎರಡು ಯುದ್ಧನಾವೆಗಳು ಇತ್ತ ಬಂದಿವೆ

ಲಂಡನಿನಲ್ಲಿ ಈ ಎಲ್ಲ ವಾರ್ತೆಯಿಂದ ಉದ್ವೇಗವುಂಟಾಗಿದೆ ಸೈನಿಕರಿಗೀತ, ಪೋಲೀಸರೇ ಈ ಬಾಗದಲ್ಲಿ ಅತ್ತಿತ್ತ ಬೇಗನೆ ಚಲಿಸಿ ಅತ್ಯಾಚಾರಗಳನ್ನು ಅಡಗಿಸಬಹುದೆಂದ ನಂಬಲಾಗಿದೆ ಸೈನಿಕರ ಒಂದು ಪಂಗಡವು ಈ ವಾರ ...

ಎಲ್ಲ ಅಧಿಕಾರವೂ ಸೈನಿಕ ಅಧ್ಯಕ್ಷರಿಗೆ ಸಲ್ಲುವುದು ಯುದ್ಧನಾವೆಗಳಿಂದ ಸಿಪಾಯರು ಬಂದು ಅತ್ರಮಣಿಡಿದ ಸ್ಥಳಗಳನ್ನೆಲ್ಲ ಸುಂದಿಶಿಮುಗಿಸಿದರು

ಅರಬರಾಷ್ಟ್ರೀಯ ರಕ್ಷಣಾಸಮಿತಿಯು ಯೆಹೂದ್ಯರ ಮೇಲೆ ದಾಳಿ ಹೊರಿಸಿರುವ ಭದ್ರತೆಯುಳ್ಳವಲ್ಲಾ ಎನ್ನುವರು. ಯೆಹುದಿಗಳಲ್ಲಿ ಮುಂದಾಳುಗಳಾದವರನ್ನು ಹಿಡಿದು ಬಂದೀಖಾನೆಗಳಿಗೆ ಸಾಗಿಸುತ್ತಾರೆ

ರತ್ನೈರ್ಮಹಾರ್ಹೈಸ್ತುತುರ್ಷುರ್ನ
ದೇವಾ । ನ ಭೇಜಿರೇ ಭೀಮ
ವಿಶೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥
ಗರಲಕವರಂಜಿದರೆ! ಸುಧೆಯನು ।
ವ ರೆಕು ಕ್ಷುದ್ರರ
ತೆರದಿ ಕುಳಿತರೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಖು ೧೫—೭—೧೯೩೮ ತಾರೀಖು 15–7–1938

ಟೊಳ್ಳು ಗದರಿಕೆಯೊ?

ಅಥವಾ

ನಿಜವಾದ ಗದರಿಕೆಯೊ?

ದೊಡ್ಡ ದೊಡ್ಡ ಮಾತುಗಳನ್ನಾಡಿ ಆಗಿಂದಾಗ್ಯೆ ಟೊಳ್ಳು ಗದರಿಕೆಗಳನ್ನು ಹೊರಡಿಸುವುದು ಐರೋಪ್ಯದ ಸರ್ವಾಧಿಕಾರಿಗಳ ಒಂದು ಕ್ರಮವಾಗಿರುತ್ತದೆ. ಯುದ್ಧ ಹೂಡುತ್ತವೆಂದು ಟೊಳ್ಳು ಗದರಿಕೆಗಳನ್ನು ಸಾರಿ, ಹಿಟ್ಲರ್ ಮುಸಲೋನಿಯವರು ಕೆಲಸ ಸಮಯದ ಹಿಂದೆ ತಮ್ಮ ಕೆಲಕಾರ್ಯಗಳನ್ನು ಯಶಸ್ವಿಯಾಗಿ ಸಾಧಿಸಿಬಿಟ್ಟರು. ಶಾಂತಿಪ್ರಿಯರಾಗಿ ಈ ಸರ್ವಾಧಿಕಾರಿಗಳು ಯುದ್ಧವನ್ನು ಹೂಡಿದರು, ಯುದ್ಧವನ್ನು ಹೂಡಿ, ನಂತರ ಒಪ್ಪಂದ ವ್ಯವಹಾರವನ್ನು ನಡೆಯಿಸುವವರಾದರು. ಸುಳ್ಳು ಗದರಿಕೆಗಳಿಂದಲೆ ಅವರು ತಮ್ಮ ಕೆಲಧ್ಯೇಯಗಳನ್ನು ಮಧ್ಯ ಐರೋಪ್ಯದಲ್ಲೆ ಮತ್ತು ಎಬಿಸೀನಿಯಾದಲ್ಲಿ ಸಾಧಿಸಿಕೊಂಬಿಟ್ಟರು.

ಸ್ಪೈಯಿನಿನ ರಿಪಬ್ಲಿಕನ್ ಸರಕಾರವು ... ಪ್ರದೇಶಗಳ ಮೇಲೆ ಇಟೆಲಿಯನ ವೈಮಾನಿಕರಿಂದ ನಡೆಯುವ ಪೈಶಾಚಿಕ ನರ್ತನದ ಕುರಿತು ಪ್ರತಿಕೂಲಿಸಿ, ಮುಸಲೋನಿಗೆ ಒಂದು ಎಚ್ಚರಿಕೆಯನ್ನು ಕಳುಹಿಸಿಕೊಡಲು, 'ಇಟೆಲಿಯ ಮೇಲೆ ಯಾವತ್ತು ಕಾರಣದಿಂದ ಬಾಂಬುಗಳ ಅಧಿಕ್ರಮವು ನಡೆದರೆ ಅದನ್ನು ನಾವು ಬಾಂಬುಗಳಿಂದಲೆ ಪ್ರತಿಭಟಿಸುವೆವು—ಸಂಗ್ರಾಮರೀತಿಯಿಂದಲೆ ವಿರೋಧಿಸುವೆವು' ಎಂದು ಮುಸಲೋನಿಯ ಗದರಿಕೆಯು ಹೊರಟಿರುತ್ತದೆ. ಇಟೆಲಿಯ ಸರ್ವಾಧಿಕಾರಿಯಿಂದ ಈ ಮಾತುಗಳು ಬಂದುದಾದ್ದುದರಿಂದ, ಇದೊಂದು ಟೊಳ್ಳು ಗದರಿಕೆಯಾಗಿರಲೂಬಹುದು, ಅಥವಾ ನಿಜವಾದ ಗದರಿಕೆಯೂ ಆಗಿರಬಹುದು. ಇಟೆಲಿಯು ಸ್ಪೆನಿಶ್ ಕಲಹದಲ್ಲಿ ಎಂದಿನಿಂದಲೂ ಇದೆ. ಆದುದರಿಂದ ಇಟೆಲಿಯು ಈಗ ನೂತನವಾಗಿ ಸ್ಪೈಯಿನ ಮೇಲೆ ಕೈಮಾಡುವುದೆಂದು ತಿಳಿಸುವುದು ಮುಸಲೋನಿಯ ಮೇಲಿನ ಮಾತುಗಳಲ್ಲಿ ಅಡಕವಾದ ಅಭಿಪ್ರಾಯವಲ್ಲ. ಐರೋಪ್ಯದ ಇತರ ಜನಾಂಗಗಳಿಗೆ ಇದೊಂದು ಗದರಿಕೆ—ತಾನು ಸ್ಪೈಯಿನಿನಲ್ಲಿ ಯುದ್ಧಸನ್ನಾಹತೆಯನ್ನು ಹೆಚ್ಚಿಸುವನೆಂದು. ಬ್ರಿಟನನ್ನು ಮತ್ತು ಫ್ರಾನ್ಸನ್ನು ದೂರ ಮಾಡುವ ಉದ್ದೇಶದಿಂದಲೆ, ಆತನು ತಟಸ್ಥಭಾವ ಕಾರ್ಯಾಕಲಾಪಗಳಲ್ಲಿ ಭಾಗವಹಿಸಿದುದು. ಈಗ ಸ್ಪೈಯಿನಿನ ಅಂತರ್ಕಲಹದಲ್ಲಿ ಪ್ರಕಟವಾಗಿ ಕೈಹಾಕಲು ಸಿದ್ಧನಾಗುತ್ತಿರುವನು.

ಸ್ಪೈಯಿನಿನ ವಿದ್ಯಮಾನಗಳು ಸಂದಿಗ್ಧ ಪರಿಸ್ಥಿತಿಗೆ ಬರುತ್ತಿವೆ. ಮೇಲಪಲ್ಲಟ ಮಾಡಿಕೊಂಡ ಈ ಅಂತರಾಷ್ಟ್ರೀಯ ಹೋರಾಟದ ಅವಸ್ಥೆಯು ಬ್ರಿಟನು ಮತ್ತು ಫ್ರಾನ್ಸಿನ ಧೋರಣೆಯ ಮೇಲೆ ಹೊಂದಿಕೊಂಡಿದೆ. ಪ್ರಜಾಸತ್ತಾತ್ಮಕ ದೇಶಗಳು ಈ ಮೊದಲೆ ರೋಮಿಗೆ ಬುದ್ಧಿ ಹೇಳುತಿದ್ದರೆ, ವಿದ್ಯಮಾನಗಳು ಅಷ್ಟು ಕೆಟ್ಟುಹೋಗುತ್ತಿರಲಿಲ್ಲ. ಸ್ಪೈಯಿನಿನ ರಣರಂಗದಲಿ ಇಳಿಯಲು ಮುಸಲೋನಿಗೆ ಧೈರ್ಯಸಾಲದಾಗಿತ್ತು.

ಮುಸಲೋನಿಯು ಬಹಳ ದೂರದರ್ಶಿ ಮುತ್ಸದ್ದಿಯಾಗಿರುವುದರಿಂದ ಬ್ರಿಟನು ಮತ್ತು ಫ್ರಾನ್ಸು ಸ್ಪೈಯಿನಿನ ಕಲಹದ ಕುರಿತು ತಟಸ್ಥಭಾವ ಧೋರಣೆಯನ್ನು ಯಾಕೆ ನಡೆಸುತ್ತಿರುವುದೆಂದು, ಆತನಿಗೆ ತಿಳಿದೇಯಿದೆ. ಆದರೆ ಇತರ ಸಿದ್ಧತೆಗಳು ಪರಿಪೂರ್ಣವಾಗುವ ವರೆಗೆ ಆತನು ಕಲಹವು ಹೀಗೆ ಇರಲು ಬಿಡುವನೆ? ಇಲ್ಲ ಎಂಬಿಗಾ ಬಿಡನು. ಆದುದರಿಂದ ಮುಸಲೋನಿಯು ಈಗ ಪ್ರಕಟವಾಗಿ ಸ್ಪೈಯಿನ ಹೋರಾಟದಲ್ಲಿ ಇಳಿಯಬೇಕಾಗಿದೆ. ಆಗ ಫ್ರಾನ್ಸು, ಬ್ರಿಟನ್ನು, ರಷ್ಯಾ - ಸುಮ್ಮನಿರುವವೆ?

ಸಿಂಧದಲ್ಲಿ ಮಂತ್ರಿಮಂಡಲ — ಗವರ್ನರರುಗಳೊಳಗೆ ಮನೋಮಾಲಿನ್ಯ

ಸುಕ್ಕೂರು ಕಾಲಿವೆ ನೀರಿನ ಮೇಲಣ ತೆರಿಗೆಯ ವಿಷಯ ವಿವಾದ

ಸುಕ್ಕೂರು ಕಾಲುವೆ ನೀರನ್ನು ಉಪಯೋಗಿಸುವವರ ಮೇಲೆ ಹೇರಿಸಬೇಕಾದ ತೆರಿಗೆಯ ಪುನರ್ವಿಮರ್ಶೆಯಿಂದ ಈ ಬಿಕಟ್ಟಿನ ಆಯವ್ಯ ಗವರ್ನರರ ಸ್ಪೆಶಲ್ ಜವಾಬ್ದಾರಿಯನ್ನು ಪೂರ್ತಿಗೊಳಿಸಿದೆ ಎಂದು 'ಇಂಡಿಯಾ ಅಕ್ಸ' ಹೇಳುತ್ತದೆ. ನ್ಯಾಯಕ್ಕೆ ಸಂಬಂಧವಾಗುವ ಆಯವಿಲ್ಲದಿರ ಮಾಗ ಮತ್ತೊಂದು ತೆರಿಗೆ ವಿಧಿಸಲು ಉಪಾಯ ತೋಚದ, ಗವರ್ನರರು ಈ ನೀರಿನಿಂದ ಕಂದಾಯವನ್ನು ಹೆಚ್ಚಾಗಿ ಪಡೆವಂತೆ ಹೊಸ ದರಗಳನ್ನು ವಿಧಿಸಲು ಸಿದ್ಧರಾಗಿದ್ದಾರೆ.

ಎಸೆಂಬ್ಲಿಯ ಮೆಂಬರರಲ್ಲಿ ಬಹಳ ಕಡೆ ಸರ್ಕಾರದೊಳಗಣ ಅಧಿಕಾರವೂ ಮಂತ್ರಿಮಂಡಲವೂ ಇದಕ್ಕೆ ವಿರುದ್ಧವಾಗಿದೆ. ರೈತರು ಈಗ ತೆರುತ್ತಿರುವ ತೆರಿಗೆಗಳೇ ಬಲು ಭಾರವಾಗಿವೆ ಎಂದು ಇವರ ಮತ. ಗವರ್ನರ್ ಸಾಹೇಬರು, ಆಗೋಸ್ತು ತಾ 1ರಲ್ಲಿ ನಾಲ್ಕು ತಿಂಗಳ ರಜಾ ಪಡೆದು ವಿಲಾಯತಿಗೆ ಹೋಗುವವರಿದ್ದರು. ಇನ್ನು ಗವರ್ನರ ಜನರಲ್‌ರವರನ್ನು ಕಂಡು, ಇದೊಂದನ್ನು ಇತ್ಯರ್ಥಿಸದೆ, ಅವರು ಹೊರಡುವ ಹಾಗಿಲ್ಲವಾಗಿದೆ.

ಮಂತ್ರಿಗಳು ಎಲ್ಲಿ ಸಂಚಾರ ಮಾಡಿರುವರೋ ಅಲ್ಲಿ ಎಲ್ಲ ರೈತರು ಈ ಹೊಸ ತೆರಿಗೆಯನ್ನು ಆಕ್ಷೇಪಿಸಿಯೇ ಇರುವರು. ಎಸೆಂಬ್ಲಿಯ ಮೆಂಬರರು ಗವರ್ನರರಿಗೆ ಈ ವಿಷಯದಲ್ಲಿ ಸಭೆ ಕರೆದು ಇತ್ಯರ್ಥಿಸಬೇಕೆಂದೂ ಅರ್ಜಿ ಬರೆದಿರುವರು.

ಜಮೀನ್ದಾರರಿಗೆ ಈಗ ಹುಟ್ಟುವಳಿಯ ಸೇಕಡಾ 25—30 ಅಂಶದ ತೆರಿಗೆ ಇದೆ. ಸರಕಾರಕ್ಕೆ 40ರಷ್ಟು ಸಿಗಬೇಕಾಗಿದೆ. ಇದರ ಭಾರವೆಲ್ಲ ಹತ್ತೀ ಬೆಳೆಯ ಮೇಲೆ ಬೀಳುವುದು.

ಕೊಂಗ್ರೆಸಿನವರಲ್ಲವಾದರೂ, ಕೊಂಗ್ರೆಸಿನ ಕಾರ್ಯಕ್ರಮವನ್ನೆ ಅನುಸರಿಸುವ ಮಂತ್ರಿಮಂಡಲ ಎಲ್ಲಿದೆ.

ಐರೋಪ್ಯದಲ್ಲಿ ಮಹಾಯುದ್ಧವೆ?

ಐರೋಪ್ಯದಲ್ಲಿ ಇನ್ನೊಂದು ಮಹಾಯುದ್ಧದ ಕುರುಹುಗಳು ಕಾಣಿಸುತ್ತವೆ. ಮುಸಲೋನಿಯು ಸ್ಪೈಯಿನಿನ ಕಡೆ ಧಾವಿಸುತ್ತಿರುವನು. ಹಿಟ್ಲರನು ಮಧ್ಯ ಐರೋಪ್ಯದಲ್ಲಿ ತನ್ನ ಡೇರೆಯನ್ನು ಹೊಡೆದಿರುವನು. ಎಲ್ಲೆಲ್ಲೂ ಉನ್ಮಾದತನವೂ, ಭಯಭೀತಿಗಳು ಉಂಟಾಗಿವೆ.

ಐರೋಪ್ಯದ ಶಾಂತಿಗೆ ಅಪಾಯ ಒದಗುವ ಸಂಭವಗಳು ಉಂಟಾಗಿವೆ. ಎಲ್ಲಾದರೂ ಸಣ್ಣದೊಂದು ಕಾರಣದ ದೆಸೆಯಿಂದ ಪ್ರಳಯವಾಗ್ನಿಯು ಉಂಟಾಗಬಹುದು. ನಿರ್ಬಲ ಜನಾಂಗಗಳಿಗಾಗಿ ಹೋರಾಡಲು ಬ್ರಿಟನ್ ಮತ್ತು ಫ್ರಾನ್ಸು ಕಲ್ಪಿಸಿಕೊಂಡರೆ, ಆಗ ಇನ್ನೊಂದು ಯುದ್ಧವನ್ನು ತಡೆಯಬಹುದು.

ಮಧ್ಯ ಐರೋಪ್ಯದಲ್ಲಿ ನಡೆಯುವ ವ್ಯಾಪತ್ತು ವಿದ್ಯಮಾನಗಳು ತಮಗೆ ಯಾವತ್ತೂ ಸಂಬಂಧಿಸಿರುವುದಿಲ್ಲವೆಂದು ಬ್ರಿಟನಿನ ಧೋರಣೆಯಾಗಿತ್ತು. ಮಧ್ಯ ಐರೋಪ್ಯದ ಪರಿಸ್ಥಿತಿಯು ಎಲ್ಲರಿಗೂ ಸಂಬಂಧಿಸಲ್ಪಡುವಂತಾದ್ದು. ಆದರಿಂದ ಐರೋಪ್ಯದ ಚರಿತ್ರೆಯು ಬದಲಾಗಬಹುದು—ಐರೋಪ್ಯವನ್ನು ಸರ್ವಾಧಿಕಾರಿಗಳ ಹಾವಳಿಯಿಂದ ರಕ್ಷಿಸಬೇಕೆಂದು ಬ್ರಿಟನು ದೃಢ ಸಂಕಲ್ಪ ಮಾಡಿಕೊಂಡರೆ ಸಾಕು.

ಜೆಕೊಸ್ಲೊವೆಕಿಯಾ, ಸ್ಪೈಯಿನು ಇತ್ಯಾದಿ ಸಣ್ಣ ರಾಷ್ಟ್ರಗಳ ಕುರಿತು ವಾದದಲ್ಲಿ ಕೈ ಮಾಡಲು, ಬ್ರಿಟನು ಎಂದಿನ ವರೆಗೆ ಸಿದ್ಧವಿಲ್ಲವೊ, ಅಂದಿನ ವರೆಗೆ ಈ ಸರ್ವಾಧಿಕಾರಿಗಳು ಐರೋಪ್ಯದ ಕೊಲೆಗಡುಕರಾಗುವರು. ಪಶುಯಿಷ್ಟ ಸ್ವಭಾವಗಳು ಇನ್ನೂ ಹರಡದಂತೆ, ಬ್ರಿಟನಿನ ಅಧಿನಾಯಕತ್ವದಲ್ಲಿ ಪ್ರಜಾಸತ್ತಾತ್ಮಕ ಜನಾಂಗಗಳು ಒಟ್ಟುಕೂಡಬಹುದು. ಆದರೆ ಐರೋಪ್ಯದ ಸಣ್ಣ ರಾಷ್ಟ್ರಗಳನ್ನು ಅವರ ಗತಿಗೆ ಬಿಟ್ಟುಬಿಟ್ಟು ಸುಮ್ಮನೆಯಿರುವುದು ಬ್ರಿಟನಿನ ಧೋರಣೆಯಾದರೆ,—ಆಗ ಬ್ರಿಟನೆ ಪ್ರಜಾಸತ್ತಾಯಕ್ಕಸ್ತೆ ಕತ್ತಿ ಹಾಕಿದಂತಾಗುವುದು. ಅಂತರಾಷ್ಟ್ರೀಯ ವ್ಯವಹಾರದಲ್ಲಿ ಸಂಗ್ರಾಮಿಕ ಉಪಾಯವೆ ಶ್ರೇಷ್ಠವಾದುದೆಂದು ಫ್ರಾನ್ಸು ಮತ್ತು ಬ್ರಿಟನು ಈ ಮೊದಲೆ ಅಭಿಪ್ರಾಯ ಪಟ್ಟಿದ್ದರೆ ಆಗ ಮುಸಲೋನಿಗೆ ಎಬಿಸೀನಿಯಾವನ್ನು ಕೂಡಿಸಲು, ಹಿಟ್ಲರನಿಗೆ ಆಸ್ಟ್ರಿಯಾವನ್ನು ಹಿಡಿಯಲು ಧೈರ್ಯಸಾಲದಾಗುತಿತ್ತು. ಬ್ರಿಟನು ಮತ್ತು ಫ್ರಾನ್ಸು ಒಟ್ಟಾದರೆ ಈ ಸರ್ವಾಧಿಕಾರಿ ಮಿಲನವನ್ನು ಧ್ವಂಸಮಾಡಿಬಿಡಬಹುದು. ಆದರೆ ಈ ಎರಡು ದೇಶಗಳಿಗೆ ಯುದ್ಧದಲ್ಲಿ ಮನಸ್ಸಿಲ್ಲ. ಅದು ಹಿಟ್ಲರ್—ಮುಸಲನಿಯರಿಗೆ ತಿಳಿದೆಯಿದೆ. ಆದುದರಿಂದಲೆ ಅವರು ಸಮಸ್ತ ಐರೋಪ್ಯವನ್ನು ಗದರಿಸುತ್ತಿರುವುದು.

ಹಾರುನ್ ಸಾಹೆಬರು ಮೆಹರಬಾನಿ:

'ನೆಹರೂ ಬ್ರಿಟಿಷ ಸರಕಾರದೊಡನೆ ಒಪ್ಪಂದ ಮಾಡುವರು'

"ಪಂಡಿತ ಜವಾಹರಲಾಲ ನೆಹರು ಬ್ರಿಟಿಷ ರಾಜಕಾರಣಪುರುಷರೊಡನೆ ಮುಂದಣ ರಾಜಕೀಯ ಪ್ರಸಂಗಗಳ ವಿಚಾರ ಮಾಡುತ್ತಿರುವುದು ನಿಜ. ಆದರೆ—ಹಿಂದೀ ಮುಸ್ಲಿಮರು ತಮ್ಮ ಜನ್ಮಸಿದ್ಧ ಹಕ್ಕಿಗಾಗಿ ಮರಣದ ವರೆಗೂ ಹೆಣಗಾಡುವರೆಂದು, ಈಗ ಕೊಂಗ್ರೆಸ್ ಮುಖಂಡರು ಮಾಡುವ ಅನೇಕ ಪ್ರಯತ್ನಗಳ ಫಲವಾಗಿ ಕೊಂಗ್ರೆಸು ಬ್ರಿಟಿಷ ಸರಕಾರದೊಡನೆ ಒಪ್ಪಂದ ಯಾ ಮೈತ್ರಿ ಸಂಪಾದಿಸಿಕೊಂಡರೆ ಮುಸ್ಲಿಮರು ಎಂದೂ ಒಂದಂಗುಲ ಕದಲುವವರಲ್ಲವೆಂದೂ ನಾನು ಸಾರುತ್ತೇನೆ" ಎಂದು ಹೈದ್ರಾಬಾದಿನಲ್ಲಿ (ಸಿಂಧ) ಮುಸ್ಲಿಮ್ ಲೀಗಿನ ಧ್ವಜವನ್ನು ಹಾರಿಸುತ್ತ ಹಾಜಿ ಸರ್ ಅಬ್ದುಲ್ಲಾ ಹಾರೂನರು ಘೋಷಿಸಿರುವರು.

'ನಾವು ಅರ್ಜಿದಾರರಾಗಲಾರೆವು. ನಾವು ಈ ದೇಶದಲ್ಲಿಯೇ ಬೆಳೆದು ಸಾಯುವವರು ನಾಗ ಗೌರವವುಳ್ಳ ಜನಾಂಗವಾಗಬೇಕು. ಒಪ್ಪಿಸಿದ ನಮ್ಮ ಹಕ್ಕುಗಳನ್ನು ಕೊಡದಿರುವುದಕ್ಕೆ ಪ್ರಪಂಚದಲ್ಲಿ ಯಾವ ಶಕ್ತಿಗೂ ಧೈರ್ಯವಿರದು.'

'ಈ ಧ್ವಜವು ಸಮಾನತೆ ಮತ್ತು ನ್ಯಾಯಗಳಿಗಾಗಿದೆ. ಇದು ಸಮಾನತೆಯ ಧ್ವಜ. ಒಂಭತ್ತು ಕೋಟಿ ಮುಸಲ್ಮಾನರು ಈ ಧ್ವಜಕ್ಕಾಗಿ ಪ್ರಾಣಕೊಡಲು ಸಿದ್ಧರು! ಸ್ವತಂತ್ರ ಭಾರತದಲ್ಲಿ ಸ್ವತಂತ್ರ ಮುಸ್ಲಿಮರು ಇರಬೇಕೆನ್ನುವ ಮುಸ್ಲಿಮ್ ಲೀಗಿನ ಕುರುಹು ಈ ಧ್ವಜ!

'ನಾವು ಮುಸ್ಲಿಮರು ಕೊಂಗ್ರೆಸಿನ ಹೇಳಿಕೆಯಂತೆ ನಡೆವವರಲ್ಲ. ನಾವು ಭಾರತೀಯರು. ನಮ್ಮ ರಾಜ್ಯದ ಆಡಳಿತದಲ್ಲಿ ನಮಗೆ ಸಮಾನ ಹಕ್ಕಿರಬೇಕು.'

ಇದಾದ ಬಳಿಕ, ಸಿಂಧ ಎಸೆಂಬ್ಲಿ ಮೆಂಬರರಲ್ಲಿ ಹಲವರ ಬಾಗಿಲಲ್ಲಿ ಸತ್ಯಾಗ್ರಹ ಮಾಡಲು ಒಂದು ಸಾವಿರ ಸ್ವಯಂಸೇವಕರಾಗಬೇಕೆಂದೂ, ಸಿಂಧದ ಎಲ್ಲ ಭಾಗಗಳಲ್ಲಿ ಲೀಗಿನ ಶಾಖೆ ತೆರೆಯಬೇಕೆಂದೂ ನಿರ್ಣಯಗಳಾದುವು.

'ಬ್ರಿಟಿಷರು ಭಾರತವಾಸಿಯರಿಗೆ ಕೊಟ್ಟ ದೆಂಬಿನ ಘೋಷಣೆಗಳು ವ್ಯರ್ಥವೆಂದು ಮಾನೆಹರು ಹೇಳು ಎಂದಿರುವರಲ್ಲವೆ,—ಮುಸ್ಲಿಮ ಲೀಗಿಗೆ ಕೊಟ್ಟ ರಿಯಾಯಿತಿಗಳು ಹಿಂದೂಗಳ ಬಲಾತ್ಕಾರ ಆಕ್ರಮ ಸಿಕ್ಕರಿಗೆ ಬೇಕಾಗಿರು ಸ್ಪೆಶಲ್ ಅಧಿಕಾರಿಗಳು ನೆಪದಲ್ಲಾದುದನ್ನೇನ ಅವರು ಹೇಳಿಲ್ಲ. ಯಾರೊಡನೆ ಒಪ್ಪಂದ ಮಾಡಲೂ ಅವರು ಹೊರಡಿಲ್ಲ. ಮುಖಂಡರೆಲ್ಲರಾದರೆ, ಯಾರು ಏನು ಮಾತಾಡಿದರೆ ಇದೇ ವಿಷಯವೆಂದು ದೂರು ಬೆದರಿಸುವ ಕ್ಷೇರ ಸಿಗೆ ಯಾರು ತಡೆಗಟ್ಟುವರಂತೆ?

ಸ್ವದೇಶಾಭಿಮಾನಿ

ಕೊಂಗ್ರೆಸಿನಲ್ಲಿ ಒಡಕು!

—ಉಂಟಾದರೆ?

ಬ್ರಿಟಿಷ ಸರಕಾರವು ಮಾಡಿಕೊಟ್ಟ ಫೆಡರೇಶನು ಸ್ಕೀಮಿಗೆ ಕೊಂಗ್ರೆಸು ವಿರುದ್ಧವಾಗಿದೆ. ಏಕೆಂದರೆ:—1. ಅದು ಭಾರತೀಯರ ತಯಾರಿಸಿದುದಲ್ಲ. 2. ಅಲ್ಲಿ ಮುಖ್ಯಾಧಿಕಾರವು ಕೇಂದ್ರದಲ್ಲಿ ಭಾರತೀಯರ ಕೈಯಲ್ಲಿಲ್ಲ. 3. ಸ್ವದೇಶಿ ರಾಜ್ಯದೊಳಗಣ ನಿರಂಕುಶರನ್ನು ಪ್ರಜಾಸತ್ತೆಯುಳ್ಳ ಪ್ರಾಂತ್ಯಗಳೊಡನೆ ಕೂಡಿಸುವ ದುರ್ವ್ಯವಸ್ಥೆಯಾಗುವುದು ಇದು ವಿಜಾತೀಯ ವಿವಾಹದಷ್ಟು ಹಾನಿಕರ.

ಇದೇ ಕಾರಣಗಳಿಂದ, ಮಹತ್ವಾದುದಾದ ಥಾ ಜವಾಬ್ದಾರಿಯುಳ್ಳ ಸಂಘ ಯಾ ಪಕ್ಷವೂ ಫೆಡರೇಶನನ್ನು ಕಣ್ಣೆತ್ತಿಯೂ ನೋಡದೆ ಹಾಗೆಯೆ ತ್ಯಜಿಸಿಯದೆ!

ಅದರೆ, ಭಾರತಿಕವೆಲ್ಲ ಒಂದಾದರೆ ಚಂದವೆಂದು ಎಲ್ಲರೂ ನಂಬಿರುವರು! ಅದನ್ನು ಹಾಗೆ [illegible]ಬೇಕಾಗಿದೆ.

ಇದೆಲ್ಲವೂ ಬ್ರಿಟಿಷ ಸರಕಾರಕ್ಕೆ ಗೊತ್ತೇ ಇದೆ. [illegible]ನ ಪ್ರಮುಖರು ಈ ವಿಷಯವೆಲ್ಲ [illegible] ಹಾವು [illegible]ದೇಲು ಮುರಿ[illegible] ಸಂಚಾಯ[illegible]ಮಾಡಬೇಕೆಂದಿದ್ದಾರೆ.

ಆದರೆ ಪಾರ್ಲಿಮೆಂಟು [illegible] ಈಗ ತಾನೆ ಆಲೋಚಿಸುವ[illegible] ಅದರ ರಗಳೆ ಅದಕ್ಕಿದೆ, ಆದುದರಿಂದ [illegible] ಅಭಿಪ್ರಾಯ ಪಡೆದು [illegible] ಸುಧಾರಿಸಬೇಕೆಂದು ಅಲ್ಲಿನ ಅಧಿಕಾರಿಗಳ [illegible]ದೆ.

ಬ್ರಿಟಿಷ ಜನಾಂಗವೇ ಎಂದಿಗೆ ಹೀಗೆ ಎಷ್ಟಕ್ಕೆ ಭಾರತವರ್ಷವು ಸ್ವತಂತ್ರವಾಗಬಹುದೆಂಬುದನ್ನು ನಿರ್ಧಾರಿಸಲು ಅರ್ಹರು ಎಂಬ ಅಭಿಪ್ರಾಯವನ್ನು ಹಿಂದೆ ಹೋದರು ಪದೇ ಪದೇ ತಿಳಿಸಿದುದನ್ನು ಇನ್ನೂ ಯಾವ ಪ್ರಮುಖನೂ ಅಲ್ಲಗೆಳೆದುದಿಲ್ಲ ಇದಲ್ಲದೆ, ರೌಂಡ್ ಟೇಬಲ್ ಪರಿಷತ್ತು ಕೂಡಿಸಿ ಯಾವ ಬಗೆಯಲ್ಲೂ ಒಂದು ನಿಶ್ಚಯ್ಯನಾಡುವುದು ಸಹ, ಬಲು ದೂರದ ಕೆಲಸವಾಗಿ, ಕೊನೆಗೆ ನಮ್ಮ ಸ್ವರಕ್ಷೆಯನ್ನೆಲ್ಲ ಮುಗಿಸಿ, ಬ್ರಿಟಿಷರು ಹೇಳುವಷ್ಟೆ ಮಾತ್ರ ನಮಗೆ ದೊರೆವಂತಹಗುವ ಪ್ರಮಾದವನ್ನು ಉಂಟುಮಾಡುವ ಕಾರಣ,—ಇನ್ನು ಈ ಬಗೆಯ ವರ್ತುಲಪರಿಷತ್ತಿನಲ್ಲಿ ಯಾರೂ ವಿಶ್ವಾಸವನ್ನಿಟ್ಟಿಲ್ಲ

ಮೊನ್ನೆ ಟ್ರೈಮ್ಸ್ ಬರೆದಂತೆ, ಹೆಚ್ಚಿನ ಹಿಂದೀಯರ ಅಭಿಪ್ರಾಯಪಡೆದು, ಅದಕ್ಕನುಗುಣವಾಗಿ, ಕೊಟ್ಟ ಆಕ್ಟಿನೊಳಗೇ ಗಡಿಮೀರದೆ ಕೆಲವು ತಿದ್ದುಪಡಿಗಳನ್ನು ಮಾಡುವುದರಿಂದ ಖಂಡಿತವಾಗಿಯೂ ಸರ್ವರೂ ಒಪ್ಪುವಂತೆ ಅದನ್ನು ಸರಿಪಡಿಸಬರುವುದಾಗಿ ಈಗಣ ಕರಣೀಕರೂ ಒಪ್ಪಿರುವಂತೆ ತೋರುತ್ತದೆ.

ಇವರೊಡನೆ ಕೊಂಗ್ರೆಸಿನ ಕಡೆಯ ಮುಖಂಡರೊಬ್ಬರು ಹಾಗೆ ಮಾಡಿದ್ದಲ್ಲಿ ಅಂಗೀಕರಿಸಬಹುದೆಂದು ಹೇಳಿರುವರೆಂಬುದು ಸ್ಪಷ್ಟವಲ್ಲವಾದರೂ, ಊಹನೆಗೆ ಕಾರಣವಾಗಿದೆ ಅದನ್ನು ತಿಳಿದು, ರಾಷ್ಟ್ರಪತಿಗಳು ಇದು ಸಲ್ಲದ ಕಾರ್ಯವೆಂದೂ ಆದುದರಿಂದ ಕೊಂಗ್ರೆಸನ್ನಾದರೂ ತ್ಯಜಿಸಿ, ಫೆಡರೇಶನು ಆಗದಂತೆ ನೋಡಬೇಕೆಂದೂ ತಾವು ನಿಶ್ಚಯಿಸಿರುವಂತೆ ಸಾರಿದ್ದಾರೆ.

ಕೊಂಗ್ರೆಸು ಹೇಗೆ ನಿರ್ಣಯಿಸುವುದೋ ಅದರಂತೆ ರಾಷ್ಟ್ರಪತಿಯೂ ನಡೆಯತಕ್ಕದು ಹೊರತು, ತಾನೇ ಕೊಂಗ್ರೆಸಿಗೂ ಮೇಲೆಂದು ಎಣಿಸಬಾರದು; ಹೀಗೆ ಸಾರುವುದು ಅಯೋಗ್ಯವೆಂದು ಶ್ರೀ ಸತ್ಯಮೂರ್ತಿಯವರು ಪ್ರಕಟಿಸಿದ್ದಾರೆ. ರಾಷ್ಟ್ರಪತಿಯ ಹಾಗೂ, ಸತ್ಯಮೂರ್ತಿಯವರ ಹಾಗೂ, ಭಿನ್ನಾಭಿಪ್ರಾಯವುಳ್ಳ ಮಂದಿ ಬಹಳವಿದೆ ಕೊಂಗ್ರೆಸು ಕಾರ್ಯಕಾರೀ ಮಂಡಲವು ಸದ್ಯದಲ್ಲೇ ಸೇರುವುದಾದ ಕಾರಣ, ಅಲ್ಲಿ ಅದರ ಇತ್ಯರ್ಥವಾಗುವ ಮೊದಲು ಹೀಗೆಲ್ಲ ಪರಸ್ಪರ ವಿರುದ್ಧ ಪ್ರಕಟಣೆಗಳಾದುದು ಕಾಂಗ್ರೆಸಿನಲ್ಲಿ ಒಡಕು ಉಂಟಾಗಬಹುದೆಂದು ಸೂಚಿಸುವಂತಾಗಿದೆ

ಕೊಂಗ್ರೆಸು ಒಡೆಯಲಾರದೆಂದು ಬ್ರಿಟಿಷರು ತಿಳಿದ ಕಾರಣವೇ, ಆಕ್ಟಿನೊಳಗಾದರೂ ತಿದ್ದಿ, ಫೆಡರೇಶನನ್ನು ಸರ್ವಸಮ್ಮತಿಗೆ ಸರಿಯಾಗುವಂತೆ ಮಾಡಲು ಹವಣಿಸಿರುವರು. ಈ ವಿಷಯದಲ್ಲಿ ಭಾರತವರ್ಷದಲ್ಲಿ ಯುವನೂ ಕೊಂಗ್ರೆಸಿಗೆ ವಿರೋಧ ಕಟ್ಟಿಕೊಂಡಿಲ್ಲ ಆದುದರಿಂದ, ಏನೋ ಒಂದು ಮಾತಿಗಾಗಿ, ಧಮ್ಮನೆ ಕೊಂಗ್ರೆಸು ಮುರಿಯುವ ಹಾಗೆ ಉದ್ವೇಗವುಂಟಾಗಿದೆ ನಾಳಿನ ಕಾರ್ಯಕಾರೀ ಮಂಡಲದ ವಿಚಾರ ತಿಳಿದೇ ಎಲ್ಲರೂ ವರ್ತಿಸುವುದು ಕ್ಷೇಮ.

ಕೊಂಗ್ರೆಸು ಒಡೆದರೆ, ಭಾರತವರ್ಷದ ಐಕ್ಯಸಾಧನೆಗಳೂ ಒಡೆವುವು.

ನೋಟಗಳು.–Note . . s

ನೈನಿತಾಲಿನ ಚೇತರಾಮ ಹೈಸ್ಕೂಲ್ ವಿದ್ಯಾರ್ಥಿಯೊಬ್ಬನು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ. ಮಾಡುವುದೇನು? ದುರ್ದೈವ ಎಂದು ಕೂತನು. ಅವನು ಪಾಸಾಗಬೇಕಿತ್ತೆಂದೂ, ಅವನ ಬುದ್ಧಿವಂತಿಕೆ ಕಡಿಮೆಯಾಗಿ ಅವನು ಫೈಲಾದುದಲ್ಲವೆಂದೂ ಕೆಲವರು ಅವನಲ್ಲಿ ಸಂದೇಹ ಹುಟ್ಟಿಸಿದರು ಉಪಾಧ್ಯಾಯನು ಪ್ರಯತ್ನಿಸಿದ್ದರೆ ಇವನು ಪಾಸಾಗುತ್ತಿದ್ದನೆಂದರು. ಈ ಹೊಗಳಿಕೆಯೆಲ್ಲ ಅವನ ತಲೆ ತಿರುಗಿಸಿತು. ಉಪಾಧ್ಯಾಯನನ್ನು ಕಂಡು, ಅವನ ಮೂಗಿಗೆ ನಾಲ್ಕು ಬಡೆದನು. ವಿದ್ಯಾರ್ಥಿ ಪಾಸಾಗದೆ, ಉಪಾಧ್ಯಾಯನ ಮೂಗು ಒಡೆದು ನೆತ್ತರು ಸುರಿಯಿತು. ವಿದ್ಯಾರ್ಥಿಯ ಬುದ್ಧಿವಂತಿಕೆ, ಉಪಾಧ್ಯಾಯನ ಪ್ರಯತ್ನಗಳು—ಇವೆರಡನ್ನೂ ಈಗ ಮೇಜಿಸ್ಟ್ರೇಟರು ನಿರ್ಣಯಿಸಬೇಕಾಗಿದೆ

° ° ° °

ಸಕ್ಕರೆಯ ಬೆಲೆ ಕಡಿಮೆಯಾದುದೇ ಟ್ರಿನಿದಾದದಲ್ಲಿ ದಂಗೆಗಳಾದುವಷ್ಟೆ. ಸಕ್ಕರೆಯ ಬೆಲೆ ಏರಿದ್ದಾಗಲೂ ಕೆಲಸಗಾರರ ಸ್ಥಿತಿ ಇಷ್ಟೆಯೆ ಇತ್ತು. ಬ್ರಿಟಿಷ ಸರಕಾರವು ಇವರನ್ನು ಉನ್ನತಿಗೆ ತರಬೇಕೆಂದು ಸಾರಿದ್ದರೂ, ಸ್ಥಳೀಯ ಸರಕಾರವು ಇವರನ್ನು ಅಲ್ಲಿ ಕೆಲಸ ಮಾಡುತ್ತಿದ್ದ ಪುರಾತನ ಗುಲಾಮರಂತೆಯೆ ನೋಡುತ್ತದೆ ಸೇಕಡಾ 60 ಮಂದಿಗೆ ಇನ್ನೂ ಅಕ್ಷರದ ಗುರುತಿಲ್ಲ ಕೆಲವೇ ಮಂದಿ ತಾವೂ ತೋಟ ಮಾಡಿಕೊಂಡಿರುವರು, ಅವರಿಗೆ ಧಾರಣೇವಾಸಿಗಳು ಇಳಿದು ಊಟಕ್ಕೆ ಸಿಗದಾಗಿದೆ ಇದನ್ನೆಲ್ಲ ತಿಳಿದು, 'ಕೂಲೀಜನಾಂಗಗಳನ್ನು ಸ್ವರಾಜ್ಯಕ್ಕೆ ಯೋಗ್ಯವಾಗುವಂತೆ ಮಾಡುವುದೇ ಪ್ರಥಮ ಕರ್ತವ್ಯವೆಂದು ಸರಕಾರವು ತಿಳಿಯಬೇಕು ಎಂದು ಬ್ರಿಟಿಷವಸಾಹತುಗಳಲ್ಲಿ ಸಾರುತ್ತಿದ್ದಾರೆ ಇದು 'ಸಾರು' ಮಾತ್ರ, ಉಪ್ಪಿಲ್ಲವಾಗಿದೆ! ಈ ವಿವೇಕವು ಆ ಸರಕಾರಗಳಿಗೆ ಹೇಗೆ ಉಂಟಾಗಬೇಕು?

° ° ° °

ಬಲರಾಮ ಪುರದ ಮಹಾರಾಜರು ಬೆನಾರಿಸ್ ಯೂನಿವರ್ಸಿಟಿ ಪರಾರದಲ್ಲಿ, ಗೋಡೆಗಳನ್ನು ಕಟ್ಟಿಸಲು, 75,000 ರೂಪಾಯಿ ದಾನ ಮಾಡಿರುವರು * * * ಕಳೆದ ಜನವರಿ ತಿಂಗಳಲ್ಲಿ ಥಿಯಲ್ಲಿ ನಡೆದ ಐ. ಸಿ. ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಸಮಾಜಾನ್ಯದ ಸಮಾನತೆಗೆ ತರಲು, ಬ್ರಿಟಿಷ ಸೇಟ್ ಸೆಕ್ರಿಟರಿಯವರು ಐವರು ಮುಸ್ಲಿಮ ತರುಣರಿಗೆನೊಮಿನೇಶನ್ ಮೂಲಕ ಹುದ್ದೆಗಳನ್ನು ದಾನ ಮಾಡಿರುವರು * * * ಬಂಗಾಳ ಮಂತ್ರಿ ಮಂಡಲದಲ್ಲಿ ನವಶ್ಯೋರ ಅಲಿಯವರು ರಾಜೀನಾಮೆ ಕೊಡಬೇಕಾಗಿ ಬಂದಿರುವ ಸ್ಥಾನಕ್ಕೆ ಯಾನೊಬ್ಬ ಪ್ರಜಾ ಕೃಷಿಕ ಪಕ್ಷದ ಮುಸ್ಲಿಮನು ಮುಂದೆ ಬಂದರೆ ಆತನಿಗೆ ಮಂತ್ರಿ ಪದವಿಯನ್ನು ಫಜಲುಲ್ಲ್ ಹುಕ್ಕರು ದಾನ ಮಾಡಲಿರುವರು,

° ° ° °

ಮೂರವಾರಿಗಳಲ್ಲಿ ಅತಿ ಎಳೆಯ ವಯಸ್ಸಿನಲ್ಲಿ ಮದುವೆಯಾಗುವುವು. ಬಾಲವಿವಾಹಗಳು ಕೂಡದೆಂದು ಸರಕಾರವು ವಿಧಿಸಿದ್ದರೂ, ಹೀಗೆವಿವಾಹ ನಡೆದಾಗ ಉಂಟಾದಮೊಕದ್ದಮೆಯನ್ನು ವಿಚಾರಣೆ ಮಾಡಿದ ನ್ಯಾಯಪತಿಗಳು "ಸಮಾಜದ ವಿಧಿ ಹೀಗಿದೆ, ಇದೊಂದು ಹೆಸರಿಗೆ ಮಾತ್ರ ತಕ್ಸೀರು, ಇವರನ್ನು ಎಚ್ಚರಿಸಲಾಗಿದೆ" ಎಂದರು. ಹೈಕೋರ್ಟಿನಲ್ಲಿ ಯಜಮಾನ್ಯ ವಹಿಸಿದ್ದ ಪುರುಷ ಸ್ತ್ರೀಯರಿಗೆ ರೂಪಾಯಿ 100 ಮತ್ತು 50 ಜುಲುಮಾನೆ ವಿಧಿಸಲಾಗಿದೆ ಕಾನೂನನ್ನು ಎದುರಿಸಿ ಸಮಾಜದ ಕಟ್ಟನ್ನು ಗೌರವಿಸಲಾಗುವುದಿಲ್ಲ ದರಿಂದ ಮೊದಲನೆ ನ್ಯಾಯಪತಿಗಳ ತೀರ್ಮಾನ ತಪ್ಪೆಂದೂ ಹೈಕೋರ್ಟು ತಿಳಿಸಿತು

° ° ° °

ಇಂಡಿಯಕ್ಕೆ ಅಮೇರಿಕದೊಡನೆ ವ್ಯಾಪಾರವು ಹೆಚ್ಚುವ ಹಾಗೆ, ಈಗ ನ್ಯೂಯೋರ್ಕಿನಲ್ಲಿ ಒಂದು ಸಂಘ ಸ್ಥಾಪನೆಯಾಗಿದೆ ಸಮೆ 35 ಕೋಟಿಯೊಡನೆ ವ್ಯಾಪಾರ ಮಾಡುವ ರಾಷ್ಟ್ರಗಳಲ್ಲಿ ಅಮೇರಿಕವು ಮೂರನೆಯದಾಗಿ ಸ್ಥಾನ ಬಿಟ್ಟುಕೊಟ್ಟಿದೆ, ಜಪಾನು ಯುನೈಟೆಡ ಸ್ಟೇಟ್ಸಿಗಿಂತ ಮೇಲೇರಿದೆ ಆದರೆ ಜಪಾನ ಯುದ್ಧರಂಗದಲ್ಲಿರುವ ಕಾರಣವೂ, 1 ವರ್ಷವು ರಾಷ್ಟ್ರೀಯವಾಗುತ್ತಿರುವ ಕಾರಣವೂ ಅದು ತನ್ನ ಸ್ಥಾನವನ್ನು ಬಿಡುವ ಸಂಭವವಿದೆ ಶ್ರೀ, ಮಲ್ಲಿಕರು ಇಂಡಿಯದ ವಾಣಿಜ್ಯ ಕಮಿಶನರಾಗಿ ನ್ಯೂಯೋರ್ಕಿನಲ್ಲಿರುವ ಕಾರಣ ಭಾರತವರ್ಷದೊಡನೆ ಅಲ್ಲಿನ ವ್ಯಾಪಾರ ಹೆಚ್ಚುವ ನಂಬಿಕೆಯಿದೆ

° ° ° °

ರೈಲ್ವೆಗಳಲ್ಲಿರುವ ಪಾದಿಕೆಯಂತೆ ನಮ್ಮ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಒಂದೇ ಬಗೆಯ ಅಳತೆಯ ಮತ್ತು ತೂಕದ ಪಡಿಗಳನ್ನು ವಿಧಿಬೇಕಾಗಿ, ಇಂಡಿಯಾ ಸರಕಾರವು ಪ್ರಯತ್ನಿಸುತ್ತದೆಂದೂ, ಸಿಮ್ಲಾದಲ್ಲಿ ಸೇರುವ ಎಸೆಂಬ್ಲಿಯ ಮುಂದೆ ಇದನ್ನು ಕುರಿತಾದ ಮಸೂದೆಯು ಆಲೋಚನೆಗೆ ಬರುವುದೆಂದೂ ಗೊತ್ತಾಗಿದೆ

° ° ° °

ಸ್ಪೈಯಿನಿನಲ್ಲಿ,—ಫ್ರೆಂಕೋ ಪಕ್ಷವು ಸಮುದ್ರತೀರದ ಮತ್ತೊಂದು ನಗರವನ್ನು ಹಿಡಿದಿದೆ ವೆಲೆನ್ಸಿಯಾ ಪ್ರಾಂತ್ಯವನ್ನು ಆಕ್ರಮಿಸಿಯದೆ ಸರಕಾರ ಪಕ್ಷವು ತಾನೂ ಬಲವಾಗಿ ಇವರನ್ನು ಎದುರಿಸುತ್ತದೆಂದು ಪ್ರಕಟಿಸಿಯದೆ ಬ್ರಿಟನ ಫ್ರಾನ್ಸುಗಳು ನಿರೀಕ್ಷಕರ ಕೂಟ ಕಳುಹುವುದರಲ್ಲಿದ್ದಾರೆ ಇಟಲಿಯ ತನ್ನವರನ್ನು ಹಿಂದೆ ತರುವ ಆಲೋಚನೆ ಮಾಡುತ್ತದೆ ಜರ್ಮನಿ ಎದುರಾಡುತ್ತಿಲ್ಲ ರಷ್ಯವು ನಿರೀಕ್ಷಕರ ಪಾಲಿಗೆ ಬಂದಿದೆ ಇಂಗ್ಲಿಷ ಮುಖ್ಯ ಮಂತ್ರಿಗಳ ಸ್ಪೈಯಿನಿನವರೇ ತಮ್ಮ ಯುದ್ಧ ಮುಗಿಸಿಕೊಳ್ಳಲಿ! ಆದರೆ, ನಮ್ಮ ನಾವೆಗಳನ್ನೇಕೆ ಫ್ರೆಂಕೋ ಮುಳುಗಿಸಬೇಕು? ಎಂದು ಹೂಂಕರಿಸ ತ್ತಾರೆ ರಣರಂಗ ಅವರಿವರಿಂದಿಲ್ಲ ಯುದ್ಧಕಾಲ, ಜಾಗ್ರತೆನೋಡುವಾ ಎಂದ ಫ್ರೆಂಕೋ ತಿಳಿಸಿ, ಎರಡು ನಾವೆಗಳನ್ನು ಮುಳುಗಿಸಿ ಆಗಿದೆ! ಇದು ಈ ವಾರದ ಸಂಕ್ಷೇಪವಾರ್ತೆ!

ಪರದೇಶಗಳಲ್ಲಿ ಒಂದು ನಿಮಿಷ

ಲಂಡನ್:—ವೈಸ್ರಾಯರು ತಾ. 14ರಲ್ಲಿ ಇಂಡಿಯಾ ಆಫಿಸಿನಿಂದ ಸತ್ಕಾರ ಹೊಂದುವರು. ಅಲ್ಲಿ 15 ದಿನಗಳಿದ್ದು ಸೆಕ್ರೆಟರಿಯವರೊಡನೆ ಎಲ್ಲ ವಿಷಯ ಗಳಲ್ಲಿ ಪರಮರ್ಶಿಸುವರು.

ಕೇಂಬ್ರಿಜ್:—ರಾಜಕುಮಾರ ರಘುನಾಥಸಿಂಹ ಎಂಬವರನ್ನು ವಿಮರ್ಶಾವಿಚಕ್ಷಣರೆಂದು ಗಣಿಸಿ, ಅವರಿಗೊಂದು ಸ್ಕೊಲರ್‌ಶಿಪ್ ಕೊಡಲಾಗಿದೆ ಇಂತಹ ವೇತನ ಹೊಂದಿದವರಲ್ಲಿ ಇವರು ಮೊದಲನೆಯವರು, ಸಿತಾಮವುರಾಜ್ಯದ ಮಹಾರಾಜರ ಮಕ್ಕಳು.

ಜೆಕೊಸ್ಲೊವಾಕಿಯ: ನಾಳಿನ ಸಪ್ಟೆಂಬರದಲ್ಲಿ ಇಲ್ಲಿ ಪ್ರಪಂಚದ ಸಂತೆ ಸೇರುವುದು 3000 ಕೈಗಾರಿಕೆ ಕಾರ್ಖಾನೆಗಳ ಪ್ರದರ್ಶನವಿದೆ

ಮೊಸ್ಕೋ:—ಹಲವು ಹಿಂದೀಯರನ್ನು ರಾಜಕೀಯ ಕಾರಣಗಳಿಂದ ಕೈದ ಮಾಡಿರುವರಾಗಿ ವಾರ್ತೆಯಿದೆ. ಬ್ರಿಟಿಷ ಸರಕಾರಕ್ಕೆ ಇದೊಂದು ತಿಳಿದಿಲ್ಲ. ಬ್ರಿಟಿಷ ಇಂಜಿನೀಯರರನ್ನು ಕೈದುಮಾಡಿದಾಗ, ಪಾರ್ಲಿಮೆಂಟೇ ಎದ್ದು ನಿಂತಿತು, ಈಗ ಬ್ರಿಟಿಷ ರಾಯಭಾರಿ ಮೊಸ್ಕೋದಲ್ಲಿಲ್ಲವೇನು? ಅಥವಾ ಹಿಂದೀಯರು ಬ್ರಿಟಿಷ ಪ್ರಜೆಗಳಾಗಿಲ್ಲದಷ್ಟು ಸ್ವರಾಜ್ಯ ಹೊಂದಿಯೇ ಇರುವರೇನು?

ಪೆಲೆಸ್ತೀನ:—ಗಾರಾಮಾರಿ ಪ್ರಬಲವಾಗಿದೆ ಅಲ್ಲಲ್ಲಿ ಅರಾಬ ಜನರನ್ನು ಗುಂಡಿಟ್ಟುಕೊಂದುದು ಪ್ರಕಟವಾಗಿದೆ ಬ್ರಿಟಿಷ ಆಫೀಸರಿಗೂ ಸೋಲ್ಜರಿಗೂ ಗಾಯಗಳಾಗಿವೆ ಸಾಯುವವರಲ್ಲಿ ಹೆಚ್ಚಿನವರು ಯೆಹೂದ್ಯರು

ಎವಿಯನ್:—ಜರ್ಮನಿಯು ಓಡಿಸುವ ಯೆಹೂದ್ಯರಿಗೆ ಸ್ಥಳಕೊಡಲು ಬ್ರಿಟನ್ನು ಫ್ರಾನ್ಸು ಗಳಿಂದಾಗುವ ಹಾಗಿಲ್ಲ ಅಮೇರಿಕದಲ್ಲಿ ಒಂದು ಸಭೆಯಾಗಿ, ವಿಚಾರವಾಗುತ್ತದೆ ಇವರು ತಮ್ಮ ಸಂಪತ್ತಿನಲ್ಲಿ ಸೇಕಡಾ 10ರಷ್ಟನ್ನು ಮಾತ್ರ ಸಂಗಡವಿಟ್ಟು ಹೊರಡಬಹುದೆಂದು ಜರ್ಮನಿ ಎನ್ನುತ್ತದೆ.

ಸಾಮ್ರಾಜರು—ಇನ್‌ಫ್ಲೂಯೆಂಜಾ ಎಂದು ಬದಲಿದ ಬಾಧ್ಯ ಹಿಡಿದಿದೆ ವರು ಚಿಂತೆಗೆ ಕಾರಣವಿಲ್ಲ ಆದರೂ ಅವರಿಗೆ ವಿಶ್ರಾಂತಿ ಬೇಕಾಗಿದೆ ಎಂಬು ಡಾಕ್ಟರರ ಅಭಿಪ್ರಾಯ

ಇಜಿಪ್ತ:—ಇಲ್ಲಿಯ ರಾಜ(ಖೆದಿವ್)ರನ್ನೆ ಖಲೀಫರನ್ನಾಗಿ ಸರ್ವಮುಸ್ಲಿಮರೂ ಅಂಗೀಕರಿಸುವ ಹಾಗೆ ಸೂಚನೆಗಳಾಗುತ್ತವೆ

ಸ್ಪೈಯಿನ್:—ಇನ್ನು 165 ದಿನಗಳೊಳಗೆ ಪರದೇಶಿಯ ಸೈನಿಕರನ್ನು ಸ್ಪೈಯಿನಿಂದ ಹೊರಗೆ ರವಾನಾಮಾಡಲು ನಿರ್ಣಯವಾಗಿದೆ ಹೋಗುವವರು ಯಾರೋ!

ಮೆಂಚಸ್ಟರ್:—ನಾಲ್ಕು ದಿನಗಳ ವರೆಗೆಂದು ನಿರ್ಧಾರವಾದ ಕ್ರಿಕೇಟ್ ಆಟವನ್ನು, ಕಾದು ಕೂತರೂ ನಾಲ್ಕನೇ ದಿನ ಸಹ ಆಡಲಾಗಲಿಲ್ಲ ಹವಾಗುಣ ಹಾಳಾಯಿತು ಜಡಿಮಳೆ!

ವೊಶಿಂಗ್ಟನ್:—ಇಂಗ್ಲೆಂಡು ಅಮೇರಿಕಗಳೊಳಗೆ ವ್ಯಾಪಾರೀ ಕರಾರು ಆಗಲು ಸಂಭಾಷಣೆಗಳಾಗುತ್ತವೆ

ಟೀ ಕುಡಿದು ತಂಪನ್ನು ಅನುಭವಿಸಿರಿ

ಬಿಸಿ ಬಿಸಿ ಟೀ ಕುಡಿದು ಶರೀರದಲ್ಲಿ ತಂಪನ್ನುಂಟುಮಾಡಿಕೊಳ್ಳುವ ಪದ್ಧತಿಯ ವಿಷಯದಲ್ಲಿ ವೈಜ್ಞಾನಿಕರ ಅಭಿಪ್ರಾಯವು ಏಕಮುಖವಾಗಿರುವುದು. ಮಂಜುಗಡ್ಡೆ (ಐಸ್) ಯಿಂದ ತಣ್ಣಗೆ ಮಾಡಲ್ಪಟ್ಟ ಪಾನೀಯದ ಮೂಲಕ ಆಗುವ ಲಾಭವು ಅಲ್ಪಕಾಲ ಮಾತ್ರವೇ ಇರುವುದು. ಆದರೆ ಬಿಸಿ ಬಿಸಿ ಟೀಯಿಂದ ದೇಹಕ್ಕೆ ಆಗುವ ಪ್ರಯೋಜನವು ಶಾಶ್ವತವಾದದ್ದು. ಬಿಸಿ ಬಿಸಿ ಟೀಯು ಮೈಯೊಳಗಿನ ರೋಮಕೂಪಗಳನ್ನು ತೆರೆದು ಚೆನ್ನಾಗಿ ಬೆವರುವಂತೆ ಮಾಡುವುದು. ಇದರಿಂದ ಶರೀರದ ಉಷ್ಣವು ಹೊರಗಾಗುವುದು. ದೇಹದಲ್ಲಿ ತಂಪನ್ನುಂಟುಮಾಡಿಕೊಳ್ಳಲು ಪ್ರಕೃತಿಯ ಸಹಜಮಾರ್ಗವಿದು. ಬಿಸಿ ಬಿಸಿ ಟೀ ಕುಡಿದು ತಂಪನ್ನು ಅನುಭವಿಸಿರಿ.

ಇಂಡಿಯಾದ ಟೀ ತಂಪನ್ನೂ ತೃಪ್ತಿಯನ್ನೂ ಕೊಡುವುದು

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಶುಚಿಯಾಗಿರುವ ನುಣ್ಣನೆಯ (ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗೆ ಒಂದು ಚಮಚ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲುಸಕ್ಕರೆ ಬೆರಸಿ ಕುಡಿಯಿರಿ.



ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು

I K 97 S

★ ಹಿಂದೀ ವಿರುದ್ಧ ಚಳವಳಿ ★

ಸ್ವಾಮಿ ಅರುಣಗಿರಿನಾಥ— ಸರ್ವಾಧಿಕಾರಿ.

ಹಿಂದು ವರ್ಷದ ಕಠಿಣ ಸಜೆ C ಕ್ಲಾಸು

ಹಿಂದುಸ್ಥಾನೀ ಭಾಷೆಯಲ್ಲಿ ಕಡ್ಡಾಯವಾಗಿ ಶಾಲೆಗಳಲ್ಲಿ ಕಲಿಸಿದಂತೆ ಮುಖ್ಯ ಮಂತ್ರಿಗಳಿಗೆ ಬುದ್ಧಿ ಕಲಿಸುವುದಕ್ಕಾಗಿ, ಅವರ ಮನೆಯ ಎದುರಲ್ಲಿ ಜನರು ಸತ್ಯಾಗ್ರಹವನ್ನಾಚರಿಸುವ ಹಾಗೆ ಪ್ರೋತ್ಸಾಹಿಸಿರುವ ಈ ಸರ್ವಾಧಿಕಾರಿಯನ್ನು ಪೋಲೀಸರು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ತಂದರು. ವಿಚಾರಣೆಯಲ್ಲಿ ಕೆಲವು ಮಾತುಗಳಲ್ಲಿ ಮೆಜಿಸ್ಟ್ರೇಟರು ಈ ಚಳವಳಿಗಾರರ ಹುಳುಕನ್ನು ಹೊರಗೆಡಹಿರುವರು.

ಈ ಸರ್ವಾಧಿಕಾರಿ ತಾನು ಸನ್ಯಾಸಿಯೆನ್ನುವನು; ಕಾವಿಯ ವಸ್ತ್ರವನ್ನು ಉಡುವನು. ಇಂಥವರೆಲ್ಲ ಸಂಸಾರದ ರಗಳೆ ಬಿಟ್ಟು, ದೇವರ ಧ್ಯಾನದಲ್ಲಿ ತಾವು ಆಸಕ್ತರಾಗಿ ಮುಕ್ತಿ ಹೊಂದಬೇಕೆನ್ನುವರು. ಇವರು ಇತರರಿಗೆ ಹಿಂದೂಮತವನ್ನು ಬೋಧಿಸುವರು. ಹಿಂದುಸ್ಥಾನಿಯನ್ನು ಶಾಲೆಗಳಲ್ಲಿ ಕಲಿಸುವರೆಂದ ಕೂಡಲೆ, ಈ ಸ್ವಾಮಿಗೆ ತಲೆಕೆರಗಿತು.' 'ಹಿಂದಿಯನ್ನು ನೋಂದಿಸುವುದಕ್ಕಾಗಿ ತಾನೂ ಇತರರೂ ಕೈಕೊಳ್ಳುವ ಈ ಯುದ್ಧದಲ್ಲಿ ನಮ್ಮ ಜೀವವನ್ನೆ ಅರ್ಪಿಸುವೆವು. ಹೀಗಿರುವುದರಿಂದ ಈ ಧರ್ಮಯುದ್ಧವನ್ನು ಎಲ್ಲಿ ಯಾವಾಗ ಯಾವ ರೀತಿಯಲ್ಲಿ ಪ್ರಾರಂಭಿಸಬೇಕೋ ತಿಳಿಸಿರಿ' ಎಂದು ಶಿವಾನಂದ ಅಡಿಗಳಿಗೆ ಪತ್ರ ಬರೆದನು. 'ಸಿಕ್ಕಲ್ಲೆಲ್ಲ ಈ ಯುದ್ಧವನ್ನು ತೊಡಗುವುದಲ್ಲ, ತಮಿಳುನಾಡಿನ ರಾಜಧಾನಿ ಮದ್ರಾಸಿನಲ್ಲಿಯೇ, ಮುಖ್ಯಮಂತ್ರಿಗಳ ಮತ್ತು ವಿದ್ಯಾ ಇಲಾಖಾ ಮಂತ್ರಿಗಳ ಮನೆಬಾಗಿಲಲ್ಲೇ 'ಪ್ರಾರಂಭಿಸಬೇಕು' ಎಂದೂ ಇವರ ಸೂಚನೆ.

ಅನಂತರ ಸಭೆಗಳಾದುವು. ಸ್ವಾಮಿ ತಾನೇ ಬರೆದ ಒಂದು ಪದ್ಯವನ್ನು ಹಾಡಿ,— ಬರೀ ಮಾತಿನ ಬದಲಾಗಿ ದುಡುಕುವ ಕೃತಿಗಳಾಗಬೇಕೆಂದು ಆ ಪದ್ಯದ ಪಲ್ಲ. ಧೀರರಾದ ತಮಿಳು ಸ್ವಯಂಸೇವಕರು ಮುಂದೆ ಬಂದು, ಮಂತ್ರಿಗಳನ್ನು ಒತ್ತಾಯಪಡಿಸಿ ಆ ಹಿಂದುಸ್ಥಾನೀ ಕಲಿಸುವ ಹುಕುಂ ರದ್ದಾಗುವಂತೆ ಮಾಡಬೇಕೆಂದು ಇದರ ಧ್ಯೇಯ. 'ತಮಿಳರಲ್ಲಿ ಧರ್ಮಯುದ್ಧಕ್ಕೆ .... , ಸಂಸಾರ ಶರಧಿಯನ್ನು ದಾಟುವರು' ಶತ್ರುಗಳನ್ನು ತಿವಿದು ಅವರ ನೆತ್ತರನ್ನು ಕುಡಿದ ಕೀರ್ತಿಯು ಧೀರರು ಹೊಂದಿದ್ದರು, ಅವರ ಕೃತಿಗಳನ್ನು ಧ್ಯಾನಿಸಿ ತಂದುಕೊಳ್ಳಬೇಡವೆ? ... ರಿನ ಹೃದಯದ ಮಂತ್ರಿ ಭೂಮಿಯೂ ಪರಲೋಕವೂ ತೃಣಗೊಂಡರೂ ಅಲುಗದ ಹೃದಯದ ಮಂತ್ರಿ, ಜಗದೀಶನ ಉಪವಾಸವನ್ನು ತಿಳಿದು ವಿಫಲನಾಗುವನೆ' ಇದು ಆ ಪದ್ಯದ ಒಂದು ಸೊಲ್ಲು. ಮಂತ್ರಿಯರಲ್ಲಿ ಹಿಂದಣ ತಮಿಳವೀರರ ಕೃತಿಗಳಂತಹ ರೀತಿಯಿಂದ ಎದುರಿಸಿ ಕಾದಾಡಬೇಕೆಂಬುದೇ ಉದ್ದೇಶ. ಸತ್ಯಾಗ್ರಹವೂ ಸಾಮಾನ್ಯವಲ್ಲವಂತೆ! ಸಾಮದಾನಭೇದ ಎಲ್ಲ ಉಪಾಯಗಳಾಗಿವೆ, ಇನ್ನು ದಂಡೋಪಾಯವೇ ಸಿದ್ಧವೆಂದೂ ಸಾರಿದನು. 'ದಂಡ'ದಲ್ಲಿ 'ಬಲಾತ್ಕಾರ' ವೂ ಇದೆಯಷ್ಟೆ. ಇದರಿಂದ ಸಾರುವಾಗೆಲ್ಲ, ಅತಿ ತುಚ್ಛ ಹೀನ ಅವಾಚ್ಯವಾದ ಬೈಗಳಿಂದ ಭಾಷಣಗಳನ್ನು ತುಂಬಿಸಿರುವನು. ಸ್ವಾಮಿ ಎನ್ನುವವರ ಬಾಯಿಂದ ಈ ಸ್ವರಗಳು ಎಂದೂ ಹೊರಡಲಾರವು. ಅಶ್ಮಧಮನೇ ಹೀಗೆ ಆಡಬಹುದು ವಿನಾ ಇತರ ಯಾವ ಗ್ರಹಸ್ಥನೂ ಇಲ್ಲ. ಸಂಸ್ಥಾನದ ನಾನಾ ಕಡೆಗಳಿಂದ ಈ ಹಿಂದೀ ವಿರುದ್ಧ ಚಳವಳಿಗಾರರು ಸ್ವಯಂಸೇವಕರಾಗಿ ಒಟ್ಟುಗೂಡುವರು. ಇವರು ಹಳ್ಳಿಗಳಲ್ಲಿದ್ದು, ನಗರಗಳಲ್ಲಿನ ಈ ಚಳವಳಿ ಪ್ರಾರಂಭಿಸುವವರ ರೀತಿ ತಿಳಿಯದು. ಈ ಚಳವಳಿಕ್ಕೆ ಸೇರಿದರೇ ಕೀರ್ತಿಯೆಂದು ಅವರ ವಿಶ್ವಾಸ. ಪಾಪದ ಬಡಜನರು ಹೊಂದುವ ದಂಡನೆಗೆ ಇಂಥಹರೇ. ಸ್ವಾಮಿಯರು ಕಾರಣ.' 'ತಮಿಳಿನ ರಕ್ಷಣೆಯೆಂದು ನೆವ ಹಿಡಿದು ಕಾಂಗ್ರೆಸ್ ಮಂತ್ರಿಮಂಡಲವನ್ನೂ ಮುಖ್ಯಮಂತ್ರಿಗಳನ್ನೂ ದೂರುವರು' ಫಲ —ಒಂದು ವರ್ಷ ... ...

★ ಕಾಫಿಯ ಕಥೆ ★

ಈ ದೇಶದಲ್ಲಿನ ಕಾಫಿತೋಟಗಳ ವಿಸ್ತೀರ್ಣವು ಎರಡು ಲಕ್ಷ ಎಕ್ರೆ. ಇದರಲ್ಲಿ ಮೈಸೂರು ಸೇಕಡಾ 62, ಮದ್ರಾಸು ಅಧಿಪತ್ಯ 26, ಕೊಡಗು 20, ಕೊಚ್ಚಿ ತಿರುವಾಂಕೂರು 2 ಎಕ್ರೆಯಾಗಿದೆ. ಪ್ರಪಂಚದ ಕಾಫೀ ಬೆಳೆಯ ಸೇಕಡಾ 60 ಬ್ರೆಜೀಲ್ ದೇಶದಲ್ಲಾಗುವುದು; ಪ್ರಪಂಚದ ಕಾಫಿಯಲ್ಲಿ ನಮ್ಮ ದೇಶದ ಕಾಫಿ ನೂರರಲ್ಲೊಂದೇ ಪಾಲು!

ಸುಮಾರು 2500ರಿಂದ 4000 ಅಡಿಯವರೆಗೆ ಸಮುದ್ರಮಟ್ಟದ ಮೇಲ್ಪಟ್ಟ ಗಟ್ಟದ ಇಳಿಜಾರುಗಳಲ್ಲಿ ಈ ತೋಟಗಳಿವೆ. ಮೈದಾನಾಗಿದ್ದಲ್ಲಿ 5000 ಅಡಿ ಎತ್ತರವಿರಬೇಕು. ನೀಲಗಿರಿ ಶಿವರಾಯ ಬೆಟ್ಟಗಳಲ್ಲಿನ ಕಾಫಿಯು, ಪಳನಿ ಮೈಸೂರು ಕೊಡಗುಗಳಲ್ಲಾಗುವ ಕಾಫಿಗಿಂತ ಉತ್ತಮ.

ಸಂಸ್ಥಾನದಲ್ಲಿ 56987 ಎಕ್ರೆ ಸ್ಥಳದಲ್ಲಿ ಕಾಫಿ ಬೆಳೆವುದು. 1908ರಲಿ 50982 ಎಕ್ರೆ ಮಾತ್ರ ಇತ್ತು. ಚಾತೋಟಗಳು ಮೂವತ್ತು ವರ್ಷಗಳ ಹಿಂದೆ 14625 ಎಕ್ರೆ ಇದ್ದುವು, ಈಗ 75349 ಎಕ್ರೆಯಾಗಿವೆ! ಹೆಚ್ಚಿನ ಕಾಫಿ ಎಲ್ಲ ಅರಬೀ ಕಾಫಿಯ ಜಾತಿಯದು. ಮೈಸೂರಿನಲ್ಲೂ ಪಳನಿಯಲ್ಲೂ ಬೆಳೆಯುವುದು ಬೇರೆ ಜಾತಿ; ಇದರ ಬೆಲೆ ಅರೆವಾಸಿ.

ಸಂಸ್ಥಾನದಲ್ಲಿ ಒಟ್ಟು ಬೆಳೆವ ಕಾಫಿ ಸುಮಾರು 4400 ಖಂಡಿ, ದೇಶದಲ್ಲಿ ಇದು 21,600 ಖಂಡಿ. ಇದಲ್ಲದೆ, ನಮಗೆ ಸುಮಾರು 320 ಖಂಡಿ ಪರದೇಶಗಳಿಂದ ಬರುವುದು. ಹೆಚ್ಚಾಗಿ ಮೈಸೂರಿಂದ ಗೋವೆಗೆ ಹೋದ ಕಾಫಿ ಇತರ ದೇಶಕ್ಕೆ ರಫ್ತಾಗುವುದಿತ್ತು. ಈಗ ಮೈಸೂರು ಮಂಗಳೂರುಗಳೊಳಗೆ ಲಾರಿ ಓಡಾಟವಿದೆ, ಹೀಗಾಗಿ ಗೋವೆಗೆ ಹೋಗುವುದು ಕಡಮೆ. ಮೈಸೂರು ಕೊಡಗುಗಳಿಂದ ಸಂಸ್ಥಾನದೊಳಗೆ ರಫ್ತಾಗುವುದು ಸರಾಸರಿ 9700 ಖಂಡಿ. ಪರದೇಶಗಳಿಗೆ ಸಂಸ್ಥಾನದಿಂದ ರಫ್ತಾದುದು ಹಿಂದಣ ವರ್ಷ 10688 ಖಂಡಿ; ಇದರ ಬೆಲೆ 101 ಲಕ್ಷ ರೂಪಾಯಿ. ಕಳೆದ ವರ್ಷ ಇದು 6658 ... ಇದರ ನೂರರಲ್ಲೊಂದು ಪಾಲು ಫ್ರಾನ್ಸಿಗೆ ಹೋಗುವುದು. ಇಂಗ್ಲೆಂಡಿಗೆ ಸುಮಾರು 1500 ಖಂಡಿ ಮಾತ್ರ. ಕಳೆದ ವರ್ಷ ಫ್ರಾನ್ಸಿಗೆ ಹೋದುದೂ ಬರೀ 2000 ಖಂಡಿ ಮಾತ್ರ.

ಮೈಸೂರ ಕಾಫಿ ಹೆಚ್ಚಾಗಿ ಇಂಗ್ಲೆಂಡಿಗೆ ಸಾಗುವುದು. ಈ ದೇಶದಿಂದ ಪರದೇಶಗಳಿಗೆ ಹೋಗುವ ಕಾಫಿಯು ಸೇಕಡಾ 90ರಷ್ಟು ನಮ್ಮ ಸಂಸ್ಥಾನದಿಂದಲೇ ರಫ್ತಾಗುವುದು. ರಫ್ತಿನಲ್ಲಿ ಸೇಕಡಾ 75ರಷ್ಟು ಮಂಗಳೂರಿಂದಲೇ.

ಕಾಫಿ ಬೀಜವು ಸುಮಾರು 15000 ಖಂಡಿ ಈ ಸಂಸ್ಥಾನದ ಉತ್ಪನ್ನ ಮತ್ತು ಆಮದುಗಳು; ಇದರಲಿ ಪರದೇಶಗಳಿಗೆ 9600 ಖಂಡಿ ರಫ್ತಾಗಿ, ಸಂಸ್ಥಾನದಲ್ಲಿ ಮೆ. 500 ಖಂಡಿ ಉಪಯೋಗವಾಗುವುದು.

ಹಂಡ್ರೆಡ್ವೇಟಿಗೆ 8ರಿಂದ 12 ರೂಪಾಯಿ ಬೆಲೆ ಬಂದಿತ್ತು. 1926ರಲ್ಲಿ ಮೇಲು ಕಾಫಿಗೆ ರೂ. 37ರಂತೆ (ಮಣಕ್ಕೆ) ಇದ್ದ ಬೆಲೆ 1934ರಲ್ಲಿ 11ಕ್ಕೆ ಇಳಿದು, 1936ರಲ್ಲಿ 10 ಆಗಿ, ಈಗ 11 ಅಥವಾ 11½ಗೆ ಬಂದಿದೆ.

ಸಂಸ್ಥಾನದಲ್ಲಿ ತಲಾ ಮೂರು ಔನ್ಸು ಕಾಫಿ ಖರ್ಚಾಗುವುದು (ವರ್ಷಕ್ಕೆ!) ಮದ್ರಾಸು ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಇದರ ಖರ್ಚು ಏರುತ್ತದೆ. ಉತ್ತರಕ್ಕೆ ಹೋದಂತೆ ಖರ್ಚು ಇಲ್ಲ. ಹೀಗಾಗಿ ಕಾಫಿಗೆಲ್ಲ ಯುರೋಪೀ ಗಿರಾಕಿ, ಅಮೇರಿಕವೂ ಕೆನಡವೂ ಈ ತಳ್ಳಿಗೆ ಬಂದಿಲ್ಲ. ಬೆಲೆಯು ಕೆಲವೇಳೆ ಹಂಡ್ರೆಡ್ವೇಟಿಗೆ 5 ರೂಪಾಯಿಗೆ ... ಗಳೊಳಗೆ ಇಳಿವುದುಂಟು.

ಕಾಫಿ ಜೊತೆಗೆ 'ಚಿಕೋರಿ'ಯನ್ನು ಬೆರಸುವರು. 25–45 ... (ನೂರರಲ್ಲಿ) ಇದೇ ಹುಡಿ ಸೇರುವುದುಂಟು. ಈ ಬೀಜವನ್ನು ಮಾರದಂತೆ ಮಾಡಿ, ಉತ್ತರ ಹಿಂದುಸ್ಥಾನದಲ್ಲಿ ಕಾಫಿಯ ಉಪಯೋಗ ಹೆಚ್ಚಿದರೆ, ಕಾಫಿಯ ಬೆಲೆ ಏರುವುದು. ಹಲವು ಪ್ರಾಂತ್ಯಗಳಲ್ಲಿ ಕಾಫಿ ಹುಡಿ ಮಾಡುವುದು ಗೊತ್ತೇ ಇಲ್ಲ. ಇಲ್ಲಿಗೆ ಹುರಿದು ಮಾಡಿದ ಹುಡಿಯನ್ನು ಪೆಟ್ಟಿಗೆಗಳಲ್ಲಿಟ್ಟು ಮಾರಾಟ ಮಾಡಿಸುವರು. ...

ಒಂದೆರಡು ಮಾತು

ಸರಕಾರದ ಹುದ್ದೆದಾರರಲ್ಲಿ ಕೆಲವರು ಆಕ್ಟಿಂಗ್ ಕೆಲಸ ಮುಗಿದು ಮೂಲ ಹುದ್ದೆಗೆ ಸೇರುವ ಅವಕಾಶದಲ್ಲಿ, ದೀರ್ಘಕಾಲದ ರಜಾ ಪಡೆದು, ಆಕ್ಟಿಂಗ್ ಹುದ್ದೆಯ ಸಂಬಳವನ್ನು ರಜಾ ಕಾಲದಲ್ಲಿ ಅನುಭವಿಸಿ, ಮೂಲ ಹುದ್ದೆಗೆ ಸೇರುವಾಗ ಕೆಳತರಗತಿಯ ಸಂಬಳವಿರುವ ಪ್ರಮಾದವನ್ನು ತಪ್ಪಿಸಿಕೊಳ್ಳುವ ನಾನಾ ಸಂದರ್ಭಗಳು ಸರಕಾರಕ್ಕೆ ತಿಳಿದುಬಂದಿರುವ ಕಾರಣ, ಈ ವಿಲಾಸವು ಜನತೆಯ ಹಿತಕ್ಕಲ್ಲವಾದುದರಿಂದ, ಇಂತಹ ಹುದ್ದೇದಾರರಿಗೆ ರಜಾ ಕೊಡುವುದನ್ನು ತಡೆಯಬೇಕಾಗಿದೆ ಎಂದು ಸರಕಾರದ ವಿಮರ್ಶೆ.

ಂ ಂ ಂ ಂ

ಶ್ರೀ। ಬರ್ನಾರ್ಡ ಅಲುವಿಹರೇ ಎಂಬವರು ಆಕ್ಟಿಂಗ್ ಕೃಷಿ ಇಲಾಖಾ ಮಂತ್ರಿಗಳು; ನೇಮಕ ಹೊಂದಿದವರು ಸಿಲೋನ್ ಗವರ್ನರರ ದರ್ಬಾರಿನಲ್ಲಿ ಖಾದೀ ಧೋತರ ಮತ್ತು ವೇಸ್ಟ್ ಕೋಟಿನಲ್ಲೇ ಹಾಜರಾದರು! ಕಾಂಗ್ರೆಸಿನ ಕ್ರಮವು ಲಂಕಾನಗರವನ್ನೂ ನುಗ್ಗಿತು.

ಂ ಂ ಂ ಂ

ಬರ್ಮಾ ಎಣ್ಣೇ ಕಂಪೆನಿಯ ದೊಡ್ಡ ಸುಗ್ರಾಣದಲ್ಲಿ ಹತ್ತು ಲಕ್ಷ ರೂಪಾಯಿ ಬೆಲೆಯ 1500 ಖಂಡಿ ಮೇಣ ಶೇಖರವಾಗಿತ್ತು. ಇದು ಇಂಗ್ಲೆಂಡಿಗೆ ರವಾನೆಯಾಗಲಿರುವಾಗಲೇ, ಮೊನ್ನೆ ರಾತ್ರಿ ಬೆಂಕಿ ಹತ್ತಿ ಎಲ್ಲ ನೀರಾಗಿ ಹರಿದು ಹಾಳಾಗಿದೆ! ಎಷ್ಟು ತಾಸು ಪ್ರಯತ್ನಿಸಿದರೂ ಬೆಂಕಿ ನಂದಿಸಲಾಗಲಿಲ್ಲ. ಹಲವು ಮೈಲು ದೂರಕ್ಕೆ ಇದರ ಜ್ವಾಲೆಗಳ ಬೆಳಕು ಕಂಡು ಬಂದಿತ್ತು. ಕಾರಣವೇನೋ? ಇನ್ಯಾರಾದುದೇ?

ಂ ಂ ಂ ಂ

ಲಾಹೋರು ಜಿಲ್ಲಾ ಸಾನಹಳ್ಳಿಯಲ್ಲಿ ಒಂದು ಗಾಡಿ ಹೋಗುವಾಗ, ಹೆಣ್ಣು ಗಂಡು ಕೂಡಿ 20 ಮಕ್ಕಳ ಸಮೇತವಾಗಿ ಆ ಗಾಡಿಯು ಹೊಳೆಯ ಕಾಲುವೆಯೊಳಗೆ ಬಿತ್ತು. ಬಿದ್ದವರ ಕೂಗನ್ನು ಕೇಳಿ, ಆ ದಾರಿಯಾಗಿ ಹೋಗುತ್ತಿದ್ದವನು ತನ್ನ ತಲೆಯ ರುಮಾಲನ್ನು ಬಿಚ್ಚಿ ನೀರಿಗೆ ಇಳಿಸಿದನು. ಒಂಭತ್ತು ಮಂದಿ ಅದನ್ನು ಹಿಡಿದುದರಿಂದ ಅವರನ್ನು ಬದುಕಿಸಲಾಯಿತು; ಉಳಿದ ಹನ್ನೊಂದು ಪ್ರವಾಹದ ಸೆಳೆತಕ್ಕೆ ಜಲಸಮಾಧಿ ಹೊಂದಿದರು. ಪಂಜಾಬೀ ರುಮಾಲಿನ ಪುಣ್ಯವೆಷ್ಟಿದೆ!

ಂ ಂ ಂ ಂ

ಫ್ರೆಂಚರ ಇಂಡೋ ಚೀನಾ ವಸಾಹತದಲ್ಲಿ 20000 ಹೊಸ ಸೈನಿಕರನ್ನು ಕೂಡಿಸಿಕೊಳ್ಳಬೇಕೆಂದು ಫ್ರೆಂಚ ಸರಕಾರದ ಅಪ್ಪಣೆಯಾಗಿದೆ. ಈಗ ಅಲ್ಲಿರುವ ಸೇನೆ ಸಾಲದೆಂದೂ, ಯುದ್ಧವಾದಲ್ಲಿ ಮೋಸವಾಗದಂತೆ- ಹೈನಾನಿನಲ್ಲಿ ಫ್ರೆಂಚರ ಸಮೀಪಕ್ಕೆ ಜಪಾನು ಆಕ್ರಮಿಸಿ ನಿಂತಿರುವುದರಿಂದ-ಈ ಹೊಸ ದೇಶೀಯ ಸೇನೆ ಅಗತ್ಯವೆಂದೂ ಸಾರಲಾಗಿದೆ. ಚೀನವನ್ನು ನುಗ್ಗಿರುವ ಜಪಾನಿಯರ ದರ್ಪವನ್ನು ನೋಡಿ, ದೇಶರಕ್ಷಣೆಯೇ ಪರಮೋಪಾಯವೆಂದು ದೇಶೀಯರು ಸೇನೆಗೆ ಸೇರುತ್ತಿರುವರು. ಫ್ರೆಂಚ ಸೇನೆಯಲ್ಲಿ ಫ್ರಾನ್ಸಿಗೇ ಬೇಕಾಗುವ ಕಾರಣ, ಇಲ್ಲಿ ವಿಶೇಷ ಸೇನಾ ಸ್ಥಾಪನೆಯಾಗುವುದು.

—ಭಾರತೀಯರದೇ ಸೈನ್ಯವೆಲ್ಲಿದೆ? ಇಲ್ಲಿ ಸೇನೆಗೆ ಸೇರುವ ಯೋಗ್ಯತೆಯು ಜನರೇ ಕಡಮೆಯಂತೆ!

ಂ ಂ ಂ ಂ

ಜುಲೈ 7ನೇ ತಾರೀಕಿಗೆ ಚೀನಾ ಜಪಾನು ಯುದ್ಧಕ್ಕೆ ಪ್ರಾರಂಭವಾಗಿ ಒಂದು ವರ್ಷವಾಯಿತು. "ಒಂದು ಅಂಗುಲ ಚೀನಾ ಪ್ರದೇಶ, ಒಬ್ಬನೇ ಚೀನಿಯನು ಉಳಿದರೂ, ಮುಕ್ತಾಯ [illegible] ವುದೇನಿದೆಯೋ ಬರಲಿ, ನಮ್ಮ ನಿರ್ಧಾರ ಇಷ್ಟಿದೆ" ಎಂಬುದೇ ಚೀನಾ ಸೈನ್ಯಾಧ್ಯಕ್ಷ ಚಿಯಾಂಗ್ ಕೈಷಾಕನ ಸಂದೇಶ.

ಂ ಂ ಂ ಂ

ಬೊಂಬಾಯಿ ಮ್ಯುನಿಸಿಪಾಲಿಟಿಯ ಕಮಿಶನರರು, ಮ್ಯುನಿಸಿಪಲ್ ಶಾಲೆಗೆ ಬರುವ ದುರ್ಬಲ ಬಾಲಕರ ಹಿತಾರ್ಥವಾಗಿ ಹಾಲನ್ನೊದಗಿಸುವರೆ, ಒಂದು ವರ್ಷಕ್ಕೆ 81000 ರೂಪಾಯಿ ಖರ್ಚಾಗಬಹುದೆಂದು ಲೆಕ್ಕಹಾಕಿ, ಅಷ್ಟು ಹಣವನ್ನು (ಮೊದಲೇ ಪ್ರತ್ಯೇಕಿಸಿದ 50000 ರೂಪಾಯಿಗಳಿಂದ) ಈಗ ಹಾಲು ಸರಬರಾಯಿಗೆ ವಿನಿಯೋಗಿಸುವರು. ಹೊಸತಾಗಿ ದಾಖಲಾಗುವ ಮಕ್ಕಳನ್ನು ಪರೀಕ್ಷಿಸಿ, ಅವಕ್ಕೆ ಬೇಕಾದಷ್ಟು ಚೇತನವಿಲ್ಲವೆಂದು ತಿಳಿದೊಡನೆ ಈ ಹಾಲನ್ನು ಕೊಡಿಸುವರು. ಮೊದಲನೆಯಿಂದ ಎರಡನೆ ಹೀಗೆ ತರಗತಿವಾರಾಗಿ ಮಕ್ಕಳಿಗೆ ಆಹಾರವೊದಗಿಸುವರು.

ಂ ಂ ಂ ಂ

ಕಾರೈಕುಡಿ ಮ್ಯುನಿಸಿಪಾಲಿಟಿಯಲ್ಲಿ ಅದರ ಕಮಿಶನರರೂ, ಮ್ಯುನಿಸಿಪಲ್ ಶಾಲೆಗಳಲ್ಲೋದುವ ಮಕ್ಕಳಿಗೆ ಹಾಲು ಕುಡಿಸುವರೆ ಸಾಕಷ್ಟು ಹಣವಿಲ್ಲದರಿಂದ, ಅದರ ಬದಲು 'ಕೆಲ್ಸಿಯಮ್ ಲೆಕ್ಟೇಟ್'—ಹಾಲಿನಲ್ಲಿರುವಷ್ಟೆ ಸುಣ್ಣವಿರುವ ಲವಣವನ್ನು—ಮಕ್ಕಳಿಗೆ ಸಿಗುವಂತಾಗಬೇಕೆಂದೂ, ಮಗುವಿಗೆ ಒಂದು ತಿಂಗಳಿಗೆ ಒಂಬತ್ತು ಪೈ ಮಾತ್ರ ಇದರಿಂದ ಖರ್ಚು ತಗಲುವುದೆಂದೂ 750 ಮಕ್ಕಳಿಗೆ ಒಂದು ವರ್ಷದ ವರೆಗೆ ದಿನಾಲೂ ಈ ಬಗೆಯ ಪೋಷಕದ್ರವ್ಯ ಒದಗಿಸಲು ರೂ. 375 ತಗಲುವುದೆಂದೂ ಹಾಗೆ ಹಣ ಸೆಂಕ್ಷನಾಗಬೇಕೆಂದು ತಿಳಿಸಿದ್ದಾರೆ.

ಂ ಂ ಂ ಂ

ಇಪ್ಪತ್ತು ಮಕ್ಕಳಿಗೆ ಸಾಕಾಗುವಷ್ಟು ಹಾಲಿನ ಪೋಷಕ ದ್ರವ್ಯವನ್ನು ಒಂದು ತಿಂಗಳ ವರೆಗೆ ಒಂದು ರೂಪಾಯಿಯಲ್ಲಿ ಒದಗಿಸಬರುವ ಕಾರಣ, ಎಲಿಮೆಂಟರಿ ಶಾಲೆಗಳಲ್ಲಿ ಇದರ ಉಪಯೋಗವು ಬಹಳ ಚೆನ್ನಾಗಿ ಹರಡಬೇಕಾಗಿದೆ. ಮಕ್ಕಳ ತೂಕವೂ, ಎತ್ತರವೂ, ಹೆಚ್ಚುವುದಾಗಿ ಇದನ್ನು ಉಪಯೋಗಿಸಿದ ವೈದ್ಯರೇ ತಿಳಿಸಿದ ಅನುಭವವಿದೆ. ನಮ್ಮ ಮ್ಯುನಿಸಿಪಾಲಿಟಿ ಕೌನ್ಸಿಲು ಇದನ್ನು ಆಲೋಚಿಸಲೇ ಬೇಕು. ಕೆನರಾ ಹೈಸ್ಕೂಲಿನ ಅಧಿಕಾರಿ

★ ಕ್ವಿನೀನು-ಪಂದ್ಯಾಟಗಳು ★

ಈ ಜಗತ್ತಿನಲ್ಲಿ ನಾವು ಸಂಸಾರವನ್ನು ಅತಿ ಯಶಸ್ವಿಯಾಗಿ ನಡೆಯಿಸಿಕೊಂಡು ಬರುವಂತೆ ನಮ್ಮಲ್ಲಿ ಹೆಚ್ಚು ಶಕ್ತಿ ಚೈತನ್ಯಗಳು ಬರುವಂತೆ, ನಮ್ಮ ಆರೋಗ್ಯಾಭಿವೃದ್ಧಿಯಾಗುವಂತೆ ನಾವು ವಿನೋದ ಆಟ ಪಂದ್ಯಾಟಗಳಲ್ಲಿ ಭಾಗವಹಿಸಬೇಕು.

ಕೆಲಸದ ತರುವಾಯ, ನಿಯಮಗಳಿಗನುಗುಣವಾಗಿ ಆಟಪಂದ್ಯಾಟಗಳಲ್ಲಿ ಭಾಗವಹಿಸುವುದೆ, ಈ ಧ್ಯೇಯಸಾಧನೆಯ ಮುಖ್ಯ ಉಪಾಯವು. ಆಟ ಪಂದ್ಯಾಟಗಳಿಂದಲೆ ನಮ್ಮ ಜೀವನವನ್ನು ಹರ್ಷಗೊಳಿಸಬಹುದು.

ನಮ್ಮಲ್ಲಿ ತರುಣರು ಆಟಪಂದ್ಯಾಟಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿ ಚಟುಗಳಿಗೂ ಈ ಕಡೆಗೆ ಲಕ್ಷ್ಯಕೊಡುವಂತೆ ನಮ್ಮ ಸೂಚನೆಯಿದೆ.

ಂ ಂ ಂ

ಹೊಸಪೇಟೆ ಮ್ಯುನಿಸಿಪಲ್ ಹೈಸ್ಕೂಲಿನಲ್ಲಿ ಪಾಠಗಳನ್ನು ಬೆಳಿಗ್ಗೆ ಪ್ರಾರಂಭಿಸುವರು. ಅದು ಕೂಡದೆಂದು 10 ಗಂಟೆಗೇ ಶಾಲಾರಂಭವಾಗಬೇಕೆಂದೂ ವಿದ್ಯಾರ್ಥಿಯರು 400ರಲ್ಲಿ 390 ಮಂದಿ ಶಾಲೆಗೆ ಬಾರದೆ, ಬರುವವರನ್ನೂ ಬರಬಿಡದೆ ಮುಷ್ಕರ ಹಾಕಿದ್ದಾರೆ. ಅಲ್ಲೇನೂ ಮಳೆಯಿಲ್ಲ, ಆದರೂ ತಂಪಾದ ಬೆಳಗ್ಗೆ ಮೈ ಹುಶಾರಾಗಿರುವಾಗ ಪಾಠ ಕಲಿಯಲು ಮನಸ್ಸೊಪ್ಪದು. ನಡುಬಿಸಿಲ ಧ್ರುವನ ತಪಸ್ಸು ಬೇಕಾಗಿದೆ! ಗುರುಕುಲಕ್ಕೂ ಸ್ಕೂಲಿಗೂ ಇರುವ ಭೇದವಿದು.

ಂ ಂ ಂ ಂ

ಮಲಬಾರಿನ ಜಿಲ್ಲಾ ಬೋರ್ಡು ವೈನಾಡು ತಾಲೂಕಿನ ಎಂಟು ಶಾಲೆಗಳಲ್ಲಿ ಜೇನುನೊಣ ಸಾಕುವ ವೃತ್ತಿಯನ್ನು ಮಕ್ಕಳಿಗೆ ಕಲಿಸಲು ಏರ್ಪಾಡು ಮಾಡಿರುವುದು. ಒಂದೊಂದು ತಾಲೂಕಿನಲ್ಲೂ ಒಂದೊಂದು ಇಂತಹ ಶಾಲೆ ತೆರೆಯುವರು. ಇದಕ್ಕಾಗಿ 200 ರೂಪಾಯಿ ಸೆಂಕ್ಷನಾಗಿದೆ. ತೋಟವಿರುವ ಶಾಲೆಗಳಲ್ಲೆಲ್ಲ ಈ ವೃತ್ತಿ ಕಲಿಸುವುದು ಸುಲಭ.

ಂ ಂ ಂ

ಮದ್ರಾಸು ಸಂಸ್ಥಾನದ ಪ್ರಾಥಮಿಕ ಶಿಕ್ಷಣ ಸುಧಾರಣೆಯನ್ನು ಜುಲೈ ತಾ. 30ರಲ್ಲಿ ಮದ್ರಾಸು ಮುಖ್ಯ ಮಂತ್ರಿಗಳು ಸೇರುವ ಸಭೆಯಲ್ಲಿ ನಿರ್ಧಾರಮಾಡುವರು.

ಚಟಿಕೆಯನ್ನು ನಡೆಯಿಸುವ ಕುರಿತು ನಮ್ಮನ್ನು ನಾವು ಹೊಗಳಿಕೊಳ್ಳಬೇಕು.

ಆಟ ಪಂದ್ಯಾಟಗಳಲ್ಲಿ ಉತ್ತಮ ಫಲಿತಾಂಶಗಳು ದೊರಕಬೇಕಾದರೆ ಒಳ್ಳೆ ತರಬೇತು ಒಂದು ಅವಶ್ಯ. ಹೆಚ್ಚಿನ ಶ್ರಮ ನಮ್ಮ ದೇಹದ ಮೇಲೆ ಹಾಕಬೇಕಾದರೆ, ನಾವು ಆ ದೇಹದ ಕುರಿತು ಹೆಚ್ಚಿನ ಜಾಗ್ರತೆ ತೆಗೆದುಕೊಳ್ಳಬೇಕೆಂದು ಪ್ರವೀಣರೊಬ್ಬರು ಹೇಳಿದ ಪ್ರಕಾರ ಪಂದ್ಯಾಟಗಳಲ್ಲಿ ಭಾಗವಹಿಸುತ್ತಿರುವಾಗ ನಾವು ಉತ್ತಮ ಆರೋಗ್ಯದಲ್ಲಿರುವುದುತ್ತಮ.

ಆದುದರಿಂದ ತರಬೇತಿನ ಸಮಯ ನಾವು ನಮ್ಮ ಆರೋಗ್ಯದ ಕುರಿತು ಬಹಳ ಜಾಗರೂಕತೆಯಿಂದ ಇರಬೇಕಾಗುತ್ತದೆ. ಆದರೆ ಶೀತವು ಹೆಚ್ಚಾಗಿದ್ದು, ಯಾವಾಗಲೂ ಜ್ವರದ ಪೀಡೆಯಿರುವ ನಮ್ಮ ಈ ದೇಶದಲ್ಲಿ ಹಾಗೆ ಆರೋಗ್ಯದ ರಕ್ಷಣೆ ಮಾಡಿಕೊಳ್ಳಲು ಎಷ್ಟು ಕಷ್ಟವೆನಿಸುತ್ತದೆ.

ಆರೋಗ್ಯಕ್ಕೆ ಆಟಪಂದ್ಯಾಟಗಳು ಅಗತ್ಯ ಮತ್ತು ಪ್ರಸಿದ್ಧನಾದ ಆಟಗಾರನೊಬ್ಬನಿಗೆ, ದೇಹಾಲಸ್ಯದಿಂದ ಶಯ್ಯೆ ಹಿಡಿಯುವುದೆಂದರೆ ಒಂದು ಮಹಾ ಕೊರತೆ ಎಂದು ಪರಿಗಣಿಸಬೇಕಾಗುವುದು.

ಚಳಿಗಾಲದಲ್ಲಿ ಆಟಪಂದ್ಯಾಟ ರಂಗಸ್ಥಳದ ಮೇಲೆ ಎಲ್ಲರೂ ಅತ್ಯಂತ ಹರ್ಷಚಿತ್ತದಿಂದ ಇರುವ ನೋಟವು ಎಷ್ಟು ಆನಂದಕರವೆನಿಸುವುದು-ಇನ್‌ಫ್ಲುಯೆಂಜಾ ಶೀತ ಇತ್ಯಾದಿಗಳಿಲ್ಲದೆ; ಅವರ ಮುಖಕಮಲಗಳನ್ನು ನೋಡುವುದೆಂದರೆ ಅತ್ಯಂತ ಸಂತೋಷಕರವೆನಿಸುವುದು.

ಅನೇಕರು ಅದರಲ್ಲೂ ತರುಣರು, ಶೀತ ಇತ್ಯಾದಿಗಳ ಕುರಿತು ನಿರ್ಲಕ್ಷ್ಯಮಾಡುವುದುಂಟು. ಅದು ತನ್ನಷ್ಟಕ್ಕೆ ತಾನೆ ಗುಣವಾಗುವುದೆಂದು ಅವರು ಎಣಿಸುವುದುಂಟು. ಇನ್‌ಫ್ಲುಯೆಂಜಾ ಮತ್ತು ಶೀತದ ನಿರ್ಲಕ್ಷದಿಂದಾಗುವ ಭೀಕರ ಪರಿಣಾಮಗಳ ಕುರಿತು ಇವರು ಅಲಕ್ಷ್ಯಮಾಡುವರು.

ಪಂದ್ಯಾಟಗಾರರು ಮತ್ತು ಆಟಪ್ರೇಮಿಗಳು, ಯಾವಾಗಲೂ ಎಲ್ಲಾ ತರದ ಹವಾಗಳನ್ನು ಎದುರಿಸುವವರು,—ಇವರು ದಿನಾಲೂ ಮೂರುಗ್ರೇನು ಕ್ವಿನೀನ ಪ್ರಕಾರ ಸೇವಿಸುವುದುತ್ತಮ. ಈ ರೀತಿಯಲ್ಲಿ ಅವರು ಇನ್‌ಫ್ಲುಯೆಂಜಾ ಇತ್ಯಾದಿ ರೋಗಗಳಿಗೆ ತುತ್ತಾಗದೆ ಪಂದ್ಯಾಟಗಳಲ್ಲಿ ಭಾಗವಹಿಸಬಹುದು ಪ್ರೇಕ್ಷಕರಾಗಬಹುದು.

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು. ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು. ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಲೋಧ್ರದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ಐ. ಸಿ. ಯಸ್. ಆಫೀಸರನ ಅನುಪಮ ಸಾಹಸ

ಕಳೆದ ಎಪ್ರಿಲ್ ತಿಂಗಳ ಅದಿಕಾಲ ನಮ್ಮ ದೇಶದ ಪ್ರಾಮುಖ್ಯವಾದ್ದೊಂದು ನಗರದಲ್ಲಿ ಹಿಂದೂ ಮುಸಲ್ಮಾನ ದಂಗೆಯಾಗಲಿಕ್ಕಿತ್ತು. ವರ್ತಮಾನವು ಜಿಲ್ಲಾಧಿಕಾರಿಯ ಕಿವಿಗೆ ಮುಟ್ಟಿತು. ಅವರು ಅನುಪಮ ಸಾಹಸವನ್ನು ತೋರಿಸಿ ದಂಗೆಯಾಗಲಿಕ್ಕೆ ಬಿಡಲಿಲ್ಲ. ಅದರಿಂದ ಸಾವಿರಾರು ಮಂದಿಯು ಕೊಲೆಯಾಗುವದು, ಸಾವಿರಾರು ಮಂದಿ ಗಾಯಗೊಂಡು ಚಿಕಿತ್ಸಾಲಯಗಳಲ್ಲಿ ನರಳುವದು, ಮತ್ತು ಧರ್ಮದ ಹೆಸರಿನಲ್ಲಿ ಅಧರ್ಮಾಚರಣೆಯಾಗುವದು ನಿಂತಿತು. ಐ ಸಿ ಯಸ್ ಆಫೀಸರವರ್ಗದ ಕೀರ್ತಿಯು ಉಜ್ವಲವಾಗಿ ಬೆಳಗಿತು.

ಎಪ್ರಿಲ್ ತಿಂಗಳ 9ನೆ ತಾರೀಕಿನ ದಿನ ಮಧ್ಯಾಹ್ನ 1 ಘಂಟೆಯಾಗಿತ್ತು. ಜಿಲ್ಲಾಧಿಕಾರಿಯು ತನ್ನ ಜಿಲ್ಲೆಯ ಮುಖ್ಯನಗರದಲ್ಲಿ ಹಿಂದುಮುಸಲ್ಮಾನದಂಗೆಯಾಗಲಿಕ್ಕಿದೆಎಂದು ಕೇಳಿ ಉಳಿದ ಎಲ್ಲಾ ಕೆಲಸ ಹಾಗೆಯೇ ಬಿಟ್ಟು ಬಿಟ್ಟು ಗೊಂದಲದ ಸ್ಥಾನಕ್ಕೆ ಹೋಗಿ ಮುಟ್ಟಿದನು. ಸಾವಿರಾರು ಮಂದಿ ಮುಸಲ್ಮಾನರು ನವೀನವಾಗಿ ಕಟ್ಟಿಸುತಿದ್ದ ಒಂದು ಮಸೀದಿಯ ಹತ್ತಿರ ಲಾಠಿ ಕತ್ತಿಗಳನ್ನು ಹಿಡಕೊಂಡು ಹಿಂದೂ ಮೆರವಣಿಗೆಯ ಮೇಲೆ ಬೀಳಲಿಕ್ಕೆ ಸಿದ್ಧರಾಗಿ ನಿಂತಿದ್ದರು. ದೇಶದ ಕಾಯಿದೆ ಮತ್ತು ಮಾನ್ಯೋಚಿತ ನ್ಯಾಯ ನೀತಿಗನುಸಾರ, ಮೆರವಣಿಗೆಯನ್ನು ತಡೆಯುವ ಅಧಿಕಾರವು ಮುಸಲ್ಮಾನರಿಗೆ ಇರುವದಿಲ್ಲವೆಂದೂ, ಅವರು ಧಾರ್ಮಿಕರಾಗಿರುವದು ನಿಜವಾದರೆ, ಮಸೀದಿಯನ್ನು ಕಟ್ಟುತಿದ್ದ ಸ್ಥಳದಲ್ಲಿ ನಮಾಜು ಕೂಡ್ತಿದ್ದಾಗ, ಹಿಂದೂ ಮೆರವಣಿಗೆ ಹೋಗುವ ಸಂದರ್ಭದಲ್ಲಿ ಹಿಂದುಗಳು ವಾದ್ಯಘೋಷ ಕೋಲಾಹಲ ಮಾಡದೆ ಶಾಂತರಾಗಿ ಹೋಗುವಂತೆ ಮಾಡುವೆನಾಗಿಯೂ ಎಷ್ಟು ಹೇಳಿದರೂ ಕೂಡ ಮುಸಲ್ಮಾನರು ಜಿಲ್ಲಾ ಅಧಿಕಾರಿಯ ಮಾತುಗಳಿಗೆ ಕಿವಿಕೊಡಲಿಲ್ಲ.

ರಾತ್ರಿ ಒಂಬತ್ತು ಘಂಟೆಯ ಸ್ವ[illegible]ಯ ಹಿಂದೂ ಮೆರವಣಿಗೆಯು ಮಸೀದಿಗೆ ಸ್ವಲ್ಪ ದೂರದ ತನಕ ಹೊರಟುಬಂದಿತ್ತು. ದಂಗೆಯಾಗುವದೆಂದು ಹಿಂದೂಗಳಿಗೂ ತಿಳಿದಿತ್ತು. ಅವರೂ ಸಂಪೂರ್ಣ ಸನ್ನದ್ಧರಾಗಿ ಬಂದಿದ್ದರು. ಇಕ್ಕಡೆಗಳಲ್ಲಿಯೂ 25000 ಜನರಿಗೆ ಮೀರಿ ಸೇರಿದ್ದರು. ಧರ್ಮದ ಹೆಸರಿನಲ್ಲಿ ತಮ್ಮ ಸಂಘಪರಾಕ್ರಮಗಳನ್ನು ಪ್ರದರ್ಶಿಸಲಿಕ್ಕೆ ಅವರು ಸಂಪೂರ್ಣ ಸಿದ್ಧರಾಗಿದ್ದರು. ಹಿಂದೂಗಳದ್ದು ನ್ಯಾಯ ಪಕ್ಷವಾಗಿತ್ತು. ಮುಸಲ್ಮಾನರು ಅನ್ಯಾಯದ ಕಡೆಗಿದ್ದರು. ಪೋಲೀಸ ಸಹಾಯವು ಕೂಡಲೇ ಒದಗಿ ಬರ ಸಾಧ್ಯವಿರಲಿಲ್ಲ. ಏನುಮಾಡಬೇಕೆಂದು ಜಿಲ್ಲಾಧಿಕಾರಿಯು ಆಲೋಚನೆಯಲ್ಲಿ ಬಿದ್ದನು.

ಪರಸ್ಪರ ಸಂಘರ್ಷವಾಗುವ ಸಮಯವು ದೂರಕ್ಕೆ ಹೋಗಲೆಂದು ಅವನು ಒಂದು ಉಪಾಯ ಮಾಡಿದನು. ಹಿಂದೂಗಳಿದ್ದಲ್ಲಿಗೆ ಹೋಗಿ 'ನಿಮ್ಮದು ನ್ಯಾಯಪಕ್ಷವಾಗಿದೆ. ಮೆರವಣಿಗೆ ಹೋಗಲಿಕ್ಕೆ ಸ್ವಲ್ಪ ತಡೆಯಿರಿ. ಪೋಲೀಸ ಸಹಾಯವು ಒದಗಲಿ' ಎಂದು ಹೇಳುತ ನಿಂತನು. ತನ್ಮಧ್ಯ ಮುಸಲ್ಮಾನರು ಸುಮ್ಮನೆ ಕಾಲಹರಣೆಯಾಗುವದನ್ನು ನೋಡಿ ಬೇಸರಪಟ್ಟು ಮನೆಗೆ ಹೋಗಬಹುದೆಂದು ಅವನು ಆಲೋಚಿಸಿದ್ದನು. ಇಷ್ಟಾಗುವಾಗ ರಾತ್ರಿ 10 ಘಂಟೆ ಕಳೆದು 11 ಆಗಲಿಕ್ಕಾಯಿತು. ಆದರಿಂದ ಹಿಂದೂಗಳಲ್ಲಿ ಅಸಮಾಧಾನಕ್ಕೆ ಆರಂಭವಾಯಿತು. ಜಿಲ್ಲಾಧಿಕಾರಿಯು ಮುಸಲ್ಮಾನ ಪಕ್ಷಕ್ಕೆ ಸೇರಿ ತಮ್ಮನ್ನು ಮೋಸಗೊಳಿಸುತಾನೆಂದು ಯಾರೋ ಒಬ್ಬ ಹಿಂದುವು ಸುಳ್ಳುವಾರ್ತೆಯನ್ನು ಹರಡಿಸಿಬಿಟ್ಟ. ಆದರಿಂದ ಹಿಂದು[illegible]ಯು ಇನ್ನೂ ಹೆಚ್ಚಿತು. ಅವರು ಮುಂದೆ ಕಾಲಿಡುವದರಲ್ಲಿದ್ದರು. 'ನೋಡಿ ಪೋಲೀಸ ಸಹಾಯವು ಇನ್ನು ಸ್ವಲ್ಪ ಸಮಯದಲ್ಲಿಯೇ ಬರುವದು. ಸ್ವಲ್ಪ ತಾಳಿಕೊಳ್ಳಿ. ಇಲ್ಲವಾದರೆ ವ್ಯರ್ಥವಾಗಿ ರಕ್ತದ ಕಾಲುವೆಯು ಹರಿದು ಹೋಗುವದು' ಎಂದು ಅವನು ಹಿಂದುಗಳಿಗೆ ಬುದ್ಧಿ ಹೇಳಿದ. ಆಗ ಅವರೆಲ್ಲ ಒಳವರು 'ಇಲ್ಲಿ ನಮ್ಮ ಸಂಖ್ಯೆಯು ಅಧಿಕವಾಗಿದೆ. ಮುಸಲ್ಮಾನರು ನಮ್ಮ ನ್ಯಾಯವಾದ ಹಕ್ಕುಅಧಿಕಾರಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಒಂದು ಕೈ ಅವರಿಗೆ ತೋರಿಸಿ ಅವರ ಧುಮ್ಮನ್ನು ಇಳಿಸಲೇ ಬೇಕು' ಎಂದರು. ಆಗ—'ನ್ಯಾಯವನ್ನು ನೀವು ನಿಮ್ಮ ಕೈಗೇ ತೆಗೆದುಕೊಂಡಂತಾಗುತ್ತದೆ. 40000 ಹಿಂದುಗಳು 20000 ಮುಸಲ್ಮಾನರನ್ನು ಸೋಲಿಸಿ ಓಡಿಸುವದು ದೊಡ್ಡ ಮಾತಲ್ಲ. ಚೆನ್ನಾಗಿ ಆಲೋಚಿಸಿ' ಎಂದು ಜಿಲ್ಲಾಧಿಕಾರಿಯು ಮುಂದು ಮುಂದಾಗಲಿಕ್ಕಿದ್ದ ಹಿಂದುಗಳನ್ನು ತಡೆಯುತ್ತಲೇ ಇದ್ದನು.

ರಾತ್ರಿ 2 ಘಂಟೆಯ ಸಮಯವಾಯಿತು. ಹಿಂದುಗಳು ಮುಂದೆಂದದು ಏನು ಮಾಡೋಣ? ವ್ಯರ್ಥ ರಕ್ತದ ಕಾಲುವೆ ಹರಿಯುವದನ್ನು ತಪ್ಪಿಸಲಿಕ್ಕೇ ಬೇಕು. ಈ ಸಂದರ್ಭದಲ್ಲಿ ಗಾಂಧಿಯವರಿರುತ್ತಿದ್ದರೆ, ಅವರೇನು ಮಾಡುತಿದ್ದರು? ತಮ್ಮ ಪ್ರಾಣವನ್ನು ಬಲಿಕೊಟ್ಟಾದರೂ ಅವರು ಶಾಂತತೆ ಮತ್ತು ವ್ಯವಸ್ಥೆಯನ್ನು ಕಾಪಾಡಲಿಕ್ಕೆ ಪ್ರಯತ್ನಿಸುತಿದ್ದರಲ್ಲವೆ? ತಾನು ಕೂಡ ಹಾಗೇಕೆ ಮಾಡಬಾರದು? ಎಂದು ಜಿಲ್ಲಾಧಿಕಾರಿಯು ತನ್ನಷ್ಟಕ್ಕೆ ಆಲೋಚಿಸತೊಡಗಿದನು. ಮೆರವಣಿಗೆಯ ಮುಂಭಾಗದಲ್ಲಿ ಹಿಂದೂ ದೇವತೆಗಳ ಪ್ರತಿಮೆಗಳನ್ನು ಇಟ್ಟು ಮೋಟಾರಲೋರಿಯು ಚಲಿಸುತಿತ್ತು. ಜಿಲ್ಲಾಧಿಕಾರಿಯು ಒಂದು ಕುರ್ಚಿಯನ್ನು ತರಿಸಿ ಲೋರಿಯ ಮುಂಭಾಗದಲ್ಲಿಟ್ಟು ತಾನು ಅದರ ಮೇಲೆ ಕೂತುಕೊಂಡ. 'ನೀವು ಮೆರವಣಿಗೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುವದಾದರೆ, ಮೊದಲು ನನ್ನ ಮೇಲೆ ಮೋಟಾರು ನಡೆಸಿ ಆಮೇಲೆ ಕೊಂಡುಹೋಗಿ' ಎಂದು ಅತ್ಯಂತ ಧೈರ್ಯದಿಂದ ಹೇಳಿದ. ಹಿಂದುಗಳು ಸ್ವಲ್ಪ ತಡೆದರು. ಆದರೆ ಅವರಲ್ಲಿ ಕೆಲವರ ತುಂಟರಿದ್ದರು. 'ಜಿಲ್ಲಾಧಿಕಾರಿಯು ಮುಸಲ್ಮಾನರ ಸ್ನೇಹಕ್ಕಾಗಿ [illegible] ವೇಷ ಮಾಡುತ್ತಾನೆ, ನಡೆಸಿ ಮೋಟಾರು' ಎಂದು ಅವರು ಗಲಾಟೆ ಮಾಡಿದರು. ಮೋಟಾರು ಇನ್ನೂ ಮುಂದೆ ಹೋಯಿತು. ಜಿಲ್ಲಾ ಅಧಿಕಾರಿಗಳ ಕುರ್ಚಿಗೂ ಮೋಟಾರಿಗೂ ನಾಲ್ಕಂಗುಲಗಳ ಅಂತರ ಮಾತ್ರ ಇದೆ! ಇನ್ನು ಅದು ಸ್ವಲ್ಪ ಮುಂದಕ್ಕೆ ಹೋದರೆ ಸಾಕು, ಜಿಲ್ಲಾಧಿಕಾರಿಯು ಮೋಟಾರಿಗೆ ಬಲಿಯಾಗುವನು! ಯಾರೋ ಒಬ್ಬ ಬಲಿಷ್ಟ ಹಿಂದುವು ಜಿಲ್ಲಾಧಿಕಾರಿಯನ್ನು ಬಲಾತ್ಕಾರದಿಂದ ಎತ್ತಿ ಆಚೆಗೆ ಮಾಡಿದನು. ಅವನಿಗೆ ಗಾಯವಾಯಿತು. ಮೋಟಾರು ಮುಂದಕ್ಕೆ ಹೋಯಿತು. ಆದರೂ ಜಿಲ್ಲಾಧಿಕಾರಿಯು ಕುರ್ಚಿಯನ್ನು ತಾನೇ ಎತ್ತಿಕೊಂಡು ಪುನಃ ಓಡಿಬಂದ. ಚಲಿಸುತಿದ್ದ ಮೋಟಾರಿನ ಎದುರಿಟ್ಟು ತಾನು ಅದರಲ್ಲಿ ದೃಢವಾಗಿ ಕೂತುಕೊಂಡ. ಸತ್ತು ಅಥವಾ ಬದುಕಿ ತಾನು ತನ್ನ ಈ ಪವಿತ್ರ ಕಾರ್ಯದಲ್ಲಿ ವಿಜಯಿಯಾಗುವದು ಖಂಡಿತ ಎಂಬ ವಿಶ್ವಾಸವು ಜಿಲ್ಲಾಧಿಕಾರಿಗೆ ಇದ್ದಿತು. ಅಷ್ಟಾಗುವಾಗ ಹಿಂದುಗಳಲ್ಲಿ ಕೆಲವರು ಮೋಟಾರನ್ನು ನಿಲ್ಲಿಸಹೇಳಿದರು. ಮೋಟಾರು ನಿಂತಿತು.

ರಾತ್ರಿ 3 ಘಂಟೆಗೆ ಪೋಲೀಸ ಸಹಾಯವು ಬಂದಿತು. 5 ಘಂಟೆಗೆ ಮಿಲಿಟರಿ ಬರುವುದಾಗಿಯೂ ವರ್ತಮಾನ ಬಂತು. ಅದು ಬರುವ ತನಕ ಮೆರವಣಿಗೆ ಮುಂದಕ್ಕೆ ಹೋಗಬಾರದೆಂಬ ಛಲವು ಹಿಂದುಗಳಿಗೆ ಇದ್ದೇ ಇದ್ದಿತು. ಮಿಲಿಟರಿ ಬಂದ ತರುವಾಯ ಸಂಪೂರ್ಣ ಅಧಿಕಾರವನ್ನು ತನಗೆ ಬಿಟ್ಟುಕೊಡಬೇಕೆಂದು ಸೇನಾಧಿಕಾರಿಯು ಜಿಲ್ಲಾಧಿಕಾರಿಯನ್ನು ಕೇಳಿದನು. ಹಾಗೆ ಮಾಡಿದರೆ ಮಿಲಿಟರಿಯು ಗುಂಡು ಹಾರಿಸುವದು ಖಂಡಿತವಿತ್ತು. ಆಗಲೂ ವ್ಯರ್ಥ ರಕ್ತಪಾತವಾಗುತಿತ್ತು. ಜಿಲ್ಲಾಧಿಕಾರಿಯು ಅಷ್ಟರ ತನಕ ಪಟ್ಟ ಪರಿಶ್ರಮ[illegible] ವ್ಯರ್ಥವಾಗುತಿತ್ತು. ಆದ್ದರಿಂದ ಅವನು ಅದಕ್ಕೆ ಒಪ್ಪಲಿಲ್ಲ. ಬದಲಿಗೆ ಗುಂಪಿನ ಮೇಲೆ ಲಾಠಿ ಚಾರ್ಜ ಮಾಡಲಿಕ್ಕೆ ಪೋಲೀಸರಿಗೆ ಆಜ್ಞೆ ಕೊಟ್ಟನು. 10 ಮಿನಿಟುಗಳಲ್ಲಿ ಗುಂಪು ಚದರಿತು. ಸುಮಾರು 50,000ದ ಜನಸಂದಣಿಯಲ್ಲಿ ಈ ಲಾಠಿ ಚಾರ್ಜಿನಿಂದ ಕೇವಲ 6 ಮಂದಿ [illegible] 6 ಪೋಲೀಸರಿಗೆ ಮಾತ್ರ ಸಣ್ಣ ಗಾಯಗಳಾದವು. ಹಿಂದಿನ ದಿನ 1 ಘಂಟೆಗೆ ಬಂದು ಅನ್ನಪಾನ, ಆರಾಮ ನಿದ್ರೆಗಳಿಲ್ಲದೆ ಬಳಲಿದ್ದ ಜಿಲ್ಲಾಧಿಕಾರಿಯು ಹೇಗೂ ಮರುದಿನ ಬೆಳಗ್ಗೆ 6 ಘಂಟೆಗೆ ಮೆರವಣಿಗೆಯು ಮಸೀದಿಯನ್ನು ದಾಟಿ ಹೋದ ತರುವಾಯ ಮನೆಗೆ ಹೋಗಿ ಒಂದು [illegible] ಬಿಟ್ಟನು.

ಮನಸ್ಸು ಮಾಡಿದರೆ, ಸಾಹಸಬಲಗಳಿದ್ದರೆ, ಸರಕಾರದ ಅಧಿಕಾರಿಗಳು ಇಂಥ ಸಂದರ್ಭಗಳಲ್ಲಿ ಹೇಗೆ ವರ್ತಿಸಿ ಅನ್ಯಾಯದ ಪಾತವನ್ನು ತಪ್ಪಿಸಬಹುದೆಂಬುದು ಮೇಲಿನ ವೃತ್ತಾಂತದಿಂದ ಖಚಿತವಾಗುತ್ತದೆ. ಶಾಂತತೆ ಮತ್ತು ವ್ಯವಸ್ಥೆಯ ರಕ್ಷಣೆಯಾಗಬೇಕೆಂಬ ಬುದ್ಧಿ, ಮತ್ತು ಸಂಘರ್ಷವಾಗುವಲ್ಲಿ ತನ್ನ ಪ್ರಾಣಗಳನ್ನಾದರೂ ಕೊಟ್ಟು ಅದನ್ನು ತಪ್ಪಿಸುವ ತ್ಯಾಗಭಾವ ಇದ್ದರೆ, ಯಾರಿಗೂ ಯಾವದೂ ಅಸಾಧ್ಯವಲ್ಲ. ಮೇಲೆ ಬರೆದ ಐ. ಸಿ. ಯಸ್ ಜಿಲ್ಲಾಧಿಕಾರಿಯು ಸರಕಾರದ ಉಚ್ಚ ನೌಕರರು ಹೇಗೆ ಹೇಗೆ ಹೆಚ್ಚಾಗುವರೋ ಹಾಗೆ ಹಾಗೆ ದೇಶದಲ್ಲಿ ಶಾಂತತೆ ಮತ್ತು ವ್ಯವಸ್ಥೆ ಉಂಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ. 'ಪ್ರತಿಯೊಬ್ಬನ ಹೃದಯವಾಸಿಯಾಗಿರುವ ಪರಮಾತ್ಮನಲ್ಲಿ ಶ್ರದ್ಧೆ, ಮತ್ತು ಶಿಷ್ಟರಕ್ಷಣೆಗಾಗಿ ಆತ್ಮಾರ್ಪಣ ಭಾವ ಇರುವಾಗ, ಇಂಥ ಕಠಿಣ ಪ್ರಸಂಗಗಳಲ್ಲಿ ಏನು ಮಾಡಬೇಕೆಂಬ ಬುದ್ಧಿಯನ್ನು ಪರಮಾತ್ಮನು ಆ ಪ್ರಸಂಗಗಳಲ್ಲಿ ಅಂಥ ಕೆಲಸಗಾರರಿಗೆ ಖಂಡಿತವಾಗಿಯೂ ಕೊಡುತ್ತಾನೆ' ಎಂದು ಈ ವೃತ್ತಾಂತವನ್ನು ಎತ್ತಿಕೊಂಡು ಯಂ. ಡಿ. ಯವರು 'ಹರಿಜನ'ದಲ್ಲಿ ಬರೆದಿರುತ್ತಾರೆ. ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಬೇಕಾದಂಥ ಮಾತುಗಳಿವು.

92 ವರ್ಷ ಪ್ರಾಯದವನು ಬಹು ದೃಢಕಾಯನಾಗಿದ್ದಾನೆ

ಉಪ್ಪರಿಗೆಯನ್ನು ಸುಲಭವಾಗಿ ಹತ್ತಿ ಇಳಿಯಬಲ್ಲನು!

ಕ್ರುಶನ್ ಲವಣವನ್ನು ಪ್ರತಿನಿತ್ಯವೂ ಬೆಳಿಗ್ಗೆ ಸೇವಿಸುವನು.

ಮಿಸೆಸ್ ಎ. ಜೆ ದಬ್ಬ್ಯ[illegible] ಹೀಗೆಂದು ಬರೆಯುತ್ತಾರೆ [illegible] ಕ್ರುಶನ್ ಲವಣದಿಂದ [illegible] ಆಶ್ಚರ್ಯಕರವಾದ ಗುಣದ [illegible] ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ [illegible] ಪತ್ರ [illegible] 92 ವರ್ಷ ಪ್ರಾಯದವನಾದರೂ ಪೂರ್ಣ [illegible] ಆರೋಗ್ಯ [illegible] ಅವನ [illegible] ಮಿತ್ರಮಂಡಳಿಗಳಲ್ಲಾ ನಾವು ಕ್ರುಶನ್ ಲವಣವನ್ನು [illegible] ಪ್ರತಿದಿನ [illegible] ಕ್ರುಶನ್ ಲವಣವು ಆಶ್ಚರ್ಯಕರ [illegible] ಎಂಬುದಾಗಿ ನನಗೆ [illegible]

ಆರೋಗ್ಯಕ್ಕೆ ನಮ್ಮ [illegible] ಅಂಗಗಳನ್ನು [illegible] ಇರಿಸುವುದರಿಂದಲೇ [illegible]

ಕ್ರಮವಾಗಿ ಅವರು ಕ್ರುಶನ್ ಲವಣವನ್ನು ಸೇವಿಸುವ [illegible] ಅಭ್ಯಾಸಿಸಿದರು [illegible]

[illegible]

ಕ್ರುಶನ್ ಲವಣವು ಎಲ್ಲಾ ಔಷಧದಲ್ಲಿಯೂ ಸ್ಟೋರ ಗಳಲ್ಲಿಯೂ ದೊರೆಯುತ್ತದೆ

THE
Canara Banking Corporation, Udipi, Ltd.
INCORPORATED IN BRITISH INDIA
ESTD 1906
Head Office: UDIPI, South Canara.
ANNOUNCEMENT.
A Branch of the CORPORATION
will be opened
at
ARNI
(N Arcot Dt)
Shortly
Total Resources Exceed Rs. 62 Lakhs.

ದಿವಾನರ ಅಸೂಯಾಗ್ನಿಗೆ ಬಲಿಯಾದ ಬೇಂಕು!

ಟ್ರಿವಂಕೂರು ಬೇಂಕಿನ ಶೋಚನೀಯ ಕತೆ

ಬೇಂಕನ್ನು ನಾಶಮಾಡದೆ ಬಿಡುವವನು ನಾನಲ್ಲ!

ಬೇಲಿಯೇ ಹೊಲವನ್ನು ಮೇಯ್ದರೆ?

ಟ್ರಿವಂಕೂರುನೆಶನಲ್ ಮತ್ತು ಕ್ವಿಲನ್‌ಬೇಂಕ ನ್ನುಮುಚ್ಚಲು ಕಾರಣವೇನೆಂಬುದರಕುರಿತು ಅದರ ಚೇಯರ್‌ಮೇನರಾದ ಶ್ರೀಮೇಮನ್ ಮಾಪಿಳ್ಳೆಯವರು ಕೊಟ್ಟ ಸ್ಟೇಟ್‌ಮೆಂಟಿನಿಂದ ಕೆಲವು ಅಂಶಗಳನ್ನು ಉದ್ಧರಿಸಿ ಇಲ್ಲಿ ಕೊಟ್ಟಿದೆ.

o o o o

ಟ್ರಿವಂಕೂರು ಬೇಂಕು ಮತ್ತು ಕ್ವಿಲನ್ ಬೇಂಕು ಎಂಬಿವು ಎರಡು ಸಂಸ್ಥೆಗಳು ಅನೇಕ ವರ್ಷಗಳಿಂದ ಬೇಂಕಿಗ್ ವಹಿವಾಟನ್ನು ನಡಿಸಿಕೊಂಡು ಬಂದವುಗಳು ಅನೇಕ ಮಂದಿ ಹಿತೈಷಿಗಳ ಅಪೇಕ್ಷೆ, ಸೂಚನೆಗಳ, ಮೇರೆಗೆ ಎರಡನ್ನೂ ಒಂದುಗೂಡಿಸಿ, 'ದಿ ಟ್ರಿವಂಕೂರು ನೆಶನಲ್ ಕ್ವಿಲನ್ ಬೇಂಕ್' ಎಂಬ ಹೊಸ ಹೆಸರಿನಲ್ಲಿ ಇಂದಿಗೆ ಒಂದು ವರ್ಷದಿಂದ ಈ ಬೇಂಕು ವಹಿವಾಟುಗಳನ್ನು ನಡೆಸಿಕೊಂಡು ಬಂದಿರುತ್ತದೆ

o o o o

ಈ ಎರಡು ಬೇಂಕುಗಳನ್ನು ಒಂದುಗೂಡಿಸಿದ ಕೆಲವೇ ತಿಂಗಳುಗಳಲ್ಲಿ, ಟ್ರೆಂಚುಗಳಲ್ಲಿ ಬೇಂಕಿಗೆ ತುಂಬಾ ನಷ್ಟವುಂಟಾಗಿದೆಯೆಂಬ ಅಪಾದನೆಗಳ ಪಿಸುಮಾತು ಅಲ್ಲಲ್ಲಿ ಕೇಳಿಸುತ್ತದೆಂಬುದನ್ನೂ, ಇದಕ್ಕೆ ಕಾರಣ ಕರ್ತರು ಟ್ರಿವಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯಂಗಾರರೆಂಬುದನ್ನೂ ಅನೇಕ ಹಿತೈಷಿಗಳು ನಮಗೆ ತಿಳಿಸಿದರು ಆದರೆ ನಾವು ನಂಬಲಿಲ್ಲ ದಿವಾನರೇ ತನ್ನ ಕೂಸಿನಂತಿದ್ದ ಈ ಸಂಸ್ಥೆಯ ನಾಶವನ್ನು ಬಯಸುವರೆಂಬುದು ನಮ್ಮಗೆ ಅಸಾಧ್ಯವೆಂದು ತೋರಿತು ಆದರೆ ಬೇಂಕಿನ ಕುರಿತು ಹೊಸ ಹೊಸ ಆರೋಪಗಳು ತಲೆಯೆತ್ತುತ್ತಲೇ ಇದ್ದುವು, ಇವುಗಳಲ್ಲಿ ಮುಖ್ಯವಾದುದೆಂದರೆ ಟ್ರಿವಂಕೂರು ಸರಕಾರದವರು ಬೇಂಕಿನಲ್ಲಿದ್ದ ತಮ್ಮ 75 ಲಕ್ಷ ರೂಪಾಯಿಗಳನ್ನು ಹಿಂದೆಗೆದುಕೊಂಡರೆಂಬುದು. ವಾಸ್ತವವಾಗಿ ಸರಕಾರದ ಒಂದು ಪೈಯೂ ನಮ್ಮ ಬೇಂಕಿನಲ್ಲಿಲ್ಲ ಇಂತಹ ಅಪಪ್ರಚಾರದಿಂದಾಗಿ ಬೇಂಕಿನಿಂದ ಹಣ ಸೋರಿ ಹೋಗುತ್ತಲೇ ಇತ್ತು ಆದರೆ ಪ್ರಯತ್ನಪೂರ್ವಕವಾಗಿ ನಾವು ಬೇಂಕಿನ ವಹಿವಾಟನ್ನು ಒಂದು ವ್ಯವಸ್ಥಿತ ರೀತಿಗೆ ತಂದು ನಿಲ್ಲಿಸಿದೆವು

o o o o

ಅಷ್ಟರಲ್ಲಿ ಬೇಂಕಿನ ಡ್ಯಾರೆಕ್ಟರರಲ್ಲೊಬ್ಬರಾದ ಎಸ್ ಚಟ್ಟಾನಂತಕರಯಲರರು ರಾಜಿನಾಮೆ ಕೊಟ್ಟಿರುವರೆಂಬ ಎಸೋಸಿಯೇಟೆಡ್ ಪ್ರೆಸ್ಸಿನವರ ವರ್ತಮಾನವು ನಮ್ಮನ್ನು ದಂಗುಬಡಿಯಿತು. ಪ್ರತಿಯೊಂದು ಪತ್ರಿಕೆಗೂ ಇದು ತಿಳಿಸಲ್ಪಟ್ಟಿತ ಅವರ ರಾಜಿನಾಮೆ ಪತ್ರವು ನಮ್ಮ ಕೈ ಸೇರುವ ಮೊದಲೆ ಈ ಬಗೆಯ ವಾರ್ತೆಯನ್ನು ಪತ್ರಿಕೆಗಳಲ್ಲಿ ನೋಡಿದ ನಮಗೆ ಬಹಳ ದುಃಖವಾಯಿತು ಅವರು ರಾಜಿನಾಮೆ ಕೊಡಲಿರುವರಾದರೂ ಈ ಬಗೆಯ ಪ್ರಾಕಟ್ಯವೇಕೆಕ್ಕೆ? ಇದರಲ್ಲೇನೊ ಒಳಗುಟ್ಟಿರಬೇಕೆಂದು ನಾವು ತನಿಖೆ ನಡೆಸಲು ಇನ್ನೂ ವಿಷದಕರವಾದ ಸಂಗತಿಯು ನಮಗೆ ತಿಳಿದುಬಂತು. ದಿವಾನರ ಒಫೀಶಿಯಲ್ ನಿವಾಸಗೃಹದಿಂದಲೇ ಈ ವರ್ತಮಾನವು ಮದರಾಸಿನ ಅನೇಕ ಪತ್ರಿಕೆಗಳಿಗೆ ತಿಳಿಸಲಾಗಿತ್ತು. ಇಷ್ಟರ ತನಕ ದಿವಾನರ ಮೇಲೆ ಸಂಶಯಲೇಶವೂ ಇಲ್ಲದ ನಮಗೆ, ಈಗ ಬೇಂಕಿನ ಕುರಿತು ಅಪಪ್ರಚಾರದಲ್ಲಿ ಅವರ ಕೈಯನ್ನು ಕಂಡಾಯಿತು ಇದರಿಂದ ನಮಗೆ ಖೇದವೂ ದಿಗಿಲೂ ಉಂಟಾಯಿತು

o o o o

ಕರಯಾಲರರ ರಾಜಿನಾಮೆಯ ಹಿಂದೆಯೇ ಇನ್ನೊಬ್ಬ ಡ್ಯಾರೆಕ್ಟರರಾದ ವಿ ಎನ್ ನಾರಾಯಣ ಪಿಳ್ಳೆಯವರ ರಾಜಿನಾಮೆ ಪತ್ರವು ನಮ್ಮ ಕೈ ಸೇರಿತು ಒಡನೆ ನಾವು ಈ ಕುರಿತು ಪರ್ಯಾಲೋಚಿಸಲು ಮದರಾಸಿಗೆ ಹೋಗಿ, ಮಾನ್ಯ ರಾಜಗೋಪಾಲಾಚಾರ್ಯರನ್ನು ಕಂಡೆವು ಅವರ ಸೂಚನೆಯ ಮೇರೆಗೆ ನಾವು ದಿವಾನರನ್ನು ಕಂಡು, ನಮ್ಮ ಪರಿಸ್ಥಿತಿಯನ್ನು ನಿವೇದಿಸಿದೆವು ಒಡನೆ ಸಿಡಿದೆದ್ದ ದಿವಾನರು 'ನಿಮ್ಮ ಬೇಂಕು ಸ್ಟೇಟ್ ಕಾಂಗ್ರೆಸಿಗೆ ಸಹಾಯ ಮಾಡಿರುತ್ತದೆ ಸರಕಾರದ ವಿರೋಧಿ ಸಂಸ್ಥೆಗೆ ಸಹಾಯ ಮಾಡಿದ್ದು ನಿಮ್ಮದು ತಪ್ಪು ಆದುದರಿಂದ ನಿಮ್ಮ ಬೇಂಕನ್ನು ನಾಶಮಾಡದೆ ಬಿಡುವವನು ನಾನಲ್ಲ' ಎಂದು ಗದರಿಸಿದರು. ಅಲ್ಲದೆ ಸ್ಟೇಟ್ ಕ್ರೆಡಿಟ್ ಒಳ ಗನ ನೂತನ ಚೆಯರ್‌ಮೇನರಾದ ದರಿಂದ ಕರಯಾಲರರನ್ನೂ ನೂತನ ಗವರ್ನರನ್ನೂ [illegible] ನಾದ ಕಾರಣ [illegible] ಬೇಂಕಿನ ಡೈರಕ್ಟರ ಸ್ಥಾನಕ್ಕೆ ರಾಜಿನಾಮೆ ಕೊಡುವಂತೆ ಪ್ರೇರೇಪಿಸಿದವನು ತಾನೆಂದು ದಿವಾನರು ಒಪ್ಪಿಕೊಂಡರು ಸರ ತು ಕೋಪದ ಪಿತ್ತವು ಇಳಿದ ನಂತರ ಇನ್ನು ಮುಂದೆ ಬೇಂಕಿನ ಕುರಿತು ಅಪಪ್ರಚಾರ ನಡಸ ವುದಿಲ್ಲವಾಗಿಯೂ, ಇತರ ಡ್ಯಾರೆಕ್ಟರರ ರಾಜಿನಾಮೆ ಕೊಡುವಂತೆ ಪ್ರೇರೇಪಿಸುವುದಿಲ್ಲವಾಗಿಯೂ ಅವರು ಆಶ್ವಾಸನೆ ಇತ್ತರು.

o o o o

ದಿವಾನರ ಮಾತು ಬರಿಯ ಮಾತಾಗಿಯೇ ಉಳಿಯಿತು ಸ್ವಲ್ಪ ದಿನಗಳಲ್ಲಿಯೇ ಸರಕಾರಿನೌಕರರು ಇನ್ನೊಬ್ಬ ಡೈರೆಕ್ಟರರಾದ ಫಿಡರ್ಬೋರ್ಯ್ ಎಂಬವರನ್ನು ರಾಜಿನಾಮೆ ಕೊಡುವಂತೆ ಒತ್ತಾಯಪಡಿಸುತ್ತಿರುವರೆಂದು ನಮಗೆ ತಿಳಿದುಬಂತು ಅಲ್ಲದೆ ಸಜಲಪೂರಿತ ನಯನಗಳಿಂದ ಅವರೇ ಮರುದಿನ ನಮಗೆ ಇದನ್ನು ತಿಳಿಸಿದರು

o o o o

ಇದಕ್ಕಿಂತಲೂ ಖೇದಾಸ್ಪದವಾದ ವಿಷಯವೆಂದರೆ ದಿವಾನರು ಪೋಲೀಸು ಕಮಿಶನರ ಮೂಲಕ ಡಿ ಎಸ್ ಪಿ ಮತ್ತು ಎ. ಎಸ್ ಪಿ ಗಳಿಗೆ ಕಳುಹಿಸಿದ ಸರ್ಕಿಲಾರ

"ರಾಜಕೀಯ ವ್ಯಕ್ತಿಗಳ ಪ್ಯಕಿ ಟಿ ಎಮ್ ವರ್ಗೀಸ್, ಪಟಮ್ ಥಾನು ಪಿಳ್ಳೆ, ಸಿ ಕೇಶವನ್ ಮತ್ತು ಸಿ ಪಿ ಮೇಥನ್ ಎಂಬವರ ಚಲನವಲನಗಳನ್ನು ಕಾದು, ಪತಿಒತ್ತ ವರದಿಮಾಡತಕ್ಕದ್ದು. ಅವರನ್ನು ರಾಜ್ಯದ ಒಳಗೆ ಮಾತ್ರವಲ್ಲ ಹೊರಗೂ ಹಿಂಬಾಲಿಸತಕ್ಕದ್ದು ಮದರಾಸಿನಿಂದ ಒಂದ ವಾರ್ತೆಗಳ ಪ್ರಕಾರವೂ, ಟ್ರಿವಂಕೂರು ನೇಶನಲ್ ಕ್ವಿಲನ್ ಬೇಂಕಿನಿಂದ ಬಹಳ ಹಣವನ್ನು ಠೇವಣಾತಿದಾರರು ಹಿಂತೆಗೆದಿರುವುದರಿಂದಲೂ, ಬೇಂಕಿನ ಭದ್ರತೆಯು ಅನುಮಾನಾಸ್ಪದವಾಗಿರುವುದು ಆದುದರಿಂದ ಈ ಬೇಂಕಿನೊಡನೆ ಹಣದ ವಹಿವಾಟನ್ನು ನಡೆಸಬೇಕೆಂದಿರುವ ಜನಸಾಮಾನ್ಯರನ್ನು ಈ ಕುರಿತು ಎಚ್ಚರಿಸತಕ್ಕದು "

o o o o

ಇದರಿಂದಾಗಿ ಟ್ರಿವಂಕೂರಿನ ಪೋಲೀಸರೂ ಸರಕಾರಿ 'ನೌಕರರೂ ಬೇಂಕಿನ ಭದ್ರತೆಯ ಕುರಿತು ಜನರಲ್ಲಿ ಬೆದರಿಕೆಯನ್ನು ಹುಟ್ಟಿಸಿ, ಬೇಂಕಿನಿಂದ ಠೇವಣಾತಿಯನ್ನು ಹಿಂದೆಗೆಯುವಂತೆ ಪುಸಲಾಯಿಸತೊಡಗಿದರು ಅಲ್ಲದೆ, ಸರಕಾರಿ ಅಧೀಸರರಿಗೂ ಪೆನ್ಶನರಿಗೂ ಬೇಂಕಿನಿಂದ ಹಣವಡೆಯುವಂತೆ ತಿಳಿಸಲಾಯಿತು ಇದಲ್ಲದೆ ಅಲ್ಲಲ್ಲಿ ದಿವಾನರ ಗುಪ್ತ ಪೋಲೀಸರ ಅಪಪ್ರಚಾರವು ನಡೆಯುತ್ತಲೇ ಇತು ಮದರಾಸಿನಲ್ಲಿ ಸಿ ಪಿಯವರ ಸಿ ಐ ಡಿ ಗಳೆಂದು ತಿಳಿಯಲಾದ ಅನೇಕರು, ಠೇವಣಾತಿದಾರರು ಬೇಂಕಿನಿಂದ ಹಣವನ್ನು ಹಿಂದೆಗೆಯುತ್ತಿರುವರೆಂದೂ, ಬೇಂಕು ಬೇಗನೆ ಮುಚ್ಚಲ್ಪಡುವುದೆಂದೂ ಟೆಲಿಫೋನ್ ಮೂಲಕ ದೊಡ್ಡ ಸಂಸ್ಥೆಗಳಿಗೆ ತಿಳಿಸುತ್ತಿದ್ದರು ಒಡನೆ ನಾನು ಮೆ 2ರಲ್ಲಿ ಬೇಂಕಿನ ಪರಿಸ್ಥಿತಿಯ ಕುರಿತು ದಿವಾನರಿಗೊಂದು ತತಿ ಕೊಟ್ಟೆ ಆದರೆ ಅದಕ್ಕೆ ಉತ್ತರವೇ ಬರಲಿಲ್ಲ

o o o o

ಇದಾದ ಮೂರು ದಿನಗಳಲ್ಲಿ ಅದರೆ ಮೇ 5ನೆಯ ದಿನ ಪಿಡರ್ಬೋರ್ಯ್ ಮತ್ತು ಫಿಲಿಪೋಜ್ ಎಂಬವರು ದಿವಾನರನ್ನು ಕಂಡು ಸರಕಾರಿ ಸರ್ಕಿಲಾರನ್ನು ಹಿಂದೆಗೆಯಬೇಕೆಂತ ಕೇಳಿಕೊಂಡರ ನಾನು ನನ್ನ 2ನೆಯ ತಾರೀಕಿನ ತಂತಿಯಲ್ಲಿ ಆ ಸರ್ಕಿಲಾರಿನ ಕುರಿತೂ [illegible] ಗಳ ಚಟವಟಿಕೆಗಳ ಕುರಿತು ಪ್ರತಿಪಾದಿಸಿದ್ದರು. ದಿವಾನರು ಆ ಸರ್ಕಿಲಾರಿನ ಸಂಗತಿ ತನಗೆ ಗೊತ್ತೇ ಇಲ್ಲವೆಂದು ಹೇಳಿದ್ದು [illegible] ಅಕ್ಷ್ಯೇಪ [illegible] ನಂತರ ನಡೆದ ಮಾತುಕತೆಗಳ [illegible], ಹಿಂತೆಗೆಯುವಂತೆ ಮಾಡುವೆನೆಂದು ದಿವಾನರು [illegible] ಹಾಗೆ ಈ ತನಕ ಮಾಡಿದ್ದಿಲ್ಲ

o o o o

ಅತ್ತ ದಿವಾನರ ಗುಪ್ತ ಪೋಲೀಸರ ಕಾರ್ಯವು ಭರದಿಂದ ಸಾಗುತಿತ್ತು ಅವರು ಬೇಂಕಿನ ಕುರಿತು ಅಪಪ್ರಚಾರ ಮಾಡುತ್ತಿದ್ದರಲ್ಲದೆ ಬೇಂಕಿನಲ್ಲಿ ಹಣ ಇಟ್ಟವರ ಮತ್ತು ಕೊಟ್ಟವರ ವರದಿಯನ್ನು ಒರೆದ ಕಳುಹಿಸುತ್ತಿದ್ದರು ಮೇ 18ರಲ್ಲಿ ಡ್ಯಾರೆಕರಿಯಲ್ಲಿ ಹೆಸರಿದ್ದ ಅನೇಕ ಮಂದಿಗೆ ಬೇಂಕಿನ ಅಸ್ಥಿರತ್ವದ ಕುರಿತು ಇಂಗ್ಲಿಷಿನಲ್ಲೂ ತಮಿಳಿನಲ್ಲೂ ಮುದ್ರಿತವಾದ ಪತ್ರಗಳ ಟಪ್ಪಾಲಿನಲ್ಲಿ ಬಂದುವು ಅಲ್ಲದೆ, ಅನೇಕ ಮಂದಿಗೆ ಅವು ಬಹಿರಂಗವಾಗಿ ಹಂಚಲ್ಪಟ್ಟುವು ಇವುಗಳ ಮೇಲೆ ಪ್ರೆಸ್ಸಿನ ಹೆಸರೂ ಪ್ರಕಟಮಾಡಿದವನ ಹೆಸರೂ ಇದ್ದಿಲ್ಲ ಇದಲ್ಲದೆ ಟ್ರಿವೆಂಡ್ರಮಿನಲ್ಲಿ ಟ್ಯಾಪ್ ಮಾಡಿದ ಅನೇಕ ನೋಟಿಸುಗಳು ಬೇಂಕುಗಳ ಮತ್ತು ಪಮುಖ ಸಂಸ್ಥೆಗಳ ಗೋಡೆಗಳಿಗೆ ಹಚ್ಚಲ್ಪಟ್ಟಿದ್ದುವು ಇದರಿಂದ ಬೇಂಕನ್ನು ನಾಶಗೊಳಿಸಲು ಅನೇಕ ಮಂದಿ ಕೆಲಸ ಮಾಡುತ್ತಿದ್ದರೆಂದೂ ಅವರಿಗೆ ಎನೆಂದು ತಿರಿಯಾಗದಂತೆ ಯಾರಿಂದಲೋ ಆಶ್ವಾಸನೆ ದೊರಕಿರಬೇಕೆಂದೂ ಖಚಿತವಾಗುತ್ತದೆ ಇಲ್ಲವಿದ್ದರೆ ಅನೇಕ ಟ್ಯಾಪ್ ಮಾಡಲ್ಪಟ್ಟ ನೋಟಿಸುಗಳು ಹೊರಡುವುದೆಂದರೇನು? ಹಾಗೆ ಮಾಡಲು ಎಷ್ಟು ಮಂದಿ ಕೆಲಸ ಮಾಡಿರಬೇಕು? ಪ್ರಕಾಶಕನ ಮತ್ತು ಮುದ್ರಣಾಲಯದ ಹೆಸರಿಲ್ಲದೆ ನೋಟಿಸುಗಳು ಹೊರಡುವುದೆಂದರೇನು? ಈ ಕೆಲಸವನ್ನು ಯಾರೂ ಮಾಡತ್ತಿರಲಿ, ಅವರಿಗೆ ಧನಸಹಾಯವನ್ನು ಮಾಡುವವರಾರು?

o o o o

ಈ ಸಂಧಿಗ್ಧಸಮಯದಲ್ಲಿ ಬೇಂಕು ಠೇವಣಾತಿದಾರರಿಗೆ ತುಂಬಾ ಹಣವನ್ನು ವಾಪಾಸು ಕೊಟ್ಟಿತು ಆದರೆ ಅಪಪ್ರಚಾರದಿಂದಾಗಿ ಬೇಂಕಿನ ಮೇಲೆ ಜನರಿಗೆ ವಿಶ್ವಾಸ ಹುಟ್ಟಲಿಲ್ಲ. ದಿವಾನರು ಇದಕ್ಕೆ ಕಾರಣರಲ್ಲವೆಂದು ಯಾರು ಹೇಳಿದರೂ, ನಂತರದ ಪರಿಸ್ಥಿತಿಗೆ ಅವರೇ ಮೂಲಭೂತರೆನ್ನಬೇಕಾಗಿದೆ ಇಲ್ಲದೆ ಅನೇಕ ಮಂದಿಯೊಡನೆ ತಾನು ಬೇಂಕನ್ನು ನಾಶಗೊಳಿಸತ್ತೇನೆಂದು ಬಹಿರಂಗವಾಗಿ ಆಡಿಕೊಳ್ಳುತ್ತಿದ್ದರು ಈ ರೀತಿಯಲ್ಲಿ ದಿವಾನರೇ ಬೇಂಕಿನ ನಾಶಕ್ಕೆ ಒದ್ದುಕ ಕಣರಾಧ ಬಳಿಕ ಇನ್ನು ಮುಚ್ಚುವುದೇ ಲೇಸೆಂದು ಬಗೆದು ನಾನ ನನ್ನ ಅಭಿಪ್ರಾಯವನ್ನು ಇತರ ಡ್ಯಾರೆಕ್ಟರರಿಗೆ ತಿಳಿಸಿದೆ ಆಗ ಎಂಡರ್ಸನ್ ಎಂಬವರು ತಾನು ಈ ಕುರಿತು ದಿವಾನರೊಡನೆ ಮಾತನಾಡುತ್ತೇನೆಂದು ಹೇಳಿದರ ದಿವಾನರ ಯಾವ ಆಶ್ವಾಸನೆಯೂ ವಿಶ್ವಾಸಹರವಲ್ಲವೆಂದು ತಾನು ಮನಗ ಡಿದ್ದರೂ, ಆಗಬಹುದೆಂದು ಹೇಳಿದೆ. ಅವರಿಬ್ಬರ ಮಾತುಕತೆಯಿಂದಾಗಿ ದಿವಾನರು [illegible] ಈ ಬೇಂಕಿಗೆ ಸಹಾಯಮಾಡುವುದು ಸರಕಾರದ ಕರ್ತವ್ಯವೆಂದೂ [illegible] ಕಿನವರು ಅಪೇಕ್ಷಿಸಿದ್ದ [illegible] ಸಿದ್ಧವಿರುತ್ತಾರೆಂದೂ ತಿಳಿಸಿದರು

o o

ಈ ತರಹ [illegible] ಗಳಿಂದ ನಮಗೆ ಸಹಾಯ [illegible] ಆದ ದರಿಂದ ಜನರಿಗೆ ಬೇಂಕಿನಲ್ಲಿ ವಿಶ್ವಾಸ ಹುಟ್ಟಬೇಕಾದರೆ [illegible] ಸರಕಾರದವರ [illegible] ಹಣವನ್ನು ಬೇಂಕಿನಲ್ಲಿ ಠೇವಣಾತಿ ಇಡಬೇಕೆಂದೂ [illegible] ಬೇಂಕಿನ ಭದ್ರತೆಯ ಕುರಿತು ಸರಕಾರದವರು [illegible] ಪ್ರಕಟಿಸಿ ಹೇಳಿಕೆ ಹೊರಡಿಸಬೇಕೆಂದೂ ನಾವು ದಿವಾನರೊಡನೆ ಯಾಚಿಸಿದೆವು ಆದ ಆಶ್ವಾಸನೆ ನಮಗೆ ದೊರೆತ ಉತ್ತರ [illegible] ಕೆಲವನ್ನು ಅವರು ಕಾಣಲು ನಿರಾಕರಿಸಿದರು, ಇಷ್ಟೆಲ್ಲ ನಡೆಯುವಾಗ ಎರಡು ವಾರಗಳು ಕಳೆದುವು ನಿರುಪಾಯರಾಗಿ ನಾವು ಬೇಂಕನ್ನು ಮುಚ್ಚಬೇಕಾಯಿತು

o o o o

ಸರ್ ಸಿ ಪಿ ರಾಮಸ್ವಾಮಿ ಅಯ್ಯಂಗಾರ ಟ್ರಿವಂಕೂರಿನ ದಿವಾನರೆಂಬ ಕಾರಣದಿಂದಾಗಿ ಅವರು ಹೀಗೆ ವರ್ತಿಸಿರಬಹುದು ಆದರೆ ಇದರಲ್ಲಿ ಯೋಗ್ಯ ವಿಚಾರಣೆ ನಡೆದರೆ ನಮಗೆ ನ್ಯಾಯ ದೊರಕಬಹುದೆಂದು ನಾನು ನಿರೀಕ್ಷಿಸುತ್ತೇನೆ

NOTICE.

The Bombay Life Assurance Company Limited

The claimant under our Policy [illegible] on the life of late Mr Narasa Koggi Prabhu having notified that he has either lost or misplaced the said policy and having requested us to issue a duplicate thereof notice is hereby given that a duplicate policy will be issued by the Company and his claim will be considered should there be no objection recorded in our Head Office to our doing so within a month of this notice

Jyotendra L Mehta.

Manager.

ಲೋಕಶಾಂತಿಯು ಹೇಗುಂಟಾಗಬೇಕು?

ಪ್ರಪಂಚದಲ್ಲಿ ಸರ್ವತ್ರ ಅಶಾಂತಿ ಉಂಟಾಗಿರುವದರ ಮುಖ್ಯ ಕಾರಣವು— ಎಲ್ಲಾ ರಾಷ್ಟ್ರಗಳು ಬಾಯಲ್ಲೊಂದು ಮನಸ್ಸಿನಲ್ಲೊಂದು ಆಡುತ್ತಿರುವದಾಗಿದೆ. ಈ ರಾಷ್ಟ್ರಗಳು ಬಾಯಿಂದ ಅಹಿಂಸಾ ಪರಮೋ ಧರ್ಮ ಎನ್ನುತ್ತವೆ ಆದರೆ ಕೃತಿಯಿಂದ ಹಿಂಸೆಯನ್ನೇ ಆಚರಿಸುತ್ತವೆ ಹೀಗಲ್ಲವಾಗಿರುತ್ತಿದ್ದರೆ ಜನಾಂಗ ಸಂಘದ ನಿರಸ್ತ್ರೀಕರಣ ಸಮಸ್ಯೆಯು ಎಂದೋ ಬಿಡಿಸಲ್ಪಡುತಿತ್ತು ಈಗ ಎಂಥೆಂಥ ಪ್ರಾಣಘಾತಕ ಭಯಂಕರ ಯಂತ್ರೋಪಕರಣಗಳ ಆವಿಷ್ಕಾರಗಳಾಗುತ್ತಿರಲಿಲ್ಲ ಈ ಜಗತ್ತಿನಲ್ಲಿ ನಿಜವಾದ ಶಾಂತಿಯು ಯಾವನಾದರೊಬ್ಬ ಮಹಾಪುರುಷನು ಇಡೀ ಜಗತ್ತನ್ನು ಅಹಿಂಸಾಮಯ ಮಾಡಿದಾಗ, ಅಥವಾ ಜಗತ್ತಿನ ಎಲ್ಲ ರಾಷ್ಟ್ರಗಳು ಪರಸ್ಪರ ಹೊಡೆದಾಡಿಕೊಂಡು ಪುನಃ ಅಸ್ತ್ರಶಸ್ತ್ರಗಳನ್ನು ಕೈಯಿಂದ ಎತ್ತಿಕೊಳ್ಳಲಿಕ್ಕೆ ಅಸಮರ್ಥವಾಗುವಷ್ಟು ದುರ್ಬಲವಾದಾಗ ಮಾತ್ರ ಸ್ಥಾಪಿಸಲ್ಪಡಬೇಕು ಎಂಬ ಈ ವಿಷಯವು ಪಂಡಿತ ಮೋಹನಲಾಲ ನೆಹರೂ ಅವರು 'ಸರಸ್ವತಿ'ಯಲ್ಲಿ ಬರೆದ ಕೆಳಗಿನ ಲೇಖನದಿಂದ ಚೆನ್ನಾಗಿ ಸ್ಪಷ್ಟವಾಗುತ್ತದೆ

☆

ಲೋಕ ಶಾಂತಿಯನ್ನು ಸ್ಥಾಪಿಸುವದಕ್ಕೋಸ್ಕರ ಶಕ್ತಿ ಸಂಪನ್ನ ದೊಡ್ಡ ದೊಡ್ಡ ರಾಷ್ಟ್ರಗಳು ಕರೆದ ನಿರಸ್ತ್ರೀಕರಣ ಪರಿಷತ್ತುಗಳು ಸಕ್ಕಿಲ್ಲವಾದರೂ ಪೂರ್ಣ ಸಾಯಲಿರುವವು. ಯಾಕೆಂದರೆ ಈ ಪರಿಷತ್ತುಗಳನ್ನು ಕರೆದವರು ಶುದ್ಧ ಹೃದಯದಿಂದ ಲೋಕಶಾಂತಿಯನ್ನು ಸ್ಥಾಪಿಸಲಿಕ್ಕೆ ಪ್ರಯತ್ನಗಳನ್ನು ಮಾಡಲೇ ಇಲ್ಲ. ತಾವು ನುಂಗಿದ್ದನ್ನು ಇತರರು ಅಪಹರಿಸಕೂಡದು ಮತ್ತು ನುಂಗಿದ ಅವು ತಮಗೆ ಯಾವ ಕಷ್ಟವನ್ನು ಕೊಡಲಿಕ್ಕೂ ಕೂಡದು. ಎಂಬುದಷ್ಟೇ ಅವರು ಸಭೆಗಳನ್ನು ಕರೆವ ಉದ್ದೇಶವಾಗಿತ್ತು. ಹೊಸದಾಗಿ ಸ್ವತಂತ್ರವಾದ ಅಥವಾ ಇನ್ನು ಸ್ವತಂತ್ರವಾಗಲಿದ್ದ ರಾಷ್ಟ್ರಗಳು ಹೇಗೆ ತಾನೇ ಈ ಉದ್ದೇಶವನ್ನು ಒಪ್ಪಿಕೊಂಡು ನಿರಸ್ತ್ರೀಕರಣ ಪರಿಷತ್ತುಗಳ ಸಫಲತೆಗೆ ಪ್ರಯತ್ನಿಸಬಹುದಾಗಿತ್ತು?

ಒಂದು ಕಡೆಯಿಂದ ಶಕ್ತಿಸಂಪನ್ನ ರಾಷ್ಟ್ರಗಳು ತಮ್ಮ ಅಸ್ತ್ರ ಶಸ್ತ್ರ, ಸೈನ್ಯ ಸರಂಜಾಮುಗಳನ್ನು ಕಡಿಮೆಮಾಡುವ ಆಲೋಚನೆಯಲ್ಲಿರುವಾಗ, ಇನ್ನೊಂದು ಕಡೆಯಿಂದ ಅವೇ ರಾಷ್ಟ್ರಗಳು ವಿಷವಾಯು ಮೊದಲಾದ ನಾನಾ ಬಗೆಯ ಪ್ರಾಣಘಾತಕ ಆವಿಷ್ಕಾರಗಳಲ್ಲಿ ತೊಡಗಿದ್ದುವು ಒಂದು ರಾಷ್ಟ್ರವು ಊರಿಗೆ ಊರನ್ನೇ ಸುಟ್ಟು ಭಸ್ಮ ಮಾಡುವ ಒಂದು ಬಾಂಬನ್ನು ಹುಡುಕಿ ತೆಗೆಯಿತಾದರೆ ಇನ್ನೊಂದು ರಾಷ್ಟ್ರವು ದೇಶಕ್ಕೆ ದೇಶವನ್ನೇ ನಾಶಮಾಡಿ ಬಿಡುವ ಅದ್ಭುತ ಪ್ರಕಾಶ ಕಿರಣವನ್ನು ಹುಡುಕಿ ತೆಗೆಯುತ್ತಲಿತ್ತು ಆದರೂ ಕೂಡ ಈ ಎಲ್ಲಾ ರಾಷ್ಟ್ರಗಳು ಬಾಯಲ್ಲಿ ಏನು ಹೇಳುತ್ತ ಇರುವವೆಂದರೆ ತಮ್ಮ ತಮ್ಮ ಆತ್ಮರಕ್ಷಣೆಗಾಗಿಯೇ ಹೀಗೆ ಮಾಡುತ್ತಿರುವವೆಂದು!

ಎಲ್ಲಾ ಶಕ್ತಿಶಾಲಿ ಜಾತಿಗಳು ತಮುತಮಗಾಗಿ ಬೇರೆ ಕೆಲವು ದುರ್ಬಲ ಜಾತಿಗಳನ್ನು ಗುಲಾಮರನ್ನಾಗಿ ಮಾಡಿಟ್ಟಿವೆ ಈ ಗುಲಾಮ ಜಾತಿಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳಲಿಕ್ಕೆ ಅವುಗಳಿಗೆ ಸೈನ್ಯ ಸರಂಜಾಮುಗಳ ಅವಶ್ಯಕತೆ ಇದ್ದೇ ಇದೆ ಅದ್ದರಿಂದಲೇ ಯಾವ ಶಕ್ತಿಸಂಪನ್ನ ರಾಷ್ಟ್ರಕ್ಕೂ ನಿರಸ್ತ್ರೀಕರಣವು ನಿಜವಾಗಿ ಬೇಡವಾಗಿದೆ ಎಲ್ಲರಿಗೂ ಒಬ್ಬರೊಬ್ಬರ ಮನೋಭಿಪ್ರಾಯವು ತಿಳಿದಿದೆ ಆದರೂ ಲೋಕ ಶಾಂತಿಯನ್ನು ಉಂಟುಮಾಡುವ ಮಹತ್ಪ್ರಯತ್ನಗಳಲ್ಲಿ ತಾವಿದ್ದೇವೆಂದು ಕಣ್ಣುಕಟ್ಟಿನ ಆಟವನ್ನು ಈ ರಾಷ್ಟ್ರಗಳು ಆಡುತ್ತಲಿವೆ.

ಅಹಿಂಸಾವಾದಿಗಳು ಅನೇಕ ಪ್ರಕಾರದವರಾಗಿ ಇರುತ್ತಾರೆ ಕೆಲವರು ಸ್ವಭಾವದಿಂದ ಅಹಿಂಸಾವಾದಿಗಳಾಗಿರುತ್ತಾರೆ ಕಾಯಾವಾಚಾಮನಸಾ ಅವರು ಯಾರನ್ನು ಪೀಡಿಸಲಿಕ್ಕೆ ಇಚ್ಛಿಸುವುದಿಲ್ಲ. ಮಹಾತ್ಮ ಗಾಂಧಿಯವರು ಇದರ ಪ್ರತ್ಯಕ್ಷ ದೃಷ್ಟಾಂತವಾಗಿದ್ದಾರೆ ಮತ್ತೇಕೆ ಅವರು ಏನಾದರೊಂದು ಕಾರಣದಿಂದ ಅಹಿಂಸಾವಾದಿಗಳಾಗುತ್ತಾರೆ ನಿರಸ್ತ್ರೀಕರಣ ಸಭೆಯ ಜನ್ಮದಾತರು ಈ ಗುಂಪಿಗೆ ಸೇರುತ್ತಾರೆ ಮತ್ತೆ ಕೆಲವರು ದುರ್ಬಲತೆ ಅಥವಾ ಹೆದರಿಕೆಯಿಂದ ಅಹಿಂಸಾವಾದಿಗಳಾಗುತ್ತಾರೆ. ಮೂರನೆ ತರಹದ ಜನರು ಯಾವ ಲೆಕ್ಕಕ್ಕೂ ಬರುವದಿಲ್ಲ ಎರಡನೆಯವರು ನಿಜಕ್ಕೆ ಹಿಂಸಾವಾದಿಗಳಾಗಿದ್ದಾರೆ ಬೇರೆ ಉಪಾಯ ಕಾಣದ್ದರಿಂದ ಮಾತ್ರ ಅಹಿಂಸಾ ಪರಮೋ ಧರ್ಮ ಎನ್ನುತ್ತಾರೆ ಇವರಿಗೆ ಲೋಕ ಶಾಂತಿಯುಂಟಾಗಬೇಕೆಂಬ ಇಚ್ಛೆಯು ಸರ್ವಥಾ ಇರುವದಿಲ್ಲ. ಇವರಲ್ಲಿ ನಿಜವಾದ ಅಹಿಂಸಾಭಾವವು ಉತ್ಪನ್ನವಾಯಿತೆಂದಾದರೆ, ಆಗ ಜಗತ್ತಿನಲ್ಲಿ ಒಂದಾದರೂ ಪರತಂತ್ರ ಜಾತಿಯು ಇರುವದಿಲ್ಲವೆಂದು ಎಣಿಸಿರಿ.

ಹಿಂಸೆ ಮಾಡಿ ಮಾಡಿ ಬೇಸತ್ತು ಕಡೆಗೆ ಅಹಿಂಸಾವಾದಿಗಳಾದರೆಂದು ನಮ್ಮ ಧರ್ಮಗ್ರಂಥಗಳ ಕೆಲಕೆಲವು ಭಾಗಗಳಲ್ಲಿ ಬರೆಯಲ್ಪಟ್ಟಿರುತ್ತದೆ. ನಿಜ, ಇವರು ಹೀಗೆ ಅಹಿಂಸಾವಾದಿಗಳಾಗುವದು ಸಹಜವಾಗಿದೆ ಆದರೆ ಅಹಿಂಸೆಯು ಸರ್ವೋತ್ಕೃಷ್ಟವಾದ ಧರ್ಮಮಾರ್ಗ ಎಂದು ವಾದಿಸುವದಕ್ಕೂ, ತಾವು ವಾದಿಸಿದ ಹಾಗೆ ಆಚರಿಸುತ್ತಿರುವದಕ್ಕೂ ಆಜಗಜಾಂತರದ ಭೇದವಿರುತ್ತದೆ ನಮಗೆ ದುಃಖವಾದಾಗ ನಾವು ಬೇಸರಪಡುವದು ದೊಡ್ಡ ಮಾತಲ್ಲ ಇತರರಿಗೆ ದುಃಖವನ್ನು ಕೊಡುತ್ತಿರುವಾಗ ಬೇಸರಿಸುವದೇ ದೊಡ್ಡ ವಿಷಯ. ಪರಂತು ಇತರರಿಗೆ ದುಃಖ ಕೊಡವಾಗ ನಮಗೆ ಬೇಸರವಾಗ ಬೇಕು ಇಷ್ಟು ಮಾತ್ರವಲ್ಲ, ನಾವು ಬೇರೆಯವರನ್ನು ಹಿಂಸಿಸುವದನ್ನು ಒಂದು ಅಹಿಂಸೆಯೆಂದಾಗಲಿ, ಅಥವಾ ಅವಶ್ಯಕ ಹಿಂಸೆ ಎಂದಾಗಲೀ ಹೇಳಿ ಜನರನ್ನು ಮರುಳು ಮಾಡುತ್ತೇವೆ

ಅಹಿಂಸೆ ಎಂದರೇನು? ಕಾಯಾವಾಚಾಮನಸಾ ಯಾರಿಗೂ ದುಃಖ ಅಥವಾ ಪೀಡೆಯನ್ನು ಕೊಡದಿರುವದೇ ಅಹಿಂಸೆಯು ಆದರೆ ಒಮ್ಮೊಮ್ಮೆ ಕೆಲವು ವ್ಯಕ್ತಿಗಳಿಗೆ ದುಃಖ ಕೊಡುವದರಿಂದ ಹಲವರಿಗೆ ಸುಖವಾಗುವ ಪ್ರಸಂಗವೂ ಬರುತ್ತದೆ ಒಂದು ಹುಲಿಯು ದನಗಳ ಒಂದು ಗುಂಪನ್ನು ಸೇರಿಕೊಂಡಿದೆ ಎಂದು ತಿಳಕೊಳ್ಳಿರಿ ಆಗ ನೀವೇನ ಮಾಡುವಿರಿ? ಹುಲಿಯನ್ನು ಕೊಂದು ದನಗಳನ್ನು ಕಾಪಾಡವಿರಲ್ಲವೆ? ಈಗ ಹುಲಿಯನ್ನು ಕೊಂದದ್ದು ಹಿಂಸೆ ಎಂದಾಗುವದೆ? ಒಬ್ಬ ಒದ್ಮಾಶನು ಊರು ಕೇರಿಯನ್ನೆಲ್ಲಾ ಪೀಡಿಸುತ್ತಿದ್ದಾನೆ ದಿಟ್ಟುಕೊಳ್ಳಿ ಆಗ ನೀವೇನು ಮಾಡುವಿರಿ? ಒಬ್ಬ ಆವನನ್ನು ಹಿಡಿದು ಸರಕಾರದ ದಂಡನೆಗೆ ಗುರಿಪಡಿಸುವದೇ ನಿಮ್ಮ ಧರ್ಮವಾಗುವದಿಲ್ಲವೆ? ಒಬ್ಬ ಮನುಷ್ಯನ ಒಂದು ಕೊಳೆತ ಅಂಗವನ್ನು ಕತ್ತರಿಸುವದರಿಂದ, ಅಥವಾ ರೋಗಿಗೆ ಔಷಧಿ ಕೊಡುವದರಿಂದ ಅವನಿಗೆ ದುಃಖವಾಗುವದಾದಲೂ, ಅವನನ್ನು ಮತ್ತೆ ಸುಖಿಯನ್ನಾಗಿ ಮಾಡುವದಕ್ಕಾಗಿಯೇ ಅದನ್ನು ಮಾಡುತ್ತಿರುವದರಿಂದ ಅದು ಹಿಂಸೆ ಎನ್ನಿಸಿಕೊಂಡಿತೆ?

ಮನುಷ್ಯನು ಹಿಂಸಕ ಪಶುವಾಗಿದ್ದಾನೆ ಜಗತ್ತಿನ ಎಲ್ಲಾ ಪ್ರಾಣಿಗಳು ಸೇರಿದರೂ ಅವು ಅವನಷ್ಟು ಹಿಂಸಕವಾಗುವದಿಲ್ಲ ತಮ್ಮ ಆಹಾರ ಸಂಗ್ರಹ ಅಥವಾ ಆತ್ಮರಕ್ಷಣೆಗಾಗಿ ಮಾತ್ರ ಬೇರೆ ಪ್ರಾಣಿಗಳು ಹಿಂಸೆ ಮಾಡುತ್ತವೆ ಆದರೆ ಮನುಷ್ಯನು ಮನೋರಂಜನೆಗಾಗಿಯೇ ಹಿಂಸೆ ಮಾಡುವನು ತನ್ನ ಜಾತಿಯವರನ್ನು ಪೀಡಿಸುವದನ್ನು ಕೂಡ ಅಧರ್ಮವೆಂದು ಅವನು ತಿಳಿಯುವದಿಲ್ಲ. ಒಬ್ಬ ಜೈನನು 2000 ರೂಪಾಯಿ ತೆಗೆದುಕೊಂಡು ತನ್ನ ಮಗಳನ್ನು ಒಬ್ಬ ಮುದುಕನಿಗೆ ಮದುವೆಮಾಡಿಕೊಡುವದಾಗಿ ಒಪ್ಪಿಕೊಂಡು, ರೂಪಾಯಿ ಸಿಕ್ಕಿದ ಮೇಲೆ ಅವಳ ವಿವಾಹವನ್ನು ಇನ್ನೊಬ್ಬನೊಡನೆ ಮಾಡಿಸಿದನು, ಇದು ಹಿಂಸೆಯಲ್ಲವೆ? ಶ್ವಾಸ ತೆಗೆದುಕೊಳ್ಳುವಾಗ ಎಷ್ಟೋ ಕ್ರಿಮಿಗಳು ಸಾಯುತ್ತವೆಂದು, ಅವನ್ನು ಬದುಕಿಸಲಿಕ್ಕೆ ಮುಖದ ಮೇಲೆ ಬಟ್ಟೆಕಟ್ಟುವ ಜೈನರು ಇದಕ್ಕೆ ಏನನ್ನುವರು?

ಅಹಿಂಸೆಯ ಹೊಗಳಿಕೆಯನ್ನು ಹಿಂದುಗಳು ಬಹು ಪುರಾತನ ಕಾಲದಿಂದ ಮಾಡುತ್ತ ಬಂದಿದ್ದಾರೆ. ಆದರೆ ಅವರೂ ಕೂಡ ಹಿಂಸೆ ಮಾಡದೆ ಇರಲಿಲ್ಲ. ಬಹುಶಃ ಅವರು ಏರೋವ ದೇಶಕ್ಕಾಗಿಯೇ ಅಹಿಂಸಾ ಪರಮೋ ಧರ್ಮ ಎಂದಿರಬಹುದು. ಅದ್ದರಿಂದ ಈಗಲಾದರೂ ಶಕ್ತಿಸಂಪನ್ನ ರಾಷ್ಟ್ರಗಳು ಅಹಿಂಸಾ ಪರಮೋ ಧರ್ಮವೆಂದು ತಮ್ಮನ್ನು ಬಿಟ್ಟು ಇತರರಿಗೆ ಉಪದೇಶ ಮಾಡುತ್ತಿರುವವಾದರೆ ಆಶ್ಚರ್ಯವಿಲ್ಲ

ಲೋಕವೆಲ್ಲ ಅಹಿಂಸಾಮಯವಾಯಿತಾದರೆ, ಲೋಕಶಾಂತಿಯನ್ನುಂಟುಮಾಡುವದ ಒಂದರೆಕ್ಷಣದಲ್ಲಿ ಸಾಧ್ಯವಾಗುವದು ಆದರೆ ಹಾಗಾಗುವದು ಸಂಭವನೀಯವೆ? ಎಲ್ಲಿಯ ತನಕ ಮನುಷ್ಯನ ಜೀವನಾವಶ್ಯಕತೆಗಳಿಗೆ ಒಂದು ಮಿತಿ ಎಂಬುದಿಲ್ಲವೋ, ಎಲ್ಲಿಯ ತನಕ ತನ್ನ ವ್ಯಾಪಾರ ಸರಕುಗಳನ್ನು ಮಾರಲಿಕ್ಕೆ ಹೊಸ ಹೊಸ ಕ್ಷೇತ್ರಗಳನ್ನು ಹುಡುಕುತ್ತಿರುತ್ತಾನೋ ಅಲ್ಲಿಯ ತನಕ ಇದು ಸಂಭವನೀಯವಾಗಿರುವದಿಲ್ಲ ಆದರೆ ಯಾವಾಗ ಮನುಷ್ಯನು ತನ್ನಂತೆ ಇತರರಿಗೂ ದುಃಖವಾಗುವದೆ ಎಂದು ತಿಳಿಯತೊಡಗುತ್ತಾನೋ ಆಗಲೇ ಲೋಕಶಾಂತಿಯುಂಟಾಗುವದು ಸಂಭವನೀಯವಾಗಿದೆ ಆದರೆ ಈಗ ಆವಶ್ಯಕತೆಗಳ ಕಡಿಮೆ ಇರುವ ಮನುಷ್ಯನು ಸಭ್ಯನೆನ್ನಿಸಿಕೊಳ್ಳುವದಿಲ್ಲ ಸಭ್ಯತೆಯು ಬೆಳೆಯುತ್ತ ಹೋದ ಹಾಗೆ ಮನುಷ್ಯನ ಆವಶ್ಯಕತೆಗಳು ಬೆಳೆಯುತ್ತ ಹೋಗುತ್ತವೆ ಅಥವಾ ಬೆಳೆಸಲ್ಪಡುತ್ತವೆ

ಸ್ವಲ್ಪ ಮನುಷ್ಯನಿಗೆ ತನ್ನ ಜಾತಿ ಅಥವಾ ದೇಶವಾಸಿಯು ಸನ್ಮಾರ್ಗದಲ್ಲಿ ನಡೆಯುತಿದ್ದಾನೆಯೋ ಎಂಬ ಆಲೋಚನೆ ಯಾತಕಬೇಕು? ಅವನಿಗೆ ತನ್ನ ಸ್ವಾರ್ಥವನ್ನೂ ಸುಖವನ್ನೂ ರಕ್ಷಿಸಿಕೊಂಡರಾಯಿತು ಇದುವೇ ಪರಂಪರೆಯಿಂದ ನಡೆದು ಬಂದ ಕ್ರಮವಾಗಿದೆ ಶ್ರೀಮನ್ನಾರಾಯಣನು ಕೂಡ ಇದೇ ತತ್ವವನ್ನು ಅನುಸರಿಸಿದ್ದಾನೆ ಜಲಂಧರ ರಾಕ್ಷಸನ ಹೆಂಡತಿಯು ಪರಮ ಸಾಧ್ವಿಯಾಗಿದ್ದಳು. ಆದರೆ ಜಲಂಧರನು ದೇವತೆಗಳ ಶತ್ರುವಾಗಿದ್ದನು. ಅವನ ಹೆಂಡತಿಯು ಸತೀತ್ವದಿಂದಾಗಿ ದೇವತೆಗಳು ಅವನನ್ನು ಕೊಲ್ಲಲಸಮರ್ಥರಾಗಿದ್ದರು ನಾರಾಯಣನು ದೇವತೆಗಳ ಮಿತ್ರನು ಅವನ ಸಹಾಯವನ್ನು ಬೇಡಿದರು ಬೇಡಿದೊಡನೆ ಅದು ಸಿಕ್ಕಿಯೂ ಸಿಕ್ಕಿತು ಹೇಗೆ? ಮರಿ ಮೋಸದಿಂದ ನಾರಾಯಣನು ಆಕೆಯ ಸತೀತ್ವವನ್ನು ಕೆಡಿಸಿದನು ಇದಕ್ಕಿಂತ ದೊಡ್ಡ ಹಿಂಸೆ ಇರುತ್ತದೆಯೆ? ಆದರೆ ನಾರಾಯಣನ ಈ ಕೆಲಸವನ್ನು ನೋಡಿಯೂ ಶಭಾಸ್ ಶಭಾಸ್ ಎನ್ನುವವರಿಗೇನೂ ಕಡಿಮೆ ಇಲ್ಲ ಎಲ್ಲವನ್ನು ನಾರಾಯಣನು ದೇವತೆಗಳಿಗಾಗಿ ಮಾಡಿದನು ಎಂದು ಅವನನ್ನು ಭಕ್ತರು ಸ್ತುತಿಸುವರು'

ಹೀಗೆ ಅಹಿಂಸಾ ಪರಮೋ ಧರ್ಮ ಎನ್ನುತ್ತಿರುವ ಹಿಂದುಗಳೇ ಸ್ತ್ರೀಯ ಸತೀತ್ವವನ್ನು ಭಂಗಮಾಡಿದ ಹಿಂಸಾ ಕರ್ಮವನ್ನು ಅಹಿಂಸೆ ಎನ್ನತೊಡಗಿದರೋ ಆಗ ಪಾಪದ ಅಹಿಂಸೆಯ ರಕ್ಷಣೆಯನ್ನು ಯಾರು ಮಾಡಬೇಕು? ಆಕೆ ಶತ್ರುವಿನ ಅರ್ಧಾಂಗಿನಿಯಾಗಿದ್ದರೂ ಕೂಡ ಸತೀ ಸ್ತ್ರೀ ಆಗಿದ್ದಳಲ್ಲವೆ? ಯಾವ ನೀತಿ ನಿಯಮವನ್ನನುಸರಿಸಿಯಾದರೂ ಆಕೆಯ ಪತಿಭಂಗ ಮಾಡುವದು, ಎಂಥ ಪರಿಸ್ಥಿತಿಯಲ್ಲಾದರೂ ಅಹಿಂಸೆ ಎನ್ನಿಸಿಕೊಳ್ಳಲಾರದು.

ಆದರೆ ಪ್ರತಿಯೊಂದು ಕೆಲಸಕ್ಕೂ ಹುಡುಕಿದರೆ ನೆವನವು ಸಿಕ್ಕದೆ ಇರುವದಿಲ್ಲ ಮರೆಯಲ್ಲಿ ಅಡಗಿ ನಿಂತು ಶ್ರೀ ರಾಮನು ವಾಲಿಯನ್ನು ಕೊಂದದ್ದು ಬಳಿಕ— ತಮ್ಮನ ಹೆಂಡತಿಯನ್ನು ಅಪಹರಿಸಿದಾತನನ್ನು ಮರೆಯಲ್ಲಿ ನಿಂತು ಕೊಲ್ಲುವದು ಹಿಂಸೆಯಲ್ಲ, ಪಾಪವಲ್ಲ. ಅಂದರೆ ರಾಮನ ಆ ಕಾರ್ಯವು ಕೂಡ ಅಹಿಂಸೆ ಎಂದು ಸಾರಲ್ಪಟ್ಟಿತು ಮತ್ತೆ ಸೀತೆಯನ್ನು ಅನ್ಯಾಯವಾಗಿ ವನವಾಸಕ್ಕೆ ಕಳುಹಿಸಿದ್ದಾದರೂ ಅದು ಪ್ರಜೆಗಳ ಸುಖಕ್ಕಾಗಿ ಹಾಗೆ ಮಾಡಲ್ಪಟ್ಟಿತೆಂದೂ ಪ್ರಜಾರಂಜನೆಯು ರಾಜಧರ್ಮವೆಂದೂ ಹೇಳಲಾಗಿದೆ.

ಶ್ರೀಮನ್ನಾರಾಯಣನ ಮತ್ತು ಶ್ರೀ ರಾಮನ ಮಾತ ಹಾಗಾಯಿತು ಸರ್ವಸಾಧಾರಣ ಜನತೆಯ ಮನೋಗತಿಯೂ ಕೂಡ ಹಾಗೆಯೇ ಇದೆ. ೧೯೧೪ರ ಮಹಾಯುದ್ಧದಲ್ಲಿ ಲಕ್ಷಾಂತರ ಜನರ ಪ್ರಾಣಗಳು ಹೋದುವು. ಆದರೆ ಯಾರೂ ಆ ಕೊಲೆಯನ್ನು ತಮ್ಮ ಮೇಲೆ ತೆಗೆದ ಕೊಳ್ಳಲಿಲ್ಲ. ಪ್ರತಿಯೊಬ್ಬರೂ ಒಬ್ಬರೊಬ್ಬರ ಮೇಲೆ ದೋಷಾರೋಪಣೆ ಮಾಡಿದರು, ಮತ್ತು ಶತ್ರುನಿಗ್ರಹಕ್ಕಾಗಿ ನಡೆಮಾಡಿದನ್ನು ಪ್ರಾರ್ಥಿಸುತ್ತ ಉಳಿದರು ಈಗಲೂ ಯುರೋಪದಲ್ಲಿ ಯುದ್ಧಸಿದ್ಧತೆಯಾಗುತ್ತಲಿದೆ ತಾವು ಸಿದ್ಧರಾಗುತ್ತಿದ್ದೇವೆಂದ ಯಾರೂ ಹೇಳುತ್ತಿರುವದಿಲ್ಲ. ಪ್ರತಿಯೊಬ್ಬರ ಇತರರೊಡನೆ ಸ್ಪರ್ಧೆಗೆ ನಿಂತು ಸೈನ್ಯ ಸರಂಜಾಮುಗಳಲ್ಲಿ ಸಮಾನ ಅಥವಾ ಅಧಿಕರಾಗಬೇಕೆಂದು ಪ್ರಯತ್ನಿಸುತ್ತಾರೆ.

ಮನುಷ್ಯನು ನಿಜಕ್ಕೂ ಹಿಂಸಾವಾದಿಯೋ ಅಥವಾ ಅಹಿಂಸಾವಾದಿಯೋ ಎಂದು ತಿಳಿಸುವದಕ್ಕಾಗಿಯೇ ಈ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಲಾಯಿತು. ಮಹಾಪುರುಷರು ಹಿಂಸೆಯ ವಿರುದ್ಧ ಪ್ರಚಾರ ಮಾಡಿದರೆಂದು ನಿಜ ಆದರೆ ಅವರ ಮಾತುಗಳನ್ನು ಕೇಳುವರೊಬ್ಬರೂ ಇಲ್ಲ ಎಲ್ಲಿ ಯಾವನೊಬ್ಬನ ಮಹಾತ್ಮರ ಹಾಗೆ ಪವಿತ್ರ ಭಾವದ ಜನರ ಸಂಖ್ಯೆ ಬಹಳ ಸ್ವಲ್ಪವಾಗಿರುತ್ತದೆ. ಯೇಸು ಕ್ರಿಸ್ತನು ಬುದ್ಧನು ಅಹಿಂಸೆಯ ಪ್ರತ್ಯಕ್ಷ ಮೂರ್ತಿಗಳು. ಮಹಮ್ಮದ ಅವರ ಹೆಸರಿನಲ್ಲಿ ಅವರ ಅನುಯಾಯಿಗಳಿಂದ ಜಗತ್ತಿನಲ್ಲಿ ಎಷ್ಟು ಹಿಂಸೆಯಾಗುತ್ತಿರುವದಿಲ್ಲ? ಹಿಂದೂ ಮಹಾಪುರುಷರು ಎಲ್ಲರಿಗಿಂತ ಮೊದಲು ಅಹಿಂಸೆಯು ಪರಮ ಧರ್ಮವೆಂದರು. ಆದರೆ ದೇವದೇವತೆಗಳ ಹೆಸರಿನಲ್ಲಿ ಎಷ್ಟು ಜನ ಧರ್ಮಾಚಾರ್ಯರು ಕೋಣ ಮೊದಲಾದ ಮೂಕ ಪಶುಗಳನ್ನು ಬಲಿಕೊಡುವದಿಲ್ಲ? ಪಾಪಕ್ಕೆ ಹೆದರಿ ಅಹಿಂಸೆಯ ಜಪ ಮಾಡುತ್ತಾರೆ ಆದರೆ ಸಮಯ ಒದಗಿದಾಗ ಎಂಥ ಭಯಂಕರ ಹಿಂಸೆಯನ್ನು ಮಾಡಲಿಕ್ಕೂ ಇವರು ಹೇಸುವದಿಲ್ಲ, ಹಿಂದೆ ಮುಂದೆ ನೋಡುವದಿಲ್ಲ.

ಮಹಾಪುರುಷರು ಹಿಂಸೆಯನ್ನು ಎಷ್ಟು ಚೆನ್ನಾಗಿ ನೀಚಾತಿನೀಚಕರ್ಮವೆಂದು ಹೇಳಿದರೋ, ಪ್ರಾಯಶಃ ಪರಮಾತ್ಮನು ಹಾಗೆ ಎಲ್ಲಿಯೂ ಹೇಳಿರುವದಿಲ್ಲ ಸಣ್ಣ ಪ್ರಾಣಿಯನ್ನು ದೊಡ್ಡದು ಹಿಡಿದು ತಿನ್ನುತ್ತದೆ, ಮತ್ತು ತನಗಿಂತ ದೊಡ್ಡದಾದುದರ ಬಾಯಿಗೆ ಬಿದ್ದು ಸಾಯುತ್ತದೆ ಮನುಷ್ಯನು ಎಲ್ಲಾ ಪ್ರಾಣಿಗಳ ಶತ್ರುವಾಗಿದ್ದಾನೆ ಮನುಷ್ಯರಲ್ಲಿ ಕೂಡ ಸಬಲರು ದುರ್ಬಲರ ಶತ್ರುವಾಗಿದ್ದಾರೆಂಬುದರ ಅರಿವಿಲ್ಲ ಅಮೇರಿಕದ ನಿಗ್ರೋ ಮತ್ತು ಹಿಂದೂ ದೇಶದ ಅಸ್ಪೃಶ್ಯರ ಸ್ಥಿತಿ ಯಾರಿಗೆ ತಿಳಿದಿಲ್ಲ? ಅಹಿಂಸೆಯ ಪ್ರಚಾರ ಮಾಡಿರಿ ಯುದ್ಧವನ್ನು ಬಹಿಷ್ಕರಿಸಿ ನಿಲ್ಲಿಸಿ ಲೋಕಶಾಂತಿಯನ್ನು ಸ್ಥಾಪಿಸಿರಿ ಎಂದು ಹೇಳುತ್ತ ಇನ್ನೊಂದು ಮಹಾಯುದ್ಧದ ಪೂರ್ಣ ಸಿದ್ಧತೆಯನ್ನು ಮಾಡುತ್ತಿರುವ ಸಭ್ಯ ಜಗತ್ತಿನ ಸ್ಥಿತಿಯೇ ಹೀಗಿದೆ

ಅಹಿಂಸಾ ಧರ್ಮವು ಮಹಾಪುರುಷರಿಂದ ನಿರ್ದಿಷ್ಟವಾದದ್ದು. ಅಹಿಂಸೆಯನ್ನು ಕೆಟ್ಟದು ಎಂದು ಹೇಳುವ ಮತ್ತು ತಿಳಿಯುವ ಮಹಾಪುರುಷರು ಈಗಲೂ ಇದ್ದಾರೆ. ಆದರೆ ಇವರ ಸ್ವರವು ಕರ್ಣಕುಹರಗಳನ್ನು ಭೇದಿಸಿ ಒಳಗೆ

(೧೧ನೇ ಪುಟವನ್ನು ನೋಡಿರಿ)

ಚೀಟಾ ಹುಲಿಯೊಡನೆ ಹೋರಾಡಿದ ಹುಡುಗ

ಕೊಂಡಾಪುರ ಹಳ್ಳಿಯಲ್ಲಿ ಬೇಕಾರಿ ಸಾಬ್ ಮತ್ತು ಸಯ್ಯದ ಸಾಬ್ ಎಂಬಿಬ್ಬರು ಹುಡುಗರು, 10-14 ವರ್ಷ ವಯಸ್ಸಿನವರು ದನಮೇಯಿಸುತಿದ್ದಾಗ, ಒಂದು ಚೀಟಾ ಹುಲಿಯು ಅತ್ತ ಸುಳಿದು, ಬೇಕಾರಿ ಸಾಬನ ಮೇಲೆ ಎರಗಿತು. ಸಯ್ಯದ ಸಾಬನು ಇದನ್ನು ನೋಡಿ ಓಡುತ್ತ, ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಹುಲಿಯನ್ನು ಬಡೆದನು ಈ ಗೊಣ್ಣೆಗಳ ತಲೆಗೆ ಒಂದು ಮೊಳೆಯುದೆ ಮೊಳೆಯ ಹೊಡೆತಕ್ಕೆ ಹುಲಿ ನೊಂದು, ಸಯ್ಯದನ ಮೇಲೆ ಹಾರಿತು ಸಯ್ಯದನು ಧೀರನು, ಒಂದಿಷ್ಟು ಕದಲದೆ ಹುಲಿಯೊಡನೆ ಕಾದಾಡಿದನು. ಇದನ್ನೆಲ್ಲ ನೋಡುತ್ತಿದ್ದ ಇತರ ಹುಡುಗರು ಊರಿಗೆ ಓಡಿ, ಅಲ್ಲಿ ಈ ಸುದ್ದಿ ಹಳಿದರು. ಅವರು ಗುಂಪಾಗಿ ಅತ್ತ ಬಂದು, ಹುಲಿಯನ್ನು ಹಿಂಬಾಲಿಸಿ, ಕೊಂದಿಕ್ಕಿದರು. ಹುಡುಗರಿಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರಾಗಿ, ನಂದ್ಯಾಲದ ವಾರ್ತೆ.

ಪಂಚಾಯತ ಪ್ರೆಸಿಡೆಂಟರಿಗೆ ಜೈಲು

ತ್ರಿವಾಲ್ಲೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ, ಅಕ್ಕರಪಕ್ಕಮ್ ಪಂಚಾಯತ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ತಿರುವೆಂಗಡಾಚಾರ್ಯರು ಅದೇ ಪಂಚಾಯತದ ಫಂಡಿನ ಹಣವನ್ನು ದುರುಪಯೋಗ ಮಾಡಿದರೆಂದು ನಿರ್ಧಾರವಾಗಿ, ಆರು ತಿಂಗಳ ಸಜೆ ಮತ್ತು 50 ರೂಪಾಯಿ ಜುಲುಮಾನೆ ವಿಧಿಸಲಾಯಿತು

ಶ್ರೀ ಕೃಷ್ಣಮಾಚಾರ್ಯರು ಏಳು ಗ್ರಾಮಗಳ ಪಂಚಾಯತು ಬೋರ್ಡುಗಳ ಸ್ಪೆಶಲ್ ಆಫೀಸರರಾಗಿ ನೇಮಕವಾಗಿದ್ದರು ಇವರು ಅವೇ ಪಂಚಾಯತುಗಳ ಫಂಡುಗಳಿಂದ ರೂ 1870-9-0ನ್ನು ದುರುಪಯೋಗ ಮಾಡಿದ್ದಾರೆಂದು ತ್ರಿವಾಲ್ಲೂರು ಪೋಲೀಸ್ ಸಬ್ ಇನ್ಸಪೆಕ್ಟರರು ಅವರ ಮೇಲೆ ಮೊಕದ್ದಮೆ ದಾಖಲು ಮಾಡಿರುವರು

—ಪಂಚಾಯತುಗಳ ಈ ಹೊಸ ಪಂಚಾಯತಿಯೇ ಬೇರೆ ಆಗಿದೆಯಲ್ಲ'

ಇದೊಂದು ವಿಚಿತ್ರವಲ್ಲವೆ?

ವಿದ್ಯಾಇಲಾಖಾ ಆಫೀಸರುಗಳೆಲ್ಲ ಹೊಸರಾಗ ಹಾಡುತ್ತಿರುವುದು!

ಕರೂರು ಮ್ಯುನಿಸಿಪಲ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯ ಸಂಘದ ಸಭೆಸೇರಿದಾಗ, ಅಲ್ಲಿನ ಸೀನಿಯರ್ ಡೆಪ್ಯೂಟಿ ಇನ್ಸಪೆಕ್ಟರರು ವಾರ್ಧಾಶಿಕ್ಷಣಯೋಜನೆಯನ್ನು ಕುರಿತು ಮಾತಾಡುತ್ತಾ—ಉಪಾಧ್ಯಾಯರು ಈ ಹೊಸ ಯೋಜನೆಯಂತೆ ಶಿಕ್ಷಣಕೊಡಲು ಸಿದ್ಧರಾಗುವ ಜವಾಬ್ದಾರಿ ಹೊರಬೇಕೆಂದೂ ಒತ್ತಿ ಹೇಳುವಾಗ, ಮ್ಯುನಿಸಿಪಲ್ ಹೈಸ್ಕೂಲಿನಲ್ಲಿ ನಾಲ್ಕು ವರ್ಷ ಬಡಗಿಯ ಕೆಲಸ ಕಲಿತ ಹುಡುಗರಿಂದ ಒಂದು ಮುರಿದ ಕುರ್ಚಿಯನ್ನು ದುರುಸ್ತಿ ಮಾಡಬರುವುದಿಲ್ಲವೆಂದೂ, ಒಂದು ಮರದ ಸೌಟನ್ನು ಸಹ ಅವರು ಮಾಡಲಾರರೆಂದೂ ತಿಳಿಸಿದರು ಮತ್ತೊಬ್ಬ ಡೆಪ್ಯೂಟಿ ಇನ್ಸಪೆಕ್ಟರರು ಮಕ್ಕಳು ಬಹಳವಾಗಿ ಪ್ರಾಥಮಿಕ ತರಗತಿಗಳಲ್ಲಿ ಕೊಳೆಯುತ್ತಿರುವರೆಂದೂ, ಮೇಲಣ ದರ್ಜೆಗೆ ಬರುತ್ತಾ ಅವರ ಸಂಖ್ಯೆ ಕಡಮೆಯಾಗುತ್ತಿರುವುದೆಂದೂ ಸೂಚಿಸಿ, ತಕಲೀ ನೂಲುವಿಕೆ ಮತ್ತು ಗಾಯನ ಇವನ್ನು ಕಲಿಸುವುದುತ್ತಮವೆಂದರು

ಪ್ರತಿಯೊಂದು ಉಪಾಧ್ಯಾಯ ಸಭೆಯಲ್ಲೂ ಈಗ,—ಮೊನ್ನೆಯ ವರೆಗೆ ಜ್ಯಾರಿಯಲ್ಲಿರುತ್ತಿದ್ದ, ಈಗಲೂ ಜ್ಯಾರಿಯಲ್ಲಿರುವ ಶಿಕ್ಷಣ ಪದ್ಧತಿಯನ್ನು ವಿಮರ್ಶಾಧಿಕಾರಿಗಳಾಗಿ ತಿದ್ದುತರುತ್ತಿರುವ ಇಲಾಖಾ ಆಫೀಸರರೇ ಈಗ ಎಲ್ಲೆಲ್ಲೂ ದೂರುವ ಹೊಸ ವಾಡಿಕೆಯಾಗಿದೆ ಮೇಲಣ ಅಧಿಕಾರಿಗಳ ಸೂಚನೆಯೆ ಇದಕ್ಕೆ ಕಾರಣವೇ? ಇಷ್ಟು ಕಾಲ ಇವರು ವಿಮರ್ಶಿಸುವಾಗ, ಅದನ್ನೆ ಹೊಗಳುತ್ತಿದ್ದರಲ್ಲ, ಅದೇಕೆ?

ವೈಕುಂಠ ಸಮಾರಾಧನೆಗಳು.

51 ಭೋಜನಾತಿಥಿಗಳಿದ್ದರೆ ಯಥೇಷ್ಟ.

ಮಾಲವಾ ಗ್ವಾಲಿಯರು ರಾಜ್ಯಗಳಲ್ಲಿ, ಉತ್ತರಕ್ರಿಯೆಯ ಮುಕ್ತಾಯಕ್ಕೆ, ಮೃತನಿಗೇ ಮಾತ್ರವಲ್ಲದೆ ಜೀವಿತರಿಗೂ ಮುಕ್ತಿ ದೊರೆವಂತಹ ಧನವ್ಯಯದ ವೈಕುಂಠ ಸಮಾರಾಧನೆಗಳಾಗುವುವು. ಇದನ್ನು ತಿಳಿದು ಗ್ವಾಲಿಯರು ಮಹಾರಾಜರು,—ಇಂತಹ ಸಂತರ್ಪಣೆಗಳಲ್ಲಿ ಅತಿಥಿಗಳ ಸಂಖ್ಯೆ 51ಕ್ಕೆ ಮೀಗಬಾರದೆಂದು ಕಟ್ಟು ಮಾಡಿರುವರು. ಈ ಸಂಖ್ಯೆಗೆ ಮೀರಿ ಸಂತರ್ಪಣೆಯಾಗುವಲ್ಲಿ, ಒಂದು ಸಾವಿರ ರೂಪಾಯಿ ಜುಲುಮಾನೆ, ಅಥವಾ ಒಂದು ತಿಂಗಳ ಸಜೆಯ ಮೂಲಕ ತಪ್ಪಿತಸ್ಥರನ್ನು ದಂಡಿಸಲಾದೀತೆಂದು ಕಾನೂನು ವಿಧಿಸಿಯದೆ'

ಚಿಕ್ಕಾಸಿನ ದುಡಿತದ ಪ್ರಯತ್ನಗಳನ್ನು ಸಹಮಾಡುವ ಆಲೋಚನೆ ಎಂಬುದೂ ನರಕಯಾತನೆ ಎಂದೆಣಿಸುವವರನ್ನು, ಮತ್ತೂ ಭಾರವಾಗಿ ಎಣಿಸಿ ಭೂಮಿಯ ಭಾರ ಹೆಚ್ಚಿಸುವ ಪ್ರಯತ್ನಗಳಿಂದ, ಇದ್ದವರ ಸರ್ವನಾಶವಾಗುವುದೇ ಮಾತ್ರವಲ್ಲದೆ, ಯೋಗ್ಯರೂ ಅರ್ಹರೂ ಇತರ ರೀತಿಯಿಂದ ಬದುಕಲಾರದವರೂ ಆದವರಿಗೆ ಇಂತಹ ಆಹಾರ ದೊರೆವಂತೆ ಮಾತ್ರ ಸಂತರ್ಪಣೆಗಳಾಗಲೆಂದು ಬರೋಡಾ ಗ್ವಾಲಿಯರ ಮೊದಲಾದ ರಾಜ್ಯಗಳಲ್ಲಿ ರಾಜರುಗಳೇ ಪ್ರಜೆಗಳಲ್ಲಿ ವಿವೇಕಹುಟ್ಟುವಂತೆ ಒತ್ತಾಯದ ಕಾನೂನುಗಳನ್ನು ಮಾಡುವರು. ಹಿಂದೂ ಧರ್ಮಪಾಲನೆಗೆ ಹಿಂದೂರಾಜರೇ ಮನುಗಳು ಎಂಬುದು ಶಾಸ್ತ್ರದ ವಚನವಂತಾದರೂ, ಈ ರೀತಿಯನ್ನು ಸರ್ವರೂ ಅನುಸರಿಸಬಾರದೇಕೆ? ಸಂತೋಷವು ಉಕ್ಕಿಹರಿಯಬಹುದಾದ ವಿವಾಹ ಸಂದರ್ಭಗಳು ಸಹಾ ಐದು ನಿಮಿಷ ಐದು ರೂಪಾಯಿ ವ್ಯಯದೊಳಗೆ ಮುಗಿಯುವಂತಾಗುವಾಗ ಈ ವಿಷಾದದ ಸಮಾರಾಧನೆಗಳೇಕೆ? ಉಳಿದವರಾದರೂ ಸಾಲವಿಲ್ಲದೆ ಬಾಳಲಿ

ಮುಸ್ಲಿಮರು ಬಂಗಾಳಿ ಭಾಷೆ ಕಲಿಯಲಿ!

ಹಿಂದುಸ್ಥಾನಿಯು ಕಡ್ಡಾಯವೇಕೆ?

ಕಲ್ಕತ್ತಾ ಕಾರ್ಪೊರೇಶನಿನಲ್ಲಿ, ಬೇಗಮ್ ಸೈನಾರವರು, ಮ್ಯುನಿಸಿಪಲ್ ಶಿಕ್ಷಕರೆಲ್ಲರು ಒತ್ತಾಯದಿಂದ ಹಿಂದುಸ್ಥಾನಿಯನ್ನು ಕಲಿಯಲೇಬೇಕೆಂದು ನಿರ್ಬಂಧಿಸುವ ಅದೊಂದು ಸೂಚನೆಯನ್ನು ಮುಂತಂದರು ಇದು ಶಿಕ್ಷಕರಿಗೆ ಪ್ರಯೋಜನಕರವೆಂದೂ ಮಾತ್ರವಲ್ಲದೆ, ಪ್ರಾಂತಗಳೊಳಗೆ ಪರಸ್ಪರವಾದ ಮೈತ್ರಿ ಸಂಭಾಷಣಾದಿಗಳಿಗೂ ಉಪಯುಕ್ತವಾದುದೆಂದೂ, ಹಿಂದುಸ್ಥಾನಿಯೇ ಇಡೀ ದೇಶದ ನಾಳಿನ ಭಾಷೆಯಾಗುವುದೆಂದೂ ಸೂಚಕರ ವಿವರವಾದ ಅನುಮೋದನೆಯಾಗಿತ್ತು

ಮೇಯರರು (ಚೆಯರ್ಮನರು)— ಬಂಗಾಳಿ ಮುಸಲ್ಮಾನರು ತಮ್ಮ ಪ್ರಾಂತ್ಯದ ಭಾಷೆಯಾದ ಬಂಗಾಳಿಯನ್ನು ಕಲಿತಿರದುದಕ್ಕೆ ನಾಚಿಕೊಳ್ಳಬೇಕು ಮಾತೃಭಾಷೆ ಅವರಿಗೆ ಗೊತ್ತಿಲ್ಲ! ಜನಸಂಖ್ಯೆಯ ನೂರರಲ್ಲಿ 55 ಮಂದಿ ಅವರು, ಅವರಿಂದ ಬಂಗಾಳಿ ಭಾಷಾ ಸಾಹಿತ್ಯಗಳಿಗೆ ದೊರೆತ ಪ್ರಯೋಜನ ಅತ್ಯಲ್ಪ!

ಏನೆನ್ನಬೇಕು! ಮುಸ್ಲಿಮ್ ಲೀಗಿನ ಮುಂದಾಳಿಗಳಾಗಿ ಬಂಗಾಳ ಸರಕಾರದ ಮುಖ್ಯ ಮಂತ್ರಿಗಳಾಗಿರುವ ಫಜಲುಲ್ ಹುಕ್ಕರು, ಮುಸ್ಲಿಮರೆಲ್ಲ ಉರ್ದು ಕಲಿಯಬೇಕೆಂದು ಸಾರಿದ್ದುದು ಎಷ್ಟು ಶೋಚನೀಯ! ಬಂಗಾಳದ ಸಾಹಿತ್ಯವೆಂಬುದು ಹೆಮ್ಮೆಯ ವಿಷಯ, ಬಂಗಾಳಿಗಳಲ್ಲದವರು ಬಂಗಾಳಕ್ಕೆ ಬಂದರೆ ನಮ್ಮ ಭಾಷೆ ಕಲಿಯಲಿ, ನಾವೇಕೆ ಅವರ ಭಾಷೆ ಕಲಿತು ನಮ್ಮ ಭಾಷೆ ಮರೆಯಬೇಕು! ಎಂತೂ ಈ ವಿಷಯವನ್ನು ಪ್ರೈಮರಿ ಶಿಕ್ಷಣ ಕಮಿಟಿಗೆ ಒಪ್ಪಿಸಲಾಯಿತು

ಮಾತೃಭಾಷೆಯೆಂದರೆ ಬಂಗಾಳಿಗಳು ಜೀವಬಿಡುವರು. ಹೆಚ್ಚಿನ ಹಿಂದೀಯರಿಗೆ, ಮಾತೃಭಾಷೆ ಮರೆತರೆ ಸುಖವೆಂದೇ ವಿಶ್ವಾಸವಾಗಿರುವುದು ದಕ್ಷಿಣ ಹಿಂದೂದೇಶದಲ್ಲಿಯೆ!

ಊಟದ ನಂತರ ನೋವು ಉಂಟಾಗುವುದನ್ನು ತಡೆಯಿರಿ

ತಲೆ ತಿರುಗುವುದು, ಗಂಟಲಲ್ಲಿ ಉರಿತ, ವಾಯು ಇತ್ಯಾದಿ ಹೊಟ್ಟೆನೋವು, ಉದರಪೀಡೆಗಳುಂಟಾಗುವುದು ಊಟವಾದ ನಂತರ

ಈ ತರದ ಸಂಕಟಗಳುಂಟಾಗುವುದು ಹಾಳು ಹೊಟ್ಟೆಯಿಂದ. ನಿಮ್ಮ ಹೊಟ್ಟೆಯನ್ನು ಸುಖವಾದ ರೀತಿಯಲ್ಲಿ ನಿರ್ಮಲಗೊಳಿಸುವ ಒಂದೇ ಒಂದು ಉಪಾಯವೆಂದರೆ, ಇನೋಸ್ 'ಫ್ರುಟ್ ಸಾಲ್ಟ್'ನ Eno's 'Fruit Salt' ಒಂದು ಗ್ಲಾಸನ್ನು ಕುಡಿಯುವುದು ಊಟವನ್ನು ರುಚಿಸಲು, ಇನೋಸ್ ಅನುಕೂಲ ಮಾಡಿಕೊಡುವುದು

ಜಗತ್ತಿನ ಎಲ್ಲಾ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟು, ಉತ್ತಮ ಪರಿಪಕ್ವವಾದ ಹಣ್ಣಿನಲ್ಲಿರುವ ಉತ್ತಮ ಗುಣಗಳಿರುವ ಪದಾರ್ಥಗಳು ಇನೋಸ್ ಫ್ರುಟ್ ಸಾಲ್ಟ್ Eno's Fruit Salt ನಲ್ಲಿವೆ ಇನೋ ಸೇವನೆಯಿಂದ ಖರ್ಚು ಕಡಿಮೆ ಎಲ್ಲಾ ಕಡೆಗಳಲ್ಲಿ ಮೂರು ಪರಿಮಾಣದಲ್ಲಿ ದೊರೆಯುತ್ತದೆ

ನಕಲಿ ಮಾಲನ್ನು ಕೊಳ್ಳಬೇಡಿರಿ ಖಾತ್ರಿಯಾದ ಫ್ರುಟ್ ಸಾಲ್ಟ್ ಬಾಟ್ಲಿಯಲ್ಲಿ ಮಾರಲ್ಪಡುತ್ತದೆ ಈ ಮಾದರಿಯ ಪೆಕಿಂಗ್ ಮಾತ್ರ ಶ್ರೇಷ್ಠವಾದುದೆಂದು ನಮ್ಮ 70 ವರ್ಷದ ಅನುಭವ ಸಿದ್ಧಾಂತವಾಗಿರುತ್ತದೆ

E V K 5

(೯ನೇ ಪುಟದಿಂದ)

ಹೋಗುವಷ್ಟು ಯಾವಾಗಲೂ ಪ್ರಬಲವಾಗಿದ್ದುದಿಲ್ಲ ಯುರೋಪದಲ್ಲಿ ಈಗ ಪ್ರತ್ಯಕ್ಷ ಎಲ್ಲರಿಗೂ ತಿಳಿಯುವಂತೆ ಯುದ್ಧ ತಯ್ಯಾರಿಗಳಾಗುತ್ತಲಿವೆ ಆದರೆ ಯಾರೂ ಅದನ್ನು ಯುದ್ಧ ತಯಾರಿ ಎನ್ನುವದಿಲ್ಲ ಕೇವಲ ತನ್ನ ಆತ್ಮರಕ್ಷಣೆಗಾಗಿಯೆ ಹಾಗೆ ಮಾಡುತಿದ್ದೇನೆಂದು ಪ್ರತಿಯೊಬ್ಬನು ಹೇಳುತ್ತಾನೆ ಆದರೆ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ, ಮೈಮೇಲೆ ಬೀಳುವ ಶತ್ರು ಯಾರು? ಇದೂ ಯಾರಿಗೂ ತಿಳಿಯದು! ಇತರರನ್ನು ಮೋಸಮಾಡುವದೇ ತನ್ನ ಕರ್ತವ್ಯವೆಂದು ಪ್ರತಿಯೊಬ್ಬನು ತಿಳಕೊಂಡಿದ್ದಾನೆ ಇಂಥಹ ಪರಿಸ್ಥಿತಿಯಲ್ಲಿ ಲೋಕಶಾಂತಿಯು ಹೇಗುಂಟಾಗಬೇಕು?

ಆದರೆ ನಾನು ತಪ್ಪು ಮಾಡಿದೆ ಲೋಕಶಾಂತಿಯುಂಟಾಗಬೇಕಾದರೆ ಬಹುಶಃ ಹಿಂಸೆಯ ಏಣಿಯ ಮೆಟ್ಟಲನ್ನು ಒಂದೊಂದಾಗಿ ಹತ್ತುವದು ಅಗತ್ಯವಾಗಿದೆ ಯಾರು ಯಾರು ಮಹಾಯುದ್ಧದ ಸರ್ವ ಸಿದ್ಧತೆಗಳನ್ನು ಮಾಡುತಿದ್ದಾರೊ, ಅವರೊಳಗೆ ಒಂದಲ್ಲ ಒಂದು ದಿನ ಪ್ರಬಲ ಸಂಘರ್ಷವು ಆಗೇ ಆಗುವದು, ಅಂತ್ಯದಲ್ಲಿ ಅವರೆಲ್ಲರೂ ಸೋತು ಸುಣ್ಣವಾಗಿ ಶಾಂತರಾಗಿರಬೇಕಾಗುವದು ಈಗಲಾದರೋ ಶಕ್ತಿಸಂಪನ್ನ ರಾಷ್ಟ್ರಗಳು ತಮ್ಮ ಯುದ್ಧದ ಹಡಗು ಯುದ್ಧದ ವಿಮಾನ, ವಿಷವಾಯು ಸೇನೆ ಸರಂಜಾಮುಗಳ ಅಭಿಮಾನದಿಂದ ತುಂಬಿ ತುಳುಕಿವೆ ಶರೀರದ ಕೊಳೆತ ಅಂಗದಂತೆ ಇದೂ ಸಮಾಜದಂತೆ ಶರೀರದ ಕೊಳೆತ ಸ್ವರೂಪವಾಗಿದೆ ಒಂದೇ ಈ ಅಂಗವು ಕೊಳೆತು ಬಿಟ್ಟು ಹೋಗುವದು ಅಥವಾ ಅದನ್ನು ಕತ್ತರಿಸಿ ಹಾಕಲಾಗುವದು ಹಡಗಿನೊಡನೆ ಹಡಗು, ಮನುಷ್ಯನೊಡನೆ ಮನುಷ್ಯನು ಹೊಡೆದಾಡಿಕೊಂಡು, ಲೋಕಶಾಂತಿಗಾಗಿ ಎಲ್ಲರೂ ಯುದ್ಧದಲ್ಲಿ ಭಾಗ ತೆಗೆದುಕೊಳ್ಳುವರು ಫ್ರಾನ್ಸದ ಯುದ್ಧ ಮಂತ್ರಿಯು ಒಮ್ಮೆ ಹೇಳಿದ ಹಾಗೆ, ಒಮ್ಮಿಂದೊಮ್ಮೆಗೆ ಮಿಂಚಿನ ಪ್ರವಾಹವು ಇಳಿದು ಬಂದು, ಒಂದರೆಕ್ಷಣದಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆಯ ಆಹುತಿ ತೆಗೆದುಕೊಂಡು ಹೋಗಿಬಿಡುವದು

ಈ ಮುಂದಿನ ಮಹಾಯುದ್ಧದಲ್ಲಿ ಸ್ವತಂತ್ರ ಜಾತಿಗಳ ಅಹಿಂಸಾವಾದಿಯಾಗಿದ ಅವುಗಳ ಸರ್ವನಾಶವಾಗುವದು ಅವುಗ ಏನು ಹಾನಿಯಾದೀತೆಂದು ಹೇಳುವದು ಕಷ್ಟವಾಗಿದೆ ಆದರೆ ಮುಂದೆ ಕೆಲವು ಶತಮಾನಗಳ ತನಕ ಯುದ್ಧಗಳಾಗದೆ ಇಲ್ಲಿ ಯುದ್ಧಗಳ ಆವಶ್ಯಕತೆಯೂ ಬೀಳುವದಿಲ್ಲ ಎಂದು ಖಚಿತ ಹೇಳಬಹುದು

ಮುಂದಿನ ಯುದ್ಧದಿಂದ ಯುರೋಪಿನ ಸಭ್ಯತೆಯು ನಷ್ಟವಾಗುವದಿಲ್ಲ?—ಎಂದು ಕೊಂಡು ಕೆಲವು ಜನರು ಮರುಗುತ್ತಾರೆ ಆದರೆ ಹಾಗೆ ಮರುಗುವ ಕಾರಣ ಇಲ್ಲ ಯುರೋಪಿನ ಸಭ್ಯತೆ ಎಂದರೇನು?—ಯಂತ್ರ ಯಂತ್ರ!! ಯಂತ್ರ!!! ತಾನೆ? ಯಾವ ಸಭ್ಯತೆಯ ಹೊಟ್ಟೆ ತುಂಬಿಸಲಿಕ್ಕೆ ಇಡೀ ಪ್ರಪಂಚ ಬಲಿಯಾಗಬೇಕಾಗಿದೆಯೋ ಅಂಥ ಸಭ್ಯತೆಯ ಇದ್ದರೇನು, ನಷ್ಟವಾಗಿ ಹೋದರೇನು? ಸಭ್ಯತೆಯು ನಷ್ಟವಾದ್ದರಿಂದ ಯುರೋಪಿನ ಜನರು ಬೇಕಾದರೆ ಬೇಕಾದಷ್ಟು ಮರುಗಬೇಕಾಗಿದ್ದರೂ ಉಳಿದವರಿಗೆ ಯಾಕೆ ದುಃಖವಾಗಬೇಕು? ಈ ಯುದ್ಧದಲ್ಲಿ ಉಳಿದ ಜಾತಿಗಳು ತಮ್ಮ ಅಸ್ತಿತ್ವವನ್ನು ಕಾಯಲಾರವು ಎಂಬುದು ನಿಜ ಎಲ್ಲರ ಸಾವಿನೊಂದಿಗೆ ಅವುಗಳಿಗೆ ಸಾವು ಬರುವದು ಬರಲಿ ಹತ್ತು ಮಂದಿಯ ಸಾವು ಮದುವೆಗೆ ಸಮಾನ! ಮತ್ತೆ ಅಂಥ ಯುದ್ಧವನ್ನು ತಪ್ಪಿಸಲಿಕ್ಕೆ ಕೂಡ ಯಾರು ಸಮರ್ಥರಾಗಿದ್ದಾರೆ? ನಮ್ಮ ಧರ್ಮಶಾಸ್ತ್ರಗಳ ಪ್ರಕಾರ ಅಂಥ ಯುದ್ಧವು ಅನಿವಾರ್ಯವಾಗಿದೆ, ಅದು ಸಾಕ್ಷಾತ್ ಭಗವಂತನ ಪ್ರೇರಣೆಯಿಂದಲೇ ಆಗುತ್ತದೆ ಎಂದೆಂದು ಧರ್ಮಗ್ಲಾನಿಯಾಗಿ ಅಧರ್ಮವು ಹಬ್ಬುತ್ತದೊ, ಆಗ ನಾನು ಅಧರ್ಮದ ನಾಶ ಮತ್ತು ಧರ್ಮಸ್ಥಾಪನೆಗಾಗಿ ನಾನು ಬರುತ್ತೇನೆ ಬಂದು ಪಾಪಿಗಳನ್ನು ಕೊಂದು, ಸಾಧುಗಳನ್ನು ಕಾಪಾಡಿ ಧರ್ಮೋದ್ಧಾರ ಮಾಡುತ್ತೇನೆ ಎಂದು ಭಗವದ್ಗೀತೆಯಲ್ಲಿ ಹೇಳಿರುವದಲ್ಲವೆ? ಆದ್ದರಿಂದ ಮುಂದಿನ ಯುದ್ಧಕ್ಕಾಗಿ ಯಾರಿಗೂ ದುಃಖ ಬೇಡ

ಮಂಗಳೂರು ವಾರ್ತೆ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಕಳೆದ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಮಂಗಳೂರು ಫೆಲಿಕ್ಸ ಪೈ ಬಜಾರಿನ ಹಾಲಿನಲ್ಲಿ ಜರಗಿತು.

ಅಧ್ಯಕ್ಷರಾದ ಶ್ರೀ. ಎಂ. ಶ್ರೀನಿವಾಸ ಮಲ್ಯರು ಮೊದಲಾಗಿ ಶ್ರೀ. ಎಂ. ಎಸ್ ಅಧಿಕಾರಿಗಳು ಮುಂದೆ ತರಲಿರುವ ಕಾರ್ಯಕಾರೀ ಮಂಡಲಿಯ ಮೇಲಿನ ಅವಿಶ್ವಾಸದ ಠರಾವನ್ನೇ ಚರ್ಚಿಸುವುದು ಉತ್ತಮವೆಂದೂ ಈ ಸಂದರ್ಭದಲ್ಲಿ ತಾನೇ ಸಭೆಯ ಅಧ್ಯಕ್ಷನಾಗಿ ಕುಳಿತುಕೊಳ್ಳುವುದು ಸರಿಯಲ್ಲವೆಂದೂ ವಿವರಿಸಿ ಅಧ್ಯಕ್ಷಸ್ಥಾನವನ್ನು ಬಿಟ್ಟು ಕೊಟ್ಟು ಶ್ರೀ ಮೇಲಹಳ್ಳಿ ಶಿವರಾಯರನ್ನು ಸಭೆಯ ಅಧ್ಯಕ್ಷರಾಗುವಂತೆ ಕೇಳಿಕೊಂಡರು

ಶ್ರೀ. ಶಿವರಾಯರು ಸಭಾಧ್ಯಕ್ಷರಾಗಿ ಶ್ರೀ ಅಧಿಕಾರಿಗಳು ತಮ್ಮ ನಿರ್ಣಯವನ್ನು ಸಭೆಯ ಮುಂದಿಡಬೇಕಾಗಿ ಕೇಳಿಕೊಂಡರು ಶ್ರೀ| ಅಧಿಕಾರಿಗಳು ನಿರ್ಣಯವನ್ನು ಓದಿ ಹೇಳಿ ತಾನು ಯಾರ ಮೇಲಣ ವ್ಯಕ್ತಿ ದ್ವೇಷದಿಂದ ಇದನ್ನು ಮುಂದರಿಸುತ್ತಿಲ್ಲವೆಂದೂ ಅಲ್ಲಲ್ಲಿ ಕಮಿಟಿಯ ಮೇಲೆ ಜನರು ದೂರು ಹೇಳುತ್ತಿರುವರೆಂದೂ ಕಮಿಟಿಯ ಮೇಲೆ ತುಂಬಾ ಆರೋಪಗಳಿರಬಹುದಾದರೂ ಅವು ತನಗೆ ಸರಿಯಾಗಿ ಗೊತ್ತಿಲ್ಲವೆಂದೂ ತಾನು ಸ್ಥಳೀಕ ಪತ್ರಿಕೆಗಳನ್ನು ಸಂಪೂರ್ಣ ಓದುವುದಿಲ್ಲವಾಗಿ ತನಗೆ ಹೆಚ್ಚಿನ ಸಂಗತಿಗಳು ಸರಿಯಾಗಿ ಗೊತ್ತಿಲ್ಲವೆಂದೂ ವಿವರಿಸಿ ಕಳೆದ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಮಿ| ಸಿ ಎಲ್ ಲೋಬೋರವರ ಕಡೆಗೆ ಕಮಿಟಿಯ ವರ್ತನ ಮತ್ತು ಶ್ರೀ| ಹಲ್ಲನಾಡು ಸೂರಪ್ಪಯ್ಯನವರನ್ನು ಆರಿಸದಿದ್ದದ್ದು ಎರಡು ಆರೋಪಗಳನ್ನು ಸಭೆಯ ಮುಂದಿಟ್ಟು ಹೆಚ್ಚಿನ ವಿಚಾರಗಳನ್ನು ಅನ್ಯ ಪಕ್ಷದವರೂ ಸಮರ್ಥಕರೂ ಹೇಳುವರೆಂದು ಹೇಳಿ ಸಭಿಕರ ಇಷ್ಟವಿದ್ದರೆ ಠರಾವನ್ನು ಮಂಜೂರು ಮಾಡಬಹುದಾಗಿಯೂ ಇಲ್ಲದಿದ್ದರೆ ನಿರಾಕರಿಸಬಹುದೆಂದೂ ಸೂಚನೆ ಮಾಡಿದರು. ಶ್ರೀ| ಜಗನ್ನಾಥ ರೈಯವರು ಅನುಮೋದಿಸಿದರು ಠರಾವಿಗೆ ಅನುಕೂಲ ಅಭಿಪ್ರಾಯವಿದ್ದವರೇ ಮೊದಲು ಮಾತಾಡುವುದುತ್ತಮವೆಂದು ಅಧ್ಯಕ್ಷರು ಸೂಚಿಸಿದಂತೆ ಶ್ರೀ| ಜಗನ್ನಾಥ ರೈಗಳೂ ಡಾಕ್ಟರ್ ಶಾಸ್ತ್ರಿಗಳೂ ಮಾತಾಡಿದರು. ಇವರಿಬ್ಬರೂ ಹಿಚ್ಚಿನ ಸರ್ಕಲಿನ ಉಮೇದ್ವಾರರನ್ನು ಆರಿಸುವಿಕೆ ಮತ್ತು ಕಾಸರಗೋಡಿನ ವಿಚಾರ ಮಾತಾಡಿದರು. ಅನಂತರ ಸಭಾಧ್ಯಕ್ಷರು ಸೂಚಿಸಿದಂತೆ ಶ್ರೀ ಶ್ರೀನಿವಾಸ ಮಲ್ಯರು ಮುಂದೆ ಬಂದು ನಾಲ್ಕು ಪ್ರಕರಣಗಳನ್ನು ವಿವರಿಸಿ ಇದರಲ್ಲಿ ಕಮಿಟಿಯವರ ಮೇಲೆ ಯಾವ ಆರೋಪಕ್ಕೂ ನ್ಯಾಯವಿಲ್ಲವೆಂದರು. ಆ ಮೇಲೆ ಇನ್ಯಾರೂ ಮಾತಾಡಲಿಲ್ಲವೆಂದು ಅಧ್ಯಕ್ಷರು ಸೂಚಿಸಲು ಶ್ರೀ| ಹೊಳ್ಳರು, ಕುಕ್ಕಿಲ ಗಣಪಯ್ಯ ಶೆಟ್ಟರು ಮತ್ತು ರಂಗರಾವ್ ಕಲಚೇರಿಯವರು ಮಾತಾಡಿದ ಬಳಿಕ ವಿಷಯವು ಸಭೆಯ ತೀರ್ಮಾನಕ್ಕೆ ಒಪ್ಪಿಸಲ್ಪಟ್ಟಿತು

ಕಾರ್ಯಕಾರೀ ಮಂಡಲಿಯ ಮೇಲಿನ ಅವಿಶ್ವಾಸದ ನಿರ್ಣಯವೆಂಬುದರಿಂದ ಆ ಮಂಡಲಿಯ ಸದಸ್ಯರ್ಯಾರೂ ಇದರಲ್ಲಿ ಓಟು ಕೊಡಲಾಗದೆಂದು ಅಧ್ಯಕ್ಷರು ಮೊದಲೇ ಇತ್ಯರ್ಥ ಹೇಳಿದ್ದರು. ಓಟುಗಳನ್ನು ಗುಪ್ತ ರೀತಿಯಿಂದ ಕೊಡುವಂತಾಗಬೇಕೆಂದು ಕೆಲವರು ಹೇಳಲು ಹಾಜರಿದ್ದ ಸದಸ್ಯರಲ್ಲಿ ಮೂರನೇ ಒಂದಂಶದಷ್ಟು ಮಂದಿ ಗುಪ್ತ ರೀತಿಯಾಗಬೇಕೆಂದು ಹೇಳಿದರೆ ಮಾತ್ರ ಆ ವಿಧಾನವು ಅನುಸರಿಸಲ್ಪಡಲಾಗುತ್ತದೆಯೆಂದೂ ಇಲ್ಲದಿದ್ದರೆ ಕೈಯೆತ್ತಿ ಮತಕೊಡುವ ಪದ್ಧತಿಯು ಅನುಸರಿಸಲ್ಪಡುವುದೆಂದೂ ಸಭಾಧ್ಯಕ್ಷರು ನಿಯಮವನ್ನು ಓದಿ ಹೇಳಿ ಗುಪ್ತರೀತಿಯಾಗಬೇಕೆಂದು ಹೇಳುವವರನ್ನು ಕೈ ಎತ್ತಲು ಹೇಳಿದರು. ಸಭೆಯಲ್ಲಿ ಜಿಲ್ಲಾ ಕಮಿಟಿಯ ೧೦೨ ಮಂದಿ ಸದಸ್ಯರಲ್ಲಿ ೬೪ ಮಂದಿ ಹಾಜರಿದ್ದರು. ಗುಪ್ತ ರೀತಿಯ ಮತದಾನವಾಗಬೇಕೆಂಬುದಕ್ಕೆ ೧೫ ಓಟುಗಳು ಮಾತ್ರ ಸಿಕ್ಕಿ ಬಹಿರಂಗವಾಗಿಯೇ ಓಟು ಕೊಡಬೇಕೆಂದು ತೀರ್ಮಾನವಾಯಿತು

ಆ ಮೇಲೆ ನಡೆದ ಮತದಾನದಲ್ಲಿ [illegible] ಮತಗಳು ಠರಾವಿಗೆ ಅನುಕೂಲವಾಗಿಯೂ ೨೬ ಮತಗಳು ಪ್ರತಿಕೂಲವಾಗಿಯೂ ಠರಾವು ಬಿದ್ದು ಹೋಯಿತು

ಅನಂತರ ಶ್ರೀ| ಶಿವರಾಯರು ಅಧ್ಯಕ್ಷಸ್ಥಾನವನ್ನು ಶ್ರೀ| ಶ್ರೀನಿವಾಸ ಮಲ್ಯರಿಗೆ ಪುನಃ ಬಿಟ್ಟುಕೊಟ್ಟರು ಶ್ರೀ| ಅಧಿಕಾರಿಗಳ ಇತರ ಠರಾವುಗಳ ವಿಚಾರವಾಯಿತು ಶ್ರೀ| ರಂಗರಾಯರ ಮೇಲೆ ೭ ವರ್ಷಗಳಿಗೆ ಶಿಸ್ತು ಜಾರಿ ಮಾಡಬೇಕೆಂಬುದರ ಅವಧಿಯನ್ನು ಕಡಮೆ ಮಾಡಬೇಕೆಂಬ ನಿರ್ಣಯಕ್ಕೆ ಅನುಮೋದಕರೇ ಇರಲಿಲ್ಲವಾಗಿ ಬಿದ್ದುಹೋಯಿತು ಹಾಗೆಯೇ ಶ್ರೀಯುತರು ತಂದ ಉಪ್ಪಿನಂಗಡಿ ತಾಲೂಕು ಕಮಿಟಿಯ ಅಧ್ಯಕ್ಷರ ಮೇಲಿನ ಅವಿಶ್ವಾಸ ಠರಾವು ಅನುಮೋದಕರಿಲ್ಲವೆಂದು ಬಿದ್ದುಹೋಯಿತು ಇದೇ ರೀತಿ ಶ್ರೀ| ಅಧಿಕಾರಿಗಳ ಎರಡು ಠರಾವುಗಳೂ ಬಿದ್ದು ಹೋದವು

ಅನಂತರ [illegible] ಸಭೆ ಮುಂದಿರಿಸಿದ ಬಜೆಟು ಮಂಜೂರಾಯಿತು ಉಡುಪಿ [illegible] ಕಾಂಗ್ರೆಸ್ ಕಮಿಟಿ [illegible] ನಿರ್ಧರಿಸಲಾಯಿತು.

ಪ್ರಕೃತ ಸಂಭವಿಸಿದ ನೆರೆಯಿಂದ ನಷ್ಟ ಹೊಂದಿದವರಿಗೆ ಜಿಲ್ಲಾ ನೆರೆಹಾವಳಿ ನಿವಾರಣಾ ಸಂಘದ ವತಿಯಿಂದ ನಿಧಿಯಿಂದ ಸಹಾಯವು ದೊರೆಯುವಂತೆ ಬೇಕಾದ ವ್ಯವಸ್ಥೆಯನ್ನು ಸಂಬಂಧಪಟ್ಟವರಿಂದ ಮಾಡಿಸುವಂತೆ ಕಾಂಗ್ರೆಸ್ ಕಮಿಟಿ ಅಧ್ಯಕ್ಷರನ್ನು ಕೇಳಿಕೊಳ್ಳಲಾಯಿತು

ಶ್ರೀ ನಾರಾಯಣ ಗೌಡರಿಗೆ ವರ್ಗವಾಯಿತು

ಸ್ಥಳೀಯ ಗವರ್ನಮೆಂಟು ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ನಾರಾಯಣ ಗೌಡರಿಗೆ ಇಲ್ಲಿಂದ ಅನಂತಪುರ ಗವರ್ನಮೆಂಟು ಕಾಲೇಜಿನ ಕೆಮಿಸ್ಟ್ರಿ ಪ್ರೊಫೆಸರರಾಗಿ ವರ್ಗ ಮಾಡಲ್ಪಟ್ಟವರಿಗೂ, ಅದೇ ಕಾಲೇಜಿನ ವರ್ಗಾಯಿಸಲ್ಪಟ್ಟ [illegible] ಪ್ರೊಫೆಸರರಾದ ಶ್ರೀ ಅಪ್ಪಲಾಚಾರ್ಯರಿಗೂ, ಬೀಳ್ಕೊಳುವ ಸಮಾರಂಭವು ಕಾಲೇಜಿನಲ್ಲಿ ಅತ್ಯಂತ ಸಂಭ್ರಮದಿಂದ ನಡೆಯಿತು

ತಾ. 8-7-'37ರಲ್ಲಿ ಸ್ಥಳೀಯ ಗವರ್ನಮೆಂಟ್ ಕಾಲೇಜ್ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿ ಸ್ಥಾನಗಳ ಚುನಾವಣೆಯು ನಡೆಯಿತು. ಅಧ್ಯಕ್ಷಸ್ಥಾನಕ್ಕೆ ಶ್ರೀಯುತ ಕೆ. ವಿಶ್ವನಾಥ ಕಾಮತ್ ಮತ್ತು ಶ್ರೀ ಎಸ್ ಜೆ ಸಮರ್ಥ ಇವರುಗಳೂ, ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಎಸ್. ಸುರೇಂದ್ರನಾಥ ನಾಯ್ಕ ಮತ್ತು ಶ್ರೀ ಬಿ. ಎ ಗೌಡಾ ಇವರುಗಳೂ ಉಮೇದ್ವಾರರಾಗಿದ್ದರು ಚುನಾವಣೆಯ ಕಾರ್ಯವು ಬಹಳ ಭರದಿಂದ ಸಾಗಿ ಫಲಿತಾಂಶವು ಈ ರೀತಿಯಾಗಿ ಪ್ರಕಟಿಸಲ್ಪಟ್ಟಿತು

ಅಧ್ಯಕ್ಷ ಸ್ಥಾನಕ್ಕೆ.—

ಶ್ರೀ ಕೆ. ವಿ. ಕಾಮತ್ 70 ಮತಗಳು
ಶ್ರೀ ಎಸ್. ಜೆ. ಸಮರ್ಥ, 64 ಮತಗಳು.

ಕಾರ್ಯದರ್ಶಿ ಸ್ಥಾನಕ್ಕೆ—

ಶ್ರೀ ಬಿ. ಎ. ಗೌಡಾ, 82 ಮತಗಳು
ಶ್ರೀ ಎಸ್. ಎಸ್. ನಾಯ್ಕ, 58 ಮತಗಳು.

ಶ್ರೀ ಕೆ. ವಿ. ಕಾಮತರು ಅಧ್ಯಕ್ಷಸ್ಥಾನಕ್ಕೂ ಶ್ರೀ ಬಿ. ಎ ಗೌಡಾರವರು ಕಾರ್ಯದರ್ಶಿ ಸ್ಥಾನಕ್ಕೂ ಆರಿಸಲ್ಪಟ್ಟರು. ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ ಮಿಸ್. ಜೊಯ್ಸಿ ವಾಸ್, ಇವರು ಪ್ರತಿಸ್ಪರ್ಧಿ ಇಲ್ಲದೆ ಆರಿಸಲ್ಪಟ್ಟಿರುವರು.

ತಾಲೂಕು ವಾರ್ತೆ

ಕಾರ್ಕಳ: — ಸ್ಥಳೀಯ ಆರ್ಯ ಸಮಾಜದ ಗೌರವ ಪ್ರಚಾರಕರಾದ ಶ್ರೀ. ಆರ್. ಮಂಜನಾಥ ಶೆಣೈಯವರು ಕಳೆದವಾರ ವೇಣೂರಿಗೆ ಹೋಗಿ ಅಲ್ಲಿ ಸಭೆ, ಭಾಷಣಾದಿಗಳ ಮೂಲಕ ವೈದಿಕ ಧರ್ಮಪ್ರಚಾರ ಮಾಡಿದರು ಮತ್ತು ಕ್ರೈಸ್ತ ಪಾದರಿಗಳ ಪ್ರಬಲ ಪ್ರಯತ್ನಗಳಿಂದ ಮತಾಂತರ ಹೊಂದಲಿಕ್ಕಿದ್ದ ಕೆಲವು ಹರಿಜನ ಕುಟುಂಬಗಳನ್ನು ಕಂಡು ಮಾತನಾಡಿ, ಅವರು ಸ್ವಧರ್ಮದಲ್ಲಿಯೇ ಇದ್ದುಕೊಳ್ಳುವಂತೆ ಬೋಧನೆಯನ್ನು ಕೊಟ್ಟರು

ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಯ ಸಭೆಯು ತಾ 3-7-38ರ ದಿನ ಬೆಳಗ್ಗೆ ಶ್ರೀ| ಕೆ ಲಕ್ಷ್ಮಣ ಕುದ್ವರ ಅಧ್ಯಕ್ಷತೆಯಲ್ಲಿ ಕೂಡಿ ಕಾಂಗ್ರೆಸ ಪ್ರಚಾರ ಮತ್ತು ಸದಸ್ಯರನ್ನು ಸೇರಿಸಿಕೊಳ್ಳುವದಕ್ಕೋಸರ, ಬೇರೆ ಬೇರೆ ಕಮಿಟಿ ಮೆಂಬರುಗಳಿಗೆ ಬೇರೆ ಬೇರೆ ವಾರ್ಡುಗಳನ್ನು ಹಂಚಿಕೊಡಲಾಯಿತು

ಇಲ್ಲಿ ಕೆಲವು ದಿನಗಳಿಂದ ಸಣ್ಣ ದೊಡ್ಡ ಕಳವುಗಳಾಗಲಿಕ್ಕೆ ಆರಂಭವಾಗಿದೆ ಪೊಲೀಸರು ಈ ಕಡೆಗೆ ಧ್ಯಾನ ಕೊಡವುದು ಅಗತ್ಯ

ತಿದ್ದುಪಡಿ:—ತಾ 8-7-38ರ ಸಂಚಿಕೆಯಲ್ಲಿ ಪ್ರಕಟವಾದ ಕಾರ್ಕಳದ ನಗರ ಮಾನಗಳಲ್ಲಿ, ವಿಜಯ ಬೇಕರ್ ಲಿಮಿಟೆಡ್‌ನ ಉದ್ಘಾಟನಾ ಸಮಾರಂಭವು ಶ್ರೀ ವಿ [illegible] ವರ ಅಧ್ಯಕ್ಷತೆಯಲ್ಲಿ ಅಲ್ಲ ಪರಂಜ ಶ್ರೀ ಕೆ ಸದಾಶಿವ ಪೈ, [illegible] ರವರ ಅಧ್ಯಕ್ಷತೆಯಲ್ಲಿ ನಡೆಯಿತಾಗಿ ತಿದ್ದಿ ಓದಬೇಕಾಗಿದೆ.

ಶ್ರೀ ಧರ್ಮಸ್ಥಳ. ಸ್ಥಳೀಯ ಪಂಚಾಯತ್ ಬೋರ್ಡು ಅಧ್ಯಕ್ಷರ ಚುನಾವಣೆಯು ಇದೇ ತಾ. ೮ಕ್ಕೆ ನೆರವೇರಿಸಲ್ಪಟ್ಟಿತು. ಶ್ರೀ ವಿ ರಾಮಗೋಪಾಲರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಇಲ್ಲಿಯ ಪಂಚಾಯತ್ ಬೋರ್ಡು ಸ್ಥಾಪನೆಯಾಗಿ, ೮-೯ ವರ್ಷಗಳಾದರೂ ಪಂಚಾಯತಿನಿಂದ ಜನಗಳಿಗೆ ಉಪಯೋಗಗಳು ಹೆಚ್ಚಾಗಿ ಆಗಿಲ್ಲ ದೂರದ ಡಿಸ್ಪೆನ್ಸರಿಗೆ ತಿಂಗಳೊಂದಕ್ಕೆ ರೂ ಹಿಂದಂತೆ, ವೈದ್ಯ ಉದ್ಯೋಗಸ್ಥರಿಗೆ [illegible] ಬಗ್ಗೆ ಸೆಲ್ಕೆನ್ ಆಗಿಯದೆ ಆದರೆ, ಈ ವರೆಗೆ ಇದ್ದ ವೈದ್ಯ ಉದ್ಯೋಗಸ್ಥರು ಕಚೇರಿ ಕಡೆಗೆ ವರ್ಗ ಮಾಡಲ್ಪಟ್ಟು, ಇಲ್ಲಿ ಜನರಿಗೆ ತುಂಬಾ ಅನಾನುಕೂಲತೆಗಳು ಉಂಟಾಗಿವೆ ಇಲ್ಲಿ [illegible] ರೋಗರುಜಿನೆಗಳು ಜಾಸ್ತಿಯಾಗಿದ್ದು, ಮಲೇರಿಯದ ತವರುಮನೆ ಎನಿಸಿದೆ ಈ ಊರಿನ ಪ್ರಮುಖರು, ಶ್ರೀಮಾನ್ ವಿ ಮಂಜಯ್ಯ ಹೆಗ್ಗಡೆಯವರು, ಆಸ್ಪತ್ರೆಗೆ ಬೇಕಾದ ಔಷಧಿಗಳನ್ನು ಒದಗಿಸಿ ಕೊಡುತ್ತಿದ್ದರೂ, ಔಷಧಗಳ ಪ್ರಯೋಗಗಳನ್ನು ಮಾಡುವರೇ, ವೈದ್ಯ ಉದ್ಯೋಗಸ್ಥರೇ ಇಲ್ಲದೆ, ಜನರು ಮರಣಕ್ಕೆ ತುತ್ತಾಗುತ್ತಿರುವರು ಇದನ್ನು ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಅಧಿಕಾರಿಗಳು, ಗಮನಿಸಿ ತಕ್ಕ ವ್ಯವಸ್ಥೆಯನ್ನಾದರೂ, ಮಾಡಬಾರದೇ?

ಬಂಟವಾಳ. ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಪಂಚಾಯತ ಬೋರ್ಡಿನ ಮೀಟಿಂಗೊಂದು ಕಳೆದ ತಾ 9ನೇ ಶನಿವಾರ ಜರಗಿತ್ತು. ಪಂಚಾಯತಿಗೆ ಒಬ್ಬ ಕ್ಲಾರ್ಕರ ಮತ್ತು ಪೇದೆಯ ನೇಮಕದ ಕುರಿತು ಚರ್ಚೆಯಾಗಿ, ಇಬ್ಬರನ್ನೂ ನೇಮಕ ಪಡಿಸುವುದೆಂದು ನಿಶ್ಚಯವಾಯಿತು ಆಫೀಸನ್ನು ಇದೇ ತಿಂಗಳ ತಾ. 21ರೊಳಗೆ ತೆರೆಯಬೇಕೆಂದೂ, ಅದರ ಪ್ರವೇಶ ಸಮಾರಂಭವನ್ನು ಜಿಲ್ಲಾ ಬೋರ್ಡ ಅಧ್ಯಕ್ಷರ ಹಸ್ತದಿಂದ ಮಾಡಿಸಬೇಕೆಂದೂ ನಿರ್ಣಯಿಸಲಾಯಿತು.

ಪ್ರಾಮುಖ್ಯವಾಗಿ ಪೇಟೆಯ ಶುಚಿತ್ವಕ್ಕೆ ಮುಂದೆ, ನೆರೆಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಬೇಗನೆ ಏನಾದರೊಂದು ಯೋಚನೆ ಮಾಡಬೇಕೆಂದು ಸರಕಾರದೊಡನೆ ಕೇಳಿಕೊಳ್ಳಬೇಕೆಂದೂ ಮದರಾಸು ಸರಕಾರದ [illegible] ಇಂಜಿನಿಯರರು ಇತ್ತ ಚಿತ್ತೈಸಿದಾಗ, ಪಂಚಾಯತ ಬೋರ್ಡಿನ ಕೆಲವು ಮಂದಿ ಸದಸ್ಯರ ಡೆಪ್ಯುಟೇಶನೊಂದು ಅವರನ್ನು ಕಂಡು, ನೆರೆ ಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಯಾವ ಬಗೆಯ ಯೋಜನೆಯನ್ನು ಕೈಕೊಳ್ಳಬಹುದೆಂದು, ಅವರೊಡನೆ ಪರ್ಯಾಲೋಚಿಸಬೇಕೆಂದೂ ಠರಾವಾಯಿತು

ಇಲ್ಲಿಯ ಜನಪ್ರಿಯ ಡಾಕ್ಟರರಾದ ರಾ. ಎಮ್ ಉಮೇಶರಾಯರು ಕ್ಷಯರೋಗ ಇತ್ಯಾದಿ ವಿಷಯಗಳಲ್ಲಿ ವಿಚಕ್ಷಣ ಶಿಕ್ಷಣವನ್ನು ಹೊಂದಲು ವಿಲಾಯತಿಗೆ ತೆರಳಿರುವುದರಿಂದ ಅವರ ಸ್ಥಾನಕ್ಕೆ ಡಾ| ರಾಮನಾಥ ಶೆಟ್ಟಿ ಎಂಬವರು ವರ್ಗಾಯಿಸಲ್ಪಟ್ಟಿರುವರು.

ಮೂಲ್ಕಿ. ಕೆಲ ಸಮಯ ಅಲ್ಲಲ್ಲಿ ಕೆನರಾ ಬ್ಯಾಂಕಿನ ಶಾಖೆಗಳಲ್ಲಿ ಏಜಂಟರಾಗಿ ಜನಪ್ರಿಯರಾಗಿದ್ದ ನಮ್ಮ ಊರವರಾದ ಶ್ರೀ| ಎಂ. ವಿ ಕಾಮತ್, ಬಿ ಕಾಂ., ಇವರು ಇತ್ತೀಚೆಗೆ [illegible] ಸರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ [illegible] ಆತ್ಮಕ್ಕೆ ಶಾಂತಿಯಿರಲಿ.

ಸ್ಥಳೀಕ ಗೌಡಸಾರಸ್ವತ ಬ್ರಾಹ್ಮಣರ ಬಡ ವಿದ್ಯಾರ್ಥಿ ಸಂಘದಿಂದ ಈ ವರ್ಷ ಸುಮಾರು [illegible] ರೂಪಾಯಿಗಳ ವಿದ್ಯಾರ್ಥಿ ವೇತನಗಳನ್ನು ಕೊಟ್ಟಿರುವರು ಎಂದು ಕೇಳುತ್ತೇವೆ.

ಇಲ್ಲಿ ಕೆಲವು ಹುಚ್ಚು ನಾಯಿಗಳ ಕಾಟವಿದೆ ಎಂದು ತಿಳಿದುಬರುತ್ತದೆ ಪಂಚಾಯತ [illegible] ಈ ಕಡೆ ಗಮನ ಕೊಡಬೇಕು

ಅಜೆಕಾರು: ತಾ 10-7-38ರಲ್ಲು ಕಳೆದ [illegible] ಪಂಚಾಯತ ಬೋರ್ಡಿನ ವಿಶೇಷ ಸಭೆಯಲ್ಲಿ ರೆವರೆಂಡ್ ಫಾದರ್ ಎಸ್ [illegible] ಅಧ್ಯಕ್ಷರಾಗಿಯೂ ಶ್ರೀ ಎ. ಗಣಪತಿ ತಿರುಮಲ [illegible] ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುವರು. ಗ್ರಾಮ [illegible] ನೆರವೇರು [illegible]

KANARA ENTERPSISE, LTD, PUTTUR

Notice.

ಈ ಕೆಳಗೆ ತಿಳಿಸಿರುವ [illegible] ಸಾಲ ಪಡಕೊಂಡವರು [illegible] ದರಿಂದಲೂ ಅವರಿಗೆ ಬಿಟ್ಟ [illegible] ನೋಟೀಸು [illegible] ಬಂದಿರುವುದರಿಂದಲೂ ಸದರಿ [illegible] ಇದೇ ಬರುವ ತಾ 27-7-1938ರ ಒಳಗೆ ಅಸ್ಲು ಬಡ್ಡಿ [illegible] ನೋಟೀಸು [illegible] ಈ ನೋಟೀಸು [illegible] ತಕ್ಕ [illegible] ನಗಗಳನ್ನು ಬಿಡಿಸಿಕೊಳ್ಳದಿದ್ದರೆ ಸದರಿ ನಗಗಳು ಇದೇ ಬರುವ ತಾ 30-7-1938ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು

ಸಾಲದ ನಂಬ್ರ	ಸಾಲಕೊಂಡವರ ಹೆಸರು	ಅಸ್ಲು
137/64	ಎಸ್. ಪದ್ಮನಾಭಾಚಾರ್ಯ	
19-12-34	ರಾಮಕುಂಜ ಗ್ರಾಮ	ರೂ 20
411/670	ಕುಕ್ಕ ಗೌಡ,	
23-2-37	ಅಜಿಲಾಡಿ ಗ್ರಾಮ	ರೂ 4
60/309	ಪೊಡಿಯ ಬ್ಯಾರಿ,	
22-10-36	ಕೊಂಬಾರು ಪಂಜ ಗ್ರಾಮ	ರೂ 2
678/938	ಕೆ ಎಸ್. ಗೋಪಾಲ	
14-7-37	ಆರ್ಯಾಪು ಗ್ರಾಮ	ರೂ. 5
593/10	ಮುತ್ತಪ್ಪಾರು ತಿಮ್ಮಯ್ಯ ಶೆಟ್ಟಿ,	
22-6-36	ಕಡೇಶ್ವಾಲ್ಯ ಗ್ರಾಮ	ರೂ. 8
106/365	[illegible]	
9-11-36	ಪಡುವನ್ನೂರು ಗ್ರಾಮ	ರೂ. 75
166/179	ಅಚ್ಯುತ ಆಚಾರಿ,	
29-11-35	ಪುತ್ತೂರು	ರೂ 50
550/568	ಮುತ್ತಪ್ಪಾಡಿ ತಿಮ್ಮಪ್ಪ ಶೆಟ್ಟಿ,	
8-6-36	ಕಡೇಶ್ವಾಲ್ಯ ಗ್ರಾಮ	ರೂ. 42
184/198	ಕರಿಮ [illegible] ಬ್ಯಾರಿ,	
7-12-35	ಆರ್ಯಾಪು ಗ್ರಾಮ	ರೂ. 15
309/322	ಮಹಮ್ಮದ್ ಹುಸೇನ್ ಸಾಹೇಬ್,	
4-2-36	[illegible] ಗ್ರಾಮ	ರೂ. 8
507/445	[illegible] ಸಾಯ್ಬ,	
1-8-35	ಕಡೇಶ್ವಾಲ್ಯ ಗ್ರಾಮ	ರೂ. [illegible]

Office of the Bank Puttur 11-7-1938 } G. N. Lakshman Pai Secretary

...ಮಗೆ ::: ತಿಳಿದಿರುವುದೆಷ್ಟು?

ಜಗತ್ತಿನ ಕೆಲವು ಕಡೆಗಳಲ್ಲಿ ಪ್ರಾಣಿಗಳನ್ನು ನ್ಯಾಯಸ್ಥಾನಕ್ಕೆ ತಂದು ವಿಚಾರಣೆ ನಡೆಯಿಸಿ ಶಿಕ್ಷಿಸುವುದುಂಟು. ಕಿಂಗ್ ಎಂಬ ಹೆಸರಿನ ಜರ್ಮನ್ ಜಾತಿಯ ನಾಯಿಗೆ ಅಮೇರಿಕಾದ ಸೂಪ್ರಿಮ್ ಕೋರ್ಟಿನವರು ಮರಣದಂಡನೆಯನ್ನು ವಿಧಿಸಿರುವರು. ವಕೀಲನೊಬ್ಬನಿಗೆ ಕಚ್ಚಿದುದಕ್ಕಾಗಿ : : : : : : : :

ಪ್ರಾಚೀನ ದಿವಸಗಳಲ್ಲಿ ಮೃಗಗಳನ್ನು ಸೆರೆಹಿಡಿಯುತ್ತಿದ್ದರು. ಅವುಗಳಿಗೆ ಪಾರ್ಲಿಮೆಂಟಿನಲ್ಲಿ ಜ್ಯೂರಿಯಾದ ಆಕ್ಷಣಗಳನ್ನು ಒದಿಯೂ ಕೂಡ ಹೇಳುತ್ತಿದ್ದರು. ಒಂದು ಕೋತಿಯನ್ನು ಸಿಗರೇಟು ಸೇದಿದುದಕ್ಕಾಗಿ ಅರೆಸ್ಟು ಕೂಡ ಮಾಡಿದ್ದರು.

ಒಂದು ಸಂದರ್ಭದಲ್ಲಿ ಒಂದು ಫ್ರೆಂಚ್ ಚಲನಚಿತ್ರದವರು ಕಂಟ್ರಾಕ್ಟು ಕರಾರನ್ನು ಮುರಿದುದಕ್ಕಾಗಿ ಚಿಂಪಾಂಜಿಯೊಂದರ ಮೇಲೆ ವ್ಯಾಜ್ಯ ಹೂಡಿದ್ದರು. ನಟನೆಯು ಆ ಚಿಂಪಾಂಜಿಯ ವೃತ್ತಿಯಾಗಿತ್ತು. ಒಂದು ಕೃತಕ ತೆಂಗಿನಮರದಿಂದ ತೆಂಗಿನಕಾಯಿಯನ್ನು ಒಬ್ಬನ ಮೇಲೆ ಬಿಸುಟಬೇಕಾಗಿ ಕರಾರಾಗಿತ್ತು. ಆದರೆ ಚಿಂಪಾಂಜಿಯು ಮರಹತ್ತಲು ಕೇಳಲಿಲ್ಲ. ಅದಕ್ಕಾಗಿ ನಷ್ಟಕ್ಕೆ ವ್ಯಾಜ್ಯ ಹೂಡಲಾಯಿತು. ನಿರ್ಮಿಸಲ್ಪಟ್ಟ ಮರವು ಚಿಂಪಾಂಜಿಗೆ ಹತ್ತಲು ಯೋಗ್ಯವಲ್ಲವಾಗಿತ್ತೆಂದು ಅದರ ವಕೀಲರು ವಾದಿಸಿದರು.

ಕೆಲಸಮಯದ ಹಿಂದೆ ಪೆರಿಸ್ ನಗರದಲ್ಲಿ ಒಂದು ಹುಚ್ಚು ಎತ್ತನ್ನು ಎರೆಸ್ಟುಮಾಡಿದ್ದರು. ವಿಚಾರಣೆ ನಡೆದು ಅದಕ್ಕೆ ಮರಣಶಿಕ್ಷೆಯು ವಿಧಿಸಲಾಯಿತು; ಮನುಷ್ಯನೊಬ್ಬನನ್ನು ಕೊಲೆಮಾಡಿದ ಅಪಾದನೆಗಾಗಿ.

★

ವಿಚಿತ್ರ ವಿವಾಹಗಳು!

ವಿಚಿತ್ರತರದಲ್ಲಿ ವಿವಾಹವಾಗುವ ಹವ್ಯಾಸವು ಐರೋಪ್ಯದಲ್ಲಿ ಈಗೀಗ ಹೆಚ್ಚುತ್ತಾ ಬರುತ್ತಿದೆ.

ಇನ್ನೊಸೆಂಜೊ ನಾವೊನೆ ಮತ್ತು ಟೆರಿಸಿನಾ ಮೊರಿನೊ, ಎಂಬ ಈರ್ವರು 10,600 ಅಡಿ ಎತ್ತರವಿರುವ ಬೆಟ್ಟದ ಶಿಖರದ ಮೇಲೆ ವಿವಾಹವಾದರು.

ಅಮೇರಿಕಾದಲ್ಲಿ ಲಿನೊ ಪೆಜಿಯಾ ಎಂಬಾತನಿಗೆ ಕಾರಾಗೃಹ ಬಂಧನದಲ್ಲಿರುವಾಗಲೆ ವಿವಾಹ ನಡೆಯಿತು.

ನ್ಯೂಡಿಸ್ಟನೊಬ್ಬನು (ನಗ್ನನಾಗಿರುವವನು) ಇನ್ನೋರ್ವ ನ್ಯೂಡಿಸ್ಟಳನ್ನು ವಿವಾಹವಾದನು, ನಗ್ನವಾಗಿರುವಾಗಲೇ!

ಇನ್ನೊಂದು ವಿವಾಹವು ವಿಮಾನದಲ್ಲಿ ನಡೆಯಿತು!

ರಷ್ಯಾದವನೊಬ್ಬನು, ಅಮೇರಿಕಾದ ತರುಣಿಯೋರ್ವಳನ್ನು ವಿವಾಹವಾದನು; ಆತನ ಭಾಷೆ ಆಕೆಗೆ ತಿಳಿಯದು, ಆಕೆಯ ಭಾಷೆ ಆತನಿಗೆ ತಿಳಿಯದು!

ಜರ್ಮನಿಯಲ್ಲಿ ಮೊನ್ನೆ ಒಂದು ಹುಡುಗಿ ಟೆಲಿಫೋನು ಮೂಲಕ ಒಬ್ಬನನ್ನು ವಿವಾಹವಾದಳು.

★

ನೀರಿನಿಂದ ಭಂಗಾರ!

ಈ ಜಗತ್ತಿನ ಎಂಡಳದ ಸಮುದ್ರಗಳಲ್ಲಿ ಒಟ್ಟು 1,400,000,000,000 ಟನ್ನುಗಳು ಭಂಗಾರವಿರುವುದೆಂದು ಪರಿಶೋಧನೆಯಿಂದ ಕಂಡು ಹಿಡಿಯಲಾಗಿದೆ. ಸಮುದ್ರಗಳಲ್ಲಿ ಅಡಗಿರುವ ಈ ಭಂಗಾರವನ್ನೆಲ್ಲಾ ತೆಗೆಯಲು ಸಾಧ್ಯವಿದ್ದರೆ ಈ ಜಗತ್ತಿನ ಪ್ರತಿಯೊಬ್ಬನು (ಸ್ತ್ರೀಯರು ಮಕ್ಕಳು ಕೂಡಿ) ಸರಾಸರಿಯಲ್ಲಿ ರೂಪಾಯಿ 42,000ದ ಧನಿಕರಾಗಬಹುದಂತೆ. ಆದರೆ ಕಷ್ಟವೆಂದರೆ ಆ ಭಂಗಾರವನ್ನು ಪಿಂಗಡಿಸಿ ತೆಗೆಯುವುದು.

★

ಸೂರ್ಯನಿಂದ ಮೋಟಾರು ಚಲಾವಣೆ.

ಪೆಟ್ರೋಲ್ ಇಲ್ಲದನೇ ಮೋಟಾರು ಕಾರುಗಳನ್ನು ಓಡಿಸುವ ಉಪಾಯವೊಂದನ್ನು ಹಾಲೆಂಡಿನ ಇಬ್ಬರು ವಿಜ್ಞಾನಿಗಳು ಕಂಡು ಹಿಡಿದಿರುವರು. ಸೂರ್ಯನ ಕಿರಣಗಳನ್ನು ಕೂಡಿಸಿ ಫೋಟೊ ಇಲೆಕ್ಟ್ರಿಕ್ ಸೆಲ್ಲಿನಿಂದ ಅವುಗಳ ಪ್ರಭಾವವನ್ನು ಹೆಚ್ಚಿಸಿದರೆ, ಅವುಗಳಿಂದ ಒಂದು ಮೋಟಾರುಕಾರನ್ನು ಚಲಿಸಲು ಬೇಕಾಗುವಷ್ಟು ಶಕ್ತಿಯನ್ನು ತಯಾರಿಸಬಹುದಂತೆ.

★

ಒಂದೇ ಒಂದು ತಪ್ಪಿಲ್ಲದ ಪುಸ್ತಕ.

ಮುದ್ರಣ ದೋಷದಿಂದ ಒಂದೇ ಒಂದು ತಪ್ಪಿಲ್ಲದ ಪುಸ್ತಕವೆಂದರೆ 'ಮೊಡರ್ನ್ ಒಕ್ಸ್‌ಫರ್ಡ್ ಬ್ಯಾಬಲ್'. ಈ ಜಗತ್ತಿನಲ್ಲಿ ಛಾಪಾದ ಇತರ ಯಾವತ್ತೂ ಪುಸ್ತಕಗಳಲ್ಲಿ ಒಂದೆರಡು 'ಪ್ರಿಂಟರ್ಸ್ ಡೆವಿಲ್' ತಪ್ಪುಗಳು ಇದ್ದೇ ಇವೆ.

★



ಈ ಮಹಾನುಭಾವನಾರು ಗೊತ್ತೇ?

ರೇಡಿಯಮಿಗಿಂತ ಹೆಚ್ಚು ಮೌಲ್ಯವುಳ್ಳದ್ದು

ಕೆಲಿಫೋರ್ನಿಯದ ಪ್ರೊಫೆಸರರೊಬ್ಬರು ರೆಡಿಯಮಿಗಿಂತ ಇಮ್ಮಡಿ ಗಟ್ಟಿಯಾಗಿರುವ ಒಂದು ಜೀನಸನ್ನು ತಯಾರಿಸಿರುವರು. ಇದರ ಹೆಸರು ರೇಡಿಯೊ ಸೊಡಿಯಮ್. ಇದರ ಕುರಿತು ಪರಿಶೋಧನಾಕಾರ್ಯವು ಇನ್ನೂ ನಡೆಯುತ್ತಾ ಇದೆ.

★

ವಿಚಿತ್ರ ತರದ ಲಿಮಿಟೆಡ್ ಸಂಸ್ಥೆ.

ಚೀನೀಯ ಇಂಜನಿಯರಿಂಗ್ ವಿದ್ಯಾರ್ಥಿಯೊಬ್ಬನಿಗೆ ವಿದ್ಯೆಯನ್ನು ಮುಂದರಿಸಲು ಹಣವಿಲ್ಲದಾಯಿತು. ಅಮೇರಿಕಾದಲ್ಲಿ ಆತನು ತನ್ನ ಎಂಟು ಮಂದಿ ಸ್ನೇಹಿತರು ತನ್ನಲ್ಲಿ ಶೇರುಗಳನ್ನು ಹಾಕುವಂತೆ ಕೇಳಿಕೊಂಡನು. ತನ್ನ ವಿದ್ಯಾಭ್ಯಾಸಂಗವನ್ನು ಮುಗಿಸಿದನು. ಆತನಿಗೆ ಒಂದು ಒಳ್ಳೇ ಕೆಲಸವೂ ದೊರಕಿತು. ಒಂದು ತಿಂಗಳ ಕೆಲಸಮಾಡಿದ ಮೇಲೆ ಆತನು ತನ್ನ ಶೇರ್‌ಹೋಲ್ಡರರನ್ನು ಕರೆದು ಒಂದು ಮೀಟಿಂಗ್ ಮಾಡಿ, ಸೇಕಡಾ 10ರ ಸಲೆ ಡಿವಿಡೆಂಡು ಹಂಚಬೇಕಾಗಿ ನಿರ್ಣಯಿಸಿದನು.

★

ಬ್ರಿಟನಿನಲ್ಲಿ ತಂಬಾಕು ಸೇದುವಿಕೆ.

ಬ್ರಿಟನಿನಲ್ಲಿ ವರ್ಷಂಪ್ರತಿ 45,898,-902,400 ಸಿಗರೇಟುಗಳು ಸೇದಲಾಗುತ್ತಿವೆ. ಇದರಲ್ಲಿ 4,000,0000,000 ಸಿಗರೇಟುಗಳು ಸ್ತ್ರೀಯರಿಂದಲೆ ಸೇದಲಾಗುತ್ತಿವೆ.

★

ಮೂಗಿಗೆ 2000 ಪವನು ಬೆಲೆ!

ಇಸ್ಲಾಮಿನ ಎರಡನೆ ಕಲೀಫರಾದ ಪ್ರಖ್ಯಾತ ಓಮಾರರ ಕುಟುಂಬದವರೊಬ್ಬರು ತಮ್ಮ ಮೂಗಿನ ಮೇಲೆ 2000 ಪವನುಗಳ ವಿಮೆಯನ್ನಿತ್ತಿರುವರು. ಸುಗಂಧಗಳನ್ನೆ ತಯಾರಿಸುವುದು ಅವರ ಉದ್ಯಮ. ಅವುಗಳನ್ನು ಸುವಾಸನೆಯಿಂದಲೆ ಕಂಡುಹಿಡಿದು, ಬೇಕಾದ ಸುಗಂಧಗಳನ್ನು ತಯಾರಿಸುತ್ತಿದ್ದಾರಂತೆ.

★

ಇನ್ನೊಂದು ಮಹಾಯುದ್ಧವು ಯಾವ ::::ಜನಾಂಗಗಳೊಳಗೆ?::::

ಪಾಶ್ಚಾತ್ಯದ ನಕ್ಷೆ ತಯಾರಿಸುವವರು, ಐರೋಪ್ಯದ ದೇಶಗಳ ಗಡಿಗಳನ್ನು ಹಾಕುವರೆ ಸ್ವಲ್ಪ ಹಿಂಜರಿಯುತ್ತಿರುವರು. ಆಸ್ಟ್ರಿಯಾ ಬೇರೆ ದೇಶವಾಗಿರುವುದು ಈಗ ಕೊನೆಗೊಂಡಿರುತ್ತದೆ. ಚೆಕೆಸ್ಲೊವೆಕಿಯಾದ ಕುರಿತು ಇನ್ನೂ ಇತ್ಯರ್ಥವಾಗಲಿದೆ. ಸ್ಪೈಯಿನಿನ ಸ್ಥಿತಿಯು ವಿಧಿಯ ಕೈಯಲ್ಲಿದೆ. ಪೋಲೆಂಡು, ಲಿಥೆನಿಯಾ, ಹಂಗೇರಿ, ಯೋಗೊಸ್ಲೆವಿಯಾ ಮತ್ತು ಇತರ ಸಣ್ಣ ರಾಷ್ಟ್ರಗಳು ತಮ್ಮ ಭವಿಷ್ಯದ ಕುರಿತು ಸಂತೃಪ್ತರಾಗಿಲ್ಲ. ಅವರಿಗೆ ಒಂದಲ್ಲ ಒಂದು ತರದ ಭಯ ಇದ್ದೇ ಇರುವುದು : : : : : : : : :

ಮಧ್ಯ ಐರೋಪ್ಯವು ಇಂದು ಐರೋಪ್ಯದ (Centre of gravity) ಯಾಗಿರುತ್ತದೆ. ಸಮಸ್ತ ಐರೋಪ್ಯವು ಶಸ್ತ್ರಧಾರಿಯಾಗಿರುತ್ತದೆ. ಈ ಕಾರಣದಿಂದಲೆ ಇನ್ನೊಂದು ಮಹಾಯುದ್ಧವು ಆಗದೆ ಇರದು. ಅದು ಸಧ್ಯದಲ್ಲೆ ಇದೆ.

ಫ್ರಾನ್ಸು, ರಷ್ಯಾ, ಇಟೆಲಿ, ಜರ್ಮನಿ—ಈ ಜನಾಂಗಗಳಲ್ಲಿ, ಕೊನೆಯವರೀರ್ವರು, ಬೆಳೆಯುವ ತಮ್ಮ ರಾಷ್ಟ್ರಕ್ಕೆ ಈಗಿನ ಸ್ಥಳ ಸಾಲದು ಎಂದು ಹೇಳುತ್ತಿರುವರು. ಹೀಗೆನೆ ಕಳೆದ ಮಹಾ ಯುದ್ಧಾನಂತರ ನಿಯಮಿಸಲ್ಪಟ್ಟ ತಮ್ಮ ಗಡಿಗಳ ಕುರಿತು ಹಂಗೇರಿಗೂ ಬಲ್ಗೇರಿಯಕ್ಕೂ ಅಸಮಾಧಾನವಿದೆ.

ಇಟೆಲಿಯು ತನ್ನ ಸಾಮ್ರಾಜ್ಯವನ್ನು ಆಫ್ರಿಕಾದಲ್ಲಿ ವಿಸ್ತರಿಸಿದೆ. ಈಗ ಅದು ಮೆಡಿಟರೆನಿಯನಿನ ಮೇಲೆ ಮತ್ತು ಸ್ಪೈಯಿನಿನ ಮೇಲೆ ಅಧಿಕಾರ ಪಡೆಯಲು ಹವಣಿಸುತ್ತದೆ. ತನ್ನ ಸುತ್ತಲೂ ಫ್ರಾನ್ಸು, ಸ್ವಿಜರ್ಲೆಂಡು, ಆಸ್ಟ್ರಿಯಾ ಮತ್ತು ಯೊಗೊಸ್ಲೆವಿಯಾ ದೇಶಗಳಿರುವುದು, ಐರೋಪ್ಯದಲ್ಲಿ ತನ್ನ ಗಡಿಗಳನ್ನು ವಿಸ್ತರಿಸುವುದು ಅದಕ್ಕೆ ಅಸಾಧ್ಯ.

ಮಧ್ಯ ಐರೋಪ್ಯದಲ್ಲಿ ನಿಜವಾಗಿಯೂ ಅಪಾಯ ಉಂಟಾಗುವುದಾದರೆ ಅದು ಜರ್ಮನಿಯಿಂದ. ಜರ್ಮನರ ಕೋರಿಕೆಗಳೆಲ್ಲಾ ಖಚಿತವಾಗಿವೆ; ಹಿಟ್ಲರನು ಅವುಗಳ ಕುರಿತು ಗುಟ್ಟು ಮಾಡಲಿಲ್ಲ. ಜರ್ಮನಿಗೆ ಬೇಕಾದುದು ಸಮೀಪವಿರುವ ಪ್ರದೇಶಗಳು; ಅತಿ ದೂರದಲ್ಲಿರುವ ದೇಶಗಳಲ್ಲ. ಕಾರಣ, ದೂರದಲ್ಲಿ ವಸಾಹತುಗಳಿರುವುದರ ದುಷ್ಪರಿಣಾಮಗಳ ಕುರಿತು ಪಾಠವು ಜರ್ಮನಿಗೆ ಹಿಂದಿನ ಮಹಾಯುದ್ಧದಲ್ಲಾಗಿದೆ. ಜರ್ಮನಿಯನ್ನು ಐರೋಪ್ಯದಲ್ಲಿ ವ್ಯಾಪಿಸುವುದರಿಂದ ಮಾತ್ರ ಲಾಭವಿದೆ ಎಂದು ಹಿಟ್ಲರನ ನಂಬಿಕೆಯಾಗಿರುತ್ತದೆ. ಈ ಕಾರಣದಿಂದಲೆ ಆತನು ತನ್ನ ಸುತ್ತುಮುತ್ತಲಿರುವ ದೇಶಗಳಲ್ಲಿ ಕೈಕಾಲುಗಳನ್ನು ಚಾಚುತ್ತಿರುವುದು.

ಐರೋಪ್ಯದ ಎಲ್ಲಾ ಜರ್ಮನ್ ಮಾತಾಡುವ ಜನರನ್ನು ಐಕ್ಯಮಾಡಿ, ಜರ್ಮನ್ ದೇಶಗಳನ್ನು ಕೂಡಿಸಿ, ಮಹತ್ತಾದ ಜರ್ಮನ್ ರಾಷ್ಟ್ರದ ಸ್ಥಾಪನೆಯು ಹಿಟ್ಲರನ ಧ್ಯೇಯವು. 'ಹಸಿವೆ—ಉತ್ತಮ ಅಡುಗೆ ಬಟ್ಟ' ಎಂದು ಜರ್ಮನ್ ನಾಣ್ಣುಡಿಯಿದೆ. ಈ ಹಸಿವಿನ ಕಾರಣದಿಂದಲೆ ಜರ್ಮನಿಯೊಡನೆ ಆಸ್ಟ್ರಿಯಾವು ಕೂಡಿಸಲ್ಪಟ್ಟಿದ್ದು; ಚೆಕೆಸ್ಲೊವೆಕಿಯಾದಲ್ಲಿ ಮ್ಯಾನೊರಿಟಿ ಸಮಸ್ಯೆ ಉಂಟುಮಾಡಿದುದು. ಫ್ರಾನ್ಸು ಮತ್ತು ರಷ್ಯಾ ದೇಶಗಳಿಲ್ಲದಿರುತ್ತಿದ್ದರೆ ಚೆಕೆಸ್ಲೊವೆಕಿಯ ಇರುತ್ತಿತ್ತೊ ಅಥವಾ ಜರ್ಮನಿಗೆ ಕೂಡಿಸಲ್ಪಡಲಾಗುತ್ತಿತ್ತೊ.

ಪೋಲೆಂಡಿಗೂ ಜರ್ಮನಿಗೂ ಹ್ಯಾಗೂ ಹತ್ತು ವರ್ಷದ ಒಂದು ಕರಾರಾಗಿ ಬಿಟ್ಟಿರುತ್ತದೆ. ಈ ಕರಾರಿನ ಪ್ರಕಾರ, ಪೋಲೆಂಡಿನ ಗಡಿಗಳ ಬದಲಾವಣೆಯಾಗುವ ಹಾಗಿಲ್ಲ. ಈ ಕರಾರಿನ ಐದು ವರ್ಷಗಳು ದಾಟಿವೆ. ಇನ್ನೂ ಐದು ವರ್ಷಗಳಿವೆ. ಉಕೆರೈನ್ ದೇಶವನ್ನು ಹಿಡಿದು ನುಂಗುವ ಕುರಿತು ಜರ್ಮನಿಗೂ ಪೋಲೆಂಡಿಗೂ ಕರಾರಾಗಿರುತ್ತದೆ. ಆದರೆ ಜರ್ಮನಿಯು ಉಕೆರೈನಿನಮೇಲೆ ಕೈಮಾಡದಂತೆ ರಷ್ಯಾದ ಅಡ್ಡಿಯಿದೆ. ಈ ಕಾರಣದಿಂದ ರಷ್ಯಾವನ್ನು ಪೌರ್ವಾತ್ಯದ ಯುದ್ಧದ ಕಡೆ ಸೆಳೆಯುವಂತೆ ಜರ್ಮನಿಯು ಜಪಾನಿನೊಡನೆ ಒಪ್ಪಂದಮಾಡಿದುದು.

ಪೂರ್ವದಲ್ಲಿ ರಷ್ಯಾವು ಜಪಾನಿನ ಮೇಲೆ ಕೈಮಾಡಿದ ವಿನಹ ಜರ್ಮನಿ ಮತ್ತು ಪೋಲೆಂಡು ರಷ್ಯಾದ ಮೇಲೆ ಕೈಮಾಡದು. ರಷ್ಯಾವು ಬಲವಂತವಾಗಿದ್ದರೂ ಎರಡು ಕಡೆಗಳ ಯುದ್ಧದಲ್ಲಿ ಧುಮುಕಲು ಅದು ಸಿದ್ಧವಿಲ್ಲ.

ಫ್ರಾನ್ಸು ಮತ್ತು ಇಟೆಲಿಯ ಕುರಿತು ವಿಚಾರಿಸುವ—ಫ್ರಾನ್ಸು ಮತ್ತು ಜರ್ಮನಿಯ ವೈರವು ಬಹಳ ಕಾಲದಿಂದ ನಡೆದುಬಂದುದು. ಈ ಕಾರಣದಿಂದ ಅದು ಜರ್ಮನಿಯ ಸಣ್ಣ ರಾಷ್ಟ್ರಗಳ ಮೇಲೆ ಕೈಮಾಡುವುದನ್ನು ಸಹಿಸದು. ಜರ್ಮನಿಯು ಪೋಲೆಂಡಿನ ಸಹಾಯದಿಂದ ರಷ್ಯಾ ಇತ್ಯಾದಿ ರಾಷ್ಟ್ರಗಳ ಖರ್ಚಿನಲ್ಲಿ ವ್ಯಾಪಿಸುವುದನ್ನು ಅದು ವಿರೋಧಿಸುವುದು. ಆದರೂ ಫ್ರಾನ್ಸಿನ ಈಗಿನ ಆಡಳಿತೆಗಾರರು ರಷ್ಯಾದ ಕೊಮ್ಯುನಿಸ್ಟ್ ಕ್ರಮಗಳನ್ನು ಸಹಿಸುವುದಿಲ್ಲ. ಇಟೆಲಿಯು ತನ್ನ ಮಹತ್ವಾಕಾಂಕ್ಷೆಗಳಿಗಾಗಿ ಜರ್ಮನಿಗೆ ಆಧರಣೀಯವಾಗಿದೆ. ಫ್ರೆಂಚ್ ಮತ್ತು ಬ್ರಿಟಿಷ ರಾಷ್ಟ್ರಗಳು ಮೆಡಿಟರೆನಿಯನ್ ಅಧಿಕಾರದಲ್ಲಿ ಕೈಮಾಡದಂತೆ ನೋಡುವುದು ಅವರ ಯತ್ನವಾಗಿರುತ್ತದೆ.

ಮಧ್ಯ ಐರೋಪ್ಯದ ಈ ಪರಿಸ್ಥಿತಿಯಲ್ಲಿ ಕೈಹಾಕಲು ಬ್ರಿಟನಿಗೆ ಸಮ್ಮತವಿಲ್ಲದಿದ್ದರೂ ಮೆಡಿಟರೆನಿಯನ್ ಒಂದರ ದೆಸೆಯಿಂದ ಅದ ಫ್ರಾನ್ಸಿನೊಡನೆ ಒಪ್ಪಂದದಲ್ಲಿರಬೇಕಾಗಿದೆ. ಮುಸಲೀನಿ ತನ್ನ ವ್ಯಾಪನಾಧೋರಣೆಯನ ಸರಾಗವಾಗಿ ನಡೆಯಿಸಿಬಿಡದಂತೆ. ಇನ್ನೊಂದ ಮಹಾಯುದ್ಧದ ಕಾರಣಗಳು ಮಧ್ಯ ಐರೋಪ್ಯದಲ್ಲಿವೆ. ಈ ಒಂದು ಕಾರಣದಿಂದಲೆ ಐರೋಪ್ಯದ-ನಕಾಶೆಯು ಬೇರೆಯಾಗಬಹುದು

———

ಶ್ರೀ ನೆಹರೂರವರ ಲಂಡನ್ ಭಾಷಣ.

ಹದಿನೈದು ದಿನ ಲಂಡನಿನಲ್ಲಿದ್ದು ನಾನಾ ಬಗೆಯ ಬೇಟಿಗಳು ಭಾಷಣಗಳು ಮೊದಲಾದುವುಗಳಲ್ಲೇ ನಿರತರಾಗಿದ್ದರೂ, ಜವಾಹರಲಾಲರಿಗೆ ತಾ. ೬ರ ವರೆಗೆ ಸಂಪೂರ್ಣವಾಗಿ ತಮ್ಮ ಹೇಳಿಕೆಯನ್ನು ಜನತೆಯ ಮುಂದಿಡಲು ಯೋಗ್ಯ ಅನುಕೂಲತೆ ದೊರೆತಿರಲಿಲ್ಲ. ಅಲ್ಲಿ, ಇಂದಿನ ಪ್ರಪಂಚದ ವೈಹದ್ವಿಚಾರಗಳನ್ನು ಹೊರಗೆಡಹುವ ಲೆಫ್ಟ್ ಬುಕ್ ಕ್ಲಬ್ ಎಂಬ ಸಂಸ್ಥೆ ಇದ್ದು, ಅರ್ಧ ಲಕ್ಷ ಜನರಷ್ಟು ಓದುವ, ಒಂದು ಕೋಟಿ ಜನರಷ್ಟು ಪರಿಣಾಮ ಹೊಂದುವ ಬಗೆಯ ಹೊಸ ಪುಸ್ತಕಗಳನ್ನು ಪ್ರತಿ ತಿಂಗಳೂ ಇದು ಪ್ರಕಟಿಸುವುದು ಈ ಪುಸ್ತಕಗಳು ಇಂಡಿಯಾದೊಳಗೆ ಬರಬಾರದೆಂದು ಇಲ್ಲಿನ ಸರಕಾರದ ನಿಯಮವಿದೆಯಾದರೂ, ನೆಹರೂರವರಂತೆಯೆ ಈ ಸಂಸ್ಥೆಗೆ ವಾರ್ಷಿಕ ವಂತಿಗೆ ಕೊಡುವ ಸದಸ್ಯರು ಇಲ್ಲಿರುವರು

ಭಾಷಣವಾಗಲಿರುವ ಭವನದಲ್ಲಿ 4000 ಜನರಿಗೆ ಆಸನಗಳಿದ್ದರೂ, ಎಷ್ಟೋ ನೂರು ಮಂದಿ ಆಸನಸಿಗದೆ ನಿರಾಶರಾಗಿ ಹಿಂತೆರಳಬೇಕಾಯಿತೆಂದರೆ, ಈ ಭಾಷಣ ಕೇಳುವ ಕುತೂಹಲಿಗಳು ಎಷ್ಟಿರಬೇಕು! ಭಾಷಣಕರ್ತರಿಗೆ ದೇಹಾಲಾಸ್ಯವಿತ್ತು, ಅವರು ಅಷ್ಟು ಚೆನ್ನಾಗಿ ಭಾಷಣಮಾಡಲಾರೆವೆಂದರು, ಆದರೂ, ತಮ್ಮ ಮನೋಭಿಪ್ರಾಯಗಳನ್ನು ಸಂಕ್ಷೇಪವಾಗಿ ತಿಳಿಸಿದರು

'ಭಾರತ ವರ್ಷದ ಸಮಸ್ಯೆ ಎಂಬುದು ಅವರ ಭಾಷಣವಿಷಯ. ಇಂಗ್ಲೆಂಡಿನಲ್ಲಿ ಅವರದೇ ಸಮಸ್ಯೆಗಳ ಬೆಟ್ಟ ಬಿದ್ದೇ ಇದೆ ಯುದ್ಧದ ಭಯವೊಂದು ರಾಕ್ಷಸ ಸಮಸ್ಯೆಯಾಗಿದೆ ಇಂಗ್ಲೆಂಡಿನ ವಾರ್ತಾ ಪತ್ರಿಕೆಗಳಲ್ಲಿ ಇಂಡಿಯದ ಪ್ರಸ್ತಾಪ ಕಡಿಮೆ [illegible] ಸ್ಥಾನಗಳೇ ಇಲ್ಲ ಆದರೆ ಇದು ಇಂಗ್ಲೆಂಡಿಗೂ ಇಂಡಿಯಾಕ್ಕೂ ಹಿತವಲ್ಲ ಪ್ರಪಂಚದ [illegible]ದೇಶದಲ್ಲಿ ಇಂಡಿಯದ ಸಮಸ್ಯೆಯೆ ಈಗ ಮುಖ್ಯವಾಗಿದ್ದೀತು.'

ಪ್ರಪಂಚವೆಲ್ಲ ಏನೋ ಆಗಿ ಹೋಗಿದೆ ಕಳೆದ ಮಹಾ ಯುದ್ಧವಿಂದೀಚೆಗೆ ನೂರಾರು ಪರಿಷತ್ತುಗಳಾಗಿವೆ ಪ್ರತಿಯೊಂದೂ ಪವಿತ್ರವಾಗಿ ಸೇರಬೇಕಾದಲ್ಲಿ, ಅದರಲ್ಲಿ ಅತೂ ಚರ್ಚೆಗೆ ಬರುವ ವಿಷಯಗಳನ್ನು ತೀರ್ಮಾನ ಮಾಡದಿದ್ದರೆ, ಅನಾಹುತವೇನೋ ಆಗಬಹುದಾಗಿ ಸಾರಿಯೇ ಇವು ಸೇರಿವೆ ಆದರೆ, ಆದುದ್ದೇನೂ ಇಲ್ಲ! ಇಂದಿನ ವರೆಗೂ ರಾಜಕಾರಣ ಪುರುಷರು ಬಹುವಿಧಾನಗಳಿಂದ ಈ ವಿಚಾರಗಳನ್ನು ಇನ್ನೂ ಇನ್ನೂ ಚೆನ್ನಾಗಿ ವಿಮರ್ಶಿಸುತ್ತ, ಸಮರ್ಥಿಸುತ್ತ ಬರುತ್ತಲಿದ್ದಾರೆ. ನಾಯಿ ಕರಿಯದೆಂದು ತಿಳಿಯಲಾರದೆ, ಅದನ್ನು ಯಾವ್ಯಾವ ವಿಧಾನಗಳಿಂದ ತೊಳೆದರೂ ಅದರ ಬಣ್ಣ ಬಿಳಿದಾಗುವುದುಂಟೆ? ಅದರಂತೆ, ಸಮಸ್ಯೆಗಳ ಮೂಲಗಳನ್ನೂ ಹುಡುಕಲೊಲ್ಲದೆ, ಮೇಲಿಂದ ಮೇಲೆಲ್ಲ ವಿಮರ್ಶೆಯಾಗಿ ವ್ಯರ್ಥವಾಗುತ್ತ ಬರುತ್ತಿದೆ.

ಸಮಸ್ಯೆಯ ಬೇರು ಎಲ್ಲಿದೆ ಎಂದು ಹುಡುಕ ಹೊರಟರೆ, ಸಮಸ್ಯೆಯನ್ನು ತೀರ್ಮಾನಮಾಡಬೇಕಾದರೆ ತಾವು ಇದು ವರೆಗೆ ಯಾವುದಕ್ಕೆಲ್ಲ ಕಾರಣರಾಗಿ ಇಂದು ಬರುತ್ತಲಿರುವೆವೋ ಅದನೆಲ್ಲ ನಿರ್ಮೂಲಿಸಬೇಕಾಗುವುದಲ್ಲಾ ಎಂಬ ಚಿಂತೆಯು. ಈ ಮಹಾಪುರುಷರನ್ನು ಬಾಧಿಸುತ್ತದೆ ಇದೆಲ್ಲ ಸಾಂಪತ್ತಿಕ ಸಮಸ್ಯೆ ಹೊರತು ಬೇರೆ ಏನೂ ಅಲ್ಲ; ಇದರಿಂದ ಮಹಾಜನ ಸಮೂಹದ ಸ್ಥಿತಿಯನ್ನು ಅಭಿವೃದ್ಧಿಗೆ ತಂದು, ಸಾಮ್ರಾಜ್ಯಶಾಹಿಯನ್ನೂ ಮತ್ತೊಬ್ಬರನ್ನು ಸುಲಿಗೆ ಮಾಡಿ ತಾನು ಬದುಕುವ ವಿಧಾನವನ್ನು ತ್ಯಜಿಸಬೇಕಾಗುತ್ತದೆ ಎಂಬ ಒಂದೇ ತೀರ್ಮಾನ ಹುಟ್ಟುವುದು. ಬ್ರಿಟಿಷ ಸಾಮ್ರಾಜ್ಯಶಾಹಿಯನ್ನು ತ್ಯಜಿಸು ಹಾಗೆ ಪ್ರಯತ್ನಿಸಿ ಜನಾಂಗದ ಸಂಪತ್ತನ್ನು ಹೆಚ್ಚಿಸಲು ಪ್ರಯತ್ನಿಸಬೇಕಾದುದು ಇಂಡಿಯದ ಕರ್ತವ್ಯವಾಗುತ್ತದೆ. ಫೆಸಿಸ್ಟರನ್ನು ಕಂಡರೆ ಎಷ್ಟೋ ಬ್ರಿಟಿಷರಿಗೆ ಆಗದು, ಇಂಡಿಯದಲ್ಲಿ ಏನಾಗುತ್ತದೆಂಬುದನ್ನು ಕುರಿತು ಮಾತಾಡಿದರೆ ಅವರಿಗೆ ಒಲ್ಲದು. ಸಾಮ್ರಾಜ್ಯಶಾಹಿಯೆಂಬುದೇನೋ ಫೆಸಿಜಮ್‌ಗಿಂತ ಪ್ರತ್ಯೇಕವೊಂದು ಬಗೆ ಎಂದೇ ಅವರು ನಂಬಿರುವರು ಆದರೆ, ಬ್ರಿಟಿಷರು ಫೆಸಿಜಮ್ ವಿರುದ್ಧ ಹೋರಾಡುವರೆಂದಲ್ಲಿ, ಇಟಲಿಯು [ಫೆಸಿಸ್ಟರಾಜ್ಯ] ಬ್ರಿಟಿಷ ಸಾಮ್ರಾಜ್ಯದಲ್ಲಾಗುವ ಸಂಗತಿಗಳನ್ನೆ ಎತ್ತಿ ತೋರಿಸಿ ಬ್ರಿಟಿಷರು ಮುಖತೋರಿಸದಂತೆ ಮಾಡುತ್ತಾರಲ್ಲ!

ಬ್ರಿಟಿಷರ ಪರರಾಷ್ಟ್ರನೀತಿಯು ಈಗ ಖಂಡಿತವಾಗಿಯೂ ಸಾಮ್ರಾಜ್ಯವನ್ನು ಒಡೆಯುವುದಕ್ಕಾಗಿಯೇ ಹೂಡಿರುವಂತೆ ತೋರುವುದು ಬ್ರಿಟಿಷಸಾಮ್ರಾಜ್ಯವು ಆತ್ಮಹತ್ಯಮಾಡಿಕೊಳ್ಳುವುದೇನು? ಎಂಬಂತೆ ತೋರುದಿಲ್ಲವೆ? ಬ್ರಿಟಿಷ ಮುತ್ಸದ್ದಿಗಳು ಈ ರೀತಿ ಏಕೆ ವರ್ತಿಸುತ್ತಾರೆಯೋ ತಿಳಿಯುವುದೇ ಇಲ್ಲ ಪ್ರಗತಿಗಾಗಿ ಸಾಧಿಸುವವರು ಮುಂದೆ ಯುದ್ಧವಿಲ್ಲದೆ ಶಾಂತ ರೀತಿಯಿಂದಲೂ ವಿವೇಕದಿಂದಲೂ ತಕ್ಕರುಟ್ಟಿನ ಸುಧಾರಣೆಗಳನ್ನು ಮೂಲದಲ್ಲೇ ಮಾಡಿಕೊಳ್ಳಬಹುದೆಂದು ನಂಬಿರುವರು ಆದರೂ – ಭಾರತವರ್ಷವು ಮಾತ್ರ ಪ್ರಪಂಚದ ಕಡೆಗೆ ತಿರುಗಿರುವ ಸಂಬಂಧವನ್ನು ಕಾಪಾಡಿ ಒದಗಿಸಿ ಸಕಲ್ಪಿಸಬೇಕೆಂದು ಇದೆ. ಪ್ರಪಂಚವೆಲ್ಲ ಸಮಾನತೆ ಹೊಂದಿದ ಒಳಿತ [illegible] ಸುಧಾರಣೆ ಎಂದ ಭಾರತವರ್ಷ[illegible] [illegible] [illegible] [illegible]

[illegible] ಈಗ [illegible] ಆಗಿರುವ ದಿನ [illegible] ಜನರ ಕೋಟಿಯೆ ಅದರ [illegible] ಇವರ [illegible] ಮಾರಣೆ ತೊಡಕುಗಳ ಪರಿಹಾರ ಇದೇ ಕೊಂಗ್ರೆಸಿನ [illegible] ವಾಗಿ ನಡೆಯಬೇಕಾಗಿದೆ

ಸ್ಪೈಯಿನ್ ಸರಕಾರವು ತನ್ನ ಆಳ್ವಿಕೆಗೆ ಒಳಪಟ್ಟ ಮೊರೊಕ್ಕೊಪ್ರಾಂತ್ಯವನ್ನು ಸರಿಯಾಗಿ ಆಳದೆ ಅಲ್ಲಿನವರು ಫ್ರಾಂಕೋವನ್ನು ಸೇರಿ ಸರಕಾರದ ವಿರುದ್ಧವಾಗಿ ಕಾದಾಡುವಂತಾದುದನ್ನು ಕಾಣಬಾರದೆ? ಸ್ಪೈಯಿನ್ ಸರಕಾರವು ಮೊರೊಕ್ಕೊ ಪ್ರಾಂತ್ಯಕ್ಕೆ ಸ್ವರಾಜ್ಯ ಕೊಡುವ ಪ್ರಸ್ತಾಪ ಎತ್ತದಾಗಲಿಲ್ಲ, ಫ್ರೆಂಚ್ ಸರಕಾರವು ಅದನ್ನ ತಡೆದು, ತನ್ನ ಸ್ವಾಧೀನವಿರುವ ಮೊರೊಕ್ಕೊ ಸಹ ಸ್ವಾತಂತ್ರ್ಯಕ್ಕಾಗಿ ಕೂಗಬಹುದೆಂದು ಸ್ಪೈಯಿನು ಮುಂದರಿಯದಂತೆ ಮಾಡಿತು ಹೀಗಾಗಿ ಪ್ರಜಾಸತ್ತೆಯು ಪಕ್ಷವಾಗಿ ಮೂವರು ನಿಲ್ಲದಂತಾಯಿತು! ಅವರೇ ಈಗ ಹಗೆಗಳಾಗಿರುವರು! ಜನಪ ಸರಕಾರವೆನ್ನುವ ಫ್ರೆಂಚ್ ಸರಕಾರವು ಸಹ ತನ್ನ ಸ್ವಾಧೀನವಾಗಿರುವ ಫ್ರೆಂಚ್ ಇಂಡೋಚೀನದಲ್ಲಿ ನಾನಾ ಗೊಂದಲದಲ್ಲೀಗ ಬಿದ್ದಿದೆ, ಪ್ರಗತಿಪರವಾಗಿ ಬಾಳಬೇಕಾಗಿರುವ ಇಚ್ಛೆಯುಳ್ಳ ಯಾವ ಸರಕಾರವೂ ಹೀಗೆ ವರ್ತಿಸಿದಲ್ಲಿ ಬಾಳಬಂದೀತೆ? ಈ ತಪ್ಪುಗಳನ್ನು ಬ್ರಿಟಿಷ ಸರಕಾರವೂ ಮಾಡಬಹುದು? ನಾಳಿನ ಕೂಲೀಪಕ್ಷದ ಸರಕಾರವು ಇದನ್ನು ಮರೆಯಬಾರದು ತನ್ನೊಡಲ್ಲಿ ಪ್ರಜಾಸತ್ತೆಯ ನ್ನಿಟ್ಟುಕೊಂಡ ಯಾವ ಸರಕಾರವಾದರೂ ವಸಾಹತುಗಳನ್ನೂ ಪ್ರಜಾಸತ್ತೆಯಿಂದಲೇ ಪಾಲಿಸಬರಬೇಕು ಫೆಸಿಸ್ಟರಿಗೆ ತಾನು ವಿರೋಧಿಯೆನ್ನುವ ಬ್ರಿಟಿಷ ಸಾಮ್ರಾಜ್ಯಶಾಹಿಗೂ ವಿರೋಧಿಯಾಗಲೇ ಬೇಕು. ಈಗಿನ ಬ್ರಿಟಿಷ

ನಿಮ್ಮ ಆಧಾರವಿಲ್ಲದೆ ನನಗೆ ಬಲವಿಲ್ಲ!

ಪ್ರಧಾನ ಮಂತ್ರಿಯರ ಬಳ್ಳಾರಿ ಭಾಷಣ.

"ಜನಾಧಾರದ ಬಲದಿಂದಲೇ ನಾನು ಕೆಲಸಮಾಡುತ್ತಿರುವೆನು ಅಖಿಳ ಪ್ರಜಾ ಜನರು ನನಗೆ ಅವರ ಆಧಾರ ಮತ್ತು ಸಮ್ಮತವನ್ನು ಕೊಡದೆಯಿದ್ದರೆ, ಆಗ ನನ್ನ ಬಲವು ಮಾಯವಾಗುವುದು ಪ್ರಜೆಗಳು ನನ್ನ ಆಧಾರವಾಗಿರುವರಿಗೆ, ಮದ್ರಾಸಿನ ಗವರ್ನರರು, ಇಂಗ್ಲಾಡಿನ ಚಕ್ರವರ್ತಿಯವರು ಮತ್ತು ಎಲ್ಲರೂ ನನ್ನನ್ನು ಮನ್ನಿಸುವರು. ಇಲ್ಲವಾದರೆ ಅವರು ನನ್ನನ್ನು ವೇಸ್ಟ್ ಪೇಪರ್ ಬಾಸ್ಕೇಟಿನಲ್ಲಿ ಬಿಸುಟುವರು"

ನಮ್ಮ ದೇಶದಲ್ಲಿ ಕೊರತೆ ಕಡಿಮೆ.

'ನಮ್ಮ ದೇಶದಲ್ಲಿ ಕೊರತೆಯಿರದ ಒಂದು ದಿನವು ಬರುವುದೆಂದು ನನಗೆ ಭರವಸೆಯಿದೆ ಬ್ರಾಹ್ಮಣರ ಮನೆಯಲ್ಲಿ ಮಾಂಸಾಹಾರವು ಇರದಂತೆ ಹಿಂದೂದೇಶದಲ್ಲಿ ಕೊರತೆಯು ಇರಬಾರದು ಜನರು ಸರಕಾರಿ ಉದ್ಯೋಗಸ್ಥರಿಗೆ ಲಂಚಕೊಟ್ಟು ಅವರನ್ನು ಕೆಡಿಸಬಾರದು ಇತರ ದೇಶಗಳಲ್ಲಿರುವಷ್ಟು ಕೊರತೆಯು ನಮ್ಮ ದೇಶದಲ್ಲಿರುವುದಿಲ್ಲ

ಬೇರೆ [illegible] ಆಂಧ್ರಪ್ರಾಂತ್ಯವಿರುವುದರಿಂದ ಉತ್ತರ ಪಡೆಯೆಂದು [illegible] ಭಾವನೆ [illegible] ಭಾಷೆಯಿದೆ ಆಂಧ್ರಪ್ರಾಂತ್ಯವೊಂದು ರಚನೆಯಾಗುವುದರಲ್ಲಿ ನನ್ನ ಆಕ್ಷೇಪವಿಲ್ಲ ಆದರೆ [illegible]

[illegible] ಶ್ರೀ [illegible] ಬಳ್ಳಾರಿಗೆ [illegible] ಮಾಡಿದ ಭಾಷಣದ [illegible] ವಾಗಿರುತ್ತದೆ

ಮುಜೂರರಿಗೆ ಪ್ರಧಾನ ಮಂತ್ರಿಯರ ಎಚ್ಚರಿಕೆ

ಸ್ವಾತಂತ್ರ್ಯ[illegible]ದಿಂದ [illegible]

[illegible]ದಲ್ಲಿ ಉಂಟಾದ ಮಜೂರ[illegible] ಪ್ರಧಾನಮಂತ್ರಿ ರಾಜಗೋಪಾಲಾಚಾರ್ಯರು ಈ [illegible] ಅಭಿಪ್ರಾಯವನ್ನೊಳಗೊಂಡ ಒಂದು ಪ್ರಕಟನೆ ಮಾಡಿರುವರು

[illegible] ವಿಷಾದಮಯ ವರದಿಗಳನ್ನು ಓದಿ ನನಗೆ ದುಃಖವಾಗುತ್ತದೆ

ಸರಕಾರವು ಇದನ್ನು ತಿಳಿದಿದೆ ನಾಳಿನ ಯುದ್ಧದ ಕಡೆಗೆ ಗಮನವಿಟ್ಟು ಪ್ರತಿಪಕ್ಷ ಇಂಡಿಯಾದಲ್ಲೇ ಏನಾದರೂ ಕೋಲಾಹಲವೇಳದಂತೆ ಜಾಗರೂಕರಾಗಿರಬೇಕಲ್ಲವೆ?

ಪೆಡರೇಶನಿನ ತತ್ವ ಸರಿಯಾಗಿದೆ ಭಾರತ ವರ್ಷವೆಲ್ಲ ಒಂದಾಗಬೇಕು ನಿಜ ಬ್ರಿಟಿಷರು ಮಾಡಿರುವ ಆಕ್ಟ ಮಾತ್ರ ಒಳ್ಳೆದಾಗಿವೆ ರಾಜರುಗಳನ್ನು ಅದರಲ್ಲಿ ಸೇರಿಸಿದ ಬಗೆ ಸರಿಯಾಗಿಲ್ಲ ಬ್ರಿಟಿಷ್ ಅಧಿಕಾರದ ಸೂತ್ರಗಳಿಗೆ ಕುಣಿಯುವ ಗೊಂಬೆಗಳೇ ಈ ರಾಜರು ನಿರಂಕುಶತೆಯೆ ಅವರ ಜೀವ ಇವರಲ್ಲಿ ಹೆಚ್ಚಿನವರು ಯಾವ ರಾಜಕುಲದವರು? ಮೋಗಲ್ ಚಕ್ರಾಧಿಪತ್ಯವು ನಾಶ ಹೊಂದುವಾಗ ಕಂದಾಯ ವಸೂಲಿ ಜಮೀನ್ದಾರಿ ದುಡುಕು ಇದ್ದವರೆಲ್ಲ ಅಲ್ಲಲ್ಲೆ ಅಣ್ಣರಾದರು, ಬ್ರಿಟಿಷ ಸರಕಾರವು ಅವರನ್ನು ಎತ್ತಿ ಹಿಡಿದು ಬೆನ್ನುತಟ್ಟಿತು, ಈ ಸರಕಾರದ ಆಧಾರವಿಲ್ಲದಿದ್ದರೆ ಇವರೆಲ್ಲ ಮಾಯವಾಗುವರು, ಇವರೀಗ ಬೇಗನೆ ಬ್ರಿಟಿಷ್ ಪ್ರಾಂತ್ಯಗಳೆಲ್ಲಾಗುವಂತೆಯೆ ಆಳುವ ಹಾಗೆ ಒತ್ತಾಯ ಸಾಕ್ಷಿದೆ, ಇದರಿಂದ ಇವರು ಪಾರ ಕಲಿತರೆ ಭಾರತವರ್ಷವು ಒಂದಾಗುವುದು.

ಶಿಸ್ತು ಇಲ್ಲದಿರುವಿಕೆಯ ಕುರಿತು ಅನೇಕ ಭಯಂಕರ ಕಥೆಗಳು ಬಂದಿರುವೆಯಾದರೂ ನಾನವುಗಳನ್ನೆಲ್ಲಾ ನಂಬುವುದಿಲ್ಲ. ಅಲ್ಲಿನ ಕೆಲಸಗಾರರಿಗೆ ಒಂದು ಎಚ್ಚರಿಕೆಯನ್ನು ಕೊಡಲು ಬಯಸುತ್ತೇನೆ ಅವರು ಕಾರ್ಖಾನೆಗಳಲ್ಲಿ ಶಿಸ್ತು, ನೀತಿ, ಇತ್ಯಾದಿ ಸರಿಯಾಗಿ ಕೆಲಸಮಾಡದೆ ಇದ್ದರೆ, ಕೆಲಸಗಾರರ ಸ್ಥಿತಿಯನ್ನು ಉತ್ತಮಗೊಳಿಸುವರೆ ನಡೆಯುವ ಸರಕಾರದ ಪ್ರಯತ್ನಗಳು ವ್ಯರ್ಥವಾಗುವುವು. ಕೆಲಸಗಾರರು ಅತ್ಯಂತ ಜಾಗರೂಕತೆಯಿಂದ ವರ್ತಿಸಬೇಕು ಅಂಥರಂತೆ ಅವರ ಇತರರ ಕೈಗೊಂಬೆಗಳಾಗಬಾರದು

ಹಿಂದೀ ಪ್ರಕರಣದ ಮೇಲೆ ಚುನಾವಣೆ.

ಹಿಂದಿಗೆ ವಿರೋಧವಾಗಿ ಕೆಲಮಂದಿ ತಮಿಳರು, ಚಳವಳವನ್ನೆಬ್ಬಿಸುವರಷ್ಟೆ ಅವರಿಗೆ ಶ್ರೀ ಸತ್ಯಮೂರ್ತಿಯವರು ಒಂದು ಚಲೇಂಜನ್ನು ಕೊಟ್ಟಿರುವರು. ಆ ಸಮಸ್ಯೆಯ ಮೇಲೆ ಚುನಾವಣೆಯಾಗಬೇಕೆಂದು. ಇದಕ್ಕೆ ತಮಿಳರು ಸಿದ್ಧರಿರುವರೆಂದು, ತಮಿಳು ಭಾಷಣ ಪ್ರೇಮಿಗಳೊಬ್ಬರ ಪ್ರಕಟಣೆಯಾಗಿರುವುದು

'ನನ್ನ ಮಗುವನ್ನು ರಕ್ಷಿಸಿರಿ!' ಸಂಯುಕ್ತ ಪ್ರಾಂತ್ಯದಲ್ಲಿ ಕೊಲೆರಾ ಹಾವಳಿ

ಶ್ರೀ ವಿಜಯಲಕ್ಷ್ಮಿ ಪಂಡಿತರ ಕೊಲೆರಾ ಪ್ರದೇಶದಲ್ಲಿ ಪ್ರವಾಸ

'ನನ್ನ ಮಗುವನ್ನು ರಕ್ಷಿಸಿರಿ' ಎಂಬ [illegible] ಸ್ವಾಸ್ಥ್ಯ ಮಂತ್ರಿಗಳಾದ ಶ್ರೀ ವಿಜಯಲಕ್ಷ್ಮಿ ಪಂಡಿತರು, ತಮ್ಮ ಪ್ರವಾಸ [illegible] ಅವರ [illegible] ಈ [illegible] ಕೇಳಿ [illegible]

ಸಂಯುಕ್ತಪ್ರಾಂತ್ಯದ ಅನೇಕ ಹಳ್ಳಿಗಳಲ್ಲಿ ಈಗ ಕೊಲರಾ ರೋಗವು ತಲೆದೋರಿದ್ದು ಮಹಾ ಹಾವಳಿಯನ್ನು ನಡೆಯಿಸುತ್ತಿದೆ ಶ್ರೀ ವಿಜಯಲಕ್ಷ್ಮಿ ಪಂಡಿತರು ಈ ಹಳ್ಳಿಗಳನ್ನು ಸಂಚರಿಸಿ ಸ್ಥಿತಿಗತಿಗಳನ್ನು ಪರಿಶೀಲಿಸುತ್ತಿರುವರು. ಕೊಲೆರಾವಿರುವ ಅನೇಕ ಮನೆಗಳನ್ನು ಸೇರಿ, ಕೊಲೆರಾದಿಂದ ನರಳುವವರಿಗೆ ಸಮಾಧಾನವನ್ನು ಹೇಳುವವರಾದರು

ಆರೋಗ್ಯಖಾತೆಯವರ ಕೆಲಸದ ಮೇಲ್ವಿಚಾರವನ್ನು ನೋಡುವುದೇ ಶ್ರೀಮತಿಯವರ ಪ್ರವಾಸದ ಉದ್ದೇಶವಾಗಿರುತ್ತದೆ

ಕಾಂಗ್ರೆಸ್ ವಾಲರು ಅಲ್ಲಲ್ಲಿ ತಿರುಗಿ ಜನರು ಕೊಲೆರಾ ಇನೋಕ್ಯುಲೇಶನನ್ನು ತೆಗೆದುಕೊಳ್ಳುವಂತೆ ಸಾರುತ್ತಿದ್ದು, ಸಾವಿರಾರು ಮಂದಿಗಳು ಅಲ್ಲಲ್ಲಿ ಕೂಡಿ ಬಂದು ಆರೋಗ್ಯಖಾತೆಯಿಂದ ಕೊಲೆರಾ ದಾತವನ್ನು ಹಾಕಿಸಿಕೊಳ್ಳುತ್ತಿದ್ದಾರೆ ಸರಕಾರಿ ನೌಕರವರ್ಗದವರಿಂದ ಮೊದಲು ಜನರು ಇನೋಕ್ಯುಲೇಶನ್ ಪಡೆಯುವಂತೆ ಮಾಡಿದ್ದ ಯತ್ನಗಳು [illegible], ಕಾಂಗ್ರೆಸ ವಾಲರು ಈ ಕಾರ್ಯದಲ್ಲಿ ತೊಡಗಲು ಇನೋಕ್ಯುಲೇಶನಿಗಾಗಿ ಜನರು ಗುಂಪು ಗುಂಪಾಗಿ ಕರೆದುಬರುವವರಾದರು.

ಸರಕಾರಿ ನೌಕರ ವರ್ಗದವರಲ್ಲದೆ ಇತರ ಸಾಮಾನ್ಯರು ಕೂಡ ಇದ್ದು, ಈ ರೋಗದ ಹಾವಳಿಯನ್ನು ತಡೆಯುವ ಬಗ್ಗೆ ಶ್ರೀಮತಿಯವರು ಒಂದು ಯೋಜನೆಯನ್ನು ಕಲ್ಪಿಸಿರು

THE

Bank of Mangalore Ltd.,

MANGALORE.

ESTD. 1931

Branches:

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances.

All kinds of banking business transacted.

[illegible] ಕೆಮ್ಮು [illegible]

ಜ್ವರ, ಇವುಗಳನ್ನು ಗುಣಪಡಿಸಿರಿ.

ನಿಮ್ಮಲ್ಲಿ ಕಳ್ಳನ ಶೀತವು ತಲೆದೋರಿದರೆ, ಕೆಮ್ಮು ಉಂಟಾದರೆ, ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಶೀತವು ಉಂಟಾದರೆ, ಈ ಸಂಕಟಗಳ ಚಿಹ್ನೆಗಳು [illegible] ನಿಸಿಕೊಂಡ ಕೂಡಲೆ, ಪೆಪ್ಸ್ ಗುಳಿಗೆಗಳನ್ನು ಸೇವಿಸು [illegible] ಉಪಚರಿಸಿಕೊಳ್ಳಿರಿ. ಪೆಪ್ಸ್ ನಿಮ್ಮ ಬಾಯಲ್ಲಿ ಕರಗುತ್ತಿರುವಾಗ, ಹೊರಡುವ ಧೂಪವು ನಿಮ್ಮ ಎದೆಯನ್ನು ಸೇರಿ, ಅಲ್ಲಿರುವ ಅಪಾಯಕರ ರೋಗಾಣುಗಳನ್ನು ನಾಶಪಡಿಸುವುದು, ಅದು ಉರಿತವನ್ನು ಕಡಿಮೆಮಾಡುವುದು, ಶ್ವಾಸ ನಳಿಗೆಗಳನ್ನು ಸ್ವಚ್ಛಗೊಳಿಸುವುದು, ಆದರಿಂದ ಕೆಮ್ಮು ಸಡಿಲಾಗುವುದು, ಗಂಟಲು ಸಂಬಂಧದ ಬೇನೆಗಳು ವಾಸಿಯಾಗುವವು. ಬ್ರೊಂಕಾಯಿಟಿಸ್, ಉಬ್ಬಸ ಮತ್ತು ಜ್ವರಬೇಸ್ಗೆಗಳಿಗೆಗಳು ಖಾತ್ರಿ ಔಷಧ.

ಪೆಪ್ಸ್ ರೂ. ಒಂದರ ಪ್ರಕಾರ ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ.

ಏಜಂಟರು—

ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್, ಮದರಾಸು.

ಯಾವಾಗಲೂ ಪೆಪ್ಸನ್ನು ಸೇವಿಸಿರಿ.

PEPS

ವಿಷಹಾರಕ ಶ್ವಾಸನೀಯ ಗುಳಿಗೆಗಳು

S. U. N. & Co.,

Silk Merchants,

Chaukhamba, BENARES CITY.

ಈಗಿನ ತರಹ (ಕಾಶಿ) ಬೆನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ. 45ರಿಂದ 150, ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟ ಶೀರೆಗಳು ರೂ. 35ರಿಂದ ರೂ. 55. ಮಡಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 10, ಅಗಲ 2¼ ರೂ. 20ರಿಂದ 35ರ ವರೆಗೆ. ಬೇರೆ ಮಾಲುಗಳ ಪಟ್ಟಿ ಬೇಗ ಉಚಿತವಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಿಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ [illegible] ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ [illegible] ಔಷಧವನ್ನು ಉಪಯೋಗಿಸಿ ನೋಡಿರಿ. [illegible] ಗೊನೋಕಿಲ್ಲರ್; ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ [illegible] ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3-0-0 (ಮೂರು) ವಿ. ಪಿ. ಛಾರ್ಜ ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** Vithalbhai Patal Road, BOMBAY.

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**
Minister of Labour.

4-10-1937

Bhuvanendra Products Ltd, Katapady, S. Kanara

ಆಂಧ್ರ ಪ್ರಾಂತ್ಯ.

"ಈ ಸರಕಾರವಿರುವವರೆಗೂ ಕಾಲ ಸಾಧ್ಯವಲ್ಲ"

ಕೌನ್ಸಿಲು ಆಫ್ ಸ್ಟೇಟಿನಲ್ಲಿ ಕಾಂಗ್ರೆಸ್ ಪಕ್ಷದ ಅಧಿನಾಯಕರು ಶ್ರೀ ವಿ. ರಾಮದಾಸ ಪಂತುಲುರವರು, ಬೆಜವಾಡದಲ್ಲಿ ಸೇರಿದ್ದೊಂದು ಮಹಾಸಭೆಯಲ್ಲಿ — ಇದೊಂದು ಕಾರ್ಯಕ್ರಮವನ್ನು ಮುಂದಿಟ್ಟು ಅದರ ಕಾರಣದಿಂದ ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲಿನಿಂದ ಎಲ್ಲ ಕಾಂಗ್ರೆಸ್ ಮತ್ತು ಇತರ ಆಂಧ್ರ ಪ್ರತಿನಿಧಿಗಳು ರಾಜೀನಾಮೆ ಕೊಡಬೇಕೆಂದೂ, ಪುನಃ ಅದೇ ಕಾರ್ಯಕ್ರಮವನ್ನು ಮುಂದಿಟ್ಟು ಚುನಾವಣೆಗೆ ನಿಲ್ಲಬೇಕೆಂದೂ ಸೂಚಿಸಿರುವರು.

"ಈಗಿನ ಮದ್ರಾಸು ಮಂತ್ರಿ ಮಂಡಲದಿಂದ ಆಂಧ್ರರಿಗೆ ಪ್ರತ್ಯೇಕ ಪ್ರಾಂತ್ಯ ಸಿಗುವ ಆಸೆಯಿಲ್ಲವೆಂದೇ ತಿಳಿಯಬೇಕಾಗಿದೆ. ನ್ಯಾಯ ವಿಧಾಯಕ ಸಭೆಗಳಲ್ಲಿ ಕಾಂಗ್ರೆಸ್ ಕೂಟಗಳ ಶಿಸ್ತಿನ ಪರಿಣಾಮವಾಗಿ, ಮಂತ್ರಿಗಳನ್ನು ಎದುರಿಸಲು ಈಗಿನ ಆಂಧ್ರ ಮೆಂಬರರಿಗೆ ಸಾಧ್ಯವಾಗಲಾರದು.

ಮದ್ರಾಸು ಮಂತ್ರಿಗಳು ವಿಶೇಷ ಮಹತ್ವವನ್ನು ಕೊಟ್ಟು, ಆಂಧ್ರ ಪ್ರಾಂತ್ಯವೊಂದು ಉಂಟಾಗುವ ಹಾಗೆ ಶಿಫಾರಸು ಮಾಡಿರುವರೆಂದೂ ಹೇಳುವ ಕೆಲವರಿದ್ದಾರೆ. ಇದು ನಿಜವಲ್ಲ. ನಾನು ತಪ್ಪೆಂದು ಸರಕಾರವೇ ನಿಜಸ್ಥಿತಿ ಹೇಳಲಿ!"

"1940ರಲ್ಲಿ ಸಾಧ್ಯವಾಗುವುದು"

ಡಾ। ಪಟ್ಟಾಭಿಸೀತಾರಾಮಯ್ಯನವರು— ಕಾಂಗ್ರೆಸ್ ಪ್ರತಿನಿಧಿಗಳೆಲ್ಲ ಎಸೆಂಬ್ಲಿಯಲ್ಲಿ ತೆಲುಗಿನಲ್ಲೇ ಮಾತಾಡಬೇಕೆಂದು ಆಂಧ್ರರಿಗೆ ತಿಳಿಸಿರುವರು. ಇದೊಂದು ರಗಳೆಯಾಗಿದೆ ಎಂದು ಇತರರ ಮಾತು. ಆದರೆ, ಈ ಬಗೆಯಲ್ಲಿ ವರ್ತಿಸುವುದರಿಂದ ಆಂಧ್ರಭಾಷೆ ಮತ್ತು ಪ್ರಾಂತ್ಯದ ಕಡೆಗೆ ಸರ್ವರ ಗಮನವುಂಟಾದೀತೆಂದೂ ಅವರ ಅಭಿಪ್ರಾಯ. ಅವರು ಮಾತ್ರ, ಇದ್ದ ಸ್ಥಳಗಳನ್ನು ತ್ಯಜಿಸಿ ಚುನಾವಣೆಗೆ ನಿಲ್ಲಬೇಕೆಂದು ಬೋಧಿಸುವುದಿಲ್ಲ.

"ಸತ್ಯಾಗ್ರಹ ಪ್ರಾರಂಭಿಸಿರಿ"

ಎಂದು ಗುಂಟೂರಲ್ಲಿ ಸೇರಿದೊಂದು ಆಂಧ್ರರ ಸಭೆಯ ನಿರ್ಣಯ. ಹಿಂದೀ ವಿರುದ್ಧ ಚಳವಳಗಾರರು ಸಾಧಿಸುವ ಹಾಗೆಯೇ, ಆಂಧ್ರ ಪ್ರಾಂತ್ಯದ ರಚನೆಗಾಗಿ ಚಳವಳಿಸುವವರೂ ಪ್ರಯತ್ನಿಸಬೇಕೆಂದೂ ಈ ಸೂಚನೆ. ಇದನ್ನು ಡಾ। ಪಟ್ಟಾಭಿಯವರು ಖಂಡಿಸಿ, ಇದು ಗೌರವಕರವಲ್ಲ; ಹೀಗೆ ಮಾಡದಿರಿ ಎಂದು ಬೋಧಿಸಿರುವರು.

"ಆಂಧ್ರ ಪ್ರಾಂತ್ಯ ಬೇಡ"

ಎಂದು ಮುಖ್ಯ ಮಂತ್ರಿಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರು ಒಪ್ಪಿಸಿರುವ ಬಿನ್ನವತ್ತಳೆಯಲ್ಲಿದೆ. "ಇದು ಜನತೆಗೆ ಬೇಕಾಗಿಲ್ಲ, ಕೆಲವರು ಇದೊಂದು ಪ್ರಾಂತ್ಯ ರಚಿಸಿಕೊಂಡು ತಾವು ಅಧಿನಾಯಕರೋ ಹುದ್ದೇದಾರರೋ ಆಗುವ ಸ್ವಾರ್ಥದಿಂದ ಇದಕ್ಕಾಗಿ ಚಳವಳಿಸುತ್ತಾರೆ. ದಯವಿಟ್ಟು ಸೀಡೆಡ್‌ವರಿಗೆ ಇದು ಬೇಡ" ಎಂದು ಬಿನ್ನವತ್ತಳೆಯಲ್ಲಿತ್ತು. ಕೂಡಲೆ, ಬೋರ್ಡು ಮೆಂಬರರು ಕೆಲವರು ಎದ್ದು ನಿಂತು, "ಈ ಬಿನ್ನಪವು ಬೋರ್ಡಿನ ಮುಂದೆ ಬಂದುದಲ್ಲಿ ಇದನ್ನು ನಾವು ಎದುರಾಡುವವರಿದ್ದೇವೆ" ಎಂದರು. ಮುಖ್ಯ ಮಂತ್ರಿಗಳು— "ಮಹಾಜನರ ಅಭಿಪ್ರಾಯವು ಪ್ರಾಂತ್ಯ ಪ್ರತ್ಯೇಕವೊಂದು ಉಂಟಾಗಬೇಕೆಂದಿದೆ. ಜನಾಭಿಪ್ರಾಯವೆಲ್ಲ ಒಂದಾಗಲಿ. ಎಲ್ಲವೂ ನಮ್ಮ ಕೈಯಲ್ಲಿಲ್ಲ. ಇನ್ನೂ ಕಾನೂನು ಪ್ರಕಾರ ಚಳವಳಿಸಿ ಒಂದೇ ಅಭಿಪ್ರಾಯ ಉಂಟಾಗುವಂತೆ ಮಾಡಿರಿ. ಮುಂದೆ ಸಾಧ್ಯವಾದೀತು" ಎಂದು ಸಮಾಧಾನ ನುಡಿದಿದ್ದಾರೆ.

ರಾಷ್ಟ್ರಪತಿಯವರ ಉದ್ಗಾರಗಳಿಗೆ ಸತ್ಯಮೂರ್ತಿಯವರ ಆಕ್ಷೇಪಗಳು

ರಾಷ್ಟ್ರಪತಿ ಸುಭಾಷಚಂದ್ರರ ಹೇಳಿಕೆ:—

"ಕಾಂಗ್ರೆಸಿನಲ್ಲಿ ಯಾವುದೊಂದು ವಿಧಾನದಿಂದ ಬಹುಮತ ದೊರೆತು ಫೆಡರೇಶನು ಜಾರಿಗೆ ತರಲು ಒಪ್ಪಿಗೆ ಸಿಗುವಂತಾದಲ್ಲಿ, ಕಾಂಗ್ರೆಸಿನೊಳಗೆ ಅಂತಃಕಲಹಗಳು ಪ್ರಾರಂಭವಾಗದಿರವು. ಪ್ರಾಂತ್ಯಗಳಿಗೆ ಅಧಿಕಾರ ಸ್ವೀಕಾರ ಮಾಡಬಹುದೆಂದು ಕಾಂಗ್ರೆಸು ಬಹುಮತದಿಂದ ಒಪ್ಪಿದೆಂದು, ಇದಕ್ಕೆ ವಿರುದ್ಧವಾದವರು ಮೌನವಾಗಿ ಕುಳಿತಂತೆ, ಫೆಡರೇಶನಿಗೆ ವಿರುದ್ಧರಾದವರು ಇಂತಹ ತೀರ್ಮಾನ ಕೇಳಿ ಸುಮ್ಮನೆ ಎಂದೂ ಬಿದ್ದುಕೊಳ್ಳಲಾರರು. ಇಂತಹ ಸಂದರ್ಭವುಂಟಾಗುವುದಾದಲ್ಲಿ, ನಾನು, ನನ್ನೀ ಅಧ್ಯಕ್ಷತೆಯನ್ನು ತೋರಿವುದೇ ಆಗ ಕರ್ತವ್ಯವೆಂದು ತಿಳಿಯುವೆನು. ಹಾಗೆ ಮಾಡುವುದರಿಂದ ಫೆಡರಲ್ ಸ್ಕೀಮನ್ನು ಹರಿಹಂಚಾಗಿ ಮಾಡುವುದಕ್ಕೆ ನನಗೆ ಆಗ ತಾನೆ ಸ್ವತಂತ್ರ ಸಿಗುವುದು!"

ಹೀಗೆ ಅವರು ಜಾಡ್ಯಹಿಡಿದು ಮಲಗಿದಲ್ಲಿಂದ ತೀಕ್ಷ್ಣವಾಗಿ ನುಡಿದರು. ಕಾರಣವೆಂದರೆ,— ಇಂಗ್ಲೆಂಡಿನಲ್ಲಿ ಸರ್ ಫ್ರೆಡರಿಕ್ ವ್ಹಾಯಿಟ್‌ರವರೊಡನೆ ಕಾಂಗ್ರೆಸಿನ ಕಾರ್ಯಕಾರೀ ಮಂಡಲಕ್ಕೆ ಸೇರಿರುವ ಧುರೀಣರೊಬ್ಬರು (ಶ್ರೀ। ಭೂಲಾಭಾಯಿ ದೇಸಾಯಿಯವರಾಗಿರಬಹುದೆಂದು ಊಹಿಸಲಾಗಿದೆ.) ಫೆಡರೇಶನಿನಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿದಲ್ಲಿ ಅದನ್ನು ಕಾಂಗ್ರೆಸ್ ಅಂಗೀಕರಿಸಬಹುದು ಎಂದು ನುಡಿದಿದ್ದರೆಂದು ವ್ಹಾಯಿಟ್ ಸಾಹೇಬರು ಒಂದು ಭಾಷಣದಲ್ಲಿ ಹೇಳಿದ್ದರಂತೆ; ಅದು ರಾಷ್ಟ್ರಪತಿಗಳಿಗೆ ತಿಳಿದು ಬಂತು. ಅದಕ್ಕಾಗಿ ಮೇಲಣ ಉದ್ಗಾರಗಳನ್ನು ಆವರೆತ್ತಿದರು.

ಶ್ರೀ। ಸತ್ಯಮೂರ್ತಿಯವರ ಆಕ್ಷೇಪ:—

ಇವರು ಬೊಂಬಾಯಿಗೆ ಹೋಗಿದ್ದರು. ಅಲ್ಲಿಂದ ಢಿಲ್ಲಿಗೆ ಹೊರಡುವುದರೊಳಗೆ ಈ ಉದ್ಗಾರಗಳನ್ನು ತಿಳಿದರು. ಕೂಡಲೆ ಇವರಲ್ಲಿ ಉದ್ವೇಗ ಉಂಟಾಯಿತು. ಆದುದರಿಂದ ಇವರೂ ಒಂದು ಹೇಳಿಕೆ ಹೊರಡಿಸಿದರು. ಇವರು ಅಷ್ಟರಲ್ಲಿ ಸರದಾರ ಪಟೇಲರನ್ನೂ ದೇಸಾಯಿಯವರನ್ನೂ ಈ ವಿಷಯ ಕಂಡು ಮಾತಾಡಿದಂತೆ ಕಾಣುತ್ತದೆ.

ಕಾಂಗ್ರೆಸಿನಲ್ಲೇ ಒಡಕು ಹುಟ್ಟಿಸಿ ಒಳಜಗಳಗಳನ್ನು ಉಂಟು ಮಾಡುವುದಕ್ಕಾಗಿ ರಾಷ್ಟ್ರಪತಿಯು ರಾಜೀನಾಮೆ ಕೊಡುವ ಭಯ ಹುಟ್ಟಿಸಿದುದು ಯೋಗ್ಯವಲ್ಲ. ಯಾರು ಏನೆಂದರೆಂಬ ನಿಜವಾದ ಮಾತುಗಳು ಸ್ಪಷ್ಟ ತಿಳಿದು ಬಂದಿಲ್ಲ. ಹೇಳಿದರೂ ವ್ಹಾಯಿಟ್ ಸಾಹೇಬರು ತಮ್ಮ ಅಭಿಪ್ರಾಯವನ್ನಷ್ಟೆ ಹೇಳಿರಬಹುದು. ಈಗಲೇ ಕೂಡುವ ಕಾರ್ಯಕಾರೀ ಮಂಡಲದ ಸಭಾ ನಂತರದಲ್ಲಿ ಇಂತಹ ಹೇಳಿಕೆಯನ್ನಾದರೂ ಪ್ರಕಟಿಸಿದ್ದರೆ ಆಕ್ಷೇಪವಿರಲಿಲ್ಲ. ಕಾರ್ಯಕಾರೀ ಮಂಡಲವನ್ನಷ್ಟಕ್ಕೆ ಬಿಟ್ಟು ಸ್ವಯಂ ನಿರ್ಣಯ ಮಾಡುವ ಈ ಚುರುಕುತನದ ದುಡುಕನ್ನು ಸಭಾಪತಿಯೋಸರಲ್ಲಿ ಖಂಡಿತ ಆಕ್ಷೇಪಿಸ ಬೇಕಾಗಿದೆ. ಯಾವ ಅಧ್ಯಕ್ಷನಾದರೂ ಆ ಸಂಸ್ಥೆಗಿಂತ ದೊಡ್ಡವನಲ್ಲ!

ಕಾಂಗ್ರೆಸು ಅಧಿಕಾರ ಸ್ವೀಕರಿಸ ಬಹುದೆಂದಾಗ ಸಹ, ನೆಹರೂರವರು ರಾಜೀನಾಮೆ ಕೊಟ್ಟವರಲ್ಲ.

ಕಾಂಗ್ರೆಸನ್ನು ಈ ರೀತಿ ಬೆದರಿಸುವುದು ಕಾಂಗ್ರೆಸ್ ಪ್ರೆಸಿಡೆಂಟರಿಗೂ ಯೋಗ್ಯವಾದುದಲ್ಲ. ಮಹಾತ್ಮಾಗಾಂಧಿಯವರು ಸಹ ಇಷ್ಟು ದೂರ ಹೋಗಲಾರರು. ಅವರೆಂದಂತೆ ಕೇಳದಿದ್ದರೆ ತಾವು ಕಾಂಗ್ರೆಸಿನಲ್ಲಿಲ್ಲ ಎಂದೇನೂ ಅವರು ಎಂದೂ ಹೇಳುವವರಲ್ಲ. ಅಧಿಕಾರ ಸ್ವೀಕಾರ ಸಲ್ಲದೆಂದು ಅವರೆಂದರೂ; ಕಾಂಗ್ರೆಸು ಸ್ವೀಕರಿಸಿದಾಗ ಮಾತೆತ್ತದೆ, ಈಗ ಅದರಿಂದಲೇ ಕಾಂಗ್ರೆಸಿನ ಬಲ ಹೆಚ್ಚಿದೆ ಎಂದು ಅವರೇ ಸಾರುತ್ತಾರೆ.

ನಾಳೆ ಅಷ್ಟು ಹೀಗೆ ಬದಲಾವಣೆ ಹೊಂದೀತೆಂದು ಈಗ ಹೇಳಬಲ್ಲುವುದೆ?

ಫೆಡರೇಶನನ್ನು ಕಾಂಗ್ರೆಸು ಒಪ್ಪಲಾರದಾದರೂ, ಬ್ರಿಟಿಷರಲ್ಲಿ ಉತ್ತಮಾಭಿಪ್ರಾಯ ಉಂಟಾಗಿ ಫೆಡರೇಶನಿನ ಕೆಲವು ತತ್ವಗಳನ್ನು ತಿದ್ದಿ ಕಾಂಗ್ರೆಸಿನ ಅಭಿಪ್ರಾಯದಂತೆ ಸರಿಮಾಡಿದಲ್ಲಿ, ಕಾಂಗ್ರೆಸು ಅದನ್ನೇಕೆ ಅಂಗೀಕರಿಸಬಾರದು? ವೈಸ್ರಾಯರ ರಕ್ಷಾಕವಚಗಳನ್ನು ಕಡಮೆಮಾಡಿ, ಹಣದ ಅಧಿಕಾರವನ್ನು ಎಸೆಂಬ್ಲಿಗೆ ಕೊಟ್ಟು, ರಾಜ್ಯಗಳ ಪ್ರತಿನಿಧಿಗಳು ಮೆಂಬರುಗಳಾಗಿ ಬರುವಂತೆ ಮಾಡಿದರೆ, ಬ್ರಿಟಿಷ ಸೈನ್ಯದ ಖರ್ಚನ್ನು ಬ್ರಿಟಿಷರೇ ತೆರುವರಾದರೆ, ಸೈನ್ಯದ ಖರ್ಚಿನ ಒಂದಂಶವನ್ನು ಎಸೆಂಬ್ಲಿಯು ಸಂಕ್ಷೇಪ ಮಾಡುವಂತಾದರೆ, ಇತರ ವಸಾಹತುಗಳಷ್ಟೆ ಅಧಿಕಾರವು ಇಂಡಿಯಾಕ್ಕೆ ಕೊಡಲ್ಪಡುವುದಾದರೆ, ಸದ್ಯಕ್ಕೆ ಅಷ್ಟು ತಿದ್ದುಪಡಿಯುಳ್ಳ ಫೆಡರೇಶನು ನಮಗೆ ಸಾಕಾಗುವುದು.

ಆಗ ಎಸೆಂಬ್ಲಿಯಿಂದ, ಜೊಯಿಂಟ್ ಇಲೆಕ್ಟೋರೇಟ್‌ಗಳನ್ನು ಸ್ಥಾಪಿಸಲು ಕಾನೂನು ಮಾಡಿಕೊಳ್ಳಬಹುದು. ಅನಂತರ, ಕಾಂಗ್ರೆಸು ಮಂತ್ರಿಮಂಡಲಗಳು ಎಲ್ಲೆಲ್ಲಿಯೂ ಪೂರ್ಣ ಸ್ವರಾಜ್ಯಕ್ಕಾಗಿ ಕಾದಾಡಬಹುದು. ಐರ್ಲೆಂಡಿನಲ್ಲಿ ಡಿ ವೇಲೇರನು ಮಾಡಿದ್ದು ಇಷ್ಟೆ. ಅಲ್ಲಿ ಹೋರಾಟವಲ್ಲ ಯುದ್ಧರೂಪದಿಂದಾಯ್ತು; ಇಲ್ಲಿ ಅಹಿಂಸಾತ್ಮಕವಾಗಿ ಸಾಗುವುದು.

ಇದನ್ನು ಸಹ ಕಾಂಗ್ರೆಸು ಒಪ್ಪಿಕೊಳ್ಳಲೂಬಹುದು, ನಿಷೇಧಿಸಲೂ ಬಹುದು. ಅದಕ್ಕಾಗಿ ಯಾರನ್ನು ಬೆದರಿಸುವುದು ತಪ್ಪು. ಕಾಂಗ್ರೆಸ್ ಪ್ರೆಸಿಡೆಂಟರೇ ಹೀಗೆ ಬೆದರಿಸುವುದು ಇನ್ನಷ್ಟು ಅಯೋಗ್ಯ.

ಗೋಧನ

ಕಾಮಧೇನು ಹೆಸರಿಗೆ ಮಾತ್ರ; ಹಾಲಿಗೆ ತತ್ವಾರ.

ಪ್ರತಿ ವರ್ಷವೂ ನಮ್ಮ ದೇಶದ ಧನಸಿರಿಗೆ ಗೋವುಗಳಿಂದಾಗುವ ಸಹಾಯವು 12 ಕೋಟಿ ರೂಪಾಯಿ ಎಂದು ಲೆಕ್ಕವಿದೆ. ಹೈನ ಪದಾರ್ಥಗಳಿಂದ 300 ಕೋಟಿ ರೂಪಾಯಿ ದೊರೆವುದು. ಇಷ್ಟೇ ಹಣವು ಅಕ್ಕಿಯಿಂದ ಉತ್ಪನ್ನವಾಗುವುದು. ಕೃಷಿ ಕರ್ಮದಲ್ಲಿ ಜಾನುವಾರಗಳಿಂದಾಗುವ ದುಡಿತದ ಬೆಲೆ 400 ಕೋಟಿರೂಪಾಯಿ. ಕೃಷಿಗಲ್ಲದೆ ಇತರ ದುಡಿತ 161 ಕೋಟಿ, ಗೊಬ್ಬರ 270 ಕೋಟಿ; ಚರ್ಮದ ಬೆಲೆ 40 ಕೋಟಿ ರೂಪಾಯಿ.

ನಿರುಪಯೋಗಿಗಳಾದ 25 ಮಿಲ್ಲಿಯ ದನಗಳನ್ನು ಈ ದೇಶದಲ್ಲಿ ಸಾಕುತ್ತಲೇ ಇರುವರು; ಇವುಗಳಿಂದ 176 ಲಕ್ಷ ರೂಪಾಯಿ ವ್ಯರ್ಥವಾಗುತ್ತದೆ. ಸಾರ್ಥಕವಾಗ್ಗಿರುವ ಜಾನುವಾರುಗಳ ಪೋಷಣೆ ಚೆನ್ನಾಗಿರದೆ, ಅವು ಪಾರಂಪರಿಯಾಗಿ ಕುಂದಿಯೇ ಬರುತ್ತಲಿವೆ.

ವರ್ಷಕ್ಕೆ ಜಾನುವಾರುಗಳಿಂದ 6400 ಮಿಲ್ಲಿಯ ಗೆಲನ್ ಹಾಲು ಸಿಗುತ್ತದೆ. ಯುನೈಟೆಡ್‌ಸ್ಟೇಟ್ಸದಲ್ಲಿ 10380 ಮಿಲ್ಲಿಯ ಗೆಲನು; ಬ್ರಿಟನಿನಲ್ಲಿ 1474 ಮಿಲ್ಲಿಯ ಗೆಲನು.

ಯುನೈಟೆಡ್ ಸ್ಟೇಟ್ಸಿನಲ್ಲಿರುವ ಜಾನುವಾರುಗಳ ಸಂಖ್ಯೆಗಿಂತ ಇಂಡಿಯಾದಲ್ಲಿನವು $8\frac{1}{2}$ ಪಾಲು ಹೆಚ್ಚಿಗೆಯಾದರೂ ದೊರೆವ ಹಾಲು ಮಾತ್ರ ಮೂರರಲ್ಲಿ ಎರಡಂಶದಷ್ಟು! ಬ್ರಿಟನ್ನಿನಲ್ಲಿರುವ ಜಾನುವಾರುಗಳಿಗಿಂತ ಇಲ್ಲಿ 30 ಪಾಲು ಹೆಚ್ಚಿಗೆ ಜಾನುವಾರುಗಳಿದ್ದು ದೊರೆವ ಹಾಲು ನಾಲ್ಕೆ ಪಾಲಷ್ಟು ಮಾತ್ರ ಹೆಚ್ಚಿಗೆ. ಮದ್ರಾಸಿನಲ್ಲಿ ದೊರೆವ ದನಗಳ (ಸರಾಸರಿ) ಹಾಲು ವರ್ಷಕ್ಕೆ 511 ಪೌಂಡು; ಪಂಜಾಬಿನಲ್ಲಿ ಅದು 1444 ರಾತ್ಲು! ಬ್ರಿಟನ್ನಿನಲ್ಲಿ 5000 ರಾತ್ಲು, ಯುನೈಟೆಡ್ ಸ್ಟೇಟ್ಸಿನಲ್ಲಿ 4500 ರಾತ್ಲು, ಡೆನ್ಮಾರ್ಕಿನಲ್ಲಿ 7800 ರಾತ್ಲು, ಹೊಲೆಂಡಿನಲ್ಲಿ 9632 ರಾತ್ಲು ಹಾಲು ಒಂದೊಂದು ದನದಿಂದ ಸರಾಸರಿಯಾಗಿ ದೊರೆವುದಾಗಿದೆ.

ಭಾರತವರ್ಷದಲ್ಲಿ ಹಾಲಿವಾಲ ದನಗಳು ಸರಾಸರಿಯಾಗಿ 1300 ರಾತ್ಲು ಹಾಲನ್ನು ವರ್ಷಕ್ಕೆ ಕೊಡುವುವು.

ಎತ್ತುಗಳ ಬಾಲ ನೋಡಿರಿ; ಮುರಿದು ಹೋದಂತಿವೆ. ಅಷ್ಟು ಚೆನ್ನಾಗಿ ಅವುಗಳನ್ನು ಪೀಡಿಸಿದೆ ಅವು ಸಾಮಾನ್ಯ ನೇಗಿಲನ್ನು ಉಳಲೂ ಗಾಡಿ ಎಳೆಯಲೂ ಒಲ್ಲವು. ಕಾರಣ ಅಷ್ಟು ಬಲಹೀನವಾಗಿವೆ.

ನಮ್ಮಲ್ಲಿ ಸರಾಸರಿಯಾಗಿ ದಿನಕ್ಕೆ ಏಳು ಔನ್ಸು ಹಾಲು ಉಪಯೋಗಿಸುವರು. ಬ್ರಿಟನ್ನಿನಲ್ಲಿ 39 ಔನ್ಸು; ಯುನೈಟೆಡ್ ಸ್ಟೇಟ್ಸಿನಲ್ಲಿ 35 ಔನ್ಸು. ದೇಹಕ್ಕೆ ಶಕ್ತಿಕೊಡುವ ಹಾಲು 12 ಔನ್ಸಿನಷ್ಟಿಲ್ಲದೆ ಯಾವನಿಗೂ ಒಂದು ದಿನ ಕೆಲಸ ಮಾಡಲು ಬರುವ ಹಾಗಿಲ್ಲ. ಮದ್ರಾಸು ಸಂಸ್ಥಾನದಲ್ಲಿ ಸರಾಸರಿಯಾಗಿ $1\frac{1}{2}$—2 ಔನ್ಸು ಹಾಲು ಮಾತ್ರವೇ ಜನರಿಗೆ (ದಿನಕ್ಕೆ) ಸಿಗುವುದು.

ಇಡೀ ದೇಶದಲ್ಲಿ ಈ ಜಾನುವಾರುಗಳು ಮೇಯಲು, ಪ್ರತಿಶತಾನುಪಾತದಲ್ಲಿ ಸರಾಸರಿ 5 ಸೆಂಟ್ಸು ಸ್ಥಳವಿದ್ದು, 1929ರಲ್ಲಿ ಇದು $12\frac{1}{2}$ ಸೆಂಟ್ಸು ಆಗಿತ್ತು. ಜನಸಂಖ್ಯೆ ಹೆಚ್ಚಿ, ಜಮೀನೆಲ್ಲ ಕಟ್ಟಡಗಳಿಗೆ ಹೊಲಗಳಿಗೆ ಬೇಕಾಗಿದೆ.

ಅವುಗಳ ಆರೋಗ್ಯ ಕಾಪಾಡುವ ವ್ಯವಸ್ಥೆ ಹೇಗಿದೆ? 14000 ಜಾನುವಾರುಗಳಿಗೆ ಒಬ್ಬನಂತೆ ವೈದ್ಯನಿರುವನು. ಸರಾಸರಿಯಾಗಿ ಒಂದೊಂದು ಜಾನುವಾರಿನ ಆರೋಗ್ಯಪಾಲನೆಗಾಗಿ ವರ್ಷಕ್ಕೆ $9\frac{1}{2}$ಪೈ ಖರ್ಚಾಗುತ್ತದೆ! ಕೆನಡಾದಲ್ಲಿ 21000 ಜಾನುವಾರುಗಳಿಗೆ ಒಬ್ಬ ವೈದ್ಯನಿರುವನು. ಅವುಗಳ ಶುಶ್ರೂಷೆಯ ಖರ್ಚು ತಲಾ 2 ಆಣೆ. ಜಾನುವಾರುಗಳ ಸಂರಕ್ಷಣಾ ಕ್ಷೇತ್ರಗಳು 39 ಇವೆ.

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ.ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P O. Peridepi (ನೆಲ್ಲೂರು ಡಿ)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟ್ಯಾನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರಿಕಟ್ಟಾ ಬಜಾರ್, ಮಂಗಳೂರು.

MIRA TOILET ARTICLES

"MIRA PRODUCTS" are of such excellence that they could compare favourably with the famous perfumes and toilet articles used by Indian Rulers in the glorious past.

H H The Maharajah of Sonepur

The Hon'ble Mr. B K. Basu, C. I E.

"MIRA' Products are in no way inferior to similar foreign products

Sole Agents

The Modern Trading Company,
Opp City Press MANGALORE.

Wanted a Canvassar to Book orders for Mira Products on pay or commission

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿಹೊಂದಿರುವ,—ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಫೆನ್ಸಿ ಶರ್ಟಿಂಗ್

ಮಂಜು ಬಣ್ಣದ್ದು ಅತಿ ಮೃದುವಾದ ದು, ಮತ್ತು ದೀರ್ಘ ಬಾಳ್ಕೆಯದು
9 ಗಜ×54 –6 ಶರ್ಟುಗಳಿಗೆ ಸಾಕಾಗುವುದು ಕ್ರಯ ರೂ 5–8–0
ಟಪ್ಪಾಲು ಖರ್ಚ ಧರ್ಮಾರ್ಥ. ಇದರೊಡನೆ 6 22×22 ಪೆನ್ಸಿ ಕರವಸ್ತ್ರಗಳು ಉಚಿತವಾಗಿ ಕೊಡಲಾಗುವವು
ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ
ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ದಿ ನೇಶನಲ್ ಟ್ರೇಡಿಂಗ್ ಕಂಪೆನಿ,
ಲೂದಿಯಾನಾ, A 211.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದು ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನ ಮಾಡಿದರೂ ಶುರುವಾಗುವುದಿಲ್ಲ ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಂಬಯಿ ಸರ್ಟಿಫಿಕೇಟು ಡಾ ವೈದ್ಯ ಎಲ್ ಸಿ ಪಿ ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪ ೦-೦ ವಿ ಪಿ [illegible]

ವಿಳಾಸ — ಸಂಜೀವಿನೀ ಔಷಧಾಲಯ ಮು. ಪೋ ಮಿರಜ, (S M.C.)

ಯಾಕೆ ಭಯಪಡುತ್ತೀರಿ?

ಕುಷ್ಠರೋಗ, ಬಿಳಿತೊನ್ನು ಮೇಹ ಇವುಗಳನು ಗುಣಪಡಿಸುವುದು ಸಾಧ್ಯವಿದೆ

ರೆಡ್ಡಿ ಮತ್ತು ಕಂಪೆನಿ (ರಿಜಿಸ್ಟರ್ಡ್)

ಮ್ಯಾನೇಜರು:

ಶ್ರೀ ಕೃಷ್ಣಾ ಆಶ್ರಂ.ಗೋಪಾಲಪುರಂ,
ಪೂರ್ವ ಗೋದಾವರಿ ಜಿಲ್ಲೆ.

ಇವರು 50 000 ರೋಗಿಗಳನ್ನು ಗುಣಪಡಿಸಿರುವರು.

ಕೆಟಲಾಗು ಮತ್ತು ವಿಚಾರಣೆ ಧರ್ಮಾರ್ಥ

The

Agricultural & Industrial Bank, Ltd,

(Incorporated in British India)

Head Office LAXMINIVAS BUILDINGS *Coondapoor*

BRANCHES –

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS 10 25 50 100 250 500 & 1000

REDEEMABLE AT ANY TIME

CUMULATIVE DEPOSITS ARE ACCEPTED

Current Deposits

From January to June 2%
and
From July to December 1%

Savings Bank Deposits

3½ per cent per annum

Fixed Deposits

for 6 Months		3½%
„ 1 Year		4%
„ 2 Years & above		4½%

For Further Particulars Apply to:—

HEAD OFFICE or BRANCHES

ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ಮತ್ತು ಪ್ಲೀಹದ ಬೆಳವಣಿಗೆ ರೋಗವನ್ನು ನಿವಾರಿಸುವ ಮತ್ತು ಕಡೆಯುವ ಖಾತ್ರಿ ಗುಣಗಳುಳ್ಳ ಔಷಧಿಯು

ಎರಡು ವಿಧಗಳಲ್ಲಿ, ಎರಡು ಪರಿಮಾಣಗಳಲ್ಲಿ ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ

ಆಯುರ್ವೇದಾಶ್ರಮಂ ಮದ್ರಾಸು.

ಪ್ರವರ್ತಕರು-ಅಮರ್‌ಚಂದ್ ಸೊಬಾಚಂದ್, ಮದ್ರಾಸು.

Buy Advertised Goods

ರಾಮನಾಮದ ಮತ್ತು ಜಪದ ಮಹತ್ವ

ರಾಮೋ ರಾಜ ಮಣಿಃ ಸದಾ ವಿಜಯತೇ।
ರಾಮಂ ರಮೇಶಂ ಭಜೇ ॥

ರಾಮೇಣಾಭಿಹತಾ ನಿಶಾಚರಚಮೂ।
ರಾಮಾಯ ತಸ್ಮೈ ನಮಃ ॥

ಶ್ರೀರಾಮನಿಗಿಂತಲೂ ಶ್ರೇಷ್ಠವಾದದ್ದು ಬೇರೆ ಯಾವದು? ರಾಮನಾಮವಲ್ಲವೇ? ಅದು ಹೇಗೆಂದರೆ—ಒಂದು ದಿನ ಹನುಮಂತನು ಶ್ರೀರಾಮನನ್ನು ಕುರಿತು 'ಪ್ರಭೂ' ನಿನಗಿಂತಲೂ ಶ್ರೇಷ್ಠವಾದುದು ಬೇರೊಂದು ಇರುತ್ತದೆ' ಎಂದನು. ಅದನ್ನು ಕೇಳಿ ಶ್ರೀರಾಮನು ಬೆರಗಾಗಿ ನನಗಿಂತಲೂ ಶ್ರೇಷ್ಠವಾದ ವಸ್ತುವು ಯಾವದೆಂದು ಹನುಮಂತನ ಕೂಡೆ ಕೇಳಿದನು. ಅದಕ್ಕೆ ಹನುಮಂತನು 'ಮಹಾಪ್ರಭೂ, ನೀನು ರಾಜ್ಯವನ್ನು ತೊರೆದು ಅರಣ್ಯವನ್ನು ಪ್ರವೇಶಿಸುವಾಗ ದಾರಿಯಲ್ಲಿ ಸಿಕ್ಕಿದ ನದಿಯನ್ನು ದೋಣಿಯ ಮೂಲಕ ದಾಟಿರುವಿ ಆದರೆ ನಾನು ಲಂಕೆಗೆ ಹಾರುವಾಗ ದೊಡ್ಡ ಸಾಗರವನ್ನು ನಿನ್ನ ನಾಮದ ಪ್ರಭಾವದಿಂದ ದಾಟಿರುವೆನು ಆದುದರಿಂದ ನಿನಗಿಂತಲೂ ಶ್ರೇಷ್ಠವಾದದ್ದು ನಿನ್ನ ನಾಮವಲ್ಲವೇ?' ಎಂದು ಉತ್ತರಕೊಟ್ಟನು ಇಂಥಾ ಮಹತ್ವದ ರಾಮನಾಮವನ್ನು ನಾವು ಪ್ರೇಮ ಹಾಗೂ ವಿಶ್ವಾಸದಿಂದ ಉಚ್ಚರಿಸಬೇಕು ಪರಮೇಶ್ವರನು ಪಾರ್ವತಿಯನ್ನು ಕುರಿತು ಶ್ರೀರಾಮನಾಮವು ಶ್ರೀ ವಿಷ್ಣುವಿನ ದಿವ್ಯ ಸಹಸ್ರನಾಮಗಳಿಗೆ ಸರಿಸಮಾನವಾಗಿದೆ ಎಂದು ಹೇಳಿರುವನು ತುಳಸೀದಾಸನು ಬರೆದ ರಾಮಾಯಣವನ್ನು ಓದಿದರೆ ಈ ರಾಮನಾಮಕ್ಕೆ ಯಾವ ದಿವ್ಯ ಶಕ್ತಿ ಇದೆ ಎಂಬುದನ್ನು ನಾವು ತಿಳಕೊಳ್ಳಬಹುದು ಇಂಥಾ ಶ್ರೇಷ್ಠವಾದ ರಾಮನಾಮವನ್ನು ಈ ಹಿಂದೂಸ್ಥಾನದಲ್ಲಿ ಸಾವಿರಾರು ವರ್ಷಗಳಿಂದ ಜನರು ಧ್ಯಾನಿಸಿಕೊಂಡು ಬಂದುದರಿಂದ ಈಗಲೂ ಪ್ರತಿಯೊಬ್ಬ ಹಿಂದುವಿನ ರಕ್ತದಲ್ಲಿ ಇದು ಬೆರತುಕೊಂಡಿದೆ, ಮಾತ್ರವಲ್ಲ ಚರಾಚರ ಪ್ರಕೃತಿಯಲ್ಲಿ ಕೂಡಾ ಅವಿತುಕೊಂಡಿದೆ ಈ ರಾಮನಾಮವನ್ನು ಸದಾಸ್ಮರಿಸುವುದರಿಂದ ಮನುಷ್ಯನಲ್ಲಿದ್ದ ರೋಗಗಳು ಮತ್ತು ಕೆಟ್ಟ ವ್ಯಸನಗಳು ದೂರತೊಲಗುತ್ತವೆ ಅಲ್ಲದೆ ಎಲ್ಲದಕ್ಕೂ ಮನಸ್ಸೇ ಕಾರಣಭೂತವಾದುದರಿಂದ ರಾಮಸ್ಮರಣೆಯಿಂದ ಅದನ್ನು ಕಟ್ಟಿ ಹಾಕಿದರೆ ಮನುಷ್ಯನ ಚಿತ್ತಶುದ್ಧಿಯಾಗಿ ಬೇರೆ ಯಾವತರದ ದುರಾಲೋಚನೆಗಳಿಗೂ ಎಡೆ ಸಿಕ್ಕುವದಿಲ್ಲ ದೇವರ ನಾಮಸ್ಮರಣೆಯಲ್ಲಿ ಎಲ್ಲಾ ಸಂಕಷ್ಟಗಳನ್ನು ನಿವಾರಿಸುವ ಮಹತ್ವದ ಶಕ್ತಿ ಇದೆ ಎಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ

ಕಬೀರ ದಾಸನು ಮುಸಲ್ಮಾನನಾಗಿ ಜನಿಸಿದರೂ ಆತನು ಶ್ರೀರಾಮನ ಮಹಾಭಕ್ತನು ಅವನಿಗೆ ರಾಮಸ್ಮರಣೆ ಎಂದರೆ ಅದೇ ಆಹಾರ, ಮನುಷ್ಯನಿಗೆ ಬೇಕಾದ ಸರ್ವಸ್ವವೂ ಅದೇ ಎಂದು ಆತನು ಬಹಳ ವಿಶ್ವಾಸ ಮತ್ತು ಪ್ರೇಮದಿಂದ ಭಜನೆ ಮತ್ತು ಕೀರ್ತನೆಯಲ್ಲೇ ಇದ್ದನು ಈ ಪ್ರಪಂಚದ ಸುಳಿವೇ ಅವನಿಗೆ ಇರಲಿಲ್ಲ. ಅವನ ಮಗನಾದ ಕಮಾಲನು ಸಹಾ ಶ್ರೀರಾಮ ಭಕ್ತನು. ಒಂದು ದಿನ ಕಮಾಲನು ಒಬ್ಬ ಕುಷ್ಠರೋಗಿಗೆ ನೀನು ಎರಡು ಬಾರಿ ರಾಮನಾಮವನ್ನು ಉಚ್ಚರಿಸಿದರೆ ನಿನ್ನ ರೋಗವು ಗುಣವಾಗುತ್ತದೆ ಎಂದು ಹೇಳಿದನು ಹಾಗೆ ಮಾಡಿದ್ದರಿಂದ ಅವನ ರೋಗವು ಗುಣವಾಗಲಿಲ್ಲ ಅದನ್ನು ಕಬೀರದಾಸನು ಕೇಳಿ ತನ್ನ ಮಗನಾದ ಕಮಾಲನನ್ನು ಕರೆದು 'ಹುಚ್ಚಾ, ನಿನಗೆ ರಾಮನಾಮದ ಮಹತ್ವವು ಇನ್ನೂ ಗೊತ್ತಿಲ್ಲ ರೋಗಗುಣವಾಗಬೇಕಾದರೆ ರಾಮನಾಮವನ್ನು ಎರಡು ಸಲ ಉಚ್ಚರಿಸಬೇಕೇ? ಒಂದೇ ಸಲ ಉಚ್ಚರಿಸುವುದರಿಂದ ಗುಣವಾಗುವುದು ಆದುದರಿಂದ ನೀನು ಆ ರೋಗಿಯನ್ನು ಗಂಗಾನದಿಯಲ್ಲಿ ನಿಲ್ಲಿಸಿ ತಲೆಯ ಮೇಲೆ ಒಂದ ಏಟನ್ನು ಹೊಡೆ ಮತ್ತು ರಾಮನಾಮವನ್ನು ಭಕ್ತಿಯಿಂದ ಒಂದು ಸಲ ಉಚ್ಚರಿಸಲಿಕ್ಕೆ ಹೇಳು, ರೋಗವು ಗುಣವಾಗುವುದ ಎಂದನು ಕಮಾಲನು ತಂದೆಯ ಆಜ್ಞೆಯಂತೆ ಮಾಡಿದನು ರೋಗಿಯು ರೋಗ [illegible] ರಾಮನಾಮವನ್ನು ಸ್ವಪ್ನದಲ್ಲಿ ಉಚ್ಚರಿಸಿದವನಿಗೆ ತನ್ನ ಮೈಯ ಚರ್ಮವನ್ನು [illegible] ಅಂಥವನ [illegible] ಎಂದು [illegible] ಹೇಳಿದ [illegible] ತುಳಸೀ ಎಲೆಯ ಮೇಲೆ ರಾಮನಾಮವನ್ನು ಬರೆದ [illegible] ರೋಗಿಗಳ ಮೇಲೆ [illegible] ಅವರ ರೋಗವನ್ನು ಗುಣಪಡಿಸಿದನು [illegible] ಮಹಾಭಕ್ತನಾದ ಸೂರದಾಸನು [illegible] ಒಂದೇ ಅಕ್ಷರವನ್ನು ಒಂದ ಹೆಣದ ಕಿವಿಯಲ್ಲಿ ಉಚ್ಚರಿಸಿ ಅದನ್ನು [illegible] ಚೋರಶಿಖಾಮಣಿಯಾದ ರತ್ನಾಕರನು ದೇವಋಷಿಯಾದ ನಾರದರ ಉಪದೇಶದಿಂದಲ್ಲವೆ ಮಹಾ ತಪಸ್ವಿಯಾಗಿ ವಾಲ್ಮೀಕಿ ಎಂಬ ನಾಮಧೇಯದಿಂದ ರಾಮಾಯಣವನ್ನು ಬರೆದುದು, ಶ್ರೀ ರಾಮನಾಮದ ಮಹತ್ವವು ಇಂಥಾ ಪರಮಭಕ್ತರಿಗಲ್ಲವೆ ಗೊತ್ತಿರುವುದು? ಸಾವಿರಾರು ಮಂದಿ ಭಕ್ತರು ಈ ಅಮೂಲ್ಯವಾದ ರಾಮನಾಮದಿಂದಲ್ಲದೆ ಮುಕ್ತಿ ಹೊಂದಿರುವರು?

ದೇವರ ನಾಮದ ಜಪ ಎಂಬುದು ಯೋಗಾಭ್ಯಾಸದ ಒಂದು ಅಂಗವಾಗಿರುತ್ತದೆ ಶ್ರೀಕೃಷ್ಣನು ಗೀತೆಯಲ್ಲಿ ಎಲ್ಲಾ ಯಜ್ಞಗಳಲ್ಲಿ ಜಪಯಜ್ಞ ಎಂದರೆ ನಾನು ಎಂದು ಹೇಳಿರುವನು ಈ ಕಲಿಯುಗದಲ್ಲಿ ಜಪದಿಂದಲೇ ಮನುಷ್ಯನಿಗೆ ಅನಾದ್ಯಂತಸುಖ ಮತ್ತು ಶಾಂತಿ ಉಂಟಾಗುವುದು, ಮತ್ತು ಆತನ ಜನನ ಮರಣಗಳೆಂಬ ಪಾಶದಿಂದ ಮುಕ್ತನಾಗುವನು ಜಪವನ್ನು ಮನುಷ್ಯನು ಸಾತ್ವಿಕಭಾವ, ಪ್ರೇಮ ಮತ್ತು ಶ್ರದ್ಧೆಯಿಂದ ಮಾಡತಕ್ಕದ್ದು ಇಂಥಾ ಜಪಕ್ಕೆ ಒಂದು ದೇವರ ಮಂತ್ರವು ಬೇಕು ಎಲ್ಲಾ ದೇವತೆಗಳಿಗೂ ಬೇರೆ ಬೇರೆ ಮೂಲ ಮಂತ್ರಗಳಿವೆ [illegible] ಎಲ್ಲಾ ಮಂತ್ರಗಳಲ್ಲಿ ರಾಮಮಂತ್ರವೇ ಶ್ರೇಷ್ಠವೆನಿಸಿಕೊಳ್ಳುತ್ತದೆ ಯಾಕೆ ಎಂದರೆ [illegible] 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರೀ ಮಂತ್ರದಿಂದಲೂ, [illegible] ಎಂಬುದನ್ನು 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರದಿಂದಲೂ ತೆಗೆದು ರಾಮ ಎಂಬುದಾಗಿ ಒಟ್ಟುಗೂಡಿಸಿದ್ದಾಗಿರುತ್ತದೆ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ [illegible] ಒಕ್ಕಿ [illegible] ಓಂ ಶ್ರೀ ರಾಮ ಜಯ ರಾಮ ಜಯ ಜಯ ರಾಮ ಎಂಬ ಪವಿತ್ರ [illegible] ಅಕ್ಷರಗಳುಳ್ಳ ಮಂತ್ರವನ್ನು ಹದಿಮೂರು ಕೋಟಿ ಸಲ ಜಪ ಮಾಡಿ ಶ್ರೀ ರಾಮನನ್ನು ಪ್ರತ್ಯಕ್ಷಮಾಡಿಕೊಂಡರು. ಆಗ ಶ್ರೀ ರಾಮನು ಸ್ವಾಮಿಗಳಿಗೆ ಹೇಳಿದ [illegible] ಹದಿಮೂರು ಅಕ್ಷರಗಳುಳ್ಳ ಜಪವನ್ನು [illegible] ಸಬಹುದು ಇದನ್ನು ಜಪಿಸುವುದಕ್ಕೆ ಯಾವ [illegible] ಇಲ್ಲ ಅನ್ನವನ್ನು ವರ್ಜ್ಯ ಮಾಡಬೇಕೆಂದಿಲ್ಲ ಕೂತುಕೊಂಡಿರುವಾಗ ನಡೆಯುತ್ತಿರುವಾಗ, ಮಲಗಿಕೊಂಡಿರುವಾಗ ಹಾಗೂ ಕೆಲಸ ಮಾಡುತ್ತಿರುವಾಗ ಇದನ್ನು ಜಪಿಸಬಹುದು ಹಾಗೆ ಯಾವಾತನು ಹದಿಮೂರು ಕೋಟಿ ಸಲ ಜಪ ಮಾಡುತ್ತಾನೋ ಆತನಿಗೆ ಆಕ್ಷಣಕ್ಕೆ ನಾನು ದರ್ಶನವನ್ನು ಕೊಡುತ್ತೇನೆ ಮತ್ತು ಜನ್ಮಜನ್ಮಾಂತರಗಳಲ್ಲಿ ಆತನು ಮಾಡಿದ ಪಾಪಕರ್ಮಗಳನ್ನು ನಾಶಮಾಡಿ ಆತನಿಗೆ ಮುಕ್ತಿ ಕೊಡುತ್ತೇನೆ.'

ಆದುದರಿಂದ ರಾಮನಾಮದ ಜಪವು ಚಿತ್ತಶುದ್ಧಿ ಮಾಡುತ್ತದೆ ಅಷ್ಟಸಿದ್ಧಿಯನ್ನು ಕೊಡುತ್ತದೆ ಮತ್ತು ಕಟ್ಟಕಡೆಗೆ ಮುಕ್ತಿಯನ್ನು ಸಹಾ ಕೊಡುತ್ತದೆ, ಅಂಥಾ ಪ್ರಭಾವವುಳ್ಳ ರಾಮನಾಮವನ್ನು ಸದಾ ಸರ್ವೆಲ್ಲರ ಮನಸ್ಸು ಧ್ಯಾನಿಸುತ್ತಿರಲಿ ಎಂದು ಶ್ರೀ ರಾಮನಿಗೆ ವಂದನೆ ಮಾಡಿ ಬೇಡಿಕೊಳ್ಳುತ್ತೇನೆ

"ಓಂ ಶ್ರೀರಾಮ ಜಯರಾಮ ಜಯ ಜಯರಾಮ"

ರಾಮದಾಸ

ಜಾತಕದ ಪರಿಣಾಮ.

ಮೊಂಬಾಯಿಯಲ್ಲಿ ಕಮಳೆಕುಟುಂಬದಲ್ಲೊಂದು ಮತ್ತೊಂದರೊಡನೆ ವಿವಾಹಸಂಬಂಧಕ್ಕಾಗಿ ಪ್ರಸ್ತಾಪವೆತ್ತಿತು [illegible] ಯಲ್ಲಿ ವಿವಾಹವಾಗುವುದಿತ್ತು [illegible] ಸಿಂದ ಹುಡುಗನ ತಾಯಿ, ಜಾತಕ ಕೂಡಿಬರುತ್ತಿಲ್ಲವೆಂದು ತಂತಿಕಳಿಸಿದಳು ಅವಳು, ಅವಳ ಗಂಡ, ಹುಡುಗ ಇಷ್ಟು ಜನದ ಮೇಲೆ ಮಾನನಷ್ಟ ಮತ್ತು ಮೋಸಕ್ಕಾಗಿ ಹುಡುಗಿಯ ಕಡೆಯವರು ಫಿರ್ಯಾದು ಮಾಡಿದರು

ಈ ವ್ಯಾಜ್ಯ ಹುಡುಗನ 200 ರೂಪಾಯಿ ತೆರಬೇಕು

ನ್ಯಾಯಾಧೀಶರು ಇದ [illegible] ಜಾತಕ ಕೂಡಿಬಾರದೆ ಅವರು ವಿವಾಹವಾದ ವುದಿಲ್ಲ. ಒಪ್ಪಿದ್ದರು, ಜಾತಕ ಕೂಡಲಿಲ್ಲ ಆದಕಾರಣದಿಂದ ಪಡೆದ 200 ರೂಪಾಯಿಗಳನ್ನು ನಷ್ಟ ಪರಿಹಾರ ತೆರಬೇಕು ಎಂದು ತೀರ್ಮಾನ ಮಾಡಿದರು

ಜಾತಕ [illegible] ವಿರಬಹುದು, ಜಾತಕವು ಆಪದ ಆದರೆ ಅದಕ್ಕಾಗಿ ಫಿರ್ಯಾದು ಪ್ರಯೋಜನವಿಲ್ಲ ಉತ್ತಮ ನೆಪ [illegible] ಜಾತಕವು ಒದಗುವುದೆಂಬು ಇಷ್ಟು ಅನುಕೂಲವಾದ ಸಂಪ್ರದಾಯವನ್ನು ವರದಕ್ಷಿಣೆ ಹೆಸರಾಂತ ದಕ್ಷಿಣ ಹಿಂದುಸ್ಥಾನವು ತ್ಯಜಿಸಿದರೆ, ಪಾಪಾತ್ಮಕನಾಗಲಾರದೆ?

ಸಾವಿತ್ರೀ ಮಾತೆಯ
ಕೇಶಚಂದನ ತೈಲ

ಕಳೆದ 75 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು ವಕೀಲರು, ನ್ಯಾಯಾಧೀಶರು, ವೈದ್ಯರು, ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ

ಕಳೆಸೋತವನ್ನು ದೃಷ್ಟಿಮಾಂದ್ಯವನ್ನು ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ ಅಂಗೈ ಮತ್ತು ಅಡಿಗಳು ಉರಿಯುವ ಪ್ರಕಾರಗಳನ್ನು ಹೋಗಲಾಡಿಸಿ, ಮೆದುಳಿಗೆ ತಂಪನ್ನು ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ ದೃಷ್ಟಿಯು [illegible], ತಲೆಯಲ್ಲಿ ಕೂದಲು ಬಾತದಲ್ಲಿ ನಾನಾ ಕೇಶಗಳು [illegible] ಅವಕಾಶಕೊಡದೆ [illegible] ಸಂಪೂರ್ಣ [illegible] ಪರಿಣಾಮ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ

ಸ್ನಾನಕ್ಕೆ ಅರ್ಧತಾಸು ಮೊದಲು ತಲೆಗೆ ಹಚ್ಚಿಕೊಳ್ಳುವುದು

ಬೆಲೆ—8 ಔನ್ಸ ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್‌ಬಹದ್ದೂರ್ ಎಂ. ಕೇಶವಯ್ಯ, ಎಮ್. ಡಿ, ಓ ಬಿ ಇ. ಇವರ ಅಭಿಪ್ರಾಯ

ಶ್ರೀಯುತ ಬಾಳಿಗರೇ,
ನೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋಗಿಸುವೆನು ಅದು ತಲೆಗೆ ತಂಪನ್ನುಂಟುಮಾಡುವ ಗುಣ [illegible] ಶ್ರೀ. ಎಮ್. ಸುಂದರರಾವ್, ಬಿ ಎ ಎಲ್ ಟಿ, ಸೆಕ್ರೆಟರಿ ಬೋರ್ಡ ಇವರ ಅಭಿಪ್ರಾಯ

ಪುಳ್ಳಿಯ ಎಷ್ಟೋ ವರ್ಷಗಳಿಂದ ಆಗಾಗ ನನಗೆ [illegible] ಭಂಗದ ಬಾಧೆಯಿತ್ತು [illegible] ಸಲ ಈ ಬಾಧೆ ಬಹಳ [illegible] ರೂಪದಲ್ಲಿ [illegible] ಈ ಎಣ್ಣೆಯು ನನಗೆ ತಂಪು ಗುಣಪ್ರದವನ್ನು ಅನುಗ್ರಹಿಸಿಯದೆ, ಇದರಿಂದ, ನನ್ನಂತೆ ಈ ಪೀಡೆಯಿಂದ [illegible] ಹೊಂದ [illegible] ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ಶಿಫಾರಸು

ಒಂದು ಕಡ್ಡಿ ದನದ ಹಾಲು ಕಾಯಿಸಿಕೊಂಡು ಒಂದಲ್ಲಿ ಆ ದೇ ಹಾಲಿನಲ್ಲಿ ಮಾತ್ರೆಯ ಮದ್ದು ಹಾಕಿ ಧರ್ಮಾರ್ಥ ಕೊಡಲಾಗುವದು



ನಿಮ್ಮ [illegible] ಲೇಹ್ಯವು [illegible] ಅದನ್ನು ನಾನ [illegible] ಉತ್ತಮ ಫಲ. ನನ್ನ ಜೊತೆಗೆ ನನ್ನ ಮಕ್ಕಳಿಗೆ ಇದು ಇಷ್ಟವಾಗಿದ್ದು ಅವು [illegible] ಈ ಲೇಹ್ಯವನ್ನು ಕೇಳುವರು [illegible] ಜನರನ್ನೂ ಮನಸ್ಸನ್ನೂ [illegible] ಪ್ರೋತ್ಸಾಹಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಜರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನೇಜರ್,
ಹೊಂಗರಕೇರಿ ರಸ್ತೆ, ಮಂಗಳೂರು, ದಕ್ಷಿಣ ಕನ್ನಡ

ಸಾವಿತ್ರೀ ಮಾತೆಯ
ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1937ನೇ ಇಸ್ವಿ ಎಪ್ರಿಲ್ ತಾ. [illegible] ರಲ್ಲಿ ಮೊದಲು ತಯಾರಿಸಲಾಗಿದೆ

ಇದರಲ್ಲಿ ಅಪಾಯಕರವಾದ್ದು [illegible] ಪುಷ್ಟಿಕರವಾದ ಹಾಲು, ಬೆಣ್ಣೆ ಸಕ್ಕರೆ ಜೇನು, [illegible] ಪದಾರ್ಥಗಳು [illegible] ಯಾವ ಬಗೆಯ [illegible] ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು ಆರೋಗ್ಯ [illegible] ವರ್ಧಿಸುವುದು. [illegible] ಗುಣಪಡಿಸಿ [illegible] ಸಂಪೂರ್ಣ [illegible]

ಬೆಲೆ ಅರ್ಧ ರಾತ್ತಲ ಸೀಸೆಗೆ ರೂ 1-12-0
ಒಂದು ರಾತ್ತಲ ,, ,, 3 0 0

ವಿಶೇಷ ಈ ಲೇಹ್ಯವನ್ನು ಸಾವಿತ್ರೀ ಮಾತೆಯ [illegible] ಕೇಶ ತೈಲವನ್ನು [illegible]

ವಿ. ಸೂ. [illegible] ಔಷಧಗಳನ್ನು [illegible] ಔಷಧದ ಬೆಲೆಯು [illegible] ಭದ್ರವಾಗಿ ಕಟ್ಟಿ ಕಳಿಸುವ, ಕೈಪ್ಪೆಯೂ ಇತರ [illegible]

ಸಂಪೂರ್ಣವೂ ಸ್ವಸ್ಥವೂ [illegible] ಅಥವಾ ಕೈಪ್ಪೆ [illegible] ಮೊದಲಾದುದನ್ನು [illegible] ಮುದ್ದಾಂಕ್ಷಗಳಿಂದ ಸಮಾಧಾನಬೇಕಾಗಿದೆ

ಕೊಲೆಗಡುಕನ ವಿಚಾರಣೆ ಬೇಡ!

ಪಶುಪತಿನಾಥರ ಹೃದಯೋದ್ಗಾರ

ಕಳೆದ ಮಾರ್ಚ ತಿಂಗಳಲ್ಲಿ ಅಲಹಾಬಾದಿನಲ್ಲಿ ಹಿಂದೂ ಮುಸಲ್ಮಾನ ದಂಗೆಯಾಗಿದ್ದಾಗ ಶ್ರೀ ಪಶುಪತಿನಾಥ ಗುಪ್ತರು ದಂಗೆಯನ್ನು ಅಡಗಿಸುವ ಮಹತ್ಪ್ರಯತ್ನಗಳನ್ನು ಮಾಡಿದ್ದರು. ಆ ಪ್ರಯತ್ನದಲ್ಲಿದ್ದಾಗ ಯಾರೋ ದುಷ್ಟನರು ಅವರ ಪ್ರಾಣಾಪಹಾರ ಮಾಡಲಿಕ್ಕೆ ಕತ್ತಿ ಬೀಸಿದ್ದರು. ಅದರಿಂದ ಗಾಯಗೊಂಡು ಸುಮಾರು ಒಂದು ತಿಂಗಳ ತನಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿ ಕೊಳ್ಳಬೇಕಾಯಿತು. ಸುಮಾರು ಎಂಟೊಂಭತ್ತು ಮಂದಿ ಶ್ರೀ ಗುಪ್ತರ ಪ್ರಾಣಾಪಹಾರ ಕಾರ್ಯದಲ್ಲಿ ತೊಡಗಿದ್ದರೆಂದು ತಿಳಿದು ಬರುತ್ತದೆ. ಪೋಲೀಸರು ತನಿಖಿ ಮಾಡಿ ಅವರನ್ನೆಲ್ಲಾ ವಿಚಾರಣೆಗೆ ಗುರಿ ಮಾಡುವುದರಲ್ಲಿದ್ದಾರೆ. ಅವರು ಇಬ್ಬರನ್ನು ಸೆರೆ ಹಿಡಿದು ಬಂದೀಖಾನೆಯಲ್ಲಿಟ್ಟಿದ್ದಾರೆ. ಉಳಿದವರನ್ನು ಸೆರೆ ಹಿಡಿಯಲಿಕ್ಕಿದ್ದಾರೆ. ಆದರೆ ಶ್ರೀ ಗುಪ್ತರು ಆಸ್ಪತ್ರೆಯಲ್ಲಿ ರುಗ್ಣಶಯ್ಯೆಯಲ್ಲಿ ಮಲಗಿದ್ದಾಗ ಈ ಎಲ್ಲಾ ಸಂಗತಿಗಳನ್ನು ತಿಳಕೊಂಡರು. ಪೂರ್ವಾಪರ ಆಲೋಚನೆ ಮಾಡಿ, ಸಂದರ್ಭದಲ್ಲಿ ತನ್ನ ಕರ್ತವ್ಯವೇನಿರುವದೆಂದು ನಿರ್ಣಯಿಸಿಕೊಂಡರು. ತದನುಗುಣವಾಗಿ ಅವರು ಒಂದು ಪತ್ರವನ್ನು ಬರೆದು— ತನ್ನ ಪ್ರಾಣಾಪಹಾರಕ್ಕಾಗಿ ಪ್ರಯತ್ನಿಸಿದವರ ವಿಚಾರಣೆಯಾಗುವದು ಬೇಡವೆಂದೂ ಅವರನ್ನು ಯಾವ ಶರ್ತವೂ ಇಲ್ಲದೆ ಬಿಟ್ಟು ಬಿಡಬೇಕೆಂದೂ, ಹೇಳಿದ್ದಾರೆ. ಮಾತ್ರವಲ್ಲ; ಪೋಲೀಸರು ತನಿಖಿಯನ್ನು ಮುಂದರಿಸುವದಾದರೂ ಕೂಡಾ, ತಾನು ಆ ವಿಚಾರಣೆಯಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಲಾರೆನೆಂದು ಪ್ರತಿಜ್ಞೆ ಮಾಡಿಕೊಂಡಿದ್ದಾರೆ. ಅವರ ಪತ್ರವು ಹೀಗಿದೆ—

———★———

"ನನ್ನ ಕೊಲೆಮಾಡುವದಕ್ಕಾಗಿ ಅಧಿ ಪ್ರಯತ್ನಗಳು ಹಿಂದೂ ಮುಂದುಗಳ ಕುರಿತು ಸಾವಧಾನವಾಗಿ ಆಲೋಚಿಸಿದ್ದೇ, ನನ್ನ ಪ್ರಾಣಾಪಹಾರ ಮಾಡಲು ಪ್ರಯತ್ನಿಸಿದವರಿಗೆ ನನ್ನ ಮೇಲೆ ವ್ಯಕ್ತಿಶಃ ಯಾವ ದ್ವೇಷವೂ ಇದ್ದಿರಲಿಲ್ಲ. ಜಾತಿ ಸ್ವಾರ್ಥದಿಂದ ಪ್ರೇರಿತರಾಗಿಯೇ ಅವರು ತಮ್ಮ ಕಾರ್ಯಗಳನ್ನು ಮಾಡಿದರು. ಹಿಂದುವಾಗಿದ್ದ ನನ್ನ ಕೊಲೆ ಮಾಡುವದರಿಂದ ತಾವು ಒಂದು ಧರ್ಮಕಾರ್ಯವನ್ನು ಮಾಡುತ್ತಿರುವೆವಾಗಿಯೂ, ಅದು ತಮ್ಮ ಕರ್ತವ್ಯವಾಗಿರುವದೆಂದೂ ತಿಳಿದು, ಮೂಢರಾಗಿ ಅವರು ಆ ರೀತಿ ವರ್ತಿಸಿದರು. ನನ್ನ ಕೊಲೆ ಮಾಡುವದರಿಂದ ತಮ್ಮ ಜಾತಿ ಮತ್ತು ಮತದ ಕಲ್ಯಾಣವಾಗಬಹುದೆಂದೂ ಅವರು ಎಣಿಸಿರಲಿಕ್ಕೆ ಸಾಕು. ನನ್ನ ಅಭಿಪ್ರಾಯವೇನೆಂದರೆ— ಈ ಬಾಬಿನಲ್ಲಿ ಈ ಬಡಪಾಯಿಗಳಿಗಿಂತ ಹೆಚ್ಚಾಗಿ, ಕೆಲವು ಸಮಯದಿಂದ ಕಾಂಗ್ರೆಸಿನ ವಿರುದ್ಧ ಅಪಪ್ರಚಾರ ಮಾಡಿದ ಕೆಲವು ಮುಸಲ್ಮಾನ ಮುಖಂಡರು ಅಪರಾಧಿಗಳಾಗಿರುತ್ತಾರೆ. ಯಾಕಂದರೆ ಈ ಮುಸಲ್ಮಾನ ಮುಖಂಡರ ಮಾತುಗಳನ್ನು ಕೇಳಿ ಉಪದೇಶಗೊಂಡೇ ಅವರು ಬೇಜವಾಬುದಾರ ಕೆಲಸಗಳನ್ನು ಮಾಡಿದರು.

"ನಾನು ಕಾಂಗ್ರೆಸಿನ ಒಬ್ಬ ನಮ್ರ ಸೇವಕನಾಗಿದ್ದೇನೆ. ಕಾಂಗ್ರೆಸ ಕಾರ್ಯಗಳನ್ನು ಮಾಡುತಿದ್ದಾಗ ನನ್ನ ಮೇಲೆ ಆಕ್ರಮಣಗಳಾದುವು. ನನ್ನ ಕಾರ್ಯಗಳಿಂದ ಇಡೀ ರಾಷ್ಟ್ರದ ಮೇಲೆ ಆಗ ಬಹುದಾದ ಪರಿಣಾಮಗಳನ್ನೂ ನಾನು ಆಲೋಚನೆಗೆ ತೆಗೆದುಕೊಳ್ಳಬೇಕಾಗಿದೆ. ನನ್ನನ್ನು ಆಕ್ರಮಿಸಿದವರ ಮೇಲೆ ನಾನು ಯಾವ ಸೇಡನ್ನೂ ತೀರಿಸಿಕೊಳ್ಳದೆ ಇದ್ದರೆ, ಅವರ ಹೃದಯ ಮನಸ್ಸುಗಳ ಮೇಲೆ ಸತ್ಪರಿಣಾಮವುಂಟಾಗಬಹುದೆಂದು ನಾನು ಎಣಿಸುತ್ತೇನೆ ಮಾತ್ರವಲ್ಲ, ನನ್ನ ಈ ಕಾರ್ಯದಿಂದ ಸುತ್ತಮುತ್ತಲಿನ ಪ್ರತಿಕೂಲ ಪರಿಸ್ಥಿತಿಯ ಸುಧಾರಣೆಯಾಗಲೂ ಬಹುದು. ನಾನು ಅಪರಾಧಿಗಳ ವಿಚಾರಣೆಯಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ಇರುವದರಿಂದ ಅಪರಾಧವನ್ನು ಮಾಡಲಿಕ್ಕೆ ಯಾರು ಪ್ರೇರಿಸಿದ್ದರೋ ಅವರ ಹೃದಯ ಬದಲಾವಣೆ ಮಾಡಲಿಕ್ಕೆ ನನಗೆ ಸಾಧ್ಯವಾಗಬಹುದು. ನನ್ನ ಈ ಭಾವನೆಯಿಂದ ಬೇರೆ ಬೇರೆ ಜನರಲ್ಲೂ ಯಾವ ಯಾವ ತರಹದ ಅಭಿಪ್ರಾಯಗಳಾಗಬಹುದೆಂಬುದನ್ನು ಹೇಳಲಿಕ್ಕೆ ಅಸಾಧ್ಯವಿದೆ, ಆದರೂ ಕೂಡಾ ಅಪರಾಧಿಗಳಿಗೆ ದಂಡನೆ ಮತ್ತು ಶಿಕ್ಷೆಯಾಗುವ ವಿಷಯದಲ್ಲಿ ನನ್ನ ಯಾವ ಸಂಬಂಧವೂ ಇರಕೂಡದೆಂಬುದು ನನ್ನ ಇಚ್ಛೆಯಾಗಿದೆ. ಆದ್ದರಿಂದ ನನ್ನ ಪ್ರಾಣಾಪಹಾರ ಸಂಬಂಧವಾದ ತನಿಖಿಯನ್ನು ಮುಂದರಿಸಬಾರದಾಗಿಯೂ ಇಷ್ಟರ ತನಕ ಕೈಸೆರೆಯಾಗಿದ್ದವರನ್ನು ಬಂಧ ಮುಕ್ತನ್ನಾಗಿ ಮಾಡಬೇಕೆಂದೂ ನಾನು ಸರಕಾರವನ್ನು ಪ್ರಾರ್ಥಿಸುತ್ತೇನೆ."

ಈ ವಿಷಯವಾಗಿ 'ಹರಿಜನ'ದಲ್ಲಿ ಶ್ರೀ ಮಹಾದೇವ ದೇಸಾಯಿಯವರ ಒಂದು 'ನೋಟ'ವು ಪ್ರಕಟವಾಗಿದೆ. ಶ್ರೀ ದೇಸಾಯಿಯವರ ಅಭಿಪ್ರಾಯವು ಹೀಗಿದೆ—"ಶ್ರೀ ಪಶುಪತಿನಾಥರ ಈ ಹೃದಯೋದ್ಗಾರಗಳನ್ನು ಕೇಳಿ ಬಹಳ ಮಂದಿ ಸಿಟ್ಟಾಗಿರುವಂತೆ ಕಾಣುತ್ತದೆ. ಶ್ರೀ ಗುಪ್ತರ ಸ್ನೇಹಿತರಾಗಿದ್ದವರೂ ಇತರರೂ ಅವರಿಗೆ ಅನೇಕ ಕಾಗದಗಳನ್ನು ಬರೆದು— ಒದ್ದಾಟ ಮತ್ತು ದುಷ್ಟ ಜನರು ಅಪರಾಧಕ್ಕೆ ತಕ್ಕ ದಂಡನೆಯನ್ನು ಪಡೆಯದಂತೆ ಗುಪ್ತರು ಸಹಾಯ ಮಾಡುವರೆಂದು ಅವರನ್ನು ದೂರಿ ಅವರ ಈ ವರ್ತನೆಯನ್ನು ನಿಷೇಧಿಸಿದ್ದಾರೆ. ಆದರೆ ಗುಪ್ತರು ಮಾತ್ರ ಇದಕ್ಕೆ ಉತ್ತಮ ಕಾರ್ಯವನ್ನು ಮಾಡುವದು ಸಾಧ್ಯವಿಲ್ಲ. ಅವರು ಧರ್ಮಕಾರ್ಯ ಮಾಡಿದ್ದಾರೆಂದೇ ನಮ್ಮ ಅಭಿಪ್ರಾಯ. ದಕ್ಷಿಣ ಆಫ್ರಿಕದಲ್ಲಿ ಮಹಾತ್ಮಾಜಿಯವರ ಮೇಲೆ ಮೀರ ಆಲಮನು ಆಕ್ರಮಣ ಮಾಡಿದಾಗ, ಮಹಾತ್ಮಾಜಿಯವರ ವರ್ತನೆಯು ಯಾವ ಬಗೆಯದಾಗಿತ್ತೋ, ಅದೇ ಇಂಥ ಸಂದರ್ಭಗಳಲ್ಲಿ ನಮಗೆ ಆದರ್ಶವಾಗಿರಬೇಕು. 'ಒಳ್ಳೇದು, ಕೊಲೆಗಡುಕರ ಕತ್ತಿಯ ಮೂಲಕ ನನ್ನ ಶರೀರದಿಂದ ಹರಿದು ಹೋದ ರಕ್ತವೇ ಹಿಂದೂ ಮುಸಲ್ಮಾನರೊಳಗೆ ಪ್ರೇಮ ಐಕ್ಯಗಳನ್ನುಂಟುಮಾಡಲೆಂದು ಆಶಿಸಿ ಪ್ರಾರ್ಥಿಸುತ್ತೇನೆ' ಎಂದ ಶ್ರೀ ಪಶುಪತಿನಾಥರು ಧೈರ್ಯದಿಂದ ಹೇಳಿ, ಮಹಾತ್ಮಾಜಿಯವರ ಅನುಕರಣೆ ಮಾಡಬಹುದು.

1931ನೇ ಇಸವಿ ಕಾನ್ಪುರದ ಹಿಂದು ಮುಸಲ್ಮಾನ ದಂಗೆಯಲ್ಲಿ ಗಣೇಶ ಶಂಕರ ವಿದ್ಯಾರ್ಥಿಯವರ ಮೇಲೆ ಬಿದ್ದ ಏಟು ಪ್ರಾಣಘಾತುಕವಾಗುತ್ತಿದ್ದಿಲ್ಲವಾದರೆ, ಅವರೂ ಕೂಡ ತಮ್ಮ ಕೊಲೆಗೆ ಪ್ರಯತ್ನಿಸಿದ ಅಪರಾಧಿಗಳನ್ನು ದಂಡಿಸುವ ಸರಕಾರದ ಕಾರ್ಯದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳುತ್ತಿರಲಿಲ್ಲವೆಂದು ಖಂಡಿತ ಹೇಳಬಹುದು. ಗಣೇಶ ಶಂಕರ ಮತ್ತು ಪಶುಪತಿನಾಥರಂಥ ನೂರಾರು ಮಂದಿ ನಮ್ಮಲ್ಲಿ ಇದ್ದ ಹೊರತು ನಿಜವಾದ ಹಿಂದು ಮುಸಲ್ಮಾನ ಐಕ್ಯತೆಯು ಸಾಧ್ಯವಲ್ಲವೆಂಬುದು ಸತ್ಯ ಮಾತಾಗಿದೆ. ಸುಧಾರಕರು ಮತ್ತು ಪೋಲೀಸ ಜನರೊಳಗೆ ಇರುವ ವ್ಯತ್ಯಾಸವನ್ನು ವಿಮರ್ಶಕರು ತಿಳಕೊಳ್ಳುವದಿಲ್ಲ. ಪಶುಪತಿನಾಥರು ಸುಧಾರಕರಾಗಿ ಕೆಲಸಮಾಡಿದ್ದರು. ಆದ್ದರಿಂದ ಅದಕ್ಕೆ ತಕ್ಕ ಫಲವನ್ನು ಅವರು ಉಣ್ಣಲೇಬೇಕು."

NOTICE.

In the Court of the
District Munsiff of Mangalore.

O S No 236/1938.

Between

Abdul Quadir Assadi PLAINTIFF

AND

Sheik Ismail & others DEFTS.

To

ALL WHOM IT MAY CONCERN

Take notice that the Plaintiff has filed the above suit in a representative capacity for and on behalf of all genuine creditors of the 1st Defendant and that the said suit is posted to 21 – 7 – 1938 when such of those as are interested as creditors may appear and have their say in the matter.

(BY ORDER OF THE COURT)

Mangalore
25th June 1938

K. B. Shanker Rao,
R. W. Bhandarkar
Vakils for Plaintiff

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು.

1 ರಥಬೀದಿ
ಮಂಗಳೂರು

2 ಪುತ್ತಿಯಾರ
ಕಲ್ಲಿಕೋಟೆ

3 ಪಿ ಬಿ 387
ಮೌಂಟ್ ರೋಡ್
ಮದ್ರಾಸು
(ಟೆಲಿಫೋನ್ ನಂಬ್ರ 8245)

4 ವಿಶ್ವೇಶ್ವರಪುರಂ ಸರ್ಕಲ್
ಬೆಂಗಳೂರು ಸಿಟಿ
(ಟೆಲಿಫೋನ್ ನಂಬ್ರ 2182)

5 ಗೌತಮ ನಿವಾಸ್,
ಚಾರ್ನಿ ರೋಡ್,
ಗಿರ್ಗಾಂವ್, ಬೊಂಬಾಯಿ
(ಟೆಲಿಫೋನ್ ನಂಬ್ರ 26314)

ಇನ್ಸ್‌ಪೆಕ್ಟೋರೇಟ್ ಆಫೀಸು:

6. ಒಟ್ಟಪಾಲ,
ದಕ್ಷಿಣ ಮಲಬಾರು.

7. ಸೆಂಟ್ರಲ್ ಸ್ಟೇಶನ್, ರೋಡ್,
ತ್ರಿವೆಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

(ಕೊಚ್ಚಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)

ರಿಜಿಸ್ಟರ್ಡ್ ಆಫೀಸು ಉಡುಪಿ

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯ ಪ್ರಖ್ಯಾತಿಯನ್ನು ಸೂಚಿಸುತ್ತದೆ

ನೂತನ ವಹಿವಾಟು	ರೂ 140,08,725
ವಿಮಾಕಂತುಗಳಿಂದ ಆದಾಯ	ರೂ 30,00,000ಕ್ಕೆ ಮಿಕ್ಕುತ್ತದೆ
ಒಟ್ಟು ಆಸ್ತಿಪಾಸ್ತಿಯು	ರೂ 100,00,000ಕ್ಕೆ ಮಿಕ್ಕುತ್ತದೆ
ಈ ವರೆಗೆ ಕ್ಲೇಮುಗಳಿಗೆ ಸಂದದ್ದು	ರೂ 50,00,000ಕ್ಕೆ ಮಿಕ್ಕುತ್ತದೆ

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ
ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಬೊಂಬೆ ಲ್ಯಾಫ್ ಕಟ್ಟಡ,
ಸೆಂಟ್ರಲ್ ಆಫೀಸು: ಉಡುಪಿ

ಈ ವಾರದ ಕತೆ

ಈಗ ವಳೆಲ್ಲಿ?

ಬರೆದವರು
ಬಿ. ರಾಘವೇಂದ್ರರಾವ್, ಮಂಗಳೂರು.

ಅವಳ ಹೆಸರು ಲಲಿತೆ ಅವಳನ್ನು ಎಲ್ಲರೂ ಲಲಿತೆಯೆಂತಲೇ ಕರೆಯುತ್ತಿದ್ದರು ಆದರೆ ನಾನು ಮಾತ್ರ ಅವಳನ್ನು ಲಲಿತೆಯೆಂದು ಕರೆಯುತ್ತಿರಲಿಲ್ಲ ನನ್ನ ಹೊರತು ಮಿಕ್ಕುಳಿದವರು ಲಲಿತೆಯೆಂದೇ ಆಕೆಯನ್ನು ಸಂಬೋಧಿಸುತ್ತಿದ್ದರು ಹಾಗೆ ಅವಳನ್ನು ಯಾರೇ ಆಗಲಿ, ಲಲಿತೆ ಎಂದು ಕರೆಯುವಾಗ ನಾನು ಒಂದು ತರದ ಪರವಶತೆಯಾನಂದವನ್ನು ಮನದಲ್ಲಿಯೇ ಹೊಂದಿ ಕುಸು ಆನಂದತುಂದಿಲನಾಗುತ್ತಿದ್ದೆನು ಆದರೆ ನಾನು ಆಕೆಯನ್ನು ಲಲಿತೆಯೆಂದು ಕರೆಯಲಿಕ್ಕೆ ನಾಚುತ್ತಿದ್ದೆನು ಕಾರಣವಾದರೂ ಹೇಳಲಿಕ್ಕೆ ಬಾರದು ಅದರ ಅನುಭವವನ್ನು ಅನುಭವಿಕರೇ ಅನುಭವಿಸಿದುದನ್ನು ಮನವರಿಕೆ ಮಾಡಿಕೊಂಡು ನಿಶ್ಚಯವಾಡಿಕೊಳ್ಳಬೇಕೇ ವಿನಹ ಅದನ್ನು ಶಬ್ದಗಳಿಂದ ಜೋಡಿಸಿ ಹೇಳುವುದು ಕಷ್ಟಸಾಧ್ಯ ಆದರೂ ಒಂದಾವರ್ತಿ ಯಾದರೂ ಅವಳನ್ನು ಲಲಿತೆಯೆಂದು ಕರೆದು ಆನಂದಪರವಶನಾಗಬೇಕೆಂಬ ಅದೊಂದು ಕುತೂಹಲತೆಯು ನನ್ನನ್ನು ಕಾಡಿಸುತಿತ್ತು ಹಾಗೆ ಕರೆಯಲು ಯಾವ ಅಭ್ಯಂತರವೂ ಇರಲಿಲ್ಲ. ನನಗೇನೇ ಸಂಕೋಚ

ವಿವಾಹವು ಪ್ರೇಮಮಯ ಪ್ರೇಮಕ್ಕಾಗಿಯೇ ವಿವಾಹವು ಅವಿವಾಹಿತರ ಪ್ರೇಮವು ಆಶಾಮಯವಾದುದು ವಿವಾಹಿತರ ಪ್ರೇಮವು ಹಾಗಲ್ಲ ಪ್ರೇಮ ಸೋಪಾನದ ಅತ್ಯುಚ್ಚ ಸ್ಥಾನವನ್ನಲಂಕರಿಸಿ ಆಶಾಪೂರ್ಣತೆಯ ಮನೋರಥವನ್ನು ಈಡೇರಿಸಿಕೊಂಡ ಸ್ಥಿರ ಪ್ರೇಮವದು ಈ ಪ್ರೇಮವೇ ಸಂಸಾರ ಶರಧಿಯ ನೌಕೆಯಾಗಿರುವುದು ವಿವಾಹಿತರು ಇಂಥಹ ನೌಕೆಯಲ್ಲಿ ಕುಳಿತು ಶರಧಿಯನ್ನು ದಾಟುತ್ತಿರುವ ಪ್ರೇಮಮಯ ಜೀವನವೇ ಅವಿವಾಹಿತರಿಗೆ ಪ್ರೇಮದ ಅಂಕುರಕ್ಷಣವನ್ನುಂಟುಮಾಡುವುದು. ಆ ನೌಕಾ ಪ್ರಯಾಣದಲ್ಲಿ ಆಶಾಮಯವಾದ ತೀರ ಸೇರುವಂತಾಗುವುದು

ನನಗೆ ಮದುವೆಯಾಗುವ ಮೊದಲೇ ನನ್ನ ತಂದೆಯವರು ಸ್ವರ್ಗಸ್ಥರಾಗಿದ್ದರು ಪಿತ್ರಾರ್ಜಿತ ಧನವು ನನ್ನ ಭಾವೀ ಸುಭಿಕ್ಷೆಕಡಮೆಯಾಗದಷ್ಟು ಇತ್ತು ನನ್ನ ಮಾತಾಪಿತೃರಿಗೆ ನಾನೊಬ್ಬನೇ ಮಗನು ನನ್ನ ತಂಗಿ ಸರೋಜೆಯೊಬ್ಬಳೇ ಮಗಳು. ರಮಣೀಯವಾದ ಉದ್ಯಾವನದಿಂದೊಡಗೂಡಿದ ಶೋಭಾಯಮಾನವಾದ ಸಣ್ಣದೊಂದು ಮನೆಯಲ್ಲಿ ನಾನೂ, ನನ್ನ ತಂಗಿ ಸರೋಜೆಯೂ, ಮತ್ತು ವೃದ್ಧಳಾದ ನಮ್ಮ ತಾಯಿಯೂ ವಾಸವಾಗಿದ್ದೆವು ಹೀಗೆ ಮೂರು ಜನರಲ್ಲದೆ ನಾಲ್ಕನೆಯವರು ಆ ಮನೆಯಲ್ಲಿರಲಿಲ್ಲ ಸರೋಜೆಯು ವಿವಾಹ ವಯಸ್ಕಳಾಗಿದ್ದರೂ, ನನ್ನ ಮದುವೆಯಾಗದೆ ಅವಳಿಗೆ ವಿವಾಹಮಾಡಕೂಡದೆಂದು ತಾಯಿಯ ಒತ್ತಾಯವಿತ್ತು ನನ್ನ ಮದುವೆಯಾದ ಬಳಿಕ ನಾವು ದಂಪತಿಗಳಿರ್ವರೂ ಸೇರಿ ಧಾರೆ ಎರೆಯಬೇಕೆಂಬುವುದೇ ತಾಯಿಯ ಒತ್ತಾಸೆ ಸರೋಜಳು ಸದಾ ತಾಯಿಯ ಬಳಿಯೇ ಇದ್ದು ನಾನೊಬ್ಬನೇ ಯಾವಾಗಲೂ ಚಾವಡಿಯಲ್ಲಿ ನನ್ನ ಬೈಠಕು ಮಾಡಿಕೊಂಡಿದ್ದೆನು

ಸರೋಜಳ ಮದುವೆಯ ಕುರಿತು ನನಗೆ ಅಷ್ಟೊಂದು ಯೋಚನೆ ಇರಲಿಲ್ಲ ಸಿಹಿಯೋ? ಕಹಿಯೋ? ಎಂದೊಡನೆ ಸಿಹಿಯಲ್ಲವೆಂದು, ಕಹಿ ಎಂಬ ಶಬ್ದವನ್ನು ತಾತ್ಸಾರ ಮಾಡುವವರು ಹೇಳುವದೊಂದು ರೂಢಿ ಅಂದರೆ ಕಹಿಯೆಂದು ಅರ್ಥಮಾಡಿಕೊಳ್ಳುವುದು ಸ್ವಭಾವಸಿದ್ಧವಷ್ಟೆ! ಹಾಗೆಯೇ ನನ್ನ ಮದುವೆಯ ಕುರಿತು ನನಗೆ ತುಂಬಾ ಗೊಂದಲವಿತ್ತು ಏಕೆಂದರೆ ಸ್ವಸಮಾಜದಲ್ಲಿ ಹುಡುಗಿಯರೇ ಕಡಮೆ ' ಸಮಾಜದ ಯುವಕರು ಕನ್ಯಾಪಿತರಿಗೆ ಹಣ ಕೊಟ್ಟು ಲಗ್ನವನ್ನು ಮಾಡಿಕೊಳ್ಳಬೇಕಿತ್ತು ನನ್ನಲ್ಲಿ ಹಣಕ್ಕೆ ಕೊರತೆ ಇಲ್ಲದಿದ್ದರೂ ಹೆಣ್ಣಿಗೆ ಸಮಾಜದಲ್ಲಿ ಕೊರತೆ ಇತ್ತು. ಸರೋಜಳ ಮದುವೆಯನ್ನು ನಾವು ದಂಪತಿಗಳಿಬ್ಬರು ಅಂದರೆ, ನಾನೂ ಮತ್ತು ನನ್ನ ಲಗ್ನದ ಬಳಿಕ ನನ್ನ ಮಡದಿಯೂ ಸೇರಿ ತಾಯಿಯ ಒತ್ತಾಸೆಯಂತೆ ಪೂರೈಸಬೇಕೆಂಬುವುದೇ ನನ್ನದೂ ಅಭಿಮತವಾಗಿತ್ತು

ನಮ್ಮ ಊರಿನ ಸ್ವಸಮಾಜದ ಯುವಕರು ಪರಜಿಲ್ಲೆಗಳಿಂದ ದಲ್ಲಾಳಿಗಳು ತರುವ ಸೆಂಟಿಸ್ಟಿಕೆಯಿಂದಲೇ ಹುಡುಗಿಯರನ್ನು ಕೇಳಿರಿಸಿಕೊಳ್ಳಬೇಕಾಗಿತ್ತು ನಾವು ಬ್ರಾಹ್ಮಣರು ಅಂದಬಳಿಕ ಕುಲಗೋತ್ರವನ್ನು ನೋಡದೆ ವಿವಾಹವು ನೆರವೇರುವಂತಿರಲಿಲ್ಲ ಪರವೂರುಗಳಿಂದ ಬರುವ ಮದುವೆಯ ದಲ್ಲಾಳಿಗಳು ಬರುತ್ತಾ, ಜಾತಕದ ಕಟ್ಟುಗಳನ್ನು ತಂದು ಮೇಳಾಮೇಳಿಗಳನ್ನು ಹೇಳಿ ಮದುವೆಯ ಮುಂಗಲ ಕಾರ್ಯವನ್ನು ಸಾಂಗಗೊಳಿಸಿ ಹೇರಳ ದ್ರವ್ಯವನ್ನು ಸೂರೆಮಾಡುವ ಪದ್ಧತಿಯು ನನಗೆ ಹೊಸತಾಗಿರಲಿಲ್ಲ ಹೇಗೂ ನನ್ನ ಮದುವೆಯ ಸಲುವಾಗಿ, ಇಂತಹ ದಲ್ಲಾಳಿಗಳ ಆಶ್ರಯವನ್ನೇ ಬಯಸಬೇಕಾಗಿತ್ತು ನಮ್ಮ ಯುವಕರ ಮದುವೆಗಳು ನೆರವೇರುವುದ ನಮ್ಮ ಊರಿನ ನಮ್ಮ ಮನೆಗಳಲ್ಲಿಯೇ ಆಗಿತ್ತು ಹೀಗೆ ಸ್ವಾಭಾವಿಕವಾಗಿ ಬಡವರಲ್ಲಿ ಹುಟ್ಟಿ ಬಳೆದ ಕನ್ಯೆಯರೇ ನಮ್ಮ ಊರಿನ ಆದರ್ಶ ರಮಣೀರತ್ನಗಳಾಗುತ್ತಿದ್ದರು.

ನಮ್ಮದು ಡಾಂಭಿಕತನವಿಲ್ಲದ ವ ಮನೆ ಹೇರಳ ಹಣ ವ್ಯಯಿಸಿ ಸಂಭ್ರಮದ ಮದುವ ಕಾರ್ಯವನ್ನು ಸಾಂಗಗೊಳಿಸುವುದು ಕನ್ಯಾಶುಲ್ಕವನ್ನು ಕೊಡಲು ಸಮರ್ಥರಾದವರು ಮಾತ್ರ ಆದರೆ ನಮ್ಮಲ್ಲಿಗ ಬರುವ ಕನ್ಯಾಪಿತೃರು ಹೆಚ್ಚಾಗಿ ದರಿದ್ರರೇ ಆಗಿದ್ದರು ಹಾಗಲ್ಲದಿದ್ದರೆ ನಮ್ಮಲ್ಲಿಗ ಕರೆತಂದು ಧಾರೆ ಎರೆಯುವ ಪ್ರಸಂಗಕ್ಕೆ ಯಾವ ಕನ್ಯಾಪಿತ ಸರನು ಮನಸ್ಸು ಮಾಡುವನು? ಹೊತ್ತು ಹೆತ್ತು ಸಾಕಿ ಸಲಹಿದ ಪ್ರೇಮ ಪುತ್ರಿಗಳನ್ನು ನಮ್ಮಂಥಹ ಪರಸ್ಥಳದವರಿಗೆ ವಿಕ್ರಯಿಸಬೇಕಾದರೆ ಆ ದರಿದ್ರಾವಸ್ಥೆಯ ಪರಮಾವಧಿಯನ್ನು ಏರಿ ನಿಲ್ಲಬೇಕೆ? ಒಮ್ಮೆ ಮದುವೆ ಮಾಡಿ ಕೊಟ್ಟರೆ ಬಳಿಕ ಇನ್ನು ಅವಳ ಮುಖಾವಲೋಕನವೂ ಕೂಡ ಕಷ್ಟತರವಾಗುತಿತ್ತು ಅಳಿಯನಾದರೂ ಮಾವನ ಮನೆಯ ಸವಿಯನ್ನುಣ್ಣುವುದ ಅಪೇಕ್ಷಿಸುತ್ತಿರಲಿಲ್ಲ [illegible] ಇತ್ತು

ಎಂಥಾದರೂ ನಮಗೆ ಪತ್ನಿಯರು ಸಿಗುವುದು ದುರ್ಲಭವಾಗಿತ್ತು ಆದುದರಿಂದ ನನ್ನ ಅವಸ್ಥೆಯೂ ಕೂಡ ಅಂಥಹ ದಲ್ಲಾಳಿಗಳ ಹಿಡಿತಕ್ಕೆ ಕಟ್ಟುಬೀಳದಿರಲಿಲ್ಲ. ಅಂತೂ ನನ್ನ ಸಂಸಾರ ನೌಕೆಯ ಚುಕ್ಕಾಣಿಯು ಲಲಿತೆಯ ಅಧೀನವಾಯಿತು ನನ್ನ ತಂಗಿ ಸರೋಜೆಯೂ ಕೂಡ ಆಕೆಯನ್ನು ಅತ್ತಿಗೆಯೆಂದು ಸಂಬೋಧಿಸುವ ಬದಲು ಲಲಿತೆಯೆಂದೇ ಕರೆಯುತ್ತಿದ್ದಳು ಅದೂ ಕೂಡ ನಾನೇ ಆಕೆಯನ್ನು ಹಾಗೆ ಹೆಸರೆತ್ತಿ ಕರೆಯಬೇಕೆಂದು ಒತ್ತಾಯಮಾಡಿದುದರಿಂದ ಸರೋಜಳು ಒಮ್ಮೆ ಆಕೆಯನ್ನು ಲಲಿತಾ ಎಂದು ಕರೆದೊಡನೆ ನನಗೆ ಅದೊಂದು ತರದ ಆನಂದವಾಗುತಿತ್ತು. ನನಗೂ ಆಕೆಯನ್ನು ಹಾಗೆಯೇ ಕರೆಯಬೇಕೆನಿಸುತಿತ್ತು ಆದರೆ ಪ್ರೇಮಬದ್ಧನಾದ ಜೀವನವು ಇನ್ನೂ ಆಶಾಮಯವಾಗಿಯೇ ಉಳಿದಿತ್ತು ಅದರಿಂದಾಗಿ ಸರೋಜಳೆಲ್ಲಿಯಾದರೂ ನಕ್ಕು ಪರಿಹಾಸ್ಯ ಮಾಡುವಳೋ ಎಂದ ನನಗೆ ಸಂಕೋಚವಾಗುತ್ತಿತ್ತು

ಪ್ರಸ್ತಗಳ ನಂತರ ಪ್ರಸ್ತಗಳು ಒಂದೊಂದಾಗಿ ನೆರವೇರಿದುವು ವಿಶೇಷ ಪ್ರಸ್ತವೂ ಸಾಂಗಗೊಳಿಸಲ್ಪಟ್ಟಿತು. ಇದುವರೆಗೆ ನನ್ನ ಕಣ್ಣೆದುರು ಬೀಳಲಿಕ್ಕೆ ನಾಚುತಿದ್ದ ಲಲಿತೆಯು ಸದಾ ನನ್ನ ಬಳಿ ಇರುವಂದಿನ ಕಾಲ ಸಮೀಪಿಸಿತೆಂದು ಹಿಗ್ಗಿದೆನು ಇನ್ನಾದರೂ ಗೂಢವಾಗಿ 'ಲಲಿತಾ' ಎಂದು ಕರೆದರೆ ಲಲಿತೆಯು ಮಾತನಾಡುವಳೆಂದು ಅಂದು ಎಣಿಸಿದ್ದೆನು ಆ ಕಾಲವೂ ಸಮೀಪಿಸಿತು. ನನ್ನ ಮನೋಭೀಷ್ಟವು ಸಿದ್ಧಿಸಬೇಕೆಂದ ಲಲಿತೆ ಮಾತ್ರ ಕಾಳ ನಮ್ಮ ಪಟ್ಟುವಾಗಿ 'ಲಲಿತಾ' ಎಂದೆನು ಅವಳು ಉತ್ತರಿಸದೆ ಬಗ್ಗಿ ಮುಗ್ಗಲ [illegible] ವಿನಹ ಮಾತನಾಡಲಿಲ್ಲ ಆ [illegible] ಆ ರಾತ್ರಿ [illegible] ತಡವಾಯಿತು. ಅಂದಿನ ಎಲ್ಲ [illegible] ಗಳು ಪೂರ್ತಿಯಾದರೂ ಅವಳನ್ನು ಲಲಿತಾ ಎಂದು ಸಂಬೋಧಿಸಿ [illegible] ಸಾಧಿಸಿಯೇ [illegible] ದಿನ [illegible] ಲಲಿತೆಯು ನನ್ನ ಹತ್ತಿರ ಬಳಿಯಿರದೆ [illegible] ಹೋಗುವ ಮೊದಲೇ ಅವಳನ್ನು [illegible] ಆಡಿದ [illegible] ಶಪಥವನ್ನು ಆ ವೀಕ್ಷಕರ ದಿವಾಗಿ ಮಾಡಿಸಿತು 'ನೋಡು, ನನ್ನ [illegible] ಎಂದಾದರೂ ಒಂದೆ ದಿನ ಎಲ್ಲರ ಎದುರೂ ಲಲಿತಾ ಎಂದು ಕರೆಯುವೆನು' ಎಂದು.

★

ಅಂದು ಸರೋಜಳ ಮದುವೆಯಾಗಿತ್ತು ಮದುವೆಯ ಸಂಭ್ರಮದಲ್ಲಿ ಹೆಂಗಸರಿಗೆ ಬಿಡುವಿಲ್ಲವೆಂಬುವುದನ್ನು ಅರಿಯದವರಿಲ್ಲ ವಿರಳರು ಸರೋಜಳ ಪತಿಯಾಗಿ ನನ್ನ ಭಾವನಾಗುವ ವರನು ನಮ್ಮ ಊರಿನವನೇ ಅಂದ ಬಳಿಕ ಹೆಂಗಳೆರ ಹೆಮ್ಮೆಯೇ ಆ ದಿನ ಮೇರೆ ಮೀರಿದ್ದಿತು ಭಾವನ ಮನೆಯ ಹೆಂಗುಸರು ನಮ್ಮಲ್ಲಿಗೆ ಬರುವುದು ನನ್ನಾಕೆಯೂ ಅಂದರೆ ಲಲಿತೆಯೂ ನಮ್ಮ ನೆರೆಕರೆಯವರೊಡನೆ ಭಾವನ ಮನೆಗೆ ಹೋಗುವುದು ಮನೆಯ ಅಂಗಣವು ತಳಿರು ತೋರಣಗಳಿಂದ ಶೋಭಾಯಮಾನವಾಗಿತ್ತು ಅಂತೆಯೇ ಲಲಿತೆಯ ಸೌಂದರ್ಯವು ಇಂದು ಉಕ್ಕೇರಿ ಕೋಡಿ ಹರಿಯುತಿತ್ತು ನನ್ನ ಎಲ್ಲಾ ಪ್ರಸ್ತಗಳಲ್ಲಿಯೂ ಅವಳನ್ನು ಶೃಂಗರಿಸಿದುದು ಇತರ ಹೆಂಗುಸರು. ಆ ಶೃಂಗಾರವು ಸಮಾಜ ನಿಯಮಾವಳಿಗಳಿಂದ ಕಟ್ಟುಬಿದ್ದು ಅವಳ ಪ್ರಾಕೃತಿಕ ಸೌಂದರ್ಯವನ್ನು ಹೊರಸೂಸುವಂತಿರಲಿಲ್ಲ ಅಂದಾದರೋ ಅವಳೇ ಫ್ಯಾಶನಿಗೆ ತಕ್ಕಂತೆ 'ಅಪ್ ಟು ಡೇಟ್' ಮಹಿಳೆಯಾಗಿದ್ದಳು. ಯೌವನದ ಕಾಂತಿಯುಕ್ತವಾದ ಅವಳ ಅಂದಿನ ಶೃಂಗಾರಯುಕ್ತವಾದ ಆ ಮುಖಕಮಲವು ಅತೀ ಸುಂದರವಾಗಿ ತೋರುತಿತ್ತು ಅಷ್ಟು ಸುಂದರವಾಗಿ ಕಾಣುವ ಅವಳ ಆ ವದನವು ಹಿಂದೆಂದೂ ನೋಡಿದಂತೆ ಭಾಸವಾಗುತ್ತಿರಲಿಲ್ಲ ಅವಳ ಸೌಂದರ್ಯ [illegible] ಅಂದು ನಾನು ಹಿಗ್ಗಿದ್ದೆನು ಅವಳ ಮುಖಕಮಲವನ್ನು ನೋಡದಷ್ಟಕ್ಕೆ ಸಾಕಾಗಲಿಲ್ಲ ಅವಳ ಮುಖವನ್ನು ವೀಕ್ಷಿಸುವುದಕ್ಕಾಗಿಯೇ ನಾನು ಅಂದಲ್ಲ ಒಂದು ನವನದಿಂದ ಅವಳನ್ನು ಅನುಸರಿಸುತ್ತಿದ್ದೆನು. ಅವಳು ಎಲ್ಲಿಗೆ ಹೋಗುವಳೋ ಅಲ್ಲಿಗೆ ನಾನೂ ಹೋಗುತ್ತಿದ್ದೆನು [illegible] ಹೆಂಗುಸರು ನನ್ನನ್ನೇ ನೋಡಿ [illegible] ತಮ್ಮ ಅಭಿಪ್ರಾಯಗಳನ್ನು ಒತ್ತಿ ಒತ್ತಿ ಹೇಳುತ್ತಿದ್ದರು ಅಂದು.

ನನ್ನ ಈ [illegible] ಲಲಿತೆಯು ನಾಚುತ್ತಿದ್ದಳು. [illegible] ನನ್ನಲ್ಲಿ ಪ್ರೇಮದ [illegible] ಅದರಿಂದಾಗಿ ನಾನು ಒಮ್ಮೆ ಅವಳ ಹಿಂದುಗಡೆಯೂ ಒಮ್ಮೆ ಮುಂದುಗಡೆಯೂ ಇದ್ದುಕೊಂಡು ಅವಳ ಅಡಿಗಳನ್ನು ಅನುಸರಿಸಿದೆನು [illegible] ಹೋಗುವಾಗ ಅವಳ [illegible] ಯಲ್ಲಿ [illegible] ಆರಳಿದ ಮಲ್ಲಿಗೆ [illegible] ನನ್ನನ್ನು [illegible] ನೋಡಿ [illegible] ಗುಲಾಬಿ ಹೂಗಳ [illegible] ನನ್ನೇ [illegible] ದ್ದೆನು [illegible] ಹೋಗುವಾಗ [illegible] ಕಾಂತಿಯನ್ನು ಬೀರುತ್ತಿರುವ ಆ ಅವಳ ನೇತ್ರಗಳನ್ನೇ ವೀಕ್ಷಿಸುವುದು. ಅವಳು ಆಗಾಗ್ಗೆ ನನ್ನನ್ನು ಓರೆಗಣ್ಣಿನಿಂದ ನೋಡಿ ಅವ್ಯಕ್ತ [illegible] ಒಡನೆಯೇ ಮುಗುಳು ನಗೆಯನ್ನು ಪ್ರದರ್ಶಿಸಿ ಮುಖವನ್ನು ವರೆಮಾಚಿಸುವ ನಟನೆಯಿಂದ ಮುಂದುವರಿಯುವುದು, ಮುಂದುಗಡೆಯಿಂದ ಹೋಗುವಾಗ ಲಲಿತೆಯು ಹಿಂದಾ

ಬನ್ನಳೋ ಇಲ್ಲವೋ ಎಂಬುವುದನ್ನು ಪರೀ ಸಿನನೋ ಎಂದು ನೋಡುವಂತೆ ಅವಳ ದಾ ನಡೆಯ ಸೌಂದರ್ಯವನ್ನು ನೋಡಿ ಂಬಗೊಳ್ಳುವುದು. ನಾನು ಹಿಂದೆ ನೋಡಿ ಸ್ಟಷ್ಟೂ ಅವಳು ನಾಚಿಕೆಯಿಂದ ನಕ್ಕು ತಲೆ ಗೆ ಬಾಗಿಸುವುದು. ಈ ಎಲ್ಲಾ ಹಾವ ವಗಳಿಂದ ಅವಳ ಮುಖಕಮಲದಿಂದ ಸೂಸು ತ್ತಿರುವ ಮುಗುಳು ನಗೆಯ ಹಸನ್ಮುಖ ವವು ನನ್ನಲ್ಲಿ ಎಲ್ಲಿಂದಿಲ್ಲದ ಪ್ರೇಮ ಪರ ತೆಯನ್ನುಂಟುಮಾಡುತಿತ್ತು

ವಾಚಕರೇ! ಹೆಂಗುಸರ ನಗೆಯ ಆಳ ವನ್ನು ಬಲ್ಲವರಿರುವರೇ? ತಾಯಿಯು ಮಗು ವನ್ನು ನೋಡಿ ನಗುವಳು ಅಕ್ಕತಂಗಿಂದಿರರು ನ್ನು ತಮ್ಮಂದಿರನ್ನು ನೋಡಿ ನಗುವರು ಸ್ತ್ರೀಯು ಪತಿಯ ಸುಖಕ್ಕಾಗಿ ನಗುವಳು ಸ್ತ್ರೀಯು ವಿಟಪುರುಷನನ್ನು ನೋಡಿ ನಗುವಳು ಗಳು ತಾತನನ್ನು ನೋಡಿ ನಗುವಳು ನಿಷ್ಕ ಳ ನಗುವೆಂದರೆ ಅದು ನಿಷ್ಕಲ್ಮಷ ಮನಸ್ಸಿ ನ ಎಲ್ಲಾ ನಗೆಯ ಅರ್ಥವೂ ಒಂದೇ ಎಂದು ಹೇಳಬರುವುದೇ? ಆದರೆ ಅದು ಎಲ್ಲ ಲ್ಲಿಯೂ ಮುಖದಿಂದಲೇ ಪ್ರದರ್ಶಿಸಲ್ಪಡು ವು

'ಇದು ನನ್ನ ರಾಜ್ಯ'ವೆಂದು ಅರಸನು ಳುವಾಗ ಭೂಮಾತೆಯು ನಗುವಳಂತೆ ಕೆಂದರೆ ಇಂತಹ ಲೆಕ್ಕವಿಲ್ಲದಷ್ಟು ರಾಜರು ದು ನನ್ನ ರಾಜ್ಯವೆಂದು ಹೇಳಿ ಆ ರಾಜ್ಯ ಗಿಯೇ ನಾಶವಾದವರನ್ನು ಭೂಮಾತೆಯು ನನವಾಡಿಷವಳ ಮಾನವನು ಭಾವಿ ಖಸಾಮ್ರಾಜ್ಯದ ಆಶಾಭರಿತನಾಗುವಾಗ ಕಾಲ ಮೃತ್ಯುವು ಹಿಂದೆ ನಿಂತುಕೊಂಡು ನಗ ವಂತೆ 'ಅಪ್ಪಾ 'ಅಪ್ಪಾ ಎಂದು ಹೇಳು ಓಡಿಬರುವ ತನ್ನ ಮಕ್ಕಳನ್ನು ಎತ್ತಿ ಮುದ್ದಾ ವಾಗ, ಕುಟಿಲ ಸತಿಯು ನಗುವಳಂತೆ ವರೆ ನನ್ನ ಲಲಿತೆಯೇ ಕುಟಿಲ ವರ್ತನೆಗಳಿಗೆ ಳಗಾದವಳೆಂದು ಹೇಳುವೆನಾಗಿ ಭಾವಿಸಬೇ ಅದೆಂದಿಗೂ ಸಾಧ್ಯವಿರಲಿಲ್ಲ

ಇಂದು ಮದುಮಗಳಾದ ಸರೋಜೆಯನ್ನು ಂಗರಿಸಿದವಳೂ ಲಲಿತೆಯೇ ... ನೂ ಅಲ್ಲಿ ಇಲ್ಲದಿರಲಿಲ್ಲ ಒಮ್ಮೆ ಸರೋಜೆ ನ್ನು ಕೆಣಕಿಸುವುದೂ ಒಮ್ಮೆ ನನ್ನ ... ನ್ನು ಕುಚೇಷ್ಟೆ ಮಾಡುವುದೂ ನನ್ನ ... ಗ್ಯವಾಗಿತ್ತು ಅಂದು ನಾನು ... ಕ್ಷೊಡನೆ ... ಸ್ತು ಅದ ವರೆಗೂ ... ಗೆ ವರ್ತಿಸಲಿಕ್ಕೆ ... ರೋಜಳು ತಂಗಿಯಾಗಿ ನನಗೆ ... ಗ್ರಹಿಸಿದ ಮಹಾಮಹಿಮನಾದ ದೇವರನ್ನು ಮನಸ್ಸಿ ಲ್ಲಿಯೇ ಕೊಂಡಾಡಿದೆನು ... ವಾಗ ಲಲಿತೆಯು ... ಸರೋಜಳ ... ಸುವುದು ಇನ್ನಷ್ಟು ವೇಗವಾಗಿ ಸಾಗಿತು

ಸರೋಜಳನ್ನು ಶೃಂಗರಿಸುವುದರಲ್ಲಿ ... ರತವಾದ ಸ್ತ್ರೀಯರ ಹೊರತ ... ನ್ನ ಕ ಚೇಷ್ಟೆಯಲ್ಲಿ ಭಾಗವಹಿಸದಿರಲಿಲ್ಲ ಲವರಿಗೆ ಅದು ಸಹಜವೆನಿಸಿತೋ ಏನೋ ದರೆ ಕೆಲವರಿಗೆ ಅದು ಸರಿದೋರಲಿಲ್ಲವಾಗಿ ತೋರುತ್ತದೆ ಒಂದಲ್ಲ ಒಂದು ನೆವನದಿಂದ ಲ್ಲಿಂದ ನಾನು ತೆರಳುವಂತೆ ಮಾತನಾಡಿದರು ನಗಾದರೋ ಲಲಿತೆಯನ್ನು ಅಲ್ಲಿಯೇ ಬಿಟ್ಟು ೋಗುವುದಕ್ಕೆ ಮನಸ್ಸು ಬಾರದು ಆದರೂ ನು ಕೊನೆಗೆ ಹೊರ ಹೋಗಲೇಬೇಕಾಯಿತು ನಾತಕ್ಕೊಂದು ಬಲ್ಲಿರಾ? ಸರೋಜಳಿಗೆ ಸೀರೆ ಡಿಸುವಾಗ ನಾನಲ್ಲಿದ್ದ ತೆರಳಬೇಕೆಂಬ ಪ್ರತಿಜ್ಞೆಯಾಯಿತು. ನನಗೂ ಅಲ್ಲಿಂದ ತೆರ ದೆ ಗತ್ಯಂತರವಿಲ್ಲದಾಯಿತು

ಬೇರುಪಾಯಗಾಣದೆ ಹೊರ ಬಂದೆನು ಮುನಗೆಯಿಂದೊಡಗೂಡಿದ ವದನದಿಂದ ಲಲಿ ಯೂ ಹೊರಗೆ ಬಂದಳು ಬಂದವಳೇ ಭಾವನ ಕ್ಷೌರಸಮಾರಂಭವನ್ನು ನೋಡುವು ಲ್ಲವೇ? ಎಂದಳು ನನಗೂ ಅದೇ ಬೇಕಾ ಪ್ತು . ಅವಳನ್ನು ಹಿಂಬಾಲಿಸುತ್ತಾ ಅವಳೊ ನೆ ನಾನು ಹೋಗುವುದನ್ನೂ ಒಮ್ಮೆ ಅವಳು ನ್ನನ್ನು ಹಿಂಬಾಲಿಸುತ್ತಾ ನಗುತ್ತಿರುವುದನ್ನೂ

ಈಗವಳೆಲ್ಲಿ?

ಮನನಮಾಡಿ ಆನಂದತುಂದಿಲನಾಗುವುದು ಅಂದಿನ ಆ ಸಮಯದ ನನ್ನ ಭಾಗ್ಯವಾಯಿತು. ಲಲಿತೆಯು ಭಾವನ ಮನೆಗೆ ಭರದಿಂದ ಸಾಗಿದಳು. ನಾನೂ ಅಷ್ಟೇ ಭರದಿಂದ ಸಾಗಿದ್ದೆನೆಂದು ಹೇಳುವ ಅವಶ್ಯವಿಲ್ಲವಷ್ಟೆ

ಎಲ್ಲರೂ ನಮ್ಮನ್ನು ನೋಡಿ ನಕ್ಕು ಸ್ವಾಗತೀ ಕರಿಸಿದರು ಕ್ಷೌರ ಸಮಾರಂಭವಾದೊಡನೆ ದಿಬ್ಬಣ ಹೊರಡಬೇಕಾಗಿತ್ತು. ಅದಕ್ಕೆ ಮೊದಲೇ ನಾವು ಮನೆಯನ್ನು ಸೇರಿ ಮದುಮಗನ ಕಡೆಯವರನ್ನು ಎದುರು ಗಾಣಲು ಹೊರಟು ಬರಬೇಕಿತ್ತು. ಅವರಿಂದಾಗಿ ನಾನೂ ಲಲಿತೆಯೂ ಒಟ್ಟಿಗೆ ಹೋಗುವ ಇನ್ನೊಂದು ಸುಯೋಗವಿತ್ತು. ಆ ಸಮಯ ಲಲಿತೆಯ ಕೈಯನ್ನು ನನ್ನ ಕೈಯಲ್ಲಿ ಹಿಡಿದುಕೊಂಡು ಒಮ್ಮೆ ಭಾವನ ಮನೆಯಿಂದ ನನ್ನ ಮನೆಗೆ ಲಕ್ಷ್ಮೀನಾರಾಯಣನಾಗಿ ಹೋಗಬೇಕೆಂಬ ಆಕಾಂಕ್ಷೆಯು ಬಾಯಲ್ಲಿ ನೀರೂರಿಸಿತು ಯಾರೂ ನಕ್ಕರೂ ನಗಲಿ, ಯಾರೂ ಏನು ಹೇಳಿದರೂ, ಲಲಿತೆಯು ಇಷ್ಟಪಡದಿದ್ದರೂ ಒತ್ತಾಯದಿಂದಲಾದರೂ ಅವಳ ಕೈಯನ್ನು ಹಿಡಿದುಕೊಂಡೇ ಮನೆಗೆ ಹೋಗುವೆನೆಂದು ದೃಢ ನಿಶ್ಚಯ ಮಾಡಿದೆನು ಇದನ್ನು ಲಲಿತೆಗೆ ಮಾತ್ರ ಹೇಳಲಿಲ್ಲ ಹೇಳಿದರೆ ಹೊರಟು ಬರುತ್ತಾಳೋ ಇಲ್ಲವೋ ಎಂಬ ಸಂಶಯವಾಯಿತು. ಹೆಂಗುಸರಿಗೆ ನಾಚಿಕೆ, ಲಜ್ಜೆ ಎಂಬುದಿದೆಯಷ್ಟೆ.

ಭಾವನಿಗೆ ಕ್ಷೌರಿಕನು ಕ್ಷೌರ ಮಾಡುವುದನ್ನು ನಾವೆಲ್ಲರೂ ನಿಂತು ನೋಡುತ್ತಿದ್ದೆವು ಒಂದು ಕಡೆಯಿಂದ ಭಾವನ ಅಕ್ಕತಂಗಿಂದಿಯರರೂ ಒಂದು ಕಡೆಯಿಂದ ಭಾವನ ಭಾವಂದಿರರೂ ನಿಂತಿದ್ದರು ವಾದ್ಯ ಘೋಷವೂ ಇತ್ತಷ್ಟು ಆದರೆ ನಾನು ಮಾತ್ರ ಲಲಿತೆಯನ್ನು ಒತ್ತಾಯ ಮಾಡಿ ಅವಳೊಡನೆ ನಿಲ್ಲಲು ಅನುಗ್ರಹೀತನಾಗಿದ್ದೆನು ಮದುಮಗನ ಕ್ಷೌರಕ್ಕೆಂದು ಕ್ಷೌರಿಕನು ಹೊಸ ಕತ್ತಿಯನ್ನಾದರೂ ಅಂದು ಮಸೆದು ತರಬಹುದಿತ್ತು ಆದರೆ ಭಾವನ ಮನೆಯವರು ಎಲ್ಲರೂ ಹಳೇ ಪದ್ಧತಿಯನ್ನನು ಸರಿಸುವರೆಂದು ಕ್ಷೌರಿಕನಿಗೂ ಗೊತ್ತು ಅವನ ಆ ನಿತ್ಯದ ಕತ್ತಿಯನ್ನೇ ಉಪಯೋಗಿಸಿದನು ಆ ಕತ್ತಿಯ ಧಾರೆಯ ಸವಿಯು ನಮ್ಮಂತಹ ಹಳ್ಳಿಗರಿಗೆ ಮಾತ್ರ ಗೊತ್ತು ಧಿನಸ First class superior ಸಲೂನುಗಳಲ್ಲಿ ಕ್ಷೌರ ಮಾಡಿಸಿಕೊಳ್ಳುವ ಪಟ್ಟಣಿಗರಿಗೆ ಅದರ ಸವಿಯು ಗೊತ್ತಾಗದು

ಮಾನವನು ಆಲೋಚಿಸುವುದೊಂದು, ಮಾಡುವುದೊಂದು, ಆಗುವುದೆ ಅದೊಂದು ಎಲ್ಲವೂ ಆ ಪರಮಾತ್ಮನ ಅಧೀನ. ಕ್ಷೌರಿಕನು (ಹಜಾಂ ನೆಂದು ಕರೆಯಲು ಸಂಕೋಚವಾಗುವುದು) ಆತನ ಆ ಧಾರೆಯಿಲ್ಲದ ಕತ್ತಿಯಿಂದ ಕ್ಷೌರಮಾಡುವಾಗ ಭಾವನ ಮುಖದ ಮೇಲೆ ಸಣ್ಣ ಸಣ್ಣ ಕೆಲವು ಘಾಯಗಳಾದವು. ಲಲಿತೆಗೆ ಅದು ಸಹನವಾಗಲಿಲ್ಲ. ತನ್ನ ಎಡಗೈಯ ಬೆರಳುಗಳನ್ನು ಮುಷ್ಟಿ ಕಟ್ಟಿಕೊಂಡು ಬಲಗೈಯ ಬೆರಳುಗಳಿಂದ ಮುಷ್ಟಿಯನ್ನು ಅವುಕಿಕೊಂಡಳು ಕೂಡಲೇ ಬಲಗೈಯ ತೋರು ಬೆರಳಿನ ಅಡಿಗಂಟನ್ನು ಆ ವೇಶ ಪೂರ್ಣವಾಗಿ ಕಚ್ಚಿಕೊಂಡಳು ಮತ್ತು ಒಡನೆಯೇ ಕೈಯನ್ನು ಕೊಡಹಿ ಬಿಟ್ಟಳು ಹೀಗೆ ತನ್ನ ಅಸಮಾಧಾನತೆಯನ್ನು ಸೂಚಿಸುತ್ತಿರುವಾಗ ಲಲಿತೆಯು ಇನ್ನೂ ಸವಿೂಪಸ್ಥನಾಗಿ "ಈಗ ಸರೋಜೆಯು ಇಲ್ಲಿದ್ದು ಭಾವನ ಮುಖದ ಮೇಲಾದ ಘಾಯಗಳನ್ನು ನೋಡಿದರೆ ಅವಳ ಮನಸ್ಸಿಗೆ ಹೇಗಾಗುತಿತ್ತು'' ಎಂದು ಭಾವನಿಗೆ ಕೇಳುವಂತೆ ಹೇಳಿದೆನು ಪ್ರತ್ಯುತ್ತರವಾಗಿ ಲಲಿತೆಯು ನನ್ನ ಅಪ್ಪನಾದರೆ ಕ್ಷೌರ ಮಾಡುವಾಗ ನಿದ್ರೆ ಬರುತಿತ್ತು'' ಎಂದು ಹೇಳಿದವಳೇ ಕೈಯ ತೋರುಬೆರಳನ್ನು ಇನ್ನೊಮ್ಮೆ ಕಚ್ಚಿಕೊಂಡಳು

"ಏ ಲಲಿತಾ'' ಎಂದೊಮ್ಮೆ ಕೂಗಿದೆನು. ಅವಳೂ ನನ್ನನ್ನೇ ನೋಡಿದಳು ನಾನು ಅವಳನ್ನೂ ನೋಡುತ್ತಾ ಇದ್ದೆ 'ಲಲಿತಾ' ಎಂದು ಅವಳನ್ನು ಎಲ್ಲರೆದುರು ಸಂಬೋಧಿಸುತ್ತೇನೆಂದು ಅಂದು ಹಾಕಿಕೊಂಡ ಪಂತಿಜ್ಞೆಯು ಇಂದು ಈ ರೀತಿ ಕೊನೆಯದಾಗುವುದತ್ತೆ?

★ ಲಂಡನಿನಲ್ಲಿ ವೈಸರಾಯರು ★

ಕೊಂಗ್ರೆಸು ಮಂತ್ರಿಮಂಡಲವೊಂದು ಅಧಿಕಾರ ಮೀರಿರುವುದೆ?

ಫೆಡರೇಶನಿನ ಪಂಚಾಯತಿ ಸಾಧ್ಯವೆ?

ಇಷ್ಟು ವರ್ಷದಿಂದ ಕಾಯುತ್ತಿದ್ದ ಸುಧಾರಣಾಅಳ್ವಿ ಜಾರಿಗೆ ಬಂದುದರ ಪರಿಣಾಮಗಳು ಎಂತಹವೆಂದು ಗೊತ್ತು ಮಾಡಲು ಈಗ ಬ್ರಿಟಿಷ ಸರಕಾರಕ್ಕೆ ಅನುಕೂಲವಾದ ಅನುಭವ ದೊರೆಯುವ ಲಂಡನಿನಲ್ಲಿರುವುದು ವಿಹಿತವೆನ್ನಲಾಗಿದೆ. ಫೆಡರೇಶನನ್ನು ಜ್ಯಾರಿಗೆ ತರಲು ಪ್ರತಿಬಂಧಕವಾಗುವುದು ಎಂಬುದನ್ನು, ಕೊಂಗ್ರೆಸು ಮಂತ್ರಿಗಳು ಪ್ರಾಂತ್ಯಗಳಲ್ಲಿ, ವಿಮರ್ಶಕರು ಸಹಾ ಹಿಂದೆ ಸಹಿಸಲಾಗದಷ್ಟು ಸಾಂಗವಾಗಿ ಹೊಸ ಸುಧಾರಣೆಗಳನ್ನು ರೂಢಿಗೆ ತಂದುದು ಶ್ಲಾಘ್ಯವಾಗಿಯೆ ಎಂಬುದನ್ನು ವಿಮರ್ಶಿಸಲಾಗುವುದು.

ಹಿಂದೆ ಸರಕಾರದ ವಿರುದ್ಧವಾಗಿ ಕೊಂಗ್ರೆಸು ಸಾರಿದುದೆಲ್ಲವನ್ನು ಮರೆತು, ಗವರ್ನರರು ಸಿವಿಲ್ ಸರ್ವಿಸು ಸಮೇತ ಉತ್ತಮ ಸಹಕಾರದಿಂದ ನಡೆಯುತ್ತಿರುವ ಕೊಂಗ್ರೆಸ್ ಮಂತ್ರಿಗಳನ್ನು ಶ್ಲಾಘಿಸುವಾಗ, ಬೇಕೆಂದೇ ಎತ್ತಿಹಿಡಿದಿರುವ ಜಾತೀಕಲಹಗಳನ್ನು ಕುರಿತು [ಹಿಂದೂ-ಮುಸ್ಲಿಮ ಚಳವಳ] ಸಂತಾಪಪಡಬೇಕಾಗಿದೆ ಇತ್ತಂಡಗಳೂ ಇನ್ನು ಐಕ್ಯವಾಗಲು ಸಾಧಿಸುವುದಿಲ್ಲವೆಂದು ಲಂಡನಿನಲ್ಲಿ ದೂರು ಇದೆ.

ಜಮೀನು ವಿಷಯಕವಾದ ಕಾನೂನುಗಳು ಹಲವು ಪ್ರಾಂತ್ಯಗಳಲ್ಲಿ ಉಂಟಾಗಿವೆಯಷ್ಟೆ. ಹಿಂದೆ, ಜಮೀನ್ದಾರರನ್ನು ಕರೆದು ಸಂಭಾಷಿಸಿ, ಈ ಕಾನೂನುಗಳನ್ನು ಮಾಡುವ ರೂಢಿಯುತ್ತೆಂದೂ, ಈಗ ಕೊಂಗ್ರೆಸ್ ಮಂತ್ರಿಗಳೇ ಇಂತಹ ವಿಷಯಗಳಲ್ಲಿ ಕಾನೂನು ಮಾಡುತ್ತಾರೆಂದೂ ಆದರೆ ಇಂತಹ ಕಾನೂನು ಆಕ್ಷನ್ನು ವಿರೋಧಿಸಲಾಗದೆಯೆಂದು ಸಹ ಲಂಡನಿನ ಪತ್ರವೊಂದು ತೋರಿಸಿಕೊಟ್ಟಿರುವುದು.

ಫೆಡರೇಶನು ಬಿಕ್ಕಟ್ಟು

ಎಪ್ರಿಲ್‌ನಲ್ಲಿ ವೈಸ್ರಾಯರು, ಪ್ರಥಮ ಕೆಲಸವೆಲ್ಲ ಮುಗಿಯತ್ತ ಬಂತು, ಇನ್ನು ಫೆಡರೇಶನನ್ನು ಜಾರಿಗೆ ತರಲೆತ್ನಿಸಬೇಕಾಗಿದೆ ಎಂದದು ಆಶಾಜನಕವಾದ ಮಾತಾದರೂ, ಅಷ್ಟು ನಿಜವಾಗಿಲ್ಲವೆಂದು ಲಂಡನು ತಿಳಿದೇ ಇದೆ. ಅಕ್ಷನ್ನು ಬ್ರಿಟಿಷಪ್ರಾಂತ್ಯಗಳು ಒಪ್ಪುವಂತೆ ತಿದ್ದುವರೆ ಪಾರ್ಲಿಮೆಂಟು ಈಗ ಒಲ್ಲದಾದ ಕಾರಣವೂ, ಪುರಾತನವಾದಿಗಳಾದ ರಾಜ್ಯಗಳು ಈ ಪ್ರಾಂತ್ಯಗಳ ಸಮಾನತೆಗೆ ಬೇಗನೆ ಬರಲೊಲ್ಲದಾದ ಕಾರಣವೂ, ಫೆಡರೇಶನನ್ನು ಕೂಡಲೆ ನಿರ್ಮಾಣಮಾಡುವುದು ಕಷ್ಟಕರವಾಗಿದೆ.

ಇವೆರಡು ಕಾರಣಗಳನ್ನು ವಿಚಾರಮಾಡಿ ಇತ್ಯರ್ಥಿಸುವಂತಾದರೆ, ಇಂಡಿಯವೆಲ್ಲ ಒಂದೇಯಾಗುವುದು ಸ್ವಾಭಾವಿಕ ಪ್ರಗತಿಗನುಗುಣವಾಗಿಯೇ ಇರುವುದೆನ್ನಬಹುದು. ಫೆಡರೇಶನನ್ನು ವಿಧಾಯಿಸಿದವರೊಡನೆ ಸ್ಪಷ್ಟವಾಗಿ ಚರ್ಚಿಸಲಿಕ್ಕೆ ವೈಸ್ರಾಯರು ಈಗ ಲಂಡನಿನಲ್ಲಿರುವುದು ಇಲ್ಲಿನವರಿಗೆ ತೃಪ್ತಿಕರವಾಗಿದೆ.

'ಟೈಮ್ಸ್' ಪತ್ರಿಕೆಯ ಅಗ್ರಲೇಖ

ಒತ್ತಾಯದಿಂದ ಫೆಡರೇಶನನ್ನು ರಚಿಸುವ ಬದಲಾಗಿ, ಒಂದು ಬಗೆಯಾಗಿ ಎಲ್ಲರೂ ಬಹುಮತಗೊಡುವಂತಹ ಸೂತ್ರಗಳ ಮೂಲಕ ಫೆಡರೇಶನನ್ನು ಹೂಡಿತರುವುದು ಅಗತ್ಯ, ಹೀಗೆ ಮಾಡುವುದರಿಂದ ಬ್ರಿಟನ್ನು - ಇಂಡಿಯಾಗಳೊಳಗೆ ಸಂಧಾನ ಮುರಿಯದು-ಎಂದೇ ಜನತೆಗೆ ಟೈಮ್ಸ್ ಸಾರುತ್ತಲಿದೆ.

ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ

ಸ್ಮಾಲ ನಂ. 61/1938

ಮುಲ್ಕಿ ಕೇಶವ ಪ್ರಭು-ಮುಲ್ಕಿ ವೆಂಕಟೇಶ ಪ್ರಭುಗಳ ಮಗ ಮಂಗಳೂರು ಶಹರಿನಲ್ಲಿರುವವ- ವಾದಿ

ಪರವಾಗಿ ವಕೀಲ್ ಜಿ ಉಪೇಂದ್ರ ಪ್ರಭು.

ಮತ್ತು

ಹೆಜಮಾಡಿ ಅಬ್ಬಯ್ಯ ಗಡಿಯಾರ-ವೆಂಕಟೇಶ ಗಡಿಯಾರರ ಮಗ-ಉಡುಪಿ ತಾಲೂಕು ಪಡುಬಿದ್ರೆಯಲ್ಲಿರುವವ-ಪ್ರತಿವಾದಿ.

ಸದ್ರಿ ಪ್ರತಿವಾದಿ ಹೆಜಮಾಡಿ ಅಬ್ಬಯ್ಯ ಗಡಿಯಾರರಿಗೆ-

'ಸದ್ರಿ ವಾದಿಯು ನಿಮ್ಮ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಸದ್ರಿ ಸ್ಮಾಲ ನಂ. 61/38ನೇ ವ್ಯಾಜ್ಯವು ತಾ 5-8-38ಕ್ಕೆ ತನಿಖೆಗೆ ಇಟ್ಟಿದೆ ಆ ಕುರಿತು ನಿಮ್ಮ ಆಕ್ಷೇಪಣೆ ಇದ್ದರೆ ನೀವು ಸ್ವತಃ ಅಥವಾ ನಿಮ್ಮ ಮುಖ್ತಾರಿಕರ ಮುಖಾಂತರ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾರೀಕಿನ ಹಗಲು 11 ಗಂಟೆಗೆ ಹಾಜರಾಗಿ ಜವಾಬು ಕೊಡತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕ್ಸಪಾರ್ಟಿ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವೆಯು ತನ್ನಿ ಮಾಡಲಾದೀತು

ಮಂಗಳೂರು, 7-7-1938 } G Upendra Prabhu. Vakil for Plaintiff

ನಗರ ಸಭಾ ವಿನೋದಗಳು.

ಸೇಲಂ ಕೌನ್ಸಿಲು ಸಭೆ

ಎರಡು ಹಪ್ತೆಗಳ ಹಿಂದೆ, ವಿಕ್ಟೋರಿಯಾ ಮಾರ್ಕೆಟಿನಲ್ಲಿ, ಖಾದಿ ಪ್ರದರ್ಶನವನ್ನು ಬಾಡಿಗೆಯಿಲ್ಲದೆ ಜರಗಿಸಲು ಈ ಸಭೆ ಅಪ್ಪಣೆಕೊಟ್ಟಿತ್ತ ಹೀಗಿರಲು, ಒಂದು ಸದಸ್ಯರಿಗೆ ಇದು ಸರಿ ತೋರದೆ ಸ್ಪೆಶಲ್ ಸಭೆ ಕರೆಯಲಾಯಿತು ಇದಕ್ಕೆ ಮೊದಲು, ಮಾರ್ಕೆಟಿನಲ್ಲಿ ತಾವು ಬಳಿಯುವ ಟೆಂಡರುಗಳನ್ನು ಆಲೋಚಿಸಲು ಒಂದು ಸಭೆ ಸೇರಿತ್ತು ಅದನ್ನು ಅರ್ಧದಲ್ಲೇ ತಡೆದ ಈ ಪ್ರದರ್ಶನದ ವಿಷಯ ಸಭೆ ಜರಗಿಸಬೇಕಾಗಿ ಒಬ್ಬರ ಸೂಚನೆ ತಂದರು. ಕೊಂಗ್ರೆಸ ಮೆಂಬರರು ಇದನ್ನು ಸಮರ್ಥಿಸಿದರು, ಟೆಂಡರುಗಳನ್ನು ಒಂದು ಕಮಿಟಿಗೆ ಒಪ್ಪಿಸೋಣವೆಂದರು.

ಆಗ,-ಗಂಭೀರವುಂಟಾಯಿತು ಆದರೆ ಮುಂದರಿಸಬೇಕೆಂಬ ಸೂಚನೆ ಬಂದುದನ್ನು ಪುಸ್ತಕದಲ್ಲಿ ಬರೆಯಬೇಕೆಂದು ಅದನ್ನು ಮುಂತಂದ ಮೆಂಬರರೂ ಕೂತಲ್ಲಿಂದ ಮೇಜು ಬಡಿದ ಸದ್ದುಗಳು, ಚೀತ್ಕಾರಗೈಯುವ ಸ್ವರಗಳೂ ಎದ್ದುವು' ಊರ ಜನರು ಸ್ತೋಮವಾಗಿ ಈ ಸಭೆಗೆ ಬಂದಿದ್ದು ಈ ವಿನೋದವನ್ನು ಕಂಡು ಆನಂದಿಸದಂತೆ, ಅವರನ್ನು ಹೊರ ನಡೆಯಬೇಕೆಂದು ಅಧ್ಯಕ್ಷರು ಅಪ್ಪಣೆಕೊಟ್ಟರು ಪೋಲೀಸರನ್ನು ಕರೆದು, ಸಭಾಗೃಹವನ್ನು ಖಾಲಿ ಮಾಡುವಂತೆ ಅಧ್ಯಕ್ಷರಾಜ್ಞೆ ಕೌನ್ಸಿಲರಲ್ಲಿ ಹಲವರು ಅಲ್ಲೇ ಉಳಿದರು ಚಿಯರ್ಮೇನರೂ ಮೆಂಬರರ ನಡುವೆ ಬಂದು ಕೂತರು

ಈಗ ಸಭೆ ಸೇರಿ ಪ್ರದರ್ಶನ ವಿಚಾರವಾಗಲೆಂದರೊಬ್ಬರು, ಸಭಾವಿಸರ್ಜನೆಯಾಗಿವೆ ಎಂದರು ಮತ್ತೊಬ್ಬರು

'ಹಾಜರಿಪಟ್ಟಿ, ಮಿನಿಟು ಬೂಕು ಎಲ್ಲಿದೆ ಎಂದರೆ, ಅಧ್ಯಕ್ಷರು ಗೊತ್ತಿಲ್ಲವೆಂದರು.

ಆಗ 18 ಮಂದಿಯಾಗಿರುವ ಕೊಂಗ್ರೆಸ್ ಮೆಂಬರರು ತಮ್ಮ ಅಧ್ಯಕ್ಷರಾಗಿ ಒಬ್ಬರನ್ನು ಗೊತ್ತುಮಾಡಿ, ಒಂದು ಸಭೆ ಕೂಡಿಸಿದರು, ಉಳಿದವರು ಸಭಾಗೃಹದ ಹೊರಗೆ ಗದ್ದಲ ನಡೆಸಿದರು

ಖಾದೀ ಪ್ರದರ್ಶನವು ಬಾಡಿಗೆ ತೆರದೆ ಜರಗಲೆಂದು ಕೊಂಗ್ರೆಸಿನವರ ಸಭೆಯ ತೀರ್ಮಾನ ಮತದಾರರಿಗೆ ಬೇರೆ ವಿನೋದಗಳನ್ನು ಒದಗಿಸುವ ಬದಲಾಗಿ, ಆಗಾಗ ಇಂತಹ ವಿನೋದಗಳೇ ಸಾಲವೇ?

ಬೆಂಕಿನೊಂದಿಸುವ ಸಾಮರ್ಥ್ಯದ ಪರೀಕ್ಷೆ

ಒಂಬತ್ತಕ್ಕೆ ಮರಣ, ಹದಿಮೂರಕ್ಕೆ ಗಾಯ

ಲಿಸ್ಬನಿನಲ್ಲಿ ಬೆಂಕಿನೊಂದಿಸುವ ದಳವು, ತನ್ನ ಸಾಮರ್ಥ್ಯವನ್ನೂ ಯೋಗ್ಯತೆಯನ್ನೂ ಪ್ರದರ್ಶಿಸುವುದಕ್ಕಾಗಿ, ತಾ. 7ರಲ್ಲಿ ನಾಲ್ಕು ಮಾಳಿಗೆಗಳೆತ್ತರದ ಮರದ ಕಟ್ಟಡ ಕಟ್ಟಿ, ಅದರಲ್ಲಿ ದಳದ ಜವಾನರ ಮಕ್ಕಳನ್ನೇ ಬಾಡಿಗೆದಾರರಂತೆ ಕೂಡ್ರಿಸಿ, ಮನೆಗೆ ಪೆಟ್ರೋಲ್ ಸುರಿದುದಾಯಿತು ದಳದವರು ಕಣ್ಣು ರಕ್ಷಣ್ಯಕ್ಕೆ ತೆರಳಿದರು

ಮನೆ ಬೆಂಕಿ ಹಚ್ಚಿ, ಕೂಡಲೇ ಬಿಗಲು ಊದಲಾಯಿತು. ದಳದವರು ಓಡ್ಯಾಡಿ ಶಿಸ್ತು ಪ್ರಕಾರ ಬಂದರು ಆದರೆ, ಬೆಂಕಿಯು ಇವರಿಗೂ ಮೊದಲಾಗಿ ಹಬ್ಬಿತು. ಆ ಮನೆಗೆ ತಲುಪುವ ಮೊದಲೇ ಮನೆಯೆಲ್ಲ ಬೆಂಕಿಯಿಂದ ಮುತ್ತಿ ಹೋಗಿತ್ತು ಒಳಗಿದ್ದ ಮಕ್ಕಳಲ್ಲಿ ಹೆಚ್ಚಿನವು ಕೆಳಕ್ಕೆ ಹಾರಿದುವು, ಉಳಿದವರಲ್ಲಿ ಹಲವರು ಸುಟ್ಟು ಸತ್ತರು

ಅಂತೂ, ಇದೂ ಒಂದು ಪ್ರವೀಣತೆಯ ಪ್ರದರ್ಶನ ವಿನೋದವಾಗುತ್ತಿತ್ತು ವಿಷಾದವಾಗಿ ಮುಗಿಯಿತು

ನಿಷ್ಣಾತ ವೈದ್ಯರು ನಿಮ್ಮ ದಮ್ಮಿನ ಚಿಕಿತ್ಸೆಯನ್ನು ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ಮಿನಿಟುಗಳಲ್ಲಿ ಚುಟಿಕಿ ಹೊಡೆದಂತೆ ಗುಣಮಾಡುವೆನೆಂದು ಅವನು ಹೇಳಬಹುದೆಂದು ನಿಮಗೆ ಅನಿಸುವದೊ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ಏಳಿದ್ರಿಮದ ಗುಳಿಗೆಗಳು ಅಥವಾ ಹೊಗೆತೆಗೆದುಕೊಳ್ಳುವ ಔಷಧಗಳು ಆದರೆ ಇವು ದಮ್ಮನ್ನು ಪೂರ್ಣ ನಾಶಪಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ ಪರಿಣಾಮದಲ್ಲಿ ಈ ಔಷಧಗಳು ಗಂಟಲದ ಹಾಗೂ ಶ್ವಾಸನಳಿಗೆಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದಮ್ಮಿನವನನ್ನಾಗಿ ಮಾಡಿಬಿಡುವವು

ದಮ್ಮು ನೆಲ್ಲಮುಳ್ಳುಗಿ ಆದರೆ ನಿಶ್ಚಿತವಾಗಿ ಗುಣಮಾಡುವ ಔಷಧಿಗಳಲ್ಲಿ ಪುರೋಹಿತ ಶ್ವಾಸಹಾರಿ ಇದೊಂದು ಪ್ರಭಾವಶಾಲಿಯಾದ ಔಷಧವಾಗಿದೆ ದಮ್ಮು, ದಾಘ ಹತ್ತುವದು, ಮೈಂಜಾವಿನ ರಸಿಕೆ, ಕಂದರಾಹ ಮಾಡುವ ಕೆಮ್ಮು ಮತ್ತು ಪುಪ್ಪುಸದ ಯಾವತ್ತೂ ವಿಕಾರಗಳನ್ನು ಗುಣಮಾಡಲು ಈ ಔಷಧದ ಯೋಜನೆಯನ್ನು ನಿರ್ಭೀತಿಯಿಂದ ಮಾಡಬೇಕು ಇದರಿಂದ ಸಾವಿರಾರು ದಮ್ಮಿನವರು ರೋಗಮುಕ್ತರಾಗಿರುವರು ಪ್ರತ್ಯೇಕ ಊರಲ್ಲಿ ಕೆಮಿಸ್ಟ ಇಲ್ಲವೆ ಅಂಗಡಿಕಾರರಲ್ಲಿ ಇದು ರೂ ೨, ೩/೮ ಮತ್ತು ರೂ ೬ ಈ ಪ್ರಕಾರ ಬೇರೆ ಬೇರೆ ಬೆಲೆಯ ಸಣ್ಣ ದೊಡ್ಡ ಸೀಸೆಗಳಲ್ಲಿ ಮಾರಲ್ಪಡುತ್ತದೆ



ಮಂಗಳೂರು - ದಿ ಪಾಪ್ಯುಲರ್ ಸ್ಟೋರ್ಸ್, ರಥಬೀದಿ.

ಹಿಂದೀ ವಿರುದ್ಧ ಚಳವಳಗಾರರಿಗೆ- ಶ್ರೀ. ಸತ್ಯಮೂರ್ತಿಯವರ 'ರಣದುಂದುಭಿ'ಯ ಕರೆ!

ವಿರುಧೊ ನಗರದಲ್ಲಿ 10000 ಜನರು ಸೇರಿದೊಂದು ಸಭೆಯಲ್ಲಿ, ಹಿಂದೀ ವಿರುದ್ಧ ಪಕ್ಷದವರು ಮುಖ್ಯ ಮಂತ್ರಿ ಮತ್ತು ವಿದ್ಯಾ ಇಲಾಖಾ ಮಂತ್ರಿಯವರು ಈ ಚಳವಳವನ್ನು ಕುರಿತಾಗಿ ಇದು ವರೆಗೆ ಮಾಡಿದ ಭಾಷಣಗಳನ್ನು ಖಂಡಿಸಿ ಭಾಷಣಗಳಾದುವು. ಈ ಸಂದರ್ಭದಲ್ಲಿ, ಶ್ರೀ ಸತ್ಯಮೂರ್ತಿಯವರು ಈ ಕಾರ್ಯಕ್ರಮವನ್ನು ಎದುರಿಗಿಟ್ಟು ಸಭಾಸದಸ್ಯತೆಗೆ ಚುನಾವಣೆಗಳಾಗಲಿ ನೋಡೋಣ ಎಂದುದನ್ನು ಈ ಭಾಷಣ ಕರ್ತರು, ಈ ಕರ್ತವನ್ನು ಮಾಡಲು ಸತ್ಯಮೂರ್ತಿಯವರಿಗೆ ಅಧಿಕಾರವಿಲ್ಲವೆಂದರು ಅದರೂ ವೋಟರರ ಅಭಿಪ್ರಾಯದಲ್ಲಿ ಹಿಂದಿಯು ಬೇಡವೆಂದು ರುಜುವಾದಲ್ಲಿ, ಮುಖ್ಯ ಮಂತ್ರಿಯರು ಹಾಗೆ ಮಾಡುವರೆಂದು ಒಪ್ಪಿದಲ್ಲಿ, ಹಿಂದೀ ವಿರುದ್ಧ ಚಳವಳಗಾರರಾಗಿರುವವರಲ್ಲಿ ಮುಖಂಡರಾದ ಸರ್ ಕೆ ವಿ ರೆಡ್ಡಿಯವರಾಗಲಿ, ಸೋಮಸುಂದರಭಾರತಿಯವರಾಗಲಿ, ಸತ್ಯಮೂರ್ತಿಯವರ ಈ ಚೆಲ್ಲೆಂಜನ್ನು ಸ್ವೀಕರಿಸುವಂತೆ ಕೇಳಿಕೊಳ್ಳಲಾದೀತೆಂದೂ ಭರವಸೆ ಹೇಳಿರುವರು.

31 ವರ್ಷ ಸಮಯದ ಹೊಟ್ಟೆ ವ್ರಣ

ಹೊಟ್ಟೆಯು ಈಗ ಸಂಪೂರ್ಣ ವಾಸಿಯಾಗಿರುತ್ತದೆ.

31 ವರ್ಷಗಳ ಹೊಟ್ಟೆ ವ್ರಣದ ಪೀಡೆಯನ್ನು ಅನುಭವಿಸಿ, ನಿರಾಶನಾದುದಕ್ಕೆ, ಸಂತೋಷ ಪಾತ್ರರ ವಚನವು ದೂರೆಯುವದೆ?

ಆದರೆ ಒಳ್ಳೆ ಖಾತರಿಯಾದ ಔಷಧಿಯನ್ನು ಉಪಯೋಗಿಸಿದರೆ ಗುಣ ಲಭಿಸುವುದು ಖಂಡಿತ. ಶ್ರೀಮತಿ M H Y ಈ ಸಂತೋಷದಾಯ ವರ್ತಮಾನವನ್ನು ಹೊಂದಿರುವರು ಅವರು ಹೀಗೆಂದು ಬರೆಯುತ್ತಾರೆ ನಾನು 31 ವರ್ಷಗಳ ಸಮಯದ ಹೊಟ್ಟೆ ವ್ರಣದ ಸಂಕಟವನ್ನು ಅನುಭವಿಸಿದೆನು. ಅನೇಕ ಔಷಧಿಗಳ ಪರೀಕ್ಷೆಯನ್ನು ನಾನು ಮಾಡಿರುವೆನು ಎಲ್ಲವೂ ವ್ಯರ್ಥವಾದವು ನಾನು ಅನುಭವಿಸಿದ ನೋವು ಅಸ್ಪಷ್ಟ-ಕೊನೆಗೆ ಒಬ್ಬರು ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು ಉಪಯೋಗಿಸುವಂತೆ ಬೋಧಿಸಿದರು ಪ್ರಥಮ ಡೋಸಿನ ನಂತರ ನನಗೆ ಸ್ವಲ್ಪ ಗುಣ ಕಂಡಿತು ಈಗ ಹೊಟ್ಟೆ ವ್ರಣವು ಸಂಪೂರ್ಣ ಗುಣವಾಗಿರುತ್ತದೆ

ಈ ದಿವ್ಯ ಔಷಧಿಯು ಹೊಟ್ಟೆ ಪೀಡೆಯನ್ನು ಅನುಭವಿಸುವವರು, ಉಪಯೋಗಿಸುವಂತೆ, ನಾನು ಶಿಫಾರಸ್ಸು ಮಾಡಿರುತ್ತೇನೆ ಆಸ್ಪತ್ರೆ ಚಿಕಿತ್ಸೆಯಿಂದ ಗಿನ್ನು ಮಗನಿಗೆ ಗುಣ ಲಾಭ ದೊರಕದಿರಲು, ಆತನನ್ನು ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿಂದ ಗುಣಪಡಿಸಲಾಯಿತು.

Alex. C. Maclean

ಎಂಬ ಸಹಿಯು ಬಾಟ್ಲಿಯ ಮೇಲೂ, ಪೆಟ್ಟಿಗೆ ಮೇಲೂ ಅದೇ ಸಹಿಯಿಂದ ಕೂಡಿದ ಕೆಂಪು ಮುದ್ರೆಯೂ ಇರುವ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿನ ಕುರಿತು ಈ ಸ್ತ್ರೀಯ ಅನುಭವವು ಹೀಗಿರಲು ಹೊಟ್ಟೆ ಪೀಡೆಯನ್ನು ಅನುಭವಿಸುವವರು ನಿರಾಶರಾಗಬೇಕಾಗಿಲ್ಲ. ಹೊಟ್ಟೆ ಪೀಡೆಗಳನ್ನು ಅನುಭವಿಸುವ ಸಾವಿರಾರು ಮಂದಿಗಳು ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿನ ಉಪಯೋಗದಿಂದ, ವ್ರಣ ಇತ್ಯಾದಿಗಳ ಮೇಲೆ ಶಸ್ತ್ರಚಿಕಿತ್ಸೆಯನ್ನು ತಪ್ಪಿಸಿ ಸಂಪೂರ್ಣ ಗುಣಹೊಂದಿರುವರು.

ಚಿಲ್ಲರೆಯಾಗಿ ಸಾಮಾನು ಮಾರುವಲ್ಲಿ, ಪುಡಿಯ ಮಾತ್ರೆರೂಪದಲ್ಲಿ, ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ.



WANTED

Agents for Silk Shirting, Coating, Sarees, etc. Pay Rs. 100 P. A. Extra. Ask free samples and particulars.

Girson Knitting Works, Ludhiana.

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಂಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬಿಳ್ಳ ಗುಡ್ಡ ಮು.	1 — 14	1 —14
ರಾಶಿ ಅಕ್ಕಿ ...	3— 8	4— 0
ಸುಗ್ಗಿ ...	4— 0	4— 8
ಗುಡ್ಡ ...	4—10	4—10
ಊರ ಅವ್ವಲ್ ಬೆಳ್ತಿಗೆ ...	4— 7	4— 7
ಥರ್ಗೂಡು ಬೆ. ಗೋ. ಗೆ ...	7 — 2	7— 4
ಎಡ್ಡದ ಬೆ. ಮು. ಗೆ ...	3—14	4— 0
ಗೋದಿ ಗೋಣಿ ಗೆ ...	13 — 0	14— 8
ತೊಗರಿ ಗೋಣಿ ಗೆ ...	11— 8	13— 8
ಹುರುಳಿ ಗೋಣಿ ಗೆ ...	6— 0	6— 2
ಕಡಲೆ ಗೋಣಿ ಗೆ ...	9 — 8	10 — 8
ತೊಗರಿಬೇಳೆ ಗೋಣಿ ಗೆ ...	17— 8	18— 0
ಉದ್ದು ಗೋಣಿ ಗೆ ...	9— 0	9 — 8
ಹೆಸರು ಗೋಣಿ ಗೆ ...	9—12	10— 8
ಊರುಬೆಲ್ಲ ಖಂಡಿ ಗೆ ...	36— 0	40— 0
ಉಪ್ಪು ಗೋಣಿ ಗೆ ...	4— 8	5— 4
ಕೊಬ್ರಿ ಖಂಡಿ ಗೆ ...	46 — 8	46— 6
ಎಳ್ಯಂಡಿ ಖಂಡಿ ಗೆ ...	25 —	26 — 0
ತೆಂಗಿನ ಎಣ್ಣೆ ಮಣ ಗೆ ...	8 — 5	8— 8
ಎಳ್ಳೆಣ್ಣೆ ಮಣ ಗೆ ...	6— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಗೆ ...	6— 5	7— 5
ಬೋರಿನ ಸಕ್ಕರೆ ಮು. ಗೆ ...	2— 13	2 —14
ಮೆಣಸು ...	4— 8	6— 0
ಸಾಸಿವೆ ಮುಡಿ ಗೆ ...	5 — 8	6— 8
ಕಾಳುಮೆಣಸು ಹ.ಪೇ.ಬೆ. ...	16 — 0	17— 8
ಯಾಲಕ್ಕಿ ಬೀಜ ಮಣ ಗೆ ...	80— 0	85— 0
ಜೀರುಬೀಜ ಮು. ಗೆ ...	3—14	3—15
ಕಲ್ಪಣ ಖಂಡಿ ಗೆ ...	50— 0	55— 0
ಕಾಂಪ್ರು ತಗಡು ಮು. ಗೆ ...	14— 12	15— 0
ಕಾಂಪ್ರು ಪಾತ್ರಗಳು ಮು. ಗೆ ...	14— 8	15— 0
ಚೀನಿಬೆಲ್ಲ ಸೇರು ಗೆ ...	13— 8	14— 0
ಹಿತ್ತಾಳೆ ತಗಡು ಮು. ಗೆ ...	12 — 0	12— 0
ಕವನು ಗೆ ...	22— 8	23— 0
ಹುಣಸೆ ಹುಳಿ ಖಂಡಿ ಗೆ	40— 0	45— 8
ನೇಟಿವ್ ಕಾಫಿ ಖಂಡಿ ಗೆ	140— 0	148— 0
ಪುಟೇರ ಕಾಫಿ ಖಂಡಿ ಗೆ ...	185— 0	198— 0
ಮಡಿಕೇರಿ ಏಲಕ್ಕಿ ಮಣ ...	35— 0	39 — 0

ಡೋಂಗರೆ ಬಾಲಾಮೃತ

ಇದರಿಂದ

ಸೊರಗಿ ಕಡ್ಡಿಯಂತಾದ ಮಕ್ಕಳು

ಆರೋಗ್ಯ ಹೊಂದಿ

ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೦ನೆಯ ಬಹುಧಾನ್ಯ ಸಂವತ್ಸರದ ಆಷಾಢ ಬ. ೪ ಶನಿವಾರದಿಂದ ಆಷಾಢ ಬ. ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೮೫೦ನೇಯ ಕರ್ಕಾಟಕ ಆಟ

ತಾ	ವಾ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ		
16	ಶನಿ	೧೭	೪೬।।।	ಶತಭಿಷಾ	೫೫।	೩೨	
17	ರವಿ	೧೮	೪೭।	ಪೂ.ಭಾದ್ರ	೫೭।।	೧	16
18	ಸೋ.	೧೯	೪೭।।	ಉ.ಭಾದ್ರ	೫೮।।।	೨	
19	ಕುಜ	೨೦	೪೬।	ರೇವತೀ	೫೯।।	೩	
20	ಬುಧ	೨೧	೪೩।	ಅಶ್ವಿನೀ	೫೮।।	೪	
21	ಗುರು	೨೨	೩೯।।	ಭರಣೀ	೫೭	೫	
22	ಶುಕ್ರ	೨೩	೩೫।।	ಕೃತಿಕಾ	೫೪	೬	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 3½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars K. R. GURU, *Managing Director*

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕ ಶೂಲೆಗಳಿಗೂ ಅಮೃತ. ಬೆಲೆ: 0–4–0, 0–2–0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0–4–0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ: 0–8–0, 0–4–0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಉರಿತ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ: 1–0–0

ಪ್ರೊಪ್ರೈಟರ್:

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರಯಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

'DILROZ' Regd.

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,

Anarkali, LAHORE

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1. ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರಗೆ
2. ಕುಂದಾಪುರದಿಂದ ಬಾಳೆಬರೆಗಾಗಿ ಶಿವೊಗ್ಗಾ
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶೃಂಗೇರಿ, ತೀರ್ಥಹಳ್ಳಿ, ಶಿವೊಗ್ಗಾ ಹರಿಹರ ವರೆಗೆ
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE

Canara Industrial & Banking Syndicate Ltd.,

(Incorporated in British India)

Estd 1925.

Head Office: UDIPI, (S. India.)

Member:

RESERVE BANK OF INDIA.
BANKERS CLEARING HOUSE, BOMBAY

Statement of Affairs of the Syndicate as on 31st May 1938.

LIABILITIES		ASSETS	
Share Capital	Rs 3,86,880—0—0	Loans on Valuable Securities	Rs 19,04,209—1—9
Reserves	" 2,16,700—0—0	Loans on Land Mortgages	2,06,600—13—0
Deposits	" 30,58,216—6—5	Loans on Bills, Hundis & Promissory Notes	10,36,1[illegible]—11—9
Due to Bankers	" 2,99,018—3—7	Investments on G. P. Notes	10,88,703—[illegible]—7
Bills for Collection	" 2,24,037—15—8	Investments on Shares of other Companies	[illegible]3,380—4—0
Sundries	" 3,39,954—11—6	Investments on Lands & Buildings	42,831—2—5
		Bills for Collection	2,24,037—15—8
		Sundries	1,87,829—1—8
		Cash in hand and at Bankers	3,08,839—13—4
Total Rs	51,19,807—5—2	Total Rs	51,19,807—5—2

DEVKARAN NANJEE'S Pure Silver Bars of 10 and 20 tolas having the seal of His Majesty's Mint are available for sale at all the Branches of the Syndicate.

A Branch of the Syndicate will be opened shortly at Felix Pai Bazaar, Mangalore, Block No 1.

ಅಂದಾ: ರೂ. ೨-೦-೦. **Established 1906.** **Regd. No. M. 3406.** ಟಪ್ಪಾಲು ಹಾಸಲು ಸೇರಿ ರೂ. 2-18-0

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು; ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಷಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆ ಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲದೆ, ಗ್ರಹಶಾಂತಿಯೊಂದೇಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಪೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸುಳ್ಳೆಂದು ಹೇಳುವ ಧೈರ್ಯ ಯಾರಿಗೂ ಇಲ್ಲ. ಈ ವಸ್ತುವಿನಿಂದ ಮುಖರ್ಜರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ.........ಕಳೆದುಕೊಂಡಿರುವ ಎಲ್ಲಾ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು-ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ, ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು-ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದಾಣೆ ತಿಕೀಟು ಕಳಿಸಿದ್ದಲ್ಲಿ ಗ್ಯಾರಂಟೀ ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸುಮ್ಮನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಚಮತ್ಕಾರವನ್ನು ಸುಳ್ಳೆಂದು ತಿರಸ್ಕರಿಸಿದರೆ ಜನ್ಮ ಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿಡಿರಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದು, ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ, ವೃದ್ಧ-ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಲ್ಪಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ, ಪುರುಷರ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ ೯ ರೂಪಾಯಿ ೯ ಆಣೆ ೩ ಪೈ. ಒಂದರಿಂದ ನಾಲ್ಕು ಕಾರ್ಯಗಳು ಆಗಬೇಕಾಗಿದ್ದರೆ ಸ್ಪೆಶ್ಯಲ್ ನಂ. ೨ನ್ನು ತರಿಸಿರಿ. ಬೆಲೆ ೫ ರೂ. ೧೧ ಆ ೩ ಪೈ. ನಾಲ್ಕಕ್ಕಿಂತ ಹೆಚ್ಚು ಕೆಲಸಗಳು ಕೈಗೂಡಬೇಕಾಗಿದ್ದರೆ ಸ್ಪೆಶ್ಯಲ್ ನಂಬ್ರ ೧ನ್ನು ತರಿಸಿ. ಬೆಲೆ ೯ ರೂ. ೧೧ ಆ. ೩ ಪೈ. ಪ್ರತಿಯೊಂದಕ್ಕೂ ೮ ಆಣೆ. ಅಂಚೆವೆಚ್ಚ ಪ್ರತ್ಯೇಕವಾಗಿ ವಿದೇಶಕ್ಕೆ ಕಳಿಸುವದಾದರೆ ಪ್ರತಿಯೊಂದಕ್ಕೂ ೫ ಶಿಲಿಂಗು ಖರ್ಚು ಬೀಳುವುದು. ಈ ಯಂತ್ರಗಳಿಗಿಂತ ಬೇರೆ ಯಾವ ಸಾಧನೆಗಳೂ ಬೇಕಾಗಿಲ್ಲ.

ಮುಕ್ತಿಸಿದ್ಧಿ—ಬೇಗನೆ ಧನಪ್ರಾಪ್ತಿಯಾಗಬೇಕೆನ್ನುವವರೂ ಬೇಗನೆ ಧನಪ್ರಾಪ್ತಿಯಾಗಬೇಕೆನ್ನುವವರೂ ಇದನ್ನು ತರಿಸಬೇಕು. ಇದನ್ನು ... ಕೊಂಡ ಒಳಿತ ಧನಪ್ರಾಪ್ತಿಯಾಗುವುದಲ್ಲದೆ ... ಧರಿಸುವುದು. ಬೆಲೆ ೩ ರೂ. ಬೆಳ್ಳಿಯ ... ರೂ. ಬಂಗಾರದ್ದು ... ಪ್ರತಿಯೊಂದಕ್ಕೂ ಟಪ್ಪಾಲು ಖರ್ಚು ೮ ಆಣೆ.

ಹಸ್ತರೇಷೆ—ಹಸ್ತರೇಷೆಯನ್ನು ತೋರಿಸಲಿಚ್ಛಿಸುವ ಸ್ತ್ರೀಪುರುಷರು ಬೇಗನೆ ಆರಿಸಿದ ೧೦೦ ವರೆಗಿನ ನಮ್ಮ ವಿಳಾಸಕ್ಕೆ ಬಂದು ಬಿಟ್ಟಿಯಾಗಬೇಕು. ಹಿಂದ್ಲಳವರು ಪುರುಷರು ಬಲಗೈಯ ಹಾಗು ಸ್ತ್ರೀಯರು ಎಡಗೈಯ ಗುರುತನ್ನು ಕಾಗದದ ಮೇಲೆ ಕರೀ ಮಸಿಯಿಂದ ಮೂಡಿಸಿ, ಕಳಿಸಿಕೊಡಬೇಕು. ಹಸ್ತರೇಷೆಯನ್ನು ನೋಡುವ ಖರ್ಚು ೨ರೂ. ಪರಸ್ಥಳದವರು ಹಸ್ತದ ಗುರುತಿನ ಕಾಗದದೊಂದಿಗೆ ೨ ರೂ. ೧ ಆ. ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:—ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ತಂತ್ರ, ಕವಚ, ಎಂಬ ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:—ಪಂಜಾಬ್ ಸಿವಿಲ್ ಸೆಕ್ರಿಟರಿ ಸಿಮಲಾ (ಎ. ಆರ್. ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವವರಾದ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೨ರೂ. ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ.ಯಿಂದ ಬೇಡಿದಲ್ಲಿ ೨ ರೂ. ೧೧ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಛಾಯಗಳು, ಬಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮುಖ್ಯ ಅಂಗಡಿಗಳಲ್ಲಿ ದೊರೆಯುವುದು.



Regd. No. M. ೨೪೦೮. ವಾರ್ಷಿಕ ಅಂಚೆ ವೆಚ್ಚ ಸೇರಿ ರೂ. 2—13—0. ಬಿಡಿಸಂಚಿಕೆ ಒಂದಾಣೆ

ಸ್ವದೇಶಾಭಿಮಾನಿ

[ಸಂಪುಟ ೩೨] ತಾರೀಕು ೨೨ನೇ ಜುಲಾಯಿ ೧೯೩೮ (22-7-1938) [ಸಂಚಿಕೆ ೨೮

★

24 ಪುಟಗಳು **24**

ಅನುಕ್ರಮಣಿಕೆ

ಮುಂದಿನ ಯುದ್ಧದಲ್ಲಿ ಸ್ತ್ರೀಯರು ಕಾದುವರೇ?

★

ನೆಹರು! ಮನುಷ್ಯಕೋಟಿಯ ವೀರ!

★

ಲೋಕವನ್ನಾಳುವ ಮಹಾ ಶಕ್ತಿ ಅದು ಯಾವುದು?

★

ಪ್ರಜಾಭ್ಯುದಯಕ್ಕಾಗಿ ಯತ್ನಿಸುವ ಪ್ರಜಾಸತ್ತಾತ್ಮಕ ರಾಜ್ಯ

★

ಪೌರ್ವಾತ್ಯದಲ್ಲಿ — ಒಂದು ತಿಂಗಳು!

★

ಮನುಷ್ಯನ ಬೆಲೆ ಎಷ್ಟು?

★

ಲಾಠೀ ಬೀಸಾಟ! ಆಟದ ಹುಡುಗರ ಓಟ! ಸಿಕ್ಕಾಬಟ್ಟೆ ದಾರಿಗರ ಚೆಲ್ಲಾಟ! ತ್ರಿವೆಂಡ್ರಮಿನಲ್ಲಿ ಪ್ರಾಣಸಂಕಟ!'

★

ಜಪಾನಿಗೆ ಆಸ್ಯಾಖಂಡವೇ ಸಾಮ್ರಾಜ್ಯವಾಗಬೇಕಾಗಿದೆ!

★

ಬ್ರಿಟಿಷ್ ಸರಕಾರದಿಂದ ತಮಗೆ ಬೇಕಾದುದನ್ನು ಪಡೆಯಲು ಭಾರತೀಯರಿಗೆ ಇದೇ ತಕ್ಕ ಸಮಯ

★

ಅಲ್ಲಲ್ಲಿನ ವಾರ್ತೆಗಳು

★

ಒಂದೊಂದು ಮಾತು

★

'ಹನ್ಸ ಪಿಕ್ಚರ್ಸಿನವರ 'ಜ್ವಾಲಾ' ಚಿತ್ರದಲ್ಲಿ ರತ್ನಪ್ರಭಾ ಮತ್ತು ಮಾಸ್ಟರ್ ವಿನಾಯಕ್

CONSTRUCTIVE BANKING.

An understanding of how a modern Bank can operate to make itself useful to the individual, to business, and to the public has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTED 1906
CANARA BANK LIMITED.

ಯುದ್ಧಾಸ್ತ್ರಗಳ ವ್ಯಾಪಾರ.

ಫ್ರೆಂಚರ ಮುಖ್ಯ ಬಂದರು ಮಾರ್ಸೇಲ್ಸಿನಲ್ಲಿ ಮೊನ್ನೆ ಅಕಸ್ಮಿಕವಾಗಿ ಒಂದು ಪೆಟ್ಟಿಗೆ ಒಡೆಯಿತು. 'ಚೀನಕ್ಕೆ ಯಂತ್ರ ಭಾಗಗಳು' ಎಂದು ಹೊರಗೆ ಬರೆದಿತ್ತು. ಒಳಗಿಂದ ಮಾತ್ರ ಹಳೆಯ ಕಾರು ಪಟ್ಟಿಗಳು ಇಟ್ಟಿಗೆ ಚೂರುಗಳು ಹಾರಿಬಿದ್ದುವು.

ಫ್ರಾನ್ಸಿನ ಮತ್ತು ಇಂಗ್ಲೆಂಡಿನ ಪೋಲೀಸರು ಪ್ರಯತ್ನಮಾಡಿ,—ಫ್ರೆಂಚನೊಬ್ಬನ ಅಪೇಕ್ಷೆಯ ಮೇರೆಗೆ ಚೀನಕ್ಕೆ ಇಂಗ್ಲಿಷನೊಬ್ಬನು ಯುದ್ಧ ಸಾಮಾಗ್ರಿ ಕಳುಹುತ್ತಲಿದ್ದನೆಂದೂ, ಅದರ ಖರ್ಚನ್ನು ಲಂಡನಿನಲ್ಲಿರುವ ಶ್ರೀಮಂತ ಚೀನಿಯನೊಬ್ಬನು ತೆರುತ್ತಿದ್ದನೆಂದೂ ಗೊತ್ತಾಯಿತು.

ಈ ಸನ್ನಾಹವೆಲ್ಲ ಮೊದಲು ಮಾರ್ಸೇಲ್ಸಿಗೆ ಕಳುಹಿ, ಅಲ್ಲಿಂದ ಹೊಂಗ್‌ಕೊಂಗಿಗೆ ಸೇರುವಂತೆ ಏರ್ಪಾಡಾಗಿತ್ತು; ಚೀನಕ್ಕೆ ಯುದ್ಧ ಸನ್ನಾಹವೆಲ್ಲ ಹೊಂಗ್‌ಕೊಂಗಿನಿಂದಲೇ ಕಳವುವುದಾಗಿದೆ,—ಈಚೆಗೆ.

ಮಾರ್ಚಿಯ ಅಂತ್ಯಕ್ಕೆ 50 ಟೀಂಕು ನುರಿಯುವ ಫಿರಂಗಿಗಳನ್ನೂ 5 ಲಕ್ಷ ತೋಟಿಗಳನ್ನು ಹೊಂಗ್‌ಕೊಂಗಿಗೆ ಈ ಮಹಾಶಯನು ಕಳಿಸಿದ್ದನು ತುಂಬಾ ಹಣವು ದೊರೆತಿದ್ದು, 15000 ಪವನಿಗೆ ಇದೆಲ್ಲ ವಿಧಾ ಮಾಡಲಾಗಿತ್ತು

ದೇವದಾರಿನ ಪೆಟ್ಟಿಗೆಗಳಲ್ಲಿ ತುಂಬ ಹಾಳು ಹರಕು ವಸ್ತುಗಳನ್ನು ತುಂಬಿಸಿ, ಅವುಗಳಲ್ಲಿ ಯುದ್ಧಾಸ್ತ್ರಗಳನ್ನು ಅಡಗಿಸಿಡುವ ಕ್ರಮವಿದೆ. ಕಳೆದ ಮಹಾಯುದ್ಧದಲ್ಲಿ, ಒಂದು ಇಡೀ ಮನೆಯನ್ನೇ ಮುರಿದು ಅದರ ಇಟ್ಟಿಗೆಗಳನೆಲ್ಲಾ ಈ ಪೆಟ್ಟಿಗೆಗಳಲ್ಲಿ ಇದಕ್ಕಾಗಿ ತುಂಬಿಸಿದ್ದದೆ

ಈ ಬಗೆಯ ಕಳ್ಳ ವ್ಯಾಪಾರದಿಂದ, ಏಳು ಮಿಲ್ಲಿಯ ಪವನು ಬೆಲೆಯ ಸ್ಫುಟ್ಟುಗುಂಡು ಮೊದಲಾದುವು ಈ ವರೆಗೆ ಸಾರಿಹೋಗಿವೆ. ಹಣವನ್ನು ತೆರುವವರೇ ಬೇರೆ, ಹೆಸರಿಗೆ ಮಾತ್ರ ಸ್ಪೈನಿನ ಚೀನೀಯ ರಾಯಭಾರಿಯ ಗುರುತಿನ ಪತ್ರಗಳಿವೆ ಈ ಸುಳ್ಳು ಸರ್ಟಿಫಿಕೇಟುಗಳನ್ನು ಬೆಲ್ಜಿಯಮಿನಲ್ಲಿ ತಯಾರಿಸುತ್ತಾರೆಂದೂ ತಿಳಿದು ಬಂದಿದೆ. ಒಬ್ಬಾನೊಬ್ಬ ಲೋರ್ಡರ ಮಗನೇ ಈ ಸರ್ಟಿಫಿಕೇಟುಗಳಿಗೆ ಮೂಲನು ಎಂದು ಚೀನಿ ರಾಯಭಾರಿ ಎನ್ನುತ್ತಾನೆ. ಇದೇಕೆ?

ಈ ವ್ಯಾಪಾರವು ಈಗ ಅತಿಲಾಭಕರವಾಗಿದೆ 1984--87ರಲ್ಲಿ ಬ್ರಿಟಿಷಯುದ್ಧ ಸನ್ನಾಹ ಕಾರ್ಖಾನೆಗಳಲ್ಲಿ 800 ನಫೆಯು 4 ಮಿಲ್ಲಿಯ ಪವನಿನಿಂದ 11½ ಮಿಲ್ಲಿಯ ಪವನಿಗೇರಿತು ವಿಕರ್ಸ್ ಕಂಪೆನಿಯೊಂದೇ 1986--87ರಲ್ಲಿ, 6 ಲಕ್ಷ ಪವನಿದ್ದ ಕಳೆದ ವರ್ಷದ ನಫೆಯನ್ನೂ, ಹದಿನಾಲ್ಕು ಲಕ್ಷ ಪವನಿಗೆ ಹೆಚ್ಚಿಸಿ ಕೊಂಡಿದೆ!

ವಿಕರ್ಸ್ ಕಾರ್ಖಾನೆಯ ಮುಖ್ಯಸ್ಥನು ಕಮಾಂಡರ್ ಸರ್ ಚಾರ್ಲ್ಸ್ ವರ್ದಿಂಗಟನ್ ಕ್ರೇವನ್. ಈಗ ವಯಸ್ಸು 64. ವಕೀಲನ ಮಗ 1898ರಲ್ಲಿ ನೌಕಾ ಶಾಲೆ ಸೇರಿ, ಪಾಸಾಗಿ, ನೌಕಾಸೈನ್ಯ ಸೇರಿ 1912ರಲ್ಲೇ ಅದನ್ನು ಬಿಟ್ಟನು ಈ ಕಾರ್ಖಾನೆ ಸೇರಿದನು, ಅಲ್ಲಿ ಎಲ್ಲ ಕೆಲಸವೂ ಇವನ ಸೂಚನೆಗೆ ಒಳಪಟ್ಟಿದೆ. ಈಗ ಸಂಬಳ ವಾರ್ಷಿಕ 15ರಿಂದ 20000 ಪವನು. ವಾರದಲ್ಲಿ ಏಳುದಿನ, ದಿನಕ್ಕೆ ಒಂಬತ್ತು ತಾಸು ಕೆಲಸಮಾಡುತ್ತಾನೆ!

ಬ್ರಿಟಿಷ ಸರಕಾರವು ವಾರ್ಷಿಕವಾಗಿ ಮುನ್ನೂರು ಮಿಲ್ಲಿಯ ಪವನು ಈ ಯುದ್ಧಸನ್ನಾಹಗಳಿಗಾಗಿ ವ್ಯಯಿಸುತ್ತದೆ. ಹೀಗಿರುವಾಗ, ಈ ಕಂಪೆನಿಗಳಿಗೆ ಆದಾಯವು ಕಡಮೆಯಾದೀತೇ? ಯುದ್ಧಸನ್ನಾಹ ತಯಾರಿಸುವ ಕಾರ್ಖಾನೆಗಳ ನಫೆಯು ಎರಡೇ ವರ್ಷಗಳಲ್ಲಿ ಸೇಕಡಾ 102ರಿಂದ 156ರ ವರೆಗೆ ಏರಿದೆ; ಕಳೆದ ವರ್ಷದ ನಫೆ ಹಿಂದಣ ವರ್ಷಕ್ಕಿಂತ ಸೇಕಡಾ 50ರಿಂದ 800ರ ವರೆಗೂ ಏರಿದ್ದದೆ!

ಚಿತ್ರ-ವಿಚಿತ್ರ

ತಾಯಿ

ತಾಯಿಯೆನಿಸಿದರೆ ಸಾಲದು; ಮಕ್ಕಳನ್ನು ಹೆತ್ತುದಕ್ಕಾಗಿ ಸರಕಾರದಿಂದ ಬಹುಮಾನವು ಸಿಗುವಂತಾಗಬೇಕು. ಮೆಕ್ಸಿಕೋ ನಗರದ ಸಿನೋರಾ ಮರ್ಸೆಡಿಸ್ ಮೊರೇಲ್ಸ್ ಎಂಬಾಕೆಯು 68 ವರ್ಷಗಳ ಮುದುಕಿ ಎಲ್ಲರಿಗಿಂತಲೂ ಹೆಚ್ಚು ಮಂದಿ ಮಕ್ಕಳನ್ನು ಹೆತ್ತುದಕ್ಕಾಗಿ ಆಕೆಗೆ 200 ಪವನುಗಳ ಬಹುಮಾನವು ದೊರೆತಿರುವುದು. ಆಕೆಯು ಈ ತನಕ 29 ಮಂದಿಗೆ ಜನ್ಮವಿತ್ತಿರುವಳು ಮಕ್ಕಳು ಮೊಮ್ಮಕ್ಕಳು ಎಂಬುದಾಗಿ 150 ಮಂದಿಯಿಂದೊಡಗೂಡಿದ ಕುಟುಂಬ ಆಕೆಯದು!

ಪಳಗಿಸಿದ ಮೀನು

ನ್ಯೂಯೋರ್ಕಿನಲ್ಲಿ ಕಪ್ತಾನ್ ಹೆರೋಲ್ಡ್ ಥೋಮಸ್ ಎಂಬವರು ಒಂದು ಮೀನನ್ನು ಪಳಗಿಸಿರುವರು ಅದೊಂದು ಬಗೆಯ ಸಂಕೇತವನ್ನು ಮಾಡಿದೊಡನೆ ಅದು ನೀರಿನ ಪೃಷ್ಠ ಭಾಗಕ್ಕೆ ಬರುವುದು ಮಾತ್ರವಲ್ಲ ಅವರು ಅದಕ್ಕೆ ಎಷ್ಟರ ಮಟ್ಟಿಗೆ ಒಡ್ಡಿ ಕಲಿಸಿರುವರೆಂದರೆ—ನೀರಿನಿಂದ ಅದನ್ನು ಎಬ್ಬಿದೆಗೆದು ತೂಕ ಮಾಡಿ ಪುನಃ ನೀರಿನಲ್ಲಿ ಬಿಡುವರು ಮೀನು ಒಂದಿಷ್ಟು ಒದ್ದಾಡುವುದಿಲ್ಲ'

ವಿಚಿತ್ರ ಜನ್ಮ

ಅದೊಂದು ಬಗೆಯ ಕಪ್ಪೆಯದೆ ಗಂಡು ಕಪ್ಪೆಯು, ಹೆಣ್ಣು ಇಟ್ಟ ಮೊಟ್ಟೆಗಳನ್ನು ಹೆಕ್ಕಿ ಅದರ ಬೆನ್ನಿನ ಮೇಲೆ ಕ್ರಮವಾಗಿ ಇಟ್ಟು ಚರ್ಮದೊಳಗೆ ಒತ್ತಿ ಬಿಡುತ್ತದೆ ಉಂಗುರ ಕಟ್ಟಿದಂತೆ ಹೆಣ್ಣಿನ ಬೆನ್ನಿನಲ್ಲಿರುವ ಸಣ್ಣ ಸಣ್ಣ ತೂತುಗಳೊಳಗೆ ಅವು ಅಂದವಾಗಿ ಕೂತು ಕೊಳ್ಳುತ್ತವೆ. ಅಲ್ಲಿ ಮೊಟ್ಟೆಯೊಡೆದು ಮರಿಗಳು ಹುಟ್ಟುತ್ತವೆ.

ಕಿತ್ತಳೆ ಹಣ್ಣಿನ ಗಾತ್ರದ ತಲೆಬುರುಡೆಗಳು

ಮಧ್ಯ ಅಮೇರಿಕದಲ್ಲಿ ಮೂಲ್ನಿವಾಸಿಗಳ ಒಂದು ಪಂಗಡವಿದೆ.

ತಮ್ಮ ಶತ್ರುಗಳನ್ನು ಕೊಂದು ಅವರ ತಲೆಬುರುಡೆಗಳನ್ನು ಸ್ಮಾರಕಗಳಾಗಿ ಇಟ್ಟು ಕೊಳ್ಳುವುದು ಅವರದೊಂದು ಪದ್ಧತಿ ಪರಂತು ಅದೊಂದು ಬಗೆಯ ವಿಚಿತ್ರ ರೀತಿಯಲ್ಲಿ ಅವರು ಪ್ರತಿಯೊಂದು ತಲೆಬುರುಡೆಯನ್ನು ಒಂದು ಕಿತ್ತಳೆ ಹಣ್ಣಿನ ಗಾತ್ರಕ್ಕೆ ತಂದು ಇಳಿಸುವರು

ಮೊದಲು ಮೂಗಿನ ಹೊಳ್ಳೆಗಳೊಳಗೆ ಅವರು ಹೊಗೆಸೊಪ್ಪನ್ನು ತುರುಕಿಸುವರು ನಂತರ ತಲೆಯ ಚರ್ಮವನ್ನೆಲ್ಲ ಸುಲಿದು, ಬುರುಡೆಯು ಅನೇಕ ಗಂಟೆಗಳ ತನಕ ಬೇಯಿಸಲ್ಪಡುವುದು. ಬೊಜ್ಜನ್ನು ಉರಿಸಿ ಬಿಡುವುದಕ್ಕಾಗಿ, ಕಾದ ಕಲ್ಲುಗಳು ಆ ಬುರುಡೆಯಲ್ಲಿ ಹಾಕಲ್ಪಡುವುವು ಬಳಿಕ ಪ್ರತಿಸಿಕ್ಕವೂ ಬುರುಡೆಗೆ ಅಂಟಿಕೊಂಡಿದ್ದ ಮಾಂಸವು ಸ್ವಲ್ಪ ಸ್ವಲ್ಪವಾಗಿ ಕೆರೆಯಲ್ಪಡುವುದು. ಕೊನೆಗೆ ತಲೆಬುರುಡೆಯು ಒಂದು ಕಿತ್ತಳೆ ಹಣ್ಣಿನ ಗಾತ್ರದಷ್ಟಾಗುವುದು.

ಪಶುಗಳಿಗೆ ವಸನ

ಮೇರಿಲೇಂಡಿನಲ್ಲಿ ಅದೊಂದು ಬಗೆಯ ರಕ್ತ ಶೋಧಕ ಕ್ರಿಮಿಗಳ ಉಪಟಳವನ್ನು ತಾಳಲಾರದೆ ಅಲ್ಲಿಯ ರೈತರು ತಮ್ಮ ದನಕರುಗಳಿಗೆ ಉಡುಪನ್ನು ಮಾಡಿಸುತ್ತಿರುವರು

ಕಪ್ಪು ಮೊಟ್ಟೆ

ಇಲಿನೋಯಿಸ್ ಎಂಬಲ್ಲಿ ಒಂದು ಕಪ್ಪು ಬಾತುಕೋಳಿಯು ಒಂದು ಕಪ್ಪು ಮೊಟ್ಟೆಯನ್ನು ಇಟ್ಟಿರುವುದು. ಆ ಮೊಟ್ಟೆಯನ್ನು ನೋಡಲು ಬಂದವರಿಗೆ ತಲಾ ಒಂದಕ್ಕೆ ಹತ್ತು ಸೆಂಟ್ಸ್ ಪ್ರಕಾರ ವಸೂಲು ಮಾಡಿದ ಆ ಬಾತುಕೋಳಿಯ ಯಜಮಾನನು ಇಂದು ಒಬ್ಬ ಗಣನೀಯ ಸಾಹುಕಾರನಾಗಿರುವನು.

ಮಲೇರಿಯಾ ಕ್ರಿಮಿ

ಒಂದು ಕ್ಯೂಬಿಕ್ ಮಿಲಿಮಿಟರ್ ರಕ್ತ

ರಕ್ತಾಣುಗಳು ಇರುತ್ತವೆ ಇಂತಹ ಸೂಕ್ಷ್ಮ ರಕ್ತಾಣುಗಳಲ್ಲಿ ವಾಸವಾಗಿರುವಷ್ಟು ಸೂಕ್ಷ್ಮವಾಗಿರುತ್ತವೆ ಮಲೇರಿಯಾ ಕ್ರಿಮಿಗಳು

ಭೂಭಾರ

ವಿಜ್ಞಾನಿಗಳ ಗಣಿತದ ಪ್ರಕಾರ ಭೂಮಿಯ ಭಾರವು ಸಾಧಾರಣ 1,256,195,670,000,000,000,000,000 ಟನ್ನುಗಳು

ಆದರೂ ಬದುಕಿದನು!

ಕೋಳಿಯ 20 ಗೊಣಸುಗಳನ್ನೂ, ಎ ಬಾಚಣಿಗೆಗಳನ್ನೂ, ಹತ್ತು ಕುದುರೆಲಾಳಗಳನ್ನೂ, 54 ಬೇರೆ ಆಣಿಗಳನ್ನೂ, ಮುಳ್ಳಾಣಿಗಳನ್ನೂ, 8 ಇಸ್ಕ್ರೂಗಳನ್ನೂ ಗುಂಡಿಗಳನ್ನೂ 12 ಸೂಜಿಗಳನ್ನೂ, ಒ ಚೂರಿಯ ಹಿಡಿಯನ್ನೂ ನುಂಗಿಬಿಟ್ಟನು ತರ ಆತನು ಹೊಟ್ಟೆನೋವಾಗುವುದೆಂದು ರಲು, ಆತನ ಮೇಲೆ ಶಸ್ತ್ರಕ್ರಿಯೆ ಮಾ ಟ್ಟಿತು ಈಗಲೂ ಆತನು ಪೂರ್ಣ ಹೊಂದಿ ಬದುಕಿರುವನು.

ನಿಮ್ಮ ನರಗಳ ಪೋಷಣೆ
ಕಡೆ ಗಮನಿಸಿರಿ.
ಅಂದರೆ ಅವುಗಳು
ಶಕ್ತಿಯುಕ್ತವಾಗುವುವು.

ಬಹು ಬೇಗನೆ ಆಯಾಸ ಹೊಂದಿ ರಾತ್ರಿಹೊತ್ತಿನಲ್ಲಿ ನೀವು ಬಹಳ ಶ್ರಮ ಪಡುವಿರಾದರೆ ಅದು ನಿಮ್ಮ ನರಗಳಿಗೆ ಆರೋಗ್ಯಕೊಡುವ ಆಹಾರಗಳ ಪೂರೈಕೆ ಇಲ್ಲದಿದ್ದುದರಿಂದಾಗುತ್ತದೆ ಅದಕ್ಕೆ ಸರಿಯಾಗಿ ಬೇಕಾಗುವ ಪಕ್ವ ಪೋಷಣೆಯನ್ನು ಕೊಡಿರಿ ಅಂದರೆ ಅವು ನಿಮ್ಮನ್ನು ಎಂದಿಗೂ ಬಾಧಿಸಲಾರವು

ಇಂಥಾ ತೊಂದರೆಗಳಲ್ಲಿ ಓವಲ್ಟೀನ [illegible] ಬಳಲಿದ ನರಗಳನ್ನು ಪುನರ್ನವಸ್ಥೆಪಡಿಸುತ್ತದೆ ಯಾಕೆಂದರೆ ಓವಲ್ಟಿನ್ ಎಂಬುದು ನರಗಳ ಶಕ್ತಿಗೆ ಬೇಕಾದ ಆರೋಗ್ಯ ಶಕ್ತಿ ಚೈತನ್ಯಗಳನ್ನುಂಟು ಮಾಡುವ ಪೌಷ್ಟಿಕ ಆಹಾರಗಳಿಂದೊಡಗೂಡಿದ್ದು ಸಂಪೂರ್ಣವಾಗಿರುವ ಆಹಾರವಾಗಿರುತ್ತದೆ

ಓವಲ್ಟೀನು ಪ್ರಾಕೃತಿಕ ಆಹಾರವಾಗಿದ್ದು [illegible] ವನದ ನವ [illegible] ಮತ್ತು ವಿಟಮಿನ್ [illegible] ಶ್ರೇಷ್ಠ ವಸ್ತುಗಳಿಂದ [illegible] ರಾತ್ರಿಹೊತ್ತಿನಲ್ಲಿ ಕುಡಿವ ಒಂದು ಕಪ್ ಓವಲ್ಟಿನ್, ನರಗಳನ್ನು ಶಾಂತಗೊಳಿಸಿ ಸುಖವಾದ ನಿದ್ರೆಯನ್ನುಂಟು ಮಾಡುತ್ತದೆ [illegible]

'ಓವಲ್‌ಟಿನ್'
ಪೌಷ್ಟಿಕ ಆಹಾರ ಪಾನೀಯ.
OVALTINE
ಶಾಂತವಾಯ ಸುಖ ನಿದ್ರೆಯನ್ನುಂಟುಮಾಡುತ್ತದೆ
ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ
ಏಜಂಟರು —ಜೇಮ್ಸ್ ರೈಟ್ ಲಿಮಿಟೆಡ್ 85½ ಕ್ಲೈವ್ ಸ್ಟ್ರೀಟ್
ಕಲ್ಕತ್ತ, ಮತ್ತು ಮುಂಬಾಯಿ, ಕರಾಚಿ, ಮದ್ರಾಸುಗಳಲ್ಲಿ
OV/438

ರಕ್ಷ್ಯೈರ್ಮಹಾರ್ಹೈಸ್ತು ಕುರ್ವನ
ದೇವಾ । ನ ಭೇಜಿರೇ ಭೀಮ
ವಿಶೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ
ಗರಳಕವರಂಜಿದರೆ! ಸುಧೆಯನು।
ಮರೆತು ಕ್ಷುದ್ರರ
ತೆರದಿ ಕುಳಿತರೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೨೨-೭-೧೯೩೮ | ತಾರೀಕು 22-7-1938

ಲಾಥೀ ಬೀಸಾಟ!

ಆಟದ ಹುಡುಗರ ಓಟ—ಸಿಕ್ಕಾಬಟ್ಟೆ ದಾರಿಗರ ಚೆಲ್ಲಾಟ

ತ್ರಿವೇಂದ್ರಮಿನಲ್ಲಿ—ಪ್ರಾಣಸಂಕಟ

ಹೀಗೆಂದು ಸ್ಟೇಟ್ ಕಾಂಗ್ರೆಸಿನ ಮುಖಂಡರ ಹೇಳಿಕೆ. ಅನಾವಶ್ಯಕವಾಗಿ ಅನ್ಯಾಯವಾಗಿ ಅಕಾಲದಲ್ಲಿ ಪೊಲೀಸರು ಲಾಥಿ ಪ್ರಯೋಗ ಮಾಡಿ, ತಾ 16ರಲ್ಲಿ ಎಷ್ಟೋ ಜನಗಳನ್ನು ಹಿಂಸಿಸಿದರೆಂದು ಸೂಚನೆ ಹೆದ್ದಾರಿಗಳಲ್ಲಿ ಪೊಲೀಸ ಫೌಜು ಕುದುರೆ ಸವಾರರು, ಸಾಯೆನ್ಸ್ ಕೊಲೆಜಿನ ಅಂಗಳದೊಳಗೆ ಲಾಥೀ ಚಾರ್ಜು ರಿಜರ್ವ ಪೊಲೀಸರು ಕೊಲೆಜಿನ ಅಂಗಳದಲ್ಲಿ ಸಾಲು ಕಟ್ಟಿ ನಿಂತು ಮೊದಲೇ ಇದಕ್ಕೆಲ್ಲ ಸಿದ್ಧರಾಗಿದ್ದರಂತೆ ಶ್ರೀಮೂಲಂ ಸಭೆ ಸಂಜೆಗೆ 5½ ಗಂಟೆಗೆ ವಿಸರ್ಜಿತು ಸಭಾಸದರಿಗೂ ಯಾವ ಬಗೆಯ ತೊಂದರೆ ಮನಃ ಕ್ಷೋಭೆ ಬರದಂತೆ ಸಭಿಕರೂ ಹೊರಗಣ ಜನಗಳೂ ಸೌಭ್ರಾತೃಯುಕ್ತರಾಗಿ ವರ್ತಿಸಿ ಸುತ್ತುವರಿದರು ಆದರೆ ಸುತ್ತುತ್ತಿಲ್ಲ, ರಣಸನ್ನಾಹವಿದ್ದೇ ಇತ್ತು ಮುಂದೂ ಹಿಂದೂ ಪೊಲೀಸ್ ಫೌಜಿನ ಸಾಲು ಮಧ್ಯದಲ್ಲಿ ದಿವಾನರೂ ನೆಶನಲಿಸ್ಟ್ ಪಕ್ಷದವರೂ ಪೊಲೀಸ್ ಅಧಿಕಾರಿಗಳೂ ಕೆಲ ಜನ ಎದುರಿನ ದಾರಿಯ ಮೇಲೆ ನಡೆದು ಮರೆ ದರು

ವಿದ್ಯಾರ್ಥಿಗಳು ಕೊಲೆಜಿನ ಆವಾರದೊಳಗೇ ಇದ್ದರು ಆಟವಾಡುತ್ತಿದ್ದವರೇ ಬಹಳ. ಸವಾರರು ಅಲ್ಲಿಗೆ ನುಗ್ಗಿದರು ಕೊಲೆಜಿನ ಹೆಬ್ಬಾಗಿಲುಗಳನ್ನು ಪೇದೆಗಳು ತೆರೆದರು ಆಗಲೆ ವಿದ್ಯಾರ್ಥಿಗಳ ಇವರೆದುರಲ್ಲಿ ಸುಮ್ಮನೆ ಕೂತರು. ಕಮಾಂಡಿಂಗ್ ಆಫಿಸರರು ಆಗಲೇ ಮತ್ತೊಂದು ಬಾಗಿಲಿಂದ ಇದಿರು ಬಾರದಿದ್ದಲ್ಲಿ ಈ ವಿದ್ಯಾರ್ಥಿಗಳ ಹಾಸಿಯೇ ಧ್ವಂಸವೇ ಆಗುತ್ತಿತ್ತು ಅವರು ಸವಾರರನ್ನು ಪೊಲೀಸರನ್ನೂ ಹೊರಕಳಿಸಿದರು

ಕೊಲೆಜಿನ ಎದುರ ಭಾಗದಲ್ಲೇ ಈ ಆಫಿಸರರು ವಿದ್ಯಾರ್ಥಿಯರೊಡನೆ ಸಂಭಾಷಿಸುತ್ತಿದ್ದರು ಹಿಂದೆ ವಿದ್ಯಾರ್ಥಿಗಳಲ್ಲಿ ಈಗ ಕೆಲ ಬೀದೀ ಹುಡುಗರು ನಿಂತು ಪೊಲೀಸರ ಮೇಲೆ ಕಲ್ಲೆಸೆದರು. ಆಗಲೆ ರಿಜರ್ವನವರು ಒಳನುಗ್ಗಿ, ಆಫಿಸರರು ಬೇಡವೆಂದರೂ ಕಿವಿಗೆ ತರದೆ, ಸಿಕ್ಕಾಬಟ್ಟೆ ಈ ವಿದ್ಯಾರ್ಥಿಗಳನ್ನೆಲ್ಲ ಬಡೆದರು. ಆಫಿಸರರು ಹಿಂದಿರುಗುವಾಗ, ಅವರ ಜತೆಯಲ್ಲಿ ವಿದ್ಯಾರ್ಥಿಗಳೂ ನಡೆದರು, ಆಗಲೆ ಪೊಲೀಸರು ಪುನಃ ಅವರ ಮೇಲೆ ಲಾಥಿ ಪ್ರಹಾರ ಮಾಡಿದರು. ಅವರೆತ್ತ ಓಡಿದರೂ, ಅವರನ್ನು ಹಿಂಬಾಲಿಸಿ ಬಡೆದರು. ಕೊಲೆಜಿನೊಳಗೂ ನುಗ್ಗಿ ಹೊಡೆದುದುಂಟು. ಆಡುತ್ತಿದ್ದವರು ತಮ್ಮ ಶಾಲಾ ಕೊಣೆಗಳೊಗೆ ನುಗ್ಗಿದ್ದರೂ ಅವರನ್ನೂ ಬಡೆದಾಗಿದೆ, ಹೊರಗೆ ಹೋಗುತ್ತಿದ್ದವರನ್ನೂ ಸುತ್ತುಗಟ್ಟಿ ಚೆನ್ನಾಗಿ ಪ್ರಹರಿಸಿದರು. ಅಲ್ಲೇ ಇಟ್ಟಿದ್ದ ಕೆಲವು ಸೈ...

ಲಂಡನಿನಲ್ಲಿ—ಫೆಡರೇಶನ್ ವಿಚಾರ

ವೈಸ್ರಾಯರ ಆಗಮನ

ತಾ 16ರಲ್ಲಿ, ಲಿಂಡ್ಲಿತ್ ಗೋ ರವರು ಲಂಡನಿನ ಇಂಡಿಯಾ ಆಫಿಸಿನಲ್ಲಿ ಅಪೂರ್ವಸ್ವಾಗತ ಪಡೆದರು. ಇಂಡಿಯಾ ವಿಷಯಕವಾದ ಎಲ್ಲ ಸಮಸ್ಯೆಗಳನ್ನು ಈಗ ತರ್ಕಿಸುವುದಾದರೂ, ಅವರು ಮುಖ್ಯವಾಗಿ ಲಂಡನಿಗೆ ವಿಶ್ರಾಂತಿಗಾಗಿ ಮಾತ್ರ ತೆರಳಿದವರೆಂದು ತಿಳಿದುಬರುತ್ತದೆ

ಹೀಗಾಗಿ ಇನ್ನು ಕೆಲದಿನಗಳಲ್ಲೇ ಫೆಡರೇಶನ್ ವಿಷಯವಾಗಿ ನಿಜಸ್ಥಿತಿಯು ಹೇಳಿಕೆ ಪ್ರಕಾರವಾದೀತೆಂದು ಯಾರೂ ಸಾರುವುದು ನಂಬಿಕೆಗೆ ಅರ್ಹವಾಗಿರುವುದಿಲ್ಲ

ವೈಸ್ರಾಯರು ಈ ತಿಂಗಳ ಅಂತ್ಯಕ್ಕೆ ಲಂಡನಿನಿಂದ ಸ್ಕೊಟ್ಲೆಂಡಿಗೆ ರಜಾ ಅವಕಾಶ ಕಳೆಯಲು ತೆರಳುವರು

ಆದರೆ, ಡೈಲಿಹೆರಾಲ್ಡ್ ಪತ್ರಿಕೆಯು—"ಇಂಡಿಯಾಕ್ಕೆ ದೊರೆಯಲಿರುವ ಸ್ವರಾಜ್ಯವನ್ನು ಕುರಿತಾಗಿ ಹೊಸ ವಿಚಾರಗಳು ಸದ್ಯದಲ್ಲೇ ಪ್ರಕಟವಾಗುವವೆಂದು ನಿರೀಕ್ಷಿಸಬಹುದಾಗಿದೆ ಕಾಂಗ್ರೆಸಿನವರ ಎತ್ತುವ ಆಕ್ಷೇಪಗಳಿಗೆಲ್ಲ ಯಥಾವತ್ತಾದ ಸಮಾಧಾನ ಕೊಡುವುದೇ ಈ ಪ್ರಕಟಣೆಯ ಉದ್ದೇಶವಾದೀತು ಎಂದು ಬರೆದುದು ಈ ಬಗೆಯ ಊಹನೆಗೆ ಕಾರಣವಾಯಿತು. ಮೇಲಧಿಕಾರಿಗಳಿಗೆ ರೆಕ್ಕಟುಗಳನ್ನು ಎಳೆದು ತಂದವರು...

ಅವರು ಈಗ ಆಸ್ಪತ್ರೆಯಲ್ಲಿರುವರು ಹನ್ನೆರಡು ವಿದ್ಯಾರ್ಥಿಗಳು ಏಟು ಪಡೆದವರೂ ಸಹ ಈಗ ಸ್ಟೇಶನಿನಲ್ಲಿರುವರು ದೊಡ್ಡ ಆಫಿಸರರು, ಹೆನ್ನನರರ ಮಕ್ಕಳೂ ಇವರೊಳಗಿದ್ದಾರೆ ಮೂವರು ಸ್ಟೇಶನಿಗೆ ಹೋಗುವಾಗಲೂ ಪೆನ್ಸಿಸ್ ರೆಕ್ಕಟ್ ಸಮೇತ ತೆರಳಿದವರ ಸದಸ್ಯತಿಲಕ ವೇಲು ಪಿಳ್ಳೆಯವರ ಮಗ ವಕೀಲ ಉಳ್ಳೂರ ಪರಮೇಶ್ವರೈಯ್ಯರ ಮಗ, ಮೊದಲಾದವರು ಕೈದು ಮಾಡಲ್ಪಟ್ಟರೂ, ಜಾಮೀನಿನ ಮೇಲೆ ಹೊರ ಬಂದಿದ್ದಾರೆ

ಸಾಯಂ 7½ ಗಂಟೆಯ ವರೆಗೆ ಅತ್ತಿತ ಹೆದ್ದಾರಿಗಳಲ್ಲಿದ್ದವರಿಗೂ ಲಾಥಿ ಬಹುಮಾನ ದೊರೆತಿದೆ ಪೊಲೀಸರ ನಡೆವಳಿಕೆಯ ಮೇಲೆ ಅಲ್ಲಿದ್ದ ಅಧಿಕಾರಿಗಳು ನಿಗಾಯಿಟ್ಟು, ಅವರು ನ್ಯಾಯಸಮ್ಮತವಾದ ರೀತಿಯಲ್ಲಿ ವರ್ತಿಸುವಂತೆ ಮಾಡಿದ್ದರೆ ಇದೊಂದು ಆಗುತ್ತಿರಲಿಲ್ಲ. ಅನಗತ್ಯವಾಗಿರುವ ಈ ಲಾಥಿ ಚಾರ್ಜು, ನ್ಯಾಯಸಮ್ಮತವಲ್ಲವೆಂದು ನಾವು ದೃಢೀಕರಿಸುತ್ತೇವೆ. ಕೊಲೆಜಿನೊಳಗೇ ಆಫಿಸರರೊಡನೆ ಮಾತಾಡುತ್ತಿದ್ದಾಗ ಲಾಥೀ ಚಾರ್ಜು! ಸಂಭಾಷಿಸುತ್ತ ಗೇಟಿನ ವರೆಗೆ ಆಫಿಸರರೊಡನೆ ಬಂದ ಹುಡುಗರಿಗೂ ಲಾಥೀ ಪೆಟ್ಟು! ಇದೆಲ್ಲಿಯದು?

ತ್ರಿವಾಂಕೂರಿನಲ್ಲಿ ಅಸ್ಪೃಶ್ಯರಿಗೆ ದೇವಳ ಪ್ರವೇಶವಿದೆ; ಕೀರ್ತಿ. ಮದ್ಯಪಾನನಿರೋಧ ...

ಸರಕಾರದ ಪ್ರಕಟನೆ

ಎಸೆಂಬ್ಲಿ ಭವನದ ಎದುರಲ್ಲಿ ಕೂಗುಗಳು

ಸಾಯೆನ್ಸ್ ಕೊಲೆಜಿನ ವಿದ್ಯಾರ್ಥಿಗಳ ಮೇಲೆ ಆಕ್ಷೇಪ. ಮೂರು ದಿನಗಳ ಅಧಿವೇಶನ ಕಾಲದಲ್ಲೆಲ್ಲ ಗಡಿಬಿಡಿ.

ಹಿಂದಣ ಮೂರು ದಿನಗಳ ಎಸೆಂಬ್ಲಿ ಅಧಿವೇಶನ ಕಾಲದಲ್ಲಿ ನಡೆದ ಹೊರಗಣದವರ ಗಡಿಬಿಡಿಗಳನ್ನು ಚರ್ಚಿಸಿ ಮುಗಿಸಿದ ಬಳಿಕ, ತಾ 15ರಲ್ಲಾದ ಲಾಥೀ ಚಾರ್ಜು ಮೊದಲಾದುವನ್ನು ಕುರಿತ ಪ್ರಕಟನೆ ಹೀಗಿದೆ

ಎಸೆಂಬ್ಲಿಗೆ ಹೋಗುವ ಮಾರ್ಗವೆಲ್ಲ ಶಾಂತವಾಗಿತ್ತು ಎಸೆಂಬ್ಲಿ ಮುಗಿದ ಬಳಿಕ ವಿದ್ಯಾರ್ಥಿಗಳೇ ಮಾತ್ರವಲ್ಲದೆ ಬರೇ ಹುಡುಗರೂ ಪುಂಟರೂ ಸಾಯೆನ್ಸ್ ಕೊಲೆಜಿನ ಹತ್ತಿಲ ಬಳಿ ನೆರೆದರು ಮಹಾರಾಜರ ಅಂಗರಕ್ಷಕರಲ್ಲಿ ಕೆಲವು ಸವಾರರು ದಾರಿಯಲ್ಲಿ ಗಸ್ತು ತಿರುಗಿದರು ... ಕೊಲೆಜು ಅಂಗಳಕ್ಕೆ ಹೋದರು, ಅವರನ್ನು ಹೊರ ಕಳಿಸಲಾಯಿತು ಅವರ ಹಿಂದೆಯೇ ಕೂಗುತ್ತ ಒಂದು ಹಿಂಡು ಬಂತು, ಇವರೆಲ್ಲ ಕಲ್ಲು ಬಿಸಾಡಿದರು. ಸವಾರರಿಗೂ ಕುದುರೆಗಳಿಗೂ ಈ ಕಲ್ಲುಗಳು ತಗಲಿದುವು

ಕಮಾಂಡಿಂಗ್ ಆಫಿಸರರು ಅಲ್ಲಿದ್ದ ವಿದ್ಯಾರ್ಥಿಗಳೊಡನೆ ಮಾತಾಡಲು ಹೋದಾಗ ಅಲ್ಲೇನೂ ವಿಶೇಷವಾಗಿಲ್ಲ ಒ ವಿಷ್ಣು ಕೆಸರನ್ನು ಅವರ ಮೇಲೆ ಯಾರೋ ಚೆಲ್ಲಿದರು. ಆದರೆ ಸಂಭಾಷಣೆ ನಡೆವಾಗ ಬೆಳೆದವರೂ ವಿದ್ಯಾರ್ಥಿಗಳೂ ಇತರರೂ ಮೊದಲೇ ಕಲ್ಲುಗಳನ್ನು ಕೂಡಿಸಿಟ್ಟು ಪೊಲೀಸರ ಮೇಲೆ ಬಿಸಾಡತೊಡಗಿದರು. ಜಿಲ್ಲಾ ಮೆಜಿಸ್ಟ್ರೇಟರು, ಸುಪರಿಂಟೆಂಡೆಂಟರು ಮೊದಲಾದವರನ್ನು ಕಲ್ಲು ಬಡಿದುವು ಈಗ ಹಿಂಡು ಬೆಳೆಯಿತು, ಕಲ್ಲುಗಳೂ ಹೆಚ್ಚಾದುವು ಮೆಜಿಸ್ಟ್ರೇಟರು ಆಗಲೆ ಲಾಥಿ ಚಾರ್ಜು ಮಾಡಲು ಅಪ್ಪಣೆ ಕೊಟ್ಟರು ಜನರನ್ನು ಚದರಿಸಲಾಯಿತು

ತಿಳಿದಿರುವ ಮಟ್ಟಿಗೆ, ಆರು ಮಂದಿಗೆ ಪೆಟ್ಟಾಗಿದೆ ಎಲ್ಲ ಗಾಯಗಳೂ ಸಾಮಾನ್ಯ ಆರೂ ಮಂದಿಯನ್ನು ಆಸ್ಪತ್ರೆಗೆ ಒಯ್ಯಲಾಗಿದೆ ಒಬ್ಬನನ್ನು ಕೂಡಲೆ ಚಿಕಿತ್ಸೆ ನೋಡಿ ಮನೆಗೆ ಕಳಿಸಿದರು ಉಳಿದೈದು ಮಂದಿ, ಮನೆಗೆ ಬಣ್ಣ ಬಳಿಯುವವರಿಬ್ಬರು, ಒಬ್ಬನು ಕೂಲಿ, ಒಬ್ಬನು 14 ವರ್ಷದ ಹುಡುಗ; ಒಬ್ಬನೇ ಒಬ್ಬನು ಮಾತ್ರ ಸಾಯೆನ್ಸ್ ಕೊಲೆಜಿನವನು.

ಇವರ ಮುಖಂಡರೆಂದು ತೋರಿದ ಕೆಲವರನ್ನು ಸ್ಟೇಶನಿಗೆ ಒಯ್ದು, ಇವರ ಮೇಲೆ ವಿಚಾರಣೆ ಮಾಡಲಾದೀತೆಂದು ತನಿಖೆಯಾಗು...

ಕಾಂಗ್ರೆಸಿನ ಆಕ್ಷೇಪಗಳೆಲ್ಲ ತಿಳಿದೇ ಇವೆ. ಮುಂದರಿಯುವುದಕ್ಕೆ ಅಗತ್ಯವಾದ ಸಲಹೆಗಳೂ ಸಧ್ಯದಲ್ಲೇ ಇವರಿಂದ ಹೊರಡುವುವು. ವೈಸ್ರಾಯರು ಹೀಗಾಗುವುದು ಅಗತ್ಯವೆಂದೂ ಉತ್ತಮವೆಂದೂ ಸೂಚಿಸಿದ್ದಾರೆ ಎಂದು ಅಂಶ ...

ಫೆಡರೇಶನಿನ ಕುರಿತು ಪುನರಾಲೋಚನೆಯಾಗುವುದೆ?

ಇಂದಿನ ಭರತಖಂಡವು ಮೊಂಟ್ ಫೊರ್ಡ್ ಸುಧಾರಣಾ ದಿನಗಳ ಹಿಂದೂದೇಶವಲ್ಲ, ಅಲ್ಲದೆ, ಕಳೆದ ವರ್ಷದ ಹಿಂದೂದೇಶವು ಅದಲ್ಲ. ಹಿಂದೀಯ ಪ್ರಜಾಭಿಪ್ರಾಯವು ಬದಲಾಗಿ ಬಿಟ್ಟಿದೆ. ಆದುದರಿಂದ ಫೆಡರೇಶನ್ ಸಮಸ್ಯೆಯ ಕುರಿತು ಪುನರಾಲೋಚನೆಯಾಗದಿದ್ದರೆ, ಅದು ಬ್ರಿಟನಿನ ಒಂದು ಮಹಾಪಾತಕ ವಾಗುವುದು.

ಇಂಗ್ಲಾಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಫೆಡರೇಶನ್ ಸಮಸ್ಯೆಯ ಕುರಿತು ಪುನರಾಲೋಚಿಸುವುದು ಉತ್ತಮವೆಂದು ತನ್ನ ಒಂದು ಅಗ್ರ ಲೇಖದಲ್ಲಿ ಪ್ರಕಾಶಿತ ಮಾಡಿರುತ್ತದೆ ವಿಚಾರವಂತರಾಗಿಯೂ ಚಾಣಾಕ್ಷರಾಗಿ ವರ್ತಿಸಲು ಬ್ರಿಟನಿಗೆ ಇದೆ ತಕ್ಕ ಸಮಯ. "ಈಗ ಕೊಟ್ಟುದನ್ನು ಸ್ವೀಕರಿಸಿರಿ,—ಮುಂದಕ್ಕೆ ಏನು ಮಾಡಬಹುದೆಂದು ನಾವು ನೋಡುತ್ತೇವೆ" ಎಂಬ ಹಳೆ ಮಾತುಗಳಿಂದ ಏನೂ ಪ್ರಯೋಜನವಾಗುವಂತಿಲ್ಲ ನೂತನ ರಾಜ್ಯಾಂಗ ಶಾಸನದ ಫೆಡರೇಶನ್ ಪ್ರಕರಣವು ಕಾಂಗ್ರೆಸ್ಸಿನಿಂದ ತ್ಯಜಿಸಲ್ಪಟ್ಟಿರುತ್ತದೆ ಮುಸ್ಲಿಮ್ ಲೀಗೂ ಅದರ ಕಡು ವಿರೋಧಿಯಾಗಿರುತ್ತದೆ ಆದುದರಿಂದ ಎಲ್ಲರಿಗೂ ಸಮಾಧಾನಕರವೆನಿಸುವ ತೆರದಲ್ಲಿ ಒಂದು ಇತ್ಯರ್ಥ ಹೊಂದುವುದ ಉತ್ತಮ ತೆರದ ಮುತ್ಸದ್ದಿತನವೆನಿಸುವುದು ಲಾರ್ಡ್ ಜೆಟ್ಲೆಂಡರು, ಲಂಡನಿನಲ್ಲಿ ನಡೆದ ಮುಂಬಯಿ ಭೋಜನದಲ್ಲಾಡಿದ ವಚನಗಳಿಂದ ಹಿಂದೂದೇಶದಲ್ಲೆಲ್ಲಾ ಕುಂಬಳ ಅಸಮಾಧಾನತೆಯು ಉಂಟಾಗಿರುತ್ತದೆ ಬ್ರಿಟಿಷರು ಈ ಫೆಡರಲ್ ಪ್ರಕರಣವನ್ನು ಒತ್ತಾಯಪೂರ್ವಕ ನಮ್ಮ ಮೇಲೆ ಹೊರಿಸುವ ಪರಿಣಾಮಗಳಿಂದ ಮತ್ತೆ ವ್ಯಥೆ ಪಡಬೇಕಾಗಿ ಬರುವುದು. ಅದರಿಂದ ಸಂಪೂರ್ಣ ರಾಜ್ಯ ಶಾಸನವೆ ಧ್ವಂಸವಾಗಿ ಹೋಗಬಹುದು

ಈಗ ವೈಸ್ರಾಯರ ಇಂಗ್ಲೆಂಡಿನಲ್ಲಿರುವುದರಿಂದ ಬ್ರಿಟಿಷ ಮಂತ್ರಿಮಂಡಳವು ಈ ಕುರಿತು ಆಲೋಚಿಸುವುದು ಉತ್ತಮ. ಪಂಡಿತ ನೆಹರೂಗಳು ಕೂಡ ಇಂಗ್ಲಾಂಡಿನಲ್ಲಿರುವುದರಿಂದ ಇಂಡಿಯಾ ಸೆಕ್ರೆಟರಿಗಳಾದ ಲೋಡ್ ಜೆಟ್ಲೆಂಡರು, ಅವರಿಂದ ಕಾಂಗ್ರೆಸ್ ಅಭಿಪ್ರಾಯಗಳನ್ನು ತಿಳಿಯುವುದು ಉತ್ತಮ. ಶ್ರೀ ನೆಹರೂಗಳವರು ಹಿಂದೂದೇಶದ ಪ್ರತಿನಿಧಿಗಳಾಗಿ ಮಾತನಾಡಲು ಅರ್ಹರು ಲೋರ್ಡ್ ಲೂಲಿತ್ ಗೋ, ಲೋರ್ಡ್ ಜೆಟ್ಲೆಂಡ್, ಪಂಡಿತ ಜವಾಹರಲಾಲ ನೆಹರು ಈ ಮೂವರು ಮುತ್ಸದ್ದಿಗಳು ವಿನಿಮಯ ಮಾತುಕತೆಗಳಿಂದ, ಈ ಸಮಸ್ಯೆಯ ಸುಧಾರಣೆಯಾಗುವುದು ಉತ್ತಮ.

...ತ್ತದೆ ವಿಚಾರಣೆಯಲ್ಲಿ ತಿಳಿಯ ಬೇಕಾಗಿರುವುದೆಲ್ಲ ಹೊರ ಬೀಳ ಬಹುದೆಂದೂ ನಂಬಲಾಗಿದೆ.

ವಿದ್ಯಾರ್ಥಿಗಳು ಇಂತಹ ಕೂಟಗಳಲ್ಲಿ ಸೇರದಂತೆ ಸರ್ವರೂ ಸರ್ವಪ್ರಕಾರದಲ್ಲಿ ಜಾಗ್ರತೆಯಿಡುವುದುತ್ತಮ ವಿಚಾರಣೆಯಾದಾಗ, ... ಎಲ್ಲ ಸತ್ಯ ಸ್ಥಿತಿಯು ತಿಳಿಯ ಬರುವದು.

ಸ್ವದೇಶಾಭಿಮಾನಿ

ವಿಲ್ಲಿಂಗಡನ್ ಬಹದ್ದೂರರ- ಫೆಡರೇಶನ್ಗೆ ವಿರುದ್ಧವಾಗುವುದೇ ಇವರಿಗೊಂದು ಭಾರತೀಯರ ಸ್ಮಾರಕ.

ಲಂಡನಿನಲ್ಲಿ ಇನ್ನೂ ಇವರು ಭಾಷಣ ಮಾಡುತ್ತ, ಫೆಡರೇಶನನ್ನು ಭಾರತೀಯರು ಕೌನ್ಸಿಲುಗಳನ್ನು ಅಂಗೀಕರಿಸಿದಂತೆ ಅಂಗೀಕರಿ ಸುವರಾಗಿ ತಿಳಿಸಿರುವರು. ಹದಿನೈದು ವರ್ಷ ಕ್ಕೂ ಮಿಕ್ಕಿ ಇಂಡಿಯಾದಲ್ಲಿ ಇದ್ದುದಕ್ಕೆ ಇವರ ಮಾತಿಗೆ ಬೆಲೆಯುದೆ. ಇವರು ಇಲ್ಲಿಂದ ಪಡೆದ ಕಂಟಳ ಬಹುಮಾನಾದಿಗಳ ಬೆಲೆಗಿಂತ ಇವರಿ ಗೀಗ ಬೆಲೆ ಹೆಚ್ಚು ಕೊಡುವ ಕನ್‌ಸರ್ವೇಟಿವ ರುವರು. ಇದೇಕೆ? ಪಂಡಿತ ಜವಾಹರ ಲಾಲರ ಮಾತಿನಿಂದ ಕನ್‌ಸರ್‌ವೇಟಿವರ ಬಹು ಕಾಲ್ಕ ಕನಸುಗಳು ಮಾಯವಾಗತೊಡಗಿವೆ, ಬ್ರಿಟಿಷರಲ್ಲಿ ನಾನಾ ಮನೋಪರಾವರ್ತನೆಗ ಳಿಗೆ ಪ್ರಾರಂಭವಾಗಿದೆ ಅದನ್ನು ತಡೆಯುವ ದಾಗೆ ಇವರೀ ಬೇಕು. "ನೆಹರುರವರ ಮಾ ತನ್ನು ನಂಬುವ, ಅವರ ಅಭಿಪ್ರಾಯಗಳಂತೆ ಅಭಿಪ್ರಾಯವುಳ್ಳವರು ಇಂಡಿಯಾದಲ್ಲಿ ನೇಕ ಡಾ 10 ಮಂದಿ ಮಾತ್ರ, ಉಳಿದ 90ರ ಅಭಿ ಪ್ರಾಯವೇ ಬೇರೆ!" ಏಕೆ? "ಇನ್ನೆಷ್ಟೋ ವರ್ಷ ಗಳ ವರೆಗೆ ಇಂಡಿಯಕ್ಕೆ ಬ್ರಿಟಿಷರ ಕುಂಬಿ ಸಹಾಯ ಸಹಾನುಭೂತಿಗಳು ಅತ್ಯಾವಶ್ಯಕ, ಆದುದರಿಂದ ಇಂಡಿಯವು ಸಾಮ್ರಾಜ್ಯದಲ್ಲೇ ಸಹಾಯಕವೂ ಪ್ರಯೋಜಕವೂ ಆಗಿ ಎಷ್ಟೋ ಕಾಲ ಇರಬೇಕಾಗುವುದು"

ಭಾರತವರ್ಷದ ಪ್ರತಿನಿಧಿಗಳೆಂದರೆ ನಮ್ಮ ಸ್ವಾಳೆ ಬರುವ ಕೆಲವು ಬ್ರಿಟಿಷರು ಎಂದೇ ಬ್ರಿಟಿ ಷರು ಅಂದಿನಿಂದಲೂ ನಂಬಿಕೊಂಡು ಬಂದಿ ರುವ ವಿಚಾರಭ್ರಮೆಯೇ ಆಗಿದೆ ಇದರೊಡನೆ ಕಾಂಗ್ರೆಸು ದೇಶದ ಅಭಿಪ್ರಾಯ ಹೇಳುವುದಾ ಗಿಲ್ಲವೆಂದೂ ಮತ್ತೊಂದು ಭ್ರಾಂತಿಯೂ ಇವ ರಲ್ಲಿ ಹರಡಿದೆಯೇ ಇದೆ ಎಷ್ಟೋ ಸಲ್ಲಾ ಈ ಸಾಯಾ ವಿಶ್ವಾಸವು ಸಲ್ಲದೆಂದು ಬ್ರಿಟಿಷರಿಗೆ ತೋರಿಸಿದರೂ, ನಾಲ್ಕು ದಿನ ಇಲ್ಲಿನ ಉತ್ಪನ್ನ ದಿಂದ ಬ್ರಿಟಿಷ ಸ್ನೋಕರರೂ, ಈ ಮಿಥ್ಯೆಯನ್ನು ಆಧರಿಸಿಯೇ ಪ್ರಚಾರಗೊಳಿಸುತಿದ್ದಾರೆ

ಆಕ್ಟು ಬರೇ ಒಂದು ಉರುಳು ಭಾರ ತದ ಕೊರಳಿಗೆ—ಎಂಬುದನ್ನು ಭಾರತವಾಸಿ ಗಳು ತಿಳಿದೇ ಇರುವರು ಅದಲ್ಲವೆಂದು ನಾನಾ ಅವತಾರಗಳ ಮೂಲಕ ಸಾರುವ ಭಾ ರವು ಕನ್ಸರ್ವೇಟಿವರ ಮೇಲೆ ಬಿದ್ದಿದೆ ನಾವೇ ಎಲ್ಲವರೆಂಬ ಸ್ವಾಭಿಮಾನವು ಅವರಲ್ಲಿ ಬಹಳ ದೊಡ್ಡದು ಮಿಥ್ಯಾ ಪ್ರಪಂಚ ನಂಬುವ ಎಲ್ಲ ರಲ್ಲೂ ಈ ಅಹಂಭಾವ ಸಲ್ಲುವುದು ಸ್ವಾಭಾ ವಿಕ, ಪ್ರಕೃತಿಯ ಲಕ್ಷಣವೇ ಹಾಗೆ!

ಭಾರತವರ್ಷದ ನರನಾಡಿಗಳನ್ನು ನೋಡಿ, ದೇಹಲಕ್ಷಣ ಹೇಳಬಲ್ಲವರು ನೆಹರು ರವರಲ್ಲ, ತಾವೇ ಎಂದು ವಿಲ್ಲಿಂಗಡನರು ಭಾವಿಸಿರುವರು. ಅವರು ಹಾಗೆ ಭಾವಿಸಿ ದರೂ, ಅವರ ಭಾವನೆಯಲ್ಲಿ ಬ್ರಿಟಿಷ್ ಪಾರ್ಲಿ ಮೆಂಟು ವಿಶ್ವಾಸವನ್ನಿಟ್ಟರೂ, ಯಾವ ಪ್ರಯೋ ಜನವೂ ಇಲ್ಲ. ಏಕೆ? ಈ ಆಕ್ಟಿನ ಗಂಧಗಾಳಿ ಯನ್ನು ಸಹ ಮೂಸಿನೋಡುವ ಒಂದೇ ಒಂದು ರಾಜಕೀಯ ಪಕ್ಷವೂ ಈ ದೇಶದಲ್ಲಿಲ್ಲ. ಕರಿ ಮರವನ್ನು ನೆಟ್ಟು ಕಸಿಮಾವನ್ನು ಬೆಳಸಿ ತಿನ್ನುವ ರಿಂದ್ದೇವೆ ಎಂದು ಬ್ರಿಟಿಷರು ನಂಬುವರಾದರೆ, ತಿನ್ನುವ ದಿನ ಬರುವಾಗ ನಿರಾಶರಾಗುವರು ಈಗ, ಕರಿಮರವದು ಎಂದು ನೆಹರುಗಳು ತಿಳಿ ಸಿದ್ದನ್ನು ಅವರು ಪಶ್ಚಾತ್ತಾಪದಿಂದ ನೆನೆಯ ಬೇಕು. ವಿಲ್ಲಿಂಗಡನ್ನರೇ ಮಾತ್ರ ಆ ಕಸಿ ಮಾವನ್ನು' ತಿನ್ನಲೆಂದೂ, ಅವರು ನಿರ್ದೇಶಿಸ ಬರು.

ಆದರೂ ಹೀಗೇಕೆ ಅವರೆನ್ನುವರು? ಬೈಕರ್ನ್ನ ಮರೆತು, ಕಾಂಗ್ರೆಸ್ ಮಂತ್ರಿಗ ಳಾಗಿ ಆಕ್ಟನ್ನು ಕೈಗೊಂಡು ಅದನ್ನು ಮುರಿಯು ವೆವೆಂದು ಯಾವ ದಿನ ಕಾಂಗ್ರೆಸಿನ ಮುಂದಾ ಳುಗಳು ಅಧಿಕಾರ ವಹಿಸಿರುವರೋ ಅಂದಿ ನಿಂದ ಆಕ್ಟಿನಲ್ಲಿ ಇವರಿಗೆ ಅಂತರಂಗಿಕ ವಿಶ್ವಾಸ ವಿದೆಯೆಂದೇ ವಿಲ್ಲಿಂಗಡನ್ ವರ್ಗದವರು ನಂಬಲು ಅವಕಾಶ ದೊರೆತಿದೆ ಕೆಲವು ಮುಂದಾಳುಗಳು ಹೀಗೆ ಒಪ್ಪಿರುವಂತೆ ತೋರಿ ಸಿಕೊಂಡುದೂ ಉಂಟು ಹೀಗಿರುವಾಗ, ಕಾಂಗ್ರೆಸು ಫೆಡರೇಶನಿಗೆ ವಿರುದ್ಧವಾಗಿದೆಂಬು ದನ್ನು ಯಾರು ನಂಬವರು? ಸುಭಾಷಚಂ ದ್ರರ ಹೇಳಿಕೆಯಿಂದಲಾದರೂ ಕಾಂಗ್ರೆಸ್ ತನ್ನ ಮೂಲಧ್ಯೇಯವನ್ನು ನೆನಪಿಗೆ ತರುವಂತಾ ಗಲಿ. ವಿಲ್ಲಿಂಗಡನರ ಡಂಗುರದಿಂದೇನು?

ಆನೆಮುಂಗಲೆಳಸಿರುವ ಹಾವು!

ಜಪಾನಿನ ಯುದ್ಧೋದ್ಯೋಗವನ್ನು ಕುರಿತಾಗಿ

ಕಾಂಗ್ರೆಸ್ ಕಮಿಟಿಯ ಮೆಂಬರ ರೊಬ್ಬರಿಗೆ ಪತ್ರ

ಹೊಂಗ್‌ಕೊಂಗ್‌ನಲ್ಲಿ ಪ್ರಕಟವಾಗುವ ಫೆಸಿಫಿಕ್ ಡಾಯ್ಜೆಸ್ಟ್ ಪತ್ರಿಕಾ ಸಂಪಾದಕರು ಶ್ರೀಯುತ ಲೋಹಿಯಾರವರಿಗೆ ಒಂದು ಪತ್ರ ಬರಿ ದುದರಲ್ಲಿ ಈ ಉಪಮೆಯನ್ನು ಉಪಯೋಗಿಸಿ ರುವರು

"ಲುಕೋಚಿಯದಲ್ಲಿ ಚೀನೀಜನಾಂಗ ವೆಲ್ಲ ಒಂದೇ ವ್ಯಕ್ತಿಯಾಗಿದ್ದು ಜಪಾನನ್ನೆದುರಿ ಸಿದಂದಿನಿಂದ, ಕಾಂಗ್ರೆಸು ಭಾರತವಾಸಿಯರ ಸಹಾನುಭೂತಿಯನ್ನು ಚೀನೀಯರಿಗೆ ತಿಳಿಯ ಪಡಿಸಿಯದೆ. ಇದಕ್ಕಾಗಿ ಚೀನೀಯರು ಕೃತ ಜ್ಞರು.

ಈ ದೇಶರಕ್ಷಣೆಯ ಯುದ್ಧದಲ್ಲಿ ಇಂದು ಎರಡನೆ ವರ್ಷಾರಂಭ ಶಾಂತಿಪ್ರಿಯರೆಲ್ಲ ರಿಗೂ, ನಿಮಗೂ, ವಂದನೆಗಳು

ಈಗ ಜಪಾನಿನ ಸೇನೆಗಳೆಲ್ಲ ಎಲ್ಲಿ ನುಗ್ಗ ಬೇಕೆಂದಿರುವುವೊ ಆ ಪ್ರದೇಶಗಳು ಸುಲಭ ವಲ್ಲ. ಒಂದು ಕಡೆ ಪರ್ವತಗಳಿವೆ, ಮತ್ತೊಂ ದು ಕಡೆ ನದಿಯ ನೆರೆಯಿದೆ ಯಾಂಗ್ಸೆನದಿ ಯಲ್ಲಿ ಹಡಗುಗಳನ್ನು ಕೂಡಿಸಿ, ಹೊಂಕೋ ಮುತ್ತಬೇಕಾಗಿ ಜಪಾನಿನ ಆಸೆ ದಾಟಲು ತಡೆಗಳಿವೆ ಅಲ್ಲಲ್ಲಿ ಹಡಗುಗಳು ಧ್ವಂಸವಾ ಗುವುವು ಮಳೆಗಾಲದ ಬಿರುಸು ಎರಡು ತಿಂಗಳಿರುವುದು. ಅಕ್ಟೋಬರದ ವರೆಗೆ ಬಯ ಲೆಲ್ಲ ಜಲಮಗ್ನವಾಗುವುದು ಹೀಗಾಗಿ, ಜಪಾನ ದಕ್ಷಿಣಕರಾವಳಿಗೆ ಹಡಗುಗಳನ್ನು ಕಳಿಸಿ ಅಲ್ಲಿ ಹಿಂಸಿಸತೊಡಗಿದೆ

ಜೂನ್ ತಾ 17ರಲ್ಲಿ ಅವರ ಅಧ್ಯಕ್ಷನು 'ಶರಣಾಗತರಾಗಿರಿ!' ಎಂದನು ಜಪಾನು ಯುದ್ಧಮಾಡುವಾಗ, ತನ್ನ ಕಷ್ಟಕಾಲದಲ್ಲಿ ಎದುರಾಳಿಗೆ ಶರಣಾಗತನಾಗೆಂದು ಬುದ್ಧಿ ಸೂಚಿಸುವುದು ಅದರ ಕ್ರಮ ಶಾಂಘಾಯಿ ನೆಂಕಿಂಗ್, ಸ್ಸುಚೊ ಇವು ವಶವಾದರೂ ಚೀನ ವು ವಶವಾಗಲಿಲ್ಲೆಂದು ಬೆದರಿ, ತಾನು ಎಲ್ಲಿ ಬಲಕುಂದಿ ಮರಣಹೊಂದುವೆನೋ ಅಧಕ್ಕೆ ಮೊದಲೇ ಈ ಪ್ರಯತ್ನಗಳು, ಇವೆಲ್ಲ ವ್ಯರ್ಥ

ಮುಖ್ಯ ರಾಷ್ಟ್ರಗಳೆಲ್ಲ ಯುರೋಪಿನಲ್ಲಾ ಗುವ ಸಂಕಟವನ್ನೆ ಕುರಿತು ಭಯಗ್ರಸ್ತವಾಗಿವೆ. ಅದೇ ಅಲ್ಲಿಂದಲೇ ಮತ್ತೊಂದು ಪ್ರಪಂಚಭೀಕ ರವಾದ ಪ್ರಚಂಡ ಯುದ್ಧವು ನಡೆಯಬಹುದೋ ಎಂದೋ ಅವು ಭಯಗೊಂಡಿವೆ ಆದರೆ, ನಾವೆ ಎನ್ನುವುದೇನಂದರೆ —ಅಂತಹ ಯುದ್ಧವಾಗ ಲು ಕಾರಣವೆಂದೂ ಇರಬಹುದಾದರೆ, ಅದು ಜಪಾನ ಎಂದೇ ನಾವು ತೋರಿಸಿಕೊಡಬೇಕಾ ಗಿದೆ ಎಷ್ಟು ಕಾಲದ ವರೆಗೆ ಜಪಾನಿನ ಅನ್ಯಾ ಯ ಅತ್ಯಾಚಾರಗಳನ್ನು ಈ ರಾಷ್ಟ್ರಗಳು ಗಣ ನೆ ತ ಮು ಜಪಾನನ್ನು ಎದುರಿಸಲಾರವೋ ಅದು ವರೆಗೆ ಜಪಾನೇ ಯುರೋಪಿನ ಅತ್ಯಾ ಚಾರೀ ರಾಷ್ಟ್ರಗಳಿಗೆ ಮಾರ್ಗದರ್ಶಕವೂ ಪ್ರೋ ತ್ಸಾಹಕವೂ ಆಗುವುದು

ಜಪಾನಿನ ಸೈನ್ಯಾಧ್ಯಕ್ಷರುಗಳ ಬಾಯಿ ಮುಚ್ಚಿ, ಕೈಕಟ್ಟಲಿ ಕೆಲ್ಲೋಗ್ ಒಪ್ಪಂದ ಹತು ವರ್ಷಗಳ ಹಿಂದೆ ಸಹಿಯಾಗಿದೆಯಾದರೂ ಅದಿನ್ನೂ ನಿರ್ಜೀವವಾಗಿದೆ ಎಂದು ಅಮೇರಿ ಕದ ಮಂತ್ರಿಯವರ ಹೇಳಿಕೆಯಷ್ಟು ಅದು ಯುರೋಪಿಗೆ ಹೇಗೋ ಹಾಗೆ ಏಷ್ಯಕ್ಕೂ ಅನ್ವ ಯಿಸವಾಗಿದೆಯಲ್ಲವೆ? ಹೀಗಿದ್ದರೂ, ಅತಿಘೋರವಾದ ಅತ್ಯಾಚಾರಗಳೆಲ್ಲ ಈ ನ ಹಿಂಸೆ ದ್ದವು ಏಷ್ಯದಲ್ಲಿ ಇನ್ನೂ ನಡೆದಿರಿಗ, ಈ ಒಪ್ಪಂದಕ್ಕೆ ಸಹಿ ಹಾಕಿದವರು ಏನು ಮಾಡುತ್ತಿದ್ದಾರೆ? ಹೀಗಿರುವ ಕಾರಣವೇ ಈ ಒಪ್ಪಂದವು ವಿಲಾಯಿತಿಯ ಅತ್ಯಾಚಾರ ಗಳನ್ನೂ ತಡೆಯಲಾರದೆನ್ನ ಬೇಕು

ನೆನಪಿರಲಿ—ಜಪಾನಿನ ಈ ಯುದ್ಧವೇ ಇಡೀ ಪ್ರಪಂಚಕ್ಕೆ ಹರಡುವುದಾಗಿಯೂ, ಎರ ಡನೆ ಮಹಾಯುದ್ಧಕ್ಕೆ ಮೂಲವಾಗಿ ಇದೆ ಎಂದು ನಾವೆನ್ನುತ್ತೇವೆ ಅನ್ಯಾಯಕ್ಕೆ ಹಾದಿ ತೆರೆದೇ ಇರುವಾಗ, ಇಂತಹ ಯುದ್ಧಗಳಾಗದೆ ಇರು ವುವೆ? ಈಗಲೇ, ಈ ಅತ್ಯಾಚಾರಗಳ ದರ್ಪವನ್ನು ಅಣಗಿಸ ಬರುವಾಗಲೇ ತಡೆಯ ಲಾರಿರಾದರೆ, ಮುಂದೆ ಇವರೇ ದುಡುಕದಿರರು

ನಮ್ಮ ದೇಶಕ್ಕಾಗಿ ನೀವು ಮಾಡಿದ ಸಹಾ ಯದ್ದ ನೆನಪಿಗಾಗಿಯೂ, ಇನ್ನು ಮಾಡಲಿರು ವಿರೆಂದು ನಾವು ವಿಶ್ವಾಸವನ್ನಿಟ್ಟಿರುವುದಕ್ಕಾ ಗಿಯೂ, ಈ ಪತ್ರ ಬರೆದಿದ್ದೇವೆ ನಿಮಗೆ ಜಯವಿರಲಿ"

ಅಲ್ಲಲ್ಲಿನ ವಾರ್ತೆಗಳು.

ಉನಾಹ್:—ನಿರಕ್ಷರ ತಂದೆ, ಮಗನೊಡನೆ ಮೆಟ್ರಿಕ್ ಪರೀಕ್ಷೆಗೆ ಕೂತ ಮಗ ಪಾಸ್, ತಂದೆ ಫೈಲ್

ನ್ಯೂಯೋರ್ಕ್.—ಹೊವಾರ್ಡ ಹ್ಯೂಸ್ ಕೋಟ್ಯಾಧೀಶ, ವಿಮಾನದಲ್ಲಿ 3½ ದಿನಗಳೊಳಗೆ ಭೂಪ್ರದಕ್ಷಿಣೆ ಮಾಡಿದ

ಕಲ್ಕತ್ತ:—17 ವರ್ಷದ ಹುಡುಗ ಟ್ರೇಮ್ ಗಾಡಿಯಿಂದ ಅನಾಹುತವಾಯಿತು 4000 ರೂಪಾಯಿ ನಷ್ಟಪರಿಹಾರ ಪಡೆದ

ಬೆಲ್‌ಗ್ರೇಡ್.—ಹೊಟೆಲಿನ ಅಡಿ ಅಗಿಯುವಾಗ, ರೋಮನರದೊಂದು ಗೋರಿ ಸಿಕ್ಕಿತು ಅದರಲ್ಲಿದ್ದ ರೋಮನನ ದವಡೆ ಬಲ ಬಲವುಳ್ಳದು, ದೊಡ್ಡದು ಸಮ್ಮನೆ ಸಾಮ್ರಾಜ್ಯವಾಗುತ್ತದೆಯೆ?

ಜಮ್‌ಶೆಡ್‌ಪುರ.—ತಾತಾ ಕಬ್ಬಿಣ ಕಾರ್ಖಾನೆ ವಾರ್ಷಿಕ ನಫೆಯಿಂದ ಕೆಲಸಗಾರರಿಗೆ ಮೂರು ತಿಂಗಳ ಸಂಬಳ ಇನಾಂ ಕೊಟ್ಟಿದೆ

ಲಂಡನ್:—ಲೋರ್ಡ ನಫಿಲ್ಡ್, ದಾನಶೂರ ಏಳೆಂಟು ಮಿಲಿಯ ಪವನ ದಾನಮಾಡಿದ ಲೋಕೋಪಕಾರಕ್ಕಾಗಿ ಈಗ ಒಂದು ಸಾವಿರ ಏರೋಪ್ಲೇನುಗಳನ್ನು (ಬಾಂಬು ಚೆಲ್ಲುವುವು) ತಯಾರಿಸಲು ಅವನ ಕಂಪೆನಿಗೇ ಸರಕಾರದ ಅಪ್ಪಣೆ

ಜೆರೂಸಲೆಮ್.—ಸಂತೆಯಲ್ಲೀ ಬಾಂಬು ಬಿಸಾಡಿಧರ ಹನ್ನೊಂದ ಮಂದಿ ಹೆಣಗಳಾದರು

ಟೋಕಿಯೋ.—ಯುದ್ಧದ ಪರಿಣಾಮವಾಗಿ ಹತ್ತು ಲಕ್ಷ ಜನರಿಗೆ ನಿರುದ್ಯೋಗ ಲಾಭ' ನೆರೆಸೀರಿನ ಹಾವಳಿಯ ಪರಿಣಾಮವಾಗಿ, 24 ಮಿಲ್ಲಿಯ ಪವನೂ 937 ಜನರೂ ನಷ್ಟ

ಕಲ್ಕತ್ತ:—ಬಂಗಾಳದ ಜೈಲುಗಳಲ್ಲಿನ ರಾಜಕೀಯ ಕೈದಿಗಳು ಚೀನಕ್ಕೆ ಧನಸಹಾಯ ಮಾಡಿದರು ರೂ. 158-14-9

ಬುಗಟೀ:—ನವಾಬರ ಮಗನನ್ನು ಕೈದುಮಾಡಿದ್ದಾರೆ ತಂದೆಗೂ ಮಗನಿಗೂ ಆಗದು

ಶಿಲೊಂಗ್.—ಬೆಳಗ್ಗೆ ಭೂಕಂಪವಾಗಿದೆ

ಕುಂಭಕೋಣ:—ಮ್ಯುನಿಸಿಪಲ್ ಕೌನ್ಸಿಲು ಸಭೆಯಿಂದ ತನ್ನ ಸೂಚನೆ ಆಲೋಚಿಸಲಿಲ್ಲೆಂದು ಮಹಿಳಾಮೆಂಬರು ಹೊರಗೆ ನಡೆದರು

ಒಂದೇ ಉಸಿರು.

ನೆಹರು.—ಸಾಮ್ರಾಜ್ಯ ಮತ್ತು ಶಾಂತಿ ಎಂಬಿವು ಜತೆಗೂಡವು ಸಾಮ್ರಾಜ್ಯಶಾಹಿ ಮತ್ತು ಫೆಸಿಜಮ್ ಎರಡೂ ಒಂದೇ.

ಮೆಕ್‌ಡೊನಾಲ್ಡ್—ಪೂರ್ವ ಮತ್ತು ಪಶ್ಚಿಮ ಎಂಬ ವಿಭಾಗಗಳನ್ನು ಮನುಷ್ಯಕೋಟಿ ಯಲಕ್ಲ ಮಾಡುವುದು ಅನ್ಯಾಯ, ಮಹಾಪರಾಧ

ಹ್ಯೂಸ್:—ವಿಮಾನಚಾರಿಗಳು (ಪ್ರತಿಯೊಂದು ಜನಾಂಗದವರೂ) ಭ್ರಾತೃಭಾವವನ್ನು ಹರಡುವರಾಗಲಿ! ಅದೇ ವಿಜಯ

ಸರೋಜಿನಿದೇವಿ:—ತಲೆಯೆತ್ತಿ, ಉದಯಿಸುವ ಸೂರ್ಯನನ್ನು ನೋಡಿರಿ. ನಿಮ್ಮ ಅದೃಷ್ಟವು ನಿಮ್ಮ ಕೈಯಲ್ಲೇ ಇದೆ

ಜವಾಹರಲಾಲ್-ಲಿನಿಲಿತ್‌ಗೌ ಭೇಟಿ

ಫೆಡರೇಶನ್ ಪ್ರಕರಣದ ಕುರಿತು ಮಾತುಕತೆಗಳು

ಶ್ರೀ। ಜವಾಹರ ನೆಹರುಗಳು ಲಂಡನಿನಲ್ಲಿ ತಮ್ಮ ಕಾರ್ಯಕ್ರಮಗಳನ್ನು ಮುಗಿಸಿ, ಈಗ ಫ್ರಾನ್ಸಿನ ರಾಜಧಾನಿಯಾದ ಪೆರಿಸ್ ನಗರಕ್ಕೆ ತೆರಳಿರುವರು ಪೆರಿಸ್ ಪಟ್ಟಣಕ್ಕೆ ತೆರಳುವ ಮೊದಲು, ಲಾರ್ಡ್ ಲಿನಿಲಿತ್ ಗೌರವರ ಆಹ್ವಾನ ಮೇರೆಗೆ, ಅವರಲ್ಲಿಗೆ ಒಂದು ಫಲಾಹಾರಕ್ಕೆ ತೆರಳಿದ್ದರು ಈ ಫಲಾಹಾರದ ಸಮಯ ಲಾರ್ಡ್ ಲಿನಿಲಿತ್‌ಗೌರವರಿಗೂ, ಶ್ರೀ। ಜವಾಹರಲಾಲರಿಗೂ ಇಂಡಿಯಾ ಆಕ್ಟಿನ ಫೆಡರೇಶನ್ ಪ್ರಕರಣದ ಕುರಿತು ಮಾತುಕತೆಗಳು ನಡೆದವು ಈ ಮಾತುಕತೆಗಳ ವಿವರಗಳು ತಿಳಿದುಬಂದಿಲ

ಶ್ರೀ। ನೆಹರುಗಳವರು, ಪೆರಿಸ್ ಪಟ್ಟಣದಲ್ಲಿ ಕೆಲವು ಭಾಷಣ ಇತ್ಯಾದಿಗಳಿಂದ ಕೂಡಿದ ಕಾರ್ಯಕ್ರಮವನ್ನು ಮುಗಿಸಿ, ಫ್ರಾನ್ಸಿನ ದಕ್ಷಿಣ ಭಾಗದಲ್ಲಿ ಒಂದೆಡೆ 10 ದಿನಗಳ ವಿಶ್ರಾಂತಿ ಪಡೆದು, ನಂತರ ಪಾಶ್ಚಾತ್ಯದ ತಮ್ಮ ಪ್ರವಾಸವನ್ನು ಮುಗಿಸ ಪರಾಗಿ ತಿಳಿದುಬರುತ್ತದೆ

ಇಂಡಿಯಾ ಆಕ್ಟಿನಲ್ಲಿ ಬದಲಾವಣೆಯಾಗುವ ಕುರಿತು, ಫೆಡರಲ್ ಪ್ರಕರಣದ ಕುರಿತು ಪಾರ್ಲಿಮೆಂಟಿನಲ್ಲಿ ಆಲೋಚಿಸಲಾಗುವುದೇ ಎಂಬ ಪ್ರಶ್ನೆಗೆ ಇಲ್ಲವೆಂಬ ಉತ್ತರವು ದೊರೆತಿರುತ್ತದೆ

ಲೋಕವನ್ನಾಳುವ ಮಹಾಶಕ್ತಿ

ಅದು ಯಾವುದು?

ಭಾರತದಲ್ಲಿ ಮಹಾತ್ಮರ ಹೆಸರು ಕೇಳಿದೊಡನೆ, ಅವರನ್ನು ನೋಡದವರೂ ಅವರ ಮಾತುಗಳ ಕಡೆಗೆ ಆಕರ್ಷಿತರಾಗುತ್ತಾರೆ. ಮಿಲಿಯಾಂತರ ಜನರು ಅವರ ದರ್ಶನ ತೆಗೆದುಕೊಂಡ ಮಾತ್ರಕ್ಕೆ ತಾವು ಪವಿತ್ರರಾದೆವೆಂದು ತಿಳಿಯುತ್ತಾರೆ. ಅಜ್ಞಾನಾವಸ್ಥೆಯಲ್ಲಿ ಬಿದ್ದುಕೊಂಡಿದ್ದ ಜನತೆಯು ಅವರ ಒಂದೇ ಸ್ವರವನ್ನು ಕೇಳಿದೊಡನೆ ಎಚ್ಚತ್ತು ಮಿಂಚಿನವೇಗದಲ್ಲಿ ಕಾರ್ಯಾಸಕ್ತವಾಗುತ್ತದೆ. ಈ ಅರ್ಧ ನಗ್ನ ಫಕೀರನಲ್ಲಿ ಜನತೆಗೆ ಜನತೆಯನ್ನೇ ತನ್ನ ಕಡೆಗೆ ಸೆಳೆಯುವ ತನ್ನ ಆಜ್ಞಾನುವರ್ತಿಯಾಗಿ ಮಾಡುವ, ಸ್ವೇಚ್ಛೆಯಿಂದ ಅದನ್ನು ಕುಣಿಸುವ ಯಾವ ಮಹಾಶಕ್ತಿಯು ಅಡಗಿದೆ. ಪಾಪದ ಕುರಿಗಳಂತೆ ಇದ್ದ ಭಾರತೀಯರನ್ನು ಬ್ರಿಟಿಷಸಿಂಹಗಳೊಡನೆ ಸೆಣಸಾಡುವಂತೆ ಮಾಡಿದ ಯಾವ ಅದ್ಭುತ ಪ್ರೇರಕ ಶಕ್ತಿಯು ಅವರಲ್ಲಿದೆ?

ಮಹಾತ್ಮಾ ಗಾಂಧಿಯವರು

ಮಹಾತ್ಮಾ ಗಾಂಧಿಯವರಲ್ಲಿ ಮಾತ್ರ ಇಂಥ ಯಾವದೋ ಒಂದು ವಿಚಿತ್ರ ಅದ್ಭುತ ಮಹಾಶಕ್ತಿಯು ಇರುವದೆಂದಲ್ಲ. ಪ್ರಪಂಚದಲ್ಲಿ ಅನುರಕ್ತಿಯನ್ನು ಪಡೆದ ವಿಭೂತಿ ಪುರುಷರಲ್ಲೆಲ್ಲ ಅಂಥಹದ್ದೊಂದು ಶಕ್ತಿಯು ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಬ್ರಿಟಿಷ ರಾಜಕಾರಣ ಪಟುಗಳೆಂದು ಪ್ರಸಿದ್ಧರಾಗಿರುವ ಲೋಯಿಡ್ ಜಾರ್ಜರನ್ನು ತೆಗೆದುಕೊಳ್ಳಿರಿ. ಯುದ್ಧ ಕಾಲದಲ್ಲಿ ಸಾಮ್ರಾಜ್ಯಾಧಿಕಾರವು ಅವರ ಕೈಯಲ್ಲಿದ್ದಾಗ, ಜೀವದ ಗೆಳೆಯರ ಮಾತಂತಿರಲಿ, ಪ್ರಾಣದ ಶತ್ರುಗಳು ಕೂಡ ಅವರಿಗೆ ದೂರದಿಂದಲೇ ನಮಸ್ಕಾರ ಹಾಕುತ್ತಿದ್ದರು. ಕಾರಣ, ಹತ್ತಿರ ಬಂದರೆ ಎಲ್ಲಿ ಅವರ ಶಕ್ತಿ ಪ್ರಭಾವಗಳಿಗೆ ಬಲಿಯಾಗಿ ತಾವು ತಮ್ಮ ಶತ್ರುತ್ವವನ್ನು ಬಿಟ್ಟು ಕೊಡುವೆವೋ ಎಂಬ ಭೀತಿ ಅವರಲ್ಲಿತ್ತು. ಲೋಯಿಡ ಜಾರ್ಜರ ಸಂಪರ್ಕದಲ್ಲಿ ಬಂದವರು ಯಾರೂ ಅವರಿಂದ ಪ್ರಭಾವಿತರಾಗದೆ ಉಳಿದವರಿಲ್ಲ. ಎಷ್ಟೋ [illegible] ತಮ್ಮ ಇಚ್ಛೆಗೆ ವಿರೋಧವಾಗಿ [illegible] ಅವರ ವ್ಯಕ್ತಿತ್ವಕ್ಕೆ ಸೋತು ಹೋಗಿದ್ದರು. [illegible] ಯುದ್ಧ ಕಾಲದ ಅವರ ಭಾಷಣಗಳನ್ನು ಕೇಳಿದವರೆಲ್ಲ ತಾವು ಒಬ್ಬ ಮಹಾಪುರುಷನ ಭಾಷಣವನ್ನು ಕೇಳಿದೆವೆಂದು ಅಂದುಕೊಳ್ಳುತ್ತಿದ್ದರು.

ಮತ್ತೆ ಈಗ ಪ್ರಪಂಚವನ್ನೇ [illegible] ಗೊಳಿಸಿದ ಹಿಟ್ಲರ ಮತ್ತು ಮುಸಲೋನಿ ಎಂಬವರಾದರೂ ಸರ್ವಾಧಿಕಾರಿಗಳಿದ್ದಾರಲ್ಲ! ಅವರ ಮುಂದೆ ಲೋಕ ಜನರು ಹೇಗೆ ವರ್ತಿಸುತ್ತಾರೆ? ಮುಸಲೋನಿ ಎಂದೊಡನೆ ಲಕ್ಷಾವಧಿ ಜನರು ಭಕ್ತಿಯಿಂದ ತಲೆ ತಗ್ಗಿಸುತ್ತಾರೆ. ಶತಮಾನಗಳಿಂದ ಬೆಳೆದು ಬಂದ ಇಟೆಲಿಯ ಆಲಸ್ಯ, ಅಕರ್ಮಣ್ಯತೆ, ವಿಲಾಸ ಪ್ರಿಯತೆ ಮೊದಲಾದ ಕೆಟ್ಟ ಚಾಳಿಗಳನ್ನು ಒಂದೇ ಏಟಿಗೆ ಹೆಸರಿಲ್ಲದಂತೆ ಮಾಡಿ, ಇಟೇಲಿಯನ್ನು ಒಂದು ರಾಷ್ಟ್ರವನ್ನಾಗಿ ಮಾಡುವ ಮಹಾಶಕ್ತಿ ಇರುವದಾಗಿ 30 ವರ್ಷಗಳ ಹಿಂದೆ ಯಾರು ಹೇಳಬಲ್ಲವರಾಗಿದ್ದರು? ಆದರೆ ಮುಸಲೋನಿಯು ಅಸಂಭವವನ್ನು ಸಂಭವಪಡಿಸಿದನು, ಅಸಾಧ್ಯವನ್ನು ಸಾಧ್ಯವೆಂದು ಜಗತ್ತಿಗೆ ತೋರಿಸಿಕೊಟ್ಟನು.

ಇಟೆಲಿಯ ಸರ್ವಾಧಿಕಾರಿ ಮುಸಲೋನಿ

ಹಿಟ್ಲರನು ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದ ಬಗೆ, ಮಿಲಿಯಾಂತರ ಮಂದಿ ಅವನಿಗಾಗಿ ತಮ್ಮ ಪ್ರಾಣಗಳನ್ನಾದರೂ ಕೊಡಲಿಕ್ಕೆ ಸಿದ್ಧರಾಗಿರುವ ರೀತಿ, ಇವೆಲ್ಲಾ ಈಗ ಜನಜನಿತ ವಿಷಯಗಳಾಗಿವೆ. ಮತ್ತೆ ಇಸ್ತಂಬೂಲ ಎಂಬ ಪುರಾತನ ನಗರವನ್ನು ಆಧುನಿಕ ಬರ್ಮಿಂಗ್ಹಾಮಿನಂತೆ ಪರಿವರ್ತಿಸಿದ [illegible] ಮುಸ್ತಫಾ ಕೆಮಾಲನ ಶಕ್ತಿ [illegible] ಕೂಡ [illegible] ವಾದ [illegible] ಸಲ್ಪ [illegible] ಯೊಂದಿಗೆ ಮತಸಂಬಂಧವಾದ [illegible] ವಿರೋಧವಿದ್ದು ಕೇವಲ 10 ವರ್ಷಗಳೊಳಗಾಗಿ [illegible] ಮಹಾ[illegible]

ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್

[illegible]ವನ್ನು ಸಾಧಿಸಿದ [illegible] ಮೋಹಿನಿ ಯ ಮಹಾಶಕ್ತಿ ಅದೆ [illegible] ಇದನ್ನು ತಿಳಿಕೊಳ್ಳುವ [illegible] ಪ್ರಕೃತಿ ಪ್ರಿಯರಿಗೆ [illegible] ಸಹಜವೆ?

ಗಾಂಧಿ ಅಥವಾ ಲಾಯಿಡ ಜಾರ್ಜ, ಹಿಟ್ಲರ ಅಥವಾ ಮುಸಲೋನಿ, ಕೆಮಾಲ್ ಅಥವಾ ಲೆನಿನ್ ಇವರಲ್ಲಿ ಲೋಕವನ್ನಾಳುವ [illegible] ಮಹಾಶಕ್ತಿಯು ಅಡಗಿದೆ. [illegible] ಅವರ ದೇಹ ಸೌಂದರ್ಯ, ದೃಢಕಾಯ, ಮಾತಿನ ವೈಖರಿ ಅಥವಾ ಅವರು ಸಂಪಾದಿಸಿದ ವಿದ್ವತ್ತ ಪ್ರೌಢಿಮೆ, ಇವುಗಳಲ್ಲಿ ಯಾವುದನ್ನು ನೋಡಿಯೊಂದು ಜನರು ಅವರಿಗೆ ಮರುಳಾಗಿರುವದಿಲ್ಲ. ಅರ್ಧ ನಗ್ನ ಫಕೀರನಂತಿರುವ ಗಾಂಧಿಯವರಲ್ಲಿ ಯಾವ ಶರೀರ ಸೌಂದರ್ಯವಿದೆ? [illegible] ಮದುಕನಾಗಿರುವ ಲಾಯಿಡ ಜಾರ್ಜರಲ್ಲಿ ಜನರು ನಿಯೊಡನೆ ಯುದ್ಧಕ್ಕೆ ಹೋಗುವ ಯಾವ ದೃಢಕಾಯವಿದೆ? ಅಥವಾ ಮುಸಲೋನಿ ಹಿಟ್ಲರರು ಯಾವ ವಿಶ್ವವಿದ್ಯಾಲಯಗಳಲ್ಲಿ ಕಲಿತು ಪದವಿಗಳನ್ನು ಪಡೆದಿದ್ದಾರೆ? ಏನೂ ಇಲ್ಲ.

ಜನರ ತನು ಮನ ಧನ ಮೂರನ್ನು ತನ್ನ ಕಡೆಗೆ ಆಕರ್ಷಿಸುವ ಒಂದು ಅದ್ಭುತ ಶಕ್ತಿಯನ್ನು ಭಗವಂತನು ಪ್ರತಿಯೊಬ್ಬನಿಗೂ ಕೊಟ್ಟಿದ್ದಾನೆ. ಅದನ್ನೇ ಇಚ್ಛಾ ಶಕ್ತಿಯೆಂದು ಕರೆಯುವರು. ಇಚ್ಛಾ ಶಕ್ತಿಯು ಬೇರೆ ಬೇರೆ ಸ್ವರೂಪಗಳನ್ನು ಇಂದ್ರಜಾಲ ಶಕ್ತಿ, ಮಹೇಂದ್ರಜಾಲ ಶಕ್ತಿ ಅಥವಾ ವಶೀಕರಣ ವಿದ್ಯೆ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೂ ಇದ್ದಾರೆ. ಪ್ರಪಂಚವನ್ನು ಆಳಿದ ದೊಡ್ಡ ದೊಡ್ಡ ಮನುಷ್ಯರಲ್ಲಿ ಇಂಥ ಶಕ್ತಿಯ ವಿಶೇಷ ವಿಕಾಸವಾಗಿರುವದು ಕಂಡುಬರುತ್ತದೆ. ಕೆಲವರಲ್ಲಿ ಅದು ಜನ್ಮದಾರಭ್ಯ ವಿಕಾಸವಾಗಿ ಇರುತ್ತದೆ. ಉಳಿದವರು ಪ್ರಯತ್ನಪೂರ್ವಕ ಅದರ ವಿಕಾಸ ಮಾಡಿಕೊಂಡಿದ್ದಾರೆ. ಈ ವಶೀಕರಣ ವಿದ್ಯೆಯನ್ನು [illegible] ಚೆನ್ನಾಗಿ ಅಭ್ಯಾಸ ಮಾಡಿ[illegible] ಅವರು ಪ್ರಪಂಚದ ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮೊದಲಾದ ಕ್ಷೇತ್ರಗಳಲ್ಲಿ [illegible] ಕ್ರಾಂತಿಯನ್ನುಂಟು ಮಾಡಲು ಸಮರ್ಥರಾಗಿದ್ದಾರೆ.

ಮಹಾತ್ಮಾ ಗಾಂಧಿ [illegible] ಅಖಂಡ [illegible] ರಲ್ಲಿ ಇಚ್ಛಾ ಶಕ್ತಿಯ ವಿಕಾಸವಾಗಿದೆ. ಅವರ ವಶೀಕರಣ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಅದ್ದರಿಂದಲೇ ಪ್ರಪಂಚದಲ್ಲಿ ಅವರಿಗೆ ಇಷ್ಟು ಉಚ್ಚ ಸ್ಥಾನಮಾನಗಳು ಪ್ರಾಪ್ತವಾಗಿವೆ. ಈ ಶಕ್ತಿ ಈ ವಿದ್ಯೆಯೇ ಲೋಕವನ್ನು ಸದಾಕಾಲ ಆಳುತ್ತಿರುತ್ತದೆ.

ಧೂರ್ತರು ದುಷ್ಟರು ಆದವರ ಕೈಗೆ ಈ ಇಚ್ಛಾ ಶಕ್ತಿ ವಶೀಕರಣ ವಿದ್ಯೆಯು ಒಂದು ಬಿಟ್ಟರೆ ಅವರೇ ಲೋಕಕ್ಕೆ ಕಂಟಕರಾಗಿ ಮೆರೆಯುವರು. ಪರಂತು ಸಜ್ಜನರು ಸದ್ಧರ್ಮಿಗಳ ಕೈಗೆ ಅದು ಬಂದರೆ ಅದರಿಂದಲೇ ಲೋಕೋದ್ಧಾರವಾಗುವದು. ಇದಕ್ಕೆ ಇತಿಹಾಸದಲ್ಲಿ ಬೇಕಾದಷ್ಟು ದೃಷ್ಟಾಂತಗಳು ದೊರೆಯುತ್ತವೆ.

ಪೈಪಿಂಗ್ ವ್ಯವಸಾಯ ಕಾಲೇಜ ?

ಚೀನಾದೇಶದ ಪೈಪಿಂಗ್‌ನ ವ್ಯವಸಾಯ ಕಾಲೇಜು ಜಪಾನಿಯರಿಂದ ಪುನಃ [illegible] ಹೊಂದಿಕೊಂಡು ಕಳೆದ ತಿಂಗಳಲ್ಲಿ ಪ್ರಾರಂಭವಾಯಿತು. ಈ ಕಾಲೇಜಿಗೆ ಅಚ್ಚೊತ್ತಿದ್ದಿಯು ತಯಾರಾಗುವ ಎರಡು ವಾರಗಳ ಮುಂಚಿತವಾಗಿ ಒಂದನರೆಂದರೆ—ಒಬ್ಬನೆ ಒಬ್ಬ ವಿದ್ಯಾರ್ಥಿ. ಕಾಲೇಜ ಶಿಬಂದಿಯು ಸಂಪೂರ್ಣವಾಗಿತ್ತು. ಕಾಲೇಜಿನ ಅಧ್ಯಕ್ಷರ ನೇಮಕವೂ ಆಗಿತ್ತು.

ಲ್ಯೊಯ್ಡ ಜೋರ್ಜ್

ಸ್ಟೆಲೀನ ಕುರಿತು ವಿಚಿತ್ರ ಕತೆಯೊಂದು ?

ರಷ್ಯಾದೇಶದ ಸರ್ವಾಧಿಕಾರಿ ಸ್ಟೆಲೀನನಿಗೆ [illegible] ಚಿಕಿತ್ಸೆ [illegible] ವೈದ್ಯಕೀಯ ಪ್ರವೀಣನನ್ನು ಕಳೆದ ತಿಂಗಳಲ್ಲಿ ಬರಮಾಡಿಕೊಳ್ಳಲಾಗಿತ್ತು. ಈ ವೈದ್ಯಮಹಾಶಯನು ಸ್ಟೆಲಿನನಂತಿರುವ ಐವರನ್ನು ಎದುರಿಗೆ ನಿಲ್ಲಿಸಲಾಯಿತು. ಅದರಲ್ಲಿ ಒಬ್ಬನು ಸ್ಟೆಲೀನನು. ಇನ್ನು ನಾಲ್ವರೂ—ಡಿಪ್ಲಿಕೇಟ್ ಸ್ಟೆಲೀನರು. ವೈದ್ಯಮಹಾಶಯನು ತನ್ನ ಆರೋಗ್ಯದ ಕುರಿತು ನಿಜವಾದ ವಾರ್ತೆಗಳನ್ನು ಹೊರಗೆಡವಿದಂತೆ—ಸ್ಟೆಲೀನ [illegible] ಉಪಾಯವು ನಡೆಸಲಾಯಿತಂತೆ.

ಅಫ್ಘಾನ್ ನ್ಯಾಶನಲ್ ಬೇಂಕ್ ?

ಈ ಬೇಂಕಿಗೆ [illegible]ನಲ್ಲಿ ಒಂದು ಶಾಖೆ ಇದೆ. ಜರ್ಮನಿಯ ಬರ್ಲಿನ್ ನಗರದಲ್ಲೂ ಒಂದು ಬ್ರಾಂಚ್ ಇದೆ. ಹಿಂದೂ ದೇಶದ ಅನೇಕ [illegible] ನಗರಗಳಲ್ಲಿಯೂ ಈ ಬೇಂಕಿನ [illegible] ಈ ಬೇಂಕಿನ ಶಾಖೆಯೊಂದು [illegible] ದಲ್ಲಿ ಅಮೇರಿಕಾದ ನ್ಯೂಯೋರ್ಕ ಪಟ್ಟಣದಲ್ಲಿ [illegible] ಗವುದು. ಈ ಬೇಂಕಿನ [illegible] ಒಂದು [illegible] ಸರಕಾರದ [illegible] ಸಾರ್ವಜನಿಕ [illegible]

ಬುಕ್ಹರಾ ಎಂಬಲ್ಲಿ ಶೋಧೆ ?

ಸೋವಿಯಟ್ ಸರಕಾರದಿಂದ ಕಳುಹಿಸಲಾದ [illegible] ಒಂದು [illegible] ಸಮರಕಂದ [illegible] ಎಂಬಲ್ಲಿ (ತುರುಕಸ್ತಾನದಲ್ಲಿ) ಹದಿನೆಂಟನೆ ಶತಮಾನದಲ್ಲಿ ಮೊದಲ [illegible] ಸಂಪೂರ್ಣ ದರ್ಶನವೇ ಆಗದು ತೆಗೆದಿರ [illegible]

ಲಿಯೊನ್ ಟ್ರಾಟ್ಸ್ಕಿ ?

ಈ [illegible] ಸ್ಟೆಲೀನ್‌ನಿಂದ [illegible] ಅಕ್ಟೋಬರ್ [illegible] ನಾಯಕರು. [illegible] ಅವರ ಸಂಪೂರ್ಣ ಸಹಾನು[illegible] ಹಿ[illegible] ದೂರದೇಶದ [illegible] ಸಿದ್ಧತೆಗಳನ್ನು ಮಾಡ[illegible] ಜಪಾನ್ [illegible]

ರಷ್ಯದ ಸರ್ವಾಧಿಕಾರಿ ಸ್ಟೇಲಿನನು

ವರ್ತನೆಯು ಯೋಗ್ಯವಲ್ಲವೆಂದು ... ಅವರ ಅಭಿಪ್ರಾಯ.

ನೆಹರು

ಮನುಷ್ಯಕೋಟಿಯ ವೀರ!

★

ಇದೊಂದು ಬಿರುದಿನಿಂದ ನೆಹರುರವರನ್ನು ಎಲ್ಲೆಲ್ಲಿಯೂ ಲಂಡನಿನಲ್ಲಿ ಸಂಬೋಧಿಸುತ್ತಾರೆ. ಪ್ರಪಂಚದ ಪರದಲ್ಲಿ ಇಂಡಿಯವು ಇದೆಯೋ ಇಲ್ಲವೋ ಎಂದು ತಿಳಿಯದ 'ಇಂಗ್ಲಿಷರಿಗೆ ಸಹಾ, ಇವರ ಮಾತುಗಳ ದೆಸೆಯಿಂದ ಪ್ರಪಂಚದ ಕೇಂದ್ರವೇ ಇಂಡಿಯಾ ಎಂದೂ, ಅದರ ಸುಖದುಃಖಗಳೇ ಪ್ರಪಂಚದ ಸುಖದುಃಖಗಳೆಂದೂ ತಿಳಿದು ಬರುವಂತಾಗಿದೆ. ಮಹಾತ್ಮಾಜಿಯವರು ಕೊಂಗ್ರೆಸಿನೊಳಗೂ ಹೊರಗೂ ಮಾಡಿರತಕ್ಕ ಕೆಲಸವನ್ನು ತಿಳಿದು ಚಕಿತರಾದವರು, ಈಗ ನೆಹರುರವರ ಭಾಷಣಗಳಿಂದ ಇನ್ನಷ್ಟು ಚಕಿತರಾಗಿದ್ದಾರೆ ಲಂಡನು ತನ್ನ ದುಃಖ ಬೆದರಿಕೆ ಬೇಸರಿಕೆಗಳಲ್ಲೇ ಇದುವರೆಗೆ ಮಗ್ನವಾಗಿದ್ದಿತು! ಇಂಡಿಯದ ನೆನಪೇ ಕಡಿಮೆಯಾಗಿತ್ತು! ಈಗ?

ಇಂಡಿಯದ ಸಮಸ್ಯೆಗಳನ್ನೆಲ್ಲ ಎಂದೋ ಮುಗಿಸಿದ್ದೇವೆ ಎಂದು, ಅಲ್ಲಿನ ಮಂತ್ರಿಗಳು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಸ್ವಸ್ಥರಾಗಿದ್ದರು. ಇವರ ಡಿಸ್ ಒಬಿಡಿಯನ್ಸ್ ಯೂನಿ ಶಾಸನೋಲ್ಲಂಘನೆಯ ಮಾತನ್ನು ಕೊಂಗ್ರೆಸು ಮರೆತು, ತಾವಿತ್ತ ಸುಧಾರಣೆಗಳನ್ನು ಕೈಕೊಂಡು ಇನ್ನು ರಗಳೆ ಕೊಡದಾಗಿದೆ ಎಂದು ಕೊಂಗ್ರೆಸನ್ನು ಮಂತ್ರಿಮಂಡಲವು ಮರೆದಿತ್ತು ಏಳು ಪ್ರಾಂತ್ಯಗಳಲ್ಲಿ ಕೊಂಗ್ರೆಸು ಅಧಿಕಾರ ತಳೆದಿದೆ, ಉಳಿದವುಗಳಲ್ಲಿ ತನ್ನ ಕೈಯಾಡಿಸುತ್ತದೆ, ಹೀಗಾಗಿ, ಅಷ್ಟರಲ್ಲೇ ಅದು ತೃಪ್ತವಾಗಿರಬಹುದೆಂದು ಸೂಚಿಸಲಾಗಿತ್ತು. ಪುನಃ ಕೊಂಗ್ರೆಸು ಮತ್ತೊಂದು ಸಮಸ್ಯೆಯನ್ನು ಮುಂತಂದು ಅಗತ್ಯ ತೋರಿದರೆ ಶಾಸನೋಲ್ಲಂಘನೆಗೆ ತೊಡಗಬಹುದೆಂದೂ ಬ್ರಿಟಿಷರು ಸ್ವಪ್ನೇಪಿ ತಿಳಿದಿರಲಿಲ್ಲ

ಈ ಆತ್ಮಸಮಾಧಾನವನ್ನು ನೆಹರುರವರು ಮಾಯಗೊಳಿಸಿರುವರು ಕ್ವೀನ್ಸ್ ಹೋಲ್'ನಲ್ಲಿ ಅವರು ಮಾಡುತ್ತಿದ್ದ ಭಾಷಣ ಕೇಳಲು ಟಿಕೇಟು ಪಡೆದು ನಿಂತವರ ಸಾಲು ಅರ್ಧ ಮೈಲು ದೂರಕ್ಕೆ ಹರಿದಿದ್ದಿತು! ಇದರಿಂದ ಪುನಃ ಇಂಡಿಯದ ಕಡೆಗೆ ಬ್ರಿಟಿಷರ ಗಮನ ಹರಿದಿದೆ ಎನ್ನಲು ಸಂದೇಹವಿಲ್ಲ

ಲೋರ್ಡ ಜೆಟ್ಲೆಂಡರಿಗೂ ಇವರಿಗೂ ನಡೆದ ಅಂತರಂಗ ಭಾಷಣದಲ್ಲಿ ಏನೆಲ್ಲ ಪ್ರಸ್ತಾಪವೆದ್ದಿತೆಂದು ಪರಮಾತ್ಮನೇ ಬಲ್ಲ ಖಾಸಗಿಯಂತೆ! ನಾನಾ ಮಾತುಕತೆಗಳಾದುವಂತೆ! ಬ್ರಿಟಿಷರ ಗೋದಿ ಮತ್ತು ಪಂಜಾಬಿನ ಗೋದಿ, ರೊಟ್ಟಿಗಾಗಿ ಹೇಗಿದೆ ಎಂದ ಹೋಲಿಸಿ ಒಂದು ತಾಸನ್ನು ಇಬ್ಬರೂ ಕಳೆದಿಲ್ಲವಷ್ಟೆ! ನೆಹರುರವರು ಯಾರಿಂದಲೂ ಏನನ್ನೂ ಕೇಳಿ ಪಡೆಯ ಬಂದುದಲ್ಲವೆಂದು ಸಾರುತ್ತಿರುವರು ಆದರೆ, ವಾಸ್ತವವಾಗಿ ಇಂಡಿಯಾ ಕರಣಿಕರು ಇಂಡಿಯದ ವಿಷಯ ತುಂಬಾ ಸೂಚನಾದಿಗಳನ್ನು ಕೊಟ್ಟಿರದೆ ಇರಲಾರರು ನೆಹರುರವರೂ ಭಾರತೀಯರ ಆಶಾಕಾಂಕ್ಷೆಗಳನ್ನು ತಿಳಿಸದೆ ಇರಲಾರರು

ಇಂಡಿಯದಲ್ಲಿನ ಭಾರೀ ಹುದ್ದೇದಾರ ಬ್ರಿಟಿಷರು ಈ ವಿಷಯ ಏನೂ ಗಡಿಬಿಡಿಹೊಂದಿಲ್ಲದಿರುವುದು ತೃಪ್ತಿಕರ ನೆಹರುರವರಿಗೆ ಪಾಸ್‌ಪೋರ್ಟು ಸಿಗದ ದಿನಗಳಿವೆ. ಈಗ ಅವರನ್ನೆಲ್ಲ ಪತ್ರಿಕೆಗಳಲ್ಲೂ ಬಹಳವಾಗಿ ಮೊದಲನೆ ಪುಟದಲ್ಲೇ ಪ್ರದರ್ಶಿಸುತ್ತಾರೆ! ಬ್ರಿಟಿಷ ಆಫಿಸರರು ಎಷ್ಟೋ ಮಂದಿ ಕೊಂಗ್ರೆಸು ಮಂತ್ರಿಗಳಿಗೆ ಅಧೀನರಾಗಿದ್ದಾರೆ ಮನಸ್ಸಿಗೆ ಒಲ್ಲದುದನ್ನು ನೆಹರುರವರು ಮಾಡಿದ್ದಲ್ಲಿ, ಅಲ್ಲಲ್ಲೇ ನಾಲಗೆ ಕಚ್ಚಿಕೊಳ್ಳುವಷ್ಟು ಮಾತ್ರ ಕೆಲವು ಆಫೀಸರರು ಇರಬಹುದು

ಗಾಂಧಿಜಿಯವರಿಗಿಂತ ನೆಹರು ವೀರಪುರುಷರೆಂಬ ಅಭಿಪ್ರಾಯವನ್ನು ಬ್ರಿಟಿಷ ಸಭೆಗಳಲ್ಲಿ ಅಧ್ಯಕ್ಷರೊಬ್ಬರು ಮುಂದೆ ತಂದಿದ್ದರು ನೆಹರುರವರು ಈ ಬಿರುದನ್ನು ಮಹಾತ್ಮಾಜಿಯವರಿಗೆ ವರ್ಗಾಯಿಸಿರಬಹುದು ಮಹಾತ್ಮಾಜಿಯವರು ಮಾನವ ಸೇವಕರೂ ರಕ್ಷಕರೂ ಆಗಿದ್ದಾರೆ, ಕೇವಲ ವೀರಪುರುಷರೇ ಮಾತ್ರವಲ್ಲ

ರಾಯಿಟರ ತಂತೀವಾರ್ತೆಗಳು ಸಹ ಈ ಸಲ ಆಗುವಷ್ಟು ಸಂಪೂರ್ಣವಾಗಿ ಬರತೊಡಗಿವೆ ಅಲ್ಲಲ್ಲಿ ಇಳಿ–ಒತ್ತುಗಳನ್ನು ಕೂಡಿಸುವುದುಂಟಾದರೂ, ಲೋಪಮಾಡುವ ಅಭ್ಯಾಸವು ಈಗಿಲ್ಲವಾಗಿದೆ

ನೆಹರುರವರು ಇಂಗ್ಲೆಂಡಿನಲ್ಲಿ ಇಲ್ಲಿನ ಉಡುಪಿನಲ್ಲಿಲ್ಲ ಎಂದು ಕೆಲವರು ಗುಣ ಗುಟ್ಟುವುದುಂಟು ಉಡುಪಿನೊಡನೆ ಅವರ ಆತ್ಮವೂ ಬದಲಾಗಿಲ್ಲವೆಂಬುದು ಅವರ ಮಾನವಾತೀತ ಗುಣ ಸೂಚಿಸುವುದು ಇದನ್ನು ಮಾತ್ರ ಮರೆಯಬಾರದು ಯಾವ ದೇಹದಲ್ಲಿಯಾದರೂ ಪರಮಾತ್ಮನು ಒಬ್ಬನೇ ಆಗಿರುವಂತೆ ಯಾವ ಉಡುಪಿನಲ್ಲಾದರೂ ವೀರರು ಒಂದೇ ಬಗೆಯಾಗಿರುವರು

ಕೊಂಗ್ರೆಸು ನೆಹರುರವರನ್ನು ತನ್ನ ಪ್ರಾತಿನಿಧ್ಯ ವಹಿಸಿ ಸಾರೆಂದ ಹೇಳುಹಿಲ್ಲ ಇವರಿಗೆ ಸ್ವಲ್ಪ ವಿಶ್ರಾಂತಿ ಬೇಕಾಗಿತ್ತು ತಾವೇ ಲಂಡನಿಗೆ ತೆರಳಿದರು ವಿಶ್ರಾಂತಿ ಮಾತ್ರ ಇಲ್ಲ ಒಂದೊಂದು ವೇಳೆ ಇವರು ವಿಶ್ರಾಂತಿಯೇ ಇಲ್ಲದೆ ಭಾಷಣಾದಿಗಳಲ್ಲೇ ನಿರತರಾಗಿರುವ ಕಾರಣ ಪಕ್ಕನೆ ಸಿಡುಕನ್ನೂ ತೋರಿಸಿರುವುದುಂಟು ತಾಸಿಂದು ನಿಲ್ಲಗಿಲ್ಲ ಎಂದು ಸೂಚಿಸಿದ ಭಾಷಣಕ್ಕೆ "ಅತುದುಂಟು ಭಾರತೀಯರ ಪೈಕಿ ಇಷ್ಟು ಅವಿಶ್ರಾಂತ ಪರಿಶ್ರಮ ಮಾಡಿದವರು ಎಷ್ಟು ಮಂದಿ ಇರುವರು" ಶ್ರೀಮಂತರಲ್ಲಿ ಹುಟ್ಟಿ ಬೆಳೆದರು ತನ್ನದೆಲ್ಲವನ್ನೂ ದೇಶಕ್ಕೆ ದಾನಮಾಡಿರುವಾಗ ಅವರು ಎಲ್ಲಿದ್ದರೂ ದೇಶವಾಸಿಗಳನ್ನು ಮರೆವುದಿಲ್ಲ ಅದುಕಾರಣವೇ—ಇಷ್ಟು ಪರಿಶ್ರಮ.

ಆಗಾಗ ಜೈಲಿನ ಏಕಾಂತವಾಸದಲ್ಲಿದ್ದಾಗ ಇವರು ಹೇಗೆ ಹೊತ್ತು ಕಳೆದರೋ ತಿಳಿಯದಾಗಿದೆ.

ಕೊಂಗ್ರೆಸಿನ ಉಪಾಧ್ಯಕ್ಷ ಸ್ಥಾನವು ತನಗಿರಬೇಕೆಂದು ಅವರಲ್ಲಿ ಆಸೆಯಿತ್ತು. ಕೊಂಗ್ರೆಸಿನಲ್ಲಿ ಹಲವರಿಗೆ ಇದು ಸರಿಯೆನಿಸಲಿಲ್ಲ. ಆ ಸ್ಥಾನವು ಇವರಿಗೆ ಸಿಗಲಿಲ್ಲ, ಇವರು ತಾವಾಗಿ ಈಗ ಭಾರತ ಪ್ರತಿನಿಧಿಯಾಗಿ ಜನಾಂಗ ಸೇವೆ ಮಾಡುತ್ತಿರುವರು ಅದೂ ಕೊಡದೆನ್ನುವವರಿರಲಾರರಷ್ಟೆ ಮೂರು ವರ್ಷ ಕೊಂಗ್ರೆಸ್ ಅಧ್ಯಕ್ಷರಾದವರು ಎಷ್ಟು ಮಂದಿ ಕಾಣೇ ಇರುವರು?

ಜಿನ್ನಾ ಸಾಹೆಬರು ಮಾತ್ರ ನೆಹರುರವರು ನಡೆಸಿದ ಪತ್ರವ್ಯವಹಾರದಲ್ಲಿ, ಹಿಂದುಗಳ ನೆಹರುವೆಂದೇ ಭಾವಿಸಿ, ತುಚ್ಛೀಕಾರಯುಕ್ತವಾಗಿ ನಾನಾ ವಿಚಾರಮಾಡಿದರಾದರೂ, ಎಲ್ಲೆಲ್ಲಿಯೂ ಅವರೀಗ ಒಂದು ಸಮಾಜದ ಮಾತ್ರವಲ್ಲದೆ ಜನಾಂಗದ, ಹಾಗೂ ಮಾನವಕೋಟಿಯ ಪ್ರತಿನಿಧಿಯರೆಂದೇ ಯುರೋಪು ಅವರನ್ನು ಮನ್ನಿಸಿಯದೆ ಕೆಸರು ಕಟ್ಟಿರುವ ಕೆರೆಯೊಳಗಣ ಕಪ್ಪೆಯ ಅಭಿಪ್ರಾಯದಿಂದ ಗರುಡನ ಗೌರವವೇನೂ ಕುಂದದಷ್ಟೆ! ಕೊಂಗ್ರೆಸು ಒಂದು ಸಮಾಜದ ಸಂಸ್ಥೆಯೆನ್ನುವವರು ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಲಿ

ದೇಸಾಯಿಯವರೂ ನೆಹರುರವರೂ ಇಂಗ್ಲಾಂಡಿಗೆ ಈಗ ಹೋಗಿ ಅಲ್ಲಿ ಭಾಷಣಮಾಡುತ್ತಿರುವುದನ್ನು ಕಂಡು ಕೆಲವಂದಿ ಇವರು ಕೊಂಗ್ರೆಸಿನ ಪ್ರಾಮುಖ್ಯತೆ ಹಬ್ಬಿಸಿ ಮುಂದಿನ ಸುಧಾರಣೆಗಳನ್ನು ಹೇಗೋ ಹಾಗೆ ಮಾಡಿಕೊಳ್ಳುತ್ತಿರುವಂತೆ ಸಿಸಿಹಿಸಿ ಸಾರತೊಡಗಿದ್ದಾರೆ! ತನ್ನ ಮುಖದ ಪ್ರತಿಬಿಂಬವೇ ಇವರಿಗೆ ಎಲ್ಲೆಲ್ಲಿಯೂ ಕಾಣುವುದಾಗಿದೆ ನಾವು ಹುಲಿ ನಾವು ಸಿಂಹ, ನಮ್ಮೆಡನೆಯಲ್ಲದೆ ಯಾವ ಪ್ರಸ್ತಾಪದಿಂದಲೂ ಶಾಂತಿಯುಂಟಾಗದು ಎಂದು ಇವರೆನ್ನುವಾಗ, ಭಾರತವರ್ಷವೆಲ್ಲ ಒಂದು ಕಾಡೇ ಕಾಡುಮೃಗಗಳ ಬೀಡೇ ಎಂದ ಭಾಸವಾಗುತ್ತದೆ ಏನಹ ಚಕ್ಕ ಪ್ರಪಂಚಕ್ಕೆ ಅಹಿಂಸಾತತ್ವ ಸಾರುವ ತತ್ವದರ್ಶಿಯರೂ ರಾಜಕಾರಣ ಪುರುಷರೂ ಇಲ್ಲಿರುವಾಗ ಪ್ರಪಂಚವು ಅವರನ್ನರಿದಕ್ಕಾಗಿ ಮನ್ನಿಸುವಾಗ ಈ ಹುಲಿ ಸಿಂಹಗಳ ಚರ್ಮ ಹೊದ್ದುಕೊಂಡವರೇ ದೇಶ?

ನೆಹರುರವರು ಈಗ ವಿಲಾಯತಿಯಲ್ಲಿ ಸಂಚಾರಮಾಡುತ್ತ ಭಾರತ ಜನಾಂಗದ ಸಮಸ್ಯೆಯನ್ನು ನಿಸ್ವಾರ್ಥವೂ ಯಥಾರ್ಥವೂ ಜಗತ್ತಿನ ಕಣ್ಮುಂದೆ ಪ್ರಕಟಿಸುವುದು ಭಾರತಕ್ಕೆ ದ ಕೀರ್ತಿ ಭಾರತ ಜನಾಂಗಕ್ಕೊಂದು ಗೌರವ

ಸಾವಿತ್ರೀ ಮಾತೆಯ
ಕೇಶಚಂದನ ತೈಲ

ಕಳೆದ 76 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೀಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು

ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಅಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ

ತಲೆನೋವನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ ಅಂಗೈ ಮತ್ತು ಅಡಿಗಳು ಉರಿಯುವ ಪ್ರಕಾರಗಳನ್ನೂ ಹೋಗಲಾಡಿಸಿ ಮಿದುಳಿಗೆ ತಂಪನ್ನೂ ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ, ದೃಷ್ಟಿಯು ಚುರುಕಾಗಿಸಿ, ತಲೆಯಲ್ಲಿ ಕೂದಲ ಬುಡದಲ್ಲಿ ನಾನಾ ಕೊರೆಗಟ್ಟುವ ದುರವಸ್ಥೆಗೆ ಅವಕಾಶಕೊಡದೆ, ಸುಖ ನಿದ್ರೆಯಾಗುವಂತೆಯೂ ನಿದ್ರಾಭಂಗ ಅನಿದ್ರೆ ಮೊದಲಾದುವುಗಳಿಗೆ ಎಡೆಸಿಗದಂತೆಯೂ ಪರಿಣಮಿಸಿ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ

ಸ್ನಾನಕ್ಕೆ ಅರ್ಧತಾಸು ಮೊದಲು ತಲೆಗೆ ಹಚ್ಚಿಕೊಳ್ಳುವುದು

ಬೆಲೆ–8 ಔನ್ಸು ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್ ಬಹದ್ದೂರ್ ಎಂ. ಕೇಶವಪೈ, ಎಮ್. ಡಿ, ಓ ಬಿ ಇ. ಇವರ ಅಭಿಪ್ರಾಯ.

ಶ್ರೀಯುತ ಬಾಳಿಗರೇ,

ನೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ

ಮಾತೆಯ ಕೇಶ ಚಂದನ ತೈಲವನ್ನು ನಾನು ಉಪಯೋಗಿಸಿರುವೆನು ಅದು ತಲೆಗೆ ತಂಪನ್ನುಂಟುಮಾಡುವ ಗುಣವುಳ್ಳದು ಎಷ್ಟೋ ವರ್ಷಗಳಿಂದ ಆಗಾಗ ನನಗೆ ನಿದ್ರಾಭಂಗದ ಬಾಧೆಯಿತ್ತು, ಕೆಲವು ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನಿಮ್ಮ ಈ ಎಣ್ಣೆಯು ನನಗೆ ತುಂಬ ಗಾಢನಿದ್ರೆಯನ್ನು ಅನುಗ್ರಹಿಸಿಯದೆ ಇದರಿಂದ ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಇತರರೂ ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ಶಿಫಾರಸು

ಒಂದು ಕುಡ್ತೆ ದನವಿನ ಹಾಲು ತೆಗೆದುಕೊಂಡು ಬಿಂದಲ್ಲಿ ಆದೇ ಹಾಲಿನಲ್ಲಿ ಮೇಹದ ಮದ್ದು ಹಾಕಿ ಧಮಾರ್ಥ ಕೊಡೋಣಾಗುವದು

ಶ್ರೀ, ಎಮ್ ಸುಂದರರಾವ್, ಬಿ ಎ ,ಎಲ್ ಟಿ , ಸೆಕ್ರೆಟರಿ ಡಿ ಬೋ ಇವರ ಅಭಿಪ್ರಾಯ

ನಿಮ್ಮ ಈ ಮಾರುತೀ ಲೇಹ್ಯವು ನಿಜವಾಗಿಯೂ ಅಮೋಘವಾಗಿದೆ ಅದನ್ನು ನಾನು ಕ್ಲಪ್ತ ಕ್ರಮದಲ್ಲಿ ಸೇವಿಸಿಲ್ಲವಾದರೂ, ನಾನೀಗ ತುಂಬ ಸುಖವಾಗಿದುವದು ಉತ್ತಮ ಫಲಗಳು ನನ್ನ ದೊರೆತಿವೆ ನನ್ನ ಮಕ್ಕಳಿಗೆ ಇದು ಇಷ್ಟವಾಗಿದ್ದು ಅವು ತಾವಾಗಿ ಈ ಲೇಹ್ಯವನು ಕೊಡೆಂದು ಕಾಡುತ್ತವೆ ದೇಹವನ್ನೂ ಮನಸ್ಸನ್ನೂ ಉತ್ತೇಜನಗೊಳಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಜರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನೇಜರು,

ಡೊಂಗರಕೇರಿ ರಸ್ತೆ ಮಂಗಳೂರು, ದಕ್ಷಿಣ ಕನ್ನಡ

ಸಾವಿತ್ರೀ ಮಾತೆಯ
ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1937ನೆ ಇಸ್ವಿ ಎಪ್ರಿಲ್ ತಾ 4ರಲ್ಲಿ ಮೊದಲು ತಯಾರಿಸಿದುದಾಗಿದೆ

ಇದರಲ್ಲಿ ಅಮೋಘವಾದದಿವ್ಯ ಗಿಡಮೂಲಿಕೆಗಳೂ, ಪುಷ್ಟವಾದ ದನದ ಹಾಲು, ಬೆಣ್ಣೆ ಕುಂಕುಮ ಜೇನು ಸಕ್ಕರೆ ಸೇರಿವೆ ದುಷ್ಟವಾದ ಮಾದಕ ಪದಾರ್ಥಗಳಾಗಲಿ ಧರ್ಮವಿರುದ್ಧವಾಗಿರುವ ಯಾವ ಬಗೆಯ ಕೊಬ್ಬಾಗಲೀ ಇರುವುದಿಲ್ಲ ಯಾವನೂ ಎಷ್ಟೇ ವಯಸ್ಸಿನವನಿದ್ದರೂ–ಬಾಲಕರು ಸಹ ಇದನ್ನು ಸೇವನೆ ಮಾಡಬಹುದು ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು ಆರೋಗ್ಯ ಚೇತನಗಳನ್ನು ವರ್ಧಿಸುವುದು ದೇಹದ ಉಷ್ಣವನ್ನು ಹೋಗಲಾಡಿಸಿ ಬಹುಮೂತ್ರ ಸಿಹಿಮೂತ್ರ ಮೊದಲಾದುವನ್ನು ಗುಣಪಡಿಸಿ ಹಸಿವನ್ನು ಹೆಚ್ಚಿಸಿ ಅಂತೂ ಮನುಷ್ಯನನ್ನು ವೀರ್ಯ ಬಲಾದಿಗಳಿಂದ ಸಂಪೂರ್ಣ ಪುರುಷನನ್ನಾಗಿ ಘಟಿಸಿ ತರುತ್ತದೆ

ಬೆಲೆ – ಅರ್ಧ ರಾತ್ತಲ್ ಸೀಸೆಗೆ ರೂ 1–12–0

ಒಂದು ರಾತ್ತಲ್ ರೂ 3–0–0

ವಿಶೇಷ ಈ ಲೇಹ್ಯವನ್ನು ಸಾವಿತ್ರೀ ಮಾತೆಯ ಚಂದನ ಕೇಶ ತೈಲವನ್ನು ಉಪಯೋಗಿಸುವಾಗಲೆ ಸೇವಿಸಿದಲ್ಲಿ ಉನ್ಮಾದ ರೋಗವು ಕೂಡ ಗುಣವಾಗುವುದು

ಐದು ರೂಪಾಯಿಗೆ ಕಡಿಮೆಯಾದ ಬೆಲೆಯ ಔಷಧಗಳನ್ನು ವಿ ಪಿ ಮುಖಾಂತರ ರವಾನಿಸುವುದಿಲ್ಲ ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯ ಕಾಲಾಂಶವನ್ನು ಮುಂಗಡ ತೆರಬೇಕಾಗಿದೆ ಭದ್ರವಾಗಿ ಕಟ್ಟಿ ಕಳುಹುವ ರೈಲ್ವೆ ಯಾ ಇತರ ರವಾನಾ ಖರ್ಚು ಪ್ರತ್ಯೇಕ

ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು ವಿಳಾಸ, ರವಾನಾ ಕ್ರಮ ಅತಿ ಸಮೀಪದ ಪೋಸ್ಟ್ ಅಥವಾ ರೈಲ್ವೆ ಆಫಿಸು ಮೊದಲಾದುವನ್ನು ಪ್ರತಿ ಸಲ ಔಷಧ ಗಿರಾಕಿಗಳು ಶುದ್ಧಾಕ್ಷರಗಳಿಂದ ನಮೂದಿಸಬೇಕಾಗಿದೆ.

ಶ್ರೀ ರಾಮಕೃಷ್ಣ ಪರಮಹಂಸರು

Rev C F Andrews' 'Makers of Modern India's
ಎಂಬ ಲೇಖನದ ಆಧಾರದಿಂದ

ಬರೆದವರು — ಬಿ ರಾಘವೇಂದ್ರರಾವ್, ಮಂಗಳೂರು

ಭಕ್ತವತ್ಸಲನಾದ ಶ್ರೀಕೃಷ್ಣ ಪರಮಾತ್ಮನು ಧರ್ಮದ ಅಧೋಗತಿಯಾಗುತ್ತಿರುವುದನ್ನು ಮನಗಂಡು ಪುಣ್ಯಭೂಮಿಯಾದ ಈ ಭರತ ಖಂಡದಲ್ಲಿ ಧರ್ಮದ ಬೀಗದ ಕೈಯಂತಿರುವ ಗೀತೆಯನ್ನು ಸಕಲ ಮಾನವವರ್ಗದ ಹಿತವಾಗಲೆಂದು ಐದು ಸಾವಿರ ವರ್ಷಗಳ ಹಿಂದೆ ಉಪದೇಶಿಸಿದನು. ಧರ್ಮದ ಸಾರವನ್ನು ಎಷ್ಟು ಹೀರಿದರೂ ಸಾಕಾಗದಷ್ಟು ಸಿಹಿಯಾದ ರಸವನ್ನು ಬೇರಿನ್ನಾವ ಧರ್ಮಗ್ರಂಥದಿಂದಲೂ ದೊರೆಯದಷ್ಟು ಶ್ರೇಷ್ಠವಾಗಿ ಉಸುರಿದ ಧರ್ಮಮಾರ್ಗದರ್ಶಕವದು. ಗೀತೆಯಲ್ಲಡಕವಾಗಿರುವ ತತ್ವಜ್ಞಾನವು ಇತರ ಯಾವದೇ ಧರ್ಮಗ್ರಂಥಗಳಲ್ಲಿ ಧರ್ಮಕಾರಕರಿಂದ ಹೇಳಲ್ಪಟ್ಟಿರುವುದಿಲ್ಲ. ಪ್ರತೀ ಒಂದು ಧರ್ಮಗ್ರಂಥದಲ್ಲಿ ವಿವರಿಸಿರುವ ಯಾವದೇ ತತ್ವದ ಸಾರವಾದರೂ ಗೀತೆಯಲ್ಲಿಲ್ಲದುದಿಲ್ಲ. ಚತುರ್ವೇದಗಳೆಂಬ ಹಾಲನ್ನು ಹೆಪ್ಪಿಕ್ಕಿ ಮೊಸರು ಮಾಡಿ ಕಡೆದ ಪರಿಣಾಮವಾಗಿ ದೊರೆಯುವ ಬೆಣ್ಣೆಯಂತಿರುವುದು ಗೀತೆಯು, ಅದನ್ನು ಕಾಯಿಸಿದೊಡನೆ ಸರ್ವಶ್ರೇಷ್ಠವಾಗಿ ಸರ್ವಾದರಣೀಯವಾದ ತುಪ್ಪವು ದೊರೆಯುವುದು. ಶ್ಲೋ॥ ಮೂಕಂ। ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್। ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್। ತಾತ್ಪರ್ಯ: ಯಾರ ಕೃಪೆಯು ಮೂಕನನ್ನು ವಾಚಾಳಿಯನ್ನಾಗಿಯೂ ಕುಂಟನನ್ನು ಪರ್ವತಾರೋಹಿಯನ್ನಾಗಿಯೂ ಮಾಡುವುದೋ ಆ ಪರಮಾತ್ಮನಾದ ಶ್ರೀಕೃಷ್ಣನನ್ನು ವಂದಿಸುತ್ತೇನೆ.

"ಧರ್ಮದವನತಿಯಾಗಿ ಅಧರ್ಮವು ಘಸರಿಸುತ್ತಾ ಮುನ್ನಡೆಯುವಾಗ ನಾನು ಅವತರಿಸುತ್ತೇನೆ" (ಗೀತಾ ೪-೭) ಎಂಬುವುದಾಗಿ ಶ್ರೀಕೃಷ್ಣನು ನುಡಿದುದು ಇಂದಿನವರಿಗೂ ಪುಣ್ಯಮಯ ಭೂಮಿಯಾದ ಭರತಖಂಡದಲ್ಲಿ ನಿಜವಾಗಿ ಕಂಡು ಬಂದಿರುವುದು. ತಾತ್ವಿಕ/ಲೌಕಿಕ, ರಾಜಕೀಯ ವಿಚಾರಗಳು ಒಂದಕ್ಕೊಂದು ಜೋಡಣೆಯನ್ನಿಟ್ಟುಕೊಂಡೇ ಹೊಂದಿಕೊಂಡಿರುವುವು. ಶಾಂತಿ ಸ್ಥಾಪನೆ ಬಗ್ಗೆ, ರಾಜಕೀಯ ವಿಚಾರಗಳಾದರೆ ಲೌಕಿಕದಲ್ಲಿ ತತ್ವಜ್ಞಾನವು ಶಾಂತಿಯ ಪ್ರಚಾರಕವಾಗಿರುವುದು. ಪ್ರಚಾರಕತೆಯಿಲ್ಲದೆ ಶಾಂತಿಸ್ಥಾಪನಾಕಾರ್ಯವು ಅಸಾಧ್ಯವಾದುದಾಗಿರುವುದು. ಶಾಂತಿಸ್ಥಾಪನೆ ಒಗ್ಗಿ ರಂಜನ ಕೈಯಲ್ಲಿ ಖಡ್ಗವನ್ನು ಹಿಡಿದು ವನವಾದರೆ ಧರ್ಮಸಂಸ್ಥಾಪಕನು ರಿಕ್ತಹಸ್ತಗತನಾಗಿ ಪ್ರಚಾರವೆಂಬ ಅಹಿಂಸಾ ಕಾಯಿದೆಯಿಂದಲೇ ವ್ಯವಹರಿಯುವನು. ಗ್ರಹಸ್ಥಾಶ್ರಮಿಗಳು ಕೌಟುಂಬಿಕ ಜೀವನವನ್ನು ಸಾಗಿಸುವುದರಿಂದಲೇ ಪ್ರಜಾಭಿವೃದ್ಧಿಯಾಗಿ, ಆ ಪ್ರಜಾಪಾಲನೆಗೆ ಅವಶ್ಯವಾದ ಶಾಂತಿಮಯ ವಾತಾವರಣವು ಪ್ರತಿಗಳ ಜ್ಞಾನೋದಯದ ಮೇಲೆ ಹೊಂದಿಕೊಂಡಿರುವುದು. ಆ ಜ್ಞಾನೋದಯದ ಕಿರಣಗಳು ಧರ್ಮಸಂಸ್ಥಾಪನಾಚಾರ್ಯರಿಂದಲೇ ಹೊರಗೆಡಲ್ಪಡುವುವು. ಈ ಕಿರಣಗಳೇ ಮಾನವನಲ್ಲಿ ಮತೀಯತೆಯನ್ನುಂಟುಮಾಡುವುವು. ಕಾಲಾನುಭಾಗದಲ್ಲಿ ಅಶಾಂತಿಯು ತಲೆದೋರಿದಾಗ್ಗೆ ಮತೀಯತೆಯು ಅಧೋಗತಿಗಿಳಿಯುವುದು. ಜನರು ಧರ್ಮಾಂಧರಾಗಿ ಇಂದ್ರಿಯ ಸುಖಾಭಿಲಾಷೆಗಳಿಂದ ಅಧರ್ಮವೇ ಮಾನವನ ಗುರಿ ಎಂದು ತಿಳಿದು ಮುಂದುವರಿಯುತ್ತಿರುವಾಗ್ಗೆ ಪರಮಾತ್ಮನು ಅವತರಿಸಿ ಧರ್ಮಾಂಧತೆಯನ್ನು ಹೋಗಲಾಡಿಸಿ ಪುನರ್ಜೀವನಗೊಳಿಸುವನು.

ಹತ್ತೊಂಭತ್ತನೇ ಶತಮಾನದ ಮಧ್ಯಭಾಗದಲ್ಲಿ ಬಂಗಾಳ ಪ್ರಾಂತ್ಯದಲ್ಲಿ ಏಕೆ? ಹಿಂದೂದೇಶದ ಯಾವತ್ತು ಕಡೆಗಳಲ್ಲಿ ಭಾರತೀಯರು ಪಾಶ್ಚಾತ್ಯ ನಾಗರಿಕತೆಗೆ ಬಲಿಬಿದ್ದು ಪಾಶ್ಚಾತ್ಯರ ನಾಗರಿಕತೆಯ ದೆಸೆಯಿಂದಾಗಿ ಧರ್ಮಾಂಧತೆಯನ್ನು ಹೊಂದಿ ಪವಿತ್ರ ಆರ್ಯಧರ್ಮವು ಅಧಃಪತನವಾಗಲಿರುವ ಸಮಯ ಪರಮಾತ್ಮನು "ಶ್ರೀರಾಮಕೃಷ್ಣ" ಎಂಬ ವಿಧಾನದಿಂದ ಅವತರಿಸಿದುದರಲ್ಲಿ ಅವಹೇಳನ ಮಾಡುವವನಾರು?

ಶ್ರೀರಾಮಕೃಷ್ಣರು, ಆ ಸಮಯ ಧರ್ಮಪ್ರಚಾರಕರನ್ನು ಕೈಗೊಂಡು ಕೃತಾರ್ಥರಾದುದಲ್ಲವಾದರೆ ಇಂದಿನ 'ಬಂಗಾಳ' ಏಕೆ? ಹಿಂದುಮಾತೆಯು ಧರ್ಮ ದೇವತೆಯ ಪಾಡು ವರ್ಣಿಸಲು ಅಸಾಧ್ಯವಾಗುತ್ತಿತ್ತು. ಆ ಧರ್ಮಪ್ರಚಾರಕತೆಯ ಕಾರ್ಯದಲ್ಲಿ ಯಶಸ್ವಿಯಾದ ಶ್ರೀ ರಾಮಕೃಷ್ಣ ಪರಮಹಂಸರು ೧೮೩೬ನೇ ಇಸವಿ ಫೆಬ್ರವರಿ ತಾ ೧೮ರಲ್ಲು ಪವಿತ್ರ ಆರ್ಯಭೂಮಿಯಲ್ಲಿ ಜನ್ಮತಾಳಿದರು. ಇವರ ಜನ್ಮದಾತರು ಬ್ರಾಹ್ಮಣವರ್ಗದ ಪುರೋಹಿತರಾಗಿದ್ದು ಪೌರೋಹಿತ್ಯದಿಂದಲೇ ಜೀವನ ಸಾಗಿಸುತ್ತಿದ್ದ ಒಡಕುಟುಂಬದವರು. ಬಂಗಾಳ ಪ್ರಾಂತ್ಯದ ಹುಗ್ಲೀಜಿಲ್ಲೆಯ ಕಾಮಾರಪುಕುರ ಎಂಬ ಹಳ್ಳಿಯೊಂದರಲ್ಲಿ ತಮ್ಮ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ಅಲ್ಲಿಯೇ ಶ್ರೀ ರಾಮಕೃಷ್ಣ ಪರಮಹಂಸರು ಹುಟ್ಟಿ ಬೆಳೆದರು. ಆದರೆ ಇವರ ಮಾತಾಪಿತೃಗಳು ಬಡವರಾದುದರಿಂದ ಇವರ ವಿದ್ಯಾಭ್ಯಾಸಂಗವು ಬೆಳೆಯಲು ಅನುಕೂಲವಾದ ಅಸ್ಪದವಿರಲಿಲ್ಲ. ಆದುದರಿಂದ ಅವರು ವಿದ್ಯಾವಿಹೀನರಾಗಿಯೇ ಉಳಿದರು. ಇವರ ಹತ್ತೊಂಭತ್ತನೇ ವರ್ಷ ವಯಸ್ಸಿನಲ್ಲಿ ಅಂದರೆ ೧೮೫೫ರಲ್ಲಿ ಕಲ್ಕತ್ತೆಗೆ ಸಮೀಪವಿರುವ ದಕ್ಷಿಣೇಶ್ವರದ ಕಾಳಿಕಾ ದೇವಸ್ಥಾನದಲ್ಲಿ ಅರ್ಚಕರ ಸಹಾಯಕರಾಗಿ ನೇಮಿಸಲ್ಪಟ್ಟರು. ಶ್ರೀ ಪರಮಹಂಸರ ಕೀರ್ತಿಗಳ ಬೆಳಗಿದ ದಿನ ಇಲ್ಲಿಂದ. ಒರೇ ಪೂಜೆಯಿಂದಲೇ ಅಲ್ಲಿ ಇವರು ತೃಪ್ತಿಗೊಂಡ ಕಿರಿದು. ಅದ್ಭುತತರವಾದ ಯೋಗಾಭ್ಯಾಸದ ಶಕ್ತಿಯನ್ನು ಪ್ರದರ್ಶಿಸಿದರು. ಯೋಗಾಸನದಲ್ಲಿ ಕುಳಿತು ಗಂಟೆಗಳಷ್ಟು ಸಮಯ ಸಮಾಧಿಯಲ್ಲಿಯೇ ಇದ್ದವರಿಗೆ ಅದರ ದೆಸೆಯಿಂದ ತತ್ವಜ್ಞಾನ ಕಿರಣವನ್ನು ಜನರಲ್ಲಿ ಬೆಳಗಮಾಡುವ ತಪಶ್ಚರ್ಯದ ಅರಿವು ಇತರರಲ್ಲಿ [illegible] ಮಾಡಿದರು. ಈ ತಪಶ್ಚರ್ಯದ ಮಹಿಮೆಯಿಂದ ಇವರು ಎಲ್ಲಿ ಸರ್ವಸ್ವಗ ಪರಿತ್ಯಾಗ ಮಾಡುವರೆಂದು ಎಣಿಸಿ ಹೆದರಿಕೊಂಡು ಇವರ ಮಾತಾಪಿತೃಗಳು ೧೮೫೯ರಲ್ಲಿ ಇವರಿಗೆ ವಿವಾಹವನ್ನು ಮಾಡಿಸಿದರು. ಆದರೆ ಈ ವಿವಾಹದಿಂದ ಇವರ ಯೋಗಸಿದ್ಧಿಯಾವಳಿಗಳಿಗಾಗಲೀ ತಪಶ್ಚರ್ಯಕ್ಕಾಗಲೀ ಯಾವ ತರದ ಲೋಪವೂ ಬಂದೊದಗಲಿಲ್ಲ.

ಇದೇ ಸಮಯ ರಾಮಕೃಷ್ಣರ ಜೀವಮಾನದಲ್ಲಿ ಅತ್ಯದ್ಭುತವಾದ ಒಂದು ವಿಷಯವು ನಡೆದುದು. ಬಂಗಾಳೀ ಬ್ರಾಹ್ಮಣ ಸನ್ಯಾಸಿಯೊಬ್ಬಳು ರಾಮಕೃಷ್ಣರ ಬಳಿ ಬಂದು "ನನ್ನನ್ನು ದೇವರು ನಿನ್ನ ದೈವಿಕ ಶಕ್ತಿಯನ್ನು ಉಜ್ವಲಗೊಳಿಸುವುದಕ್ಕಾಗಿ ಕಳುಹಿಸಿರುವನು" ಎಂದು ಹೇಳಿದಳು. ಈ ಸನ್ಯಾಸಿನಿಯ ಕುರಿತು ಹೆಚ್ಚಿಗೆ ಏನೂ ತಿಳಿದುಬಂದಿಲ್ಲ. 'ಟೋಟಾಪುರಿ' ಎಂಬ ಸನ್ಯಾಸಿಯೊಬ್ಬನು ಇವರಿಗೆ ವೇದಾಂತದ ಮತ್ತು ಯೋಗಾಭ್ಯಾಸದ ಜ್ಞಾನವನ್ನಿತ್ತರು.

ಅನಂತರ ರಾಮಕೃಷ್ಣರು ವೈಷ್ಣವ ಮತದಿಂದ ನಿರಂತರ ದೊರಳುವ ದೈವಿಕಭಾವನೆಯಿಂದ ಅಚಲ ಮನಸ್ಸಿನವರಾದರು. ಬಂಗಾಳಿಗಳ ಇಂದಿನ ಏಕಮಾತ್ರ ಭಕ್ತಿಯು, ರಾಮಕೃಷ್ಣರು, ವೈಷ್ಣವ ಮತದ ಜ್ಞಾನಭಂಡಾರವನ್ನು ಸೂರೆಮಾಡಲು ಅಸ್ಪದ ಕೊಟ್ಟದುದರಿಂದಾಗಿದೆ. ಇವರು ಎಲ್ಲಾ ಮತದ ತತ್ವಗಳೆಲ್ಲಾ ವೈಷ್ಣವ ಮತದಂತೆಯೇ ಏಕಮಯವಾಗಿರುವುದೆಂದೂ, ಅವುಗಳೆಲ್ಲವೂ ಒಂದೇ ದಾರ್ಢ್ಯವನ್ನು ಸೂಚಿಸಿ, ಮಾನವರನ್ನು ಒಂದೇ ಸ್ಥಳದಲ್ಲಿ ಐಕ್ಯಗೊಳಿಸುವುದಾಗಿಯೂ, ಅವುಗಳ ಆದ್ಯಂತವು ವಿಶ್ವದ ಉದ್ಧಾರವನ್ನು ಸೂಚಿಸುತ್ತಿರುವುದೆಂದೂ ಮೊದಲಿಗರಾಗಿ ಸಾರಿದವರು. ಶ್ರೀ ರಾಮಕೃಷ್ಣರ ಈಗಿನ ಜಾತಿಮತ ಭೇದವು ತೊಲಗುವಂತೆ, ಮಾನವ ಸಮುದಾಯಕ್ಕೆ ದಿವ್ಯ ದೃಷ್ಟಿಭಾಗ್ಯವನ್ನಿತ್ತ ಪ್ರಥಮ ಅವತಾರಿಕ ಇವರು. ಇವರಿಗೆ ಮೊದಲಿನವರಾದ ಮತಸಂಸ್ಥಾಪಕರು ತಮ್ಮ ಮತವೇ ಶ್ರೇಷ್ಠವೆಂಬುದಾಗಿ ಸಾರಿದ್ದರು. ರಾಮಕೃಷ್ಣರು ಸರ್ವ ಮತಗಳೂ ಶ್ರೇಷ್ಠಸಮಾನತೆಯುಳ್ಳದ್ದು ದಗ್ಧದಿದವುಗಳಾಗಿರುವುದೆಂದು ಸಾರಿ ಜಾತಿಮತ ಭೇದಗಳಿಂದ ಉಂಟಾಗುವ ಸಕಲ ಹಾನಿಯನ್ನು ತಡೆಗಟ್ಟುವಂತೆ ಮಾಡಿ ಜ್ಞಾನಕಿರಣಗಳು ಉದಯಿಸುವಂತೆ ಬೋಧಿಸಿದವರು. ವಿಶ್ವದ ಉದ್ಧಾರಕ್ಕೆ ಇದಕ್ಕಿಂತಲೂ ಶ್ರೇಷ್ಠವಾದ ಜ್ಞಾನಮಾರ್ಗವು ಬೇರೊಂದಿಲ್ಲ. ಇವರ ಅನೇಕ ಮಹಮ್ಮದೀಯ ಮತ್ತು ಕ್ರೈಸ್ತ ಮತದ ಆಚಾರ್ಯರೊಡನೆ ವಾದಿಸಿ ಅವರನ್ನು ಈ ತಮ್ಮ ಉತ್ಕೃಷ್ಟ ಭಾವನಾಬೋಧನೆಯಿಂದ ಆನಂದ ತುಂದಿಲರನ್ನಾಗಿ ಮಾಡಿ ವಿಶ್ವಕೀರ್ತಿಯನ್ನು ಗಳಿಸಿದರು. ಸರ್ವ ಮತಾದರಣೀಯವೇ ಇವರ ತತ್ವವಾಗಿತ್ತು. ಈ ಜ್ಞಾನವನ್ನು ಬೆಳಗುವಂತೆ ಮಾಡಿದವರು ಇವರೇ ಮೊದಲಿನವರಾಗಿದ್ದು, ವೈಷ್ಣವ ತತ್ವದ ನಿಜಗುರಿಯನ್ನರಿತವರು ಇವರು ಶ್ರೀ ರಾಮಕೃಷ್ಣ ಪರಮಹಂಸರು.

ಹತ್ತೊಂಭತ್ತನೇ ಶತಮಾನದ ಅಂತ್ಯದರ್ಧಭಾಗವು ಶ್ರೀ ರಾಮಕೃಷ್ಣ ಪರಮಹಂಸರ ತತ್ವಗಳಿಂದ ಬಂಗಾಳದಲ್ಲಿ ಸುವರ್ಣಮಳೆಗರೆಯಿತು. ಇವರ ತೇಜೋಮಯವಾದ ನಾಮಕೀರ್ತಿಯು ಎಲ್ಲರ ಹೃದಯಾಂತರಾಳದಲ್ಲಿ ನೆಲೆಗೊಂಡಿತು. ಪಾಶ್ಚಾತ್ಯದ ಆಂಗ್ಲ ಭಾಷಾ ವಿದ್ಯಾಭ್ಯಾಸ ಮಾಡಿ ಅಧ್ಯಯನಗೈದ [illegible] ಇವರ [illegible] ಹಿಮಾಚಲದ ವರೆಗೆ ಬೆಳಗಿ ಬಲಿಂದ ಪಾಶ್ಚಾತ್ಯ [illegible] ವಿಶ್ವವ್ಯಾಪಿಯ ವಿಶ್ವಪ್ರೇಮದ ವಿಶ್ವಸೇವೆಯೇ ಬೇರೆಂತದ ಗುರಿಯೆಂದು ಸಾರಿದ ಶ್ರೀ ವಿವೇಕಾನಂದರ ಕೀರ್ತಿಯು ವಿಶ್ವವ್ಯಾಪಿಯಾದುದು. ಅವರು ರಾಮಕೃಷ್ಣರ ಶಿಷ್ಯರಾದುದರಿಂದಲೇ. ರಾಮಕೃಷ್ಣರ ನಿಷ್ಕಪಟ ಸ್ವಭಾವವೂ, ಸರಳತೆಯೂ, ನಿಷ್ಕಲ್ಮಷ ಪ್ರೇಮವೂ, ದಯಾಮಯವಾದ ಕಿರಣಗಳಿಂದೊಡಗೂಡಿದ ಕೋಮಲ ಮುಖವೂ ಆ ಸಮಯದ ಬ್ರಹ್ಮಸಮಾಜದ ಮುಂದಾಳುಗಳಾದ ಕೇಶವ ಚಂದ್ರ ಸೇನರ ಮನಸೆಳೆದು ರಾಮಕೃಷ್ಣರನ್ನು ಮೊದಲನೆಯದಾಗಿ ಅತಿ ಮಾನ್ಯ ಪ್ರಕಟಗೊಳಿಸಿದರು. ಸೇನರ ಇವರ ಈ ಸಾರುವಿಕೆಯಿಂದ ಬಂಗಾಳವು ನವಚೇತನವನ್ನು ಹೊಂದಿ ಸ್ಫೂರ್ತಿದಾಯಕವಾದ ಆಕರ್ಷಣತೆಯನ್ನು ರಾಮಕೃಷ್ಣರು ಪಡೆದರು.

ರಾಮಕೃಷ್ಣರ ವಿಶ್ವಸೇವೆಯ ಮಹತ್ತಿಕೆಯನ್ನು ಈಗಲೂ ತನ ಮಂದಿರಗಳನ್ನಸಿರಿಸಿ ಸಾರುತ್ತಿರುವ ಶ್ರೀ ರಾಮಕೃಷ್ಣ ಮಿಶನ್ ಎಂಬ ಸಂಸ್ಥೆಯು, ಅವರ ಪ್ರಿಯತಮ ಶಿಷ್ಯರಾದ ಶ್ರೀ ವಿವೇಕಾನಂದರ ಪರಿಶ್ರಮಯುಕ್ತವಾದ ಚಟುವಟಿಕೆಗಳಿಂದ ಬಸ್ತವೆತ್ತಿದಾದರೂ, ಅದರ ಆಧಾರ ಸ್ತಂಭವು ರಾಮಕೃಷ್ಣ ಪರಮಹಂಸರೇ ಆಗಿರುವರು. ಸ್ವಾಮಿ ವಿವೇಕಾನಂದರೇ ಅದನ್ನು ಸ್ಥಾಪಿಸಿದವರಾದರೂ, ಇಂದಿನ ಭಾರತೀಯರು ಅದನ್ನನುಸರಿಸುವುದು ಶ್ರೀ ರಾಮಕೃಷ್ಣ ಪರಮಹಂಸರೇ ಜಗದ್ರಕ್ಷಕರೆಂಬ ಭಾವನೆಯಿಂದಾಗಿರುವುದು. ಇವರು ಹಿಂದಿನ ಮತೀಯತೆಯ ಅಂಧಶ್ರದ್ಧೆಯನ್ನವಲಂಬಿಸಿ ಪಾಷಂಡಿತನದಿಂದ ಮತದ ಕಟ್ಟುಕಟ್ಟಳೆಗಳನ್ನು ಪರಿಪಾಲಿಸಿಕೊಂಡು ಬರಬೇಕೆಂಬ ನಿಯಮಾವಳಿಗಳನ್ನು ತೊಲಗಿಸಿ, ವಿಶ್ವಬಾಂಧವ್ಯವನ್ನು ಸೂಚಿಸುವ ವಿಶ್ವಸೇವೆಯೇ ವೇದಾಂತದ ಗುರಿಯೆಂದು ಪಾಶ್ಚಾತ್ಯರೂ ಕೂಡ ಬಾಯಿ ಬಾಯಿ ಬಡೆದುಕೊಂಡು ವೇದಾಂತವೇ ಧರ್ಮವಾಗಿರುವುದು! ಎಂಬ ಭಾವನೆಯಿಂದ ವಿಶ್ವಸೇವೆಯಲ್ಲಿ ನಿರತರಾಗುವಂತೆ ಮಾಡಿ ಭರತಖಂಡವು ಪಾಶ್ಚಾತ್ಯರೊಡನೆ ಸರಿಸಮಾನತೆಯನ್ನು ಕೋರುವಂತೆ ಮಾಡಿದರು.

ತಮ್ಮ ಪ್ರಿಯತಮ ಶಿಷ್ಯರಾದ ಶ್ರೀ ವಿವೇಕಾನಂದರ ಮುಖಾಂತರವೇ ತಮ್ಮ ತತ್ವಗಳನ್ನು ಸ್ಫೂರ್ತಿದಾಯಕವಾಗಿ ಸಾರಲ್ಪಡುವಂತೆ ಅನುಗ್ರಹಿಸಿದರು. ಅವರ ತತ್ವಗಳು ಹಿಂದೂ ತತ್ವವನ್ನೇ ಆಧಾರವಾಗಿದ್ದವುಗಳಾಗಿ ಹಿಂದೂ ತತ್ವವನ್ನೇ ಕೈಗೊಳ್ಳುವಂತಿರುವುದು. ಮುಂದಣ ಜನಾಂಗವು ಮತದ ಸೇವೆಯಿಂದಲೇ ಮುಂದುವರಿದು ಮನಸ್ವರ್ಗವೇ ಪ್ರೇಮಾಲಿಂಗನೆಯಿಂದ ಬದುಕಿಬಾಳುವ ಚಾರ್ತುರ್ಯೆಯಿಂದೊಡಗೂಡಿದುದಾಗಿರುವುದು. ಈ ಆಲಿಂಗನಕ್ಕೆ ಜಾತಿಮತಗಳೆಂಬ ಬೇಧಭಾವದ ತಾತ್ಪರತೆಯು ಇರುವುದಿಲ್ಲ. ವಿಶ್ವಸೇವೆಯ ಪರಮಾವಧಿಯು, ಬಡವರ ಗೋಳನ್ನು ಅಡಗಿಸುವ ಕಾರ್ಯ ನಿರತವಾಗುವುದರಲ್ಲಿಯೇ ಇದೆ ಎಂದು ಬದಿ ನೋಡಿ, ತೋರಿದ ರಾಮಕೃಷ್ಣರ ಮೂಲಾಧಾರವಾದುದಾಗಿದೆ.

ಶ್ರೀ ರಾಮಕೃಷ್ಣ ಮಿಶನಿನವರು ತಮ್ಮ ಪ್ರಚಾರಕತೆಯಲ್ಲಿ ಎಷ್ಟರ ವರೆಗೆ ಜಯ ಪ್ರದರಾಗುತ್ತಿರುವರೆಂಬುದನ್ನು ಹೇಳುವುದು ಸುಲಭಸಾಧ್ಯವಲ್ಲದಿದ್ದರೂ ಹಿಂದೂದೇಶದಿಂದ ಸಾರಲ್ಪಟ್ಟ ಎಲ್ಲಾ ಮತಗಳಿಗಿಂತಲೂ ಇದು ಮಿಗಿಲಾಗಿ ಅನ್ಯ ದೇಶದ ಜನಾಂಗಗಳಲ್ಲಿ ಚೇತನವನ್ನು ಉಂಟುಮಾಡಿ ವಿಶ್ವಸೇವೆಯ ಮಹಿಮೆಯನ್ನು ಸ್ಪಷ್ಟವಾಗಿ ಹರಡಿಸಿ ಹೃದಯಾಂತರಾಳವನ್ನು ಸೇರಿರುವುದು.

ಪಾಶ್ಚಾತ್ಯರಾದ 'ರೋಮೈನ ರೊಲೇಂಡು' ವೆಂಬವರು ರಾಮಕೃಷ್ಣರ ಕುರಿತು ಕೊಟ್ಟ ತನ್ನ ಅಭಿಪ್ರಾಯವನ್ನು ಇಲ್ಲಿ ವಿಶದೀಕರಿಸದಿದ್ದರೆ ಈ ಲೇಖನವು ಸಂಪೂರ್ಣವಾಗ ಮುಗಿಯುವುದಿಲ್ಲ. "ರಾಮಕೃಷ್ಣರು ಹಳ್ಳಿಯಲ್ಲಿ ಜನ್ಮವೆತ್ತಿ ಹಳ್ಳಿಗರೊಡನೆ ಬೆಳೆದು ಜನ್ಮಾಂತ್ಯದ ವರೆಗೂ ಓದುಬರಹದ ಜ್ಞಾನವಿಲ್ಲದವರಾಗಿದ್ದು ಅವರು ಸಾರಿದ ತತ್ವಜ್ಞಾನದ ಮಹಿಮೆಯು ಬಂಗಾಳದ ಪಾಶ್ಚಾತ್ಯ ನವನಾಗರಿಕತನಕ್ಕೆ ಬಲಿಬಿದ್ದ ಸುಶಿಕ್ಷಿತ ಜನರಲ್ಲಿ ಮೊದಲನೆಯವಾಗಿ ಹರಡಿ ಅವರ ಜೀವನದಲ್ಲಿಯೇ ಆತ್ಯದ್ಭುತವಾದ ಮಾರ್ಪಾಟನ್ನುಂಟುಮಾಡಿದ ವಿಚಾರವು ಅತ್ಯಮೋಘವಾಗಿರುವುದು. ಅಲ್ಲಿಂದ ಅದು ತನ್ನ ಕಿರಣಗಳನ್ನು ಹಳ್ಳಿಹಳ್ಳಿಗಳಿಗೂ ಒಡಟಿಗರ ಮೇಲೂ ಪಸರಿಸಿ ನವಚೈತನ್ಯ ಮಾಡಿತು."

ಬಂಗಾಳವು ಪಾಶ್ಚಾತ್ಯರ ನಾಗರಿಕತನಕ್ಕೆ ಬಲಿಬಿದ್ದು ಅನಾಗರಿಕತನವೇ ಒಂದು ಫ್ಯಾಶನ್ ಆಗಿ ಜನ ಸರಿಸುತ್ತಿರುವಾಗ ಜನರಿಗೆ ನಿಜವಾಗಿ ಆ ಫ್ಯಾಶನಿನಲ್ಲೊಂದು ಅಸದುದ್ದಾನತೆಯನ್ನು ತಲೆದೋರಿ ಜಾಗುಪ್ಸಿಕವಾದ ಜೀವನದ ಅರಿವು ಉಂಟಾಗುತ್ತಿರುವ ಸಮಯ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ನವಸ್ಫೂರ್ತಿದಾಯಕವಾದ ಉಪದೇಶದಿಂದ ಪತ್ರಕ್ಷವಾಗಿ ಸೌಂದ ವಿಚಾರವು ಚರಿತ್ರಾರ್ಹವಾಗಿರುವಂಗಿದೆ. ಇಂದಿನ ಬಂಗಾಳವು ಹಿಂದುತ್ವದ ಧ್ವಜಾರೋಹಣದಿಂದ ದೊರೆತ ಮಾನುಷತ್ವದ ಪರಿಣಾಮವಾಗಿ, ಸರಳತೆಯಿಂದಲೂ, ಕುಶಲತೆಯಿಂದಲೂ, ವಿಶ್ವಪ್ರೀತಿಯಿಂದಲೂ ವಿಶ್ವಬಾಂಧವ್ಯವನ್ನು ಗಳಿಸುವುದರಲ್ಲಿ ಲೀನವಾಗುವುದಾಯಿತು. ರಾಮಕೃಷ್ಣರ ಉಪದೇಶಾಮೃತವು ಅವರನ್ನು ಎಲ್ಲಾ ದುಷ್ಪರಿಣಾಮಗಳಿಂದ ಉದ್ಧರಿಸಿ ರಕ್ಷಿಸಿತು. ಶಾಂತಿಯನ್ನು ಪಸರಿಸಿತು.

ಓಂ! ಶಾಂತಿ!! ಶಾಂತಿ!!!

ಮದನಕಾಮೇಶ್ವರೀ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಡೇಪಿ.
P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್, ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

MIRA TOILET ARTICLES

"MIRA PRODUCTS" are of such excellence that they could compare favourably with the famous perfumes and toilet articles used by Indian Rulers in the glourious past.

H. H. The Maharajah of Sonepur

The Hon'ble Mr. B. K. Basu, C. I. E.

"MIRA" Products are in no way inferior to similar foreign products.

Sole Agents:

The Modern Trading Company,
Opp. City Press, MANGALORE.

Wanted a Canvassar to Book orders for Mira Products on pay or commission.

ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವ, ಅತ್ಯುತ್ಕೃಷ್ಟವಾದ

'ಸ್ವದೇಶಾಭಿಮಾನಿ' ವಾರ ಪತ್ರಿಕೆಗೆ

ಈ ದಿನವೇ ಚಂದಾದಾರರಾಗಿರಿ.

ಫೆನ್ಸಿ ಶರ್ಟಿಂಗ್

ಮಂಜು ಬಣ್ಣದ್ದು ಅತಿ ಮೃದುವಾದುದು, ಮತ್ತು ದೀರ್ಘ ಬಾಳಿಕೆಯದು.
9 ಗಜ×54"–6 ಶರ್ಟುಗಳಿಗೆ ಸಾಕಾಗುವುದು. ಕ್ರಯ ರೂ. 5–8–0
ಟಪ್ಪಾಲು ಖರ್ಚು ಧರ್ಮಾರ್ಥ. ಇದರೊಡನೆ 6 22"×22" ಫೆನ್ಸಿ ಕರವಸ್ತ್ರಗಳು ಉಚಿತವಾಗಿ ಕೊಡಲಾಗುವವು.
ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.
ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ದಿ ನೇಶನಲ್ ಟ್ರೇಡಿಂಗ್ ಕಂಪೆನಿ,

ಲೂದಿಯಾನಾ, A 211.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಳವಾಪೂರ್ಹಿದು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ. ಪಿ. ಅಣೆ ೩

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)

ಮೌನವಾಗಿ



ನರಳುವವರು

ಅನೇಕ ಮಂದಿಗಳಿಗೆ ಅವರ ಸಂಕಟದ ಕಾರಣಗಳು ತಿಳಿಯವು, ಇನ್ನನೇಕರಿಗೆ ಅವುಗಳು ತಿಳಿದಿದ್ದರೂ ಅದನ್ನು ಡಾಕ್ಟರರೊಡನೆ ತಿಳಿಸಲು ನಾಚಿಕೆಗೊಳ್ಳುವರು. ಇವರೀರ್ವರಿಗೂ ಒಂದು ಮಹಾ ವರವಿರುವುದು.

ಜೀವಾಮೃತ ದಲ್ಲಿ

ಅದು ಅಶಕ್ತತೆಯನ್ನು, ಅದರ ಕಾರಣಗಳು ಯಾವವೇ ಇರಲಿ ಹೋಗಗೊಳಿಸುತ್ತದೆ. ನಿಮ್ಮ ದೇಹಕ್ಕೆ ಸಂಪೂರ್ಣ ಹೊಸ ಹುರುಪನ್ನು ಕೊಡುತ್ತದೆ. ಬಲ, ನವಚೇತನವನ್ನು ಕೊಡುತ್ತದೆ.

ಪರಿಣಾಮಗಳು ಕೆಡುವ ಮೊದಲು, ಇದರ ಪರೀಕ್ಷೆಯನ್ನು ಮಾಡಿರಿ.

ಎಲ್ಲಾ ದವಾಖಾನೆಗಳಲ್ಲಿ ದೊರಕುತ್ತದೆ.

ಆಯುರ್ವೇದಾಶ್ರಮಂ, ಟಿ. ಪೆ. ನಂಬ್ರ 287 ಮದ್ರಾಸು.

ಸ್ಟಾಕಿಸ್ಟರು: —
ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

The

Agricultural & Industrial Bank, Ltd.,

(Incorporated in British India.)

Head Office "LAXMINIVAS BUILDINGS" *Coondapoor.*

BRANCHES:–

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:-

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS. 10, 25, 50, 100, 250, 500 & 1000,

REDEEMABLE AT ANY TIME.

CUMULATIVE DEPOSITS ARE ACCEPTED

Current Deposits

From January to June 2%
and
From July to December 1%

Savings Bank Deposits

3½ per cent per annum

Fixed Deposits

for 6	Months	3½%
„ 1	Year	4%
„ 2	Years &above	4½%

For Further Particulars Apply to:–

HEAD OFFICE or BRANCHES

ಓದದೆ ಬಿಡತಕ್ಕ ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ ಸಾಪ್ತಾಹಿಕ ಪತ್ರಿಕೆ
ಎಂದಿನಂತೆ ಇಂದಿಗೂ ಆದರಣೀಯವಾಗಿದೆ.

Wanted Urgently

A Medical Practitioner L. M. P. or L. I. M. for the Rural Dispensary Dharmastala on a salary of Rs. 30/– per mensum.

(L. I. M. Preffered)

President.
Panchayat Board
Dharmastala, S. K.

Buy Advertised Goods

ಭಾರತೀಯ ಕಾಂಗ್ರೆಸು

ಎಂದರೆ

ರಾಜಕಾರಣದಲ್ಲಿ ಅದು ಶಕ್ತಿಸಂಪನ್ನ ಸಂಸ್ಥೆ

★

ಭಾರತದಲ್ಲೀಗ ಬ್ರಿಟಿಷ ಅಧಿಕಾರಕ್ಕಿಂತಲೂ ಮೇಲಾಗಿ ಶಕ್ತಿಯುತವಾದ ಕಾಂಗ್ರೆಸಿನ ಅಧಿಕಾರವಿದೆ ಎಂದು ಆಂಗ್ಲೇಯ ನಿರೀಕ್ಷಕರೊಬ್ಬರು ರೋಯ್ಸ್ ವೀಕ್ಲಿಯಲ್ಲಿ ಬರೆಯುತ್ತಾರೆ. ಬ್ರಿಟಿಷ ಇಂಡಿಯದಲ್ಲಿ ಈಗ್ಯೆ ಕೆಲವು ವರ್ಷಗಳಿಂದ, ಮೈಸೂರು ಸಂಸ್ಥಾನದಲ್ಲಿ ಮೊನ್ನೆ ತಾನೇ ನಡೆದ ಅನೇಕಾನೇಕ ಘಟನೆಗಳಿಂದ ಈ ಮಾತು ಸಿದ್ಧವಾಗುತ್ತದೆ ಒಂದು ಕಡೆಯಿಂದ ಭಾರತದಲ್ಲಿ ಭಾರತೀಯ ಕಾಂಗ್ರೆಸಿನ ಪ್ರತಿಷ್ಠೆ ಪ್ರಭಾವಗಳು ಬೆಳೆಯುತ್ತಿರುವಾಗ ಇನ್ನೊಂದು ಕಡೆಯಿಂದ ಇಲ್ಲಿ ಬ್ರಿಟಿಷರ ಪ್ರತಿಷ್ಠೆ ಪ್ರಭಾವಗಳು ಕುಂದುತ್ತ ಇವೆ ಎಂಬ ಅಂಶವು ಆ ನಿರೀಕ್ಷಕರ ಈ ಲೇಖನದ ಸಾರಾಂಶದಿಂದ ಸ್ಪಷ್ಟವಾಗುತ್ತದೆ

ಭಾರತೀಯ ರಾಜಕಾರಣದಲ್ಲಿ ಇಂದು ನಡೆಯುತ್ತಿರುವ ಘಟನಾವಿಶೇಷಗಳ ಪ್ರಾಮುಖ್ಯತೆಯನ್ನು ಜನರು ಚೆನ್ನಾಗಿ ತಿಳಕೊಂಡಿದ್ದಾರೆಯೆ ಎಂದು ನನಗೆ ಆಶ್ಚರ್ಯವಾಗುತ್ತದೆ ಕಾಂಗ್ರೆಸ್ಸಿಗೆ ತನ್ನ ರಾಜದಲ್ಲಿ ಯಾವ ಸ್ಥಾನವನ್ನು ಕೊಡದಿದ್ದರೆ ಬ್ರಿಟಿಷ ಶ್ರೇಷ್ಠ ಅಧಿಕಾರವನ್ನು ತಾವು ಮನ್ನಿಸಿದಂತಾಗಿ ತಮ್ಮ ಕರ್ತವ್ಯವು ಮುಗಿಯಿತೆಂದು ಸಂಸ್ಥಾನಾಧಿಕಾರಿಗಳು ತಿಳಿಯುತ್ತಿದ್ದ ಒಂದು ಕಾಲವಿತ್ತು ಆದರೆ ಇಂದು ನಾವು ಮೈಸೂರಿನಲ್ಲಿ ಏನನ್ನು ನೋಡುತ್ತೇವೆ?

ಮೈಸೂರು ಸರಕಾರವು ಪ್ರತ್ಯಕ್ಷವಾಗಿ ಪ್ರಕಟವಾಗಿ ಭಾರತೀಯ ಕಾಂಗ್ರೆಸಿನೊಂದಿಗೆ ಸಂಧಾನಪ್ರಯತ್ನಗಳನ್ನು ನಡೆಸುತ್ತ ಇದೆ ಶ್ರೇಷ್ಠ ಅಧಿಕಾರವು ಬ್ರಿಟಿಷ ಅರಸರಿಗಿರುವುದಿಲ್ಲ ಕಾಂಗ್ರೆಸಿಗೇ ಇರುವಂತೆ ಅದು ತಿಳಿದ ವರ್ತಿಸುತ್ತದೆ ಕಾಂಗ್ರೆಸ ಕಡೆಯಿಂದ ಸರದಾರ ಪಟೇಲರು ಮೈಸೂರು ರಾಜದರಬಾರದಲ್ಲಿ ರಾಯಭಾರಿಗಳಾಗಿದ್ದಾರೆ. ಮೈಸೂರು ದಿವಾನರು ಪಟೇಲರನ್ನು ಕರೆಸಿ ಅವರಿಗೆ ಸಂದರ್ಶನವನ್ನು ಕೊಡುತ್ತಾರೆ ಮೈಸೂರು ಕಾಂಗೆಸ ಕಮಿಟಿಯು ಸರಕಾರದ ಆಡಳಿತದೊಡನೆ ಸಂಧಿಯನ್ನು ಮಾಡುತ್ತದೆ

ಹೀಗಾಗಬೇಕಿತ್ತೋ. ಮೈಸೂರಿನಲ್ಲಿ ಹಾಗೆಯೇ ಆಗುತ್ತಲಿದೆ ಎಂದು ನಾವೆಂದುಕೊಳ್ಳಬಹುದು ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಯಿಲರ ಉದಾರ ಸರಳಸ್ವಭಾವಗಳ ವರ್ಣನವನ್ನು ನಾನು ಹಿಂದೆ ಹಲವು ಬಾರಿ ಕೇಳಿದ್ದೆ ಅದಕ್ಕೆ ಪ್ರತ್ಯಕ್ಷ ನಿದರ್ಶನವು ನನಗೆ ಈಗ ದೊರೆಯಿತು ವಿದುರಾಶ್ವತ್ಥ ಗುಂಡುಗಳು ಎಲ್ಲರಿಗಿಂತ ಹೆಚ್ಚಾಗಿ ಅವರನ್ನು ಚಂಗುಪಡಿಸಿವೆ ದೇಶದ ಪರವಾಗಿ ತಮ್ಮ ಕರ್ತವ್ಯ ನಿರ್ವಾಹ ಮಾಡುವಾಗ ಸಶಸ್ತ್ರಪೋಲೀಸರನ್ನು ಎದುರಾಯಿಸುವ ಹಳ್ಳಿಗರ ಎದೆಗಾರಿಕೆಯ ಮಹತ್ವವೆಷ್ಟೆಂಬುದನ್ನು ಅವರು ತಿಳಿದಷ್ಟು ಚೆನ್ನಾಗಿ ಬೇರೆಯವರು ತಿಳಿದಿರಲಿಕ್ಕಿಲ್ಲ ಈ ಪ್ರಕರಣದಲ್ಲಿ ಅವರು ಇಷ್ಟು ಮಾತ್ರಕ್ಕೂ ಛಲಧುರಭಿಮಾನವನ್ನು ತೋರಿಸಿಲ್ಲ ಮೈಸೂರಿನಲ್ಲಿ ಎಲ್ಲರಿಗಿಂತ ಹೆಚ್ಚಾದ ದೇಶಪ್ರೇಮ-ಅಭಿಮಾನಗಳನ್ನು ಮಿರ್ಜಾ ಇಸ್ಮಾಯಿಲರು ಪ್ರಕಟಿಸಿದ್ದಾರೆ. ಅದರಿಂದ ಅವರ ಆಡಳಿತದ ಮಾನವು ಎಷ್ಟೋ ಬೆಳೆದಿದೆ

ಆದರೆ ಈ ಎಲ್ಲ ಘಟನೆಗಳ ಹಿಂದುಗಡೆ ಯಾವ ಅಪ್ರತಿಮ ಶಕ್ತಿಯು ಕೆಲಸಮಾಡುತ್ತಾ ಇದೆ ಎಂಬುದನ್ನು ನಾವು ತಿಳಿಯಬೇಕು ಬ್ರಿಟಿಷ ಅಧಿಕಾರಕ್ಕೆ ಮೇಲಾಗಿ ಈಗ ಭಾರತದಲ್ಲಿ ಕಾಂಗ್ರೆಸ ಅಧಿಕಾರವು ಸ್ಥಾಪಿತವಾಗಿದೆ. ಇನ್ನೂ ಫೆಡರೇಶನು ಬಂದಿಲ್ಲ ಸಮ್ರಾಟರ ಪ್ರತಿನಿಧಿಗಳಾಗಿ ವಾಯ್ಸರಾಯರು ಈಗಲೂ ಸಂಸ್ಥಾನಗಳ ಮೇಲೆ ಅಧಿಕಾರ ನಡೆಸುತ್ತಾರೆ ಅವರ ರಾಜಕಾರಣ ಖಾತೆಯು ಈಗಲೂ ಚೇತನಮಯವಾಗಿದೆ ಆದರೂ ಕೂಡ ರಾಜ್ಯದಲ್ಲಿ ಶಿಸ್ತುವ್ಯವಸ್ಥೆಯ ಸಂಗತಿಗೂ ಕಾನೂನ ಕಾಯದೆಗಳಿಗೆ ಜನರ ಮನ್ನಣೆ ದೊರೆಯಲಿಕ್ಕೂ ಮೊದಲಿನಂತೆ ಒಂದ ಸಂಸ್ಥಾನವು ರೆಸಿಡೆಂಟರ ಸಹಾಯವನ್ನು ಅಪೇಕ್ಷಿಸುವುದಿಲ್ಲ ರಾಜಕೀಯ ಖಾತೆಯು ಸಹಾಯವನ್ನು ಬೇಡುವದಿಲ್ಲ, ಆದರೆ ಭಾರತೀಯ ಕಾಂಗ್ರೆಸಿನ ಅಖಂಡ ಮಂಡಲದ ಸಹಾಯ ಒಲವುಗಳನ್ನು ಅಪೇಕ್ಷಿಸುತ್ತದೆ

ಇದರ ಅರ್ಥವೇನೆಂದು ಗೊತ್ತಾಯಿತೆ ? ಬ್ರಿಟಿಷರ ಇಲ್ಲಿ ತಮ್ಮ ಹಕ್ಕು ಅಧಿಕಾರಗಳು ಯಾವಪ್ರಕಾರ ಕಾಯ್ದಿಟ್ಟುಕೊಳ್ಳುವೆವು ಎಂದು ಭಾವಿಸಿದ್ದಾರೆ ಬ್ರಿಟಿಷ ಅಧಿಕಾರಿಗಳ ಮಾತುಗಳಿಗೆ ಇಲ್ಲಿ ಮಾನ್ಯತೆ ಇರುತ್ತದೆಂದು ತಿಳಿದಿದ್ದಾರೆ ಆದರೆ ವಸ್ತುಸ್ಥಿತಿ ಏನು? ಮೊಗಲರ ಕಾಲದಲ್ಲಿ ವ್ಯಾಪಾರ ಮಾಡಲಿಕ್ಕೆ ಕೆಲವು ಅನುಕೂಲತೆಗಳನ್ನು ತನಗೆ ಕೊಡಬೇಕೆಂದ ಮುಗಲ್ ಬಾದಶಹರನ್ನು ಕೇಳಿದ್ದಾಗ ಇಂಡಿಯದಲ್ಲಿ ಬ್ರಿಟಿಷ ವರ್ತಕರ ಸ್ಥಿತಿಗತಿಗಳು ಇದ್ದುವೋ ಅವೇ ಸ್ಥಿತಿಗತಿಗಳಿಗೆ ಬ್ರಿಟಿಷರು ಭಾರತದಲ್ಲೀಗ ಇಳಿಯುತ್ತಿದ್ದಾರೆ ಈಗ ಆಳುವದು ಎಂಬ ಶಬ್ದದ ನಿಜವಾದ ಅರ್ಥದಲ್ಲಿ ಭಾರತವನ್ನು ಆಳುತ್ತಿರುವದಿಲ್ಲ ಕಾಂಗ್ರೆಸ ಪ್ರಾಂತ್ಯಗಳಲ್ಲಿ ಮಾತ್ರವಲ್ಲ ಸಂಸ್ಥಾನಗಳಲ್ಲಿ ಕೂಡ ಜನರು ತಮ್ಮ ಸ್ವಾತಂತ್ರ್ಯ ಹಕ್ಕು ಅಧಿಕಾರಗಳನ್ನು ತಿಳಕೊಂಡಿದ್ದಾರೆ. ಈಗ ಪ್ರತಿಯೊಂದು ವಿಷಯವನ್ನು ಬ್ರಿಟಿಷರ ಮನೋಇಚ್ಛೆಯ ನಿರ್ಧರಿಸುವದಿಲ್ಲ, ಪರಂತು ಭಾರತೀಯ ಜನಮತವು ಅದನ್ನು ನಿರ್ಧರಿಸುತ್ತದೆ

ಜನರು ಒಂದಾಗಿ ಚಳವಳಿಸಬೇಕು, ಆಗ ಸರಕಾರವು ತಾನಾಗಿ ಜನಮತಕ್ಕೆ ಒಗ್ಗುತ್ತದೆ ಎಂಬದು ಇದರಿಂದ ಸ್ಪಷ್ಟವಾಯಿತು ಬ್ರಿಟಿಷರಾಜರಿಗೆ ಇದ ತನಕ ಭಾರತದಲ್ಲಿದ್ದ ಅಧಿಕಾರ ಪ್ರತಿಷ್ಠೆಗಳು ಈಗ ಕುಂದಲಾರಂಭಿಸಿವೆ ಇದರ ದೃಷ್ಟಾಂತಗಳು ಯಾವುವೆಂದರೆ— ಸಂಯುಕ್ತ ಪ್ರಾಂತ್ಯ, ಬಿಹಾರಗಳಲ್ಲಿ ರಾಜಕೀಯ ಮಂತ್ರಿಗಳು ಪುನಃ ತಮ್ಮ ಪದವಿಗಳನ್ನು ಸ್ವೀಕರಿಸಬೇಕಾದರೆ ಅಲ್ಲಿಯ ಗವರ್ನರುಗಳು ತಾವು ಮೊದಲು ಆಡಿದ ಅಧಿಕಾರ ಪ್ರತಿಷ್ಠೆಯ ಮಾತುಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು ಕಾಂಗ್ರೆಸ ಜನಮತಕ್ಕೆ ತಲೆಬಾಗಿಯೇ ಬ್ರಿಟಿಷರು ಒರಿಸ್ಸದ ಗವರ್ನರ ಪದವಿಯನ್ನು ಒರಿಸ್ಸದ ಮಂತ್ರಿಗಳ ಅಭಿಪ್ರಾಯಕ್ಕೆ ಬಲಿಕೊಡಬೇಕಾಯಿತು

ಎಲ್ಲ ಲೀಡರ್ ಲಿನ್ಲಿತ್‌ಗೋ ಮತ್ತು ಅವರ ಬ್ರಿಟಿಷ ಸರಕಾರವೇ ತಲೆಬಗ್ಗಿಸಬೇಕಾಗಿದೆಯೋ ಅಲ್ಲಿ ಸರ್ ಮಿರ್ಜಾ ಇಸ್ಮಾಯಿಲರ ತಲೆ ಬಗಿಸಿದರೆ ಆಶ್ಚರ್ಯವಿಲ್ಲ ಭಾರತೀಯರಾಗಿ ಭಾರತೀಯರಿಗೆ ಅವರು ಬಗಿಸುದರಲ್ಲಿ ಒಂದು ಬಗೆಯ ಗೌರವವಿದೆ ಅಭಿಮಾನವಿದೆ ಅದರಿಂದಾಗಿಯೇ ಸರಕಾರ ಮತ್ತು ಪ್ರಜಾವರ್ಗದ ಕಡಿದ ಹೋದ ಸ್ನೇಹಸಂಬಂಧವು ಪುನಃ ಕಟ್ಟಿಬರ ತೊಡಗಿತು ಕಾಂಗೆಸು ಮುಂದಾಳುಗಳು ಸೇರಿರುವ ಮೈಸೂರು ಸುಧಾರಣಾ ಕಮಿಟಿಯಿಂದ ಶಿಫಾರಸು ಮಾಡಲ್ಪಡುವ ಪ್ರಕಾರ ಮೈಸೂರು ಮಹಾರಾಜರು ಜಾರಿಗೆ ತರುವ ಆ ರಾಜಕೀಯ ಸುಧಾರಣೆಗಳು ಹೇಗೆ ಕೆಲಸ ಮಾಡುವವೆಂಬುದನ್ನು ಪ್ರತಿಯೊಬ್ಬರು ಕುತೂಹಲದಿಂದ ನೋಡುವರು ಮೈಸೂರು ಇವತ್ತು ಮಾಡಿದ ದನ್ನೇ ನಾಳೆ ಉಳಿದ ಸಂಸ್ಥಾನಗಳು ಮಾಡುವವು ಯಾಕೆಂದರೆ ಸಂಸ್ಥಾನಗಳಿಗೆಲ್ಲ ಮೈಸೂರೇ ಮುಂದಾಳುವಾಗಿರುವುದು ಮೈಸೂರಿನ ಅನುಕರಣೆಯನ್ನು ಎಲ್ಲ ಸಂಸ್ಥಾನಗಳೂ ಮಾಡುವವು

ಜಪಾನಿಗೆ ತಡೆ.

ಸಂಧಾನ ವ್ಯವಹಾರಗಳು ನಿಷ್ಫಲವಾದರೆ, ಯುದ್ಧವನ್ನು ಮುಂದುವರಿಸಲು ಜಪಾನಿಗೆ ಸಾಧ್ಯವಿರಬಹುದು ಆದರೆ ಅವರಿಗೆ ಜಯ ದೊರಕುವ ಸಂಭವಗಳು ತೀರ ಕಡಿಮೆಯೆನ್ನಬೇಕು ಸ್ವಾತಂತ್ರ್ಯವು ಚೀನಿಯರ ಜನ್ಮಸಿದ್ಧ ಹಕ್ಕು ಅದಕ್ಕಾಗಿ ಅವರು ಪ್ರಾಣಾರ್ಪಿಸಲು ಕೂಡ ಸಿದ್ಧರಿರುವರು

ಅಬ್ಬರದ ಜಪಾನೀಯರು, ಚೀನಾದಲ್ಲಿ ತಮ್ಮ ಮಹತ್ವಾಕಾಂಕ್ಷೆಗಳ ಸಾಧನೆಗೆ ತಡೆಯಾಗುವುದೆಂದು ಯೋಚಿಸಿದೆಯಿಲ್ಲ ಮಂಚೂರಿಯವನ್ನು ಹಿಡಿದಷ್ಟೆ ಸುಲಭವಾಗಿ ಈ ಕಾರ್ಯ ಸಾಧನೆಯಾಗುವುದೆಂದು ಅವರ ಭಾವನೆಯಾಗಿತ್ತು ಆದರೆ ಒಂದು ವರ್ಷದ ಘೋರ ಸಂಗ್ರಾಮ ನಡೆಯತ್ತಾದರೂ ಈಗ ಅನೇಕ ಜಪಾನೀಯ ಮುತ್ಸದ್ದಿಗಳು, ಸಂಧಾನ ವ್ಯವಹಾರಗಳ ಕುರಿತು ತವಕಪಡುತ್ತಿರುವರು ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಚೀನವು ದೃಢ ಸಂಕಲ್ಪ ಮಾಡಿಯದೆ ಸಂಧಾನದ ಶರ್ತಗಳು ಅವಮಾನಕರ ಮತ್ತು ಹಾನಿಕರವೆಂದು ಚೀನಿಯರ ನಾಯಕರಾದ ಚಿಯಾಂಗ್‌ಕೈಶೇಕರು, ಅವುಗಳನ್ನೆಲ್ಲಾ ತಿರಸ್ಕರಿಸಿರುವರು. ಕೊನೆಯ ತನಕ ಹೋರಾಡಲು ಅವರು ಸಿದ್ಧರಿರುವರು ಗುರಿಲ್ಲಾ ಯುದ್ಧೋಪಾಯದಿಂದಲೆ ಜಪಾನನ್ನು ಕೊನೆಗೆ ಸೋಲಿಸಬಹುದೆಂಬ ಭರವಸೆಯು ಚೀನಕ್ಕೆ ಇದೆ ಈ ಗುರಿಲ್ಲಾ ಯುದ್ಧೋಪಾಯದ ಬಗ್ಗೆ ಅವರೀಗ ಸಿದ್ಧತೆಗಳನ್ನು ಮಾಡುತ್ತಿರುವರು

ನೋಟೀಸು.
ಕೆನರಾ ಬೇಂಕ್ ಲಿಮಿಟೆಡ್
ಕುಂದಾಪುರ

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಕೊಡದೆ ಬಾಕಿ ಮಾಡಿಕೊಂಡದ್ದರಿಂದ ಆ ಕುರಿತು ರಿಜಿಸ್ಟ್ರಿ ನೋಟೀಸ್ ಕೊಟ್ಟಲ್ಲಿ ಕೆಲವರು ನೋಟೀಸ್ ಪಡೆಕೊಂಡು ಸುಮ್ಮಗಿರುವುದ್ರಿಂದಲೂ ಬಾಕಿಯವರು ಅವರಿಗೆ ಸಿಕ್ಕದೆ ನೋಟೀಸ್‌ಗಳ ವಾಪಾಸ್ ಬಂದಿರುವುದ್ರಿಂದ ಕೂಡ ಇದೇ ಬರುವ ಆಗೋಸ್ತು ತಾ 9ರ ವಳಗೆ ಬೇಂಕಿಗ ಬರತಕ್ಕ ಮೊಬ್ಲಗನ್ನು ಪಾವತಿ ಮಾಡಿ ಸಂಬಂಧಪಟ್ಟ ದಾಗಿನೆಗಳನ್ನು ಕೊಂಡುಹೋಗಲಿಕ್ಕೆ ತಪ್ಪಿದ್ರೆ ಅವುಗಳನ್ನು ಇದೇ ಬರುವ ಆಗೋಸ್ತು ತಾ 16ನೇ ಮಂಗಳವಾರ ಹಗಲು ಘಂಟೆ 12ಕ್ಕೆ ಯಾ ಬ್ಯಾಂಕಿನವರಿಗೆಯುಕ್ತ ತೋರುವ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟಿಸ್ ವಗೈರೆ ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಕ್ರಯದಲ್ಲಿ ಬೇಂಕಿಗೆ ಬರತಕ್ಕದ್ದನ್ನು ವಜಾ ಮಾಡಿ ಉಳಿಕೆ ಇದ್ರೆ ಅವರವರ ಅಮಾನತ್ ಲೆಖ್ಖದಲ್ಲಿ ಜಮಾ ಇಡಬಹುದಾದ ಮೊಬ್ಲಗನ್ನು ಕೊಡದೆ ಹೋಗದಿದ್ರೆ ಅಂಥಾ ಹಣಕ್ಕೆ ಬಡ್ಡಿ ನಡಿಯಲಿಕ್ಕಿಲ್ಲವೆಂತ ಈ ಮೂಲಕ ತಿಳಿಯ ಪಡಿಸುವದಾಗುತ್ತದೆ —

1 ಸಾಲದ ನಂಬ್ರ 294/35 11 3 35 ಬಾಳೆಬೇರು ಸುಬ್ಬಣ್ಣ ಶೆಟ್ಟಿ ಮಂಜಯ್ಯ ಶೆಟ್ರ ಅಳಿಯ ಅಂಪಾರು ಗ್ರಾಮ ಕಂಡ್ಲೂರ ಪೋಸ್ಟ ಅಸ್ಲು ರೂ 40 0 0
2 ಸಾಲದ ನಂಬ್ರ 156/35 18 7 35 ಎಂ ವೈಕುಂಠ ಕಿಣಿ ಲಕ್ಷ್ಮಣ ಕಿಣ್ಯರ ಮಗ ಟೈಲರ ಕುಂದಾಪುರ. ಅಸ್ಲು ರೂ 35-0 0
3 ಡಿ 515/35 20 8-35 ಬಾಳೆಬೇರು ಸುಬ್ಬಣ್ಣ ಶೆಟ್ಟಿ ಮಂಜಯ್ಯ ಶೆಟ್ರ ಅಳಿಯ ಅಂಪಾರು ಗ್ರಾಮ ಕಂಡ್ಲೂರ ಪೋಸ್ಟ ಅಸ್ಲು ರೂ 25 0 0
4 ಡಿ-34/37 18 1 37 ಗುಜ್ಜಾಡಿ ವೆಂಕಟೇಶ ನಾಯ್ಕ ಮುದ್ದುಗಿರಿ ನಾಯ್ಕರ ಮಗ ಗಂಗೊಳ್ಳಿ ಪೋಸ್ಟ ಅಸ್ಲು ರೂ 130-0-0
5 ಡಿ-380/37 21 6 37 ಡಿ ಡಿ ಡಿ 115 0-0
6 ಡಿ 507/36 31 8 37 ಡಿ ಡಿ ಡಿ 37 8 0
7 ಡಿ 590/37 18 10 37 ಡಿ ಡಿ 75-0 0
8 ಡಿ-217/37 3 4 37 ಸೌಕೂರ ಅನಂತ ಪಾಟ್ ಪರಮೇಶ್ವರ ಅಡಿಗರ ಮಗ ಸೌಕೂರುಮನೆ ಗುಲ್ವಾಡಿ ಗ್ರಾಮ ಕಂಡ್ಲೂರ ಪೋಸ್ಟ ಅಸ್ಲು ರೂ 50 0 0
9 ಡಿ-43/35 25 9 35 ಬಾಳೆಬೇರು ಸುಬ್ಬಣ್ಣ ಶೆಟ್ಟಿ ಮಂಜಯ್ಯ ಶೆಟ್ರ ಅಳಿಯ ಅಂಪಾರು ಗ್ರಾಮ ಕಂಡ್ಲೂರ ಪೋಸ್ಟ ಅಸ್ಲು ರೂ 16 0-0
10 ಡಿ 56/35 25 10 3 ದೊಡ್ಡ ಕೋಟಿ ಬಾವಲು ಕೋಟಿ ಮಗ ಆನಗಳ್ಳಿ ಗ್ರಾಮ ಕುಂದಾಪುರ ಪೋಸ್ಟ ಅಸ್ಲು ರೂ 20-0-0
11. ಡಿ-15/36 9 5 36 ಕೃಷ್ಣಯ್ಯ ಯಾನೆ ಅನಂತ ಭಟ್ಟ ಮಂಜಯ್ಯ ಭಟ್ಟರ ಮಗ ಮೊಂದೂರು ಗ್ರಾಮ ಮೂಡ್ಲಕಟ್ಟೆ ಪೋಸ್ಟ ಅಸ್ಲು ರೂ 10 0 0
12 ಡಿ-22/36 12 6 36 ಹಾಸಪ್ಪ ಯಾನೆ ಸುಬ್ರಾಯ ಪೂಜಾರಿ ವೆಂಕಟ್ರಮಣ ಪೂಜಾರಿ ಮಗ ಕಂಡ್ಲೂರ ಪೋಸ್ಟ ಅಸ್ಲು ರೂ 16-0-0
13 ಡಿ-26/36 22 6-36 ಗುಜ್ಜಾಡಿ ವೆಂಕಟೇಶ ನಾಯ್ಕ ಮುದ್ದುಗಿರಿ ನಾಯ್ಕರ ಮಗ ಗಂಗೊಳ್ಳಿ ಪೋಸ್ಟ ಅಸ್ಲು ರೂ 20-0-0
14. ಡಿ-65/37 18-9-37 ಡಿ ಡಿ ಡಿ 14 0-0
15. ಡಿ-36/36 21-8-36 ದೊಡ್ಡ ಮುದ್ದಿಗ್ಯ ಅಳ್ವಿನ್ನ ಮುದ್ದಿಗ್ಯರ ಮಗ ಕುಂದಾಪುರ ಅಸ್ಲು ರೂ 10-0-0

Office of the Bank } S. R. Achar,

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ

ಕಾಮನ್ ವೆಲ್ತ್

ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ

1937-38ನೇ ಸಾಲಿನ ಪ್ರಗತಿ

ಗಳಿಸಿದ ಉದ್ಯಮ	ರೂ. 50,18,543
ಪೂರ್ಣವಾದ ಉದ್ಯಮ	ರೂ 40,39,773

ದಕ್ಷಿಣ ಕನ್ನಡದ ಎಲ್ಲ ಜಿಲ್ಲೆಗಳಲ್ಲೂ ಗೌರವಸ್ಥರೂ ಸಮರ್ಥರೂ ಆದ ಏಜಂಟರು ಬೇಕು.

ಹೆಚ್ಚಿನ ವಿವರಗಳಿಗೆ:—

ಪಿ ಆರ್ ನಾಯಕ್ ಅಂಡ್ ಸನ್ಸ್, ಸ್ಪೆಷಲ್ ಏಜಂಟ್ಸ್, ಕಾರ್ ಸ್ಟ್ರೀಟ್, ಮಂಗಳೂರು.

ಗವಾಂಕರ್ ಅಂಡ್ ಸನ್ಸ್, ಚೀಫ್ ಏಜಂಟ್ಸ್, 168, ಗಾಂಧಿ ನಗರ, ಬೆಂಗಳೂರು.

ಪೌರ್ವಾತ್ಯದಲ್ಲಿ::::::?

---- ಒಂದು ತಿಂಗಳು!

> ಕಳೆದ ತಿಂಗಳಲ್ಲಿ ಪೌರ್ವಾತ್ಯದಲ್ಲಿ ವಿಶೇಷ ತರದ ಅನೇಕ ಘಟನೆಗಳು ನಡೆದುಬಿಟ್ಟವು ಅವುಗಳಿಂದ ಏಷ್ಯಾ ಖಂಡದ ಭವಿಷ್ಯವೆ ಬದಲಾಗುವಂತಾಯಿತು

ಜಪಾನೀಯರಿಗೆ ಮಹಾ ಸೋಲು ಲಭಿಸಿತು ಇಟಲಿಗೂ ಒಂದು ಒಪ್ಪಂದ ಬ್ರಿಟನು ಪೌರ್ವಾತ್ಯದ ತನ್ನ ಹಿತಗಳ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡುವಂತಾಯಿತು ಇಟಲಿಗೂ ಬ್ರಿಟನಿಗೂ ನಡೆದ ಒಪ್ಪಂದದ ದೆಸೆಯಿಂದ, ಬ್ರಿಟನಿನ ಯುದ್ಧ ನೌಕೆಗಳು ಮೆಡಿಟರೇನಿಯನ್ ಸಾಗರದಲ್ಲಿ ಕಾವಲಿಡ ಹೋಗಿ ಬೇಕಾಗಿಲ್ಲ. ಈ ಯುದ್ಧ ನೌಕೆಗಳು ಈಗ ಪೌರ್ವಾತ್ಯಕ್ಕೆ ಅಲ್ಲಿ ಬ್ರಿಟಿಷ ರಕ್ಷಣೆ ಕಾರ್ಯದಲ್ಲಿ ತೊಡಗಬಹುದು

★ ★ ★

ಈ ಒಪ್ಪಂದದಿಂದ ಚೀನಾಕ್ಕೆ ಬಹಳ ಸಂಕಟವಾಗಿದೆ. ಕಾರಣ ಜಪಾನು, ಬ್ರಿಟನ್ನು ಪೌರ್ವಾತ್ಯದಲ್ಲಿ ಪೀಡಿಸುವುದು ಕಡಿಮೆಯಾಗುವದೆಂದು ಚೀನಿಯ ಅಭಿಪ್ರಾಯವಾಗಿರುತ್ತದೆ. ಈ ಒಪ್ಪಂದದ ದೆಸೆಯಿಂದ ಜಪಾನಿಗೆ ಪಾಶ್ಚಾತ್ಯದ ಜನಾಂಗಗಳಲ್ಲಿ ಅವಿಶ್ವಾಸವು ಉಂಟಾಗಿರುತ್ತದೆ. ಜರ್ಮನಿಯು, ವ್ಯಾಪಾರ ದೃಷ್ಟಿಯಿಂದ ಚೀನಾಕ್ಕೆ ಬೇಕಾದ ಯುದ್ಧ ಸಾಮಗ್ರಿಗಳನ್ನು, ಒದಗಿಸುತ್ತಿದ್ದು, ಜಪಾನಿಗೆ ಯಾವತ್ತೂ ತರದ ಸಹಾಯವನ್ನು ಮಾಡುತ್ತಿದೆ. ಜರ್ಮನ್ ಸಂಗ್ರಾಮ ಪ್ರವೀಣರು ಅನೇಕರು ಜಪಾನಿಯರಿಗೆ ವಿರೋಧವಾಗಿ ಚೀನಾ ರಣರಂಗದಲ್ಲಿರುವರು.

ಟಾಯಿರ್ಚ್ವಾಂಗ ಎಂಬಲ್ಲಿ ಜಪಾನಿಗೆ ಮಹಾ ಸೋಲು ಲಭಿಸಿತು. ಸಾವಿರಾರು ಮಂದಿ ಜಪಾನೀಯ ಸೈನಿಕರು ಹತರಾದರು ಈ ಸೋಲಿನಿಂದ ಜಪಾನಿಯ ಸೈನಿಕರ ಧೈರ್ಯವು ಕೆಟ್ಟು ಹೋಗಿ, ಅವರು ಪಲಾಯನ ಸೂತ್ರವನ್ನವಲಂಬಿಸುವಂತಾಯಿತು ಈ ವಿಜಯದಿಂದ ಚೀನಿಯದಲ್ಲಿ ಹೊಸ ಸ್ಫೂರ್ತಿಯು ಉಂಟಾಗಿ, ಯುದ್ಧರಂಗದಲ್ಲಿ ಅವರು ಹೆಚ್ಚಿನ ಸಾಹಸವನ್ನು ತೋರಿಸುವವರಾದರು ಒಳನುಗ್ಗಿದ ಜಪಾನೀಯರನ್ನು ಅವರೀಗ ಕರಾವಳಿಯ ಕಡೆ ದೂಡುತ್ತಿದ್ದಾರೆ.

ಈ ಯುದ್ಧದ ದೆಸೆಯಿಂದ, ಚೀನಾವು ಒಂದು ಮಹಾ ಸಂಗ್ರಾಮಿಕ ಜನಾಂಗವಾಗಿ ಮಾರ್ಪಡುವುದೆಂದು ಬಲವಾದ ನಿರೀಕ್ಷೆಗಳಿವೆ. ಚೀನಾಕ್ಕೆ ಯುದ್ಧ ಕಾರ್ಯಗಳನ್ನು ನಡೆಯಿಸುವರೆ ಬೇಕಾದ ಹಣವು ಸಾಲವಾಗಿ ಕೊಡಲು, ಲಂಡನಿನ ಬೇಂಕುಗಳು ಒಪ್ಪಿರುವದಾಗಿ ವಾರ್ತೆಯಿದೆ.

ಚೀನಾಕ್ಕೆ ಬೇಕಾದ ಯುದ್ಧ ಶಸ್ತ್ರ ಸಾಮಗ್ರಿಗಳು, ಫ್ರೆಂಚರ ಇಂಡೋ-ಚೀನಾದ ಮೂಲಕ ಬರುತ್ತಿದ್ದುದರಿಂದ, ಜಪಾನೀಯ ವೈಮಾನಿಕರು, ಆ ಪ್ರದೇಶಗಳಿಂದ ಹೊರಡುವ ರೈಲ್ವೆ ಮಾರ್ಗಗಳನ್ನು ಕೆಡಿದು ಹಾಕಲು ಪ್ರಯತ್ನ ಪಟ್ಟರು ಆದರೆ ಯುದ್ಧಶಸ್ತ್ರ ಸಾಮಗ್ರಿಗಳು ನೂತನವಾಗಿ ರಚನೆಯಾದ ಒಂದು ರಸ್ತೆಯ ಮೂಲಕ ಸರಾಗವಾಗಿ, ಮೋಟಾರ ಲಾರಿಗಳ ಮೂಲಕ ಚೀನಾವನ್ನು ಸೇರುತ್ತಿವೆ.

ಇತ್ತ ಟೋಕಿಯೋ ನಗರದಲ್ಲಿ ಕಗ್ಗತ್ತಲೆ ಕವಿದಿರುತ್ತದೆ ಯುದ್ಧ ದೆಸೆಯಿಂದ ಜಪಾನೀಯ ವರ್ತಕರಲ್ಲಿ ತುಂಬಾ ಅಸಮಾಧಾನವು ಉಂಟಾಗಿರುತ್ತದೆ ಜಪಾನೀಯ ವ್ಯಾಪಾರವು ಸಂಪೂರ್ಣ ಕೆಟ್ಟು ಹೋಗಿರುತ್ತದೆ ಇದಲ್ಲದೆ ಜಪಾನಿನ ಕುರಿತು ಅನೇಕ ಶೋಚನೀಯ ತರದ ಪಿಸಿ ವಾರ್ತೆಗಳು ಅಲ್ಲಲ್ಲಿ ಪ್ರಚಾರವಾಗುತ್ತಲಿವೆ. ಜಪಾನು, ಬ್ರಿಟನಿನ ಮೂಲಕ ಸಂಧಾನ ಯತ್ನದಲ್ಲಿದೆ, ಜಪಾನಿನ ಮಂತ್ರಿ ಮಂಡಳದಲ್ಲಿ ಛಿದ್ರ ಇತ್ಯಾದಿ. ಈ ಪಿಸು ವಾರ್ತೆಗಳ ಅಭಿಪ್ರಾಯಗಳು ಅಂತೂ ಚೀನಾಕ್ಕೆ ಯಶವಾಗಿದೆ ಚೀನಾಕ್ಕೆ ರಷ್ಯಾ ದೇಶದಿಂದ ಧಾರಾಳ ವಿಮಾನ, ಸೈನಿಕ, ಉದ್ಯೋಗಸ್ಥ ಇತ್ಯಾದಿ ಒದಗಿರುವ ಈ ಕುರಿತು ಜಪಾನು, ರಷ್ಯಾದೊಡನೆ ಪ್ರತಿಕೂಲಿಸಿದರೂ ಸ್ಟೆಲೀನನು ಅದರ ಲಕ್ಷ್ಯವೆ ಮಾಡಲಿಲ್ಲ ರಷ್ಯಾದೊಡನೆ ಸಂಗ್ರಾಮ ಹೂಡಲು ಜಪಾನು ಭೀತಿ ಪಡುತ್ತಿದೆ ಆದುದರಿಂದ ರಷ್ಯಾದಿಂದ ಚೀನಾಕ್ಕೆ ಬರುವ ಸಹಾಯಕ್ಕೆ ತಡೆಹಾಕಲು ಜಪಾನಿಗೆ ಅಸಾಧ್ಯ.

ರಷ್ಯಾ ದೇಶದ ಸಂಗ್ರಾಮಿಕ ಬಲವು ಅತ್ಯಧಿಕವಾದುದು ವಿಮಾನ ಶಕ್ತಿಯು ರಷ್ಯಾದೊಡನಿದ್ದಷ್ಟು ಬೇರೆ ಯಾವ ಜನಾಂಗಗಳೊಡನೆ ಇಲ್ಲ. ಅನ್ಯ ಜನಾಂಗಗಳೊಡನೆ ಒಳಸಂಚು ನಡೆಯಿಸುದುದಕ್ಕಾಗಿ ಅನೇಕ ಛಾದ್ರಿಗಳು ಇತ್ಯಾದಿಯರು, ಸ್ಟೆಲೀನನಿಂದ ನಾಡಿನಲ್ಲಿ ಯುದ್ಧವು ಕಮ್ಮಿ ಹಿತದಲ್ಲಿಲ್ಲವೆಂದು, ಜಪಾನಿನ ಎಲ್ಲಾ ಸಂಗ್ರಾಮಿಕ ಉದ್ಯೋಗಸ್ಥರಿಗೆ ಈಗಾಗಲೆ ಜ್ಞಾನೋದಯವು ಆಗಿರುತ್ತದೆ

ಮಂಚೂಕ್ವೊನಲ್ಲಿ ಜಪಾನಿನ ಧಾರಾಳ ಸೈನ್ಯ ಸಂಗ್ರಹವಿದ್ದರೂ, ಅದನ್ನು ಚೀನಿಯ ಯುದ್ಧರಂಗಕ್ಕೆ ಕರೆಯಲು, ಅದಕ್ಕೆ ಧೈರ್ಯ ಸಾಲದಾಗಿದೆ. ರಷ್ಯಾ ದೇಶವೇ ಇದಕ್ಕೆ

ಒಂದೊಂದು ಮಾತು.

ಟೋಕಿಯೋದಲ್ಲಿ:—1940ರಲ್ಲಿ ಪ್ರಪಂಚದ ವ್ಯಾಯಾಮ ಸ್ಪರ್ಧೆಗಳಾಗ ಬೇಕೆಂದಿತ್ತು ಮಂತ್ರಿಗಳು ಅದನ್ನೀಗ ರದ್ದುಮಾಡಿದರು ಅನ್ಯಾಯ ಯುದ್ಧದ ಮೊದಲ ನ್ಯಾಯ ವ್ಯಾಯಾಮಸ್ಪರ್ಧೆಗಳೇ?

ಬ್ರಿಟಿಷ ಸಾಮ್ರಾಜ್ಯದೊಳಗೆ:—ಒಳ್ಳೇ ಗುರಿಯಿಟ್ಟು ಗುಂಡು ಹೊಡೆಯ ಬಲ್ಲವಂಗೆ ವರ್ಷವೂ ಕೊಲಾಪುರ ಕಪ್ ಇದೆ ಈ ವರ್ಷ ಅದು ಕೆನಡಕ್ಕಾಯಿತು (1110 ಪೊಯಿಂಟ್) ಇಂಗ್ಲಂಡು (1105) ಇಂಡಿಯಾ (1100) ಹೀಗೆ ಸ್ಥಾನ ಹೊಂದಿವೆ 1919ನೆ ಇಸ್ವಿಯಿಂದ ಇಂಡಿಯವು 1935ರಲ್ಲಿ ಮಾತ್ರ ಈ ಕಪ್ ಪಡೆಯಿತು ಆದರೆ ಅದ ಪಡೆದ 1147 ಪೊಯಿಂಟುಗಳಷ್ಟು ಇದ ವರೆಗೆ ಯಾವ ರಾಜ್ಯವು ಪಡೆದಿಲ್ಲ'

ನ್ಯೂಝಿಲಂಡಿನ:—ಹೊಕ್ಕೀ ಆಟಗಾರರೊಡನೆ ಮನವಾದರ (ಮದ್ರಾಸು) ಆಟಗಾರರು ಇದೇ ತಾ. 23, 30ರಲ್ಲೂ ಅಗೋಸ್ತು ತಾ 27ರಲ್ಲೂ ಆಡ ಪರ ಇವರು ಅಲ್ಲಿನ ಶಾಲೆಗಳನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ "ಹೊಕ್ಕಿ" ಆಟದ ಮಾಹಿತಿ ಕೊಟ್ಟರು ಶಾಲೆಗಳೊಡನ ಆರು ಮಿನಿಟುಗಳಲ್ಲಿ ಮೂರ ಗೋಲ್' ಇವರ! ಮುಖ್ಯ ಭಾಷಣ ಕರ್ತರು ಪ್ರೊ ಪೆಸರು ಜಗನ್ನಾಥ ವೆಲ್ಲಿಂಗಟನ್‌ನಲ್ಲಿ 10000 ಜನರು ಈ ಆಟ ನೋಡಿ 1935ರ ದ ಇಂತಹದನ್ನು ನೋಡಿಲ್ಲವೆಂದರು

ಸಿಂಧದಲ್ಲಿ:—ಮಂತ್ರಿಮಂಡಲವು ಬದಲಾಗ ವ ಸಂಭವ, ಪ ಧ್ಯವಿ ಕ್ಯವಸ್ಥಿ ಮಂತ್ರಿಗಳೊಬ್ಬರ ರಾಜೀನಾಮೆ. ವಾಯವ್ಯ ಗಡಿನಾಡಿನಲ್ಲೂ ಗಡಿಬಿಡಿ, 'ನೋಡಿ' ಎನ್ನುತ್ತಾರೆ ಖಾನಸಾಹೇಬರು

ಬಂಗಾಳ:—ಎಲ್ಲ ದಿಟೆನ್ಯೂಗಳನ್ನು ಅಗೋಸ್ತು ಅಂತ್ಯದೊಳಗೆ ಬಿಡುಗಡೆಮಾಡುವರು!

ಕೋಕನಾಡ:—ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಭಾಷಣ, ಇಂದು ಎಲ್ಲವೂ ತೆಲುಗಿನಲ್ಲಾಗಿವೆ!

ಚಿರಾಳ: -ಇದು ವರೆಗೆ ವಿಶ್ವಬ್ರಾಹ್ಮಣರೆಂದು ಬರೆಯುತ್ತಿದ್ದವರು ಇನ್ನು 'ವಿಶ್ವಕರ್ಮ' ಎಂದಷ್ಟೇ ಬರೆಯಬೇಕಾಗಿ ಸರಕಾರವು ಪ್ರಕಟಿಸಿದುದನ್ನು ಈ ಸಮಾಜವು ಆಕ್ಷೇಪಿಸಿಯದೆ

ನಾಗಪಟ್ಟಿ:—ಆದುತ್ತಿದ್ದ ಮೂವರು ಹುಡಗರ ಅಲ್ಲೇ ಹೆಣ್ಣು ಮಗುವೊಂದರ ಆಭರಣ ಕದಿಯುತ್ತಿದ್ದ ಕಳ್ಳನನ್ನು ಹಿಡಿದು ಬಂಧಿಸಿ ಪೊಲೀಸರು ಕೈದುಮಾಡುವ ವರೆಗೆ ಅವನ ಹಿಂಸೆ ತಡೆದುದಕ್ಕೆ ಈಗ ಬಹುಮಾನ ಹೊಂದಿರುವರು.

ಮದುರಾ:—ಎಲ್ಲಾ ಜಿಲ್ಲಾ ಬೋರ್ಡುಗಳನ್ನು ರದ್ದುಮಾಡಬೇಕೆಂದೂ, ಅದು ಅವರ ವಿಭಕ್ತ ಬೋರ್ಡುಗಳನ್ನು ಒಂದು ಕೂಡಿಸಬೇಕೆಂದೂ ಒಂದು ನಿರ್ಣಯವು ಗ್ರಾಮಗಳ ರಾಜಕೀಯ ಪರಿಷತ್ತಿನಲ್ಲಿ ಮಂಜೂರಾಗಿದೆ

ಡಿಂಡಿಗಲ್:—ಟೌನ್ ಕೊಂಗ್ರೆಸ್ ಕಮಿಟಿಯು ಮ್ಯುನಿಸಿಪಲ್ ಆಡಳಿತದೊಳಗೆ ಕೈಯಿಕ್ಕಬಾರದೆಂದು, ಅದು ಯಾವುದೊಂದು ಪಕ್ಷದ ಆಡಳಿತದಲ್ಲಿಯೂ ಮೊದಲಾಗಿ ಮುಖ್ಯ ಪಾರ್ಲಿಮೆಂಟು ಸೆಕ್ರೆಟರಿಯರು ಕೊಂಗ್ರೆಸ್ ಕಮಿಟಿಗೆ ಬುದ್ಧಿ ಹೇಳಿರುವರು.

ಊಟಕಮಂಡ್:—ಇಲ್ಲಿ ಪ್ರಾಥಮಿಕ ಶಿಕ್ಷಣವು ಕಡ್ಡಾಯದಿಂದಾಗುವುದು. ವಿದ್ಯಾರ್ಥಿಗಳಿಗೆ ನೇಯುವುದಕ್ಕೂ ಜೇನುನೊಣಗಳನ್ನು ಸಾಕುವುದಕ್ಕೂ ಕಲಿಸುವರು

ಮತಾಂತರ

ಅದ್ವೈತಿಯು ದ್ವೈತಿಯಾದನು!

ಅದ್ವೈತಿಯಾಗಿ ಮೋಕ್ಷ ದೊರೆಯದೆಂದು, ಕಳ್ಳಿದೇ ಕುರಿಚಿಯ ರಾಮಚಂದ್ರಪುರ ಅಗ್ರಹಾರದಲ್ಲಿನ ಬ್ರಹ್ಮಶ್ರೀ ಶ್ರೀನಿವಾಸ ಅಯ್ಯರ್, (65 ವರ್ಷ ಪ್ರಾಯ) ಇವರು ದ್ವೈತಮತವನ್ನು ಅಂಗೀಕರಿಸಿದರು.

ಶ್ರೀ ಸತ್ಯಿಧ್ಯಾನ್ಯ ತೀರ್ಥಶ್ರೀಪಾದಂಗಳವರು (ಉತ್ತರಾದಿಮಠ) ನಾಚಿಯಾರ ಕೋಯಿಲದಲ್ಲಿ ಅಯ್ಯರ ಮತಾಂತರ ಮಾಡಿ, ಮಾಧ್ವ ಮತಕ್ಕೆ ಅವರನ್ನು ಸೇರಿಸಿಕೊಂಡರು.

'ಇಂದಿನಿಂದ ನೀನು ಮಾಧ್ವನಾದಿ. ಸದ್ವೈಷ್ಣವನಾದಿ. ನಿನ್ನ ಪುಣ್ಯ ಕರ್ಮಗಳು ಮೋಕ್ಷಕ್ಕೊಯ್ಯುವುವು. ಇನ್ನು ನಿನ್ನ ಉದ್ಧಾರವಾಯಿತೆಂದು' ಎಂದು ಅಯ್ಯರಿಗೆ ಆಶೀರ್ವಾದವಾಯಿತು. ಸಂಸ್ಕಾರಗಳಾದುವು ಅಯ್ಯರು ಇನ್ನು 'ಆಚಾರ್ಯ'ನಾದನು.

ಈ ಬಗೆಯಾಗಿ ಒಂದು ಬಗೆಯ ಬ್ರಾಹ್ಮಣನು ಮತ್ತೊಂದು ವರ್ಗಕ್ಕೆ ಮತಾಂತರ ಹೊಂದಿದ್ದುದು ಅಪರೂಪ. ಅಲ್ಲಿನ ಬ್ರಾಹ್ಮಣರಲ್ಲೆಲ್ಲ ಗಡಿಬಿಡಿಯೆದ್ದಿದೆ.

ಈ ತನುಮಧ್ಯೆ ಅಮೇರಿಕಾವು ಯುದ್ಧ ಸಿದ್ಧತೆಯ ಒಂದು ಮಹಾ ಯೋಜನೆಯನ್ನು ಹಾಕಿಕೊಂಡು, ಅದು ಕಾರ್ಯರೂಪಕ್ಕೆ ತರುತ್ತಿದೆ.......ಇನ್ನೊಂದು ಮಹಾಯುದ್ಧವು ಸಮಸ್ತ ಜಗತ್ತಿನಲ್ಲೆಲ್ಲಾ ನಡೆಯುವುದು. ಈ ಭೂಲೋಕದ ಸಾಧಾರಣ ಎಲ್ಲಾ ರಾಷ್ಟ್ರಗಳು, ಅದರಲ್ಲಿ ದುಮುಕುವಂತಾಗುವುದು.

ಎಲ್ಲ ಕೆಲಸಗಾರರಿಗೆ!

ಶ್ರೀ। ಸರೋಜಿನಿದೇವಿಯವರ ಮಾತು

ಹೂಗ್ಲಿ ಜಿಲ್ಲಾ ಕಾರ್ಖಾನೆಗಳ ಕೂಲಿಕಾರರ ಪರಿಷತ್ತಿನಲ್ಲಿ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ, ದೇವಿಯವರು ಬೋಧಿಸಿದ್ದು ಹೀಗೆಂದು —

ಸುಲಭದಲ್ಲಿ ಮುಷ್ಕರಹಾಕಲು ನಿರ್ಧಾರ ಮಾಡಬಾರದು; ಅವಸರದಿಂದಲ್ಲ, ಬೇರೆ ಯಾವ ಉಪಾಯವೂ ಫಲಿಸದಿದ್ದರೆ ಮಾತ್ರ ಮುಷ್ಕರ ನಿಮ್ಮ ಕಷ್ಟಗಳನ್ನು ನಿವಾರಿಸಿಕೊಳ್ಳಲು ಸಾವಿರ ಉಪಾಯಗಳುಂಟು ಇವೆಲ್ಲವನ್ನು ಪರ್ಯಾಲೋಚಿಸಿ, ಖಂಡಿತವಾಗಿ ಮುಷ್ಕರವೇ ಗತಿಯೆಂತಾದರೆ ಮಾತ್ರ ಹಾಗೆ ಮಾಡಬಹುದು

ಹಾಗೆ ನಿರ್ಧಾರವಾದ ಬಳಿಕ, ಒಂದಂಶವೂ ಸರಿಯದೆ, ಅದನ್ನೆ ದೃಢಬುದ್ಧಿಯಿಂದ ಕೊಳ್ಳಬೇಕು ಮುಗಿಯುವತನಕವೂ ನಿರ್ಧಾರವಿರಬೇಕ ಪಕ್ಷ, ವ್ಯವಸ್ಥೆ ಹಣ ಇವಿಲ್ಲದಿದ್ದರೆ ಮುಷ್ಕರವು ಸಕ್ಕಲಗಳನ್ನು ಕೊಡದೇ ರದು

ಶ್ರೀ। ಸುಭಾಷಚಂದ್ರರು

ಅಲ್ಲಿದ್ದು, ತಮ್ಮ ಕೆಲವು ಅಭಿಪ್ರಾಯಗಳನ್ನು ಕೂಡಿಸಿ ಹೇಳಿದರ ಜನತೆಯ ಚಳವಳಕ್ಕೆ ಸಹಾನುಭೂತಿಯಿಂದ ಇರುವಂತೆ ಮುಷ್ಕರ ಪ್ರಯತ್ನಗಳಾಗಬೇಕು. ಜನಾಂಗದ ಹೋರಾಟದ ಒಂದಂಗವಾಗಿ ಮುಷ್ಕರಗಳು ಸಾಗುತ್ತಿರಬೇಕು.

ಧನಿಗಳು ಸರಕಾರವೂ ಮುಷ್ಕರಗಾರರನ್ನು ... ಎದ ರಿಸುವುದೆಂದನ್ನು ... ಗಾಳದಲ್ಲಿ ಯಾರೂ ಮರೆಯರದು. ಸರಕಾರವು, ಮುಷ್ಕರಕಾಲದಲ್ಲಿ ಬಂದದಲ್ಲಾದರೋ ಇರಾವಾಗಲೂ ಧನಿಗಳ ಪಕ್ಷವಾಗಿಯೇ ಇರ ವುದೆಂದು ಎಲ್ಲರಿಗೂ ಗೊತ್ತು

ಇದಕ್ಕಾಗಿ ಯೋಗ್ಯ ವ್ಯವಸ್ಥೆ ಇರಬೇಕು ಇದೇ ಒಡಕೂಲಿಯವನ ಆಯುಧ. ನಿರಕ್ಷರ ಕೂಲಿಯ ವರು ಒಂದು ವ್ಯವಸ್ಥೆಮಾಡಿಕೊಳ್ಳುವುದ ಬಹುಕಷ್ಟ

ಜನತೆಯಲ್ಲಿ ಹೆಚ್ಚಿನ ಅಂಶ ದರಿದ್ರ ದಾರಿದ್ರ್ಯ, ನಿರಕ್ಷರತೆ, ನಿರುದ್ಯೋಗ ... ನಮಗ ಹಿಡಿದಿರ ವ ಮೂರು ಮಹಾ ಮಾರಿಗಳ ಈ ಮಾರಿಗಳನ್ನು ನಿವಾರಿಸದೆ ಜನಾಂಗವು ಬ ಂದರಿಯಲಾರದು.

50,000

ಕುಷ್ಟರೋಗಿಗಳು ಸಂಪೂರ್ಣ ಗುಣಮುಖರಾಗಿರುವರು!

OFFICE OF MESSRS REDDY & Co.,



GOPALAPURAM (E. GODAVARY)

ಕುಷ್ಟರೋಗ, ಬಿಳಿತೊನ್ನು ಮುಕ್ಕು ನೋಹಾದಿ ರೋಗಗಳ ಚಿಕಿತ್ಸೆ—ಒಂದು ವಿಶೇಷತ್ವ.

ಶ್ರೀ ಕೃಷ್ಣ ಆಶ್ರಮ — ರೆಡ್ಡಿ ಮತ್ತು ಕಂಪೆನಿ ಗೋಪಾಲಪುರಂ. ಪೂರ್ವ ಗೋದಾವರಿ.

ಮಂಗಳೂರು ವಾರ್ತೆ

ನಗರಸಭೆ.

ತಾ. 10ರಲ್ಲಿ ಜರಗಿತು. ನುಹಜ್ವಾಜಿ ರ ಪರಸ್ಥಿಲವನ್ನು ನಗರಸಭೆ ಸದನದಲ್ಲಿ ಗಾದಿಸಬೇಕಾಗಿ ನಿರ್ಣಯಿಸಲಾಯಿತು ಅದಲ್ಲದೆ, ಬಾಲಬಾಲಕಿಯರ ವೈದ್ಯಪರೀಕ್ಷೆ, ಟೌನ್‌ಹೊಲ್ ಎಂಡೊಮೆಂಟ ಫಂಡಿನ ಆಡಳಿತಸಭೆಗೆ ಚುನಾವಣೆ, ಬೋಳಾರದಲ್ಲಿ ಸಾರ್ವಜನಿಕ ವಾಚನಾಲಯದ ಸ್ಥಾಪನೆ, ಸಿನೆಮಾಗಳಿಗೆ ಕಾಯಂ ಲೈಸನ್ಸುಕೊಡುವುದು ಇತ್ಯಾದಿ ವಿಚಾರಗಳ ಕುರಿತು ಚರ್ಚಿಸಲಾಯಿತು

ಜಿಲ್ಲಾ ಬೋರ್ಡು ಸಭೆ.

ನವೀನವಾಗಿ ರಚನೆಯಾದ ಜಿಲ್ಲಾಬೋರ್ಡಿನ ಸಾಮಾನ್ಯ ಸಭೆಯೊಂದು ಮೊನ್ನೆ ತಾ. 16ರಲ್ಲಿ ಶ್ರೀ ವಿಠಲ್ ಶೆಟ್ರ ಅಧ್ಯಕ್ಷತನದಲ್ಲಿ ಜರಗಿ, ಟೌನ್ ಹೊಲ್ ಎಂಡೋಮೆಂಟ್ ಫಂಡಿನ ಆಡಳಿತೆಗೆ ಜಿಲ್ಲಾಬೋರ್ಡಿನ ಪರವಾಗಿ, ಶ್ರೀಗಳಾದ ಎಫ್ ಅಲ್ವುಕರ್ಕರನ್ನು ಆರಿಸಲಾಯಿತು ಶ್ರೀ ವೈಕುರ ಬಾಳಿಗ, ಎಂ ಶಿವರಾವ್, ಕೆ. ವೆಂಕಪ್ಪ ಶೆಟ್ಟಿ, ಎನ್. ಕೆ. ಬಿಡೆ, ಬೆಳಂಜೆ ಕೃಷ್ಣಯ್ಯ ಹೆಗ್ಗಡೆ, ವಿಜಾರ್ ಹೈದರ್ ಸಾಹೇಬ, ರಾಘವನ್ ನಂಬಿಯಾರ್, ಶಿರಾಜ್ ಸಾಹೇಬ, ನಂಜುನಾಥ ಶಾನುಭಾಗ, ಅರೂರು ಲಕ್ಷ್ಮೀ ನಾರಾಯಣ ರಾವ್, ಮಹಾಲಿಂಗ ಶೆಟ್ಟಿ, ಎಫ್ ಎ ಅಲ್ವುಕರ್ಕ ಮತ್ತು ಕೃಷ್ಣ ರಾಯ ಶೆಟ್ಟಿ, ಇವರನ್ನು ಜಿಲಾ ಎಡ್ಯುಕೇಶನಲ್ ಕೌನ್ಸಿಲಿನ ಮೆಂಬರರನ್ನಾಗಿ ಚುನಾಯಿಸಲಾಯಿತು. ಅಲ್ಲದೆ ಇತರ ಅನೇಕ ಸ್ಟಾಂಡಿಂಗ್ ಕಮಿಟಿಗಳಿಗೆ ಚುನಾವಣೆಗಳು ನಡೆದವು. ಶ್ರೀ ವಿಠಲ್ ಶೆಟ್ರರನ್ನು ಸದ್ಯದಲ್ಲೆ ಕಲ್ಕತ್ತೆಯಲ್ಲಿ ಜರಗಲಿರುವ ಸ್ಥಳೀಯ ಸಂಸ್ಥೆಗಳ ಪರಿಷತ್ತಿಗೆ ಪ್ರತಿನಿಧಿಗಳಾಗಿ ಆರಿಸಲಾಯಿತು ಬೋರ್ಡಿನ ಸಭಾಭವನದ ಮತ್ತು ಆಫೀಸಿನ ಬಗ್ಗೆ ... ಬಗ್ಗೆ ರೂ 1100 ಶ್ಯಾಂಕ್ಷನ್ ಆಯಿತು

ಇಲ್ಲಿಯ ಬೀಡಿ ವರ್ಕರ್ಸ್ ಯೂನಿಯನಿನ ಮಹಾ ಸಭೆಯು ಶ್ರೀ ಜನಾರ್ದನ ಸೈಥ್ಯರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ನಡೆಯಿತು. ಲೆಕ್ಕ ಪರಿಶೋಧನೆ ವರದಿ ವಾಚನಗಳಾದ ನಂತರ ಶ್ರೀ ರಂಗರಾಯರನ್ನು ಸಂಘದ ಅಧ್ಯಕ್ಷತನದಿಂದ ಕಾರ್ಯಕಾರಿ ವರ್ಗದಿಂದ ತೆಗೆದು ಹಾಕಿದುದನ್ನು ಈ ಸಭೆಯು ಅನುಮೋದಿಸಿತು. ಶ್ರೀಗಳಾದ ಕೆ. ಕೇಶವ...ನಾಥ್, ಅಧ್ಯಕ್ಷ, ಕೆ ಯಸ್ ಅಹಮ್ಮದ್ ಕಾರ್ಯದರ್ಶಿ, ಎಂ ಮಂಜುನಾಥ ಜೊತೆ ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು ಈ ಸಾಂಧರ್ಭದಲ್ಲಿ ಶ್ರೀ ವಿ ಯಸ್. ಭಾಸ್ಕರ ಕೈಗಳ ಯೂನಿಯನಿನ ಏಳಿ, ಶಕ್ತಿ ಅದು ಮಾಡಬೇಕಾದ ಕರ್ತವ್ಯ ಮುಂತಾದವುಗಳ ಕುರಿತಾಗಿ ಕುಶಾಗ್ರ್ಯ ಭಾಷಣವಿತ್ತರು

ತಾ 14-7-38 ಬಿ ಇ ಮಿಷನ್ ಹೈಸ್ಕೂಲಿನ ಹಿರಿಯ ಸಂಘದ ಪ್ರಾರಂಭೋತ್ಸವವು ಮಾನ್ಯ ಯಸ್. ಎ ಫುರ್ಟಾಡೋ ಬಿ. ಎ. ಯಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು ಮಂಗ್ಳೂರಿನ ಸುಪ್ರಸಿದ್ಧ ವಕೀಲರೂ, ಉತ್ತಮ ವಾಗ್ಮಿಗಳೂ ಆದ ಶ್ರೀಯುತ ಮುಂಕೆ ನಂಬ್ಯಾರ್ ಬಾರ್-ಎಟ್ ಲೊ, ಇವರು ಚಿತ್ತಾಕರ್ಷಕ ಶೈಲಿಯಲ್ಲಿ ಗಂಭೀರವಾದ ಭಾಷಣವನ್ನಿತ್ತರು. ದೇಶೋದ್ಧಾರಕ್ಕಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರು, ತಂತಮ್ಮ ಜಾತಿ ಮತ ಭೇದಗಳನ್ನು ಮರೆತು ಒಗ್ಗಟ್ಟಿನಿಂದ ಹೇಗೆ ಮುಂದರಿಯ ಬೇಕೆಂಬುದನ್ನು, ವಾ ಶಾಸ್ತ್ರ ಮತ್ತು ಪೌರ್ವಾತ್ಯ ಉದಾಹರಣೆಗಳನ್ನಿತ್ತು ವಿವರಿಸಿ ಹೇಳಿದರು ಅಧ್ಯಕ್ಷರ ಸಂದರ್ಭೋಚಿತವಾದ ಭಾಷಣವಾದ ಬಳಿಕ, ಸಂಘದ ಕಾರ್ಯದರ್ಶಿಯವರಾದ ಶ್ರೀ ಹರಿದಾಸ ಪುರುಷೋತ್ತಮರವರು ವಂದನಾರ್ಪಣೆಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಸೆಂಟ್ರಲ್ ಎಸೆಂಬ್ಲಿ ಸದಸ್ಯರ ಸತ್ಕಾರ

ಸೆಂಟ್ರಲ್ ಎಸೆಂಬ್ಲಿಯಲ್ಲಿ ಶ್ರೀ ಅರೋನರ ರಾಜೀನಾಮೆಯಿಂದ ಖಾಲಿಬಿದ್ದ ಸ್ಥಳಕ್ಕೆ ಚುನಾಯಿತರಾದ ಶ್ರೀ ಜಿನರಾಜ ಹೆಗ್ಗಡೆಯವರನ್ನು ಸತ್ಕರಿಸುವ ಬಗ್ಗೆ, ಒಂದು ಕೂಟವು, ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರಿಂದ ಏರ್ಪಾಡಿಸಲ್ಪಟ್ಟು, ಅವರ ಮಂಗಳೂರಿನ ಮನೆಯಲ್ಲಿ ಜರಗಿತು ಊರಪರಊರ ಅನೇಕ ಮಹನೀಯರು ಕೂಟದಲ್ಲಿ 'ನೆರೆದ್ದರು ಶ್ರೀ. ಜಿನರಾಜ ಹೆಗ್ಗಡೆಯವರು, ತನ್ನನ್ನು ಆರಿಸಿದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ, ಕರ್ನಾಟಕ ಪ್ರಾಂತ್ಯರಚನೆ, ಪ್ರಾಣಿಬಲಿ ನಿಷೇಧ ಇತ್ಯಾದಿಗಳಿಗಾಗಿ ಪ್ರಯತ್ನಿಸುವೆನೆಂದು ವಾಗ್ದಾನವಿತ್ತರು

ವಿದ್ಯಾರ್ಥಿ ಸಂಘಗಳ ಸಭೆ

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದ 'ಸಂಸದ ವಾರ್ಷಿಕೋತ್ಸವವು ಮೊನ್ನೆ ತಾ 16ರಲ್ಲಿ ಜರಗಿತು. ಸೈಂಟ್ ಅಲೋಸಿಯಸ್ ಕಾಲೇಜಿನ ಶ್ರೀ ಜೋಸೆಫರು, ಸುರಸವಾದ ಭಾಷಣವನ್ನಿತ್ತರು

ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಸಂಘದ ಸಭೆಯೊಂದು ಜರಗಿ ಜಾತೀಗಳಿಂದ ಒಳ್ಳಿತಕ್ಕಿಂತ ಕೆಡುಕೇ ಹೆಚ್ಚಾಗಿದೆ ಎಂಬ ವಿಷಯವು ಚರ್ಚಿಸಲ್ಪಟ್ಟಿತು

ಮಹಿಳಾಸಭೆ.

ಶ್ರೀಮತಿ ಡಾ ಸುಬ್ಬಾರಾಯನ್‌ರವರು ಸೆಂಟ್ರಲ್ ಎಸೆಂಬ್ಲಿಯಲ್ಲಿ ತರಲಿರುವ ಬಹುಪತ್ನಿ ನಿಷೇಧ ಮಸೂದೆಯನ್ನು ಸಮರ್ಥಿಸಿ, ಠರಾವುಮಾಡಲಾಯಿತು. ಸ್ತ್ರೀಯರಿಗೆ ಹೆಚ್ಚಿನ ಹಕ್ಕು ದೊರಕಬೇಕಾಗಿ ಈ ಸಭೆಯಲ್ಲಿ ಚರ್ಚಿಸಲಾಯಿತು

ಸ್ವಾಸ್ಥ್ಯ ಸಂಘದ ಸಹಾಯಾರ್ಥ

ಈ ಸಂಘದ ನಾಟಕ ಮಂಡಲಿಯವರು 'ಕನ್ನಡ ಕೇಸರಿ' ಎಂಬ ಐತಿಹಾಸಿಕ ನಾಟಕವನ್ನೂ ಮತ್ತು ಐರಿಶನಾಟ್ಯ(Classical Dance) ಆರ್ಚಸ್ಟ್ರ ವಿವಿಧ ವಿನೋದಾವಳಿಗಳನ್ನೂ ಸದ್ಯದಲ್ಲೇ ಉತ್ತಮ ನಟವರ್ಗದಿಂದೊಡಗೂಡಿ ಆಡಲಿರುವರು ಮಹಾಜನರು ಪ್ರೋತ್ಸಾಹಿಸಬೇಕೆಂದು ಸಮ್ಮಂಧಪಟ್ಟವರು ತಿಳಿಸುತ್ತಾರೆ

ಇಲ್ಲಿಯ ಸುಪ್ರಸಿದ್ಧ ಶ್ರೀಮಂತರಾದ ನಗರ ವಾಸುದೇವ ಶೆಣ್ಯೆಯವರು ಕೆಲವು ಸಮಯದಿಂದ ಅಸ್ವಸ್ಥರಿಂದ ಇದ್ದವರು ಕಳೆದ ಬುಧವಾರ ಸ್ವರ್ಗಸ್ಥರಾದರೆಂಬ ಸಂಗತಿಯನ್ನು ತಿಳಿಸಲು ವಿಷಾದಪಡುತ್ತೇವೆ ಮೃತರ ಆತ್ಮಕ್ಕೆ ಶಾಂತಿ ದೊರೆಯಲಿ

ಕ ಪ್ರಾ ಕಾ ಕ. ಪ್ರಕಟಣೆ

ಚೀನನಿಧಿ:—ಇದೇ ತಿಂಗಳ ತಾ 7, 8 ಮತ್ತು 9 ಹೀಗೆ ಮೂರು ದಿವಸ ಪ್ರಾಂತ್ಯದ ಅನೇಕ ಭಾಗಗಳಲ್ಲಿ ಚೀನನಿಧಿ ದಿನಾಚರಣೆ ನಡೆದಿದ್ದು ಈ ಬಗ್ಗೆ ನಮ್ಮ ಕಡೆಗೆ ಇಲ್ಲಿಯ ವರೆಗೆ ಬಹಳ ಕಡಿಮೆ ನಿಧಿ ವರದಿಗಳು ಬಂದಿರುತ್ತವೆ. ಈಗ ಚೀನಕ್ಕೆ ಅವರ ಕಷ್ಟದಲ್ಲಿ ನೆರವಾಗಲು, ಕಾಂಗ್ರೆಸ್ಸಿನಿಂದ ಕಳಿಸಿಕೊಡಬೇಕೆಂದಿರುವ ಶುಶ್ರೂಷಾಪಥಕವು ಬೇಗನೆ ಹೊರಡಲಿರುವುದು ನಮ್ಮ ಪ್ರಾಂತ್ಯದಲ್ಲಿ ಕೂಡಿದ ನಿಧಿಯಾದರೂ ಅಷ್ಟರಲ್ಲಿಯೇ ಕಲುಪಿದರೆ ಆ ಪಥಕಕ್ಕೆ ಒಂದು ರೀತಿಯಿಂದ ನೆರವಾದಂತಾಗುವುದು ಕಾರಣ ಎಲ್ಲ ಕಮಿಟಿಗಳು ತಮ್ಮ ಹತ್ತಿರ ಕೂಡಿದ ಹಣವನ್ನು ಕೂಡಲೇ ನಮ್ಮ ಕಚೇರಿಗೆ ಕಳಿಸಿಕೊಡಬೇಕು ನಾವು ಕೂಡಿದ ಹಣವನ್ನು 25-7-38ನೇ ದಿವಸ ಅಲಹಾಬಾದ ಕಚೇರಿಗೆ ಕಳಿಸಿಕೊಡುವೆವು.

ಗುದ್ಲೆಪ್ಪ ಹಳ್ಳಿಕೇರಿ,
ಪ್ರ. ಕಾರ್ಯದರ್ಶಿ

ತಾಲೂಕು ವಾರ್ತೆ

ಕಾರ್ಕಳ:—ಕಾರ್ಕಳ ಮಂಗಳೂರು ತಾಲೂಕುಗಳ ಬಗ್ಗೆ ಸರಕಾರದಿಂದ ತೆರೆಯೋಣಾಗುವ ಜಮೀನು ಅದಲಾಬದಲ ಬೇಂಕಿನ ಗೂತ್ತು ಗುರಿಗಳನ್ನು ಜನರಿಗೆ ತಿಳಿಯಪಡಿಸುವ ಅವಶ್ಯಕತೆಗಾಗಿ ಒಂದು ಸಾರ್ವಜನಿಕ ಸಭೆಯು ತಾ. 12-7-1938ರ ದಿನ ಸಾಯಂಕಾಲ ವಕೀಲ ಕ ಬಾಬುರಾಯ ಜ್ಯೋಸರ ಅಧ್ಯಕ್ಷತೆಯಲ್ಲಿ ಕೂಡಿ, ಈ ಬೇಂಕುಗಳ ಸಬ್ ಡಿಸ್ಟ್ರಿಕ್ಟ ರಿಜಿಸ್ಟ್ರಾರರಾದ ಶ್ರೀ ಎ. ವೇಣುಗೋಪಾಲ ರಾಯರು ಬೋಧಪ್ರದವಾದ ಭಾಷಣವನ್ನು ಕೊಟ್ಟರು

ಸ್ಥಳೀಯ ಪಂಚಾಯತ ಬೋರ್ಡಿನ ಸದಸ್ಯರ ಒಂದು ವಿಶೇಷ ಸಭೆಯು ಶ್ರೀ ಮಂಜುನಾಥ ಶಾನಭೋಗ ಅಧ್ಯಕ್ಷರಾಗಿ ತಾ 14-7-1938ರ ದಿನ ಪಂಚಾಯತ ಬೋರ್ಡ ಆಫೀಸಿನಲ್ಲಿ ಕೂಡಿ ಜನಾಬ್ ಯಚ್ ಯಸ್. ಹುಸೈನ್ ಸಾಹೇಬ್ ಬಿ ಎ. ಬಿ. ಯಲ್., ಯಂ ಯಲ್ ಎ ರವರು ಸರ್ವಾನುಮತಿಯಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಇಲ್ಲಿಯ ಬೋರ್ಡ ಹ್ಯಾಸ್ಕೂಲಿನಲ್ಲಿ ತಾ 11-7-1938ರ ದಿನ ಕನ್ನಡ ವಿದ್ಯಾರ್ಥಿಗಳ ಸಭೆಯಲ್ಲಿ ಸ್ವಾಮಿ ಧರ್ಮಾನಂದರವರು ಸದ್ಧರ್ಮ ವಿಷಯವಾಗಿ ಒಂದು ಭಾಷಣವನ್ನು ಕೊಟ್ಟರು. ಮುಖ್ಯೋಪಾಧ್ಯಾಯರಾದ ಶ್ರೀ ಕೆ. ವಿ ನರಸಿಂಹ ವೆಂಕಟೇಶ ಶೆಣ್ಯೆಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು.

ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲೆಯ ಸಂಸ್ಕೃತ ಮಾಸ್ತರರಾಗಿದ್ದ ಶ್ರೀ ಕೆ ರಾಮಚಂದ್ರ ಜ್ಯೋಸರು ಅನಾರೋಗ್ಯದ ದೆಸೆಯಿಂದ ರಜೆ ಪಡಕೊಂಡಿರುವ ನಿಮಿತ್ತ ಅವರ ಸ್ಥಾನದಲ್ಲಿ ಶ್ರೀ ಕೆ ಪಾಂಡುರಂಗ ಭಟ್ಟ ಸಾಹಿತ್ಯ ಶಿರೋಮಣಿಯವರ ನೇಮಿಸಲ್ಪಟ್ಟಿರುತ್ತಾರೆ

ನಮ್ಮ ತಾಲೂಕಿನ ಖಾದಿಪ್ರಚಾರ ಕೋ ಪ್ರೆಸ್ ಕೆಲಸಗಾರರಾಗಿದ್ದ ಶ್ರೀ ಮಿ ಮೂ ಕೃಷ್ಣಯ್ಯ ಶೆಟ್ಟರು ಇಲ್ಲಿಯ ಹರಿಜನ ಸೇವಾ ಸಂಘದ ಹರಿಜನ ಶಾಲೆಯ ಸಂಚಾಲಕ ಅಧ್ಯಾಪಕರಾಗಿಯೂ ದಕ್ಷಿಣ ಕನ್ನಡ ಗ್ರಾಮೋದ್ಧಾರಕ ಸಂಘದ ಪ್ರಚಾರಕರಾಗಿಯೂ ನೇಮಿಸಲ್ಪಟ್ಟಿರುವುದು ಆನಂದದಾಯಕ ಸಂಗತಿಯಾಗಿದೆ

ಇಲ್ಲಿಯ ಜನ ಪ್ರಿಯ ತಹಸೀಲ್ದಾರರಾಗಿದ್ದ ಶ್ರೀ ಬಿ ಗಣೇಶ ಬಿ ಎ ರವರು ಪುತ್ತೂರಿಗೆ ವರ್ಗವಾದ ನಿಮಿತ್ತ ಅವರ ಕಮಿಟಿಯ ಬೋರ್ಡ ಎಲಿಮೆಂಟರಿ ಶಾಲೆಯವರು ಸಭೆ ಕರೆಸಿ ಶಾಲಾಮಕ್ಕಳಿಗೆ ಸಕ್ಕರೆ ಮಿಠಾಯಿ ಹಂಚಿ ಸಂತೋಷ ಪಡಿಸಿದ್ದು ಮಾತ್ರವಲ್ಲದೆ ಅವರು ಮಕ್ಕಳ ಶೀಲಗಳು ಹೇಗಿರಬೇಕೆಂದು ಚಿಕ್ಕ ಭಾಷಣವನ್ನೂ ಕೊಟ್ಟು ಪ್ರೋತ್ಸಾಹಿಸಿದರು ಶ್ರೀ ಗಣೇಶರ ಸ್ಥಾನಕ್ಕೆ ಕೆ ಕೃಷ್ಣಯ್ಯರವರು ನೇಮಿಸಲ್ಪಟ್ಟಿರುವುದಾಗಿ ತಿಳಿದು ಬಂದಿದೆ

ಕೋಟೆ—ಇಲ್ಲಿಯ ಶ್ರೀ ಶಾಂಭವೀ ವಾಚನಾಲಯದ ದ್ವಿತೀಯ ವಾರ್ಷಿಕೋತ್ಸವವು ಇದೇ ತಾ. 17-7-38ನೇ ದಿನ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಡಾ. ಶ್ರೀ ನಾರಾಯಣಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಉಪಹಾರ ನಂತರದಲ್ಲಿ ಹೊಸ ಮೆಂಬರರನ್ನು ಸೇರಿಸುವಿಕೆ, ಯಕ್ಷಗಾನ ಕಾಲಕ್ಷೇಪಗಳಾದುವು.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಸಭೆ

ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ತಾ.23 ಮತ್ತು 24ರಲ್ಲಿ ವಾರ್ಧಾದಲ್ಲಿ ಕೂಡುವುದರಿಂದಲೂ ಮತ್ತು ಕರ್ನಾಟಕ ಪ್ರಾಂತೀಕ ಕೊಂಗ್ರೆಸ್ ಕಮಿಟಿಯ ಮೆಂಬರರಲ್ಲಿ ಕೆಲವರು ಕರ್ನಾಟಕ ಏಕೀಕರಣದ ಕೆಲಸದ ನಿಮಿತ್ತವಾಗಿ ಅಲ್ಲಿಗೆ ತೆರಳುವುದರಿಂದಲೂ ಬಿಜಾಪುರದಲ್ಲಿ ತಾ 23, 24ರಲ್ಲಿ ಕೂಡಲಿಕ್ಕಿದ್ದ ಕರ್ನಾಟಕ ಪ್ರಾಂತೀಕ ಕೊಂಗ್ರೆಸ್ ಕಮಿಟಿಯ ಸಭೆಯು ಮುಂದುವರಿಸಲ್ಪಟ್ಟಿದೆ

ಬಂಟವಾಳ

ಇಲ್ಲಿಯ ಪಂಚಾಯತ ಬೋರ್ಡಿನವರು ನೆರೆಹಾವಳಿಯಿಂದ ತಪ್ಪಿಸಿಕೊಳ್ಳಲು ಯಾವ ಯೋಜನೆಯನ್ನು ಕೈಕೊಳ್ಳಬಹುದೆಂದು ನೇಮಿಸಿದ ಸಮಿತಿಯವರು, ಇಂದಿಗೆ ಕೆಲವು ದಿನಗಳಿಂದ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರೊಡನೆ ಪರ್ಯಾಲೋಚನೆಯನ್ನು ನಡೆಸುತ್ತಿರುವರು. ಸದ್ರಿ ಇಂಜಿನಿಯರರು ನಮ್ಮ ಆಲೋಚನೆಯನ್ನು ದರ್ಶಾರ್ಥವಾಗಿ ಕೊಡಲೊಪ್ಪಿದುದು. ಸ್ವತಃ ಅನೇಕ ಸ್ಥಳಗಳನ್ನು ಸಂದರ್ಶಿಸಿ, ಇಂತಹ ರೀತಿಯಲ್ಲಿ ಮಾರ್ಗನಿರ್ಮಾಣ ಮಾಡಿದರೆ ಆಗಬಹುದೆಂದು ಇಕ್ಕರ್ತ ವಾಗಿದೆಯೆಂದೂ ತಿಳಿದುಬರುತ್ತದೆ.

ಇಲ್ಲಿಯ ಪಂಚಾಯತ್ ಬೋರ್ಡ ಚುನಾವಣೆಯಲ್ಲಿ ಮುಸ್ಲಿಂ ಲೀಗಿನ ಮಂಗಳೂರು ಶಾಖೆಯ ಕಾರ್ಯದರ್ಶಿಯವರಾದ ಜನಾಬ್ ಬಿ ಎಲ್ ಅಹಮ್ಮದ್ ಸಾಹೇಬರು ಪ್ರತಿಸ್ಪರ್ಧಿಯಿಲ್ಲದೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು ಈ ಚುನಾವಣೆಯಲ್ಲಿ ಮಂಗ್ಳೂರು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ನಾಗೇಂದ್ರನಾಥ ಬಾಳಿಗರು ಉಪಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟಿರುತ್ತಾರೆ. ಈ ಸ್ಥಾನವನ್ನು ಶ್ರೀಯುತ ಬಾಳಿಗರು ಸ್ವೀಕರಿಸ ಬಹುದೋ ಎಂಬುದನ್ನು ತಾಲೂಕು ಮತ್ತು ಜಿಲ್ಲಾ ಕಾಂಗ್ರೆಸು ಸಮಿತಿಗಳು ತೀರ್ಮಾನಿಸುವುವು. ಯೋಗ್ಯ ರೀತಿ ಸತ್ಯಾಗ್ರಹ ಸಮರದಲ್ಲಿ ಹೆಸರುಗೊಂಡ ನನ್ನೂರಲ್ಲಿ ಇದುವರೆಗೂ ಜಿಲಾ ಬೋರ್ಡ ಮತ್ತು ಸ್ಥಾಯಿ ವಿಭಾಗ ಕ ಸಭೆಗಳಿಗೂ ಬಹುಮತದಿಂದ ಯಾ ಪ್ರತಿಸ್ಪರ್ಧೆಗಳಿಲ್ಲದೆ ಕಾಂಗ್ರೆಸ್‌ಹುರಿಯಾಳುಗಳನ್ನು ಕಳುಹಿಸಿದಂತೆ ಕೂಡ, ಪಂಚಾಯತ್ ಬೋರ್ಡಿಗೆ ಮಾತ್ರ ಕಾಂಗ್ರೆಸಿನವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಡದಿದ್ದುದು ಶೋಚನೀಯ ಸಂಗತಿಯಾಗಿದೆ

ಕುಂಬಳೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರವರು, ಶಾಲಾ ವರ್ಗಗಳಿಗೆ ಧರ್ಮಾರ್ಥವಾಗಿ ಸ್ಲೇಟು ಪುಸ್ತಕಗಳನ್ನು ಕೊಡುವ ವಿಷಯದಲ್ಲಿ ಕೆಟ್ಟ ನಂ 4/1938ನೇ ಸರ್ಕುಲಾರಿನಲ್ಲಿ ... ಉಪಾಧ್ಯಾಯ ... ಪುಸ್ತಕಗಳನ್ನು ... ಬೋರ್ಡು ಪ್ರೆಸಿಡೆಂಟರವರಿಗೆ ತಾ 5-7-38 ರಲ್ಲಿ ಒರಿದವನ್ನು ಅವರಿಂದ ತನಗೆ ಬಂದ Dis No 5011 L 4/11-7-38ನೇ ಉತ್ತರದಲ್ಲಿ ಹೀಗೆ ಪುಸ್ತಕಗಳನ್ನು ಕೊಡುವುದರಲ್ಲಿ ತಾನು ಉಪಾಧ್ಯಾಯರಿಗೆ ಸಹಾಯ ಮಾಡಬಹುದೆಂತ ಒಪ್ಪಿರುತ್ತಾರೆ ಪುಸ್ತಕ ಸ್ಲೇಟುಗಳನ್ನು ಕೆಗೆದುಕೊಡಲು ಅನುಕೂಲವಿಲ್ಲದ ಉಪಾಧ್ಯಾಯರು ಅವರ ಶಾಲೆಗಿರುವ ಗ್ರಾಮ ಗೃಹಸ್ಥರ ಸಹಾಯದಿಂದ ತಾ. 30-7-38ರ ಒಳಗ ನನ್ನಾ ಅಧಾರಿಂತ ತಾನು ಬಾವಿಸುತ್ತೇನೆ ಅದಾಗುವ ಹಾಗಿಲ್ಲದಿದ್ದರೆ ಅಂಥಾ ಶಾಲೆಗಳ ಮುಖ್ಯೋಪಾಧ್ಯಾಯರು ಶಾಲೆಗೆ ಬೇಕಾದ ಸ್ಲೇಟು ಪುಸ್ತಕಗಳಿಗೆ ತನಗೆ ಕೈಕಾಗದ ಕೊಟ್ಟರೆ ತಾನು ಅವುಗಳನ್ನು ಅವರಿಗೆ ಕೊಟ್ಟು ಅವರಿಗೆ ಬೋರ್ಡಿನಿಂದ ಹಣಬಂದಾಗ ಅವರಿಂದ ಹಣಪಡೆದು ಕೈಕಾಗದವನ್ನು ವಾಪಾಸು ಕೊಡುವುದಕ್ಕೆ ತಯಾರಿದ್ದೇನೆ. ಎಂದು ಮುಸ್ಲಿಂ ವಿದ್ಯಾಭ್ಯಾಸ ಸಂಘದ ಸೆಕ್ರೆಟರಿಗಳಾದ ಎಂ. ಸಿ ಮಮ್ಮಿಯವರು ತಿಳಿಸುತ್ತಾರೆ

ತಿರುವಾಂಕೂರಿನಲ್ಲಿ ವಿದುರಾಶ್ವತ್ಥವಾದೀತೆ?

ಇನ್ನೆರಡು ತಿಂಗಳ ವರೆಗೆ ತ್ರಿವೇಂಡ್ರಮಿನಲ್ಲಿ ಸಭೆಗಳು, ಮೆರವಣಿಗೆಗಳು ಮೊದಲಾದುವು ನಡೆಯಬಾರದೆಂದು ಮೆಜಿಸ್ಟ್ರೇಟರು ಅಪ್ಪಣೆ ಪ್ರಕಟಿಸಿರುವುದಕ್ಕೆ, ಸಾಕಷ್ಟು ಕಾರಣಗಳು ಕಳೆದವಾರ ಜರುಗಿದ ಎಸೆಂಬ್ಲಿ ಸಭಾ ಕಾಲದಲ್ಲಾದ ಅತ್ಯಾಚಾರಗಳಲ್ಲಿವೆಯೇನೋ ನಿಜವೆ. ಆದರೆ, ಪ್ರಜೆಗಳು ಒಂದು ಕಡೆ ಕೂಡುವ ಸ್ವಾತಂತ್ರ್ಯವಿದ್ದುದನ್ನು ಹೀಗೆ ಅಪಹರಿಸುವ ಹಾಗೆ ಕಾರಣಗಳಿವೆಯಾದರೆ, ಈ ಕಾರಣಗಳಿಂದಲೇ ಪ್ರಜೆಗಳಲ್ಲಿ ಪ್ರಜಾಸತ್ತೆಯನ್ನು ಮುಂದರಿಸಲು ಅಗತ್ಯವಾಗಿರುವ ಇಚ್ಛೆಯೂ ಹುಟ್ಟಿರುವುದೆಂಬುದನ್ನು ಮನ್ನಿಸಬೇಕಾಗುತ್ತದೆ.

ಹೀಗಿರುವಾಗ, ಯಾವುದೊಂದು ಖಂಡಿತವಾದ ಸ್ಪಷ್ಟವಾದ ರುಜುವಾತು ಇಲ್ಲದೆ, ಸ್ಟೇಟ್ ಕೊಂಗ್ರೆಸಿನ ಮೇಲೆ, ಕಳೆದ ವಾರದ ಅನಾಹುತಗಳಿಗೆಲ್ಲ ಜವಾಬ್ದಾರಿಯನ್ನು ಹೊರಿಸಿರುವುದು ವಿಚಿತ್ರವೆನ್ನಬೇಕು ಸರಕಾರವು ಭಾವಿಸಿದ್ದುದು ನಿಜವೇ ಇರಬಹುದು, ಆದರೂ ರುಜುವಾತು ಇದೆಯೆ? ಈ ಪಕ್ಷದವರ ಮೇಲೆಯೇ ಮಾತ್ರ ಈ ನಿರೋಧದ ಕಟ್ಟು ಏತಕ್ಕೆ? ಇತರ ಶಾಂತಭಾವದ ಮಹಾಜನಕ್ಕೇನೂ ಅಪ್ಪಣೆ ಅನ್ವಯಿಸುವುದಿಲ್ಲವಂತೆ ಏಕೆಂದರೆ, ಶಾಂತಭಾವದ ಮಹಾಜನರಿಗೆ ಈ ಕೊಂಗ್ರೆಸು ಒಪ್ಪದಂತೆ. ಆದುದರಿಂದಲೇ ಮಹಾಜನರು ಕೊಂಗ್ರೆಸು ಕೂಡುವಲ್ಲಿ ಉಪಟಳವನ್ನು ಉಂಟುಮಾಡುವುದಂತೆ ಇರಲಿ

ಎರಡು ತಿಂಗಳ ಅವಕಾಶದೊಳಗೆ, ಇತ್ತಂಡಗಳೂ ವಿಚಾರಮಾಡಿಕೊಂಡು, ಈ ಬಗೆಯ ತಂಟೆಗಳು ಏಕಾಗುತ್ತವೆ ಎಂದಾದರೂ ಸ್ಪಷ್ಟವಾಗುವಂತೆ ಪ್ರಯತ್ನಿಸಿ ಪ್ರಕಟ ಕೂಡಬಾರದೆಂದಿದೆಯೆ? ಸಂಪೂರ್ಣ ವಿಚಾರಣೆಯಂತೂ ನಡೆವುದಗತ್ಯವಾಗಿದೆ

ದಿವಾನರಾಗಿ, ಅತ್ಯುತ್ತಮ ನ್ಯಾಯವಿಶಾರದರಾಗಿರುವ ಸರ್ ಸಿ ಪಿ ರಾಮಸ್ವಾಮಿ ಅಯ್ಯರರಿದ್ದಾರೆ ತ್ರಿವಾಂಕೂರು ರಾಜ್ಯವು ಸ್ಥಳೀಯ ರಾಜರ ಜವಾಬುದಾರಿಯದಾದರೂ, ಕಾನೂನು ಎಂಬುದು ತನ್ನದೇ ಎಂದು ಮಾತ್ರ ಹೇಳಬರುವುದೆ? ನ್ಯಾಯವೆಂಬುದು ಸರ್ವತ್ರವೂ ಸಮಾನವಾಗಿಲ್ಲವೆ? ರಾಜ್ಯದ ಹೊರಗೆ ಈ ವಿಧಾನಗಳು ತಲ್ಲಣಗೊಳಿಸಿವೆ ಎಂಬುದನ್ನು ಅಡಗಿಸಿಡಲಾಗುವುದಿಲ್ಲ ವಾದ ಪ್ರತಿವಾದಗಳು ಹೆಚ್ಚಿವೆ ವಿಚಾರಣೆಯಾಗದೆ ಉಪಾಯವಿಲ್ಲ ನಿಜವಾಗಿಯೂ 'ಇದ್ದವರು ಇಲ್ಲದವರು'ಗಳ ಪಂಗಡಗಳೊಳಗೆ ಈ ವಿವಾದ ಅದೇ ರಾಜಕೀಯ ಚಳವಳವಾಗಿದೆ ಎನ್ನುತ್ತಾರೆ ನಿಜವೆ? ಯಾರಿಗೆ ಸಮಾಧಾನ ತೋರುತ್ತದೆಯೋ, ಆ ವಿದ್ಯಮಾನಗಳಂತೆ ಆ ಪಕ್ಷ–ಈ ಪಕ್ಷಗಳೊಳಗೆ ವೈಷಮ್ಯ ಬೆಳೆಯುತ್ತ ಬರುತ್ತದೆ ಇದು ವಾಸ್ತವವಾಗಿಯೂ ಎರಡೂ ಪಕ್ಷಗಳಿಗೆ ಯೋಗ್ಯ ಭೂಷಣವೇನೂ ಅಲ್ಲ

ನಿಷ್ಪಕ್ಷನಾದ ವಿಚಾರಣೆಯಾಗಿ ತೀರ್ಮಾನವಾಗದೆ ಈ ವಾದವು ಮುಗಿಯದೆಂಬುದು ಸ್ಪಷ್ಟ. ಬ್ರಿಟಿಷ ಸರಹದ್ದಿನೊಳಗೆ ತ್ರಿವಾಂಕೂರು ರಾಜ್ಯದ ಪ್ರಜೆಗಳು ಆಗಾಗ ಬಂದು ತಮ್ಮ ಹೇಳಿಕೆ ಪ್ರಕಟಿಸುತ್ತಲೇ ಇರುತ್ತಾರೆ ಇತ್ತಂಡಗಳೊಳಗೆ ಸಹಾನುಭೂತಿಯಾಗುವಂತೆ ವಿಚಾರಣೆ ನಡೆಯಬೇಕು.

ಇಲ್ಲಿಯೂ ಒಂದು ವಿದುರಾಶ್ವತ್ಥ ಪ್ರಕರಣವಾಗುವ ತನಕ ವಿಚಾರಣೆ ಬಾಕಿ ಇಟ್ಟು ವಿಳಂಬಿಸುವುದರಿಂದ ಖಂಡಿತವಾಗಿಯೂ ಕೆಡುಕುಂಟು. ಈ ಹೆಸರ್ಗೊಂಡ ರಾಜ್ಯ, ಐತಿಹಾಸಿಕ ಗೌರವವುಳ್ಳುದು. ಇದೇಕೆ ತನ್ನ ಮನ್ನಣೆಯನ್ನು ಸಮಸ್ತರ ಇದಿರಲ್ಲಿ ಶಾಶ್ವತವಾಗಿ ಅನರ್ಜಿತವಾಗಿಸಿಕೊಳ್ಳಬಾರದು?

ಕೊಂಗ್ರೆಸ್ ಸದಸ್ಯರ ಸಭಾಭಂಗ

ಟ್ಯುಟಿಕೊರಿನ್‌ನಲ್ಲಿ ಕೊಂಗ್ರೆಸು ಮಂತ್ರಿಮಂಡಲವುಂಟಾಗಿ ಒಂದು ವರ್ಷ ಕಳೆದುದರ ವರ್ಧಂತ್ಯುತ್ಸವವನ್ನು ಕೊಂಗ್ರೆಸ್ ಸ್ವಯಂಸೇವಕರು ಜರುಗಿಸಿದರು. (ತಾ. 14). ಅಲ್ಲೀಗಲೇ, ಇಬ್ಬರು ಹೆಡ್‌ಕನ್ಸಟೇಬಲರೂ ಇಬ್ಬರು ಜವಾನರೂ ಹಾಜರಿದ್ದಾಗ್ಯೂ ಸಭಾಧ್ಯಕ್ಷರನ್ನು ತಿವಿದು, ಮತ್ತೊಬ್ಬ ಸ್ವಯಂಸೇವಕನನ್ನು ಕೈಯಲ್ಲಿ ಗಾಯಪಡಿಸಿ, ಹಲವರನ್ನು ಚೆನ್ನಾಗಿ ಬಡೆದು, ಪುಂಡರು ಸಾಕಷ್ಟು ಹಾವಳಿಯನ್ನುಂಟುಮಾಡಿದರು.

ತಿನ್ನವೆಲ್ಲಿ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷ ವೀರಬಾಹು ಪಿಳ್ಳೆಯವರು ಕೊಂಗ್ರೆಸಿನ ಕೀರ್ತಿಕಲಾಪಗಳನ್ನು ಹಾಡುವಾಗ, ಯಾರೋ 'ಇದು ಬ್ರಾಹ್ಮಣ ಮಂತ್ರಿಕೂಟ, ಬ್ರಾಹ್ಮಣ ಹಿತಾರ್ಥಾಯ ಅವತರಿಸಿದ್ದು!'' ಎಂದು ಕೂಗಿದರು

'ಮದ್ಯನಿವಾರಣಾ ಆಕ್ಟನ್ನು ಮಂಜೂರು ಮಾಡಿ ಬ್ರಾಹ್ಮಣೇತರರಿಗೇ ಹೆಚ್ಚಿನ ಸಹಾಯ ಮಾಡಿದ ಮಂತ್ರಿಗಳಿವರು'' ಎಂದು ಭಾಷಣಕರ್ತರೆನ್ನಲು, ಕೂಡಲೆ ಹೊಯಿಗೆ ಕಲ್ಲು ಮೊದಲಾದುವನ್ನು ಎಸೆದು ಪುಂಡರು ಮೆರೆದರು

ಅಧ್ಯಕ್ಷರು 'ಶಾಂತಂ, ಶಾಂತಂ' ಎಂದು ಕೂಗಿದರು

ಆತ್ಮಗೌರವವುಳ್ಳ ಪುಂಡರು ಅಟ್ಟಹಾಸ ಬಿಡಲಿಲ್ಲ ಪ್ರೆಸಿಡೆಂಟರ ಕಡೆಗೇ ಧಾವಿಸಿದರು. ದೀಪವನ್ನು ಜಡೆದಿಕ್ಕಿದರು ಕತ್ತಲಲ್ಲಿ ಗಡಿಬಿಡಿಸಾಗಿತು ಮತ್ತೊಂದು ದೀಪ ತಂದರು ಅದನ್ನು ಒಡೆದು ಹಾಕಲಾಯಿತು

ಆಗಲೆ ಕತ್ತಲಲ್ಲಿ ಪ್ರೆಸಿಡೆಂಟರನ್ನು ಬೆನ್ನಲ್ಲಿ ತಿವಿದರು ಇತ್ಯಾದಿಯವರಿಗೆ ಗಾಯಗಳಾದುವು

ಸರ್ಕಲ್ ಇನ್ಸ್‌ಪೆಕ್ಟರರೂ ಮೆಜಿಸ್ಟ್ರೇಟರೂ ಬರಲು, ಪುಂಡರಾದ ಆತ್ಮಗೌರವಿಗಳ ಉತ್ಸಾಹಪೂರ್ವಕವಾದ ಭಂಗಕಾರಕ ವರ್ತನವನ್ನು ವಿವರಿಸಲಾಯಿತು

ಮ್ಯುನಿಸಿಪಲ್ ದೀಪದ ಬೆಳಕಿನಲ್ಲಿ ಹೊರಗೆ ಸಭೆ ನಡೆಯಿತು 14 ಮಂದಿಯನ್ನು ಕೈದು ಮಾಡಲಾಗಿದೆ ತಿರುವಾಂಕೂರಿಂದ ಇತ್ತ ಗಾಳಿ ಬೀಸಿತು

ಶ್ರೀಮತಿ ಸೌ ಸುಬ್ಬರಾಯನ್‌ರವರಿಗೆ ಮದ್ರಾಸು ಮಹಿಳಾಸಮಾಜದ ಆರಿಕೆ

ಮದ್ರಾಸು ನಗರದಲ್ಲಿ ಸೇರಿದ ವಿಮೆನ್ಸ್ ಇಂಡಿಯನ್ ಎಸೋಸಿಯೇಶನ್‌ನಲ್ಲಿ — ಈಗ ಹೆಮ್ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಸೌಕರ್ಯಗಳು ಕಡಮೆ, ಬಹುಪತ್ನೀ ವಿವಾಹಸಲ್ಲದೆಂಬ ಶ್ರೀಮತಿಯವರ ಮಸೂದೆಗೆ ಪ್ರೋತ್ಸಾಹ, ಡಾ। ದೇಶಮುಖರ ಹಿಂದೂವಿವಾಹ ಸುಧಾರಣ ಆಕ್ಟು ಮತ್ತು ಉತ್ತರಾಧಿಕಾರದ ಆಕ್ಟುಗಳಿಗೆ ಅನುಮೋದನೆ, ದೇವದಾಸಿಗಳನ್ನು ಒಪ್ಪಿಸದಂತಹ ಸುಧಾರಣೆಯ ಅಗತ್ಯ — ಮೊದಲಾದ ವಿಷಯಗಳು ಯಥಾಯೋಗ್ಯವಾಗಿ ಚರ್ಚೆಯಾಗಿ ಅನುಮೋದನೆ ಹೊಂದಿದುವು

ಮದುವೆಯು ಇತ್ತಂಡಗಳಿಗೂ ಸಮಾನವಾಗಿದ್ದು, 'ಬಹು' ವಿಚಾರಗಳು ಅಡಗಬೇಕೆಂದೂ, ಇದಕ್ಕಾಗಿ ಶ್ರೀ। ಸುಬ್ಬರಾಯನ್‌ರವರು ತಂದ ಮಸೂದೆಯನ್ನು ಸರಕಾರವು ಮಂಜೂರ್ಮಾಡುವಂತಾಗಬೇಕೆಂದೂ ಅಧಿಕ ಪ್ರೋತ್ಸಾಹ ಕೊಡಲಾಯಿತು.

ಬಹುಪತ್ನೀ ವಿವಾಹವನ್ನು ದಂಡಿಸಬೇಕೆಂದು ಕಕ್ಕ ಹೊಸ ಸೆಕ್ಷನುಗಳನ್ನು ಆ ಮಸೂದೆಯಲ್ಲಿ ಸೇರಿಸಬೇಕೆಂದಾಯಿತು. ಹೆಮ್ಮಕ್ಕಳಿಗೆ [illegible] ರಣೆ ಹೊಂದುವುದಾಗಿಯೂ ಸೂಚಿಸಲಾಯಿತು. ಕೆಲ ಹೆಂದಿರು ಗಂಡಂದಿರನ್ನು ಹಿಂಸಿಸುವ ಕಾರಣ, ಅವರೊಳಗೆ ದಾಂಪತ್ಯ ವಿಚ್ಛೇದಕ್ಕೂ ಅವಕಾಶವಿರಬೇಕೆಂದೂ ಸೂಚಿತವಾಯಿತು— ಮಹಿಳೆಯರಿಂದಲೇ!

ಬೊಂಬಾಯಿ: ಗ್ರಾಮೋದ್ಧಾರ ಕಾರ್ಯ

ಆರು ಕೋಟಿ ರೂಪಾಯಿಗಳ ವ್ಯಯಮಾಡಿ ಸಾಧ್ಯವಾಗುವುದ

ಸರಕಾರದ ಹೊಸಯೋಜನೆ.

ಸರಕಾರದ ಮಂತ್ರಿಮಂಡಲದಲ್ಲಿ ಈಗ ಏಳು ಮಂತ್ರಿಗಳಿರುವರು ಇನ್ನೊಬ್ಬರನ್ನು ನೇಮಿಸುವರು ಇವರು ಈ ಗ್ರಾಮೋದ್ಧಾರಕ್ಕಾಗಿ ತಯಾರಾಗಿರುವ ಹೊಸ ಯೋಜನೆಯನ್ನು ವ್ಯವಹಾರಕ್ಕೆ ತರುವರು

ಈ ಹೊಸ ಯೋಜನೆಯಂತೆ, ಕಳೆದ ಆರು ವರ್ಷದಿಂದ ಸಾಗುವಳಿ ಮಾಡುತ್ತಿದ್ದ ರೈತರಿಗೆಲ್ಲ, ಆಯಾ ಜಮೀನಿನ ಮೇಲೆ ಸ್ಥಾಯಿ ಹಕ್ಕು ಸಿಗುವುದು ನೂರು ಎಕ್ರೆಗಿಂತ ಹೆಚ್ಚು ಜಮೀನಿರುವ ಜಮೀನ್ದಾರರ ರೈತರೂ ಈ ಹಕ್ಕು ಪಡೆವರು ಇವರು ನ್ಯಾಯ ಪ್ರಕಾರ ನಿಶ್ಚಿತವಾಗುವ ಗೇಣಿ ತೆರದಿದ್ದರೆ ಮಾತ್ರ ಜಮೀನು ಬಿಡಬೇಕು ಈ ಹಕ್ಕನ್ನು ವರ್ಗಾಯಿಸಬಾರದು

1932ಕ್ಕೆ ಹಿಂದೆ ಮಾಡಿರುವ ಸಾಲವನು ಅವಧಿಯಂತೆ ಇಳಿಸಲಾಗುವುದು ಸಾಲಗಾರನ ಸಂಪತ್ತು ಯೋಗ್ಯತೆ ಜಮೀನಿನ ಮೌಲ್ಯ ಇವನ್ನು ನೋಡಿ, ಸಾಲದನ್ನು ಇಳಿಸುವರು

ಗ್ರಾಮೋದ್ಧಾರಕ್ಕೆ ಹಣ ಒದಗಿಸುವರೆ, ಈ ಸಾಲಗಳನ್ನು ಇಳಿಸಿ ನಿಶ್ಚಯಿಸುವರೆ, ರೈತರಿಗೆ ಕಡಿಮೆ ಅವಧಿಯ ಸಾಲಗಳನ್ನು ತೆರುವರೆ ಒಂದು ಕಮಿಟಿ ನೇಮಕ ಹೊಂದುವುದು.

ರೈತರ ವಸತಿಹಕ್ಕು ಶಾಶ್ವತವಾಗಬೇಕಾದರೆ, ಹಿಂದಣ ಎರಡು ವರ್ಷಗಳ ಗೇಣಿ ತತ್ತಿರಬೇಕು 1936ರ ಮೊದಲಿನ ಗೇಣಿಯನ್ನು ನಾಲ್ಕು ಕಂತುಗಳಲ್ಲಿ ತೆತ್ತಿರಬೇಕು.

ಸರಕಾರವು ಪಂಚಾಯತಿ ಮೂಲಕವಾಗಿ ಗೇಣಿಯನ್ನು ನಿರ್ಧರಿಸುವುದು ಜಮೀನು ಕೃಷಿ ಸರಿಯಾಗಿ ಮಾಡದ ಒಕ್ಕಲನ್ನು ಹೊರಡಿಸಬಹುದ ಧಣಿಯೇ ಕೃಷಿಮಾಡುವನಾದರೂ ಒಕ್ಕಲಿಗೆ ಹಕ್ಕಿರದು.

ಧಣಿಗಳ ನಾನಾ ವಿಪರೀತ ಹಕ್ಕುಗಳೆಲ್ಲ ರದ್ದಾಗುವುವು, ಈ ಹಕ್ಕುಗಳನ್ನು ರದ್ದು ಮಾಡದೆ, ಒಕ್ಕಲುಗಳಿಗೆ ಯಾವ ಸೌಕರ್ಯ ಕೊಡಲಾಗದಾಗಿದೆ ಎಂದು ಸರಕಾರದ ಅಭಿಪ್ರಾಯ. ಹಕ್ಕು ಕಳೆದ ಧಣಿಗಳಿಗೆ ಸರಕಾರವೇ ಪರಿಹಾರವನ್ನು ಮಾಡುವುದು.

100 ಎಕ್ರೆಗಿಂತ ಕಡಿಮೆ ಕೃಷಿ ಮಾಡುವವರಿಗೆ ಅಥವಾ ಧಣಿಗಳಿಗೆ ಸಾಲವಿಮೋಚನೆಯ ಸೂತ್ರಗಳು ಅನ್ವಯಿಸುವುವು 1932ರಲ್ಲಿದ್ದ ಸಾಲದಿಂದ ಸೇಕಡಾ 30ರ ತೆ ಕಳೆಯಲಾಗುವುದು. ಉಳಿದುದನ್ನು ಸಾಲಗಾರನ ಅನುಕೂಲತೆ ನೋಡಿ ಎಷ್ಟೊಂದು ನಿಶ್ಚಿತ ಮೊಬಲಗಿಗೆ ತರಲಾಗುವುದು

ಗ್ರಾಮೋದ್ಧಾರ ಮಂಡಲಕ್ಕೆ ಆರ ಕೋಟಿ ರೂಪಾಯಿ ಭಂಡವಾಳವಿದ್ದೀತು ಇದರಿಂದ ಸಾಲ ಕೊಡುವ ಹಣಗಳನ್ನು ಸುಲಭ ಕಂತುಗಳಲ್ಲಿ ವಸೂಲ್ಮಾಡಿಕೊಳ್ಳುವರು ಬೊಂಬಾಯಿ ಸರಕಾರವು ಈ ಭಂಡವಾಳದಲ್ಲಿ ಐದು ಕೋಟಿ ರೂಪಾಯಿಗಳನ್ನು ತಾನೇ ತೆರುವುದು ಸೇಕಡಾ 8ರ ಸಲೆ ಬಡ್ಡಿಯ ಈ ಸಾಲವಾದ ಕಾರಣ, ಸಾಲಗಾರರಿಗೆ ಹಣಕೊಟ್ಟಿರುವವರೆಲ್ಲರು ಇದಕ್ಕೆ ಭಂಡವಾಳ ವಂತಿಗೆ ತೆರುವಂತಾಗುವುದು ಈ ಸಾಲದ ಕುರಿತಾದ ಮಸೂದೆಗೆ ಇನ್ನೆರಡು ತಿಂಗಳ ಅವಕಾಶ ಬೇಕಾಗಿದೆ

ಮದ್ರಾಸು ರೈತರ ಋಣವಿಮೋಚನಾ ಆಕ್ಟು

ಕಳೆದ ಮಾರ್ಚಿ 22ರಿಂದ ಎಪ್ರಿಲ್ ಅಂತ್ಯದ ವರೆಗೆ ನಡೆದುದೇನು?

ಕಳೆದ ಮಾರ್ಚಿ 22ರಲ್ಲಿ ಈ ಆಕ್ಟು ಜ್ಯಾರಿಗೆ ಬಂತು ಸುಮಾರು ಐದು ಹಪ್ತೆಗಳಲ್ಲಿ ಎಷ್ಟು ಪರಿಣಾಮವನ್ನು ಅದು ರೈತರಲ್ಲಿ ಉಂಟುಮಾಡಿತು ಎಂದು ಎಪ್ರಿಲ್ ತಿಂಗಳ ಕೊನೆಯ ತನಕ ನಡೆದ ವ್ಯವಹಾರದ ಅಂಕೆಸಂಖ್ಯೆಗಳಿಂದ ತಿಳಿಯಬಹುದು –

1) 1932ನೆ ಇಸ್ವಿ ಒಕ್ಟೋಬರದ ಹಿಂದೆ ಆದ ಸಾಲಗಳ ವಿಷಯದಲ್ಲಿ ಸುಮಾರು 280 ಲಕ್ಷ ರೂಪಾಯಿಯ ಸಾಲಗಳಿದ್ದುದು, 170 ಲಕ್ಷ ರೂಪಾಯಿಗೆ ಇಳಿಯಿತು

2) 1932ನೆ ಇಸ್ವಿ ಒಕ್ಟೋಬರದ ನಂತರ ಉಂಟಾದ ಸಾಲಗಳ ವಿಷಯದಲ್ಲಿ ಸುಮಾರು 142 ಸಾವಿರ ರೂಪಾಯಿ ಸಾಲವಿತ್ತು, 9400[illegible] ಕ್ಕಿಳಿಯಿತ

3) ಬಡ್ಡಿ ರೂಪಾಯಿ 9000 ಇದ್ದುದು 2000 ರೂಪಾಯಿಗೆ ಇಳಿಯಿತು

4) ವ್ಯಾಜ್ಯಾದಿಗಳ ಖರ್ಚು 800[illegible] ರೂಪಾಯಿ ಇದ್ದುದ, 6000ಕ್ಕಿಳಿಯಿತು

5) ಮೂಲ ಡಿಕ್ರಿ ಐವಜುಗಳು 134000 ವಿತ್ತು 94 ಸಾವಿರವಾಯಿತು

6) ಅನುಲ್ಲಾಗಿ ದಾಖಲಾದ ಅರ್ಜಿಗಳ 5000 ಇದ್ದುವು ಇವು ಜ್ಯಾರಿಗೆ [illegible] ದಾವು.

7 ದಿವಾಳಿ ಅರ್ಜಿಗಳ ಮೊಬಲಗು 5750 ರೂಪಾಯಿ ಇತ್ತು ಇದು 1800 [illegible]

8 ಈ ವಿಷಯದಲ್ಲಾದ ವ್ಯಾಜ್ಯಗಳ [illegible] 1912 [illegible] 5775 ತೀರ್ಮಾನವಾಗಿವೆ

'ಜಪಾನಿಗೆ ಏಸ್ಯಾಖಂಡವೇ ಸಾಮ್ರಾಜ್ಯವಾಗಬೇಕಾಗಿದೆ!'

ಶ್ರೀ ಎಮ್ ಪಿ ಶಾ ಕೂವೊ ಚೆನ್– ಇವರು ಕ್ಯಾಂಟನ್ ನಗರದಲಿನ ಚೀನಾ ವಿಶ್ವವಿದ್ಯಾಲಯದ ಡೈರೆಕ್ಟರರು ಇವರೀಗ ಕಲ್ಕತ್ತದಲ್ಲಿರುವರು ಅಲ್ಲಿ ವಿಶ್ವವಿದ್ಯಾಲಯದ ಪ [illegible] ಭಾಷಣ [illegible]– ಚೀನದಲ್ಲಿ ಶಿಕ್ಷಣ ಮತ್ತು ಧರ್ಮ ಹೀಗಿದೆ [illegible] ದನ್ನು ವಿವರಿಸಿದರ

ಚೀನದಲಿ ಬುದ್ಧಧರ್ಮ, ತಾವುಧರ್ಮ, ಇಸ್ಲಮ್, ಕೊನ್ಫ್ಯೂಸಿಯಸಿಜಮ್, ಯೆಹೂದ [illegible] ಮೊದಲಾದವು ಇದ್ದರೂ ಇವೆಲ್ಲ ತುಂಬ ಸಮನ್ವಯಗೊಂಡು ಮೈತ್ರಿಯಿಂದಿವೆ ನಾನಾ ವಂಶ ಅಥವಾ ಜನಾಂಗ ಅಥವಾ ಧರ್ಮಗಳೊಳಗೆ ಎಂತಹ ಜಗಳಗಳಾಗಲಿ ಕಚ್ಚಾಟ [illegible] ರಗಳಾಗಲಿ ಇಲ್ಲ!

'ಚೀನವು ಅಮೇರಿಕದ ಶಿಕ್ಷಣಕ್ರಮವನ್ನು ಅನುಸರಿಸಿಯದೆ ಅದು ಕೇಂದ್ರ ಸರಕಾರದ ಇಲಾಖೆಯಲ್ಲ, ಪ್ರಾಂತಿಕ ಸರಕಾರಗಳಿಗೆ ಸಂಬಂಧಿಸಿಯದೆ 1911ರಲ್ಲಿ ಸರಕಾರ ಈ ಹೊಸ ಕ್ರಮವನ್ನು ಪ್ರಾರಂಭಿಸಿದಂದಿನಿಂ ಶಿಕ್ಷಿತರ ಸಂಖ್ಯೆ ಸೇಕಡಾ 25 ಆಗಿದೆ ಶಿಕ್ಷಣವು ಪ್ರೈಮರಿ, ಸೆಕೆಂಡರಿ, ಉಚ್ಚತರಗತಿಗಳಲ್ಲಿ 16 ವರ್ಷ ಮುಗಿಯುವುದಾಗಿದೆ ಚೀನದಲ್ಲೀಗ, ಉತ್ತಮ ಕೈಗಾರಿಕೆ ವ್ಯಾಪಾರಾದಿಗಳನ್ನು ಕುರಿತಾದ ಶಿಕ್ಷಣವೂ ದೊರೆವುದಲ್ಲದೆ ಸಮುದಾಯಕವಾಗಿ ಯುವಕರಿಗೂ ಶಿಕ್ಷಣ ಪ್ರಚಾರವಾಗುತ್ತದೆ

'ಜಪಾನಿನ ಒಂದೇ ಒಂದು ಆಸೆಯೆಂದರೆ — ಇಡೀ ಏಸ್ಯಾಖಂಡವನ್ನು ಗೆಲ್ಲುವುದಾಗಿದೆ!

★ ಬ್ರಿಟಿಷ್ ಸರಕಾರದಿಂದ

: : : ತಮಗೆ ಬೇಕಾದುದನ್ನು ಪಡೆಯಲು : : : :

ಭಾರತೀಯರಿಗೆ ಇದೆ ತಕ್ಕ ಸಮಯ!

ಶ್ರೀ ಜವಾಹರಲಾಲ ನೆಹರೂರವರ ಭಾಷಣಗಳ ಕಾರಣದಿಂದಲೊ ಎನ್ನುವಂತೆ, ಬ್ರಿಟಿಷ ರಾಜಕೀಯ ಹಿತದೃಷ್ಟಿಯು ಮತ್ತೊಮ್ಮೆ ಹಿಂದೂದೇಶದ ಮೇಲೆ ಬಿದ್ದಿರುತ್ತದೆ ಇಂಡಿಯಾ ಆಕ್ಟಿನ ಫೆಡರೇಶನ್ ಪ್ರಕರಣವನ್ನು ಭಾರತೀಯ ಅಭಿಪ್ರಾಯಗಳಿಗೆ ತಕ್ಕುದಾದ ತರದಲ್ಲಿ ಬದಲಾಯಿಸುವ ಕುರಿತು ಮತ್ತೊಮ್ಮೆ ಪರ್ಯಾಲೋಚನೆ ನಡೆಯಿಸಬೇಕಾಗಿ, ಅವರಲ್ಲಿ ಜಾಗ್ರತಿಯುಂಟಾಗಿರುತ್ತದೆ ಉಪಾಯದಿಂದ ಬ್ರಿಟಿಶರ ಮೇಲೆ ಈ ಸಮಯದಲ್ಲಿ ಒತ್ತಾಯ ನಡೆಸಿದರೆ, ಭಾರತೀಯರು ತಮಗೆ ಬೇಕಾದುದನ್ನೆಲ್ಲ ದಿದ್ದರೂ, ಹೆಚ್ಚಿನ ಕೋರಿಕೆಗಳನ್ನು ಪೂರ್ತಿಗೊಳ್ಳಬಹುದೆಂದು, ಪ್ರಸಿದ್ಧ ಪತ್ರಕಾರರೊಬ್ಬರ ಅಭಿಪ್ರಾಯ ಲಾರ್ಡ ಸಾಮ್ಯುವೇಲರೂ, ಲೋರ್ಡ್ ಲೊತಿಯನರೂ, ಹಿಂದೂದೇಶದ ಪ್ರವಾಸಗೈದು ಸ್ಥಿತಿಗತಿಗಳನ್ನೆಲ್ಲಾ ಚೆನ್ನಾಗಿ ಅರಿತುಕೊಂಡು ಫೆಡರೇಶನಿಗೆ ಬಲವಾದ ವಿರೋಧವಿರುವುದೆಂದು, ಬ್ರಿಟಿಷ ಮುತ್ಸದ್ದಿಗಳಿಗೆ ತಿಳಿಸಿದ್ದಾರೆ ಇರುವರು ಲಂಡನಿನ ಅನೇಕ ಪ್ರಾಮುಖ್ಯ ಪತ್ರಿಕೆಗಳು, ಹಿಂದೂದೇಶದ ಪ್ರಶ್ನೆಯ ಕುರಿತು ಅಗ್ರಲೇಖವನ್ನು ಬರೆದಿರುವರು ಈ ಪತ್ರಿಕೆಗಳ ಸಹಾನುಭೂತಿಯು ಹಿಂದೂದೇಶಕ್ಕಿರುವುದು ಹಿಂದೂದೇಶದ ಕುರಿತು ಈ ರಾಗದಲ್ಲಿ ಈ ಪತ್ರಿಕೆ ಇಷ್ಟರ ತನಕ ಎಂದಿಗೂ ಹಾಡಿದ್ದಿಲ್ಲ ಈ ಪತ್ರಿಕೆಗಳು ಈ ಲೇಖಗಳನ್ನು ಬ್ರಿಟಿಷ ಸರಕಾರವನ್ನು ವಿಚಾರಿಸಿ ಬರೆದುದಾಗಿರುತ್ತದೆಂದು ಸ್ಪಷ್ಟವಾಗಿದೆ ಬ್ರಿಟಿಷ ಸರಕಾರವು ತನ್ನಷ್ಟಕ್ಕೆ ಚೆಕೊಸ್ಲೊವೇಕಿಯಾ ವ್ಯವಹಾರದಲ್ಲಿ ಮಗ್ನವಾಗಿದ್ದರೂ ಇಂಡಿಯಾ ಆಕ್ಟಿನ ಪುನರ್ ವಿಚಾರವಾಗುವ ಕುರಿತು ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷದ ಅಸ್ತಿತ್ವ ಇಲ್ಲದಿರುವುದರಿಂದ ಮಂತ್ರಿಮಂಡಳವು ಮನಸ್ಸು ಮಾಡಿದ್ದರೆ ಶಾಸನದ ಮೂಲಕವೆ, ಆ ಆಕ್ಟಿನಲ್ಲಿ ಬದಲಾವಣೆಗಳನ್ನು ಮಾಡಿಬಿಡಬಹುದು ಆದರೆ ಶಾಸನಗಳ ಸಹಾಯವಿಲ್ಲದೆ ಹೇಗೆ ಈ ಬದಲಾವಣೆಗಳನ್ನು ಮಾಡಲು ಸಾಧ್ಯವಿದೆಯೆ ಎಂದು ಇಂಡಿಯಾ ಸೆಕ್ರೆಟರಿಯವರೂ ವೈಸ್ರಾಯರೂ ಯತ್ನಿಸುತ್ತಿರುವರು

ಅಂತೂ ಬ್ರಿಟನಿನ ಮೊದಲಿನ ಬಲತ್ಕಾರ ದರ್ಪವು ಈಗ ಕಾಣಿಸುವುದಿಲ್ಲ ಹೇಗಾದರೂ ಮಾಡಿ ಹಿಂದೀಯರನ್ನು ಒಲಿಸಿಕೊಳ್ಳುವ ಮಹಾ ಆಶೆಯು, ಬ್ರಿಟಿಷ್ ಮಂತ್ರಿ ಮಂಡಲದಲ್ಲಿರುವುದು ಕಾಣಿಸುತ್ತದೆ ಕಾಂಗ್ರೆಸ್ ಪ್ರಭಾವ ಶಕ್ತಿಯು ಅದಕ್ಕೆ ತಿಳಿದಿರುತ್ತದೆ ಕಾಂಗ್ರೆಸ್ಸಿಗೆ ತಕ್ಕ ಮನ್ನಣೆ ಕೊಡದಿದ್ದರೆ, ಪರಿಣಾಮಗಳು ವಿಪರೀತವಾಗುವುದೆಂದು ಬ್ರಿಟಿಷ್ ಸರಕಾರಕ್ಕೆ ತಿಳಿದೆ ಇದೆ ಆದುದರಿಂದ ಅದು ಕಾಂಗ್ರೆಸ್ಸಿನೊಡನೆ ಯೋಗ್ಯ ತರದ ಸಂಧಾನವನ್ನು ಮಾಡುವ ಯತ್ನದಲ್ಲಿದೆ

ಫೆಡರಲ್ ಯೋಜನೆಯಲ್ಲಿ ಈ ಕೆಳಗೆ ಸೂಚಿಸಿದ ಬದಲಾವಣೆಗಳಿಗೆ ಬ್ರಿಟಿಷ್ ಸರಕಾರವು ಸಿದ್ಧವಿದೆಯಾಗಿ ತಿಳಿದು ಬರುತ್ತದೆ–

(1) ಆಶ್ರಿತ ರಾಜ್ಯಗಳು ಪ್ರಜಾಸತ್ತಾ ಕ್ರಮಗಳನ್ನಾಚರಿಸುವಂತೆ ಒತ್ತಾಯಪಡಿಸಿ ಫೆಡರಲ್ ಎಸೆಂಬ್ಲಿಗೆ ಪ್ರಜೆಗಳ ಪ್ರತಿನಿಧಿ ಆರಿಸಬರುವಂತೆ ಮಾಡಿ ಪ್ರಜಾಸತ್ತಾ ಪ್ರಾಂತ್ಯಗಳೊಡನೆ ಸಮ್ಮಂಧಾರಿ ರಾಜರ ಗಳ ಪ್ರತಿನಿಧಿಗಳು ಇರಕೂಡದೆಂಬ ಕಾಂಗ್ರೆಸ್ಸಿನ ಆಕ್ಷೇಪವನ್ನು ನಿವಾರಿಸುವುದು

(2) ಪ್ರಾಂತ್ಯಗಳಲ್ಲಿ ಕಟ್ಟಿಂತೆ ದಿನ ತದೆ ಫಡರೇಶನ್ ಸರಕಾರದ ವ್ಯವಹಾರದಲ್ಲಿ ವ್ಯವಹಾರಗಳಲ್ಲಿ ವೈಸ್ರಾಯರು ಕೈಹಾಕ ಬಲ್ಲವೆಂಬುದಾಗಿ ಭರವಸೆಯನ್ನು ಕೊಡಿಸುವುದು

(3) ಪ್ರಜಾಭಿಪ್ರಾಯಗಳ ಪ್ರಕಾರ ಹಿಂದೂದೇಶಕ್ಕೊಂದು ರಾಜ್ಯಾಂಗ ಶಾಸನ ರಚನೆಯಾಗುವಂತೆ ಮತ್ತು ಇಂಡಿಯಾ ಆಕ್ಟಿನ ಜವಾಬ್ದಾರಿ ಜೆಸ್ಸಿಗಳ ಪ್ರಕಾರ ಜನ್ಯಪಡಿಯಾಗುವಂತೆ ಫೆಡರಲ್ ಸರಕಾರ ರಚನೆಯಾಗ ಪೂರ್ವದ ಒಂದು ಪ್ರಕಟಣೆ

ಸದ್ಯದಲ್ಲೆ ಇಂಡಿಯಾ ಸೆಕ್ರೆಟರಿಯವರಿಂದಲೂ ವೈಸ್ರಾಯರಿಂದಲೂ ಪ್ರಕಟಣೆಯಾಗಬಹುದು

ಇಂಗ್ಲಿಷ್ ಶಿಕ್ಷಣದಿಂದಾದ ಅನಾಹುತ

ಗಾಂಧಿಜಿಯವರ ಮತ.

ಭಾರತದಲ್ಲಿ ಉಚ್ಚ ಶಿಕ್ಷಣವು ಪರದೇಶಿಕ ಭಾಷೆಯ ಮುಖಾಂತರ ಕೊಡಲ್ಪಡುತ್ತಿದ್ದರಿಂದ, ಭಾರತದ ಜನಾಂಗಕ್ಕೆ ಅಗಣಿತ ಮಾನಸಿಕ ಮತ್ತು ನೈತಿಕ ಹಾನಿಯು ತಟ್ಟಿರುವುದು, ಎಂಬುದಾಗಿ ತನ್ನ ಜೀವಮಾನದಿಂದಲೇ ಒಂದು ದೃಷ್ಟಾಂತವನ್ನು ಕೊಟ್ಟು ಗಾಂಧಿಜಿಯವರು ಬರೆದಿರುತ್ತಾರೆ

ಹದಿನೆರಡು ವರ್ಷಗಳ ತನಕ ಅವರು ತನ್ನ ಮಾತೃಭಾಷೆಯಾದ ಗುಜರಾತಿಯ ಮುಖಾಂತರವೇ ಜ್ಞಾನಾರ್ಜನೆಯನ್ನು ಮಾಡಿದ್ದರು ಹ್ಯಾಸ್ಕೂಲಿನ ಪ್ರವೇಶವಾದ ಮೂರು ವರ್ಷಗಳ ತನಕ ಇಂಗ್ಲೀಷನ್ನ ಕಲಿಯುವುದರಲ್ಲೇ ಹೆಚ್ಚಿನ ಸಮಯವನ್ನು ಕಳೆಯಬೇಕಾಯಿತು ಒರೆದಂತೆ ಉಚ್ಚರಿಸಲಾರದ ಈ ಹೊಸ ಭಾಷೆಯನ್ನು ಕಲಿಯಲು ನನಗೆ ಬಹಳ ಕಷ್ಟವಾಯಿತು ಮಾತ್ರವಲ್ಲ ಶಬ್ದಗಳ ಅಕ್ಷರಭ್ಯಾಸವನ್ನ ಬಾಯಿಪಾಠ ಕಲಿಯುವುದು ನನಗೆ ಹೊಸದಾಗಿ ತೋರಿತು

ಪರಂತ ಇದಕ್ಕಿಂತಲು ಹೆಚ್ಚಿನ ಕಷ್ಟಗಳು ನಾಲ್ಕನೆಯ ವರ್ಷದಿಂದ ಪ್ರಾರಂಭವಾದುವು ರೇಖಾಗಣಿತ, ಬೀಜಗಣಿತ ರಸಾಯನ ಶಾಸ್ತ್ರ, ಜ್ಯೋತಿಷ್ಯ ಇತಿಹಾಸ, ಭೂಗೋಲ, ಪ್ರತಿಯೊಂದನ್ನು ಇಂಗ್ಲಿಷಿನಲ್ಲೇ ಕಲಿಯಬೇಕಾಗಿತ್ತು ಇಂಗ್ಲಿಷಿನ ಬಹಳವು ಎಷ್ಟರ ಮಟ್ಟಿಗಿತ್ತೆಂದರೆ ಸಂಸ್ಕೃತ ಫ್ರೆಂಚ್ ಭಾಷೆಗಳನ್ನು ಕೂಡ ಮಾತೃಭಾಷೆಯಲ್ಲಿ ಕಲಿಯದೆ ಒಂದ ಲಾಗಿ ಇಂಗ್ಲಿಷಿನಲ್ಲೆ ಅಭ್ಯಸಿಸಬೇಕಾಗಿತ್ತು

ತರಗತಿ ಸಂಪೂರ್ಣವಾಗಿ ಅದೇ ಭಾಷೆಗದ ಒತ್ತಾಯಪೂರ್ವಕ ಭಾಷೆಯನ್ನು ವಿದ್ಯಾರ್ಥಿಯು ಸರಿಯಾಗಿ ಅರಿಯದ ಉಪಾಧ್ಯಾಯನು ಅದನ್ನು ಸರಿಯಾಗಿ ಹೇಳಿಕೊಡುತ್ತ ಗುಜರಾತಿ ಹೋಗುತ್ತಿರಲಿಲ್ಲ ಹಾಗೆ ಅವನಿಗೆ ಪ್ರಯತ್ನಪಡಬೇಕಾದ ಅಗತ್ಯ ಇಂಗ್ಲಿಷಿನ ತಪ್ಪು ತಿಳಿವಳಿಕೆ ಆಗಿತ್ತು

ಇವರ ಪರಿಣಾಮವಾದರೆ ಎಷ್ಟು ವಿದ್ಯಾರ್ಥಿಗಳಾದ ನಮಗೆ ಸರಿಯಾಗಿ ತಿಳಿಯದ, ಹಲವೊಮ್ಮೆ ಏನೂ ತಿಳಿಯದ ವಿಷಯಗಳನ್ನು ಕೂಡ ಗಿಳಿಪಾಠ ಮಾಡಬೇಕಾಗಿತ್ತು. ರೇಖಾಗಣಿತದ ಕುರಿತು ಉಪಾಧ್ಯಾಯರು ತನ್ನ ವಿವರಣೆಯನ್ನು ನಮಗೆ ತಿಳಿಯುವಂತೆ ಹೇಳಲು ಒದ್ದಾಡುತ್ತಿರುವಾಗ ನನ್ನ ತಲೆಯು ತಿರುಗಲಾರಂಭಿಸುತ್ತಿತ್ತು ಯುಕ್ಲಿಡನ ಪ್ರಥಮ ಪುಸ್ತಕದಲ್ಲಿರುವ 13ನೆಯ ಸೂತ್ರಕ್ಕೆ ಹೋಗುವ ತನಕ ನನ್ನಿಂದ ರೇಖಾಗಣಿತದ ತುದಿ ಮೊದಲನ್ನು ತಿಳಿದುಕೊಳ್ಳಲಾಗಲಿಲ್ಲ

ಇಂಗ್ಲಿಷ್ ಮುಖೇನ, ರೇಖಾ ಗಣಿತ, ಬೀಜಗಣಿತ, ಮೊದಲಾದುವುಗಳನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತುದನ್ನು ಮಾತೃಭಾಷೆಯಲ್ಲಾದರೆ ಒಂದೇ ವರ್ಷದಲ್ಲಿ ಮುಗಿಸಬಹುದಿತ್ತೆಂದು ನನಗಿಂದು ಭಾಸವಾಗುತ್ತದೆ ಮಾತ್ರವಲ್ಲ ಪ್ರತಿಯೊಂದು ವಿಷಯ ಪರಿಚಯವು ನನಗೆ ಚೆನ್ನಾಗಿ ಆಗುತ್ತಿತ್ತು ನನ್ನ ಗುಜರಾತಿ ಶಬ್ದಭಂಡಾರವೂ ಅಭಿವೃದ್ಧಿಯಾಗುತ್ತಿತ್ತು ಅಂತಹ ಜ್ಞಾನವನ್ನು ನಾನು ನನ್ನ ಮನೆಯಲ್ಲೆ ಉಪಯೋಗಿಸಿ ಪ್ರಯೋಜನವನ್ನು ಹೊಂದುತ್ತಿದ್ದೆ'

ಬಳಿಕ ಇಂಗ್ಲೀಷ್ ವಿದ್ಯಾಭ್ಯಾಸವು ತನ್ನೊಳಗೂ ತನ್ನ ಕುಟುಂಬದೊಳಗೂ ಯಾವ ಬಗೆಯ ವಿಚ್ಛೇದಗಳನ್ನು ತಂದೊಡ್ಡಿತೆಂದು ಹೇಳಿ ಮಹಾತ್ಮರು ಈ ರೀತಿಯಲ್ಲಿ ತನ್ನ ಪ್ರಬಂಧವನ್ನು ಅಂತ್ಯಗೊಳಿಸಿರುವರು, "ಹ್ಯಾಸ್ಕೂಲುಗಳೆಂದರೆ, ಬರೇ ಇಂಗ್ಲಿಷ್ ವಿದ್ವತ್ತನ್ನು ಸಂಪಾದಿಸುವ ಆಲಯಗಳು ನನ್ನ ಶಾಲೆಯಲ್ಲಿದ್ದ ನೂರಾರು ವಿದ್ಯಾರ್ಥಿಗಳು ಗಳಿಸಿದ ಜ್ಞಾನವು ಪ್ರಯೋಜನಕ್ಕೆ ಬಾರದ ಕಟ್ಟಿಟ್ಟ ಧನದಂತಾಯಿತು ಪ್ರಜಾ ಜನರಿಗೆ ಅದರಿಂದ ಪ್ರಯೋಜನವೇ ಇಲ್ಲದಂತಾಯಿತು —ಅದನ್ನ ಹೇಳಿ ಕೊಡುವುದೇ ಅಸಾಧ್ಯವಾಯಿತು

ತಗ್ಗುವೆ ಕಾಂಗ್ರೆಸ್ಸಿನ ಆದರ್ಶ

ಪ್ರಧಾನ ಮಂತ್ರಿ ರಾಜಾಜಿಯವರ ಭಾಷಣ

ಆಂಧ್ರ ಪ್ರಾಂತ್ಯದ ರಚನೆಯಾಗುವುದು

ನೆಲ್ಲೂರಿಗೆ ತೆರಳಿದ ಪ್ರಧಾನ ಮಂತ್ರಿ ರಾಜಾಜಿಯವರಿಗೆ ಅತ್ಯಂತ ಉತ್ಸಾಹಕರ ಸ್ವಾಗತವು ದೊರಕಿತು ಮೂಲೆಮೂಲೆಗಳಿಂದ ಹಳ್ಳಿಹಳ್ಳಿಗಳಿಂದ ಜನರು ನೆರೆದು ಬಂದಿದ್ದರು ಅಲ್ಲಿ ಒಂದೆಡೆ ಭಾಷಣ ಮಾಡುತ್ತಾ, "ನಮ್ಮ ವಿಮೋಚನ ಮಾರ್ಗವು ತ್ಯಾಗದ ಮೇಲೆ ಹೊಂದಿಕೊಂಡಿರಬೇಕಾಗಿ ಗಾಂಧಿಜಿಯವರೆನ್ನುವುದು ಕಾಂಗ್ರೆಸ್ ಸರಕಾರವನ್ನು ನಡೆಸುವುದರಿಂದ ಮುಂದಕ್ಕೆ ತ್ಯಾಗವು ಬೇಕಾಗಿಲ್ಲವೆಂದೆಣಿಸಬೇಡಿರಿ ಹಿಂದಿನಿಗಿಂತ ಹೆಚ್ಚಿನ ತರದ ತ್ಯಾಗಗಳು ನಮಗೆ ಬೇಕಾಗಿವೆ ಆಜ್ಞೆ ಪ್ರಕಾರ ತ್ಯಾಗ ದೊರಕಿಸಿಕೊಳ್ಳುವುದೆ ಪ್ರಗತಿಯ ತಳಹದಿ" ದೇಶದ ಬಡತನ, ನಿರಕ್ಷರತೆ, ಅಜ್ಞಾನ ಇತ್ಯಾದಿಗಳನ್ನು ನಿವಾರಿಸಲು ಜನರು ಅನೇಕ ತರದ ತ್ಯಾಗಗಳನ್ನು ಮಾಡಲು ಸಿದ್ಧರಾಗಬೇಕೆಂದು, ರಾಜಾಜಿಯವರು ಬೇಡಿಕೊಂಡರು

ಆಂಧ್ರ ಪ್ರಾಂತ್ಯ ರಚನೆಯ ಕುರಿತು ಗೂಂಟೂರಿಗೆ ತೆರಳಿದ ಪ್ರಧಾನ ರಾಜಾಜಿಯವರಿಗೆ ಪ್ರಾಂತ್ಯರಚನೆ ಚಳವಳಿಗಾರರು ಪ್ರಶ್ನೆ ಇತ್ಯಾದಿಗಳಿಂದ ಬಹಳವಾಗಿ ಪೀಡಿಸಿದರು. ಅಲ್ಲಿ ಒಂದೆಡೆ ರಾಜಾಜಿಯವರು ಭಾಷಣ ಮಾಡುತ್ತಿರುವಾಗ, ಆಂಧ್ರ ಪ್ರಾಂತ್ಯರಚನೆ ಕುರಿತು ಇಂಡಿಯಾ ಸೆಕ್ರೆಟರಿಯವರಿಗೂ, ಪ್ರಧಾನ ರಾಜಾಜಿಯವರಿಗೂ ನಡೆದ ಪತ್ರವ್ಯವಹಾರವನ್ನು ಬಹಿರಂಗಪಡಿಸಬೇಕಾಗಿ ಕೇಳಲು, ರಾಜಾಜಿ ಪುನಃ ನ್ಯಾಯ ನೀತಿ ಚಡಪಡಿಸುತ್ತೀರಿ, ~~ಅಸಮಾಧಾನಪಡಬೇಡಿ~~ ಶ್ರೀರಿ. ಆಂಧ್ರ ಪ್ರಾಂತ್ಯವನ್ನು ವಿಂಗಡಿಸುವ ಅಧಿಕಾರವು ನನ್ನಲ್ಲ ಬೇರೆ ಒಂದು ಪ್ರಾಂತ್ಯವು ರಚನೆಯಾಗುವುದಾದರೆ ಅದ ಕಾಂಗ್ರೆಸ್ ಸರಕಾರದಿಂದ ಇನ್ನಿತರ ಯಾವತ್ತು ಸರಕಾರದಿಂದ ಆಗಾಗದು ಒಂದೆ ಸ ಶಯಗೊಳ್ಳಬೇಡಿರಿ ಕಾಂಗ್ರೆಸ್ ಸರಕಾರಕ್ಕೆ ನಮ್ಮ ಆಧಾರವನ್ನು ಕೊಟ್ಟು, ಅವರ ಕೈಗಳನ್ನು ಇನ್ನೂ ಬಲವಂತರಗೊಳಿಸಿರಿ"

ಆಯ್ದ ಮುತ್ತುಗಳು

ಕಡಪ್ಪದಲ್ಲಿ ಮದ್ಯ ನಿಷೇಧದ ಕುರಿತು ಮಾತನಾಡುತ್ತ ಮಾನ್ಯ ಸಿ ರಾಜಗೋಪಾಲಾಚಾರ್ಯರು ಹೀಗೆಂದಿರುವರು

ಮದ್ಯಪಾನ ನಿಷೇಧವನ್ನು ಹಿಂದುಗಳು ತಮ್ಮ ವ್ರತಗಳನ್ನು ಆಚರಿಸುವಂತೆ ಕೈಕೊಳ್ಳಬೇಕಾಗಿದೆ ನಾವು ವ್ರತವನ್ನಾಚರಿಸುತ್ತೇವೊ ಇಲ್ಲವೋ ಎಂದು ಕಾಯುವುದಕ್ಕಾಗಿ ಪೋಲೀಸರನ್ನು ನೇಮಿಸುವುದಿಲ್ಲ ತನ್ನಷ್ಟಕ್ಕೆ ಅದು ಆಗಿಹೋಗ್ತದೆ ಪ್ರತಿಯೊಂದು ತಾಳೆ ಮರದ ಬುಡದಲ್ಲಿ ಒಬ್ಬೊಬ್ಬ ಕಾವಲನ್ನು ಇಡುವುದು ಅಸಾಧ್ಯವಾದ ಮಾತು ಹಾಗೆ ಮಾಡಿದರೂ ಪಾನ ನಿಷೇಧವು ಫಲಕಾರಿಯಾಗಲಿಕ್ಕಿಲ್ಲ ಪ್ರತಿಯೊಬ್ಬ ಮನುಷ್ಯನೂ ಒಬ್ಬ ಪೋಲೀಸನಂತೆ ವರ್ತಿಸಬೇಕು.

ಒಬ್ಬ ವಕೀಲರು ರೈತರ ಸಾಲ 'ಪರಿಹಾರ ಮಸೂದೆಯ ಕುರಿತ ಮಾತನಾಡಲು ಬಾಯಿ ಎತ್ತಿದೊಡನೆ ಪ್ರಧಾನಮಂತ್ರಿ ತನ್ನ ಒಂದೇ ಮಾತಿನಿಂದ ಅವರ ಬಾಯಿಯನ್ನು ಮುಚ್ಚಿದರು ರೈತರ ಸಾಲ ಪರಿಹಾರ ಮಸೂದೆಯು ಗಂಡನ ಮನೆಗೆ ಕಳುಹಲ್ಪಟ್ಟ ನವ ಮಧುವು ಅದರ ಕುರಿತು ವ್ಯಾಖ್ಯಾನ ಬರೆಯಲು ಸರಕಾರಕ್ಕೆ ಈಗ ಸಾಧ್ಯವಿಲ್ಲ ಅದು ನಿಮ್ಮಂಥವರ ಕೆಲಸ'

ರಾಗಿ ಒಪ್ಪಿಸಲ್ಪಟ್ಟ ಮೆಮೊರಂಡಮಿನಲ್ಲಿ ಹಣಕಾಸಿಗೆ ಮೊರೆಯಿಟ್ಟುದನ್ನು ಕಂಡು ಮಾನ್ಯ ಆಚಾರ್ಯರು 'ನೀವು ಹಣವನ್ನು ಕೇಳುವಿರಲ್ಲವೆ, ಅದನ್ನು ಗಳಿಸುವ ಉಪಾಯವನ್ನು ಸೂಚಿಸುವುದಿಲ್ಲ ಆದರೂ ಇಷ್ಟು ಮೆಮೊರಂಡಮುಗಳು ಬಂದುದನ್ನು ಕಂಡರೆ ನಿಮಗೆ ನನ್ನಲ್ಲಿ ತುಂಬಾ ವಿಶ್ವಾಸವಿದೆಯೆಂದು ವಿಚಿತವಾಗುತ್ತದೆ ನಿಮ್ಮ ವಿಶ್ವಾಸವೇ ನನ್ನ ಶಕ್ತಿ ಆದರೆ ಪ್ರತಿಯೊಂದಕ್ಕೂ ಒಂದು ಮೇರೆ ಇದೆ

ವಿಶ್ವಾಸ ಮತ್ತು ಪ್ರಶಂಸೆಯು ಹನುಮಂತನನ್ನು ಸಮುದ್ರ ಹಾರಿಸಿತು, ಆದರೆ ಸೀತೆಯನ್ನು ತರುವಂತೆ ಅದು ಆತನಿಗೆ ಸಹಾಯಕವಾಗಲಿಲ್ಲ ನಿರಂತರ ನಾನು ನಿಮ್ಮ ಸಹಾಯವನ್ನು ಕೋರುವದೇಕೆಂದರೆ—ಸೀತೆಯನ್ನು ತರಲು ಸೇತುವನ್ನು ಕಟ್ಟುವುದಕ್ಕಾಗಿ ಈ ಹತ್ತು ತಿಂಗಳುಗಳಲ್ಲಿ ನಾನು ಆಚೆ ದಡಕ್ಕೆ ಹಾರಿರುವೆನು. ಪರಂತು ಸೀತೆಯು ನನ್ನೊಡನೆ ಬರಲು ನಿರಾಕರಿಸಿರುವಳು. ಸೀತೆಯು ಹನುಮಂತನನ್ನು ಹಿಂಬಾಲಿಸಲು ನಿರಾಕರಿಸಿದಂತೆ, ಯುಕ್ತಿಯಿಂದ ಸ್ವರಾಜ್ಯವನ್ನು ಗಳಿಸುವುದು ಆಗದ ಮಾತೆ ವ ಇವ ಒಳಪಡಿಸುತ್ತದೆ ರಾವಣ ಕುಂಭಕರ್ಣರೊಡನೆ ಕಾದಾಡಿ ತನ್ನ ಮನದಿ ಚ್ಛೆಯನ್ನು ಪಡೆಯಬೇಕಾದರೆ ರಾಮನ ಜೊತೆ ಕಾದಬೇಕಾಗುತ್ತ ಆದ ಪರಿಂದ ನಿಮ್ಮ ಜಿಲ್ಲೆಯ ತ ಗಳಿಸ್ಸ್ರ ಲಸನ್ನು ದಳವೇ ಕಾದರೆ ನೀವು ತಾಳಿಕೊಂಡಿರಬೇಕೆಂದು ನಾನು ಕೇಳಿಕೊಳ್ಳುತ್ತೇನೆ' ಎಂದರು

ಬೀಡಿ ವರ್ತಕರು, ಹೊಗೆಸೊಪ್ಪಿನ ಮೇಲೆ ಹೊರಿಸಿದ ಸುಂಕವು ಹೆಚ್ಚಾಯಿತೆಂದು ಹೇಳಲು, ಆಚಾರ್ಯರ ಉತ್ತರವಿಷ್ಟೆ

ಹೊಗೆಸೊಪ್ಪಿನ ಮೇಲೆ ಸುಂಕವು ಹೊರಿಸಲ್ಪಟ್ಟಿರುವುದಾದರೆ ಬೀಡಿಯನ್ನು ಪಡಕೊಳ್ಳುವವನು ಅದನ್ನು ಕೊಡುವನಲ್ಲದೆ ನೀವಲ್ಲ ಎಷ್ಟು ತೆರಿಗೆಯನ್ನು ಹೊರಿಸಿದರೂ ಬೀಡಿಖೋರನು ಅದನ್ನು ಕೊಟ್ಟೇ ಕೊಡುವನು ಈಗ ನೀವು ಒಂದಾಣೆಗೆ 30 ಬೀಡಿಗಳ ಪ್ರಕಾರ ಮಾರುತ್ತಿರುವಿರಾದರೆ, ಇನ್ನು ಮುಂದೆ 26ರ ಪ್ರಕಾರ ಮಾರುವಿರಿ ಇದರಿಂದ ಬೀಡಿಸೇದುವವನು, ಅದನ್ನು ಬಿಟ್ಟುಬಿಡುವಂತಿಲ್ಲ."

ಈ ವ್ಯತ್ಯಾಸ

ರಾಷ್ಟ್ರೀಯ ಪಕ್ಷಪಾತಿಗಳಾದ ಕೆಲವು ಮಂದಿ ಮುಸಲ್ಮಾನರು 'ವಂದೇ ಮಾತರಂ' ಕವಿತೆಯ ಕುರಿತು ಇಲ್ಲಿ ವಿರೋಧ ಕೂಗನ್ನು ಎಬ್ಬಿಸುತ್ತಿರಲು, ಲಂಡನಿನಲ್ಲಿರುವ ಜಗದ್ವಿಖ್ಯಾತ ಹಾಡುಗಾರನಾದ ಪೋಲ್ ರೊಬೆಸನ್ ಎಂಬಾತನು ಅದನ್ನು ಕಲಿಯಲು ಪ್ರಯತ್ನಿಸುತ್ತಿರುವನು. ಆ ಹಾಡನ್ನು ಆತನಿಗೆ ಇಂಗ್ಲಿಷಿನಲ್ಲಿ ಪರಿವರ್ತಿಸಿ ಕೊಟ್ಟವನು ಒಬ್ಬ ಮುಸಲ್ಮಾನನು—ಭಾರತದ ಸಮಾಜವಾದ ಪಕ್ಷದ ಮುಂದಾಳುವಾದ ಯುಸುಫ್ ಮೆಹರಾಲಿ!

ಭಕ್ತಿ

ಅದ್ವೇಷ್ಟಾ ಸರ್ವ ಭೂತಾನಾಂ । ಮೈತ್ರಃ ಕರುಣ ಏವಚ ॥
ನಿರ್ಮಮೋ ನಿರಹಂಕಾರಃ । ಸಮದುಃಖ ಸುಖಃ ಕ್ಷಮೀ ॥
ಸಂತುಷ್ಟಃ ಸತತಂ ಯೋಗೀ । ಯತಾತ್ಮಾ ದೃಢ ನಿಶ್ಚಯಃ ॥
ಮಯ್ಯರ್ಪಿತ ಮನೋಬುದ್ಧಿ । ರ್ಯೋಮದ್ಭಕ್ತಃ ಸಮೇ ಪ್ರಿಯಃ ॥

ಹಿಂದೂ ಧರ್ಮದಲ್ಲಿ "ಭಕ್ತಿ" ಎಂಬ ಪದವು ವಿಶೇಷವಾದ ಅರ್ಥಗರ್ಭಿತ ಪದವಾಗಿರುತ್ತದೆ. ಬೇರೆ ಬೇರೆ ಧರ್ಮದ ಜ್ಞಾನಿಗಳೂ ಈ ಭಕ್ತಿ ಪದದ ಅರ್ಥವನ್ನು ವಿಧವಿಧವಾಗಿ ವಿವರಿಸಿದ್ದಾರೆ. ಈಶ್ವರನಲ್ಲಿರುವ ಅಖಂಡವಾದ ಪ್ರೇಮವೇ ಭಕ್ತಿಯು. ಮನುಷ್ಯನ ಎಲ್ಲಾ ವೃತ್ತಿಗಳು ಈಶ್ವರನ ಕಡೆಗೆ ಇರುವ ಅಥವಾ ಈಶ್ವರನನ್ನು ಹೊಂದಿಕೊಂಡಿರುವ ಅವಸ್ಥೆಯೇ ಭಕ್ತಿ. ಈಶ್ವರನ ಹೊರತು ಮನುಷ್ಯನಿಗೆ ಗುರು, ರಾಜನು, ಮಾತಾಪಿತೃಗಳು, ಯಜಮಾನ ಮೊದಲಾದವರು ಅನೇಕರು ಸಹ ಭಕ್ತಿಗೆ ಪಾತ್ರರಾದವರಿದ್ದಾರೆ. ಇದಕ್ಕೆ ಮನುಷ್ಯ ಭಕ್ತಿ ಎಂದು ಹೇಳುತ್ತಾರೆ. ಅದು ಬೇರೆ. ಈಶ್ವರ ಭಕ್ತಿಗೆ ಮೊದಲು ಈ ಮನುಷ್ಯ ಭಕ್ತಿಯ ವಿಚಾರವನ್ನು ಮಾಡೋಣ. ಯಾರು ನಮಗಿಂತ ಶ್ರೇಷ್ಠರಾಗಿದ್ದು ಅವರ ಶ್ರೇಷ್ಠತ್ವದಿಂದ ನಮಗೆ ಉಪಕಾರವಿದೆಯೋ ಅವರೇ ನಮ್ಮ ಭಕ್ತಿಗೆ ಪಾತ್ರರು. ಭಕ್ತಿಯು ಇರದಿದ್ದರೆ ನಿಕೃಷ್ಟರು ಶ್ರೇಷ್ಠರ ಅನುಕರಣವನ್ನೆಂದಿಗೂ ಮಾಡಲಿಕ್ಕಿಲ್ಲ. ನಿಕೃಷ್ಟರು ಶ್ರೇಷ್ಠರ ಅನುಕರಣವನ್ನು ಮಾಡದಿದ್ದರೆ ಸಮಾಜದಲ್ಲಿ ಐಕ್ಯವೂ, ಪರಸ್ಪರ ಸಂಬಂಧವೂ ಉನ್ನತಿಯೂ ಸಹ ಇರಲಾರದು. ಇದೇ ಭಕ್ತಿಯಿಂದ ಸಮಾಜಕ್ಕೆ ಇರುವ ಪ್ರಯೋಜನವಲ್ಲವೇ? ಮನುಷ್ಯರಲ್ಲಿ ಭಕ್ತಿಗೆ ಪಾತ್ರರ್ಯಾರೆಂದು ನೋಡೋಣ. ತಂದೆತಾಯಿಗಳು ನಮಗಿಂತ ಶ್ರೇಷ್ಠರು ಎಂಬುದು ನಿರ್ವಿವಾದವಾದುದರಿಂದ ಅವರು ಭಕ್ತಿಗೆ ಪಾತ್ರರು. ಮಾತಾಪಿತೃಗಳ ಸೇವೆಯಿಂದಲ್ಲವೇ ಭಕ್ತ ಪುಂಡಲೀಕನು ದೇವರನ್ನು ಪ್ರತ್ಯಕ್ಷ ಕಂಡುದು? ಗುರುವಾದರೋ ನಮಗಿಂತ ಜ್ಞಾನದಲ್ಲಿ ಶ್ರೇಷ್ಠನಾಗಿ ನಮಗೆ ಜ್ಞಾನವನ್ನು ಕೊಟ್ಟವನಾದುದರಿಂದ ನಮ್ಮ ಭಕ್ತಿಗೆ ಪಾತ್ರನು. ಗುರುವಿಲ್ಲದಿದ್ದರೆ ಮನುಷ್ಯನಿಗೆ ಮನುಷ್ಯತ್ವವು ಎಂದಿಗೂ ಲಭಿಸಲಾರದು. ಹಿಂದೂ ಧರ್ಮವು ಸರ್ವತತ್ವದರ್ಶಿಯಾದುದರಿಂದಲೇ ಭಕ್ತಿ ಪಾತ್ರತೆಯಲ್ಲಿ ಗುರುವಿಗೆ ಅತ್ಯುಚ್ಚ ಸ್ಥಾನವನ್ನು ಕೊಟ್ಟಿರುತ್ತದೆ. ಪುರೋಹಿತನು ಯಾವಾಗಲೂ ನಮ್ಮ ಹಿತವನ್ನೇ ಕೋರುವವನಾಗಿ ನಮ್ಮೇಳಿಗೆ ಮಂಗಲವಾಗಬೇಕೆಂದು ಈಶ್ವರನನ್ನು ಪ್ರಾರ್ಥಿಸಿ ನಮಗೆ ಶುಭ ಪವಿತ್ರ ಸ್ವಭಾವವುಳ್ಳವನಾದ ದರಿಂದ ನಮ್ಮ ಭಕ್ತಿಗೆ ಪಾತ್ರನು. ಬರೇ ಧನಲೋಭವಿರುವ ಪುರೋಹಿತನು ಭಕ್ತಿಗೆ ಪಾತ್ರನಲ್ಲ. ಗಂಡನು ಸರ್ವಥಾ ಎಂದಲ್ಲ ಹೆಂಡತಿಗಿಂತ ಶ್ರೇಷ್ಠನೆಂದು ದರಿಂದ ಹೆಂಡತಿಯ ಭಕ್ತಿಗೆ ಪಾತ್ರನು. ಹೆಂಡತಿಯನ್ನು ಲಕ್ಷ್ಮೀರೂಪವಾಗಿ ಕಾಣಬೇಕೆಂದು ಹಿಂದೂ ಧರ್ಮವು ಸಾರುತ್ತಿರುವುದರಿಂದ ಹೆಂಡತಿಯೂ ಗಂಡನ ಭಕ್ತಿಗೆ ಪಾತ್ರಳು. ಆದರೆ ಆ ಥರ ಹೆಂಡತಿಯು ಸ್ನೇಹವಯಿಯಾಗಿ, ಧರ್ಮಾಚರಣೆಯಲ್ಲಿಯೂ, ಪವಿತ್ರತೆಯಲ್ಲಿಯೂ ಶ್ರೇಷ್ಠಳಾಗಿರತಕ್ಕದು. ಇಂಥಾ ಗುಣಗಳು ಇದ್ದುದರಿಂದಲ್ಲವೇ ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಪತ್ನಿಯಾದ ಶಾರದಾದೇವಿಯನ್ನು ದೇವೀ ಭಾವದಿಂದ ಪೂಜಿಸಿದ್ದು! ಭಕ್ತಿ ಪಾತ್ರರಾದವರಿಗೆ ನಮ್ಮ ಭಕ್ತಿಯನ್ನು ನಾವು ಯಥೋಚಿತವಾಗಿ ಅರ್ಪಿಸುವುದು ನಮ್ಮ ಕರ್ತವ್ಯವಾಗಿರುತ್ತದೆ. ಇದು ಅನುಶೀಲನದ ಒಂದು ಉದ್ದೇಶ. ಹಿಂದೂ ಧರ್ಮದ ಸಾರ.

ಆದುದರಿಂದಲೇ ಹಿಂದೂ ಧರ್ಮವು ಶಿಕ್ಷಕರಿಗೆ ಉಚ್ಚಸ್ಥಾನದಲ್ಲಿದೆ. ಮಕ್ಕಳಿಗೆ ಮಾತಾಪಿತೃಗಳು ಭಕ್ತಿಪಾತ್ರರಿರುವಂತೆ ರಾಜನು ಪ್ರಜೆಗಳ ಭಕ್ತಿಗೆ ಪಾತ್ರನು. ಪ್ರಜಾಭಕ್ತಿಗೆ ಪಾತ್ರನಲ್ಲದ ರಾಜನ ಬಾಹುಗಳಲ್ಲಿ ಬಲವಾದರೂ ಎಲ್ಲಿದೆ? ಪ್ರಜಾಭಕ್ತಿಯೇ ರಾಜನ ಶಕ್ತಿ. "ರಾಜಾ ಪ್ರತ್ಯಕ್ಷ ದೇವತಾ" ಎಂದು ಹೇಳುವವರು ಭಾರತೀಯರು ಅಲ್ಲದೆ ಮತ್ತಾರೂ ಅಲ್ಲ. ರಾಜನಿಗಿಂತಲೂ ಸಮಾಜದ ಶಿಕ್ಷಕರೇ ಹೆಚ್ಚಿನ ಭಕ್ತಿಗೆ ಪಾತ್ರರು. ಇವರು ಬರೇ ನಮ್ಮ ಮನೆಯ ಗುರುಗಳಾಗಿರದೆ ಇಡೀ ಸಮಾಜಕ್ಕೇನೇ ಗುರುಗಳಾಗಿರುತ್ತಾರೆ. ಪರಿಶ್ರಮಯುಕ್ತವಾದ ತಮ್ಮ ವಿದ್ಯಾಬುದ್ಧಿಗಳ ಬಲದಿಂದ ಸಮಾಜದ ಶಿಕ್ಷಣವನ್ನು ಕೈಕೊಂಡು ಸಮಾಜೋನ್ನತಿಯನ್ನು ಸಾಧಿಸಲಿಕ್ಕೆ ಯಾರು ಬದ್ಧಕಂಕಣರೋ ಅವರೇ ಸಮಾಜದ ಅಧಿಪತಿಗಳು. ಅವರೇ ನಿಜವಾದ ರಾಜರು. ಧರ್ಮವಿದರೂ, ವೈಜ್ಞಾನಿಕರೂ, ನೀತಿಶಾಸ್ತ್ರಕೋವಿದರೂ, ಪುರಾಣೇತಿಹಾಸಜ್ಞರೂ, ಕವಿಗಳೂ, ಮೊದಲಾದವರೆಲ್ಲರೂ ಯಥೋಚಿತವಾಗಿ ಮನುಷ್ಯನ ಭಕ್ತಿಗೆ ಪಾತ್ರರು. ಜಗತ್ತಿನಲ್ಲಿ ಏನಾದರೂ ಉನ್ನತಿಯಾಗಿದ್ದಿದ್ದರೆ ಅದಕ್ಕೆ ಇವರೇ ಮೂಲಕಾರಣರು. ಇವರು ಅನುಸರಿಸುವ ಮಾರ್ಗವನ್ನೇ ಜಗತ್ತು ಅನುಸರಿಸುತ್ತದೆ. ಇವರೇ ರಾಜರಿಗ ಗುರುಗಳು. ರಾಜರಲ್ಲಿ ಪ್ರಜಾಪಾಲನೆಯ ಕ್ಷಮತೆ ಉಂಟಾಗುವಂತೆ ರಾಜರ ಶಿಕ್ಷದಾರರೂ ಇವರೇ. ಇದೇ ಭಾರತ ವರ್ಷದ ಪ್ರಾಚೀನ ಋಷಿ ಸಂಪ್ರದಾಯವು. ವ್ಯಾಸ, ವಾಲ್ಮೀಕಿ, ವಶಿಷ್ಠ, ಗೌತಮ, ವಿಶ್ವಾಮಿತ್ರ, ಕಪಿಲ, ಮನು, ಯಾಜ್ಞವಲ್ಕ್ಯರೇ ಮೊದಲಾದ ಋಷಿವರ್ಯರನ್ನು ಭಾರತೀಯರು ಪಿತೃತುಲ್ಯರೆಂದು ಪೂಜ್ಯಭಾವವನ್ನು ತೋರಿಸಲು ಕಾರಣವಾದರೂ ಇದೇ ಭಕ್ತಿಯೇ. ನಮ್ಮ ಉನ್ನತಿಯ ಪ್ರತಿಸ್ಥಾಪನ ಯಾರಲ್ಲಿ ಭಕ್ತಿ ಪ್ರವೃತ್ತಿಯು ವಿಕಾಸವಿಲ್ಲವೋ ಆತನ ತನ್ನ ಚರಿತ ಉನ್ನತಿಯನ್ನೆಂದಿಗೂ ಸಾಧಿಸಲಾರನ. ಲೋಕಶಿಕ್ಷಕರ ಶಿಸೆಗೆ ಇದ ಏಕಾದ ಭಕ್ತಿಯ ವಿಚಾರವನ್ನು ಮಾಡೋಣ. ಒಂದು ಗ್ರಂಥವನ್ನು ಓದುವಾಗ ಆ ಗ್ರಂಥಕರ್ತನ ಮೇಲೆ ನಮಗೆ ಭಕ್ತಿಯು ಇರದಿದ್ದರೆ ಅದರ ವಾಚನದಿಂದ ನಮಗೇನಾದರೂ ಪ್ರಯೋಜನವಾಗಲಾರದು. ಆತನ ಆ ಉಪದೇಶದಿಂದ ನಮ್ಮ ಆಚರಣೆಯಲ್ಲಿ ಬದಲಾವಣೆಯೂ ಆಗುವಂತಿಲ್ಲ. ಆ ಗ್ರಂಥದ ಸಾರವನ್ನು ನಾವು ತಿಳಿಯಲಾರೆವು. ಗ್ರಂಥಕರ್ತನ ಐಕ್ಯವನ್ನು ಹೊಂದದೆ ಗ್ರಂಥದ ಅಭಿಪ್ರಾಯವು ವಾಚಕನಿಗೆ ತಿಳಿಯುವ ಹಾಗೆ ಜಗತ್ತಿನ ಶಿಕ್ಷಕರ ಮೇಲೆ ಭಕ್ತಿ ಇಲ್ಲದವನಿಗೆ ಶಿಕ್ಷಣವು ಲಭಿಸದು. ಲೋಕಶಿಕ್ಷಕರ ಮೇಲೆ ಭಕ್ತಿಯಿಡುವುದು ಅನುಶೀಲನದ ಶ್ರೇಷ್ಠ ಧರ್ಮ. ಶ್ರೀರಾಮನ ಪರಾಕ್ರಮ ಮತ್ತು ಪ್ರಜಾಪ್ರೇಮ ಕಂಡಿದ್ದರೂ ಆದರೆ ಋಷಿಗಳ ರವಿಕುಲ ಶ್ರೀರಾಮನು ಧನದ ಹಂಬಲವನ್ನು ಕೇಳದೆ ಲೋಕಕಲ್ಯಾಣಕ್ಕಾಗಿ ಮಾಡುತ್ತಿದ್ದ ಯಜ್ಞಗಳಿಗೆ ಉಂಟಾಗುವ ವಿಘ್ನಗಳನ್ನು ನಿವಾರಿಸಲು ಸ್ವತಃ ಕೇಳಿಕೊಂಡರು. ಇಂಥ ಚಿತ್ತವೃತ್ತಿಯನ್ನು ಪಡೆದ ಮಾನವ ಸಂಪ್ರದಾಯವು ಈ ಪುಣ್ಯಭೂಮಿಯಾದ ಭಾರತವರ್ಷದಲ್ಲಲ್ಲದೆ ಲೋಕದ ಯಾವ ಭಾಗದಲ್ಲೂ ಜನ್ಮಗ್ರಹಣ ಮಾಡಿದ್ದಿಲ್ಲ. ಇವರಿಂದ ನಿರ್ಮಿಸಲ್ಪಟ್ಟ ಸಮ್ಮತಿಯೂ, ಸಮಾಜೋನ್ನತಿಯೂ ಮತ್ತಾವ ದೇಶದಲ್ಲೂ ಇಲ್ಲ. ಒಬ್ಬನ ಮೇಲೆ ಭಕ್ತಿಯನ್ನಿಡುವುದು ಆತನ ಗುಣ ಮತ್ತು ವರ್ತನೆಗಾಗಿ. ಅಂತಹ ಗುಣಗಳೂ ವರ್ತನವೂ ಇಲ್ಲದವರು ಎಂದಿಗೂ ಭಕ್ತಿಗೆ ಪಾತ್ರರಲ್ಲ. ಧಾರ್ಮಿಕರೂ, ಜ್ಞಾನಿಗಳೂ ಸಹಾ ಭಕ್ತಿಗೆ ಪಾತ್ರರು. ಧಾರ್ಮಿಕನು ಕುಲದಲ್ಲಿ ನೀಚನಾದರೂ ಭಕ್ತಿಗೆ ಪಾತ್ರನಾಗಿರುತ್ತಾನೆ. ಆದುದರಿಂದ ಈ ಮೇಲೆ ವಿವರಿಸಿದವರೆಲ್ಲರೂ ಮನುಷ್ಯನ ಭಕ್ತಿಗೆ ಪಾತ್ರರು.

ರಾಮದಾಸ

(ಇನ್ನೂ ಇದೆ)

ಉಡುಪಿ

ಉಡುಪಿ:— ಕಳೆದ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶವಾಗಿ ಸಪ್ಲಿಮೆಂಟಲ್ ಪಟ್ಟಿಯಂತೆ ಸ್ಥಳೀಯ ಬೋರ್ಡ್ ಹೈಸ್ಕೂಲಿನಲ್ಲಿ ಮತ್ತೋರ್ವ ವಿದ್ಯಾರ್ಥಿಯು ತೇರ್ಗಡೆ ಹೊಂದಿರುತ್ತಾನೆ. ಅಂತೆ ಸದ್ರಿ ಶಾಲೆಯಲ್ಲಿ 88ರಲ್ಲಿ 28 ಮಂದಿ ಒಟ್ಟು ತೇರ್ಗಡೆ ಹೊಂದಿದಂತಾಯಿತು.

1936—37ನೇ ವರ್ಷಕ್ಕೆ ಮದ್ರಾಸು ಆಧಿಪತ್ಯದೊಳಗಣ 80 ಮುನಿಸಿಪಾಲಿಟಿಗಳಲ್ಲಿ ಬರೀ 12 ಮಾತ್ರ ಉತ್ತಮ ಆಡಳಿತದವುಗಳೆಂದು ಒಂದನೇ ತರಗತಿಯವುಗಳೆಂದು ಸರಕಾರದ ಆಡಳಿತ ವರದಿಯಿಂದ ತಿಳಿದು ಬರುತ್ತದೆ. ಇವುಗಳಲ್ಲಿ ಉಡುಪಿಯದ್ದು ಒಂದಾಗಿರುತ್ತದೆ. ಸದ್ರಿ ಮುನಿಸಿಪಾಲಿಟಿಗೆ ಪ್ರಥಮ ಕೌನ್ಸಿಲು 1936ನೇ ಆಗೋಸ್ತಿನಲ್ಲಿ ಚುನಾವಣೆಯಾದದ್ದಾಗಿದೆ. ಅದೇ ವರ್ಷ ಮಾತ್ರ ಅರ್ಧ ವರ್ಷಗಳ ಬಾಬ್ತು ತೆರಿಗೆ ನೋಟೀಸುಗಳು ಪ್ರಥಮದಾಗಿ ಹೊರಟಿದ್ದುವು. ಆರ್ಥಿಕ ದುಸ್ಥಿತಿಯ ಕಾಲಕ್ಕೆ ಒಂದೇ ಸಮನೆ ಹೆಚ್ಚಿಗೆ ಹೆಚ್ಚಿಗೆ ದರದಲ್ಲಿ ತೆರಿಗೆ ವಸೂಲಿಯಿಂದಾಗಿ ಜನತೆಗೆ ಬಹಳ ಕಷ್ಟಕ್ಕೀಡಾಗಿತ್ತು. ಅಲ್ಲದೆ 2 ಕಂತುಗಳ ವಸೂಲಿಯು ಒಟ್ಟಿಗೆ ಬೇಡಲ್ಪಟ್ಟಿತು. ವಾರ್ಡುವಾರ್ಡುಗಳಲ್ಲಿ ಸಭೆಗಳಾಗಿ ತೆರಿಗೆ ವಸೂಲಿಗೆ ವಿರೋಧವೂ ಇತ್ತು. ಆದ್ದರಿಂದ ತೆರಿಗೆ ವಸೂಲಿ ಮಟ್ಟಿಗೆ ಮುನಿಸಿಪಾಲಿಟಿಯು ಹಿಂದಟ್ಟಿತಾದರೂ ಕೌನ್ಸಿಲಿನ ಪ್ರಥಮ ಆಡಳಿತ ವರ್ಷದಲ್ಲೇ ಒಂದನೆ ತರಗತಿಗೇರಿದ್ದು ಸುತ್ಯಾರ್ಹ. ಸಮರ್ಥ ಕರ್ತವ್ಯ ಭಕ್ತರೆನಿಸಿದ ಭವಸ್ಥರೂ ಆದ ಕಪಿ ಸನರ ಹಾಗೂ ಉತ್ಸಾಹೀ ಪತ್ರ ಸಹೃದಯ ಭೂತಿ ಪ್ರವಾದ ಮುನಿಸಿಪಲ್ ಅಧ್ಯಕ್ಷರೂ ಕೌನ್ಸಿಲರ. ಈ ಗೌರವಕ್ಕೆ ಕಾರಣ ಭೂತರೆಂದರೆ ತಪ್ಪಾಗದು. ಸಧ್ಯ ಬರಲಿರುವ ಚುನಾವಣೆಯಲ್ಲೂ ನಾಗರಿಕರು ಉತ್ಸಾಹೀ ಹಾಗೂ ಯೋಗ್ಯ ಸದಸ್ಯರನ್ನು ಆರಿಸಿ ನಗರದ ಅಭಿವೃದ್ಧಿಗೆ ಅನುವಾಗಿರಾರೆಂದು ಭರವಸೆಯಿದೆ.

... ದಿನದಿಂದ ... ಳೆಯ ... ನವಾಗಿದೆ ... ಕೆಲಯ ...ದೆ

ಕೆನರಾ ಬೇಂಕ್, ಲಿಮಿಟೆಡ್

ಸಿಟಿ, ಮಂಗಳೂರು

ನೋಟಿಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನುಗಳಿಗೆ ಒಪ್ಪಿಯ ನಮೂದಿಸಿದ ಕೊಡವ ಇರ ವಲ್ಲದ ಅವರಿಗೆ ಬಗ್ಗೆ ಒಟ್ಟು ರಿಜಿಸ್ಟ್ರಿ ನೋಟಿಸು ಅವರ ತೀರಿ ಹೋಗಿರುತ್ತಾಗಿ ವಾಪಸು ಬಂದಿರುವದರಿಂದ, ಸದರೀ ಸಾಲಗಾರರ ಕಾಯಿದೆ ಶೀರವಾರಿಸ್ಸಾದರು ಈ ಬಗೆಯಲ್ಲಿ ಬೇಕಿಗ ಒರ ತಕ್ಕ ಅಸಲು ಬಡ್ಡಿ ಹಣಗಳನ್ನು ಇದೇ ತಾರೀಕು 5 8—38ನೆ ಶುಕ್ರವಾರದೊಳಗೆ ಬೇಂಕಿಗೆ ಪಾವತಿ ಮಾಡಿ, ಇಡವಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗ ವರೆ ತಪ್ಪಿದಲ್ಲಿ ಅವುಗಳನ್ನು ತಾರೀಕು 9—8—38ನೇ ... ಗಳವಾರ ಅಪರಾಹ್ನ 2 ಘಂಟೆಗೆ ಆಗಲಿ, ಯಾತರುವಾಯ ... ಕೆನವರಿಗೆ ಅನುಕೂಲವಿರುವ ಇತರ ದಿನ ಪ ಹೊತ್ತಿನಲ್ಲಿ ತಿರುಗಿ ನೋಟಿಸು ಕೊಡದೇನೇ ಈ ಬೇಂಕಿನ ಡೋಂಗ್ರೆಕೇರಿ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದಾಗಿ ಈ ಮೂಲಕ ತಿಳಿಯಪಡಿಸೋಣಾಗ ತ್ತದೆ.

ಲೋನ ನಂಬ್ರ S L 38/87

ಸಾಲಗಾರರ ಹೆಸರು ಮತ್ತು ವಿಳಾಸ—

ಮಂಗ್ಳೂರು ಬೊಕ್ಕಪಟ್ಣದಲ್ಲಿರುವ ಅಂಗರನವರ ಮಗ ಆನಂದ ಸಿರಿಯನ್

ಸಾಲದ ಮೊಲಗು Rs. 10/-

ಬಾಕಿಯಾಗುವ ಒಡ್ಡಿ ವಗೈರೆ Rs. 1-11-10

ಮತ್ತು ಈ ನೋಟಿಸು ಖರ್ಚು ಸಹಾ.

Office of the Bank
City Mangalore
20—7—1938

P Krishna Kamath
Agent

ಮಂಗಳೂರು

ಇದೇ ಬರುವ ಆದಿತ್ಯವಾರ ದಿವಸ ತಾ. 24ರಲ್ಲು ಬೆಳಿಗ್ಗೆ ಘಂಟೆ 8ಕ್ಕೆ ಶ್ರೀ ವಿವೇಕಾನಂದ ಸಭೆಯ ಕಡೆಯಿಂದ ಕೆನರಾ ಹೈಸ್ಕೂಲು ಬಳಿಯ ಶ್ರೀಕೃಷ್ಣ ಮಂದಿರದಲ್ಲಿ ಗವರ್ನಮೆಂಟು ಕೊಲೇಜಿನ ಅಧ್ಯಾಪಕ ಶ್ರೀ ಕಾರ್ಕಳ ವೆಂಕಟರಾಯರ ಹರಿಕೀರ್ತನೆಯೂ ಕೆನರಾ ಹುಡುಗಿಯರ ಶಾಲಾ ಗಾಯನ ಅಧ್ಯಾಪಕಿ ಶ್ರೀಮತಿ ಚೊಲ್ಪಾಡಿ ಯಮುನಾ ಬಾಯಿಯವರ ಗಾಯನವೂ ನಡೆಯುವುವು. ಸ್ವಜಾತಿ ಬಾಂಧವರೆಲ್ಲರೂ ಕ್ಲುಪ್ತಸಮಯದಲ್ಲಿ ಬಂದು ಸಭೆಯ ಮೆಂಬರರ ಈ ಆಮಂತ್ರಣವನ್ನು ಸ್ವೀಕರಿಸಬೇಕಾಗಿ ಸ್ಥಳೀಯ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಕೊಡಗು

ಮದ್ರಾಸಿನ ಮಂತ್ರಿಗಳಿಂದ ಮಾನ್ಯ ಶ್ರೀ ಗೋಪಾಲ ರೆಡ್ಡಿಯವರು ಇದೇ ತಾ ೧೯ನೇ ಮಂಗಳವಾರ ಕೊಡಗಿನಲ್ಲಿ ಪ್ರವಾಸವನ್ನು ಬೆಳೆಸುವರು. ವಿರಾಜಪೇಟೆ, ಮಡಿಕೇರಿಗಳನ್ನು ಸಂದರ್ಶಿಸಿ ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರ ಮಾನಪತ್ರವನ್ನು ಸ್ವೀಕರಿಸುವರು.

ಒಂದೇ ವಾರದಲ್ಲಿ ನೋವು ಮಾಯವಾಯಿತು!

ನಾನು ಇಂದಿಗೆ ... ವರ್ಷಗಳಿಂದ ... ಕರುಳಿನ ... ದಿಂದ ನರಳುತ್ತಿದ್ದೆನು. ನನಗೆ ಬೇಕಾದುದನ್ನು ತಿನ್ನಲಿಕ್ಕಾಗುತ್ತಿರಲಿಲ್ಲ. ಈ ಕಾರಣದಿಂದ ನನ್ನ ಜೀವನವು ಅತ್ಯಂತ ಸಂಕಟಮಯವಾಗಿತ್ತು.

ಕೊನೆಗೆ ... ವರ್ಷಗಳ ಹಿಂದೆ ನನಗೆ ಆಸ್ಪತ್ರೆಯಲ್ಲಿ ... ಅಲ್ಲಿನ ವೈದ್ಯರು ಒಂದು ... ನನಗೆ ಬೋಧಿಸಿದರು. ಮತ್ತು ... ಶಸ್ತ್ರಚಿಕಿತ್ಸೆ ನಡೆಯಿಸಬೇಕೆಂದು ನಿಶ್ಚಯವಾಗಿತ್ತು.

... ನೋಡಿ ... ನನ್ನ ಸ್ಥಿತಿಯು ... ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು ಸೇವಿಸಬಾರದೆ ಎಂದ ... ಎಂದರು ... ವಿಚಿತ್ರ ... ಅದರ ಸೇವನೆಯ ಒಂದೇ ಒಂದು ವಾರದೊಳಗೆ ಹೊಟ್ಟೆ ನೋವು ಪೂರ್ಣ ಮಾಯವಾಯಿತು!' A W

ಇದೇ ... ಸಂವಿಧಾನ ಪತ್ರಗಳ ... ಯಾವತ್ತು ... ಮೆಕ್ಲೀನ್ ಬ್ರಾಂಡ್ ... ಎಂಬುದು ... ತಿಳಿದು ಬರುವುದು. ಆದರೆ ... ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪುಡಿಯನ್ನು ಪಡೆಯಬೇಕು. ... ಮೆಕ್ಲೀನ್ ... ಪಡೆಯಬಹುದು. ... ವಾಗುತ್ತ ಚಿಲ್ಲರೆಯ ... ಎಲ್ಲಾ ದವಾಖಾನೆಗಳಲ್ಲಿ ದೊರೆಯುತ್ತದೆ.

ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರ್

ಬಾಟ್ಲಿಯ ಮೇಲೆ ಮತ್ತು ಪೆಟ್ಟಿಗೆಯ ಮೇಲೆ ಈ ಕೆಳಗಿನ ಸಹಿಯು ಇರುವಂತೆ ನೋಡಿಕೊಳ್ಳಿರಿ.



MACLEAN
BRAND
Stomach Powder

ಮನುಷ್ಯನ ಬೆಲೆ ಎಷ್ಟು?

ಮನುಷ್ಯನ ಬೆಲೆ ಎಷ್ಟು? ಇದೊಂದು ವಿಚಿತ್ರ ಪ್ರಶ್ನೆ ಎಂದು ನೀವು ಹೇಳಬಹುದು. ಮನುಷ್ಯನ ಬೆಲೆಯನ್ನು ಅವನ ಬುದ್ಧಿ ಶಕ್ತಿಗೆ ಕೊಡುವದಾಗಿದ್ದರೆ, ಅದು ಅಪಾರವಾಗಬಹುದು. ಅದನ್ನು ಹೇಳುವದು ಯಾರಿಗೂ ಕಷ್ಟಸಾಧ್ಯವಾಗಬಹುದು ಆದರೆ ಅವನ ಬೆಲೆಯನ್ನು ಶರೀರಕ್ಕೆ ಕಟ್ಟುವದಾಗಿದ್ದರೆ ಅದು ಬಹು ಸುಲಭವಾಗ ಪ್ರಶ್ನೆಯು. ವಿಚಿತ್ರವೆಂದು ಯಾರಿಗೂ ತೋರದು

ಕೆಲವು ಶಾಸ್ತ್ರಜ್ಞರು ಮನುಷ್ಯನ ಶರೀರಕ್ಕೆ ಬೆಲೆಕಟ್ಟಿದ್ದಾರೆ ಶರೀರದೊಳಗಿನ ಬೇರೆ ಬೇರೆ ಧಾತುಗಳ ಬೆಲೆಯು ಮೂರು ರೂಪಾಯಿಗಳಿಗೆ ಮೀರುವದಿಲ್ಲ ಶರೀರವು ಬಹಳ ಸ್ಥೂಲವಾಗಿದ್ದರೆ ಅದು ನಾಲ್ಕು ರೂಪಾಯಿ ತನಕ ಏರಬಹುದ , ಅಷ್ಟೆ!

ದೇಹದ ಹೆಚ್ಚಿನ ಪಾಲು ನೀರು ಆಗಿದೆ ರಕ್ತದಲ್ಲಿ ಸೇಕಡಾ 90 ಪಾಲು, ಕಾಳಿಜದಲ್ಲಿ 69 ಪಾಲು, ಬಹಳ ಗಟ್ಟಿಯಾದ ಎಲುಬಿನಲ್ಲಿ ಕೂಡ 27 ಪಾಲು ನೀರು ಇರುತ್ತದೆ ಉಳಿದುದೆಲ್ಲ ಸುಣ್ಣ, ರಂಜಕ, ಗಂಧಕ, ಪೋಟ್ಯಾಸಿಯಮ್ ಮೊದಲಾದ ಧಾತುಗಳಿಂದ ಆಗಿರುತ್ತದೆ ಈ ಎಲ್ಲ ವಸ್ತುಗಳನ್ನು ಬೇರೆ ಬೇರೆ ಮಾಡಿ ಪೇಟೆಯಲ್ಲಿ ಮಾರಿದ್ದಾದರೆ ಅವುಗಳ ಬೆಲೆಯು ಮೇಲೆ ಹೇಳಿದಷ್ಟು ಆಗುತ್ತದೆ

ಇಡೀ ಶರೀರದಲ್ಲಿ ಒಂದು ಡೋಜು ಮೆಗ್ನೇಸಿಯ, ಸುಮಾರು ಎರಡು ರಾತಲು ಸಕ್ಕರೆ, ಏಳು ಬಟ್ಟೆ ಸಾಬೂನು ಮಾಡಲಿಕ್ಕೆ ಬೇಕಾದಷ್ಟು ಕೊಬ್ಬು, 2000 ಬೆಂಕಿ ಕಡ್ಡಿಗಳಿಗೆ ಬೇಕಾದಷ್ಟು ರಂಜಕ, ಕೋಳಿಗೂಡಿಗೆ ಬಳೆಯ ಬೇಕಾದಷ್ಟು ಸುಣ್ಣ ಮತ್ತು ಎರಡು ಆಣೆಗಳನ್ನು ಮಾಡಲಿಕ್ಕೆ ಅಗತ್ಯವುಳ್ಳ ಕಬ್ಬಿಣ ಇರುತ್ತದೆ.

o o o o

ಒಂದು ಮಿನುಟಿನಲ್ಲಿ ಏನಾಗುತ್ತದೆ?

ಒಂದೊಂದು ಮಿನುಟಿನಲ್ಲಿ ಏನೇನಾಗುತ್ತದೆಂದು ನಿಮಗೆ ಗೊತ್ತೆ? ಒಂದು ಮಿನುಟಿನಲ್ಲಿ ಮನುಷ್ಯನ ಹೃದಯವು 72 ಬಾರಿ ಬಡಿಯುತ್ತದೆ ಒಂದು ಮಿನುಟಿನಲ್ಲಿ ಜಗತ್ತಿನಲ್ಲಿ 90 ಮಗುಗಳು ಹುಟ್ಟುತ್ತವೆ ಒಂದು ಮಿನುಟಿನಲ್ಲಿ ಜಗತ್ತಿನಲ್ಲಿ 76 ಮಂದಿ ಸಾಯುತ್ತಾರೆ ಒಂದು ಮಿನುಟಿನಲ್ಲಿ ಜಗತ್ತಿನಲ್ಲಿ ಒಬ್ಬನು ಆಪತ್ತಿಗೆ ಸಿಕ್ಕಿ ಗಾಯಗೊಳ್ಳುತ್ತಾನೆ

ಒಂದು ಮಿನುಟಿನಲ್ಲಿ ಪಾಶ್ಚಾತ್ಯ ದೇಶಗಳಲ್ಲಿ 20 ದಂಪತಿಗಳ ವಿವಾಹವಾಗುತ್ತಾರೆ ಮತ್ತು ಒಬ್ಬರು ದಾಂಪತ್ಯ ವಿಚ್ಛೇದಮಾಡಿಕೊಳ್ಳುತ್ತಾರೆ.

o o o

ಒಂದು ಮಿನುಟಿನಲ್ಲಿ ಇಲಿಗಳಿಂದ ಜಗತ್ತಿಗೆ ಆಗುವ ನಷ್ಟ 99 ಪವನು ಆಗಿರುತ್ತದೆ.

ಬೇಡುವ ನಾಯಿಗಳು

ಲಂಡನಿನಲ್ಲಿ ವೊನ್ನೆತನಕ ವಿಕ್ಟರ ಎಂಬ ಹೆಸರಿನ ಒಂದು ನಾಯಿ ಇದ್ದಿತು. ಅದು ರೈಲು ಸ್ಟೇಶನಿಗೆ ಬಂದ ಜನರೊಡನೆ ಭಿಕ್ಷೆ ಬೇಡುತಿತ್ತು ಸಾಯುವ ಕಾಲದ ತನಕ ಅದು ಬೇಡಿದ ಒಟ್ಟು ಹಣವು 2700 ಪವನುಗಳಾಗಿದ್ದುವು ಇಷ್ಟು ಹಣವನ್ನು ಅದು ಉಪಕಾರ ಸಂಸ್ಥೆಗಳಿಗೆ ದಾನಮಾಡಿತ್ತು ಅಂತೆಯೇ ಅಲ್ಲೀಗ ಜಾಕ್ ಎಂಬ ನಾಯಿ ಇದೆ ಅದೂ ಕೂಡಾ ಸಾವಿರಾರು ಪವನುಗಳನ್ನು ಬೇಡಿ ತಂದು ಸಂಪ ಸಂಸ್ಥೆಗಳಿಗೆ ದಾನ ಮಾಡಿದೆ ಗ್ರೇಸ ಎಂಬ ಹೆಸರಿನ ಮತ್ತೊಂದು ಹೆಣ್ಣು ನಾಯಿ ಎರಡು ವರ್ಷಗಳಲ್ಲಿ 200 ಪವನುಗಳನ್ನು ಬೇಡಿತಂದು ಒಂದು ಅನಾಥಾಲಯಕ್ಕೆ ಕೊಟ್ಟಿದೆ

o o o o

20 ಮಣ ಭಾರದ ಪುಸ್ತಕ

ಇಟಲಿಯಲ್ಲಿ ಫ್ಲೋರೆನ್ಸಿಗೆ ಸೇರಿದ ವೆಟಿಕನ ನಗರದಲ್ಲಿ ಒಂದು ಬ್ಯಾಬಲ ಗ್ರಂಥವಿದೆ ಅದು 20 ಮಣ ಭಾರವಿದೆ

ಒಕ್ಸ ವರ್ಡ ನಗರದ ಬೋಡ್ಲಿಯನ ನಗರದಲಿ ಇನ್ನೊಂದು ಬ್ಯಾಬಲ ಗ್ರಂಥವಿದೆ ಅದು ಕಿರುಬೆರಳಿನಷ್ಟು ಚಿಕ್ಕದಾಗಿದೆ

ಬರ್ಲಿನ ನಗರದ ಒಂದು ಪುಸ್ತಕಾಲಯದಲ್ಲಿ ಮತ್ತೊಂದ ಬ್ಯಾಬಲ ಗ್ರಂಥವಿದೆ ಅದನ್ನೆಲ್ಲ ಓಲೆಗರಿಗಳ ಮೇಲೆ ಅಚ್ಚು ಹಾಕಿದ್ದಾರೆ

ಮಜೂರರ ಸಂತೃಪ್ತಿ ಸಾಧನೆ: ಕಾನ್ಪೂರದಲ್ಲಾದುದರ ತಾತ್ಪರ್ಯ

ಬ್ರಿಟಿಷ ಇತಿಹಾಸದಲ್ಲಿ ಕಾನ್ಪೂರದ ಹೆಸರು—ಅಲ್ಲಿ ಬ್ರಿಟಿಷರನ್ನು ಕೊಂದು ಹೆಣಗಳನ್ನು ಒಗೆದ ಒಂದು ಬಾವಿಯ ದೆಸೆಯಿಂದ ಉಳಿದಿದೆ! ಆದರೆ, ಭಾರತೇತಿಹಾಸದಲ್ಲಿ ಕೊಂಗ್ರೆಸು ಸರಕಾರಬಂದು ಅತಿ ಮಹತ್ವದ ತೀರ್ಮಾನವನ್ನು ಮಾಡಿ, ಮಜೂರರಿಗೆ ಸಂತೃಪ್ತಿಯನ್ನುಂಟುಮಾಡಿದುದಕ್ಕಾಗಿ, ಅದೇ ಮೊದಲನೆಯ ಸ್ಥಳವೆನಿಸಿ, ಧನಿಗಳಿಗೂ ಮಜೂರರಿಗೂ ಏಕಪ್ರಕಾರವಾದ ಸಮಾಧಾನವನ್ನುಂಟು ಮಾಡುವುದಕ್ಕೆ ಕೊಂಗ್ರೆಸು ಮಂತ್ರಿಗಳು ಪ್ರಯತ್ನಿಸಿರುವುದಕ್ಕಾಗಿ ಅದು ಹೆಸರುಗೊಳ್ಳದಿರದು.

ಐವತ್ತು ದಿನಗಳ ಮುಷ್ಕರ, ಅರ್ಧ ಲಕ್ಷ ಮಜೂರರ ಮುಷ್ಕರ, ಅರೆಹೊಟ್ಟೆಯಿಂದಾದರೂ ಸತ್ಯಾಗ್ರಹಿಗಳಾಗಿ ಐಕ್ಯತೆಯಿಂದ ಈ ಮಜೂರ ದರಿದ್ರರು ಇಷ್ಟು ಕಾಲ ಬಲವಾಗಿದ್ದರು, ಧನಿಗಳಿಗೆ ಒಂದು ಕೋಟಿ ರೂಪಾಯಿ ನಷ್ಟವಾಯಿತು. ... ವಿಧ್ವಮಾನಗಳು ಉಂಟಾದರೂ, ... ಶಾಂತರಾಗಿ, ತಮ್ಮ ಪ್ರಕರಣವೆಂಬುದು ಇಡೀ ಭಾರತ ವರ್ಷದ ಮಜೂರರ ಪ್ರಕರಣವೆಂದು ಸತ್ಯಾಗ್ರಹ ಪಾಲಿಸಿದರು. ಇದೊಂದು ಕಾರಣದಿಂದ ಅವರು ವಿಜಯಿಗಳಾದರು.

ಆದರೆ, ಕೊಂಗ್ರೆಸು ಸರಕಾರವು ಅಲ್ಲಿಲ್ಲದಿದ್ದರೆ,—ಪಂಡಿತ ಗೋವಿಂದವಲ್ಲಭ ಪಂತರ ... ಮಂತ್ರಿಗಳಾಗಿಲ್ಲದಿದ್ದರೆ,— ಏನಾಗುತ್ತಿತ್ತು? ಮಜೂರರ ದೃಷ್ಟಿಯಿಂದ ಈ ವಿಧ್ವಮಾನಗಳನ್ನು ವಿಮರ್ಶಿಸುವ ಹಾಗೆ ಧನಿಗಳನ್ನು ಅವರು ಪ್ರೇರೇಪಿಸಿದರು, ಧನಿಗಳು ಒಪ್ಪಲೇ ಬೇಕಾಯಿತು ಒಂದು ಕಾಲದಲ್ಲಿ, ಇವೆಲ್ಲ ಹೀಗಿರಲಿ ನಮ್ಮ ಕಾರ್ಖಾನೆಗಳನ್ನು ... ಬಿತ್ತಿ ... ಧನಿಗಳು ... ಗಾದರು.

... ರತ್ನ ... ಅರ್ಧಲಕ್ಷ ಜನರ ... ಅವರು ಸಮಾಧಾನವಾಗಿರ ... ಪ್ರಯತ್ನಿಸುವಂ ... ಅವರ ... ತ್ತಿದೆ.

ಧನಿಗಳಿಂದಲೂ ... ವೇಳೆ, ... ಎಲ್ಲ ... ದೊಡ್ಡ ... ಈ ... ದು ... ಮುಷ್ಕರ ನಡೆದು ಮುಗಿಯಿತು

ಕಾನ್ಪೂರವಿರುವುದೇ ಕಾರ್ಖಾನೆಗಳಿಂದಾಗಿ' ಕೂಲಿ ನಿರ್ಧರಣ ಸಭ, ... ನ್ಯಾಯಸ್ಥಾನ ಮಜೂರರ ಸಭಾ ನಿರ್ಮಾಣ ... ಗಳನ್ನು ಸೃಷ್ಟಿಸಲೋ ಈ ಮುಷ್ಕರ ಮುಗಿಯಿತು ಇವೇ ವಿಧಾನಗಳಿಂದ ಇತರ ವ್ಯಾಪಾರಗಳಲ್ಲಿ ಮಜೂರರಿಗೆ ಸಮಾಧಾನವಾಗುವಂತೆ ವ್ಯವಸ್ಥೆ ಮಾಡಬಹುದಾಗಿದೆ. ಧನಿಗಳು ತಾವಾಗಿ ಮಜೂರರ ಹೆಚ್ಚಿನವೊಪ್ಪಿದರು,—ಹೊರಗಣ ರಾಜ್ಯಗಳಿಗೆ ಹೋಗಿ ಅಲ್ಲಿ ಕಾರ್ಖಾನೆ ತೆರೆವೆವೆಂದು ... ಸಾರಿದ್ದುದನ್ನು ... ದರು

ಸರಕಾರವು, ಇದೆಲ್ಲ ... ಕಣ್ಣಾರೆ ಕಂಡುದೇ ಹೊರತು, ... ಎಡೆಯನ್ನು ... ಉತ್ತಮ ... ಗಳಾಗುವಂತೆ, ಧನಿಗಳಿಗೆ ಪ್ರೋತ್ಸಾಹ ... ಮತ್ತು ಮಜೂರರಿಗೆ ಹೊಸ ... ಗಾಗುವಂತೆ ಪ್ರೇರೇಪಿಸಿತು, ... ದಾಗಲಾಗುವಂತಿಲ್ಲ; ಅವನೂ ಹಕ್ಕುಗಳುಳ್ಳ ನಾಗರಿಕನು, ಅವನ ಜವಾಬು ಕೇಳಿ ತಪ್ಪಿದರೆ ಅವನೂ ನ್ಯಾಯ ವಿಚಾರಣೆ ಮಾಡಿಸಿಕೊಳ್ಳುವನು

ಧಂತವಾಳ ಮತ್ತು ಕ್ರಮ ಇವೆರಡನ್ನು ಕಾನ್ಪೂರದಲ್ಲಿ ಪಂತರು ಪ್ರೇಮ ಬಂಧನದಲ್ಲಿ ಬಿಗಿದಿರುವರು



THE

Bank of Mangalore Ltd.,

MANGALORE.

ESTD. 1931.

Branches:-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances.

All kinds of banking business transacted.

ಕಳೆಗುಂದಿಸುವ ಕಜ್ಜಿ ಬೊಕ್ಕೆಗಳನ್ನು ಗುಣಪಡಿಸಿರಿ.

ಮಲಗುವ ಸಮಯ ಜ್ಯಾಂಬಕ್ ತಿಕ್ಕಿಕೊಳ್ಳಿರಿ.

ಬೊಕ್ಕೆ ಯಾ ಉರಿಕಜ್ಜಿಯ ಸ್ಥಳವು ಎಷ್ಟು ಕಜ್ಜಿದಾಗಲೀ, ಒಡನೆ ಜ್ಯಾಂಬಕನ್ನು ಉಪಯೋಗಿಸಿರಿ. ಅದರಿಂದ ಕಜ್ಜಿ, ಬೊಕ್ಕೆ ಇತ್ಯಾದಿ ರೋಗಗಳ ಬೆಳವಣಿಗೆಯು ತಡೆಯಲ್ಪಡುವುದು. ಜ್ಯಾಂಬಕನಲ್ಲಿರುವ ಅಮೂಲ್ಯವಾದ ವನಸ್ಪತಿತೈಲಗಳು ಚರ್ಮದಡಿಯಲ್ಲಿರುವ ಗ್ರಂಥಿಗಳನ್ನು ಸೇರುತ್ತವೆ. ಮಾಯಾವಿ ತರದಲ್ಲಿ ನೋವನ್ನು ನಿವಾರಿಸುತ್ತದೆ. ರಶಿಯನ್ನು ಒಣಗಿಸುತ್ತದೆ; ಆದುದರಿಂದ ನಿಮ್ಮಲ್ಲುಂಟಾಗುವ ಎಲ್ಲಾ ತರದ ಚರ್ಮ ವ್ಯಾಧಿಗಳಿಗೆ ಅದನ್ನುಪಯೋಗಿಸಿರಿ.

ಎಲ್ಲಾ ದವಾಖಾನೆಗಳಲ್ಲಿ ರೂ. ಒಂದು ಪೆಟ್ಟಿ 2-4-0 ಪ್ರಕಾರ ವ್ಯಾಪಾರವಾಗುತ್ತ.

ಏಜಂಟರು —

ಮೆಸರ್ಸ್ ರಾಧಾ ಮತ್ತು ಕಂಪೆನಿ, ಫಾರ್ಟ್ ಟೌನ್, ಮದರಾಸು.

ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸಿರಿ.

ZAM-BUK

ಇದರಲ್ಲಿ ಪ್ರಾಣಿ ಕೊಬ್ಬು ಮಿಶ್ರವಾಗಿಲ್ಲ.

S. U. N. & Co.,

Silk Merchants,

Chaukhamba, BENARES CITY.

ಈಗಿನ ತರದ (ಕಾಶಿ) ಬೆನಾರೆಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಸೀರೆಗಳು 1ಕ್ಕೆ ರೂ. 45ರಿಂದ 50. ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಸೀರೆಗಳು ರೂ. 35ರಿಂದ ರೂ. 55. ಪಡಲು ಸಾದಾ ಸೀರೆ 18 ಮೊಳ ರೂ. 32ರಿಂದ ರೂ. 5. ಉದ್ದ ಮೊಳ 16, ಅಗಲ 2¼ ರೂ. 20ರಿಂದ 35ರ ವರೆಗೆ. ಬೇರೆ ಮಾಲುಗಳ ಪಟ್ಟಿಯನ್ನು ಉಚಿತವಾಗಿ ಕಳುಹಿಸಲಾದೀತು.

ರಾಜ:—

ಶಿರೋಮಣಿ ನಾರಾಯಣಾಚಾರ್ಯ,

ಚೌಕಂಬಾ, ಬೆನರೆಸ್ ಸಿಟಿ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್ ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ. ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬಿಲ್ಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3-0-0 (ಮೂರು) ವಿ. ಪಿ. ಖರ್ಚು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, Vithalbhai Patal Road, BOMBAY

...... of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(*Sd.*) **V. V. Giri,**

10-1937 *Minister of Labour.*

huvanendra Products Ltd, Katapady, S. Kanara

ಬೇಸಿಗೆಕಾಲದಲ್ಲಿ ಟೀಯನ್ನು ಮೀರಿಸಿದ ಪಾನೀಯವೇ ಇಲ್ಲ. ಅದು ಶರೀರದಲ್ಲಿ ಬೆವರನ್ನು ಹೊರಡಿಸಿ ದೇಹದ ಉಷ್ಣವನ್ನು ತಗ್ಗುವಂತೆ ಮಾಡುವುದು. ತಂಪನ್ನು ಅನುಭವಿಸಲು ಅಪಾಯರಹಿತವಾದ ಮತ್ತು ಅತ್ಯುತ್ತಮವಾದ ಸಾಧನವು ಇಂಡಿಯಾದ ಟೀಯೇ. ಬೇಸಿಗೆ ಕಾಲದಲ್ಲಿ ಬೇಕಾದಷ್ಟು ಬಿಸಿ ಬಿಸಿ ಟೀ ಕುಡಿಯಿರಿ. ತಂಪನ್ನೂ ಆನಂದವನ್ನೂ ಅನುಭವಿಸಿರಿ.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಶುಚಿಯಾಗಿರುವ ಮಣ್ಣಿನ (ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ.



ಅದು
ತಂಪನ್ನುಂಟುಮಾಡಿ
ಆನಂದವನ್ನು
ಕೊಡುವುದು

ಇಂಡಿಯಾದ ಟೀ
ತಂಪನ್ನೂ
ತೃಪ್ತಿಯನ್ನೂ
ಕೊಡುವುದು

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು

IK 96 S

ಪರಿಪಕ್ವವಾದ ತತ್ವ

ಬಿಸಿಯಾದ ಟೀಯಿಂದ ದೇಹವನ್ನು ತಂಪಾಗಿಡಬಹುದೆಂಬ ಹೇಳಿಕೆಯಲ್ಲಿ ಪರಿಪಕ್ವವಾದ ಒಂದು ತತ್ವವಿದೆ. ದೇಹವನ್ನು ತಂಪಾಗಿಡುವುದು ಹೇಗೆಂದು ಕೆಲವು ವೈದ್ಯಶಾಸ್ತ್ರಜ್ಞರ ಕೆಲವು ಅಭಿಪ್ರಾಯಗಳನ್ನು ಗ್ರೇಟ್ ಬ್ರಿಟನ್ನಿನ ಎರಡು ಮುಖ್ಯವಾದ ಸಿಕ್ಕವಾದ ಪತ್ರಿಕೆಯಲ್ಲಿದ್ದಂತೆ ಕೆಳಗೆ ನಾವು ಅವುಗಳನ್ನು ಕೊಟ್ಟಿರುತ್ತೇವೆ. ಮಂಜುಗೆಡ್ಡೆ ಹಾಕಿದ ಪಾನಗಳು ಎಷ್ಟೋ ಹರ್ಷೋತ್ಪಾದಕವಾಗಿದ್ದರೂ, ಬಿಸಿಬಿಸಿಯಾಗಿರುವ ಟೀಯು ಅವುಗಳೆಲ್ಲಾವುದಕ್ಕಿಂತಲೂ ಅತಿ ಶೀಘ್ರತೆಯಿಂದಲೂ ದೇಹಕ್ಕೆ ತಂಪುಂಟುಮಾಡುತ್ತದೆ. ಇದಕ್ಕೆ ಕಾರಣಗಳೇನೆಂದರೆ—

'ಅತ್ಯಂತ ತಂಪನ್ನುಂಟುಮಾಡುವ ಪಾನವು ಇಂಡಿಯಾದಿಂದ ಬರುತ್ತದೆ. ಅದು ಟೀ. ಕಾರಣ್ಣ ಗ್ಲಾಂಡ್ಸ್‌ಗಳಲ್ಲಿ ಸೇರಿ, ರಕ್ತನಾಳಗಳನ್ನು ಸಂಕೋಚಿಸಿ ಚರ್ಮದ ಮೇಲ್ಭಾಗದಿಂದ ರಕ್ತವನ್ನು ಕೆಳಗೆ ಸೆಳೆಯುತ್ತದೆ. ಚರ್ಮದ ಮೇಲ್ಭಾಗದಲ್ಲಿಯೇ ನಾವು ಕಾವನ್ನು ಅನುಭವಿಸುವುದು—ಡೈಲಿ ಎಕ್ಸ್‌ಪ್ರೆಸ್

'ವಿಶೇಷ ಶೋಧನೆ ಮತ್ತು ಅನುಭವಗಳಿಂದ ಟೀಗಿಂತಲೂ ಮತ್ತೆ ಇನ್ನಾವ ಪಾನವೂ ದಾಹ ನೀಗಿಸಿಕೊಳ್ಳಲರ್ಹವಾಗಿಲ್ಲವೆಂಬ ತೀರ್ಮಾನಕ್ಕೆ ಬಂದಿರುತ್ತೇನೆ.' ಮಂಜುಗಡ್ಡೆ ಹಾಕಿದ ಪಾನಗಳಿಂದ ನೀವು ತಂಪಾಗಿರುತ್ತೇವೆಂದು ಯೋಚಿಸಬಹುದು. ಆದರೆ ಶಾಸ್ತ್ರರೀತಿಯಲ್ಲಿ ಪರೀಕ್ಷಿಸಿದಲ್ಲಿ ಬಿಸಿಬಿಸಿ ಟೀಯು ಬೆವರುವಿಕೆಯನ್ನೂ ಹೆಚ್ಚಿಸಿ ದೇಹದ ಉಷ್ಣವನ್ನು ನಿವಾರಿಸುತ್ತದೆ—ಡೈಲಿ ಡಿಸ್‌ಪ್ಯಾಚ್

ಪ್ರತಿಯೊಬ್ಬ ಟೀ ಪಾನಮಾಡುವವನೂ ತನ್ನ ಸ್ವಂತ ಅನುಭವದಿಂದ ಇದನ್ನು ತಿಳಿದಿರುತ್ತಾನೆ. ಏಕೆಂದರೆ ಟೀಯನ್ನು ಕುಡಿದ ಅನಂತರ ಸ್ವಲ್ಪ ಬೆವರಲಾರಂಭಿಸಿ, ತಂಪನ್ನುಂಟುಮಾಡಿ ಬಹಳ ಕಾಲದ ವರೆಗೆ ಆಲಸ್ಯವನ್ನು ಹೋಗಲಾಡಿಸಿರುತ್ತದೆ. ಈ ಬಗೆಯ ತಣ್ಣಗಾಗುವಿಕೆಯು ಟೀಯಿಂದ ಉತ್ಪತ್ತಿಯಾಗಿದ್ದಕ್ಕಾಗಿ, ತಣ್ಣೀರು ಅಥವಾ ಮಂಜುಗಡ್ಡೆ ಹಾಕಿ ಇತರೇ ಪಾನಗಳಿಂದೊದಗುವ ತಾತ್ಕಾಲಿಕ ತಂಪಿಗೂ ಬಹು ವ್ಯತ್ಯಾಸವಿದೆ. ಅನೇಕ ವೈದ್ಯರುಗಳ ಅಭಿಪ್ರಾಯವೇನೆಂದರೆ, ನೀರು ದಾಹವನ್ನು ಆರಿಸುವುದಿಲ್ಲವೆಂದು. ಬೇಸಿಗೆಯ ದಿನಗಳಲ್ಲಿ ತೆಗೆದುಕೊಳ್ಳಬೇಕಾದ ಆಹಾರ ಮತ್ತು ಪಾನಗಳ ಮುನ್ನೆಚ್ಚರಿಕೆಗಳ ಬಗ್ಗೆ ಒಬ್ಬ ಕೀರ್ತಿಯುತ ಡಾಕ್ಟರರ ಅಭಿಪ್ರಾಯವನ್ನು ಎತ್ತಿಹೇಳುತ್ತಾ ನೇಟ್ಸ್‌ಮನ್ ಪತ್ರಿಕೆಯು 1938ನೇ ಇಸವಿ ಎಪ್ರಿಲ್ ಮಾಹೆ ೨ನೇ ತಾರೀಕಿನ ಪತ್ರಿಕೆಯಲ್ಲಿ ಈ ರೀತಿಯಾಗಿ ಬರೆದಿದ್ದಿತು.

'ಬಿಸಿಬಿಸಿಯಾದ ಟೀಯು ಅತ್ಯಂತ ತಂಪನ್ನುಂಟುಮಾಡುವ ಮಂಜುಗಡ್ಡೆಯನ್ನು ಅವುಗಳಲ್ಲಿ ಬೆರಸಿದ್ದಾಗ್ಯೂ ಅವುಗಳಿಗಿಂತಲೂ ಅತಿ ಬೇಗ ತಂಪನ್ನುಂಟುಮಾಡುವುದು.'

ಇಂಡಿಯಾದಲ್ಲಿ ವಿಶೇಷವಾಗಿ ಓದುವ 'ಇಲ್ಲಸ್ಟ್ರೇಟೆಡ್ ವೀಕ್ಲಿ, ಬೊಂಬಾಯಿ' ಎಂಬ ಮತ್ತೊಂದು ಪತ್ರಿಕೆಯು ಅದೇ ತಿಂಗಳಲ್ಲಿ 'ತಂಪಾಗಿ ದೇಹವನ್ನಿಡುವಿಕೆ' ಎಂಬ ಲೇಖನವನ್ನು ಪ್ರಕಟಿಸಿತು. ಈ ಲೇಖನದಲ್ಲಿ ಹೊರಪಡಿಸಿದ ಅನೇಕ ಸಲಹೆಗಳನ್ನು ಲೇಖಕರು "ಇತರೇ ಮಂಜುಗಡ್ಡೆಯಿಂದ ತಯಾರಿಸಿದ ಐಸ್ ಕ್ರೀಂ ಇವೇ ಇತ್ಯಾದಿಗಳಿಗಿಂತಲೂ" ಸೆಖೆಕಾಲದಲ್ಲಿ ಟೀಯನ್ನು ಅತ್ಯಂತ ಇಷ್ಟಪಡಬಹುದಾಗಿರುತ್ತದೆ.

ಸೆಖೆಯ ದಿನಗಳಲ್ಲಿ ಬಿಸಿಬಿಸಿ ಟೀಯನ್ನು ಪಾನಮಾಡುವದು 'ದಿನವು ಎಷ್ಟು ಸೆಖೆಯಾಗಿರುತ್ತದೆಯೋ ಅದಕ್ಕಿಂತ ಪಾನವು ಬಿಸಿಯಾಗಿರಬೇಕೆಂಬ ಪ್ರಕೃತಿಯ ತತ್ವವನ್ನು ಅಭ್ಯಾಸಮಾಡಿದಂತಾಗುವುದಲ್ಲದೆ ಮತ್ತೆ ಬೇರೆ ಯಾವ ಉದ್ದೇಶವೂ ಇಲ್ಲ. ಈ ರೀತಿಯಾಗಿ ಬೇಸಿಗೆಯ ದಿನಗಳಲ್ಲಿ ದೇಹವನ್ನು ತಂಪಗಿಡುವ ಬಗೆಯನ್ನು ತೃಪ್ತಿಕರವಾಗಿ ಕಂಡುಹಿಡಿದಿರುತ್ತಾರೆ. ಆದ ಕಾರಣ ನಾವು ಹೇಳುವುದೇನೆಂದರೆ, ಬೇಸಿಗೆಯ ದಿವಸಗಳಲ್ಲಿ ಅಥವಾ ಸೆಕೆಗೆ ಉತ್ತಮವೇನೆಂದರೆ 'ಟೀ'ಯೆಂಬುದೊಂದೇ. ಇದರ ವಿನಾ ಇತರೇ ಇನ್ನಾವ ಪಾನವೂ ಸರಿಯಾದುದಲ್ಲ.

ಮಹಾಖ್ಯಾತಿಯನ್ನು ಪಡೆದ ದಿವ್ಯ ಔಷಧಿ

ಈಗಲೂ ಮಲೇರಿಯಾ ಹಾವಳಿಯಿರುವ ದೊಡ್ಡ ದೊಡ್ಡ ಪ್ರದೇಶಗಳಿವೆ. ಹಿಂದಿನಕಾಲದಲ್ಲಿ ಈ ರೋಗದ ಹಾವಳಿ ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಹರಡಿತ್ತು. ಇಂದು ಮಲೇರಿಯಾವೆ ಇಲ್ಲದ ಕಡೆಗಳಲ್ಲೂ ಈ ರೋಗದ ಹಾವಳಿಯು ಇದ್ದಿತು. 17 ಶತಮಾನದ ಅಂತ್ಯದಲ್ಲಿ ರಾಬರ್ಟ್ ಟಾಲ್ಬೋರನೆಂಬವನು ತನ್ನ ವಿಚಿತ್ರ ಗುಣಕಾರಿ ಚಿಕಿತ್ಸೆಯಿಂದ ಬಹಳ ಖ್ಯಾತಿಯನ್ನು ಪಡೆದನು—'ಅರ್ಕಾನಮ' ಎಂಬ ಔಷಧಿಯನ್ನುಪಯೋಗಿಸಿ ಈ ಔಷಧಿಯಿಂದ ಇಂಗ್ಲಾಂಡಿನ ಎರಡನೇ ಚಾರ್ಲ್ಸ್‌ನು ಜ್ವರಪೀಡಿತನಾದಾಗ ಜೀವವನ್ನು ಉಳಿಸಲಾಯಿತು. ಇದಕ್ಕಾಗಿ ಟಾಲ್ಬೋರನಿಗೆ ಮಹಾ ಬಿರುದು ದೊರೆಕಿತು. ನಂತರ ಟಾಲ್ಬೋರನು ಫ್ರಾನ್ಸಿಗೆ ತೆರಳಿ ಅಲ್ಲಿ ಫ್ರೆಂಚ್ ಚಕ್ರವರ್ತಿಯವರನ್ನು, ಅವರ ರಾಜಕುಮಾರನನ್ನು ತನ್ನ 'ಅರ್ಕಾನಮ' ಔಷಧಿಯಿಂದ ಗುಣಮಾಡಿದನು. ಜ್ವರಪೀಡಿತರಾಗಿ ಕಷ್ಟಪಡುತ್ತಿದ್ದ ಫ್ರಾನ್ಸಿನ ಇತರ ಮುಖ್ಯ ಮಹಾನುಭಾವರನ್ನು ಗುಣಮಾಡಿದನು. ಫ್ರಾನ್ಸಿನ ಚಕ್ರವರ್ತಿಯವರು ಟಾಲ್ಬೋರನಿಂದ ಔಷಧಿಯನ್ನು ಕ್ರಯಕ್ಕೆ ಪಡೆದುಕೊಂಡರು. ಸ್ಪೈನಿನ ರಾಣಿಯವರು ಟಾಲ್ಬೋರನನ್ನು ತನ್ನ ವೈದ್ಯನಾಗಿ ನೇಮಕ ಮಾಡಿದರು. ಕೊನೆಗೆ ಟಾಲ್ಬೋರನ ಔಷಧಿಯು ಸಿಂಕೋನಾ ತೊಗಟೆಯಿಂದ ತಯಾರಿಸಲಾದುದೆಂದು ಕಂಡುಹಿಡಿಯಲಾಯಿತು.

ಈಗ ಸಿಂಕೋನಾ ತೊಗಟೆಯನ್ನುಪಯೋಗಿಸುವದಿಲ್ಲ. 1820ರಲ್ಲಿ ಪೆಲಿಟಿಯರ್ ಮತ್ತು ಕೆವೆಂಟೊವ್ ಎಂಬವರು ಅದರಿಂದ ಕ್ವಿನೀನನ್ನು ವಿಂಗಡಿಸಿ ತೆಗೆದರು—ನಂತರ ಮಲೇರಿಯಾ ಚಿಕಿತ್ಸೆಗೆ ಮತ್ತು ತಡೆಯುವಿಕೆ ಅದೇ ಒಂದು ದಿವ್ಯ ಔಷಧಿಯಾಗಿರುತ್ತದೆ.

ಮಲೇರಿಯಾ ಹಾವಳಿಯು, ಇಡೀ ಸಮುದಾಯ ರೋಗವು ತಗಲದಂತೆ ದಿನಂಪ್ರತಿ 6 ಜನಾಂಗಮಂಡಳದ ಸೂಚನೆಯಾಗಿರುತ್ತದೆ. ಅಲ್ಲದೆ ಮಲೇರಿಯಾ ಜ್ವರಹಿಡಿದಾಗ, 6 ಯಾ 7 ದಿನಗಳ ವರೆಗ 15ರಿಂದ 18 ಗ್ರೇನುಗಳ ವರೆಗೆ ಕ್ವಿನೀನನ್ನು ಸೇವಿಸಿದರೆ, ಜ್ವರವನ್ನು ಸಂಪೂರ್ಣ ಗುಣಪಡಿಸಬಹುದು. ಮತ್ತೊಮ್ಮೆ ಜ್ವರವು ತಲೆದೋರಿದರೆ, ಇದೇ ರೀತಿ ಕ್ವಿನೀನನ್ನು ಸೇವಿಸಿ, ಜ್ವರ ನಿವಾರಣೆಮಾಡಿಕೊಳ್ಳಬಹುದು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 53/1938

1 ಅಪ್ಪಿಹೆಂಗ್ಸು 2 ಪುಷ್ಪ 3. ಅಂಗು 4 ದೇವು 5 ವೆಂಕಪ್ಪ 6 ಪೂವ. 7 ಅಪ್ಪಿ ಹೆಂಗ್ಸು 8. ದಾರಮ್ಮ ಹೆಂಗು. 9 ಸೇಸು } ಪ್ರಾಯರ ಇವರ ಬಗ್ಗೆ 10 ಓಬು } ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು 11 ದೇಜು ಹೆಂಗ್ಸು—	ಅರ್ಜಿದಾರರು

ಕಾರ್ಕಳ ತಾಲೂಕು ನಲ್ಲೂರು ಗ್ರಾಮದ ಅಪ್ಪಿ ಪೂಜಾರ್ತಿಯ ಮಗ ದುಗ್ಗಪ್ಪನು ತಾರೀಕು 16–4–1938ರಲ್ಲಿ ಮೃತಪಟ್ಟಿರುವುದರಿಂದ ಅವನಿಗೆ Reliance Assurance Co Ltd, Bangalore. Mutual Benefit Scheme Certificate No 22024ನೇ ಪೊಲಿಸಿ ಪ್ರಕಾರ ಬರಬೇಕಾದ ಹಣವನ್ನು ವಸೂಲುಮಾಡುವರೆ, ಮೃತನ ವಾರಿಸುದಾರರಾದ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಬರಕೊಂಡ ಅರ್ಜಿಯು ತಾ. 13–8–1938ಕ್ಕೆ ಇಟ್ಟಿದೆ, ಈ ಕುರಿತು ಆಕ್ಷೇಪ ಉಳ್ಳವರು ಸದ್ರಿ ದಿನ ಈ ಕೋರ್ಟ ಮುಂದೆ ಹಗಲು 10 ಗಂಟೆಗೆ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ಅರ್ಜಿದಾರರ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ಜಾಹೀರು ಮಾಡಲಾಗಿದೆ—

ಕೋರ್ಟ ಹುಕುಂ ಪ್ರಕಾರ—

ತಾ. 18–7–38 } K. Mahabala Hegde

ಮುಂದಿನ ಯುದ್ಧದಲ್ಲಿ ಸ್ತ್ರೀಯರು ಕಾದುವರೆ?

ಮುಂದಿನ ಯುದ್ಧದಲ್ಲಿ ಸ್ತ್ರೀಯರು ಕಾದುವರೆ? ಅಥವಾ ಅವರು ಎಂದಿನಂತೆ ಮುಂದೂ ತಮ್ಮ ಗೃಹಜೀವನದಲ್ಲೇ ತೃಪ್ತರಾಗುವರೆ? ಎಂಬ ಪ್ರಶ್ನೆಯು ಈಗ ವಿಚಾರಿಗಳ ಮನಸ್ಸನ್ನು ಕಲಕಿಸಿದೆ. ಕೆಲವರು ಅವರು ಕಾದುವರೆಂತಲೂ ಇನ್ನು ಕೆಲವರು ಅವರು ಕಾದಲಾರರೆಂದೂ ಹೇಳುತ್ತಾರೆ. ಆದರೆ ಈ ಪ್ರಶ್ನೆಗೆ ಖಂಡಿತವಾದ ಉತ್ತರವನ್ನು ಕೊಡಲಿಕ್ಕಾಗುತ್ತದೆಯೋ ಎಂಬುದು ಪಾಯೋನಿಯರ ಪತ್ರಿಕೆಯಲ್ಲಿ ಪ್ರಕಟವಾದ ಮಿ. ಚಾರ್ಲೆಸ ಪಿಳ್ಳೆಯವರ ಕೆಳಗಿನ ಲೇಖನದಿಂದ ಗೊತ್ತಾಗುತ್ತದೆ

ಸ್ಪೈನಿನ ಅಂತಃ ಕಲಹದಲ್ಲಿ ಸ್ತ್ರೀಯರು ಪುರುಷರ ಹೆಗಲಿಗೆ ಹೆಗಲು ಕೊಟ್ಟು ಕಾದಿದ್ದಾರೆ. ಮುಂದೂ ಯುದ್ಧಗಳಲ್ಲಿ ಸ್ತ್ರೀ ಹೀಗೆ ಕಾದಲು ಮುಂದಾಗುವರೆ? ಜನಾಂಗ ಜನಾಂಗಗಳೊಳಗೆ ಯುದ್ಧಗಳಾಗುವಾಗ ಸ್ತ್ರೀಯರು ಯುದ್ಧ ಕೂಡ ರಣರಂಗಕ್ಕೆ ಹೋಗಬೇಕೆಂದು ಒತ್ತಾಯವಾಗುವದೆ? ಅವರಾದರೂ ತಮ್ಮ ಮನೆ ಮಂದಿ ಮಕ್ಕಳು ಮರಿಗಳನ್ನು ಬಿಟ್ಟು ರಣರಂಗಕ್ಕೆ ಹೊರಡುವರೆ?

ವಿಶ್ವವಿದ್ಯಾಲಯದ ಅಧಿಕಾರಿ, ಒಂದು ದೊಡ್ಡ ಶಹರಿನಲ್ಲಿ ವಾಸವಾಗಿರುವ ನಾಗರಿಕ ಸೇನೆಯ ಒಬ್ಬ ಅಧಿಪತಿ ಮತ್ತು ಇನ್ನೂ ಅನೇಕ ವಿಚಾರವಂತರು—ಈಗಿನ ಘಟನೆಗಳನ್ನೆಲ್ಲ ನೋಡುವಾಗ ಮುಂದಿನ ಯುದ್ಧದಲ್ಲಿ ಸ್ತ್ರೀಯರು ಭಾಗ ತೆಗೆದುಕೊಳ್ಳುವದು ಖಂಡಿತವೆಂದು ನನ್ನೊಡನೆ ಹೇಳಿದ್ದಾರೆ. ಅವರ ಅಭಿಪ್ರಾಯಗಳನ್ನು ಬೆಲೆಯುಳ್ಳವುಗಳಲ್ಲವೆಂದು ಅಲಕ್ಷಿಸಲಿಕ್ಕಾಗುವದಿಲ್ಲ

ಆದರೆ ಜನರು ಹೀಗೆ ಅಭಿಪ್ರಾಯಪಡುವದನ್ನು ಕೇಳಿ, ಲೋಕದ ಭವಿಷ್ಯದ ಕುರಿತು ನನಗೆ ಭಯವಾಗುತ್ತದೆ. ಆದರೂ ಶಾಂತ ಚಿತ್ತನಾಗಿ ಎಲ್ಲಾ ಸಂಗತಿಗಳನ್ನು ಆಲೋಚಿಸಿದಾಗ, ಹೀಗಾಗುವದನ್ನು ತಪ್ಪಿಸಲಿಕ್ಕೇ ಆಗುವದಲ್ಲವೆಂದಾದರೆ ವ್ಯರ್ಥ ಭಯ ಏತಕ್ಕೆ ಎಂದು ಕಾಣುತ್ತದೆ

ಈಗ ಯುರೋಪದ ಆಕಾಶವನ್ನು ಆವರಿಸಿರುವ ಯುದ್ಧದ ಕಾರ್ಮುಗಿಲುಗಳೆಲ್ಲ ಒಡೆದು ಬಿರುಮಳೆ ಸುರಿಯಲಾರಂಭವಾದರೆ, ಜನಾಂಗ ಜನಾಂಗಗಳು ತಮ್ಮ ತಮ್ಮೊಳಗೆ ಕಾದಿ ರಕ್ತದ ನದಿಯನ್ನೇ ಹರಿಯಗೊಡುವದಾದರೆ, ಪ್ರಪಂಚದ ಸರ್ವ ನಾಶವನ್ನು ಮಾಡುವದೇ ಈ ಜನಾಂಗಗಳ ಯುದ್ಧೋದ್ದೇಶವಾಗುವದಾದರೆ, ಆಗ ಎಲ್ಲಿ ಏನಾದೀತು, ಏನಾಗಬಾರದು ಎಂದು ಹೇಳುವದು ಯಾರಿಗೂ ಸಾಧ್ಯವಾಗುವ ಮಾತಲ್ಲ ಅಂಥಾ ಸಂದರ್ಭದಲ್ಲಿ ಸ್ತ್ರೀಯರು ರಣರಂಗಕ್ಕೆ ಹೋದರೂ ಹೋಗಬಹುದು

ಅಂಥ ಮಹಾ ಯುದ್ಧವು ಆರಂಭವಾದಾಗ ಇಡೀ ಜನಾಂಗವು ಸೇನೆಯಲ್ಲಿ ಭರ್ತಿಯಾಗುವದು ಪ್ರಾಯಭರಿತ ಮತ್ತು ಸಮರ್ಥರಾದ ಎಲ್ಲಾ ಸ್ತ್ರೀಪುರುಷರು ಅಂಥ ಸೇನೆಗಳಿಗೆ ಸೇರಿಕೊಳ್ಳಬೇಕಾಗುವದು ಒಳ್ಳೇ ದೃಢಕಾಯರಾದ ಹೆಂಗಸರು ತೋಪು ಫಿರಂಗಿಗಳನ್ನು ಹಾರಿಸಲಿಕ್ಕೆ ಸರಕಾರವು ಅವರನ್ನು ಕೇಳಿಕೊಳ್ಳಲಿಕ್ಕೂ ಸಾಕು

ಕಳೆದ ಒಂದು ಶತಮಾನದಲ್ಲಿ ಯುದ್ಧ ಕ್ರಮಗಳಲ್ಲಿ ಹೇಳಿಕೊಡದಷ್ಟು ಪರಿವರ್ತನೆಗಳಾಗಿರುವವು. ಎದುರೆದುರು ನಿಂತ ಕೇವಲ ಬಾಹು ಬಲ ಅಥವಾ ಕತ್ತಿ ಈಟಿಗಳನ್ನು, ಬಿಲ್ಲು ಬಾಣಗಳನ್ನು ಹಿಡಿದು ಯುದ್ಧ ಮಾಡುತ್ತಿದ್ದ ಪ್ರಾಚೀನ ಕಾಲದಲ್ಲಿಯಾದರೆ, ಹೆಂಗಸರು ಯುದ್ಧಕ್ಕೆ ಹೋಗುವರೆಂಬ ಸೂಚನೆಯನ್ನು ಕೇವಲ ಹುಚ್ಚರು ಮಾತ್ರ ಮಾಡಬಹುದಾಗಿತ್ತು. ಆ ಕಾಲದ ಯುದ್ಧಗಳಲ್ಲಿ ಜಯಾಪಜಯಗಳ ನಿರ್ಣಯವು ಸೇನೆಯ ಶರೀರ ಬಲಬಲವನ್ನು ಹೊಂದಿಕೊಂಡಿತ್ತು. ಆದ್ದರಿಂದ ಆ ಯುದ್ಧಗಳಲ್ಲಿ ಗಂಡಸರು ಮಾತ್ರ ಭಾಗಿಯಾಗುವದು ಸಹಜವೂ ಸ್ವಾಭಾವಿಕವೂ ಆಗಿತ್ತು. ಆದರೆ, ಆಧುನಿಕ ಯುದ್ಧಗಳಲ್ಲಿ ಶರೀರ ಬಲ ಅಥವಾ ಪಶುಬಲಕ್ಕೆ ಮೊದಲಿನ ಪ್ರಾಮುಖ್ಯತೆಯು ಇರುವದಿಲ್ಲ.

ಹೆಚ್ಚಿನ ಯುದ್ಧವೆಲ್ಲ ಈ ದಿನಗಳಲ್ಲಿ ಮೇಶೀನುಗನ್ನು, ತೋಪು, ತುಪಾಕಿಗಳ ಮೂಲಕ ನಡೆಯುತ್ತದೆ. ಶತ್ರು ಸೇನೆಯನ್ನು ಸಂಹರಿಸಬೇಕಾದರೆ ಅದು ಕಣ್ಣೆದುರಿಗೆ ಇರಬೇಕಾದುದಿಲ್ಲ ದೊಡ್ಡ ದೊಡ್ಡ ಫಿರಂಗಿಗಳು ಭಾರವಾದ ಗುಂಡುಗಳನ್ನು 20–30 ಮೈಲುಗಳ ದೂರಕ್ಕೂ ಎಸೆಯ ಬಲ್ಲವು ಈಗಿನ ಯುದ್ಧ ವಿಮಾನಗಳು ವಿಷವಾಯು ತುಂಬಿರುವ ಬುರುಡೆಗಳನ್ನು ಎಲ್ಲಿ ಬೇಕಾದರೂ ಚೆಲ್ಲಿ ವೈರಿಗಳ ಪೇಟೆ ಪಟ್ಟಣ ಹಳ್ಳಿಹಳ್ಳಿಗಳ ನಾಶ ಮಾಡ ಬಲ್ಲವು

ಆಧುನಿಕ ಯುದ್ಧೋಪಕರಣಗಳನ್ನು ಉಪಯೋಗಿಸಲಿಕ್ಕೆ ಬಹಳ ಶಾರೀರಿಕ ಬಲ ಅಥವಾ ವಿಶೇಷ ಬುದ್ಧಿಶಕ್ತಿಯು ಬೇಕೆಂದಿರುವದಿಲ್ಲ ಸ್ವಲ್ಪ ಮಾತ್ರ ಗಣಿತಜ್ಞಾನ ಮತ್ತು ಸಾಧಾರಣ ದೇಹ ಬಲ ಇರುವ ಒಬ್ಬ ಹೆಂಗಸಾದರೂ ಕೂಡ ಅವುಗಳನ್ನು ಉಪಯೋಗಿಸಬಲ್ಲಳು. ವಿಮಾನ ಯುದ್ಧಗಳಾಗುವವಾದರೂ ಕೂಡ, ಸ್ತ್ರೀಯರು ಹಿಂದಾಗಲಾರರು. ವಿಮಾನ ಸಂಚಾಲನೆಯಲ್ಲಿ ಸ್ತ್ರೀಯರೂ ಪುರುಷರಂತೆ ಕ್ಷಮತೆಯನ್ನು ತೋರಿಸಿದ್ದಾರೆ

ಆದ್ದರಿಂದ ಒಂದೇ ಒಂದು ಪ್ರಶ್ನೆ ಉಳಿಯುತ್ತದೆ ಅಗತ್ಯ ಬಿದ್ದರೆ ಪುರುಷರಂತೆ ಸ್ತ್ರೀಯರೂ ಸೈನಿಕರಾಗಿ ಸೇರಿ ಆಧುನಿಕ ಕ್ರಮಗಳನ್ನು ಯುದ್ಧಕಾರ್ಯಗಳನ್ನು ನಿರ್ವಹಿಸಬಲ್ಲರು. ಆದರೆ ಬಿಟ್ಟರೆ ಅವರು ಯುದ್ಧರಂಗಕ್ಕೆ ಹೋಗಿಯಾರೆ? ಹೋದರೆ ಪುರುಷರು ಅದನ್ನು ಒಪ್ಪಿಯಾರೆ?

ಸ್ತ್ರೀಯರನ್ನು ಯುದ್ಧರಂಗಗಳಿಗೆ ಕಳುಹಿಸಲಿಕ್ಕೆ ಯಾವ ನಾಗರಿಕ ಸರಕಾರವಾದರೂ ಒಪ್ಪೀತೆಂದು ನಾನು ಎಣಿಸುವದಿಲ್ಲ ಹಿಟ್ಲರ—ಮುಸಲೋನಿ ಸತ್ತೆಗಳು ನಡೆಯುವಲ್ಲಿ ಕೂಡ ಸರಕಾರಗಳು ಹೀಗೆ ಮಾಡಲಾರವು ಆದ್ದರಿಂದ ಅವರ ವಿಷಯದಲ್ಲಿ ಬಲತ್ಕಾರವು ಎಲ್ಲಿಯೂ ನಡೆಯಲಿಕ್ಕಿಲ್ಲ ಆದ್ದರಿಂದ ಹೆಂಗಸರಿಗೆ ಯುದ್ಧಮಾಡುವ ಇಚ್ಛೆ ಇದೆಯ? ಇದ್ದುದಾದರೆ ಪುರುಷರು ಅದಕ್ಕೆ ಒಪ್ಪಿಯಾರೆ?

ಎಂಬುದನ್ನು ಮಾತ್ರ ನಾವು ಆಲೋಚಿಸಬೇಕು ಹಿಟ್ಲರ ಮುಸಲೋನಿಯರು ಎಷ್ಟು ಮಾತ್ರಕ್ಕೂ ಸ್ತ್ರೀಯರನ್ನು ಯುದ್ಧರಂಗಗಳಿಗೆ ಕಳುಹಿಸಲಾರರು, ಮನೆಯೇ ಸ್ತ್ರೀಯರ ಕಾರ್ಯಕ್ಷೇತ್ರವಾಗಿರುವದೆಂದು ಅವರ ಪ್ರಕಟವಾಗಿ ಹೇಳಿದ್ದಾರೆ ಪುರುಷರನ್ನು ಹಡೆಯುವದೇ ಸ್ತ್ರೀಯರ ಕಾರ್ಯವೆಂದು ಅವರಂದಿದ್ದಾರೆ

ನಮ್ಮ ಜೀವಮಾನದಲ್ಲಿಯೇ ಇಂಗ್ಲಂಡಿನ ಸ್ತ್ರೀಯರ ಸ್ಥಿತಿಗತಿಗಳಲ್ಲಿ ಪರಿವರ್ತನೆಗಾಗಿವೆ. ಅವರು ಪ್ರತಿಯೊಂದು ಕ್ಷೇತ್ರದಲಿ, ಪ್ರತಿಯೊಂದು ವಿಷಯದಲ್ಲಿ ಪುರುಷರಿಗೆ ಸಮಾನರಾಗಿದ್ದಾರೆ ಅವರು ಜೀವನ ನಿರ್ವಾಹ ಅಥವಾ ಕಾಲಯಾಪನೆಗಾಗಿ ಯಾವ ವೃತ್ತಿ ಉದ್ಯೋಗವನ್ನು ಅವಲಂಬಿಸಬಹುದು. ಸ್ತ್ರೀಯರ ಹಕ್ಕು ಅಧಿಕಾರಗಳನ್ನೆಲ್ಲ ಇಂಗ್ಲಾಂಡಿನ ಪುರುಷರು ಒಪ್ಪಿದ್ದಾರೆ ಆದರೂ ಕೂಡ ಸ್ತ್ರೀಯರು ಕೊಲೆಗಡುಕರಾಗಬೇಕೆಂದು ಪುರುಷರು ಎಷ್ಟು ಮಾತ್ರಕ್ಕೂ ಒಪ್ಪಲಾರರು ವಿದೇಶೀ ಶತ್ರುಗಳು ಬಂದು ಇಂಗ್ಲಂಡನ್ನು ಮುತ್ತಿದುದಾದರೆ ಇಂಗ್ಲಂಡಿನ ಪುರುಷರು ತಮ್ಮ ಪ್ರಾಣಕೊಟ್ಟಾದರೂ ದೇಶದ ಸ್ವಾತಂತ್ರ್ಯಕ್ಕಾಗಿ ಕಾದುವದು ನಿಶ್ಚಯ ಪರಂತು ತಮ್ಮೊಟ್ಟಿಗೆ ಸ್ತ್ರೀಯರು ಯುದ್ಧಕ್ಕೆ ಹೋಗುವದನ್ನು ಮಾತ್ರ ಎಷ್ಟು ಮಾತ್ರಕ್ಕೂ ಒಪ್ಪಲಾರರು ಯಾಕಂದರೆ ಇಂಗ್ಲಂಡಿನ ಪುರುಷರು ಅಲ್ಲಿಯ ಸ್ತ್ರೀಯರನ್ನು ಆದರ, ಗೌರವಗಳಿಂದ, ಕಾಣುತ್ತಾರೆ, ಅವರನ್ನು ದೇವಿಯರಂತೆ ಪೂಜಿಸುತ್ತಾರೆ

ಆದ್ದರಿಂದ ಮುಂದಿನ ಮಹಾಯುದ್ಧದಲ್ಲಿ ಕಾದಲಿಕ್ಕೆ ಸ್ತ್ರೀಯರು ಬೇಕಾದಷ್ಟು ಶಕ್ತಿ ಸಾಮರ್ಥ್ಯಗಳನ್ನು ಪಡೆದಿರುತ್ತಾರಾದರೂ, ಅವರು ಯುದ್ಧಕ್ಕೆ ಹೋಗುವ ಸಂಭವವಿರುವದಿಲ್ಲವೆಂದು ಧಾರಾಳವಾಗಿ ಹೇಳಬಹುದು

ಬೆಂಗಳೂರು ಬೇಂಕ್: ಲಿಕ್ವಿಡೇಶನಿಗೆ ಸಿದ್ಧತೆ

ಈ ಬೇಂಕಿನ ಮಾಜಿ ಏಜಂಟರು, ಮಾಜಿ ಚೆಯರ್ಮೇನರು, ಮಾಜಿ ಸಬ್ ಏಜಂಟರು ಮೊದಲಾದ ಮಾಜಿಗಳು ಸೇರಿ, ಬೇಂಕನ್ನು ಮುಕ್ತಾಯಗೊಳಿಸಬೇಕೆಂದು ಕೋರ್ಟಿಗೆ ಅರ್ಜಿಮಾಡಿರುವರು. ಅದಕ್ಕಾಗಿ ಈಗ ಬೇಂಕಿಗೆ ಸಂಬಂಧಪಟ್ಟವರನ್ನು ಕೂಡಿಸಿ, ಈಗಿನ ಪ್ರೆಸಿಡೆಂಟರು ಎಲ್ಲ ವಿಷಯಗಳನ್ನು ವಿವರಿಸಿ, ಬೇಂಕು ನಾಲ್ಕು ವರ್ಷಗಳೊಳಗೆ ಸಂಪನ್ನವಾಗುವ ಹಾಗಿರುವ ವಸೂಲಾಗಲಿಕ್ಕಿರುವ ಎಲ್ಲ ಸಾಲಗಳನ್ನು ಕುರಿತಾಗಿ ಅಂಕೆಸಂಖ್ಯೆಗಳನ್ನು ಹೊರಗೆಡಹಿದರು ಐವತ್ತು ರೂಪಾಯಿಗೆ ಒಳಪಟ್ಟು ಡಿಪಾಜಿಟುಗಳನ್ನು ಈಗಲೇ ಹಿಂತೆರುವುದಾಗಿಯೂ, ಮಿಕ್ಕವರಿಗೆ 50 ರೂಪಾಯನ್ನು ಈಗಲೇ ಉಳಿದುವನ್ನು ನಾಲ್ಕು ವರ್ಷ ಪಾಯಿದೆಗೆ ರಿವಣಾತಿಯಾಗಿಟ್ಟುಕೊಂಡು ಸೇಕಡಾ 3½ರಿಂದ 4ರ ಸಲೆ ಬಡ್ಡಿಸಮೇತ ಯಥಾಕಾಲದಲ್ಲಿ ಹಿಂತೆರುವ ಹಾಗೂ ಒಂದು ವ್ಯವಸ್ಥೆ ಮಾಡೋಣವೆಂದು ಅಧ್ಯಕ್ಷರೆಂದರು. ಅಂತೂ ಮುಕ್ತಾಯವಾಗವುದು ಬೇಡವೆಂದೂ, ಆದರೆ ಈ ವ್ಯವಸ್ಥಾಕ್ರಮವನ್ನು ಸರ್ವಪಾಲುಗಾರರೇ ಮೊದಲಾದವರಿಗೆ ವಿವರಿಸುವ ಪತ್ರಿಕ ಹಂಚಬೇಕೆಂದೂ, ನಿರ್ಧಾರವಾಯಿತು.

ಮೈಸೂರು ಸರಕಾರವು, ಈ ಬೇಂಕಿನ ಅಧೀನತೆಯಲ್ಲಿದ್ದ ಚರ್ಮ ಹದ ಮಾಡುವ ಕಾರ್ಖಾನೆಯನ್ನು ಸಾರ್ವಜನಿಕ ಲಿಮಿಟೆಡ್ ಸಂಸ್ಥೆಯಾಗಿ ನಡಿಸುವುದಾಗಿಯೂ, ಈ ಬೇಂಕಿಗೆ ಒಂದು ಲಕ್ಷರೂಪಾಯಿಗಳನ್ನು ತೆರುವುದಾಗಿಯೂ ಪ್ರಕಟವಾಗಿದೆ

ಇದೂ ಒಂದು ಕಂಪೆನಿ!

ಮೆಹತನೆಂಬಾತನು ಮಾರವಾಡಿ, ಸೂರತ್ತಿನವನು ಹೊಸಪೇಟೆ ಸಕ್ಕರೆ ಕಾರ್ಖಾನೆಯನ್ನು 1933ರಲ್ಲಿ ಇವನು ಸ್ಥಾಪಿಸಿದನು ಇವನ ಪಾಲುಗಾರ ಆರ್ ನರಸಿಂಗ್ರಾವ್,—ಕಾರ್ಖಾನೆಯ ಮೆನೆಜಿಂಗ್ ಏಜಂಟರ ಪಾಲುಗಾರ ಮೆನೆಜಿಂಗ್ ಏಜಂಟ್ಸ್, ಜೊನ್ಸನ್ ಎಂಡ್ ಕೋ, ಎಂದರೆ ಇವರಲ್ಲದೆ ಮೆಹತಾನ ಹೆಂಡತಿ, ಮೆಹತಾನ ತಾಯಿ, ಅವನ ಮಗ, ನರಸಿಂಗರಾವನ ಹೆಂಡತಿ ಇವರುಳ್ಳ ಒಂದು ಸಂಘ ಈ ಜೊನ್ಸನ್ ಕಂಪೆನಿಗೂ ಈಸ್ಟನ್ ಅಂಡರರಾಯಿಟರ್ಸ್ ಸಿಂಡಿಕೇಟಿಗೂ ಒಂದು ಕರಾರಾಗಿತ್ತು ಈ ಸಿಂಡಿಕೇಟು ಸಂಸ್ಥೆಯೆಂದರೆ ಮೆಹತಾ ಮಾತ್ರ ಮೆಹತಾನೂ ನರಸಿಂಗ್ರಾವನೂ ಠಾಕೂರ್ ಕಂಪೆನಿಗೆ 69000 ರೂಪಾಯಿಗಳನ್ನು ಕಾರ್ಖಾನೆಗಾಗಿ ಬೇಕಿನ ಸಾಮಾನುಗಳಿಗೆ ತೆತ್ತರೆಂದು ಹೇಳಿಕೆ ಠಾಕೂರ್ ಕಂಪೆನಿಯೆಂಬುದು ಇಲ್ಲವಾಗಿದೆ

ಈಗ ಬಳ್ಳಾರಿಯಲ್ಲಿ ವ್ಯಾಜ್ಯವೆದ್ದಿದೆ. ಕಂಪನಿಯಾದ ಆರಂಭಿಂಗಳಲ್ಲಿ ಲೆಕ್ಕತನಿಖೆಯಾಗಿ ಇದೆಲ್ಲ ಹೊರ ಬಿದ್ದ ಕಾರಣ, ಎಲ್ಲ ರಶೀದಿಗಳನ್ನೆ ಹುಡಲಾಗಿ ಸೃಷ್ಟಿಸಿದ ಆಪಾದನೆ ಬಂದ ಇವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ

ಒಬ್ಬೊಬ್ಬನು, ಒಂದೊಂದು ಕುಟುಂಬ ಸೇರಿ, ಭಾರೀ ಕಂಪನಿಗಳಾಗಿರುವಲ್ಲಿ ಎಲ್ಲ ಈ ಬಗೆಯ ಗಡಿಬಿಡಿಗಳಿಗೆ ಅವಕಾಶವುಂಟು ಲೆಕ್ಕ ತನಿಖೆಯಾದುದೇ ಸ್ಪಷ್ಟವಾಗುತ್ತದೆ

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಔಷಧದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು:— **ಕೇಸರಿ ಕುಟೀರಂ, ಮದರಾಸು.**

ಆತ್ಮವಿಕ್ರಯ

ಬರೆದವರು
ಬಿ. ಆರ್ ಕಾಮತ್

ಕೆಲವು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಕೃಷ್ಣ ಶೆಟ್ಟರೆಂಬ ಬಂಗಾರದ ವ್ಯಾಪಾರಿಗಳಿದ್ದರು. ಸರಾಫ ಕೃಷ್ಣ ಶೆಟ್ಟರೆಂದೊಡನೆ ಎಲ್ಲರಿಗೂ ತಿಳಿಯುತ್ತಿತ್ತು. ಆಗ ಅವರು ದೊಡ್ಡ ವಜ್ರದ ವ್ಯಾಪಾರಿಗಳು; ಎಷ್ಟು ಬಂಗಾರವನ್ನು ತಂದು ಕೊಟ್ಟರೂ ತೆಗೆದುಕೊಳ್ಳುತ್ತಿದ್ದರು. ಅವರ ಕುಟುಂಬದವರಿಗೆ ಅವರು ಗಳಿಸಿಟ್ಟ ಹಣವೂ, ಅವರ ವೃತ್ತಿಯೂ ಈಗ ಇಲ್ಲದಿದ್ದರೂ, ಅವರ ಆ ಒಂದುಮಣೆಯಷ್ಟು ದೊಡ್ಡ ಒರೆಗಲ್ಲು ಪರಹಸ್ತಗತವಾಗದೆ, ಪಿತ್ರಾರ್ಜಿತ ಸೊತ್ತಾಗಿ ಈಗಲೂ ಕುಟುಂಬದಲ್ಲೇ ಇದೆ. ಆದರೆ ಮೊನ್ನೆ ತಾನೆ ಅದರಿಂದ ಏನಾದರು ಪ್ರಯೋಜನ ಹೊಂದಬೇಕೆಂದು, ಅದನ್ನು ಕಡೆಯುವ ಕಲ್ಲಾಗಿ ಮಾರ್ಪಾಡಿಸಿರುವರು

ಆ ಒರೆಗಲ್ಲೆಂದರೆ ಬಹಳ ಹೆಸರು ಪಡೆದ ವಸ್ತು. ಬಂಗಾರವನ್ನು ಪರೀಕ್ಷಾರ್ಥವಾಗಿ ಕೃಷ್ಣ ಶೆಟ್ರು ಒಮ್ಮೆ ಆ ಕಲ್ಲಿಗೆ ತಿಕ್ಕಿದರೆಂದರೆ, ಕನಿಷ್ಠ ಪಕ್ಷಕ್ಕೆ ಅವರಿಗೆ ಒಂದು ಚಿಕ್ಕ ಲಾಭವಿತ್ತು. ಆದುದರಿಂದ ಈಗಲೂ ಎಲ್ಲಿಯಾದರೂ ಕೃಷ್ಣ ಶೆಟ್ರ ಕುರಿತು ಮಾತುಕತೆ ಬಂದರೆ, ಅವರ ಒರೆಗಲ್ಲಿನ ಸ್ಮರಣೆ ಮಾಡಲು ಯಾರೂ ಮರೆಯುವುದಿಲ್ಲ. ಅವರ ಕಾಲದಲ್ಲಿ ಸರಾಫ ಕೃಷ್ಣ ಶೆಟ್ರು ಎಂದು ಹೇಳುವ ಬದಲು ಜನರು ಅವರನ್ನು 'ಸರ್ಪ ಶೆಟ್ರು' ಎಂದು ಅಕ್ಕರೆಯಿಂದ ಕರೆಯುತ್ತಿದ್ದರು.

ಸರಾಫ ಕಟ್ಟೆಯನ್ನು ಇಟ್ಟ ಸ್ವಲ್ಪ ಸಮಯದಲ್ಲೇ ಕೃಷ್ಣ ಶೆಟ್ರು ತುಂಬಾ ಹಣವನ್ನು ಸಂಗ್ರಹಿಸಿಟ್ಟರು. ಅವರ ಹೆಸರು ಊರ ಮೂಲೆ ಮೂಲೆಗಳಿಗೂ ಮುಟ್ಟಿತು. ಎಲ್ಲಿಯಾದರೂ ವರ್ಧಂತ್ಯುತ್ಸವಗಳಿದ್ದರೆ ಕೃಷ್ಣ ಶೆಟ್ರಿಗೆ ಆಮಂತ್ರಣವಿಲ್ಲದೆ ಇಲ್ಲ, ಸತ್ಕಾರ ಕೂಟಗಳಿದ್ದರೆ ಅಲ್ಲಿಯೂ ಕೃಷ್ಣ ಶೆಟ್ರು ಕಾಣಸಿಗುವರು. ಮುನಿಸಿಪಾಲಿಟಿಯಲ್ಲಿ ಒಂದು ಸೀಟಂತು ಅವರಿಗಾಗಿಯೇ ಕಾದಿಡಲ್ಪಡುತಿತ್ತು. ಚುಟುಕಿನಲ್ಲಿ ಹೇಳುವುದಾದರೆ ಕೃಷ್ಣ ಶೆಟ್ರ ಕೀರ್ತಿ ಧ್ವಜವು ಮಂಗಳೂರಿನಲ್ಲಿ ಎಲ್ಲೆಡೆಯಲ್ಲೂ ಹಾರಾಡ ತೊಡಗಿತು

ಕಾಲಾನುಕ್ರಮದಲ್ಲಿ ಕೃಷ್ಣ ಶೆಟ್ರ ವ್ಯಾಪಾರವು ಕಳೆಗುಂದುತ್ತ ಬಂದಿತು. ಇತ್ತೀಚೆಗೆ ಯಾರೂ ಅವರಲ್ಲಿ ವ್ಯಾಪಾರಕ್ಕಾಗಿ ಬರುತ್ತಿದ್ದಿಲ್ಲ. ಪ್ರತಿಯೊಬ್ಬರೂ ಅವರ ಹೆಸರು ಬಿದ್ದೊಡನೆ "ಕೃಷ್ಣ ಸರ್ಪ ಮಹಾರಾಯಾ ಅದು. ಹತ್ತರ ಹೋದರೆ ಕಚ್ಚುತ್ತದೆ!" ಎನುತ್ತಿದ್ದರು.

ಒಂದು ದಿನ ತನ್ನ ವ್ಯಾಪಾರವನ್ನು ಕಾಪಾಡುವುದಕ್ಕಾಗಿ ಕೃಷ್ಣ ಶೆಟ್ರಿಗೆ ಹತ್ತು ಸಾವಿರ ರೂಪಾಯಿಗಳ ಅಗತ್ಯ ಬಿತ್ತು. ಅಂದು ಅಂಗಡಿಗೆ ಹೋಗದೆ, ಅಷ್ಟು ರೂಪಾಯಿಯನ್ನು ಹೇಗೆ ಪಡೆಯುವುದೆಂದು ಅವರ ಮನೆಯಲ್ಲೇ ಒಂದು ಈಸೀಚೇರಿನ ಮೇಲೆ ಕುಳಿತು ಆಲೋಚಿಸತೊಡಗಿದರು. ಹೀಗೆ ಬಹಳ ಹೊತ್ತಿನ ತನಕ ಎಷ್ಟು ಆಲೋಚಿಸಿದರೂ ಯಾವುದೂ ಉಪಾಯ ತೋಚದೆ, ಬಳಿಯಲ್ಲಿದ್ದ ಒಂದು ಪುಸ್ತಕವನ್ನು ತೆಗೆದು ಅವರು ಓದ ತೊಡಗಿದರು. ಅದೊಂದು ಯಕ್ಷಿಣೀ ವಿದ್ಯೆಯ ಪುಸ್ತಕವಾಗಿತ್ತು. ಪುಸ್ತಕವನ್ನು ತೆರೆದು ಅವರು ಓದ ತೊಡಗಿದರು. ಪಾಕ ಶಾಸ್ತ್ರದ ಕುರಿತು ಅದರಲ್ಲಿ ತುಂಬಾ ಅನುಭವವು ಕೊಡಲ್ಪಟ್ಟಿತ್ತಲ್ಲದೆ, ಅಲ್ಲಲ್ಲಿ ಪ್ರಿಯಾಗಮ್ಮನವರ (ಕೃಷ್ಣ ಶೆಟ್ರ ಸಹ ಧರ್ಮಿಣಿ) ಟೀಕಾತ್ಮಕ ಸೂಚನೆಗಳೂ ಇದ್ದುವು. ಅದನ್ನು ಓದಿ, ಪುಸ್ತಕವು ಏನೋ ಪಾಕ ಶಾಸ್ತ್ರವಾಗಿರಬೇಕೆಂದು ಬಗೆದರವರು.

"ಎರಡು ಜೇಡರ ಹುಳಗಳ ರಸವನ್ನು ತೆಗೆದು ಒಂದು ಹೆಣ್ಣು ಗೂಬೆಯ ಗರ್ಭಕೋಶವನ್ನು ಒಣಗಿಸಿ ಅದರೊಡನೆ ಅರೆದು" ಎಂಬುದೇ ನಂತರ ಅವರ ಕಣ್ಣಿಗೆ ಬಿದ್ದ ವಿಷಯ. ಇದೇನು ವಿಚಿತ್ರವೆಂದು ಅವರು ಆ ಪುಟದ ಮೇಲ್ಗಡೆಯಲ್ಲಿ ನೋಡಲು "ಪ್ರೇಮ ವಶೀಕರಣ" ಎಂದು ದಪ್ಪ ಅಕ್ಷರಗಳಿಂದ ಬರೆದುದು ಅವರಿಗೆ ಗೋಚರಿಸಿತು. ಪರಂತು ಆಗ ಅವರಿಗೆ ಪ್ರೇಮ ಪ್ರಸಂಗದಲ್ಲಿ ಆಸಕ್ತಿಯಿಲ್ಲದುದರಿಂದ ಮುಂದೇನಿದೆಯೆಂಬ ಕುತೂಹಲದಿಂದ ಪುಸ್ತಕದ ಪುಟಗಳನ್ನು ಅವರು ಒಂದೊಂದಾಗಿ ಮಗುಚತೊಡಗಿದರು. ಒಂದು ಪುಟದ ಮೇಲೆ "ಸೈತಾನನಿಗೆ ನಿಮ್ಮ ಆತ್ಮವನ್ನು ಮಾರುವುದೆಂತು?" ಎಂದು ಬರೆದಿತ್ತು. ಅವರು ಅದನ್ನು ಓದಿದರು. ಸೈತಾನನಿಗೆ ಆತ್ಮವನ್ನು ಮಾರಿ ಸಂಪತ್ತನ್ನು ಗಳಿಸಿದ ಅನೇಕ ಕತೆಗಳನ್ನೂ, ಕೊಂಬಿರುವ ಬಾಲವಿರುವ ಭೂತಾದಿಗಳ ಅದ್ಭುತ ಸಾಹಸದ ಕತೆಗಳನ್ನೂ ಓದಿ ಅವರು ತಿಳಿದುಕೊಂಡರು

ಹೀಗೆ ಓದುತ್ತಾ ಸಮಯ ಕಳೆದುದು ಕೃಷ್ಣ ಶೆಟ್ರಿಗೆ ತಿಳಿಯಲೇ ಇಲ್ಲ. ಅವರ ಮಡದಿ ಪ್ರಿಯಾಗಮ್ಮನವರು ಗಂಡನು ಅಂಗಡಿಗ ಹೋಗದೆ ಇದ್ದುದನ್ನು ನೋಡಿ ಬಾಗಿಲಿನ ಬಳಿಯಲ್ಲಿ ಬಂದು ನಿಂತು 'ಅಲ್ಲೇನು ಮಾಡುತ್ತಿರುವಿರಿ? ಅಂಗಡಿಗೆ ಹೋಗುವುದಿಲ್ಲವೆ? ಗೊತ್ತಾಯಿತು' ಎಂದರು. ಅದಕ್ಕುತ್ತರವಾಗಿ ತಾನು ತನ್ನ ಆತ್ಮವನ್ನು ಸೈತಾನನಿಗೆ ಮಾರಲಿದ್ದೇನೆಂದು ಕೃಷ್ಣ ಶೆಟ್ರು ಅಂದರು. ಆಗ ಪ್ರಿಯಾಗಮ್ಮನವರು, "ಅಂಗಡಿಗೆ ಹೋಗಿ ಸ್ವಲ್ಪ ಬಂಗಾರವನ್ನಾದರೂ ಮಾರಬಾರದೆ?" ಎಂದರು. ಕೃಷ್ಣ ಶೆಟ್ರು ಆಗ ಕೋಪದಿಂದ, 'ನಿನಗೆ ಎಷ್ಟು ಸಲ ಹೇಳಲಿ, ಈಗ ಬಂಗಾರವನ್ನು ಕೊಂಡುಕೊಳ್ಳುವವರು ಇಲ್ಲವೆಂದು. ಅಂಗಡಿಗೆ ನೊಣ ಹೊಡೆಯುವುದಕ್ಕಿಂತ ಮನೆಯಲ್ಲೇ ಇದ್ದು ಹಣ ಸಂಪಾದಿಸುವುದು ಎಷ್ಟೋ ಮೇಲಲ್ಲವೆ? ಆದುದರಿಂದ ಬಾಗಿಲನ್ನು ಮುಚ್ಚಿ ನಡೆ ಇಲ್ಲಿಂದ ನನಗೆ ಕೆಲಸವಿದೆ" ಕೃಷ್ಣ ಶೆಟ್ರು ಅರ್ಭಟಿಸಿದರು. ಪ್ರಿಯಾಗಮ್ಮನವರು ನಾಸಿಕ ರಂಧ್ರಗಳ ಮುಖಾಂತರ ಭೋರ್ಗರೆದು, ಬಾಗಿಲು ಮುಚ್ಚಿ ಹೊರಟು ಹೋದರು

ಹೆಂಡತಿಯೊಡನೆ ತಾನು ಆತ್ಮ ವಿಕ್ರಯ ಮಾಡಲಿರುವೆನೆಂದು ಹೇಳುವಾಗ ಕೃಷ್ಣ ಶೆಟ್ರು ತಾನು ಮುಂದೆ ಏನು ಮಾಡಬೇಕೆಂದು ನಿಶ್ಚೈಸಿಲ್ಲವಾದರೂ, ಅವರ ಅರ್ಧಾಂಗಿಯಾದ ಪ್ರಿಯಾಗಮ್ಮನವರು ಬಾಗಿಲು ಮುಚ್ಚಿ ತೆರಳುವಾಗ ಬೀರಿದ ಆ ತಿರಸ್ಕಾರ ವ್ಯಂಜಕ ಅರೆನೋಟವು ಅವರ ಹೃದಯದಲ್ಲೊಂದು ದೃಢ ನಿಶ್ಚಯದ ಮುದ್ರೆಯನ್ನೊತ್ತಿ ಬಿಟ್ಟಿತು. ಆದುದರಿಂದ ಅವರು ಆ ಪುಟದಲ್ಲಿ ಹೇಳಿದ ವಿಷಯಗಳನ್ನೆಲ್ಲಾ ಪುನಃ ಓದಿದರು. ಸ್ವಲ್ಪ ಕರ್ಪೂರವನ್ನು ಹೊತ್ತಿಸಿ ಕೋಣೆಯ ಮೂಲೆಗಳಲ್ಲಿ ಇಟ್ಟರು

ನಂತರ ಅವರು ರಂಗದಲ್ಲಿ ಬರೆದಂತೆ ನೆಲದ ಮೇಲೆ ಏನೇನೂ ಗೆರೆಗಳನ್ನು ಎಳೆದರು. ಬಳಿಕ ನಡುವೆ ನಿಂತು, ಪುಸ್ತಕವನ್ನು ತೆರೆದು ಅದರಲ್ಲಿದ್ದ ಮಂತ್ರಗಳನ್ನು ಗಟ್ಟಿಯಾಗಿ ಉಚ್ಚರಿಸ ತೊಡಗಿದರು. ಸೈತಾನನಿಗೆ ಸರಿಯಾಗಿ ಕೇಳಿಸಬೇಕೆಂದು ಅವರು ಎಷ್ಟು ಹೊತ್ತಾದರೂ ಸ್ವರವನ್ನು ತಗ್ಗಿಸಲಿಲ್ಲ. ಆಗಲೆ ಅವರ ಶ್ರೀಮತಿಯು ಬಾಗಿಲು ತೆರೆದು, ತಲೆಯನ್ನು ನೀಡಿ, ಒಳಗೆ ಇಣಿಕಿ ನೋಡಿದಳು.

"ಲೇ, ಬಾಗಿಲು ಮುಚ್ಚು. ನಾನು ಏನು ಮಾಡುತ್ತಿರುವೆನೆಂದು ಈ ಮೊದಲೇ ನಿನಗೆ ತಿಳಿಸಿರುವೆನು." ಕೃಷ್ಣ ಶೆಟ್ರು ಒದರಿದರು. "ನನಗೆ ಕರ್ಪೂರ ಪರಿಮಳ ಬಂತು." ಪ್ರಿಯಾಗಮ್ಮನವರೆನ್ನಲು "ಸರಿಸರಿ ಸೈತಾನನನ್ನು ಆಹ್ವಾನಿಸಲು ನಾನದನ್ನು ಉರಿಸಿದಾಗಿರುತ್ತದೆ" ಕೃಷ್ಣ ಶೆಟ್ರ ಉತ್ತರ ಹೊರಟಿತು. "ನೀವು ಸೈತಾನನನ್ನು ಆಹ್ವಾನಿಸುತ್ತಿರುವಿರಾದರೆ ಈ ಮನೆಯಲ್ಲಿ ಬೇಡ. ಬಚ್ಚಲು ಕೊಟ್ಟಿಗೆಗೆ ಹೋಗಿ ಅಲ್ಲಿ ನಿಮ್ಮ ಮಂತ್ರ ಮಾಟಗಳನ್ನೆಸಗಬಾರದೆ?" ಎಂದುಸುರಿ ಪ್ರಿಯಾಗಮ್ಮನವರು ಮೂಗು ಮುರಿದು, ಬಾಗಿಲು ಮುಚ್ಚಿದರು. ಕೃಷ್ಣ ಶೆಟ್ರು ಪುನಃ ಎಲ್ಲವನ್ನೂ ಮೊದಲಿನಿಂದಲೂ ಪ್ರಾರಂಭಿಸಿದರು

ಮಂತ್ರ ಮಾಟಗಳೆಲ್ಲ ಮುಗಿದರೂ ಏನೂ ಸಂಭವಿಸಲಿಲ್ಲ. ಗುಡುಗಾದುದಿಲ್ಲ, ಮಿಂಚು ಹೊಳೆದುದಿಲ್ಲ. ಹೊಗೆ ಎದ್ದುದಿಲ್ಲ. ಕರ್ಪೂರದ ಪರಿಮಳ ಮಾತ್ರ ಕೋಣೆ ತುಂಬ ಹಬ್ಬಿತು. ಕೆಲ ಸಮಯದ ತನಕ ದಿಗ್ಭ್ರಾಂತರಂತೆ ಕೃಷ್ಣ ಶೆಟ್ರು ಪುಸ್ತಕವನ್ನು ಹಿಡಕೊಂಡು ಕೋಣೆಯ ಮಧ್ಯದಲ್ಲಿ ನಿಂತುಬಿಟ್ಟರು. ಬಳಿಕ ಮರುದಿನ ಹೆಂಡತಿಯು ಬೈಗಳನ್ನು ಕೇಳಲಿಚ್ಛೆಯಿಲ್ಲದೆ, ಕೋಣೆಯನ್ನು ಗುಡಿಸಿ ಚೊಕ್ಕಟ ಮಾಡಿದರು

ಆಗಲೆ ಟೆಲಿಫೋನ್ ಗಂಟೆಯು ಕೂಗಿತು. ಶೆಟ್ರು ಬಳಿಗೆ ಹೋಗಿ 'ಏನು' ಎಂದರು. "ಕೃಷ್ಣ ಶೆಟ್ರೆ ನೀವು?" ದೂರದ ಸ್ವರ ವಿಚಾರಿಸಿತು 'ಹೌದೆಂದರು ಶೆಟ್ರು. ನನ್ನ ಹೆಸರು ಸೈತಾನ. ನನಗೆ ತುಂಬಾ ಕೆಲಸವಿದ್ದುದರಿಂದ ಈ ಮೊದಲು ಮಾತನಾಡಲಾಗಲಿಲ್ಲ. ನಾನು ನಾಳೆ ಬಂದರೆ ಆಗಬಹುದೆ?' ದೂರದ ವ್ಯಕ್ತಿ ವಿಚಾರಿಸಿತು 'ಆಗಬಹುದು' ಶೆಟ್ರು ಸಂತೋಷದಿಂದ ಅಂದರು

ದೂರದಿಂದ ಯಾರೋ ತನ್ನ ಹೆಸರು ಸೈತಾನನೆಂದು ಹೇಳಿದ್ದರೂ ಸೈತಾನನ ಸಿದ್ಧಿಯಲ್ಲಿದ್ದ ಶೆಟ್ರಿಗೆ ಅದು ಸೈತಾನನೆಂದೇ ಕೇಳಿಸಿತು. ಇನ್ನು 24 ತಾಸುಗಳಲ್ಲಿ ತಾನು ಸೈತಾನನನ್ನು ಕಂಡು ತನ್ನ ಇಷ್ಟಾರ್ಥಸಿದ್ಧಿ ಮಾಡಿಕೊಳ್ಳಬಹುದೆಂದು ಅವರು ಹಿಡಿಯಲಾರದಷ್ಟು ಹಿಗ್ಗಿದರು

ಆ ದಿನ ರಾತ್ರೆ ಶೆಟ್ರ ತಲೆಯಲ್ಲೆಲ್ಲಾ ಸೈತಾನನ ವಿಷಯವೇ ತುಂಬಿದ್ದುದರಿಂದ ಅವರಿಗೆ ಜಾಗರಣವಾಯಿತು. ಆದುದರಿಂದ ಮರುದಿನ ಅವರು ಎದ್ದು ಅಂಗಡಿಗೆ ಹೋಗುವಾಗ ಎಂದಿನಂತೆ ಸ್ವಲ್ಪ ತಡವಾಯಿತು. ಅವರು ಆಫೀಸಿಗೆ ಹೋಗಿ ಕೂತುಕೊಂಡಿದ್ದರೋ ಇಲ್ಲವೋ ಅಷ್ಟರಲ್ಲಿ ಅವರ ಕಾರಕೂನನೊಬ್ಬನು ಬಂದು ಯಾರೋ ಮೂವರು ಶೆಟ್ರ ದರ್ಶನಾರ್ಥವಾಗಿ ಬಂದಿರುವರೆಂದು ತಿಳಿಸಿದನು.

'ಅವರು ಹೇಗಿರುವರು?' ಕೃಷ್ಣ ಶೆಟ್ರು ಆತುರದಿಂದ ವಿಚಾರಿಸಿದರು. 'ಅವರಲ್ಲಿ ನನಗೆ ಒಬ್ಬರ ಪರಿಚಯವೂ ಇಲ್ಲ. ಮನುಷ್ಯರಂತೆ ಇರುವರು' ಕಾರಕೂನನೆಂದ. ಸೈತಾನನು ತನ್ನ ಹೆಸರನ್ನು ಬೇರೆಯವರಿಗೆ ತಿಳಿಸುವನೆ? ಇಲ್ಲವೆ ತನ್ನ ನಿಜ ಸ್ವರೂಪಿನಲ್ಲಿ ಬರುವನೆ? ಎಂದೂಹಿಸಿ ಶೆಟ್ರು ಮುಗುಳ್ನಕ್ಕು ಅವರನ್ನು ಒಳಗೆ ಬರುವಂತೆ ಹೇಳಲು ಅಪ್ಪಣೆಯಿತ್ತರು.

ಆ ಮೂವರಲ್ಲಿ ಒಬ್ಬರು ಒಳಗೆ ಬಂದರು. ಅವರ ದೀರ್ಘಾಕಾರ, ಎಣ್ಣೆಕಪ್ಪು ಮೈಬಣ್ಣ, ಕೆಂಪು ಮೂಗನ್ನು ಕಂಡ ಶೆಟ್ರು ಅವನೇ ಸೈತಾನನಾಗಿರಬೇಕೆಂದು ಊಹಿಸಿದರು. ಆದುದರಿಂದ ಅವರು ಆತನಿಗೆ ನಮಸ್ಕರಿಸಿ, ಪ್ರತಿಯಾಗಿ ದೊರೆತ ನಮಸ್ಕಾರವನ್ನು ಕಿಸೆಯಲ್ಲಿ ತುರುಬಿ ಮುಗುಳ್ನಕ್ಕರು. ಬಂದ ವ್ಯಕ್ತಿಯು 'ಏನು ಶೆಟ್ರೆ, ನೀವು ಮಾರುವುದು ಖಂಡಿತವಷ್ಟೆ' ಎಂದಿತು. 'ಖಂಡಿತವೆಂದರು ಶೆಟ್ರು. ಈಗ ದರವಿಳಿದಿದೆಯೆಂದು ಎಲ್ಲರೂ ಹೇಳುತ್ತಿರುವುದರಿಂದ ನನಗೆ ಈಗ ವ್ಯಾಪಾರ ಮಾಡಲು ಹೆದರಿಕೆಯಾಗುತ್ತಿರುವುದು.' ಆದರೂ ನನಗೆ ಒಟ್ಟು 6000 ರೂಪಾಯಿಗಳದ್ದು ಬೇಕು'

'ಅರೇರೆ? ಹತ್ತು ಸಾವಿರ ರೂಪಾಯಿ ಮಾಡಿ.' ಶೆಟ್ರು ಅಂದರು. ಹತ್ತು ಸಾವಿರ ರೂಪಾಯಿಯಿದ್ದರೆ ತನ್ನ ಮಾನ ಉಳಿಸಲು ಶೆಟ್ರಿಗೆ ಅಂದೇ ಸಾಕು. ಆದುದರಿಂದಲೇ ಹೆಚ್ಚು ಹೇಳದೆ, ಅವರು ಹತ್ತೆಂದುದು. ಆದರೆ ಆ ಉದ್ದ ಮನುಷ್ಯನು ಈಗ ಧಾರಣೆ ಬಿದ್ದಿರುವುದೆಂದೂ ಇನ್ನು ಏರುವುದು ಅಸಂಭವನೀಯವೆಂದೂ ಏನೋ ಉದ್ದುದ್ದ ಮಾತನಾಡಿದನು. 'ಆದಿರಬಹುದು' ಶೆಟ್ರು ಪ್ರತ್ಯುತ್ತರವಿತ್ತರು. 'ನೀವು ಹತ್ತು ಸಾವಿರಕ್ಕೆ ಕೊಂಡುಕೊಳ್ಳಬೇಕು ಒಂದು 'ಪೈ ಕಮ್ಮಿಯಾಗಲಿಕ್ಕಿಲ್ಲ' 'ಆರೇ ಸಾವಿರ' ಆ ವ್ಯಕ್ತಿ ಅಂದಿತು. 'ಒಂಭತ್ತು ಸಾವಿರ, ಆಗಬಹುದಾದರೆ ಕೊಂಡುಹೋಗಿ' ಶೆಟ್ರು ವಾದಿಸಿದರು. 'ಆರುವರೆ ಸಾವಿರ ಇದೇ ನನ್ನ ಕಡೆಯ ಮಾತು' ಉದ್ದ ಮನುಷ್ಯನು ಖಂಡಿತ ನುಡಿದನು

ಅಂತೂ ಇಂತೂ ಏಳು ಸಾವಿರವೆಂದು ಇತ್ಯರ್ಥಿಸಲ್ಪಟ್ಟು ಉದ್ದ ಮನುಷ್ಯನು ಚೆಕ್ಕು ಬರೆದು ಶೆಟ್ರ ಕೈಯಲ್ಲಿಟ್ಟು 7000ದ ಬಂಗಾರವನ್ನು ತೂಕಮಾಡಿ ನಮ್ಮ ಆಫೀಸಿಗೆ ಕಳುಹಿಸಿಕೊಡಿ 'ಪೇಟೆ ಧಾರಣೆಗಿಂತ 12 ಆಣೆ ಹೆಚ್ಚು' ಎಂದನು. 'ಏನು ನೀವು ಸೈತಾನನಲ್ಲವೆ?' ಶೆಟ್ರು ಆಶ್ಚರ್ಯದಿಂದ ಪ್ರಶ್ನಿಸಿದರು. ಆಗ ಆ ವ್ಯಕ್ತಿಯು ನಕ್ಕು 'ನಾನು ಭಟ್ಯಾ ಬ್ರದರ್ಸ್‌ನವರ ಸಂಸ್ಥೆಯ ಏಜಂಟನು. ನಿಮ್ಮದು ಬಹಳ ಉಪಕಾರವಾಯಿತೆಂದು ನಮಸ್ಕರಿಸಿ ಎದ್ದಿತು.

'ಇರಲಿ. ಹೀಗಾದುದು ಒಳ್ಳೆದೇ ಆಯಿತು. ನನಗಿನ್ನು ಮೂರು ಸಾವಿರ ರೂಪಾಯಿಗಳು ಬೇಕು. ನನ್ನ ಆತ್ಮಕ್ಕೆ ಅಷ್ಟಾದರೂ ಮೌಲ್ಯ ಬಂದೀತು.' ಶೆಟ್ರು ತನ್ನಷ್ಟಕ್ಕೆ ತಾನು ಸಮಾಧಾನ ಪಡಿಸಿಕೊಂಡರು. ನಂತರ ಎರಡನೆಯ ಆಸಾಮಿಯು ಒಳಗೆ ಬಂದನು. ಜನಾರ್ಧನಯ್ಯನೆಂದು ಅವರ ಹೆಸರು. ಹ್ಯಾಟು ಕೋಟು ಬೂಟು ಸೂಟುಗಳಿಂದ ಅಲಂಕರಿಸಿದ ಅವರ ವೇಷವನ್ನು ಕಂಡು ಪುಸ್ತಕದಲ್ಲಿ ಕೊಟ್ಟ ಸೈತಾನನ ಚಿತ್ರದಂತೆ ಅವರು ಇಲ್ಲದಿದ್ದರೂ ವೇಷ ಪಲ್ಲಟಿಸಿರಬೇಕೆಂದೂ ಶೆಟ್ರು ಅವರಿಗೆ ಬಗ್ಗಿ ನಮಸ್ಕಾರವಿತ್ತರು.

ಈಗ ಜನಾರ್ಧನಯ್ಯನವರೇನು ಸೈತಾನನಾಗಿರದೆ, ಕೃಷ್ಣ ಶೆಟ್ರಿಗೆ ದೂರದ ಸಂಬಂಧಿಕರಾಗಿದ್ದರು ಇಲ್ಲಿಯಲ್ಲಿದ್ದ ಅವರ ಅಜ್ಜಿಯು ತನ್ನ ಉಯಿಲಿನಲ್ಲಿ ಮಂಗಳೂರಿನಲ್ಲಿದ್ದ ವಜ್ರದ ವ್ಯಾಪಾರಿ ಕೃಷ್ಣ ಶೆಟ್ರಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಬರೆದಿಟ್ಟುದರಿಂದ, ಆ ಹಣವನ್ನು ನೋಟಾ ಪಾವತಿ ಮಾಡಿ, ಕೃಷ್ಣ ಶೆಟ್ರ ಪರಿಚಯ ಮಾಡಿಕೊಂಡು ತೆರಳಬೇಕೆಂದು ಮಂಗಳೂರಿಗೆ ಬಂದಿದ್ದರು. ಇದೆಲ್ಲವನ್ನು ಕೇಳಿದೊಡನೆ ಕೃಷ್ಣ ಶೆಟ್ರಿಗೆ ಆನಂದಾಶ್ಚರ್ಯಾಸ್ಮಿತರಾಗಿ ಪ್ರೇಮಕ್ಕೆ ಉಕ್ಕಿ ಬರಬರಲು ಜನಾರ್ಧನಯ್ಯನವರನ್ನು ಅಪ್ಪಿಕೊಂಡರು ಹೇಳದೆ ಕೇಳದೆ 3000 ರೂಪಾಯಿ ಲಾಭವಾಗಲಿಲ್ಲವೆ?

ಆಹಾ ತಾನೀಗ 10,000 ರೂಪಾಯಿಗಳ ಧನಿಕನಲ್ಲವೆ? ತನ್ನೊಡನೆ ಹಣ ಹುಟ್ಟಿದಂತೆ ತನ್ನ ಆತ್ಮದ ಮೌಲ್ಯವೂ ಏರಬೇಕು ಇನ್ನು ಕಮ್ಮಿಯೆಂದರೆ ಹದಿನೈದು ಸಾವಿರ ರೂಪಾಯಿಯೂ, ಒಂದು ಮೋಟಾರು ಕಾರೂ ದೊರಕಬೇಕು. ಶೆಟ್ರು ಆಲೋಚಿಸಿದರು. ಬಳಿಕ ಗಡಿಯಾರದ ಮುಖವನ್ನು ನೋಡಿದರು. ಗಂಟೆ ಒಂದಾಗಿತ್ತು. ಸೈತಾನನು ಯಾವಾಗಲೂ ಹೇಳಿದ ಮಾತಿಗೆ ತಪ್ಪುವವನಲ್ಲ. ಆದುದರಿಂದ ಹೋಗಲಿದ್ದವನೇ ಸೈತಾನನಾಗಿರಬೇಕು. ಶೆಟ್ರು ಪುನಃ ನೆನೆದರು. ಮೂರನೆಯ ಆಸಾಮಿಯು ಒಳಗೆ ಬಂದನು. ಆತನ ಕೋಸು ಕಣ್ಣು, ಬಾಚಿದ ಮೀಸೆಗಳನ್ನು ಕಂಡೊಡನೆ, ಅವನಾದರೂ ಸೈತಾನನಾಗಿರಬೇ

(ಅಂನೇ ಪುಟವನ್ನು ನೋಡಿರಿ)

ಪ್ರಜಾಭ್ಯುದಯಕ್ಕಾಗಿ ಪ್ರಯತ್ನಿಸುವ ಪ್ರಜಾಸತ್ತಾತ್ಮಕ ರಾಜ್ಯ

ಹಿಂದೂದೇಶದಂತೆಯೇ ಚೀನವೂ ಒಂದು ಕೃಷಿಪ್ರಧಾನ ದೇಶ. ಆದರೆ ಅದು ಸ್ವತಂತ್ರವಾಗಿದೆ. ಅಲ್ಲಿ ಪ್ರಜಾಸತ್ತಾತ್ಮಕ ಸರಕಾರವು ನೆಲೆಗೊಂಡಿದೆ. ಅದು ಪ್ರಜಾಭ್ಯುದಯಕ್ಕಾಗಿ ಹೋರಾಡುತ್ತದೆ. ಪ್ರಜೆಗಳ ಸರ್ವತೋಮುಖವಾದ ಉನ್ನತಿಗಾಗಿ ಬೇರೆ ಯಾವ ರಾಷ್ಟ್ರವೂ ಹೋರಾಡದಷ್ಟು ಇಂದು ಚೀನವು ಹೋರಾಡುತ್ತದೆ.

ಚೀನದ ಸೇಕಡಾ 80ರಷ್ಟು ಜನರು ಒಕ್ಕಲಿಗರಾಗಿದ್ದಾರೆ. ಆದ್ದರಿಂದ ಚೀನ ಸರಕಾರವು ಈ ಒಕ್ಕಲಿಗರ ಉನ್ನತಿಯನ್ನೇ ತನ್ನ ಪ್ರಧಾನ ಲಕ್ಷ್ಯವನ್ನಾಗಿ ಇಟ್ಟುಕೊಂಡಿದೆ. ಪ್ರಬಲ ಶತ್ರುಗಳು ಬಂದು ಹೊರಗಿನಿಂದಲೂ ಅದನ್ನು ಆಕ್ರಮಿಸಿ, ಅದರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವದಕ್ಕೆ ಪ್ರಬಲ ಪ್ರಯತ್ನಗಳನ್ನು ಮಾಡುತ್ತಿದೆಯಾದರೂ, ಆ ಶತ್ರುವಿನೊಂದಿಗೆ, ಧೈರ್ಯ ಸ್ಥೈರ್ಯಗಳಿಂದ ಕಾದಾಡುತ್ತ ಪ್ರಜಾಭ್ಯುದಯಕ್ಕಾಗಿ ಚೀನ ಸರಕಾರವು ಕೈ ಕೊಂಡಿರುವ ಕಾರ್ಯಕ್ರಮವು ಅತ್ಯಂತ ಶ್ಲಾಘನೀಯವಾಗಿರುವದು.

ಒಕ್ಕಲಿಗರ ಮೇಲೆ ಇರುವ ತೆರಿಗೆಯ ಭಾರವು ಕಡಿಮೆಯಾಗಬೇಕೆಂದು ಚೀನ ಸರಕಾರವು ಸುಮಾರು 5000 ಬೇರೆ ಬೇರೆ ತೆರಿಗೆಗಳನ್ನು ತೆಗೆದುಹಾಕಿದೆ. ಇದರಿಂದ ಪ್ರತಿವರ್ಷ 50 ಮಿಲಿಯ ಯುವಾನ್ ನಾಣ್ಯಗಳ ನಷ್ಟವು ಸರಕಾರಕ್ಕಾಗುವದಾದರೂ ಅದು ಸಂತುಷ್ಟವಾಗಿದೆ. ಜನರಲ್ಲಿ ಪರಸ್ಪರ ಸಹಕಾರ ಸಹಾಯ ಬುದ್ಧಿಗಳು ಬೆಳೆದು ಬರುವಂತೆ ಅದು ಒಂದು ಕೇಂದ್ರ ಪರಸ್ಪರ ಸಹಕಾರ ಸಂಘವನ್ನು ಸ್ಥಾಪಿಸಿ ಅದರ ಮೂಲಕ ಸಹಕಾರ ತತ್ವಗಳ ಪ್ರಚಾರವನ್ನು ದೇಶದ ಎಲ್ಲೆಡೆಗಳಲ್ಲಿ ಮಾಡುವ ಪ್ರಯತ್ನ ಮಾಡಿದೆ. ಈ ಪ್ರಚಾರದ ಪರಿಣಾಮವಾಗಿ ಜನರಲ್ಲಿ ಸಹಕಾರ ಭಾವನೆಯು ಚೆನ್ನಾಗಿ ಮೂಡಿಬಂದಿದೆ. ಈಗಾಗಲೇ 26000ಕ್ಕೆ ಮಿಾರಿ, ಸಹಕಾರ ಸಂಘಗಳು ಚೀನದಲ್ಲಿ ಸ್ಥಾಪಿತವಾಗಿ ಆದರ್ಶ ಪರ ಮಾರ್ಗದಲ್ಲಿ ಮುನ್ನಡೆಯುತ್ತ ತಮ್ಮ ಕಾರ್ಯನಿರ್ವಾಹ ಮಾಡಿಕೊಂಡಿರುವವು.

ಒಕ್ಕಲಿಗರಿಗೆ ದೀರ್ಘ ಮಾಯಿದೆಯ ಸಾಲಗಳನ್ನು ಕೊಟ್ಟು, ನವೀನ ಕೃಷಿ ಕ್ರಮವನ್ನು ಬಳಕೆಗೆ ತರುತ್ತ ಅವರ ಸ್ಥಿತಿಗತಿಗಳನ್ನು ಸುಧಾರಿಸುವದಕ್ಕೋಸ್ಕರ ಸರಕಾರವು 60 ಮಿಲಿಯ ಯುವಾನ್ ನಾಣ್ಯಗಳ ಭಂಡವಾಳವುಳ್ಳ ಒಂದು ಕೃಷಿಕರ ಸಂಘವನ್ನು ಸ್ಥಾಪಿಸಿದೆ. ಈ ಸಂಘವು ಕೃಷಿ ಉತ್ಪತ್ತಿಗಳನ್ನು ಮಾರುವ ಕೃಷಿ ಸಾಧನಗಳನ್ನು ಕೊಳ್ಳುವ ಕಾರ್ಯಕ್ರಮವನ್ನೂ ಇಟ್ಟುಕೊಂಡಿದೆ.

ಸರಕಾರವು ನೀರಾವರಿ ಕೆಲಸಗಳಿಗಾಗಿಯೂ ತನ್ನ ಲಕ್ಷ್ಯಕೊಡದೆ ಇಲ್ಲ. ಅಗತ್ಯ ಮತ್ತು ತತ್ಕಾಲ ಸಾಧ್ಯವಿರುವಲ್ಲೆಲ್ಲ ಅಣೆಕಟ್ಟುಗಳನ್ನು ಕಟ್ಟಿ, ಕಾಲುವೆಗಳನ್ನೂ ತೋಡಿದೆ. ರಸ್ತೆಗಳನ್ನೂ ರೈಲು-ರಸ್ತೆಗಳನ್ನೂ ಮಾಡಿದೆ. ಈಗ ಚೀನದಲ್ಲಿ 13000 ಕಿಲೋಮಿಾಟರುಗಳಷ್ಟು ಉದ್ದದ ರೈಲುರಸ್ತೆಗಳಿವೆ. 96145 ಕಿಲೋಮಿಾಟರುಗಳಷ್ಟು ಉದ್ದದ ರಾಜ ರಸ್ತೆಗಳಿವೆ. 16000 ಕಿಲೋಮಿಾಟರುಗಳಷ್ಟು ಉದ್ದದ ರಾಜರಸ್ತೆಗಳು ಈಗ ಆಗುತ್ತ ಇವೆ. ವಿಮಾನ ಸಂಚಾರದ ಕಡೆಗೂ ಸರಕಾರದ ಅಲಕ್ಷವಿಲ್ಲ. ಶಾಂಗ್ಹಾಯಿ, ಹೆಂಕೊ, ಚುಂಗ್ಕಿ, ಪೀಪಿಂಗ್, ಕೆಂಟನ ಮತ್ತು ಇನ್ನು ಕೆಲವು ಮುಖ್ಯ ಪಟ್ಟಣಗಳನ್ನು ಅದು ವಿಮಾನ ದಾರಿಗಳಿಂದ ಜೋಡಿಸಿದೆ.

ನಾಣ್ಯ ನೋಟುಗಳ ಚಲಾವಣೆ ಕ್ರಮದಲ್ಲಿಯೂ ಸುಧಾರಣೆಗಳಾಗಿವೆ. ಮುಂದೆ ಚೀನವನ್ನು ಇನ್ನೂ ಉತ್ತಮ ಸ್ಥಿತಿಗೆ ತರುವದಕ್ಕೋಸ್ಕರ ಚೀನ ಸರಕಾರವು ಈಗ ಒಂದು ಪಂಚವಾರ್ಷಿಕ ಕಾರ್ಯಕ್ರಮವನ್ನು ತಯಾರಿಸಿದೆ. ಅದರಲ್ಲಿ ಚೀನದ ಸರ್ವತೋಮುಖವಾದ ಉನ್ನತಿಗಾಗಿ ಪ್ರಯತ್ನದ ವ್ಯವಸ್ಥೆ ಇದೆ. ಇದರ ಪೂರ್ಣ ಸಫಲತೆಗಾಗಿ ಸರಕಾರಕ್ಕೆ 41 ಮಿಲಿಯ ಯುವಾನ್ ನಾಣ್ಯಗಳ ಸಾಲವು ಬೇಕಾಗುವದು. ಈ ಸಾಲವನ್ನು ಅದು ಪ್ರಜಾವರ್ಗದಿಂದಲೂ ಹೊರದೇಶದಿಂದಲೂ ಪಡೆಯಬೇಕೆಂದಿದೆ. ಈ ಕಾರ್ಯಕ್ಕೆ ವಿದೇಶೀ ಭಂಡವಾಳವು ಅತ್ಯಗತ್ಯವಾಗಿದೆ.

ತನ್ನಧ್ಯ ಜಪಾನಿಯರ ಮತ್ತು ಅವರ ವಿದೇಶೀ ಮಿತ್ರಮಂಡಳಿಯ ವಿಘಾತುಕ ಕಾರ್ಯನೀತಿಯಿಂದ ಚೀನ ಸರಕಾರದ ಈ ಪ್ರಯತ್ನಗಳ [illegible] ಹೇಗೆ [illegible] ತಾಗುವುದೋ? [illegible] ಆದಕ್ಕಿದೆ. ಆದರೆ [illegible] ವಿಘ್ನವಿಡ್ಡರಗಳನ್ನು ಲೆಕ್ಕಿಸದೆ ಮುಂದರಿಯುತ್ತ ಹೋಗುವುದು ಕರ್ತೃತ್ವಶಾಲಿಗಳ ಲಕ್ಷಣವೆಂದು ತಿಳಿಕೊಂಡ ಸರಕಾರವು ಪ್ರಜಾರಂಜನೆಯಲ್ಲಿ ತನ್ಮಯವಾಗಿರುವದು.

ಆತ್ಮವಿಕ್ರಯ

(ಗನೆಯ ಪುಟದಿಂದ)

ಕಂದು ಶೆಟ್ಟರು ಖಂಡಿತ ಮಾಡಿದರು. ಬಳಿಕ ನೀನು ಸೈತಾನನೇ?" ಎಂದು ಆತನನ್ನೊಡನೆ ಕೇಳಿಯೇ ಬಿಟ್ಟರು." ನಾನು ಸೈತಾನನೂ ಅಲ್ಲ, ಕೈತಾನನೂ ಅಲ್ಲ. ಆದರೆ ಕೈತಾನ ದೊರೆಗಳೇ ನನ್ನನ್ನು ನಿಮ್ಮ ಬಳಿಗೆ ಕಳುಹಿದಾಗಿರುತ್ತದೆ. ನಿಮ್ಮ ಸಾಮಾನುಗಳನ್ನು ಕಾಪಾಡಲು ಈ ಕಾಗದಕ್ಕೆ ಸಹಿ ಹಾಕಿ. ಬಳಿಕ ಎಲ್ಲವೂ ಸರಿಯಾಗುತ್ತದೆ" ಒಳಗೆ ಬಂದವನು ಹೇಳಿದನು.

ಬಳಿಕ ಆತನು ಕೃಷ್ಣ ಶೆಟ್ಟಿಗೆ ಸಂಘರ ಸಂಘದ ಒಂದು ಫೋರ್ಮನ್ನು ತೆಗೆದುಕೊಟ್ಟನು. ಅದಕ್ಕೆ ಸಹಿ ಹಾಕಿದರೆ ಅವರು ತಿಂಗಳಿಗೆ ಆ ಸಂಘಕ್ಕೆ ಒಂದು ರೂಪಾಯಿ ಕೊಡುತ್ತಾ ಬರಬೇಕಾಗುತ್ತದೆ. ಪರಂತು ಶೆಟ್ರು ಆ ಕಾಗದವನ್ನು ಕಣ್ಣೆತ್ತಿಯೂ ನೋಡದೆ, "ನೀವು ಏನು ಹೇಳುವಿರೊ ನನಗೆ ತಿಳಿಯದು. ನನಗೆ 15 ಸಾವಿರ ರೂಪಾಯಿಗಳೂ ಒಂದು ಮೋಟಾರು ಕಾರೂ ಇದರಲ್ಲಿ ದೊರೆಯಬೇಕು!" ಎಂದರು. ಆಗ ಅವ್ಯಕ್ತಿಗೆ ಶೆಟ್ರು ಮೂರ್ಖನಾಗಿದ್ದುದು ಸ್ಪಷ್ಟವೆಂದು ಅರ್ಥವಾಗದೆ, "ಹೇಗೂ ಇರಲಿ; ಈ ಪತ್ರಕ್ಕೆ ಸಹಿ ಹಾಕಿರಿ" ಎಂದಿತು.

"ಇರಲಿ. ನಾನು ಹೇಳಿದಷ್ಟು ಹಣವನ್ನು ಕೊಡಲು ನಿಮಗೆ ಸಾಧ್ಯವಿದೆಯೇ?" ನಂತರ ಇನ್ನೊಮ್ಮೆ ಶೆಟ್ರು ವಿಚಾರಿಸಿದರು. ಆ ಪುರುಷನು ಮರುತ್ತರವಾಗಿ ಕುರ್ಚಿಯಿಂದ ಎದ್ದು ನಿಂತು, "ಈ ಹುಚ್ಚನೊಡನೆ ಮಾತಾನಾಡುವವರ್‍ಯಾರು?" ಎಂದು ಗೊಣಗುಟ್ಟುತ್ತ ಬಾಗಿಲಿನ ಕಡೆಗೆ ತಿರುಗಿದನು. ಶೆಟ್ರು ಪುನಃ ಕೇಳಿದರು "ನೀನು ನಿಜವಾಗಿಯೂ ಸೈತಾನನೇ?" "ಹೌದೌದು ಅವರ ಕಡೆಯಿಂದಲೇ ಬಂದವನು" ಆತನು ಉತ್ತರವಿತ್ತನು. "ಹಾಗಾದರೆ ಈಗಲೆ ಅದೃಶ್ಯನಾಗು," ಶೆಟ್ರು ಅಪ್ಪಣೆಯಿತ್ತರು. ಇದಕ್ಕೆ ಪ್ರತ್ಯುತ್ತರವಾಗಿ ಆ ಪುರುಷನು ಏನು ನುಡಿಯದುದನ್ನು ಕಂಡು ಶೆಟ್ರು, "ಇಲ್ಲಿ ಬಾ ನಿನ್ನ ವಿದ್ಯೆಯನ್ನು ತೋರಿಸು" ಎಂದರು.

ಆದರೆ ಕೈತಾನ ದೊರೆಗಳ ಆಳು ಯಾವ ವಿದ್ಯೆಯನ್ನೂ ತೋರಿಸದೆ, ಮಂಗನಂತೆ ಹಲ್ಲುಗಳನ್ನು ಕಿರಿದು, ಕೋಣೆಯ ಬಾಗಿಲು ತೆರೆದು ತೆರಳುವವನಾದನು. ಒಡನೆ ಶೆಟ್ರು ಆತನು ಅದೃಶ್ಯನಾಗುವಂತೆ ಪುಸ್ತಕದಿಂದ ಮಂತ್ರಗಳನ್ನು ಓದಿದರು. ಅವುಗಳನ್ನು ಕೇಳಿದೊಡನೆ ಆತನು ಬಿಳುಪು ತಿರುಗಿದನು. ಹುಚ್ಚನೊಡನೆ ಯಾವ ವ್ಯವಹಾರವನ್ನೂ ಮಾಡಲು ತನಗೆ ಸಾಧ್ಯವಿಲ್ಲವೆಂದು ಗೊಣಗುಟ್ಟುತ್ತ, ಚೀರಿ ಬಾಗಿಲನ ಮೆಟ್ಟು ಕಾಲಿಗೆ ಬುದ್ಧಿ ಹೇಳಿದನು.

ನಂತರ ಒಡಳೆ ಹೊತ್ತಿನ ತನಕ ಕೃಷ್ಣ ಶೆಟ್ರು ಕಾದು ಕುಳಿತರು. ಪರಂತು ಯಾರೆ ಅವರನ್ನು ಕಾಣಬರಲಿಲ್ಲ. ಸೈತಾನನು ಪ್ರಾಯಶಃ ತನ್ನ ಆಲೋಚನೆಯನ್ನ ಬದಲಾಯಿಸಿರಬೇಕು. ಅಂತು, ಆತನು ಬಂದರೂ ಇನ ಆತನೊಡನೆ ಹೋಗದವನಾದರೂ ಯಾರು? ತನಗಂತು ಬೇಕಾದದು ಹಣವು ದೊರೆಯುವುದ. ಇನ್ನೇಕೆ ಅನಾವಶ್ಯಕ ಆತ್ಮವಿಕ್ರಯ ಮಾಡಬೇಕು? ಎಂದು ಪರಿಪರಿಯಾಗಿ ಆಲೋಚಿಸುತ್ತ ಶೆಟ್ರು ಮಧ್ಯಾಹ್ನದ ಊಟಕ್ಕೆ ಮನೆ ಕಡೆ ಹೊರಟರು.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ನಮ್ಮ ಆಫೀಸುಗಳು

1 ರಥಬೀದಿ
ಮಂಗಳೂರು

2 ಪುತ್ತಿಯಾರ
ಕಲ್ಲಿಕೋಟೆ

3 ಪಿ. ಬಿ 337
ಮೌಂಟ್ ರೋಡ್
ಮದ್ರಾಸು
(ಟೆಲಿಫೋನ್ ನಂಬ್ರ 8245)

4. ವಿಶ್ವೇಶರಪುರಂ ಸರ್ಕಲ್
ಬೆಂಗಳೂರು ಸಿಟಿ
(ಟೆಲಿಫೋನ್ ನಂಬ್ರ 2182)

5. ಗೌತಮ ನಿವಾಸ್,
ಚಾರ್ನಿ ರೋಡ್,
ಗಿರ್‌ಗಾಂವ್, ಬೊಂಬಾಯಿ
(ಟೆಲಿಫೋನ್ ನಂಬ್ರ 26314)

ಇನ್ಸ್‌ಪೆಕ್ಟೊರೇಟ್ ಆಫೀಸು.

6. ಒಟ್ಟಪ್ಪಾಲ,
ದಕ್ಷಿಣ ಮಲಬಾರು

7. ಸೆಂಟ್ರಲ್ ಸ್ಟೇಶನ್, ರೋಡ್,
ಟ್ರಿವೆಂಡ್ರಮ್.

ಮದ್ರಾಸು ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,
(ಕೊಚ್ಚಿಕಾರ್ ಬ್ರದರ್ಸ್ ರಿಜಿಸ್ಟರ್ ಆದುದು)
ರಿಜಿಸ್ಟರ್ಡ್ ಆಫೀಸು ಉಡುಪಿ

ಜೀವವಿಮಾಕಾರ್ಯದಲ್ಲಿ ಅತ್ಯಾಧುನಿಕ ವಿಶೇಷ ನೂತನ ಸೌಕರ್ಯಾದಿಗಳನ್ನು ಒದಗಿಸುವ

ಆದರ್ಶ ಜೀವವಿಮಾ ಸಂಸ್ಥೆ

ಪ್ರಗತಿಯು ಪ್ರಖ್ಯಾತಿಯನ್ನು ಸೂಚಿಸುತ್ತದೆ

ನೂತನ ವಹಿವಾಟು	ರೂ 140,08,725
ವಿಮಾಕಂತುಗಳಿಂದ ಆದಾಯ	ರೂ 30,00,000ಕ್ಕೆ ಮಿಕ್ಕುತ್ತದೆ
ಒಟ್ಟು ಆಸ್ತಿಪಾಸ್ತಿಯು	ರೂ 100,00,000ಕ್ಕೆ ಮಿಕ್ಕುತ್ತದೆ
ಈ ವರೇಗೆ ಕ್ಲೇಮುಗಳಿಗೆ ಸಂದದ್ದು	ರೂ 50,00,000ಕ್ಕೆ ಮಿಕ್ಕುತ್ತದೆ

ಉತ್ತಮ ಪ್ರತಿಫಲದ ಮೇಲೆ ಏಜನ್ಸಿಗಳಿಗಾಗಿ, ಒಳ್ಳೆ ಗುಣವಂತ ಮತ್ತು ಪ್ರಭಾವಶಾಲಿ ಸ್ತ್ರೀ ಪುರುಷರಿಂದ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗುವುದು.
ಹೆಚ್ಚಿನ ವಿವರಗಳಿಗ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಬೊಂಬೆ ಲ್ಯಾಫ್ ಕಟ್ಟಡ,
ಸೆಂಟ್ರಲ್ ಆಫೀಸ: ಉಡುಪಿ

ಶಿಕ್ಷಿತ ಹೆಮ್ಮಕ್ಕಳು ಆರೋಗ್ಯವನ್ನು ಲಕ್ಷಿಸುವದಿಲ್ಲ

ಅವರು ರಾಗಿ ಬೀಸಬೇಕು—ಅಕ್ಕಿ ಕುಟ್ಟಬೇಕು!

ಅಂದರೆ

ಆರೋಗ್ಯವಾಗಿ ಇರಬಲ್ಲರು

ನಮ್ಮ ದೇಶದ ಮಹಿಳೆಯರ ಜೀವನ ಕ್ರಮದಲ್ಲಿ ಪರಿವರ್ತನಗಳಾಗುತ್ತಲೇ ಇವೆ. ಈ ಪರಿವರ್ತನಗಳು ಅವರ ಹಿತಕ್ಕಾಗಿ ಇರದೆ ಅಹಿತಕ್ಕಾಗಿ ಇರುವವೆಂಬುದು ಅತ್ಯಂತ ದುಃಖದ ಸಂಗತಿಯಾಗಿದೆ. ಅವರ ಶರೀರಾರೋಗ್ಯವು ಈ ಪರಿವರ್ತನಗಳಿಂದ ಸಂಪೂರ್ಣ ಕೆಟ್ಟು ಹೋಗುತ್ತಲಿದೆ.

ಐವತ್ತು ವರ್ಷಗಳ ಮೊದಲು ನಮ್ಮ ದೇಶದ ಹೆಂಗಸರು ರಾಗಿ ಬೀಸುತ್ತಿದ್ದರು ಅಕ್ಕಿ ಕುಟ್ಟುತ್ತಿದ್ದರು. ಈಗ ಅವರಿಗೆ ಈ ಕೆಲಸಗಳನ್ನು ಮಾಡುವದೆಂದರೆ ಕುಂಬಾ ನಾಚಿಕೆಯಾಗುತ್ತದೆ. ಆಗಿನ ಕಾಲದ ಹೆಂಗಸರಿಗೆ ಮನೆಕೆಲಸಗಳನ್ನು ಮಾಡುವಾಗ ನಾಚಿಕೆಯಾಗುತ್ತಿರಲಿಲ್ಲ. ಮಾತ್ರವಲ್ಲ, ಆ ಕೆಲಸಗಳನ್ನು ಮಾಡಿ ಅವರು ಗೌರವಪಡೆಯುತ್ತಿದ್ದರು. ಈಗ ಮನೆಕೆಲಸಗಳನ್ನು ನೌಕರರ ಪಾಲಿಗೆ ಬಿಟ್ಟು ಹೆಂಗಸರು ತಾವು ಸಭ್ಯರೆಂದು ತಿಳಿಯುತ್ತಾರೆ.

ಆದಕಾರಣ ಇವತ್ತು ಅವರು ದೃಢಕಾಯರಾದ ತಮ್ಮ ಅಜ್ಜಿಯಂದಿರ ಹಾಗೂ ಇರುವದಿಲ್ಲ; ಅಥವಾ ಯಾನ ಪಾಶ್ಚಾತ್ಯನಾಗರಿಕತೆಯ ಥಳಕುಬೆಳಕುಗಳಿಗೆ ಅವರು ಮೋಹಿತರಾಗಿದ್ದಾರೋ ಆ ಪಾಶ್ಚಾತ್ಯ ಸ್ತ್ರೀಯರಂತೆ ಗಟ್ಟಿಮುಟ್ಟಾಗಿ ಇರುವುದೂ ಇಲ್ಲ. ಅವರ ಶಾರೀರಿಕ ಆರೋಗ್ಯವು ಬಹಳ ಕೆಟ್ಟಿರುತ್ತದೆ. ಎಂದು ಡಾಕ್ಟರ್ ಗೋಕುಲಚಂದ ನಾರಂಗರು ಸ್ತ್ರೀಯರ ಒಂದು ಸಭೆಯಲ್ಲಿ ಭಾಷಣ ಕೊಟ್ಟರು.

ಕ್ಷಯರೋಗವು ನಮ್ಮ ಶರೀರಬಂಧೆಯನ್ನು ಅಡಗಿಸಿಡಲಿಕ್ಕೆ ಹೊರಟಿರುವ ರೋಗವು ಬೆಂಕಿಯ ಹಾಗೆ ಇದೆ. ಕಿಡಿಯಾಗಿದ್ದಾಗ ಬೆಂಕಿಯನ್ನು ಸುಲಭದಲ್ಲಿ ನಂದಿಸಬಹುದು. ಹಾಗೆಯೇ ಪ್ರಾರಂಭದಲ್ಲಿ ರೋಗವನ್ನು ಗುಣಮಾಡಬಹುದು. ಅದು ಪ್ರಬಲವಾದಾಗ ಮಾತ್ರ ಚಿಕಿತ್ಸೆಯು ಅಸಾಧ್ಯವಾಗುತ್ತದೆ. ಅನೇಕ ಹೆಂಗಸರು ಲಜ್ಜೆಯಿಂದಾಗಿ ತಮ್ಮ ಬೇನೆ ಬೇಸಾರಿಕೆಗಳನ್ನು ತಮ್ಮ ಸಮೀಪದ ಸಂಬಂಧಿಗಳಿಗೂ ಹೇಳುವುದಿಲ್ಲ. ಆದ್ದರಿಂದಲೇ ಅವರು ಮತ್ತೆ ಭಯಂಕರ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ' ಎಂದು ನಾರಂಗರು ಹೇಳಿದರು.

ಸ್ತ್ರೀಯರು ಒಳ್ಳೇ ಪೌಷ್ಟಿಕವಾದ ಆಹಾರವನ್ನು ಉಣ್ಣಬೇಕು. ಟೀ, ಕಾಫಿ, ಮೊದಲಾದ ಪಾನೀಯಗಳನ್ನು ಸೇವಿಸಕೂಡದು. ಕಸರತ್ತನ್ನೂ ಯಾವಾಗಲೂ ಮಾಡಬೇಕು. ರಾಗಿ ಬೀಸುವದು, ಅಕ್ಕಿಕುಟ್ಟುವದು, ಹಾಲುಕರೆಯುವದು, ನೀರುಸೇದುವದು ಮೊದಲಾದ ಕೆಲಸಗಳನ್ನು ಮಾಡುವದರಲ್ಲಿ ಹೆಂಗಸರು ಲಜ್ಜಿತರಾಗಬಾರದು. ಗೃಹಕೃತ್ಯಗಳನ್ನು ಮಾಡುವದು ಸ್ತ್ರೀಯರಿಗೆ ಗೌರವವನ್ನು ಕೊಡುತ್ತದೆ. ಅವರು ಯೋಗ್ಯ ಹೆಂಡಂದಿರೂ ತಾಯಂದಿರೂ ಆಗಿರಬೇಕು. ಪ್ರೇಮಿಗಳೂ, ದಯಾವಂತೆಯರೂ, ಕರ್ತವ್ಯಪರಾಯಣೆಯರೂ, ಭಕ್ತಿಶ್ರದ್ಧಾವಂತೆಯರೂ ಆಗಿರಬೇಕು. ಯೋಗ್ಯಳಾದ ಹೆಂಡತಿಯು ಮನೆಯನ್ನೇ ಸ್ವರ್ಗ ಮಾಡುವಳು. ಅದು ಸುಖಸಂತೋಷಗಳ ಆಗರವಾಗುವದು.

ಕಾಲೇಜುಗಳಿಗೆ ಹೋಗಿ ಕಲಿತ ಮಾತ್ರದಿಂದ ಸ್ತ್ರೀಯರು ಜೀವನಸಂಗ್ರಾಮದಲ್ಲಿ ಸಫಲರಾಗುವುದಿಲ್ಲ. ಕೆಲವು ಇಂಗ್ಲೀಷು ಮಾತುಗಳನ್ನು ಕಲಿತ ಮಾತ್ರಕ್ಕೆ ಯಾರೂ ಸುಶಿಕ್ಷಿತರೂ ಅಥವಾ ಸುಸಂಸ್ಕೃತರು ಎಂದು ಅನ್ನಿಸಿಕೊಳ್ಳುವುದಿಲ್ಲ ಎಂದು ಶ್ರೀ ನಾರಂಗರು—"ನನಗೆ ಅಧಿಕಾರ ವಿರುತ್ತಿದ್ದರೆ ಸ್ತ್ರೀಯರು ಬಿ. ಎ., ಎಂ. ಎ. ಗಳಾಗುವದನ್ನು ಕೂಡಲೇ ನಿರ್ಬಂಧಿಸುತ್ತಿದ್ದೆ. ಅದರ ಬದಲಿಗೆ ಅವರಿಗೆ ಗೃಹ ವಿಜ್ಞಾನ ಮತ್ತು ಮನೆ ಕೆಲಸಗಳನ್ನೇ ಪ್ರಾಮುಖ್ಯವಾಗಿಟ್ಟು ಕಲಿಸುವ ಪಾಠಪಟ್ಟಿಯನ್ನು ತಯ್ಯಾರಿಸಿಕೊಡುತ್ತಿದ್ದೆ" ಎಂದರು.

ಎಲ್ಲರೂ ಚೆನ್ನಾಗಿ ಆಲೋಚಿಸಬೇಕಾದ ವಿಷಯವಿದು.

ಒಂದೇ ವರ್ಷದೊಳಗೆ ಭೂಮಿಯು ನಾಶಹೊಂದುವುದು

ಎಂಬುದಾಗಿ ತಾಮಸ್ ವಿಲ್ಸನ್ ಎಂಬುವರು ಭವಿಷ್ಯವನ್ನು ನುಡಿದಿರುವರು.

ಆಗಾಗ್ಗೆ ಭೂಕಂಪವಾಗುತ್ತಿರುವುದು, ಪೆಸಿಫಿಕ್ ಸಾಗರದಲ್ಲಿ ಹಲವು ಗುಪ್ತ ಪ್ರವಾಹಗಳು ಏಳುತ್ತಿರುವುದು, ಹವಾಮಾನದಲ್ಲಿ ವಿಪರೀತ ವ್ಯತ್ಯಾಸಗಳಾಗುತ್ತಿರುವುದು, ಇಂತಹ ನಡೆದ ವಿಷಯಗಳಿಂದಲೇ ಅವರು ಈ ಬಗೆಯ ತೀರ್ಮಾನವನ್ನು ಮಾಡಿದಾಗಿರುತ್ತದೆ.

ಯಾವುದೋ ಒಂದು ಧೂಮಕೇತುವು ನಮ್ಮ ಪ್ರಪಂಚದ ಸಮೀಪಗತವಾಗುತ್ತಿರುವುದೇ ಈ ಬಗೆಯ ವ್ಯತ್ಯಾಸಗಳಿಗೆ ಕಾರಣವೆಂದು ಅವರು ಅಭಿಪ್ರಾಯಪಡುತ್ತಿರುವರು. ಈ ಧೂಮಕೇತುವು ಗಗನದಲ್ಲಿ ಈಗ ಕಾಣಿಸಿಕೊಂಡಿಲ್ಲ. ಆದರೆ ಅದು ಸಮೀಪ ಬರುತ್ತಿದೆಯೆಂದೂ, ಇನ್ನು ಒಂದು ವರ್ಷದೊಳಗಾಗಿ ದೃಗ್ಗೋಚರವಾಗಬಹುದೆಂದೂ ಅವರ ಮತ.

ಅದರಿಂದ ಭೂಕಂಪ, ನೆರೆ ಮೊದಲಾದ ಅನಾಹುತಗಳು ಉಂಟಾಗಿ ಒಂದೇ ವರ್ಷದೊಳಗೆ ಇಡೀ ಪ್ರಪಂಚವೇ ನುಚ್ಚುನೂರಾಗುವುದಂತೆ.

ಹೊಟ್ಟೆ ಹುಣ್ಣು

ಆಕ್ರ ಮತ್ತು ರುಚಿ ಆಹಾರದಿಂದ ಹೊಟ್ಟೆನೋವು, ಅಜೀರ್ಣ ಮುಂತಾದುವುಗಳು ಉಂಟಾಗುತ್ತವೆ. ಹೊಟ್ಟೆಯು ಅಕ್ರಮ ಹೊಂದುತ್ತಲೇ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಕುಡಿಯಿರಿ. ಅದು ಬಹಳ ರುಚಿಕರ. ರಕ್ತವನ್ನು ತಣ್ಣಗಿರಿಸಿ, ಹೊಟ್ಟೆಯನ್ನು ಕ್ರಮವಾಗಿರಿಸುತ್ತದೆ. ಅದು ಅನ್ನಕೋಶವನ್ನು ಏನೊಂದು ಅಪಾಯವಿಲ್ಲದೆ ಹೊಕ್ಕು ಸಾವಧಾನದಿಂದ ತನ್ನ ಕೆಲಸ ಮಾಡುತ್ತದೆ.

ಜಗತ್ತಿನ ಎಲ್ಲಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ. ಒಳ್ಳೇ ಮಾಗಿದ ಫಲ ಮೂಲ ಮತ್ತು ಅನೇಕ ಔಷಧಿ ಮಿಶ್ರಿತವಾದ ಈ ಲವಣವು ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುವುದು.

'ಇಮಿಟೇಶನನ್ನು ತಿರಸ್ಕರಿಸಿರಿ. ಒಳ್ಳೆಯ ಮಾತ್ರ ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವದಿಂದ ಅದು ಕ್ರಮಪ್ರಕಾರ ತಯಾರಿಸಲ್ಪಡುವುದು."

E V K 1

ನಾಳಿನ ಖಲೀಫರಾರು?

ಈಜಿಪ್ತದ ಫರೂಕರೆ??

ಈಜಿಪ್ತದ ರಾಜ ಫರೂಕರನ್ನು ಹೊಸ ಖಲೀಫರೆಂದು ಅಭಿಷೇಕಿಸುವರಾಗಿ ವಾರ್ತೆ ಹರಡುತ್ತದೆ. 'ಮುಹಮ್ಮದೀ ಮತದ ಅತ್ಯುಚ್ಚ ಅಧಿಕಾರಿ—ಖಲೀಫ' ನಾಗಿದ್ದುದು ನಿಜ; ಆದರೆ ಕೆಮಾಲ್ ಪಾಶಾನ ಸುಧಾರಣಗಳ ದೆಸೆಯಿಂದ ತುರ್ಕಿಯ ಅಣ್ಣನು ಇನ್ನು ಖಲೀಫನಾಗುವ ಹಾಗಿಲ್ಲ.

ಬ್ರಿಟನ್ನಿಗೆ, ಬ್ರಿಟನ್ನ ಪಕ್ಷವಾಗಿದ್ದ ಖಲೀಫನೇ ಬೇಕಾಗಿದ್ದಾನೆ. ಇವನ ದೆಸೆಯಿಂದ, ಪೆಲೆಸ್ತೀನದಲ್ಲಿನ ರಗಳೆಯನ್ನು ಬ್ರಿಟಿಷರ ಸುಲಭವಾಗಿ ತೀರಿಸಬಹುದು. ಖಲೀಫನ ಮಾತನ್ನು ಮೀರುವರು ಅರಬರೇ?

ಆದರೆ ಖಲೀಫನ ಅಧಿಕಾರವು ಮತಸಂಬಂಧವಾದ ದ್ದಾಗಿ ರಾಜಕೀಯವಾದರೆ ಬ್ರಿಟಿಷರ ಕೈಯಲ್ಲಿರುವ ಪೆಲೆಸ್ತೀನದಲ್ಲಿ ಮಾತ್ರವಲ್ಲದೆ, ಅದರ ಜೊತೆಯ ಟ್ರಾನ್ಸ್‌ಜೋರ್ಡಾನಿಯದಲ್ಲೂ, ಫ್ರೆಂಚರ ಕೈಯಲ್ಲಿರುವ ಸಿರಿಯಾದಲ್ಲೂ ಅದಕ್ಕೆ ಮನ್ನಣೆ ಸಿಗಬೇಕು.

ಖಲೀಫನಾಗಲು ಬ್ರಿಟಿಷರು ಫರೂಕನಿಗೆ ಬೇಕಾದ ಅನುಮತಿ ಕೊಟ್ಟಿರುವರು. ಇನ್ನು ಫ್ರೆಂಚರ ಬೆಂಬಲ ಬೇಕಾಗಿದೆ. ಫ್ರೆಂಚರು ಇದಕ್ಕೆ ಅನುಕೂಲರೇ ಸರಿ. ಇಟಲಿಯನರ ಮತ್ತು ಸ್ಪೈನಿನಲ್ಲಿನ ದಂಗೆಗಾರರ ಪ್ರೆಂಚ ವಿರೋಧವನ್ನು ಕುಂದಿಸಲು ಖಲೀಫನ ಸಹಾಯವು ಅತ್ಯಾವಶ್ಯಕ. ಫ್ರೆಂಕೋವು ನಾಳೆ ಫ್ರೆಂಚರ ಮೊರೊಕ್ಕೋವನ್ನು ವಶಪಡಿಸಿಕೊಳ್ಳಲಿದ್ದಾನೆ; ಮುಸ್ಸೊಲಿನಿಗೆ ಟ್ಯುನಿಸ್ ಬೇಕಾಗಿದೆ, ಫ್ರೆಂಕೋವೂ ಮುಸ್ಸೊಲಿನಿಯೂ ತಾವೇ ಮುಸ್ಲಿಮರ ಗೆಳೆಯರೆನ್ನುತ್ತಾರೆ. ಖಲೀಫನು ಕೈರೋವಿನಲ್ಲಿರುವನಾದರೆ, ಫ್ರೆಂಚರು ಇವರಿಬ್ಬರ 'ಗೆಳೆತನ'ದಿಂದ ತಮ್ಮ ರಾಜ್ಯದೊಳಗಣ ಮುಸ್ಲಿಮರನ್ನು ಪ್ರತ್ಯೇಕಿಸ ಬರುವುದಲ್ಲವೆ?

ಉತ್ತರ ಆಫ್ರಿಕಾದಲ್ಲಿ ಫ್ರೆಂಚರಿಗೆ ಯಾವ್ಯಾವ ಹಕ್ಕುಗಳಿವೆಯೋ ಅವನ್ನು ಮಂಜೂರು ಮಾಡುವುದಕ್ಕೆ ಫರೂಕನು ಒಪ್ಪಿಕೊಂಡರು [illegible]

ಇಟಲಿಯ ವಿಜಯವಾದ ಮೇಲೆ ಫ್ರೆಂಚರ ಟ್ಯುನಿಸ್ ಒಂದು ಕಡೆಯಲ್ಲಿರುವಾಗ ಈಜಿಪ್ತದ ಬೆಂಬಲ ದೊರೆತರೆ ಫ್ರೆಂಚರು ಸುರಕ್ಷಿತ ಮಾಡಿಕೊಳ್ಳಬಹುದಲ್ಲವೆ?

ಇದಲ್ಲದೆ ನಮ್ಮ ನಿಜಾಮರ ಪ್ರಿನ್ಸ್ ಜೋರ್ಡಾನನ ಅಮೀರ ಅಬ್ದುಲ್ಲಾ ಇರುವನು. ಇವನಿಗೊಂದು ಗದ್ದುಗೆ ಇದೆ. ಉತ್ತಮವಾಗಿ ಚತುರಂಗದಾಟವನ್ನು ಬಲ್ಲನು. ಇವನ ತಮ್ಮನನ್ನೇ ಇರಾಕಿನ ಅರಸಾಗಿ (ಫೈಸುಲ್) ಬ್ರಿಟಿಷರು ಚುನಾಯಿಸಿದರೆಂದೇ ಇವನು ಮನನೊಂದಿರುವನು. ಫರೂಕನು ಖಲೀಫನಾದಲ್ಲಿ, ಇವನೂ ಆತನ ಖಲೀಫತನವನ್ನು ಶಿರಸಾವಹಿಸಬೇಕಾಗುವುದು. ಅದಕ್ಕಿಂತ್ತಲೂ, ಇವನಿಗಿರುವ ಚಿಲ್ಲರೆ ಸ್ವಾತಂತ್ರ್ಯವು ಮಾಯವಾಗುವುದು. ಈ ಅಸಮಾಧಾನವನ್ನು ಅಡಗಿಸಲು, ಫರೋಕನ ಕುಟುಂಬಕ್ಕೆ ಕೈರೋವಿನಲ್ಲಿರುವ ಎಲ್ ಅಜರ್ ವಿಶ್ವವಿದ್ಯಾಲಯವಿದೆ. ಇಲ್ಲಿಂದಲೇ ವರ್ಷವೂ ಹಲವು ನೂರು ಉಲೇಮರು ಉತ್ತೀರ್ಣರಾಗುತ್ತಾರೆ. ಇವರಲ್ಲಿ ಪ್ರತಿಯೊಬ್ಬನೂ ಫರೂಕನೇ ಖಲೀಫನಾಗಬೇಕಾಗಿ ಸಾರುವನು. 'ಮುಸ್ಲಿಮ್—ಅರಬ ಐಕ್ಯದ ಫಲವಾಗಿ ಈ ಅಮೀರನೇ ಪೆಲೆಸ್ತೀನ—ಟ್ರಾನ್ಸ್ ಜೋರ್ಡನ ಯಾನಗಳ ಸುಲ್ತಾನನಾಗುವನು' ಎಂದೂ ಹೊಗಳಿ ಅಮೀರನನ್ನು ಸಮಾಧಾನಿಸಿರುವರು.

ಅರಬ ಸ್ಥಾನದ ಇಬನ್ ಸೌದನೂ ದೊಡ್ಡ ಅರಸು, ಮಕ್ಕಾ ಮದೀನಗಳಿಗೆ ಹಾದಿ ಅವನ ಸ್ವಾಧೀನತೆಯಲ್ಲಿದೆ ನಿಜ. ಆದರೆ, ಮುಸ್ಲಿಮರಲ್ಲಿ ಅಧಿಕಪಕ್ಷದ ಮತ ಬೇರೆಯೇ.

ಫರೂಕನ ಸೋದರಿ ಫಾವ್‌ಜಿಯಾಳನ್ನು ಇರಾಕಿನ ಯುವರಾಜ ಮಹಮೂದ್‌ರಿಜಾನೊಡನೆ ವಿವಾಹವಾಗುವುದೆಂದೂ ನಿಶ್ಚಯವಾಗಿದೆ. ಇದರಿಂದ ಇರಾಕ್—ಈಜಿಪ್ತಗಳ ರಾಜಮನೆತನಗಳು ಒಂದಾಗುತ್ತವೆ. ಫಾವಜಿಯೂ ಶಾಜಾ ಸುನ್ನೀಮತದವಳು; ರಾಜ ಕುಮಾರನು ಶಿಯಾ ಮತದವನು. ಇವರನ್ನು ಒಂದು ಕೂಡಿಸುವ ಭಾರವೂ ಆ ಅಜರ್ ವಿದ್ಯಾಲಯದ ಅಧ್ಯಕ್ಷ ಶೇಕನ ಸಹಾಯಬೇಕು. ಇವನೀಗ ಒಂದು ಪತ್ರವನ್ನು ತಯಾರಿಸಿ, ಉಭಯ ಮತಗಳೂ [illegible]

THE

Canara Banking Corporation, Udipi, Ltd.

INCORPORATED IN BRITISH INDIA
ESTD 1906

BOARD OF DIRECTORS:

Dr U Sunder Ram Pai, M. B. & B. S., *President.*
M. R. Ry. R. M. Karnad, Avl., *Vice President.*
M. R. Ry. Kochikar Padmanabha Pai, Avl., B. A.,
M. R. Ry. B. Vaikunta Baliga, Avl., B. A., B. L.,
M. R. Ry. Kasturi Nagesh Pai Avl.,
M. R. Ry. Mijar Govinda Pai, Avl.,
Dr. U. Padmanabha Mallya, L. M. & S.,
M. R. Ry. M. Narayana Kamath, Avl., B. A.,
M. R. Ry. K. Narasimha Kamath, Avl.,
M. R. Ry. U. K. Bhujana Nayak, Avl.,

V. R. Kamath, B. A., LL. B.,
Manager.

WANTED

Agents for Silk Shirtings Coating Sarees etc. Pay Rs. 100 T. A. Extra Ask free samples and particulars.

Girson Knitting Works,
Ludhiana

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಛವಿನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಸಗಟು ರೂ. ಅ.	ಪರ್ಚೂನ ರೂ. ಅ.
ಬೆಳ್ತಿಗೆ ಅಕ್ಕಿ ಮುಡಿ	1 – 14	1 – 14
ರಾಶಿ ಅಕ್ಕಿ	3 – 8	4 – 0
ಸುಗ್ಗಿ	4 – 0	4 – 8
ಗುಡ್ಡು	4 – 10	4 – 10
ಘಾಟ ಅವ್ವಲ್ ಬೆಳ್ತಿಗೆ	4 – 7	4 – 7
ರಂಗೂನು ಬೆ. ಗೋ. ಗಳ್ಳೆ	7 – 2	7 – 4
ಎಲ್ಲೂರು ಬೆ. ಮು. ಗಳ್ಳೆ	3 – 14	4 – 0
ಗೋದಿ ಗೋಣಿ ಗಳ್ಳೆ	13 – 0	14 – 8
ತೊಗರಿ ಗೋಣಿ ಗಳ್ಳೆ	11 – 8	13 – 8
ಹುರುಳಿ ಗೋಣಿ ಗಳ್ಳೆ	6 – 0	6 – 2
ಕಡಲೆ ಗೋಣಿ ಗಳ್ಳೆ	9 – 8	10 – 8
ತೊಗರಿಬೇಳೆ ಗೋಣಿ ಗಳ್ಳೆ	17 – 8	18 – 0
ಉದ್ದು ಗೋಣಿ ಗಳ್ಳೆ	9 – 0	9 – 8
ಹೆಸರು ಗೋಣಿ ಗಳ್ಳೆ	9 – 12	10 – 8
ಊರುಬೆಲ್ಲ ಖಂಡಿ ಗಳ್ಳೆ	36 – 0	40 – 0
ಉಪ್ಪು ಗೋಣಿ ಗಳ್ಳೆ	4 – 8	5 – 4
ಕೊಬ್ರಿ ಖಂಡಿ ಗಳ್ಳೆ	46 – 8	46 – 8
ಎಳ್ಳಿಂಡಿ ಖಂಡಿ ಗಳ್ಳೆ	25 –	26 – 0
ತೆಂಗಿನ ಎಣ್ಣೆ ಮುಡಿ ಗಳ್ಳೆ	3 – 5	3 – 6
ಎಳ್ಳೆಣ್ಣೆ ಮುಡಿ ಗಳ್ಳೆ	6 – 0	7 – 0
ಚಿಮಿಣಿ ಎಣ್ಣೆ ಪೆಟ್ಟಿಗೆ ಗಳ್ಳೆ	6 – 5	7 – 5
ಮೋರಿಸ ಸಕ್ಕರೆ ಮು. ಗಳ್ಳೆ	2 – 13	2 – 14
ಮೆಣಸು	4 – 8	6 – 0
ಸಾಸಿವೆ ಮುಡಿ ಗಳ್ಳೆ	5 – 8	6 – 8
ಕಾಳುಮೆಣಸು ಜ ಪೇಗೆ	16 – 0	17 – 8
ಯೇಲಕ್ಕಿ ಬೀಜ ಮುಡಿ ಗಳ್ಳೆ	80 – 0	85 – 0
ಗೇರುಬೀಜ ಮು. ಗಳ್ಳೆ	3 – 14	3 – 15
ಕಬ್ಬಿಣ ಖಂಡಿ ಗಳ್ಳೆ	50 – 0	55 – 0
ಕಾಂಪ್ರು ತಗಡು ಮು. ಗಳ್ಳೆ	14 – 12	15 – 0
ಕಾಂಪ್ರು ಪಾತ್ರೆಗಳು ಮು. ಗಳ್ಳೆ	14 – 8	15 – 0
ಚೀನಿಬೆಳ್ಳಿ ಸೇರು ಗಳ್ಳೆ	13 – 8	14 – 0
ಹಿತ್ತಾಳೆ ತಗಡು ಮು. ಗಳ್ಳೆ	12 – 0	12 – 0
ಸತುವು ಗಳ್ಳೆ	22 – 8	23 – 0
ಮುಣಸೆ ಹುಳಿ ಖಂಡಿ ಗಳ್ಳೆ	40 – 0	45 – 8
ನೇಟಿವ್ ಕಾಫಿ ಖಂಡಿ ಗಳ್ಳೆ	140 – 0	148 – 0
ಪ್ಲಾಂಟರ ಕಾಫಿ ಖಂಡಿ ಗಳ್ಳೆ	185 – 0	198 – 0
ಮಡಿಕೇರಿ ಏಲಕ್ಕಿ ಮುಡಿ	35 – 0	39 – 0

ಡೋಂಗರೇ ಬಾಲಾಮೃತ

ಇದರಿಂದ

ಸೊರಗಿ ಕಡ್ಡಿಯಂತಾದ ಮಕ್ಕಳು

ಆರೋಗ್ಯ ಹೊಂದಿ

ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೫ನೆಯ ಬಹುಧಾನ್ಯ ಸಂವತ್ಸರದ ಆಷಾಢ ಬ॥ ೧೧ ಶನಿವಾರದಿಂದ ಶ್ರಾವಣ ಶು॥ ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೩ನೇಯ ಕಸಾ॥ ೭೩ ೭೭

ತಾ	ವಾರ	ತಿಥಿ	ಘ	ನಕ್ಷತ್ರ	ಘ	[illegible]	[illegible]
23	ಶನಿ	೨೪	೩೦	ರೋಹಿಣಿ	೫೦	?	
24	ರವಿ	೨೫	೨೫	ಮೃಗಶಿರಾ	೪೬	೨	
25	ಸೋ	೨೬	೧೯	ಆದ್ರಾ	೪೩	೯	
26	ಮಂ	೨೭	೧೩	ಪುನರ್ವಸು	೩೯	೧೦	
27	ಬುಧ	೨೮	೭	ಪುಷ್ಯ	೩೪	೧೧	
28	ಗುರು	೨೯	೧	ಆಶ್ಲೇಷಾ	೩೧	೧೨	
29	ಶುಕ್ರ	೧	೫೦	ಮಘಾ	೨೮	೧೩	

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕ ಶೂಲೆಗಳಿಗೂ ಅಮೃತ ಬೆಲೆ 0–4–0, 0–2–0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0–4

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ
ಬೆಲೆ 0–8–0, 0–4–0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರುಗುವಿಕೆ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1–0–0

ಪ್ರೊಪ್ರೈಟರ್.
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars K. R. GURU, *Managing Director*

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

'DILROZ' Redg

Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm, Sinus Fistula auxillary Abscess

There is no need of dressing the wounds, nor are baths prohibited.

Price Rs. 2 Postage extra.

TAHIR DIN,
Anarkali, LAHORE.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ
2 ಕುಂದಾಪುರದಿಂದ ಬಾಳೆಬರೆಗಾಗಿ ಶಿವಮೊಗ್ಗಾ
3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬಗಾಗಿ ಕೊಪ್ಪಾ, ಶೃಂಗೇರಿ, ತೀರ್ಥಹಳ್ಳಿ, ಶಿವಮೊಗ್ಗಾ ಹರಿಹರ ವರೆಗೆ
4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು ಕಡೂರು ವರೆಗೆ
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕಲೇಶಪುರ, ಹಾಸನ ಬೇಲೂರು, ಇತ್ಯಾದಿ ಸ್ಥಳಗಳಿಗೆ
6 ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

THE

Canara Industrial & Banking Syndicate Ltd.,

(Incorporated in British India)

Estd 1925.

Head Office: UDIPI, (S. India.)

Member:

RESERVE BANK OF INDIA,
BANKERS CLEARING HOUSE, BOMBAY

Statement of Affairs of the Syndicate as on 31st May 1938.

LIABILITIES		ASSETS	
Share Capital	Rs 3,66,680—0—0	Loans on Valuable Securities	Rs 13 [illegible] 209 —1—9
Reserves	2,16,700—0—0	Loans on Land Mortgages	3 06 800 13 0
Deposits	,, 30,53,210—6 5	Loans on Bills, Hundis & Promissory Notes	10 86 175—11 9
Due to Bankers	,, 8,99,018—3—7	Investments on G P Notes	10 88 [illegible] 03— —
Bills for Collection	,, 2 24,037—15—8	Investments on Shares of other Companies	[illegible] 3 360 1—0
Sundries	,, 3,3[illegible],051 14—6	Investments on Lands & Buildings	32 631 —2—3
		Bills for Collection	2 24,037—1[illegible]
		Sundries	1,57 829—1—8
		Cash in hand and at Bankers	3 03,839—13—4
Total Rs.	51,19,807—5—2	Total Rs	51,19807—5—2

DEVKARAN NANJEE'S Pure Silver Bars of 10 and 20 tolas bearing the seal of His Majesty's Mint are available for sale at all the Branches of the Syndicate.

A Branch of the Syndicate will be opened on Sunday, 31st July 1938 at Felix Pai Bazaar, Mangalore, Block No 1.

ಚಂದಾ ರೂ. 2-0-0. *Established 1906.* *Regd. No. M. 3406.* ಟಪ್ಪಾಲು ಹಾಸಲು ಸೇರಿ ರೂ. 2-1

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಲಾಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು. ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲ. ಗ್ರಹಶಾಂತಿಯೊಂದೇ ಎಂದು ನವಗ್ರಹ ಯಂತ್ರವಾಗಿದೆಯೆಂದು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯನುಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯ ವಾಗುವುದು. ಇಂಥ ವಸ್ತುವನ್ನು ಸರಿಯಾಗಿ ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮಹಾರ್ಧನೇಶರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಿ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ, ಕಳೆದುಕೊಂಡಿರುವ ಎಲ್ಲಾ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನನ್ನ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು. ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರೇಳು ಎಂಟೆಂಟು ಅಲ್ಲ ಹನ್ನೆರಡು-ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದು ಟಿಕೀಟು ಕಳಿಸಿದ್ದರೆ ಗ್ಯಾರಂಟೀ ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸುಮ್ಮನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಪ್ಯಾಕೇಜನ್ನು ಸರಿಯಾಗಿ ತಿರಸ್ಕರಿಸಿದರೆ ಜನ್ಮ ಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿಡಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದು, ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ, ವೃದ್ಧ—ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ... ಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೪ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ ೯ ರೂಪಾಯಿ ೬ ಆಣೆ ... ಒಂದರಿಂದ ನಾಲ್ಕು ಕಾರ್ಯಗಳು ಆಗಬೇಕಾಗಿದ್ದರೆ ಸ್ಪೆಶಲ್ ನಂಬ್ರನ್ನು ತರಿಸಿರಿ. ಬೆಲೆ ೫ ರೂ ೧೧ ಆ ... ಹೆಚ್ಚು ಕೆಲಸಗಳು ಕೈಗೂಡಬೇಕಾಗಿದ್ದರೆ ಸ್ಪೆಶಲ್ ನಂಬ್ರ ೧ನ್ನು ತರಿಸಿ. ಬೆಲೆ ೯ ರೂ ೧೧ ಆ ... ಪ್ರತಿಯೊಂದಕ್ಕೂ ೮ ಆಣೆ ಅಂಚೆವೆಚ್ಚ ಪ್ರತ್ಯೇಕವಾಗಿ. ಈ ವೇಳೆಕ್ಕೆ ಕಳಿಸಬೇಕಾದ ಪ್ರತಿಯೊಬ್ಬರಿಗೂ ೮ ಶಿಲಿಂಗು ಭಾಗ್ಯ ಬೀಳುವುದು. ಈ ಯಂತ್ರಗಳಿಗಾಗಿ ಬೇರೆ ಯಾವ ಸಾಧನಗಳೂ ಬೇಕಾಗಿಲ್ಲ.

ಧನಸಿದ್ಧಿ—ಹೆಚ್ಚಾಗಿ ಧನಪ್ರಾಪ್ತಿಯಾಗಬೇಕೆನ್ನುವರೂ ಬೇಗನೆ ಧನಪ್ರಾಪ್ತಿಯಾಗಬೇಕೆನ್ನುವರೂ ... ಕವಚವನ್ನು ತರಿಸಬೇಕು. ಇದನ್ನು ... ಕೊಂಡ ಒಳಗೆ ಧನಪ್ರಾಪ್ತಿಯಾಗುವುದಲ್ಲದೆ ... ಪರಿಸ್ಥಿತಿಯು ಸುಧಾರಿಸುವುದು. ಬೆಲೆ ೩ ರೂ ಬೆಳ್ಳಿಯದು ... ರೂ ಬಂಗಾರದ್ದು ... ಟಪ್ಪಾಲು ಹಾಸಲು ೮ ಆಣೆ.

ಹಸ್ತರೇಖೆ—ಹಸ್ತರೇಖೆಯನ್ನು ತೋರಿಸಬೇಕೆನ್ನುವ ಸ್ತ್ರೀಪುರುಷರು ಬಲಗೈಯ ... ವರೆಗಿನ ನಮ್ಮ ವಿಳಾಸಕ್ಕೆ ಬಂದು ಬಿಟ್ಟಿರಬೇಕು. ಪರಸ್ಥಳದವರ ಪುರುಷರು ಬಲಗೈಯ ಹಾಗು ಸ್ತ್ರೀಯರು ಎಡಗೈಯ ಗುರುತನ್ನು ಕಾಗದದ ಮೇಲೆ ಕರೀ ಮಸಿಯಿಂದ ಮೂಡಿಸಿ ಕಳಿಸಿಕೊಡಬೇಕು. ಹಸ್ತರೇಖೆಯನ್ನು ನೋಡುವ ಫೀಜು ... ಪರಸ್ಥಳದವರು ಹಸ್ತರೇಖೆ ... ಕಾಗದದ ಜೊತೆ ... ರೂ ೧ ಆ ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:—ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರುಗಳನ್ನಿಟ್ಟು ತಮ್ಮ ಮನಸ್ಸಿಗೆ ತಿಳಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಅದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಸಂದರ್ಭವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:—ಪಂಜಾಬ್ ಸಿವಿಲ್ ಸೆಕ್ರೆಟರಿಯೇಟ್ (ಎ. ಆರ್ ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ... ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವುದಕ್ಕಾಗಿ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ ರೂ. ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ ೩ ರೂ ೧೦ ಆಣೆ ಬೀಳುವುದು.

ವಿಳಾಸ — **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಚಾಕುತಿವುಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

ಸಂಪುಟ ೩೨] ತಾರೀಖು ೨೯ನೇ ಜುಲಾಯಿ ೧೯೩೮ (29 – 7 – 1938.) [ಸಂಚಿಕೆ ೨

★

24 ಪುಟಗಳು **24**

ಅನುಕ್ರಮಣಿಕೆ

ಮಧ್ಯಪ್ರಾಂತ್ಯದ ಮಂತ್ರಿಗಳು

★

ಚೀನಾ ಜಪಾನ ಸಂಘರ್ಷ

★

ಚೀನಿ ಸ್ತ್ರೀಯರ ಮೇಲೆ ಅತ್ಯಾಚಾರ

★

ಜಯ ಯಾರಿಗೆ ಲಭಿಸಬೇಕು ಜಪಾನಿಗೊ ಚೀನಕ್ಕೊ?

★

ದ[illegible] ನಿವಾರಣ

ಅವ[illegible]ತ್ತಸರದಲ್ಲಿ ರೈತರ ಮೇಲೆ ಲಾಥಿಪ್ರಯೋಗ

★

ಆಧುನಿಕ ಭಾರತದ ನಿರ್ಮಾಪಕರು

★

ಅರೆ ನೋಟಗಳು

★

ಕೋರ್ಟಿನಲ್ಲಿ ಗಂಡ ಹೆಂಡಿರ ಜಗಳ

★

ಹಿಮಾಲಯದ ತುದಿಯ ಮೇಲೆ ವಾಸಿಸುವ ಜನರು

★

ಪುರುಷರಲ್ಲಿ ಪರಧಾಕ್ರ[illegible]ಗುವ ದೇಶ

★

ಶಾಂತಿ ಸ್ಥಾಪನೆಗಾಗಿ ಪ್ರಯತ್ನಗಳು

★

ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಇಂಡಿಯಾ ವಿಷಯಕವಾದ ಪ್ರಶ್ನೋತ್ತರಗಳು

★



ವಿಶ್ವಕವಿ ರವೀಂದ್ರನಾಥ ಠಾಗೋರರವರು.

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER
A CRORE.

ESTED. 1906.
CANARA BANK
LIMITED.

ಅಂಕೆ-ಸಂಖ್ಯೆಗಳು

ಮದ್ರಾಸು ಪ್ರಾಂತ್ಯದಲ್ಲಿ ಜನರಿಗೆ ವಿಷ ಹಾಕಿದ ಮೊಕದ್ದಮೆಗಳು 426. ಹಿಂದಣ ವರ್ಷ 368. 266 ಮೊಕದ್ದಮೆಗಳಲ್ಲಿ ರುಜು ವಾತು ದೊರೆತಿದೆ. ಅಫೀಮು 88, ದತ್ತೂರ 28, ಮುಖ್ಯ ವಿಷಗಳು. 8227 'ವಸ್ತು'ಗಳನ್ನು ಪೋಲೀಸರು ವಿಷಪರೀಕ್ಷೆಗಾಗಿ ಕಳಿಸಿದ್ದರು.

ಜಾನುವಾರುಗಳಲ್ಲಿ 24ಕ್ಕೆ ವಿಷಹಾಕಿದ್ದು ತಿಳಿದುಬಂದಿದೆ.

ಜ ಜ ಜ ಜ ಜ

ಕೋಲಾರ ಗನಿಗಳಿಂದ ಹದಿನೈದು ದಿನಗಳಲ್ಲಿ ದೊರೆತ ಚಿನ್ನ 18½ ಲಕ್ಷ ರೂಪಾಯಿಯದು.

ಜ ಜ ಜ ಜ ಜ

ಇಂಡಿಯದ ವ್ಯಾಪಾರ ಜೂನ್ ತಿಂಗಳಲ್ಲಿ ಆಮದು 1200 ಲಕ್ಷ ರೂಪಾಯಿಯದ್ದು; ರಫ್ತು 1272 ಲಕ್ಷ ರೂಪಾಯಿಯದು.

ಜ ಜ ಜ ಜ ಜ

ಗೋಧಿಯ ದಾಸ್ತಾನು: ಅಮೇರಿಕ 978 ಮಿಲಿಯ ಬುಶೆಲ್ಸ್; ಕೆನಡಾ 364 ಮಿಲಿಯ ಬುಶೆಲ್ಸ್; ಅರ್ಜೆಂಟೀನ 1600 ಮಿಲ್ಲಿಯ ಕ್ವಾರ್ಟರ್ಸ್; ಆಸ್ಟ್ರೇಲ್ಯ 26½ ಮಿಲಿಯ ಬುಶೆಲ್ಸ್.

ಜ ಜ ಜ ಜ ಜ

ನಮ್ಮ ಸಂಸ್ಥಾನದ ಆರು ಜಿಲ್ಲೆಗಳಲ್ಲಿ-ನಿರುದ್ಯೋಗಿ ಶಿಕ್ಷಿತರು 3171. ಇವರಲ್ಲಿ ಹೆಂಗಸರು 106.

ಜ ಜ ಜ ಜ ಜ

ಡಚ್ಚರ ಪೂರ್ವ ಹಿಂದೀ ದ್ವೀಪಗಳಿಂದ 66 ಮಿಲ್ಲಿಯ ಕಿಲೋಗ್ರೆಮ್ ಚಾ ರಫ್ತಾಗುತ್ತದೆ. ಜಾವಾದಿಂದ 53, ಸುಮಾತ್ರದಿಂದ 13.

ಜ ಜ ಜ ಜ ಜ

1940ರ ಒಳಗೆ ಇಂಗ್ಲೆಂಡಿನ ಪ್ರಥಮ ಶ್ರೇಣಿಯ ವಾಯು ವಿಮಾನಗಳ ಸಂಖ್ಯೆ 2370 ಆಗುವುದು. ಇವುಗಳಲ್ಲಿ 96000 ಜನರನ್ನು ಕೆಲಸಕ್ಕೆ ನೇಮಿಸುವರು. ಒಟ್ಟು ಖರ್ಚು 184 ಮಿಲ್ಲಿಯ ಪವನು.

ಜ ಜ ಜ ಜ ಜ

ಬ್ರಿಟಿಷ್ ದ್ವೀಪಗಳಲ್ಲಿನ ವ್ಯಾಪಾರದ ಮೊಬಲಗು, ಕಳೆದ ಆರು ತಿಂಗಳಲ್ಲಿ ರಫ್ತು 266 ಮಿಲ್ಲಿಯ ಪವನು. ರಫ್ತು ಕಳೆದ ವರ್ಷಕ್ಕಿಂತ 25 ಮಿಲ್ಲಿಯ ಪವನು ಕಡಮೆ.

ಜ ಜ ಜ ಜ ಜ

ಬ್ರಿಟಿಷರು ಎತ್ತಿದ ಕಲ್ಲಿದ್ದಲು, ಮೂರು ತಿಂಗಳಲ್ಲಿ 60 ಮಿಲ್ಲಿಯ ಖಂಡಿ; ಮಾರಿದುದರ ಬೆಲೆ 48 ಮಿಲ್ಲಿಯ ಪವನು. ನಷ್ಟ—5 ಮಿಲ್ಲಿಯ ಪವನು.

ಜ ಜ ಜ ಜ ಜ

ಬಂಗಾಳದ ಮುಖ್ಯ ರಫ್ತು: ಸಣಬು. ಈ ವರ್ಷ ಬರೀ 194000 ಕಟ್ಟು ರಫ್ತಾಗಿದೆ,

50,000
ಕುಷ್ಠರೋಗಿಗಳು ಸಂಪೂರ್ಣ ಗುಣಮುಖರಾಗಿರುವರು!

OFFICE OF MESSRS. REDDY & Co.,



GOPALAPURAM (E. GODAVARY.)

ಕುಷ್ಠರೋಗ, ಚಿಕಿತ್ಸೆಯನ್ನು ಮತ್ತು ಮೇಹಾದಿ ರೋಗಗಳ ಚಿಕಿತ್ಸೆ—ಒಂದು ವಿಶೇಷತ್ವ.

ಶ್ರೀ ಕೃಷ್ಣ ಆಶ್ರಮ — ರೆಡ್ಡಿ ಮತ್ತು ಕಂಪೆನಿ. ಗೋಪಾಲಪುರಂ, ಪೂರ್ವ ಗೋದಾವರಿ.

ಆರೋಗ್ಯವಂತ ಮಕ್ಕಳೇ

ಸುಖಿಗಳಾದ ಮಕ್ಕಳು.

ನಿಮ್ಮ ಮಕ್ಕಳು ಸುಖಿಗಳಾಗಿ, ಹರ್ಷಚಿತ್ತ ಮತ್ತು ಕಾಂತಿಯುಕ್ತರಾಗಬೇಕೆಂಬುದೂ ನಿಮ್ಮ ಇಚ್ಛೆಯಾಗಿರುತ್ತದೆ. ಅವರು ಆರೋಗ್ಯವಂತರಾದರೆ ಮಾತ್ರ ಅವರು ಸುಖಿಗಳಾಗುವರು.

ಆರೋಗ್ಯ, ಬಲ, ಚೇತನ್ಯವು ತಿನಿಸಿನ ಮೇಲೆ ಹೊಂದಿಕೊಂಡಿವೆ. ನಿಮ್ಮ ಮಕ್ಕಳಿಗೆ ನೀವು ತುಂಬಾ ಆಹಾರವನ್ನು ಕೊಡಬಹುದು, ಆದರೆ ಸಕ್ಕಲೂ ನೀವು ಉಪಯೋಗಿಸುವ ಸಾಮಾನ್ಯ ತರದ ಆಹಾರದಲ್ಲಿ ಬಲದಾಯಕ ಮತ್ತು ಚೇತನದಾಯಕ ಗುಣಗಳಿರುವುದಿಲ್ಲ.

ರುಚಿಕರವಾದ 'ಓವಲ್ಟಿನ್' ಸಂಪೂರ್ಣ ಪುಷ್ಟಿದಾಯಕ ತಿನಸಾಗಿರುತ್ತದೆ. ಒಳ್ಳೆ ಪಕ್ವವಾದ ಬಾರ್ಲಿಯಿಂದ ತಯಾರಿಸಿದ ಮಾಲ್ಟು ಮತ್ತು ದನವಿನ ಸವಿಯಾದ ಪುಷ್ಟಿದಾಯಕ ಹಾಲು ಎಂಬ ನೈಸರ್ಗಿಕ ಟಾನಿಕ್‌ಗಳಿಂದ ಸಿದ್ಧವಾಗಿ, ಇತರ ಅನೇಕ ಮಾದಾ ಗುಣಗಳಿಂದ ಕೂಡಿದ್ದಾಗಿ 'ಓವಲ್ಟಿನ್' ದೇಹಕ್ಕೆ, ಮೆದುಳಿಗೆ, ನರಗಳಿಗೆ ಬೇಕಾದ ಪೌಷ್ಟಿಕವನ್ನು ಒದಗಿಸಿ, ನಿಮಗೆ ಉತ್ತಮ ತರದ ಆರೋಗ್ಯವನ್ನು ಒದಗಿಸುತ್ತದೆ.

ಜಗದ್ವಿಖ್ಯಾತವಾದ ಈ ಪಾನೀಯವನ್ನು ನಿಮ್ಮ ಮಕ್ಕಳಿಗೆ ಕೊಡಲು ಮರೆಯಬೇಡಿರಿ. ಆದರೆ ನಮಿಲಿ ಪ್ಲಾಟಿನ ಕುರಿತು ಜಾಗರೂಕರಾಗಿರಿ. 'ಓವಲ್ಟಿನ್' ಒಂದೇ ಸ್ವರೂಪವಾಗುತ್ತದೆ. ಅದು ಸಿಹಿ, ಗುಣಕಾರಿಯೂ, ಬಲದಾಯಕವೂ, ಪರಿಪುಷ್ಟಿಯುಕ್ತವೂ ಆಗಿದ್ದು, ಆದರಲ್ಲಿ ಕಂಮಿತಿಯು ಹೆಚ್ಚು. 'ಓವಲ್ಟಿನ್'ನ ಕಾರ್ಖಾನೆಯಲ್ಲಿ ಹಸ್ತ ಸ್ಪರ್ಶವಾಗುವುದಿಲ್ಲ.

ಓವಲ್‌ಟಿನ್ ಪುಷ್ಟಿದಾಯಕ ಆಹಾರ ಪಾನೀಯ.

'OVALTINE'

ದೇಹವನ್ನು ಬೆಳೆಯಿಸುತ್ತದೆ, ಮನಸ್ಸನ್ನು ಶುಭ್ರಗೊಳಿಸುತ್ತದೆ.

ಎಲ್ಲಾ ಅಂಗಡಿಗಳಲ್ಲೂ, ದವಾಖಾನೆಗಳಲ್ಲಿ ದೊರಕುತ್ತದೆ.

ಏಜಂಟರು:—ಜೇಮ್ಸ್ ರ್‍ಯಾಟ್, ಲಿಮಿಟೆಡ್, 85, ರಿಪ್ಪನ್ ಸ್ಟ್ರೀಟ್,

ಕಲ್ಕತ್ತಾ, ಅಲ್ಲದೆ ಬೊಂಬಾಯಿ, ಮದ್ರಾಸು ಮತ್ತು ಕರಾಚಿ.

OV/301

ಇನ್ನು ಮುಂದೆ "ಸರಕಾರ್ ಸಲಾಂ" ಇಲ್ಲ!

ಒರಿಸ್ಸದಲ್ಲಿ ಬಂದೀಖಾನೆಗಳ ಸುಧಾರಣೆ.

ಕಾಂಗ್ರೆಸು ಮಂತ್ರಿ ಮಂಡಲಗಳು ಅಧಿಕಾರಕ್ಕೆ ಬರುವ ಮೊದಲು ಭಾರತೀಯ ಜೈಲುಗಳಲ್ಲಿ ಕೈದಿಗಳ ಸ್ವಾಭಿಮಾನಕ್ಕೆ ಭಂಗವನ್ನು ಲೋಪವನ್ನೂ ತರುವ ಹಲವು ಪದ್ಧತಿಗಳು ಇದ್ದುವು. ಯಾರಾದರೂ ಅಧಿಕಾರಿಗಳು ಜೈಲು ಸಂದರ್ಶನೆಗೆ ಬಂದಾಗ, ಕೈದಿಗಳು ಅವರನ್ನು ನೋಡಿ 'ಸರಕಾರ್ ಸಲಾಮ್' ಎಂದುಕೊಂಡು ಬಗ್ಗಿ ವಂದನೆ ಮಾಡುವ ಕ್ರಮವೂ ಅವುಗಳಲ್ಲಿ ಒಂದಾಗಿದ್ದಿತು. ಈಗ ಅಂಥ ಕ್ರಮಗಳನ್ನು ಒಂದೊಂದಾಗಿ ತೆಗೆದು ಹಾಕುವ ಪ್ರಯತ್ನಗಳನ್ನು ಕಾಂಗ್ರೆಸ ಮಂತ್ರಿ ಮಂಡಲಗಳು ಮಾಡುತ್ತಿರುವದು ಸಂತೋಷದಾಯಕವಾಗಿದೆ.

ಒರಿಸ್ಸದ ಪ್ರಧಾನಮಂತ್ರಿ ಶ್ರೀ ವಿಶ್ವನಾಥ ದಾಸ, ಜೈಲುಗಳ ಮಂತ್ರಿ ಶ್ರೀ ಬೋಧರಾಮ ದುಬೇ, ಜೈಲುಗಳ ಇನ್ಸಪೆಕ್ಟರ ಜನರಲ್, ಮತ್ತು ಕಟಕಿನ ಜಿಲ್ಲಾ ಮೆಜಿಸ್ಟ್ರೇಟ ಇವರ ಒಂದು ಸಭೆ ಕೂಡಿ, ಪರಸ್ಪರ ವಿಚಾರ ಪರಾಮರ್ಶೆಗಳು ನಡೆದು 'ಸರಕಾರ್ ಸಲಾಮ್'ನ್ನು ತೆಗೆದು ಹಾಕಬೇಕೆಂದೂ, ಈಗ 'ಎ' ತರಗತಿಯ ಕೈದಿಗಳಿಗೆ ಇರುವ ಅನುಕೂಲತೆಗಳನ್ನು ಎಲ್ಲ ರಾಜಕೀಯ ಕೈದಿಗಳಿಗೂ ಕೊಡಬೇಕೆಂದೂ, ಇತ್ಯಾದಿ ಜೈಲುಗಳಲ್ಲಿ ಹಲವು ಸುಧಾರಣೆ ಕಾರ್ಯಗಳನ್ನು ಕೈಕೊಳ್ಳುವ ನಿರ್ಧಾರ ಮಾಡಿರುತ್ತಾರೆ.

ಆಗತಾನೇ ಆಗಿರುವ ಹೊಸ ನಿಯಮಗಳಿಗನುಗುಣವಾಗಿ, ರಾಜಕೀಯ ಕೈದಿಗಳಿಗೆ ವರ್ತಮಾನ ಪತ್ರಿಕೆಗಳನ್ನು ಓದಲಿಕ್ಕೆ ಕೊಡುವ ಮತ್ತು ಪೌಷ್ಟಿಕವಾದ ಉತ್ತಮ ಆಹಾರ ಪದಾರ್ಥಗಳನ್ನು ಕೊಡುವ ವ್ಯವಸ್ಥೆ ಆಗಿರುತ್ತದೆ. ಆಹಾರದಲ್ಲಿ ಜೀವಾತುಗಳಿಂದ ಕೂಡಿರುವ ಕೈಯಿಂದ ಕುಟ್ಟಿ ಮಾಡಿದ ಅಕ್ಕಿಯ ಅನ್ನವು ಸೇರಿರುತ್ತದೆ. ಮೊದಲಿನಂತೆ ಮಿಲ್ ಅಕ್ಕಿಯ ಅನ್ನವನ್ನು ಇನ್ನು ಮುಂದೆ ಕೊಡುವದಿಲ್ಲ. ಆಹಾರ ಪದಾರ್ಥಗಳನ್ನು ವರ್ಷಗಟ್ಟಲೆ ಬೇಕಾಗುವಷ್ಟು ಒಂದೇ ಬಾರಿಗೆ ಸಂಗ್ರಹಿಸಿಡುವದರಿಂದ ಅವು ಕೆಟ್ಟು ಅವುಗಳ ಪೌಷ್ಟಿಕಾಂಶವು ಕಡಿಮೆ ಅಥವಾ ಸಂಪೂರ್ಣ ನಷ್ಟವಾಗುವ ಸಂಭವವಿರುವುದರಿಂದ, ಆಗಾಗ ಬೇಕಾದಷ್ಟು ಪದಾರ್ಥಗಳನ್ನು ಆಗಾಗಲೇ ಕೊಂಡುಕೊಳ್ಳಲಾಗುವುದು. ಮಾತ್ರವಲ್ಲ ಜೈಲುಗಳ ತೋಟಗಳಲ್ಲಿ ನಟ್ಟು ಬೆಳಸಿದ ಕಾಯಿಪಲ್ಲೆ ಮೊದಲಾದ ಉತ್ಪತ್ತಿಗಳಲ್ಲಿ ಜೈಲುಗಳಲ್ಲಿ ಬೇಕಾದಷ್ಟನ್ನು ಖರ್ಚು ಮಾಡಿಯೂ ಉಳಿಯುವುದಾದರೆ, ಅಂಥ ಉಳಿಕೆಯನ್ನು ಮಾತ್ರ ಆಸ್ಪತ್ರೆ ಮೊದಲಾದ ಸಂಸ್ಥೆಗಳಿಗೆ ಮಾರಬಹುದೆಂದು ಒರಿಸ್ಸಾ ಸರಕಾರವು ನಿರ್ಣಯಿಸಿರುತ್ತದೆ. ಮನುಷ್ಯತ್ವವನ್ನು ಕಾಪಾಡುವ ದೃಷ್ಟಿಯಿಂದಾದರೂ ಇಂಥ ಸುಧಾರಣೆಗಳು ಎಲ್ಲ ಜೈಲುಗಳಲ್ಲಿ ಆಗುವದು ಸಮಂಜಸವಾಗಿದೆ ಎಂದು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ.

ಜೂನ್‌ನಲ್ಲಿ. ಇನ್ನು ವರ್ಷಗಳಲ್ಲಿ ಜೂನ್‌ನಲ್ಲಿ ಮೂರು ಲಕ್ಷ ಕಟ್ಟುಗಳಿಗೆ ಕಡಿಮೆಯಾಗದಷ್ಟು ರಫ್ತಾಗುತ್ತಿತ್ತು.

ಜ ಜ ಜ ಜ ಜ

ಲಂಡನು: ಅರ್ಧ ವರ್ಷಗಳಲ್ಲಿ ಹೆದ್ದಾರಿಗಳಲ್ಲಿ ಅಪಘಾತಗಳ ಸಂಖ್ಯೆ 106569. ಜೂನ್‌ನಲ್ಲಿ ಮಾತ್ರ ಮರಣಗಳು 586; ಮೋಟರು ಓಡಾಟದ ಫಲ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರ ಗದರಿಂ । ಹರುಷದಾಯುತಿ ಮತೆ ವಿಷ್ವವ ಸುಡುವ ಬರುತಿರುವ ॥ ಗರಲಕ್ಕನರಂಜಿದರೆ ಸುಧೆಯನು ಮರಿತು ಕ್ಷುದ್ದುರ ಕೆರದ ಕುಳಿತರೆ । ತೆರೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ತಾರೀಕು ೨೯–೭–೧೯೩೮ | ತಾರೀಕು 29 – 7 – 1938

ಮಧ್ಯಪ್ರಾಂತ್ಯದ ಮಂತ್ರಿಗಳು

ರಾಜೀನಾಮೆಯ ಗೊಂದಲ

ಮೇ ತಿಂಗಳಲ್ಲಿ, ಈ ಮಂತ್ರಿ ಮಂಡಲದ ರಗಳೆಗಳನ್ನೊಮ್ಮೆ ತೀರಿಸಿದಾಗ, ಮಂತ್ರಿಗಳ ವರ್ತನೆಯು ಅತ್ಯಾಕ್ಷೇಪಕರವಾದುದರಿಂದ ಈ ರಗಳೆಗಳು ಹೇಗೆ ತೀರಬಹುದೋ ಎಂಬ ಸಂದೇಹ ಭಯಗಳು ಇದ್ದುವು. ಈಗ ಈ ಮಂತ್ರಿ ಮಂಡಲದಲ್ಲಿ ಕೆಲವರು ತಾವೇ ರಾಜೀನಾಮೆ ಕೊಟ್ಟರು, ಇತರರಲ್ಲಿ ಗವರ್ನರರೇ ಡಿಸ್‌ಮಿಸ್ ಮಾಡಬೇಕಾಯಿತು. ಹೀಗೇಕಾಯಿತು

ಹೆಸರಿಗೆ ಮಾತ್ರ ಸ್ವತಂತ್ರವೆನ್ನುವ ಮಂತ್ರಿಕೂಟಗಳು ಉಳಿಯಲೂ ಅಳಿಯಲೂ ಇಶ್ಯರ್ಥವು ಅವರ ಮೇಲ್ವಿಚಾರಕರಾದ ಇತರ ಸಂಸ್ಥೆಗಳ ಕೈಯಲ್ಲಿರುವುದರಿಂದ ಹೀಗಾಯಿತೆಂದು ಆಕ್ಷೇಪಕರು ವಿವರಿಸುವರು

ಡಾ। ಖಾರೆಯವರು ಅವರಿಬ್ಬರ ಸಹಕಾರಿಗಳೂ ಮೊದಲಾಗಿ ಗವರ್ನರರಿಗೆ ತಮ್ಮ ರಾಜೀನಾಮೆಗಳನ್ನು ಒಪ್ಪಿಸಿದರು. ಕಾನೂನು ಪ್ರಕಾರ ಇದು ಹೀಗೆಯೇ ಆಗತಕ್ಕದು. ಗವರ್ನರ್‌ರು ಈ ರಾಜೀನಾಮೆಗಳನ್ನು ಕಾನೂನು ಪ್ರಕಾರ ಅಂಗೀಕರಿಸಿದರು. ಉಳಿದ ಮಂತ್ರಿಗಳನ್ನು ಅವರು ಡಿಸ್‌ಮಿಸ್ ಮಾಡಬೇಕಾಯಿತು

ಅಷ್ಟರಲ್ಲಿ ರಾಜೀನಾಮೆಕೊಟ್ಟ ಡಾ। ಖಾರೇ ಮತ್ತವರ ಸಹಕಾರಿಗಳಿಗೆ ಕಾಂಗ್ರೆಸ್ ಮೇಲಧಿಕಾರಿಗಳು ರಾಜೀನಾಮೆ ಹಿಂತೆಗೆದುಕೊಳ್ಳಬೇಕಾಗಿಯೂ, ಕಾರ್ಯಕಾರೀ ಮಂಡಳಿಯು ತಿಳಿಸುವ ವರೆಗೆ ಕಾಯಬೇಕಾಗಿಯೂ ತಿಳಿಸಿದರು. ಹಾಗೆ ತಿಳಿಸಿದ ಪತ್ರವು ಮಾತ್ರ ಮಂತ್ರಿಯವರಿಗೆ ತಲುಪಿತೋ ಇಲ್ಲವೋ ತಿಳಿದಿಲ್ಲ. ಏಕೆಂದರೆ, ಅದನ್ನು ನೂತನಾಲೋಚಿಸಲು ಕಾಂಗ್ರೆಸ್ ಕಮಿಟಿಯು ಅಧ್ಯಕ್ಷರ ಮೂಲಕ ರವಾನಿಸಲಾಗಿತ್ತು. ರಾಜೀನಾಮೆ ಕೊಡದೆ ಡಿಸ್‌ಮಿಸ್ ಹೊಂದಿದ ಮಂತ್ರಿಗಳು ಮಹಾ ಕೋಪಗೊಂಡ [illegible] ಡಾ। ಖಾರೆಯವರನ್ನು ಕಾರಣ [illegible] ಪತ್ರವಾಹಕರ ತಿಳಿಸಿರುವರು. ಡಿಸ್‌ಮಿಸ್ ಹೊಂದಿದವರು, ರಾಜೀನಾಮೆ ಕೊಡಬಾರದೆಂದೂ ಅದೇ ಪತ್ರದಲ್ಲಿತ್ತು. “ಎಲ್ಲ ಮಂತ್ರಿಗಳು ಒಮ್ಮೆಲೇ ರಾಜೀನಾಮೆ ಕೊಡುವುದು ಒಳ್ಳೇಯ ಕ್ರಮವಾದರೂ ನಮಗೆ ರಾಜೀನಾಮೆ ಕೊಡಲು ಕಾಂಗ್ರೆಸು ಕಾರ್ಯಕಾರೀ ಮಂಡಲವು ತಿಳಿಸುವವರೆಗೆ ಸ್ವಾತಂತ್ರ್ಯವಿಲ್ಲ” ಎಂದೇ ಈ ಮಂತ್ರಿಗಳು ಗವರ್ನರರಿಗೆ ತಿಳಿಸಿದರು.

ಕಾಂಗ್ರೆಸಿನ ಅಧಿನಾಯಕರ ಮಾತಿಗೊಳಗಾಗಿ ಮಂತ್ರಿಗಳಾದವರು ವೋಟರರ ಪ್ರತಿನಿಧಿಗಳಾಗಿಯೂ ವರ್ತಿಸಲು ಜವಾಬ್ದಾರಿಯುಳ್ಳವರೇ ಅಲ್ಲವೆ? ಇವೆರಡು ಮಂದಿಗಳೊಳಗೆ ಯಾರ ಕಡೆಯ ಜವಾಬ್ದಾರಿ ಹೆಚ್ಚಿನದು?”

ಕಾನೂನಿನಂತೆ ವರ್ತಿಸಲಾಗದಿದ್ದುವಲ್ಲಿ ರಾಜೀನಾಮೆಯೊಂದೇ ಉಪಾಯ, ಕರ್ತವ್ಯ. ಡಾ। ಖಾರೆಯವರ ವರ್ತನವು ಸರಿಯೋ ತಪ್ಪೋ ತಿಳಿಯದು, ಅವರ ಸಹಯೋಗಿಗಳು ವರ್ತಿಸಿರುವುದು ಕಾನೂನಿಗೆ ಸರಿಯಲ್ಲ ಎಂದೇ ಕಾನೂನು ಎನುವದು.

ಗಾಂಧಿಜಿಯವರ ಸತ್ಯಾಗ್ರಹ ತತ್ವ

ಪೆಲೆಸ್ತೀನದ ಯಹೂದ್ಯರಿಗ ಉಪದೇಶ

ಕರ್ನಲ್ ವೆಜವುಡ್ಡರು ಪೆಲಸ್ತೀನದ ಯಹೂದ್ಯರಿಗೊಂದು ಪತ್ರ ಬರೆದು—ಗಾಂಧಿಜಿಯವರು ಇಂಡಿಯದಲ್ಲಿ ದಕ್ಷಿಣಾಫ್ರಿಕದಲ್ಲಿ ಕೈಕೊಂಡ ಸತ್ಯಾಗ್ರಹ ಕ್ರಮವನ್ನೇ ಅವರು ಅಂಗೀಕರಿಸಬೇಕೆಂದೂ, ಆದರೆ ಹಾಗೆ ಮಾಡಲು ಸರ್ಕಾರ [illegible] ಒಂದಾಗಿ ಬೇಕೆಂದೂ ಕಾರಾಗೃಹಕ್ಕೆ ಹೋಗಲು ಸಿದ್ಧತೆ ಹೊಂದಬೇಕೆಂದೂ ಸೂಚಿಸಿರುವರೆಂದು ಲಂಡನ್ ಪತ್ರಗಳಲ್ಲಿ ಪ್ರಕಟವಾದೊಡನೆ ಸಾಮಾಜಿಕ ಬಹಿಷ್ಕಾರ ಪ್ರತೀಕಾರವನ್ನು [illegible] ಅಸಹಕಾರಿಗಳಾಗಬೇಕಾಗುವುದು

ನಿರಪರಾಧಿಗಳಾದ ಅರಬರನ್ನು ಕೊಲ್ಲುವ ಪ್ರತಿಹಿಂಸೆಯಿಂದ ನೈತಿಕ ದೃಷ್ಟ್ಯಾ ಲಾಭವಿಲ್ಲ. ಉಪಯೋಗವಿಲ್ಲ. ಪಕ್ಕದ ಕಾನೂನು ವ್ಯರ್ಥವಾದೊಡನೆ [illegible] ಒಂದು ವೇಳೆ ನಿರಪರಾಧಿಗಳನ್ನು ಕೊಲ್ಲುವುದಕ್ಕಿಂತ ಉತ್ತಮ [illegible] ಅಗತ್ಯವಿಲ್ಲ [illegible] ಪಕ್ಷವಾಗಿಲ್ಲ.

ಅರಬರಿಗೆ ಹೆಚ್ಚಿ [illegible] ದೊರೆತದ್ದು [illegible] ಅಭಿಪ್ರಾಯ ಹೇಳಿರುವರು

ಮೆಡಮ್ ಚಿಯಾಂಗರವರು

ಚೀನೀಯ ಮಹಿಳಾ ವರ್ಗಕ್ಕೆ ಸಂದೇಶ

ದೇಶರಕ್ಷಣೆಯ ಈ ಯುದ್ಧದಲ್ಲಿ [illegible] ಮಹಿಳಾ ವರ್ಗದ್ದೇ ಇದೆ. ಗ್ರಾಮ, ನಗರ [illegible] ದೃಷ್ಟಿ [illegible] ಎಲ್ಲರೂ [illegible] ಮಹಿಳೆಯರು [illegible] ಈ ಕರ್ತವ್ಯ [illegible]

ಯುದ್ಧಾರಂಭವಾದಂದಿನಿಂದ ಸಾವಿರಾರು ಮಹಿಳೆಯರು ಮನೆ ಬಿಟ್ಟು, ಯುದ್ಧರಂಗದಲ್ಲಿ ಅತಿ ಮಹತ್ವದ ಕಾರ್ಯಗಳಲ್ಲಿ ನಿರತರಾಗಿ ಕೀರ್ತಿಹೊಂದಿರುವರು. ಜೀವದಾಸೆ ತೊರೆದು, ರಣದ ಮುಂಭಾಗದಲ್ಲಿದ್ದು ಕಾರ್ಯ ನಿರ್ವಹಿಸಿದವರ ಹೆಸರ ಅಜರಾಮರವಾಗಿ ಪ್ರಪಂಚದಲ್ಲೆಲ್ಲ ಮೆರೆದಿದೆ

ಆದರೂ ಇನ್ನೂ ವ್ಯವಸ್ಥೆಯಾಗತಕ್ಕುದಿದೆ. ಆದುದರಿಂದಲೇ ನಾವಿನ್ನೂ ಅಷ್ಟು ವಿಜಯಹೊಂದಿಲ್ಲ. ನಮ್ಮ ಸ್ವಕೀಯವಾದ ವಿಚಾರಗಳನ್ನು ಮೂಲೆಗೊತ್ತಿ, ದೇಶಹಿತವನ್ನೇ ಮುಂದಿಟ್ಟುಕೊಳ್ಳೋಣ

ನಾವು ಖಂಡಿತವಾಗಿಯೂ ಜಾಗ್ರತರಾಗತಕ್ಕದು. ಎಲ್ಲರೂ ಒಂದಾಗಿ ಜನಾಂಗದ ಬಲವನ್ನು ಹೆಚ್ಚಿಸತಕ್ಕದು. ಪುನರುದ್ಧಾರದ ಅಸ್ತಿಭಾರವನ್ನು ಕಟ್ಟತಕ್ಕದು. ಇತಿಹಾಸದಲ್ಲಿ ನೂತನ ಪ್ರಕರಣವನ್ನೇ ಬರೆಯ ತೊಡಗೋಣ. ಜನಾಂಗಕ್ಕೆ ಮಹತ್ವದ ಕೃತಿಗಳನ್ನು ಮಾಡಿ ಹೆಸರ್ಗೊಂಡ ಮಹಿಳೆಯರ ಹೆಸರು ಇತಿಹಾಸದಲ್ಲಿದ್ದೇ ಇದೆ

ಹೀಗೆ ಮಾಡಿದಲ್ಲಿ, ಚೀನೀ ಮಹಿಳಾ ವರ್ಗಕ್ಕೆ ಕೀರ್ತಿ ಸಲ್ಲುವುದು. ನಮ್ಮ ಜನಾಂಗಕ್ಕೆ ಲೋಕ ಮನ್ನಣೆ ಉಂಟಾಗುವದು

ಚೀನಾ–ಜಪಾನ ಸಂಘರ್ಷ

ಒಂದು ವರ್ಷ ಮುಗಿಯಿತು: ಫಲ?

ಚೀನಾ ಜಪಾನ ಗಳೊಳಗೆ ಯುದ್ಧವು ಇನ್ನೂ ಪ್ರಾರಂಭವಾಗಿಲ್ಲವೆಂದೇ ಜಪಾನಿನ ಹೇಳಿಕೆ. ಇದು [illegible] ಯುದ್ಧವಾಗಿದ್ದಲ್ಲಿ ನಾಲ್ಕಾರು ಸಾವಿರ ಯುದ್ಧನೀತಿ [illegible] ನಡೆಯಬೇಕಾಗುವುದು. ಇದು ಕೇವಲ ಗೃಹಕಲಹ, ಇತರರಿಗೆ ಇದರಲ್ಲಿ ಕೈ ಹಾಕುವ [illegible] ಯುದ್ಧವೆಂದ ಕೂಡಲೆ ನಾಲ್ವರು ಸಹಾಯಕರಾಗುವರು. ಪಕ್ಷಹಿಡಿದು ಬರುವರ. ಈಗ ಪಕ್ಷಹಿಡಿಯಲಿಕ್ಕಿಲ್ಲ. ಅವರವರ ಅವರವರಿಗೆ, ಅಷ್ಟೆ ಎಂದರ್ಥ

ನರಹಿಂಸೆ ಪಾತಕದ ಪ್ರವಾಹ ಹರಿದೇ ಹೋಯಿತ. ಯುದ್ಧವಾಗಿರಲಿ ಇಲ್ಲದಿರಲಿ [illegible] ಭರ್ಜರಿ ಯುದ್ಧವಾಗಿದ್ದರೆ, ಅಷ್ಟು ವಿಪರೀತವಾಗುತ್ತಿರಲಿಲ್ಲ. ಇದಕ್ಕೂ ಯಾವ [illegible] ಸಂಬಂಧವಿಲ್ಲ

ಈಗ ಜಾಪಾನ [illegible] ಶಹರಿನ ಮೇಲೆ ದೃಷ್ಟಿ ಇಟ್ಟಿದೆ. ಚೀನಾವು ಅದನ್ನು ರಕ್ಷಿಸಲೆಳಸಿರುವದು. ಒಂದೆರಡು [illegible] ಯುದ್ಧವಾಗುವುದೆನ್ನುವರು. ಇನ್ನಾಗಲಿರುವ ಯುದ್ಧವು ಭಯಂಕರವೂ ಹಿಂಸೆಯ ಪರಮಾವಧಿಯುದೂ ಆಗುವುದು. [illegible] ಕೇಂದ್ರೀಕರಣವಾಗತೊಡಗಿದೆ

ಜಪಾನ ತನ್ನ [illegible] ಯುದ್ಧೋತ್ಸಾಹವನ್ನು ಹೆಚ್ಚಿಸಲು [illegible] ಮಾಡುತ್ತದೆ. [illegible] ದಾಗಿಯೂ ಸಾರಿದೆ [illegible] ಜನರೆಲ್ಲ [illegible] ತೂರಾಡುತ್ತದೆ

ಯುದ್ಧದ ವಾರ್ಷಿಕೋತ್ಸವದ ದಿವಸ [illegible] ನಗರದ ಮೇಲೆ [illegible] ಗಳನ್ನು ಚೆಲ್ಲಿದ್ದಾರಂತೆ. [illegible] ರನ್ನು ಕೊಂದಾಯಿತು. ಚೀನಿಯರೂ ಇದಕ್ಕೆ ಪ್ರತ್ಯುತ್ತರವನ್ನಿತ್ತರು. ಜಪಾನಿನ [illegible]

ಚೀನೀ ಸ್ತ್ರೀಯರ ಮೇಲೆ ಅತ್ಯಾಚಾರ

ಸಭ್ಯರೂ ಇವುಗಳ ಚಿತ್ರಗಳನ್ನೂ ನೋಡರು

ಮಕ್ಕಳು, ಹೆಂಗಸರು, ಮುದುಕರು ಮೊದಲಾಗಿ ಯಾವ ಪ್ರಕಾರದಲ್ಲೂ ಯುದ್ಧದಲ್ಲಿ ಸೇರದವರನ್ನೇ ತುಂಬಾ ಸಿಡಿಗುಂಡು ಚೆಲ್ಲಿ ಕೊಲ್ಲುತ್ತಿರುವುದು ಜಪಾನಿನ ನಿತ್ಯಕೃತ್ಯವಾಗಿದೆ. ನಿರಪರಾಧಿಗಳ ನಿರಸ್ತ್ರರೂ ಆಗಿರುವವರನ್ನು ಕೊಂದು, ಕೊಲ್ಲುತ್ತಿರುವ ದುಷ್ಕೀರ್ತಿಗೆ ಯುವತಿಯರನ್ನು ಒತ್ತೆಯಾಗಿರಿಸಿ, ಅವರನ್ನು ಭಟರು ಹೊಡೆದು ಹಾಗೆಯೇ ನಗ್ನ ಚಿತ್ರಗಳನ್ನು ಬಲಾತ್ಕಾರ ಪೂರ್ವಕ ಎತ್ತುತ್ತಿರುವರಂತೆ! ಪಿಶಾಚಿಗಳ ಕಟ್ಟು ಕಥೆಗಳಲ್ಲಿ ಸಹ ಇಂತಹ ದುಸ್ಸಹ ಅಸಹ್ಯ ಕಥೆಗಳು ಕೇಳಬರುವುದಿಲ್ಲ. ಈ ನಗ್ನ ಚಿತ್ರಗಳಲ್ಲಿ ಕೆಲವು ಮೊಡರ್ನ ರಿವ್ಯೂ ಸಂಪಾದಕರ ಕೈಸೇರಿವೆ. ಮರ್ಯಾದೆಯುಳ್ಳವರಾರೂ ಇವನ್ನು ನೋಡಿ, ಆ ಪಾತಕದಿಂದ ಕಣ್ಣುಗಳನ್ನು ಕಳೆದುಕೊಳ್ಳಬಾರದೆಂದು ಅವರು ಅವನ್ನು ಪ್ರಕಟಿಸಿಲ್ಲ, ಅಷ್ಟೆ [illegible] ಮುಗಿಸಿದ್ದಾರೆ. ಆದರೆ, ಅವನ್ನು ರಾಷ್ಟ್ರೀಯ ಮಹಾಸಭಾ ಅಧ್ಯಕ್ಷರ ಬಳಿಗೆ ರವಾನಿಸಿರುವರು. ಇಂತಹ ವಿಪರೀತ ಘಟನೆಗಳನ್ನು ಕೇಳಿಯೆ ಭಾರತವಾಸಿಯಲ್ಲಿ, ಕ್ರೋಧವೂ ಅಸಹತೆಯೂ ಜಪಾನಿನ ಕಡೆಗೆ ಉಂಟಾಗದಿರವು. ಇಷ್ಟು ಅತ್ಯಾಚಾರಗಳನ್ನು ಕೇಳಿಯೂ ಸಭ್ಯರೆಂಬ ಜನಾಂಗಗಳಾವುವೂ ಮಾತೆತ್ತುವುದಿಲ್ಲವೇಕೆ? ಜಪಾನು [illegible] ಬಹಿಷ್ಕೃತವೊ, ಈ ಸುಧಾರಣಾ—ಸಭ್ಯತೆಗಳ [illegible] ಪಾಶ್ಚಾತ್ಯ ಸರಕಾರಗಳು ತಂಪು [illegible] ವರ್ತಿಸುವುದು ಏತಕ್ಕೋ? ಈ ಕಳಂಕವನ್ನು ತೊಡೆಯುವವರಾರು? ಹೇಗೆ?

[illegible] ಮೇಲೆ [illegible] ಚೆಲ್ಲಿದ್ದಾರಂತೆ.

ಅಂತೂ ಯುದ್ಧ [illegible] ದಿಂದ ಸಾಗಿದೆ.

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ

ಕಾಮನ್‌ವೆಲ್ತ್

ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ.

***1937-38*ನೇ ಸಾಲಿನ ಪ್ರಗತಿ**

ಗಳಿಸಿದ ಉದ್ಯಮ	ರೂ. 50,18,643
ಪೂರ್ಣವಾದ ಉದ್ಯಮ	ರೂ. 40,39,778

ದಕ್ಷಿಣ ಕನ್ನಡದ ಎಲ್ಲ ಜಿಲ್ಲೆಗಳಲ್ಲೂ ಗೌರವಸ್ಥರೂ, ಸಮರ್ಥರೂ ಆದ ಏಜಂಟರು ಬೇಕು.

ಹೆಚ್ಚಿನ ವಿವರಗಳಿಗೆ:—

ಪಿ. ಆರ್. ನಾಯಕ್ ಆಂಡ್ ಸನ್ಸ್
ಸ್ಪೆಷಲ್ ಏಜಂಟ್ಸ್
ಕಾರ್ ಸ್ಟ್ರೀಟ್, ಮಂಗಳೂರು.

ಗವಾಂಕರ್ ಆಂಡ್ ಸನ್ಸ್
ಚೀಫ್ ಏಜಂಟ್ಸ್
168, ಗಾಂಧೀ ನಗರ, ಬೆಂಗಳೂರು.

ಜಯ ಯಾರಿಗೆ ಲಭಿಸಬೇಕು: ಜಪಾನಿಗೋ? ಚೀನಕ್ಕೋ?

ಜಪಾನಿನ ಜಯ—ಲೋಕದಲ್ಲಿ ಹೆಚ್ಚಿನ ಅನಾಹುತಕ್ಕೆ ಕಾರಣವಾಗುವುದು! ಲೋಕ ಶಾಂತಿಯುಂಟಾಗಬಹುದು—ಚೀನೀಯರ ಜಯದಿಂದ!

[ಈ ಮೇಲಿನ ವಿಷಯದ ಕುರಿತು ಪ್ರಖ್ಯಾತ ಬರಹಗಾರರೊಬ್ಬರು ಅಮೇರಿಕಾದ ಒಂದು ಮಾಸಪತ್ರಿಕೆಯಲ್ಲಿ ಈ ಕೆಳಗಿನ ಅಭಿಪ್ರಾಯಗಳನ್ನೊಳಗೊಂಡ ಲೇಖವನ್ನು ಬರೆದಿರುವರು. ಈ ಲೇಖವನ್ನು ಓದಿದ ನಮ್ಮ ವಾಚಕರಲ್ಲಿ ಜಯವು ಚೀನಾಕ್ಕೆ ದೊರಕಬೇಕೆಂಬ ಇಚ್ಛೆಯುಂಟಾಗದಿರದು]

> ಚೀನಾ ಜಪಾನ್ ಯುದ್ಧವು ನಡೆಯುತ್ತಿರುವುದಷ್ಟೆ. ಈ ಯುದ್ಧದಲ್ಲಿ ಯಾರು ವಿಜಯಿಗಳಾಗಬೇಕು—ಚೀನವೋ? ಜಪಾನೋ? ಇವರಲ್ಲಿ ಒಬ್ಬರು ವಿಜಯಿಯಾಗಿಯೇ ಈ ತಿಕ್ಕಾಟ ನಿವಾರಣೆಯಾಗಬೇಕಂದಿಲ್ಲ. ಸಂಧಾನವಾಗಿ ಈ ಕಲಹದ ನಿವಾರಣೆಯಾಗಬಹುದು. ಆದರೆ ಯಾವ ಸಂಧಾನವೂ ಪರಿಪೂರ್ಣವಾಗಲೊಲ್ಲದು. ಜಪಾನ್ ಯಾ ಚೀನಾ ವಿಜಯಸ್ಥಾನವನ್ನು ಪಡೆಯುವುದು. ಇದರಿಂದ ಒಂದಕ್ಕಾದರೂ ಸಂಧಿಶರ್ತಗಳನ್ನು ಆಜ್ಞಾಪಿಸಲಾಗುವುದು.

ಆದ್ದರಿಂದ ಜಗತ್ತು ಏನನ್ನು ನಿರೀಕ್ಷಿಸಬೇಕು?

ಈ ಯುದ್ಧದನಂತರ ಪೌರ್ವಾತ್ಯವು ಮೊದಲಿನಂತೆಯಿರದು. ಚೀನಾ ಜಪಾನು ಮೊದಲಿನಂತಿರವು. ಇತರ ಜಗದೊಡನೆ ಅವರ ಸಂಬಂಧವು ಮೊದಲಿನಂತಿರದು. ವಿಜಯಿಯಾದ ದೇಶಕ್ಕೆ ಜಗತ್ತಿನಲ್ಲಿ ಅತ್ಯಂತ ಪ್ರಾಮುಖ್ಯ ಸ್ಥಾನವು ದೊರಕುವುದು

◇ ◇ ◇

ಜಪಾನಿಗೆ ಜಯವಾದರೆ

ಜಪಾನಿಗೆ ಜಯಲಭಿಸಬಹುದು. ಸ್ವಾತಂತ್ರ್ಯವನ್ನು ಹೇಳಿನ ಮುಟ್ಟಿಸ್ತಿ ಅದು ವಿಜಯಿಯಾಗಬಹುದು. ಅದರ ಪರಿಣಾಮ ಏನಾಗಬಹುದು? ಚೀನಾದೇಶದ ಪುನರುತ್ಥಾನ ಕಾರ್ಯವನ್ನು ಅದು ಕೈಗೊಳ್ಳಬೇಕಾಗುವುದು. ಜಪಾನೀಯ ಕಾರ್ಖಾನೆಗಳು ಅಲ್ಲಿ ಸ್ಥಾಪನೆಯಾದಾವು. ಚೀನಾದೇಶದ ವ್ಯಾಪಾರವೆಲ್ಲಾ ಜಪಾನೀಯರ ಕೈಗಳಿಗೆ ಬರುವುದು. ಇದರ ಪರಿಣಾಮವಾಗಿ ಉಂಟಾಗುವ ಅಭಿವೃದ್ಧಿಯ ದೆಸೆಯಿಂದ, ಜಪಾನು ಇನ್ನೂ ಬಲವತ್ತರವಾಗುವುದು. ಜಪಾನಿನ ಈಗಿನ ಧೋರಣೆಗಳೇ ಸಮಸ್ತ ಪೌರ್ವಾತ್ಯದ ಧೋರಣೆಗಳಾಗುವವು. ಚೀನಾದೊಡನೆ ಇತರ ಜನಾಂಗಗಳು ವ್ಯವಹರಿಸುವ ಕುರಿತು ಶರ್ತ ಹೇಳುವ ಜನಾಂಗವು ಅದಾಗುವುದು. ಅದು ಹೆಚ್ಚಿನ ಮಟ್ಟಿಗೆ ಅನ್ಯರನ್ನು ಹೊರಗೆನೆ ಇಟ್ಟುಬಿಡುವುದು. ಜಪಾನು ಒಂದು ಪ್ರಬಲ ಜನಾಂಗವಾಗುವುದಲ್ಲದೆ ಸಮಸ್ತ ಪೌರ್ವಾತ್ಯವು ತನ್ನ ಕೈಗಳಿದ್ದು ಅತಿ ಮಹತ್ತಾದ ಒಂದು ಜನಾಂಗವಾಗುವುದು. ಈ ರೀತಿಯಲ್ಲಿ ಸೊಕ್ಕಿದ ಜಪಾನು ಸುಮ್ಮನಿರದು. ಸುತ್ತಲಿರುವ ಇತರರ ಮೇಲೆ ಪೋಲ್ವಾಯಲು ಯತ್ನಿಸುವುದು. ತನ್ನ ಪ್ರಬಲತೆಯನ್ನು ಇನ್ನೂ ಹೆಚ್ಚಿಸಿಕೊಂಡು ಹಿಂದಿನ ರೋಮನ್ ಸಾಮ್ರಾಜ್ಯದಷ್ಟೆ ಕೀರ್ತಿಯನ್ನು ಗಳಿಸುವ ಮಹದಾಶೆಯು ಅದರಲ್ಲುಂಟಾಗುವುದು

ಜಪಾನಿಗೆ ವಿಜಯವಾದರೆ, ಪೌರ್ವಾತ್ಯದಲ್ಲಿ ಸಾರ್ವಭೌಮ ಮತ್ತು ಪೆಸ್ಸಿಯಸ್ಟ ತಂದ ನೀತಿಗಳುಳ್ಳ ಒಂದು ಸಂಗ್ರಾಮಿಕ ಜನಾಂಗಕ್ಕೆ ಜಯದೊರಕಿದಂತಾಗುವುದು. ತಾವು ಯಾವಾಗಲೂ ಯುದ್ಧ ಸನ್ನಾಹಿತರಾಗಲೆಬೇಕೆಂಬ ಅಭಿಪ್ರಾಯವು ಇತರ ಜನಾಂಗಗಳಲ್ಲಿ ಉಂಟಾಗುವಂತಾಗುವುದು. ಕಾರಣ, ಮುಂದಕ್ಕೆ ಯುದ್ಧಗಳನ್ನೆ ತಡೆಯುವುದು ಅಸಾಧ್ಯವೆಂದೆ ಆಗುವುದು. ಚೀನಾದ ಉಪಯೋಗದಿಂದ ಜಪಾನಿಗೆ ಮುಂದಿನ ಯುದ್ಧಕ್ಕೆ ಬೇಕಾಗುವ ಅವಕಾಶ ಅನುಕೂಲಗಳೆಲ್ಲವೂ ದೊರಕುವವು. ಚೀನಾವನ್ನು ಪುನರ್ವ್ಯವಸ್ಥೆಗೊಳಿಸುವ ನಿಮಿತ್ತ ಜಪಾನಿನಿಂದ ಯುದ್ಧವು ಮುಂದುವರಿಸಲ್ಪಟ್ಟರೆ, ಪೌರ್ವಾತ್ಯದಲ್ಲಿ ತನ್ನ ಆಶಯಗಳನ್ನು ಕಳೆಗೊಂಡ ಇತರ ಜನಾಂಗಗಳನ್ನು ಕೆಣಕಿ ಪೆಬ್ಬಿಸಿ, ಯುದ್ಧಗಳನ್ನು ಉಂಟುಮಾಡದೆ ಇರವು.

ಜಯವು ಚೀನಾಕ್ಕೆ ಲಭಿಸಿದರೆ

ಚೀನಾಕ್ಕೆ ಜಯ ಲಭಿಸಿದರೆ—ಆಗ ಚೀನಿಯರ ಪ್ರಾಬಲ್ಯವು ಇನ್ನೂ ಬಹಳವಾಗಿ ಬೆಳೆಯುವುದು. ಚೀನಿಯರು ಕ್ಷೀಣರೆಂದೆ ಈ ಆಧುನಿಕ ಕಾಲದಲ್ಲಿ ಪರಿಗಣಿಸಲ್ಪಟ್ಟಿರುವರು. ಅವರ ಸಂಗ್ರಾಮಿಕ ಬಲವೆನೊ ಕ್ಷೀಣವಾಗಿರುವುದು ನಿಜ. ಪಾಶ್ಚಾತ್ಯರೆನ್ನುವಂತೆ ಒಂದು ಮಿಲಿಟರಿ ಜನಾಂಗವಾಗುವ ಕುರಿತು ಅದಕ್ಕೆ ತುಂಬಾ ಸಂದೇಹಗಳಿದ್ದವು. ಆದರೆ ತಾತ್ವಿಕ ತರದ ಮನೋಭಾವದಿಂದ ಅವರು ತಮ್ಮ ಈ ಅಯೋಗ್ಯತೆಯ ಕುರಿತು ಸಮಾಧಾನಪಟ್ಟು ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ಆದರೆ ತಮ್ಮದೆ ಹಳೆಯ ಕ್ರಮಗಳಿಂದ ಜಪಾನೀಯರ ಯಂತ್ರೋಪಕರಣಗಳಿಂದ ಕೂಡಿದ ಸಂಗ್ರಾಮಿಕರನ್ನು, ಯುದ್ಧ ನೌಕೆಗಳನ್ನು ಹಿಂದೂಡಿದುದರ ಪರಿಣಾಮವಾಗಿ ಚೀನಿಯರಲ್ಲಿ ಒಂದು ತರದ ನವೀನ ಉತ್ಸಾಹಕ್ಕೆ ಕಾರಣವಾಗಿರುತ್ತದೆ. ಆಧುನಿಕ ಯುದ್ಧೋಪಕರಣಗಳ ಕುರಿತು ಅವರಲ್ಲಿರುವ ಭಯವು ಈಗ ಮಾಯವಾಗಿರುತ್ತದೆ. ತಮ್ಮೊಡನೆ ರಕ್ಷಣೋಪಾಯವು ಇರುವುದೆಂದು ಅವರಲ್ಲಿ ಜ್ಞಾನೋದಯವಾಗಿರುತ್ತದೆ. ತಮ್ಮ ಬಲ ಮತ್ತು ಸಂಕಲ್ಪದಿಂದಲೇ ತುದಿಗೆ ಈ ಯುದ್ಧದಲ್ಲಿ ವಿಜಯ ಹೊಂದಬಹುದೆಂಬ ವಿಶ್ವಾಸವು ಅವರಲ್ಲುಂಟಾಗಿರುತ್ತದೆ.

ಅವರಲ್ಲಿ ಹುಟ್ಟಿದ ಈ ನೂತನ ವಿಶ್ವಾಸದ ಕಾರಣವಾಗಿ, ಅವರು ವಿಜಯಿಗಳಾದ ಪಕ್ಷದಲ್ಲಿ, ಅವರಿಗೊಂದು ಮಹತ್ತಾದ ಸ್ಫೂರ್ತಿಯು ಬಂದುಬಿಡುವುದು. ಯಾವ ತರದ ಕಾರ್ಯಸಾಧನೆಯಲ್ಲೂ ಅವರು ದುಡುಕರು. ಚರಿತ್ರೆಯಲ್ಲಿ ಇಂಥನ ತನಕ ಕಾಣಿಸದ ವಿದ್ಯಮಾನಗಳು ಚೀನಾದಲ್ಲಿ ನಡೆದುಬಿಡುವವು. ಚೀನಾದಲ್ಲಿ ವ್ಯಾಪಾರಕ್ಕೆ ಮಹತ್ತಾದ ಅವಕಾಶವು ದೊರಕುವುದು. ಹೊರ ದೇಶಗಳಿಂದ ಅವರು ಧಾರಾಳ ವಸ್ತು ಒಡವೆಗಳನ್ನು ಪಡಕೊಳ್ಳಬೇಕಾಗುವುದು. ಎಲ್ಲಾ ತರದ ಮೋಟಾರು ವಾಹನಗಳಿಗೆ ಬೇಡಿಕೆಯು ಹೆಚ್ಚುವುದು. ರೈಲ್ವೆ ಸೌಕರ್ಯಗಳು ಬೆಳೆಯಿಸಲಾಗುವವು. ಕಾರಣ ಇಷ್ಟೆ. ಚೀನಾ ದೇಶದ ಕೈಗಾರಿಕೆಗೆ ಚೀನಾದ ಎಲ್ಲಾ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗದು. ಹೊರ ದೇಶಗಳಲ್ಲಿ ಚೀನಾಕ್ಕೆ ಒಳ್ಳೆ ಪ್ರಸಾದವು ದೊರಕುವುದು. ತನಗೆ ಬೇಕಾದುದನ್ನು, ತನಗೆ ಇಚ್ಛೆ ಕಂಡಂತೆ ಪಡಕೊಳ್ಳಲು ಅದಕ್ಕೆ ಸಾಧ್ಯವಾಗುವುದು. ಯುದ್ಧದೆಸೆಯಿಂದ ಹಾಳುಬಿದ್ದ ಸ್ಥಳಗಳ ಪುನರುತ್ಥಾನವಲ್ಲದೆ, ವಿಜಯದಿಂದ ಒದಗುವ ಮಹತ್ವಿಕೆಯಿಂದ, ಅದು ಬೆಳವಣಿಗೆಗಾಗಿ ಇನ್ನಷ್ಟು ಚಟುವಟಿಕೆಗಳನ್ನು ನಡೆಯಿಸಬೇಕಾಗುವುದು

ಆದುದರಿಂದ ಕೈಗಾರಿಕಾ ವಿಚಾರದಲ್ಲಿ, ಅದು ಈ ಜಗತ್ತಿನ ಇತರ ಮಹಾ ಕೈಗಾರಿಕಾ ದೇಶಗಳೊಡನೆ ಹಿತದಲ್ಲಿರುವುದು, ಕಾರಣ ಚೀನಾವು ಒಂದು ಒಳ್ಳೆ ಗಿರಾಕಿಯಾಗುವುದು. ಜಪಾನಿನ ಸಾಮಾನುಗಳನ್ನು ಪಡೆಯಲು ಅದು ಕೂಡಲೆ ಇಚ್ಛಿಸದು. ಅದರಿಂದ ಒಳ್ಳೆ ಲಾಭ ಮಾಡಿಕೊಳ್ಳಲು ಇತರ ಜನಾಂಗಗಳಿಗೆ ಒಂದು ಸುಸಂಧಿಯು ಬಂದೊದಗುವುದು. ಕಾಲಕ್ರಮೇಣ ಜಪಾನೀಯರಿಗೂ ಚೀನಿಯರಿಗೂ, ಒಳ್ಳೆ ಸಂಬಂಧಗಳುಂಟಾಗಿ ಜಪಾನೀಯ ಒಡವೆಗಳು ಅತಿ ಅಗ್ಗಬೆಲೆಯಲ್ಲಿ ದೊರಕುವುದರಿಂದ, ಚೀನಾ—ಜಪಾನು ದೇಶಗಳೊಳಗೆ ವ್ಯಾಪಾರ ಸಂಬಂಧ ಐಕ್ಯ ಉಂಟಾಗಬಹುದು. ಆದರೆ ಈ ಕುರಿತು ಚೀನಾಕ್ಕೂ—ಜಪಾನಿಗೂ ನಡೆಯುವ ಎಲ್ಲಾ ವ್ಯವಹಾರಗಳಲ್ಲಿ ಚೀನಾಕ್ಕೆ ಮೇಲ್ಮೈ ದೊರಕುವುದು. ಚೀನಾ—ಜಪಾನ್ ವೈರ್ಯವು ಅಣಗುವ ಒಳಗಾಗಿ ಚೀನಾದಲ್ಲಿ ಧಾರಾಳ ಲಾಭ ಮಾಡಿಕೊಳ್ಳಲು ಇತರ ಜನಾಂಗಗಳು ಯತ್ನಿಸುವವು. ಕಾರಣ ಈ ವೈರ್ಯ ದೀರ್ಘಕಾಲ ಇರದು. ತುದಿಗೆ ಪ್ರಗತಿ ಬಂದ ಹಾಗೇ, ಪರಸ್ಪರ ಮೈತ್ರಿಯಿಂದ ಇರುವುದರ ಮೌಲ್ಯದ ಕುರಿತು ಈ ಉಭಯ ಜನಾಂಗಗಳಿಗೂ ಮನದಟ್ಟಾಗುವುದು.

ಚೀನಾವು ವಿಜಯಿಯಾದರೆ, ಪೌರ್ವಾತ್ಯದಲ್ಲಿ ಅದಕ್ಕೆ ಪ್ರಥಮ ಸ್ಥಾನವು ದೊರಕಿ, ಜಪಾನು ಎರಡನೇ ತರದ ಸಾಧಾರಣ ಜನಾಂಗವಾಗುವುದು. ಏಸ್ಯಾಖಂಡದಲ್ಲಿ ಅಧಿನಾಯಕತ್ವವನ್ನು ಪಡೆಯುವ ಅವಕಾಶವು ಚೀನಾಕ್ಕೆ ದೊರಕುವುದು. ಅಧಿನಾಯಕತನಕ್ಕೆ ಬರಲಿಲ್ಲವಾದರೆ—ಅದು ಅವರಲ್ಲಿ ಸಾಂಪ್ರದಾಯಿಕವಾಗಿ ಅಂಟಿಕೊಂಡು ಬಂದಿದ್ದ ಜಿಪ್ತತನದಿಂದ ಅವರ ಹಿಂದಕೆಯ ಪ್ರವೃತ್ತಿಯು ಭಾವಿಸಬೇಕಾಗುವುದು. ಆದರೆ ಚೀನಾವು ಬಹು ಪಕ್ಷಿ ಒಬ್ಬ್ಯಯಾಗಿರುವ ಕಾಗಿಲ್ಲ. ಅವರಲ್ಲಿ ನವಚೇತನವು ನವಜಾಗೃತಿಯು ಉಂಟಾಗಿರುತ್ತದೆ. ಈ ನವಜಾಗ್ರತಿಯುಂಟಾದಲ್ಲಿ, ಅಲ್ಲಿ ಜನರ ಜಳವ ಇಂಗಿ ಪಾಪಬದ್ಧವಾಗಿರುವುದು ಯುದ್ಧದ ದೆಸೆಯಿಂದ ಚೀನಿಯರ ಇನ್ನೂ ಎಚ್ಚರಿಸಲ್ಪಟ್ಟವರಾಗಿ, ಮುಂದೆ ಸಾಗಬಯಸುವರು. ಈಗ ಕೋಮ್ಯುನಿಸ್ಟರಿಗೂ ಚೀನಾದ ಸರಕಾರಕ್ಕೂ ನಡೆದ ಒಪ್ಪಂದವು ಶಾಶ್ವತವಾದುದಲ್ಲ. ಜಪಾನಿನೊಡನೆ ಸಂಧಾನವಾದ ಮೇಲೆ ತಮ್ಮ ಪುನರ್ವ್ಯವಸ್ಥೆ ಕಾರ್ಯವಿರುವುದೆಂದು ಪ್ರತಿಯೋರ್ವ ಚೀನಿಯನಿಗೆ ತಿಳಿದಿರುವುದು. ಈಗಿರುವ ಸರಕಾರವು ಮತ್ತೆ ಅಧಿಕಾರದಲ್ಲಿರದು. ಈಗಿನ ನಾಯಕರಾದ ಚೆಂಗ್ ಕೈಶೇಕರಿಗೆ ಮತ್ತೆ ನಾಯಕರಾಗಿರಲು ಸಾಧ್ಯವಾಗದು. ನಂತರದ ಸರಕಾರವು ಹೆಚ್ಚಿನ ಮಟ್ಟಿಗೆ ಎಡತರದೆ ಆಗುವುದು. ಒಂದಾನೊಂದು ಕಾಲದಲ್ಲಿ ಪ್ರಬಲರಾಗಿದ್ದ ಧನಾಢ್ಯರ ದರ್ಪವು ಮತ್ತೆ ನಡೆಯದು. ಯುದ್ಧ ನಾಯಕರು ಅಸ್ತಂಗತರಾಗುವರು. ಈ ಯುದ್ಧದ ಕೊನೆಯೊಂದಿಗೆ ಅವರ ಪ್ರಾಬಲ್ಯವು ಕೊನೆಗೊಳ್ಳುವುದು. ಚೀನಾವು ಹೊಸತೆ ಒಂದು ಜೀವನವನ್ನು ಪ್ರಾರಂಭಿಸುವುದು. ಕೋಮ್ಯುನಿಸ್ಟರೆ ಅಧಿಕಾರಕ್ಕೆ ಬರಬಹುದು. ಹಾಗೆ ಚೀನಾವು ಕಮ್ಯುನಿಷ್ಟ ರೂಪವನ್ನು ತಾಳದೆಯಿದ್ದಲ್ಲಿ ರೈತಾಪಿ ಜನರ ಪ್ರಭಾವವನ್ನು ಹೆಚ್ಚುವುದ. ಹಳ್ಳಿಗಳ ಬೆಳವಣಿಗೆ, ರೈತರಿಗೆ ನ್ಯಾಯ ದೊರಕಿಸಿಕೊಡುವ ತರದ ಸರಕಾರದ ಸ್ಥಾಪನೆಯಾಗುವುದು.

ಚೀನಾವು ವಿಜಯಿಯಾದರೆ ಅದರ ಬಹಿರ್ ವ್ಯವಹಾರದಲ್ಲಿ ಅದಕ್ಕನೆ ಮೇಲ್ಮೈ ದೊರಕುವುದು. ಅದರ ಪ್ರದೇಶದಲ್ಲಿ ಅನ್ಯರ ಪ್ರೇರಣೆಯು ನಡೆಯದು. ಚೀನಿಯರಿಗೆ ಬೇಕಾಗುವ ಅನ್ಯ ಜನಾಂಗಿಕರಿಗೆ ಚೀನಾದಲ್ಲಿ ಎಡೆ ದೊರಕಬಹುದು, ಧಾರಾಳ ವ್ಯಾಪಾರವೂ ಸಿಗಬಹುದು. ಆದರೆ ಎಲ್ಲಾ ವಿಚಾರಗಳಲ್ಲಿ ಚೀನಾದೇಶದ ಅಧಿಕಾರ ವಾಣಿಯು ನಡೆಯುವುದು. ಚೀನಾದೇಶದಲ್ಲಿರುವ ಅನ್ಯ ಜನಾಂಗಿಕ ಸೈನ್ಯ ಪಡೆಗಳೆಲ್ಲಾ ಹೊರಗೆ ಕಳುಹಿಸಲ್ಪಡುವವು. ಚೀನಿಯ ಸಮುದ್ರ ಕರಾವಳಿಯ ಸಮೀಪವಿರುವ ಅನ್ಯ ಜನಾಂಗಿಕ ಯುದ್ಧ ನೌಕೆಗಳು ಹೊರಟು ಹೋಗಬೇಕಾಗುವುದು. ಹೊರ ಪ್ರದೇಶಗಳ ಆಸೆಯು ಚೀನಾಕ್ಕೆ ಉಂಟಾಗದು. ಕಾರಣ ತನ್ನಲ್ಲಿ ಸುವ್ಯವಸ್ಥೆ ಬೆಳವಣಿಗೆ ಮಾಡಿಕೊಳ್ಳಲು ಅದಕ್ಕೆ ದೀರ್ಘ ಸಮಯವು ಬೇಕಾಗುವುದು. ಚೀನಾದೇಶದ ದೆಸೆಯಿಂದ ಏಸ್ಯಾಖಂಡದನಂತರದೆ ಒಂದು ಜನಾಂಗ ಮಂಡಳದ ಸ್ಥಾಪನೆಯಾಗಬಹುದು. ಸಣ್ಣದಾಗಿ ಹೇಳುವುದಾದರೆ ಚೀನಾಕ್ಕೆ ಜಯವು ದೊರೆತರೆ, ಅದೊಂದು ಪ್ರಥಮ ತರದ ಜನಾಂಗವಾಗುವುದು—ಸಾರ್ವಭೌಮ ಶಾಹಿ ಪ್ರಬಲತ್ವದಲ್ಲ. ತನ್ನ ಮೂಲ ಸ್ವಭಾವವನ್ನು ಅದು ಹೆಚ್ಚಿನ ಮಟ್ಟಿಗೆ ಬದಲಾಯಿಸದು. ಸಾಮ್ರಾಜ್ಯಗಳನ್ನು ಪಡೆಯುವ ಯಾ ಸರ್ವಾಧಿಕಾರವನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯು ಅದಕ್ಕಿರುವುದಿಲ್ಲ. ಬಹಳ ಸಮಯದವರೆಗೆ ಚೀನಾದ ಲಕ್ಷ್ಯವು, ತನ್ನದೆ ಸಾಂಪತ್ತಿಕ ಹಿತಸಮ್ಬಂಧ ಚಟುವಟಿಕೆ, ಬೆಳವಣಿಗೆಯ ಕಡೆಗೆ ಬೀಳುವುದು

ಆದರೆ ತರಬೇತು ಹೊಂದಿದ 10 ಮಿಲಿಯ ಚೀನಿಯರಿರುವ ಸೈನ್ಯ ಪಡೆಯೊಂದು ರಚಿಸುವ ಕಾರ್ಯದಲ್ಲಿ ಚೀನಾವು ತೊಡಗಿರುವುದೆಂದು, ಜ್ಞಾಪಕದಲ್ಲಿಡತಕ್ಕದು. ಅವರು ಉತ್ತಮ ತರದ ತರಬೇತು ಹೊಂದಿಕೊಂಡು, ಆ ತರಬೇತಿನ ಅರ್ಹತೆಯಾದರೆ, ಚೀನಾವು ಒಂದು ಅತ್ಯಂತ ಬಲಿಷ್ಠವಾದ ಮಹಾ ಸಂಗ್ರಾಮಿಕ ಜನಾಂಗವಾಗುವುದು. ಅದು ತನ್ನ ಯುದ್ಧಗಳ ಕಡೆಗೆ ತನ್ನ ಹಳೆಯ ಮನೋಭಾವನ್ನು ಚರಿಸುವುದೊ, ಪಾಶ್ಚಾತ್ಯದ ತರದ ಮನೋಭಾವವನ್ನು ಹೊಂದುವುದೊ, ಎಂಬುದನ್ನು ಮುಂದಕ್ಕೆ ನೋಡಲಿದೆ. ಪ್ರಾಯಶಃ ತಕ್ಕ ಮಟ್ಟಿಗೆ ಮಾತ್ರ ಅದು ಯುದ್ಧಸನ್ನಾಹಿತೆಯಲ್ಲಿ ತೊಡಗಬಹುದು. ಇತರರನ್ನು ಪೀಡಿಸುವ ದೃಷ್ಟಿಯಿಂದ ಅದು ಸೈನ್ಯವನ್ನು ಬೆಳೆಸದು. ಅದಕ್ಕೆ ಪರಾಹತುಗಳ ಬೇಕಿಲ್ಲ. ಚೀನಾಕ್ಕೆ ಬೇಕಾದುದೆಲ್ಲ ಚೀನದಲ್ಲೆ ಇರುವುದು.

ಚೀನಾವು ಬಲವಂತವಾಗಿ ಬರುತ್ತಿದ್ದ ಹಾಗೆ ಜಪಾನು ದುರ್ಬಲವಾಗುತ್ತ ಬರುವುದು. ಜಪಾನಿಗೆ ಸೋಲು ಒದಗಿಬಿಟ್ಟರೆ, ಇದೇ ತರದ ಇನ್ನೊಂದು ಯತ್ನವನ್ನು ಕೈಗೊಳ್ಳಲು, ಹೆಚ್ಚಿನ ಸಮಯದವರೆಗೆ ಅದಕ್ಕೆ ಸಾಧ್ಯವಾಗದು. ತನ್ನೊಡನಿದ್ದ ಪ್ರದೇಶದಲ್ಲೇ ಅದು ಸಂತುಷ್ಟವಾಗಿರಬೇಕಾಗುವುದು. ಪೌರ್ವಾತ್ಯದಲ್ಲಿ ಚೀನಾಕ್ಕೆ ಅಧಿನಾಯಕತ್ವವು ದೊರಕಿಬಿಟ್ಟರೆ, ಮತ್ತೆ ಜಪಾನಿಗೆ ಉನ್ನತಸ್ಥಾನಕ್ಕೆ ಬರಲು ಅವಕಾಶವೆ ದೊರಕದು. ಕಳೆದು ಹೋದ ವ್ಯಾಪಾರದ ಪುನರ್ವ್ಯವಸ್ಥೆ ಮಾಡಿಕೊಳ್ಳುವ ಕಾರ್ಯವು ಜಪಾನಿಗಿರುವುದು. ತನ್ನ ಆರ್ಥಿಕ ಸ್ಥಿತಿಯನ್ನು ಉದ್ಧರಿಸಿಕೊಳ್ಳಬೇಕಾಗುವುದು. ಜಪಾನಿಗೆ ಈ ಯುದ್ಧದಲ್ಲಿ ಸೋಲು ಒದಗಿಬಿಟ್ಟಿತೆಂದರೆ—ಜಪಾನಿನಲ್ಲಿ ಒಂದು ಮಹಾಕ್ರಾಂತಿಯೆ ಉಂಟಾಗಬಹುದು. ಒಂದೇ ಒಂದು ದಿನದಲ್ಲಿ ಈಗಿನ ದೃಢವಾದ ಜಪಾನು, ಧ್ವಂಸವಾಗುವುದು ಸುಲಭವಲ್ಲ. ಆದರೆ ಸಂಗ್ರಾಮ ಮತ್ತು ನೌಕಾವರ್ಗಗಳು ತಮ್ಮ ಈಗಿನ ಅಧಿಕಾರವನ್ನು ಕಳಕೊಳ್ಳುವವು. ಸಂಗ್ರಾಮಿಕ ಜಪಾನಿನ ದಿನಗಳು ಕೊನೆಗೊಳ್ಳುವವು. ಜಪಾನು ಸೋಲಿಸಲ್ಪಟ್ಟರೆ, ಆಗ ಅದು ಮುಂದಕ್ಕೆ ಜಗತ್ತನ್ನು ಪೀಡಿಸುವ ಜನಾಂಗವಾಗಿರದು. ಸೋಲಿಸಲ್ಪಟ್ಟ ಧ್ವಂಸಿಸುವ ತರದ ಸೈನ್ಯವರ್ಗದ ಅಧಿಕಾರವಳಿದು ಜಪಾನಿನ ಕ್ಷಾಗಿ, ವ್ಯಾಪಾರ ಬೆಳೆಸಲು ಯತ್ನಿಸುವ ಜಪಾನವು ಬರುವದ

ಆದುದರಿಂದ ವಿಜಯವು ಯಾರಿಗೆ ದೊರೆತರೆ ಲೋಕಕ್ಕೆ ಉತ್ತಮ? ಜಪಾನಿಗೋ ಚೀನಾಕ್ಕೊ? ಚೀನಾವು ವಿಜಯಿಯಾಗುವುದರಿಂದ ಜಗತ್ತಿಗೆ ಕಲ್ಯಾಣವಾಗುವುದೆಂದು ಅದರಿಂದ ಮಾನವವರ್ಗಕ್ಕೆ ಸುಖವಿದೆ ಎಂದು ನನ್ನ ಅಂಬೋಣ. ಚೀನಿಯರ ನೀತಿ ಇತ್ಯಾದಿಗಳು ಜಪಾನಿಯರಿಗಿಂತ ಉತ್ತಮವೆಂದಲ್ಲ. ಆದರೆ ಚೀನಿಯರ ಲೋಕಕಲ್ಯಾಣ ದೃಷ್ಟಿಯಲ್ಲಿ ಜಪಾನಿಯರಿಗಿಂತ ಉತ್ತಮರೆ ಆಗಿರುವರು. ಇವತ್ತಿಗೆ ಅನೇಕ ಶತಮಾನಗಳಿಂದ ಬೆಳೆದು ಬಂದಿದ್ದ ಚೀನೀಯರ ಸಂಸ್ಕೃತಿಯಿಂದ, ಚೀನೀಯನು ಮಾನವ ಸಮಾಜಕ್ಕೆ, ಜಪಾನಿಯನಿಯನಿಗಿಂತ ಕಡಿಮೆ ತರದ ಅಪಾಯನಾಗಿರುವನು. ಜಪಾನು ಜಯವಂತವಾದರೆ, ಮುಂದಕ್ಕೆ ಇನ್ನತರ ಅನೇಕ ಅನಾಹುತಗಳಿಗೆ ಈ ಜಗತ್ತು ಸಿದ್ಧವಾಗಬೇಕಾಗುವುದು. ಚೀನಾವು ವಿಜಯಿಯಾದರೆ, ಜಗತ್ತಿನಲ್ಲಿ ಚಿರಸ್ಥಾಯಿಯಾದ ಶಾಂತಿಯು ಸ್ಥಾಪನೆಯಾಗುವುದೆಂದು ನಮ್ಮ ಆಶಯಗಳಾಗಬಹುದು

◈

ಭಯಂಕರ ಮಹಾಳಿ

ಅಡಿಕೆ ತೋಟಗಾರರಿಗೆ ಸಕಾಲದ ಎಚ್ಚರಿಕೆ

ದಕ್ಷಿಣಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರತಿಯೊಬ್ಬ ತೋಟಗಾರನಿಗೆ ಮಹಾಳಿ ಅಥವಾ ಕೊಳೆರೋಗವೆಂದರೇನೆಂದೂ, ಅದರಿಂದ ತಮಗಾಗುವ ಪರಿಣಾಮವೇನೆಂದೂ, ಈಗ ಚೆನ್ನಾಗಿ ತಿಳಿದಿರುವ ವಿಷಯವಾಗಿದೆ.

ರೋಗದ ವಿಷಯ ನಿರುತ್ಸಾಹ ಸ್ವಿರುದ್ಯೋಗಗಳ ದೆಸೆಯಿಂದ ತೋಟಗಾರರು ಸಂಪೂರ್ಣ ನಷ್ಟಹೊಂದಿದ ವರೆಗೆ ನಿರುದ್ಯೋಗದ ಕೆಡುಕನ್ನು ಹೇಳುವುದು ಅನಾವಶ್ಯಕ. 1936ನೇ ಇಸವಿಯ ಮಳೆಗಾಲದಲ್ಲಿ ಅನೇಕ ತೋಟಗಾರರು ರೋಗವನ್ನು ಆರೋಪಿಸುವುದಕ್ಕೆ ತಯಾರಿಲ್ಲದಾಗ ರೋಗವು ಬಿರುಸಾಗಿ ಹಬ್ಬಿತು. ಅನೇಕ ತೋಟಗಾರರೊಡನೆ ಮದ್ದು ಚಿಮಿಕಿಸುವ ಯಂತ್ರ (sprayer) ಇರಲಿಲ್ಲ. ಮತ್ತು ಈ ಪಂಪುಗಳನ್ನು ಕ್ರಯಕ್ಕಾಗಲಿ ಎರವಾಗಿಯಾಗಲಿ ಪಡಕೊಳ್ಳಲು ಸಾಧ್ಯವಾಗಲಿಲ್ಲ. ದೂರದ ಊರುಗಳಿಂದ ಪಂಪುಗಳನ್ನು ಸಹಾಸಪಟ್ಟು ತರಿಸಿದವರು ಕೂಡ ಆ ತರಿಸಲಿಕ್ಕೆ ಬೇಕಾದ ದಿವಸಗಳಲ್ಲಿ ತನ್ನ ತೋಟಗಳ ಹೆಚ್ಚಿನಂಶದ ಉತ್ಪತ್ತಿಯನ್ನು ಕಳಕೊಂಡರು. 1937ನೇ ಇಸವಿಯಲ್ಲಿ ಕೃಷಿ ಇಲಾಖೆಯವರು ಬಹಳ ಪ್ರಯತ್ನದಿಂದ ರೋಗನಿವಾರಣಾ ಕ್ರಮಗಳ ಪ್ರಚಾರ ಕೆಲಸಗಳನ್ನು ಮಾಡಿದ್ದರಿಂದಲೂ ರೈತರು ಸ್ವತಃ ನಷ್ಟಪಟ್ಟು ಪಾಠವನ್ನು ಕಲಿತದ್ದರಿಂದಲೂ ಆ ವರುಷ ರೋಗದ ಪರಿಣಾಮವು ಬೇರೆಯಾಯಿತು. ರೈತರು ರೋಗವನ್ನು ಆರೋಪಿಸಲು ಎಲ್ಲಾ ಕಡೆಗಳಲ್ಲಿಯೂ ತಯಾರಾಗಿದ್ದರು. ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಪಂಪುಗಳೂ ಮದ್ದೂ ದೊರಕುತಿತ್ತು. ಅಡಿಕೆ ಬೆಳೆಸುವ ಪ್ರಾಮುಖ್ಯ ಪ್ರದೇಶಗಳಲ್ಲಿ ಶೇಕಡಾ 90%ಗಿಂತ ಹೆಚ್ಚು ತೋಟಗಳಿಗೆ ಮದ್ದು ಹಾಕಲ್ಪಟ್ಟಿತ್ತು. ಇದರ ದೆಸೆಯಿಂದ ಆದ ಫಲವು ಬಹು ಪ್ರಯೋಜನಕಾರಿಯಾಗಿತ್ತು. ದೊಡ್ಡ ಮಳೆಗಳು ಬಂದರೂ ಹಿಂದಿನ ವರುಷದಷ್ಟು ಇಲ್ಲವೇ ಅದಕ್ಕಿಂತ ಒಳ್ಳೆ ಕಾಲಸ್ಥಿತಿಯು ರೋಗವು ಹರಡಲಿಕ್ಕೆ ಇದ್ದರೂ ಆ ವರುಷ ಸ್ವಲ್ಪ ನಷ್ಟವು ಉಳಿಸಲ್ಪಟ್ಟಿತು.

ಈಗ ಮದ್ದು ಹಾಕುವ ಸಮಯವು ಬಂದಿರುವುದರಿಂದ ದಕ್ಷಿಣಕನ್ನಡ ಮತ್ತು ಮಲಬಾರಿನ ತೋಟಗಾರರು ಈ ರೋಗವನ್ನು ಆರೋಪಿಸುವ ಕೆಲಸಗಳಲ್ಲಿ ಉದಾಸೀನ ಮತ್ತು ಆಲಸ್ಯ ಮಾಡಕೂಡದೆಂದು ತಿಳಿಸಿ ಎಚ್ಚರಿಕೊಡಲ್ಪಡುತ್ತದೆ. ಹೋದ ವರ್ಷ ಸಿಕ್ಕಿದ ಒಳ್ಳೆ ಫಸಲು ತಕ್ಕ ಸಮಯದಲ್ಲಿ ಮದ್ದು ಹಾಕಿದುದರ ಫಲದಿಂದಲೇ ಎಂದು ತಿಳಿಯಬೇಕು. ಈ ವರುಷ ರೋಗವು ತಲೆದೋರಲಿಲ್ಲ. ಅದು ಬಂದನಂತರ ಮದ್ದು ಹಾಕಬಹುದು ಎಂದು ಭಾವಿಸುವುದು ಬಹೂ ಹಾನಿಕರವಾದದ್ದು. ಕೃಷಿ ಡಿಪಾರ್ಟುಮೆಂಟಿನವರು ಕಳೆದ ವರುಷ ಮಾಡಿದ ಪರೀಕ್ಷಾರ್ಥಗಳಿಂದ ಮದ್ದು ಹಾಕುವ ಸಮಯವು ಹೆಚ್ಚಿನ ಪ್ರಾಮುಖ್ಯತೆದ್ದು ಎಂದು ತಿಳಿದುಬಂದಿದೆ. ಎರಡು ಸಾರಿ ಮದ್ದು ಹಾಕುವಂತಾದ್ದು ಒಂದು ಸಾರಿ ಹಾಕುವುದಕ್ಕಿಂತ ಹೆಚ್ಚು ಒಳ್ಳೇದೆಂದು ಸಹಾ ಕಂಡುಹಿಡಿದಿದ್ದಾರೆ. ಮೊದಲನೇ ಸಾರಿ ಮದ್ದು ಬಿದ್ದು ಬಂಧಾದ್ದು ಮಳೆಹಿಡಿಯುವ ಮೊದಲೂ ಎರಡನೇ ಸಾರಿ ಮದ್ದು ಚಿಮುಕಿಸುವಂದಾದ್ದು 6 ಹಪ್ತೆಗಳ ನಂತರವೆಂದೂ ತಿಳಿದು ಬಂದಿದೆ.

ಒಂದು ತೋಟದಲ್ಲಿ ಒಮ್ಮೆ ರೋಗವು ಕಲಿದ್ದೊಟದರೆ ಅವಸರದಲ್ಲಿ ಎಷ್ಟು ಪ್ರಯತ್ನ ಮಾಡಿದರೂ ಸಂಪೂರ್ಣ ಬೆಳೆಯನ್ನು ಉಳಿಸಿಕೊಳ್ಳುವುದು ಸಾಧ್ಯವಲ್ಲ.

ಎಲ್ಲಾ ತೋಟಗಾರರು ತಮಗೆ ಬೇಕಾದ ಪಂಪುಗಳನ್ನೂ ಔಷಧಿಗಳನ್ನೂ ಒದಗಿಸಿಟ್ಟುಕೊಳ್ಳಬೇಕು. ಹಳೆ ಪಂಪುಗಳನ್ನು ಪರೀಕ್ಷಿಸಿ ಸವೆದುಹೋದ ಭಾಗಗಳನ್ನು ಸರಿಮಾಡಿಸಬೇಕು. ಇಲ್ಲವೇ ಹೊಸಭಾಗಗಳನ್ನು ಹಾಕಬೇಕು ಮತ್ತು ಸರಿಯಾಗಿ ಕೆಲಸಮಾಡುವಂತೆ ಮಾಡಿಡಬೇಕು. ಕಳೆದ ವರುಷ ಮಾಡಿದ ಪರೀಕ್ಷಾರ್ಥಗಳಿಂದ ಎಣ್ಣೆ ಅಥವಾ ಕೇಸಿನ್ ಮದ್ದು ಸರಿಯಾಗಿ ಹರಡಿ ಅಂಟಿಕೊಳ್ಳಲಿಕ್ಕೆ ಒಳ್ಳೆಯದೆಂದು ತಿಳಿದುಬಂದಿದೆ. ಹಿಂದಿನ ವರುಷಗಳಲ್ಲಿ ಉಪಯೋಗಿಸಿದ ದಾಳ ಮತ್ತು ಸೋಡಗಳ ಬದಲಿಗೆ ಮೇಲಿನ ಎಣ್ಣೆ ಅಥವಾ ಕೇಸಿನ್ ಉಪಯೋಗಿಸಬಹುದು.

ಮಿಶ್ರಣವನ್ನು ತಯಾರುಮಾಡುವ ಬಗ್ಗೆ ಭಾಗಗಳೂ ಪತ್ತೂರಿನಲ್ಲಿರುವ ಕೃಷಿ ಡೆಮೋನ್‌ಸ್ಟ್ರೇಟರಿಂದ ಪಡಕೊಳ್ಳಬಹುದು. ಅಥವಾ ತಲಚೇರಿಯಲ್ಲಿರುವ ಡಿಪ್ಯೂಟಿ ಡೈರೆಕ್ಟರರಿಂದ ಪಡಕೊಳ್ಳಬಹುದು.

ಕೃಷಿಯ ಸ್ಥಿತಿ.

ಕೆಳಗೆ ಪ್ರಕಟವಾಗಿರುವ ವರದಿಯು 1935-36ರ ಕೃಷಿಯ ಸ್ಥಿತಿಯನ್ನು ವಿವರಿಸುವುದು.

ಒಟ್ಟು ಕೃಷಿಯಾದ ವಿಸ್ತೀರ್ಣವು 261 ಮಿಲಿಯ ಎಕ್ರೆ; ಇದರಲ್ಲಿ ಆಹಾರ ವಸ್ತುಗಳಿಗಾಗಿ 200 ಮಿಲಿಯ ಸಕ್ಕರೆ, ಹಣ್ಣು 4 ಮಿಲಿಯ, ಸಂಬಾರಕ್ಕಾಗಿ ಒಂದು ಮಿಲಿಯ.

ಎಣ್ಣೆಕಾಳುಗಳು 15, ನಾರು 18, ಔಷಧಿಗಳು 2, ದನಗಳ ಆಹಾರಕ್ಕಾಗಿ 10, ಆಹಾರಕ್ಕಲ್ಲದ ಪದಾರ್ಥಗಳಿಗಾಗಿ 1 ಮಿಲಿಯ ಜಮೀನು ಕೃಷಿಯಾಗಿದೆ.

ಹೀಗೆ ಆಹಾರ ಪದಾರ್ಥಗಳು ಸೇಕಡಾ 81 ಆಹಾರಕ್ಕಲ್ಲದುವು 19ರಂತೆ ಕೃಷಿಯಾಗಿವೆ.

ಆಹಾರ ಪದಾರ್ಥಗಳನ್ನು ಬೆಳಸುವ ಜಮೀನು 31 ಲಕ್ಷ ಎಕ್ರೆ ಕಡಮೆಯಾಗಿದೆ, ಗೋದಿ ಬಾರ್ಲಿಗಳ ಬೆಳೆ ಕಡಿಮೆ.

ಎಳ್ಳು ಮತ್ತು ನೆಲಗಡಲೆ ಬೆಳೆ ಹೆಚ್ಚಾಗಿದೆ. ಇಂಡಿಯದ ಎಲ್ಲ ಎಣ್ಣೆಕಾಳುಗಳಲ್ಲಿ ಮದ್ರಾಸ ಅಧಿಪತ್ಯದ ಸೇಕಡಾ 26ರಷ್ಟು ಜಮೀನಿನಲ್ಲಿ, ಹತ್ತಿಯ ಕೃಷಿಯಲ್ಲಿ ಸೇಕಡಾ 3ರಷ್ಟು ಜಮೀನಿನಲ್ಲಿ ಬೆಳೆಯಾಗಿದೆ.

ಜಾನುವಾರುಗಳ ... ಮದ್ರಾಸಿನಲ್ಲಿ ಎರಡು ಮಿಲಿಯ ಎಮ್ಮೆದನಗಳು ಹೆಚ್ಚಿವೆ, ಆಡು ಕುರಿಗಳ ಸಂಖ್ಯೆಯಲ್ಲಿ ಮದ್ರಾಸಿನಲ್ಲಿ ಹದಿನಾರು ಲಕ್ಷ ಕಡಮೆಯಾಗಿದೆ.

ಝೆಕ್ಕ ಸರಕಾರ.

ಜರ್ಮನರಿಗೆ ಅನುಕೂಲ.

ಬೋಹೀಮಿಯ, ಮೊರಾವಿಯ, ಸಿಲೇಸಿಯ, ಸ್ಲೊವಾಕಿಯ, ರುಥೇನಿಯ ಇವಿಷ್ಟೂ ಸೇರಿ (ಪಶ್ಚಿಮದಿಂದ ಪೂರ್ವಕ್ಕೆ) ಝೆಕೊಸ್ಲೊವಾಕಿಯವಾಗಿದೆ.

ಮೊದಲನೆ ಏರ್ಪಾಡಿನ ಗಡಿಯಲ್ಲಿ ಜರ್ಮನರು; ಅವೆಂದರಲ್ಲೇ ಕೈಗಾರಿಕೆ ಹೆಚ್ಚು.

ಈಗ, ಇವಲ್ಲಿ ಪ್ರತಿಯೊಂದಕ್ಕೂ ಪ್ರತ್ಯೇಕ ಪಾರ್ಲಿಮೆಂಟು (4 ಮತ್ತು 5ಕ್ಕೆ ಒಂದು) ಪ್ರತಿಯೊಂದಕ್ಕೂ ಪ್ರಾಂತಿಕ ಸ್ವರಾಜ್ಯ. ಎಲ್ಲ ರಾಷ್ಟ್ರಕ್ಕೂ ಒಂದೇ ಭಂಡಾರ; ಪರರಾಷ್ಟ್ರ ನೀತಿ ಸಂರಕ್ಷಣೋಪಾಯಗಳೆಲ್ಲ ಒಂದೇ. ಇವೆಲ್ಲವನ್ನು ರಾಷ್ಟ್ರೀಯ ಸಭೆ ನಿರ್ಧರಿಸುವುದು.

ಅಲ್ಲಲ್ಲಿನ ನಿವಾಸಿಗಳ 'ಜಾತಿ'ಪಂಕ್ತಿಗಳಂತೆ, ಜನಸಂಖ್ಯೆಗೆ ಸರಿಯಾಗಿ ಪ್ರತಿನಿಧಿಗಳನ್ನು ಚುನಾಯಿಸುವರು.

ಪ್ರತಿ ಪ್ರಾಂತಿಕ ಪಾರ್ಲಿಮೆಂಟು, ಸ್ಥಳೀಯ ವ್ಯವಹಾರವನ್ನೂ ಇಲ್ಲಿ, ಅಲ್ಲಲ್ಲಿರುವ ಜನಸಂಖ್ಯೆಯನ್ನು ಕುರಿತಾಗಿ ಎಲ್ಲವನ್ನು ಅದೇ ನಿರ್ಧರಿಸುವುದು.

ಬ್ರಿಟಿಷ ಸಂತತಿಗಳೂ ಝೆಕ್ಕರ ಮಂತ್ರಿಗಳೊಡನೆಯೂ ಜರ್ಮನ್ ಪ್ರತಿನಿಧಿಯೊಡನೆಯೂ ಈ ಹೊಸ ರಾಜ್ಯಭಾರ ಸುಧಾರಣೆಗಳನ್ನು ಚರ್ಚಿಸಿದಂತೆ, ಎಲ್ಲರೂ ತೃಪ್ತರಾದಂತೆ ಹೇಳುವರು.



ಅರೆ ನೋಟಗಳು

...ರಾವಿಂಡಿ ಪಟ್ಟಣದಲ್ಲಿ ... 30 ಮಂದಿಗಾ ... ಗಾಯಗೊಂಡವರಲ್ಲಿ ... ಮುಖ್ಯ ... ಬರುವುದಿಲ್ಲ ... ಮೊನ್ನೆ ... ಅವರಲ್ಲಿ 6 ಮಂದಿ ... 8 ಮಂದಿ ಗಾಯಪಡೆದರು. ... ಸಂಚಾರ ... ಸ್ಪೆಕ್ಟರರೂ ಕೂಡಲೆ ... ವರ್ತಮಾನಪತ್ರಿಕೆಗಳಲ್ಲಿ ಫೋಟೋ ... ಭಾರೀ ಅಗ್ರಲೇಖಗಳು! ಇದು ... ದೂರು.

++ ++ ++

ನಮ್ಮ ದೂರುಗಳು ಬೇರೆ ವಿಧ. ಅವ ...ಗಳು ನಗರಗಳಲ್ಲಾದರೆ, ಮಹಾಪುರುಷರ ...ದರ್ಶನ; ಗ್ರಾಮಗಳಲ್ಲಾದರೆ ಲೋಪ ... ...ರಣವೇನು? ನಗರಗಳಲ್ಲಿ ಅಪಘಾತಗಳು ...ಪೂರ್ಣ, ಹೀಗಾಗಿ ಅದು ನ್ಯೂಸ್! ಗ್ರಾಮ ...ಗಳಲ್ಲಿ ಅನುಸಿತ್ಯದ ವಿಚಾರ, ಅದಕ್ಕೇನೂ ...ಚಾರವಿಲ್ಲ.

++ ++ ++

ಹಂಫ್ರಿ ಹ್ಯೂಸನು ಭೂಪ್ರದಕ್ಷಿಣೆ ಮಾ...ದ 81 ದಿನಗಳ ದಾಖಲೆ ಹೊಗಳುವವರಿಗೆ: ಈ ಭೂಪ್ರದಕ್ಷಿಣೆಯ ಮಾರ್ಗವು 14874 ಮೈಲು ಉದ್ದವಾಗಿತ್ತು. ನಮ್ಮಲ್ಲಿ ಭೂಮಿಯ ಸುತ್ತಳತೆ 24902 ಮೈಲೆಂದು ಹೇಳುವರು. ಉತ್ತರ ಅಥವಾ ದಕ್ಷಿಣ ಧ್ರುವದ ಬಳಿ ತೆರಳಿ, ಅಲ್ಲಿ ಅರೆಸೆಕ್ಕುಂಡದಲ್ಲೇ ಭೂಪ್ರದಕ್ಷಿಣೆ ಮಾಡಿ ಬರುವುದಲ್ಲ, ಹಂಫ್ರಿ ಹ್ಯೂಸರ ದಾಖಲೆ ಕೊಡೆದುಹಾಕುವವರಿಗೆ!

++ ++ ++

ಲಿಜಾ ಮೇಲಿರುವ ನಮ್ಮ ವೈಸ್ರಾಯರಿಗೆ ...ದಿಯಾ ಆಫೀಸಿನಲ್ಲಿ ಭಾರೀ ಸ್ವಾಗತವಿತ್ತು. ಒಂದು ತಾಸು ವರೆಗೆ ಅವರು ಶೇಕ್ ಹ್ಯಾಂಡ್ ಮಾಡಿಯೆ, ಪ್ರತಿಯೊಬ್ಬರನ್ನೂ ವಂದಿಸಬೇಕಾಗಿ ಬಂತು. ಲೋರ್ಡರಂತೆ, ಧರ್ಮಪತ್ನಿ ಲೇಡಿ ಯವರೂ ನಿಂತೇ ಇರಬೇಕಾಯಿತು. ಹಳೆಯ ಬ್ರಿಟಿಷ ಆಫೀಸರರೆಲ್ಲ ಅಲ್ಲಿ ಬಹಳವಾಗಿದ್ದರು. ದೇಶೀಯರ ಸಂಖ್ಯೆ ಅತ್ಯಲ್ಪ.

++ ++ ++

ಹಿಂದೀಯರಿಗೆ ಬ್ರಿಟಿಷ ಹೊಟೆಲುಗಳಲ್ಲಿ ಸ್ಥಾನ ದೊರೆಯುವುದಿಲ್ಲವೆಂದು ದೂರು. ದೊಡ್ಡ ಹೊಟೆಲುಗಳಲ್ಲಿ ಹೀಗೆಲ್ಲ ವರ್ಣಭೇದ ನೋಡುವುದಿಲ್ಲವಂತೆ. ಅಲ್ಲಿ ದರ ಹೆಚ್ಚು. ಸಣ್ಣ ಹೊಟೆಲುಗಳಲ್ಲಿ ಭೇದಭಾವನೆಗಳಿರಬಹುದು; ಅಲ್ಲಿ ಜಾಗವಿಲ್ಲ. ಅನ್ನೆ ಹೊರತು ಈ ದೂರಿಗೆ ಬೇರೆ ಕಾರಣವಿಲ್ಲ.

++ ++ ++

ಹಿಂದುಮತ ಶಾಸನಸಭೆಗಳ ಬೋರ್ಡಿನ ಮೆಂಬರರಲ್ಲಿ ಇಬ್ಬರ ಸ್ಥಾನಗಳು ಈಗ ಖಾಲಿ ಬಿದ್ದಿವೆ. ಈ ಸ್ಥಾನಗಳಿಗೆ 650 ಮಂದಿ, ಮಾಜಿ ಜಡ್ಜರುಗಳೂ ಹಾಲೀ ವಕೀಲರುಗಳೇ ಮೊದಲಾದವರು ಅರ್ಜಿ ಹಾಕಿ ಕೂತಿರುವರು.

++ ++ ++

ನೀವು ನೋಡಿಲ್ಲವೆ? ಅನಾಥನಾಗಿ ದಾರಿ ಪಕ್ಕದಲ್ಲಿ ಬಿದ್ದಿರುವ ಚೀನೀಯ ಬಾಲಕನನ್ನು ಇಬ್ಬರು ಜಪಾನು ಸೈನಿಕರು ಆರೈಕೆಮಾಡುತ್ತ, ನಗಿಸುತ್ತಾರೆ—ಆ ಚಿತ್ರವನ್ನು? ಆ ಮಗು ಏಕೆ ಅನಾಥವಾಯಿತೆಂದು ಯಾರೂ ಹೇಳುವುದಿಲ್ಲ; ಆದರೆ ಏನೇ ಇರಲಿ,—ಜಪಾನಿಂದ ಪರೋಪಕಾರಿಗಳು ಚೀನಕ್ಕೆ ಬಂದು, ಅನಾಥ ಮಕ್ಕಳನ್ನು ನಗಿಸುವ ಏರ್ಪಾಡಿಗೆ—ಯುದ್ಧವೆನ್ನುವ ಹುಚ್ಚರಾರು?

++ ++ ++

ತಂಜಿಬಾರದ ಸುಲ್ತಾನನ ಪ್ರತಿನಿಧಿಯು ಮೊಂಬಾಸದಲ್ಲಿರುವನು. ಈತನೀಗ ತನ್ನ ಅರಮನೆಯಂತಹ ಭವ್ಯಭವನವನ್ನು ಬ್ರಿಟಿಷ ನೌಕಾ ಸೈನ್ಯಕ್ಕೆ ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವ ನಂತೆ. ಲವಂಗ ವ್ಯಾಪಾರದ ವರಹಾಮನ? ದೊರೆತ ರಿಯಾಯಿತಿಗೆ ಇದೂ ಪ್ರತಿ ಬಹುಮಾನವೆ?

++ ++ ++

ಮ್ಯುನಿಸಿಪಲ್ ಕಮಿಶನರರಿಗೇ ಮಾತ್ರ ವಲ್ಲದೆ, ಚೆಯರ್ಮೇನರಿಗೂ ಒಂದು ವಾಹನದ ಎಲೊವೆನ್ಸು ಬೇಕು ಎಂದು ಚೆಯರ್ಮೇನರು ಸರಕಾರಕ್ಕೆ ಬರೆದುಕೊಂಡಿರುವರು. ದಯವಿಟ್ಟು ಕಾರುಗಳ ಭತ್ತೆಯನ್ನು ಕೊಡಬಾರದು. ಉತ್ತಮವಾದ ಬೂಟ್ಸು ಕೊಟ್ಟು, ಓಣಿಗಳಲ್ಲೂ ಇವರು ಸ್ವಲ್ಪ ಸಂಚಾರಿಸುವಂತೆ, ಕೊಂಗ್ರೆಸು ಸರಕಾರವು ಬಡವರ ಪಕ್ಷವಾಗಿ ಇವರನ್ನು ಪ್ರೋತ್ಸಾಹಿಸಬೇಕು? ಎಂದು ಮದ್ರಾಸಿಗೂ ಒಂದು ಸೂಚನೆ ತಲಪಿದೆಯಂತೆ.

++ ++ ++

ಕುರಿಗಳು ಕಡಮೆಯಾಗುತ್ತ ಬೂ ಆಡುಗಳು ಹೆಚ್ಚುತ್ತಲೂ ಇರುವುದೇಕೆ ಎಂದು ವರದಿಯೊಂದು ಕೇಳಿದೆ. ನಮ್ಮದು ಉಷ್ಣದೇಶ—ಕುರಿಗಳು ಏಕೆ? ಆಡುಗಳು ಕಾಗದ ತಿಂದಾದರೂ ಬದುಕ ಬಲ್ಲವು.

++ ++ ++

ತ್ರಿವಾಂಕೂರು ಬೇಂಕನ್ನು ಉದ್ಧಾರ್ಜನೆ ಮಾಡಿಯಾಗಿದೆ. ಈಗ ಊರ್ಜಿತವಾಗಿ ಇರುವುದಕ್ಕೆ ನಾನಾ ಶಿಫಾರಾಸುಗಳು ಹೊಂದಿವೆ. ವ್ಯತಿಸಂಚೀವಿನಿ ಕಂಪೆನಿಯೊಂದು ಹೊರಡದಿದ್ದರೆ ಇನ್ನು ನಿರ್ವಾಹವಿಲ್ಲ; ಏಕೆಂದರೆ, ಬೇಂಕು ತಾನಾಗಿ ಸತ್ತುದೇ ಮಾತ್ರವಲ್ಲದೆ, ಅದನ್ನು 'ಸಾಯಿಸಿದವರೂ' ಪ್ರಯತ್ನಿಸದೆ ಅದೆಂತು ಪುನರುಜ್ಜೀವನ ಹೊಂದಬಹುದು?

++ ++ ++

ಡಿಕ್ರೀದಾರರಿಗೆ ಆಸ್ತಿ ಸ್ವಾಧೀನ ಕೊಡುವ ಅಮೀನನಿಗೆ ಬಹಳ ಕಷ್ಟ. ಅಸ್ತಿಯಲ್ಲೊಂದು ಮನೆ. ಅದರ ಒಂದು ಗೋಡೆಯಲ್ಲೊಂದು ವಿಗ್ರಹವಿದೆ. ಅದನು ಕಿತ್ತು ಮನೆ ಮಾತ್ರ ತನಗೆ ಕೊಡಬೇಕಾಗಿ ಡಿಕ್ರೀದಾರನ ಹಟ; ವಿಗ್ರಹ ಮುಟ್ಟಿದರೆ ಹೇಗಾದೀತು, ಜಡ್ಜರನ್ನು ಕೇಳಬೇಕೆಂದು ಅಮೀನನ ಹಟ. ಜಡ್ಜರು ಕೊನೆಗೆ, ವಿಗ್ರಹವನ್ನು 7 ದಿನಗಳೊಳಗೆ ಯಾರೂ ಬಂದು ಬೇಕೆಂದು ಅರ್ಜಿ ಹಾಕದಿದ್ದಲ್ಲಿ, ಬಿಡೆಂದು ಅಮೀನನಿಗೆಂದರು. ಈಗ ವಿಗ್ರಹದ ಪ್ರಾರ್ಥನೆ; ಯಾರೊಬ್ಬರು ತನಗಾಗಿ ಅರ್ಜಿ ಹಾಕಲಿ ಎಂದು! ಜಡ್ಜರು ಇದನ್ನು ಕೇಳುವರೆ?

++ ++ ++

ಕುಂದಾಪುರದ (ಮೈಲಿನಲ್ಲಿ ಬ್ರಿಟಿಷ ಇಂಡಿಯಾ ಎಲ್ಲಿಜ್ ಮುನ್ಸಿಫರು ಎಂದಿರುವರು) ಶ್ರೀ ಕೆ. ಆರ್. ಕೃಷ್ಣಯ್ಯ ಶೆಟ್ಟಿಯವರು ವಿದುರಾಶ್ವತ್ಥದಲ್ಲಿ ಗುಂಡಿನೇಟು ತೊಡೆದರು, ತಾ. 25 (ಎಪಿಲ್) ರಲ್ಲಿ ಸುಮಾರು ಒಂದು ತಾಸಿನ ತನಕ ನಡೆದೇ ಇತ್ತೆಂದೂ, ಒಂದೇ ಸಲ ಹೊರತು ನಮವೆ ವಿರಾಮವಿದ್ದು ಎರಡು ಸಲವಲ್ಲೆಂದೂ, ಆಯಂಕಾಲ ಗುಂಡಿಟ್ಟುದಕ್ಕೆ ಕಾರಣವೇ ಇದ್ದಿಲ್ಲವೆಂದೂ, ಅಧಿಕಾರಿಗಳು ಕೈದುಮಾಡಿದ ಕೊಂಗ್ರೆಸಪರೊಡನೆ ಹಿಂತಿರುಗದೆ ಯಾವ ಗಲಭೆಗಳೂ ಆಗುತ್ತಿರಲಿಲ್ಲೆಂದೇ ತಮ್ಮ ಅಭಿಪ್ರಾಯವೆಂದೂ ತಿಳಿಸಿಬಿಟ್ಟಿದ್ದಾರೆ; ಜವಾನ ಬಲವಿಲ್ಲದೆ ಸಾಪೂರಕಟ್ಟಲೆ ಜನಸಿನ್ನು ಚದರಿಸ ಹೋಗಿ ಹೀಗಾಯಿತು. ಎಂದೂ ಅವರೆಂದಿದ್ದಾರೆ.

++ ++ ++

ಕೊಡಗು ಸ್ವತಂತ್ರವಾಗಿಯೆ ಒಂದು ಪ್ರಾಂತ್ಯವಾಗಿರಬೇಕೆಂದು, ಕೊಡಗು ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಭಿಪ್ರಾಯ. ಹಿಂದೆ ಹರಿಪುರದಲ್ಲಿ, ಕೊಡಗನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸ ಬೇಕೆಂದು ಸೂಚಿಸಿದ್ದು ಸರಿಯಲ್ಲವೆಂದೂ ಹೇಳಿಯದೆ; ... ಕಾರ್ಯಕಾರೀ ಸಮಿತಿಯು ಇದಕ್ಕಾಗಿ ... ಬೆಳವಣಿಸಬೇಕೆಂದು ಸೂಚಿಸಬೇಕೆಂದೂ ನಿರ್ಣಯವಾಗಿದೆ.

++ ++ ++

ಸಂಯುಕ್ತ ಪ್ರಾಂತ್ಯದಲ್ಲಿ — ಮುಸ್ಲಿಮ ಲೀಗಿಗೆ ಸೇರಿದ ಮಂತ್ರಿಗಳನ್ನು ಮುಸ್ಲಿಮರ ಕೇರಿಬಾವುಟಗಳಿಂದ ಎದುರ್ಗೊಂಡು, ಅವರು ಸೇರುವ ಕೂಟಗಳಿಗೆ ಹೋಗದೆ, ಇತರ ಯಾ ಬಾವುಟವಿದ್ದರೂ ಅಲ್ಲೇ ಮುಸ್ಲಿಮ ಲೀಗಿ ಬಾವುಟವನ್ನು ಏರಿಸಬೇಕೆಂದು ಮುಸ್ಲಿಮ ಲೀಗಿನ ಕಾ ಬೀ... ಅಪ್ಪಣೆ! ಧ್ವಜಾರೋಹಣವಾಗದೆ ಉತ್ಸವವುಂಟೆ?

++ ++ ++

ರಾಜಕೀಯ ಕೈದಿಗಳು ಬಿಡುಗ... ಹೊಂದಿದರೂ, ಅವರು ಕೊಂಗ್ರೆಸ್ ಪ್ರಾಂ...ದಲ್ಲೇ ಸುಳಿಯಬೇಕಾಗಿದೆ. ಇಲ್ಲಿ ಪಂಜಾಬ, ಬಂಗಾಳಗಳಲ್ಲಿ ಕಾಕೋರಿ ಕೈದಿಗಳ ಅವ... ಹೀಗಾಗಿದೆ. ಬಂಗಾಳವನ್ನು ಮುಟ್ಟಿದೆ. ಅವ... ಬರಿಸ್ತಕ್ಕೆ ಬಂದರೆ, ಮದ್ರಾಸು ಮಧ್ಯಪ್ರಾಂ... ಬೊಂಬಾಯಿಗಳಲ್ಲಿ ಉಳಿಯಬಹುದು. ಕೈ...ಸಿಂದ ವಿಮೋಚನೆಯಾದರೆ ಎಲ್ಲವೂ ವಿಮೋಚನೆ ಹೊಂದುವುದಿಲ್ಲವಲ್ಲ – ಪಾಪ.

++ ++ ++

'ಗೀತಾ ಉಪನಿಷತ್ತುಗಳು ಕರಾ... ನೊಡನೆ ಸಂಭಾಷಿಸಿದುವು' ಹೀಗೆಂದು ಒಂದು ಪತ್ರಿಕೆ ಬರೆದಿದೆ. ಕಾರಣ, ಪಂಜಾಬಿನ ಕೈದು ಅನುಭವಿಸುವ ಮದ್ರಾಸೀ ಕೈದಿಗಳನ್ನು ಕೇಳುತ್ತಾ ಅವರನ್ನು ಬಿಡಿರಿ ಎಂದು 'ರಾಜಾಜಿ'ಯವರು ಸಿಕಂದರ ಖಾನರಿಗೆಂದರೆ, ಪಂಜಾಬ ಸರಕಾರಕ್ಕೆ ಭಯ. ಲಾಹೋರಿನ ಬೇಂ... ಗಳನ್ನು ಇವರು ಮುಂದರೆ? ರಾಜಾ... ನನೇ ಒಲೆ. ಪ್ರಶ್ನೆ ಮಾತಾಡುವವನ್ನ ನನ್ನ ಜವಾಬ್ದಾರಿ ಹೆಚ್ಚಿತ್ತದೇನೆ. ಅವಕಾ... ಕಾಯುತ್ತೇನೆ' ಎನ್ನುತ್ತಾರೆ. ಕೈದಿಗಳ ಬಿಡುಗಡೆ ಮಾಡಿದ್ದಾರೆ.

++ ++ ++

ಬಂಗಾಳದಲ್ಲಿರುವ ಕೈದಿಗಳನ್ನೂ ಹೀ...ಯೆ ಬಿಡುಗಡೆ ಮಾಡಬಹುದು. ಕೈದಿಗಳೆ ಳಗೆ ಹುಲಿ–ಸಿಂಹಗಳು ಇಲ್ಲವೆಂದು ಹಿಂದೆ ವಾಗಿ ಹುಕ್ಕರು ತಿಳಿದರೆ ಸಾಕ್ತೆ!

++ ++ ++

ಹಾಡು ಹುಕ್ಕರಿಗೆ ಇನ್ನು ವಿರಾಮ ಏಕೆ? ಬಿಹಾರದಲ್ಲಿನ ಬಿಹಾರಿ ಹಿಂದೂಗಳೂ ಬಂಗಾಳೀ ಹಿಂದುಗಳೂ ತಂತಮ್ಮ ಹಕ್ಕುಗಳ ಸೋಕರಿಯ ಪ್ರಾತಿನಿಧ್ಯದ ವಿಷಯ ಕಾದಾಡುತ್ತಿರುವರು!

ಸಾವಿತ್ರೀ ಮಾತೆಯ

ಕೇಶವರ್ಧನ ತೈಲ

ಕಳೆದ 76 ವರ್ಷಗಳಿಂದಲೂ ಸರ್ವತ್ರವೂ ಉಪಯೋಗಿಸಲ್ಪಟ್ಟು ಶ್ರೇಯಸ್ಸನ್ನು ಪಡೆದಿರುವ ಸುಪ್ರಸಿದ್ಧ ಈ ಕೇಶ ತೈಲವು ವಕೀಲರು, ನ್ಯಾಯಾಧೀಶರು, ವೈದ್ಯರು ವಿದ್ಯಾರ್ಥಿಗಳು ಮಾತ್ರವಲ್ಲದೆ, ಆಬಾಲವೃದ್ಧ ಸಮಸ್ತ ಸ್ತ್ರೀಪುರುಷರೂ ಉಪಯೋಗಿಸಲರ್ಹವಾಗಿದೆ.

ತಲೆನೋವಿನ್ನೂ ದೃಷ್ಟಿಮಾಂದ್ಯವನ್ನೂ ಇದು ಸಂಪೂರ್ಣವಾಗಿ ನಿವಾರಿಸುವುದಾಗಿದೆ, ಅಂಗೈ ಮತ್ತು ಅಡಿಗಳು ಉರಿಯುವ ಪ್ರಕಾರಗಳನ್ನೂ ಹೋಗಲಾಡಿಸಿ, ಮಿದುಳಿಗೆ ತಂಪನ್ನು ಕೊಟ್ಟು, ಕಣ್ಣುನೋವನ್ನು (ಕೆಂಗಣ್ಣು ಮೊದಲಾದುವು) ದೂರಗೊಳಿಸಿ, ದೃಷ್ಟಿಯು ಚುರುಕಾಗಿಸಿ, ತಲೆಯಲ್ಲಿ ಕೂದಲು ಬುಡದಲ್ಲಿ ನಾನಾ ತೊರೆಗಳಿದ್ದುವ ಮರವಣ್ಕೆಗೆ ಅವಕಾಶಕೊಡದೆ, ಸುಖ ನಿದ್ರೆಯಾಗುವಂತೆಯೂ ಸದ್ರಾಧಣ ಅರಿವು ಮೊದಲಾದುವುಗಳಿಗೆ ಎಚ್ಚರಗದಂತೆಯೂ ವರಿಣಮಿಸಿ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದಾಗಿದೆ.

ಸ್ನಾನಕ್ಕೆ ಅರ್ಧತಾಸು ಮೊದಲು ತಲೆಗೆ ಹಚ್ಚಿ ಕೊಳ್ಳುವುದು.

ಬೆಲೆ:—2 ಔನ್ಸು ತೈಲವಿರುವ ಸೀಸೆಗೆ ರೂ. 1

ಅಭಿಪ್ರಾಯಗಳು.

ಸುಪ್ರಸಿದ್ಧ ಡಾಕ್ಟರ್ ರಾವ್ ಬಹದ್ದೂರ್ ಎಂ. ಕೇಶವಯ್ಯ, ಎಮ್. ಡಿ., ಓ. ಬಿ. ಇ. ಇವರ ಅಭಿಪ್ರಾಯ:

ಶ್ರೀಯುತ ಬಾಳಿಗರೇ,

ನೀವು ಅನುಗ್ರಹಪೂರ್ವಕ ಕಳಿಸಿರುವ ಸಾವಿತ್ರಿ...

ಸಾವಿತ್ರಿ ಮಾತೆಯ ಸಿದ್ಧೌಷಧ

81ನೇ ಜಯಂತಿಯ ದಿನ ಪರಮಾತ್ಮನಿಗೆ ಕೃತಜ್ಞತಾರ್ಪಣೆ.

ಮಾತೆಯ ಕೇಶ ವರ್ಧನ ತೈಲವನ್ನು ನಾನು ಉಪಯೋಗಿಸುವವನು, ಅದು ತಲೆಗೆ ತಂಪನ್ನುಂಟುಮಾಡುವ ಗುಣವುಳ್ಳದು. ಎಷ್ಟೋ ವರ್ಷಗಳಿಂದ ಆಗಾಗ ನನಗೆ ತಲೆ ಭಂಗದ ಬಾಧೆಯುತ್ತು, ಕೆಲವು ಸಲ ಈ ಬಾಧೆ ಬಹಳ ಪ್ರಬಲ ರೂಪದಲ್ಲಿತ್ತು. ನಮ್ಮ ಈ ಎಣ್ಣೆಯು ನನಗೆ ತುಂಬ ಗುಣವನ್ನಿತ್ತಿದ್ದುದನ್ನು ಅನುಗ್ರಹಿಸಿಯದೆ, ಇದರಿಂದ, ನನ್ನಂತೆ ಈ ಪೀಡೆಯಿಂದ ಬಾಧೆ ಹೊಂದುವ ಇತರರೂ ಇದನ್ನು ಧರಿಸಿಯೆಂದು ಉಪಯೋಗಿಸಬಹುದೆಂದು ನನ್ನ ಶಿಫಾರಸು.

ಒಂದು ಬುಡ್ಡಿ ದನ ವಿನ ಹಾಲು ತೆಗೆದುಕೊಂಡು ಬಂದಲ್ಲಿ ಆದೇ ಹಾಲಿನಲ್ಲಿ ಮೇಹದ ಮದ್ದು ಹಾಕಿ ಧರ್ಮಾರ್ಥ ಕೊಡೋಣಾಗುವುದು.

ಶ್ರೀ. ಎಮ್. ಸುಂದರರಾವ್, ಬಿ. ಎ., ಎಲ್. ಟಿ., ಸೆಕ್ರೆಟರಿ ಡಿ. ಬೋ. ಇವರ ಅಭಿಪ್ರಾಯ:

ನಮ್ಮ ಈ ಮಾರುತೀ ಲೇಹ್ಯವು ಜಬರ್ದಸ್ತ ಅಸೋಷಧವಾಗಿದೆ. ಅದನ್ನು ನಾನು ಕ್ಲಿಷ್ಟ ಪ್ರಸಂಗದಲ್ಲಿ ಸೇವಿಸಲ್ಪಡುವೆನು, ನಾಶಿಗೆ ತುಂಬ ಸುಖವಾಗಿರುವದನ್ನು ಉತ್ತಮ ಫಲಗಳು ನನಗೆ ದೊರೆತಿವೆ. ನನ್ನ ಮಕ್ಕಳಿಗೆ ಇದು ಇಷ್ಟವಾಗಿದ್ದು, ಅವು ತಾವಾಗಿ ಈ ಲೇಹ್ಯವನ್ನು ಕೊಡೆಂದು ಕಾಡುತ್ತವೆ. ದೇಹವನ್ನೂ ಮನಸ್ಸನ್ನೂ ಉತ್ತೇಜನಗೊಳಿಸುವುದಕ್ಕೆ ಇದು ದಿವ್ಯ ಔಷಧವೆಂದು ಹೇಳಬಹುದು.

ಬಿ. ವೈಕುಂಠ ಬಾಳಿಗ, ರಿಟೈರ್ಡ್ ಸುಪರವಾಯ್ಸರ್

ಸಾವಿತ್ರೀ ಮಾತೆಯ ಔಷಧಗಳ ಮ್ಯಾನುಫೆಕ್ಚರರು,

ಡೊಂಗರಕೇರಿ ರಸ್ತೆ, ಮಂಗಳೂರು, ದಕ್ಷಿಣ ಕನ್ನಡ.

ಸಾವಿತ್ರೀ ಮಾತೆಯ

ಮಾರುತೀ ಲೇಹ್ಯ

(ದಿವ್ಯ ಸಾಧುವೊಬ್ಬನಿಂದ ಪ್ರಾಪ್ತವಾದದು)

ಇದನ್ನು 1937ನೇ ಇಸ್ವಿ ಎಪ್ರಿಲ್ ತಾ. ...ರಲ್ಲಿ ... ಉ ತಯಾರಿಸಿದ್ದಾಗಿದೆ.

ಇದರಲ್ಲಿ ಅಪೀಣಧಾವಿವಿದ್ಯ ಗಿಡಮೂಲಿಕೆಗಳೂ, ಪ್ರಶಸ್ತವಾದ ದನದ ಹಾಲು, ಬೆಣ್ಣೆ, ಕುಂಕುಮ, ಜೇನು, ಸಕ್ಕರೆ ಸೇರಿವೆ. ದುಷ್ಪವಾದ ಮಾದಕ ಪದಾರ್ಥಗಳಾಗಲಿ, ಧರ್ಮವಿರುದ್ಧವಾಗಿರುವ ಯಾವ ಬಗೆಯ ಕೊಬ್ಬಾಗಲೀ ಇರುವುದಿಲ್ಲ. ಯಾವನೂ ಎಷ್ಟೇ ವಯಸ್ಸಿನವನಿದ್ದರೂ—ಬಾಲಕರೂ ಸಹ ಇದನ್ನು ಸೇವನೆ ಮಾಡಬಹುದು. ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸು, ಆರೋಗ್ಯ ಬೇಕಾದವುಗಳನ್ನು ವರ್ಧಿಸುವುದು. ದೇಹದ ಉಷ್ಣವನ್ನು ಹೋಗಲಾಡಿಸಿ, ಜಿಹ್ವಾಮಾತ್ರ, ಸಿಹಿಮೂತ್ರ ಮೊದಲಾದವನ್ನು ಗುಣಪಡಿಸಿ, ಹಸಿವನ್ನು ಹೆಚ್ಚಿಸಿ, ಅಂತೂ ಮನುಷ್ಯನನ್ನು ಪೀಡ್ಯ ಬಲಾಧಿಗಳಿಂದ ಸಂಪೂರ್ಣ ಪುರುಷನನ್ನಾಗಿ ಪಡೆಸಿ ತಲುತ್ತದೆ.

ಬೆಲೆ:—ಅರ್ಧ ರಾತ್ತಲು ಸೀಸೆಗೆ ರೂ. 1-12-0

ಒಂದು ರಾತ್ತಲು ,, ರೂ. 3-0-0

ವಿಶೇಷ: ಈ ಲೇಹ್ಯವನ್ನು ಸಾವಿತ್ರೀ ಮಾತೆಯ ವರ್ಧನ ಕೇಶ ತೈಲವನ್ನು ಉಪಯೋಗಿಸುವಾಗಲೆ ಸೇವಿಸಿದಲ್ಲಿ ಉನ್ನತ ರೋಗವು ಕೂಡ ಗುಣವಾಗುತ್ತದು.

ವಿ. ಪೀ. ಖರ್ಚು ರೂಪಾಯಿಗೆ ಕಡಿಮೆಯಾದ ಬೆಲೆಯ ಔಷಧಗಳನ್ನು ವಿ. ಪಿ. ಮೂಲಕ ರವಾನಿಸುವುದಿಲ್ಲ. ಪ್ರತಿಯೊಂದು ಸಲ ಬೇಕಾಗುವ ಔಷಧದ ಬೆಲೆಯ ಅಂಚೆಖರ್ಚನ್ನು ಮುಂಗಡ ತೆರಬೇಕಾಗಿದೆ. ಧಾರ್ಮಿಕವಾಗಿ ಕಟ್ಟಿ ಕಳುಹುವ, ರೈಲ್ವೆ ಯಾ ಇತರ ರವಾನಾ ಖರ್ಚು ಪ್ರತ್ಯೇಕ. ಸಂಪೂರ್ಣವೂ ಸ್ಪಷ್ಟವೂ ಆದ ಹೆಸರು, ವಿಳಾಸ, ರವಾನಾ ಕ್ರಮವು ಅತಿ ಸಮೀಪದ ಪೋಸ್ಟ್ ಅಥವಾ ರೈಲ್ವೆ ಆಫೀಸು ಮೊದಲಾದುವನ್ನು ಪ್ರತಿ ಸಲ ಔಷಧ ಗಿರಾಕಿಗಳು ಶುದ್ಧಾಕ್ಷರಗಳಿಂದ ನಮೂದಿಸಬೇಕಾಗಿದೆ.

ಭಕ್ತಿ!

ಮಲಗಿ ಪರಮಾದರದಿ ಪಾಡಲು । ಕುಳಿತು ಕೇಳುವ ಕುಳಿತು ಪಾಡಲು ।
ನಿಲುವ ನಿಂತರೆ ನಲಿವ ನಲಿದರೆ ಒಲಿವ ನಿಮಗೆಂಬಾ ॥
ಸುಲಭನು ಹರಿ ತನ್ನವರನರೆ । ಗಳಿಗೆ ಬಿಟ್ಟಗಲನು ರಮಾಧವ ।
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ ॥

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಹಿಂದಿನ ಸಂಚಿಕೆಯಲ್ಲಿ ಮಾನುಷ ಭಕ್ತಿಯನ್ನು ಕುರಿತು ಹೇಳಿದೆವಷ್ಟೆ. ಈಗ ಈಶ್ವರ ಭಕ್ತಿಯನ್ನು ವಿಚಾರಿಸೋಣ. ಭಕ್ತಿಯಲ್ಲಿ ಅಪರಾ ಭಕ್ತಿ ಮತ್ತು ಪರ ಭಕ್ತಿಗಳೆಂದಿವೆ ಮೂರ್ತಿಪೂಜೆ, ಹರಿಕೀರ್ತನೆ, ಭಜನೆ, ಪುರಾಣ ಶ್ರವಣ ಮುಂತಾದುದನ್ನು ಮಾಡುವುದು ಮತ್ತು ದೇವರನ್ನು ಸಗುಣನಾಗಿ ಆರಾಧಿಸುವುದು ಇದಕ್ಕೆ ಅಪರಾ ಭಕ್ತಿ ಅಥವಾ ಗೌಣ ಭಕ್ತಿ ಎಂದೆನ್ನುತ್ತಾರೆ ಸಾತ್ವಿಕ, ರಾಜಸಿಕ ಮತ್ತು ತಾಮಸಿಕ ಗುಣಗಳಿಂದ ವಿರಹಿತವಾದ ನಿರ್ಗುಣಭಕ್ತಿಯೇ ಪರಾಭಕ್ತಿಯು. ಮನುಷ್ಯನ ಜ್ಞಾನಾರ್ಜನೀವೃತ್ತಿಗಳು ಈಶ್ವರ ಶೋಧನೆಯನ್ನು ಮಾಡುವದು, ಕಾರ್ಯಕಾರಿಣೀ ವೃತ್ತಿಗಳು ಈಶ್ವರಾರ್ಪಿತವಾಗುವುದು, ಚಿತ್ತರಂಜನೀ ವೃತ್ತಿಗಳು ಈಶ್ವರ ಸೌಂದರ್ಯಾನುಭವವನ್ನು ಪಡೆಯುವದು, ಶಾರೀರಿಕೀ ವೃತ್ತಿಗಳು ಈಶ್ವರ ಸೌಂದರ್ಯಾನುಭವವನ್ನು ಪಡೆಯುವದು, ಶಾರೀರಿಕೀ ವೃತ್ತಿಗಳು ಈಶ್ವರನ ಕೆಲಸಗಳನ್ನು ಅಥವಾ ಆಜ್ಞಾಪಾಲನವನ್ನು ಮಾಡುವದು ಇದಕ್ಕೆ ಭಕ್ತಿಯೆನ್ನುವದು ಈಶ್ವರನು ಯಾವ ಮನುಷ್ಯನ ಜ್ಞಾನದ ಗುರಿಯಾಗಿರುವನೋ, ಯಾವಾತನ ಸಕಲ ಕರ್ಮಗಳು ಈಶ್ವರನ ಅರ್ಪಿತವಾಗುತ್ತವೆಯೋ, ಯಾವನು ಈಶ್ವರನಲ್ಲಿ ಆನಂದದ ಪರಮೋತ್ಕರ್ಷತೆಯನ್ನು ಅನುಭವಿಸುತ್ತಿರುವನೋ, ಯಾವನು ತನ್ನ ಶರೀರ ಮನಸ್ಸು ಈಶ್ವರಾರ್ಪಣ ಮಾಡಿರುವನೋ, ಆತನೇ ನಿಜವಾದ ಭಕ್ತನು ಈಶ್ವರ ಸಂಬಂಧಿಯಾದ ಭಕ್ತಿಯು ಉಪಯುಕ್ತ ಸ್ಫೂರ್ತಿಯೂ ಪೂರ್ಣತೆಯೂ ಆತನಲ್ಲಿರುತ್ತದೆ ಎಲ್ಲಾ ವೃತ್ತಿಗಳಂತೆ ಭಕ್ತಿಯು ಒಂದು ವೃತ್ತಿ ಮನುಷ್ಯನ ಎಲ್ಲಾ ವೃತ್ತಿಗಳು ಈ "ಭಕ್ತಿ" ವೃತ್ತಿಯನ್ನು ಅನುಸರಿಸುತ್ತಿರುವುದೇ "ಭಕ್ತಿ" ವೃತ್ತಿಯ ಉಚಿತವಾದ ಸ್ಫೂರ್ತಿ ಆದುದರಿಂದಲೇ "ಭಕ್ತಿ" ವೃತ್ತಿಯನ್ನು ಶ್ರೇಷ್ಠವೆಂದೆಣಿಸುತ್ತಾರೆ ಭಕ್ತಿಯನ್ನು ಈಶ್ವರನಲ್ಲಿರಿಸಿ ಉಳಿದ ಎಲ್ಲಾ ವೃತ್ತಿಗಳು ಭಕ್ತಿಯನ್ನನುಸರಿಸಿ. ಭಕ್ತಿಯಿಂದ ಪ್ರದರ್ಶಿಸಲ್ಪಟ್ಟ ಮಾರ್ಗದಲ್ಲಿ ಮುನ್ನಡೆಯುವುದೇ "ಭಕ್ತಿ" ವೃತ್ತಿಯ ಅನುಶೀಲನವೆನಿಸುತ್ತದೆ. ಮನುಷ್ಯನ ಸಕಲ ವೃತ್ತಿಗಳ ಮಹತ್ವದ ಉದ್ದೇಶವಾದರೋ ಈಶ್ವರನೇ ಯಾವುದಾದರೊಂದು ವೃತ್ತಿಯು ಈಶ್ವರಾನುವರ್ತಿಯಾದರೆ ಅದಕ್ಕೆ ಇತರ ವೃತ್ತಿಗಳಿಂದ ಕಂಟಕವಾಗದು. ಈಶ್ವರಾನುವರ್ತಿಯಾದ ವೃತ್ತಿಯು ಉದ್ದೇಶವು, ಈಶ್ವರನ ಅನಂತಜ್ಞಾನ, ಅನಂತ ಕಲ್ಯಾಣ, ಅನಂತಧರ್ಮ, ಅನಂತಸೌಂದರ್ಯ, ಅನಂತಭಕ್ತಿ ಎಂದ ಮೇಲೆ ಆ ವೃತ್ತಿಗೆ ಅವರೋಧವೆಲ್ಲಿಂದ ಬಂದೀತು? ಆದುದರಿಂದ ಎಲ್ಲಾ ವೃತ್ತಿಗಳು "ಭಕ್ತಿ"ಯನ್ನು ಹೊಂದಿಕೊಂಡಿರುವುದೇ ಸಾಮಂಜಸ್ಯ ಮನುಷ್ಯನ ಎಲ್ಲಾ ವೃತ್ತಿಗಳು ಈಶ್ವರಾರ್ಪಣವಾದ ಹೊರತು ಮನುಷ್ಯತ್ವವಿಲ್ಲವೆಂಬುದೇ ಅನುಶೀಲನ ಧರ್ಮದ ಮುಖ್ಯ ಸಾರಾಂಶ ನಮ್ಮ ಸಕಲ ಕರ್ಮಗಳನ್ನು ಕೃಷ್ಣಾರ್ಪಣವೆನ್ನುವುದರ ಅರ್ಥವೂ ಇದೇ ಪ್ರಕೃತ ನಿಷ್ಕಾಮಧರ್ಮವೆಂದರೂ ಇದೇ ನಿತ್ಯವಾದ ಸುಖವೂ ಇದೇ ಇದರ ನಾಮಾಂತರವು "ಚಿತ್ತಶುದ್ಧಿ" ಭಕ್ತಿ, ಪ್ರೀತಿ ಮತ್ತು ಶಾಂತಿ ಇವು ಮೂರು ಈ ಚಿತ್ತಶುದ್ಧಿಯ ಲಕ್ಷಣಗಳಾಗಿರುತ್ತವೆ ಧರ್ಮವೆಂದರೆ ಇದೇ. ಇದನ್ನು ಬಿಟ್ಟರೆ ಬೇರೆ ಧರ್ಮವಿಲ್ಲ

ನಿಜವಾದ ಭಕ್ತಿಯು ಆರ್ಯಮಹರ್ಷಿಗಳ ಉಪದೇಶಾಮೃತದಿಂದ ಮಾತ್ರವೇ ಲಭಿಸುತ್ತದೆ ವೇದವ್ಯಾಸ ಮಹರ್ಷಿಗಳು ರಚಿಸಿದ ಭಾಗವತ, ಶಾಂಡಿಲ್ಯ ಋಷಿಗಳ ಮತ್ತು ನಾರದ ಋಷಿಗಳ ಭಕ್ತಿಸೂತ್ರಗಳು ಇವುಗಳನ್ನು ಓದಿದರೆ ಭಕ್ತಿಯ ಮಹತ್ವವು ತಿಳಿಯುವುದು. ಭಕ್ತಿ ಮಾರ್ಗವು ಜ್ಞಾನ ಮಾರ್ಗಕ್ಕಿಂತಲೂ ಶ್ರೇಷ್ಠವೆನ್ನಬಹುದು. ಯಾಕೆಂದರೆ ಜ್ಞಾನದಿಂದ ನಾವು ಅನೇಕ ವಸ್ತುಗಳ ತಿಳುವಳಿಕೆಯನ್ನು ಮಾಡಿಕೊಳ್ಳಬಹುದು. ಆದರೆ ತಿಳುವಳಿಕೆ ಇದ್ದ ಮಾತ್ರಕ್ಕೆ ನಾವು ಆ ವಸ್ತುಗಳನ್ನು ಪಡೆಯಲಾರೆವು ನಾವು ದ್ವೇಷಿಸುವ ವಸ್ತುಗಳ ತಿಳುವಳಿಕೆಯು ನಮಗೆ ಇದೆ ಹಾಗಾದರೆ ನಾವು ಈಶ್ವರನ ಮೇಲೆ ಭಕ್ತಿಯನ್ನಿಡುವ ಬದಲಾಗಿ ಆತನನ್ನು ದ್ವೇಷಿಸಿದರೆ ಈಶ್ವರನು ನಮಗೆ ಸಿಗುವನೇ! ನಾವು ಪ್ರೀತಿಸುವ ವಸ್ತುವನ್ನು ನಾವು ಪಡೆಯುವ ಸಂಭವವಿದೆ ದೇಹಧಾರಿಯಾದ ವಸ್ತುವನ್ನು ಪ್ರೀತಿಸುವುದಲ್ಲದೆ ಸಾಧಿಸುವುದು ಬಹು ಕಷ್ಟ ಶರೀರವಿಲ್ಲದ ಪರಮಾತ್ಮನನ್ನಾದರೋ ನಾವು ಬರೀ ಅಂತಃಕರಣದಿಂದಲೇ ಪಡೆಯಬೇಕು. ಬೇರೆ ದಾರಿಯೇ ಇಲ್ಲ ಆದಕಾರಣ ಪರಮಾತ್ಮನ ಮೇಲೆ ವಿಶೇಷವಾದ ಅನುರಾಗವನ್ನು ಇಟ್ಟರೇನೇ ಆತನನ್ನು ನಾವು ಹೊಂದಬಹುದು ಅನ್ಯಥಾ ಸಾಧ್ಯವೇ ಅಲ್ಲ ಈ ಅನುರಾಗವೇ "ಭಕ್ತಿ"ಯು ಈಶ್ವರನ ಮೇಲೆ ಶ್ರದ್ಧೆಯೂ ಬೇಕು ಶ್ರದ್ಧೆಯು ಇದ್ದಲ್ಲಿ ಸಂಶಯವು ಇರ ಪುದಿಲ್ಲವೆನ್ನುವ ಕಾರಣ ಶ್ರದ್ಧೆಯು "ಭಕ್ತಿ"ಗೆ ಸಂಬಂಧಿಸಿರುತ್ತದೆ

ಹಿಂದುಗಳಲ್ಲಿ ಈಶ್ವರ ಕಲ್ಪನೆಯು ಎರಡು ವಿಧವಾಗಿದೆ — ಸಗುಣ ಮತ್ತು ನಿರ್ಗುಣ ಎಂದು. ಯಾವದ ನಿರ್ಗುಣವೋ ಅದಕ್ಕೆ ಉಪಾಸನೆಯು ಸಾಧ್ಯವಲ್ಲ ಅದರ ಗುಣಾನುವಾದ [illegible] ಅದರ ಅಸ್ತಿತ್ವವನ್ನು ನಮ್ಮ ಮನಸ್ಸು ಉಪಾಯವಿಲ್ಲವೆಂದ ಮೇಲೆ ಅದಕ್ಕೆ ಏನೆಂದು ಹೇಳಬೇಕು? ಅದರ ಭಾವನೆಯನ್ನಾದರೂ ಗ್ರಹಿಸುವುದೆಂತು? ಆದುದರಿಂದ ಸಗುಣನಾದ ಈಶ್ವರನೇ ಉಪಾಸನಾ ಯೋಗ್ಯನು ಸಗುಣನಾದಲ್ಲಿ ಉಪಾಸನಾ ಮಾರ್ಗವೇ ಇಲ್ಲ ಭಕ್ತಿಯು ಅಸ್ತಿತ್ವಕ್ಕೆ "ಸಗುಣ"ವಾದವು ಇದ್ದೇ ತೀರಬೇಕು. ಈಶ್ವರ ಭಕ್ತಿಯ ಲಕ್ಷಣಗಳು ಒಂಬತ್ತು ವಿಧವಾಗಿವೆ. ಅವು ಶ್ರವಣಂ ಕೀರ್ತನಂ ವಿಷ್ಣೋ ಸ್ಮರಣಂ ಪಾದಸೇವನಮ್ ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥" ಪರಮಾತ್ಮನ ದಿವ್ಯಚರಿತೆಯನ್ನು ಕೇಳುವದು ಶ್ರವಣವೆಂದೂ ಆತನ ಚರಿತ ಹಾಗೂ ನಾಮದ ಪಠನವು ಕೀರ್ತನವೆಂದೂ, ಆತನ ಧ್ಯಾನವು ಸ್ಮರಣವೆಂದೂ, ಆತನ ಚರಣ ಕಮಲಸೇವೆಯು ಪಾದಸೇವನವೆಂದೂ, ಆತನನ್ನು ಷೋಡಶೋಪಚಾರಗಳಿಂದ ಪೂಜಿಸುವುದು ಅರ್ಚನವೆಂದೂ, ಆತನನ್ನು ಸಾಷ್ಟಾಂಗ ನಮಸ್ಕಾರ ಪೂರ್ವಕ ವಂದನವೆಂದೂ, ಆತನ ಕಿಂಕರನೆಂಬ ಭಾವನೆಯಿಂದ ವರ್ತಿಸುವುದು ದಾಸ್ಯವೆಂದೂ ಆತನಲ್ಲಿ ಸ್ನೇಹವನ್ನು ಬೆಳೆಸುವುದು ಸಖ್ಯವೆಂದೂ ತನ್ನ ಸರ್ವಸ್ವವನ್ನು ಆತನಿಗೆ ಸಮರ್ಪಿಸುವದು ಆತ್ಮನಿವೇದನವೆಂದೂ ನಿರೂಪಿಸಲ್ಪಟ್ಟಿರುವುದು. ದೃಷ್ಟಾಂತಕ್ಕಾಗಿ ಈ ಮೇಲೆ ತೋರಿದ ನವವಿಧ ಭಕ್ತಿಗಳಲ್ಲಿ ಒಂದೊಂದನ್ನು ಅನುಸರಿಸಿದವರು— ಪರೀಕ್ಷಿತರಾಜ ಶುಕರು, ಪ್ರಹ್ಲಾದ ಲಕ್ಷ್ಮಿ, ಪೃಥು ಚಕ್ರವರ್ತಿ, ಅಕ್ರೂರ, ಹನುಮಂತ, ಅರ್ಜುನ ಮತ್ತು ಬಲಿಚಕ್ರವರ್ತಿ

(ಮುಂದುವರಿಯುವುದು)

ರಾಮದಾಸ

ನಿಮ್ಮ ಮಕ್ಕಳ ದುರವಸ್ಥೆಗೆ ಕಾರಣವೇನು?

ನಿಮ್ಮ ಸಣ್ಣ ಮಕ್ಕಳ ಹೊಟ್ಟೆಯೊಳಗೆ ತುಂಬಿರುವ ವಿಷಭರಿತ ಪದಾರ್ಥಗಳೇ ಅವರ ಅನಾರೋಗ್ಯಕ್ಕೆ ಕಾರಣವಾಗಿದೆ. ಅವುಗಳಿಗೆ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's Fruit Salt ಕುಡಿಯಕೊಡಿರಿ ಆ ಕೂಡಲೇ ಅದರ ಫಲಿತಾಂಶವು ನಿಮಗೆ ಕಂಡುಬರುವುದು. 'ಇನೊ' ಇದು ಹೊಟ್ಟೆಯೊಳಗಿರುವ ಜೀರ್ಣಾಂಗಗಳಲ್ಲಿನ ವಿಷಪದಾರ್ಥಗಳನ್ನು ಹೊರಗೆದವಿ ನಿರ್ಮಲಗೊಳಿಸುತ್ತದೆ. ನಿಮ್ಮ ಮನೆಗಳಲ್ಲಿ ಯಾವಾಗಲೂ ಒಂದು ಬಾಟ್ಲಿ ಇನೊಸ್ 'ಫ್ರುಟ್ ಸೋಲ್ಟ್' Eno's Fruit Salt ಇಟ್ಟುಕೊಳ್ಳಿರಿ.

ಜಗತ್ತಿನ ಎಲ್ಲಾ ಡಾಕ್ಟರರು ಇದನ್ನು ಶಿಫಾರಸುಮಾಡಿರುತ್ತಾರೆ ಇನೊಸ್ 'ಫ್ರುಟ್ ಸೋಲ್ಟ್ Eno's Fruit Salt' ಇದನು ಪರಿಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ಪದಾರ್ಥಗಳಿಂದ ತಯಾರಿಸಲ್ಪಟ್ಟಿದೆ ಎಲ್ಲಾ ಕಡೆಗಳಲ್ಲಿಯೂ ಮೂರು ಸೈಜಿನ ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ.

"ಇಮಿಟೇಶನನ್ನು ಬಹಿಷ್ಕರಿ. ಒಳ್ಳೆಯ ಖಾತ್ರಿ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವದಿಂದ ಅದು ಕ್ರಮಪ್ರಕಾರ ತಯಾರಿಸಲ್ಪಡುವುದು."

EVK 2

THE CANARA BANKING CORPORATION, UDIPI, LIMITED.

(Incorporated in British India)

ESTD. 1906.

STATEMENT OF AFFAIRS AS AT 30TH JUNE, 1938.

CAPITAL AND LIABILITIES				
1. Paid up Capital	Rs.	3,03,145	0	0
2. Reserves	Rs.	3,83,788	6	8
3. Deposits	Rs.	39,34,585	9	6
4. Due to Bankers	Rs.	13,57,642	14	11
5. Bills for Collection per contra	Rs.	1,13,331	3	2
6. Sundries	Rs.	2,00,858	4	8
Total	Rs.	62,98,351	6	11

PROPERTY AND ASSETS				
1. Landed Property, Premises and Buildings Safes and furniture	Rs.	3,63,004	5	0
2. Advances	Rs.	36,56,673	2	3
3. Investment on Govt. Securities Debentures, Shares, Etc	Rs.	17,53,922	5	2
4. Cash on Hand and Bankers at Call	Rs.	3,45,380	5	10
5. Bills for Collection	Rs.	1,13,331	3	2
6. Sundries	Rs.	66,040	1	6
Total	Rs.	62,98,351	6	11

OFFICE OF THE CORPORATION, UDIPI, 8TH JULY, 1938.

V. R. KAMATH, B.A., LL.B.
MANAGER.

ಅರ್ಧಾಂಗಿಗಾಗಿ ಅರಸನ ಬೇಟೆ

ಮಂಚುಕುವೊ ಚಕ್ರವರ್ತಿಯ ಸ್ತ್ರೀಹುಚ್ಚು.

"ಅರಸನ ಅರ್ಧಾಂಗಿಯಾಗಲು ಪೂರ್ವ ಸುಂದರಿ ತರುಣಿಯು ಬೇಕು. ಉತ್ತರಾಧಿಕಾರಿಯನ್ನು ಒದಗಿಸಿಕೊಡಲು ಶಕ್ತಳಾಗಿರಬೇಕು ಶ್ರೀಮಂತಿಕೆ, ಕುಲ್ಯ ಜನಗಳು. ಪ್ರಪಂಚದ ಯಾವ ಭಾಗ ವಿಧದಾದರೂ ತರುಣಿಯರು ಅರ್ಜಿ ಮಾ ಸಬಹುದು ಮಂಚುಕೂವೊ ಚಕ್ರವರ್ತಿಯಾದ ಕಾಂಗ್‌ಟೇಗೆ ನಿಮ್ಮ ಭಾವಚಿತ್ರ ದೊಡನೆ ಬರೆದುಕೊಳ್ಳಿ.'

ಇದೇನು ಯಾವುದಾದರೂ ಪತ್ರಿಕೆಯಲ್ಲಿ ವಧು ಬೇಕು' ಎಂದು ಬಂದ ಜಾಹೀರಾತಲ್ಲ ವರಂತು ಸದ್ಯದಲ್ಲೇ ಬರಲೂ ಸಾಕು ಮೂ ವತ್ತು ವರ್ಷಗಳ ಯೌವನಸ್ಥರಿಂದ ಮಂಚು ಕೂವೊ ಚಕ್ರವರ್ತಿಯರು ತನಗೆ ಯೋಗ್ಯಳಾದ ಸಹಧರ್ಮಿಣಿಗಾಗಿ ಪ್ರಪಂಚದಲ್ಲೆಲ್ಲಾ ಹುಡು ಕಾಡುತ್ತಿರುವರು. ಈ ತನಕ ಅವರಿಗೆ ಮಕ್ಕ ಳಾಗದಿರುವುದೇ ಇದಕ್ಕೆ ಕಾರಣ ಪೌರಸ್ತ್ಯ ದೇಶಗಳಿಂದ ಅನುರೂಪಳಾದ ತರುಣಿಯು ದೊರಕದಿದ್ದರೆ, ಅಮೇರಿಕ ನಂತರ ಇಂಗ್ಲಾಂಡು ಮೊದಲಾದ ರಾಷ್ಟ್ರಗಳಲ್ಲಿ ಶೋಧೆ ನಡೆಸ ಲಾಗುವುದೆಂದು ಅವರ ಪ್ರಧಾನರು ತಿಳಿಸಿರು ವರು.

ಬಡ ಕುಟುಂಬಗಳಿಂದ ಲಾವಣ್ಯ ವತಿಯರಾದ ನೂರು ಮಂದಿ ತರುಣಿಯರನ್ನು ಹೆಕಿ ರಾಜಧಾನಿಯಾದ ಚಾಂಗ್‌ಚುನ್ ನಗರಕ್ಕೆ ತರುವಂತೆ ಸಲಹೆಗಳನ್ನಿತ್ತು ಅನೇಕ ಮಂದಿ ಏಜಂಟರನ್ನು ಕಳುಹಲಾಗಿದೆ ಇವರ ಶೋಧೆಯ ಪ್ರತಿಫಲವಾಗಿ ಬಹುತೇಕ ಸುಂದರಿಯರು ಕಾಂಗ್‌ಟೇಯವರನ್ನು ಕಾಣಲು ಬಂದರು ಅವರನ್ನು ಒಪ್ಪಿಕೊಳ್ಳುವರನ್ನಾಗಿ ಪರೀಕ್ಷಿಸಿ, ಅವರ ಆರೋಗ್ಯಾದಿಗಳ ಕುರಿತು ಪ್ರಶ್ನಿಸಿ, ಸವಿಸ್ತಾರಗಳನ್ನಾಡಿದರವರು ಆದರೆ ಅವರಲ್ಲಿ ಒಬ್ಬಳೂ ಚಕ್ರವರ್ತಿಗಳಿಗೆ 'ವಸಂತ' ವಾಗಲಿಲ್ಲ

ಅವರ ದೇಶದ ಕಾನೂನಿಗನುಸಾರವಾಗಿ ಪ್ರಥಮ ಭಾರ್ಯೆಯ, ಇಲ್ಲವೆ ಉಪಪತ್ನಿಯ ಮಕ್ಕಳಲ್ಲಿ ಯಾರನ್ನೇ ಯುವರಾಜಪಟ್ಟಕ್ಕೆ ಏರಿಸಬಹುದಾಗಿದೆ ಅಂತಹ ಯುವರಾಜನ ತಾಯಿಯೇ ಮಹಾರಾಣಿಯೆನಿಸುವಳು. ಆದರೂ ಕಾಂಗ್‌ಟೇಯವರು ಭಾರ್ಯಾನ್ವೇಷಣೆಯೆಂಬುದನ್ನು ತನ್ನ ವ್ರತವನ್ನಾಗಿ ಆರಿಸಿದಂತೆ ತೋರುವುದು ಕಳೆದ ಅನೇಕ ತಿಂಗಳುಗಳಿಂದ ತನ್ನ ಏಜಂಟರುಗಳು ಕಳುಹಿದ ಭಾವಚಿತ್ರಗಳ ಕಟ್ಟುಗಳನ್ನು ಪರೀಕ್ಷಿಸುತ್ತಿರುವರು, ಕೆಲವರನ್ನು ಸ್ವತಃ ನೋಡಿರುವರು

ಅವರ ಮನವನ್ನೊಲಿಸುವುದು ಅಗದ ಮಾತಲ್ಲ, ಆದರೆ ಮದುವೆ ಮಾಡಿಕೊಂಡರೆ ಗಂಡು ಮಗು ಹುಟ್ಟಬಹುದೆಂದು ತೋರುವ ತರುಣಿಯನ್ನೇ ಅವರು ಅರಸುತ್ತಿರುವರು

ಬೊಂಬು

ತನಗಿರುವ ರಾಜ್ಯಗಳಿಗಿಂತ ಹೆಚ್ಚು ಮಂದಿ ಮಡದಿಯರಾದರು ಈ ಮಂಚುಕೂವೊ ಅರಸರಿಗೆ ಅವರಿಗೆ ಇರುವ ರಾಜ್ಯಗಳು ಮೂರು ಮೊಂಚುವಿನ ತನ್ನ ಪೂರ್ವಜರ ಹಕ್ಕಿನಿಂದಾಗಿ ಬರೇ ಮೂರು ವರ್ಷ ಪ್ರಾಯದಲ್ಲಿ ಅವರು ಪೆಕಿಂಗನಲ್ಲಿರುವ ಡ್ರೆಗನ್ ಸಿಂಹಾಸನವನ್ನೇರಿದರು. ಕ್ರಾಂತಿಯು ಉಂಟಾದಾಗ ಯಾರಿಗೂ ತಿಳಿಯದಂತೆ ಅರಮನೆಯಿಂದ ತಲೆತಪ್ಪಿಸಿಕೊಂಡು, ತನ್ನ ರಕ್ಷಣೆಗಾಗಿ ಹಾತೊರೆಯುತ್ತಿರುವ ಪ್ರಜೆಗಳ ನಡುವಿನಲ್ಲಿ ವೇಷ ಪಲ್ಲಟಿಸಿ ಕಾಲಕಳೆದರು.

ನಂತರ ಬಂದು ಒಪ್ಪಂದವು 'ಮಾಡಲ್ಪಟ್ಟು ಅವರಿಗೆ 400,000 ಪವನುಗಳು ವರ್ಷಾಶನ ಕೊಡುವುದೆಂದಾಯಿತು. ಆದರೆ ಕಿಶ್ಚಯವಾದ ಹಣದಲ್ಲಿ ಒಂದು ಪೈ ಕೂಡ ದೊರೆಕದುದರಿಂದ ಯಾರೋ ಪುಣ್ಯಾತ್ಮನು ಕೊಟ್ಟ ಒಂದು ಬೊಂಬನ್ನು ಅದಗಿಸಿಟ್ಟ ಹಣ್ಣುಗಳ ಬುಟ್ಟಿಯನ್ನು ಹಿಡಕೊಂಡು ಅವರು ಅರಮನೆಯಿಂದ ಎರಡನೆಯ ಬಾರಿ ಪಲಾಯನ ಮಾಡಿದರು.

ಚೀನಾದೇಶವನ್ನು ಬಿಟ್ಟುಬಿಟ್ಟು ಮೆಂಚೂರಿಯದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಅವರು ಹೊರಟಾಗ, ತನ್ನ ಪ್ರಥಮ ಭಾರ್ಯೆಯನ್ನು ಟ್ಯೆಂಟ್ಸಿನ್‌ನಲ್ಲಿ ಇರಿಸಿ ಹೋದರು. ಖರ್ಚಿಗೆ ಕಾಸಿಲ್ಲದುದರಿಂದ ಆಕೆಯು ತನ್ನ ಆದಿಯ ಪ್ರಿಯತಮನೊಬ್ಬನನ್ನು ಮರೆಹೊಕ್ಕಳು. ಆಗಲೇ ಕಾಂಗ್‌ಟೇಯವರ ತಮ್ಮನೊಬ್ಬನು ಬಂದು "ಮೆಂಚೂರಿಯದ ಅಧ್ಯಕ್ಷನು ನಿನಗೆ ಮರಣದಂಡನೆಯನ್ನು ವಿಧಿಸಿರುವನು" ಎಂದು ಹೇಳಿ, ಆತ್ಮಹತ್ಯೆ ಮಾಡಿಕೊಳ್ಳುವಂತೆ ಆಕೆಗೆ ಹೇಳಿದನು. ಆಕೆಯು ನಿರಾಕರಿಸಿದಳು.

ವಿಷ.

ಚಕ್ರವರ್ತಿಯ ಇನ್ನೊಬ್ಬ ಮಡದಿಯು, ಅವರನ್ನು ವಿಷಹಾಕಿ ಕೊಲ್ಲಲು ಪ್ರಯತ್ನಿಸಿ, ಕೃತಕೃತ್ಯಳಾಗದೆ, ಅವರ ಮೋಟಾರುಕಾರೊಂದನ್ನು ತೆಗೆದುಕೊಂಡು ಪಲಾಯನ ಮಾಡಿದಳು

ಕಾಂಗ್‌ಟೇಯವರು ತನ್ನ ಹದಿನೆಂಟನೆಯ ವರ್ಷದಲ್ಲಿ ಕುವೊಹ್ಸಿಯಾಸ್ ಪಟ್ಟದ ರಾಜಕುವರಿಯರೊರ್ವಳನ್ನು ಪಾಣಿಗ್ರಹಣ ಮಾಡಿಕೊಂಡಿದ್ದರು. ಈ ತನಕ ಆಕೆಯು ಓರ್ವ ಉತ್ತರಾಧಿಕಾರಿಯನ್ನು ಅರಸನಿಗೆ ಒಪ್ಪಿಸಲು ಶಕ್ತಳಾಗಲಿಲ್ಲ. ಇನ್ನೊಬ್ಬಳಿಗೆ ಮಕ್ಕಳಾಗಲಿಲ್ಲ ಮಾತ್ರವಲ್ಲ, ಅವರನ್ನೇ ಬಿಟ್ಟು ಹೋಗುವೆನೆಂದು ಗದರಿಸಿದ್ದಳಾಕೆ ಇದರಿಂದಾಗಿ ಅವರು ಆಕೆಗೆ ವರ್ಷಾವಧಿ ಖರ್ಚಿಗಾಗಿ 1,600 ಪವನುಗಳನ್ನು ಕೊಡುವೆನೆನ್ನಾಗಿ ಒಪ್ಪಿಕೊಂಡು, ತನ್ನ 'ಪವಿತ್ರ' ಕುಲಕ್ಕೊದಗಲಿರುವ ಕಲಂಕವನ್ನು ಹೋಗಲಾಡಿಸಬೇಕಾಯಿತು

ಹೆಂಡಂದಿರಿಗಾಗಿ ಕಾಂಗ್‌ಟೇಯವರು, ಧಾರಾಳ ಹಣವನ್ನೂ ಸಮಯವನ್ನೂ ವ್ಯಯಿಸಿರುವನು ಆದರೂ ಬಾಳ್ವೆಯ ಬೇಟೆಯನ್ನು ಅವರಿನ್ನೂ ಬಿಟ್ಟಂತೆ ತೋರುವುದಿಲ್ಲ!

★

ಪರದೇಶಗಳಲ್ಲಿ: ಒಂದು ನಿಮಿಷ

ಹೈಫಾ:—ಯೆಹೂದಿಯೊಬ್ಬನನ್ನು ಕಡಿದರೆ ಕೆಡೆಯಲಿಲ್ಲ ಅರಬನಿಪಾಯಿ ಗುಂಡಿಟ್ಟನು. ಹುಡುಕಿದಲ್ಲಿ ಅವರಿಬ್ಬರ ಮೇಲೆ ಯಾವ ಹತ್ಯಾರೂ ಇದ್ದಿಲ್ಲ

ಜಾಫಾ:—ಅರಬನನ್ನು ಕೈದುಮಾಡಿದರು ಒಂದು ಸಿಡಿಗುಂಡು ಅಡಗಿತ್ತು

ಕಿರಿಯಾತ್:—ಇಬ್ಬರು ಗಂಡಸರು, ಇಬ್ಬರು ಹೆಂಗಸರು, ಒಂದು ಮಗು ಸುಟ್ಟುಹೋದರು ಇಷ್ಟು ಬೆಂಕಿ ಹೊತ್ತಿಸುವ ಗುಂಡಿನಿಂದ ಎರಡು ಮನೆಗಳನ್ನು ಅರಬರು ಸುಟ್ಟಾಗ ಉಂಟಾದ ಪರಿಣಾಮ ಮತ್ತಿಬ್ಬರು ಸುಟ್ಟುಹೋದರು

ಮೊಸ್ಕೋ:—ಮಂಚುಕುವೋದ ಗಡಿಯಿಂದ ದೂರ ಸಾಗದಿದ್ದರೆ, ಯುದ್ಧವಾದೀತೆಂದು ರಷ್ಯಕ್ಕೆ ಜಪಾನು ತಿಳಿಸಿಯದೆ ಆದರೆ, ಎರಡೂ ರಾಜ್ಯಗಳೊಳಗೆ ಹಿಂದೆ ಆದ ಕರಾರಿನಂತೆ ನಕ್ಷೆನೋಡಿದರೆ, ರಷ್ಯದ ಸೇನೆಯಿರುವ ಸ್ಥಳವು ರಷ್ಯದ್ದೇ ಎಂದು ಜಪಾನಿಗೂ ತಿಳಿದೀತು,

(ಉವಾಲ್ ಉನಾಲ್‌ನಲ್ಲಿ ಎಬಿಸೀನಿಯದವರು ಸೈನ್ಯಕೂಡಿಸಿವರೆಂದು ಇಟಲಿಯು ಯುದ್ಧಮಾಡಿಲ್ಲವೆ?/ ಉವಾಲ್ ಉನಾಲ್ ಸಹ ಎಬಿಸೀನಿಯದ ಗಡಿಯೊಳಗೇ 'ಇತ್ತು'!)

ಪ್ಯಾರಿಸ್:—ಬ್ರಿಟಿಷಚಕ್ರವರ್ತಿ ಸಾಮ್ರಾಜ್ಞ-ಸಾಮ್ರಾಜ್ಞಿಯವರಿಗೆ ಅತ್ಯಪೂರ್ವ ಸ್ವಾಗತಸಂಭ್ರಮಗಳಾದುವು 50000 ಸೈನಿಕರ 600 ವಿಮಾನಗಳು ಎರಡು ರಾಕ್ಷಸ ಫಿರಂಗಿಗಳು ಇವೇ ಅವರನ್ನು ವರ್ಸೈಲ್ಸಿನಲ್ಲಿ ಎದುರ್ಗೊಂಡವು

ನ್ಯೂಯೋರ್ಕ:—ಲಂಡನಿನಿಂದ ನ್ಯೂಯೋರ್ಕಿಗೆ 3048 ಮೈಲು ದೂರ, ಆಕಾಶಮಾರ್ಗದಲ್ಲಿ 22½ ತಾಸುಗಳಲ್ಲಿ ಟಪ್ಪಾಲು ವಿಮಾನ ಹಾರಿತ ಐರ್ಲೆಂಡಿನಿಂದ ನ್ಯೂಫ್‌ಡ್‌ಲೆಂಡಿಗೆ 13½ ತಾಸು ಮೊಂಟ್ರೀಲಿಗೆ 20 ತಾಸು (ಈ ಪ್ರಯತ್ನಪರೀಕ್ಷೆಗಳಿಂದ ಶಾಂತಿಯ ಕಾಲದಲ್ಲಿ ಟಪ್ಪಾಲು ವ್ಯವಹಾರಾದಿಗಳಿಗೂ ಯುದ್ಧಕಾಲದಲ್ಲಿ ಇತರ ವ್ಯಾಪಾರಗಳಿಗೂ ಯೋಗ್ಯ ಅನುಭವ ಸಿಗುತ್ತದೆ)

ರೋಮ್:—ಪೋಪಸ್ವಾಮಿಯವರು 'ವರ್ಣಗರ್ವದ ಅತಿಶಯದ ಹೆಮ್ಮೆಯು ಕ್ರೈಸ್ತಧರ್ಮಕ್ಕೆ ಒಪ್ಪದ, ಮಾನವಕೋಟಿಗೂ ಗೌರವವಲ್ಲ' ಎಂದರು. ಮುಸೋಲಿನಿಯು ಫೆಸಿಸ್ಟ್ ತತ್ವಕ್ಕೆ ಇದು ವಿರುದ್ಧವಾಗಿದೆ। ಇನ್ನು ಪೋಪ್ ಮೇಲೂ ಮುಸೋಲಿನಿ ರೇಗಬಹುದು.

ಫಿಕ್ಸ್‌ಲಬೇನ್ಸ್:—ತಾತ್ಕಾಲಿಕ ಕಂಪೆನಿಯ ಜೆಮೋರ್ಜೆನ್ ಸ್ಟ್ ನವಯೋಜಿಸಲ್ಪಟ್ಟ... ಎಪ್ರಿಲ್‌ನಲ್ಲಿ ಯುರೋಪಖಂಡಕ್ಕೆ ತೆರಳಿದ್ದರು ಆಗೋಸ್ತು ಪ್ರಥಮವಾರದಲ್ಲಿ ವಿಮಾನಚಾರಿಗಳಾಗಿ ಒಡುವವರಿದ್ದರು ತಾ 21ರಲ್ಲಿ ಇವರು ಇಲ್ಲಿ ಮಡಿದರು ವಯಸ್ಸು 63, ಹೃದ್ರೋಗ

ಲಂಡನ್:—ಪಂಡಿತ ಜವಾಹರಲಾಲರು ಪ್ಯಾರಿಸಿಗೆ ತಾ 21ರಲ್ಲಿ ಹೊರಟರು ಕುಮಾರಿ ಇಂದಿರೆಯು ಬಳಿಯಲ್ಲಿರುವಳು ಲಂಡನಿಗೆ ಪುನಃ ಸೆಪ್ಟಂಬರದಲ್ಲಿ ಹಿಂತಿರುಗುವರು

ವೆಲೆನ್ಸಿಯ:—75 ವಿಮಾನಗಳು ಸಿಡಿಗುಂಡು ಕೆಲ್ಲಿ—ಒಂದು ಗುಂಡು ಮಾತ್ರ ತಗಲಿದ ಫಲವಾಗಿ 83 ಮಂದಿ (ಹೆಂಗಸರು ಮಕ್ಕಳು ಮುದುಕರು) ಸತ್ತರು.

ಮೆಕ್ಸಿಕೋ:—ಅಮೇರಿಕಕ್ಕೆ ಸಂಬಂಧಪಟ್ಟ ಮೆಕ್ಸಿಕೋ ಸರಕಾರವು ಜಪ್ತುಮಾಡಿದ ಜಮೀನು ಒಂದು ಮಿಲ್ಲಿಯ ಎಕ್ರೆಯಾಗಿದೆ

ಉದಯಿಸುವ ಸೂರ್ಯನೇ ಆಹಾರ

ಜಪಾನಿನವರು ಚೀನದಲ್ಲಿ ನಡೆಸುತ್ತಿರುವ ಯುದ್ಧದ ವೆಚ್ಚವನ್ನು ಒದಗಿಸುವುದಕ್ಕಾಗಿ ಉದಯಿಸುವ ಸೂರ್ಯ'ನೆಂಬ ಊಟವನ್ನು ತಿನರು ಈಗ ತಮ್ಮ ಹೊಟೇಲುಗಳಲ್ಲಿ ಕೊಡುತ್ತಿರುವರು ಅನ್ನದ ಒಂದು ಉಂಡೆ ಮಾಡಿ ಅದರ ತಲೆಯ ಮೇಲೆ ಒಂದಿಷ್ಟು ಉಪ್ಪಿನಕಾಯಿ ಹಾಕುವುದು ಬಿಳಿ ಬಣ್ಣದ ಹಿನ್ನೆಲೆಯ ಮೇಲೆ ಕೆಂಪು ಬಣ್ಣದ ಉದಯಿಸುವ ಸೂರ್ಯನೇ ಅವರ ಧ್ವಜವಾದುದರಿಂದ ಈ ಬಗೆಯ ಊಟಕ್ಕೆ 'ಉದಯಿಸುವ ಸೂರ್ಯ'ನೆಂದು ಹೆಸರು ಕೊಡಲಾಗಿದೆ

ಜುಲಾಯಿ 7ನೆಯ ದಿನ—ಜಪಾನಿನವರು ಚೀನದೊಡನೆ ಯುದ್ಧವನ್ನು ಪ್ರಾರಂಭಿಸಿದ ವಾರ್ಷಿಕೋತ್ಸವದ ದಿನ—ಇದು ಮೊದಲು ಒಳಕೆಯಲ್ಲಿ ಬಂತು. ಅದೇ ದಿನವನ್ನು ಇಡೀ ಜಪಾನ ಮಾಂಸಕಿನ್ನದೆ ಕಳೆಯಿತು ಮಾತ್ರವಲ್ಲ ಇನ್ನೂ ಒಂದೆ ಯುದ್ಧಕ್ಕಾಗಿ ಹಣವನ್ನು ಕೊಡುವ... ಗಳಲ್ಲಿ ಒಂದ ದಿನವನ್ನು ... ನಿಶ್ಚಯಿಸಿದೆ ...

★

ಸಾಧಾರಣ ಥಂಡಿ ಮತ್ತು ಕೆಮ್ಮುಗಳ ಜ್ವರವು ಕೋಡಿಗೆ ಕೆಮ್ಮಿನಲ್ಲಿ ರೂಪಾಂತರವಾಗುತ್ತದೆ

ಸಣ್ಣ ಹುಡುಗರ ಪ್ರಥಮತಃ ಉತ್ಪತ್ತಿಯಾಗುವ ಥಂಡಿಯು ಕೋಡಿಗೆ ಕೆಮ್ಮಿನಲ್ಲಿ ಎಂದು ರೂಪಾಂತರ ಹೊಂದುವದೋ ಎಂಬ ಭಯವಿರುವುದಿಲ್ಲ. ಕೆಮ್ಮಿ ಕೆಮ್ಮಿ ಜೀವವು ಗಂಟಲಿಗಾಗಿ ಹುಡುಗನು ಕಾವಿಸಿಕೊಳ್ಳುತ್ತಾನೆ ಜ್ವರಬರುತ್ತದೆ ನಿದ್ದೆ ಹತ್ತುವದಿಲ್ಲ, ದಿನದಿನಕ್ಕೆ ಅಶಕ್ತತೆಯುಂಟಾಗಿ ಅಲಕ್ಷತೆಯ ಮೂಲಕ ಅಕಸ್ಮಾತ ಮೃತ್ಯುವಾಗುವದು. 'ಪುರೋಹಿತ ಶ್ವಾಸಹಾರೀ' ಕಂಪೌಂಡು ಇದು ಇದರ ಮೇಲೆ ಅತ್ಯಂತ ವಿಶ್ವಸನೀಯ ಮತ್ತು ಡಾಕ್ಟರ ಉಪಾಯವು ... ಕೂಡಲೆ ಕಡಿಮೆ ಆಗಿ ಜ್ವರವು ನಿಲ್ಲುವದು ಮತ್ತು ನಿದ್ದೆ ಹತ್ತಿ ಆರಾಮವೆನಿಸುವದು ... ಔನ್ಸ್ ... ಔನ್ಸ್ ಮತ್ತು ... ಔನ್ಸ್ ... ರೂ ... ಬಾಟ್ಲಿಗಳಲ್ಲಿ ... ರೂ ... ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ

ಮಂಗಳೂರು ಏಜಂಟ್—ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಪುರೋಹಿತ ಶ್ವಾಸಹಾರಿ

ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ.



ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ಮತ್ತು ಪ್ಲೀಹದ ಬೆಳವಣಿಗೆ ರೋಗವನ್ನು ನಿವಾರಿಸುವ ಮತ್ತು ತಡೆಯುವ ಖಾತ್ರಿ ಗುಣಗಳುಳ್ಳ ಔಷಧಿಯು.

ಎರಡು ವಿಧಗಳಲ್ಲಿ, ಎರಡು ಪರಿಮಾಣಗಳಲ್ಲಿ ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ

ಆಯುರ್ವೇದಾಶ್ರಮಂ ಮದ್ರಾಸು.

ಪ್ರವರ್ತಕರು—ಅಮರ್‌ಚಂದ್ ಸೊಟಾಚಂದ್, ಮದ್ರಾಸು.

ಚೈತನ್ಯ ಸ್ವಾಮಿಯ ಪರಮ ಶಿಷ್ಯ—ಲೋಕನಾಥ.

ಹಿಂದುಗಳ ಪುಣ್ಯಕ್ಷೇತ್ರವಾಗಿರುವ ಬೃಂದಾವನವು ನಾಲ್ಕು ಶತಮಾನಗಳ ಹಿಂದೆ ಅರಣ್ಯಭೂಮಿಯಾಗಿತ್ತು. ಧರ್ಮಾಂಧರಾದ ಮುಸಲ್ಮಾನರು ಅದನ್ನು ಪೂರ್ಣ ಕೆಡಹಿ ಹಾಕಿದ್ದರು. ಪವಿತ್ರ ದೇವಮೂರ್ತಿಗಳು ಅಲ್ಲಲ್ಲಿ ಚೆದರಿ ಬಿದ್ದಿದ್ದವು. ಧರ್ಮೋದ್ಧಾರಕ ಚೈತನ್ಯ ಸ್ವಾಮಿಗೆ ಇದು ತಿಳಿದು ಅವರು ತಮ್ಮ ಪರಮ ಶಿಷ್ಯ ಲೋಕನಾಥನನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಸ್ವಾಮಿಯ ಸಂದೇಶವನ್ನು ಶಿರೋಧಾರ್ಯ ಮಾಡಿಕೊಂಡು ಲೋಕನಾಥನು ಬೃಂದಾವನದ ಜೀರ್ಣೋದ್ಧಾರ ಮಾಡಿದನು. ಪುಣ್ಯಪ್ರದವಾದ ಅವನ ಜೀವನ ಕತೆಯನ್ನು ಕಲ್ಯಾಣ ಕಲ್ಪತ್ತರುವಿನಿಂದ ಎತ್ತಿಕೊಂಡು ಇಲ್ಲಿ ಕೊಟ್ಟಿರುತ್ತೇವೆ.

★

ಜೆಸ್ಸೋರ ಗ್ರಾಮದಲ್ಲಿ ಮಹಾ ಆಸ್ತಿಕ ಪುರುಷರೆಂದು ಪ್ರಸಿದ್ಧರಾಗಿದ್ದ ಪದ್ಮನಾಭ ಚಕ್ರವರ್ತಿಯೇ ನಮ್ಮ ಲೋಕನಾಥನ ತಂದೆ. ತಾಯಿತಂದೆಗಳು ದೊಡ್ಡ ವೈಷ್ಣವ ಭಕ್ತರಾಗಿದ್ದರು. ಆದ್ದರಿಂದ ಹುಟ್ಟಿನಿಂದ ಲೋಕನಾಥನಲ್ಲಿ ಭಕ್ತಿರಸವು ಪ್ರವಾಹ ಕಟ್ಟಿಕೊಂಡು ಹರಿಯುತ್ತಿದ್ದಿತು. ಮೊದಲಿನಿಂದ ಪ್ರಪಂಚದ ಆಗುಹೋಗುಗಳ ಕಡೆಗೆ ಉದಾಸೀನ ಭಾವ, ಅಗಾಧವಾದ ವಿದ್ವತ್ತು, ಭಕ್ತಿ ಪಂಥದ ಸತತ ಅಧ್ಯಯನ, ಭಗವಾನ ಶ್ರೀ ಕೃಷ್ಣನಲ್ಲಿ ನಿಶ್ಚಲ ಭಕ್ತಿ, ಆವನ ಅಪರಂಪರ ಲೀಲಾ ವಿನೋದಗಳಲ್ಲಿ ಅತಿಶಯ ಶ್ರದ್ಧೆ ಇವುಗಳೆಲ್ಲ ಅವನಿಗೆ ಬಾಲ್ಯದಿಂದ ಜನರ ಪ್ರೇಮ ಆಧಾರಗಳನ್ನು ತಂದು ಕೊಟ್ಟಿದ್ದುವು.

ಇದೇ ಸಮಯಕ್ಕೆ ನವದ್ವೀಪದಲ್ಲಿ ವಾಸವಾಗಿದ್ದ ಚೈತನ್ಯ ಮಹಾಪ್ರಭುವಿನ ಕೀರ್ತಿ ಪ್ರಭೆಯು ಇಡೀ ಬಂಗಾಳವನ್ನು ಬೆಳಗಿಸಿತು. ಲೋಕನಾಥನು ಮಹಾಪ್ರಭುವಿನ ದರ್ಶನಕ್ಕಾಗಿ ಲಾಲಾಯಿತನಾದನು. ಲೋಕೋದ್ಧಾರ ಮಾಡಲಿಕ್ಕೆ ಚೈತನ್ಯ ಸ್ವಾಮಿಯ ಜನ್ಮವಾಗಿರುತ್ತದೆಂದು ಅವನಿಗೆ ವಿಶ್ವಾಸವಾಗಿದ್ದಿತು. ಚೈತನ್ಯ ಸ್ವಾಮಿಯು ದೇವಾಂಶ ಸಂಭೂತರೆಂದೂ, ವಿಭೂತಿ ಪುರುಷರೆಂದೂ ಅವನಿಗೆ ನಂಬಿಗೆಯಾಗಿದ್ದಿತು. ಬರೀ ಎರಡು ದಿನಗಳ ಪ್ರಯಾಣ ಮಾಡಿದ ಮಾತ್ರದಿಂದ ಸ್ವಾಮಿಯನ್ನು ನೋಡಬಹುದಾದ ಅನುಕೂಲವು ಪ್ರಾಪ್ತವಾಗಿರುವಾಗ, ಲೋಕನಾಥನು ನವದ್ವೀಪಕ್ಕೆ ಹೊರಡದೆ ಹೇಗಿದ್ದಾನು? ಪ್ರಾಪಂಚಿಕ ವಿಷಯಗಳಲ್ಲಿ ಲೋಕನಾಥನ ಜುಗುಪ್ಸೆ ಹೊಂದಿರುವದನ್ನು ನೋಡಿ ತಾಯಿತಂದೆಗಳು ಕಳವಳಾದರು. ಅವನು ನವದ್ವೀಪಕ್ಕೆ ಹೋಗಲಿರುವದನ್ನು ಕೇಳಿಯಂತೂ ಅವರು ತಬ್ಬಿಬ್ಬಾದರು.

ಲೋಕನಾಥನ ಮನೋಗತಿಯನ್ನು ತಿರುಗಿಸಬೇಕೆಂದು ಅವನ ತಾಯಿ ತಂದೆಗಳು ಶತ ಪ್ರಯತ್ನ ಮಾಡಿದರು. ಏಕ ಮಾತ್ರ ಮಗನನ್ನು ಸದಾಕಾಲಕ್ಕೆ ದೂರ ಬಿಡುವದು ಅವರಿಗೆ ಅಸಹನೀಯವಾಗಿತ್ತು. ಆದ್ದರಿಂದ ಅವನು ನವದ್ವೀಪಕ್ಕೆ ಹೋಗಬಾರದೆಂದು ತಾಯಿತಂದೆಗಳು ಅವನನ್ನು ತಡೆದರು. ಅವನಿಗೆ ಒಂದು ಹುಡುಗಿಯನ್ನು ತಂದು ಗಂಟು ಹಾಕುವದಾಗಿಯೂ ನಿಶ್ಚಯಿಸಿದರು.

ಆದರೆ ತಾಯಿತಂದೆಗಳು ತಮ್ಮ ಪ್ರಯತ್ನಗಳಲ್ಲಿ ಸಫಲರಾಗಲಿಲ್ಲ. ಅವರು ಮಾಯಾಜಾಲದಲ್ಲಿ ಒಡ್ಡುವ ಮೊದಲೇ ಲೋಕನಾಥನು ಮನೆಯಿಂದ ಹೊರಬಿದ್ದನು. ತಾಯಿತಂದೆಗಳಿಗೆ ಮಾನಸಿಕ ಕ್ಲೇಶವನ್ನು ಕೊಟ್ಟ ಅಪರಾಧಕ್ಕಾಗಿ ಅವರೊಡನೆ ಮನಸ್ಸಿನಲ್ಲಿಯೇ ಕ್ಷಮಾಯಾಚನೆ ಮಾಡಿ, ಅವನು ಅವಸರವಸರವಾಗಿ ನವದ್ವೀಪಕ್ಕೆ ನಡೆದುಬಿಟ್ಟನು. ಎರಡು ದಿನಗಳ ಪ್ರಯಾಣವನ್ನು ಒಂದೂವರೆ ದಿನಗಳಲ್ಲಿಯೇ ಮುಗಿಸಿ, ಸಾಯಂಕಾಲವಾಗುವ ಹೊತ್ತಿಗೆ ಚೈತನ್ಯ ಸ್ವಾಮಿಯ ಮನೆತೋಟಕ್ಕೆ ಬಂದು ಮುಟ್ಟಿದನು. ಸ್ವಾಮಿಯನ್ನು ನೋಡುವ ಆಸೆಯು ಅವನಲ್ಲಿ ಎಷ್ಟು ಪ್ರಬಲವಾಗಿತ್ತೆಂದರೆ, ದಾರಿಯಲ್ಲಿನ ಕಲ್ಲುಮುಳ್ಳು ಹಸಿವು ನೀರಡಿಕೆ, ಆಯಾಸ ಬಳಲಿಕೆ ಯಾವದನ್ನು ಅವನು ಲಕ್ಷಿಸಲಿಲ್ಲ. ಮನುಷ್ಯ ಜನ್ಮದಲ್ಲಿ ಹುಟ್ಟಿದುದಕ್ಕೆ ಒಂದು ಸಾರೆಯಾದರೂ ಚೈತನ್ಯ ಸ್ವಾಮಿಯನ್ನು ಚರ್ಮಚಕ್ಷುಗಳಿಂದ ಮನದಣಿಯೆ ನೋಡಿ ಜನ್ಮ ಸಾರ್ಥಕ ಮಾಡಿಕೊಳ್ಳಬೇಕೆಂಬುದೇ ಅವನ ಮಹತ್ವಾಕಾಂಕ್ಷೆಯಾಗಿದ್ದಿತು.

ಪುಣ್ಯಕ್ಕೆ ಸ್ವಾಮಿಯು ಮನೆಯೊಳಗಿದ್ದರು. ಲೋಕನಾಥನಿಗೆ ಒಂದು ಹೆಜ್ಜೆ ಕೂಡ ಮುಂದಕ್ಕಿಡಲಾಗದಷ್ಟು ದಣಿವಾಗಿದ್ದಿತು. ಆದರೂ ಹೇಗೂ ಮಾಡಿ ತನ್ನ ಬಳಲಿದ ದೇಹವನ್ನು ಬಹುಪ್ರಯಾಸದಿಂದ ಎಳೆದುಕೊಂಡು ಅವನು ಹಿಂಬಾಗದ ಮನೆ ತೋಟವನ್ನು ಸೇರಿದನು. ಒಳಗೆ ತನ್ನ ಅಚ್ಯುತೇಚ್ಛನ ಶಿಷ್ಯರನ್ನು ಸುತ್ತು ಹಾಕಿಕೊಂಡ ಸ್ವಾಮಿಯು ಎತ್ತರವಾದ ಮಂಚದ ಮೇಲೆ ಕುಳಿತುಕೊಂಡಿದ್ದರು. ಲೋಕನಾಥನ ಅವರನ್ನು ನೋಡಿದ ಮಾತ್ರಕ್ಕೆ ಶಿರ ನಮಸ್ಕರಿಸಿದನು. ಅವನ ಆನಂದ ಸ್ಥಾನದಲ್ಲಿ ಹೊಳೆ ಹರಿಯಿತು.

ಬಿಕ್ಕಿ [illegible] ನಮಸ್ಕರಿಸುತ್ತಿರುವ ಲೋಕನಾಥನನ್ನು ದೂರದಿಂದ ನೋಡಿ ಚೈತನ್ಯ ಸ್ವಾಮಿಯು ಓಡಿ ಬಂದು, ಅವನನ್ನು ಪ್ರೇಮದಿಂದ ಅಪ್ಪಿ ತಲೆಯನ್ನು ಮುದ್ದಿಟ್ಟು 'ಲೋಕನಾಥ, ಎಷ್ಟು ದಿನ ನನ್ನನ್ನು ಮರೆತು ಇದ್ದೆ. ನಿನ್ನ ವಿರಹವು ನನಗೆ ಅಸಹನೀಯವಾಗಿತ್ತು. ಈಗ ನೀನು ಬಾರದೇ ಇದ್ದಿದ್ದರೆ ನನ್ನ ಸ್ಥಿತಿ ಏನಾಗುತ್ತಿತ್ತು ?' ಎಂದನು.

ಸಮಾಗಮದಲ್ಲಿ 5 ದಿನಗಳು ಕಳೆದುವು. ಈ ಐದು ದಿನಗಳಲಿ ಲೋಕನಾಥನಿಗೆ ಪ್ರಪಂಚದ ಕಡೆಗೆ ಎಚ್ಚರವೇ ಇರಲಿಲ್ಲ. ಚೈತನ್ಯ ಸ್ವಾಮಿಯ ಆಶೀರ್ವಾದದ ಬಲದಿಂದ ಅವನಿಗೆ ಆತ್ಮಜ್ಞಾನವಾಗಲಾರಂಭವಾಯಿತು. ಐದನೆ ದಿನ ಸ್ವಾಮಿಯು ಅವನನ್ನು ಸಮೀಪಕ್ಕೆ ಕರೆದು 'ಲೋಕನಾಥ' ಬೃಂದಾವನಕ್ಕೆ ಹೋಗು. ಅಲ್ಲಿ ನೀನು ಮಾಡಬೇಕಾದ ಮಹತ್ವದ ಕೆಲಸಗಳಿವೆ' ಎಂದರು. ಸ್ವಾಮಿಯನ್ನು ಬಿಟ್ಟು ಹೋಗುವುದು ಲೋಕನಾಥನಿಗೆ ಅಸಹನೀಯವಾಗಿತ್ತಾದ್ದರೂ ಸ್ವಾಮಿಯ ಆಜ್ಞೆಯು ಅವನಿಗೆ ಶಿರೋಧಾರ್ಯವಾಗಿತ್ತು. ಅವನು ಹೋಗುವ ಸಮಯಕ್ಕೆ ತಾಯಿಯನ್ನು ಅಗಲಿ ಹೋಗುವ ಚಿಕ್ಕ ಮಗನಂತೆ ಬಿಕ್ಕಿಬಿಕ್ಕಿಯಾಗಿ ಪ್ರಲಾಪಿಸಿದನು. ಸ್ವಾಮಿಯು ಅವನನ್ನು ಸಮಾಧಾನಪಡಿಸಿ [illegible] ಬೃಂದಾವನದ ಜೀರ್ಣೋದ್ಧಾರಕ್ಕೆ ಬೇಕಾದ [illegible] ಸೂಚನೆಗಳನ್ನಿತ್ತು ಅವನನ್ನು ಬೀಳ್ಕೊಟ್ಟರು. ಹೋಗುವಾಗ ಅವನ ಸಹಾಯಕ್ಕೆ ತನ್ನ ಇನ್ನೊಬ್ಬ ಶಿಷ್ಯ ಭೂಗರ್ಭನನ್ನು ಸಂಗಡ ಮಾಡಿಕೊಟ್ಟರು. ಅವರು ಹೊರಟು ಹೋಗುವಾಗ [illegible] ದೃಶ್ಯವು ಬಹು ಹೃದಯ ವಿದ್ರಾವಕವಾಗಿತ್ತು.

ಆಗ ಹಿಂದೂ ಮುಸಲ್ಮಾನ ರಾಜ್ಯಗಳೊಳಗೆ ಘೋರ ಸಂಘರ್ಷವು ನಡೆದಿತ್ತು. ಆದ್ದರಿಂದ ರಾಜಮಹಲಿನಿಂದ ಬೃಂದಾವನಕ್ಕೆ ನೆಟ್ಟಗೆ ಮಾರ್ಗವು ಹಿಂದೂಗಳಿಗೆ ಬಹು ಅಪಾಯಕಾರಿಯಾಗಿತ್ತು. ಲೋಕನಾಥ ಭೂಗರ್ಭರಿಗೆ ಪ್ರಾಣದ ಮೇಲೆ ಹಂಬಲವಿಲ್ಲ. ಸ್ವಾಮಿ ಕಾರ್ಯಕ್ಕಾಗಿ ಅವರು ಪ್ರಾಣಕೊಡಲಿಕ್ಕೆ ಸಿದ್ಧರಿದ್ದರು. ಆದರೆ ಈ ಸಂದರ್ಭದಲ್ಲಿ ಮುಸಲ್ಮಾನರ ಕೈಯಲ್ಲಿ ತಮ್ಮ ಪ್ರಾಣಗಳನ್ನು ಬಲಿ ಕೊಟ್ಟ ಮಾತ್ರಕ್ಕೆ ಸ್ವಾಮಿ ಕಾರ್ಯವು ಕೈಗೂಡುವಂತಿರಲಿಲ್ಲ. ಆದ್ದರಿಂದ ಅವರು ಒಂದು ಸುತ್ತಾದ ದಾರಿಯನ್ನು ನಡೆದು ಬಹು ಪ್ರಯಾಸದಿಂದ ಬೃಂದಾವನವನ್ನು ಸೇರಿದರು.

ಬೃಂದಾವನವು ಆಗ ಬಹಳ ಹಾಳು ಸ್ಥಿತಿಯಲ್ಲಿದ್ದಿತು. ಮುಸಲ್ಮಾನ ಆಕ್ರಮಣಕಾರರು ಈ ಪುಣ್ಯಕ್ಷೇತ್ರದ ಧ್ವಂಸ ಮಾಡಿದ್ದರು. ದೇವ ಮಂದಿರಗಳೆಲ್ಲ ಬಿದ್ದುಹೋಗಿದ್ದುವು. ಅನೇಕ ದೇವ ಮೂರ್ತಿಗಳು ಕೆಡವಿ ಬಿದ್ದಿದ್ದುವು. ಆ ಭಗ್ನಾವಶಿಷ್ಟಗಳನ್ನು ನೋಡಿ ಕಣ್ಣುಗಳಿಂದ ನೀರಿಳಿಯುತ್ತಿತ್ತು. ವೃಂದಾವನದ ಜನರು ಕ್ಷೇತ್ರದ ಮಹತ್ವ ಅದರ ಪಾವಿತ್ರ್ಯ ಎಲ್ಲವನ್ನು ಮರೆತಿದ್ದರು.

ಭಗವಾನ ಶ್ರೀ ಕೃಷ್ಣನ ಲೀಲಾ ಸ್ಥಾನಗಳನ್ನು ಗುರುತಿಸುವದು ಲೋಕನಾಥ ಭೂಗರ್ಭರಿಗೆ ಬಹು ಪ್ರಯಾಸದ ಕಾರ್ಯವಾಗಿ ಪರಿಣಮಿಸಿತು. ಗೋವರ್ಧನ ಗಿರಿ ಮತ್ತು ಯಮುನಾ ನದಿಯಲ್ಲದೆ, ಕ್ಷೇತ್ರ ಮಹಾತ್ಮೆಯನ್ನು ತಿಳಿಸುವ ಬೇರೆ ಯಾವ ಕುರುಹೂ ಅಲ್ಲಿರಲಿಲ್ಲ. ರಾಧಾಕೃಷ್ಣನೊಡನೆ ಪ್ರಾರ್ಥನೆ ಮತ್ತು ಸತತ ಪರಿಶ್ರಮದಿಂದ ಅಸಾಧ್ಯಕಾರ್ಯವು ಅವರಿಗೆ ಸಾಧ್ಯವಾಯಿತು. ಗುರುಕೃಪೆಯಿಂದ ಅವರು ಕೈ ಹಿಡಿದ ಉದ್ಯಮವು ಸಫಲವಾಯಿತು. ಮೆಲ್ಲ ಮೆಲ್ಲಗೆ ಲೋಕನಾಥ ಭೂಗರ್ಭರೆಂಬ ಇಬ್ಬರು ಪುಣ್ಯಪುರುಷರು ಬೃಂದಾವನಕ್ಕೆ ಬಂದಿರುವರೆಂದೂ, ಅವರು ಕ್ಷೇತ್ರದ ಜೀರ್ಣೋದ್ಧಾರ ಕಾರ್ಯದಲ್ಲಿ ತೊಡಗಿದ್ದಾರೆಂದೂ ಸುತ್ತ ಮುತ್ತಲಿನ ಜನರು ತಿಳಿಯ ಹತ್ತಿದರು. ಜನರು ತಾವಾಗಿ ಬಂದು ಅವರಿಗೆ ಸಹಾಯ ಮಾಡತೊಡಗಿದರು.

ತನ್ಮಧ್ಯೆ ಚೈತನ್ಯ ಸ್ವಾಮಿಯು ಸನ್ಯಾಸ ತೆಗೆದುಕೊಂಡು ತೀರ್ಥಯಾತ್ರೆಗೆ ಹೊರಟಿರುವರೆಂಬ ಸುದ್ದಿಯು ಲೋಕನಾಥ ಭೂಗರ್ಭರಿಗೆ ಬಂದು ಮುಟ್ಟಿತು. ಆದ್ದರಿಂದ ಸ್ವಾಮಿಯ ದರ್ಶನಕ್ಕಾಗಿ ಅವರ ಪುನರ್ಮಿಲನಕ್ಕಾಗಿ ಬಿಟ್ಟರೆ ಇಬ್ಬರೂ ದಕ್ಷಿಣಕ್ಕೆ ಹೊರಟರು. ಅಲ್ಲಿ ಹೋದಾಗ ಚೈತನ್ಯ ಸ್ವಾಮಿಯು ಬೃಂದಾವನಕ್ಕೆ ಹೋಗಿರುವರೆಂದು ತಿಳಿಯಿತು. ಪುನಃ ಬೃಂದಾವನಕ್ಕೆ ಬರುವಷ್ಟರಲ್ಲಿ ಬಂದೆರಡು ದಿನಗಳ ಹಿಂದೆ ಅವರು ಊರಿಗೆ ಹೋದರೆಂದು ಗೊತ್ತಾಯಿತು. ಹೀಗಾಗಿ ಲೋಕನಾಥನ ಹೃದಯವು ಸ್ವಾಮಿ ದರ್ಶನಾಕಾಂಕ್ಷೆಯಿಂದ ಒಡೆದು ಚೂರುಚೂರಾಯಿತು. ಅವನು ಪೂರ್ಣ ನಿರಾಶನಾದನು. ಕಡೆಗೆ ಒಂದು ದಿನ ಸ್ವಾಮಿಯು ಸ್ವಪ್ನದಲ್ಲಿ ಕಾಣಿಸಿಕೊಂಡು, 'ಲೋಕನಾಥ ನೀನು ನನ್ನ ಬಳಿಗೆ ಬರಬೇಡ. ಅಲ್ಲೇ ಇದ್ದು ನನ್ನ ಕಾರ್ಯಗಳನ್ನು ಮಾಡು. ನಾನು ಈಗ ಮೊದಲಿನಂತೆ ಇರುವದಿಲ್ಲ. ಸನ್ಯಾಸಿಯಾಗಿದ್ದೇನೆ. ಮೊದಲು ಬೇರೆ [illegible] ನವದ್ವೀಪದಲ್ಲಿ ಗೃಹಸ್ಥಾಶ್ರಮದಲ್ಲಿದ್ದಾಗ ನನ್ನ ಸುಂದರ ರೂಪ ಅಲಂಕಾರಗಳನ್ನು ಕಂಡ ನೀನು ನನ್ನ ಈಗಿನ ಅಸ್ಥಿ ಚರ್ಮಮಯ ಕೃಶ ಶರೀರವನ್ನು ನೋಡಿ ಸಹಿಸಲಾರೆ. ಆದ್ದರಿಂದ ನನ್ನ ಈಗಿನ ರೂಪವನ್ನು ಹೃದಯದಲ್ಲಿ ತಾಳದು. ನೀನು ನನ್ನನ್ನು ನೋಡಕೂಡದೆಂದೇ ನಾನು ಉದ್ದೇಶಪೂರ್ವಕ ಇಲ್ಲಿಂದ ದೂರವಾಗಿದ್ದೇನೆ' ಎಂದು ಸಂದೇಶವನ್ನು ಕೊಟ್ಟರು. ಅಂದಿನಿಂದ ಲೋಕನಾಥನು ಸ್ವಾಮಿದರ್ಶನದ ಆಸೆಯನ್ನು ಪೂರ್ಣ ಬಿಟ್ಟುಬಿಟ್ಟನು.

ಬೃಂದಾವನದಲ್ಲಿ ಮೊದಲು ಲೋಕನಾಥ ಭೂಗರ್ಭರಿಬ್ಬರು ಮಾತ್ರ ವಾಸವಾಗಿದ್ದರು. ಅನಂತರ ಚೈತನ್ಯ ಸ್ವಾಮಿಯೂ ಕೆಲವು ದಿನ ಅಲ್ಲಿದ್ದರು. ಆ ಮೇಲೆ ಎಷ್ಟೋ ಮಂದಿ ಬೇರೆ ಶಿಷ್ಯರು ಅಲ್ಲಿ ಬಂದು ಉಳಿಕೊಳ್ಳಲಾರಂಭಿಸಿದರು. ಅವರ ಪ್ರಯತ್ನಗಳಿಂದ ರಾಧಾಕೃಷ್ಣ ಲೀಲಾ ಸ್ಥಾನಗಳೆಲ್ಲ ಗುರುತಿಸಲ್ಪಟ್ಟು ಅವುಗಳ ಜೀರ್ಣೋದ್ಧಾರ ಕಾರ್ಯವು ನಡೆಯಿತು. ಮುಸಲ್ಮಾನರಿಂದ ಗುಪ್ತವಾಗಿ ಇಡಲ್ಪಟ್ಟ ದೇವ ಪ್ರತಿಮೆಗಳನ್ನು ಶೋಧಿಸಿ ತೆಗೆದರು. ಅವುಗಳನ್ನು ಪೂರ್ವ ಸ್ಥಾನಗಳಲ್ಲಿ ಪ್ರತಿಷ್ಠಿಸಿ ಪುನಃ ಪೂಜಿಸಲಾರಂಭಿಸಿದರು. ಪುನಃ ಬೃಂದಾವನವನ್ನು ಹಿಂದುಗಳ ಪರಮ ಪವಿತ್ರ ಪುಣ್ಯ ಕ್ಷೇತ್ರವಾಗಿ ಪರಿವರ್ತನೆ ಹೊಂದಿತು.

ಬಹಿಪ್ರಪಂಚದ ಯಾವ ಸಂಬಂಧವನ್ನೂ ಇಟ್ಟು ಕೊಳ್ಳದೆ ಲೋಕನಾಥನು ತನ್ನ ಶೇಷ ಜೀವನವನ್ನು ಬೃಂದಾವನದಲ್ಲಿ ರಾಧಾಕೃಷ್ಣರ ಭಜನೆಯಲ್ಲಿ ಕಳೆದನು. ಜೀವನದ ಶ್ರೇಷ್ಠ ಪುರುಷಾರ್ಥವು ಪರಮಾತ್ಮ ಸಾನಿಧ್ಯವನ್ನು ಪಡೆಯುವುದು ಮಾತ್ರ ಆಗಿರುವದರಿಂದ ಅವನಿಗೆ ಬಹಿಪ್ರಪಂಚದ ಸಂಬಂಧವನ್ನಿಟ್ಟುಕೊಳ್ಳುವ ಆಗತ್ಯವೇ ತೋರಿ ಬರಲಿಲ್ಲ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಜಿಸ್ಟರ್ಡ್)





ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ, ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು ಗೊನೊಕಿಲರ್ ಇರುವುದು ಎಂಬುದನ್ನು ನೋಡಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೊಕಿಲ್ಲರ್, ಸ್ತ್ರೀಪುರುಷರ ಎಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುಕೊಳ್ಳುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು 8 ಆಣೆ ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N JASANI,** Vithalbhai Patel Road, BOMBAY 4

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಮಲೇರಿಯಾ

ಜಗತ್ತಿನ ಹೆಚ್ಚಿನ ಕಡೆಗಳಲ್ಲಿ ವ್ಯಾಪಿಸಿರುವ ರೋಗ.

ಶೀತೋಷ್ಣ ಮತ್ತು ಅರ್ಧಶೀತೋಷ್ಣ ವಲಯಗಳಲ್ಲಿರುವ ದೇಶಗಳಲ್ಲಿ ಮಲೇರಿಯಾವು ಹೆಚ್ಚಾಗಿ ಕಾಣಿಸುತ್ತದೆ; ಸಮಶೀತೋಷ್ಣ ವಲಯಗಳಲ್ಲೂ ಮಲೇರಿಯಾವು ತಲೆದೋರುವುದುಂಟು. ಶೀತೋಷ್ಣ ಪ್ರದೇಶಗಳಲ್ಲಿ ಮಲೇರಿಯಾವು ಸಮುದ್ರಕರಾವಳಿಯಲ್ಲೂ, ಸರೋವರಗಳ ಬದಿಗಳಲ್ಲೂ ಕಾಣಿಸಿಕೊಳ್ಳುತ್ತದೆ. ಜನರನ್ನು ವಿಧ ವಿಧ ತರಗಳಲ್ಲ ಪೀಡಿಸುವ ರೋಗವು ಮಲೇರಿಯಾವು. ಅದರ ನಿರ್ಮೂಲನಕ್ಕಾಗಿ ಜನವರ್ಗವು ಹೋರಾಡುತ್ತಿದೆ. ಮಲೇರಿಯಾದ ದೆಸೆಯಿಂದ ಮಾನವ ಕೋಟಿಗೆ ಮಹತ್ತಾದ ನಷ್ಟ ಉಂಟಾಗುತ್ತವೆ, ಅಲ್ಲದೆ, ಅವರ ಆರೋಗ್ಯಸಿರಿಯು ದಾಯವಾಗುತ್ತದೆ.

ಮಲೇರಿಯಾ ಹಾವಳಿಯಿರುವ ಪ್ರದೇಶಗಳಲ್ಲಿ, ಅದರ ದೆಸೆಯಿಂದ ಕೆಲಸಗಾರರ ಸಂಖ್ಯೆಯು ಕಡಿಮೆಯಾಗುವುದು, ಅದರಿಂದ ವ್ಯಾಪಾರ ವ್ಯವಹಾರಕ್ಕೆ ತಡೆಯು ಬರುವುದು,— ತೋಟಗಳಲ್ಲಿ ಮಜೂರರು ಕಡಿಮೆಯಾಗಿಬಿಟ್ಟರೆ, ಬೆಳೆಯು ಕಡಿಮೆಯಾಗಿ ಮಹತ್ತಾದ ನಷ್ಟಗಳಿಗೆ ಕಾರಣವಾಗುವುದು.

ಮಲಿಯ ಗಟ್ಟಿಯಲ್ಲಿ ಜನರ ಪ್ರಾಣಹಾನಿ ಈ ಮಲೇರಿಯಾ ಜ್ವರಕ್ಕಾಗುತ್ತಿದೆ. ಈ ಕೆಳಗೆ ಕೆಲವು ಅಂಕೆ ಸಂಖ್ಯೆಗಳು ಕೊಡಲಾಗಿವೆ.

1909 ಅಮೇರಿಕಾದಲ್ಲಿ ಮಲೇರಿಯಾ ಹಾವಳಿಗೆ ಒಳಗಾದವರ ಸಂಖ್ಯೆಯು 3,000,000, ಮಲೇರಿಯಾದ ದೆಸೆಯಿಂದ ವ್ಯಾಪಾರ ಇತ್ಯಾದಿಗಳಿಗೆ ಉಂಟಾದ ನಷ್ಟವು 10,000,000 ಡೊಲ್ಲರುಗಳು. ಬ್ರಿಟಿಷ ಹಿಂದೂದೇಶದಲ್ಲಿ ವರ್ಷಂಪ್ರತಿ 1,300,000 ಜನರು ಮಲೇರಿಯಾಕ್ಕೆ ಆಹುತಿಯಾಗುತ್ತಿರುವರೆಂದು ಕಂಡು ಹಿಡಿಯಲಾಗಿದೆ.

ಡಚ್ಚ ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಕೃಷಿಗಾರರಿಗೆ ಮತ್ತು ಅದೆ ತರ ಇತರ ವ್ಯವಸಾಯಿಗಳಿಗೆ ಮಲೇರಿಯಾವು ಒಂದು ಮಹಾ ಅಪಾಯವಾಗಿರುವುದು. ಮಲೇರಿಯಾವನ್ನು ಅಲ್ಲಿಂದ ಸಂಪೂರ್ಣ ಕಿತ್ತು ಬಿಸಾಡುವರೆ ಅಲ್ಲಿಯವರು ಮಹತ್ಪ್ರಯತ್ನಗಳನ್ನು ಮಾಡುತ್ತಿದ್ದಾರೆ, ಅಲ್ಲಿ ಮಲೇರಿಯಾದಿಂದ ಮಡಿಯುವವರ ಸಂಖ್ಯೆಯು ಬಹಳವಿದೆ. ಇಲ್ಲಿ ನಡೆದಷ್ಟು ಮಲೇರಿಯಾದ ಹಾವಳಿ ಬೇರೆಲ್ಲೂ ನಡೆಯುವುದಿಲ್ಲ. ಆದರೂ ಮಲೇರಿಯಾಕ್ಕೆ ದಿವ್ಯ ಔಷಧಿಯು ಅಲ್ಲೇ ದೊರಕುತ್ತದೆ. ಕ್ವಿನೀನನ್ನು ತಕ್ಕ ಸಮಯದಲ್ಲಿ ಉಪಯೋಗಿಸಿದರೆ, ಮಲೇರಿಯಾದಿಂದ ಮೃತ್ಯುಕರ ದುಷ್ಪರಿಣಾಮಗಳು ಉಂಟಾಗವು. ಮಲೇರಿಯಾ ನಿವಾರಣೆಗೆ ಕ್ವಿನೀನು ಸರ್ವಶ್ರೇಷ್ಠವಾದುದು.

ಮಲೇರಿಯಾ ನಿವಾರಣೆಗೆ ಈ ಕೆಳಗೆ ಹೇಳಿದ ಪ್ರಕಾರ ಚಿಕಿತ್ಸೆಯಾಗಬೇಕೆಂದು ಜನಾಂಗ ಮಂಡಳಿಗೆ ಮಲೇರಿಯಾ ಸಮಿತಿ ಮಂಡಳಿಯವರು ಸಾರಿರುತ್ತಾರೆ. ಮಲೇರಿಯಾ ಜ್ವರ ಹಿಡಿದ ಪ್ರಥಮ ಆರೇಳು ದಿವಸಗಳಲ್ಲಿ ದಿನಾಲೂ 15-18 ಗ್ರೇನುಗಳ ವರೆಗೆ ಕ್ವಿನೀನು ಸೇವಿಸಬೇಕು. ಜ್ವರವು ಮತ್ತೊಮ್ಮೆ ತಲೆದೋರಿದರೆ ಅದೆ ಚಿಕಿತ್ಸೆಯನ್ನು ಮುಂದುವರಿಸಬೇಕು. ಮಲೇರಿಯಾವು ಕಾಣಿಸಿಕೊಂಡ ಸಮಯದಲ್ಲಿ ದಿನಂಪ್ರತಿ 6 ಗ್ರೇನು ಕ್ವಿನೀನು ಪ್ರಕಾರ ತಿಂದುಬಿಟ್ಟರೆ, ಮಲೇರಿಯಾವು ನಿಮಗೆ ತಟ್ಟದು; ಮುಂದಕ್ಕೆ ನಿಮ್ಮ ಗೋಜಿಗೆ ಬಾರದು.

ಅದೃಶ್ಯ ವಿಮಾನ

ಬ್ರಿಟಿಷ್ ವಿಜ್ಞಾನಿಗಳು ಅದೊಂದು ಬಗೆಯ ಪಾರದರ್ಶಕ ವಸ್ತುವಿನಿಂದ ವಿಮಾನಗಳನ್ನು ತಯಾರಿಸಲು ಪ್ರಯತ್ನಿಸುತ್ತಿರುವರು. ಅವರ ಪ್ರಯತ್ನಗಳು ಫಲಕಾರಿಯಾದರೆ, ಇನ್ನು ಮುಂದಿನ ವಿಮಾನಗಳು ಮೇಲಿದ್ದಾಗ ಪ್ರಾಯಶಃ ಕಣ್ಣಿಗೇ ಕಾಣಿಸಲಿಕ್ಕಿಲ್ಲ.

ಆ ವಸ್ತುವು ಕನ್ನಡಿಯಂತೆ ಪಾರದರ್ಶಕವಾಗಿರುವುದಲ್ಲದೆ, ಈಗ ವಿಮಾನಗಳನ್ನು ತಯಾರಿಸುತ್ತಿರುವ ವಸ್ತುಗಳಂತೆ ಗಟ್ಟಿಯೂ ಬಲವೂ ಆಗಿರುವುದು. ಅಂತು ಇನ್ನು ಮುಂದೆ ಗೋಪ್ಯವಾಗಿ ಬಂದು, ನಗರಗಳ ಮೇಲೆ ಬೊಂಬೆಸೆದು ಹೋಗಲು ಸುಲಭವಾಯಿತಲ್ಲ!

ಸ್ತ್ರೀಯರು ಮಾಡಬೇಕಾದ್ದುದೇನು?

ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರ ಅಭಿಪ್ರಾಯದ ಮೇರೆಗೆ, ಭಾರತದ ನಾರಿಯರೆಲ್ಲರೂ ಅಡಿಗೆಮನೆಯಲ್ಲಿ ಸೆರೆಯಾಳುಗಳಾಗಿರುವುದರಿಂದ ಆರೋಗ್ಯ, ವ್ಯಕ್ತಿತ್ವ ಮತ್ತು ವಿವೇಚನಾ ವಿಷಯಗಳಲ್ಲಿ ಬಹಳ ದುರ್ಬಲ ಸ್ಥಿತಿಯಲ್ಲಿದ್ದು, ಬರಿಯ ಅಲಂಕಾರಿಕ ಸಾಮಗ್ರಿಗಳಂತಾಗಿರುವರು.

ಮಹಿಳೆಯರು ಜೀವನದ ಪ್ರತಿಯೊಂದು ರಂಗದಲ್ಲಿಯೂ ಪುರುಷರೊಡನೆ ಸ್ನೇಹ, ಸಹಕಾರ, ಶ್ರದ್ಧೆಯಿಂದ ಕಲಿತು, ಭಾರತದ ಇತಿಹಾಸವನ್ನು ಉದ್ದೀಪನಗೊಳಿಸಬೇಕಾಗಿದೆ. ಮಾತ್ರವಲ್ಲ ಉಚ್ಚಕುಲೋತ್ಪನ್ನ ತರುಣಿಯರು ಶ್ರೇಷ್ಠ ಮತ್ತು ಭೂತದಯಾಪರ ನರ್ಸ ವೃತ್ತಿಯನ್ನು ಕೈಕೊಳ್ಳುವಂತೆ ಪ್ರೋತ್ಸಾಹಿಸಬೇಕಾಗಿದೆ.

ನರ್ಸ ವೃತ್ತಿಗೆ, ಅದರ ಮಹತ್ವಕ್ಕೆ, ಜನಾದರವೇ ಈ ತನಕ ದೊರೆತ್ತಿಲ್ಲವೆನ್ನಬೇಕು. ಪರಂತು ನರ್ಸುಗಳ ಸಾಮಾಜಿಕ ನೆಲೆಯ ಕುರಿತು ಜನತೆಯು ತುಸು ಉದಾರ ಬುದ್ಧಿಯನ್ನು ತಾಳಿದರೆ, ಮುಂದೆಯಾದರೂ ಭಾರತೀಯ ತರುಣಿಯರು ನರ್ಸ ವೃತ್ತಿಗೆ ಕೈ ಹಚ್ಚಲು ಹಿಂಜರಿಯಲಿಕ್ಕಿಲ್ಲ...

ಮಾತ್ರವಲ್ಲ, ರೋಗಿಯು ಗುಣ ಹೊಂದುತ್ತಿರುವ ಸಮಯದಲ್ಲಿ ಆತನಿಗೆ ಆಧುನಿಕ ರೀತಿಗಳಿಗನುಸಾರವಾಗಿ ಯಾವ ಬಗೆಯ ಆಹಾರಾದಿಗಳನ್ನು ಕೊಡಬಹುದೆಂಬ ಜ್ಞಾನ ಲೇಶವಾದರೂ ನಮ್ಮ ಸ್ತ್ರೀಯರಿಗೆ ಇದ್ದಂತೆ ತೋರುವುದಿಲ್ಲ. ಆದುದರಿಂದ ಈ ಕುರಿತು ತುಸು ಜ್ಞಾನವನ್ನು ನಮ್ಮ ತರುಣಿಯರಿಗೆ ಶಾಲೆಗಳಲ್ಲಿ ಕೊಡುವುದು ಅತ್ಯುತ್ತಮ. ಶಾಲೆಗೆ ಬಾರದವರಿಗೆ ಮನೆಯಲ್ಲಿಯೇ ಈ ವಿಷಯಗಳನ್ನು ಹೇಳಿಕೊಡುವುದು ಗಂಡಸರನ್ನು ಹೊಂದಿಕೊಂಡಿದೆ.''

ನಾಲ್ಕು ಮೂಲೆಗಳಿಂದ.

ಜಲಂದರ:—ಉಪಾಧ್ಯಾಯರೊಬ್ಬರು ಪತ್ತೇದಾರಿ ಇನ್ಸಪೆಕ್ಟರೆಂದು ಒಬ್ಬಳನ್ನು ಕೈದುಮಾಡಿ ಅವಳ ಮನೆ ಝಡ್ತಿ ಮಾಡಿದರು. ಈಗ ಉಪಾಧ್ಯಾಯರನ್ನು ಸರಿಯಾದ ಶಿಕ್ಷಣ ತರಬೇತು ಹೊಂದುವ ಶಿಕ್ಷೆಗೆ ಗುರಿಪಡಿಸಲು ವಾರಾಂಟು.

ಬಳ್ಳಾರಿ:—ತಿಮ್ಮರೆಡ್ಡಿ: ಮಗಳನ್ನು ಹುಗಿಟ್ಟು ಕೊಂದದ್ದಂತೆ. ಶವವನ್ನೆತ್ತುತ್ತಾರೆ.

ಬೆಂಗಳೂರು:—ಪ್ರಜಾಹಿತಕರವಾದ ಸಂಸ್ಥೆಗಳಿಗೆ ಶ್ರೀ ಸರ್/ ಪುಟ್ಟಣ್ಣ ಸೆಟ್ಟರು ಮಾಡಿರುವ ಹಿಂದಣ ಸಹಾಯದೊಂದಿಗೆ, ಈಗ ಒಂದು ವೀರಶೈವ ಹೊಸ್ಟೆಲನ್ನು ದಾನ ಮಾಡಿದರು.

ತ್ರಿವೆಂಡ್ರಮ್:—ಬಾಲ ವಿವಾಹ ವಿರೋಧ ಮಸೂದೆ ಮಂಜೂರಾಯಿತು. 14ರೊಳಗಣ ಹೆಮ್ಮಕ್ಕಳ ವಿವಾಹವಾಗ ಬಾರದು.

ಎರ್ನಾಕುಲಂ:—ಸರಕಾರದ ವರದಿಗಳು ಮಲೆಯಾಳಿ ಭಾಷೆಯಲ್ಲಿ ಪ್ರಕಟವಾಗಿ, ಅವುಗಳ ಸಾರಾಂಶ ಮಾತ್ರ ಇಂಗ್ಲಿಷಿನಲ್ಲಾದರೆ ಸಾಕೆಂದು ನ್ಯಾಯ ಸಭಾ ಅಭಿಪ್ರಾಯ.

ಅಹ್ಮದಾಬಾದು:— ತಾ. 21ರಿಂದ ಮದ್ಯಪಾನ ಪ್ರತಿಬಂಧಕ ಹೋರಾಟವಿಲ್ಲ ದಂತಾಗಿದೆ.

ಬೊಂಬಾಯಿ: -ಕೆಲಸಗಾರರಿಗೆ ಸಂಬಳವು ತಾ. 10ಕ್ಕೇ ತೆರುವಂತೆ ಸರಕಾರವು ಕೇಳಿಕೊಂಡಿದೆ. ತಾ. 10–11ಕ್ಕೆ ಮದ್ದ ವ್ಯಾಪಾರವಾಗಬಾರದಂತೆಯೂ ಆಪ್ಪಣೆ ಕೊಟ್ಟಿದೆ.

ದಾದಾರ:—ಯುವಕನೂ ಯುವತಿಯೂ ಒಬ್ಬರನೊಬ್ಬರು ಅಪ್ಪಿಕೊಂಡಿದ್ದೇ ರೈಲ್ವೆ ಮಾರ್ಗದಲ್ಲಿ ಮಲಗಿದ್ದು, ಗಾಡಿ ಓಡಿದ ತರುವಾಯ ಅವರಿಬ್ಬರನ್ನು ಎತ್ತಿಕೊಳ್ಳಲಾಗಿದೆ. ಯುವಕನು ಮೃತನಾಗಿದ್ದಾನೆ; ಯುವತಿಗೆ ಗಾಯಗಳಾಗಿವೆ. ಮದುವೆಗೆ ಆತಂಕವಾದುದರಿಂದ ಹೀಗೆ ಮಾಡಿದರಂತೆ.

ಬೊಂಬಾಯಿ ಟೇಕ್ಸಿಗಳು:---ಇನ್ನು ಮೈಲಿಗೆ 4 ಆಣೆ ಒಡಬೇಕು; ಇದು ವರೆಗೆ ಆರು ಆಣೆ ಬಾಡಿಗೆ ಇತ್ತು.

ಪಾಟ್ನಾ:—ಹದಿನೇಳು ಮಂದಿ ದೋಣಿ ಕವುಚಿ ಸತ್ತರು.

ಹುಬ್ಬಳ್ಳಿ:—ಗೋಕಾಕ ಗಿರಣಿಯಲ್ಲಿ ಮುಷ್ಕರಾರಂಭ.

ಅಲ್ಲಹಾಬಾದು:—ಕೊಂಗ್ರೆಸ್ ಸ್ವಯಂ ಸೇವಕರ ದಳ ರಚಿಸಲು ಅಪ್ಪಣೆ ಹೊರಟಿದೆ. ಸಂಯುಕ್ತ ಪ್ರಾಂತ್ಯದಲ್ಲಿ ಈ ವರ್ಷ 5 ಲಕ್ಷ ಇಂಥವರನ್ನು ಕೂಡಿಸುವರು.

ಕಲ್ಕತ್ತ:—ಹೆಮ್ಮಕ್ಕಳಿಗಾಗಿ ಒಂದು ವರದಾ ಕೊಲೆಜು ಸ್ಥಾಪನೆ ಹೊಂದುವುದು.

ಕರಾಚಿ:—ಇನ್ನು ವಾರಕ್ಕೆ ಐದು ಸಲ ವಿಮಾನ ಟಪ್ಪಾಲು ಹೊರಡುವುದು.

ನವಗೊಂಗ್:—ಬ್ರಹ್ಮಪುತ್ರಾ ನದಿಯ ನೆರೆ ಏರಿದೆ. ನಾನೂರು ಗ್ರಾಮಗಳು ನೀರಿನ ಅಡಿಯಲ್ಲಿವೆ.

ಗುಂಬುಟಿ:—ವಿೂರನ ಹಿಂಬಾಲಕರನ್ನು ಕೈದುಮಾಡಿದ್ದಾರೆ. ಈಗೆಲ್ಲ ಶಾಂತವಾಗಿದೆ.

ಊಟಕಮಂಡ:—ಬೆಳಗೆ ಹಾವಳಿಮಾಡುತ್ತಿದ್ದ ಮೃಗಗಳನ್ನು ಕೊಲ್ಲಲು ತಂದೆ ಬಂದೂಕು ಹಿಡಿದುಕೊಂಡು ಹೋಗಿದ್ದವನು, ಮರಳಿ ಮನೆಗೆ ಬಂದು ಬಂದೂಕನ್ನು ಇಡುವಾಗ, ಅದು ಹಾರಿ ಮಕ್ಕಳಿಗೆ ತಗಲಿ ಅವು ಸತ್ತರು.

ಮಧುರಾ:—ವಿೂನಾಕ್ಷಿ ದೇವಸ್ಥಾನದ ಆನೆಯು ಮಾಹುತನು ರಾಜನಾಮೆ ಕೊಟ್ಟಿದ್ದಾನೆ. ಆನೆಗೆ 9 ವರ್ಷ ಪ್ರಾಯ: ಜೋರಾಗಿದೆ. ವೆಟರಿನರಿ ಡಾಕ್ಟರರು ಈಗ ಔಷದ ಕೊಡುತ್ತಿರುವರು.

ಫೆನ್ಸಿ ಶರ್ಟಿಂಗ್

ಮಂಜು ಬಣ್ಣದ್ದು ಅತಿ ಮೃದುವಾದುದು, ಮತ್ತು ದೀರ್ಘ ಬಾಳ್ವಿಕೆಯದು.

9 ಗಜ×54"–6 ಶರ್ಟುಗಳಿಗೆ ಸಾಕಾಗುವುದು. ಕ್ರಯ ರೂ. 5–8–0

ಟಪ್ಪಾಲು ಖರ್ಚು ಧರ್ಮಾರ್ಥ. ಇದರೊಡನೆ 6 22"×22" ಪೆನ್ಸಿ ಕರವಸ್ತ್ರಗಳು ಉಚಿತವಾಗಿ ಕೊಡಲಾಗುವವು.

ಎಲ್ಲೆಲ್ಲೂ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ದಿ ನೇಶನಲ್ ಟ್ರೇಡಿಂಗ್ ಕಂಪೆನಿ,

ಲೂದಿಯಾನಾ, A 211.

ಈ ಭಾಷಾ ಬಿಕ್ಕಟ್ಟು

ಅದನ್ನು ಪರಿಹರಿಸುವುದಕ್ಕಾಗಿ ಗಾಂಧಿಜಿಯವರು ಒಂದು ಸೂಚನೆಯನ್ನು ಮುಂಡಿಸಿರುವರು.

ಪ್ರಾಂತಿಕ ಭಾಷೆಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುವುದಕ್ಕಾಗಿ, ಕೋರ್ಟು ಭಾಷೆಯು ಆಯಾ ಪ್ರಾಂತ್ಯದ ಭಾಷೆಯೇ ಆಗುವುದು ಉತ್ತಮ., ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಲ್ಲೂ ಅದೇ ಪ್ರಾಂತದ ಭಾಷೆ, ಇಲ್ಲವೆ ಭಾಷೆಗಳನ್ನೇ ಉಪಯೋಗಿಸತಕ್ಕದು. ಇಂತಹ ಸಭೆಯ ಸದಸ್ಯರು ಸ್ವಲ್ಪ ಶ್ರಮಿಸಿದರೆ ತಮ್ಮ ಪ್ರಾಂತದ ಪ್ರತಿಯೊಂದು ಭಾಷೆಯನ್ನು ತಿಳಿದುಕೊಳ್ಳುವಷ್ಟು ಜ್ಞಾನವನ್ನು ಒಂದೆರಡು ತಿಂಗಳುಗಳಲ್ಲಿ ಸಂಪಾದಿಸಬಹುದು. ತೆಲುಗುವಿನಿಂದ ಒಂದಿಷ್ಟು ವ್ಯಾಕರಣ, ಹಲಕೆಲವು ಶಬ್ದಗಳನ್ನು ತಮಿಳು ದೇಶದವನು ಬಹಳ ಸುಲಭದಲ್ಲಿ ಕಲಿತುಕೊಳ್ಳಬಹುದು. ಮಲೆಯಾಳ, ಕನ್ನಡ ಭಾಷೆಗಳೂ ತಮಿಳು ಭಾಷೆಗೆ ಸಂಬಂಧಿಸಿದವುಗಳು. ದಕ್ಷಿಣ ಭಾರತದ ಭಾಷೆಗಳೆಲ್ಲವೂ ಒಂದಕ್ಕೊಂದು ಸಂಬಂಧವಿದ್ದ ದ್ರಾವಿಡ ಭಾಷೆಗಳಲ್ಲವೇ? ಪರಂತು ಕೇಂದ್ರದಲ್ಲಿ ಹಿಂದುಸ್ಥಾನಿಯೇ ಉಪಯೋಗಿಸಲ್ಪಡಬೇಕು, ಎಂಬುದೆ ಅವರ ಅಭಿಪ್ರಾಯ.

ಹೊಟ್ಟೆಯ ಮೇಲೆ ಶಸ್ತ್ರಚಿಕಿತ್ಸೆಯಿಂದ

ರಕ್ಷಿಸಲಾದೆನು.

ಈ ಕೆಳಗೆ ಕೊಟ್ಟಿರುವ ಪತ್ರವು ಹೊಟ್ಟೆ ಪೀಡೆಗಾಗಿ ಶಸ್ತ್ರಚಿಕಿತ್ಸೆಯಿಂದ ನಿಮ್ಮನ್ನು ರಕ್ಷಿಸಬಹುದು; ಹೊಟ್ಟೆ ಪೀಡೆಗಳಿಂದ ನರಳುವವರಿಗೆ ಅದರಲ್ಲಿ ಒಳ್ಳೆ ನೀತಿಯಿದೆ.

ಮೂರು ವರ್ಷಗಳ ಹಿಂದೆ ಮಿ A. E. I ಎಂಬವರ ಮೇಲೆ ಭಯಂಕರ ತರದ ಹೊಟ್ಟೆ ಪೀಡೆಗಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಆದರೆ ಕೆಲವು ತಿಂಗಳ ಅವಧಿಯಲ್ಲಿ ಮತ್ತೊಮ್ಮೆ ಆ ಸಂಕಟವು ಕಾಣಿಸಿಕೊಂಡದ್ದಲ್ಲದೆ, ಅದರ ನೋವನ್ನು ತಾಳಲಾರದೆ ಇನ್ನೊಮ್ಮೆ ಶಸ್ತ್ರಚಿಕಿತ್ಸೆ ಮಾಡಿಸುವುದನ್ನು ಹೇಳುವ ಹಾಗಿದ್ದರು. ... ನೋಡಿದ ಪತ್ರಗಳಲ್ಲಿ ನನಗೆ ... ಕೊನೆಗೆ ನಾನು ಮೆಕ್ಲೀನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ಉಪಯೋಗಿಸಿದೆ. ಈ ಔಷಧಿಯು ... ಗಳು ... ನನ್ನ ಆರೋಗ್ಯವು ... ಯಿತು.

ಮೆಕ್ಲೀನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ನಾನು ಮೊದಲಾಗಿ ಉಪಯೋಗಿಸುತ್ತಿದ್ದರೆ, ನನಗೆ ಪ್ರಥಮದಲ್ಲೂ ಶಸ್ತ್ರಚಿಕಿತ್ಸೆಯ ಅಗತ್ಯ ಬೀಳುತ್ತಿರಲಿಲ್ಲವೆಂದು ನನ್ನ ದೃಢವಾದ ನಂಬಿಕೆಯಾಗಿರುತ್ತದೆ.

ಈ ವಿಶಿಷ್ಟ ಔಷಧಿಯ ಉತ್ತಮ ಗುಣಗಳ ಕುರಿತು, ಸಾವಿರಾರು ಸಾಕ್ಷ್ಯಗಳಲ್ಲಿ ಇದೊಂದು. ನಿಮ್ಮ ಪೀಡೆಯು ಭಯಂಕರ ರೂಪವನ್ನು ತಾಳಿರಲಿಕ್ಕಿಲ್ಲ—ಆದರೂ ... ಅಪಾಯವನ್ನು ... ಯೇ ಹೊಟ್ಟೆ ಪೀಡೆಗಳು ... ಮೆಕ್ಲೀನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ... ವಿಸಿ, ಎಲ್ಲಾ ನೋವುಗಳನ್ನು ಮತ್ತು ಅಪಾಯಗಳನ್ನು ನಿವಾರಿಸಿರಿ. ಅದನ್ನು ಕೊಂಡುಕೊಳ್ಳುತ್ತಿರುವಾಗ,



ಎಂಬ ಸಹಿಯನ್ನು ನೋಡುವ ಕುರಿತು ಜಾಗರೂಕರಾಗಿರಿ. ಈ ಸಹಿಯಿರುವ ಪೆಟ್ಟಿಗೆಯೊಳಗೆ ಈ ಸಹಿ ಇರುವ ಕೆಂಪು ಮುಚ್ಚಳ ಕೂಡಿದ ಬಾಟ್ಲಿಯಲ್ಲಿ ಬರುವುದು ಮಾತ್ರಿಯಾದ ಮೆಕ್ಲೀನ್ ಬ್ರಾಂಡ್ ಹುಡಿಯು ಮಾತ್ರ ಯಾ ಹುಡಿ ರೂಪದಲ್ಲಿ ಮಾರಾಟವಾಗುತ್ತೆ. ನಕಲಿ ಮಾಲಿನಿಂದ ನಿಮ್ಮ ಪೀಡೆಯು ಇನ್ನೂ ಬೆಳೆಯಬಹುದು. ಎಲ್ಲಾ ದವಾಖಾನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ದೊರೆಯುತ್ತದೆ.

ಮಂಗಳೂರು ವಾರ್ತೆ

ಜಿಲ್ಲಾ ಲೋಕಲ್ ಮ್ಯಾಲಕ ಸಂಘದವರಿಂದ ಮೆಮೋರಿಯಲ್.

ದಕ್ಷಿಣ ಕನ್ನಡ ಜಿಲ್ಲಾ ಲೋರಿ ಮ್ಯಾಲಕ ಸಂಘದವರು ಡಿಸ್ಟ್ರಿಕ್ಟ್ ಬೋರ್ಡಿನ ಸೆಕ್ರಿಟರಿಯವರಿಗೆ ಎರಡು ಮೆಮೋರಿಯಲ್‌ಗಳನ್ನು ಒಪ್ಪಿಸಿರುವರು. ಅದರಲ್ಲಿ ಲೋರಿಗಳಲ್ಲಿ ಭಾರಹೇರುವ ಕುರಿತೂ ಲಾರಿಗಳ ವೇಗತೆಯ ಕುರಿತೂ ಇರುವ ನಿರ್ಬಂಧವನ್ನು ಇದರಲ್ಲಿ ಆಕ್ಷೇಪಿಸಿಯದೆ

ಗವರ್ನಮೆಂಟ್ ಕೋಲೇಜಿನ ಹೊಸ ಪ್ರಿನ್ಸಿಪಾಲರು.

ಸ್ಥಳೀಯ ಗವರ್ನಮೆಂಟ್ ಕೋಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದ ಶ್ರೀ ಕೆ. ಶಂಕರ ಉನ್ನಿ ನಾಯರ್ ಬಿ ಎ (ಒಕ್ಸನ್) ಬಾರ್ ಎಟ್ ಲೋ, ಇವರು ಕಳೆದ ತಾ 20 ರಲ್ಲಿ ಚಾರ್ಜನ್ನು ವಹಿಸಿಕೊಂಡರು.

ಪಣಂಬೂರಿನಲ್ಲಿ ಮಾರಾಮಾರಿ

ತಾರೀಕು 21ನೇ ಸಾಯಂಕಾಲ ಕೆಲವು ಹುಡುಗರು ಮಾಡಿಕೊಂಡ ಜಗಳದಲ್ಲಿ ಹಿರಿಯರು ಪ್ರವೇಶಮಾಡಿದ್ದರಿಂದ ಮಾರಾಮಾರಿ ಆಯಿತು. ಮುತ್ತಪ್ಪ ಎಂಬವನು ತಿಮ್ಮಪ್ಪ ಪೂಜಾರಿ ಮತ್ತು ಮಂಜಪ್ಪ ಎಂಬವರನ್ನು ಹೊಡೆದು ಗಾಯಗೊಳಿಸಿದ ಅವರಿಬ್ಬರೂ ಹೊಡೆದ ಪ್ರತಿಫಲವಾಗಿ ಮುತ್ತಪ್ಪನೂ ಗಾಯಗೊಂಡನು ಈತನು ಈಗ ಪೋಲೀಸರ ಕಾವಲಿನಲ್ಲಿ ಅಸ್ಪತ್ರೆಯಲ್ಲಿರುವನು ಉಳಿದವರಿಬ್ಬರೂ ಅಸ್ಪತ್ರೆಗೆ ಕರಲ್ಪಟ್ಟಿದ್ದಾರೆ

ಸೋಶಿಯಲಿಸ್ಟ ಪಕ್ಷದ ಮಹಾಸಭೆ

ಇದೇ ತಿಂಗಳ ತಾ 31ನೇ ಆದಿತ್ಯವಾರ ಸೋಶಿಯಲಿಸ್ಟ ಪಕ್ಷದ ಮಹಾ ಸಭೆಯು ಜರಗಬೇಕಾಗಿ ನಿರ್ಣಯಿಸಲಾಗಿದೆಯೆಂದೂ ಜಿಲ್ಲೆಯ ಎಲ್ಲಾ ಸಮಾಜವಾದಿಗಳು ಸಭೆಗೆ ಬರಬೇಕಾಗಿಯೂ ಪಕ್ಷದ ಸದಸ್ಯತನದ ಅರ್ಜಿಗಳನ್ನು ಆ ತಾರೀಕಿನೊಳಗಾಗಿ ಆಫೀಸಿಗೆ ರವಾನಿಸಬೇಕಾಗಿಯೂ ವಿನಂತಿ ಎಂದು ಅಧ್ಯಕ್ಷಿಯರಾದ ಶ್ರೀ ಕಮಲಾದೇವಿಯವರು ತಿಳಿಸುತ್ತಾರೆ.

ಕರ್ನಾಟಕ ಕೊಂಗ್ರೆಸ್ ಕಮಿಟಿಯ ಮೆಂಬರರ ಮೇಲೆ ಶಿಸ್ತು

ಇಲ್ಲಿಯ ಮುನಿಸಿಪಲ್ ಚುನಾವಣೆಯ ಕಾಲದಲ್ಲಿ ಕೊಂಗ್ರೆಸ್ ಉರಿಮೆದಾರನ ವಿರೋಧಿಸಿ ಚುನಾವಣೆಗೆ ನಿಂತ ಕರ್ನಾಟಕ ಕೊಂಗ್ರೆಸ್ ಕಮಿಟಿಯ ಮೆಂಬರರಾದ ಶ್ರೀ ರಂಗರಾವ್ [illegible]ಚೇರಿಕರರನ್ನು ಇನ್ನುಮುಂದೆ ಕೊನೆಯ ನಿರ್ಣಯದ ವರೆಗೆ ಕೊಂಗ್ರೆಸ ಕಮಿಟಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸ ಕೂಡದೆಂತ ತಿಳಿಸಲಾಗಿದೆ ಎಂದು ಕರ್ನಾಟಕ ಪ್ರಾಂತೀಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಗಂಗಾದರ ರಾವ್ ದೇಶ ಪಾಂಡೇಯವರು ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ಇದೇ ಜುಲ್ಯೆ ತಾರೀಕು 12ರಲ್ಲಿ ತಂತಿ ಮೂಲಕ ತಿಳಿಸಿರುವರು ಎಂದು ಜಿ. ಕಾಂ. ಕಮಿಟಿಯ ಜತೆ ಕಾರ್ಯದರ್ಶಿಯವರು ತಿಳಿಸುತ್ತಾರೆ

ಬಾವಿಯಲ್ಲಿ ಹುಡುಗಿಯ ಶವ

ಇದೇ ಕಳೆದ ಆದಿತ್ಯವಾರ ಮಂಗಳೂರಿನ ಡೊಂಗರಕೇರಿಯಲ್ಲಿ ಒಂದು ಬಾವಿಯಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಜಾತಿಯ ಸುಮಾರು ೧೪ ವರುಷದ ಹುಡುಗಿಯ ಶವವು ಇತ್ತು. ಸುಮಾರು ಎರಡು ಗಂಟೆಗೆ ಶವವನ್ನು ಮೇಲಕ್ಕೆ ತೆಗೆಯಲಾಯಿತು. 4 ಗಂಟೆಗೆ ಪೋಲೀಸರು ಶವವನ್ನು ಅಸ್ಪತ್ರೆಗೆ ಸಾಗಿಸಿ, ಅಲ್ಲಿ ಪೋಸ್ಟ ಮಾರ್ಟಮ್ ಮಾಡಲಾಗಿದೆ.

ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ. ಯವರು ವಾರ್ಧಾಕ್ಕೆ ತೆರಳಿರುವರು

ಕರ್ನಾಟಕ ಏಕೀಕರಣ ಮಂಡಳಿಯ ಅಧ್ಯಕ್ಷರಾದ ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಯವರು ಕರ್ನಾಟಕದ ಏಕೀಕರಣದ ಕುರಿತಾಗಿ ಚರ್ಚಿಸಲು ವಾರ್ಧಾಕ್ಕೆ ತೆರಳಿರುವರು.

ಶ್ರೀ ಎಚ್ ವಿ. ಕಾಮತರು.

ಮಾತೃಭೂಮಿಯ ಸೇವೆಯನ್ನು ಮಾಡಲು ಐ ಸಿ. ಯಸ್ ಹುದ್ದೆಗೆ ರಾಜಿನಾಮೆಯನ್ನಿತ್ತ ಶ್ರೀ. ಎಚ್ ವಿ. ಕಾಮತರನ್ನು ವರ್ಕಿಂಗ್ ಕಮಿಟಿಯವರು ರಾಷ್ಟ್ರಪತಿ ಸುಭಾಷಚಂದ್ರ ಭೋಸರ ಖಾಸಗಿ ಸಹಾಯಕರನ್ನಾಗಿ ನೇಮಿಸಿದ್ದಾರೆ. ಇವರು ದಕ್ಷಿಣ ಕನ್ನಡಿಗರು

ದಕ್ಷಿಣ ಕನ್ನಡ ಜಿಲ್ಲೆಗೆ ಹರಿಜನ ಸೇವಕರು

ಕಾರ್ಕಳ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ ಪಿ ಕಾಮತ್ ಎಂ. ಎ ಬಿ. ಎಲ್.ರವರು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹರಿಜನ ಸೇವಕರಾಗಿ ನೇಮಿಸಲ್ಪಟ್ಟಿದ್ದಾರೆ ಇಡಿ ಕರ್ನಾಟಕ ಪ್ರಾಂತ್ಯಕ್ಕೆ ನೇಮಿಸಲಾದ ಇಬ್ಬರಲ್ಲಿ ಇವರೊಬ್ಬರಾಗಿರುತ್ತಾರೆ

ಕಳ್ಳರ ಹಾವಳಿ

ಕಳೆದ ಶನಿವಾರ ರಾತ್ರಿ ಶ್ರೀ ಪಂಚಮಾರ್ ಶ್ರೀನಿವಾಸ ಕಾಮತ್‌ರವರ ಮನೆಯನ್ನು ನುಗ್ಗಿ ಒಬ್ಬ ಕಳ್ಳನು ಬಂದಿದ್ದನು ನಾಯಿಯು ಬೊಗಳುವಿಕೆಯಿಂದಾಗಿ ಆತನು ಹೆದರಿ ಅಲ್ಲಿಯೆ ಅಡಗಿಕೊಂಡಿದ್ದನಂತೆ ನಾಯಿಯ ಬೊಗಳುವಿಕೆಯನ್ನು ಕೇಳಿ ಮನೆಯವರು ಎಚ್ಚತ್ತು ಬರಲು ನಾಯಿಯು ಕಳ್ಳನು ಅಡಗಿ ಕೊಂಡಿದ್ದ ಸ್ಥಳವನ್ನು ತೋರಿಸಿತು ಕಳ್ಳನನ್ನು ಇವರು ಹಿಡಿದಿರುವರಂತೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಈ ಸಂಸ್ಥೆಯ ಹೊಸ ಶಾಖೆಯೊಂದು ತಾ 31-7-38ನೇ ಆದಿತ್ಯವಾರ ಸಂಜೆ 5-30ಕ್ಕೆ ಕದ್ರಿ [illegible] ಬೇಂಕಿನ ಪ್ರಸಿಡೆಂಟ್‌ರಾದ ಡಾ ಎಲ್ ಪಿ ಫರ್ನಾಂಡಿಸ್ ಬಿ ಎ ಎಲ್ ಎಮ್ [illegible] ಅಧ್ಯಕ್ಷತೆಯಲ್ಲಿ ತೆರೆಯಲ್ಪಡುವುದು

ಹರಿಜನ ಲೇಬರ್ ಲೀಗಿನ ವಾರ್ಷಿಕೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಲೇಬರ್ ಲೀಗಿನ (ಕೂಲಿಗಾರರ ಸಂಘದ) ಎರಡನೇ ವಾರ್ಷಿಕೋತ್ಸವವು ಇದೇ ಬರುವ ಅಗೋಸ್ಟು ತಿಂಗಳ ತಾ. 7ನೇ ಆದಿತ್ಯವಾರ ದಿವಸ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ಜರಗಲಿಕ್ಕಿರುವುದು.

ದಕ್ಷಿಣ ಕನ್ನಡ ಜಿಲ್ಲಾ ಮಹಾಜನರಲ್ಲಿ ವಿನಂತಿ.

ಸದ್ರಿ ಜಿಲ್ಲಾ ಹರಿಜನ ಲೇಬರ್ ಲೀಗಿನ ಗೌರವ ಕಾರ್ಯದರ್ಶಿಯು ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

'ನಮ್ಮ ಲೀಗಿನ ಕಡೆಯಿಂದ ಹೊರಡಿಸಲಿಕ್ಕಿರುವ ಬಿಸಿನೆಸ್ (Business Book) ಬುಕ್ಕನ್ನು ನಾವು ಈ ತನಕ ಹೊರಡಿಸದಿರುವುದರಿಂದ, ಕೆಲವರಿಗೆ ಸಂಶಯಕ್ಕೆಡೆಯುಂಟಾಗಿ ಕೇಳುವಳಗೊಂಡಿರುತ್ತಾರೆಂದು ಬಂದಿರುತ್ತದೆ

ನಾವು ಈ ಕೆಲಸಕ್ಕೆ ನೇಮಕ ಮಾಡಿದ ಏಜೆಂಟರಾದ ಶ್ರೀ ವಿ. ಶ್ರೀನಿವಾಸನ್ ಎಂಬವರು ಕಲೆಕ್ಷನ್ ಮಾಡಿದ ಹಣವನ್ನು (Advertisements) ಎಡ್ವರ್ಟೈಸ್‌ಮೆಂಟ್ಸನ್ನು ತರುತ್ತೇನೆಂದು ಹೋದವರು ನಮ್ಮ ಆಫೀಸಿಗೆ ಇನ್ನೂ ಬಂದಿರುವುದಿಲ್ಲ. ಇವರು ಸದ್ರಿ ಕಲೆಕ್ಷನನ್ನು ಇನ್ನೂ ಮಾಡುತ್ತಲೇ ಇದ್ದಾರೆಂದು ತಿಳಿದು ಬಂದಿರುವುದರಿಂದ, ಇನ್ನು ಮುಂದೆ ಯಾರೂ ಅವರೊಂದಿಗೆ ಕಲೆಕ್ಷನಾಗಲೀ ಎಡ್ವರ್ಟೈಸ್‌ಮೆಂಟನ್ನಾಗಲಿ ಕೊಡಬಾರದಾಗಿ ವಿನಂತಿ.

ತಾಲೂಕು ವಾರ್ತೆ

ಬಂಟವಾಳ

ಮದ್ರಾಸು ಸರಕಾರದ ಪ್ರಧಾನ ಇಂಜಿನಿಯರರು ನಮ್ಮ ಜಿಲ್ಲೆಗೆ ಚಿತ್ತೈಸಿದಾಗ, ಇಲ್ಲಿಯ ಪಂಚಾಯ್ತ ಬೋರ್ಡಿನವರಿಂದ ನೇಮಕವಾದ ಒಂದು ಸಮಿತಿಯವರು, ತಾ 27ನೇ ಬುಧವಾರ ಅವರನ್ನು ಕಂಡು, ನೆರೆಹಾವಳಿಯಿಂದ ನಮ್ಮ ಊರನ್ನು ಸುರಕ್ಷಿತ ಮಾಡಲು ಕೈಕೊಳ್ಳಬಹುದಾದ ಯೋಜನೆಗಳ ಕುರಿತು ಅವರೊಡನೆ ಚರ್ಚಿಸಿ ಹಿಂದಿರುಗಿರುವರು.

ಕಾರ್ಕಳ

ಕಾರ್ಕಳ ತಾಲೂಕು ಕೊಂಗ್ರೆಸ್ ಕಮಿಟಿಯ ಒಂದು ಸಭೆಯು ತಾ 17—7—1938ರ ದಿನ ಸಾಯಂಕಾಲ ಕಮಿಟಿಯ ಆಫೀಸಿನಲ್ಲಿ ಶ್ರೀ ಕೆ ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಜರುಗಿ, ಕಮಿಟಿಯ ಜತೆಕಾರ್ಯದರ್ಶಿಗಳಾದ ಶ್ರೀ ಕೆ ಕೆ ಪಿ ರಾಮ ಪೊಡುವಾಳರವರು ಸೋಶಿಯಲಿಸ್ಟ ಪಾರ್ಟಿಯ ಸದಸ್ಯರನ್ನು ಸೇರಿಸುವ ಕೆಲಸದಲ್ಲಿ ಮುಂದಾಳಾಗಿ ಭಾಗವಹಿಸುವುದು ಅವರ ಕಾರ್ಯದರ್ಶಿಯಾಗಿರುವಷ್ಟು ಕೊಂಗ್ರೆಸ್ ಹಿತದೃಷ್ಟಿಯಿಂದ ಸರಿಯಲ್ಲವೆಂದು ಶ್ರೀ [illegible] ಹೆಗ್ಡೆ [illegible] ಕಾರ್ಕಳ ತಾಲೂಕಿನಿಂದ ಪ್ರತಿಸ್ಪರ್ಧೆ ಇಲ್ಲದೆ ಜಿಲ್ಲಾ ಬೋರ್ಡಿಗೆ ಆರಿಸಿ ಬಂದ ಕೊಂಗ್ರೆಸು ಉಮೇದುವಾರರೆ, ತಮಗೆ ಹಿಂದಕ್ಕೆ ಸಿಗಲಿಕ್ಕಾಗುವ ಡಿಪೋಜಿಟು ಹಣವನ್ನು ಕೊಂಗ್ರೆಸ್ ಪ್ರಚಾರ ಕಾರ್ಯಕ್ಕಾಗಿ ಕಾರ್ಕಳ ತಾಲೂಕು ಕೊಂಗ್ರೆಸ್ ಕಮಿಟಿಗೆ ಕೊಡಬೇಕೆಂದು ಅವರನ್ನು ಕೇಳಿಕೊಳ್ಳುವ ಎರಡು ಠರಾವುಗಳು ಮಂಜೂರಾದವು

ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯು ಇದೇ ಸಪ್ಟಂಬರ ತಿಂಗಳ ಪ್ರಾರಂಭಿಕ ಪರೀಕ್ಷೆಗಳನ್ನು ಕಾರ್ಕಳ ಕೇಂದ್ರದಿಂದ ಕೊಡಲಿಚ್ಛಿಸುವ ಹಿಂದೀ ಭಾಷಾಭ್ಯಾಸಿಗಳು ತಮ್ಮ ಅರ್ಜಿದಾರ ಪತ್ರಗಳೊಂದಿಗೆ ಶುಲ್ಕವನ್ನು ಇದೇ 5-8 1938ರ ಒಳಗೆ ತಮ್ಮಲ್ಲಿ [illegible] ವ್ಯವಸ್ಥೆ ಮಾಡಬೇಕೆಂದು ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಕಾರ್ಕಳ ಪಂಚಾಯ್ತ ಬೋರ್ಡಿನ [illegible] ಅಧ್ಯಕ್ಷರನ್ನು [illegible] ಮೆಂಬರರ ಒಂದು ವಿಶೇಷ ಸಭೆಯು ತಾ 30 7 38 ರ ದಿನ ಸಾಯಂಕಾಲ ಬೋರ್ಡಿನ ಆಫೀಸಿನಲ್ಲಿ ಕೂಡ[illegible] ಅದೇ ದಿನ ಸಂಜೆ [illegible] 5 30ಕ್ಕೆ ಕೂಡುವ ಸಾಧಾರಣ ಸಭೆಯಲ್ಲಿ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ಸೂಚನೆಯನ್ನು ಕೊಟ್ಟ—'ಪಂಚಾಯತ ಬೋರ್ಡಿನ ಆರ್ಥಿಕ ಸ್ಥಿತಿ ಮತ್ತು ಅದನ್ನು ಕ್ರಮೇಣ ಸುಧಾರಿಸುವ ವಿಷಯವನ್ನು ಆಲೋಚನೆಗೆ ತೆಗೆದುಕೊಂಡು ಕಾರ್ಕಳ ಊರ ಉನ್ನತಿಗಾಗಿ ಒಂದು ತ್ರೈವಾರ್ಷಿಕ ಯೋಜನೆಯನ್ನು ತಯಾರಿಸಬೇಕಾಗಿ ಅಧ್ಯಕ್ಷರನ್ನು ಕೇಳಿಕೊಳ್ಳುವ ಠರಾವು ಚರ್ಚೆಗೆ ಬರಲಿರುತ್ತದೆ

ಸ್ಥಳೀಯ ಬೋರ್ಡ್ ಹೈಸ್ಕೂಲಿನ V ಫೋರ್ಮಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿ, ಆ ತರಗತಿಯನ್ನು ಎರಡಾಗಿ ವಿಭಾಗಿಸಿದ್ದರಿಂದ ಜಿಲ್ಲಾ ಬೋರ್ಡಿನವರು ಶ್ರೀ ಮಂಜುನಾಥ ಕುಡುವ, ಬಿ. ಎ, ಎಲ್ ಟಿ ಯವರನ್ನು ಹೆಚ್ಚಿಗೆ ಸಹಾಯಕ ಉಪಾಧ್ಯಾಯರನ್ನಾಗಿ ಅಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಟೈಪ್‌ರೈಟಿಂಗ್ ಮತ್ತು ಶೋರ್ಟ್ ಹೇಂಡ್ ಮೊದಲಾದ ವಿಷಯಗಳನ್ನು ಕಲಿಸಲಿಕ್ಕಾಗಿ ಇಲ್ಲಿ 'ನೇಶನಲ್ ಸ್ಕೂಲ್ ಓಫ್ ಕಾಮರ್ಸ್' ಎಂಬ ಒಂದು ಸಂಸ್ಥೆಯು ಹೊಸದಾಗಿ ತೆರೆಯಲ್ಪಟ್ಟಿರುತ್ತದೆ ತಾ. 18-7-38ರ ದಿನ ರಾತ್ರಿ ಆ ಸಂಬಂಧ ಶ್ರೀ ಕೆ. ಸೊಯ್ರು ಪ್ರಭುಗಳ ಅಧ್ಯಕ್ಷತೆಯಲ್ಲಿ ಒಂದು ಸಂತೋಷ ಕೂಟ [illegible]

ಉಡುಪಿ: ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ಕೆ. ವಿಠ್ಠಲ ಸೆಟ್ಟರವರು ತಾ. 21ಕ್ಕೆ ಉಡ್ಪಿಗೆ ಬಂದು, ಸುಧ್ಯಾಪ್ತ ಕಟ್ಟಾದಿ, ಕಾಪು, ಎರ್ಮಾಳು, ಪಡುಬಿದ್ರೆಗಳನ್ನು ಸಂದರ್ಶಿಸಿದರು ಅಲ್ಲಲ್ಲಿನ ಶಾಲೆಗಳ ಮತ್ತು ಇತರ ಸ್ಥಳೀಯ ವಿಷಯಗಳ ಸ್ವತಹ ಅನುಭವ ಹೊಂದುವುದು ಉದ್ದೇಶವಾಗಿತ್ತು. ಪಿ-ಡಿ ದೇಹಾಲಸ್ಯದ ನಿಮಿತ್ತ ಉಡುಪಿಯಲ್ಲೇ ಉಳಕೊಂಡರು ತನ್ನಡ್ಕೆ ಮಲ್ಪೆ, ಕೊಡವೂರು ಶಾಲೆಗಳನ್ನು ಸಂದರ್ಶಿಸಿ, ಕೊಡವೂರಿನ ಹಾ ವ. ಬೋರ್ಡು ಶಾಲೆಯ ಮೊಲ್ತರಗತಿಗಳನ್ನು ವಡಭಾಂಡೇಶ್ವರದಲ್ಲಿರುವ ಹಳೇ ಬಸ್ ಕಾರಖಾನೆಗೆ ವರ್ಗಾಯಿಸುವ ವಿಷಯ ಸಮಾಲೋಚಿಸುವರೆ ಅಸಿಸ್ಟಾಂಟ್ ಇಂಜಿನಿಯರರೊಡನೆ ತೆರಳಿರುವರು ಸಹಾನುಭೂತಿ ಪರವಾದ ಹುಕುಂ ಕೊಡಿಸಿರುವರಾಗಿಯೂ ತಿಳಿದು ಬರುತ್ತದ

ತಾ 21ಕ್ಕೆ ಸಂ ಕಾಲಕ್ಕೆ ಉಡುಪಿ ಪರಸ್ಪರ ಸಹಾಯಕ ಸಂಘದ ವಿಶೇಷ ಮಹಾಸಭೆಯು [illegible] ಸಂಘವನ್ನು ಬದಲ್ಬಿಟ್ಟು ಪರಸ್ಪರ ಸಹಾಯಕ ಸಂಘದೊಡನೆ ಏಕೀಕರಣದ ಬಗ್ಗೆ ವಿವೇಚಿಸಲಿಕ್ಕೆ ಕರೆಯಲಾಗಿತ್ತು, ಕನಿಷ್ಠ ಹಾಜರಿಯಿಲ್ಲದೆ ಸಭೆ ವಿಸರ್ಜನೆಯಾಯಿತು. ಕೊನೆಗೆ ಸಾಧಾರಣ ಸರ್ವಾವಧಿ ಮಹಾ ಸಭೆಯು ಶ್ರೀ ಎಮ್. ವಾಮನ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಚಾಲ್ತಿ ವರ್ಷಕ್ಕೆ ಅಂದಾಜು ಪಟ್ಟಿಯು ಮಂಜೂರಾಯಿತು. [illegible] ರೂ 6—4—0 [illegible] ಮತ್ತು ಸ್ವಂತ ಜವಾಬ್ದಾರಿಯ ಮೇಲೆ ರೂ 7-13-0 ರಂತೆ ಒಪ್ಪಿಯು ತಗ್ಗಿಸಲಾಯಿತು. [illegible] ಸಂಘವನ್ನು ಪ್ರಕೃತ [illegible] ಸಂಘದೊಡನೆ ಏಕೀಕರಿಸುವುದು ಬೇಡವೆಂದಾಯಿತು. ಚಾಲ್ತಿ ವರ್ಷಕ್ಕೆ ಶ್ರೀ ಗಳಾದ [illegible]

[illegible]

ಪುತ್ತೂರು

ಇಲ್ಲಿ ಪೋಲೀಸ್ ಸ್ಟೇಶನ ಬಳಿ ವ್ಯಾಪಾರ ನಡಿಸಿಕೊಂಡಿದ್ದ ಸುಮಾರು ೩೬ ವರ್ಷ ಪ್ರಾಯದ ಸುಬ್ರಾಯ ಎಂಬವರು, ಈಚೆಗೆ ಮೃತರಾಗಿರುತ್ತಾರೆ ಅತ್ಮಹತ್ಯವಾಗಿರಬಹುದೇ ಎಂದು ವಿಚಾರವಾಗುತ್ತಿದೆ'

ಕುಂದಾಪುರ

ಕೋಟೇಶ್ವರದಲ್ಲಿ ಇತ್ತೀಚೆಗೆ ಮದ್ರಾಸಿನ ಎಲ್ ಪಿ ಎಮ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಕೆಲ ಸಮಯ ತರಬೇತಿಯನ್ನು ಹೊಂದಿದ ಪ. ರಾ. ಎನ ಆ ಕಾಮತರು ಖಾಸಗಿ ಆಸ್ಪತ್ರೆಯೊಂದನ್ನು ತೆರೆದು ಪ್ರಷ್ಟ ವೃತ್ತಿಯನ್ನವಲಂಬಿಸಿದುದು ಕೋಟೇಶ್ವರದವರ ಭಾಗ್ಯವೇ ಸರಿ. ಇವರು ಹೆರಿಗೆಯ ವಿಷಯದಲ್ಲಿ ಪ್ರತ್ಯೇಕ ತರಬೇತಿಯ ಪ್ರಶಸ್ತಿಪತ್ರವನ್ನು ಹೊಂದಿರುವರೆಂದೂ ತಿಳಿದುಬರುತ್ತದೆ. ಹಳ್ಳಿಗಳ ಕೇಂದ್ರವಾಗಿದ್ದ ಇಂತಹ ಸಣ್ಣ ಸಣ್ಣ ಊರುಗಳಲ್ಲಿ ತೆರೆಯುವ ಈ ದವಾಖಾನೆಗಳಿಗೆ ಪಂಚಾಯತ ವ ಡಿ ಬೋರ್ಡಿನವರು ಯಥೋಚಿತ ಧನಸಹಾಯ ಮಾಡಿ ಪ್ರೋತ್ಸಾಹಿಸುವುದು [illegible]

ಶಾಂತಿಸ್ಥಾಪನೆಗಾಗಿ ಪ್ರಯತ್ನಗಳು

ಪ್ಯಾರಿಸ್ ನಗರದಲ್ಲಿ ಜರುಗಿದ ಪರಿಷತ್ತು

ಶ್ರೀ ಜವಾಹರಲಾಲರು: ಅವರ ಭಾಷಣ

ಮೂವತ್ತು ದೇಶಗಳಿಂದ 850 ಮಂದಿ ಪ್ರತಿನಿಧಿಗಳು ತಾ. 23ರಲ್ಲಿ ಪ್ಯಾರಿಸಿನಲ್ಲಿ ಸೇರಿದರು. ನಗರಗಳ ಮೇಲೆ ಬಾಂಬು ಗಳನ್ನು ಚೆಲ್ಲುವ ವಿಷಯ ಚರ್ಚೆಯಾಯಿತು. ಬ್ರಿಟಿಷ ಪಾರ್ಲಿಮೆಂಟಿನ 10 ಮಂದಿ ಮೆಂಬರು, ನಾನಾ ಧರ್ಮ ಸಂಸ್ಥೆಗಳ ಪ್ರತಿನಿಧಿಗಳು ಸಹ ಹಾಜರಾಗಿದ್ದರು. ಇಂಡಿಯಾದ ಪ್ರತಿನಿಧಿ ಶ್ರೀ ನೆಹರೂರವರು

ಲೋರ್ಡ ರೊಬರ್ಟಸಿಸಿಲ್‌ರವರು ಅಧ್ಯಕ್ಷರು, ಆಗಲೇ ಬ್ರಿಟಿಷ ಚಕ್ರವರ್ತಿಯರಿಗೂ ಸರಕಾರಕ್ಕೂ ಫ್ರಾನ್ಸಿನ ದೊರೆತ ಸನ್ಮಾನದಿಂದ, ಬ್ರಿಟಿಷ ಫ್ರೆಂಚ ಜನಾಂಗಗಳೊಳಗೆ ಅಖಂಡ ಪ್ರೇಮವು ಬೆಳೆದು ಸಹಕಾರದಿಂದ ಜಗತ್ತಿನಲ್ಲಿ ನೀತಿ (ಕಾನೂನು) ಬಾಳಬಹುದೆಂದು ತಿಳಿಯಿದೆ ಎಂದರು

ಫ್ರೆಂಚ ಮಜೂರ ಪಕ್ಷದ ಪ್ರತಿನಿಧಿಯರು—"ಯುದ್ಧದ ಕಡೆಗೆ ಹೋಗುತ್ತಿದ್ದೇವೆ ಜೋರವಾಗಿ ಕೃತಿಗಳನ್ನು ಮಾಡ ಬಲ್ಲವರು ಮಾತ್ರ ಶಾಂತಿಯನ್ನು ಕಾಪಾಡ ಬಲ್ಲರು ಎಂದರು

ಅಮೇರಿಕದವರು—ಶಾಂತಿಗಾಗಿ ಅಮೇರಿಕವು ಉತ್ಸಾಹದಿಂದಿದೆ

ಜಸ್ಮನಿನ ಧರ್ಮಗುರುಗಳು—ಸುಧಾರಿತ ರಾಜ್ಯಗಳಲ್ಲಿ ಸರ್ವರು ದುಡುಕುವವರಿಗೆ ವಿರುದ್ಧರು ನಿರಸ್ತ್ರರನ್ನು ಕೊಲ್ಲುವ ದೇಶದವರನ್ನು ಸಮಸ್ತರು ಬಹಿಷ್ಕರಿಸಬೇಕು

ಡಾ। ಸವರ್‌ಸ್ಕೈಲ್ ಎಂಬ ಮಹಿಳೆ ಪಾರ್ಲಿಮೆಂಟಿನ ಮೆಂಬರರು ಈಗಲೆ ಸ್ಪೈನಿನ ರಣರಂಗದಿಂದ ಇತ್ತ ಬಂದವರು 'ಯುದ್ಧದ ಭಯಂಕರತೆಕ್ಕೆ ಒಂದು ಮಿತಿ ಹಾಕಬು ಪ್ರಯತ್ನಿಸಿರಿ'' ಎಂದರು

ಶ್ರೀ ನೆಹರೂರವರ (ಇ ವಿಯದ ಪಕ್ಷವಾಗಿ ಅತ್ತ ಹೋದವರ ಹತ್ತು ಮಂದಿ, ಇವರು ಅವರ ನಾಯಕರು)

★

ಶಾಂತಿಸಾಧನೆಗಾಗಿ

ಶ್ರೀ ನೆಹರೂರವರು ಏನೆಂದರು?

(ಸಭೆಯ ಅಭಿಪ್ರಾಯದಲ್ಲಿ—ಯಾರ ಬೊಂಬೆಸೆವ ವಿಮಾನಗಳನ್ನು ಬಳಸುತ್ತಾರೆಯೋ ಅವರಿಗೆ ವಿರುದ್ಧವಾಗಿ ರಕ್ಷಣೆಯ ಏರ್ಪಾಡು ಮಾಡತಕ್ಕವರು ವಿಮಾನಗಳನ್ನು ಧ್ವಂಸಮಾಡುವ ಬಗೆಯ ಫಿರಂಗಗಳನ್ನು ಬಹಳ ಹೆಚ್ಚಾಗಿ ಉಪಯೋಗಿಸುವಂತೆ ಅವನ್ನು ಒದಗಿಸಬೇಕೆಂದೂ, ಅವರಿಗೆ ಬೇಕಾದ ಧನಸಹಾಯವನ್ನು ಹಿಂತೆಗೆಯದೆ ಮುಕ್ತಹಸ್ತವಾಗಿ ಕೊಡಬೇಕೆಂದೂ, ದಾಳಿಯಿಡುವಾತನಿಗೆ ಸೀಮೆಯೆಣ್ಣೆ ಮತ್ತು ಲೋಹಗಳು ಸಿಗಲಾರದಂತೆ ಮಾಡಬೇಕೆಂದೂ, ಚೀನಾ ಸ್ಪೈನುಗಳಲ್ಲಿ ನಿರಸ್ತ್ರರು ಹೀಗೆ ವಿಮಾನಗಳ ಹಾವಳಿಗೆ ಒಳಪಡುವ ಮೊದಲೇ ಊರುಗಳನ್ನು ತ್ಯಜಿಸಬೇಕೆಂದೂ ನಿರ್ಣಯಗಳಾದುವು

ಎಲ್ಲೆಲ್ಲಿ ಬೊಂಬು ಚೆಲ್ಲಾಟ ನಡೆವುದೋ ಅಲ್ಲಲ್ಲಿ ಸಂದರ್ಶಿಸಿ ವಿಮರ್ಶೆವರದಿ ಬರೆದುಕೊಳ್ಳಲು ಕಮಿಟಿಗಳನ್ನು ನೇಮಿಸಬೇಕೆಂದಾಯಿತು

ಶ್ರೀ ನೆಹರೂರವರು ಭಾಷಣವನ್ನೆಲ್ಲ ಆಗಾಗ ಜಯಘೋಷಗಳಿಂದ ತಡದರೇ ಮಾತ್ರವಲ್ಲದೆ, ಕೊನೆಗೆ ಇಡೀ ಸಭೆಯು ಎದ್ದು ನಿಂತು, ಅವರನ್ನು ಸನ್ಮಾನಿಸಿದರ

"ನಿರಸ್ತ್ರರ ಊರ ಗಳ ಮೇಲೆ ಸಿಡಿಗುಂಡು ಚೆಲ್ಲುವವರ ಪಾಪಗಳನ್ನು ಸುಮ್ಮನೆ ನಿಂತುನೋಡುವ ಜನಾಂಗಗಳೇ ಹೊಣೆಯಾಗಿರುವುದು ಹೀಗೆ ಅತ್ಯಾಚಾರಿಗಳಾಗಿರುವವರನ್ನು ತಡೆವ ಕರ್ತವ್ಯ ಇಲ್ಲದ ಸರಕಾರಗಳ ವಿಷಯ ನಾವೇನನ್ನಬಹುದು? ಫ್ರೆ ಕೊ ಪಕ್ಷಕ್ಕೆ ಬೇಕಾದ್ದೆಲ್ಲ ಯುದ್ಧಸಾಹಿತ್ಯಗಳು ಸಿಗುವಂತೆ ಮಾಡಿ ಸ್ಪೈನ ಸರಕಾರದ ಫ್ರೆಂಚ್ ಗಡಿಯನ್ನು ಮಾತ್ರ ಇಸ ಟ್ಟಿರುವ ಸರಕಾರಗಳ ವಿಷಯ ನಾವು ಏನೆಂದೆಣಿಸಬೇಕು?

ಇಂತಹ ಘಾತ ಪಡೆಂದಿದ ನಿರಸ್ತ್ರರಿಗೆ ಸಹಾಯವು ಪ್ರಪಂಚದ ಎಲ್ಲೆಲ್ಲಿ ದಿಂದ ಸಿಗುವಂತಾಗಬೇಕು ಈ ಪರಿಷತ್ತು ಪತ್ಯಕ್ಷರೂಪವಾಗಿ ಸಹಾಯಮಾಡಬೇಕು ಶಾಂತಿಯೂ ಪ್ರಜಾಸತ್ತೆಯೂ ಅಳಿದರೆ, ನಾವು ಅಳಿಯುವೆವು ಅವು ಬದುಕಿದರೆ, ನಾವೂ ಬದುಕುವೆವು"

[ಇಲ್ಲಿಂದ ನೆಹರೂರವರು ಫ್ರಾನ್ಸಿನಲ್ಲಿ ಸ್ವಲ್ಪ ವಿರಾಮ ಅನುಭವಿಸಿ, ಅಲ್ಲಿಂದ ಝೆಕೊಸ್ಲೊವಾಕಿಯ ವಿಯೆನ್ನ, ಬುಡಾಪೆಸ್ತಗಳನ್ನೂ ಸಂದರ್ಶಿಸಿ ಇಂಗ್ಲೆಂಡಿಗೆ ಮರಳುವರು]

★

ಪಾರ್ಲಿಯದಲ್ಲಿ

ಮಧ್ಯಪ್ರಾಂತ್ಯದ ಮಂತ್ರಿಮಂಡಲದ ರಗಳೆ.

ಮಧ್ಯಪ್ರಾಂತ್ಯದಲ್ಲಿ ಬಾಳಬಹುದಾಗಿರುವ ಮಂತ್ರಿಮಂಡಲವನ್ನು ರಚಿಸಿಕೊಡಬೇಕಾಗಿ ಬೇರಾರ ಪ್ರಾಂತ್ಯದ ಕೊಂಗ್ರೆಸ್ ನಾಯಕರ ಹೇಳಿಕೆಯನ್ನು ಸರದಾರ ಪಟೇಲರು ಕೇಳಿ—ಕೊಂಗ್ರೆಸ್ ಪಕ್ಷಕ್ಕೆ ಅಲ್ಲಿ ನಾಯಕರಾಗಿ ಯಾರಿರ ಬೇಕೆಂಬುದರ ಇತ್ಯರ್ಥ ಮಾಡುತ್ತಿರುವರು. ಡಾ। ಖಾರೆಯವರನ್ನು ಪುನಃ ಯಾರೂ ಚುನಾಯಿಸುವ ಹಾಗಿಲ್ಲ ಶ್ರೀ ಶುಕ್ಲರನ್ನೆ ಆರಿಸಬಹುದಾಗಿ ಭಾವನೆ.

ಈ ಮಧ್ಯೆ, ಡಾ। ಖಾರೆಯವರು ಮೊದಲೊಮ್ಮೆ ಮುಖ್ಯ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟರು. ಗವರ್ನರರು ಅದನ್ನು ಅಂಗೀಕರಿಸುತ್ತ ಪುನಃ ಅವರು ಕೊಂಗ್ರೆಸ್ (ಅಧಿಕ ಸಂಖ್ಯೆ) ಪಕ್ಷದವರಿಂದ ಅನಿಕರನ್ನು ಮಂತ್ರಿಮಂಡಲ ರಚಿಸ ಹೇಳಿದರು. ಅವರೂ ಹಾಗೆ ಮಾಡಿದರು. ಕೊಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡನ್ನು ಕೇಳದೆ ಹೀಗೆ ಮಾಡಿದ್ದು ಶಿಸ್ತಿಗೆ ವಿರುದ್ಧವೆಂದು ಅವರಿಗೆ ತಿಳಿಸಲು, ತಾನು ಶಿಸ್ತಿಗೆ ಒಳಪಟ್ಟೆನೆಂದು ಅವರು ಪುನಃ ರಾಜೀನಾಮೆ ಕೊಟ್ಟರು ಗವರ್ನರರು ಅದನ್ನು ಈಗಲೆ ಅಂಗೀಕರಿಸಲಿಲ್ಲ ಇವರೂ ಆ ವಿಷಯ ಕಾರ್ಯಕಾರೀ ಮಂಡಲದ ಅಭಿಪ್ರಾಯವನ್ನು ಕೇಳಿ ಮತ್ತೆ ತಿಳಿಸವೆನೆಂದರು ಅದು ಈಗ ಕಾರ್ಯಕಾರೀ ಮಂಡಲವು ಆಲೋಚಿಸಬೇಕಾಯಿತು. ಹೇಗಿದ್ದರೂ ಈಗ ಡಾ। ಖಾರೆಯವರ ಮಂತ್ರಿಕೂಟವು ಗವರ್ನರರು ಅವರ ರಾಜೀನಾಮೆ ಅಂಗೀಕರಿಸುವ ವರೆಗೆ ಕೆಲಸ ನಡೆಸಬೇಕಾಗಿದೆ

ಈ ವಿಷಯದಲ್ಲಿ ಮಧ್ಯಪ್ರಾಂತ್ಯದ ಕೊಂಗ್ರೆಸು ಪಕ್ಷವು ಸೇರಿ ನಿರ್ಧರಿಸಬೇಕೆಂದೂ ಡಾ। ಖಾರೆಯವರು ತಮ್ಮ ಅಧ್ಯಕ್ಷತನವನ್ನು ಬಿಡಬೇಕೆಂದೂ ತಿಳಿಸಲಾಗಿದೆ. ಅವರು ಪುನಃ ಅಧ್ಯಕ್ಷರಾಗಬಾರದಾಗಿ ಕೊಂಗ್ರೆಸ್ ಕಾರ್ಯಕಾರೀ ಮಂಡಲಿ ತಿಳಿಸಿಯದೆ. ತಾನು ಶಿಸ್ತಿಗೆ ಸರಿ ನಡೆದ ಕಾರಣ, ತಾನೂ ಒಬ್ಬ ಉಮೆದ್ವಾರನಾಗಿ ಅಧ್ಯಕ್ಷಪದವಿಗೆ ಅರ್ಹನಾಗಿ ಇರುವೆನೆಂದು ಡಾ। ಖಾರೆಯವರು ಹೇಳಿರುವರು ಈ ಮಹಾಶಯರು ಉಮೇದುವಾರರಾಗ ಬಹು ಕಾಲ, ಪಕ್ಷದಲ್ಲಿ ಒಡಕು ಹುಟ್ಟಲು ಕಾರಣವಿದೆಯೆಂದೇ ಕಾರ್ಯಕಾರೀ ಮಂಡಲವು ನಂಬಿರುವುದು

ಎರಡೆರಡು ಬಾರಿ ಕೊಂಗ್ರೆಸಿನ ಗೌರವವು ಕುಂದುವಂತೆ ನಡೆದ ಖಾರೆಯವರು ಪುನ ಉಮೇದುವಾರರಾಗುವುದು ಸುಗತವಲ್ಲ

ಆದರೆ, ಮಹಾಕೋಸಲದ ಮಂತ್ರಿಗಳ ಯಾವಾಗಲು ಇವರಿಗೆ ವಿರುದ್ಧವಾಗಿ ನಡದದೆ ಇವರ ಎಲ್ಲವನ್ನು ಒಂದಕ್ಕೊಂದಾಗ ಮಾಡುವುದು ಕಾರಣವಾಯಿತೆಂದು ಇವರ ಪ್ರಾಂತ್ಯದಲ್ಲಿ ಶಿಸ್ತಿಗೆ ವಿರುದ್ಧ ನಡೆದವರ ಇವರ ಸಹಕಾರಿಗಳು ತಮಗೆ ಬೇಕಾಗಿರುವ ಇಲಾಖೆ ಕೊಡಿರೆಂದ ಅದರ ಕಾರಣ ಅಡಚಣೆಯುಂಟುಮಾಡಿ ಮಂತ್ರಿಗಳ ಅಧಿಕಾರ ಕೈಬಿಟ್ಟ ಅವರ ಕೊಟ್ಟ ಇಲಾಖೆ ಅವರ ವಹಿಸಿಕೊಳ್ಳಲಿಲ್ಲ

ಗವರ್ನರರೂ ಇವರ ರಾಜೀನಾಮೆ ಅಂಗೀಕರಿಸಿ

★

ಭಾಷಾನ್ವಯ ಪ್ರಾಂತ್ಯಗಳ ಇವುಗಳ ನಿರ್ಧಾರಕ್ಕಾಗಿ ಪ್ರಯೋಗಿಸುವ ಶಕ್ತಿಯ ಸಮುಪಯೋಗ

ಕೊಂಗ್ರೆಸ್ ಕಾರ್ಯಕಾರೀ ಮಂಡಲದ ಪುನಃ ನಿರ್ಧಾರ

ತಾ 24ರಲ್ಲಿ ಈ ಕಮಿಟಿಯು ಗಾಢವಾಗಿ ವಿಶೇಷ ವಿಚಾರಮಾಡಿತು. ಆಂಧ್ರದಿಂದ 6 ಕರ್ನಾಟಕದಿಂದ 8, ಕೇರಳದಿಂದ 1 ಹೀಗೆ ಪ್ರತಿನಿಧಿಗಳು ತಮ್ಮ ಪ್ರಾಂತ್ಯಗಳನ್ನು ರಚಿಸಿಕೊಡಬೇಕೆನ್ನುವ ಸೂಚನೆ ಕೊಡಲು ಬಂದಿದ್ದರು ಬೋರ್ಡ್ ಚೆಟ್ಫೀಲ್ಡರ ಈಗ ತಾನೆ ಭಾಷಾನ್ವಯ ಪ್ರಾಂತ್ಯರಚನೆಗೆ ಮುಹೂರ್ತವಲ್ಲವೆಂದು ಹೇಳಿದದನ್ನು ಚರ್ಚಿಸಲಾಯಿತು ಆಂಧ್ರ ಮತ್ತು ಕರ್ನಾಟಕ ಪ್ರಾಂತ್ಯಗಳ ಪರವಾಗಿ ಲೋರ್ಡ್ ಸಾಹೇಬರನ್ನು ಸ್ವತಃ ಕಂಡು ಎಲ್ಲ ಹೇಳಿಕೆಗಳನ್ನು ಮುಂದಿಡಲು ಒಬ್ಬ ಪ್ರತಿನಿಧಿಯನ ಕಳುಹುವ ಮತ್ತು ಅವರು ಮದ್ರಾಸು ಮತ್ತು ಬೊಂಬಾಯಿ ಎಸೆಂಬ್ಲಿಗಳು ಕಳೆದ ಮೇ ತಿಂಗಳಲ್ಲಿ ಮಂಜೂರ್ಮಾಡಿದ ನಿರ್ಣಯಗಳನ್ನು ಮುಂದಿಡುವ ವಿಷಯವನ್ನು ಈ ಕಮಿಟಿಯ ಮುಂದಿಡಲಾಯಿತು

ಪ್ರತಿನಿಧಿಯನ್ನು ಇಂಗ್ಲೆಂಡಿಗೆ ಕಳುಹುವ ವಿಷಯವನ್ನು ವರ್ಜಿಸಲಾಯಿತು

ಆದರೆ, ಕೊಂಗ್ರೆಸ್ ಕಾರ್ಯಕಾರೀ ಮಂಡಲವೇ, ಮದ್ರಾಸು ಮುಂಬಾಯಿ ಎಸೆಂಬ್ಲಿಗಳು ಈ ವಿಷಯ ಮಾಡಿದ ನಿರ್ಣಯಗಳಂತೆ ತಾವೂ ಒಂದು ನಿರ್ಣಯವನ್ನು ಮಂಜೂರ್ಮಾಡಿ ಚೆಟ್ಲೆಂಡರಿಗೆ ತಿಳಿಸುವುದೆಂದಾಯಿತು

ಫೆಡರೇಶನ್ ಆಗುವ ತನಕ ಈ ಹೊಸ ಪ್ರಾಂತ್ಯಗಳ ಸಮಸ್ಯೆ ಹಾಗಿರಲಿ ಎಂದು ರಾಷ್ಟ್ರ ನಾಯಕರುಗಳು ಅಂದ ಮತಿವಿದಿಗಳಿಗೆ ಸರಿಯನಿ ಫೆಡರೇಶನ್ ಆಗುವ ತನಕ ನಮ್ಮ ಪ್ರಾಂತ್ಯಗಳು ... ಆದ ನಂತರ ಅದು ಹೀಗೆ ಮಾಡಲಿ ... ಇದೇ ತಿಳಿಯದೆ ಎಂಬುದು ... ಗಳನ್ನು ಮುಂದಿಡಲಾಯಿತು

ಕೊಂಗ್ರೆಸ ಭಾಷಾನ್ವಯ ಪ್ರಾಂತ್ಯರಚನಾ ವಿಚಾರದಲ್ಲಿ ಅಭಿಪ್ರಾಯವನ್ನು ಬದಲಿಸಿ ಎಲ್ಲ ಅಧಿಕಾರವೂ ಕೈಗೆ ದೊರೆತನಕ ಮಾತ ಕಾಯುವುದುತ್ತಮ ಎನ್ನುತ್ತದೆ ಏಕೆ ದರೆ ಈ ಎಲ್ಲ ಚಳವಳಿಗಳೂ ಬಿಡದೆ ವಿಷಯ—ಫೆಡರೇಶನ್ ಎದುರಿಸುವ—ನಡೆಯಬೇಕಾಗಿರುವಾಗ ಇದೊಂದು ವಿಷಯವನ್ನು ಮುಂತಂದ ಜನಗಳ ಶಕ್ತಿಯನ್ನು ಅಪವ್ಯಯ ಮಾಡಬಾರದೆಂದು ಕಮಿಟಿಯು ಸೂಚಿಸಿತು

★

ಕಲ್ಕತ್ತದ ಯುರೋಪೀಯರು.

ಫೆಡರೇಶನ್' ವಿಷಯ ಚರ್ಚಿಸಿ,—ಇದರಿಂದ ಮುಖ್ಯ ವಿಚಾರ ಯುರೋಪಿಯರು ಈ ದೇಶದಲ್ಲಿರುವುದಕ್ಕೂ, ಮಾತ್ರವಲ್ಲದೆ ಪಂಡಿತ ಜವಾಹರರು ಎನ್ನುವಂತೆ ಜಗತ್ತಿನಲ್ಲಿ ಶಾಂತಿ ಇರುವುದಕ್ಕೂ ಇದರ ಇತ್ಯರ್ಥವಾಗಬೇಕು. ನಾವು ಇದುವರೆಗೆ ರಾಜಕೀಯ ವಿಚಾರಗಳಲ್ಲಿ ಕೈಯಿಕ್ಕಿದವರಲ್ಲ ಆದರೂ 1935ನೇ ಇಸ್ವಿಯ ಆಕ್ಟಿನ ಬೆಂಬಲವಾಗಿಯೆ ನಾವಿದ್ದೇವೆ ಪಾರ್ಲಿಮೆಂಟು ಇನ್ನು ಕೆಲವು ಕಾಲದ ವರೆಗೆ ಈ ಆಕ್ಟೇ ತನ್ನ ಕೊನೆಯ ತೀರ್ಮಾನವೆಂದಿದೆ 'ಆಕ್ಟಿನೊಳಗೆ ಬೇಕಾದ ತಿದ್ದುಪಡಿ ಮಾಡುವುದಿದ್ದರೆ, ಸಂಬಂಧವುಳ್ಳ ಸಮಸ್ತಪಕ್ಷಗಳೊಡನೆ ವಿಚಾರಿಸಿ ಅನುಭವ ಅಭಿಪ್ರಾಯ ಪಡೆದು ಮಾಡಬೇಕಾಗಿದೆ ನಾವೂ ಆ ಪಕ್ಷಗಳಲ್ಲಿ ಒಬ್ಬರು, ನಮ್ಮ ಅಭಿಪ್ರಾಯವನ್ನು ಪಡೆಯದೆಯೆ ಆಕ್ಟನ್ನು ಯಾವ ವಿಧ ತಿದ್ದಲೂ ಆಗುವುದಿಲ್ಲ, ಆಗಬಾರದು ಎಂದು ಯುರೋಪೀಯ ಸಂಘದ ಅಧ್ಯಕ್ಷರಾದ

ರಾಷ್ಟ್ರಪತಿಯರ ಖಾಸಗಿ ಸಹಾಯಕರಾಗಿ

ಶ್ರೀ ಎಚ್. ವಿ. ಕಾಮತರು.

★

ಶ್ರೀ ಪಾರ್ಕಿಯವರ ಭಾಷಣಗಳಿಂದ.

ಶಿಕ್ಷಣ ವಿಚಾರಗಳು: ಲಾಲಗುಡಿಯಲ್ಲಿ

ಸರಕಾರವು ಶಿಕ್ಷಣ ಸುಧಾರಣೆ ಕೈಗೊಂಡು, ಉಪಾಧ್ಯಾಯರ ಸ್ಥಿತಿಯನ್ನು ಅಭಿವೃದ್ಧಿಗೆ ತರುವುದಕ್ಕಿರುವಾಗ, ಉಪಾಧ್ಯಾಯರೂ ಸಿಲ್ಲಿಬಸು ಇತ್ಯಾದಿಗಳ ವಿಷಯ ಸೂಚನೆಗಳನ್ನು ಕೊಡಬೇಕಾಗಿದೆ ಹಿಂದಣ ಸರಕಾರದ ಕೈಕೆಳಗಿದ್ದ ಶಿಕ್ಷಣ ಕ್ರಮವು ನಿಪುಣರ ಸೂಚನೆಯಿಂದಾದಲ್ಲ, ಈಗಣ ಸರಕಾರವು ಉಪಾಧ್ಯಾಯರನ್ನು ಕೇಳಿಕೊಂಡೇ ಸುಧಾರಣೆಗಳನ್ನು ಮಾಡುವುದು

ಮಂತ್ರಿಗಳಿಗೆ ರೂಪಾಯಿ 5000 ಸಂಬಳವಿರುವಾಗ, ಅವರಿಗೆ ಶಿಕ್ಷಕರ ಕಷ್ಟಗಳು ಹೇಗೆ ತಿಳಿಯಬೇಕು? ಹಸಿದವನಿಗೇ ಹಸಿವೆಯು ಗೊತ್ತು. 2000 ರೂಪಾಯಿ ಸಂಬಳವುಳ್ಳ ಡೈರೆಕ್ಟರರು, ಹೆಂಡತಿಯ ಆಭರಣಗಳನ್ನು ಒತ್ತೆಯಿಟ್ಟು ಶಿಕ್ಷಕರು ತಮ್ಮ ವೃತ್ತಿ ನೋಡಿಕೊಳ್ಳುತ್ತಾರೆಂದು ಹೇಗೆ ತಿಳಿಯಬೇಕು?

ಪ್ರೈಮರಿ ಶಾಲಾ ಉಪಾಧ್ಯಾಯರ ಸಂಬಳವನ್ನು ಬೋರ್ಡು ಶಾಲಾ ಉಪಾಧ್ಯಾಯರ ...

ಹಾಯರ್ ಎಲಿಮೆಂಟರಿ ಶಾಲೆಗಳ ಮತ್ತು ಮಿಡ್ಲ್ ಸ್ಕೂಲುಗಳು ಎಂದು ಬೇರೆ ತರಗತಿಗಳ ಶಾಲೆಗಳನ್ನು ಸರಕಾರವು ಇಡುವ ಹಾಗಿಲ್ಲ ಮೇಲ್ತರಗತಿಯ ಶಿಕ್ಷಣಕ್ಕೆ ಅನುಕೂಲವಾದ ವಿದ್ಯಾಭ್ಯಾಸಕ್ಕಾಗಿ ಪ್ರಿಪರೇಟರಿ ಶಾಲೆಗಳನ್ನು ಸರಕಾರವು ಇಡುವುದ

ಮಿಡ್ಲ್ ಸ್ಕೂಲುಗಳ ವಿದ್ಯಾರ್ಥಿಗಳು ಖಂಡಿತವಾಗಿಯೂ ಹಾಯರ್ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಿಗಿಂತ ಹೆಚ್ಚಿಗೆ ನಿಪುಣರೆನ್ನಬೇಕು ನಿಮ್ಮ ಶಾಲೆಗಳನ್ನು ಮಿಡ್ಲ ಸ್ಕೂಲುಗಳಷ್ಟೆ ಸಂಪೂರ್ಣವಾಗುವ ಹಾಗೆ ಚಳವಳ ಮಾಡಿರಿ

ಸರಕಾರವು ಬೋರ್ಡು ಮತ್ತು ಪಂಚಾಯತ ಶಾಲೆಗಳನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುವುದು ಮ್ಯುನಿಸಿಪಲ್ ಮತ್ತು ಖಾಸಗಿ ಶಾಲೆಗಳನ್ನು ತೆಗೆದುಕೊಳ್ಳಲಾರದು ಖಾಸಗಿ ಶಾಲೆಗಳು ಉತ್ತಮವಾದಲ್ಲಿ ಉಳಿಯುವುವು, ಇಲ್ಲವೆ ಅಳಿಯುವುವು

ಕಡ್ಡಾಯ ವಿದ್ಯಾಭ್ಯಾಸದ ವಿಚಾರದಲ್ಲಿ ಸರಕಾರವು ಅಮೂಲಾಗ್ರವಾಗಿ ಒಂದು ಹೊಸ ...

ಖಾನ್ ಬಹದ್ದೂರ್ ಖಲಿಫುಲ್ಲಾ ಸಾಹೇಬರು!

"ಶಹಬಾಸ್! ಭಾಯಿ!"

ಮಾಯಾವರಂ ತಾಲೂಕಿನ ಮುಸ್ಲಿಮ್ ಲೀಗ್ ಸಭೆಗೆ ಇವರು ಅಧ್ಯಕ್ಷರು ಸುಮಾರು 10,000 ಜನರು ನೆರೆದಾಗ ಇವರು ಮಾಡಿದ ಒಂದು ಭಾಷಣದಿಂದ ನಾವು ಕೆಲವು ಅಮೂಲ್ಯ ವಚನಗಳನ್ನು ಎತ್ತಬಹುದು. ಮಂತ್ರಿಗಳಾಗಿದ್ದವರಲ್ಲಿ ಇವರೂ ಒಬ್ಬರು; ಈಗ ಅಲ್ಲದಿರುವವರಲ್ಲಿ ಇವರೂ ಒಬ್ಬರು.

'ಕಾಂಗ್ರೆಸು ಮುಸ್ಲಿಮರ ಬಾಂಧವ್ಯಕ್ಕಾಗಿ ಪ್ರಯತ್ನಿಸಿದಂದಿನಿಂದ, ಲೀಗಿಗೆ ಇದೇ ಆರು ತಿಂಗಳಲ್ಲಿ ಬಹಳ ಜೋರಾಗಿ ತುಂಬುತ್ತ ಬರುತ್ತಲಿದ್ದಾರೆ ಬೇಡ, ಕಾಂಗ್ರೆಸಿಗೆ ಈ ಬಾಂಧವ್ಯದ ಪ್ರಯತ್ನಗಳೇ ಬೇಡ, ಸಾರುತ್ತೇನೆ, ಎಚ್ಚರಿಸುತ್ತೇನೆ! ಇದೊಂದು ಬರೀ ಕನಸು

'ಕಾಂಗ್ರೆಸು ಮುಖಂಡರೂ ಕಾಂಗ್ರೆಸು ಮುಸ್ಲಿಮರೂ ಎಷ್ಟೋ ಸಾರಿದರೂ, ಮುಸ್ಲಿಮರು ಲೀಗನ್ನು ತೊರೆವವರಲ್ಲ, ಮುಸ್ಲಿಮರ ಹಕ್ಕುಗಳನ್ನು ಮುಂತಂದು ಅವರ ಹಿತಸಾಧನೆ ಮಾಡಿದುದೇ ! ಲೀಗು! ಕಾಂಗ್ರೆಸಿಗೆ ಇದು ತಿಳಿದಿರಲಿ!

'ರೈತರ ಸಂಕಟ ನಿವಾರಣಾ ಆಕ್ಟು, ಧನಿಕರಿಗೇ ಸಹಾಯ ಮಾಡತಕ್ಕದ್ದು ಹೊರತು ಬಡವರಿಗಲ್ಲ. ಇನ್ನು ಸಾಲ ಸಿಗದಂತಾದ ಬಡವರು, ನಿರ್ನಾಮ ಹೊಂದುವ ಹಾಗೆ ಈ ಆಕ್ಟು ಮಾಡಿಯದೆ ಸಕ್ಕವಾದಿಗಳು ಅಸಕ್ತ ಪರ್ತನೆಗೆ ಕೈ ಹಚ್ಚುವ ಹಾಗೆ ಈ ಆಕ್ಟು ನಾನಾ ಕೃತ್ರಿಮ ಸಾಲಗಳನ್ನು ಕೊಡಲು ಸಹಾಯವಾಗಿದೆ!

'ಮದ್ಯಪಾನ ವಾರಣದ ವಿಷಯ ಸುಮ್ಮನೆ ಪಂಕ್ತಿಗಳೂ ಅವರ ವಿಧೇಯ ನೋಕರರೂ ಹೇಳುತ್ತಿರುವುದೆಲ್ಲ ಸುಳ್ಳು. ಈ ವರದಿಗಳನ್ನೋದಿ ಹಾಳಾಗ ಬೇಡಿ. [illegible] ದ್ಯವು ಮುಸ್ಲಿಮರಾರಿಗೂ ಬೇಡ. ಆದರೆ ಈ ಸುಧಾರಣೆ ಕಾನೂನಿನಿಂದಾಗದು, ಸಾವಕಾಶವಾಗಿಯೇ ನಿವಾರಣೆಯಾಗಬೇಕು

ಕಡ್ಡಾಯ ಹಿಂದೀ ಶಿಕ್ಷಣ ಮಾಡತಕ್ಕದ್ದು ಅನ್ಯಾಯ ಕುಟಿಲ ತಂತ್ರ. ಹಿಂದೀ ಭಾಷೆಗೆ ವ್ಯಾಕರಣವೂ ಇಲ್ಲ, ಯೋಗ್ಯ ಸಾಹಿತ್ಯವೂ ಇಲ್ಲ!! ಅದು ಇಡೀ ರಾಷ್ಟ್ರದ ಭಾಷೆಯಾಗುವುದೆಂಬ ಹುಚ್ಚು ಏನನ್ನಲಿ! ಇಡೀ ಭೂಲೋಕದಲಿ ಹೆಸರುಗೊಂಡಿರುವ ಉರ್ದು ಭಾಷೆಯೇ ರಾಷ್ಟ್ರಭಾಷೆಯಾಗಬಾರದೇಕೆ?

'ಹಿಂದೆ ಆಗಬಾರದ ಅನ್ಯಾಯವೆಂದು ಯಾವ ಕ್ರಮವನ್ನು ದೂರುತ್ತಿದ್ದರೋ, ಅದೇ ಕ್ರಮವನ್ನು ಕಾಂಗ್ರೆಸ್ ಮಂತ್ರಿಗಳು ಈಗ ಹಿಂದೀ ವಿರುದ್ಧರನ್ನು ದಂಡಿಸಲು ಉಪಯೋಗಿಸುತ್ತಾರಲ್ಲ, ಇದೇಕೆ?

ಆದುದರಿಂದ ಮುಸಲ್ಮಾನರು ಸರ್ವರೂ ಮುಸ್ಲಿಮ ಲೀಗನ್ನು ಸೇರಿರಿ. ಬಲಗೊಡಿರಿ!

ಜಪಾನು

ನೂತನ ಯುದ್ಧ ಆಕ್ರಮಣ.

ಹೆಂಕೋ ನಗರವನ್ನು ಆಕ್ರಮಿಸುವುದಕ್ಕಾಗಿ ಸೋಮವಾರದಿಂದಲೂ ಮಹಾ ಹೋರಾಟವಾಗ ತೊಡಗಿದೆ. ಯಂಗ್‌ತ್ಸೆ ನದಿಯ ಮೇಲಿರುವ ಕಿಯೂಕಿಯಾಂಗ್ ಪಟ್ಟಣವನ್ನು ಎರಡೂ ದಿನ ಎಡೆಬಿಡದೆ ಬಾಂಬು ಚೆಲ್ಲಿ ಧ್ವಂಸ ಮಾಡುತ್ತ ಜಪಾನು ಸೈನ್ಯವು ಮುಂದರಿಯಲೆಳಸಿದೆ

ನೂರು ವಿಮಾನಗಳು, ಇನ್ನೂರು ಬಾಂಬುಗಳನ್ನು ಈ ನಗರದ ಮೇಲೂ ಸುತ್ತಲೂ ಚೆಲ್ಲಿರುವುವಂತೆ. ಅದ ಹಿಂಸೆ 'ಅತಿ ಭಯಂಕರ' ಎಂದಷ್ಟೆ ವಾರ್ತೆ. ಹಾಗೆಯೆ, ಎರಡು ದಳಗಳು ಆ ನಗರದ ಕಡೆಗೆ ಮುಂದರಿದಿವೆ. ಅವರ ಬಳಿಯಲ್ಲೇ ಮಹಾಯುದ್ಧವಾಗುತ್ತಿದೆ.

ಜಪಾನು-ರಷ್ಯ, ಜಪಾನು-ಇಂಗ್ಲೆಂಡು, ಇವುಗಳೊಳಗೆ ಮೈತ್ರಿಯನ್ನು ಕಾಪಾಡುವುದಕ್ಕಾಗಿ ಪ್ರತಿನಿಧಿಗಳ ಮೂಲಕ ಪ್ರಯತ್ನಗಳು ನಡೆಯುತ್ತಲಿವೆ. ಗಡಿನಾಡುಗಳ ಗಡಿಗಳನ್ನು ಸರಿಯಾಗಿ ಗುರುತಿಸಲೂ ಪ್ರಯತ್ನಗಳಾಗುತ್ತವೆ.

ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಇಂಡಿಯಾ ವಿಷಯಕವಾದ ಪ್ರಶ್ನೋತ್ತರಗಳು

[ಜುಲೈ 18ರಲ್ಲಿ ಸೇರಿದ ಪಾರ್ಲಿಮೆಂಟ್ ಸಭೆಯಲ್ಲಿ]

ಇಂಡಿಯಾ ಅಂಡರ್ ಸೆಕ್ರೆಟರಿಯವರಿಗೆ ಪ್ರಶ್ನೆ —ನರೇಂದ್ರ ಮಂಡಲವು ಕಳೆದ ಐದು ವರ್ಷಗಳಲ್ಲಿ ಎಷ್ಟು ಸಲ ತಾನೆ ಸೇರಿದೆ?

ಉತ್ತರ—1933, 1935, 1937ರಲ್ಲಿ (ಮೂರು ಸಲ)

ಪ್ರಶ್ನೆ—ಈ ಸಭೆಯನ್ನು ವೈಸ್ರಾಯರು ತಾವಾಗಿ ಕೂಡಿಸುವರೋ, ಅಥವಾ ರಾಜರುಗಳ ಅಪೇಕ್ಷೆಯ ಮೇರೆಗೆ ಸಭೆ ಸೇರಿಸುವುದೋ?

ಉತ್ತರ—ಮಂಡಲದ ಸ್ಥಾಯೀ ಕಮಿಟಿಯು ಎಲ್ಲ ಸಭಾಕಾರ್ಯಗಳ ಅನುಕೂಲತೆ ಮಾಡುವುದು. ಆಗ, ಸಭೆಯನ್ನು ಯಾವಾಗ ಸೇರಿಸಬೇಕೆನ್ನುವ ವಿಚಾರವು ವೈಸ್ರಾಯರ ಅನುಮತಿಗೆ ಅನುಕೂಲಲೆಗೆ ಒಪ್ಪಿಸಿಕೊಡಲಾಗುವುದಾಗಿದೆ

ಪ್ರಶ್ನೆ—ಹಾಗೆಂದರೆ, ಸರಿಯಾಗಿ ಇಷ್ಟೇ ಸಭೆಗಳಾಗಬೇಕೆಂಬ ನಿಯಮವೇ ಇಲ್ಲವೆಂದು ತಿಳಿಯಬಹುದೇ?

ಉತ್ತರ—ವರ್ಷಕ್ಕೊಮ್ಮೆ ಸೇರಬೇಕಾಗಿ ನಿಯಮಗಳಿವೆ. ಹಾಗೆ ಬೇಡವೆಂದು ನಿರ್ಧರಿಸುವುದೂ ಸಭೆಯ ಕೈಯಲ್ಲೇ ಇದೆ

ಜಪಾನಿನೊಡನೆ ವ್ಯಾಪಾರ

ಪ್ರಶ್ನೆ—ಕಳೆದ ಮೂರು ವರ್ಷಗಳಲ್ಲಿ ಇಂಡಿಯಾ ಜಪಾನುಗಳೊಳಗೆ ನಡೆದ ವ್ಯಾಪಾರದಲ್ಲಿ ಆವ ಆವ ರಫ್ತುಗಳೆಷ್ಟು? ಯುದ್ಧಕ್ಕಾಗಿ ಕಚ್ಚಾ ಸಾಮಗ್ರಿ ಇಂಡಿಯಾದಿಂದ ರಫ್ತಾದುದೆಷ್ಟು?

ಉತ್ತರ—1937-38ರ ಬಗ್ಗೆ ಪೂರ್ಣ ಅಂಕೆಗಳ ದೊರೆತಿಲ್ಲ. ಇದರ ಹಿಂದಣ ವರ್ಷಗಳಲ್ಲಿ ಪ್ರಕಟವಾಗಿರುವ ವೃತ್ತಾಂತರಗಳ ಪುಸ್ತಕ ಭಂಡಾರದಲ್ಲಿವೆ. ಹತ್ತಿ, ಕಬ್ಬಿಣ, ಸಣಬು, ಲೋಹದ [illegible] ಇವು ರಫ್ತಾಗುತ್ತವೆ. ಇವನ್ನು ಯುದ್ಧ ಸಾಮಗ್ರಿ ತಯಾರಿಸಲು ಉಪಯೋಗಿಸಬಹುದು.

ಪ್ರಶ್ನೆ—1937ನೆಯ ವ್ಯಾಪಾರದ ಅಂಕೆಗಳು ಯಾವಾಗ ದೊರೆವುವು?

ಉತ್ತರ ವಿಚಾರಿಸಿ ಹೇಳಬಹುದಾಗಿದೆ.

ಫಡರೇಷನ್.

ಪ್ರಶ್ನೆ—ಫಡರೇಷನಿಗೆ ವಿರೋಧ ಪ್ರಾಬಲ್ಯ ಬಹಳವಾಗಿರುವ ಕಾರಣ, ಇಂಡಿಯಾ ಆಕ್ಟನ್ನು ತಿದ್ದಲು. ಚುನಾವಣೆ ಮತ್ತು ಹಣದ ಅಧಿಕಾರಗಳ ಧಾರಣೆಯ ಬಗ್ಗೆ ಹೇಳುವರೆ. ಒಕ್ಕೂಟದ [illegible] ಶರ್ತಗಳುಳ್ಳ ಹೊಸ ಆಕ್ಟನ್ನು ಪಾರ್ಲಿಮೆಂಟು ತಯಾರಿಸುವುದೆ?

ಉತ್ತರ—ಈಗ ಉಂಟಾಗಿರುವ ಆಕ್ಟು ಪಾರ್ಲಿಮೆಂಟು 1935ರಲ್ಲಿ ಬಹಳವಾಗಿ ಆಲೋಚಿಸಿ ಉಂಟಾದುದು. ಇದನ್ನು ಪುನರಾಲೋಚಿಸಬೇಕೆಂದು ಹೇಳಲು ಸರಕಾರವು ಒಪ್ಪುವುದಿಲ್ಲ

ಬ್ರಿಟಿಷ ಸೈನಿಕರು

ಪ್ರಶ್ನೆ—ಇಂಡಿಯಾದಲ್ಲಿರುವ ಬ್ರಿಟಿಷ್ ಸೈನಿಕರ ಖರ್ಚನ್ನು ಜೊರಲು ಪಾರ್ಲಿಮೆಂಟು ಒಪ್ಪುವ ಹಾಗೇನೂ ಸೂಚನೆಗಳು ಆಗಲಿವೆಯೆ?

ಉತ್ತರ—ಇದು ಇಡೀ ಭಾರತರಕ್ಷಣೆಯ ವಿಮರ್ಶೆಯಲ್ಲಿ ಒಂದು ಭಾಗ ಮಾತ್ರ. ಇದೆಲ್ಲವನ್ನು ಈಗ ಸೆಕ್ರೆಟರಿಯವರು ಸಂಪೂರ್ಣವಾಗಿ ಸಾಂಗವಾಗಿ ವಿಮರ್ಶಿಸುತ್ತಿರುವರು

ರಾಜಕೀಯ ಕೈದಿಗಳು

ಪ್ರಶ್ನೆ—ಕಳೆದ 12 ತಿಂಗಳಲ್ಲಿ ಬಿಡುಗಡೆ ಹೊಂದಿದ ರಾಜಕೀಯ ಕೈದಿಗಳು ಪುನಃ ದಂಡನೆ ಹೊಂದಿದುಂಟಾದರೆ, ಅವರ ಸಂಖ್ಯೆ ಎಷ್ಟು?

ಉತ್ತರ—ಇಲ್ಲಿ ಆ ಸಂಖ್ಯೆ ಸಿಗಲಾರದು. ವಿಚಾರಿಸಿ ಹೇಳಲಾದೀತು.

ಸ್ಪೈಯಿನನಲ್ಲಿ

ಯುದ್ಧದ ಮೂರನೆ ವರ್ಷಾವಧಿಯಲ್ಲಿ ಭಾಷಣಗಳ ಸಾರಾಂಶ

ಜನರಲ್ ಫ್ರಾಂಕೋ—ಈ ಮೂರನೆ ವರ್ಷದಲ್ಲಿ ಖಂಡಿತವಾಗಿಯೂ ಯುದ್ಧವು ತನಗೆ ವಿಜಯವನ್ನು ತರುವುದಾಗಿದೆ. ನೇಶನಲಿಸ್ಟ್ ಸ್ಪೈಯಿನು ಸಮಸ್ತ ಪರರಾಷ್ಟ್ರೀಯರಿಗೂ ಸಮಾನವಾಗಿ ಆದರವನ್ನು ಕೊಡುವುದು. ಸಮಾಜವಾದಿಗಳು ಎಲ್ಲವನ್ನೂ ಧ್ವಂಸ ಮಾಡಿರುವುದರ ಮೇಲೆ ಕೈಗಾರಿಕೆಗಳ ಮೂಲಕ ಹೊಸ ಸಂಪತ್ತು ಹೇಗೆ ನಿರ್ಮಾಣವಾಗುವುದೆಂದು ಪರರಾಷ್ಟ್ರಗಳು ನೋಡಲಿ!

ಪ್ರಕೃತಿಕ ಮತ್ತು ವಾಣಿಜ್ಯ ಸಂಬಂಧಗಳನ್ನು ನೋಡಿದರೆ ಇಂಗ್ಲೆಂಡು ಸ್ಪೈಯಿನುಗಳೊಳಗೆ ಮೈತ್ರಿಯುಂಟಾಗಲೇ ಬೇಕು ಎಂದು ಬೋಧೆಯಾಗುವುದು. ಮೈತ್ರಿಯಿಲ್ಲದಿರುವಲ್ಲಿ, ಎರಡೂ ಜನಾಂಗಗಳ ಸಂಸ್ಕೃತಿಗಾ ಸುಧಾರಣೆಗೂ ಹಾನಿಯಿರುವುದರಿಂದ, ಮೈತ್ರಿಯ ಮಾನ್ಯತೆಯು ಇಬ್ಬರಿಗೂ ಕರ್ತವ್ಯವಾಗಿದೆ

ಸಿನ್ಯರ್ ಡೆಲ್‌ವಾಯೋ—ಸರಕಾರದ ಪಕ್ಷದ ಪರವಾಗಿ ಇವರು ಭಾಷಣ ಮಾಡುವಾಗ,—ಕಡೆಯ ಮನುಷ್ಯನಿರುವವರೆಗೆ ಸ್ಪೈಯಿನು ಭೂಮಿಯ ಕಡೆಯ ಅಂಗುಲ ಪ್ರದೇಶಕ್ಕಾದರೂ ಖಂಡಿತವಾಗಿ ಕಾದಾಡಲೇ ಬೇಕೆಂದು ಪ್ರತಿಯೊಬ್ಬನು ನಿರ್ಧರಿಸಿರುವ ಕಾರಣ, ವಿಜಯಲಕ್ಷ್ಮಿಯು [illegible] ಎಂಬ ವಿಶ್ವಾಸವು ನನ್ನದು.

ಯಾರ ಭಾಷಣವು—ಯಾರ [illegible] ಲಕ್ಷ್ಮಿಯ ವರೆಗೂ—ಕಾಲವೇ ತಿಳಿದಿದೆ

ಸ್ಟಾಲಿನನು ಹೋಗುವನು

[illegible] ಇಂಗ್ಲೆಂಡ್ [illegible] ಸಭೆಯಲ್ಲಿ, ಒಮ್ಮೆ ರಷ್ಯದ ಪ್ರಧಾನ [illegible] ಕೆರೆನ್ಸ್ಕಿ ಎಂಬವರು [illegible] ಸ್ಟಾಲಿನ [illegible] ವಾಗಿ [illegible]

'[illegible] ರಷ್ಯದ [illegible] ಶಕ್ತಿ [illegible] ಈಗ ರಷ್ಯದಲ್ಲಿ ನಡೆಯುತ್ತಿರುವ [illegible] ಕಾರಣ [illegible] ಜೋಸೆಫ್ [illegible] ಆದರೆ ಅದು [illegible] ದಿನಗಳಲ್ಲೇ, ವರುಷಗಳಲ್ಲೇ, ಇಲ್ಲವೆ ಮೂರು ವರ್ಷಗಳಲ್ಲಿ [illegible] ಸೋವಿಯಟ್ ಅಧಿಕಾರವು [illegible]

ಈಗ ಎಲ್ಲಾ ಪ್ರತಿಭಟನೆ [illegible] ಕೆಂಪು ಸೈನ್ಯದಲ್ಲಿಯೂ, ಪಕ್ಷದ [illegible] ಚಳವಳಿಯಲ್ಲಿಯೂ, ಸಿವಿಲ್ [illegible] ಅದಗಿರುವುದು ಒಂದಲ್ಲ ಒಂದು ದಿನ ಅದೇ ಕಿಡಿಯು ಸಿಡಿದು ಪ್ರಜ್ವಲಿಸಲಿರುವುದು

ಅಂದೇ ಸ್ಟಾಲಿನನ ಅಂತ್ಯ

ಸರ್ ಕೆ. ಪಿ ಪುಟ್ಟಣ್ಣ ಚೆಟ್ಟಿಯವರು

ಮೂರೇ ದಿನಗಳ ಹಿಂದೆ ಈ ಮಹನೀಯರು ನೂತನವಾಗಿ ದಾನವಾಗಿತ್ತ ಧರ್ಮಾರ್ಥವಸತಿಗೃಹ (ವೀರಶೈವ)ವನ್ನು ಮೈಸೂರು ದಿವಾನರು ತೆರೆವ ಸಮಾರಂಭ ನಡೆದಿತ್ತು. ಇವರು ತಾ. 28ರಲ್ಲಿ, ಬೆಂಗಳೂರಲ್ಲಿ ದಿವಂಗತರಾದರು. ಎರಡು ದಿನದ ಜ್ವರ, ಅಷ್ಟೆ ಕಾರಣ.

ಮೈಸೂರಿಗೆ ನಷ್ಟವೆಂದರೆ, ಉತ್ತಮ ದಾನಿಗಳೊಬ್ಬರು. ಯೋಗ್ಯ ಆಡಳಿತ ಬಲ್ಲವರೊಬ್ಬರು ಮಾಯವಾದುದು. ಲಿಂಗಾಯತರು ತಮ್ಮ ಸಮಾಜದ ಅತ್ಯುತ್ತಮ ಹಿತೈಷಿಯನ್ನು ಕಳೆದುಕೊಂಡರು. ಮೈಸೂರು ಲಿಂಗಾಯತ ಶಿಕ್ಷಣ ನಿಧಿ (ರೂ 1,30,000) ತೋಟದಪ್ಪನ ಛತ್ರ—ಇವನ್ನು ಇವರೇ ಸ್ಥಾಪಿಸಿದವರು. ವಿಕ್ಟೋರಿಯ ಆಸ್ಪತ್ರೆಗೆ ಲಗಾವಾಗಿರುವ ಧರ್ಮಾರ್ಥ ಔಷಧಾಲಯ (ರೂ 26,000) ಮತ್ತು ಬೆಂಗಳೂರು ಟವನ್ ಹೋಲ್ (ನಗರ ಭವನ: ರೂಪಾಯಿ 85,000) ಇವೆರಡೂ ಈ ಸಜ್ಜನ ಹಿತಕಾರರ ದಿವ್ಯಸ್ಮಾರಕಗಳಾಗಿವೆ

ಇವರು 1856ರಲ್ಲಿ ಜನಿಸಿ, ಮೈಸೂರು ಸರ್ವೀಸ್ಸಿಗೆ 1875ರಲ್ಲಿ ಸೇರಿ 1886ರಲ್ಲಿ ಡಿಪ್ಯುಟಿ ಕಮಿಶನರ್, ಜಿಲ್ಲಾ ಮೆಜಿಸ್ಟ್ರೇಟ ಹುದ್ದೆ ಪಡೆದು, 1906ರಲ್ಲಿ ಮಹಾರಾಜರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರರಾಗಿದ್ದು 1912ರಲ್ಲಿ ನಿವೃತ್ತರಾದರು. ಅಂದಿನಿಂದ ಪ್ರಜಾಹಿತಕಾಂಕ್ಷಿಯರಾಗಿ ಎಷ್ಟೋ ಟ್ರಸ್ಟುಗಳ, ಸಹಾಯನಿಧಿಗಳ, ಬೇಂಕುಗಳ ಅಧ್ಯಕ್ಷರಾಗಿದ್ದರು. ಲೆಜಿಸ್ಲೆಟಿವ್ ಕೌನ್ಸಿಲಿಗೆ 25 ವರ್ಷಗಳಿಂದಲೂ ಮೆಂಬರರಾಗಿದ್ದರು.

ಇವರ ಹೆಸರು ಅಳಿಯಲಾರದು; ಜನ ಜ್ಯೋತಿಯು ಸದಾ ಬೆಳಗಿರುತ್ತದೆ.

ಸ್ಪೈಯಿನಿನಲ್ಲಿ ಮಹಾಯುದ್ಧ

ಫ್ರಾಂಕೋ ಪಕ್ಷವು ದೊಡ್ಡ ಸೈನ್ಯದೊಡನೆ ಮುತ್ತಿಗೆ ಹಾಕಿ ನಗರಗಳನ್ನು ಬಲಿಗೊಂಡುದೇ ಅಲ್ಲದೆ, ಬಂದಿವಾನರನ್ನೂ ಯುದ್ಧಸಾಮಗ್ರಿಯನ್ನೂ ಹಿಡಿದಿರುವುದು.

ಈ ಪಕ್ಷವು ನಾಲ್ಕೇ ದಿನಗಳಲ್ಲೇ 1760 ಚದರ ಮೈಲು ವಿಸ್ತೀರ್ಣದ ಪ್ರಾಂತ್ಯವನ್ನು ಅತಿ ತೀವ್ರವಾಗಿ ವಶಮಾಡಿಕೊಂಡಿದೆ. ಈ ಕಾರ್ಯವು ಸಿದ್ಧವಾಗುವಂತೆ ಸರಕಾರದ ಸೈನ್ಯವೂ ವಿಮಾನಗಳೂ ಬಹಳವಾಗಿ ದುಡುಕಿ, ಸರಕಾರದ ಸೇನೆಗಳು ಎಲ್ಲೆಲ್ಲಿಯೂ ಸುತ್ತುಗಟ್ಟಿದುದರಿಂದ ಗಲಿಬಿಲಿ ಹೊಂದಿರುವ ಸುದ್ದಿಯನ್ನು ಪ್ರಕಟಿಸಿವೆ

ಈಗ—ಒಂದು ಲಕ್ಷ ಸೈನಿಕರನ್ನು ಕೂಡಿಸಿ ಸರಕಾರಪಕ್ಷವು ಈ ಪ್ರಾಂತ್ಯದ ಗಡಿಯನ್ನು ರಕ್ಷಣೆ ಮಾಡುತ್ತದೆ. ಸದ್ಯದಲ್ಲೇ ಮಹಾಯುದ್ಧವಾಗಲಿಕ್ಕಿದೆ

ಉತ್ತರ ದಕ್ಷಿಣದಲ್ಲಿ ಮುಂದರಿವ ಫ್ರಾಂಕೋ ಸೇನಾವಿಭಾಗಗಳು ಒಂದಾಗಿ ಸುತ್ತುಗಟ್ಟಿದ ಕಾರಣ, ಸರಕಾರದ ವಶದಲ್ಲಿದ್ದ ದೊಡ್ಡ ವಿಸ್ತೀರ್ಣವು ಎಲ್ಲ ನಗರಗಳ ಸಹಿತ ವಾಗಿ ಫ್ರಾಂಕೋವಿನ ವಶವಾಗಿದೆ. ಇಲ್ಲಿ ದೊರೆತ ಕೊಳ್ಳೆ ಮಿತಿಮೀರಿದ್ದು, ಇನ್ನೂ ಎಷ್ಟೆಂದು ಲೆಕ್ಕವಾಗಲಿಲ್ಲ'

ದೊರೆತ ಭಾಗದಲ್ಲಿ 23 ದೊಡ್ಡ ನಗರಗಳ ಗ್ರಾಮಗಳು ಇವೆ. ಅತಿಸಂಭರಿತವಾದ ರಾಜ್ಯಭಾಗವಿದು

ಬ್ರಿಟನ್ನು - ಫ್ರಾನ್ಸು

ಸಂದರ್ಶನೆಯ ಪರಿಣಾಮಗಳು

[illegible] ರಾಜ [illegible] ಫ್ರಾನ್ಸನ್ನು ಸಂದರ್ಶಿಸಿರುವುದರಿಂದ ವಿಶೇಷ ವೃಷ್ಟಿಯನ್ನೇ [illegible] ಬಗೆ [illegible] ಎಂದೂ ಪತ್ರಿಕೆಗಳ [illegible] ಅಭಿಪ್ರಾಯವಾಗಿದೆ

ಲಾರ್ಡ್ ಹೇಲಿಫೆಕ್ಸರು ಫ್ರೆಂಚ್ ಮಂತ್ರಿಗಳೊಡನೆ [illegible] ಪರಿಣಾಮವಾಗಿ,—ಎರಡೂ ಸರಕಾರಗಳ ಅಭಿಪ್ರಾಯಗಳು ಹೆಚ್ಚು ಸಮ [illegible] ಎಂದೂ, ಚೆಕೊಸ್ಲೊ [illegible] ಎರಡೂ ಸರಕಾರಗಳ [illegible] ನಿರ್ಮಾಣ [illegible] ಪ್ರಯತ್ನ [illegible] ಮಾಡುವುದರಲ್ಲಿ [illegible] ಐಕ್ಯಮತ [illegible] ತಿಳಿಯಲಾಗಿದೆ

ಇತರ ಫಲವಾಗ [illegible] ಆದರೂ, ಆಗಲಾರದಲ್ಲ, ಸ ಡೆಟಿನ್ ಜರ್ಮನರಿಗೂ [illegible] ಇರುವ ವಿವಾದವನ್ನು ಇಷ್ಟರ ರೀತಿಗಳಿಂದ ಸಮಾಧಾನಗೊಳಿಸುವ ವಿಧಾನಗಳನ್ನು ಚರ್ಚಿಸಲಾಗಿದೆಂದು ತಿಳಿದುಬರುತ್ತದೆ

ಸ್ವದೇಶಾಭಿಮಾನಿ

ರಷ್ಯಾ-ಜಪಾನು ದ್ವಂದ್ವ: ಸಂಭವಿಸೀತೇ?

ಚೀನಾ ಯುದ್ಧ ಭೂಮಿಯಲ್ಲಿ ಮೊಣ ಕಾಲ ವರೆಗೂ ಮುಳುಗಿ ಸಿಕ್ಕಿಕೊಂಡಿರುವ ಜಪಾನು; ಆಗಾಗ ರಷ್ಯದೊಡನೆ ಸಮರವಾಗ ಲಿರುವ ಪ್ರಯತ್ನಗಳನ್ನು ಪ್ರಕಟಿಸುತ್ತಲೇ ಇರುವುದಷ್ಟೆ. ಕಳೆದ ವಾರದಲ್ಲಿಯೆ, ಮಂಚು ಕೂವೊದಲ್ಲಿ ರಷ್ಯದವರು ನುಗ್ಗಿರುವರೆಂದೂ, ಅವರು ಹಿಂದೆ ತೆರಳದಿರುವಲ್ಲಿ ಯುದ್ಧವಾದೀ ತೆಂದೂ ರಷ್ಯದ ಸರಕಾರಕ್ಕೆ ಜಪಾನು ತಿಳಿಸಿ ತೆಂದೂ, ರಷ್ಯ ಆಗಲೆ ಗಡಿನಾಡಿನ ನಕ್ಷೆ ತೋರಿಸ್ಯ ತನ್ನ ಸೈನ್ಯವು ಇರುವ ಸರಹದ್ದಿಲ್ಲ ತನ್ನ ದೆಂದು ಸೂಚಿಸಿತೆಂದೂ, ಅದಾದ ಬಳಿಕ,-ಗಡಿನಾಡನ್ನು ಸರಿಯಾಗಿ ನಿಷ್ಕರ್ಷಿಸಲು ಒಂದು ಕಮಿಶನನ್ನು ನೇಮಿಸಲಾಗುವುದೆಂದು ಜಪಾನು ಎಂದಿತೆಂದೂ ಪ್ರಕಟವಾಗಿದೆ. ಹೀಗೆ ಯುದ್ಧೋಪಕ್ರಮದ ವಿಷಯವಾಗಿ ನಾಲ್ಕು ಸಲವಾ ಯಿತು,-ಸುಳ್ಳು ಸುದ್ದಿಗಳು.

ಇದೇಕೆ? ಪದೇ ಪದೇ ರಷ್ಯವನ್ನು ದೂರುವ ಮೂಲಕ, ರಷ್ಯವೇ ತಪ್ಪಾಗಿ ನಡೆವುದೆಂದು ಜನರಲ್ಲಿ ಒಂದು ಅಭಿಪ್ರಾಯವನ್ನು ಮುಂದಾಗಿ ಹರಡಿಸಬೇಕೆಂಬುದೇ ಜಪಾನಿನ ಇಚ್ಛೆ, ಉದ್ದೇಶ. ಹದಿನೆಂಟು ತಿಂಗಳ ಹಿಂದೆಯೆ ಮಿ| ಲಿಟ್ವಿನೊವರು ಸೂಚಿಸಿದಂತೆ, ಈ ಕಮಿಶನನ್ನೇಕೆ ಜಪಾನು ನೇಮಿಸದೆ, ಇಂದಿಗೆ ಮಾತ್ರ ನೇಮಿಸುವುದಾಗಿ ಹೇಳಿಯದೆ? ಸೊವಿಯಟ್ ಸರಕಾರದ ವಿಮಾನಗಳನ್ನು ತಡೆದು, ಅಲ್ಲಿನ ಯುದ್ಧ ನಾವೆಗಳನ್ನು ಮುಂದರಿಯಬಿಡದೆ ಜಪಾನು ರೇಗಿಸಿ ನೋಡಿಲ್ಲವೆ? ಇದಿಷ್ಟೆ ಕಾರಣದಿಂದ ಮಹಾ ಯುದ್ಧವಾಗದಿದ್ದುದು ಪುಣ್ಯವಲ್ಲವೆ?

ಗುಟ್ಟು ಇಷ್ಟೆ. ಜಪಾನಿಗೆ ಯುದ್ಧ ಬೇಡ, ರಷ್ಯದ ಅಂತರಂಗ ಬೇಗದೆ ಎಂದು ವಿಚಾರಿಸಿ ತಿಳಿಯಬೇಕಾಗಿದೆ. ಅದಕ್ಕಾಗಿ ಆಗಾಗ ರೇಗಿಸಿ ನೋಡುತ್ತದೆ. ಮೊಸ್ಕೋವಿನಿಂದ ಇನ್ನೂ ಯುದ್ಧ ಮಾಡಲು ಅಪ್ಪಣೆ ಹೊರಡುವುದಿಲ್ಲ. ನಾನಾ ಮೃಗವನ್ನು ಸುಳಿಯಿಸಿ, ರಷ್ಯವನ್ನು ಮಂತ್ರೋಣವೆಂದರೂ ಸಾಧ್ಯವಾಗುತ್ತಿಲ್ಲ.

——ಜೂನ್ ತಾ. 24ರಲ್ಲಿ ಜಪಾನು ಮಂತ್ರಿಗಳು ರಷ್ಯದೊಡನೆ ಸ್ನೇಹಭಾವದ ಜೀರಿಕೆ ಪ್ರಕಟಿಸುವಾಗಲೆ, ಜಪಾನು ಯಾವಾಗಲು ರಷ್ಯದೊಡನೆ ಯುದ್ಧವನ್ನು ಕಾಯುತ್ತಿರಬೇಕಾಗಿದೆ ಎಂದೂ ಸಾರಿದ್ದಾರೆ.

ಆದರೆ, ರಷ್ಯವು ಜಪಾನಿಗೆ ಎಷ್ಟೋ ಮಡಿ ಮಿಗಿಲಾಗಿ ಯುದ್ಧ ಸನ್ನಾಹಗಳಿಂದ ಬಲವಾಗಿದೆ. ಹೀಗಾಗಿ ಜಪಾನಿಗೆ ಎಂದೂ ತನ್ನ ಅಂತರಂಗವನ್ನು ಹೇಳುವುದೇ ಇಲ್ಲ. ಹಾಗೆಂದು ಆಗಾಗ ಮೂದಲಿಸುತ್ತಿದ್ದರೆ,—"ರಷ್ಯದ ಒಂದಂಗುಲ ರಾಜ್ಯವೂ ಯಾರಿಗೂ ಸಿಗದು. ರಷ್ಯವು ಮಾಡುವ ಯುದ್ಧವು ಶತ್ರುವಿನ ದೇಶದಲ್ಲಿ" ಎಂದು ವೊರೊಶಿಲೋವ್ ತಿಳಿಸಿದಂತೆ, ಕೂಡಲೆ ಜಪಾನನ್ನು ನುಗ್ಗಿ ಧ್ವಂಸ ಮಾಡದಿರದು.

ಮಂಗಳೂರು

ಪುಣ್ಯದ ಪ್ರಭಾವ

ಕಳೆದ ತಾ. 27ನೇ ದಿನ ಸುರತ್ಕಲ್‌ನಲ್ಲಿ ಅಮಾವಾಸ್ಯೆಯ ಸಂಬಂಧ ಸಮುದ್ರ ಸ್ನಾನ ಮಾಡಿ ಪುಣ್ಯ ಸಂಪಾದನೆಗೆ ಹೋದವರಲ್ಲೊಬ್ಬಕೆ, ಒಬ್ಬ ಯಜಮಾನನ್ನು, ಸಮುದ್ರರಾಜನ ಆಶ್ರಯವನ್ನು ಪಡೆದನೆಂದು ವರ್ತಮಾನ. ಪುಣ್ಯದ ಪ್ರಭಾವ!

ಭಯಂಕರ ದರೋಡೆಖೋರರು

ವಾಯುವ್ಯ ಗಡಿನಾಡಿನ ಮೆಹೆರ್ ಬಿಲ್ ನ ಪಕ್ಕದ ಸುಮಾರು 200 ಮಂದಿ ಪಠಾನರು, ಬನ್ನು ರೈಲ್ವೆ ಸ್ಟೇಶನಿಗೆ ನುಗ್ಗಿದರು (ತಾ. 25) ಸ್ಟೇಶನಿನ ಜವಾನರು ಅವರನ್ನು ಓಡಿಸಿದರು. ಅಲ್ಲಿಂದ ದರೋಡೆಖೋರರು ಪಟ್ಟಣಕ್ಕೆ ಬಂದು, ಕೆಲವು ಮನೆಗಳನ್ನು ಸುಟ್ಟರು. ಸೈನಿಕರೂ ಪೋಲೀಸರೂ ಅತ್ತ ಬಂದು ಅವರನ್ನೆಲ್ಲ ಬೇಗನೆ ಓಡಿಸಿದರು. 'ಮಧ್ಯರಾತ್ರಿಗೆ ಬೆಂಕಿ ನಂದಿಸಲಾಯಿತು. ದರೋಡೆಖೋರರಲ್ಲಿ ನಾಲ್ವರು ಸತ್ತರು; 8 ಮಂದಿಗೆ ಗಾಯಗಳಾದುವು; 21 ಮಂದಿ ಕೈದಿನಲ್ಲಿರುವರು. ನಾಲ್ಕು ಮೈಲು ವಿಸ್ತೀರ್ಣಕ್ಕೆ ತಂತೀ ಸಂಗೆಗಳನ್ನು ಕಡಿದು ಹಾಕಿದ್ದರು.

ಅಫಘಾನಿಸ್ಥಾನದಲ್ಲಿ ಭಾರತೀಯ ವ್ಯಾಪಾರಿಗಳು.

'ಕೌನ್ಸಿಲ್ ಒಫ್ ಸ್ಟೇಟ್'ದಲ್ಲಿ ಕೇಳಿದ ಪ್ರಶ್ನೆಗಳಿಗೆ-ಸರ್ ಜಗದೀಶ ಪ್ರಸಾದರ ಉತ್ತರ:-

ಕೌನ್ಸಿಲ್ ಆಫ್‌ಸ್ಟೇಟದಲ್ಲಿ ಒಬ್ಬ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಭಾರತದ ಕೇಂದ್ರ ಸರಕಾರದ ಕಾರ್ಯನಿರ್ವಾಹಕ ಸಭೆಯ ಮಂತ್ರಿ ಸರ ಜಗದೀಶ ಪ್ರಸಾದರು ಉತ್ತರ ಕೊಡುತ್ತ — 'ಭಾರತೀಯ ವ್ಯಾಪಾರಿಗಳು ವ್ಯಾಪಾರಕ್ಕಾಗಿ ಅಫಘಾನಿಸ್ಥಾನಕ್ಕೆ ಹೋಗುವ ಅಪ್ಪಣೆ ದೊರೆಯುವ ಮೊದಲು, ವ್ಯಾಪಾರಿಗಳು ಜಾಮೀನು ಕೊಡಬೇಕಾದ ಶರ್ತವಿರುವುದನ್ನು ಮುಟ್ಟಿದೊಡನೆ ಅವನು ಪೋಲೀಸ ಠಾಣೆಗೆ ಹೋಗಿ ವ್ಯಾಪಾರದ ಪರ್ಮಿಟನ್ನು ತೆಗೆದುಕೊಳ್ಳಬೇಕು. ಹಾಗೆ ಅವನು ಪೋಲೀಸ ಠಾಣೆಯಲ್ಲಿ ತಾನು ಬಂದ ಸಂಗತಿಯನ್ನು ತಿಳಿಸದ್ದಿದರೆ ಅವನಿಗೆ ಜೈಲಿಗೆ ಹೋಗುವ ಸಂದರ್ಭ ಬರಲಿಕ್ಕೂ ಸಾಕು. ಅವನು ಇಬ್ಬರು ಅಫಘಾನಿಗಳನ್ನು ಜಾಮೀನು ಕೊಡಬೇಕಾಗಿದೆಯೇ ಎಂಬ ಸಂಗತಿ ಭಾರತೀಯ ಸರಕಾರಕ್ಕೆ ಗೊತ್ತಿಲ್ಲ. ಈ ನಿಯಮವು ವಿದೇಶಿಯರಿಗೂ ಲಗಾವಾಗಬಹುದು. ಆದರೆ ಅಫಘಾನಿಗಳು ಭಾರತಕ್ಕೆ ಬರುವ ಸಂದರ್ಭದಲ್ಲಿ ಅವರು ಹೀಗೆ ಮಾಡಬೇಕಾಗಿದ್ದಿರುವುದಿಲ್ಲ.

'ಅಫಘಾನಿಸ್ಥಾನದಲ್ಲಿ ವಾಸ್ತವ ಮಾಡಿಕೊಂಡು ವ್ಯಾಪಾರ ನಡೆಸಲಿಚ್ಛಿಸುವ ಹಿಂದೀ ವ್ಯಾಪಾರಿಯು ಆ ಬಗ್ಗೆ ಅಫಘಾನಿಸ್ಥಾನದ ಸರಕಾರದಿಂದ ಲೈಸೆನ್ಸ ತೆಗೆದುಕೊಳ್ಳಬೇಕು. ಅವನು ಲೈಸೆನ್ಸ ಬಗ್ಗೆ ಹಣ ಕೊಡಬೇಕಾಗಿದೆಯೇ ಎಂಬುದು ಭಾರತ ಸರಕಾರಕ್ಕೆ ಗೊತ್ತಿಲ್ಲ. ಆದರೆ ಈ ನಿಯಮವು ಅಫಘಾನಿಗಳಿಗೂ, ಇತರ ವಿದೇಶಿಯರಿಗೂ ಕೂಡ ಲಗಾವಾಗುತ್ತದೆಂದು ಭಾರತ ಸರಕಾರವು ಊಹಿಸುತ್ತದೆ. ಭಾರತಕ್ಕೆ ಬರುವ ಅಫಘಾನಿ ವ್ಯಾಪಾರಿಗಳು ಇಲ್ಲಿ ಹಾಗೆ ಮಾಡಬೇಕೆಂದಿಲ್ಲ.

'ಅಫಘಾನಿಸ್ಥಾನದಲ್ಲಿ ವ್ಯಾಪಾರ ಮಾಡಿಕೊಂಡಿದ್ದ ಹಿಂದೀ ವ್ಯಾಪಾರಿಯು ಆ ದೇಶವನ್ನು ಬಿಟ್ಟು ಸ್ವದೇಶಕ್ಕೆ ಮರಳ ಬೇಕಾದರೆ ಮೊದಲು, ಅಲ್ಲಿ ಸರಕಾರಕ್ಕೆ ಬಾಕಿ ಇರಬಹುದಾದ ಸಾಲದ ಮತ್ತು ತೆರಿಗೆಗಳ ಬಗ್ಗೆ ಹೊಣೆ ಕೊಡಬೇಕಾಗಿರುತ್ತದೆ. ಹಾಗೆ ಹೊಣೆ ಕೊಡದ್ದ ಮತ್ತು ಪಾಸಪೋರ್ಟ ಪಡೆಯದೆ ಸ್ವದೇಶಕ್ಕೆ ಮರಳಲಿಕ್ಕೆ ಪ್ರಯತ್ನಿಸಿದನಾದರೆ ಮಾತ್ರ ಅವನಿಗೆ ಅಲ್ಲಿ ಶಿಕ್ಷೆಯಾಗ ಬಹುದಲ್ಲದೆ, ಬೇರೆ ಪ್ರಸಂಗಗಳಲ್ಲಿ ಶಿಕ್ಷೆಯಾಗಲಿಕ್ಕಿಲ್ಲ. ಈ ನಿಯಮವು ಇತರ ವಿದೇಶಿಯರಿಗಾಗಿಯೂ ಇರುತ್ತದೆ. ಪರಂತ ಭಾರತಕ್ಕೆ ಬರುವ ಅಫಘಾನಿಗಳಿಗೆ ಈ ದೇಶದಲ್ಲಿ [illegible]

[illegible] ಅಫಘಾನಿಸ್ಥಾನಕ್ಕೆ ಹೋಗಿ [illegible] ವ್ಯಾಪಾರಿಗಳಿಗೆ ಅಲ್ಲಿ [illegible] ಅನೇಕ [illegible] ನ [illegible] ಅಫಘಾನಿ [illegible] ವ್ಯಾಪಾರಿಗಳಿಗೆ [illegible] ಅನಾನುಕೂಲತೆಯು [illegible] ಪ್ರಶ್ನೋತ್ತರಗಳಿಂದ ಸ್ಪಷ್ಟ [illegible] ಗುತ್ತದೆ. ಈ ದೇಶದಲ್ಲಿ ಅಫಘಾನಿ [illegible] ಗಳಿಗೆ ವ್ಯಾಪಾರ ಮಾಡಲಿಕ್ಕೆ ಯಾವ ಪ್ರತಿಬಂಧ ಅಥವಾ ತಡೆಯೂ ಇಲ್ಲದಿರುವಾಗ, ಅಫಘಾನಿಸ್ಥಾನದಲ್ಲಿ ಹಿಂದೀ ವ್ಯಾಪಾರಿಗಳಿಗೆ ಮಾತ್ರ ಅಂಥ ಪ್ರತಿಬಂಧಗಳಿರುವದರಲ್ಲಿ ಯಾವ ಔಚಿತ್ಯವೂ ಕಂಡು ಬರುವದಿಲ್ಲ. ಅಲ್ಲದೆ ಅಫಘಾನಿಗಳ ಕೈಯಲ್ಲಿ ಹಿಂದೀಯರು ಅನ್ಯಾಯ ಹೊಂದಿದಂತೆಯೂ ಆಗುತ್ತದೆ.

ಆದಕಾರಣ ಭಾರತೀಯ ವ್ಯಾಪಾರಿಗಳಿಗೆ ಅಫಘಾನಿಸ್ಥಾನದಲ್ಲಿರುವ ಈ ಪ್ರತಿಬಂಧಗಳು ಅನನುಕೂಲತೆಗಳು ಮತ್ತು ತಡೆಗಳು ಇಲ್ಲದಂತೆ ಪ್ರಯತ್ನಿಸುವದು ಭಾರತೀಯ ಸರಕಾರದ ಕರ್ತವ್ಯವಾಗಿದೆ ಎಂದ ನಾವು ತಿಳಿಯುತ್ತೇವೆ.

ಕುಂದಾಪುರ

ಸ್ಥಳೀಯ ಬೋರ್ಡು ಹೈ ಸ್ಕೂಲಿನ ಸಹಾಯಕ ಉಪಾಧ್ಯಾಯರಾದ ಮ| ರಾ| ಬಿ ಸದಾಶಿವ ರಾವ್ ಬಿ.ಎ., ಎಲ್ ಟಿ.ಯವರು ಮೂಲ್ಕಿ ಹೈ ಸ್ಕೂಲಿಗೆ ಆಕ್ಟಿಂಗ್ ಹೆಡ್ಮಾಸ್ಟರಾಗಿ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಮ| ರಾ| ಶ್ರೀನಿವಾಸಾಚಾರ್ಯ ಬಿ ಎ, ಎಲ್ ಟಿ ಯವರು ನೇಮಕವಾಗಿರುತ್ತಾರೆ.

ಪುನರ್ವಸು ಮಳೆಯು ಸಮಾಧಾನವಾಗಿ ಬಂದಿರುತ್ತದೆ. ಹೆಚ್ಚಿನ ತೊಂದರೆಯೇನೂ ಸಂಭವಿಸಲಿಲ್ಲ.

ಒಂದೊಂದು ಮಾತು

ಚೀನಾ:— ಪಂಡಿತ್ಜ ಜವಾಹರಲಾಲರ 'ಭಾರತವೂ ಪ್ರಪಂಚವೂ' ಎಂಬ ಗ್ರಂಥವನ್ನೂ, ಶ್ರೀ| ಲೊಹಿಯಾರವರ 'ಭಾರತವೂ ಚೀನವೂ' ಎಂಬ ಗ್ರಂಥವನ್ನೂ ಚೀನೀ ಭಾಷೆಗೆ ಪರಿವರ್ತಿಸಿರುವರು.

ಒಸ್ಟ್ರಿಯಾ:— ಹಿಂದೆ ಡೊಲ್ಫಸ ಮಂತ್ರಿಯನ್ನು ಕೊಂದ ನಾಜಿಗಳು 13 ಮಂದಿಗೆ ಫಾಶಿಯಾಗಿತ್ತು. ಈಗ ಡೊಲ್ಫಸನ ಸ್ಮಾರಕ ದಿನದಂದು, ಈ 13 ಮಂದಿಯನ್ನು 'ಜರ್ಮನಿಯ ವಿಸ್ತಾರಕ್ಕಾಗಿ ಮಡಿದ 13 ಮಂದಿ ವೀರರ ಸ್ಮಾರಕ'ವನ್ನು ಆಚರಿಸಲಾಯಿತು.

ರಷ್ಯ:— ಇನ್ನೂರು ಮಂದಿ ರಷ್ಯದ ವೈಮಾನಿಕರು ಹೊಂಕೊಂಗನ್ನು ತಲಪಿದರೆಂದೂ ಚಿಯಾಂಗ್ ಕೈಷಾಕರು ಎರಡು ಲಕ್ಷ ಸೈನಿಕರನ್ನು ಜಪಾನಿನ ಸೇನೆಗೆ ಇದಿರಾಗಿಟ್ಟು, ರಷ್ಯದಿಂದ ಬರುವ ಯುದ್ಧಸಾಮಗ್ರಿಗಳು ಸಾಂಗವಾಗಿ ಅದರಾಚೆಗೇ ತಲುಪುವಂತೆ ಮಾಡಿರುವರೆಂದು ವಾರ್ತೆ. ಮೂವತ್ತು ಮಂದಿ ಸೇನಾ ವ್ಯೂಹ ಚತುರರು ಹೆಂಕೋಪಿಗೆ ತಲಪಿರುವರು.

ಇಟಲಿ:— ಇಟಲಿಯಾನರೂ ಆರ್ಯರು. ಫೆಸಿಸ್ಟರಿಗ ವಿರುದ್ಧವಾಗಿ ಹೋರಾಡುವವರಿಗೆ ಸಹಾಯಕರು ಯೆಹೂದ್ಯ ಧನವಂತರು. ಇಟಲಿಯಿಂದಲೂ ಯೆಹೂದ್ಯರನ್ನು ಹೊರಡಿಸಬಹುದಾಗಿದೆ ಎಂದು ಫೆಸಿಸ್ಟ ಪಕ್ಷದ ಕಾರ್ಯದರ್ಶಿಯ ಮಾತು.

ಸ್ಪೈಯಿನ್:— ನಾಲ್ಕೇ ದಿನಗಳ ಯುದ್ಧದಲ್ಲಿ 15000 ಸರಕಾರದ ಪಕ್ಷದ ಸೈನಿಕರನ್ನು ಫ್ರೆಂಕೋ ಸೆರೆಹಿಡಿದಿರುವನು. ಇನ್ನೂ 5000 ಸೈನಿಕರನ್ನು ಸುತ್ತುಕಟ್ಟಿರುವನು.

ಲಂಡನು:— ಲೋರ್ಡ ರನ್ಸಿಮೆನ್‌ರನ್ನು ಜೆಕ್ಕೊಸ್ಲೊವಾಕಿಯಕ್ಕೆ ಕಳಿಸಿ ಜರ್ಮನಿಗೂ ಜೆಕ್ಕರಿಗೂ ಒಪ್ಪಂದವಾಗುವಂತೆ ಪ್ರಯತ್ನಗಳಾಗುವುವು.

ಪೆಲೆಸ್ತೀನ:— ಹೈಫಾದಲ್ಲಿ ಪುನಃ ಸಿಡಿಗುಂಡುಗಳ ಆಕಸ್ಮಿಕ ಸಿಡಿತ ಹೆಚ್ಚಿದೆ. ತಾ|| 21ರಲ್ಲಿ 43 ಅರಬರು 4 ಯೆಹೂದ್ಯರೂ ಸತ್ತರು, 41 ಅರಬರೂ 11 ಯೆಹೂದ್ಯರೂ ಗಾಯ ಹೊಂದಿದರು. ಸಿಡಿತದ ತರುವಾಯ ನಡೆದ ದಂಗೆಯ ಪರಿಣಾಮವಿದು.

ಪೊರ್ಟೊರೀಕೋ:— ಗವರ್ನರನನ್ನು (69 ವರ್ಷ ವಯಸ್ಸು) ಕೊಲ್ಲುವ ಪ್ರಯತ್ನವಾಯಿತು. ಈ ದ್ವೀಪವು ಈಗ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸಂಬಂಧಿಸಿದೆ. ಹಿಂದೆ ಅದು ಸ್ಪೈನಿನದು. ದಂಗೆಯಲ್ಲಿ ಇಬ್ಬರು ಸತ್ತರು. 20 ಮಂದಿಗೆ ಗಾಯಗಳಾದುವು. ಒಳಪಡಿಸುವಂತೆ [illegible] ಮಾಡಿದ್ದಾರೆ.

ಜರ್ಮನಿ:— [illegible]

ಲೀಗಿಗೆ ಕೊಂಗ್ರೆಸಿನ ಉತ್ತರ

ಇವರ ಮುಖಂಡರು ಶೈರಿ ಗುಲ್ ಎಂಬಾತನು. ಇವನು 'ಗಾಯಗೊಂಡವರ ಲ್ಲೊಬ್ಬನಾಗಿ, ಇಸ್ಲಾಮ ಎದಿಯ ಸನ್ಮೇತಧರ್ಮಯುದ್ಧ' ಮಾಡಲು ಬಂದಿದ್ದನೆಂದು ಬಾಚ್ಚಾಖಾನ ತಿಳಿಸಿ ಸತ್ತನು.

ದರೋಡೆಗಾರರು ನುಗ್ಗಿದ್ದ ಪ್ರದೇಶ ಕೆಂಬ ಧನಿಕರು ವಸತಿಗಳುಳ್ಳದು.

ಜನರಿಗೆ ಬೇಕಾದ ಬಂದೂಕುಗಳನ್ನು ಸರಕಾರವು ಕೊಟ್ಟಿದೆ.

ಸೈನಿಕರು, ಮನೆಗಳು ಹೆಚ್ಚಿರುವಲ್ಲಿ, ಗಸ್ತು ತಿರುಗುತ್ತಿದ್ದಾರೆ.

ನಷ್ಟಗೊಂಡ ಜನರು ತಮಗೆ ಸರಕಾರವು, ನಷ್ಟ ಭರ್ತಿಮಾಡಿ ಕೊಡಬೇಕೆಂದೂ, ಇಲ್ಲವೆ ಸುಲಭ ಕಂತುಗಳಲ್ಲಿ ಹಿಂತೆರಲು ಬೇಕಾದ ಸಾಲ ಕೊಡಬೇಕೆಂದೂ ಹೇಳಿಕೊಂಡಿದ್ದಾರೆ.

ವಾರ್ಧಾದಲ್ಲಿ ಸೇರಿದ ಕೊಂಗ್ರೆಸ್ ಕಾರ್ಯಕಾರಿ ಮಂಡಲಿಯು, ಮಿ| ಜಿನ್ನಾರವರ ಹೇಳಿಕೆಗಳನ್ನು ವಿಮರ್ಶಿಸಿ, ಅದಕ್ಕೊಂದು ಉತ್ತರದ ಒಕ್ಕಣೆ ತಯಾರಿಸಿಯದೆ.

ಎಲ್ಲ ಮುಸ್ಲಿಮರ ಏಕಮಾತ್ರ ಪ್ರತಿನಿಧಿ ಎಂದು ಮುಸ್ಲಿಮ ಲೀಗನ್ನು ಅಂಗೀಕರಿಸಬೇಕೆನ್ನುವುದನ್ನು ಬಿಟ್ಟು,—ರಾಷ್ಟ್ರೀಯತೆಯ ದೃಷ್ಟಿಯಿಂದ ನೋಡಿದರೆ, ಕೊಂಗ್ರೆಸು ಈ ಸಂಸ್ಥೆ ತ್ತದೆ. ಅಫಘಾನಿಸ್ಥಾನಕ್ಕೆ ಇತರ ದೇಶಗಳ ವ್ಯಾಪಾರಿಗಳು ಹೋಗುವ ಸಂದರ್ಭದಲ್ಲಿ ಯ ಜಾಮೀನಿನ ನಿಯಮ ಆ ದೇಶದಲ್ಲಿ ಇರುತ್ತದೆ. ಆದರೆ ಅಫಘಾನಿಗಳು ಹಿಂದೂ ದೇಶಕ್ಕೆ ವ್ಯಾಪಾರಕ್ಕಾಗಿ ಬಂದವರಾದರೆ ಇಂಥ ನಿರ್ಬಂಧವು ಇರುವುದಿಲ್ಲ.

'ಒಬ್ಬ ಹಿಂದೀ ವ್ಯಾಪಾರಿಯು ಕಾಬೂಲ ಯನ್ನು ಏಕಮಾತ್ರ ಪ್ರತಿನಿಧಿ ಸಂಸ್ಥೆ ದು ಒಪ್ಪಿಕೊಳ್ಳಲಿಲ್ಲವೆಂದು ಸೂಚಿಸಲಾಗಿದೆ.

ಮುಸ್ಲಿಮರು ಲೀಗಿನೊಳಗೆ ಕೊಂಗ್ರೆಸ ಕರಾರ ನಿರಾಕರಣೆ, ಸೇರ ನ ಕಮಿಟಿಯಲ್ಲಿ—ಇತರ ಮುಸ್ಲಿಮರನ್ನು (ಲೀಗಿನವರಲ್ಲದ) ಸೇರಿಸಬಾರದೆಂಬ ಶರ್ತವನ್ನು ಕೊಂಗ್ರೆಸು ಒಪ್ಪುವುದಿಲ್ಲ. ಯಾವುದೇ ಸಮಾಜದವರಾದರೂ ಕೊಂಗ್ರೆಸಿನ ಪ್ರತಿನಿಧಿಗಳೆಂದು ಕಳುಹಲು ಕೊಂಗ್ರೆಸಿಗೆ ಹಕ್ಕು ಇರಬೇಕು ಎಂದು ಸೂಚಿಸಲಾಗಿದೆ.

ಲೀಗು ಸಮ್ಮೆಯೂ ಈ ಸೂಚನೆಗಳನ್ನು ಪರ್ಯಾಲೋಚಿಸಿ, ಎರಡೂ ಸಂಸ್ಥೆಗಳು ಒಂದಾಗಿ ಸೇರಿ ವೈಕ್ಯತೆಬೆಳಸಲು ಅನುಕೂಲವಾಗುವ ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಳ್ಳಲಾಗಿದೆ.

ಇತ್ಯಂದಗಳು ಸದ್ಯಕ್ಕೆ ಒಂದಾಗುವ ಲಕ್ಷಣಗಳನರಲು ಸಹ ಇನ್ನೂ ಕಾಣುವ ಹಾಗಿಲ್ಲ.

ಮೊಸ್ಕೋ ನಗರದಲ್ಲಿ ಭಾರತೀಯರ ದಸ್ತಗಿರಿ.

ಬ್ರಿಟನ್ನಿನ ಉಪೇಕ್ಷೆ

ಮೊಸ್ಕೋ ನಗರದಲ್ಲಿ ಭಾರತೀಯರ ದಸ್ತಗಿರಿಯ ಕುರಿತು ಕೋಮನ್ಸ ಸಭೆಯಲ್ಲಿ ಪ್ರಸ್ತಾಪಬರಲು, ವಿದೇಶಾಂಗ ಸಮಿತಿಯ ಉಪ ಕಾರ್ಯದರ್ಶಿಗಳು, ಈ ಕುರಿತು ದಾಖಲೆಗಳನ್ನು ಸಂಗ್ರಹಿಸಿ ಒಪ್ಪಿಸಿದಲ್ಲಿ ತಾನು ಬ್ರಿಟಿಷ್ ರಾಯಭಾರಿಯೊಡನೆ ತನಖಿ ನಡೆಸುವಂತೆ ಕೇಳಿಕೊಳ್ಳುವೆನಾಗಿ ತಿಳಿಸಿರುವರು.

ಇನ್ನೂ ದಾಖಲೆಗಳ ವಿವರವನ್ನು ಕಾಯುತ್ತಿರುವುದೇಕೆ? ಸ್ವಲ್ಪ ಕಾಲದಿಂದ ಮೊಸ್ಕೋ ನಗರದಲ್ಲಿ ಆಗುತ್ತಿರುವ ಭಾರತೀಯರ ದಸ್ತಗಿರಿಯ ಕುರಿತು ಇನ್ನೂ ಬಟ್ಲರ್ ಮಹಾಶಯರ ಗಮನಕ್ಕೆ ಬರಲಿಲ್ಲವೇ? ನರಮೇಧದ ವಾರ್ತೆಯೇ ಅವರ ಕಿವಿಗಳನ್ನು ಮುಟ್ಟಲಿಲ್ಲವೇ? ಕಣ್ಣುಗಳಿಗೆ ಬೀಳಲಿಲ್ಲವೇ? ಹೀಗಿರುವಾಗ ಇನ್ನೂ 'ನಮಗೆ ತಿಳಿದಿಲ್ಲ'ವೆನ್ನುವುದು ಕಣ್ಣಿದ್ದೂ ಕುರುಡನಂತೆ ನಟಿಸಿದಂತಾಗುವುದಿಲ್ಲವೇ?

ಆದುದರಿಂದ ಬೇಗನೆ ಮಿ ಬಟ್ಲರರು ಬೇಕಾದ ವಿಷಯವನ್ನು ಸಂಗ್ರಹಿಸಿ, ಭಾರತೀಯರ ರಕ್ಷಣೆಗಾಗಿ ತಕ್ಕ ವ್ಯವಸ್ಥೆ ಮಾಡುವರೆಂದು ನಾವು ನಂಬುತ್ತೇವೆ.

ಬ್ರಿಟಿಷ್ ಚಕ್ರವರ್ತಿಯವರ ಪೇರಿಸ್ ಸಂದರ್ಶನ
ಅಭೂತಪೂರ್ವ ಸ್ವಾಗತ

ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಗಳೂ ಅರಸೀ ಜೋರ್ಜರು ಸಪತ್ನೀಯುಕ್ತರಾಗಿ ಗೂಡಿ ತಾ 19ನೇ ಮಂಗಳವಾರ ಪೇರಿಸಿಗೆ ಹೋಗಿ, ಪರಂಡ ಸ್ವಾಗತವನ್ನು ಪಡೆದರು.

ಈ ರಾಜದಂಪತಿಗಳ ವಸತಿಗಾಗಿ ಫ್ರೆಂಚ್ ಸರಕಾರವು "ಕ್ವಾಯ್ ಡಿ ಆರ್ಸೇ" ಎಂಬ ದಿವ್ಯ ಭವನವನ್ನು ದೇದೀಪ್ಯಮಾನವಾಗಿ ಅಲಂಕರಿಸಿರುವರು. ಜನರಂತೂ ತಮ್ಮ ರಾಜಧಾನಿಯಲ್ಲಿ ರಾಜಯೋಗ್ಯವಾದ ವಾತಾವರಣವನ್ನು ನಿರ್ಮಿಸುವುದಕ್ಕಾಗಿ, ತಮ್ಮ ತಮ್ಮ ಮನೆಮಠಗಳನ್ನು ಚಿತ್ರ ವಿಚಿತ್ರ ಬಣ್ಣಗಳ ಪುಷ್ಪಸ್ತಬಕಗಳಿಂದ ಸಿಂಗರಿಸಿದ್ದರು.

ಈ ಉತ್ಸವ ಸಮಾರಂಭಗಳಲ್ಲಿ ಫ್ರೆಂಚ್ ಮಕ್ಕಳೂ ಭಾಗವಹಿಸಲಪೇಕ್ಷಿಸಿ, ತಮ್ಮಂತೆ ಎಳೆಯರಾದ ರಾಜಕುಮಾರಿ ಪ್ರಿನ್ಸೆಸ್ ಎಲಿಜೆಬೆತ್ ಹಾಗೂ ಪ್ರಿನ್ಸೆಸ್ ಮಾರ್ಗರೆಟ್ ರೋಜ್, ಇವರಿಬ್ಬರನ್ನೂ ಅಗತ್ಯ ಕರಕೊಂಡು ಬರುವಂತೆ, ರಾಜದಂಪತಿಗಳಿಗೆ ವಿನಂತಿಸಿದ್ದರು. ಆದರೆ ಅವರನ್ನು ರಾಜದಂಪತಿಗಳು ಕರಕೊಂಡು ಬರುವುದಿಲ್ಲವೆಂದು ತಿಳಿದೊಡನೆ, ಫ್ರೆಂಚ್ ಮಕ್ಕಳೆಲ್ಲ ಒಂದುಗೂಡಿ, 128 ಸಾವಿರ ಮಕ್ಕಳ ಸಹಿಯುಳ್ಳ ಒಂದು ವಿನಂತಿ ಪತ್ರವನ್ನು ತಯಾರಿಸಿದುವು. ಆ ವಿನಂತಿ ಪತ್ರವನೂ ಅಮೂಲ್ಯ ಗೊಂಬೆಗಳ ಕಾಣಿಕೆಯನ್ನೂ ಮಕ್ಕಳ ಪ್ರತಿನಿಧಿಗಳು ಬ್ರಿಟಿಷ್ ಅರಮನೆಗೆ ತಂದು ರಾಜಕುಮಾರಿಯರಿಗೆ ಇತ್ತರಂತೆ.

ತ್ರಿವರ್ಣ ಧ್ವಜದ ಕರ್ತನಾರು?

ಇಂದು ಭಾರತೀಯರೆಲ್ಲರ ಪ್ರೀತಿಯ, ಅಭಿಮಾನದ ಧ್ವಜವನ್ನು ಮಾಡಿದವನು ಶ್ರೀಯುತ ಹೇಮಚಂದ್ರ ದಾಸನೆಂಬಾತನು. ಈತನನ್ನು 1924ರಲ್ಲಿ ಅಂಡಮಾನದಿಂದ ಬಿಡುಗಡೆ ಮಾಡಲಾಗಿದೆ. ಅಂದಿನಿಂದ ಬೇರೊಂದು ಹೆಸರನ್ನಿಟ್ಟುಕೊಂಡು, ಆತನು ತಲೆಮರೆಸಿ ಜೀವನವನ್ನು ನಡೆಸುತ್ತಿರುವನು. ಆತನನ್ನು ಪತ್ತೆ ಹಚ್ಚುವುದಕ್ಕಾಗಿ ಈಗ ಶ್ರೀ ಸವಾರಕರರೂ ಮರಾಟ ಎಂಬ ಪತ್ರಿಕೋದ್ಯಮಿಗಳೂ ಟೊಂಕ ಕಟ್ಟಿರುವರು.

ಅಹ್ಮದಾಬಾದು.—
ಮದ್ಯಪಾನ ನಿರೋಧ

"ಕೊಂಗ್ರೆಸಿನ ಕಾರ್ಯಕ್ರಮದಲ್ಲಿ ಮುಖ್ಯವಾದುದು ಮದ್ಯಪಾನ ನಿರೋಧ. 150 ವರ್ಷ ಬ್ರಿಟಿಷ್ ರಾಳಿಕೆಯೂ ಇದೊಂದೇ ಒಂದು ಕ್ರಮ ಸ್ವೀಕರಿಸಲಿ. ಸ್ವರಾಜ್ಯಕ್ಕೆ ಇದೇ ಬೇಕಾದದ್ದೆ" ಸರದಾರ ಪಟೇಲರ ಭಾಷಣದಲ್ಲಿ ಈ ಮಾತುಗಳಿದ್ದುವು (ತಾ 20)

ಊರೆಲ್ಲ ಉತ್ಸಾಹದಿಂದ ತುಂಬಿದ್ದಿತು. ಗಿರಣಿಗಳು, ಅಂಗಡಿಗಳೂ ಮುಚ್ಚಿದುದರಿಂದ, ಕೆಲಸಗಾರರು ತುಂಬ ಈ ಮದ್ಯಪಾನ ನಿರೋಧಾರಂಭದ ಕಾರ್ಯಕ್ರಮ ಕಾಣುತ್ತಿತ್ತು. ನಾಟಕಶಾಲೆಗಳಲ್ಲಿ ಸಾಯಂಕಾಲದ ಪ್ರದರ್ಶನಗಳಿದ್ದಿಲ್ಲ.

ನಡುರಾತ್ರಿಯಿಂದ ಮುಂದೆ, ಮದ್ಯ ಸಿಗಲಾರದು ಎಂಬ ಸುವಾರ್ತೆ ಸಾರುತ್ತ ಹಲವು ಲೊರ್ರಿಗಳು ಊರೆಲ್ಲ ಓಡಾಡಿದುವು. ಕಾಮೂಸು ಮುರಿಯುವವರಿಗೇನು ದಾಪನೆಯೊಂದೂ ಸಾರಲಾಯಿತು. ಮುಚ್ಚಿಪಾಡಿದ್ದ ಕಡೆಯುಳ್ಳಲ್ಲ ಮಹಾ ಉತ್ಸಾಹದಿಂದ ಈ ಲೊರಿಗಳಿಗೆ ಶ್ಲಾಘನೆ ದೊರೆಯಿತು. ಸ್ತ್ರೀಯರು ಬಹಳವಾಗಿ ಪ್ರೋತ್ಸಾಹಿಸಿರುವರು.

ಅರ್ಧ ಮೈಲು ಉದ್ದದ ಒಂದು ಮೆರವಣಿಗೆ ಊರಲ್ಲೆಲ್ಲ ಮೆರೆಯಿತು. ಸ್ವರದಾರ ಪಟೇಲರೂ, ಮಂತ್ರಿ ಡಾ। ಗಿಲ್ಡರರೂ ಇದರ ಮುಂಭಾಗದಲ್ಲಿದ್ದರು.

ಲಾಲ್ ಮೈದಾನಿನಲ್ಲಿ ಮಹಾಸಭೆ ಜರಗಿತು. "ಹಿಂದೆ ಪಿಕೆಟಿಂಗ್ ಮಾಡಬೇಕಾಗಿತ್ತು, ಬಲ್ಲಿರಾ? ಈಗ ಸಾಧ್ಯವಾಯಿತು. ಸರಕಾರವೇ ಈ ಕಾರ್ಯಕ್ರಮ ಕೈಕೊಂಡಿದೆ, ಜನರ ಹಿತಕ್ಕೆ ಸರಕಾರವು ಪ್ರಯತ್ನಿಸುವುದೆಂದರೆ ಹೀಗೆ.— ಈಗ ಮದ್ಯಪಾನ ನಿರೋಧಕ್ಕೊಬ್ಬ ಕಮಿಶನರನ್ನೇ ನೇಮಿಸಲಾಗಿದೆ, ಅಬಕಾರಿ ಆಫಿಸರನ್ನಲ್ಲ— ಇವರಿಗೆ ಇದರಲ್ಲಿ ವಿಶ್ವಾಸ ಕಡಿಮೆಯಷ್ಟೆ. ಅಮಲು ಅಭ್ಯಾಸಿಗಳಿಗೆ ಪರ್ಮಿಟು ಕೊಡಲಾಗುವುದು, ಆದರೆ, ಅವನ್ನು ಪುನಃ ಊರ್ಜಿತಗೊಳಿಸಲಾಗುವುದಿಲ್ಲ. ಅಂತಹ ಅಭ್ಯಾಸವುಳ್ಳವರು ಊರನ್ನು ಬಿಟ್ಟು ಹೊರಗೆ ಹೋಗಬಹುದು, ಅಷ್ಟೇ. ಅಹ್ಮದಾಬಾದಿನಲ್ಲಿರುವ ಐದು ಲಕ್ಷ ಜನರಲ್ಲಿ 205 ಮಂದಿ ಮಾತ್ರ ಪರ್ಮಿಟುಗಳಿಗೆ ಅರ್ಜಿ ಕೊಟ್ಟಿರುವರು. ಒಬ್ಬ ಕೂಲಿಯವನಾಗಲಿ, ಒಬ್ಬ ಹರಿಜನವಾಗಲಿ ಪರ್ಮಿಟಿಗೆ ಅರ್ಜಿ ಹಾಕಿದ್ದಿಲ್ಲ! ಮಜೂರರಿಗೆ ಇಷ್ಟರಲ್ಲೇ 40 ಲಕ್ಷ ರೂಪಾಯಿಯಷ್ಟು ಹೆಚ್ಚಿನ ಕೂಲಿ ಸಿಗುವಂತೆ ಮಾಡಿದವರು ಕೊಂಗ್ರೆಸ್ ಮಂತ್ರಿಗಳು, ಈಗ ಮದ್ಯಪಾನ ನಿರೋಧದಿಂದ, ವ್ಯರ್ಥವಾಗಿ ಮದ್ಯಕ್ಕೆ ವ್ಯಯವಾಗುವ 40 ಲಕ್ಷವನ್ನೂ ಅವರು ಉಳಿಸಬಹುದಲ್ಲವೇ? ಬಾರ್ಡೋಲಿ ತಾಲೂಕಿನಲ್ಲಿ ಆಗಸ್ಟು ತಾ 1ರಂದ ಮದ್ಯನಿವಾರಣೆಗೆ ಆರಂಭ. ಅಲ್ಲಿ ಪರ್ಮಿಟುಗಳನ್ನು ಕೊಡುವುದಿಲ್ಲ. 50000 ಜನರ ಪರ್ಮಿಟು ಪಡೆಯುವರಾಗಿ ಮೊದಲು ಮಂತ್ರಿಗಳಿಗೆ ಎಚ್ಚರಿಸಿದ್ದರು, ಈಗ? ಇನ್ನು ನಾನಾ ವಿನೋದಾದಿಗಳನ್ನು ಜನರು ಅನುಭವಿಸುವಂತಾಗುವುದು" ಎಂದೂ ಪಟೇಲರು ಭಾಷಣದಲ್ಲಿ ಸೂಚಿಸಿದರು.

ಪರ್ಮಿಟು ಪಡೆದವರು 270, ಇವರಲ್ಲಿ 104 ಯುರೋಪಿಯನರು, 60 ಪಾರ್ಸಿಯರು, ಕ್ರೈಸ್ತರು, ಯೆಹೂದ್ಯರ, 7 ಹಿಂದುಗಳ ಇಬ್ಬರೇ ಮುಸ್ಲಿಮರು.

ವಾರ್ಧಾ ವಿದ್ಯಾಯೋಜನೆಯ ಕುರಿತು.

ಭಿನ್ನಾಭಿಪ್ರಾಯಗಳಿರುವುದು ನಮಗೆಲ್ಲರಿಗೂ ವಿದಿತವಿರುತ್ತದೆ. ಅದನ್ನು ಹೊಗಳುವವರೂ ತೆಗಳುವವರೂ ಇದ್ದಾರೆ. ಅದಲ್ಲದೇ ಭಾರತಕ್ಕೆ ಬೇರೆ ಗತಿ ಇಲ್ಲವೆಂದು ಹೇಳುವವರು ಕೆಲವರು; ಅದು ಕೇವಲ ಕಾಗದದಲ್ಲಿ ಅಲ್ಲದೆ ಕಾರ್ಯತಃ ಸಾಧಿಸುವುದು ಅಸಾಧ್ಯದ ಮಾತೆನ್ನುವವರು ಹಲವರು. ಈ ಪ್ರಸಂಗದಲ್ಲಿ ಇಲಸ್ಟ್ರೇಟೆಡ್ ವೀಕ್ಲಿ ಒಫ್ ಇಂಡಿಯಾ ಪತ್ರಿಕೆಯು ಕೆಲವು ಅಭಿಪ್ರಾಯಗಳು ವಿವೇಚನೀಯವಿದೆ.

"ವಾರ್ಧಾ ವಿದ್ಯಾಯೋಜನೆಯು ಜಾರಿಗೆ ಬಂದಲ್ಲಿ ಅದೊಂದು ರೂಪದಲ್ಲಿ ಶಿಶುಗೇಯ್ಮೆ (Child labour) ಪ್ರಾರಂಭವಾಗಬಹುದೋ ಎಂಬ ಅಂಜಿಕೆಯು ನಮಗಿದೆ.

ದಿನ ಒಂದಕ್ಕೆ 8 ಗಂಟೆ ಕೆಲಸ ಮಾಡಿ ಓರ್ವ ವಿದ್ಯಾರ್ಥಿಯು 12 ಆಣೆಗಳಷ್ಟು ಸಾಮಾಗ್ರಿಗಳನ್ನು ತಯಾರಿಸ ಬಲ್ಲನೆಂಬ ಈ ಪ್ರತೀಕ್ಷೆಯಿಂದಾಗಿ ಅಷ್ಟನ್ನೇ ದುಡಿಯುವಂತೆ ವಿದ್ಯಾರ್ಥಿಗಳನ್ನು ಉಪಾಧ್ಯಾಯರು ಬಲವಂತಪಡಿಸುವಂತಾಗಬಹುದು. ಇದರಿಂದ ಇತರ ವಿಷಯಗಳು ಮೂಲೆಗೆ ಒತ್ತಲ್ಪಡಬಹುದು. ಪರೀಕ್ಷೆಯ ಭೂತವು ಹೋಗಿ ಅದರ ಸ್ಥಳದಲ್ಲಿ ದಿನ ಒಂದರ 12 ಆಣೆಯ ಪಿಶಾಚಿಯು ಪದಾರ್ಪಣ ಗೈಯಬಹುದು."

S. U. N.& Co.,

Silk Merchants,

Chaukhambha, BENARES CITY.

ಈಗಿನ ತರಹ(ಕಾಶಿ) ಬನಾರೆಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ ಮಾತ್ರ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಶೀರೆಗಳು ರೂ 35ರಿಂದ ರೂ 55 ಪಡಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ. 65 ಉದ್ದ ಮೊಳ 16, ಅಗಲ 2¼ ರೂ 20ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —

ತಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

I visited the office of the Bhuvanendra Products Ltd. I wish the same every success as I am told they are rendering help to the poor by the supply of medicines free of cost. I wish the institution every success.

(Sd.) V. V. Giri,
Minister of Labour.

4-10-1937

Bhuvanendra Products Ltd, Katapady, S. Kanara

DIAMONDS! DIAMONDS!

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ 'ವಜ್ರ ವ್ಯಾಪಾರಿ!

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹೆಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು.

ಓದದೆ ಬಿಡತಕ್ಕ

ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ

ಸಾಪ್ತಾಹಿಕ ಪತ್ರಿಕೆ

ಎಂದಿನಂತೆ

ಇಂದಿಗೂ ಆದರಣೀಯವಾಗಿದೆ

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬಿಳ್ತ ಗುಡ್ಡು ಮು.	1 —14	1 —14
ರಾಶಿ ಅಕ್ಕಿ ...	3— 8	4— 0
ಸುಗ್ಗಿ ...	4— 0	4— 8
ಗುಡ್ಡು ...	4—10	4—10
ಊರ ಅವ್ವಲ್ ಬೆಳ್ತಿಗೆ ...	4— 7	4— 7
ರಂಗೂನು ಬೆ. ಗೋ. ಗಿಳ್ಳೆ..	7 — 2	7— 4
ಎಲ್ಲೂರು ಬೆ. ಮು. ಗಿಳ್ಳೆ..	3—14	4— 0
ಗೋಧಿ ಗೋಣಿ ಗಿಳ್ಳೆ ..	13 — 0	14— 8
ತೊಗರಿ ಗೋಣಿ ಗಿಳ್ಳೆ ...	11— 8	13— 8
ಹುರುಳಿ ಗೋಣಿ ಗಿಳ್ಳೆ ...	6— 0	6— 2
ಕಡಲೆ ಗೋಣಿ ಗಿಳ್ಳೆ ...	9 — 8	10 — 8
ತೊಗರಿಬೇಳೆ ಗೋಣಿ ಗಿಳ್ಳೆ...	17— 8	18— 0
ಉದ್ದು ಗೋಣಿ ಗಿಳ್ಳೆ ...	9— 0	9 — 8
ಹೆಸರು ಗೋಣಿ ಗಿಳ್ಳೆ ...	9—12	10— 8
ಊರುಬೆಲ್ಲ ಖಂಡಿ ಗಿಳ್ಳೆ ..	36— 0	40— 0
ಉಪ್ಪು ಗೋಣಿ ಗಿಳ್ಳೆ ..	4— 8	5— 4
ಕೊಬ್ರಿ ಖಂಡಿ ಗಿಳ್ಳೆ ...	46 — 8	46— 8
ಎಳ್ಳಿಂಡಿ ಖಂಡಿ ಗಿಳ್ಳೆ	25 —	26 — 0
ತೆಂಗಿನ ಎಣ್ಣೆ ಮುಡಿ ಗಿಳ್ಳೆ..	3 — 5	3— 6
ಎಳ್ಳೆಣ್ಣೆ ಮುಡಿ ಗಿಳ್ಳೆ .	6— 0	7— 0
ಚಿಟ್ಟೆಎಣ್ಣೆ ಪೆಟ್ಟಿಗೆ ಗಿಳ್ಳೆ .	6— 5	7— 5
ಮೋರಿಸ ಸಕ್ಕರೆ ಮು ಗಿಳ್ಳೆ.	2— 13	2 —14
ಹೊಗೆಸೊಪ್ಪು ..	4— 8	6— 0
ಸಾಸಿವೆ ಮುಡಿ ಗಿಳ್ಳೆ ..	5 — 8	6— 8
ಕಾಳುಮೆಣಸು ಹ ವೇಗೆ..	16 — 0	17— 8
ಯಾಲಕ್ಕಿ ದೀಜ ಮುಡಿಗಿಳ್ಳೆ	80— 0	85— 0
ಗೇರುಬೀಜ ಮು. ಗಿಳ್ಳೆ ..	3—14	3—15
ಕಬ್ಬಿಣ ಖಂಡಿ ಗಿಳ್ಳೆ .	50— 0	55— 0
ತಾಂಮ್ರತಗಡು ಮು ಗಿಳ್ಳೆ...	14— 12	15— 0
ತಾಂಮ್ರಪಾತ್ರಗಳು ಮು ಗಿಳ್ಳೆ	14— 8	15— 0
ಚೀನಬೆಳ್ಳಿ ಸೇರು ಗಿಳ್ಳೆ .	13— 8	14— 0
ಹಿತ್ತಾಳೆ ತಗಡು ಮು ಗಿಳ್ಳೆ.	13— 0	13— 0
ಸವಸು ಗಿಳ್ಳೆ	22— 8	23— 0
ಹುಣಸೆ ಹುಳಿ ಖಂಡಿ ಗಿಳ್ಳೆ	40— 0	45— [illegible]
ನೇಟಿವ್ ಕಾಫಿ ಖಂಡಿ ಗಿಳ್ಳೆ	140— 0	148— 0
ಫಟೇರಿ ಕಾಫಿ ಖಂಡಿ ಗಿಳ್ಳೆ	185— 0	198— 0
ಮಾಡಿಕೇರಿ ಪಿಲಕ್ಕಿ ಮುಡಿ	35— 0	39 — 0

ಡೋಂಗರೇ ಬಾಲಾಮೃತ

ಇದರಿಂದ

ಸೊರಗಿ ಕಡ್ಡಿಯಂತಾದ ಮಕ್ಕಳು

ಆರೋಗ್ಯ ಹೊಂದಿ

ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ [illegible] ಬಹುಧಾನ್ಯ ಸಂವತ್ಸರದ ಶ್ರಾವಣ ಶು. [illegible] ಶನಿವಾರದಿಂದ ಶ್ರಾವಣ ಶು. ೧೦ ಶುಕ್ರವಾರದ ತನಕದ ಪಂಚಾಂಗ [illegible]

ದಿ	[illegible]	[illegible]	[illegible]	[illegible]	[illegible]	[illegible]	[illegible]
30	ಶನಿ	೨	೪೬	[illegible]	[illegible]	೧೪	
31	ರವಿ	೩	೪೩	[illegible]	[illegible]	[illegible]	[illegible]
1	ಸೋ	೪	೪೧	ಹಸ್ತ	೨೩	೧೬	[illegible]
2	ಕುಜ	೫	೪೦	ಚಿತ್ರಾ	೨೪	[illegible]	[illegible]
3	ಬುಧ	೬	[illegible]	ಸ್ವಾತಿ	[illegible]	[illegible]	[illegible]
4	ಗುರು	೭	೪೨	ವಿಶಾಖಾ	[illegible]	೧೮	[illegible]
5	ಶುಕ್ರ	೮	೪೫	ಅನುರಾಧ	೩೩	[illegible]	[illegible]

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4¼ For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines. Unique Banking Facilities to Businessmen and interested Public

Apply for particulars-K R. GURU, *Managing Director*

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ

ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ಸಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ ಬೆಲೆ 0–4–0, 0–2 0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0–4–0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಪಡಿಸುವ ಅದ್ಭುತ ಶಕ್ತಿಯುಳ್ಳ ಮಾತ್ರೆ

ಬೆಲೆ. 0–8–0, 0–4–0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರಿಕೆ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1–0–0

ಪ್ರೊಪ್ರೈಟರ್:

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

'DILROZ' Regd

'Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm, Sinus Fistula auxillary Abscess

There is no need of dressing the wounds, nor are baths prohibited

Price Rs. 2 Postage extra.

TAHIR DIN,

Anarkali, LAHORE

ರಾಜಾಜಿಯವರ ಅಪ್ರತಿಮ ಜಯ!

ಬೇಲಿಯೇ ಹೊಲವನ್ನು ನುಂಗಿದರೆ? ತೆಗಳಲು ಬಂದವರು ತಲೆದೂಗಿ ನಿಂತರು. ಜನಸಮೂಹದಲ್ಲಿ. ತಾರುಣ್ಯದ ದುಡುಕು. ಪ್ರತಿಕೂಲವಲ್ಲ.

ಬೇಲಿಯೇ ಹೊಲವನ್ನು ನುಂಗಿದರೆ?

ಎಂದು ಮುಸುಲೀಪಟ್ಟಣದಲ್ಲಿ ಮದ್ರಾಸಿನ ಪ್ರಧಾನ ಮಂತ್ರಿಗಳಿಗೆ ಒಪ್ಪಿಸಿದ ಅರ್ಜಿಯೊಂದು ಬಿನ್ನವತ್ತಳೆಯಲ್ಲಿ ಬರೆದಿತ್ತು. ಈ ಭಿನ್ನಹ ಪತ್ರವನ್ನು ಒಪ್ಪಿಸಿದವರು ಕೈಕಲ್ಲೂರು ತಾಲೂಕಿನ ರೈತರು.

"ಬೇಲಿಯಾರು?" ರಾಜಾಜಿಯವರು ವಿಚಾರಿಸಿದರು.

"ಬೇಲಿಯು ಸರಕಾರವೆಂದು ಅವರ ಅಭಿಪ್ರಾಯವು" ಪಟ್ಟಾಭಿಯವರು ವಿವರಿಸಿದರು.

"ತನ್ನನ್ನು ಹೊಂದಿಕೊಂಡಿದ್ದವರನ್ನು ನಾಶಪಡಿಸುವ ಧನಿಯು ಕುರಿತು ಈ ಮಾತುಗಳು ಸಮಂಜಸವೇ ಸರಿ. ಆದರೆ ಈ ಪ್ರಸಂಗದಲ್ಲಿ ಈ ಗಾದೆಯ ಪ್ರಯೋಗವು ಸಂದರ್ಭೋಚಿತವೆಂದು ತೋರುವುದಿಲ್ಲ" ಎಂದು ಸುರಿ ರಾಜಾಜಿಯವರು ಪಟ್ಟಾಭಿಯವರ ಮುಖವನ್ನು ದಿಟ್ಟಿಸಿ ನೋಡಿದರು. ಇದಕ್ಕೆ ತನ್ನ ಅನುಮೋದನೆಯನ್ನು ಸೂಚಿಸಲೋ ಎಂಬಂತೆ ಅವರು ತಲೆದೂಗಿ ಮುಗುಳ್ನಕ್ಕರು.

ತೆಗಳಲು ಬಂದವರು ತಲೆದೂಗಿ ನಿಂತರು

ರಾಜಾಜಿಯವರ ಅಪ್ರತಿಮ ಜಯ!

ಗುಂಟೂರಿನಲ್ಲಿ ರಾಜಾಜಿಯವರಿಗೆ ದೊರೆತ ಸ್ವಾಗತವು ಚರಿತ್ರಾರ್ಹವಾದುದು. ಸಾವಿರಾರು ಜನ [illegible] ಅವರಾಗಮನವನ್ನು ಪ್ರತೀಕ್ಷಿಸುತ್ತ ರೈಲ್ವೇ ಸಿಲ್ದಾಣದಲ್ಲಿ ಕಿಕ್ಕಿರಿದು ನೆರೆದಿದ್ದರು. ಅಲ್ಲಲ್ಲಿ ಕೆಲವು ಕಪ್ಪು [illegible]ಗಳೂ, ಹಳದಿ ಪತಾಕೆಗಳ [illegible] ದುತ್ತಿದ್ದವು. ರೈಲು ಬಂದಿಯು ಬಂದೊಡನೆ ಜನಸಮೂಹವು ಮುಂದೊತ್ತೊದಗಿತು. "ನಮ್ಮ ಆಂಧ್ರಪ್ರಾಂತ್ಯ—ರಾಜಿನಾಮೆ ಕೊಡಿ" ಎಂದು ಹಳದಿ ಪತಾಕೆಯಲ್ಲಿ ಬರೆದಿತ್ತು. "ರಾಜಾಜೀ ಕೀ ಜೈ" ಎನ್ನುವ ಬದಲು "ಆಂಧ್ರ ರಾಷ್ಟ್ರಕೀ ಜೈ" ಎಂಬ ಕೂಗೇ ವಾತಾವರಣದಲ್ಲಿ ತುಂಬಿತ್ತು. ಸಾಲದುದಕ್ಕೆ ಕುದುಗೋಲಿನ ಮತ್ತು ಸುತ್ತಿಗೆಯ ಚಿತ್ರಗಳಿದ್ದ ದೊಡ್ಡ ದೊಡ್ಡ ರಕ್ತದ ಧ್ವಜಗಳೂ ಅಲ್ಲಲ್ಲಿ ಕೆಲವು ಇದ್ದುವು.

ಜನಸಮೂಹದಲ್ಲಿ

ರೈಲಿನಿಂದ ರಾಜಾಜಿಯವರು ಇಳಿದೊಡನೆ ಜನರು ಅವರನ್ನು ಸುತ್ತುಗಟ್ಟಿದರು. "ನಮ್ಮ ಆಂಧ್ರ ಪ್ರಾಂತ್ಯ—ನಮ್ಮ ಪ್ರಾಂತ್ಯ—ಕೊಡಿ. ಆಂಧ್ರ ಪ್ರಾಂತ್ಯವನ್ನು ನಮಗೆ ಕೊಡಿ" ಎಂದು ಎಲ್ಲರೂ ಘೋಷಿಸಿದರು. ಬಹು ಕಷ್ಟದಿಂದ ಅವರು ಪ್ಲೇಟ್‌ಫೋರ್ಮಿನಿಂದ ಹೊರಗೆ ಬಂದರು. ಹೊರಗೊಂದು ಕಾರು ಕಾದುನಿಂತಿತ್ತು. ಅದರೊಳಗೆ ಹೋಗಲು ಅವರಾಕ್ಷರು ಪ್ರಯತ್ನಿಸಿದರು. ಆದರೆ ಜನರು ಬಿಡಲಿಲ್ಲ. ಕಾರನ್ನು ಹತ್ತುವುದು ಅಸಾಧ್ಯವೆಂದು ಕಂಡೊಡನೆ ರಾಜಾಜಿಯವರು ಕಾಲ್ನಡೆಯಲ್ಲಿ ಹೋಗಲುಪಕ್ರಮಿಸಿದರು. ಅವರು ಮುಂದೆ ಹೋಗುತ್ತಾ, ಜನರು ಕೂಗುತ್ತ ಅವರನ್ನು ಹಿಂಬಾಲಿಸಿದರು. ಕೆಲವರು ಅವರ ಬಲಗೈಯನ್ನು ಹಿಡಿದು ಕುಲುಕಿದರು, ಕೆಲವರು ಎಡಗೈಯನ್ನು ಹಿಡಿದೆಳೆದರು. ಆದರೂ ರಾಜಾಜಿಯವರು ಮೆಲ್ಲನೆ ಮುಂದೆ ನಡೆಯುತ್ತಲೇ ಇದ್ದರು. ಸೂರ್ಯನು ಆಕಾಶದಲ್ಲಿ ಏರುತ್ತಿದ್ದನು; ಮೋಡಗಳು ಮುಚ್ಚುತ್ತಿದ್ದುವು. ಆ ಪ್ರಶಾಂತ ಪ್ರಾತಃಕಾಲದಲ್ಲಿ ರಾಜಾಜಿಯವರು ಮುಂದೆ ಹೋಗುತ್ತಾ ಜನಸಮುದ್ರವು ಸಾಗರದ ತೆರೆಗಳಂತೆ ಉಕ್ಕುತಿತ್ತು. ಅವರನ್ನು ಅನುವೇಷ್ಟಿಸಲು ಮಾಡಿದ ಪೋಲೀಸರ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು.

ಮಾರ್ಗದಲ್ಲಿ ಬಂದೊಡನೆ ರಾಜಾಜಿಯವರು ಕೂತುಕೊಳ್ಳುವಂತೆ ಜನರನ್ನು ಕೇಳಿಕೊಂಡರು. ಅನೇಕ ಮಂದಿ ಕೂತರು; ಉಳಿದವರು "ಆಂಧ್ರ ಪ್ರಾಂತ್ಯ"ವೆಂದು ಗುಲ್ಲನ್ನೆಬ್ಬಿಸಿ ಕೂತವರನ್ನೂ ನಿಲ್ಲುವಂತೆ ಮಾಡಿದರು. ಪುನಃ ಜನರನ್ನು ಕೂತುಕೊಳ್ಳುವಂತೆ ಮಾಡಲು ರಾಜಾಜಿಯವರು ಪ್ರಯತ್ನಿಸಿದರು, ಸಾಧ್ಯವಾಗಲಿಲ್ಲ.

ಅವರ ಸುತ್ತಲೂ ಜನರು ಕೂಡಿದ್ದರು. ಆದರೂ ರಾಜಾಜಿಯವರು ಹಸನ್ಮುಖಿಯಾಗಿದ್ದರು. ಕೋಪದ ಚಿಹ್ನೆಯೊಂದನ್ನೂ ತೋರ್ಪಡಿಸಲಿಲ್ಲ.

ತಾರುಣ್ಯದ ದುಡುಕು.

ಹೀಗೆ ಮುಂದುವರಿಯುತ್ತ ರಾಜಾಜಿಯವರು ಪ್ರವಾಸಿಕರ ಬಂಗಲೆಯ ಬಳಿಗೆ ಬಂದರು. ಆಗ ಒಬ್ಬ ಪೋಲೀಸಿನವನನ್ನು ಅವರು ಕರೆದರು. ಆಯಾಸದಿಂದ ಬಳಲಿದ ಅವರು, ಪೋಲೀಸನಿಗೆ ತನಗೆ ಕೈಕೊಡಲು ಕರೆದರೆಂದು ಕೆಲವರು ಊಹಿಸಿದರು. ಆದರೆ ಅವರು ಆ ಪೋಲೀಸಿನವನಿಗೆ ಬಗ್ಗುವಂತೆ ಹೇಳಿದರು. ಒಡನೆ ಆತನ ಬೆನ್ನನ್ನು ಹತ್ತಿ, ತಟ್ಟನೆ ಹಾರಿ ಬಂಗಲೆಯ ಆವರಣ ಗೋಡೆಯ ಮೇಲೆ ನಿಂತರು. ಕೆಲವು ಕ್ಷಣಗಳ ತನಕ ಜನಸಮೂಹವೆಲ್ಲವೂ ನಿಶ್ಶಬ್ದವಾಯಿತು.

ಬಳಿಕ ರಾಜಾಜಿಯವರ [illegible] ಸನ್ನೆಯಿಂದ ಜನರಿಗೆ ಕೂತುಕೊಳ್ಳುವಂತೆ ಸೂಚಿಸಿ "ಇದು ತರುಣಾವೇಶದ [illegible] ಜನರು ಇದನ್ನು ಜರಗಿಸಿದವರು. ಬಹಳ ಪ್ರಯತ್ನಪಟ್ಟು ನಾನೇ ಇದನ್ನು ಒದಗಿಸಿದೆನು. ಅದೃಷ್ಟವಶಾತ್ ಇಲ್ಲೊಂದು ಪ್ಲೇಟ್‌ಫೋರ್ಮ್ ಇದೆ (ಆವರಣದ ಗೋಡೆ.) ಉತ್ತರ ಕೊಡುವವನಿಗೆ ಉತ್ತಮ ಪ್ಲೇಟ್‌ಫೋರ್ಮಿದು" ಎಂದರು.

ಈ ಮಾತುಗಳನ್ನು ಕೇಳಿ ಜನರೆಲ್ಲರೂ ನಕ್ಕರು.

"ನಾನು ಆಭಾರಿಯಾಗಿದ್ದೇನೆ."

ನಂತರ ಅವರೆಂದರು, "ನಾನು ನಿಮ್ಮ ಪ್ರತಿನಿಧಿ. ನನ್ನ ತಮಿಳು ನಾಡಿನ ಜನದಷ್ಟೇ, ಆಂಧ್ರದೇಶದವರೂ ನನಗೆ [illegible]ವರು. ಇಲ್ಲಿ ಅವರಿಗಿಂತಲೂ ನನಗೆ ನಿಮ್ಮ ಮೇಲೆ ಪ್ರೀತಿ ಹೆಚ್ಚು. ಆದುದರಿಂದ ನನ್ನನ್ನು [illegible] ಪ್ರಾರ್ಥಿಸುವೆ."

"ನಿಮ್ಮನ್ನು ಪೀಡಿಸಬೇಕೆಂಬ ಇಚ್ಛೆಯೇ ನಮಗಿಲ್ಲ. ಅದು ನಮ್ಮ ಇಂಗಿತವಲ್ಲ." ಇಡೀ ಸಭೆಯು ಮುಕ್ತಕಂಠದಿಂದ ಕೂಗಿತು.

ಪ್ರತಿಕೂಲವಲ್ಲ.

"ನಾಳಿನ ಪತ್ರಿಕೆಗಳಲ್ಲಿ ನಾನು ಇಲ್ಲಿ ಈ ಪ್ರತಿಕೂಲ ಪ್ರದರ್ಶನಗಳನ್ನು ಯಾವ ರೀತಿಯಲ್ಲಿ ಎದುರಾಯಿಸಿದೆನೆಂಬ ವಾರ್ತೆಯು ಅಚ್ಚಾಗುವುದು. ಆಗ ನೀವೆಲ್ಲರೂ ನನಗೆ ಪ್ರತಿಕೂಲವಾಗಿರದೆ, ನಿಮ್ಮನ್ನು ಒಪ್ಪಿಕೊಳ್ಳಲು ನಾನು ಬಂದವನೆಂದು ನೀವು ಎದೆ ತಟ್ಟಿ ಹೇಳಬಲ್ಲಿರಾ?"

"ಅಹುದು! ಅಹುದು! ಅಹುದು!"

ಆಂಧ್ರ ಪ್ರಾಂತ ನಿರ್ಮಾಣದ ಕುರಿತು ಆದ ನಿರ್ಣಯವನ್ನು ಸೆಕ್ರೆಟರಿ ಒಫ್ ಸ್ಟೇಟಿಗೆ ಕಳುಹಿಸುವಾಗ ಸರಕಾರವು ತನ್ನ ಅನುಮೋದನೆಯನ್ನು ಕೊಟ್ಟಿರುವುದೇ ಎಂಬುದಾಗಿ ಕೆಲವರು ಪ್ರಶ್ನಿಸಿದರು. ಹೌದೆಂದರು ರಾಜಾಜಿಯವರು.

"ಹಾಗಾದರೆ ಅದನ್ನೇಕೆ ನೀವು ಪ್ರಕಟಿಸಲಿಲ್ಲ?" ಎಂದೊಬ್ಬ ತರುಣನ ನಂತರದ ಪ್ರಶ್ನೆ.

"ನಾನು ನಿನಗೊಂದು ಪತ್ರವನ್ನು ಬರೆದರೆ, ನಿನ್ನ ಅನುಮತಿಯಿಲ್ಲದೆ ಪ್ರಕಟಿಸಲಿಕ್ಕೆ ಒಫ್ ಸ್ಟೇಟಿನವರ ಒಪ್ಪಿಗೆಯಿಲ್ಲದೆ ಯಾವುದನ್ನೂ ಪ್ರಕಟಿಸಲು ನನಗೆ ಸಾಧ್ಯವಿಲ್ಲ."

"ನೀವು ಹಾಗೆ ಮಾಡಿರುವಿರಾದರೆ, ಖಂಡಿತವಾಗಿಯೂ ನೀವು ಜಾಹೀರುಪಡಿಸುತ್ತಿದ್ದಿರಿ" ಇನ್ನೊಬ್ಬ ತರುಣನೆಂದನು.

"ತನ್ನ ಪಾತಿವ್ರತ್ಯದ ಕುರಿತು ಯಾವ ಒಬ್ಬ ಹೆಂಗಸೂ ಕೊಚ್ಚುವುದಿಲ್ಲ" ಎಂದೇ ರಾಜಾಜಿಯವರ ಆಗಿನ ಉತ್ತರ. ಈ ಮಾತನ್ನು ಕೇಳಿ ಜನರೆಲ್ಲರೂ ಪುನಃ ನಕ್ಕರು.

"ಹೆರ್ವೆಲ್ ರಿಪೋರ್ಟಿನ ಮಾತೇನು?" ಇನ್ನೊಂದು ಪ್ರಶ್ನೆ ನಡೆಯಿತು.

"ಅದು ವಾಸ್ತವವಾದುದರಿಂದಲೇ ನಾನದನ್ನು ಅಂಗೀಕರಿಸುವೆನು."

"ಹೆರ್ವೆಲ್ ರಿಪೋರ್ಟನ್ನು ಹೊರಗೆ ತಳ್ಳಿ!" ಜನರೆಲ್ಲರೂ ಕೂಗಿದರು.

ಆದರೂ ರಾಜಾಜಿಯವರು ನಿಶ್ಚಲವಾಗಿ ಆ ಗೋಡೆಯ ಮೇಲೆ ನಿಂತಿದ್ದರು. ತಮ್ಮ ಕೂಗಿನಿಂದ ಅವರ ಮನೋವೃತ್ತಿಯ ಮೇಲೆ ಏನಾದರೂ ಪರಿಣಾಮವಾಗದುದನ್ನು ಕಂಡು, ತೆಗಳಲು ಬಂದ ಜನರು ತಲೆದೂಗಿ ಅವರ ಮಾತುಗಳನ್ನು ಕೇಳುತ್ತ ನಿಂತರು.

"ಯಾವ ರಿಪೋರ್ಟನ್ನಾದರೂ ಹೊರತಳ್ಳಲು ಜನಸಂದಣಿಗೆ ಸಾಧ್ಯವಿಲ್ಲ. ಜನಸಂದಣಿಗೆ ಒಂದು ದೇಶವನ್ನು ಆಳಲು ಆಗುವಂತಿಲ್ಲ. ಆದುದರಿಂದ ಇಂತಹ ನಿಮ್ಮ ಪ್ರತಿಕೂಲ ಪ್ರದರ್ಶನಗಳು ಏನೂ ಫಲಕಾರಿಯಾಗುವಂತಿಲ್ಲ. ನೀವಿನ್ನು ನಿಮ್ಮ ನಿಮ್ಮ ಮನೆಗಳಿಗೆ ತೆರಳುವುದುತ್ತಮ." ಎಂದು ನಂತರ ರಾಜಾಜಿಯವರು ಹೇಳಿ ಗೋಡೆಯ ಮೇಲಿಂದ ಕೆಳಗಿಳಿದರು. ಜನರೂ ಏನೊಂದು ಗುಲ್ಲನ್ನೆಬ್ಬಿಸದೆ ಒಬ್ಬೊಬ್ಬರಾಗಿ ಗೃಹಾಭಿಮುಖವಾಗಿ ಹೊರಟರು!

THE

Bank of Mangalore Ltd.,

MANGALORE

ESTD 1931

Branches—

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
"	6 "	4 "
	12 "	[illegible]
	24 & upwards	5½%

Interest Payable Quarterly

Saving Bank deposit 3½ on daily balances.

All kinds of banking business transacted

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದ ಬಲಹೀನತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದ ವಿಶ್ವ ಸಮಾಜ, ಪೆರಿದೇಪಿ

P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಳಿಕಟ್ಟಾ ಬಜಾರ್, ಮಂಗಳೂರು.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅತಿಕ್ಷೀಣವಾಗುತ್ತದೆ. ಬಹಳ ಬಡತನದ ಕೀಳ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. [illegible] ಪೂರ್ಣವಾಗಿದ್ದು [illegible] ಗರ್ಭಧಾರಣ [illegible] [illegible] ಎಲ್. ಸಿ. ಪಿ. ಎಸ್. [illegible] ಗರ್ಭಧಾರಣವೂ ಆಗುವುದಿಲ್ಲ. [illegible] ಕ್ರಯ ರೂ. [illegible]

ವಿಳಾಸ — ಸಂಜೀವಿನೀ ಔಷಧಾಲಯ ಮು. ಪೋ. ವಿರಜ. (S. M. L.

DIAMONDS! DIAMONDS! BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಏವರ್ಸ್ಟ್ರಿಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುವದು.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾಯಿಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು

ನಿಮಗೆ ಬೇಕಾದುದನ್ನು ಏನೊಂದೂ ಸಂಕೋಚವಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬಿಳ್ತ ಗುಡ್ಡ ಮು.	1 —14	1 —14
ರಾಶಿ ಅಕ್ಕಿ ..	3— 8	4— 0
ಸುಗ್ಗಿ .	4— 0	4— 3
ಗುಡ್ಡ ...	4—10	4—10
ಊರ ಅಪ್ಪಲ್ ಬೆಳ್ತಿಗೆ ..	4— 7	4— 7
ರಂಗೂನು ಬೆ. ಗೋ. ೧ಕ್ಕೆ .	7 — 2	7— 4
ಎಲ್ಲೂರು ಬೆ. ಮು. ೧ಕ್ಕೆ .	3—14	4— 0
ಗೋಧಿ ಗೋಣಿ ೧ಕ್ಕೆ ...	13— 0	14— 8
ತೊಗರಿ ಗೋಣಿ ೧ಕ್ಕೆ ...	11— 8	18— 8
ಹುರುಳಿ ಗೋಣಿ ೧ಕ್ಕೆ ...	6— 0	6— 2
ಕಡಲೆ ಗೋಣಿ ೧ಕ್ಕೆ ..	9 — 8	10 — 8
ಕಡಗಂಬೇಳೆ ಗೋಣಿ ೧ಕ್ಕೆ ..	17— 8	18— 0
ಉದ್ದು ಗೋಣಿ ೧ಕ್ಕೆ ...	9— 0	9 — 8
ಹೆಸರು ಗೋಣಿ ೧ಕ್ಕೆ ...	9—12	10— 8
ಊರುಬೆಲ್ಲ ಖಂಡಿ ೧ಕ್ಕೆ .	36— 0	40— 0
ಉಪ್ಪು ಗೋಣಿ ೧ಕ್ಕೆ ...	4— 8	5— 4
ಕೊಪ್ಪರಿ ಖಂಡಿ ೧ಕ್ಕೆ ..	46 — 8	46— 8
ಎಳ್ಳೆಂಡಿ ಖಂಡಿ ೧ಕ್ಕೆ ..	25 —	26 — 0
ತೆಂಗಿನ ಎಣ್ಣೆ ಮುಡಿ ೧ಕ್ಕೆ. .	3 — 5	3— 6
ಎಳ್ಳೆಣ್ಣೆ ಮುಡಿ ೧ಕ್ಕೆ ...	6— c	7— 0
ಚಿಮಿಣಿ ಎಣ್ಣೆ ಪಟ್ಟಿಗೆ ೧ಕ್ಕೆ. .	6— 5	7— 5
ಮೋರಿಸ ಸಕ್ಕರೆ ಮು ೧ಕ್ಕೆ...	2— 13	2 —14
ಮೆಣಸು ...	4— 8	6— 0
ಸಾಸಿವೆ ಮುಡಿ ೧ಕ್ಕೆ ...	5 — 8	6— 8
ಶಾಬುಮಣಸ್ಸು ಪ ಪೆಟ್ಟಿಗೆ .	16 — 0	17— 8
ಯಾಲಕ್ಕಿ ಬೀಜ ಮಣ ೧ಕ್ಕೆ.	80— 0	85— o
ಗೇರುಬೀಜ ಮು. ೧ಕ್ಕೆ ..	3—14	3—15
ಕಬ್ಬಿಣ ಖಂಡಿ ೧ಕ್ಕೆ ...	50— o	55— 0
ತಾಂಬ್ರತಗಡು ಮ ೧ಕ್ಕೆ..	14— 12	15— 0
ತಾಂಬ್ರಪಾತ್ರಗಳು ಮ ೧ಕ್ಕೆ	14— 8	15— o
ಚೀನಬೆಳ್ಳಿ ಸೇರು ೧ಕ್ಕೆ .	13— 8	14— 0
ಹಿತ್ತಾಳೆ ತಗಡು ಮ ೧ಕ್ಕೆ .	12— 0	12— o
ಸತುವು ೧ಕ್ಕೆ .	22— 8	23— 0
ಮುಣಸ ಹುಳಿ ಖಂಡಿ ೧ಕ್ಕೆ	40— o	45— 8
ನೇಟಿವ್ ಕಾಫಿ ಖಂಡಿ ೧ಕ್ಕೆ	140— o	148— 0
ಫಿಟೇರಿ ಕಾಫಿ ಖಂಡಿ ೧ಕ್ಕೆ	188— o	198— 0
ಪುಡಿಕೇರಿ ಏಲಕ್ಕಿ ಮಣ	35— o	39 — 0

ಡೋಂಗರೆಯ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಬಹುಧಾನ್ಯ ಸಂವತ್ಸರದ ಶ್ರಾವಣ ಶು। ೪ ಶನಿವಾರದಿಂದ ಶ್ರಾವಣ ಶು ೧೦ ಶುಕ್ರವಾರದ ವರೆಗಿನ ಪಂಚಾಂಗ (೧೬ನೇಯ ಕಲಾಃ ಟಕ ಛಟಿ

ದಿ	ವಾ	ತಿ	ಘ ಗ	ನಕ್ಷತ್ರ	ಘ ಗ		
30	ಶನಿ	೨	೪೬	ಪುಬ್ಬಾ	೨೫।	೧೪	
31	ರವಿ	೩	೪೩।	ಉತ್ತರಾ	೨೪	೧೫	
1	ಸೋ	೪	೪೧	ಹಸ್ತಾ	೨೩॥	೧೬	
2	ಕುಜ	೫	೬೦॥	ಚಿತ್ತಾ	೨೪	೧೭	
3	ಬುಧ	೬	೬೦॥	ಸ್ವಾತೀ	೨೫॥	೧೮	
4	ಗುರು	೭	೪೨॥	ವಿಶಾಖಾ	೨೮।	೧೯	
5	ಶುಕ್ರ	೮	೬೫॥	ಅನುರಾಧ	೩೩।	೨೦	

THE PIE-MONEY BANK LTD,

Maidan Road MANGALORE

Undertakes all kinds of Banking Business Current account at 2½per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... d ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K R. GURU**, *Managing Director*

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅನೇಕ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-0

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ
ಬೆಲೆ 0-8-0, 0-4-0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇಂತ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್.
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

'DILROZ' Redg

'Dil Roz' is a sure cure for Oriental sores local sores, all kinds of deep rooted sores, skin eruptions Pimples, Eczema, Ringworm, Sinus Fistula axillary Abscess

There is no need of dressing the wounds, nor are baths prohibited.

Price Rs. 2 Postage extra.

TAHIR DIN,
Anarkali, LAHORE.

ರಾಜಾಜಿಯವರ ಅಪ್ರತಿಮ ಜಯ!

ಬೇಲಿಯೇ ಹೊಲವನ್ನು ನುಂಗಿದರೆ? ತೆಗಳಲು ಬಂದವರು ತಲೆದೂಗಿ ನಿಂತರು ಜನಸಮೂಹದಲ್ಲಿ ತಾರುಣ್ಯದ ದುಡುಕು. ಪ್ರತಿಕೂಲವಲ್ಲ.

ಬೇಲಿಯೇ ಹೊಲವನ್ನು ನುಂಗಿದರೆ?

ಎಂದು ಮಸುಲೀಪಟಾಮಿನಲ್ಲಿ ಮದ್ರಾಸಿನ ಪ್ರಧಾನ ಮಾತ್ಯರಿಗೆ ಒಪ್ಪಿಸಿದ ಅದೊಂದು ಬಿನ್ನವತ್ತಳೆಯಲ್ಲಿ ಬರೆದಿತ್ತು ಈ ಭಿನ್ನಹ ಪತ್ರವನ್ನು ಒಪ್ಪಿಸಿದವರು ಕೈಕಲೂರು ತಾಲೂಕಿನ ರೈತರು

"ಬೇಲಿಯಾರು?" ರಾಜಾಜಿಯವರು ವಿಚಾರಿಸಿದರು

"ಬೇಲಿಯು ಸರಕಾರವೆಂದು ಅವರ ಅಭಿಪ್ರಾಯವು" ಪಟ್ಟಾಭಿಯವರು ವಿವರಿಸಿದರು.

"ತನ್ನನ್ನು ಹೊಂದಿಕೊಂಡಿದ್ದವರನ್ನು ನಾಶಪಡಿಸುವ ಧನಿಯ ಕುರಿತು ಈ ಮಾತುಗಳು ಸಮಂಜಸವೇ ಸರಿ ಆದರೆ ಈ ಪ್ರಸಂಗದಲ್ಲಿ ಈ ಗಾದೆಯ ಪ್ರಯೋಗವು ಸಂದರ್ಭೋಚಿತವೆಂದು ತೋರುವುದಿಲ್ಲ" ಎಂದು ಸುರಿ ರಾಜಾಜಿಯವರು ಪಟ್ಟಾಭಿಯವರ ಮುಖವನ್ನು ದಿಟ್ಟಿಸಿ ನೋಡಿದರು ಇದಕ್ಕೆ ತನ್ನ ಅನುಮೋದನೆಯನ್ನು ಸೂಚಿಸಲೋ ಎಂಬಂತೆ ಅವರು ತಲೆದೂಗಿ ಮುಗುಳ್ನಕ್ಕರು.

ತೆಗಳಲು ಬಂದವರು ತಲೆದೂಗಿ ನಿಂತರು

ರಾಜಾಜಿಯವರ ಅಪ್ರತಿಮ ಜಯ!

ಗುಂ[illegible]ನಲ್ಲಿ ರಾಜಾಜಿಯವರಿಗೆ ದೊರೆತ ಸ್ವಾಗತವು ಚರಿತ್ರಾರ್ಹವಾದುದ[illegible] ಸಾವಿರಾರು ಮಂದಿ ಪ್ರಧಾನ ಅಮಾತ್ಯರ ಆಗಮನವನ್ನು ಪ್ರತೀಕ್ಷಿಸುತ್ತ ರೈಲ್ವೇ ಸ್ಟೇಷನಿನಲ್ಲಿ ಕಿಕ್ಕಿರಿದು ನೆರೆದಿದ್ದರು ಅಲ್ಲಲ್ಲಿ ಕಪ್ಪು ಕನ್ನೆ[illegible]ಗಳೂ ಹಳದಿ ಪತಾಕೆಗಳ[illegible] ಹಾರಾಡುತ್ತಿದ್ದುವು [illegible] ಬಂದೊಡನೆ ಜನ ಸಮೂಹವು [illegible] "ನಮ್ಮ ಆಂಧ್ರಪ್ರಾಂತ್ಯ—ರಾಜಿನಾಮೆ ಕೊಡಿ" ಎಂದು ಹಳದಿ ಪತಾಕೆಯಲ್ಲಿ ಬರೆದಿತ್ತು "ರಾಜಾಜೀ ಕೀ ಜೈ" ಎನ್ನುವ ಬದಲು "ಆಂಧ್ರ ರಾಷ್ಟ್ರಕೀ ಜೈ" ಎಂಬ ಕೂಗೇ ವಾತಾವರಣದಲ್ಲಿ ತುಂಬಿತ್ತು ಸಾಲದುದಕ್ಕೆ ಕಡುಗೋಲಿನ ಮಟ್ಟು ಸುತ್ತಿಗೆಯ ಚಿತ್ರಗಳಿದ್ದ ದೊಡ್ಡ ದೊಡ್ಡ ರಕ್ತದ ಧ್ವಜಗಳೂ ಅಲ್ಲಲ್ಲಿ ಕೆಲವು ಇದ್ದುವು

ಜನಸಮೂಹದಲ್ಲಿ

ರೈಲಿನಿಂದ ರಾಜಾಜಿಯವರು ಇಳಿದೊಡನೆ ಜನರು ಅವರನ್ನು ಸುತ್ತುಗಟ್ಟಿದರು "ನಮ್ಮ ಆಂಧ್ರ ಪ್ರಾಂತ್ಯ—ನಮ್ಮ ಪ್ರಾಂತ್ಯ—ನಮ್ಮ ಆಂಧ್ರ ಪ್ರಾಂತ್ಯವನ್ನು ನಮಗೆ ಕೊಡಿ" ಎಂದು ಎಲ್ಲರೂ ಘೋಷಿಸಿದರು ಬಹು ಕಷ್ಟದಿಂದ ಅವರು ಪ್ಲೇಟ್‌ಫೋರ್ಮಿನಿಂದ ಹೊರಗೆ ಬಂದರು ಹೊರಗೊಂದು ಕಾರು ಕಾದುನಿಂತಿತ್ತು ಅದರೊಳಗೆ ಹೋಗಲು ಅಮಾತ್ಯರು ಪ್ರಯತ್ನಿಸಿದರು ಆದರೆ ಜನರು ಬಿಡಲಿಲ್ಲ ಕಾರನ್ನು ಹತ್ತುವುದು ಅಸಾಧ್ಯವೆಂದು ಕಂಡೊಡನೆ ರಾಜಾಜಿಯವರು ಕಾಲ್ನಡೆಯಲ್ಲಿ ಹೋಗಲುಪಕ್ರಮಿಸಿದರು. ಅವರು ಮುಂದೆ ಹೋಗುತ್ತಾ, ಜನರು ಕೂಗುತ್ತ ಅವರನ್ನು ಹಿಂಬಾಲಿಸಿದರು ಕೆಲವರು ಅವರ ಬಲಗೈಯನ್ನು ಹಿಡಿದು ಕುಲುಕಿದರು, ಕೆಲವರು ಎಡಗೈಯನ್ನು ಹಿಡಿದೆಳೆದರು. ಆದರೂ ರಾಜಾಜಿಯವರು ಮೆಲ್ಲನೆ ಮುಂದೆ ನಡೆಯುತ್ತಲೇ ಇದ್ದರು ಸೂರ್ಯನು ಆಕಾಶದಲ್ಲಿ ಏರುತ್ತಿದ್ದನು, ಮೋಡಗಳು ಮುಚ್ಚುತ್ತಿದ್ದುವು. ಆ ಪ್ರಶಾಂತ ಪ್ರಾತಃಕಾಲದಲ್ಲಿ ರಾಜಾಜಿಯವರು ಮುಂದೆ ಹೋಗುತ್ತಾ ಜನಸಮ್ಮರ್ದವು ಸಾಗರದ ತೆರೆಗಳಂತೆ ಉಕ್ಕುತಿತ್ತು. ಅವರನ್ನು ಅನುವೇಷ್ಟಿಸಲು ಮಾಡಿದ ಪೋಲೀಸರ ಪ್ರಯತ್ನಗಳೆಲ್ಲ [illegible]

ಮಾರ್ಗದಲ್ಲಿ ಬಂದೊಡನೆ ರಾಜಾಜಿಯವರು ಕೂತುಕೊಳ್ಳುವಂತೆ ಜನರನ್ನು ಕೇಳಿಕೊಂಡರು ಅನೇಕ ಮಂದಿ ಕೂತರು, ಉಳಿದವರು "ಆಂಧ್ರ ಪ್ರಾಂತ್ಯ"ವೆಂದು ಗುಲ್ಲೆಬ್ಬಿಸಿ ಕೂತವರನ್ನೂ ನಿಲ್ಲುವಂತೆ ಮಾಡಿದರು ಪುನಃ ಜನರನ್ನು ಕೂತುಕೊಳ್ಳುವರತೆ ಮಾಡಲು ರಾಜಾಜಿಯವರು ಪ್ರಯತ್ನಿಸಿದರು, ಸಾಧ್ಯವಾಗಲಿಲ್ಲ.

ಅವರ ಸುತ್ತಲೂ ಜನರು ಕೂಡಿದ್ದರು ಆದರೂ ರಾಜಾಜಿಯವರು ಹಸನ್ಮುಖಿಯಾಗಿದ್ದರು ಕೋಪದ ಚಿಹ್ನೆಯೊಂದನ್ನೂ ತೋರ್ಪಡಿಸಲಿಲ್ಲ

ತಾರುಣ್ಯದ ದುಡುಕು

ಹೀಗೆ ಮುಂದುವರಿಯುತ್ತ ರಾಜಾಜಿಯವರು ಪ್ರಯಾಣಿಕರ ಬಂಗಲೆಯ ಬಳಿಗೆ ಬಂದರು ಆಗ ಒಬ್ಬ ಪೋಲೀಸಿನವನನ್ನು ಅವರು ಕರೆದರು ಆಯಾಸದಿಂದ ಬಳಲಿದ ಅವರು ಪೋಲೀಸನಿಗೆ ತನಗೆ ಕೈಕೊಡಲು ಕರೆದರೆಂದು ಕೆಲವರು ಊಹಿಸಿದರು ಆದರೆ ಅವರ [illegible] ಪೋಲೀಸಿನವನಿಗೆ ಬಗು[illegible] ಹೇಳಿದರ[illegible] ಒವನೆ [illegible] ತಟ್ಟನೆ [illegible] ಬಂಗಲೆಯ [illegible] ನೋಡ [illegible] ನಂತರ [illegible] ಕ್ಷಣಗಳ [illegible] ಸವ[illegible]

ಒ[illegible] ರಾಜಾಜಿಯ[illegible] ಜನರಿಗೆ ಕೂತ[illegible] ಇದು [illegible] ಜರಗಿದ [illegible] ಇದನ್ನು ಜರಗಿಸಿದ[illegible] ಬಹಳ [illegible] ಪಟ್ಟ [illegible] ಇದನ್ನು ಜರಗಿ[illegible] ಅದೃಷ್ಟವಶ[illegible] [illegible] (ತವರಣದ ಗೋಡೆ) [illegible] ಎಂದರ

ಈ ಮಾತುಗಳನ್ನು ಕೇಳಿ ಜನರೆಲ್ಲರೂ ನಕ್ಕರು

'ನಾನು ಅಪರಾಧಿಯ[illegible]

[illegible] ಅವರೆ [illegible] ನನ್ನ [illegible] ಜನ್ಮ[illegible] ದೇಶದವರೂ [illegible] ವೇಳೆ [illegible] ಆದುದರಿಂದ ನನ್ನನ್ನು [illegible] ಪುರ ಸಾರ್ಥ[illegible]

'ನಿಮ್ಮನ್ನು [illegible] ನವಗಿಲ್ಲ ಅದು ನಮ್ಮ ಇಂಗಿತವಲ್ಲ ಇಡೀ ಸಭೆಯು [illegible] ದ ಕೂಗಿತು

ಪ್ರತಿಕೂಲವಲ್ಲ

"ನಾಳಿನ ಪತ್ರಿಕೆಗಳಲ್ಲಿ ನಾನು ಇಲ್ಲಿಯ ಪ್ರತಿಕೂಲ ಪ್ರದರ್ಶನಗಳನ್ನು ಯಾವ ರೀತಿಯಲ್ಲಿ ಎದುರಾಯಿಸಿದೆನೆಂಬ ವಾರ್ತೆಯು ಅಚ್ಚಾಗುವುದು ಆಗ ನೀವೆಲ್ಲರೂ ನನಗೆ ಪ್ರತಿಕೂಲವಾಗಿರದೆ, ನಿಮ್ಮನ್ನು ಅಪ್ಪಿಕೊಳ್ಳಲು ನಾನು ಬಂದವನೆಂದು ನೀವು ಎದೆ ತಟ್ಟಿ ಹೇಳಬಲ್ಲಿರಾ?"

"ಅಹುದು! ಅಹುದು!! ಅಹುದು!!!"

ಆಂಧ್ರ ಪ್ರಾಂತ ನಿರ್ಮಾಣದ ಕುರಿತು ಆದ ನಿರ್ಣಯವನ್ನು ಸೆಕ್ರಟರಿ ಒಫ್ ಸ್ಟೇಟಿಗೆ ಕಳುಹಿಸುವಾಗ ಸರಕಾರವು ತನ್ನ ಅನುಮೋದನೆಯನ್ನು ಕೊಟ್ಟಿರುವುದೇ ಎಂಬುದಾಗಿ ಕೆಲವರು ಪ್ರಶ್ನಿಸಿದರು ಹೌದೆಂದರು ರಾಜಾಜಿಯವರು.

"ಹಾಗಾದರೆ ಅವನ್ನೇಕೆ ನೀವು ಪ್ರಕಟಿಸಲಿಲ್ಲ?" ಎಂದೊಬ್ಬ ತರುಣನ ನಂತರದ ಪ್ರಶ್ನೆ

"ನಾನು ನಿನಗೊಂದು ಪತ್ರವನ್ನು ಬರೆದರೆ ನಿನ್ನ ಅನುಮತಿಯಿಲ್ಲದೆ ಪ್ರಕಟಿಸಲಿಕ್ಕೆ [illegible] ಒಫ್ ಸ್ಟೇಟಿನವರ ಒಪ್ಪಿಗೆಯಿಲ್ಲದೆ ಯಾವುದನ್ನೂ ಪ್ರಕಟಿಸಲು ನಮಗೆ ಸಾಧ್ಯವಿಲ್ಲ"

"ನೀವು ಹಾಗೆ ಮಾಡಿರುವಿರಾದರೆ, ಖಂಡಿತವಾಗಿಯೂ ನೀವು ಜಾಸ್ತಿಯುಪಡಿಸುತಿದ್ದಿರಿ" ಇನ್ನೊಬ್ಬ ತರುಣನೆಂದನು

"ತನ್ನ ವ್ಯಾಕ್ತಿವೃಕ್ಷದ ಕುರಿತು ಯಾವ ಕೊಬ್ಬ ಹೆಂಗಸೂ ಕೊಚ್ಚುವುದಿಲ್ಲ" ಎಂದೇ ರಾಜಾಜಿಯವರ ಆಗಿನ ಉತ್ತರ ಈ ಮಾತನ್ನು ಕೇಳಿ ಜನರೆಲ್ಲರೂ ಪುನಃ ನಕ್ಕರು

"ಹರ್ವೆಲ್ ರಿಪೋರ್ಟಿನ ಮಾತೇನು?" ಇನ್ನೊಂದು ಪ್ರಶ್ನೆ ನಡೆಯಿತು

"ಅದು ವಾಸ್ತವವಾದುದರಿಂದಲೇ ನಾನದನ್ನು ಅಂಗೀಕರಿಸುವೆನು"

"ಹರ್ವೆಲ್ ರಿಪೋರ್ಟನ್ನು ಹೊರಗೆ ತಳ್ಳಿ!" ಜನರೆಲ್ಲರೂ ಕೂಗಿದರು

ಆದರೂ ರಾಜಾಜಿಯವರು ನಿಶ್ಚಲವಾಗಿ ಆ ಗೋಡೆಯ ಮೇಲೆ ನಿಂತಿದ್ದರು ತಮ್ಮ ಕೂಗಿನಿಂದ ಅವರ ಮನೋವೃತ್ತಿಯ ಮೇಲೆ ಏನಾದರೂ ಪರಿಣಾಮವಾಗದುದನ್ನು ಕಂಡು ತೆಗಳಲು ಬಂದ ಜನರು ತಲೆದೂಗಿ ಅವರ ಮಾತುಗಳನ್ನು ಕೇಳುತ್ತ ನಿಂತರು

"ಯಾವ ರಿಪೋರ್ಟನ್ನಾದರೂ ಹೊರ ತಳ್ಳಲು ಜನಸಂದಣಿಗೆ ಸಾಧ್ಯವಿಲ್ಲ. ಜನಸಂದಣಿಗೆ ಒಂದು ದೇಶವನ್ನು ಆಳಲು ಆಗುವಂತಿಲ್ಲ. ಆದುದರಿಂದ ಇಂತಹ ನಿಮ್ಮ ಪ್ರತಿಕೂಲ ಪ್ರದರ್ಶನಗಳು ಏನೂ ಫಲಕಾರಿಯಾಗವೆಂತಿಲ್ಲ ನೀವಿನ್ನು ನಿಮ್ಮ ನಿಮ್ಮ ಮನೆಗಳಿಗೆ ತೆರಳುವುದುತ್ತಮ." ಎಂದು ನಂತರ ರಾಜಾಜಿಯವರು ಹೇಳಿ ಗೋಡೆಯ ಮೇಲಿಂದ ಕೆಳಗಿಳಿದರು ಜನರೂ ಏನೊಂದು ಗುಲ್ಲೆಬ್ಬಿಸದೆ ಒಬ್ಬೊಬ್ಬರಾಗಿ ಗೃಹಾಭಿಮುಖರಾಗಿ ಹೊರಟರು!

THE

Bank of Mangalore Ltd.,

MANGALORE

ESTD 1931

Branches -

Panemangalore Mudabidri & Padubidri.

Fixed Deposits will be received at following rates of interest

For 3 months	3½%
6	4%
12	[illegible]
24 & upwards	5½%

Interest Payable Quarterly

Saving Bank deposit 3½ on daily balances.

All kinds of banking business transacted

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದ ಬಲಹೀನತೆ, ನಿಸ್ಸತ್ವ, ವೀರ್ಯ ನಷ್ಟ [illegible] ಅನೇಕ [illegible] ಗಳನ್ನು [illegible] ಉಂಟುಮಾಡಿ ಸಂಭೋಗ ಶಕ್ತಿಯನ್ನು [illegible] ವುದರಲ್ಲಿ ಅಮೋಘವಾದದ್ದು ಚರ್ಮರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯ [illegible] ಮಾಡಲು 2 ಡಬ್ಬಿಗಳ ಸಾಕು 20 ದಿವಸಕ್ಕೆ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ. ಅಂಡ್ ಕೋ,
ಆಯುರ್ವೇದಿಕ ಸಮಾಜ, ಪರಿದೇಪಿ
P O Peridepi (ನೆಲ್ಲೂರು ಡಿ)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಂಟಿನ್,
ಉಪಯೋಗಿಸಿರಿ
ಕೆ ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್ ಮಂಗಳೂರು

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ [illegible] ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. [illegible] ಹೆಚ್ಚು ಮಕ್ಕಳಾಗುವುದರಿಂದ ದುಃಖಿತರಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು [illegible] ಸೇವನೆಯಿಂದ ಮುಟ್ಟಾಗುವಿಕೆಯು ನೇರವಾದಂತೆ [illegible] ಪೂರ್ಣವಾಗಿದ್ದ [illegible] ಗರ್ಭಧಾರಣೆ ಬಂದಾಗುವುದು [illegible] ಮಾಡಿದರೆ ಸುದಾಗುವುದಿಲ್ಲ [illegible] ಎಲ್ ಸಿ ಪಿ ಎಸ್, ಕೆಳವಾದೂತಿನು, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. [illegible] ವಿ. ಪಿ. ಅಂಚೆ ಖ.

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ವಿರಡಿ, (S M.C.

ಪುರುಷರಲ್ಲಿ ಪರದಾ ಕ್ರಮವಿರುವ ದೇಶ!

ಆಫ್ರಿಕಾ ಖಂಡದ ಶಾಹಾರಾ ಮರುಳುಪ್ರದೇಶವಿರುವುದಷ್ಟೆ. ಈ ಪ್ರದೇಶವು ಮಾನವಜಾತಿ ಮೂಲಸ್ಥಳವೆಂದು ಪರಿಗಣಿಸಲ್ಪಟ್ಟಿರುತ್ತದೆ. ಅಲ್ಲಿನ ಒಂದು ಕಡೆಯಲ್ಲಿ ಪುರುಷರು ಪರದಾವನ್ನಾಚರಿಸುವ ಗ್ರೋವಳ ವಿಜಾತಿ ಮನುಷ್ಯ ವರ್ಗವು ಇಂದಿಗೂ ವಾಸವಾಗಿರುವುದು. ಪುರುಷರು ಅಲ್ಲಿ ತಲೆಯ ಮೇಲೆ ಮುಸುಕು ಹಾಕಿಕೊಂಡಿರುವಾಗ—ಈ ಮುಸುಕನ್ನು ಅವರು ಮಲಗುವಾಗಲೂ, ಉಣ್ಣು ತಿನ್ನುವಾಗಲೂ ತೆಗೆಯುವ ಕ್ರಮವಿರುವುದಿಲ್ಲ—ಅವರ ಸ್ತ್ರೀಯರು ಮುಸುಕಿಲ್ಲದೆ ತಿರುಗಾಡುತಿದ್ದಾರೆ. ಪುರುಷರು ಅವರ ಮಡದಿಯರಿಗೂ ಕೂಡ ತಮ್ಮ ಮುಖವನ್ನು ತೋರಿಸಬಾರದಾಗಿ ಅಲ್ಲಿ ನಿರ್ಬಂಧವಿರುತ್ತದೆ.

★

ಮಿಯೋಸ್ವದಲ್ಲೆಲ್ಲ ಪ್ರಂಚು ಮಾಸಿಕದಲ್ಲಿ ಇದೊಂದು ನಿರ್ಜನ ಪ್ರದೇಶವಾಗಿರುವ ಸ್ವತಃ ಆಫ್ರಿಕಾದ 'ಗಾರ್ಡನ್ ಒಫ್ ಏಡನ್' ಎಂಬ ಪ್ರಸಿದ್ಧಿಯನ್ನು ಪಡೆದ ಸ್ಥಳದಲ್ಲಿ ಅತ್ಯಂತ ಗೌರವದಿಂದ ಮೆರೆಯುತ್ತಿದ್ದವರ ಅನುಯಾಯಿಗಳೆಂದು ಭಾವಿಸಲ್ಪಟ್ಟು 'ಟೊರೆಗ್' ವರ್ಗದವರೆಂದು ಈ ವಿಜಾತಿಗೆ ನಾಮಾಂಕಿತವಿದೆ. ಅತ್ಯಂತ ಪುರಾತನ ಕಾಲದಲ್ಲಿ ಈಜಿಪ್ತ, ರೋಮನ್ ಮತ್ತು ಕಾರ್ಥೇಜ್ ಮಹಾ ಪ್ರಭುತ್ವಗಳೊಡನೆ ಕಾದಾಡಿದ ಸಾಹಸೀ ಜನರ ವರ್ಗದವರು ಇವರು. ಒಂದಾನೊಂದು ದಿನ ಫಲವತ್ತಾದ ಅವರ ಈ ಪ್ರದೇಶವೂ ಕಾಲಕ್ರಮೇಣ ಒಣಮರುಳು ಕಾಡಾಗಿ ಮಾರ್ಪಟ್ಟರೂ, ಟೊರೆಗ್ಗರು ತಮ್ಮ ಮೂಲಸ್ಥಳವನ್ನು ತ್ಯಜಿಸದೆ, ಅಲ್ಲಿ ನೆಲೆಸುತ್ತವರಾದರು. ಶಾಹರಾ ಮರುಳು ಭೂಮಿಯ ಕಠಿಣ ತರದ ಶಿಖಿಯಿಂದ ಅತ್ಯಂತ ಸುಸಂಸ್ಕೃತರೂ, ನಾಗರೀಕರೂ ಆಗಿದ್ದ ಈ ಜನವರ್ಗವು, ಗ್ರೋವಳ ವರ್ಗಕ್ಕೆ ಮಾರ್ಪಡಿಸಲ್ಪಟ್ಟಿತು. ಶಹಾರಾ ಮರುಳು ಕಾಡಿನಲ್ಲಿ ನೀರಿದ್ದ ಕೆಲವು ಸ್ಥಳಗಳನ್ನು ಹುಡುಕಾಡುತ್ತ ಸಂಚಾರ ಮಾಡಿ ಜೀವಿಸುವುದೇ ಅವರ ಕ್ರಮವಾಗಿರುತ್ತದೆ.

★

ಅವರಲ್ಲಿ ಸ್ತ್ರೀಯರು ಪ್ರಬಲರು

ಈ ಜನವರ್ಗಕ್ಕೆ ಆಧುನಿಕ ನಾಗರೀಕತೆಯ ಸಂಪರ್ಕವೆ ಆಗದೆ, ಅವರು ವಿಚಿತ್ರ ಕ್ರಮಗಳನ್ನಾಚರಿಸಿ ಜೀವಿಸುತ್ತಿದ್ದಾರೆ. ಸ್ತ್ರೀಯರಿಂದ ಆಳಲ್ಪಟ್ಟ ಜನವರ್ಗವೆಂದರೆ ಜಗತ್ತಿನಲ್ಲಿ ಇದೊಂದೆ. ಅವರಲ್ಲಿ ಸ್ತ್ರೀಯರೆ ಸರ್ವಾಧಿಕಾರಿಗಳು. ಒಂದು ಉಸಿರು ಕೂಡ ಎದುರಾಡದೆ, ಈ ಟೊರೆಗ್ ವರ್ಗದ ಜನರು ಅವರ ಸ್ತ್ರೀಯರಿಗೆ ವಿಧೇಯರಾಗಿರಬೇಕು. ಟೊರೆಗ್ ಪುರುಷರು ಈ ಜಗತ್ತಿನ ಯಾವತ್ತು ಜೀವಿತ ವಸ್ತುವಿಗೆ ತಮ್ಮ ಮುಖವನ್ನು ತೋರಿಸಲೆ ಬಾರದು. ಅವರು ತಮ್ಮ ಮೂಗಿನ ತುದಿಯವರೆಗೆ ಮುಸುಕು ಹಾಕಿಕೊಂಡಿರಬೇಕು, ತಲೆಗೆ ಒಂದು ರುಮಾಲನ್ನು ಸುತ್ತಿಕೊಂಡಿರಬೇಕು. ಕೆಲಸ ಮಾಡುವಾಗವಾಗಲಿ ವಿಶ್ರಮಿಸುತ್ತಿರುವಾಗಲಿ, ಅವರು ಈ ಮುಸುಕನ್ನು ತೆಗೆಯಬಾರದಾಗಿ ನಿರ್ಬಂಧವಿದೆ. [illegible] ಅವರು ಮುಖವನ್ನು ಮರೆಮಾಸಿಯೆ ಇರಬೇಕು. ಯಾವತ್ತು ಪುರುಷರಾಗಲಿ, ಅವರ ಮಡದಿಯರಾಗಲಿ, ಅವರ ಮುಖವನ್ನು ನೋಡಬಾರದಾಗಿ, ಕಠಿಣವಾದ ಕಟ್ಟಳೆಯಿದೆ.

★

ಪುರುಷರ ಮುಖಗಳನ್ನು ನೋಡಿದೆ ಇಲ್ಲ

ತಮ್ಮ ಪತಿಯರ ಮುಖವನ್ನು ನೋಡುವುದರ ಹೊರತು ಟೊರೆಗ್ ಸ್ತ್ರೀಯರಿಗೆ ಇತರ ಎಲ್ಲಾ ವಿಚಾರಗಳಲ್ಲಿ ನಿರ್ಬಂಧರಹಿತ ಸ್ವಾತಂತ್ರ್ಯವು ಇರುವುದು. ಪತಿಯು ಘೋರವಾದ ನಿದ್ದೆಯಲ್ಲಿದ್ದಾಗ್ಯೂ ಕೂಡ ಆತನ ಮುಖದ ಮೇಲಿನ ಮುಸುಕನ್ನು ತೆಗೆದು ಆತನ ಮುಖವನ್ನು ನೋಡಬಾರದಾಗಿ ಬಲವಾದ ನಿರ್ಬಂಧಗಳಿವೆ. ಈ ಪದ್ಧತಿಯು ಒಂದು ಅಂಧಶ್ರದ್ಧೆಯಿಂದ ಬೆಳೆದು ಬಂದುದಾಗಿರುವುದರಿಂದ, ಅಷ್ಟು ಸಾಹಸದ ಕೃತ್ಯವನ್ನು ಮಾಡಲು ಯಾವ ಪತ್ನಿಗಾದರೂ ಧೈರ್ಯ ಬರದು. ಟೊರೆಗ್ ಸ್ತ್ರೀಯರ ಮೇಲಿರುವುದು ಇದೇ ಒಂದು ನಿರ್ಬಂಧವಾಗಿರುತ್ತದೆ. ಜಗತ್ತಿನ ಇತರ ಕಡೆಗಳಲ್ಲಿ ರೂಢಿಯಲ್ಲಿರುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವು ಅಲ್ಲಿನ ಸ್ತ್ರೀಯರಿಗೆ ಇರುವುದು. ಒಬ್ಬಾಕೆಯು ತನ್ನ ಪತಿಗೆ ನಿಷ್ಠೆಯಾಗಿರಬೇಕಾಗಿ ಯಾವತ್ತೂ ನಿರ್ಬಂಧಗಳು ಇರುವುದಿಲ್ಲ. ಅಲ್ಲಿ ಸ್ತ್ರೀಯರು ವಿವಾಹವಾಗುವುದು ಪುರುಷರಿಗಾಗಲ್ಲ, ಅವರ ಸ್ವಂತ ಹಿತಕ್ಕಾಗಿಯೆ ಅವರು ವಿವಾಹವಾಗುತ್ತಿರುವುದು. ಯಾವತ್ತೂ ಕಾರಣಗಳಿಂದಾಗಿ ತಮ್ಮ ಮಡದಿಯರಿಂದ ದಾಂಪತ್ಯ ವಿಚ್ಛೇದ ಮಾಡಿಕೊಳ್ಳುವ ಹಕ್ಕು ಅಲ್ಲಿನ ಪುರುಷರಿಗಿರುವುದಿಲ್ಲ. ಪತ್ನಿಯಿಂದ ವಿಚ್ಛೇದ ಹೊಂದುವ ಅಧಿಕಾರವು ಪತಿಗಿರುವುದಿಲ್ಲ. ಆದರೆ ಸ್ತ್ರೀ ತಮ್ಮ ಇಚ್ಛಾನುಸಾರ ಪತಿಯನ್ನು ಒದ್ದುಬಿಡಬಹುದು. ಪತಿಯ ಕುರಿತು ತನಗೆ ಬೇಸರ ಉಂಟಾಗಿರುತ್ತದೆಂಬ ಕಾರಣದಿಂದ, ಒಂದು ಸ್ತ್ರೀಯು ಆತನನ್ನು ತ್ಯಜಿಸಿ ಬಿಡಬಹುದು.

★

ಸ್ತ್ರೀಯರೇ ಪ್ರಣಯ ನಡೆಯಿಸುತ್ತಿರುವರು

ವಿವಾಹ ವಿಚಾರದಲ್ಲಿ ಪುರುಷರಿಗೆ ಯಾವತ್ತು ಅಧಿಕಾರವಿರುವುದಿಲ್ಲ. ತರುಣಿಯೊಡನೆ ಪ್ರಣಯ ನಡೆಯಿಸುವ ಯಾ ಆಕೆಯನ್ನು ವಿವಾಹವಾಗಲು ಕೇಳುವ ಅಧಿಕಾರವು ಪುರುಷರಿಗಿರುವುದಿಲ್ಲ. ಆದರೆ ಒಬ್ಬನು ಒಂದು ತರುಣಿಯನ್ನು ಎದುರುಗೊಂಡು ಆಕೆಯೊಡನೆ ಮಾತನಾಡುವ ಕುರಿತ ಯಾವತ್ತೂ ಆಕ್ಷೇಪಗಳಿರುವುದಿಲ್ಲ. ವರನನ್ನು ಆರಿಸುವ ಅಧಿಕಾರವು ಸ್ತ್ರೀಯರಲ್ಲೇ ಇರುವುದ[illegible] ದವರನ್ನು ಅವರು ಆರಿಸಿಕೊಳ್ಳಬಹುದು. ಈ ಕುರಿತು ಅವರು ತಮ್ಮ ಹೆತ್ತವರನ್ನೂ ಕೂಡ ವಿಚಾರಿಸಬೇಕಾಗಿಲ್ಲ. [illegible] ವಿವಾಹ ಪ್ರಕರಣದಲ್ಲಿ ಪ್ರವೇಶವಿಲ್ಲ. ಆದರೆ ವರನ ಮುಖವನ್ನೇ ನೋಡದೆ ಒಬ್ಬಾಕೆಯು [illegible] ವರನನ್ನು ಆರಿಸಿ[illegible] ವಿವಾಹದ [illegible] ಮಾತೆತ್ತುವುದು [illegible] ಪದ್ಧತಿಯಾಗಿರುತ್ತದೆ. [illegible] ವಿವಾಹವಾಗಲು [illegible] ಇರುವುದಿಲ್ಲ. [illegible] ಗಳ [illegible] ಇರುವುದರಿಂದ ಒಬ್ಬರ ಸಾಂಪತ್ತಿಕ ಮತ್ತು ಸಾಮಾಜಿಕ ಸ್ಥಾನವನ್ನು ನೋಡಿ ತರುಣಿಯರು [illegible] ಬೇಕಾದ ವರನನ್ನು ಆರಿಸುತ್ತಾರೆ. ವರನ ಮುಖ [illegible] [illegible] ಅಭಿಪ್ರಾಯವಿಲ್ಲದಿದ್ದರೂ ಒಳ್ಳೆ ಕಪ್ಪಗಾದ ಕಣ್ಣುಳ್ಳ ಪುರುಷರನ್ನು ತರುಣಿಯರು ಹೆಚ್ಚಾಗಿ ಆರಿಸುತ್ತಿದ್ದಾರೆ. ವರನು ಕುರೂಪಿಯಾ ಸುಂದರನೂ ಎಂಬುದರ ಕುರಿತು ತರುಣಿಯು ಲಕ್ಷ್ಯವ ಮಾಡುವುದಿಲ್ಲ. ಕಾರಣ ಆತನ ಮುಖವನ್ನೆ ನೋಡಬಾರದೆಂಬ ನಿರ್ಬಂಧವಿದ್ದುದರಿಂದ ತರುಣಿಯು ತನ್ನ ಪತಿಯ ಮೂಗಿನ ತುದಿ ಮತ್ತು ಕಣ್ಣುಗಳನ್ನು ಮಾತ್ರ ನೋಡುವುದು. ಪುರುಷನೊಬ್ಬನ ಮುಖವನ್ನು ನೋಡಿಬಿಟ್ಟರೆ ತಮಗೆ ಮುಂದಕ್ಕೆ ಭಯಂಕರ ಸಂಕಟಗಳು ಬಂದೊದಗುವುದೆಂಬ ಅಂಧ ವಿಶ್ವಾಸವು ಟೊರೆಗ್ ಸ್ತ್ರೀಯರಲ್ಲಿರುವುದು.

★

ಅವರ ಮಹತ್ವಾದ ಸ್ವಾತಂತ್ರ್ಯ

ಇತರ ಮುಂದರಿದ ದೇಶದ ಹೆಣ್ಣು ಸಹೋದರಿಯರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯವು ಟೊರೆಗ್ ಸ್ತ್ರೀಗೆ ಇರುವುದು. ಆಕೆಗೆ ಯಾವ ಕರ್ತವ್ಯಪಾಲನ, ಜವಾಬ್ದಾರಿಕೆ ಇತ್ಯಾದಿಗಳೆ ಇರುವುದಿಲ್ಲ. ಒಂದು ಸ್ತ್ರೀಯು ಒಬ್ಬ ಪುರುಷನೊಡನೆ ವಾಸವಾಗಿರುವ ತನಕ, ಆಕೆಯ ಅಶ್ಯಕತೆಯನ್ನು ಆತನು ನೋಡಬೇಕು. ಆದರೆ ಆಕೆ ತನ್ನ ಇಚ್ಛಾನುಸಾರ ವರ್ತಿಸುವಳು—ತನಗೆ ಬೇಕಾದ ಕಡೆಗೆ ಹೋಗುವಳು. ತನ್ನ ಇಚ್ಛೆಗೆ ಸರಿಯಾದ ಕೆಲಸಗಳನ್ನು ಮಾಡುವಳು. ಸ್ತ್ರೀಯರ ಯಾವತ್ತೂ ವ್ಯವಹಾರದಲ್ಲಿ ಚಾಚು ಮಾತೆತ್ತುವ ಅಧಿಕಾರವು ಪುರುಷರಿಗಿಲ್ಲ. ಪುರುಷನು ಸೇವಕನಂತೆ ತನ್ನ ಪತ್ನಿಯ ಆಜ್ಞೆಗಳನ್ನು ಶಿರಸಾವಹಿಸಬೇಕು.

★

ದುಂಡುಗಾದ ಸೌಂದರ್ಯವತಿಯರು

ಭಾರದ ಪ್ರಕಾರ ಸೌಂದರ್ಯದ ಅಳತೆ ಮಾಡುವುದು ಟೊರೆಗ್ ಜನರ ಕ್ರಮ. ತನ್ನ ಮಗಳು ವಿವಾಹದ ಪ್ರಾಯಕ್ಕೆ ಬರುವುದರೊಳಗಾಗಿ ಆಕೆಯನ್ನು ಆದಷ್ಟು ದಪ್ಪಗಾಗಿ ಮಾಡಿ ತಂದೆ ತನ್ನ ಮಗಳ ಮೇಲಿರುವ ಪ್ರೀತಿಯನ್ನು ವ್ಯಕ್ತಪಡಿಸುವುದು ಅಲ್ಲಿನ ಪದ್ಧತಿ. ಆಕೆಯು ದಪ್ಪಗಾಗುವಂತೆ ಉಡಿಗೆ ತೊಡಿಗೆಗಳು, ದಿನೇ ದಿನೇ ಹೆಚ್ಚಿಸಲಾಗುವವು. ಕೊಟ್ಟಿರುವ ಆಹಾರವು ಅವಳಿಗೆ [illegible] ಅತ್ಯಂತ ಸೌಂದರ್ಯವತಿಯೆನಿಸುವ ಟೊರೆಗ್ ಸ್ತ್ರೀ ಅತ್ತ ಇತ್ತ ಕದಲಲು ಅಸಾಧ್ಯ. ಅತ್ತ ಇತ್ತ ಕದಲುವ ಆವಶ್ಯಕತೆಯೂ [illegible] ಅವಳಿಗಿರುವುದಿಲ್ಲ. ಕಾರಣ ಆಕೆಯನ್ನು ಹಲ್ಲಿ[illegible]ಯಲ್ಲಿ ಹೊರುವರು. ಅತ್ಯಂತ ಭಾರವಾದ ಈ ಅತ್ಯಂತ ಸೌಂದರ್ಯದ ಸುಂದರಿಯರನ್ನು ಹೊರಲು, ಗುಲಾಮರನ್ನು ಇಡುವ ಪದ್ಧತಿಯು ಅಲ್ಲಿನ ಕುಟುಂಬಗಳಲ್ಲಿದೆ. ಗುಲಾಮರಿಲ್ಲದೆ ಇದ್ದರೆ, ಈ ಭಾರದ ಸುಂದರಿಯರನ್ನು ಹೊರುವ ಕೆಲಸವು ಕುಟುಂಬ ಪುರುಷರ ಮೇಲೆ ಬೀಳುವುದು.

ಪುರುಷರು ಸೂರ್ಯನ ತಾಪದಡಿ ಗದ್ದೆಗಳಲ್ಲಿ ಬೆವರಿಳಿಸಿ ಪರಿಶ್ರಮಿಸುತ್ತಿರುವಾಗ, ಅವರ ಸ್ತ್ರೀಯರು ಮನೆಯಲ್ಲಿ ಸಂಗೀತ ಇತ್ಯಾದಿ ವಿನೋದ ವಿಹಾರಗಳಲ್ಲಿ ಸಮಯ ಕಳೆಯುತ್ತಿರುವರು. ಅವರಲ್ಲಿ ಕೆಲವರು ಸೌಂದರ್ಯವತಿಯರು ನಿಜ. ಆದರೆ ಅವರನ್ನು ತೆಳ್ಳಗೆ ಮಾಡಿಕೊಳ್ಳುವುದು ಅವಶ್ಯ. ಆಗ ಅವರು ಇನ್ನೂ ಸೌಂದರ್ಯವತಿಯರಾಗಿ ಕಾಣಿಸುವರು.

★

ಟೊರೆಗ್ ಜನರ ನೀತಿ?

ಟೊರೆಗ್ ಜನರು ದೇವರು ಮತ್ತು ಭೂತಗಳ ಕುರಿತು ವಿಶ್ವಾಸವುಳ್ಳವರಾದರೂ, ಅವರ ಜೀವನ ಕ್ರಮವು ಯಾವತ್ತೂ ನೀತಿಯನ್ನಾಚರಿಸಿರುವುದಿಲ್ಲ. ಅನಾದಿಯಿಂದ, ತಂದೆಯಿಂದ ಮಗನಿಗಾಗಿ ಬಂದ, ಅವರ ನೀತಿಯು ಈ ಕೆಳಗಿನಂತಿರುವುದು.

ಪುರುಷರ ಕೆಲಸ ಮಾಡಬೇಕು. ಸ್ತ್ರೀಯರ ಸುಖವಿಲಾಸದಲ್ಲಿ ಸಮಯ ಕಳೆಯಬೇಕು. [illegible] ಮುಖವನ್ನು ಒಂದೇ ಒಂದು ಸ್ತ್ರೀಗೆ ತೋರಿಸಬೇಡ. [illegible] ಮುಖವು ಆಕೆ ನೋಡಿದಕ್ಷಣದಿಂದ ಆಕೆಗೆ ನಿನ್ನ ಮೇಲಿ[illegible] ಕಷ್ಟಗಳು ಪ್ರಾರಂಭವಾಗುವುದು. [illegible] ಸಾಧ್ಯವಿರುವ ಅರಿವಾಗಿ [illegible] ಮಾತ್ರ ವಾಗ್ದಾನಗಳನ್ನು ಮಾಡು. [illegible] ಸಾಧ್ಯವಾಗ ವಸ್ತುವ ಅರಿವಾಗಿಗಿಂತ ಹೆಚ್ಚಿ[illegible] ಸಾಲ್ಯಗಳನ್ನು ಪಡೆಯ[illegible] [illegible] ಮುಂದಕ್ಕೆ [illegible] ಸ್ತ್ರೀಯರಲ್ಲಿ [illegible] ಆಕೆ [illegible] ಹಿತ [illegible] ತನಕ [illegible].

The

Agricultural & Industrial Bank, Ltd,

(Incorporated in British India)

Head Office LAXMINIVAS BUILDINGS *Coondapoor*

BRANCHES –

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF Rs 10 25 50 100 250 500 & 1000

REDEEMABLE AT ANY TIME.

CUMULATIVE DEPOSITS ARE ACCEPTED

Current Deposits

From January to June 2%

and

From July to December 1%

Savings Bank Deposits

3½ per cent per annum

Fixed Deposits

for 6 Months 3½%

1 Year 4%

2 Years & above 4½%

For Further Particulars Apply to—

HEAD OFFICE or BRANCHES

Buy Advertised Goods

'ಎರಡು ಗಂಟೆಗಳ ತನಕ ಅವಳ ಜೀವನ ಸ್ಮರಣದ ಇತ್ಯರ್ಥವಾಗಿರಲಿಲ್ಲ. ಕಿವಿ, ಮೂಗುಗಳನ್ನು ಕೊಯ್ದುದರಿಂದ ಆಮರಣಾಂತ ಅವಳ ರೂಪುಕೆಟ್ಟು ಇರಬೇಕಾಯಿತು. ನೋಡಿ, ನನಗೆ ಬೇಸರವಾಗುತ್ತದೆ' ಎಂದು ಗ್ಲಮೋರ್ಗನ ಕೋರ್ಟಿನಲ್ಲಿ ಗ್ರಿಫಿತ್ ವಿಲಿಯಮ್ ಎಂಬ ವಕೀಲರು ಫಿರ್ಯಾದಿಯ ಕಡೆಯಿಂದ ವಾದಿಸುತ್ತ ಹೇಳಿದನು

ಉತ್ತರ ಆಫ್ರಿಕದ ಟೂನಿಸನಲ್ಲಿ ವಾಸವಾಗಿದ್ದ ಮಹ್ಮದ್ ಬೆನ್ ಅಲಿಶಾರಿಫ ಎಂಬವನ ಮೇಲೆ ಕೋರ್ಟಿನಲ್ಲಿ ಫಿರ್ಯಾದಿಮಾಡಿದ್ದಿತು. ಅವನ ಪ್ರಾಯ 35, ವೃತ್ತಿಯಿಂದ ಹಡಗಿನ ಖಲಾಸಿ ಆದರೆ ಆ ಸಮಯ ನಿರುದ್ಯೋಗಿಯಾಗಿದ್ದ.

ಅವನು ಹೆಂಡತಿಯ ವ್ಯವಹಾರದಿಂದ ಬಹಳ ಉದ್ರೇಕಗೊಂಡು ಆಕೆಯನ್ನು ಅಮಾನುಷಿಕ ರೀತಿಯಿಂದ ಗಾಯಪಡಿಸಿದನೆಂದು ಕೋರ್ಟು ಅವನಿಗೆ ಶಿಕ್ಷೆ ಕೊಟ್ಟಿತು ಹೆಂಡತಿಗೆ 18 ವರ್ಷಗಳಾಗಿದೆ ಮಾತ್ರ ಮೇರಿ ಜೋಸೆಫಿನ್ ಕಾರಾ ಎಂದು ಹೆಸರು.

ಜೋಸೆಫಿನ ಕಾರಾಳ ಮನೆಯಲ್ಲಿ ವಾಸವಾಗಿದ್ದ ರೋನಾಲ್ಡ ನಥಾನಿಯಲ್ ಮೋರ್ಗನ್ ಎಂಬವನನ್ನೂ ಗಾಯಪಡಿಸಿದ್ದನೆಂದು ಮಹ್ಮದ ಕಾಥಾನ ಮೇಲೆ ಇನ್ನೊಂದು ತಪ್ಪು ಆರೋಪಿಸಲ್ಪಟ್ಟಿತ್ತು ಆದರೆ ಅದಕ್ಕೆ ರುಜುವಾತು ಇಲ್ಲದುದರಿಂದ ಆ ತಪ್ಪಿನ ಮೇಲೆ ಅವನಿಗೆ ಶಿಕ್ಷೆಯಾಗಲಿಲ್ಲ

ಕಳೆದ ವರ್ಷದ ಮೇ ತಿಂಗಳಲ್ಲಿ ಟ ಹ ಮ್ಮದ ಕಾರಾಸಿಗೂ ಮೇರಿ ಕಾರಾಳಿಗೂ ವಿವಾಹವಾಯಿತು ಆ ಮೇಲೆ ಅವರಿಗೆ ಎರಡು ಮಕ್ಕಳು ಹುಟ್ಟಿದವು ಒಂದು ಬಿಳಿ, ಇನ್ನೊಂದು ಕಪ್ಪು ಆದರೆ ಎರಡರ ತಂದೆಯೂ ತಾನಾಗಿರಲಿಲ್ಲವೆಂದು ಮಹಮ್ಮದನು ಕೋರ್ಟಿನಲ್ಲಿ ಹೇಳಿದ

ಕೋರ್ಟಿನಲ್ಲಿ ಗಂಡ ಹೆಂಡಿರ ಜಗಳ

ಕಿವಿ ಮೂಗು ಕೊಯ್ದ ಗಂಡನಿಗೆ ಹದಿನೆಂಟು ತಿಂಗಳ ಶಿಕ್ಷೆ

ಕಾರ್ಡಿಫ ಶಹರದ ಮಾಳಿಗೆ ಮನೆಯೊಂದರಲ್ಲಿ ದಂಪತಿಗಳಿಬ್ಬರೂ ವಾಸವಾಗಿದ್ದರು ಒಂದು ದಿನ ಅವರಿಬ್ಬರೊಳಗೆ ಭಯಂಕರ ಜಗಳವಾಯಿತು. ಸಿಟ್ಟುಗೊಂಡ ಮೇರಿ ಕಾರಾಳು ತನ್ನ ಕುರ್ಚಿ ಮೇಜು ಮೊದಲಾದ ಸಾಮಾನುಗಳನ್ನು ಮಾಳಿಗೆಯಿಂದ ಕೆಳಕ್ಕೆ ಒಯ್ಯತೊಡಗಿದಳು

ಇದರಿಂದ ಮಹ್ಮದನಿಗೂ ಸಿಟ್ಟು ಬಂದಿತು ಅವನು ಕ್ರೋಧದಿಂದ ಸುಟ್ಟು ಬೂದಿಯಾದನು ಮನ ಕೆಟ್ಟು ಅಲ್ಲೇ ಇದ್ದ ಕ್ಷೌರ ಕತ್ತಿಯಿಂದ ಮೇರಿ ಕಾರಾಳ ಕಿವಿ, ಮೂಗು ಎಲ್ಲಾ ಕಡಿದು ಹಾಕಿದ ಅವಳ ಸಹಾಯಕ್ಕಾಗಿ ಓಡಿ ಬಂದ ಮೋರ್ಗನನನ್ನು ಅವನು ಗಾಯ ಮಾಡಿದ

ಮೇರಿ ಕಾರಾಳು ಬಹಳವಾಗಿ ಗಾಯಗೊಂಡಿದ್ದಳು. ಕಾರ್ಡಿಫದ ಆಸ್ಪತ್ರೆಯಲ್ಲಿ ಆ ಗಾಯಗಳ ನಿಮಿತ್ತ 60 ಅಂಗಭಾಗಗಳನ್ನು ಹೊಲಿದು ಮುಲಾಮುಪಟ್ಟಿ ಹಾಕ್ಬೇಕಾಯಿತು

ವಾದ ವಿವಾದ ನಡೆಯುವಾಗ ಮಹ್ಮದ ಕಾರಾ ಮತ್ತು ಮೇರಿ ಕಾರಾಳ ಮನಸ್ಸು ಕೂಡಿ ಒಂದಾಗಿರಲಿಲ್ಲ [illegible] ತಾನು ಗಂಡನೊಂದಿಗೆ [illegible] ವ ಬಗ್ಗೆ ಎಂದು ಅವಳು ಕೋರ್ಟಿನಲ್ಲಿ ಹೇಳಿದಳು. 'ನಾನು ಅವನನ್ನು ಪ್ರೀತಿಸುತ್ತಿದ್ದೆ ಅವನ ಮೇಲೆ ನನಗೆ ಪ್ರೀತಿಯಿರಲಿಲ್ಲ ಮದುವೆಯಾಗಬೇಕೆಂದು ಒತ್ತಾಯ ಮಾಡಿದ್ದರಿಂದ ನಾನು ಅವನನ್ನು ಮದುವೆಯಾದೆ' ಎಂದಳವಳು

ತನ್ನನ್ನು ಮದುವೆಯಾಗಬೇಕೆಂದು ಮಹ್ಮದನು ಮೇರಿಯಳನ್ನು ಅನೇಕ ಬಾರಿ ಕೇಳಿದ್ದ. ಆದರೂ ಅವಳು ಒಪ್ಪಿರಲಿಲ್ಲ. ಕಡೆಗೆ ತಾಯಿಯು ಒತ್ತಾಯ ಮಾಡಿದ್ದರಿಂದ ಅವಳು ಒಪ್ಪಿಕೊಂಡಳು.

ಮೇರಿಯೊಡನೆ ಮೋರ್ಗನನಿಗೆ ಅಕ್ರಮ ಸಂಬಂಧವಿದ್ದಿತ್ತೇ ಎಂದು ಕೇಳಿದಾಗ 'ಇಲ್ಲ' ಎಂದು ಮೋರ್ಗನನು ಹೇಳಿದ ಮೇರಿಯು ತನ್ನ ಹೆಚ್ಚಿನ ಸಮಯವನ್ನು ಅವನ ಕೋಣೆಯಲ್ಲಿಯೇ ಕಳೆಯುತ್ತಿದ್ದಳು ಎಂಬ ಮಾತನ್ನು ಕೂಡ ಅವನು ಒಪ್ಪಿಕೊಳ್ಳಲಿಲ್ಲ.

'ಮಹ್ಮದನು ಮೇರಿಯನ್ನು ಕಡಿಯುತ್ತಿದ್ದಾಗ, ಗಲಾಟೆ ಕೇಳಿ ನಾನು ಅವಳನ್ನು ಕಾಪಾಡುವುದಕ್ಕೆ ಹೋದೆ ಆ ಜಗಳದಲ್ಲಿ ನನ್ನ ಮುಖ, ಕೈಗಳ ಮೇಲೂ ಗಾಯಗಳಾದುವು' ಎಂದು ಮೋರ್ಗನ ಹೇಳಿದ

ಆದರೆ ಮೇರಿಯ ತಾಯಿ ಮಾತ್ರ ಬೇರೆ ರೀತಿಯಿಂದ ಸಾಕ್ಷಿ ಹೇಳಿದಳು ಸನ್ಯಾಸ್ಯಗೃಹಸ್ಥನು [illegible] ಹಾಗೆ ಮಹ್ಮದನು ಮೇರಿಯನ್ನು ಕಂಡಿದ್ದನೆಂದು ಅವಳ ಸಾಕ್ಷಿ ಕೊಟ್ಟಳು. ಮಹ್ಮದ ನನ್ನ ಮಗಳನ್ನು ಮದುವೆಯಾಗಲಿಕ್ಕೆ ಬೇಗ ತಾನು ಒತ್ತಾಯ ಮಾಡಿದ್ದು ಸುಳ್ಳೆಂದೂ, ಆದರೆ ಮಹ್ಮದನಂಥ ಒಳ್ಳೇ ಲಕ್ಷಣದ ಹುಡುಗನನ್ನು ಮದುವೆಯಾಗುವುದು ಮೇರಿಗೇ ಒಳ್ಳೆದೆಂದು ಹೇಳಿದ್ದೆಯೆಂದೂ ಅಂದಳು

'ಮೇರಿಯು ಯಾವಾಗಲೂ ನನ್ನ ಇಚ್ಛೆಗೆ ಅನುಕೂಲವಾಗಿ ನಡೆಯುತ್ತಿರಲಿಲ್ಲ ಆ ದಿನ ಅವಳು ಒಂದು ಊಟ ಹಿಡಿದು ನನ್ನನ್ನು ಹೊಡೆಯಲಿಕ್ಕೆ ಬರುತ್ತಾಳೆಂದು ನಾನು ಎಣಿಸಿದೆ. ಆದ್ದರಿಂದ ಆತ್ಮರಕ್ಷಣೆಗಾಗಿ ನಾನು ಕ್ಷೌರಕತ್ತಿಯನ್ನು ಉಪಯೋಗಿಸಿದೆ. ಅವಳು ನನ್ನ ಮೈಮೇಲೆ ಬೀಳಲಿಕ್ಕೆ ಬಂದಾಗ ಆಕಸ್ಮಿಕವಾಗಿ ಗಾಯಗಳಾದುವು. ಅವಳು ಮನೆಯಿಂದ ಓಡಿ ಹೋಗಲಿಕ್ಕಿದ್ದಳು. ನಾನು ಅವಳನ್ನು ಎತ್ತಿ ಮನೆಯೊಳಗೆ ಕರೆದಾಗ ಮೋರ್ಗನ ಬಂದು ನನ್ನ ದವಡೆಗೆ ಒಂದು ಏಟು ಕೊಟ್ಟ. ಆಗ ನನಗೂ ಅವನಿಗೂ ಕಾದಾಟವಾಗಿ ಅವನಿಗೆ ಕೆಲವು ಗಾಯಗಳಾದುವು. ನಾನು ಅಪರಾಧಿಯಲ್ಲ' ಎಂದು ಮಹ್ಮದ ಹೇಳಿದ

ಜೂರಿಯವರು—'ಮೋರ್ಗನ ಗಾಯಪಟ್ಟುದರಲ್ಲಿ ಮಹ್ಮದನ ತಪ್ಪಿಲ್ಲವೆಂದು ಹೇಳಿ ಬಹಳ ಉದ್ರೇಕಗೊಂಡಾಗ ಹೆಂಡತಿಯ ಕಿವಿ ಮೂಗು ಕೊಯ್ದುದರಿಂದ ಅವನಿಗೆ 18 ತಿಂಗಳ ಶಿಕ್ಷೆ ಸಾಕೆಂದು ಅಭಿಪ್ರಾಯಪಟ್ಟರು

ಜೂರಿಯವರ ಸಿಫಾರಸಿನಂತೆ ಲಾರ್ಡ ಜಡ್ಜರು ಮಹ್ಮದನಿಗೆ 18 ತಿಂಗಳ ಶಿಕ್ಷೆ ಕೊಟ್ಟರೂ ಆದರೂ ಅವರು ಜೂರಿಯವರ ಅಭಿಪ್ರಾಯದೊಂದಿಗೆ ತನ್ನ ಅಸಮ್ಮತಿಯಿದೆ ಎಂದು ಹೇಳಿ ತಾನು ಮಹ್ಮದನ ದೇಶತ್ಯಾಗಕ್ಕೆ ಬರೆದು ಹಾಕುವೆನೆಂದರು.

ಪಾಶ್ಚಾತ್ಯ ದೇಶಗಳಲ್ಲಿ ನಡೆಯುವ ವಿಚಿತ್ರ ವಿವಾಹಗಳ ಮತ್ತು ಅನಂತರದ ಪರಿಣಾಮಗಳ ಇದೊಂದು ಮನೋರಂಜಕ ಹಾಗೂ ಬೋಧಪ್ರದ ಸಮಾಚಾರವಾಗಿದೆ

Wanted Urgently

A Medical Practitioner L. M. P or L. I. M for the Rural Dispensary Dharmastala on a salary of Rs. 30/- per mensum

(L I M Preffered)

President
Panchayat Board
Dharmastala, S K.

THE

Bombay Life Assurance Company, Limited,

(ESTD 1908.)

45-47 Churhgate Street, Fort-BOMBAY.

Evidence of

PROGRESS, SECURITY & STABILITY.

Year	New Business completed	Premium Income	Life Fund	Business in force
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply to any of our following Offices —

Kochikar Brothers Limited,
Madras Branch Secretaries,
Bombay Life Building, UDIPI (S India)

(1) Visweswarapuram Circle, Bangalore City. (2) Car Street, Mangalore. (3) Puttimyara, Calicut. (4) Charni Road, Girigaum, Bombay No 4 (5) P. B 337, Mount Road, Madras (6) Ottapalam, S. Malabar. (7) Central Station Road, Trivandrum

ಆಧುನಿಕ ಭಾರತದ ನಿರ್ಮಾತರು

— ಹತ್ತೊಂಭತ್ತನೆ ಶತಮಾನದ ಅಖಂಡ ಮುಖಂಡರು —

ಭಾರತವನ್ನು ಒಂದು ರಾಷ್ಟ್ರವನ್ನಾಗಿ ಮಾಡಲಿಕ್ಕೆ ಪ್ರಯತ್ನಿಸಿದ ಕೀರ್ತಿಶರೀರಗಳು — ಅಜಗಜಾವಸ್ಥೆಯಲ್ಲಿ ಬಿದ್ದುಕೊಂಡ ಭಾರತೀಯರಲ್ಲಿ ಸ್ಫೂರ್ತಿ ಉತ್ಸಾಹಗಳನ್ನು ತುಂಬಿದ ಪ್ರಾತಃಸ್ಮರಣೀಯರು

? ? ? ಯಾರು? ? ? ?

ರಾಜಾರಾಮ ಮೋಹನರಾಯಿ, ಮಹರ್ಷಿ ದೇವೇಂದ್ರನಾಥ ಠಾಗೋರ, ಸ್ವಾಮಿ ದಯಾನಂದ ಸರಸ್ವತಿ, ಬ್ರಹ್ಮಾನಂದ ಕೇಶವ ಚಂದ್ರಸೇನ, ಸರ್ ಸಯ್ಯದ ಅಹ್ಮದಖಾನ್, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಬಂಕಿಮಚಂದ್ರ ಚಟರ್ಜಿ, ದಾಧಾಬಾಯಿ ನವರೋಜಿ, ಪಂಡಿತ ರಮಾಬಾಯಿ—ಇವರೇ ಅವರೆಂದು ಸಿ. ಎಫ್. ಎಂಡ್ರ್ಯೂಸರು 'ಓರಿಯಂಟ್' ಪತ್ರಿಕೆಯಲ್ಲಿ ಬರೆಯುತ್ತಾರೆ.

[illegible] ಭಾರತೀಯರ ಹೆಸರು ಈ ಸೂಚಿಯಲ್ಲಿ ಸೇರಬೇಕಾಗಿತ್ತು. ಆದರೆ ಅಂಥವರ ಸಂಪೂರ್ಣ ಪರಿಚಯವು ಇಲ್ಲದಿದ್ದುದರಿಂದ ಅವರ ಹೆಸರನ್ನು ಬಿಡಬೇಕಾಯಿತೆಂದು ಎಂಡ್ರ್ಯೂಸರು ಹೇಳುತ್ತಾರೆ. ಹತ್ತೊಂಭತ್ತನೆ ಶತಮಾನದಲ್ಲಿ ಹುಟ್ಟಿದ್ದರೂ, 20ನೇ ಶತಮಾನದಲ್ಲಿ ಕೆಲಸ ಮಾಡಿದವರಾದ್ದರಿಂದ ಬಾಲಗಂಗಾಧರ ತಿಲಕ, ಗೋಪಾಲಕೃಷ್ಣ ಗೋಖಲೆಯವರ ಹೆಸರುಗಳನ್ನೂ ಈ ಸೂಚಿಯಲ್ಲಿ ಸೇರಿಸಿರುವದಿಲ್ಲ. ಆಧುನಿಕ ಭಾರತ ನಿರ್ಮಾತರಾಗಿದ್ದರೂ, ಅವರ ಕಾರ್ಯಭಾಗವು ಪೂರ್ಣವಾಗಿಲ್ಲದಿರುವದರಿಂದ ಗಾಂಧಿ ನೆಹರುಗಳ ಹೆಸರುಗಳನ್ನೂ ಈ ಸೂಚಿಯಲ್ಲಿ ಬಿಟ್ಟುಬಿಡಲಾಗಿದೆ. ಹೀಗೆ ಸೂಚಿಯು ಅಪೂರ್ಣವಾಗಿರುವದಾದರೂ ಅದರಲ್ಲಿ ಹೆಸರು ಕಾಣಿಸಿದವರು ಆಧುನಿಕ ಭಾರತದ ನಿರ್ಮಾತರಾಗಿದ್ದರೆಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ.

ಸೂಚಿಯಲ್ಲಿ ಹೆಸರು ಕಾಣಿಸಿದ ಈ ಮಹಾ ಪುರುಷರಲ್ಲಿ ಕೆಲವೊಂದು ವೈಶಿಷ್ಟ್ಯಗಳು ಇರುವದನ್ನು ನೋಡಬಹುದು. ದಾಧಾಭಾಯಿ ನವರೋಜಿಯವರು ದೀರ್ಘಕಾಲ ಬದುಕಿ ಬಾಳಿದರು. ಸ್ವರ್ಗವಾಸಿಗಳಾಗುವಾಗ ಅವರ ಪ್ರಾಯವು 92 ವರ್ಷಗಳಾಗಿದ್ದವು. ಆದರೆ ಕೇಶವ ಚಂದ್ರಸೇನರು 50 ವರ್ಷಗಳಾಗುವಾಗಲೇ ತೀರಿಕೊಂಡರು. ಆದರೂ ಸಾಯುವ ಮೊದಲು ಅವರು ರಾಷ್ಟ್ರನಿರ್ಮಾಣದ ಬಹು ದೊಡ್ಡ ಕಾರ್ಯಭಾಗವನ್ನು ಪೂರೈಸಿದರು. ಎರಡನೆಯದಾಗಿ ಇವರೆಲ್ಲರೂ ಧರ್ಮದಲ್ಲಿ ಅತಿಶಯ ಶ್ರದ್ಧೆಯುಳ್ಳವರಾಗಿದ್ದರು. ಎಲ್ಲರೂ ಧರ್ಮಾಚಾರ್ಯರುಗಳಾಗಿದ್ದರು. ಧರ್ಮಕ್ಕಾಗಿ ಅವರು ರಾಜಕೀಯಕ್ಕೆ ಮನಸ್ಸು ಕೊಟ್ಟರು. ಪಾಶ್ಚಾತ್ಯ ದೇಶಗಳಲ್ಲಿಯಂತೆ ರಾಜಕೀಯಕ್ಕಾಗಿ ಧರ್ಮವನ್ನು ಸೇವಿಸಲಿಲ್ಲ. ಹತ್ತೊಂಭತ್ತನೆ ಶತಮಾನವು ಅಪೂರ್ವ ಮತ್ತು ಅದ್ಭುತ ಭಾರತೀಯ ಜನಜಾಗೃತಿಯ ಕಾಲವಾಗಿತ್ತು. ಆ ಕಾಲದಲ್ಲಿಯೇ ಮೊದಲು ಅನೇಕಾನೇಕ ಧಾರ್ಮಿಕ ಸಾಮಾಜಿಕ ಸುಧಾರಣೆಗಳು ನಡೆದುವು. ರಾಜಕೀಯ ಜಾಗೃತಿಗೆ ಹೀಗೆ ಆ ಧಾರ್ಮಿಕ ಜಾಗೃತಿಯು ಮೂಲವಾಯಿತು. ಅದರಿಂದ ರಾಷ್ಟ್ರನಿರ್ಮಾಣ ಕಾರ್ಯವು ಅತ್ಯಂತ ಸುಲಭವಾಯಿತು.

ಮೂರನೆಯ ವೈಶಿಷ್ಟ್ಯವೆಂದರೆ, ಈ ಆಧುನಿಕ ಭಾರತದ ನಿರ್ಮಾತರಲ್ಲಿ ಪ್ರತಿಯೊಂದು ಮತದ ಪ್ರಾತಿನಿಧ್ಯವನ್ನು ಪಡೆದವರಿದ್ದಾರೆ. ಪ್ರತಿಯೊಂದು ಮತವೂ ತನ್ನ ತನ್ನ ಒಬ್ಬೊಬ್ಬ ಶ್ರೇಷ್ಠ ಪುರುಷನನ್ನು ಭಾರತೀಯ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಬಲಿಕೊಟ್ಟಿತು. ಮೇಲೆ ಕೊಟ್ಟ ಸೂಚಿಯಲ್ಲಿ ಸನಾತನ ಹಿಂದುಗಳು, ಮುಸಲ್ಮಾನರು, ಸುಧಾರಕ ಹಿಂದುಗಳು, ಪಾರ್ಸಿಗಳು, ಕ್ರೈಸ್ತರು ಎಲ್ಲರೂ ಇದ್ದಾರೆ.

ಪಂಡಿತ ರಮಾಬಾಯಿಯವರು ಭಾರತೀಯ ಮಹಿಳಾ ಆಂದೋಲನದ ಪ್ರಾರಂಭ ಕಾಲದಲ್ಲಿ ಒಬ್ಬೊಂಟಿಗರಾಗಿ ಕೆಲಸ ಮಾಡಿದ್ದರೆಂಬುದರಿಂದ ಅವರಿಗೆ ಭಾರತೀಯ ರಾಷ್ಟ್ರನಿರ್ಮಾತರಲ್ಲಿ ಗಣನೀಯ ಸ್ಥಾನವು ಸಲ್ಲಬೇಕು. ಈಗ ಬೇಕಾದರೆ ಈ ಆಂದೋಲನವನ್ನು ಹೂಡಿರುವ ಹಲವು ಮಂದಿ ವಿದುಷಿಯರ ಹೆಸರುಗಳು ನಿಮಗೆ ದೊರೆಯಬಹುದು. ಆದರೆ ಹತ್ತೊಂಭತ್ತನೆ ಶತಮಾನದಲ್ಲಿ ಭಾರತೀಯ ಮಹಿಳಾ ಪ್ರಪಂಚವನ್ನು ಸುಧಾರಿಸಲಿಕ್ಕೆ ಪ್ರಯತ್ನಿಸಿದ ಏಕ ಮಾತ್ರ ಭಾರತೀಯ ಮಹಿಳೆ ಎಂದರೆ ರಮಾಬಾಯಿ ಒಬ್ಬರೇ ಆಗಿದ್ದರು. ಆದ್ದರಿಂದ ಅವರು ಕೈಕೊಂಡ ಕಾರ್ಯಸಾಧನೆಗಾಗಿ ಪಟ್ಟ ಕಷ್ಟಗಳು ಅಸಾಮಾನ್ಯವಾಗಿದ್ದವು.

ಭಾರತೀಯರಿಗೆ ಧರ್ಮವೆಂದರೆ ಪ್ರಾಣವೆಂದು ಹೇಳುತ್ತಾರೆ; ನಿಜ. ಆಧುನಿಕ ಭಾರತದ ಮೋಹನರಾಯಿಯವರು ದೊಡ್ಡ ಧಾರ್ಮಿಕ ಪುರುಷರೂ ಬ್ರಹ್ಮ ಸಮಾಜದ ಪ್ರವರ್ತಕರೂ ಆಗಿದ್ದರು. ಆ ಕಾಲದಲ್ಲೂ ಉಪ್ಪಾವಸ್ಥೆಯಲ್ಲಿದ್ದ ರಾಜಕೀಯಕ್ಕೆ ಅವರು ಬಲಿ ಕೊಟ್ಟವರಾಗಿದ್ದರು. ಧರ್ಮವು ಅವರ ಮೆಚ್ಚಿನ ವಿಷಯವಾಗಿತ್ತು. ಸ್ವಾಮಿ ದಯಾನಂದ ಸರಸ್ವತಿಯವರು ಸನ್ಯಾಸಿಗಳಾಗಿ ಬಾಳಿ ಸನ್ಯಾಸಿಗಳಾಗಿ ಸತ್ತರು. ಉತ್ತರ ಭಾರತದ ಜನ ಜಾಗೃತಿ ಮತ್ತು ರಾಜಕೀಯಕ್ಕಾಗಿ ಅವರು ಮಾಡಿದ ಕೆಲಸಗಳು ಅಸಾಧಾರಣವಾಗಿದ್ದುವು. ಆದರೂ ಕೂಡಾ ಅವರಿಗೆ ಧರ್ಮವೇ ಮುಖ್ಯವಾಗಿತ್ತು. ಆದುದರಿಂದಲೇ ಆರ್ಯಸಮಾಜದ ಸ್ಥಾಪಕರೆಂದು ಅವರು ನಮಗೆ ಹೆಚ್ಚು ಪರಿಚಯದವರಾಗಿದ್ದಾರೆ.

ಸರ ಸಯ್ಯದ ಅಹ್ಮದ ಖಾನರನ್ನು ನೋಡಿರಿ. ಅವರ ಹೃದಯದಲ್ಲಿ ಇಸ್ಲಾಮ್ ಧರ್ಮಜ್ಯೋತಿಯು ಜಾಜ್ವಲಮಾನವಾಗಿ ಉರಿಯುತಿತ್ತು. ಕನಸು ಮನಸುಗಳಲ್ಲಿ ಅವರು ಮುಸಲ್ಮಾನ ಧರ್ಮವನ್ನು ಚಿಂತಿಸುತ್ತಿದ್ದರು. ಅವರು ಮೊದಲಿಂದ ಕಡೇ ತನಕ ಪರಮ ಧಾರ್ಮಿಕರಾಗಿದ್ದರು. ಆದರೂ ಇಡೀ ದೇಶದಲ್ಲಿ ಮುಸಲ್ಮಾನರೊಳಗೆ ರಾಜಕೀಯಕ್ಕಾಗಿ ಅವರಂತೆ ಸತತ ಕೆಲಸ ಮಾಡಿದವರು ಬೇರೊಬ್ಬರಿರುವದಿಲ್ಲ.

ರಾಷ್ಟ್ರೀಯ ಸ್ವಾಭಿಮಾನ ರಕ್ಷಣೆಗೆ ಕಾರಣೀಭೂತರಾದವರೇ ಸ್ವಾಮಿ ವಿವೇಕಾನಂದರು. ಅವರಿಂದಾಗಿ ದೇಶ ವಿದೇಶಗಳಲ್ಲೂ ಭಾರತದ ಘನತೆ ಪ್ರತಿಷ್ಠೆಗಳು ಬೆಳೆದುವು. ಉತ್ತರದಿಂದ ದಕ್ಷಿಣದ ವರೆಗೆ ಭಾರತದಲ್ಲೆಲ್ಲ ರಾಷ್ಟ್ರಾಭಿಮಾನವು ತುಂಬುವಂತೆ ಮಾಡಿದ ಪುರುಷೋತ್ತಮರು ವಿವೇಕಾನಂದರಾಗಿದ್ದಾರೆ. ಭಾರತದ ಮಾನ ಮರ್ಯಾದೆಗಳನ್ನು ಕಾಯುವದಕ್ಕಾಗಿ ಅವರು ತಮ್ಮ ಪ್ರಾಣಗಳನ್ನು ಕೊಡಲಿಕ್ಕೂ ಸಿದ್ಧರಾಗಿದ್ದರು. ಭಾರತದ ಮಾನ ಮರ್ಯಾದೆಗಳ ರಕ್ಷಣೆಗಾಗಿಯೇ ಅವರು ಹಗಲಿರುಳು ಕಾದಿದ್ದರು. ಆದರೂ ಕೂಡ ಅವರ ಹೃದಯದಲ್ಲಿ ಧರ್ಮಕ್ಕೆ ಅತ್ಯುಚ್ಚ ಸ್ಥಾನವು ಪ್ರಾಪ್ತವಾಗಿದ್ದಿತು. 20ನೇ ಶತಮಾನದ ರಾಷ್ಟ್ರನಿರ್ಮಾತರ ವಿಷಯವನ್ನು ತೆಗೆದುಕೊಳ್ಳುವದಾದರೆ, ಮಹಾತ್ಮಾ ಗಾಂಧಿಯವರು ತಾನು ಧರ್ಮಕ್ಕಾಗಿಯೇ ರಾಜಕೀಯರಂಗಕ್ಕೆ ಪಾದಾರ್ಪಣಮಾಡಿದೆನೆಂದು ಹಲವು ಬಾರಿ ಪ್ರಕಟವಾಗಿ ಹೇಳಿದ್ದಾರೆ.

ಇನ್ನು ದಾಧಾಭಾಯಿ ನವರೋಜಿಯವರ ಮಾತೇನು? ಅವರ ಜನ್ಮವು ಒಂದು ಪಾರ್ಸಿ ಗುರುಗಳ ಕುಟುಂಬದಲ್ಲಾಯಿತು. ಆ ಕುಟುಂಬದಲ್ಲಿ ಪ್ರತಿಯೊಬ್ಬರಿಗೆ ಹುಟ್ಟಿದ ಜ್ಯೇಷ್ಠ ಪುತ್ರನು ಧರ್ಮ ಸೇವೆಗಾಗಿ ಸಮರ್ಪಿಸಲ್ಪಟ್ಟಿರುವನು. ನವರೋಜಿಯವರು ತಾವು ಸ್ವತಃ ಧರ್ಮಸೇವೆಯನ್ನು ಎಂದೂ ವಹಿಸಿಕೊಳ್ಳಲಿಲ್ಲವಾದರೂ ಅವರು ತ್ರಿಕರಣಗಳಿಂದ ಧರ್ಮಪ್ರಿಯರಾಗಿದ್ದರು. ಅವರ ಜೀವನ ಪರಿಶುದ್ಧತೆಯು ಅವರಿಗೆ ಎಲ್ಲಾ ಮತೀಯರಿಂದ ಆದರ, ಗೌರವ ಶ್ರದ್ಧೆ, ಪೂಜ್ಯತೆಗಳನ್ನು ತಂದು ಕೊಟ್ಟಿದ್ದವು.

ಹತ್ತೊಂಭತ್ತನೇ ಶತಮಾನದಲ್ಲಿ ಎಂದು ಮಾತ್ರವಲ್ಲ, ಅದರ ಪೂರ್ವಕಾಲದಲ್ಲೂ ಕೂಡ ಧರ್ಮವೇ ಭಾರತದ ಜೀವಾಳವಾಗಿದ್ದುದು ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಅತ್ಯಂತ ಭಯಾನಕ ಪ್ರಾಕೃತಿಕ ಪ್ರಕೋಪಕ್ಕೆ ಮನುಷ್ಯಜಾತಿಯು ಬಲಿಯಾಗುವ ಕಾಲಕ್ಕೆ ಅದು ವಿಚಾರ ವಿವೇಕಗಳನ್ನು ಕಳಕೊಳ್ಳದೆ, ಎಲ್ಲ ಕಷ್ಟಗಳನ್ನು ಶಾಂತಚಿತ್ತದಿಂದ ಸಹಿಸಿಕೊಂಡಿರುವಂತೆ ಮಾಡುವ, ಪರಮಾತ್ಮನ ಮೇಲಿನ ಆಸ್ತಿಕ್ಯ ಭಾವನೆ ಮತ್ತು ಧಾರ್ಮಿಕ ಶ್ರದ್ಧೆಯು 20ನೇ ಶತಮಾನದ ಈ ಯಾಂತ್ರಿಕ ಯುಗದಲ್ಲಿ ಕಡಿಮೆ ಕಡಿಮೆಯಾಗುತ್ತ ಬರುತ್ತಿರುವದು ನಮಗೆ ಶ್ರೇಯಸ್ಕರವಾಗಿದೆಯೋ ಎಂದು ನಾವು ಆಲೋಚಿಸುವ ಹೊತ್ತೀಗ ಬಂದಿರುತ್ತದೆ.

ಧರ್ಮಭಾವನೆಯು ಲುಪ್ತವಾಗುತ್ತಿರುವದು ಭಾರತಕ್ಕೆ ಮಾತ್ರವಲ್ಲ, ಯುರೋಪಿಗೂ ಹಾನಿಕರವಾಗಿದೆ. ಈಗೀಗ ಧರ್ಮದ ಸ್ಥಾನವನ್ನು ರಾಷ್ಟ್ರೀಯತ್ವವು ತೆಗೆದುಕೊಳ್ಳುತ್ತ ಇದೆ. ರಾಷ್ಟ್ರೀಯತ್ವವೇ ಪ್ರತಿಯೊಬ್ಬ ದೇಶವಾಸಿಯ ಜೀವನ ಧ್ಯೇಯ-ಆದರ್ಶವಾಗಿ ಪರಿಣಮಿಸಿದೆ. ಆದರೆ ರಾಷ್ಟ್ರಾಭಿಮಾನವು ಯಾವಾಗಲೂ ಮಿತಿಮೀರಬಾರದು. ಎಷ್ಟೆಂದರೂ ಒಂದುಗೂಡಿಸುವಲ್ಲಿ, ಪರಂತು ಒಂದಾಗಿದ್ದುದನ್ನು ವಿಭಜಿಸುವ ಒಂದು ವಿಚಿತ್ರ ಶಕ್ತಿ ಅದರಲ್ಲಿ ಅಡಕವಾಗಿದೆ. ಪ್ರತಿಯೊಂದು ದೇಶದವರು ಇತರ ದೇಶಗಳನ್ನು ಬಿಟ್ಟು ಕೇವಲ ತಮ್ಮ ತಮ್ಮ ದೇಶಗಳನ್ನು ಮಾತ್ರ ಪ್ರೀತಿಸುವದರಿಂದಾದರೆ, ದೇಶದೇಶಗಳೊಳಗೆ ಸಂಘರ್ಷವಾಗುವದು ಖಂಡಿತ. ಅದರಿಂದ ಜಗತ್ತಿನಲ್ಲಿ ಅಶಾಂತಿಯು ಹರಡುವದು. ಜಗತ್ತಿನಲ್ಲಿ ವಿಶ್ವ ಭ್ರಾತೃತ್ವ ಭಾವನೆಗೆ ಪುಷ್ಟಿಕೊಟ್ಟು ವಿಶ್ವ ಶಾಂತಿಯನ್ನು ಸ್ಥಾಪಿಸುವ ಶಕ್ತಿಯು ಕೇವಲ ಧರ್ಮಕ್ಕೆ ಮಾತ್ರ ಇರುತ್ತದೆ.

ಮನುಷ್ಯಜಾತಿಯು ಒಂದಾಗಿರುವದು ನಿಜವಾದರೆ, ಮನುಷ್ಯ ಜಾತಿಯನ್ನು ಒಂದು ಮಾಡುವದೇ ಜೀವನ ಧ್ಯೇಯವಾಗಿರಬೇಕಾದ್ದು ನಿಜವಾದರೆ, ಜನಾಂಗ ಜನಾಂಗಗಳೊಳಗಿನ ದ್ವೇಷಭಾವನೆಯು ನಿರ್ಮೂಲ ನಷ್ಟವಾಗಬೇಕಾದ್ದು ಅಗತ್ಯವಾಗಿದೆ. 'ನಿಮ್ಮ ಸೃಷ್ಟಿಕರ್ತನು ಒಬ್ಬನೇ-ನೀವೆಲ್ಲರೂ ಸಹೋದರರು' ಎನ್ನುವಂಥ ಯಾವದಾದರೊಂದು ಮಹತ್ವಪೂರ್ಣ ಧರ್ಮವು ಮಾತ್ರ ಜಗತ್ತಿನ ಒಂದಕೊಂದು ಪ್ರತಿಕೂಲವಾದ ಶಕ್ತಿಗಳನ್ನು ಒಂದು ಕೂಡಿಸಿ, ಮನುಷ್ಯಜಾತಿಯನ್ನು ಒಂದಾಗಿ ಸಂಘಟಿಸಲಿಕ್ಕೆ ಸಮರ್ಥವಾಗಿರುತ್ತದೆ. ಆದ್ದರಿಂದಲೇ ಪ್ರಾಚೀನ ಭಾರತದಲ್ಲಿ ಪರಮಾತ್ಮನನ್ನು ಅವರ್ಣನೀಯ ಅದ್ವೈತನೆಂದೂ ಕರೆದಿದ್ದರು.

ಹೀಗಿರುವದರಿಂದ ಆಧುನಿಕ ಭಾರತದ ನಿರ್ಮಾತರು, ಒಬ್ಬರನ್ನೂ ಬಿಡದೆ ಎಲ್ಲರೂ ಪರಮ ಧಾರ್ಮಿಕರಾಗಿದ್ದುದರಲ್ಲಿಯಾಗಲೀ, ಅವರು ಧರ್ಮಸೇವೆಗಾಗಿ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣ ಮಾಡಿದುದರಲ್ಲಿಯಾಗಲೀ ಯಾವ ಆಶ್ಚರ್ಯವೂ ಇರುವದಿಲ್ಲ. ಭಾರತೋದ್ಧಾರವು ನಿಜವಾಗಿ, ರಾಜಕೀಯ ಸ್ವಾತಂತ್ರ್ಯಪ್ರಾಪ್ತಿಯಿಂದ ಅಲ್ಲ ಸ್ವಂತ ಅದಾದ ಮೇಲೆ ವಿಶ್ವಧರ್ಮದ ಪ್ರಚಾರದಿಂದ ಆಗಲಿಕ್ಕಿದೆ.



ಶಿಶುವಿನ ಆರೋಗ್ಯವು ಹೆತ್ತವರ ಸಂಪತ್ತು.

ನಮ್ಮ ಈ ನಿರ್ಭಾಗ್ಯ ದೇಶದಲ್ಲಿ ಶಿಶು ಮರಣವು ಒಂದು ಮಹಾ ಶಾಪವಾಗಿರುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಸಾಂಪತ್ತಿಕ ತರದ ಅನೇಕ ಕಾರಣಗಳಿವೆ.

ಶಿಶುಗಳ ಪೀಡೆಗಳಲ್ಲಿ, ಯಕೃತ್ತು ಸಂಬಂಧ ಪೀಡೆಗೆ ಬಲಿಯಾಗುವ ಶಿಶುಗಳ ಸಂಖ್ಯೆಯು ಹೆಚ್ಚು. ಕೆಸರಿನ ಬಣ್ಣ ಮಲ, ಅಜೀರ್ಣ, ಹಸಿವೆಯಿಲ್ಲದಿರುವಿಕೆ, ಮಗು ಕರ್ಕಶವಾಗಿರುವುದು, ಮಲಬದ್ಧತೆ, ಜ್ವರ, ಹೊಟ್ಟೆ ಉಬ್ಬುವಿಕೆ, ಇವುಗಳೆಲ್ಲಾ ಈ ಪೀಡೆಯಲ್ಲಿ ಕಾಣಿಸಿಕೊಳ್ಳುವ ಚಿಹ್ನೆಗಳು. ವಿಪರೀತ ಅವಸ್ಥೆಗೆ ತಲಪಿದ ಪೀಡೆಗಳಲ್ಲಿ, ಯಾವಾಗಲೂ ಹಳದಿ ಬಣ್ಣದ ಮೂತ್ರ, ಹಳದಿ ಬಣ್ಣದ ಕಣ್ಣುಗಳು, ಕೈಕಾಲು ಬಾತುವಿಕೆ, ಹೊಟ್ಟೆಯ ಮೇಲೆ ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆ ದೊಡ್ಡದಾಗಿರುವುದು, ಇವುಗಳು ಚಿಹ್ನೆಗಳು

ನಿಮಗೆ ಸಂದೇಹಗಳಿರುವುದಾದರೆ, ಯಕೃತ ಪ್ರವೀಣರಾದ ಜಮ್ಮಿ ವೆಂಕಟ್ರಮಣಯ್ಯರವರನ್ನು ವಿಚಾರಿಸಿರಿ. ಅವರ ಅನುಭವಶಾಲಿ ಬೋಧನೆಯನ್ನು ಪಡೆದು ವರ್ತಿಸುವವರಾಗಿರಿ.

'ಲಿವರ್ ಕ್ಯೂರ'ನ್ನೇ ಉಪಯೋಗಿಸಿರಿ—ಯಕೃತ್ತು ಮತ್ತು ಪ್ಲೀಹ ಸಂಬಂಧ ಎಲ್ಲಾ ಪೀಡೆಗಳಿಗೆ ಅದೊಂದು ಖಾತ್ರಿ ಮತ್ತು ದಿವ್ಯವಾದ ಔಷಧಿ ಎಂದು ಸರ್ವವಿಧಿತವಾಗಿರುವುದು

ಹೆಚ್ಚಿನ ವಿವರಗಳಿಗೆ—

ಡಾ॥ ಜಮ್ಮಿ ವೆಂಕಟ್ರಮಣಯ್ಯ

ಯಕೃತ್ತು ಮತ್ತು ಪ್ಲೀಹ ಸ್ಪೆಶಲಿಷ್ಟರು,

ಮೈಲಾಪುರ, ಮದರಾಸು.

ದೀಪ ನಿರ್ವಾಣ

ಅನುವಾದಕರು: ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಲಕ್ಷ್ಮಿಯ ಸ್ವಪ್ನಲೋಕವು ಸುಟ್ಟು ಭಸ್ಮೀಭೂತವಾಯಿತು. ಅವಳು ಯಾವ ಯಾವ ಪ್ರಾಸಾದಗಳನ್ನು, ಉಪವನಗಳನ್ನು, ಆನಂದದ ತೊರೆಗಳನ್ನು ನೋಡಿದ್ದಳೋ, ಅವುಗಳೆಲ್ಲವು ಪ್ರಲಯದ ಪ್ರವಾಹದಲ್ಲಿ ಕೊಚ್ಚಿಹೋದುವು. 'ಅವನು ಬರುವನು-ಬರುವನು, ಬಂದೇ ಬರುವನು' ಎಂದು ಅವಳು ನಿರೀಕ್ಷಿಸಿಕೊಂಡಿದ್ದಳು. ಆದರೆ ಈಗ ಅವನು ಬರುವವನಾಗಿದ್ದಾನೆ, ಪರಂತು ಅವಳಿಗೆ ಆ ಆನಂದವಿಲ್ಲ

'ಅಪ್ಪಾ ಎಂದರೆ ಏನು, ಅಮ್ಮಾ?'

'ನೋಡು, ಆಚೆಮನೆಯ ಕಿಟ್ಟನಿಗೆ ಅಪ್ಪನಿದ್ದಾರಲ್ಲ, ಹಾಗೆ ನಿನಗೂ ಒಬ್ಬ ಅಪ್ಪ ಇದ್ದಾರೆ ಗೊ.'

'ಎಲ್ಲಿದ್ದಾರೆ, ಅವರು ಅಮ್ಮಾ?'

'ಊರಿಗೆ ಹೋಗಿದ್ದಾರೆ.'

'ಎಂದು ಬರುತ್ತಾರೆ, ಅಮ್ಮಾ?'

'ಶೀಘ್ರದಲ್ಲಿಯೇ ಬರುವರು'—ಹೀಗೆಂದು [illegible]ತ್ತ, ಲಕ್ಷ್ಮಿಯ ಕಣ್ಣುಗಳಿಂದ ಎರಡು ಹನಿ[illegible]ದು ಇಳಿದು ಬಂದಿತು. ದುಃಖದಿಂದ ಅವಳ [illegible]ತವು ಬಿಗಿದುಬಂದಿತು.

'ಬರುತ್ತಾ ನನಗಾಗಿ ಏನೇನು ತರುವರು, [illegible]ಮ್ಮಾ?'

'ಎಲ್ಲವನ್ನು ತರುವರು, ಮಗೂ! ಪೆಪ್ಪರಮಿಂಟು, ಬೂಟ್ಸು, ಗೊಂಬೆ, ಇಲೆಕ್ಟ್ರಿಕ ದೀಪ—[illegible]ವನ್ನು ತರುವರು.'

ಸರಿ, ಇದನ್ನು ಕೇಳಕೇಳುತ್ತಲೇ ಜಯ[illegible]ಮನು ಹಾರುತ್ತ ನೆಗೆಯುತ್ತ ಹೊರಗೆ ನಡೆ[illegible]ನು. 'ನನ್ನ ಅಪ್ಪ ಬರುವವರಿದ್ದಾರೆ, ಅವರು [illegible]ನಗೋಸ್ಕರ ಎಲ್ಲವನ್ನು ತರುವವರಿದ್ದಾರೆ' [illegible]ದು ಕೂಗುತ್ತ, ಆನಂದಪರಾತ್ರ(?) ಅವನು ತನ್ನ [illegible]ತೆಯ ಮಕ್ಕಳೊಂದಿಗೆ ಆಟ ವಿನೋದಗಳಲ್ಲಿ [illegible]ಲೀನನಾದನು.

\+ \+ \+ \+

ಅವನು ಲಕ್ಷ್ಮಿಯ ಏಕಮಾತ್ರ ಜೀವನ[illegible]ನವಾಗಿದ್ದನು. ಲಕ್ಷ್ಮಿಯ ಗಂಡನು [illegible] [illegible]ಗಿಯಾಗಿ ಮನೆಯ ತೇ[illegible] ಇದು ಬಿಟ್ಟಿದ್ದನು. [illegible] ಕೆಲಸ ಸಿಕ್ಕದಿಲ್ಲ, ಹೊಟ್ಟೆ ಹೇಗೆ [illegible] ಬೇಕು? ಲಕ್ಷ್ಮಿಯ ತನ್ನ [illegible]ಯಿಯ ಮನೆಯಲ್ಲಿ ಬಹಳ ಸ್ನೇಹದಿಂದ [illegible]ಕಲ್ಪಟ್ಟಿದ್ದಳು. ಆದ್ದರಿಂದ ಆಕೆ ತನ್ನ [illegible]ಯಿಯ ಮನೆಯಲ್ಲಿಯೇ ಇರತೊಡಗಿದಳು. [illegible] ಗಂಡನ ಬರುವಿಕೆಗಾಗಿ [illegible] ಅವ[illegible] ಮೆಚ್ಚುತ್ತಿರಲಿಲ್ಲ. ಆದರೆ, ಪಾಪದವಳು, [illegible]ದರೂ ಏನು ಮಾಡಿಯಾಳು?

ಮಗುವು ಹುಟ್ಟಿ ಒಂದು ವರ್ಷವಾಗಿತ್ತು. [illegible]ಕ್ಷ್ಮಿಯ ಗಂಡನು ಗೃಹಜೀವನದ ಆನಂದ[illegible]ವನ್ನು ಪೂರ್ಣರೂಪದಿಂದ ಪಡೆಯಲಿಕ್ಕೆ ಸಮ[illegible]ರ್ಥನಾಗಲಿಲ್ಲ. ಇತರರ ಮನೆಯಲ್ಲಿ ಎಷ್ಟು ದಿನ ಕಾಲ ಕಳೆಯಬಹುದಾಗಿತ್ತು? ಈ [illegible]ಲೋಚನೆಯಲ್ಲಿ ಅವನ ಮನಸ್ಸು ಒಡೆದು [illegible]ರುಚೂರಾಯಿತು. 'ದೇಶಾಂತರ ಹೋಗಿ [illegible]ದರೂ ಹಣ ಸಂಪಾದಿಸು' ಎಂಬದೊಂದು [illegible]ದೆ ಇತ್ತು. ಆದ್ದರಿಂದ ಅವನಿಗೆ ಪರದೇಶಕ್ಕೆ [illegible] ಹಣ ಸಂಪಾದಿಸುವ ಇಚ್ಛೆ [illegible]

ಇಚ್ಛೆಯು ದಿನದಿನಕ್ಕೆ ಪ್ರಬಲವಾಗುತ್ತ [illegible]ದಿತು.

ಕಡೆಗೆ ಒಂದು ದಿನ, ಆತನು ಮನಸ್ಸನ್ನು [illegible]ಮಾಡಿ ರಂಗೂನಿಗೆ ಹೊರಟು ಹೋದ[illegible]. [illegible]ತ್ತಾ ಅವನು ತನ್ನ ಹೆಂಡತಿಯನ್ನು [illegible]—'ದೇವರ ದಯೆಯಿಂದ ನನಗೆ ಒಳ್ಳೇ [illegible]ಕರಿ ಸಿಕ್ಕುವದೆಂಬ ಆಸೆ ಇದೆ. ಅದು ಸಿಕ್ಕ[illegible]ಲೇ ನಿನ್ನನ್ನೂ ಮಗುವನ್ನೂ ಅಲ್ಲಿಗೆ ಕರೆಸಿ[illegible]ಳ್ಳುವೆನು.'

ಅಲ್ಲಿ [illegible] ಕಂಪನಿಯೊಂದರಲ್ಲಿ ಅವನಿಗೆ [illegible]ದು ನೌಕರಿ ಸಿಕ್ಕಿತು. ಒಡೆದುಹೋದ [illegible]ನಸ್ಸು ಪುನಃ ಕೂಡತೊಡಗಿತು. ತಾನೂ [illegible] ಈ ಪ್ರಪಂಚದಲ್ಲಿ ಒಬ್ಬ ಮನುಷ್ಯನಾಗಿ[illegible]ನೆ ಎಂಬ ಧೈರ್ಯವು ಅವನಿಗೆ ಬಂತು. [illegible]ಕ್ಷ್ಮಿಯನ್ನು ಕರೆಸಿಕೊಳ್ಳುವ ಅವನ ವಿಚಾರ[illegible]ಯಿತು. 'ಆದರೆ ಇನ್ನೂ ಒಂದೆರಡು ವರ್ಷ[illegible]ಳು ಕಳೆದರೆ, ಇನ್ನೂ ಕೆಲವು ರೂಪಾಯಿಗಳು [illegible]ಟ್ಟಾಗುವವು. ಆ ಮೇಲೆ ಲಕ್ಷ್ಮಿಯನ್ನು ಕರೆ[illegible]ದರೆ, ಸುಖದಿಂದ ದಿನಗಳನ್ನೂ ಕಳೆಯ[illegible]ಲ್ಲೆನು. ಇಷ್ಟು ದಿನ ಆಕೆಯೊಡನೆಯೇ [illegible]ದ್ದೆ. ಈಗ ಕೆಲವು ದಿನ ಬೇರೆಯಾಗಿದ್ದರೆ [illegible]ನು ನಷ್ಟವಾದೀತು' ಎಂದೂ ಅವನು ಆಲೋ[illegible]ಸಿದ. 'ಇನ್ನು ಕೆಲವು ತಿಂಗಳುಗಳಲ್ಲಿ ಬಂದು [illegible]ನ್ನನ್ನು ಕರೆಸಿಕೊಳ್ಳುತ್ತೇನೆ' ಎಂದವನು ಹೆಂಡ[illegible]ತಿಗೆ ಕಾಗದ ಬರೆದ.

೨

ಆರು ತಿಂಗಳುಗಳು ಕಳೆದುವು. ಲಕ್ಷ್ಮಿಯ ಗಂಡನು ಬರಲಿಲ್ಲ. ಲಕ್ಷ್ಮಿಯ ಮನಸ್ಸು, ಸಮುದ್ರದೊಳಗಿನ ಹುಲ್ಲುಕಡ್ಡಿಯ ಹಾಗೆ ಉರುಳಾಡತೊಡಗಿತು.

'ಅವ್ವ ಇಲ್ಲಿ ಇದ್ದಾಗ, [illegible]ಂದು ನೌಕರಿ ಬೇಕೆಂದು [illegible]' ಎಂದು ನಾನು [illegible] ಆದರೆ ನನ್ನ [illegible] ಅಪರಾಧಕ್ಕಾಗಿ ನನಗೆ ಈ ಶಿಕ್ಷೆಯ? [illegible] ಅಸಹ್ಯ[illegible] [illegible] ದರವಾಗಿ [illegible] ಹೇಗೆ [illegible] ತ್ತಾನೆ' [illegible]ಗಳನ್ನು ಕೇಳ[illegible] ಆಸೆ '[illegible]' ನನಗೋಸ್ಕರ ಬರುವವರಿದ್ದರೆ, [illegible] ಆಗತ್ಯ [illegible] ಪತ್ರ ಬರೆದೆ.

[illegible] ಲಕ್ಷ್ಮಿ! ಇನ್ನು ಕೆಲವೇ ದಿನ [illegible] ಹುಚ್ಚಿ, ನನಗೆ ಮಗನನ್ನು ನೋಡುವ ಆಸೆ ಇಲ್ಲವೆಂದು ತಿಳಿದೆಯಾ? ಆದರೆ ಏನು ಮಾಡಲಿ, ರಜೆಯೇ ಸಿಕ್ಕ[illegible]ವದಿಲ್ಲ. ಇದು ಹೇಳುತ್ತ ಇಲ್ಲಿ [illegible] ಮಾಡಬೇಕಾದ ಕೆಲವು ಕೆಲಸಗಳಿವೆ. ಈ ಕೆಲಸಗಳನ್ನು ನಾನು ಪೂರೈಸಿದೆನಾದರೆ ನನಗೆ ಸಂಬಳದಲ್ಲಿ [illegible]ಯಾಗುವುದು. ಆದ್ದರಿಂದ ಇನ್ನು ಒಂದೆರಡು ತಿಂಗಳು ತಾಳಿಕೊಳ್ಳು.'

ಇನ್ನು ಆರು ತಿಂಗಳುಗಳು ಕಳೆದುವು. 'ಒಂದು ವರ್ಷವಾಯಿತು. ಇನ್ನೂ ತಮ್ಮ ಮನಸ್ಸು ಕರಗಲಿಲ್ಲವೇ? ನಾನು ಅಂಥ ಯಾವ ಅಪರಾಧ ಮಾಡಿ[illegible] ಸ್ವಾಮಿ!' [illegible] ಎಂದು ಲಕ್ಷ್ಮಿಯು ಪುನಃ ಕಾಗದ ಬರೆದಳು.

[illegible] ತಿಂಗಳ ಕಳೆದ ಮೇಲೆ ಉತ್ತರ ಬಂದಿತು—'[illegible] ಸಂಬಳದ [illegible]ದ್ದೇನೆ. ಹೀಗೆ ಇನ್ನು [illegible] ತಿಂಗಳು ಕಳೆಯಬೇಕಾಗುವದು. ಆ ವೇಳೆ ನಿನ್ನನ್ನು ಕರೆಸಿಕೊಳ್ಳುವ ವಿಚಾರವಾದರೆ, ಮತ್ತೆ ನಿನಗೆ ಕಾಗದ ಬರೆಯುವೆನು. ಮಗುವಿನ ಆರೈಕೆ ಚೆನ್ನಾಗಿ ನೋಡಿಕೊಳ್ಳು.'

ಒಂದು ವರ್ಷದ ಹಿಂದೆ ಇನ್ನೊಂದ ವರ್ಷವು ಕಳೆಯಿತು. ಮೂರನೆ ವರ್ಷವು ಆಗಿ ನಾಲ್ಕನೆಯ ವರ್ಷವೂ ಮುಗಿಯಿತು. ಈಗ ಜಯರಾಮನು ಐದು ವರ್ಷದ ಹುಡುಗ. ಅವನ ಮಧುಮಧುರವಾದ ತೊದಲು ಮಾತುಗಳನ್ನು ಕೇಳಬಾರದಿಲ್ಲ. ಲಕ್ಷ್ಮಿಯು ನಿಟ್ಟುಸಿರು ಬಿಟ್ಟು—'ಇದನ್ನು ಅವರು ಕೇಳಲಾರರಲ್ಲ!' ಎಂದು ಮರುಗುತ್ತಾಳೆ.

ಈ ನಾಲ್ಕು ವರ್ಷಗಳ ಅವಧಿಯಲ್ಲಿ ಪತಿ ಪತ್ನಿಯರೊಳಗೆ ಪತ್ರವ್ಯವಹಾರ ನಡೆಯುತ್ತ ಇದ್ದಿತು. ಆ ಪತ್ರಗಳಲ್ಲಿ ಸ್ನೇಹಸಿಕ್ತ ಮಾತುಗಳಿಗೆ ಕಡಿಮೆ ಇರಲಿಲ್ಲ. ತನ್ನ ಪ್ರಿಯತಮನ ಪತ್ರಗಳನ್ನು ಲಕ್ಷ್ಮಿಯು ಜೋಪಾನವಾಗಿ ಇಡುತ್ತಿದ್ದಳು. ಒಂದೊಂದು ಪತ್ರವು ಬಂದಾಗ [illegible]ಲ್ಲ—ಹೌದು, ಈ ಪತ್ರದಲ್ಲಿ ಅವರು ಊರಿಗೆ ಹೊರಟು ಬರುವ ಸಮಾಚಾರ ಬರೆದಿದ್ದಾರೆ' ಎಂದು ಆಲೋಚಿಸಿ ಅದನ್ನು ಆತುರದಿಂದ ತೆರೆ[illegible]ಯುತ್ತಿದ್ದಳು. ಕೊನೆಯ ಸಾಲಿನ ತನಕ ಧ್ಯಾನವಿಟ್ಟು ಓದುತ್ತಿದ್ದಳು. ಪ್ರತಿಯೊಂದು ಪತ್ರದಲ್ಲಿ ಗಂಡನು—ತಾನು ಬಾರದಿರುವ ಕಾರಣವನ್ನು ಬರೆಯುತ್ತಿದ್ದ, ಯಾವಾಗ ಬರುವನೆಂದು ತಾರೀಖನ್ನೂ ಹೇಳುತ್ತಿದ್ದ. ಆಗ ಒಂದು ನಿಟ್ಟುಸಿರಿನಿಂದ ಅವಳು ಆ ಪತ್ರವನ್ನು ಆಲುಗಾಡಿಸಿ [illegible]ಡುತ್ತಿದ್ದಳು. ತನ್ನ ಎರಡು ಕಣ್ಣೀರು ಹನಿಗಳ ಮೋಹರು ಒತ್ತಿ ಪೆಟ್ಟಿಗೆಯ ಹಳೆ ಪತ್ರಗಳ ಜತೆ ಹೊಸದಾಗಿ ಬಂದುದನ್ನೂ [illegible] ಇಡುತ್ತಿದ್ದಳು. ಹೀಗೆ ಅವಳು ಬಹಳ [illegible] [illegible]ದ್ದಳ.

೩

\+ \+ \+ \+

'ಲಕ್ಷ್ಮಿಬಾಯಿಗೆ ಕಾಗದ' ಎಂದು ಟಪಾ[illegible] [illegible] ಕಾಗದ [illegible] ದಳೇ [illegible] ಕಾಗದ ಪಡೆದ [illegible] ಕೈಗೆ ಕೊಟ್ಟ [illegible] ನೋಡುವ [illegible] [illegible] ಕಾಗದವನ್ನು ತೆರೆದ ಓದ[illegible] [illegible]ಗಿದಳ. ಅದೇನ? ಅವಳ ಮುಖ [illegible] ಆನಂದ [illegible] ಅವಳ ಕಣ್ಣುಗಳಲ್ಲಿ ಅದೆಂಥ ಕಾಂತಿ! ಆದರೆ ಪುನ [illegible] ಅದೇನು? ಅವಳ [illegible] [illegible] [illegible] ಮುಚ್ಚಿದುವು? ಅವಳ [illegible] ಅವ[illegible]ವಾಗಿದೆ?

ಹುಡುಗನ [illegible] [illegible], [illegible] [illegible] ನೋಡ[illegible]. [illegible] [illegible] [illegible] ಬಂದ ಆ ಜ್ಯೋತಿ ಮತ್ತು ಅನಂತರ ಅದು [illegible]ಭೂತವಾದ ಕಾರಣ—ಅದೆಲ್ಲ ಆ ಪಾಪದ ಬಾಲಕನಿಗೆ [illegible] [illegible]?

'ಅವನು ಬರುವನೆಂದಾನೆ' ಅದು ಸತ್ಯ. ಆದ್ದರಿಂದಲೇ ಅವಳ [illegible] [illegible]. [illegible]. ಆದರೆ—? ಈಗ [illegible] [illegible] ಆ ಹಳೆಯ [illegible] [illegible] [illegible] [illegible]ವು ಬರ[illegible], ಬರುತ್ತದೆ—ಎಂದು ಜರ್ಜರಿತ ಮೂರ್ತಿ, ಕ್ಷಯದಿಂದ ಪೀಡಿತ ವಾದ್ದು! 'ಅಯ್ಯೋ, ದೇವರೇ!' ಎಂದು ಅವಳು ಚೀರಿದಳು. ಮತ್ತು ತಲೆಯ ಮೇಲೆ ಕೈ ಇಟ್ಟು ಅಲ್ಲೇ ನೆಲದ ಮೇಲೆ ಕೂತುಕೊಂಡಳು.

ಅವನು ಬರೆದಿದ್ದನು—'ಪ್ರಿಯೆ! ನಿನ್ನೊಡನೆ ಯಾವ ಮಾತನ್ನಾದರೂ ಅಡಗಿಸಿಡುವದರಿಂದ ಏನು ಲಾಭ? ಕಾರ್ಯಬಾಹುಳ್ಯದಿಂದ ನನ್ನ ದೇಹಾರೋಗ್ಯವು ಕೆಟ್ಟಿತು. ಅಲ್ಲಿಯ ಮೋದ ಪ್ರಮೋದಗಳಿಂದ ಸಾಕಲ್ಪಟ್ಟ ನನ್ನ ಶರೀರವು ಇಲ್ಲಿಯ ಹವಾಮಾನ ಮತ್ತು ಸಂಚಾರಾದಿಗಳನ್ನು ಸಹಿಸಲಾರದಾಯಿತು. ಕಳೆದ ವರ್ಷವೇ ನನಗೆ ಕ್ಷಯವು ಆಗಿತ್ತು. ಉಚಿತ ಔಷಧಿಗಳನ್ನು ಸೇವಿಸಿ, ವ್ಯಾಧಿಯು ದೂರವಾದ ಮೇಲೆ ಅಲ್ಲಿಗೆ ಬರುವದೆಂದು ನಾನು ಆಲೋಚಿಸಿದ್ದೆ. ಆದರೆ 'ನನ್ನ ಪ್ರಾಣಗಳನ್ನು ಹೀರಲಿಕ್ಕೇನೇ ಈ ರೋಗವು ಬಂದಿರುವಂತೆ' ನನಗೆ ತೋರುತ್ತದೆ. ಇಷ್ಟರ ತನಕ ಈ ವಿಷಯವನ್ನು ನಿನ್ನಿಂದ ಅಡಗಿಸಿ ಇಟ್ಟಿದ್ದೆ. ಆದರೆ ಮುಂದಕ್ಕೂ ಇದನ್ನು ಅಡಗಿಸಿಡುವದು ಉತ್ತಮವಲ್ಲ. ನನ್ನ ಜೀವನ ಕಾಲವು ಈಗ ಸಂಕುಚಿತವಾಗುತ್ತ ನಡೆದಿದೆ. ಇದರ ಸೂಚನೆಯನ್ನು ಕೊಡದೇನೇ ಅಲ್ಲಿಗೆ ಬರಬೇಕೆಂದು ನನ್ನ ಇಚ್ಛೆಯಿತ್ತು. ಆದರೆ ಅದರಿಂದೇನು? ಒಮ್ಮೆಲೆ ಒಂದು ದಿನ [illegible] ಸಂಗತಿ ನಿಮಗೆ ಗೊತ್ತಾಗಲಿಕ್ಕೇ [illegible] ಆಕಸ್ಮಾತ್ತಾಗಿ ಅದು ತಿಳಿದುಬರುವದಕ್ಕಿಂತ, ಸ್ವಲ್ಪ ಸಮಯ ಮೊದಲೇ ತಿಳಿದಿದ್ದರೆ ಮನಸ್ಸಿಗೆ ಕೊಂಚ ಸಮಾಧಾನವಾಗುತ್ತದೆ. ದೇವರ ದಯೆಯಿಂದ, ಕಡಿಮೆ ಪಕ್ಷ, ನನ್ನ ಕೊನೆಗಾಲಕ್ಕಾದರೂ ನಾನು ನಿನ್ನ ಬಳಿಗೆ ಬಂದು ಸೇರಿಯೇನೇನೋ. [illegible] [illegible] [illegible] ಬಡತನದಲ್ಲಿ ಮತ್ತು ನಿರಾಶ್ರಯಗಳಾಗಿ ಬಿಟ್ಟುಹೋಗುವದಿಲ್ಲ ಎಂಬ ಸಂತೋಷವು ನನಗಿದೆ. ನನ್ನ ಮಗನು [illegible] ಭವಿಷ್ಯದಲ್ಲಿ ಯಾರ ಮೋರೆಯನ್ನೂ ನೋಡಬೇಕಾದುದಿಲ್ಲ. ಅವನಿಗಾಗಿಯೇ ನಾನು ಸಾಕಷ್ಟು ಹಣ ಒಟ್ಟುಮಾಡಿದ್ದೇನೆ. ನಮಗೋಸ್ಕರ ಒಂದು ಬೇರೆ ಮನೆ ಹುಡುಕಿ ಇಡಬೇಕಾಗಿ ನನ್ನ ಅಣ್ಣನೊಡನೆ ಹೇಳು. ನಿಮ್ಮನ್ನು ನೋಡಬೇಕೆಂಬ ಆಸೆ ಅಧಿಕವಾಗುತ್ತಿದೆ.'

ಲಕ್ಷ್ಮಿಯ ಸ್ವಪ್ನಲೋಕವು ಸುಟ್ಟು ಭಸ್ಮವಾಯಿತು. ಅದರಲ್ಲಿ ಅವಳು ಯಾವ ಯಾವ ಪ್ರಾಸಾದಗಳನ್ನು, ಉಪವನಗಳನ್ನು ಮತ್ತು ಆನಂದದ ತೊರೆಗಳನ್ನು ಕಂಡಿದ್ದಳೋ ಅವುಗಳೆಲ್ಲ ಪ್ರಲಯದ ಪ್ರವಾಹದಲ್ಲಿ ತೇಲಿಹೋದವು. ಅವನ ಬರವನ್ನು ಅವಳು ನಿರೀಕ್ಷಿಸಿಕೊಂಡಿದ್ದಳು. ಅವನು ಈಗ ಬರುವನು ಆಗ ಬರುವನು ಎಂದು ಹಾರೈಸಿದ್ದಳು. ಈಗ ಅವನು ಬರುವವನಿದ್ದಾನೆ. ಆದರೆ ಅವಳಿಗೆ ಮಾತ್ರ ಆನಂದವಿಲ್ಲ.

\+ \+ \+ \+

ಅವನು ಬಂದುಬಿಟ್ಟನು. ಆದರೆ ರೋಗದ ನಾಶಕ ಶಕ್ತಿಯು ಎಷ್ಟು [illegible]ವಾಗಿತ್ತು

(ಮುಂದಿನ ಪುಟವನ್ನು ನೋಡಿರಿ)

THE

Canara Banking Corporation, Udipi, Ltd.

INCORPORATED IN BRITISH INDIA

ESTD 1906

BOARD OF DIRECTORS:

Dr U Sundar Ram Pai, M B & B S, *President*

M R Ry. R M Kamad, Avl, *Vice President*.

M R Ry. Kochikar Padmanabha Pai Avl, B A,

M. R Ry. B. Vaikunta Baliga, Avl, B. A., B. L.,

M R Ry Kastur Nagesh Pai Avl,

M R. Ry. Mijar Govinda Pai, Avl.,

Dr. U Padmanabha Mallya, L M & S,

M R. Ry M. Narayana Kamath, Avl., B. A.,

M. R. Ry. K. Narasimha Kamath, Avl,

M R. Ry. U. K Bhujanga Nayak, Avl,

V. R. Kamath, B A., LL B.,
Manager.

ಅಮೃತಸರದಲ್ಲಿ

ರೈತರ ಮೇಲೆ ಲಾಠಿಪ್ರಯೋಗ

ನೀರಾವರಿ ಕಾಲುವೆಗಳ ಮೇಲೆ ಹೊಸ ತೆರಿಗೆ

ಜಲಿಯನ್‌ವಾಲಾಬಾಗ್ ಸ್ಮರಣೀಯ ಸ್ಥಳ. ಡಾಯರ್, ಒಡ್ವಾಯರುಗಳ ಸಮ್ಮಿಳಿತ ಪ್ರೇಮಬಂಧನದಿಂದ 'ಪ್ರಜೆ' ಕೊಟ್ಟದ್ದ ವೇ ನಾಶವಾಗ..ವಂತಾದ ಜಲಿಯನ್ ವಾಲಾಬಾಗ್! ಅಲ್ಲೇ ಹಲವು ಸಾವಿರ ರೈತರು ಸಭೆ ನಡೆಸಿದ್ದರು ಸರದಾರ ಉದಮಸಿಂಗ ನಕ್ಷೆ ...ಕರೇ ಅಧ್ಯಕ್ಷರು. ಸಭಾ ಕಾರಣ—ನೀರಾವರಿ ಕಾಲುವೆಗಳಿಂದ ಇನ್ನು ಹೊಸ ತೆರಿಗೆ ...ಸಿದಂತೆ ಅನುಕೂಲವಾಗಿ, ನೀರಿನ ಹರಿ...ನ್ನು ಕಡಿಮೆಮಾಡುವ ಸರಕಾರದ ಉದ್ದೇಶವನ್ನು ನಿರಾಕರಿಸುವುದು

ಸರ್ವರೂ ಶಾಂತವಾಗಿರಬೇಕೆಂದೂ ...ಧ ತೋರಬಾರದೆಂದೂ ಸಾರಲಾಯಿತು ...ಸಮಸ್ತ ಗ್ರಾಮಗಳ ರೈತರ ಪ್ರತಿನಿಧಿಗಳಾಗಿ 500 ಮಂದಿ, ಸುಮಾರು 2–45ಕ್ಕೆ ...ಯಾಗಿ ಅಲ್ಲಿಂದ ಹೊರಟರು, ಇವರನ್ನು ...ಬಾಲಿಸಿ ಪ್ರೇಕ್ಷಕರಾಗಿ 5000 ಜನರಿದ್ದರು.

3–30ಕ್ಕೆ ಈ ಮೆರವಣಿಗೆಯು ಸೇತುವೆ...ಯ ಮೇಲೇರಿತು. ಸೇತುವೆಯ ಆ ಕಡೆ ...0 ಪೋಲೀಸರು, ಮೆಜಿಸ್ಟ್ರೇಟರೇ ಮೊದಲಾದ ...ಧಿಕಾರಿಗಳು, ಸವಾರರು ಹಾಜರಾಗಿದ್ದರು

4 ಗಂಟೆಗೆ ಸಾಧಾರಣ ಅರೆವಾಸಿ ಮೆರವಣಿಗೆ ರೈಲ್ವೆ ಮಾರ್ಗ ದಾಟಿತು. ಅತ್ತ ಬರ...ದಾಗಿ ಮೆಜಿಸ್ಟ್ರೇಟರ ಅಪ್ಪಣೆ. ಅಕ್ರಮ ...ಟನೆಂದಾಯ್ತು ಈ ಮೆರವಣಿಗೆ ಅಧಿ...ರಿಗಳಿಗೆ ನಮ್ಮ ಹಾಲಹವಾಲುಗಳನ್ನು ...ಳಿಕೊಳ್ಳಲು ಮುಂದರಿಯುತ್ತೇವೆಯ್ಯ— ...ದರು ಸರದಾರ ಉದಮಸಿಂಗರು

ಮೆಜಿಸ್ಟ್ರೇಟರು ಲಾಠಿ ಪ್ರಯೋಗಕ್ಕೆ ...ಪ್ಪಣೆಕೊಟ್ಟರು ಮೆರವಣಿಗೆಯ ಪ್ರತಿನಿಧಿ...ಗಳು ಅಲ್ಲೇ ದಾರಿಯಲ್ಲಿ ಮಲಗಿದರು 10–...ಮಿನಿಟು ವರೆಗೆ ಇವರ ಮೇಲೆ ಲಾಠಿ ...ಯೋಗ ನಡೆಯಿತು ಉದಮಸಿಂಘರ ಬಲ...ಕ್ಕಿನ ಮೇಲೆ ಪೆಟ್ಟು.

ರೈಲ್ವೆ ಬಳಿಯಿಂದ ಯಾರೋ ಪೋಲೀಸರ ಮೇಲೆ ಕಲ್ಲು ಬಿಸಾಡಿದರು ಇದರಿಂದ ಪೋ...ಸ್ ಸುಪರಿಂಟೆಂಡೆಂಟರಿಗೆ ಪೆಟ್ಟು ತಗಲಿತು, ...ಖಕ್ಕೆ

ಸೇವಾಸಮಿತಿಯ ಸ್ವಯಂಸೇವಕರು, ...ಟರು ಆಸ್ಪತ್ರೆಯ ಜವಾನರು, ಇತರರು ...ಗಾಯಗೊಂಡವರ ಆರೈಕೆ ನೋಡಲು ...ದರು

5 ಗಂಟೆಗೆ ಆ ಸ್ಥಳದಲಿ ಮತ್ತಾರೂ ...ಳಿಯಲಿಲ್ಲ ಎಲ್ಲರೂ ಮರಳಿ ಜಲಿಯನ್‌ವಾಲಾ ಬಾಗಿಗೆ ಬಂದು ಮತ್ತೊಂದು ಸಭೆ ...ರಿಸಿದರು

ಆಸ್ಪತ್ರೆಗೆ 250 ಮಂದಿ ಸೇರಿದರು ...ವರನ್ನು ಮಾತ್ರ ಅಲ್ಲಿಟ್ಟುಕೊಳ್ಳಲಾಯಿತು ...ಳಿದವರನ್ನು ಆಗಲೆ ಔಷಧ ಹಚ್ಚಿ ಮನೆಗೆ ಕಳಿಸಿದರು. ಸೇವಾ ಸಮಿತಿಯ ದಳವೂ ...ರಲ್ಲದೆ ನೂರು ಮಂದಿ ಗಾಯಗೊಂಡವ... ಶುಶ್ರೂಷೆ ಮಾಡಿದ್ದಾರು

ಆರು ಮಂದಿ ಪ್ರಮುಖರನ್ನು ಕೈದುಮಾ...ವರು. ಮೇಲಣ ಸರದಾರರೂ ಇವರಲ್ಲೊ...ರು ಇತರರನ್ನು ಲಾರಿಗಳಲ್ಲಿ ಕೂಡ್ರಿಸಿ ...ಲಿಯ ಗಡಿಯ ಹೊರಗೆ ಒಯ್ದು ಬಿಡುಗಡೆ ...ಡುವರಂತೆ

ಈ ಬಗೆಯ ಸಭೆಗಳು ಮೆರವಣಿಗೆ ...ದಲಾದುವನ್ನು ಲಾಠಿಪ್ರಯೋಗದಿಂದ ಮು...ಸುವ ಸರಕಾರದ ಧೋರಣೆಯನ್ನು ಆಕ್ಷೇ...ತಾ 25ರಲ್ಲಿ ಎಸೆಂಬ್ಲಿಯಲ್ಲಿ ಪ್ರಶ್ನೆ...ಗಳಾದುವು.

ಎಸೆಂಬ್ಲಿಯ ಸಭೆಯ ಕನಿಷ್ಠಮಿತಿಗೂ ...ಮ್ಮೆ ಸದಸ್ಯರು ಹಾಜರಾಗಿದ್ದರು.

ಸರ್ ಸಿಕೆಂದರ ಹಯ್ಯಾತಖಾನರು ಈ ...ಕ್ಷೇತ್ರಗಳ ಕಾಲದಲ್ಲಿ,—ಇದೆಲ್ಲವೂ ನೀರಾವರಿ ಇಲಾಖೆಯ ಒಬ್ಬ ನೋಕರನ ಕೃತ್ರಿಮವಾಗಿದೆ. ಕಾಸೂ ತೆರಿಗೆ ಕೊಡದವರಿಗೆ ನೀರೊದಗಿಸಬೇಕಾದರೆ, ಇತರರು ಇನ್ನಷ್ಟು ಹೆಚ್ಚಿಗೆ ತೆರಿಗೆ ತೆರಬೇಕಾಗುತ್ತದೆ 'ಅದಕ್ಕಾಗಿ ಆಕ್ಷೇಪಿಸುವವರಿಗೆ ನಾನಾ ಸಮಾಧಾನ ಕೊಡಲು ಸರಕಾರವು ಸಿದ್ಧವಿದೆಯಾದರೂ ಅದರಿಂದ ಅವರು ಸಮಾಧಾನ ಹೊಂದಲು ಇಚ್ಛಿಸುತ್ತಿಲ್ಲವೆಂದರು.

ಹೊಡೆದಾಟದಲ್ಲಿ ಮುರಿದು ತುಂಡಾದ ಲಾಠಿಗಳನ್ನು ಪೋಲೀಸರು ಪ್ರಯೋಗಿಸಿದ್ದುದನ್ನು ಸಭೆಗೆ ತಿಳಿಸಲಾಯಿತು ಆ ತುಂಡುಗಳನ್ನು ಸಭೆಯಲ್ಲಿ ಪ್ರದರ್ಶಿಸಲಾಯಿತು.

ಸರದಾರ ಹರಜಬ ಸಿಂಘ—ಡಿಪ್ಯುಟಿ ಕಮಿಶನರರು ಹೃದಯವೇ ಇಲ್ಲದವರು. ಗಾಯಗೊಂಡವರ ಕಡೆಗೆ ಕಣ್ಣೆತ್ತಿಯೂ ನೋಡಿಲ್ಲ.

ಶ್ರೀಮತಿ ರಘುಬೀರ ಕೌರ–70 ವರ್ಷದ ಮುದುಕನು ಪ್ರಜ್ಞೆ ತಪ್ಪುವವರೆಗೆ ಪೋಲೀಸರು ಹೊಡೆದುದನ್ನು ನಾನು ಕಂಡವಳು ಆತನಿಗೆ ಇಷ್ಟು ನೀರು ಕುಡಿಯಕೊಡಲು ಹೋಗುವಾಗ ನನ್ನನ್ನೆ ಪೋಲೀಸರು ನೂಕಿದರು

ಸರ್ ಹಯ್ಯಾತಖಾನರು — ಇದೆಲ್ಲ ಈ ಸರಕಾರದ ಕಾನೂನಾಗಲಿರುವ ಮಸೂದೆಗಳನ್ನು ಎದುರಿಸುವ ರಾಜಕೀಯ ಪಂಗಡದವರ ಹಂಚಿಕೆಯಿಂದ ಹೀಗೆ ಮೆರವಣಿಗೆಗಳಾಗುವುವೆಂದು ತಿಳಿದಿದ್ದೇವೆ ಜನರಿಗೆ ನಾನಾವಿಧ ಸುಳ್ಳು ತಿಳಿಸಿ ಹೀಗೆ ಮಾಡಿಸುತ್ತಿದ್ದಾರೆ 50 ಮಂದಿ ಪ್ರತಿನಿಧಿಗಳನ್ನು ಡಿ. ಕಮಿಶನರರು ಕಾಣಲು ಸಿದ್ಧರು ಆದರೆ, ರೈತರು ಇದನ್ನೊಪ್ಪರು ಶ್ರೀ। ಕೌರರೊಡನೆ ಸ್ತ್ರೀಯರ ಮೆರವಣಿಗೆ ಹೋಗುವಾಗ ಸುರಿವ ಬೈಗಳು ಸಾಮಾನ್ಯವಲ್ಲ (ಶ್ರೀ। ಕೌರ್: ಇಲ್ಲವೇ ಇಲ್ಲ ನಾನು ಯಾವ ಮೆರವಣಿಗೆಯನ್ನೂ ತಂದವಳಲ್ಲ!) ಡಿ ಕಮಿಶನರರು ಯೋಗ್ಯರೀತಿಯಲ್ಲಿ ವರ್ತಿಸಿಲ್ಲವಾದಲ್ಲಿ ಅದು ನ್ಯಾಯವಲ್ಲ ಈ ರೀತಿಯ ಬೈಗಳಿಗೂ ಮೆರವಣಿಗೆಗಳಿಗೂ ಕಾರಣವೇ ಇಲ್ಲ ಪೋಲೀಸರು ಯಾವ ಬಗೆಯಲ್ಲೂ ಅತ್ಯಾಚಾರ ನಡೆಸಿರವಲ್ಲಿ, ಅವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಲಿಂದೀತ ಆದರೆ, ಯಾವ ಪ್ರಾಂತ್ಯಕ್ಕಿಂತಲೂ ಚೆನ್ನಾಗಿ ಶದ್ಧೆಯಿಂದ ಕೆಲಸ ಮಾಡುವವರ ಎಂದರ

ಅಂತೂ ಆಕ್ಷೇಪಗಳನ್ನು ಸಭೆಯು ತಿರಸ್ಕರಿಸಲಿಗೊತ್ತಿತು

ದೀಪ ನಿರ್ವಾಣ

(ಹಿನೆಯ ಪುಟದಿಂದ ಮುಂದುವರಿದುದು.)

ಅವನ ಶರೀರದ ಸೌಂದರ್ಯ, ಆಕರ್ಷಣ, ಬಲ ಎಲ್ಲವೂ ಲುಪ್ತವಾಗಿದ್ದುವು. ಅವನು ಎಲುಬು ಚರ್ಮಗಳ ಒಂದು ಪಂಜರ ಮಾತ್ರವಾಗಿದ್ದನು. ದೊಡ್ಡ ದೊಡ್ಡ ಡಾಕ್ಟರರು ಬಂದು ಅವನ ಪರೀಕ್ಷೆಮಾಡಿದರು ಆದರೆ ಎಲ್ಲರೂ ಹೇಳಿದರು—'ಏನೂ ಪ್ರಯೋಜನವಿಲ್ಲ, ಭ್ರಾಣವು ಕೈತಪ್ಪಿ ಹೋಗಿದೆ.'

ಅವನು ಬರುತ್ತಲೇ ಜಯರಾಮನಿಗೆ ಎಷ್ಟೆಷ್ಟೋ ವಿಚಿತ್ರ ವಸ್ತುಗಳು ಸಿಕ್ಕಿದುವು ಬರ್ಮದ ಗೊಂಬೆಗಳು, ರಂಗೂನಿನ ಮಿಠಾಯಿ, ಚೀನದ ಸಾಮಗ್ರಿ, ಎಲ್ಲಾ ಅವನಿಗೆ ದೊರೆತಿದ್ದುವು ಯಾವದರಲ್ಲಿಯೂ ಕಡಿಮೆಯಿಲ್ಲ ಅದ್ಭುತ ಕೆಲಸ ಕಾರ್ಯಗಳನ್ನು ಮಾಡಿತೋರಿಸುವ ಒಂದು ಇಲೆಕ್ಟ್ರಿ ದೀಪವು ಉಳಿದೆಲ್ಲವುಗಳಿಗಿಂತ ಅತಿ ವಿಚಿತ್ರವಾಗಿತ್ತು. ಅದರ ಗುಬ್ಬಿಯನ್ನು ಒತ್ತುತ್ತಲೇ ಉಜ್ವಲ ಪ್ರಕಾಶವು ನಾಲ್ಕು ಸುತ್ತಲೂ ಹರಡುತಿತ್ತು, ಮತ್ತ ಜಯರಾಮನು ಆನಂದಸಾಗರದಲ್ಲಿ ಮುಳುಗೇಳುತಿದ್ದನು

'ಅಪ್ಪ, ಅಪ್ಪ' ಎಂದ ತಾಯಿಯು ಹೇಳಿಕೊಂಡಿದ್ದ ಆ ಮನುಷ್ಯನು ಬಡಕಲಾಗಿ ಸುಕ್ಕಿಹೋದ ಒಬ್ಬ ವ್ಯಕ್ತಿಯೆಂದು ಯಾವಾಗ ಜಯರಾಮನಿಗೆ ತಿಳಿಯಿತೋ, ಆಗ ಅವನು ಆ 'ಅಪ್ಪ'ನೊಂದಿಗೆ ಯಾವ ಪ್ರಕಾರದಿಂದಲೂ ಆಕೃಷ್ಟನಾಗಲಿಲ್ಲ ಅಪ್ಪನು ಎಷ್ಟೋ ಸಲ ಜಯರಾಮನನ್ನು ಎದೆಗೆ ಅಪ್ಪಿಕೊಂಡು ಅವನ ಮುಖವನ್ನು ಮುದ್ದಿಟ್ಟಿದ್ದನು ಆದರೆ ಜಯರಾಮನು ಮಾತ್ರ ತಂದೆಯ ಆ ಪ್ರೇಮವನ್ನು ಸ್ವೀಕರಿಸುವ ಸ್ಥಿತಿಯಲ್ಲಿದ್ದಿರಲಿಲ್ಲ 'ಅಪ್ಪ' ಎನ್ನುವದರ ಅರ್ಥವೂ ಅವನಿಗೆ ತಿಳಿಯಲಿಲ್ಲ ಅಪ್ಪನಿಗಿಂತ ಅಪ್ಪನ ತಂದ ಆ ವಸ್ತು ಒಡವೆಗಳಲ್ಲಿ ಅವನ ಮನಸ್ಸು ಹೆಚ್ಚಿಗೆ ರಮಿಸುತಿತ್ತು ಎಲ್ಲಕ್ಕಿಂತ ಹೆಚ್ಚಾಗಿ ಆ ಇಲಕ್ಟ್ರಿ ದೀಪದ ಕಡೆಗೆ ಅವನ ಮನಸ್ಸು ಹೆಚ್ಚು ಆಕೃಷ್ಟವಾಗಿತ್ತು ತನ್ನ ಎಲ್ಲ ಜೊತೆಗಾರರಿಗೆ ಅವ... ವನ್ನು ತೋರಿಸಿದನ

'ಇಲ್ಲಿ ನೋಡು' ಎಂದು ಅವನ ಹೇಳುತಿದನ ಹತ್ತಿರದ ಹುಡುಗರ ಅವನ ಕಡೆಗೆ ... ನೋಡುತಿದ್ದಾಗಲೇ ಅವನ ದೀಪದ ಗುಬ್ಬಿ ... ಒತ್ತಿ ಅವನ ಪಂಜಿದ ಪೇಟಿ ಬೆಳಕ ಮಾಡುತಿದ್ದ ಅವರ ಕಣ್ಣುಗಳ ಆ ತೀವ್ರ ಪ್ರಕಾಶವನ್ನು ನೋಡಲಾರದೆ ಮುಚ್ಚಿಕೊಳ್ಳುತಿದ್ದುವು 'ಅಯ್ಯಪ್ಪಾ' ಎಂದವರು ಚೀತ್ಕರಿಸುತಿದ್ದರು. ಅವರ ಬೆಕ್ಕಸದಿಂದ ಜಯರಾಮನಿಗೆ ಹೇಳಲಾರದ ಸಂತೋಷವಾಗುತಿತ್ತು.

'ಇದನ್ನು ನಿನಗೆ ಯಾರು ಕೊಟ್ಟರು?'

'ಅಪ್ಪನು.'

'ಅಪ್ಪ ಎಂದರೆ ಯಾರು?'

'ಯಾರು ಇದನ್ನು ಕೊಟ್ಟನೋ, ಅವನ ಅಪ್ಪ ಎಂಬ ವಿಷಯವಾಗಿ ಅವನ ... ವ್ಯಾಖ್ಯೆಯು ಇದುವೇ ಆಗಿತ್ತು.

‡ ‡ ‡ ‡

ಸಂಧ್ಯಾ ಸಮಯ ಸೂರ್ಯನು ಸಮುದ್ರದಲ್ಲಿ ಮುಳುಗಿದ್ದನು ಜನರು ತಮ್ಮ ತಮ್ಮ ಮನೆಗಳಲ್ಲಿ ದೀಪ ಉರಿಸಿದರು ಜಯರಾಮನು ಕೂಡ, ತಾಯಿ ಹೇಳಿದ್ದರಿಂದ, ... ಕಾಲದಲ್ಲಿಯೇ ತನ್ನ ದೀಪವನ್ನು ಹೆಚ್ಚಾಗಿ ಉರಿಸುತಿದ್ದನು. ಆ ದಿನ ಮನೆ ತುಂಬ ಕಳವಳವು ತುಂಬಿತ್ತು ಲಕ್ಷ್ಮಿಯು ಚಿಂತೆಯ ಪ್ರತಿಮೂರ್ತಿಯಾಗಿದ್ದಳು ಅವಳ ಪತಿಯು ಜೀವನ ಮರಣಗಳ ನಡುವೆ ಘನಘೋರ ಸಂಗ್ರಾಮವು ನಡೆಯುತಿತ್ತು

ಜಯರಾಮನು ತನ್ನ ಇಲೆಕ್ಟ್ರಿ ದೀಪವನ್ನು ಕೈಗೆ ತೆಗೆದುಕೊಂಡನು ಗುಬ್ಬಿಯನ್ನು ಒತ್ತಿದನು ಆದರೆ ಬೆಳಕು ಆಗಲಿಲ್ಲ. ಅದು ನೊಂದಿಹೋಗಿತ್ತು ಅದೇ ಸಮಯ ಲಕ್ಷ್ಮಿಯ ಮಂಗಲಸೂತ್ರದ ಆಧಾರಭೂತ ದೀಪವು ಕೂಡ ನೊಂದಿಹೋಯಿತು ರೋಗಕ್ರಿಮಿಗಳಿಂದ ಗ್ರಸ್ತವಾಗಿದ್ದ ಅವನ ಶರೀರದ ಅಂತವಾಯಿತ ಮನೆ ತುಂಬ ಅದೇ... ರೋದನ

'ಅಯ್ಯೋ, ಅಯ್ಯೋ, ನನ್ನ ದೀಪ ನೊಂದುಹೋಯಿತು ಅದನ್ನು ಮತ್ತೆ ಉರಿಸಿಕೊಡ' ಎಂದು ಹೇಳುತ್ತ ಜಯರಾಮನು ತಾಯಿಯ ತೊಡೆಯಲ್ಲಿ ಬಿದ್ದು ಅಳತೊಡಗಿದನು. ಎಲ್ಲ ಜನ ಅಳತೊಡಗಿದರು. ಜಯರಾಮನೂ ಅಳತೊಡಗಿದನು ಅವನಿಗೆ ಒಂದೆ ಕಾರಣವೂ ಸಿಕ್ಕಿತ್ತು ಅವನ ಜೋರು ಜೋರಾಗಿ ಅಳತೊಡಗಿದ... ದುಃಖ ಸಂತಪ್ತ ಜನರ ಆ ಎಲ್ಲಾ ... ರೋದನದ ಹೃದಯ ವಿದಾರಕ ಧ್ವನಿಯಲ್ಲಿ ... ಸಂಲಗ್ನ ಸಣ ... ಕೇಳಿ ಬಂದಿತು.

ಒಂದು ದೀಪವು ನೊಂದಿ ಹೋದುದಕ್ಕೆ ... ಅಳುತ್ತಾಲಿದ್ದಳು, ಅವನ ... ದೀಪವು ನೊಂದಿ ಹೋದದರಿಂದ ಅಳುತ್ತಲಿದ್ದಾನೆ!

ಹಿಂದಿಯಲ್ಲಿ ಉದ್ಧೃತವಾದ ತಮಿಳು ಕಥೆ

ಆ ನೋವನ್ನು ನಿವಾರಿಸಿರಿ.

ಮುಟ್ಟು ಸರಿಯಿಲ್ಲದ ಸ್ತ್ರೀಯರಿಗೆ, ಬೆನ್ನು, ಕೈಕಾಲು, ಹೊಟ್ಟೆ ಮತ್ತು ತಲೆಯಲ್ಲಿ ನೋವು ಉಂಟಾಗುವುದು ಅದರ ಪರಿಣಾಮವಾಗಿ ಅವರ ಆರೋಗ್ಯವು ಕೆಟ್ಟುಹೋಗಿ, ಅವರು ಅಲ್ಲಸಲ್ಲದ ರೋಗಗಳಿಗೆ ತುತ್ತಾಗುವರು ಪರಿಣಾಮಗಳ ಕಾರಣ—ಮುಟ್ಟುದೋಷವನ್ನೇ ನಿವಾರಿಸಿಬಿಟ್ಟರೆ, ಅವರ ಆ ನೋವು ನಿವಾರಣೆಯಾಗುವುದು, ಅವರ ಆರೋಗ್ಯ ಉತ್ತಮಗೊಳ್ಳುವುದು. ಅದಕ್ಕಾಗಿ ಅವರು ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದ ಮತ್ತು ಗುಣಕಾರಿಯಾದ ಲೋಧ್ರದ ಕಡೆಗೆ ಗಮನ ಕೊಡಬೇಕು.

ತಯಾರಿಸುವವರು.— **ಕೇಸರಿ ಕುಟೀರಂ, ಮದರಾಸು.**

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:—

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರಗೆ

2 ಕುಂದಾಪುರದಿಂದ ಬಾಳಬರೆಗಾಗಿ ಶಿವೊಗ್ಗಾ

3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಳ್ಳಿ ಶಿವೊಗ್ಗಾ ಹರಿಹರ ವರೆಗೆ

4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು ಕಡೂರು ವರೆಗೆ

5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗ

6 ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE

Canara Industrial & Banking Syndicate Ltd.,

(Incorporated in British India)

Estd 1925.

Head Office: UDIPI, (S. India.)

Member:

RESERVE BANK OF INDIA.

BANKERS CLEARING HOUSE, BOMBAY

Statement of Affairs of the Syndicate as on 31st May 1938.

LIABILITIES			ASSETS		
Share Capital	Rs	3,56,880—0—0	Loans on Valuable Securities	Rs	19,04,909-1-9
Reserves		2,16,700—0—0	Loans on Land Mortgages		2,08,800-13-0
Deposits	„	30,53,216-6-0	Loans on Bills, Hundis & Promissory Notes		10,36,175-11-9
Due to Bankers	„	6,99,018—3—7	Investments on G P Notes		10,89,708-[illegible]-7
Bills for Collection	„	2,24,037-15-8	Investments on Shares of other Companies		63,380—4—0
Sundries	„	3,89,954-11-6	Investments on Lands & Buildings		32,881—1-5
			Bills for Collection		2,24,037-15-8
			Sundries		1,57,829—1-8
			Cash in hand and at Bankers		8,03,839-13-1
Total	Rs	51,19,807-5-2	Total	Rs	51,19,807-5-2

DEVKARAN NANJEE'S Pure Silver Bars of 10 and 20 tolas having the seal of His Majesty's Mint are available for sale at all the Branches of the Syndicate

A Branch of the Syndicate will be opened on Sunday, 31st July 1938 at Felix Pai Bazaar, Mangalore, Block No 1

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಲಾಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು ಜೀವನ ಬದಲಾಯಿಸುವುದು ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ–ತಂತ್ರ–ಯಂತ್ರಗಳೂ ಇರದೆ, ಗ್ರಹಶಾಂತಿಯೊಂದೇ ಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಜೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸಕ್ರಿಯದಿಂದ ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮಹರ್ಷಿಗಳನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಆವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ವಿಧವಾದ ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು. ಎಷ್ಟೋ ಜನರು ಬೇರೆ ಬೇರೆ ಕಾರಣಗಳಿಂದ ಆರು ಎಂಟೆಂಟು ಅಲ್ಲ ಹನ್ನೆರಡು ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವಿಲ್ಲದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ ಒಂದಾಣೆ ಟಿಕೇಟು ಕಳಿಸಿದ್ದರೆ ಗ್ರಂಥದ ಒಂದು ಪ್ರತಿಯನ್ನು ಕಳುಹುವೆವು. ಇಷ್ಟಲ್ಲ ಇದರ ಉಪಯೋಗ ಮಾಡಿ ನೋಡಿದರೆ ಒಂದು ಸಂವತ್ಸರದ ಒಳಗಾಗಿ ಹಣವ ರಾಶಿ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಮನುಷ್ಯನೆದುದ್ದು ಹಾಳ ಆಗುವದೆಂಬ ಭಾವನೆಯಿಂದ ಈ ಜ್ಯೋತಿಷ ತತ್ವವನ್ನು ಸಕ್ರಿಯದಿಂದ ವಿಶ್ವಾಸಿಸಿದರೆ ಜನ್ಮ ಜನ್ಮಾಂತರದಲ್ಲಿಯೂ ಪವಿತ್ರ ಫಲವನ್ನು ಪಡೆಯಬೇಕಾಗುವುದು. ಈ ಮಹಾಸನ್ನಿವೇಶದಲ್ಲಿ ಇಂಥಹ ವಸ್ತುವು ವರ್ಷಗಳೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದು ಪ್ರತಿಯೊಬ್ಬ ಸ್ತ್ರೀ ಪುರುಷ ಬಾಲಕ ವೃದ್ಧ ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಟ್ಟಿಗೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪ್ಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ ೯ ರೂಪಾಯಿ ೯ ಆಣೆ ಹೆಚ್ಚು. ಒಂದರಿಂದ ನಾಲ್ಕು ಕಾರಣಗಳ ಉಪಯೋಗಬೇಕಾಗಿದ್ದರೆ ಸ್ಪೆಶಲ್ ನಂಬರನ್ನು ತರಿಸಿರಿ. ಬೆಲೆ ೫ ರೂ ೧೧ ಆಣೆ ಹೆಚ್ಚು. ನಾಲ್ಕಕ್ಕಿಂತ ಹೆಚ್ಚು ಕೆಲಸಗಳ ಕೈಗೂಡಬೇಕಾಗಿದ್ದರೆ ಸ್ಪೆಶಲ್ ನಂಬ್ರವನ್ನು ತರಿಸಿ. ಬೆಲೆ ೯ ರೂ ೧೧ ಆಣೆ ಹೆಚ್ಚು. ಪ್ರತಿಯೊಂದಕ್ಕೂ ೮ ಆಣೆ ಅಂಚೆವೆಚ್ಚ ಪ್ರತ್ಯೇಕವಾಗಿ ಪರದೇಶಕ್ಕೆ ಕಳಿಸುವದಾದರೆ ಪ್ರತಿಯೊಂದಕ್ಕೂ ೫ ಶಿಲಿಂಗು ಹೆಚ್ಚು ಬೀಳುವುದು. ಈ ಯಂತ್ರಗಳಿಗಾಗಿ ಬೇರೆ ಯಾವ ಸಾಧನಗಳೂ ಬೇಕಾಗಿಲ್ಲ.

ಯಶಸಿದ್ಧಿ— ಹೆಚ್ಚಿನ ಧನಪ್ರಾಪ್ತಿಯಾಗಬೇಕೆನ್ನುವವರು ಈ ಯೋಗದ ಧನಪ್ರಾಪ್ತಿಯಾಗಬೇಕೆನ್ನುವವರು ಸಿದ್ಧಿ ಕವಚವನ್ನು ತರಿಸಬೇಕು. ಇದನ್ನು ೩೦ ದಿನ ಪೆಟ್ಟಿಗೆಯಲ್ಲಿಟ್ಟುಕೊಂಡ ಬಳಿಕ ಧನಪ್ರಾಪ್ತಿಯಾಗುವುದಲ್ಲದೆ ಮೋಡಿಕಿನ ಗಂಟು ಬಿಟ್ಟು ಪರಿಸ್ಥಿತಿಯು ಸಧಾರಿಸುವುದು. ಬೆಲೆ ೩ ರೂ. ಬೆಳ್ಳಿಯದು ೩ ರೂ. ಬಂಗಾರದ್ದು ೯ ೩ ಆಣೆ. ಪ್ರತಿಯೊಂದಕ್ಕೂ ಟಪ್ಪಾಲು ಹಾಸಿಲು ೮ ಆಣೆ.

ಹಸ್ತರೇಖೆ— ಹಸ್ತರೇಖೆಯನ್ನು ತೋರಿಸಲಿಚ್ಛಿಸುವ ಸ್ತ್ರೀಪುರುಷರು ಬೆಳಗಿನ ೮ರಿಂದ ೧೦ರ ವರೆಗೆ ನಮ್ಮ ನಿವಾಸಕ್ಕೆ ಬಂದು ಭೆಟ್ಟಿಯಾಗಬೇಕು. ಪರಸ್ಥಳದವರ ಪುರುಷರು ಬಲಗೈಯ ಹಾಗು ಸ್ತ್ರೀಯರು ಎಡಗೈಯ ಗುರುತನ್ನು ಕಾಗದದ ಮೇಲೆ ಕರೇ ಮಸಿಯಿಂದ ಮಾಡಿಸಿ ಕಳಿಸಿಕೊಡಬೇಕು. ಹಸ್ತರೇಖೆಯನ್ನು ನೋಡುವ ಫೀಜು ೩ ರೂ. ಪರಸ್ಥಳದವರು ಹಸ್ತದ ಗುರುತು ಕಾಗದದೊಂದಿಗೆ ೩ ರೂ ೧೪ ಆಣೆ ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರುಗಳನ್ನಿಡುತ್ತಾರೆ. ತಮ್ಮ ಮನಸ್ಸಿಗೆ ತೋಚಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಳೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು— ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮಲಾ ಎ ಆರ್ ಜಾನ್) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವುದಕ್ಕಾಗಿ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ವಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟ್ಯಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ ರೂ ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ ೩ ರೂ ೧೦ ಆಣೆ ಬೀಳುವುದು.

ವಿಳಾಸ – **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತೆ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

[ಸಂಪುಟ ೩೩] ತಾರೀಖು ೧೨ನೇ ಅಗೋಸ್ಟು ೧೯೩೮ (12-8-1938) [ಸಂಚಿಕೆ ೩೦.

★

24 ಪುಟಗಳು **24**

ಅನುಕ್ರಮಣಿಕೆ

ಭಾರತೀಯ ಎಸೆಂಬ್ಲಿ ಕೌನ್ಸಿಲುಗಳಲ್ಲಿ ಮಹಿಳೆಯರ ಸ್ಥಾನ ಮಾನ

★

ಪ್ರಶ್ನಾವಳಿ

★

ಅರೆ ನೋಟಗಳು

★

ಮಾತನಾಡುವ ಪತ್ರಿಕೆ

★

ಭಾ... ಬೆಂಕಿಪೆಟ್ಟಿಗೆಯ ಕೈಗಾರಿಕೆ

★

ಮರಳಲಿ ಇತಿಹಾಸ ಪ್ರಸಿದ್ಧ ಪ್ರಾಚೀನ ನಗರ

★

ಚೆಂಕಿಂಗ್‌ನಲ್ಲಿ ಘೋರ ಭೀಕರ ಭಯಂಕರ-ಅತ್ಯಾಚಾರಗಳು

★

ಯುದ್ಧವು ಚೀನಕ್ಕೆ ಕಲಿಸಿದುದೇನು?

★

ಪ್ರಕೃತ ಪಾಠಗಳು

★

...ಸ್ತು-ಫಿರಂಗಿಗಳಿಂದ ...ಶಾಂತಿಯಂತೆ!

★

ಠೀಕೆ ಟಿಪ್ಪಣಿಗಳು

★

ನಿಮಗೆ ತಿಳಿದಿರುವುದು ಎಷ್ಟು

★

150 ವರ್ಷ ಮೀರಿದ 30 ಮಂದಿ ತುರುಕರು!

★

ಹಿಂದೂ ದೇವಾಲಯಗಳ ಆಡಳಿತೆ

★

ಫೆಡರೇಶನು-ಅಕ್ಕ ಹಾಗೆಯೆ ಇರಲಿ!

★

ಕಾಶಿ ಪಟ್ಟಣದ ಗಂಗಾನದಿಯ ಒಂದು ದೃಶ್ಯ.

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTED. 1906.
CANARA BANK LIMITED.

ಚಿತ್ರ-ವಿಚಿತ್ರ

ಇಂಗ್ಲೆಂಡಿನ ಸುದ್ದಿ

ಆಕ್ಸ್‌ಫರ್ಡ್ ಯುನಿವರ್ಸಿಟಿಯ ವೈದ್ಯ ಶಾಲೆಯ ಪ್ರೊಫೆಸರರಾದ ಡಾ। ರೋಬರ್ಟ್ ಸನ್ ಎಂಬವರು ಪ್ರೋಟೀನುಗಳನ್ನು ಇಂಜೆಕ್ಷನಿನ ಮುಖಾಂತರ ರಕ್ತದೊಳಗೆ ಸೇರಿಸಿ ಸಾಧ್ಯವಿದೆಯೆಂದು ಪತ್ತೆ ಹಚ್ಚಿರುವರು ... ನೀರು ಉಪ್ಪು, ಇವುಗಳನ್ನು ಈ ಮೊದಲು ಇಂಜೆಕ್ಷ ಮಾಡುತ್ತಿದ್ದರು. ಇನ್ನು ಮುಂದೆ ಮನುಷ್ಯನು ತನಗೆ ಬೇಕಾದಷ್ಟು ಆಹಾರವನ್ನು ಇಂಜೆಕ್ಷನಿನ ಮುಖಾಂತರ ತೆಗೆದುಕೊಳ್ಳಲು ಸಾಧ್ಯವಿದೆ

ಸೂರ್ಯನ ಕಿರಣಗಳಿಂದ ವಿದ್ಯುಚ್ಛಕ್ತಿ

ಸೂರ್ಯನ ಕಿರಣಗಳನ್ನು ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸುವ ಒಂದು ನೂತನ ಯಂತ್ರವನ್ನು ಫ್ರಾನ್ಸಿನ ಓರ್ವ ವಿಜ್ಞಾನಿಯು ಕಂಡುಹಿಡಿದಿರುವನು

ಹೆಲಿಯೊ ಇಲೆಕ್ಟ್ರಿಕ್ ಜನರೇಟಿಂಗ್ ಸೆಲ್ ಎಂದು ಅದರ ಹೆಸರು, ಸಾಧಾರಣ ಕಿಸೆ ಗಡಿಯಾರದಷ್ಟು ದೊಡ್ಡದಿದೆ ... ಒಳಗೆ ಯಾವ ಬಗೆಯ ಪರಿಷ್ಕೃತ ಯಂತ್ರ ... ಹಿತ್ತಾಳೆಯ ಒಂದು ಚಕ್ರಕ್ಕೆ ಅದೊಂದು ... ಯ ದ್ರಾವಣವನ್ನು ಹಚ್ಚಿರುವುದು ಈ ... ಪ್ರವಕವು ಸೂರ್ಯನ ಪ್ರಕಾಶವನ್ನು ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವುದು

ಸ್ಟೋರೆಜ್ ಬೆಟರಿಯೊಡನೆ ಹೊಂದಿಕೊಂಡ ಇಂತಹ ಸೆಲ್ಲುಗಳನ್ನು ಮನೆಯ ಮಾಡಗಳಲ್ಲಿ, ತೋಟಗಳಲ್ಲಿ ಇಟ್ಟು ಬಿಡುವುದು. ಇಂತಹ ಮೋಡವಿದ್ದ ದಿನವಲ್ಲಾದರೂ ರಾತ್ರಿಯ ಹೊತ್ತಿಗೆ ಉರಿಸಲು ಬೇಕಾದಷ್ಟು ಶಕ್ತಿಯನ್ನು ಅವು ಸಂಗ್ರಹಿಸಿಡುತ್ತವೆ ಒಂದು ಗಜ ... ಕಳದಲ್ಲಿಟ್ಟ ಸೆಲ್ಲುಗಳು 60 ಗಂಟೆ ಉರಿಸಲು ಬೇಕಾದಷ್ಟು ಶಕ್ತಿಯನ್ನು ಒಂದು ದಿನದಲ್ಲಿ ಸಂಗ್ರಹಿಸುತ್ತವೆ

ಸೂರ್ಯನಿಗಿಂತಲೂ ಪ್ರಕಾಶಮಾನವಾದ ತಾರೆ.

ಕೆಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಒಫ್ ಟೆಕ್ನೊಲೊಜಿ ಎಂಬ ಸಂಸ್ಥೆಯವರಾದ ಡಾ। ... ಜ್ವಿಕಿ ಎಂಬರು ಸೂರ್ಯನಿಗಿಂತಲೂ ... ಏಳು ಬಿಲಿಯ ಬಾರಿಗೆ ಹೆಚ್ಚು ಪ್ರಕಾಶವುಳ್ಳ ತಾರೆಯೊಂದನ್ನು ಕಂಡುಹಿಡಿದಿರುವರು, ಅದು ... ಬಹು ದೂರದಲ್ಲಿರುವುದಂತೆ

ಅದು ಇತರ ತಾರೆಗಳಂತಿರದೆ ನ್ಯೂಟ್ರೊನ್ ಎಂಬ ಧಾತುವಿನಿಂದ ಮಾಡಲ್ಪಟ್ಟದೆಯಂತೆ ಅದರ ಒಂದು ಘನ ಅಂಗುಲವು ...,000,000 ಟನ್ನುಗಳಷ್ಟು ಭಾರವಿದೆಯಂತೆ ಅದರ ವ್ಯಾಸವು 60 ಮೈಲು

ಹೆಂಡತಿ ಮಕ್ಕಳ ವಿಕ್ರಯ

ಬ್ರಾಲ್ಕನ್ ಪ್ರಾಂತ್ಯದ ಒಬ್ಬ ಮರಕಡಿಯುವವನು ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಸಾಕಲು ಸಾಧ್ಯವಾಗದೆ ಅವರನ್ನು ಬಹಿರಂಗವಾಗಿ ಹರಾಜು ಹಾಕಿ 4 ಶಿಲ್ಲಿಂಗ್ 2 ಪೆನ್ನಿಗೆ ಓರ್ವ ರೈತನಿಗೆ ಮಾರಿರುವನು

ಗಂಟೆಗೆ 800 ಮೈಲು

ತನ್ನನ್ನು ಜಯಿಸುವುದು ಹೇಗೆಂಬುದನ್ನು ಪ್ರಕೃತಿಯು ನಮಗೆ ಕಲಿಸುತ್ತದೆ ಆದುದರಿಂದ ನಾವು ಜಲಾಂತರ್ಗತ ನಾವೆಗಳನ್ನು ಮೀನಿನಂತೆ ಮಾಡುತ್ತವೆ. ವಿಮಾನಗಳನ್ನು ಹಕ್ಕಿಯ ಆಕಾರದಲ್ಲಿ ತಯಾರಿಸುತ್ತೇವೆ. ಅಮೇರಿಕವು ಈಗ ಗಂಟೆಗೆ 800 ಮೈಲುಗಳ ವೇಗದಿಂದ ಹಾರುತ್ತಿರುವ ಒಂದು ಕ್ರಿಮಿಯನ್ನು ಪರಿಶೀಲಿಸುತ್ತಿದೆ ...ನಿಮಿಯಾ ಎಂದದರ ಹೆಸರು ಬರೀ ...

...ಎಷ್ಟು ವೇಗವಾಗಿ ಹಾರುತ್ತದೆ ಎಂದರೆ ಅದರ ಹಾರಾಟವು ಬರಿಗಣ್ಣಿಗೆ ಗೋಚರಿಸದು ದಂಡಗಾದ ತಲೆ ಚಪ್ಪಟೆಯಾದ ಮೂಗ, ಮತ್ತು ಕುಸು ಗೋಪುರಾಕಾರದ (tapering body) ಇವು ಅದಕ್ಕೆ ವೇಗವಾಗಿ ಹಾರಾಡುವಂತೆ ಸಹಾಯಕವಾಗಿವೆ ಇದರ ಆಕಾರದಂತೆ ವಿಮಾನಗಳನ್ನು ನಿರ್ಮಿಸಿದರೆ ವೇಗವಾಗಿ ಹಾರಾಡಬಲ್ಲವೆಂದು ಅಮೇರಿಕದವರು ನಂಬುತ್ತಾರೆ

ಪ್ರಕೃತಿಯ ಬಿರುಸು ಬಾಣಗಳು

ಯುರೋಪಿನ ಮತ್ತು ಅಮೇರಿಕದ ಉತ್ತರ ಅಕ್ಷಾಂಶದಲ್ಲಿ, ಅದೊಂದು ಅರ್ಧಚಂದ್ರಾಕಾರ ಸ್ಥಳದಿಂದ ಬಗೆಬಗೆಯ ಬಣ್ಣಗಳಿಂದೊಡಗೂಡಿದ ಪ್ರಕಾಶದ ಕಿರಣಗಳು ಗಗನದಲ್ಲಿ ಆಗಾಗ್ಗೆ ಕಾಣಿಸುತ್ತವೆ ಬಿಳಿ, ಕೆಂಪು, ಹಸರು, ಹಳದಿ ಬಣ್ಣದ ಬಾಣಗಳಂತೆ ಪ್ರಕಾಶದ ಕಿರಣಗಳು ಒಮ್ಮೊಮ್ಮೆ ನೇರವಾಗಿಯೂ ಒಮ್ಮೊಮ್ಮೆ ಸರ್ಪಾಕಾರವಾಗಿಯೂ ಥಳಥಳಿಸಿ ಗಗನವನ್ನು ಬೆಳಗಿಸುವುವು ಆಗೂ ಈ ಪ್ರಕಾಶವು ನೂರಾರು ಮೈಲುಗಳ ದೂರದ ತನಕವೂ ಕಾಣಿಸುವುದು.

* * * * *

ಬ್ರಿಟಿಷ್ ಟಪ್ಪಾಲು ಇಲಾಖೆಗೆ ನಿಮಿಷಕ್ಕೆ 140 ಪವನುಗಳು ಉತ್ಪತ್ತಿಯಾಗುತ್ತದೆ.

* * * * *

ಮಕ್ಕಳ ಮೂಗುಗಳಿಗೆ ಆಭರಣಗಳನ್ನು ಹಾಕುವುದು ಟ್ರಿಪೋಲಿಯಲ್ಲಿ ನಿಷೇಧಿಸಲ್ಪಟ್ಟಿದೆ

* * * * *

ತನ್ನ ಮನೆಯವರೆಲ್ಲರನ್ನೂ ಒಂದು ಮೇಜಿನ ಮೇಲೆ ಕುಳ್ಳಿರಿಸಿ ಆ ಮೇಜನ್ನು ಜೋನ್ ಶಾರ್ಪ ಎಂಬ 18 ವರ್ಷದ ತರುಣನು ಎತ್ತಬಲ್ಲನು

* * * * *

ಓಟಲ ರಾವ್ ಎಂಬ 30 ವರ್ಷದ ಒಬ್ಬ ಮನುಷ್ಯ ಆತನ ಭಾರ 10 ರಾತ್ಲು ಎತ್ತರ 2 ಅ 6 ಅಂಗುಲ ಎದೆಯ ಸುತ್ತಳತೆ 16 ಅಂಗುಲ ಪ್ರಪಂಚದಲ್ಲೆಲ್ಲಾ ಅತಿ ಗಿಡ್ಡ ಮನುಷ್ಯನು ತಾನೆಂದು ಈ ಮದರಾಸಿಯು ಹೇಳುತ್ತಿರುವನು.

ಸಭೆಯ ಗದ್ದಲ

ಗದ್ದಲದ ಸಭೆ

ಲಾಹೋರಿನಲ್ಲಿ ಜಮೀನು ಸಂಬಂಧವಾದ ಹೊಸ ಕಾನೂನಿನ ಕಡೆಗೆ ಕೊಂಗ್ರೆಸಿನ ಧೋರಣೆ ವಿವರಿಸಲು ಕೊಂಗ್ರೆಸ್ ಸಭೆ ಸೇರಿತ್ತು ಡಾ। ಸತ್ಯಪಾಲರೂ ಡಾ। ಗೋಪಿಚಂದ ಭಾರ್ಗವರೂ (ಕೊಂಗ್ರೆಸ್ ಧುರೀಣರು) ಭಾಷಣ ಕರ್ತರು. ಸಭಾ ಮಧ್ಯದಿಂದ 'ಕೊಂಗ್ರೆಸಿಗೆ ಮರಣ!'-'ಲೀಗಿಗೆ ಮರಣ!'-'ಹಿಂದೂ ಮಹಾಸಭೆಗೆ ಮರಣ' ಎಂದು ಹಿಂದೂಗಳೂ ಸಿಕ್ಕರೂ ಕೂಗಿದರು. ಅಲ್ಲೇ ಬಡೆದಾಟವಾಯಿತು. ಸರಾಗವಾಗಿ ಹೊಡೆದುಕೊಂಡರು. ಅಧ್ಯಕ್ಷರಿದ್ದಲ್ಲೂ ಇಟ್ಟಿಗೆ ತುಂಡುಗಳು ಒಬ್ಬರಿಗೆ ಕಣ್ಣಿಗೆ ಏಟು ಅನಂತರ ಶಾಂತಿ. ಸಭೆ ಮಧ್ಯರಾತ್ರಿಯ ವರೆಗೆ ಜರುಗಿ ರಾತ್ರಿ ಸಭೆಗಳಿವು.

WANTED

Applications are invited fo[r] the post of a Manager (Parupathyagar) for the Sri Venkatraman[a] Temple Mulki on a salary o[f] Rs 7o – per month

The applicants should hav[e] completed the age of 25 years an[d] must belong to the Gowd Saraswat Brahmin Community

The applicant if selecte[d] should furnish before taking up h[is] appointment Security in cash for [a] sum of Rs 2 500

Applications should be accom[]panied by true copies of testimon[i]als if any and should reach th[e] trustees on or before 25—8—'38.

For further particulars apply to

THE TRUSTEES SRI VENKATRAMANA TEMPL[E] MOOLKY.

27-7-'38

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ಸ್ವದೇಶಾಭಿಮಾನಿ

SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರು ಗದರಿಂ । ಹರುಷವಾಯಿತೆ! ಘುತ್ತೆ ವಿಶ್ವವ ಸುಡುವ ಬರುತಿರುವ ॥ ಗರಳಕಪರಂಜಿದರೆ! ಸುಧೆಯನು । ಪಡೆದು ತೃಪ್ತರ್ಗೆ ಕೆರದು ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೧೨—೮—೧೯೩೮ | ತಾರೀಕು 12 – 8 – 1938

ರಾಜಕೀಯ ಧೈರ್ಯದಿಂದ

ಎಂತೂ ಆಯಿತು ಖಾರೆಯವರನ್ನು ನೆರಿಮನರ ಸಾಲಿಗೆ ಕುಳ್ಳಿರಿಸಲಾಯಿತ ಇವ ಠ ಬದಲಾಗಿ, ಡಿಸ್‌ಮಿಸ್ ಮಾಡಿದ್ದ ಮಂತ್ರಿಯನ್ನೆ ಮಂತ್ರೀಶ್ವರನಾಗಲು ಗವರ್ನರರೂ ಕರೆದಂತಾಯಿತು! 'ಕೊಂಗ್ರೆಸ್ ಕಾರ್ಯಕಾರಿಗಳು ಸಾಮ್ರಾಜ್ಯಶಾಹಿಗೆ ಬಡಿದ ಥಪರಾಕು ಇದು, ಎನ್ನುತ್ತಾರೆ ಬ್ರಿಟಿಷ ಅಣ್ಣರು ಏನೆನ್ನುವರು? ಡಾ। ಖಾರೆಯವರು ಶ್ರೀ। ಮಿಶ್ರರನ್ನು ಅಭಿನಂದಿಸಿದ್ದಾರೆ ಇದು ಯಥಾರ್ಥ ವಂದನೆಯೆ? ಉಪಚಾರ ಮಾತ್ರವೆ? ಸಂದಿಗ್ಧ ಸಮಯದಲ್ಲಿ ಖಾರೆಯವರು ವರ್ತಿಸಿದುದನ್ನು ತಿಳಿದವರಿಗೆ ಇದು ಎರಡನೆಯ ರೀತಿ ಎನಿಸುತ್ತಿದೆ

ಆದರೆ ಕೊಂಗ್ರೆಸ್ ಕಾರ್ಯಕಾರೀ [illegible] ಹಲವು ರಾಷ್ಟ್ರೀಯ ಪತ್ರಿಕೆಗಳಲ್ಲಿನ ವಿಮರ್ಶೆಗಳನ್ನು ಓದಿದಲ್ಲಿ ಜನತೆಯು ಆಧಾರವು [illegible] ಇಳಿಯುತ್ತ ಬರಬಹುದಾಗಿ ತಿಳಿದು [illegible] ವ ಹಾಗಾಗಿದೆ ಅಧ್ಯಕ್ಷಸ್ಥಾನ ಕ್ಷಜ ಸೆಂದು ಕಟ್ಟಸ್ಸಣೆ ಕೊಟ್ಟಿರುವದ ಪಜಾಸತ್ತೆಯ ಕ್ರಮವೇ? ಎಂದು ಪ್ರಶ್ನಿಸಲಾಗಿದೆ ನಿರಂಕುಶತೆ ಇದೆನ್ನುವವರು ಇದ್ದಾರೆ [illegible] ಮೆನರ ತೀರ್ಮಾನದಿ ದ ಜವಾಹರಲಾಲ [illegible] ಗಾಂಧಿಜಿಯು ರೂ ಆಗ ಹಕ್ಕ [illegible] ಈ ಸಂಭವವೂ ಕಡವೆ [illegible] ಯವರಿಗೆ ವರಾರಾ ಕಾಂಗ್ರೆಸ್ [illegible] ಬಹಿರಂಗ ಪತ್ರ ಬರೆದದೂ ವಿಶೇಷ ಗಾಂಧಿಜಿಯವರ ಪ್ರಭಾವವು ಕಡಮೆಯಾದ [illegible] ದೀತು?

ಏಳ ಪ್ರಾಂತ್ಯಗಳಲಿ ಕೊಂಗ್ರೆಸ್ ಸರಕಾರವಿರಬಹುದು. ಡಿಲ್ಲಿ [illegible] ಅಲ್ಲಿ ಒಂದು ಹರತಾಳವಾಯಿತು [illegible] ಗೆ ಕೈದು 'ಸರ್ಜಿವಂದಿ [illegible] ಅಧಿಕಾರಿಗಳ ವರ್ತನೆಸ್ಸು ಒಹಳ ಅಧಿ[illegible]ಗಳ ಹೀಗೆ ಮಾಡಿದುದರಿಂದ ಧಿಲ್ಲಿಯು ಇನ್ನು ಬ್ರಿಟಿಷ ಸಾಮ್ರಾಜ್ಯದಲ್ಲಿ ಉಳಿಯದ [illegible] ನಮ್ಮ ಭಾರತ ವರ್ಷದ ರಾಜಧಾನಿಯಲ್ಲಿ ಈ ಚಿನ್ನದ ಸಂಕೋಲೆಯು [illegible]ಗರಿಕತೆಗೇನೆನ್ನಬೇಕು? ಪ್ರಾಂತಿಕ ಸ್ವರಾಜ್ಯವೆಂದರೆ ಹೀಗಿದೆಯೆ? ಧಿಲ್ಲಿಯನ್ನು ಸಂಯುಕ್ತ ಪ್ರಾಂತ್ಯಕ್ಕೆ ಸೇರಿಸಿರಿ ಎಂದೀಗ ಕೂಗು ಎದ್ದಿದೆ,—ಪಂಜಾಬಿಗಲ್ಲ'

ಶಾಂತಿಸ್ಥಾಪನೆಯ ಪರಿಷತ್ತಿನಲ್ಲಿ ಜವಾಹರಲಾಲರನ್ನು ಸಭೆಯೆಲ್ಲ ಎದ್ದು ನಿಂತು ಶ್ಲಾಘಿಸಿರುವುದು (ಪಾರಿಸಿನಲ್ಲಿ) ಬಾರಿಕಳ್ಳಿಂದು ಗೌರವ ವ್ಯಕ್ತಿ ಎಂಥವನು? ಆದರೂ ಮಾತೆಲ್ಲ ಭಾರತವಾಸಿಯದು ಹೊರತು ಜವಾಹರಲಾಲರದಲ್ಲ! ಜನಾಂಗಗಳು ಈ ರೀತಿ ಭಾರತ ವರ್ಷದ ಕಡೆಗೆ ನೋಡುವಂತೆ ಪ್ರೇರೇಪಿಸಿದುದಕ್ಕೆ ಜವಾಹರಲಾಲರಿಗೇನು ಬಹುಮಾನ? ಹೊಗಳಿಕೆಯೆ? ನಮ್ಮವನೆಂದರಾಯಿತೆ? ಅವರ ಮಾತಿನಂತೆ ಇತರ ಹಿಂದೀಯರು ನಡೆವುದೇ ಬಹುಮಾನ ಸಲ್ಲಿಸಿದಂತಾಯಿತು ಅವರು ಭಾಷಣ ಮಾಡಿದುದನ್ನು ಕೇಳಿದುದಕ್ಕೆ, ಅವರು ಮಾಡುವ ಕರ್ತವ್ಯಗಳಲ್ಲಿ ಸಹಾಯಕರಾದರೆ ತೀರಿತು.

ಪ್ರಶ್ನಾವಳಿ

[ಶ್ರೀ ಕೆ ಎನ್ ಶರ್ಮ, ಬಿ ಎ (ಆನರ್ಸ್)]

೧ ಕೊಂಗ್ರೆಸ್ಸಿನಲ್ಲಿ ಸದಸ್ಯತೆಗೆ ಇಂಥದೇ ಜಾತಿ ಇಂಥದೇ ಸಮಾಜ ಇಂಥದೇ ವರ್ಣ ಇರಬೇಕೆಂದಿದೆಯೆ?

೨ ಕೊಂಗ್ರೆಸಿನ ಸದಸ್ಯರಲ್ಲಿ ಮುಸ್ಲಿಮರು ಸಾವಿರಗಟ್ಟಲೆಯಲ್ಲಿ ಇಲ್ಲವೆ?

೩ ಕೊಂಗ್ರೆಸಿನ ಶಾಸನೋಲ್ಲಂಘನೆಯ ಚಳವಳದಲಿ ಭಾಗ ವಹಿಸಿ ಸಾವಿರಾರು ಮುಸ್ಲಿಮರು ಕೊಂಗ್ರೆಸಿನ ಧ್ವಜದ ಆಶ್ರಯದಲ್ಲೇ ಸೆರೆಮನೆಗೆ ಹೋಗಿಲ್ಲವೆ?

೪ ಕೊಂಗ್ರೆಸಿನ ಯಾವ [illegible] ಹಿಂದುಗಳಿಗಂದೆ ಮಾತ್ರ ಚಳವಳಿಸಬೇಕಾಗಿ [illegible]? ಹಿಂದುಗಳದೇ ಆದ ಯಾವ ಉತ್ಸವಾದಿ ಸಭೆಗಳಲ್ಲಿ ಕೊಂಗ್ರೆಸು ಭಾಗ ವಹಿಸಿದ್ದದೆಯೆ? ಹಿಂದುಗಳದೇ ಹಿತ ಅಥವಾ ಅಭ್ಯುದಯ ಸಾಧನೆಗಳಿಗಾಗಿ [illegible] ಕೊಂಗ್ರೆಸ ತನ್ನ ಬೆಂಬಲಕೊಟ್ಟಿದ್ದುಂಟೆ?

೫ ಮುಸ್ಲಿಮರ ಹಿತಸಾಧನೆಗಾಗಿ ನಡೆದ ಯಾವ ಚಳವಳಕ್ಕೆ ವಿರುದ್ಧವಾಗಿ ಕೊಂಗ್ರೆಸ ವರ್ತಿಸಿದ್ದದೆಯೋ?

೬ ಕೊಂಗ್ರೆಸಿನ ಅಧ್ಯಕ್ಷಸ್ಥಾನವನ್ನು [illegible] ಮಹಮ್ಮದ ಅಲಿ [illegible] ಡಾ। ಅನ್ಸಾರಿ [illegible] ಶ್ರೀ ಆಜಾದರೇ [illegible]? [illegible] ಜನರಲ್ ಸೆಕ್ರೆಟರಿ [illegible]

೭ ಕೊಂಗ್ರೆಸಿನ ವಶವಾಗಿ ಅಧಿಕಾರಿಕ ಮತವುಳ ಪ್ರಾಂತ್ಯದ [illegible] ಇದೆಯೆ ಇಲ್ಲವೆ?

[illegible]

೮ [illegible]

[illegible]

೯ [illegible]

೧೦ [illegible]

೧೧ [illegible] ವರ್ತಿಸಿದೆಯೆ?

೧೨ [illegible] ಹಿಂದೂ ಸಸ್ಯಗಳ ಹೆಚ್ಚುಗಳಿ [illegible] ಚಳವಳದಲ್ಲಿ ಕೊಂಗ್ರೆಸ [illegible]?

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ

ಕಾಮನ್ ವೆಲ್ತ್

ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ

1937-38ನೇ ಸಾಲಿನ ಪ್ರಗತಿ

ಗಳಿಸಿದ ಉದ್ಯಮ	ರೂ 50 18 543
ಪೂರ್ಣವಾದ ಉದ್ಯಮ	ರೂ 40 39 773

ದಕ್ಷಿಣ ಕನ್ನಡದ ಎಲ್ಲಾ ಕಡೆಗಳಲ್ಲೂ ಗೌರವಸ್ಥರೂ, ಸಮರ್ಥರೂ ಆದ ಏಜಂಟರು ಬೇಕು

ಏಜನ್ಸಿ ವಿವರಗಳಿಗೆ:—

ಪಿ. ಆರ್ ನಾಯಕ್ ಅಂಡ್ ಸನ್ಸ್
ಸ್ಪೆಶಲ್ ಏಜಂಟ್ಸ್
ಕಾರ್ ಸ್ಟ್ರೀಟ್, ಮಂಗಳೂರು

ಗವಾಂಕರ್ ಅಂಡ್ ಸನ್ಸ್
ಚೀಫ್ ಏಜಂಟ್ಸ್
163, ಗಾಂಧೀ ನಗರ, ಬೆಂಗಳೂರು

ವೃದ್ಧವರ ಮಹಾಶಯರುಗಳಿಗಾಗಿ

ಹೊಸ ಕಾನೂನು

"ಮುದುಕನಲ್ಲಿ ಸುದತೀ ಆತ, ಎಷ್ಟತ್ತೇ ವಯದಂತ!' ಎಂದು ಶಾರದಾ ನಾಟಕದಲ್ಲಿ ಶಾರದೆಯಂಥ ಕನ್ಯೆಗೆ ಅವಳಿಗಾಗಿ ಗೊತ್ತಾದ ಮುದುಕ ವರನನ್ನು ಕುರಿತು ಹಾಡಿದ ಪದ್ಯದ ನೆನಪಾಗುತದೆ ಈಗ ಮೊ ಬಾಯಿ ಕೌನ್ಸಿಲಿನ ಮುಂದೆ ಶ್ರೀ। [illegible] ಮುನಶೀಯು [illegible] ಒಂದು ಮಸೂದೆ ತರಲಿರುವರ

ನಲ್ವತ್ತೈದು ವರ್ಷ ವಯಸ್ಸು ಮೀರಿದ [illegible] ಎಳೇಕನ್ಯೆಯನ್ನು ಮದುವೆಯಾಗುವ ವಾಡಿಕೆ [illegible] ಸ್ಥಾನದಲ್ಲಿ [illegible] ಇರುವ ಕಾರಣ ಇಂಥ ಮದುವೆಗಳ [illegible] ಜನರಲ್ಲಿ [illegible] ಹುಟ್ಟಿರುವ [illegible] ಮದುವೆಗಳ ಅಪರಾಧವೆಂದ [illegible] ದಂಡನೆಗೆ ಒಳಪಡಲು ಯೋಗ್ಯವಾಗಿವೆ

[illegible]

[illegible] 45[illegible] [illegible] 1[illegible]

[illegible]

[illegible]

[illegible]

[illegible] ಇದನ್ನೆಲ್ಲ ಗಣನೆಗೆ [illegible] ಇತ್ತೀಚೆ [illegible] ವರನ್ನು [illegible] ಮುಸ್ಲಿಮರನ್ನು [illegible] ಜಿನ್ನಾರವರ ಹೊರೆದಲಿ ಮುಸ್ಲಿಮರೆಂಡನೆ ಸ [illegible] ಕೊಂಗ್ರೆಸ ಹೊರತಲಿ [illegible] ಪೊಲೀಸ್ ಮತ್ತು ಶಾಂತಿ ದಳಗಳೂ ಸಿದ್ಧವಾಗಿರಲಿ [illegible] ಮುಗಿಯತಿಸ್ಸು ಇನ್ನು [illegible]

ಶ್ರೀ। ರಾಜಗೋಪಾಲಾಚಾರ್ಯರು ನಾನಾ ವಿಧ ಅಲಂಕಾರ ಮಾತಾಡುತ್ತಾರೆ ತಾನು ಗ್ಲಾಸಿನ ಒಡವೆ ಹೊರುವವನು, ಅದು ಒಡೆಯದಂತೆ ನನ್ನನ್ನು ನಡೆಯಬಿಡಿರಿ ಎನ್ನುತ್ತಾರೆ ಗ್ಲಾಸು ಪರದೇಶೀಯ ವಸ್ತು, ಮೂಲಕ ಕೆಲವು ಕಂಚಿನ ಪಾತ್ರಗಳನ್ನು ಹೊರುತ್ತಿದ್ದರೆ ಈ ಬೆದರಿಕೆ ಮುಗಿವುದು ಸ್ವದೇಶೀಯವಾಗಲಿ ಇವರ ಆಳಿಕೆ. ಗ್ಲಾಸು ಒಡಲು ಕಂಚು ಬೇಕಾಗಿದೆ

—P K. K

ಅರೆ ನೋಟಗಳು!

ಮಧ್ಯಪ್ರಾಂತ್ಯದ ಖಾರೇ ಸಾಹೇಬರು ಖರೇ ಡಾಕ್ಟರರಾದರೂ, ಶರೀರ ರೋಗದಲ್ಲಿ ಮುದ್ದು ಕೊಡುವ ಅಭ್ಯಾಸದಿಂದ, ತಮ್ಮ ರೋಗವನ್ನೆ ಅರಿಯದಾದರು. ಮಾತ್ರವಲ್ಲ, ತಾವೇ ನಿರ್ಧರಿಸಿದ ರೋಗವೇ ಪ್ರಾಂತ್ಯದ ಕಾಂಗ್ರೆಸ್ ಮಂಡಲಕ್ಕೆ ಹಿಡಿದಿದೆ ಎಂದು ಛಲ ಹಿಡಿದರು. ಎರಡು ತಿಂಗಳ ಹಿಂದಿನಿಂದಲೂ ತುಫಾನಿನ ಪೂರ್ವಸೂಚನೆ ಇವರಿಗಿತ್ತಾದರೂ, ಯಾವ ಮುಂಜಾಗ್ರತೆಯನ್ನೂ ಇವರು ತೆಗೆದು ಕೊಳ್ಳಲಿಲ್ಲ.

++ ++ ++

ಶ್ರೀ ನರಿಮನ್ ಸಾಹೆಬರೂ ಹೀಗೆಯೆ ಕಾಂಗ್ರೆಸಿನ ದಂಡನೆಗೆ ಪಾತ್ರರಾದರೂ, ಅವರ ಪಕ್ಷವಾಗಿ ಹೋರಾಡುವವರಿನ್ನೂ ಇದ್ದಾರಾದರೂ, ಅವರು ಮಾತ್ರ ಕಾಂಗ್ರೆಸಿನ ಸೇವಕರಾಗಿಯೇ ಅಧಿಕಾಧಿಕವಾಗಿ ಹಿಂದಣ ಸ್ಥಾನಕ್ಕೆ ಗಣನೀಯರಾಗುತ್ತ ಬರುತ್ತಲೇ ಇರುವರು. ಖಾರೆಯವರೂ ಹೀಗೆ ಮಾಡಬಾರದೆ?

++ ++ ++

ಸರದಾರ ಪಟೇಲರ ಬದಲಾಗಿ ಸುಭಾಷ ಬೋಸರು ಮಧ್ಯಪ್ರಾಂತ್ಯದ ಗೊಂದಲ ವಿಚಾರಣೆಯ ಕಾಲದಲ್ಲಿ ಅಧ್ಯಕ್ಷರಾಗಿದ್ದುದು ಯುಕ್ತವೇ ಆಗಿದೆ. ಪಟೇಲರೂ ತಮ್ಮ ಅಧ್ಯಕ್ಷತೆಕ್ಕೆ ಜಿಸಿದ್ದ ಶಿಸ್ತಿನ ಗುಣಪ್ರಭಾವ ಅವರೇ ಅಧ್ಯಕ್ಷರಾಗಿ ಹೀಗೆ ಮಾಡಿದ್ದರೆ, ತೀರ್ಮಾನದ ಚರ್ಚೆ ಬಹಳವಾಗುತ್ತಿತ್ತು. ನರಿಮನರನ್ನು ವಿಚಾರಿಸಿ ಅವರ ಮೇಲೆ ವಿರುದ್ಧ ತೀರ್ಮಾನ ಮಾಡಿದವರು ಎಂದು ಪಟೇಲರನ್ನು ಇಂದಿಗೂ ದೂರುವವರು ಇದ್ದಾರೆ. ಅವರು ಇನ್ನೂ ಚೆನ್ನಾಗಿ ದೂರುತ್ತಿದ್ದರು. ಬೋಸರ ಅಧ್ಯಕ್ಷತೆಯ ಮೇಲೆ ಅವರ ಟೀಕೆ ಕಡಮೆಯಾಗಿಲ್ಲ, ಆದರೂ ಇದು ಪ್ರಥಮ ಸೀರಿಕೆಯಷ್ಟೆ.

++ ++ ++

ಬಿಹಾರದಲ್ಲಿ ಪ್ರಾಂತೀಯ ಪಕ್ಷಪಾತದೊಡನೆಯೆ ಜಾತಿ ಪಕ್ಷಪಾತವೂ ಬೆಳೆದಿದೆ. ಬಿಹಾರಿಗಳೂ ಬಂಗಾಳಿಗಳೂ ಆ ಪ್ರಾಂತ್ಯದಲ್ಲಿದ್ದು 'ಯಾರು ಹೆಚ್ಚು, ಯಾರು ಕಡಮೆ' ಎಂಬ ಪ್ರಶ್ನೆಯು ಚರ್ಚೆಯೇ ವಿಶೇಷವಾಗಿದೆ. ಪ್ರಸಿದ್ಧ ಅಮೃತಬಜಾರ ಪತ್ರಿಕೆಯು 'ಬಿಹಾರಿಗಳ ಗೊತ್ತಿಲ್ಲವೆ ನಮಗೆ? ಅವರು ಬಂಗಾಳದ ಆಫೀಸು ಕಚೇರಿಗಳಲ್ಲಿನ ಬಂಗಲು ಕಾವಲಿನವರು (ದರವಾನರು!)' ಎಂದು ಬರೆದು, ಬಿಹಾರದಲ್ಲಿ ಆ ಪತ್ರಿಕೆಯೇ ಬಹಿಷ್ಕಾರಕ್ಕೆ ಒಳಗಾಗುವಂತಾಯಿತು. ಕೊನೆಗೆ ಪತ್ರಿಕೆ ಕ್ಷಮೆ ಬೇಡಿತು, ಬಿಹಾರದ ಮುಖಂಡರು ಇನ್ನು ಈ ಮನಸ್ತಾಪವನ್ನು ಕ್ಷಮಿಸಿ ಮರೆಯಬೇಕೆಂದರು. ಹಾಗೆಯೆ ಆಯಿತು.

++ ++ ++

ಕಲ್ಕತ್ತದ ಸ್ಟಾರ್ ಒಫ್ ಇಂಡಿಯಾ ಪತ್ರಿಕೆಯು ಮುಸ್ಲಿಮ ಅಧಿಕಾರೀ ಧನಿಗಳ ಆಶ್ರಯದಲ್ಲಿದೆ. ಅದನ್ನು ಬಿಹಾರ ಸರಕಾರವೂ ಯಾವ ಬಗೆಯಲ್ಲೂ ಪ್ರೋತ್ಸಾಹಿಸಿಲ್ಲ. ಪತ್ರಿಕೆ ಧಾರಾಳವಾಗಿ ಬಿಹಾರಿಗಳನ್ನೂ ಹಿಂದುಗಳನ್ನೂ ಬೈಯ್ಯುವುದರಲ್ಲಿದ್ದು, ತನ್ನ ಚಂದಾದಾರರನ್ನೂ ಜಾಹೀರಾತುದಾರರನ್ನೂ ಕಳೆದುಕೊಳ್ಳುತ್ತದೆ. 'ಅಮೃತಬಜಾರ'ದಂತೆ ಇದೇಕೆ ಇನ್ನೂ ವರ್ತಿಸಲಾರದೋ!

++ ++ ++

'ಯುದ್ಧದ ಮೋಡಗಳು ಕವಿಯುತ್ತವೆ' ಎಂದು ಮೆಂಚೆಸ್ಟರ ಗಾರ್ಡಿಯನ್ ಪತ್ರವು ಗರ್ಜಿಸುತ್ತದೆ. ಜರ್ಮನಿಯು ಜೆಕೊಸ್ಲೊವಾಕಿಯದ ಕಡೆಗೆ ಮುಂದರಿಯುತ್ತಲೇ ಇದೆ, ಇಂಗ್ಲೆಂಡು ಲೋರ್ಡ ರನ್ಸಿಮೆನರನ್ನು ಅತ್ತ ಕಳಿಸಿದೆ, ಯಾರೂ ಹಗೆಗಳಾಗದಂತೆ, ಎಲ್ಲರ ಗೆಳೆತನ ಸಂಪಾದಿಸುವಂತೆ ತನ್ನ ಪ್ರಯತ್ನ ಎಂದು ಇವರ ಮೊದಲನೆ ಧ್ಯೇಯ. ಹಾಗಾದರೆ ಸಾಕು, ಯುದ್ಧ ತಡೆಯಬಹುದು.

++ ++ ++

ಪೋಪ ಸ್ವಾಮಿಯವರು ಇಟಲಿಗೂ ತಿಳಿಸಿ, ಯೆಹೂದ್ಯರ ಮೇಲೆ ಹತ್ಯಾರು ನಡೆಸದಂತೆ ನೋಡಿರುವುದೇ ಮಾತ್ರವಲ್ಲದೆ, ಜಾತಿ ನೋಡಿ ಪಕ್ಷಪಾತ ಮಾಡುವುದು ಕ್ರೈಸ್ತಧರ್ಮವಲ್ಲವೆಂದರು. ಮುಸ್ಸೊಲಿನಿಗೆ ಇದು ಸರಿ ತೋರಿಲ್ಲ. ಇಟಲಿಯನ್ ವಂಶವು ನಿರ್ಮಲವಾಗಿರುವಂತೆ ನೋಡಲಾದೀತು, ಅದೇ ಕ್ರೈಸ್ತ ಧರ್ಮ ಎಂದೇ ಅವನ ಮಾತು! ಈ ವಂಶ ಶುದ್ಧತೆಗೆ ಈಗ ಅತ್ಯಾತುರವಾಗಿ ಉತ್ಸಾಹ ದೊರೆತಿದೆ.

++ ++ ++

ಮುಸ್ಲಿಮರ ಏಕಮಾತ್ರ ಮುಖ್ಯಸಂಸ್ಥೆ ಮುಸ್ಲಿಮ್ ಲೀಗ್ ಅಲ್ಲವೆಂದು ಕಾಂಗ್ರೆಸು ಹೇಳಿರುವುದರಿಂದಲೂ, ಅಹ್ರಾರ್ ಸಭೆ ಮತ್ತು ಜಮಾಯತ್ ಉಲ್ ಉಲೇಮವು ಮುಸ್ಲಿಮ್ ಲೀಗಿನವರು ಮಾಡಿದುದರಲ್ಲಿ ತಮಗೆ ವಿಶ್ವಾಸವಿಲ್ಲವೆಂದುದರಿಂದಲೂ, ಮುಸ್ಲಿಮ್ ಲೀಗ್ ಎಲ್ಲ ಮುಸ್ಲಿಮರ ಸಂಸ್ಥೆಯಾಗಲು ಏಕೆ ಯತ್ನಿಸಬಾರದೋ ಜಿನ್ನಾರವರೇ ಬಲ್ಲರು. ಹಾಗಾದಲ್ಲಿ, ಹಿಂದೂ ಮಹಾಸಭೆಯೂ ಹಿಂದುಗಳ ಏಕಮಾತ್ರ ಸಂಸ್ಥೆಯಾಗುವಂತಾದರೆ, ಇವೆರಡರ ಸಂಧಾನದಿಂದ ಇಡೀ ಜನಾಂಗಕ್ಕೆ ಸಮಾಧಾನಕರವಾದ ಒಪ್ಪಂದವಾಗಲು ಅನುಕೂಲವಾಗುವುದಲ್ಲವೆ?

++ ++

ಆಗಾಖಾನರು ರಾತ್ರಿಗೆ ಮೂವತ್ತು ಪವನಿನ ಬೆಲೆಯ ಚಾ ಕುಡಿದರು ಎಂದು ಪ್ರಕಟವಾಗಿದೆ. ಅಯೋಧ್ಯೆಯ ತಾಲೂಕುದಾರರೊಬ್ಬರು ಯುದ್ಧಕಾಲದಲ್ಲಿ ತೆಗೆದುಕೊಂಡ ಸಾಲದ ಪತ್ರಗಳಲ್ಲಿ (War-bonds) ೧೦೦೦೦ ರೂಪಾಯಿ ಬೆಲೆಯವನ್ನು ಸುಟ್ಟು ಕಾಸಿದ ನೀರಲ್ಲಿ ಒಂದು ಕಪ್ ಚಾ ಮಾಡಿ ಕುಡಿದ ವೃತ್ತಾಂತವೂ ಪ್ರಕಟವಾದುದುಂಟು.

++ ++ ++

ಅಹಿಂಸೆ ನಮ್ಮಲ್ಲಿ ಊರಿಕೊಂಡಿದೆ. ಇಟಲಿಯ ನಾವಿಕರು ಬೊಂಬಾಯಿ ಮೊದಲಾದ ಬಂದರುಗಳಿಗೆ ನಿರಾತಂಕವಾಗಿ ಬರಬಹುದು. ಡಬ್ಲಿಸಿನಲ್ಲಿ ಹೆಂಗಸರು ಮಕ್ಕಳನ್ನು ಕೊಂದ ನಾವಿಕರೆಂದು ಇವರನ್ನು ಅಬಿಸೀನಿಯದಲ್ಲಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಉಣಿಸಿದರು. ಹಾವನ್ನು ಕಂಡಂತೆ ಇವರನ್ನು ಅಲ್ಲಿನ ಹೊಟೇಲುಗಳಲ್ಲಿ ಕಂಡರು. ಈ ಹಾವುಗಳ ಕೂಡಲೆ ಸೀರಿಗೀಳಿದವು (ಹಡಗಕ್ಕೆ)

++ ++ ++

ಬನ್ನು ಪ್ರಾಂತ್ಯವೆಲ್ಲಿದೆ? ಬ್ರಿಟಿಷ ಇಂಡಿಯದ್ದೇ, ಅಥವಾ ಗಡಿನಾಡಿನದೆ? ಅಲ್ಲಿನ ದರೋಡೆಗಳಲ್ಲಿ ನುಗ್ಗಿ ಬಂದವರು ಎತ್ತಲಾದರೂ ಗವಿಗಳಿಗೆ ಮರಳಲಿಲ್ಲವಾದುದರಿಂದ [ಸರ್ ಚೆಂಬರಲೇನರ ಮಾತಿನ ಆಧಾರ ಹಿಡಿದರೆ] ಬನ್ನು ಪ್ರಾಂತ್ಯವು ಬ್ರಿಟಿಷ ರಾಜ್ಯದಲ್ಲೇ ಇದೆ ಎನ್ನಬಹುದು. ಸಹಾನುಭೂತಿಯಿಂದ ಕರುಣಾಮಯವಾಗಿ ಸಿಡಿಗುಂಡು ಚಲ್ಲುವ ಕ್ರಮವಿದೆಯಷ್ಟೆ. ಗಡಿನಾಡಿನಲ್ಲಿ ಎಷ್ಟೋ ವಿಲ್ಲಿಯ ಖರ್ಚಾಗಿ ಹೋಯಿತು. ಹೀಗಿದ್ದರೂ ಬನ್ನುವಿನಲ್ಲಿ ಇನ್ನೂ ಜನಗಳನ್ನೆ ಕದ್ದೊಯ್ಯುವ ರೂಢಿ ಇದ್ದೇ ಇದೆ!

++ ++ ++

ಸಂಯುಕ್ತ ಪ್ರಾಂತ್ಯದಿಂದ ಪ್ರತಿ ಜಿಲ್ಲೆಗೆ ೧೦೦೦೦ದಂತೆ 'ಸೈನ್ಯ' ತಯಾರಾಗುವುದಂತೆ! ಈ 'ಸೈನ್ಯವನ್ನು ಮಂತ್ರಿ ಸಂಪೂರ್ಣಾನಂದರು ಕೂಡಿಸತೊಡಗಿದ್ದೇ, ಜಮೀನ್ದಾರರಿಗೆ ಅಪೂರ್ಣಾನಂದವಾಗತೊಡಗಿದೆ. ಇದರಿಂದ ಇಡೀ ಭಾರತವರ್ಷದ ಜಮೀನ್ದಾರರ ಒಂದು ದೊಡ್ಡ ಸಂಘವಾಗುವಂತಿದೆ.

++ ++ ++

ಜಪಾನು ಅಥವಾ ಇಂಗ್ಲೆಂಡುಗಳೊಡನೆ ವಾಣಿಜ್ಯ ಕರಾರು ಮಾಡುವ ಮಾತನ್ನೆ ಮರೆದು, ವಿದೇಶೀಯ ಎಕ್ಸಪರ್ಟರನ್ನು ಇತ್ತ ತರುವ ಅಮದು ವ್ಯಾಪಾರವನ್ನು ಕುರಿತು ಇಂಡಿಯನ್ ಚೇಂಬರ್ ಒಫ್ ಕೊಮರ್ಸ್ ಎಂಬ ಭಾರತೀಯ ವಾಣಿಜ್ಯ ಸಂಘವು ಚಳವಳಗೊಂಡಿದೆ. ಬ್ರಿಟಿಷ ಮಿದುಳುಗಳನ್ನು ಈ ರೀತಿ ಆಮದು ಮಾಡಿದರೆ, ಭಾರತೀಯ ಮಿದುಳುಗಳ ಬೆಲೆ ಇಳಿದೀತೆಂದೇ ಅವರ ಬೆದರಿಕೆ.

++ ++ ++

ಬ್ರಿಸ್ಟ್ರೇಲ್ಯದ ಪಾರ್ಲಿಮೆಂಟಿನಲ್ಲಿ, ಸದಸ್ಯರ ಕಿವಿಗಳನ್ನು ನೋಯಿಸುವ ಪ್ರತಿಯೊಂದು ಭಾಷಣಕ್ಕೆ 10 ಶಿಲಿಂಗಿನ ಬೆಲೆ ಬರುತ್ತದೆ. ಆದರೆ, ಇಂಡಿಯದ ನ್ಯಾಯಸಭೆಗಳಲ್ಲಿನ ಭಾಷಣಗಳಿಗೆ ಸರಾಸರಿ ಬೆಲೆ ಎಷ್ಟೆಂದು ತಿಳಿದು ಬಂದಿಲ್ಲ. ಹೇಗೂ ಇರಲಿ, ಇಲ್ಲಿ ಭಾಷಣಗಳನ್ನು ಓದುವವರು ಕಡಮೆ. ಶಾಸ್ತ್ರದ ಶ್ಲೋಕಗಳನ್ನು ಪಾರಮಾಡುವ ಬಾಲ್ಯದ ಅಭ್ಯಾಸವಿರುವುದರಿಂದ ಕಾಗದ ಹಿಡಿದು ಭಾಷಣ ಓದುವ ಬದಲಾಗಿ, ಇಲ್ಲಿ ಸಿಂದ ರಿಂದಲೇ ಭಾಷಣ ಓದುತ್ತಾರೆ.

++ ++ ++

ಕಾಂಗ್ರೆಸಿನವರು 'ಉಪವಾಸಿಗಳು, ಹಸಿವಿಂದ ಪೀಡಿತರಾದವರು' ಎಂದು ಕರೆವುದು ಯಾರನ್ನು? ರೈತರನ್ನೇ ಅಥವಾ ಜಮೀನಿನ ಯಾವ ಸಂಪರ್ಕವೂ ಇಲ್ಲದ ಕೂಲಿಯವರನ್ನೇ? ಎರಡನೆಯವರಿಗೆ ಅನ್ನಕಷ್ಟ ವಿಶೇಷ ಕೂಲಿ ಸಿಕ್ಕುವೂ ದೊರೆಯದು. ಇವರನ್ನು ರೈತರಷ್ಟೇ ಚೆನ್ನಾಗಿ ದುಡಿಸಿ, ಅವರ ದುಡಿತದ ಮೇಲೆ ಜೀವನ ಮಾಡುವವರಿದ್ದಾರೆ. ಇವರಿಗಾಗಿ ಕಾಂಗ್ರೆಸು ಏನು ಮಾಡಿಯದೆ? ರೈತರು ಸಹಾ ದುಡಿಸಿ ತಿನ್ನುವ ಈ ಕೂಲಿ ಕೆಲಸಗಾರರನ್ನು ಕಾಂಗ್ರೆಸು ಉದ್ಧರಿಸಬೇಡವೆ?

++ ++ ++

ಪೆಲೆಸ್ಟೀನ 48 ವರ್ಷ ... ಮಾಡಿದ್ದ ಮಿಸ್ ನ್ಯೂಟನ್ ಎಂಬಾಕೆ ... ವುದೇನು? ಪೆಲೆಸ್ಟೀನದಲ್ಲಿ ಅರಬರಾಜ್ಯವಾದರೂ ಅದರೊಳಗೆಯೆ ಹೂದಿದೇಶವನ್ನು ನಿರ್ಮಾಣ ಮಾಡುವುದಕ್ಕಾಗಿ ನಾವು(ಬ್ರಿಟಿಷರು) ಅಲ್ಲಿ ಅರಬರನ್ನು ಜಗ್ಗಿಸನೋಡುತ್ತ ಭಯಾನಕ ಅವಸ್ಥೆಯನ್ನು ಉಂಟುಮಾಡಿದ್ದೇವೆ. ಬ್ರಿಟಿಷರನ್ನು ದೂರ ಪುದಕ್ಕೆಂದು ಹೀಗೆ ಹೇಳುವುದಿಲ್ಲ. ನಿಷ್ಪಕ್ಷವಾಗಿರುವ ಬ್ರಿಟಿಷರ ನಡತೆಯು ಈ ಯುಗದಲ್ಲಿ ಹೇಗೆ ಬದಲಾಗಿದೆ ಎಂದು ಚಕಿತಳಾಗಿಯೇ ಹೀಗೆನ್ನುವುದು." ಇದು ಬ್ರಿಟಿಷರಿಗೆ ಹೇಳಿರುವ ಮಾತು. ಭಾರತೀಯರಿಗೇನು? 'ನಿಷ್ಪಕ್ಷವಾಗಿ ನಡೆದು ನ್ಯಾಯ ತೀರಿಸುವ ಬ್ರಿಟಿಷರ ಬುದ್ಧಿ'ಯನ್ನು ಓದುತ್ತಲೇ ಕಾಂಗ್ರೆಸರು ನಗಬೇಕು.

++ ++ ++

'ಜನರ ಮಿತ್ರರಾಗಿ ಪೋಲೀಸರು ಬಾಳುವರು' ಎಂದು ಶ್ರೀ ರಾಜಗೋಪಾಲಾಚಾರ್ಯರು ಎಂದುದಕ್ಕೆ—'ದಯವಿಟ್ಟು ಪೊಲೀಸ್ ಫೌಜಿಗೆ ಖಾದೀ ದುಸ್ತು ದಯಪಾಲಿಸಿರಿ' ಎಂದು ಒಬ್ಬರು ಉತ್ತರ ಬರೆದಿರುವರು.

++ ++ ++

ನಾಗಪುರದಲ್ಲಿ ಖಾರೇ ಪಕ್ಷವಾಗಿ ವಿದ್ಯಾರ್ಥಿಗಳ ಕೂಟವಾಗಿ ಗಡಿಬಿಡಿ ನಡೆಸಲಾಯಿತು. ಅದು ಮರಾಠರದ ಕೇಂದ್ರ. ಜಬಲಪುರವು ಮಹಾ ಕೋಸಲದ ಕೇಂದ್ರ: ಹೊಸ ಮುಖ್ಯ ಮಂತ್ರಿ ಶ್ರೀ ಶುಕ್ಲಾ ಪಕ್ಷವಾಗಿ ಅಲ್ಲಿನ ವಿದ್ಯಾರ್ಥಿಗಳು ಗಡಿಬಿಡಿ ನಡೆಸಬಹುದು. ಹಿಂದೂಮುಸ್ಲಿಮ ಸಮಸ್ಯೆಗೆ ಸರಿಯಾಗಿ ಇನ್ನು ವರ್ಗಾಯಿಸದಿದ್ದಲ್ಲಿ, ರಗಳೆಗಳು ಮುಗಿಯುವ ಹಾಗಿಲ್ಲವಂತೆ.

++ ++ ++

ಹಿಂದೀ ವಿರುದ್ಧರ ಸತ್ಯಾಗ್ರಹ ಮದ್ರಾಸಿನಲ್ಲಿ, ವೈಸ್ರಾಯರ ಸರ್ಟಿಫಿಕೇಟಿನ ಪ್ರಭಾವದಿಂದ ಮಂಜೂರಾಗಿದ್ದು ಕಾಂಗ್ರೆಸಿನ ಮೇಲೆ ಎಂದು ಬಿಸುಟ ಅಸ್ತ್ರವನ್ನೆ ಈಗ ಕಾಂಗ್ರೆಸು ಈ ಸತ್ಯಾಗ್ರಹಿಗಳ ಮೇಲೆ ಬಿಸುಡುತಿದ್ದಾರೆ, ಮಧ್ಯಪ್ರಾಂತ್ಯದಲ್ಲಿ ಶುಕ್ಲವಿರುದ್ಧ ಚಳವಳ ಸತ್ಯಾಗ್ರಹಗಳು ಉಂಟಾದರೆ ಈ ಅಸ್ತ್ರವೇ ಬೇಕಾಗಬಹುದು.

++ ++ ++

ಸಿಂಧಪ್ರಾಂತ್ಯದೊಳಗೆ ಎಲ್ಲೆಲ್ಲಿ ಮುಸ್ಲಿಮ ಲೀಗ ಸದಸ್ಯರಿಗೆ ಅಧಿಕಾರವಿದೆಯೋ ಅಲ್ಲಿ ಬೋರ್ಡ ಮ್ಯುನಿಸಿಪಲ್ ಆಫೀಸು/ ಎಂದು ನೋಡದೆ ... ಲೀಗ್ ಧ್ವಜಹಾರಿಸಬೇಕೆಂಬುದು ಹಾರೂ... ರ ಸೂಚನೆ. ... ಕಾಂಗ್ರೆಸು ... ಲೀಗ್ ... ಎಲ್ಲ ... ಅಸ್ತ್ರದ ತನಕ ಈ ... ಕಾಂಗ್ರೆಸಿನ ಲೀಗ್ ಸಮಾನಪಟ್ಟವೆಂಬುದನ್ನು, ಧ್ವಜಹಾರಿಸಿಯೇ ಸಮಾನವಾಗಿದೆಂದು ರುಜುಮಾಡಬೇಕೆಂದು ಅವರ ಬೋಧನೆ.

THE

Bank of Mangalore Ltd.,

MANGALORE

ESTD 1931

Branches-

Panemangalore Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% ***on daily balances.***

All kinds of banking business transacted

ನೆಂಕಿಂಗ್‌ನಲ್ಲಿ

ಘೋರ-ಭೀಕರ-ಭಯಂಕರ-ಅತ್ಯಾಚಾರಗಳು

ಯುದ್ಧವೆಂದ ಬಳಿಕ, ಅತ್ಯಾಚಾರಗಳಾಗದೆ ಇರುವುದು ಅಸಂಭವ ಕಳೆದ ಮಹಾಯುದ್ಧದಲ್ಲಾದುವು ಕಡಿಮೆಯುವಲ್ಲ. ಹೊಸ್ಟೇ ವೇಳೆ ಈ ಅತ್ಯಾಚಾರಗಳನ್ನು ಅತಿಶಯವಾಗಿ ವರ್ಣಿಸುವರಾದ ಕಾರಣ, ಅವನ್ನು ಹಳವಾಗಿ ಕಡಮೆಯಾಗಿ ಎಣಿಸುವರು. ದರೂ, ಅತ್ಯಾಚಾರಕ್ಕೆ ಬೇರೆ ಹೆಸರು ಇಲ್ಲ ಷ್ಟೆ ಇಂಥವಕ್ಕೆ ಬೇರೆ ದಾಖಲೆಗಳು ಇರು ಆಗ ಅವನ್ನು ಅತಿಶಯವೆಂದೆನ್ನಲಾಗುತ್ತಿಲ್ಲ ಂಥ ದಾಖಲೆಗಳನ್ನೇ, ಸಿನೆಮಾ ಫೊಟೋಗ ನ್ನೇ, ಈಗ ರಿಕಾರ್ಡು ಸಮೇತ ಹೊರಡಿಸಿರು ದು ಜಪಾನಿನ ಅತ್ಯಾಚಾರಗಳು ಎಂ ಬೊಂದು ಪುಸ್ತಕವು ಹೀಗೆ ತಯಾರಾಗಿದೆ

ಕಳೆದ ಡಿಸೆಂಬರು 14ಕ್ಕೆ ನೆಂಕಿಂಗ್ ನಗರವನ್ನು ಜಪಾನಿನ ಸೇನೆಗಳು ಪ್ರವೇಶಿಸಿದುವು ಮುಂದೆ ಪಿಶಾಚರೂ, ರಾಕ್ಷಸರೂ ಆ ಪ್ರದೇಶವನ್ನು ಆಳಿದಂತೆ ತೋರುವುದು ಎರಡು ಶತಮಾನಗಳ ಹಿಂದೆ ಯಾವ ಬಗೆಯಲ್ಲಿ ವ ನು ಷ್ಯರು ಬರ್ಬರತೆಯಿಂದ ಮಾದಿಗರಿಗೂ ಕೀಳಾಗಿ, ನರಕದ ನಾಯಿಗಳಾಗಿ ಯುದ್ಧಗಳಲ್ಲಿ ವರ್ತಿಸುತ್ತಿದ್ದರೋ ಅಷ್ಟೇ ಚೆನ್ನಾಗಿ ಈ ಸೇನೆಗಳು ವರ್ತಿಸಿದುವು. ನಗರವನ್ನು ಪರದೇಶೀಯರು ಬಿಟ್ಟುತೆರಳಬೇಕಾಗಿ ಜಪಾನಿನ ಡಂಗುರವಿತ್ತು, ಆದರೂ ಅಮೇರಿಕ, ಜರ್ಮನಿ, ಇಂಗ್ಲೆಂಡುಗಳಿಂದ ಬಂದ ಕೆಲವು ವಾರ್ತಾದಾಯರು ಅಲ್ಲೇ ನಿಂತು, ತಮ್ಮ ಸರಹದ್ದಿನಲ್ಲಿ ಆಶ್ರಯಗೊಳುವವರನ್ನು ಕಾಪಾಡಲು ಉದ್ಯುಕ್ತರಾದರು. ಇವರು ಪತ್ರಿಕೆಗಳಿಗೆ ಬರೆದುದನ್ನು ಪ್ರಕಟಿಸಧ ಹಾಗೂ ಪ್ರಕಟಿಸಿದರೆ ಅದೆಲ್ಲ ಅತಿಯೋಕ್ತಿ ಎನ್ನುವ ಹಾಗೂ ಜಪಾನಿನವರು ತಡೆದರು ಆದರೆ, ಟಿಂಪರ್ಲೆ ಎಂಬೊಬ್ಬರ (ಮೆಂಚೆಸ್ಟರ್ ಗಾಡಿಯನ್ ಪತ್ರದ ಬಾತ್ಮೀದಾರರ) ತಮ್ಮ ಹೇಳಿಕೆಯನ್ನೆಲ್ಲ ಬರೆದಿಟ್ಟು ಕೊನೆಗೆ ಈಗ ಪುಸ್ತಕರೂಪವಾಗಿ ಪ್ರಕಟಿಸಿ ಬಿಟ್ಟಿದ್ದಾರೆ ಇದರಲ್ಲಿ ಅಲ್ಲಿದ್ದ ಪರದೇಶೀಯರು ಬರೆದ ಪತ್ರಗಳೂ [illegible]

ಜಪಾನಿನ ಸೈನ್ಯಗಳ [illegible]

ಅಲ್ಲೇ 40 000 ಚೀನೀಯರನು ಅವರು ನಿರಾಯುಧರಾಗಿದ್ದರೂ, ಜಪಾನೀಯರು ಕೊಂದೇಬಿಟ್ಟರು ಇವರನ್ನು ಹುಗಿದಿಟ್ಟ ಲೆಕ್ಕವಿದೆ, ಹೊಂಡಗಳಿವೆ ರಿಕಾರ್ಡು ಇದೆ ಇವರೊಳಗೆ ಸೇಕಡಾ 80 ಎಂದೂ ಆಯುಧ ಹಿಡಿದವರೇ ಆಗಿರಲಿಲ್ಲ ಡೈರಿಯಲ್ಲಿದೆ ಹೀಗೆ —

ಡಿಸೆಂಬರು ತಾ 22 ಬುಧವಾರ ಬೆಳಗ್ಗೆ 6 ರಿಂದಲೂ ಗುಂಡುಹಾಕ್ಕಿಕೊಲ್ಲುವ ಸೇನಾಂಗ ಕೆಲಸಮಾಡುತ್ತಲಿದೆ ನಾವು 100 ಗುಂಡು ಹಾರಿಸಿದುದನ್ನು ಕೇಳಿದೆವು, ಗುಂಡಿನ ಲೆಕ್ಕ ಮಾಡಿದ್ದೇವೆ ಹತ್ತಿರದ ಹಳ್ಳದಲ್ಲೇ ಐವತ್ತು ಹೆಣಗಳನ್ನು ಎಣಿಕೆ ಮಾಡಿದ್ದೇವೆ ನಮ್ಮ ಕಚೇರಿಯು ಕೆಲವು ಮೈಲು ದೂರದಲ್ಲೇ ಈ ಹೊಂಡ ಪ್ರತಿ ಹೆಣದ ಕೈಗಳನ್ನು ಹಿಂದೆ ಕಟ್ಟಲಾಗಿತ್ತು ಒಬ್ಬನ ತಲೆ ಅರ್ಧ ಕತ್ತರಿಸಲಾಗಿದೆ ಸಕಬಳಿ [illegible]

ಡಿಸೆಂಬರು ತಾ 23 ಗುರುವಾರ [illegible] ಗಾವ ನ [illegible] ಕರ [illegible] ಶಿಬಿರದಿಂದ 70 ಮಂದಿಯನ್ನು ಕರೆದುಕೊಂಡು ಹೋಗಿ ಪ್ರತಿಯೊಬ್ಬನನ್ನೂ ಗುಂಡಿಟ್ಟು ಕೊಂದರು ಯಾರು ಸಿಗುವರೋ ಅವರನ್ನು ಸೈನಿಕರು ಕೊಂಡೊಯ್ಯುವರು ಕೈಗಳ ಮೇಲೆ ಜಿಡ್ಡು ಕಟ್ಟಿದ ಗುರುತಿದ್ದರೆ ಅವನು ಸೈನಿಕನೆಂದರ್ಥ ಅವುಗಳ ವ್ರಣ [illegible] ಕಪ್ಪಾಗಿರುವವರನ್ನು ಈ ಒಗೆಯಾಗಿ ಕೈನೋಡಿ [illegible] ನಡುವ [illegible] ಅವನ ತಲೆ [illegible] ಕಣ್ಣುಕಿವಿಗಳ [illegible]

[illegible]

ಮೊಶಿನ್‌ಗನ್ ಎಷ್ಟೇ ಬೆಂಕಿ ಹಚ್ಚಿದ ಶಿವಿದಾಟವೂ ಇತ್ತು ಹಿಂದುಹಿಂದಾಗಿಸಿ ಕೊಲ್ಲುವಾಗ ಇದೇ ಪ್ರಯೋಗ ಕೆಲವರು ಉಳಿದರೆ ವಾರ್ತೆ ತಿಳಿಸುವರ ಪ್ರಾಣಭಯವಿಲ್ಲವೆಂದು ವಚನಕೊಟ್ಟು, ಕೂಲಿಕೆಲಸವಮಾಡಿಸಿ, ಆ ಬಳಿಕ ಅವರನ್ನು ಹಿಂಡಾಗಿಸಿ ಕೊಲ್ಲಿಸಿರುವರು

ಇದೊಂದು ಪ್ರಕರಣವೇ ಒರೆ ಇದೇ ನಗರದಲೆಲ್ಲ ಸೈನಿಕರ ಸೂರೆ ನಡೆಯಿತು ಹಣ [illegible] ಇಲ್ಲದ ಜೀವಕೊಂದು ಎಂದೇ ನಿರ್ಬಂಧ. ಹಣವಿಲ್ಲದವರು ಹೆಣ್ಣನ್ನಾದರೂ ಕೊಡಬೇಕಾಗಿತ್ತು ಅಂಗಡಿಗಳನ್ನು [illegible] ಮಾಡುವುದು, [illegible] ಸುಡುವುದು ಮುಂದಿದ ಹಾಕುವುದ ಇತರ ಉದ್ಯೋಗಗಳ ಕೆಲವು ಸಂಗತಿಗಳನ್ನು ಬರೆವುದು ದುಃಖಕರ ಸ್ತ್ರೀಯರನ್ನು [illegible] ಹೆದ್ದಾರಿಗಳಿಂದ ಹೆಂಗಸರನ್ನು ಸೈನಿಕರ ಎತ್ತಿಕೊಂಡು ನಡೆವರು ರಾತ್ರಿ ಕಾಲಗಳಲ್ಲಿ ಮನೆನ [illegible] ಪರದೇಶೀಯರ ಆಶ್ರಯದಲ್ಲಿದ್ದ ಮನೆಗಳಿಂದಲೂ ಹೆಂಗಸರನ್ನು ಸೆಳೆದೊಯ್ದರು ಕೆಲವೇಳೆ ಇವರನ್ನು ಹಿಡಿ [illegible] ಎಷ್ಟೋ ವೇಳೆ ಇವರ ಪತ್ತೆ [illegible] ಹೆಂಗಸರು ಒಬ್ಬರಿದ್ದಲ್ಲಿ ಅವರನ್ನು ತಿವಿದು ಕೊಲ್ಲುತ್ತಿದ್ದರ ಗಂಡಸರ ಇವ [illegible] ಅವರನ್ನು [illegible] ಇಕ್ಕಿದರು. ತಾಯಿಯೊಬ್ಬಳ ಮೇಲೆ ಅತ್ಯಾಚಾರ ನಡೆವಾಗ ಮಗು ಅತ್ತಿತೆಂದು ಅದನ್ನು ಕೊರಳ ಹಿಸುಕಿ ಕೊಂದರು

ಹೀಗೆ 50000 [illegible]

[illegible]

—ಹೆಂಗಸರ ಮಾನರಕ್ಷಣೆ [illegible] —ದರೆ

ಇವರಿಗೂ ಕೂಡಲೆ ಗುಂಡಿನೇಟಿನ ಮರಣವಾದೀತೆಂಬ ಗಂಡಾಂತರವಿತ್ತು

ಪರದೇಶೀಯರಲ್ಲಿ ಅಮೇರಿಕದ ಮಿಶ್ಯನರಿಗಳೂ ಡಾಕ್ಟರರೂ ಹೆಚ್ಚಿನವರು. ಎಲ್ಲರಲ್ಲಿ ಹೆಚ್ಚಿನ ಕೀರ್ತಿ ಹರ್ ರೇಬ್ ಎಂಬ ಜರ್ಮನ್ ಗೃಹಸ್ಥನಿಗೆ ಸಲ್ಲುವುದು ರೇಬನ ಮನೆಯಂಬಾ ಚೀನೀ ಸ್ತ್ರೀಯರು ಆಶ್ರಯಹೊಂದಿದ್ದರು. ರೇಬನು ಮನೆಯಿಂದ ಹೊರಕ್ಕೆ ಬರಲೇ ಇಲ್ಲ. ಜಪಾನಿನ ಸೈನಿಕರು ಗೋಡೆ ಹಾರಿ ಅಂಗಳದಲ್ಲಿಳಿದ ಕೂಡಲೆ, ಅದೇ ದಾರಿಯಾಗಿ ಹಿಂದೆ ಹೋಗಬೇಕೆಂದು ಇವನ ಒತ್ತಾಯ. ಅವರು ಬಲವಂತ ನಡೆಸಿದರೆ ಅವರ ಮುಖದ ಮೇಲೆ, ತಾನು ನಾಜಿ ಎಂಬ ಗುರುತು ತೋರಿಸಿಯೊ, ಇದರರ್ಥವೇನು? ಎಂದು ಕೇಳುವನು. ಅವರು ಕೂಡಲೆ ಪಲಾಯನಮಾಡುವರು

ಇನ್ನೂ ವಿಶೇಷತರದ ಅತ್ಯಾಚಾರಗಳ ರೀತಿಯನ್ನು 'ನೆಂಕಿಂಗ್ ಕೆಪ್ಟರ್' ಎಂಬ ಫಿಲ್ಮ್‌ಚಿತ್ರದಲ್ಲಿ ಮೆಂಚೆಸ್ಟರಿನಲ್ಲಿ ಪ್ರದರ್ಶಿಸಲಾಗಿದೆ

ಈ ಪುಸ್ತಕ ಮತ್ತು ಈ ಚಿತ್ರಪ್ರದರ್ಶನದಿಂದ ಚೀನೀಯರ ಕಡೆಗೆ ಬ್ರಿಟಿಷರ ಸಹಾನುಭೂತಿಯು [illegible] ಗುವಂತಾಗಿದೆ.

ಊಟವಾದೊಡನೆ ಆತನಲ್ಲಿ ಸಂಕಟವಾಗುತ್ತಿತ್ತು

ಕಠಿಣ ತರದ ಅಜೀರ್ಣಾವಸ್ಥೆಯು ಕ್ರುಶನ್‌ನಿಂದ ನಿವಾರಿಸಲ್ಪಟ್ಟಿತು

ಈಗ ಆತನು ಹೊಸ ಮನುಷ್ಯನಾಗಿರುವನು

ಈತನನ್ನು ಅಜೀರ್ಣಾವಸ್ಥೆಯಿಂದ ಗುಣಪಡಿಸಿದ ಚಿಕಿತ್ಸೆಯು, ಪ್ರತಿಯೊಬ್ಬರೂ ಉಪಯೋಗಿಸುವುದರಲ್ಲಿ ಉತ್ತಮ [illegible] ಆತನು ಹೀಗೆಂದು ಬರೆದಿರುವನು

[illegible]

ಹೊರದೆಸಿ ಹೊಟ್ಟೆಯಲ್ಲಿ ಜೀರ್ಣವಾಗದ ಆಹಾರವನ್ನು ಜೀರ್ಣಗೊಳಿಸುವ ಪ್ರಭಾವವು ಕ್ರುಶನ್ಸಿಗೆ ಇದೆ ಕ್ರುಶನ್ ಲವಣಗಳು ಎಲ್ಲಾ ಬಜಾರುಗಳಲ್ಲೂ ದವಾಖಾನೆಗಳಲ್ಲೂ ದೊರಕುತ್ತದೆ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER

ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗತೆ ತೆಗೆದುಕೊಳ್ಳಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು ಗೊನೊಕಿಲರ್ ಇರುವುದು ಎಂಬುದನ್ನು ನೋಡಿರಿ

ಇಂದಿನ ಅದ್ಭುತ ಔಷಧ ಇಂಗ್ಲೀಷು ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವು, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದಾಗಿ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N JASANI,** Vithalbhai Patel Road, BOMBAY 4

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಯುದ್ಧವು ಚೀನಕ್ಕೆ ಕಲಿಸಿದುದೇನು?

ಮೇಡೇಮ್ ಚಿಯಾಂಗ್-ಕೈ-ಶೇಕ್ ಇವರಿಂದ.

...ಯರು ಚೀನದಲ್ಲಿ ... ಕಾಲಿಟ್ಟ ... ದಿಲ್ಲ ಸ್ಮಶಾನವನ್ನೆ ಸೃಷ್ಟಿಸಿರುವರು. ...ನಲ್ಲಿ, ನಮ್ಮ ಹೃದಯ, ನಮ್ಮ ಮನಸ್ಸಿನ ಮೇಲೆ ಇವರು ಕಲಂಕ ಬಳಿದು ಗಾಯ ...ರುವರು. ಈ ಗಾಯಗಳು ಯುಗಾಂತರದವರೆಗೂ ಮಾಯುವಹಾಗಿಲ್ಲ. ಇಷ್ಟು ಹಾನಿಯು ಜಪಾನಿಗಳಿಗೆ ಗೊತ್ತೇ?

ಜಗತ್ತಿನಲ್ಲಿ ತಮ್ಮ ಸ್ಥಾನಮಾನ ಕಾಪಾಡುವ ಆಸೆ ಜಪಾನಿಗಿದ್ದರೆ ವಿವೇಕದಿಂದ ಬೇಗನೆ ...ಯಾಗಿ ವರ್ತಿಸಕಲಿಯಲಿ. ಜಪಾನು ನಮ್ಮ ದೇಶದ ಸ್ತ್ರೀ ಪುರುಷಬಾಲಕರ ಪ್ರೇತಗಳ ಕೋಟೆಯನ್ನೇ ಎಬ್ಬಿಸಿರುವರು. ಈ ಪ್ರೇತಗಳು ...ರಿ, ಪುರಾತನ ನಗರ, ದೇವಾಲಯ, ಗ್ರಾ...ವ, ಕಾರಖಾನೆ, ಅಂಗಡಿಗಳು ಇವುಗಳ ಪ್ರೇತಗಳು ಬೇರೆ.– ಇವೆಲ್ಲವು ಇರುವಷ್ಟು ಕಾಲ ಜಪಾನೀಗೆ ಶಾಂತಿಯಿದ್ದೀತೆ? ಇಂಥ ರಾಕ್ಷಸ ವ್ಯಾಪಾರವನ್ನು ಜಗತ್ತಿನಲ್ಲಿ ಮತ್ತೆಲ್ಲಿ ಕಾಣಬಹುದು? ಕಂಡವರಿದ್ದಾರೆಯೋ? 1988ರ ನಾಗರಿಕತೆಯ ಲಕ್ಷಣವಾಗಿ, ಇಂಥ ಮಹಾಪಾತಕಿಗೆ ಮಹಾಪಾತಕಿ ಶಾಸನ ಮಾಡುವವರಿಲ್ಲವೆಂದಾಗಿದೆಯೊ?

ಭವಿಷ್ಯವು ಹೇಗಿದೆ? ಪುನಃ ರಚನೆಗೆ ಕೈ ಹಾಕುವುದೇ ಮುಖ್ಯ ಕರ್ತವ್ಯ. ಕೋವಿಗಳ ಸದ್ದು ಮುಗಿದ ಬಳಿಕ, ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಬೇಕಾಗಿದೆ. ಜನಾಂಗವನ್ನೆ ಪುನಃ ನಿರ್ಮಾಣಗೊಳಿಸಬೇಕು. ಕಟ್ಟಡ ಜನಾಂಗಗಳನ್ನು ಸಿಡಿಗುಂಡಿಗಳು ಕೆಡಿಸಿವೆ ಮಾತ್ರವಲ್ಲದೆ, ರಾಜ್ಯಭಾರ ಕ್ರಮವನ್ನು ಕೆಡಿಸಿವೆ. ಮುಂದಣ ನಿರ್ಮಾಣ ಕಾರ್ಯದಿಂದ, ಜನಾಂಗವು ಪ್ರಜಾಸತ್ತೆಯ ಕೀರ್ತಿಯ ಜೀವಂತ ಶರೀರವಾಗಬೇಕು. ನಾವು ಉಳಿದರೆ ಎಂದರೆ ಪ್ರಜಾಸತ್ತೆಯೇ ಉಳಿದರೆ ಇಷ್ಟೆಲ್ಲ ಸಾಧ್ಯವಾಗಿದೆ.

1911ರಿಂದ ಇದುವರೆಗೂ ಅಂತಃ ಕಲಹಗಳಿದ್ದುವು. ಜನಾಂಗವು ಇದೀ ಎದ್ದು ನಿಂತುದಿಲ್ಲ, ಸುಧಾರಣೆ ಹೊಂದುದಿಲ್ಲ. ಪುರಾತನ ಕೀರ್ತಿಯ ಮೇಲೆ ನಾವು ಬಹುಕಾಲ ಆಧರಿಸಿಯೇ ಬಾಳಿದೆವು. ಮುಂದೆ ನಮ್ಮ ಕರ್ತವ್ಯಕ್ಕೆಕೊಂಡು ನಡೆಯುತ್ತಿರುವಾಗಲೇ ಜಪಾನು ನುಗ್ಗಿತು.

ನಮ್ಮ ಹಳೆಯ ದುರ್ಗುಣಗಳು ಇನ್ನೂ ತಲೆಯೆತ್ತಿಯೇ ಇದ್ದುದರಿಂದ ಜನಾಂಗದ ಪುನರ್ಘಟನೆಯಾಗಿದ್ದಿಲ್ಲ. 1987ನೇ ಇಸವಿ ಜುಲಾಯಿ 6ರಿಂದ ಸಿಡಿಗುಂಡ ಮಳೆ ಸುರಿದು ಸುರಿದು, ಈ ದುರ್ಗುಣಗಳು ಸುಟ್ಟು ಭಸ್ಮವಾಗಿದೆ. ಇಷ್ಟಾದರೂ ಈ ಯುದ್ಧದ ಉಪಕಾರವೆನ್ನೋಣ.

ಪ್ರಜಾಸತ್ತೆಯಲ್ಲಿ ನನ್ನ ಆಸೆ. ಪ್ರಜಾಸತ್ತೆಯು ಇದುವರೆಗೆ ಮಾಡಿರುವುದೇನು? ಎಂದು ಸಂಶಯಗೊಂಡು ಕೇಳುವವರೂ ಇದ್ದಾರೆ. ಪ್ರಜಾಸತ್ತೆಗಾಗಿ ಅದನ್ನು ಸಂರಕ್ಷಣೆಮಾಡುವ ಕರ್ತವ್ಯವನ್ನಾದರೂ ನಾವು ಮಾಡಿದ್ದಿಲ್ಲ. ಯುದ್ಧ ಬಂದೇ ಬಂತು, ಈಗ ಯುದ್ಧ ಮಾಡಲೇ ಬೇಕಾಯಿತು.

ಆದರೂ ಪ್ರಜಾ ಸತ್ತೆಯಲ್ಲಿ ಮುಂದರಿದ ಇತರ ಜನಾಂಗಗಳು, ಜಪಾನಿನ ಅತ್ಯಧಿಕ ಅತ್ಯಾಚಾರಗಳನ್ನು ಕಂಡೂ ಕೇಳಿಯೂ ಏನೂ ತಡೆವುದಿಲ್ಲವೇಕೆ? ನಾವೇ ಮಾತ್ರ ನಮ್ಮಷ್ಟಕ್ಕೆ ಈ ಪ್ರಜಾ ಸತ್ತೆಯ ರಕ್ಷಣೆಗಾಗಿ ಹೋರಾಡ ಬೇಕಾಗಿದೆ. ಕರಾರುಗಳೂ ಸಂಧಾನಗಳೂ ಮೂಲೆ ಪಾಲಾಗಿದೆ. ಎಲ್ಲರೂ ತಟಸ್ಥರಾಗಿರಬೇಕೆಂದು ಜಪಾನ. ಅವರಿಗೆ ಹೇಳುವಾಗ ಮಾತ್ರ ಕಿವಿಕೊಡುತ್ತಿರುವರೇಕೆ? ಅವರು ಪ್ರಜಾಸತ್ತಾತ್ಮಕ ರಾಜ್ಯಗಳಾಗಿ ಪ್ರಜಾಸತ್ತೆಯ ರಕ್ಷಣೆಗಾಗಿ ಏನನ್ನೂ ಮಾಡದಿರುವ ಕಾರಣ ನಮ್ಮ ಪ್ರಜೆಗಳನ್ನು ಜಪಾನು ಧ್ವಂಸಮಾಡುವ ಹಾಗಾಗಿದೆ. ನುಗ್ಗಿದಷ್ಟೂ ಸ್ಮಶಾನವಾಗುತ್ತಿದೆ. ಇದು ಪ್ರಜಾಸತ್ತೆಯ ಮಹದುಪಕಾರವೇ?

ಪ್ರಜಾಸತ್ತೆ ಇರುವ ರಾಜ್ಯಗಳು ನಮಗೆ ಸಹಾನುಭೂತಿ ತೋರಿಸಿರುವುದು ಕಡಮೆಯಲ್ಲ. ಇಂಥ ರಾಜ್ಯಗಳಲ್ಲಿನ ಪ್ರಜೆಗಳೂ ಸರಕಾರಗಳೂ ಬೇರೆಬೇರೆಯಾಗಿ ನಮ್ಮ ಕಡೆಗೆ ಸಹಾನುಭೂತಿ ತೋರಿಸಿದೆ. ಸರಕಾರಗಳು ಜಪಾನಿಗೆ ಶಾಂತರೀತಿಯಿಂದ ಎಚ್ಚರವಿರಲೆನ್ನುತ್ತವೆ, ಪ್ರಜೆಗಳು ಉದ್ರೇಕಗೊಂಡು ಜಪಾನನ್ನು ದಮಿಂದಿಕ್ಕಬೇಕೆನ್ನುವುವು. ಹಾಗಿದ್ದರೂ ಅದೇ ಪ್ರಜೆಗಳು ಪ್ರತಿನಿಧಿಗಳಿರುವ ಸರಕಾರಗಳು ಪ್ರಜೆಗಳ ಮಾತನ್ನೇಕೆ ಮನ್ನಿಸುವುದಿಲ್ಲ? ಸರಕಾರಗಳ ಎಣಿಕೆಯಲ್ಲಿ, ಜಪಾನನ್ನು ಗೆಲ್ಲುವುದು ಕಷ್ಟವೆಂದೇ ಭ್ರಾಂತಿಯಿದೆ.

ಹತ್ತು ತಿಂಗಳಲ್ಲೂ ನಾವು ತಿಳಿದುಕೊಂಡಿರುವುದು ಇಷ್ಟನ್ನೇ. ಅಗಲಿ ಜಪಾನುಗೆಲ್ಲುತ್ತ ಚೀನವನ್ನು ಸೆಳೆದು ಅದರ ಮೇಲೆ ತನ್ನ ಕಾಲುಗಳನ್ನೂ ಬೊಂಬುಗಳನ್ನೂ ಊರಲಿ. ಅಲ್ಲಿಂದ ಮುಂದೆ ಪಾಶ್ಚಾತ್ಯ ಎಲ್ಲ ರಾಷ್ಟ್ರಗಳನ್ನೂ ಜಪಾನು ಇದೇ ರೀತಿ ತನ್ನ ಕಾಲುಗಳ ಮತ್ತು ಗುಂಡುಗಳ ಗುರಿಯಿಂದ ನೋಯಿಸದೆ ಇರಲಾರದೆಂದೂ ಈ ರಾಷ್ಟ್ರಗಳು ತಿಳಿಯಲಿ.

ಇದರಿಂದ ತಿಳಿಯಬಹುದಾದುದೇನೆಂದರೆ,– ಪ್ರಜಾಸತ್ತೆಯ ಗೌರವ ಕಳೆಯುವುದು ಬಿಡು ಈ ಪರಜನಾಂಗಗಳಲ್ಲಿ ಸುಳ್ಳು ಮಾತಾಗಿದೆ, ಜನಾಂಗ ಸಂಘವು ವ್ಯರ್ಥವಾಗಿದೆ. ನಾವು ನೆಂಟರು ಎಂದು ಹುಚ್ಚ ಗ್ರಾಮಸ್ಥರ ನಗರವಾಸಿಗಳನ್ನು ಸೇರಿ ಕುಣಿದಂತೆ ಇದು ಅವಹಾಸ್ಯಕರವಾಗಿದೆ.

ಇಲ್ಲಿ ನೋಡಿರಿ. ಪರರಾಷ್ಟ್ರಗಳು ತಟಸ್ಥವಾಗಿ ಸಹಾನುಭೂತಿ ತೋರಿಸುತ್ತಿರಲಿ. ನಾವೇ ಒಂದುಗೂಡಿದ್ದಲ್ಲಿ ಜಪಾನಿನ ವಿಜಯವೆಲ್ಲಿ ನಿಂತಿದೆ? ನಾವೇ ಜಪಾನನ್ನು ತಡೆಯಲಿಲ್ಲವೇ? ಹಾಗಿರುವಾಗ ಜನಾಂಗವು ತಾನಾಗಿ ಮುಂದಿನ ಸುಧಾರಣಾ ಕರ್ತವ್ಯವನ್ನು ತಾನೇ, ಇವರ ಮುಖನೋಡಿ ಕಾತರದೆ ಮಾಡಬಹುದೆಂಬ ಧೈರ್ಯಗೊಂಡಿದೆ. ಪರರಾಷ್ಟ್ರಗಳಲ್ಲಿನ ಯುವಕರೂ ನಮ್ಮ ಜನರೂ ಈ ಭಾವನೆಯನ್ನು ಖಂಡಿತವಾಗಿ ನೆರವೇರಿಸಿಕೊಡಬಲ್ಲರು.

ಚೀನವು ಈಗ ತನ್ನ ಆತ್ಮವನ್ನು ಕಂಡುಕೊಳ್ಳುತ್ತದೆ. ಯಾರೇ ಗೆಲ್ಲಲಿ, ನಮ್ಮ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆ ನಮ್ಮ ಮುಂದೆ ನಿಲ್ಲುವುದಷ್ಟೆ. ಆಗ ಅದರ ಇತ್ಯರ್ಥಮಾಡುವ ಭಾರವು ನಮ್ಮ ಯುವಕರ ಮೇಲಿರುವುದು. ಜನಾಂಗವೆಲ್ಲ ಆಗ ಜಾಗ್ರತವಾಗಿ, ಭಗವಂತನಿಂದ ಆತ್ಮ ಶಕ್ತಿಯನ್ನುಗಳಿಸಿಕೊಂಡು ಜನಾಂಗವನ್ನು ಪುನಃ ಘಟಿಸಿ ತರುವುದು.

ಕೆಲವೇ ತಿಂಗಳಲ್ಲಿ ನಮ್ಮ ಜನಾಂಗವು ನಿರ್ನಾಮವಾಗುವುದೆಂದು ನಾವೆಲ್ಲ ನಂಬಿದ್ದರೂ, ಹಾಗೆ ಆಗದೆ, ಇನ್ನೂ ಹಿಂದಿಗಿಂತ ಹೆಚ್ಚಾಗಿಂತ ಹೆಚ್ಚಾಗಿ ಬಲಗೊಂಡಿದ್ದೇವೆ ಎಂಬುದನ್ನು ಈಗ ಜನರು ತಿಳಿದುಕೊಂಡಿದ್ದಾರೆ. ಈ ಅಧಿಕಬಲವು ಎಲ್ಲಿಂದ ದೊರೆಯಿತು? ಆ ಬಲದಲ್ಲಿ ವಿಶ್ವಾಸವಿದ್ದುದರಿಂದ ನಾವಿನ್ನೂ ವಿಜಯಿಗಳು. ಅಂತೂ ಸೋತಿಲ್ಲ, ನಾವು ಸೋತಿಲ್ಲ, ಸೋಲುವವರಿಲ್ಲ ಎಂಬುದನ್ನು ಇತರರು ತಿಳಿದುಕೊಳ್ಳುವಂತಾಗಿದೆ. ಇದರಿಂದಲೇ ನಮ್ಮ ವಶಕ್ತಿ.

ಆಲಸಗಾರರ ಜನಾಂಗವೆಂಬುದು ಈ ರೀತಿ ಕರ್ತವ್ಯಬದ್ಧ ಹೋರಾಟಗಾರರ ಜನಾಂಗವೆಂದು ಹೇಗಾದೀತ? ಹೊರಗಿನವರ ಸಹಾಯ ನಿರಾಕರಿಸುವವರೇ ನಮ್ಮಲ್ಲಿ ಹೆಚ್ಚು. ಅದರಿಂದ ನಮ್ಮ ಗೌರವ ಕೆಡುತ್ತದಾಗಿ ಅವರ ನಂಬಿಕೆ. ಈ ನಂಬಿಕೆ ಹಾಳು. ಇನ್ನು ಇದು ಇರದು. ಈ ಯುದ್ಧದ ಚಿತ್ರವು ಮಿದುಳಲ್ಲಿ ಇರವತನಕ, ನಾವು ನಮ್ಮನ್ನು ಪರೀಕ್ಷಿಸಿಕೊಂಡು, ಜನಾಂಗದ ಭವಿತವ್ಯತೆಗಾಗಿ ಹೇಗೆ ದುಡಿಯಬೇಕೋ ಅದನ್ನು ತಿಳಿಯುವೆವು. ಇದನ್ನು ಈಗಲೂ ತಿಳಿದುಕೊಳ್ಳುತ್ತ ಮುಂದರಿಯುವವರು ಹೆಚ್ಚಾಗಿದ್ದಾರೆ.

ಜನರು ನವಾರ್ಜಿತ ಶಕ್ತಿ ... ಈ ನಮ್ರತೆಯೆ ನಮ್ಮ ಮುಂದಿನ ... ಜನಾಂಗಿಕವಾದ ಸಾಂಪತ್ತಿಕ ಪ್ರಗತಿಯು ಇದರಿಂದ ಸಾಧ್ಯವಾಗುವುದು ಖಂಡಿತ. ಆಗ ನಿಜವಾಗಿಯೂ ನಮಗೆ ಪರರಾಷ್ಟ್ರಗಳ ಸಹಾಯವೂ ಬೇಡವಾಗುವುದೇ? ಪುರಾತನರು ನಮ್ಮಲ್ಲಿ ನಾವೇ ಸರ್ವಸ್ವನೆಂದು ನಂಬಿದಂತೆ ನಾವೂ ನಂಬಬಹುದೇ? ಇತರರು ನಮ್ಮೊಳಗೆ ನುಗ್ಗಿ ಧ್ವಂಸಮಾಡುವುದನ್ನು ನೋಡಿಯೂ ನಾವು ಹೊರಗಣವರನ್ನು ಎಣಿಸದೆ ಇರಬಹುದೇ? ನೂರು ವರ್ಷಗಳಿಂದೀಚೆಗೆ ಈ ಪರಸಹಾಯದ ನಿರ್ಭರತೆಯನ್ನು ನಾವು ಕಳೆದುಕೊಂಡು ಇದ್ದೇವು.

ಪರಕೀಯರನ್ನು ನಾವು ಬಹಿಷ್ಕರಿಸಿದ್ದೇ ನಮ್ಮಲ್ಲಿ ಅವರಿಗೆ ಸಂದೇಹವನ್ನುಂಟುಮಾಡುವುದು. ಅವರ ವ್ಯಾಪಾರಕ್ಕೆ ನಾವು ತಡೆಗಟ್ಟಿದೆವು. ವ್ಯಾಪಾರವು ಇತ್ತಂಡಕ್ಕೂ ಉಪಕಾರ. ಪರಕೀಯರು ನಮ್ಮನ್ನು ಮೋಸಗೊಳಿಸುವರೆಂಬ ಭಯವೇ ನಾವು ಅವರಲ್ಲಿ ವಿಶ್ವಾಸವನ್ನಿಡದಂತೆ ಇದುವರೆಗೆ ಪ್ರೇರೇಪಿಸಿತು.

ನೋಟೀಸು.

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ

O P No 104/1938

1 ಐಸಬಿ ಮೃತಪಟ್ಟ ಮಹಮ್ಮದ ಹಸನ್ ಎಂಬವರ ಹೆಂಡತಿ
2 ಉಬೈದು
3 ಅಬ್ದುಲ್ಲ ಕಾದ್ರಿ
4 ಬಿ ಪಾತುಮ್ಮ

ಸದ್ರಿ ಮಹಮ್ಮದ ಹಸನ್‌ನಿಗೆ 1ನೇ ಅರ್ಜಿದಾರಳು ಐನ ಬಿಯಲ್ಲಿ ಜನಿಸಿದ ಮಕ್ಕಳು ಮೈನರರು ಇವರ ಕ್ಷೇಮ ಚಿಂತಕಳು 1ನೇ ಅರ್ಜಿದಾರಳು.

ಕಾಸರಗೋಡು ತಾಲೂಕು ಕಳಂಗರೆ ಗ್ರಾಮದಲ್ಲಿರುವವರು — ಅರ್ಜಿದಾರರು

ಇವರೊಳಗೆ

1ನೇ ಅರ್ಜಿದಾರಳ ಗಂಡ ಮ 2, 3 ಮತ್ತು 4ನೇ ಅರ್ಜಿದಾರರ ತಂದೆ ಮೃತಪಟ್ಟ ಮಹಮ್ಮದ ಹಸನ್‌ಗೆ ಹೋಗಕುಳಗಳಿಂದ ಬರಬೇಕಾದ ಹಂದರೆ The Asiatic Government Security Life Assurance ಕಂಪೆನಿ ... ಪೋಲಿಸಿ ನಂ 15801ನೇಗೆ ಬರಬೇಕಾದ ಹಣವನ್ನು ವಸೂಲಿಮಾಡಿಕೊಳ್ಳುವದೆ ನಾವು ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಮೇಲಿನ ಅರ್ಜಿಯು ತಾರೀಖು 26 8 1938ನೇ ತಾರೀಖಿಗೆ ಇಟ್ಟಿರುವದರಿಂದ ಆಕ್ಷೇಪವುಳ್ಳವರು ಆ ದಿವಸ ಹಾಜರು ಮಾಡಿಕೊಳ್ಳತಕ್ಕದೆಂದು ಈ ಮೂಲಕ ತಿಳಿಸಲಾಗಿಯದೆ

Kasaragod 4—8—38

P Ahmad,
Advocate for Petitioner



ಶಿಶುವಿನ ಆರೋಗ್ಯವೆ ಹೆತ್ತವರ ಸಂಪತ್ತು.

ನಮ್ಮ ಈ ನಿರ್ಭಾಗ್ಯ ದೇಶದಲ್ಲಿ ಶಿಶು ಮರಣವು ಒಂದು ಮಹಾ ಶಾಪವಾಗಿರುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಸಾಂಪತ್ತಿಕ ತರದ ಅನೇಕ ಕಾರಣಗಳಿವೆ.

ಶಿಶುಗಳ ಪೀಡೆಗಳಲ್ಲಿ ಯಕೃತ್ತು ಸಂಬಂಧ ಪೀಡೆಗೆ ಬಲಿಯಾಗುವ ಶಿಶುಗಳ ಸಂಖ್ಯೆಯು ಹೆಚ್ಚು. ಕೆಸರಿನ ಬಣ್ಣ ಮಲ, ಅಜೀರ್ಣ, ಹಸಿವೆಯಿಲ್ಲದಿರುವಿಕೆ, ಮಗು ಕರ್ಕಶವಾಗಿರುವುದು. ಮಲಬದ್ಧತೆ ಜಾಡಣೆ, ಹೊಟ್ಟೆ ಉಬ್ಬುವಿಕೆ, ಇವುಗಳೆಲ್ಲಾ ಈ ಪೀಡೆಯಲ್ಲಿ ಕಾಣಿಸಿಕೊಳ್ಳುವ ಚಿಹ್ನೆಗಳ. ವಿಪರೀತ ಅವಸ್ಥೆಗೆ ತೆರಳಿದ ಪೀಡೆಗಳಲ್ಲಿ, ಯಾವಾಗಲೂ ಹಳದಿ ಬಣ್ಣದ ಮೂತ್ರ, ಹಳದಿ ಬಣ್ಣದ ಕಣ್ಣುಗಳು, ಕೈಕಾಲು ಬಾತುವಿಕೆ, ಹೊಟ್ಟೆಯ ಮೇಲೆ ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆ ದೊಡ್ಡದಾಗಿರುವುದು, ಇವುಗಳು ಚಿಹ್ನೆಗಳು.

ನಿಮಗೆ ಸಂದೇಹಗಳಿರುವುದಾದರೆ, ಯಕೃತ ಪ್ರವೀಣರಾದ ಜಮ್ಮಿ ವೆಂಕಟ್ರಮಣಯ್ಯರವರನ್ನು ವಿಚಾರಿಸಿರಿ. ಅವರ ಅನುಭವಶಾಲಿ ಬೋಧನೆಯನ್ನು ಪಡೆದು ವರ್ತಿಸುವವರಾಗಿರಿ.

'ಲಿವರ್ ಕ್ಯೂರ'ನ್ನೇ ಉಪಯೋಗಿಸಿರಿ– ಯಕೃತ್ತು ಮತ್ತು ಪ್ಲೀಹ ಸಂಬಂಧ ಎಲ್ಲಾ ಪೀಡೆಗಳಿಗೆ ಅದೊಂದು ಖಾತ್ರಿ ಮತ್ತು ದಿವ್ಯವಾದ ಔಷಧಿ ಎಂದು ಸರ್ವವಿಧಿತವಾಗಿರುವುದು.

ಹೆಚ್ಚಿನ ವಿವರಗಳಿಗೆ—

ಡಾ। ಜಮ್ಮಿ ವೆಂಕಟ್ರಮಣಯ್ಯ
ಯಕೃತ್ತು ಮತ್ತು ಪ್ಲೀಹ ಸ್ಪೆಶಲಿಷ್ಟರು,
ಮೈಲಾಪುರ, ಮದರಾಸು

ತೋಪು ಫಿರಂಗಿಗಳಿಂದ ಲೋಕಶಾಂತಿಯಂತೆ!

★

ಜರ್ಮನಿಯು ಆಸ್ಟ್ರಿಯವನ್ನು ನುಂಗಿ, ಇಟೆಲಿಯು ಅಬಿಸೀನಿಯವನ್ನು ನುಂಗಿ, ಜಪಾನು ಮಂಚೂರಿಯವನ್ನು ನುಂಗಿ ನೀರು ಕುಡಿದು ಬಹಳ ದಿನಗಳು ಕಳೆದಿಲ್ಲ ಆದರೂ ಅವುಗಳ ಹಸಿವು ಬಾಯಾರಿಕೆಗಳು ಯಥಾಪ್ರಕಾರ ಇವೆ ಅವುಗಳ ವಕ್ರದೃಷ್ಟಿ ಬೇರೆ ಬೇರೆ ದುರ್ಬಲ ದೀನ ಹೀನ ರಾಷ್ಟ್ರಗಳ ಕಡೆಗೆ ಹೊರಳುತ್ತಲೇ, ಅಲ್ಲಿ ಅವುಗಳ ಸ್ವಾರ್ಥದ ಬೇಳೆ ಬೇಯುತ್ತಲೇ ಇದೆ ಆದ್ದರಿಂದ ಸರ್ವತ್ರ ಅಶಾಂತಿ ಅತೃಪ್ತಿಗಳ ಕಾಡ್ಗಿಚ್ಚು ಪ್ರಚಂಡ ವೇಗದಿಂದ ಪ್ರಬಲವಾಗಿ ಹರಡುತ್ತಲೇ ಇದೆ ಇಷ್ಟಕ್ಕೆಲ್ಲ, ಪ್ರಪಂಚದ ಶಾಂತಿರಕ್ಷಣೆ ಮಾಡುವೆವೆಂದು, ಪ್ರಜಾಸತ್ತೆಯ ಆದರ್ಶ ತತ್ವಗಳ ಅನುಯಾಯಿಗಳೆಂದು ಜಂಭ ಕೊಚ್ಚುತ್ತಿರುವ ಇಂಗ್ಲಂಡ, ಫ್ರಾನ್ಸು ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ಅಂತರರಾಷ್ಟ್ರೀಯ ನೈತಿಕ ಪತನವೇ ಕಾರಣವಾಗಿದೆ. ತೋಪು ಫಿರಂಗಿಗಳಿಂದ ಲೋಕಶಾಂತಿಯಾಗುವದೆಂದು, ಸೈನ್ಯ ಸರಂಜಾಮುಗಳಿಗಾಗಿ ವರ್ಷೆ ವರ್ಷೇ ಅಧಿಕಾಧಿಕ ಹಣವನ್ನು ಖರ್ಚುಮಾಡುತ್ತಿರುವದೇ ಕಾರಣವಾಗಿದೆ

[illegible]ಥ ಲೋಕ ಶಾಂತಿಗಾಗಿ, ಸೈನ್ಯ ಸರಂಜಾಮುಗಳಿಗೆ ಇಂಗ್ಲಂಡು ಮಾಡುವ ವಾರ್ಷಿಕ ಖರ್ಚು ಎಷ್ಟು? ಅದನ್ನು ಕೇಳಿದರೆ—[illegible] ಪ್ರಪಂಚವೇ ದಾರಿದ್ರ್ಯ ಮೂಲಕದ ಅಪರಿಮಿತ ಕಷ್ಟ ನಷ್ಟಗಳನ್ನು ಅನು[illegible]ಸುತ್ತಲಿರುವಾಗ, ಲೋಕ ಶಾಂತಿಗಾಗಿ [illegible]ದ್ಧವೆಂಬ ಈ ಅನ್ಯಾಯದ ಮತ್ತು ಅಧರ್ಮ ಕಾರ್ಯಕ್ಕಾಗಿ, ಕೋಟ್ಯಂತರ ರೂಪಾಯಿ[illegible] ಅಪವ್ಯಯ ಅನಾವಶ್ಯಕ ಅತಿ ವ್ಯಯಗಳೆ? [illegible]ದು ತೋರಿ ಬರುವದು ನಿಶ್ಚಯ.

1932-1933ನೆ ಇಸವಿಯಲ್ಲಿ ಒಂದು [illegible]ರ್ಷದಲ್ಲಿ ಇಂಗ್ಲಂಡು ಸೈನ್ಯ ಸರಂಜಾಮು[illegible]ಗಳಿಗಾಗಿ ಮಾಡಿದ ವೆಚ್ಚವು 103 ಮಿಲಿಯ[illegible]ನು (ರೂಪಾಯಿಗಳಲ್ಲ!)ಗಳಾಗಿದ್ದವು [illegible] ಖರ್ಚು ವರ್ಷ ವರ್ಷಕ್ಕೂ ಏರುತ್ತ 37–38ಕ್ಕೆ 278½ ಮಿಲಿಯಕ್ಕೆ ಬಂದು [illegible]ಟ್ಟಿದೆ ಇದರಲ್ಲಿ 80 ಮಿಲಿಯ ಪವನು[illegible] ಸಾಲವೂ ಸೇರಿದೆ, ವಿಮಾನದಾಳಿ[illegible]ಯಿಂದ ಪೇಟೆ ಪಟ್ಟಣ ಹಳ್ಳಿಹಳ್ಳಿಗಳ ರಕ್ಷಣೆ[illegible]ದು ಮಾಡಿದ 3½ ಮಿಲಿಯ ಪವನುಗಳ [illegible]ವು ಬೇರೆಯೇ ಇದೆ ಹೀಗೆ 1932–33[illegible]ಲ್ಲಿ ಮಾಡಿದುದಕ್ಕಿಂತ 1937 – 38ರಲ್ಲಿ [illegible]ಮಾಡಿದ ಖರ್ಚು ಒಟ್ಟು 176½ ಮಿಲಿಯ ಪವ[illegible]ಗಳಿಗೆ ಏರಿದೆ ಇಷ್ಟು ದೊಡ್ಡ ಮೊಬಲಗು ಖರ್ಚಿಗೆ ಎಲ್ಲಿಂದ ದೊರೆಯಿತು? ಕುಬೇರನ [illegible]ಂಡಾರವೇನೂ ಇಂಗ್ಲೆಂಡಿಗೆ ಪ್ರಾಪ್ತವಾಗಿಲ್ಲ [illegible]ಜಾಭ್ಯುದಯ ಮತ್ತು ಪ್ರಜಾರಕ್ಷಣೆಗೆ ಖರ್ಚು ಮಾಡಬೇಕಾದ್ದನ್ನು ಹಾಗೆ ಖರ್ಚು ಮಾಡದೆ, [illegible]ಳಿಸಿಕೊಂಡು, ಸಾಲದಾದರೆ ಮತ್ತೆ ಸಾಲ [illegible]ದುಕೊಂಡು ಈ ಖರ್ಚು ಮಾಡಲಾಗಿದೆ [illegible]ದು ನ್ಯಾಯವೇ, ಧರ್ಮವೇ ಎಂದ ಜನ[illegible] ಆಲೋಚಿಸಬೇಕು.

1938–39ರ ಇಂಗ್ಲಂಡಿನ ಈ ಸಂಬಂಧ[illegible]ದ ಅಂದಾಜು ಖರ್ಚು ಮತ್ತು ಹೆಚ್ಚಾಗಿದೆ [illegible]ದು 343½ ಮಿಲಿಯ ಪವನ ಗಳಷ್ಟಿದೆ ಅದ[illegible]ಲ್ಲಿ 90 ಮಿಲಿಯ ಪವನ ಗಳ ಸಾಲವೂ [illegible]ರಿದೆ ವಿಮಾನ ದಾಳಿಯಿಂದ ರಕ್ಷಣೆಗೆ [illegible] ಮಿಲಿಯ ಪವನು ಖರ್ಚಾಗುವದು ಒಟ್ಟು [illegible]ರ್ಚು 361½ ಮಿಲಿಯ ಪವನು ಆಗುವದು [illegible]ದು 1932–33ಕ್ಕಿಂತ 248½ ಮಿಲಿಯ [illegible]ವನು ಹೆಚ್ಚಾಗಿರುವದು

ಹೀಗೆ ಇಂಗ್ಲಂಡು ಮಾತ್ರ ಈ ರೀತಿ [illegible]ಚ್ಚ ಮಾಡುತ್ತಲಿರುವದಲ್ಲ ಫ್ರಾನ್ಸು, [illegible]ರ್ಮನಿ, ಇಟಲಿ, ಮೊದಲಾದ ಇತರ ರಾಷ್ಟ್ರ[illegible]ಳೂ ಮುಂದಿನ ಯುದ್ಧಕ್ಕಾಗಿ ಮಾಡುವ [illegible]ರ್ಚು ಇಂಗ್ಲಂಡಿಗಿಂತ ಬಹಳ ಕಡಿಮೆ ಮಾ[illegible]ಡುವದಿಲ್ಲ. ಕೆಲವು ಸಂದರ್ಭಗಳಲ್ಲಿ ಅದು ~~ಖರ್ಚನ್ನು ಏರಿ ಇಂಗ್ಲಂಡು~~ [illegible]ಂಗ್ಲಂಡು ಯುದ್ಧ ಸಿದ್ಧತೆಗಾಗಿ ಹೆಚ್ಚು ಖರ್ಚು ಮಾಡಿತೆಂದು, ಫ್ರಾನ್ಸೂ ಅದರ ಅನುಕರಣೆ ಮಾಡುತ್ತದೆ ಅವೆರಡು ಹಾಗೆ ಮಾಡಿದಾಗ ಜರ್ಮನ್ ಇಟಲಿಗಳು ಸುಮ್ಮನಿರುವದು ಹೇಗೆ? ಮತ್ತೆ ಸಣ್ಣ ಸ್ವತಂತ್ರ ರಾಜ್ಯಗಳ ಏನು ಗಾದಿಯಾವು? ಎಲ್ಲವುಗಳ ಹಾಡು ಒಂದೇ, ಎಲ್ಲವುಗಳ ಬವಣೆ ಒಂದೇ! ಪರಸ್ಪರ ಹೆದರಿಕೆ, ಸಂದೇಹ ಮೂಲವಾದ ಈ ಸ್ಪರ್ಧೆಯು ಇಂದು ಯೂರೋಪಿನಲ್ಲಿ ಪ್ರಬಲವಾಗಿ ನಡೆದಿರುವದ ಆದಕಾರಣ ಪ್ರಜಾಭ್ಯುದಯ ಕಾರ್ಯಗಳಿಗೆ ಹಣವು ಬಾರದೆ ಪ್ರಜಾ ವರ್ಗವು ಅತ್ಯಂತ ಹೀನಾವಸ್ಥೆಯಲ್ಲಿ ನಾರಕೀಯ ಕಷ್ಟದ [illegible]ಗಳನ್ನು ಅನುಭವಿಸುತ್ತ ಇದೆ

ಇನ್ನೊಂದು ಮಹಾಯುದ್ಧಕ್ಕೆ ಸಿದ್ಧತೆ ಮಾಡುವದಕ್ಕಿಂತ ಕಡಿಮೆ ಭಯಕರ [illegible] ಹೆಚ್ಚು ಸುಲಭವಾದ ಬೇರೆ ಉಪಾಯಗಳಿಂದ ಲೋಕ ಶಾಂತಿಯನ್ನು ಸ್ಥಾಪಿಸಲಿಕ್ಕೆ ಬರುವದಿಲ್ಲವೆ? ಸಬಲರು ಸಬಲರನ್ನು ಮತ್ತು ಸಬಲರು ದುರ್ಬಲರನ್ನು ಪಾದಾಕ್ರಾಂತರನ್ನಾಗಿ ಮಾಡಿಯೇ ಲೋಕ ಶಾಂತಿಯು [illegible]ಗಬೇಕೆಂದಾದರೆ, ಯಾರು ಯಾರನ್ನು ಸೋಲಿಸಬೇಕು? ಯಾರು ಯಾರಿಗೆ ಗೆಲಬೇಕು? ಹೀಗಾಗುವ ಯುದ್ಧಗಳಿಗೆ ಅಂತ್ಯವೆಲ್ಲಿ? [illegible]

ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ಪರಸ್ಪರ ಪ್ರೇಮ, ಸೌಹಾರ್ದ [illegible] ತ್ರಿದ್ದರೆ, ಸಹಕಾರ ಸಹಾಯ [illegible] ಸ್ನೇಹ ಸಹಾನುಭೂತಿಗಳು ಇದ್ದರೆ, ಯಾವ ದೇಶವೇ ಆಗಲಿ, ಯಾವ ಸರಕಾರವೇ ಆಗಲಿ ಲೋಕಶಾಂತಿಗಾಗಿ ಮ[illegible] ಯುದ್ಧಸಿದ್ಧತೆಗೆ ಇಷ್ಟೊಂದು ಅಪಾರ ಖರ್ಚನ್ನು ಮಾಡಬೇಕಾಗಿರಲಿಲ್ಲ ಈ ಖರ್ಚು ನಾನಾ ತರಹದ ~~ಪ್ರಜಾಭ್ಯುದಯ ಕಾರ್ಯಗಳಿಗೆ ದೊರತ~~ ಪ್ರಪಂಚದ ದಾರಿದ್ರ್ಯ, ನಿರುದ್ಯೋಗ, ಕಷ್ಟ ನಷ್ಟಗಳು ದೂರವಾಗಿ ಪ್ರಪಂಚವು ಈಗಿನಕ್ಕಿಂತ ನೂರಾರು ಪಾಲು ಸುಖಿಯೂ ಶಾಂತವೂ ಆಗುತಿತ್ತು

ಆದರೆ ಇಂದು ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳ ಪರಿಸ್ಥಿತಿ ಹೇಗಿದೆ ಎಂದರೆ ಯಾ[illegible] ರಾಷ್ಟ್ರವೂ ತನ್ನ ಸ್ವಾರ್ಥದ ಮುಂದೆ ಇತರ ರಾಷ್ಟ್ರಗಳ ಸ್ವಾರ್ಥವನ್ನು ಲೆಕ್ಕಿಸುವದಿಲ್ಲ ಪ್ರತಿಯೊಂದು ಪ್ರಬಲರಾಷ್ಟ್ರವು ಮಹತ್ವಾಕಾಂಕ್ಷೆಯಿಂದ ಪೂರಿತವಾಗಿದೆ ಅಧಿಕಾರೋನ್ಮಾದದಿಂದ ಅಂಧವಾಗಿದೆ ಆದ್ದರಿಂದ ದುರ್ಬಲ ರಾಷ್ಟ್ರಗಳ ಪ್ರತಿಯಾಗಿ ಎಂಥ ಅನ್ಯಾಯದ ಅಧರ್ಮದ ಕಾರ್ಯಗಳನ್ನು ಮಾಡಲಿಕ್ಕೆ ಹೇಸುವದಿಲ್ಲ

ಪರಂತು ಇಂಥ ಅನ್ಯಾಯದ ಅಧರ್ಮದ ಕೆಲಸಗಳನ್ನು ಮಾತ್ರ ಬಹಳ ಮಂದಿ [illegible] ಬಲರಾಷ್ಟ್ರಗಳ ಹಿಂದು[illegible] ಮಂದನ್ನು ಸ್ವಲ್ಪ ಪರ್ಯಾಲೋಚಿಸಿದರೆ ಲೋಕದಲ್ಲಿ ನಿಜವಾದ ಶಾಂತಿಯ ಬದಲಾಗಿ ಯುದ್ಧಸಿದ್ಧತೆಗಾಗಿಯೇ ಈಗ ಇಷ್ಟೊಂದು ವೆಚ್ಚವಾಗ ಬೇಕಾದರೆ, [illegible] ಜಗತ್ತೊಂದ ಯುದ್ಧವು [illegible]ದಾಗ ವೆಚ್ಚವು ಯಾವ ಪರಿಮಾಣದಲ್ಲಿ ಏಳಿಯ ಬಹುದು? ಜನರಿಯ ಕಷ್ಟ ನಷ್ಟ ನೋವು ಸಂಕಟಗಳ ಯಾವ ಪರಿಮಾಣದಲ್ಲಿ ಏಳಿಯಬಹುದು? ಸೊಂದು ಒಂದು ಜನತೆಯ ಮುಂದೆ ಈ ಸರಕಾರಗಳ ಅಥವಾ ಸರಕಾರದ ಸೂತ್ರಧಾರಿಗಳ ಸ್ಥಿತಿಗಳು ಏನಾದಾವು? ಇದ ಊಹಿಸಲಿಕ್ಕೂ ಆಗದಷ್ಟು ಬಹು ಭಯಾನಕ, ಬಹು ಭೀಕರವಾಗಿರುವದು. ಪ್ರಜಾವರ್ಗ ಮತ್ತು ಅಧಿಕಾರ ವರ್ಗಗಳೊಳಗಿನ ಪರಸ್ಪರ ಘೋರ ಸಂಘರ್ಷದಿಂದ, ಒಂದು ಪ್ರಳಯಾಗ್ನಿಯೇ ಎದ್ದು ಅದರಲ್ಲಿ ಪ್ರಪಂಚದ ಸರ್ವನಾಶವಾಗದೆ ಇರದ ~~ಲೋಕಶಾಂತಿಗೆ ಇರುವ ಉಪಾಯವು~~ ಯುದ್ಧ ಸಿದ್ಧತೆಯಲ್ಲಿ ಪರತ [illegible] ದ ಭಾವನೆಗಳಿಗೆ ಎಳ್ಳು ನೀರು ಬಿಟ್ಟು, ಪ್ರತಿಯೊಂದು ರಾಷ್ಟ್ರವು ಉಳಿದ ಎಲ್ಲ ರಾಷ್ಟ್ರಗಳ ನ್ಯಾಯವಾದ ಹಕ್ಕು ಅಧಿಕಾರ, ಸ್ವಾನಮಾನಗಳನ್ನು ಮನ್ನಿಸಿ, ಅವುಗಳ ರಕ್ಷಣೆಗೆ ಪ್ರಯತ್ನಿಸಿ, ಸ್ನೇಹಸಹಾನುಭೂತಿ, ಪ್ರೇಮ ಔದಾರ್ಯ ಭಾವನೆಗಳಿಂದ ಪರಿಪೂರಿತವಾಗಿ ಇರುವದೇ ಆಗಿದೆ ತೋಪು ಫಿರಂಗಿಗಳಿಂದ ಎಷ್ಟುಮಾತ್ರಕ್ಕೂ ಯಾವ ಕಾಲಕ್ಕೂ ನಿಜವಾದ ಲೋಕ ಶಾಂತಿಯುಂಟಾಗಲಿಕ್ಕಿಲ್ಲ.

ಹಿಂಸಾಮಾರ್ಗವಲ್ಲ ಅಹಿಂಸಾ ಮಾರ್ಗವೇ ಪ್ರಪಂಚದ ಬೇರೆ ಬೇರೆ ಸಮಸ್ಯೆಗಳನ್ನು ಬಿಡಿಸುವ ಏಕ ಮಾತ್ರ ಉಪಾಯವಾಗಿದೆ ಮಹಾತ್ಮಾ ಗಾಂಧಿಯವರು ಪ್ರಪಂಚಕ್ಕೆ ಉಪದೇಶಿಸುವ ಮಹಾಮಂತ್ರವು ಇದುವೇ ಆಗಿದೆ. ಅವರು ತೋರಿಸಿಕೊಟ್ಟ ಮಾರ್ಗಾನುಸರಣ ಮಾಡುವದರಿಂದಲೇ ಲೋಕ ಕಲ್ಯಾಣವಾಗುವದು

ನೋಟೀಸು

ಕಾರ್ಕಳ ಡಿ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ 143/31.
R I A No 1004/32.
R E P No. 501/38

[illegible] ನಾರಾಯಣ ಆಚಾರ್ಯ | 4ನೇ ಪ್ರತಿವಾದಿ | ಅರ್ಜಿದಾರ.

ಮತ್ತು

ಶ್ರೀ [illegible] ಕೂಡಾ ಎದುರಿರು

ಇವರೊಳಗೆ

ಸದಿ ವ್ಯವಹರಣೆಯ ಎದುರಿರು

(1) [illegible] (ಮೈನರ) 1ನೇ ಪ್ರತಿವಾದಿ ಅನಂತರಾಮಯ್ಯನವರ ಮಗ, ಇವನ ಗಾರ್ಡಿಯನಳು ಇವನ ತಾಯಿ ಪದ್ಮಾವತಿ [illegible] ಅನಂತರಾಮಯ್ಯನವರ ವಿಧವೆ (2) K I [illegible] ಲಕ್ಷ್ಮೀನಾರಾಯಣಯ್ಯನವರ ಮಗ—

ಉಡುಪಿ [illegible] ಗಂಪದ [illegible] ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ —

ಮೇಲ್ ಡಿಕ್ರಿ ವಿಧಿಪ್ರಕಾರ ತನ್ನ ಪಾಲು [illegible] ಅರ್ಜಿದಾರಳು [illegible] ಕೂಡಾ ದಾಖಲುಮಾಡಿದ ಸದ್ರಿ ಅರ್ಜಿಯು [illegible] ಕೋರ್ಟಿನಲ್ಲಿ ತಾರೀಕು 22—8—1938ಕ್ಕೆ ಇಡಲ್ಪಟ್ಟಾಗಿದೆ ಆ ತಾರೀಕಿಗೆ 11 ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಉದಾಹರಣೆಯನ್ನು ಹಾಜರುಮಾಡದೆ ಇದ್ದಲ್ಲಿ ಸದಿ ಅಪ್ಲಿಕೇಶನಿನಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಸದ್ರಿ ವ್ಯವಹರಣೆಯು ತೀರ್ಮಾನಿಸಲಾಗುತ್ತದೆ ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ

(ಕೋರ್ಟಿನ ಮೊಹರು ಪ್ರಕಾರ)

[illegible] ಎಂ. ಎಸ್. ಅಧಿಕಾರಿ
ತಾ [illegible]—6—38 | ಅರ್ಜಿದಾರನ ಕಡೆ ವಕೀಲ.

THE

Canara Banking Corporation, Udipi, Ltd.

INCORPORATED IN BRITISH INDIA
ESTD 1906

BOARD OF DIRECTORS:

Dr U Sunder Ram Pai, M B & B S, *President*
M R Ry R M Karnad, Avl, *Vice President*
M R Ry Kodlukar Padmanabha Pai, Avl, B A,
M R Ry B Vaikunta Baliga, Avl, B A, B L,
M R Ry Kasturi Nagesh Pai Avl,
M R Ry Mijar Govinda Pai, Avl,
Dr U Padmanabha Mallya, L M & S,
M R Ry M Narayana Kamath, Avl, B A,
M R Ry K Narasimha Kamath, Avl,
M R Ry U K Bhujanga Nayak, Avl,

V. R. Kamath, B A, LL B.
Manager.

ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಿಂದ, ಲಿವರ್ ಮತ್ತು ಸ್ಪ್ಲೀಹದ ವಿಕಸನಕೆ ರೋಗವನ್ನು ನಿವಾರಿಸುವ ಮತ್ತು ಶಕ್ತಿಯುತ ಮಾತ್ರೆ ಗುಣಗಳುಳ್ಳ ಔಷಧಿಯು.

ಎರಡು ವಿಧಗಳಲ್ಲಿ, ಎರಡು ಪರಿಮಾಣಗಳಲ್ಲಿ ಎಲ್ಲಾ ದವಾಖಾನೆಗಳಲ್ಲಿ ದೊರಕುವಾಗುತ್ತದೆ

ಆಯುರ್ವೇದಾಶ್ರಮಂ ಮದ್ರಾಸು.

ಪ್ರವರ್ತಕರು—ಅಮರ್‌ಚಂದ್ ಸೊಹಾಚಂದ್—ಮದ್ರಾಸು.

ಟೀಕೆ-ಟಿಪ್ಪಣಿಗಳು

ದಕ್ಷಿಣ ಕನ್ನಡವು ಯಾರೊಡನೆ ಸೇರಬೇಕು—ಅಂತರಾಷ್ಟ್ರೀಯ ಪರಿಸ್ಥಿತಿ—ಪಂಡಿತ್ ನೆಹರೂರುಗಳವರು—ನಾಗಪುರ ಪರಿಸ್ಥಿತಿಯ ಪಾಠ—ಫೆಡರೇಶನ್ ಪ್ರಕರಣ

[illegible]

ಲಂಡನ್ ನಗರದಲ್ಲಿ ವಿವಿಧ ಪ್ರಭುತ್ವಗಳ ಪ್ರತಿನಿಧಿಗಳ ಸಭೆಯು ಕೂಡಿ ಕೆಲವು ದಿವಸಗಳ ತನಕ ನಡೆದು ಸ್ಪೆನಿಶ್ ಯುದ್ಧದ ಕುರಿತು ತಟಸ್ಥಭಾವ ಯೋಜನೆಯೊಂದನ್ನು ರಚಿಸಿಬಿಟ್ಟು ತಮ್ಮ ತಮ್ಮ ಬೆನ್ನುಗಳನ್ನು ತಟ್ಟಿಕೊಳ್ಳುತ್ತಿರುವರು. ಆದರೆ ಜನರಲ್ ಫ್ರೆಂಕೊನು ಮುಂದುವರಿಯುತ್ತಾ ಇದ್ದಾನೆಂದು ವಾರ್ತೆಯು ಬಂದಿರುತ್ತದೆ. ಈ ಸಂಘರ್ಷಣದ ನಿವಾರಣೆಯಾಗುವ ಮೊದಲು ತಟಸ್ಥಭಾವ ಸಮಿತಿಯು ಸ್ಪೈನಿಗೆ ತೆರಳುವುದೆಂದು ಹೇಳಲು ಸಂದೇಹಗಳುಂಟಾಗುತ್ತವೆ.

ಜೆಕೆಸ್ಲೊವಾಕಿಯಾ ಪ್ರಕರಣ

ಮಧ್ಯ ಯುರೋಪ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಗಳು ಆಗದಿದ್ದರೂ ಈಗ ಸದ್ಯಕ್ಕೆಲ್ಲವೂ ಶಾಂತವಾಗಿರುವುದೆಂದು ಹೇಳಬೇಕಾಗಿದೆ. ಜೆಕೆಸ್ಲೊವಾಕಿಯಾದಲ್ಲಿ ನಾಜಿ ಜನರ ಹಕ್ಕುಬಾಧ್ಯತೆಗಳ ಕುರಿತು ಹಿಟ್ಲರನು ತನ್ನ ಕೋರಿಕೆಗಳನ್ನೆಲ್ಲ ಇನ್ನೂ ತೊರೆದು ಬಿಡಲಿಲ್ಲ. ಫ್ರಾನ್ಸು, ರಷ್ಯ, ಬ್ರಿಟನ್ ಈ ಮೂರು ಮಹಾ ಪ್ರಭುತ್ವಗಳು, ತಾನು ಜೆಕೆಸ್ಲೊವಾಕಿಯಾದಲ್ಲಿ ಕಾಲೂರುವ ಕುರಿತು ಕಡು ವಿರೋಧಭಾವವನ್ನು ತಾಳಿದುದರಿಂದ, ಹಿಟ್ಲರನು ಸ್ವಲ್ಪ ದಾಕ್ಷಿಣ್ಯಕ್ಕೆ ಒಳಗಾಗಿರುವನು. ಅಲ್ಲದಿರುತ್ತಿದ್ದರೆ ಇಷ್ಟರೊಳಗಾಗಿ ಆಸ್ಟ್ರಿಯಾ ದೋಪಾದಿ ಹಿಟ್ಲರನು ಅಲ್ಲಿಗೆ ಪ್ರವೇಶಮಾಡುತ್ತಿದ್ದನು. ಜೆಕೆಸ್ಲೊವೆಕಿಯಾವನ್ನು ವಶೀಕರಿಸಲು ಉತ್ತಮ ಅವಕಾಶವನ್ನು ನಿರೀಕ್ಷಿಸುತ್ತಾ ಹಿಟ್ಲರನು ಕಾಯುತ್ತಿರುವನು. ಫ್ರಾನ್ಸಿಗೂ ಜರ್ಮನಿಗೂ ಮೊದಲಿಂದಲೂ ವೈರ್ಯವಿದೆ. ರಷ್ಯಾವು ಬೆಳೆಯುವ ಪ್ರಬಲತ್ವವಾಗಿರುತ್ತದೆ. ರಷ್ಯಾವು ಪೌರ್ವಾತ್ಯದ ಯುದ್ಧದಲ್ಲಿ ದುಮುಕಿಬಿಟ್ಟರೆ, ಆಗ ಯುರೋಪ್ಯದಲ್ಲಿ ತನ್ನ ಇಷ್ಟಾರ್ಥ ಸಿದ್ಧಮಾಡಿಕೊಳ್ಳಲು ಹಿಟ್ಲರನಿಗೆ ಸುಲಭಸಾಧ್ಯವಾಗಬಹುದು.

ಫ್ರಾನ್ಸಿಗೆ ಬ್ರಿಟಿಷ ಚಕ್ರವರ್ತಿಯರ ಆಗಮನ

ಫ್ರಾನ್ಸು-ಬ್ರಿಟಿಷುಗಳೊಳಗೆ ಬಲವಾದ ಮೈತ್ರಿ ಒಪ್ಪಂದಗಳಿವೆ. ಬ್ರಿಟನು ಯಾವಾಗಲೂ ಫ್ರಾನ್ಸಿನ ಬೆಂಬಲಕ್ಕಿದೆಯೆಂಬುದನ್ನು ಸೂಚಿಸುವುದಕ್ಕೋ ಎಂಬಂತೆ ಬ್ರಿಟಿಷ ಚಕ್ರವರ್ತಿಯರು ಫ್ರಾನ್ಸಿನ ಪೆರಿಸ್ ನಗರವನ್ನು ಆಗಮಿಸಿ ಬಂದಿರುವರು. ಈ ಎರಡೂ ಪ್ರಜಾಸತ್ತಾ ಪ್ರಭುತ್ವಗಳಲ್ಲಿ ಪರಸ್ಪರ ಒಲುಮೆಯಿದೆ, ಎಂದು ಸರ್ವ ಜಗತ್ತಿಗೆ ನಿಧಿತವಾಯಿತು. ಈ ಆಗಮನಕ್ಕೆ ಅಂತರಾಷ್ಟ್ರಿಯ ಪ್ರಾಮುಖ್ಯತೆಯು ಬಹಳವಿದೆ. ಕಾರಣ ಚಕ್ರವರ್ತಿಯರ ಆಗಮನದ ಸಮಯದಲ್ಲಿ ಫ್ರಾನ್ಸಿನ ಅಪಾರವಾದ ಬಲದ ಕುರಿತು ಪ್ರದರ್ಶನಗಳು ನಡೆದುಬಿಟ್ಟವು. ಲಂಡನ್-ಪೆರಿಸ್ ಒಪ್ಪಂದದ ಕುರಿತು ಮುಸಲೊನಿಗೆ ಸಮಾಧಾನವಿಲ್ಲವೆನ್ನುವಂತೆ, ಇಟಲಿಯ ವರ್ತಮಾನ ಪತ್ರಗಳು ಈ ಕುರಿತು ಮೌನತೆಯನ್ನು ಆಚರಿಸಿಬಿಟ್ಟವು. ಆದರೆ ಹಿಟ್ಲರನು ಬ್ರಿಟನಿನ ಒಲುಮೆಯನ್ನು ಸಾಧಿಸಲು ಈ ಆಗಮನದ ಸಮಯ, ಒಂದು ಪ್ರೇಮಸೂಚಕ ಸಂದೇಶವನ್ನು ಕಳುಹಿಸಿದ್ದನು.

ಪೆರಿಸ್ ನಗರದಲ್ಲಿ ಪಂಡಿತ್ ನೆಹರುರುಗಳವರು.

ಪೆರಿಸ್ಸಿನ ಅಂತರಾಷ್ಟ್ರೀಯ ಶಾಂತಿಪರಿಷತ್ತಿನಲ್ಲಿ ಪಂಡಿತ್ ನೆಹರುರುಗಳವರು ಮಹತ್ವದ ಒಂದು ಭಾಷಣವನ್ನು ಮಾಡಿಬಿಟ್ಟರು. ಈ ಸಂಘದ ಎಲ್ಲಾ ಪ್ರತಿನಿಧಿಗಳು ಪಂಡಿತರ ನುಡಿಗಳಿಗೆ ತಲೆದೂಗಿರುವರು. ಪ್ರಜಾಸತ್ತೆಯ ದೇಶಗಳನ್ನು ಅವರ ವಿರೋಧಿಗಳಿಂದ ರಕ್ಷಿಸುವ ಕುರಿತು ಪಂಡಿತರು ತಮ್ಮ ಭಾಷಣದಲ್ಲಿ ಹೇಳಿದ್ದರು.

ನಮ್ಮ ಸ್ತ್ರೀಯರು ಏನೆಂತಿ? ...... ಓಂ ಮಂಡಳಿ

ರಕ್ಷಣೆಯಿಲ್ಲದ ನಾಗರೀಕರ ಮೇಲೆ ಮತ್ತು ನಗರಗಳ ಮೇಲೆ ಬೊಂಬು ಸಿಡಿಗುಂಡುಗಳ ಹಾವಳಿಯು ನಡೆಯುತ್ತಿದ್ದರೂ ಯುರೋಪ್ಯದ ಮಹಾಪ್ರಭುತ್ವಗಳು ಮೌನವಾಗಿದ್ದು, ಈ ಹಾವಳಿಗಳನ್ನು ನಿರೀಕ್ಷಿಸುತ್ತಿವೆ. ಪಂಡಿತ್ ನೆಹರುಗಳವರ ಭಾಷಣದಿಂದ ಹುರಿದುಂಬಿಸಲ್ಪಟ್ಟ ಮೂವತ್ತು ಜನಾಂಗಗಳ ಪ್ರತಿನಿಧಿಗಳು, ಈ ಕುರಿತು ಬಲವಾದ ನಿರ್ಣಯಗಳನ್ನು ಮುಂದೆ ತಂದರು. ಆದರೆ ಈ ಪ್ರತಿನಿಧಿಗಳ ನಿರ್ಣಯಗಳಿಗೆ ಅವರವರ ಸರಕಾರಗಳ ಮನ್ನಣೆಯು ಎಷ್ಟರ ಮಟ್ಟಿಗೆಯಿರುವುದೆಂದು ನೋಡುವುದು ಮಾತ್ರ ಬಾಕಿಯಿದೆ.

ನಾಗಪುರದ ಪರಿಸ್ಥಿತಿ.

ಮಧ್ಯಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಳದ ಒಂದು ನಾಟಕವೆ ನಡೆದು ಬಿಟ್ಟಿತು. ಮಹಾರಾಷ್ಟ್ರ ಮಂತ್ರಿಗಳಿಗೂ ಮಹಾಕೋಸಲ ಮಂತ್ರಿಗಳಿಗೂ ಉಂಟಾದ ತಿಕ್ಕಾಟದ ದೆಸೆಯಿಂದ 'ಡಾ| ಖಾರೆಯವರು ರಾಜಿನಾಮೆ ಕೊಟ್ಟರು, ಮಹಾಕೋಸಲದ ಮಂತ್ರಿಗಳು ಗವರ್ನರರಿಂದ ಡಿಸ್‌ಮಿಸ್ ಮಾಡಲ್ಪಟ್ಟರು. ಡಿಸ್‌ಮಿಸ್ ಮಾಡಲ್ಪಟ್ಟ ಮಂತ್ರಿಗಳು ಮತ್ತೊಮ್ಮೆ ಅಧಿಕಾರಕ್ಕೆ ಬಂದರು.

ನಾಗಪುರದ ಪರಿಸ್ಥಿತಿಯು ಉಂಟಾದುದು, ಗವರ್ನರ—ಮಂತ್ರಿಮಂಡಳ ವ್ಯತ್ಯಾಸದಿಂದಲ್ಲ, ಮಹಾಕೋಸಲ್ – ಮಹಾರಾಷ್ಟ್ರ ತಿಕ್ಕಾಟದಿಂದಲ್ಲ, ಕಾಂಗ್ರೆಸ್ ಮುಖ್ಯಾಧಿಕಾರಕ್ಕೂ, ಪ್ರಾಂತ್ಯಕೀಯ ಪ್ರಧಾನರಿಗೂ ಉಂಟಾದ ತಿಕ್ಕಾಟದಿಂದ. ಈ ಪ್ರಕರಣದಿಂದ ಒಂದು ವಿಷಯವು ಸಾರ್ವಜನಿಕ ವಿಚಾರಕ್ಕೆ ಒಳಗಾಗಿರುವುದು. ಕಾಂಗ್ರೆಸ್ ಮುಖ್ಯಾಧಿಕಾರಕ್ಕೂ-ಪ್ರಾಂತ್ಯಕೀಯ ನಾಯಕರಿಗೂ ಇರುವ ಪರಸ್ಪರ ಸಂಬಂಧದ ಕುರಿತು.

ಕಾಂಗ್ರೆಸ್ ಮಂತ್ರಿಮಂಡಳಗಳೆಲ್ಲಾ ಕಾಂಗ್ರೆಸ್ ಮುಖ್ಯಾಧಿಕಾರದ ಒಳಗಿರಬೇಕೆಂಬ ವಿಷಯವು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಹಿಂದೆಯೆ ಖಚಿತಮಾಡಲ್ಪಟ್ಟಿದೆ. ಈ ಕಾರಣದಿಂದಲೆ ಅವರು ಪಾರ್ಲಿಮೆಂಟರಿ ಸಬ್ ಕಮಿಟಿಯನ್ನು ನೇಮಿಸಿದುದು. ಕಾಂಗ್ರೆಸ್ ಮಂತ್ರಿಮಂಡಳಗಳ ಧೋರಣೆ ಇತ್ಯಾದಿಗಳ ಬಗ್ಗೆ ಆಗಿಂದಾಗ್ಗೆ ಆಜ್ಞೆ ಇತ್ಯಾದಿಗಳನ್ನು ಕೊಡುವುದೆ ಈ ಸಬ್ ಕಮಿಟಿಯ ಕಾರ್ಯವಾಗಿರುತ್ತದೆ.

ಪ್ರಾರಂಭದಲ್ಲ, ಅಧಿಕಾರವನ್ನು ಧರಿಸುವ ಭರದಲ್ಲಿ ಪ್ರಾಂತ್ಯಕೀಯ ನಾಯಕರು ಕಾಂಗ್ರೆಸ್ ಮುಖ್ಯಾಧಿಕಾರದ ಕುರಿತು ಲಕ್ಷ್ಯವೆ ಮಾಡಿದಿಲ್ಲ. ಈ ತರದ ತೊಂದರೆಗಳು ಬರುವವೆಂದು ಶ್ರೀ| ಶ್ರೀನಿವಾಸ ಶಾಸ್ತ್ರಿಯರಂಥ ರಾಜಕೀಯ ಪ್ರವೀಣರು ಮೊದಲೆ ನಿರೀಕ್ಷಿಸಿದ್ದರು.

ಏಳು ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಮಂತ್ರಿಮಂಡಳಗಳು, ಕಾಂಗ್ರೆಸ್ ಮುಖ್ಯಾಧಿಕಾರಕ್ಕೆ ಜವಾಬ್ದಾರರಾಗಿರಬೇಕು, ಪ್ರಾಂತ್ಯಕೀಯ ನ್ಯಾಯ ವಿಧಾಯಕರಿಗೆ ಅವರ ಮೇಲೆ ಹತೋಟಿಯಿರುವುದಲ್ಲ, ಎಂಬುದು ಮೇಲಿನ ಪ್ರಕರಣದಿಂದ ಖಚಿತವಾಗುತ್ತದೆ.

ಕಾಂಗ್ರೆಸ್ ಮಂತ್ರಿಮಂಡಳಗಳ ಮೇಲೆ ಹತೋಟಿಯಿರುವುದರಿಂದ ಕಾಂಗ್ರೆಸ್ ಮಂತ್ರಿಮಂಡಳಗಳ ಸ್ಥಿತಿಯು ವಿಚಿತ್ರ ತರದ್ದಾಗುವುದು. ಕಾಂಗ್ರೆಸಿನೊಳಗೆ ಶಿಸ್ತು ಪಾಲನೆಯಾಗುವ ಬಗ್ಗೆ, ಕಾಂಗ್ರೆಸ್ ಮುಖ್ಯಾಧಿಕಾರದ ವರ್ತನೆಯು ಸರಿಯಾಗಿದ್ದರೂ ಪ್ರಾಂತ್ಯಕೀಯ ಮಂತ್ರಿಮಂಡಳಗಳಿಗೆ ಹೆಚ್ಚಿನ ಸ್ವಾತಂತ್ರ್ಯವು ಇರುವುದರಿಂದ ಉತ್ತಮವಿದೆ.

ಫೆಡರೇಶನ್ ಪ್ರಕರಣ

ಫೆಡರೇಶನಿನ ಕುರಿತು, ಇಷ್ಟರ ತನಕ ಯಾವ ನಿಷ್ಕರ್ಷೆಯೂ ಆಗಲಿಲ್ಲ. ಆದರೆ ಈ ಕುರಿತಾದ ಕಾಂಗ್ರೆಸ್ಸಿನ ಹಿಂದಿನ ನಿರ್ಣಯಗಳು ಎಂದಿಗೂ ಬದಲಾಗವು. ಫೆಡರೇಶನ್ ಶಾಸನವನ್ನು ಮುರಿದಿಕ್ಕುವ ಕಾರ್ಯದಲ್ಲಿ ಕಾಂಗ್ರೆಸ್ಸು ಎಂದಿಗೂ ಹಿಂದುಳಿಯದು.

ಆದರೆ 1935ರ ಇಂಡಿಯಾ ಆಕ್ಟಿನ ಫೆಡರೇಶನ್ ಪ್ರಕರಣದೊಳಗೆ ಕೆಲವು ಮಾರ್ಪಾಟುಗಳನ್ನು ಮಾಡಿಸಿಕೊಳ್ಳುವ ಕುರಿತು ಕೆಲವು ಪ್ರಭಾವಶಾಲಿ ಕಾಂಗ್ರೆಸ್‌ವಾಲರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುವರು. ಈ ಕುರಿತು ಅಲ್ಲಸಲ್ಲದ ವಾರ್ತೆಗಳು ಹರಡಿದ್ದವು. ಪಂಡಿತ್ ನೆಹರುಗಳು, ಲಾರ್ಡ್ ಲಿನಲಿತ್‌ಗೊಹರಲ್ಲಿ ಔತಣಕ್ಕೆ ತೆರಳಿದ ಸಮಯ, ಇಂಡಿಯಾ ಆಕ್ಟೇ ರದ್ದು ಮಾಡಲಾಗುವುದೆಂದು, ಬರೆದಿರುವುದರಿಂದ, ಆ ಬಗ್ಗೆ ಉಂಟಾದ ಎಲ್ಲಾ ಸಂದೇಹಗಳ ನಿವಾರಣೆಯಾಗಿರುತ್ತವೆ.

'ಕರ್ನಾಟಕ ಪ್ರಾಂತ್ಯ,—'ದಕ್ಷಿಣ ಕನ್ನಡವು ಕೇರಳ ಪ್ರಾಂತ್ಯದೊಡನೆ ಸೇರುವುದುತ್ತಮ'

ಬೇರೆ ಒಂದು ಕರ್ನಾಟಕ ಪ್ರಾಂತ್ಯದ ರಚನೆಯಾಗುವ ಕುರಿತು ಈಗ ಬಹಳ ಚಳವಳ ನಡೆಯುತ್ತದಷ್ಟೆ. ದಕ್ಷಿಣ ಕನ್ನಡಿಗರು ಈ ಕುರಿತು ಏನು ಮಾಡಬೇಕೆಂಬುದರ ಕುರಿತು ಅಭಿಪ್ರಾಯವನ್ನೊಳಗೊಂಡ ಅನೇಕ ಲೇಖಗಳು ನಮಗೆ ಬಂದಿವೆ. ಅವುಗಳಲ್ಲಿ ಸಾಧಾರಣ ಒಂದೆ ಒಂದು ಅಭಿಪ್ರಾಯವು ಅಡಕವಾಗಿರುತ್ತದೆ. ಅದಾವುದೆಂದರೆ, ದಕ್ಷಿಣ ಕನ್ನಡವನ್ನು ಕರ್ನಾಟಕ ಪ್ರಾಂತ್ಯದೊಡನೆ ಒಟ್ಟುಗೂಡಿಸಬಾರದು, ಸಾಂಪತ್ತಿಕ, ವ್ಯವಹಾರಿಕ ಇತ್ಯಾದಿ ಎಲ್ಲಾ ದೃಷ್ಟಿಯಲ್ಲಿ, ದಕ್ಷಿಣ ಕನ್ನಡವನ್ನು ಕೇರಳ ಪ್ರಾಂತ್ಯದೊಡನೆ ಸೇರಿಸಿಬಿಡುವುದು ಉತ್ತಮವೆಂದು ಈ ಲೇಖಗಳ ಅಭಿಪ್ರಾಯವಾಗಿರುತ್ತದೆ.

ದಕ್ಷಿಣ ಕನ್ನಡಕ್ಕೂ, ಕರ್ನಾಟಕದ ಇತರ ಜಿಲ್ಲೆಗಳಿಗೆ ಸರಿಯಾದ ಜೋಡಣೆಯು ಇರುವುದಿಲ್ಲ, ಕೇರಳ ಪ್ರಾಂತ್ಯವು ಮಂಗಳೂರಿನಿಂದ ಬರೇ ನಾಲ್ಕು ತಾಸಿನ ದೂರದಲ್ಲಿದೆ, ಕರ್ನಾಟಕದ ಕೇಂದ್ರವು ಬಹಳ ದೂರದಲ್ಲಿರುವುದು, ವ್ಯಾಪಾರ ವಿಚಾರದಲ್ಲಿ ಕರ್ನಾಟಕ ಇತರ ಜಿಲ್ಲೆಗಳಿಗೂ ದಕ್ಷಿಣ ಕನ್ನಡಕ್ಕೂ ಯಾವತ್ತೂ ಸಂಬಂಧಗಳಿರುವುದಿಲ್ಲ, ಉತ್ತರ ಕರ್ನಾಟಕ, ಹುಬ್ಬಳ್ಳಿ, ಧಾರವಾಡ ಇತ್ಯಾದಿ ಕಡೆಗಳಲ್ಲಿನ ಕನ್ನಡಿಗರೂ ದಕ್ಷಿಣ ಕನ್ನಡಿಗರಿಗೂ ಭಾಷೆ, ಸಂಸ್ಕೃತಿ, ಸಾಮಾಜಿಕ ಪದ್ಧತಿ, ಕನ್ನಡ ಭಾಷೆ ಇತ್ಯಾದಿಗಳಲ್ಲಿ ಅನೇಕ ಬೇಧಗಳಿರುವವು, ಈ ವಿಚಾರಗಳಲ್ಲಿ ಕೇರಳದವರಿಗೂ ದಕ್ಷಿಣ ಕನ್ನಡಿಗರೂ ಹೆಚ್ಚಿನ ಸರಿಹೋಲಿಕೆಯು ಇರುವುದು, ದಕ್ಷಿಣ ಕನ್ನಡಿಗರೆ ಕರ್ನಾಟಕದ ಇತರ ಜನರ ಮಧ್ಯದಲ್ಲಿ ಎಂದಿಗೂ ಸುಖಿರದು; ಕರ್ನಾಟಕದ ಕೆಲವುಂದಿ ರಾಜಕೀಯ ಸ್ವಾರ್ಥಿಗಳು, ಮಂತ್ರಿ ಹುದ್ದೆ ಇತ್ಯಾದಿಗಳನ್ನು ಪಡೆಯುವ ಅಧಿಕಾರಾಭಿಲಾಷೆಯಿಂದ ಕರ್ನಾಟಕ ಪ್ರಾಂತ್ಯರಚನಾ ಚಳವಳವನ್ನು ನಡೆಯಿಸುವುದೆಂದೂ, ದಕ್ಷಿಣ ಕನ್ನಡವು ಕೇರಳ ಪ್ರಾಂತ್ಯದೊಡನೆ ಸೇರುವಂತೆ, ಜಿಲ್ಲೆಯಲ್ಲೆಲ್ಲಾ ಚಳವಳ ನಡೆಯಿಸಲು ವ್ಯವಸ್ಥೆಯಾಗಬೇಕು. ಇವೇ ಮೊದಲಾದ ಅಭಿಪ್ರಾಯಗಳು ಈ ಲೇಖಗಳಲ್ಲಿ ಕೂಡಿವೆ.

ಓಂ ಮಂಡಳಿ

ಸಿಂಧ ಪ್ರಾಂತ್ಯದಲ್ಲಿ ಸ್ತ್ರೀಯರ ನೂತನ ಒಂದು ಸಂಘದ ಸ್ಥಾಪನೆಯಾಗಿರುತ್ತದೆ. ಈ ಸಂಘಕ್ಕೆ ಸೇರಿದ ಸ್ತ್ರೀಯರು ಕುಮಾರ ವ್ರತವನ್ನಾಚರಿಸಬೇಕಾಗಿ ಶರ್ತವಿದೆ. ಈ ನೂತನ ಸಂಘದ ಚಟುವಟಿಕೆಗಳ ಕುರಿತು ವಾರ್ತೆಗಳು ಪಶ್ಚಿಮ ಹಿಂದೂದೇಶದ ಪತ್ರಿಕೆಗಳಲ್ಲಿ ಬಹಳವಾಗಿ ಪ್ರಕಟವಾಗಿವೆ.

ಈ ಸಂಘವು 1935ರಲ್ಲಿ ಜನ್ಮಹೊಂದಿರುವುದೆಂದು ತಿಳಿದುಬರುತ್ತದೆ. 'ಓಂ ಮಂಡಳಿ' ಎಂಬುದು ಅದರ ನಾಮಾಂಕಿತವು. ಈ ಸಂಘದ ಕೇಂದ್ರವು ಇರುವುದು ಹೈದರಾಬಾದ್ (ಸಿಂಧ)ನಲ್ಲಿ. ಈ ಸಂಘಕ್ಕೆ ಈಗ 400 ಮಂದಿ ಸದಸ್ಯೆಯರಿರುವರು. ಒಂದು ಸ್ತ್ರೀಯ ನಾಯಕತ್ವದಲ್ಲಿ ಈ ಸಂಘದ ಸಕಲ ಚಟುವಟಿಕೆಗಳು ನಡೆಯುತ್ತಿವೆ. ಈ ಸಂಘದ ಆಶ್ರಯದಲ್ಲಿ ಅನೇಕ ವಿದ್ಯಾ ಸಂಸ್ಥೆಗಳು, ಹಾಸ್ಟೇಲುಗಳು ನಡೆಯುತ್ತಿವೆ. ಈ ಸಂಘದ ಸದಸ್ಯೆಯರು, ಅವಿವಾಹಿತರಾಗಿರಲಿ, ವಿವಾಹಿತರಾಗಿರಲಿ, ಅವರು 'ಕುಮಾರ ವ್ರತದ ಪ್ರತಿಜ್ಞೆಯನ್ನು ಗಯ್ಕೊಳ್ಳಬೇಕೆಂದಿದೆ

ಈ ನೂತನ ಸಂಘವು ಕೆಲವೊಂದು ತೊಂದರೆಗಳಿಗೆ ಕಾರಣವಾಗಿರುವುದು. 'ಕುಮಾರ ವ್ರತ' ಪ್ರತಿಜ್ಞೆಗೆಯ್ಯಬೇಕೆಂಬ ನಿಯಮವೆ ಈ ತೊಂದರೆಯ ಮುಖ್ಯ ಕಾರಣವು. ವಿವಾಹಿತರಾದ, ಮಕ್ಕಳುಳ್ಳ ಅನೇಕ ಸ್ತ್ರೀಯರು ಈ ಸಂಘವನ್ನು ಸೇರಿರುವರು. ಸಂಘದ ಪ್ರತಿಜ್ಞೆಯನ್ನು ಗೈದಿರುವರು.

ಹಿಂದೂದೇಶದಲ್ಲಿ ವಿವಾಹದ ಕುರಿತು ಅಖಂಡ ಕಾಯಿದೆಗಳಿವೆ. ಈ ಕಾಯಿದೆಗಳಿಂದಾಗಿ ಸ್ತ್ರೀಯರಿಗೆ ಘೋರ ಅನ್ಯಾಯವು ನಡೆಯುತ್ತಿದ್ದರೂ, ಪತಿಯು ಕ್ರೂರನಾಗಿದ್ದು ತನಗೆ ಹಿಂಸಿಸುತ್ತಿದ್ದರೂ, ಮತ್ತು ಇನ್ನಿತರ ಅನ್ಯಾಯಗಳು ಪತಿಯಿಂದ ತನಗಾಗುತ್ತಿದ್ದರೂ, ಪತಿಯಿಂದ ವಿಚ್ಛೇದ ಹೊಂದುವ ಸ್ವಾತಂತ್ರ್ಯವು ನಮ್ಮ ಸ್ತ್ರೀಯರಿಗಿರುವುದಿಲ್ಲ. ಎಲ್ಲವನ್ನೂ ಅವರು ಪಶುಗಳಂತೆ ಸಹಿಸುತ್ತಿರಬೇಕು. ಈ ಒಂದು ಕಾರಣದಿಂದ, ಸ್ತ್ರೀಯರು ಥಕ್ಕನೆ ಒಂದು ದಿನ ಕುಮಾರ ವ್ರತ ಪ್ರತಿಜ್ಞೆಯನ್ನು ಗೈಯಬಹುದು. ಧರ್ಮ ಪತ್ನಿಯರಾಗಿರುವ ಕುರಿತು ಹಾಕಿಕೊಂಡ ಪ್ರತಿಜ್ಞೆಯನ್ನು ಮುರಿಯುವ ಕುರಿತು ಇಷ್ಟರತನಕ ಯಾವ ಅಡ್ಡಿಗಳಿರುವುದಿಲ್ಲ. ಮುಂದಕ್ಕೆ ಬರಬಹುದಾದ ತೊಂದರೆಯ ಕುರಿತು ಎಚ್ಚರಿಕೆಯಾಗಿರುವುದು ಈ ಓಂ ಮಂಡಳಿಯು. ಭವಿಷ್ಯದಲ್ಲಿ ಈ ತರದ ಅನೇಕ ಸಂಘಗಳ ಉದ್ಭವವಾಗಬಹುದು. ಪುರುಷರು ಸ್ತ್ರೀಯರ ಕುರಿತು ವಿಚಾರವಂತರಾಗಿ ವರ್ತಿಸಲು ಈಗ ಪ್ರಾರಂಭಿಸಿದರೆ ಉತ್ತಮವಿದೆ.

ಕಾನ್ಪುರ ಪೊಲೀಸರು:
30 ಮಂದಿ (ಗಂಡಸರೂ ಹೆಂಗಸರೂ)ಗೆ ಹೊಡೆತವಂತೆ!

ಪೊಲೀಸರ ಈ ಪಂಗಡವು ಶಿಕಾರಿಗೆ ಹೋಗಿತ್ತು. ಗಂಗಾನದಿಯ ಮೇಲೆ ಒಂದು ದೋಣಿ ಮೆಲ್ಲನೆ ಹೋಗುತ್ತಿತ್ತು. ಪೊಲೀಸರು ಅದರಲ್ಲಿ ಕಳ್ಳ ಶರಾಬು ಇರಬಹುದಾಗಿ ಭಾವಿಸಿದರು. ದೋಣಿಯನ್ನು ಹುಡುಕುವಾಗ, ಅದರಲ್ಲಿ ನಾಲ್ಕು ಬಾಟ್ಲಿ ಸಿರ್ಕ ಸಿಕ್ಕಿತು. ದೋಣಿಯವರಿಗೂ ಪೊಲೀಸರಿಗೂ ಮಾತು ಜೋರಾಯಿತು, ಹೊಡೆತವಾಗಲಿಲ್ಲ.

ಮರುದಿನ ಬೆಳಗ್ಗೆ, ಗೌರೀ ಗ್ರಾಮಕ್ಕೆ (ಅಲ್ಲಿಯವರು ದೋಣಿಯಲ್ಲಿದ್ದವರು) ಪೊಲೀಸರ ಒಂದು ಗುಂಪು ತೆರಳಿ, ಗ್ರಾಮಸ್ಥರನ್ನು ಕಂಡಾಬಟ್ಟೆ ಬಡಿದು ಬಿಟ್ಟರಂತೆ.

ನಿಜಸ್ಥಿತಿ ತಿಳಿದಿಲ್ಲವೆಂದು ಅಧಿಕಾರಿಗಳು ಕಾಯುತ್ತಿದ್ದಾರೆ. ಪೊಲೀಸು ಸುಪರಿಂಟೆಂಡೆಂಟರೇ ಈಗ ಅಪರಾಧವೇನು ನಡೆಯಿತೆಂದು ಪತ್ತೆ ಹಚ್ಚಲು ಪೊಲೀಸ್ ಆಫೀಸರರನ್ನು ಕಳಿಸಿದ್ದಾರೆ!

ನಿಮಗೆ :: ತಿಳಿದಿರುವುದು :: ಎಷ್ಟು

★

ಬಾಲವಿರುವ ಮಾನವರು.

ಪಪುವಾ ದ್ವೀಪದಲ್ಲಿರುವರು

ಪಪುವಾ ದ್ವೀಪದ ಅಡವಿ ಪ್ರದೇಶದಲ್ಲಿ ಬಾಲವಿರುವ ಮನುಷ್ಯರಿರುವರೆಂದು ಮೊನ್ನೆ ಅತ್ತ ಕಡೆಗೆ ತೆರಳಿದ ಪ್ರಸಿದ್ಧ ವಿಜ್ಞಾನಿಗಳೊಬ್ಬರು ಕಂಡುಹಿಡಿದಿರುವರು. ಸರ್ ಹ್ಯೂಬರ್ಟ್ ಮುರೇ ಎಂಬವರು ಪಪುವಾ ದ್ವೀಪದ ಗವರ್ನರರು. ಅವರಿರುವ ಪಟ್ಟಣದ ತೀರದಲ್ಲಿರುವ ಅಡವಿ ಪ್ರದೇಶದಲ್ಲಿ ಬಾಲವಿರುವ ಮನುಷ್ಯರಿರುವರೆಂದು ಅವರ ಸೇವಕನೊಬ್ಬನು ತಿಳಿಸಿರುವನಂತೆ.

ಇದಲ್ಲದೆ, ಪಪುವಾದ್ವೀಪದ ಆ ಅಡವಿ ಪ್ರದೇಶದಲ್ಲಿ ಪ್ರವಾಸಗೈದು, ಇನ್ನೂ ಅನೇಕರು ಬಾಲವಿರುವ ಈ ಮನುಜರನ್ನು ಕಂಡಿರುವರಾಗಿ ತಿಳಿದು ಬರುತ್ತದೆ

ಈ ಜನರು ನೆಲದಿಂದ ಎತ್ತರಿಸಲ್ಪಟ್ಟ ಗೂಟಗಳ ಮೇಲೆ ರಚಿಸಲ್ಪಟ್ಟ ಮನೆಗಳಲ್ಲಿ ವಾಸಮಾಡುತ್ತಿರುವರು ಮನೆಗಳ ನೆಲದಲ್ಲಿ ಅಲ್ಲಲ್ಲಿ ತೂತುಗಳಿರುವವಂತೆ ಬಾಲವನ್ನು ಅವುಗಳೊಳಗೆ ಹಾಕಿ ಕೂರುಕೊಳ್ಳಲು ಅವರಿಗೆ ಈ ತೂತುಗಳಿಂದ ಅನುಕೂಲವಾಗುತ್ತದೆ

ಪ್ರಯಾಣಿಕನೊಬ್ಬನು ಈ ತರದ ಮನೆಯು ಒಳಗೆ ಸೇರಿ, ಈ ಬಾಲಗಳನ್ನೆಲ್ಲಾ ಮೆಲ್ಲನೆ ಕಟ್ಟಿ ಬಿಟ್ಟು ಗದ್ದಲವೆಬ್ಬಿಸಿ, ಪಲಾಯನ ಮಾಡಿದನು ಗಂಟಿರಿ ಹೋಗಿದ್ದ ಬಾಲವುಳ್ಳ ಆ ಮನುಜರೂ ಪಕ್ಕನೆ ಏಳಲು ಆಗದೆ, ಬಹಳ ಚಡಪಡಿಸಿದರಂತೆ

★

ಅನೇಕ ಮಕ್ಕಳ ತಾಯಿ

ಆಕೆಗೆ ಸರಕಾರದ ಬಹುಮಾನ

ಸೆನೋರಾ ಮನ್ನಿಡಸ್ ಎಂಬವಳು ಮೆಕ್ಸಿಕೋ ದೇಶದ ಸ್ತ್ರೀ ಆಕೆಯ ಪ್ರಾಯವು 63 ವರುಷ 200 ಪವನು ಮೌಲ್ಯದ ಒಂದು ಪಾರಿತೋಷಿಕವು ಸರಕಾರದಿಂದ ಆವಳಿಗೆ ದೊರಕಿರುತ್ತದೆ ಹೆಚ್ಚಿನ ಸಂತತಿಗೆ ಕಾರಣಳಾದುದಕ್ಕಾಗಿ ಇಪ್ಪತ್ತನಕ ಆಕೆಯು ಇಪ್ಪತ್ತೊಂಬತ್ತು ಮಕ್ಕಳನ್ನು ಹಡೆದಿರುವಳು. 4 45 ವರ್ಷದ ಪ್ರಾಯದವರೆಗಿನ ಆಕೆಯ 19 ಮಂದಿ ಮಕ್ಕಳು ಜೀವಂತರಾಗಿರುವರು. ಆಕೆಯ ದೆಸೆಯಿಂದ 160 ಜನರ ಒಂದು ಕುಟುಂಬವೆ ಉಂಟಾಗಿರುವುದು.

ಒಂದು ಸ್ತ್ರೀಯು ಪುರುಷನಿಗಿಂತ ಸೇಕಡಾ 20 ಸಲ ಕಡಿಮೆ ತಿನ್ನುತ್ತಿದ್ದಾಳೆ ಉಪ್ಪಿಗೆ ಹಾಕಿದ ಆಹಾರವನ್ನು ತಿನ್ನುವವರಿಗೆ ರೋಗ ಹೆಚ್ಚು ಸಮುದ್ರದಲ್ಲಿರುವ ಉತ್ತಮ ಲವಣಗಳೆಲ್ಲಾ ಮೀನುಗಳ ಮೂಲಕ ದೊರಕುತ್ತವೆ. ಆದುದರಿಂದ ಮೀನು ಶ್ರೇಷ್ಠವಾದ ಆಹಾರವು. ಹಣ್ಣು ಹಂಪಲುಗಳನ್ನು ತಿನ್ನುವವರು ಸಮಸ್ವಭಾವದವರಾಗುವರು.

★

25 ಟನ್ನು ಆಹಾರ ಭುಂಜಿಸಲಾಗುವುದು

ಐವತ್ತು ವರ್ಷ ವಯಸ್ಸಿನ ಒಬ್ಬ ಸಾಧಾರಣ ಮನುಷ್ಯನು, ಆತನ ಆ ಪ್ರಾಯದೊಳಗೆ 25 ಟನ್ ಆಹಾರವನ್ನು ಭುಂಜಿಸುವನು. ಹೆಚ್ಚಾಗಿ ತಿನ್ನುವವರು—ಸಾಧಾರಣ 50 ರಿಂದ 60 ಟನ್ ಆಹಾರದ ವರೆಗೆ ಸೇವಿಸುವರು ಆದರೆ ಕಡಿಮೆ ಆಹಾರ ತಿಂದವನಿಗೆ ಆಯುಷ್ಯವು ಹೆಚ್ಚು. ಹಿಂದೆ ರೋಮಿಯರು, ಅತಿ ಹೆಚ್ಚಿಗೆ ತಿನ್ನುವ ಜನರಾಗಿದ್ದರು. ಅತಿಶಯವಾಗಿ ತಿನ್ನುವುದೆಂದರೆ ಅವರಿಗೆ ಪ್ರಾಣ. ಈ ಕಾರಣದಿಂದಲೆ ಪ್ರಖ್ಯಾತ ರೋಮನ್ ಸಾಮ್ರಾಜ್ಯವು ನುತ್ತ ನಾಶವಾಯಿತು.

ಮಾನವ ದೇಹದಲ್ಲಿರುವ ಪ್ರತಿಯೊಂದು ರಾತ್ರ ಕೊಬ್ಬಿಗೆ, 1½ ಮೈಲು ಉದ್ದದ ರಕ್ತನಾಳಗಳು ಬೇಕಾಗಿವೆ ಆದಕಾರಣ, ಮಾನವರಲ್ಲಿ ಹೆಚ್ಚಿಗೆಯಾಗಿರುವ ಪ್ರತಿ 5 ರಾತ್ಲ ಮಾಂಸಕ್ಕೆ ಆತನೊಡನೆ 3 ಮೈಲು ಉದ್ದದ ರಕ್ತನಾಳವು ಇರುವುದು

★

ಕ್ರಿಕೆಟ್ ಆಟದ ಮೇಲೆ ನಿರ್ಬಂಧ

ಟೊಂಗಾ ದ್ವೀಪದಲ್ಲಿ ಒಂದು ವಾರದಲ್ಲಿ ಆರು ದಿನಗಳಲ್ಲಿ ಕ್ರಿಕೆಟ್ ಆಟ ಆಡಬಾರದಾಗಿ ನಿರ್ಬಂಧವಿದೆ ಕಾರಣ, ಅಲ್ಲಿನ ನಿವಾಸಿಗಳಿಗೆ ಕ್ರಿಕೆಟ್ ಆಟದಲ್ಲಿ ಎಷ್ಟು ಉತ್ಸಾಹವೆಂದರೆ ಅವರು, ಈ ಆಟದಲ್ಲಿ ತೊಡಗಿದರಾದರೆ ಮತ್ತೆ ಯಾವ ಕೆಲಸವನ್ನೂ ಮಾಡಲಾರರು. ಹೀಗಾಗಿ ಅಲ್ಲಲ್ಲಿ ತೋಟ ಇತ್ಯಾದಿಗಳಲ್ಲಿ ಕೆಲಸಗಾರರಿಲ್ಲದೆ ಬಾಳಿ ಬೀಳಬೇಕಾಗುವುದು. ಈ ಕಾರಣದಿಂದ ಕ್ಷಾಮವೂ ಉಂಟಾಗಬಹುದು

★

ಸರ್ಪಗಳಿಗೆ ಸಂಗೀತ

ಸರ್ಪಗಳಿಗೆ ಸಂಗೀತದಲ್ಲಿ ಅಭಿರುಚಿ ಇರುವುದೆಂದು ಲಂಡನ ಸರ್ಪಾಲಯದ ಕ್ಯೂರೇಟರರಾದ ಡಾ। ಎಂನೆರ್ಟನ್ ರ ಅಭಿಪ್ರಾಯ. ಗಾಯನವು ಅವುಗಳಿಗೆ ಕೇಳಿಸುವುದಾದರೆ, ಗಾಯನ ಹೊರಡುವ ಸ್ಥಳದ ಸ್ಪರ್ಶವಾಗ ಬೇಕು ಸರ್ಪಗಳಿಗೆ ಕಿವಿಗಳಿಲ್ಲ ಪ್ರದಿಕ್ಕ ಅವುಗಳು ಕೇಳಿಸುವುದು ತಮ್ಮ ದೇಹದ ಮೂಲಕ, ಪಾದಪದ ಹೊಟ್ಟೆಯ ಮೂಲಕ ಆಗಿರಬಹುದು ಒಳ್ಳೆ ದೀರ್ಘ ಕಂಠದ ಮೇಲೆ ಅವುಗಳಿಗ ರುಚಿ ಹೆಚ್ಚು

★

ಕೃತಕ ಮಳೆ

ಪ್ರೊಲಿಯನ ರೈತನಿಕ್ಕೋಬ್ಸ್ ಗೆ ಕೃತಕ ಮಳೆ ಸೃಷ್ಟಿ ಮಾಡುವ ವಿಚಿತ್ರ ಪ್ರಯೋಗ ವಿದೆ ಕೆಲವು ರಸಾಯನಗಳನ್ನು ಕೂಡಿ ತನು ನೆಲದ ಮೇಲೆ ಚೆಲ್ಲಿ ಬಿಟ್ಟರೆ ಅಲ್ಲಿ ಮಳೆಯು ಬರುವುದು. ಎಲ್ಲಾ ಕಡೆಗಳಲ್ಲಿ ಆತನಿಂದ ನಡೆಯಿಸಲ್ಪಟ್ಟ ಪ್ರದರ್ಶನಗಳಲ್ಲಿ ಬರೆ 2 ತಾಸಗಳ ಪ್ರಯತ್ನಫಲವಾಗಿ ಮಳೆಯು ಉಂಟಾಗುವುದು

★

ಮಲೇರಿಯಾಕ್ಕೆ ಕ್ವಿನಿನೆ ದಿವ್ಯೌಷಧಿ!

ಪೆಂಟೋನ್ ಜೌಗು ಪ್ರದೇಶ—ಕ್ವಿನೀನಿನ ಮಹತ್ವ—ಅದು ಮನುಷ್ಯನಿಗೆ ಮಹದುಪಕಾರ ಮಾಡಿರುತ್ತದೆ—ಅದರ ದೆಸೆಯಿಂದ ನೂತನವಾದ ಅನೇಕ ನಗರಗಳೇ ರೋಮಿನ ಸುತ್ತಲೂ ಉಂಟಾಗಿವೆ.

★

ಪ್ರಖ್ಯಾತವಾದ ರೋಮ್ ನಗರವಿರುವುದಷ್ಟೆ. ಒಂದಾನೊಂದು ಕಾಲದಲ್ಲಿ ಇದರ ಸುತ್ತಮುತ್ತಲಿನ ಪ್ರದೇಶವೆಲ್ಲಾ ಒದ್ದೆ ಜೌಗು ಪ್ರದೇಶವಾಗಿತ್ತು

ರೋಮಿನ ಬಳಿ 150,000 ಎಕ್ರೆ ಸ್ಥಳವು ಏನೊಂದು ಉಪಯೋಗವಿಲ್ಲದೆ ಬಂಜರು ಬಿದ್ದಿತು. ಮನುಷ್ಯರಿಗೆ ಉಳಕೊಳ್ಳಲು ಆ ಸ್ಥಳವು ಅಸಾಧ್ಯತರವಾಗಿದ್ದಿತ್ತು ಈ ಕಾರಣದಿಂದ ಹತ್ತಿರದ ಪ್ರದೇಶದಲೆಲ್ಲಾ ಮಲೇರಿಯಾದ ಭಯಂಕರ ಹಾವಳಿಯು ನಡೆಯುತಿದ್ದಿತು. ಈ ಹಾವಳಿಯು ಎಷ್ಟರ ಮಟ್ಟಿಗೆ ಕಠಿಣವಾಗಿತ್ತೆಂದರೆ — ಅಲ್ಲೆ ಸಮೀಪವಿರುವ ನಿಂಫಾ ನಗರದ ಜನರು ಜೀವವನ್ನು ಉಳಿಸಿಕೊಳ್ಳಲು, ಸಂಪೂರ್ಣವಾಗಿ ಆ ನಗರವನ್ನು ತ್ಯಜಿಸುವವರಾದರು

ಈ ತರದ ಸ್ಥಿತಿಯನ್ನು ನಿವಾರಿಸುವರೆ ಬಹಳ ಪ್ರಾಚೀನ ಕಾಲದಿಂದ ಪ್ರಯತ್ನಗಳು ನಡೆದು ಬಂದಿದ್ದವು ಆದರೆ ಒದ್ದೆಯಾಗಿದ್ದ ಆ ಜೌಗು ಪ್ರದೇಶವನ್ನು ಒಣಗಿಸುವರೆ ಅಸಾಧ್ಯವೆಂದ ತೋರಿತು ಕ್ರಿ. ಪೂ 200 ದಲ್ಲಿ ಕಾಲವೆಯನ್ನು ತೋಡಿ, ನೆಲವನ್ನು ಒಣಗಿಸುವ ಪ್ರಯತ್ನಗಳಾಗಿ ಅದು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿ ನಡೆದಿದ್ದಿತು. ಆದರೆ ಕ್ರಮೇಣ ಈ ಕಾಲುವೆಯು ಮುಚ್ಚುತ್ತ ಬಂದು, ಸ್ಥಿತಿಯು ಮೊದಲಿನ ರೂಪವನ್ನೆ ತಾಳಿತು

17 ಶತಮಾನದಲ್ಲಿ (ಇಟಲಿಯ ಸುವರ್ಣ ಯುಗದಲ್ಲಿ) ಅಧಿಕಾರದಲ್ಲಿದ್ದ ಅನೇಕ ಪೋಪ್ ಸಾಹೇಬರು, ರೋಮ್ ನಗರದ ಸುತ್ತಲಿರುವ ಈ ಜೌಗು ಪ್ರದೇಶವನ್ನು ಉದ್ಧರಿಸುವ ಕಾರ್ಯವನ್ನು ನಡೆಯಿಸುವವರಾದರು. ಈ ಜೌಗು ಪ್ರದೇಶಗಳನ್ನು ಛಕ್ಕಿಸಲು ಕಟ್ಟಾಕ್ಷಗಳನ್ನು ಕರೆಯುವವರಾದರು. ಈ ಕಟ್ಟಾಣೆನ್ನು ವಹಿಸಿದವರಲ್ಲಿ ಇವರು ಡಚ್ ಮೇಸನರು, ನೀರಿನ ಸಂಬಂಧ ಕೆಲಸಗಳಲ್ಲಿ ಅವರು ಪ್ರವೀಣರೆನಿಸಿಕೊಂಡಿದ್ದರು. ಅದರಲ್ಲಿ ಮೊದಲನೆಯವನು ಏಳು ವರ್ಷಗಳ ಸಮಯ ಪರಿಶ್ರಮಿಸಿ, ಆ ಜೌಗು ಪ್ರದೇಶವು ವಾಸಸ್ಥಾನಕ್ಕೆ ಯೋಗ್ಯವಾಗುವಂತೆ ಮಾಡುವ ಒಂದು ಮಹಾ ಯೋಜನೆಯನ್ನು ಕಲ್ಪಿಸಿ ಕೂನೆಗೆ ಒಂದು ದಿನ ಮಲೇರಿಯಾ ಪೀಡಿತನಾಗಿ ಮೃತನಾದನು. ಆತನ ನಂತರ ಕೋರ್ನೆಲಸ್ ಮೆಯರ್ ನೆಂಬವನು ಈ ಕಾರ್ಯವನ್ನು ವಹಿಸಿಕೊಂಡನು, ಅವನನ್ನು ಬಹು ಮಟ್ಟಿಗೆ ಯಶಸ್ವಿಯಾಗಿ ನಡಯಿಸುವವನಾದನು ಆದರೆ ತೀರಿದ ಒಂದು ಹ್ಯಾಮರು ಕಲ್ಮಾದಿ ಜಮೀನ್ದಾರರ ಬೆಂಬಲದಿಂದ, ಆತನು ತಮ್ಮ ಹಕ್ಕಿಗೆ ಒಂದು ಅಡ್ಡಿಯನ್ನು ಹಾಕುತ್ತಿರುವ ನೆಂಬ ಭಾವನೆಯಿಂದ, ಆತನನ್ನು ಈ ಕಾರ್ಯದಲ್ಲಿ ಬಹಳವಾಗಿ ತಡೆಯುವವರಾದರು. ಮೆಯರನು ಕಟ್ಟಿದ ಕಾಲುವೆ, ಅಣೆಕಟ್ಟು ಇತ್ಯಾದಿಗಳನ್ನು ಕಿತ್ತು ಬಿಸುಟುವವರಾದರು ಮೆಯರು ಕೂಡ ಒಂದಾನೊಂದು ದಿನ ಮಲೇರಿಯಾ ಪೀಡಿತನಾಗಿ ಮೃತನಾದನು ಇವರ ನಂತರ ಕೆಲವು ಕಾಲುವೆಗಳು ತೊಡಲಾಗಿ ಅವುಗಳಲ್ಲಿ ನೀರು ಸರಿಯಾಗಿ ಹರಿಯುವಂತೆ ನೋಡಲಾಯಿತು. ಈ ಕಾರ್ಯಕ್ಕೆ ಎತ್ತುಗಳು ಉಪಯೋಗಿಸಲಾದವು. ಕಾಲುವೆಯಲ್ಲಿ ಬೆಳೆಯುವ ನೀರು ಹುಲ್ಲನ್ನು ಒದೆದು ನಾಶ ಮಾಡುವರೆ.

ಈ ಕೆಲಸವು ಮೊನ್ನೆ ತನಕ ಅಂದರೆ ಪೆಸಿಯಸ್ಟರು ಅಧಿಕಾರಕ್ಕೆ ಬರುವ ತನಕ ನಡೆಯುತ್ತಿದ್ದಿತ್ತು, ಈಗ ಎತ್ತಿನ ಬದಲಿಗೆ ಯಂತ್ರಗಳಿಂದ ಚಲಿಸುವ ಕೆಸರು ತೆಗೆಯುವ ಡ್ರೆಜರ್ ಉಪಕರಣಗಳು ಉಪಯೋಗಿಸಲಾಗುತ್ತಿವೆ. ರೋಮಿನ ಸುತ್ತಲಿರುವ ಜೌಗು ಪ್ರದೇಶವನ್ನು ಛಕ್ಕಿಸಲು, ಒಂದು ಮಹಾ ಯೋಜನೆಯು ನಡೆಯುತ್ತಿದೆ ಆ ಪ್ರದೇಶವು ಉಪಯುಕ್ತವಾಗುವಂತೆ ಮಾಡುವರೆ ಇಟಲಿಯಾನರು ಹಗಲಿರುಳು ದಣಿಯುತ್ತಾರೆ. ಅವರ ಶ್ರಮದಲ್ಲಿ ಅವರಿಗೆ, ಆಧಾರಕನಾಗಿರುವ ಪ್ರಬಲನಾದ ಮಿತ್ರನೊಬ್ಬನ ಸಹಾಯವು ದೊರಕಿರುವುದು.— ಕ್ವಿನೀನು — ಈ ಔಷಧಿಯಿಲ್ಲದಿರುತ್ತಿದ್ದರೆ, ಅವರು ತಮ್ಮ ಹಿಡಿದ ಕಾರ್ಯವನ್ನು ಬಿಟ್ಟು ಬಿಡಬೇಕಾಗುತಿತ್ತು. ಕ್ವಿನೀನ ಸಹಾಯದಿಂದ ಕೆಲಸಗಾರರು ಮಲೇರಿಯಾವನ್ನು ಎದುರಾಡಿ ಯಶಸ್ವಿಯಾಗಿ ತಮ್ಮ ಕೆಲಸಗಳನ್ನು ನಡೆಯಿಸುತ್ತಿದ್ದಾರೆ ಒಂದಾನೊಂದು ಕಾಲದಲ್ಲಿ ಉಪಯೋಗವಿಲ್ಲದೆ ಬಾಲಿಬಿದ್ದ ಪಂಟೊನ್ ಪ್ರದೇಶವು ಈಗ ವಾಸಸ್ಥಾನಕ್ಕೆ ತಕ್ಕದಾದ ಸ್ಥಳವಾಗಿರುವುದಾದರೆ, ಅದು ಆ ಬಿಳಿ ಬಿಲ್ಲೆ ಕ್ವಿನೀನಿನಿಂದ ಸರಕಾರದ ಆಜ್ಞೆಯ ಮೇರೆಗೆ ಈ ಬಿಲ್ಲೆಗಳು ಕೆಲಸಗಾರರಲ್ಲಿ ಧರ್ಮಾರ್ಥ ಹಂಚಲಾಗುತ್ತಿವೆ

ಮಲೇರಿಯಾವನ್ನು ತಡೆಯುವಂತೆ, ಜ್ವರ ಹಾವಳಿಯುದುವ ಅವಧಿಯಲ್ಲಿ ಪ್ರತಿದಿನವೂ, 6 ಗ್ರೇನ ಕ್ವಿನೀನ ಪ್ರಕಾರ ಸೇವಿಸಬೇಕೆಂದು ಜನಾಂಗ ಸಂಘಗಳ ಮಲೇರಿಯಾ ಸಮಿತಿಯು ಸೂಚನೆಯಾಗಿರುತ್ತದೆ ಮಲೇರಿಯಾ ಜ್ವರವೇ ಪತ್ತೆಯಾದರೆ, ಮೊದಲಿನ 5 ಯಿಂ 7 ದಿವಸಗಳಲ್ಲಿ ದಿನಂಪ್ರತಿ 15 ರಿಂದ 18 ಗ್ರೇನು ಕ್ವಿನೀನ ವರೆಗೆ ಸೇವಿಸಬೇಕು ನಂತರದ ಚಿಕಿತ್ಸೆಯಾದರೂ ಬೇಕಾಗಿಲ್ಲ, ಜ್ವರವು ಮತ್ತೆ ತಮ್ಮ ತೋರಿಸಿಕೊಂಡರೆ, ಇದೆ ತರದಲ್ಲಿ ಪತ್ತೆ ಮತ್ತೆ ಕ್ವಿನೀನನ್ನು ಉಪಯೋಗಿಸಿದರೆ ಸರಿ

M L No. 37

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O P No 99 1938

ಚೇರಿಕ ನ್ಯಾಂ ಶಂಭು ದೀಕ್ಷನ್ ನಂಬೂದ್ರಿ . . . } ಅರ್ಜಿದಾರ.

ಮತ್ತು

1 ದ್ರೌಪದಿ ಅಂತರ್ಜನಂ
2 ಕೃಷ್ಣನ್ ನಂಬೂದ್ರಿ
3. ಸುಬ್ರಹ್ಮಣ್ಯನ್ ನಂಬೂದ್ರಿ (ಮ್ಯಾನರ್)
4. ಶಂಕರನ್ ನಂಬೂದ್ರಿ } ರೆಸ್ಪಾಂಡೆಂಟರು

ಅರ್ಜಿದಾರನ ತಂದೆ ಚೇರಿಕುನ್ನಾಂ ನಾರಾಯಣ ನಂಬೂದ್ರಿ ಎಂಬವನು ಕಳೆದ 1112ನೇ ಕೊಲ್ಲದ ಮಿಥುನಮಾಸ 27ರಲ್ಲು ಮೃತಪಟ್ಟಿರುವದರಿಂದ ಆತನು ಕಾಸರಗೋಡು ಕೆನರಾ ಬೇಂಕಿನಲ್ಲಿ ಅಡವಿಟ್ಟ ನಗ ಏಲಂನಿಂದ ಹುಟ್ಟಿಬಂದ ಐವಜಿನಿಂದ ಬೇಂಕಿಗೆ ಸಲತಕ್ಕ ಐವಜು ಕಳೆದು ಆತನ ಲೆಕ್ಕಕ್ಕೆ ಇನ್ನು ಬಾಕಿ ಇರುವ ಐವಜು ವಗೈರೆ ವಸೂಲಿ ಮಾಡಲು ಮೃತನ ಪ್ರತಿನಿಧಿವಾರಿಸುದಾರನಾದ ಅರ್ಜಿದಾರನು ವಾರಿಸ್ ಸರ್ಟಿಫಿಕೇಟು ಅಪೇಕ್ಷಿಸಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 17—8—1938ಕ್ಕೆ ತನಿಖೆಗೆ ಇಟ್ಟಿರುತ್ತದೆಂದು ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು, ತಾ. 6-8-'38. } **B. S. Kakkillaya,** Advocate for Petitioner.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O P No 101 1938.

1 ಸುಂದರನಾಯ್ಕ ಪ್ರಾಯ 14
2. ಲಲಿತಾ ಪ್ರಾಯ 9
3 ವಿಠಲ್ ನಾಯ್ಕ ಪ್ರಾಯ 5
ಇವರ ಗಾರ್ಡಿಯನ ಇವರ ತಾಯಿ 4ನೇ ಅರ್ಜಿದಾರಳು
4 ಚೀರಕ್ಕೆ ಹೆಂಗ್ಸು } ಅರ್ಜಿದಾರರು

ಮತ್ತು

1 ರಾಮ ನಾಯ್ಕ
2 ಕೆ ಬಾಬು ನಾಯ್ಕ
3 ಕೆ ಶಂಕರನಾಯ್ಕ } ರೆಸ್ಪಾಂಡೆಂಟರು.

ಇವರೊಳಗೆ ತಾ 6 – 8 – 1938

ಸದ್ರಿ ಅರ್ಜಿದಾರರ ಕಡೆಯಿಂದ ನೋಟೀಸ್

ಸದ್ರಿ ಮೃತಪಟ್ಟ ಕೆ ಮಾಲಿಂಗ ನಾಯ್ಕರ ಬಾಬ್ತು ದಿ ಓರಿಯಂಟಲ್ ಲೈಫ್ ಎಸ್ಯೂರೆನ್ಸ್ ಕಂಪನಿ, ಲಿಮಿಟೆಡ್, ಬೆಂಗಳೂರ್ ಬ್ರಾಂಚ್ ಇದ್ರ ನಂಬ್ರ 544130ನೇ ಪೋಲಿಸಿ ಪ್ರಕಾರ ಐವೇಜು ರೂಪಾಯಿ 935 – 3 – 0ನು ಬರಮಾಡಿಕೊಳ್ಳುವರೆ ಮೃತನ ಪ್ರತಿನಿಧಿ ವಾರಿಸ್ಸುದಾರರಾದ ಅರ್ಜಿದಾರರು ವಾರಿಸ್ ಸರ್ಟಿಫಿಕೇಟು ಬಗ್ಗೆ ದಾಖಲುಮಾಡಿದ ಅರ್ಜಿಯು ತಾ. 26 – 8 – 1938ಕ್ಕೆ ತನಿಖೆಗಿಟ್ಟಿರುವುದರಿಂದ ಆಕ್ಷೇಪಿಸುವವರು ಕೋರ್ಟು ಮುಂದೆ ಹಾಜರಾಗಿ ಮನವಿಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ.

Kasaragod, 8—8—38. } **K. P. Madhava Rao,** Advocate for Petitioners.

ಮೂಲೆಮೂಲೆಗಳಿಂದ

ಮಲಯಾ ದ್ವೀಪಗಳಲ್ಲಿ

★ ಒಂದು ರಬ್ಬರ್ ಕೋಟದಲ್ಲಿ ರಬ್ಬರ್ ಹಾಲನ್ನು, ಎರಡು ದನಗಳು ಅದು ಹಾರಿಂದೆನಿಸಿ, ಕುದಿದುಬಿಟ್ಟು ನಂತರ ಮೃತವಾದ ವಾರ್ತೆ ಬಂದಿರುತ್ತದೆ.

ರಬ್ಬರ್ ಮರಗಳಿಂದ ಹೊರಬರುವ ಬಿಳಿ ದ್ರಾವಕಕ್ಕೂ ಹಾಲಿಗೂ ನೋಡಲಿಕ್ಕೆ ಯಾವ ವ್ಯತ್ಯಾಸವೂ ಕಾಣಿಸುವುದಿಲ್ಲ. ಬಾಲ್ದಿಯಲ್ಲಿ ಬಿಳಿ ದ್ರಾವಕವನ್ನು ಕಂಡ ಆ ದನಗಳು, ಅದು ಹಾಲೆಂದೆ ಭಾವಿಸಿ, ಅದನ್ನು ನುಂಗಿಬಿಟ್ಟಿದ್ದಾಗಿರುತ್ತದೆ. ಹೊಟ್ಟೆಗೆ ಹೋದ ಈ ದ್ರಾವಕವು ಕ್ರಮೇಣ ರಬ್ಬರಾಗಿ ಮಾರ್ಪಟ್ಟುದೆ ದನಗಳ ಸಾವಿಗೆ ಕಾರಣವೆಂದು, ವೈದ್ಯರ ಅಭಿಪ್ರಾಯವಾಗಿರುತ್ತದೆ.

ನೌಕಾ ನಿರ್ಮಾಣಕರ ಪರಿಷತ್ತು

★ ಜಗತ್ತಿನ ಎಲ್ಲಾ ಕಡೆಗಳಿಂದ ಒಂದು ಸಾವಿರ ಪ್ರತಿನಿಧಿಗಳು ಕೂಡಿಬರುವ ನೌಕಾ ನಿರ್ಮಾಣಕರ ಪರಿಷತ್ತೊಂದು ಸದ್ಯದಲ್ಲೇ ಲಂಡನ್ ನಗರದಲ್ಲಿ ಸೇರುವುದು.

ನೌಕಾರಚನೆಯ ಬಗ್ಗೆ ಆಧುನಿಕ ಕ್ರಮಗಳು; ನೌಕೆಗಳು ಜಲಪ್ರಯಾಣಕ್ಕೆ ಅತ್ಯಂತ ಭದ್ರತೆಯುಳ್ಳವಾಗುವಂತೆ ಉಪಾಯಗಳು, ಇವೆ ಮೊದಲಾದ ವಿಷಯಗಳು ಈ ಪರಿಷತ್ತಿನಲ್ಲಿ ಚರ್ಚಿಸಲ್ಪಡುವವು.

ಚಲಿಸುತ್ತಿರುವಾಗ ಜಹಜುಗಳಲ್ಲಿ ಉಂಟಾಗುತ್ತಿರುವ ನಡುಕವನ್ನು ಕಡಿಮೆಮಾಡುವ ಕುರಿತು ಅಲ್ಲಿ ಆಲೋಚನೆಗಳಾಗುವುದಂತೆ.

ಜರ್ಮನಿಯ ಪ್ರಸಿದ್ಧ ನೌಕಾನಿರ್ಮಾಣಕರು; ಜಪಾನಿನ ಪ್ರವೀಣ ನೌಕಾ ನಿರ್ಮಾಣಕರು, ನೌಕಾರಚನೆಗೆ ಸಂಬಂಧಪಟ್ಟ ಕೆಲವು ವಿಷಯಗಳ ಮೇಲೆ ತಮ್ಮ ಉಪನ್ಯಾಸಗಳನ್ನು ಓದುವವರಿದ್ದಾರೆ.

ಬಾರ್ಸೆಲೋನಾ ಸರಕಾರ

★ ಸ್ಪೈನಿನ ಬಾರ್ಸೆಲೋನಾದಲ್ಲಿರುವ ಸ್ಪೆನಿಶ್ ರಿಪಬ್ಲಿಕ್ ಸರಕಾರಕ್ಕೆ (ಫ್ರೆಂಕೋವಿನ ವಿರೋಧಿಗಳಿಗೆ) ಲಂಡನಿನ ತಟಸ್ಥಭಾವ ಸಮಿತಿಯವರು ತಾವು ಕಲ್ಪಿಸಿದ ತಟಸ್ಥಭಾವ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಕುರಿತು ಕಳುಹಿಸಲಾದ ಸೂಚಕಪತ್ರವು, ತಲ್ಪಿರುತ್ತದೆ. ಅದರ ಕುರಿತು ತಾವು ಆಲೋಚಿಸುವೆವೆಂದು ಉತ್ತರ ಬಂದಿರುತ್ತದೆ. ಶಾಂತಿರಕ್ಷಣೆ ಬಗ್ಗೆ ಬಾರ್ಸೆಲೋನಾ ಸರಕಾರವು ಹಿಂದಿನಂತೆ ಈಗಲೂ ತ್ಯಾಗಮಾಡಲು ಸಿದ್ಧವಿದೆಯಾಗಿ ತಿಳಿದುಬರುತ್ತದೆ.

ಸಿಂಧದಲ್ಲಿ ನೆರೆಹಾವಳಿ

★ ಸಿಂಧಪ್ರಾಂತ್ಯದ ಕಾಲಿವೆಗಳಲ್ಲಿ ಪ್ರಳಯ ಉಂಟಾಗಿ, ಕಾಲಿವೆ ಹರಿಯುವ ಪ್ರದೇಶಗಳಲ್ಲೆಲ್ಲಾ ನೆರೆಹಾವಳಿಯು ನಡೆದಿರುತ್ತದೆ. 84,000 ಎಕ್ರೆ ಸ್ಥಳವು ಈ ನೆರೆಹಾವಳಿಗೆ ಒಳಗಾಗಿರುತ್ತದೆ. ಸುಕ್ಕೂರು ಪ್ರದೇಶದಲ್ಲಿ 15 ಹಳ್ಳಿಗಳು, ನೀರುಪಾಲಾಗಿದ್ದವು. ಹೀಗೆ ಅನೇಕ ಕಡೆಗಳಲ್ಲಿ ನೆರೆಹಾವಳಿಯು ನಡೆದಿರುತ್ತದೆ. ನೆರೆಹಾವಳಿಯಿಂದ ಪೀಡಿತರಾದವರಿಗೆ ಸರಕಾರದಿಂದ ಬೇಕಾದ ಸಹಾಯ, ಇತ್ಯಾದಿಗಳು ದೊರಕಿವೆಯಾಗಿ ತಿಳಿದುಬರುತ್ತದೆ.

ಯಹೂದ್ಯರ ಕುರಿತು ನಾಜಿಗಳ ಹೊಸ ಕಾನೂನುಗಳು

★ ಯೆಹೂದ್ಯರು ಜರ್ಮನಿಯಲ್ಲಿ ಆಸ್ತಿಗಳ ಬ್ರೋಕರರಾಗಿರಬಾರದು, ಗುಪ್ತ ಪೋಲೀಸ್ ಮಂಡಳಿಗಳಲ್ಲಿರಬಾರದು, ಅವರು ಯಾರಿಗೂ ಆರ್ಥಿಕ ಬೋಧಕರಾಗಿರಬಾರದು, ವಿವಾಹದ ಬಗ್ಗೆ ಏಜನ್ಸಿಗಳನ್ನು ನಡೆಯಿಸುವವರಾಗಬಾರದು, ಈ ತರದ ಏಜನ್ಸಿಗಳನ್ನು ಅವರು ನಡೆಯಿಸುವುದಾದರೆ, ಅದು ಯಹೂದ್ಯರ ಬಗ್ಗೆ ಆಗಬೇಕು.

ಈ ಕಾನೂನುಗಳಿಗೆ ವಿರೋಧವಾಗಿ ನಡೆದವರಿಗೆ ಕಾರಾಗ್ರಹ ಶಿಕ್ಷೆ ವಿಧಿಸಲಾಗುವುದು.

ಮಲೆಯಾದಲ್ಲಿ ಪುರಾತನದ ಕುರಿತು ಪರಿಶೋಧನೆ

★ ಮಲೆಯಾದಲ್ಲಿ ಪುರಾತನದಲ್ಲಿ ಹಿಂದಿ ರಾಜ್ಯ, ಸಂಸ್ಕೃತಿ ಇತ್ಯಾದಿಗಳ ಪರಿಶೋಧನೆಯನ್ನು ನಡೆಯಿಸುವರೆ, ಗ್ರೇಟರ್ ಇಂಡಿಯಾ ರಿಸರ್ಚ್ ಸಂಘದ ಒಬ್ಬ ಪ್ರವೀಣರನ್ನು ಅಲ್ಲಿನ ಜೊಹೆರ್ ಸರಕಾರದವರು ಆಹ್ವಾನಿಸಿರುವರಾಗಿ ತಿಳಿದುಬರುತ್ತದೆ. ಹದಿನೆರಡು, ಹದಿಮೂರನೆ ಶತಮಾನಗಳಲ್ಲಿ ಮಲಿಯಾ ಪ್ರದೇಶಗಳಲ್ಲಿ ಮಹಾಪ್ರಸಿದ್ಧಿಯನ್ನು ಪಡೆದ ರಾಜ್ಯಗಳ ಕುರಿತು, ಈ ಪರಿಶೋಧನೆಯು ನಡೆಯುವುದಂತೆ.

ಉದ್ಯೋಗ ಹುಡುಕಿಕೊಂಡು, ಎರಡು ಭೂಮಂಡಳಗಳನ್ನು ದಾಟಿದನು

★ ಹೊಲ್ಲೆಂಡಿನ ತರುಣನೊಬ್ಬನು ಔದ್ಯೋಗಿಕ ಶಿಕ್ಷಣವನ್ನು ಪಡೆದನು. ಒಂದು ಉದ್ಯೋಗವನ್ನು ಹುಡುಕಾಡಿ, ಸೈಕಲಿನಲ್ಲಿ ಸಮಸ್ತ ಹಾಲೆಂಡಿನ ಪ್ರವಾಸ ಮಾಡಿದನು. ಫಲ ಸಿಗಲಿಲ್ಲ. ಕೊನೆಗೆ ಈಸ್ಟ್ ಇಂಡಿಸ್ ದ್ವೀಪಗಳಲ್ಲಿ ಒಳ್ಳೆ ಅವಕಾಶವಿರುವುದಾಗಿ, ಯಾರಿಂದಲೊ ತಿಳಿದು ಅಲ್ಲಿಗೆ ತೆರಳಲು, ಸ್ಟೀಮರು ಚಾರ್ಜನ್ನು ವಿಚಾರಿಸಿದನು. ಅಷ್ಟು ಹಣವು ಅವನಲ್ಲಿ ಇಲ್ಲದಿರಲು, ಸೈಕಲಿನಲ್ಲೆ ಈಸ್ಟ್ ಇಂಡಿಸ್ ದ್ವೀಪಗಳಿಗೆ ತೆರಳಲು ಹೊರಟನು. ತನ್ನ ಸ್ವದೇಶದಲ್ಲಿ ಈ ತರುಣನು ಉದ್ಯೋಗಕ್ಕಾಗಿ ಸಾಧಾರಣ ಒಂದೂವರೆ ವರ್ಷ ಸಮಯ ಅಲೆದಾಡಿದ್ದನು. ಫೆಬ್ರವರಿಯಲ್ಲಿ ಒಂದಾನೊಂದು ದಿನ ಈ ತರುಣನು ಈಸ್ಟ್ ಇಂಡಿಸ್ ದ್ವೀಪಗಳ ಕಡೆ ತನ್ನ ಸೈಕಲಿನಲ್ಲಿ ಹೊರಟನು. ಜರ್ಮನಿಯ ಮೂಲಕವಾಗಿ, ಡೆನ್ಯೂಬ್ ಆಗಿ, ಯುರೋಪನ್ನು ದಾಟಿ ಏಸ್ಯಾಖಂಡವನ್ನು ದಾಟಿ ಹೇಗೂ ಡಚ್ ಈಸ್ಟ್ ಇಂಡಿಸ್ ದ್ವೀಪಗಳಿಗೆ ಬರುವವನಾದನು.

ಹಾದಿಯಲ್ಲಿ ಆತನಿಗೆ ಮಲೇರಿಯಾ ಜ್ವರವು ಹಿಡಿಯಿತು. ಸಂಪೂರ್ಣ ಸೋತವನಾಗಿ ಕೈಯಲ್ಲಿ ಒಂದು ಚಿಕ್ಕಾಸು ಇಲ್ಲದವನಾಗಿ, ಈ ತರುಣನು ಹೇಗೂ ಸಿಂಗಾಪುರಕ್ಕೆ ತೆರಳಿದನು. ಅಲ್ಲೀಗ ಆತನು ಆಸ್ಪತ್ರೆಯಲ್ಲಿರುವನು. ಇನ್ನು ಮೂರು ತಿಂಗಳ ಸಮಯ ಆತನು ಅಲ್ಲಿರಬೇಕಾಗುವುದಂತೆ.

ಬಟ್ಟೆಗಳನ್ನು ಮನೆಯಲ್ಲಿ ಸನ್‌ಲೈಟ್ ಸೋಪಿನಿಂದ ಒಗೆದಲ್ಲಿ ಹೆಚ್ಚು ವರ್ಷಗಳು ಬಾಳಿಕೆ ಬರುತ್ತವೆ.

ಬಿಸಿ ನೀರಿನಲ್ಲಿ ನೆನೆಸಿರಿ ಸನ್‌ಲೈಟ್.

ಪ್ರತಿದಿನವೂ ಒಗೆಯಬೇಕಾದ ಉಡುಪುಗಳನ್ನು ಸನ್‌ಲೈಟ್ ಜೊತೆಯಾಗಿಯೂ ಸುಲಭವಾಗಿಯೂ ತೊಳೆಯುತ್ತದೆ.

ಸನ್‌ಲೈಟ್ ಸೋಪಿನಿಂದ ಚರ್ಮಕ್ಕೆ ಹಾನಿಯಿಲ್ಲ.

ಹಿಂದೂದೇಶದ ಎಲ್ಲಾ ಭಾಗದಲ್ಲಿರುವ ಲಕ್ಷಾಂತರ ಗೃಹಸ್ಥರು ತಮ್ಮ ಉಡುಪುಗಳನ್ನು ಸನ್‌ಲೈಟಿನಿಂದ ಒಗೆದು ಹಣವನ್ನು ಮಿಗಿಸುತ್ತಾರೆ. ಮತ್ತು ಉತ್ತಮ ಫಲವನ್ನು ಪಡೆಯುತ್ತಾರೆ. ಸನ್‌ಲೈಟಿನಿಂದ ಒಗೆದ ಬಟ್ಟೆಗಳು ಹೆಚ್ಚು ಬಾಳಿಕೆಗೆ ಬರುತ್ತವೆ. ಏಕೆಂದರೆ, ಎಳೆಗಳನ್ನು ನಾಶಪಡಿಸುವ ಹೊಡೆಯುವಿಕೆ ಇಲ್ಲದೇನೆ ಸನ್‌ಲೈಟ್ ಸೋಪು ಕೊಳೆಯನ್ನೆಲ್ಲಾ ತೆಗೆಯುತ್ತದೆ. ನಿಮ್ಮ ಬಟ್ಟೆಗಳಿಗೆಲ್ಲಾ ಸನ್‌ಲೈಟ್ ಸೋಪು ಶ್ರೇಯ. ಯಾಕೆಂದರೆ, ಅದು ಅಪಾಯಕರವಾದ ಅಂಶಗಳಿಲ್ಲದೆ ಅಪ್ಪಟ ಸಸ್ಯಸಂಬಂಧದ ಎಣ್ಣೆಯಲ್ಲಿ ಮಾಡಲ್ಪಟ್ಟಿರುತ್ತೆ.

ಸನ್‌ಲೈಟ್ ಸೋಪ್

ಬಿಸಿ ನೀರಿನ ಬಟ್ಟೆಯಲ್ಲಿ ಉಪಯೋಗಿಸುವದಕ್ಕೆ ಬಹಳ ಯೋಗ್ಯವಾಗಿರುತ್ತದೆ

ಅಪ್ಪಟ ಸಸ್ಯಸಂಬಂಧವಾದ ಎಣ್ಣೆಯಿಂದ ಹಿಂದೂದೇಶದ ಕೆಲಸಗಾರರಿಂದ ಹಿಂದೂದೇಶದಲ್ಲಿ ತಯಾರಿಸಲ್ಪಟ್ಟುದು.

X-S 1206-50 LEVER BROTHERS (INDIA) LIMITED

KANARESE

Buy Advertised Goods

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎ. ಕೆ. ರಜಪೂತ್ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಇಲ್ಲ ಜನನದಲ್ಲಿ ಕ್ಲೇಶ ಮುಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೋಬಲೀ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳಮಾಮಾಹಿಮ, ಅನೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೮—೮ ವಿ. ಪಿ. ಆಕ್. ೮.

ವಿಳಾಸ:— ಸಂಜೀವಿನೀ ಔಷಧಾಲಯ, ಮು. ವಿಪ್ರೊ. ಎರಜಿ, (S. M. C.)

ಸಾವಿತ್ರೀ ಮಾತೆಯ ಪಂಚಾಮೃತವೆಂಬ ಅಮೂಲ್ಯವಾದ ಸಿದ್ಧ ಪಂಚ ಔಷಧಗಳು.

1. ಕೇಶಚಂದನ ತೈಲ:- ಕಳೆದ 75 ವರ್ಷಗಳಿಂದಲೂ ಉಪಯೋಗಿಸಲ್ಪಟ್ಟ ಈ ತೈಲವು ತಲೆನೋವು, ದೃಷ್ಟಿಮಾಂದ್ಯ, ಕೆಂಗಣ್ಣು. ಇವನ್ನು ದೂರಪಡಿಸಿ ನಿದ್ರಾಭಂಗವನ್ನು ನಾಶಪಡಿಸಿ ಸುಖ ನಿದ್ರೆಯನ್ನೂ, ಮಿದುಳಿಗೆ ತಂಪನ್ನೂ ಕೊಡುವುದು.

ಸುಪ್ರಸಿದ್ಧ ಡಾ। ರಾವ್ ಬಹದ್ದೂರ್ ಎಮ್. ಕೇಶವ ಪೈ, ಓ.ಬಿ.ಇ.ಎಮ್.ಡಿ., ಸ್ವತಃ ಉಪಯೋಗಿಸಿ ಬರೆಯುತ್ತಾರೆ:- ಇದು ತಲೆಗೆ ತಂಪು ಮಾಡುವ ಗುಣವುಳ್ಳದು. ಎಷ್ಟೊ ವರ್ಷಗಳಿಂದ ನನಗೆ ನಿದ್ರಾಭಂಗದ ಬಾಧೆಯಿತ್ತು. ಕಳೆದ ಸಲ ಈ ಬಾಧೆ ಪ್ರಬಲವಿತ್ತು, ಆದ್ದು ಈ ಎಣ್ಣೆಯು ನನಗೆ ತುಂಬಾ ನಿದ್ರೆ ಅನುಗ್ರಹಿಸಿದೆ. ಆದರಿಂದ ನನ್ನಂತೆ ನಿದ್ರಾಭಂಗಪಡುವ ಇತರರು ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ಸಿಫಾರಸು.

ಬೆಲೆ: 2 ಔನ್ಸ್ ಸೀಸೆ 1ರ ರೂ. 1 ಮಾತ್ರ. ಒಂದು ಇಡೀ ಸೀಸೆ ಒಂದು ತಿಂಗಳಿಗೆ ಸಾಕು.

2. ಮಾರುತಿ ಲೇಹ:- ಇದರಲ್ಲಿ ದುಷ್ಟವಾದ ಮಾದಕ ಪದಾರ್ಥಗಳು ಸೇರುವುದಿಲ್ಲ. ಎಲ್ಲರೂ ಸೇವನೆಮಾಡಬಹುದು. ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸನ್ನು ವರ್ಧಿಸುವದು. ಬಹುಮೂತ್ರ, ಸಿಹಿಮೂತ್ರ, ಉಬ್ಬಸ ಇವುಗಳನ್ನು ಗುಣಪಡಿಸಿ, ಹಸಿವನ್ನೂ, ವೀರ್ಯ ಬಲವನ್ನೂ ಹೆಚ್ಚಿಸಿ, ಮನುಷ್ಯನನ್ನು ಸಂಪೂರ್ಣ ಪುರುಷನನ್ನಾಗಿ ಮಾಡುತ್ತದೆ. ಇದರ ಸಂಗಡ ಕೇಶಚಂದನ ತೈಲವನ್ನು ಉಪಯೋಗಿಸಿದ್ದಲ್ಲಿ ಉನ್ಮಾದ ರೋಗವು ಗುಣವಾಗುತ್ತದೆ.

ಕ್ರಯ ½ ರಾತ್ತಿಗೆ ರೂ. 1—12—0

1 ರಾತ್ತಿಗೆ ರೂ. 3—0—0 ಮಾತ್ರ.

3. ಅದ್ಭುತ ಶಕ್ತಿ ತೈಲ:- ಇದು ನರಗಳಿಗೆ ದಿವ್ಯ ಔಷಧ. ಕಾಲು ಬಾರದ ಸಣ್ಣ ಮಕ್ಕಳಿಗೆ ಕಾಲಿಗೆ ಹಚ್ಚಿದಲ್ಲಿ ಕಾಲು ಬರುತ್ತದೆ. ವೃದ್ಧರು ಮಾರುತಿ ಲೇಹ ತೆಗೆದುಕೊಳ್ಳುವಾಗ ಈ ಎಣ್ಣೆಯನ್ನು ಉಪಯೋಗಿಸಿದಲ್ಲಿ ಒಳ್ಳೇ ಶಕ್ತಿ ಬರುವುದು.

ಬೆಲೆ: 2 ಔನ್ಸ್ ಬಾಟ್ಲಿಗೆ ರೂ. 1-4-0 ಮಾತ್ರ.

4. ಜೀವಬಿಂದು:- ಇದು ಅನೇಕ ವರ್ಷಗಳಿಂದ ಉಪಯೋಗಿಸಲ್ಪಟ್ಟು, ಕೊಲೆರಾ, ಹೊಟ್ಟೆನೋವು, ಮೇಹ, ಪ್ರಮೇಹ, ಉಬ್ಬಸ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸಿದೆ.

40 ರಿಂದ 60 ಡೋಸುಗಳಿರುವ ಸೀಸೆ 1ಕ್ಕೆ ರೂ. 1—0—0 ಮಾತ್ರ.

5. ವೇದಾಂಜನ ಬಾವ್ಮ್: (ಹೊರಗಿನಿಂದ ಉಪಯೋಗಿಸುವಂತಹದ್ದು) ವಾತ, ತಲೆನೋವು, ಹೊಟ್ಟೆನೋವು, ಕಜ್ಜಿ, ಹುಳಕಜ್ಜಿ, ಇತ್ಯಾದಿಗಳಿಗೆ ಸಿದ್ಧೌಷಧ. ಚರ್ಬಿ ಮಿಶ್ರ ಇಲ್ಲದ್ದು. ಎಲ್ಲಾ ಶ್ರೇಷ್ಠ ವರ್ಗದವರೂ ಉಪಯೋಗಿಸಬಹುದು. ಬೆಲೆ: ½ ಔನ್ಸ್ ಬಾಟ್ಲಿಗೆ ಬರೇ 8 ಆಣೆ ಮಾತ್ರ.

ಹೆಚ್ಚಿನ ಅನುಭವದ ಬಗ್ಗೆ ಪುಸ್ತಕಗಳನ್ನು ಮುಫತ್ತಾಗಿ ಕಳುಹಿಸಲಾಗುತ್ತದೆ.

ಬಿ. ವೈಕುಂಠ ಬಾಳಿಗಾ, ರಿಟಾಯರ್ಡ್ ಸುಪರ್‌ವೈಸರ್, ಡೊಂಗರಕೇರಿ ರಸ್ತೆ, ಮಂಗಳೂರು, ದ. ಕನ್ನಡ.

ಮಂಗಳೂರು ಸಮಾಚಾರ

ಕದ್ರಿ ಗುಡ್ಡೆಯಲ್ಲಿ ಹುಲಿಯೊಂದನ್ನು ಕೊಂದರು.

ಇದೇ ತಾರೀಕು 4ನೇ ಗುರುವಾರ ರಾತ್ರೆ ಪ್ರಿಯ ಗೋಲ್ಫ ಕ್ಲಬ್ಬಿನ ಕರಣೀಕರಾದ ಮಿ ಜೋರ್ಜ ಮುಚ್ಚಾಡೊರವರು ಕದ್ರಿ ಗುಡ್ಡೆಯಲ್ಲಿ ಒಂದು ಚಿಟ್ಟೆಹುಲಿಯನ್ನು ಕೊಂದಿರುವರು. ಈ ಚಿಟ್ಟೆಹುಲಿಯು ಚಿಟ್ಟೆಹುಲಿಗಳಲ್ಲಿ ದೊಡ್ಡ ಜಾತಿಗೆ ಸೇರಿದುದಾಗಿ 7½ ಅಡಿಯಷ್ಟು ಉದ್ದವಿತ್ತೆಂದು ತಿಳಿದು ಬರುತ್ತದೆ. ಶ್ರೀಯುತರು ಇತ್ತ ಕೆಲಸಮಯದಿಂದ ಕಿನ್ನಿಗೋಳಿಯ ಮಹಾಜನರಿಗೆ ಉಪಟಳ ಕೊಡುತ್ತಿರುವ ಹುಲಿಯೊಂದನ್ನು ಕೊಲ್ಲುವ ಪ್ರಯತ್ನ ಮಾಡಲಿದ್ದಾರೆಂದು ತಿಳಿದು ಬರುತ್ತದೆ. ಸರಕಾರದವರು ಇಂಥಾ ಉತ್ಸಾಹಿ ತರುಣರಿಗೆ ಪ್ರೋತ್ಸಾಹ ಕೊಡುವುದು ಅವಶ್ಯವಾಗಿದೆ.

ಮೈದಾನಿನಲ್ಲಿ ಒಂದು ವಾಚು ಸಿಕ್ಕಿರುತ್ತದೆ.

ಸುಮಾರು ಏಳೆಂಟು ದಿವಸಗಳ ಹಿಂದೆ ತನಗೆ ಮೈದಾನಿನಲ್ಲಿ ಒಂದು ವಾಚು ಸಿಕ್ಕಿರುತ್ತದೆಂದೂ ಅದರ ವಾರಿಸುದಾರರು ಅದರ ಗುರ್ತನ್ನು ಕೊಟ್ಟು ತನ್ನಿಂದ ಪಡೆದುಕೊಂಡು ಹೋಗಬಹುದೆಂದು ಶ್ರೀ. ಡಾ ಅದನರ ಮನೆಯ ಹತ್ತಿರವಿರುವ ಶ್ರೀ ಡಿ ಮಂಜಯ್ಯ ಹೆಗ್ಡೆಯವರು ತಿಳಿಸುತ್ತಾರೆ.

ಶ್ರೀಗಣಪತಿ ದೇವಸ್ಥಾನದಲ್ಲಿ ಕಳವು

ಇದೇ ಕಳೆದ ತಾ 8ನೇಯ ಸೋಮವಾರ ರಾತ್ರೆ 9 ಗಂಟೆಗೆ ಶ್ರೀ ಶರವು ಮಹಾಗಣಪತಿ ದೇವಸ್ಥಾನದಲ್ಲಿ ಇಬ್ಬರು ಕಳವು ಮಾಡಲು ಯತ್ನಿಸಿದರು. ಒಬ್ಬ ಕಳ್ಳನು ಹೊರಗಿನ ಅಂಗಣದಲ್ಲಿ ಕಾವಲಿದ್ದು ಇನ್ನೊಬ್ಬನು ದೇವಸ್ಥಾನದ ಬಾಗಿಲು ಹಾಕುವುದಕ್ಕೇನೆ ಮುಂಚೆ ಒಳಗೆ ಅವಿತುಕೊಂಡಿದ್ದು ದೇವಸ್ಥಾನದ ವೆಂಕಟೇಶ್ವರರ ಕೆಲಸದವನೂ ಊಟಕ್ಕೆ ಹೋದ ಸಮಯದಲ್ಲಿ ಶ್ರೀ ಮಹಾಗಣಪತಿ ದೇವರ ಗರ್ಭಗೃಹದ ಮೊದಲನೇ ಬಾಗಿಲನ್ನು ತೆಗೆದು ಒಳಗೆ ಪ್ರವೇಶಿಸಿ ಎರಡನೇ ಬಾಗಿಲನ್ನು ತೆಗೆಯುವ ಯತ್ನದಲ್ಲಿದ್ದನು. ಈ ಶಬ್ದವು ಕೇಳಿ ಶ್ರೀ ಸುಬ್ಬಣ್ಣ ಶಾಸ್ತ್ರಿಗಳ ಮನೆಯಲ್ಲಿದ್ದ ವಾಸುದೇವ ಭಟ್ಟರು ಹೊರ ಅಂಗಣದಲ್ಲಿ ಕಾವಲಿದ್ದ ಒಬ್ಬ ಕಳ್ಳನನ್ನು ಯತ್ನದಿಂದ ಹಿಡಿದರು. ಈ ಗಲಿಭೆಯಿಂದ ದೇವಸ್ಥಾನದ ಒಳಗಡೆ ಇದ್ದ ಕಳ್ಳನು ಬೀಗ ಮುರಿಯುವ ಕೆಲಸವನ್ನು ಅಲ್ಲೇ ಬಿಟ್ಟು ದೇವಸ್ಥಾನದ ಎದುರಿನ ಹೆಬ್ಬಾಗಿಲಿಗೆ ಒಳಗಿನಿಂದ ಹಾಕಿದ ಬೀಗವನ್ನು ಮುರಿದು ಬಾಗಿಲು ತೆಗೆದು ಹೊರಗೆ ಬರುವಷ್ಟರಲ್ಲಿ, ಈ ಶಬ್ದವನ್ನು ತನ್ನ ಆಫೀಸಿನಲ್ಲಿ ಕೇಳಿದ ಎಡ್ವೊಕೇಟ್ ಶ್ರೀ. ಕೆ ಬಾಲಕೃಷ್ಣರಾಯರು ಕೂಡಲೇ ಬಂದು ಓಡಿಹೋಗಲೆತ್ನಿಸಿದ ಮುಖ್ಯ ಕಳ್ಳನನ್ನು ಬಲಾತ್ಕಾರದಿಂದ ಹಿಡಿದು ನಿಲ್ಲಿಸಿದರು ಕೂಡಲೇ ಜನಸ್ತೋಮವು ಜೆಚ್ಚು ಸೇರಿ ಅವರೀರ್ವರನ್ನು ಪೋಲೀಸರವಶಕ್ಕೊಪ್ಪಿಸಿದರು ವೃಕೃತ ಅವರೀರ್ವರು ರಿಮಾಂಡಿನಲ್ಲಿದ್ದಾರೆ.

ಅಸಹಕಾರ ಚಳವಳದಲ್ಲಿ ಕೆಲಸ ಕಳೆದುಕೊಂಡವರು.

ಮಂಗಳೂರು ತಾಲೂಕು ಮಂಚಿ ಗ್ರಾಮದ ಶ್ರೀ ಪತ್ತುಮುಡಿ ವಾಸುದೇವಯ್ಯ ಇವರು ಕುಂಬೆ ಗ್ರಾಮದ ಶ್ಯಾನುಭಾಗರಾಗಿದ್ದರು. 1921ರಲ್ಲಿ ಇವರು ಅಸಹಕಾರ ಚಳವಳದಲ್ಲಿ ಭಾಗವಹಿಸಿದರು. ಈ ತಪ್ಪಿಗಾಗಿ ರೆವೆನ್ಯೂ ಡಿವಿಜನಲ್ ಆಫೀಸರರು ಡಿಸ್ ನಂಬ್ರ 9 R/ 1921/ Rev ತಾ. 10—8—1921 ರಲ್ಲಿ ಇವರು (ರಾಜೀನಾಮೆ ಹೋದರೂ ಕೊಡಾ) ಡಿಸಮಿಸ್ ಮಾಡಿದರು. ಇವರನ್ನು ನಿವೃತ್ತಿ ಪಡಿಸಿದುದು ಮಾತ್ರವಲ್ಲದೆ ಇವರ ಸಂತತಿಯವರಿಗೂ ಈ ಕೆಲಸ ದೊರೆಯದಂತೆ ಹುಕುಂ ಮಾಡಿದರು. ಶ್ರೀ. ವಾಸುದೇವಯ್ಯನವರ ತಂದೆಯವರು, ಕುಟುಂಬದವರಿಗೆ ಕೊಡಬಾರದೆಂಬ ರೆ. ಡಿ. ಆಫೀಸರರ ಆಜ್ಞೆಯನ್ನು ತೆಗೆದು ಹಾಕಬೇಕಾಗಿ ಕಲೆಕ್ಟರರಿಗೆ ಮಾಡಿದ್ದು, ಶ್ರೀ. ವಾಸುದೇವಯ್ಯನವರಿಗೆ ಮಾತ್ರ ಕೆಲಸವಿಲ್ಲೆಂದು, ಕುಟುಂಬಸ್ಥರಿಗೆ ದೊರೆಯಬಹುದೆಂದು ಆಯಿತು. ಈಗ ವಾಸುದೇವಯ್ಯನವರು ಮದರಾಸು ಮಂತ್ರಿಯವರಿಗೆ ತನ್ನನ್ನು ಪುನಃ ನೇಮಿಸಬೇಕೆಂದು ಬರೆಕೊಂಡಿದ್ದಾರೆ. ಮುಖ್ಯ ಮಂತ್ರಿಯವರಿಗೆ ಮಾಡಿದ ಮನವಿಯನ್ನು ಶ್ರೀ. ವಾಸುದೇವಯ್ಯನವರು ಮಹಾತ್ಮಾಗಾಂಧಿಯವರಿಗೂ, ರಾಷ್ಟ್ರಪತಿ ಸುಭಾಸ ಚಂದ್ರಭೋಸರಿಗೂ ಕಳುಹಿಸಿರುವರು

ಗುತ್ತೆ ಏಲಂ

ಮಂಗಳೂರು ತಾಲೂಕಿನ ಶೇಂದಿ ಅಂಗಡಿಗಳ ಹರಾಜು ತಾ 3—8—38ರಲ್ಲು ತಾಲೂಕು ಕಚೇರಿಯಲ್ಲಿ ಡಿವಿಜನಲ್ ಆಫೀಸರರ ಸಮಕ್ಷಮ ನಡೆಯಿತು. ಒಟ್ಟು 186 ಅಂಗಡಿಗಳ ಪೈಕಿ 68 ಮಾತ್ರಾ ಏಲಾಂ ಆದವು. ಪಟ್ಟಣದ ಅಂಗಡಿಗಳಲ್ಲಿ ಮಾರ್ನಮಿ ಕಟ್ಟೆ ಅಂಗಡಿ ಮಾತ್ರವೇ ಏಲಂ ಆಯಿತು ಉಳಿದ ಅಂಗಡಿಗಳ ಏಲಂನ್ನು ತಾ 22—8—38ಕ್ಕೆ ಮುಂದರಿಸಲಾಗಿದೆ. ಈ ವರ್ಷ ಏಲಂ ಸಮಯ ಉತ್ಸಾಹವು ಬಹಳ ಕಡಿಮೆಯಾಗಿದ್ದು ಹಿಂದಣ ವರ್ಷಗಳಷ್ಟು ಬೆಲೆ ಬರಲಿಲ್ಲವೆಂದು ತಿಳಿದು ಬರುತ್ತದೆ

ದನ ಕದ್ದದಕ್ಕೆ ಶಿಕ್ಷೆ

ಕುಂಬೆ ಗ್ರಾಮದಲ್ಲಿ ಅಪ್ಪು ಮೂಲ್ಯ ನೇಬ ಹಳೆ ಅಪ ಧಿಯ ಎರಡು ದನಗಳನ್ನು ಕದ್ದದಕ್ಕೆ ಸೆಕ್ಷನ್ನ ಜಡ್ಜರು ಈತನಿಗೆ ಮೂರು ತಿಂಗಳ ಕಠಿಣ ಸಜೆಯನು ವಿಧಿಸಿದರು. ಜೈಲಿನಿಂದ ಬಿಡುಗಡೆಯಾದ ಮೇಲೆ 3 ವರ್ಷ ಪೋಲೀಸರ ಪರಿಶೋಧನೆಗೊಳಗಾಗಬೇಕಾಗಿಯೂ ವಿಧಿಸಿದರು

ಜನ್ಮಟಾಪು

ಪುತ್ತೂರು ತಾಲೂಕಿನ ಕಮ್ಮಾರಿನ ಇಸುಬ ಬ್ಯಾರಿ ಎಂಬವನು ತಾ 19—5—38ರಲ್ಲಿ ಅಪ್ಪಣ್ಣ ಎಂಬ ಒಳಿಗರ ಹೆಂಗಸನ್ನು ಕಾಡಿಗೆ ಎಳೆದೊಯ್ದು ಕೊಂದನೆಂಬ ಆರೋಪದಲ್ಲಿ ಕೈದಿಯು ಚಿಕ್ಕಪ್ರಾಯದವನೆಂಬದರಿಂದ ಸೆಷ್ಷನ್ಸ್ ಜಡ್ಜರು ಜನ್ಮಟಾಪನು ವಿಧಿಸಿದರು.

ಕೀರ್ತಿಶೇಷ ಶ್ರೀ ಸೂರಪ್ಪಯ್ಯನವರ ನಿಧನಕ್ಕಾಗಿ ಸಂತಾಪಸೂಚಕ ಸಭೆ

ಕೀರ್ತಿಶೇಷ ಶ್ರೀ ಸೂರಪ್ಪಯ್ಯನವರ ಅಕಾಲನಿಧನವನ್ನು ಹೊಂದಿದ ಬಗ್ಗೆ ಸಂತಾಪವನ್ನು ಸೂಚಿಸಲು ಮಂಗಳೂರು ಪುರಜನರ ಸಭೆಯು ತಾ ೮ನೇ ಸೋಮವಾರ ಸಂಜೆ ಮಂಗಳೂರ ಮೈದಾನದಲ್ಲಿ ಜರಗಿತು

ಶ್ರೀ ಕಿಣ್ಣಣ್ಣಶೆಟ್ಟಿಗಳವರು ಸಭೆಯ ಉದ್ದೇಶವನ್ನು ವಿವರಿಸಿದರು ಶ್ರೀಗಳಾದ ಕೆ ಕೃಷ್ಣರಾವ್, ಕೆ. ಬಾಲಕೃಷ್ಣ ನಾಯರ್, ಕೆ ಆರ್ ಆಚಾರ್, ಗೋಪಾಲ ನಾರಾಯಣ ಭೀಡೆ, ಹಿ ರಾ. ಮಲ್ಯ, ಎನ್ ಎಸ್, ಕಿಲ್ಲೆಯವರು ಶ್ರೀಯುತರ ಸಂಪೂರ್ಣ ಪರಿಚಯ ಅವರ ನಿಸ್ವಾರ್ಥ ಹಾಗೂ ಆದರ್ಶಮಯ ರಾಷ್ಟ್ರಸೇವೆಗಳ ಕುರಿತಾಗಿ ವಿವರಿಸಿದರು ಅನಂತರ ಅಧ್ಯಕ್ಷರು, 'ನಮ್ಮ ಜಿಲ್ಲೆಯ ಉತ್ಸಾಹೀ ತರುಣ ಕಾಂಗ್ರೆಸ್ ಕೆಲಸಗಾರರಾದ, ಜಿಲ್ಲೆಯ ಮಹಾಜನರ ಪ್ರೀತಿಗೆ ಪಾತ್ರರಾಗಿದ್ದ, ಶ್ರೀ ಹಳ್ಳಿನಾಡು ಸೂರಪ್ಪಯ್ಯನವರು ತಮ್ಮ 27ನೇ ವರ್ಷ ಪ್ರಾಯದಲ್ಲಿ ಅಕಾಲನಿಧನವನ್ನು ಹೊಂದಿದ ಬಗ್ಗೆ ಮಂಗಳೂರು ಪುರಜನರ ಸಭೆಯು ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ ಮತ್ತು ಮೃತರ ಕುಟುಂಬಕ್ಕೆ ತನ್ನ ಸಹಾನುಭೂತಿಯನ್ನು ತಿಳಿಸುತ್ತದೆ' ಎಂಬ ಠರಾವನ್ನು ಓದಿದ ನಂತರ ಕೆಲಹೊತ್ತು ಆತ್ಮಶಾಂತಿಗಾಗಿ ಪ್ರಾರ್ಥನೆ ನಡೆದು, ಸಭೆಯು ಮುಕ್ತಾಯವಾಯಿತು

ರಾತ್ರಿಶಾಲೆಯ ಆರಂಭೋತ್ಸವ

ಇಲ್ಲಿಯ ಫೆಲಿಕ್ಸ್ ಪೈ ಬಜಾರಿನಲ್ಲಿ ಕಳೆದ ಆದಿತ್ಯವಾರ ಸಂಜೆ 5.30ಕ್ಕೆ ಮುನ್ಸಿಪಲ್ ಕೌನ್ಸಿಲರಾದ ಶ್ರೀಮತಿ ಲೀಲಾಬಾಯಿ ಎಕಂಬರ ರಾಯರ ಅಧ್ಯಕ್ಷತೆಯಲ್ಲಿ ಬೀಡಿ ಲೇಬರ್ ಯೂನಿಯನಿನ ಪರವಾಗಿ ಒಂದು ರಾತ್ರಿಶಾಲೆಯ ಆರಂಭೋತ್ಸವವು ನಡೆಯಿತು. ಯೂನಿಯನಿನ ಅಧ್ಯಕ್ಷರಾದ ಶ್ರೀ. ಕೇಶವ ಕಾಮತರು ಅಧ್ಯಕ್ಷರ ಪರಿಚಯವನ್ನು ಸಭೆಗೆ ಮಾಡಿಕೊಟ್ಟ ಅನಂತರ, ಶ್ರೀ. ಕೆ. ಬಾಲಕೃಷ್ಣ ನಾಯರರು ಮಲೆಯಾಳದಲ್ಲಿ ಭಾಷಣಮಾಡಿದರು.

ತಾಲೂಕು ಸಮಾಚಾರ

ಉಡುಪಿ

ತಾ. ೮ನೇ ಸೋಮವಾರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ವಾಡಿಕೆಯಂತೆ ಭಜನೆ ಸಪ್ತಾಹದ ಮಂಗಲೋತ್ಸವ ಸಂಕರ್ತನೆಗಳು ಸಾಂಗವಾಗಿ ನೆರವೇರಿದವು.

ತಾ. ೮ಕ್ಕೆ ಉಡುಪಿ ತಾಲೂಕಿನ ಸೇಂದಿ ಅಂಗಡಿಗಳ ಹರಾಜು ಕುಂದಾಪುರ ಡಿವಿಜನಲ್ ಆಫೀಸರರವರಿಂದ ಜರಗಿಸಲ್ಪಟ್ಟಿತು. ಪ್ರತಿಸ್ಪರ್ಧೆಯು ಬಹಳವಾಗಿದ್ದು ಒಟ್ಟು ಆದಾಯ ಕಳೆದ ವರ್ಷಕ್ಕಿಂತ ರೂ ೧೦,೦೦೦ಕ್ಕೆ ಮಿಕ್ಕಿದೆಯೆನ್ನುವರು ಉಡುಪಿ ಶಹರಿನೊಳಗಿನ ಅಂಗಡಿಗೆಗಳೆಲ್ಲಾ ಹೆಚ್ಚಿಗೆಯಾಗಿರುತ್ತದೆ.

ಜಿಲ್ಲಾ ಕೊಂಗ್ರೆಸು ಕಮಿಟಿಯವರ ಅಪೇಕ್ಷೆಯಂತೆ ಇದೇ ತಾ ೧೪ಕ್ಕೆ ಉಡುಪಿ ತಾಲೂಕಿನಲ್ಲೆಲ್ಲ ಚೀನಾ ದಿನಾಚರಣೆಯನ್ನು ಮುಖ್ಯತಃ ಚೀನಕ್ಕೆ ವೈದ್ಯಕೀಯ ಸಹಾಯ ಕಳುಹುವರೆ ನಿಧಿ ಸಂಗ್ರಹ ಮಾಡಬೇಕಾಗಿದೆಯೆಂದು ತಾಲೂಕು ಕಮಿಟಿಯ ಕಾರ್ಯದರ್ಶಿಯವರು ಮಹಾಜನರಲ್ಲಿ ಬಿನ್ನವಿಸುತ್ತಾರೆ

ಮಂಜೇಶ್ವರ

ಮಂಜೇಶ್ವರದ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ನಡೆದು ಬರುತ್ತಿರುವ ಶ್ರೀ ದರ್ಶನೋತ್ಸವದ ಪಾತ್ರಿಯು ಕೆಲವು ಸಮಯದ ಹಿಂದೆ ಸ್ವರ್ಗಸ್ಥರಾಗಿರುವುದರಿಂದ ಪುನಃ ಶ್ರೀ ದರ್ಶನೋತ್ಸವವನ್ನು ಆರಂಭಿಸುವ ಬಗ್ಗೆ ಮಂಜೇಶ್ವರ, ಬಂಗ್ರಮಂಜೇಶ್ವರ ಮತ್ತು ಉದ್ಯಾವರ ಗ್ರಾಮನಿವಾಸಿಗಳು ಇದೇ ತಾರೀಕು 7—8 1938ರಲ್ಲು ದೇವಸ್ಥಾನದಲ್ಲಿ ಶ್ರೀ ವೈ. ಕೆ. ರಾಮಚಂದ್ರ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಕೂಡಿದ ಸಮಯದಲ್ಲಿ ಶ್ರೀ ದರ್ಶನೋತ್ಸವದ ಪ್ರಾರ್ಥನೆಯನ್ನು ಇದೇ ತಾ 16—8—1938ನೇ ಮಂಗಳವಾರ ಜರಗಿಸುವುದಾಗಿ ಸರ್ವಾನುಮತದಿಂದ ನಿರ್ಣಯ ಮಾಡಲಾಯಿತೆಂದು ತಿಳಿದುಬರುತ್ತದೆ

ಶ್ರೀ ಬಿ ಎಸ್ ಬಾಸ್ಕರ ಭಟ್ಟರು, ಕನ್ನಡದಲ್ಲಿ ಪ್ರಥಮತಃ ಪ್ರಕಟವಾದ ಭಾಷಣಪತ್ರಿಕೆ, ಅಧ್ಯಕ್ಷರು ತಮ್ಮ ಸ್ವಂತ ಭಾಷಣ ಪತ್ರದ ಕೊನೆಯಲ್ಲಿ ಶ್ರೀ. ಜನಾರ್ದನಸ್ವಾಮಿಗಳವರ, ರಂದನಾನರ್ತನೆಯನ್ನು ಮಾಡಿ ನಾ ಳೆಯ ರಾತ್ರೆ 8 30ರಿಂದ 9 30 ರ ತನಕ ಯಾಕೆ ಮರಳಿ ಆಫೀಸಿನಲ್ಲಿ ನಡೆಸಲ್ಪಡುವುದೆಂದು ತಿಳಿಸಿದರು.

ನೋಟೀಸು

ದಿ ವಿಜಯ ಬೇಂಕ್ ಲಿಮಿಟೆಡ್, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡೆದ ಸಾಲಗಳನ್ನು ಮುಧ್ಧಾವಾದ ಮುಂದೆ ಒತ್ತಿ ಸಹಾ ಹೇಳ್ಲು ಸಮಯ ಕೊಡದೆ ಬಾಕಿ ನಾಶಿಕೊಂಡಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ — ಸದ್ರಿ ನಗಗಳನ್ನು ತಾ 27—8 38ನೇ ಶನಿವಾರ ಮಧ್ಯಾಹ್ನ ಗಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಲಕ ವಿಕ್ರಯಿಸಲಾಗುವುದು ಏಲಂ ಅದೇ ದಿವಸ ಸಪೂರ್ಣ ಆಗದೆ ಇದ್ದರೆ ಬೇಂಕಿಂಗ್ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು ತಿಳಿದಿರುವುದು

ಸಾಲದ ನಂಬ್ರ 408/36 ತಟ್ಟದ ಮೂಲ್ಯ ಜಾನು ಮೂಲ್ಯನ ಅಳಿಯ, ಕೊಡಿಯಾಲ್‌ಬೈಲು ಗ್ರಾಮದ ಒಟ್ಟೆಗುಡ್ಡೆ, ಪೋಸ್ಟು ಬಿಜೈ ಬಡ್ಡಿ ಬಾಕಿ ಆದ ತಾ. 18—5—37. ಅಸ್ಲು ರೂ 25—0—0

ನಂಬ್ರ 502/36 ಗುಡ್ಡಪ್ಪ ನಾಯ್ಕ, ರುಕ್ಕ ನಾಯ್ಕರ ಮಗ, ಮಲ್ಲಾರು ಗ್ರಾಮ, ಪೋಸ್ಟು ಕಾಪು ಬಡ್ಡಿ ಬಾಕಿ ಆದ ತಾ. 22—3—37.

ಅಸ್ಲು ರೂ. 10—0 0.

ನಂಬ್ರ 747/36 ನಾರಾಯಣ ದೇವಾಡಿಗ, ಬೊಗ್ರ ದೇವಾಡಿಗನ ಅಳಿಯ ಕದ್ರಿ, ಮಂಗಳೂರು, ಬಡ್ಡಿ ಬಾಕಿ ಆದ ತಾ 2—6—37 ಅಸ್ಲು ರೂ. 30—0—0

Vijaya Bank Ltd Mangalore Dated, 10—8—'38. } K Gopalkrishna Shetty, Secretary

ಕಾರ್ಕಳ.

ಪೆರ್ಡೂಟೆಯ ಬೋರ್ಡು ಎಲಿಮೆಂಟರಿ ಶಾಲೆಯನ್ನು ತಳ್ಳಾರು ರಸ್ತೆಗೆ ವರ್ಗಾಯಿಸಿದರಿಂದ, ಮೊದಲು ಅಲ್ಲಿದ್ದ ಹರಿಜನ ಪಾಠಶಾಲೆಯನ್ನು ಕಾರ್ಕಳ ಹರಿಜನ ಸೇವಾಸಂಘದವರು ಅನಾವಶ್ಯಕವೆಂದು ಮುಚ್ಚಿರುವರು ಪೆರ್ಡೂಟೆ ಶಾಲೆಯಲ್ಲಿ 60 ಮಂದಿ ಇತರ ಮಕ್ಕಳೊಂದಿಗೆ 24 ಮಂದಿ ಹರಿಜನ ಬಾಲಕರೂ ಕೂಡಿ ಶಿಕ್ಷಣ ಪಡೆಯುತ್ತಿರುವರು. ತಾ 29—7—38ರ ದಿನ ಈ ಮಕ್ಕಳಿಗೆ ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾಕ್ಟರ್ ಕೆ. ವಿಟ್ಟಲ ಶೆಟ್ಟಿಯವರ ಮೂಲಕ ಸ್ಥಳೀಯ ಹರಿಜನ ಸೇವಾ ಸಂಘವು ವಸ್ತ್ರ, ಉಡಿಗೆ ಸ್ಲೇಟು ಪುಸ್ತಕಗಳನ್ನು ಮಾರ್ಧ ಒದಗಿಸಿ ಕೊಟ್ಟಿತು

ಕಾರ್ಕಳ ಪಂಚಾಯತ ಬೋರ್ಡು ಸಭೆಯು ತಾ 30—7—1938ರ ದಿನ ಬೋರ್ಡಿನ ಆಫೀಸಿನಲ್ಲಿ ಜನಾಬ್ ಯಚ್. ಯಸ್ ಹುಸ್ಸೇನ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೈ ಶ್ರೀನಿವಾಸ ಹೆಗ್ಡೆಯವರು ಉಪಾಧ್ಯಕ್ಷರಾಗಿ ಸರ್ವಾನುಮತಿಯಿಂದ ಆರಿಸಲ್ಪಟ್ಟರು ಮಾತ್ರವಲ್ಲದೆ, ಬೋರ್ಡಿಗೆ ಒಂದು ಕ್ರಿಯಾಶಿಕ್ಷಣ ಯೋಜನೆಯನ್ನು ತಯ್ಯಾರಿಸಲಿಕ್ಕೆ ಅಧ್ಯಕ್ಷ ಉಪಾಧ್ಯಕ್ಷ ಮತ್ತು ಶ್ರೀಗಳಾದ ಭವಾನಿಶಂಕರ ರಾವ್, ಜನಾರ್ಧನ ಕಾಮತ, ಪಾಂಡುರಂಗ ಪೈ ಮತ್ತು ಕಟಪಾಡಿ ಶ್ರೀನಿವಾಸ ಶೆಣೈಯವರಿಂದೊಡಗೂಡಿದ ಒಂದು ಉಪಸಮಿತಿಯು ರಚಿಸಲಾಯಿತು

ಮಂಗಳೂರಲ್ಲಿ ಸಂಗೀತಾಭ್ಯಾಸಮಾಡಿ ಈಗ ಮಂಗಳೂರಲ್ಲಿ ಅದರ ಪ್ರಚಾರ ಮಾಡುತ್ತಿರುವ ಕಾರ್ಕಳ ಮಂಜುನಾಥ ಪ್ರಭುಗಳವರ ತಾ. 31—7—1938ರ ದಿನ ಸಾಯಂಕಾಲ ಹಿಂದೂ ಬಾಲಿಕಾ ಪಾಠಶಾಲೆಯ ಕಳಿಕಟ್ಟದಲ್ಲಿ ಶ್ರೀ ಕೆ ಸೀತಾರಾಮ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಒಂದು ಸಂಗೀತ ಕಚೇರಿಯನ್ನು ನಡೆಸಿದರು. ಅನೇಕರೂ ಸಂಗೀತ ಪ್ರೇಮಿಗಳು ಬಂದು ಪ್ರೋತ್ಸಾಹಿಸಿದರು.

ನೋಟೀಸು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

O P No 106/193

1 ವೆಂಕಮ್ಮ ಪೊಡುಕೋಳ ಗೋವಿಂದ ಭಟ್ಟ ವಿಧವೆ 2 ಕೃಷ್ಣ 3 ಪೆಕಲು ಹಾಳದ ಗಂಡು ಮಗು ಸದ್ರಿ ಗೋವಿಂದಭಟ್ಟ ಮಕ್ಕಳ ಮಕ್ಕಳು ಕ್ಷೇತ್ರ ಚಿರತಸ್ಸಿ ತಾಯಿ 1ನೇ ಅರ್ಜಿದಾರಳು 4 ತಿರುಮಲ ರಾಯಣ ಭಟ್ಟ ಗೋವಿಂದ ಭಟ್ಟ ಮಗ 5 ಶಿವರಾಮಭಟ್ಟ, 6 ಸುಬ್ರಾಯ ಭಟ್ಟ 7 ವೆಂಕಟ್ರಮಣ ಭಟ್ಟ 8 ನರಸಿಂಹ ಭಟ್ಟ 9 ಕೃಷ್ಣ 4ನೇ ಅರ್ಜಿದಾರನ ಮಕ್ಕಳು. 9ನೇಯವ ಮಗ್ನನ ಕ್ಷೇತ್ರ ತಂದೆ 1ನೇ ಅರ್ಜಿದಾರ ಬೇಳ ಗ್ರಾಮದ ಪೊಡುಕೋಳ— 10 ಮಹಾಬಲಭಟ್ಟ ಕೆಳಗಿನ ಸುಬ್ರಾಯಭಟ್ಟ ಮಗ ಬದ್ಯಾರು ಗ್ರಾಮದ ಕಿಂಗಾರು. } ಅರ್ಜಿದಾರರು

ಸದ್ರಿ ಅರ್ಜಿದಾರರ ಕಡೆಯಿಂದ ತಿಳಿಸುವದೇನೆಂದರೆ —

1ನೇ ಅರ್ಜಿದಾರಳ ಗಂಡ 2, 3 ಯವರ ತಂದೆ, 4ನೇಯವನ ಮಗ 5ರಿಂದ 9ನೇಯವರ ಸಹೋದರ ವ್ಯಂಕಪಟ್ಟ ಪೊಡುಕೋಳ ಗೋವಿಂದ ಭಟ್ಟನಿಗೆ 'ಗಾರ್ಡಿಯನ್ ಒಫ್ ಇಂಡಿಯಾ ಲ್ಯಾಫ್ ಎಸ್ಯೂರೆನ್ಸ ಕಂಪನಿ ಲಿಮಿಟೆಡ್ ಮದ್ರಾಸು' ಪೋಲಿಸಿ ನಂ 7468ನೇ ಪ್ರಕಾರ ತಿಕ್ಕಕ್ಕೆ ಬರುವ ರೂಪಾ 750/- ವಸೂಲುಮಾಡುವದರ ಬಗ್ಗೆ (2-3 ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳಿ ಸಕ್ಸೆಸ್ಸನ್ ಸೆರ್ಟಿಫಿಕೇಟು ಕೊಡಿಸಬೇಕೆಂದು) ದಾಖಲುಮಾಡಿದ ಅರ್ಜಿಯು ತಾ. 28-8-'38 ಇಟ್ಟಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರುಮಾಡಿಕೊಳ್ಳಬಹುದು ಎಂತ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು, ತಾ. 5-8-38. } (Sd.) C. V. Kamati Advocate for Petitione

ಫೆಡರೇಶನು — ಅಕ್ಷು ಹಾಗೇ ಇರಲಿ!

ಒಂದೊಂದ್ದೇ ಸಂದರ್ಭ ನೋಡಿ, ಹೊಸ ತಿದ್ದುಪಡಿ ಸೂಚಿಸಬಹುದು. ಕೊಂಗ್ರೆಸ್ ಮುಖಂಡರ ಅಭಿಪ್ರಾಯ ಪಡೆಯದೆ ಮುಂದರಿಯಬಾರದು. ಭಾರತೀಯರಿಗೆ ಸಮಾನತೆಯಿಲ್ಲದೆ ಹಿಂದೀ ಸುಧಾರಣೆಗಳು ಮುಂದರಿಯವು.

ಮುಂಬಯಿ ಗಾರ್ಡಿಯನ ಪತ್ರಿಕೆಯಲ್ಲಿ ಕಗ್ಗಲ್ಲದ ವಿಷಯವಾದ ಫೆಡರೇಶನ ಬಗ್ಗೆ ಇಂಗ್ಲೆಂಡಿನ ಭಾರತ ಮಂತ್ರಿ ಭಾವನೆಯನ್ನು ಕುರಿತಾಗಿ ಭಾಷಣಗಳೂ ಚರ್ಚೆಗಳೂ ತುಂಬಾ ಕೇಳಬರುತ್ತವೆ. ಅಧಿಕಾರಿಗಳು ಏನೇನೂ ಅಂತರಂಗದಲ್ಲಿಯೂ ವಿಮರ್ಶಿಸುತ್ತಿರುವಂತೆ ಭಾಸವಾಗುತ್ತದೆ. ಹೊರತು, ಅವರ ಭಾಷಣಗಳು ನಾಳಿನ ಸುಧಾರಣೆಗಳಲ್ಲಿ ತಿದ್ದುಪಾಡುಗಳು ಇರುವುವಾದರೆ ಅವು ಯಾವುವೆಂಬುದು ಸಹ ತಿಳಿಯಗೊಡುವಂಥವಲ್ಲ. ಆದರೂ ಬಹಳ ವಿಮರ್ಶೆ ನಡೆಯುತ್ತಲೂ, ಅದರ ಫಲವಾಗಿ ಸತ್ಪರಿಣಾಮಗಳೂ ಆಗಲಿವೆ ಎನ್ನಬೇಕಾಗಿದೆ.

ಭಾರತದ ಸಮಸ್ಯೆಯ ರೂಪರೇಖೆಗಳೂ ಮಾತ್ರ ಬ್ರಿಟಿಷರ ಮುಂದಿವೆ. ನಿಜವಾಗಿ ಈ ಸಮಸ್ಯೆ ಬ್ರಿಟಿಷರ ಮುಂದೆ ಕಳೆದ ಮಹಾಯುದ್ಧದ ನಂತರ ನಿಂತೇ ಇದೆಯೆನ್ನಬೇಕು. ಭಾರತೀಯರಲ್ಲಿ ರಾಷ್ಟ್ರೀಯಭಾವವು ಎಷ್ಟರದಿದೆ, ಇಂಥ ರಾಷ್ಟ್ರೀಯಭಾವನೆಯು ತೃಪ್ತಿಗಾಗಿ ಯಾವ ಬಗೆಯಲ್ಲಿ ಸುಧಾರಣೆಗಳಾಗಬೇಕು, ತೃಪ್ತಿಗಾಗಿ ಸುಧಾರಣೆಗಳಾಗದೆ ಹೋದರೆ ಎಷ್ಟಕ್ಕೆ ಹಿಂದೆ ಬೀಳುವೆವು ಎಂಬಿಷ್ಟು ಸದ್ಯದ ವಿಮರ್ಶೆಯ ಭಾಗಗಳು.

ಬ್ರಿಟಿಷ ಸರಕಾರವೂ ಕೊಂಗ್ರೆಸೂ ಈ ಇತ್ಯರ್ಥವಾಗುವ ಹಾಗೆ ಬಹಳ 'ಸಿ' ಗುಂಡು' (ಮಾತಿನವು) ಚೆಲ್ಲಿವೆ. ಸ್ವಲ್ಪ ಹಾನಿಯೂ ಉಂಟಾಗಿದೆ. ಹಾಗೆಂದು ಶಾಂತಿ ಸ್ಥಾಪನೆಯಾಗಲಾರದು ಎನ್ನುವ ಪ್ರವಾದಿಗಳು ಯಾರೂ ಇಲ್ಲ. ಲೋರ್ಡ್ ಜೆಟ್ಲೆಂಡರೂ ಕೊಂಗ್ರೆಸು ಮುಂದಾಳುಗಳೂ ಪರಸ್ಪರವಾಗಿ ಚುಚ್ಚುವ ಮಾತುಗಳನ್ನು ಆಡಿಕೊಂಡಿರುವರಾದರೂ, (ಆಗ ಆಕ್ಟಿನ ಪ್ರಥಮ ಭಾಗವು ಮಾತ್ರ ಜ್ಯಾರಿಗೆ ಬರುವುದರಲ್ಲಿತ್ತು) ಕೊನೆಗೆ ಉಭಯ ಪಕ್ಷಗಳೂ ಒಂದು ಬಗೆಯಲ್ಲಿ ಒಪ್ಪಿಕೊಂಡು ಮುಂದರಿದಿರುವ ಹಾಗೆಯೆ,—ಆಕ್ಟಿನ ದ್ವಿತೀಯ ಭಾಗವನ್ನು ಕುರಿತು ಈಗ ಅದೇ ರೀತಿ ಮಾತಿಗೆ ಮಾತು ಬರುತ್ತಲೇ ಇದೆ ಎನ್ನಬಹುದು.

ಪ್ರಾಂತಿಕ ಮಂತ್ರಿಕೂಟಗಳ್ಳು ಎಷ್ಟು ವಿಚಕ್ಷಣತೆಯಿಂದ ಆಡಳಿತವನ್ನು ನಡೆಸಲಿರುವರೆಂಬುದನ್ನು ಆಕ್ಟಿನ ರಚನಾಕಾಲದಲ್ಲಿಯೆ ಪಾರ್ಲಿಮೆಂಟು ತಿಳಿದುಕೊಂಡಿದ್ದರೆ, ಆಕ್ಟಿನ ಸ್ವರೂಪವೇ ಬೇರೆಯಾಗುತ್ತಿತ್ತು.

ಫೆಡರೇಶನಿನ ವಿಚಾರದಲ್ಲಿ, ಕೆಲಗಡೆ ತಿದ್ದುಪಡಿಗೆ ಅಗತ್ಯವಿದೆ ಎಂಬುದನ್ನು ಬ್ರಿಟಿಷ ಸರಕಾರವೂ ಒಪ್ಪಿಕೊಳ್ಳುವುದು ಅಗತ್ಯವಾಗಿದೆ. ಅತಿ ಆಕ್ಷೇಪಕರವಾಗಿರುವ ಹಲವು ಸೂತ್ರಗಳಿರುವ ಕಾರಣ, ಅವನ್ನು ತಿದ್ದಿಕೊಂಡು ಮುಂದರಿಯದಿದ್ದಲ್ಲಿ ಪುನಃ ಕಳೆದ ವರ್ಷದ ರೀತಿಯ ವಾದವಿವಾದಗಳು ಯಾವಾಗಲೂ ಆಸ್ಪದವಿರುವುದೆಂಬುದನ್ನು ಮರೆಯಬಾರದು.

ಪಾರ್ಲಿಮೆಂಟು ಈಗಲೇ ಆಕ್ಟನ್ನು ತಿದ್ದಬೇಕಾಗಿ ಕೇಳುವ ಅಗತ್ಯವಿಲ್ಲವೆಂದು ಹೇಳಬಹುದು. ಪದ್ಧತಿಗಳನ್ನೂ ಮೇಲ್ಪಂಕ್ತಿಗಳನ್ನೂ ಬೇರೆ ರೀತಿಯಾಗಿ ಹಾಕಿಕೊಡಬಹುದು. ಆದರೆ ಹಿಂದೀ ಮುಖಂಡರನ್ನು ಮುಖ್ಯವಾಗಿ ಕೊಂಗ್ರೆಸ್ ಧುರೀಣರಲ್ಲಿ ಅಗತ್ಯವಾಗಿ ಅಭಿಪ್ರಾಯ ಕೊಡುವಂತೆ ಕೇಳಿಕೊಳ್ಳಲೇ ಬೇಕಾಗಿದೆ.

ಧುರೀಣರ ವಿಮರ್ಶೆ ಕೇಳುವೆವು ಎಂದು ಲೋರ್ಡ್ ಜೇಟ್ಲೆಂಡರು ಹೇಳಿರುವುದು ಸಾಲದು. ಭಾರತೀಯ ರಾಷ್ಟ್ರೀಯ ಪಕ್ಷವು ಬ್ರಿಟಿಷ ರಾಷ್ಟ್ರೀಯ ಪಕ್ಷದ ಸಮಾನತೆಗೆ ಏರಿದೆ ಎಂಬುದನ್ನು ಬ್ರಿಟಿಷ್ ಅಧಿಕಾರಿಗಳು ತಿಳಿದುಕೊಳ್ಳಲೇ ಬೇಕಾಗಿದೆ. ಈ ಸಮಾನತೆಯನ್ನು ಆಧರಿಸಿಯೆ ಮುಂದಣ ಸುಧಾರಣೆಗಳನ್ನು ರೂಪಿಸಿ ತರಬೇಕಾಗಿದೆ.

'ಸ್ವತಂತ್ರಭಾರತದ ಅಧಿಷ್ಠಾನವು ಅಷ್ಟು ದೂರವಲ್ಲವೆಂಬುದನ್ನು ಬ್ರಿಟಿಷ ಮುಖಂಡರು ತಿಳಿದೇ ಇರುವರಾಗಿ ಭಾರತೀಯ ಮುಖಂಡರೂ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಆದರೆ, ಈ 'ಸ್ವಾತಂತ್ರ್ಯವ'ನ್ನು ಹೇಗೆ ಸಾಧಿಸಿಕೊಳ್ಳುವರು, ಸ್ಥಾಪಿಸುವರು ಎಂಬ ವಿಷಯದಲ್ಲಿ ಮಾತ್ರ ಬಿನ್ನಾಭಿಪ್ರಾಯಗಳಿವೆ.

ನಾಳೆ 'ಕೊನ್ಸ್ಟಿಟ್ಯೂವೆಂಟ್' ಎಸೆಂಬ್ಲಿಯಾಗದ ಹಾಗೆ ನೋಡಿಕೊಳ್ಳಲು ಬ್ರಿಟಿಷರಿಗೆ ಎರಡೇ ಉಪಾಯಗಳಿವೆ. ಬ್ರಿಟಿಷ್ ಇಂಡಿಯದೊಳಗಣ ಪ್ರಾಯಸ್ಥರಿಗೆಲ್ಲಾ ವೋಟಿನ ಅಧಿಕಾರವನ್ನು ಕೊಟ್ಟಿರುವಾಗ, ಸ್ಥಳೀಯ ರಾಜ್ಯಗಳಲ್ಲಿನ ಪ್ರಜಾವರ್ಗದ ಪ್ರಾತಿನಿಧ್ಯವು ಸರಿಯಾಗಿ ಸಿಗುವಂತೇನು ಮಾಡಬೇಕೆಂಬದನ್ನು ತಿಳಿದುಕೊಳ್ಳಬೇಕು. ಕೊನ್ಸ್ಟಿಟ್ಯೂವೆಂಟ್ ಎಸೆಂಬ್ಲಿಯ ಚುನಾವಣೆಯಾದ ಬಳಿಕ, ಅದು ಸರ್ವಸಮ್ಮತವಾದ ರಾಜ್ಯಭಾರಕ್ರಮವನ್ನು ಸಿದ್ಧಮಾಡಿಕೊಡದೆ ವ್ಯರ್ಥವಾಗಬಹುದೆಂಬುದನ್ನೂ ಮರೆಯಬಾರದು.

ಬ್ರಿಟಿಷರು ಮಾಡಿಕೊಂಡು ತನ್ನ ಮೇಲೆ ಹೋರಿಸಿದುದೆಂಬ ಈ ಫೆಡರೇಶನಿನ ವಿರೋಧಿಯಾದ ಎಂಥ ಭಾರತೀಯನಾದರೂ, ಕೊನ್ಸ್ಟಿಟ್ಯೂವೆಂಟ ಎಸೆಂಬ್ಲಿಯನ್ನು ಕರೆದು ಅದರ ಮೂಲಕ ಎಲ್ಲವೂ ಸಾಧ್ಯವಾದೀತೆಂದು ವಾಸ್ತವವಾಗಿ ನಂಬಿರುವನೇ? ಹಾಗ ನಂಬಿಲ್ಲವೆಂಬುದು ನಿಜವಾದರೂ, ಅದರಿಂದ ಫೆಡರೇಶನಿನ ಮೇಲೆ ಆತನಿಗೆ ವಿಶ್ವಾಸವಿದೆಯೆಂದು ನಂಬಲೂ ಆದ ಆಸ್ಪದವೂ ತೋರುವುದಿಲ್ಲ.

ಕೊಂಗ್ರೆಸಿಗೆ ಲೀಗಿನ 'ಜವಾಬು'

(ಜವಾಬು ಹೀಗಿರ ಬಹುದಾಗಿ ಯುನೈಟೆಡ್ ಪ್ರೆಸ್ ವಾರ್ತೆ)

ಮಹಾತ್ಮಾಜೀಯವರು, ಈಗಲೇ ಆಗಿ ಹೋದ ಸಂಭಾಷಣೆಗಳ ಪೀಠಿಕೆ ಹಾಕುವಾಗ, ಲೀಗಿನೊಡನೆ ಸಂಭಾಷಣೆ ಪ್ರಾರಂಭಿಸಿದ್ದುದು, ಹಿಂದೀ ಮುಸ್ಲಿಮರ ಪರವಾಗಿ ಲೀಗು ಪ್ರತಿನಿಧಿ ಸಂಸ್ಥೆಯಾಗಿ ಮಾತು ಕತೆ ನಡೆಸಲು ಯೋಗ್ಯವಾದುದೆಂದೇ ಅಭಿಪ್ರಾಯವನ್ನು ರುಜುಪಡಿಸುವುದು. ಜಮೂಯಾತ ಉಲ್ ಉಲೇಮಾವಾಗಲೀ, ಮಜ್ಲಿಸೇ ಅಹರಾರ್ ಆಗಲಿ ಲೀಗಿನ ಸರಿ ತೂಕಕ್ಕೆ ಬರಲಾರವು, ಏಕೆಂದರೆ, ಮೊದಲನೆ ಸಂಸ್ಥೆಯು ಮುಸ್ಲಿಮ್ ಲೀಗಿನ ಉಮೇದುವಾರರನ್ನು ಕಳೆದ ಚುನಾವಣೆಗಳಲ್ಲಿ ಬೆಂಬಲ ಕೊಟ್ಟಿದೆಯಾದರೂ, ಮುಸ್ಲಿಮ್ ಧರ್ಮಪ್ರವರ್ತಕರು ಮಾತ್ರ ಇರುವರು, ಎರಡನೆಯದು ಪಂಜಾಬಿನದು ಮಾತ್ರವಾಗಿದ್ದು, ಅಲ್ಲಿನ ಎಸೆಂಬ್ಲಿಯ ಇಬ್ಬರೇ ಮಾತ್ರ ಮೆಂಬರರು ಅದರ ಸದಸ್ಯರಾಗಿದ್ದಾರೆ.

ಗಡಿನಾಡಿನದು ಬೇರೆ ಮಂತ್ರಿ ಕೂಟ, ಕೊಂಗ್ರೆಸಿನವರದೇ ಅಲ್ಲಿ ಮೇಲ್ಗಾಟ, ಆದಾಗೂ ಲೀಗೂ ಅಲ್ಲಿನ ಮುಸ್ಲಿಮರ ಪ್ರತಿನಿಧಿಯಾಗಿ ತಾನೇ ಇಲ್ಲವೆಂದಿಲ್ಲವಷ್ಟೆ. ಮೊನ್ನೆ ಹಜಾರಾ ಜಿಲ್ಲಾ ಚುನಾವಣೆಯಲ್ಲಿ ಲೀಗಿನ ಉಮೇದ್ವಾರರೇ ಗೆದ್ದು ಬರಲಿಲ್ಲವೆ?

ಸಿಪಿನೌಡಲ್ಲಾದ ಕರಾರಿನ ಕಾಲದಲ್ಲಿ, ಕೊಂಗ್ರೆಸು ಲೀಗಿನೊಡನೆ ಅದು ಮುಸ್ಲಿಮರ ಪ್ರತಿನಿಧಿ ಸಂಸ್ಥೆಯೆಂದೇ ಕರಾರು ಮಾಡಿದ್ದಿಲ್ಲವೆ? ಆಗ ಕೊಂಗ್ರೆಸಿನಲ್ಲಿದ್ದ ಮುಸ್ಲಿಮ ಮುಖಂಡರಲ್ಲಿ ಶ್ರೀ ಜಿನ್ನಾರವರೂ, ಡಾ। ಮಜರುಲ್ ಹುಕ್, ಹಸನ ಇಮಾಮರು ಮೊದಲಾದವರು ಅದೊಂದು ಗೌರವದ ಪಡವಿಯೆಂದೇ ಗಣಿಸಿ ಕರಾರು ಉಂಟಾಗುವಂತೆ ಪ್ರಯತ್ನಿಸಲಿಲ್ಲವೆ? ಬೇರೆ ಬೇರೆ ಪ್ರಾಂತ್ಯಗಳಲ್ಲಿ ಜರಗಿದ ಉಪಚುನಾವಣೆಗಳಲ್ಲಿ—ಬಿಜನೋರು ಮತ್ತು ಗಡಿನಾಡಿನ ಎರಡು ಕಡೆ ಹೊರತು ಮಿಕ್ಕೆಲ್ಲ ಸ್ಥಾನಗಳು ಲೀಗಿನ ಉಮೇದವಾರರಿಗೇ ದೊರೆತಿವೆ.

ಆದುದರಿಂದ ಮುಸ್ಲಿಮರ ಮುಖಸಂಸ್ಥೆಯಾಗಿ ಲೀಗ್ ಒಂದೇ ಇದೆ, ಈ ತತ್ವವನ್ನು ಅದು ಎಂದೂ ಪಲ್ಲಟಗೊಳಿಸಲು ಒಪ್ಪದು.

ಎರಡನೆದಾಗಿ, ಕೊಂಗ್ರೆಸು ನೇಮಕ ಮಾಡುವ ಸಬ್ ಕಮಿಟಿಯಲ್ಲಿ ಹಿಂದುಗಳನ್ನೆ ನಮೂದಿಸ ತಕ್ಕದ್ದು ಹೊರತು, ಮುಸ್ಲಿಮರನ್ನಲ್ಲ. ಲಖನೌ ಕರಾರಿನ ಕಾಲದಲ್ಲಿ, ಅಂಥದೇ ಒಂದು ಕಮಿಟಿಗೆ ಹಿಂದುಗಳನ್ನು ಮಾತ್ರ ಕೊಂಗ್ರೆಸು ನೇಮಿಸಿತ್ತು. ಕೊಂಗ್ರೆಸು ಮುಸ್ಲಿಮರನ್ನೂ ಈ ಕಮಿಟಿಗೆ ನೇಮಿಸಿದಲ್ಲಿ, ಹಿಂದುಗಳ ಸಂಖ್ಯೆ ಕಡಿಮೆಯಾಗಿತ್ತೆಂದು, ಉಂಟಾಗಬಹುದಾದ ಕರಾರನ್ನು ಹಿಂದುಗಳೇ ತಿರಸ್ಕರಿಸಬಹುದಾಗಿದೆ.

ಕೊಂಗ್ರೆಸು ಈ ವಿಚಾರಗಳನ್ನು ಮನಸ್ಸಿಗೆ ತಂದುಕೊಂಡು ಪುನಃ ಆಲೋಚಿಸಲಿ. ಕೊನೆಯ ಮಾತು ಮುಂದಿರಲಿ.

ಬಂಗಾಳದ ಮಂತ್ರಿಮಂಡಲ.

ಉತ್ಕಂಠಿತವಾದ ಕೋಲಾಹಲ:

ಬಂಗಾಳದ ಮಂತ್ರಿಗಳಲ್ಲಿ ಯಾವ ಭರವಸೆಯೂ ಇಲ್ಲವೆಂದು ವಿಮರ್ಶಿಸಿ ನಿರ್ಧರಿಸಲು ಹತ್ತು ಸೂಚನೆಗಳು, ಹತ್ತು ಮಂತ್ರಿಗಳನ್ನು ಕುರಿತು, ತಾ ೮ರಲ್ಲಿ ಎಸೆಂಬ್ಲಿಯಲ್ಲಿ ಬಂದಿವೆ.

ಒಟ್ಟು ಮೆಂಬರರ ಸಂಖ್ಯೆ 246ಯಲ್ಲಿ ನಾಲ್ಕೈದು ಮಂದಿ ಗೈರಹಾಜರಾಗಬಹುದು. ಎಂದರೆ 241 ಮಂದಿ ಯಾವುದೊಂದು ಸೂಚನೆಯ ನಿಷ್ಕರ್ಷೆಯ ಕಾಲದಲ್ಲಿ ಇರುವ ಕಾರಣ ಕೊಂಗ್ರೆಸು ಪಕ್ಷವು ತನಗೆ 120 ವೋಟುಗಳು ದೊರೆವುದು ಖಂಡಿತವೆಂದು ನಂಬಿರುವ ಕಾರಣ ಈ ಸೂಚನೆಗಳ ನಿರ್ಧಾರದಂತೆ ಮಂತ್ರಿ ಮಂಡಲದ ಗತಿಯಾಗುವುದು.

ಯುರೋಪೀಯ ಮೆಂಬರರು ಸರಕಾರದ ಕಡೆಯವರಾಗಿಯೇ ಇರುವರು. ಅವರವರು ಯುಕ್ತ ಕಂಡಂತೆ ವೋಟುಕೊಡುವುದೂ ಇಲ್ಲ. ತಟಸ್ಥರೂ ಅಲ್ಲ ಎಂದು ತೋರುವುದು.

ತಾ॥8ರಲ್ಲಿ 4 45ಕ್ಕೆ ಅಧಿವೇಶನವು ಪ್ರಾರಂಭಿಸಿತು. ಮೆಂಬರರನ್ನು ಪ್ರೇರೇಪಿಸಿ ಆ ಪಕ್ಷ ಈ ಪಕ್ಷವೆಂದು ಸೆಳೆಯುತಿದ್ದಾರೆ.

ಎಸೆಂಬ್ಲಿ ಮಂದಿರದ ಹೊರ ಅಂಗಳದಲ್ಲಿ ಬಹಳ ಮಂದಿ ವಿದ್ಯಾರ್ಥಿಗಳೇ ಮೊದಲಾದವರು ಒಂದುಗೂಡಿ, ಹುಕ್ ಮಂತ್ರಿಮಂಡಲಕ್ಕೆ ಜಯವಾಗಲಿ, ಕೊಂಗ್ರೆಸನ್ನು ನಿಪಾತಮಾಡಿರಿ ಎಂದು ಕೂಗುತ್ತಾ ಇದ್ದರು. 50000 ಜನರ ಮೆರವಣಿಗೆಗಳು ಅತ್ತಿತ್ತ ಹೊರಟ ಮೆರೆದು, ಪೋಲೀಸರು ಶಾಂತಿಯಿಂದ ಎಲ್ಲರೂ ಚಲಿಸುತ್ತಿರುವುದನ್ನು ನೋಡಿದರು.

ತಾ 7ರಲ್ಲೀ ಸುಮಾರು 80 ಮಂದಿ ಸದಸ್ಯರು ತಮ್ಮ ಹಾಸಿಗೆಗಳೊಡನೆ ಒಂದು ಎಸೆಂಬ್ಲಿ ಮಂದಿರದಲ್ಲಿ ಮಲಗಿದ್ದರು. 100—150 ಮಂದಿ ಅಧಿವೇಶನದ ಕಾಲದಲ್ಲಿ ಹಾಜರಾಗಿರಲು ಅಪೇಕ್ಷಿಸಿ ಆಸನಗಳನ್ನು ಅಪೇಕ್ಷಿಸಿರುವರು.

ತಾ 7ರಲ್ಲಿ, ಎಷ್ಟೊ ಮಂದಿ ಸದಸ್ಯರ ಮನೆಗಳ ಬಳಿ ನಾನಾ ತಂಟೆ ಮಾಡುವ ಕೇಡಿ ಗುಂಪುಗಳು ಸುಳಿಯುತ್ತಿದ್ದು, ಮಂತ್ರಿಪರುದ್ಧರ ಧ್ವಂಸಮಾಡುವ ಪ್ರಯತ್ನಗಳು ನಡೆದುವು. ಹುಕ್ ಮಂತ್ರಿಗಳ ಪಕ್ಷಪಿರುದ್ಧದವರು ಜೀವಕ್ಕೇ ಹಾನಿಯಾಗುವ ಸಂಭವ ಹೆಚ್ಚಿದೆಯೆಂದು ಪೋಲೀಸರಿಗೂ ತಿಳಿಸಲ್ಪಟ್ಟಿತ್ತು. ಆದರೂ ಹಲವು ಮುಖಂಡರನ್ನು ಬಡಿದರು. ಈ ವಿಷಯ ಪತ್ಯೇಕ ಚರ್ಚೆಯು ಎಸೆಂಬ್ಲಿಯ ಮುಂದೆ ಬರಲಿದೆ.

ಮುಸ್ಲಿಮ್ ಲೀಗ್ ಮತ್ತು ಖಿಲಾಫತ್ ಮಿಟಿಗಳು ಸಿಕ್ಕಾಬಟ್ಟೆ ಮೆರವಣಿಗೆಗಳನ್ನು ಪ್ರಾರಂಭಿಸಿದ್ದಾರೆ. ಹುಕ್ಕರು ತಾ 30ರಲ್ಲಿ ಮುಸ್ಲಿಮ್ ಮಂತ್ರಿಗಳನ್ನು ಉಳಿಸಬೇಕು, ವಿರೋಧಿಸಿದಲ್ಲಿ ದಂಗೆ ಕೊಲೆ ಇತ್ಯಾದಿ ಉಂಟಾದೀತು ಎಂದು ಭಾಷಣ ಮಾಡಿದ್ದೇ ಇವರಿಗೆಲ್ಲ ಉತ್ಸಾಹ ಹೆಚ್ಚಲೂ ಕಾರಣವಾಯಿತು.

ವಾರ್ತೆಗಳು

ಬೊಂಬಾಯಿ: ಅಹಿಂಸೆಯ ಮತ್ತೊಂದು ಬಗೆಯ ಪ್ರಯೋಗದಿಂದ ಇಡೀ ಕೊಂಗ್ರೆಸ್ಸನ್ನು ತುಂಬಾ ಚೇತನಗೊಳಿಸುವ ಹಾಗೆ ಪ್ರಯತ್ನಮಾಡಲಾಗುವುದೆಂದೂ, ಅದಕ್ಕಾಗಿ ಸಪ್ಟಂಬರಿನೊಳಗೆ ಮಹಾತ್ಮಾಜಿಯವರು ಹೊಸ ಹಂಚಿಕೆಯನ್ನು ವಿವರಿಸಲಿರುವರೆಂದೂ ಗೊತ್ತಾಗಿದೆ.

ನಾಸಿಕ್: ಡಾ। ಖಾರೆಯವರು ತನ್ನಂಥ ಧೀರ ಮಂತ್ರಿ ಇಲ್ಲವೆಂಬುದನ್ನು ರುಜು ಪಡಿಸಲು,— ಯಾವ ಕಾನೂನಿನ ಸೆಕ್ಷನುಗಳನ್ನು ಪ್ರಯೋಗಿಸಿ ಈಗ ಮದ್ರಾಸು ಸರಕಾರವು ಹಿಂದೀ ವಿರುದ್ಧರನ್ನು ಜೈಲಿಗೆ ಕಳುಹುತ್ತದೆಯೋ ಅದೇ ಕಾನೂನನ್ನು ರದ್ದುಮಾಡಿ, ಕೊಂಗ್ರೆಸಿನ ಕಾರ್ಯಕ್ರಮವನ್ನು ಜ್ಯಾರಿಗೆ ತಂದವನು ತಾನೆನ್ನುತ್ತಾರೆ.

ನಾಗಪುರ: ಮಧ್ಯಪ್ರಾಂತ್ಯದ ಮಂತ್ರಿ ಮಂಡಲದಲ್ಲಿ ಒಬ್ಬನಾದರೂ ಹರಿಜನನಿಲ್ಲದಿದ್ದಲ್ಲಿ ಸತ್ಯಾಗ್ರಹಾರಂಭವಾದೀತು ಎಂದು ಅಲ್ಲಿನ ಹರಿಜನ ಮೆಂಬರರು ನುಡಿದುದಕ್ಕೆ— ಯೋಗ್ಯ ಹರಿಜನ ಮೆಂಬರನಿದ್ದು, ಮಂತ್ರಿಪದವಿಗೆ ಅರ್ಹನಾಗಿರುವಾಗ ಅವನನ್ನು ಮಂತ್ರಿಯಾಗಿ ಸೇರಿಸಿಕೊಳ್ಳಲು ಪ್ರಯತ್ನಿಸಬೇಕೇ ಹೊರತು ಹರಿಜನನೆಂಬ ಮಾತ್ರಕ್ಕೇ ಅವರನ್ನು ಮಂತ್ರಿಯನ್ನಾಗಿ ಮಾಡಿರೆನುವುದಕ್ಕೊಂದು ಸತ್ಯಾಗ್ರಹವೆ? ಎಂದು ಬರೆದಿರುವರು.

ಕಲ್ಕತ್ತ: ಹಕ್ಕ ಮಂತ್ರಿಗಳಿಗೆ, ಯಾವ ಪ್ರಾತಿನಿಧ್ಯವೂ ಬೆಂಬಲಕೊಡದೆಹೋದ ಎಸೆಂಬ್ಲಿಯ ಒಬ್ಬ ಕೊಂಗ್ರೆಸ್ ಮೆಂಬರರನ್ನು ಕೂಡ್ಲೇ ಕೊಂಗ್ರೆಸಿನಿಂದ ಹೊರತಳ್ಳುವ ಹಾಗೆ ಮಜೂರ ಸಭಾ ನಿರ್ಣಯವಾಗಿದೆ.

ಅಮೃತಸರ: ಕಿಸಾನರ ಪ್ರತಿನಿಧಿಗಳನ್ನು ಪ್ರತಿದಿನವೂ ಕೈದುಮಾಡುತ್ತ ಇರುವರು. ದಿನಕ್ಕೆ ಸರಾಸರಿ 25-30ರಂತೆ ಇವರು ಜೈಲಿಗೆ ಹೋಗುತ್ತಾರೆ. ಈಗ ಸರ್ ಸಿಕಂದರಹಯಾತರೇ, ಮುಖ್ಯ ಮಂತ್ರಿಗಳೇ, ಅಮೃತಸರಕ್ಕೆ ತೆರಳಿ ಈ ಸತ್ಯಾಗ್ರಹ ಮುಗಿಸಬೇಕೆಂದು ಪ್ರಯತ್ನಿಸುವರಂತೆ.

ಕಟಕ: ಒರಿಸ್ಸದ ಸರಕಾರವು ಸಾಲಕೊಡುವವರನ್ನು ಕುರಿತಾದ ಅಲ್ಲಿನ್ನು ಮುಂತರುವುದು.

ಸಿಮ್ಲಾ: ಶ್ರೀ ಜಿನ್ನಾರವರಿಗೆ ಬಹಳವಾದ ಆತಿಥ್ಯ ಸತ್ಕಾರಗಳು ಸಿಮ್ಲಾದಲ್ಲಿ ದೊರೆತುವು.

ವಾರ್ಧಾ: ಒರಿಸ್ಸದ ಮಂತ್ರಿಗಳು ವಾರ್ಧಾಕ್ಕೆ ಬಂದು ತಮ್ಮ ಕಾರ್ಯಕ್ರಮದ ಕುರಿತಾಗಿ ಚರ್ಚೆಮಾಡಿ, ನಿರ್ಧಾರ ಮಾಡಿಕೊಂಡರು.

ಕಲ್ಕತ್ತ: ಕಾಸಿಂಬಜಾರ ಮಹಾರಾಜರು ವಿಶ್ವಾಸಯೋಗ್ಯರಲ್ಲವೆಂಬ ಮೊದಲನೆ ಠರಾವು 130 (ವಿರುದ್ಧ 111) ವೋಟುಗಳ ಸಹಾಯ ಎಸೆಂಬ್ಲಿಯಲ್ಲಿ ಬಿದ್ದು ಹೋಯಿತು.

ಬೆಂಗಳೂರು: ವಿದುರಾಶ್ವತ್ಥದ ವಿಚಾರಣೆ ಇನ್ನೂ ಮುಗಿದಿಲ್ಲ. ರಾಮಾಚಾರ್ಯರ ಅಂದಿನ ಭಾಷಣಾದಿಗಳ ವಿಚಾರ ಇನ್ನೂ ವಿಶದವಾಗಿ ತಿಳಿಯ ಬರುವಂತಾಗಿದೆ.

ಗೋರಖಪುರ: ಸರಯೂ ನದಿಯು ನೆರೆಯೇರಿದೆ. ಪ್ರತಿ ಭಾಗದಲ್ಲೂ ನೆರೆ ಹಾವಳಿ ವಿಶೇಷ.

ಕರಾಚಿ: ಮುಸ್ಲಿಮ್ ಲೀಗನ್ನು ಸೇರಿ ಕೊಂಗ್ರೆಸನ್ನು ಇದುರಿಸಿ, ಸಿಂಧದ ಮಂತ್ರಿಗಳನ್ನು ಓಡಿಸಬೇಕೆಂಬ ಕುತೂಹಲ, ಅಲ್ಲಿನ ಎಸೆಂಬ್ಲಿ ಮುಸ್ಲಿಮ ಮೆಂಬರರಿಗೆ!

ರಾವಲ್ ಪಿಂಡಿ: ಜಮೀನ್ದಾರರೊಳಗೆ ಜಗಳವಾಗಿ, ನೀರು ತಮ್ಮ ಗದ್ದೆಗೆ ಮೊದಲೆಂದು ನಿರ್ಧಾರಮಾಡಲು ಇಬ್ಬರು ಸತ್ತರು.

ಮಧ್ಯಪ್ರಾಂತ್ಯ ಪುರಾಣದಲ್ಲಿ : : : : ಖಾರೆಕಾಂಡವು!

* * * * *

ಸರದಾರ ಪಟೇಲರು (ಪಾರ್ಲಿಮೆಂಟರಿ [illegible]ಟಿಯವರು ಹೊರಡಿಸಿದ ಪತ್ರಿಕದ ತರು[illegible]ಯು) ಡಾ। ಖಾರೆಯವರ ವರ್ತನವನ್ನು [illegible]ರಿತಾಗಿ ಬರೆದ ಹೇಳಿಕೆಯನ್ನು ಓದಿ, ಖಾರೆ[illegible]ವರಿಗೆ ಇನ್ನೂ ಉದ್ವೇಗವುಂಟಾಗಿದೆ. [illegible]ನು ಎಂದೂ ಮುಖ್ಯಮಂತ್ರಿಯಾಗಬೇಕೆಂದು [illegible]ಥವಾ ನಾಯಕನಾಗಬೇಕೆಂದು ಹಿಂದೆ ಜವಾ[illegible]ರಲಾಲರನ್ನಾಗಲಿ ಪಟೇಲರನ್ನಾಗಲಿ ಕೇಳಿ[illegible]ಕೊಂಡುದೇ ಇಲ್ಲ. ಈ ಸಂದರ್ಭದಲ್ಲಿ ಮುಖಂ[illegible]ರಾಗಲು ಪ್ರಯತ್ನಿಸಿದವರು ಶ್ರೀಯುತರುಗ[illegible]ಾದ ಶುಕ್ಲ,ಮಿಶ್ರ, ಮೇಧಾರವರೇ ಮಿಶ್ರರನ್ನು [illegible]ಮಂತ್ರಿಯನ್ನಾಗಿ ಮಾಡಿಕೊಂಡುದು ಪಟೇಲರಿಗೆ [illegible]ಂದೂ ಒಪ್ಪಿದುದಲ್ಲ. ಆಗಣ ಗವರ್ನರರು [illegible]ಪ್ಪಿದ್ದುದಲ್ಲ. ಹೀಗಾಗಿ, ನಾನು ಮುಖ್ಯ[illegible]ಮಂತ್ರಿಯಾಗಬೇಕಾಗಿ ಬಂದುದು ಸಂದರ್ಭದ [illegible]ಕ್ಕಾಯದಿಂದಲೇ. ನನ್ನ ಮಂತ್ರಿಮಂಡಲ[illegible]ನ್ನು ನಾನೇ ಸ್ವಾಧಿಕಾರದಿಂದ ಯಾರೊಬ್ಬರ [illegible]ಚನೆಯಂತಲ್ಲದೆ ಆರಿಸಿಕೊಂಡೆನು. [illegible]ನ್ನ ಪಕ್ಷ (ಕಾಂಗ್ರೆಸಿನವರು) ನಾನೇ ಬೇಕಾದ[illegible]ರನ್ನು ಆರಿಸಲು ಅಧಿಕಾರ ಕೊಟ್ಟಿದ್ದರು [illegible]ಸ್ಸಿರುವಾಗ, ನಾನು ಮಂತ್ರಿಕೂಟ ರಚಿಸ[illegible]ವಲ್ಲಿ, ನನ್ನ ಜವಾಬುದಾರಿಯನ್ನ ನಾನು [illegible]ರಿತೆನೆಂದೂ ಅಧಿಕಾರಸ್ಥಕಾರಕ್ಕೊಪ್ಪಿದ [illegible]ಕಾಂಗ್ರೆಸ ಕಾರ್ಯಕಾರೀಮಂಡಲವು ನನ್ನಲ್ಲಿ [illegible]ಪರಾಧ ಕಾಣುತ್ತಿರಲಿಲ್ಲವೆ? ಏಕೆಂದರೆ, [illegible]ಮಂತ್ರಿಪದವಿಯಿಂದ ನನಗೆ ಹಣನಷ್ಟವೇ [illegible]ಇರತು ಮತ್ತೇನೂ ಲಾಭವಿಲ್ಲೆಂದು ನಾನು [illegible]ಗೆ ಮಾಡಿದೆನೆನ್ನುತ್ತಿದ್ದರು.

ಶಿಕ್ಷಣ ಮಾಡಿದ ಅಪರಾಧದಲ್ಲಿ, ಅ[illegible] ಯಾವ ಸಹೋದ್ಯೋಗಿಗಳನ್ನು ಕೇಳದೆ [illegible]ನಾಗಿ ನ್ಯಾಡಿದ್ದೆಂದು ಎಲ್ಲರಿಗೂ ಗೊತ್ತಿದೆ [illegible]ಟೇಲರ ಸುಪರಚಿತ ಮೆಂಬರರೇ ಶಿಕ್ಷಣದಲ್ಲಿ [illegible]ಪರಾಧವಿಲ್ಲ ದು ಕಾಂಗ್ರೆಸ್ ವರ್ಕಿಂಗ [illegible]ಟಿಯಲ್ಲಿ ವೋಟ ಕೊಟ್ಟುದು ಶಿಕ್ಷಣದ ಪ[illegible]ತ್ತೆ ಸಾಮುದಾಯಿಕವಾದ ಜವಾಬ್ದಾರಿ[illegible]ಬುದು ಆಗ ಇದ್ದಿಲ್ಲವಷ್ಟೆ

ನನಗೆ ಹಲವು ವೇಳೆ ರಾಜಿನಾಮೆ ಕೊಡು[illegible]ಂತೆ ಅನೇಕರು [illegible] ಸೂಚಿಕೊಟ್ಟರೂ ನಾನು [illegible]ಗೆ [illegible]ವೆಂದು ಪಟೇಲರನ್ನನರ [illegible]ದರೆ ನಾನು ಮಂತ್ರಿಮಂಡಲದಿಂದ ಹೊರ[illegible]ಹಾಗ ಪಟೇಲರಿಗೆ ಅಧಿಕ ಆಸೆ ಇತ್ತೆಂದ[illegible]ಯಿರುವುದಿಲ್ಲವೆ? ಮಹಾಕೋಸಲದ ಮೂ[illegible] ಮಂತ್ರಿಗಳ ರಾಜಿನಾಮೆ ಕೊಟ್ಟರು, [illegible]ದೇ ವಾರದ ಹಿಂದೆ ಶ್ರೀ [illegible] ಪೇಟಬಾಯಿ[illegible]ಲ್ಲಿ ಪಟೇಲರನ್ನು ಕಂಡರು ನಿರ್ದೇಶವೇ ಈ [illegible]ಜಿನಾಮೆಗಳಾದವು [illegible]ದರ ಅರ್ಥ ಈಗ [illegible]ಯುವ ಹಾಗಾಗಿದೆ

ಪಾಚಮಾಹಿಯಲ್ಲಿ ಒಂದು ಬಗೆಯ [illegible]ಧಾನವಾಯಿತು ಕಾಂಗ್ರೆಸಿನ ಹಿತಕ್ಕಾಗಿ [illegible] ಸಂಧಾನವಾಗಲೆಂದು ಪಟೇಲರೆಂದರು. [illegible] ತಾ. 25ರಲ್ಲಿ ಸಂಧಾನ, ಹತ್ತೇ ದಿನಗ[illegible]ಲ್ಲಿ ಮಹಾಕೋಸಲದವರಿಬ್ಬರು ಮಂತ್ರಿಗಳು [illegible]ವರ್ನರರ ಇದಿರಲ್ಲಿ ಬಿರಾರಿಗೆ ಪಕ್ಷಪಾತವಾ[illegible]ತ್ತಿದಾಗಿ ಮತ್ತೊಬ್ಬ ಮಂತ್ರಿಯರನ್ನ ದೂರಿ[illegible]ರಲ್ಲ! ಇದು ಕಾಂಗ್ರೆಸ್ ಶಿಸ್ತಿಗೆ ಸರಿಯಾ[illegible]ದೆಂದು ಪಟೇಲರನ್ನುತ್ತಾರೆಯೆ? ಜುಲೈ 2ರಲ್ಲಿ ಈ ವಿಷಯ ಪಟೇಲರ ಮುಂದಿಟ್ಟರೆ, [illegible]ವರು ಅದನ್ನು ನೋಡಲೂ ಒಪ್ಪಲಿಲ್ಲ!

ನನ್ನ ಮೇಲೆ ಇತರರ ವಿಚಾರಿ ನಡೆದ[illegible]ದು ನಂಬದಿದ್ದರೂ, ನಾನು ಎಷ್ಟೋ ವೇಳೆ [illegible]ಜೀನಾಮೆ ಕೊಡಲು ಸಂದರ್ಭಗಳನ್ನು [illegible]ಡಲಾಗಿತ್ತೆಂದು ಅವರು ಎನ್ನುವುದರ ಅರ್ಥ[illegible]ೇನು? ಪಟೇಲರಂಥವರಿಗೆ ಈ ಒಳಸಂಚು [illegible]ಣಲಾರದವನ್ನು ಅವರು ಕುರುಡರೆ? ನನ್ನ [illegible]ರ್ತವ್ಯಸ್ಥಾನ ಬಿಡಬಾರದೆಂಬುದಕ್ಕಾಗಿ ಮಾತ್ರ [illegible]ನು ರಾಜಿನಾಮೆ ಕೊಟ್ಟಿಲ್ಲ.

ಹೀಗೆ ಖಾರೆಯವರು ಪ್ರಕಟಿಸಿಬಿಟ್ಟು, [illegible]ಟೇಲರು (ಹಿಂದೆ ನರಿಮನ್ ಕಾಂಡದಲ್ಲಿ [illegible]ಯಿಗೆ ಒಳಗಾದವರು) ಈ ಕಾಂಡದಲ್ಲಿ [illegible]ಗೆ ಪಕ್ಷಪಾತಿಗಳು, ಸ್ವಾರ್ಥಪ್ರಾಯದಂತೆ [illegible]ರ್ತಿಸುವವರು ಎಂದು ಋಜುವಾತಾಗುವ [illegible]

ಈ ಭಾಗದಲ್ಲಿ ಗಾಂಧಿಜೀಯವರು 'ಹರಿಜನ' ಪತ್ರಿಕೆಯಲ್ಲಿ ಸಂಪೂರ್ಣವಾಗಿ ವಿವರಿಸಿ, ತತ್ವವಿಮರ್ಶೆಮಾಡಿರುವರು:—

ವರ್ಕಿಂಗ್ ಕಮಿಟಿಯ ನಿರ್ಣಯವನ್ನು ದೂರುವ ಲೇಖಗಳು ಬಾರದಿರವು ಎಂದು ಮೊದಲೇ ತಿಳಿದಿದ್ದೆನು ಆದರೆ, ಈ ಕಮಿಟಿಯ ಜವಾಬುದಾರಿ ಮತ್ತು ಕಾರ್ಯೋದ್ದೇಶಗಳು ಅಷ್ಟು ಚೆನ್ನಾಗಿ ವಿಮರ್ಶಕರಿಗೆ ತಿಳಿದಿಲ್ಲವೆಂದು ಮಾತ್ರ ನಾನು ತಿಳಿದಿರಲಿಲ್ಲ.

ಪಾರ್ಲಿಮೆಂಟರಿ ಬೋರ್ಡಿನ ನಿರ್ಣಯಗಳನ್ನು ಉಲ್ಲಂಘಿಸಿದ್ದು ಖಾರೆಯವರ ಮಹಾಪರಾಧ, ಗವರ್ನರರು ಇವರನ್ನು ಭ್ರಾಂತರನ್ನಾಗಿಮಾಡುವಂತೆ ಇವರು ನಡೆದುದು ಪಾರ್ಟಿಯ ಅಧಿನಾಯಕತ್ವಕ್ಕೆ ಇವರು ಅಯೋಗ್ಯರೆಂಬುದನ್ನು ಸ್ಪಷ್ಟಮಾಡಿದೆ. ಇವರು ತಾನಾಗಿ ಮೊದಲಾಗಿ ಕೆಲಸಮಾಡುತ್ತ ಕಾಂಗ್ರೆಸಿನ ಗೌರವವನ್ನು ಕುಂದಿಸುವರೆಂದೂ ಇವರು ತಿಳಿಧಿದ್ದುದು ಇನ್ನೂ ಆಶ್ಚರ್ಯ

ತನ್ನ ಅಪರಾಧವನ್ನು ಸರಿಯಾಗಿ ವಿಷರಿಸಿ ಒಪ್ಪಿಕೊಂಡು ನಾಯಕತ್ವದಿಂದ ಹಿಂದೆಗೆಯಬೇಕೆಂದರೂ ಖಾರೆಯವರು ಒಪ್ಪಲಿಲ್ಲ ಖಾರೆಯವರಂಥವರ ಮೇಲೆ ಕಠಿಣವಾದ ದಂಡನೆ ಹೊರಿಸದಿದ್ದರೆ, ವರ್ಕಿಂಗ್ ಕಮಿಟಿಯು ತನ್ನ ಕರ್ತವ್ಯವನ್ನು ಮರೆದಂತಾಗುತ್ತಿತ್ತು

ನನಗೆ ಅತ್ಯವಶ್ಯಕವಾದ ಕೂಡಲೆ ಚಿಕಿತ್ಸೆ [illegible] ಬೇಕಾದ [illegible] ಒದ್ದಿಮಾದನ್ನು ನಾನು ಕೊಟ್ಟಿರುವೆನು [illegible] ಮಂತ್ರಿಗಳನ್ನು ಬಿಟ್ಟು ಸಾಮಾನ್ಯರಿಂದ [illegible] ಉತ್ತಮವೆಂದು ನಾನು ಸೂಚಿಸಿದಾಗ, ಖಾರೆಯವರು ಒಪ್ಪಿದರೂ, ಅವರ [illegible] ಸಾನಾ [illegible] ಬೋರ್ಡಿನವರಿಗೆ [illegible] ವರ್ಕಿಂಗ್ ಕಮಿಟಿಗೆ ಹೀಗೆ ಸೂಚಿಸು [illegible] ಇರವೆಲ್ಲಿ [illegible] ಪತ್ರ ಬರೆದರು [illegible] ರಾಜೀನಾಮೆ ಕೊಟ್ಟಿದರು. ಹಾಗೆಯೆ [illegible] ಮಂತ್ರಿ[illegible] ರಚಿಸಿದ [illegible]

ಖಾರೆಯವರ ಉತ್ತಮಹೇತು [illegible] ಇವರ ತಪ್ಪು ತಪ್ಪಾಗಿದ್ದ [illegible] ಇವರ ಗೌರವವು ಇನ್ನಷ್ಟು ಹೆಚ್ಚಾಗುವುದು

ಗವರ್ನರರ ದರ್ಪದ ಅತ್ಯವಸರದ ಬದಲಾಗಿ [illegible] ವರ್ಕಿಂಗ್ ಕಮಿಟಿಗೆ ದೂರಿ ಡಬಹುದಿತ್ತು. ವರ್ಕಿಂಗ್ ಕಮಿಟಿಯು ಅನುಮತಿಯಿಲ್ಲದೆ ಮಂತ್ರಿಕೂಟದ ಜಗಳಗಳನ್ನು ಗವರ್ನರರ ನಿರ್ಧರಿಸುವುದೇ? ಕಮಿಟಿ ಮೊಲ್ಲನೆ ಕೆಲಸಮಾಡುವುದಾದಲ್ಲಿ, ಅದನು ಬೇಗನೆ ಕೆಲಸಮಾಡೆನ್ನಬಹುದ ಅಯೋಗ್ಯರಿದ್ದಾರೆ ಯಾವರೆ ಅವರನ್ನು ಓಡಿಸಿ ಇತರರನ್ನು ನೇಮಿಸಬಹುದು ಇದೊಂದನ್ನು ಗಣನೆಗೆ ತಾರದೆ, ಖಾರೆಯವರು ಗವರ್ನರರನ್ನು ಕಂಡುದೇಕೆ?

ಮಂತ್ರಿಗಳನ್ನು ನೇಮಿಸುವ ಅಧಿಕಾರವನ್ನು ಕಮಿಟಿ ಇಟ್ಟುಕೊಂಡಿಲ್ಲ ಅವೆಲ್ಲ ಪಕ್ಷಕ್ಕೇ ಸಂಬಂಧಿಸಿಯದ ಶಿಸ್ತು ಸರಿಯಾಗಿರುವ ತನಕ ಕಮಿಟಿ ಏನೂ ಮಾಡಬಾರದು

ಗವರ್ನರರು ಇದರಲ್ಲಿ ಕೈಯಿಕ್ಕಬಾರದಾಗಿತ್ತು. ವರ್ಕಿಂಗ್ ಕಮಿಟಿ ಸೇರುವ ತನಕ ಕಾಯುತ್ತಿದ್ದರೆ ಅನ್ಯಾಯವಾಗುತ್ತಿರಲಿಲ್ಲ. ಗವರ್ನರರಿಗೆ ಅಷ್ಟು ಅವಸರವೇಕೆ? ಬರೇ ಎರಡು ದಿನ ಕಾಯಬಾರದಿತ್ತೇ? ಇಂಥ ಸಂದರ್ಭದಲ್ಲಿ ಬಂಗಾಳದ ಗವರ್ನರರು ಹತ್ತು ದಿನ ಕಾಯಲಿಲ್ಲವೆ?

ಗವರ್ನರರು ಕಾನೂನಿನ ಒಳಗೇ ವರ್ತಿಸಿದ್ದುದು ನಿಜ. ಆದರೆ ಕಾಂಗ್ರೆಸಿಗೂ ಬ್ರಿಟಿಷ ಸರಕಾರಕ್ಕೂ ಆದ ಒಡಂಬಡಿಕೆಯನ್ನು ಮಾತ್ರ ಅವರು ಮೂಲೆಪಾಲು ಮಾಡಿದರು ವೈಸ್ರಾಯರು ಅಂದು ಪ್ರಕಟಿಸಿದ ಪ್ರಕಟಣೆಯನ್ನೂ ವರ್ಕಿಂಗ್ ಕಮಿಟಿಯ ನಿರ್ಣಯವನ್ನೂ ಒಮ್ಮೆ ಓದಿ ನೋಡಿದರೆ ಎಲ್ಲವೂ ವ್ಯಕ್ತವಾದೀತು. ಕಾಂಗ್ರೆಸಿನ ಗೌರವವನ್ನು ಕಡಿಮೆ ಮಾಡುವುದಕ್ಕೇ ಗವ[illegible] [illegible]ರರು ಹೀಗೆ ಮಾಡಿದರೆಂದು ಬೇಕಾದರೆ [illegible]

ಅಲ್ಪಸಂಖ್ಯಾತರಾಗಿರುವ ಹಿಂದೀ, ಯರಿಗೆ ನ್ಯಾಯ ಸಲ್ಲಿಸಿರಿ!

ಬರ್ಮೀಯರಿಗೆ ಸುಭಾಷರ ನಿವೇದನೆ.

ಬರ್ಮೀಯರು ಮತ್ತು ಭಾರತೀಯರೊಳಗೆ ಸದ್ಯದಲ್ಲಿ ಆದ ಬಡಿದಾಟವನ್ನು ಸರಿಯಾಗಿ ವಿಮರ್ಶಿಸಿ, ಅದರ ಮೂಲ ಕಾರಣಗಳನ್ನು ಹುಡುಕಿ ತೆಗೆಯಲು ಬರ್ಮಾ ಸರಕಾರವು ಪ್ರಜಾಪ್ರತಿನಿಧಿಗಳ ನಿಷ್ಪಕ್ಷವಾದೊಂದು ಕಮಿಟಿಯನ್ನು ನೇಮಿಸಬೇಕಾಗಿ ಶ್ರೀ। ಸುಭಾಷಚಂದ್ರ ಭೋಸರು ನಿವೇದಿಸಿಕೊಂಡಿರುವರು.

ಬರ್ಮಾದಲ್ಲಾದ ದಂಗೆಯಿಂದ ವಿಶೇಷವಾಗಿ ಹತಾಹತರಾದವರು ಹಿಂದೀಯರು; ಧಾರಾಳವಾಗಿ ನಷ್ಟಹೊಂದಿರುವವರೂ ಅವರೇ ಎಂದು ತಿಳಿದು ಬರುತ್ತದೆ ಇಷ್ಟೂ ಸರಕಾರದ ಅಂಕಸಂಖ್ಯೆಗಳ ಆಧಾರದ ಮೇಲಿಂದ ತೋರುವಾಗ, ನಿಜವಾಗಿ ಉಂಟಾದ ಜನಹಾನಿ ಧನಹಾನಿಗಳು ಇನ್ನಷ್ಟು ಹೆಚ್ಚಾಗಿರಬೇಕೇನೋ ಎಂದು ಸಂದೇಹವುಂಟು.

ಕಂಗೆಟ್ಟ ಹಿಂದೀಯರೊಳಗೂ ಅಧಿಕ ಸಂಖ್ಯೆಯಲ್ಲಿ ಮುಸ್ಲಿಮರೇ ಇದ್ದಾರೆಂದೂ, ಯಾವನೊಬ್ಬ ಮುಸ್ಲಿಮನು ಬರೆದ ಪುಸ್ತಕದಲ್ಲಿ ಬೌದ್ಧ ಮತದವರ ಧಾರ್ಮಿಕ ಚಿತ್ತಗಳಿಗೆ ನೋವಾದುದೆಂಬುದೇ ಈ ದಂಗೆಗೆ ಕಾರಣವಾಯ್ತೆಂದೂ ತಿಳಿದು ಬಂದಿದೆ

ಧಾರ್ಮಿಕ ಸಂತಾಪ ಹೊಂದಿದವರೊಡನೆ ಸಹಾನುಭೂತಿ ತೋರಿಸುವುದು ಅಗತ್ಯವೂ ಉಚಿತವೂ ಆಗಿದೆ, ಹಾಗೆಂದು ಈ ಸಂತಾಪವು ಪರಿತೃಪ್ತಿ ಹೊಂದುವಂತೆ ಹಿಂಸಾತುರರಾಗಿ ದಂಗೆಯೆದ್ದ ಕೂಡಲೆ ಶಮನವಾಯಿತೂ ಆಯಿತೇ ಎಂಬುದನ್ನು ಶಾಂತಚಿತ್ತರಾದ ಬರ್ಮೀಯರೂ ಹಿಂದೀಯರೂ ಆಲೋಚಿಸಲಿ

ಉಭಯ ಪಕ್ಷಗಳೂ ವಿವೇಕದಿಂದ ಮನೋಮಾಲಿನ್ಯವೇನೂ ಇಲ್ಲದೆ ಗೌರವದಿಂದ [illegible] ನನ್ನ ಆಸೆ [illegible] ಇಂತಹ ಸಂಭವಗಳು [illegible] ನಡೆದ [illegible]?

ಹಿಂದೀಯರು ಬರ್ಮೀಯರುಗಳೊಳಗೆ ಈ ರೀತಿಯಾಗಿ [illegible] ಇದೇ ಮೊದಲನೆಯ ಸಲವಲ್ಲ ಇದಕ್ಕೆಲ್ಲ ಕಾರಣಗಳೇನು ಎಂಬುದನ್ನು ಶೋಧಿಸಿ ನಿರ್ಣಯಿಸುವ ಕಮಿಟಿಯ [illegible] ಬೇಡವೆ?

ಈ ಬಗೆಯ ದಂಗೆಗಳಿಗೆ ಧರ್ಮದ್ವೇಷವೇ ಕಾರಣವೇ ಅಥವಾ ಬೇರೇನಾದರೂ ಇದೆಯೆ? ವಾಸ್ತವವಾದ ತಾರತಮ್ಯ [illegible] ದಂಗೆಗಳ ಉಂಟಾಗಲು ಎಡೆ[illegible]

ಕಾಂಗ್ರೆಸ ಬರ್ಮವನ್ನು ಗೌರವದಿಂದ ಕಾಣುತ್ತಿರುವುದೇ ಮಾತ್ರವಲ್ಲದೆ ಧಾರಾಳವಾದ ಸ್ನೇಹ [illegible] ಇಂಡಿಯಕ್ಕೂ ಬರ್ಮಕ್ಕೂ ಸಮಾನತೆಯಷ್ಟೇ ಇದೆ ನಮಗೆ ಬೇಕಾಗಿದೆ. ಬರ್ಮಕ್ಕೆ ಸ್ವಾತಂತ್ರ್ಯ ಸಿಗಲೆಂದು ನಮಗೆ ಆಸೆಯಿದೆ ಹೀಗಿರುವ ಕಾರಣ, ಬರ್ಮೀಯರು ಅಲ್ಪಸಂಖ್ಯೆಯವರಾಗಿರುವ ಹಿಂದೀಯರನ್ನು ನ್ಯಾಯದಿಂದ ಕಾಣಬೇಕಾಗಿದೆ ಎಷ್ಟೆಂದರೂ ಹಿಂದೀಯರಲ್ಲಿ ಹಲವರು ಬರ್ಮದಲ್ಲೇ ನೆಲಸಿ ಆ ದೇಶದ ಅಭ್ಯುದಯಕ್ಕೆ ತಕ್ಕಷ್ಟು ಸಹಾಯ ಮಾಡಿಲ್ಲವೆ? ಇವರಿಗೆ ಹಾನಿಯುಂಟಾಗುವಾಗ, ಕಾಂಗ್ರೆಸಿನ ಸಹಾನುಭೂತಿಯು ಇವರ ಕಡೆಗಲ್ಲದೆ ಮತ್ತೆಲ್ಲಿದ್ದೀತು? ಹಿಂದೀಯರು ಯಾವ ಮತದವರೇ ಆಗಿರಲಿ, ಅವರ ಬೆಂಬಲಕ್ಕೆ ಕಾಂಗ್ರೆಸು ಇದ್ದೇ ಇದೆ ಏಕೆಂದರೆ, ಕಾಂಗ್ರೆಸು ಸಮಸ್ತ ಭಾರತೀಯರ ಪ್ರತಿನಿಧಿ ಸಂಸ್ಥೆ, ಎಲ್ಲ ಹಿಂದೀಯರ ಬೆಂಬಲಕ್ಕೆ ಅದಿರಲೇ ಬೇಕಾಗಿದೆ.

★

ಸಂಯುಕ್ತಪ್ರಾಂತ್ಯ, ಬಿಹಾರ, ಒರಿಸ್ಸಾಗಳಲ್ಲಿ ಗವರ್ನರರು ವರ್ಕಿಂಗ್ ಕಮಿಟಿಯ ನಿರ್ಣಯ ಕಾಯಲಿಲ್ಲವೆ? ಅಲ್ಲಿ ಬ್ರಿಟಿಷರಿಗೆ ಹಿತವೆಂದು ತೋರಿದ್ದು, ಮಧ್ಯಪ್ರಾಂತ್ಯದಲ್ಲಿ ಮಾತ್ರ ಹಾಗೆ ತೋರಲಿಲ್ಲವೇಕೆ?

ಈ ಬಗೆಯ ನಿರ್ಣಯಗಳಾಗದಂತೆ ಬ್ರಿಟಿಷಸರಕಾರವು ಎಚ್ಚರವಿಡಲಿ.

○ ○ ○ ○

ಕಾಂಗ್ರೆಸಿನ ಉದ್ದೇಶಗಳನ್ನು ಸರಿಯಾಗಿ [illegible]

ಜಪಾನು ಸೋವಿಯಟ್ ಪರಾಮರ್ಶೆ

ಅಟ್ಟಹಾಸ ::: ಕಾದಾಟ

ರಷ್ಯವು ಚೀನದೊಡನೆ 1868ರಲ್ಲಿ ಮಾಡಿದ ಕರಾರಿನಂತೆ ಉತ್ತರಗಡಿಗಳು ಇರಬೇಕೆಂದು ಸೋವಿಯಟ್ ಸರಕಾರದ ಆಸೆ. ಜಪಾನಿನ ಸೇನೆಗಳು ಈ ಪ್ರಾಂತ್ಯದಲ್ಲಿ ನುಗ್ಗುವರು. ತಮ್ಮದೆನ್ನುವರು. ಒಳಬರಕೂಡದೆಂದರೆ ಗುಂಡುಹಾರಿಸುವರು. ಇಟೆಲಿಯ ಅಬಿಸೀನಿಯದ ಗಡಿಯೊಳಗೆ ನುಗ್ಗಿ, ಎಲ್ಲಿ ಅಬಿಸೀನಿಯದ ಸಿಪಾಯರು ತನ್ನವರನ್ನು ಕೊಂದಿಕ್ಕಿದ್ದೆಂದಿಕ್ಕೋ ಆ ಸ್ಥಾನವು ನೂರಾರು ಮೈಲು, ಅಬಿಸೀನಿಯದೊಳಗೇ ಇದ್ದಿಲ್ಲವೆ? ಅದರಂತೆ ಇದು.

ಈ ತಿಂಗಳ ಆರಂಭದಿಂದ ಇಂತಹ ಕಾದಾಟ ಪ್ರಾರಂಭಿಸಿರುವುದು.

ಜಪಾನು ರಾಯಭಾರಿಯ ಪ್ರಯತ್ನವೆಂದರೆ ರಷ್ಯವು ಮೊದಲಾಗಿ ಮಂಚುಕೂವೋ ಪ್ರಾಂತ್ಯದಲ್ಲಿ ನುಗ್ಗಿ ಗದ್ದಲಾಟದ ತಪ್ಪಿಗೆ ಬೇಕಾಗಿದೆ ಎಂದು ಸಾರುವುದು ರಷ್ಯದ ಪ್ರಯತ್ನ 1868ರಲ್ಲಾದ ಚೀನಾ ಒಪ್ಪಂದದಂತೆ ನಿರ್ದಿಷ್ಟವಾದ ಗಡಿಗಳ ಈಚೆಗೆ ಬರುವ ಜಪಾನೀಯರನ್ನು ಕೊಲ್ಲಲಾದೀತೆನ್ನುವುದು, ಮತ್ತು ಕೊಂದಿಕ್ಕುವುದು

ಜಪಾನೀಯ ವಾರ್ತೆಗಳು ಪ್ರಕಟವಾದ ಮಟ್ಟಿಗೆ ತಿಳಿದು ಬರುವದಾದರೆ, ಎಷ್ಟೆಂದರೂ ಜಪಾನಿಗೆ ಈ ಭಾಗದಲ್ಲಿ ಸುಖವಿಲ್ಲ, ಮೋಕ್ಷ ದೊರೆವುದು ಏಕೆಂದರೆ, ನಾವು ಇಷ್ಟು ವಿಮಾನ ಕೆಡೆದೆವು, ಇಷ್ಟು ಕೊಂದೆವು ಎಂದು ಪ್ರಕಟವಾಗ ತಿಳಿಸುವ ಜಪಾನು, ನಾವಿತ್ತಂದಗಳೂ ಇದ್ದಲ್ಲೇ ಇರೋಣ, ಮುಂದೆ ಗಡಿ ನಿಶ್ಚಯವಾದಂತೆ ನಡೆದುಕೊಳ್ಳೋಣ ಎನ್ನುತ್ತದೆ, ರಷ್ಯವು ಇದನ್ನೊಪ್ಪದು

ಹಾಲು ಕದರಿ ಜಗಳಕ್ಕೆ ಕರೆದ ಜಾಜಿನ ಹುಂಜದಂತೆ ಜಪಾನು ಇದೆ. ಅಲ್ಲಲ್ಲಿ ಗಡಿನಾಡುಗಳಲ್ಲಿ ಸಂಘರ್ಷಗಳಾಗುವುದುಂಟು, ಅದು ಕ್ಷಣಿಕ ಇದು ಅದರಂತೇನೂ ಅಲ್ಲದೆ, ಹಲವು ಜಿಲ್ಲೆಗಳಿಗೆ ಹಬ್ಬುವ ಮೆಶೀನ್ ಗನ್ ಪ್ರಯೋಗವಾಗುವ ಯುದ್ಧ, ರಷ್ಯದ ಗಡಿಯಾ[illegible] [illegible] ರಷ್ಯದ ಸೇನೆಯ ಮೇಲೆ ಗುಂಡು ಹಾರಿಸಿ [illegible] [illegible] ಎಷ್ಟೋ [illegible] ಗಾಯಗಳಾಗವೇ?

ಹೀಗೆ ಆಗಾಗ ಗಡಿದಾಟಿ ಒಂದು ರಷ್ಯದ [illegible] ಜನರನ್ನು ಆಗಾಗ ಕೊಲ್ಲುವ ಜಪಾನು ಈ ಯುದ್ಧವನ್ನು ಇನ್ನು [illegible] ರಷ್ಯದ [illegible] ಚೆನ್ನಾಗಿ [illegible] ಫಿರಂಗಿ, ವಿಮಾನ [illegible] ಇಂದ ಅದನ್ನು ತಡೆಯಲೇ ಬೇಕಾದೀತು " ಹೀಗೆ ರಷ್ಯವು ತಿಳಿಸಿಯದೆ

ರಷ್ಯವು ಬಲಪೂರ್ವಕವಾಗಿ ತನ್ನ ಗಡಿಯನ್ನು ಕಾದಾಡಿಕೊಂಡಿದೆ [illegible] ಗುಂಡು ಹಾರಿಸುವುದೆಂದೂ ಬಹಳವಾಗಿ ನಷ್ಟಹೊಂದಿದೆಯೆಂದೂ ಜಪಾನೆನ್ನುವುದು. ನೂರು ನೂರು ವಿಮಾನಗಳನ್ನೇ ಜಪಾನು [illegible] ಒಡೆದು ಬೀಳಿಸಿದೆಯಂತೆ. ರಷ್ಯದ ಸೇನೆಗೂ ಅಪಾರನಷ್ಟವಂತೆ

ಆದರೆ,—ರಷ್ಯದ ಗಡಿಯನ್ನು ಕಾಪಾಡಿಕೊಂಡಿರುವ ಸೇನೆಗಳ ಒತ್ತಾಯದಿಂದ, ಜಪಾನಿನ ರಾಯಭಾರಿ ಹೇಗೂ ಮಾಡಿ ಈ ಜಗಳಾಟ ನಿಲ್ಲಿಸೋಣ ಎನ್ನುತ್ತಾನೆ. ರಷ್ಯವು ಗಡಿನೋಡಿ ಮಾತಾಡೆನ್ನುತ್ತದೆ. ಜಪಾನಿನ ರಾಯಭಾರಿಯ ಆಫೀಸನ್ನೇ ರಷ್ಯವು ಮುಚ್ಚಿಸಿಬಿಟ್ಟಿದೆ.

★

ದೂರುವವರು ದೂರಲಿ: ಆಗ ಸಾಧ್ಯವಾಗದು. ಕಾಂಗ್ರೆಸು ಹಾಗೆ ಖಂಡಿತವಾದವನ್ನು ಮಾಡುತ್ತಿರುವುದಾದರೆ, ತನ್ನ ಹಿಂಬಾಲಕರ ವಿಧೇಯತೆ ಸೇವೆಯನ್ನು ಅದು ಪಡೆಯಬಲ್ಲುದು ಬಹಳವಾಗಿ ಖಾರೆಯಂಥವರೂ ಸಹ ಕಾಂಗ್ರೆಸಿನಲ್ಲಿರುವ ಇಚ್ಛೆಯಿದ್ದಲ್ಲಿ, ಅಧಿನಾಯಕತ್ವವನ್ನು ತೊರೆದೂ ಸೇವಕರಾಗಿ ಕೆಲಸ ಮಾಡಬಹುದು.

ಸ್ವದೇಶಾಭಿಮಾನಿ

ಹಿಂದೂ ದೇವಾಲಯಗಳ ಆಡಳಿತ.

ಹಿಂದೂ ಮತ ಧರ್ಮಸಂಸ್ಥೆಗಳನ್ನು ವಿಮರ್ಶಿಸುವ ಬೋರ್ಡಿನವರು ಸತ್ಕರಿಸಿದ ಮಂತ್ರಿ ಶ್ರೀ ರಾಜನ್‌ರವರು ಮುಂದಿನ ಸುಧಾರಣೆಗಳನ್ನು ಕುರಿತು ಹೇಳಿದ ಕೆಲವು ಮಾತುಗಳು ಗಮನಾರ್ಹವಾಗಿವೆ

ದೇವಾಲಯಗಳ ಸುಧಾರಣೆಗೆ ತೊಡಗುವುದರೊಳಗೆ ಅದನ್ನೆಲ್ಲ ತೀವ್ರವಾಗಿ ವಿಮರ್ಶಿಸಿ ತೋರುವ ಒಂದು ಬಗೆಯ ಸ್ವಾರ್ಥಿಗಳೂ ಪುರಾತನವಾದಿಗಳೂ ಅಥವಾ ಸ್ಥಾನಮಾನಾದಿಗಳ ವಂಚಿತರಾಗಬಹುದೆನ್ನುವವರೂ ಇರುವರು. ಒಂದು ಕಡೆ ಧಾರ್ಮಿಕವಾದ ಅಧಿಕಾರವೂ ಐತಿಹಾಸಿಕ ಮಹತ್ವವೂ, ಜನರ ವಿಶ್ವಾಸಾದಿಗಳೂ ಇವರ ಕಡೆಗೆ ಒಲಿದಿರುವ ಕಾರಣ, ಇವನ್ನು ಸುಧಾರಿಸುವುದೆಂದರೂ ಎಷ್ಟೋ ಮಂದಿ ಒಪ್ಪಲಾರರು ಅಥವಾ ಅಂಜಿಕೊಂಡೇ ಅದರಲ್ಲಿ ಕೈಯಿಕ್ಕಬಹುದು. ದೇವಾಲಯಗಳ ಸುಧಾರಣೆ ಎಂದ ಕೂಡಲೆ, ಕಾನೂನಿನ ಬೆಂಬಲವೂ ಧೀರತೆಯೂ ಸರಿಯಾದ ತಿಳುವಳಿಕೆಯುಳ್ಳವರೂ ಬೇಕಾಗುವರು

ಹೀಗಿದ್ದರೂ ಜನರಲ್ಲಿ ಈ ಧರ್ಮಸಂಸ್ಥೆಗಳು ಉತ್ತಮ ರೀತಿಯ ಆಡಳಿತಕ್ಕೆ ಒಳಪಡುವಂತೆ ಕಾನೂನಾಗಬೇಕಾಗಿ ಬಹಳವಾಗಿ ಕೇಳಿಕೊಳ್ಳುವರು. ಈ ಸಂಸ್ಥೆಗಳ ಆಡಳಿತವು ಅತಿ ಕೆಟ್ಟಸ್ಥಿತಿಯಲ್ಲಿದೆ ಎಂದೂ ನಾನಾ ಆಡಳಿತಗಾರರ ಮೇಲೆ ಹಲವು ವಿಧದ ಅಪರಾಧಗಳನ್ನು ಹೂಡಿಸಿ ಬಹಿರಂಗವಾಗಿ ಮಂತ್ರಿಗಳು ಉತ್ತರಕೊಡಬೇಕಾದರೂ, ಅವನ್ನು ಅಲ್ಲಗಳೆಯಲಾರದಿರುವುದರಿಂದ, ಈ ದೋಷಗಳಿರುವುದು ಖಂಡಿತವೆಂದು ತಿಳಿಯಬೇಕಾಗಿದ. ಅದು ಕಾರಣವೇ ಹಿಂದುಗಳಲ್ಲಿ ವಿಮರ್ಶಬುದ್ಧಿಯುಳ್ಳವರು ಸರಕಾರಕ್ಕೆ ತಮ್ಮ ಸೂಚನೆಗಳನ್ನು ಆಗತ್ಯವಾಗಿಯೂ ಕೊಡುವರಾಗಿ ನಂಬಿಕೊಂಡಿದ್ದಾರೆ ಮಂತ್ರಿಗಳು!

ದೇವಾಲಯಗಳ ಸುಧಾರಣೆ ಎಂದ ಕೂಡಲೆ, ಆಧುನಿಕ ಜೀವಿತಕ್ಕೆ ತಕ್ಕಂತೆ ಅವುಗಳನ್ನು ತಿದ್ದಬೇಕೆಂಬ ಒತ್ತಾಯವಿದ್ದರೂ ಅದನ್ನು ಲೆಕ್ಕಿಸುವ ಅಗತ್ಯವಿಲ್ಲ, ದೇವಾಲಯಗಳಲ್ಲಿ ಜಮೆಗೊಂಡಿರುವ ಕಸಕೊಳೆಗಳನ್ನು ಸಂಪೂರ್ಣವಾಗಿ ಹೊರಗಿಕ್ಕಿ, ಮುಂದೆ ಇವು ಜಮೆಯಾಗದಂತೆ ನೋಡಿಕೊಂಡರೆ ಸಾಕಾಗುವಷ್ಟು ಪ್ರಯತ್ನಪಟ್ಟರೆ ಸಾಕಾಗುವುದು. ಈ ಕಸಕೊಳೆಗಳಿಂದಲೇ ದೇವಾಲಯಾದಿ ಧರ್ಮಸಂಸ್ಥೆಗಳ ನೈತಿಕ ಹಾಗೂ ಧಾರ್ಮಿಕ ಪ್ರಕಾಶವು ಮುಚ್ಚಿಹೋಗಿ, ಜನತೆಯು ಅವುಗಳಿಂದ ಏನೂ ಪ್ರಯೋಜನ ಪಡೆಯದಂತಾಗಿದೆ. ದೇವಾಲಯಾದಿಗಳ ಆಡಳಿತಗಳಲ್ಲಿ ಇನ್ನೂ ಚೇತನವಿದೆಯಾದರೆ, ಅವು ತಮ್ಮನ್ನು ಹೊದ್ದಿರುವ ಆಲಸ್ಯಾದಿ ಅನೈತಿಕ ಜಾಡ್ಯಗಳನ್ನು ಕಳಚಿಬಿಟ್ಟು, ಎಚ್ಚೆತ್ತುಕೊಳ್ಳಬೇಕು. ಯಾವ ಸಮಾಜವು ಇಂತಹ ಧರ್ಮಸಂಸ್ಥೆಗಳ ಜಾಡ್ಯಗಳನ್ನು ತಿಳಿದೂ, ಅವು ನಿವಾರಣೆಹೊಂದುವಂತೆ ಪ್ರಯತ್ನಪಡದೆ ಆ ಸಮಾಜವೇತಕ್ಕೆ? ಸಾವಿರಾರು ವರ್ಷಗಳಿಂದ ಬದುಕಿಕೊಂಡಿರುವ ಹಿಂದೂಧರ್ಮವು ಅಷ್ಟು ನಿಶ್ಚೇಷ್ಟಿತವಾಗಿದೆಯೆ? 26 ಕೋಟಿ ಜನರು ಈ ದೇಶವನ್ನು ಪುಣ್ಯ ಭೂಮಿ ಎಂದು ಕರೆಯುತ್ತಾರಾದರೆ, ದೇಶದಲ್ಲಿ ಪುಣ್ಯ ಸ್ಮಾರಕಗಳಾಗಿರುವ ದೇವಾಲಯಾದಿಗಳಲ್ಲಿ ಇನ್ನೂ ಪುಣ್ಯ ಉಳಿದಿರುವುದೇ ಎಂಬುದನ್ನು ವಿಚಾರಿಸಿಕೊಂಡು, ತಕ್ಕ ತಿದ್ದುಪಾಟುಗಳನ್ನು ಮಾಡುವುದು ಅಗತ್ಯವಾಗಿದೆ.

ದೇವಾಲಯಗಳನ್ನು ಸಂದರ್ಶಿಸಿದಾಗಲೆಲ್ಲಿ ಎಷ್ಟು ಅಪಹರಣವಾಗುತ್ತದೆಯೋ ಅಧರ್ಮ ಅನ್ಯಾಯಗಳು ಎಷ್ಟು ನಡೆಯುತ್ತವೆಯೋ ಎಂದು ತಿಳಿಯಲು ಉತ್ಸುಕತೆಯುಂಟಾಗುತ್ತದೆ. ಧರ್ಮದ ಹೆಸರಲ್ಲಿ ನಡೆವ ಅಧರ್ಮವು ಬಹಳವಾಗಿದೆ. ಜನರಲ್ಲಿ ವಿಶ್ವಾಸವು ಭಕ್ತಿಯೂ ವಿಶೇಷವಾಗಿಯೇ ಇವೆ. ದೇವಸ್ಥಾನಗಳನ್ನು ಕೆಡೆಬೀಳಿಸಿ ವಿಗ್ರಹಗಳನ್ನು ವಸ್ತು ಸಂಗ್ರಹಾಲಯಗಳಿಗೆ ಕಳಿಸುವುದು ಮಾತ್ರವೇ ಇವುಗಳ ಸುಧಾರಣೋಪಾಯವಲ್ಲ. ದೇವಾಲಯಗಳಲ್ಲಿ ವಿಶ್ವಾಸವಿರಬೇಕು. ಆತ್ಮೋದ್ಧಾರಕ್ಕೆ ಈ ಸಂಸ್ಥೆಗಳು ಅಗತ್ಯ. ದೇವತಾ ಸಾನ್ನಿಧ್ಯದಲ್ಲಿರುವ ಸುಖವು ಆತ್ಮನಿಗೆ ದೊರೆವಂತೆ ದೇವಸ್ಥಾನಗಳು ಬೇಕು. ಇಷ್ಟನ್ನು ಹೇಳುವುದಕ್ಕೆ ಯಾವನೊಬ್ಬನು ಧರ್ಮಾತ್ಮನೇ ಆಗಿರಬೇಕೆಂದಿಲ್ಲ. ದೀನನಾದ ಯಾವನೊಬ್ಬ ಹಿಂದುವಾದರೂ ತನ್ನ ಹುಟ್ಟಿನಲ್ಲೇ ಇಂತಹ ವಿಶ್ವಾಸವುಳ್ಳವನಾಗಿದ್ದು, ಅದನ್ನು ಮುಂದೆ ಅಲ್ಲಗಳೆಯಲಾರನು. ಈ ವಿಶ್ವಾಸವುಳ್ಳುದರಿಂದಲೇ ಅವನು ದೇವಾಲಯಗಳಲ್ಲಿ ಈಗ ಉಂಟಾಗಿರುವ ಕುಂದುಗಳನ್ನು ನಿವಾರಿಸಲು ಬೇಕಾಗುವಷ್ಟು ಸಹಾಯಮಾಡುವನು

ದೇವಾಲಯಗಳೂ ದೇವರೂ ಎಲ್ಲಿ ಮನ್ನಣೆ ಹೊಂದವೊ ಅಲ್ಲಿ ಜನಾಂಗವೂ ಗೌರವ ಹೊಂದದು, ಬಾಳದು. ಹಿಂದುಗಳು ಅದು ದರಿಂದಲೇ ದೇವಾಲಯ ಸಂಸ್ಥೆಗಳನ್ನು ಆಯಾ ಯುಗದಲ್ಲಿ ತಕ್ಕಂತೆ ಸುಧಾರಿಸಿ ತಂದಿರುವರು. ಮುಂದೆಯೂ ಹಾಗೆಯೆ. ಹಾಗೆ ಕಾಲೋಚಿತವಾದ ರೀತಿಯಲ್ಲಿ ಸುಧಾರಣೆ ಮಾಡುತ್ತ ಬರುವಂತೆ, ಧರ್ಮವೂ ಧರ್ಮಸಂಸ್ಥೆಯೂ ಬಾಳುವಂತಾಗುವುದು.

ಒಂದೊಂದು ಮಾತು

ಲಕನೌ:—ಡಿಸ್‌ಮಿಸ್!—ಆಲಿಘರ ಪೋಲೀಸ ಆಫೀಸು ಗುಮಾಸ್ತ ದ್ವಾರಕಾಧೀಶ! ಲೋರಿ ಡ್ರೈವರರಿಂದ ಆಗಾಗ ಗಿಂಬಳ ಪಡೆಯುತ್ತಿದ್ದನು. ಗೊತ್ತಾಯಿತು. ವಿಚಾರಣೆಯಾಗಿ ಡಿಸ್‌ಮಿಸ್.

ಕರಾಚೀ:—ಹಬೇಸ್! ಸರ್ ಅಬ್ದುಲ್ಲಾ ಹಾರೂನರು ಅಲ್ಲಲ್ಲಿ "ಕೊಂಗ್ರೆಸ್" ಧ್ವಜಗಳನ್ನು ಮುನಿಸಿಪಲ್ ಕಚೇರಿಗಳ ಮೇಲೆ ಏರಿಸುವರೆಂದು ತಿಳಿದು, ಲೀಗ್ ಧ್ವಜ ಹಾರಿಸಲು ಮುಸ್ಲಿಮರಿಗೆ ಆಗ್ರಹಪೂರ್ವಕ ಸೂಚಿಸಿದ್ದಾರೆ

ನವಾಡಿಲ್ಲಿ:—ಮಾರೊ! ಮುನ್ಸಿಪಲ್ ಜಾಗದಲ್ಲೊಂದು ಮಂದಿರದಂಥ ಕಟ್ಟಡ. ಅದರಲ್ಲಿ ದೇವರ ವಿಗ್ರಹ ಇತ್ತೆಂದು ಒಬ್ಬ ಸಾಧು ತಿಳಿಸಿದನು. ಸಾವಿರ ಹಿಂದುಗಳತ್ತ ಬಂದರು. ಪೊಲೀಸರು ಲಾಠೀಚಾರ್ಜು ಮಾಡಬೇಕಾಯಿತು. ವಿಗ್ರಹವಿದ್ದಿಲ್ಲವೆಂದು ಅಧಿಕಾರಿಗಳ ಮಾತು. ಇರಲಿ ಇಲ್ಲದಿರಲಿ, ಕೆಲವರಿಗೆ ಪೆಟ್ಟಂತೂ ಆಯಿತು.

ಜಬಲಪುರ:—ತಯ್ಯಾರ್! ಕೊಂಗ್ರೆಸನಗರದ ನಿರ್ಮಾಣವಾಗುತ್ತದೆ. 250ಟನ್ನು ಸಿಮೆಂಟ್ ಧರ್ಮಾರ್ಥ ದೊರಕಿದೆ. ಮದನಮಹಾಲ್ ಸ್ಟೇಶನೂ ತಯಾರಾಗುತ್ತದೆ. ಲಮೇಟಿಗಾಟ್ ಎಂಬಲ್ಲಿಗೆ (ನಗರವಾಗುವ ಸ್ಥಳ) ರಸ್ತೆಸರಿಪಡಿಸಲು ಸರಕಾರವು 15,000 ರೂಪಾಯಿ ಸೆಂಕ್ಷನು ಮಾಡಿದೆ, 8,000 ಬಾವಿಗಳಿಗೆ.

ಲಕನೌ:—ತಾಜಾ! ಮಜ್ಲಿಸ್ ಅಹ್ರರ್ ಮತ್ತು ಜಮಾಯತ್ ಉಲ್ ಉಲೇಮಾ ಮಾತ್ರ, ಬಹಳ ತ್ಯಾಗಮಾಡಿರುವ ಮುಸ್ಲಿಮರ ಪ್ರತಿನಿಧಿ ಸಂಸ್ಥೆಗಳು. ಹೊರತು ಮುಸ್ಲಿಂ ಲೀಗ್ ಅಲ್ಲ, ಲೀಗಿನೊಡನೆ ಕೊಂಗ್ರೆಸು ಪರಾಮರ್ಶಿಸುವುದರಿಂದ ಈ ಸಂಸ್ಥೆಗಳು ಅದನ್ನು ಮಂಜೂರ್ಮಾಡವು ಎಂದು ಪ್ರಕಟಣೆ

ಕಲ್ಕತ್ತಾ:—ಹುಶಾರ್! ಮಹಾಯುದ್ಧವಾಗುವುದಾದರೆ, ಬ್ರಿಟಿಷರೊಡನೆ ಸಹಕರಿಸದೆ ಸಾಮ್ರಾಜ್ಯಶಾಹಿಯಿಂದ ಭಾರತವರ್ಷವನ್ನು ಹೊರಗೆಡವಲು ನಮ್ಮ ಪ್ರಯತ್ನಗಳಾಗುವುವು ಎಂದು ಪ್ರೊಫೆಸರ್ ರಂಗಾ "ಎಲ್ಲಿಂದ ಓಡಿ ಬಂದೆ ರಂಗಯ್ಯ?" ಎಂದು ಮೈಲ್ ಪತ್ರಿಕೆ ಕೇಳುತ್ತದೆ

ಬರ್ಲಿನ್:—ಜಪ್ತು!—ಟೈಮ್ಸ್ ಪತ್ರಿಕೆಯನ್ನು ಜರ್ಮನಿಯಲ್ಲಿ ಎಲ್ಲೆಲ್ಲಿಯೂ ಜಪ್ತಿಮಾಡುತ್ತಾರೆ. ಡಾ. ಡೊಲ್ಫಸನನ್ನು ಕೊಂದವರನ್ನು ಹೊಗಳಿದ ನಾಝಿಗಳನ್ನು ಟೈಮ್ಸ್ ಜರೆಯುತಿತ್ತು. 'ಬ್ರಿಟಿಷ ಸಾಮ್ರಾಜ್ಯವನ್ನು ಟೈಮ್ಸ್ ಪತ್ರಿಕಾದಿಗಳ ಎಡಿಟರರು ಉಂಟುಮಾಡಿದ್ದಲ್ಲ. ಯಾವ ನೈತಿಕ ಬಂಧನವೂ ಇಲ್ಲದ ಬ್ರಿಟಿಷರು ಸ್ಥಾಪಿಸಿದ್ದು. ಗ್ರೇಟ್ ಬ್ರಿಟನ್ನಿನ ಇತಿಹಾಸವೆಲ್ಲ ರಕ್ತಮಯ, ಉಳಿದ ಮುಖ್ಯವಾದುದು ಬ್ರಿಟಿಷರಲ್ಲಿದ್ದಷ್ಟು ರಾಜದ್ರೋಹ ಮತ್ತೆಲ್ಲಿತು?' ಎಂದು ಜರ್ಮನಿಯ ನಾಝಿಗಳ ಚುರುಮಾತು

ಇಟೆಲಿ:—ಬಂದೊಬಸ್ತ್! ಫಿರಂಗಿಗಳ ಸಂಖ್ಯೆ ಹೆಚ್ಚಿಸಿ, ಸೈನ್ಯಗಳು ಅಬಲವಾಗದಂತ ಮಾಡುವ ಪ್ಲೇನು ತಯಾರಾಗಿದೆ

ಬೊಲಿವಿಯಾ:—ರಾಜಿ! ಹತ್ತು ವರ್ಷಗಳಿಂದ ನಡೆದ ಯುದ್ಧವು ಮುಗಿದು ಪರಾಗ್ವೇಯೊಡನೆ ಒಪ್ಪಂದದ ಕರಾರುಗಳಾದುವು

ಮೆಕ್ಸಿಕೋ:—ಕಬೂಲ್! ಬ್ರಿಟಿಷರಿಗೆ ಎಣ್ಣೆಗಣಿಗಳಿಗಾಗಿ ಸಲ್ಲತಕ್ಕ ಹಣವನ್ನು ಕೊಡುವ ಸಮ್ಮತಿ ಕೊಡಲಾಗಿದೆ. ಆದರೆ ಯಾವಾಗ ಹೇಗೆ ಎಂಬುದು ಮಾತ್ರ ಮುಂದೆ ಎಂದೋ ಆಗಲಿದೆ

ಅಹ್ಮದಾಬಾದು:—ಏ ಕ್ಯಾ?—ದೇವಾಲಯ ಪವಿತ್ರ ಮಂದಿರದಲ್ಲಿ ಅಬಕಾರಿ ಪೋಲೀಸರು ಜಪ್ತಿಮಾಡಿದರೆ 60ತೊಲೆ ಭಂಗೀ ದೊರೆಯಿತು!

ಕಲ್ಕತ್ತ:—ಭಲೇ! ಮುಸ್ಲಿಮ್ ಮಂತ್ರಿಮಂಡಲದ ಪಕ್ಷವಾಗಿ ಕಲ್ಕತ್ತದ ಮುಸ್ಲಿಮರೆಲ್ಲ ಮೆರವಣಿಗೆಯಾಗಿ ಎಸೆಂಬ್ಲಿ ಮಂದಿರದ ಕಡೆಗೆ ಬರ್ತಿ ವರು. ಅದೇ ಸಮಯದಲಿ ಮಂತ್ರಿಮಂಡಲದ ವಿರುದ್ಧಪಕ್ಷವಾಗಿ ಮಜೂರ ಪಕ್ಷದ ಎಷ್ಟೋ ಸಹಸ್ರಮಂದಿ ಅಲ್ಲಿಗೇ ಮೆರವಣಿಗೆಯಾಗಿ ಬರುವರು

ಕೊಂಗ್ರೆಸ್ ಕಾರ್ಯಕಾರೀ ಮಂಡಲ. ಇದರ ಮೇಲಣ ದೂರನ್ನು ವಿಚಾರಿಸಬಾರದೇ?

(ಶ್ರೀ ಎಚ್ ಎನ್ ರಾಯರಿಂದ)

ಖಾರೇಕಾಂಡದಲ್ಲಿ ನಿರೂಪಿತವಾದ ನಾನಾ ದೂರುಗಳನ್ನು ಸಮಾಧಿಸುವ ಕೊಂಗ್ರೆಸ್‌ವಾಲರ ಸಂಖ್ಯೆ ಹೆಚ್ಚುತ್ತ ಬರುವಾಗ, ಈ ದೂರುಗಳು ಸತ್ಯಾಂಶವನ್ನು ಶೋಧಿಸಲು ಒಂದು ನ್ಯಾಯವಿಚಾರಕರ ಸಮಿತಿಯನ್ನು ಬೇಗನೆ ಸ್ಥಾಪಿಸುವುದು ಅಗತ್ಯವೆಂದು ತೋರುತ್ತದೆ

ಆ ದೂರುಗಳಲ್ಲಿ ಸಂದರ್ಭಾನುಸಾರ ದೊರೆವ ರುಜುವಾತು ಮತ್ತು ಕೆಲವು ಘಟನೆಗಳ ಸತ್ಯತೆ—ಇಷ್ಟು ನಿಜವೆಂತಾದರೆ, ಈಗ ಕೊಂಗ್ರೆಸಿನ ಮುಖಂಡರೆನಿಸಿ ಅದರ ಕಾರ್ಯಕ್ರಮವನ್ನು ಗೊತ್ತುಮಾಡುವವರು ತಮ್ಮ ಸ್ಥಾನಗಳನ್ನು ತ್ಯಜಿಸಬೇಕಾಗುವದು

ಸರಕಾರವೀಗ ಇದಕ್ಕಾಗಿ ಹೊಸ ಕಾನೂನಿನ ಮಸೂದೆಯನ್ನು ತಯಾರಿಸಿಯದೆ. ಸಮಸ್ತ ಹಿಂದುಗಳ ಸಹಾನುಭೂತಿ ದೊರೆತು ಇದು ಮಂಜೂರಾದಲ್ಲಿ, ಮುಂದೆ ಧರ್ಮಸಂಸ್ಥೆಗಳು ಆಗುವಷ್ಟು ಚೆನ್ನಾಗಿ ಸುಧಾರಣೆ ಹೊಂದಿ ಉದ್ದೇಶಕ್ಕೆ ತಕ್ಕಂತೆ ಬಾಳುವುವೆಂದು ನಂಬಬಹುದು. ಮಂತ್ರಿಯರ ಉದ್ದೇಶ ಚೆನ್ನಾಗಿದೆ, ಭಕ್ತಾದಿಯರು ಅದನ್ನು ತಿಳಿದುಕೊಳ್ಳತಕ್ಕದು.

... ಸ್ವಾತಂತ್ರ್ಯ ದಿನವನ್ನು ಸರಕಾರೀ ರಜಾದಿನವನ್ನಾಗಿ ಚಳ್ಳರಿಗೆ ತರಲೆತ್ನಿಸುವ ಮೂಲಕ ಆಕ್ಷನ್ನು ಮುರಿದಿಕ್ಕಲು ಪ್ರಯತ್ನಿಸ ಹೊರಟವರಲ್ಲೆಲ್ಲ ತಾನೊಬ್ಬನೆ ಮಂತ್ರಿ ಎಂದು ಡಾ। ಖಾರೆಯವರು ಹೇಳುವರು. ಹಾಗೆ ಅವರು ಮಾಡಿದಿಲ್ಲವೇಕೆಂದರೆ ಕೊಂಗ್ರೆಸ್ ಕಾರ್ಯಕಾರೀ ಸಮಿತಿಯು ಅವರನ್ನು ತಡೆಯಿತು. ಈ ಮಾತು ಸತ್ಯವಲ್ಲವೆಂದು ರುಜುಪಡಿಸುವ ಭಾರವು ಆ ಸಮಿತಿಯ ಮೇಲಿದೆ ಎಂದೂ ಖಾರೆಯವರೆನ್ನುತ್ತಾರೆ

ಎಲ್ಲವೂ ಅಂತರಂಗದಲ್ಲೇ, ಒಳಗಿಂದೊಳಗೇ, ಪರದೆಯ ಹಿಂದ ನಡೆಯುವ ಮೂಲಕ ಏನೂ ಹೇಳಬರುವುದಿಲ್ಲವಾಗಿ ಸಹ ಖಾರೆಯವರ ದೂರು.

ಗುಟ್ಟಿನ ಒಳಕೂಟವಿರದಂತೆ ನೋಡುವುದು ಪ್ರತಿ ಕೊಂಗ್ರೆಸ್ ಸದಸ್ಯನ ಕರ್ತವ್ಯವಾಗಿದೆ. ಕೊಂಗ್ರೆಸಿನಂತೆ ಮಹಾಜನ ಸಮೂಹದ ಸಂಸ್ಥೆಯಲ್ಲಿ ಇಂತಹ ಅಂತರಂಗ ವರ್ತನೆಗಳಿಗೆಲ್ಲ ಅವಕಾಶವಿರಲೇಬಾರದು

ಅಲಕ್ಷಿಸಲ್ಪಟ್ಟ ಹೊಟ್ಟೆನೋವುಗಳು ಪರಿಣಾಮ ಭಯಂಕರ ಶಸ್ತ್ರಚಿಕಿತ್ಸೆ

ಹೊಟ್ಟೆಸಂಕಟ ಪೀಡಿತರಾದವರನೇಕರು, ಹೊಟ್ಟೆನೋವುಗಳ ಅಲಕ್ಷ್ಯ ಮಾಡಿ—ಊಟ ಮಾಡೊಡನೆ ಉಂಟಾಗುವ ನೋವುಗಳು, ಕೊನೆಗೆ ಸರ್ಜನರ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾಯಿತು. ಆ ನೋವುಗಳು ಬರೆ ಅಜೀರ್ಣ ಸಂಬಂಧವೆಂಬ ಭಾವನೆಯಿಂದ ಆತನು ನಿರ್ಲಕ್ಷ್ಯ ಮಾಡಿ,—ಕೊನೆಗೆ ಕಠಿಣ ಪರಿಣಾಮಗಳನ್ನು ಅನುಭವಿಸುವವನಾಗುವನು

ತಿಂದ ಮೇಲೆ ನಿಮ್ಮಲ್ಲಿ ಹೊಟ್ಟೆನೋವು ಉಂಟಾಗಲು ಕಾರಣವೇನು? ಆಹಾರವು ಜೀರ್ಣವಾಗದೆ ಹೊಟ್ಟೆಯಲ್ಲಿ ಕೊಳೆಯುತ್ತಿರುವುದೆಂದು ಅದರ ಅರ್ಥ—ಹೀಗೆ ಕೊಳೆಯುತ್ತಿರುವಾಗ ಉಂಟಾದ ದ್ರಾವಕಗಳು ನಿಮ್ಮ ಹೊಟ್ಟೆ ಪದರನ್ನು ಕೆರೆಯುತ್ತವೆ. ಹೀಗೆ ಕೊರೆಯುವಿಕೆಯು ಆಗುತ್ತಾ ಕೊನೆಗೆ ಒಂದು ಅಲ್ಲಿ ವ್ರಣಗಳು ಉಂಟಾಗ ವವು ನಿಮಗೆ ಗುಣವಾಗಬೇಕೆ? ಹಾಗಾದರೆ ಆ ವ್ರಣಗಳ ಮೇಲೆ ಶಸ್ತ್ರ ಚಿಕಿತ್ಸೆಯು ನಡೆಯಲೇ ಬೇಕು.

ಹೊಟ್ಟೆಯೊಳಗೆ ವ್ರಣಗಳುಂಟಾಗುವಂತೆ ತಪ್ಪಿಸ ಬೇಕಾದರೆ ತಿಂದೊಡನೆ ನಿಮ್ಮ ಹೊಟ್ಟೆಯೊಳಗೆ ನೋವು ಕಾಣಿಸಿಕೊಂಡರೆ ಒಂದ ಡೋಸ್ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಸೇವಿಸಿರಿ. ಹೊಟ್ಟೆಯೊಳಗಿರುವ ದ್ರಾವಕದ ಕೊರೆಯುವ ಗುಣವನ್ನು ಅದು ನಾಶಮಾಡುವುದು, ಹೊಟ್ಟೆಯೊಳಗೆ ಕೊಳೆಯುತ್ತಿರುವ ಆಹಾರವನ್ನು ಹೊರಗೆ ತಳ್ಳಿಬಿಡುವುದು. ತಿಂದ ನಂತರ ಹೊಟ್ಟೆನೋವನ್ನು ಅನುಭವಿಸಿದ್ದ ನೂರಾರುಮಂದಿ ಸ್ತ್ರೀಪುರುಷರು ಈ ತರದಲ್ಲಿ ತಮ್ಮ ಸಂಕಟ ನಿವಾರಣೆಯನ್ನು ಮಾಡಿರುವರು! ಇಂದೆ ಒಂದು ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರಿನ ಬಾಟ್ಲಿಯನ್ನು ಪಡೆಕೊಳ್ಳಿರಿ

ಎಂಬ ಸಹಿಯು ಪೆಟ್ಟಿಗೆಯ ಮೇಲೂ, ಅದೇ ಸಹಿಯಿಂದ ಕೂಡಿದ ಕೆಂಪು ಮುದ್ರೆವುಳ್ಳ ಬಾಟಿಯಲ್ಲಿ ಬರುವ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಪಡೆಕೊಂಡು ನಿಮಗೆ ಖಾತ್ರಿ ಮಾಲು ದೊರಕಿರುವುದೆಂದು ಖಚಿತ ಮಾಡಿಕೊಳ್ಳಿರಿ. ಅದು ಚಿಲ್ಲರೆಯಾಗಿ ಮಾರಾಟವಾಗುವುದಿಲ್ಲ. ಪೌಡರು ಯಾ ಮಾತ್ರೆ ರೂಪದಲ್ಲಿ. ಸುಲಭ ಬೆಲೆ ಇಮಿಟೇಶನ್ ಮಾಲಿನಿಂದ ನಿಮಗೆ ಗುಣಲಾಭ ದೊರಕದು. ಸಂಕಟವು ಇನ್ನೂ ಹೆಚ್ಚಾಗಬಹುದು. ಎಲ್ಲಾ ದವಾಖಾನೆಗಳಲ್ಲಿ ಮತ್ತು ಸ್ಟೋರ್ಸ್‌ಗಳಲ್ಲಿ ದೊರಕುತ್ತದೆ

ತೀರ್ಥ-ಯಾತ್ರೆಗಳು

ತೀರ್ಥವೆಂಬ ಶಬ್ದವು ಉದ್ಧಾರ ಮಾಡ ತಕ್ಕ ಶಕ್ತಿಯುಳ್ಳದೆಂಬ ವಿಶಿಷ್ಟಾರ್ಥದಿಂದ ಗ್ರಥಿತವಾದದ್ದಿರುತ್ತದೆ. ಆದುದರಿಂದ ಈ ಶಬ್ದದ ಶ್ರವಣಮಾತ್ರದಿಂದ ಮನುಷ್ಯನಲ್ಲಿ ಪವಿತ್ರ ಭಾವನೆಯುಂಟಾಗುವುದು ಸ್ವಾಭಾವಿಕ. ಇದರಂತೆ ತೀರ್ಥವೆಂದ ಕೂಡಲೆ ಅದು ಯಾವದೊಂದು ಪವಿತ್ರನದಿ, ಸರೋವರ ಅಥವಾ ಕುಂಡಗಳ ನೀರು, ದೇವಪ್ರತಿಮೆ ಹಾಗೂ ಸಾಲಿಗ್ರಾಮಗಳನ್ನು ಪೂಜಿಸಿದ ನೀರು, ಸಾಧುಗಳ ಮತ್ತು ಗುರುಗಳ ಚರಣಗಳನ್ನು ಪ್ರಕ್ಷಾಲನ ಮಾಡಿದ ನೀರು ಆಗಿರಬೇಕೆಂಬ ತಿಳುವಳಿಕೆಯು ನಮ್ಮಲ್ಲಿ ಹುಟ್ಟುತ್ತದೆ. ಇದರಿಂದ ನಾವು ತಿಳಕೊಳ್ಳುವುದೇನೆಂದರೆ ಪವಿತ್ರಯೋಗವುಳ್ಳ ಜಲವೇ ತೀರ್ಥ. ದೇವಸಾನ್ನಿಧ್ಯದಿಂದಾಗಲಿ ಸಜ್ಜನರ ಸಾನಿಧ್ಯದಿಂದಾಗಲಿ ಯಾವ ಜಲಾಶಯವು ಅಥವಾ ಜಲವು ಪವಿತ್ರವಾಗಿರುವುದೋ ಅದೇ ತೀರ್ಥವೆನಿಸಲ್ಪಡುತ್ತದೆ.

ತೀರ್ಥಗಳ ಉತ್ಪತ್ತಿಗೆ ಸಾಧುಗಳೇ ಕಾರಣರು. ಪರಮ ಪವಿತ್ರವಾದ ಗಂಗೆಯು ಭಗೀರಥರಾಯನ ತಪಶ್ಚರ್ಯದಿಂದಲೇ ಭೂಲೋಕಕ್ಕೆ ಇಳಿದುಬಂದಳು. ಆದುದರಿಂದಲೇ ಗಂಗೆಗೆ ಭಾಗೀರಥಿ ಎಂದು ಹೆಸರು ಬಂದಿರುವುದು. ಯಮುನಾನದಿಯು ಸೂರ್ಯನ ಪತಿಯಾದ ಸಂಜ್ಞಾದೇವಿಯಿಂದ ಉದ್ಭವಿಸಿದಳು. ಹೀಗೆಯೇ ಎಲ್ಲಾ ಪವಿತ್ರನದಿಗಳೂ ಸಾಧುಗಳ ತಪಃಪ್ರಭಾವದಿಂದ ತೀರ್ಥಗಳೆನಿಸಿಕೊಂಡವು. ಕೆಲವು ತೀರ್ಥಗಳ ಉತ್ಪತ್ತಿಗಳನ್ನು ಕುರಿತು ಶಾಪಗ್ರಸ್ತರಾದ ಪುಣ್ಯವ್ಯಕ್ತಿಗಳು ನದೀರೂಪಗಳಿಂದ ಭೂಲೋಕದಲ್ಲಿ ವಾಸಮಾಡುತ್ತಾರೆಂದು ಪುರಾಣಗಳು ಹೇಳುತ್ತವೆ. ಈ ತೀರ್ಥಗಳಲ್ಲಿ ಒಂದು ಮಹತ್ವಾದ ಶಕ್ತಿಯೂ ಇರುತ್ತದೆ. ಕೆಲವು ತೀರ್ಥಗಳಿಂದ ಪಿತ್ತವು ಉಪಶಮನವಾಗುವುದು, ಕೆಲವು ಉಷ್ಣವನ್ನು ನಿವಾರಣೆ ಮಾಡುವುವು, ಮತ್ತು ಕೆಲವು ಶೀತಬಾಧೆಯನ್ನು ತೊಲಗಿಸುವುವು. ಈ ತೀರ್ಥಗಳಲ್ಲಿ ಖನಿಜ ದ್ರವ್ಯಗಳ ಕೂಡಿರುವುವು. ಆದುದರಿಂದ ತೀರ್ಥಸ್ನಾನವು ದೇಹಾರೋಗ್ಯಕ್ಕೆ ತಕ್ಕದೊಂದ ಚಿಕಿತ್ಸೆಯೆನ್ನಬಹುದು. ಇವೆಲ್ಲ ತೀರ್ಥಗಳಲ್ಲಿ ಗಂಗೆಯೇ ಪ್ರಸಿದ್ಧವೆನಿಸುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಶ್ರೇಷ್ಠವಾದುದು ಕಾಶೀಕ್ಷೇತ್ರವೇ.

ನಮ್ಮ ಹಿರಿಯರ ಕಾಲದಿಂದ ಈ ತೀರ್ಥಯಾತ್ರೆಗಳೆಡೆಗೆ ಬಹಳ ವಿಶೇಷವೆನಿಸುತ್ತವೆ. ಅವರು ಬಹಳ ಶ್ರದ್ಧೆ ಪಟ್ಟು ಶ್ರದ್ಧೆಯಿಂದ ತೀರ್ಥಯಾತ್ರೆಗಳನ್ನು ಮಾಡುತ್ತಿದ್ದರು. ಆ ಕಾಲದಲ್ಲಿ ರೈಲು ಮತ್ತು ಮೋಟಾರು ವ್ಯಾರೆ ಇರಲಿಲ್ಲ. ಪ್ರಯಾಣಿಕರು ಅತಿ ಕಷ್ಟದಿಂದ ಯಾತ್ರೆಗಳನ್ನು ಮಾಡುತ್ತಿದ್ದರು. ದಾರಿಯಲ್ಲಿ ಕಳ್ಳರ ಭಯ. ಕಾಶಿಗೆ ಹೋಗಿ ತಿರುಗಿ ಮನೆಗೆ ಬರುವುದಕ್ಕೆ ಒಂದೆರಡು ವರ್ಷಗಳು ಬೇಕಾಗಿದ್ದವು. ತಿರುಗಿ ಮನೆಗೆ ಬಂದೇವೆಂಬ ಧೈರ್ಯ ಅವರಲ್ಲಿರಲಿಲ್ಲ. ಆದರೂ ಅವರು ದೃಢವಿಶ್ವಾಸ ಹಾಗೂ ಭಕ್ತಿಯಿಂದ ಯಾತ್ರೆ ಮಾಡುತ್ತಿದ್ದರು. ಈಗಲಾದರೋ ಯಾತ್ರೆಗೆ ಹೋಗಲಿಕ್ಕೆ ರೈಲು, ಮೋಟಾರುಗಳ ಅನುಕೂಲಗಳಿವೆ. ಯಾತ್ರೆಗೆ ಹೋಗುವವರಿಗೆ ಅಲ್ಲಲ್ಲಿ ಸತ್ರಗಳು ಇವೆ. ನಡೆದುಹೋಗಬೇಕಾಗಿಲ್ಲ. ದಾರಿಯಲ್ಲಿ ಕಳ್ಳರ ಭಯವಿಲ್ಲ. ಹಿಂದಣ ಕಾಲದಂತೆ ಹೆಚ್ಚು ದ್ರವ್ಯವಾದರೂ ಬೇಡ, ಎಲ್ಲಾ ತರದ ಸೌಕರ್ಯಗಳು ಇವೆ. ಆದರೆ ಹೆಚ್ಚು ಜನರಲ್ಲಿ ಈಗಣ ಪಾಶ್ಚಿಮಾತ್ಯ ವಿದ್ಯೆಯಿಂದ ಭಕ್ತಿ, ಶ್ರದ್ಧೆ ಕಡಿಮೆಯಾಗಿ ಯಾತ್ರೆಗಳಲ್ಲಿ ವಿಶ್ವಾಸವಿಲ್ಲ. ದೃಢ ವಿಶ್ವಾಸವಿಲ್ಲದೆ ತೀರ್ಥಯಾತ್ರೆಗಳಿಂದ ಪ್ರಯೋಜನವು ಸಿಗಲಾರದು. ಅಂಥಾ ಭಾವನೆ ಇಲ್ಲದೆ ಬರಿದೆ ತೀರ್ಥದಲ್ಲಿ ಮುಳುಗಿದರೆ ಅಥವಾ ದೇವದರ್ಶನ ಮಾಡಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಈ ತೀರ್ಥಕ್ಷೇತ್ರಗಳಲ್ಲಿ ಸಾಧುಗಳ ಪಾದಸ್ಪರ್ಶದಿಂದಲೂ ಅವರ ವಾಸ್ತವ್ಯದಿಂದಲೂ, ಪವಿತ್ರವಾದ ಯೋಗ್ಯತೆಯು ಬಂದಿರುತ್ತದೆ. ಆ ಕ್ಷೇತ್ರಗಳ ಮಣ್ಣು ಪವಿತ್ರವೆನಿಸುತ್ತದೆ ಮಾತ್ರವಲ್ಲ, ಅಲ್ಲಿಯ ಗಾಳಿಯು ಕೂಡಾ ನಿರ್ಮಲವಾಗಿಯದೆ. ಅಂಥಾ ಸ್ಥಳಗಳ ದರ್ಶನಮಾತ್ರದಿಂದಲೇ ಪ್ರಾಣಿಗಳಲ್ಲಿ ಸದ್ಬುದ್ಧಿಯು ಹುಟ್ಟುತ್ತದೆ. ನಮ್ಮಲ್ಲಿದ್ದ ದುರ್ಗುಣಗಳನ್ನು ತ್ಯಜಿಸುವುದಕ್ಕಾಗಿಯೇ ತೀರ್ಥಯಾತ್ರೆಗಳನ್ನು ಮಾಡತಕ್ಕದ್ದು. ಹೃದಯವು ಶುದ್ಧವಾಗಿ ಚಿತ್ತಶುದ್ಧಿಯಿಂದ ಯಾತ್ರೆಗೆ ಹೋಗುವವರು ತಮ್ಮಲ್ಲಿ ಬಾಧಕವಿರುವ ದುರ್ಗುಣಗಳನ್ನು ಬಿಡಬೇಕೆಂದು ನಿಯಮವಿರುವದು. ಅದು ಈಗ ಸುಧಾರಣೆಹೊಂದಿ ತಮಗೆ ಸೇರದ ಯಾವುದಾದರೊಂದು ಪದಾರ್ಥವನ್ನು ಬಿಟ್ಟುಬಿಡುವದರಲ್ಲಿ ರೂಪಾಂತರಿಸಿಯದೆ. ಹೃದಯದಲ್ಲಿರುವ ದುರ್ಗುಣಗಳನ್ನು ಬಿಡದೆ ಯಾವುದಾದರೊಂದು ಕಾಯಿಪಲ್ಲೆ ಅಥವಾ ಹಣ್ಣುಹಂಪಲುಗಳನ್ನು ಬಿಟ್ಟರೆ ಏನು ಪ್ರಯೋಜನ? ದುರ್ಗುಣಗಳನ್ನು ಬಿಟ್ಟರೇನೇ ನಿಜವಾದ ತೀರ್ಥಗಳ ಮಹತ್ವವನ್ನು ತಿಳಿದಂತಾಗುವುದು. ತೀರ್ಥಗಳ ದರ್ಶನ, ಅಲ್ಲಿಯ ಸ್ಥಳ ಮಾಹಾತ್ಮ್ಯ, ಸಾಧುಗಳ ದರ್ಶನ ಮೊದಲಾದುವುಗಳಿಂದ ಮನುಷ್ಯನ ಮನಸ್ಸು ಆ ಪವಿತ್ರ ಸ್ಥಳಗಳಲ್ಲಿ ಶಾಂತಿಯನ್ನು ಹೊಂದುತ್ತದೆ. ಮನಸ್ಸಿಗೆ ಶಾಂತಿ ದೊರಕುವುದೇ ಸತ್ಕರ್ಮಗಳನ್ನು ಮಾಡುವುದರ ಗುರುತು. ಒಟ್ಟಾರೆ ತೀರ್ಥಕ್ಷೇತ್ರಗಳಲ್ಲಿ ಭಗವತ್ಸಾನಿಧ್ಯವಿರುತ್ತದೆ. ಭಕ್ತಿಯಿಂದ ಅಲ್ಲಿಗೆ ಹೋದ ಮನುಷ್ಯನಿಗೆ ಏನಾದರೂ ಲಾಭವಾಗದೆ ಹೋಗುವದಿಲ್ಲ. ಯಾತ್ರಿಕರಿಗೆ ನಾನಾ ದೇಶಗಳ ಸಂಚಾರದಿಂದ ವ್ಯವಹಾರ ಚತುರತೆಯೂ, ಜ್ಞಾನವೂ ಆಗುವದೆಂಬುದು ಖಂಡಿತ.

ಇಂಥಾ ಕ್ಷೇತ್ರಗಳಲ್ಲಿ ಮಾಡತಕ್ಕ ಎರಡು ವಿಧಿಗಳಿವೆ. ಮೊದಲನೆಯದು ಕ್ಷೌರವಿಧಿ, ಎರಡನೆಯದು ಶ್ರಾದ್ಧವಿಧಿ. ತೀರ್ಥಕ್ಷೇತ್ರಗಳಲ್ಲಿರುವ ಪ್ರಸಿದ್ಧ ದೇವಸ್ಥಾನಗಳಲ್ಲಿ ದೇವರಿಗೆ ಅಭಿಷೇಕ ಅರ್ಚನಾದಿಗಳನ್ನು ಸಹ ಮಾಡಿಸುತ್ತಾರೆ. ಕ್ಷೌರವಿಧಿಯಿಂದ ಮನುಷ್ಯನ ದೇಹದಲ್ಲಿ ಪವಿತ್ರತೆಯುಂಟಾಗುತ್ತದೆ. ಶ್ರಾದ್ಧವಿಧಿಯಿಂದ ಪಿತೃಗಳ ಉದ್ಧಾರವಾಗುತ್ತದೆ. ಶ್ರದ್ಧೆಯಿಂದ ಮಾಡುವುದೇ ಶ್ರಾದ್ಧವು. ನಮ್ಮ ಜನ್ಮದಾರಭ್ಯ ಕಷ್ಟಪಟ್ಟು ನಮ್ಮನ್ನು ಸಂರಕ್ಷಿಸಿದ ತಂದೆತಾಯಿಗಳನ್ನು ಅವರ ಜೀವಂತನಾಗಿರುವಾಗ ಮಾತ್ರವಲ್ಲ, ಅವರ ಸತ್ತನಂತರವೂ ಅವರನ್ನು ಮರೆಯಬಾರದೆಂಬುದಕ್ಕಾಗಿ ಶ್ರಾದ್ಧಗಳನ್ನು ಅವರ ಸ್ಮಾರಕವೆಂದು ಧರ್ಮದಲ್ಲಿ ಸಮಾವೇಶಮಾಡಿರುವರು. ಮನುಷ್ಯನು ತನ್ನ ಸ್ವಾರ್ಥಕ್ಕಾಗಿಯೇ ತೀರ್ಥಾಟನೆಯನ್ನು ಮಾಡದೆ ಪಿತೃಗಳ ಉದ್ಧಾರಕ್ಕೂ ಮಾಡಬೇಕಾಗುವುದು. ತೀರ್ಥಾಟನೆ ಮಾಡತಕ್ಕವರ ಪಿತೃಗಣಗಳೆಲ್ಲರೂ ಸದ್ಗತಿಯನ್ನು ಹೊಂದುತ್ತಾರೆಂಬ ನಿಯಮವಿಲ್ಲ. ಯಾವ ಪಿತೃಗಳು ಕ್ಷೀಣಪಾಪರಾಗಿರುವರೋ ಅವರಿಗೆ ತೀರ್ಥಶ್ರಾದ್ಧದಿಂದ ಸದ್ಗತಿಯಾಗುವದು. ಒಬ್ಬ ಮನುಷ್ಯನು ಅಪರಾಧವಮಾಡಿ ತನಗೆ ಅಧಿಕಾರ ವಿಧಿಸಿದ ದಂಡನನ್ನು ಕೊಡದೆ ಕಾರಾಗೃಹಕ್ಕೆ ಹೋದರೆ ಆತನ ಮಗನು ಆ ದಂಡವನ್ನು ತೆರುತ್ತಲಿ ತಂದೆಯು ಕಾರಾಗೃಹದಿಂದ ಬಿಡುಗಡೆ ಹೊಂದದಿರನು. ಇದು ಪ್ರತ್ಯಕ್ಷ ವ್ಯವಹಾರವು, ಅಪ್ರತ್ಯಕ್ಷ ವ್ಯವಹಾರವೂ ಹಾಗೆಯೇ. ಪಾಪಿಷ್ಠ ತಂದೆಯ ಮಗನು ಪುಣ್ಯಕರ್ಮಗಳನ್ನಾಚರಿಸಿದರೆ ಆ ಪುಣ್ಯದಲ್ಲಿ ತಂದೆಗೆ ಭಾಗ್ಯವು ಸಿಗುವುದು. ಇದು ಪರಮಾತ್ಮನ ನಿಯಮವು. ಈ ನಿಯಮವನ್ನು ನಾವು ಪುರಾಣಗಳಿಂದ ತಿಳಕೊಳ್ಳಬಹುದು. ಆದುದರಿಂದ ಮಗನು ತೀರ್ಥಶ್ರಾದ್ಧವನ್ನು ಮಾಡಿದರೆ ತಂದೆಗೆ ಸದ್ಗತಿ ದೊರೆಯದಿರಲಾರದು.

ತೀರ್ಥಯಾತ್ರೆಯಲ್ಲಿ ಮನುಷ್ಯನಿಗೆ ವಿಶ್ವಾಸ ಮತ್ತು ಭಕ್ತಿ ಮುಖ್ಯವಿರಬೇಕು. ಇದರ ವಿಷಯವಾಗಿ ಒಂದು ಕಥೆ ಇದೆ— ಪ್ರಸಿದ್ಧವಾದ ಕಾಶೀಕ್ಷೇತ್ರದಲ್ಲಿ ಮಹೋದಯದ ಪರ್ವಕಾಲ. ಲಕ್ಷಾಂತರ ಜನರು ಗಂಗಾಸ್ನಾನಕ್ಕಾಗಿ ಕೂಡಿರುತ್ತಾರೆ. ಕೆಲವರು ಶ್ರಾದ್ಧಕರ್ಮಗಳನ್ನು ಮಾಡುತ್ತಾರೆ. ಇನ್ನು ಕೆಲವರು ಸ್ನಾನ ಮಾಡುತ್ತಾರೆ. ಕೆಲವರು ಕೃತ್ಯಕರ್ಮಗಳನ್ನು ಮಾಡುತ್ತಾರೆ. ಆ ಸಮಯದಲ್ಲಿ ಶಂಕರನು ತನ್ನ ಪತ್ನಿಯಾದ ಪಾರ್ವತಿಯೊಡನೆ ನಂದಿಯ ಮೇಲೆ ಕುಳಿತು ಆಕಾಶಮಾರ್ಗವಾಗಿ ಹೋಗುತ್ತಿದ್ದನು. ಆ ಸಮಯದಲ್ಲಿ ಗಂಗೆಯ ತೀರದಲ್ಲಿ ಲಕ್ಷಾಂತರ ಜನರು ಕೂಡಿದ್ದನ್ನು ಪಾರ್ವತಿಯು ಕಂಡು ಪತಿಯನ್ನು ಕುರಿತು ಇವರು ಹೀಗ ನೆರೆದಿರಲು ಕಾರಣವೇನೆಂದು ಕೇಳಿದಳು. ಅದಕ್ಕೆ ಶಂಕರನು ಪಾರ್ವತಿಯನ್ನು ಕುರಿತು 'ಇದು ಮಹೋದಯ ಪರ್ವಕಾಲವು. ಈ ಪರ್ವಕಾಲದಲಿ ಪುಣ್ಯಕರ್ಮಗಳನ್ನು ಮಾಡುವದಕ್ಕೆ ಗಂಗಾತೀರಕ್ಕೆ ಜನರು ಬಂದಿರುವರು. ಇಂಥ ಯೋಗವು ಪುಣ್ಯದಿನಗಳಿಗೆ ಸಿಗುವುದು ದುರ್ಲಭ. ಸಾಮಾನ್ಯ ದಿನಗಳಲ್ಲಿ ಗಂಗಾಸ್ನಾನ ಮಾಡಿದುದರಿಂದಲೇ ಮನುಷ್ಯನು ಬಹಳ ಪುಣ್ಯವನ್ನು ಹೊಂದುತ್ತಾನೆ, ಅಂದ ಮೇಲೆ ಇಂಥಾ ಪುಣ್ಯದಿನದಲ್ಲಿ ಗಂಗಾನದಿಯಲ್ಲಿ ಸ್ನಾನಮಾಡಿದರೆ ಎಷ್ಟು ಪುಣ್ಯವು ಲಭಿಸುವದೆಂದು ನೀನೇ ಆಲೋಚಿಸು'' ಎಂದು ಹೇಳಿದನು. ಆಗ ಪಾರ್ವತಿಯು ಆಶ್ಚರ್ಯಗೊಂಡು ಹಾಗಾದರೆ ಇಷ್ಟು ಜನರಿಗೂ ಮುಕ್ತಿ ಸಿಗುವದಲ್ಲವೇ? ಇವರೆಲ್ಲರೂ ಕೈಲಾಸಕ್ಕೆ ಬಂದರೆ ನಾವು ಕೈಲಾಸ ಬಿಟ್ಟು ಹೋಗಬೇಕಾಗದೆ? ಎಂದು ವಿನೋದ ಮಾಡಿದಳು. ಅದಕ್ಕೆ ಶಂಕರನು ನಕ್ಕು "ಪ್ರಿಯೇ ಇಲ್ಲಿ ಕೂಡಿದ ಇಷ್ಟು ಜನರೂ ಮುಕ್ತಿ ಹೊಂದುವರೆಂದು ತಿಳಿಯಬೇಡ. ಈ ಜನರೆಲ್ಲರೂ ಸತ್ಪಾತ್ರರೆಂದು ತಿಳಿಯಬೇಡ. ಕೆಲವರು ವಿನೋದಕ್ಕಾಗಿ ಬಂದಿರುವರು. ಕೆಲವರು ದ್ರವ್ಯ ಸಂಪಾದನೆಗಾಗಿ ಬಂದಿರುವರು. ಕೆಲವರು ಸುಂದರ ಒಡವೆಗಳನ್ನು ನೋಡಿ ತಮ್ಮ ನೇತ್ರಗಳನ್ನು ತೃಪ್ತಿಗೊಳಿಸುವುದಕ್ಕಾಗಿ ಬಂದಿರುವರು. ಪುಣ್ಯಸಾಧನೆಗಾಗಿ ಬಂದವರು ಬಹಳ ಕಡಮೆ. ಬೇಕಾದರೆ ಇದರ ದೃಷ್ಟಾಂತವನ್ನು ನಿನಗೆ ತೋರಿಸುತ್ತೇನೆ'' ಎಂದನು. ವಿಶ್ವೇಶ್ವರನ ಗುಡಿಯ ಮುಂದೆ ಒಬ್ಬ ತರುಣಿಯು ಒಂದು ಹೆಣವನ್ನು ಮುಂದಿಟ್ಟುಕೊಂಡು ಒಂದೇ ಸಮನೆ ರೋದಿಸುತ್ತಿದ್ದಳು. ಆಕೆಯು ವಿಶ್ವೇಶ್ವರನನ್ನು ಪೂಜಿಸಿ ಮರಳುವ ಜನರನ್ನು ಕುರಿತು— "ಸ್ವಾಮಿ, ಈ ಮಹೋದಯ ಪರ್ವಕಾಲದಲ್ಲಿ ಗಂಗಾಸ್ನಾನ ಮಾಡಿ ಶ್ರೀ ವಿಶ್ವೇಶ್ವರನ ದರ್ಶನ ಮಾಡಿದ್ದರಿಂದ ನೀವು ಪುಣ್ಯಶಾಲಿಗಳಾಗಿರುವಿರಿ. ಇದರಲ್ಲಿ ಯಾರಾದರೂ ನನ್ನ ಗಂಡನನ್ನು ಸ್ಪರ್ಶಿಸಿದರೆ ಈತನು ಸಜೀವನಾಗುವನು'' ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದಳು. ಅವಳ ಆರ್ತಧ್ವನಿ ಕೇಳಿದವರಲ್ಲಿ ಎಷ್ಟೋ ಜನರ ಹೃದಯವು ಕರಗಿಹೋಯಿತು. ಆದರೆ ಶವವನ್ನು ಬದುಕಿಸುವ ಧೈರ್ಯವು ಯಾರಿಗೂ ಇಲ್ಲ. ಈ ಗಂಗಾ ಸ್ನಾನದಿಂದಲೂ ಶ್ರೀ ವಿಶ್ವೇಶ್ವರನ ದರ್ಶನದಿಂದಲೂ ತನಗೆ ಪುಣ್ಯವು ದೊರೆಯುವದೋ ಎಂಬ ಸಂಶಯ. ಪ್ರತಿ ಒಬ್ಬನಲ್ಲಿ ಇತ್ತು. ಹಾಗಾಯಿತೆನಿಸಿ ಅಲ್ಲಿ ನೆರೆದವರೆಲ್ಲರೂ ಅಲ್ಲಿಂದ ತೆರಳಿದರು. ಹೀಗೆ ಇಡೀ ರಾತ್ರಿಯಾಗಿದೆ ಸೂರ್ಯೋದಯವಾಯಿತು. ಅಷ್ಟರಲ್ಲಿ ಕೈಯಲ್ಲಿ ಗಂಗೋದಕದ ಪಾತ್ರವನ್ನು ಹಿಡಿದ ಒಬ್ಬ ಸ್ತ್ರೀ ಅಲ್ಲಿಗೆ ಬಂದಳು. ಆಕೆಯು ವಿಶ್ವೇಶ್ವರನನ್ನು ಪೂಜಿಸಿ ಬಂದು ... ಕಂಡಳು. ... ಆ ಸ್ತ್ರೀಯು ... ತಾಳಿ ದೇವರನ್ನು ಸ್ಮರಿಸಿ ಆ ಶವವನ್ನು ಮುಟ್ಟಿದಳು. ತಕ್ಷಣವೇ ಶವವು ಎದ್ದು ಕುಳಿತುಕೊಂಡಿತು. ಆ ಸ್ತ್ರೀಯು ತನ್ನ ಮನೆಗೆ ಹೋಗಲಿಕ್ಕೆ ತಿರುಗಿದಳು. ಆಗ ಅಲ್ಲಿ ಒಂದು ಆಶ್ಚರ್ಯವಾಯಿತು. ಆ ತರುಣಿಯು ಆಕೆಯ ಕೂಡ ಶವವೂ ಅಲ್ಲಿ ಇಲ್ಲದೆ ಕೈಲಾಸಪತಿ ಶಂಕರನು ಪಾರ್ವತಿಯೊಡನೆ ಆ ಸ್ತ್ರೀಯ ಮುಂದೆ ಪ್ರತ್ಯಕ್ಷನಾದನು. ಆಗ ಶಂಕರನು ಪಾರ್ವತಿಯನ್ನು ಕುರಿತು "ಲಕ್ಷಾಂತರ ಜನರ ಕೂಡಿದ್ದಲ್ಲಿ ಇವಳು ಮಾತ್ರ ಮುಕ್ತಿಯನ್ನು ಹೊಂದಲಿಕ್ಕೆ ಯೋಗ್ಯಳಾದಳು. ನನ್ನ ಹೆಂಡತಿ ಇವಳಿಗೆ ಬೇರೆ ಅಭಿಲಾಷೆಯಿಲ್ಲ. ಗಂಗಾ ಸ್ನಾನಮಾಡಿದುದರಿಂದ ಪಾಪವೆಲ್ಲಾ ತೊಲಗುವದು ಎಂಬ ದೃಢ ವಿಶ್ವಾಸವು ಇವಳಲ್ಲಿದೆ. ಯಾರ ಯಾರು ಎಷ್ಟೆಷ್ಟು ವಿಶ್ವಾಸದಿಂದ ಯಾತ್ರೆಗೆ ಬಂದಿರುವರೆಂದು ನಿನಗೆ ಈಗ ತಿಳಿಯಿತೇ''? ಎಂದನು. ಅಷ್ಟರೊಳಗೆ ವಿಮಾನವು ಬಂತು, ಆ ಸ್ತ್ರೀಯನ್ನು ಅದರಲ್ಲಿ ಶಂಕರನ ಕೈಲಾಸಕ್ಕೆ ಕಳುಹಿಸಿದನು. ಈ ಕಥೆಯಿಂದ ನಾವು ಇನ್ನೂ ಏನನ್ನು ತಿಳಕೊಳ್ಳಬೇಕೆಂದರೆ ಮೀನುಗಳು ತೀರ್ಥಗಳಲ್ಲಿ ದಿನಾಲೂ ಸ್ನಾನ ಮಾಡುತ್ತವೆ, ಕಾಗೆಗಳು ಮೈತೊಳೆದುಕೊಳ್ಳುತ್ತವೆ, ನಾಯಿಗಳು ಹಾಗೂ ಇತರ ಜಂತುಗಳು ತೀರ್ಥಗಳ ನೀರನ್ನು ಕುಡಿಯುತ್ತವೆ. ಅವೆಲ್ಲಾ ಸದ್ಗತಿಯನ್ನು ಹೊಂದುವದಿಲ್ಲ. ಯಾಕೆಂದರೆ ಅವುಗಳ ಕೇವಲ ಅಜ್ಞಾನವೇ ಕಾರಣ. ಮನುಷ್ಯನೂ ಅಜ್ಞಾನದಿಂದ ಹಾಗೆಯೇ ಮಾಡಿದರೆ ಅವನಿಗೆ ಮುಕ್ತಿ ಎಲ್ಲಿಂದ? ಆದುದರಿಂದ ಮನುಷ್ಯನು ಭಕ್ತಿ, ಪ್ರೇಮ, ಶ್ರದ್ಧೆಗಳಿಂದ ತೀರ್ಥಾಟನೆಯನ್ನು ಮಾಡಿದರೆ ಮಾತ್ರ ಅದರ ಪ್ರಯೋಜನಗಳನ್ನು ಹೊಂದುವನು.

ರಾಮದಾಸ.



'ಶ.ದು.' (ಶರೀರದ ದುರ್ಗಂಧ)ದಿಂದ ನಿಮ್ಮನ್ನು ಕಾಪಾಡಿಕೊ

ಅನೇಕರು ತಮ್ಮ ಕೆಲಸದಲ್ಲಿಯೂ ಮತ್ತು ತಮ್ಮ ಗೃಹಕೃತ್ಯದ ವ್ಯಾಪಾರದಲ್ಲಿಯೂ ಶರೀರ ದುರ್ಗಂಧಕ್ಕೋಸ್ಕರ ಕಷ್ಟಪಟ್ಟವರಾಗಿದ್ದಾರೆ. ಅನನುಕೂಲದ ಸ್ಥಳಗಳಲ್ಲಿ ತಮಗೆ ತಿಳಿಯುವ ಮೊದಲೇ ಇತರರನ್ನು ಕೋಪಗೊಳಿಸುವುದು ಬಹಳ ಸುಲಭ. ಬೆವರು ಸಹಜವಾದ್ದು ಮತ್ತು ಆರೋಗ್ಯವಾದ್ದು ಮತ್ತು ಅದರಷ್ಟಕ್ಕೆ ಅದು ಅಸಹ್ಯಕರವಾದ್ದಲ್ಲ. ಆದರೆ ಚರ್ಮದ ರಂಧ್ರಗಳನ್ನು ಮುಚ್ಚಿ ಹಳಸುವುದಕ್ಕೆ ಬಿಟ್ಟರೆ ಶೀಘ್ರದಲ್ಲಿಯೇ ಶರೀರ ದುರ್ಗಂಧಕ್ಕೆ ಕಾರಣವಾಗುತ್ತದೆ. ಆದಾಗ್ಯೂ ತನ್ನ ಜೀವನ ಸ್ಥಿತಿಯನ್ನು ಕಾಪಾಡಿಕೊಳ್ಳುವುದಕ್ಕೆ ಒಂದು ಸುಲಭವಾದ ಸುಲಭೋಪಾಯ ಉಂಟು—ತಪ್ಪದೆ ಲೈಫ್‌ಬಾಯ್ ಟಾಯ್‌ಲೆಟ್ ಸೋಪನ್ನು ಉಪಯೋಗಿಸುವಿಕೆ. ಅದು ಆರೋಗ್ಯಪ್ರದವಾದ ಕ್ರಿಮಿಹಾರ ಅಂಶವನ್ನು ಹೊಂದಿದೆ ಮತ್ತು ಚರ್ಮದ ರಂಧ್ರಗಳ ತಳದವರೆಗೂ ಶುದ್ಧಿಮಾಡಿ ಹಳಸು ಬೆವರನ್ನೆಲ್ಲಾ ಹೋಗಲಾಡಿಸುತ್ತದೆ.

ಲೈಫ್ ಬಾಯ್ ಟಾಯ್‌ಲೆಟ್ ಸೋಪ್

'ಶ.ದು.' (ಶರೀರ ದುರ್ಗಂಧ) ನಿಲ್ಲಿಸುತ್ತದೆ

ಸಂಪೂರ್ಣವಾಗಿ ಇಂಡಿಯಾದೇಶದಲ್ಲಿ ತಯಾರಾದ್ದು

X-LBT 673-50 LEVER BROTHERS (INDIA) LIMITED KANARESE

DIAMONDS! DIAMONDS!
BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬತ್ತ ಗುಡ್ಡ ಮು.	1—14	1—14
ರಾಶಿ ಅಕ್ಕಿ ...	3—8	4—0
ಸುಗ್ಗಿ ...	4—0	4—8
ಗುಡ್ಡು ...	4—10	4—10
ಊರ ಅಚ್ಚಲ್ ಬೆಲ್ಲ ...	4—7	4—7
ರಂಗೂನು ಬೆ. ಗೋ. ಗಳ್ಳ...	7—2	7—4
ಎಲ್ಲೂರು ಬೆ. ಮು. ಗಳ್ಳ...	3—14	4—0
ಗೋದಿ ಗೋಣಿ ಗಳ್ಳ ...	13—0	14—8
ಕೊಗಂ ಗೋಣಿ ಗಳ್ಳ ...	11—8	18—8
ಹುರುಳಿ ಗೋಣಿ ಗಳ್ಳ ...	6—0	6—2
ಕಡಲೆ ಗೋಣಿ ಗಳ್ಳ ...	9—8	10—8
ಕೊಗಂಬೇಳೆ ಗೋಣಿ ಗಳ್ಳ...	17—8	18—0
ಉದ್ದು ಗೋಣಿ ಗಳ್ಳ ...	9—0	9—8
ಹೆಸರು ಗೋಣಿ ಗಳ್ಳ ...	9—12	10—8
ಊರುಬೆಲ್ಲ ಖಂಡಿ ಗಳ್ಳ ...	36—0	40—0
ಉಪ್ಪು ಗೋಣಿ ಗಳ್ಳ ...	4—8	5—4
ಕೊಬ್ರಿ ಖಂಡಿ ಗಳ್ಳ ...	46—8	46—8
ಎಳ್ಳಿಂಡಿ ಖಂಡಿ ಗಳ್ಳ ...	25—	26—0
ತೆಂಗಿನ ಎಣ್ಣೆ ಮೌಂ ಗಳ್ಳ...	3—5	3—6
ಎಳ್ಳೆಣ್ಣೆ ಮುಡಿ ಗಳ್ಳ ...	6—0	7—0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳ...	6—5	7—5
ಮಾರಿಷಸಕ್ಕರೆ ಮು. ಗಳ್ಳ...	2—13	2—14
ಮೆಣಸು ...	4—8	6—0
ಸಾಸಿವೆ ಮುಡಿ ಗಳ್ಳ ...	5—8	6—8
ಕಾಳುಮೆಣಸು ಹ. ಪೇ. ಗೆ...	16—0	17—8
ಯೇಲಕ್ಕಿ ಬೀಜ ಧುಣ ಗಳ್ಳ...	80—0	85—0
ಗೇರುಬೀಜ ಮು. ಗಳ್ಳ ...	3—14	3—15
ಕಚ್ಚಿಹ ಖಂಡಿ ಗಳ್ಳ ...	50—0	55—0
ತಾಂಮ್ರತಗಡು ಮ. ಗಳ್ಳ...	14—12	15—0
ತಾಂಮ್ರಪಾತ್ರಗಳು ಮ. ಗಳ್ಳ	14—8	15—0
ಚೀಣಬೆಳ್ಳಿ ಸೇರು ಗಳ್ಳ ...	13—8	14—0
ಹಿತ್ತಾಳಿ ತಗಡು ಮ. ಗಳ್ಳ...	12—0	12—0
ಜವಸು ಗಳ್ಳ ...	22—8	28—0
ದಾಣಿ ಸುಳಿ ಖಂಡಿ ಗಳ್ಳ	40—0	45—8
ನೇಟಿವ್ ಚಾಕು ಖಂಡಿ ಗಳ್ಳ	140—0	148—0
ಫ್ಯಾಕ್ಟರಿ ಚಾಕು ಖಂಡಿ ಗಳ್ಳ...	185—0	198—0
ಪಾಡಿಕೇರಿ ಹುಲಿಕ್ಕ ಮುಣ...	35—0	39—0

ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಬಹುಧಾನ್ಯ ಸಂವತ್ಸರದ ಶ್ರಾವಣ ಬ॥ ೩ ಶನಿವಾರದಿಂದ ಶ್ರಾವಣ ಬ॥ ೮ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ಸಿಂಹ ಸೋಣ)

13	ಶನಿ	೧೬	೧೫।	ಶತಭಿಷಾ	೧೩।	೨೮	[illegible]
14	ರವಿ	೧೭	೧೬॥	ಪೂ.ಭಾದ್ರ	೧೬।	೨೯	
15	ಸೋ.	೧೮	೧೬॥।	ಉ.ಭಾದ್ರ	೧೮॥	೩೦	
16	ಕುಜ	೧೯	೧೫॥	ರೇವತಿ	೧೯	೩೧	
17	ಬುಧ	೨೦	೧೩।	ಅಶ್ವಿನೀ	೧೮॥	೧	
18	ಗುರು	೨೧	೯॥	ಭರಣೀ	೧೬॥।	೨	
19	ಶುಕ್ರ	೨೨	೫॥	ಕೃತಿಕಾ	೧೩॥	೩	

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಪೋಷ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅನ್ವಯ. ಬೆಲೆ: 0–4–0, 0–2–0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0–4–

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ.
ಬೆಲೆ: 0–8–0, 0–4–0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ: 1–0–0

ಪ್ರೊಪ್ರೈಟರ್:
ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction . . Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—K. R. GURU, *Managing Director*

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

'DILROZ' Regd.

'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus Fistula, auxillary-Abscess.

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.

ಮಾತಾಡುವ ಅಂಕೆಸಂಖ್ಯೆಗಳು!

ಜಪಾನಿನಲ್ಲಿ ಶಾಲೆಗೆ ಹೋಗತಕ್ಕ ವಯಸ್ಸಿನ ಮಕ್ಕಳ ಸಂಖ್ಯೆ 9565952; ಶಾಲೆಯಲ್ಲಿ ಇರುವವರು 9514000 ಎಂದರೆ ಶಾಲೆಗೆ ಹೋಗುವ ವಯಸ್ಸಿನ 6ರಿಂದ 10ರೊಳಗಣ ಮಕ್ಕಳಲ್ಲಿ ನೂರಕ್ಕೆ 99·46 ಶಾಲೆಯಲ್ಲಿರುವರು. ಒಟ್ಟು ಇವರು 44,4000 ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆವರು. ಪ್ರತಿವರ್ಷ 20 ಲಕ್ಷ ಬಾಲಕರು ಪ್ರಾಥಮಿಕ ತರಗತಿ ಮುಗಿಸುವರು. ಅವರಲ್ಲಿ ಹುಡುಗರಲ್ಲಿ ನೂರರಲ್ಲಿ 10, ಹುಡುಗಿಯರಲ್ಲಿ 6 ಮಾತ್ರ ಸೆಕೆಂಡರಿ ಶಾಲೆಗಳಿಗೆ ಹೋಗುವರು. 17600 ಸೆಕೆಂಡರಿ ಶಾಲೆಗಳುಂಟು. 968 ಹುಡುಗಿಯರಿಗಾಗಿ ಹೈಸ್ಕೂಲುಗಳಿವೆ. ಹೈಸ್ಕೂಲು 5 ವರ್ಷ. ಮಿಡ್ಲ್ ಸ್ಕೂಲುಗಳು 558. ಯುನಿವರ್ಸಿಟಿ ವಿದ್ಯಾಭ್ಯಾಸ 2 ಯಾ 3 ವರ್ಷ ಮಾತ್ರ.

ಂ ಂ ಂ ಂ ಂ

ಜಪಾನಿನ ಎರಡು ದೈನಿಕ ಪತ್ರಿಕೆಗಳು 10 ಲಕ್ಷ ಪ್ರತಿಗಳನ್ನು ಛಾಪಿಸುವುದಕ್ಕೂ ಶಾಂತವಿವೆ. ನಮ್ಮಲ್ಲಿ ಸೇಕಡಾ 9 ಶಿಕ್ಷಿತರು!

ಂ ಂ ಂ ಂ ಂ

ಗ್ಲಾಸ್ಗೋ 'ಸಾಮ್ರಾಜ್ಯ ಪ್ರದರ್ಶನ'ಕ್ಕೆ ಹೋದ ನಮ್ಮ ಆಗಾಖಾನರು ಕುಡಿದ ಚಾಗೆ, ಪೌಂಡಿಗೆ 80 ಪವನು ಬೆಲೆಯಾಗಿತ್ತೆಂದು ಪ್ರಕಟವಾಗಿದೆ.

ಂ ಂ ಂ ಂ ಂ

ಮದ್ರಾಸು ಪ್ರಾಂತ್ಯದಿಂದ ಹಿಂದೀ ಪ್ರಚಾರ ಸಭಾ ಪರೀಕ್ಷೆಗಳಿಗೆ ಉಮೇದ್ವಾರರಾಗಿದ್ದವರು—ಇದುವರೆಗೆ 69,715 ಮಂದಿ.

ಂ ಂ ಂ ಂ ಂ

ಸೇಲಂನಲ್ಲಿ ಮದ್ಯಪಾನ ನಿಷೇಧವಾದ ಬಳಿಕ, ದಿನಕ್ಕೆ 600 ಕಪ್ ಚಾ ಮಾರಾಟವಾಗಿದೆ. 27 ದಿನಗಳಲ್ಲಿ 15400 ಕಪ್ ಚಾ ಕುಡಿದರು,— ಹಿಂದಣ ಮದ್ಯಪಾಯಿಗಳು. ಹಿಂದಣ ಕುಡುಕರಲ್ಲಿ ಸೇಕಡಾ 90 ಈಗ ಚಾ ಕುಡಿಯುತ್ತಾರೆ.

ಂ ಂ ಂ ಂ ಂ

ಸೇಕಡಾ 3ರ ಸಲೆ ಬಡ್ಡಿಯಲ್ಲಿ ಪಂಜಾಬ ಸರಕಾರಕ್ಕೆ ಒಂದು ಕೋಟಿ ರೂಪಾಯಿ ಸಾಲ ಬೇಕಾಗಿತ್ತು. ಈ ಹಣದಿಂದ ಹಾವೇಲಿ ನೀರಾವರಿ ಕೆಲಸ ಮಾಡಲಾಗುವುದು. ಎರಡೇ ತಾಸಿನಲ್ಲಿ ಈ ಹಣವೆಲ್ಲ ಕೂಡ ಬಂದಿದೆ.

ಂ ಂ ಂ ಂ ಂ

1837ನೇ ಇಸ್ವಿಯ ಪ್ರಪಂಚದ ವ್ಯಾಪಾರದ ಅಂಕೆಸಂಖ್ಯೆಗಳು ದೊರತಿವೆ. 1936ರಲ್ಲಿ ಈ ವ್ಯಾಪಾರದ ಮೌಲ್ಯಕ್ಕಿಂತ 1937ರಲ್ಲಾದ ವ್ಯಾಪಾರದ ಮೌಲ್ಯವು ಸೇಕಡಾ ಇಪ್ಪತ್ತಮೂರರಷ್ಟು ಹೆಚ್ಚಾಗಿದೆ. ವ್ಯಾಪಾರಕ್ಕೆ ಸೇರಿರುವ ಜಿನಸುಗಳು ಅಳತೆ ತೂಕಗಳಲ್ಲಿ ಸೇಕಡಾ 12ರಷ್ಟು ಹೆಚ್ಚಿವೆ. ಆಹಾರ ವಸ್ತುಗಳೂ ಕೈಗಾರಿಕೆಯ ಉತ್ಪನ್ನಗಳೂ ಸೇಕಡಾ 7ರಂತೆ ಕಡಮೆಯಾಗಿವೆ.

ಂ ಂ ಂ ಂ ಂ

ಅದಲುಬದಲಾಗಿ ವ್ಯಾಪಾರ ನಡೆಯುವುದು. ಅತಿ ಹೆಚ್ಚಾಗಿದೆಯಾದರೂ, 1937ನೆಯ ವರ್ಷದ ಅಂತ್ಯದಲ್ಲಿ ಕುಂದುತ್ತ ಬಂದಿದೆ.

ಂ ಂ ಂ ಂ ಂ

ಕಲ್ಕತ್ತ ಮ್ಯುನಿಸಿಪಾಲಿಟಿಯು 10,87000 ರೂಪಾಯಿಗಳ 17 ವರ್ಷದ ಸಾಲ ಎತ್ತುವುದು. ಇದರಿಂದ 1908-09ರಲ್ಲಿ ಎತ್ತಿದ 20 ಲಕ್ಷ ರೂಪಾಯಿಯ ಸಾಲವನ್ನು (ಉಳಿದ ಅಂಶ) ಸಂಪೂರ್ಣ ತೆತ್ತು ಬಿಡುವರು, ಬಡ್ಡಿಸಿ.

ಂ ಂ ಂ ಂ ಂ

ಮದ್ರಾಸು ಸರಕಾರವು ಸಾಲ ಎತ್ತುವುದರಲ್ಲಿ ಹೊಸ ಪ್ರಕರಣವನ್ನೇ ಆರಂಭಿಸಿಯದೆ. ಸರಕಾರವು ರಿಜರ್ವ ಬೇಂಕಿನ ಮೂಲಕವಾಗಿ 30 ಲಕ್ಷ ರೂಪಾಯಿಗಳನ್ನು ಪ್ರತಿ ಸಾಲದ ಮೊಬಲಗು 25000ಕ್ಕೆ ಕಡಮೆಯಾಗದೆ ಮಹಾಜನರಿಂದ ಪಡೆಯುವುದು. ಆಗೋಸ್ತು ತಾ. 12ರಲ್ಲಿ ಇದು ಮುಕ್ತಾಯವಾಗುವುದು. ಸಾಲ ಕೊಡುವವರು ತಾವು ನಿಷ್ಕರ್ಷಿಸುವ ಬಡ್ಡಿಯನ್ನು ತಿಳಿಸಬೇಕು.

ಂ ಂ ಂ ಂ ಂ

ಮದ್ರಾಸು ಬಂದರದಿಂದ ರಫ್ತುಗಳು ಕಳೆದ ವರ್ಷ ಸೇಕಡಾ 7ರಂತೆ ಹೆಚ್ಚಿವೆ. ಅದುರುಗಳು ಸೇಕಡಾ 3¼, ನೆಲಗಡಲೆ ಸೇಕಡಾ 20ರಂತೆ ಹೆಚ್ಚು. ಹದಮಾಡಿದ ಚರ್ಮ ಸೇಕಡಾ 10 ಕಡಮೆ.

ಂ ಂ ಂ ಂ ಂ

ಭಾರತವರ್ಷದ ಜನಸಂಖ್ಯೆ 1881ರಲ್ಲಿ 254 ಮಿಲ್ಲಿಯನಿತ್ತು. 1921ರಲ್ಲಿ ಇನ್‌ಫ್ಲುಯೆಂಜದ ಹಾವಳಿಯ ಅನಂತರದಲ್ಲಿ 319 ಮಿಲ್ಲಿಯನಿತ್ತು. 1931ರಲ್ಲಿ 353 ಮಿಲ್ಲಿಯವಾಗಿದೆ. 1941ರಲ್ಲಿ ಅದು 400 ಮಿಲ್ಲಿಯದಷ್ಟಾದೀತೆಂದು ಲೆಕ್ಕ. ಎಂದರೆ ಈಗ ಪ್ರತಿವರ್ಷವೂ ಸೇಕಡಾ ಒಂದರಂತೆ ಹೆಚ್ಚಾಗುತ್ತಲಿದೆ.

ಂ ಂ ಂ ಂ ಂ

ಈ ದೇಶದಲ್ಲಿ ಹುಟ್ಟುವ 100 ಮಕ್ಕಳಲ್ಲಿ, ಐದು ವರ್ಷ ವಯಸ್ಸಾಗುವುದರೊಳಗೆ 45 ಸಾಯುತ್ತವೆ. ವಿಲಾಯತಿಯಲ್ಲಾದರೆ ಈ ಸಂಖ್ಯೆ 15! ಮರಣ ಸಂಖ್ಯೆಯನ್ನು ಇಳಿಸುವ ಪ್ರಯತ್ನಗಳಾಗಬೇಕು. ಈಗ ಸಾವಿರಕ್ಕೆ 24ರಂತೆ ಮರಣಗಳಾಗುತ್ತವೆ.

ಂ ಂ ಂ ಂ ಂ

ಉತ್ತರಾರ್ಧ ಗೋಲದಲ್ಲಿ, 1918ರಿಂದ ಇದುವರೆಗೆ ಯಾವ ವರ್ಷದಲ್ಲೂ ಬೆಳೆಯದಷ್ಟು ಗೋಧಿಯು ಈ ವರ್ಷ ಉತ್ಪನ್ನವಾಗಿದೆ. ಕಳೆದ ವರ್ಷದ ಬೆಳೆಗಿಂತ ಸೇಕಡಾ 112! ಎಂದರೆ ಒಂದು ವರ್ಷದ ಎಲ್ಲ ಗೋಧಿಯನ್ನು ಉಪಯೋಗಿಸಿಯೂ, ಬರುವ ವರ್ಷಕ್ಕೂ ಬೇಕಾಗುವಷ್ಟು ದಾಸ್ತಾನು ಉಳಿಯುತ್ತದೆ!

ಂ ಂ ಂ ಂ ಂ

ಸಿನೆಮಾ ಕೈಗಾರಿಕೆ: ನಮ್ಮ ದೇಶದಲ್ಲಿ ಈ ಕೈಗಾರಿಕೆಯಲ್ಲಿ ಹಾಕಲಾದ ಭಾಂಡವಾಳ 18 ಕೋಟಿ ರೂಪಾಯಿ! 1927ರಲ್ಲಿ 350 ಸಿನೆಮಾಗಳಿದ್ದುವು; ಈ ವರ್ಷ 1236 ಸಿನೆಮಾಗಳಿವೆ. ಆದರೆ, 10000 ಜನಸಂಖ್ಯೆಯಾದರೂ ಇರುವ ನಗರಗಳು 700 ಮಾತ್ರ. ಬ್ರಿಟಿಸ್ಸಿನಲ್ಲಿ ಈಗ ಇರುವ ಸಿನೆಮಾಗಳು 4000!

ಂ ಂ ಂ ಂ ಂ

1918ರಿಂದ ಈಚೆಗೆ ಜಪಾನು ತನ್ನ ಕೈಗಾರಿಕೆಗಳನ್ನು ಸೇಕಡಾ 75ರಷ್ಟು ಹೆಚ್ಚಿಸಿಯದೆ; ರಷ್ಯವು ನೂರಕ್ಕೆ 77ರಷ್ಟು ಹೆಚ್ಚಿಸಿಯದೆ! ಯುನೈಟೆಡ್ ಸ್ಟೇಟ್ಸಲ್ಲಿ ಒಂದೇ ವರ್ಷ (1936)ದಲ್ಲಿ ಹಿಂದಣ ವರ್ಷಕ್ಕಿಂತ ನೂರಕ್ಕೆ 77ರಷ್ಟು ಹೆಚ್ಚಿಸಿದ ಉತ್ಪನ್ನಗಳಾಗಿವೆ.

ಂ ಂ ಂ ಂ ಂ

ನಮ್ಮ ಸಂಸ್ಥಾನದ ಹುಚ್ಚರ ಆಸ್ಪತ್ರೆಗಳಲ್ಲಿ ಹಿಂದಣ ವರ್ಷ 2061 ಮಂದಿಯಿದ್ದರು; 1937ರಲ್ಲಿ 2756! ಇವರಲ್ಲಿ ರೋಗಿಗಳು (ದಿನದ ಸರಾಸರಿ) 327. ಮರಣಗಳು ಸೇಕಡಾ 7. [1593 ಗಂಡಸರು, 488 ಹೆಂಗಸರು, ಸರಾಸರಿಯಾಗಿ ಆಸ್ಪತ್ರೆಗಳಲ್ಲಿ ದೈನಿಕ ಹಾಜರು ಕೊಟ್ಟಿರುವರು.] 24 ಯುರೋಪಿಯರು, 78 ಕ್ರೈಸ್ತರು, 571 ಹಿಂದು, 180 ಮುಸ್ಲಿಮ್. ಆಸ್ಪತ್ರೆಯಿಂದ ಓಡಿಹೋದವರು 9.

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

150 ವರ್ಷ ಪ್ರಾಯ ಮೀರಿದ 30 ಮಂದಿ ತುರುಕರು!

ಇತ್ತೀಚೆಗೆ ನಡೆದ ಖಾನೇಶುಮಾರಿಯ ಪ್ರಕಾರ ಟರ್ಕಿಯಲ್ಲಿ 150 ವರ್ಷ ಪ್ರಾಯ ಮೀರಿದ 30 ಮಂದಿ ವಯೋವೃದ್ಧರಿದ್ದಾರೆಂದು ಗೊತ್ತಾಗಿದೆ. ಇವರೆಲ್ಲರೂ ಟರ್ಕಿಗೆ ಸೇರಿದ ಪೌರ್ವಾತ್ಯ ರಾಜ್ಯಗಳಲ್ಲಿಯೇ ವಾಸವಾಗಿರುವರು; ಅವರಲ್ಲಿ ಒಬ್ಬರಾದರೂ ಪಾಶ್ಚಾತ್ಯ ರಾಷ್ಟ್ರಭಾಗಗಳಲ್ಲಿ ಇರುವುದಿಲ್ಲ. ಆಶ್ಚರ್ಯದ ವಿಷಯವೆಂದರೆ, ಇವರೆಲ್ಲರ ಪ್ರಧಾನ ಆಹಾರವು ಮಜ್ಜಿಗೆ ನೀರು ಆಗಿರುವುದು.

ಇವರಲ್ಲಿ ಅತಿವೃದ್ಧನ ಹೆಸರು ಅಲಿ ಎಂದು. ಅಲಿಯನ್ನು ಕೊರ್ಪೊರಲ್ ಅಲಿ ಎಂದೂ ಕರೆಯುತ್ತಾರೆ. ಅವನು ಮೊದಲು ಟರ್ಕಿಸೇನೆಯಲ್ಲಿ ಕೊರ್ಪೊರಲ್ ಎಂಬ ಒಬ್ಬ ಸೇನಾಧಿಕಾರ ಪದದಲ್ಲಿ ಕೆಲಸಮಾಡಿಕೊಂಡಿದ್ದನಾದ್ದರಿಂದ ಅವನಿಗೆ ಆ ಹೆಸರು ಬಂದಿತು. ಅಲಿಯು ಈಗ ಪೂರ್ವ ಅನಟೋಲಿಯ ಪ್ರಾಂತ್ಯದ ಅಲ್-ಅಜೀಜ್ ಎಂಬಲ್ಲಿ ವಾಸವಾಗಿದ್ದಾನೆ. ಪ್ರಪಂಚದಲ್ಲಿಯೇ ಇವನು ಅತಿವೃದ್ಧನಾಗಿರುವನೆಂದು ಹೇಳುತ್ತಾರೆ.

ಅಲಿಯ ಒಬ್ಬ ಸಂಬಂಧಿಕಳು ಅಲ್-ಅಜೀಜಿನಿಂದ ಮೂರು ತಾಸುಗಳ ಪ್ರಯಾಣ ಮಾಡಿ ಹೋಗಬಹುದಾದ ಇನ್ನೊಂದು ಹಳ್ಳಿಯಲ್ಲಿ ವಾಸವಾಗಿರುತ್ತಾಳೆ. ಅವಳಿಗೆ ಈಗ 137 ವರ್ಷ ಪ್ರಾಯ: ಟರ್ಕಿಯಲ್ಲಿ ಇವಳೇ ಅತಿ ವೃದ್ಧ ಸ್ತ್ರೀಯಾಗಿರುವಳು.

ಅಲಿಗೆ ಈಗ ಬಹಳ ಮಾತನಾಡಲಿಕ್ಕೆ ಬರುವುದಿಲ್ಲ. ಅವನ ಶ್ರವಣ ಶಕ್ತಿಯೂ ಈಗ ಸ್ವಲ್ಪ ಮಂದವಾಗಿದೆ. ಆದರೂ ಶರೀರಾರೋಗ್ಯವು ಮಾತ್ರ ಬಹು ಚೆನ್ನಾಗಿರುವುದು. ರಾತ್ರಿಕಾಲದಲ್ಲಿ ದಿವಸಕ್ಕೆ ನಾಲ್ಕು ತಾಸುಗಳಂತೆ ಮಾತ್ರ ಅವನು ನಿದ್ದೆಮಾಡುತ್ತಾನೆ. ಅವನ ಉಳಿದ ಸಮಯವನ್ನು ಹೊಗೆಬತ್ತಿಗಳನ್ನು ಸೇದುವುದರಲ್ಲಿ ಕಳೆಯುತ್ತದೆ. ಅವನಿಗೆ ವೃದ್ಧಾಪ್ಯದಲ್ಲಿ ಶಾಶ್ವತ ಹಲ್ಲು ಹೋಗಿ, ಅವುಗಳ ಸ್ಥಾನದಲ್ಲಿ ಮತ್ತೆ ... ಹಲ್ಲುಗಳು ಮೂಡಿರುವುವು. ಹೀಗೆ ಸಾಮಾನ್ಯವಾಗಿ ನಡೆಯುವಂಥಾದ್ದು ಇರುವುದಿಲ್ಲ.

1800ನೇ ಇಸವಿಯ ಸಮಾರಿಗೇನೆ ಅಲಿಯು ಟರ್ಕಿಯ ಸೇನೆಯಲ್ಲಿ ಒಬ್ಬ ಸೈನಿಕನಾಗಿದ್ದನು. 1829ರಲ್ಲಿ ಗ್ರೀಕರೊಡನೆ ನಡೆದ ಯುದ್ಧಕಾಲದಲ್ಲಿ ಅವನಿಗೆ ಕೊರ್ಪೊರಲ್ ಪದವಿಯು ದೊರೆಯಿತು. ಅನಂತರ ನಡೆದ ಕ್ರಿಮಿಯನ್ ಯುದ್ಧದಲ್ಲಿಯೂ, 1876ರ ಸರ್ಬಿಯದ ಮೊದಲನೆ ದಂಗೆಯಲ್ಲಿಯೂ ಅವನು ಭಾಗ ತೆಗೆದುಕೊಂಡಿದ್ದನು. ಆ ಕಾಲಕ್ಕೆ ಅವನು ನೂರು ವರ್ಷದ ಮುದುಕನಾಗಿದ್ದನು.

ಟರ್ಕಿಯ ಅತಿ ವೃದ್ಧರ ಮಾತು ಹಾಗಿರಲಿ. ಅವರಲ್ಲದೆ 6241 ಮಂದಿ ನೂರು ವರ್ಷ ಪ್ರಾಯ ಸಂದ ಇತರ ವೃದ್ಧರೂ ಟರ್ಕಿಯಲ್ಲಿ ಇರುವರಾಗಿ ಈಚೆಗೆ ನಡೆದ ಜನಗಣತಿಯಿಂದ ಗೊತ್ತಾಗಿದೆ. ಇವರಲ್ಲಿ 3985 ಮಂದಿ ಹೆಂಗಸರು 1256 ಮಂದಿ ಗಂಡಸರು ಆಗಿರುವರು.

ಬರ್ಮಾ ಕೊಂಗ್ರೆಸ್ ಕಮಿಟಿಗೆ

ನಿಮ್ಮ ತಂತೀವಾರ್ತೆ ತಲುಪಿತು. ಬರ್ಮಾದಲ್ಲಿ ನನ್ನ ವರ್ಚಸ್ಸು ಎಷ್ಟಿರಬಹುದೋ ನಾನರಿಯೆ. ಈ ದಂಗೆಗಳು ಅತಿ ಶೋಚನೀಯವಾಗಿವೆ. ಇವುಗಳ ಕಾರಣವೇನೇ ಇರಲಿ, ನಾವು ಉಭಯತರೂ ಇನ್ನೂ ಬರ್ಬರತೆಯ ಸ್ಥಿತಿ ದಾಟಿಲ್ಲವೆಂದು ಇವು ಸೂಚಿಸುವುವು. ಇಂತಹ ದುಃಖಕರವಾದ ಘಟನೆಗಳು ಉಂಟಾಗದಂತೆ ಎರಡೂ ಸಮಾಜಗಳ ಮುಂದಾಳುಗಳು ಪ್ರಯತ್ನಿಸಿದಲ್ಲಿ ಎಷ್ಟು ಸುಗಮವಾಗುವುದು.

—ಗಾಂಧೀಜಿಯವರ ಸೂಚನೆ.

The

Agricultural & Industrial Bank, Ltd.,

(Incorporated in British India.)

Head Office "LAXMINIVAS BUILDINGS" *Coondapoor.*

BRANCHES:-

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF RS. 10, 25, 50, 100, 250, 500 & 1000.

REDEEMABLE AT ANY TIME.

CUMULATIVE DEPOSITS ARE ACCEPTED

Current Deposits

From January to June 2%

and

From July to December 1%

Savings Bank Deposits

3½ per cent per annum

Fixed Deposits

for 6 Months 3½%

" 1 Year 4%

" 2 Years &above 4½%

For Further Particulars Apply to:—

HEAD OFFICE or BRANCHES

ಸತ್ತ ಜಾನುವಾರುಗಳಿಂದ ಲಕ್ಷಾಂತರ ರೂಪಾಯಿಗಳ ಲಾಭ!

ನಮ್ಮ ದೇಶದಲ್ಲಿ ಕಾಲ್ನಡಿಗೆಗಳನ್ನು ಕಾಮಧೇನು—ಅಂದರೆ ಬೇಡಿದ್ದನ್ನು ಕೊಡುವ ಪ್ರಾಣಿ ಎಂದು ತಿಳಿದು ಭಕ್ತಿಯಿಂದ ಪೂಜಿಸುತ್ತಾರೆ; ಕಾಲ್ನಡಿಗೆಗಳು ಬದುಕಿರುವಾಗ ಅವುಗಳ ಹಾಲು ಮೊಸರು ತುಪ್ಪ, ಸಗಣಿ ಮೂತ್ರ ಗೊಬ್ಬರ ಮೊದಲಾದ ಅತ್ಯಂತ ಉಪಯುಕ್ತ ಕಾರ್ಯಗಳಿಗೆ ಬರುವವು ಮಾತ್ರವಲ್ಲದೆ ಸತ್ತ ನಂತರವೂ ಸಾವಿರಾರು ರೂಪಾಯಿಗಳ ಪ್ರಯೋಜನವನ್ನು ಮನುಷ್ಯನಿಗೆ ಮಾಡಿಕೊಡುತ್ತವೆ. ಬದುಕಿರುವಾಗಲೂ ಸತ್ತಾಗಲೂ ಪ್ರಯೋಜನಕ್ಕೆ ಬರುವ ಪ್ರಾಣಿಗಳೆಂದರೆ ಇವುಗಳೇ!

ಅಜ್ಞಾನ ಅಲಕ್ಷ್ಯಗಳಿಗೆ ಬಲಿಯಾಗಿ ಭಾರತೀಯರು ಗೋಧನವನ್ನು ತುಚ್ಛೀಕರಿಸಿದ್ದಾರೆ. ಬದುಕಿರುವಾಗ ಅವುಗಳನ್ನು ಯಥಾಯೋಗ್ಯವಾಗಿ ಅವರು ಲಾಲಿಸಿಪಾಲಿಸಿ ಪ್ರಯೋಜನ ಪಡೆಯದಿರುವದಷ್ಟೇ ಅಲ್ಲದೆ, ಸತ್ತ ಮೇಲೆಯೂ ಅವುಗಳ ಶಾಸ್ತ್ರೀಯ ಉಪಯೋಗ ಮಾಡದೆ ಹೇರಳ ನಷ್ಟವನ್ನು ಅನುಭವಿಸುತ್ತಿದ್ದಾರೆ. ಭಾರತೀಯರ ದಾರಿದ್ರ್ಯಕ್ಕೆ ಅವರು ಗೋಧನವನ್ನು ಅಲಕ್ಷಿಸಿರುವುದು ಕೂಡ ಒಂದು ಮುಖ್ಯ ಕಾರಣವಾಗಿರುತ್ತದೆ.

ಜನರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಒಂದು ಕಾರ್ಯಕ್ರಮವಾಗಿ ಮಧ್ಯಪ್ರಾಂತ್ಯಗಳ ಸರಕಾರವು 1938–1939ನೇ ವರ್ಷದ ಬಗ್ಗೆ ಆಯವ್ಯಯಗಳ ಅಂದಾಜು ಪಟ್ಟಿಯಲ್ಲಿ 6000 ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟು, ಆ ಹಣದಿಂದ ಜನರಿಗೆ ಸತ್ತ ಜಾನುವಾರುಗಳ ಉಪಯೋಗವನ್ನು ತಿಳಿಸುವ ವ್ಯವಸ್ಥೆ ಮಾಡಿರುತ್ತದೆ. ವಾರ್ಧಾ, ಇಯೊತ್ಮಾಲ್, ನಾಗೋರ್ ಮತ್ತು ರಾಯಪುರ ಜಿಲ್ಲೆಗಳ ಜನರಿಗೆ ಸತ್ತ ಜಾನುವಾರುಗಳ ಗೊಬ್ಬರ ತಯಾರಿಸುವ ಕ್ರಮವನ್ನು ಕಲಿಸುವ ಪ್ರಚಾರಕಾರ್ಯ ಮಾಡೋಣಾಗುವುದು. ಗೊಬ್ಬರ ತಯಾರಿಸಲಿಕ್ಕೆ ಎರಡು ಕೇಂದ್ರಗಳನ್ನು ತೆರೆದಿರುತ್ತದೆ. ನಳವಾಡಿಯ ಸಮಗಾರ ಶಾಲೆಯಲ್ಲಿ ಕೆಲಸಗಾರರಿಗೆ ಒಂದು ತಿಂಗಳ ತನಕ ತರಬೇತಿಯನ್ನು ಕೊಟ್ಟು ಅವರಿಗೆ ಸತ್ತ ಜಾನುವಾರುಗಳ ಗೊಬ್ಬರ ತಯಾರಿಸುವ ಕ್ರಮವನ್ನು ಕಲಿಸಿಕೊಡುತ್ತಾರೆ. ಅಷ್ಟೇ ಅಲ್ಲದೆ ಅವರಿಗೆ ಆ ಕೈಗಾರಿಕೆಯಲ್ಲಿ ಮಾನಸಿಕ ವ್ಯವಹಾರಿಕ ಮತ್ತು ವಾಣಿಜ್ಯ ಸಂಬಂಧ ಶಿಕ್ಷಣವನ್ನು ಕೊಡುವರು.

ನಳವಾಡಿ ಸಮಗಾರ ಶಾಲೆಯ ಸ್ಥಾಪಕರೂ ಗಾಂಧಿಸೇವಾ ಸಂಘದ ಪ್ರಮುಖ ಕೆಲಸಗಾರರೂ ಆಗಿರುವ ಶ್ರೀ ಜಿ. ಆರ್. ವಾಲುಂಜಕರ ಎಂಬವರು ಈ ಯೋಜನೆಯನ್ನು ತಯಾರಿಸಿದ್ದಾರೆ. ಮಧ್ಯಪ್ರಾಂತ್ಯಗಳ ಜನರು ಸತ್ತ ಜಾನುವಾರುಗಳನ್ನು ಹೇಗೆ ಅಲಕ್ಷಿಸುತ್ತಿದ್ದಾರೆಂಬುದನ್ನು ಪ್ರಾಂತೀಯ ಸರಕಾರಕ್ಕೆ ತೋರಿಸಿಕೊಟ್ಟು, ಅವುಗಳ ಮಾಂಸದ ಗೊಬ್ಬರ ಎಲುಬುಗೊಬ್ಬರ ಗೊರಸುಕೊಂಬುಗಳ ವಸ್ತ್ರ ಒಡವೆಗಳು ಮುಂತಾದುವನ್ನು ತಯಾರಿಸಿ ಮಾರಾಟ ಮಾಡಿದ್ದಾದರೆ ಕೃಷಿಕರಿಗೂ ಪಶುಪಾಲಕರಿಗೂ ಸಾವಿರಾರು ರೂಪಾಯಿಗಳ ಲಾಭವಾಗುವದೆಂಬುದನ್ನು ಅಂಕೆಸಂಖ್ಯೆಗಳನ್ನು ಕೊಟ್ಟು ಸಿದ್ಧ ಮಾಡಿದ್ದಾರೆ.

ಮಧ್ಯಪ್ರಾಂತ್ಯವೊಂದರಲ್ಲೇ ಸತ್ತ ಜಾನುವಾರುಗಳ ಉಪಯೋಗದ ವ್ಯವಸ್ಥೆಯನ್ನು ಸರಕಾರವು ಮಾಡಿದ್ದಾದರೆ ಅದಕ್ಕೆ 11,58,660 ರೂಪಾಯಿಗಳ ವಾರ್ಷಿಕ ಲಾಭವಾಗುವುದೆಂದು ಶ್ರೀ ವಾಲುಂಜಿಕರರ ಅಂದಾಜು ಮಾಡಿದ್ದಾರೆ. ಮಧ್ಯಪ್ರಾಂತ್ಯಗಳಲ್ಲಿ ಹೇಗೋ ನಮ್ಮ ದೇಶದ ಇತರ ಪ್ರಾಂತ್ಯಗಳಲ್ಲಿಯೂ ಜನರು ಸತ್ತ ಜಾನುವಾರುಗಳ ಉಪಯೋಗ ಮಾಡಿಕೊಳ್ಳುವದರಲ್ಲಿ ಬಹಳ ಹಿಂದಾಗಿರುತ್ತಾರೆ. ಹೀಗೆ ಹಿಂದಾಗಲಿಕ್ಕೆ, ಸತ್ತ ಜಾನುವಾರುಗಳನ್ನು ಮುಟ್ಟಿದರೆ, ಅವುಗಳ ಉಪಯೋಗ ಮಾಡಿದರೆ ತಮ್ಮ ಧರ್ಮಕ್ಕೆ ಲೋಪವೂ ಭಂಗವೂ ಆಗುತ್ತದೆಂಬ ಅಂಧಶ್ರದ್ಧೆಯೂ ಕಾರಣವಾಗಿದೆ. ಆದ್ದರಿಂದ ಆ ಸಂಬಂಧ ಪ್ರಬಲ ಪ್ರಚಾರಕಾರ್ಯವು ನಡೆದು ಜನರು ಸರ್ವತ್ರ ಸತ್ತ ಜಾನುವಾರುಗಳ ಯಥಾರ್ಥ ಉಪಯೋಗ ಮಾಡಿಕೊಂಡರೆ, ಅದರಿಂದ ಈಗ ಆಗುತ್ತಿರುವ ಕೋಟ್ಯಂತರ ರೂಪಾಯಿಗಳ ವಾರ್ಷಿಕ ನಷ್ಟವು ತುಂಬಿ ಇರುವುದಲ್ಲದೆ, ಬಹಳ ಸಾರವತ್ತಾದ ಎಲುಬುಹುಡಿ, ಮಾಂಸದ ಗೊಬ್ಬರ ಮೊದಲಾದುವನ್ನು ಹೊಲತೋಟಗಳಿಗೆ ಉಪಯೋಗಿಸಿ ಜನರು ಮತ್ತೆ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸಲಿಕ್ಕೂ ಸಾಧ್ಯವಿದೆ. ಸರಕಾರಕ್ಕೂ ಲಾಭವಾಗುವುದು. ಈ ಕಾರಣ ಆರ್ಥಿಕ ದುಸ್ಥಿತಿಯಿಂದ ನರಳುತ್ತಿರುವ ನಮ್ಮ ಪ್ರಾಂತೀಯ ಸರಕಾರಗಳೂ ಕೇಂದ್ರ ಸರಕಾರವೂ ಈ ಕಡೆಗೆ ತಮ್ಮ ಲಕ್ಷ್ಯವನ್ನೀಯುವುದು ಅಗತ್ಯವೆಂದು ನಮಗೆ ಕಾಣುತ್ತದೆ.

ಬೇಕಾದಾಗ ಮಳೆ–ಬೇಕಾದಾಗ ಬೆಳೆ

ಇನ್ನು ಬರಗಾಲದ ಭಯವಿಲ್ಲ ನಿಮಗೆ!

ಕಾಲಕಾಲಕ್ಕೆ ಮಳೆಬಾರದೆ ನೀರಾವರಿಯ ನೀರು ಸಿಕ್ಕದೆ ಕೃಷಿಕಾರ್ಯಕ್ಕೆ ಲೋಪವೂ ಭಂಗವೂ ಆಗದ ದೇಶವಿಲ್ಲ. ಅಥವಾ ಮಳೆ ಮಿತಿ ಮೀರಿ ಒಂದು ಹೊಲ ಮನೆಗಳೆಲ್ಲ ಕೊಚ್ಚಿ ಹೋಗಿ ಜನ ಜಾನುವಾರುಗಳು ಕಷ್ಟನಷ್ಟಗಳಿಗೆ ಗುರಿಯಾಗದ ದೇಶವೂ ಇರುವುದಿಲ್ಲ. ಬೇಕಾದಾಗ ಮಳೆ ಬಂದು ಬೇಕಾದಾಗ ಬೆಳೆ ಬೆಳೆಸಬಹುದಾಗಿದ್ದರೆ ಜನ ಜಾನುವಾರುಗಳ ಎಷ್ಟು ಸುಖ ಶಾಂತಿಗಳಿಂದ ಕಾಲಯಾಪನೆ ಮಾಡುತ್ತಿರಬಹುದು? ಇಂಥ ಸುಖಸ್ವಪ್ನವನ್ನು ಜಗತ್ತಿನ ವಿಜ್ಞಾನಿಗಳು ಬಹು ದಿವಸಗಳಿಂದ ಕಾಣುತ್ತ ಇದ್ದರು. ಅದೀಗ ನಿಜವಾಗುತ್ತ ಬಂದಿದೆ.

ಯುರೋಪದ ಹಂಗೇರಿಯಲ್ಲಿ ಕಾಲಕಾಲಕ್ಕೆ ಮಳೆ ಬರುವುದಿಲ್ಲ. ಬಂದರೆ ವಿಪರೀತ ಬಂದ ಕೆರೆ ತೊರೆಗಳೆಲ್ಲ ತುಂಬಿಕೊಂಡು ಮನೆ ಮಠಗಳೆಲ್ಲ ನೀರುಪಾಲಾಗುವವು. ಬಾರದಿದ್ದರೆ ನೀರಿನ ಒಂದು ಹನಿಯನ್ನು ಕಾಣುವದು ಕೂಡ ಭಾಗ್ಯದ ಮಾತಾಗುತ್ತದೆ. ಆದ್ದರಿಂದ ಹಂಗೇರಿಯಲ್ಲಿ ಬರಗಾಲಗಳ ತಪ್ಪಿದ್ದೇ ಇಲ್ಲ. ಈ ಕಾರಣದ ಮಿಲಿಯಾಂತರ ಪವನು ಬೆಲೆಬಾಳುವ ಆಸ್ತಿಪಾಸ್ತಿಗಳ, ಜನರ ಕಷ್ಟಪರಿಶ್ರಮಗಳ ಅಲಿ ಪ್ರತಿವರ್ಷ ವ್ಯರ್ಥವಾಗುತ್ತವೆ. ಇದನ್ನೆಲ್ಲ ಕಂಡ ಆ ದೇಶದ ಇಬ್ಬರ ವಿಜ್ಞಾನಿಗಳು ಆಗ ಒಂದು ಅದ್ಭುತ ಶೋಧವನ್ನು ನಡೆಸಿದ್ದಾರೆ. ಜಗತ್ತಿನ ಎಲ್ಲ ಭಾಗಗಳ ಕೃಷಿಕರ ಕಣ್ಣುಗಳು ಅದರ ಕಡೆಗೆ ಹೊರಳಿವೆ.

ಈ ವಿಜ್ಞಾನಿಗಳು ಕೃತ್ರಿಮ ಮಳೆಯನ್ನು ಬರಮಾಡಿಸುವ ಉಪಾಯವನ್ನು ಕಂಡುಕೊಂಡಿದ್ದಾರೆ. ಒಂದ ದೊಡ್ಡ ಬೆಂಕಿ ಎದ್ದಾಗ ಅಥವಾ ಒಂದು ದೊಡ್ಡ ಜ್ವಾಲಾಮುಖಿಯ ಸ್ಫೋಟನವಾದಾಗ, ಅದರ ಹಿಂದೆಯೇ ಮಳೆ ಬರುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ಆದ್ದರಿಂದ ದೊಡ್ಡ ದೊಡ್ಡ ಕೆರೆ ತೊರೆ, ನದಿ ಸರೋವರ ಮೊದಲಾದ ಜಲಪ್ರದೇಶಗಳ ಸಮೀಪದಲ್ಲಿ ಸಾಕಾದಷ್ಟು ದೊಡ್ಡ ಬೆಂಕಿ ಹಾಕಿದರೆ, ಅವುಗಳ ಸುತ್ತ ಮುತ್ತ ಮಳೆಯಾಗುವದು ಖಂಡಿತವಷ್ಟೆ! ಈಗ ಈ ವಿಜ್ಞಾನಿಗಳು ಆ ಪ್ರದೇಶಗಳಲ್ಲಿ ಬೆಂಕಿ ಹಾಕಿ ಮಳೆ ಬರಿಸುವ ಉಪಾಯವನ್ನು ಕಂಡುಹಿಡಿದ್ದಾರೆ.

ನೀರಾವರಿ ಕೆಲಸಗಳು ನಡೆಯುವಲ್ಲಿ ಕೃಷಿ ಭೂಮಿಗೆ ನೀರು ಒದಗಿಸಬೇಕಾದರೆ ಒಂದು ಎಕರೆ ಪ್ರದೇಶಕ್ಕೆ ಬೇಕಾಗುವಷ್ಟು ಕಾಲುವೆ ನೀರಿಗೆ ನೂರು ಬೆಲೆ ಕೊಡಬೇಕಾಗುತ್ತದೆ. ಹಂಗೇರಿಯ ಆ ವಿಜ್ಞಾನಿಗಳ ಉಪಾಯವು ಸರ್ವತ್ರ ಸುಲಭ ಸಾಧ್ಯವೆಂದಾಗುವದಾದರೆ ಕೃಷಿ ಕಾರ್ಯದಲ್ಲಿ ನೀರಿಗಾಗಿ 25 ರೂಪಾಯಿಗಳನ್ನು ಖರ್ಚುಮಾಡಬೇಕಾಗಿರುವಲ್ಲಿ, ಈ ಕೃತ್ರಿಮ ಮಳೆ ನೀರಿಗೆ ಒಂದೇ ರೂಪಾಯಿ ಖರ್ಚು ಮಾಡಿದರೆ ಸಾಕಾಗುವದು. ಆದ್ದರಿಂದ ಆ ವಿಜ್ಞಾನಿಗಳ ಅದ್ಭುತ ಶೋಧೆಯನ್ನು ಈಗ ಅಲ್ಲಲ್ಲಿ ಪರೀಕ್ಷಿಸಿ ಬೇಕಾದಾಗ ಮಳೆ ಬರುವಂತೆ ಮಾಡುವ ಸಾಧ್ಯಸಾಧ್ಯತೆಯನ್ನು ನೋಡಿಕೊಳ್ಳ ಹತ್ತಿದ್ದಾರೆ!



ಈ ಮ್ಯಾಜಿಕ್ ಲೇಪವು ಎಲ್ಲರಿಗೂ ಬೇಕಾಗಿದೆ.

ಚರ್ಮವ್ಯಾಧಿ ಮತ್ತು ಕಡಿತಗಳಿಗೆ ಜ್ಯಾಂಬಕ್

ನಿಮಗೆ ಒಂದು ಕಡಿತ, ಯಾ ಇತರ ಯಾವತ್ತೂ ತರದ ಪೆಟ್ಟುಗಳಾದರೆ—ನಿಮ್ಮ ಮೈಮೇಲೆ ಗಜ್ಜಿ, ಬೊಕ್ಕೆ ಇತ್ಯಾದಿಗಳು ಇದ್ದರೆ ಜಾಂಬಕ್ ಲೇಪನವು ನಿಮ್ಮನ್ನು ಕೂಡಲೆ ಗುಣಪಡಿಸುವುದು. ಅದರಲ್ಲಿ ಅಮೂಲ್ಯವಾದ ವನಸ್ಪತಿ ತೈಲ್ಯಗಳು ಚರ್ಮದ ಗ್ರಂಥಿಗಳನ್ನು ಸೇರುವುದು. ಈ ಕಾರಣದಿಂದ ನೋವು ನಿವಾರಣೆಯಾಗುವುದು, ಬಾತುಹೋದುದು ಕಡಿಮೆಯಾಗುವುದು, ಉರಿ ಇತ್ಯಾದಿ ಮಾಯವಾಗುವುದು. ಜಾಂಬಕ್ ಕಲೆಗಳನ್ನು ಬಿಡದೆ ಗುಣಪಡಿಸುತ್ತದೆ. ಇದನ್ನು ಕಜ್ಜಿ, ಬೊಕ್ಕೆ ಇತ್ಯಾದಿಗಳಿಗೆ ಉಪಯೋಗಿಸಬಹುದು. ಎಲ್ಲಾ ಕಡೆಯಲ್ಲೂ ರೂ ಒಂದು ಮತ್ತು 2—4—0 ಪ್ರಕಾರ ಮಾರಾಟವಾಗುತ್ತದೆ.

ಏಜಂಟರು:— ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದರಾಸು

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಇದರಲ್ಲಿ ಪ್ರಾಣಿಕೊಬ್ಬು ಮಿಶ್ರವಾಗಿಲ್ಲ

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ಸ್ವಪ್ನ ವೀರ್ಯನಷ್ಟ ಇಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೆ ಕಾರಣವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಆರೋಪವಾದದ್ದು. ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನು ಉಂಟುಮಾಡುವ 2 ದಿನಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1 4 0 (ಪೋಸ್ಟ್ ಚಾರ್ಜ್ ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ ಸರ್ಜನ್ ಪೆರಿಡೇಲಿ
P. O. Peridepi ನೆಲ್ಲೂರು ಡಿ.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಯಂಟೈನ್,
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಮಂಗಳೂರು

FANCY SHIRTING

Snow white very soft decent and durable. 9 yds × 54" sufficent for 6 shirts. Price 5—8—0 Post free money refunded if unapproved. Half dozen fancy handkerchiefs 22 22 will be given to every purchaser

AGENTS WANTED EVERY WHERE ASK FOR FREE PARTICULARS

NATIONAL TRADING CO.,
LUDHIANA A 211

S. U. N. & Co.,

Silk Merchants,

Chaukhamba BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಪರಿಯಬೇಕು. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ 45ರಿಂದ 150. ಸಾಧಾರಣತರದ್ದು 18 ಮೊಳ ಸಣ್ಣ ಬುಟ ಶೀರೆಗಳು ರೂ 35ರಿಂದ ರೂ 55. ಪಚಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65. ಉದ್ದ ಮೊಳ 16, ಅಗಲ 2¼ ರೂ 20ರಿಂದ 35ರ ವರೆಗೆ. ಬೇರೆ ಮಾಲುಗಳ ಪಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಭಾ, ಬೆನರೆಸ್ ಸಿಟಿ

ಇವು ಪ್ರಕೃತಿ ಪ್ರಕೃತ ಪಾಠಗಳು ಪಾಠಗಳಲ್ಲ

1 ದೇವಸ್ಥಾನಗಳೇ ಮೊದಲಾದ ಆರಾಧನಾ ಮಂದಿರಗಳನ್ನು ಕಟ್ಟಿಸುವವರನ್ನು ಕುರಿತು ಲಂಡನಿನ ಒಂದು ಪತ್ರಿಕೆ ಹೀಗೆ ಉಪದೇಶ ಮಾಡಿದೆ—ಜನವಸತಿಗೆ ಅನುಕೂಲವಾದ ಮಂದಿರಗಳನ್ನು ಕಟ್ಟಿಸಿ ಜನಸೇವೆ, ದೇಶಸೇವೆ ಮಾಡಿರಿ' ನಮ್ಮಲ್ಲಿ ಒಂದೇ ನಗರದಲ್ಲಿ 4000 ದೇವಸ್ಥಾನಗಳಿವೆ ಎಂಬ ಖ್ಯಾತಿಯಿದೆ ಆದರೆ ಅವನ್ನು ನೋಡಬರುವ ಭಕ್ತಕೋಟಿಗೆ ಉಳಿದುಕೊಳ್ಳಲು ಯಾವ ಅನುಕೂಲ ವಸತಿಗಳೂ ಇಲ್ಲ

ಲಂಡನಿನ ಬ್ರಿಟಿಷರು ಈ ವರ್ಷ 25 ಇಗರ್ಜಿಗಳನ್ನು ಆ ನಗರದಲ್ಲಿ ಕಟ್ಟಿಸುವರು ಮುದಿ ಪೆನ್ಶನರರಿಗಾಗಿ ಉಳಿದುಕೊಳ್ಳಲು 35 ವಸತಿಗಳನ್ನು ಕಟ್ಟಿಸಲು 'ಇವುಗಳಿಗೆ ವ್ಯಯವಾಗುವ ಹಣ ಸಾಕಾಗಿದೆ ಪೆನ್ಶನು ಎಂದು ಮುದುಕರಿಗೆ ಸರಕಾರವು ಅಲ್ಲಿ ತೆರುವ ಅಶ ಸಾರ್ಥವು ಯಾವ ಮನೆಬಾಡಿಗೆಗೂ ಸಾಕಾಗದಾಗಿದೆ ವೃದ್ಧರದೊಂದು ಶಾಲೆಯು ಅಥವಾ ಆಶ್ರಮವನ್ನು ಕಟ್ಟಿಸಿಕೊಟ್ಟರೆ ಸರಕಾರಕ್ಕೆ ಪುಣ್ಯವೂ ಕೀರ್ತಿಯೂ ಬರುವವು ಅದೂ ಅಲ್ಲದೆ, ನೂರ ಗಟ್ಟಲೆ ಇಗರ್ಜಿಗಳನ್ನು ರವಿವಾರಗಳಲ್ಲೇ ಜನರ ಕೂಟ ಕಡಿಮೆ ಮಿಕ್ಕ ವಾರಗಳಲಿ ಹೆಗ್ಗಣ ಮುಸಿಗಳೇ ವಾಸಮಾಡುವುವು ಆಶ ಮ ಕಟ್ಟಿಸಿದರೆ ಅವು ಯಾವಾಗಲೂ ತುಂಬಿಯೇ ಇರುವುವಲ್ಲವೆ?

ಬಡಬರಿಗಾಗಿ ವಸತಿಗಳ ಸಾಲುಗಳನ್ನು ಕಟ್ಟಿಸಿ, ಅಲಿ [illegible]ಂದರ ಬೇಕಾದರೆ ಅವರ ಒಗ್ಗ ಒಂದು ದೇವಾಲಯ ಕಟ್ಟಿ[illegible] ಜ[illegible]ರತ ದೇವಾಲಯ ಕಟ್ಟಿ ಬಳಿಕ ಬಕ್ತರಿಗೆ ನೆಲೆ[illegible] ದಂತೆ ಮಾಡದ ವುದು ಪಾಪ, ಅನಾರೋಗ್ಯಕರ, ಹಾನಿಕರ

2 ಒನಸೆ[illegible] ವ ಜಿಸ್ಟ್ರೇಟರ ವಿಷಯ ನಮ್ಮಲಿ ಎಷ್ಟು ಬಗೆಯ ಕಥನಾ ಮಗಳಿಲ್ಲ? ಇಂಗ್ಲಂಡಿನಲಿ ಇ[illegible]ರನ್ನ ಜೆ [illegible] ಎ[illegible]ದಿ ಜಸ್ಟಿಸ್ ಒಸ್[illegible] ದಿ [illegible]ಸ ಎನ್ನುವ[illegible] ಈ ಜೆ ಪಿ[illegible]ಗಳನ್ನು ಈಗ ಇಂಗ್ಲಂಡಿನಲಿ ಶಾಲೆಗೆ ಕಳುಹಿಸಲು ನಿರ್ಣಯವಾಗಿದೆ ಇವರ ಕರ್ತವ್ಯಗಳೇನೂ ಎಂಬ ದನ್ನು ಇವರಿಗೆ ಸ[illegible]ಯಾಗಿ, ಬೋಧಿಸಲು ಪಾಠಗಳಾಗಬೇಕು ಎಂದು ಹೌಸ್ ಒಫ್ ಕೋಮನ್ಸ್ ಸಭೆ[illegible] [illegible]ಟರ್ನಿ ಜನರಲ್‌ರವರು ತಿಳಿಸಿಬಿಟ್ಟಿದ್ದಾರೆ ಈಗ ಬೆಂಚಿನ ಮೇಲೆ ಕೂತುಕೊಳ್ಳುವ ಇವರಲ್ಲಿ ಹೆಚ್ಚಿನವರಿಗೆ ತಮ್ಮ ಕೆಲಸದ ವಿಷಯ ಏನೂ ಗೊತ್ತಿಲ್ಲ ಕಾನೂನಿನ ವಿಷಯವಾಗಿ ಭಾಷಣಗಳನ್ನು ಇವರು ಆಗಾಗ ಕೇಳುವಂತಾಗಲೇಬೇಕು ಇನ್ನು ಮುಂದೆ ಬೆಂಚ್ ಮೆಜಿಸ್ಟ್ರೇಟುರಾಗುವವರು ಅಂಥ ಭಾಷಣಗಳಿಗೆ ಹಾಜರಾಗುವೆವೆಂದು ಬರಹ ಮೂಲಕ ಒಪ್ಪಿಗೆ ಕೊಡಬೇಕು' ಎಂದು ಪಾರ್ಲಿಮೆಂಟಿನ ಮೆಂಬರರೊಬ್ಬರೂ ಸೂಚಿಸಿದರು

3 ಮಹಾತ್ಮಾಜಿಯವರು (ಬೆರಿಸ್ಟರರು) ಸರದಾರ ಪಟೇಲರು (ವಕೀಲರು) ಪಂಡಿತ ನೆಹರುರವರು (ಬೆರಿಸ್ಟರರ) ಶ್ರೀ ಭುಲಾಭಾಯಿ ದೇಸಾಯಿಯವರು, ಶ್ರೀ ರಾಜಗೋಪಾಲಚಾರ್ಯರು ಮೊದಲಾದ ಪ್ರಸಿದ್ಧ ವಕೀಲರು ಹೊಸ ಬೆಂಚ್ ಮೆಜಿಸ್ಟ್ರೇಟರಿಗಾಗಿ ಉಪನ್ಯಾಸಗಳನ್ನು ಭಾಷಣಮೂಲಕ ಹೇಳಿದರಾದೀತೆಂದು ಶ್ರೀ ಚನ ನಲಾಲರು ಸೂಚಿಸಿದ್ದಾರೆ

3 ಕಬ್ಬಿನ ಮಾರ್ಗಗಳು, ಕಬ್ಬಿಣದವಲ್ಲ—ಕೇಂದ್ರ ಸರಕಾರದ ರೋಡ್ ಕಮಿಟಿಯ ಅವಗಾಹನೆಗಾಗಿ-ಕೊಂಕ್ರಿಟ್ ಮಾರ್ಗಗಳನ್ನು ರಚಿಸುವಾಗ ಸಾವಿರಾರು ಖಂಡಿ ಹಿಂಡಿದ ಕಬ್ಬನ್ನು ಉಪಯೋಗಿಸುತ್ತಾರೆ ಲಂಡನಿನ ಬಳಿಯಲ್ಲೊಂದು ದೊಡ್ಡ ಕಾರ್ಖಾನೆ ಸ್ಥಾಪಿಸಿ, ಅಲ್ಲಿ ಈ ಬಗೆಯ ಮಾರ್ಗನಿರ್ಮಾಣ ವಸ್ತುವಿನ ಸಿದ್ಧತೆಯಾಗುತ್ತದೆ ಸಕ್ಕರೆಯಾಗುವ ಅಂಶವನ್ನು ಹಿಂಡಿದ ಬಳಿಕ ಉಳಿದುದನ್ನು ಇಲ್ಲಿ ತರುವರು ಅದನ್ನು ನಾನಾ ಬಗೆಯ ಎಣ್ಣೆಗಳೊಡನೆ ಮಿಶ್ರಗೊಳಿಸಿದರೆ, ಇಟ್ಟಿಗೆಗಳನ್ನು ಕೂಡಿಸುವ ಸಿಮೆಂಟಿನಂತೆ ಗಟ್ಟಿಯಾಗಿ ಬಂಧಿಸಬರುತ್ತದೆ ಸೆಕೆಕಾಲದಲ್ಲಿ ವಿಸ್ತರಿಸಿ, ಚಳಿಗಾಲದಲ್ಲಿ ಸಂಕೋಚವಾಗುವುದಕ್ಕೂ ಎಡೆ ಕೊಡುವಂತೆ, ಈ ಕಬ್ಬಿನ ಜಲ್ಲಿಯು ಇಟ್ಟಿಗೆಗಳನ್ನು ಮಾರ್ಗಗಳ ಮೇಲೆ ಹೆಣೆದಿಡುತ್ತಾರೆ ಚಳಿಕಾಲದಲ್ಲಿ ಇಡೀ ದಾರಿ ಸೀಡಿದ್ದು, ಸೆಕೆಕಾಲದಲ್ಲಿ ಬಟ್ಟೆನುಡಚಿದಂತೆ ನೆರಿಗೆ ಬಿದ್ದ ಮಾರ್ಗಗಳಾಗುವುವು ಮೂರು ವರ್ಷ ಇದನ್ನು ಉಪಯೋಗಿಸಿ ಈಗ ಬ್ರಿಟಿಷ ಸರಕಾರವು ಹೊಸ ಹೆದ್ದಾರಿಗಳನ್ನೆಲ್ಲ ಈ ಕ್ರಮದಲ್ಲಿ ತಯಾರಿಸುತ್ತಾರೆ ಇದಲ್ಲದೆ, ಕಬ್ಬಿನ ಜಲ್ಲಿಯು 'ನಾರು' ಬೋರ್ಡುಗಳನ್ನು ಮಾಡಲು ಉಪಯೋಗಕ್ಕೆ ಬರುತ್ತದೆಂದು, ಈ ಹಲವು ಮಿಲಿಯ ಫೀಟ್ ಉದ್ದದ ಬೋರ್ಡು ಈಗ ತಯಾರಾಗುತ್ತಿದೆ ಈ ಬೋರ್ಡನ್ನು ಉಪಯೋಗಿಸಿದರೆ, ಶಬ್ದದ ಕಠಿನತೆಯು ಕಡಮೆಯಾಗುವುದು ಸಿನೆಮಗಳಲ್ಲಿ ಅದಕ್ಕಾಗಿ ಗೋಡೆಗಳಿಗೆ ಈ ಬೋರ್ಡನ್ನು ಮುಚ್ಚುವರು ಇದೇ ಹೊಸ ಕೈಗಾರಿಕೆ[illegible] ಹವಾಯಿ ದ್ವೀಪಗಳಲ್ಲೂ ಪ್ರೋತ್ಸಾಹ ಪಡೆದು ತಲೆಯೆತ್ತಿದೆ

4 ನ[illegible] ದೇಶದಲಿ 305 ವಿ[illegible] ಜನ[illegible] [illegible] ನ್ಯೂಸ ಪ್ರದರ್ಶ[illegible] ಆದರೆ [illegible] ವಸ್ತು [illegible] ಕಳೆದ ವರ್ಷ 80 ಲಕ್ಷ[illegible] ಸಣೆ ಹಟ್ಟಿದೆ (ಇ[illegible] ದ ವರ್ತಿತ ಪೆನ[illegible]) [illegible] ಟಿ ಬ್ರಿಟಿಷ[illegible] [illegible] ಕಳೆದ ವರ್ಷ ಜನ ಸಾವೆ ನಮ್ಮಲಿನ ಸಿನೆಮ [illegible] ದಿನಗಳ [illegible] ದೇಶ? [illegible] ಚಿತ್ರಗಳ [illegible] ಟಿಷ ಚಿತ್ರಗಳ [illegible] ಪುಷ್ಪದ ಚಿತ್ರಗಳನ್ನು [illegible] ಇ ಗ್ಲಿಷರೇ ಇಂಗ್ಲಿಷ [illegible]ಗಳನ್ನು ನೋಡ[illegible] ಮೆಚ್ಚುವುದಿ ವಾದ[illegible] [illegible] ಪ್ರದರ್ಶ[illegible] ದ[illegible] ಬ್ರಿಟಿಷ ಚಿತ್ರ [illegible] ಪ್ರದರ್ಶನವಾದ ಲೇಬೇಕೆಂದ [illegible] ನಮ್ಮಲ್ಲಿ ಇಂಥ ನಿರ್ಬಂಧಗಳ [illegible] ವೇ?

5 [illegible] ಈಗ ಪೆ[illegible]ಲು ಕಡಿಮೆ ಬಸಾಗಿದೆ ಇನ್ನು ಅಲಿ ಬಸ್ಸುಗಳನ್ನು ಇದ್ದಲಿನ ಶಕ್ತಿಯಿಂದ ನಡೆಸುವರು ಇದ್ದಲಿ ಕೆಂಡದ ಮೇಲೆ ಉಗಿಯ ನ್ನು ಹರಿಯುವಂತೆ ಮಾಡಿ, ಅದರ ಶಕ್ತಿಯಿಂದ ಬಸ್ಸು ಓಡುವಂತೆ ಇಂಜಿನು ಕಟ್ಟಿಸಿದ[illegible] ಇದು ಪೆಟ್ರೋಲಿಗಿಂತ ಎಷ್ಟೋ ಕಡಮೆ ವ್ಯಯದಲ್ಲಾಗುತದೆ ಆದರೆ ಯಂತ್ರಗಳು ಭಾರವಾಗಿ ದೊಡ್ಡ ಗಾಡಿಗಳಿಗೆ ಮಾತ್ರ ಸರಿಯಾಗುವುವು ಬಸ್ಸುಗಳ ಸಂಖ್ಯೆ ಹೆಚ್ಚಿನ ಈ ದೇಶದಲ್ಲಿ ಇದ್ದಲ ಶಕ್ತಿಯಿಂದ ಚಲಿಸುವ ಯಂತ್ರಗಳನ್ನು ಉಪಯೋಗಿಸಿದರೆ ಎಷ್ಟು ಸಹಾಯವಾದೀತು' ಪರದೇಶಗಳಿಗೆ ಪೆಟ್ರೋಲಿಗಾಗಿ ತೆರುವ ಹಣವು ಉಳಿಯುವುದಲ್ಲದೆ? ಮನೆಯಲ್ಲಿ ಅಡುಗೆಯ ನಂತರ ಉಳಿಯುವ ಮಸಿಕೆಂಡಗಳೇ ಬಸ್ಸಿನ ಯಂತ್ರಗಳಿಗೆ ಸಾಕಾಗುವುದು ಬಸ್ಸಿನ ಖರ್ಚು ಕಡಮೆಯಾದರೆ, ಪ್ರಯಾಣಿಕರು ಸುಲಭ ದರದಲ್ಲಿ ಸಂಚಾರ ಮಾಡಬಹುದು, ಅಲ್ಲವೆ?

WANTED.

Active and influential Gentlemen to act as special Agents for a Limited Society, Rs Rs 40-5-100 per month

For particulars please apply to - Box No

Swadeshabbimany

ಪದೋನ್ನತಿಗೆ ನೀವು ಯೋಗ್ಯರೆ?

ನಿಮ್ಮನ್ನು ನೀವೆ ನೋಡಿ. ನಿಮ್ಮಲ್ಲಿ ಶಕ್ತಿಯುರುವುದಿಲ್ಲ. ನಿಮ್ಮ ಮುಖದ ಮೇಲೆ ಸಂತೋಷವಿಲ್ಲ. ನಿಮ್ಮ ಕಣ್ಣಲ್ಲಿ ಯಾವಾಗಲೂ ನಿದ್ರೆ ಕಾಣಿಸುತ್ತದೆ ನಿಮ್ಮ ಉದರದೊಳಗೆ ಮತ್ತು ರಕ್ತದೊಳಗೆ ವಿಷವಿರುವುದೆಂದು ಇವುಗಳೆಲ್ಲ ಚಿಹ್ನೆಗಳು 'ಇನೊಸ್ 'ಫ್ರುಟ್ ಸಾಲ್ಟ್'Eno's 'Fruit Salt' ಮಾತ್ರ ಈ ವಿಷವನ್ನು ನಿಮ್ಮ ದೇಹದಿಂದ ಹೊರದೂಡಬಲ್ಲುದು ಸಾವಿರಾರು ಮಂದಿ ಪುರುಷರು, ಸ್ತ್ರೀಯರು, ಮತ್ತು ಮಕ್ಕಳು ವೈದ್ಯರ ಬೋಧನೆ ಪಡೆದುಕೊಂಡು, ಇನೊಸ್ 'ಫ್ರುಟ್ ಸಾಲ್ಟ್'ನ್ನು Eno's 'Fruit Salt' ದಿನಾಲೂ ಸೇವಿಸುತಿದ್ದಾರೆ ಆದರಿಂದ ಅವರು ಆರೋಗ್ಯವಂತರೂ, ಹರ್ಷಿತವಂತರೂ ಆಗಿರುವರು ಆರೋಗ್ಯಕ್ಕಾಗಿ ಇಂದಿನಿಂದಲೇ ಇನೋವನ್ನು ತೆಗೆದುಕೊಳ್ಳುವಕ್ರಮಿಸಿರಿ

ಜಗತ್ತಿನ ಎಲ್ಲಾ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ ಪಂಪಕ್ವವಾದ ಹಣ್ಣುಗಳಲ್ಲಿರುವ ಪ್ರಯೋಜನಕಾರಿಯಾದ ವಸ್ತುಗಳಿಂದ ಇನೊಸ್'ಫ್ರುಟ್ ಸೋಲ್ಟ್'Eno's 'Fruit Salt ತಯಾರಿಸಲ್ಪಟ್ಟಿರುತ್ತದೆ ಇನೋ ಡೋಜಿಗೆ ಖರ್ಚು ಕಡಿಮೆ ಎಲ್ಲರಿಗೂ ಈ ಆರೋಗ್ಯಕರ ಪಾನೀಯ ಪಡೆಯಲು ಸಾಧ್ಯವಿದೆ. ಎಲ್ಲಾ ಕಡೆಗಳಲ್ಲಿಯೂ ಮೂರು ಪರಿಮಾಣದಲ್ಲಿ ಮಾರಲ್ಪಡುತ್ತದೆ

"ಇಮಿಟೇಶನನ್ನು ತಿರಸ್ಕರಿಸಿರಿ ಒಳ್ಳೆಯ ಖಾತ್ರಿ ಇನೊಸ್ 'ಫ್ರುಟ್ ಸೋಲ್ಟ್' Eno's 'Fruit-Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ ನಮ್ಮ ಎಪ್ಪತ್ತು ವರ್ಷಗಳ ಅನುಭವವು ಮಾದರಿಯ ಪೆಟ್ಟಿಗೆ ತೀರಾ ಸಮಾಧಾನಕರವೆಂದು ಎಚ್ಚರಿಸಿದೆ"

EVK 4



ಅಮೃತ

ರಕ್ತಶುದ್ಧಿ ದ್ರಾವಕವು

ಇದು ರಕ್ತಹೀನತೆ ಮಲಬದ್ಧತೆ, ಅಜೀರ್ಣ, ಕೀಲುನೋವು, ಸೋಮಾರಿತನ ಮೇಹ ವ್ರಣಗಳು, ಸುಖ ಸಂಕಟಗಳು, ನಿಶ್ಶಕ್ತಿ ಹೊಟ್ಟೆಯಲ್ಲಿ ಉರಿ ಮುಂತಾದ ವ್ಯಾಧಿಗಳನ್ನು ನಿವಾರಿಸಿ ಶರೀರಕ್ಕೆ ಕಾಂತಿಯನ್ನೂ ಮುಖಕ್ಕೆ ತೇಜಸ್ಸನ್ನೂ ಉಂಟುಮಾಡುತ್ತದೆ ಈ ಉತ್ತಮವಾದ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿರುತ್ತಾರೆ

ಅರ್ಕ

ಸರ್ವ ಜ್ವರ ನಿವಾರಿಣಿ

ಆಹಾರ, ವಿಹಾರ ಋತು ಭೇದ ದೋಷಗಳಿಂದ ಆಸ್ನಾಶಯದಲ್ಲಿ ಕ್ರಿಮಿಕೀಟಗಳು ಸೇರಿ, ಹಲವು ವಿಧವಾದ ಜ್ವರಗಳು ಸಂಭವಿಸುತ್ತಿವೆ ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಜ್ವರಗಳು, ಹೊಟ್ಟೆಯಲ್ಲಿ ಪ್ಲೀಹವೆಂಬ ಜ್ವರದ ಗಡ್ಡೆ ಇವುಗಳನ್ನು ನಿವಾರಿಸುತ್ತದೆ ಈ ಔಷಧವನ್ನು ಚಿಕ್ಕ ಮಕ್ಕಳಿಗೂ ಸಹ ಕೊಡಬಹುದು

ಕೇಸರಿ ಕುಟೀರಂ, ಮದ್ರಾಸು.

ವರ್ಸಾಲೆ

ಇತಿಹಾಸಪ್ರಸಿದ್ಧ ಪ್ರಾಚೀನ ನಗರ

ವರ್ಸಾಲೆ ನಗರವು ಲೋಕಸಂಚಾರಿಗಳಿಗೆ ಮನೋರಂಜನೆಯನ್ನು ಉಂಟುಮಾಡುವ ಆಕರ್ಷಣೀಯ ಸ್ಥಾನವಾಗಿರುವುದು ಮಾತ್ರವಲ್ಲದೆ, ಅದು ರಾಜಕೀಯ ಮಹತ್ವವನ್ನು ಹೊಂದಿರುವ ಪ್ರಾಚೀನ ಪಟ್ಟಣವಾಗಿಯೂ ಇರುತ್ತದೆ.

ಇಂಗ್ಲೆಂಡಿನ ಮಹಾರಾಜ–ಮಹಾರಾಣಿಯವರು ಇದೇ ಜೂನ್ ತಿಂಗಳ ಅಂತಿಮ ವಾರದಲ್ಲಿ ಫ್ರಾನ್ಸನ್ನು ಸಂದರ್ಶಿಸಿದರು. ಅವರ ಸ್ವಾಗತೋಪಚಾರಗಳ ಬಗ್ಗೆ ಅಲ್ಲಿ ಬಹು ವಿಶೇಷ ತರಹದ ಏರ್ಪಾಡುಗಳು ನಡೆದಿದ್ದುವು. ಅವರು ಉಳಕೊಳ್ಳುವ ಬಗ್ಗೆ ವರ್ಸಾಲೆ ಅರಮನೆಯನ್ನು ದೇವೇಂದ್ರನ ಅಮರಾವತಿಯಂತೆ ಶೃಂಗರಿಸಿದ್ದರು. ಈ ವರ್ಸಾಲೆ ಅರಮನೆಯು ಇತಿಹಾಸ ಪ್ರಸಿದ್ಧವಾಗಿದೆ. ಅದು ಮೂರು ನೂರು ವರ್ಷಗಳ ಪುರಾತನವಾಗಿಯೂ ಇದೆ. ಈ ಅರಮನೆಗೆ ಸಂಬಂಧಪಟ್ಟು ಕೊಂಡೇ ಯೂರೋಪಿನ ರಾಜಕೀಯ ಬಹು ಮುಖ್ಯ ಘಟನೆಗಳು ಘಟಿಸಿದುವು. ಪ್ರಪಂಚದಲ್ಲೆಲ್ಲ ದೊಡ್ಡದಾದ ಈ ಅರಮನೆಯಲ್ಲಿಯೇ ಜರ್ಮನ ಸಾಮ್ರಾಜ್ಯದ ಹುಟ್ಟು ಸಾವುಗಳು ಆದುವು.

ಕಳೆದ 70 ವರ್ಷಗಳಲ್ಲಿ ನಡೆಯದಂಥ ಮಹತ್ವಪೂರ್ಣ ಕೆಲಸ ಕಾರ್ಯಗಳು ಮೊನ್ನೆ ಹಾನೇ ಜೂನ್ ತಿಂಗಳಾಂತ್ಯಕ್ಕೆ ವರ್ಸಾಲೆ ನಗರದಲ್ಲಿ ನಡೆದುವು. ಫ್ರಾನ್ಸಿನ ಜನತೆಯೂ ಸರಕಾರವೂ ತಮ್ಮ ಸರ್ವಶಕ್ತಿಗಳನ್ನು ವೆಚ್ಚಮಾಡಿ, ವರ್ಸಾಲೆ ನಗರದಲ್ಲಿ ಬ್ರಿಟಿಷ ಸಾಮ್ರಾಟ ಮತ್ತು ಸಾಮ್ರಾಜ್ಞಿಯರ ಸ್ವಾಗತೋಪಚಾರಗಳ ಸರ್ವಸಿದ್ಧತೆಗಳನ್ನು ಮಾಡಿದ್ದರು. ಇಲ್ಲಿ ನಡೆದ ಸಂಭ್ರಮದ ಸ್ವಾಗತೋಪಚಾರಗಳ ಪರಿಣಾಮವಾಗಿಯೇ ಫ್ರಾನ್ಸು ಮತ್ತು ಇಂಗ್ಲೆಂಡುಗಳು ಸ್ನೇಹ ಸಂಬಂಧವು ಎಂದೆಂದೂ ಕಡಿದು ಹೋಗದಂತೆ ಬಲವಾದ ದಾರದಿಂದ ಕಟ್ಟಲ್ಪಟ್ಟಿತೆಂದು ಧಾರಾಳವಾಗಿ ಹೇಳಬಹುದು. ಮೊನ್ನೆಯ ತನಕ ಈ ನಗರವು ಕೇವಲ ಲೋಕ ಸಂಚಾರಿಗಳಿಗೆ ಮಾತ್ರ ಆಕರ್ಷಕವಾಗಿದ್ದದು. ಈಗ ಯೂರೋಪದ ಮುನ್ನೂರು ವರ್ಷಗಳ ಇತಿಹಾಸವನ್ನು ನಮ್ಮ ಸ್ಮರಣೆಗೆ ತರುತ್ತವೆ.

ಒಂದಾನೊಂದು ಸಮಯದಲ್ಲಿ ವರ್ಸಾಲೆ ಅರಮನೆಯಲ್ಲಿ ಹತ್ತು ಸಾವಿರ ಜನರು ವಾಸವಾಗಿದ್ದರು: ಜಗತ್ತಿನಲ್ಲಿ ಅದು ಬಹು ದೊಡ್ಡದಾಗಿದೆ. ಇಂಗ್ಲೆಂಡಿನ ವಿಂಡ್ಸರ ಅರಮನೆಯು ವರ್ಸಾಲೆ ಅರಮನೆಗಿಂತ ಪ್ರಾಚೀನವಾಗಿರುವದಾದರೂ, ಅದು ಇದರಷ್ಟು ವಿಸ್ತಾರವಾಗಿರುವದೂ ಇಲ್ಲ. ಐತಿಹಾಸಿಕ ಪ್ರಸಿದ್ಧಿಯನ್ನು ಸಂಪಾದಿಸಿರುವದೂ ಇಲ್ಲ. ಅರಮನೆಯೂ ಅದರ ಮುಂಭಾಗದಲ್ಲಿರುವ ಹೂ ಫಲ ಮರಗಳ ತೋಟವೂ ಅರ್ಧ ಮೈಲು ಉದ್ದವಾಗಿರುವದು. ಅರಮನೆಯ ಈ ಭಾಗದಲ್ಲಿ 378 ಕಿಟಕಿಗಳಿವೆ. ಇಡೀ ಅರಮನೆಯಲ್ಲಿರುವ ಕಿಟಕಿಗಳ ಸಂಖ್ಯೆ ಒಂದು ಸಾವಿರಕ್ಕೂ ಮೀರಿರುತ್ತದೆ.

ಹದಿನಾಲ್ಕನೆ ಲೂಯಿ ಅರಸನು ಈ ರಾಜಭವನವನ್ನು ಕಟ್ಟಿಸಿದನು. 40 ಮಿಲಿಯ ಪವನುಗಳು ಇದಕ್ಕೆ ಖರ್ಚಾದುವು. ಇದರಲ್ಲಿ ವಾಸವಾಗಿರುತ್ತಿದ್ದ ಸಾವಿರಾರು ಮಂದಿ ರಾಜಮನೆತನದವರಿಗೆ ಜೀವನದ ಸಕಲ ಸೌಲಭ್ಯಗಳನ್ನು ಒದಗಿಸಿ ಕೊಡುವದಕ್ಕೋಸ್ಕರ, ಅರಮನೆಯ ಸುತ್ತಲೂ ಮೆಲ್ಲ ಮೆಲ್ಲಗೆ ವರ್ಸಾಲೆ ನಗರದ ನಿರ್ಮಾಣವಾಯಿತು.

ಹಲವರು ಭಾವಿಸುವಂತೆ ವರ್ಸಾಲೆಯು ಫ್ರಾನ್ಸು ರಾಜದಂಪತಿಗಳ ವಿಹಾರ ಸ್ಥಾನವಾಗಿರಲಿಲ್ಲ. ಜನ ಸಮ್ಮರ್ದವಾದ ಪ್ಯಾರೀಸ ನಗರದಿಂದ ಸ್ವಲ್ಪ ದೂರದಲ್ಲಿ ಅದೊಂದು ಉಪನಗರವಾಗಿದ್ದಿತು. ಅಲ್ಲಿಯ ಶಾಂತ ವಾತಾವರಣದಲ್ಲಿದ್ದುಕೊಂಡು ರಾಜಕಾರ್ಯಗಳನ್ನು ನಡೆಸಲಿಕ್ಕೆ ಅನುಕೂಲವಾಗಿ ವರ್ಸಾಲೆ ಇದ್ದಿತು, ಆದ್ದರಿಂದ ಫ್ರಾನ್ಸಿನ ರಾಜಸತ್ತೆಯು ಇದ್ದ ಕಾಲಕ್ಕೆ ವರ್ಸಾಲೆಯು ರಾಜಕೀಯ ಮುತ್ಸದ್ದಿಗಳ ಕಾರ್ಯರಂಗವಾಗಿದ್ದಿತು. ಆಗ ಫ್ರಾನ್ಸನ್ನು ಆಳುತ್ತಿದ್ದುದು ಪ್ಯಾರೀಸ ಅಲ್ಲ, ಪರಂತು ಈ ವರ್ಸಾಲೆ ನಗರವಾಗಿದ್ದಿತು.

ಪ್ರಸಿದ್ಧ ಜನರ ನಿವಾಸಸ್ಥಾನ.

ವರ್ಸಾಲೆ ಅರಮನೆಯಲ್ಲಿ ಜನ್ಮಕ್ಕೆ ಬಂದಷ್ಟು ಲೋಕಪ್ರಸಿದ್ಧ ಜನರು ಫ್ರಾನ್ಸಿನ ಬೇರೆ ಯಾವ ಭವನದಲ್ಲಿಯೂ ಜನ್ಮಕ್ಕೆ ಬಂದಿರುವದಿಲ್ಲ. ಫ್ರಾನ್ಸಿನ ಬಿವರು ಸಮ್ರಾಟರು ಇದೇ ಅರಮನೆಯಲ್ಲಿ ಹುಟ್ಟಿದರು. ಹೌಡನ ಎಂಬ ಪ್ರಸಿದ್ಧ ಶಿಲ್ಪಿ, ಹೋಶ್ ಮತ್ತು ಬರ್ತಿಯರ ಎಂಬ ಪ್ರಸಿದ್ಧ ಸೇನಾಧಿಪತಿಗಳು, ಸುಯೋಜ ಕಾಲುವೆಯನ್ನು ಪ್ರಪಂಚಕ್ಕೆ ಕೊಟ್ಟು ಮಹದುಪಕಾರ ಮಾಡಿದ ಲೆಸ್ಸೆಪ್ಸ ಮೊದಲಾದವರೆಲ್ಲ ಈ ಅರಮನೆಯಲ್ಲಿಯೇ ಮೊತ್ತಮೊದಲು ಪ್ರಪಂಚದ ಬೆಳಕನ್ನು ಕಂಡರು.

ವರ್ಸಾಲೆ ಎಂದರೆ ಹಸುರು ಪಟ್ಟಿಗಳಿಂದ ಹರಡಿದ ನೆಲವೆಂದು ಅರ್ಥವಾಗುತ್ತದೆ. ನಿಜಕ್ಕೂ ಈ ನಗರವು ಎಲ್ಲಿ ಕಂಡರೂ ಹಸುರು ಪಟ್ಟಿಗಳಿಂದ ತುಂಬಿಕೊಂಡಿದ್ದು ನೋಡಲಿಕ್ಕೆ ಬಹು ರಮಣೀಯವಾಗಿರುವದು. 1624ರಲ್ಲಿ ಹದಿಮೂರನೆ ಲೂಯಿಯು ಇಲ್ಲೊಂದು ಸಣ್ಣ ಭವನವನ್ನು ಕಟ್ಟಿಸಿದನು. ವಿಹಾರಕ್ಕಾಗಿ ಎಲ್ಲಿಯಾದರೂ ಈ ಕಡೆಗೆ ಬಂದಿದ್ದಾಗ ಅವನು ಇದೇ ಅರಮನೆಯಲ್ಲಿ ಉಳಕೊಳ್ಳುತ್ತಿದ್ದನು. ಆದರೆ ಅವನ ನಂತರ ಅಧಿಕಾರಕ್ಕೆ ಬಂದ ಹದಿನಾಲ್ಕನೆ ಲೂಯಿಯು, ವರ್ಸಾಲೆಯು ಸಮ್ರಾಟರು ಇರಲಿಕ್ಕನುಕೂಲವಾದ ಅಪ್ರತಿಮ ಸ್ಥಾನವೆಂದು ತಿಳಿದು ಅಲ್ಲಿ ಕೋಟ್ಯಂತರ ರೂಪಾಯಿಗಳ ಖರ್ಚು ಮಾಡಿ ವರ್ಸಾಲೆ ಅರಮನೆಯನ್ನು ಕಟ್ಟಿಸಿದರು. ಇದನ್ನು ಕಟ್ಟಿ ಈಗ ಮೂರು ಶತಮಾನಗಳು ಮುಗಿಯುತ್ತ ಬಂದಿರುವವು.

ಅರಮನೆಯ ನಿರ್ಮಾಣ ಕಾರ್ಯವು 1640ರಲ್ಲಿ ಆರಂಭವಾಯಿತು. 1682ರಲ್ಲಿ ಲೂಯಿಯು ಮೊತ್ತಮೊದಲು ಗೃಹಪ್ರವೇಶ ಸಮಾರಂಭವನ್ನು ನಡೆಯಿಸಿದನು.

ರಾಜಕೀಯ ಕ್ರೀಡಾಸ್ಥಾನ

ಅಂದಿನಿಂದೀಚೆಗೆ ವರ್ಸಾಲೆಯು ರಾಜಕೀಯ ಕ್ರೀಡಾಸ್ಥಾನವಾಗಿ ಪರಿಣಮಿಸಿರುವದು. ಫ್ರಾನ್ಸಿನ ಅಧಿಕಾರ ಸೂತ್ರವು—ತೆರೆಯ ಮರೆಯಲ್ಲಿ—ಅಲ್ಲಿಯ ಸ್ತ್ರೀಯರ ಕೈಯಲ್ಲಿರುವದು ಒಂದು ವಿಶೇಷ ಸಂಗತಿಯಾಗಿದೆ. ಈ ಸ್ತ್ರೀಯರ ಹಲವು ಮುಗಿಪುಗಳಿಂದಾಗಿಯೇ ವರ್ಸಾಲೆಯಿಂದ ಎಷ್ಟೋ ಜನರ, ಎಷ್ಟೋ ಅರಸರ, ಎಷ್ಟೋ ಕ್ರಾಂತಿಗಳ, ಎಷ್ಟೋ ಸಾಮ್ರಾಜ್ಯಗಳ ಉತ್ಥಾನ ಪತನಗಳಾಗಿರುವವು. ವರ್ಸಾಲೆಯು ಹಲವು ವರ್ಷಗಳ ತನಕ ಫ್ರಾನ್ಸಿನ ರಾಜಕೀಯಗಳ ಕೇಂದ್ರಸ್ಥಾನವಾಗಿದ್ದಿತು.

ಕೇವಲ ಒಂದು ಶತಮಾನ ಕಾಲ ಮಾತ್ರ ಫ್ರಾನ್ಸಿನ ಅರಸರು ಈ ಭವನದಲ್ಲಿ ರಾಜಸುಖವನ್ನು ಅನುಭವಿಸಲಿಕ್ಕೆ ಸಮರ್ಥರಾಗಿದ್ದರು. ಅಲ್ಲಿಂದಾಚೆಗೆ ಅವರ ಭಾಗ್ಯವು ಕೆಟ್ಟಿತು. ಜನರಿಗೆ ರಾಜಸತ್ತೆಯು ಬೇಡವೆನಿಸಿತು. ಒಂದರ ಮೇಲೊಂದರಂತೆ ಹಲವು ಸಣ್ಣ ದೊಡ್ಡ ಕ್ರಾಂತಿಗಳಾದುವು. ಎಲ್ಲವುಗಳಿಗೂ ವರ್ಸಾಲೆಯೇ ಮೂಲ. ಇಲ್ಲಿಂದಲೇ ಅರಸರು ಪಲಾಯನಮಾಡಿದರು, "ಅವರ ಸಿಂಹಾಸನಗಳು ಉರುಳಿದುವು, ಅವರ ತಲೆಗಳು ಕ್ರಾಂತಿಕಾರಿ ಕೊಲೆಗಡುಕರ ಕತ್ತಿಗಳಿಗೆ ಬಲಿಯಾದುವು.

ಫ್ರಾನ್ಸಿನಲ್ಲಿ ರಾಜಸತ್ತೆಯ ಬದಲಿಗೆ ಪ್ರಜಾಸತ್ತೆಯು ಸ್ಥಾಪಿತವಾಯಿತು. ಸ್ವಲ್ಪ ಕಾಲ ಕ್ರಾಂತಿಕಾರಿಗಳು ಈ ವರ್ಸಾಲೆ ರಾಜಭವನವನ್ನು ಫ್ರಾನ್ಸಿನ ಅಧ್ಯಕ್ಷರ ನಿವಾಸಸ್ಥಾನವಾಗಿ ಉಪಯೋಗಿಸಿದರು. ಆ ಮೇಲೆ ಅವರು ಅಮೂಲ್ಯವಾದ ಈ ಅರಮನೆಯನ್ನು ಮಾರಾಟಕ್ಕಿಟ್ಟರು. ಆದರೆ ಅದನ್ನು ಮಾರಾಟಕ್ಕೆ ಪಡೆಯಲು ಸಮರ್ಥರು ಯಾರೂ ಇರಲಿಲ್ಲ, ಆದ್ದರಿಂದ ಫ್ರಾನ್ಸಿನ ಕೊನೆಯ ಅರಸನಾದ ಲೂಯಿ ಫಿಲಿಪ್ಪನು ಅದನ್ನು ಫ್ರೆಂಚ ಜನಾಂಗಕ್ಕೆ ದಾನಮಾಡಿ ಕೊಟ್ಟನು. ಫ್ರಾನ್ಸಿನ ಪ್ರಾಚೀನ ವಸ್ತು ಒಡವೆಗಳೆಲ್ಲ ವರ್ಸಾಲೆ ಅರಮನೆಯಲ್ಲಿ ಸಂಗ್ರಹೀತವಾಗಿರುವವು. ವರ್ಸಾಲೆ ಅರಮನೆಯು ಈಗ ಪ್ರಪಂಚದ ಎಲ್ಲ ಭಾಗಗಳ ಜನರನ್ನು ತನ್ನ ಕಡೆಗೆ ಸೆಳೆಯುವ ರಾಷ್ಟ್ರೀಯ ವಸ್ತು ಸಂಗ್ರಹಾಲಯವಾಗಿರುವದು.

ಸಾಮ್ರಾಜ್ಯಗಳ ಉತ್ಥಾನ ಪತನ

ಜರ್ಮನ ಸಾಮ್ರಾಜ್ಯದ ಉತ್ಥಾನ ಪತನವು ಇಡೀ ವರ್ಸಾಲೆ ಅರಮನೆಯಲ್ಲಾಯಿತು. ಜರ್ಮನರು ಗೆಂದು ಫ್ರಾನ್ಸನ್ನು ಮುತ್ತಿ ವರ್ಸಾಲೆ ಅರಮನೆಯನ್ನೇ ತನ್ನ ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು ಜರ್ಮನ ಸಾಮ್ರಾಜ್ಯದ ಘೋಷಣೆ ಮಾಡಿತು. ಈ ಘಟನೆಯು ೧೮೭೧ರಲ್ಲಿ ನಡೆಯಿತು. ಆದರೆ ಅದೇ ಜರ್ಮನ ಸಾಮ್ರಾಜ್ಯದ ಪತನವು ಕೂಡ ವರ್ಸಾಲೆ ಅರಮನೆಯಲ್ಲಿಯೇ ಆಯಿತೆಂದು ಕೇಳಿದರೆ ಯಾವಾತನಿಗೆ ಆಶ್ಚರ್ಯವಾಗಲಿಕ್ಕಿಲ್ಲ. ೧೯೧೮ನೆ ಇಸವಿಯಲ್ಲಿ ಕಳೆದ ಮಹಾಯುದ್ಧವು ಕೊನೆಗೊಂಡಾಗ ಮಿತ್ರ ಪಕ್ಷದವರು ಬರೆದು ಸಿದ್ಧಪಡಿಸಿದ ಸಂಧಿಪತ್ರಕ್ಕೆ ಜರ್ಮನ ಸೇನಾಧಿಕಾರಿಗಳು ಈ ವರ್ಸಾಲೆ ಅರಮನೆಯಲ್ಲಿಯೇ ತಮ್ಮ ಹಸ್ತಾಕ್ಷರವನ್ನು ಕೊಟ್ಟು ಜರ್ಮನ ಸೇನಾಧಿಕಾರಿಗಳು ಸಾಮ್ರಾಜ್ಯದ ಮೇಲೆ ಎಳ್ಳು ನೀರು ಬಿಟ್ಟರು.

ಮಹಾಯುದ್ಧದ ಕಾಲದಲ್ಲಿ ವರ್ಸಾಲೆಯು ಮಿತ್ರಪಕ್ಷದವರ ಚಲನವಲನಗಳ ಕೇಂದ್ರವಾಗಿತ್ತು. ಇಲ್ಲಿಂದಲೇ ಮಾರ್ಶಲ ಫ್ಲೋಕನು ತನ್ನ ಅಧಿಕಾರದಲ್ಲಿದ್ದ ಪ್ರಚಂಡ ಸೇನೆಯ ಸಂಚಾಲನ ಮಾಡಿದನು. ಶಾಂತಿ ಪರಿಷತ್ತು ಮುಗಿದ ಬಳಿಕ ವರ್ಸಾಲೆಯು ಈಗ ಪುನಃ ಲೋಕಸಂಚಾರಿಗಳ ಪ್ರೇಕ್ಷಣೀಯ ಸ್ಥಾನವಾಗಿ ಪರಿವರ್ತನೆಹೊಂದಿದೆ.

೧೯೦೧ನೆ ಇಸವಿ ಆಗೋಸ್ತು ತಿಂಗಳ ೧೦ ತಾರೀಕಿನ ದಿನ ಈ ವರ್ಸಾಲೆ ಅರಮನೆಯಲ್ಲಿ ಒಂದು ಅಪೂರ್ವ ಘಟನೆಯು ನಡೆಯಿತು. ಇಂಗ್ಲೆಂಡಿನ ಇಬ್ಬರು ಅಧ್ಯಾಪಿಕೆಯರು ಅರಮನೆಯ ರಮಣೀಯವಾದ ಉದ್ಯಾನದಲ್ಲಿ ಸಂಚರಿಸುತ್ತಿದ್ದಾಗ, ಅವರು ಒಂದು ಅಜ್ಞಾತಪ್ರದೇಶವನ್ನು ಸೇರಿದರು. ಅಲ್ಲಿ ಅವರು ಒಂದು ಕಡೆ ನೂರಾರು ಮಂದಿ ಸ್ತ್ರೀಪುರುಷರು ಶತಮಾನಗಳ ಹಿಂದಿನ ಉಡಿಗೆತೊಡಿಗೆಗಳಿಂದ ಶೃಂಗರಿಸಿಕೊಂಡು ಆ ಹಳೆಯ ಕಾಲಕ್ಕೆ ಒಪ್ಪುವಂತ ಜೀವನಕ್ರಮವನ್ನು ಅನುಸರಿಸುವದನ್ನು ಕಂಡರು. ಅವರಿಗೆ ಈ ಅಧ್ಯಾಪಿಕೆಯರು ಇರುವದು ತಿಳಿದೇ ಇಲ್ಲ. ಇವರು ಅವರ ಪರಿಚಯ ಮಾಡಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಮರುಕ್ಷಣದಲ್ಲಿ ದೃಶ್ಯವು ಬದಲಾಯಿತು. ಅಧ್ಯಾಪಿಕೆಯರು ತಮ್ಮ ಅಂದಿನ ವಿಚಿತ್ರ ಅನುಭವವನ್ನು ಯಾರೊಡನೆ ಹೇಳಿದರೂ ಯಾರೂ ನಂಬಲಿಲ್ಲ. ಯಾಕೆಂದರೆ ಅವರು ಕಂಡಂಥ ಸ್ಥಳವನ್ನು ಪುನಃ ಗುರುತಿಸುವದು ಅವರಿಗೇ ಸಾಧ್ಯವಾಗಲಿಲ್ಲ. ಪಾಪದ ಅಧ್ಯಾಪಿಕೆಯರು ಭ್ರಾಂತರು, ಉನ್ಮತ್ತರು ಎಂದು ಹೆಸರಾದರು. ಪರಂತು ಪ್ಯಾರಿಸನಲ್ಲಿ ಮತ್ತೆ ದೊರಕಿದ ಒಂದು ಹಳೆಯ ವರ್ಣನೆಯಲ್ಲಿ ಅಂಥ ಒಂದು ಸ್ಥಾನವು ವರ್ಸಾಲೆಯಲ್ಲಿ ಇದ್ದುದಾಗಿ ಗೊತ್ತಾಯಿತು. ಆದರೆ ಎಂದೂ ಇದ್ದ ಆ ಪುರಾತನ ಸ್ಥಾನವನ್ನು ಬಿದ್ದು ಬಹಳ ವರ್ಷಗಳು ಕಳೆದು ಹೋದ ಮೇಲೆ ಈಗ ನೋಡುವದು ಹೇಗೆ? ಪ್ರಾಯಶಃ ಆ ಅಧ್ಯಾಪಿಕೆಯರು ಕಲ್ಪನಾಲೋಕದಲ್ಲಿ ಸಂಚರಿಸಿದ್ದಿರಬೇಕು ಎಂದು ಜನರು ಊಹಿಸಿದರು. ಪರಂತು ಇಷ್ಟೊಂದು ಐತಿಹಾಸಿಕ ಮಹತ್ವವನ್ನು ಪಡೆದಿರುವ ವರ್ಸಾಲೆಯಲ್ಲಿ ಇಂಥ ಒಂದು ಅದ್ಭುತ ಘಟನೆಯು ಘಟಿಸುವುದು ಅಸಾಧ್ಯವೆಂದು ಹೇಗೆ ಹೇಳಲಿಕ್ಕೆ ಬರುತ್ತದೆ? ಆ ಅಧ್ಯಾಪಿಕೆಯರು ನಿಜಕ್ಕೂ ೨೦೦ ವರ್ಷಗಳ ಹಿಂದಿನ ವರ್ಸಾಲೆಯನ್ನು ಆಗ ಕಂಡಿರಲೂ ಬಹುದು. ಅದು ಹೇಗೆ ಎಂದು ಹೇಳುವದು ಮಾತ್ರ ನಮಗೆ ಸಾಧ್ಯವಲ್ಲ, ಆದರೆ ಹಾಗೆ ಕಾಣುವದು ಅಸಾಧ್ಯವೆಂದೇನೂ ಇರುವದಿಲ್ಲ

'ಹಿಂದೂಸ್ಥಾನ ಸ್ಟಿರಟ್ ವೀರ್'ರವರ ಲೇಖನದ ಆಧಾರದಿಂದ.

ನಿಷ್ಣಾತ ವೈದ್ಯರು

ನಿಮ್ಮ ದಮ್ಮಿನ ಚಿಕಿತ್ಸೆ

ಯನ್ನು

ಹೇಗೆ ಮಾಡುವರು?

ನಿಮ್ಮ ದಮ್ಮನ್ನು ಐದು ನಿಮಿಷಗಳಲ್ಲಿ ಚಿಟಿಕಿ ಹೊಡೆದಂತೆ ಗುಣವಾಗ ಬೇಕೆಂದು ಅವನು ಹೇಳಬಹುದೆಂದು ನಿಮಗೆ ಅನಿಸುವದೇ? ದಮ್ಮನ್ನು ತತ್ಕಾಲಕ್ಕೆ ಗುಣಮಾಡುವ ಉಪಾಯವು ವಿಧವಿಧದ ಗುಳಿಗೆಗಳು ಅಥವಾ ಹೊಗೆತೆಗೆದುಕೊಳ್ಳುವ ಔಷಧಗಳು. ಆದರೆ ಇವು ದಮ್ಮನ್ನು ಪೂರ್ಣ ನಾಶಪಡಿಸಲು ತೀರ ನಿರುಪಯೋಗಿಯಾಗುವವೆಂದು ಅನುಭವದಿಂದ ಸಿದ್ಧವಾಗಿದೆ. ಪರಿಣಾಮದಲ್ಲಿ ಈ ಔಷಧಗಳು ಗಂಟಲದ ಹಾಗೂ ಶ್ವಾಸನಳಿಗೆಗಳ ಬೇನೆಯನ್ನು ಹೆಚ್ಚಿಸಿ ರೋಗಿಯನ್ನು ಕಾಯಂ ದಮ್ಮಿನವನನ್ನಾಗಿ ಮಾಡಿಬಿಡುವವು.

ದಮ್ಮು ಮೆಲ್ಲಮೆಲ್ಲಗೆ ಆದರೆ ನಿಶ್ಚಿತವಾಗಿ ಗುಣಮಾಡುವ ಔಷಧಿಗಳಲ್ಲಿ ಪುರೋಹಿತ ಶ್ವಾಸಹಾರಿ ಇದೊಂದು ಪ್ರಭಾವಶಾಲಿಯಾದ ಔಷಧವಾಗಿದೆ. ದಮ್ಮು, ದಾಫ ಹತ್ತುವದು, ಮೂಗಿನ ಕಸಿಕೆ, ಕಂಠದಾಹ ಮಾಡುವ ಕೆಮ್ಮು ಮತ್ತು ಪುಪ್ಪುಸದ ಯಾವತ್ತು ವಿಕಾರಗಳನ್ನು ಗುಣಮಾಡಲು ಈ ಔಷಧದ ಯೋಜನೆಯನ್ನು ನಿರ್ಧಿಷ್ಟತೆಯಿಂದ ಮಾಡಬೇಕು. ಇದರಿಂದ ಸಾವಿರಾರು ದಮ್ಮಿನವರು ರೋಗಮುಕ್ತರಾಗಿರುವರು. ಪ್ರತ್ಯೇಕ ಊರಲ್ಲಿ ಕೆಮಿಸ್ಟ ಇಲ್ಲವೆ ಅಂಗಡಿಕಾರರಲ್ಲಿ ಅದು ರೂ. ೨, ೩/೪, ಮತ್ತು ರೂ. ೬ ಈ ಪ್ರಕಾರ ಬೇರೆ ಬೇರೆ ಬೆಲೆಯ ಸಣ್ಣ ದೊಡ್ಡ ಸೀಸೆಗಳಲ್ಲಿ ದೊರಲ್ಪಡುತ್ತದೆ.



ಡಾ ಪುರೋಹಿತ

ಶ್ವಾಸಹಾರಿ

ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಮಂಗಳೂರು:—ದಿ ಪೊಪ್ಯುಲರ್ ಸ್ಟೋರ್ಸ್, ರಥಬೀದಿ.

ಮಾತನಾಡುವ ಪತ್ರಿಕೆ!

ಕೂತಲ್ಲೇ ಕೇಳಬಹುದು! ★ ಕೂತಲ್ಲೇ ಓದಬಹುದು!

ಮಾತನಾಡುವ ಪತ್ರಿಕೆ ಎಂದರೆ, ಅದೆಂಥಹುದು ? ರೇಡಿಯೋವೇ, ಗ್ರಾಮಫೋನೇ ? ಎಂದು ನೀವು ಆಶ್ಚರ್ಯದಿಂದ ಕೇಳಬಹುದು. ಆದರೆ ಅದು ರೇಡಿಯೋ ಅಲ್ಲ, ಗ್ರಾಮಫೋನೂ ಅಲ್ಲ. ನೀವು ಪ್ರತಿನಿತ್ಯ ಓದುವಂಥ ಪತ್ರಿಕೆಯಂತೆ ಅದು ಒಂದು ಅಚ್ಚುಹಾಕಿದ ಕಾಗದದ ಪತ್ರಿಕೆ. ಓದುಬರಹಬಲ್ಲವರು ಯಾರೂ ಅದನ್ನು ಒಂದಾಣೆ ಎರಡಾಣೆ ಕೊಟ್ಟು ಕ್ರಯಕ್ಕೆ ಪಡೆಕೊಳ್ಳಬಹುದು, ಮತ್ತು ವಾರದ, ಪಕ್ಷದ ವರ್ತಮಾನ ವಿಚಾರಗಳನ್ನು ಓದಿತಿಳಕೊಳ್ಳಬಹುದು

ಆದರೆ ಸಾಮಾನ್ಯ ಪತ್ರಿಕೆಗೂ ಅದಕ್ಕೂ ಒಂದು ವ್ಯತ್ಯಾಸ ಮಾತ್ರ ಇದೆ ಪತ್ರಿಕೆಯ ಒಂದೊಂದು ಹಾಳೆ ಇರುವದಷ್ಟೆ? ಅದರ ಎರಡು ಬದಿಯ ಮಾರ್ಜಿನುಗಳಲ್ಲಿ ವಾರದ ವರ್ತಮಾನ, ಲೇಖ ಇತ್ಯಾದಿಗಳ ಗ್ರಾಮಫೋನು ರಿಕಾರ್ಡು ಇರತ್ತದೆ. ಹಾಳೆಯ ಮಾರ್ಜಿನಿನ ಆ ಅಂಶವನ್ನು ಹರಿದು ತೆಗೆದು, ಗ್ರಾಮಫೋನಿನ ಮುಳ್ಳಿನ ಕೆಳಗೆ ಇಟ್ಟರಾಯಿತು. ಆಗ ಅದು ಮಾತನಾಡತೊಡಗುತ್ತದೆ ಕಥೆ, ಸಂಗೀತ, ವರ್ತಮಾನ, ಲೇಖನ, ಹಾಸ್ಯ, ವಿನೋದ ಬೇಕಾದುದನ್ನು ಕೇಳಿಕೊಂಡು ನೀವು ವಿನೋದಪಡಬಹುದು ಓದಬಾರದವರೂ, ಕುರುಡರೂ ಕೂಡ ಪತ್ರಿಕೆಯ ಯಥಾರ್ಥ ಪ್ರಯೋಜನವನ್ನು ಪಡೆಯಬಹುದು.

ಡಬ್ಲ್ಯು ಜಿ ಯಾಚ್ ಫಿಂಟ್ ಎಂಬ ನ್ಯೂಯೋರ್ಕ ಶಹರದ ರೇಡಿಯೋ ಮತ್ತು ಟೆಲಿಫೋನ ತಜ್ಞನೊಬ್ಬನು ಇಂಥ ಮಾತನಾಡುವ ಪತ್ರಿಕೆಯನ್ನು ಮಾಡುವ ಕಲೆ ಕಂಡುಹಿಡಿದ್ದಾನೆ. ಅವನು ಶೋಧನಮಾಡಿ ತೆಗೆದ 40ರ ಇತರ 'ಶಬ್ದ' ಶೋಧಗಳೊಂದಿಗೆ 'ಮಾತನಾಡುವ ಪತ್ರಿಕೆ' ಎಂಬುದು ಅವನ 41ನೆಯ ಶೋಧೆಯಾಗಿರುವುದು

ದಿನನಿತ್ಯದ ಅಥವಾ ವಾರದ ವರ್ತಮಾನ ಲೇಖ ಮೊದಲಾದವನ್ನು ಕಾಗದದ ಹಾಳೆಯ ಮೇಲೆ ಅಚ್ಚು ಹಾಕುವಂತೆಯೇ, ಪತ್ರಿಕೆಯ ಹಾಳೆಯ ಮೇಲೆ ಅವುಗಳ ಶಬ್ದ ಮಾನಗಳನ್ನು ಅಚ್ಚುಹೊಡೆಯುವ ಒಂದು ಸುಲಭ ಉಪಾಯವನ್ನು ಅವನು ಹುಡುಕಿ ತೆಗೆದಿದ್ದಾನೆ. ಶಬ್ದಮಾರ್ಗಗಳನ್ನು ಅಚ್ಚುಹೊಡೆದ ಹಳೆಯ ತುಂಡನ್ನು ಹರಿದು ತೆಗೆದು, ಅದಕ್ಕಾಗಿಯೇ ಅವನು ಪ್ರತ್ಯೇಕವಾಗಿ ಹುಡುಕಿ ತೆಗೆದ ಒಂದು ವಿಜಾತೀಯ ಗ್ರಾಮಫೋನು ಯಂತ್ರದಲ್ಲಿಟ್ಟು ಅದನ್ನು ನಡೆಸಿಬಿಟ್ಟರಾಯಿತು ಯಂತ್ರವು ಕಂಡಂತೆ, ಕೇಳಿದಂತೆ, ಮಾತನಾಡಲಾರಂಭಿಸುತ್ತದೆ ಈ ಯಂತ್ರವನ್ನು ನಡೆಸುವುದು ಎಷ್ಟು ಸುಲಭವಾಗಿದೆ ಎಂದರೆ, ಏನೂ ಅಭ್ಯಾಸವಿಲ್ಲದ ಚಿಕ್ಕಮಕ್ಕಳು ಕೂಡಾ ಅದನ್ನು ಇಟ್ಟು ಉಪಯೋಗಿಸಬಹುದು ಮತ್ತೆ ಅದು ಸರ್ವಸಾಮಾನ್ಯರಿಗೆ ಕೊಂಡುಕೊಳ್ಳಲಿಕ್ಕೆ ಸುಲಭಸಾಧ್ಯವಾಗುವಷ್ಟು ಅಗ್ಗವಾಗಿಯೂ ಇರುತ್ತದೆ ಹದಿನೆರಡಾಣೆ ಅಥವಾ ಒಂದು ರೂಪಾಯಿಗೆ ಅಂಥ ಯಂತ್ರವು ದೊರೆಯುವದು

ಈ ಯಂತ್ರಕ್ಕೆ ಧ್ವನಿಪ್ರಸಾರಕ ಯಂತ್ರವನ್ನು ಜೋಡಿಸಲಿಕ್ಕೆ ಸಾಧ್ಯವಿದೆ. ಅದನ್ನು ಜೋಡಿಸಿಬಿಟ್ಟರೆ, ಪ್ರತಿಯೊಂದು ಸಂಗತಿಯನ್ನು ಆಯಾ ಸ್ಥಳಗಳಲ್ಲಿ ನಿಜಕ್ಕೂ ಹೇಗೆ ನಡೆದಿದೆಯೋ, ಯಥಾರ್ಥಕ್ಕೆ ಹಾಗೆಯೇ ಕೇಳಿಸಬಹುದು 6,000 ಮೈಲು ದೂರದಲ್ಲಿ ಬ್ರಿಟಿಷ ಪಾರ್ಲಿಮೆಂಟ ಭವನದಲ್ಲಿ ಪ್ರಧಾನ ಮಂತ್ರಿಗಳು ಹಿಂದೂದೇಶಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯವಾಗಿ ಮಾಡಿದ ಭಾಷಣ, [illegible] ಚರ್ಚೆ, ಉಂಟಾದ ಕೋಲಾಹಲ ಎಲ್ಲವನ್ನು ನೀವು ಇಲ್ಲಿ ಇದ್ದಲ್ಲಿ, ಅಲ್ಲಿ ಆದಂತೆ ಈ ಮಾತನಾಡುವ ಪತ್ರಿಕೆಯ ಮೂಲಕ ಕೇಳಬಹುದು

★

ಭಾರತದಲ್ಲಿ - - - - - : : : : ಬೆಂಕಿಪೆಟ್ಟಿಗೆಯ ಕೈಗಾರಿಕೆ!

ಜಗತ್ತಿನಲ್ಲಿ ಬೆಂಕಿಪೆಟ್ಟಿಗೆಯ ಉಪಯೋಗ ವೆಷ್ಟು ಎಂದು ಕೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ನಮ್ಮ ಈ ಜಗತ್ತಿನಲ್ಲಿ ಪ್ರತಿವರ್ಷ ನೂರಐವತ್ತು ಮಿಲಿಯ ಗ್ರೋಸ (=144) ಬೆಂಕಿಪೆಟ್ಟಿಗೆಗಳು ಖರ್ಚಾಗುತ್ತವೆ ಅದರ ಪೈಕಿ ನಮ್ಮ ಈ ಹಿಂದೂದೇಶದಲ್ಲೇ ಹದಿನೇಳು ಮಿಲಿಯ ಗ್ರೋಸ ಬೆಂಕಿಪೆಟ್ಟಿಗೆಗಳು ಪ್ರತಿವರ್ಷ ಖರ್ಚಾಗುವವು.

ಈಗ ನಮ್ಮ ದೇಶಕ್ಕೆ ಬೇಕಾಗುವ ಅಷ್ಟು ಬೆಂಕಿಪೆಟ್ಟಿಗೆಗಳು ಹಿಂದೆ ಜಪಾನ, ಸ್ವೀಡನ್ ಮೊದಲಾದ ವಿದೇಶಗಳಿಂದ ಬರುತ್ತವೆ ಅಥವಾ ವಿದೇಶೀ ಭಂಡವಾಳದಿಂದ ಸ್ಥಾಪಿಸಲ್ಪಟ್ಟ ನಮ್ಮ ದೇಶದಲ್ಲಿನ ಫೇಕ್ಟರಿಗಳಲ್ಲಿ ಅವು ತಯ್ಯಾರಾಗುತ್ತವೆ. ಅಚ್ಚ ಸ್ವದೇಶಿ ಬೆಂಕಿಪೆಟ್ಟಿಗೆಗಳು ನಮ್ಮ ದೇಶದಲ್ಲಿ ತಯ್ಯಾರಾಗುವದು ಬಹಳ ಕಡಿಮೆ ಇರುತ್ತದೆ

ಆದರೆ ನಮ್ಮ ದೇಶಕ್ಕೆ ಪ್ರತಿ ವರ್ಷಕ್ಕೆ ಬೇಕಾಗುವಷ್ಟು ಬೆಂಕಿಪೆಟ್ಟಿಗೆಗಳನ್ನು ಮಾತ್ರವಲ್ಲ, ವಿದೇಶಿಗಳಿಗೆ ರಫ್ತುಮಾಡಲಿಕ್ಕೆ ಸಾಧ್ಯವಾಗಬಹುದಾದಷ್ಟು ಬೆಂಕಿಪೆಟ್ಟಿಗೆಗಳನ್ನು ನಾವು ನಮ್ಮ ದೇಶದಲ್ಲಿ ನಮ್ಮ ದೇಶದ ಬಂಡವಾಳ ಮತ್ತು ಕೆಲಸಗಾರರ ಪರಿಶ್ರಮದ ಮೂಲಕ ತಯ್ಯಾರಿಸುವ ಅನುಕೂಲತೆಯು ನಮಗೆ ಇರುತ್ತದೆ ಇತ್ತೀಚೆಗೆ ನಡೆದ ಒಂದು ತನಿಖೆಯಿಂದ ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಬೇಕಾದ ಜಾತಿಯ ಮರಗಳು ನಮ್ಮ ದೇಶದ ಕಾಡುಗಳಲ್ಲಿ ಧಾರಾಳವಾಗಿ ಬೆಳೆಯುತ್ತಲಿರುವವೆಂಬುದು ಸ್ಪಷ್ಟವಾಗಿದೆ ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಮುಖ್ಯವಾಗಿ ಬೇಕಾದ [illegible] ಜಾತಿಯ [illegible] ಗಳೇ ಬೆಂಕಿಪೆಟ್ಟಿಗೆ [illegible]ಲಿಕ್ಕೆ ಅಥವಾ ಕಡ್ಡಿ ಕೆತ್ತರಿಸಲಿಕ್ಕೆ ಬರುವ 78 ಜಾತಿಯ ಮರಗಳು ನಮ್ಮ ಅರಣ್ಯದಲ್ಲಿ ಇವೆಯೆಂದು ಗೊತ್ತಾಗಿದೆ.

ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಬೇಕಾದ ಇತರ ಕಚ್ಚಾ ಮಾಲುಗಳೆಂದರೆ—ಪೆರಫಿನ ಎಂಬ ಮೇಣ, ರೆಡ್ ಆಕ್ಸೈಡ್, ಮೆಂಗನೀಸ್ ಡಾಯಾಕ್ಸೈಡ್, ಗಾಜಿನಹುಡಿ ಮೊದಲಾದವು ಆಗಿವೆ ಇವೆಲ್ಲ ನಮ್ಮ ದೇಶದಲ್ಲಿ ಬೇಕಾದಷ್ಟು ತಯ್ಯಾರಾಗುತ್ತಲಿವೆ. ಕೆಲವು ರಾಸಾಯನಿಕ ದ್ರವ್ಯಗಳನ್ನು ಮತ್ತು ಬೆಂಕಿಪೆಟ್ಟಿಗೆಗೆ ಬೇಕಾಗುವ ಕಾಗದವನ್ನು ಈಗ ವಿದೇಶಗಳಿಂದ ಆಮದು ಮಾಡುತಲಿದ್ದಾರೆ. ಆದರೆ ನಮ್ಮ ದೇಶದ ಕಾಗದ ಕೈಗಾರಿಕೆಯಲ್ಲಿ ಸುಧಾರಣೆಗಳು ಆಗುತ್ತಹೋಗಿ, ಕಾರ್ಖಾನೆಯುಗಳಲ್ಲಿ ಎಲ್ಲ ಅವಶ್ಯಕತೆಗಳಿಗೆ ಬೇಕಾದ ಕಾಗದಗಳು ತಯ್ಯಾರಾಗುವ ಹೊತ್ತಿಗೆ, ಈಗ ವಿದೇಶಗಳಿಂದ ಆಮದುಮಾಡುವ ರಾಸಾಯನಿಕ ದ್ರವ್ಯಗಳೂ ಇಲ್ಲಿಯೇ ತಯ್ಯಾರಾಗಬಹುದು. ಆಗ ಬೆಂಕಿಪೆಟ್ಟಿಗೆಗಳ ಮಟ್ಟಿಗೂ ನಮ್ಮದೇಶವು ಸ್ವತಂತ್ರವಾಗುವದು

ಹೀಗೆ ನಮ್ಮ ದೇಶದಲ್ಲಿ ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಉಜ್ವಲ ಭವಿಷ್ಯವಿರುವದು ಯಾರಿಗಾದರೂ ಕಂಡುಬಂದೀತು. ಬೆಂಕಿಪೆಟ್ಟಿಗೆಯು ನಮ್ಮ ಅನುದಿನದ ಅವಶ್ಯಕತೆಯ ವಸ್ತು ಆಗಿರುವದರಿಂದ ಈ ಕೈಗಾರಿಕೆಯನ್ನು ಒಳ್ಳೇ ಮುಂದಾಲೋಚನೆ ಇಟ್ಟುಕೊಂಡು ಅಭಿವೃದ್ಧಿ ತಂದರೆ, ಅದಕ್ಕೆ ಯಾವ ರೀತಿಯ ಅಡಚಣೆ ಕ್ಷತಿ ಉಂಟಾಗುವ ಹಾಗೆ ಇರುವದಿಲ್ಲ ನಮ್ಮ ದೇಶದ ಭಾಂಡವಾಳಗಾರರು ಈ ವಿಷಯವನ್ನು ಆಲೋಚಿಸಲಿ

★

THE

Bombay Life Assurance Company, Limited.

(ESTD 1908.)

45-47 Churchgate Street, Fort-BOMBAY.

Evidence of

PROGRESS, SECURITY & STABILITY.

Year	New Business completed	Premium Income	Life Fund	Business in force
1931	73,00,000	11,00,000	31,00,000	2,27,00,000
1934	1,04,00,000	19,00,000	58,00,000	3,71,00,000
1937	1,40,00,000	31,00,000	99,00,000	6,00,00,000

The Company offers all that is best and up-to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply to any of our following Offices:—

Kochikar Brothers Limited,
Madras Branch Secretaries,
Bombay Life Building, UDIPI. (S. India).

(1) Visweswarapuram Circle, Bangalore City. (2) Car Street, Mangalore. (3) Puthiyara, Calicut (4) Chunai Road, Girigaum, Bombay No. 4 (5) P. B. 337, Mount Road, Madras (6) Ottapalam, S. Malabar. (7) Central Station Road, Trivandrum.

ಭಾರತೀಯ ಎಸೆಂಬ್ಲಿ ಕೌನ್ಸಿಲುಗಳಲ್ಲಿ

ಮಹಿಳೆಯರ ಸ್ಥಾನಮಾನ

ಕಳೆದ ಒಂದು ಶತಮಾನದಲ್ಲಿ ಭಾರತೀಯ ಮಹಿಳೆಯರ ಪ್ರಗತಿಯು ಅತ್ಯಾಶ್ಚರ್ಯಕರವಾಗಿರುವದು. ಪುರುಷರಿಂದ ಸ್ತ್ರೀಯರು ಭಿನ್ನರಾಗಿದ್ದಾರೆ ಎಂಬ ಭಾವನೆಗಿಂತಲೂ ಹೆಚ್ಚಾಗಿ ಸ್ತ್ರೀಯರೂ ಪುರುಷರೂ ಒಂದೇ ಮಾನವ ಕುಟುಂಬಕ್ಕೆ ಸೇರಿದ್ದಾರೆ ಎಂಬ ಭಾವನೆಯು ಅವರ ಅಭಿವೃದ್ಧಿಗಾಗಿ ಕೆಲಸಮಾಡಿದೆ. ಹೀಗಾದ್ದರಿಂದ ಪಾಶ್ಚಾತ್ಯರು ಕನಸು ಮನಸುಗಳಲ್ಲಿ ಎಣಿಸಕೂಡದಾದಷ್ಟು ಶೀಘ್ರದಲ್ಲಿ ಭಾರತೀಯ ಮಹಿಳೆಯರು ಉನ್ನತಿಯನ್ನು ಹೊಂದಿದ್ದಾರೆ. ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದ ಪ್ರಭಾವ, ಗತ ಪಂಚವಾರ್ಷಿಕ ಮಹಾಯುದ್ಧದ ಪರಿಣಾಮ ಮತ್ತು ಸೋವಿಯಟ್ ರಶ್ಯದಲ್ಲಿ ಸರಕಾರದ ನೀತಿ ಇವುಗಳಿಂದ

ಭಾರತೀಯ ಸ್ತ್ರೀಯರು ಒಳ್ಳೇ ಪ್ರಗತಿಯ ದಿಶೆಯಲ್ಲಿ ಮುನ್ನಡೆಯುತ್ತಲಿದ್ದಾರೆ. ಒಂದು ಸಂಯುಕ್ತ ಪ್ರಾಂತ್ಯಗಳ ಲೆಜಿಸ್ಲೇಟಿವ್ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರಾದ ಬೇಗಮ್ ಐಜಾಜ್ ರಸೂಲ್‌ರು ಹೇಳುತ್ತ, ಭಾರತೀಯ ಎಸೆಂಬ್ಲಿ ಕೌನ್ಸಿಲುಗಳಲ್ಲಿ ಮಹಿಳೆಯರಿಗೆ ಪ್ರಾಪ್ತವಾದ ಸ್ಥಾನಮಾನಗಳ ಕುರಿತು ಹೀಗೆ ಹೇಳುತ್ತಾರೆ:—

೧೯೧೯ನೆ ಇಸವಿಯ ಮತದಾನ ಕಾಯಿದೆಯ ಮೇರೆಗೆ ಭಾರತೀಯ ಮಹಿಳೆಯರಿಗೆ ಪುರುಷರಿಗಿದ್ದಂತೆಯೇ ಮತದಾನದ ಅಧಿಕಾರವು ಕೊಡಲ್ಪಟ್ಟಿತು. ಆದರೆ ಆಸ್ತಿಯ ಮೇಲೆ ಅಧಿಕಾರವುಳ್ಳವರು ಮಾತ್ರ ಮತದಾರರಾಗಬಹುದೆಂಬ ನಿಯಮವಿದ್ದುದರಿಂದ, ಯಥಾರ್ಥವನ್ನು ಹೇಳುವದಾದರೆ ಕೆಲವೇ ಮಂದಿ ಸ್ತ್ರೀಯರಿಗೆ ಮಾತ್ರ ಮತದಾನದ ಅಧಿಕಾರವು ದೊರೆಯಿತು. ೧೯೩೫ನೆ ಇಸವಿಯ ಕಾನೂನು ಮೇರೆಗೆ ಆಸ್ತಿಯ ಮೇಲೆ ಅಧಿಕಾರವುಳ್ಳವರಿಗೆ ಮಾತ್ರವಲ್ಲ, ಆಸ್ತಿಪಾಸ್ತಿಗಳುಳ್ಳ ಪುರುಷರ ಹೆಂಡಂದಿರಿಗೂ ವಿಧವೆಯರಿಗೂ ಮತ್ತು ಓದು ಬರಹ ಗೊತ್ತಿರುವ ಸ್ತ್ರೀಯರಿಗೂ ಈ ಅಧಿಕಾರ ದಕ್ಕಿತು. ಹೀಗೆ ಬ್ರಿಟಿಷ ಇಂಡಿಯದಲ್ಲಿ ೫ ಮಿಲಿಯ ಸ್ತ್ರೀಯರಿಗೆ ಮತದಾನದ ಅಧಿಕಾರವು ಪ್ರಾಪ್ತವಾಗಿರುತ್ತದೆ. ಈ ರೀತಿ ಮತದಾನದ ಅಧಿಕಾರ ಪಡೆದ ಪುರುಷರ ಸಂಖ್ಯೆ ೩೫ ಮಿಲಿಯ ಇದೆ.

ಹೊಸ ರಾಜಕೀಯ ಸುಧಾರಣೆಗಳಿಗನುಸಾರವಾಗಿ ನಡೆದ ಕಳೆದ ಬಾರಿಯ ಚುನಾವಣೆಗಳಲ್ಲಿ ಪುರುಷರೊಂದಿಗೆ ಸ್ತ್ರೀಯರೂ ಎಸೆಂಬ್ಲಿ ಕೌನ್ಸಿಲುಗಳಿಗೆ ಉಮೇದುವಾರರಾಗಿ ನಿಂತು ಕಾದಿಟ್ಟ ಸ್ಥಾನಗಳನ್ನು ಸ್ಪರ್ಧಿಸಿದುದು ಮಾತ್ರವಲ್ಲದೆ ಅವರು ಎಲ್ಲರಿಗಾಗಿಟ್ಟ ಜನರಲ್ ಸೀಟುಗಳನ್ನು ಸ್ಪರ್ಧಿಸಿದರು! ಅವರು ಮತದಾನ ಮಾಡಲಿಕ್ಕೂ ಬಹಳ ಹೆಚ್ಚಿನ ಸಂಖ್ಯೆಯಿಂದ ಹೋದರು. ಇದು ಕಳೆದ ಬಾರಿಯ ಚುನಾವಣೆಗಳ ಒಂದು ವೈಶಿಷ್ಟ್ಯವಾಗಿದೆ. ಈ ಚುನಾವಣೆಗಳ ಪ್ರಭಾವವು ಭಾರತೀಯ ಮಹಿಳಾ ಆಂದೋಲನದ ಮೇಲೆ ತುಂಬಾ ಬಿದ್ದಿದೆ. ಮುಂದೂ ಅದು ಬೀಳದೆ ಹೋಗುವದಿಲ್ಲ.

ಪ್ರಜಾಸತ್ತಾತ್ಮಕ ಶಾಸನ ಕ್ರಮವು ಜಾರಿಗೆ ಬಂದಿರುವ ದೇಶಗಳಲ್ಲಿ ಭಾರತವು ಕೊನೆಯದು. ಆದರೂ ಕೂಡ ಅಮೇರಿಕದ ಸಂಯುಕ್ತ ಸಂಸ್ಥಾನಗಳನ್ನು ಬಿಟ್ಟರೆ ಬೇರೆ ಯಾವ ದೇಶದ ಎಸೆಂಬ್ಲಿ ಕೌನ್ಸಿಲುಗಳಲ್ಲಿಯೂ ಈ ದೇಶದ ಎಸೆಂಬ್ಲಿ ಕೌನ್ಸಿಲುಗಳಲ್ಲಿ ಇರುವಷ್ಟು ಹೆಚ್ಚು ಸ್ತ್ರೀ ಪ್ರತಿನಿಧಿಗಳು ಇರುವದಿಲ್ಲ. ಸ್ತ್ರೀಯರ ವಿಷಯದಲ್ಲಿ ಯಾವ ದೇಶದ ಪುರುಷರು ಬಹಳ ಉದಾಸೀನರಾಗಿರುತ್ತಾರೆ ಎಂಬ ಪ್ರತೀತಿಯಿರುತ್ತದೋ, ಅಂಥ ಭಾರತದಲ್ಲಿಯೇ ಹೀಗೆ ಸ್ತ್ರೀಯರಿಗೆ ಉಚ್ಚ ಸ್ಥಾನಮಾನಗಳು ಪ್ರಾಪ್ತವಾಗಿವೆ ಎಂಬುದನ್ನು ಕೇಳಿ ಯಾರಿಗೆ ತಾನೇ ಸಂತೋಷವಾಗಲಿಕ್ಕಿಲ್ಲ? ಅಮೇರಿಕದ ಸಂಯುಕ್ತ ಪ್ರಾಂತ್ಯಗಳ ಎಸೆಂಬ್ಲಿ ಕೌನ್ಸಿಲುಗಳಲ್ಲಿ ಒಟ್ಟಿಗೆ ೧೫೦ ಮಂದಿ ಸ್ತ್ರೀ ಪ್ರತಿನಿಧಿಗಳು ಇರುತ್ತಾರೆ. ರಶ್ಯದ ಎಸೆಂಬ್ಲಿ ಕೌನ್ಸಿಲುಗಳಲ್ಲಿ ೧೫೦ ಮಂದಿ ಸ್ತ್ರೀ ಪ್ರತಿನಿಧಿಗಳು ಇರುತ್ತಾರೆಂಬುದು ನಿಜವಾದರೂ, ರಶ್ಯದ ಶಾಸನ ಕ್ರಮವು ಬೇರೆ ಯಾವ ದೇಶದ ಶಾಸನ ಕ್ರಮವನ್ನೂ ಹೋಲದ ವಿಜಾತೀಯವಾಗಿರುವದರಿಂದ, ರಶ್ಯದ ಸಂಖ್ಯೆಯನ್ನು ಗಣನೆಗೆ ತರಬೇಕಾದ್ದಿಲ್ಲ. ಆದ್ದರಿಂದ ಎಸೆಂಬ್ಲಿ ಕೌನ್ಸಿಲುಗಳಿಗೆ ೮೦ ಮಂದಿ ಮಹಿಳೆಯರನ್ನು ಆರಿಸಿ ಕಳುಹಿಸಿಕೊಟ್ಟಿರುವ ಭಾರತಕ್ಕೇ ಪ್ರಪಂಚದಲ್ಲಿ ಈ ಗೌರವದ ದ್ವಿತೀಯ ಸ್ಥಾನವು ದೊರೆಯುತ್ತದೆ. ಫೆಡರೇಶನು ಜಾರಿಗೆ ಬರುವದಾದರೆ, ಸ್ತ್ರೀಯರಿಗೆ ಇಲ್ಲಿ ಇನ್ನೂ ಆರು ಸ್ಥಾನಗಳು ಹೆಚ್ಚಿಗೆ ದೊರೆಯುವವು.

ಬಹಳ ಸುಧಾರಣೆಯನ್ನು ಹೊಂದಿದಂಥ ದೇಶಗಳೆನ್ನಿಸುವ ಫ್ರಾನ್ಸ, ಇಟಲಿ, ಸ್ವಿಜರಲೆಂಡ, ಜರ್ಮನಿ, ಜಪಾನುಗಳಲ್ಲಿ ಸ್ತ್ರೀಯರು ಎಸೆಂಬ್ಲಿ ಕೌನ್ಸಿಲುಗಳಿಗೆ ಹೋಗುವ ಮಾತು ಹಾಗಿರಲಿ, ಅವರಿಗೆ ಮತದಾನದ ಅಧಿಕಾರವು ಕೂಡ ಪ್ರಾಪ್ತವಾಗಿರುವದಲ್ಲ ಎಂಬುದನ್ನು ಕೇಳಿ ನೀವು ಆಶ್ಚರ್ಯಪಟ್ಟೀರಿ. ಪ್ರಪಂಚದ ಯಾವ ಭಾಗದಲ್ಲಿಯೂ ಮಹಿಳಾ ಆಂದೋಲನವು ಒಂದೇ ಉದ್ದೇಶದಿಂದ, ಏಕಪ್ರಕಾರವಾಗಿ, ಒಂದೇ ಕ್ರಮದಿಂದ ನಡೆದುದಿಲ್ಲ. ಜರ್ಮನಿಯಲ್ಲಿ ಹಿಟ್ಲರನು ಅಧಿಕಾರಕ್ಕೆ ಬರುವ ಮೊದಲು ಅಲ್ಲಿಯ ಎಸೆಂಬ್ಲಿ ಕೌನ್ಸಿಲುಗಳಲ್ಲಿ ೩೩ ಮಂದಿ ಸ್ತ್ರೀ ಪ್ರತಿನಿಧಿಗಳು ಇರುತಿದ್ದರು. ಆದರೆ ಹಿಟ್ಲರನ ಧೋರಣೆಯಿಂದಾಗಿ ಅಲ್ಲಿ ಒಬ್ಬರಾದರೂ ಸ್ತ್ರೀ ಪ್ರತಿನಿಧಿ ಇರುವದಿಲ್ಲ.

ಆದರೆ ಹಿಂದೂದೇಶದಲ್ಲಿ—? ಒಬ್ಬ ಮಹಿಳೆಯು ಸಂಯುಕ್ತ ಪ್ರಾಂತದ ಸ್ಥಾನಿಕ ಸ್ವರಾಜ್ಯ ಮತ್ತು ಸಮುದಾಯ ಆರೋಗ್ಯ ಖಾತೆಯ ಮಂತ್ರಿಣಿಯಾಗಿದ್ದಾಳೆ. ಅಸ್ಸಾಮು ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಇಬ್ಬರು ಮಹಿಳೆಯರು ಕೌನ್ಸಿಲುಗಳ ಉಪಾಧ್ಯಕ್ಷ ಪದವಿಯಲ್ಲಿದ್ದಾರೆ. ಇಬ್ಬರು ಮಹಿಳೆಯರು ಮದ್ರಾಸು ಮತ್ತು ಮಧ್ಯಪ್ರಾಂತಗಳಲ್ಲಿ ಎಸೆಂಬ್ಲಿಯ ಉಪಾಧ್ಯಕ್ಷ ಪದವಿಯಲ್ಲಿದ್ದಾರೆ. ಪಂಜಾಬು ಮತ್ತು ಬೊಂಬಾಯಿಯಲ್ಲಿ ಇಬ್ಬರು ಮಹಿಳೆಯರು ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದಾರೆ. ಅನೇಕ ಮಂದಿ ಮಹಿಳೆಯರು ಎಸೆಂಬ್ಲಿ ಕೌನ್ಸಿಲುಗಳ ಪಾರ್ಟಿ ಸಭೆಗಳಲ್ಲಿ ಬೇರೆ ಬೇರೆ ಅಧಿಕಾರಪದವಿಯಲ್ಲಿರುವರು. ಇದೇ ಈಗ ನಮ್ಮ ದೇಶದ ಸ್ತ್ರೀಯರ ಪ್ರಗತಿಯನ್ನು ಬಹಳ ಮಟ್ಟಿಗೆ ಸೂಚಿಸುತ್ತಲಿರುವದು.

ಮಹಿಳೆಯರು ರಾಜಕಾರಣದಲ್ಲಿ ಪ್ರತ್ಯಕ್ಷ ಮತ್ತು ನಿಕಟ ಸಂಬಂಧವನ್ನು ಇಟ್ಟುಕೊಂಡಿರುವದರ ಅರ್ಥ—ಸ್ತ್ರೀಯರು ಮಕ್ಕಳುಗಳ ಜೀವನ ಸಂಬಂಧ ಅನೇಕ ಸಮಸ್ಯೆಗಳನ್ನು ಬಿಡಿಸುವ ಸಾಹಸ ಸಾಮರ್ಥ್ಯಗಳು ಅವರಲ್ಲಿ ಇವೆ ಎಂದಾಗಿದೆ. ಆದ್ದರಿಂದ ಭಾರತೀಯ ಮಹಿಳೆಯರು ಈಗ ಜವಾಬುದಾರಿ ಅಧಿಕಾರಪದದಲ್ಲಿರುತ್ತಾ—ಸ್ತ್ರೀ ಪುರುಷರಿಗೆ, ಜಾತಿಭೇದವಿಲ್ಲದೆ ಅವರವರ ಕೆಲಸಕ್ಕೆ ತಕ್ಕ ಮಜೂರಿ, ಹೆರಿಗೆಯ ಸೌಕರ್ಯ, ಬಾಲ್ಯವಿವಾಹ ನಿಷೇಧ, ವ್ಯಭಿಚಾರ ನಿವಾರಣೆ, ವಿಧವೆಯರ ಹಕ್ಕು, ಬಾಲ್ಯಹತ್ಯೆ, ಸ್ತ್ರೀಯರಿಗೆ ವಾರೀಸ ಹಕ್ಕು, ಸ್ತ್ರೀಶಿಕ್ಷಣ ಪ್ರಚಾರ ಇವುಗಳಿಗಾಗಿ ಅನುಕೂಲಕರವಾದ ಕಾನೂನುಗಳು ಶೀಘ್ರದಲ್ಲಿಯೇ ಆಗಬೇಕಾದ್ದು ಅತ್ಯಗತ್ಯವಾಗಿರುವದು.

ಐದು ಮಿಲಿಯ ಸ್ತ್ರೀಯರಿಗೆ ಮತದಾನದ ಅಧಿಕಾರವು ಪ್ರಾಪ್ತವಾಗಿರುವದಾದರೂ ಸ್ತ್ರೀಯರು ರಾಜಕಾರಣದಲ್ಲಿ ಪ್ರವೇಶಿಸಿ ಬಹಳ ಸಮಯವು ಕಳೆದುಹೋಗಿರುವದಿಲ್ಲ. ಅವರಲ್ಲಿ ರಾಜಕೀಯ ಜಾಗೃತಿಯಾಗಿ ಕೆಲವೇ ದಿನಗಳಾಗಿವೆ. ಆದರೂ ಆ ಜಾಗೃತಿಯು ಒಂದೇ ಪ್ರಕಾರ ಬೆಳೆದುಹೋಗುವದೆಂದು ಆಶಿಸಬಹುದು. ಹಿಂದೂದೇಶದಲ್ಲಿ ನೆಮ್ಮದಿ ಮತ್ತು ಸುಖ ಶಾಂತಿ ಸಮಾಧಾನಗಳು ಬಹುಮಟ್ಟಿಗೆ ಸ್ತ್ರೀಯರಿಂದಲೇ ಸ್ಥಾಪಿತವಾಗಬೇಕಾಗಿದೆ. ಸ್ತ್ರೀಯರು ಈಗ ತಮಗೆ ತಮ್ಮ ಉನ್ನತಿ ಮತ್ತು ದೇಶಕ್ಕೆ ಉಪಕಾರಮಾಡಲಿಕ್ಕೆ ದೊರೆತ ಅನುಕೂಲತೆಗಳ ಸಕಾಲದಲ್ಲಿ ಸದುಪಯೋಗಮಾಡಿಕೊಳ್ಳುವರಾದರೆ, ಪುರುಷವರ್ಗಕ್ಕೆ ಸ್ತ್ರೀಯರ ಮೇಲೆ ಇರುವ ಆದರ ವಿಶ್ವಾಸಗಳು ನೂರಾರು ಪಾಲು ಹೆಚ್ಚಿಗೆ ಸರ್ವತ್ರ ಸುಖಶಾಂತಿಗಳು ನೆಲೆಗೊಳ್ಳುವವು. ಭಾರತದ ಮುನ್ನಡೆಯಲ್ಲಿ ಸ್ತ್ರೀಯರು ಆದರ್ಶಪ್ರಾಯರಾಗಿ ಹೆಜ್ಜೆ ಇಡಬೇಕು. ಹೀಗಾದರೆ ಅವರ ಮೂಲಕ ಲೋಕಶಾಂತಿಯೂ ಸ್ಥಾಪಿತವಾಗಬಹುದು; ಮಾನವ ಜಾತಿಯ ಸರ್ವತೋಮುಖವಾದ ಉನ್ನತಿಯೂ ಆಗಬಹುದು. ಸೇವಾಭಾವದಿಂದ ಪ್ರೇರಿತರಾಗಿಯೇ ಸ್ತ್ರೀಯರು ತಮ್ಮ ಜಾತಿ ಮತ್ತು ದೇಶದ ಸೇವೆ ಮಾಡಬೇಕು. ಯಾಕೆಂದರೆ ಅದೇ ಉನ್ನತಿಯ ಹೆದ್ದಾರಿಯಾಗಿದೆ.

50,000

ಕುಷ್ಠರೋಗಿಗಳು ಸಂಪೂರ್ಣ ಗುಣಮುಖರಾಗಿರುವರು!

OFFICE OF MESSRS. REDDY & CO.,

GOPALAPURAM (E. GODAVARY)

ಕುಷ್ಠರೋಗ, ಬಿಳಿತೊನ್ನು ಮತ್ತು ಮೇಹಾದಿ ರೋಗಗಳ ಚಿಕಿತ್ಸೆ ಒಂದು ವಿಶೇಷತ್ವ.

ಶ್ರೀ ಕೃಷ್ಣ ಔಷಧಾಲಯ — ರೆಡ್ಡಿ ಮತ್ತು ಕಂಪೆನಿ, ಗೋಪಾಲಪುರಂ, ಪೂರ್ವ ಗೋದಾವರಿ.

THE CAVALCADE!

The Cavalcade of a Century MUST be something unusual!

The History of 'BHUVANENDRA PRODUCTS'- reads like a Novel!

A century of progress has made it the

LEADING AYURVEDIC CONCERN

OF THE DISTRICT.

Buy all your requirements from

BHUVANENDRA PRODUCTS, LTD.,

Katapady, S. Kanara.

(BRANCH—KUMTA, N. KANARA.)

Write for Catalogue to-day!

ಒಂದು ಶತಮಾನದ ಇತಿಹಾಸ!

ಒಂದು ಶತಮಾನದ ಇತಿಹಾಸವು ಸ್ವಾರಸ್ಯವಾಗಿರಲೇಬೇಕು!
ಭುವನೇಂದ್ರ ಪ್ರಾಡಕ್ಟ್ಸ್, ಲಿಮಿಟೆಡ್,
ಇದರ ಚರಿತ್ರವು ಕಾದಂಬರಿಯಂತೆ ಮನೋಹರವಾಗಿದೆ.

ಒಂದು ಶತಮಾನದ ಅಭಿವೃದ್ಧಿಯು

ಈ ಸಂಸ್ಥೆಯನ್ನು ಜಿಲ್ಲೆಯ ಪ್ರಚಂಡ ಆಯುರ್ವೇದ ಸಂಸ್ಥೆಯನ್ನಾಗಿ ಮಾಡಿದೆ!
ಇಂದು 'ಭುವನೇಂದ್ರ ಪ್ರಾಡಕ್ಟ್ಸ್' ಎಂದರೆ ಭರವಸೆಯ ಹೆಗ್ಗುರುತು.

ಲೇಹಗಳು, ಆಸವಗಳು, ಅರಿಷ್ಟ, ತೈಲಗಳು, ಘೃತಗಳು—
ಇವೆಲ್ಲವೂ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಲ್ಪಡುವಂಥದ್ದನ್ನು
ಇಲ್ಲಿಂದಲೇ ಕೊಂಡುಕೊಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ,- ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ತಿಕೆಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರಗೆ
2 ಕುಂದಾಪುರದಿಂದ ಬಾಳಬರೆಗಾಗಿ ಶಿಮೊಗ್ಗಾ
3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಳ್ಳಿ ಶಿಮೊಗ್ಗಾ ಹರಿಹರ ವರೆಗ
4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು ಕಡೂರು ವರೆಗ
5 ಮಂಗಳೂರಿನಿಂದ ಉಪ್ಪಿನಂಗಡಿ ಶಿರಾಡಿಗಡಿಗಾಗಿ ಸಕ್ಲೇಶಪುರ ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗ
6 ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ ವೀರರಾಜೇಂದ್ರಪೇಟ ಮೈಸೂರು ಇತ್ಯಾದಿ ಸ್ಥಳಗಳಿಗ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL

THE
Canara Industrial & Banking Syndicate Ltd.,

Incorporated in Bombay Ind.

Estd 1925

Head Office: UDIPI, (S. India)

Member:

RESERVE BANK OF INDIA.

BANKERS CLEARING HOUSE, BOMBAY

An Additional Branch of the Syndicate has been opened in Mangalore at Felix Pai Bazaar (Block No.) on 31st. July 1938 where all kinds of BANKING Business Undertaken.

Authorised Capital	... ..	Rs. 1000000
Issued Capital		800000
Subscribed Capital	.. ...	774500
Paid up Capital	.	" 386,850
Reserves	..	216700

TOTAL RESOURCES EXCEED RUPEES 51 LAKHS.

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇರದೆ, ಗ್ರಹಶಾಂತಿಯೊಂದೇ ಒಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಲಾಭ

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸಕ್ರಿಯವಾಗಿ ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮುಂಬರುವವರೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ, ಕಳೆದುಕೊಂಡ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ ಪಂಡಿತರೂ ಈ ಯಂತ್ರವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣದ ಆವಶ್ಯಕತೆಯೇ ಇಲ್ಲ. ವಿಶ್ವಾಸವನ್ನಿಡದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ಎಲ್ಲಾ [illegible] ಆಸೆಗಳನ್ನೂ ಪೂರ್ತಿ ಮಾಡುವುದು.

ಒಂದು ಸಲ ತರಿಸಿ ಲಾಭವಾದ ಮೇಲೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಗಳಿಂದ ಆರಾರು-ಎಂಟೆಂಟು ಅಲ್ಲ, ಹನ್ನೆರಡು-ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವಿಲ್ಲದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದಾಣೆ ಟಿಕೇಟು ಕಳಿಸಿದ್ದಲ್ಲಿ [illegible] ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದೆ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ವಾಪಸ ಪಡೆಯಬಹುದು. ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಮಾಡಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸಂಪೂರ್ಣ ದೃಢವಾದ ಭಾವನೆಯಿಂದ ಈ ಯಂತ್ರವನ್ನು ಧರಿಸಿದರೆ ಜನ್ಮಜನ್ಮಾಂತರದಲ್ಲಿಯೂ [illegible] ಫಲವನ್ನು ಪಡೆಯಬಹುದು. ಈ ಮಾತನ್ನು ನೆನಪಿನಲ್ಲಿಡಿರಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದರೆ ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ ವೃದ್ಧ—ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ೨ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ. ಟಪಾಲು ಖರ್ಚು ೮ ಆಣೆ. ಬೆಳ್ಳಿಯ ಯಂತ್ರ ೩ ರೂಪಾಯಿ.



ಬಂಗಾರದ್ದು ಬೇಕಾಗಿದ್ದರೆ [illegible] ರೂಪಾಯಿ [illegible] ಆಣೆ. [illegible] ನಾಲ್ಕು [illegible] ಗಿದ್ದರೆ ಸ್ಪೆಶಲ್ [illegible] ತರಿಸಿರಿ. ಬೆಲೆ ರೂ ೧೧ [illegible] ಹೆಚ್ಚು ಕೆಲಸಗಳು [illegible] ಆಣೆ. [illegible] ಪ್ರತ್ಯೇಕವಾಗಿ ಬರೆಯಬೇಕು. [illegible] ಯಂತ್ರಗಳು ಬೇರೆ ಯಾವ ಸಾಧನಗಳು [illegible]

ಧನಸಿದ್ಧಿ—ಹೆಚ್ಚಾಗಿ ಧನಪ್ರಾಪ್ತಿಯೂ ಬೇಕು [illegible] ಧನಪ್ರಾಪ್ತಿಯಾಗಬೇಕೆನ್ನುವವರು [illegible] ತರಿಸಬೇಕು. ಇದನ್ನು [illegible] ಧನಪ್ರಾಪ್ತಿಯಾಗುವುದಲ್ಲದೆ [illegible] ಧರಿಸುವುದು. ಬೆಲೆ ರೂ [illegible] ಬಂಗಾರದ್ದು [illegible] ಆಣೆ.

ಹಸ್ತಕೇಶಿ—[illegible] ಸ್ತ್ರೀಪುರುಷರು [illegible] ಬೆಟ್ಟಿಯಾಗಬೇಕು. [illegible] ಗೈಯು ಹಾಗು ಸ್ತ್ರೀಯರು ಎಡಗೈಯ [illegible] ಮೇಲೆ ಇದೇ ಮಸಿಯಿಂದ [illegible] ಕೊಡಬೇಕು. [illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೆ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು.—ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೇ ಇದ್ದಾರೆ. ಯಂತ್ರ, ಮಂತ್ರ, ಕವಚ ಎಂದು ಬೇರೆ ಬೇರೆ ಹೆಸರುಗಳನ್ನಿತ್ತು ತಮ್ಮ ಮನಸ್ಸಿಗೆ ತೋಚಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾರುವುದು ಸಾಧ್ಯವಾಗಿಲ್ಲ. ಅವರಿಗೆ ಆಗುವುದು ಶಕ್ಯವೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:—ಪಂಜಾಬ್ ಸಿವಿಲ್ ಸೆಕ್ರೆಟರಿ [illegible] (ಎ ಆರ್ [illegible]) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು [illegible] ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನನಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ [illegible] ಸರಿ. [illegible] ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವ [illegible] ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ [illegible] ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ ೩ ರೂ. ೧೧ ಆಣೆ ಬೀಳುವುದು.

ವಿಳಾಸ — **Pandit B. R. BHAVISYAVAKA (S. S. M.) Bombay, No. 4.**



(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ[illegible]ಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂ[illegible]ಬೇನೆ, ವಕ್ಷವಾತ ಮೊಡಿಮೆ ಮೊದಲಾದ ಎಲ್ಲಾ ರೋಗಗಳಿ[illegible] ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ[illegible] ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀಮಂಗಳೂರಲ್ಲಿ ಶಾ[illegible]ಯಲ್ಲಿ ದೊರೆಯುವುದು.

Edited, Printed & Pu[blis]hed By A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ಸಂಪುಟ ೩೨] ತಾರೀಖು ೧೯ನೇ ಆಗೋಸ್ತು ೧೯೩೮ (19-8-1938) [ಸಂಚಿಕೆ

★

24 ಪುಟಗಳು **24**

ಅನುಕ್ರಮಣಿಕೆ

ವರ್ತಾವಡುವ ಅಂಕೆಸಂಖ್ಯೆಗಳು

ಬಂಗಾಳದ ಮಂತ್ರಿಮಂಡಲವನ್ನು ಕುರಿತಾಗಿ ಕಲ್ಕತ್ತ ಬಾತ್ಮೀದಾರ

★

ಪೋರ್ಚುಗಲ ಮತ್ತು ಸ್ಪೈನಿನಲ್ಲಿ ಜರ್ಮನರ ಗುರಿ

★

...ರು ಮತ್ತು ಜಾತಿ

★

...ನನ್ನ ...ಗಾರಿಕೆಗಳ ...ನಾಲಯ

★

...ೀಟಗಳು

★

...ನಾ ಯುದ್ಧ

★

...ಸಾಮ್ರಾಜ್ಯದಲ್ಲಿ ...ಯರ ಸ್ಥಿತಿ

★

...ಪ್ರಕಾಶರಿಗೆ ೧೬ ...-ಹೈದರಾಬಾದಿ ...ಮರ ಅತ್ಯಾಚಾರ

★

...ದ್ಧ ಮಾಡುವು... ...ಸವ್ಯೂಹದ ...ದ ಯುರೋ... ...ಉಂಟಾಗಿದೆ

★

...ವಿರೋಧಿ ಪುಂಡರ ...ಮೋಪಾಯಗಳು

★

...ಮೂಲೆಗಳಿಂದ

★

...ಪತ್ರಿಕೆಗಳಿಂದ

★

...ಯುವರಿಗೆ ಬೆದರಿಕೆ

★

ಶ್ರೀಮತಿ ಸುಲೋಚನಾ

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

.... And this is but the beginning. We are a progressive ank, with plenty of enthusiasm for our work, plus plenty of solid xperience with which to tackle the work successfully.

RESOURCES OVER A CRORE.

ESTED. 1906.
CANARA BANK LIMITED.

SWADESHABHIMANI, ESTD. 1906.

ಚಿತ್ರ-ವಿಚಿತ್ರ

ನಿಗ್ರೋಗಳನ್ನು ಬಿಳಿಯರನ್ನಾಗಿ ಮಾಡುವವರು.

ಅಮೇರಿಕದ ಸುಪ್ರಸಿದ್ಧ ವೈದ್ಯರಲ್ಲೊಬ್ಬರಾದ ಪ್ರೊಫೆಸರ್ ಸ್ಮಿರೊಕರವರು ನಿಗ್ರೋ ವಿನ ಕಪ್ಪು ಚರ್ಮವನ್ನು ಬಿಳಿದು ಮಾಡುವ ಪ್ರಯತ್ನವನ್ನು ನಡೆಸುತ್ತಿರುವರು.

ಈ ಮೊದಲೇ ಗ್ರಂಥಿಗಳಿಗೆ ಇಂಜಕ್ಷನ್ ಕೊಟ್ಟು ಇವರು 6 ಮಂದಿ ನಿಗ್ರೋಜನರ ಮೈ ಬಣ್ಣವನ್ನು ತುಸು ಬಿಳುಪು ತಿರುಗಿಸಿರುವರು. ಇನ್ನು ಸ್ವಲ್ಪ ಸಮಯದಲ್ಲೇ ಅವರ ಚರ್ಮವನ್ನು ಪೂರ್ಣ ಬಿಳುಪುಮಾಡಲಾಗುವುದೆಂದು ಅವರು ಆಶಿಸುತ್ತಿರುವರು.

ಕ್ರಿಮಿನಾಶಕ ಪ್ರೇಮ.

ಕೊಲೊರೇಡೊನಲ್ಲಿ ವಾಸಿಸುತ್ತಿರುವ ಓರ್ವ ಪ್ರೆಂಚ ಡಾಕ್ಟರರು ನೆಗಡಿಗೆ ಒಂದು ಮದ್ದನ್ನು ಕಂಡು ಹಿಡಿದಿರುವರು. ಅದೇನು ಬಲ್ಲಿರಾ? ಮದುವೆ ನಿಶ್ಚಯ ಮಾಡಿಕೊಳ್ಳುವುದು (getting engaged).

ಮದುವೆಯಾಗಲಿರುವ ದಂಪತಿಗಳಿಗೆ ಸರ್ವಸಾಮಾನ್ಯವಾಗಿ ನೆಗಡಿಯೇ ಆಗುವುದಿಲ್ಲವಂತೆ. ಕಾರಣ ಅವರ ಪ್ರಣಯ ಚೇಷ್ಟೆಗಳ ಸಮಯದಲ್ಲಾಗುವ ರಕ್ತಸಂಚಲನದ ತೀವ್ರಗತಿಯು, ನೆಗಡಿಯ ಕ್ರಿಮಿಗಳ ಹಾವಳಿಯಿಂದ ತಪ್ಪಿಸಿಕೊಳ್ಳುವಷ್ಟು ಚೈತನ್ಯವನ್ನು ದೇಹದಲ್ಲುಂಟು ಮಾಡುತ್ತದಂತೆ.

ಬೆಕ್ಕಿಗೆ ಯೋಗ್ಯತಾಪತ್ರ

ಉರಿಯುತ್ತಿರುವ ಒಂದು ಮನೆಯಿಂದ ತನ್ನ ಮರಿಗಳನ್ನು ರಕ್ಷಿಸಿದ ಒಂದು ಬೆಕ್ಕಿಗೆ, ಅಮೇರಿಕದ ಭೂತದಯಾಪರ ಸಂಘದವರು ಸಾರ್ವಜನಿಕ ಸಭೆಯನ್ನು ಜರುಗಿಸಿ, ಒಂದು ಯೋಗ್ಯತಾಪತ್ರವನ್ನು ಕೊಡಲು ನಿಶ್ಚೈಸಿರುವರು. ಆ ನಗರದ ಅಧ್ಯಕ್ಷರೇ ಈ ಕಾರ್ಯವನ್ನು ಮಾಡಲೊಪ್ಪಿರುವರು.

ಕಪ್ಪೆಗಳ ಸುರಿಮಳೆ.

ಕಳೆದ ತಿಂಗಳ ಆದಿಯಲ್ಲಿ ಬ್ರಿಸ್ಬೇನ್ ಎಂಬ ಪ್ರಾಂತ್ಯದಲ್ಲಿ ಗಗನದಿಂದ ಮಿಲಿಯಗಟ್ಟಲೆ ಮೃತ ಕಪ್ಪೆಗಳ ಸುರಿಮಳೆ ಬಿತ್ತು. ಇದು ಕ್ಷಾಮದ ಸೂಚನೆಯೆಂದು ತಿಳಿಯದ ಜನರು ಅಂಜಿಕೊಳ್ಳುತ್ತಿರುವರು.

ಹಕ್ಕಿ ಮುಟ್ಟದ ಹಣ್ಣು.

ಇಂಗ್ಲಾಂಡಿನಲ್ಲಿ ಮಿ. ಪ್ರೋಲ್ ಸ್ಟಾರ್ ಎಂಬವರು ಒಂದು ಹಣ್ಣಿನ ಗಿಡವನ್ನು ಬೆಳೆಯಿಸಿರುವರು. ಅದರಲ್ಲಾದ ಹಣ್ಣುಗಳನ್ನು ಹಕ್ಕಿಗಳು ಮುಟ್ಟುವುದಿಲ್ಲ.

ಈ ಹಣ್ಣುಗಳು ಕನಕ ವರ್ಣದವುಗಳಾಗಿದ್ದು, ಅದೇ ಜಾತಿಯ ಇತರ ಹಣ್ಣುಗಳಿಗಿಂತ ಸಿಹಿಯಾಗಿವೆ. ಆದರೆ ಹಕ್ಕಿಗಳು ಮಾತ್ರ ಅವುಗಳ ಬಳಿಗೆ ಸುಸುಳುವುದಿಲ್ಲ.

ಅಲ್ಲದೆ ಇನ್ನೊಂದು ಬಗೆಯ ಫಲವೃಕ್ಷ ಮನೆಯ ಒಳಗೂ ಬೆಳೆಸುವಂತೆ ಅವರು ಇಡಿದಿರುವರು. ಒಂದು ಸಣ್ಣ ಗಿಡದ ಗಾತ್ರ ದೊಡ್ಡದಾಗುವುದು. ಆದರೆ ಅದರಲ್ಲಾಗುವ ಫಲಗಳು ಮಾತ್ರ ಅದೇ ಜಾತಿಯ ಇತರ ಫಲಗಳಷ್ಟೇ ದೊಡ್ಡದಾಗುವುವು; ಅಷ್ಟೆ ರುಚಿಕರವೂ ಇರುವುವು.

ಮುದಿ ಮರ

ಕ್ವೀನ್ಸ್ ಲೇಂಡಿನಲ್ಲೊಂದು ಮರವಿದೆ. ಇದರ ಎತ್ತರ 20 ಅಡಿ. ಪ್ರಾಯ 12,000 ವರ್ಷಗಳು. ಜಗತ್ತಿನಲ್ಲಿರುವ ಎಲ್ಲಾ ಮರಗಳಲ್ಲಿ ಇದೇ ಅತಿ ಮುದಿಯ ಮರವೆಂದು ಅಂದಾಜು ಮಾಡಲಾಗಿದೆ.

ಟಪ್ಪಾಲಿನಲ್ಲಿ ಮಾತಿನ ವಾರ್ತೆ.

ತನ್ನ ಮಿತ್ರರಿಗ್ಯಾಗಳಿಗೆ ಕಾಗದ ಕಾರ್ಡುಗಳನ್ನು ಬರೆದು ಕಳುಹಿಸುವ ಬದಲಾಗಿ, ಮಾತುಗಳಲ್ಲೆ ವಾರ್ತೆಯನ್ನು ಕಳುಹಿಸುವ ಆದೊಂದು ನೂತನ ವಿಧಾನವನ್ನು ಎವ್ಸ್ಟನ್ ಡೇವಿನಲ್ಲಿ ಕಲ್ಪಿಸಿರುವರು.

ಅಂಚೆಕಟ್ಟೆಯಲ್ಲೊಂದು ಯಂತ್ರವನ್ನು ಇಟ್ಟಿರುವರು. ಅದಕ್ಕೊಂದು ಮ್ಯಾಕ್ರೊಫೋನು ಹೊಂದಿಕೊಂಡಿರುವುದು. ಯಂತ್ರದಲ್ಲಿ ಅಂಚೆವೆಚ್ಚದ ಹಣವನ್ನು ಹಾಕಿ, ಮ್ಯಾಕ್ರೋಫೋನಿನಲ್ಲಿ ತಾನು ಕಳುಹಲಿರುವ ವಾರ್ತೆಯನ್ನು ನುಡಿದರಾಯಿತು. ಆದರೆ ಈ ವಾರ್ತೆಯು 100 ಶಬ್ದಗಳಿಗೆ ಮಿಕ್ಕಿ ಇರಬಾರದು.

ಕೆಲವೇ ನಿಮಿಷಗಳಲ್ಲಿ ಫೊನೋಗ್ರಾಫಿನ ಪ್ಲೇಟೊಂದು ಬಂದು ಯಂತ್ರದ ಪೃಷ್ಠಭಾಗದಲ್ಲಿ ನಿಲ್ಲುವುದು. ವಾರ್ತೆಯನ್ನು ಕಳುಹಿಸಲು ಬಂದವನು ಒಡನೆ ಅದನ್ನು ತೆಗೆದು ವಿಳಾಸ ಬರೆದು ಟಪ್ಪಾಲಿಗೆ ಹಾಕಿದರಾಯಿತು. ಅದನ್ನು ಪಡೆದವನು ಒಂದು ಫೋನಿನ ಮೇಲೆ ಇಟ್ಟು ವಾರ್ತೆಯನ್ನು ಕೇಳಿ ತಿಳಿದುಕೊಳ್ಳಬಹುದು.

ಆನೆಗೆ ಎಣ್ಣೆಸ್ನಾನ

ಆನೆಗೊಂದು ಎಣ್ಣೆಸ್ನಾನವನ್ನು ಕೊಡಬೇಕಾದರೆ, ಅದರ ಮೈಗೆ ಹಚ್ಚಲು 8 ಗೆಲನು ಎಣ್ಣೆಬೇಕಾಗುವುದು.

ಹುಲ್ಲಿನಿಂದ ವಸ್ತ್ರ

ಜಪಾನಿನ ವಿಜ್ಞಾನಿಯೋರ್ವನು ಹುಲ್ಲನ್ನು ಹತ್ತಿಯಂತೆ ಮಾಡಿ, ವಸ್ತ್ರವನ್ನು ಹಣೆಯುವ ಒಂದು ನೂತನ ಶೋಧೆಯನ್ನು ಮಾಡಿರುವನು.

ಪರದೇಶಗಳಲ್ಲಿ: ಒಂದು ನಿಮಿಷ

ಝೆಕೋಸ್ಲೊವಾಕಿಯ:—ಕಲ್ನಿವೆನ್ ಶ್ರೀಮಂತರು ಅತ್ತ ತೆರಳಿ ಜರ್ಮನರಿಗೂ ಝೆಕ್‌ರಿಗೂ ಸಂಧಾನಪ್ರಸಂಗವನ್ನು ವಿಮರ್ಶಿಸುವರೆಂದು ಸ್ವಲ್ಪ ಶಾಂತಿಮುಖವಾಗಿದ್ದ ವಿದ್ಯಮಾನಗಳು, ಈಗ, ಝೆಕ್ಕರಾಷ್ಟ್ರೀಯ ಮುಖಂಡನ ಮರಣೋನ್ಮುಖಸ್ಥಿತಿಯಿಂದ ಬದಲಾಗಿದೆ. ಮುಖಂಡನ ಉತ್ತರಾಧಿಕಾರಿ ಯಾರೆಂದು ತಿಳಿಯದು. ಇದರಿಂದ ಉತ್ತರಕಾಂಡ ಹೇಗಾಗುವುದೋ ತಿಳಿಯದು.

ಲಂಡನು:—ರಾಷ್ಟ್ರೀಯ ರಕ್ಷಣೋಪಾಯಗಳಿಗಾಗಿ 82 ಮಿಲ್ಲಿಯ ಪವನು ಬ್ರೆಂಡು ಮೂಲಕ ಸಾಲ ಎತ್ತಲಾಗಿದೆ.

ಶಂಘಾಯಿ:—ಶಂಘಾಯಿಯಲ್ಲಿ ಚೀನಿಯರಿಗೆ ನಾನಾ ರೀತಿ ಬೋಧಿಸಿ ಯುರೋಪಿಯರನ್ನು ದ್ವೇಷಿಸುವ ಪ್ರೋತ್ಸಾಹಕೊಟ್ಟವರಲ್ಲಿ, ಹಲವರು ಜಪಾನಿಯರು. ವೇಷಪಲ್ಲಟಿಸಿ ಹೀಗೆ ಮಾಡುತ್ತಿದ್ದರೆಂದು ಅವರನ್ನು ಕೈದುಮಾಡಲಾಗಿದೆ. ಅಮೇರಿಕನ ನೌಕಾಸೈನಿಕರು ಇವರನ್ನು ಪತ್ತೆಮಾಡಿದರು. ಬ್ರಿಟಿಷರ ಮೇಲೆ ಮೇಶಿನ್‌ಗನ್‌ಗಳನ್ನು ಹಾರಿಸಲು ಜಪಾನಿಯರು ಸಿದ್ಧರಾಗಿದ್ದರು. ಆಗಲೇ ಬ್ರಿಟಿಷರೂ ಹಾಗೇ ಮರುತ್ತರ ಕೊಡುವರಾಗಿ ತಿಳಿಸಿದುದರಿಂದ ಅಲ್ಲಿಗಲ್ಲಿಗೆ ಶಾಂತಿ.

ಟೋಕಿಯೋ:—ರಷ್ಯದ ಮತ್ತು ಜಪಾನಿನ ಸೈನಿಕರು ಕೊರೀಯದಲ್ಲಿ ಸದ್ಯಕ್ಕೆ ಶಾಂತಿಯನ್ನು ಕಂರಾರು ಮೂಲಕ ನಿರ್ಧರಿಸಿರುವರಷ್ಟೆ. ಸೈನಿಕರು ಎಲ್ಲಿದ್ದರೋ ಅಲ್ಲಿಂದ ೯೦ ಗಜದೂರಕ್ಕೆ ಸರಿಸಂತೆ ಅಪ್ಪಣೆಕೊಡಲಾಗಿದೆ. ಏಕೆಂದರೆ, ರಷ್ಯದ ಸ್ವಾಧೀನವಿದ್ದ ಜಪಾನಿನ ಬಂದರದಲ್ಲಿ ಆಕ್ರಮಿಸಲು ಸುಲಭವಾದೊಂದು ಗುಡ್ಡವನ್ನು ಜಪಾನು ಸೈನಿಕರು ಹತ್ತಿ ತಂಗಿದ್ದರು.

ಮೆಕ್ಸಿಕೋ:—ಎರಡು ರೈಲುಗಾಡಿಗಳು ಢಿಕ್ಕೀಬಡಿದು ನಾಲ್ವರು ಸತ್ತರು. 8 ಗಾಡಿಗಳೇ ಪುಡಿಯಾದುವು. ಎರಡೂ ಗಾಡಿಗಳಲ್ಲಿ ಪ್ರಯಾಣಿಕರೂ ವಿಹಾರಿಗಳೂ ತುಂಬಾ ಇದ್ದು, ಇಲ್ಲೇ ಜರಗಲಿರುವ ಶಾಂತಿಸಭೆಗೆ ಬರಲಿದ್ದ ಪ್ರತಿನಿಧಿಗಳೂ ಇದ್ದರು.

ಜರ್ಮನಿ:—ಮುಂದಣ ವಾರ, ಜರ್ಮನ್ ಸೈನ್ಯವೂ ವಿಮಾನಗಳೂ ಭಾರೀ ಪ್ರದರ್ಶನ (ಯುದ್ಧವಿದ್ಯೆ) ಮಾಡಲಿವೆ. ಬವೇರಿಯಾ, ಸೆಕ್ಸನಿ, ರೈನ್ ನದೀತೀರಗಳಲ್ಲಿ ಈ ಯುದ್ಧದ ಕಸರತ್ತು ನಡೆವುದಾಗಿದೆ. ಸಿಕ್ಕಿದ ವಾಹನಗಳನ್ನೆಲ್ಲ ಇಲ್ಲಿಗೆ ಬಳಸುವರೆ ಸರಕಾರವು ವಹಿಸಿಕೊಂಡಿದೆ. ಅತ್ತ ಇರತರಾರೂ ಕಾಲಿಟ್ಟರೆ ಕೂಡಲೆ ಮರಣದಂಡನೆ ಎಂದೂ ಸಾರಲಾಗಿದೆ. ಜನರೆಲ್ಲ ಯುದ್ಧದ ವಾತಾವರಣದಲ್ಲೇ ಇದ್ದಾರೆ. ಎಲ್ಲರ ಕಟ್ಟಡ ಜಮೀನು ಮೊದಲಾದ ಸಂಪತ್ತು ಸೈನಿಕರ ವಶವಿರಿಸಲಾಗಿದೆ. ಪರರಾಷ್ಟ್ರಗಳಿಗೆ ತನ್ನ ಬಲದ್ಯೋತಿ ತೋರಿಸಲು ಈ ಪ್ರದರ್ಶನವನ್ನು ಜರ್ಮನಿ ಮಾಡುತ್ತಿದೆಯೋ? ಹದಿಮೂರುಲಕ್ಷ ಸೈನಿಕರ ಪ್ರದರ್ಶನವಿದು.

ಪಾರಿಸ್:—ಬ್ರಿಟಿಷ ರಾಯಭಾರಿಗಳು ಫ್ರೆಂಚ ಮಂತ್ರಿಯರನ್ನು ಇದೇ ವಿಷಯ ಚರ್ಚಿಸಲು ಸಂಭಾಷಣೆಗೆ ಆಮಂತ್ರಿಸಿದ್ದರು. ಈ ಗಡಿಬಿಡಿಗೆ ಇನ್ನು ಬೆಲೆಯಿಲ್ಲವೆಂದು ಇತ್ಯರ್ಥವಾಗಿದೆ.

ಜೆರೂಸಲೇಮ್:—ಯೆಹೂದ್ಯರ ಕೊಲೆಗಳು ನಡೆಯುತ್ತಲೇ ಇವೆ. ಒಬ್ಬ ಬ್ರಿಟಿಷ ಅಧಿಕಾರಿಯನ್ನು ಮನೆಯಲ್ಲಿ ನಿಂತು ಯಾರೋ ಕೊಂದಿಕ್ಕಿದರು.

ನ್ಯೂಯೋರ್ಕ್:—ಜರ್ಮನ್ ವಿರೋಪ್ಲೇನು ಸ್ಪರ್ಧೆಗಾಗಿ ಬುಧವಾರ ರಾತೆ ಹೊರಟು ಮರುದಿನ ಸಾಯಂ ನ್ಯೂಯೋರ್ಕಿಗೆ ತಲಪಿದೆ. ಬ್ರಿಟಿಷ ಹಡಗ, ಕ್ವೀನ್ ಮೇರಿ 187 ಮೈಲು ದೂರಕ್ಕೆ ತಾಸಿಗೆ 32 ಮೈಲಿನಂತೆ ಸಮುದ್ರ ಪ್ರಯಾಣ ಮಾಡಿದ ರಿಕಾರ್ಡು ಸ್ಥಾಪಿಸಿದೆ.

ಸ್ಪೈಯಿನ್:—ಎರಡುಕಡೆ ಯುದ್ಧ ನಡೆಯುತ್ತಲೇ ಇದೆ. ಸ್ಪೈಯಿನಿನಲ್ಲಿ ಇಪ್ಪೇಎಣ್ಣೆ, ಜಾನುವಾರುಗಳು ಧಾನ್ಯ ಬಹುಹೆಚ್ಚಾಗಿ ಸಿಗುವಲ್ಲೇ ಒಂದು ಯುದ್ಧ ನಡೆಯುತ್ತ ಫ್ರೆಂಕೋವಿನ ಸೇನೆ ಮುಂದರಿದಿದೆ. ಎಬ್ರೋ ನದೀಯಾಚೆಗೆ ಮೂರು ವಾರಗಳಿಂದಲೂ ಯುದ್ಧವಾಗುತ್ತದೆ; ಸರಕಾರ ಪಕ್ಷವು ಇನ್ನೂ ಇಲ್ಲಿ ಸೋತಿಲ್ಲ. ಹತ್ತು ವಿಮಾನಗಳು ಎಲಿಕಾಂಟಿಯ ಮೇಲೆ 150 ಬಾಂಬು ಎಸೆದಿವೆ. ಊರನ್ನು ಹಾದು ಮರಳುತ್ತ ಬಾಂಬು ಸುರಿಯಲಾಗುತ್ತದೆ. ಹಾವಳಿ ಹೆಚ್ಚಿಲ್ಲ. ಕೆಲವೇ ಮರಣಗಳು,

ರೋಮ್:—ಸ್ಪೈಯಿನಿನಲ್ಲಿ ಕಾದಾಡುವ ಇಟಲಿಯಾನರನ್ನು ಇಟಲಿಯು ಹಿಂದೆ ಕರೆವುದೂ ಬಲು ಕಷ್ಟ. ಇದನ್ನು ಸಾಧ್ಯಮಾಡದೆ ಇಂಗ್ಲೆಂಡು ಇಟಲಿಯೊಡನೆ ಮಾಡಿದ ಕರಾರೂ ಸಿಂಧುವಾಗುವುದಿಲ್ಲ. ಇದರಿಂದ ಮೆಡಿಟರೇನಿಯನಿನಲ್ಲಿ ಶಾಂತಿ ನೆಲೆಗೊಳ್ಳದೆಂದು ಪತ್ರಿಕೆಗಳೆನ್ನುತ್ತವೆ

ಬ್ರಿಟನ್ನು:—ಎರಡು ಕಡೆ ವಿಮಾನಗಳು ಬಿದ್ದವು. ಸಿಡಿಲುಎರಗಿ ರೇಷ್ಮೆಕಾರ್ಖಾನೆಯೊಂದು ಸುಟ್ಟಿತು. ಭಾರೀ ಜಡಿಮಳೆ ಸುರಿದು ಎಷ್ಟೋ ರಸ್ತೆಗಳು ಹೊಳೆಗಳಂತಾದುವು.

ಚೀನ:—ಯಂಗ್ಸ್ಸೆ ನದೀದಡದಲ್ಲಿ ಒಂದುಮಿಲ್ಲಿಯ ಚೀನೀಯರು ಜಪಾನನ್ನು ಎದುರಿಸಿದ್ದಾರೆ.

ವಿಯೆನ್ನಾ:—ಯೆಹೂದ್ಯರನ್ನು ಇನ್ನಷ್ಟು ಪೀಡಿಸಿ ಬಹಿಷ್ಕರಿಸುತ್ತಾರೆ.

ನ್ಯೂಯೋರ್ಕ್:—ಜರ್ಮನ್ ನಾಝಿಗಳ ಒಳಸಂಚಿನ ಸಂಘವೊಂದು ಹೊರಬಿದ್ದಿದೆ. 25,000 ಮೆಂಬರರು!

ದಿವಸ ಹೋದಂತೆ ಹೊಟ್ಟೆನೋವು

ದ್ವಿಗುಣಿತವಾಗುತಿತ್ತು

ವರ್ಷಗಟ್ಟಲೆ ಯಾತನೆಯಿಂದ ಬಿದ್ದಾಡಿದ ಮಿ. ಡಬ್ಲ್ಯುರವರು ಎಲ್ಲಾ ಪೀಡನೆಗಳಿಂದ ನಿವೃತ್ತರಾಗಿ ಸುಖಿಸುತ್ತಿದ್ದು ಅವರ ಹೆಂಡತಿಯು ಇಂತಹದೊಂದು ಪತ್ರವನ್ನು ಬರೆದಿದ್ದಾರೆ. ಓದಿದ ಪರಿಣಾಮವಾಗಿ — ಮಿಸೆಸ್ ಡಬ್ಲೂರವರ ಈ ಪತ್ರವು ಹೊಟ್ಟೆ ನೋವಿನಿಂದ ನರಳುವವರಿಗೆ ಬಹಳ ಪ್ರಯೋಜನವಾದೀತು.

"ನನ್ನ ಪತಿಯು ಸುಮಾರು 7 ವರ್ಷಗಳಿಂದ ಹೊಟ್ಟೆಯ ಪೀಡೆಯಿಂದ ನರಳುತ್ತಿದ್ದು ಗುಣವನ್ನೇ ಹೊಂದಿರಲಿಲ್ಲ. ದಿವಸ ಹೋದಂತೆ ಅವರ ಹೊಟ್ಟೆನೋವು ಅಭಿವೃದ್ಧಿಯಾಗುತ್ತಿತ್ತು. ಸಾಧಾರಣ ಎರಡು ತಿಂಗಳ ಹಿಂದೆ ಜಠರ ಬಾಧೆಯಿಂದ ರೋಗಿಯಾಗಿದ್ದರು. ಅವರು ಸ್ವಲ್ಪ ಏನನ್ನಾ ತಿನ್ನುತ್ತಿದ್ದರೂ ಅವರು ಜಠರ ಬಾಧೆಯಿಂದ ನರಳುತ್ತಿದ್ದರು. ಡಾಕ್ಟರರೂ ಕೂಡ ಬೇಸರಪಟ್ಟಿರುವರು".

"ಆಗ ನಾನು ಮೆಕ್ಲೀನ್ ಬ್ರೆಂಡ್ ಸ್ಟಾಮಕ್ ಪೌಡರಿನ ಜಾಹೀರಾತನ್ನು ನೋಡಿದೆನು. ಒಂದು ಬಾಟ್ಲಿಯನ್ನು ಸೇವಿಸಿದೊಡನೆ ನನ್ನ ಪತಿಯು ಗುಣಹೊಂದಲು ಪ್ರಾರಂಭಿಸಿದರು. ಮತ್ತು ಈಗ ಅವರು ಏನನ್ನೂ ತಿನ್ನುವರು. ಅವರು ಈಗ ನಿಮ್ಮ ಅತ್ಯುತ್ತಮ ಔಷಧಿಗೆ ಕೃತಜ್ಞತೆಯನ್ನು ಸೂಚಿಸುತ್ತಿರುವರು".

ಮಿಸೆಸ್ ಸಿ. ಡಬ್ಲೂ.

ನೀವು ಕೂಡಾ 'ಮೆಕ್ಲೀನ್ ಬ್ರಾಂಡ' ಸ್ಟಾಮಕ್ ಪೌಡರ್' ಜಠರ ಬಾಧೆಗಳಿಗೆ ಉತ್ಕೃಷ್ಟವೆಂದು ಕಂಡುಕೊಳ್ಳುವಿರಿ. ಒಂದು ಬಾಟ್ಲಿಯನ್ನು ಇವತ್ತೇ ಕೊಂಡುಕೊಳ್ಳಿರಿ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುತ್ತದೆ

ಕಮ್ಮಿ ಧರದಲ್ಲಿ ಮಾರಲ್ಪಡುವ ನಕಲಿ ಮಾಲಿನ ವಿಷಯ ಜಾಗತೆಯಿರಲಿ.

ನೀವು ತೆಗೆದುಕೊಳ್ಳುವ ಪೌಡರು ಎಲೆಕ್ಸ ಸಿ ಮೆಕ್ಲೀನ್ ಎಂಬ ಸಹಿಯುಳ್ಳದ್ದಾಗಿದೆಯೋ ಎಂದು ನೋಡಿರಿ. ಬಿಡಿಯಾಗಿ ಮಾರಲ್ಪಡುವುದಿಲ್ಲ.

ಸಹಿಯನ್ನು ನೋಡಿರಿ



MACLEAN BRAND Stomach Powder

ಕೋಳಿಗೆ ಶಿಕ್ಷೆ

ಬೇಜಲ್ ಊರಿನಲ್ಲಿ, ಒಂದು ಕೋಳಿಯು ಒಂದೇ ಮೊಟ್ಟೆಯನ್ನು ಇಟ್ಟಿತು. ಗಾತ್ರ ಎಂಬ ಆರೋಪವು ಅದರ ಮೇಲೆ ಹೊರಿಸಲ್ಪಟ್ಟು ವಿಚಾರ ನಡೆದು, ಆ ಒಂದು ಮೊಟ್ಟೆಯೊಡನೆ ಅದನ್ನು ಸುಟ್ಟು ಹಾಕಲಾಯಿತು.

ಗದಗು ಮ್ಯುನಿಸಿಪಾಲಿಟಿ:—4.

ಆದರ್ಶರೀತಿ

ಈ ಮ್ಯುನಿಸಿಪಾಲಿಟಿಯ ಕೈಕೆಳಗಣ ಜನ ಸಿಬ್ಬಂದಿಗೆ, ಹರಿಜನ ಸೇವಕಸಂಘ ಮುತ್ತಿತರ ಹರಿಜನ ಉದ್ಧಾರಕರ ಸಹಾಯದಿಂದ, ಮ್ಯುನಿಸಿಪಲ್ ಕೌನ್ಸಿಲು ಹೊಸ ರಿಯಾಯಿತಿಗಳನ್ನು ಕೊಟ್ಟಿದೆ:—

1 ಎಲ್ಲ ಭಂಗಿಗಳೂ (ತೋಟಿ) ಗುಡಿಸುವವರೂ ವರ್ಷದಲ್ಲಿ ಮೂವತ್ತು ರಜೆ; ಮತ್ತು 21 ದಿನ ಕೆಜುವಲ್ ರಜೆ ಪಡೆಯಲು ಅರ್ಹರು.

2 ಸ್ತ್ರೀಯರಿಗೆ ಬಾಳಂತಿತನದ ರಜೆಯಾಗಿ ಆರು ಹಪ್ತೆಯ ರಜೆ.

3 ಇವರೆಲ್ಲರಿಗೂ ಪ್ರೊವಿಡೆಂಟ್ ಫಂಡು ವ್ಯವಸ್ಥೆಯಾಗಲು ಸೆಂಕ್ಷನಾಗಿದೆ.

ಗೊಂಡಾದಲ್ಲಾದ ನೆರೆಹಾವಳಿಯಿಂದ—ನೂರು ಜನರೂ 1,200 ಜಾನುವಾರುಗಳೂ ಮುಳುಗಿ ಸಾಯುವಂತಾಗಿದೆ.

ಶಕ್ಯೋ ವರ್ಗಾಪ್ಯುತ್ಸಾತುರ್ಮನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲನುಪಮ ರತ್ನಗಳು
ಸಾಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತೆ
ವಿಶ್ವವ ಸುಡುವ ಬರುತಿರುವ ॥
ಗರಲಕವರಂಜಿದರೆ! ಸುಧೆಯಂ
ಮರೆತು ಕ್ಷುದ್ರರ
ತೆರದಿ ಕುಳಿತರೆ । ತೆರಳಬಲ್ಲರೆ!
ತೊರೆದು ಧೀರರು
ನಿಶ್ಚಿತಾರ್ಥವನು ॥

ತಾರೀಕು ೧೯—೮—೧೯೩೮ | ತಾರೀಕು 19—8—1938

ಕೊಂದೇ ಬಿಡುತ್ತಿದ್ದೆ!

ಕಿಸಾನ ಮುಂದಾಳುವಿನ ಬೆದರಿಕೆ

ಕಿಸಾನ ಸಭೆಯು ಕೆಲಸಗಾರರು ಕಾಂಗ್ರೆಸ ಮಂತ್ರಿಮಂಡಲದವರನ್ನು ಯಾವ ರೀತಿಯಲ್ಲಿ ಕಾಣುತ್ತಿರುವರೆಂಬುದು ಬೆಗುಸಾರಿಯಲ್ಲಿ ಜರುಗಿದ ಅದೊಂದು ಸಭೆಯಲ್ಲಿ ಖಚಿತವಾದಂತಾಯಿತು.

ಕಿಸಾನ ಸಭೆಯ ತಲೆಯಾಳುಗಳಲ್ಲಿಬ್ಬರಾದ ಬಾಬು ಬ್ರಹ್ಮದೇವ ಪ್ರಸಾದ ಸಿಂಹರೆಂಬವರು ಬಿಹಾರಿನ ಪ್ರಧಾನಮಂತ್ರಿಯವರನ್ನು ಸಂದರ್ಶಿಸಲು ಹೋದಾಗ, ಅವರು ಶ್ರೀ. ಕೃಷ್ಣಸಿಂಹರನ್ನು ಕುರಿತು, 'ನಿಮ್ಮ ಅಭಿಪ್ರಾಯವೇನೆಂದು ನನಗೆ ತಿಳಿಯದು. ನಿಮ್ಮ ಇಲಾಖೆಯಲ್ಲಿ ಸ್ವಾಮಿ ಸಹಜಾನಂದರನ್ನು ನೀವು ಸೇರಿಸಿರುವಿರಿ' ಎಂದರಂತೆ.

ಅಲ್ಲದೆ ಇದನ್ನು ಬೆಗುಸಾರಿಯಲ್ಲಿ ನಡೆದ ಕಿಸಾನ ಜನಿಕ ಸಭೆಯ ಮುಂದೆ ಹೇಳುತ್ತಾ, 'ನನ್ನ ಕೂಡೆ ಒಂದು ಪಿಸ್ತೂಲು ಇದ್ದುದಾದರೆ, ಅವರ ಎದೆಗೆ ಗುರಿಯಿಟ್ಟು ಹೊಡೆಯುತ್ತಿದ್ದೆ' ಎಂದರಂತೆ;

ಅಲ್ಲಿ ಅನೇಕ ಮಂದಿ ಇನ್ನಿತರ ಕಿಸಾನ ಮುಂದಾಳುಗಳಿದ್ದರೂ ಈ ಬಗೆಯ ಮಾತುಗಳನ್ನು ಕೇಳಿಯೂ ಅವರು ಸುಮ್ಮಗಿದ್ದುದು ಆಶ್ಚರ್ಯದ ಸಂಗತಿಯಾಗಿದೆ!

ಬೆರ್ಹ್ಮ ಮುಸ್ಲಿಂ ಎಮ್. ಎಲ್. ಎ.ಗೆ ಬೆದರಿಕೆ!

ಕಾಂಗ್ರೆಸನ್ನು ಸೇರಿದರೆ ಮುಖ ವಿರೂಪನ ಮಾಡಲಾದೀತು!

ಬೆರೈಲಿಯ ಮುನಿಸಿಪಲ್ ಅಧ್ಯಕ್ಷರೂ ಎಮ್. ಎಲ್. ಎ.ಗಳೂ ಆದ ಮೌಲ್ವಿ ಅಬ್ದುಲ್ ವಜೀದರೆಂಬವರು ಕಾಂಗ್ರೆಸನ್ನು ಸೇರಿದ ಕಾರಣದಿಂದಾಗಿ, ಗದರಿಸಿ ಅವರಿಗೊಂದು ಪತ್ರವು ಬಂದಿರುವುದು.

'ಕಾನಪುರದಲ್ಲಿ ಇಬ್ರಾಹಿಮ್ ಹಕೀಮರಿಗೆ ಕಲಿಸಿದ ಪಾಠದಂತಹ ಪಾಠವನ್ನೆ ನಿಮಗೂ ಹೇಳಿಕೊಡದಿದ್ದರೆ 'ನೀವು ಸುಧಾರಿಸುವುದಿಲ್ಲವೆಂದು ಹಿಂದಿನ ಅನುಭವಗಳಿಂದ ಖಚಿತವಾಗುತ್ತದೆ. ಆದುದರಿಂದ ಬೆರೈಲಿ ಮುಸಲ್ಮಾನರು ಕ್ಷಿಪ್ರದಲ್ಲೇ ನಿಮಗೊಂದು ಪಾಠವನ್ನು ಹೇಳಿಕೊಡಬೇಕೆಂದಿರುವರು. ನೀವು ನಮಗಿನ್ನು ಬೇಕಾಗಿಲ್ಲ; ಆದಷ್ಟು ಬೇಗನೆ ನಿಮ್ಮನ್ನು ನಾಶ ಮಾಡಬೇಕಾಗಿದೆ. ಆದುದರಿಂದ ಬೆರೈಲಿಯನ್ನು ಬಿಟ್ಟು ನೀವು ಬರುವ ಎಸೆಂಬ್ಲಿ ಅಧಿವೇಶನಕ್ಕೆ ಹೋಗಬೇಕಾದರೆ ನಿಮ್ಮ ಮುಖವನ್ನು ವಿರೂಪಗೊಳಿಸುವೆವು. ಅಲ್ಲದೆ ಮ್ಯುನಿಸಿಪಲ್ ಕಟ್ಟೋಣಗಳ ಮೇಲೆ ಮುಸ್ಲಿಂ ಲೀಗಿನ ಧ್ವಜಕ್ಕೆ ಇದಿರಾಗಿ ನೀವು ತ್ರಿವರ್ಣ ಧ್ವಜವನ್ನು ಏರಿಸಿ, ಲೀಗಿನ ಪತಾಕೆಗೆ ಅವಮಾನವನ್ನು ಮಾಡಿರುವಿರಿ. ಕಾಂಗ್ರೆಸಿನವರ ಸಾಮೂಹಿಕ ಸಂಬಂಧ ಕಾರ್ಯಕ್ರಮಕ್ಕೆ ಒತ್ತಾಸೆಯನ್ನಿತ್ತು ನೀವು ಮುಸ್ಲಿಮರಿಗೆ ಕಾಂಗ್ರೆಸಿಗೆ ಸೇರುವಂತೆ ಪ್ರೇರೇಪಿಸುತ್ತಿರುವಿರಿ' ಎಂಬುದಾಗಿ ಆ ಪತ್ರದಲ್ಲಿ ಬರೆದಿತ್ತು.

ವಜೀದರು ಆ ಪತ್ರವನ್ನು ಪೋಲೀಸರಿಗೆ ಒಪ್ಪಿಸಿರುವರು.

ಮುಸಲೇನಿಯವರಿಗೊಂದು ಗುಟ್ಟು

ಎಟ್ಲಾಸ್ ಪರ್ವತದಲ್ಲಿ ನಿಧಿ

ಮೂವತ್ತು ವರ್ಷಗಳ ಹಿಂದೆ ಪದಚ್ಯುತರಾದ ಮೊರೊಕೊ ದೇಶದ ಸುಲ್ತಾನರಾದ ಅಬ್ದುಲ್ ಅಜೀದರೆಂಬವರು ಒಂದು ಗುಟ್ಟಿನ ವಿಷಯದ ಕುರಿತು ಪ್ರಸ್ತಾಪಿಸಲು ರೋಮಿಗೆ ತೆರಳಿರುವರು; ಅವರ ಗುಟ್ಟು ದಿಟವಾದರೆ ಮುಸಲೇನಿಯವರಿಗೆ ಹೇರಳ ದ್ರವ್ಯವು ಸಿಗುವುದರಲ್ಲಿದೆ.

ಮೊರೊಕೊ ದೇಶದ ಕರಾವಳಿಯಲ್ಲಿ ಎಟ್ಲಾಸ್ ಪರ್ವತದಲ್ಲಿ ಒಂದು ಬಂಗಾರದ ಮತ್ತು ಅಮೂಲ್ಯ ಕಲ್ಲುಗಳ ನಿಧಿಯೇ ಇರುವುದಾಗಿ ಆ ಸುಲ್ತಾನರು ಹೇಳುತ್ತಿರುವರು. ಆ ಪ್ರದೇಶವನ್ನು ಅಲ್ಲಿಯ ಜನರು 'ಚಂದ್ರಪರ್ವತ' ವೆಂದು ಕರೆಯುತ್ತಿರುವರು. ಅದರಲ್ಲಿದ್ದ ನಿಧಿಯನ್ನು ಪಡೆಯುವುದಕ್ಕಾಗಿ ಅನೇಕ ಮಂದಿ ಪ್ರಯತ್ನಪಟ್ಟು ವ್ಯರ್ಥಮನಸ್ಕರಾಗಿರುವರು.

ಆದರೆ ಒಬ್ಬನು ಮಾತ್ರ ಆ ನಿಧಿಯು ಎಲ್ಲಿದೆಯೆಂದು ಕಂಡುಹಿಡಿದರೂ, ಅದನ್ನು ಕೊಂಡೊಯ್ಯಲು ಬದುಕಲಿಲ್ಲ. ಈ ವಿಷಯವನ್ನು ಅಬ್ದುಲ ಅಜೀದರಿಗೆ ಅವರ ತಾಯಿಯು ಹೇಳಿದುದಾಗಿದೆ. ಅವರಿಗೆ ಈ ಗುಟ್ಟು ಜನಾನಖಾನೆಯಲ್ಲಿ ತಿಳಿದುಬಂದುದಂತೆ. ಒಂದು ಕುರಿಯ ಚರ್ಮದ ಮೇಲೆ ಅದರದೊಂದು ನಕಾಶವನ್ನು ಬಿಡಿಸಿ ತಾಯಿಯು ತನ್ನ ಮಗನಿಗೆ ಅದನ್ನು ಒಪ್ಪಿಸಿದ್ದಳು.

ಮೂವತ್ತು ವರ್ಷಗಳಿಂದ ಸಿಂಹಾಸನರಹಿತರಾಗಿ ಅಲೆದಾಡುತ್ತಿದ್ದ ಅಬ್ದುಲ್ ಅಜೀದರು ಈಗ ಆ ನಿಧಿಯ ಕುರಿತು ತನಗೆ ಗೊತ್ತಿದ್ದುದೆಲ್ಲವನ್ನು ವಿಕ್ರಯಿಸಲು ಸಿದ್ಧರಾಗಿ ಮುಸಲೇನಿಯವರ ಭೇಟಿಗೆ ಹೋಗಿರುವರು!

ಚೀನದ ಹೊಸ ದಳ

6 ಮಿಲಿಯ ಜನರ ಸಿದ್ಧತೆ

ದಕ್ಷಿಣ ಚೀನದಲ್ಲಿ ಜಪಾನಿನವರು ಮುಂದೊತ್ತಿ ಬರುವುದನ್ನು ತಡೆಗಟ್ಟುವುದಕ್ಕಾಗಿ ಚೀನದ ಕೇಂದ್ರ ಸರಕಾರದವರು ತುಂಬಾ ಸಿದ್ಧತೆಗಳನ್ನು ಮಾಡುತ್ತಿರುವರು. ಹ್ಯೂನಾನ್, ಹ್ಯೂಪೆ ಮತ್ತು ಕ್ವಾಂಗ್ಸಿ ಈ ಮೂರು ಪ್ರಾಂತ್ಯಗಳಲ್ಲೇ 6 ಮಿಲಿಯ ಸೈನಿಕರನ್ನು ತಯಾರು ಮಾಡಲಾಗಿದೆಯೆಂದು ತಿಳಿದುಬಂದಿದೆ.

ಚೀನದ ಸೈನ್ಯ ಚಲಾವಣೆಯು ತೊಂದರೆಗೆ ಈಡಾಗದಂತೆಯೂ, ಹೊರಗಿನಿಂದ ಯುದ್ಧ ಸಾಮಾನುಗಳ ಆಮದು ನಿಂತುಬಿಟ್ಟರೆ, ಸ್ವದೇಶದಲ್ಲೇ ಅವುಗಳನ್ನು ತಯಾರಿಸುವುದಕ್ಕಾಗಿಯೂ ತುಂಬಾ ತಯಾರಿಗಳಾಗುತ್ತಿವೆ. ಸಿಡಿಮದ್ದು, ತುಪಾಕಿಗಳನ್ನು ಚೀನದ ವ್ಯಾಪಾರಿಗಳೇ ಈಗ ತಯಾರಿಸುತ್ತಿರುವರು. ಹೊರಗಿನಿಂದ ಇವುಗಳು ಬಾರದಿದ್ದರೂ ಸಾಕಷ್ಟನ್ನು ಚೀನವೇ ತಯಾರಿಸಬಲ್ಲುದೆಂದು ಊಹಿಸಲಾಗಿದೆ.

ಯುದ್ಧದಲ್ಲಿ ಗಾಯಗೊಂಡವರಿಗೆ ವೈದ್ಯಕೀಯ ಸಹಾಯವು ಈಗ ಸುಧೇಷ್ಟವಾಗಿ ಕೊಡಲ್ಪಡುತ್ತಿದೆ. ಗಾಯಗೊಂಡವರಲ್ಲಿ ಸೇಕಡಾ 60 ಮಂದಿ ಗುಣಹೊಂದುವರು. ಇವರಲ್ಲಿ ಸೇಕಡಾ 90 ಮಂದಿ ಸ್ವೇಚ್ಛೆಯಿಂದ ಪುನಃ ಯುದ್ಧಕ್ಕೆ ಹೊರಡುವರು.

ಅಲ್ಲದೆ ಆಹಾರ ಸಾಮಗ್ರಿಗಳನ್ನು ಶೇಖರಿಸುವ ಕೆಲಸವು ಭರದಿಂದ ಸಾಗುತ್ತಿದೆ. ಆಹಾರ ಸಾಮಗ್ರಿಗಳನ್ನು ಒದಗಿಸಿ ಕೊಡಲೂ ಅವು ಹಾಳಾಗಿ ಹೋಗದಂತೆ ನೋಡಿಕೊಳ್ಳಲು ಅಲ್ಲಲ್ಲಿ ಅಧಿಕಾರಿಗಳನ್ನು ಇರಿಸಲಾಗಿದೆ.

THE

Bank of Mangalore Ltd.,

MANGALORE.

ESTD. 1931.

Branches:-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Saving Bank deposit 3½% on daily balances.

All kinds of banking business transacted.

ವಿಷವಾಯುವಿನ ಜಮೆ

ಫ್ರಾನ್ಸಿಗೆ ಹೆದರಿಕೆ

ಫ್ರಾನ್ಸಿನ ದಕ್ಷಿಣ ಗಡಿಯಲ್ಲಿ ಸ್ಪೈನಿನ ಪ್ರದೇಶದಲ್ಲಿ, ವಿಷವಾಯುವಿನಿಂದ ತುಂಬಿದ ಹಂಡೆಗಳನ್ನು ಜರ್ಮನಿಯವರು ಜಮಾಯಿಸುತ್ತಿರುವರು, ಎಂಬುದಾಗಿ ಸ್ಪೈನಿನ ವಿದೇಶಾಂಗ ಮಂತ್ರಿಗಳಾದ ಅಲ್ವಾರಿಜ್ ಡೆಲ್ ವಾಯೊ ಎಂಬವರು ಹೇಳುತ್ತಿರುವರು.

ಈ ವಾರ್ತೆಯ ಕುರಿತು ಏನೂ ಸಂಶಯಕ್ಕೆ ಆಸ್ಪದವಿಲ್ಲ. ಫ್ರಾನ್ಸಿನ ವಿರೋಧವಾಗಿ ಉಪಯೋಗಿಸುವುದಕ್ಕಾಗಿಯೇ ಈ ರೀತಿ ವಿಷವಾಯುವು ಶೇಖರಿಸಲ್ಪಡುತ್ತಿರುವುದೆಂಬುದು ನಿರ್ವಿವಾದ. ಜರ್ಮನರು ಎಷ್ಟರ ಮಟ್ಟಿಗೆ ಸ್ಪೈನಿನಲ್ಲಿ ಕೈವಾಡವನ್ನು ನಡೆಸುತ್ತಿರುವರೆಂಬುದಕ್ಕೆ ಇದು ಇನ್ನೊಂದು ನಿದರ್ಶನವಾಗಿದೆ. ಸಮಾಗೇ ಇದಿರಾಗಿ ಆ ವಿಷವಾಯುವನ್ನು ಉಪಯೋಗಿಸುವರೋ ಎಂಬುದನ್ನು ಖಂಡಿತ ಹೇಳಲು ಬರುವಂತಿಲ್ಲ.

ಜರ್ಮನ ಇಂಜಿನಿಯರರು ಈಗಾಗಲೇ ವಿಮಾನ ನಿಲ್ದಾಣಗಳನ್ನೂ, ಪಿರೆನಿ ಪರ್ವತಗಳಲ್ಲಿ ಕೊತ್ತಳಗಳನ್ನೂ ತಯಾರಿಸಿರುವರು ಎಂಬುದಾಗಿ ಜನರ ಅಭಿಪ್ರಾಯವಿರುವುದು.

ಕೇಳಿದಿರಾ?

ರಷ್ಯ-ಜಪಾನು

ತಾ. 8ರಲ್ಲಿ, ಅದುವರೆಗೆ ಕೇವಲವಾಗಿ ಒಂದು ಸಂಭ್ರಮರೂಪವಾಗಿ ತೋರಿದ ಜಪಾನು-ಸೊವಿಯೆಟ್ ಸೆಣಸಾಟವು, ಸ್ವಲ್ಪ ಕೈಮೀರಿಯೇ ನಡೆಯಿತೆನ್ನಬಹುದು. ರಷ್ಯ ಮಂಚೂಕೂವೊ ಗಡಿಯಲ್ಲಾಗುತ್ತಿದ್ದ ಅಂದಿನ ಕಾದಾಟವು ನಾಲ್ಕು ಮೈಲು ವಿಸ್ತೀರ್ಣಕ್ಕೆ ನೀಡಿದ್ದಿತು. ಎರಡು ದಿನ್ನೆಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಯುದ್ಧಗಳು ನಡೆದುವು. ಸೊವಿಯೆಟ್ ಪಕ್ಷದ 20000 ಜನರೂ 200 ಟೇಂಕ್ ಗಾಡಿಗಳೂ 200 ವಿಮಾನಗಳೂ ಒಂದು ಕಡೆ ಸೇರಿದ್ದಂತೆ ಲೆಕ್ಕ ಹಾಕಲಾಗಿದೆ. ಎರಡೂ ಸೇನೆಗಳ ಕೆಲವೇ ನೂರು ಗಜಗಳ ದೂರದಲ್ಲಿದ್ದು ನಡುವೆ ಹೆಣಗಳು ಮೆಶಿನ್ ಗನ್‌ಗಳು ಕೋವಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಕೊರಿಯದೊಳಗೆ 21 ಸೊವಿಯೆಟ್ ವಿಮಾನಗಳು ನುಗ್ಗಿ ಹಾವಳಿ ಮಾಡಿದುವೆಂತಲೂ 6ನೇ ತಾರೀಕಿನಿಂದ ಇದೇ ರೀತಿ ಅನಿಶ್ಚಿತ್ವ ನಡೆಯುತ್ತಲೇ ಇರುವುದೆಂದೂ ಜಪಾನಿಯರು ಆರು ಸೊವಿಯೆಟ್ ಪ್ಲೇನುಗಳನ್ನು ಇದುವರೆಗೆ ಕೆಡವಿರುವರೆಂದೂ ಪ್ರಕಟವಾಗಿದೆ.

ಕೈಕೈಯಾಗಿ ಯುದ್ಧವಾಗುತ್ತದೆ.

ಇದರ ಫಲವಾಗಿ ಜಪಾನಿನ ಸೇನೆಗಳು (ಚೀನದೊಳಗೆ ನುಗ್ಗಿದುವು) ಹಿಂತೆಗೆಯತೊಡಗಿವೆ. ಇದೇ ಸಂದರ್ಭವೆಂದು ಚೀನದ ಸೇನೆಗಳು ಬಲವಾಗಿ ಕಾದುದರಿಂದ, ಮೊನ್ನೆ ಒಂದೇ ದಿನ 2000 ಜಪಾನಿಯರಿಗೆ ಪ್ರಾಣಹಾನಿಯಾಗಿದೆ ಎಂದೂ ಪ್ರಕಟವಾಗಿದೆ.

ಕೆಂಟನ್ ನಗರದಲ್ಲಿ ಜಪಾನಿನ ವಿಮಾನಗಳು ಸಿಡಿಗುಂಡು ಚೆಲ್ಲುವುದನ್ನೇನೂ ಕಡಿಮೆ ಮಾಡಿಲ್ಲ. ದಿನಕ್ಕೆ ನೂರಿನ್ನೂರು ಚೀನೀಯರನ್ನು ಕೊಲ್ಲುತ್ತಲೇ ಇರುವರು.

ಅರೆ ನೋಟಗಳು!

ಅಜೀರ್ಣಕ್ಕೆ ಮೈ ಲಕ್ಷಣಗಳು ತೋರಿ ಬಂದ ಬಳಿಕವೇ ಬರುವುದು. ಅಜೀರ್ಣಮೆಂಟು ಠರಾವುಗಳು ಮುಂದೆ ಬರುವುದೂ ಎಸೆಂಬ್ಲಿಗಳಲ್ಲಿ ಅವುಗಳ ದುರ್ಬಲತೆ ಸೂಚಕವಾದುವು. ಆದರೆ ಅವು ಗಳಿಗೊಂದು ಮಿತಿಯದೆ. ಅಂಥ ವಿಶೇಷ ಕಾಲಗಳಲ್ಲಿ ಒಂದೆರಡು ಇಂಥ ಠರಾವುಗಳಾದರೆ ಬಾಧೆಯಿಲ್ಲ, ಲಕ್ಷಣವಿದೆ. ಈಗ ಹತ್ತೆಂಟು ಪ್ರತಿಸಲ ಬರುವ ಕಾರಣ ಅವು ಸಂಸ್ಥೆಯ ದಿನಚರಿಯವಾಗಿ ಬಿಟ್ಟಿದೆ. ಫಲಿತಾಂಶ—ಏನೂ ಇಲ್ಲ.

++ ++ ++

ಎಷ್ಟೋ ವೇಳೆ ಇವನ್ನು ಎಸೆಂಬ್ಲಿ ಅಧ್ಯಕ್ಷರು ಓದುವುದು ಸಹ ಇಲ್ಲ. ಈ ಠರಾವುಗಳನ್ನು ಮುಂತರುವವರು ಮಾತ್ರ ಬಹಳ ಉತ್ಸಾಹದಿಂದ, ಅನ್ಯಾಯ ಹೊಂದಿದ ಸಾಧುಗಳಂತೆ ತೋರುತ್ತಾರೆ. ಪಾಟ್ನಾದಲ್ಲೂ ಅದೇ, ಲಕ್ನೋನಲ್ಲೂ ಅದೇ. ಎಷ್ಟೋ ಅಜೀರ್ಣಮೆಂಟು ಠರಾವುಗಳನ್ನು ಬರೇ ಪ್ರಶ್ನೆಗಳ ಮೂಲಕವೇ ಸುಧಾರಿಸಬಹುದಿತ್ತೆಂದು ತೋರುತ್ತದೆ.

++ ++ ++

ಇವೇಕೆ ಇಷ್ಟಾಗಿ ಬೆಳೆದಿವೆ? ಪ್ರತಿ ಕಡೆಯಲ್ಲೂ ಜಾತಿ ವೈಷಮ್ಯವು ಹಿಮಾಲಯದೆತ್ತರಕ್ಕೆ ಬೆಳೆದು ಬಿಟ್ಟಿದೆ. ಪ್ರತಿಯೊಂದು ಸಂಭವವನ್ನೂ ಜಾತಿದೃಷ್ಟಿಯಿಂದ ಕಾಣುವವರು ಹೆಚ್ಚು. ಬಿಹಾರದಲ್ಲಿ ಎಸೆಂಬ್ಲಿಯ ಮುಂದೆ ಬಂದುದೊಂದು ಠರಾವು ಕೂಡಲೆ ಹಿಂದುಗಿಸಬಹುದಾದುದು. ಆದರೆ, ಅಲ್ಪ ಸಂಖ್ಯಾಕರು ಏನೆಂದಾರು? ಇರಲಿ ಎಂದೇ ಅದರ ಚರ್ಚೆಯಾಯಿತು. ಈ ಭಯದಿಂದ ರಾಜಕೀಯದಲ್ಲಿ ಮುಕ್ತದಿತನವೇ ಹಾಳಾಗಿ ಬರುತ್ತದೆ. ವಿವೇಕವೂ ತಿಳುವಳಿಕೆಯೂ ಮಾಯವಾಗಬೇಕಾದರೆ, ಜಾತಿ ಪಕ್ಷಪಾತ ಅಥವಾ ಜಾತಿ ವೈಷಮ್ಯ ಇದ್ದರೆ ತೀರಿತು.

++ ++ ++

ಕೊಂಗ್ರೆಸು ಅಧಿಕಾರ ಬಂದಲ್ಲಿ,—ಜಾತಿ ಪಕ್ಷಲ ಮಹನೀಯರು—ಕೊಂಗ್ರೆಸಿನ ತಲೆಗೆ ಪಿತ್ತವೇರಿದೆಯೆಂಬಷ್ಟು ಎನ್ನುವುದುಂಟು. ನಿಜವಾಗಿ, ಈ ಕೊಂಗ್ರೆಸಿನವರಲ್ಲಿ ಸ್ವಲ್ಪ ಪಿತ್ತ ಹೆಚ್ಚಾಗಿ ಸುರಿದು, ಆಹಾರವು ಜೀರ್ಣವಾಗಲು ಅವಕಾಶವಿದ್ದರೆ, ಅವರ ಮುಖಗಳು ಯಾವಾಗಲೂ ಜವಾಬ್ದಾರಿಯ ಬೆಸೆಯಿಂದ ಭಾರವಾಗಿ ತೋರದೆ, ಇಂಥ ಅಜೀರ್ಣಮೆಂಟು ಠರಾವುಗಳಿಗೆ ಆಸ್ಪದವೇ ಇಲ್ಲದಂತೆ ಇದಿರಾಳಿಗಳನ್ನು ಖಂಡಿಸುವ ಬಲ ಅವರಲ್ಲಿ ಉಂಟಾಗುತ್ತಿತ್ತು.

++ ++ ++

ಹೀಗಿಲ್ಲದಿದ್ದರೆ, ಈ ಅಧಿಕಾರದಿಂದ ನಾನು ವಿಮೋಚನ ಹೊಂದುವಂತಿದ್ದರೆ ಎಷ್ಟು ಚೆನ್ನಾಗುತ್ತಿತ್ತೆಂದು ಮುಖ್ಯ ಮಂತ್ರಿಗಳೊಬ್ಬರು ಹೇಳುತ್ತಿದ್ದರೇ? ಸಂಬಳ ಸಹ ಇವರಿಗೆ ಅಲ್ಪ; ಅಧಿಕಾರ ಲಾಲಸೆಯವರಲ್ಲ, ಇವರು ಸೇವಾವ್ರತಿಗಳಾಗಿ ಮುಂದೆ ಬಂದವರು. ಇವರಿಗೂ ಬೇಸರಹುಟ್ಟಿತೆಂದರೆ, ಅದು ಭಾಗ್ಯದಮಾತೇ?

++ ++ ++

ಊರಲ್ಲಿ ದಂಗೆಗಳಾದರೂ, ಎಸೆಂಬ್ಲಿಗಳಲ್ಲಿ ಈ ಜಾತಿವತ್ಸಲರ ಹಾವಳಿ, ಅವುಗಳಿಗಿಂತ ಹೆಚ್ಚು. ದಂಗೆಯಲ್ಲಿ ಟಪ್ಪನೆ ಸಿಟ್ಟೇರಿ, ಮಾರಾಮಾರಿಯಾಗಿ ಎಲ್ಲ ಮುಗಿದು . . . . . . ಅಲ್ಲಿ ಶಾಂತಿಯಾಗುವುದು. ಎಂತೂ ಮುಂದಣ ವರ್ಷ ಅಂಥದೊಂದು ಮೆರವಣಿಗೆಯಾಗುವ ತನಕ ಶಾಂತಿಯೆನ್ನೋಣ. ಎಸೆಂಬ್ಲಿಯಲ್ಲಿ; ಮಾತಾಡಿದಷ್ಟಕ್ಕೆ ಪಿತ್ತ ಏರುವುದು. ಪ್ರತಿಮಾತೂ ಒಂದು ಬಗುಳಾಟದಂತಾಗಿ, ಕೊನೆಗೆ ವಿವೇಕವೇ ಕೆಡುವುದು. ಜಿನ್ನಾರನ್ನಾಗಲಿ ಗಾಂಧಿಜಿಯರನ್ನಾಗಲೀ ಈ ವಿಷಯ ವಿಚಾರಿಸಿ ಕಾರಣ ಹೊರಡಿಸಬೇಕು.

++ ++ ++

ಇಲಾಖಾ ಆಫಿಸರರ ಮೇಲೆ, ಅರೆಜೀರ್ಣವಾದ ರಿಕಾರ್ಡುಗಳಿಂದ, ನಾನಾ ದೂರುಗಳನ್ನು ಹಾಕಿ ಪಂಡಿತ ಪಂತರ ತಲೆಕೆಡುವಂತೆ ರೇಗಿಸಿದ ಜಾತಿವತ್ಸಲರಿರುವರು. ಎಸೆಂಬ್ಲಿ ಮೆಂಬರನೆಂದ ಮಾತ್ರಕ್ಕೆ ಹರಟುವುದೆ? ಜವಾಬ್ದಾರಿಯ ಇಲ್ಲವೆ? ನಿರ್ಭಯವಾಗಿ ಮಾತಾಡಬಹುದೆಂದರೆ ಬೇಕಾದಂತೆ ಸತ್ಯವನ್ನು ಮುರುಟಿಸಿಯೇ ಮಾತಾಡಬೇಕೆ? ಹಾಗಿದ್ದರೂ, ಮುಸ್ಲಿಮ್ ಮೆಂಬರರೊಬ್ಬರು ಒಬ್ಬ ಆಫಿಸರನನ್ನು ಕುರಿತು ತಪ್ಪಾಡಿದಾಗಲೂ ಮತ್ತೊಬ್ಬ ಮುಸ್ಲಿಮ ಮೆಂಬರರು ಅವರ ಸಹಾಯಕ್ಕೆ ಬಂದು ಇಮ್ಮಡಿ ತಪ್ಪನ್ನು ಮಾಡಿದರು. ನ್ಯಾಯಕ್ಕಾಗಿ ಬಲ್ಲವರಂತೆ ಅಲ್ಲ. ಜಾತಿವಾತ್ಸಲ್ಯದಿಂದ ಎಂದು ಎಸೆಂಬ್ಲಿಯಲ್ಲಿ ರುಜುವಾಯಿತು. 'ಬೋರ್ಡ್ ಓಫ್ ರೆವಿನ್ಯೂ ಮೆಂಬರರು ತಮ್ಮ ನಡತೆಯ ಮೇಲೆ ಇಲ್ಲಿ ಕಲಂಕ ಬಳಿದರೆಂದು ಹೇಳದಿರಲಾರರು.' ಎಂದು ಪಂತರು ಹೇಳಿದರು. ಕೊಂಗ್ರೆಸು ಮಂತ್ರಿಗಳಾದರೇನು? ನ್ಯಾಯಕ್ಕಾಗಿ ಬ್ರಿಟಿಷ್ ಆಫಿಸರರನ್ನು ಹೊಗಳಿ ಅಲ್ಲಿಗೆ ಚರ್ಚೆ ತೀರಿಸಿದರು.

++ ++ ++

ಇಷ್ಟಿದು ಪರಿಷ್ಠ ಎಸೆಂಬ್ಲಿಗೂ ತಲಪಿದೆ. ಜಿನ್ನಾರವರು ಹೊಸ ಮುಸ್ಲಿಮ್ ಪಾರ್ಟಿ ತಯಾರಿಸುತ್ತಾರೆ. ಗ್ರಿಗ್ ಸಾಹೇಬರು ಇನ್ನು ಕಾಯಕಲ್ಪಮಾಡಿಕೊಳ್ಳಬೇಕು. ಸಾಮ್ರಾಜ್ಯಶಾಹಿಯ ಗೆಳೆತನಕ್ಕೆ ಮುಸ್ಲಿಮರ ಜಾತಿಯ ತತ್ವವನ್ನೆ ಕಟ್ಟಿಕೊಂಡವರು. ತಮ್ಮ ಬಳಿಯಲ್ಲೇ ಜಾತಿವಾತ್ಸಲ್ಯ ಎದ್ದು ರಣಾಭಿನಯಮಾಡುವುದನ್ನು ಗ್ರಿಗ್ ಸಾಹೇಬರು ನೋಡಲಿ. ಭೂಲಾಭಾಯಿ—ಜಿನ್ನಾರವರೊಳಗೆ, ಜಾತಿ ವೈಷಮ್ಯದ ಭೂತವೆದ್ದು, ಅವರು ಹೊಡೆದಾಡಿಕೊಳ್ಳದಂತಾಗಲಿ.

++ ++ ++

ಖಾರೆಯವರು ಹೇಳುವುದು ಒಂದು, ಪಠೇಲರೆನ್ನುವುದು ಬೇರೇ ಒಂದು. ಇಬ್ಬರೂ ಸತ್ಯ ಹೇಳುವವರೇ. ಇಲ್ಲಿ ಸತ್ಯಶೋಧನೆ ಒಂದಿಷ್ಟು ಅಗತ್ಯ. ಕೊಂಗ್ರೆಸು ಪ್ರಕಟನೆ ಬೇರೆ, ಖಾರೆಯವರದೇ ಬೇರೆ. ಖಾರೆಯವರು ಎಂದೂ ಸುಳ್ಳಾಡರು ಎಂದು ಮರಾಠರೆಲ್ಲರ ಪ್ರಮಾಣ. ಖಾರೆಯವರು ಸತ್ಯವನ್ನಾಡಬಲ್ಲವರಲ್ಲ ಎಂದೇ ಪಠೇಲ ಪಕ್ಷದ ಠರಾವು. ಹೀಗಾಗಿ ಇತ್ತಂಡಗಳ ಕೊಳೆಯೆಲ್ಲ ಬೀದಿಯಲ್ಲೇ ತೊಳೆಯಲಾಗುತ್ತದೆ.

++ ++ ++

ದಿವಂಗತ ಪುಟ್ಟಣ್ಣ ಶೆಟ್ಟರ ಗುಣಗಾನ ಮಾಡುತ್ತ, ಒಬ್ಬ ಮಹಾಸೀಯರು ಎಂದಿನಂತೆ ದಿವಂಗತರಾದ ಮೇಲೆ ಕೇಳುತ್ತಲೇ ಮಾತ್ರ ಪ್ರತ್ಯಕ್ಷ ಜೀವಂತರಾಗಿರುವುದನ್ನು ವ್ಯಕ್ತಪಡಿಸಲು ಬರೆದು, ಅವರಿಗೆ L. L. D. ಪದವಿಯನ್ನು ಕೊಟ್ಟಂತೆ, ಅಂಥವರಿಗೆಲ್ಲ ಇನ್ನೂ ಜೀವಂತರಾಗಿರಲು ಹಲವು ವರ್ಷ ಇರುವಾಗಲೆ ಯೂನಿವರ್ಸಿಟಿಗಳು ಅಂಥ ಪದವಿಗಳನ್ನು ಕೊಡುವುದು ಅತ್ಯಗತ್ಯವೆಂದು ಸೂಚಿಸುತ್ತ, ತಮ್ಮ ಉಮೇದುವಾರಿಯನ್ನು ಪ್ರಕಟಿಸಿಬಿಟ್ಟಿರುವರೋ ಇಲ್ಲವೋ ತಿಳಿದಿಲ್ಲ.

++ ++ ++

ಬಾಬು ರಾಜೇಂದ್ರ ಪ್ರಸಾದರು ಕೊಂಗ್ರೆಸಿನವರಿಗೆ ಬುದ್ಧಿವಾದ ಹೇಳುತ್ತ,—ಅಧಿಕಾರ ಕಳೆದಂದಿನಿಂದ ಕೊಂಗ್ರೆಸ್‌ವಾಲಾರಲ್ಲಿ ಹಲವರು ಕಮಿಟಿಗಳಲ್ಲಿ ಸೇರುವುದೇ ಮಹೋದ್ದೇಶವೆಂದೂ ಭಾವಿಸಿ, ಹಲವು ತಂಡಗಳ ಹಲವರೊಡನೆ ಸೇರಿಯೂ ನಾನಾ ಬಗೆಯ ಜನಗಳು ನಾನಾ ರೀತಿಯಲ್ಲಿ ತಂಡಗಳನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿರುವರು. ನಮ್ಮ ಧ್ಯೇಯಗಳನ್ನು ಮೂಲೆಗೊತ್ತಿ, ಅಧಿಕಾರ ಲಾಲಸೆಗಾಗಿ ಹೀಗೆ ಮಾಡುವುದು ಸರಿಯಲ್ಲ. ಏಕೆಂದರೆ, ಈ ಬಗೆಯಲ್ಲಿ ಅಧಿಕಾರ ಪಡೆವುದು ಪತನಕ್ಕೆ ಕಾರಣವಾಗುವುದು ಎಂದು ಎಚ್ಚರಿಸಿದ್ದಾರೆ.

++ ++ ++

ಇಡೀ ಹಗಲಲ್ಲಿ ಮಸೀದಿಗಳ ಬಾಗಿಲುಗಳಲ್ಲಿ ನಾನಾ ಗದ್ದಲ ಗೊಂದಲ ಗಲಭೆಗಳಿಂದ ಜನಜಾನವಾರು ಗಾಡೀಸಂಚಾರ ಮೋಟರುಧಾವತಿ ಮೊದಲಾದುವುಗಳಿದ್ದರೂ ಮೌನವಾಗಿರುವ ಮುಸ್ಲಿಮರು, ಒಂದು ಮೆರವಣಿಗೆ ಎಂದ ಕೂಡಲೇ 'ಧರ್ಮಕ್ಕೆ ಅಪಮಾನ' ಎಂದು ದಂಗೆಯೇಳಲೂ ತೊಡಗುವಂತೆ ಮಾಡಿರುವ ಈ ಮನೋವಿಕಾರಕ್ಕೆ ಏನೆನ್ನಬೇಕು? ಎಂದು 'ಸರ್ಚಲೈಟ್' ಪತ್ರಿಕೆ ಕೇಳುವುದು.

++ ++ ++

ನಾಲ್ಕಾರು ಕಡೆಗಳಲ್ಲಿ ಒಮ್ಮೆಲೇ ಹಿಂದೂ ಮುಸ್ಲಿಮ ದಂಗೆಗಳುಂಟಾಗುವಂತೆ ಮಾಡಿದ ಕೂಡಲೇ ಕೊಂಗ್ರೆಸ್ ಸರಕಾರಗಳು ಹಾಳೆಂದು ರುಜುಪಡಿಸ ಬರುತ್ತದೆಂಬ ಸುಳ್ಳು ನಂಬಿಕೆಯೇ ಈ ದಂಗೆಗಳನ್ನು ಹುಟ್ಟಿಸುವವರನ್ನು ಹೀಗೆ ಭ್ರಾಂತರನ್ನಾಗಿ ಮಾಡಿಬಿಡುತ್ತದಲ್ಲ!

++ ++ ++

ಖಾರೆಯವರು ನಾನಾ ಪ್ರಸಂಗಗಳನ್ನು ತೋರಿಸಿ ತಾನು ಬಲಿಯಾದೆ ಎಂದು ತೋರಿಸಿಕೊಂಡು, ಒಂದು ಪಿಗ ಪ್ಷವಾಗಲು [illegible] ದ್ದರು. ಆದರೆ ಗಾಂಧಿಜಿಯವರು,—ನೀವು ನಿಮ್ಮ ಹೇಳಿಕೆ ಬರೆದ ಪತ್ರವನ್ನು ಸರಿಯಾದ ಪೂಟೋವಿನಂತೆಯೆ ಪ್ರಕಟಿಸಿ ಬಿಡಿರಿ ಎಂದರು. ಖಾರೆಯವರು ಗುಟ್ಟು ರಟ್ಟಾಗುವುದೆಂದು ಭಾವಿಸಿ, ಇದೀಗ ಸುಮುಹೂರ್ತವಲ್ಲ ಎಂದು ಕೂತಿದ್ದಾರೆ. ಹೀಗೆಂದ ಕೂಡಲೇ ಮರಾಠರು ತಮ್ಮನ್ನು ತಿಲಕ ಪದವಿಗೆ ಏರಿಸುವರೆಂದು ಆತರು ನಂಬಿದ್ದರು. ಸತ್ಯವು ಹೊರಬರಲು ನಾಚುತ್ತದೆಂದು ತಿಳಿದು ಈ ಪದವಿ ಇನ್ನು ಇವರಿಗೆ ಸಿಗುವ ಹಾಗಿಲ್ಲವಾಯಿತು,—ಗಾಂಧಿಜಿಯವರ ಸೂಚನೆ ಮನ್ನಿಸದೆ!

++ ++ ++

ಚೀನದಲ್ಲಿ ಎರಡು ಲಕ್ಷ ಮುಸ್ಲಿಮರು ಜಪಾನಿನ ವಿರುದ್ಧ ಕಾದಾಡುತ್ತಿದ್ದಾರೆ. "ಹುಚ್ಚರು" ಎಂದೊಬ್ಬ ಲೀಗ್ ಸದಸ್ಯರು ಇವರಿಗೆಂದಿದ್ದಾರೆ. ಚೀನದಲ್ಲಿ 50 ಲಕ್ಷ ಮುಸ್ಲಿಮರಿರುವರು. ತಮ್ಮ ಧರ್ಮ ಮತ್ತು ಸಂಸ್ಕೃತಿಗಳ ರಕ್ಷಣೆನೋಡದೆ, ಯುದ್ಧಕ್ಕೆ ಹೋಗುವುದೆಂದರೇನು? ಏಕೆಂದರೆ, ರಾಷ್ಟ್ರೀಯ ಚಳವಳಿಯಲ್ಲಿ ಕೊಂಗ್ರೆಸಿನೊಡನೆ ಸೇರಬೇಕಾದರೆ ಅಷ್ಟು ಪೈಂಟುಗಳು ಇಲ್ಲಿನ ಮುಸ್ಲಿಮರಿಗೆ ಬೇಕಾಗಿವೆ! ಅಲ್ಲಿ ಎಲ್ಲರ ಪೈಂಟು ಒಂದೇ,—ಜನಾಂಗದ ಸ್ವಾತಂತ್ರ್ಯರಕ್ಷಣೆ. ಆ ಮುಸ್ಲಿಮರೆ ಮುಸ್ಲಿಮರು.

++ ++ ++

ನೆಹರುಗಳವರು ಸ್ಥಳೀಯ ರಾಜ್ಯಗಳ ಪ್ರಜೆಗಳ ಪರಿಷತ್ತಿನಲ್ಲಿ ಅಧ್ಯಕ್ಷರಾಗುವರೆಂದು ತಿಳಿದು ಸ್ಥಳೀಯ ಅಣ್ಣರಲ್ಲೊಬ್ಬರು,—ನಾವು ಬೇಕಾದರೆ ಎಲ್ಲರಿಗೂ ವೋಟು ಅಧಿಕಾರ ಕೊಡಲು ಸಿದ್ಧರು. ನೆಹರು ಯಾಕೆ ಇಲ್ಲಿ ಬರಬೇಕು? ನಮ್ಮನ್ನು ತೆರಿಗೆ ಕೂಡಿಸುವವರು ಬ್ರಿಟಿಷ್ ಸರಕಾರದ ಜಂತುಗಳು ಎಂಬಿತ್ಯಾದಿಯಾಗಿ ಬಿರುದುಕೊಟ್ಟು ಭಾಷಣಮಾಡಿದವರು. ನಾವು ಸೂರ್ಯ ಚಂದ್ರ ವಂಶಗಳವರು ಎಂದೆನ್ನುತ್ತ, ಕೊಂಗ್ರೆಸು ತಮ್ಮ ರಾಜ್ಯಗಳಲ್ಲಿ ನುಗ್ಗಿ ಕೆಲಸ ಮಾಡದಂತೆ ಸಹಾ ಸೂಚಿಸಿದರಾಗಿದೆ.

++ ++ ++ ++

ಶ್ರೀ ಕೃಷ್ಣಕಾಂತ ಮಾಲವೀಯರು ಹಿಂದೀ ಯುವಕರಿಗೆ ವಿಮಾನ ಸಂಚಾರ ಶ್ರಮವನ್ನು ಬೋಧಿಸಲು ಒಂದು ಶಾಲೆ ತೆರೆಯಲು ಪ್ರಯತ್ನ ಮಾಡುತ್ತಾರಲ್ಲ,—ಇವರಿಗೆ ಜರ್ಮನ ಶಿಕ್ಷಕರು ಸಿಗುವರಂತೆ. ಬ್ರಿಟಿಷ ಹಿಂದುಸ್ಥಾನದಲ್ಲಿ ಬ್ರಿಟಿಷ ಆಫೀಸರರು ಸಿಗಲಾರರೇ ಅಥವಾ ಬ್ರಿಟಿಷ ಸರಕಾರವೇ ಈ ಶಾಲೆ ತೆರೆಯಲಾಗದೆ? ಅಥವಾ ಇವರಿಗೆ ಜರ್ಮನ್ ಸರಕಾರ ಅಥವಾ ರಷ್ಯನ್ ಸರಕಾರ ಈ ರೀತಿಯ ಉದ್ಯಮಕ್ಕೆ ಪ್ರೋತ್ಸಾಹ ಕೊಟ್ಟಿರುವುದೆ?

++ ++ ++ ++

ಬಹಳ ಕೆಲಸ ಮಾಡಿ ದಣಿದ ಸರಕಾರಿ ಮೇಲು ಉದ್ಯೋಗಸ್ಥರಿಗೆ ವಿಶ್ರಾಂತಿ ಸಿಗಬೇಕಾದರೆ ಏನು ಮಾಡಬೇಕು? ಅವರು ರಜ ಪಡೆದು ಲಂಡನಿಗೆ ತೆರಳಿ ಅಲ್ಲಿ ಇಂಡಿಯಾ ಸೆಕ್ರೆಟರಿಯರೊಡನೆ ಸಂಭಾಷಣೆ ಮಾಡುತ್ತಿರಬೇಕು! ಇದೇ ಯೋಗ್ಯವಾದ ರೀತಿಯಲ್ಲಿ ಅವರನ್ನು ಪುನಃ ಆರೋಗ್ಯದ ಹಾದಿಗೆ ತರುವುದು. ಇಲ್ಲದಿದ್ದಲ್ಲಿ, ಫೆಡರೇಶನು ಇತ್ಯಾದಿ ಯಾವ ಸಂಭಾಷಣೆಯನ್ನೂ ಮಾಡುವ ಉದ್ದೇಶವಿಲ್ಲವೆಂದು ವೈಸರಾಯರು ತಿಳಿಸಿ, ಅವರ ಹಲವು ಮಂದಿ ಮೇಲು ಉದ್ಯೋಗಸ್ಥರೂ ಲಂಡನಿಗೆ ಈಗಲೆ ನಾಲ್ಕು ತಿಂಗಳ ರಜಾ ಪಡೆದು ಹೋಗಿರಲೂ ಹೋಗುತ್ತಿರಲೂ ಕಾರಣವೇನು? ಇದು ವಿಶ್ರಾಂತಿ ಅಲ್ಲವೆ?

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸಿನ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಅದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಮಾಹಿಮ, ಠಾಣೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೩—೪ ವಿ. ಪಿ. ಖರ್ಚು ಬೇ.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, (S. M. C.)

ಪ್ರಕಟಣೆ.

ಕಾರ್ಕಳ ಡಿ। ಮುನ್ಸಿಫ್ ಕೋರ್ಟಿನ

ಕ್ರಮ ನಂಬ್ರ 104/8

ರಾಮಚಂದ್ರಾಚಾರ್ಯ — ವಾದಿ

ಮತ್ತು

ಯೇದು ಸೆಟ್ಟಿ — ಪ್ರತಿವಾದಿ

ಇವರೊಳಗೆ

ಸದ್ರಿ ದಾವೆಯ ಪ್ರತಿವಾದಿ ಯೇದು ಸೆಟ್ಟಿ—ದೊಗ್ಗು ಸೆಟ್ಟಿ ಮಗ, ಮಂಗಳೂರು ತಾಲೂಕು ಇ[illegible] ಗ್ರಾಮದ ಕೊರಗು ಸೆಟ್ಟಿ ಅಳಿಯ, ದಾಸುಬೈಲು ಕು[illegible] ಸೆಟ್ಟಿಯ ಮನೆಯಲ್ಲಿರುವವ, ಇವರಿಗೆ—

ಸದ್ರಿ ದಾವೆಯಲ್ಲಿ ಕೇಳಿದ ಪ್ರಕಾರ ನಿಮ್ಮಿಂದ ವಾದಿಗೆ ಬರತಕ್ಕ ಗೇಣಿ ಬಾಕಿ ರು. 128–13–3 ಮುಂದಿನ ಬಡ್ಡಿ ಕೂಡ ಖರ್ಚು ಸಹಾ ಬರಮಾಡಿಕೊಳ್ಳುವರೇ ಮಾಡಿದ ದಾವೆಯು ತನ್ನ ಬಗ್ಗೆ ತಾರೀ 25–8–38ಕ್ಕೆ ಇಡೋಣಾಗಿದೆ. ಅದಿವ್ಸ ಬೆಳಿಗ್ಗೆ 11 ಗಂಟೆಗೆ ನೀವು ಸದ್ರಿ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ನಿಮ್ಮ ಉದಾಹರಣೆ ಇರುವುದಾದರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು.

ಮೊ. ಕಾರ್ಕಳ | ಕೋರ್ಟು ಹುಕುಂ ಪ್ರಕಾರ

ತಾ. 13-8-38 | ಎಂ. ಎಸ್. ಅಧಿಕಾರಿ

ವಾದಿ ಕಡೆ ವಕೀಲ

ಗುಡಿ ಕೈಗಾರಿಕೆಗಳ ಪ್ರದರ್ಶನಾಲಯ

ನೆಲ್ಲೂರಲ್ಲಿ ಈ ಆಧಿಪತ್ಯದಲ್ಲಿ ಮೊದಲನೆಯದು.

★

ಕೈಗಾರಿಕೆಗಳ ಇಲಾಖಾ ಮಂತ್ರಿ ಶ್ರೀ ವಿ. ವಿ. ಗಿರಿಯವರು ನಮ್ಮ ಜಿಲ್ಲೆಯನ್ನು ಸಂದರ್ಶಿಸಿದಾಗ, ಇಲ್ಲಿ ಒಂದು ಜಿಲ್ಲಾ ಕೈಗಾರಿಕೆಗಳ ಪ್ರದರ್ಶನಾಲಯವನ್ನು ತೆರೆಯಬೇಕೆಂದು ಸೂಚಿಸಿದ್ದರು. ಇವರ ಇಂಥ ಸೂಚನೆಗಳು ಪ್ರತಿ ಜಿಲ್ಲೆಗೂ ತಲಪಿದೆ. ನೆಲ್ಲೂರಲ್ಲಿ ಮಾತ್ರ ಮೊದಲನೆಯದಾಗಿ ನಮ್ಮ ಆಧಿಪತ್ಯದಲ್ಲಿ ಇಂಥ ಪ್ರದರ್ಶನಾಲಯವನ್ನು ಈ ವಾರ ತೆರೆಯಲಾಯಿತು.



ಮಾನ್ಯ ವಿ. ವಿ. ಗಿರಿ

ರದೇಶಗಳಲ್ಲಿ ಸಹ ಮಾನಗಳನ್ನು ಪಡೆದಿರುವ ಕೈಗಾರಿಕೆಗಳ ಉತ್ಪನ್ನಗಳು ಪ್ರತಿ ಜಿಲ್ಲೆಯಲ್ಲೂ ಇವೆ. ಎಷ್ಟೋ ಜನರಿಗೆ ಒಂದಿಷ್ಟು ಅನ್ನವನ್ನೊದಗಿಸುವ ಈ ಕೈಗಾರಿಕೆಗಳು ಎಷ್ಟೋ ಬಗೆಯಾಗಿವೆ. ಕೈಗಾರಿಕೆಗಳು ಯಾವುವು ಇವೆ. ಎಷ್ಟು ಉನ್ನತಿಗೆ ಬರಿದಿತೆ ಅಥವಾ ಬರಬಹುದು ಎಂಬುದನ್ನು ನಿರ್ಧರಿಸುವುದಕ್ಕೆ ಈ ಪ್ರದರ್ಶನಾಲಯಗಳೂ ಅಗತ್ಯ. ಸ್ಥಳವಿದ್ದಲ್ಲಿ, ಹತ್ತಿರದ ಜಿಲ್ಲೆಗಳಲ್ಲಿನ ಕೈಗಾರಿಕೆಗಳನ್ನೂ, ಇಲ್ಲಿನವುಗಳೊಡನೆ ಸ್ಪರ್ಧಿಸುವ ಒಡವೆಗಳನ್ನೂ ಪ್ರದರ್ಶನಕ್ಕಿಡುವುದು. ಉತ್ತೇಜಿಸಬೇಕಾಗಿರುವ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಲೂ, ಇವುಗಳ ಇತಿಹಾಸವೂ ಆಯಾ ಜಿಲ್ಲೆಯವರಿಗೆ ತಿಳಿಯುವುದೂ ಅಗತ್ಯ

ಮಂತ್ರಿಯವರು ಭಾಷಣಮಾಡುತ್ತ—ಹಣವಿಲ್ಲದ ಈ ಕಾಲದಲ್ಲಿ ಈ ಬಗೆಯ ಪ್ರದರ್ಶನಾಲಯಗಳನ್ನು ಖಂಡಿತವಾಗಿ ತೆರೆಯಬಹುದೆಂದು ಅವರು ಹಿಂದೆ ಹೇಳಿದುದನ್ನು ವಿವರಿಸಿ, ಜಿಲ್ಲೆಯ ಕಲೆಕ್ಟರರೂ ಜನರೂ ಒಂದಾಗಿ ಕೆಲಸಮಾಡುವುದರಿಂದ ಇಂಥ ಆಲಯಗಳು ಉಂಟಾಗುವುವೆಂದೂ, ಇವುಗಳಿಗೆ ಸ್ಥಳ, ಕಟ್ಟಡ ಮೊದಲಾದುವು ಜನರಿಂದಲೇ ದೊರೆವುವೆಂದೂ ತಿಳಿಸಿದರು

ಹಳ್ಳಿಗಳಿಗೆ ಹೋಗಿ ಅಲ್ಲಿ ಜೀವನ ನಡೆಸುವ ಮಾತ್ರಕ್ಕೆ ಜನರು ಹೋಗಲಾರರು. ಅವರಿಗೆ ಜೀವನೋಪಾಯಗಳನ್ನೂ ತಿಳಿಸಬೇಕಾಗುತ್ತದೆ. ಕೃಷಿಯಿಂದ ಜೀವನಮಾಡುವುದು ಈ ಕಾಲದಲ್ಲಿ ಕಷ್ಟ. ಕೃಷಿಕನಿಗೆ ಅವಕಾಶದಲ್ಲಿ ಹೆಚ್ಚಿನದೊಂದು ಕಸಬು ದೊರೆವ ಹಾಗಾದರೆ ಆಗ ಮಾತ್ರ ಅವನಿಗೆ ಕಿಂಚಿತ್ತು ಸುಖಜೀವನವಾಗುವುದು.

ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಮೂಲಕ ಹಳ್ಳಿಬೇಸಾಯಗಾರರಿಗೆ ಉಪವೃತ್ತಿ ದೊರೆವುದು. ಆದರೆ, ಈ ಉಪವೃತ್ತಿಯಿಂದುಂಟಾಗುವ ಉತ್ಪನ್ನಗಳನ್ನು ಮಾರಲು ಸರಕಾರವು ಮುಂದೆ ಬಾರದಿದ್ದರೆ, ವೃತ್ತಿಕೈಕೊಂಡು ಲಾಭವಿರದು

ಎಷ್ಟೋ ಕೈಗಾರಿಕೆಗಳು ಅಳಿದು ಹೋಗಲು ಕಾರಣವೆಂದರೆ, ಅವುಗಳಿಗೆ ಪ್ರೋತ್ಸಾಹವಿಲ್ಲದಿರುವುದು; ಮಾತ್ರವಲ್ಲದೆ ಅವನ್ನು ಮಾರಲೂ ವ್ಯವಸ್ಥೆ ಇಲ್ಲದಿರುವುದು. ಪ್ರತಿ ಜಿಲ್ಲೆಯಲ್ಲಿಯೊಂದು ಪ್ರದರ್ಶನ ಮದ್ರಾಸು ನಗರದಲ್ಲಿ ಇಡೀ ಆಧಿಪತ್ಯದೊಂದು ಪ್ರದರ್ಶನ ಇದ್ದರೆ ಇದಕ್ಕೆಲ್ಲ ಅನುಕೂಲತೆ ಉಂಟಾದೀತು. ವಸ್ತುಗಳನ್ನು ಸರ್ವರಿಗೂ ಅನುಭವಕ್ಕೆ ಬರುವಂತೆ ಪ್ರದರ್ಶಿಸಿ, ಅದಕ್ಕೆ ಗಿರಾಕಿಗಳೂ ದೊರೆವಂತೆ ಮಾಡಬಹುದು.

ಪ್ರತಿ ಹಳ್ಳಿಯಲ್ಲಾಗುವ ಪ್ರತಿಯೊಂದು ಕೈಗಾರಿಕೆ ಜಿಲ್ಲಾ ಪ್ರದರ್ಶನಾಲಯಗಳಲ್ಲಿ ಸ್ಥಾನವಿರಲೇ ಬೇಕು. ಹೀಗಾದರೆ, ತಯಾರಿಸುವವನೂ ಗಿರಾಕಿ ವ್ಯಾಪಾರಿಗಳೂ ಒಬ್ಬರನ್ನೊಬ್ಬರು ಪರಿಚಯಮಾಡಿಕೊಂಡ, ದಲಾಲರ ಮಧ್ಯವರ್ತಿ ಕಷ್ಟಗಳ ನಷ್ಟಗಳ ಆಸ್ಪದೆಯಿಲ್ಲದಂತಾಗಿ, ಕೈಗಾರಿಕೆಗ[illegible] ಹಣ [illegible] ಸ್ಪದವಿದೆ.

[illegible] ಇದಕ್ಕೆಂದು [illegible] ಇನ್ನೆಷ್ಟೋ ಜಿಲೆಗಳಲಿ ಈ [illegible] ಇಂಥ ಪ್ರದರ್ಶನಾಲಯಗಳು [illegible]

[illegible] ಇಡೀ ಭಾರತವರ್ಷದೊಂದ [illegible] ಪ್ರದರ್ಶನಾಲಯವಾಗಬೇಕಾಗಿ [illegible] ಸರಕಾರಗಳಿಗೆ [illegible] ಅಖಿಲ ಭಾರತದ ಗ್ರಾಮ ಕೈಗಾರಿಕೆಗಳ ಪ್ರದರ್ಶನಾಲಯ ತೆರೆಯಲಾದೀತು.

ಕೈಗಾರಿಕೆಗಳ ವಿಧಾನವನ್ನು ಈ ಮಂದಿರಗಳಲ್ಲಿ ಪ್ರದರ್ಶಿಸಬೇಕ 35 ಕೋಟಿಗೆ ಅನ್ನ ಸಂಗ್ರಹವಾಗುವ ವಿಧಾನವಿದು.

ಕೊಂಗ್ರೆಸ್ ಪಕ್ಷದವರಿಗೆ

★

ಮಹಾತ್ಮಾಜಿಯವರ ಹಿತಸೂಚನೆಗಳು ಕೆಳಗಿನವುಗಳು ಹಿಂಸೆ ಮತ್ತು ಧೂರ್ತತನದ ಉದಾಹರಣೆಗಳು

(೧) ಮಜೂರರು ತಮ್ಮ ಕೆಲಸಕ್ಕೆ ಹೋಗುವಾಗ ಅವರನ್ನು ತಡೆಕಟ್ಟುವಂತೆ ಎದುರಾಗಿ ಸಾಲು ಕಟ್ಟಿ ನಿಲ್ಲುವುದು,

(೨) ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರ ಮಂಜೂರಾತಿಗೆ ಒಳಪಟ್ಟಿರುವ ಕೊಂಗ್ರೆಸ್ ಕಚೇರಿಯನ್ನು ಕೊಂಗ್ರೆಸ್ ಸದಸ್ಯರೇ ವಶಮಾಡಿಕೊಳ್ಳುವುದು,

(೩) ಸಭಾದಿಗಳನ್ನು ಗುಲ್ಲೆಬ್ಬಿಸಿ ಮತ್ತಿತರ ರೀತಿಯಲ್ಲಿ ಗದಿಬಿಡಿಯೆಬ್ಬಿಸಿ ಮುರಿದು ಹಾಕುವುದು,

(೪) ಧನಿಯಾ ಭಾಂಡವಳಿಕರನ್ನು ಎಲ್ಲಾ ಒಂದೇ ತರಗತಿಯವರೆಂದು ಆಕ್ಷೇಪಿಸಿ ಜರೆದು, ಜನರು ಅವರನ್ನು ಸುಲಿಗೆಮಾಡುವಂತೆ ಪ್ರೇರೇಪಿಸುವುದು

(೫) ಇಂಥ ವರ್ತನೆಯು ಹೆಚ್ಚಾಗಿ ಕೂಲಿ [illegible] ಕಾಲದಲ್ಲಿ ಒಹಳ [illegible] ನಡೆದೇ ಹೋಗಿದೆ. ಇಂಥ ಹಿಂಸೆಯನ್ನು [illegible] ಇದು ಇಡೀ ಕೊಂಗ್ರೆಸ್ ಸಂಸ್ಥೆಗೇ ಒಂದು ಕಳಂಕವಾಗಿ [illegible] ಅದನ್ನು [illegible]

[illegible] ಕಾಲದ [illegible] ಗಟ್ಟ [illegible] ಎದುರಲ್ಲಿ [illegible] ಇವರಿಂದ ಇತರರಿಗೆ [illegible] ಇತರರಿಂದ [illegible] ಧಾರಕರಿಂದಲೂ [illegible] ಮಾಡಿಕೊಳ್ಳ [illegible] ಆದನ್ನು [illegible] ಪಿಕೆಟಿಂಗ್ ಎನ್ನಲಾಗದು [illegible] ಕೆಲಸಗಾರರು ತಮ್ಮ ಕೆಲಸಕ್ಕೆ ಹೋಗ[illegible] ಅಡ್ಡಕಟ್ಟುವುದು [illegible] ಹಿಂಸೆ. ಇದನ್ನು ತ್ಯಜಿಸಲೇ ಬೇಕು.

ಇಂದ ಸಂದರ್ಭಗಳಲ್ಲಿ [illegible] ಪೋಲೀಸರನ್ನು ಕರೆದರೆ, ಅದೂ ನ್ಯಾಯವೇ ಎನ್ನಬೇಕಾಗಿದೆ. ಕೊಂಗ್ರೆಸ್ ಸರಕಾರವು ಇಂದ ಸಂದರ್ಭಗಳಲ್ಲಿ [illegible] ಅಲ್ಲಿನ ಕೊಂಗ್ರೆಸ್ ಸಮಿತಿಯು ತಡೆಯದಿದ್ದಲ್ಲಿ, ಪೋಲೀಸರನ್ನು ಕಳುಹಲೇ ಬೇಕಾಗುತ್ತದೆ

(೬) ಇದು ಶುದ್ಧ ಪುಂಡಾಟಿಕೆ.

೩ ಮತ್ತು ೪ ಹಿಂಸೆಯೆ, ಅಕ್ರಮದ ಪರಮಾವಧಿ. ದುರ್ವರ್ತನ ಭಾಂಡವಳಿಕರಿಗೆ ಹಿಂದಣ ಸರಕಾರಗಳು ನ್ಯಾಯ ಸಲ್ಲಿಸುತ್ತಿದ್ದರೆಂದೂ, ಈಗ ಕೊಂಗ್ರೆಸ್ ಸರಕಾರಗಳು ಇವರಿಗೆ ನ್ಯಾಯ ಸಲ್ಲಿಸುವುದಿಲ್ಲ ಮಾತ್ರವಲ್ಲದೆ ತುಚ್ಛೀಕರಿಸಿ ಹೀನರನ್ನಾಗಿ ನೋಡುತ್ತಿದ್ದಾರೆಂದೂ ನನಗೆ ದೂರು ತಲುಪಿದೆ.

ಬ್ರಿಟಿಷ ಕ್ರಮದಲ್ಲಿ ಭಾಂಡವಳಿಕರನ್ನು ಪಕ್ಷಪಾತ ದೃಷ್ಟಿಯಿಂದ ನೋಡುವುದು ಅವಶ್ಯಕ. ಬಡಕೋಟಿಯ ಸಂರಕ್ಷಣೆ ನೋಡತಕ್ಕದಾದ ಕೊಂಗ್ರೆಸು ಭಾಂಡವಳಿಕರನ್ನು ತಿರಸ್ಕಾರ ದೃಷ್ಟಿಯಿಂದ ನೋಡುವುದ ಹಾಗೆಂದು, ಅಹಿಂಸಾ ವ್ರತವುಳ್ಳ ಕೊಂಗ್ರೆಸು ಭಾಂಡವಳಿಕರ ಸ್ಥಾನವನ್ನು ಆಕ್ರಮಿಸುವುದೆ? ಯಾರನ್ನಾದರೂ ಹಿಂಸಿಸುವುದೆ? ಕಾನೂನ ಬೇರೆ ಇದೆ, [illegible] ಪ್ರತಿಯೊಬ್ಬ ಸದಸ್ಯನು ಹೇಳುವಂತೆ [illegible]

[illegible] ಪಿಕೆಟಿಂಗ್ [illegible] ಕೊಂಗ್ರೆಸು [illegible]

[illegible] ಕೊಂಗ್ರೆಸ್ ಕಮಿಟಿಗಳು [illegible]

ಅಹಿಂಸ [illegible] ಕೊಂಗ್ರೆಸಿನ [illegible]

ಅಹಿಂಸೆ ಮತ್ತು ಸತ್ಯ [illegible] ಹಿಂಸೆ ಮತ್ತು ಅಸತ್ಯಗಳನ್ನು [illegible] ಕೊಂಗ್ರೆಸ ಎಂದು [illegible]

ಶಿಶುವಿನ ಆರೋಗ್ಯವೆ ಹೆತ್ತವರ ಸಂಪತ್ತು.

ನಮ್ಮ ಈ ನಿರ್ಭಾಗ್ಯ ದೇಶದಲ್ಲಿ ಶಿಶು ಮರಣವು ಒಂದು ಮಹಾ ಶಾಪವಾಗಿರುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಸಾಂಪತ್ತಿಕ ತರಹ ಅನೇಕ ಕಾರಣಗಳಿವೆ

ಶಿಶುಗಳ ಪೀಡೆಗಳಲ್ಲಿ, ಯಕೃತ್ತು ಸಂಬಂಧ [illegible] ಬಲಿಯಾಗುವ ಶಿಶುಗಳ ಸಂಖ್ಯೆಯು ಹೆಚ್ಚು. ಕೆಸರಿನ ಬಣ್ಣ ಮಲ, ಅಜೀರ್ಣ, ಹಸಿವೆಯಿಲ್ಲದಿರುವಿಕೆ, ಮಗು ಕರ್ಕಶವಾಗಿರುವುದು, ಮಲಬದ್ಧತೆ, ಜಾಡಣೆ, ಹೊಟ್ಟೆ ಉಬ್ಬುವಿಕೆ ಇವುಗಳೆಲ್ಲಾ ಈ ಪೀಡೆಯಲ್ಲಿ ಕಾಣಿಸಿಕೊಳ್ಳುವ ಚಿಹ್ನೆಗಳು. ವಿಪರೀತ ಅವಸ್ಥೆಗೆ ತೆರಳಿದ ಪೀಡೆಗಳಲ್ಲಿ, ಯಾವಾಗಲೂ ಹಳದಿ ಬಣ್ಣದ ಮೂತ್ರ, ಹಳದಿ ಬಣ್ಣದ ಕಣ್ಣುಗಳು, ಕೈಕಾಲು ಬಾತುವಿಕೆ, ಹೊಟ್ಟೆಯ ಮೇಲೆ ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆ ದೊಡ್ಡದಾಗಿರುವುದು, ಇವುಗಳು ಚಿಹ್ನೆಗಳು

ನಿಮಗೆ ಸಂದೇಹಗಳಿರುವುದಾದರೆ, ಯಕೃತ ಪ್ರವೀಣರಾದ ಜಮ್ಮಿ ವೆಂಕಟ್ರಮಣಯ್ಯರವರನ್ನು ವಿಚಾರಿಸಿರಿ. ಅವರ ಅನುಭವಶಾಲಿ ಬೋಧನೆಯನ್ನು ಪಡೆದು ವರ್ತಿಸುವವರಾಗಿರಿ.

‘ಲಿವರ್ ಕ್ಯೂರ್’ನ್ನೇ ಉಪಯೋಗಿಸಿರಿ—ಯಕೃತ್ತು ಮತ್ತು ಪ್ಲೀಹ ಸಂಬಂಧ ಎಲ್ಲಾ ಪೀಡೆಗಳಿಗೆ ಅದೊಂದು ಖಾತ್ರಿ ಮತ್ತು ದಿವ್ಯವಾದ ಔಷಧಿ ಎಂದು ಸರ್ವವಿಧಿತವಾಗಿರುವುದು

ಹೆಚ್ಚಿನ ವಿವರಗಳಿಗೆ—

ಡಾ॥ ಜಮ್ಮಿ ವೆಂಕಟ್ರಮಣಯ್ಯ
ಯಕೃತ್ತು ಮತ್ತು ಪ್ಲೀಹ ಸ್ಪೆಶಲಿಷ್ಟರು,
ಮೈಲಾಪುರ, ಮದರಾಸು

ಸ್ಪೈಯಿನ್‌ನಲ್ಲಿ ಮತ್ತು ಪೋರ್ಚುಗಲ್‌ನಲ್ಲಿ ಜರ್ಮನರ ಗುರಿ

ಸ್ಪೈನಿನಲ್ಲಿ ನಡೆಯುತ್ತಿರುವ ಯುದ್ಧವು [illegible] ಗೆ ಯುದ್ಧ ಪದ್ಧತಿಯನ್ನು ಕಲಿಯಲು ಅನುಕೂಲವಾಗಿರುವುದಲ್ಲದೆ, ರಾಜನೀತಿಯ ದೃಷ್ಟಿಯಲ್ಲೂ ಅದು ಹಿತಕರವೇ ಆಗಿರುವುದು, ಎಂಬುದಾಗಿ ಜರ್ಮನರು ಅಭಿಪ್ರಾಯಪಡುತ್ತಿರುವರು. ಈ ವಿಷಯವು ಜರ್ಮನರ ಅದ್ವೊಂದು ಪ್ರಾಮುಖ್ಯವಾದ ಪತ್ರದಿಂದ ತಿಳಿದುಬರುತ್ತದೆ. ಆ ಪತ್ರದ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತದೆ.

ಶತ್ರುಗಳ ವ್ಯಾಪಾರ ಮಾರ್ಗಗಳನ್ನೂ, ಜಲಮಾರ್ಗಗಳನ್ನೂ ಯುದ್ಧವು ಪ್ರಾರಂಭವಾಗುವ ಮೊದಲೆ ಸ್ವಾಧೀನಪಡಿಸಿಕೊಳ್ಳಬೇಕಾದರೆ ಮೊದಲಿಂದಲೂ ಕ್ರಮವಾಗಿ ಬಹಳ ಜಾಗ್ರತೆಯಿಂದ ಸಿದ್ಧತೆಗಳನ್ನು ಮಾಡುತ್ತ ಬರಬೇಕು. ಏಶಿಯದ ಮತ್ತು ಆಫ್ರಿಕದ ಕರಾವಳಿ ಪ್ರದೇಶಗಳೂ ಮೆಡಿಟರೇನಿಯನಿನ ತಪ್ಪಲು ಪ್ರದೇಶಗಳೂ ಕೂಡಿ ಯುದ್ಧದ ಸಮಯದಲ್ಲಿ ಬಹಳ ಪ್ರಯೋಜನಕ್ಕೆ ಬೀಳುವ ಸ್ಥಳಗಳಾಗಿವೆ. ಸ್ಪೈನಿನಲ್ಲಿ ನಮ್ಮ ಸ್ಥಾನದಿಂದಾಗಿ ಆ ಪ್ರಯೋಜನಕಾರಿ ಸ್ಥಳಗಳಲ್ಲಿ ಅತಿ ಪ್ರಾಮುಖ್ಯವಾದಲ್ಲಿ ನಾವು ಅನುಕೂಲ ಸ್ಥಾನದಲ್ಲಿ ಇರುವೆವು.

ಇಂಗ್ಲೆಂಡು ಮತ್ತು ಫ್ರಾನ್ಸಿನ ಅಗತ್ಯದ ಮಾರ್ಗವು, ಅಂದರೆ ಮೆಡಿಟರೇನಿಯನ್ ಹಾದಿಯು, ಬಹಳ ಸಂಶಯಕ್ಕೆ ಕಾರಣವಾಗಿದೆ ಯೆಂಬುದನ್ನು ಎಲ್ಲರೂ ಗಮನಿಸತಕ್ಕದು. ಮೆಡಿಟರೇನಿಯನಿನ ಬಾಗಿಲು ಪ್ರದೇಶಗಳಲ್ಲಿ, ಯುದ್ಧದ ಸಮಯದಲ್ಲಿ ಅತ್ಯಗತ್ಯವಾದ ಸ್ಥಳಗಳು ಬ್ರಿಟನಿನ ಸ್ವಾಧೀನವಿವೆ ಎಂಬುದು ನಿಜ. ಜಿಬ್ರಾಲ್ಟರ್, ಮಾಲ್ಟಾ, ಪೋರ್ಟಸೆಡ್, ಎಲೆಗ್ಜಾಂಡ್ರಿಯಾ ಬಂದರು, ಸೈಪ್ರಸ ಮತ್ತು ಕೆಂಪು ಸಮುದ್ರದಿಂದ ಹಿಂದೂಸಾಗರಕ್ಕೆ ಹೋಗುವ ಗಡಿಯಲ್ಲಿರುವ ಏಡನ್ ಕೋಟೆ ಇವೆಲ್ಲವೂ ಬ್ರಿಟಿಷರ ವಶದಲ್ಲಿವೆ. ಆದರೆ ತನ್ನ ನೌಕಾ ಮತ್ತು ವಿಮಾನ ನಿಲ್ದಾಣಗಳಲ್ಲಿ ಇಟಲಿಯು ಇಂದು ಇಂಗ್ಲೆಂಡಿಗಿಂತ ಮಿಗಿಲಾಗಿದೆ. ಯುದ್ಧ ಸಂಭವಿಸಿದರೆ ಜಿಬ್ರಾಲ್ಟರ್ ಮತ್ತು ಪೋರ್ಟಸೆಡ್‌ಗಳೊಳಗೆ ನಡೆಯುತ್ತಿರುವ ಇಂಗ್ಲಿಷರ ಜಲವ್ಯಾಪಾರವನ್ನು ಇಟಲಿಯು ಬಂದು ಮಾಡಲು ಕೃತಕೃತ್ಯವಾಗದಿದ್ದರೂ ತಡೆಗಟ್ಟಬಹುದೆಂದು ದೃಢವಾಗಿ ನಂಬಬಹುದು.

ಶತ್ರುಗಳ ವಾಯು ಪಡೆಯು ಮೊದಲೇ ತುಂಬಾ ಕಮ್ಮಿ ಮಾಡಲ್ಪಡದಿದ್ದರೆ, ಸೇನೆಗಳನ್ನೂ ಸರಕುಗಳನ್ನೂ ಮೆಡಿಟರೇನಿಯನಿನ ಮುಖಾಂತರ ಸಾಗಿಸುವುದು ಸರ್ವ ಸಾಧಾರಣವಾಗಿ ಆಗದ ಮಾತೆಂದೇ ಊಹಿಸಬಹುದಾಗಿದೆ. ಮೆಡಿಟರೇನಿಯನಿನ ಏಕಾಧಿಪತ್ಯವನ್ನು ಬ್ರಿಟನು ಖಂಡಿತವಾಗಿಯೂ ಕಳಕೊಂಡಿರುವುದು. ಆ ಸಾಗರವು ಸಾರ್ವಜನಿಕವಾಗಿದೆ. ಅದರ ಆಧಿಪತ್ಯಕ್ಕಾಗಿ ಕಾದಾಟವು ನಡೆಯುತ್ತಿದೆ. ಇಂದು ಅದರಲ್ಲಿ ಯಾರ ನಾವೆಗಳಾದರೂ ನಿರಪಾಯವಾಗಿ ತೇಲಿಕೊಂಡು ಹೋಗಬಲ್ಲವೆಂದು ಹೇಳಲಾಗುವುದಿಲ್ಲ.

ಸ್ಪೈನ್, ಬರ್ಲಿನ್–ರೋಮ್ ಅಕ್ಷ, ಇವೆರಡು ಮೆಡಿಟರೇನಿಯನಿನ ಆಧಿಪತ್ಯಕ್ಕಾಗಿ ನಡೆಯುತ್ತಿರುವ ಯುದ್ಧದಲ್ಲಿ ಭಾಗವಹಿಸಲು ನಮಗೆ ಆಸ್ಪದವನ್ನು ಒದಗಿಸಿಕೊಟ್ಟಿವು. ನಮಗೆ ಹಿತಕರವಾದ ಹಾದಿಯಲ್ಲೇ ನಾವು ಮುಂದರಿಯುತ್ತಿದ್ದೇವೆ. ಅಲ್ಜೀಸಿರಾಸಿನ ಸಮೀಪದಲ್ಲೂ ಜಿಬ್ರಾಲ್ಟರಿನ ಇದಿರಾಗಿ ಆಫ್ರಿಕದ ಕರಾವಳಿಯಲ್ಲೂ ದೂರ ಗುರಿಯಿಡಬಲ್ಲ ಫಿರಂಗಿಗಳನ್ನು ಏರಿಸಲು ಜನರಲ್ ಫ್ರಾಂಕೋವಿಗೆ ನಾವು ಮಾಡಿದ ಸಹಾಯವನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಯುದ್ಧದ ಸಮಯದಲ್ಲಿ ಇಂಗ್ಲಿಷರೊಳಗೂ ಫ್ರೆಂಚರೊಳಗೂ ನಡೆಯುತ್ತಿರುವ ವ್ಯಾಪಾರವನ್ನು ಕಡಿದು ಹಾಕಲು ಇದು ನಮಗೆ ತುಂಬಾ ಸಹಾಯಕವಾಗದಿರದು.

ಮೆಡಿಟರೇನಿಯನಿನ ಕರಾವಳಿಯಿಂದಾಗಿ ಫ್ರಾನ್ಸಿಗೆ ತುಂಬಾ ಪ್ರಯೋಜನವಿರುವುದು. ಸಾರ್ಡಿನಿಯಾ ಮತ್ತು ಬೆಲೆರಿಕ್ ದ್ವೀಪಗಳು ಶತ್ರುಗಳ ಕೈಯಲ್ಲಿರುವುದರಿಂದ ಆಫ್ರಿಕಾಖಂಡದೊಡನೆ ಫ್ರಾನ್ಸು ನಡೆಸುತ್ತಿರುವ ವ್ಯಾಪಾರವನ್ನು ಅಪಾಯಕ್ಕೊಳಪಡಿಸಬಹುದಾಗಿದೆ. ಯುದ್ಧವುಂಟಾದರೆ ಆಫ್ರಿಕದಿಂದ ಸೈನ್ಯವನ್ನು ಸಾಗಿಸಲು ಫ್ರಾನ್ಸು ಎಟ್ಲಲಾಂಟಿಕ್ ದಾರಿಯನ್ನೇ ಉಪಯೋಗಿಸಬೇಕಾದೀತು. ಅಲ್ಲಿ ಯುರ್‍ಸ ಮಾರ್ಸೆಯಲ್ಸ ದಾರಿಗಿಂತ ಈ ದಾರಿಯು ನಾಲ್ಕೈದು ಪಾಲುಗಳಿಗೆ ದೊಡ್ಡದಾದುದರಿಂದ, ಇದರಿಂದುಂಟಾಗುವ ವಿಳಂಬವು ಯುದ್ಧದ ಸಮಯದಲ್ಲಿ ತಮಗೆ ತುಂಬಾ ಪ್ರಯೋಜನಕಾರಿಯಾಗದಿರದು.

ಈ ತನಕ ಸುರಕ್ಷಿತವಾಗಿದ್ದ ಫ್ರಾನ್ಸಿನ ಸ್ಪೈಯಕ್ಕೆ ಭಾಗವನ್ನು, ನಾವೀಗ ಸ್ಪೈನಿನ ಉತ್ತರ ಗಡಿಯಲ್ಲಿ ತಯಾರಿಸುತ್ತಿರುವ ನಿಲ್ದಾಣಗಳ ಸಹಾಯದಿಂದ ಹಿಡಿದು ಆಕ್ರಮಿಸಬಹುದಾಗಿದೆ. ಸ್ಪೈನಿನಲ್ಲಿ ನಾವು ನಡೆಸುತ್ತಿರುವ ಚಟುವಟಿಕೆಗಳಲ್ಲಿ ಇದೂ ಒಂದು ಪ್ರಮುಖವಾಗಿದೆ. ಫ್ರಾನ್ಸಿಗೆ ಇದಿರಾಗಿ ಪಿರೆನಿಗಳಲ್ಲಿ ನಾವು ಇಟಲಿಯ ಮತ್ತು ಸ್ಪೆನಿಶ್ ನೇಶನಲಿಸ್ಟ್ ಪಕ್ಷದವರ ಸಹಾಯದಿಂದಾಗಿ ಫ್ರಾನ್ಸಿಗೆ ಇದಿರಾಗಿ ನಿಲ್ಲಬಲ್ಲೆವು.

ಈ ವಿಷಯವು ಇಂಗ್ಲೆಂಡಿನ ಗಮನಕ್ಕೆ ಬಂದಿರುವುದು. ಅದಕ್ಕಾಗಿ ಅವರು ಪ್ರತಿ ಕೆಲಸಗಳನ್ನು ನಡೆಸುತ್ತಿರುವರು. ಈ ಸಂಬಂಧದಿಂದಾಗಿ ಆಕೆಯ ಲಕ್ಷ್ಯವು ಪೋರ್ಚುಗಲ್ಲಿನತ್ತ ಹೊರಳಿರುವುದು.

ಪೋರ್ಚುಗಲ್ಲಿನಲ್ಲಿ 7,000000 ಜನಸಂಖ್ಯೆಯಿರುವುದು. ಸ್ಪೈನಿನ ದಿಕ್ಕಿನಲ್ಲಿ ಅದರ ಗಡಿಯು ಉದ್ದವು 600 ಮೈಲು. ಅದರ ಎಟಲಾಂಟಿಕ ಕರಾವಳಿ ಪ್ರದೇಶವು 500 ಮೈಲು. ಐಬೇರಿಯನ್ ಅರ್ಧ ದ್ವೀಪದಲ್ಲಿ ಈಗ ನಡೆಯುತ್ತಿರುವ ಯುದ್ಧದಲ್ಲಿ ಪೋರ್ಚುಗಲು ನಿರ್ಲಿಪ್ತವಾಗಿರಲು ಸಾಧ್ಯವಿಲ್ಲ. ಇಂಗ್ಲಾಂಡಿಗೂ, ಫ್ರಾನ್ಸಿಗೂ ಅದರ ಸ್ನೇಹವು ಅತ್ಯಗತ್ಯವಾಗಿರುವುದು. ಅದರಲ್ಲೂ ಮೆಡಿಟರೇನಿಯನ್ ಮಾರ್ಗವು ತಡೆಗಟ್ಟಲ್ಪಡೆ ಇದರ ಮಹತ್ವವು ಇನ್ನಷ್ಟು ಹೆಚ್ಚುವುದು.

ಎಟಲಾಂಟಿಕ್ ಸಾಗರದ ಗಡಿಯಲ್ಲಿರುವ ಕಾರಣ, ಯುದ್ಧವು ಸಂಭವಿಸಿದಾಗ ಬಹಳ ಅನುಕೂಲ್ಯ ನೆಲೆಯು ಪೋರ್ಚುಗಲಿಗಿರುವುದು, ಆದುದರಿಂದ ಇಂಗ್ಲಾಂಡು ಪೋರ್ಚುಗಲಿನೊಡನೆ ಯಾವಾಗಲೂ ಮೈತ್ರಿಯಿಂದ ಇರಲು ಯತ್ನಿಸುತ್ತಿರುವುದು. ಪ್ರಾಮುಖ್ಯವಾದ ಜಲ ಮತ್ತು ವಾಯು ಮಾರ್ಗಗಳು ಪೋರ್ಚುಗಲಿನ ಕರಾವಳಿಯನ್ನು ಹಾದುಕೊಂಡು ಹೋಗುವುದರಿಂದ, ಅಲ್ಲಿಂದ ಅವುಗಳನ್ನು ರಕ್ಷಿಸಲೂ ಕೆಡಹಲೂ ಸಾಧ್ಯವಿದೆ. ಆಫ್ರಿಕಕ್ಕೆ ಹೋಗಬೇಕಾದರೆ ಪೋರ್ಚುಗಲು ಒಂದು ಸಂಕದಂತಿರುವುದು. ಆದುದರಿಂದ ಮೆಡಿಟರೇನಿಯನ್ ಕರಾವಳಿ ಪ್ರದೇಶಕ್ಕೂ ಅದಕ್ಕೂ ನಿಕಟ ಸಂಬಂಧವಿರುವುದು.

ಮೆಡಿಟರೇನಿಯನ್ ಸಾಗರವನ್ನು ಪ್ರವೇಶಿಸುವಲ್ಲಿರುವ ಮದೀರವು ಕಾವಲು ಮಾಡಲು ಅದ್ವೊಂದು ಆದರ್ಶ ಸ್ಥಳವಾಗಿರುವುದು. ಪಶ್ಚಿಮಾಭಿಮುಖವಾಗಿ ಸೀಳಿಕೊಂಡಿರುವ ಎಝೋರು ದ್ವೀಪಗಳು ಎಟ್ಲಾಂಟಿಕ ಸಾಗರದ ಮೇಲೆ ನಡೆಯುತ್ತಿರುವ ಅಂತರಾಷ್ಟ್ರೀಯ ವಾಯು ವ್ಯವಹಾರಗಳಲ್ಲಿ ಪ್ರಮುಖ ಭಾಗವನ್ನು ವಹಿಸಬಹುದಾಗಿದೆ. ಅವುಗಳನ್ನು ಉಪಯೋಗಿಸುವ ಹಕ್ಕು ಇದ್ದರೆ, ಯುದ್ಧದ ಹೊತ್ತಿನಲ್ಲಿ ಆಹಾರಾದಿ ಸಾಮಗ್ರಿಗಳನ್ನು ಒದಗಿಸಿ ಕೊಡಲು ಇಂಗ್ಲಾಂಡಿಗೆ ತುಂಬಾ ಸುಲಭವಾಗುತ್ತದೆ.

ಕೇಪ್ ವರ್ಡ ಮತ್ತು ಎಝೋರ ದ್ವೀಪಗಳು ದಕ್ಷಿಣಾಫ್ರಿಕಕ್ಕೆ ಹೋಗುವ ಜಲಮಾರ್ಗದಲ್ಲಿದೆ. ಈ ಮಾರ್ಗದ ದಕ್ಷಿಣಾರ್ಧ ಭಾಗವು ಪೋರ್ಚುಗೀಸು ಗಿನಿಯಾ, ಸಾಥೋಮ್, ಪ್ರಿನ್ಸ್‌ಟೌನ್ ಮತ್ತು ಅಂಗೋಲದ ಕರಾವಳಿ ಪ್ರದೇಶವನ್ನು ಹಾದುಕೊಂಡು ಹೋಗಬೇಕಾಗಿದೆ.

ಈ ಸ್ಥಳಗಳೆಲ್ಲಾ ವೈರಿಗಳ ಕೈವಶವಾದರೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಗಂಡಾಂತರವು ಬಂದೊದಗಿದಂತೆಯೇ ಸರಿ. ಮೆಡಿಟರೇನಿಯನಿನ ಪರಿವರ್ತಿತ ಪರಿಸ್ಥಿತಿಯಿಂದಾಗಿ ಬ್ರಿಟನಿಗೆ ಪೋರ್ಚುಗಲಿನ ಸ್ನೇಹವು ಅತ್ಯಾವಶ್ಯಕವೆಂಬುದನ್ನು ಇದು ವಿಶದೀಕರಿಸುತ್ತದೆ.

ಇಂಗ್ಲಾಂಡು ಯಾವಾಗಲೂ ಪೋರ್ಚುಗಲಿನೊಡನೆ ಮೈತ್ರಿಭಾವದಿಂದಿರಲು ಇದೇ ಕಾರಣ. ಇತ್ತೀಚೆಗೆ ಪೋರ್ಚುಗಲನ್ನು ಸಂದರ್ಶಿಸಿದ ಬ್ರಿಟಿಷ ಮಿಲಿಟರಿ ರಾಯಭಾರಿ ಮಂಡಲದವರು ಈ ಸ್ನೇಹವನ್ನು ಬಲಪಡಿಸುವುದಕ್ಕಾಗಿಯೇ ಅಲ್ಲಿಗೆ ಹೋದುದಾಗಿರುತ್ತದೆ.

ಯುದ್ಧ ಸಂಭವಿಸಿದರೆ ಇಂಗ್ಲೆಂಡು ಆ ಮಾರ್ಗವನ್ನು ಉಪಯೋಗಿಸಬೇಕಾದಲ್ಲಿ, ಅದನ್ನು ಪೋರ್ಚುಗಲಿನ ಪ್ರದೇಶಗಳಿಂದ ಸಂರಕ್ಷಿಸಬಹುದೆಂಬುದೊಂದೇ ಬ್ರಿಟಿಷರ ಮತ್ತು ಪೋರ್ತುಗೀಸರ ಮೈತ್ರಿಗೆ ಕಾರಣವಲ್ಲ. ಜಿಬ್ರಾಲ್ಟರ್ ಮತ್ತು ಪೋರ್ಟಸೆಡ್ ರೇವುಗಳನ್ನು ಮುತ್ತಿದರೆ ಸಂರಕ್ಷಣಾರ್ಥವಾಗಿ ಪೋರ್ಚುಗಲು ಇಂಗ್ಲಾಂಡಿಗೆ ಆವಶ್ಯಕವಾಗಿದೆ.

ಪೋರ್ಚುಗಲಿನ ಒತ್ತಾಸೆಯಿಲ್ಲದೆ ಜಿಬ್ರಾಲ್ಟರನ್ನು ವಶದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಜಿಬ್ರಾಲ್ಟರನ್ನು ಮುತ್ತಿದರೆ, ತಮ್ಮ ವಿಮಾನಗಳನ್ನು ಇಳಿಸಲೂ, ಹಡಗುಗಳು ಮೆಡಿಟರೇನಿಯನಲ್ಲಿ ಲಂಗರು ಹಾಕಲು ಬ್ರಿಟನಿಗೆ ವಿಶಾಲ ಸ್ಥಳಗಳು ಬೇಕಾಗುವುವು.

ಈ ವಿಷಯದಲ್ಲಿ ಜಿಬ್ರಾಲ್ಟರ್ ಮತ್ತು ಮಾಲ್ಟಾ ಬಂದರುಗಳು ಬಹಳ ಇಕ್ಕಟ್ಟಾಗಿದೆ ಪರಂತು. ಪೋರ್ಚುಗಲಿನ ದಕ್ಷಿಣ ಕರಾವಳಿಯಲ್ಲಿ ಇಂಗ್ಲಾಂಡಿಗೊಂದು ವಾಯು ನಿಲ್ದಾಣವಿದ್ದರೆ ಬಹಳ ಉಪಕಾರಿಯಾಗುವುದು. ಈ ತಯಾರಿಗಳೆಲ್ಲಾ ಭರದಿಂದ ಸಾಗುತ್ತಿರುವುದರಿಂದ, ಕ್ಲುಪ್ತ ಕಾಲದಲ್ಲಿ ನಾವೂ ಪ್ರತಿ ಸಿದ್ಧತೆಗಳನ್ನು ಮಾಡಲೇ ಬೇಕು. ಅರ್ಥಾತ ಪೋರ್ಚುಗಲನ್ನು ನಾವು ನಮ್ಮ ಪಕ್ಷಪಾತಿಯನ್ನಾಗಿ ಮಾಡಿಕೊಳ್ಳಬೇಕು. ಆಂಗ್ಲೇಯರು ಫ್ರೆಂಚರೂ ಆಡುತ್ತಿರುವ ಈ ಚದುರಂಗಾಟದ ಆಳಿನಂತೆ ಉಪಯೋಗಿಸಲ್ಪಡುತ್ತಿರುವ ಪೋರ್ಚುಗಲಿನ ಪರಿಸ್ಥಿತಿಯನ್ನು ನಾವು ಸುಧಾರಿಸಬೇಕಾಗಿದೆ. ಕಾರಣ, ಇದರಿಂದ ನಮಗೆ ನೇಶನಲಿಸ್ಟ್ ಸ್ಪೈನಿಗೂ ಹಾನಿಯಿರುವುದು.

ಸಾಂಕೋವಿನತ್ತ ಪೋರ್ಚುಗಲಿನವರು ತೋರುತ್ತಿರುವ ಸೌಹಾರ್ದವು ನಮಗೆ ಹಿತಕ್ಕಾಗಿಯೇ ಇರುವುದು. ಸ್ಪೈನಿನಲ್ಲಿ ನಡೆಯುತ್ತಿರುವ ಯುದ್ಧವನ್ನು ಪೋರ್ಚುಗಲಿನವರು ಬಹಳ ಆಸಕ್ತಿಯಿಂದ ನೋಡುತ್ತಿರುವರು. ಎರಡು ಐಬೇರಿಯನ್ ಜನಾಂಗಗಳು ಒಂದಾಗಿ ಒಂದು ಫೆಡರೇಶನನ್ನು ಸ್ಥಾಪಿಸುವ ಶುಭಚಿಹ್ನೆಗಳು ಎಂದಿಗಿಂತಲೂ ಇಂದು ತುಂಬಾ ಕಾಣುತ್ತಿವೆ.

ನಾವು ಸೇನೊರ್ ಸಲಾಜರರ ಮೈತ್ರಿಯನ್ನು ಸಂಪಾದಿಸುವುದರಲ್ಲಿ ಜಯಶೀಲರಾಗಬಹುದು. ಪೋರ್ಚುಗೀಸರ ಸ್ವಭಾವದಲ್ಲಿ ಐಬೇರಿಯನ್ ಜನಾಂಗಗಳನ್ನು ಒಂದುಮಾಡಬೇಕು, ಇಂಗ್ಲೀಷರನ್ನು ವಿರೋಧಿಸಬೇಕೆಂಬ ಭಾವನೆಯು ದಿನೇ ದಿನೇ ಬೆಳೆಯುತ್ತಿರುವುದರಿಂದ ಅವರನ್ನೂ ನಮಗೆ ಅನುಕೂಲವಾಗಿಯೆ ಮಾಡಿಕೊಳ್ಳಬಹುದು. ಮಾತ್ರವಲ್ಲ ಜನರಲ್ ಫ್ರಾಂಕೋರವರಿಗೆ ಜಯವಾದರೆ ನಾವು ನಮ್ಮ ಗುರಿಯನ್ನು ಸೇರಲು ಇನ್ನಷ್ಟು ಉತ್ತಮವಾಯಿತು.

ಸ್ಪೈನಿನಲ್ಲಿ ಜಯಪ್ರದವಾದ ಬಳಿಕ ಜನರಲ್ ಫ್ರಾಂಕೋವಿನ ಕೈಕೆಳಗಿರುವ ಸೈನ್ಯವು ಅಗತ್ಯಬಿದ್ದರೆ ನಾವು ಉಪಯೋಗಿಸಿಕೊಳ್ಳಬಹುದಾಗಿದೆ. ನೇಶನಲಿಸ್ಟ್ ಸ್ಪೈನಿಗೆ ಅಲ್ಲಿ ತುಂಬಾ ಸಹಾಯವು ಇರುವುದರಿಂದ ಆ ಸೈನ್ಯವು, ನಮಗೆ ಬೇಕಾದಂತಹ ಆಡಳಿತವನ್ನು ಪೋರ್ಚುಗಲಿನಲ್ಲಿ ಸ್ಥಾಪಿಸಲು [illegible]ವಾಗಬಹುದು.

ನಮ್ಮ ಈ ಆಲೋಚನೆಗಳಿಗೆ ಪೋರ್ಚುಗಲು ಅಡ್ಡ ಬರಲಿಕ್ಕಿಲ್ಲ. ಬಂದರೂ ಅವರ ಸೈನ್ಯವು ಬಹಳ ಅಬಲವಾಗಿರುವುದು. ಒಟ್ಟು ಅವರ ಕೂಡೆ 140,000 ತರಬೇತಿಹೊಂದಿದ ಸೈನಿಕರಿರುವರು. ಜಲ ಸೈನ್ಯವನ್ನು ಪರಿಗಣಿಸಬೇಕಾದುದಿಲ್ಲ. ಪರಂತು ಈ ಸ್ಪೈನಿನ ನೇಶನಲಿಸ್ಟ್ ಚಳವಳವು ಪೋರ್ಚುಗಲಿನ ಗಡಿಯಲ್ಲೇ ಸಮಾಪ್ತವಾಗುವುದೆಂದು ಎಂದೂ ಊಹಿಸಲು ಎಡೆಯೇ ಇಲ್ಲ.

ಆದುದರಿಂದ ಆ ಎಲ್ಲಾ ಸ್ಥಳಗಳನ್ನು ವಶಪಡಿಸಿಕೊಳ್ಳಬೇಕಾದರೆ ನಾವು ಫ್ರಾಂಕೋರಿಗೆ ಸಹಾಯಮಾಡುತ್ತಿರುವುದನ್ನು ಇನ್ನೂ ಬಲಪಡಿಸಿ, ಆತನಿಗೆ ಜಯವಾಗುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ.

FANCY SHIRTING

Snow white very soft decent and durable. 9 yds ×54" sufficent for 6 shirts. Price 5—8—0 Post free money refunded if unapproved Half dozen fancy handkerchiefs 22"×22" will be given to every purchaser

AGENTS WANTED EVERY WHERE ASK FOR FREE PARTICULARS

NATIONAL TRADING CO.,
LUDHIANA, A. 211.

ಚೀನಾ ಯುದ್ಧ

(ಅಮೇರಿಕದವರ ವಿಮರ್ಶೆ)

ಯುದ್ಧವೆಂದು ಡಂಗುರ ಸಾರದೆಯೆ, ಚೀನದಲ್ಲಿ ಯುದ್ಧ ನಡೆಯುತ್ತ ಒಂದು ವರ್ಷ ಕಳೆಯಿತು. ಇವು ಹನ್ನೆರಡು ತಿಂಗಳಲ್ಲೂ, ಉಭಯ ರಾಜ್ಯಗಳ ಜನಗಳೂ ಪ್ರತಿನಿಧಿಗಳೂ ಅಮೇರಿಕದಲ್ಲಿ, ವಿಜಯವಾಗುವುದೆಂಬೇ ತಮ ತಮಗೆ ಬೆನ್ನು ತಟ್ಟಿಕೊಂಡರು. ಆದರೆ ಯುದ್ಧ ಮಾತ್ರ ಮುಗಿಯಲೂ ಇಲ್ಲ, ಜಯದ ಕುರುಹೂ ಇತ್ತಂಡಗಳಲ್ಲಿ ಒಬ್ಬರಿಗೂ ಸೂಚಿತವಾಗಿಲ್ಲ.

ಚೀನಿಯರಿಗೆ ಈ ವರ್ಷ ತುಂಬಾ ನಷ್ಟವೇ; ನಿರಂತರವಾದ ಅಪಜಯವೇ. ಚೀನೀಯ ಸಿಪಾಯರು ಅತಿ ಧೀರರೆಂದು ರುಜುಪಡಿಸಿರುವರು: ಆದರೆ ಅವರ ವಿರುದ್ಧವಾಗಿ ಹೋರಾಡಿದವರು ಸಾಗರಬಲರು. ಉತ್ತಮ ಶಿಕ್ಷಣ ಹೊಂದಿದ ಜಪಾನು ಸೇನೆಗಳು, ಯುದ್ಧಸರಂಜಾಮವು ಅತ್ಯುತ್ತಮವಾದ ಕಾರಣವೇ ಗೆದ್ದರು. ಚೀನದ ಅತಿ ಸಂಪನ್ನವಾದ ಪ್ರಾಂತ್ಯಗಳು ಜಪಾನಿಯರ ವಶವಾಗಿದೆ. ಹತ್ತು ಲಕ್ಷ ಚೀನಿಯರು ಮಡಿದಿರಬಹುದು.

1987ನೇ ಜುಲೈ 7ರಿಂದ ಜಪಾನು ಇಷ್ಟರಲ್ಲಿ, ಜರ್ಮನಿ ಫ್ರಾನ್ಸುಗಳೆರಡನ್ನೂ ಕೂಡಿಸಿದರೂ ಅದರ ದುಬಾರಿಯಾಗುವಷ್ಟು ವಿಸ್ತಾರವಾದ ಪ್ರಾಂತ್ಯವನ್ನು ಚೀನದಿಂದ ಗೆದ್ದುಕೊಂಡಿದೆ. ಫ್ರಾನ್ಸಿನಷ್ಟು ವಿಸ್ತಾರವಾದ ಭೂಭಾಗವನ್ನು ನೆಲಸಮಮಾಡಲಾಗಿದೆ. ಉಭಯ ರಾಜ್ಯಗಳೂ ಬಡವಾಗಿದೆ. 1914-1918ರಲ್ಲಾದ ಮಹಾಯುದ್ಧದಿಂದ ಆದ ಎಲ್ಲ ನಷ್ಟವು ಇದೊಂದೇ ವರ್ಷದಲ್ಲಿ ಈ ರಣರಂಗದಲ್ಲಿ ಉಂಟಾಗಿಯೇ ಇದೆ.

ಜಪಾನಿಯರಿಗೆ—ಎಣಿಸಿದೊಂದು ಆದುದೆಂಬಂತಾಗಿದೆ. ಬರೀ ಮಂತಾಟದಿಂದ ಪ್ರಾರಂಭವಾಗಿ ಅಲ್ಲಿಗಲ್ಲಿಗೇ ಮುಗಿವುದಾಗಿ ಜಪಾನಿಯರು ನಂಬಿದ ಈ ಹೋರಾಟವು ಈ ಜೀವ ಉಳಿಸಲು ಅಗತ್ಯವಾಗಿರುವ ಮಹಾಯುದ್ಧವಾಗಿದೆ. ಹಾಗೆಂದು ಚೀನಿಯರಿಗೂ ಇದು ಮುಗಿಯದೇ, ಎರಡೂ ರಾಜ್ಯಗಳು ಉಳಿಯುವ ಹಾಗಿಲ್ಲ. ಜಪಾನು ದಿನಕ್ಕೊಂದು ಜಯಲಾಭ ಪಡೆಯುತ್ತಿದ್ದರೂ ದಿದೇದಿನೇ ಬಡವಾಗುತ್ತ, ದುರ್ಬಲವಾಗುತ್ತ ಬರುತ್ತಿದೆ.

ಪ್ರಪಂಚದ ಬಡಜನಾಂಗಗಳಲ್ಲಿ ಒಂದೊಂದು ಜಪಾನನ್ನು ತಿಳಿದಿಷ್ಟರೂ, ಅಪಾರ ವಸ್ತುಗಳೇ ಮೊದಲಾದುವನ್ನು ಕೂಕ ಪ್ರಕಾರ ಹಂಚಿಹಾಕುತ್ತ, ಚೀನದಲ್ಲಿ ತನ್ನ ಸಹಾಸಕೃತಿಯನ್ನು ಜಪಾನು ನಡೆಸುತ್ತ ಬರುತ್ತದೆ. ಹದಿನೈದು ಮಿಲಿಯ ರೂಪಾಯಿ ಬೆಲೆಯ ಸಿಡಿಗುಂಡುಗಳನ್ನು ಪ್ರತಿದಿನವೂ ಜಪಾನು ಹೊಗೆರೂಪದಲ್ಲಿ ಉಡಾಯಿಸುತ್ತಲೇ ಇದೆ.

ಚೀನದಲ್ಲಾದ ಈ ಯುದ್ಧದ ಖರ್ಚಿನ (ಒಂದು ವರ್ಷದ) ಅಂದಾಜು ಎರಡು ಸಾವಿರ ಮಿಲಿಯ ಡೊಲ್ಲರು (6,000,000,000 ರೂ) ಎಂದು ಬಲ್ಲವರು ಹೇಳುವರು.

ಜಪಾನಿನ ಸಂಪತ್ತು ನೆತ್ತರಂತೆ ಪಸಿಹಾಯಾಗಿ ಸುಂದೇ ಹಾಳಾಗುತ್ತದೆ. ಕಳೆದ ಮೂರು ತಿಂಗಳುಗಳಿಂದ ಸರಕಾರವು ಹೊರಡಿಸಿದ ಪ್ರಕಟಣೆಗಳಿಂದ ಇದು ಸ್ಪಷ್ಟವಾಗಿ, ಈಗ ಕುಟ್ಟಿಯ ಕಾಲವಾಗಿದೆ. ಒಟ್ಟು ತೊಂಬತ್ತು ಮಿಲಿಯ ಪವನು ದಾಸ್ತಾನು ಇದ್ದುದರಲ್ಲಿ, 47 ಮಿಲಿಯವನ್ನು ಈಗ ಹೊರತೆಗೆಯುವರಾಗಿ ಸರಕಾರವು ತಿಳಿಸಿಯದೆ.

ಅತಿ ತ್ವರೆಯಾಗಿ ಸಂಪೂರ್ಣ ಜಯ ದೊರೆತರೆ ಮಾತ್ರ ಜಪಾನು ಉಳಿಯಬಹುದು; ಆದರೆ ಜಯವು ಅಷ್ಟುಬೇಗನೆ ದೊರೆಯಂತಿಲ್ಲ, ಮಾತ್ರವಲ್ಲ ಹಿಂದೆ ಎಣಿಸಿದುದಕ್ಕಿಂತ ಇನ್ನೂ ಇನ್ನೂ ದೂರವಾಗುತ್ತಲಿದೆ.

ಚೀನವು ಕಳೆದುಕೊಂಡುದು ಅಪಾರ; ಆದರೆ ಉಳಿದುದೂ ಅಪಾರ. ಇವೀ ರಾಜ್ಯದಲ್ಲಿ ನೋಡಿದರೂ ಸುವ್ಯವಸ್ಥಿತವಾಗಿ ಸಂಚಾರವಾಡುತ್ತಿರುವ ಸೇನೆಗಳಿವೆ. ಚೀನವು ಈಗ ಒಂದಾಗಿದೆ, ಪಕ್ಷಗಳಿಲ್ಲ. ಎಲ್ಲ ಭಾಗ ಎಲ್ಲ ಪಕ್ಷಗಳವರೂ ಒಂದಾಗಿ ಹೋರಾಡುತ್ತಾರೆ. ಒಳಕಲಹಗಳು ಮಾಯವಾಗಿವೆ.

ಎರಡನೆಯದಾಗಿ ಚೀನಕ್ಕೆ ಸ್ನೇಹ ಬಲ ಹೆಚ್ಚಿದೆ. ಹಿಂದೆ ಶಿಕ್ಷಿತಕೆಲವರು ಮಾತ್ರ ಜಪಾನಿಗೆ ವಿರುದ್ಧವಾಗಿದ್ದರು. ಜಪಾನು ಯುದ್ಧರಂಗದಲ್ಲಿ ಮಾಡಿದ ಅತ್ಯಾಚಾರದಿಂದ ಅತಿ ಹಿಂದುಳಿದ ರೈತನೂ ಈಗ ಜಪಾನೆಂದರೆ ರೋಷಗೊಂಡು ಉದ್ರೇಕ ಹೊಂದುತ್ತಾನೆ, ಪ್ರತಿಹಿಂಸೆ ಮಾಡಲು ಸಿದ್ಧನಾಗುತ್ತಾನೆ. ಜಪಾನಿಯರನ್ನು ಕಂಡಲ್ಲಿ ಹೊಡೆದಿಕ್ಕುವುದೇ ಚೀನದ ಶ್ರೇಯಸ್ಸಾಗಿ ಉಳಿದಿದೆ.

ಎರಡನೆಯ ವರ್ಷ ಮೂಡಿದರೆ, ಚೀನವು ಬಡವಾಗಿದೆ ನಿಜ ಆದರೂ ಬಲಗುಂದಿಲ್ಲವೆನ್ನಬಹುದು. ಬಹು ದೀರ್ಘ ಕಾಲದ ವರೆಗೆ ಕಾದಾಡಿಯೇ ಗೆದ್ದೆನೆನ್ನಬಹುದೆಂದು ಜಪಾನಿನ ಮೇಲೆ ಒತ್ತಾಯ ಮಾಡುವ ಬಲವು ಈಗ ಚೀನದಲ್ಲಿ ಉಂಟಾಗಿದೆ.

ಚೀನವು ಸಾಮಾನ್ಯವಾದ ಕಾದಾಟವೆಂಬುದನ್ನು ಪೌರಾಣಿಕ ಯುದ್ಧದಂತೆ ಮಾರ್ಪಡಿಸಿಕೊಂಡಿದೆ; ಇನ್ನೂ ಸೋತಿಲ್ಲ, ಸೋಲುವ ಹಾಗಿಲ.

ಪೆಲೆಸ್ತೀನವಿಚಾರದಲ್ಲಿ—
ಜರ್ಮನ್ ಗ್ರಂಥಕರ್ತರು; ಮುಸ್ಲಿಮ ಸಭೆ.

“ಇನ್ನೂ ಇನ್ನೂ ಸೈನ್ಯಗಳು! ಯೆಹೂದ್ಯರು ಅರಬರುಗಳೊಳಗೆ, ಬ್ರಿಟಿಷರು ಅರಬರುಗಳೊಳಗೆ ವೈಷಮ್ಯಕಡಮೆಯಾಗುತ್ತಿಲ್ಲ. ಅರಬರು ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ, ಬ್ರಿಟಿಷರು ಬಲಪ್ರದರ್ಶನದ ಮೂಲಕ ಅವರನ್ನು ಬಗ್ಗಿಸುತ್ತಾರೆ. ಬರ್ಲಿನಿನ ಇಸ್ಲಾಮಿಕ್ ಅಸೋಸಿಯೇಷನು— ಇದರಷ್ಟು ದೊಡ್ಡ ಮುಸ್ಲಿಮ ಸಂಘವು ಮಧ್ಯ ಯುರೋಪಿನಲ್ಲಿ ಮತ್ತೊಂದಿಲ್ಲ— ಬರ್ಲಿನಿನ ಹೋಟೇಲ್ ಕೈಸರ ಹೋಫ್‌ನಲ್ಲಿ ಮಹಾಸಭೆ ಕೂಡಿಸಿತು! ಇದರೊಡನೆ ಅರಬಸಂಘವು ಸೇರಿತು. ಪೆಲೆಸ್ತೀನದಲ್ಲಿ ಬ್ರಿಟನ್ನಿನ ಚರ್ಯೆಯನ್ನು ಕುರಿತೇ ಭಾಷಣಗಳೂ ವಿಮರ್ಶೆಗಳೂ ನಡೆದುವು. ಪೆಲೆಸ್ತೀನದ ಮಾರ್ಗವಾಗಿ ಇಂಡಿಯಕ್ಕೆ ಶಾಶ್ವತವಾದ ಹೆದ್ದಾರಿ ಮಾಡಿಕೊಳ್ಳುವುದಕ್ಕಾಗಿಯೇ ಬ್ರಿಟನ್ನು ಹೀಗೆ ವರ್ತಿಸುವುದಾಗಿಯೂ ನಿರ್ಧಾರವಾಗಿದೆ. ಇಂಡಿಯಕ್ಕಾಗಿ ಇಷ್ಟೆಲ್ಲ ರಗಳೆ. “ಇಂಗ್ಲೆಂಡು, ಯೆಹೂದ್ಯರು, ಅರಬರು” ಎಂಬೊಂದು ಜರ್ಮನ್ ಗ್ರಂಥವು ಪ್ರಕಟವಾಗಿದೆ. ಈ ಗ್ರಂಥದಲ್ಲಿ ಎಲ್ಲ ವಾಕ್ಯಗಳಿಗೂ ಸರಕಾರೀ ರಿಕಾರ್ಡಿನಿಂದಲೇ ಆಧಾರಗಳನ್ನು ಕೊಟ್ಟಿರುವ ಕಾರಣ ಇದನ್ನೇನೂ ಅಲ್ಲಗಳೆಯುವ ಹಾಗಿಲ್ಲ. ಅರಬರಿಗೆ ಕೊಟ್ಟಿರುವ ಬ್ರಿಟಿಷ ವಾಗ್ದಾನಗಳು ಅಪಾರ; ಅವನ್ನು ಒಂದೂ ಪೂರೈಸಿಲ್ಲ. ಇದರಿಂದಾಗಿಯೇ ಅರಬರು ತುರ್ಕರಿಗೆ ವಿರುದ್ಧನಿಂತಿದ್ದರು. ತುರ್ಕರಿಗೆ ವಿರುದ್ಧವಾಗಿ ಅರಬರು ಎದ್ದುದಕ್ಕೆ ಈಗ ಪೆಲೆಸ್ತೀನದಲ್ಲಿ ಅವರನ್ನು ಪ್ರತಿಹಿಂಸೆಗೆ ಗುರಿಮಾಡುತ್ತಿದ್ದಾರೆ. ಯಹೂದ್ಯ ಸಮಸ್ಯೆಯು ಪ್ರಪಂಚದ ಸಮಸ್ಯೆಯಾಗಿದೆ. ‘ಪಂಡಿತ ಜವಾಹರಲಾಲರೂ ಗಾಂಧಿಯವರೂ ಎಂಬ ಮತ್ತೊಂದು ಜರ್ಮನ್ ಗ್ರಂಥದಲ್ಲಿ ಅಖಿಲ ಅರಬರ ಪರಿಷತ್ತಿಗೆ ಕೊಂಗ್ರೆಸ್ ಅಧ್ಯಕ್ಷರಾಗಿ ನೆಹರೂರವರು ಕಳಿಸಿದ ಸಂದೇಶವನ್ನು ನೋಡಿದರೆ ಇದು ಸ್ಪಷ್ಟವಾಗುವುದು. ಅರಬರು ಒಂದು ಜನಾಂಗವಾಗಲೇಬೇಕೆಂದು ನಿರ್ಧರಿಸಿರುವರು. ತಾವೇ ಪೆಲೆಸ್ತೀನ ಸಮಸ್ಯೆಯನ್ನು ಇತ್ಯರ್ಥಿಸಬಲ್ಲೆವೆಂದೂ ಅವರು ನಂಬಿರುವರು. ಯೆಹೂದ್ಯರಲ್ಲಿ ಹಲವರು ಇಂಡಿಯಕ್ಕೆ ತೆರಳುವ ಇಚ್ಛೆಯುಳ್ಳವರೆಂದೂ ಪ್ರಕಟವಾಗಿದೆ.” (ಬರ್ಲಿನಿಂದ ಪತ್ರ)

THE

Bombay Life Assurance Company, Limited,

(ESTD: 1908.)

45-47 Churchgate Street, Fort-BOMBAY.

Evidence of

PROGRESS, SECURITY & STABILITY.

Year	New Business completed	Premium Income	Life Fund	Business in force
1931	73,00,000	11,00,000	33,00,000	2,27,00,000
1934	1,04,00,000	19,00,000	58,00,000	3,71,00,000
1937	**1,40,00,000**	**31,00,000**	**99,00,000**	**6,00,00,000**

The Company offers all that is best and up-to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply to any of our following Offices:—

Kochikar Brothers Limited,
Madras Branch Secretaries,
Bombay Life Building, UDIPI. (S. India).

(1) Visweswarapuram Circle, Bangalore City. (2) Car Street, Mangalore. (3) Puthiyara, Calicut. (4) Charni Road, Girigaum, Bombay No. 4. (5) P. B. 337, Mount Road, Madras. (6) Ottapalam, S. Malabar. (7) Central Station Road, Trivandrum.

ಶ್ರೀಮತಿ ಸುಬ್ಬರಾಯನರ ಹಿಂದೂ ಬಹುವಿವಾಹ ನಿಷೇಧ ಮಸೂದೆ

ಹಿಂದೂ ಸಮಾಜದ ಸಂಘಟನೆ ಮತ್ತು ಅದರ ಸ್ಥಿತಿಗತಿಗಳ ಸುಧಾರಣೆ ಮಾಡುವ ಉದ್ದೇಶದಿಂದ ಶ್ರೀಮತಿ ಸುಬ್ಬರಾಯನರು ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಕೆಳಗೆ ಕಾಣುವ 'ಹಿಂದೂ ಬಹುವಿವಾಹ ನಿಷೇಧ ಮಸೂದೆ'ಯನ್ನು ತರುವ ಸೂಚನೆಯನ್ನು ಕೊಟ್ಟಿರುತ್ತಾರೆ

ಉದ್ದೇಶ.

ಗಂಡ ಅಥವಾ ಹೆಂಡತಿಯು ಜೀವಮಾನ ಕಾಲದಲ್ಲಿ ಅವರು ಪುನಃ ವಿವಾಹಮಾಡಿಕೊಳ್ಳುವುದು ವರ್ತಮಾನಕಾಲದ ಹಿಂದೂ ಸಮಾಜದ ಮನೋಭಾವಗಳಿಗೆ ಪ್ರತಿಕೂಲವಾಗಿರುವುದರಿಂದಲೂ, ಹಿಂದೂ ಸಮ್ಮಿಳಿತ ಕುಟುಂಬಗಳ ಶಾಂತಿ ಸುಖಗಳಿಗೆ ಭಂಗವನ್ನೂ ಲೋಪವನ್ನೂ ತರುವಂಥದ್ದಾಗಿರುವುದರಿಂದಲೂ, ಅಂಥ ವಿವಾಹಗಳನ್ನು ನಿಷೇಧಿಸಿ ತಡೆಯುವದು ಅಗತ್ಯವೆಂದು ಕಂಡು ಬಂದುದರಿಂದಲೂ ಈ ಕೆಳಗೆ ಕಂಡಂತೆ ಕಾನೂನಾಗುವದು ಅಗತ್ಯವಾಗಿದೆ –

1. ಈ ಕಾನೂನನ್ನು 1939ನೆ ಇಸವಿಯ ಹಿಂದೂ ಬಹುವಿವಾಹ ನಿಷೇಧ ಮಸೂದೆಯೆಂದು ಕರೆಯಬಹುದು.

2 (a) ಬ್ರಿಟಿಷ ಇಂಡಿಯಾದಲ್ಲಿ ವಾಸವಾಗಿರುವ ಎಲ್ಲ ಹಿಂದೂಗಳಿಗೆ ಈ ಕಾನೂನು ಲಗಾವಾಗುತ್ತದೆ

(b) 1939ನೆ ಇಸವಿಯ ಎಪ್ರಿಲ್ ತಿಂಗಳ 1ನೆ ತಾರೀಕಿನಿಂದ ಈ ಕಾನೂನು ಜ್ಯಾರಿಗೆ ಬರತಕ್ಕದ್ದು

3. (a) ಹಿಂದೂ ಕಾನೂನು ಅಥವಾ ರೀತಿರಿವಾಜುಗಳು ಬೇರೆ ಯಾವ ಪ್ರಕಾರ ಇದ್ದರೂ ಕೂಡಾ, ಈಗ ಚಾಲ್ತಿಯಲ್ಲಿರುವ ಕಾಯಿದೆ ಕಾನೂನುಗಳಿಗೆ ಅನುಗುಣವಾಗಿ, ವಿವಾಹಿತ ಯಾವ ವ್ಯಕ್ತಿಯೂ, ಕೆಳಗಿನ 7ನೇ ನಿಬಂಧನೆಗೆ ಅನುಕೂಲವಾಗಿ ಹೊರತ ತನ್ನ ಹೆಂಡತಿ ಅಥವಾ ಗಂಡನ ಜೀವಮಾನಕಾಲದಲ್ಲಿ ಬೇರೊಬ್ಬ ಸ್ತ್ರೀ ಅಥವಾ ಪುರುಷನೊಡನೆ ವಿವಾಹವಾಗುವುದು ಈ ಕಾನೂನಿಗೆ ವಿರೋಧವಾಗಿರುತ್ತದೆ

(b) ಮೊದಲೇ ವಿವಾಹಿತನಾಗಿರುತ್ತ ಯಾರೊಬ್ಬ ವ್ಯಕ್ತಿಯು ಈ ಕಾನೂನಿನ ಶರ್ತಗಳಿಗೆ ಅನುಗುಣವಾಗಿ ಅಲ್ಲದೆ, ಅದಕ್ಕೆ ವಿರೋಧವಾಗಿ ತನ್ನ ಹೆಂಡತಿ ಅಥವಾ ಗಂಡನ ಜೀವಮಾನಕಾಲದಲ್ಲಿ ಬೇರೊಬ್ಬ ಸ್ತ್ರೀ ಅಥವಾ ಪುರುಷನನ್ನು ವಿವಾಹವಾಗುವುದಾದರೆ, ಅದು ಇಂಡಿಯನ್ ಪೀನಲ್ ಕೋಡಿನ 494 ಅಥವಾ 495ನೆ ನಿಬಂಧನೆ ಪ್ರಕಾರ ಒಂದು ತಕ್ಸೀರಾಗಿ, ಆ ನಿಬಂಧನೆಗಳಲ್ಲಿ ತೋರುವ ಶಿಕ್ಷೆಗೆ ಬಾಧ್ಯನಾಗುವನು ಅಥವಾ ಬಾಧ್ಯಳಾಗುವಳು. ಹಾಗೆ ಆದಂಥ ವಿವಾಹವು ಕೂಡ ಈ ಕಾನೂನು ಪ್ರಕಾರ ರದ್ದಾಗುತ್ತದೆ

4 ವಿವಾಹಿತ ಒಬ್ಬ ವ್ಯಕ್ತಿಯು ತನ್ನ ಗಂಡ ಅಥವಾ ಹೆಂಡತಿಯು ಜೀವಿಸಿರುವ ಕಾಲದಲ್ಲಿ ಕೆಳಗೆ ಹೇಳಿದಂಥ ಯಾವದಾದರೂ ಕಾರಣಗಳಿಂದ ತನಗೆ ಪುನಃ ವಿವಾಹವಾಗಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿ ಯಾವದಾದರೂ ಸಿವಿಲ್ ಕೋರ್ಟಿಗೆ ಅರ್ಜಿಕೊಡಬಹುದು–

(a) ಗಂಡ ಅಥವಾ ಹೆಂಡತಿಯು ಎಡೆಬಿಡದೆ ಐದು ವರ್ಷಗಳಿಂದ ಯಾವದಾದರೂ ಅಂಟುರೋಗ ಅಥವಾ ಗುಣಮಾಡಲಿಕ್ಕೆ ಅಸಾಧ್ಯವೆನಿಸುವ ರೋಗದಿಂದ ಪೀಡಿತನಾಗಿ ಅಥವಾ ಪೀಡಿತಳಾಗಿ ಇರುವದಾದರೆ

(b) ಗಂಡ ಅಥವಾ ಹೆಂಡತಿಯು ಎಡೆಬಿಡದೆ ಐದು ವರ್ಷಗಳ ತನಕ ಒಬ್ಬರನ್ನೊಬ್ಬರು ಅಗಲಿ ಇರುವದಾದರೆ

(c) ಗಂಡ ಅಥವಾ ಹೆಂಡತಿಯು ಎಡೆಬಿಡದೆ ಒಂದು ವರ್ಷದ ತನಕ ವ್ಯಭಿಚಾರಿ ಅಥವಾ ವ್ಯಭಿಚಾರಿಣಿಯಾಗಿ ಇರುವುದಾದರೆ

(d) ಗಂಡ ಅಥವಾ ಹೆಂಡತಿಯು ಸ್ವಾಸ್ಥ್ಯ ಅಥವಾ ಪ್ರಾಣ ಘಾತುಕ ಅತ್ಯಾಚಾರಗಳನ್ನು ಮಾಡುವನೆಂದು ಸಿದ್ಧವಾದರೆ

ಮೇಲೆ ಹೇಳಿದ (a) ಕಾರಣದಿಂದ ಪುನರ್ವಿವಾಹವಾಗಲು ಅಪ್ಪಣೆ ಕೇಳಿ ಅರ್ಜಿಕೊಟ್ಟಾತನು ಗಂಡನಾಗಿರುವ ಪಕ್ಷಕ್ಕೆ, ಅವನು ತನ್ನ ಹೆಂಡತಿಗೆ ಈ ಕೆಳಗಿನವುಗಳನ್ನು ವಗಾಯಿಸಿರುವನೆಂದಾಗಲೀ, ಅವಳ ತಂದೆಗೆ ಕೊಟ್ಟಿರುವನೆಂದಾಗಲೀ ಕೋರ್ಟಿಗೆ ಖಚಿತವಾಗತಕ್ಕದ್ದು–

1 ಹೆಂಡತಿಯು ತಂದೆ ಅಥವಾ ರಕ್ಷಕನು ಕೊಟ್ಟ ವರದಕ್ಷಿಣೆ ಮತ್ತು ಚಿನ್ನಾಭರಣ

2 (a) ನಿಸ್ಸಂತತಿಯಾಗಿರುವನಾದರೆ ಅಥವಾ ಸಂತತಿಯುಳ್ಳ ವಿಭಕ್ತನಾಗಿರುವನಾದರೆ ಅವನ ಸ್ಥಿರಚರ ಸೊತ್ತಿನ ಮೂರನೆ ಒಂದಂಶ ಅಥವಾ

(b) ವಿಭಕ್ತನಾಗದೆ ಇರುವನಾದರೆ, ವಿಭಕ್ತನಾದಾಗ ಅವನಿಗೆ ದೊರೆಯಬಹುದಾದ ಸ್ಥಿರ ಚರ ಸೊತ್ತಿನ ಅರ್ಧಾಂಶ

ವಿವರ – ಸಮ್ಮಿಳಿತ ಸ್ಥಿರ ಚರ ಸೊತ್ತಿನಲ್ಲಿ ಅಥವಾ ಸಮ್ಮಿಳಿತ ಕುಟುಂಬದ ಸ್ಥಿರಚರ ಸೊತ್ತಿನಲ್ಲಿ ಅವನಿಗೆ ಅವಿಭಕ್ತ ಪಾಲುಇರುವದಾದರೆ, ಅದು ಕೂಡ ಈ ನಿಬಂಧನೆಗನ ಗಣವಾಗಿ ಅವನ ಸ್ಥಿರಚರ ಸಂಪತ್ತಿಯೊಳಗೆ ಕೂಡುತ್ತದೆ

5. ನಾಲ್ಕನೆ ನಿಬಂಧನೆಗನುಗುಣವಾಗಿ ಗಂಡನು ಅರ್ಜಿಯನ್ನು ಕೊಟ್ಟಾಗ ಕೋರ್ಟಿನವರು ಕ್ರಮ ಪ್ರಕಾರ ಗಂಡ ಅಥವಾ ಹೆಂಡತಿಗೆ ನೋಟೀಸು ಕೊಟ್ಟು, ವಿಚಾರಣೆ ನಡೆಸಿ, ಕೊಟ್ಟ ಕಾರಣಗಳು ತೃಪ್ತಿಕರವಾಗಿರುವುವೆಂದು ಸಮಾಧಾನ ಪಟ್ಟರೆ ಆ ಗಂಡ ಅಥವಾ ಹೆಂಡತಿಗೆ ಬೇರೊಂದು ವಿವಾಹವಾಗಲಿಕ್ಕೆ ಅಪ್ಪಣೆ ಕೊಡತಕ್ಕದು. ಉಳಿದ ಎಲ್ಲಾ ಸಂಗತಿಗಳಲ್ಲಿ ಅಂಥ ಅರ್ಜಿಗಳನ್ನು ತೆಗೆದುಹಾಕತಕ್ಕದ್ದು

6. ಇತರ ಕಾಯಿದೆ ಕಾನೂನುಗಳಿಗನುಗುಣವಾಗಿ ಹೆಂಡತಿಗೆ ಗಂಡನಿಂದ ಅಶನಾರ್ಥ ಕೇಳುವ ಮತ್ತು ಪಡೆಯುವ ಹಕ್ಕು ಅಧಿಕಾರಗಳು ಇರುವವಾದ ಪಕ್ಷದಲ್ಲಿ ಅಂಥ ಹಕ್ಕು ಅಧಿಕಾರಗಳಿಗೆ ಈ ಕಾನೂನು ವಿರೋಧವಾಗತಕ್ಕದ್ದಲ್ಲ.

7 ಇತರ ಕಾನೂನು ಅಥವಾ ಸಿಂಧುವಾಗತಕ್ಕ ರೀತಿರಿವಾಜು ಪ್ರಕಾರ ಒಬ್ಬ ಹಿಂದೂ ಹೆಂಡತಿಗೆ ಇನ್ನೊಬ್ಬ ಗಂಡನನ್ನು ಮದುವೆಯಾಗುವ ಹಕ್ಕು ಅಧಿಕಾರಗಳು ಇರುವಲ್ಲಿ ಆ ಹಕ್ಕು ಅಧಿಕಾರಗಳಿಗೂ ಈ ಕಾನೂನಿನಿಂದ ಭಂಗಬರಬಾರದು.

ನೋಟೀಸು

ಮಂಗ್ಳೂರು ಡಿ ಮುನ್ಸಿಫ್ ಕೋರ್ಟಿನಲ್ಲಿ

ಸ್ಯೂಟ್ ನಂಬ್ರ 849/193[illegible]

ಕ್ರಮ ಅಮಲ್ದಾರಿ ನಂಬ್ರ 6/1938

ನಾಗಪ್ಪಗೌಡಾ ಕಾನಪ್ಪ ಪಕೀರ ಗೌಡನ ಮಗ ಮಂಗಳೂರು ತಾಲೂಕು ಪಡವು ಗ್ರಾಮಸ್ಥ — ಅರ್ಜಿದಾರ (ವಾದಿ)

ಎದ್ರು

1 ಮೋನಗೌಡಾ ವಂಟಿ ಗೌಡನ ಮಗ 2 ಮಣ್ಣ ಗೌಡ. 1ನೇ ವನ ಮಗ ಮಂಗಳೂರು ತಾಲೂಕು ಪಡು ಪಂ. ಗ್ರಾಮದ ಪದೀಲ್ಲಿರುವವ — ರೆಸ್ಪೊಂಡೆಂಟ್ರು (ಪ್ರತಿವಾದಿರು)

ನಂ 2 ರೆಸ್ಪೊ ಡೆಂಟಿಗೆ

ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾರನು ನಿಮ್ಮ ಬಾಬ್ತು ಜಪ್ತಾದ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ [illegible] ಬಗ್ಗೆ ಮತ್ತು ಸದ್ರಿ [illegible] ತನಗೆ [illegible] ಮುಂತಿ [illegible] ಕೊಡಬೇಕಾಗಿ ಸದ್ರಿ ಅರ್ಜಿದಾರನು ದಾಖಲುಮಾಡಿದ ಐ ಎ ನಂಬ್ರ 1 [illegible] ನೇ ಅರ್ಜಿಯು ಕೂಡಾ ಇದೇ 1938ನೆ ಇಸವಿ ಸೆಪ್ಟಂಬ್ರ ತಿಂಗಳ ತಾರೀಕ 21ನೆ ಬುಧವಾರ ದಿವಸಕ್ಕೆ ಇಟ್ಟಿರುತ್ತದೆ ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಖುದ್ದಾಗಲೀ ಯಾ ಅಧಿಕಾರ ಹೊಂದಿದ ಪ್ಲೀಡರ ಮೂಲಕವಾಗಲೀ ಹಾಜರಾಗಿ ಅದನ್ನು ಜಾಹೀರು ಮಾಡಿಕೊಳ್ಳತಕ್ಕದು. ತಪ್ಪಿದ್ರೆ ಸದ್ರಿ ಅರ್ಜಿಗಳು ನಿಮ್ಮ ಗೈರುಹಾಜರಿಯಲ್ಲಿಯೇ ಏಕಪಕ್ಷವಾಗಿ ತೀರ್ಮಾನ ಮಾಡಲಾಗುವವು

ಮಂಗ್ಳೂರು 12–8–1938 — H Vasudeva Kamath ಅರ್ಜಿದಾರನ ಕಡೆ ವಕೀಲ

TENDER NOTICE

Sealed tenders will be received by the undersigned up to 4 P. M. on the 22nd September 1938 for Constructing a bridge of 8 spans of 30 feet clear each with R C C T. Beams and slabs and one span of 60 feet with R C C bowstring girders for the main bridge and one 30 foot span bridge with R. C. C. T Beams and R. C. deo on the approach road, over the Kateel river in mile 15/8 of Mangalore Kinnigoli Road No 23 Tender documents plans etc can be seen in the District Board Engineer's office, Mangalore during office hours and can be obtained on payment of Rs 10/- per set which amount will on no account be refunded

Dt Bd Engineer's office Mangalore Dated 9–8–1938 — K. K NAMBIAR, Dt Board Engineer South Kanara

---

ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಸ್ಯೂಟ್ ನಂಬ್ರ 10/1936

ಸ್ಯೂಟ್ ಅಮಲ್ದಾರಿ ನಂಬ್ರ 91 1938

ಕೆ ಜನಾರ್ದನ ರಾವ್ ಶಿವ್ರು : : . ಅರ್ಜಿದಾರ (ವಾದಿ)

ಎದ್ರು

ಎಚ್ ನರಸಪ್ಪ ಕಾಮತ್ : ರೆಸ್ಪೊಂಡೆಂಟ್ರು (ಪ್ರತಿವಾದಿರು)

1ನೇ ರೆಸ್ಪೊಡೆಂಟ ಮಂಗಳೂರ [illegible] ಎಚ್ [illegible] ಕಾಮತ್ [illegible] ಎಚ್ ನರಸಪ್ಪ [illegible] –

ಮೇಲ್ಕಂಡ ಅಮಲ್ದಾರಿಯಲ್ಲಿ [illegible] ಅರ್ಜಿದಾರ [illegible] ಸದ್ರಿ ಅರ್ಜಿಯು ಇದೇ 1[illegible]ನೇ ಇಸವಿ ಸಪ್ಟಂಬರ್ ತಿಂಗಳ [illegible] ಇಟ್ಟಿರುತ್ತದೆ [illegible] ಆಕ್ಷೇಪ ಇದ್ದಲ್ಲಿ [illegible] ಗಂಟೆಗೆ ಸದ್ರಿ ಕೋರ್ಟಿನ [illegible] ಅಧಿಕಾರ ಹೊಂದಿದ [illegible] ಅದನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ, ಸದ್ರಿ ಅರ್ಜಿಯು ನಿಮ್ಮ ಗೈರುಹಾಜರಿಯಲ್ಲಿಯೇ ಏಕಪಕ್ಷವಾಗಿ ತೀರ್ಮಾನ ಮಾಡಲಾಗುವದು

ಮಂಗ್ಳೂರು 13–8–1938 — H. Vasudeva Kamath, ಅರ್ಜಿದಾರರ ಕಡೆ ವಕೀಲ

ಸಾವಿತ್ರೀ ಮಾತೆಯ ಪಂಚಾಮೃತವೆಂಬ ಅಮೂಲ್ಯವಾದ ಸಿದ್ಧ ಪಂಚ ಔಷಧಗಳು

1 **ಕೇಶಚಂದನ ತೈಲ:–** ಕಳೆದ 75 ವರ್ಷಗಳಿಂದಲೂ ಉಪಯೋಗಿಸಲ್ಪಟ್ಟ ಈ ತೈಲವು ತಲೆನೋವು, ದೃಷ್ಟಿಮಾಂದ್ಯ ಕೆಂಗಣ್ಣು ಇವನ್ನು ದೂರಪಡಿಸಿ ನಿದ್ರಾಭಂಗವನ್ನು ನಾಶಪಡಿಸಿ ಸುಖ ನಿದ್ರೆಯನ್ನೂ ಮಿದುಳಿಗೆ ತಂಪನ್ನೂ ಕೊಡುವುದು

ಸುಪ್ರಸಿದ್ಧ ಡಾ। ರಾವ್ ಬಹದ್ದೂರ್ ಎಮ್ ಕೇಶವ ಪೈ, ಓ ಬಿ ಇ ಎಮ್ ಡಿ , ಸ್ವತಃ ಉಪಯೋಗಿಸಿ ಬರೆಯುತ್ತಾರೆ.

ಇದು ತಲೆಗೆ ತಂಪು ಮಾಡುವ ಗುಣವುಳ್ಳದು ಎಷ್ಟೋ ವರ್ಷಗಳಿಂದ ನನಗೆ ನಿದ್ರಾಭಂಗದ ಬಾಧೆಯಿತ್ತು ಕಳೆದ ಸಲ ಈ ಬಾಧೆ ಪ್ರಬಲವಿತ್ತು ನಿಮ್ಮ ಈ ಎಣ್ಣೆಯು ನನಗೆ ತುಂಬಾ ಸಿದ್ಧಿ ಅನುಗ್ರಹಿಸಿದೆ, ಆದರಿಂದ ನನ್ನಂತೆ ನಿದ್ರಾಭಂಗಪಡುವ ಇತರರು ಇದನ್ನು ಭರವಸೆಯಿಂದ ಉಪಯೋಗಿಸಬಹುದೆಂದು ನನ್ನ ಅಭಿಪ್ರಾಯ.

ಬೆಲೆ: 2 ಔನ್ಸ್ ಸೀಸೆ 1ರ ರೂ 1 ಮಾತ್ರ. ಒಂದು ಇಡೀ ಸೀಸೆ ಒಂದು ತಿಂಗಳಿಗೆ ಸಾಕು

2. **ಮಾರುತಿ ಲೇಹ:-** ಇದರಲ್ಲಿ ದುಷ್ಟವಾದ ಮಾದಕ ಪದಾರ್ಥಗಳು ಸೇರಿರುವುದಿಲ್ಲ ಎಲ್ಲರೂ ಸೇವನೆಮಾಡಬಹುದು ಇದು ರಕ್ತವನ್ನು ಶುದ್ಧೀಕರಿಸಿ, ತೇಜಸ್ಸನ್ನು ವರ್ಧಿಸುವದು. ಬಹುಮೂತ್ರ, ಸಿಹಿಮೂತ್ರ, ಉಬ್ಬಸ ಇವುಗಳನ್ನು ಗುಣಪಡಿಸಿ, ಹಸಿವನ್ನೂ, ವೀರ್ಯ ಬಲವನ್ನೂ ಹೆಚ್ಚಿಸಿ, ಮನುಷ್ಯನನ್ನು ಸಂಪೂರ್ಣ ಪುರುಷನನ್ನಾಗಿ ಮಾಡುತ್ತದೆ, ಇದರ ಸಂಗಡ ಕೇಶಚಂದನ ತೈಲವನ್ನು ಉಪಯೋಗಿಸಿದ್ದಲ್ಲಿ ಉನ್ಮಾದ ರೋಗವು ಗುಣವಾಗುತ್ತದೆ.

ಕ್ರಯ ½ ರಾತ್ತಲಿಗೆ ರೂ 1–12–0
1 ರಾತ್ತಲಿಗೆ ರೂ 3–0–0 ಮಾತ್ರ

3 **ಅದ್ಭುತ ಶಕ್ತಿ ತೈಲ.–** ಇದು ರೋಗಗಳಿಗೆ ದಿವ್ಯ ಔಷಧ ಕಾಲು ಬಾರದ ಸಣ್ಣ ಮಕ್ಕಳಿಗೆ ಕಾಲಿಗೆ ಹಚ್ಚಿದಲ್ಲಿ ಕಾಲು ಬರುತ್ತದೆ, ವೃದ್ಧರು ಮಾರುತಿ ಲೇಹ ತೆಗೆದುಕೊಳ್ಳುವಾಗ ಈ ಎಣ್ಣೆಯನ್ನು ಉಪಯೋಗಿಸಿದಲ್ಲಿ ಒಳ್ಳೇ ಶಕ್ತಿ ಬರುವುದು

ಬೆಲೆ: 2 ಔನ್ಸ್ ಬಾಟ್ಲಿಗೆ ರೂ 1 4-0 ಮಾತ್ರ.

4 **ಜೀವಬಿಂದು** ಇದು ಅನೇಕ ವರ್ಷಗಳಿಂದ ಉಪಯೋಗಿಸಲ್ಪಟ್ಟು, ಕಾಲರಾ ಹೊಟ್ಟೆನೋವು ಮೇಹ, ಪ್ರಮೇಹ, ಉಬ್ಬಸ ಮೊದಲಾದ ಅನೇಕ ರೋಗಗಳನ್ನು ಗುಣಪಡಿಸಿದೆ

40 ರಿಂದ 60 ಡೋಸುಗಳಿರುವ ಸೀಸೆ 1ಕ್ಕೆ ರೂ 1 – 0 — 0 ಮಾತ್ರ

5. **ವೇದಾಂಜನ ಬಾಮ್:** (ಹೊರಗಿನಿಂದ ಉಪಯೋಗಿಸುವಂತಾಹದ್ದು) ವಾತ, ತಲೆನೋವು, ಹೊಟ್ಟೆನೋವು, ಕಜ್ಜಿ ಹುಳಕಚ್ಚು, ಇತ್ಯಾದಿಗಳಿಗೆ ಸಿದ್ಧೌಷಧ. ಚರ್ಮ ಮಿತ್ರ ಇಲ್ಲದ್ದು ಎಲ್ಲಾ ಶ್ರೇಷ್ಠ ವರ್ಗದವರೂ ಉಪಯೋಗಿಸಬಹುದು **ಬೆಲೆ: ½ ಔನ್ಸ್ ಬಾಟ್ಲಿಗೆ ಬರೇ 8 ಆಣೆ ಮಾತ್ರ**

ಹೆಚ್ಚಿನ ಅನುಭವದ ಬಗ್ಗೆ ಪುಸ್ತಕಗಳನ್ನು ಮುಫತ್ತಾಗಿ ಕಳುಹಿಸಲಾಗುತ್ತದೆ

ಬಿ. ವೈಕುಂಠ ಬಾಳಿಗಾ, ರಿಟಾಯರ್ಡ್ ಸುಪರ್‌ವೈಸರ್, ಡೊಂಗರಕೇರಿ ರಸ್ತೆ, ಮಂಗಳೂರು, ದ ಕನ್ನಡ

S. U. N. & Co.,

Silk Merchants,

Chaukhamba BENARES CITY

ಈಗಿನ ತರಹ (ಕಾಶಿ) ಬೆನಾರೆಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ್ಗೆ ಕ್ರಯ ತುಂಬಾ ಸುಲಭ ಖಾತ್ರಿ ಮಾಲು. 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ ಶೀರೆಗಳು ರೂ 35ರಿಂದ ರೂ 55 ಪಡಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ ಮೊಳ 16, ಅಗಲ 2½ ರೂ 20ರಿಂದ 35ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾಗುತ್ತದೆ

ವಿಳಾಸ –

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ

ಆಚಾರ್ಯ ದೇವೋ ಭವ

ಮಾತೃದೇವೋ ಭವ, ಪಿತೃದೇವೋ ಭವ!

ಆಚಾರ್ಯ ದೇವೋಭವ—ಅಂದರೆ ತಾಯಿ, ತಂದೆ ಮತ್ತು ಗುರುಗಳು ದೇವತೆಗಳಾಗುತ್ತಾರೆ. ಅವರನ್ನು ದೇವತೆಗಳಂತೆಯೇ ಮನ್ನಿಸಿ ಪೂಜಿಸಬೇಕು ಎಂದು ನಮ್ಮ ಹಿರಿಯರು ಆಜ್ಞಾಪಿಸಿದ್ದಾರೆ ಪರಮಾತ್ಮ ಸಾನ್ನಿಧ್ಯವು ಗುರುವಿನ ಪ್ರೇಮಕಟಾಕ್ಷದಿಂದಲೇ ಪ್ರಾಪ್ತವಾಗಬೇಕು ಗಂಗಾದಾಸನು ಒಬ್ಬ ಹಿರಿಯ ಗುರು. ಅವನ ಶಾಪವೇ ದೇವಿಕೆಗೆ ವರವಾಗಿ ಪರಿಣಮಿಸಿತು. ದೇವಿಕೆಯಿಂದಾಗಿ ಗಂಗಾದಾಸನಿಗೂ ಪರಮಾತ್ಮ ಸಾಕ್ಷಾತ್ಕಾರವಾಯಿತು ಅದಕ್ಕೆ ನಿಶ್ಚಲವಾದ ಗುರುಭಕ್ತಿಯೇ ಕಾರಣ ಕಲ್ಯಾಣ ಕಲ್ಪತ್ತರುವಿನಲ್ಲಿರುವ ಗಂಗಾದಾಸನ ಈ ಕತೆಯು ಮೇಲಿನ ಮಾತುಗಳನ್ನು ಸ್ಪಷ್ಟಗೊಳಿಸುತ್ತವೆ

ನಾಸಿಕ ಪಟ್ಟಣದ ಹೊರ ಭಾಗ ಗೋದಾವರಿಯು ಅಲ್ಲಿಯೇ ಕಲಕಲ ಸ್ವರಮಾಡಿ ಹರಿಯುತ್ತಲಿದೆ. ಅದರ ಪವಿತ್ರವಾದ ದಂಡೆಯ ಮೇಲೆ ಸಣ್ಣ ದೊಡ್ಡ ಗಿಡಮರಗಳ ಕಾಡಿನಲ್ಲಿ ಭಗ್ನಾವಶಿಷ್ಟವಾದ ಒಂದು ದೇವ ಮಂದಿರವಿದೆ ಹಾವು ಚೇಳುಗಳಿಂದ ತುಂಬಿ ಹೋಗಿರುವ ಆ ಪ್ರದೇಶವನ್ನು ಯಾರೂ ಸುತ್ತಾಡುವದಿಲ್ಲ. ಆದರೆ ಪ್ರಾಕೃತಿಕ ಸೌಂದರ್ಯವನ್ನು ಕಂಡು ಮೋಹಗೊಳ್ಳುವ ಒಬ್ಬ ಸಾಧುವು ಅದೇ ಮಾರ್ಗವಾಗಿ ಬರುತಿದ್ದನು

ಅವನು ಬೇರೆ ಯಾರೂ ಅಲ್ಲ. ಗಂಗಾದಾಸನೆಂದರೆ ಅವನೇ. ಗೋದಾವರಿಯಲ್ಲಿ ಸ್ನಾನಮಾಡಿ ಅವನು ದೇವ ಮಂದಿರವನ್ನು ಒಳಹೊಕ್ಕನು. ಗರ್ಭಗುಡಿಯನ್ನು ಸೇರಿದಾಗ ಅಲ್ಲಿಂದು ಭಿನ್ನಗೊಂಡ ವಿಗ್ರಹವು ಬನ್ನ ಮೇಲಾಗಿ ಬಿದ್ದುಕೊಂಡಿರುವದನ್ನು ಕಂಡನು. ಅದು ಚಿತ್ರವಿಚಿತ್ರವಾಗಿ ಕೆತ್ತಲ್ಪಟ್ಟ ಪರಮ ಪವಿತ್ರನಾದ ನಾರಾಯಣ ಸ್ವಾಮಿಯ ವಿಗ್ರಹ ಆ ದೇವ ಮಂದಿರದ ಜೀರ್ಣೋದ್ಧಾರಮಾಡಬೇಕೆಂದೂ, ವಿಗ್ರಹದ ಪೂಜೆವಿನಿಯೋಗಾದಿಗಳನ್ನು ಆರಂಭಿಸಬೇಕೆಂದೂ ಗಂಗಾದಾಸನಿಗೆ ಅಶರೀರವಾಣಿಯಾದಂತೆ ಭಾಸವಾಯಿತು.

ಮಹಂತನಾದನು

ಗಂಗಾದಾಸನು ಅಲ್ಲಿಂದ ಕಾಲು ಕೀಳಲಿಲ್ಲ. ಅಲ್ಲಿ ಉಳಕೊಂಡು ಆ ಕ್ಷೇತ್ರವನ್ನು ಗುಡಿಸಿ ಸಾರಿಸಿ ಸ್ವಚ್ಛಮಾಡಿದನು ದೇವ ಮಂದಿರದ ಸಂದು ಬಿಟ್ಟ ಗೋಡೆ ಬಿರುಕುಗಳಿಗೆ ಸುಣ್ಣಗಾರೆ ತುಂಬಿಸಿ ಮಂದಿರವನ್ನು ಸ್ವಲ್ಪ ಭದ್ರಮಾಡಿದನು ಬಿದ್ದ ದೇವ ಮೂರ್ತಿಯನ್ನು ಎತ್ತಿ ನಿಲ್ಲಿಸಿ ಅದರಲ್ಲಿ ಪುನಃ ಪ್ರಾಣ ಪ್ರತಿಷ್ಠೆ ಮಾಡಿದನು. ಹತ್ತಿರದಲ್ಲೇ ತನಗೊಂದು ಗುಡಿಸಲು ಕಟ್ಟಿ [illegible] ನಾರಾಯಣ ಸ್ವಾಮಿಯ ಪೂಜೆ ಮಾಡುತ್ತ [illegible] ಸೇವೆಯಲ್ಲಿಯೇ ಕಾಲಕಳೆಯುತ್ತಿದ್ದನು

ಸ್ವಲ್ಪ ಕಾಲದೊಳಗಾಗಿಯೇ ಆ ದೇವಸ್ಥಾನವು ಪ್ರಸಿದ್ಧ ಯಾತ್ರಾ ಸ್ಥಾನವಾಗಿ ಪರಿವರ್ತನೆ ಹೊಂದಿತು ಗಂಗಾದಾಸನು ಆ ಕ್ಷೇತ್ರದ ಮಹಂತನಾದನು ಅವನು ಸ್ವಲ್ಪ ಸ್ವಲ್ಪ ಜ್ಯೋತಿಷ್ಯ ಆಯುರ್ವೇದಗಳನ್ನು ಕಲಿತು [illegible] ಜನಸೇವೆಗಾರಂಭಿಸಿದನು [illegible] ದಿನಗಳು ಕಳೆಯುವಷ್ಟರಲ್ಲಿಯೇ ಅವನ ಹೆಸರು ಕೀರ್ತಿಗಳು ಸರ್ವತ್ರ ಹರಡತೊಡಗಿದುವು ನಾಲ್ಕೂ ಸುತ್ತಲಿಂದ ಅನೇಕ ಮಂದಿ [illegible] ಪುರುಷರು ಅವರಿಗೆ ಶಿಷ್ಯರಾಗಿ ಬರಲಾರಂಭಿಸಿದರು

ಗುರುಶಾಪ.

ಹಾಗೆ ಶಿಷ್ಯಳಾದ [illegible] ದೇವಿಕೆ [illegible] ಒಬ್ಬಳು ಅವಳ ಗೊಲ್ಲಜಾತಿಯವಳು. [illegible] ದನಗಳನ್ನು ಸಾಕಿ ಜೀವನಮಾಡಿಕೊಂಡಿದ್ದಳು ಗುರು ಅನುಗ್ರಹವಾಗಿದೆ [illegible] ರವು ಸರ್ವಥಾ ಸಾಧ್ಯವಲ್ಲವೆಂಬುದು ಅವಳ ದೃಢವಾದ ವಿಶ್ವಾಸವಾಗಿತ್ತು ಆಗ ಅವಳಿಗೆ 40 ವರ್ಷ ಪ್ರಾಯ [illegible] ಅವಳನ್ನು ಸುತ್ತುಹಾಕಲಾರಂಭಿಸಿತು. ಆಗ [illegible] ಒಂದು ಚರಕ ಹಾಲುಕೊಡುವ ಒಂದು ದನ—ಇವಷ್ಟೇ ಅವಳ ಸಂಪತ್ತಾಗಿ ಉಳಿದಿತು. ಚರಕದಿಂದ ನೂತು ಜೀವನ ಮಾಡುತ್ತಿದ್ದಳು. ದನವು ಕೊಡುತಿದ್ದ ಹಾಲನ್ನು ಗುರುಚರಣಗಳಿಗೆ ಒಪ್ಪಿಸುತಿದ್ದಳು '

ಗುರುಪೂರ್ಣಿಮೆಯ ದಿನ ಒಂದಿಷ್ಟು ಪೂಜೆಗೆ ದೇವಿಕೆಯು ಹೆಚ್ಚು ಹಾಲುತರುವಳೆಂದು ಗಂಗಾದಾಸನು ನಂಬಿಕೊಂಡಿದ್ದನು. ಆದರೆ ದನವು ಕರುಹಾಕಿ ಕೆಲವು ತಿಂಗಳುಗಳು ಕಳೆದು ಹೋಗಿದ್ದುವು. ಆದ್ದರಿಂದ ಪೂಜೆಗೆ ಬೇಕಾದಷ್ಟು ಹಾಲನ್ನು ತರುವದು ದೇವಿಗೆ ಸಾಧ್ಯವಾಗಲಿಲ್ಲ. ಕ್ರಯಕೊಟ್ಟು ತರಲಿಕ್ಕೆ ಹಣವೆಲ್ಲಿಂದ ಬರಬೇಕು? ಆದರೂ ನಿರಾಶೆಪಟ್ಟು ಗಂಗಾದಾಸನು ಸಿಟ್ಟಿನಿಂದ ಉನ್ಮತ್ತನಾದನು. ಇಷ್ಟು ಸ್ವಲ್ಪ ಹಾಲು ತರುವದಕ್ಕಿಂತ ಗೋದಾರಿಯಲ್ಲಿ ಬಿದ್ದು ಸತ್ತಿದ್ದರೆ ಹೆಚ್ಚು ಪುಣ್ಯ ಬರುತಿತ್ತೆಂದು ಅವನು ಅವಳನ್ನು ಸಿಟ್ಟಿನಿಂದ ಮಾತಾಡಿದನು. ದೇವಿಕೆ ಮರುಮಾತಾಡದೆ ಹಿಂದಿರುಗಿದಳು.

ಆತ್ಮೋದ್ಧಾರವಾಯಿತು

ತಿಂಗಳಬೆಳಕು ಹಿಟ್ಟು ಚೆಲ್ಲಿದಂತೆ ನಾಲ್ಕು ಸುತ್ತಲೂ ಹರಡಿತ್ತು ಅರ್ಧ—ರಾತ್ರಿಯ ಸಮಯ ಯಾರೋ ಒಬ್ಬಾಕೆ—ಗೋದಾವರಿಯ ದಂಡೆಯ ಮೇಲೆ ಒಬ್ಬಳೇ ಆಗಿ ತಿರುಗುತಿದ್ದಾಳೆ ನಾರಾಯಣ ನಾರಾಯಣ ಎಂದು ನಾಮ ಸ್ಮರಣೆ ಮಾಡುತ್ತಿರುವಳು ಯಾರವಳು? ಆಕೆ ಗುರುವಿನ ಸಿಟ್ಟಿಗೆ ಬಲಿಯಾಗಿ ತಿರಸ್ಕೃತಳಾದ ದೇವಿಕೆ ನಾರಾಯಣ ನಾರಾಯಣ [illegible] ದೇವತೆಯೇ [illegible] ನನ್ನ ಗುರುವು ನನಗೆ ಗೋದಾವರಿಯಲ್ಲಿ [illegible] ಅಪ್ಪಣೆಕೊಟ್ಟಿದ್ದಾರೆ [illegible] ಆತನ ಆಜ್ಞೆಯ [illegible] [illegible]

ಆದರೆ [illegible] [illegible] ದೇವಿಕೆಯ [illegible] [illegible] ದೇವಿಕೆಯು [illegible] [illegible] ಕಂಡಳು. [illegible] ಶಿರಸ್ಸಿನ ಮೇಲೆ ಕೋಟಿ ಸೂರ್ಯರಿಗೆ ಸಮಾನ ಪ್ರಕಾಶವನ್ನು ಬೀರುವ ರತ್ನಖಚಿತ ಕಿರೀಟವು [illegible] ಅಶ್ರುಪಾತವಿದ್ದಿತ

ಅಭಯ ವಚನ

ದೇವಿಕೆಯು [illegible] ದಿವ್ಯ [illegible] ವಿಗ್ರಹವನ್ನು ಕಂಡು ಆನಂದದಿಂದ ಪರವಶಳಾದಳು ಅವಳ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ 'ದೇವಿಕಾ' ಗುರುವೆಂದರೆ ಪರಮಾತ್ಮನ ಪ್ರತ್ಯಕ್ಷ ಮಾನವರೂಪವಾಗಿರುತ್ತದೆ ಗುರುವು ಯಾರೇ ಆಗಿರಲಿ, ಅವನ ಆಜ್ಞೆ—ಮಾತುಗಳು ಎಂಥವೇ ಆಗಿರಲಿ, ಅವುಗಳನ್ನು ಅಕ್ಷರಶಃ ಪಾಲಿಸಬೇಕಾದ್ದು ಶಿಷ್ಯರ ಧರ್ಮ ನೀನು ಧರ್ಮಪಾಲನೆಯನ್ನು ಚೆನ್ನಾಗಿ ಮಾಡಿದೆ ಬಹಳ ಸಂತುಷ್ಟನಾದೆ ನಿನಗೇನು ಬೇಕೋ ಅದನ್ನು ಕೇಳ ಕೊಡುತ್ತೇನೆ ಎಂದು ನಾರಾಯಣ ಸ್ವಾಮಿಯು ಅಪ್ಪಣೆ ಕೊಡಿಸಿದನು.

ಪ್ರಭೂ! ಸುಖ ಕಾಲದಲ್ಲಿ, ದುಃಖ ಕಾಲದಲ್ಲಿ—ನಾನು ಯಾವಾಗಲೂ ನಿನ್ನನ್ನು ಮರೆಯದಂತಾಗಲೀ ಇದೇ ನನ್ನ ಅಭೀಷ್ಟ!' ಎಂದು ದೇವಿಕೆ ಹೇಳಿದಳು.

ಪರಮಾತ್ಮನು ಅವಳ ಅತಿಶಯ ಭಕ್ತಿಗೆ ಮೆಚ್ಚಿ ಪ್ರೇಮಾಲಿಂಗನ ಮಾಡಿದನು 'ಇಗೋ, ಈ ಪಾತ್ರವನ್ನು ಗುರುವಿನ ಬಳಿಗೆ ಕೊಂಡು ಹೋಗು ಅದರಿಂದ ಅವನಿಗೆ ಬೇಕು ಬೇಕಾದಷ್ಟು ಹಾಲು ದೊರೆಯುತ್ತದೆ.' ಎಂದನು.

ಇದೆಂಥ ಅದ್ಭುತ!

ಗುರುಪೂರ್ಣಿಮೆಯ ಉತ್ಸವಾದಿಗಳು ಮುಗಿಯುತ್ತ ಬಂದಿದ್ದುವು. ಬಂದಿದ್ದ ಪ್ರೇಕ್ಷಕರು ಒಬ್ಬೊಬ್ಬರಾಗಿ ಹೋಗಲಾರಂಭಿಸಿದರು. ಗಂಗಾದಾಸನು ಸಾಷ್ಟಾಂಗ ಪ್ರಣಾಮ ಮಾಡುತ್ತಿರುವ ಶಿಷ್ಯ ವೃಂದವನ್ನು ಆಶೀರ್ವದಿಸುತ್ತಲಿದ್ದನು ಅದೇ ಸಮಯಕ್ಕೆ ದೇವಿಕೆಯು ಅಲ್ಲಿಗೆ ಬಂದ ಪರಮಾತ್ಮನಿಂದ ಪ್ರಾಪ್ತವಾದ ಅಕ್ಷಯ ಪಾತ್ರವನ್ನು ಅವನ ಪಾದಕಮಲಂಗಳಿಗೆ ಎರಗಿದಳು

ಗುರುದೇವ ಈ ಪಾತ್ರೆಯನ್ನು ಸ್ವೀಕರಿಸಬೇಕು ಇದು ಬೇಕು ಬೇಕಾದಷ್ಟು ಹಾಲು ಕೊಡುತ್ತದೆ ಹೀಗೆಂದು ಹೇಳುತ್ತ ಅವಳು ಅಲ್ಲೇ ಇದ್ದ ಒಂದು ಹಂಡೆಯೊಳಗೆ ಹಾಲು ಸುರಿಸತೊಡಗಿದಳು [illegible] ಈ ಅದ್ಭುತವನ್ನು ನೋಡಿ ದರ್ಶಕರಿಗೆ ಪರಮಾಶ್ಚರ್ಯವಾಯಿತು. ಗಂಗಾದಾಸನು 'ಇದೆಂಥ ಅದ್ಭುತ!' ವೆಂದು [illegible] ಬೆರಳಿಟ್ಟು ಆಶ್ಚರ್ಯ ಪಡುವವನಾದನು.

ಅವನು [illegible] [illegible] ದೇವಿಕೆಯು [illegible] [illegible] [illegible] [illegible] [illegible] ದೇವಿ ನಿನಗೆ ಸಾಕ್ಷಾತ್ಕಾರವಾದ ಆ ಸ್ಥಾನವನ್ನು ನನಗೂ ತೋರಿಸಲಾರೆಯಾ! ನಾನೂ ಪತಿತಪಾವನನಾದ ಆ ನಾರಾಯಣ ಸ್ವಾಮಿಯನ್ನು ಕಣ್ಣಾರೆ ಕಂಡು ಕೃತಾರ್ಥನಾಗುತ್ತೇನೆ ಅಷ್ಟು ದಯೆ ತೋರಿಸು' ಎಂದನು ಎಲ್ಲರೂ ಗೋದಾವರಿ ನದಿತೀರಕ್ಕೆ ಹೋದರು.

'ದೇವೀ, ನಾನು ಪಾಪಿ'

ಎಲ್ಲರೂ ಗೋದಾವರಿತೀರಕ್ಕೆ ಹರಿಸಂಕೀರ್ತನೆಗೆ ಆರಂಭಿಸಿದರು. ಎಲ್ಲರೂ ಪರಮಾತ್ಮಧ್ಯಾನದಲ್ಲಿ ತಲ್ಲೀನರಾದರು. ಆದರೆ ದೇವಿಕೆಗಲ್ಲದೆ ಬೇರೆ ಯಾರ ಚರ್ಮಚಕ್ಷುವಿಗೂ ಪರಮಾತ್ಮನು ಕಾಣಿಸಿಕೊಳ್ಳಲಿಲ್ಲ ಗಂಗಾದಾಸನು ಪೂರ್ಣ ನಿರಾಶನಾದನು 'ದೇವಿ! ನಾನು ಪಾಪಿ, ದೇವರು ನನಗೆ ಕಾಣಿಸಿಕೊಳ್ಳಲಿಲ್ಲ ನಾನು ಬದುಕಿ ಫಲವಿಲ್ಲ ಇಗೋ, ನಾನು ಇದೇ ಗೋದಾವರಿಯಲ್ಲಿ ಬಿದ್ದು ಸಾಯುವೆನು' ಎಂದನು ಅವನ ಕಣ್ಣುಗಳಿಂದ ಧಾರೆಕಟ್ಟಿ ನೀರು ಹರಿಯುತ್ತಿತ್ತು

ದೇವಿಗೆ ದಿಕ್ಕು ತೋಚದಂತಾಯಿತು ಪರಮಾತ್ಮ ಸಾಕ್ಷಾತ್ಕಾರವಾಗದಿದ್ದರೆ ಗುರುವು ಪ್ರಾಣಘಾತ ಮಾಡಿಕೊಳ್ಳುವದು ನಿಶ್ಚಯ. ಹಾಗೆ ಅವನು ಸತ್ತರೆ ಅದಕ್ಕೆ ಕಾರಣಳು ತಾನೇ ಆಗುವಳು ಆದ್ದರಿಂದ ಅವಳು ಪರಮಾತ್ಮನಿಗೆ ಮೊರೆಯಿಟ್ಟಳು—'ಪ್ರಭೂ ಗುರುವು ಸತ್ತರೆ ಅದಕ್ಕೆ ನಾನೆ ಕಾರಣಳಾಗುವೆ ಅವನ ಸತ್ತ ಮೇಲೆ ನಾನ ಬದುಕಲಾರೆ' ಎಂದು ಹೇಳಿ ಗುರುವಿನೊಂದಿಗೆ ತಾನೂ ಗೋದಾವರಿಯಲ್ಲಿ ಬಿದ್ದು ಸಾಯಲಿಕ್ಕೆ ಸಿದ್ಧಳಾದಳು.

ಪಟ ಪರಿವರ್ತನ.

ಆಗಲೇ ಪತ್ಯಕ್ಷ ಪಟ ಪರಿವರ್ತನೆಯಾಯಿತು [illegible] ಸೂರ್ಯ [illegible] [illegible] ಸ್ವಾಮಿಯು ಪ್ರಸನ್ನ ದೇವಿಗೆ [illegible] [illegible] [illegible] [illegible] [illegible] [illegible] [illegible] [illegible] ಆ ಕಲ್ಲಿನ ವಿಗ್ರಹವು [illegible] ಅಲ್ಲಿ, ಅದು ಪ್ರತ್ಯಕ್ಷ [illegible] [illegible] ಶಿಷ್ಯೆಯರು ಅಮರರಾದರು ಗಂಗಾದಾಸನ ನಾರಾಯಣ ಮಂದಿರವು [illegible] ಜನಾರ್ಧನನ [illegible] [illegible]

ಜೀವಾಮೃತದಲ್ಲಿ

ಆದು ಆಶಕ್ತತೆಯನ್ನು, ಅದರ ಕಾರಣಗಳು ಯಾವವೆ ಇರಲಿ ಹೋಗಗೊಳಿಸುತ್ತದೆ ನಿಮ್ಮ ದೇಹಕ್ಕೆ ಸಂಪೂರ್ಣ ಹೊಸ ಹುರುಪನ್ನು ಕೊಡುತ್ತದೆ. ಬಲ, ನವಚೇತನವನ್ನು ಕೊಡುತ್ತದೆ.

ಪರಿಣಾಮಗಳು ಕಡುವ ನೋಡಲು, ಇದರ ಪರೀಕ್ಷೆಯನ್ನು ಮಾಡಿರಿ.

ಎಲ್ಲಾ ದವಾಖಾನೆಗಳಲ್ಲಿ ದೊರಕುತ್ತದೆ.

ಆಯುರ್ವೇದಾಶ್ರಮಂ, ಟಿ. ಪೆ. ನಂಬ್ರ 287 ಮದ್ರಾಸು.

ಸ್ಟಾಕಿಸ್ಟರು. — ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು.

ಶ್ರೀ ... ಕರ್ಮಯೋಗ

... ಈ ಭಗವದ್ಗೀತೆಯಲ್ಲಿ ... ಮತ್ತು ಜ್ಞಾನ ... ನಮಗೆ ದೊರೆಯುತ್ತದೆ. ಆದುದರಿಂದಲೇ ಗೀತೆಯು ಧರ್ಮಗ್ರಂಥಗಳಲ್ಲಿ ಅತ್ಯುತ್ಕೃಷ್ಟವೆಂದು ಪ್ರಖ್ಯಾತಿಯನ್ನು ಪಡೆದಿದೆ. ಕೆಲವರು ಗೀತೆಯನ್ನು ಘಾತಕ ಶಾಸ್ತ್ರವೆಂದು ಹೇಳುತ್ತಾರೆ. ಸರಿಯಾಗಿ ವಿಚಾರಮಾಡಿದರೆ ಗೀತೆಯ ನಿಜವಾದ ಉದ್ದೇಶವು ಅರ್ಜುನನಿಗೆ ಯುದ್ಧದಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವದಲ್ಲ. ಹಿಂದೂಧರ್ಮವು ಅಧ್ಯಾತ್ಮಿಕ ಮತ್ತು ಪಾರಮಾರ್ಥಿಕ ಅಡಿಗಲ್ಲಿನ ಮೇಲೆ ಕಟ್ಟಲ್ಪಟ್ಟಿದೆ. ಯಾವ ಸಂದರ್ಭಗಳಲ್ಲಿ ಯುದ್ಧವು ಮನುಷ್ಯನ ಕರ್ತವ್ಯವಾಗಿರುತ್ತದೆಂಬ ಕಠಿಣಸಮಸ್ಯೆಯನ್ನು ಅಧ್ಯಾತ್ಮಿಕ ಮತ್ತು ಪಾರಮಾರ್ಥಿಕ ತತ್ವಗಳ ಮೂಲಕವೇ ಬಿಡಿಸಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ. ಅರ್ಜುನನು ಕುರುಕ್ಷೇತ್ರದಲ್ಲಿ ಮಾಡಿದ ಯುದ್ಧವು ಆತ್ಮರಕ್ಷಾರ್ಥವಾದದ್ದು. ಏಕೆಂದರೆ ತನ್ನ ಸಂಪತ್ತಿನ ರಕ್ಷೆಯೂ ಆತ್ಮರಕ್ಷಣೆಯಲ್ಲಿ ಸೇರುತ್ತದೆ. ಅರ್ಜುನನಿಗೆ ಯುದ್ಧಾರಂಭದಲ್ಲಿ ಹುಟ್ಟಿದ ಅಪ್ರವೃತ್ತಿಯನ್ನು ಮೂಲವಾಗಿಟ್ಟುಕೊಂಡು ಶ್ರೀ ಕೃಷ್ಣನು ತನ್ನ ಅಮೂಲ್ಯವಾದ ಮತ್ತು ಪರಮ ಪವಿತ್ರವಾದ ಗೀತಾಧರ್ಮವನ್ನು ಜಗತ್ತಿನಲ್ಲಿ ಪ್ರಚಾರಪಡಿಸಿದನು. ಯಾವ ಸಂದರ್ಭದಲ್ಲಿ ಯುದ್ಧಮಾಡಬೇಕು, ಯಾವ ಸಂದರ್ಭದಲ್ಲಿ ಯುದ್ಧವನ್ನು ಮಾಡಬಾರದು ಎಂಬ ಯುದ್ಧದ ಕರ್ತವ್ಯ ಮತ್ತು ಅಕರ್ತವ್ಯ ಸಂಬಂಧಪಟ್ಟ ಎರಡು ಅನುಷ್ಠಾನಗಳನ್ನು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಮೊದಲನೆಯದು.—ಅಧ್ಯಾತ್ಮಿಕ ಎಂದರೆ, ಆತ್ಮನು ನಿತ್ಯನು ಸಾವಿಲ್ಲದವನು ಎಂಬ ಪವಿತ್ರವಾದ ಜ್ಞಾನ ಮೂಲಕವಾದ ದಾರಿ. ಇದಕ್ಕೆ ಜ್ಞಾನಯೋಗ ಮತ್ತು ಸಾಂಖ್ಯಯೋಗವೆಂದು ಹೆಸರು. ಶ್ರೀ ಕೃಷ್ಣನು ಮೂರನೇ ಅಧ್ಯಾಯದಲ್ಲಿ ಜ್ಞಾನಯೋಗವನ್ನು ಮೊದಲು ಸಂಕ್ಷೇಪವಾಗಿ ವಿವರಿಸಿ ಕರ್ಮಯೋಗವನ್ನು ಅನಂತರ ಸವಿಸ್ತಾರವಾಗಿ ವಿವರಿಸುತ್ತಾನೆ. ಈ ಜ್ಞಾನಯೋಗವನ್ನು ಮತ್ತು ಕರ್ಮಯೋಗವನ್ನು ತಿಳಿದರೆ ಗೀತೆಯು ಭಕ್ತಿಶಾಸ್ತ್ರವೆಂದು ಖಚಿತವಾಗುತ್ತದೆ.

ಶ್ರೀಕೃಷ್ಣನು ಕರ್ಮಯೋಗದ ಪ್ರಸಂಶೆಯನ್ನು ಮಾಡಿ ಅರ್ಜುನನಿಗೆ ಕರ್ಮದಲ್ಲಿ ಉತ್ಸಾಹ ಅಥವಾ ಪ್ರವೃತ್ತಿಯನ್ನು ಹುಟ್ಟಿಸಲಿಕ್ಕಾಗಿ ಹೀಗೆಂದು ಹೇಳುತ್ತಾನೆ—"ಮನುಷ್ಯನಿಗೆ ಒಂದು ಕ್ಷಣವಾದರೂ ನಿಷ್ಕರ್ಮನಾಗಿರಲಿಕ್ಕೆ ಸಾಧ್ಯವಿಲ್ಲ. ಒಬ್ಬನು ತಾನು ಕರ್ಮವನ್ನು ಮಾಡುವುದಿಲ್ಲವೆಂದರೂ ಪ್ರಕೃತಿಯಿಂದ ಹುಟ್ಟಿದ ಸತ್ವ, ರಜ, ತಮವೆಂಬ ಗುಣಗಳಿಗೆ ವಶನಾಗಿ ಆತನು ಕರ್ಮವನ್ನು ಮಾಡಲೇಬೇಕಾಗುತ್ತದೆ." ಆದುದರಿಂದ ಕರ್ಮವನ್ನು ಮಾಡಲೇಬೇಕು. ಕರ್ಮವೆಂದರೆ ಯಾವುದು? ತನ್ನ ಕಲ್ಯಾಣದ ಇಚ್ಛೆಯಿಂದ ದೇವತೆಗಳ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ಮಾಡುವ ಯಜ್ಞಯಾಗಾದಿ ಕಾಮ್ಯಕರ್ಮಗಳೇ ಕರ್ಮವೆಂಬ ಭಾವನೆಯು ವೇದಕಾಲದಿಂದಲೂ ಇತ್ತು. ಆದರೆ ಶ್ರೀಕೃಷ್ಣನು ಹೇಳುವ 'ಕರ್ಮ'ವೆಂದರೆ ಬರೀ ವೇದೋಕ್ತ ಸಂಪ್ರದಾಯದ ಕರ್ಮವಲ್ಲ. ಶ್ರೀಕೃಷ್ಣನು ಅರ್ಜುನನಿಗೆ ಹೀಗೆಂದು ಹೇಳಿರುವನು "ಫಲಸಾಧನರೂಪವಾದ ಕರ್ಮವೇ ಹೊರತು ಇನ್ನೇನೂ ಇಲ್ಲವೆಂದು ಮೂರ್ಖರು ಆಶಾಬದ್ಧರಾಗಿ ಸ್ವರ್ಗಾದಿಗಳೇ ಪರಮ ಪುರುಷಾರ್ಥವೆಂದೂ, ಜನ್ಮವು ... ಕರ್ಮದ ಫಲವೆಂದೂ ... ಕಾಮ್ಯಕರ್ಮಗಳನ್ನು ... ಶಾಸ್ತ್ರವೆಂದು ಭಾವಿಸುವವರು ಅವರು ಮೂರ್ಖರು. ಹೀಗೆ ... ಭೋಗೈಶ್ವರ್ಯಾದಿಗಳ ಆಸಕ್ತಿಯಿಂದ ಅಪಹೃತವಾದ ಅವರ ವ್ಯವಸಾಯಾತ್ಮಿಕ 'ಬುದ್ಧಿಯು' ಸಮಾಧಿ ಅಥವಾ ಧ್ಯಾನದಲ್ಲಿ ಎಂದೂ ನಿಲ್ಲಲಾರದು." ಶ್ರೀಕೃಷ್ಣನ ಈ ಮಾತುಗಳಿಂದ ವೈದಿಕಕರ್ಮವೆಂದು ಹೇಳುವ ಕಾಮ್ಯಕರ್ಮಗಳ ಅನುಷ್ಠಾನವು ಧರ್ಮವಲ್ಲವಾದರೂ, ಪ್ರತಿಯೊಬ್ಬನೂ ಕರ್ಮವನ್ನು ಮಾಡಲೇಬೇಕೆಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಮನುಷ್ಯನು ಯಾವ ಕರ್ಮಗಳನ್ನು ಮಾಡಬೇಕು? ಯಾವದು ಕಾಮ್ಯವಲ್ಲವೋ ಅಂತಹ ನಿಷ್ಕಾಮಕರ್ಮಗಳನ್ನೇ ಮನುಷ್ಯನು ಆಚರಿಸಬೇಕು. ಈ ತರದ ಕರ್ಮಮಾರ್ಗವು ನಿಷ್ಕಾಮಧರ್ಮವೆಂದು ಕರೆಯಲ್ಪಡುತ್ತದೆ. ಮನುಷ್ಯನ ಶ್ರೇಷ್ಠವಾದ ಅನುಷ್ಠಾನವೆಂದರೆ ಇದೇ ನಿಷ್ಕಾಮಕರ್ಮದ ಸ್ವರೂಪವನ್ನು ಶ್ರೀಕೃಷ್ಣನು ಅರ್ಜುನನಿಗೆ ಹೀಗೆಂದು ಹೇಳಿರುತ್ತಾನೆ—

"ನಿನಗೆ ಕರ್ಮದಲ್ಲಿ ಮಾತ್ರ ಅಧಿಕಾರ. ಫಲವನ್ನು ಯೋಚಿಸುವದು ನಿನ್ನ ಅಧಿಕಾರವಲ್ಲ. ಫಲವನ್ನೇ ಕಾರಣವಾಗಿಟ್ಟುಕೊಂಡು ಕರ್ಮವನ್ನಾಚರಿಸಬೇಡ. ಆದರೆ ಕರ್ಮತ್ಯಾಗದ ಕಡೆಗೆ ನಿನ್ನ ಪ್ರವೃತ್ತಿಯನ್ನು ಇಡಲೇಬಾರದು ಮತ್ತು ನೀನು ಯೋಗಸ್ಥನಾಗಿ ಸಂಗವನ್ನು ತ್ಯಜಿಸಿ ಕರ್ಮವನ್ನು ಮಾಡು." ಸಂಗವೆಂದರೆ ಆಸಕ್ತಿ. ನಾವು ಯಾವ ಕರ್ಮವನ್ನು ಮಾಡುವಾಗಲೂ ಆ ಕರ್ಮದ ಮೇಲೆ ನಮ್ಮ ಪ್ರೀತಿ ಅಥವಾ ಅನುರಾಗವಿಡಬಾರದು. ಕರ್ಮವನ್ನು ಮಾಡಬೇಕು. ಆದರೆ, ಅದರಿಂದ ಸ್ಥಿತಿಯು ಆಗಲಿ ಆಗದಿರಲಿ, ಎರಡನ್ನೂ ಸಮಾನವೆಂದು ಭಾವಿಸಬೇಕು. ಆ ಕರ್ಮಾಚರಣೆಯಲ್ಲಿ ಸಿದ್ಧಿಯಾದರೆ ಆನಂದವನ್ನೂ, ಸಿದ್ಧಿಯಾಗದಿದ್ದರೆ ದುಃಖವನ್ನೂ ಪಡದೆ ಸಿದ್ಧಿಯನ್ನೂ ಅಸಿದ್ಧಿಯನ್ನೂ ಸರಿಸಮಾನವೆಂದು ತಿಳಿಯುವ ಜ್ಞಾನವೇ ಯೋಗವೆಂದರ್ಥ. ಈ ರೀತಿಯಲ್ಲಿ ಯೋಗಯುಕ್ತನಾಗಿ ಕರ್ಮಾಸಕ್ತಿ ಇಟ್ಟಿಡದೆ ಮಾಡುವ ಕರ್ಮಾನುಷ್ಠಾನವೇ ನಿಷ್ಕಾಮಕರ್ಮಾಚರಣೆ ಎನಿಸುತ್ತದೆ. ಈ ನಿಷ್ಕಾಮಧರ್ಮದ ಪ್ರವರ್ತಕನಾದ ಶ್ರೀಕೃಷ್ಣನು ಇದನ್ನು ಇನ್ನೂ ವಿವರಿಸಿ ಅರ್ಜುನನಿಗೆ ಹೀಗೆಂದು ಹೇಳಿರುವನು. ಭಗವದುದ್ದೇಶವಾಗಿ ಮಾಡುವ ಕರ್ಮದ ಹೊರತು ಇತರ ಕರ್ಮವೆಲ್ಲವೂ ಲೋಕಕ್ಕೆ ಬಂಧಕವಾಗುವುದು. ಆದುದರಿಂದ ಆಸಕ್ತಿಯನ್ನು ಬಿಟ್ಟು ಭಗವದುದ್ದೇಶವಾದ ಕರ್ಮಗಳನ್ನಾಚರಿಸು." ಶ್ರೀಕೃಷ್ಣನು ಹೇಳಿದ ತಾತ್ಪರ್ಯವೇನೆಂದರೆ—ಈಶ್ವರನನ್ನು ಉದ್ದೇಶಿಸಿ ಅಥವಾ ಈಶ್ವರನಿಗೋಸ್ಕರ ಮಾಡುವ ಕರ್ಮವೇ ಕರ್ಮವು. ಇದಲ್ಲದೆ ಇತರ ಕರ್ಮವೆಲ್ಲವೂ ಬಂಧನಕ್ಕೆ ಕಾರಣವಾದುದರಿಂದ ಈಶ್ವರ ಸಮ್ಬಂಧವಾಗಿರದ ಯಾವ ಕರ್ಮವನ್ನೂ ಮಾಡಕೂಡದು. ಹೀಗೆ ಈಶ್ವರಸಮ್ಬಂಧವಾದ ಕರ್ಮಗಳನ್ನಾಚರಿಸುವುದರಿಂದ ಸಕಲವೃತ್ತಿಗಳೂ ಈಶ್ವರಾಭಿಮುಖವಾಗಲೇಬೇಕು. ಎಲ್ಲಾ ವೃತ್ತಿಗಳೂ ಈಶ್ವರಾನುವರ್ತಿಗಳಾಗದಿದ್ದರೆ ಸಕಲ ಕರ್ಮಾಚರಣೆಯನ್ನು ಈಶ್ವರೋದ್ದಿಷ್ಟವಾಗಿ ಮಾಡಲು ಸಾಧ್ಯವೇ ಇಲ್ಲ. ಸಕಲವೃತ್ತಿಗಳೂ ಈಶ್ವರಾಭಿಮುಖವಾಗಿರುವುದೇ "ಭಕ್ತಿ" ಎಂದ ಬಳಿಕ ಈ ನಿಷ್ಕಾಮಧರ್ಮಕ್ಕೂ ಭಕ್ತಿಗೂ ವ್ಯತ್ಯಾಸವೆಲ್ಲಿದೆ? ನಿಷ್ಕಾಮಧರ್ಮವೇ ಭಕ್ತಿ. ಭಕ್ತಿಯೇ ನಿಷ್ಕಾಮಧರ್ಮ. ಕರ್ಮ ಮತ್ತು ಭಕ್ತಿಯ ಐಕ್ಯದವಿಷಯವಾಗಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ವಿವೇಕಬುದ್ಧಿಯಿಂದ ಸಕಲಕರ್ಮಗಳನ್ನು ನನಗೆ ಅರ್ಪಿಸಿ, ಆ ಕರ್ಮಗಳಲ್ಲಿ ಆಸಕ್ತಿ ... ಅಹಂಕಾರದ ಅಭಿಮಾನವನ್ನು ತ್ಯಜಿಸಿ ... ಯುದ್ಧವನ್ನು ಮಾಡು" ... ಹೇಳಿರುವನು.

ಮನುಷ್ಯನು ಅನುಷ್ಠೇಯ ಕರ್ಮಗಳನ್ನು ಮಾಡಲೇಬೇಕು ... ಎಲ್ಲಾ ವಿಧದ ಕರ್ಮವೂ ಅನುಷ್ಠೇಯ ... ಈಶ್ವರೋದ್ದಿಷ್ಟವಾಗಿಯೂ ಈಶ್ವರ ... ಆಚರಿಸುವ ಕರ್ಮಗಳು ಅನುಷ್ಠೇಯ ಕರ್ಮಗಳೆನಿಸುತ್ತವೆ. ಅಂತಹ ಕರ್ಮಗಳಲ್ಲಿ ಆಸಕ್ತಿಯನ್ನೂ ಫಲಾಪೇಕ್ಷೆಯನ್ನೂ ತೊರೆದ ಅವುಗಳನ್ನು ಆಚರಿಸಬೇಕು. ಆ ಕರ್ಮಾಚರಣೆಯಲ್ಲಿ ಸಿದ್ಧಿಯಾದರೂ, ಸಿದ್ಧಿಯಾಗದಿದ್ದರೂ ಎರಡನ್ನೂ ಸಮತುಲ್ಯವೆಂದೆಣಿಸಬೇಕು. ... ಕರ್ಮವನ್ನು ಮಾಡತಕ್ಕವನು ಈಶ್ವರನೆಂದೂ ತಾನು ಆತನ ಭೃತ್ಯನಾಗಿ ಕರ್ಮಾಚರಣೆಯನ್ನು ಮಾಡುತ್ತಿರುವನೆಂದೂ ಮನೋನಿರ್ಧಾರವುಳ್ಳವನಾಗಿ ಕರ್ಮವನ್ನು ಈಶ್ವರಾರ್ಪಣ ಮಾಡಬೇಕು. ಈ ತರದ ಕರ್ಮಾಚರಣೆಯೇ ಕರ್ಮಯೋಗ. ಇದೇ ನಿಷ್ಕಾಮ ಧರ್ಮ. ಈ ನಿಷ್ಕಾಮ ಧರ್ಮವನ್ನು ಆಚರಿಸುವುದರಿಂದ ನಮ್ಮ ಕಾಯಕವಾಚಿಕ, ಶಾರೀರಿಕ ಮೊದಲಾದ ವೃತ್ತಿಗಳೆಲ್ಲವೂ ಈಶ್ವರಾನುವರ್ತಿಗಳಾಗುತ್ತವೆ. ಆದುದರಿಂದಲೇ ಭಕ್ತಿಯೋಗಕ್ಕೂ, ಕರ್ಮಯೋಗಕ್ಕೂ ಭೇದವೇನೂ ಇಲ್ಲ. ಕರ್ಮಯೋಗಕ್ಕೂ, ಭಕ್ತಿಯೋಗಕ್ಕೂ ಇರುವ ಈ ಐಕ್ಯ ಮತ್ತು ಸಾಮಂಜಸ್ಯವನ್ನು ಪರಿಶೀಲಿಸಿದರೆ ಇಂತಹ ಅಪೂರ್ವವಾದ ತತ್ವವೂ, ಧರ್ಮವೂ ಶ್ರೀಕೃಷ್ಣನಿಂದ ಹೇಳಲ್ಪಟ್ಟ ಗೀತೆಯಲ್ಲಿ ಅಲ್ಲದೆ ಇನ್ನಾವುದರಲ್ಲಿಯೂ ಇಲ್ಲವೆಂದು ಹೇಳಬಹುದು. ಕರ್ಮವೇ ಧರ್ಮದ ಮೊದಲನೇಯ ಮೆಟ್ಟಲು.

ರಾಮದಾಸ.


... ಚಿಕಿತ್ಸೆ ಚಟಕಾರ.

ಮೇಹರೋಗ, ಶರೀರದೌರ್ಬಲ್ಯ, ನಿಶ್ಶಕ್ತಿ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ.,
ಆಯುರ್ವೇದಿಕ್ ವೈದ್ಯರು, ಪೆರಡೇಲು.
P. O. Peridepu (ಸೌತ್ ಕೆನರಾ ಡಿ.)

ಹಂಸಾ ಸ್ನೋ ಮತ್ತು ಬ್ರಿಲ್ಲಿಯಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ದ. ಕ. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಯ ಹೇಳಿಕೆ

ಶ್ರೀ ಕೆ. ಕೆ. ಶೆಟ್ಟರ ಅನುಮಾನ ಹಾಗೂ ಆರೋಪಗಳಿಗೆ ಉತ್ತರ

ಪಾರ್ಟಿಯ ಮೀಟಿಂಗಿನಲ್ಲಿ ಚರ್ಚಾಸ್ಪದವಾದ ವಿಷಯಗಳು ಎಷ್ಟೋ ಬಂದಿರಬಹುದು. ಆದರೆ ಅವುಗಳ ಆಧಾರದ ಮೇಲೆ ಯಾವುದಾದರೂ ನಿರ್ಧಾರ, ಊಹೆ, ಟೀಕೆಗಳನ್ನು ಬರೆಯುವುದು ಪಾರ್ಟಿ ಮೆಂಬರರಲ್ಲದ ಶ್ರೀ. ಶೆಟ್ಟರಿಗೆ ಎಷ್ಟು ಮಾತ್ರವೂ ನ್ಯಾಯವಲ್ಲವೆಂದು ಪಾರ್ಟಿಯು ಅಭಿಪ್ರಾಯಪಡುತ್ತದೆ.

ಪಾರ್ಟಿಯು ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದ ಒಂಭತ್ತರ ಸಮಿತಿ'ಯವರು ಆಯಾ ಸ್ಟ್ಯಾಂಡಿಂಗ್ ಕಮಿಟಿಗೆ ಬೇಕಾದ ಬೋರ್ಡಿನ ... ಹಾಗೂ ಹೊರಗಣವರನ್ನು ಆರಿಸಿ ನಿರ್ಧಾರಕ್ಕೆ ಬಂದುದನ್ನು ಪಾರ್ಟಿಯ ಮೆಂಬರರಲ್ಲಿ ... ಪಟ್ಟಿ ತಿಳಿದುಕೊಳ್ಳದಿದ್ದರೂ ... ಮೊದಲೇ ತಿಳಿದಿದ್ದ ... ಆ ವಿಚಾರವು ಸಮಿತಿಯ ... ಪಾರ್ಟಿ ಮೆಂಬರರೊಳಗಣ ಸಂಬಂಧದ ... ಮೆಂಬರರಲ್ಲದ ಶ್ರೀ. ಕೆ. ಕೆ. ಶೆಟ್ಟರಿಗೆ ಆ ಕುರಿತು ಯಾವ ಅಭಿಪ್ರಾಯವನ್ನೂ ಪಾರ್ಟಿಯ ವಿಷಯ ಹೇಳುವ ಯಾವ ಅಧಿಕಾರವೂ ಇರುವುದಿಲ್ಲವೆಂದೂ ಪಾರ್ಟಿಯ ಪತಿಯಿಂದ ಒಮ್ಮೆ ಶ್ರೀ. ಶಿವರಾಮ ಶೆಟ್ಟರು ಓದಿ ಹೇಳಿದ ಸದಸ್ಯರುಗಳು ಮತ್ತು ಹೊರಗಣವರ ಹೆಸರು ಪಾರ್ಟಿಯ ಅನುಮೋದನೆಯದ್ದೇ ಇರುತ್ತವೆಯೆಂದೂ ಪಾರ್ಟಿಯು ಸ್ಪಷ್ಟಪಡಿಸುತ್ತದೆ. ಅರ್ಜಿಯನ್ನು ಶ್ರೀ ಶೆಟ್ಟರು ಕೊಟ್ಟುದನ್ನು ಯಾ ಅವರಂತೆ ಬೇರೆಯವರು ಕೊಟ್ಟರೂ ಸ್ವೀಕರಿಸುವುದು ಲೀಡರ ಯಾ ಲೀಡರ ಸ್ಥಾನದಲ್ಲಿದ್ದವರ ಕರ್ತವ್ಯ. ಅಂತೆಯೇ ಲೀಡರರ ಸ್ಥಾನದಲ್ಲಿದ್ದ ಡೆಪ್ಯುಟಿ ಲೀಡರರು ಅರ್ಜಿಯನ್ನು ಸ್ವೀಕರಿಸಿದುದಿದ್ದರೆ ಅದು ಸರಿಯೆಂದೂ ಆ ಕುರಿತು ಮೊದಲೇ ಆಗಿದ್ದ ನಿರ್ಧಾರವನ್ನು ಶ್ರೀ. ಶೆಟ್ಟರಿಗೆ ಲೀಡರರ ಸ್ಥಾನದಲ್ಲಿದ್ದ ಡೆಪ್ಯುಟಿ ಲೀಡರರ ತಿಳಿಸಲೇ ಬೇಕೆಂಬ ಯಾವ ನಿರ್ಧಾರವೂ ಇಲ್ಲದಿರುತ್ತಾ, ಅವರು ತಿಳಿಸದೆ ಇದ್ದರೆ ಅದು ಅವರಿಂದ ತಪ್ಪಾಗುವುದಿಲ್ಲವೆಂದೂ ಪಾರ್ಟಿಯ ಅಭಿಪ್ರಾಯ.

ಪಾರ್ಟಿಯ ಮೆಂಬರರಲ್ಲದ ಶ್ರೀ. ಪಿ. ಜಿ. ಆಚಾರ್ಯ ಅವರು ಸೂಚಿಸಿದ ಹೆಸರನ್ನು ಅನುಮೋದಿಸುವಂತೆ ಪಾರ್ಟಿ ಮೆಂಬರರಲ್ಲೊಬ್ಬರಾದ ಶ್ರೀ ಫೆರ್ನಾಂಡೀಸರನ್ನು ಶ್ರೀ. ಶೆಟ್ಟರು ಒತ್ತಾಯಪಡಿಸಿದ ದನ್ನು ನೋಡುವಾಗ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾಗಿ ... ಶಿಸ್ತನ್ನು ಊರಿಗೆ ಹೇಳಿಕೊಡಬೇಕಿದ್ದ ಶ್ರೀ ಶೆಟ್ಟರು ಕಾಂಗ್ರೆಸ್ಸಿನ ಆಜ್ಞೆ ... ನಡೆಯಲು ಬದ್ಧ ... ಬೋ ಕಾಂಗ್ರೆಸ್ ಪಾರ್ಟಿಯಲ್ಲಿ ಶಿಸ್ತು ಇರಬಾರದೆಂದು ತಾವೇ ಉದ್ದೇಶಪೂರ್ವಕ ಇಚ್ಛಿಸಿ ಆ ರೀತಿ ಪ್ರವೃತ್ತಿಸಿದುದು ಎಷ್ಟು ಮಾತ್ರಕ್ಕೂ ಸಮಂಜಸವಲ್ಲವೆಂದು ಪಾರ್ಟಿಯು ಅಭಿಪ್ರಾಯಪಡುತ್ತದೆ.

ಜಿಲ್ಲಾ ಕಾಂಗ್ರೆಸ್ ಸೆಕ್ರೆಟರಿಯವರ ಹೆಸರನ್ನು ಕಾಂಗ್ರೆಸ್ ವಿರೋಧಿಗಳೊಬ್ಬರು ಸೂಚಿಸಿದುದರ ಪರಿಣಾಮವಾಗಿ ಮಾತ್ರವಲ್ಲ ಪಾರ್ಟಿಯ ಪತಿಯಿಂದ ಮೊದಲೇ ಇಬ್ಬರ ಹೆಸರು ಅನುಮೋದಿಸಲ್ಪಟ್ಟಿರುತ್ತಾ ಅತ್ತ ಕಾಂಗ್ರೆಸ್, ಇತ್ತ ಡಿ ಬೋ ಪಾರ್ಟಿಗಳ 'ಶಿಸ್ತು' ಭಂಗವಾಗಬಾರದೆಂಬುದಕ್ಕಾಗಿ ಮಾತ್ರ ಬೋರ್ಡು ಮೆಂಬರರು ಶ್ರೀ. ಶೆಟ್ಟರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆಯಬೇಕೆಂದು ಅವರ ಧರ್ಮಬುದ್ಧಿಗೆ ಮನವಿಮಾಡಿಕೊಂಡಿದ್ದುದಾಗಿತ್ತು. ಹೊರತು ಶ್ರೀ. ಶೆಟ್ಟರು ತಮ್ಮ ಉಮೇದ್ವಾರಿಕೆಯನ್ನು ಮಾಡದೊತ್ತಿದುದು ಯಾ ಶ್ರೀ. ಆಚಾರ್ಯರು ಅನುಮೋದಿಸಿದೊಡನೆಯೇ ಹಿಂತೆಗೆಯದಿದ್ದುದು ನ್ಯಾಯವೆಂದು ಪಾರ್ಟಿಯ ಯಾವ ಮೆಂಬರನೂ ಅಭಿಪ್ರಾಯ ಪಟ್ಟಿಲ್ಲವೆಂದು ಪಾರ್ಟಿಯು ಸರ್ವಾನುಮತಿಯಿಂದ ಸ್ಪಷ್ಟೀಕರಿಸುತ್ತದೆ.

ಬಿ. ವೈಕುಂಠ ಬಾಳಿಗಾ ಲೀಡರ್,
ದ. ಕ. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿ.

ಮಂಗಳೂರಿನ ಸಮಾಚಾರ — ತಾಲೂಕಿನ ಸಮಾಚಾರ

...ನಾಯಕರಾದ ಶ್ರೀ. ...ಮಂಗಳೂರಿಗೆ ಬಂದು ...ಗುರುವಾರ ಇಲ್ಲಿಂದ ಹಿಂತೆರಳು... ಕಾರ್ಯಕ್ರಮವನ್ನು ಸ್ಥಳೀಯ ...ದವರೊಡನೆ ವಿಚಾರಿಸಿ ತಿಳಿದು ...ದು.

...ಘಾತ

...ದ ತಾ. 9ರಲ್ಲಿ ಕಡೂರಿನಿಂದ ಬಂದ ...ಬಸ್ಸು ವೆನ್‌ಲೋಕ್ ಆಸ್ಪತ್ರೆಯ ಬಳಿ ...ಗ ಸುಮಾರು 28 ವರ್ಷದ ಒಬ್ಬ ಕೂ...ಬಸ್ಸಿನ ಒಂದು ಬದಿಯನ್ನು ಹಿಡಿದು ...ಕೈತಪ್ಪಿಬಿದ್ದು ಬಸ್ಸಿನ ಹಿಂದಿನ ಚಕ್ರವು ...ನ ಒಂದು ಕಾಲಿನ ಮೇಲೆ ಹೋಗಿ ...ಯಾಯಿತು. ಆತನನ್ನು ಕೂಡಲೇ ಆಸ್ಪತ್ರೆಗೆ ಒಯ್ಯಲಾಯಿತು.

...ಚೀನ ನರ್ತನದ ಪ್ರಶಂಸೆ

...ಪ್ಯಾರಿಸಿನ ಇಂಟರ್ ನೆಶನಲ್ ಡ್ಯಾನ್ಸ್ ...ಸೋಸಿಯೇಷನಿನ ಪ್ರೆಸಿಡೆಂಟರಾದ ಎಂ. ರಾ..., ಡಿ ಮಾರಿಯವರು ಬಾಲಿ ಮೊದಲಾದ ...ಪ್ರಾಚ್ಯ ದ್ವೀಪಗಳ ಸಂದರ್ಶನವನ್ನು ಮುಗಿ...ಕೊಂಡು ತಾ 9ಕ್ಕೆ ಇಲ್ಲಿಗೆ ಬಂದು ಉರುವ...ಕೋಲ ಕುಣಿಯುವುದೂ ಮೊದಲಾದ ...ಕ ತರದ ನೃತ್ಯಗಳನ್ನು ನೋಡಿದರು. ...ಉದಿನ ಸಂಜೆಗೆ ಬಿಸೆಂಟ್ ಗರ್ಲ್ಸ್ ಸ್ಕೂಲಿ...ನ ಯಕ್ಷಗಾನ ನರ್ತನಗಳನ್ನೂ ಶ್ರೀ. ಕೋಟ ...ರಾಮ ಕಾರಂತರ ಕಲಾಪ್ರದರ್ಶನ ನೃತ್ಯಗ...ನ್ನು ನೋಡಿ ಬಹೂ ಸಂತೋಷಗೊಂಡರು ...ಯ ನರ್ತನಗಳಲ್ಲಿ ಒಂದು ವಿಶೇಷ ವ್ಯಕ್ತಿ...ವಿದೆ, ಈ ವಿಷಯ ಇನ್ನೂ ಹೆಚ್ಚಿನದನ್ನು ...ಭ್ಯಾಸಿಸುವುದಕ್ಕೆ ತಾನು ಇನ್ನೊಂದಾವರ್ತಿ ...ವೆನೆಂದು ಹೇಳಿ ಮಾರನೆ ದಿವಸ ಕೊನರ್ಕ ...ಕಥಕ್ಕಳಿಯ ವಿಷಯ ತಿಳಿದುಕೊಳ್ಳಲು ...ಹೋದರು

...ಬ್ಲಿಕ್ ಪ್ರೊಸೆಕ್ಯೂಟರ್ ಸ್ಥಾನಕ್ಕೆ

ಮಂಗಳೂರಿನ ಬಾರ್ ಎಸೋಸಿಯೇಶ...ನವರು ಪಬ್ಲಿಕ್ ಪ್ರೊಸೆಕ್ಯೂಟರ್ ಸ್ಥಾನಕ್ಕೆ ...ದ ಚುನಾವಣೆಯು ಸರಿಯಲ್ಲವೆಂದು ಹೇಳಿ ...ಕಾರವು ಶ್ರೀ ಕೆ. ಕೆ. ನಂಬಿಯಾರರನ್ನು ...ಬ್ಲಿಕ್ ಪ್ರೊಸೆಕ್ಯೂಟರ ಸ್ಥಾನಕ್ಕೆ ಚುನಾಯಿ...ಸಿದೆಂದು ವಾರ್ತೆ.

...ರ್ ಎಸೋಸಿಯೇಷನಿಗೆ
...ಜರಿಯುವರ ಸಮಾಧಾನಕರ ಉತ್ತರ

ಮಾನ್ಯ ಮುಖ್ಯ ಮಂತ್ರಿಯವರು ಅಲ್ಲ...ವಕೀಲರಿಗೆ ದೂಷಿಸಿ ಭಾಷಣ ಕೊಟ್ಟಿರುವ...ದೂ ಅದನ್ನು ಈ ಸಭೆಯು ಖಂಡಿಸುತ್ತ...ದೂ ಇಲ್ಲಿಯ ಬಾರ್ ಎಸೋಸಿಯೇಷನಿನ ...ಮಾಡಿದ ತಂತಿಗೆ ರಾಜಾಜಿಯವರು ತಾ...ವಕೀಲರನ್ನು ದೂಷಿಸಲಿಲ್ಲವೆಂಬ ಸಮಾಧಾ...ದ ಉತ್ತರವನ್ನು ಕಳುಹಿಸಿದ್ದಾರೆಂದು ವಾರ್ತೆ.

...ಯೋಜಿತ ಪ್ರವಾಸ.

...ಕಮಲಾದೇವಿಯವರು ಸಧ್ಯದಲ್ಲೆ ...ಪ್ರವಾಸವನ್ನು ಮಾಡಲಿರುವರೆಂ...ದು ತಿಳಿದುಬಂದಿದೆ.

...

...ಗಾಗಲಿ ಬಹುಕಾಲವಾಗಿದ್ದರೆ ...

...9-10-1938ರಂದು... ...ಮಧ್ಯಾಹ್ನ... ಗಂಟೆಗೂ, ...ಗುರುವಾರ ಬೆಳಿಗ್ಗೆ 7 ಗಂಟೆಗೂ ಮಂ...ಗಳೂರಿಗೆ ಬಂದು ಮರುದಿನ 8-45 ಘಂಟೆಗೆ ಮಂಗಳೂರಿನಿಂದ ಹೊರಟು ಒಂದು ಗುರುವಾರ ಮಧ್ಯಾಹ್ನ ಎರಡು ಗಂಟೆಗೆ ಇನ್ನೊಂದು ಆದಿತ್ಯವಾರ ಬೆಳಿಗ್ಗೆ ಒಂಬತ್ತು ಗಂಟೆಗೆ ಬೊಂಬಾಯಿಯನ್ನು ತಲ್ಪುವುವು. ಅಪ್ಪರ್ ಕ್ಲಾಸಿನ ದರವನ್ನು 15 ರೂಪಾಯಿಯಿಂದ 11½ಗೆ ಇಳಿಸಲಾಗಿದೆ

ಶ್ರೀಕೃಷ್ಣ ವಿಠಲ ಕೀರ್ತನಮಂಡಳಿ

ಇದರ 18ನೇ ವಾರ್ಷಿಕೋತ್ಸವವು ಇದೇ ತಾ 11ನೇ ಗುರುವಾರ ಮಂಡಳಿಯ ಹೊಸತಾಗಿ ಕಟ್ಟಿಸಿದ ಕಟ್ಟಡದಲ್ಲಿ ಚೆಯರ್‌ಮೇನರಾದ ಶ್ರೀ. ಬಿ. ವೈಕುಂಠ ಬಾಳಿಗಾ ಎಂ. ಎಲ್. ಎ ಯವರ ಅಧ್ಯಕ್ಷತೆಯಲ್ಲಿ ಜರಗಿತು

ಇದೇ ಅಗೋಸ್ತು ತಿಂಗಳ ತಾ 20ನೇ ಶನಿವಾರ ಅಪರಾಹ್ನ ಘಂಟೆ 4ರಿಂದ 6ರ ವರೆಗೆ ಕನ್ನಡ ತೊರವೆ ರಾಮಾಯಣದ ಪಾದುಕಾ ಪಟ್ಟಾಭಿಷೇಕದ ವಾಚನವು ಶ್ರೀ ಮಹಾಬಲ ಷೆಣಂದರು ಓದುವಿಕೆಯಿಂದಲೂ ಶ್ರೀ ಕೆ. ಬಾಲಕೃಷ್ಣರಾವ್, ಎಡ್ವೋಕೇಟ್ ಇವರ ವಿವರಿಸುವಿಕೆಯಿಂದಲೂ ಶ್ರೀ ಮಹಾಗಣಪತಿದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ನೆರವೇರಲಿರುವದು ಸರ್ವರಿಗೂ ಸುಸ್ವಾಗತವಿದೆ

ದಿ ಸೌತ್ ಕೆನರಾ ಮೋಟಾರ್ ಯೆಂಪ್ಲೊಯೀಸ್ ಯೂನಿಯನ್

ಈ ಸಂಘವು ತಾ 19-7-38ರಲ್ಲು ಮಾನ್ಯ ಲೇಬರ್ ಕಮಿಷನರರಿಂದ ರಿಜಿಸ್ಟ್ರಿ ಮಾಡಲ್ಪಟ್ಟು, ನಂಬ್ರ 102ನೇ ಸರ್ಟಿಫಿಕೇಟು ಈ ಸಂಘಕ್ಕೆ ಕೊಡಲಾಗಿರುತ್ತದೆ ರಿಜಿಸ್ತ್ರಿಯಾಗುವ ಸಮಯ ಈ ಸಂಘದಲ್ಲಿ ಸುಮಾರು 620 ಮಂದಿ ಸದಸ್ಯರಿದ್ದರು. ಈ ವಿಚಾರವನ್ನು ಮಾನ್ಯ ಲೇಬರ್ ಕಮಿಷನರರಿಗೆ ತಿಳಿಸಿರುತ್ತದೆ ಸಂಘದ ಸದಸ್ಯರ ಸಂಖ್ಯೆಯನ್ನು ಇನ್ನೂ ಹೆಚ್ಚಿಸುವ ಉದ್ದೇಶ್ಯ ಮತ್ತು ಅವರಲ್ಲಿ ಹೆಚ್ಚಿನ ಐಕ್ಯತೆಯನ್ನು ಸ್ಥಾಪಿಸುವ ಉದ್ದೇಶ್ಯ ಇದೇ ತಾರೀಕು 12-8-38ರಲ್ಲು, ಈ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಸಂಘದ ಆಫೀಸಿನಲ್ಲಿ, ಸಂಘದ ವೈಸ್ ಪ್ರೆಸಿಡೆಂಟ್ ಶ್ರೀ. ವೆಂಕಟಪ್ಪಯ್ಯ ಬಾಳಿಗ M L A ಇವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಠರಾವುಗಳನ್ನು ಮಂಜೂರು ಮಾಡಲಾಯಿತು.

1 ಯೂನಿಯನಿನ ನಿಬಂಧನಾವಳಿಯನ್ನು ಶ್ರೀ. ಎಸ್ ಎಸ್ ಹೊಳ್ಳರು ಕನ್ನಡದಲ್ಲಿ ತರ್ಜುಮೆ ಮಾಡುವರೆ ಒಪ್ಪಿರುವದರಿಂದ, ಅವರಿಂದ ತರ್ಜುಮೆ ಮಾಡಿಸಿ ಒಂದು ಸಾವಿರ ಪ್ರತಿಗಳನ್ನು ಛಾಪಾ ಮಾಡಿಸಿ ಯೂನಿಯನಿನ ಸದಸ್ಯರಿಗೆ ಹಂಚಿಕೊಡಬಹುದಾಗಿ ನಿರ್ಣಯಿಸಲಾಯಿತು ಇದಕ್ಕೆ ಆಗತಕ್ಕವುಳ್ಳ ಖರ್ಚನ್ನು ಯೂನಿಯನಿನ ಸೆಕ್ರೆಟರಿಯವರು ವೆಚ್ಚಮಾಡಬಹುದು.

2 ಬುಕ್ಕಿಂಗ್ ಕ್ಲಾರ್ಕರು (ಮಂಗಳೂರು ಸೆಂಟರಿನ) ಬರಕೊಂಡಿದ್ದ ಅರ್ಜಿಯು ಓದಲಾಯಿತು ಜಿಲ್ಲೆಯ ಎಲ್ಲಾ ಬುಕ್ಕಿಂಗ್ ಕ್ಲಾರ್ಕರು ಈ ಯೂನಿಯನಿನ ಸದಸ್ಯರಾಗಿ ಸೇರಿ ಎಲ್ಲರೂ ಒಕ್ಕಟ್ಟಾಗಿ, ತಮ್ಮ ಸಂಕಷ್ಟಗಳನ್ನು ಜಿಲ್ಲಾ ಟ್ರಾಫಿಕ್ ಬೋರ್ಡಿನವರ ಕೂಡೆ ಹೇಳಿಕೊಂಡರೆ ಉತ್ತಮವೆಂತ ಈ ಸಭೆಯ ಅಭಿಪ್ರಾಯವಾಗಿರುತ್ತದೆ ಅದ್ದರಿಂದ ಬುಕ್ಕಿಂಗ್ ಕ್ಲಾರ್ಕರು ಈ ಯೂನಿಯನಿನ ಸದಸ್ಯರಾಗಿ ಸೇರಬೇಕಾಗಿ ಅಪೇಕ್ಷಿಸಲಾಗುತ್ತದೆ. ಕನ್ನಡ್ಯ ಈ ಕೆಳಗೆ ಹೆಸರು ಕಾಣಿಸಿದ ಸದಸ್ಯರು ...ಸಂಕಷ್ಟಗಳ ಕುರಿತು ಒಂದು ಅರ್ಜಿಯು ...ಯೂನಿಯನಿಗೆ ...

ತಕ್ಕದ್ದ... ಆ ...ಗಳನ್ನು ...ಪ್ರತಿಗಳನ್ನು ತಯಾರಿಸಿ, ಒಂದೊಂದು ಪ್ರತಿಯನ್ನು ಜಿಲ್ಲಾ ಟ್ರಾಫಿಕ್ ಬೋರ್ಡಿನ ಪ್ರತಿಯೊಬ್ಬ ಮೆಂಬರರಿಗೂ ಒಂದು ಪ್ರತಿಯನ್ನು ಮಾನ್ಯ ಮಂತ್ರಿಗಳಿಗೂ, ಒಂದು ಪ್ರತಿಯನ್ನೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ರವಾನಿಸತಕ್ಕದ್ದು ಟ್ರಾಫಿಕ್ ಬೋರ್ಡಿನವರ ಕೂಡೆ ಬುಕ್ಕಿಂಗ್ ಕ್ಲಾರ್ಕರ ಪರವಾಗಿ, ಅವರ ಪ್ರತಿನಿಧಿಗಳಿಗೆ ಟ್ರಾಫಿಕ್ ಬೋರ್ಡಿನ ಮೀಟಿಂಗಿನ ಸಮಯ, ಅವರ ಸಂಕಷ್ಟಗಳ ಕುರಿತು ಹೇಳಿಕೊಳ್ಳುವರೆ ಅವಕಾಶ ಕೊಡುವಂತೆ ಕೇಳಿಕೊಳ್ಳತಕ್ಕದ್ದು. ಸಾಧ್ಯವಿದ್ದರೆ ಯೂನಿಯನಿನ ವೈಸ್ ಪ್ರೆಸಿಡೆಂಟರು ಕೂಡ (ಆ ದಿವಸದ ಅಧ್ಯಕ್ಷರು) ಪ್ರತಿನಿಧಿಗಳೊಂದಿಗೆ, ಜಿಲ್ಲಾ ಟ್ರಾಫಿಕ್ ಬೋರ್ಡಿನ ಮೀಟಿಂಗಿನ ಸಮಯ ಹೋಗಿ ಅವರ ಸಂಕಷ್ಟಗಳನ್ನು ಹೇಳಿಕೊಳ್ಳತಕ್ಕದ್ದು. ಸಂಘದ ಪರವಾಗಿ ಪ್ರತಿನಿಧಿಗಳಾಗಿ ಈ ಕೆಳಗೆ ಹೆಸರು ಕಾಣಿಸಿದವರನ್ನು ನೇಮಕ ಮಾಡಲಾಯಿತು

1 ರಾಮಕೃಷ್ಣ ಕದಿಯಾರು, 2 ಜಿ. ದಾಮೋದರ ಶೆಣೈ, 3 ಸೋಮಯ್ಯ ಶೆಟ್ಟಿ, 4 ಸುಬ್ರಾಯ ಕಾಮತ್, 5 ಜೆ. ಎಂ. ಸಲ್ಡಾನ.

3 ಶ್ರೀ. ದಾಮೋದರ ಪೈಗಳು ಯೂನಿಯನಿಗೆ ಉಚಿತಾರ್ಥವಾಗಿ ಕೊಟ್ಟ ಕವಾ...

...ಯಲ್ಲಿ ಜಯಶೀಲ ಹರತಾಳ
...ಸಭೆ

ದೇಶಭಕ್ತರಾದ ಶ್ರೀ ಹಲ್ಲನಾಡು ...ಪ್ಪಯ್ಯನವರ ನಿಧನಹೊಂದಿದ ವಾರ್ತೆ ...ದೊಡನೆ, ಕಾಳಾಡಿಯಲ್ಲಿ ಇದೇ ತಾ. ...ನೇ ಗುರುವಾರ ದಿವಸ ಸಾರ್ವತ್ರಿಕ ಹರತಾಳವಾ...ಸಲ್ಪಟ್ಟಿತು. ಪೇಟೆ ಇಡೀ ಮೌನವಾಗಿ ...ತಿತ್ತು ಆ ದಿನ ಸಂಜೆಯಲ್ಲಿ ಒಂದು ಮೈಲುದ್ದದ ಬರಿತಲೆಯ ಮೆರವಣಿಗೆಯು ಕಾಂಗ್ರೆಸ್ ಮಂದಿರದಿಂದ ಹೊರಟು ಬಂಟ್ಸ್ ಮೈದಾನದಲ್ಲಿ ನೂರಕ್ಕೂ ಮಿಕ್ಕಿದ ಜನಸಂದಣಿಯ ಸಭೆ ಕೂಡಿತು. ಮ॥ ರಾ॥ ಲಕ್ಷ್ಮಣ ಪ್ರಭುಗಳು ಅಧ್ಯಕ್ಷರಾಗಿದ್ದರು ಶ್ರೀಗಳಾದ ವೆಂಕ...ಗಿರಿನಾಯ್ಕ, ಮೋನಪ್ಪ ಸೆಟ್ಟಿ. ಗೋವಿಂ...ಪುದುವಾಳ್, ಬಿ ಮಂಜುನಾಥ ನಾಯ್ಕ ಗಣಪಯ್ಯ ಕಮ್ತಿ ಮೊದಲಾದವರು ಶ್ರೀಯುತ...ಗುಣಕಥನ ಮಾಡಿದರು.

...ಟನ್ನು ಧನ್ಯಪೂರ್ವಕವಾಗಿ ಸ್ವೀಕರಿಸಲಾಯಿತು

8) ಮಂಗಳೂರು ಸೆಂಟರಿನ ಬುಕ್ಕಿಂಗ ಕ್ಲಾರ್ಕರು ಯೂನಿಯನಿನ ಪರವಾಗಿ ಕೊಟ್ಟ...ರುವ 'ಮದ್ರಾಸ್ ರೋಡ್ ಟ್ರಾಫಿಕ್ ಕೋಡ 38' ಈ ಪುಸ್ತಕವನ್ನು ವಂದನಾಪೂರ್ವಕವಾ...ಸ್ವೀಕರಿಸಲಾಯಿತು.

ಸಂಯುಕ್ತ ಗೌಡಸಾರಸ್ವತ ಸಭಾ, ಮದ್ರಾಸು.

ತಾ 7 ರಲ್ಲಿ, ಟ್ರಿಪ್ಲಿಕೇನ್‌ನಲ್ಲಿರುವ ಸ್ಪಾರ್ಟ ಮುಖ್ಯಾಫೀಸಿನಲ್ಲಿ ಜರುಗಿದ, ಹೊಸ ಗ್ರೇಜುವೇಟರನ್ನು ಅಭಿನಂದಿಸಿದ ಸಭೆಯ ವೃತ್ತಾಂತವು ನಮಗೆ ತಲುಪಿದೆ. ಸುಮಾರು 300 ಮಂದಿ ಹಾಜರಾಗಿದ್ದರು ಉಪಹಾರ ಮುಗಿಸಿ, ಫೋಟೋ ಚಿತ್ರಗಳನ್ನೆತ್ತಿದ ಬಳಿಕ, ಶಿವಾಜಿ ಸ್ಕೌಟದಳದವರು ವಂದೇಮಾತರವ್ ಹಾಡಲು, ಶ್ರೀ ಜೆ ವೈಕುಂಠ ಭಟ್ಟರು ಉಪನಿಷತ್ತಿನಿಂದ ಶ್ಲೋಕಗಳ ಮೂಲಕ ಆಶೀರ್ವಾದವನ್ನು ಹಾಡಿದರು. ದಿವಾನ ಬಹದ್ದೂರ್ ಶ್ರೀ। ಕೆ ಪಿ ಲಕ್ಷ್ಮಣರಾಯರು ಅಗ್ರಾಸನವನ್ನೇರಿ, ಸಭಾ ಕಾರ್ಯವು ಮಹಾಜನಗಳ ಆದರಕ್ಕೆ ತುಂಬ ಒಳಗಾಗುತ್ತಲಿದೆ ಎಂಬುದನ್ನು ಅಂದು ಸೇರಿದ ಸಭಾ ವೃಂದದಿಂದ ಗೊತ್ತುಹಚ್ಚಬಹುದಾಗಿಯೂ, ವಿದ್ಯಾರ್ಥಿನಿಯರು ಹೆಚ್ಚಾಗಿ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಉತ್ತೀರ್ಣರಾಗುತ್ತ ಬರುವುದೂ ಶಿಕ್ಷಣದಲ್ಲೀಗ ಸಮಾಜವು ಮುಂದುವರಿಯುತ್ತಿರುವುದರ ಸುಚಿಹ್ನೆಯಾಗಿರುವುದಾಗಿಯೂ, ಡಾ॥ ವಿ ಪಿ ಕಾಮತ್, ರಾವ್ ಬಹದ್ದೂರ್, ಇವರಂಥ ನುರಿತ ಅನುಭವಿಗಳು ನಿರುದ್ಯೋಗವನ್ನೆದುರು ನೋಡುತ್ತಿರುವ ಗ್ರೇಜುವೇಟರಿಗೆ ಉತ್ತಮ ಬೋಧನೆ ಕೊಡಲು ಯೋಗ್ಯರೆಂದು ಶ್ರೀಯುತರನ್ನು ಭಾಷಣ ಕೊಡಲು ಕರೆದರು

ಮುಂಬರುವ ಜೀವನದ ಸಂಕಷ್ಟಗಳನ್ನು ಕುರಿತು ಮೊನ್ನೆಯೆ ಮೈಸೂರು ದಿವಾನರು ಅಧಿಭಾಷಣದಲ್ಲಿ ಸೂಚಿಸಿದ್ದಾರೆ ನಿಮ್ಮೆಲ್ಲರ ಸಾಮುದಾಯಿಕ ಜಾತಕ ನೋಡಿ ಫಲವಿಲ್ಲ, ಪ್ರತಿಯೊಬ್ಬರದು ಗುಣಿಸಲು ಧೈರ್ಯ ಸಾಲದು ಇದೆಲ್ಲ ನಮ್ಮ ಬಹುಕಾಲ ಮುಗಿಯಲೇ ಬೇಕಾಗಿರುವ ಶಿಕ್ಷಣದ ಫಲ ವಾರ್ಧಾ ಸ್ಕೀಮು ಜ್ಯಾರಿಗೆ ಬರಲಿದೆ. ಹಳ್ಳಿಗಳ ಅಭಿವೃದ್ಧಿಯಾಗಿ, ಜನರ ಸುಖಜೀವನದ ಏಮ ಮಾಡಲು ಇದು ಅತಿ ಸಹಾಯಕವಾಗುತ್ತ, ಧಾರ್ಮಿಕತೆಯಲ್ಲಿ ದೆಯೂ ಪುರಾತನವಾಗಿಯೂ ಇರುವ ಈಗಿನ ಕ್ರಮವನ್ನು ಇದು ದೂರಗೊಳಿಸುವುದಾಗಿ ನಂಬಬಹುದು. ಪ್ರತಿಯೊಬ್ಬರೂ ಅವರವರಲ್ಲಿ ಕಲಿತು ಉತ್ತೀರ್ಣರಾದ ವಿದ್ಯಾ ... ಅತಿ ಸ್ವಾಭಾವಿಕವಾದುದೆಂದು ... ಇದೇ ...

...ವಾದುದೇ ಇಲ್ಲವೆಂದೂ ಸಾರುವರು. ಭಾಂ...ವಳಿಕರು ತುಂಬ ಇರುವಾಗ, ಸಮಾಜವಾ...ವನ್ನೆ ಇವರು ಸಾರುವರೆಂಬಂತಿದೆ ರಾಗದ್ವೇಷಗಳು ಹೀಗೆ ಮುಂದಿರುವಲ್ಲಿ ಶಾಂತಿ ಎಲ್ಲಿ ಸಾಧ್ಯವಾದೀತು?

'ಎಂತೂ ನಮ್ಮ ಮುಂದೆ ಕಷ್ಟಕಾಲವಿದೆ ಈ ಕಾಲವನ್ನು ಸುಖವಾಗಿ ಕಳೆಯಲು ಮೊ...ಲಾಗಿ ದೇಹಾರೋಗ್ಯವಿರಬೇಕು, ಅದೃಷ್ಟವಿರಬೇಕು, ನಾವು ದುಃಖಸುಖನಾಗಿರಬೇಕು ಹೀಗಿದ್ದರೇ ಎಂತಹ ಜೀವನವೂ ಸುಖಜೀವನವಾದೀತು. ಇತರರಿಗೆ ನ್ಯಾಯಸಲ್ಲಿಸಲು, ವಿನೋದವಾಗಿರಲೂ, ಸೌಂದರ್ಯವನ್ನನುಭವಿಸಲೂ ಕಲಿತುಕೊಳ್ಳಬೇಕು ಕೊನೆಯ ಮೂರು ಗುಣಗಳು ನಿಮ್ಮಲ್ಲಿ ಉತ್ತಮವಾಗಿರವಲ್ಲಿ ಜೀವನದಲ್ಲಿ ಬೇಸರ ಬಾರದು. ಅಂ...ಸುಖಜೀವನವು ನಿಮಗೆ ದೊರೆಯಲಿ'' ಎಂದ ರಾವ್‌ಬಹದ್ದೂರ ಕಾಮತರೆಂದರು

ಶ್ರೀಮತಿ ವಿಲಾಸಿನಿ ಶೆಣಾಯಿ, ಬಿ. ಎ ಬಿ ಎಲ್ ಇವರು ಮಹಾತ್ಮರ ಜೀವನದ ನೆ...ಯುವಿದ್ದಲ್ಲಿ ಅವರವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಮುಂದರಿದರೆ, ಧೈರ್ಯವೂ ಸಾಹಸವೂ ನಮ್ಮಲ್ಲಿದ್ದರೆ ಇಂದಿನ ಅಧ್ಯಕ್ಷರು ಭಾಷಣಕರ್ತರ ಮೊದಲಾದವರಂತೆ ನಾವೆಲ್ಲಿ ವಿಜಯಿಗಳಾಗ...ಬಹುದು ಎಂದರು

ಶ್ರೀ ಬಿ. ಕೃಷ್ಣರಾವ್, ಬಿ. ಎಸ್. ಸಿ ಇವರು ಈ ಆದಾರ ಸತ್ಕಾರಗಳಿಗೆ ಸಭೆಯನ್ನ ವಂದಿಸಿ ಹಿರಿಯರ ಹಿತೋಕ್ತಿಗಳಂತೆ ಸರ್ವರು ನಡೆದುಕೊಳ್ಳಲು ಯತ್ನಿಸುವರೆಂದೂ ಉತ್ತರ ನುಡಿದರು.

ಭಗವಂತನ ಮೇಲೆ ವಿಶ್ವಾಸವನ್ನಿಟ್ಟು ನಡೆದರೆ ಜೀವನದಲ್ಲಿ ಜಯವಿದೆ ಎಂಬುದನ್ನು ಅಧ್ಯಕ್ಷರು ಚೆನ್ನಾಗಿ ಬೋಧಿಸಿದರು

ಭಾರತಮಾತೆಯ ಪ್ರತಿಮೆಯ ಅರ...ನಾ ವಿಧಾನ ಕೊನೆಗು, ಸ್ಕೌಟರು ಪ್ರತಿಮ ಪ್ರದರ್ಶನ ಮಾಡಿದರು.

ಸಭಾಕಾರ್ಯದರ್ಶಿ, ಡಾ. ಎಸ್. ಕೆ... ...ಯವರು ಸಮಸ್ತರ ಸಹಕಾರವನ್ನು ... ...

ಭಗವದ್ಗೀತಾ — ಕರ್ಮಯೋಗ

ಶ್ರೀಕೃಷ್ಣನು ಶ್ರೀಮದ್ಭಗವದ್ಗೀತೆಯನ್ನು ಅರ್ಜುನನಿಗೆ ಕುರುಕ್ಷೇತ್ರದ ರಣರಂಗದಲ್ಲಿ ಉಪದೇಶಿಸಿದನು. ಈ ಭಗವದ್ಗೀತೆಯಲ್ಲಿ ಕರ್ಮ ಭಕ್ತಿ ಮತ್ತು ಜ್ಞಾನ ಈ ಮೂರರ ಸಾಮಂಜಸ್ಯವು ನಮಗೆ ದೊರೆಯುತ್ತದೆ. ಆದುದರಿಂದಲೇ ಗೀತೆಯು ಧರ್ಮಗ್ರಂಥಗಳಲ್ಲೆಲ್ಲಾ ಅತ್ಯುತ್ಕೃಷ್ಟವೆಂದು ಪ್ರಖ್ಯಾತಿಯನ್ನು ಪಡೆದಿದೆ. ಕೆಲವರು ಗೀತೆಯನ್ನು ಘಾತಕ ಶಾಸ್ತ್ರವೆಂದು ಹೇಳುತ್ತಾರೆ. ಸರಿಯಾಗಿ ವಿಚಾರಮಾಡಿದರೆ ಗೀತೆಯ ನಿಜವಾದ ಉದ್ದೇಶವು ಅರ್ಜುನನಿಗೆ ಯುದ್ಧದಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವದಲ್ಲ. ಹಿಂದೂಧರ್ಮವು ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ಅಡಿಗಲ್ಲಿನ ಮೇಲೆ ಕಟ್ಟಲ್ಪಟ್ಟಿದೆ. ಯಾವ ಸಂದರ್ಭಗಳಲ್ಲಿ ಯುದ್ಧವು ಮನುಷ್ಯನ ಕರ್ತವ್ಯವಾಗಿರುತ್ತದೆಂಬ ಕಠಿಣಸಮಸ್ಯೆಯನ್ನು ಆಧ್ಯಾತ್ಮಿಕ ಮತ್ತು ಪಾರಮಾರ್ಥಿಕ ತತ್ವಗಳ ಮೂಲಕವೇ ಬಿಡಿಸಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲ. ಅರ್ಜುನನು ಕುರುಕ್ಷೇತ್ರದಲ್ಲಿ ಮಾಡಿದ ಯುದ್ಧವು ಆತ್ಮದ ಸ್ವಾರ್ಥವಾದದ್ದು. ಏಕೆಂದರೆ ತನ್ನ ಸಂಪತ್ತಿನ ರಕ್ಷೆಯೂ ಆತ್ಮರಕ್ಷಣೆಯಲ್ಲಿ ಸೇರುತ್ತದೆ. ಅರ್ಜುನನಿಗೆ ಯುದ್ಧಾರಂಭದಲ್ಲಿ ಹುಟ್ಟಿದ ಅಪ್ರವೃತ್ತಿಯನ್ನು ಮೂಲವಾಗಿಟ್ಟುಕೊಂಡು ಶ್ರೀ ಕೃಷ್ಣನು ತನ್ನ ಅಮೂಲ್ಯವಾದ ಮತ್ತು ಪರಮ ಪವಿತ್ರವಾದ ಗೀತಾಧರ್ಮವನ್ನು ಜಗತ್ತಿನಲ್ಲಿ ಪ್ರಚಾರಪಡಿಸಿದನು. ಯಾವ ಸಂದರ್ಭದಲ್ಲಿ ಯುದ್ಧಮಾಡಬೇಕು, ಯಾವ ಸಂದರ್ಭದಲ್ಲಿ ಯುದ್ಧವನ್ನು ಮಾಡಬಾರದು ಎಂಬ ಯುದ್ಧದ ಕರ್ತವ್ಯ ಮತ್ತು ಅಕರ್ತವ್ಯ ಸಂಬಂಧವಾದ ಎರಡು ಅನುಷ್ಠಾನಗಳನ್ನು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಮೊದಲನೆಯದು—ಆಧ್ಯಾತ್ಮಿಕ ಎಂದರೆ, ಆತ್ಮನು ನಿತ್ಯನು ಸಾವಿಲ್ಲದವನು ಎಂದು ಮೊದಲಾದ ಜ್ಞಾನ ಮೂಲಕವಾದ ದಾರಿ. ಇದಕ್ಕೆ 'ಜ್ಞಾನಯೋಗ ಮತ್ತು ಸಾಂಖ್ಯಯೋಗವೆಂದು ಹೆಸರು. ಶ್ರೀಕೃಷ್ಣನು ಮೂರನೇ ಅಧ್ಯಾಯದಲ್ಲಿ ಜ್ಞಾನಯೋಗವನ್ನು ಮೊದಲು ಸಂಕ್ಷೇಪವಾಗಿ ವಿವರಿಸಿ ಕರ್ಮಯೋಗವನ್ನು ಅನಂತರ ಸವಿಸ್ತಾರವಾಗಿ ವಿವರಿಸುತ್ತಾನೆ. ಈ ಜ್ಞಾನಯೋಗವನ್ನು ಮತ್ತು ಕರ್ಮಯೋಗವನ್ನು ತಿಳಿದರೆ ಗೀತೆಯು ಭಕ್ತಿಶಾಸ್ತ್ರವೆಂದು ಖಚಿತವಾಗುತ್ತದೆ.

ಶ್ರೀಕೃಷ್ಣನು ಕರ್ಮಯೋಗದ ಪ್ರಸಂಶೆಯನ್ನು ಮಾಡಿ ಅರ್ಜುನನಿಗೆ ಕರ್ಮದಲ್ಲಿ ಉತ್ಸಾಹ ಅಥವಾ ಪ್ರವೃತ್ತಿಯನ್ನು ಹುಟ್ಟಿಸಲಿಕ್ಕಾಗಿ ಹೀಗೆಂದು ಹೇಳುತ್ತಾನೆ—'ಮನುಷ್ಯನಿಗೆ ಒಂದು ಕ್ಷಣವಾದರೂ ನಿಷ್ಕರ್ಮನಾಗಿರಲಿಕ್ಕೆ ಸಾಧ್ಯವಿಲ್ಲ. ಒಬ್ಬನು ತಾನು ಕರ್ಮವನ್ನು ಮಾಡುವುದಿಲ್ಲವೆಂದರೂ ಪ್ರಕೃತಿಯಿಂದ ಹುಟ್ಟಿದ ಸತ್ವ, ರಜ, ತಮವೆಂಬ ಗುಣಗಳಿಗೆ ವಶನಾಗಿ ಆತನು ಕರ್ಮವನ್ನು ಮಾಡಲೇಬೇಕಾಗುತ್ತದೆ'' ಆದುದರಿಂದ ಕರ್ಮವನ್ನು ಮಾಡಲೇಬೇಕು. ಕರ್ಮವೆಂದರೆ ಯಾವುದು? ತನ್ನ ಕಲ್ಯಾಣದ ಇಚ್ಛೆಯಿಂದ ದೇವತೆಗಳ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ಮಾಡುವ ಯಜ್ಞಯಾಗಾದಿ ಕಾಮ್ಯಕರ್ಮಗಳೇ ಕರ್ಮವೆಂಬ ಭಾವನೆಯು ವೇದಕಾಲದಿಂದಲೂ ಇತ್ತು. ಆದರೆ ಶ್ರೀಕೃಷ್ಣನು ಹೇಳುವ ಕರ್ಮವೆಂದರೆ ಬರೀ ವೇದೋಕ್ತ ಸಂಪ್ರದಾಯದ ಕರ್ಮವಲ್ಲ. ಶ್ರೀಕೃಷ್ಣನು ಅರ್ಜುನನಿಗೆ ಹೀಗೆಂದು ಹೇಳಿರುವನು. "ಫಲಸಾಧನರೂಪವಾದ ಕರ್ಮವೇ ಹೊರತು ಇನ್ನೇನೂ ಇಲ್ಲವೆಂದು ಯಾರೂ ಆಶಾಬದ್ಧರಾಗಿ ಸ್ವರ್ಗಾದಿಗಳೇ ಪರಮ ಪುರುಷಾರ್ಥವೆಂದೂ, ಜನ್ಮವು ಕರ್ಮದ ಫಲವೆಂದೂ, ಭೋಗೈಶ್ವರ್ಯ ಪ್ರಾಪ್ತಿಯ ಸಾಧನವಾದ ಕ್ರಿಯಾಬಾಹುಲ್ಯವನ್ನು ವೇದಗಳ ಮುಖ್ಯ ತಾತ್ಪರ್ಯವೆಂದು ಭಾವಿಸುತ್ತಾರೆಯೋ ಅವರು ಮೂರ್ಖರು." ಹೀಗೆ ಭೋಗೈಶ್ವರ್ಯಾದಿಗಳ ಆಸಕ್ತಿಯಿಂದ ಅಪಹೃತವಾದ ಅವರ ವ್ಯವಸಾಯಾತ್ಮಿಕ ಬುದ್ಧಿಯು ಸಮಾಧಿ ಅಥವಾ ಧ್ಯಾನದಲ್ಲಿ ಎಂದೂ ನಿಲ್ಲಲಾರದು.'' ಶ್ರೀಕೃಷ್ಣನ ಈ ಮಾತುಗಳಿಂದ ವೈದಿಕಕರ್ಮವೆಂದು ಹೇಳುವ, ಕಾಮ್ಯಕರ್ಮಗಳ ಅನುಷ್ಠಾನವು ಧರ್ಮವಲ್ಲವಾದರೂ, ಪ್ರತಿಯೊಬ್ಬನೂ ಕರ್ಮವನ್ನು ಮಾಡಲೇಬೇಕೆಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಮನುಷ್ಯನು ಯಾವ ಕರ್ಮಗಳನ್ನು ಮಾಡಬೇಕು? ಯಾವದು ಕಾಮ್ಯವಲ್ಲವೊ ಅಂತಹ ನಿಷ್ಕಾಮಕರ್ಮಗಳನ್ನೇ ಮನುಷ್ಯನು ಆಚರಿಸಬೇಕು. ಈ ತರದ ಕರ್ಮಮಾರ್ಗವು ನಿಷ್ಕಾಮಧರ್ಮವೆಂದು ಕರೆಯಲ್ಪಡುತ್ತದೆ. ಮನುಷ್ಯನ ಶ್ರೇಷ್ಠವಾದ ಅನುಷ್ಠಾನವೆಂದರೆ ಇದೇ. ನಿಷ್ಕಾಮಕರ್ಮದ ಸ್ವರೂಪವನ್ನು ಶ್ರೀಕೃಷ್ಣನು ಅರ್ಜುನನಿಗೆ ಹೀಗೆಂದು ಹೇಳಿರುತ್ತಾನೆ—

"ನಿನಗೆ ಕರ್ಮದಲ್ಲಿ ಮಾತ್ರ ಅಧಿಕಾರ. ಫಲವನ್ನು ಯೋಚಿಸುವದು ನಿನ್ನ ಅಧಿಕಾರವಲ್ಲ. ಫಲವನ್ನೇ ಕಾರಣವಾಗಿಟ್ಟುಕೊಂಡು ಕರ್ಮವನ್ನಾಚರಿಸಬೇಡ. ಆದರೆ ಕರ್ಮತ್ಯಾಗದ ಕಡೆಗೆ ನಿನ್ನ ಪ್ರವೃತ್ತಿಯನ್ನು ಇಡಲೇಬಾರದು ಮತ್ತು ನೀನು ಯೋಗಸ್ಥನಾಗಿ ಸಂಗವನ್ನು ತ್ಯಜಿಸಿ ಕರ್ಮವನ್ನು ಮಾಡು'' ಸಂಗವೆಂದರೆ ಆಸಕ್ತಿ. ನಾವು ಯಾವ ಕರ್ಮವನ್ನು ಮಾಡುವಾಗಲೂ ಆ ಕರ್ಮದ ಮೇಲೆ ನಮ್ಮ ಪ್ರೀತಿ ಅಥವಾ ಅನುರಾಗವಿಡಬಾರದು. ಕರ್ಮವನ್ನು ಮಾಡಬೇಕು. ಆದರೆ, ಅದರಿಂದ ಸ್ಥಿತಿಯು ಆಗಲಿ ಆಗದಿರಲಿ, ಎರಡನ್ನೂ ಸಮಾನವೆಂದು ಭಾವಿಸಬೇಕು. ಆ ಕರ್ಮಾಚರಣೆಯಲ್ಲಿ ಸಿದ್ಧಿಯಾದರೆ ಆನಂದವನ್ನೂ, ಸಿದ್ಧಿಯಾಗದಿದ್ದರೆ ದುಃಖವನ್ನೂ ಪಡದೆ ಸಿದ್ಧಿಯನ್ನೂ ಅಸಿದ್ಧಿಯನ್ನೂ ಸರಿಸಮಾನವೆಂದು ತಿಳಿಯುವ ಜ್ಞಾನವೇ ಯೋಗವೆಂದರ್ಥ. ಈ ರೀತಿಯಲ್ಲಿ ಯೋಗಯುಕ್ತನಾಗಿ ಕರ್ಮಸಕ್ತಿ ಇಲ್ಲದೆ ಮಾಡುವ ಕರ್ಮಾನುಷ್ಠಾನವೇ ನಿಷ್ಕಾಮಕರ್ಮಾಚರಣೆ ಎನಿಸುತ್ತದೆ. ಈ ನಿಷ್ಕಾಮಧರ್ಮದ ಪ್ರವರ್ತಕನಾದ ಶ್ರೀಕೃಷ್ಣನು ಇದನ್ನು ಇನ್ನೂ ವಿವರಿಸಿ ಅರ್ಜುನನಿಗೆ ಹೀಗೆಂದು ಹೇಳಿರುವನು. "ಭಗವದುದ್ದೇಶವಾಗಿ ಮಾಡುವ ಕರ್ಮದ ಹೊರತು ಇತರ ಕರ್ಮವೆಲ್ಲವೂ ಲೋಕಕ್ಕೆ ಬಂಧಕವಾಗುವುದು. ಆದುದರಿಂದ ಆಸಕ್ತಿಯನ್ನು ಬಿಟ್ಟು ಭಗವದುದ್ದೇಶವಾದ ಕರ್ಮಗಳನ್ನಾಚರಿಸು'' ಶ್ರೀಕೃಷ್ಣನು ಹೇಳಿದ ತಾತ್ಪರ್ಯವೇನೆಂದರೆ.—ಈಶ್ವರನನ್ನು ಉದ್ದೇಶಿಸಿ ಅಥವಾ ಈಶ್ವರನಿಗೋಸ್ಕರ ಮಾಡುವ ಕರ್ಮವೇ ಕರ್ಮವು. ಇದಲ್ಲದೆ ಇತರ ಕರ್ಮವೆಲ್ಲವೂ ಬಂಧನಕ್ಕೆ ಕಾರಣವಾದುದರಿಂದ ಈಶ್ವರ ಸಮ್ಮಂಧವಾಗಿರದ ಯಾವ ಕರ್ಮವನ್ನೂ ಮಾಡಕೂಡದು. ಹೀಗೆ ಈಶ್ವರಸಮ್ಮಂಧವಾದ ಕರ್ಮಗಳನ್ನಾಚರಿಸುವುದರಿಂದ ಸಕಲವ್ಯಕ್ತಿಗಳೂ ಈಶ್ವರಾಭಿಮುಖಿಯಾಗಲೇಬೇಕು. ಎಲ್ಲಾ ವ್ಯಕ್ತಿಗಳೂ ಈಶ್ವರಾನುವರ್ತಿಗಳಾಗದಿದ್ದರೆ ಸಕಲ ಕರ್ಮಾಚರಣೆಯನ್ನು ಈಶ್ವರೋದ್ದಿಶ್ಯವಾಗಿ ಮಾಡಲು ಸಾಧ್ಯವೇ ಇಲ್ಲ. ಸಕಲವ್ಯಕ್ತಿಗಳೂ ಈಶ್ವರಾಭಿಮುಖವಾಗಿರುವುದೇ "ಭಕ್ತಿ'' ಎಂದ ಬಳಿಕ ಈ ನಿಷ್ಕಾಮಧರ್ಮಕ್ಕೂ ಭಕ್ತಿಗೂ ವ್ಯತ್ಯಾಸವೆಲ್ಲಿದೆ? ನಿಷ್ಕಾಮಧರ್ಮವೇ ಭಕ್ತಿ. ಭಕ್ತಿಯೇ ನಿಷ್ಕಾಮಧರ್ಮ. ಕರ್ಮ ಮತ್ತು ಭಕ್ತಿಯ ಐಕ್ಯದವಿಷಯವಾಗಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ವಿವೇಕಬುದ್ಧಿಯಿಂದ ಸಕಲಕರ್ಮಗಳನ್ನು ನನಗೆ ಅರ್ಪಿಸಿ, ಆ ಕರ್ಮಗಳಲ್ಲಿ ಆಸಕ್ತಿಯನ್ನೂ, ಅಹಂಕಾರದ ಅಭಿಮಾನವನ್ನೂ ತ್ಯಜಿಸಿ [illegible] ಯುದ್ಧವನ್ನು ಮಾಡು'' ಎಂದು ಹೇಳಿದನು.

ಮನುಷ್ಯನು ಅನುಷ್ಠೇಯ ಕರ್ಮಗಳನ್ನು ಮಾಡಲೇಬೇಕು. ಎಲ್ಲಾ ವಿಧದ ಕರ್ಮವೂ ಅನುಷ್ಠೇಯವಲ್ಲ. ಈಶ್ವರೋದ್ದಿಶ್ಯವಾಗಿಯೂ ಈಶ್ವರ ಪ್ರೀತ್ಯರ್ಥವಾಗಿಯೂ, ಆಚರಿಸುವ ಕರ್ಮಗಳು ಅನುಷ್ಠೇಯ ಕರ್ಮಗಳೆನಿಸುತ್ತವೆ. ಅಂತಹ ಕರ್ಮಗಳಲ್ಲಿ ಆಸಕ್ತಿಯನ್ನು ಫಲಾಪೇಕ್ಷೆಯನ್ನೂ ತೊರೆದು ಅವುಗಳನ್ನು ಆಚರಿಸಬೇಕು. ಆ ಕರ್ಮಾಚರಣೆಯಲ್ಲಿ ಸಿದ್ಧಿಯಾದರೂ, ಸಿದ್ಧಿಯಾಗದಿದ್ದರೂ ಎರಡನ್ನೂ ಸಮತುಲ್ಯವೆಂದೆಣಿಸಬೇಕು. ಎರಡನೆಯದಾಗಿ ಕರ್ಮವನ್ನು ಮಾಡತಕ್ಕವನು ಈಶ್ವರನೆಂದೂ, ತಾನು ಆತನ ಭೃತ್ಯನಾಗಿ ಕರ್ಮಾಚರಣೆಯನ್ನು ಮಾಡುತ್ತಿರುವನೆಂದೂ ಮನೋನಿರ್ಧಾರಮಾಡಿ ಕರ್ಮವನ್ನು ಈಶ್ವರಾರ್ಪಣ ಮಾಡಬೇಕು. ಈ ತರದ ಕರ್ಮಾಚರಣೆಯೇ ಕರ್ಮಯೋಗ. ಇದೇ ನಿಷ್ಕಾಮ ಧರ್ಮ. ಈ ನಿಷ್ಕಾಮ ಧರ್ಮವನ್ನು ಆಚರಿಸುವುದರಿಂದ ನಮ್ಮ ಕಾರ್ಯಕಾರಿಣೀ, ಶಾರೀರಿಕೀ ಮೊದಲಾದ ವೃತ್ತಿಗಳೆಲ್ಲವೂ ಈಶ್ವರಾನುವರ್ತಿಗಳಾಗುತ್ತವೆ. ಆದುದರಿಂದಲೇ ಭಕ್ತಿಯೋಗಕ್ಕೂ, ಕರ್ಮಯೋಗಕ್ಕೂ ಭೇದವೇನೂ ಇಲ್ಲ. ಕರ್ಮಯೋಗಕ್ಕೂ, ಭಕ್ತಿಯೋಗಕ್ಕೂ ಇರುವ ಈ ಐಕ್ಯ ಮತ್ತು ಸಾಮಂಜಸ್ಯವನ್ನು ಪರಿಶೀಲಿಸಿದರೆ ಇಂತಹ ಅಪೂರ್ವವಾದ ತತ್ವವೂ, ಧರ್ಮವೂ ಶ್ರೀಕೃಷ್ಣನಿಂದ ಹೇಳಲ್ಪಟ್ಟ ಗೀತೆಯಲ್ಲಿ ಅಲ್ಲದೆ ಇನ್ನಾವುದರಲ್ಲಿಯೂ ಇಲ್ಲವೆಂದು ಹೇಳಬಹುದು. ಕರ್ಮವೇ ಧರ್ಮದ ಮೊದಲನೇಯ ಮೆಟ್ಟಲು.

ರಾಮದಾಸ.

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲಿಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತೇಕ)

ಪಿ. ಸಿ. ಎ. ಅಂಡ್ ಕೋ.,
ಆಯುರ್ವೇದಿಕ್ ಔಷಧಾಲಯ, ಪೆರಿಡೇಪಿ.
P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ, ಬಜಾರ್, ಮಂಗಳೂರು

ದ. ಕ. ಜಿಲ್ಲಾ ಬೋರ್ಡು ಕೊಂಗ್ರೆಸ್ ಪಾರ್ಟಿಯ ಹೇಳಿಕೆ

ಶ್ರೀ| ಕೆ. ಕೆ. ಶೆಟ್ಟರ ಅನುಮಾನ ಹಾಗೂ ಆರೋಪಗಳಿಗೆ ಉತ್ತರ

ಪಾರ್ಟಿಯ ಮೀಟಿಂಗಿನಲ್ಲಿ ಚರ್ಚಾಸ್ಪದವಾದ ವಿಷಯಗಳ ಎಷ್ಟೋ ಬಂದಿರಬಹುದು. ಆದರೆ ಅವುಗಳ ಆಧಾರದ ಮೇಲೆ ಯಾವುದಾದರೂ ನಿರ್ಧಾರ ಇಲ್ಲದೆ ಟೀಕೆಗಳನ್ನು ಬರೆಯುವುದು ಪಾರ್ಟಿ ಮೆಂಬರರಲ್ಲದ ಶ್ರೀ ಶೆಟ್ಟರಿಗೆ ಎಷ್ಟು ಮಾತ್ರವೂ ನ್ಯಾಯವಲ್ಲವೆಂದು ಪಾರ್ಟಿಯ ಅಭಿಪ್ರಾಯಪಡುತ್ತದೆ.

ಪಾರ್ಟಿಯು ಸಂಪೂರ್ಣ ಅಧಿಕಾರವನ್ನು ಹೊಂದಿದ [illegible] ಆಯಾ ಸ್ಟೇಂಡಿಂಗ್ ಕಮಿಟಿಗೆ ಬೇಕಾದ ಬೋರ್ಡು ಮೆಂಬರರು ಹಾಗೂ ಹೊರಗಣವರನ್ನು ಆರಿಸಿ ನಿರ್ಧಾರಕ್ಕೆ [illegible] ಪಾರ್ಟಿಯ ಮೆಂಬರರಲ್ಲಿ ಕೆಲವರು [illegible] ತಿಳಿದುಕೊಳ್ಳದಿದ್ದಿರಬಹುದು. ಕೆಲವರು ಮೊದಲೇ ತಿಳಿದಿದ್ದುದೂ ಇರಬಹುದು. [illegible] ವಿಚಾರವು ಸಮಿತಿಯ ಮತ್ತು ಪಾರ್ಟಿ ಮೆಂಬರರುಗಳ ಸಂಬಂಧದ್ದಿರುತ್ತಾ ಪಾರ್ಟಿ [illegible] ಶ್ರೀ ಕೆ. ಕೆ. ಶೆಟ್ಟರಿಗೆ ಆ ಕುರಿತು ಯಾವ ಅಭಿಪ್ರಾಯವನ್ನೂ ಪಾರ್ಟಿಯ ವಿಷಯ ಹೇಳುವರೆ ಯಾವ ಅಧಿಕಾರವೂ ಇರುವುದಿಲ್ಲವೆಂದೂ ಪಾರ್ಟಿಯ ಪಕ್ಷದಿಂದ ಒಮ್ಮೆ ಶ್ರೀ| ಶಿವರಾಮ ಶೆಟ್ಟರು ಓದಿ ಹೇಳಿದ ಸದಸ್ಯರ ಗಳು ಮತ್ತು ಹೊರಗಣವರ ಹೆಸರು ಪಾರ್ಟಿಯ ಅನುಮೋದನೆಯುದ್ದೇ ಇರುತ್ತವೆಯೆಂದೂ ಪಾರ್ಟಿಯು ಸ್ಪಷ್ಟಪಡಿಸುತ್ತದೆ. ಅರ್ಜಿಯನ್ನು ಶ್ರೀ ಶೆಟ್ಟರು ಕೊಟ್ಟುದನ್ನು ಯಾ ಅವರಂತೆ ಬೇರೆಯವರು ಕೊಟ್ಟರೆ ಸ್ವೀಕರಿಸುವುದು ಲೀಡರ ಯಾ ಲೀಡರ ಸ್ಥಾನದಲ್ಲಿದ್ದವರ ಕರ್ತವ್ಯ. ಅಂತೆಯೇ ಲೀಡರರ ಸ್ಥಾನದಲ್ಲಿದ್ದ ಡೆಪ್ಯುಟಿ ಲೀಡರರು ಅರ್ಜಿಯನ್ನು ಸ್ವೀಕರಿಸಿದ್ದರೆ ಅದು ಸರಿಯೆಂದೂ ಆ ಕುರಿತು ಮೊದಲೇ ಆಗಿದ್ದ ನಿರ್ಧಾರವನ್ನು ಶ್ರೀ| ಶೆಟ್ಟರಿಗೆ ಲೀಡರರ ಸ್ಥಾನದಲ್ಲಿದ್ದ ಡೆಪ್ಯುಟಿ ಲೀಡರರು ತಿಳಿಸಲೇ [illegible] ಯಾವ ಕಾರಣವೂ ಇಲ್ಲದಿರುತ್ತಾ ಅವರು ತಿಳಿಸದೆ ಇದ್ದರೆ ಅದು ಅವರ ತಪ್ಪಾಗುವುದಿಲ್ಲವೆಂದೂ ಪಾರ್ಟಿಯ ಅಭಿಪ್ರಾಯ.

ಪಾರ್ಟಿಯ ಮೆಂಬರಲ್ಲದ ಶ್ರೀ| ಪಿ. ಟಿ. [illegible] ಅವರು ಸೂಚಿಸಿದ ಹೆಸರನ್ನು ಅನುಮೋದಿಸುವಂತೆ ಪಾರ್ಟಿ ಮೆಂಬರರಲ್ಲೊಬ್ಬರಾದ ಶ್ರೀ [illegible] ಶ್ರೀ| ಶೆಟ್ಟರು ಒತ್ತಾಯಪಡಿಸಿದ್ದನ್ನು ನೋಡುವಾಗ ಜಿಲ್ಲಾ ಕೊಂಗ್ರೆಸ್ ಕಮಿಟಿ ಪ್ರಧಾನ ಕಾರ್ಯದರ್ಶಿಯಾಗಿ ಕೊಂಗ್ರೆಸ್ ಶಿಸ್ತನ್ನು ಇತರರಿಗೆ ಹೇಳಿಕೊಡಬೇಕಿದ್ದ ಶ್ರೀ| ಶೆಟ್ಟರು ಕೊಂಗ್ರೆಸಿನ ಅಪ್ಪಣೆ ಅಧಿಕಾರಿಗಳಂತೆ ನಡೆಯಲು ಬದ್ಧರಾದ ದ. ಕ. ಕೊಂಗ್ರೆಸ್ ಪಾರ್ಟಿಯಲ್ಲಿ ಶಿಸ್ತು ಇರಬಾರದೆಂದು ತಾವೇ ಉದ್ದೇಶಪೂರ್ವಕ ಇಚ್ಛಿಸಿ ಆ ರೀತಿ ಪ್ರವೃತ್ತಿಸಿದುದು ಎಷ್ಟು ಮಾತ್ರಕ್ಕೂ ಸಮಂಜಸವಲ್ಲವೆಂದು ಪಾರ್ಟಿಯು ವಿಷಾದಪಡುತ್ತದೆ.

ಜಿಲ್ಲಾ ಕೊಂಗ್ರೆಸ್ ಸೆಕ್ರೆಟರಿಯವರ ಹೆಸರನ್ನು ಕೊಂಗ್ರೆಸ್ ವಿರೋಧಿಗಳೊಬ್ಬರು ಸೂಚಿಸಿದುದರ ಪರಿಣಾಮವಾಗಿ ಮಾತ್ರವಲ್ಲ ಪಾರ್ಟಿಯ ಪಕ್ಷದಿಂದ ಮೊದಲೇ ಇಬ್ಬರ ಹೆಸರು ಅನುಮೋದಿಸಲ್ಪಟ್ಟಿರುತ್ತಾ ಅತ್ತ ಕೊಂಗ್ರೆಸ್, ಇತ್ತ ಡಿ. ಬೋ. ಪಾರ್ಟಿಗಳ 'ಶಿಸ್ತು' ಭಂಗವಾಗಬಾರದೆಂಬುದಕ್ಕಾಗಿ ಮಾತ್ರ ಬೋರ್ಡು ಮೆಂಬರರು ಶ್ರೀ| ಶೆಟ್ಟರು ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆಯಬೇಕೆಂದು ಅವರ ಧರ್ಮಬುದ್ಧಿಗೆ ಮನವಿಮಾಡಿಕೊಂಡಿದ್ದುದಾಗಿತ್ತು. ಹೊರತು ಶ್ರೀ| ಶೆಟ್ಟರು ತಮ್ಮ ಉಮೇದ್ವಾರಿಕೆಯನ್ನು ಮುಂದೊತ್ತಿದುದು ಯಾ ಶ್ರೀ| ಆಚಾರ್ಯರು ಅನುಮೋದಿಸಿದೊಡನೆಯೇ ಹಿಂತೆಗೆಯದಿದ್ದುದು ನ್ಯಾಯವೆಂದು ಪಾರ್ಟಿಯ ಯಾವ ಮೆಂಬರನೂ ಅಭಿಪ್ರಾಯಪಟ್ಟಿಲ್ಲವೆಂದು ಪಾರ್ಟಿಯು ಸರ್ವಾನುಮತಿಯಿಂದ ಸ್ಪಷ್ಟೀಕರಿಸುತ್ತದೆ.

ಬಿ. ವೈಕುಂಠ ಬಾಳಿಗಾ ಲೀಡರ್,
ದ. ಕ. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿ.

ಮಂಗಳೂರು ಸಮಾಚಾರ

ಸೇವಾಸಮಿತಿ ಸ್ಕೌಟ್ ದಳದ ಮುಖ್ಯ ಪ್ರಚಾರಕ ಕಮಿಷನರು

ಅಖಿಲ ಭಾರತ ಸೇವಾಸಮಿತಿ ಸ್ಕೌಟ್ ದಳದ ಮುಖ್ಯ ಪ್ರಚಾರಕ ಕಮಿಷನರಾದ ಪಂಡಿತ ಶ್ರೀರಾಮ ಬಜಪಾಯಿಯವರು ಮದ್ರಾಸು ಸಂಸ್ಥಾನವನ್ನು ಸಂಚರಿಸುತ್ತಿರುವರು. ಇವರು ಇದೇ ತಾ. 28-8-1938ನೇ ಮಂಗಳವಾರ 4½ ಗಂಟೆಗೆ ಹಿಂದುಸ್ಥಾನ ಸ್ಕೌಟು ದಳದ ಮದ್ರಾಸಿನ ಪ್ರಚಾರಕ ಕಮಿಷನರಾದ ಶ್ರೀ. ವೆಂಕಟ್ರಮಣರೊಂದಿಗೆ ಮಂಗಳೂರಿಗೆ ಬಂದು 25-8-38ನೇ ಗುರುವಾರ ಇಲ್ಲಿಂದ ಹಿಂತೆರಳುವರು. ಇವರ ಕಾರ್ಯಕ್ರಮವನ್ನು ಸ್ಥಳೀಯ ಸ್ಥಾನಿಕ ಸಂಘದವರೊಡನೆ ವಿಚಾರಿಸಿ ತಿಳಿದುಕೊಳ್ಳಬಹುದು.

ಬಸ್ಸು ಅಪಘಾತ.

ಕಳೆದ ತಾ. 9ರಲ್ಲಿ ಕಡೂರಿನಿಂದ ಬಂದ ಮೈಲು ಬಸ್ಸು ವೆನ್‌ಲಾಕ್ ಆಸ್ಪತ್ರೆಯ ಬಳಿ ಬರುವಾಗ ಸುಮಾರು 28 ವರ್ಷದ ಒಬ್ಬ ಕೂಲಿಯು ಬಸ್ಸಿನ ಒಂದು ಬದಿಯನ್ನು ಹಿಡಿದು ನೇತಾಡಿ ಕೈತಪ್ಪಿಬಿದ್ದು ಬಸ್ಸಿನ ಹಿಂದಿನ ಚಕ್ರವು ಆವನ ಒಂದು ತೊಡೆಯ ಮೇಲೆ ಹೋಗಿ ಘಾಯ ಆಯಿತು. ಆತನನ್ನು ಕೂಡಲೇ ಆಸ್ಪತ್ರೆಗೆ ಒಯ್ಯಲಾಯಿತು.

ಪ್ರಾಚೀನ ನರ್ತನದ ಪ್ರಶಂಸೆ.

ಪ್ಯಾರಿಸಿನ ಇಂಟರ್ ನೇಶನಲ್ ಡ್ಯಾನ್ಸ್ ಎಸೋಸಿಯೇಷನಿನ ಪ್ರೆಸಿಡೆಂಟರಾದ ಮಿ. ರಾಲ್ಫ್ ಡಿ ಮಾರಿಯವರು ಬಾಳಿ ಮೊದಲಾದ ಪೌರ್ವಾತ್ಯ ದ್ವೀಪಗಳ ಸಂದರ್ಶನವನ್ನು ಮುಗಿಸಿಕೊಂಡು ತಾ 9ಕ್ಕೆ ಇಲ್ಲಿಗೆ ಬಂದು ಉರುವದಲ್ಲಿ ಕೋಲು ಕುಣಿಯುವುದು ಮೊದಲಾದ ಅನೇಕ ತರದ ನೃತ್ಯಗಳನ್ನು ನೋಡಿದರು. ಮರುದಿನ ಸಂಜೆಗೆ ಮಿಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಯಕ್ಷಗಾನ ನರ್ತನಗಳನ್ನೂ ಶ್ರೀ. ಕಡೇಕಾರು ಶಿವರಾಮ ಕಾರಂತರ ಕಲಾಪ್ರದರ್ಶನ ನೃತ್ಯಗಳನ್ನು ನೋಡಿ ಬಹಳ ಸಂತೋಷಿಸಿದರು. ಇಲ್ಲಿಯ ನರ್ತನಗಳಲ್ಲಿ ಒಂದು ವಿಶೇಷ ವೈಚಿತ್ರ್ಯವಿದೆ, ಈ ವಿಷಯ ಇನ್ನೂ ಹೆಚ್ಚಿನದನ್ನು ಅಭ್ಯಾಸಿಸುವುದಕ್ಕೆ ತಾನು ಇನ್ನೊಂದಾವರ್ತಿ ಬರುವೆನೆಂದು ಹೇಳಿ ಮಾರಣೆ ದಿವಸ ಶೊರ್ನೂರಿಗೆ ಕಥಕ್ಕಳಿಯ ವಿಷಯ ತಿಳಿದುಕೊಳ್ಳಲು ಹೋದರು.

ಪಬ್ಲಿಕ್ ಪ್ರೊಸೆಕ್ಯೂಟರ್ ಸ್ಥಾನಕ್ಕೆ

ಮಂಗಳೂರಿನ ಬಾರ್ ಎಸೋಸಿಯೇಷನಿನವರು ಪಬ್ಲಿಕ್ ಪ್ರೊಸೆಕ್ಯೂಟರ್ ಸ್ಥಾನಕ್ಕೆ ನಡೆದ ಚುನಾವಣೆಯು ಸರಿಯಲ್ಲವೆಂದು ಹೇಳಿ ಸರಕಾರವು ಶ್ರೀ. ಕೆ ಕೆ ನಂಬಿಯಾರರನ್ನು ಪಬ್ಲಿಕ್ ಪ್ರೊಸೆಕ್ಯೂಟರ ಸ್ಥಾನಕ್ಕೆ ಚುನಾಯಿಸುವುದೆಂದು ವಾರ್ತೆ.

ಬಾರ ಎಸೋಸಿಯೇಷನಿಗೆ ರಾಜಾಜಿಯವರ ಸಮಾಧಾನಕರ ಉತ್ತರ

ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಲ್ಲಿ ವಕೀಲರಿಗೆ ದೂಷಿಸಿ ಭಾಷಣ ಕೊಟ್ಟಿರುವರೆಂದೂ ಅದನ್ನು ಈ ಸಭೆಯು ಖಂಡಿಸುತ್ತದೆಂದೂ ಇಲ್ಲಿಯ ಬಾರ್ ಎಸೋಸಿಯೇಷನಿನವರು ಮಾಡಿದ ಠರಾವಿಗೆ ರಾಜಾಜಿಯವರು ತಾನು ವಕೀಲರನ್ನು ದೂಷಿಸಲಿಲ್ಲವೆಂಬ ಸಮಾಧಾನಕರ ಉತ್ತರವನ್ನು ಕಳುಹಿಸಿದ್ದಾರೆಂದು ವಾರ್ತೆ.

ಯುರೋಪ ಪ್ರವಾಸ.

ಶ್ರೀ. ಕಮಲಾದೇವಿಯವರು ಸಧ್ಯದಲ್ಲಿ ಯುರೋಪ ಪ್ರವಾಸವನ್ನು ಮಾಡಲಿರುವರೆಂದು ತಿಳಿದು ಬರುತ್ತದೆ.

ಸ್ಟೀಮರು ಚಲಾವಣೆ.

ಹವಾಮಾನವು ಅನುಕೂಲವಾಗಿದ್ದರೆ "ದಿ ಬೊಂಬೆ ಸ್ಟೀಮ್ ನೆವಿಗೇಷನಿನ" ಪ್ರಯಾಣಿಕರ ಮತ್ತು ಸಾಮಾನಿನ ಹಡಗುಗಳು ತಾ. 9-9-1938ರಿಂದ ಪ್ರತಿ ಶುಕ್ರವಾರ ಮತ್ತು ಮಂಗಳವಾರ ಬೊಂಬಾಯಿಯಿಂದ ಹೊರಟು ಒಂದು ಆದಿತ್ಯವಾರ ಮಧ್ಯಾಹ್ನ 2 ಗಂಟೆಗೂ, ಇನ್ನೊಂದು ಗುರುವಾರ ಬೆಳಿಗ್ಗೆ 7 ಗಂಟೆಗೂ ಮಂಗಳೂರಿಗೆ ಬಂದು ಮರುದಿನ 8-45 ಗಂಟೆಗೆ ಮಂಗಳೂರಿಂದ ಹೊರಟು ಒಂದು ಗುರುವಾರ ಮಧ್ಯಾಹ್ನ ಎರಡು ಗಂಟೆಗೆ ಇನ್ನೊಂದು ಆದಿತ್ಯವಾರ ಬೆಳಿಗ್ಗೆ ಒಂಬತ್ತು ಗಂಟೆಗೆ ಬೊಂಬಾಯಿಯನ್ನು ತಲ್ಪುವುವು. ಅಪ್ಪರ್ ಕ್ಲಾಸಿನ ದರವನ್ನು 15 ರೂಪಾಯಿಯಿಂದ 11½ಗೆ ಇಳಿಸಲಾಗಿದೆ.

ಶ್ರೀಕೃಷ್ಣ ವಿಠಲ ಕೀರ್ತನಮಂಡಳಿ

ಇದರ 13ನೇ ವಾರ್ಷಿಕೋತ್ಸವವು ಇದೇ ತಾ. 11ನೇ ಗುರುವಾರ ಮಂಡಳಿಯ ಹೊಸತಾಗಿ ಕಟ್ಟಿಸಿದ ಕಟ್ಟಡದಲ್ಲಿ ಚೆಯರ್‌ಮೇನರಾದ ಶ್ರೀ. ಬಿ ವೈಕುಂಠ ಬಾಳಿಗಾ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ಆಗೋಸ್ತು ತಿಂಗಳ ತಾ 20ನೇ ಶನಿವಾರ ಅಪರಾಹ್ನ ಘಂಟೆ 4ರಿಂದ 6ರ ವರೆಗೆ ಕನ್ನಡ ತೊರವೆ ರಾಮಾಯಣದ ಪಾದ ಕಾವಟ್ಟಾಭಿಷೇಕದ ವಾಚನವು ಶ್ರೀ ಮಹಾಬಲ ನೊಂಡರ ಓಧುವಿಕೆಯಿಂದಲೂ ಶ್ರೀ ಕೆ ಬಾಲಕೃಷ್ಣರಾವ್, ಎಡ್ವೋಕೇಟ್ ಇವರ ವಿವರಿಸುವಿಕೆಯಿಂದಲೂ ಶ್ರೀ ಮಹಾಗಣಪತಿದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ನೆರವೇರಲಿರುವದು. ಸರ್ವರಿಗೂ ಸುಸ್ವಾಗತವಿದೆ.

ದಿ ಸೌತ್ ಕೆನರಾ ಮೋಟಾರ್ ಯಂಪ್ಲೋಯೀಸ್ ಯೂನಿಯನ್

ಈ ಸಂಘವು ತಾ 19-7-38ರಲ್ಲಿ ಮಾನ್ಯ ಲೇಬರ್ ಕಮಿಷನರವರ ರಿಜಿಸ್ಟ್ರೇಷನ್ ಸರ್ಟಿಫಿಕೇಟು ನಂ 102ರ ಸರ್ಟಿಫಿಕೇಟು ಈ ಸಂಘಕ್ಕೆ ಕೊಡಲ್ಪಟ್ಟಿರುತ್ತದೆ. ರಿಜಿಸ್ಟ್ರಾ ಆಗುವ ಸಮಯ ಈ ಸಂಘದಲ್ಲಿ ಜನ್ಮ 620 ಮಂದಿ ಸದಸ್ಯರಿದ್ದರು. ಈ ವಿಚಾರವನ್ನು ಮಾನ್ಯ ಲೇಬರ್ ಕಮಿಷನರಿಗೆ ತಿಳಿಸಿದ ಕಳೆದ ಸಂಘದ ಸದಸ್ಯರ ಸಂಖ್ಯೆಯನ್ನು, ಇನ್ನೂ ಹೆಚ್ಚಿಸುವ ಉದ್ದೇಶ ಮತ್ತು ಅವರ್ಲ್ಲಿ ಹೆಚ್ಚಿನ ಐಕ್ಯತೆಯನ್ನು ಸ್ಥಾಪಿಸುವ ಉದ್ದೇಶ ಇದೇ ತಾರೀಕು 12-8-38ರಲ್ಲಿ ಈ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಸಂಘದ ಆಫೀಸಿನಲ್ಲಿ, ಸಂಘದ ವೈಸ್ ಪ್ರಸಿಡೆಂಟ್ ಶ್ರೀ। ವೆಂಕಪ್ಪಯ್ಯ ಬಾಳಿಗ M L A ಇವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾವುಗಳನ್ನು ಮಂಜೂರು ಮಾಡಲಾಯಿತು

1 ಯೂನಿಯನಿನ ನಿಬಂಧನಾವಳಿಯನ್ನು ಶ್ರೀ। ಎಸ್ ಪನ್ ಹೊಳ್ಳರು ಕನ್ನಡದಲ್ಲಿ ತರ್ಜುಮೆ ಮಾಡುವರೆ ಒಪ್ಪಿರುವದರಿಂದ, ಅವರಿಂದ ತರ್ಜುಮೆ ಮಾಡಿಸಿ ಒಂದು ಸಾವಿರ ಪ್ರತಿಗಳನ್ನು ಛಾಪಾ ಮಾಡಿಸಿ ಯೂನಿಯನಿನ ಸದಸ್ಯರಿಗೆ ಹಂಚಿಕೊಡಬಹುದಾಗಿ ನಿರ್ಣಯಿಸಲಾಯಿತು. ಇದಕ್ಕೆ ಅಗತ್ಯವುಳ್ಳ ಖರ್ಚನ್ನು ಯೂನಿಯನಿನ ಸೆಕ್ರೆಟರಿಯವರು ವೆಚ್ಚಮಾಡಬಹುದು.

2 ಬುಕ್ಕಿಂಗ್ ಕ್ಲಾರ್ಕರು (ಮಂಗಳೂರು ಸೆಂಟರಿನ) ಬರೆಕೊಂಡಿದ್ದ ಅರ್ಜಿಯು ಓದಲಾಯಿತು. ಜಿಲ್ಲೆಯ ಎಲ್ಲಾ ಬುಕ್ಕಿಂಗ್ ಕ್ಲಾರ್ಕರು ಈ ಯೂನಿಯನಿನ ಸದಸ್ಯರಾಗಿ ಸೇರಿ ಎಲ್ಲರೂ ಒಕ್ಕಟ್ಟಾಗಿ, ತಮ್ಮ ಸಂಕಷ್ಟಗಳನ್ನು ಜಿಲ್ಲಾ ಟ್ರಾಫಿಕ್ ಬೋರ್ಡಿನವರ ಕೂಡೆ ಹೇಳಿಕೊಂಡರೆ ಉತ್ತಮವೆಂತ ಈ ಸಭೆಯ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಬುಕ್ಕಿಂಗ್ ಕ್ಲಾರ್ಕರು ಈ ಯೂನಿಯನಿನ ಸದಸ್ಯರಾಗಿ ಸೇರಬೇಕಾಗಿ ಅಪೇಕ್ಷಿಸೋಣಾಗುತ್ತದೆ. ತನ್ಮಧ್ಯ ಈ ಕೆಳಗೆ ಹೆಸರು ಕಾಣಿಸಿದ ಸದಸ್ಯರು ಅವರ ಸಂಕಷ್ಟಗಳ ಕುರಿತು ಒಂದು ಅರ್ಜಿಯು ತಯಾರಿಸಿ ಯೂನಿಯನಿಗೆ ಕಳುಹಿಸಿಕೊಡತಕ್ಕದ್ದು. ಇಂಥಾ ಅರ್ಜಿ ಬಂದ ತರುವಾಯ ಆ ಅರ್ಜಿಯ ಆರು ಪ್ರತಿಗಳನ್ನು ತಯಾರಿಸಿ, ಒಂದೊಂದು ಪ್ರತಿಯನ್ನು ಜಿಲ್ಲಾ ಟ್ರಾಫಿಕ್ ಬೋರ್ಡಿನ ಪ್ರತಿಯೊಬ್ಬ ಮೆಂಬರರಿಗೂ ಒಂದು ಪ್ರತಿಯನ್ನು ಮಾನ್ಯ ಮಂತ್ರಿಗಳಿಗೂ, ಒಂದು ಪ್ರತಿಯನ್ನೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ರವಾನಿಸತಕ್ಕದ್ದು. ಟ್ರಾಫಿಕ್ ಬೋರ್ಡಿನವರ ಕೂಡೆ ಬುಕ್ಕಿಂಗ್ ಕ್ಲಾರ್ಕರ ಪರವಾಗಿ, ಅವರ ಪ್ರತಿನಿಧಿಗಳಿಗೆ ಟ್ರಾಫಿಕ್ ಬೋರ್ಡಿನ ಮೀಟಿಂಗಿನ ಸಮಯ, ಅವರ ಸಂಕಷ್ಟಗಳ ಕುರಿತು ಹೇಳಿಕೊಳ್ಳುವರೆ ಅವಕಾಶ ಕೊಡುವಂತೆ ಕೇಳಿಕೊಳ್ಳತಕ್ಕದ್ದು. ಸಾಧ್ಯವಿದ್ದರೆ ಯೂನಿಯನಿನ ವೈಸ್ ಪ್ರೆಸಿಡೆಂಟರು ಕೂಡ (ಈ ದಿವಸದ ಅಧ್ಯಕ್ಷರು) ಪ್ರತಿನಿಧಿಗಳೊಂದಿಗೆ, ಜಿಲ್ಲಾ ಟ್ರಾಫಿಕ್ ಬೋರ್ಡಿನ ಮೀಟಿಂಗಿನ ಸಮಯ ಹೋಗಿ ಅವರ ಸಂಕಷ್ಟಗಳನ್ನು ಹೇಳಿಕೊಳ್ಳತಕ್ಕದ್ದು. ಸಂಘದ ಪರವಾಗಿ ಪ್ರತಿನಿಧಿಗಳಾಗಿ ಈ ಕೆಳಗೆ ಹೆಸರು ಕಾಣಿಸಿದವರನ್ನು ನೇಮಕ ಮಾಡಲಾಯಿತು.

1 ರಾಮಕೃಷ್ಣ ಕೆದಿಯಾರು, 2 ಜಿ ದಾಮೋದರ ಶೆಣೈ, 3 ಸೋಮಯ್ಯ ಶೆಟ್ಟಿ, 4 ಸುಬ್ರಾಯ ಕಾಮತ್, 5 ಜಿ. ಎಂ ಸಲ್ದಾನ.

8 । ಶ್ರೀ। ದಾಮೋದರ ಪೈಗಳು ಯೂನಿಯನಿಗೆ ಉಚಿತಾರ್ಥವಾಗಿ ಕೊಟ್ಟ ಕಪಾಟನ್ನು ಧನ್ಯಪೂರ್ವಕವಾಗಿ ಸ್ವೀಕರಿಸಲಾಯಿತು.

3 । ಮಂಗಳೂರು ಸೆಂಟರಿನ ಬುಕ್ಕಿಂಗ್ ಕ್ಲಾರ್ಕರು ಯೂನಿಯನಿನ ಪರವಾಗಿ ಕೊಟ್ಟಿರುವ 'ಮದ್ರಾಸ್ ರೋಡ್ ಟ್ರಾಫಿಕ್ ಕೋಡ್ 83' ಈ ಪುಸ್ತಕವನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು

ತಾಲೂಕು ಸಮಾಚಾರ

ಹಾಲಾಡಿಯಲ್ಲಿ ಜಯಶೀಲ ಹರತಾಳ

ದುಃಖಸೂಚಕ ಸಭೆ

ದೇಶಭಕ್ತರಾದ ಶ್ರೀ। ಹಲ್ಸನಾಡು ಸೂರಪ್ಪಯ್ಯನವರ ನಿಧನಹೊಂದಿದ ವಾರ್ತೆ ತಲುಪಿದೊಡನೆ, ಹಾಲಾಡಿಯಲ್ಲಿ ಇದೇ ತಾ. ೪ನೇ ಗುರುವಾರ ದಿವಸ ಸಾರ್ವತ್ರಿಕ ಹರತಾಳವಾಚರಿಸಲ್ಪಟ್ಟಿತು. ಪೇಟೆ ಇಡೀ ಮೌನವಾಗಿ ಅಳುತಿತ್ತು. ಆ ದಿನ ಸಂಜೆಯಲ್ಲಿ ಒಂದು ಮೈಲು ಉದ್ದದ ಬರಿಕಾಲಿನ ಮೆರವಣಿಗೆಯು ಕಾಂಗ್ರೆಸ್ ಮಂದಿರದಿಂದ ಹೊರಟು ಬಂಗ್ಲೆ ಮೈದಾನದಲ್ಲಿ ನೂರಕ್ಕೂ ಮಿಕ್ಕಿದ ಜನಸಂದಣಿಯ ಸಭೆ ಕೂಡಿತು. ಮ। ರಾ। ಲಕ್ಷ್ಮಣ ಪ್ರಭುಗಳು ಅಧ್ಯಕ್ಷರಾಗಿದ್ದರು. ಶ್ರೀ।ಗಳಾದ ವೆಂಕಟಗಿರಿನಾಯ್ಕ, ಮೋನಪ್ಪ ಸೆಟ್ಟಿ, ಗೋವಿಂದ ಪುದುವಾಳ್, ಬಿ. ಮಂಜುನಾಥ ನಾಯ್ಕ, ಗಣಪಯ್ಯ ಕಮ್ತಿ ಮೊದಲಾದವರು ಶ್ರೀಯುತರ ಗುಣಕಥನ ಮಾಡಿದರು.

ಸಂಯುಕ್ತ ಗೌಡಸಾರಸ್ವತ ಸಭಾ, ಮದ್ರಾಸು.

ತಾ 7 ರಲ್ಲಿ, ತ್ರಿಪಿಕೇನ್‌ನಲ್ಲಿರುವ ಸ್ಕೌಟ್ ಮುಖ್ಯಾಫೀಸಿನಲ್ಲಿ ಜರುಗಿದ, ಹೊಸ ಗ್ರ್ಯಾಜುವೇಟರನ್ನು ಅಭಿನಂದಿಸಿದ ಸಭೆಯು ಸ್ಮರಣೀಯವಾಗಿ ಜರುಗಿದೆ. ಸುಮಾರು 300 ಮಂದಿ ಹಾಜರಾಗಿದ್ದರು. ಉಪಹಾರ ಮುಗಿಸಿ, ಫೋಟೋ ಚಿತ್ರಗಳನ್ನೆತ್ತಿದ ಬಳಿಕ, ಶಿವಾಜಿ ಸ್ಕೌಟದಳದವರ ವಂದೇಮಾತರವ್ ಹಾಡಿದ ಬಳಿಕ ಶ್ರೀ ಜೆ ವೈಕುಂಠ ಭಟ್ಟರು ಉಪನಿಷತ್ತಿನ ಶ್ಲೋಕಗಳ ಮೂಲಕ ಆಶೀರ್ವಾದವನ್ನು ಹಾಡಿದರು. ದಿವಾನ ಬಹದ್ದೂರ್ ಶ್ರೀ। ಕೆ ಪಿ ಲಕ್ಷ್ಮಣರಾಯರು ಅಗ್ರಾಸನವನ್ನೇರಿ, ಸಭಾ ಕಾರ್ಯವು ಮಹಾಜನಗಳ ಆದರಕ್ಕೆ ತುಂಬ ಒಳಗಾಗುತ್ತಲಿದೆ ಎಂಬುದನ್ನು ಅಂದೆ. ಸೇರಿದ ಸಭಾ ವೃಂದದಿಂದ ಗೊತ್ತಾಗುತ್ತದೆ. ದಾಗಿಯೂ, ವಿದ್ಯಾರ್ಥಿನಿಯರು ಹೆಚ್ಚಾಗಿ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಉತ್ತೀರ್ಣರಾಗುತ್ತ ಬರುವುದೂ ಶಿಕ್ಷಣದಲ್ಲೀಗ ಸಮಾಜವು ಮುಂದುವರಿಯುತ್ತಿರುವುದರ ಸೂಚನೆಯಾಗಿರುವುದಾಗಿಯೂ, ಡಾ। ವಿ ಪಿ ಕಾಮತ್, ರಾವ್ ಬಹದ್ದೂರ್, ಇವರಂಥ ನುರಿತ ಅನುಭವಿಗಳು ನಿರುದ್ಯೋಗವನ್ನೆ ಎದುರು ನೋಡುತ್ತಿರುವ ಗ್ರ್ಯಾಜುವೇಟರಿಗೆ ಉತ್ತಮ ಬೋಧನೆ ಕೊಡಲು ಯೋಗ್ಯರೆಂದು ಶ್ರೀಯುತರನ್ನು ಭಾಷಣ ಕೊಡಲು ಕರೆದರು.

ಮುಂದಣ ಜೀವನದ ಸಂಕಷ್ಟಗಳನ್ನು ಕುರಿತು ಮೊನ್ನೆಯ ಮೈಸೂರು ದಿವಾನರು ಅಭಿಭಾಷಣದಲ್ಲಿ ಸೂಚಿಸಿದ್ದಾರೆ. ನಿಮ್ಮೆಲ್ಲರ ಸಾಮುದಾಯಿಕ ಜಾತಕ ಗುಣಿಸಿ ಫಲವಿಲ್ಲ, ಪ್ರತಿಯೊಬ್ಬರದು ಗುಣಿಸಲು ಧೈರ್ಯ ಬಾರದು. ಇದೆಲ್ಲ ನಮ್ಮ ಬಹುಕಾಲ ಮುಗಿಯಲೇ ಬೇಕಾಗಿರುವ ಶಿಕ್ಷಣದ ಫಲ. ವಾರ್ಧಾ ಸ್ಕೀಮು ಜ್ಯಾರಿಗೆ ಬರಲಿದೆ. ಹಳ್ಳಿಗಳ ಅಭಿವೃದ್ಧಿಯಾಗಿ, ಜನರ ಸುಖಜೀವನದ ಏನು ಮಾಡಲು ಇದು ಅತಿ ಸಹಾಯಕವಾಗುತ್ತ, ಧಾರ್ಮಿಕತೆಯಿಲ್ಲದೆಯೂ ಪುರಾತನವಾಗಿಯೂ ಇರುವ ಈಗಿನ ಕ್ರಮವನ್ನು ಇದು ದೂರಗೊಳಿಸುವುದಾಗಿ ನಂಬಬಹುದು. ಪ್ರತಿಯೊಬ್ಬರೂ ಅವರವರು ಕಲಿತು ಉತ್ತೀರ್ಣರಾದ ವಿದ್ಯಾ ವಿಷಯಕವಾಗಿ, ಅದು ಅತಿ ಪ್ರಾಮುಖ್ಯವಾದುದೆಂದೂ, ಜನೋದ್ಧಾರಕ್ಕೆ ಸಹಾಯಕವಾಗುವುದೆಂದೂ ಅದಕ್ಕೆ ಸೇವಾವೃತ್ತಿ ಮಾಡುದೇ ಇಲ್ಲವೆಂದೂ ನಾರ ನಡೆ. ಭಾರತ ವಳಿಕರು ಕೆಲವು ಇರುವಾಗ ಸಮಾಜವಾದ ನನ್ನೆ ಇವರು ಸಾರ ಸಡೆಯಬೇಕಿದೆ. ರಾಗದ್ವೇಷಗಳು ಹೀಗೆ ಮುಂದರಿವಲ್ಲಿ ಶಾಂತಿ ಎಲ್ಲಿ ಸಾಧ್ಯವಾದೀತು?

'ಎಂತಹ ನಮ್ಮ ಮುಂದೆ ಕಷ್ಟಕಾಲವಿದೆ. ಈ ಕಾಲವನ್ನು ಸುಖವಾಗಿ ಕಳೆಯಲು ಮೊದಲಾಗಿ ದೇಹಾರೋಗ್ಯವಿರಬೇಕು, ಆದೃಷ್ಟವಿರಬೇಕು, ನಾವು ದುಃಖಸಹಿಷ್ಣುಗಳಾಗಬೇಕು. ಹೀಗಿದ್ದರೇ ಎಂತಹ ಜೀವನವೂ ಸುಖಜೀವನವಾದೀತು. ಇತರರಾಗಿ ನಮ್ಮ ಸಲ್ಲಿಸಲೂ, ವಿನೋದವಾಗಿರಲು, ಸೌಂದರ್ಯವನ್ನು ಅನುಭವಿಸಲೂ ಕಲಿತುಕೊಳ್ಳಬೇಕು. ತೋರುವ ಈ ಗುಣಗಳು ನಿಮ್ಮಲ್ಲಿ ಉತ್ತಮವಾಗಿರುವಲ್ಲಿ ಜೀವನದಲ್ಲಿ ಬೇಸರ ಬಾರದು. ಅಂಥ ಸುಖಜೀವನವು ನಿಮಗೆ ದೊರೆಯಲಿ" ಎಂದು ರಾವ್ ಬಹದ್ದೂರ ಕಾಮತರೆಂದರು.

ಶ್ರೀಮತಿ ವಿಲಾಸಿನಿ ರಿಗ್ರಾಯ್, ಬಿ ಎ. ಬಿ ಎಲ್ ಇವರು ಸುಖಾತ್ಮಕ ಜೀವನದ ಪಂಥಿಯವಿದ್ದಲ್ಲಿ ಅನವರತ ಹೆಚ್ಚೆಯಲ್ಲಿ ಹೆಚ್ಚೆ ಇಟ್ಟು ಮುಂದರಿದರೆ, ಧೈರ್ಯವೂ ಸಾಹಸವೂ ನಮ್ಮಲ್ಲಿದ್ದರೆ ಇಂದಿನ ಅಧ್ಯಕ್ಷರು ಭಾಷಣಕರ್ತರು ಮೊದಲಾದವರಂತೆ ನಾವೆಲ್ಲ ವಿಜಯಿಗಳಾಗಬಹುದು ಎಂದರು.

ಶ್ರೀ ಬಿ ಕೃಷ್ಣರಾವ್, ಬಿ ಎಸ್ ಸಿ. ಇವರು ಈ ಆದಾರ ಸತ್ಕಾರಗಳಿಗೆ ಸಭೆಯನ್ನು ವಂದಿಸಿ ಹಿರಿಯರ ಹಿತೋಕ್ತಿಗಳಂತೆ ಸರ್ವರೂ ನಡೆದುಕೊಳ್ಳಲು ಯತ್ನಿಸುವರೆಂದೂ ಉತ್ತರಿಸಿದರು.

ಭಗವಂತನ ಮೇಲೆ ವಿಶ್ವಾಸವನ್ನಿಟ್ಟು ನಡೆದರೆ ಜೀವನದಲ್ಲಿ ಜಯವಿದೆ. ಎಂಬುದನ್ನು ಅಧ್ಯಕ್ಷರು ಚೆನ್ನಾಗಿ ಬೋಧಿಸಿದರು.

ಭಾರತಮಾತೆಯ ಪ್ರತಿಮೆಯ ಆರಾಧನಾ ವಿಧಾನ ತೋರಿಸಿ, ಸ್ಕೌಟರು ಪ್ರತಿಮಾ ಪ್ರದರ್ಶನ ಮಾಡಿದರು.

"ಸಭಾಕಾರ್ಯದರ್ಶಿ, ಡಾ. ಎಮ್. ಕೇಶವ ಪೈಯವರು ಸಮಸ್ತರ ಸಹಕಾರವನ್ನು ಕೋರಿ, ಸಭಾಕಾರ್ಯವು ಜಯಶೀಲವಾಗುವಂತೆ ಸಹಾಯಮಾಡಿದವರನ್ನೆಲ್ಲ ವಂದಿಸಿದರು.

"ಜನಗಣಮನ ಅಧಿನಾಯಕ" ನ ಹಾಡಿನೊಂದಿಗೆ ಸಭೆ ಮುಗಿಯಿತು.

ಹಿಂದೀ ವಿರೋಧಿ ಪುಂಡರ ಕೃತಿಮೋಪಾಯಗಳು

ಮಹಾತ್ಮರಿಗೆ ಕಾಯಕಲ್ಪ ಚಿಕಿತ್ಸೆ! ಗಾಂಧಿಜಿಯವರಿಗೆ ಬೆದರಿಕೆ!

ಮಹಾತ್ಮರಿಗೆ ಕಾಯಕಲ್ಪ ಚಿಕಿತ್ಸೆ.

ಮಹಾತ್ಮಾಜಿಯವರಿಗೆ ಕಾಯಕಲ್ಪ ಚಿಕಿತ್ಸೆಯನ್ನು ನಡೆಸುವುದಕ್ಕಾಗಿ ಈ ಕೆಳಗೆ ಹೇಳಿದ ಏರ್ಪಾಡುಗಳಾಗುತ್ತಿವೆಯೆಂದು ಲಂಡನಿನ ಲೀಡರ್ ಎಂಬ ಪತ್ರಿಕೆಯು ಅನ್ನುತ್ತಿದೆ.

ಡಿಲ್ಲಿಯಿಂದ 20 ಮೈಲುಗಳ ದೂರದಲ್ಲಿರುವ ಫೂಜಿಯಾಬಾದ ಎಂಬ ಹಳ್ಳಿಯು, ಕಾಯಕಲ್ಪ ಚಿಕಿತ್ಸೆಗಾಗಿ ಅಲ್ಲಿಗೆ ಬರಲಿರುವ ಮಹಾತ್ಮಾಜಿಯವರ ಆಗಮನವನ್ನು ಪ್ರತೀಕ್ಷಿಸುತ್ತಿದೆ.

ಮಹಾತ್ಮರು ಮುದುಕರಾಗಿರುವರು. ಅವರ ಹಲ್ಲುಗಳು ಬಿದ್ದಿರುವುವು; ರಕ್ತದ ಒತ್ತಾಟವು ಹೆಚ್ಚಾಗಿರುವುದು. ಅವರ ಅನುಯಾಯಿಗಳು, ಕಾಯಕಲ್ಪ ಚಿಕಿತ್ಸೆಯನ್ನು ಕೈಕೊಂಡರೆ ಮಹಾತ್ಮರು ಪುನಃ ಶಕ್ತಿಸಂಪನ್ನರಾಗಬಹುದೆಂಬ ಶ್ರದ್ಧೆಯಿಂದ ಸದ್ರಿ ಚಿಕಿತ್ಸೆಯನ್ನು ಕೈಕೊಳ್ಳುವಂತೆ ಅವರನ್ನು ಪ್ರೇರೇಪಿಸಿರುವರು.

ಪಂಜಾಬ ವಿಶ್ವವಿದ್ಯಾಲಯದ ಎಮ್. ಎ. ಪದವಿಧರರಾದ ರಾಜವೈದ್ಯ ಆನಂದಸ್ವಾಮಿ ಎಂಬವರು ಮಹಾತ್ಮರ ಮೇಲೆ ಈ ಚಿಕಿತ್ಸೆಯನ್ನು ನಡೆಸಲಿರುವರು. ಅದಕ್ಕಾಗಿ ಫೂಜಿಯಾಬಾದಿನಲ್ಲಿ ಅವರೊಂದು ಕುಟೀರವನ್ನು ತಯಾರಿಸಿರುವರು.

ರಾಜಕೀಯ ವಿಷಯಗಳ ಮತ್ತು ಬಾಹ್ಯ ಪ್ರಪಂಚದ ಸ್ಪರ್ಶವಿಲ್ಲದೆ ಆ ಕುಟೀರದೊಳಗೆ ಮಹಾತ್ಮರು ಎರಡು ತಿಂಗಳುಗಳ ತನಕ ಇರುವರು. ಒಂದು ನೆಲ ಮನೆಯಲ್ಲಿ 60 ದಿನಗಳ ತನಕ ಅವರು ಸೂರ್ಯನ ಸ್ಪರ್ಶವಿಲ್ಲದೆ ಇರುವರು. ಪತ್ರಿಕೆಗಳನ್ನು ಮಾತ್ರ ಅವರು ಓದಬಹುದಾಗಿದೆ. ಕಿತ್ತಳೆ ಹಣ್ಣಿನ ರಸ ಮತ್ತು ಲಿಂಬೆ ಹಣ್ಣುಗಳು ಮಾತ್ರ ಅವರಿಗೆ ಆಹಾರವಾಗಿ ಕೊಡಲ್ಪಡುವುವು.

ದಿನಕ್ಕೆ ಮೂರಾವರ್ತಿ ಆನಂದ ಸ್ವಾಮಿಯು ಮಹಾತ್ಮಾಜಿಯವರಿಗೆ ಕಾಯಕಲ್ಪ ಮದ್ದನ್ನು ಕೊಡುವನು. ನೆಲ್ಲಿಕಾಯಿ, ಜೇನು ತುಪ್ಪ ಮತ್ತು ಹಿಮಾಲಯದ ಅದೊಂದು ಗುಪ್ತ ಮೂಲಿಕೆಯಿಂದ ತಯಾರಿಸುವ ಈ ಮದ್ದು ಆನಂದಸ್ವಾಮಿಗೆ ಮಾತ್ರ ತಿಳಿದಿರುವುದು.

ಫ್ರಾಂಕೋವಿನ ಆತ್ಮಶ್ಲಾಘನೆ ಯುರೋಪಿನ ರಕ್ಷಕ.

"ಯೂರೋಪಿನ ಭಾಗ್ಯವು ಗಂಡಾಂತರಕ್ಕೊಳಗಾಗಿರುವುದು. ನಾವು ಧರ್ಮಯುದ್ಧವನ್ನು ನಡೆಸುತ್ತಿರುವೆವು. ಅದು ಕಾರಣವೇ ಮೊದಲಿಂದಲೂ ಸ್ಪೇನಿಶ್ ರಿಪಬ್ಲಿಕಿನ ಪಕ್ಷವನ್ನು ವಹಿಸಿ, ಯುದ್ಧದ ಟ್ಯಾಂಕುಗಳನ್ನು ವಿಮಾನಗಳನ್ನೂ ಕಳುಹಿಸಿದ, ರಷ್ಯನರು ಯುರೋಪಿನಲ್ಲಿ ಅನಗತ್ಯವೆಂದು ಕಂಡುದುದರಿಂದ ಅವರ ಉಚ್ಚಾಟನೆಗಾಗಿ ನಾವು ಪ್ರಯತ್ನಿಸುತ್ತಿರುವುದು."

"ನಮಗೆ ಬೇಡವಾದವರು ಕೆಟಲನ್ ಗಡಿಯಿಂದ ಸ್ಪೈನಿನಲ್ಲಿ ನುಗ್ಗಿ, ಇಲ್ಲಿಯ ಪಟ್ಟಣ, ಹಳ್ಳಿಗಳನ್ನು ಲೂಟಿ ಮಾಡಿದರು. ಇಷ್ಟು ತೊಂದರೆಗಳಿದ್ದರೂ ನಾವು ತುಂಬಾ ಜಯವನ್ನು ಸಂಪಾದಿಸಿರುವೆವು. ಕಳೆದ ವರ್ಷ ಕೆಂಪು ಸೈನ್ಯದವರ ಉಪಟಳದಿಂದ ಮೂರು ಮಿಲಿಯ ಸ್ಪೇನಿಯರ್ಡರನ್ನು ಬಿಡುಗಡೆಮಾಡಲು ನಾವು ಶಕ್ತರಾದೆವು" ಎಂಬುದಾಗಿ ತಾವು ಯುದ್ಧದ ಮೂರನೆಯ ವರ್ಷದಲ್ಲಿ ಮಾಡಬೇಕಾದ ಕೆಲಸಗಳ ಕುರಿತು ತನ್ನ ಸೈನಿಕರಿಗೆ ಭಾಷಣಮಾಡುತ್ತ ಜನರಲ್ ಫ್ರಾಂಕೋರವರು ಹೇಳಿದರು.

ಭದ್ರತೆಯಿಲ್ಲದೆ ಮಕ್ಕಳಿಲ್ಲ. ಬ್ರಿಟಿಷ್ ಗರತಿಯರ ಮುಷ್ಕರ!

"ಭದ್ರತೆಯಿಲ್ಲದೆ ಮಕ್ಕಳಿಲ್ಲ" ಎಂಬುದಾಗಿ ಹೇಳುತ್ತ ಬ್ರಿಟಿಷ್ ಗರತಿಯರು ಗರ್ಭಪಾತದ ಕಾನೂನಿನಲ್ಲಿ ತಿದ್ದುಪಡಿಮಾಡಬೇಕೆಂದು ಚಳವಳವನ್ನು ಹೂಡಿರುವರು.

ಲಂಡನಿನ ವಿಮೆನ್ಸ್ ಕೋಪರೇಟಿವ್ ಗಿಲ್ಡಿನವರು ಈ ವಿಷಯದಲ್ಲಿ ಮುಂದಾಳುತನವನ್ನು ವಹಿಸಿರುವರು. ಅದರ ಅಧ್ಯಕ್ಷೆಯಾದ ಮೇರಿ ಮಿಲ್ಲರ್ ಎಂಬಾಕೆಯೇ ಈ ಚಳವಳದ ಜೀವಾಳ. "ಈ ಪ್ರಪಂಚದಲ್ಲಿ ಮಕ್ಕಳು ರಕ್ಷಿಸಲ್ಪಡುವವೆಂಬುದಕ್ಕೆ ಭದ್ರತೆಯಿಲ್ಲದುದರಿಂದ ಮಕ್ಕಳನ್ನೇ ಹೆರದಿರುವುದು ಲೇಸು. ಮಗುವು 'ನಾನೇಕೆ ಹುಟ್ಟಿದೆನು?' ಎಂಬ ಪ್ರಶ್ನೆಯನ್ನು ಹಾಕುವ ಸಂದರ್ಭವೇ ಬರಬಾರದು. ಹೊಟ್ಟೆಗಿಲ್ಲದೆ ಮಕ್ಕಳು ನರಳುತ್ತಿರುವುದನ್ನು ಸ್ಪೈನಿನ ತಾಯಂದಿರು ತಮ್ಮ ಕಣ್ಣಿನಿಂದಲೇ ನೋಡುತ್ತಿರುವರು. ಬಾಂಬುಗಳಿಂದ ಅಂಗಹೀನವಾದ ಮಕ್ಕಳೆಷ್ಟಿಲ್ಲ! ಆದುದರಿಂದ ಒಂದು ವರ್ಷದ ತನಕ ಹೆಂಗಸರು ಮಕ್ಕಳನ್ನು ಹೆರುವುದಿಲ್ಲವಾಗಿ ಮುಷ್ಕರ ಹಿಡಿದರೆ ಸರಕಾರವು ಗಾಬರಿಗೊಳ್ಳುವುದು. ಆಗ ನಮ್ಮ ಇಚ್ಛೆಯು ಈಡೇರುವುದು." ಎಂಬುದಾಗಿ ಅವರು ಅಭಿಪ್ರಾಯಪಡುತ್ತಿರುವರು.

ಇಂಡಿಯಾ ಆಕ್ಟಿನಲ್ಲಿ ತಿದ್ದುಪಡಿ ಮಾಡಲಾದೀತು?

ಮಿ. ಚೆಂಬರಲೇನರು ದೇಶವಿದೇಶಗಳಲ್ಲಿ ನಡೆಸುತ್ತಿರುವ ಯುದ್ಧಸಿದ್ಧತೆಗಳನುಸಾರವಾಗಿ ಭಾರತಕ್ಕೆ ಇನ್ನೂ ಹೆಚ್ಚಿನ ರಿಯಾಯತಿಗಳು ಕೊಡಲಾಗುವುದೆಂದು ಲಂಡನಿನಲ್ಲಿ ನಂಬಲಾಗಿದೆ. ಆದುದರಿಂದ ಈ ಕುರಿತು ಇಂಡಿಯದ ಕಡೆಯಿಂದ ಸಾಕಷ್ಟು ಸಹಾಯವಾಗುತ್ತವಾದರೆ, ಇಂಡಿಯಾ ಆಕ್ಟನ್ನು ತಿದ್ದುಪಡಿ ಮಾಡುವಷ್ಟು ಹಕ್ಕನ್ನು ವ್ಯಾಸರಾಯರಿಗೆ ಕೊಡಲಾಗುವುದೆಂದೂ ಪ್ರತೀತಿ ಇದೆ.

ಮುಂಬರುವ ಕೊಂಗ್ರೆಸ್ ನಗರ ರಚನೆ.

ಭೋಜನ ಶಾಲೆಗಳು ಬೇಡ.

ಮುಂಬರುವ ಕೊಂಗ್ರೆಸ್ ನಗರ ನಿರ್ಮಾಣ ಕಾರ್ಯವು ಭರದಿಂದ ಸಾಗುತ್ತಿದೆ. ಸಮೀಪದ ಹಳ್ಳಿಗಳಿಂದ ಯಾವ ಯಾವ ವಸ್ತುಗಳನ್ನು ಒದಗಿಸಿಕೊಳ್ಳಲು ಸಾಧ್ಯವಿದೆಯೆಂದು ಆ ಹಳ್ಳಿಗಳಲ್ಲಿ ಸುತ್ತಾಡಿ ಪರಿಚಯ ಮಾಡಿಕೊಳ್ಳುವ ಸಮಯದಲ್ಲೇ 250 ಟನ್ ಸಿಮೆಂಟನ್ನು ನಗರ ನಿರ್ಮಾಣ ಸಮಿತಿಯ ಕಾರ್ಯದರ್ಶಿಯವರು ಸಂಗ್ರಹಿಸಿರುವರು.

ಕೊಂಗ್ರೆಸ್ ನಗರ ನಿರ್ಮಾತರಾದ ಶ್ರೀ ಗುಲಹತಿಯವರು ತಮ್ಮ ಯೋಜನೆಗಳ ಪಟ್ಟಿಯನ್ನು ಅನುಮೋದನೆಗಾಗಿ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರಿಗೆ ಕೊಟ್ಟಿರುವರು. ಆಹಾರ ವ್ಯವಸ್ಥೆಯ ಬಗ್ಗೆ ಮಹಾತ್ಮಾಜಿಯವರು ಕೊಟ್ಟ ಈ ಕೆಳಗಿನ ಸಲಹೆಗಳನ್ನೂ ಕಮಿಟಿಯವರು ಪರ್ಯಾಲೋಚಿಸುತ್ತಿರುವರು.

"ಈಗಿನ ಈ ಆರ್ಥಿಕ ಮುಗ್ಗಟ್ಟಿನ ದಿನಗಳಲ್ಲಿ ಕೊಂಗ್ರೆಸಿನ ಖರ್ಚನ್ನು ಆದಷ್ಟು ಕಮ್ಮಿ ಮಾಡುವುದಕ್ಕಾಗಿ ಭೋಜನಶಾಲೆಯನ್ನು ನಿರ್ಮಿಸದಿರುವುದು ಲೇಸು. ಕೊಂಗ್ರೆಸ್ ಅಧಿವೇಶನಕ್ಕೆ ಬಂದವರಿಗೆ ಊಟವನ್ನು ಒದಗಿಸಿಕೊಡುವ ಕೆಲಸವನ್ನು ಮಾತ್ರ ಪಾಕಶಾಲೆಯವರು ನೋಡಿಕೊಳ್ಳಬೇಕು. ಊಟವನ್ನು ಪಡಕೊಂಡು ಅವರು ತಮತಮಗೆ ಹಿತಕಂಡ ಸ್ಥಳಗಳಲ್ಲಿ ಕೂತು ಉಣ್ಣಬಹುದು. ಆದರೆ ಆರೋಗ್ಯ ದೃಷ್ಟಿಯಿಂದ ಅಲ್ಲಲ್ಲಿ ಗಲೀಜು ಮಾಡಕೂಡದೆಂದು ಮಾತ್ರ ಅವರಿಗೆ ತಿಳಿಸತಕ್ಕದು."

ಮತಭ್ರಾಂತಿಯ ಪರಮಾವಧಿ

ಬೊಂಬಾಯಿ ಪ್ರಾಂತ್ಯದಲ್ಲಿರುವ ಕಂಬಾರ ಎಂಬಲ್ಲಿ ಮುಸ್ಲಿಂ ಲೀಗಿನವರಿಗೆ ಮ್ಯುನಿಸಿಪಾಲಿಟಿಯಲ್ಲಿ ಬಹುಮತವಿರುವುದು. ಈ ಕಾರಣದಿಂದಾಗಿ ಅವರು ಆ ಊರ ಮ್ಯುನಿಸಿಪಾಲಿಟಿಯನ್ನೇ "ಮುಸ್ಲಿಂ ಲೀಗ್ ಮ್ಯುನಿಸಿಪಾಲಿಟಿ"ಯೆಂದು ನಾಮಕರಣ ಮಾಡಿರುವರು.

ಬಹುಮತ ಪಕ್ಷದವರು ಈ ರೀತಿಯಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದುದಕ್ಕಾಗಿ ನಗರದಲ್ಲಿ ಅತೃಪ್ತಿಯುಂಟಾಗಿರುವುದು.

ಗಾಂಧಿಜಿಯವರಿಗೆ ಬೆದರಿಕೆ!

ಸಹಿ ಇಲ್ಲದ ಅನೇಕ ಪತ್ರಗಳು ಗಾಂಧಿಜಿಯವರಿಗೆ ಮಹಾರಾಷ್ಟ್ರದಿಂದ ಬಂದಿರುತ್ತವೆಂದು ಸ್ಟೇಟ್ಸ್‌ಮನ್ ಪತ್ರಿಕೆಯು ಅನ್ನುತ್ತಿದೆ. ಈ ಪತ್ರಗಳಲ್ಲಿ ಗಾಂಧಿಜಿಯವರ ಮೈ ಮೇಲೆ ಕೈ ಮಾಡಲಾಗುವುದೆಂದು ಬೆದರಿಕೆಯನ್ನು ತೋರಿಸಲಾಗಿದೆಯಂತೆ.

ಖಾರೆ ಪ್ರಕರಣದಲ್ಲಿ ಗಾಂಧಿಜಿಯವರು ಪ್ರಮುಖ ಭಾಗವನ್ನು ವಹಿಸಿದುದರಿಂದ, ಅದರ ಫಲವಾಗಿ ಈ ಬಗೆಯ ಪತ್ರಗಳು ಬರುತ್ತಿವೆ ಎಂದು ಊಹಿಸಲಾಗಿದೆ.

ಹಿಂದೀ ವಿರೋಧಿ ಪುಂಡರ ಕೃತಿಮೋಪಾಯಗಳು.

ಮದರಾಸಿನಲ್ಲಿ ನಡೆಯುತ್ತಿರುವ ಹಿಂದೀ ವಿರೋಧ ಚಳವಳವು ನಿಜವಾಗಿ ಭಾಷಾಪ್ರೇಮದಿಂದ ನಡೆದುದಾಗಿರದೆ, ಕೇವಲ ಕೆಲವು ಮಂದಿ ಪುಂಡರ ಕೈವಾಡವಾಗಿರುವುದೆಂದು ಈಗ ಬೆಳಕಿಗೆ ಬಂದಿರುವುದು.

"ಸಾಯುವ ತನಕ ನಿರಶನ ವ್ರತವನ್ನು" ಕೈಕೊಳ್ಳುವನೆಂದು ಡಂಗುರ ಸಾರಿದ ಸ್ಟೇಲಿನ ಜಗದೀಶನ ಧೀಕ್ಷೆಯ ಗುಟ್ಟು ರಟ್ಟಾಗಿರುವುದು. ಎರಡು ತಿಂಗಳುಗಳಿಂದ ಉಪವಾಸವನ್ನು ಮಾಡುತ್ತಿರುವೆನೆಂದು ಜನರನ್ನು ಮರುಳುಗೊಳಿಸಿದ ಈ ಜಗದೀಶ "ಪುಣ್ಯ ಪುರುಷನು" ಈಗ ಒಮ್ಮೆಲೆ ಹಿಂದುಸ್ತಾನಿ ವಿರೋಧ ಸಮರಕ್ಕಾಗಿ ಸಂಗ್ರಹಿಸಿದ ನಿಧಿಯೊಡನೆ ಪಲಾಯನ ಮಾಡಿರುವನು. ಈಗ ಆತನ ಭಕ್ತರೆಲ್ಲರೂ ಕೂಡಿ "ಆತನೊಬ್ಬ ಕೊಂಗ್ರೆಸಿನ ಗುಪ್ತಚಾರನು" ಆರೋಪವನ್ನು ಹೋರಿಸಿ, ಕೊಂಗ್ರೆಸಿನ ಮೇಲೆ ಬಿದ್ದಿರುವರು.

ಹಿಂದುಸ್ತಾನಿ ವಿರೋಧ ಚಳವಳವು ಮೊದಲಿಂದಲೂ ಕೆಲವು ಮಂದಿ ಸ್ವಾರ್ಥ ಪರಾಯಣರ ಕೆಲಸವಾಗಿತ್ತೆಂಬುದು ಈ ಕೆಳಗಿನ ಕೆಲವು ನಿದರ್ಶನಗಳಿಂದ ಖಚಿತವಾಗಿದೆ. ಮೊದಲಿಂದಲೂ ಈ ಚಳವಳದಲ್ಲಿ ಭಾಗವಹಿಸಿದವರು ಕೆಲವು ಮಂದಿ ನಿರುದ್ಯೋಗಿ ತರುಣರು. ಅವರಿಗೆ ದುಡ್ಡು ಕೊಟ್ಟು ಚಳವಳವು ನಡೆಯುವಂತೆ ಸಾಧಿಸಲಾಗಿತ್ತು. ಈ ಸಮಯದಲ್ಲಿ "go as you please" ರೈಲ್ವೆ ಟಿಕೇಟುಗಳು ತುಂಬಾ ಪ್ರಯೋಜನಕಾರಿಯಾದವು.

ಇಂತಹ ತರುಣರಲ್ಲೊಬ್ಬನು ತನ್ನನ್ನು ವಿರುಧ ನಗರದಿಂದ ಕೆಲಸ ಕೊಡುವೆನಾಗಿ ಹೇಳಿ ಮದರಾಸಿಗೆ ಕರೆತರಲಾಗಿತ್ತೆಂದು ಕೋರ್ಟಿನಲ್ಲಿ ಹೇಳಿ ಬಿಟ್ಟನು. ಈ ಕೆಲಸವೆಂದರೆ ಹಿಂದೀ ವಿರೋಧ ಪಿಕೆಟಿಂಗ್ ನಡೆಸುವುದು ಮತ್ತು ಕೂಗಾಡುವುದು. ಇಷ್ಟು ಕೆಲಸವನ್ನಾತನು ಮಾಡುವನಾದರೂ ಆತನ ಕಡೆಗೆ ಕಣ್ಣೆತ್ತಿ ನೋಡುವವರೂ ಊಟ ಕೊಡುವವರೂ ಇಲ್ಲದೆ ಹೋಯಿತು. ಆದುದರಿಂದ ಆತನು ಹಿಂದೀ ವಿರೋಧ ಚಳವಳದಲ್ಲಿ ಭಾಗವಹಿಸಿ, ಪ್ರಯತ್ನ ಪೂರ್ವಕವಾಗಿ ಪೊಲೀಸರ ಕೈವಶವಾಗುವಂತೆ ಸಾಧಿಸಿದನು.

ಇ. ವಿ. ರಾಮುಸ್ವಾಮಿ ನಾಯಕರ್ ಎಂಬವರು ತನಗೆ ಉದ್ಯೋಗವನ್ನು ಕೊಡುವೆನೆಂದು ಹೇಳಿ ಇರೋಡಿನಿಂದ ತನ್ನನ್ನು ಮದರಾಸಿಗೆ ಕರತಂದು ಇದೇ ರೀತಿಯಲ್ಲಿ ಜೋಸ ಗೊಳಿಸಿದರೆಂದು ಇನ್ನೊಬ್ಬ ತರುಣನೂ ಕೋರ್ಟಿನಲ್ಲಿ ಹೇಳಿದನು.

"ನನ್ನ ತಾಯಿಯನ್ನು ಕಾಣದೆ ಒಂದು ತಿಂಗಳಾಯಿತು. ಆದುದರಿಂದ ನನ್ನನ್ನು ಮನೆಗೆ ಕಳುಹಿಸಿಕೊಡಿ." ಎಂಬುದಾಗಿ ಆತನು ನಂತರ ಮೊರೆಯಿದ್ದನು. ಇವರ ವಿಚಾರಣೆಯನ್ನು ನಡೆಸುತ್ತಿದ್ದ ನ್ಯಾಯಾಧೀಶರು, ಹಿಂದೀವಿರೋಧಿ ಪುಂಡರ ಈ ಬಗೆಯ ಹೀನೋಪಾಯಗಳನ್ನು ಖಂಡಿಸಿ, ಅವರಿಬ್ಬರನ್ನು ಪುನಃ ಮನೆಗೆ ಕಳುಹಿಸುವಂತೆ ಹೇಳಿದರು.

ಇಂತಹ ಸ್ವಾರ್ಥಿಗಳ ಮೇಲೆ ಸರಕಾರದವರು ಯಾವ ತರದ ಕಾನೂನನ್ನು ಜ್ಯಾರಿ ಮಾಡಿದರೆ ತಪ್ಪಿದೆಯೆ?

ಜರ್ಮನಿ ಯುದ್ಧಮಾಡುವುದೆ?

[ಈ ವಾರದ ಸೇನಾವ್ಯೂಹದ ಪ್ರದರ್ಶನದಿಂದ ಯುರೋಪಿನಲ್ಲಿ ಕಳವಳ ಉಂಟಾಗಿದೆ.]

ಜರ್ಮನಿ ಈಗ ಪ್ರಬಲವಾಗಿದೆ ಎಂದು ಕೆಲವರೆನ್ನುವರು; ಧೈರ್ಯವಿಶ್ವಾಸಗಳು ಉಳ್ಳದೆನ್ನುವರು. ಇದು ನಿಜವಲ್ಲ; ಆದರೆ, ಹೊರಗಿನಿಂದ ಹಾಗೆ ತೋರಿಸಿಕೊಳ್ಳುತ್ತಲಿದೆ, ಅಷ್ಟೆ. ತನ್ನ ಅತ್ಯುತ್ತಮ ಕೃಷಿಕ್ಷೇತ್ರಗಳನ್ನೂ ಗಣಿಗಳನ್ನೂ ಕಳೆದುಕೊಂಡು, ಸುಲಭವಾಗಿ ನೆರೆಯವರ ವಿಮಾನಗಳಿಂದ ತನ್ನ ನಗರಗಳು ಆಹುತಿಯಾಗಲು ಸಮೀಪವಾಗಿದ್ದು, ಕೆಥೊಲಿಕ್ ಜನಗಳ ಯೆಹೂದ್ಯರ ದ್ವೇಷವನ್ನೂ ಅದು ಗಳಿಸಿಕೊಂಡಿದೆ. ಒಸ್ಟ್ರಿಯವನ್ನು ಕೂಡಿಸಿಕೊಂಡು ಇಟಲಿಯ ಸ್ನೇಹವನ್ನೂ ಸಾಕಷ್ಟು ಕಳೆದುಕೊಂಡಿದೆ.

ಹೀಗಿರುವಾಗ ಜರ್ಮನಿ ಪ್ರಬಲವಾಗಿಲ್ಲ, ದುರ್ಬಲವಾಗಿದೆ. ಜರ್ಮನಿಯ ಎದುರಾಳಿಗಳು ಪ್ರಬಲರಾಗಿದ್ದಾರೆ.

ಬ್ರಿಟನ್ನಿನ ಸಾಂಪತ್ತಿಕ ಸ್ಥಿತಿ ಅತ್ಯುತ್ತಮವಾಗಿದೆ. ಸಾಮಾಜಿಕ ಮತ್ತು ಔದ್ಯೋಗಿಕ ಜೀವನವೂ ಉತ್ತಮವಾಗಿದೆ. ಐರ್ಲಂಡಿನೊಡನೆ ಕರಾರುಮಾಡಿದೆಂದೂ ಎಲ್ಲ ಸಾಮ್ರಾಜ್ಯಗಳೊಡನೆ ಮೈತ್ರಿ ಬಾಂಧವ್ಯಗಳನ್ನು ಸಂಪಾದಿಸಿಕೊಂಡಿದೆ. ಶಾಂತಚಿತ್ತವೇ ಇದ್ದರೂ, ಸೈನ್ಯಬಲವೂ ವಿಮಾನಬಲವೂ ತುಂಬ ಇವೆ. ನೌಕಾಬಲವಂತೂ ಬೇರೆ ರಾಷ್ಟ್ರಗಳ ಬಲಕ್ಕಿಂತ ಹೆಚ್ಚಿನದು.

ಫ್ರಾನ್ಸಿನಲ್ಲಿ ಒಳಜಗಳಗಳಿದ್ದರೂ, ಫ್ರೆಂಚ ಸೈನ್ಯವು ಎಣೆಯಿಲ್ಲದಷ್ಟು ಚೆನ್ನಾಗಿದೆ. ಪೋಲೆಂಡ್ ಝೆಕೊಸ್ಲೊವಾಕಿಯ ಸೈನ್ಯಗಳು ಪ್ರಬಲವಾಗಿವೆ, ಕಡೆಯ ತನಕವೂ ಕಾದುವುವಾಗಿವೆ. ಜರ್ಮನಿಯು ಒಸ್ಟ್ರಿಯವನ್ನು ಕೂಡಿಸಿಕೊಂಡದೇ, ರುಮೇನಿಯವು ಪೋಲೆಂಡಿನೊಡನೆ ಮೈತ್ರಿ ಕರಾರನ್ನು ಮಾಡಿಕೊಂಡಿದೆ.

ಜರ್ಮನಿ ರಾಜಕಾರಣ ಚಾತುರ್ಯದಿಂದಲೇ ವಿಜಯ ಹೊಂದುತ್ತಲಿದೆ. ಹಿಟ್ಲರನು ತಟ್ಟನೆ ತೀವ್ರವಾಗಿ ಕಾರ್ಯ ಮಾಡುವ ಕಾರಣ ಮಿಕ್ಕವರು ನಿಧಾನವಾಗಿ ಕಾರ್ಯರಂಗಕ್ಕೆ ಇಳಿವುದರಿಂದ, ಇದು ವರೆಗೆ ವಿಜಯಿಯೇ ಸರಿ. ಜರ್ಮನ್ ಜನರು ಯುದ್ಧ ಕಷ್ಟಕ್ಲೇಶಗಳನ್ನು ಅನುಭವಿಸಿ ಧೀರರಾಗಿದ್ದಾರೆ. ಮಿತ್ರರಾಷ್ಟ್ರಗಳು 20 ವರ್ಷದಲ್ಲಿ ತಮ್ಮ ತಮ್ಮ ರಾಜ್ಯಗಳನ್ನು ರಕ್ಷಣೆಮಾಡಲು ಸಿದ್ಧರಾಗಿಯೇ ಇರುವುವು. ಹೇಗೂ ಶಾಂತಿ ಇರಬೇಕೆಂಬುದೇ ಅವರ ಧ್ಯೇಯ. ಶಾಂತಿಯನ್ನು ಭಂಗಗೊಳಿಸುವರು ಎಂದು ಭಯಪ್ರದರ್ಶಿಸಿಯೆ ಹಿಟ್ಲರನು ತನಗೆ ಬೇಕಾದುದೆಲ್ಲವನ್ನು ಪಡೆಯಬಹುದು. ಯುದ್ಧವಾದರೆ, ಅವನ ಹಾಗೂ ಜರ್ಮನಿಯು ಸರ್ವನಾಶವಾಗುವುದಾಗಿ ಅವನು ಬಲ್ಲನು. ಶಾಂತಿ ಹೆಚ್ಚುತ್ತ ಬಂದರೆ, ಇನ್ನೊಮ್ಮೆ ಜರ್ಮನ್ ಸಾಮ್ರಾಜ್ಯವೂ ಉಂಟಾಗಬಹುದು; ಯುದ್ಧವಾದರೆ, ಇನ್ನು ಇಪ್ಪತ್ತು ವರ್ಷಗಳ ವರೆಗೆ ಸಾಮ್ರಾಜ್ಯದ ಕನಸೂ ಜರ್ಮನಿಗಿರದು.

ಬ್ರಿಟಿಷ ಸಾಮ್ರಾಜ್ಯದಲ್ಲಿ ಹಿಂದೀಯರ ಸ್ಥಿತಿ

ಧರ್ಮಪ್ರಕಾಶರಿಗೆ ೧೬ ಗಾಯಗಳು

ಹೈದರಾಬಾದಿನಲ್ಲಿ ಮುಸ್ಲಿಮರ ಅತ್ಯಾಚಾರ

ಬ್ರಿಟಿಷ ಸಾಮ್ರಾಜ್ಯದಲ್ಲಿ ಹಿಂದೀಯರ ಸ್ಥಿತಿ

(ದೀನಬಂಧು ಎಂಡ್ರ್ಯೂಸ್‌ರವರಿಂದ)

ಸಮಸ್ತ ಪತ್ರಿಕಾ ಪ್ರತಿನಿಧಿಗಳನ್ನು ಬಂಗಳೂರಲ್ಲಿ ಕಂಡ ಶ್ರೀ| ಎಂಡ್ರ್ಯೂಸ್‌ರವರು, ಸಾಮಾನ್ಯವಾಗಿ ಹಿಂದೀಯರ ಗೌರವವು ವಸಾಹತುಗಳಲ್ಲಿ ಉತ್ತಮವಾಗುತ್ತ ಬರುತ್ತಿದೆಯಾದರೂ, ದಕ್ಷಿಣಾಫ್ರಿಕದಲ್ಲಿ ಮಾತ್ರ ಅದು ಕೀಳಾಗಿಯೇ ಇದೆ ಎಂದು ಸಾರಾಂಶವಾಗಿ ಹೇಳಿರುವರು.

ಫಿಜಿದ್ವೀಪದಲ್ಲಿ ವಿಕ್ಟೋರಿಯಾ ರಾಣಿಯವರ ಕಾಲದಿಂದಲೂ [illegible] ಶಾಶ್ವತ ಅನುಭವಿಸುವಂತೆ ಜಮೀನನ್ನು [illegible] ಕೊಡಲಾಗಿತ್ತು. ಆದರೆ ಹಿಂದೀಯರನ್ನು [illegible] ಯುರೋಪಿಯನ್ ಪ್ಲಾಂಟರರು [illegible] ಫಿಜೀದ್ವೀಪದಲ್ಲಿ ಇತರರ [illegible] ಬಡ್ಡಿ [illegible] ಕರಾರು [illegible] ಕಬ್ಬಿನ ತೋಟಗಾರಿಕೆಯ [illegible] ಹಿಂದೀಯರು ಫಿಜೀ ವಾಸಿಗಳಿಂದ [illegible] ಗೇಣಿಗೆ ಜಮೀನನ್ನು ಪಡೆದ [illegible] ಈಗ 920ರಿಂದ ಈ ಬಗೆಯಾಗಿ ಹಿಂದೀಯರನ್ನು [illegible] ಕಳುಹಿಸಲ್ಪಡುವುದು [illegible] ಕಾರಣ, [illegible] ಕರಾರುಗಳೂ ರದ್ದಾಗುತ್ತ ಎಂದಿವೆ, ಜಮೀನುಗಳ ಅವಧಿಯು ಮುಗಿಯುತ್ತ ಬರುವುದಾಗಿದೆ.

ಹಾಳು ಕಂಟಿಗಳು ಬೆಳೆದ ಕಾಡನ್ನು ಕಡಿದು, ಹಿಂದೀಯರು ಅದನ್ನು ಹಸುರು ಮಾಡಿ ಕಬ್ಬಿನ ತೋಟಗಳನ್ನೆ ಮಾಡಿರುವರು. ಹೀಗಿರುವಾಗ, ತಾವೇ ಮಾಡಿರುವ ತೋಟಗಳಿಂದ ತಮ್ಮನ್ನೇಕೆ ಹೊರದೂಡುವರೆಂದು ಅವರು ಕೇಳುವುದು ತಪ್ಪೇ? ಉತ್ತಮ ಕೃಷಿ ಮಾಡುತ್ತಿರುವವರಿಗೆಲ್ಲ ಅವರವರ ಜಮೀನನ್ನು ಮತ್ತಷ್ಟು ಅವಧಿಗೆ ಗೇಣಿಗೆ ಕೊಡುವುದು ಸಹಜ, ಹೊರತು, ಚಿಕ್ಕಂದಿನ ಪ್ರಯತ್ನವನ್ನು ಮಾಡದವರಿಗೆ ಈಗ ಫಲ ಹೊರುವ ನೆಲವನ್ನೆಲ್ಲ ಕೊಟ್ಟು, ಜೀವನವನ್ನೆಲ್ಲ ಈ ಕಷ್ಟಕ್ಕೀಡು ಮಾಡಿದವರನ್ನು ಮನೆಗೆ ಕಳಿಸುವುದು ಅನ್ಯಾಯವೆನಿಸದೆ?

ಈಗ ಆಸ್ಟ್ರೇಲ್ಯಕ್ಕೆ ಹೋಗುತ್ತಿರುವ ಪಂ| ಹೃದಯನಾಥ ಕುಂಜ್ರುರವರು ಫಿಜೀದ್ವೀಪಕ್ಕೂ ತೆರಳುವರು. ಅವರು ಅಲ್ಲಿ ಈ ಜಮೀನು ಗೇಣಿಯ ವಿಷಯ ಸಂಪೂರ್ಣ ತೃಪ್ತಿಕರವಾದ ಇತ್ಯರ್ಥ ಮಾಡುವರಾಗಿ ನಂಬಿಕೆಯಿದೆ.

ಇದೊಂದು ವಿಚಾರವಲ್ಲದೆ, ಅಲ್ಲಿನ ಹಿಂದೀಯರ ಸ್ಥಿತಿ ಚೆನ್ನಾಗಿ ಬರುತ್ತಲಿದೆ. ಆರೋಗ್ಯವೂ ಚೆನ್ನಾಗಿದೆ.

ಜಂಜಿಬಾರಿನಲ್ಲಿ ನಮಗೆ ಸಾಕಷ್ಟು ವಿಜಯ ದೊರೆತಿದೆ. ಅನ್ಯಾಯಕರವಾದ ಕಾನೂನನ್ನು ನಾವು ಎದುರಿಸಿದರೆ, ನಮ್ಮ ನ್ಯಾಯವು ಖಂಡಿತವಾಗಿ ಗೆಲ್ಲುವದಾಗಿ ನಾನು ಪತ್ಯಕ್ಷಾನುಭವದಿಂದ ಸರಕಾರಕ್ಕೂ ಕಾಂಗ್ರೆಸಿಗೂ ತಿಳಿಸಿದೆನು. ಹಾಗೆಯೇ ಆಗಿದೆ. ಹಿಂದೀಯರಿಗೆ ಕಡು ಅನ್ಯಾಯವಾಗುವಂತೆ ಅಲ್ಲಿ ನಿರ್ಧಾರವಾಗಿತ್ತು. [illegible] ಇಲ್ಲಿ ದೃಢವಾಗಿರದಿದ್ದರೆ, ನಮಗೆ [illegible] ವಿಜಯವಾಗುತ್ತಿರಲಿಲ್ಲ.

ಸರಕಾರವು ಎಷ್ಟೇ ಪ್ರಯತ್ನಿಸಿದರೂ ಹಿಂದೀಯರನ್ನು ಪ್ರತ್ಯೇಕಿಸಿ, ಅವರನ್ನು ಸಾಮಾಜಿಕ ಮತ್ತು ಸಾಂಪತ್ತಿಕ ಅನ್ಯಾಯಗಳಿಗೆ ಒಳಪಡಿಸಲು ದಕ್ಷಿಣಾಫ್ರಿಕದಲ್ಲಿ ಪ್ರಯತ್ನಗಳಾಗುತ್ತಲೇ ಇವೆ.

ಎಂಥ ಮಹಾಪುರುಷನೇ ಆಗಲಿ ಹಿಂದೀಯರಿಗ ತಿಳಿದಿರುವ ಕಾರಣ, ಆಫ್ರಿಕಾನರ ಮೇಲೆ ಈ ಬಿಳೀ ಜನರು ವರ್ಣದ್ವೇಷ ತೋರಿಸುವಷ್ಟಕ್ಕೆ ಹಿಂದೀಯರೂ ಅದರ ತಾಪಕ್ಕೆ ಒಳಗಾಗುವರು. [illegible] ಬಳಿಕ ಹಿಂದೀ ಆಫ್ರಿಕಾನ ಎಂದಿಲ್ಲ. ಆಫ್ರಿಕಾನರ ಗತಿಯೇ ಹಿಂದೀಯರಿಗೆ!

ಇನ್ನೂ ಇನ್ನೂ ಹಿಂದೀಯರ ಸ್ಥಿತಿ ಇಲ್ಲಿ ಕೆಡುತ್ತಲಿದೆ. ಯುರೋಪಿಯರೆಲ್ಲ ಉತ್ತಮ ಆರೋಗ್ಯಕರ ಸ್ಥಳಗಳನ್ನು ತಮ್ಮವನ್ನಾಗಿ [illegible] ಅಷ್ಟೇ ಜೋರಾಗಿ [illegible] ಮೇಲೆ ಪಾಲಾಗಿ [illegible]

ಎಲ್ಲ ವಸಾಹತುಗಳಿಗೆ ನಿಷ್ಪಕ್ಷಪಾತದಿಂದ [illegible] ನ್ಯಾಯವನ್ನು ಹಿಂದೀಯರು [illegible] ಕಾರಣ [illegible] ಸತ್ಯವು ನ್ಯಾಯವು [illegible] ವಿಧದಲ್ಲಿ [illegible] ಮೊದಲು ನೆಲೆಸಿರುವರು. ಹಿಂದೀಯರು ಬಿಳೀ ಜನರಷ್ಟೇ [illegible] ಕಚೇರಿಗಳಲ್ಲೂ ಇತ್ಯರ್ಥಗೊಳಿಸಬೇಕಾಗಿದೆ.

ಖಾರೇಕಾಂಡ.

'ಮೆಂಚೆಸ್ಟರ್ ಗಾರ್ಡಿಯನ್' ಉವಾಚ

ಕಾಂಗ್ರೆಸ್ ಕಾರ್ಯಕಾರೀ [illegible] ತೀರ್ಮಾನವು ನ್ಯಾಯವೆಂದ ದಲ್ಲ [illegible] ಮೆಂಚೆಸ್ಟರ್ ಗಾರ್ಡಿಯನ್ ಪತ್ರವು ಅಗ್ರಲೇಖದಲ್ಲಿ ತಿಳಿಸಿರುವುದು.

"ಪ್ರಜಾಸತ್ತೆಯ ತತ್ವವನ್ನಾವರಿಸಿ ನಡೆವುದಾಗಿ ಮುಖಂಡರು ತಿಳಿಸುವ ಕಾಂಗ್ರೆಸ್ಸು, ಭಾರತವರ್ಷದಲ್ಲಿ ಪ್ರಜಾಸತ್ತೆಯನ್ನು ಹೂಡಿ ತರಲು ಯೋಗ್ಯ ಸಂಸ್ಥೆಯಾಗಿದೆ. ಆದರೆ ಸ್ವಾತಂತ್ರ್ಯವೇ ಅದರ ಮುಖ್ಯ ಆದರ್ಶಸಾಧನೆ. ಇದು ಇನ್ನೂ ಸಾಧ್ಯವಿಲ್ಲದ ಕಾರಣ ಶಿಸ್ತು ಬಹಳ ಕಠಿಣವಾಗಿದೆ. ಈ ಕಠಿಣತೆ ಎಷ್ಟು ಅಪಾಯಕರ ಪರಿಣಾಮಗಳನ್ನೂ ಉಂಟುಮಾಡಬಹುದೆಂದು ಖಾರೆಯವರ ದಂಡನೆಯಿಂದ ತಿಳಿಯಬಂದೀತು."

"ಗವರ್ನರರು ಖಾರೆಯವರ ರಾಜಿನಾಮೆ ಅಂಗೀಕರಿಸಿ ಅವರ ಮತ್ತೊಂದು ಮಂತ್ರಿಮಂಡಲಕ್ಕೂ ಸೂಚಿಸಿ, ಉಳಿದ ಮಂತ್ರಿಗಳನ್ನು ಡಿಸ್‌ಮಿಸ್ ಮಾಡಿದುದರಲ್ಲಿ ತೋರಿದ (ರಾಜಕೀಯ ಗಟ್ಟಿ ಅರಸರ) ರೀತಿಯನ್ನು ಕಾರ್ಯಕಾರೀ ಮಂಡಲವು ತಪ್ಪೆಂದು ದೋಷವೆಣಿಸಿದುದು, ಶಾಸನಸಮ್ಮತವಾದ ವರ್ತನೆಯಲ್ಲಿ ದೋಷಕಂಡಂತಾಗಿದೆ. ಅನುಭವಶಾಲಿಗಳು ತಮ್ಮ ಕೆಳಗಣ ಅಲ್ಪಾನುಭವಿಗಳ ವಿಷಯದಲ್ಲಿ ಬಹಳ ಜಾಗರೂಕರಾಗಿರುವುದು ಸರಿಯಾದರೂ, ವರ್ಕಿಂಗ್ ಕಮಿಟಿಗೆ ಆಕ್ಷಿನ ಪ್ರಕಾರ ರಾಜಕೀಯದಲ್ಲಿ ಎಷ್ಟರ ಮಟ್ಟಿಗೆ ಸ್ಥಾನವೂ ಇಲ್ಲವೆಂಬುದನ್ನು ಮರೆಯಬಾರದು. ಗವರ್ನರರು ತಮ್ಮ ಅಧಿಕಾರವೆಂಬಂತೆ ವರ್ತಿಸಿದರು, ಕಮಿಟಿಯು ವರ್ತಿಸಿಲ್ಲ. ನ್ಯಾಯವಾದ ಪ್ರಜಾಸತ್ತೆಯ ರೀತಿಯಂತೆ ಇದು ನಡೆದಿಲ್ಲವೆಂದು ಹಿಂದೀ ಮತ್ತು ಇತರ ರಾಜಕಾರಣ ಬಲ್ಲವರು ಒಪ್ಪತಕ್ಕದ್ದೆಂದು ಸ್ಪಷ್ಟ ಹೇಳಬಹುದು."

ದರ್ಮಪ್ರಕಾಶರಿಗೆ ೧೬ ಗಾಯಗಳು

ಹೈದರಾಬಾದಿನಲ್ಲಿ ಮುಸ್ಲಿಮರ ಅತ್ಯಾಚಾರ

ಕಲ್ಯಾಣಿಯ ಆರ್ಯಸಮಾಜದ ಮುಖಂಡರಲ್ಲೊಬ್ಬರಾದ ಶ್ರೀ| ಧರ್ಮಪ್ರಕಾಶರೆಂಬವರನ್ನು ಕಳೆದ ಜೂನ್ 27ನೆಯ ಸೋಮವಾರ ದಿನ ಕೆಲವು ಮಂದಿ ಮುಸಲ್ಮಾನ ಗೂಂಡಾಗಳು ತಿವಿದು ಕೊಂದಿದ್ದರಷ್ಟೆ. ಆ ಕುರಿತು ಈ ಕೆಳಗೆ ಕೊಟ್ಟ ಕೆಲವು ವಿಷಯಗಳು ಬೆಳಕಿಗೆ ಬಂದಿವೆ.

ಕಲ್ಯಾಣಿಯ ಆರ್ಯಸಮಾಜ ಕಾರ್ಯದರ್ಶಿಯವರು ಈ ವರ್ತಮಾನವನ್ನು ಕೇಳಿದೊಡನೆ, ಅಲ್ಲಿಗೆ ಹೋಗಿ ಪೋಲೀಸರಿಗೂ [illegible] ಈ ವರ್ತಮಾನವನ್ನು ತಿಳಿಸಿದರು. ನೆಲದ ಮೇಲೆ ಇರು[illegible] ರಕ್ತದ [illegible] ಪೋಲೀಸ ಅಧಿಕಾರಿ [illegible] ಅದು [illegible] ಪರಿಹಾಸ್ಯ ಮಾಡಿದರಂತೆ. ಅದರ ಚೆನ್ನಾಗಿ ಪರೀಕ್ಷೆ ಮಾಡಿ ನೋಡುವಂತೆ ಹೇಳಲು, ಕಟ್ಟಕಡೆಗೆ ಅದು ರಕ್ತವೆಂದು ಅವರು ಒಪ್ಪಿಕೊಳ್ಳಬೇಕಾಯಿತು. ಶವವನ್ನು ಪೋಸ್ಟ್ ಮೋರ್ಟೆಮ್ ಮಾಡಿದ ಡಾಕ್ಟರರ ಹೇಳಿಕೆಯ ಮೇರೆಗೆ ಮೃತರ ದೇಹದಲ್ಲಿ ಖಡ್ಗ, ಈಟಿ ಮತ್ತು ಲಾಠಿಯ ಗಾಯಗಳು ಕೂಡಿ ಒಟ್ಟಿಗೆ 16 ಇದ್ದುವು.

ಶವವು ನಂತರ ಆರ್ಯಸಮಾಜ ಮಂದಿರಕ್ಕೆ ಕೊಂಡೊಯ್ಯಲಾಯಿತು. ಹೈದರಾಬಾದಿನ ಆರ್ಯಸಮಾಜದ ಕಾರ್ಯದರ್ಶಿಯವರು ಶವದಹನಕಾರ್ಯವನ್ನು ಬುಧವಾರದ ತನಕ ನಿಂದಿ ಹಾಕಬೇಕೆಂದು ತಂತಿಮೂಲಕ ತಿಳಿಸಿದ್ದರು. ಆದರೆ ಪೋಲೀಸರು ಅದನ್ನು ಕೂಡಲೆ ದಹನಮಾಡಬೇಕೆಂದೂ ಇಲ್ಲದಿದ್ದರೆ ಅದನ್ನು ಹೂಳಲಾಗುವುದೆಂದೂ ಗದರಿಸಿದರು. ಅಲ್ಲಿಯೇ 145ನೇ ಸೆಕ್ಷನು ಜಾರಿ ಮಾಡಲ್ಪಟ್ಟು ಹಿಂದುಗಳ ಕೈಯಲ್ಲಿದ್ದ ಕೋಲು ಮೊದಲಾದುವು ಸೆಳೆದು [illegible] ಆದರೆ [illegible] ತರದ [illegible] ಹೀಗಿರುತ್ತಿರಲು [illegible] ದಿನ 11 ಗಂಟೆಗೆ ಶವಸಂಸ್ಕಾರವನ್ನು [illegible] ಮೆರವಣಿಗೆಯ [illegible] 9000 [illegible]

ಈಗ [illegible] ಹಿಂದುಗಳ ಮನೆಗಳಿಗೆ [illegible] 145ನೆಯ ಸೆಕ್ಷನು ಜಾರಿಯಲ್ಲಿದ್ದರೂ ಅವರು ಲಾಠಿಗಳನ್ನು ಹಿಡಿದು [illegible] ಹಿಂದುಗಳಿಗೆ [illegible] ಆರ್ಯಸಮಾಜದ [illegible] ಗಣಪತ್ ಮೋಹನಸಿಂಗ, [illegible] ಎಂಬವರನ್ನು ತಾವು [illegible] ಬಹಿರಂಗವಾಗಿ ಹೇಳಿ ತಿರುಗಾಡುತ್ತಿರುವರು. ಇದರಿಂದಾಗಿ ಮುಸಲ್ಮಾನರ ವಸತಿಗಳಲ್ಲಿದ್ದ ಹಿಂದುಗಳು ತಮ್ಮ ಮನೆಗಳನ್ನು ಬಿಟ್ಟು ಬಿಟ್ಟು, ಹಿಂದುಗಳಿದ್ದಲ್ಲಿಗೆ ಬಂದು ಸೇರುತ್ತಿರುವರು.

ಗಿರಣಿ ಬಟ್ಟೆ ಮತ್ತು ಖದ್ದರ್

(ಶ್ರೀ| ಜೆ ಸಿ ಕುಮಾರಪ್ಪನವರಿಂದ)

[illegible] ಅವನ್ನು [illegible] ಬಡಜನರ ದಳಸೆಗೆ ಉಪಯೋಗಿಸದ [illegible] ಸಾವು [illegible] ಯಂತ್ರ [illegible] ನಡೆವುದಿಲ್ಲ. ಆದರೆ [illegible] ಸಮುದ್ರ [illegible] ಸಾಕವಾಗುವಂತೆ [illegible] ಯಂತ್ರಗಳ ಮನುಷ್ಯ [illegible] ದರಿದ್ರ [illegible]

ಯಂತ್ರವು ಒಂದು ಕಡೆ ಇರುವಾಗ, ಅದಕ್ಕೆ ಬೇಕಾದ ಕೈಗಾರಿಕೆಯ ಕಚ್ಚಾ ಸಾಮಾಗ್ರಿ ದೂರದ ಕಡೆ ಇರುವುದು. ಸರಾಗವಾಗಿ [illegible] ಈ ಸಾಮಗ್ರಿಗಳು ಜಗತ್ತಿನ [illegible] ನಮ್ಮ [illegible] ಕೊಳ್ಳುವಾಗ [illegible] ಮಾಡಿ [illegible] ಅವರಿಗೆ [illegible] ಕೇಂದ್ರ [illegible] ಅವರು ನಮ್ಮ [illegible] ಸ್ಪರ್ಧಿಸುವ [illegible]

ಕೊನೆಗೆ ಬ್ರಿಟಿಷ ಸರಕಾರದ [illegible] ಗಳನ್ನು [illegible] ಪ್ರಯೋಗಿಸಲು [illegible] ಹಣ [illegible] ಹಿಂದೀ ಬಡಕೋಟಿಯೇ ಇದನ್ನು [illegible]

ಹಿಂದೀ ಸೈನ್ಯದ ಖರ್ಚನ್ನು ತೆರುವ ಹಿಂದೀ ಬಡವರೇ, ಆ ಸೈನ್ಯವು ತಮ್ಮ ಮೇಲೆ ಯುದ್ಧ ಮಾಡುವಂತೆ ಲಂಕಾಶಯರು ಪ್ರಯೋಗಿಸುವರೆ ಹಣ ಒದಗಿಸುತ್ತಾರೆ.

ರೈಲ್ವೆಗಳು, ಸಿಂಗಾಪುರ ಜಹಜ್ಜಟ್ಟಿಗಳು [illegible] ಗಳು ಸೈನ್ಯಗಳು ಮೊದಲಾದುವೆಲ್ಲದರ ಖರ್ಚನ್ನು ನೋಡಿದರೆ, ಇದರಿಂದ ಲಂಕಾಶಯರು ಬಟ್ಟೆ ಮೊದಲು ಸುಗಮವಾಗುವ ಕಾರಣ, ಅದನ್ನೂ ಇಲ್ಲೇ ತಯಾರಾಗುವ ಖಾದಿಯನ್ನು ಹೋಲಿಸಿ ನೋಡಿರಿ.

ಲಂಕಾಶಯರು ಬಟ್ಟೆ ಅಗ್ಗ ನಿಜ, ಈ ಖರ್ಚ ಕೂಡಿಸಿದರೆ? ಖಾದೀ ಬಟ್ಟೆಯು ಗಜಕ್ಕೆ 8 ಆಣೆಯಾದರೂ, ಗಿರಣಿ ಬಟ್ಟೆ 4 ಆಣೆಯೇ ಆದರೂ, ಖಾದಿ ಅಗ್ಗವಾಗದೆ?

ಹೀಗಾಗಿ, ಗಿರಣಿ ಬಟ್ಟೆ ಅಗ್ಗವೆನ್ನುವುದು ಹುಚ್ಚುತನ.

[ಬೆಂಗಳೂರಿನ ಭಾಷಣ 12-8-38]

ಹಿಂದೀ—ಶಿಕ್ಷಣ

ಎಂಟು ಮಂತ್ರಿಗಳ ಭಾಷಣ.

ವರ್ಷವಿಡೀ ಶಾಲೆಗಳಲ್ಲಿ ಹಿಂದೀ ಶಿಕ್ಷಣ ಕಡ್ಡಾಯವಾಗಬಾರದೆಂಬ ಆಕ್ಷೇಪವ ನ್ನೆತ್ತಿ ನಾನಾ ಬಗೆಯ ಸತ್ಯಾಗ್ರಹ ಪ್ರದರ್ಶನ ಮಾಡಿ 315 ಮಂದಿ ದಂಡನೆಗೆ ಒಳಗಾಗಿರುವರು. ದಕ್ಷಿಣಭಾಗದಿಂದ ಮದ್ರಾಸಿಗೆಂದು ಹೊರಟೆಂಬತ್ತು ಮಂದಿ ಹೊರಟು ನಡೆಸಿಗೂಡಿ ಹಿಂದೀಶಿಕ್ಷಣ ವಿರುದ್ಧವಾಗಿ ಭಾಷಣಕೊಡುತ್ತ ಬರುತ್ತಿರುವರು. ಹಿಂದೀ ಕಡ್ಡಾಯವಾಗಿ ಕಲಿಸಬಾರದೆಂದು ಪ್ರಚಂಡ ಸಭೆಗಳಾಗಿವೆ; ಹಿಂದಿ ಕಲಿಸಲೇಬೇಕೆಂದೂ ಅತ್ಯಾತುರತೆಯಿಂದ ಹಿಂದಿಯನ್ನು ಕಲಿಯಲು ಮುಂಗೆ ಬರುವ ವ್ಯಕ್ತಿಗಳ ಮತ್ತು ಶಾಲೆಗಳ ಸಂಖ್ಯೆ ಹೆಚ್ಚುತ್ತ ಬರುವುವೆಂದೂ ವಾರ್ತಾ ಪತ್ರಿಕೆಗಳು ತಿಳಿಸುತ್ತಲೇ ಇವೆ. ಈ ಸಂದರ್ಭದಲ್ಲಿ ಕಳೆದ ರವಿವಾರ ಮದ್ರಾಸಿನಲ್ಲಿ ಸೇರಿದ ಮಹಾಸಭೆಯಲ್ಲಿ ಮಂತ್ರಿಮಂಡಲದಿಂದ ಎಂಟು ಮಂದಿ ಮಂತ್ರಿಗಳು 70,000 ಜನರಿಗೆ ಹಿಂದೀ ವಿಷಯವಾದ ಈ ವಿರುದ್ಧಭಾವವನ್ನು ಕುರಿತು ಸಮಾಧಾನವನ್ನು ಬೋಧಿಸಿದರು.

'ಮದ್ರಾಸು ನ್ಯಾಯವಿಧಾಯಕ ಸಭೆಗಳೆರಡರಲ್ಲೂ ಸಂಪೂರ್ಣವಾಗಿ ಕೂಲಂಕಷವಾಗಿ ತರ್ಕಿಸಿ ಆದ ಬಳಿಕವೇ, ಈ ಕಡ್ಡಾಯ ಶಿಕ್ಷಣಕ್ಕೆ ಖರ್ಚನ್ನು ಮಂಜೂರು ಮಾಡಲಾಯಿತು. ಈಗ ಮಂತ್ರಿಗಳು ಅದನ್ನು ಜಾರಿಗೆ ತಾರದಿರುವರಾದರೆ, ಅವರು ಅಧಿಕಾರವನ್ನು ತ್ಯಜಿಸಬೇಕಾಗುವುದು. ಹೀಗಿರುವುದರಿಂದ, ಈಗ ಬೇಕೆಂದೇ ಆಕ್ಷೇಪವೆತ್ತಿ ಸರಕಾರದ ಕರ್ತವ್ಯವಾಗದಂತೆ ಬಾಧಿಸುವವರನ್ನು ದಂಡಿಸಬೇಕಾಗುತ್ತದೆ. ಈ ಅಗತ್ಯ ಪೀಡಾ ನಿವಾರಣೆಗಾಗಿ ಸರಕಾರವು ತನ್ನ ಬಳಿಯಲ್ಲಿರುವ ಯಾವ ಕಾನೂನನ್ನು ಉಪಯೋಗಿಸಬಹುದಾಗಿದೆ.'' ಎಂದು ಮುಖ್ಯ ಮಂತ್ರಿಗಳೆಂದರು.

"ತಮಿಳು ನಾಡಿನ ಕೀರ್ತಿ ಹೆಚ್ಚಬೇಕೋ, ಬೇಡವೋ? ತಮಿಳಿಗೂ ತಮಿಳುನಾಡಿಗೂ ಕೀರ್ತಿ ಹೆಚ್ಚುವ ಉಪಾಯ ಕಲಿಸಿಕೊಟ್ಟವರು ಮಹಾತ್ಮಜಿ. ದೇಶಭಾಷೆಗಳಿಗೆ ಪ್ರಾಮುಖ್ಯತೆ ಬರುವಂತೆ ಮಾಡಿದರವರು. ಈಗ ತಮಿಳನ್ನು ಕಾಪಾಡಬೇಕಾಗಿ ಹಿಂದೀಯನ್ನು ಆಕ್ಷೇಪಿಸಿ ಮಾತಾಡುವವರು, ಇಂಗ್ಲಿಷಿನಲ್ಲೇ ಮಾತಾಡುತ್ತಾರಲ್ಲದೆ, ತಮಿಳಲ್ಲಿ ಕೂಡಾ ಇಲ್ಲವಲ್ಲ! ಎಷ್ಟೋ ಭಾಷೆಗಳ ಸಂಘಟ್ಟನೆಗೊಳಪಟ್ಟರೂ ಇನ್ನೂ ತಮಿಳು ಅವೆಲ್ಲವನ್ನೂ ಮೀರಿ ಬದುಕಿಕೊಂಡಿದೆಯಲ್ಲವೆ? ತಮಿಳನ್ನು ಧ್ವಂಸಮಾಡುವುದು ಭಗವಂತನಿಗೂ ಸಾಧ್ಯವಾಗಿಲ್ಲ! ಹಿಂದೀ ಬೇಡವೆನ್ನಲು ಎಲ್ಲರಿಗೂ ಅಧಿಕಾರವಿದೆ. ಪ್ರಜೆಗಳ ಪ್ರತಿನಿಧಿಗಳೇ ಆಗಿರುವ ಮಂತ್ರಿಗಳು ತಮಿಳನ್ನು ಮಾತ್ರವಲ್ಲ, ಸ್ತ್ರೀ, ಇಡೀ ದೇಶದೊಡನೆ ಒಕ್ಕಟ್ಟಾಗಲು ತಮಿಳುನಾಡು ಸಿದ್ಧವಾಗಲೆಂದು ಹಿಂದಿಯ ಕಲಿಸಬೇಕೆಂದುಕೂಡಲೇ ರೇಗುವುದೆಂದರೆ ಅರ್ಥವೇನು? ಮಂತ್ರಿಮಂಡಲವು ಅಧಿಕಾರದಲ್ಲಿ ಇರಲೆಂದು ಪ್ರಜೆಗಳು ಎನ್ನುವತನಕ, ಪ್ರಜೆಗಳು ಅವರಿಗೆ ಬೆಂಬಲ ಕೊಡುವುದು ಅಗತ್ಯ'' ಎಂದರು, ಶ್ರೀ ರಾಜನ್‌ರವರು.

"ಎಲ್ಲರಿಗೂ ಪರಿಚಯವುಳ್ಳ ಒಂದೇ ಭಾಷೆಯನ್ನು ಹರಡಬೇಕಾಗಿ ರಾಷ್ಟ್ರೀಯ ಮುಸ್ಲಿಮರು 20 ವರ್ಷಗಳಿಂದಲೂ ಪ್ರಯತ್ನಿಸಿದ್ದರು. ಆಗ ಮಾತ್ರ ಹಿಂದುಗಳು ಅವರಿಗೆ ಬೆಂಬಲ ಕೊಡಲಿಲ್ಲ. ಈಗ ಹಿಂದುಗಳು ಮುಂದೆ ಬಂದು ಹಿಂದೀ ಕಲಿಯುತ್ತಿದ್ದಾರೆಂಬುದು ಶುಭವಿಷಯ. ದೇವನಾಗರಿ ಅಥವಾ ಉರ್ದು ಬರಹವಾದರೇನು? ಹಿಂದುಸ್ಥಾನಿ ಕಲಿಯಬಹುದು. ಇಂಗ್ಲೀಷು ಎಲ್ಲಿ ಶಾಶ್ವತವಾಗಿ ಇರುವರೇ? ಆಗ ಎಲ್ಲರು ಒಬ್ಬರೊಡನೊಬ್ಬರು ಹಿಂದೂಸ್ಥಾನಿಯಲ್ಲೇ ಮಾತಾಡಲು ಅನುಕೂಲ'' ಎಂದು ಶ್ರೀ ಯಾಕೂಬ್ ಹುಸೇನರೆಂದರು.

ಡಾ॥ ಸುಬ್ಬರಾಯನವರು "ಮಾತೃಭಾಷೆಯನ್ನಲ್ಲದೆ ವಿಲಾಯಿತಿಯಲ್ಲಿ ವಿದ್ಯಾರ್ಥಿಗಳು ಎರಡು ಮೂರು ಇತರ ಭಾಷೆಕಲಿಯುವರು. ತಮಿಳುನಾಡಿನವರಿಗೆ ದೇಶದ ಬೇರೆ ಕಡೆ ಏನು ನಡೆಯುತ್ತದೆಂಬುದೂ ಅಗತ್ಯ ತಿಳಿಯಬೇಕಾಗಿರುವ ವಿಷಯ. ಹಿಂದೂಸ್ಥಾನಿ ಈಗ ಕಲಿಯಲು ಅನುಕೂಲಮಾಡಲಾಗಿದ್ದು, ಪ್ರಾಂತಿಕ ಭಾಷೆಯಲ್ಲೇ ಎಲ್ಲ ಹೈಸ್ಕೂಲ್ ಶಿಕ್ಷಣವಾಗುವಂತೆಯೂ ಮಾಡಲಾಗಿದೆ. ಎಂದರು.

"ತಮ್ಮ ಮಕ್ಕಳಿಗೇ ಅನ್ಯಾಯವಾಗುವ ಹಾಗೆ ಹಿಂದೀ ವಿರುದ್ಧ ಚಳವಳ ನಡೆಸುವರು. ಜೈಲಿನಲ್ಲಿದ್ದಾಗ ನಾನು ನಾಲ್ಕು ಭಾಷೆ ಕಲಿತೆನು. ಮಕ್ಕಳಿಂದ ಒಂದು ಭಾಷೆ ಕಲಿಯಲಾಗದೆಂಬುದು ನಿಜವೆ? ಫೆಡರೇಶನ್ ಬಂದಾಗ, ಹಿಂದುಸ್ಥಾನಿ ತಿಳಿಯದಿದ್ದರೆ ಅಪಾರ ದೋಷವಾದೀತು. ಈ ಮಂತ್ರಿ ಮಂಡಲದ ವಿರುದ್ಧ ಚಳವಳ ಎಂದರೆ ಇಡೀ ಜನಾಂಗದ ವಿರುದ್ಧ ಚಳವಳ. ಇದು ಮಹಾಪರಾಧ. ಮಂಡಲವನ್ನು ಮುರಿದರೆ ಜನಾಂಗದ ಬೆನ್ನು ಮುರಿದಂತಾಗುವುದು. ಹೀಗೆ ಮಾಡದಿರಿ. ಸತ್ಯಾಗ್ರಹವೆಂದರೆ ಇದಲ್ಲ. ಕೊಂಗ್ರೆಸ್ ಸರಕಾರವು ಬಲಹೀನವೆಂದು ಭಾವಿಸಬಾರದು. ಜನಾಂಗದ ಬೆಂಬಲವುಳ್ಳ ಕೊಂಗ್ರೆಸ್ ಸರಕಾರವನ್ನು ಮುರಿಯುವವರಾರು?'' ಎಂದು ಶ್ರೀ ಟಿ. ಪ್ರಕಾಶಮ್ ಎಂದರು.

ಶ್ರೀ॥ ವಿ. ವಿ. ಗಿರಿಯವರು,— ಎಲ್ಲ ಮಜೂರರು ಒಂದಾಗ ಬೇಕು, ಆಗ ಜನಾಂಗ ಒಂದಾಗುವುದು. ಹೀಗೆ ಎಲ್ಲರ ಭಾಷೆ ಒಂದಾಗುವಂತಿರಬೇಕು. ತಮಿಳು ಗೊತ್ತಿದ್ದರೆ ಹೊರ ಪ್ರಾಂತ್ಯಗಳಲ್ಲಿ ಉಪಯೋಗವಿಲ್ಲ. ಮಜೂರರ ಹೆಸರಲ್ಲಿ ಎಲ್ಲರೂ ಹಿಂದುಸ್ಥಾನೀ ಕಲಿಯುವಂತಾಗಲಿ,— ಎಂದರು.

ಶ್ರೀ॥ ಮುನಿಸ್ವಾಮಿ ಪಿಳ್ಳೆಯವರು— "ನಾಲ್ವರು ಮಂತ್ರಿಗಳು ತಮಿಳರು; ಹೀಗಿರುವಾಗ ಅವರು ತಮಿಳನ್ನು ಕೊಲ್ಲುವರೆಂಬುದು ಸತ್ಯವೆ? ಒಬ್ಬನೆ ಆದಿದ್ರಾವಿಡನಾದರೂ ಹಿಂದೀ ವಿರುದ್ಧವಾಗಿ ಎಸೆಂಬ್ಲಿಯಲ್ಲಿ ಮಾತಾಡಿಲ್ಲ. ಸೈನ್ಯದಲ್ಲಿರುವ ಆದಿದ್ರಾವಿಡರು ಹಿಂದುಸ್ಥಾನಿ ಮಾತಾಡುವರು. ನಿರಕ್ಷರರಾಗಿ ಇತರರ ಮೋಸಕ್ಕೆ ಒಳಗಾದ ಕೆಲ ಯುವಕರು ಮಾತ್ರ ಹೀಗೆ ಹಿಂದೀ ವಿರೋಧಿಗಳಾಗಿದ್ದಾರೆ'' ಎಂದರು.

ಶ್ರೀ॥ ರಾಮನಾಥನ್‌ರವರು— "ಹಿಂದೀ ವಿರುದ್ಧ ಚಳವಳವು ತಮಿಳನ್ನು ಉಳಿಸುವುದಕ್ಕಲ್ಲ, ಈಗಣ ಮಂತ್ರಿಮಂಡಲಕ್ಕೆ ವಿರೋಧಿಗಳಾಗಿರುವವರ ಬೇರೆ ಯಾವ ಉಪಾಯವು ತೋಚದೆ ಈ ವಿರೋಧದ ನೆವ ಹಿಡಿದೇ ಪೀಡಿಸಲು ತೊಡಗಿದ್ದಾರೆ. ಆದರೆ ಇದರಿಂದ ಮಂತ್ರಿಮಂಡಲವು ಇನ್ನೂ ಬಲಗೊಳುವ ಹಾಗಾಗಿದೆ. ಕೊಂಗ್ರೆಸ್ ಮಂತ್ರಿಗಳ ಸ್ಥಾನದಲ್ಲಿ ಇನ್ನಾರೂ ಬರುವ ಹಾಗಿಲ್ಲ. ಬಂದರೂ, ಶಾಂತಿ ನೆಲೆಗೊಳ್ಳದು''

ಅಂತೂ, ಎಂಟು ದೊಡ್ಡ ಫಿರಂಗಿಗಳ ಗರ್ಜನೆಯಿಂದ ಹಿಂದೀ ವಿರೋಧವು ಅಡಗಿತು.

ರೀತಿ ಅಲ್ಪವಷ್ಟೆ. ಇವರಲ್ಲಿ ಮಾನವಜನ್ಮದ ಅನುಭವಗಳು ಸ್ವಾಭಾವಿಕವಾಗಿರುವ ವಿಧ್ಯಮಾನಗಳಲ್ಲಿ ಹೇಗೆ ದೊರೆವವೂ ಅವುಗಳ ನಿರೂಪಣೆ ಅಲ್ಪಸ್ವಲ್ಪ ಸಿನೆಮಾ ಮೆರುಗಿನಿಂದ ಹೊಳೆವಂತೆ ಇವು ಪ್ರದರ್ಶಿಸಬೇಕು.

ನೈತಿಕಬೋಧೆ— ಇವುಗಳಲ್ಲಿ ವಿಸ್ತಾರವಾದ ಪ್ರತ್ಯಕ್ಷ ಪ್ರದರ್ಶನದೊಳಗಿಂದ ಸ್ವಲ್ಪ ತಿಳಿದು ಸ್ಪಷ್ಟವಾಗುವಂತಿರಬೇಕು. ಉತ್ತಮ ಜೀವನದ ದೃಷ್ಟಾಂತಗಳ ಮೂಲಕ ನೀತಿಮಾ ಸಾಮಾಜಿಕ ಅನ್ಯಾಯ ಮತ್ತು ಕುಂದುಗಳನ್ನು ವಿಶೇಷ ಅತಿಶಯೋಕ್ತಿಯಿರದೆಯೂ, ಹುಚ್ಚುನಂಬಿಕೆಗಳು ನಾಶವಾಗುವಂತೆಯೂ ನಾಳಿನ ಸಮಾಜವು ಹೇಗಿರಬೇಕೆಂಬುದನ್ನು ತೋರಿಸುವಂತೆಯೂ ಚಿತ್ರಗಳಿರಬೇಕು.

ದೃಷ್ಟಿ ವಿಸ್ತಾರಹೊಂದುವ ಮೂಲಕ ಶಿಕ್ಷಣದೊರೆವಂತಿರಬೇಕು. ಮನುಷ್ಯನಲ್ಲಿರುವ ನಿರ್ಮಾಣಕ, ಭಾವಕ, ಕಲೋಪಾಸಕಶಕ್ತಿಯು ಚಿತ್ರಗಳಲ್ಲಿ ತೋರಬೇಕು.

ಆದರೆ— ತಮಿಳು ತೆಲುಗು ಚಿತ್ರಗಳು ಹೆಚ್ಚಾಗಿ ಈ ಮೂಲತತ್ವಗಳ ಮೇಲೆ ಆಧರಿಸಿಯೇ ಇಲ್ಲವೆಂದು ಅಭಿಪ್ರಾಯ ಹುಟ್ಟುವಂತಾಗಿರುವುದು ಶೋಚನೀಯವಾಗಿದೆ. ಮಂದಚಿತ್ರಗಳು ಎಂದೇ ಇವನ್ನು ಕರೆಯಬೇಕಾಗಿದೆ.

ಜನರಿಗೆ ಅಭಿರಂಜನೆ ಮಾಡುವುದಷ್ಟೇ ಚಿತ್ರದ ಕಾರ್ಯವಲ್ಲ. ಹಣಮಾಡವುದೂ ಉದ್ದೇಶವಾಗಿರಬಾರದು.

ಮನುಷ್ಯನ ಗುಣಲಕ್ಷಣಗಳನ್ನು ವಿರೂಪಗೊಳಿಸಿ, ಸುಳ್ಳುವಿಧ್ಯಮಾನಗಳನ್ನು ಸೃಷ್ಟಿಸಿ, ಹಣಕೂಡಿಸಬಹುದು ನಿಜ. ಆದರೆ, ಇದರಿಂದಲೇ ಪ್ರೇಕ್ಷಕರ ಮನಸ್ಸಿಗೆ ತಪ್ಪುಗ್ರಹಿಕೆಗಳನ್ನು ಬೋಧಿಸಿ, ಅವರಲ್ಲಿನ ಕಲಾಜ್ಞಾನವನ್ನು ಲೋಪಿಸಲೂ ಕುರೂಪಗೊಳಿಸಲೂ ಈ ಚಿತ್ರಗಳು ಯತ್ನಿಸಿವೆ. ಕೊನೆಗೆ, ಚಿತ್ರದಂತೆ ನೋಡುವವನೂ ಉತ್ತಮನೋ ಅಧಮನೊ ಆಗುವದಲ್ಲವೆ?

ದೈನಂದಿನೀ ಜೀವವನ್ನು ಪ್ರೇಕ್ಷಕರು ಗ್ರಹಿಸಲಾರರು ಎಂದು ಭಾವಿಸಿ, ಈ ಚಿತ್ರಗಳು ದೇವರ ಚಿತ್ರಗಳನ್ನು ಕೊಡಲೆತ್ನಿಸಿವೆ.

ಜನರಲ್ಲಿನ ಭಕ್ತಿಬುದ್ಧಿ, ಧರ್ಮವಿಶ್ವಾಸಗಳು ಮೊದಲಾದುವುಗಳ ಮೇಲೆ ಅವೇ ತನ್ನ ಭಾಂಡವಾಳವೆಂದು ಈ ಚಿತ್ರ ನಿರ್ಮಾಣಕರು ನಂಬಿ, ಲಾಭ ಪಡೆಯಲು ನೋಡುತ್ತಾರೆ. ನಮ್ಮ ಜನಾಂಗದಲ್ಲಿನ ಜೀವನದ ಮುಪ್ಪತನವನ್ನೆಲ್ಲ ಪ್ರದರ್ಶಿಸಿ, ಮತವನ್ನು ಹಾಳೆನ್ನಿಸುವ ಪ್ರಯತ್ನಗಳನ್ನು ಈ ಚಿತ್ರಗಳೇಕೆ ಮಾಡಬೇಕು?

ಹಳೆಯ ಪುರಾಣಗಳಲ್ಲಿನ ಭೀಭತ್ಸ ಕಾಮುಕ ವ್ಯಾಪಾರಗಳನ್ನು ಬಯಲಿಗೆ ತಂದು ಹಿಂದೂಧರ್ಮದ ಗೌರವವನ್ನು ಇವರು ಕೆಡಿಸುವಂತೇಕೆ ಪ್ರಯತ್ನಿಸಬೇಕು? ಇದರಿಂದ ಜನರ ಬುದ್ಧಿ ಉತ್ತಮವಾಗುವುದೆ? ಶಿಕ್ಷಣ ದೊರೆವುದೆ?

ಶ್ರೀಕೃಷ್ಣನು ಸದಾ ಸ್ತ್ರೀಲೋಲನ; ಸ್ತ್ರೀಯರ ಟೀಕೆಗೆ ತಲೆಬಾಗಿಸುವವನು; ಇಬ್ಬರು ಜಗಳಗಂಟಿ-ಹೆಂಡಿರ ನಡುವೆ ಅವನು ಬಾಳುವನು; ಸುಬ್ರಹ್ಮಣ್ಯಸ್ವಾಮಿ ವಲ್ಲಿಯೊಡನೆ ಕಾಮುಕನಂತೆ ವರ್ತಿಸಿದವನು; ಅವಳ ಸೌಂದರ್ಯವನ್ನು ಕಾಮುಕತನದಿಂದ ಬಣ್ಣಿಸಿ ಹಾಡುವವನು; ಆ ಹಾಡನ್ನು ಕೇಳಿ ವಲ್ಲಿಯು ಜನಸಹಾಯಕ್ಕಾಗಿ ಕೂಗದೆಯೂ ಹೇಗೆ ನಿಂತಳೋ? ಶಿವ ವಿಷ್ಣುಗಳು ದುರ್ಬಲರಾಗಿದ್ದು ಯಾವ ಹೊಟ್ಟ ಸುಂದರಿ ಅತ್ತ ಸುಳಿಯದೆ ಅವರಲ್ಲಿ ಜೀವವೇ ಇಲ್ಲದಂತೆ ಚಿತ್ರಗಳಲ್ಲಿ ಕಾಣುವುದೇಕೆ? ಋಷಿಯೊಬ್ಬನು ಎತ್ತಲಿಂದಲೋ ಉದಯಿಸಿ ಇವರಲ್ಲಿ ಜೀವಸಂಚಾರಮಾಡಿಸುವುದೂ ಉಂಟು.

ಈ ಪುರಾಣಗಳು ವಾಸ್ತವಿಕ ಹಿಂದೀಜೀವನವನ್ನು ಹಿಂದೀಯರ ಧರ್ಮವಿಶ್ವಾಸಗಳನ್ನು ಪ್ರಕಟಿಸುವುದೆ? ಇವು ಕಥೆಗಳೇ? ಅಥವಾ ವ್ಯಾಂಗ್ಯವಾಗಿ ಪಾರಮಾರ್ಥಿಕ ವಿಚಾರ ಬೋಧಿಸುವ ರೂಪಕಗಳೆ? ಹೇಗಿದ್ದರೂ, ಜನಸಾಮಾನ್ಯರ ಇದಿರಲ್ಲಿ ಇವನ್ನು ಪ್ರದರ್ಶಿಸುವುದು ವಿಹಿತವೆನಿಸುವುದಿಲ್ಲ. ನಿಜವಾದ ಹಿಂದೂಧರ್ಮವು ಈ ಚಿತ್ರಗಳಿಂದ ಎಂದೂ ನಿರೂಪಿಸಿದಂತಾಗಲಾರದು.

ದೇವರೂ ಧರ್ಮವೂ ಚಿತ್ರಮೂಲಕ ಪ್ರದರ್ಶನಹೊಂದಲು ಸಾಧ್ಯವೇ ಇಲ್ಲ. ಇವುಗಳ ಚಿತ್ರವು ಅಸಾಧ್ಯ, ಅಸಂಗತ. ಯಾರ ಇತಿಹಾಸಕ್ಕೆ ಸಂಬಂಧವೇ ಇಲ್ಲದವರನ್ನು ಕುರಿತಾಗಿ ಚಿತ್ರಗಳನ್ನು ಮಾಡುವುದು ಸುಲಭವಲ್ಲ. ಅವರ ದುಸ್ತು ಆಭರಣಗಳು, ನಡೆನುಡಿಗಳು ಎಂಥವು? ಇಂದಿನ ಉಡುವುಗಳಲ್ಲಿ ಇತಿಹಾಸಕ್ಕೂ ಹಿಂದಣ ವ್ಯಕ್ತಿಗಳ ಕಥೆ ಪ್ರದರ್ಶಿಸಲಾದೀತೆ?

ಸಾಮಾನ್ಯ ಜೀವನದಲ್ಲಿ ಹೊರಬೀಳುವ ಅನುಭವಭಾವನಾದಿಗಳು ಸಾಮಾನ್ಯವಲ್ಲ. ಮನುಷ್ಯನು ಇವುಗಳಲ್ಲಿ ತುಂಬ ಸಹಾನುಭೂತಿ ತೋರಿಸಬಲ್ಲನು. ಕಥೆಯೂ ಅನುಭವವೂ ಸನ್ನಿವೇಶಗಳೂ ಸತ್ಯವಾಗಿ ಇಂಥ ಚಿತ್ರಗಳಲ್ಲಿ ಕಂಡುಬರುವುವು.

ಚಿತ್ರಗಳ ನಿರ್ದೇಶಕನು ಉತ್ತಮನಾದರೆ, ಸಾಮಾನ್ಯವಾಗದುದೇ ರತ್ನವೆನಿಸೀತು. ಇವನು ಮನುಷ್ಯ ಸ್ವಭಾವವನ್ನು ಚೆನ್ನಾಗಿ ಕಲಿಯುವ ವಿದ್ಯಾರ್ಥಿಯಾಗಿರತಕ್ಕದು; ಸಂಸ್ಕೃತಿಯ ವಿಮರ್ಶಕನಾಗಿರತಕ್ಕದು. ಚಿತ್ರದಲ್ಲಿ ತೋರುವುದೆಲ್ಲ, ಸ್ವಾಭಾವಿಕವೂ ಸತ್ಯವೂ ಎನ್ನುವಂತಿರಬೇಕು.

ಕೆಲವೇ ದಿನಗಳೊಳಗೆ ಒಂದು ಚಿತ್ರವನ್ನು ಸಿದ್ಧಗೊಳಿಸುವುದು; ಸರಿಯಾದ ವೇಷಭೂಷಣಗಳಿಲ್ಲದಿರುವುದು; ಅಭಿನಯಕಾರರು ಉತ್ತಮರಾಗಿಲ್ಲದಿರುವುದು; ಸನ್ನಿವೇಶಗಳು ಅನರ್ಥಕವಾಗಿರುವುದು; ಅತಿರೇಕ ಹಾಡುಗಳಿರುವುದು— ಇವೆಲ್ಲ ದೋಷಗಳು.

ನವಿಶ್ವಗಣ ಕುಂದುಗಳು, ವಿಜ್ಞಾನದ ಮಹತ್ವ, ಸೃಷ್ಟಿಸೌಂದರ್ಯ, ನೃತ್ಯಸಂಗೀತಗಳ ಮಹಾಶಕ್ತಿ, ಭಗವಂತನ ಅಪಾರ ಕರುಣೆ, ಪ್ರೇಮದ ಉಜ್ವಲಗುಣ,— ಇವನ್ನು ನಿರೂಪಿಸುವ ಕಥೆಗಳೂ ಚಿತ್ರಗಳೂ ನಮ್ಮಲ್ಲಿ ಉಂಟಾಗಬಾರದೆಂದಿದೆಯೆ?

ಅಸಹ್ಯಕರವಾದ ಅಪಹಾಸ್ಯ ನೀಚಕಾಮುಕತೆಯ ಪ್ರದರ್ಶನ, ಅನವಶ್ಯಕವೂ ಅತಿದೀರ್ಘವೂ ಆಗಿರುವ ಹಾಡುಗಾರಿಕೆ ಸಂಭಾಷಣೆ ಮೊದಲಾದುವು ಇಲ್ಲದೆ ಜನರು ಚಿತ್ರ ನೋಡಲು ಬಾರರೆಂದು ಚಿತ್ರಕರ್ತರ ನಂಬಿಗೆಯಿದೆಯೆ?

ಭಗವಂತನ ಅವತಾರ ಎಂದರೆ ಭಕ್ತಭಯಗಳು ಉತ್ಸಾಹ ಧೈರ್ಯಗಳು ಉಂಟಾಗಬೇಕು. ಉಬ್ಬಿದ ಕೆನ್ನೆಗಳುಳ್ಳವನಾಗಿ, ಕೈಕಾಲುಸೊಕ್ಕಿ ಹಾಸುಗೆಯಂತಾಗಿ, ಸರಿಯಾಗಿ ನಡೆಯಲೂ ಬಾರದವನು. ಕೊಬ್ಬಿ, ಅಕಟವಿಕಟವಾದ ದಂತಪಂಕ್ತಿಯುಳ್ಳವನು ಯಾವ ಭಗವಂತನ ಅವತಾರ? ದೇವಿಯರಂತೂ 1938ನೆ ಇಸ್ವಿಯ ಬ್ರೂಚ್, ಸೇಫ್ಟಿಪಿನ್, ಜಾಕೆಟ್‌ಗಳಲ್ಲಿರುವರಾದರೆ, ಲೋಕಮೋಹಕ ದೇವದಾಸಿಯೆನಿಸರೆ?

ಪಾಶ್ಚಾತ್ಯದಲ್ಲಿ ಧರ್ಮಬುದ್ಧಿ ಕಡಮೆಯೆನ್ನುವವರು, ಈ ರೀತಿಯಾಗಿ ಅದರ ಯಾವ ಚಿತ್ರವಲ್ಲಾದರೂ ದೇವರ ಅವತಾರದ 'ಪಾರ್ಟ್' ಪ್ರದರ್ಶಿಸಿರುವುದನ್ನು ತೋರಿಸಬಲ್ಲರೆ?

ಬಿಡುಗಡೆ ಹೊಂದಿದ ರಾಜಕೀಯ ಕೈದಿಗಳಿಗೆ ಉದ್ಯೋಗ

ಬಂಗಾಳ ಕೊಂಗ್ರೆಸ್ ಕಮಿಟಿಯ ಯೋಜನೆ

ಬಿಡುಗಡೆ ಮಾಡಲ್ಪಟ್ಟ ರಾಜಕೀಯ ಕೈದಿಗಳಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕಾಗಿ ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರಿಂದ ಅಧಿಕೃತವಾದ ಒಂದು ಉಪಸಮಿತಿಯವರು 20 ಲಕ್ಷ ಭಂಡವಾಳವನ್ನು ಹಾಕಿ ಒಂದು ಕಂಪೆನಿಯನ್ನು ಹೊರಡಿಸುವ ಆಲೋಚನೆಯನ್ನು ಮಾಡುತ್ತಿರುವರು.

ಅನೇಕ ಮಂದಿ ವ್ಯಾಪಾರಿ ಪ್ರಮುಖರೂ, ಇಬ್ಬರು ಮಿಲಿಯಾಧಿಪತಿಗಳೂ ಈ ಕಂಪೆನಿಯನ್ನು ಹೊರಡಿಸಲು ಬೇಕಾದ ಭಂಡವಾಳವನ್ನು ಒದಗಿಸಿ ಕೊಡಲು ಒಪ್ಪಿರುವರು. ಅನೇಕ ಬಗೆಯ ಕಾರ್ಖಾನೆಗಳನ್ನು ತೆರೆಯುವ ಆಲೋಚನೆಯಾಗುತ್ತಿದೆ.

ಇದೆಲ್ಲಾ ಕೂದಲಿನ ವಿಷಯವಾಗಿ

"ಕೂದಲಿನ ವಿಷಯವಾಗಿ ನೀವು ತಿಳಿದಿರುವುದೆಷ್ಟು? ಯಾರ ತಲೆಯಲ್ಲಿಯೂ 160000ಕ್ಕಿಂತ ಹೆಚ್ಚಿಗೆ ಕೂದಲು ಇರುವದಿಲ್ಲವೆಂಬುದು ನಿಮಗೆ ಗೊತ್ತೆ? ಪ್ರಪಂಚದಲ್ಲಿ ಕೋಟ್ಯಾಂತರ ಜನರು ಇರುವಾಗ ನಿಮ್ಮ ತಲೆಯಲ್ಲಿ ಎಷ್ಟು ಕೂದಲು ಇದೆಯೋ ಅಷ್ಟೇ ಕೂದಲು ಇರುವ ಇನ್ನೂ ಅನೇಕ ತಲೆಗಳು ಈ ಪ್ರಪಂಚದಲ್ಲಿ ಇರಬಹುದೆಂದು ತಿಳಕೊಳ್ಳಿರಿ. ಇಷ್ಟು ಮಾತ್ರವೇ ಅಲ್ಲ, ಕೂದಲಿನ ವಿಷಯವಾಗಿ ತಿಳಕೊಳ್ಳಬೇಕಾದ ಸಂಗತಿಗಳು ಇನ್ನೂ ಅನೇಕ ಇವೆ" ಎಂದು ಹೇಳುತ್ತಾ ವಾಲ್ಟರ ಶೆಪ್ಪರ್ಡರು "ಪಾಯೋನಿಯರ್"ದಲ್ಲಿ ಒಂದು ಲೇಖನ ಬರೆದಿದ್ದಾರೆ. ಅದರ ಸಾರಾಂಶವಿಷ್ಟು ಇಲ್ಲಿದೆ:-

ಒಬ್ಬರ ತಲೆಕೂದಲಿನಂತೆ ಎಲ್ಲರ ತಲೆಕೂದಲು ಇರುವದಿಲ್ಲ. ಅವುಗಳ ಆಕಾರ, ಪರಿಮಾಣ, ರಚನಾಕ್ರಮಗಳು ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ಪ್ರಕಾರ ಇರುವವು. ಸಾವಿರಾರು ಮಂದಿಯ ಕತ್ತರಿಸಿ ಹಾಕಿದ ತಲೆಕೂದಲ ರಾಶಿಯಿಂದ ನಿಮ್ಮದನ್ನು ನಿಶ್ಚಯವಾಗಿ ತಿಳಿದು ಹುಡುಕಿ ತೆಗೆಯಲು ಈಗ ಬಹು ಸುಲಭವಾಗಿದೆ. ಕೂದಲ ಶಾಸ್ತ್ರವನ್ನು ಬಲ್ಲ ಶಾಸ್ತ್ರಿಗಳು ತಲೆಕೂದಲ ಆಧಾರದಿಂದಲೇ ಅನೇಕ ಅಪರಾಧಿಗಳನ್ನು ಹುಡುಕಿ ಹಿಡಿದು ದಂಡನೆಗೆ ಗುರಿಮಾಡಿರುವರು.

1934ರ ಒಂದು ಸಂಗತಿ.

1934ರಲ್ಲಿ ಒಬ್ಬ ಅಪರಾಧಿಗೆ 12 ತಿಂಗಳ ಸಕ್ರಮ ಶಿಕ್ಷೆಯಾಯಿತು. ಅವನು ದರ್ಹಾಮಿನಲ್ಲಿ ಇದ್ದನು. ಆ ಅಪರಾಧಿಯನ್ನು ಹುಡುಕಿ ತೆಗೆಯುವದು ಹೇಗೆ ಸಾಧ್ಯವಾಯಿತು? ದರೋಡೆ ನಡೆದ ಸ್ಥಳದಲ್ಲಿ ಒಂದೇ ಒಂದು ಕೂದಲು ಸಿಕ್ಕಿತು. ಅದರ ಆಧಾರದಿಂದಲೇ ಆ ಅಪರಾಧಿಯನ್ನು ಕಂಡುಹಿಡಿದರು. ದರೋಡೆ ಮಾಡಿದವನು ಅವನೇ ಎಂದು ಇತರ ಪುರಾವೆಗಳಿಂದ ಸ್ಥಿರವಾಯಿತು.

ಆ ಅಪರಾಧಿಯ ಕೂದಲಿಗೂ ದೊರೆತ ಆ ಕೂದಲಿಗೂ ಬಹಳ ಸಾಮ್ಯವಿದ್ದಿತು. ಸಾಧಾರಣ ಸಾಮ್ಯವು ಬಣ್ಣದ್ದಾಗಿತ್ತು. ಆದರೆ ಮುಖ್ಯವಾದ ಸಾಮ್ಯವು ಅದು ಕೊಯಿದ ಕೂದಲು ಆ ಚಕ್ರದಲ್ಲಿತ್ತು. ಹೀಗೆ ಎಲ್ಲ ತರಗಳಿಂದ ಸಾಮ್ಯವು ತೋರಿಬರಲು ಅವನೇ ಅಪರಾಧಿಯಾಗಿರುವನೆಂದು ನಿಶ್ಚಯವಾಯಿತು.

ಕೂದಲ ಪರೀಕ್ಷೆ

ಪರಿಮಾಣ ಸುರುಳಿ ಪಾರದರ್ಶಕತ್ವ, ರಸಾಯನಿಕ ಪರೀಕ್ಷೆ, ಸ್ಥಿತಿಸ್ಥಾಪಕತ್ವ, ಬಿಸುತನ ಇವೇ ಮೊದಲಾದುವು ಕೂದಲ ಪರೀಕ್ಷೆಗೆ ಮುಖ್ಯ ಸಾಧನಗಳಾಗಿವೆ. ಬಣ್ಣ ಮುಖ್ಯ ಸಾಧನವಲ್ಲ. ಯಾಕೆಂದರೆ ಯಾವಾಗಲಾದರೂ ಅದು ಒದಲಾಗಬಹುದು. ಮೇಲೆ ಹೇಳಿದಂಥವು ಎಂದೂ ಬದಲಾಗುವದಿಲ್ಲ. ಮಾತ್ರವಲ್ಲ, ಅವು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆಯಾಗಿಯೇ ಇರುವದು. ಆದ್ದರಿಂದ ಕೂದಲ ಶಾಸ್ತ್ರವು ಬಹು ಮನೋರಂಜಕ ಅಧ್ಯಯನ ವಿಷಯವಾಗಿ ಪರಿಣಮಿಸಿದೆ.

ಸರ್ವ ಸಾಧಾರಣ ತರಗಳು

ಬಿರುಸಾದ ನೆಟ್ಟಗಿನ ಕೂದಲು ಮಂಗೋಲಿಯನರಿಗಿರುತ್ತದೆ. ಅವರ ಕೂದಲ ಅಡ್ಡ ಛಿದ್ರವು ದುಂಡಗಾಗಿರುವುದು. ಅದು ಉರುಟಾಗಿರುವದರಿಂದ ನೆಟ್ಟಗೆ ನಿಲ್ಲುತ್ತದೆ. ಆದರೆ ಯುರೋಪಿಯನರ ತಲೆಕೂದಲು ಬೇರೆ ಪ್ರಕಾರವಿರುತ್ತದೆ. ಅದು ನಯವಾಗಿಯೂ ದೀರ್ಘವಾಗಿಯೂ ಇರುತ್ತದೆ. ನಿಗ್ರೋಗಳ ತಲೆಕೂದಲೂ ಉಣ್ಣೆಯಂತೆ ಚಿಕ್ಕದು ಮತ್ತು ಸುರುಳಿಸುತ್ತಿಕೊಂಡಿದೆ.

ವಿಶುದ್ಧ ತಲೆಕೂದಲುಗಳು ದೊರೆಯುವದು ಈಗ ಅಪರೂಪವಾಗಿದೆ. ಎಲ್ಲಿಯಾದರೂ ಈ ಜಗತ್ತಿನ ಒಂದೆರಡು ಸಂದುಗೊಂದುಗಳಲ್ಲಿ ಅವು ದೊರೆತರೆ ದೊಡ್ಡ ಪುಣ್ಯವೆನ್ನಬೇಕು. ಯಾಕೆಂದರೆ ಪ್ರಪಂಚದಲ್ಲಿ ಈಗ ಎಲ್ಲಿಯೂ ಶುದ್ಧ ಮನುಷ್ಯ ಜಾತಿಯು ಇರುವದೇ ಅಲ್ಲ. ಜನರೆಲ್ಲ ಬೇರೆ ಬೇರೆ ಸಂಕರ ಜಾತಿ ಕುಲಗಳಿಗೆ ಸೇರಿರುತ್ತಾರೆ. ಆದ್ದರಿಂದಲೇ ಕೂದಲ ಶಾಸ್ತ್ರವು ಈಗ ಒಂದು ದೊಡ್ಡ ವಿಷಯವಾಗಿದೆ.

ಘನ ವಿದ್ವಾಂಸರು

ಹೀಗಿದ್ದರೂ ಕೂದಲ ಶಾಸ್ತ್ರದ ಆದ್ಯಂತ ಅಧ್ಯಯನ ಮಾಡಿದ ದೊಡ್ಡ ದೊಡ್ಡ ವಿದ್ವಾಂಸರು ನಮ್ಮ ಈ ಪ್ರಪಂಚದಲ್ಲಿ ಇರುತ್ತಾರೆ. 1930ರಲ್ಲಿ ವಿವಿಯನ ಮೆಸ್ಸೀಟರ ಎಂಬವನನ್ನು ಯಾರೋ ದುರಾತ್ಮರು ಕೊಡಲಿಯಿಂದ ಕಡಿದು ಕೊಲೆ ಮಾಡಿದ್ದರು. ಬಹು ಸಮಯದ ತನಕ ಅಪರಾಧಿಗಳ ಪತ್ತೆಯಾಗಲೇ ಇಲ್ಲ. ಕೊನೆಗೆ ಕಡಿದ ಆ ಕೊಡಲಿಗೆ ಅಂಟಿಕೊಂಡಿದ್ದ ಹುಬ್ಬಿನ ಎರಡು ಕೂದಲುಗಳ ಆಧಾರದಿಂದ ಪೊದ್‌ಮೋರ್ ಎಂಬವನ ಮೇಲೆ ತಪ್ಪು ಸಾಬೀತಾಗಿ ಅವನು ಗಲ್ಲಿಗೇರಿಸಲ್ಪಟ್ಟನು.

ಯಾರ ಶರೀರದ ಮೇಲೆ ಅತಿ ಹೆಚ್ಚು ಕೂದಲು ಇರುವದೋ ಅವರ ತಲೆಯಲ್ಲಿ ಅತಿ ಕಡಿಮೆ ಕೂದಲು ಇರುತ್ತದೆಂದು ಈ ವಿದ್ವಾಂಸರು ಕಂಡು ಹಿಡಿದಿದ್ದಾರೆ. ಬಣ್ಣದಿಂದಲೂ ಈ ಅಂತರದಲ್ಲಿ ಹೆಚ್ಚುಕಡಿಮೆಯಾಗುತ್ತದೆ. 160000ದಿಂದಾರಂಭಿಸಿ 25000ವರೆಗೂ ತಲೆ ಕೂದಲು ಇರುವ ಜನರು ಪ್ರಪಂಚದಲ್ಲಿ ಇರುತ್ತಾರೆ ಎಂಬುದು ಬೇರೆ ಬೇರೆ ಕಡೆಗಳಲ್ಲಿ ನಡೆದ ಪರೀಕ್ಷೆಗಳಿಂದ ತಿಳಿದುಬರುತ್ತದೆ.

ಪ್ರತಿ ದಿನವೂ ಸುಮಾರು 40 ಕೂದಲುಗಳು ತಿರೆ ಬಿದ್ದುಹೋಗುತ್ತಿರುತ್ತವೆ. ಪ್ರತಿ ಸಲ ಕ್ಷೌರಮಾಡುವಾಗ ನೀವು 10000 ಕೂದಲ ಬುಡಗಳನ್ನು ಕಡಿದು ಬೀಸಾಕುತ್ತೀರಿ. ನೀವು ಕಡಿದು ಬಿಸಾಡುವ ಈ ಹತ್ತು ಸಾವಿರ ಗಡ್ಡ ಮಿಸೆ, ಹುಬ್ಬು, ಎವೆ ಕೂದಲುಗಳಿಂದಲೇ ತಜ್ಞರು ಮತ್ತು ಗುಪ್ತಚಾರರು ನಿಮ್ಮ ವಿಷಯವಾದ ಅನೇಕ ಸಂಗತಿಗಳನ್ನು ತಿಳಕೊಳಲಿಕ್ಕೆ ಸಮರ್ಥರಾಗುತ್ತಾರೆ. ನೀವು ಗಂಡಸೋ ಹೆಂಗಸೋ, ಅಥವಾ ಬೇರೆ ಯಾವ ಜಾತಿಗೆ ಸೇರಿದವರು ಎಂಬುದನ್ನು ಅವರು ಈ ಕೂದಲುಗಳ ಆಧಾರದಿಂದಲೇ ಸ್ಪಷ್ಟವಾಗಿ ಹೇಳಿಬಿಡುತ್ತಾರೆ!

ಬಿಡದೆ ಬರುವ ಕೆಮ್ಮನ್ನು ತಡೆಯಿರಿ

ನಿಮ್ಮ ಗಂಟಲೊಳಗೆ ಥಟ್ಟನೆ ಚುಚ್ಚಿದಂತಾಗಿ ನಿಮ್ಮಗೆ ಕೆಮ್ಮು ಉಂಟಾಗುವುದರಿಂದ ಶ್ವಾಸಕೋಶದ ಪದರಕ್ಕೆ ಭಯಂಕರವಾದ ಉರಿತವು ಉಂಟಾಗುವುದು. ಆದುದರಿಂದ ಆ ಕೆಮ್ಮನ್ನು ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಉಪಯೋಗಿಸಿ ತಡೆಯಿರಿ.

ನಿಮ್ಮ ಬಾಯೊಳಗೆ ಕರಗುತ್ತಿರುವ ಪೆಪ್ಸ್ ಗುಳಿಗೆಯು ಅತ್ಯುತ್ತಮ ಔಷದೀಯವಾದ ಒಂದು ಧೂಪವನ್ನು ಹೊರಡಿಸುತ್ತದೆ. ಈ ಧೂಪದಿಂದ ಕೆಮ್ಮಿನಿಂದ ನೋವುಂಟಾದ ನಿಮ್ಮ ಕಂಠನಾಳವು ಗುಣಹೊಂದುವುದು. ಅದರಿಂದಾಗಿ ಕಫವು ಹೊರಬೀಳುವುದು ಮತ್ತು ನಿಮ್ಮ ಎದೆಯನ್ನೂ ಶ್ವಾಸಕೋಶಗಳನ್ನೂ ಬಲಪಡಿಸುವುವು.



ಎಲ್ಲಾ ದವಾಖಾನೆಗಳ ಲ್ಲಿ ಟಿನ್ ಒಂದಕ್ಕೆ ಒಂದು ರೂಪಾಯಿಯಂತೆ ಮಾರಲ್ಪಡುವುದು.
ಏಜಂಟರು —
ಮೆಸರ್ಸ್ ದಾದಾ ಎಂಡ್ ಕೊ., ಪಾರ್ಕ್ ಟೌನ್, ಮದ್ರಾಸು.
ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆ
PEPS
ಗಳನ್ನೆ ಉಪಯೋಗಿಸಿರಿ.

The Bombay Steam Navigation Company Ltd., TENDERS

The Bombay Steam Navigation Company invite tenders for the supply of labour and supervision for the work of stevedoring their steamers plying on the Mangalore Line between Karwar and Mangalore inclusive also the shore handling of cargo at the port of Mangalore. Conditions of Contract may be seen at the Company's Office Mangalore and copies of specifications will be supplied on payment of Rs 5 per copy. Tenders should be addressed to the General Manager of the Company direct 100 Frere Road Bombay. The Company reserve the right of rejecting the lowest or any tender without assigning any reason for so doing. Sealed tenders superscribed Tenders for stevedoring and tenders for shore handling must reach the General Manager at 100 Frere Road, Bombay by 1-noon (S. T.) on 29th August 193[illegible]

Killick Nixon & Co,
Agents,
The Bombay Steam Navigation Company Ltd

ದಿ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿ, ಲಿಮಿಟೆಡ್.

ಟೆಂಡರುಗಳು

ಕಾರವಾರು ಮತ್ತು ಮಂಗಳೂರು [illegible] ಸೇರಿದ ಮತ್ತು ಈ ಎರಡು ಸ್ಥಳಗಳ ನಡುವೆ ಸಂಚರಿಸುವ ದಿ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರುಗಳಿಗೆ ಸರಕುಗಳನ್ನು ಹತ್ತಿಸಲು ಇಳಿಸಲು ಅಗತ್ಯವಿರುವ ಕೆಲಸಗಾರರನ್ನು [illegible] ಒದಗಿಸುವ ಬಗ್ಗೆ ಮಂಗಳೂರು ಬಂದರದಲ್ಲಿ ಸರಕುಗಳನ್ನು ತೀರದಲ್ಲಿ ಹತ್ತಿ ಇಳಿಸುವುದಕ್ಕೆ ಸದರಿ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯು [illegible] ಟೆಂಡರುಗಳನ್ನು ಅಪೇಕ್ಷಿಸುತ್ತದೆ. [illegible] ಕರಾರಿನ ಶರ್ತಗಳನ್ನು ಕಂಪೆನಿಯ ಮಂಗಳೂರು [illegible] ನೋಡಬಹುದು ಮತ್ತು ಈ ಕರಾರಿನ ಬೇಕಾದ ಪೆಚ್ಚಿನ ವಿವರಗಳುಳ್ಳ [illegible] ಪ್ರತಿಯೊಂದಕ್ಕೆ 5 ರೂಪಾಯಿ ತೆತ್ತು ಪಡೆಯಬಹುದು. [illegible] ಟೆಂಡರುಗಳನ್ನು ಕಂಪೆನಿಯ [illegible] ಜನರಲ್ ಮೆನೇಜರ್ (100 [illegible]) ಇವರಿಗೆ ನೇರವಾಗಿ ಕಳುಹಿಸತಕ್ಕದ್ದು. ಕಂಪೆನಿಯು ಅತ್ಯಂತ ಕಡಿಮೆ ದರದ ಟೆಂಡರುಗಳನ್ನಾಗಲಿ ಅಥವಾ ಬೇರೆ ಯಾವ ಟೆಂಡರುಗಳನ್ನಾಗಲೀ ಯಾವ ಕಾರಣವನ್ನು ಕೊಡದೆ ನಿರಾಕರಿಸುವ ಅಧಿಕಾರವನ್ನು ಇಟ್ಟುಕೊಂಡಿದೆ. ಮೊಹರು ಒತ್ತಿದ ಸರಕುಗಳನ್ನು ಹತ್ತಿಸುವ ಟೆಂಡರುಗಳು, ತೀರದಲ್ಲಿ ಹತ್ತಿ ಇಳಿಸುವ ಟೆಂಡರುಗಳು ಎಂದು ಬರೆದು ಮೇಲೆ ಸೂಚಿಸುವ, ಆ ಎಲ್ಲಾ ಟೆಂಡರುಗಳು ಇದೇ 1938ನೇ ಆಗೋಸ್ತ 29ನೇ ತಾರೀಕು ಮಧ್ಯಾಹ್ನ 12 ಘಂಟೆ (ಸ್ಟ್ಯಾಂಡಾರ್ಡ್ ಟೈಮು) ಯೊಳಗಾಗಿ ಜನರಲ್ ಮೆನೇಜರ್ 100 ಫ್ರೀರ್ ರೋಡ್, ಬೊಂಬಾಯಿ ಗೆ ತಲಪತಕ್ಕದ್ದು.

Killick Nixon & Co.,
Agents,
The Bombay Steam Navigation Company, Ltd

Mangalore, 17—8—38

ಕೆಟಸ್ಕ್ಯಾಟ್-ಕಟಮರ.

ನಮ್ಮ ದೇಶದ ಪೂರ್ವ ಸಮುದ್ರಕರಾವಳಿಯಲ್ಲಿ ಜನರು, ಇಲ್ಲಿ ನಾವು ದೋಣಿಗಳನ್ನೂ ಮಂಜಗಳನ್ನೂ ಉಪಯೋಗಿಸುವ ಹಾಗೆ ಕಟಮರಗಳೆಂಬ ಸಾಧನಗಳನ್ನು ಉಪಯೋಗಿಸುತ್ತಾರೆ. ಅವರು ತೇಲಾಡುವ ಜಾತಿಯ ಕೆಲವು ಮರಗಳ ದಿಮ್ಮಿಗಳನ್ನು ಒಂದಕ್ಕೊಂದು ಭದ್ರವಾಗಿ ಬಿಗಿದ ಅವುಗಳನ್ನು ನದಿಗಳಲ್ಲಿ ಅಥವಾ ಸಮುದ್ರಗಳಲ್ಲಿ ತೇಲಬಿಟ್ಟು, ದೋಣಿ-ಮಂಜಿಗಳಲ್ಲಿ ಕೂತು ಹೋಗುವಂತೆ ಅವುಗಳಲ್ಲಿ ಕೂತು ಒಂದು ಕಡೆಯಿಂದ ಒಂದು ಕಡೆಗೆ ಹೋಗುತ್ತಿರುತ್ತಾರೆ. ಇವುಗಳನ್ನೇ ಅಲ್ಲಿಯ ಜನರು ಕಟಮರಗಳೆಂದು ಕರೆಯುವರು.

ಎಲ್ಲ ಕಡೆಗಳಲ್ಲಿಯಂತೆ ಪೂರ್ವಕರಾವಳಿ ಪ್ರದೇಶಗಳಲ್ಲಿಯೂ ಕಾನೂನು ಕಾಯಿದೆಗಳಿಗೆ ವಿರೋಧವಾಗಿ ಕೆಲವು ಜನರು ಸುಂಕ ಕೊಡದೇನೇ ಅನೇಕ ವಸ್ತು ಒಡವೆಗಳನ್ನು ಸಮುದ್ರ ಮಾರ್ಗವಾಗಿ ತಂದು ವ್ಯಾಪಾರ ಮಾಡಿ, ತಾವು ಹೇರಳ ಲಾಭ ಸಂಪಾದಿಸುತ್ತಿರುವರಾದರೂ, ಸರಕಾರಕ್ಕೆ ತುಂಬಾ ನಷ್ಟವನ್ನುಂಟುಮಾಡುತಿದ್ದಾರೆ. ಇಂಥವರನ್ನು ಶೋಧಿಸಿ ತೆಗೆದು ದಂಡನೆಗೆ ಗುರಿಮಾಡದಿದ್ದರೆ, ದೇಶವೆಲ್ಲಾ ಸುಂಕ ಮುರಿದ ಸಾಮಾನುಗಳಿಂದ ತುಂಬಿ ಹೋಗಿ, ಯಾವ ಸರಕಾರವು ನಡೆಯುವದಾದರೂ ಬಹಳ ಕಷ್ಟಕ್ಕೆ ಬರಬಹುದು. ಆದಕಾರಣ ಇಂಥವರನ್ನು ಹುಡುಕಿ ತೆಗೆಯಲಿಕ್ಕೆ ಸರಕಾರವು ಬಹಳ ಪರಿಶ್ರಮ ತೆಗೆದುಕೊಳ್ಳುತ್ತದೆ. ಆ ಕಾರ್ಯಕ್ಕಾಗಿ ಸಮುದ್ರ ಮಾರ್ಗಗಳು ಒಂದು ಮುಟ್ಟುವಲ್ಲೆಲ್ಲ ಸರಕಾರದ ಚಾಣಾಕ್ಷರಾದ ಅಧಿಕಾರಿಗಳು ಕೆಲಸ ಮಾಡುತ್ತಲಿದ್ದಾರೆ.

ಇಂಥ ಅಧಿಕಾರಿಗಳ ವರ್ಗಕ್ಕೆ ಸೇರಿದ ಒಬ್ಬ ಮಹನೀಯರು, ತಾವು ಹುಡುಕಿ ತೆಗೆದ ಅದೊಂದು ಜಾತಿಯ ಕಟಮರ, ಮತ್ತು ತಾವು ಅದಕ್ಕೆ ಕೊಟ್ಟ ಹೆಸರಿನಿಂದಾಗ ಈಗ ಬಹಳ ಪ್ರಸಿದ್ಧಿಗೆ ಬಂದಿದ್ದಾರೆ. ಸಮುದ್ರ ಕಳ್ಳರನ್ನೂ, ಕಳ್ಳವ್ಯಾಪಾರಿಗಳನ್ನೂ ಬೆನ್ನಟ್ಟಿಕೊಂಡು ಹೋಗುವದಕ್ಕೆ, ಆ ಮಹನೀಯರು ಯಂತ್ರಬಲದಿಂದ ನಡೆಯುವ ಒಂದು ವಿಶೇಷ ತರಹದ ಕಟಮರವನ್ನು ರಚಿಸಿ ಅದಕ್ಕೆ 'ಕೆಟಸ್ಕ್ಯಾಟ್' ಎಂದು ಇಂಗ್ಲಿಷಿನಿಂದ ನಾಮಕರಣ ಮಾಡಿದ್ದಾರೆ. ಈ ಕೆಟಸ್ಕ್ಯಾಟುಗಳು ಮತ್ತು ಸ್ಟೀಮು ಲಾಂಚುಗಳ ಸಹಾಯ ತೆಗೆದುಕೊಂಡು ಇನ್ನು ಸ್ವಲ್ಪ ಕಾಲದಲ್ಲಿ ಸಮುದ್ರಗಳ ಮೂಲಕ ಕಳ್ಳ ವ್ಯಾಪಾರವೇ ನಡೆಯದ ಹಾಗೆ, ಅಂಥ ಕಳ್ಳರನ್ನೆಲ್ಲ ಹಾದಿಗೆ ಹಚ್ಚಬಹುದೆಂದು ನಂಬಲಾಗಿದೆ.

ಶಾಂತ ಪ್ರವಾಹದಲ್ಲಿ ಕಟಮರವು ತಾಸಿಗೆ 10 ಮೈಲುಗಳಷ್ಟೆ ಚಲಿಸಬಲ್ಲದು. ಆ ಶಾಂತ ಸಮುದ್ರದಲ್ಲಿ ಇದರ ವೇಗವು ಇದಕ್ಕಿಂತ ಕಡಿಮೆಯಾಗುವುದಾದರೂ, ಅದು ಸರಕಾರದ ಅಧಿಕಾರಿ ವರ್ಗದ ಕಾರ್ಯ ಸಾಧನೆಗೆ ಪರ್ಯಾಪ್ತವಾಗ ಮಷ್ಟು ಇರುತ್ತದೆ. ಈ ಕಟಮರವನ್ನು ಹುಡುಕಿರುವದಕ್ಕಾಗಿ ಆ ಮಹನೀಯರಿಗೆ ಎಷ್ಟು ಹೆಸರು ಬಂದಿದೋ, ಅದಕ್ಕೂ ದೊಡ್ಡ ಹೆಸರು ಅವರ ನಾಮಕರಣಕ್ಕಾಗಿ ಬಂದಿದೆ. 'ಕೆಟಸ್ಕ್ಯಾಟ' ಎಂಬುದು ಇಂಗ್ಲಿಷ ಭಾಷೆಯಲ್ಲಿ ಇದು ತನಕ ಇಲ್ಲದ ಶಬ್ದ. ಒಂದು ಹೊಸ ಶಬ್ದವನ್ನು ಇಂಗ್ಲಿಷ ಭಾಷಾಕೋಶಕ್ಕೆ ಸೇರಿದ ಕೀರ್ತಿಯು ಈ ಮಹನೀಯರಿಗೆ ಇದೆ. ಭಾಷಾ ಕೋಶಗಳಿಗೆ ಹೊಸ ಹೊಸ ಶಬ್ದಗಳನ್ನು ಸೇರಿಸಿದ ಕೀರ್ತಿಯು ಬಹಳ ಕೆಲವೇ ಜನರಿಗೆ ಬರುತ್ತದೆ. ಅಂಥವರೊಳಗೆ ಇವರೂ ಒಬ್ಬರಾದಂತಾದುದು ಮಹತ್ವದ ಸಂಗತಿಯಾಗಿದೆ. 'ಕೆಟಸ್ಕ್ಯಾಟು' ಎಂದರೆ ಅಂಟಿಕೊಂಡು ಹೋಗುವ ಕಟಮರ ಎಂದು ಅರ್ಥವಾಗುತ್ತದೆ.

SHET BRILLIANT

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ವಿನ್ ಸ್ಟ್ಯಾಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಶಂಕಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಒಳ್ಳೆ ಗುಡ್ಡೆ ಜವ.	1—14	1—14
ರಾಗಿ ಅಕ್ಕಿ ...	3—8	4—0
ಹುಗ್ಗಿ ...	4—0	4—8
ಗುಡ್ಡ ...	4—10	4—10
ಉಪ್ಪರ ಅಪ್ಪಲ್ ಬೆಲ್ಲಗೆ ...	4—7	4—7
ರಂಗೂನು ಟಿ. ಗೋ. ಗಳ್ಳೆ ...	7—2	7—4
ಎಲ್ಲೂರು ಟಿ. ಮು. ಗಳ್ಳೆ ...	3—14	4—0
ಗೋದಿ ಗೋಣಿ ಗಳ್ಳೆ ...	13—0	14—8
ತೊಗರಿ ಗೋಣಿ ಗಳ್ಳೆ ...	11—8	13—8
ಹುರುಳಿ ಗೋಣಿ ಗಳ್ಳೆ ...	6—0	6—2
ಕಡಲೆ ಗೋಣಿ ಗಳ್ಳೆ ...	9—8	10—8
ಕೊಗ್ರಬೇಳೆ ಗೋಣಿ ಗಳ್ಳೆ ...	17—8	18—0
ಉದ್ದು ಗೋಣಿ ಗಳ್ಳೆ ...	9—0	9—8
ಹೆಸರು ಗೋಣಿ ಗಳ್ಳೆ ...	9—12	10—8
ಊರುಬೆಲ್ಲ ಖಂಡಿ ಗಳ್ಳೆ ...	36—0	40—0
ಉಪ್ಪು ಗೋಣಿ ಗಳ್ಳೆ ...	4—8	5—4
ಮೆಣಸು ಖಂಡಿ ಗಳ್ಳೆ ...	46—8	46—8
ಎಳ್ಳೆಂದು ಖಂಡಿ ಗಳ್ಳೆ ..	25—	26—0
ತೆಂಗಿನ ಎಣ್ಣೆ ಮುಡಿ ಗಳ್ಳೆ ...	3—5	3—6
ಎಳ್ಳೆಣ್ಣೆ ಮುಡಿ ಗಳ್ಳೆ ...	6—0	7—0
ಬಿಳಿ ಎಳ್ಳು ಪಟ್ಟಿಗೆ ಗಳ್ಳೆ ...	6—5	7—5
ಮೋರಿಸ ಸಕ್ಕರೆ ಮು ಗಳ್ಳೆ .	2—13	2—14
ಮೆಣಸು ..	4—8	6—0
ಕೊತ್ತಂಬರಿ ಮುಡಿ ಗಳ್ಳೆ ...	5—8	6—8
ಶಾಲುಮೆಣಸು ಪ.ಪೆಟ್ಟಿಗೆ ..	16—0	17—8
ಯೇಲಕ್ಕಿಬೀಜ ಮುಡಿಗಳ್ಳೆ	80—0	85—0
ಗೇರುಬೀಜ ಮು ಗಳ್ಳೆ ...	3—14	3—15
ಕಬ್ಬಿಣ ಖಂಡಿ ಗಳ್ಳೆ .	60—0	55—0
ತಾಂಮ್ರತಗಡು ಮು ಗಳ್ಳೆ	14—12	15—0
ತಾಂಮ್ರಪಾತ್ರಗಳು ಮು ಗಳ್ಳೆ	14—8	15—0
ಹಿತ್ತಾಳೆ ಸೇರು ಗಳ್ಳೆ ...	13—8	14—0
ಹಿತ್ತಾಳೆ ತಗಡು ಮು. ಗಳ್ಳೆ	12—0	12—0
ಜವನು ಗಳ್ಳೆ	22—8	23—0
ಹುಣಸೆ ಹುಳಿ ಖಂಡಿ ಗಳ್ಳೆ	40—0	45—8
ನೇಟಿವ್ ಕಾಫಿ ಖಂಡಿ ಗಳ್ಳೆ	140—0	148—0
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳೆ	185—0	198—0
ವಾಡಿಕೇರಿ ಏಲಕ್ಕಿ ಮುಡಿ	35—0	39—0

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅವಲೋಕಿಸ ವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ, ಮಕ್ಕಳ ಕೆಮ್ಮು ನೆಗಡಿ, ಜ್ವರ, ಪಕ್ಕೆ ಶೂಲೆಗಳಿಗೂ ಅಮೃತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ 0-8-0, 0-4-0

ಸುಕುಮಾರತೈಲ

ಬಿಸಿಲು ಹೆಚ್ಚಿದ ಕಾಗಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ಇರಿತ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ ಬೆಲೆ 1-0-0

ಪ್ರೊಪ್ರೈಟರ್,
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.



ಡೋಂಗರೇ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಶಾಲಿವಾಹನ ಶಕ ೧೮೫೯ನೆಯ ಬಹುಧಾನ್ಯ ಸಂವತ್ಸರದ ಶ್ರಾವಣ ಬ॥ ೯ ಶನಿವಾರದಿಂದ ಭಾದ್ರಪದ ಶು॥ ೧ ಶುಕ್ರವಾರದ ವರೆಗಿನ ಪಂಚಾಂಗ (ಗಡಿಯಾರದ ಸೂರ್ಯೋದಯ ೬-೨೦ ಸೋಣ)

20	ಶನಿ	೨೩	೫೪॥	ರೋಹಿಣಿ	[illegible]	೪	
21	ರವಿ	೨೪	೪೯।	ಮೃಗಶಿರಾ	[illegible]	೫	[illegible]
22	ಸೋ	೨೫	೪೩।	ಆರ್ದ್ರಾ	[illegible]	೬	[illegible]
23	ಕುಜ	೨೬	೩೭।	ಪುಷ್ಯ	[illegible]	೭	[illegible]
24	ಬುಧ	೨೭	[illegible]	ಆಶ್ಲೇಷಾ	[illegible]	೮	[illegible]
25	ಗುರ	೨೮	[illegible]	ಮಘಾ	[illegible]	೯	[illegible]
26	ಶುಕ್ರ	೨೯	[illegible]	ಹುಬ್ಬಾ	[illegible]	೧೦	

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 1½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars-K R. GURU, *Managing Director*

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary Abscess.

There is no need of dressing the wounds, nor are baths prohibited.

Price Rs. 2 Postage extra

TAHIR DIN,
Anarkali, LAHORE.

ಪರರಾಷ್ಟ್ರಗಳ ಪತ್ರಿಕೆಗಳಿಂದ

...ಗರ್ ಪ್ರೆಸ್: ಝೆಕೊಸ್ಲೊವಾಕಿಯ

ಬರ್ಲಿನ್ ಮತ್ತು ವಾರ್ಸೋಗಳೊಳಗಿರುವ ರಾಯಭಾರಿಗಳು ಸ್ನೇಹಿತರೇ ಆಗಿರೂ, ಜರ್ಮನಿಯಲ್ಲಿ ಪೋಲೆಂಡ್ ದ್ವೇಷವೂ, ...ಲೆಂಡಿನಲ್ಲಿ ಜರ್ಮನ್ ದ್ವೇಷವೂ ಹೆಚ್ಚುತ್ತಿರುತ್ತದೆ. ಸರಕಾರದ ನಡತೆಗೂ ಜನತೆಯ ...ಪ್ರಾಯಕ್ಕೂ ಇಷ್ಟು ಭೇದವು, ಪೋಲೆಂಡ್ ...ರ್ಮಾಣವಾದಂದಿನಿಂದ ಉಂಟಾದುದಿಲ್ಲ. ...ಲಿಷ್ ಜನರಲ್ಲಿ ಬಹುಸಂಖ್ಯಾತರು ಜರ್ಮ ಪೋಲೆಂಡುಗಳೊಳಗೆ ವಿದ್ವೇಷವು ಒಂದು ... ಹೆಚ್ಚುತ್ತ, ಯುದ್ಧವಾಗದಿರದೆಂದು ಅಭಿ...ಯ ಮಾಡಿಕೊಂಡಿರುವರು. ಜರ್ಮನರ ...ಗಳನ್ನು ಆಕ್ಷೇಪಿಸಿ ದೂರಿ ನಾನಾ ಭಾಷಣಗಳೂ ಮೆರವಣಿಗೆಗಳೂ ಆಗಿವೆ.

o o o

...ಕುಂಗ್ ಪಾವ್: ಹಂಕೋ: ಚೀನ

ಚೀನದ ಕ್ವಂಗ್‌ಟುಂಗ್ ಪ್ರಾಂತ್ಯದಲ್ಲಿದ್ದ ...ಟಿಷ ಅಧಿಕಾರವು ನಿರ್ನಾಮವಾಗುವ ಹಾಗೆ ...ನು ಖಂಡಿತವಾಗಿಯೂ ಸಾಧಿಸುತ್ತಿ...ವಾಗ, ಎಂಗ್ಲೋ-ಜಪಾನಿಯರ ಸ್ನೇಹ...ವನ್ನು ಕುರಿತು ಮಂತ್ರಿ ಕ್ರೇಗಿಯೊಡನೆ ...ಟಿಷ) ಮಂತ್ರಿ ಉಗಾಕಿ (ಜಪಾನು) ಸಂಭಾ...ಗಳನ್ನು ನಡೆಸುತ್ತಿರುವನು. ಬ್ರಿಟಿಷರ ...ತಿಕ ರಾಜಧರ್ಮ ಕ್ರಮವು ಹೀಗೆ ಇರುತ್ತಾದರೆ, ಜಪಾನಿನೊಡನೆ ರಾಜಿಪಂಚಾಯಿ...ಲ್ಲೇ ಕಾಲಹರಣ ಮಾಡಲು ಬ್ರಿಟಿಷರು ...ರಿಸುವರಾದರೆ, ಇಲ್ಲಿ ನಡೆವ ಯುದ್ಧವು ... ಪ್ರಬಲವಾಗಿ, ಶತಮಾನದಾದಿಯಿಂದ ...ನೆಲೆಸಿದ್ದ ಬ್ರಿಟಿಷ ಗೌರವವು ಮೂಲೆ...ಲಾಗುವುದು; ಕ್ರಮೇಣ ಯುರೋಪು ...ಯುದ್ಧದಲ್ಲಿ ಸೇರುವಂತಾಗದಿರದು.

o o o o

...ಾಲ್ಡ್ ಟ್ರಿಬ್ಯೂನ್: ನ್ಯೂಯೋರ್ಕ್

ಯುನೈಟೆಡ್ ಸ್ಟೇಟ್ಸಿನ ಜನರು ಯಾಂಗ್ಟ್ಸಿ ...ದಾಟಿ ಅತ್ತ ಸುಳಿದರೆ, ಅಲ್ಲಲ್ಲಿನ ದಂಗೆ...ರ ಹಾವಳಿಗೆ ತುತ್ತಾಗಬಹುದೆಂದು ಜಪಾನಿನ ರಾಯಭಾರಿಗೆ ತಿಳಿಸಿಯದೆ. ನಂಕಿಂಗ್ ...ತ್ತು ಶಂಘಾಯಿಗಳಲ್ಲಿ ಸಹ ತೋರಿಕೆಗೆ ...ತ್ರ ಶಾಂತವಾಗಿರುವಂತಿದ್ದರೂ, ಒಳಗಿಂ...ಳಗೆ ಹಗೆತನ ಕುದಿಯುತ್ತಲೇ ಇದೆ. ಅಮೇ...ವರು ಶಾಂಘಾಯಿಯಲ್ಲಿ ಅವರದೇ ಆದ ...ಯಿಂದ ಹೊರಡಬೇಕಾಗಿ ಜಪಾನು ಎಂ...ದ್ದು, ರಾಯಭಾರಿ ಆಕ್ಷೇಪಿಸಲು, ಅದಕ್ಕೆ ...ರವಾಗಿ ಈ ಪ್ರಕಟಣೆಯನ್ನು ಜಪಾನು ...ಕಾರವು ಹೊರಡಿಸಿಯದೆ.

o o o o

ನಿಶಿ ನಿಶಿ: ಟೋಕಿಯೋ

“ಕೆಂಪು ಸೈನ್ಯದ ಅಧಿಕಾರಿಗಳು ಮತ್ತು ಸಿವಿಲ್ ಅಧಿಕಾರಿಗಳು ಇವರೊಳಗಿಂದ ಸುಮಾರು ಹತ್ತು ಲಕ್ಷ ಜನರನ್ನು ಸ್ಟೇಲಿನ್ನನು ಕೈದು ಮಾಡಿರುವನು!” ಎಂದು ಸೋವಿಯಟ್ ಸರಕಾರದ ಗುಪ್ತ ಪೊಲೀಸರ ಮುಖಂಡನು (ಜನರಲ್ ಲಿಷ್‌ಕೊವ್) ಈಗ ಮಂಚೂಕೊವೊಗೆ ತಪ್ಪಿಸಿಕೊಂಡು ಬಂದಿದ್ದು ಪ್ರಕಟಿಸಿರುವನು. ಸ್ಟೇಲಿನನಿಗೆ ವಿರುದ್ಧವಾಗಿ ಜನರಲ್ಲಿ ಅತಿಯಾದ ಉದ್ರೇಕಭಾವವುಂಟಾಗಿದೆ. ಸದ್ಯದಲ್ಲೇ ಮಹಾದಂಗೆಗಳೂ ಆಗಬಹುದು, ಎಂದು ಎಲ್ಲ ಪತ್ರಿಕಾ ಪ್ರತಿನಿಧಿಗೆ ಈ ತಲೆತಪ್ಪಿಸಿಕೊಂಡ ಜನರಲನು ವಾರ್ತೆ ತಿಳಿಸಿರುವನು.

o o o o

ಲ ಸ್ವಾರ್: ಬ್ರುಸೆಲ್ಸ್

ಸ್ಪೆಯಿನಿನ ಕೋರಳು ಒಸುಕುವುದರಲ್ಲಿ ಉದ್ಯುಕ್ತರಾಗಿರುವ ಜರ್ಮನಿ ಇಟಲಿಗಳು ನಾಳೆ ಪೋರ್ಚುಗಲನ್ನೂ ನುಂಗುವುವು ಎಂದು ತಿಳಿದು, ಮತ್ತು ಅವು ಹಾಗೆ ಮಾಡಿಯೇ ಜಿಬ್ರಾಲ್ಟರನ್ನು ಫಿರಂಗಿಗಳ ಹೊಡೆತಕ್ಕೆ ಒಳಪಡಿಸಿ ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರೂ ಫ್ರೆಂಚರೂ ಸುಳಿಯದಂತೆ ಸಾಧಿಸುವುವೆಂದು ತಿಳಿದು, ಬ್ರಿಟಿಷ ಸರಕಾರವು ಪೋರ್ಚುಗಲ್ ಸರಕಾರಕ್ಕೆ ಭಾರೀ ಫಿರಂಗಿಗಳನ್ನು ...ಸಿ ಲಂಡನ್-ಪ್ಯಾರಿಸುಗಳಂತೆ ವರ್ತಿಸಲು ಪ್ರೇರಿಪಿಸಿವೆ. ಪೋರ್ಚುಗಲಿಗೆ ತುಂಬ ಸಾಲವ...ನ್ನು ಬ್ರಿಟಿಷರು ಕೊಡುವರು. ‘ಅತಿ ಪುರಾತನ ಗೆಳೆಯ’ನೆಂದು ಬ್ರಿಟನ್ನು ಪೋರ್ಚುಗಲನ್ನು ಕರೆದಿದೆ. ಪೋರ್ಚುಗಲ್ ಇಂಗ್ಲೆಂಡು ಘನಿಷ್ಟ ಗೆಳೆಯರಿದ್ದ ವ್ಯಕ್ತಿಯು ಮೂರು ಶತಮಾನಗಳ ...ಕೆಯದು. ಅದರ ಮೇಲೆ ದೂಳು ಮುಚ್ಚಿದ ಅದನ್ನು ಈಗ ಝಾಡಿಸಿ, ಹಣವನ್ನು ...ಗಳನ್ನು ಕೊಡುವ ಮೂಲಕ ಊರ್ಜಿತ...ಗಿ ಸ್ಥಾಪಿಸುವೆವು.

o o o o

ನೋರ್ತ ಚೈನಾ ಡೈಲಿ ನ್ಯೂಸ್: ಜುಲೈ 13

ಚೀನ...ಲ ಪ್ರತಿನಿಧಿಗಳು ಯುನೈಟೆಡ್ ಸ್ಟೇಟ್ಸಿಗೆ ತೆರ...ರುವರು. ಬ್ರಿಟನ್ನು ಲಂಡನ್ ನಗರದಲ್ಲೂ ಪ... ಯುರೋಪಿಗೂ ಬಲ್ಕಾನ ರಾಷ್ಟ್ರಗಳಿಗೂ ಸ್ಥಿ... ಕೊಡಲು ಮೊದಲೇ ಒಪ್ಪಿರುವ ಕಾರಣ, ...ನಕ್ಕೆ ಬ್ರಿಟನ್ನಿನಲ್ಲಿ ಸಾಲ ಸಿಗುವಂತಿಲ್ಲ; ... ಕಾರಣ, ಯುನೈಟೆಡ್ ಸ್ಟೇಟ್ಸಿನಿಂದ 20 ...ಯ ಪವನು ಸಾಲವನ್ನು ಪಡೆಯಲು ಈ ಪ್ರತಿ...ಗಳು ಪ್ರಯತ್ನಿಸುವರು. ಬದಲಾಗಿ, ದಕ್ಷಿಣ ...ನದಲ್ಲಿ ಚೀನದ ಕಾರ್ಖಾನೆಗಾರರು ಬೆ...ನ್ನು ಉತ್ಪನ್ನಗಳನ್ನು ...ಬೆಲೆಯಾಗುವುವು. ಯುದ್ಧರಂಗದಿಂದ ಈ ಸ್ಥಳವು ಬಲು ದೂರವಿದ್ದು, ಭದ್ರವಾಗಿದೆ.

o o o o

ನ್ಯೂಸ್ ರಿವ್ಯೂ: ಜುಲೈ 14

ರುಮೇನಿಯದ ಅಧಿಕಾರಿಗಳು-ಅತ್ತಲಿಲ್ಲಾದರೂ ಜರ್ಮನಿ ನುಗ್ಗುವಂತಿದ್ದಲ್ಲಿ, ರುಮೇನಿಯದೊಳಗಿನ ಎಣ್ಣೆ ಕೆರೆಗಳನ್ನೆ ಸುಟ್ಟು ಹಾಕುವ ಸೂಚನೆ ಕೊಟ್ಟಿರುವರು. ಕೆರೊಲ್ ರಾಜನೇ ಈ ಸೂಚನೆ ಮಾಡಿಹನನೆನ್ನುವರು. ಬ್ರಿಟಿಷರು ಅಲ್ಲಿನ ಎಣ್ಣೆ ಕಾರ್ಖಾನೆ, ಗನಿ ಮೊದಲಾದುವುಗಳಲ್ಲಿ ಇನ್ನಷ್ಟು ಭಾಂಡವಾಲ ಹಾಕುವಂತೆ ಅತನು ಪ್ರೇರೇಪಿಸಿರುವನು. ಮೆಕ್ಸಿಕೋದಲ್ಲಿ ಬ್ರಿಟಿಷರಿಗೆ ಎಣ್ಣೆ ಗನಿಗಳೆಲ್ಲ ಜಪ್ತಾಗಿ ನಷ್ಟವಾಗಿದೆಯಾದ ಕಾರಣ, ಅವರು ಆ ನಷ್ಟವನ್ನು ರುಮೇನಿಯದ ಎಣ್ಣೆ ಗನಿಗಳಲ್ಲಿ ಹಣ ಹಾಕಿ ತುಂಬಬಹುದೆಂದು ನಂಬಿಕೆ.

o o o o

ಚೀನಾ ಯುದ್ಧದಲ್ಲಿ ಗಾಯಪೊಂದಿದ ಅಥವಾ ಸತ್ತ ಸೈನಿಕರಿಗೆ ಅಥವಾ ಅವರ ವಿಧವೆ ಮತ್ತು ಸಂತತಿಗೆ ಜಪಾನು ಸರಕಾರವು ಹೊಸತಾಗಿ ಸ್ಥಾಪಿಸಲಾದ ಉತ್ತರ ಮತ್ತು ಮಧ್ಯ ಚೀನಾ ಅಭ್ಯುದಯ ಕಂಪೆನಿಗಳಲ್ಲಿ ಪಾಲುಗಳನ್ನು ಧನಾರ್ಥ ಕೊಡುವುದಾಗಿ ವಾಗ್ದಾನ ಮಾಡಿಯದೆ. ಹೀಗೆ, ಯಾವ ರಾಜ್ಯವನ್ನು ಗೆಲ್ಲಲು ಸಿಪಾಯರು ರಕ್ತ ಸುರಿದರೋ, ಅದರ ಉದ್ಧಾರಾರ್ಥದ ಕೆಲಸದಲ್ಲೂ ಅವರಿಗೆ ಪಾಲು ಇರುವುದು. ಇಂಥ 450000 ಪಾಲುಗಳನ್ನು, ಎಂದರೆ ಒಟ್ಟು ಪಾಲುಗಳ ಸೇಕಡಾ 10ರಂತೆ ಸಿಪಾಯರಿಗೆ ಕೊಡಲಾಗುವುದು. ಇವರು ಅವುಗಳಿಗೆ ತಮ್ಮ ಸಂಬಳ ಯಾ ಪೆನ್ಶನುಗಳಿಂದ ತಿಂಗಳ ಕಂತುಗಳಲ್ಲಿ ಕಡಿಮೆ ಪಾಲ್ಕೆ ತೆತ್ತು ಅವನ್ನು ಕೊಂಡುಕೊಳ್ಳಬೇಕಾಗಿದೆ! ಕಂತಿನ ಮೊಬಲಗು ಎಷ್ಟು ಕಡಮೆ ಎಂದರೆ, ಅದೇನೂ ಹೆಚ್ಚಿನದಲ್ಲವೆಂದು ತಿಳಿಯುವಷ್ಟು ಕಡಮೆ.

The
Agricultural & Industrial Bank, Ltd.,
(Incorporated in British India.)

Head Office "LAXMINIVAS BUILDINGS" *Coondapoor.*

BRANCHES:-

COONDAPOOR	BYNDOOR	SOMWARPET
KUMTA	GOKARN	SHIMOGA
KOTESHWAR	VIRARAJENDRAPET	TARIKERE & KADUR

Deposits are accepted at following rates:-

5 YEARS CORONATION CASH CERTIFICATES BEARING 5 PER CENT INTEREST ARE ISSUED IN DENOMINATIONS OF Rs. 10, 25, 50, 100, 250, 500 & 1000. REDEEMABLE AT ANY TIME. CUMULATIVE DEPOSITS ARE ACCEPTED

Current Deposits
From January to June 2%
and
From July to December 1%

Savings Bank Deposits
3½ per cent per annum

Fixed Deposits
for 6 Months 3½%
„ 1 Year 4%
„ 2 Years & above 4½%

For Further Particulars Apply to:—
HEAD OFFICE or BRANCHES

THE
anara Banking Corporation, Ųipi, Ltd.
INCORPORATED IN BRITISH INDIA.
ESTD. 1906.

BOARD OF DIRECTORS:

Dr. U. Sunder Ram Pai, M. B. & B. S., *Presid...*
M. R. Ry. R. M. Karnad, Avl., *Vice Preside...*
M. R. Ry. Kochikar Padmanabha Pai, Avl., B...
M. R. Ry. B. Vaikunta Baliga, Avl., B. A., B. L.
M. R. Ry. Kasturi Nagesh Pai, Avl.,
M. R. Ry. Mijar Govinda Pai, Avl.,
Dr. U. Padmanabha Mallya, L. M. & S.,
M. R. Ry. M. Narayana Kamath, Avl., B. A.,
M. R. Ry. K. Narasimha Kamath, Avl.,
M. R. Ry. U. K. Bhujanga Nayak, Avl.

V. R. Kamath, B. A., B...
Manager.

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ.

ಕಾಮನ್ ವೆಲ್ತ್

ಆಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ.

***1937-38*ನೇ ಸಾಲಿನ ಪ್ರಗತಿ.**

ಗಳಿಸಿದ ಉದ್ಯಮ . . . . ರೂ. 50,18,543
ಪೂರ್ಣವಾದ ಉದ್ಯಮ . . . . ರೂ. 40,39,773

ದಕ್ಷಿಣ ಕನ್ನಡದ ಎಲ್ಲ ಕಡೆಗಳಲ್ಲೂ ಗೌರವಸ್ಥರೂ, ಸಮರ್ಥರೂ ಆದ ಏಜಂಟರು ಬೇಕು.

ವಿಶೇಷ ವಿವರಗಳಿಗೆ:—

ಪಿ. ಆರ್. ನಾಯಕ್ ಅಂಡ್ ಸನ್ಸ್
ಸ್ಪೆಷಲ್ ಏಜಂಟ್ಸ್
ಕಾರ್ ಸ್ಟ್ರೀಟ್, ಮಂಗಳೂರು.

ಗವಾಂಕರ್ ಅಂಡ್ ಸನ್ಸ್
ಚೀಫ್ ಏಜಂಟ್ಸ್
168, ಗಾಂಧಿ ನಗರ, ಬೆಂಗಳೂರು.

ಬ್ರಹ್ಮಚರ್ಯದ ಅಭಾವದಿಂದ

ಕಾಂಗ್ರೆಸಿನ ಹಿಡಿತ ತಪ್ಪಿದೆ!

ಬ್ರಹ್ಮಚರ್ಯದಿಂದಲೇ ಭಾರತದ ಮುಕ್ತಿಯಾಗುವದು!
ಬ್ರಹ್ಮಚರ್ಯವನ್ನು ಕೆಡಿಸುವವರು ಹೆಂಗಸರಲ್ಲ, ಗಂಡಸರು!!

[ಲೇಖಕರು —ಶ್ರೀ ಮೋಹನದಾಸ ಕರಮಚಂದ ಗಾಂಧಿಯವರು]

[illegible] ಸಂ [illegible] (1920–1925) ಕಾಂಗ್ರೆಸಿನಲ್ಲಿದ್ದ [illegible] ಶಕ್ತಿಗಳು ಈಗ ಅದರಲ್ಲಿ ಇಲ್ಲದಿರಲು ಕಾರಣವೇನು? ಕಾಂಗ್ರೆಸ್ಸು ದುರ್ಬಲವಾಗಲು ಕಾರಣವೇನು? ಕಾಂಗ್ರೆಸ್ಸಿನೊಳಗೆ ಶಿಸ್ತುಬದ್ಧತೆಗಳು ಈಗ ಅಷ್ಟು ಬಿಗಿಯಾಗಿ ಯಾಕೆ ಇರುವುದಿಲ್ಲ? ನೂರಕ್ಕೆ 90 ಮಂದಿ ಕಾಂಗ್ರೆಸ ಜನರು ಈಗ ಶಿಸ್ತು ಮೀರಿ ನಡೆಯುತ್ತಿರುವರಲ್ಲ? ಈ ಹಾನಿಕರ ಸ್ಥಿತಿಯನ್ನು ಸುಧಾರಿಸಲಿಕ್ಕೆ ನೀವೇನಾದರೂ ಮಾಡಬಾರದೆ?—" ಎಂದು ಕೇಳಿದರು.

ಈ ಪ್ರಶ್ನೆಯು 'ಸಮಂಜಸವಾಗಿಯೂ ಸಕಾಲಿಕವಾಗಿಯೂ ಇರುತ್ತದೆ. ಈಗ ನಾನು ಕಾಂಗ್ರೆಸಿನೊಳಗೆ ಇರುವುದಿಲ್ಲವೆಂದಾಗಲೀ, ಅದರ ಹೊರಗೆ ಇದ್ದೇನೆಂದಾಗಲೀ ಹೇಳಿದ ಮಾತ್ರದಿಂದ ಕಾಂಗ್ರೆಸಿನ ಜವಾಬುದಾರಿ ನನ್ನ ಮೇಲಿರುವದಿಲ್ಲವೆಂದು ನನಗೆ ಹೇಳಲಿಕ್ಕಾಗುವದಿಲ್ಲ. ಕಾಂಗ್ರೆಸಿನ ಸ್ಥಿತಿಗತಿಗಳ ಸುಧಾರಣೆ ಮತ್ತು ಅದರ ಅಭಿವೃದ್ಧಿಗಾಗಿಯೇ ನಾನು ಕಾಂಗ್ರೆಸಿನಿಂದ ಹೊರಗಾದುದಾಗಿದೆ. ಕಾಂಗ್ರೆಸಿನ ಕಾರ್ಯ ಧೋರಣೆಗಳ ಮೇಲೆ ಈಗಲೂ ನನ್ನ ಮಾತುವಿಚಾರಗಳ ಪ್ರಭಾವವು ಕಾಣಿಸಿಕೊಳ್ಳುತ್ತದೆ. 1920ನೆ ಇಸವಿಯ ಕಾಂಗ್ರೆಸ ಘಟನೆಯನ್ನು ತಯಾರಿಸಿದವನು ನಾನಾಗಿರುವ ಕಾರಣ, ಅಂದಿನಿಂದ ಇಂದಿನ ತನಕ ಕಾಂಗ್ರೆಸಿನಲ್ಲಿ ಕಂಡುಬರುವ ಅನಿಷ್ಟಗಳಿಗೆ ನಾನೇ ಜವಾಬುದಾರನಾಗಿದ್ದೇನೆ.

1920ರಲ್ಲಿ ಕಾಂಗ್ರೆಸು ಕೆಲವು ಆದಿ ಆತಂಕಗಳೊಡನೆ ತನ್ನ ಕಾರ್ಯಕ್ರಮವನ್ನು ಆರಂಭಿಸಿತು. ಅಂದು ಕಾಂಗ್ರೆಸಿನಲ್ಲಿದ್ದವರಲ್ಲಿ ಕೆಲವು ಮಂದಿ ಮಾತ್ರ 'ಸತ್ಯಅಹಿಂಸೆಗಳಲ್ಲಿ ನಿಶ್ಚಲವಿಶ್ವಾಸವುಳ್ಳವರಾಗಿದ್ದರು. ಮಿಕ್ಕವರು ಅವುಗಳನ್ನು ತಮ್ಮ ಧೋರಣೆಯನ್ನಾಗಿ ಮಾತ್ರ ಇಟ್ಟುಕೊಂಡರು. ಹಾಗಾಗುವದು ಇಂದಿನಂತೆ ಅಂದೂ ಅನಿವಾರ್ಯವಾಗಿತ್ತು. ಸತ್ಯ ಅಹಿಂಸೆಗಳ ಪ್ರಯೋಗಗಳು ನಡೆದು ಅವುಗಳ ಮಹತ್ವವು ತಿಳಿದ ಮೇಲೆ ಹೆಚ್ಚು ಜನರು ಅವುಗಳ ತತ್ವಾನುಸರಣ ಮಾಡುವರೆಂದು ನನಗೆ ವಿಶ್ವಾಸವಿತ್ತು. ಕೆಲವರಲ್ಲಿ ಇಂಥ ಪರಿವರ್ತನೆಗಳಾದುದು ನಿಜ. ಈ ತತ್ವಗಳು ಸ್ವಲ್ಪ ಸಮಯದಲ್ಲಿಯೇ ದಿವಂಗತರಾದ ಮೋತಿಲಾಲ ನೇಹರು, ಚಿತ್ತರಂಜನದಾಸ ಮೊದಲಾದ ಪ್ರಮುಖನಾಯಕರ ಮೇಲೆ ಪ್ರಚಂಡಪರಿಣಾಮವನ್ನುಂಟು ಮಾಡಿದುವು. 'ಯಂಗ ಇಂಡಿಯ'ದಲ್ಲಿ ಅವರು ಬರೆದ ಪತ್ರಗಳು ಈ ಮಾತಿಗೆ ಸಾಕ್ಷಿಯಾಗಿವೆ. ಸ್ವಾರ್ಥತ್ಯಾಗ, ಸರಳತೆ, ಆತ್ಮಸಂಯಮಗಳನ್ನು ಜೀವನಧ್ಯೇಯವಾಗಿಟ್ಟುಕೊಂಡು ಸತ್ಯ ಅಹಿಂಸಾಮಯ ಜೀವನವನ್ನಾರಂಭಿಸಿದ ವೇಳೆ ಈ ಮುಖಂಡರುಗಳಲ್ಲಿ ನವೀನ ಸ್ಫೂರ್ತಿಯೂ ಹೊಸ ಆನಂದವೂ ತೋರಿತು. ಅಲೀಬಂಧುಗಳೂ ಈ ಪರಿವರ್ತನೆಯಲ್ಲಿ ಧನಿಕರಾಗಿದ್ದವರು ಭಿಕ್ಷುಕರಾದರು. ಈ ಮಹಾನಾಯಕರ ತ್ಯಾಗ ಉತ್ಸಾಹಗಳು ಇತರರಲ್ಲಿಯೂ ಹಬ್ಬಿದುವು.

ಈ ಅದ್ಭುತ ಬದಲಾವಣೆಗೆ— 'ಒಂದು ವರ್ಷದಲ್ಲಿ ಸ್ವರಾಜ್ಯ' ಎಂದು ನಾನು ಕೊಟ್ಟ ಭರವಸೆಯೇ ಮೂಲಕಾರಣವಾಯಿತು. ಆದರೆ ಭರವಸೆಯ ಮಾತನ್ನು ಅನೇಕರು ನಂಬಿದ್ದರೇ ಹೊರತು, ಆ ಭರವಸೆಯ ಸಾಧನೆಗಾಗಿ ನಾನು ಕೊಟ್ಟ ನಿಯಮಗಳನ್ನು ಮಾತ್ರ ಅವರು ಪೂರ್ಣಪಾಲಿಸಲಿಲ್ಲ. ನಿಯಮಗಳನ್ನು ಸೂಚಿಸುವಾಗ ಅವುಗಳನ್ನು ಪಾಲಿಸುವದು ಎಷ್ಟರ ಮಟ್ಟಿಗೆ ಸಾಧ್ಯವೆಂಬುದನ್ನು ಆಲೋಚಿಸಬೇಕಾಗಿ ಕ್ವಾಜಾ ಅಬ್ದುಲ್ ಮಜೀದರು ನನಗೆ ಹೇಳಿದ್ದರು. ಅದು ನ್ಯಾಯವೆಂದು ನನಗೆ ತೋರುತ್ತದೆ. ಆದರೆ ಆಗ ನನಗೆ ಆ ವಿಚಾರವು ಹೊಳೆದಿರಲಿಲ್ಲ. ರಾಜಕೀಯದಲ್ಲಿ ಅಹಿಂಸಾಮಯ ಕಾರ್ಯಕ್ರಮವು ನನಗೂ ಒಂದು ಪ್ರಯೋಗ ವಿಷಯವಾಗಿತ್ತು. ನಾನು ಆಗ ವಂತಿರಲಿಲ್ಲ. ನಾನು ಸ್ವರಾಜ್ಯಸಾಧನೆಗೆಂದು ಸೂಚಿಸಿದ ನಿಯಮಗಳು ಸಾಧ್ಯವಾಗುವದು, ಸಾಧ್ಯವಾಗದಿರುವದು, ಎರಡೂ ಸಂಭವವಾಗಿತ್ತು, ತಪ್ಪುತಡೆಗಳೂ ಆಗಬಹುದಿತ್ತು. ಈ ಎಲ್ಲ ಕಾರಣಗಳಿಂದ, ಮತ್ತು ಸ್ವರಾಜ್ಯವು ಒಂದು ವರ್ಷದಲ್ಲಿ ದೊರೆಯದೆ, ಹೋರಾಟವು ಮುಂದರಿಯುತ್ತ ಹೋದಂತೆ, ಹಾಗೂ ಖಿಲಾಫತ್ ಪ್ರಶ್ನೆಯು ಹಿಂದಕ್ಕೆ ಬಿದ್ದಂತೆ ಅಹಿಂಸಾತ್ಮಕ ಮತ್ತು ಸತ್ಯಮಯ ಸ್ವರಾಜ್ಯ ಚಳವಳಿಯಲ್ಲಿ ಜನರ ಉತ್ಸಾಹ ನಂಬಿಕೆಗಳು ಕಡಿಮೆಯಾಗುತ್ತ ಬಂದುವು. ಅಷ್ಟು ಮಾತ್ರವಲ್ಲದೆ ಸತ್ಯ–ಅಹಿಂಸೆ ಎಂಬುದು ಒಂದೇ ಕಾರ್ಯಧೋರಣೆ ಎಂದು ಅನೇಕ ಮಂದಿ ತಿಳಿಯಲಾರಂಭಿಸಿದರು. ಆದ್ದರಿಂದ ಸತ್ಯಅಹಿಂಸೆಯಲ್ಲಿ ಜನರ ಅಪನಂಬಿಕೆ ಹೆಚ್ಚಿತು. ಖಾದಿಧಾರಣೆಯ ಬಗ್ಗೆ ಇರುವ ನಿಯಮವನ್ನು ಒಪ್ಪದವರೂ ಕಾಂಗ್ರೆಸಿನಲ್ಲಿ ಹೆಚ್ಚಿದರು. ಅನೇಕ ಮಂದಿ ಬಹಿರಂಗವಾಗಿ ಕಾಂಗ್ರೆಸ ನೀತಿನಿಯಮಗಳನ್ನು ಮೀರಿ ನಡೆಯಹತ್ತಿದರು.

ಈ ಅನಿಷ್ಟವು ಈಗಲೂ ಹಾಗೆಯೇ ಬೆಳೆಯುತ್ತ ಬಂದಿದೆ. ಕಾಂಗ್ರೆಸ ವರ್ಕಿಂಗ್ ಕಮಿಟಿಯವರು ಈ ದೋಷವನ್ನು ದೂರ ಮಾಡಲಿಕ್ಕೆ ಪ್ರಯತ್ನಪಟ್ಟಿರುವರಾದರೂ, ಕಾಂಗ್ರೆಸಿನೊಳಗೆ ಸದಸ್ಯರ ಸಂಖ್ಯೆ ಕಡಿಮೆಯಾದೀತೆಂಬ ಭಯದಿಂದ ಅವರು ಕಠಿನ ಕಾರ್ಯಕ್ರಮವನ್ನು ಕೈಕೊಳ್ಳದೆ ಇದ್ದಾರೆ. ಆದರೆ ನನಗೆ ಮಾತ್ರ ಸಂಖ್ಯೆಗಿಂತ ಗುಣಗಳ ಶಕ್ತಿಯಲ್ಲಿ ವಿಶ್ವಾಸವು ಅಧಿಕವಾಗಿದೆ. ಆದರೆ ತತ್ವಾನುಸಂಧಾನ ಮಾಡುವಾಗ ಬಲಾತ್ಕಾರವು ಕೂಡದು. ಬಲಾತ್ಕಾರದಿಂದ ತತ್ವವನ್ನು ಒಪ್ಪಿಸಿದರೆ ಫಲವಿಲ್ಲ. ಬುದ್ಧಿಗೆ ಮೆಚ್ಚುವಂತೆ ಮಾಡಿ ಅದಕ್ಕೂ ಹೆಚ್ಚಾಗಿ ಹೃದಯಕ್ಕೆ ಒಪ್ಪುವಂತೆ ಮಾಡುವದರಿಂದಲೇ ತತ್ವ ಸಿದ್ಧಿಯಾಗುತ್ತದೆ.

ಮೇಲೆ ಹೇಳಿದ ವಿಚಾರಗಳನ್ನು ಪರ್ಯಾಲೋಚಿಸಿದರೆ ಸತ್ಯಾಗ್ರಹವನ್ನು ನಡೆಸುವ ನಾಯಕನ ಮಾತಿನಲ್ಲಿ ಅಪ್ರತಿಮ ಶಕ್ತಿಯಿರಬೇಕೆಂದು ಅರ್ಥವಾಗಬಹುದು. ಆದರೆ ಈ ಶಕ್ತಿ ಯುದ್ಧೋಪಕರಣಗಳ ಬಲದಿಂದಲ್ಲ; ಪರಿಶುದ್ಧ ಜೀವನ, ಆತ್ಮನಿರೀಕ್ಷಣೆ, ಅವ್ಯಾಹತಸಾಧನೆ ಮೂಲಕ ಬರುವ ಧರ್ಮವಾಗಿದೆ. ಸಂಪೂರ್ಣ ಬ್ರಹ್ಮಚರ್ಯವನ್ನು ಸಾಧಿಸಿದ ಹೊರತು ಈ ಶಕ್ತಿಯು ಯಾರಿಗೂ ಬರುವಂಥಾದಲ್ಲ. ಬ್ರಹ್ಮಚರ್ಯವೆಂದರೆ ಶಾರೀರಿಕ ಸಂಯಮ ಮಾತ್ರವಲ್ಲ, ನಮ್ಮ ಎಲ್ಲಾ ಇಂದ್ರಿಯಗಳ ಪರಾವಧಿನಿಗ್ರಹವೇ ನೈಷ್ಠಿಕ ಬ್ರಹ್ಮಚರ್ಯವಾಗಿದೆ. ಆದ್ದರಿಂದ ಮನಸ್ಸಿನಲ್ಲೇಳುವ ಅಪರಿಶುದ್ಧ ಭಾವನೆಗಳು ಬ್ರಹ್ಮಚರ್ಯವನ್ನು ಕೆಡಿಸುತ್ತವೆ. ಕಾಮ, ಮೋಹ, ಮದ, ಮತ್ಸರ, ಮೊದಲಾದ ಷಡ್ವೈರಿಗಳೆಲ್ಲ ಬ್ರಹ್ಮಚರ್ಯವನ್ನು ಭಂಗಪಡಿಸುತ್ತವೆ. ಸಂತಾನಕ್ಕಾಗಿ ಗಂಡಹೆಂಡಿರು ಒಂದಾಗುವದು ಕ್ಷಮ್ಯವಾಗಿದೆ. ಅದನ್ನು ಬಿಟ್ಟು ಎಲ್ಲಾ ಸಂದರ್ಭಗಳಲ್ಲಿ ಅವರು ಕೂಡುವದು ವಿಷಯಲೋಲುಪತೆಯಾಗಿರುವದು. ಸತ್ಯ ಅಹಿಂಸೆಗಳ ಮೂಲಕ ಕಾರ್ಯಸಾಧನೆಯಾಗಬೇಕಾದರೊಳ್ಳೆ ಸಂತಾನೋತ್ಪತ್ತಿಗಾಗಿಯೂ ವರಣ ಗಂಡಹೆಂಡಿರು ಕೂಡಬಾರದಾಗಿದೆ. ಅದಕ್ಕೆ ಸ್ತ್ರೀಪುರುಷರು ಪರನಾವಧಿಯ ವರೆಗೆ ಸಂಪೂರ್ಣ

ನಮ್ಮ ಎಲ್ಲಾ ಶಕ್ತಿಗಳೂ ವೀರ್ಯಸಂಗೋಪಕದಲ್ಲಿ ಅಡಗಿರುತ್ತವೆ. ವೀರ್ಯಪತನ ಮಾಡಿಕೊಳ್ಳುವುದಕ್ಕಿಂತ ಅದನ್ನು ಪ್ರಯತ್ನಪಟ್ಟು ಶರೀರದಲ್ಲಿಯೇ ಕೂಡಿಸಿಕೊಳ್ಳುವದರಿಂದ ನಮಗೆ ಮಹತ್ತರವಾದ ಶಕ್ತಿಗಳು ಪ್ರಾಪ್ತವಾಗುವವು. ಈಗಲಾದರೋ ಈ ವೀರ್ಯವು ಪಾಪಕಾರ್ಯಗಳಲ್ಲಿಯೂ ಅನಾವಶ್ಯಕ ಕಾರ್ಯಗಳಲ್ಲಿಯೂ ದುರ್ವ್ಯಯ ಅಪವ್ಯಯ ಹೊಂದುತ್ತಲಿರುವದು. ಭಾವನೆಯೇ ಮಾತು ಮತ್ತು ಕ್ರಿಯೆಗೆ ಮೂಲವಾದುದರಿಂದ ಬ್ರಹ್ಮಚಾರಿಯು ತನ್ನ ಭಾವನೆಗಳನ್ನೂ ಪವಿತ್ರವಾಗಿಡಬೇಕು. ಅಗಸ್ತ್ಯ ಋಷಿಗಳಿಂದ ಬ್ರಹ್ಮಚಾರಿಗಳಾಗಿದ್ದವರಿಗೇ ಶಾಪಾನುಗ್ರಹ ಶಕ್ತಿಗಳು ಪ್ರಾಪ್ತವಾಗುವವು.

ಮಾನವನನ್ನು ದೇವರ ಪ್ರತಿಬಿಂಬವೆಂದು ಹೇಳುತ್ತಾರೆ. ಅದು ನಿಜವಾದಲ್ಲಿ ತನ್ನ [illegible] ಕಾರ್ಯಕ್ಷೇತ್ರದಲ್ಲಿ ಮಾನವನೂ ದೇವರಂತೆ ಸರ್ವಶಕ್ತನಾಗಿರಬೇಕಲ್ಲವೆ? ಶಕ್ತಿಯ ಅಪವ್ಯಯ ದುರ್ವ್ಯಯ ಮಾಡುವವರಿಗೆ [illegible] ಇದ ಸಾಧ್ಯವಲ್ಲ. [illegible] ತಮ್ಮ ಶಕ್ತಿಯ ಸದುಪಯೋಗ ಮಾಡುವವರಿಗೆ ಮಾತ್ರ ಸರ್ವಶಕ್ತಿಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಸಂತಾನೋತ್ಪತ್ತಿಗಾಗಿ ಬ್ರಹ್ಮಚರ್ಯ ಕೇವಲ ಕಾಮೋಪಭೋಗಕ್ಕಾಗಿ [illegible] ವು ನಿಷೇಧಿಸಲ್ಪಟ್ಟಿರುತ್ತದೆ. [illegible] ಮಹತ್ತರವಾದ ಕಾರ್ಯಗಳಲ್ಲಿ [illegible] ವರ ನೈಷ್ಠಿಕ ಬ್ರಹ್ಮಚಾರಿ [illegible] ಅವಶ್ಯಕವಾಗಿದೆ.

ಆದರೆ ಪ್ರಯತ್ನಗಳಿಂದಲೇ ಸರ್ವಶಕ್ತಿಗಳ ಪ್ರಾಪ್ತವಾಗುವುದಿಲ್ಲ ಬದನ್ನು ನಾವು ತಿಳಿದಿರಬೇಕು. ಗೀತೆಯಲ್ಲಿ ಹೇಳಿದಂತೆ ಅದಕ್ಕೆ ಪರಮಾತ್ಮನ ಅನುಗ್ರಹ ಬೇಕು. ಪರಮಾತ್ಮನ ಅನುಗ್ರಹದಿಂದ ಮಾತ್ರ ಲಭಿಸುವ ಶಕ್ತಿಯು ಸಾಧಕನಲ್ಲಿ ರವಾಗಿ ಉಳಿಯುವದೂ ಸಮಾಜದಿಂದ ದೂರವಾಗಿ ಕಾಡ ಗುಡ್ಡಗಳಲ್ಲಿ ವಾಸವಾಗಿರುವವರು ಮಾತ್ರ ನೈಷ್ಠಿಕ ಬ್ರಹ್ಮಚಾರಿಗಳಾಗಿರಲು ಸಾಧ್ಯವೆಂದೂ, ಅಂಥವರು ಹೆಂಗಸರನ್ನು ನೋಡುವುದು ಕೂಡ ಸಲ್ಲದೆಂದೂ ಹೇಳುತ್ತಾರೆ. ನಾನು ಈ ಮಾತನ್ನು ಒಪ್ಪಲಾಗುವುದಿಲ್ಲ. ನೈಷ್ಠಿಕ ಬ್ರಹ್ಮಚಾರಿಯಾಗಿದ್ದವನು ಸ್ತ್ರೀಯನ್ನು ಕಾಮುಕ ದೃಷ್ಟಿಯಿಂದ ನೋಡಬಾರದು. ಆದರೆ ಕಾಮದ ಕೈ ಚಳಕವು ಅದ್ಭುತವಾದುದು. ಅದು ಯಾವಾಗ ಯಾವ ನಲ್ಲಿ ಏನು ಮಾಡಿತೆಂದು ಹೇಳುವದು ಅಸಾಧ್ಯವಾಗಿದೆ. ಆದ್ದರಿಂದಲೇ ಬ್ರಹ್ಮಚಾರಿಯು ನಿಸ್ಸಂಗಿಯಾಗಿರಬೇಕೆಂದು ಹೇಳಿರಬಹುದು. ಆದರೆ ಸಮಾಜದಲ್ಲಿ ಬೆರೆತು ಕೆಲಸಮಾಡಬೇಕಾಗಿರ ಸಾಧಕರ ನಿಸ್ಸಂಗಿಗಳಾದರೆ ಪ್ರಯೋಜನವಿಲ್ಲ. ಅಂಥವರು ಸಮಾಜದಲ್ಲಿದ್ದುಕೊಂಡೇ ಬ್ರಹ್ಮಚರ್ಯವನ್ನು ಸಾಧಿಸಬೇಕು.

ನಾನು ಕಳೆದ ಮೂವತ್ತು ವರ್ಷಗಳಿಗೆ ಬ್ರಹ್ಮಚರ್ಯವನ್ನು ಸಾಧಿಸಿದ್ದೇನೆ. ಈ ಅವಧಿಯಲ್ಲಿ ನಾನು ನನ್ನ ಹೆಂಡತಿ ವಿನಹ ಬೇರೆ ಯಾರೊಡನೆಯೂ ನನ್ನ ಬಹಿರಂಗವ್ಯವಹಾರವನ್ನು ವ್ಯತ್ಯಾಸಗೊಳಿಸಿರುವದಿಲ್ಲ. ನನ್ನ ಬ್ರಹ್ಮಚರ್ಯವು ಕೇವಲ ತಾತ್ವಿಕ ವಿಷಯವಾ [illegible]

ದೆ. ಅದರ ಪಾಲನೆಗಾಗಿ ನಾನು ಅನೇಕ ನಿಯಮಗಳನ್ನು ಮಾಡಿದ್ದೇನೆ. ಹೆಂಗಸರು ಗಂಡಸರನ್ನು ಪಾಪದಾರಿಗೆ ಕೊಂಡೊಯ್ಯುವವರೆಂದು ನಾನು ತಿಳಿದಿರುವದಿಲ್ಲ. ಪಾಪ ಮಾಡುವವರೂ, ಪಾಪಕ್ಕೆ ಸ್ತ್ರೀಯರನ್ನು ಪ್ರೇರೇಪಿಸಿ ಅವರನ್ನು ಬಲಾತ್ಕಾರ ಮಾಡುವಂಥವರೂ ಗಂಡಸರೆಂದೇ ನನ್ನ ಭಾವನೆಯಾಗಿರುವದು. ಸ್ತ್ರೀಯರ ಸಹವಾಸವು ಪುರುಷರನ್ನು ಕೆಡಿಸುವದಿಲ್ಲ. ಪರಂತು ಪುರುಷಸಹವಾಸವೇ ಸ್ತ್ರೀಯರನ್ನು ಕೆಡಿಸುವಷ್ಟು ಭಯಂಕರವಾಗಿರುತ್ತದೆ.

ಬ್ರಹ್ಮಚಾರಿ ಬ್ರಹ್ಮಚಾರಿಣಿಯರು ತಮ್ಮ ಪ್ರತಿಲಿಂಗೀಯರೊಡನೆ ಇಡುವ ವ್ಯವಹಾರದಲ್ಲಿ ಯಾವ ರೀತಿಯ ನಿಯಮಗಳನ್ನಿಡಬೇಕೆಂಬ ವಿಷಯದಲ್ಲಿ ನನಗೆ ಈಗ ಕೆಲವು ಸಂದೇಹಗಳಿವೆ. ನಾನು ಬ್ರಹ್ಮಚರ್ಯ ಪಾಲನೆಗೆ ಹಿಂದೆ ಮಾಡಿಟ್ಟುಕೊಂಡ ನಿಯಮಗಳು ನನಗೆನೇ ಸಮರ್ಪಕವೆಂದು ತೋರುವದಿಲ್ಲ. ಆದರೆ ಅವುಗಳ ಬದಲಿಗೆ ಬೇರೆ ಯಾವ ನಿಯಮ ನಿರ್ಬಂಧಗಳನ್ನಿಡಬೇಕೆಂಬುದು ನನಗೆ ಗೊತ್ತಾಗಲಿಲ್ಲ. ಈ ಬಗ್ಗೆ ನಾನು ಇನ್ನೂ ಪ್ರಯೋಗ ಪರೀಕ್ಷೆಗಳನ್ನು ಮಾಡುತ್ತಲೇ ಇದ್ದೇನೆ. ನನ್ನ ಮನಸ್ಸಿನಲ್ಲಿರುವ ನೈಷ್ಠಿಕ ಬ್ರಹ್ಮಚರ್ಯದ ಆದರ್ಶವನ್ನು ನಾನು ಇದುವರೆಗೆ ಸಾಧಿಸಿಲ್ಲ. ಅಹಿಂಸೆಯ ಸಾಧನೆಗೆ ಬೇಕಾದಷ್ಟು ನಾನು ಜಿತೇಂದ್ರಿಯನಾಗಿರುವದಿಲ್ಲ. ಆದ್ದರಿಂದ ನನ್ನ ಅಹಿಂಸಾವಾದವು ಸರ್ವತ್ರ ಹರಡಬೇಕಾದರೆ ನಾನು ಪೂರ್ಣ ಜಿತೇಂದ್ರಿಯನಾಗುವದು ಅಗತ್ಯವಾಗಿದೆ. ನನ್ನ ಬ್ರಹ್ಮಚರ್ಯದಲ್ಲಿ ಎಲ್ಲಿಯೋ ಏನೋ ಕೊರತೆ ಇರುವದರಿಂದಲೇ ನನ್ನ [illegible] ದಶಸಪ್ತ ಲೇಖನಾರಂಭದಲ್ಲಿ ಸೂಚಿಸಿರುವ [illegible] ತೋರಿಸಿಕೊಟ್ಟ ಕಾಂಗ್ರೆಸಿನೊಳಗಿನ ಲೋಪದೋಷ ಕುಂದುಕೊರತೆಗಳಿಗೆ ಅವಕಾಶವಾಯಿತೆಂದು ಕಾಣುತ್ತದೆ.

ಆದರೆ ಅಹಿಂಸಾತತ್ವದಲ್ಲಿ ನನ್ನ ನಂಬಿಗೆಯು ದೃಢವಾಗಿರುವುದರಿಂದ ನನ್ನ ದೇಶದ ವಿವಿಧ ಸಮಸ್ಯೆಗಳು ಮತ್ತು ನಾನಾ ವಿಪತ್ತುಗಳನ್ನು ಪರಿಹರಿಸಲು ಅಹಿಂಸಾತತ್ವದ [illegible] ಉಪಯೋಗಿಸಬೇಕು [illegible] ಇದೊಂದೇ ಉಪಾಯ [illegible] ಪರಿಣಾಮಿಸಬಹುದು. ನಾನು ನನ್ನ ವಿಷಯದಲ್ಲಿ ಹಿಡಿದ್ದ ದೊಡ್ಡ ಆಸೆಗಳನ್ನು ಕಟ್ಟಿಕೊಂಡಿರುವೆನು. ಇಡೀ ಜಗತ್ತನ್ನ ಅಹಿಂಸಾಮಾರ್ಗಕ್ಕೆ ಕೊಂಡೊಯ್ಯುವ ಶಕ್ತಿಯನ್ನು ಪರಮಾತ್ಮನು ನನಗೆ ಕೊಟ್ಟಿಲ್ಲವೆಂದು ನಾನು ತಿಳಿದಿದ್ದೇನೆ. ಆದರೆ ಹಿಂದೂ ದೇಶದ ವಿವಿಧ ಕಷ್ಟಗಳ ನಿವಾರಣೆಗೆ ಅಹಿಂಸಾವ್ರತವನ್ನು ಬೋಧಿಸಲು ಪರಮಾತ್ಮನು ನನ್ನನ್ನು ತನ್ನ ಕೈಯ ಆಯುಧವನ್ನಾಗಿ ಮಾಡಿದ್ದಾನೆಂದು ನನ್ನ ವಿಶ್ವಾಸವಿದೆ. ನನ್ನ ಕೆಲಸಕಾರ್ಯಗಳು ಇನ್ನೂ ಮುಗಿದಿರುವದಿಲ್ಲವೆಂದೂ ಈಗ ನನ್ನ ಸತ್ಯಪಥವನ್ನು ಆವರಿಸಿರುವ ಕತ್ತಲು ಮಾಯವಾಗಿ ಪರಮಾತ್ಮನ ಅನುಗ್ರಹದಿಂದ ದಂಡಿಯಾತ್ರೆಗಿಂತ ಮಿಗಿಲಾದ ಧರ್ಮಯುದ್ಧದಿಂದು ಅಥವಾ ಅಂಥಹ ಯುದ್ಧ ಹೋರಾಟವಿಲ್ಲದೇನೇ— ಅಹಿಂಸಾಮಾರ್ಗದಿಂದಲೇ ಭಾರತದ ಸ್ವಾತಂತ್ರ್ಯವು ಸಂಪಾದಿಸಲ್ಪಡುವದೆಂಬ ದೃಢವಾದ ನಂಬಿಗೆಯು ನನಗೆ ಇರುತ್ತದೆ. ಆದಕಾರಣ ನನ್ನನ್ನು ಆವರಿಸಿರುವ ಕತ್ತಲು ದೂರವಾಗಲೆಂದೂ ಪ್ರಕಾಶವು ಹರಡಲೆಂದೂ ನಾನು ಭಗವಂತನನ್ನು ಪ್ರಾರ್ಥಿಸುತ್ತಿದ್ದೇನೆ. ಅಹಿಂಸೆಯಲ್ಲಿ ನಂಬಿಗೆಯುಳ್ಳವರೆಲ್ಲರೂ ಅದೇ ರೀತಿ ಪ್ರಾರ್ಥನೆ ಮಾಡಲಿ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಬ್ರಾಹ್ಮಣರು ಮತ್ತು ಜಾತಿ!

ಡಾ|| ಹರದಯಾಲರ ಅಭಿಪ್ರಾಯ.

★

ಜಾತಿಯೆಂಬುದು ಭಾರತಕ್ಕೊಂದು ಶಾಪ ಜಾತಿಯು ಬಹು ರೂಪಗಳನ್ನು ಹೊಂದಿ, ನಮ್ಮನ್ನು ಗುಲಾಮಗಿರಿಯಲ್ಲಿ ಬಂಧಿಸಿರುವುದು. 200 ವರ್ಷಗಳ ಹಿಂದೆ ಮುಂದಾಲೋಚನೆ ಇಲ್ಲದ ಬ್ರಾಹ್ಮಣರು ಅಧಿಕಾರ ಅಂಧರಾಗಿ, ಜ್ಞಾನಾರ್ಜನೆಯೆಂಬುದು ತಮ್ಮ ಹುಟ್ಟು ಹಕ್ಕು ಇಂದೂ, ಪರರಿಗೆ ವಿದ್ಯೆಯನ್ನು ಗಳಿಸುವ ಅಧಿಕಾರವಿಲ್ಲವೆಂದೂ ಪ್ರಸಾರ ಮಾಡಿ, ನಮ್ಮನ್ನು ದಾಸ್ಯದ ಕೂಪದಲ್ಲಿ ದೂಬ್ಬಿರುವರು. ಹಿಂದುಗಳು ತನಗೆ ಮನಬಂದ ಓರ್ವ ಹಿಂದು ಕನ್ಯೆಯನ್ನು ವಿವಾಹಮಾಡಿಕೊಳ್ಳಲು ಅವರಿಗೆ ಅಧಿಕಾರವಿಲ್ಲ. ಸಹಪಂಕ್ತಿ ಭೋಜನ ಮಾಡ ದಂತೆ ಅವರ ಮೇಲೆ ನಿಷೇಧವು ಹಾಕಲ್ಪಟ್ಟಿದೆ ಒಂದೇ ವರ್ಗದವರು ಒಮ್ಮತವಾಗಿ ಇರಕೂಡ ದೆಂಬುದಕ್ಕಿಂತ ಹೆಚ್ಚಿನ ಹುಚ್ಚುತನವಿದೆಯೇ?

ತಮ್ಮ ಕುಟಿಲೋಪಾಯಗಳೆಲ್ಲ ಕೃತಕೃತ್ಯ ವಾದುವೆಂದು ಬ್ರಾಹ್ಮಣರು ಸಂತುಷ್ಟರಾದರು ಅವರ ಈ ಜಾತಿ ಭೇದದ ಯೋಜನೆಯು ಹಿಂದುಸ್ಥಾನವನ್ನು ವೈಭವದ ಶಿಖರವನ್ನೇ ಏರುವಂತೆ ಮಾಡಿತು ಆದರೆ ಈ ವೈಭವ ಮದವನ್ನು ಅಲ್ಪಾವಧಿಯಲ್ಲೇ ಕಾಳ ರಾತ್ರಿಯು ಹಿಂಬಾಲಿಸಿತು ಜಾತಿಭೇದ ಮತ್ತು ಬ್ರಾಹ್ಮಣ ವೃತ್ತಿಯಿಂದ ಸಮಾಜದ ಏಳಿಗೆಗೆ ಘೋರವಾದ ಅಸ್ತ್ರಾಘಾತವು ಸಿಕ್ಕದಾಯಿತು. ತಾವು ಕುಳಿತಿರುವ ಮರವನ್ನೇ ಬ್ರಾಹ್ಮಣರು ಕಡಿದರು ಅವರ ಈ ಅಂಧಕಾರ್ಯವು ದೇಶದಲ್ಲಿ ಬಡತನವನ್ನು ತಂದಿತ್ತು, ನಮ್ಮನ್ನು ಗುಲಾಮರನ್ನಾಗಿ ಮಾಡಿತು ಅಂದು ಹಿಂದುಗಳ ಮೇಲೆ ಸಾಧಿಕಾರಿಗಳೆನ್ನುವರೆಯಲು ಆಸ್ಪದ, ಅದೇ ಮುಸಲ್ಮಾನರ ಮತ್ತು ಆಂಗ್ಲೇಯರ ಗುಲಾಮ ರಾದರು ಆದುದರಿಂದ ಅವರ ಈ ಯತ್ನವು ನಮ್ಮೆಲ್ಲರನ್ನು ಗುಲಾಮರನ್ನಾಗಿ ಮಾಡಿರು ವುದು ಬ್ರಾಹ್ಮಣರು ನಮ್ಮ ಗುರುಗಳು, ಆಕೆಯೂ ಅವರೂ ಕೂಡಿ ವಿದೇಶೀಯರ ಗುಲಾ ಮರು ಜಾತಿಯ ಭೇದದಿಂದ ನಮಗೆ ದೊರ ಕಿದ ಫಲವಿದು ನಮ್ಮನ್ನು ಹಾಳು ಮಾಡಿ ದುದು ಇಸ್ಲಾಂ ಅಲ್ಲ, ಆಂಗ್ಲೇಯರಲ್ಲ ನಮ್ಮ ವರೇ ನಮ್ಮ ಕೊರಳಿಗೆ ಕತ್ತಿಯಿಟ್ಟವರು ಬ್ರಾಹ್ಮಣರು ಮತ್ತು ಜಾತಿಯು ನಮ್ಮನ್ನು ಶಕ್ತಿಹೀನರನ್ನಾಗಿ ಮಾಡಿತು

ಈ ಜಾತಿ ಭೇದದ ಕಾಳ ಸರ್ಪನ ವಿಷಕ್ಕೆ ಸಿದ್ಧ ಭಾರತದ ವಾಙ್ಮಯದಲ್ಲಿಲ್ಲವಾದರೂ ಇದೆಯೇ? ಜಾತಿ ಭೇದಕ್ಕೆ ವಿರೋಧವಾಗಿ ಪ್ರಚಾರವನ್ನು ಮಾಡಿದ ಅನೇಕ ಮಂದಿ ವೈಷ್ಣವ ಗುರುಗಳು ನಮ್ಮಲ್ಲಿ ಆಗಿಹೋದರು ಆದರೆ ಅವರ ಕಾರ್ಯವು ಒಂದಿಷ್ಟು ಫಲಕಾರಿಯಾಗ ಲಿಲ್ಲವೆಂದೇ ಹೇಳಬೇಕು.

ಜಾತಿಯೆಂಬ ಈ ರಾಕ್ಷಸನನ್ನು ಕೊಲ್ಲಲು ಅಸಾಧಾರಣವಾದ ಶಕ್ತಿಯು ಬೇಕು ಅದನ್ನು ನಾವು ನಾಶಮಾಡಲೇ ಬೇಕು. ಇಲ್ಲದಿದ್ದರೆ ಅದು ನಮ್ಮನ್ನೆ ನಾಶಮಾಡದಿರದು. ಜಾತಿ ಭೇದವನ್ನು ಕಿತ್ತೊಗೆಯುತ್ತೇವೆಂದು ನಾವು ಪ್ರತಿಜ್ಞೆಯನ್ನು ಮಾಡಬೇಕಾಗಿದೆ ಹಿಂದು ಗಳಲ್ಲಿ ಐಕ್ಯವನ್ನೂ ಸಮಾನತೆಯನ್ನೂ ಸ್ಥಾಪಿ ಸುವುದೇ ನಮ್ಮ ಧ್ಯೇಯ, ಗುರಿಗಳಾಗಿರಬೇಕು ನಮಗೆ 4, 8, 2 ಜಾತಿಗಳೇ ಬೇಡ ನಾಲ್ಕು ಜಾತಿಗಳು, ಅವುಗಳ ಕರ್ತವ್ಯಾದಿಗಳ ಕುರಿತು ನಮಗೆ ಯಾರೂ ಬೋಧಿಸುವುದೇ ಬೇಡ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಈ ತಾರತಮ್ಯವೇ ನಮಗೆ ಅಗತ್ಯವಿಲ್ಲ ನಾವು ಮನುಷ್ಯರು ಮೊದಲು, ಹಿಂದುಗಳು ನಂತರ, ನಮಗೆ ಬೇಕಾದ ವೃತ್ತಿಯನ್ನು ಅನುಸರಿಸುವ ಸ್ವಾತಂತ್ರ್ಯವು ನಮಗಿರಬೇಕು ನಾವು ಭಾರತ ಮಾತೆಯ ಮಕ್ಕಳು

ಪ್ರಾಣಾಪಹಾರಕಾರಿಯಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನೆಂಬ ಈ ತಾರತಮ್ಯವು ನಾಶವಾಗಲಿ! ಭಾರತದ ಶಬ್ದಕೋಶದಲ್ಲಿ ಈ ನಾಲ್ಕು ಸಂಸ್ಕೃತ ಶಬ್ದಗಳೇ ಇರಬಾರದು ಅಸಮಾನತೆ, ಕಲಹ, ಅಶಕ್ತಿ, ಗುಲಾಮಗಿರಿಯ ಚಿಹ್ನೆಗಳಾಗಿರುವ ಈ ಜಾತಿಯೆಂಬ ರಾಕ್ಷಸನನ್ನು ದಫನಮಾಡಲು ರಜಪೂತಾನದಲ್ಲಿರುವ ಆಳ ಬಾವಿಗಳಿಗಿಂತಲೂ ಆಳವಾದ ಹೊಂಡವನ್ನು ನಾವಿಂದೇ ಅಗೆಯಬೇಕಾಗಿದೆ!

ಈ ರೀತಿ ಜಾತಿಭೇದದ ಕುರಿತು ಡಾ|| ಹರದಯಾಲ ಎಂಬವರು ಹಿಂದೂ ಔಟ್‌ಲುಕ್ ಎಂಬ ಪತ್ರಿಕೆಯಲ್ಲಿ ಬರೆದಿರುತ್ತಾರೆ

ನಾಗಪುರದಿಂದ ಪತ್ರಗಳು

ಮಧ್ಯಪ್ರಾಂತ್ಯದಲ್ಲಿ ಮಂತ್ರಿಮಂಡಲದ ಬದಲಾವಣೆಯುಂಟಾದುದು ಇಡೀ ದೇಶದ ಅದ್ಭುತ—ಅಚಿಂತ್ಯ ಎಂದೇ ಹೇಳಬೇಕಾಗಿದೆ. ಪತ್ರಿಕೆಗಳಲ್ಲಿ ಪ್ರಕಟವಾಗುವುದೆಲ್ಲ ಭ್ರಮೆಗೊಳಿಸುವುದಾಗಿದೆ ಕೆಲವು ಮುಖಂಡರಿಗಂತೂ ಇದೆಲ್ಲ ನಿರಂಕುಶ ಪ್ರಭುತ್ವದ ಕಾಂಗ್ರೆಸ್ ಕಾರ್ಯಕಾರೀ ಮಂಡಲದ ಅನ್ಯಾಯ, ಗಾಂಧಿಜಿಯವರು ಕೊಟ್ಟ ಸೂಚನೆಯಂತೆ ನಡೆಯಲು ಖಾರೆಯವರಿಗೆ ಅನುಕೂಲವಾಗಲಿಲ್ಲವಂತೆ ಎಂದರೆ ಅರ್ಥವೇನು? ಗಾಂಧಿಜಿಯವರು ಪಕ್ಷ ಕಟ್ಟಿಕೊಂಡಂತೆಯೂ, ದೇಶದ ಮಾತನ್ನು ವರ್ತಿಸುವದು ಕ್ರೂರ ಶಾಸಕತ್ವದಲ್ಲವೆ? ಎಂದವರು ಪ್ರಶ್ನಿಸುತ್ತಾರೆ.' ಇದು ಒಂದು ಪಕ್ಷದಿಂದ

'ಕಾಂಗ್ರೆಸಿನ ಕಾರ್ಯಕಾರೀ ಮಂಡಲವನ್ನು ದೂರ ಸರಿಸಲು ಸಮಾಜವಾದಿಗಳೂ ಇದ್ದು, ಪಾರ್ಲಿಮೆಂಟರಿ ಕ್ರಮ ಹೀಗಿಲ್ಲ ಇದೆಯೆ? ಎನ್ನುತ್ತಾರೆ. ಇತರರು ಉಪ್ಪೇಗಿ ಗಳು ಇತ್ತೀಚೆ ಪಾರ್ಲಿಮೆಂಟರಿ ಕ್ರಮ ಜ್ಯಾರಿಗೆ ಬಂದಿರುವುದೇ? ಎಂಬ ದನ್ನು ಮನಸ್ಸಿಗೆ ತಂದುಕೊಳ್ಳದೇ ಇಂಗ್ಲೆಂಡು ಫ್ರಾನ್ಸುಗಳಲ್ಲಿನ ಹಾಗೆ ಇಲ್ಲಿ ಪ್ರಜಾಪ್ರಭುತ್ವವಿದೆಯೆ? ಹೀಗಿರುವಾಗ, ಕಾಂಗ್ರೆಸಿನ ಉಚ್ಚ ಅಧಿಕಾರಿಗಳಾದರೂ, ಅರಿವರೆಂದೂ ನೋಡದೆ, ಸೂತ್ರ ಕ್ಕೂ ನ್ಯಾಯಕ್ಕೂ ತಕ್ಕಂತೆ ಯಾವ ಪಕ್ಷಕ್ಕೂ ಹೆದರದೆ ವರ್ತಿಸಿರುವುದು ಅನ್ಯಾಯವೆ? ಬೆಚ್ಚಗಿನ ತರ್ಕಕ್ಕಿಂತ ತೀರ್ಮಾನವೇ ಈಗ ಸಮಯೋಚಿತ ಟಪ್ಪನೆ ಅಪ್ಪಣೆ ಕೊಡುವುದೇ ಕರ್ತವ್ಯ — ಹೀಗೆ ಮತ್ತೊಂದು ಪಕ್ಷ

'ಅಕ್ಷಮ್ಯ ಪೆರಿಯ ವುದಕ್ಕೆಂದೇ ಕಾಂಗ್ರೆಸು ಅಧಿಕಾರ ಸ್ವೀಕರಿಸಿಯದೆ ಇದನ್ನು ಮರೆಯ ಬಾರದು ಹಾಗೆ ಅಧಿಕಾರ ಸ್ವೀಕರಿ ಸುವಾಗ ಯಾವ ಸೂತ್ರಗಳನ್ನು ಮಾಡಿದ್ದಿಲ್ಲವೋ ಗಿತ್ತೋ ಅವನ್ನು ಮೀರಬಾರದು. ಅಧಿಕಾರವನ್ನು ಅವರ ವಿನಿಯೋಗವಾಗುವಾಗ ಮೊಲ್ಲನೆ ಅದರ ಸವಿ ಹಿಡಿದ, ಅದನ್ನೆ ಕಾ ಪಿಡಿಸಿಕೊಳ್ಳ ಬೇಕೆಂಬ ಆಸೆ ಹೆಚ್ಚಾಗ, ಸಂ ತತ್ವಗಳು ಮರೆತುಹೋಗದಂತೆ, ಕಾರ್ಯ ಮಂಡಲವು ವಿಮರ್ಶಿಸುತ್ತದೆ ಕ್ಷಿಪ್ರನೋ! ಹೀಗೆ ಇನ್ನೊಂದು ಪಕ್ಷ

'ಕಾರ್ಯಕಾರೀ ಮಂಡಲವಿಲ್ಲದಿದ್ದ ಕಾಂಗ್ರೆಸಿನ ಗತಿಯಲ್ಲಿ ಆಳಿಯುತ್ತಿತ್ತೆ ಅತ್ತ ಸರ್ ಫ್ರಾನ್ಸಿಸ್ ವಾಯ್ಲಿಗಳೂ ಡಾ|| ಖಾರೆಗಳು ಸೇರಿ ಕಾಂಗ್ರೆಸಿನಲ್ಲಿ ಹಾಸ್ಯವನ್ನುಂಟುಮಾಡುತ್ತಿದ್ದರು ಗವರ್ನರು ಒಂದು ಇಡೀ ರಾತ್ರಿ ಆಲೋಚನೆ ಮಾಡದೆ ನಿದ್ದೆ ಹೋಗದಿದ್ದರಂತೆ! ವಿರೋಧಿಗಳನ್ನು ಕೈಗೆ ತೆಗೆದುಕೊಳ್ಳಬಹುದೋ ಎಂದೇ ಅವರ ಆ ಶಯವಾಗಿದ್ದಿರಬೇಕು. ಈಗ ನೋಡಬೇಕಾದ್ದು ಯಾರನ್ನು ಅವರು ಮಂತ್ರಿಪದವಿಯಿಂದ ಡಿಸ್‌ಮಿಸ್ ಮಾಡಿದ್ದರೋ ಅವರನ್ನೇ ಸೇರಿ ಬೇಕಾಗಿ ಬರುವಂತೆ ಕಾಂಗ್ರೆಸ್ ಕಾರ್ಯಕಾರಿ ಗಳು 'ಆದೇಶಿಸಿದರಲ್ಲವೆ?' ಮಂತ್ರಿಯವರ ದನೆಯು ರಾಜೀನಾಮೆಯನ್ನು ಅಂಗೀಕರಿಸ ಗವರ್ನರು ವಿಳಂಬಿಸಿದರೇ ಇಲ್ಲವೆ? 'ಪ್ರಾಂ ಅಧಿಕಾರ' ಎಂಬುದರ ಸತ್ವ ಪರೀಕ್ಷೆಯ ದಿನ'—ಎಂದು ಪತ್ರಿಕೆಯವರ ತೀವ್ರ ಚರ್ಚೆ

'ಶಿರೀಷ ಪ್ರಸಂಗದಲ್ಲಿ ಖಾರೆಯು ಗುಟ್ಟು ಹೇಳಬಿದ್ದದೆ 'ಮಹಾಕೋಶ ಮಂತ್ರಿಗಳು ಹಿಂದೆ ರಾಜೀನಾಮೆ ಕೊಟ್ಟ ಇವರೇನು ಮಾಡಿದರಂತೆ? ಕಾಂಗ್ರೆಸಿನ ಕಾ ಕಾರೀ ಮಂಡಲದ ಅನುಜ್ಞೆ ಕಾಯುತ್ತಿ ಲ್ಲವೆ? ಆಗಲೆ ಇವರ ಸತ್ಯವೆಷ್ಟೆಂದು ತಿಳಿ ಬಂತು ಅನಂತರ, ಈಗ ನಾಕ್ರ ಕಾರ್ಯಕಾರಿ ಮಂಡಲದ ತೀರ್ಮಾನವು ಸರಿ ಗಿಲ್ಲವೆ? ಆಗಾ ಹಾಕಿ ಬೆನ್ನು ಹುಳುಕಿ ವನು ಪುನಃ 'ಪಕ್ಷಿ' ಆಗ ಹಾಕಿದರೆ ಉಳ ನಾಶಿಯಾಗುವುದೇನು?'—ಹೀಗೂ ಅಭಿಪ್ರಾ ಪ್ರಕಟವಾಗಿದೆ.

'ಈ ಮರಾಠಿ ಹಿಂದೀ ವಾದದ ರ ಭೂಮಿಯಲ್ಲಿ, ಮಂತ್ರಿಯವರು ಮ.ಹಾ ರಾಗದೆ, ಎಂದೂ ಶಾಂತಿಯು ಆ ಪ್ರಾಂತ್ಯ ನೆಲೆ ನಿಲ್ಲದು. ಪ್ರತಿದಿನ ಜಗಳಾಟ ದೇಶದರದು' ಇದು ಭವಿಷ್ಯ.

ಊಟದ ನಂತರ ನೋವು ಉಂಟಾಗುವುದನ್ನು ತಡೆಯಿರಿ

ತಲೆ ತಿರುಗುವುದು, ಗಂಟಲಲ್ಲಿ ಉರಿತ, ವಾಯು ಇತ್ಯಾದಿ ಹೊಟ್ಟೆನೋವು, ಉದರಪೀಡೆಗಳುಂಟಾಗುವುದು ಊಟ ವಾದ ನಂತರ

ಈ ತರದ ಸಂಕಟಗಳುಂಟಾಗುವುದು ಹಾಳು ಹೊಟ್ಟೆಯಿಂದ ನಿಮ್ಮ ಹೊಟ್ಟೆಯನ್ನು ಸುಖವಾದ ರೀತಿಯಲ್ಲಿ ನಿರ್ಮಲಗೊ ಳಿಸುವ ಒಂದೇ ಒಂದು ಉಪಾಯವೆಂದರೆ, ಇನೋಸ್ 'ಫ್ರುಟ್ ಸಾಲ್ಟ್'ನ Eno's 'Fruit Salt' ಒಂದು ಗ್ಲಾಸನ್ನು ಕುಡಿ ಯುವುದು ಊಟವನ್ನು ರುಚಿಸಲು, ಇನೋಸ್ ಅನುಕೂಲ ಮಾಡಿಕೊಡುವುದು.

ಜಗತ್ತಿನ ಎಲ್ಲಾ ವೈದ್ಯರಿಂದ ಶಿಫಾರಸು ಮಾಡಲ್ಪಟ್ಟ, ಉತ್ತಮ ಪರಿಪಕ್ವವಾದ ಹಣ್ಣಿನಲ್ಲಿರುವ ಉತ್ತಮ ಗುಣಗಳಿರುವ ಪದಾರ್ಥಗಳು ಇನೋಸ್ ಫ್ರುಟ್ ಸಾಲ್ಟ್ Eno's Fruit Salt ನಲ್ಲಿವೆ ಇನೋ ಸೇವನೆಯಿಂದ ಖರ್ಚು ಕಡಿಮೆ. ಎಲ್ಲಾ ಕಡೆಗಳಲ್ಲಿ ಮೂರು ಪರಿಮಾಣದಲ್ಲಿ ಮಾರಾಟವಾಗುತ್ತದೆ.

ನಕಲಿ ಪದಾರ್ಥಗಳನ್ನು ತಡೆಯಬೇಕಾದ್ದು ಖಾತ್ರಿಯಾದ ಫ್ರುಟ್ ಸಾಲ್ಟ್ ಬಾಟ್ಲಿ ಎಲ್ಲಿ ಮಾರಲ್ಪಡುತ್ತದೆ ಅವಶ್ಯವಾಗಿ ಪಿಕಿಂಗ್ ಮಾತ್ರ ಶ್ರೇಷ್ಠ ವೆಂಬುದೆಂದು ನಮ್ಮ 70 ವರ್ಷದ ಅನುಭವ ಸಿದ್ಧಾಂತವಾಗಿರುತ್ತದೆ.

E V K 5

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ|| ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ, ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು 'ಗೊನೋಕಿಲರ್' ಇರುವುದು ಎಂಬುದನ್ನು ನೋಡಿರಿ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ದಾಹವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವುದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಛಾರ್ಜ್ 8 ಆಣೆ ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N JASANI**, Vithalbhai Patal Road, BOMBAY 4

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ನಾಲ್ಕೂ ಮೂಲೆಗಳಿಂದ

ಲಕ್ನೋ:—ನೆರೆಹಾವಳಿಯ ಫಲವಾಗಿ ಸಂಯುಕ್ತ ಪ್ರಾಂತ್ಯದಲ್ಲಿ 177600 ಜನರು ನಿರಾಶ್ರಿತರಾಗಿದ್ದಾರೆ.

ಕಾನ್ಪುರ:—ಮಳೆ ಸುರಿದು (9 ಇಂಚು) ಗಂಗಾನದಿ ಏರಿದೆ. ಮನೆಗಳ್ ಬಿದ್ದವೆ; ಮಡಿದವರು ಹಲವರು.

ರಂಗೂನ್:—ಹಿಂದೂ ಮುಸ್ಲಿಮರೊಳಗೆ ದಂಗೆಯಾಯ್ತೆಂದು ಸುಳ್ಳು ಸುದ್ದಿ ಹರಡಿಸಿದ ಮಹಮ್ಮದ ಇಸಾಕನಿಗೆ ಒಂದೂವರೆ ತಿಂಗಳು ಜೈಲಿನಲ್ಲೇ ಸುದ್ದಿಯಿಲ್ಲದಿರಲು ಅವಕಾಶ ಕೊಡಲಾಗಿದೆ.

ಪಾಟ್ನಾ:—ಇಲ್ಲಿನ ಮ್ಯುನಿಸಿಪಾಲಿಟಿಗೆ ಅಧ್ಯಕ್ಷರನ್ನಾಗಿ ಶ್ರೀ ಭೂಪನಾರಾಯಣ ಥೋಲಿಯವರನ್ನು ಆರಿಸಲಾಗಿದೆ. ಮೊದಲನೆ ಹರಿಜನರ ಚಯರ್ಮೇನರಿವರು.

ಢಾಕ್ಕಾ:—ನೆರೆಯ ಹಾವಳಿಯಿಂದ, 1931ರಿಂದೀಚೆಗೆ ಎರಡನ್ನೆತ್ತರ ನೀರೇರಿ, ರೈಲ್ವೆ ಮತ್ತು ಮನೆಗಳು, ರಸ್ತೆಗಳು ಸಹ ನೀರಿನಲ್ಲಿ ಅದ್ದಿವೆ.

ವಾರ್ಧಾ:—ಕಾಂಗ್ರೆಸ್ ಕಾರ್ಯಕಾರೀಮಂಡಲದ ನಿರ್ಣಯ ತಿಳಿಸುವ ಸಭೆ: ಖಾರೇ ಪಕ್ಷ ಎದ್ದಿತು: ಮಹಾತ್ಮಾಜೀಯವರನ್ನೂ ದೋಷಯುಕ್ತರನ್ನಾಗಿ ಮಾಡಿದೂರಿದರು.

ಸಿಮ್ಲಾ:—ಹಿಂದೀ ವಿಮಾನ ಸಂಚಾರದ ಸಂಸ್ಥೆಗೆ ಹಿಂದೀಯರೂ ಪಾಲುಗಾರರಾಗಬಹುದಂತೆ! ಚೋದ್ಯವಲ್ಲವೆ?

ಕುಂಭಕೋಣ:—ಸನಾತನಿಗಳ ಪ್ರತಿಷ್ಠೆಯ ನಾಯಕನು-ಎಲ್ಲಿ ಕೇಳಿದರೂ ಹರಿಜನರು ದೇವಸ್ಥಾನ ಪ್ರವೇಶ ತಮಗೆ ಬೇಡವೆನ್ನುತ್ತಾರೆಂದು ಭಾಷಣದಲ್ಲಿ ತಿಳಿಸಿರುವನು!

ತಿರುವಾಂಕೂರು:—ಮದ್ಯಪಾನ ನಿವಾರಣೆಯನ್ನು ಸರಕಾರವು ಮೆ-ಲ್ಲ-ನೆ ಪ್ರಾರಂಭಿಸುವುದು ಎಂದು ಸರಕಾರದ ಹೇಳಿಕೆ.

ಬೆಂಗಳೂರು:—ರೇಷ್ಮೆ ಕೈಗಾರಿಕೆಯಲ್ಲಿ ಚರ್ಕಕ್ಕೆ ಸ್ಥಾನವಿಲ್ಲೆಂದು ಮೈಸೂರು ರೇಷ್ಮೆ ವರ್ತಕರ ಹೇಳಿ.

ಕರಾಚಿ:—ಸಿಂಧದಲ್ಲಿ ಕಾಂಗ್ರೆಸ್ ಇತರ ಪಕ್ಷ ಸೇರಿ ಮಂತ್ರಿಕೂಟ ರಚಿಸುವುದು. ಸರಿಯಲ್ಲವೆಂದರು.

ಹೈದ್ರಾಬಾದು:—ವಕೀಲ ಸಭೆಯ ಅಧ್ಯಕ್ಷರೂ ಇವಲ್ಲರು ಹಿಂದೂ ಮೆಂಬರ್ರೂ, ಶ್ರೀ ಭೂಲಾಭಾಯಿಯವರಿಗೆ ಅಲ್ಲಿ ಭಾಷಣ ಮಾಡಲು ಸರಕಾರವು ತಡೆದ ವಿಚಾರ ವಿಮರ್ಶಿಸಿ ರಾಜೀನಾಮೆ ಕೊಟ್ಟರು.

ನೆಲ್ಲೂರು:—ಪೋಲೀಸ್ ಸಹಕಾರೀ ಸಂಘದ ಖಜಾನೆಯಿಂದ 2200 ರೂಪಾಯಿ ಕಳವು ಆದ ಸಂದರ್ಭದಲ್ಲಿ ಒಬ್ಬ ಅಕ್ಕಸಾಲೆಯನ್ನೂ ಅವನ ಹೇಳಿಕೆಯಂತೆ ಒಬ್ಬ ಪೋಲೀಸ್ ಕಾನ್ಸಟೇಬಲನನ್ನೂ ಕೈದುಮಾಡಿರುವರು.

ಜಲಂಧರ:—ಚೌದರಿ ಶೇರ್ ಗಂಜನು ಪಿತೂರಿಮೊಕದ್ದಮೆಯಲ್ಲಿ ಸೇರಿದವನು. ಕೂಡಲೆ ಪಂಜಾಬನ್ನು ಗಡಿದಾಟಿ ರೈಲು ಹತ್ತಿ ಸ್ವಸ್ಥಾನಕ್ಕೆ ತೆರಳುವಂತೆ ಸರಕಾರವು ಅವನನ್ನು ರೈಲು ಹತ್ತಿಸಿ ಸ್ವಸ್ಥವಾಯಿತು. . . .

ಪೇಶಾವರ:—ಡಾ। ಖಾನ್ ಸಾಹಿಬರು ಬನ್ನುಶಹರಿಗೆ ಹೋಗಿರುವರು. ಹಿಂದುಗಳನ್ನು ಅಲ್ಲಿಂದ ಕದ್ದೊಯ್ಯುತ್ತಾರೆಂಬ ದೂರು ಬಹಳ. ಅದರ ವಿಚಾರಕ್ಕಾಗಿ ಮಂತ್ರೀಶ್ವರರ ಖುದ್ದು ಸವಾರಿ.

ನವಶೇರ:—ಬಾಯಮ್ಮ ಸರಹದ್ದಿನಲ್ಲಿ ಸಂಕಗಳನ್ನು ದಾಟುವರು ಸುಂಕ ತೆರಬೇಕು. ಅದಕ್ಕೆ ವಿರುದ್ಧವಾಗಿ ರೈತರು ಸತ್ಯಾಗ್ರಹ ಮಾಡಿರುವರು.

ಅಲ್ಲಹಾಬಾದು:—ಆಗೋಸ್ತು ತಾ. 1ರಿಂದ ಸರಕಾರೀ ಛಾಪಖಾನೆಯ ಕೆಲಸ ಅರೆ ತಾಸು ಕಡಮೆ ಮಾಡಲಾಗಿದೆ.

ಮದ್ರಾಸು:—ವಿಶ್ವಕರ್ಮರು ಇನ್ನು ಪುನಃ ವಿಶ್ವಬ್ರಾಹ್ಮಣರೆಂದೇ ಬರೆಯಬಹುದಾಗಿ ಸರಕಾರದ ಅಪ್ಪಣೆ ಹೊರಡಲಿಕ್ಕಿದೆ.

ಕಡಪ:—ಮದ್ಯಪಾನ ನಿವಾರಣೆಗೆ ಜನರೂ ಮಿಶ್ನರಿಗಳೂ ಬಹಳ ಸಂಭ್ರಮದಿಂದ ಕೆಲಸ ಮಾಡುತ್ತಾರೆ.

ಮೈಸೂರು:—ಕ್ಷೌರಿಕರ ಸತ್ಯಾಗ್ರಹ ಮುಗಿಯಿತು. ಇಷ್ಟರಲ್ಲಿ 'ಸೇಫ್ಟಿ ರೇಜರು'ಗಳು ಎಷ್ಟು ಸಾವಿರ ಮಾರಾಟವಾದುವು?

ಮದನಪಳ್ಳಿ:—ಮದ್ಯಪಾನ ನಿವಾರಣೆಗೆ ಮಹೂರ್ತ: ಅಕ್ಟೋಬರ ಮೊದಲನೆ ಭಾನುವಾರ ಆ ದಿನ ಆಚರಣೆ.

ಪಾಲ್ಘಾಟು:—ಪಂತಕ್ಕಾಗಿ ಇಡೀ ದೋಸೆ ಒಂದೇ ಬಾರಿ ನುಂಗ ತೊಡಗಿ, ದೋಸೆ ಗಂಟಲು ಕಟ್ಟಿ, ಒಂದೇ ಉಸಿರಲ್ಲಿ ಗೋವಿಂದ ಯೇಸುದಾಸನ್, — ಗೋವಿಂದಾ!

ಮದ್ರಾಸು:—ಗವರ್ನಮೆಂಟ್ ಸೆನಿಟರಿ ಇಂಜನಿಯರ್ ಶ್ರೀ ಜಿ. ವಿ. ರಾವ್‌ರವರ ಮೇಲೆ ಹಲವು ಅಪಾದನೆಗಳು ಇರುವ ಕಾರಣ, ಅವರನ್ನೀಗ ಸಸ್ಪೆಂಡ್ ಮಾಡಲಾಗಿದೆ.

ಸಿಮ್ಲಾ:—ಬ್ರಿಟಿಷರೊಡನೆ ಹಿಂದೀವಾಣಿಜ್ಯ ಸಂಬಂಧವಾದ ಕರಾರು ಸದ್ಯದಲ್ಲೇ ಇತ್ಯರ್ಥವಾಗುವುದು.

ಕಲ್ಕತ್ತ:—ಬಂಗಾಳಿಯೊಬ್ಬನು ಜರ್ಮನ್ ಹೆಂಡತಿ ಮಾಡಿಕೊಂಡಿದ್ದನು. ರಜಿಸ್ಟರಾಗುವಾಗ ಆಕೆ ಮತ ತಿಳಿಸಿಲ್ಲ. ವಿವಾಹ ರದ್ದಾಯಿತು.

ಬೊಂಬಾಯಿ:—ಹಿಂದೂ ಮಹಾಸಭೆಯು ಕಾಂಗ್ರೆಸಿನೊಡನೆ ದ್ವಂದ್ವಮಾಡುತ್ತಿರುವುದು ಅಪರಾಧವೆಂದು ಡಾ। ಕುರ್ತಕೋಟಿಯವರು ಸೂಚಿಸಿದ್ದಾರೆ.

ಚಿತ್ತೂರು:—ನಿದ್ರಾಬಾಧೆಗೊಳಗಾದ ಡ್ರೈವರನಿಂದ ಮೋಟಾರುಲಾರಿ ಓಡಿಸಿದರ ಫಲವಾಗಿ ಪ್ರಯಾಣಿಕನೊಬ್ಬನು ಸತ್ತನು. ವಿಚಾರಣೆಯಲ್ಲಿ ಅವನ ತಪ್ಪು ಕಡಮೆಯೆಂದಾಯಿತು, ಒಂದು ವರ್ಷ ದಂಡನೆ ಎರಡು ತಿಂಗಳು ಇಳಿಸಲಾಗಿದೆ. ಡ್ರೈವರನನ್ನು ಅಪ್ಪಣೆಕೊಟ್ಟು ಹೊರಡಿಸಿದ ಮಾಲೀಕನಿಗೆ ಯಾವ ದಂಡನೆಯೂ ಆಗಿಲ್ಲವಲ್ಲ.

ವಿರುಧುನಗರ:—ಎರಡು ಪಕ್ಷಗಳಲ್ಲಿ (ನಳ್ಳರ ಜಾತಿ) ವಿರುದ್ಧವಾಗಿ ದಂಗೆ: ಮೂವರಿಗೆ ಗಾಯ: ಆಸ್ಪತ್ರೆಯಲ್ಲಿದ್ದಾರೆ.

ಖುಗುಟೆ:—ಇಲ್ಲಿನ ರಾಜಕುಮಾರನನ್ನು ಜೈಲಿನಲ್ಲಿಟ್ಟಿರುವರು. ಅವರನ್ನು ಹಾಗೆ ಬಂಧಿಸುವುದಿಲ್ಲವಾಗಿ ಭರವಸೆ ಕೊಟ್ಟು ಕರೆಕರಿಸಿದ್ದರಂತೆ.

ಕುಂಭಕೋಣ:—ದಾರಿಯಲ್ಲಿ ಹಣ ಚೆಲ್ಲುತ್ತ ಒಬ್ಬ ಹುಡುಗಿ ಹೋದಳು. ಜನರ ಗಳಿಗೆ ಹೆಚ್ಚಿತು. ಪೋಲೀಸರ ಹುಡುಗಿ (ಕೃಷ್ಣಮ್ಮ, 20 ವರ್ಷ)ಯನ್ನು ಕೈದುಮಾಡಿದರು; ಶ್ರೀಮಂತರಿಂದ ಹಣ ಬೇಡಿ ತಂದು, ಕೆಲವನ್ನು ಹೀಗೆ ಚೆಲ್ಲಿ ಹಲವನ್ನು ತಾನುಪಯೋಗಿಸುವ ಕಳ್ಳ ಮಂತ್ರವಾದಿಯಂತೆ.

ಜನವರಿ ತಿಂಗಳವರೆಗೂ

ಪ್ರತಿವಾರವೂ 400 ರೂಪಾಯಿಗಳು ಬಹುಮಾನ

ಈಗಲೇ ನಂಬರನ್ನುಳ್ಳ ರ್‍ಯಾಪರುಗಳನ್ನು ಶೇಖರಿಸುವುದಕ್ಕೆ ಪ್ರಾರಂಭಿಸಿರಿ!



ಕಳೆದವಾರ ಬಹುಮಾನ ಪಡೆದವರು.

ಬೊಂಬಾಯಿ ಪ್ರಾಂತ್ಯ: ಮಿಸ್. ಲಿಲ್ಲಿ ಡಿಕೊಬ್ಬ 2ನೇ ಪಿರಿ ಖಾನ್ ರಸ್ತೆ, ಹೊಸ ನಾಗ್ ಪಾಡಾ ಬೊಂಬಾಯಿ 9. ಕರಾಚಿ ಪ್ರಾಂತ್ಯ: ಮಿ. ಜಂಗಲಾಲ್, C/o ಮಿ. ಜಗನ್ನಾಥ್ ಹೀರಾಲಾಲ್, ಜಮ್ಮು. ಮದ್ರಾಸು ಪ್ರಾಂತ್ಯ: ಮಿ. ಎ. ಅಬ್ದುಲ್ ಖಾದೀರ್ 46 ಹೊಸ ಮಾರ್ಕೆಟು ಬೌಕ್, ಬೆಂಗಳೂರು ಸಿಟಿ. ಕಲ್ಕತ್ತ ಪ್ರಾಂತ್ಯ: ಮಿ. ಎಲ್. ಮೋತಿಲಾಲ್ ಗೋಯಾಲ್, ಅಜುರ್ ಮಾರ್ಕೆಟಿನ ಒಳಗಡೆ ಜೋಹರಿ ಬಜಾರ್, ಆಗ್ರಾ.

ಲಕ್ಸ್ ಟಾಯಿಲೆಟ್ ಸಾಬೂನು

ಇಂಡಿಯಾದಲ್ಲೇ ಸಕ್ಕಗಾ ಶೋಧಿಸಿದ ಎಣ್ಣೆಯಿಂದಲೇ ತಯಾರಿಸಿದ್ದು.

X-LTS 347-33 LEVER BROTHERS (INDIA) LIMITED

ಅಮೃತ

ರಕ್ತಶುದ್ಧಿ ದ್ರಾವಕ

ಇದು ರಕ್ತಹೀನತೆ ಮಲಬದ್ಧತೆ, ಅಜೀರ್ಣ, ಕೀಲುನೋವು, ಸೋಮಾರಿತನ
ಮೇಹ ವ್ರಣಗಳು, ಸುಖ ಸಂಕಟಗಳು, ನಿಶ್ಶಕ್ತಿ. ಹೊಟ್ಟೆಯುಲ್ಲಿ ಉರಿ
ಮುಂತಾದ ವ್ಯಾಧಿಗಳನ್ನು ನಿವಾರಿಸಿ ಶರೀರಕ್ಕೆ ಕಾಂತಿಯನ್ನೂ
ಮುಖಕ್ಕೆ ತೇಜಸ್ಸನ್ನೂ ಉಂಟುಮಾಡುತ್ತದೆ. ಈ ಉತ್ತಮ
ವಾದ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿರುತ್ತಾರೆ

ಅರ್ಕ

ಸರ್ವ ಜ್ವರ ನಿವಾರಿಣಿ

ಆಹಾರ, ವಿಹಾರ, ಋತು ಭೇದ ದೋಷಗಳಿಂದ ಅನ್ನಾಶಯದಲ್ಲಿ ಕ್ರಿಮಿಕೀಟಗಳು ಸೇರಿ, ಹಲವು ವಿಧವಾದ ಜ್ವರಗಳು ಸಂಭವಿಸುತ್ತಿವೆ. ವಾತ ಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಜ್ವರಗಳು, ಹೊಟ್ಟೆಯಲ್ಲಿ ಪ್ಲೀಹವೆಂಬ ಜ್ವರದ ಗಡ್ಡೆ ಇವುಗಳನ್ನು ನಿವಾರಿಸುತ್ತದೆ. ಈ ಔಷಧವನ್ನು ಚಿಕ್ಕ ಮಕ್ಕಳಿಗೂ ಸಹ ಕೊಡಬಹುದು.

ಕೇಸರಿ ಕುಟೀರಂ, ಮದ್ರಾಸು.

Buy Advertised Goods



ಟೀ ಮೂಲಕ ವಿಶ್ರಾಂತಿ ಹೊಂದಿರಿ

ಪೂರ್ಣವಿಶ್ರಾಂತಿ ಎಂದರೆ ಏನು. ದೇಹವನ್ನು ಸಡಿಲವಾಗಿ ಬಿಟ್ಟು ಮನಸ್ಸು ಸ್ಥಿರತೆಯಲ್ಲಿರಬೇಕು. ಇಂತಹ ಸ್ಥಿತಿಯನ್ನು ಹೊಂದಲು ನಾವು ಹೇಳುವ ಮಾರ್ಗವನ್ನು ಅನುಸರಿಸಿರಿ. ನೆಮ್ಮದಿಯಾಗಿ ಕುಳಿತು ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿಯಿರಿ. ಅದು ಕೂಡಲೆ ನರಗಳಿಗೆ ಶಕ್ತಿಯನ್ನು ಕೊಟ್ಟು ಚಂಚಲವಾದ ಮನಸ್ಸನ್ನು ಸ್ಥಿರತೆಗೆ ತಂದು ನಿಲ್ಲಿಸುವುದು. ಟೀ ಕುಡಿದು ವಿಶ್ರಾಂತಿ ಹೊಂದಿರಿ.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿ. ಶುಚಿಯಾಗಿರುವ (ಪಿಂಗಾಣಿ) ಮಣ್ಣಿನ ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗೆ ಒಂದು ಚಮಚ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ.

ಇಂಡಿಯದ ಆನಂದ ಮತ್ತು ಹೆಮ್ಮೆಯ ನೆಲೆ ಇಂಡಿಯದ ಟೀ

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್ಶನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು IK 108 S

ಮಾತಾಡುವ ಅಂಕಿ-ಸಂಖ್ಯೆಗಳು

ಜಪಾನು ತನ್ನ ಭಂಡಾರದೊಳಗಣ 48 ಮಿಲ್ಲಿಯ ಪವನಿನಲ್ಲಿ, ಈಗಲೆ 17½ ಮಿಲ್ಲಿಯ ಪವನನ್ನು ಖರ್ಚಿಗೆ ಹೊರತೆಗೆಯಬೇಕಾಗಿ ಬಂದಿದ್ದೆ. ಇದರಿಂದ ಬೇಕಾದ ಕಚ್ಚಾಸಾಮಾನುಗಳನ್ನು ಕ್ರಯಕ್ಕೆ ಕೊಂಡುಕೊಳ್ಳುವುದು.

⊙ ⊙ ⊙ ⊙

48 ಮಿಲಿಯ ಕ್ರೌನ್ ಬೆಲೆಯ ಸರಕನ್ನು ಒಂದೇ ತಿಂಗಳಲ್ಲಿ ಝೆಕ್ಕರು ಚೀನಕ್ಕೆ ಮಾರಿದರು. ಹಿಂದಣ ವರ್ಷ ಈ ತಿಂಗಳಲ್ಲಿ 17 ಮಿಲಿಯ ಕ್ರೌನ್‌ನಷ್ಟೆ ಸರಕನ್ನು ಮಾರಿದ್ದಿತು.

⊙ ⊙ ⊙ ⊙

ಪೋಲೆಂಡಿನ ವ್ಯಾಪಾರವು, ಒಂದೇ ತಿಂಗಳಲ್ಲಿ 98 ಮಿಲ್ಲಿಯ ನಾಣ್ಯದಷ್ಟು ಆಮದೂ, 87 ಮಿಲ್ಲಿಯ ನಾಣ್ಯದಷ್ಟು ರಫ್ತೂ ಆಗಿದ್ದಿತು. ಕಳೆದ ವರ್ಷ ಇದೇ ತಿಂಗಳಲ್ಲಿ ಆಮದು ರಫ್ತುಗಳೂ 112 ಮತ್ತು 95 ಮಿಲ್ಲಿಯ ನಾಣ್ಯದಷ್ಟು ಬೆಲೆಯದಾಗಿದ್ದುವು.

⊙ ⊙ ⊙ ⊙

20000 ಟನ್ ಹಳೆಯ ಕಬ್ಬಿಣವನ್ನು ಬ್ರಿಟನ್ನು ಜರ್ಮನಿಗೆ ಮಾರಿರುವುದನ್ನು ಜರ್ಮನ್ ಪತ್ರಿಕೆಗಳು ಪ್ರಕಟಿಸಿವೆ. ಹಳೆಯ ಕಬ್ಬಿಣವನ್ನು (ಹಡಗು ಮೊದಲಾದುವನ್ನು ಕುಂದರಿಸಿ ದೊರೆಕುದು) ರಫ್ತುಮಾಡಬಾರದಾಗಿ ಮೊನ್ನೆಯ ವರೆಗೆ ಅಪ್ಪಣೆಯಿತ್ತು. ಇಂಗ್ಲೆಂಡು ಈ ಅಪ್ಪಣೆ ರದ್ದು ಮಾಡಿದ್ದುದ್ದೆ, ಈಗ ಇಷ್ಟು ದೊಡ್ಡ ರಾಶಿ ಇಷ್ಟರಲ್ಲೇ ರಫ್ತಾಯಿತು.

⊙ ⊙ ⊙ ⊙

ಇನ್ಕಮ್‌ಟ್ಯಾಕ್ಸನ್ನು ಮಾಫಿ ಮಾಡಿಕೊಳ್ಳುವ ಹಾಗೆ, ನಾಡುಗಳಿಗೆ ಹಲವು ಬಹು ನಷ್ಟ ಹೊಂದಿರುವ ವ್ಯಾಪಾರಿ ಸಂಘಗಳು ಸಹಾಯ ದ್ರವ್ಯವನ್ನು ಕೊಡುತ್ತಲಿವೆ. ಹಂಟ್ಲೆ ಕಂಪೆನಿಯು ನಾರ್ಥ್ ಮಾ ಖಂಡನೊಬ್ಬನಿಗೆ ಒಂದು ನೋಟನ್ನು ಕೊಟ್ಟಿತು. ಮ್ಯುನಿಸಿಪಾಲಿಟಿಗೆ ಎರಡು ಮಿಲ್ಲಿಯ ಮಾರ್ಕು(ನಾಣ್ಯ)ಗಳನ್ನು ಎಸ್ ಮತ್ತು ಆತನ ಸ್ನೇಹಿತನಿಗೆಂದು 660000 ಮಾರ್ಕುಗಳನ್ನೂ ಕೊಟ್ಟಿತು.

⊙ ⊙ ⊙ ⊙

ಜರ್ಮನಿಯ ಪರದೇಶ ವ್ಯಾಪಾರವು 517ರಿಂದ 485 ಮಿಲ್ಲಿಯ ಮಾರ್ಕಿನ ಆಮದಿಗೂ, 465ರಿಂದ 485 ಮಿಲ್ಲಿಯ ಮಾರ್ಕಿನ ರಫ್ತಿಗೂ ಇದೇ ತಿಂಗಳಲ್ಲಿ ಕುಂದಿತು. ಪರಪ್ರಾಂತ್ಯಗಳಿಗೆ ಸಲ್ಲಬೇಕಾಗಿರುವ ಹಣದ ಮೊಬಲಗು ಹೆಚ್ಚಿದೆ.

⊙ ⊙ ⊙ ⊙

ಕಸ್ಟಮ್ಸ್ ಸುಂಕದಿಂದ ದಕ್ಷಿಣಾಫ್ರಿಕಕ್ಕೆ ಮೂರು ತಿಂಗಳಲ್ಲಿ ಬರೀ 2¾ ಮಿಲ್ಲಿಯ ಪವನು ದೊರೆತಿದೆ; ಕಳೆದ ವರ್ಷ ಇದೇ ಮೂರು ತಿಂಗಳಲ್ಲಿ ಇದು 3¼ ಮಿಲ್ಲಿಯವಾಗಿತ್ತು. ಸರಕಾರದ ಎಲ್ಲ ಆದಾಯವೂ 7¼ ಮಿಲಿಯ ಪವನಿಂದ 7 ಮಿಲಿಯಕ್ಕೂ ಕಡಮೆಯಾಗಿಳಿದಿದೆ. ಖರ್ಚು 9½ ಮಿಲಿಯ ಪವನು ಕಳೆದ ವರ್ಷ; ಈ ವರ್ಷ ಅದೇ ಕಾಲದಲ್ಲಿ 10¼ ಮಿಲಿಯ ಪವನಾಗಿದೆ.

⊙ ⊙ ⊙ ⊙

ಬ್ರಿಟನಿಗೂ ರಷ್ಯಕ್ಕೂ ನಡೆದ ವ್ಯಾಪಾರವು ಈ ವರ್ಷ ಚೆನ್ನಾಗಿ ಬೆಳೆದಿದೆ. ರಫ್ತುಗಳು 2½ ಮಿಲಿಯ ಪವನು ಬೆಲೆಯವು. ಆಮದುಗಳು ಬರೀ 66000 ಪವನು ಬೆಲೆಯವು.

⊙ ⊙ ⊙ ⊙

ಬ್ರಿಟಿಷ ಸರಕಾರವು ಬ್ರಿಟಿಷ್ ಕೈಗಾರಿಕೆಗಳಿಗೆ ಕೊಡುವ ಸಹಾಯವೆಷ್ಟು? ಸರ್ ಜೋನ್ ಸೈಮನರು ಪಾರ್ಲಿಮೆಂಟಿನಲ್ಲಿ ಹೀಗೆ ತಿಳಿಸಿರುವರು:— ಬೀಟ್ ಸಕ್ಕರೆ (21 ಮಿಲ್ಲಿಯ ಪವನು); ಜಾನುವಾರು ಆರೈಕೆ (18 ಮಿ.ಪ.); ಹಾಲು (5½ ಮಿ.ಪ.); ಕೃಷಿ (2 ಮಿ.ಪ.); ಓಟ್ಸ್ ಮತ್ತು ಬಾರ್ಲಿ, ಎರಡು ಲಕ್ಷ ಪವನು; ಚಿಲ್ಲರೆ ಹಡಗುಗಳು (4ಮಿ.ಪ.) ಹೆರ್ರಿಂಗ್ ಮೀನು (1½ ಲಕ್ಷ ಪ.); ಸಿವಿಲ್ ವಿಮಾನ ಸಂಚಾರ (3½ ಮಿ.ಪ.). (ಯೋರ್ಕ್‌ಶಯರ್ ಪೋಸ್ಟ್ ಜುಲೈ 18).

⊙ ⊙ ⊙ ⊙

ಹೇಂಡ್ಲಿ ಪೇಜ್ ಲಿಮಿಟೆಡ್ ಎಂಬ ವಿಮಾನ ತಯಾರಿಸುವ ಕಾರ್ಖಾನೆಯ ಕಳೆದ ವರ್ಷ ಆಯವು 561 ಸಾವಿರ ಪವನು. ಸಂಬಳ ಕಾರ್ಖಾನೆಯ ಖರ್ಚು 148 ಸಾವಿರ ಪವನು. ತೆರಿಗೆ 15000 ಪವನು. ರಿಜರ್ವ್ ಫಂಡು 125000 ಪವನು. ಪಾಲುಗಾರರಿಗೆ ಡಿವಿಡೆಂಡ್ ಸೇಕಡಾ 80. ಇದಲ್ಲದೆ, ಪ್ರತಿ ಪಾಲುಗಾರನಿಗೆ ಪಾಲಿಗೆ ಅರ್ಧ ಪಾಲಿನಂತೆ ಹೆಚ್ಚಿನ ಪಾಲುಗಳನ್ನು ಕೂಡಿಸಿ (ಪಾಲ್ಯ ಭರ್ತಿಯಾದಂತೆ) ಕೊಡುವರು.

⊙ ⊙ ⊙ ⊙

ಪ್ರಪಂಚದ ಎಲ್ಯುಮಿನಿಯಮ್ ಉತ್ಪತ್ತಿಯು ಈ ವರ್ಷವಾದಷ್ಟು ಹಿಂದೆ ಎಂದೂ ಆಗಿಲ್ಲ. 1932ರಲ್ಲಿ 150000 ಟನ್ ಆಗಿದ್ದ ಉತ್ಪನ್ನವು 1936ರಲ್ಲಿ 360700 ಟನ್ನೂ, ಈ ವರ್ಷ 500000 ಟನ್ನೂ ಆಗಿದೆ. ಬ್ರಿಟಿಷರು 19000 ಟನ್ನಿನಷ್ಟು ಮಾತ್ರ ತಯಾರಿಸುತ್ತಾರೆ.

⊙ ⊙ ⊙ ⊙

ಬರುವ ಸೆಪ್ಟೆಂಬರು ತಾ. 1 ರಿಂದ ಪ್ರಪಂಚದಲ್ಲಿ ಸಕ್ಕರೆ ಮಾರಾಟವನ್ನು 3,150,000 ಟನ್ನು ಬಗಲು ಕತ್ತರಿಸಿದ್ದಾರೆ. (ಅಂತರ್ಜಾತೀಯ ಸಕ್ಕರೆಸಮಿತಿ.) 1938-39 ರಲ್ಲಿ ಖರ್ಚಿನ ಮೊತ್ತ 3,582,500 ಟನ್ನು. ಇದರಲ್ಲಿ ಸೇಕಡಾ 5ರಂತಾದರೂ ಇಳಿಸಬೇಕೆಂದು ಪ್ರಯತ್ನಗಳು. ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿರುವ ರಾಷ್ಟ್ರಗಳು ತಮ್ಮಲ್ಲಿನ ಸಕ್ಕರೆಯ ಮಾರಾಟವನ್ನು 20000 ಟನ್ನು ಇಳಿಸುವದಾಗಿ ಒಪ್ಪಿರುವುವು.

⊙ ⊙ ⊙ ⊙

ಬ್ರಿಟಿಷ ಹತ್ತಿ ಬಟ್ಟೆಗಳ ವ್ಯಾಪಾರ ಕುಂದುತ್ತಲಿದೆ. ಇದೇ ಅರ್ಧವರ್ಷದಲ್ಲಿ 704 ಮಿಲ್ಲಿಯ ಯಾರ್ಡು ರಫ್ತಾಗಿದೆ; 90 ವರ್ಷಗಳಿಂದೀಚೆಗೆ ಇಷ್ಟು ಕಡಮೆ ಬಟ್ಟೆ ರಫ್ತಾದುದಿಲ್ಲ! ಕಳೆದ ವರ್ಷ ಇದೇ ಅವಧಿಯಲ್ಲಿ 980 ಮಿಲ್ಲಿಯವಿತ್ತು!

ಬಂಗಾಳದ ಮಂತ್ರಿಮಂಡಲವನ್ನು ಕುರಿತಾಗಿ ಕಲ್ಕತ್ತದ ಬಾತಮಿದಾರ

ನಮ್ಮ ಮಂತ್ರಿಗಳು ಬಂಗಾಲದಲ್ಲಿನ ಒಂದು ಮಹಾಜನ ಸಭೆಯಲ್ಲಿ—ಇನ್ನು ಗಾಂಧೀಜಿ ಉಪವಾಸಿಗಳಾದರೂ, ಈ ವಿಷಯದಲ್ಲಿ ಕೈ ಹಾಕಿದ್ದರೆ, ನನಗಾಗಿ ಮುಸ್ಲಿಮರು ನಿದ್ದೆ ಬಿಟ್ಟೊಂದು ಕಡೆಯಲ್ಲೂ ಉತ್ಪಾತವನ್ನುಂಟು ಮಾಡುತ್ತಾರು ಎಂದು ಭಾಷಣ ಕೊಟ್ಟಂದಿನಿಂದ, ಬಂಗಾಳದಲ್ಲಿ ಎಲ್ಲರ ಬಾಯಿಯಲ್ಲೂ ಒಂದೇ ಮಾತು, ಒಂದೇ ಪ್ರಶ್ನೆ—ಈ ಹಕ್ಕ ಮಂತ್ರಿ ಮಂಡಲ ಎಂದಿಗೆ ಮುಗಿದೀತು?"

ವಿರುದ್ಧರ ಸಂಖ್ಯೆ ಬೆಳೆದು ಬರುತ್ತಲೇ ಇದೆ. ಇಂದಲ್ಲ ನಾಳೆ, ಈ ಮಂಡಲ ಮುಗಿಯಲೇ ಬೇಕಾಗಿದೆ. ಬಲವು ಸಂಸನಾನವಾಗಿ ಬಂದೇ ಇದೆ ಯುರೋಪೀಯ ಮೆಂಬರರ ತಂಡವಲ್ಲದಿದ್ದಲ್ಲಿ ಇವರು ಎಂದೋ ಮಾಯವಾಗುತ್ತಿದ್ದರು.

ಮೆಂಬರುಗಳಂತೂ ಎಲ್ಲಿ ಕಂಡರೂ ಪಿಸುಮಾತಿನಲ್ಲೇ ಮುಗಿಸುವರು; ಅವರು ಯಾವಾಗ ಕೇಳಿದರೂ ಒಂದೇ ಸುದ್ದಿ ಮಾತಾಡುವರು ಎಲ್ಲೆಲ್ಲಿಯೂ ಈ ಮಂತ್ರಿಮಂಡಲ ಎಂದಿಗೆ ಮುಗಿದೀತೆಂದೇ ತರ್ಕ

ಏಕೆ? 'ಮುಸ್ಲಿಮ ಅರಸುತನ' 'ಮುಸ್ಲಿಂ ರಾಜ್' 'ಕೊಂಗ್ರೆಸು ಹಿಂದೂ' ಇತ್ಯಾದಿ ಕೂಗುಗಳಲ್ಲೇ ನಿರತರಾಗಿ ಮಂತ್ರಿಗಳು ಯಾವಾಗಲು ಸುಲಭವಾಗಿ ಈ ಕೂಗುಗಳಿಂದ ಕೊಂಗ್ರೆಸನ್ನು ಜರೆದೋಡಿಸುವ ತವಕದಲ್ಲಿದ್ದರು. 'ಧರ್ಮ ಕೆಡುತ್ತದೆ!' ಎಂದು ಕೂಗಿದರೂ, ಅದರ ಕುರುಹು ಹಸಿವಿನದು ಯುನಿವರ್ಸಿಟಿಯ ಮೊಹರಿಂದ ಶ್ರೀ—ಮತ್ತು ಕಮಲ ಎರಡು ಚಿಹ್ನಗಳನ್ನೂ ಕಿತ್ತು ತೆಗೆದು ಅದೆಲ್ಲ ಹಿಂದೂ ಚಿಹ್ನವೆಂದು ದೂರವಿಟ್ಟರು ಪರ,—ಶ್ರೀಯೂ ಕಮಲವುಖವೂ ಮಾಯವಾಗಿ, ಹಸಿವು ಇನ್ನೂ ಇನ್ನೂ ಹೆಚ್ಚುತ್ತ ಬಂದಿದೆ

ಎಲ್ಲಿ ನೋಡಿದರೂ ಗಣಿತ, ಗುಣಿತ ಯಾವ್ಯಾವ ಪಕ್ಷದವರು ಎಷ್ಟು ಮುಂದೆಯಾಗುತ್ತಾ ಬರುತ್ತಾರೆಂದೇ ನಿರಂತರ ಚಿಂತೆ ಹುಕ್ ಪಕ್ಷ, ಕೊಂಗ್ರೆಸ್ ಮತ್ತು ಪ್ರಜಾಪಕ್ಷ, ಇವೆರಡರ ಬಲ ಹೇಗಿದೆ? ಎಂದೇ ಪ್ರಶ್ನೆ. ಹಲವರು ಗಣಿತಜ್ಞರು ಮಾತ್ರವಲ್ಲದೆ ಜೋಯಿಸರೂ ಆಗಿದ್ದಾರೀಗ!

ಹಿಂದುಸ್ಥಾನದ ಹಸಿವು, ದಾರಿದ್ರ್ಯಗಳಿಗೆ ಕಾರಣರೆನ್ನುವ ಯುರೋಪೀಯ ಪಕ್ಷವೊಂದು ಏನು ಮಾಡೀತೋ ಎಂದೇ ಎಲ್ಲರಲಿ ಸಂದೇಹ ಹಿಂದೀ ಪ್ರಜಾಪ್ರತಿನಿಧಿಗಳ ನಿಜವಾದ ಆಶಾಕಾಂಕ್ಷೆಗಳನ್ನು ಎದುರಿಸಿಯೇ ಇವರು ವೋಟ ಕೊಡುತ್ತಾರೋ, ಹಾಗೆ ಮಾಡಿಯೇ ಸ್ವರಾಜ್ಯವು ಉಂಟಾಗುವ ದಿನವನ್ನು ಅಗ್ಗುವನ್ನು ದೂರಮಾಡುವರೋ ಎಂದು ಪ್ರಶ್ನೆ. ಏಕೆಂದರೆ ಇವರ ವಶ ಸುಮಾರು ೩೦ ವೋಟುಗಳುಂಟು 'ನಾವು ನ್ಯಾಯವಾದಿಗಳು, ಇದ್ದ ಸರಕಾರಕ್ಕೆ ಶುದ್ಧ ಭಕ್ತಿಯುಳ್ಳವರು, ನಮಗೆ ಪಕ್ಷವಿಲ್ಲ' ಎಂದೆಲ್ಲ ಸಾರುವರಾಗಿ, ನೋಕರಶಾಹಿಯು ಶಾಶ್ವತವಾಗಿ ಬಾಳುವ ಹಾಗೆ ಮಾಜಿ ಗವರ್ನರರು ಎಂಡರ್ಸನರು ಮಾಡಿಟ್ಟ ಸೂತ್ರಗಳನ್ನು ಅನುಮೋದಿಸಿ ಬಾಳುವ ಹುಕ್ಕರಿಗೇ ಇವರು ವೋಟು ಕೊಡುವರು ಎಂದು ತಿಳಿದೇ ಇದೆ ಹಾಗೆ ಇವರು ಮಾಡಿದಲ್ಲಿ, ಬಂಗಾಳವು ತನ್ನದನ್ನು ಲಭಿಸಿಕೊಳ್ಳುವ ದಿನಗಳು ದೂರವಾಗುವ ಹಾಗೆ ಇವರು ಮಂತ್ರಿಸಿದ ಹಾಗಾಗುವುದು ಬಂಗಾಳಿಗಳೆಲ್ಲರ ವಿರೋಧವನ್ನೂ ಇವರು ಶಾಶ್ವತ ಕಟ್ಟಿಕೊಂಡಂತಾಗುವುದು

ಆದರೂ ನೆನಪಿರಲಿ,—ಮುಳುಗುವ ಹಡಗು ಜಲಸಮಾಧಿ ಹೊಂದುವ ಮೊದಲೇ ಖಾಲಿಯಾಗಲು ಯುರೋಪೀಯ ನಾವಿಕರು ಅದನ್ನು ತೊಲಗಿದುದನ್ನು ನೆನೆದರೆ, ಹುಕ್ಕರ ಮಂತ್ರಿಮಂಡಲದ ಅವಸಾನ ಕಾಲಕ್ಕೆ ಮೊದಲೇ ಇವರ ಅವರನ್ನು ತೊರೆಗುವುದು ಖಂಡಿತ ವಿರುದ್ಧ ಬಲವು ಹೆಚ್ಚಾದಲ್ಲಿ, ಹುಕ್ಕರು ಹುಕ್ಕರೇ, ಯುರೋಪೀಯರು ಅವರೇ ಯಾವ ತಂಟೆಗೂ ಹೋಗದೆ ಅವರು ತಟಸ್ಥರಾದರೂ ಇರಬಾರದೆಂದಿಲ್ಲ ನೋಡಬೇಕು.

ಅವಿಶ್ವಾಸದ ಠರಾವುಗಳಲ್ಲಿ ವಿರುದ್ಧ ಪಕ್ಷವು ಸೋತುಹೋಗಲು ಈ ಯುರೋಪೀಯ ತಂಗಡವೇ ಕಾರಣವಾಗಬಹುದ ಹೊರತು ಬೇರೆ ಕಾರಣಗಳೇ ಇಲ್ಲ ಪ್ರಜಾಪ್ರತಿನಿಧಿಗಳಾಗಿ ಎಸೆಂಬ್ಲಿಗೆ ತೆರಳಿದವರಲ್ಲಿ, ಮಂತ್ರಿಮಂಡಲಕ್ಕೆ ವಿರುದ್ಧರಾಗಿರುವವರ ಸಂಖ್ಯೆಯೇ ಹೆಚ್ಚು ಮಂತ್ರಿಗಳ ಹಣೆಯ ಬರಹವನ್ನು ಇವರೇ ನಿರ್ಧರಿಸುವುದಾದಲ್ಲಿ ಈ ಮಂಡಲವು ಎಂದೋ ಮಾಯವಾಗುತ್ತಿತ್ತು

ಮಂತ್ರಿಗಳ ಧೈರ್ಯ ಕುಂದಿಹೋಗಿರೆ ಠರಾವುಗಳು ಸೋತರೇನಾಯಿತು? ಇವರ ಕವನವೂ ಅಕ್ರಮವೋ ಹೊರಬಿತ್ತು ಸಾವಿರಾರ ಜನರನ್ನು ಜಾತಿಧ್ವಂಸವಾಗುವ ಬೆದರಿಕೆಯ ಕಾರಣದಿಂದ ಮೆರವಣಿಗೆ ಮಾಡ ಮತ್ತೆ ಪ್ರೋತ್ಸಾಹಿಸುವುದು ಮುಳ್ಳೇ ಮುದ್ರಿಸಿ ಪ್ರಕಟಿಸಾ ಪತ್ರಗಳು ಪೆಟರೀ ಅವನ್ನು ತಡೆಯದಿರುವುದು; 'ಗುಂಡಾ' ಜನಗಳ ಪುಂಡಾಟಿಕೆಗೆ ಸದಸ್ಯರು ಬಲಿಗೊಳ್ಳುವಂತಾದರೂ ಯಾವ ಶಿಕ್ಷೆಯೂ ಈಗ ಅವರನ್ನು ಅಣಗಿಸಲು ಮಂತ್ರಿಗಳಿಗೆ ದೊರೆವುದಿಲ್ಲ! ಕೊಂಗ್ರೆಸು ಯಾವ ಮೆರವಣಿಗೆಯನ್ನೂ ಹೊರಡಿಸಿಲ್ಲ

ಎಂತೂ ಇದು ನಿಶ್ಚಿತವಾಗಿದೆ ಮಂತ್ರಿಗಳ ಉಳಿಗಾಲವು ಕಿರಿದಾಗಿದೆ ಎಂಬುದು ಸರ್ವವ್ಯಕ್ತ.

ಹುಕ್ಕರನ್ನು ನೋಡಬೇಕ ಎಲ್ಲರ ಜತೆಯಲ್ಲಿರುವಾಗಲೂ, ಅವರೇನು ಹುಲಿ ಸಿಂಹಗಳ ಹಾಗೆ ಕಾಣುತ್ತಿಲ್ಲ, ಅದೇ ಜಾತಿಯ ಲಕ್ಷಣಗಳು ಮಾತ್ರ ಕಾಣುವುವು ಇನ್ನು ಸ್ವಲ್ಪ ಸಾಧ್ಯವಾಗಬಹುದು, ಎಂದರೆ, ವಿರುದ್ಧ ಪಕ್ಷವು ಬೆಳೆದೇ ಬಂದದನ್ನು ತಡೆಯಲಾರದೆಂದು ತಿಳಿದೇ ಇದೆ

ಇನ್ನು ಮಹಾತ್ಮಾಜೀಯವರು ಕೈಯಿಕ್ಕಿದ್ದರೆ, ದಂಗೆಗಳಾಗುವುವು ಎಂದು ತಿಳಿಸಿದುದರ ಅರ್ಥವು ಕಳೆದ ವಾರವೇ ಸ್ಪಷ್ಟವಾಗಿ ತಿಳಿಯಿತು ಮಹಾತ್ಮಾಜಿಯವರು ಇದರಲ್ಲೇಕೆ ಕೈಯಿಕ್ಕುವರು?

ಸಿದ್ದೀಕಿಯವರಿಗೆ ಬುದ್ಧಿ ಬಂತು ಮುಳ್ಳನ್ನು ಹಿಂತೆಗೆದರು

ಸಿದ್ದೀಕಿಯವರ ಬಂಗಾಳದ ಎಮ್ ಎಲ್ ಎ ಯು ಹುಕ್ಕರ ಎದುರಿಗೆ ಮೊನ್ನೆ ಅವಿಶ್ವಾಸದ ಠರಾವುಗಳಾಗುವಾಗ ಕೊಂಗ್ರೆಸ್ ಪಕ್ಷದವರ ... ಜನನಾಗವೇ ಕೊಡ ನಾನಾ ಬಗೆಯ ಬಿಂತ ಕೇಳುತ ಪ್ರಜಾಪಕ್ಷದವರನ್ನು ಸೆಳೆಯೆ ಮಾತ್ರವಾದ ಮಾಗಿ ಇವರ ತಿಳಿಸಿದ್ದರ ... ರ ಪಾಯ ನೋಟಿಸ್ ... ಕೊಡ ತ್ವಲೇ ... ಬರೆದು ಕೊಟ್ಟಿದ್ದರೆ ದ. ನಹ ಇವರ ಎಸೆಂಬ್ಲಿಯಲ್ಲಿ ಓದಿದ್ದರು ಇದಕ್ಕೆ ಆಕ್ಷೇಪಣೆಯ ಕಾರಣ, ಸ್ಪೀಕರರ ಈ ಪ್ರಶ್ನೆಯನ್ನು ವಿಚಾರಮಾಡಿ, ತೀರ್ಮಾನಿಸುವಂತಾಗಬೇಕೆಂದು ಕೊಂಗ್ರೆಸಿನ ಜಾರಿಯಿತ್ತು ಸ್ಪೀಕರರು ಇದನ್ನು ವಿಚಾರಿಸಿ ಇದಕ್ಕೆ ಯಾವ ರಜಾ ವಾತೂ ಇಲ್ಲದೆ ತಿಳಿದ ಸಿದ್ದೀಕಿಗೆ ಕ್ಷಮಿಸಬೇಕಾಗಿ ಬಂತು

ಸಿದ್ದೀಕಿಯರು ಬೇರೆ ಉಪಾಯ ತೋಚದ್ದೆ, ಕ್ಷಮೆ ಪ್ರಾರ್ಥಿಸಬೇಕಾಯಿತು "ಅವರು ಕ್ಷಮಾಪ್ರಾರ್ಥನೆಯ ಭಾಷಣಮಾಡಿದರು ಅವರ ಹಿಂದಣ ಮಾತೆಲ್ಲವನ್ನು ಪ್ರೊಸೀಡಿಂಗ್ಸಿನಿಂದ ಅಳಿಸಿ ತೆಗೆಯಲೂ ಅಪ್ಪಣೆಯಾಯಿತು

ಮುಳ್ಳಿಗೆ ಬಹಿರಂಗವಾಗಿ ಹೀಗೆ ಚಿಕಿತ್ಸೆ ಮಾಡಲಾಯಿತು

ಬಂಗಾಳದ ಸತ್ವಪರೀಕ್ಷೆ

ಬಂಗಾಳದ ಕೌನ್ಸಿಲು ಮೂಗಿನಲ್ಲೇ ಉಸಿರಾಡುತ್ತ ಇನ್ನೂ ಜೀವ ಹಿಡಿದುಕೊಂಡಿರುವಂತೆ ಅಭಿನಯಿಸಿಯುದೆ. ಹುಕ್ಕ ಮಂತ್ರಿ ಮಂಡಲವು ನಿರುಪಯೋಗಿಯೆಂದು ಗೊತ್ತಿದ್ದುದನ್ನು ಅದಿಯೂ, ಆದರೆ ಇತರ ಯಾವ ಪಂಗಡವೂ ರಾಜ್ಯಭಾರ ನಿರ್ವಹಿಸುವವರೆ ಅದು ಬಹುಕಾಲ ಬಾಳುವುದು ಖಂಡಿತವಲ್ಲವೆಂಬ ಕಾರಣವೂ ಯುರೋಪೀಯ ಸದಸ್ಯರ ಹಿಂಡೇ ಹುಕ್ಕರ ಪರವಾಗಿ ವೋಟುಕೊಟ್ಟ ಕಾರಣ ಹುಕ್ಕರ ಮಂಡಲಿ ಸದ್ಯಕ್ಕೆ ಉಳಿದಿದೆ

ಆದರೆ, ಈ ಮಂತ್ರಿಮಂಡಲದ ಹಟಮಾರಿತನ ಪಕ್ಷಪಾತ ಬುದ್ಧಿ, ಸ್ವೇಚ್ಛಾ ಪ್ರವೃತ್ತಿಯೇ ಮಾತವಲ್ಲದೆ ವಿರುದ್ಧ ಪಕ್ಷವನ್ನು ಅಣಗಿಸುವರೆ ನಾನಾ ರೀತಿ ಉತ್ತೇಜಕ ಭಾಷಣಾದಿಗಳ ಮೂಲಕ ದರ್ಪವನ್ನು ಮೆರೆಯಿಸುವಿಕೆ ಮೊದಲಾದ ಎಲ್ಲ ದುರ್ಲಕ್ಷಣಗಳು ಮಾಯವಾಗದಿರುವಲ್ಲಿ ಸದ್ಯದೊಳಗೆ ಬಂಗಾಳವು ದಂಗೆ ಕ್ಷೋಭೆ ಮೊದಲಾದ ಪಾತಳಿಗಳಿಗೆ ತುತ್ತಾಗಬಹುದೆಂಬ ಅಂಜಿಕೆಯಿದೆ ... ಅನ್ಯಾಯಗಳು ಬಂಗಾಳದ ಭಾಗ್ಯವಿಧಾತರಾಗಿ ... ಅಲ್ಲಿನ ಪತ್ರಿಕೆಗಳ ಗೋಳಾಟ ... ಗಳನ್ನು ಕುರಿತು

50,000

ಕುಷ್ಠರೋಗಿಗಳು ಸಂಪೂರ್ಣವಾಗಿ ಗುಣಮುಖರಾಗಿರುವರು!

OFFICE OF MESSRS REDDY & Co.,

GOPALAPURAM (E. GODAVARY)

ಕುಷ್ಠರೋಗ ಬಿಳಿತೊನ್ನು ಮತ್ತು ಮೇಹಾದಿ ರೋಗಗಳ ಚಿಕಿತ್ಸೆಯಲ್ಲಿ ವಿಶೇಷಜ್ಞ

ಶ್ರೀ ಕೃಷ್ಣ ಚಿಕಿತ್ಸಾ — ರೆಡ್ಡಿ ಮತ್ತು ಕಂಪೆನಿ

ಗೋಪಾಲಪುರಂ ಪೂರ್ವ ಗೋದಾವರಿ

THE CAVALCADE!

The Cavalcade of a Century MUST be something unusual!

The History of 'BHUVANENDRA PRODUCTS'-reads like a Novel!

A century of progress has made it the

LEADING AYURVEDIC CONCERN

OF THE DISTRICT.

Buy all your requirements from

BHUVANENDRA PRODUCTS, LTD,

Katapady, S. Kanara

(BRANCH KUMTA N KANARA)

te for Catalogue to-day!

ಒಂದು ಶತಮಾನದ ಇತಿಹಾಸ!

ಒಂದು ಶತಮಾನದ ಇತಿಹಾಸವು ಸ್ವಾರಸ್ಯವಾಗಿರಲೇಬೇಕು!

ಭುವನೇಂದ್ರ ಪ್ರಾಡಕ್ಟ್ಸ್, ಲಿಮಿಟೆಡ್,

ಇದರ ಚರಿತ್ರವು ಕಾದಂಬರಿಯಂತೆ ಮನೋಹರವಾಗಿದೆ

ಒಂದು ಶತಮಾನದ ಅಭಿವೃದ್ಧಿಯು

ಈ ಸಂಸ್ಥೆಯನ್ನು ಜಿಲ್ಲೆಯ ಪ್ರಚಂಡ ಆಯುರ್ವೇದ ಸಂಸ್ಥೆಯನ್ನಾಗಿ ಮಾಡಿದೆ!

ಇಂದು 'ಭುವನೇಂದ್ರ ಪ್ರಾಡಕ್ಟ್ಸ್' ಎಂದರೆ ಭರವಸೆಯ ಹೆಗ್ಗುರುತು.

ಲೇಹಗಳು, ಆಸವಗಳು, ಅರಿಷ್ಟ, ತೈಲಗಳು ಘೃತಗಳು—

ಇವೆಲ್ಲವೂ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಲ್ಪಡುವಂಥದ್ದನ್ನು

ಇಲ್ಲಿಂದಲೇ ಕೊಂಡುಕೊಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ.—ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ 'ತೀಡಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1. ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ.
2. ಕುಂದಾಪುರದಿಂದ ಬಾಳೆಬರೆಗಾಗಿ ಶಿವೊಗ್ಗಾ.
3. ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶ್ರಿಂಗೇರಿ, ತೀರ್ಥಳ್ಳಿ, ಶಿವೊಗ್ಗಾ ಹರಿಹರ ವರೆಗೆ.
4. ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು, ಕಡೂರು ವರೆಗೆ.
5. ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ, ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ.
6. ಮಂಗಳೂರಿನಿಂದ ಪುತ್ತೂರು, ಸಂಪಾಜೆಗಾಗಿ ಮಡಕೇರಿ, ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ.

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

THE

Canara Industrial & Banking Syndicate Ltd.,

(Incorporated in British India)

Estd 1925.

Head Office: UDIPI, (S. India.)

Member:

RESERVE BANK OF INDIA.

BANKERS CLEARING HOUSE, BOMBAY.

An Additional Branch of the Syndicate has been opened in Mangalore at Felix Pai Bazaar (Block No. 1) on 31st. July 1938 where all kinds of BANKING Business Undertaken.

Authorised Capital.	Rs.	10,00,000
Issued Capital.	„	8,00,000
Subscribed Capital.	„	7,74,500
Paid up Capital.	„	3,86,880
Reserves.	„	2,16,700

TOTAL RESOURCES EXCEED RUPEES 51 LAKHS.

ಮುಂಗಡ ರೂ. ೭-೦-೦. Established 1906. Regd. No. M. 3406. ಟಪ್ಪಾಲು ಹಾಸಲು ಸೇರಿ ರೂ. ೭-೧೩-೦.

ಸ್ವದೇಶಾಭಿಮಾನಿ.

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ

ಲಾಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು— ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ-ತಂತ್ರ-ಯಂತ್ರಗಳೂ ಇಲ್ಲ. ಗ್ರಹಶಾಂತಿಯೊಂದೇಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ... ಈ ವಸ್ತುವಿನಿಂದ ಮಹರ್ಷಿಗಳನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಿ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ .... ಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನನ್ನ ಸ್ವಭಾವಸಿದ್ಧ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ, ಪಂಡಿತರೂ ಈ ಯಂತ್ರವನ್ನು ...



ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:— ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ, ಎಂದು ಬೇರೆ ಬೇರೆ ಹೆಸರುಗಳನ್ನು ... ತ್ತಾರೆ. ತಮ್ಮ ಮನಸ್ಸಿಗೆ ತೋಚಿದ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಆದರಿಂದ ಆಗುವುದು ಏನೂ ಇಲ್ಲ. ಆದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:— ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮಲಾ (ಎ. ಆರ್. ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು, ಒಂದು ನನಗಾಗಿ ಮತ್ತೊಂದನ್ನು ನನ್ನ ಸೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವುದಕ್ಕಾಗಿ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ಟಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ ರೂ. ೬ ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ. ಯಿಂದ ಬೇಡಿದಲ್ಲಿ ೩ ರೂ. ೧೦ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಸ್ವದೇಶಾಭಿಮಾನಿ

[ಸಂಪುಟ ೩೨] ತಾರೀಖು ೨೬ನೇ ಆಗೋಸ್ತು ೧೯೩೮ (26-8-1938) [ಸಂಚಿ

★

24 ಪುಟಗಳು 24

ಅನುಕ್ರಮಣಿಕೆ

ಗಡಿನಾಡಿನ ಗಡಿಬಿಡಿ

★

ಇಂದಿನ ಯುರೋಪು ಕೋಲಾಹಲ: ನೆಹರು ರವರ ಅಭಿಮತ

★

ದೊಡ್ಡ ಅಪಾಯ ಜೆಕೊಸ್ಲೊವೇಕಿಯಾದಲ್ಲಿ ಹಿಟ್ಲರನ ಕೋರಿಕೆಗಳು

★

ಪ್ಯಾಲೆಸ್ಟೈನದಲ್ಲೇನು ಎಲ್ಲೆಲ್ಲೂ ದಂಗೆಗಳು

★

... ಸಾಮ್ರಾಜ್ಯದಲ್ಲಿ ... ಯುದ್ಧದಲ್ಲಿ ಬ್ರಿಟಿಷ, ಫ್ರೆಂಚ್, ಜರ್ಮನ್ನರ ಉದ್ದೇಶವೇನು?

★

ಹಿಟ್ಲರ ... ಸ್ಟೈಲಿನ್ ... ಅವರೊಳಗೆ ... ಮಾಡಿಯುವರು!

★

ಜಪಾನಿನ ಜಯವು ಕಾಗದದಲ್ಲಿ ಮಾತ್ರ

★

ಸರ್ವಾಧಿಕಾರಿ... ತಕ್ಕ...

★

ಚೀನೀ ಮಹಿಳೆಯರ ಉತ್ಕರ್ಷ

★

ನಾಲ್ಕೂ ಮೂಲೆಗಳಿಂದ

★

ಪರರಾಷ್ಟ್ರ ಪತ್ರಿಕೆಗಳಿಂದ

★

ಚಿಕ್ಕ ನೋಟಗಳು

★

ನಾಶವಾಗುವ ಅಂಕಿಸಂಖ್ಯೆಗಳು

★

CONSTRUCTIVE BANKING.

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding A CRORE.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTED. 1906.
CANARA BANK LIMITED.

ಅಧಿಕಪ್ಪ ಜಿಲ್ಲಾ ಬೋರ್ಡುಗಳು

ವಿದ್ಯಾಭ್ಯಾಸ, ಹೆದ್ದಾರಿಗಳು, ವೈದ್ಯ ಸಹಾಯ, ಆರೋಗ್ಯ ಪ್ರತಿಯೊಂದರಲ್ಲೂ ಹಿಂದೆ ಹಿಂದೆ.

★

1936—37ನೆ ಇಸ್ವಿಯ ಕುರಿತಾದ ...ರ್ಡುಗಳ ಆಡಳಿತದ ವರದಿಯು ಇಂಡಿಯಾ ...ರಕ್ಕೆ ತಲಪಿದೆ. ಈ ವರದಿಯಲ್ಲಿ ತಾ. ...ನೆ ಜೂನ್ 1938ರಲ್ಲಿ ವಿಮರ್ಶಿಸಿ ಬರೆದ ...ರದ ರಿಪೋರ್ಟಿನ ಸ್ಥೂಲಾಭಿಪ್ರಾಯ ಹೀಗಿದೆ

ನೀಲಗಿರಿ, ಕರ್ನೂಲು, ತಿರುಚನಾಪಳ್ಳಿ, ...ತ್ತರ ರಾಮನಾಡು ಜಿಲ್ಲಾ ಬೋರ್ಡುಗಳು ...ದು ಪ್ರಗತಿಪರ ಲಕ್ಷಣವುಳ್ಳವು. ದಕ್ಷಿಣ ...ನ್ನಡ ಕೂಡಿ ಹನ್ನೆರಡು ಹಿಂದಿನಂತೆ ತೃಪ್ತಿಕರ, ...ನ್ನು 18 ಸಾಧಾರಣ ತೃಪ್ತಿ, ಮತ್ತೈದು ಕಿಂ...ಷ್ಟು ತೃಪ್ತಿಕರವಾದ ಆಡಳಿತವುಳ್ಳವು

ಎಲ್ಲೂರೂ ಪಕ್ಷಭೇದದಿಂದ, ವಿಲ್ಲುಪುರಂ ...ಸಕ್ತಾಗಿ, ಕೊಕನಾಡ ಪದೇ ಪದೇ ತಿಳಿಸಿ...ರೂ ವಾರ್ಷಿಕ ರಿಪೋರ್ಟಿ ಇಲ್ಲದರಿಂದ,—...ಸ್ವೀಕರವೆನ್ನಲಾಗುತ್ತಿಲ್ಲ

ಅಧಿಪತ್ಯದಲ್ಲಿದ್ದ 30ನ್ನು 89 ಆಗಿ ಬೋ...ರ್ಡುಗಳಲ್ಲಿ ವಿಭಜಿಸಿ ಸಂಖ್ಯೆ ಏರಿಸಿದ ವರ್ಷ...ದು ದೊಡ್ಡ ಪಂಚಾಯಿತುಗಳು 438. ...ಟ್ಟು ಪಂಚಾಯತುಗಳು 6723

ಬೋರ್ಡುಗಳು 34148 ಮೈಲು ಹೆದ್ದಾರಿ...ಗಳನ್ನು ಊರ್ಜಿತವಿರಿಸಿವೆ 292 ಮೈಲು ...ಹೊಸ ಹೆದ್ದಾರಿಗಳಾಗಿವೆ ಪ್ರತಿ 100 ಚದರ ...ಮೈಲುಗಳಲ್ಲಿ, ಕರ್ನೂಲಿನಲ್ಲಿ 14 ಮೈಲು ...ಹೆದ್ದಾರಿಯಿದ್ದರೆ, ಪೂರ್ವ ತಂಜಾವೂರದಲ್ಲಿ 90 ...ಮೈಲು ಇತ್ತು 8034 ಮೈಲು ರಾಜರಸ್ತೆಗಳು ...0½ ಲಕ್ಷ ರೂಪಾಯಿ ವ್ಯಯಿಸಿ ಬೋರ್ಡು ...ಶದಲ್ಲಿ ಸುರಕ್ಷಿತವಾದುವು, ಸರಕಾರವು 18½ ಲಕ್ಷ ರೂಪಾಯಿ ಸಹಾಯವಮಾಡಿದೆ. ದಕ್ಷಿಣ ಕನ್ನಡದ ರಾಜರಸ್ತೆಗಳು ಅತೃಪ್ತಿಕರವಾಗಿದ್ದವು.

II ಕ್ಲಾಸು ರಸ್ತೆಗಳಿಗೆ ಬೋರ್ಡುಗಳು ಒಟ್ಟು 40 ಲಕ್ಷ ರೂಪಾಯಿ ವ್ಯಯಿಸಿದುವು; ಸರಕಾರವು 15 ಲಕ್ಷ ರೂಪಾಯಿ ಸಹಾಯ ಮಾಡಿತು. 27½ ಲಕ್ಷ ರೂಪಾಯಿ ಮೋಟರು ತೆರಿಗೆಯಿಂದ ಬೋರ್ಡುಗಳಿಗೆ ಹಂಚಲಾಯಿತ

ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲ ಬೋರ್ಡುಗಳು ಶಿಕ್ಷಣ ತೆರಿಗೆ ವಿಧಿಸಿವೆ 16 ಲಕ್ಷ ರೂಪಾಯಿ ದೊರೆತಿದೆ ನಾಲ್ಕಾರು ಕಡೆ ಕಡ್ಡಾಯವಿದೆ.

ಶಿಕ್ಷಣದ ವಯಸ್ಸಿನ (5 10 ವಯಸ್ಸು) ಹುಡುಗರಲ್ಲಿ ಸೇಕಡಾ 54, ಹೆಮ್ಮಕ್ಕಳಲ್ಲಿ ಸೇಕಡಾ 82 ಯಾವ ಬಗೆಯ ಶಿಕ್ಷಣವನ್ನೂ ಹೊಂದುದಿಲ್ಲ, ಹಿಂದಣ ವರ್ಷ ಈ ಸಂಖ್ಯೆಗಳು 56 ಮತ್ತು 82 ಆಗಿದ್ದುವು ದಕ್ಷಿಣ ಕನ್ನಡದಲ್ಲಿ ಸೇಕಡಾ 80ಕ್ಕಿಂತ ಹೆಚ್ಚಿನ ಹೆಮ್ಮಕ್ಕಳ ಶಾಲೆಗಳಿದ್ದರು ಹುಡುಗರು ಮಾತ್ರ 70ಕ್ಕೆ ...ಡಮೆ

ಹುಡುಗರ ಶಾಲೆಗಳು 14188, ಹುಡುಗಿಯರ ಶಾಲೆಗಳು 2760 ಇದ್ದು 733111 ಹುಡುಗರೂ 307171 ಹುಡುಗಿಯರೂ ಓದುತ್ತಿದ್ದರು ಒಟ್ಟು ಖರ್ಚು 104,17,000 ರೂಪಾಯಿ ವ್ಯಯವಾಗಿತ್ತು 1-5ನೆ ಕ್ಲಾಸುಗಳಲ್ಲಿನ ವಿದ್ಯಾರ್ಥಿಯರ ಸಂಖ್ಯೆಗೆ 1 2 ಕ್ಲಾಸುಗಳಲ್ಲಿರುವವರ ದಾಮಾಶಾಯಿವು 50 – 66 ಹುಡುಗಿಯರು ಹೀಗಿತ್ತ (ತಲಾ ರೂಪಾಯಿ 10-8-9 ಖರ್ಚು ವೆಚ್ಚವಾಗಿದೆ) ಸೆಕೆಂಡರಿ ಶಾಲೆಗಳು 201ರಿಂದ 203ಕ್ಕೇರಿವೆ

ವೈದ್ಯ ಸಹಾಯ ಸರಾಸರಿ 99 ಚದರ ಮೈಲಿಗೊಂದು ವೈದ್ಯಶಾಲೆ, 84500 ಜನರಿಗೊಂದರಂತೆ ಇತ್ತು ಹಿಂದಣ ವರ್ಷ 104 ಚದರ ಮೈಲಿಗೊಂದ 36100 ಜನರಿಗೊಂದರಂತಿತ್ತು

ಜನನಗಳು ಸಾವಿರ ಜನಸಂಖ್ಯೆಗೆ 34ರಂತೆ, 691 ಸೂಲಗಿತ್ತಿಯರು 48664 ಹೆರಿಗೆಗೆ ಸಹಾಯ ಮಾಡಿದರು ಮರಣಗಳು ... ಸಂಕ್ಷೇಪವಾದ 296275 ರೂಪಾಯಿಗಳ ಬೋರ್ಡುಗಳು 152928 ರೂಪಾಯಿಯ ಮಾತ್ರ ಖರ್ಚಿಗೆ ತೆಗೆದುಕೊಂಡಿವೆ

ದಕ್ಷಿಣ ಕನ್ನಡ ಬೋರ್ಡಿನ ಸಾಂಪತ್ತಿಕ ಸ್ಥಿತಿ ಅತೃಪ್ತಿಕರವಾಗಿತ್ತು ವರ್ಷದ ಕೊನೆ ದಿನ ಹೊರ ಸಲ್ಲಬೇಕಾದ ಐವಜು, ಎಲ್ಲಿಗಿಂತ ಹೆಚ್ಚಾಗಿತ್ತು!

40 ಬಾಬುಗಳಲ್ಲಿ 13961 ರೂಪಾಯಿ ದ್ರವ್ಯಾಪಹರಣವಾಗಿತ್ತು 88 ಬಾಬುಗಳ 7847 ರೂಪಾಯಿ ಸರ್ಚಾರ್ಜು ಮಾಡಲಾಗಿತ್ತು.

ಕಾಲು ಕುಂಟುಗೊಳಿಸುವ ಬೊಕ್ಕೆಗಳನ್ನು ನಿವಾರಿಸಿರಿ.

ಝ್ಯಾಂಬಕು ಕಲೆಗಳಿಲ್ಲದಂತೆ ಮಾಡುತ್ತದೆ

ವ್ರಣ, ಕಡಿತ, ಕಾಲು ಕುಂಟುಗೊಳಿಸುವ ಬೊಕ್ಕೆ ಇತ್ಯಾದಿಗಳ ಮೇಲೆ ಝ್ಯಾಂಬಕನ್ನು ಹಚ್ಚಿದ್ದರಾದ್ದೇ ಗುಣವನ್ನು ಕೊಡಲು ಪ್ರಾರಂಭವಾಗುತ್ತದೆ, ಇದು ಝ್ಯಾಂಬಕಿನಲ್ಲಿರುವ ಅಪೂರ್ವವಾದ ಗಿಡಮೂಲಿಕೆಗಳ ಎಣ್ಣೆಯ ಇರುವ ಕಾರಣದಿಂದ ಇದು ಪ್ರತಿ ಒಂದು ನರಗಳಿಂದ ಎಳೆಯಲ್ಪಟ್ಟು ವ್ರಣ ಬೊಕ್ಕೆ ಇತ್ಯಾದಿಗಳ ಬಾಧೆಯನ್ನು ಆದಿಯಲ್ಲಿಯೇ ನಾಶಮಾಡುತ್ತದೆ ಝ್ಯಾಂಬಕು ನೋವನ್ನು ನಿವಾರಿಸುತ್ತದೆ, ಉರಿತವನ್ನು ಕಡಿಮೆಮಾಡುತ್ತದೆ, ಸಂಕ್ರಾಮಕ ಬೊಕ್ಕೆಗಳಿಂದ ರಸಿಗೆಯ ಕೆಟ್ಟನೀರು ಹೋಗುವುದನ್ನು ನಿವಾರಿಸುತ್ತದೆ ಪ್ರತಿಕಡೆಯಲ್ಲೂ ದ್ರವ್ಯರಿಂದಲೂ ಸರ್ವರಿಂದಲೂ ಶ್ಲಾಘನೆಹೊಂದಿದ ಎಲ್ಲ ದವಾಖಾನೆಗಳಲ್ಲಿಯೂ ರೂ 1 ಮತ್ತು 2 4 0 ಮಾರಲ್ಪಡುತ್ತದೆ

ಏಜಂಟ —

ಮೆಸರ್ಸ ದಿ. ಧಿ. ಎಂಡ್ ಕೊ., ಪಾರ್ಕಟೌನ್ ಮದ್ರಾಸು

ಯಾವಾಗಲೂ ಝ್ಯಾಂಬಕನ್ನು ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

HOMO SUM: HUMANI NIL A ME ALIENUM PUTO

"I am a man and nothing that is human is foreign to me ... " was the motto of Dr J E de Vry the man to whom nothing that was human was foreign and who worked without ceasing as long as his light lasted

Dr J E de Vry was born in Rotterdam on January 31st 18... At the age of twenty he was obliged to succeed his father in managing the pharmacy for when his father died he became the sole support of his mother and her numerous family

As the simple work at the pharmacy did not give him sufficient intellectual occupation he decided to translate Rose's Treatise on analytical chemistry He thus came into contact with Rose himself which gave him the opportunity of making the acquaintance of illustrious personages who were conversant with such questions at the time

De Vry became a student at the Leyden Academy and spent the time in studying that is generally reserved for sleep ... that ... years later he took his ... degree After the sudden death of his young wife, he gave himself up entirely to science which was his sole amusement and became the object of his life In 1857 he was appointed inspector for the chemical concerns in Java The formidable work accomplished during these years by this singular man is astonishing This was the man who brought pharmacy out of its primitive state and turned it into a scientific profession This was the man wh... in 1845, long before Pasteur, demonstrated by convincing proofs that life can only be produced by life.

Research work that he undertook in various directions in connection with the mesta still treasures of the vegetable world till ... led him to ... which ... his favourite subject ... which was not without difficulties ... at that time ... a great ...

... farewell ... settled ... Hague ... organised a chemical ... where he ... the rich harvest that he had gathered in the tropics By his innovation in research and scientific work he finally obtained in 1852 the decoration of Knight in the Order of the Dutch Lion ... British and French Governments ... already ... previously

De Vry ... known by his cinchona drops In this with ... stated the following declaration According to statements ... the generals thought that I ... cinchona drops ... money and get a profit out of ... I think that it is desirable to state openly that this is not the case and that everything that I have done in this connection has been ... disinterested manner

For sixty years De Vry devoted himself to the interests of science and humanity

M Eng No

30,000 ರೂಪಾಯಿಯನ್ನು

ಸರಿಯಾದ ಉತ್ತರ ಕಳುಹಿಸಿದ 15 ಜನರೊಳಗ ಹಂಚಲ್ಪಡುವುದು

ಬೊಂಬಾಯಿಯ ಒಂದು ಪ್ರಸಿದ್ಧ ಬೇಂಕಿನಲ್ಲಿಟ್ಟ ಉತ್ತರಕ್ಕೆ ಸರಿಯಾಗಿ ಹೋಲುವ ಉತ್ತರವನ್ನು ಕಳುಹಿಸಿದವರಿಗೆ ಕಡಿಮೆ ಎಂದರೆ 2000 ರೂಪಾಯಿಯನ್ನು ಬಹುಮಾನವಾಗಿ ಕೊಡುವೆವೆಂದು ಭರವಸೆ ಕೊಡುತ್ತೇವೆ.



ರೂಪಾ 700 ಮತ್ತು 300 ರದ ಪ್ರತ್ಯೇಕ ಬಹುಮಾನಗಳನ್ನು ... ಉತ್ತರಗಳನ್ನು ಕಳುಹಿಸಿದವರಿಗೆ ಹಂಚಲಾಗುತ್ತದೆ

... ಪ್ರತಿ ... 1ರಿಂದ 1... ವರೆಗಿನ ಅಂಕೆಗಳನ್ನು ... ಪ್ರತಿ ಸಾಲು ... ಅದರ ಎದುರಿನ ಸಾಲುಗಳ ... ಅಂಕೆಗಳನ್ನು ... 38 ... ಒಂದು ಬಾರಿ ಉಪಯೋಗಿಸಿದ ಅಂಕೆಗಳನ್ನು ಪುನಃ ಉಪಯೋಗಿಸಬಾರದು.

ಉತ್ತರಗಳನ್ನು ಕಳುಹಿಸ ... ಕಡೆಯ ತಾರೀಕು ... 9 38 ... 8–9 ...

ಪ್ರವೇಶ ಹಾಕಲು ಒಂದು ಉತ್ತರಕ್ಕೆ 1 ರೂ ಎಂಟು ಉತ್ತರಕ್ಕೆ ರೂ. 5.

ರೂಲ್ಸುಗಳು. ಎಷ್ಟು ಉತ್ತರಗಳನ್ನು ... ಕಾಗದದ ... ಹಣವನ್ನು ಪೋಸ್ಟಲ್ ಆರ್ಡರ್ ಯಾ ಮನಿಯಾರ್ಡರ್ ... ನಿಮ್ಮ ವಿಳಾಸವನ್ನು ಬರೆದು ಒಂದು ಅಂಚೇಟಿಕೀಟು ಹಚ್ಚಿದ ಲಕೋಟೆಯನ್ನು ಕಳುಹಿಸಿ ... ಅಧಿಕಾರವೇ ಕಡೆಯದು

ಮೇಲಿನ ಬಹುಮಾನದಲ್ಲದೆ ಉತ್ತರವನ್ನು ಕಳುಹಿಸಿದ ಪ್ರತಿಯೊಬ್ಬರಿಗೆ ಒಂದು ... ಯಲ್ ... ಎಂಟು ಉತ್ತರ ಕಳುಹಿಸಿದವರಿಗೆ (ಬೇರೆ ಬೇರೆ ಹೆಸರನ್ನು ಕಳುಹಿಸಬಹುದು) ಈ ಕೆಳಗಿನ ಯಾವುದಾದರೂ ಒಂದು ಬಹುಮಾನವು ಕೊಡಲ್ಪಡುವುದು 1 ಎಸ್ಸ ಎಲ್ ಬ್ರೈನ್ (ಮೆದುಳಿನ ಔಷಧ) 2 ಕಣ್ಣಿನ ಔಷಧಿ (ಕಣ್ಣಿಗೆ ಬಹಳ ಉತ್ಕೃಷ್ಟವಾದದು)

ನಮ್ಮ ಕಳೆದ ಬಾರಿಯ ಉತ್ತರ (34)

1ನೇ ಸಾಲು	15	4	9	6
2ನೇ	1	14	7	12
3ನೇ	8,	11,	2	13
4ನೇ	10	5	16	3

ನಿಮ್ಮ ಉತ್ತರವನ್ನೂ ಹಣವನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ

ಮೆನೇಜರ್—ದಿ ಗೆಟ್‌ವೇ ಪ್ರೊಡಕ್ಟ್ಸ್,

116 C ಜವಾರಿ ಬಜಾರ್ ಬೊಂಬಾಯಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ... ಹಡೆಯುವುದರಿಂದ ಹೆಂಗಸರ ಆರೋಗ್ಯ ಕೆಟ್ಟುಹೋಗುತ್ತದೆ ... ಶೀಘ್ರ ಮುದುಕರಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನಿಲ್ಲುವಂತೆ ... ಶರೀರಕ್ಕೆ ಏನೂ ಅಪಾಯವಾಗದ ... ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂಧವಾಗುವುದು ಅದನಂತರ ಏನು ಮಾಡಿದರೂ ... ಮತ್ತು ಸರ್ಟಿಫಿಕೇಟು—ಡಾ. ವೈದ್ಯ ಎಲ್. ... ಕೆಳವಾಣಾರಿಸು, ... ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದ ... ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ... ವಿ ಪಿ. ಅಂಚೆ ...

... ಔಷಧಾಲಯ, ಮು. ಪೊ. ವಿರಜಿ, (S M. C.)

ಸತ್ಯೈರ್ಮರ್ಹಾರ್ಯೈಸ್ತು ತುರ್ಮಾನ ದೇವಾ । ನ ಭೇಜಿರೇ ಭೀಮ ವಿಶೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

ಸ್ವದೇಶಾಭಿಮಾನಿ

SWADESHABHIMANI

ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ದೊರೆಯಲಿನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿ ಗದರಿಂ । ಹರುಷವಾಯಿತೆ! ಮಿಕೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜದರೆ! ಸುಧೆಯನ । ಮರಿತು ಕ್ಷುದ್ರರ ಕೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಖು ೨೬—೮—೧೯೩೮ | ತಾರೀಖು 26 – 8 – 1938

ಗಡಿನಾಡಿನ ಗಡಿಬಿಡಿ

(ಮೆಂಚೆಸ್ಟರ ಗಾರ್ಡಿಯನ್ ಪತ್ರದ ಅಗ್ರಲೇಖ)

ವಾಯುವ್ಯ ಗಡಿನಾಡಿನಲ್ಲಿ ಸರಕಾರದ ಸಮಸ್ಯೆ ದ್ವಿಮುಖವಾಗಿದೆ. ಗಡಿನಾಡೆಂದು ಅದರ ಮೇರೆಗಳು ಯಾವುವೆಂದು ನಿರ್ಧರಿಸುವುದು ಒಂದು ಸಮಸ್ಯೆ, ಗಡಿನಾಡಿನವರಿಗೆ ಯಾವ ರೀತಿಯಿಂದ ಆಳುವುದೆಂಬುದು ಇನ್ನೊಂದು ಸಮಸ್ಯೆ.

ಇವನ್ನು ಪರ್ಯಾಲೋಚಿಸುವಾಗ ಲೋರ್ಡ್ ಕರ್ಜನರ ನೀತಿಯು ನೆನಪಾಗುವುದು. ಮುಂದರಿದ ಸ್ಥಳಗಳಿಂದ ಬ್ರಿಟಿಷ ಸೈನ್ಯವನ್ನು ಹಿಂದೆ ಕರೆವುದು, ಅಲ್ಲಿನ ಗೋತ್ರಗಳ ನೆಲೆಗಳನ್ನು ಕಾಪಾಡಲು ಅಲ್ಲಿನವರನ್ನೆ ನೇಮಿಸುವುದು, ಅವರ ಬೆನ್ನಿಗೆ ಬ್ರಿಟಿಷಸೈನ್ಯವನ್ನು ರಕ್ಷಣೋಪಾಯಕಾಗಿ ಇಟ್ಟುಕೊಳ್ಳುವುದು ಅಲ್ಲಿಂದ ಹಿಂದೆ ಪೆದ್ದಾರಿಗಳನ್ನು ರಚಿಸುವುದು ಇದೇ ನ ಮ್ಮೆಕ್ಷೇಪಾಯವೆನಿಸುವುದು ... ನೀತಿಯನ್ನು ಒದಗಾಯಿಸದಿದರೆ ... ವರ್ಷಗಳಿಂದಲೂ ನಡೆದ ಯುದ್ಧದಂಥ ವಜೀರಸ್ತಾನ ಯುದ್ಧಗಳೇ ... ಇದುವುದು. ಇವನ್ನು ನಿವಾರಿಸಬೇಕು.

ಸೈನ್ಯಗಳನ್ನು ... ಕಳಿಸುವುದೂ, ಅಲ್ಲಿನವರಿಗೆ ಧನಸಹಾಯ ಕೊಡುವುದೂ (ಅಶನಕ್ಕಾಗಿ) ವ್ಯರ್ಥ. ಅದರ ಬದಲಾಗಿ, ಈ ಖರ್ಚಿಗೆ ಬರುವ ಮೊಬಲಗನ್ನು ಆ ಕಾಡಾಡಿಗಳ ಜೀವನವನ್ನು ಸುಖಮಯವನ್ನಾಗಿ ಮಾಡಲು ವಿನಿಯೋಗಿಸುವುದೊಂದೇ ಉಪಾಯ ಉಳಿದದೆ.

ಈ ಹೊಸ ಬಗೆಯ ಉದ್ಯಮ ಸ್ವೀಕರಿಸಲು ಯೋಗ್ಯಕಾರಣಗಳುಂಟು. ಎಂದಿನಂತೆ ಉಳಿದ ... ಬಲಪ್ರಯೋಗದಿಂದ ಪ್ರಗ್ನಾಟ ವಾದ ... ಸಂಭವಗಳು ಮಾಯವಾಗಿರುವ ಕಾರಣ, ಸೈನ್ಯವು ಅಷ್ಟು ಹೆಚ್ಚಾಗಿ ಅಲ್ಲಿರಬೇಕಾಗಿಲ್ಲ. ~~ಅಫಗಾನಿಸ್ಥಾನವು ಶಾಂತವಾಗಿ,~~ ಸ್ನೇಹಮಯವಾಗಿ, ಸ್ವತಂತ್ರವಾಗಿದೆ. ಇದಲ್ಲದೆ, ಪೇಶಾವರದಲ್ಲೇ ಇವರೇ ಕುಲದವರ ಬಂಧುಬಾಂಧವರು ಆಳುತ್ತಿರುವ ಸರಕಾರದ ಸ್ಥಾಪನೆಯಾಗಿದೆಯಷ್ಟೆ.

ಆದುದರಿಂದ ಸಾಂಪತ್ತಿಕ ಅಭ್ಯುದಯವನ್ನೇ ಸಾಧಿಸಬೇಕಾಗಿದೆ. ಏಕೆಂದರೆ, ಈ ಕುಲಗಳ ಮುಖ್ಯ ಕೊರತೆ ಸಂಪತ್ತಿಲ್ಲದಿರುವಿಕೆಯೇ. ಇವರೆಲ್ಲ ಯುದ್ಧಾತುರರಾಗಿರಲು ಕಾರಣ ಅವರ ಧರ್ಮವಾನಗಳೇ ಹೊರತು ಮತ್ತಾವುದೂ ಅಲ್ಲ.

ಇವರನ್ನು ನಾವು ಸುಧಾರಣೆಗೆ ತರಬೇಕು; ಇಲ್ಲವೆ, ಸಂಪೂರ್ಣ ನಿರ್ಮೂಲಗೊಳಿಸಬೇಕು. ಈ ಎರಡನೆಯ ವಿಧಾನವನ್ನು ಯಾರೂ ಶಿಫಾರಸು ಮಾಡಿಲ್ಲವಾದುದರಿಂದ, ಮೊದಲನೆಯನ್ನೆ ಕೈಕೊಳ್ಳುವ.

ಸಮಸ್ತ ಜಗತ್ತಿನ ಯುದ್ಧಶಸ್ತ್ರ ವ್ಯಾಪಾರ ಬಗ್ಗೆ ಆಸ್ಟ್ರೀಯಾ ದೇಶದ ಪ್ರಸಿದ್ಧ ಯುದ್ಧಶಸ್ತ್ರ ವ್ಯಾಪಾರಿಯೊಬ್ಬನು ಲಂಡನಿನಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿರುವನಾಗಿ ತಿಳಿದುಬರುತ್ತದೆ.

ಇಂದಿನ ಯುರೋಪು.

ಅಲ್ಲೋಲ ಕಲ್ಲೋಲ ನೆಹರುರವರ ಅಭಿಮತ

ಪ್ರೇಗ್ — ಝೆಕೊಸ್ಲೊವಾಕಿಯ ದಿಂದ ನೆಹರುರವರು ಯುಗೋಸ್ಲಾವಿಯದ ಕಡೆಗೆ ಪ್ರಯಾಣಮಾಡಲು ಹೊರಟಿರುವಾಗ ಈ ದೇಶದಲ್ಲಿ ಉಂಟಾಗಿರುವ ಪ್ರಶ್ನೆಗಳು ಬಹು ಗೊಂದಲದುವು. ಸುಲಭವಾಗಿ ಇತ್ಯರ್ಥ ಮಾಡುವುದು ಕಷ್ಟ. ಸ್ಥಳೀಯ ರಾಜ್ಯಭಾರ ಬಹು ಚೆನ್ನಾಗಿದೆ, ಇದನ್ನೆ ... ದಲ್ಲಿ ಪ್ರಾರಂಭಿಸಬಹುದು. ರಾಜ್ಯಕ್ಕೆ ಕೆಡುಕು ಉಂಟಾಗದ ರೀತಿಯಲ್ಲಿ ಇಲ್ಲಿನ ಸಮಸ್ಯೆಗಳು ಮುಗಿಯಬೇಕೆಂದು ನನ್ನ ಆಸೆ. ರಾಜ್ಯದ ರಾಜ್ಯಭಾರವು ಹಾಳಾಗದ ಹಾಗೆ ಎಷ್ಟರವರೆಗೆ ಎಲ್ಲ ಜನಾಂಗಗಳವರಿಗೂ ಪೂರ್ಣ ಸಮಾಧಾನಕರ ... ಸ್ವಾತಂತ್ರ್ಯ ಕೊಡಬಹುದು ಎಂತ ... ಯುರೋಪು ಒಂದು ಅವಾಂತರವನ್ನೇ ಮಾಡಿಕೊಂಡಿದೆ. ಈ ರಾಜ್ಯದ ವಿಷಯ ಭಾರತವರ್ಷಕ್ಕೆ ... ಆದರೆ ... ವಾದಲ್ಲಿ ನಾವು ನಮ್ಮ ಹಿತ ... ನ್ನು ನೋಡಿ ... ಬೇಕಾಗುವುದು. ಅದು ... ಈ ಖಂಡಕ್ಕೆ ಬಂದು, ಬ್ರಿಟನಿಗಾಗಿ ನಾವು (ಅಧೀನರ) ಹೋರಾಡಬೇಕಾದುದು ಹೇಗೆ? ಅದನ್ನು ಭಾರತ ವಾಸಿಯರೇ ನಿರ್ಧರಿಸಬೇಕು ಅನರೀ ಆರ್ ... ಳು.

ಸ್ವತಂತ್ರ ಐಯರ್ಲೆಂಡು

ಡಿ'ವೆಲರರಿಗೂ ಬ್ರಿಟಿಷ ಸರಕಾರಕ್ಕೂ ನಡೆದ ಒಪ್ಪಂದದ ಶರ್ತಗಳಿಗನುಗುಣವಾಗಿ, ಐಯರ್ಲೆಂಡಿನಲ್ಲಿರುವ ಬ್ರಿಟಿಷ ಸೈನ್ಯವರ್ಗಗಳನ್ನು ಹಿಂದಕ್ಕೆ ಕರೆಯಲಾಗುವುದು. ಈ ಕಾರಣದಿಂದ ಸೈನ್ಯ ಬಲವನ್ನು ಈಗ ಇರುವುದಕ್ಕಿಂತ ಇಮ್ಮಡಿಯಾಗಿ ಹೆಚ್ಚಿಸುವ ... ಜನೆಯು ಡಿ'ವೆಲರರ ಸರಕಾರದಿಂದ ಕಲ್ಪಿಸಲಾಗಿದೆ. ಸೈನ್ಯದ ತರಬೇತಿಗಾಗಿ ಡಿ'ವೆಲರರು ಆಂಗ್ಲೇಯ ಸಂಗ್ರಾಮ ಪ್ರವೀಣರನ್ನು ಬರಮಾಡಿಕೊಳ್ಳುವರಂತೆ.

ದೊಡ್ಡ ಅಪಾಯ

ಜೆಕೆಸ್ಲೊವೆಕಿಯಾದಲ್ಲಿ ಹಿಟ್ಲರನ ಕೋರಿಕೆಗಳು

ಯುರೋಪ್ಯದಲ್ಲಿ ಈಗಿನ ಪ್ರಸಂಗ ಸಮಯವನ್ನು ನೋಡಿದರೆ, ಇನ್ನೊಂದು ಮಹಾಯುದ್ಧವು ಉಂಟಾಗುವುದು ಖಂಡಿತ ಎಂಬ ಅಭಿಪ್ರಾಯವು ಒಬ್ಬರಲ್ಲಿ ಉಂಟಾಗುತ್ತದೆ.

ಜೆಕೆಸ್ಲೊವೆಕಿಯವು ಜರ್ಮನಿಯ ಕೋರಿಕೆಗಳನ್ನು ಪೂರೈಸುವಂತಾದರೆ, ಪೋಲೆಂಡು ಮತ್ತು ಯುಗೊಸ್ಲೆವಿಯಾದ ಕುರಿತು ಬ್ರಿಟನಿನ ನಿರ್ಲಕ್ಷವಾದರೆ ಆಗ ಜರ್ಮನಿಗೆ ಒದಗುವ ಜಯವು ಶಾಶ್ವತ ತರದೆಂದು ಕಂಡುಬಂದರೂ, ಅದು ಶಾಂತಿದಾಯಕವಾಗಿಯೇ ಉಳಿಯದು. ಕೊನೆಗೆ ಯುರೋಪ್ಯದಲ್ಲಿ ಮಹಾಯುದ್ಧವು ನಡೆಯುವುದು ಖಂಡಿತವಾಗಿರುವುದು. ಆ ಯುದ್ಧದಲ್ಲಿ ಜರ್ಮನಿಯು ಪರಾಜಯವಾಗುವುದು.

ಕಳೆದ ಮಹಾಯುದ್ಧದ ಸಾಲ

ಕಳೆದ ಮಹಾಯುದ್ಧದ ದೆಸೆಯಿಂದ ಬ್ರಿಟನು ... ಅಮೇರಿಕಾದ ಸರಕಾರಕ್ಕೆ ಒಂದು ದೊಡ್ಡ ಋಣವನ್ನು ತೀರಬೇಕಾಗಿತ್ತು. ... ಒಪ್ಪಂದದಿಂದ ಬ್ರಿಟನ ಈ ಸಾಲವನ್ನು ಸಂಪೂರ್ಣ ಅಮೇರಿಕಾಕ್ಕೆ ಪಾವತಿ ಮಾಡಬೇಕೆಂದು ಕರಾರು ಆಗಿದ್ದರೂ ಕೆಲವೊಂದು ಕಂತುಗಳನ್ನು ಮಾತ್ರ ಕೊಟ್ಟು, ಇತ್ತೀಚೆಗೆ ಅನೇಕ ವರ್ಷಗಳಿಂದ ಆ ಸಾಲದ ಮರು ಪಾವತಿಯನ್ನು ನಿಲ್ಲಿಸಿಬಿಟ್ಟಿತ.

ಮೊನ್ನಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಈ ಸಾಲದ ಸಂಬಂಧವಾಗಿ, ಬ್ರಿಟನಿಗೆ ಆದರ ಮರುಪಾವತಿಯ ... ಆಲೋಚನೆ ಇರುವುದಾಗಿ ತಿಳಿಯಬಂತು. ಅಂತರಾಷ್ಟ್ರೀಯ ಕರಾರುಗಳನ್ನು ಪಾಲಿಸುವ ... ಬ್ರಿಟನು ಈ ರೀತಿ ವರ್ತಿಸುವುದಂತೆ. ಅಂದರೆ ... ಅಮೇರಿಕಾದ ಮೈತ್ರಿಯು ಬ್ರಿಟನಿಗೆ ಅತಿ ಅವಶ್ಯವಿದ್ದುದರಿಂದಲೇ, ಬ್ರಿಟಿಷ್ ಮುತ್ಸದ್ದಿಗಳು ಈ ರೀತಿ ವರ್ತಿಸುವುದಾಗಿರಬಹುದು.

ವರ್ಷೇ ವರ್ಷೇ ವೃದ್ಧಿಹೊಂದುತ್ತಿದೆ

ಕಾಮನ್ ವೆಲ್ತ್

ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ.

1937-38ನೇ ಸಾಲಿನ ಪ್ರಗತಿ.

ಗಳಿಸಿದ ಉದ್ಯಮ	ರೂ. 50,18,543
ಪೂರ್ಣವಾದ ಉದ್ಯಮ	ರೂ. 40,39,778

ದಕ್ಷಿಣ ಕನ್ನಡದ ಎಲ್ಲಾ ಕಡೆಗಳಲ್ಲೂ ಗೌರವಸ್ಥರೂ, ಸಮರ್ಥರೂ ಆದ ಏಜಂಟರು ಬೇಕು.

ಏಜನ್ಸಿ ವಿವರಗಳಿಗೆ:—

ಪಿ. ಆರ್. ನಾಯಕ್ ಆಂಡ್ ಸನ್ಸ್
ಸ್ಪೆಶಲ್ ಏಜಂಟ್ಸ್
ಕಾರ್ ಸ್ಟ್ರೀಟ್, ಮಂಗಳೂರು.

ಗವಾಂಕರ್ ಆಂಡ್ ಸನ್ಸ್
ಚೀಫ್ ಏಜಂಟ್ಸ್
163, ಗಾಂಧೀ ನಗರ, ಬೆಂಗಳೂರು

ಪೆಲೆಸ್ಟೀನದಲ್ಲೇನು

ಎಲ್ಲೆಲ್ಲೂ ದಂಗೆಗಳು

ಪೆಲೆಸ್ಟೀನದಲ್ಲೇನು? ಅರಬರಲ್ಲಿಯ ರಾಷ್ಟ್ರೀಯ ಭಾವವು ಉಂಟಾಗಿದ್ದು, ಎಲ್ಲ ಪಂಗಡಗಳು ಈ ದೃಷ್ಟಿಯಲ್ಲಿ ಐಕ್ಯ ಹೊಂದಿದ್ದಾರೆ. ಇದು ಇಲ್ಲಿ ಮಾತ್ರವಲ್ಲದೆ, ಉತ್ತರ ಆಫ್ರಿಕಾದ ... ಪ್ರದೇಶದಲ್ಲೂ ಕಾಣಬರುತ್ತದೆ. ಈ ಬಗೆಯ ಸ್ಥಿತಿಯಿಂದ ಮೊರಾಕೋ ... ಪ್ರದೇಶದಲ್ಲಿ ಭಯಂಕರ ಕೊಲೆಗಳು ... ಕಾರಣವಿದೆ. ಪ್ಯಾಲೆಸ್ಟೀನದಲ್ಲಿನ ಸ್ಥಿತಿಯ ಪರಿಣಾಮಗಳು ... ದ ರಾಜಕೀಯದಲ್ಲಿ ಪ್ರಭಾವ ನಡೆಯಲಾರವು.

ನ್ಯೂಯೋರ್ಕ ಟೈಂ.

ಪೆಲೆಸ್ಟೀನದ ಕುರಿತ, ಅಲ್ಲಿನ ಮುಸ್ಲಿಂ ಧರ್ಮ ಸ್ಥಾನಗಳ ಮೇಲೆ ... ನಡೆದಿರುವುದಾ । ಪರ್ಶಿಯನ್ ಭಾಷೆ ಪತ್ರಿಕೆಗಳ ಮೂಲಕ ಹಿಂದೂದೇಶದ ಪ್ರಚಾರ ನಡೆಯುತ್ತಿರುವುದಾಗಿ, ಲಂಡನಿನ ವಾರ್ತೆ ವರದಿಸುತ್ತವೆ.

ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳುವ ಬಗ್ಗೆ ವಿಮಾನಗಳನ್ನು ಮಾಡಲು ಬ್ರಿಟಿಷ ಮತ್ತು ಫ್ರೆಂಚ್ ಸರಕಾರಗಳು ಒಟ್ಟಾಗಿ ಆಲೋಚಿಸಿ ಒಂದು ಯೋಜನೆಯನ್ನು ಕಲ್ಪಿಸುವರೆಂದು ತಿಳಿದುಬರುತ್ತದೆ.

ಲಂಕೆಶಯರಿನ ವ್ಯಾಪಾರ

ಕೆಳಮೊಗವಾಗಿರುತ್ತ

... ಸರಕಾರದಿಂದ ಹಾಕಲ್ಪಟ್ಟ ನಿರ್ಬಂಧನೆಗಳ ದೆಸೆಯಿಂದ ಲಂಕೆಶಯರಿನಿಂದ ಆ ಕಡೆಗೆ ಹೋಗುತ್ತಿರುವ ಸರಕು ಕಡಿಮೆಯಾಗಿರುತ್ತದೆ. ... ಈ ನಿರ್ಬಂಧನೆಗಳನ್ನು ತೆಗೆದು ಹಾಕುವರೆ, ಲಂಕೆಶಯರಿನ ವ್ಯಾಪಾರಿ ಮಂಡಳಿಯ ಈಗ ಲಂಡನಿನಲ್ಲಿ ... ದ ... ಯೊಡನೆ ಮಾತುಕತೆ ನಡೆಯುತ್ತಾಗಿಯೂ, ಈ ವಿಚಾರದಲ್ಲಿ ಪರಸ್ಪರ ದೃಷ್ಟಿಯಲ್ಲಿ ಒಂದು ವ್ಯಾಪಾರ ಒಪ್ಪಂದವಾದಂತೆ ಲಂಕೆಶಯರಿನಿಂದ ಒಂದು ನ್ಯಾಯ ... ಮಂಡಳಿಯು ಸದ್ಯದಲ್ಲಿ ... ಹೋಗಲಿದೆ. ಆದರೆ ಇನ್ನು ಒಂದು ತಿಂಗಳ ವರೆಗೆ ಯಾವ ಒಪ್ಪಂದ ಕರಾರುಗಳಾಗುವಂತಿಲ್ಲ.

೦ ೦ ೦ ೦

ಚೀನಾ ಜಪಾನ್ ಮತ್ತು ಹಿಂದೂ ಈ ದೇಶಗಳ ಪ್ರತಿಸ್ಪರ್ಧೆಯಿಂದ ಲಂಕೆಶಯರಿನ ವಸ್ತ್ರ ವ್ಯಾಪಾರವು ಕುಂದುತ್ತಾ ಬಂದು ಸಾವಿರಾರು ಮಂದಿಗಳು ದಿನೇ ದಿನೇ ಉದ್ಯೋಗ ಕಳೆಗೊಳ್ಳುತ್ತಿದ್ದಾರೆ. ಸ್ಥಿತಿಯು ಇನ್ನೂ ಕೆಡುವ ಸಂಭವವಿರುವುದಾಗಿ ಅಲ್ಲಿನ ತಜ್ಞರ ಅಭಿಪ್ರಾಯ. ಹೀಗಿರುತ್ತಾ ಸ್ಥಿತಿಯು ಸಂಪೂರ್ಣ ಕೆಟ್ಟುಹೋಗುವ ಮೊದಲೇ ಲಂಕೆಶಯರ ಉದ್ಧಾರದ ಬಗ್ಗೆ ಸರಕಾರವು ಒಂದು ರಾಯಲ್ ಕಮಿಶನನ್ನು ನೇಮಿಸಬಾರದೆ ಎಂಬ ಅಲ್ಲಿನ ಪತ್ರಿಕೆಯೊಂದರ ಉದ್ಗಾರ ಹೊರಡುತ್ತದೆ.

ಅರೆ ನೋಟಗಳು!

ಬಂಗಾಳದಲ್ಲಿ ಕಾಂಗ್ರೆಸಿಗೆ ಶಕ್ತಿಯು ಸಿಗಲಿಲ್ಲ. ಹಾಗೆಂದು ಕಾಂಗ್ರೆಸು ಕೀಳೆಂದು, ಕೆಲಸಕ್ಕೆ ಕಾರಣವಿಲ್ಲ. ಅವಿಶ್ವಾಸದ ಠರಾವು ತರುವ ಮೊದಲೇ ಬೇಕಾದ ಸಿದ್ಧತೆ ನಡೆಸಬೇಕಾಗಿತ್ತು. ವೋಟುಗಳ ನಿರ್ಧಾರವಿಲ್ಲದೆ ಠರಾವಿನ ನಿರ್ಧಾರವು ವ್ಯರ್ಥ.

++ ++ ++

ಈ ಅವಿಶ್ವಾಸದ ಠರಾವುಗಳ ನಿರ್ಧಾರದ ವೃತ್ತಾಂತ ಓದಿದರೆ, ಅಮೇರಿಕದ ಫಿಲ್ಮುಗಳಲ್ಲಿನ ನಾನಾ ಸಂಗಡಿಗರು ಮಾಡುವ ಕೃತ್ರಿಮೋಪಾಯ ಸಾಹಸಾದಿಗಳ ಚಿತ್ರವನ್ನು ಬಣ್ಣಿಸಿದಂತೆ ತೋರುವುದು. ಮೆಂಬರುಗಳನ್ನು ಕದ್ದೊಯ್ಯುವುದು, ರಾತ್ರಿಯನ್ನು ಎಸೆಂಬ್ಲಿಯೊಳಗೇ ಕಳೆವುದು, ಕೆಲವರನ್ನು ಸೆರೆಹಿಡಿವುದು, ಲಂಚದ ಪ್ರಕಟಣೆ ಇತ್ಯಾದಿಗಳೆಲ್ಲ ಕುಹಕಿಗಳ ಕಾರ್ಯಗಳು. ಆದರೂ ಈ ಅವಿಶ್ವಾಸದ ಠರಾವನ್ನು ಮುಂತಂದವರು ಕಾಂಗ್ರೆಸು ಪಕ್ಷದವರೇ ಅಲ್ಲದಿದ್ದುದೊಂದು ಕಾಂಗ್ರೆಸಿಗೆ ಕೀರ್ತಿ.

++ ++ ++

ಯುರೋಪಿಯರು ಕಾಂಗ್ರೆಸಿನ ಕಡೆ ವೋಟು ಕೊಡಲಿಲ್ಲವೆಂದರೆ ಸಾಲದು. ಹರಿಜನರೇ ಮೊದಲಾದವರ ಪ್ರತಿನಿಧಿಗಳನ್ನಾದರೂ ಅಲ್ಲಿ ಏಕೆ ಕಾಂಗ್ರೆಸು ಸ್ವಪಕ್ಷಕ್ಕೆ ಒಲಿಸಿಕೊಳ್ಳಲಿಲ್ಲ?— ಬಂಗಾಳದಲ್ಲಿ ಮುಖಂಡರೇ ಇಲ್ಲವೆಂದು ತೋರುವುದು. ಶ್ರೀ| ಶರತ್ ಬೋಸರು ಕೃತಾರ್ಥರಾಗಲಿಲ್ಲ.

++ ++ ++

ಕಾಂಗ್ರೆಸ್ ಕಾರ್ಯಕಾರೀ ಮಂಡಲವು ಇದನ್ನೊಪ್ಪಲೇಬೇಕು. ಈ ಮಂಡಲವು ಅಲ್ಲಿನ ಕಾಂಗ್ರೆಸ್ ಪಕ್ಷಕ್ಕೆ ಯಾವ ರೀತಿಯಲ್ಲಿ ವರ್ತಿಸಬೇಕೆಂದಾದರೂ ಬುದ್ಧಿ ಹೇಳುತ್ತಿಲ್ಲವೇಕೆ? ಶರತ್‌ರನ್ನು ಮಂಡಲದಲ್ಲಿ ಸೇರಿಸಿಕೊಂಡಿರುವುದೇ, ಬಂಗಾಳದಲ್ಲಿ ಕಾಂಗ್ರೆಸು ಹಿಂದೆ ಬೀಳಲು ಕಾರಣವಾಯಿತೆಂಬಂತಿದೆ.

++ ++ ++

ಒಂದು ಅವಿಶ್ವಾಸದ ಠರಾವು ವ್ಯರ್ಥವಾದೊಡನೆ ಮಿಕ್ಕೆಲ್ಲವನ್ನು ಹಿಂತೆಗೆದರು. ಇದೊಂದು ಚೆನ್ನಾಯಿತು. ಮುಂದೆ ಇವು ಖಂಡಿತ ಜಯತರಲಾರವಾದಲ್ಲಿ ಎಸೆಂಬ್ಲಿಯ ಚರ್ಚೆಗೆ ಬರಲೇಬಾರದು. ಜಮೀನ್ದಾರರು ಕಾಂಗ್ರೆಸಿನ ಪಕ್ಷವಾಗಿಲ್ಲ. ಪ್ರಾಂತ್ಯದಲ್ಲಿ ಅಧಿಕಾರ ಹೊಂದುವ ಬಲಬರಬೇಕಾದರೆ, ಜಮೀನ್ದಾರರ ಸಹಾಯ ಅಗತ್ಯ. ಬಿಹಾರದಲ್ಲಿ ಮಂತ್ರಿಗಳು ವ್ಯವಹರಿಸಿರುವಂತೆ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷವು ಜಮೀನ್ದಾರರೊಡನೆ ಏಕೆ ವ್ಯವಹರಿಸಿ ಒಪ್ಪಂದ ಮಾಡಿಕೊಳ್ಳಬಾರದು?

++ ++ ++

ಬಾಬು ರಾಜೇಂದ್ರಪ್ರಸಾದರೂ ಮೌಲಾನಾ ಆಜಾದ್‌ರೂ ದರ್ಭಾಂಗದ ಮಹಾರಾಜರೊಡನೆಯೂ ಇತರ ಜಮೀನ್ದಾರರೊಡನೆಯೂ ಒಂದು ಕರಾರನ್ನು ಮಾಡಿಕೊಂಡರಲ್ಲವೆ? ಸ್ವಾಮಿ ಸಹಜಾನಂದ ಮೊದಲಾದ ಸಮಾಜವಾದೀ ಪಕ್ಷಗಳವರೂ ಎಂತೆಂತಹ ಪ್ರಕಾರಗಳಿಂದ ಬಾಧಿಸಿದರೂ, ಮಂತ್ರಿಮಂಡಲಕ್ಕೆ ಏನೂ ಹಾನಿಯುಂಟಾಗಲಿಲ್ಲ. ಜಮೀನ್ದಾರರೂ ಒಕ್ಕಲುಗಳಿಗೆ ಒಪ್ಪಂದದಂತೆ ನ್ಯಾಯ ತೀರಿಸುವಂತಾದರೆ ಸಾಕು. ಒಕ್ಕಲುಗಳೂ ಜಮೀನ್ದಾರರೂ ಮಂತ್ರಿಗಳ ಪಕ್ಷ ಸೇರುವರು.

++ ++ ++

ಬಂಗಾಳದಲ್ಲಿ ಜಮೀನ್ದಾರರ ನಾಯಕರೂ ಇಲ್ಲ. ಬರ್ದವಾನ ಮಹಾರಾಜರು ತಾವೇ ದೃಢಬುದ್ಧಿಯವರಲ್ಲ. ಕಾಂಗ್ರೆಸಿನ ಖಾಸಾ ಅಧಿನಾಯಕನೂ ಇಲ್ಲ. ಹೀಗಾಗಿ, ಯಾರು ಯಾರೊಡನೆ ಒಪ್ಪಂದ ಮಾಡಬಹುದು?

++ ++ ++

ಡಾ| ವಿಧಾನಚಂದ್ರರಾಯರು ಈಗ ಹರಿಪುರದಲ್ಲಿ ಶ್ರೀ ನಳಿನೀ ರಂಜನ ಸರಕಾರರನ್ನು ಮುಖ್ಯಮಂತ್ರಿ ಫಜ್ಲುಲ್‌ಹಕ್ಕರಿಂದ ದೂರವಿರಿಸಬಹುದು. ಇವರು ದೂರವಾದರೆ, ಇಷ್ಟು ಕಾರ್ಡುಗಳಿಂದ ಮಾಡಿದ ಕೋಟೆಯಂತೆ, ಮಂತ್ರಿಮಂಡಲವು ಕುಸಿದು ಬೀಳುವುದು ಖಂಡಿತ.

++ ++ ++

ಸಿಮ್ಲಾದ ಎಸೆಂಬ್ಲಿಯಲ್ಲಿ ನಡೆದ ಅದ್ಭುತಗಳೇ ಬೇರೆ. ಹಿಂದೀಯರನ್ನೇ ಮೇಲು ಹುದ್ದೆಗಳಿಗೆ ನೇಮಿಸಬೇಕೆಂದು ಚಳವಳ ಎಬ್ಬಿಸಿದ ಸರ್ ಘಜ್ನಾವಿಯವರೇ, ಈಗ ಸರಕಾರವು ಹಾಗೆ ಮಾಡದಿದ್ದುದನ್ನು ಕುರಿತು ಕಾಂಗ್ರೆಸು ತಂದ ಅತೃಪ್ತಿಸೂಚಕ ಠರಾವನ್ನು ಅನುಮೋದಿಸಲಿಲ್ಲ. ಕಾರಣ,-ಮುಸ್ಲಿಂ ಲೀಗಿಗೆ ಪಕ್ಷವಾಗಿ ನಿಂತು ಘಜ್ನಾವಿಯವರು ತಮ್ಮ ಹಿಂದಣ ಸೂತ್ರಕ್ಕೆ ತಾವೇ ವಿರುದ್ಧರಾದರು.

++ ++ ++

ಆದರ ಫಲವನ್ನೂ ತಿಂದರು. ಮರುದಿನ ಕರಾವಳಿ ಹಡಗು ಸಂಚಾರ ವಿಷಯದಲ್ಲಿ ಇವರ ಮಸೂದೆಯು ಚರ್ಚೆಯಾಗುವಾಗ, ಸರಕಾರದ ಕಡೆಯಿಂದ ಸರ್ ಮಹಮ್ಮದ ಜಫ್ರುಲ್ಲಾರವರು ಇವರ ಮಸೂದೆಯ ತತ್ವವನ್ನೇ ವಿರೋಧಿಸಿದರು!

++ ++ ++

ಜಿನ್ನಾರವರು ಸಿಮ್ಲಾದಲ್ಲಿದ್ದಾರೆ. ಎಸೆಂಬ್ಲಿಯ ಸಭೆಯಲ್ಲಿ ಅವರು ಅಪೂರ್ವವೆಂಬ ಮಾತು ಕೇಳಬರುತ್ತದೆ. ಅವರು ಅಪೂರ್ವವೇ ಆದರೂ, ಕಾಂಗ್ರೆಸಿನವರು ಮುಂತರುವ ಮತ್ತು ಚರ್ಚಿಸಿ ಮುಗಿಸುವ ವಿಷಯಗಳ ಮಹತ್ವದ ಎದುರಲ್ಲಿ ಮುಸ್ಲಿಮ್ ಲೀಗ್ ಮಾಡಿದ್ದೆಲ್ಲ ಅತ್ಯಲ್ಪವಾಗಿದೆ ಎಂದೂ ತೋರುತ್ತದೆ. ಕಾಂಗ್ರೆಸ್ ಪಕ್ಷದ ಮೆಂಬರರ ಸಂಖ್ಯೆಯ ಅರೆವಾಸಿ ತಾವು ಎನ್ನುವ ಲೀಗಿನವರು, ಕಾಂಗ್ರೆಸಿನವರು ಪೂರಯಿಸುವ ಕೆಲಸದ ಅರೆವಾಸಿಯನ್ನು ಮಾಡಿರುವರೇ? ಇವರಲ್ಲೆಷ್ಟು ಮಂದಿ ಸರಕಾರದ ಸೂಚನೆ ಪತ್ರಗಳನ್ನು ಓದಿ ಚರ್ಚಿಸಿಕೊಂಡು ಬರುವರು? ಇವರಲ್ಲೆಷ್ಟು ಮಂದಿ ಪ್ರಶ್ನೆ ಕೇಳುವರು, ಅಥವಾ ಸೂಚನೆಗಳನ್ನು ಮುಂದಿಡುವರು? ಅತ್ಯಲ್ಪ.

++ ++ ++

ಕಾಂಗ್ರೆಸಿನವರೇ ಕಾರ್ಯ ಬಾಹುಳ್ಯದ ಭಾರ ಹೊರುವಂತೆ ಲೀಗ್ ಬಿಟ್ಟಿರುವುದೇಕೆ? ಕಾಂಗ್ರೆಸಿಗೂ ಸರಕಾರಕ್ಕೂ ಮಾತು ಬಂದಾಗ ಮಾತ್ರ ಲೀಗ್ ಮುಂದೆ ಬರುವುದೇ? ಲೀಗಿನ ಮೆಂಬರರನ್ನು ಎಸೆಂಬ್ಲಿಗೆ ಕಳುಹಿದವರಿಗೆ ಇದು ನ್ಯಾಯವೆ?

++ ++ ++

ರಷ್ಯಾ ಜಪಾನುಗಳ ಗಡಿ ಸಿಧ್ರ್ಯದ(?) ಕೆಂಟನ್ ಪ್ರಾಂತ್ಯದಲ್ಲಿ ಜಪಾನಿನ ದಾಳಿ, ಸಿಡಿಗುಂಡು ಮಳೆ ಕುರಿತಾಗಿ ಫ್ರಾನ್ಸಿನ ದೂರು, ಜರ್ಮನಿಯ ಯುದ್ಧಸನ್ನಾಹ ಪ್ರದರ್ಶನ, ಝೆಕ್ಕರೊಡನೆ ಜರ್ಮನರ ದರ್ಪ, ಮುಸೋಲಿನಿಯ ಸಿದ್ಧತೆಯ ಪ್ರಕಟಣೆ – ಇವೆಲ್ಲ ಈವಾರದಲ್ಲಿ ಯುದ್ಧಾತುರದ ವರ್ತನೆಯ ಕುರುಹು.

++ ++ ++

ಇದೊಂದು ವಿಶೇಷ ವಾರ್ತೆ. ಒರಿಸ್ಸಾ ಸ್ಥಳೀಯ ರಾಜ್ಯಗಳನ್ನು ಕುರಿತಾದ ವಿಮರ್ಶೆಗೆ ಸಂಬಂಧಪಟ್ಟ ರೆಕಾರ್ಡೆಲ್ಲವೂ ಮಾಯವಾಗಿದೆಯಂತೆ!

++ ++ ++

ಇಂಗ್ಲೆಂಡಿನಿಂದಾದ ಮುಖ್ಯ ಲಾಭ(?)ಗಳಲ್ಲಿ ಹಲಕೆಲವು ಎಕ್ಸಪರ್ಟರು. ಥೋಮಸ್, ಸಾರ್ಜೆಂಟ್, ಚೆಂಬರ್ಸ್, ಒಲಿವರ್ ಇತ್ಯಾದಿಯರು! ಆಮದುಗಳು 60 ಮಂದಿ ಹಡಗು ಖಲಾಸಿಗಳು, ಎಕ್ಸಪರ್ಟರ ಸಂಬಳ ಒಬ್ಬೊಬ್ಬರಿಗೆ ರೂ 2500 ಮತ್ತು ರೂ 150 ಚಿಲ್ಲರೆ ಬತ್ತೆ. ಇವರ ಸಂಬಳಕ್ಕೂ ಖಲಾಸಿಗಳ ಮಜೂರಿಗೆ ಸರಿಯೆ?

++ ++ ++

'ನಮ್ಮ' ಸೈನ್ಯದ ಖರ್ಚನ್ನು ಪುನರ್ವಿಮರ್ಶಿಸಿ, ಸೈನಿಕರ ಸಂಖ್ಯೆ ಇಳಿಸಿ, ನಮ್ಮ ಖಜಾನೆಗೆ ಇನ್ನೂ ಎರಡು ಕೋಟಿ ರೂಪಾಯಿಗಳ ಹೆಚ್ಚಿಗೆ ಖರ್ಚನ್ನು ಬ್ರಿಟಿಷ ಸರಕಾರವು ಕೂಡಿಸಿ ಕೊಟ್ಟಿರುವುದೂ ಭಾಗ್ಯವೆ!

++ ++ ++

ಪವಿತ್ರವಾದ ಪೆಲಸ್ಟೀನದಲ್ಲಿ ಅರಬರನ್ನು ಕೊಲ್ಲುವ ಸೈನಿಕರ ಕ್ರಮ ನೋಡಿ, ಯೆಹೂದ್ಯರ ಪಕ್ಷವಾಗಿರುವ ಬ್ರಿಟಿಷ ಯುದ್ಧ ಮಂತ್ರಿ ಹೋರ್ ಬೆಲಿಷಾರವರನ್ನು ಆಕ್ಷೇಪಿಸಿ ಹೀಗೆ ಸೈನಿಕರ ಸಹಾಯಕ್ಕೆ ಒಂದು ಪೈಯನ್ನೂ ಮಂಜೂರು ಮಾಡಬಾರದಾಗಿ ದೊಡ್ಡಣ್ಣ ಶೌಕತಾಲಿಯವರ ಭಾಷಣ.

++ ++ ++

ಸರ್ ಜೋನ್ ವೂಲ್ಲಿಯವರ ಇಲ್ಲಿ ಸಂಚಾರ ಮಾಡುತ್ತಿರುವರು. ಇಂಡಿಯಾ ಸರಕಾರದ ಕೆಲಸದ ಮೇಲೆ. ಅವರ ಪತ್ನಿಗೆ ಇದರಿಂದ ಬೇಸರವಾಗದಂತೆ, ಪತಿಯ ಕಾರ್ಯದರ್ಶಿಯಾಗಿ ಮಾಸಿಕ 500 ರೂಪಾಯಿ ತೆರಲಾಗುತ್ತದೆ. ಬಹಳ ಕಷ್ಟ. ಟೈಪಿಸ್ಟ್ ಆಗಿ ಒಬ್ಬಳು ಮಗಳೂ, ಗುಮಾಸ್ತನಾಗಿ ಒಬ್ಬ ಮಗನೂ ಇವರಿಗೆ ದೊರೆಯದಿದ್ದುದೂ ಇನ್ನೂ ಕಷ್ಟ. ಇವರಿಗೆ ಸಂಬಳ ಕೊಡಲ ನಮ್ಮಲ್ಲಿ ಹಣವಿರುವಾಗ ಇವರೇಕೆ ಮಕ್ಕಳನ್ನು ತರಲಿಲ್ಲವೊ?

++ ++ ++

ಫ್ರೆಂಕೋವಿನ ಪರಾಕ್ರಮ ಬ್ರಿಟಿಷರ ಪತ್ರಗಳಿಗೆ ತಕ್ಕ ಜವಾಬನ್ನೂ ಕೊಡಲಾರ. ಪರಾರಕ್ಕಿರದು(?) ಬ್ರಿಟಿಷ ಹಡಗುಗಳನ್ನೆ ಧ್ವಂಸ ಮಾಡುತ್ತಿರುವನು. ಇಟಲಿಯ ಸಹಾಯವೂ ಪ್ರತಿವಾರವೂ ತುಂಬ ಅವನಿಗೆ ದೊರೆಯುತ್ತಿದ್ದಾಗಿ ಪ್ರಕಟವಾಗುತ್ತಲೇ ಇದೆ. ಟ್ಯಾರಿಯ(?)ದಲ್ಲಿನ ಸ್ಪೆಯಿನ್ ಜನರು ಫ್ರೆಂಕೋವನ್ನು ಸೇರಬೇಕಾಗಿ ಹಿಟ್ಲರನ ಅಪ್ಪಣೆ.

++ ++ ++

ಡಾ| ಖಾರೆಯವರು ಮರಾಠರನ್ನು ಸ್ವವಶಮಾಡಿಕೊಳ್ಳುವ ಭರದಲ್ಲಿದ್ದು, ಕಾಂಗ್ರೆಸನ್ನು ದೂರುತ್ತಿರುವರು. ಮರಾಠಿಪ್ರಾಂತ್ಯದ ವಿದ್ಯಾರ್ಥಿಗಳು 'ಗಾಂಧಿಯನ್ನು ಕೊಲ್ಲಿರಿ' ಎನ್ನಲೂ ಸಿದ್ಧರು! ಏಕೆ? ಫೆಸಿಸ್ಟ್ ಸರಕಾರವಾಗಿದ್ದಲ್ಲಿ ಖಾರೆಯವರ ತಲೆ ಕಡಿಯುತ್ತಿದ್ದರೆಂದು ಗಾಂಧಿಜಿ ಹೇಳಿರಲಿಲ್ಲವೆ? ಅದಕ್ಕಿದು ಉತ್ತರವಂತೆ. ಆತ್ಮನನ್ನು ಧ್ವಂಸಮಾಡುವುದಕ್ಕಾಗಿ ಕಾಂಗ್ರೆಸು ಅಧಿಕಾರ ನಿರ್ವಹಿಸಿತಲ್ಲವೆ? ಈಗ,–ಗವರ್ನರರ ಕಡೆ ಹಲವು ಕಾಂಗ್ರೆಸ್‌ವಾಲರು, ಕಾರ್ಯಕಾರೀಮಂಡಲಿಯ ಕಡೆ ಹಲವು ಕಾಂಗ್ರೆಸ್ ವಾಲರೂ,–ಹೀಗಾದರೆ, ಆತ್ಮ ಧ್ವಂಸವಾಗುವುದು ಎಂದು ಇವರು ನಂಬಿರಬಹುದು.

++ ++ ++

ಜನಸಂಖ್ಯೆಯ ನೂರಕ್ಕೆ ¼ ಮಂದಿಯಾಗಿರುವ ಯುರೋಪೀಯರಿಗೆ ಸೇಕಡಾ 10ರಂತೆ ಪ್ರಾತಿನಿಧ್ಯವು ಬಂಗಾಳದಲ್ಲಿ ಕೊಟ್ಟದ್ದು ಸಾರ್ಥಕವಾಯಿತು, 99¾ ನೇಟಿವರನ್ನು ಆಳಲಿಕ್ಕೆ(?) ಬದಲು ಈ ಪ್ರತಿನಿಧಿ ¼ ಮಂದಿ ಸಾಕಾದರು. ಕಾಂಗ್ರೆಸು ಅಧಿಕಾರಕ್ಕೆ ಬಂದರೆ, ಮುಸ್ಲಿಮರನ್ನು ಒಲಿದುಕೊಳ್ಳುವ ಪ್ರಯತ್ನವಾದೀತೆಂದೇ ಬೆದರಿಕೆ.

++ ++ ++

ಜೈಲುಗಳ ಸುಧಾರಣೆ ಮಾಡಲೆಳಸುವ ಕಾಂಗ್ರೆಸು ಮಂತ್ರಿಗಳಿಗೆ ಎಚ್ಚರಕೊಡುವವರಾರು? ಮೊನ್ನೆ ಪೇಶಾವರದಲ್ಲೊಬ್ಬನು— "ನಾನೀಗ ಜೈಲಿಗೆ ಹೋಗುವ ಆತುರದಲ್ಲಿದ್ದೇನೆ. ಡಾ| ಖಾನ್ ಸಾಹೇಬರು ಜೈಲು ಸುಧಾರಣೆ ಮಾಡಿರುವ ಕಾರಣ, ಕೈದಿಗಳಿಗೆ ಉತ್ತಮ ಆಹಾರವೂ ಬೆಚ್ಚನಾದ ಬಟ್ಟೆಗಳೂ ಅಲ್ಲಿ ಸಿಗುವುವಂತೆ" ಎಂದರು. ಇನ್ನೇಕೆ ಸುಧಾರಣೆಗಳು? ಜೈಲಿಗೆ ಹೋಗಲು ಕೈಕೊಳ್ಳಬಹುದಾದ ವಿಧಾನಗಳನ್ನು ಕಡಿಮೆಮಾಡಿದರಾಗದೆ? ಮದ್ಯಪಾನ ನಿಷೇಧ, ಜೈಲು ಸುಧಾರಣೆಗೆ ಖರ್ಚು ಎರಡೂ ಎಲ್ಲಿಂದ ಬಂದೀತು.

++ ++ ++

ಹಿಂದುಗಳನ್ನೂ ಸಿಕ್ಕರನ್ನೂ ಪೋಲೀಸ್ ಇಲಾಖೆಗೆ ಹೆಚ್ಚಾಗಿ ಸೇರಿಸಬೇಕೆಂದು ಡಾ| ಖಾನ್ ಸಾಹೇಬರಿಗೆ ದೂರು ಹೋಯಿತು. "ಇದೆಲ್ಲಿಯದು? ನಾವು ಯಾವ ಗವರ್ನಮೆಂಟಿನಲ್ಲಿ ಹಿಂದು, ಮುಸ್ಲಿಮ, ಸಿಕ್ಕ ಎಂದು ಯಾರೂ ಇಲ್ಲ. ಎಲ್ಲರೂ ಹಿಂದೀಯರೆ? ಮುಸ್ಲಿಮರನ್ನು ಪೋಲೀಸ್ ಕೆಲಸಕ್ಕೆ ನೇಮಿಸಿದವರಾರು?" ಎಂದು ಅವರು ಪ್ರತಿವಾದಿಸಿದರು. ಹಿಂದೀಯರೆಂದೇ ಎಲ್ಲರಿಗೂ ಅಲ್ಲಿ ನೌಕರಿ. ಹೊರತು ಜಾತಿ ನೋಡುವುದು ಅಲ್ಲ.

++ ++ ++

ವಿಮಾ ಆಫಿಸರನಾಗಿ ಯುರೋಪಿಯರನ್ನು ನೇಮಿಸಿದ್ದು ಸರಿಯೆಂದು ಎಸೆಂಬ್ಲಿಯಲ್ಲಿ ಲೀಗಿನವರು ಹೇಳಲು ಕಾರಣವು ಈಗ ಪ್ರಕಟವಾಗಿದೆ. ಯಾವನು ಯೋಗ್ಯನೆಂದು ಈಗ ತಿಳಿದು ಬಂದಿದೆಯೋ ಅವನು ಹಿಂದುವಾಗಿದ್ದನು. ಮುಸ್ಲಿಮರಾರೂ ಆ ಪದವಿಗೆ ಯೋಗ್ಯರಿರಲಿಲ್ಲ. ಹಿಂದುವಿಗೆ ಆ ಹುದ್ದೆ ಸಿಗುವ ಬದಲಾಗಿ ಅದು ಬ್ರಿಟಿಷರಿಗೆ ಹೋದರೂ ಚಿಂತೆಯಿಲ್ಲೆಂದು ಲೀಗಿನ ಘಜ್ನಾವಿಗಳ ಅಭಿಪ್ರಾಯ.

ಬ್ರಿಟಿಷ ವಸ್ತುಗಳಿಗೆ ಬಹಿಷ್ಕಾರ ಹಾಕಿ, ಅವರು ಪೆಲಸ್ಟೀನದಲ್ಲಿ ಮಾಡುವ ಅರಬ ಹಿಂಸೆಗೆ ಪ್ರತೀಕಾರವಾಗಬೇಕಂತೆ, ಬ್ರಿಟಿಷ ಜನರನ್ನು ಇತ್ತ ಬರಮಾಡಿಸುವುದರಲ್ಲಿ ಪ್ರೋತ್ಸಾಹಕೊಟ್ಟು ಹಿಂದುಗಳ ಮೇಲೆ ಪ್ರತೀಕಾರವಾಗಬೇಕಂತೆ!

FANCY SHIRTING

Snow white very soft decent and durable. 9 yds ×54" sufficent for 6 shirts Price 5—8—0 Post free money refunded if unapproved Half dozen fancy handkerchiefs 22"×22" will be given to every purchaser

AGENTS WANTED EVERY WHERE ASK FOR FREE PARTICULARS

NATIONAL TRADING CO.,
LUDHIANA, A. 211.

ಕೌತುಕಮಯ ಭವಿಷ್ಯವಾಣಿ.

ಹಿಟ್ಲರ್ ★ ಮುಸಲೆನಿ ★ ಸ್ಟೆಲೀನ್

ಇವರೊಳಗೆ ಈರ್ವರು ಮಡಿಯುವರು

ಶ್ರೀ ಡಿಸ್ಮೊಂಡ್‌ರೆಂಬವರು ಪ್ರಸಿದ್ಧ ಲೇಖನಕಾರರು, ಪ್ರಖ್ಯಾತ ಭವಿಷ್ಯ ಜ್ಞಾನಿಗಳು, ಇವರು ಕೆಲವೆ ದಿವಸಗಳೊಳಗೆ ಮೊನ್ನೆ ಈಚೆಗೆ, ಜಗತ್ತಿನ ಮುಂದಿನ ಸ್ಥಿತಿಯ ಕುರಿತಾಗಿ ಒಂದು ಗ್ರಂಥವನ್ನು ಹೊರಡಿಸಿರುವರು.

ಲಂಡನಿನ 'ಡೈಲಿ ಮಿರರ್' ಎಂಬ ಪತ್ರಿಕೆಯ ವಿನಂತಿ ಪ್ರಕಾರ ಈ ಮಹನೀಯರು ಮುಂದಿನ ಸ್ಥಿತಿಯ ಕುರಿತು ಭವಿಷ್ಯಗಳಿಂದ ಕೂಡಿದ ಒಂದು ಲೇಖವನ್ನು ಬರೆದಿರುವರು.

ಈ ಲೇಖವು ಈ ಕೆಳಗೆ ಕೊಡಲಾಗಿದೆ.—ವಿಸ್ಮಯಕರ ವಿಷಯಗಳು ಅದರಲ್ಲಿ ಕೂಡಿವೆ.

ಬ್ರಿಟನನ್ನು ನಡೆಯಿಸುವ ಜನರಾದ— ಹಿಟ್ಲರ್, ಮುಸಲೆನಿ ಮತ್ತು ಸ್ಟೆಲೀನರು ಈ ಮೂವರಿಗೆ ಅವರೆಲ್ಲಿರುವರೆಂದು ತಿಳಿದಿಲ್ಲ. ಈ ಜಗತ್ತಿನ ಗೊಂದಲದಲ್ಲಿ ಅವರು ದಿಗಿಲುಗೊಂಡಿರುವರು.

ಆದರೆ ಮುಂದೇನು?— ಮುಂದಿನ ನಾಲ್ಕು ವರ್ಷಗಳಲ್ಲಿ ಅನೇಕ ಮಹತ್ವಾದ ವಿಷಯಗಳು ನಡೆದು ಬಿಡುವವು.— ಈ ಮಹತ್ವ ವಿಷಯಗಳು ಜಗತ್ತಿಗೆ ಮಾತ್ರ [illegible] ಬ್ರಿಟನಿಗೆ ಮುಖ್ಯ ಸಂಬಂಧವುಳ್ಳವುಗ[illegible]ಗುವವು.

ಸಮಸ್ತ ವಿರೋಪ್ಯವು ಇನ್ನು ಎರಡು ಯಾ ಮೂರು ವರ್ಷಗಳಲಿ ಮಹಾಯುದ್ಧದಲ್ಲಿ ತೊಡಗುವುದು—ಆದರೆ ಬ್ರಿಟನು ಈ ಯುದ್ಧದಲ್ಲಿರದು.

1942—ಈ ವರ್ಷವು ಯುರೋಪ್ಯದ ಸರ್ವಾಧಿಕಾರಿಗಳಿಗೆ ವ್ಯಕ್ತ್ಯಕರವೆನಿಸುವುದು.

ಇದೇ ವರ್ಷದಲ್ಲಿ ಹಿಟ್ಲರ್ ಪ್ರಭಾವಿತ ಜರ್ಮನಿಯು—ಇದು ನಿಜವಾದ ಜರ್ಮನಿಯಲ್ಲ ಸಂಗ್ರಾಮ ವಿಚಾರದಲ್ಲಿ ಅತ್ಯಂತ ತರಬೇತು ಹೊಂದಿದ ಜನಾಂಗವಾಗಿರುವುದು. ಜರ್ಮನ್ ವೈ[illegible]ರು ಜಗತ್ತಿನಲ್ಲಿ ಮಹಾ ಪ್ರಖ್ಯಾತರೆನಿಸುವರು.

ಮುಂದಿನ ಯುರೋಪ್ಯದ ಯುದ್ಧವು ದೇಶ ದೇಶಗಳೊಳಗೆ ನಡೆಯುವುದು. ಆದರೆ ಅವುಗಳು ಅಂತಃಕಲಹ ಸಂಬಂಧವಾದ ಯುದ್ಧಗಳಾಗುವವು. ಅದು ದೇಶಗಳೊಳಗಿನ ಡೆಯುವುದು.

ಇಂದಿನ ದಿನಗಳಲ್ಲಿ ಹಿಟ್ಲರನು ಸಿರುಪಾಯ ಮನುಷ್ಯನಾಗಿರುವನು.

ಅವನಂತೆ ಮುಸಲೆನಿಯು. ಹೀಗೆಂದು ಕೆಲ ವರ್ಷಗಳ ಹಿಂದೆ ಆತನ ದರುಶನ ಮಾಡಿದಾಗ ಆತನ ಮುಖದಿಂದ ನನಗೆ ತಿಳಿಯಬಂತು. ಹಾಗೇನೆ ಸ್ಟೆಲೀನನು. ಸ್ಟೆಲೀನನು ಮೂವರಲ್ಲಿ ಅತ್ಯಂತ ನಿರುಪಾಯನಾದವನು.

ಹಿಂಸೆಯ ಮೂಲಕ ಇವರಲ್ಲಿ ಒಬ್ಬನ ಸಾವು ನಡೆಯುವುದು ಖಂಡಿತ. ಇವರಲ್ಲಿ ಈರ್ವರು ಕೊಲೆ ಮಾಡಲ್ಪಡುವರೆಂದು ನನ್ನ ದೃಢವಾದ ನಂಬಿಕೆ.

ಜರ್ಮನಿಯಲ್ಲಿ ಮತ್ತು ಆಸ್ಟ್ರಿಯಾದಲ್ಲಿ ಕೊನೆಗೆ ಯೆಹೂದ್ಯರ ಕ್ಷೇಮವಾಗುವುದು— ಹಿಟ್ಲರನದಲ್ಲ.

ಇಟಲಿಯು ತನ್ನ ಈಗಿನ ಆರ್ಥಿಕ ದುರವಸ್ಥೆಯನ್ನು ಹೇಗೂ ನೀಗಬಹುದು. ಆದರೆ [illegible]

ಯನ್ನು ಎದುರಾಯಿಸಲು ಅದಕ್ಕೆ ಅಸಾಧ್ಯವೆನಿಸುವುದು.

ತನ್ನ ಭವಿಷ್ಯದ ಕುರಿತು ಈ ಸರ್ವಾಧಿಕಾರಿಗಳಿಗೆ ಈಗಲೆ ತಿಳಿದಿರುವುದು.' ಗೋಡೆಯ ಮೇಲೆ ಬರೆದ ಅಕ್ಷರಗಳಂತೆ ಅದು ಅವರಿಗೆ ಕಾಣಿಸುತ್ತಿರುವುದು.

ಇನ್ನು ಕೆಲವೆ ವರ್ಷಗಳಲ್ಲಿ ಹಿಟ್ಲರನ ಗತಿಯ ಕೊನೆಯಾಗುವುದು

—1942ರ ಒಳಗಾಗಿ

ಒಳಸಂಚು ನಡೆಯಿಸಿ ದಂಗೆಯಿಂದ ತನ್ನ ಜನರನ್ನು ಆತನು ಎದುರಾಯಿಸಬೇಕಾಗುವುದು. ಕಾರಣ, ಅಧಿಕಾರಕ್ಕೆ ಬರಲು ಆತನು

ನಡೆಯಿಸಿದಂತಾ ಸಾವಿರಾರು ಕೊಲೆಗಳಿಂದ ಆತನಿಗೆ ಅನಾದರಣಾಂತ ತನಕದ ಶತ್ರು ಕಮ ವೈರಿಗಳು ಉಂಟಾಗಿರುವರು.

ಹಿಟ್ಲರನು ಹೇಗೆಲ್ಲಾ ತನ್ನ ಕಾರ್ಯ ಸಾಧನೆಯನ್ನು ಮಾಡುತ್ತ ಹೋದ ಹಾಗೆ,-ತನಗೆ ಬೇಕಾದ ಕಾರಣ ಸಾಮಗ್ರಿಗಳು ಇನ್ನೂ ದೊರಕಿಲ್ಲ ಎಂಬ ಜ್ಞಾನೋದಯವು ಜರ್ಮನರಲ್ಲಾಗಿ, "ಇಷ್ಟೆಲ್ಲಾ ಪರಿಶ್ರಮವೇತಕ್ಕೆ?" ಎಂಬ ಪ್ರಶ್ನೆಯನ್ನು ಅವರು ಹಿಟ್ಲರನಿಗೆ ಹಾಕುವವರಾಗುವರು.

ಇನ್ನೊಂದು ಮಹಾಯುದ್ಧದಲ್ಲಿ ಕೈ ಮಾಡುವ ಸಾಮರ್ಥ್ಯವು ಹಿಟ್ಲರನಲ್ಲಿರುವುದಿಲ್ಲ. ಅದು ಅವನಿಗೆ ತಿಳಿದೇ ಇರುವುದು.

ಆದರೆ ಜರ್ಮನಿಯು ತನಗೆ ವಿರೋಧವಾಗಿ ದಂಗೆ ಎಬ್ಬಿರುವುದೆಂದು ಆತನಿಗೆ ತಿಳಿದೊಡನೆ, ಜರ್ಮನಿಯ ಮಿಲಿಯಾದಿ ಮಂದಿಗಳನ್ನು ಯುದ್ಧದಲ್ಲಿ ದೂಡಲು ಆತನು ಹಿಂಜರಿಯನು,-ನಾಜಿ ಅಧಿಕಾರದ ರಕ್ಷಣೆಗಾಗಿ,-ನಾಜಿ ಅಧಿಕಾರಕ್ಕೆ ಸ್ಥಿರತ್ವವಿಲ್ಲವೆಂದೇ ನನ್ನ ಅಭಿಪ್ರಾಯವಾಗಿರುತ್ತದೆ.

ಬೆನಿಟೊ ಮುಸಲೆನಿಯು—ಟೊಳ್ಳು ಗದರಿಕೆಗಳಿಂದಲೆ ಆತನು ತನ್ನ ಕಾರ್ಯ ಸಾಧನೆ [illegible]

ಜರ್ಮನಿಯಲ್ಲಿ ಅಂತರ್ಯುದ್ಧವು ಉಂಟಾಗುವುದು. ಜರ್ಮನರ ತತ್ವವು ನಾಜಿತತ್ವವಲ್ಲ. ಜರ್ಮನರು ಉತ್ತಮ ಜನರು, ಶಾಂತಚಿತ್ತರು,— ಈ ಕಾರಣದಿಂದಲೆ ಜರ್ಮನಿಯಲ್ಲಿ ತಿಕ್ಕಾಟವು ಪ್ರಾರಂಭವಾಗುವುದು.

ಹಿಟ್ಲರನು ಕ್ರೈಸ್ತಮತ ವಿರೋಧಿಯು. ಆದರೆ ಜರ್ಮನರಿಗೆ ಕ್ರೈಸ್ತ ಧರ್ಮದ ಮೇಲೆ ತುಂಬಾ ಅನುರಾಗವು ಇರುವುದು ಈಗಲೂ ಕಾಣಿಸುತ್ತದೆ.

ರಷ್ಯದಲ್ಲಿ ಇನ್ನು ಎರಡೇ ವರ್ಷಗಳಲ್ಲಿ ಸ್ಟೆಲೀನನ ಸರ್ವಾಧಿಕಾರಕ್ಕೆ ವಿರೋಧವಾಗಿ ಮಹಾ ದಂಗೆಯೊಂದು ಉಂಟಾಗುವುದು.

ಈ ದಂಗೆಗೆ ಹೊರಗಿನವರು ಅಂದರೆ ಸ್ಥೋತ್ಸ್ಕಿಯಂತವರು ಎಂದಿಗೂ ಕಾರಣವಾಗಲಾರರು.

ಸ್ಟೆಲೀನನ ಸರ್ವನಾಶವಾಗುವುದು

ಜರ್ಮನಿ, ರಷ್ಯ ಮತ್ತು ಇಟಲಿ ಈ ಮೂವರು ದೇಶಗಳಲ್ಲಿ ಅಂತರ್ಯುದ್ಧವು ಪ್ರಾರಂಭವಾವುದು.

ಜಪಾನಿನಲ್ಲಿ? ಈ ದೇಶದ ಅನುಭವವು ನನಗೆ ಬಹಳವಿದೆ. ಇನ್ನು ಕೆಲವೇ ತಿಂಗಳೊಳಗೆ ಹೆಚ್ಚಾದರೆ ಒಂದು ವರ್ಷದೊಳಗೆ ನಾಗರ ದಂಗೆಗಳುಂಟಾಗಲು ಪ್ರಾರಂಭವಾಗುವುದು.

ಚೀನಾ ಯುದ್ಧದ ವಾರ್ತೆಗಳು ಜಪಾನಿಯರ ಕಿವಿ ಸೇರದಂತೆ, ಸಂಗ್ರಾಮಾಧಿಕಾರಿಗಳ ನಿರ್ಬಂಧವಿದ್ದಾಗ್ಯೂ, ಅದು ಅವರ ಕಿವಿ ಸೇರುವುದು.

"ನಮ್ಮ ಮಕ್ಕಳನ್ನು ನಮಗೆ ಹಿಂತಿರುಗಿ ಕೊಡಿರಿ" ಎಂಬುದಾಗಿ ಜಪಾನೀಯ ತಾಯಂದಿರ ಗೋಳು ಪ್ರಾರಂಭವಾಗಿರುವುದು. ಕಾರ್ಯ ಕೆಟ್ಟಿರುವುದೆಂದು ಪ್ರತಿಯೊರ್ವ ಜಪಾನೀಯ ಸಂಗ್ರಾಮಾಧಿಕಾರಿಗೆ ತಿಳಿದಿರುವುದು. ಈಗ ಅಧಿಕಾರದಲ್ಲಿ ಸಂಗ್ರಾಮಿಕ ಅಧಿಕಾರದ ನಾಶವಾಗುವುದು.

ಮುಂದಿನ ನಾಲ್ಕು ವರ್ಷಗಳಲ್ಲಿ ಬ್ರಿಟನಿ[illegible]

ಲಾಗುವವು.—ಲೇಬರ್ ಪಕ್ಷವು ಹೆಸರಿಗೆ ಮಾತ್ರ ಒಂದು ಪಕ್ಷವಾಗಿ ಉಳಿಯುವುದು.

ಲೇಬರ್ ಪಕ್ಷವು ತನ್ನ ಹೆಸರನ್ನು ಬದಲಾಯಿಸಿ ಬಿಡಬಹುದು. ಕಾರಣ ಎಲ್ಲವೂ ಇರುವುದು ಬರಿ ಹೆಸರಿನ ಮೇಲೆ, ಆದರ್ಶದ ಮೇಲಲ್ಲ.

ಯುದ್ಧರಂಗಕ್ಕಿಳಿದ ಸೈನಿಕರು ಒಬ್ಬರ ನೊಬ್ಬರು ಕೊಲ್ಲಲು ಕೇಳದ ದಿನವು ಬೇಗನೆ ಬರುವುದು. ಯುದ್ಧಕ್ಕೆ ವಿರೋಧವಾಗಿ ಯುದ್ಧವೆಂಬ ಚಳವಳವು ಪ್ರಾರಂಭವಾಗುವುದು.

ಕೊಮ್ಯುನಿಸ್ಟ ಚಳವಳದ ಪ್ರಚಾರವು ನಿಲ್ಲುವುದು. ಕೊಮ್ಯುನಿಸಂ ಈಗಲೆ ಕೊನೆಯ ಗತಿಗೆ ಬಂದಿರುವುದು.

ಸರ್ವಾಧಿಕಾರಿ ಸ್ಟೆಲೀನ ನಾಶದೊಂದಿಗೆ ಕೊನೆಯ ಹಿಸಿ ನಾಶವಾಗುವುದು.

ಬ್ರಿಟನಿನಲ್ಲಿ ಮೇಜರ್ ಅಟ್ಲಿ, ಲ್ಯಾಡ್ ಜಾರ್ಜ ಮೊದಲಾದವರ ಅಧಿನಾಯಕತ್ವದಲ್ಲಿ, ಲೆಬರ್ ಪಕ್ಷವು ಯಾವಾಗಲೂ ಸರಕಾರಕ್ಕೆ ವಿರೋಧ ಪಕ್ಷವಾಗಿರುವುದು.

ಚೆಂಬರ್ಲೇನರು ಮುಂದಿನ ವರ್ಷದಲ್ಲಿ ಅಧಿಕಾರ ತ್ಯಜಿಸಬೇಕಾಗುವುದು. ಆದರೆ ಲೆಬರ್ ಪಕ್ಷವು ಅಧಿಕಾರಕ್ಕೆ ಬಾರದು!

ಆದರೆ ಒಂದು ವಿಷಯ ಬಂದೀತು!

1942ರೊಳಗೆ ಬ್ರಿಟನಿನಲ್ಲಿ ಸರಕಾರವೇ ಕಬ್ಬಿಣ, ಉಕ್ಕು ಸಂಬಂಧ ಕೈಗಾರಿಕೆ ನೌಕಾ ರಚನಾ ಇತ್ಯಾದಿ ಇತರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು ಅವುಗಳನ್ನು ನಡೆಯಿಸುವುದು.

ಕೆಲಸಗಾರರ ಕೂಲಿ ಮತ್ತು ವೇತನ ಸರಕಾರದಿಂದಲೆ ಇತ್ಯರ್ಥಿಸಲಾಗುವುದು, ಒಡೆಯರಿಂದಲ್ಲ. ಅಷ್ಟರೊಳಗೆ ಪ್ರಾಯಶಃ ಲಿಬರಲ್ ಕಾನ್ಸರ್ವೇಟಿವ್ ಸರಕಾರವು ಅಧಿಕಾರಕ್ಕೆ ಬಂದು, ದೇಶದ ಸಮಸ್ತ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳುವ ಯೋಜನೆಯನ್ನು ಕೈಕೊಳ್ಳಬಹುದು ಸಬುವಕ್ತ್ರವಾಗುವುದು

ಆದರೆ ಇವೆಲ್ಲಾ ಚಳವಳಗಳು, ಧರ್ಮ ಪ್ರಚಾರ ಚಳವಳದ ದೆಸೆಯಿಂದ ಕೆಳಗೆ ಬೀಳುವವು. ಧರ್ಮದ ಲೀಲೆಯೊಂದು ಸಮಸ್ತ ಜಗತ್ತಿನ ಮೇಲೆ ವ್ಯಾಪಿಸುವುದು.

—ಜೀವನದಲ್ಲಿ ಧರ್ಮದುಪಯೋಗ— ಈ ಚಳವಳವು ಸಧ್ಯದಲ್ಲಿ ಜಗತ್ತಿನ ಎಲ್ಲಾ ಕಡೆಗಳಲ್ಲಿ ಪ್ರಾರಂಭವಾಗುವುದು.

ಪೌರ್ವಾತ್ಯರ ವಿದೇಶ ವಾಸ

ಭಾರತೀಯರ ವಿದೇಶ ವಾಸವು ಎಲ್ಲಿಯೂ ಸುಖಕರವಾಗಿರುವದಿಲ್ಲ. ಯಾಕೆ? ಬ್ರಿಟಿಷ ಸಾರ್ವಭೌಮರ ಛತ್ರತೆಯನ್ನು ಪಡೆದ ಭಾರತೀಯ ಪ್ರಜೆಗಳಾಗಿದ್ದೂ ಅವರಿಗೆ ಬ್ರಿಟಿಷ ಸಾರ್ವಭೌಮರ ರಾಜಧಾನಿ – ಲಂಡನ ನಗರದಲ್ಲಿಯೇ ಒಳ್ಳೆಯ ಸ್ಥಿತಿಗತಿ, ಉತ್ತಮ ಸ್ಥಾನಮಾನಗಳು ಇರುವದಿಲ್ಲವೆಂದ ಮೇಲೆ, ಯಾವ ಸ್ನೇಹ ಸಂಬಂಧವೂ ಇಲ್ಲದ ಉಳಿದ ವಿದೇಶಗಳಲ್ಲಿಯಾದರೂ ಅವರಿಗೆ ಎಂಥ ಸ್ಥಾನಮಾನಗಳು ಪ್ರಾಪ್ತವಾದಾವು? ಅವರ ಸ್ಥಿತಿಗತಿಗಳು ಹೇಗೆ ತಾನೇ ಸುಧಾರಿಸಿಕೊಂಡು ಅವರು ಸುಖಿಗಳೂ ಸಂಪನ್ನರೂ ಆಗಿಯಾರು?

ಲಂಡನಿನಲ್ಲಿ ಭಾರತೀಯರಿಗೆ ಒಂದು ನೆಲೆ ಎಂದೇ ಇಲ್ಲ. ಆದ್ದರಿಂದ ಅವರ ಸಂಖ್ಯೆ ಇಂತಿಷ್ಟೇ ಎಂದು ಹೇಳಲವಕಾಶವಿಲ್ಲ. ಕೆಲವು ಬಾರಿ ಹೆಚ್ಚಾಗಿಯೂ ಕೆಲವು ಬಾರಿ ಕಡಿಮೆಯಾಗಿಯೂ ಇರುತ್ತಾರೆ. ಆದರೆ ಯಾವ ಸಮಯದಲ್ಲಿಯೂ ಅದು ಐದಂಕವನ್ನು ದಾಟಿರುವದಿಲ್ಲ. ಲಂಡನಿನ ಒಟ್ಟು ಜನಸಮುದಾಯದಲ್ಲಿ ಭಾರತೀಯರು ನಗಣ್ಯರಾಗಿರುತ್ತಾರೆ. ಇವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ಅವರು ಸಾಮಾನ್ಯವಾಗಿ ತಮ್ಮ ಕೇಂದ್ರವಾಗಿರುವ ಗ್ರೋವರ್ ರಸ್ತೆಯ ಹಿಂದೀ ವಿದ್ಯಾರ್ಥಿ ನಿಲಯದಲ್ಲಿ ವಾಸಮಾಡಿಕೊಂಡು ಬರುತ್ತಾರೆ.

ಭಾರತದಲ್ಲಿಯಂತೆ ಅಲ್ಲಿ ಭಾರತೀಯ ವಿದ್ಯಾರ್ಥಿಗಳು ತಮ್ಮ ಜಾತಿ ಮತಸಂಬಂಧವಾದ ವೈಷಮ್ಯ ತೋರಿಸದಿರುವದು ಒಂದು ಶುಭಲಕ್ಷಣವಾಗಿದೆ. ಅವರು ಏನೊಂದು ಅಳುಕಿಲ್ಲದೆ ಪರಸ್ಪರ ಕೂಡಿಕೊಳ್ಳುತ್ತಾರೆ. ಅವರೆಲ್ಲರ ಉಡಿಗೆ ತೊಡಿಗೆಗಳು ಸಾಮಾನ್ಯತಃ ವಿಲಾಯಿತಿಯ ಕ್ರಮಗಳನ್ನೇ ಅನುಸರಿಸುತ್ತವೆ. ಅವರು ಒಂದೇ ಕೋಣೆಯಲ್ಲಿ ಈಶ್ವರ ಪ್ರಾರ್ಥನೆಯನ್ನು ಮಾಡುವದು ಕೂಡ ಇರುತ್ತದೆ. ಅಂಥ ಸಂದರ್ಭದಲ್ಲಿ ಮಾತ್ರ ಹಿಂದೂ ಮುಸಲ್ಮಾನ ಮೊದಲಾದ ಬೇರೆ ಬೇರೆ ಮತದವರು ಆ ಕೋಣೆಯನ್ನು ಬೇರೆ ಬೇರೆ ಸಮಯಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ.

ಪ್ರಾರ್ಥನಾ ಮಂದಿರದ ಅಲಂಕಾರ

ಈ ಪ್ರಾರ್ಥನಾ ಮಂದಿರದಲ್ಲಿ ಜಾತಿ ಮತ ದ್ಯೋತಕ ಯಾವ ಅಲಂಕಾರಗಳೂ ಇರುವದಿಲ್ಲ. ಹಿಂದುಸ್ಥಾನೀ ಕ್ರಮವನ್ನೇ ಅನುಸರಿಸಿ ಅದರ ಶೃಂಗಾರವು ಇರುತ್ತದೆ. ನೆಲವನ್ನು ಒಂದು ಜಮಖಾನಿನಿಂದ ಹಾಸಿರುತ್ತಾರೆ. ದೇವಪ್ರತಿಮೆಗಳಾಗಲೀ, ಅಕ್ಷರ ಸಂಜ್ಞೆಗಳಾಗಲೀ ಇರುವದಿಲ್ಲ. ಉಪದೇಶಕನು ನೆಲದ ಮೇಲೆ ಕೂತೇ ಉಪದೇಶ ಮಾಡುತ್ತಾನೆ. ಅವನ ಮುಂದೆ ಸಣ್ಣದೊಂದು ಇಳಿಮೇಜು ಮಾತ್ರ ಇರುತ್ತದೆ.

ವಿದ್ಯಾರ್ಥಿ ನಿಲಯದಲ್ಲಿ ಈ ವಿದ್ಯಾರ್ಥಿಗಳು ಭಾರತೀಯ ಅಥವಾ ವಿಲಾಯಿತಿಯ ಯಾವ ಅಡಿಗೆಯನ್ನಾದರೂ ಉಣ್ಣಬಹುದು. ವಿದ್ಯಾರ್ಥಿಗಳು ಹೆಚ್ಚಾಗಿ ಬಡವರೇ ಆಗಿರುತ್ತಾರೆ. ಆದ್ದರಿಂದ ಹೊರಗಿನ ದೊಡ್ಡ ದೊಡ್ಡ ಹೊಟೇಲುಗಳಿಗೆ ಹೋಗಿ, ರುಚಿಕರವಾದ—ಆದರೆ ಹೆಚ್ಚೆಚ್ಚು ಹಣ ಕೊಡಬೇಕಾದ – ಭಕ್ಷಭೋಜ್ಯಗಳನ್ನು ಅವರು ತಿನ್ನುವದು ಬಹಳ ಅಪರೂಪ. ಎಲ್ಲಿಯಾದರೂ ವರ್ಷಕ್ಕೆ ಒಂದೆರಡು ಬಾರಿ ಮಾತ್ರ ಭಾರತೀಯ ಹೊಟೇಲುಗಳಿಗೆ ಹೋಗಿ ತಮ್ಮ ಹಲವು ದಿನಗಳ ಅಭಿಪ್ರಾಯಗಳನ್ನು ತೀರಿಸಿಕೊಳ್ಳುವರು. ಇಲ್ಲಿಗೆ ಹೋಗುವದಾದರೂ ಅವರು ಉಂಡು ತಿಂದು ತೇಗಿ ಸುಖಿಸುವದಕ್ಕೆ ಆಗಿರುವದಿಲ್ಲ. ಹೊಟೇಲಿನ ಮಾಲಿಕನು ಭಾರತೀಯನಾಗಿರುತ್ತಾನೆ. ಲಂಡನಿನ ದೊಡ್ಡ ಜನಸಮುದಾಯದಲ್ಲಿ ಅವರಿಗೆ ಭಾರತೀಯರು ಕಾಣಸಿಗುವದು ಕಡಿಮೆ. ಆದ್ದರಿಂದ ತಮ್ಮ ದೇಶೀಯನೊಡನೆ ಒಂದು ಬಾರಿಗೆ ಮಾತನಾಡಿಕೊಂಡು ಬರೋಣ ಎಂದು

ಅಲ್ಲಿಯೂ ಜನರ ಸ್ನೇಹ ಸಂಪರ್ಕ ಕಡಿಮೆ

ಭಾರತೀಯರಿಗೆ ಲಂಡನಿನಲ್ಲಿರುವಾಗ ಪಾಶ್ಚಾತ್ಯರ ಸ್ನೇಹ ಸಂಪರ್ಕವಾಗುವದು ಕಡಿಮೆ. ಭಾರತೀಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ವೈದ್ಯಕೀಯವನ್ನು ಅಭ್ಯಾಸಮಾಡಲು ಹೋದವರಾಗಿರುತ್ತಾರೆ. ಭಾರತದ ಪ್ರಾಕೃತಿಕ ಸೌಂದರ್ಯವು ಲಂಡನಿನಲ್ಲಿ ಇಲ್ಲದಿರುವದನ್ನು ನೋಡಿ ಅವರ ಮನಸ್ಸು ಬಹಳ ಬೇಸರಿಸುತ್ತದೆ. ಇಂಗ್ಲೀಷ ಸಭ್ಯ ಜನರ ಸಂಪರ್ಕವು ಇವರಿಗೆ ಬಹಳ ಕಡಿಮೆಯಾಗಿ ಪ್ರಾಪ್ತವಾಗುವದರಿಂದ ಅವರ ಜೀವನ ನಡೆವಳಿಗಳ ಸೂಕ್ಷ್ಮ ನಿರೀಕ್ಷಣ ಮಾಡುವದು ಇವರಿಗೆ ಅಸಾಧ್ಯವಾಗುತ್ತದೆ. ಆದ್ದರಿಂದ ಜೀವನವು ನೀರಸವೆನ್ನಿಸುತ್ತದೆ.

ಹೆಚ್ಚಾಗಿ ಈ ವಿದ್ಯಾರ್ಥಿಗಳು ಭಾರತೀಯರಲ್ಲದವರೊಡನೆ ಆಡಿ ಕೂಡಿ ಇರದೆ ಪ್ರತ್ಯೇಕ ಇರುತ್ತಾರೆ. ತಾವು ಯಾಕೆ ಹೀಗೆ ಪ್ರತ್ಯೇಕವಾಗಿ ಇರಬೇಕೆಂದು ಅವರು ಆಗಾಗ ತಮ್ಮನ್ನು ಪ್ರಶ್ನಿಸುವರು. ಆದರೆ ಸರಿಯಾದ ಉತ್ತರವು ಅವರಿಗೆ ದೊರೆಯುವದಿಲ್ಲ. ಆಂಗ್ಲೀಯ ಮಹಾಪ್ರಭುಗಳು ಸುಸಂಸ್ಕೃತ ಪ್ರಜಾವರ್ಗಕ್ಕೆ ಸೇರಿದವರಾಗಿದ್ದು ಇಂಗ್ಲಂಡಿನ ಸಭ್ಯ ಸಮಾಜದಲ್ಲಿ ಅವರಿಗೆ ಮಾನ ಮನ್ನಣೆಗಳು ಇಲ್ಲವೆಂಬುದು ಬಹಳ ಖೇದವನ್ನುಂಟುಮಾಡುವ ಸಂಗತಿಯಾಗಿದೆ. ಸಭ್ಯ ಸಮಾಜದಲ್ಲಿ ಯಾರೂ ಅವರನ್ನು ಪ್ರೇಮಾದರಗಳಿಂದ ಸ್ವಾಗತಿಸುವದಿಲ್ಲ.

ಜೀವನೋದ್ಯೋಗಿಗಳ ಜೀವನಕಥೆ

ವಿದ್ಯಾರ್ಥಿಗಳ ಮಾತು ಹಾಗಾಯಿತು. ಮತ್ತೆ ಲಂಡನಿನಲ್ಲಿ ವಾಸವಾಗಿರುವ ಭಾರತೀಯ ಉದ್ಯೋಗಿಗಳ ಜೀವನಕಥೆ ಎಂಥಹದಿರುವದು? ಇವರಿಗಾದರೂ ಸಭ್ಯ ಸಮಾಜದಲ್ಲಿ ಸೇರಿಕೊಂಡಿರಲು ಅವಕಾಶವಿಲ್ಲ. ಮತ್ತೆ ತಮ್ಮ ಇತರ ದೇಶಬಾಂಧವರೊಡನೆ ಕೂಡಿರಲಿಕ್ಕೂ ಅವರಿಗೆ ಸಮಯದ ಅಭಾವವಿರುತ್ತದೆ. ಆದ್ದರಿಂದ ಅವರ ಜೀವನವು ವಿದ್ಯಾರ್ಥಿಗಳ ಜೀವನಕ್ಕಿಂತ ಯತ್ತಷ್ಟು ಕಷ್ಟತರವಾಗಿರುತ್ತದೆ. ಇತರ ಜಾತಿಯವರಿಗಿಂಥ ಪಾರಸಿಗಳು ಮತ್ತು ಮಹಮ್ಮದೀಯರು ಒಂದಾಗಿ ಇರುತ್ತಾರೆ. ಮಹಮ್ಮದೀಯರಿಗೆ ಆಗಾಗ ಒಟ್ಟುಕೂಡಲಿಕ್ಕೆ ವೋಕಿಂಗ ಮತ್ತು ಸೌತ್ ಫೀಲ್ಡುಗಳಲ್ಲಿ ಮಸೀದಿಗಳಿವೆ. ಬಕ್ರೀದ್ ಮೊದಲಾದ ಜಾತ್ರೆ ಉತ್ಸವಗಳ ಕಾಲದಲ್ಲಿ ಮಹಮ್ಮದೀಯರೆಲ್ಲ ಅಲ್ಲಿ ಒಟ್ಟು ಸೇರುತ್ತಾರೆ. ಒಟ್ಟುಸೇರಿಕೊಂಡು ತಮ್ಮ ಹಳೆ ಸಂಪ್ರದಾಯವನ್ನನುಸರಿಸಿ ಒಂದೆರಡು ಆಡುಗಳನ್ನು ಬಲಿಕೊಟ್ಟು ಸಂತೋಷಿಸುತ್ತಾರೆ.

ಹಾಗೆ ಪಾರಸಿಯರಿಗೂ ಅವರ ಅಗ್ನಿ ದೇವಾಲಯಗಳು ಇರುತ್ತವೆ. ಅವರೂ ಅಂಥ ದೇವಾಲಯಗಳಲ್ಲಿ ಆಗಾಗ ಕೂಡುತ್ತಾರೆ. ಆದರೆ ಹಿಂದೂಗಳು ಮಾತ್ರ ಬಹಳ ನಿಕೃಷ್ಟ ಸ್ಥಿತಿಯಲ್ಲಿ ಇರುವರು. ಅವರಿಗೆ ಲಂಡನಿನಲ್ಲಿ ದೇವಾಲಯ ಪ್ರಾರ್ಥನಾಲಯ ಯಾವುದೂ ಇರುವದಿಲ್ಲ. ಆದ್ದರಿಂದ ಹಿಂದುಗಳಿಗೆ ಅಲ್ಲಿ ವ್ಯಕ್ತಿಗತ ಸ್ಥಾನಮಾನಗಳಿರುವವೇ ಹೊರತು ಸಾಮಾಜಿಕ ಸ್ಥಾನಮಾನಗಳಿರುವದಿಲ್ಲ. ಅವರು ಇಡೀ ಲಂಡನ ನಗರದಲ್ಲಿ ಅಲ್ಲಲ್ಲಿ ಚೆದರಿಕೊಂಡು ಇರುತ್ತಾರೆ.

ಹಿಂದೂ ಉದ್ಯೋಗಿಗಳೆಂದರೆ ಹೆಚ್ಚಾಗಿ ಹೊಟೇಲುಗಳ ನೌಕರ ಚಾಕರರಾಗಿರುತ್ತಾರೆ. ಇವರು ಎಲ್ಲಿಂದ ಬಂದವರು? ಭಾರತದ ನೌಕರ ಚಾಕರ ಜಾತಿಗೆ ಸೇರಿದವರು ಇವರು ಅಲ್ಲವೇ ಅಲ್ಲ. ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ ಭಾರತೀಯ ವಿದ್ಯಾರ್ಥಿಗಳು ಲಂಡನಿನಲ್ಲಿ ಬೇರೆ ಯಾವ ಪ್ರಕಾರ ಜೀವನ ಸಾಗಿಸುವದೆಂದು ಗೊತ್ತಾಗದೆ, ಕೊನೆಗೆ ನಿರುಪಾಯರಾಗಿ ಈ ಹೊಟೇಲು ವೃತ್ತಿಗೆ ಶರಣುಹೋಗುತ್ತಾರೆ. ಅಲ್ಲಿ ಎಂಥ ಕೆಲಸಕಾರ್ಯಗಳನ್ನು ಮಾಡಲಿಕ್ಕಾದರೂ ಸಿದ್ಧರಾಗುತ್ತಾರೆ. ಹಾಗೂ ಹೀಗೂ ಸ್ವದೇಶಕ್ಕೆ ಮರಳುವ ತನಕ ಅಲ್ಪಸ್ವಲ್ಪ ಸಂಪಾದಿಸಿ ದಿನ ಕಳೆಯುತ್ತಾರೆ.

ಹಾಗೆಯೇ ಉಚ್ಚ ಪದವಿಯಲ್ಲಿಲ್ಲದ ಭಾರತೀಯ ಸೈನಿಕರೂ ಕೆಲಸದಿಂದ ನಿವೃತ್ತರಾಗಿ, ತಮ್ಮ ಮೇಲಾಫೀಸರುಗಳಿಂದ ಶಿಫಾರಸು ಪಡೆದು ಲಂಡನಿಗೆ ಹೋಗಿ ಈ ವೃತ್ತಿಯನ್ನು ಆಶ್ರಯಿಸುತ್ತಾರೆ. ಭಾರತದಲ್ಲಿ ಬಹು ಪರಾಕು ಮಾಡಿ ಇವರಿಗೆ ಅಭ್ಯಾಸವಾಗಿರುವದರಿಂದ ಅವರು ಅಲ್ಲಿ ಈ ವೃತ್ತಿಗೆ ಬಹಳ ಯೋಗ್ಯರಿರುತ್ತಾರೆ ಯಾಕೆಂದರೆ ಭಾರತೀಯ ಹೊಟೇಲುಗಳಿಗೆ ಹೋಗುವ ಭಾರತೀಯರು ಅಲ್ಲಿಯ ತಿಂಡಿತೀರ್ಥ—ಭಕ್ಷಭೋಜ್ಯಗಳಿಗಿಂತ ನೌಕರರ ಚಾಕರರ 'ಬಹುಪರಾಕು'ಗಳಿಗೆ ಮುಗ್ಧರಾಗುವದು ಹೆಚ್ಚು.

ಭಾರತೀಯ ಫೇರೀವಾಲಾ

ಯಾರೂ ಲಕ್ಷ್ಯ ಕೊಡದಂಥ ಇನ್ನೊಂದು ಭಾರತೀಯ ಜನವರ್ಗವು ಲಂಡನಿನಲ್ಲಿದೆ. ಅದೇ, ಫೇರಿವಾಲಾರ ಜಾತಿ. ಇವರು ತಿಂಗಳಿಗೆ ಮಿಕ್ಕಿ ಇರುವದಿಲ್ಲ. ಇವರು ಲಂಡನಿನ ದೊಡ್ಡ ದೊಡ್ಡ ವ್ಯಾಪಾರಿಗಳಿಂದ ಸ್ವಲ್ಪ ಸ್ವಲ್ಪ ಸಾಮಾನುಗಳನ್ನು ಎರವಾಗಿ ತೆಗೆದುಕೊಂಡು ಮನೆಮನೆಗಳಿಗೆ ಹೋಗಿ ಚಿಲ್ಲರೆಯಾಗಿ ಮಾರುವರು. ಬಡವರೇ ಇವರ ಗಿರ್‍ಹಾಕಿಗಳಾಗಿರುತ್ತಾರೆ. ಅವರಿಗೆ ಬೇಕಾದುದನ್ನು—ವಿಶೇಷವಾಗಿ [illegible] ಥಳಕಿನ ಮಣಿಸರಗಳನ್ನು ಇವರು [illegible] ಟಕ್ಕೆ ತರುವರು. ಈ ಸಾಮಾನುಗಳು ಅಗ್ಗವಾಗಿಯೂ ಇರುತ್ತವೆ. ಲಾಭ ತರುವಂಥವೂ ಆಗಿವೆ. ಪ್ರಾರಂಭದಲ್ಲಿ ಈ ಫೇರಿವಾಲಾರು ಹಡಗುಗಳ ಕಲಾಸಿಗಳಾಗಿದ್ದರು. ಆ ವೃತ್ತಿಯನ್ನು ಬಿಟ್ಟು ಇದಕ್ಕೆ ಬಂದರು. ಅನಂತರ ಅವರಿಗೆ ಆಗುವ ಲಾಭವನ್ನು ಕಂಡು ಇತರರೂ ಈ ವೃತ್ತಿಗೆ ಬಂದರು. ಈಗ ಮಾತ್ರ ಈ ವ್ಯಾಪಾರವು ಬಹಳ ಕೆಟ್ಟಿದೆ. ಯಾರೂ ತಮ್ಮ ಆವಶ್ಯಕತೆಗಳಿಗಾಗಿ ಫೇರಿವಾಲಾರನ್ನು ಕಾಯುತ್ತಿರುವದಿಲ್ಲ. ಆದರೂ ಕೂಡ ಈ ವೃತ್ತಿಯಿಂದ ಸುಸಂಪನ್ನರಾದ ಕೆಲವು ಭಾರತೀಯರು ಲಂಡನಿನಲ್ಲಿ ಇರುತ್ತಾರೆ.

'ಸಿರಿಲ್' ಈ ಫಿಲಿಫ್ಸನ್' ಎಂಬವರು 'ಓರಿಯಂಟ' ಪತ್ರಿಕೆಯಲ್ಲಿ ಬರೆದ ಸ್ವಾನುಭವದ ಲೇಖನವಿದು. ಇದರಿಂದ ಲಂಡನಿನಲ್ಲಿನ ಭಾರತೀಯ ಜನಜೀವನದ ಚಿತ್ರವು ಮನಸ್ಸಿನಲ್ಲಿ ಸ್ಪಷ್ಟವಾಗಿ ಅಂಕಿತವಾಗುತ್ತದೆ. ಇದರ ಮೇಲಿಂದಲೇ ಇತರ ದೇಶಗಳಲ್ಲಿ ಭಾರತೀಯ ಜೀವನವು ಹೇಗಿರಬಹುದೆಂಬುದನ್ನು ಕಲ್ಪಿಸಿಕೊಳ್ಳಬಹುದು.

ಅಮೃತ

ರಕ್ತಶುದ್ಧಿ ದ್ರಾವಕ

ಇದು ರಕ್ತಹೀನತೆ ಮಲಬದ್ಧತೆ, ಅಜೀರ್ಣ, ಕೀಲುನೋವು, ಸೋಮಾರಿತನ ಮೇಹ ವ್ರಣಗಳು, ಸುಖ ಸಂಕಟಗಳು, ನಿಶ್ಶಕ್ತಿ. ಹೊಟ್ಟೆಯಲ್ಲಿ ಉರಿ ಮುಂತಾದ ವ್ಯಾಧಿಗಳನ್ನು ನಿವಾರಿಸಿ ಶರೀರಕ್ಕೆ ಕಾಂತಿಯನ್ನೂ ಮುಖಕ್ಕೆ ತೇಜಸ್ಸನ್ನೂ ಉಂಟುಮಾಡುತ್ತದೆ. ಈ ಉತ್ತಮವಾದ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿರುತ್ತಾರೆ

ಅರ್ಕ

ಸರ್ವ ಜ್ವರ ನಿವಾರಿಣಿ

ಆಹಾರ, ವಿಹಾರ, ಋತು ಭೇದ ದೋಷಗಳಿಂದ ಅನ್ನಾಶಯದಲ್ಲಿ ಕ್ರಿಮಿಕೀಟಗಳು ಸೇರಿ, ಹಲವು ವಿಧವಾದ ಜ್ವರಗಳು ಸಂಭವಿಸುತ್ತವೆ. ವಾತ ಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಜ್ವರಗಳು, ಹೊಟ್ಟೆಯಲ್ಲಿ ಪ್ಲೀಹವೆಂಬ ಜ್ವರದ ಗಡ್ಡೆ ಇವುಗಳನ್ನು ನಿವಾರಿಸುತ್ತದೆ. ಈ ಔಷಧವನ್ನು ಚಿಕ್ಕ ಮಕ್ಕಳಿಗೂ ಸಹ ಕೊಡಬಹುದು.

ಕೇಸರಿ ಕುಟೀರಂ, ಮದ್ರಾಸು.

50,000

ಕುಷ್ಠರೋಗಿಗಳು ಸಂಪೂರ್ಣ ಗುಣಮುಖರಾಗಿರುವರು!

OFFICE OF MESSRS. REDDY & CO.,

GOPALAPURAM (E. GODAVARY.)

ಕುಷ್ಠರೋಗ, ಬಿಳಿತೊನ್ನು ಮತ್ತು ಮೇಹಾದಿ ರೋಗಗಳ ಚಿಕಿತ್ಸೆ–ಒಂದು ವಿಶೇಷತ್ವ.

ಶ್ರೀ ಕೃಷ್ಣ ಆಶ್ರಮ — ರೆಡ್ಡಿ ಮತ್ತು ಕಂಪೆನಿ,

ಚೀನೀ ಮಹಿಳೆಯರ ಉತ್ಕರ್ಷ

ಇಪ್ಪತ್ತೈದು ವರ್ಷಗಳ ಮೊದಲು ಚೀನೀ ಮಹಿಳೆಯರು ಅಡಿಗೆ ಮನೆಗಳಲ್ಲಿ ದಿನಮಾನದ 24 ತಾಸುಗಳನ್ನೂ ಕಳೆಯಬೇಕಾಗಿದ್ದಿತು. ಅವರಿಗ ಹೊರಗಿನ ಪ್ರಪಂಚದಲ್ಲಿ ಯಾವ ನಾಗರಿಕ ಹಕ್ಕು ಅಧಿಕಾರಗಳೂ ಇದ್ದಿರಲಿಲ್ಲ. ಅವರು ಅಡಿಗೆ ಮನೆಯ ಕಿಟಿಕಿಯಿಂದ ಹೊರಗೆ ಇಣಿಕಿ ನೋಡುವದೂ ತ್ಯಾಜ್ಯವೂ ದಂಡವೂ ಆಗಿತ್ತು. ಆದರೆ ಈಗ?

ಈಗ ಮನೆಮಠ, ಹಾದಿಬೀದಿ, ಶಾಲೆ ಚೇರಿ ಎಂಬುದಿಲ್ಲದೆ ಎಲ್ಲೆಲ್ಲಿಯೂ ಚೀನೀ ಮಹಿಳೆಯರು ಪುರುಷರ ಸರಿಸಾಟಿಯಾಗಿ ನಡೆದು ಬರುವುದು ಕಾಣುತ್ತದೆ. ಅವರು ಹೋಗದ ಊರಿಲ್ಲ, ಮಾಡದ ಕೆಲಸವಿಲ್ಲ. ಪ್ರತಿಯೊಂದು ಸಾಮಾಜಿಕ, ರಾಜಕೀಯ ವ್ಯವಹಾರದಲ್ಲಿ ಚೀನೀಸ್ತ್ರೀಯರ ಕೈ ಇದ್ದೇ ಇದೆ.

ಉಡಿಗೆತೊಡಿಗೆ, ಶೃಂಗಾರಕ್ರಮ, ಹಾವಭಾವ, ಮಾತುರೀತಿ–ಪ್ರತಿಯೊಂದರಲ್ಲಿ ಅವರು ಆಧುನಿಕತೆಗೆ ಒಪ್ಪುತಿದ್ದಾರೆ. ಹಳೆಯ ರೀತಿ ರಿವಾಜು, ಕ್ರಮ-ಸಂಪ್ರದಾಯಗಳೆಲ್ಲಾ ಈಗ ಮೂಲೆಗೊಂಪಾಗುತ್ತ ಬಂದಿವೆ. ಅವರು ಅಷ್ಟರಮಟ್ಟಿಗೆ ಮುಂದರಿದಿದ್ದಾರೆ ಎಂದರೆ, ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಅವರು ಪುರುಷರಿಗೆ ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದಾರೆ.

ಹಿಂದಿನ ಕಾಲದಲ್ಲಾದರೆ ಚೀನೀಸ್ತ್ರೀಯರಿಗೆ ಓದುಬರಹ ಇದ್ದಿಲ್ಲ. ಅವರಿಗೆ ಯಾವ ಹಕ್ಕು ಅಧಿಕಾರಗಳು ಇರಲಿಲ್ಲ. ಅಪವಾದವೆಂಬಂತೆ ಎಲ್ಲಾದರೊಮ್ಮೊಮ್ಮೆ, ಅಪರೂಪವಾಗಿ ಕೆಲವು ಮಹಿಳೆಯರು ಸಾಮಾಜಿಕ ಧಾರ್ಮಿಕ ಬಂಧನಗಳನ್ನು ಕಡಿದೊಗೆದು, ರಾಜಕೀಯ [illegible]ಗಳನ್ನು ಮರಿಯುತ್ತಾ ಪ್ರಕಾಶಕ್ಕೆ ಬರುತ್ತಿದ್ದರು, ಬಂದು ಪುರುಷರೂ ಕಂಗೆಡುವಂತೆ ತಮ್ಮ ಶಕ್ತಿಸಾಮರ್ಥ್ಯಗಳನ್ನು ತೋರಿಸುತ್ತಿದ್ದರು.

ಹಕ್ಕುಅಧಿಕಾರ ಸ್ಥಾನಮಾನಗಳೆಲ್ಲ ಗಂಡುಗಳಿಗೇ ಇರತಿತ್ತು. ಬೇಕು ಬೇಕೆಂದೇ ಪ್ರಯತ್ನಪಟ್ಟು ಪುರುಷರು ಸ್ತ್ರೀಯರನ್ನು ಕೆಳಕೆಳಗೆ ದೂಡುತಿದ್ದರು. ಮದುವೆಯಾಗುವ ತನಕ ಹುಡುಗಿಯು ತನ್ನ ಭಾವೀಗಂಡನು ಎಂಥವನೆಂದು ನೋಡಲು ಅವಕಾಶವಿರಲಿಲ್ಲ. ಅವಳ ಪರವಾಗಿ ವಿವಾಹಕ್ಕೆ ಸಂಬಂಧಿಸಿದ ಕಾರ್ಯಗಳನ್ನೆಲ್ಲ ಪುರೋಹಿತರೇ ಮಾಡಿಬಿಡುತಿದ್ದರು. ಎಂಥ ಸಲಿಗೆಯವನಾದರೂ [illegible] ಇತರರನ್ನು ಸ್ತ್ರೀಯ ಸಂಪರ್ಕದಲ್ಲಿ ಇರಬಿಡುತಿದ್ದಿಲ್ಲ. ಗಂಡಸು ಬೇಕುಬೇಕಾದಾಗ ದಾಂಪತ್ಯವಿಚ್ಛೇದ ಮಾಡಿಕೊಂಡು ಬೇಕುಬೇಕಾದಾಗ ಹೆಣ್ಣುಗಳನ್ನು ಮದುವೆಯಾಗಬಹುದಿತ್ತು. ಆದರೆ ಹೆಣ್ಣಿಗೆ ಮಾತ್ರ ಅತ್ಯಾಚಾರಿ ಗಂಡನನ್ನು ಬಿಟ್ಟು ಇರುವ ಅಧಿಕಾರವು ಕೂಡ ಇರುತಿದ್ದಿಲ್ಲ. ಅವಳು ಸತ್ತಾಗ ಗಂಡಸು ಒಂದು ಹನಿ ಕಣ್ಣೀರು ಕೂಡ ಸುರಿಸಬೇಕೆಂದು ಇರಲಿಲ್ಲ.

ಆಧುನಿಕ ಶಿಕ್ಷಣದ ಪ್ರಭಾವ

ಆದರೆ ಮೆಲ್ಲಮೆಲ್ಲಗೆ ಚೀನದಲ್ಲಿ ಆಧುನಿಕ ಶಿಕ್ಷಣದ ಪ್ರಚಾರ ಪ್ರಾರಂಭವಾಗತೊಡಗಿತು. ಅವರು ಶಿಕ್ಷಿತರಾದಂತೆ ಜ್ಞಾನದ ಕಿರಣಗಳು ಅವರ ಹೃದಯ ಮನಸ್ಸುಗಳನ್ನು ಬೆಳಗಿಸಿದಂತೆ ಅವರು ತಮ್ಮ ತಮ್ಮ ಹಕ್ಕುಅಧಿಕಾರ ಸ್ಥಾನಮಾನಗಳನ್ನು ಗುರುತಿಸತೊಡಗಿದರು. ಅವರಲ್ಲಿ ನವೀನ ಸ್ಫೂರ್ತಿ ಉತ್ಸಾಹ, ಆಶೆಪ್ರತ್ಯಾಶೆಗಳ ಉದಯವಾಯಿತು. ಸಾವಿರಾರು ಮಂದಿ ಹೆಮ್ಮಕ್ಕಳು ಯೂರೋಪ ಅಮೇರಿಕಗಳ ವಿದ್ಯಾಲಯಗಳಲ್ಲಿ ಹೋಗಿ ಅಭ್ಯಾಸ ಮಾಡತೊಡಗಿದರು. ಇದಕ್ಕೇ ಚೀನದ ಸ್ವತಂತ್ರ ರಾಷ್ಟ್ರೀಯ ಸರಕಾರವೂ ಅನುಕೂಲವಾಗಿ ವರ್ತಿಸಿತು.

ಈಗ ಎಷ್ಟೋ ಮಂದಿ ಜಗದ್ವಿಖ್ಯಾತ ಚೀನೀ ಸ್ತ್ರೀಯರು ಪ್ರಾಬಲ್ಯಕ್ಕೆ ಬಂದಿದ್ದಾರೆ. ಸರಕಾರಿ ಉಚ್ಚಾಧಿಕಾರಿಗಳೂ ಇರುವರು. ದೊಡ್ಡ ದೊಡ್ಡ ರಾಜಕೀಯ ಮುತ್ಸದ್ದಿಗಳೂ ಈಗ ಚೀನೀ ಸ್ತ್ರೀಯರಾಗಿದ್ದು, ಅಸಾಧ್ಯಕಾರ್ಯಗಳನ್ನು ಅವರು ಸಾಧ್ಯಮಾಡಿ ತೋರಿಸಿರುವರು. ಪುರುಷನಿಗೆ ಬಹಳ ಕಷ್ಟಸಾಧ್ಯವಾದ ಟಿಬೇಟ್ ಪ್ರಯಾಣವನ್ನು ಒಬ್ಬ ಚೀನೀ ಮಹಿಳೆಯು ಕೈಕೊಂಡು ಟಿಬೇಟಿನ ರಾಜ್ಯಾಧಿಕಾರಿ ದಲಾಯಿ ಲಾಮಾ ಮತ್ತು ಚೀನೀ ಸರಕಾರಗಳೆರಡರ ಒಂದು ಗುಪ್ತ ಸಂಧಿಯನು ಸಾಧಿಸಿರುವಳು.

೧೯೧೧ರ ಕ್ರಾಂತಿ

೧೯೧೧ರ ಕ್ರಾಂತಿಯು ಸ್ತ್ರೀಯರ ಕಡೆ ಮುಚ್ಚಿದ್ದ ಬಾಗಿಲುಗಳನ್ನು ತೆರೆದು ಅವರನ್ನು ಬಾಹ್ಯಪ್ರಪಂಚದ ಕಡೆಗೆ ಸೆಳೆದು ತಂದಿತು. ಅವರ ಹೃದಯಗಳಲ್ಲಿಯೂ ಸ್ವಾತಂತ್ರ್ಯಪ್ರೇಮ ಸಂಚಾರವಾಯಿತು. ಅವರ ಪುರುಷರ ಕೈಗೆ ಕೈಕೊಟ್ಟು ಸ್ವಾತಂತ್ರ್ಯಯುದ್ಧದಲ್ಲಿ ಹೋರಾಡಿದರು. ಆದ್ದರಿಂದ ಮುಂದೆ ಸ್ಥಾಪಿತವಾದ ಪ್ರಜಾಪ್ರಭುತ್ವವು ಸ್ತ್ರೀಯರ ನ್ಯಾಯವಾದ ಹಕ್ಕುಅಧಿಕಾರಗಳನ್ನು ಮನ್ನಿಸಿತು.

ಈಗ ಹಳತ ಯಾವುದೂ ಇಲ್ಲ. ಎಲ್ಲಾ ಹೊಸತು. ಚೀನೀಹೆಣ್ಣುಗಳು ತಮಗೆ ಬೇಕಾದ ಗಂಡಂದಿರನ್ನು ತಾವೇ ಆರಿಸಿಕೊಳ್ಳುತ್ತಾರೆ. ಅವರಿಗೆ ಹೆತ್ತವರ ಆಸ್ತಿಪಾಸ್ತಿಯಲ್ಲಿ ಅಣ್ಣತಮ್ಮದಿರಿಗಿರುವಷ್ಟೇ ಅಧಿಕಾರವು ಇದೆ. ಅವರು ಎಲ್ಲಾ ವಿಧಗಳಲ್ಲಿಯೂ ಪುರುಷರ ಸಮಾನರಾಗಿದ್ದಾರೆ. ದಾಂಪತ್ಯವಿಚ್ಛೇದದ ಅಧಿಕಾರವು ಅವರಿಗೆ ಪ್ರಾಪ್ತವಾಗಿದೆ.

ಸೈನ್ಯ ಸಾಹಸಗಳಲ್ಲಿ ಚೀನೀಸ್ತ್ರೀಯರು ಪುರುಷರಿಗೆ ಯಾವ ರೀತಿಯಲ್ಲಿಯೂ ಕಡಿಮೆಯಾಗಿ ಉಳಿದಿಲ್ಲ. ಪೋಲೀಸ ದಳ ಸೈನ್ಯಪಡೆಗಳಲ್ಲಿಯೂ ಸ್ತ್ರೀಯರು ಸೇರಿ ಕೆಲಸಮಾಡುತ್ತಲಿರುವರು. ಆಧುನಿಕ ಶಿಕ್ಷಣದ ಪ್ರಭಾವವು ಅವರ ಮೇಲೆ ಬಹು ಚೆನ್ನಾಗಿ ಕಾಣಿಸಿಕೊಂಡಿರುವುದು. ಅವರೀಗ ಅತ್ಯಂತ ಆಕರ್ಷಕರಾಗಿ ಮಾನ ಮರ್ಯಾದೆಯಿಂದ ಬದುಕಿ ಬಾಳುತ್ತಿರುವರು.

ಚೀನೀ ಸ್ತ್ರೀಯರು ಲಲಿತ ಕಲೆಗಳಲ್ಲಿ ಅತ್ಯಂತ ಪ್ರವೀಣೆಯರಾಗಿರುವರು. ನಾಟ್ಯನರ್ತನ ಸಂಗೀತ-ವಾದನಗಳೆಂದರೆ ಅವರಿಗೆ ಬಹಳ ಪ್ರೇಮ. ಶಾಲೆಗಳಲ್ಲಿ ಪ್ರತಿಯೊಬ್ಬ ಬಾಲಿಕೆಯೂ ಈ ಕಲೆಗಳ ಅಭ್ಯಾಸಮಾಡುತ್ತಿರುವಳು. ಎಷ್ಟೋ ಮಂದಿ ಮಹಿಳೆಯರು ಪ್ರಸಿದ್ಧ ಆಟಗಾರ್ತಿಯರೂ ಆಗಿರುತ್ತಾರೆ. ಸಾಮಾಜಿಕ ಸುಧಾರಣಾಕಾರ್ಯಗಳಲ್ಲಿ ಅವರು ಬಹಳ ಮುಂದಾಗಿಯೂ ಇರುತ್ತಾರೆ. ಇವರ ಪ್ರಯತ್ನಗಳಿಂದಾಗಿ, ಆರೋಗ್ಯ ನೈರ್ಮಲ್ಯಶುಚಿತ್ವಗಳಲ್ಲಿ ಹಿಂದಾದ ಚೀನವು ಈಗ ಬಹಳ ಮುಂದುವರಿಯಲ್ಪಡುವುದು.

ಭಾರತೀಯ ಮಹಿಳೆಯರಿಗೆ ಒಂದು ಪಾಠ

ಚೀನೀ ಸ್ತ್ರೀಯರ ಈ ಆಧುನಿಕ ಉತ್ಕರ್ಷವನ್ನು ಕಂಡು ವಿದೇಶಿಯರು ಕಲೆದಾಗಿದ್ದಾರೆ, ಮುಕ್ತಕಂಠದಿಂದ ಪ್ರಶಂಸಿದ್ದಾರೆ. ಅವರಿಂದ ಭಾರತೀಯ ಮಹಿಳೆಯರೂ ಅನೇಕ ವಿಷಯಗಳನ್ನು ಕಲಿತು, ತಮ್ಮ ಸಮಾಜದ, ದೇಶದ ಉದ್ಧಾರಕಾರ್ಯಗಳನ್ನು ಕೈಕೊಳ್ಳಬಹುದು. ಸ್ತ್ರೀಪುರುಷರ ಪರಸ್ಪರ ಸಹಾಯ—ಸಹಕಾರಗಳಿಂದಲೇ ಈ ಕಾರ್ಯವು ಸಾಧ್ಯವೆಂಬುದನ್ನು ಅವರು ಮರೆಯತಕ್ಕದ್ದಲ್ಲ.

ಹೊಟ್ಟೆವಾಯು

ಖಾರ ಮತ್ತು ರುಚಿ ಆಹಾರ [illegible]

ಮುಂತಾದುವುಗಳು ಉಂಟಾಗುತ್ತವೆ. ಹೊಟ್ಟೆಯು ಅಕ್ರಮ ಹೊಂದುತ್ತಲೇ ಒಂದು ಗ್ಲಾಸು ಇನೋಸ್ 'ಫ್ರುಟ್ ಸೋಲ್ಟ್' Eno's 'Fruit Salt' ಕುಡಿಯಿರಿ. ಅದು ಬಹಳ ರುಚಿಕರ ರಕ್ತವನ್ನು ತಣ್ಣಗಿರಿಸಿ, ಹೊಟ್ಟೆಯನ್ನು ಕ್ರಮವಾಗಿರಿಸುತ್ತದೆ. ಅದು ಅನ್ನಕೋಶವನ್ನು ಏನೊಂದು ಅಪಾಯವಿಲ್ಲದೆ ಶುಚಿತ್ವ ಸಾವಧಾನದಿಂದ ತನ್ನ ಕೆಲಸ ಮಾಡುತ್ತದೆ.

ಜಗತ್ತಿನ ಎಲ್ಲಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ. ಒಳ್ಳೇ ಮಾಗಿದ ಫಲ ಮೂಲ ಮತ್ತು ಅನೇಕ ಔಷಧಿ ಮಿಶ್ರಿತವಾದ ಈ ಲವಣವು ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುವುದು

"ಇಮಿಟೇಶನನ್ನು ತಿರಸ್ಕರಿಸಿ. ಒಳ್ಳೆಯ ಮಾತ್ರ 'ಇನೋಸ್ ಫ್ರುಟ್ ಸೋಲ್ಟ್' Eno's Fruit Salt' ಬಾಟ್ಲಿಗಳಲ್ಲಿ ಮಾರಲ್ಪಡುತ್ತದೆ. ನಮ್ಮ ಎಪ್ಪತ್ತು ವರ್ಷಗಳ ಅನುಭವದಿಂದ ಅದ ರೂಪ ಸ್ವರೂಪ ತಯಾರಿಸಲ್ಪಟ್ಟದ್ದು.'

E V K 1

THE

Bank of Mangalore Ltd.,

MANGALORE

ESTD 193

Branches

Panemangalore Mudabidri & Padubidri.

Fixed Deposits will be received at following rates of interest

1 to 3 month		3½%
„ 6		4%
12		5%
„ 24	& upwards	5½%

Interest Payable Quarterly

Saving Bank deposit 3½ on daily balances.

All kinds of banking business transacted

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದ ಬಲಹೀನತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಜಿ. ಎ. ಅಂಡ್ ಕೋ.,
ಆಯುರ್ವೇದಿಕ್ ಸಮಾಜ, ಪೆರಿಡೇಪಿ,
P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ನಾಲ್ಕೂ ಮೂಲೆಗಳಿಂದ

[illegible]—ಹೋಟೇಲು ಸತ್ಯಾಗ್ರಹದ ಹರಿಜನರು ಮಂತ್ರೀಶ್ವರರನ್ನು ಕಂಡರು. ಹರಿಜನರನ್ನಾದರೂ ಒಳಬಿಡುವರು, ಆದರೆ, ನುಲಿಯರಿಗೆ ಪ್ರವೇಶಸಿಗದು. ಅವರು ಯಾವ ಜಾತಿಯವರಾದರೇನು—ಎಂದರು ಶ್ರೀ। ಶೇರರು.

ಕೊಲಂಬೊ—ಇಂಡಿಯದಿಂದ 20000 ಜನರನ್ನು ಕಳುಹಿಸಿ ದಾಸ್ಯಾನು ಇಟ್ಟು ಉಪಯೋಗಿಸುತ್ತದಕ್ಕಾಗಿ ಸಿಲೋನ್ ಇರಬಾರದು; ಸಿಲೋನನ್ನು ಉದ್ಧರಿಸುವವರನ್ನು ಸಿಲೋನಿನವರಷ್ಟು ಚೆನ್ನಾಗಿ ಸಮಾನವಾಗಿ ಕಾಣಬೇಕು—ಎಂದರು ಶ್ರೀ। ಹೃದಯನಾಥ ಕುಂಜ್ರುರವರು.

ಲಾಹೋರ್:—ರಷ್ಯದಿಂದ ಹಿಂತಿರುಗಿದ ರತನಸಿಂಗನೆಂಬ ಸಿಕ್ಖನನ್ನು ಕೂಡ್ಲೆ ಸಿ. ಐ. ಡಿ.ಗಳು ಕೈದುಮಾಡಿರುವರು.

ಕರಾಚಿ:—ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಕೆಲ ನೋಕರರನ್ನು ನಿವೃತ್ತಗೊಳಿಸಿ ಎರಡುಲಕ್ಷ ರೂಪಾಯಿ ವಾರ್ಷಿಕ ಉಳಿತಾಯ ಮಾಡುವರು.

ನಾಗಪುರ:—ಮೆಡಿಕಲ್ ಸ್ಕೂಲ್ ವಿದ್ಯಾರ್ಥಿಗಳು 250 ಮಂದಿ ಮುಷ್ಕರ ಹಿಡಿದಿದ್ದರು. ಮಂತ್ರಿ ಶ್ರೀ। ಮಿಶ್ರರನ್ನು ಕಂಡು ಮಾತಾಡಿ ಸಮಾಧಾನ ಹೊಂದಿದರು.

ಲಕನೌ:—ಸಿ. ಐ. ಡಿ. ಗಳು ಎಲ್ಲ ಭಾಷಣಗಳನ್ನು ಸರಕಾರಕ್ಕೆ ರಿಪೋರ್ಟು ಮಾಡಬೇಕೆಂದು ಅಪ್ಪಣೆ.

ಅಲ್ಲಹಾಬಾದು:—ಮಂತ್ರಿ ಶ್ರೀ। ವಿ. ಎಲ್. ಪಂಡಿತ್ ಇವರು ವಿಲಾಯತಿಗೆ ಆರೋಗ್ಯ ಲಾಭಕ್ಕಾಗಿ ಎರಡು ತಿಂಗಳ ಅವಧಿಗೆ ಹೋಗುವರು. ರಜಾಕಾಲದಲ್ಲೂ ಅವರು ಮಂತ್ರಿಗಳಾಗಿಯೇ ಇರುವರು.

ನಾಗಪುರ:—ಕೊಂಗ್ರೆಸ್ ಶಿಸ್ತಿಗೆ ವಿರುದ್ಧ ನಡೆವ ಕೊಂಗ್ರೆಸ್ ಕೆಲಸಗಾರರನ್ನು ದಂಡಿಸುವರಾಗಿ ಪ್ರಕಟಣೆಯಾಗಿದೆ.

ಶಂಘಾಯಿ:—ಚೀನಿಯರದೊಂದು ಹಡಗು ಮತ್ತೊಂದಕ್ಕೆ ಬಡಿದು ಮುಳುಗಿ 150 ಮಂದಿ ಮುಳುಗಿ ಸತ್ತರು.

ಹಿಮಾಲಯ:—17,400 ಅಡಿ ಎತ್ತರದಲ್ಲಿ ಮೂವರು ಸಾಧುಗಳು ಚಳಿಗೆ ಮರಕಟ್ಟಿ ಸತ್ತುದು ತಿಳಿದುಬಂದಿದೆ.

ರಾಜಕೋಟೆ:—ಇಲ್ಲಿ ಹೊಸ ದಿವಾನರ ನೇಮಕವನ್ನು ವಿರೋಧಿಸಿ ಪ್ರಜೆಗಳು ಆಕ್ಷೇಪವೆತ್ತಿದ್ದಾರೆ.

ನೆಲ್ಲೂರು:—ಪೊಲೀಸರು ಹಾಗೆ ಹೀಗೆಂದು ಸುಳ್ಳುದೂರು ಕೊಟ್ಟವರನ್ನು ಚೆನ್ನಾಗಿ ಬುದ್ಧಿ ಹೇಳಿರುವರು ಮಂತ್ರಿ ರೆಡ್ಡಿಯವರು.

ತಿನ್ನವೆಲ್ಲಿ:—ಲೇಬರ್ ಯೂನಿಯನ್ ಆಫೀಸಿನಿಂದ 350 ರೂಪಾಯಿ ಕಾಣೆ.

ಇರೋಡು:—ಈ ತಾಲೂಕು ಶೇಂದಿ ಅಂಗಡಿಗಳಲ್ಲಿ 91ರ ಪೈಕಿ 76, ಕಳೆದ ವರ್ಷಕ್ಕಿಂತ 28,000 ರೂಪಾಯಿ ಹೆಚ್ಚಿಗೆ ಮೊಬಲಗಿಗೆ ಏಲಂ ಆದುವು.

ಕಂಚಿ:—ದೇವವಿಗ್ರಹದ ವಜ್ರಕೆತ್ತಿದ ನಾಮಕ್ಕೆ ಯಾರೋ ಕಳ್ಳರು ನಾಮಹಾಕಿರುವರು.

ಮದ್ರಾಸು:—ಕಲೆಕ್ಟರರ ದರ್ಬಾರಿನಲ್ಲಿ ನಮ್ಮ ಜಿಲ್ಲಾ ಶ್ರೀ। ಕೆ. ತೊಂಬತ್‌ರವರಿಗೆ ಜನ್ಮದಿನದ ರಾವ್‌ಸಾಹೆಬ್ ಬಿರುದು ಕೊಡಲಾಗಿದೆ.

ಪೆರಿಯಾಕುಲಂ:—ಇಲಿಗಳು ಸಾಯುತ್ತಿವೆ. ಪ್ಲೇಗನ್ನು ನಿರೀಕ್ಷಿಸುತ್ತಾರೆ.

ಮದ್ರಾಸು:—ರೈಲ್ವೆಸ್ಟೇಶನಿನಿಂದ ಸಾಮಾನು ಕದಿಯುತ್ತಿದ್ದ III ವರ್ಷದ ಕೊಲೇಜ್ ವಿದ್ಯಾರ್ಥಿ ರಾಜಮಾಣಿಕ್ಯನನ್ನು ಪೊಲೀಸರು ಕೈದುಮಾಡಿದ್ದಾರೆ. ಪ್ರಯಾಣಿಕರು ಬರುತ್ತಲೇ ಇವನ ಪರಾಕ್ರಮವಿತ್ತು.

ಊಟಿಕಮಂಡ:—ಇಬ್ಬರು ಭಿಕ್ಷುಕವೃತ್ತಿಯವರು. ಅವರಿಗೆ ಪಣಕಾಸುಗಳನ್ನು ಲೇವಾದೇವಿಗೆ ಕೊಟ್ಟವರೆಂದು ಅವರ ಬಡ್ಡೀ ಲೆಕ್ಕದಿಂದ ತಿಳಿದುಬಂದಿದೆ.

ಕರಾಚಿ:—ಟಿಕಾರಿ ನಾಣ್ಯಗಳು ಇಲ್ಲಿ ಈಗ ಸಿಗುವುದಕ್ಕೆ ಲೆಕ್ಕವೇ ಇಲ್ಲವಾಗಿದೆ.

ಕೆಲಿಕಟ್ ಟೇಂಕ್:—ಬಂದ್ ಆಗಿದೆ.

ಎರ್ನಾಕುಲಂ:—ಕೊಂಗ್ರೆಸ್ ಧ್ವಜಗಳು ಸಿಗುವುದಿಲ್ಲವಂತೆ.

ಮದ್ರಾಸು:—ಇನ್ನು ಲೋಕಲ್ ಬೋರ್ಡು ಚುನಾವಣೆಗಳು ಒಕ್ಟೋಬರ ಸಪ್ತಂಬರಗಳಲ್ಲೆಂದು ಮಜೂರಾಗಿದೆ.

,, ಚಿಲ್ಲರೆ ಬಂದರುಗಳ ಫಂಡು ರೂ. 55 ಲಕ್ಷವನ್ನು ಸರಕಾರವು ಇತರ ಖರ್ಚುಗಳಿಗೆ ವಿನಿಯೋಗಿಸುವುದಾಗಿ ತಿಳಿಸಲಾಗಿದೆ. ನೊವೆಂಬರಿನಲ್ಲಿ ಈ ವಿಷಯವು ನಿರ್ಧಾರವಾಗುವುದು.

,, ಹರಿಜನರನ್ನು ಸರ್ವಸಾಮಾಜಿಕ ಕೂಟ, ಸಂಸ್ಥೆಗಳಿಗೆ ಪ್ರವೇಶಕೊಡುವ ಬಿಲ್ಲು ಮಂಜೂರಾಗಿದೆ. ಹೊಟೆಲುಗಳೂ ಈ ಬಿಲ್ಲಿನನ್ವಯ ಹರಿಜನರನ್ನು ಪ್ರವೇಶ ಕೊಡದೆ ಇರಲಾಗುವುದಿಲ್ಲ.

ಕಲ್ಲಿಕೋಟೆ:—ಚೆರುವನೂರು ಹಿಂದು ಶಾಲೆಯ ಉಪಾಧ್ಯಾಯರ ಮುಷ್ಕರ. ಮೆನೆಜ್‌ಮೆಂಟು ಸಂಬಳ ಸಕಾಲದಲ್ಲಿ ಕೊಟ್ಟಿಲ್ಲ.

ಊಟಿಕಮಂಡ:—'ದೇವರಿಗೆ' ಭಕ್ತಿವಿಶ್ವಾಸಗಳನ್ನು ತೋರಿಸುತ್ತ, ಬ್ರಿಟಿಷ ಸಾಮ್ರಾಜ್ಯದ ಅಂಗವಾಗಿ ಆದರೆ ಸ್ವತಂತ್ರವಾಗಿ ಇಂಡಿಯವು ಇರಬಹುದೆಂದು ಬ್ರಿಟಿಷರು ಹೇಳುವಾಗ, ರಾಜನಿಗೆ ಭಕ್ತಿತೋರಿಸುವೆವೆಂದು ಪ್ರಮಾಣ ಮಾಡುವುವರಲ್ಲಿ ಸ್ವಾತಂತ್ರ್ಯಕ್ಕೇನು ಕೊರತೆ? ಎಂದು ಶ್ರೀ। ರಾಮಮೂರ್ತಿಯವರೆಂದರು ! ಇವರು ಕೊಂಗ್ರೆಸ್ ಕೌನ್ಸಿಲರರು.

ದೇವಿಕೋಟೆ:—ಮುನ್ಸಿಪಲ್ ಪ್ರೊಸೀಡಿಂಗ್ಸೆಲ್ಲ ತಮಿಳಲ್ಲೇ ಆಗಬೇಕಾಗಿ ನಿರ್ಧಾರವಾಗಿದೆ.

ಬೆಜ್ವಾಡಾ:—1939ರಲ್ಲಿ ಆಂಧ್ರಪ್ರಾಂತ್ಯವಾಗದಿದ್ದಲ್ಲಿ ಕೌನ್ಸಿಲನ್ನು ಬಹಿಷ್ಕರಿಸಬೇಕೆಂದು ನಿರ್ಧಾರ

ಕುಂಭಕೋಣ:—ಹುಡುಗಿಯರ ಶಾಲೆಗೆ ಗಂಡಸು ಮೆಂಬರರು ಯಾರೂ ಒಂಟಿಯಾಗಿ ಸಂದರ್ಶನೆಗೆ ಹೋಗಬಾರದೆಂಬ ಸರಕಾರದ ನಿಯಮವು ಇಲ್ಲಿನ ಮುನಿಸಿಪಲ್ ಕೌನ್ಸಿಲಿಗೆ ಸರಿತೋರಲಿಲ್ಲ. ವಿದ್ಯಾಇಲಾಖೆಯವರು ಗಂಡಸರಾಗಲೀ, ಹೆಂಗಸರಾಗಲಿ ಹೋಗಬಹುದಂತೆ. ಕೌನ್ಸಿಲರರು ಮಾತ್ರ ಚೇಯರ್ಮನರು ಸಹ ಹೋಗಬಾರದೆಂದರೇನು? ಇಂಥ ಒಬ್ಬ ಆಫೀಸರರು ಗರ್ಲ್ಸ್ ಶಾಲೆ ನೋಡಬಾರದಾಗಿ ಇದೇ ಕೌನ್ಸಿಲು ನಿರ್ಧರಿಸಿದ್ದುಂಟು. ಈಗ ಅವರೇ ಮಾತ್ರ ಅಲ್ಲಿಗೆ ಹೋಗಬಾರದೆಂದಾಯ್ತು; ಹಾಗೆ ಅಪ್ಪಣೆಕೊಟ್ಟವರಿಗೆ ನಿಷೇಧ. ಸರಕಾರವು ಅಪ್ಪಣೆ ತಿದ್ದಲಿ ಅಥವಾ ರದ್ದುಮಾಡಲಿ ಎಂದು ಸಭಾನಿರ್ಣಯ.

ತಲಚೇರಿ:—ಮುನ್ಸಿಪಲ್ ಕೌನ್ಸಿಲು (ದಿಂಡಿಗಲ್ ಕೌನ್ಸಿಲಿನ ಹುಕುಂ ವಿಮರ್ಶಿಸಿ) ಶಾಲಾ ಉಪಾಧ್ಯಾಯರು 50 ವರ್ಷ ವಯಸ್ಸಿನಲ್ಲೇ ನಿವೃತ್ತರಾಗಬೇಕೆಂಬುದನ್ನು ಒಪ್ಪಲಿಲ್ಲ. ಎಲ್ಲಾ ಮ್ಯುನಿಸಿಪಲ್ ಕೌನ್ಸಿಲುಗಳಿಗೂ ದಿಂಡಿಗಲಿನವರು ಡಂಗುರ ಸಾರಿದ್ದಾರೆ. 50ರಲ್ಲೇ ಇದ್ದವರು ನಿವೃತ್ತರಾದರೆ, ಕಾಯುತ್ತಿರುವವರಿಗೆ ಸದುದ್ಯೋಗ ಮುಹೂರ್ತವಂತೆ.

ಸನ್‌ಲೈಟ್ ಸೋಪಿನಿಂದ ಚರ್ಮಕ್ಕೆ ಹಾನಿಯಿಲ್ಲ

ಪ್ರತಿನಿತ್ಯವೂ ಒಗೆಯುವುದಕ್ಕೆ ಸನ್‌ಲೈಟ್

ಪ್ರತಿದಿನವೂ ಒಗೆಯಬೇಕಾದ ಬಟ್ಟೆಗಳು ಸನ್‌ಲೈಟ್ ಸೋಪಿನಿಂದ ಹೊಸದಾಗಿಯೂ ಮತ್ತು ಸುವಾಸನೆಯುಳ್ಳದ್ದಾಗಿಯೂ ಇರುತ್ತವೆ.

ಹೆಚ್ಚಾಗಿ ನೊರೆಯನ್ನು ಉಂಟುಮಾಡದೆ ಇರುವ ಅಗ್ಗವಾದ ಮತ್ತು ಗಡಸಾದ ಸೋಪುಗಳಿಂದ ಒಗೆಯಬೇಕಾದ ಬಟ್ಟೆಗಳನ್ನು ಶುಭ್ರಮಾಡುವುದಕ್ಕೆ ಹೊಡೆಯಲೂ ಉಜ್ಜಲೂ ಬೇಕಾಗುತ್ತದೆ. ಸನ್‌ಲೈಟ್ ಸೋಪು ಸೊಗಸಾದ ಸಸ್ಯಸಂಬಂಧ ಎಣ್ಣೆಯಿಂದಲೇ ತಯಾರಾಗಿರುವುದರಿಂದ ಆ ಬಾಯಿಕರವಾದ ಹೊಡೆಯುವಿಕೆಯೂ ಉಜ್ಜುವಿಕೆಯೂ ಇಲ್ಲದನೇ ಕೊಳೆಯನ್ನು ತೆಗೆಯುತ್ತದೆ. ಆದ್ದರಿಂದ ಸನ್‌ಲೈಟ್ ಸೋಪಿನಿಂದ ಒಗೆದ ಬಟ್ಟೆಗಳು ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಮತ್ತು ಶುಭ್ರವಾಗಿ ಒಗೆಯಲ್ಪಡುತ್ತವೆ. ಸನ್‌ಲೈಟ್ ಸೋಪಿನಿಂದ ಸೂಕ್ಷ್ಮ ಎಳೆಗಳಿಗೂ ಮತ್ತು ಒಗೆಯಬಹುದಾದ ಬಟ್ಟೆಗಳ ಬಣ್ಣಕ್ಕೂ ಕ್ಷೇಮವಿದೆ.

ಸನ್‌ಲೈಟ್ ಸೋಪು

ಅಪ್ಪಟ ಸಸ್ಯಸಂಬಂಧವಾದ ಎಣ್ಣೆಯಿಂದ ಹಿಂದೂದೇಶದ ಕೆಲಸಗಾರರಿಂದ ಹಿಂದೂದೇಶದಲ್ಲಿ ತಯಾರಿಸಲ್ಪಟ್ಟುದು.

K-S 1287-50

KANARESE

ಬಾಲಭಾಸ್ಕರ

ಅತಿ ಭಯಂಕರವೆನಿಸುವ ಮಕ್ಕಳ ವ್ಯಾಧಿಗಳಾದ, ಲಿವರ್ ಮತ್ತು ಪ್ಲೀಹದ ಬೆಳವಣಿಗೆ ರೋಗವನ್ನು ನಿವಾರಿಸುವ ಮತ್ತು ತಡೆಯುವ ಶಾಂತಿ ಗುಣಗಳುಳ್ಳ ಔಷಧಿಯು.

ಎರಡು ವಿಧಗಳಲ್ಲಿ, ಎರಡು ಪರಿಮಾಣಗಳಲ್ಲಿ ಎಲ್ಲಾ ದವಾಖಾನೆಗಳಲ್ಲಿ ಮಾರಾಟವಾಗುತ್ತದೆ.

ಆಯುರ್ವೇದಾಶ್ರಮಂ ಮದ್ರಾಸು.

ಪ್ರವರ್ತಕರು:-ಅಮರ್‌ಚಂದ್ ಸೊಬಾಚಂದ್, ಮದ್ರಾಸು.

THE

Canara Banking Corporation, Udipi, Ltd

INCORPORATED IN BRITISH INDIA.
ESTD. 1906.

BOARD OF DIRECTORS:

Dr. U. Sunder Ram Pai, M. B. & B. S., *President.*
M. R. Ry. R. M. Karnad, Avl., *Vice President.*
M. R. Ry. Kochikar Padmanabha Pai, Avl., B. A.,
M. R. Ry. B. Vaikunta Baliga, Avl., B. A., B. L.,
M. R. Ry. Kasturi Nagesh Pai Avl.,
M. R. Ry. Mijar Govinda Pai, Avl.,
Dr. U. Padmanabha Mallya, L. M & S.,
M. R. Ry. M. Narayana Kamath, Avl., B. A.,
M. R. Ry. K. Narasimha Kamath, Avl.,
M. R. Ry. U. K. Bhujanga Nayak, Avl.,

V. R. Kamath, B. A., LL. B.
Manager.

ರೈಲ್ವೆ ಅಪಘಾತ:

ತಾ. 20-21ರ ಮಧ್ಯರಾತ್ರಿ. 255½ ಮೈಲು ಕಲ್ಲಿನ ಸಮೀಪ, ಥಕ್ಕನೆ ವಿಶೇಷ ಮಳೆ ಬಂದುದರ ಫಲವಾಗಿ ರೈಲ್ವೆ ಮಾರ್ಗದಿಂದ ಮಣ್ಣು ಕೊಚ್ಚಿಕೊಂಡು ಹೋಗಿ, ಬರೀ ಕಂಭಿಗಳು ಮಾತ್ರ ಉಳಿದುದರಿಂದ, ತ್ರಿಚಿನ್ನಾಪಳ್ಳಿಯಿಂದ ಶೆಂಕೊಟ್ಟಾಗೆ ಹೋಗುವ ರೈಲುಗಾಡಿಯ 6 ಗಾಡಿಗಳು ಉರುಳಿ ಕೆಳಬಿದ್ದವು. ಕೆಲವು ಗಾಡಿಗಳು ದೂಳಾಗಿ ಹೋದುವು. ಇಂಜಿನೂ ಕೆಳಹಾರಿತು. 12 ಮಂದಿ ಸತ್ತರೆಂದೂ 50 ಮಂದಿಗೆ ಸಾಧಾರಣ, ಇನ್ನೂ [illegible]0 ಮಂದಿಗೆ ಕಠಿಣ ಗಾಯಗಳಾಗಿವೆಯೆಂದೂ ಅವರನ್ನು ದಿಂಡಿಗಲ್ ಆಸ್ಪತ್ರೆಗೆ ಒಯ್ದರೆಂದೂ ವಾರ್ತೆ ಹರಡಿದೆ. 25ಕ್ಕೂ ಹೆಚ್ಚು ಸತ್ತಿರಬಹುದೆಂದೂ, 117 ಮಂದಿಗೆ ಗಾಯವೆಂದೂ ಪ್ರಯಾಣಿಕರಲ್ಲಿ ಉಳಿದವರು ತಿಳಿಸುತ್ತಾರೆ. ನಮ್ಮ ಜಿಲ್ಲೆಯ ಕೃಷ್ಣರಾವ್ ಎಂಬಾತನೊಬ್ಬನು ಅದೇ ಗಾಡಿಯಲ್ಲಿದ್ದು ಈಗ ಆಸ್ಪತ್ರೆಯಲ್ಲಿರುವನಂತೆ. ಇಂಜಿನಿನ ಮೇಲಿದ್ದ ಆಳೋಬ್ಬನು ಸತ್ತನು. ಅಧಿಕಾರಿಗಳು ಬಹಳ ಸಾಹಸಪಟ್ಟು ಸಂರಕ್ಷಣೋಪಾಯ ಮಾಡಿದ್ದಾರೆ. ಇದುವರೆಗೆ ಬಹು ವರ್ಷಗಳಿಂದ ಇಂಥ ಅಪಘಾತ ಈ ರೈಲ್ವೆಯಲ್ಲಾದುದಿಲ್ಲ. ಪ್ರಯಾಣಿಕರಲ್ಲಿ ಒಂದು ಮದುವೆ ದಿಬ್ಬಣದವರಿದ್ದರು, ಇವರೊಳಗೆ ಒಂದು ಮಗು ಮಾತ್ರ ಉಳಿದಿದೆ. ಸತ್ತವರ ಸಂಖ್ಯೆ ನೂರಾಗಿರಬಹುದೆಂದೂ, ಟಪ್ಪಾಲು ಗಾಡಿಯಿಂದ ಮೂವರು ಸಿಗಲಿಲ್ಲವೆಂದೂ ಮುಂದಣ ವಾರ್ತೆ. I, II ಕ್ಲಾಸು ಗಾಡಿಗಳು ಕಡೆಗಿದ್ದುವು, ನಿರಪಾಯ.

ರೈಲ್ವೆ ಅಪಘಾತದಲ್ಲಿ ನಾಲ್ಕು ಗಾಡಿಗಳಲ್ಲಿ (ಈಗ ದೂಳಾಗಿವೆ) 400ರಷ್ಟು ಮಂದಿ ಪ್ರಯಾಣಿಕರಿದ್ದರೆಂದೂ, ಅವರಲ್ಲಿ ಬದುಕಿದವರು ಕಡಮೆಯೆಂದೂ, ಎಷ್ಟೋ ಜನರು ಗಾಡಿಗಳ [illegible]ಯಲ್ಲಿ ಹೂತು ಹೋಗಿರಬಹುದೆಂದೂ ಪ್ರಯಾಣಿಕರಲ್ಲಿ ಕೆಲವರು ಹೇಳುತ್ತಿರುವರು. ನೂರಕ್ಕೆ ಕಡಿಮೆ ಮಿಲ್ಲದಷ್ಟು ಸತ್ತಿರಬೇಕೆಂಬುದು ದೃಢವಾಗುತ್ತ ಬರುತ್ತದೆ. ಅಫಿಸಿಯಲ್ ಲೆಕ್ಕ ಪ್ರಕಾರ ಎತ್ತಿದ ಹೆಣಗಳೇ 35, ಗಾಯ ಪಡೆದವರು 120. ಆಸ್ಪತ್ರೆಯಲ್ಲಿದ್ದವರಲ್ಲಿ ಪುನಃ 6 ಮಂದಿ ಸತ್ತರು. (ತಾ 22) ಟಪ್ಪಾಲು ಚೀಲಗಳು 300ರಲ್ಲಿ 120 ಮಾತ್ರ ದೊರೆತಿವೆ. ಸತ್ತ ಚೆಟ್ಟಿಯಾರನೊಬ್ಬನ ಚೀಲದಲ್ಲಿ 3000 ರೂಪಾಯಿಯ ನೋಟುಗಳಿದ್ದುವು. ಮತ್ತೊಂದು ಹೆಣದ ಮೇಲೆ 7 ಪವನುಗಳೂ ಇಷ್ಟು ಅಫೀಮೂ ದೊರೆತಿವೆ. ಈ ಗಾಡಿಯು [illegible] ಹತ್ತಿರದ ಮತ್ತೊಂದು ಸ್ಟೇಶನಿನಲ್ಲಿ 40 ಮಂದಿ ಮುಸ್ಲಿಮ ಯಾತ್ರಿಕರ ಇಳಿದಿದ್ದರು, ಅವರು ಬದುಕಿದ್ದು ದೈವವಶಾತ್. ಗಾಡಿಯು ಜಖಂ ಹೊಂದಿದ ಸ್ಥಳಕ್ಕೆ ಬರುವ ಮೊದಲೇ ಹಳ್ಳಿಯವರು ದೀವಟಿಗೆ ಉರಿಸಿ ಗಾಡಿಯನ್ನು ತಡೆಯಲು ಬೊಬ್ಬಿಟ್ಟು ಎಚ್ಚರಿಸಿದ್ದರು, ಆದರೆ ಡ್ರೈವರನಿಗೆ ಅದು ತಿಳಿಯಲಿಲ್ಲ. ಮಳೆ ಜೋರಾಗಿ ಸುರಿದು, ಅಡಿಯ ಮಣ್ಣೆಲ್ಲ ಕರಗಿ, ಪಟ್ಟಿಗಳು ಮುರಿದು ಗಾಡಿ ಧ್ವಂಸವಾಯಿತೆನ್ನುವರು. ಸರಕಾರವು ಈ ವಿಷಯ ತುಂಬಾ ವಿಚಾರಣೆ ಮಾಡಲಿಕ್ಕಿದೆ. ಗವರ್ನರರೂ ಮಂತ್ರಿ ಮಂಡಲವೂ ಸಂಬಂಧಪಟ್ಟವರೊಡನೆ ಸಹಸಂತಾಪ ಸೂಚಿಸಿ ಸಂದೇಶ ಕಳುಹಿದ್ದಾರೆ.

ಹಿಂದೀಯರು ಬೇಕು:

ಬ್ರಿಟಿಷ ಸಾಮ್ರಾಜ್ಯವು ನೆಲೆಗೊಂಡು ಬಾಳಬೇಕಾದರೆ, ಖಾಲಿಯಿರುವ ಸ್ಥಳಗಳಲ್ಲಿ ಜನಸಂಖ್ಯೆ ತುಂಬಬೇಕು. ಬಿಳಿಪರಕ್ತದವರೂ ಸಾಮ್ರಾಜ್ಯದಲ್ಲಿನ ಬಿಳೀ ಜನರೂ ಹಿಂದೀಯರೂ ಸಹ ಅಗತ್ಯ. ಹಿಂದೀಯರು ಈಗಲೇ ಈ ಸ್ಥಳಗಳನ್ನು ತುಂಬಲಾರದಿದ್ದರೆ, ಮುಂದೆ ಮೋಸ ಹೊಂದುವಿರಿ. ಹಿಂದೂದೇಶದ ಜನಸಂಖ್ಯೆ ಹೆಚ್ಚುತ್ತ ಬರುವಾಗ, ಇನ್ನೂ ಇಲ್ಲೇ ಹಿಂದೀಯರು ಇರುವುದು ಸರಿಯಲ್ಲ ಎಂದು ರೋಡೇಶಿಯಾದ ಕಮಿಷನರ ಲೋರ್ಡ ಬ್ಲೆಡಿಸ್ಲೋಅವರ ಸಂದೇಶ.

ಕೇಳಿದಿರಾ?

ಸಮಯ ಸಿಗದು:

ಇಂಗ್ಲೆಂಡಿಗೆ ತೆರಳಿ, ಸಿಲೋನಿನ ರಾಜ್ಯಭಾರಕ್ರಮವನ್ನು ಬದಲಾಯಿಸಬೇಕೆಂದು ಮನವಿ ಮಾಡಲು ಪ್ರಯತ್ನಿಸುತಿದ್ದ ಪ್ರತಿನಿಧಿಗಳಿಗೆ, ಸರಕಾರದ ಸೆಕ್ರೆಟರಿಗಳು ಅವರಾಗಿ ಬಂದುದರಿಂದಲೂ ಗವರ್ನರರ ಮೂಲಕ ಬಾರದಿದ್ದುದರಿಂದಲೂ, ಸಮಯವಿಲ್ಲವೆಂದು ಭೇಟಿಗೆ ಅವಕಾಶಕೊಡಲಿಲ್ಲ. ಪೆಲೆಸ್ತೀನದ ರಗಳೆ ಸೆಕ್ರೆಟರಿಯವರಿಗಿರುವಾಗ, ಈ ರಗಳೆ ನಿವಾರಣೆಗೆ ಇದು ಸುಲಭೋಪಾಯ. ಅಲ್ಲೀಗ 6 ತಿಂಗಳಲ್ಲಿ 147 ಕೊಲೆಗಳಾಗಿವೆ! ಇನ್ನೂ ಆಗುತ್ತಲಿವೆಯಷ್ಟೆ.

ಜಾಮೀನಿಲ್ಲ

ಶ್ರೀ| ಕಮಲಾದೇವಿಯರಿಗೆ ಇನ್ನೆರಡು ತಿಂಗಳ ತನಕ ತಿರುವಾಂಕೂರಲ್ಲಿ ಪ್ರವೇಶವಿಲ್ಲವೆಂದು ಆಪ್ಪಣೆ ಅಲ್ಲಿನ ಗಡಿಯೊಳಗೆ ಕಾಲಿಡುವ ಮೊದಲೇ ತಲುಪಿಸಿದ್ದಾಯಿತು. ಅವರು ರೈಲ್ವೆ ಸ್ಟೇಶನಿನಿಂದ ಕೆಳಗಿಳಿಯುತ್ತಲೇ ಕೈದು ಮಾಡಲಾಯಿತು. ತ್ರಿವಾಂಡ್ರಮ್ ಮೆಜಿಸ್ಟ್ರೇಟರ ಮುಂದೆ ಹಾಜರು ಮಾಡಿದಾಗ 'ಜಾಮೀನಿದೆಯೆ? ತಿರುವಾಂಕೂರು ಬಿಟ್ಟು ಹೊರಡುವುದಾದರೆ ಮೊಕದ್ದಮೆ ಇಲ್ಲ' ಎಂದು ಮೆಜಿಸ್ಟ್ರೇಟರೆಂದರು. ಜಾಮೀನಿಲ್ಲ, ಹೋಗೋದೂ ಇಲ್ಲ ಎಂದುತ್ತರ. ಆದಕ್ಕಾಗಿ ವಿಚಾರಣೆ ಮುಂದರಿಸಲಾಯಿತು. ಕಾರಾಗೃಹಕ್ಕೆ ಕೊಂಡೊಯ್ಯಲಾಗಿದೆ. [illegible]ರಲ್ಲಿ ಯುವಕ ಸಂಘದ ಸಭೆ ದಾರಿಯಲ್ಲೆಲ್ಲ ಗಲಾಟೆಗಳಾಗಿವೆಯಂತೆ.

ಶ್ರೀ ಶಿವ ಲಾಲ್ [illegible]ಯವರನ್ನು ರವಿವಾರವೇ ತ್ರಿ[illegible] ಆ ರಾಜ್ಯದ ಹೊರಗೆ ಹೋಗ[illegible] [illegible] ಹತ್ತಿಸಿ [illegible] ಮೊಕದ್ದಮೆ [illegible] ಇಲ್ಲ [illegible] ಗಡೆಯು ಶರ್ತಗಳೂ ಇಲ್ಲ.

ಜಸ್ಟೀಸ್ ತ್ಯಾಜ್ಯ:

ಸರ್ [illegible]ದ ಖುಸ್ಸಾನ್ ಜಸ್ಟಿಸ್ ಪಕ್ಷ ತೊರೆದರು. ಈಗ ಸ್ವತಂತ್ರ ಪಕ್ಷ ಸೇರುವರು. ಇವರು ಹಿಂದೀ ಭಕ್ತರು, ಸರ್ ಪನ್ನೀರಸೆಲ್ವಂರಂತೆ, ರೆಡ್ಡಿಯವರಂತೆ ವಿರೋಧಿಗಳಲ್ಲ, ಇದೊಂದು ಕಾರಣವಿದೆಯಲ್ಲವೆ?

24 ಲಕ್ಷ ರೂಪಾಯಿ

ವಿಶೇಷಶಿಕ್ಷಣಾದಿಗಳಿಗಾಗಿ ಸರ್ ಡೋರಬ್ ತಾತಾರವರ ಫಂಡಿನಿಂದ 1938ರಿಂದ 1937ರ ತನಕ 24, 63, 815 ರೂಪಾಯಿ ದಾನವಾಗಿ ವೇತನಾದಿಗಳಿಗೆ 'ಕೊಡಲಾಗಿದೆ! ಪರದೇಶಗಳವರಿಗೆ ರೂ. 156382ನ್ನೂ ಸ್ವದೇಶಿಯರಿಗೆ 57001 ರೂಪಾಯನ್ನೂ ರಕ್ತಸಂಬಂಧ ರೋಗಗಳ ನಿವಾರಣೋಪಾಯಗಳಿಗಾಗಿ ಹಂಚಲಾಗಿದೆ. ಶಿಕ್ಷಣ ವೈದ್ಯ ಸಾಮಾಜಿಕ ಅಭ್ಯುದಯಗಳಿಗಾಗಿ ನೂರಡಾ 99ರಂತೆ, ರೂ. 22, 25,057 ಹಿಂದೀಯರಿಗೇ ಹಂಚಲಾಗಿದೆ. ವರ್ಷಕ್ಕೆ ಸುಮಾರು 5 ಲಕ್ಷ ರೂಪಾಯಿ ಹಂಚಬಲ್ಲ ಈ ದಾನಶೂರರಿಗೆ ಸಮಾನರೆಷ್ಟು ಮಂದಿ ಇರುವರು?

ಕಮಿಶನರರು ಬೇಡ

ಈ [illegible]ನದ ಮ್ಯುನಿಸಿಪಲ್ ಚೆಯರ್ಮೇನ ಪ್ರೆಸ್ ಚೆಯರ್ಮೇನರುಗಳ ಪರಿಷತ್ತು ಮದ್ರಾಸು ಕೌನ್ಸಿಲ್ ಚೇಂಬರಿನಲ್ಲಿ ಸೇರಿ,—ಕಮಿಶನರುಗಳು ಬೇಡ, ಚೆಯರ್ಮೇನರಿಗೆ ರೂ 50 ರಂತಾದರೂ ಭತ್ತೆ ಸಿಗಬೇಕು, ವಿದ್ಯುತ್ ಕಾರ್ಖಾನೆಗಳು ಮ್ಯುನಿಸಿಪಾಲಿಟಿಗಳದಾಗಬೇಕು ಹೆಮ್ಮಕ್ಕಳ ಶಾಲೆ ಸಂದರ್ಶನೆಗೆ ತೊಡಕಾದ ಅಪ್ಪಣೆ[illegible]ಗಬೇಕು—ಇತ್ಯಾದಿ ಶಿಫಾರಸುಗಳನ್ನು ಮಾಡಿತು.

ಖಾದಾಖಾಡಿ ಯುದ್ಧ

[illegible] ಲಕ್ಷ ಚೀನೀ ಸಿಪಾಯಿರು ಹೆನ್ಕೋನದಿ ಪಡದಲ್ಲಿ ಬಂದು ಸೇರಿದ್ದು, ಜಪಾನನೊಡನೆ ಯುದ್ಧಕ್ಕಾಗಿ ಕಾಯುತ್ತಿರುವರು. ಹ[illegible] ನಗರದಿಂದ ಪರದೇಶೀಯರು ಹೊರಟುಹೋಗು[illegible], 364 ಸ್ತ್ರೀಯರೂ 80 ಮಕ್ಕಳೂ [illegible] ಇನ್ನು ಉಳಿದಿರು[illegible].

ಹರಿಜನರು.

ಇವರಿಗಾಗಿ ಪ್ರತ್ಯೇಕ ಶಾಲೆಗಳಿರಬಾರದು, ಮತ ಮತ್ತು ಜಾತಿಗಳ ಅಹಂಕಾರವು ಅಳಿದು ಎಲ್ಲರೂ ಒಂದಾಗದ ವಿನಹ ದೇಶಕ್ಕೆ ಉದ್ಧಾರ ಪ್ರಯತ್ನವಿಲ್ಲವೆಂದೂ, ಕಾಲೇಜು ತರಗತಿಗಳಿಗೆ ಹರಿಜನ ವಿದ್ಯಾರ್ಥಿಯರನ್ನು ಧರ್ಮಾರ್ಥ ಸೇರಿಸಿಕೊಂಡು ಕಲಿಸುವುತೆ ಸರಕಾರವು ಯತ್ನಿಸುವುದೆಂದೂ, ಹೈಯರ್ ಗ್ರೇಡ್ ಟ್ರೇನಿಂಗ ತರಗತಿಗಳನ್ನು ವಿಸರ್ಜಿಸುವುದುಕ್ತವೆಂದೂ, ಸರಕಾರದ ಅಭಿಪ್ರಾಯವೆಂದೂ ಡಾ| ಸುಬ್ಬರಾಯನವರು ತಿಳಿಸಿರುವರು.

ಹಂಗೇರಿ ನಾಝಿಗಳು.

ಈಗಲೆ ಉದ್ವಿಗ್ನರಾಗಿ ಜರ್ಮನ್ ಸ್ನೇಹಕ್ಕೆ ತೊಡಗಿರುವರು 106 ಜನರನ್ನು ಕೈದು ಮಾಡಲಾಗಿದೆ. ಇವರನ್ನು ಆಳುತಿದ್ದ ಎಡ್ಮಿರಲ್ ಹೊರ್ತಿ ಜರ್ಮನಿಗ ಹಿಟ್ಲರನ ಸಂದರ್ಶನೆಗೆ ತೆರಳಿರುವುದು ಇವರಿಗೆ ಅತ್ಯುತ್ತಮ ಸಂದರ್ಭವಾಗಿದೆ.

ಫ್ರೆಂಕೊ.

ಯಾವ ಸಂಧಾನವೂ ಸಾಗದಂತೆ ಚಮತ್ಕಾರದಿಂದ ಫ್ರೆಂಕೋ ಬ್ರಿಟನಿಗೆ ಇಷ್ಟು ವಿಳಂಭವಾಗಿ ಉತ್ತರ ಕೊಟ್ಟಿರುವನು. "ಎಂಗ್ಲೊ ಇಟಲಿಯನ್ ಕರಾರು ಸತ್ತಿತು" ಎಂದೇ ಬ್ರಿಟಿಷ ಪತ್ರಿಕೆಗಳು ಟೀಕಿಸಿವೆ. ಹೀಗಾದ್ರೆ? ಶಾಂತಿಗೆ ಉಪಾಯವೇನು?

The

Agricultural & Industrial Bank, Ltd,

(Incorporated in British India)

Head Office LAXMINIVAS BUILDINGS *Coondapoor*

BRANCHES —

COONDAPOOR	HANDHOK	SOMWARPET
KUMTA	O KALN	SHIMOGA
KOTESHWAR	VIRARAJENDRAPET	TAPI SERF & KADUR

Deposits are accepted at following rates:

5 YEARS
CORONATION
CASH
CERTIFICATES
BEARING
5 PER CENT
INTEREST ARE
ISSUED IN
DENOMINATIONS
OF RS. 10, 25, 50, 100,
250, 500 & 1000

REDEEMABLE AT ANY
TIME.
CUMULATIVE
DEPOSITS ARE
ACCEPTED

Current Deposits

From January to June 2%

and

From July to December 1%

Savings Bank Deposits

3½ per cent per annum

Fixed Deposits

for 6 Months 3½%

„ 1 Year 4%

„ 2 Years & above 4½%

For Further Particulars Apply to:—

HEAD OFFICE or BRANCHES

Notice.

Canara Bank, Limited, Puttur.

ಕೆನರಾ ಬ್ಯಾಂಕ್ ಲಿಮಿಟೆಡ್, ಪುತ್ತೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ವ ಅದರ ಮೇಲಣ ಬಡ್ಡಿಯನ್ನಾಗಲೀ ಸರಿಯಾಗಿ ವಾಯಿದೆಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಅವರಿಗೆ ಕ್ರಮಪ್ರಕಾರವಾಗಿ ಬಿಟ್ಟ ರಿಜಿಸ್ಟ್ರಿ ನೋಟೀಸು ಮೂಲಕ ಕೆಲವರು ಸಿಕ್ಕಲಿಲ್ಲವಾಗಿಯೂ ಮತ್ತು ಕೆಲವರು ಮೃತಪಟ್ಟಿರುವುದಾಗಿಯೂ ಬಂದಿರುವುದರಿಂದ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—ಸದ್ರಿಯವರಿಂದ ಬ್ಯಾಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ವ ಈ ನೋಟೀಸು ಖರ್ಚು ಸಹ ಕಟ್ಟಿಸಿ ಇದೇ ಬರುವ ತಿಂಗಳ ತಾ 27-9-1938 ರೊಳಗೆ, ಸದ್ರಿಯವರು ಮತ್ತು ಮೃತಪಟ್ಟವರ ನ್ಯಾಯವಾದ ಹಕ್ಕುದಾರರು ಬ್ಯಾಂಕಿಗೆ ತಂದು ಸಲ್ಲಿಸಿ, ಅಡವಿಟ್ಟ ನಗಗಳನ್ನು ಬಿಡಿಸಿ ಕೊಂಡು ಹೋಗದೆ ಬಿಟ್ಟಲ್ಲಿ ಅಡವಿಟ್ಟ ಸದ್ರಿ ನಗಗಳನ್ನು ಅದೇ ದಿವಸ ಯಾ ಅದರ ನಂತರ ಬ್ಯಾಂಕಿನವರು ಗೊತ್ತುಪಡಿಸುವ ಬೇರೆ ತಾರೀಖಿನಲ್ಲಿ ಪುನ ಯಾವ ತರದ ನೋಟೀಸ ಕೊಡದೆ ಅದರ ಸಾಲ ವಿಕ್ಕೆ ಸದ್ರಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ತಿಳಿದಿರುವುದು.

S L. 81/36 ಅಪ್ಪಯ ಆಚಾರಿ, ಬಸ್ಸ್ರೂಆಚಾರಿಯವರ ಮಗ, ಬೊಳ್ವಾರು ಪುತ್ತೂರು ಅಸಲು ರೂ. 10

S L 288/36 ಕುಂಜಣ್ಣ ರೈ ಸುಬ್ಬಣ್ಣ ರೈಯವರ ಅಳಿಯ, ನೆಟ್ಟಣಿಗೆ ಮುಡ್ನೂರು ಗ್ರಾಮ, ಅಡೂರು ಪೋಸ್ಟು. ಅಸಲು ರೂ. 5.

S L. 42/37. ಕೊರಗೆ[illegible], [illegible] ಗೌಡರ ಮಗಳು, ಕೆಡಿಂಜಿ, ಉಪ್ಪಿನಂಗಡಿ ಪೋಸ್ಟು. ಅಸಲು ರೂ 20.

L. 388/36. ಪಟ್ಟೆಂಜಾಜೆ ಪಮ್ಮದಬ್ಬರು, ಅಬ್ದುಲ್ ರಹಿಮಾನಬ್ಯಾರಿಯವರ ಮಗ, ಹಿರೆಬಂಡಾಡಿ ಗ್ರಾಮ, ಉಪ್ಪಿನಂಗಡಿ ಪೋಸ್ಟು. ಅಸಲು ರೂ. 100.

L. 593/36. ಡಿ. ಡಿ. ಅಸಲು ರೂ. 11

L 838/36. ಡಿ. ಡಿ. ಅಸಲು ರೂ. 62

Office of the Bank, Puttur 22—8—1938 } **M. Anantha Bhandari**, *Agent.*

ಈ ವಾರದ ಕಥೆ

ವ್ಯಥೆ!

ಒಂದು ಚಂದದ ವರ್ಷಾಕಾಲ! ರಾಮಣ್ಣನು ಕೂಲಿಯವನು; ಒಂದಿಷ್ಟು ವಿಶ್ರಾಂತಿಯಿಲ್ಲದೆ ಆತನು ತನ್ನ ಕೆಲಸವನ್ನು ಮಾಡುತ್ತಿದ್ದನು. ಕೋಣಗಳು ತಮ್ಮ ಪೂರ್ಣ ಶಕ್ತಿಯನ್ನುಪಯೋಗಿಸಿ, ಮಳೆ ಬಂದು ಮೆತ್ತ ನಾದ ನೆಲವನ್ನು ನೇಗಿಲು ಆಳವಾಗಿ ಉಳು ವಂತೆ ಮಾಡುತ್ತಿದ್ದುವು. ಬಹುಕಾಲದಿಂದ ಕಾದು ಕಾದು ಕೊನೆಗೆ ಮಳೆಯು ಬಂದರು ತುದು, ಚಾತಕ ಪಕ್ಷಿಯಂತೆ ಹಾತೊರೆವ ಭೂಮಿಯನ್ನೂ, ತನ್ನ ಅಮೃತಮಯ ವೃಷ್ಟಿ ಯಿಂದ ಸಂತುಷ್ಟಗೊಳಿಸಿ, ಮೇಘ ಜಲವು ಕೊಳಗಳನ್ನೂ ನದಿಗಳನ್ನೂ ತುಂಬಿ ಬಿಟ್ಟಿತು. ನವಿಲುಗಳು ತಮ್ಮ ಬಾಲವನ್ನು ಬೀಸಣಿಗೆ ಯಂತೆ ಬಿದಿಸಿ, ಆನಂದ ತಾಂಡವವನ್ನು ಮಾಡ ತೊಡಗಿದ್ದುವು.

ರಾಮಣ್ಣನು ಒಂದು ಬೈರಾಸನ್ನು ಅಡ್ಡ ಉಟ್ಟು, ಒಂದು ಕೆಂಪು ಎಲವಸ್ತ್ರವನ್ನು ತಲೆಗೆ ಸುತ್ತಿಕೊಂಡಿದ್ದನು. ನೇಗಿಲು ಅವಿಶ್ರಾಂತ ವಾಗಿ ತನ್ನ ಕೆಲಸವನ್ನು ಮಾಡುತಿತ್ತು ಮಣ್ಣು ಮಗುಚಿ ಬಿದ್ದು, ಬೀಜದ ಬಿತ್ತುವಿಕೆಯನ್ನು ಮುಗ್ಧತೆಯಿಂದ ಕಾಯುತಿತ್ತು.

ಈ ವರ್ಷ ಮಳೆ ಬಹಳ ಹಿಂದೆ, ಮಳೆ ಗಾಲವೇ ತಲೆದೋರುವುದಿಲ್ಲವೆಂಬಂತೆ ಅನ್ನಿ ಸಿತು. ಆಕಾಶದಲ್ಲಿ ಮೇಘಗಳ ಸಂದಣಿಯು ಕಿಕ್ಕಿರಿದು ಕೂಡುವುದು ಜನರ ಹೃದಯ ದಲ್ಲಿ ಆಶೆಯನ್ನು ಹುಟ್ಟಿಸಿ, ಪುನಃ ನಾಶವಾಗು ವುದು. ಮಳೆಯಿಲ್ಲದೆ ಬಾವಿಗಳಲ್ಲೂ ಕೊಳ ಗಳಲ್ಲೂ ನದಿಗಳಲ್ಲೂ ನೀರು ಬತ್ತಿಹೋಗಿ, ಮತ್ಸ್ಯಶಯ್ಯೆಯ ಮೇಲೆ ಪವಡಿಸಿರುವ ರೋಗಿ ಯ ಹೃತ್ಕಂಪದಲ್ಲಿ ಕಣ್ಣು ಮುಚ್ಚಾಟವಾಡು ತ್ತಿರುವ ಪ್ರಾಣ ಪಕ್ಷಿಯಂತೆ, ಒಂದೆರಡು ಕಟಕು ಮಾತ್ರ ಅತ್ತಿತ್ತ ಅಲೆದಾಡುತಿತ್ತು. ಸೂರ್ಯನ ಪ್ರಖರ ಕಿರಣಗಳ ತಾಪದಿಂದ ಭೂಮಿಯೆಲ್ಲವೂ ಒಣಗಿ ಕಾದ ಕಬ್ಬಿಣದಂತಾ ಗಿತ್ತು. ಜನರೆಲ್ಲರೂ ಇದು ಬರಗಾಲದ ಸೂಚನೆಯೆಂದರು

ರಾಮಣ್ಣನು ಮಳೆಗಾಲದಲ್ಲಿ ತಾನು ಮಾಡಬೇಕಾದ ಎಲ್ಲಾ ಕೆಲಸನ್ನು ಮೊದಲೇ ನಿಷ್ಕರ್ಷಿಸಿದ್ದನು

ಮಳೆಗಾಲವು ಬರುತ್ತಿರುವುದ .

ಹೃದಯಂಗಮವಾದ ಮಳೆಗಾಲ! ಕಾಡುಗಳಲ್ಲಿ ಪಕ್ಷಿಸಂಕುಲವು ಇಂಪಾಗಿ ಹಾಡುವ ಕಾಲ! ನವಿಲುಗಳು ಸೊಗೆಗೆದರಿ ಕುಣಿಯುವ ಕಾಲ ಮರಗಿಡಗಳು ಕೆಂದಳಿ ರನ್ನು ಹೊರನೆಗಚಿ ಮೈ ತುಂಬ ಶೋಭಿಸುವ ಕಾಲ! ಗದ್ದೆಗಳು ಹಸುರಾದ ಎಳೆಯ ಪೈರಿ ನಿಂದ ರಮ್ಯವಾಗಿ ಕಂಗೊಳಿಸುವ ಕಾಲ!

ಆದರೆ ಮಳೆಯೇ ಬರಲೊಲ್ಲದು!

ರಾಮಣ್ಣನು ಚಿಂತಾತುರನಾದನು "ಈ ದಿನ ಖಂಡಿತವಾಗಿ ಮಳೆ ಬರುವುದು ನೀವು ನೋಡುವಿರಿ" ಎಂದನಾತನು, "ನಿನ್ನೆ ಬಕ ಗಳ ತಂಡವೊಂದು ನನ್ನ ಗುಡಿಸಲಿನ ಮಾಡ ಮೇಲಿಂದ ಹಾದುಹೋಯಿತು"

ಆದರೆ ಮೋಡಗಳು ಮುರಿಯಲಿಲ್ಲ, ಮಳೆ ಬೀಳಲಿಲ್ಲ. ಅನುನಿತ್ಯವೂ ರಾಮಣ್ಣನು ಅಂತರಿಕ್ಷವನ್ನು ನೋಡಿ, "ಈ ಹೊತ್ತು ಖಂಡಿತ ವಾಗಿಯೂ ಮಳೆ ಬರುವುದು ಎನ್ನುವನು

ದಿನಗಳ ಮೇಲೆ ದಿನಗಳು ಉರುಳಿ ದುವು. ಆದರೆ ಮಳೆಯ ಸುಳಿವಿಲ್ಲ ಬಾವಿ ಕೊಳಗಳಲ್ಲಿಯ ನೀರು ಪೂರ್ಣ ಇಂಗಿಹೋ ಯಿತು. ನದಿಯಲ್ಲಿ ಮಾತ್ರ, ಅಲ್ಲಲ್ಲಿ ಮೋಡ ಗಳ ಮರೆಯಲ್ಲಿ ಹೊಳೆಯುತ್ತಿರುವ ಮಿಂಚಿ ನಂತೆ, ಸ್ವಲ್ಪ ಸ್ವಲ್ಪ ನೀರು ಜಿನುಗುತಿತ್ತು.

ರಾಮಣ್ಣನ ಹೊಲಗಳ ಚಪ್ಪರವೆಲ್ಲವೂ ಮುರಿದು ಅಪ್ಪಳಿಸಿಹೋಯಿತು. ಅಗಾಧ ವಾದ ವ್ಯಸನವು ಆತನನ್ನು ಮುತ್ತಿಕೊಂಡಿತು. ಊರಿನ ಊರೇ ಶೋಕಾಕ್ರಾಂತವಾಯಿತು "ಇದರ ಅರ್ಥವೇನು? ಹೀಗೆ ಮಳೆಯನ್ನು ತಡೆಯಲು ಪರಮಾತ್ಮನ ಉದ್ದೇಶವೇನು?" ಎಂದರು ಕೆಲವರು "ವೈಶಾಖವು ಎಂದೊ ಕಳೆ ದಿರುವುದು ಇಷ್ಟರಲ್ಲಿ ಯಾವಾಗಲೂ ಜಲಾಶ ಯಗಳೆಲ್ಲವೂ ತುಂಬಿತುಳುಕುವ ಸಮಯ. ಹೊಲಗಳಲ್ಲಿ ಯುಪ್ಪೈರುಪಚ್ಚೆಗಳು ಸೊಂಪಾಗಿ ಮಂದಮಾರುತನೊಡನೆ ವಿಹರಿಸುವ ಸಮಯ" ಎಂದರು ಇನ್ನು ಕೆಲವರು.

ಈ ವರ್ಷ ಮಳೆಯೇ ಇಲ್ಲವೇನು?

ಒಂದು ದಿನ ಅಂತರಿಕ್ಷವು ತೆರೆದು ಧಾರಾ ಕಾರವಾಗಿ ಮಳೆಯು ಸುರಿಯಿತು ವನವೆ ಲ್ಲವು ಆನಂದಿತ ಪಕ್ಷಿಗಳ ಇಂಚರದಿಂದ ಪ್ರತಿ ಧ್ವನಿಸಿತು. ನದಿಗಳೂ ಕೊಳಗಳೂ ಚರಂಡಿ ಗಳೂ ಬಾವಿಗಳೂ ನೀರತಿಕ್ಕಾಟದಿಂದ ಊರ್ಧ್ವ ಶ್ವಾಸವನ್ನು ಬಿಡತೊಡಗಿದುವು ನದಿಯ ಒಂದು ಕಡೆಯಲ್ಲಿ ಕ್ರೌಂಚ ಮಿಥುನವೊಂದು ಆನಂದದಿಂದ ತೂರ್ಯೋನ್ಮುಖವಾದಂತೆ ಮಂಡಿಸಿತ್ತ

ರಾಮಣ್ಣನು ಅವುಗಳನ್ನು ನೋಡುತ್ತ ನಿಂತುಕೊಂಡನು ಒಂದರ ಬೆನ್ನು ಹತ್ತಿ ಇನ್ನೊಂದು ಮೆಲ್ಲನೆ ಹಾದುಹೋಗುತ್ತಿದ್ದುವು ಅವುಗಳು ಹಾದುಹೋದ ದಾರಿಯು ದ್ರವೀ ಭೂತವಾದ ರಜತಲೇಖೆಯಂತೆ ಶೋಭಿಸು ತಿತ್ತು ಹೆಣ್ಣು ಹಿಂದೆಬಿದ್ದರೆ ಗಂಡು ಅದನ್ನು ಪ್ರೇಮಪೂರಿತವಾದ ಕೂಜನದಿಂದ ತನ್ನಬಳಿಗೆ ಕರೆಯುವುದು ಗಂಡು ಹಿಂದೆಬಿದ್ದರೆ ಹೆಣ್ಣು ಅದನ್ನು ಕಾದುನಿಲ್ಲುವುದು ಹೀಗೆ ಒಂದರ ಪಕ್ಕದಲ್ಲಿ ಇನ್ನೊಂದು ಉಜಾಕ್ತ ಮೆಲ್ಲನೆಹಾದು ಹೋಗುತ್ತಿದ್ದುವು

"ನಾಳೆ ಗದ್ದೆಯನ್ನು ಉಳಬಹುದು ನೆಲವು ಮೆತ್ತನಾಗಿರುವುದು" ಎಂದುಸುರಿ ಮಳೆ ಯನೀರಿಗೆ ಹೊಸತಾಗಿ ಇಳಿದ ನಿಶಾನನ್ನು ಹಿಡಿ ಯುವುದಕ್ಕಾಗಿ ರಾಮಣ್ಣನು ಬಲೆಯನ್ನು ತರಲು ಮನೆಗೆಹೋದನು ಅಲ್ಲಲ್ಲಿ ಹಾಳಾ ದ್ದಲ್ಲಿ ಸರಿಪಡಿಸಿ, ಹೆಗಲಮೇಲೆ ಹಾಕಿಕೊಂಡು ಸ್ವಲ್ಪ ಹೊತ್ತಿನಲ್ಲಿಯೇ ಹೊರಗೆಬಂದನು

"ನಾಳೆ" ಎಂದನಾತನು ಮನಸ್ಸಿನ ಲ್ಲಿಯೇ, "ನಾಳೆ!"

ನಾಳೆಮೂಡಿತ ಅದರೊಡನೆ ಕಾನನ ಗಳಲ್ಲಿಯ ಕೋಲಾಹಲವು ಹೆಚ್ಚಿತು ಅಂತ ರಿಕ್ಷವು ಮೋಡಗಳಿಂದ ನಿರ್ಭಯವಾಯಿತು, ಪ್ರಚಂಡವಾದ ಗಾಳಿಯು ಬೀಸಿ, ಗಿರಿಶಿಖರಗ ಳಲ್ಲಿಯ ಮರಗಳು ಮಗುಚಿಬಿದ್ದುವು ಮ ಧ್ಯಾಹ್ನದ ಬಳಿಕ ಮುಸಲಧಾರೆಯಿಂದ ಮಳೆ ಎಂದರು ಕೆಲವರು "ವೈಶಾಖವು ಎಂದೋ ಕಳೆದಿರುವುದು ಇಷ್ಟರಲ್ಲಿ ಯಾವಾಗಲೂ ಜಲಾಶಯಗಳೆಲ್ಲವೂ ತುಂಬಿತುಳುಕುವ ಸಮ ಯ'ಸುರಿದು, ರಾತ್ರಿಯ ಸಮಯಕ್ಕೆ ಎಲ್ಲವೂ ಶಾಂತವಾಯಿತು, ರಾಮಣ್ಣನು ಗದ್ದೆ ಹೂಡು ವುದು ನಾಳೆಯೇ ಆಯಿತು!

ಮರುದಿನ ಎಲ್ಲೆಲ್ಲಿಯೂ ಗದ್ದೆಗಳನ್ನು ಉಳುವುದಕ್ಕೆ ಸಿದ್ಧಮಾಡುವ ಗದ್ದಲ. ಉಳು ವಾಗ ರಾಮಣ್ಣನು ತನ್ನ ಎಲ್ಲ ಶಕ್ತಿಯನ್ನುಪ ಯೋಗಿಸಿದನು ಇದರಿಂದ ಆತನಿಗೆ ಒಂದು ಬಗೆಯ ನವಚೇತನವನ್ನು ಕೊಟ್ಟಂತಾಯಿತು, ಆತನ ಬೆನ್ನು ನೇರಾಯಿತು, ನಡೆ ವೇಗವಾಯಿ ತು, ಮತ್ತು ಕಣ್ಣುಗಳಲ್ಲಿ ಸೂಸುತ್ತಿದ್ದ ಆ ದುಃಖವ್ಯಂಜಕ ದೃಷ್ಟಿಯು ದೂರವಾಯಿತು ಮಣ್ಣು ಆತನನ್ನು ಕೂಗಿತು ಬೀಜಕ್ಕೋ ಸ್ಕರ, ಫಲಾನುಭೋಗಕ್ಕೋಸ್ಕರ ಹವ್ಯಾಸಿಸುವ ಹೊಸತಾಗಿ ಮಗುಚಿಬಿದ್ದ ಮಣ್ಣು, ರಾಮ ಣ್ಣನ ಗುಡಿಸಲು ಮತ್ತು ನದಿಯ ನಡುವೆಯಿರುವ ಮಣ್ಣು ಆತನ ಲೋಕ!

ನದಿಯದಡದಲ್ಲಿರುವ ಒಂದ ಗುಡಿಸಲಿ ನಿಂದ ವ್ಯಕ್ತಿಯೊಬ್ಬನು ಹೊರಗೆ ಬಂದನು ಆತನು ಗದ್ದೆಯಬದಿಯ ಮಾರ್ಗವಾಗಿ ರಾಮ ಣ್ಣನು ಉಳುವಲ್ಲಿಗೆ ಬಂದುನಿಂತನು ರಾಮ ಣ್ಣನು ತಲೆಬಗ್ಗಿಸಿ ತನ್ನ ಕೆಲಸದಲ್ಲಿಯೇ ನಿರತ ನಾಗಿದ್ದನು ಗದ್ದೆಯ ಆಚೆಕಡೆಗೆ ಹೋದೊ ಡನೆ ನೆಟ್ಟಗೆನಿಂತು ಮೇಲೆ ನೋಡಿದನು ನೇಗಿ ಲನ್ನು ಆಳವಾಗಿ ಹುಗಿದು ಆಗಂತುಕನಿದ್ದಲ್ಲಿಗೆ ಬಂದನು

ಆಗಂತುಕನೂ ಮುಂದೆನಡೆದನು ಆ ತನ ಮುಖಮುದ್ರೆಯು ಬಹಳ ಗಂಭೀರವಾ ಗಿತ್ತು ಮಾತನಾಡಲೆಂದು ಬಾಯ್ದೆರೆದನಾ ತನು ಆದರೆ ಬಾಯಿಯಿಂದ ಶಬ್ದಗಳೇ ಹೊರಡಲೊಲ್ಲವು!

'ಏನ ?" ರಾಮಣ್ಣನು ಪ್ರಶ್ನಿಸಿದನು ನಂತರ ಆಗಂತುಕನ ಮುಖವನ್ನು ಚೆನ್ನಾಗಿ ನೋಡಿದನು. ನೋಡಿಸ್ತಂಭೀಭೂತನಾದನ ಎದೆಯು ರಭಸದಿಂದ ಬಡಿಯಲಾರಂಭಿಸಿತ

'ಎಲ್ಲವೂ ಮುಗಿಯಿತು,' ಮೆಲ್ಲನೆ ಆಗಂತುಕನೆಂದನ ,"ನೀನು ಮನೆಗ ಹೋಗ.

"ಏನು? ಹೇಗಾಯಿತು!"

"ಮನೆಗೆ ಹೋಗಿ ನೋಡು. ನಾನು ನೇಗಿಲನ್ನು ಹಿಡಿಯುವೆನು '

ಆಗಂತುಕನು ನೇಗಿಲನ್ನು ಹಿಡಿದು ಉಳ ತೊಡಗಿದನ ರಾಮಣ್ಣನು ಮನೆಯತ್ತ ಹೊರ ಟನು. ಆನಂದದಿಂದ ಉತ್ಕಂಠತೆಯಿಂದ ಹರಿ ಯುತ್ತಿರುವ ಆ ನದಿಯತ್ತ ಹೊರಟನ ಗಾಳಿ ತಂಪಾಗಿ ಬೀಸುತಿತ್ತು, ಆಕಾಶವು ಮೋಡ ರಹಿತವಾಗ ಶುಭ್ರವಾಗಿತ್ತು.

ಮನೆಗೆ ಹೋದೊಡನೆ ರಾಮಣ್ಣನು ಶಾರೆಯ ಮುಖ ಬಾಡಿಸಿಕೊಂಡು, ಗುಗ್ಗು ವನ್ನು ಸಂತವಿಸುತ್ತ, ಮೂಲೆ ಗುಂಪಾಗಿ ಕುಳಿ ತಿರುವುದನ್ನು ಕಂಡನು. ಇನ್ನೊಂದು ಮೂಲೆ ಯಲ್ಲಿ ಒಂದು ಹರಕು ಮಂಚದ ಮೇಲೆ ಜಾಕವ್ವೆ, ಕಣ್ಣು ಮುಚ್ಚಿಕೊಂಡು ನಿದ್ರಿಸುವಂತೆ ಮಲಗಿದ್ದಳು ಅಸ್ತವ್ಯಸ್ತವಾದ ಜಡೆಯು ಹಣೆಯ ಮೇಲೆ ಬಿದ್ದಿತ್ತು ಮುಖವು ಬಿಳು ಪು ತಿರುಗಿತ್ತು

ರಾಮಣ್ಣನು ಮೆಲ್ಲನೆ ಮಂಚದ ಬಳಿ ನಡೆದನು ಬಗ್ಗಿ ನೋಡಿದನು ಆಕೆ ಮಲ ಗಿದ್ದಳು ಅವನಂತೆ ಮಳೆಯಾಗಮನ ವನ್ನು ಆತ್ಮಾತುರದಿಂದ ಕಾಯುತ್ತಿದ್ದ ಜಾಕವ್ವೆ, ಮಳೆಬಂತು ಆದರೆ ಅದರೊಡನೆ ರಾಮಣ್ಣನ ವ್ಯಥೆಯು ಮಾತ್ರ ಹರಿಯಲಿಲ್ಲ. ಕಾರಣ, ಮಳೆಯ ನೀರು ಜಾಕವ್ವೆಯ ಪ್ರಾಣವನ್ನು ಕೊಚ್ಚಿಕೊಂಡು ಹೋಗಿತ್ತು! ರಾಮಣ್ಣನನ್ನು ಕರೆದ ಮಣ್ಣು ಅವಳನ್ನು ಕರೆದಿತ್ತು!

(ಒಂದು ಇಂಗ್ಲಿಷ್ ಕಥೆಯ ಅನುವಾದ)

ನೋಟೀಸು

ಮಂಗ್ಳೂರು ಡಿ। ಮು। ಕೋರ್ಟಿನಲ್ಲಿ

ಸ್ಮಾಲ ಸಂಖ್ಯೆ 723/1937

ಸ್ಮಾಲ ಅದ್ಮಿಶ್ಯಾಲಿ ಸಂಖ್ಯೆ 319/1938

ಎಮ್. ಪದ್ಮನಾಭ ರಘುನಾಥಪ್ಪ ಮತ್ತು ಕಂಪೆನಿ ಪರೆಲಿಶ್ರೀ ಜಿ ಉಪೇಂದ್ರ ಪ್ರಭು } ಡಿಕ್ರಿ ಹೊಂದಿದವರು

ಮತ್ತು

ಡಿ ಪೂವಪ್ಪ ಸೆಟ್ಟಿ ಡಿ ಕಿಂಜಣ್ಣ ಸೆಟ್ಟಿ ಆಳಿಯಕಟ್ಟಿಲವೆ ನ್ಯಪಕ್ಷ ರ ... ವ ... ಲ್ಲಿ ... } ಡಿಕ್ರಿ ತೀರಿಸತಕ್ಕವರು

ಪತ್ರಿ ಕ್ಷಮಾಂಪಂಟರಿಗೆ

ಸದ್ರಿ ಸ್ಮಾಲ ನಂಬ್ರ 723/1937ನೆ ... ಜ್ಯಾರಿಯಲ್ಲಿ ನಿಮ್ಮನ್ನು ... ವಾರಂಟಿನಲ್ಲಿ ಹಿಡಿದು ಜಿವೇಲು ವಶ ... ಕೊಡದಿದ್ದರೆ ಸಿವಿಲ್ ಜೈಲಿನಲ್ಲಿ ಇರಿಸಬೇ ಕೆಂತ ಪಗ್ಗೆರೆ ಡಿ ... ಪಜಿದಾರರು ಮಾಡಿದ ಸದ್ರಿ ಅರ್ಜಿಯು ... ತೀರ್ಮಾನಿಸಲಿಕ್ಕೆ ತಾ. 7-10-1938ಕ್ಕೆ ಇಟ್ಟಿರುವದರಿಂದ ಈ ಕುರಿತು ನಿಮ್ಮ ಆಕ್ಷೇಪವಿದ್ದರೆ ನೀವು ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹಿರುಮಾಡತಕ್ಕದ್ದು ಎಂಬುದು ಈ ಮೂಲಕ ತಿಳಿಸೋಣ್ತಾಗಿದೆ

ಮಂಗ್ಳೂರು ತಾ 19-8-1938 } G. Upendra Prabhu, Vakil for Petitioners

ಮಂಗಳೂರು ಸಮಾಚಾರ

ಪ್ರಾಂತಿಕ ಸದಸ್ಯತ್ವಕ್ಕೆ ರಾಜಿನಾಮೆ

ಶ್ರೀ. ಎಂ. ಉಮೇಶರಾಯರು ಕೆಲವೊಂದು ಖಾಸಗಿ ಕಾರಣಗಳ ಸಲುವಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯತ್ವಕ್ಕೆ ಕೊಟ್ಟ ರಾಜಿನಾಮೆ ಕ. ಪ್ರಾ. ಕಾ. ಕಮಿಟಿಯ ಕಾರ್ಯಕಾರಿ ಮಂಡಳಿಯವರು ಸ್ವೀಕರಿಸಿರುತ್ತಾರೆ.

ರಂಗರಾವ ತಲಚೇರಿಕರರ ಮೇಲಿನ ಶಿಸ್ತು ಭಂಗದ ಆರೋಪ

ತಾ. ೬-8-1938ರಲ್ಲಿ ಧಾರವಾಡದಲ್ಲಿ ಕೂಡಿದ ಕ. ಪ್ರಾ. ಕಾ. ಕಮಿಟಿಯ ಕಾರ್ಯಕಾರಿಮಂಡಲದ ಸಭೆಯಲ್ಲಿ ಈ ಸಂಬಂಧವಾಗಿ ಮಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಿಫಾರಸುಗಳನ್ನು, ಶ್ರೀ. ತಲಚೇರಿಕರರ ಲೇಖಿ ಹೇಳಿಕೆಯನ್ನು ಪರಿಶೀಲಿಸಿ ಶ್ರೀ ರಂಗರಾವ ತಲಚೇರಿಕರರು ಶಿಸ್ತು ಭಂಗದ ಆರೋಪಕ್ಕೆ ಹೊಣೆಗಾರರಿದ್ದೂ ಅವರ ಈ ನಡತೆಯು ದೀರ್ಘಾಲೋಚನೆಗೆ ತಕ್ಕುದಾದುದೆಂದೂ ಅಭಿಪ್ರಾಯ ಪಟ್ಟಿದೆ. ಇಂಥಿನಿಂದ ಹದಿನೈದು ದಿವಸದೊಳಗಾಗಿ (೨೦-೫-೩೮) ಶ್ರೀ. ತಲಚೇರಿಕರರು ಮಂಗಳೂರು ಮುನಿಸಿಪಾಲಿಟಿಯ ಸದಸ್ಯತ್ವಕ್ಕೆ ರಾಜಿನಾಮೆ ಕೊಡಬೇಕೆಂದೂ ಹಾಗೆ ಅವರು ಮಾಡದಿದ್ದಲ್ಲಿ ಹೆಚ್ಚು ಕಠೋರ ಉಪಾಯಗಳನ್ನು ಕೈಕೊಳ್ಳಬೇಕೆಂದೂ ನಿರ್ಣಯಿಸಿರುತ್ತದೆ. ಈ ಪ್ರಶ್ನೆಯ ಕೊನೆಯ ನಿರ್ಣಯವನ್ನು ಮುಂದಿನ ಸಭೆಗೆ ಹಾಕಿದ್ದಾರೆ. ಆ ನಿರ್ಣಯ ಪಾಸಾಗುವ ವರೆಗೆ ಶ್ರೀ ತಲಚೇರಿಕರರನ್ನು ಅವರ ಪ್ರಾ. ಕಾ. ಕ ಹಾಗೂ ಜಿ. ಕಾ. ಕಮಿಟಿಯ ಸದಸ್ಯತ್ವದಿಂದ ದೂರವಿರಿಸಲಾಗಿದೆ ಹಾಗೂ ಈ ಸಂಬಂಧವಾಗಿ ಪ್ರಾ. ಕಾ. ಕಮಿಟಿ ಅಧ್ಯಕ್ಷರು ಶ್ರೀ ತಲಚೇರಿಕರರಿಗೆ ಕೊಟ್ಟ ಆಜ್ಞೆಯನ್ನು ದೃಢಪಡಿಸಿರುತ್ತದೆ

ಶ್ರೀ ಕಮಲಾದೇವಿಯರ ದಸ್ತಗಿರಿ ಮತ್ತು ಬಿಡುಗಡೆ

ತಿರುವಾಂಕೂರಿನಲ್ಲಿ ತಾ 20, 21ರಲ್ಲಿ ಕೂಡಲಿದ್ದ ಯುವಕ ಸಂಘದ ಪರಿಷತ್ತಿಗೆ ಅಧ್ಯಕ್ಷೆಯರಾಗಿ ಆರಿಸಲ್ಪಟ್ಟ ಶ್ರೀಮತಿ ಕಮಲಾದೇವಿಯವರು 15 ದಿವಸಗಳ ವರೆಗ ತಿರುವಾಂಕೂರನ್ನು ಪ್ರವೇಶಿಸಬಾರದೆಂಬ ಮಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿದರಿಂದ ಕೈದುಮಾಡಲ್ಪಟ್ಟು 22-8-38ನೇ ರವಿವಾರ ತ್ರಿವೆಂಡ್ರಿಮಿಗೆ ತಂದು ಬಿಡುಗಡೆ ಮಾಡಲ್ಪಟ್ಟಿದ್ದಾರೆ

"ಪ್ರೇಮಪುರ"

ಸ್ವಲ್ಪ ಸಮಯದ ಹಿಂದೆ ಕೆನರಾ ಹೈಸ್ಕೂಲಿನಲ್ಲಿ ಬಡ ಹುಡುಗರಿಗೆ ಮಧ್ಯಾಹ್ನದ ಊಟದ ಏರ್ಪಾಡಿಗಾಗಿ ತೆರೆಯಲಾದ ಈ "ಪ್ರೇಮಪುರ"ಕ್ಕೆ ಸಹಾಯ ಮಾಡಿದ ಮಹನಿಯರು.

ಎಂಡೋಮೆಂಟ್

೧. ಶ್ರೀ. ಕಸ್ತೂರಿ ಪುಂಡಲೀಕ ಪೈ ರೂ. ೧೦೦೦. ೨. ಶ್ರೀಮತಿ ಎಮ್. ಕಸ್ತೂರಿ ಬಾಯಿ, ಬೆಂಗಳೂರು ಚಿಕ್ಕ ಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ 2 ಶೇರುಗಳು ೩. ಮೆಸರ್ಸ ಕಸ್ತೂರಿಕಾರ್ ಬ್ರದರ್ಸ, ನೆಡುಂಘಾಡಿ ಬೇಂಕಿನ ಮೂರು ಶೇರುಗಳು ೪. ಶ್ರೀ. ಯು. ವಾಸುದೇವ ನಾಯಕ್, ರೂ. ೧೫೦ ೫. ರಾವ್ ಬಹದೂರ್ ಡಾ ಎಮ್. ಕೇಶವ ಪೈ, ರೂ. ೧೦೧. (ದಾನದ ಒಂದನೇ ಕಂತು)

ವಸ್ತುಗಳ ಮೂಲಕ ಸಹಾಯ

೧. ಕಸ್ತೂರಿಕಾರ್ ಸಹೋದರರು. ಎರಡು ಮುಡಿ ಅಕ್ಕಿ ೨ ಎಮ್. ಪದ್ಮನಾಭ ರಘುನಾಥ ಪೈ ಮತ್ತು ಸಹೋದರರು ಒಂದು ಮುಡಿ ಅಕ್ಕಿ. ೩. ಶ್ರೀ. ಜಯಂತಿ ಲಾಲ್ ಶೆಟ್ಟಿ ಒಂದು ಮುಡಿ ಅಕ್ಕಿ. ೪. ಶ್ರೀ. ಉಳ್ಳಾಲ ಮಾಧವ ನ್ಯಾಕ ಒಂದು ಮುಡಿ ಅಕ್ಕಿ. ೫. ಕಸ್ತೂರಿ ಸುಬ್ರಾಯ ಪೈ, ಸುಜೀರ್ ರಾಮಚಂದ್ರ ನ್ಯಾಕ್ ಮತ್ತು ಕಂಪೆನಿ ಒಂದು ಮುಡಿ ತೊಗರಿಬೇಳೆ.

ಧನ ಸಹಾಯ ಮಾಡಿದವರು

ರೂಪಾಯಿ ಹದಿನೆರಡರಂತೆ

ಶ್ರೀಯುತರಾದ ಕಸ್ತೂರಿಕಾರ್ ಸಹೋದರರು, ಸದಾಶಿವ ರಾವ್, ಬಿ ಎ. ಎಮ್ ಎಲ್, ಕೆ. ರಘುನಾಥ ಕೃಷ್ಣ ಪ್ರಭು ಮತ್ತು ಕೆ. ಅಣ್ಣಪ್ಪ ಶ್ರೀಧರ ನಾಯಕ್, ಕೆ. ಬಿ. ಕಾಮತ್, ತಾಜಮಹಾಲ್ ಹಿಂದೂ ರೆಸ್ಟೋರೆಂಟ್, ಎ. ದಾಮೋದರ ಪೈ ಬಿ. ಎ, ಬಿ. ಎಲ್ ಉಪೇಂದ್ರ ಪ್ರಭು ಬಿ. ಎ. ಬಿ. ಎಲ್.

ರೂಪಾಯಿ ೧೦ರಂತೆ

ಶ್ರೀಯುತರಾದ ಯು. ರಘುನಂದನ ಶೆಣೈ ಮತ್ತು ಸಹೋದರರು

ರೂಪಾಯಿ ೬ರಂತೆ

ಶ್ರೀ. ಎಸ್. ಮುಕುಂದ ರಾವ್ ಎಂ. ಎ. ಎಲ್. ಟಿ.

ರೂಪಾಯಿ ೫ರಂತೆ

ಶ್ರೀಯುತರಾದ ಉಳ್ಳಾಲ ಹರಿವಾಮನ ನ್ಯಾಕ, ಹುಂಡಿ ನರಸಿಂಹ ಕಾಮತ್, ಗುರ್ಪುರ ಗುಣೆ ನರಸಿಂಹ ಪ್ರಭು ಮತ್ತು ಸಹೋದರ, ಎಸ್. ಮಾಧವ ಲಕ್ಷ್ಮಣನ್ಯಾಕ.

ರೂಪಾಯಿ ೪ರಂತೆ

ಬಿ ಮಾಧವ ಬಾಳಿಗಾ ಬಿ.ಎ ಎಲ್.ಟಿ ಬಿ. ಪುಂಡಲೀಕ ಬಾಳಿಗಾ ಬಿ ಎ, ಯು ಕೇಶವ ರಾವ್, ಬಿ ಎ ಎಲ್.ಟಿ ಕೆ ಅನಂತ ನಾರಾಯಣ ಪ್ರಭು

ರೂಪಾಯಿ 2ರಂತೆ

ಶ್ರೀಯುತರಾದ ಕೆ. ಯಮುನಾ ಬಾಯಿ, ಎಂ ಮಾಧವರಾವ್ ಬಿ ಎ ಬಿ.ಎಲ್. ಜಯಂತಿ ಲಾಲ್ ಶೆಟ್ಟಿ, ಜಿ ಯಶ್ ನಗರ್ಕಾರ ಬಿ ಎ ಬಿ ಎಲ್, ಎಸ್ ರಘುನಾಥ ನಾಯಕ್ ಮತ್ತು ಎಸ್ ಪುರುಷೋತ್ತಮ ನಾಯಕ್, ಪಂಚಮಾಲ್ ಕೃಷ್ಣಯ ಶೆಣೈ ಶಿವಗೂರ್ ರಾಮಚಂದ್ರ ಕಾಮತ್ ಎಂಡ್ ಸನ್ಸ್, ಪಂಚಮಾಲ್ ನಾರಾಯಣ ಶೆಣೈ, ಬೋಳಾರ್ ಅಣ್ಣಪ್ಪ ಪಥ ಎಂಡ್ ಸನ್ಸ ಕೆ ಎ ಕನ್ಯಾಭಾಗ ಮತ್ತ ಕಂಪೆ ವಿಟ್ಠಲ ವಾಸುದೇವ ಕುಲಕರ್ಣಿ, ಪಿ ಎಸ್ ಎಸ್ ಕಾಮತ್ ಮತ್ತು ಕಂಪೆನಿ, ಎಮ್ ಶ್ರೀನಿವಾಸ ಹೆಗ್ಡೆ, ಜಿ ನಾರಾಯಣ ರಾವ್ ಬಿ.ಎ ಎಲ್ ಎಲ್ ಬಿ

ರೂಪಾಯಿ ೧ರಂತೆ

ಶ್ರೀಗಳಾದ ಎಸ್ ಮಾಧವ ಕಾಮತ್, ಎ ಮಂಜುನಾಥ ಕಾಮತ್, ಕಟೀಲ್ ಪಾಂಡುರಂಗ ನರಸಿಂಹ ಪೈ ಮತ್ತು ಕಂಪೆನಿ, ಎ ವೆಂಕಟೇಶ ಕಾಮತ್, ಬಿ ನಾರಾಯಣ ಕಾಮತ್ ಮತ್ತು ಕಂಪೆನಿ ಮಣೇಲ ರಾಮಚಂದ್ರ ನಾಯಕ್, ಕೆ.ಪಿ. ಕಾಮತ್ ಎಂಡ್ ಸನ್ಸ, ಬಿ ಹರಿದಾಸ ಭಂಡಾರ್ಕಾರ, ಪೆರ್ಗುತ್ತು ಶ್ರೀನಿವಾಸ ಪ್ರಭು

ಸೂಚನೆ

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಮೆನೇಜರಿಕೆ ಮತ್ತು ಮೆನೇಜರರಿಗೆ ಇರಬೇಕಾದ ಯೋಗ್ಯತೆ (qualifications) ಯಾವುವು? ಯಾವ ಯಾವ ವಿಷಯಗಳ ಮಾಹಿತಿ ಇರಬೇಕು? ಎಷ್ಟು ಪ್ರಾಯದ ಒಳಗಿನವನಾಗ ಬೇಕು? ಅಂದರೆ ಗಡ್ಡನೆರೆದವರಾಗಬಹುದೇ? ಎಂಬ ವಿಷಯವನ್ನು ಕೋರಿ ಒಂದು ಪತ್ರವ್ಯವಹಾರವು ನಮಗೆ ಬಂದಿರುತ್ತದೆ ಸ್ಥಳ ಅಭಾವದಿಂದ ಈ ವಾರ ಪ್ರಕಟಿಸಲಿಲ್ಲ ಮುಂದಿನವಾರ ಪ್ರಕಟಿಸಲ್ಪಡುವುದು

ಹಳ್ಳನಾಡು ಸೂರಪ್ಪಯ್ಯ ಸ್ಮಾರಕ ಸಂಚಿಕೆ.

ವಿದ್ಯಾರ್ಥಿ ಸಂಘದ ವತಿಯಿಂದ ಪ್ರಕಟವಾಗುತ್ತಿದ್ದ 'ಪ್ರೇಮ್' ಎಂಬ ವಾರ ಪತ್ರಿಕೆಯ ವಿಶೇಷ ಸಂಚಿಕೆಯೊಂದು, ವಿದ್ಯಾರ್ಥಿ ಸಂಘದ ಸ್ಥಾಪನಾಚಾರ್ಯರಾದ ಶ್ರೀ ಹಳ್ಳನಾಡು ಸೂರಪ್ಪಯ್ಯನವರ ಸ್ಮಾರಕಾರ್ಥವಾಗಿ ಸಪ್ಟೆಂಬರ ತಿಂಗಳ ಅಂತ್ಯದಲ್ಲಿ ಪ್ರಕಟವಾಗಲಿದೆ. ನಮ್ಮ ಈ ಪ್ರಯತ್ನದಲ್ಲಿ ಜಿಲ್ಲೆಯ ಕಾಂಗ್ರೆಸ್ ಭಕ್ತರು ಹಾಗೂ ಇನ್ನಿತರ ಮಹನೀಯರು ನೆರವಾಗಿ ನಮ್ಮ ಸಾಹಸವು ಯಶಸ್ವಿಯಾಗುವಂತೆ ಮಾಡಬೇಕಾಗಿ ವಿನಂತಿ ಎಂದು ಪ್ರೇಮಿನ ಸಂಪಾದಕರಾದ ಶ್ರೀ. ಎ. ಎಸ್. ರಾವ್ ಮತ್ತು ಶ್ರೀ. ಕೆ. ಹರಿರಾಮರಾಯರು ತಿಳಿಸುತ್ತಾರೆ.

ತಾಲೂಕು ಸಮಾಚಾರ

ಬಂಟವಾಳ.

ಇಲ್ಲಿ ಕಳೆದ 17ನೆಯ ತಾರೀಕಿನ ದಿನ ಬುಧವಾರ ಸಾಯಂಕಾಲ ಗಂಟೆ ೮ಕ್ಕೆ ಪಂಚಾಯತ ಬೋರ್ಡಿನ ಸಭೆಯು ಜರಗಿತ್ತು. ಶ್ರೀ ಬಿ. ಕೇಶವ ಬಾಳಿಗರು ಸಭೆಯ ಮುಂದೆ ಅನೇಕ ಠರಾವುಗಳನ್ನು ಮಂಡಿಸಿದ್ದರು.

ಮೊದಲನೆಯದಾಗಿ ಕೆರೆಗೆಗಳನ್ನು ಹೊರಿಸುವ ಕುರಿತು ಚರ್ಚೆಯು ನಡೆದು, ಬಂದು ತೀರ್ಮಾನವಾದ ನಂತರ, ಪಂಚಾಯಿತ ಬೋರ್ಡಿನ ಸಭೆಯ ದಿನಗಳಲ್ಲೂ ಇನ್ನಿತರ ಸಂತೋಷ ಸಮಾರಂಭಗಳ ದಿನಗಳಲ್ಲೂ ರಾಷ್ಟ್ರೀಯ ಧ್ವಜವನ್ನು ಆಫೀಸಿನ ಮೇಲೇರಿಸಬೇಕೆಂಬ ನಿರ್ಣಯವು ಸಭೆಯ ಮುಂದೆ ಇಡಲ್ಪಟ್ಟು ಸರ್ವಾನುಮತದಿಂದ ಮಂಜೂರಾಯಿತು.

ನಂತರ ಪಂಚಾಯಿತ ಬೋರ್ಡಿನ ವತಿಯಿಂದ ಒಂದು ವ್ಯಾಯಾಮ ಶಾಲೆಯನ್ನು ತೆರೆಯಬೇಕೆಂಬ ನಿರ್ಣಯವು ಮುಂದೊತ್ತಲ್ಪಟ್ಟು, ಈ ಕುರಿತು ಪೂರ್ವಾಪರ ವಿಚಾರವನ್ನು ಮಾಡುವುದಕ್ಕಾಗಿ ಶ್ರೀಗಳಾದ, ಬಿ. ಕೇಶವ ಬಾಳಿಗಾ, ಬಿ ನಾಗೇಂದ್ರ ನಾಥ ಬಾಳಿಗಾ, ಮತ್ತು ಬಿ. ನಾರಾಯಣ ಪ್ರಭು, ಇವರಿಂದೊಡಗೂಡಿದ ಒಂದು ಉಪಸಮಿತಿಯು ನಿರ್ಮಿಸಲಾಗಿದೆ

ಊರ ಪೌರರಲ್ಲಿರುವ ನಿರಕ್ಷರತೆಯು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡುವುದಕ್ಕಾಗಿ ಬೋರ್ಡಿನವರು ಒಂದು ಧರ್ಮಾರ್ಥ ರಾತ್ರಿ ಶಾಲೆಯನ್ನು ತೆರೆಯಬೇಕೆಂಬುದೇ ನಂತರದ ನಿರ್ಣಯವು ಇದೂ ಮಂಜೂರಾಗಿ ಈ ಕುರಿತು ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಶ್ರೀಗಳಾದ ಕೆ. ಅನಂತರಾವ್, ಬಿ ದಾಮೋದರ ಬಾಳಿಗಾ, ಬಿ ಪುಂಡಲೀಕ ಬಾಳಿಗಾ, ಬಿ ನಾರಾಯಣ ಪ್ರಭು ಮತ್ತು ಬಿ ಕೇಶವ ಬಾಳಿಗಾ ಇವರು ಮೊದಲಾದವರಿಂದೊಡಗೂಡಿದ ಒಂದು ಸಮಿತಿಯು ಏರ್ಪಡಿಸಲಾಗಿದೆ

ಬಳಿಕ ಇಲ್ಲಿರುವ ತಾ. ಬೋರ್ಡ್ ಶಾಲೆಗಳೆರಡನ್ನು ಪಂಚಾಯತ ಬೋರ್ಡಿನ ಆಡಳಿತದೊಳಗೆ ಮಾಡಿಕೊಳ್ಳುವ ವಿಷಯವು ಮುಂದೆ ಬಂತು. ಈ ಕುರಿತು ಪರ್ಯಾಲೋಚಿಸುವರೆ ಎಂಟು ಮಂದಿಯಿಂದೊಡಗೂಡಿದ ಒಂದು ಉಪಸಮಿತಿಯು ಏರ್ಪಡಿಸಲಾಗಿದೆ. ಶ್ರೀಗಳಾದ ಬಿ. ಮಾಧವ ಶೆಣೈ, ಬಿ. ಕೇಶವ ಬಾಳಿಗಾ, ಬಿ. ಪುಂಡಲೀಕ ಬಾಳಿಗಾ, ಬಿ. ದಾಮೋದರ ಬಾಳಿಗಾ ಜೆ ಡಿ'ಸೋಜ, ಬಿ. ನಾಗೇಂದ್ರ ನಾಥ ಬಾಳಿಗಾ, ಬಿ.ಎ.ಎಲ್ ಅಹಮ್ಮದ ಮತ್ತ ಬಿ. ನಾರಾಯಣ ಪ್ರಭು, ಇವರೇ ಆ ಸಮಿತಿಯ ಸದಸ್ಯರು

ಭಾರತೀಯರ ಪ್ರಾಚೀನ ಪದ್ಧತಿಗನುಸರಿಸಿ, ಇನ್ನು ಮುಂದೆ ಪಂಚಾಯಿತ ಬೋರ್ಡಿನ ಸಭೆಗಳನ್ನು ಚಾಪೆಗಳ ಮೇಲೆ ಕುಳಿತು ಜರಗಿಸಬೇಕೆಂಬ ನಿರ್ಣಯವು ದೀರ್ಘ ಚರ್ಚೆಗೆ ಆಸ್ಪದವನ್ನು ಕೊಟ್ಟಿತು ಕನ್ನಡ್ಡೆ ಒಂದು ಧರ್ಮಾರ್ಥ ವಾಚನಾಲಯವನ್ನೂ, ಪುಸ್ತಕ ಭಂಡಾರವನ್ನೂ ಬೋರ್ಡಿನ ವತಿಯಿಂದ ತೆರೆಯಬೇಕೆಂಬ ನಿರ್ಣಯವೂ ಚರ್ಚಿಸಲ್ಪಟ್ಟಿತು. ಇವುಗಳ ಕುರಿತು ಯಾವ ಇತ್ಯರ್ಥವೂ ಆಗದುದರಿಂದ, ಇನ್ನೂ ಕೆಲವು ಠರಾವುಗಳೊಡನೆ ಈ ವಿಷಯಗಳನ್ನು ಬರುವ ಸಭೆಯಲ್ಲಿ ಚರ್ಚಿಸಬಹುದೆಂದು ನಿರ್ಣಯವಾಗಿ ಸಭೆಯು ಮುಕ್ತಾಯವಾಯಿತು.

ಹೊಸ ಬೋರ್ಡು; ಹೊಸ ಮೆಂಬರರು, ಅವರಲ್ಲಿ ಹೊಸ ಹುರುಪು ಇರುವುದು ಸಹಜವೇ ಸರಿ ಆದರೆ ಬೋರ್ಡಿನ ಆರ್ಥಿಕ ಪರಿಸ್ಥಿತಿಯು ಹೇಗಿರುವದೆಂಬ ಗಂಧವೂ ಇರದೆ, ಮೊದಲೇ ದೊಡ್ಡ ವೇಷವನ್ನು ಬರೆದುಕೊಂಡ ನಂತರ ಹಾಸ್ಯಕ್ಕೀಡಾಗುವುದಕ್ಕಿಂತ ಮಾಳಿಗೆಯ ಮೆಟ್ಟಲುಗಳನ್ನು ವಿಧದಂತೆ ಏರ್ಪಾಟು ಒಂದೊಂದು ಸುಧಾರಣೆಗಳನ್ನು ಮಾಡುತ್ತಾ ಬರುವುದು ಹಿತಕರವಲ್ಲವೆ?

ಕಾರ್ಕಳ

ಕಾರ್ಕಳ ಆರ್ಯಸಮಾಜದಲ್ಲಿ ತಾ. 11-8-1938ರ ದಿನ ಉಪಾಕರ್ಮ ಮತ್ತು ಯಜ್ಞೋಪವೀತಧಾರಣ ಸಮಾರಂಭವು ವೇದೋಕ್ತ ವಿಧಿಕ್ರಮಗಳನ್ನು ಅನುಸರಿಸಿ ನಡೆಯಿತು ಅನೇಕ ಜನರು ಈ ಸಮಾರಂಭದಲ್ಲಿ ಭಾಗವಹಿಸಿಕೊಂಡಿದ್ದರು

ನಗರ ಸಭೆ.

ತಾ 27-8-38ನೇ ಶನಿವಾರ ಸಾಯಂಕಾಲ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು

ನೋಟೀಸು

ದಿ ಕೆನರಾ ಬೇಂಕ್ ಲಿಮಿಟೆಡ್, ಉಪ್ಪಿನಂಗಡಿ.

ಈ ಕೆಳಕೆ ನಮೂದಿಸಿದವರು, ಮೇಲೆ ಕಾಣಿಸಿರುವ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಗಳ ಅಸಲು ಯಾ ಬಡ್ಡಿಯನ್ನಾಗಲಿ ವ್ಯಾದೆಗೆ ಕೊಟ್ಟು ಸಲ್ಲಿಸದೆ ಇರುವದರಿಂದಲೂ, 1ನೇ ಮತ್ತು 4ನೇಯವರು ರಿಜಿಸ್ಟ್ರಿ ನೋಟೀಸು ಪಡಕೊಂಡು ಸುಮ್ಮನೆ ಕಾಲಹರಣಮಾಡುವುದರಿಂದಲೂ, 2,3, ಮತ್ತು 5ನೇಯವರು ತಮ್ಮ ವಾಸ್ತವ್ಯಗಳಲ್ಲಿ ಇಲ್ಲವಾಗಿಯೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿ ಆಗದೆ ವಾಪಾಸು ಬಂದಿರುವುದರಿಂದಲೂ, ಈ ನೋಟೀಸು ಮೂಲಕ ತಿಳಿಯಪಡಿಸುವುದೇನೆಂದರೆ-

ಈ ಕೆಳಗಿನ ಸಾಲಗಳ ಬಾಬಿನಲ್ಲಿ ಬೇಂಕಿಗೆ ಬರಾ ಅಸ್ಲು ಬಡ್ಡಿ ವ ಇತರ ಖರ್ಚುಗಳನ್ನು ಸದ್ರಿಯವರು ತಾ 7-9-38ನೇ ಬುಧವಾರದ ಒಳಗೆ ಬೇಂಕಿಗೆ ತೆತ್ತು ಆಧಿನ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ತಾ 10-9-38ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಯಾ ತದನಂತರ ಬೇಂಕಿನವರಿಗೆ ಯುಕ್ತಕಂಡ ದಿವಸಗಳಲ್ಲಿ ಪ್ರತ್ಯೇಕ ನೋಟೀಸು ವಿನಹಾ ಸದ್ರಿ ಅಡವಿಟ್ಟ ನಗಗಳನ್ನು ಬೇಂಕಿನ ಉಪ್ಪಿನಂಗಡಿ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು.

ಕ ನಂಬ್ರ	ಲೋನು ನಂಬ್ರ	ಹೆಸರು ವ ವಿಳಾಸ	ಅಸ್ಲು ರೂ.
1	S. L. 76/37	ಕೃಷ್ಣ ಭಟ್ಟ, ರಾಮ ಭಟ್ರ ಮಗ, ಸುಬ್ರಹ್ಮಣ್ಯ ಪೋಸ್ಟು	12/-
2	S L 102/37	ಅಹಮ್ಮದ್ ಬ್ಯಾರಿ, ಅಬ್ದುಲ್ಲಬ್ಯಾರಿ ಮಗ ಶಿರ್ಲೆಂಥಗ್ರಾಮ, ಉಪ್ಪಿನಂಗಡಿ ಪೋಸ್ಟು	22/-
3.	S L. 65/36	ತಾಯಂ ಶೆಟ್ಟಿ, ಜೆಗ್ಗಣ್ಣರ ಅಳಿಯ, ಕಡೆಕಾರು ಉಪ್ಪಿನಂಗಡಿ ಪೋಸ್ಟು	14/-
4	L 127/37	ಎಂ. ದೇವದಾಸ ಪ್ರಭು, ಎಂ ಕೆ. ಗಣಪತಿಪ್ರಭುರ ಮಗ, ಜುವೆಲರ್, ಉಪ್ಪಿನಂಗಡಿ	60/-
5.	S. L. 110/37	ಅಹಮ್ಮದ್ ಬ್ಯಾರಿ, ಅಬ್ದುಲ್ ರಹಿಮಾನ್ ಬ್ಯಾರಿ ಮಗ, ಕಸಬಾ ಉಪ್ಪಿನಂಗಡಿ	7/-

Office of The Bank Uppinangady
28-8-1938

M. A Bhat,
AGENT.

ಸರ್ವಾಧಿಕಾರಿಗಳ ರಕ್ಷಣೋಪಾಯಗಳು

ಅವರ ರಕ್ಷಣೆಗಾಗಿ ಮಿಲಿಯಗಟ್ಟಲೆ ಪವನಿನ ವೆಚ್ಚ!

ಪ್ರಜೆಗಳ ತಲೆಯನ್ನು ಮೆಟ್ಟಿ ಅಧಿಕಾರದ ಪೀಠವನ್ನೇರಿದ ಯುರೋಪಿನ ಆ ನಾಲ್ವರು ಸರ್ವಾಧಿಕಾರಿಗಳೇ ಇಂದು ಅದೇ ಪ್ರಜೆಗಳು ತಮ್ಮನ್ನು ಎಳೆದು ಕೆಳಗೆ ಹಾಕದಂತೆ ಬಹಳ ಜಾಗ್ರತೆಯಿಂದಿರುವರು.

ಮುಸಲೇನಿ, ಹಿಟ್ಲರ್, ಕೆಮಲ್ ಅಟ ಟರ್ಕ್, ಮತ್ತು ಸ್ಟೇಲಿನ ಈ ನಾಲ್ವರು ಸರ್ವಾಧಿಕಾರಿಗಳ ಹೆಸರುಗಳನ್ನು ಕೇಳಿ ಅರಿಯದ ಮಾನವನೇ ಪ್ರಪಂಚದಲ್ಲಿಲ್ಲವೆನ್ನಬಹುದು. ಅವರ ವ್ಯಾಕ್ತಿತ್ವದೊಡನೆ ವೈಭವ, ಅತುಲೈಶ್ವರ್ಯ, ಅಧಿಕಾರ, ಇವುಗಳ ಮೋಹಕ ಚಿತ್ರವು ನಮ್ಮ ಕಣ್ಣೆದುರಿಗೆ ಚಿತ್ರಿತವಾಗುವುದಲ್ಲವೆ? ಪರಂತು ಅವರು ಜನರಿಗೆ ಹೆದರುವಷ್ಟು, ಜನರು ಅವರಿಗೆ ಅಂಜುವುದಿಲ್ಲವೆನ್ನಬಹುದು. ಜನರಿಂದ ತಮಗೆ ಹಾನಿಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಅವರು ಎಂತೆಂಥಹ ಏರ್ಪಾಡುಗಳನ್ನು ಮಾಡಿರುವರು ಬಲ್ಲಿರಾ? ಒಬ್ಬೊಬ್ಬನ ಪ್ರಾಣ ರಕ್ಷಣೆಗಾಗಿ ವರ್ಷಂಪ್ರತಿ ಮಿಲಿಯಗಟ್ಟಲೆ ಪವನುಗಳು ವೆಚ್ಚವಾಗುತ್ತಿದೆ.

ಸರ್ವಾಧಿಕಾರಿಯು ಮತದ ಮೆರವಣಿಗೆ, ಉಗಿಬಂಡಿಗಳಲ್ಲಿ ಪ್ರಯಾಣ ಮಾಡುವುದು ಅಪಾಯಕರವು. ಅವುಗಳು ನಿಗದಿತಸಮಯಕ್ಕೆ ಹೋಗುವುವು ಮತ್ತು ಬರುವುವು. ಆಗ ಯಾವುದಾದರೊಂದು ಸ್ಥಳದಲ್ಲಿ ಕಾದುಕೊಂಡಿದ್ದು, ತನ್ನ ನೀಚಕೃತ್ಯವನ್ನು ಜರಗಿಸಲು ಕೊಲೆಗಡುಕನಾದವನಿಗೆ ಸುಲಭವಾಗುವುದು.

ಕಾರು, ವಿಮಾನಗಳಲ್ಲಿ ಪ್ರಯಾಣ ಮಾಡಿದರೂ ಅದೊಂದು ಬಗೆಯ ಅಪಾಯ ಇದ್ದೇ ಇರುವುದು. ಆದರೆ 60 ಮಿಲಿಯ ಮಂದಿ ಜನರಿಗೆ ಕಟ್ಟಾಜ್ಞೆಗಳನ್ನಿತ್ತು ಕಡು ಅನುಭವವಿದ್ದ ಹರ್ ಹಿಟ್ಲರರು, ಉಗಿಬಂಡಿಗಿಂತ ಕಾರು, ವಿಮಾನಗಳಲ್ಲಿ ಸಂಚರಿಸುವುದು ಹೆಚ್ಚಿನ ಶ್ರೇಯಸ್ಕರವೆಂದು ಕಂಡುಹಿಡಿದಿರುವರು. ನಾಝಿ ಚಳವಳದಲ್ಲಿ ಶ್ರೇಷ್ಠ ಪದವೀಧರರಾದ ಯೋಧರು ಪೂರ್ಣ ನಿಲ್ಲಿಸಿರುವರು. ಅವರು ವಿಮಾನಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡುವರು. ಆ ವಿಮಾನಗಳೂ ಸಾಮಾನ್ಯ ತರಗತಿಯವುಗಳ ಹಾಗೇ ತೋರುವುವು. ಹಿಟ್ಲರರ ರಕ್ಷಣೆಗಾಗಿ ಮಿಲಿಯಗಟ್ಟಲೆ ಹಣ ವ್ಯಯವಾಗುತ್ತಿರುವುದೆಂದೊಡನೆ, ಅವರೊಡನೆ ಯಾವಾಗಲು ಸೈನ್ಯವಿರುವುದೆಂದು ನೀವು ಭಾವಿಸಬಹುದು. ಆದರೆ ಬಂದೂಕನ್ನು ಹಿಡಕೊಂಡ ಓರ್ವ ಶಿಫಾಯಿಯಲ್ಲದೆ ಮತ್ತಾರೂ ಪ್ರಯಾಣದ ಹೊತ್ತಿಗೆ ಅವರೊಡನೆ ಹೋಗುವುದಿಲ್ಲ. ಹೀಗೆ ಸಾಮಾನ್ಯನಾದೊಬ್ಬ ಮನುಷ್ಯನಂತೆ, ಸಾಮಾನ್ಯವಾದೊಂದು ವಾಹನದಲ್ಲಿ ಪ್ರಯಾಣವನ್ನು ಬೆಳಸಿದರೆ, ಜನರ ದೃಷ್ಟಿಯನ್ನು ಆಕರ್ಷಿಸದೆ, ನಿರಾಯಾಸವಾಗಿ ಹೋಗಬಹುದೆಂದು ಹಿಟ್ಲರರ ಮತವಾಗಿರುವುದು.

ಹಿಟ್ಲರರ ಪ್ರತಿಬಿಂಬ.

ಹಿಟ್ಲರರ ಕಾರುಗಳೆಲ್ಲ ಸರಕಾರಕ್ಕಾಗಿಯೇ ಒಳ್ಳೇ ಸಾಮಾಗ್ರಿಗಳಿಂದ ತಯಾರಿಸಿದವುಗಳಾಗಿವೆ. ಕೆಲವು ಸಮಯದ ಹಿಂದಿನ ತನಕ ಅವರೊಡನೆ ಕಾರುಗಳನ್ನು ಓಡಿಸಲು ಶ್ರೆಕ್ ಎಂಬೊಬ್ಬ ಡ್ರೈವರನಿದ್ದನು. ಆತನು ಜರ್ಮನಿಯ ಪ್ರತಿಯೊಂದು ಮಾರ್ಗ, ಮೂಲೆಗಳನ್ನು ತಿಳಿದುಕೊಂಡಿದ್ದನಲ್ಲದೆ, ಹಿಟ್ಲರರನ್ನೇ ಅಸಾಧಾರಣವಾಗಿ ಹೋಲುತ್ತಿದ್ದನು.

ಹಿಟ್ಲರರು ಹೋಗುವ ಸ್ಥಳಗಳಲ್ಲಿ ಅವರ ಕುರಿತು ಜನರಲ್ಲಿರುವ ಅಭಿಪ್ರಾಯವನ್ನು ಹೊಂದಿ, ಅವರ ರಕ್ಷಣೆಯ ಸಿದ್ಧತೆಗಳನ್ನು ಮಾಡಲಾಗುತಿತ್ತು. ಹಲವೊಮ್ಮೆ ಸಂಧಿಗ್ಧ ಸಮಯಗಳಲ್ಲಿ ಅವರು ಒಮ್ಮೆಗೇ ಎರಡು ಸ್ಥಳಗಳನ್ನು ಸಂಧರ್ಶಿಸುವವನಾಗಿ ಪ್ರಕಟಿಸುತ್ತಿದ್ದರು. ಕಡೆಯ ತನಕ ಯಾವ ಸರಕಾರಿ ಉದ್ಯೋಗಸ್ಥನಿಗೂ ಅವರು ಎಲ್ಲಿಗೆ ಹೋಗುವರೆಂದು ತಿಳಿಯುತ್ತಿರಲಿಲ್ಲ. ಈ ಕುರಿತು ಅವರು ಗೊಣಗುಟ್ಟುವುದೂ ಇಲ್ಲ. ಕಾರಣ, ಇದೆಲ್ಲವೂ ಹಿಟ್ಲರರ ಆತ್ಮರಕ್ಷಣೆಗಾಗಿಯೇ ಮಾಡಲ್ಪಡುವುದಲ್ಲವೆ?

ಜನಸಮುದಾಯದಿಂದ ದೂರವಾಗಿರುವ, ಪ್ರಾಚೀನ ಇತಿಹಾಸ ಪ್ರಸಿದ್ಧವಾದ, ಆಲ್ಪ್ಸ ಪರ್ವತಗಳಲ್ಲಿರುವ ಬರ್ಚೆಸ್ ಗಾರ್ಡನ್ ದೆಂಬ ಪಟ್ಟಣವು ಹಿಟ್ಲರರ ನಿವಾಸಸ್ಥಳವು. ಕೊಲೆಗಡುಕರ ಕೈಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ಅವರು ಆ ನಿರ್ಜನವೂ ಉನ್ನತವೂ ಆದ ಪ್ರದೇಶದಲ್ಲಿ ತನ್ನ ನಿವಾಸವನ್ನು ನಿರ್ಮಿಸಿದ್ದಾಗಿರುತ್ತದೆ. ಮಾತ್ರವಲ್ಲ ಅಲ್ಲಿ ಪರಕೀಯನೊಬ್ಬನಿಗೆ ಹೋಗಲು ಅಶಕ್ಯವೇ ಸರಿ. ಚತುರ ಶಿಲ್ಪಿಗಳು ಅದನ್ನು ಅಷ್ಟು ಭದ್ರವಾಗಿ ಕಟ್ಟಿರುವರಲ್ಲದೆ, ಅಹೋರಾತ್ರಿಯೂ ಅದರ ಸುತ್ತಲೂ ಕಾವಲಿರುವುದು.

ನೆಲಡಡಿಯ ಕೋಟೆ

ಹಿಟ್ಲರರ ಈ ಗಿರಿಮನೆಗೆ ಹೋಗುವ ದಾರಿಯಲ್ಲಿ ಅಲ್ಲಲ್ಲಿ ಮರದ ಕಾವಲು ಮನೆಗಳಿರುವುವು. ಈ ಮನೆಗಳಲ್ಲಿ ನೂತನ ರೀತಿಯ ಫಿರಂಗಿಗಳು ಇರುವುವು. ವಿಮಾನಗಳಿಂದ ಯಾವ ತರದ ತೊಂದರೆಯೂ ಆಗದಂತೆ ನೋಡಿಕೊಳ್ಳಲು ಅಲ್ಲಲ್ಲಿ ವಿಮಾನಗಳನ್ನು ಕೆಡಹುವ ಫಿರಂಗಿಗಳು ಇರುವವಲ್ಲದೆ, ಅವರ ಗೃಹದ ಸುತ್ತಲೂ ಮುಳ್ಳಿನ ಬೇಲಿಯು ಹಾಕಲ್ಪಟ್ಟಿರುವುದು. ಬಳಿಯಲ್ಲಿಯೇ ಜರ್ಮನಿಯ ರಕ್ಷಣ ಪ್ರವೀಣರು ಬೊಂಬು, ಗೇಸುಗಳಿಗೂ ಅಂಜಿಕ್ಯವಾದ ನೆಲಮನೆಗಳನ್ನು ನಿರ್ಮಿಸಿರುವರು.

ಹಿಟ್ಲರರ ಈ ವಸತಿಯಿಂದ ಹದಿನೆಂಟು ಮೈಲು ದೂರದಲ್ಲಿ, ಪ್ರತ್ಯೇಕವಾಗಿ ತಯಾರಿಸಲ್ಪಟ್ಟ ಎರಡು ಮಾರ್ಗವಿರುವುವು. ಇವುಗಳ ಸಮೀಪ ಬಂದೊಡನೆ, ಬೇಕಾದ ಕಾಗದಪತ್ರಗಳಿಲ್ಲದಿದ್ದರೆ ಯಾರನ್ನೂ ಮುಂದೆ ಹೋಗಲು ಬಿಡುವುದಿಲ್ಲ. ಕಾಗದಪತ್ರಗಳಿದ್ದು ಅಲ್ಲಿಂದ ಮುಂದರಿಸಿ ಬಂದರೂ ಹಿಟ್ಲರರ ಆರಮನೆಯ ಸುತ್ತಲೂ ಬಲವಾದ ಬೇಲಿಯೂ ಕಾವಲೂ ಇರುವುದು. ಅಪರಿಚಿತನೊಬ್ಬನಿಗೆ ಈ ಅಭ್ಯಂತರಗಳನ್ನು ಸುರಕ್ಷಿತವಾಗಿ ದಾಟಿ ಹೋಗಲು ಅಸಾಧ್ಯವೇ ಸರಿ..

ಮುಸಲೇನಿಯವರ ಪ್ರಾಣದ ಮೇಲೆ ಪ್ರಯತ್ನ

ಮುಸಲೇನಿಯವರ ಪ್ರಾಣಾಪಹರಣ ಮಾಡಲು ಅನೇಕ ಬಾರಿ ಪ್ರಯತ್ನಗಳು ನಡೆದಿದ್ದುವು. ಇವುಗಳಲ್ಲಿ ಅತಿ ವಿಚಿತ್ರವಾದುದೆಂದರೆ, ಲೋರ್ಡ್ ಏಶ್‌ಬರ್ನರ ಮಗಳಾದ ಮಾನ್ಯ ವಾಯಲೆಟ್ ಗಿಬ್ಸನಳೆಂಬಾಕೆಯು ೧೯೨೬ರಲ್ಲಿ ಅವರ ಮೂಗಿಗೆ ಗುರಿಯಿಟ್ಟು ಗುಂಡು ಹಾರಿಸಿದುದಾಗಿರುತ್ತದೆ. ಇದರಿಂದಾಗಿ ಮೂಗಿಗೊಂದು ಮುಲಾಮುಪಟ್ಟಿಯನ್ನು ಹಚ್ಚಿಕೊಳ್ಳಬೇಕಾದರೂ, ಅವರು ತನ್ನ ಯಾವತ್ತು ಕಾರ್ಯಗಳನ್ನು ಯಥಾನುಕ್ರಮವಾಗಿ ನಿರ್ವಹಿಸಿ ಜನಾದರಕ್ಕೆ ಪಾತ್ರರಾದರು.

ಅಂದಿನಿಂದ ಅವರ ಪ್ರಾಣರಕ್ಷಣೆಗಾಗಿ ಬಹಳ ಪರಿಷ್ಕೃತ ಸಿದ್ಧತೆಗಳು ಮಾಡಲಾಗಿರುವುವು. ಓವ್ರಾ ಎಂಬ ಹೆಸರಿನ ೩೦೦ ಮಂದಿ ಯೋಧರಿಂದೊಡಗೂಡಿದ ಒಂದು ದಂಡು, ಮುಸಲೇನಿಯವರಿಗೆ ಯಾವ ಬಗೆಯ ಹಾನಿಯೂ ತಟ್ಟದಂತೆ ಸದಾ ಸರ್ವದಾ ಕಾವಲು ನಡೆಸುತ್ತಿರುವುದು. ಮುಸಲೇನಿಯವರ ವಸತಿಗೃಹವನ್ನು ಈ ದಂಡಿನವರು ಕಾಯುತ್ತಿರುವರಲ್ಲದೆ, ರೋಯಲ್ ಕಾರ್ಬಿನಿಯರ್ಸ್ ಎಂಬುದೊಂದು ಸೇನಾ ಸಮೂಹವೂ ಅವರ ಕಾರ್ಯದಲ್ಲಿ ನೆರವಾಗುತ್ತಿದೆ.

ತನ್ನ ಆಫೀಸಿನಿಂದ ಮನೆಗೆ ಪ್ರತಿ ನಿತ್ಯವೂ ಒಂದೇ ದಾರಿಯಾಗಿ ಪ್ರಯಾಣ ಬೆಳೆಸುವುದರಿಂದ ಮುಸಲೇನಿಯವರ ವೈರಿಗಳು ಅವರ ಪ್ರಾಣದ ಮೇಲೆ ಪ್ರಯತ್ನ ಮಾಡಬಹುದಾಗಿದೆ. ಆದುದರಿಂದ ಬೊಂಬು ಮೊದಲಾದ ಸ್ಫೋಟಕ ಸಾಮಾಗ್ರಿಗಳನ್ನು ಇಡಲನುಕೂಲವೆಂದು ಕಂಡ ಪ್ರತಿಯೊಂದು ಮೂಲೆ ಮೂಲೆಯನ್ನೂ ಉಕ್ಕಿನ ತಗಡು ಇಲ್ಲವೆ ಕಂಕ್ರೀಟು ಸುರಕ್ಷಿತ ಮಾಡಲಾಗಿರುವುದು. ಇದಲ್ಲದೆ ಅದೊಂದು ಸಂಕೇತವು ಮಾಡಲ್ಪಟ್ಟೊಡನೆ ಪೋಲೀಸರು ಅವರು ಹಾದುಹೋಗುವ ದಾರಿಯನ್ನು ನಿರಾತಂಕವಾಗಿ ಮಾಡುವರಲ್ಲದೆ, ಮುಸಲೇನಿಯವರ ಅಂಗರಕ್ಷಕರು ಅಲ್ಲಲ್ಲಿ ಬಂದು ನಿಲ್ಲುವರು.

ಮುಸ್ತಾಫರ ವಿಧಾನ

ಸ್ಮಿರ್ನಾ ಎಂಬಲ್ಲಿ ತನ್ನ ಕೆಲವು ಮಂದಿ ಮಿತ್ರರೊಡನೆ ಒಂದು ದಿನ ಟರ್ಕಿಯ ಸರ್ವಾಧಿಕಾರಿಯಾದ ಮುಸ್ತಾಫರು ಇಸ್ಪೀಟಾಟವಾಡುತ್ತ ಕುಳಿತಿದ್ದರು. ಮುಸ್ತಾಫರನ್ನು ಕಾಣಲು ಅಲಿಯೆಂಬೊಬ್ಬ ಆಗಂತುಕನು ಬಂದನು. ಆತನು ಒಳಗೆ ಬಂದೊಡನೆ ಮತ್ತಾರೂ ಆತನ ಕಡೆಗೆ ಲಕ್ಷ್ಯವನ್ನು ಕೊಟ್ಟಿಲ್ಲವಾದರೂ ಮುಸ್ತಾಫರು ಅವನ ಮೇಲಿಟ್ಟ ಕಣ್ಣನ್ನು ಹಿಂತೆಗೆಯಲಿಲ್ಲ.

ಒಳಗೆ ಬಂದ ಕಾಲುಗಂಟೆಯ ತನಕ ಸುಮ್ಮನಿದ್ದು ಅಲಿಯು ಮುಸ್ತಾಫರಿದ್ದಲ್ಲಿಗೆ ಬಂದು ತಾನು ಬಯಸಿದ ಒಂದು ಕೆಲಸವನ್ನು ಕೊಡಬೇಕೆಂದು ಕೇಳಿದನು. ಮಾತನಾಡುತ್ತಿದ್ದಾಗಲೆ ಅಲಿಯ ಕೈಯು ಕಿಸೆಯತ್ತ ಹೋಯಿತು. ಆದರೆ ಆತನು ತನ್ನ ಪಿಸ್ತೂಲನ್ನು ಹೊರತೆಗೆಯಬೇಕಾದರೆ ಕೇಮಲರ ವಜ್ರಮುಷ್ಟಿಯು ಅವನ ಕೈಯನ್ನು ಬಂಧಿಸಿತು.

ಕೇಮಲರ ಮಿತ್ರರು ನಂತರ ಒದ್ದಾಡುತ್ತಿದ್ದ ಆ ಅಲಿಯನ್ನು ಎಳೆದುಕೊಂಡು ಹೋಗಿ ಹೊರಗೆ ದೊಬ್ಬಿಬಿಟ್ಟರು. ಅಲಿಯು ಗುಂಡನ್ನು ಹಾರಿಸಿರುದಾದರೆ ಟರ್ಕಿಯ ಭವಿಷ್ಯವೇ ಬೇರೆಯಾಗುತಿತ್ತು.

ಆತ್ಮರಕ್ಷಣೆಗಾಗಿ ಮುಸ್ತಾಫರು ಮುಸಲೇನಿ ಅಥವಾ ಹಿಟ್ಲರರಷ್ಟು ಸಿದ್ಧತೆಗಳನ್ನು ಮಾಡಿಲ್ಲವಾದರೂ ಅವರ ಅಂಗರಕ್ಷಕರು ಬಹಳ ಜಾಗರೂಕತೆಯಿಂದ ಯಾವಾಗಲೂ ತಮ್ಮ ಒಡೆಯನ ರಕ್ಷಣೆಚಿಂತನೆಯನ್ನು ಮಾಡುತ್ತಿರುವರು.

ಮುಸ್ತಾಫರ ಆಹಾರಾದಿಗಳನ್ನು ಮೊದಲು ತಿಂದು ಪರೀಕ್ಷಿಸಿ ನೋಡಲು ಓರ್ವ ವ್ಯಕ್ತಿಯು ಇರುವನು. ಆತನು ಯಾವಾಗಲೂ ವೇಷ ಪಲ್ಲಟ ಮಾಡಿಕೊಂಡೇ ಇರುವನು. ತುರ್ಕಿಯ ಗುಪ್ತ ಪೋಲೀಸಿನ ದಳದವನಾಗಿದ್ದ ಆತನು ಮುಸ್ತಾಫನ ಹೊಟ್ಟೆಯೊಳಗೆ ಹೋಗುವ ಆಹಾರ, ಪಾನೀಯಗಳನ್ನು ಅವುಗಳಲ್ಲಿ ವಿಷ ಪ್ರಯೋಗಮಾಡಲ್ಪಟ್ಟಿರುವುದೇ ಎಂದು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡುವನು. ಈ ಉದ್ಯೋಗದಿಂದಾಗಿ ಆತನು ವರ್ಷಾವಧಿ 3,000 ಪವನುಗಳನ್ನು ಸಂಪಾದಿಸುವನು.

ಕ್ಷಮೆಯೆಂಬುದು ಸ್ಟೇಲಿನರಿಗೆ ತಿಳಿಯದು

ಸ್ಟೇಲಿನರ ಮುಖವು ಯಾವಾಗಲೂ ಗಂಭೀರವಾಗಿಯೇ ಇರುತ್ತದೆ. ಎಂತಹ ಪ್ರಸಂಗದಲ್ಲಾದರೂ ಒಂದಿಷ್ಟು ನಗೆ ಇಲ್ಲವೆ ಹೊಗೆಯಲ್ಲದೆ ಬೇರೆಯಾವತರದ ಭಾವನೆಗಳೂ ಅವರ ಮುಖದಲ್ಲಿ ಕಾಣುವಂತಿಲ್ಲ.

ಒಂದು ದಿನ ಗಾಗ್ರಿ ಎಂಬಲ್ಲಿ ಅದೊಂದು ದೋಣಿಯಲ್ಲಿ ಪವಡಿಸಿ ಸ್ಟೇಲಿನರು ಬಿಸಿಲಿನಲ್ಲಿ ಕಾಸಿಕೊಳ್ಳುತ್ತಿರಲು ಎಲ್ಲಿಂದಲೋ ಗುಂಡು ಹಾರಿಸಿದ ಶಬ್ದವಾಯಿತು. ಅವರ ಬಳಿಯಲ್ಲಿಯೇ ಅದು ನೀರಿನಲ್ಲಿ ಬಿದ್ದು, ನೀರು ಚದರಿ ಹೋಯಿತು. ಗವಿಯಲ್ಲಿ ಕಾವಲಿದ್ದ ಒಬ್ಬ ಸೈನಿಕನು ಅವರನ್ನು ಕೊಲ್ಲಬೇಕೆಂದು ಆಚೆದಡದಿಂದ ಒಂದು ಗುಂಡನ್ನು ಹಾರಿಸಿದ್ದನು.

ತನ್ನ ಪ್ರಾಣಪಹರಣ ಮಾಡಲು ಪ್ರಯತ್ನವು ನಡೆದಿರಲು, ಸ್ಟೇಲಿನರ ಮುಖವು ಕುಸುಕಷಾಯಿತವಾಗಿತ್ತಲ್ಲದ, ಬೇರೆ ಯಾವ ತರದಲ್ಲೂ ಅವರು ರೇಗಲಿಲ್ಲ. ಕಳೆದ ಸೆಪ್ಟೆಂಬರ ತಿಂಗಳಲ್ಲಿ ಈ ಪ್ರಸಂಗದ ಸಂಬಂಧದಿಂದಾಗಿ 13 ಮಂದಿ ಅಧಿಕಾರಿಗಳ ವಿಚಾರಣೆ ನಡೆಸಲಾಗಿತ್ತು.

ಕೊಲೆಗಡುಕರ ಕತ್ತಿಯಿಂದ ಪಾರಾಗಲು ಸ್ಟೇಲಿನರು ಮಾಡಿದ ಯೋಚನೆಗಳಲ್ಲಿ 'ಒಗ್ಪು' ಎಂಬ ಅಂಗರಕ್ಷಕರ ದಳವೇ ಪ್ರಮುಖವಾದುದು. ಕ್ರೆಮ್ಲಿನ್ ಎಂಬಲ್ಲಿದ್ದ ಅವರ ವಸತಿಯಿಂದ, ಆಫೀಸಿಗೆ ಹೋಗುವ ಮಾರ್ಗವನ್ನು ಈ ಅಂಗರಕ್ಷಕರು ಕಾಯುತ್ತಿರುವರು. ವಿಶೇಷ ದಿನಗಳಲ್ಲಿ ಅವರನ್ನು ಕಾಣಲು ಹೋಗುವ, ಮತ್ತು ಅವರನ್ನು ಕಂಡು ಹಿಂದಿರುಗಿದ ಜನರ ಸಂಖ್ಯೆಯ ಪಟ್ಟಿಯೂ ಇಡಲಾಗುವುದು.

ತನ್ನ ಮನೆಯನ್ನು ಪ್ರವೇಶಿಸಬೇಕಾದರೂ ಸ್ಟೇಲಿನರು ಪತ್ರಗಳನ್ನು ತೋರಿಸಬೇಕಾಗಿರುವುದು. ಕಾರಣ, ಅವರನ್ನು ಕೊಲ್ಲಬೇಕೆಂದು ಬಯಸುವವರು ಅವರಂತೆಯೇ ವೇಷಧರಿಸಿ ಬಂದು ಮೋಸಪಡಿಸಬಹುದಲ್ಲವೆ? ಆದುದರಿಂದ ಸ್ಟೇಲಿನರ ಮನೆಯನ್ನು ಪ್ರವೇಶಿಸುವ ಪ್ರತಿಯೊಬ್ಬನೂ ಅಲ್ಲಿಯ ಕಾವಲಿನವರಿಗೆ ತನ್ನ ಪರಿಚಯವನ್ನು ಮಾಡಿಕೊಡಬೇಕಾಗಿದೆ.

ಈ ರೀತಿ ಸರ್ವಾಧಿಕಾರಿಗಳ ಪ್ರಾಣರಕ್ಷಣೆಗಾಗಿ ವರ್ಷಾವಧಿ ಮಿಲಿಯಗಟ್ಟಲೆ ಪವನು ವೆಚ್ಚಮಾಡಲಾಗುತ್ತಿವೆ.

ಗಾಂಧಿಜೀಯವರನ್ನು ಕಂಡರು:

ಖಾರೇ ಪಕ್ಷದ ವಿದ್ಯಾರ್ಥಿಗಳು,— ಮತ್ತು ಹಿಂತೆರಳಿದರು.

ಖಾರೇ ಪಕ್ಷದ ಸುಮಾರು 150 ವಿದ್ಯಾರ್ಥಿಗಳು ಗಾಂಧಿಜೀಯವರನ್ನು ವಾರ್ಧಾಕ್ಕೆ ಬಂದು ಶೇವಗಾಂವದಲ್ಲಿ ಕಂಡರು. ಅವರು ಮೌನವ್ರತಹಿಡಿದ ಕಾರಣ, ಎಲ್ಲ ಪ್ರಶ್ನೆಗಳಿಗೆ ಬರೆದೇ ಉತ್ತರ ಕೊಟ್ಟರು. 50 ಪೋಲೀಸ್ ಜವಾನರೂ ಅಲ್ಲಿಗೆ ಬಂದಿದ್ದು ಅನರ್ಥಗಳಾಗದಂತೆ ನೋಡಿದರು.

ನಾಗಪುರದಲ್ಲಿ ಖಾರೆಯವರಿಗೆ ವರ್ಕಿಂಗ್ ಕಮಿಟಿಯು ಅನ್ಯಾಯಮಾಡಿತೆಂಬ ಆಕ್ಷೇಪವು ಬಹಳವಾಗಿದ್ದು ಹಾಗೆ ತೀರ್ಮಾನ ಮಾಡಿದವರನ್ನು ದಂಡಿಸಬೇಕಾಗಿಸಹ ಪ ತಿನಿಧಿಯರು ತಿಳಿಸಿದರು. ಕೊಂಗ್ರೆಸಿನ ಗೌರವವನ್ನು ಉಳಿಸಲು ಹೀಗೆ ಮಾಡಬೇಕೆಂದೂ ಸೂಚಿಸಲಾಯಿತು.

"ಬಹಳವಾಗಿ ಚರ್ಚಿಸಿ ನನ್ನೊಳಗೇ ವಿಚಾರಿಸಿಕೊಂಡರೂ, ಖಾರೆಯವರಿಗೇನೂ ಅನ್ಯಾಯವಾಗಿಲ್ಲವೆಂದು ನನ್ನ ವಿಶ್ವಾಸ. 1920ರಲ್ಲಿ ಕೊಂಗ್ರೆಸ್ ಆಡಳಿತದ ಸೂತ್ರಗಳನ್ನು ನಾನೇ ರಚಿಸುವಾಗ, ವರ್ಕಿಂಗ್ ಕಮಿಟಿಗೆ ಸರ್ವಾಧಿಕಾರವನ್ನು ಕೊಟ್ಟೇ ಆ ಕಮಿಟೀಗೆ ಎಲ್ಲರೂ ತಮ್ಮ ಆಕ್ಷೇಪ ತಿಳಿಸಬಹುದೆಂದೂ ಸೂಚಿಸಿರುವೆನು. ಕಮಿಟಿ ಎಂಬರರೇ ಆದರೂ ತಪ್ಪುಮಾಡಿದ್ದಲ್ಲಿ, ದಂಡನೆಗೆ ಅರ್ಹರಾಗಿದ್ದಾರೆ. ಖಾರೆಯವರ ವಿಷಯ ಹೇಳದಿರುವುದನ್ನು ಕಮಿಟಿಯು ಮುಂದಿಡಬಹುದು.

ನನಗೆ ಹೇಳಲಿಕ್ಕಿರುವುದನ್ನು ಹೇಳುವೆನು. 70 ವರ್ಷವಯಸ್ಸಿನಲ್ಲಿ ಬಹಿರಂಗ ಸಭೆಯಲ್ಲಿ ನಾನು ಮಾತಾಡಲಾರೆನು. ಖಾರೆಯವರ ತಪ್ಪನ್ನು ರುಜುಪಡಿಸುವುದಕ್ಕೂ; ನೀವು ಖಾರೆಯಲ್ಲಿಟ್ಟಿರುವ ಪ್ರೀತಿಯನ್ನು ಕಡಮೆಮಾಡುವುದಕ್ಕೂ ನಾನು ಮೆಚ್ಚುವುದಿಲ್ಲ.

ಕಾಲಕ್ರಮದಲ್ಲಿ ಖಾರೆಯವರೇ ತಮ್ಮ ತಪ್ಪನ್ನು ಒಪ್ಪಿಕೊಳ್ಳುವರು. ನಾನು ಅಷ್ಟು ತಾಳಬಲ್ಲೆ. ನಾನು ಮಾಡಿದುದರಲ್ಲಿ ತಿಳಿಯದೆ ತಪ್ಪಿದ್ದರೆ, ನಾನು ಕ್ಷಮೆ ಬೇಡುವೆನು. ವರ್ಕಿಂಗ್ ಕಮಿಟಿಯೂ ತಪ್ಪು ಮಾಡಿರುವುದಾದರೆ, ಅದು ತಿದ್ದಿಕೊಳ್ಳಲೂ ಅರ್ಹತೆಯುಳ್ಳದಾಗಿದೆ."

ಇಷ್ಟೇ ಮುಖ್ಯವಾಗಿ ಅವರ ಉತ್ತರ. ಪ್ರತಿನಿಧಿಗಳು ನಾಗಪುರಕ್ಕೆ ಹಿಂದೆ ಬಂದರು.

ಹಿಟ್ಲರನ ಪ್ರಭಾವ

ಹಿಟ್ಲರನು ಜರ್ಮನಿಯ ಸುತ್ತಲೂ ಬಲವಾದ ಕೋಟೆಕೊತ್ತಲಗಳನ್ನು ಕಟ್ಟಿಸುವ ಏರ್ಪಾಡು ಮಾಡಿರುವರು.

ಇಂಗ್ಲಾಂಡಿನ ಲಾರ್ಡ್ ರನ್ಸಿಮೇನರ ಮೂಲಕ ಜೆಕೊಸ್ಲವೆಕಿಯಾದಲ್ಲಿ ತಮಗೆ ಬೇಕಾದುದನ್ನು ಸಾಧಿಸುವುದು ಜರ್ಮನ್ ಸರಕಾರದ ಉದ್ದೇಶವಂತೆ.

ಹಿಟ್ಲರನು ಜರ್ಮನರನೆಲ್ಲಾ ಸಂಗ್ರಾಮಕ್ಕೆ ಸಿದ್ಧರಾಗುವಂತೆ ಅವಸರದ ಪ್ರಕಟಣೆಯನ್ನು ಮಾಡಿರುವನಷ್ಟೆ. ಇದೂ ಎಂದಿನಂತೆ ಟೊಳ್ಳು ಗದರಿಕೆಯಾಗಿರುವುದು, ಬ್ರಿಟಿಷರು ಈ ಟೊಳ್ಳು ಗದರಿಕೆ ಕಿಂಚಿತ್ತು ಹೆದರದೆ ವರ್ತಿಸಬೇಕೆಂದು, ಇಂಗ್ಲಾಂಡಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಟೀಕೆ.

ಸ್ಪೈಯಿನಿನ ಯುದ್ಧ

ಸದ್ಯಕ್ಕೆ ಮುಗಿಯುವ ಹಾಗಿಲ್ಲ. ಬರುವ ಚಳಿಗಾಲ ಒಳಗಾಗಿ ರಿಪಬ್ಲಿಕ್ ಸರಕಾರದ ಕಡೆಯ ಸಂಗ್ರಾಮವರ್ಗದಲ್ಲಿ ಅನೇಕ ಮಹತ್ತರ ಬದಲಾವಣೆಗಳಾಗಿ, ಆ ಪಕ್ಷವು ಇನ್ನೂ ಬಲವತ್ತರವಾಗುವುದಂತೆ. ಫ್ರೆಂಕೊನು ಕೂಡ ತನ್ನ ಸಿದ್ಧತೆಯಲ್ಲಿ ಇರುವುದು. ಆತನಿಗೆ ಮುಸಲೀ [illegible]

ಸೈನ್ಯಕ್ಕೆ ಸೇರಲು ಆತಂಕವಿರದಂತೆ

ಇದನ್ನು ಆಲೋಚನೆಗೆ ತೆಗೆದುಕೊಳ್ಳುವಂತೆ ಮುಸ್ಲಿಂ ಲೀಗಿನ ಸಹಾಯ: ವಿರುದ್ಧಪಕ್ಷಕ್ಕಿಂತ ಹತ್ತು ವೋಟುಗಳು ಸರಕಾರಕ್ಕೆ ಹೆಚ್ಚು.

ಕ್ರಿಮಿನಲ್ ಕಾನೂನಿನ ತಿದ್ದುಪಡಿಯ ಮಸೂದೆಯನ್ನು ಎಸೆಂಬ್ಲಿಯು ಆಲೋಚನೆಗೆ ತೆಗೆದುಕೊಳ್ಳುವ ಹಾಗೆ ಸರಕಾರ ಪಕ್ಷಕ್ಕೆ 65 ವಿರುದ್ಧ ಪಕ್ಷಕ್ಕೆ 55 ವೋಟುಗಳು ದೊರೆತುವು. ಕೊಂಗ್ರೆಸ್ ಪಕ್ಷವು ಪ್ರತಿಕೂಲ; ಮುಸ್ಲಿಮ್ ಲೀಗ್ ಪಕ್ಷವು ಅನುಕೂಲ. ಹೀಗಿದ್ದು ಸರಕಾರಕ್ಕೆ ಇದೊಂದು ವಿಜಯವೆಂದಾಯಿತು.

ಇಂಡಿಯಾ ಆಕ್ಟಿನ ಪ್ರಕಾರ ಇಂಥ ಕಾನೂನನ್ನು ವರಿಷ್ಠ ಸರಕಾರವು ಪ್ರಾಂತಿಕ ಸರಕಾರದ ಅನುಮತಿಯೊಡನೆ ಜ್ಯಾರಿಗೆ ತರಬೇಕೆಂದಿದೆ. ಈ ಸಂದರ್ಭದಲ್ಲಿ, ಪಂಜಾಬು ಸರಕಾರವು ಈ ಕಾನೂನಾಗಬೇಕೆಂದು ಇಂಡಿಯಾ ಸರಕಾರವನ್ನು ಪ್ರಾರ್ಥಿಸಿದಂತೆ ಎಸೆಂಬ್ಲಿಯಲ್ಲಿ ತಿಳಿಸಲಾಯಿತು. ಪಂಜಾಬು ಸರಕಾರವೇ ತಾನಾಗಿ ಈ ಕಾನೂನನ್ನು ಮಂಜೂರಿ ಮಾಡಿಕೊಂಡು ಇಂಡಿಯಾ ಸರಕಾರಕ್ಕೆ ಕಳುಹಿಸಬಹುದಾಗಿತ್ತು. ಆದರೆ, ಅಲ್ಲಿ ನಾಲ್ಕು ಕ್ಷಿಪ್ರ ಕರ ಮಸೂದೆಗಳು ಪ್ರಕಾಂಡವಾಗಿ ಜನತೆಯ ಮುಂದೆ ಎದ್ದು ನಿಂತಿದ್ದು ಅಲ್ಲಿ ಗಡಿಬಿಡಿಯುಂಟಾಗುವ ಪ್ರಮುಖ, ಈ ಬಗೆಯ ಮಸೂದೆಗೆ ಅಲ್ಲಿ ಯಾವ ವಿಘ್ನಗಳೇ ಎದುರು ಬಂದಾವೋ ಎಂಬ ಬೆದರಿಕೆಯಿಷ್ಟೇ! ಇಂಡಿಯಾ ಸರಕಾರಕ್ಕೆ ಮನಸು.

ಹಿಂದೀ ಸೈನ್ಯವೆಂಬುದು ತುಂಬುವಂತೆ, ಯುದ್ಧಗಳಿಗೆ ಹೋಗುವ ಹಾಗೆ ಸನ್ನದ್ಧವಾಗುವಂತೆ, ಸರಕಾರವು ಜನ ಕೂಡಿಸುವ ಕಾಲಕ್ಕೆ ಜನರು ಸೇರದಂತೆ ಅಥವಾ ಕರ್ತವ್ಯ ಪಾಲಿಸದಂತೆ ಪ್ರಚಾರ ಮಾಡಿ ಬೋಧಿಸಿದಲ್ಲಿ, ಅವರನ್ನು ಕಠಿನ ದಂಡನೆಯಿಂದ ಪುರಸ್ಕರಿಸಲಾದೀತೆಂಬುದೇ ಈ ಕಾನೂನಿನ ಮುಖ್ಯ ವಿಷಯ. ಸೇರಲಿಚ್ಛಿಸುವವರಿಗೆ ಸೇರುವುದಕ್ಕೆ ಹೇಗೋ ಹಾಗೆಯೆ ಅವರ ಬಂಧುಗಳಿಗೆ ಅವನು ಸೇರಬಹುದು ಅಥವಾ ಬಾರದು ಎಂದು ಸೂಚಿಸುವುದಕ್ಕಾಗಿ ಸ್ವತಂತ್ರವಿರಬೇಕು. ಎಲ್ಲ ರಾಷ್ಟ್ರಗಳಲ್ಲೂ ಈ ಬಗೆಯ ಹಕ್ಕು ಜನತೆಗಿದೆ; ಇಂಡಿಯಾದಲ್ಲಿ ಮಾತ್ರ ಅದೇಕೆ ಇರಬಾರದು! ಎಂಬ ಪ್ರಶ್ನೆ ಸರಕಾರದ ವಿರುದ್ಧ ಪಕ್ಷದ್ದು.

ಕಳೆದ ಮೂರು ತಿಂಗಳಲ್ಲಿ ಪರಿಚೂರ ಗೃಹಸ್ಥರು 115 ಭಾಷಣಗಳನ್ನು ಮಾಡಿದ್ದು, (ಅವುಗಳಲ್ಲಿ 71 ಪಂಜಾಬಿನಲ್ಲೇ) ಸೈನ್ಯಕ್ಕೆ ಜನತೆ ಬರಲು ಆತಂಕವಾದುದರಿಂದ ಹೀಗೆ ಕಾನೂನು ನಿರ್ಮಾಣ ಮಾಡಬೇಕಾಗಿ ಬಂದಿದೆ ಎಂದು ಸರಕಾರದ ಉತ್ತರ.

ಇದ್ದ ಕ್ರಿಮಿನಲ್ ಕಾನೂನಿನಲ್ಲಿ, ಇಂತಹ ಭಾಷಣಕರ್ತರನ್ನು ವಿಚಾರಣೆಗೆ ಒಳಪಡಿಸಿ ದಂಡಿಸಬರುವುದಿಲ್ಲವೆ? ಎಂಬ ಪ್ರಶ್ನೆಯುದೆ. ಇದೊಂದು ಹೊಸ ತಕ್ಸೀರನ್ನು ಉಂಟು ಮಾಡುವ ಅಗತ್ಯವನ್ನು ಸರಕಾರವು ಕಂಡುಕೊಂಡಿದೆ. ಆದರೆ, ತಕ್ಸೀರನ್ನು ನಿರ್ಧರಿಸುವ ಮಟ್ಟಿಗೆ—ಅಧಿಕಾರವು ನ್ಯಾಯಸ್ಥಾನಗಳಿಗಿದೆ. ಪರಂತು, ಹೀಗೆ ನಿರ್ಧಾರಾಧಿಕಾರಗಳು ನ್ಯಾಯಸ್ಥಾನಕ್ಕೆ ಸೇರಿದಲ್ಲಿ, ಒಂದೊಂದು ನ್ಯಾಯಸ್ಥಾನವು ಒಂದೊಂದು ಬಗೆ ತೀರ್ಮಾನಿಸಿರುವ ಕಾರಣ, ಪಕ್ಕನೆ ಈ ನ್ಯಾಯಸ್ಥಾನದ ಅಧಿಕಾರಗಳೆಂಬುದನ್ನು ವಿಶ್ವಾಸದಿಂದ ನಂಬಬಹುದೇ, ಅದಕ್ಕಾಗಿ ಈ ವಿಷಯವನ್ನು ಎಲ್ಲ ಪ್ರಾಂತ್ಯಗಳ ಸರಕಾರಗಳ ಅಭಿಪ್ರಾಯ ವಿಮರ್ಶೆಗಾಗಿ ಕಳುಹಿಸೋಣವೇ ಎಂದರೆ ಅಗದೆಂದಾ [illegible]

ಹೊಸ ಕಾನೂನಿನ ಮಸೂದೆ

ಯಾವ ವ್ಯಕ್ತಿಗಾದರೂ ಮೂಲತಃ ಇರುವ ವಿಚಾರ ಸ್ವಾತಂತ್ರ್ಯವನ್ನು ಇದು ನಿರ್ಮೂಲಿಸುವುದು ಎಂದರೆ,—ಜಿನ್ನಾರವರು "ನಾಳೆ ಒರ್ಡಿನನ್ಸು ಮೂಲಕ ಸರಕಾರವು ಇಂಥ ಕಾನೂನನ್ನು ಹೊರಡಿಸಬಾರದೆಂದುಂಟೆ?" ಎಂದರು. ಹಾಗಿದ್ದರೆ ಎಸೆಂಬ್ಲಿಯ ಮುಂದೆ ಸರಕಾರವು ಇದನ್ನು ತರುವ ಆವಶ್ಯಕತೆ ಇದ್ದಿಲ್ಲ; ತಂದ ಮೇಲೆ ಅದನ್ನು ಖಂಡಿತವಾಗಿ ನಮ್ಮ ಸ್ವಾತಂತ್ರ್ಯಪಹಾರದ ಕಾನೂನೆಂದು ಹೇಳದೆಯೂ ನಿರ್ವಾಹವಿಲ್ಲ ಎಂದು ಕೊಂಗ್ರೆಸ್ ಪಕ್ಷಕ್ಕೆ ಸಾರಿತು.

ಭಕ್ತಿ ವಿಶ್ವಾಸಗಳಿಂದ ವಿಧೇಯವಾಗಿ ಕರ್ತವ್ಯ ಪರಾಯಣವಾಗುವ ಸೈನ್ಯವು ಯಾವ ಬಗೆಯ ಸರಕಾರಕ್ಕೂ ಅಗತ್ಯವೇ ಇದೆ. ಆದರೆ, ಯುದ್ಧಗಳೇ ಬೇಡವೆಂದೂ, ಎಲ್ಲಿಯೋ ಆಗುವ ಯಾರದೋ ಯುದ್ಧಗಳಲ್ಲಿ ನಮ್ಮವರು ಹೋಗಿ ಕಾದಾಡುವುದು ನ್ಯಾಯವಲ್ಲವೆಂದೂ, ಹಿಂದೆ ಮಹಾಯುದ್ಧ ಕಾಲಕ್ಕೆ ಸುಮಾರು 650 ಕೋಟಿ ರೂಪಾಯಿಗಳನ್ನೂ 36000 ಜನರನ್ನೂ ಬಲಿಯಿತ್ತುದಕ್ಕೆ ಭಾರತವರ್ಷಕ್ಕೇನೂ ಪ್ರಯೋಜನ ದೊರೆತುದಿಲ್ಲವೆಂದೂ ಮೊದಲಾಗಿ ಆಕ್ಷೇಪಗಳು ಎದುರು ಬಂದುವು. ಜನರಿಗೆ ನ್ಯಾಯವಾದ ಹಕ್ಕನ್ನು ಕೊಡಲಾರದ ಸರಕಾರವು ಜನತೆಯಿಂದ ಭಕ್ತಿಯನ್ನು ಸಂಪಾದಿಸಲರಿಯದು ಎಂದೂ ತರ್ಕ ಸಾಗಲಾಯಿತು.

ಇಂಥ ಕಾನೂನು ಈಗ ಮಂಜೂರಾದರೂ, ಮುಂದೆ ಅಲ್ಲಲ್ಲಿನ ಪ್ರಾಂತ್ಯದಲ್ಲಿ ಅದು ಜ್ಯಾರಿಗೆ ಬರದಂತೆ ಮಾಡಬಹುದೆಂದೂ, ಪ್ರಜಾಧಿಪತ್ಯಕ್ಕೆ ವಿರುದ್ಧವಾಗಿ ಈ ಶಾಸನವು ಹೊರಬೀಳದಂತೆ ಮುಂದೆ ಮಾಡಲು ನಮ್ಮಲ್ಲಿ ಶಕ್ತಿಯಿದೆ ಎಂದೂ ಪೆಲೆಸ್ತೀನ ವಜೀರಸ್ತಾನಗಳಲ್ಲಿ ಮುಸ್ಲಿಮರ ಮೇಲೆಯೆ ಯುದ್ಧಗಳಾಗಬಹುದಾದರೂ ನಮ್ಮ ಸೈನ್ಯವು ಸಿದ್ಧವಾಗಿರುವ ಹಾಗೆ ನಾವೇಕೆ ಒಪ್ಪಕೂಡದು? ಎಂದೂ ಜಿನ್ನಾರವರು ನುಡಿದರು.

ಸೈನ್ಯವು ಒಂದುವೇಳೆ ಬೇಕಾದರೂ, ಇಂಡಿಯಾ ಸರಕಾರವು ಬ್ರಿಟಿಷ ಯುದ್ಧಗಳಿಗೆ ಸೈನ್ಯ ತಯಾರಿಸುವಾಗ ಹಿಂದೀಯರಾರೂ ಸೇರಬಾರದೆಂದು ಸಹ ಕಾನೂನು ಮಾಡಿದ್ದರೆ ಉತ್ತಮವಾಗುತ್ತಿತ್ತೆಂದೂ, 20–25 ರೂಪಾಯಿ ಸಂಬಳ ಪಡೆದ್ದು ಹಿಂದೀಯರ ಪಾಲ್ದ ಸ್ವಾತಂತ್ರ್ಯ ಮುಕ್ತಿ ಕಾರಣಗಳಿಗಾಗಿ ಯಾವ ಹಿಂದೀಯನೂ ಹೋರಾಡಿ ಸಾಯದಂತೆ ಸೂಚಿಸಿದರೂ ತಪ್ಪಾಗುವುದಲ್ಲ ಎಂದೂ, ಜನಾಭಿಪ್ರಾಯ ಪಡೆದ ಬಳಿಕವೇ ಇಂಥ ಕಾನೂನನ್ನು ಚರ್ಚೆಗೆ ಮತ್ತು ಪರ್ಯಾಲೋಚನೆಗೆ ತರಬಹುದಾಗಿತ್ತೆಂದೂ ಶ್ರೀ ಭೂಲಾಭಾಯಿಯವರು ನುಡಿದರು.

ಎಷ್ಟೋ ಪತ್ರಿಕೆಗಳು ಅವಸರವಾಗಿ ಇದನ್ನು ಮುಂದರಿಸದೆ, ಜನಾಭಿಪ್ರಾಯ ಪಡೆಯಲು ಒಪ್ಪಿಸುತ್ತಿದ್ದರೆ ಉತ್ತಮವಿತ್ತು ಎಂದು ಈಗಲೂ ಬರೆಯುತ್ತವೆ.

ಮಂಜೂರಾದ ಬಳಿಕ, ಪಂಜಾಬಿನಲ್ಲಿ, ಇದು ಪ್ರಥಮವಾಗಿ, ಜ್ಯಾರಿಗೆ ಬರುವುದು. ಇತರ ಪ್ರಾಂತ್ಯಗಳಲ್ಲಿ ಜ್ಯಾರಿಗೆ ಬರಬೇಕಾದರೆ ಆಯಾ ಪ್ರಾಂತಿಕ ಸರಕಾರಗಳು ಅದನ್ನು ಮಂಜೂರ್ಮಾಡಿ ಆಯಾ ಪ್ರಾಂತ್ಯಕ್ಕೆ ಅನ್ವಯಿಸುವಂತೆ ಪ್ರಕಟಿಸಬೇಕು.

ಅಂತೂ, ಇದು ಚರ್ಚೆಯಾಗಿ, ಲೀಗಿನವರು ಸೂಚಿಸುವ ಕೆಲ ತಿದ್ದುಪಡಿಗಳಾದಲ್ಲಿ [illegible]

ಸೇಲಂ ವಿಷಯವಾಗಿ

ಬಂಗಾಳೀ ವಿದ್ಯೆ:— ಕಳ್ಳಿನ ವಿಷಯ ಸುಳ್ಳು.

ಕಲ್ಕತ್ತೆಯಿಂದ ಸೇಲಂನಲ್ಲಾಗುವ ಮದ್ಯಪಾನ ನಿವಾರಣಾ ಪ್ರಯತ್ನಗಳನ್ನು ಟೀಕಿಸಿ ಹರಟೆ ತುಂಬ ವಿಚಾರಗಳನ್ನುಳ್ಳ ಪ್ರಕಟನೆಗಳು ಹೊರಡುತ್ತವಾಗಿ ಮದ್ರಾಸು ಸರಕಾರಕ್ಕೆ ತಿಳಿದುಬಂದಿದೆ.

ಕಸಬುಗಳಲ್ಲಿ ಹೊರತು ಹಳ್ಳಿಗಳಲ್ಲಿ ಈ ಹೊಸ ಸುಧಾರಣೆ ಸಫಲವಾಗಿಲ್ಲವೆಂದು ಆ ಪ್ರಕಟಣೆ ಹೇಳುವುದು. ಹಳ್ಳಿಗಳಲ್ಲಿ ಸಾವಿರಾರು ತಾಳೆಮರಗಳಿವೆ; ತುಂಬ ಕಳ್ಳಕುಡಿಯುತ್ತಾರಂತೆ. ಪೋಲೀಸರು ಒಂದು ಲಕ್ಷ ಮಡಿಕೆಗಳನ್ನು ಪರೀಕ್ಷಿಸಿದಲ್ಲಿ 58 ಮಡಿಕೆಗಳು ಮಾತ್ರ ಕಳ್ಳು ತುಂಬಿದ್ದುವೆಂದು ತಿಳಿದು ಹೋಳದ್ದುಗಳಾಗಿವೆ. ಹಳ್ಳಿಗಳಲ್ಲಿರುವ ಕಮಿಟಿಗಳು ತಮ್ಮ ಚಿಕ್ಕ ವಿಸ್ತೀರ್ಣದಲ್ಲಿ ಬಹಳ ಚೆನ್ನಾಗಿ ಮದ್ಯ ನಿವಾರಣೆ ಮಾಡಬಲ್ಲವೆಂಬುದನ್ನು ಮರೆಯಲಾಗದು. ತೋಟಗಳ ಯಜಮಾನರು ಕಳ್ಳಸೇಂದ್ರಿಯಲ್ಲಿ ಜವಾಬ್ದಾರರಾಗಿದ್ದಾರೆ!

ಕಳ್ಳುಸಿಗದರ ಕಾರಣ, ಮಾರ್ಗದುರುಸ್ತಿ, ಬಾವಿ ತೋಡುವಿಕೆ ಇತ್ಯಾದಿ ಕೈಗೂಡುವುದಿಲ್ಲವೆಂದು ಇನ್ನೊಂದು ಸುಳ್ಳು. ಆದರೆ, ಹಿಂದಣ ವರ್ಷಗಳಷ್ಟೆ ಚೆನ್ನಾಗಿಯಾದರೂ ಈ ಕೆಲಸವೆಲ್ಲ ಸಾಗಿದೆ. ಎಲ್ಲಿ ಕಾರ್ಪೊರೇಷನ್‌ಗಳಲ್ಲೂ ಈಗ ಕೆಲಸ ಉತ್ತಮವಾಗಿದೆ ಎಂದು ರಿಪೋರ್ಟು ಇದೆ. ಒಬ್ಬಿಬ್ಬರು ಕಳ್ಳಿಲ್ಲದಾಗದು ಎಂದವರಿದ್ದಾರೆ ನಿಜ; ಆದರೆ ಅವರೂ ಕೆಲಸಮಾಡಿದ್ದಾರೆ.

ಹಗೆಗಳ ಪೆಟ್ಟಿಯಿಂದ ಮಳ್ಳು ಲಿಗ್ಯಾಬು ಗಳಾದವೆಂದು ಜನರು ಗಾಬರಿಯಾಗಿದ್ದಾರೆಂದೂ ಇನ್ನೊಂದು ಸುಳ್ಳು. ಗಾಂಜಾನಂಬ್ರಗಳು 522ರಲ್ಲಿ 12 ಮಾತ್ರ ಹೀಗಾಗಿರಬಹುದಾಗಿಯೂ ಇವುಗಳಲ್ಲೂ 10 ತನಿಖೆಯೇ ಆಗಿಲ್ಲವಾಗಿಯೂ ತಿಳಿದು ಬಂದಿದೆ. ಇಂಥ ನೂರಾರು ನಂಬ್ರಗಳಿವೆ ಎಂದು ಒರೆದಿರು ಭ್ರಮೆಯ ಫಲ.

ಯುನಿವರ್ಸಿಟಿಯ ವಿದ್ಯಾರ್ಥಿಗಳು ಬಾಕು ಕ್ಕಿಂತ ಇದನ್ನೆಲ್ಲ ತನಿಖೆ ಮಾಡಿ, ಮದ್ಯಪಾನ ನಿವಾರಣೆ ಸಾರ್ಥಕವಾಗಿದೆಂದಿದ್ದಾರೆ

ಜಪಾನಿನಲ್ಲಿ ನೂತನ ತರದ ಚಳುವಳಿ

200 ಮಂದಿಗಳ ದಸ್ತಗಿರಿ

ಚೀನಾ ಯುದ್ಧವು ನಿಲ್ಲಬೇಕು. ಜನರ ಸರಕಾರವು ಅಧಿಕಾರಕ್ಕೆ ಬರಬೇಕು, ಎಂಬ ಉದ್ದೇಶಗಳನ್ನು ಹಾಕಿಕೊಂಡ ಜಪಾನಿನಲ್ಲಿ ನವೀನ ಒಂದು ಸಂಘವು ಸ್ಥಾಪನೆಯಾಗಿ, ತಮ್ಮ ಧ್ಯೇಯ ಸಾಧನೆಗಾಗಿ, ಒಹಳ ಚಳುವಳಿಯನ್ನು ನಡೆಯಿಸುತ್ತಿದ್ದು, ಮೊನ್ನೆ ಟೋಕಿಯೊ ಪಟ್ಟಣದಲ್ಲಿ ಪೋಲಿಸರು ಈ ಸಂಸ್ಥೆಗೆ ಸಂಬಂಧಪಟ್ಟ ವಿದ್ಯಾರ್ಥಿ, ಪ್ರೊಫೆಸರರು ಇತ್ಯಾದಿಯವರು ಇರುವ 200 ಮಂದಿಗಳನ್ನು ಗಸ್ತಿ ಹಿಡಿದಿರುವರು. ಈ ಸಂಘವು, ತಮ್ಮ ಮೇಲಿನ ಕೋರಿಕೆಗಳನ್ನು ತಿಳಿಸಿ, ಜಪಾನಿನ ಚಕ್ರವರ್ತಿಯವರಿಗೆ ಒಂದು ಅರ್ಜಿಯನ್ನು ಕಳುಹಿಸಿಕೊಟ್ಟಿರುವರು.

ಚೀನಾ ದೇಶದ ಜನಸಂಖ್ಯೆ

ಚೀನಾದೇಶದ ಜನಸಂಖ್ಯೆಯು 250 ಮಿಲಿಯವೆಂದು ಫ್ರೆಂಚ್ ತಜ್ಞರೊಬ್ಬರು ಅಭಿಪ್ರಾಯವಾಗಿದ್ದರೂ, 'ಅದು' ಈ ಸಂಖ್ಯೆಯ ಇಮ್ಮಡಿಯಷ್ಟು ಆಗಿರುವುದೆಂದು ತಿಳಿದುಬರುತ್ತದೆ.

ಮರಣ, ಬೆಂಕಿ ಅನಾಹುತ ಮತ್ತು ಕಷ್ಟವಾದ ಕಾರಣಗಳಿಂದ ಅಲ್ಲಿ ಸಾಯುವವರ ಸಂಖ್ಯೆಯು ಬಹಳವಾಗಿರುವುದು. ಅಲ್ಲಿ ಜನಿಸುವ ಪ್ರತಿ ನೂರು ಶಿಶುಗಳಲ್ಲಿ 60 ಶಿಶುಗಳು ಮಡಿಯುತ್ತಿದ್ದಾವೆ.

ಕಳೆದ ಮಹಾಯುದ್ಧದ ನಂತರ ಚೀನಾ ದೇಶದ ಜನಸಂಖ್ಯೆಯಲ್ಲಿ 30 ಮಿಲಿಯದ ಇಳಿ [illegible]

ಸ್ವದೇಶಾಭಿಮಾನಿ

...ಗ್ರೆಸ್ ಮಂತ್ರಿಮಂಡಲದ ಪ್ರಥಮ ವರ್ಷದ ವರದಿ.

...ದ್ರಾಸಿನ ಕಾಂಗ್ರೆಸ್ ಮಂತ್ರಿಮಂಡ... ...ನು ಅಧಿಕಾರ ನಿರ್ವಹಿಸಿದಂದಿನಿಂದ ...ದು ವರ್ಷ ಮುಗಿದುದರಿಂದ, ಆ ಅವಧಿ ...ಲ್ಲಿ ಮಾಡಲೆತ್ನಿಸಿದ, ಮುಗಿಸಿದ, ಇನ್ನೂ ...ಡಲಿರುವ ಕಾರ್ಯಗಳನ್ನು ಕುರಿತಾದ, ಆಗು... ...ಷ್ಟು ಸ್ವಚ್ಛಂದವಾದ ಒಂದು ವರದಿಯನ್ನು ...ಕಟಿಸಿದೆ. ಇದಿಲ್ಲ ವೋಟರ ಸಮುದಾಯಕ್ಕೂ ...ಯವಂತಾದಲ್ಲಿ, ರಾಜ್ಯಭಾರದ ಒಂದು ವಿಮ... ...ಮಾಡಲು ಅತ್ಯುಪಯುಕ್ತವಾದೀತು ಎಂಬ ...ರಣದಿಂದ, ಈ ಪ್ರಯತ್ನವನ್ನು ಕೊಂಡಾಡ... ...ಕಾಗಿದೆ.

ಪ್ರತಿ ಇಲಾಖೆಯೂ ಪ್ರತಿವರ್ಷ, ಎರಡು ...ರ್ಷಗಳ ಹಿಂದೆ ನಡೆದುಹೋಗಿ ಮರೆತೇಹೋ... ...ವ ಕಾರ್ಯಕಲಾಪಗಳ ರಿಪೋರ್ಟುಗಳನ್ನು ...ಕಾರದ ವಿಮರ್ಶೆಯೊಡನೆ ಪ್ರಕಟಿಸುವ ...ವಾನವೊಂದುಂಟು. ಇದು ಸರಕಾರಕ್ಕೆ ...ತ್ರ ಉಪಯುಕ್ತವಾಗಬಹುದು. 1936-7ರಲ್ಲಿ ನಡೆದ ಯಾವುದೊಂದು ಇಲಾಖೆಯ ...ರ್ಯವೃತ್ತಾಂತವನ್ನು 1938ನೆ ವರ್ಷದಲ್ಲಿ ...ದ ಯಾವ ಫಲವುಂಟೋ ತಿಳಿಯದು. ...ಥ ರಿಪೋರ್ಟುಗಳ ಬದಲಾಗಿ, ಹೀಗೆ ವರ... ...ಗಳು ಹೊರಡುವುದುತ್ತಮ

"ಮಾಡಿದ್ದೆಷ್ಟೋ ಇದ್ದರೂ ಅತ್ಯಲ್ಪ, ...ಡಲಿರುವುದು ಧಾರಾಳ ಜನತೆಯ ಪು... ...ಶ್ರೇಯೋಭಿವೃದ್ಧಿಗಾಗಿ ವೋಟರರ ಮುಂದಿಟ್ಟ ...ರ್ಯಕ್ರಮಕ್ಕೆ ಅನುಸಾರವಾಗಿ ನಾವಿಷ್ಟನ್ನಾ... ...ರೂ ಮಾಡಲೆತ್ನಿಸಿದ್ದೇವೆ ಈ ಅನುಭವ... ...ದ ಮುಂದೆ ಕಾಲಿಡುವೆವು" ಎಂದು ವರದಿ ...ಳುವುದು ವಿಮರ್ಶಾ—ಹಾಗೂ ಆತ್ಮ ಪರೀ... ...ಕ್ಷಾಬುದ್ಧಿಯಿಂದ. ಎಂತೂ, ಅಧಿಕಾರ ಸ್ವೀಕ... ...ರುವುದು ಕೂಡದೆಂದವರಿಗೂ ಈ ವರದಿ ...ಒಂದೆ ತಿದ್ದಿ ಕರುವಂತಾಗಿದೆ ಧೈರ್ಯವೂ ...ಟ್ಟಿದೆ, ಎಣಿಸಿದಂತೆಲ್ಲ ಮಾಡುವುದೂ ಕಷ್ಟ... ...ಂದೂ ಬುದ್ಧಿಹುಟ್ಟಿಸಿಯದೆ ಸಮಯವೂ ...ಂದರ್ಭಗಳೂ ದೊರೆತರೆ ಎಷ್ಟನ್ನೊ ಸಾಧಿಸ... ...ಹುದೆಂಬ ಸೂಚನೆಯನ್ನು ಉಂಟುಮಾಡಿ... ...ದೆ. ಅಕ್ಕಿಗಿಂತ ಮೇಲಾಗಿ ಅದನ್ನು ಕಾರ್ಯ... ...ರೂಪಕ್ಕೆ ತರುವವರ ಮೇಲೆಯೆ ರಾಜ್ಯಭಾರ ...ಹೊಂದಿಕೊಂಡಿದೆ ಎಂಬುದೂ ವ್ಯಕ್ತವಾಗಿದೆ

ಹಿಂದುಸ್ಥಾನೀ ಶಿಕ್ಷಣಪ್ರಚಾರ, ಮದ್ಯ... ...ಪಾನ ನಿವಾರಣೆ, ಋಣವಿಮೋಚನಾ ಆಕ್ಟು, ...ಕರಿಗೆ ಸಾಲಸಲ್ಲಿಯಿಸಲು 50 ಲಕ್ಷರೂಪಾ... ...ಯ ಸಹಾಯ, ಜಮೀನು ಆದಾಯದ ...ಕಂಟು ಬಡಾವಣೆ, ಮಜೂರರ ಸಮಸ್ಯೆಗಳ ...ತ್ಯರ್ಥ, ಸಂಬಳಗಳ ಇಳಿತಾಯ, ಗೌರವ ...ದ್ಯೋಗಸ್ಥರ ನೇಮಕ, ಇತ್ಯಾದಿಗಳನ್ನು ಸ್ವಲ್ಪ ...ವರವಾಗಿ ತಿಳಿಸಲಾಗಿದೆ. ಯಾವ ಮಂತ್ರಿಮಂ... ...ಲವಾದರೂ ಇಷ್ಟನ್ನು ಮಾಡಬಹುದಾಗಿತ್ತೆಂ... ...ದು ಕೆಲವರು ಸೂಚಿಸಬಹುದು, ಆದರೆ ಪ್ರಜೆ... ...ಳ ಬೆಂಬಲವಿದ್ದು ಇಷ್ಟನ್ನೆ ಮಾಡಿದರೆಂಬ ...ರ್ತಿ ಈ ಮಂಡಲಿಗೇ ಸಲ್ಲಬೇಕು. ಕೀರ್ವೆ ...ಮಾಫಿ, ನೆರೆಕ್ಷಾಮಗಳ ನಿವಾರಣೆ, ನೀರಾವರಿ ...ಲಸ, ಇತ್ಯಾದಿ ಎಷ್ಟೋ ವಿಷಯಗಳ ಕಡೆಗೆ ...ಕ್ಷಿನ ಗಮನ ಉಂಟಾಗಬೇಕು ಕೈಗಾರಿಕೆ... ...ಳಿಗೆ ಸರಕಾರವೂ ಪಾಲುಗಾರನಾಗಿ ಬರಹ... ...ದೆ. ಕೀರ್ವೆ ಇಳಿಸುತ್ತಲಿದ್ದರೆ, ಖರ್ಚಿಗೆ ...ಸ್ಸಿಂದ ಒದಗಬಹುದು ಎಂಬ ಪ್ರಶ್ನೆ ಉಳಿದಿದೆ.

ಈ ವರ್ಷದ ಅನುಭವದಿಂದ, ಉಪಯು... ...ಮಾದುದನ್ನು ನಿಷ್ಠೆಗೆ ತಂದುಕೊಂಡು, ಅನು... ...ಪಯುಕ್ತವಾದುದನ್ನು ತಿದ್ದಿಕೊಂಡು, ಮಂಡ... ...ಯು ಮುಂದರಿದಲ್ಲಿ ಪ್ರಾಂತ್ಯಕ್ಕೂ ಕ್ಷೇಮ; ...ಮಂತ್ರಿಗಳಿಗೂ ಕೀರ್ತಿ.

ಚೌ ಎನ್‌ಲಾಯ್

ಈಗ ಚೀನದಲ್ಲಿ ಹೋರಾಡುತ್ತಿರುವ ಕಮ್ಯುನಿಸ್ಟ ದಳವಾದ 8ನೆ ಸೈನ್ಯದ ಅಧಿನಾಯಕನ ಬಲಗೈಯಾಗಿರುವ ಚೌ ಎನ್‌ಲಾಯ್‌ ಹಂಕೌ ಡೇವಿಸಲ್ಲಿಷ್ಟ್ವೆ ವಾರ್ತಾದಾತರಿಗೆ ಹೀಗೆಂದು ನುಡಿದನೆಂದು ಪ್ರಕಟವಾಗಿದೆ.

"ಜಪಾನಿನೊಡನೆ ನಡೆವ ಯುದ್ಧದಲ್ಲಿ ಖಂಡಿತವಾಗಿಯೂ ಚೀನವೆ ಜಯಹೊಂದುವುದು.

ಆದರೆ ಹಾಗೆ ಜಪಾನನ್ನು ಸೋಲಿಸಲು ಮೂರು ಅಥವಾ ಇನ್ನೂ ಹೆಚ್ಚು ವರ್ಷಗಳು ಬೇಕಾಗುವುವು.

ಅಸ್ವಕಾಲ ಯುದ್ಧವು ಮುಂದರಿದರೆ ಜಪಾನಿನೊಳಗೇ ಕ್ರಾಂತಿಯುಂಟಾಗುವುದು

ಕೊಮ್ಯುನಿಸ್ಟರಿಗೂ ಇತರ ಪಕ್ಷಗಳಿಗೂ ವಾದಗಳಿವೆ; ಅವುಗಳ ತೀರ್ಮಾನವು ಈಗ ಅಗತ್ಯವಾಗಿಲ್ಲ ಈಗ ಈ ಯುದ್ಧವಿದೆ ಇದೊಂದನ್ನು ಗೆಲ್ಲದೆ, ನಾವು ನಮ್ಮ ಜಗಗಳನ್ನು ಮುಂದೊತ್ತುವುದಿಲ್ಲ.

ಎಲ್ಲ ಪಕ್ಷಗಳು ಈಗ ಒಂದಾಗಿವೆ. ಯುದ್ಧದಲ್ಲಿ ಜಯಹೊಂದಿದ ಬಳಿಕ, ಪ್ರಜಾಸತ್ತೆಗೆ ಕೈಯಿಕ್ಕುವೆವು. ಅದಿಲ್ಲದೆ, ಸಾಮಾಜಿಕ ಅಭ್ಯುದಯವು ಸಾಧ್ಯವಾಗಲಾರದು

ಉತ್ತರ ಭಾಗದಲ್ಲಿನ ಚೀನೀ ರೈತರು ಯುದ್ಧಾನಂತರ ತಮ್ಮ ಜಮೀನುಗಳನ್ನು ಪಡೆವರು ಹಲವು ವರ್ಷಗಳ ಅವಧಿಯೊಳಗೆ ಗೇಣಿ ಕಡಮೆಯಾಗುತ್ತ ಬರುವುದು ಕೆರಿಗೆಯೂ ಕಡಿಮೆಯಾದೀತು ಕೊನೆಗೆ ಅವರು ಏನೂ ತೆರಬೇಕಾಗುವಂತಿಲ್ಲ. ಆಗ ಜಮೀನೆಲ್ಲ ರೈತರಿಗಾಗುವುದು ಕಾನೂನು ಪ್ರಕಾರ ಹೀಗಾಗುವುದು ಹೊರತು, ಎಲ್ಲವನ್ನು ಜಪ್ತು ಮಾಡಿ ಸರಕಾರವು ಯಾರಿಗೂ ಹಂಚಿಕೊಡದು

ಯುದ್ಧಾನಂತರ, ಪರರಾಷ್ಟ್ರೀಯರ ಹಣವು ನಮಗೆ ಸಾಲವಾಗಿ ಬೇಕಾಗುವುದು ಜಯವಾದಲ್ಲಿ ಚೀನವು ಇತರ ರಾಷ್ಟ್ರಗಳಿಗೆ ಸಮಾನವಾಗಿ ನಡೆದುಕೊಂಡೀತೆಂದು ಭಾವಿಸಬೇಕು"

ಚೌ ಈಗ 38ನೆ ವಯಸ್ಸಿನವನಾಗಿರುವನು ಫ್ರಾನ್ಸಿನಲ್ಲಿ ಈತನೆ ಚೀನಿಯ ಸಮತಾವಾದಿಗಳ ಪಕ್ಷವನ್ನು ಸ್ಥಾಪಿಸಿದನು ಜರ್ಮನಿ ಜಪಾನುಗಳಲ್ಲಿ ಈತನು ಶಿಕ್ಷಣಹೊಂದಿದವನು

ಗೀತೆಯೂ ಅಹಿಂಸೆಯೂ

ಗೀತೆಯ ಮುಖ್ಯ ತತ್ವವು ಹಿಂಸೆಯಾಗಿರದೆ ಅಹಿಂಸೆಯೇ ಆಗಿರುವುದೆಂದು ಎರಡನೆಯ ಪರಿಚ್ಛೇದದಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯದಿಂದ ತಿಳಿದು ಬರುತ್ತದೆ ಇದೇ ವಿಷಯವು ನಂತರ 18ನೆಯ ಪರಿಚ್ಛೇದದಲ್ಲಿಯೂ ಸಂಗ್ರಹಿಸಲ್ಪಟ್ಟಿರುವುದು ಉಳಿದ ಪರಿಚ್ಛೇದಗಳಲ್ಲಿ ಪ್ರತಿಪಾದಿತವಾದ ವಿಷಯಗಳು ಇದೇ ವಿಷಯವನ್ನು ಸಮರ್ಥಿಸುತ್ತವೆ

ಕೋಪ ಅಸೂಯೆ, ಮೋಹಗಳಿಲ್ಲದಿದ್ದರೆ ಹಿಂಸೆಯು ಅಸಾಧ್ಯವಾಗಿರುವುದು ಗೀತೆಯು ನಮ್ಮನ್ನು ಸತ್ವ, ರಜ, ತಮೋಗುಣಗಳಿಗೆ ಬಾಹಿರವಾದ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸುವುದರಿಂದ, ಗೀತೆಯ ಬೀಜಮಂತ್ರವು ಅಹಿಂಸೆಯೊಂದೇ ದೃಢವಾಗಿ ಹೇಳಬಹುದ, ಎಂಬುದಾಗಿ ಗಾಂಧಿಜಿಯವರು ಅಭಿಪ್ರಾಯ ಪಡುತ್ತಾರೆ

ಗುರಿತಪ್ಪದಂತೆ ಕಣ್ಣಿಗೆ ಶಸ್ತ್ರ ಚಿಕಿತ್ಸೆ

ಜಪಾನೀಯ ಸೈನಿಕರ ಗುರಿಯು ತಪ್ಪದಂತೆ, ಅವರಿಗೆ ನೇರವಾಗಿ ಗುಂಡು ಹಾರಿಸಲಾಗುವಂತೆ, ಡಾಕ್ಟರರು ಅವರ ಕಣ್ಣುಗಳ ಮೇಲೆ ಶಸ್ತ್ರಕ್ರಿಯೆಯನ್ನು ನಡೆಸುತ್ತಿರುವರು. ಸಾವಿರಾರು ಮಂದಿ ಈಗಾಗಲೇ ಈ ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡಿರುವರು.

ಜಪಾನೀಯ ಸೈನಿಕರಿಗೆ ಅವರ ಜನಾಂಗ ಸಹಜವಾದ ಇಳಿರೆಪ್ಪೆಗಳಿರುವುದರಿಂದ, ಗುರಿಯಿಟ್ಟು ಹೊಡೆಯಲು ಅವರಿಗೆ ಬಹಳ ತೊಂದರೆಯಾಗುತ್ತಿರುವುದರಿಂದ, ರೆಪ್ಪೆಯನ್ನು ಕುಸು ಮೇಲೆ ಮಾಡಿ ಬಿಟ್ಟರೆ ಈ ಅವಗುಣವು ಗುಣವಾಗುವುದೆಂದು ಊಹಿಸಲಾಗಿದೆ

ಫ್ರಾಂಕೋವಿನ 'ಸಿಡಿಬಾಣಗಳು'

ಫ್ರಾಂಕೋರವರು ಈಗ ಸಿಡಿಬಾಣಗಳನ್ನು (Rockets) ತಯಾರಿಸುತ್ತಿರುವರು. ಬಿಲ್ಬೋ ಎಂಬಲ್ಲಿ ಒಂದು ಕಾರ್ಖಾನೆಯು ಇವುಗಳನ್ನು ತಯಾರಿಸುವುದಕ್ಕಾಗಿಯೇ ಅಹೋರಾತ್ರಿ ದುಡಿಯುತ್ತಿದೆ.

ಈ ಸಿಡಿಬಾಣಗಳು 1,000 ಗಜ ಎತ್ತರದಲ್ಲಿ ಎರಡು ಮೈಲುಗಳಷ್ಟು ದೂರದಲ್ಲಿ ತನಕ ಸಿಡಿಯ ಬಲ್ಲವು ಅವು ಸಿಡಿದೊಡನೆ ನೆಶನಲಿಸ್ಟ್ ಸೈನಿನ ಸಂಕೇತದ ಬಣ್ಣಗಳಿಂದ ಕೆಂಪು ಮತ್ತು ಹಳದಿ ಬಣ್ಣದ 'ನಕ್ಷತ್ರಗಳು' ಉದುರುವುವು.

ಪ್ರತಿಯೊಂದು ಸಿಡಿಬಾಣದಲ್ಲಿ ಸಾವಿರಾರು ನೋಟೀಸುಗಳಿರುತ್ತವೆ ಸರಕಾರದ ಸೈನ್ಯವನ್ನು ಬಿಟ್ಟವರಿಗೆ, ಇಲ್ಲವೆ ದಂಗೆಯೆದ್ದವರಿಗೆ 50 ಪವನುಗಳ ಬಹುಮಾನವು ಕೊಡಲಾಗುವುದೆಂದು ಅವುಗಳ ಮೇಲೆ ಬರೆದಿರುತ್ತಾರೆ

ಕೊಳೆಯನ್ನು ತೊಳೆಯಿರಿ!

ತಕ್ಕ ಸಮಯದಲ್ಲಿ ಹಿಂಸೆಯನ್ನು ತಡೆಗಟ್ಟದಿದ್ದರೆ ಅಂತರ್ಗತ ಕಾರಣಗಳಿಂದಲೇ ಕೊಂಗ್ರೆಸು ಮಣ್ಣುಪಾಲಾಗಬಹುದು ಪ್ರಾಂತಿಕ ಮತ್ತು ಇನ್ನಿತರ ಕೊಂಗ್ರೆಸ್ ಕಮಿಟಿಗಳವರು ಈ ಕೊಳೆಯನ್ನು ತೊಳೆದು ಬಿಡಲು ವಿಳಂಬಿಸದೆ ಪ್ರಯತ್ನಿಸಬೇಕಾಗಿದೆ

ಇಲ್ಲವೆ, ಕೊಂಗ್ರೆಸ್ ವಾಲರು ಅಹಿಂಸಾ ತತ್ವದಿಂದಾಗಿ ಬೇಸರಗೊಂಡಿರುವರಾದರೆ, ಕೊಂಗ್ರೆಸಿನ ನಿಯಮ ನಿಬಂಧನಾವಳಿಗಳಿಂದ ಅದನ್ನು ಆದಷ್ಟು ಬೇಗನೆ ಅಳಿಸಿಬಿಡುವುದುತ್ತಮ ಇದರಿಂದ ಸಂಬಂಧಪಟ್ಟ ಜನರಿಗೂ ದೇಶಕ್ಕೂ ಹಿತವಿದೆ

ಅಸತ್ಯ ಹಿಂಸೆಗಳನ್ನು ಮುಚ್ಚುವುದಕ್ಕಾಗಿ ಕೊಂಗ್ರೆಸಿನವರು ಸತ್ಯ, ಅಹಿಂಸೆಯೆಂಬ ಸೋಗನ್ನು ಹಾಕಿಕೊಂಡಿರುವರೆಂಬ ಅಪವಾದವು ಈ ಪವಿತ್ರ ಸಂಸ್ಥೆಗೆ ತಗಲದಿರಲಿ' ಎಂಬುದಾಗಿ ಕೊಂಗ್ರೆಸ್ ಮಂತ್ರಿಮಂಡಲದವರ ಕೃತಗಳನ್ನು ಟೀಕಿಸಿ ಮಹಾತ್ಮಾಜಿಯವರು ಹರಿಜನದಲ್ಲಿ ಬರೆದಿರುತ್ತಾರೆ

ನಾಗಮಣಿ ದೊರಕಿರುವುದು

ಬನಾರ್ಸಿ ಬೋಗಟನೆಂಬವನೊಬ್ಬನು ಒಂದು ದಿನ ತನ್ನ ಎತ್ತನ್ನು ಹಿಡಿದುಕೊಂಡು ಕಾಡಿಗೆ ಹೋದನು ಕತ್ತಲಾಗುವ ಸಮಯಕ್ಕೆ ಏನೋ ಮಿನುಗುವ ಒಂದು ವಸ್ತುವು ತನ್ನ ಬಳಿಗೆ ಬರುವುದನ್ನು ಆತನು ಕಂಡನು ಒಡನೆ ಆತನು ಆ ಪ್ರಾಣಿಯ ಮೇಲೆ ಸೆಗಣಿಯನ್ನು ಎಸೆದು ಮನೆಗೆ ಹಿಂತೆರಳಿದನು

ಎರಡು ದಿನಗಳ ನಂತರ ಬನಾರ್ಸಿಯು ಅಲ್ಲಿಗೆ ಹೋಗಿ ನೋಡಿದನ ಒಂದು ಸರ್ಪವು ಸತ್ತು ಬಿದ್ದಿತ್ತು ಸೆಗಣಿಯೊಳಗೆ ಪ್ರಕಾಶಮಾನವಾದ ಒಂದು ಮಣಿಯು ಆತನಿಗೆ ದೊರಕಿತು. ಅದನ್ನು ಹಿಡಕೊಂಡು ತಂದು ಆತನು ತನ್ನ ಊರಿನವರಿಗೆ ತೋರಿಸಿದನು ಅದೊಂದ ಅಮೂಲ್ಯವಾದ ವಸ್ತುವೆಂದು ಹೇಳಿ ಅವರು ಅದನ್ನು ಜೋಪಾನದಿಂದ ಇಡುವಂತೆ ಹೇಳಿದರಾತನಿಗೆ

ಈ ವರ್ತಮಾನವನ್ನು ಕೇಳಿದ ನರೇಶ ಎಂಬಾತನು, ಬನಾರ್ಸಿಯ ಜಮೀನುದಾರನು ಆ ನಾಗ ಮಣಿಯನ್ನು ತರಲು ತನ್ನನ್ನು ಕಳುಹಿರುವನೆಂದ ಹೇಳಿ, ಸ್ವಲ್ಪ ಹಣವನ್ನು ಕೊಟ್ಟು ಆತನಿಂದ ಆ ಮಣಿಯನ್ನು ಪಡಕೊಂಡು ತೆರಳಿದನ ಈ ವಿಷಯವು ಆ ಜಮೀನುದಾರನಿಗೆ ತಿಳಿದೊಡನೆ ಆತನು, ಉತ್ತರರಾಜ ಜಮೀನಿನ ಅಧಿಕಾರಿಯಾದ ರಾಜಾ ಭಯ್ಯಾರುದ್ರ ಪ್ರತಾಪ ದೇವರಿಗೆ ತಿಳಿಸಿದನು ಬನಾರ್ಸಿಯನ್ನೂ ನರೇಶನನ್ನೂ ರಾಜನ ಮುಂದೆ ತಂದು ನಿಲ್ಲಿಸಲಾಯಿತು. ಬನಾರ್ಸಿಯು ತನ್ನ ಮಣಿಯನ್ನು ಕೊಡಬೇಕೆಂದು ನರೇಶನೊಡನೆ ಕೇಳಿದನು ನರೇಶನು ಒಂದು ಸಾಮಾನ್ಯ ಕಲ್ಲನ್ನು ತೆಗೆದುಕೊಟ್ಟನು.

ಬನಾರ್ಸಿಯು ಆ ಕಲ್ಲು ತನ್ನದಲ್ಲವೆನ್ನುವನು. ನರೇಶನು ಹೌದೆಂದು ಛಲ ಹಿಡಿದಿರುವನು. ಮಾತ್ರವಲ್ಲ ಬನಾರ್ಸಿಯ ಜಮೀನುದಾರನೂ ತಾನು ನರೇಶನನ್ನು ಆ ಮಣಿಯನ್ನೆ ತರುವಂತೆ ಕಳುಹಿದಿಲ್ಲವೆಂದೂ ವಾದಿಸುವನು.

ಈ ವಿಷಯವನ್ನು ಈಗ ಪೊಲೀಸರು ಕೈಯಲ್ಲಿ ತೆಗೆದುಕೊಂಡಿರುವರು. ಮಾತ್ರವಲ್ಲ ಆ ಮಣಿಯನ್ನು ಹುಡುಕಿ ಕೊಟ್ಟವನಿಗೆ ಬಹುಮಾನವು ಕೊಡಲಾಗು... ...ಸಾರಿರುವರು

ಸಾಮ್ರಾಜ್ಯದ ಒಕ್ಕಟ್ಟು
ಲೋರ್ಡ್ ಲೋಥಿಯನ್‌ರ ಪುನಃ ಭಾಷಣ.

ಸಾಮ್ರಾಜ್ಯವೆಲ್ಲ ಒಂದಾಗುವ ಉಪಾಯಗಳನ್ನು ಸಿಡ್ನೀ ನಗರದಲ್ಲಿ ಶೋಧಿಸುವ ಪರಿಷತ್ತಿಗೆ ವಿಮಾನಹತ್ತಿ ಹೋಗುತಿದ್ದ ಲೋರ್ಡ್ ಲೋಥಿಯನರು ಕರಾಚಿಯಲ್ಲಿ ಇಳಿದು ಅಲ್ಪವಕಾಶದೊಳಗೆ ಕೆಲ ಸೂಚನೆಗಳನ್ನು, ಇಲ್ಲಿ ಫೆಡರೇಶನ್ ಸ್ಥಾಪಿಸುವ ವಿಷಯವಾಗಿ ತಿಳಿಸಿರುವರು.

ಇಂಡಿಯಾದಲ್ಲಿ ಆರು ತಿಂಗಳಿಂದೀಚೆಗೆ ಏನಾಗುತ್ತಿದೆ ಎಂದು ಸಂಪೂರ್ಣ ತಿಳಿದಿಲ್ಲವಾದರೂ, ನಾನಾ ಪಕ್ಷಗಳೊಳಗೆ ಒಕ್ಕಟ್ಟನ್ನುಂಟುಮಾಡುವುದಕ್ಕಾಗಿ ಉಂಟಾಗಿರುವ ಈಗಣ ಆಕ್ಟಿನಲ್ಲಿ ದೋಷಗಳಿರಬಹುದಾದರೂ, ಇಂಡಿಯವು ತಾನಾಗಿ ತನ್ನ ಸರಕಾರೀ ವ್ಯವಸ್ಥೆ ಮಾಡಿಕರಲು, ಅಪೇಕ್ಷಿಸುವುದೂ ನ್ಯಾಯವಾದರೂ, —ಫೆಡರೇಶನ್ ಆಕ್ಟನ್ನು ತಿದ್ದುವುದಕ್ಕೆ ಮುಖಂಡರಿಗೆ ಇದೀ ಫೆಡರಲ್ ಸರಕಾರ ನಡೆಸಿ ಸ್ವಲ್ಪ ಅನುಭವ ಉಂಟಾಗುವ ಮೊದಲು ಯೋಗ್ಯ ಮುಹೂರ್ತವಿಲ್ಲ ಎಂದೇ ನನ್ನ ಅಭಿಪ್ರಾಯವಾಗಿದೆ ಬರೇ ಎಣಿಕೆಯಿಂದಲೆ ಹೀಗೆ ಹಾಗೆ ಆಗಬೇಕೆನ್ನುವ ಬದಲಾಗಿ, ಸ್ವಲ್ಪ ಅನುಭವ ದೊರೆತು ತಿದ್ದುಪಡಿಗಳಾವುವೆಂದು ಸೂಚಿಸಿದರೆ, ಅವುಗಳಿಗೆ ಬೆಲೆಯುಂಟಲ್ಲವೆ?

ಯುರೋಪಿನಲ್ಲೆಲ್ಲ ಈಗ ನಾನಾ ಸಂಕಟಗಳು ಉಂಟಾಗಿರುವುದಕ್ಕೆ, ಭಾಂಡವಳಿಕರ ಅನ್ಯಾಯವು ಕಾರಣವಲ್ಲ, ಯುರೋಪಿನಲ್ಲೊಂದು ಫೆಡರೇಶನ್ ಇಲ್ಲದಿರುವುದೇ ಕಾರಣ ರಾಜಕೀಯ ಸಂಕಟಗಳಿಂದ ಯುದ್ಧಸನ್ನಾಹಕ್ಕಾಗಿಯೆ ಹಣ ವ್ಯಯಿಸುವ ಸರಕಾರಗಳು ಹೀಗೆ ಶಾಂತಿಸಾಧನೆಗಾಗಿ ಇತರ ಪ್ರಯತ್ನ ಮಾಡಬಹುದ ?

ಜಪಾನು ಚೀನವನ್ನು ತುಂಡರಿಸಿದರೂ ಇಂಡಿಯದ ಐಕ್ಯವು ನಾಶವಾದರೆ, ಮುಂದಿನ ಸಾಂಪತ್ತಿಕ ಪ್ರಗತಿ ಹೇಗಾಗುವುದು? ಸ್ವರಾಜ್ಯಸಿಗಬೇಕಾಗುವ ಹೋರಾಟದ ನಡು... ...ದೇ ಸರಕಾರದ ಕೆಳಗಿದ್ದು ಆದ ... ...ಕೆಯನ್ನು ಕಳೆಯದಂತಾಗಬಾರದ

ಈಗ ... ಅಗಾಗ ಅನುಭವಕ್ಕೆ ತಕ್ಕಂತ ಸಾಮುದಾಯಿಕ ಅಭಿಪ್ರಾಯ ಪಡೆದು ತಿದ್ದಿ ತರಬಹುದು ಈಗಣ ಆಕ್ಟಿನಲ್ಲಿರುವ ಕುಂದುಗಳು, ಇಂಡಿಯಾದ ಐಕ್ಯವು ತಪ್ಪಿದಲ್ಲಿ ಉಂಟಾಗುವ ಕುಂದ್ರಗಳಿಗಿಂತ ಕಡಮೆ

ಹೀಗಿರುವುದರಿಂದ ಎಷ್ಟೇ ಕುಂದುಗಳಿರುವುದಾದರೂ ಫೆಡರೇಶನನ್ನು ಜ್ಯಾರಿಗೆ ಶೀಘ್ರದಲ್ಲಿ ತರುವುದುತ್ತಮವೆಂದು ನನ್ನ ವಿಶ್ವಾಸ ಇದೀ ರಾಜ್ಯಭಾರ ಕ್ರಮವನ್ನು ಪುನಃ ಆಮೂಲಾಗವಾಗಿ ಘಟಿಸಿ ತರಲು ಪ್ರಯತ್ನಿಸುವ— ಬದಲಾಗಿ ಅನುಭವ ದೊರೆತಂತೆ ತಿದ್ದುಪಡಿ ಮಾಡಿಕೊಳ್ಳುತ್ತ ಈಗಣ ಆಕ್ಟನ್ನೆ ಸಂಗೋಳಿಸಬಹುದು ಎಂದು ನಂಬಿರುವೆನು

ಯುರೋಪಿಯ ಸ್ಥಿತಿ.

ಬಲು ಕಷ್ಟಕರವಾಗಿದೆ, ಭಯಂಕರವಾಗಿದೆ ... ಹುಟ್ಟಿಸಿಲ್ಲ ಝೆಕೊಸ್ಲೊವಾಕಿಯ ಸಮಸ್ಯೆ ಒಂದು ವರ್ಷದೊಳಗಾಗಿ ಮುಗಿದರೆ ಮತ್ತೆ ಮಹಾಯುದ್ಧವಾಗದು ಇಂಡಿಯಕ್ಕೂ ಯುರೋಪಿಗೂ ಸಮಾನಬಾಧೆ ಬರುವುದು ಮತದಿಂದಲ್ಲ ಪ್ರೈನೋರಿಟಿಯ ಪ್ರಶ್ನೆಯಿಂದ

ಇಂಗ್ಲೆಂಡಿನಲ್ಲಿ ಜವಾಹರಲಾಲರನ್ನು ಕಂಡರೂ, ಅವರೂ ಫೆಡರೇಶನ್ ವಿಷಯ ಅವರ ಅಭಿಪ್ರಾಯಗಳನ್ನು ಬದಲಿಸಿಲ್ಲ. ನಾನೂ ಹಾಗೆಯೆ ವೈಸ್ರಾಯರನ್ನು ಕಂಡಿರುವೆನು, ನಮ್ಮೊಳಗೆ ನಡೆದ ಸಂಭಾಷಣೆಯೇನೆಂದು ಮಾತ್ರ ತಿಳಿಸಲಾರೆನು

ಸ್ಫುಟಿತತರಂಗ

ಶರಣಾಗತರಾದರು.

ಸ್ಕುಳ್ಳನ ಸುರಿಮಳೆಯನ್ನು ಸುರಿಸಿಯೂ ಫಲಿಸಿತು. ರಷ್ಯವು ಹೇಳಿದ ಶರ್ತಗಳನ್ನು ಒಪ್ಪಿ ರಾಜಿಮಾಡಲಾಗಿರುವುದೆಂದು ಈಗ ಜಪಾನು ತಲೆದೂಗಬೇಕಾಯಿತು.

ಜಪಾನೀಯರು ನದಿಯ ಆಚೆದಡಕೆ ಹೋಗಿರುವರು. ಅಂದರೆ, ಯುದ್ಧಕ್ಕೆ ಕಾರಣ ನಾದ ಆ ಗುಡ್ಡವು ಸೋವಿಯಟಿನ ಕೈವಶವಾಗಿರುವುದು. ಅಲ್ಲದೆ, ಸೋವಿಯಟಿನವರು ಕೊಟ್ಟ ಅದೊಂದು ನಕಾಶೆಯ ಆಧಾರದಮೇಲೆ ಗಡಿನಿಶ್ಚಯಮಾಡಲಾಗುವುದು. ಸೋವಿಯಟಿನವರು ಕೊಟ್ಟ ನಕಾಶೆಯಿಂದಮೇಲೆ ಗಡಿನಿಶ್ಚಯದ ನಾಟಕವೂ ಅಭಿನಯಿಸಲ್ಪಡಬೇಕೆ?

ಜಪಾನು ರಷ್ಯಕ್ಕೆ ಶರಣಾಗತವಾಗಿರುವುದೆಂದು ಇದರಿಂದ ವಿಶದವಾಗದಿರದು. ಜಪಾನು ಮಾಡಿದುದೂ ಯೋಗ್ಯವೇ ಆಯಿತೆನ್ನಬೇಕು. ಕಾರಣ, ಸೋವಿಯಟಿನೊಡನೆಯೂ ಯುದ್ಧವೆಂದರೆ ಜಪಾನು ತನ್ನ ಘೋರಿಯನ್ನು ತಾನೇ ತಯಾರಿಸಿದಂತಾಗುತಿತು!

ಒಂದೇ ತರತಿ ಮಿಾಟುತ್ತಿರುವರು

ಎಂದಿನಂತೆ ಇಂದಿಗೂ ಲೋರ್ಡ ಲೋಥಿಯನರು ಭಾರತೀಯರು ಫೆಡರೇಶನನ್ನು ಸಿರಾಕರಿಸಿದರೆ ಅವರ ಒಕ್ಕಟ್ಟಿಗೆ ಧಕ್ಕೆ ತಗಲಬಹುದೆಂಬ ಅದೊಂದೇ ತಂತಿಯನ್ನು ಮಿಾಟುತ್ತಿರುವರು.

ಭಾರತೀಯರನ್ನು ಒಂದು ಗೂಡಿಸಿ ಫೆಡರೇಶನನ್ನು ಮೊದಲೇ ಕಳ್ಳ ... ಶಕ್ತಿಯು ... ಸಿಗಿರುವುದಾದರೆ, ... ಯೋಜನೆಯನ್ನು ಕೈ ಕೊ ... ಒಕ್ಕಟ್ಟನ್ನು ... ಷ್ಟು ಶಕ್ತಿಯು ... ಸಿಗಿರ ಪುದಿಲ್ಲವೆ? ... ಅಲ್ಲದೆ ಭಾರತದಲ್ಲಿ ಐಕ್ಯವನ್ನು ಸ್ಥಾಪಿಸಿದುದು ಏತರೇತನೇನು? ಇಲ್ಲವೆ ಬ್ರಿಟಿಷರು ತಯಾರಿಸಿದ ... ದರೊಳು ಯೋಜನೆಯೇನು? ಕಾಂಗ್ರೆಸಿನ ಕೈಕಳಗೆ ಜನರಲ್ಲಿ ಉಂಟಾದ ... ನಮ್ಮಲ್ಲಿ ಒಕ್ಕಟ್ಟು ... ಅಂಕುರಿಸುವಂತೆ ಮಾಡಿದುದು?

ಯುದ್ಧದ ಭಯ

ಯುರೋಪಿನಲ್ಲಿ ಸದ್ಯದಲ್ಲಿಯೇ ಯುದ್ಧವಾಗಬಹುದೆಂಬ ಅಂಜಿಕೆಯು ಇಂಗ್ಲಾಂಡಿಗೆ ಉಂಟಾಗಿರುವುದು. ಅವರ ಸಂಕಷ್ಟ ಸಮಯದಲ್ಲಿ ಭಾರತೀಯರು ಸಹಾಯಕರಾಗಬೇಕೆಂದು ... ಇಂಡಿಯಾ ಸರಕಾರವು ಈಗಿಂದಲೇ ಸಿದ್ಧತೆಗಳನ್ನು ನಡೆಸುತ್ತಲಿದೆ

ಬ್ರಿಟನ್ನು ಯುದ್ಧದಲ್ಲಿ ಪ್ರವೇಶಿಸಿದರೆ, ಭಾರತದಿಂದ ಯಾವ ತರದ ಸಹಕಾರ ಸಹಾಯಗಳು ದೊರಕಲಿಕಿಲ್ಲವೆಂದು ಇಲ್ಲಿಯ ಪ್ರಮುಖರು ಅಗಿಂದಾಗ್ಗೆ ಒತ್ತಿ ಹೇಳಿರುವರು. ಆದುದರಿಂದ ಇವರನ್ನು ಮುಂಚಿತವಾಗಿಯೇ ಸಮಾಧಾನ ಪಡಿಸಿ, ಸುಮ್ಮಗೆ ಕುಳ್ಳಿರಿಸಲು ಸಿಮ್ಲಾವು ನೋಡುತ್ತಿದೆ ... ಗುಂಡುಗಳಿಗೆ ಇಂಡಿಯ ದಿಂದ ಆಹಾರವು ದೊರಕಬೇಕಲ್ಲವೇ?

ಲೀಗು ತಲೆದೂಗಿರುತ್ತದೆ

ಇದಕ್ಕಾಗಿ ಎಸೆಂಬ್ಲಿಯಲ್ಲೊಂದು ಬಿಲ್ಲು. ಹೆಸರಿಗೆ ಮಾತ್ರ ಈ ಬಿಲ್ಲಿನ ಜನ್ಮದಾತರು ಸಿಕಂದರ ಮಂತ್ರಿ ಮಂಡಲದವರೆಂದು ಸಾರಲಾಗಿದೆ. ಹೀಗೆ ಮಾಡಿದುದರಿಂದ ಮುಸ್ಲಿಂ ಲೀಗೂ ಇದರಲ್ಲಿ ಭಾಗವನ್ನು ವಹಿಸಲು ಒಪ್ಪಿರುವುದು.

ಅಂತು ಮುಸ್ಲಿಮರು ಕೂಡಿ ಈ ಬಿಲ್ಲಿನ ಬೆನ್ನು ತಟ್ಟಿರುವರು. ಕಾರಣ, ಸರಕಾರಕ್ಕೆ ಸಹಾಯಮಾಡಿ, ಕಾಂಗ್ರೆಸಿನಲ್ಲಿ ಒಡಕುಂಟು ಮಾಡುವ ಉದ್ದೇಶ.

ಆದರಿಂದ ಒಳ್ಳೆಯದಾಗಲಿ ಕೆಟ್ಟದಾಗಲಿ ಜನ್ನರಿಗೆ ತನ್ನ ಶಕ್ತಿಯನ್ನು ಪ್ರದರ್ಶಿಸಬೇಕಾಗಿದೆ. ಅದಕ್ಕೆ ಇದೇ ತಕ್ಕ ಸಮಯ. "ನಾವು ಹೇಳುವ ಶರ್ತಗಳಿಗೆ ಒಪ್ಪಿಕೊಳ್ಳಿ, ಇಲ್ಲದಿದ್ದ ಪಕ್ಷದಲ್ಲಿ ನಾವು ಪ್ರವೇಶವನ್ನು ಕೊಡೆವು" ಎಂದು ಹೇಳಬಹುದಲ್ಲವೆ? ದೇಶಭಕ್ತ ಜನ್ನರು.

ಪರದೇಶಗಳಲ್ಲಿ: ಒಂದು ನಿಮಿಷ

ಶಂಘಾಯಿ:—ಪ್ಲೇಗುರೋಗವು ತಲೆದೋರಿಯದೆ. ಕಾಲೇರಾ, ಮಲೇರಿಯಾಗಳು ಮೊದಲೇ ನೆಲೆನಿಂತಿವೆ.

ಪೆಲೆಸ್ಟೀನ:—ಒಂದೂರಿಂದ ಮತ್ತೊಂದೂರಿಗೆ ಪ್ರಯಾಣ ಮಾಡುವಾಗ, ಹೂತಿಟ್ಟ ಸಿಡಿಗುಂಡು ತಗಲಿ ಇಬ್ಬರು ಬ್ರಿಟಿಷರು ಸತ್ತರು. ಟಪ್ಪಾಲು ಒಯ್ಯುವ ಪೆಟಿಯನ್ನು ಹೊಡೆದು 2000 ಪವನಿನ ನೋಟುಗಳನ್ನು ಕದ್ದೊಯ್ಯಲಾಗಿದೆ. ಪೊಲೀಸ್ ಸ್ಟೇಶನಿಂದ ಇಬ್ಬರು ಬ್ರಿಟಿಷರನ್ನು ಹೊಡೆದು, ಕೋವಿಗಳನ್ನು ಕದ್ದು, ಯೆಹೂದಿ ಸಬ್ ಇನ್ಸ್‌ಪೆಕ್ಟರನನ್ನು ಹೆಂಡತಿ ಮಕ್ಕಳ ಸಮೇತ ಕದ್ದೊಯ್ಯಲಾಗಿದೆ.

ಬ್ರಿಟನ್ನು:—ಲೋರ್ಡ್ ಹೆಲಿಫೆಕ್ಸರಿಗೂ ಮುಖ್ಯ ಮಂತ್ರಿ ಚೆಂಬರಲೇನರಿಗೂ ಮನೋಮಾಲಿನ್ಯವಿಲ್ಲವೆಂದು ಈಗ ಪ್ರಕಟವಾಗಿದೆ. ಈ ಮಾಲಿನ್ಯ ಯಾವಾಗ ಉಂಟಾಗಿತ್ತೆಂಬುದು ಪ್ರಕಟವಾಗಿದ್ದಿಲ್ಲ. ವಾರಕ್ಕೊಮ್ಮೆ ಇವರು ಭೇಟಿಮಾಡಿಕೊಳ್ಳುತ್ತಾರೆ. ಮುಖ್ಯ ಮಂತ್ರಿಗಳಿಗೆ ಆರೋಗ್ಯವಿಲ್ಲ.

ಬರ್ಮಾ:—ಎಂಗ್ಲೊ ಬರ್ಮನರು, ಚೀನಾ—ಜರ್ಮನರು ಮೊದಲಾದವರಿಗೆ, ಬರ್ಮಾದ ನೆತ್ತರು ದೇಹದಲ್ಲಿದ್ದವರಿಗೆ, ಬ್ರಿಟಿಷ್ ಕಂಪೆನಿಗಳಲ್ಲಿ ಎಷ್ಟು ಕೆಲಸ ಸಿಕ್ಕಿದೆ ಎಂಬುದರ ಅದೊಂದು ಖಾನೆಸುಮಾರಿ ಮುಗಿದಿದೆ. ಮೇಲು ಹುದ್ದೆಗಳಲ್ಲಿ 482 ಬರ್ಮಿಯರು, (ಶುದ್ಧರು 177) 1101 ಯುರೋಪೀಯರೂ, ಈ ಕಂಪೆನಿಗಳಲ್ಲಿರುವರು. ತಿಂಗಳಿಗೆ ರೂ 150ಕ್ಕೆ ಮಿಕ್ಕಿದ ನೋಕರಿಗಳೊಳಗೆ 613 ಬರ್ಮನರು ಇರುವರು. ಇನ್ನೂ ಹೆಚ್ಚಾಗಿ ಇವರನ್ನೇ ನೇಮಿಸುವುದಾಗಿ ಅಲ್ಲಿನ ಮಂತ್ರಿ ಮಂಡಲಕ್ಕೆ ತಿಳಿಸಲಾಗಿದೆ

ಒಸ್ಟ್ರಿಯಾ:—ಬ್ರಿಟಿಷ್ ಪಾಸ್‌ಪೋರ್ಟಗಳ ತನಿಖೆ ಆಫಿಸರು ಕೆಂಡ್ರಿಕ್ ಎಂಬಾತನನ್ನು ಒಸ್ಟ್ರಿಯಾ ಸರಕಾರವು ಕೈದುಮಾಡಿದೆ. ಯಾವಾಗ ಅಗಕ್ಯವೋ ಆಗ ಏಕೆ ಕೈದು ಮಾಡಿದ್ದೆಂದು ವಿವರಿಸುವರಂತೆ. ಅವನು ಒಸ್ಟ್ರಿಯಾದಿಂದ ಜರ್ಮನೀ ಮಾರ್ಗವಾಗಿ ಇಂಗ್ಲೆಂಡಿಗೆ ಹೊರಡಲುದ್ಯುಕ್ತನಾಗಿದ್ದನು

ಚೀನ—ಶಂಘಾಯಿಯಲ್ಲಿ ಯುರೋಪಿಯರ ಮೇಲೆ ಕೈಯೆತ್ತಬಂತೆ ಬೋಧಿಸಿದ ಜಪಾನ್ಯರನ್ನು ಶೋಧಿಸಿ ತೆಗೆದ ಚೀನಿ ಆಫಿಸರನನ್ನು ಅವರು ಆಪಿಸಿಗೆ ಹೋಗುವಾಗಲೆ ಯಾರೋ ಕೊಂದು ಪಲಾಯನ ಮಾಡಿದರು. ಹೇಕೋಬಿನಲ್ಲಿ ಎರಡು ಜಪಾನು ವಿಮಾನಗಳನ್ನು ಉರುಳಿಸಿದರು. ಜುಲೈ 6—ಅಗೋಸ್ತು 6ರೊಳಗೆ 13300 ಜಪಾನಿಯರನ್ನು ಚೀನೀಯರು ಕೊಂದಿಕ್ಕಿ 4600ಕ್ಕೆ ಗಾಯಗೊಳಿಸಿದರಾಗಿಯೂ, ಮೆಂಚೂಕೂವೊದಿಂದ 60000 ಸೈನಿಕರು ಸರಿಹಿಡಿದಿದ್ದಾರಾಗಿಯೂ ವಾರ್ತೆ ಪ್ರಕಟವಾಗಿದೆ

ಲಂಡನ್:—ಪ್ರಸಿದ್ಧ ಸಾಹಿತಿ ವೆಲ್ಸರವರು ಬರೆದ ಪ್ರಪಂಚದ ಇತಿಹಾಸದಲ್ಲಿ ಮಹಮ್ಮದ್ ಪೈಗಂಬರರನ್ನು ದೂಷಣೆ ಮಾಡಿ ... ಆಲಿನ ಮುಸ್ಲಿಮರು ವೆಲ್ಸರಿಂದ ... ವಿರುವರು ...

ಬ್ರಿಟಿಷ್ ಗಾಯಿನಾ:—ಸಕ್ಕರೆ ಕಾರ್ಖಾನೆಗಳಲಿ ಮುಷ್ಕರ ಬಹಳವಾಗಿ, 800 ... ಕಾರ್ಖಾನೆಯೊಂದನ್ನು ... ಪ್ರಯುಕ್ತನಾಗಿರುವರು. ಸರಕಾರವು ಪೊಲೀಸ್ ಹತ್ಯಾರುಗಳಿಂದ ಒಡೋಡಿಸ ... ಮಾಡಿದೆ

ಕೆನಡಾ:—ಪ್ರೆಸಿಡೆಂಟ್ ರೂಸ್‌ವೆಲ್ಟರು ಕೆನಡಾ ಯುನೈಟೆಡ್ ಸ್ಟೇಟ್ಸುಗಳ ನಡುವೆ ... ರುವ ಸ್ಯಾಂಟ್ ಲಾರೆನ್ಸ್ ನದಿಯ ಮೇಲಣ 8½ ಮೈಲು ಉದ್ದವೂ 280 ಅಡಿ ಎತ್ತರವೂ ಇರುವ ಸೇತುವೆಯ ... ಉದ್ಘಾಟನ ಭಾಷಣಮಾಡಿ, ಕೆನಡಾ—ಯುನೈಟೆಡ್ ಸ್ಟೇಟ್ಸುಗಳ ನಡುವೆ ಅಥವಾ ಅತಿಕ್ತ ಬೇರೆ ... ಇಲ್ಲ ... ನೋಡುವಿಯ ... ಇವೆರಡು ರಾಷ್ಟ್ರಗಳೊಳಗೆ ಏಕೀಭಾವ ಮೈತ್ರಿ ...

ಕಿಂಗ್‌ಸ್ಟನ್:—ಕೆನಡಾವನ್ನು ಯಾರೂ ಗಡಿಬಿಡಿ ಒಳನುಗ್ಗ ... ಯುನೈಟೆಡ್ ಸ್ಟೇಟ್ಸ ಸುಮ್ಮನಿರುವುದಿಲ್ಲ, ... ಪ್ರಜಾಸತ್ತೆಗೆ ವಿರುದ್ಧ ವರ್ತನ, ... ಮಾನವ ... ನೋಡಿ ಜನತೆ ... ನಾವೇನೂ ದೂರದ ... ಜಗತ್ತಿನ ... ತಿಗೆ ನಾವು ಅಗತ್ಯವೇ ... ಸಹಾಯಕ್ಕೆ, ನಾವೇ ಬಲವಾದ ಕೋಟೆಯ ಸಂರಕ್ಷಣೆ ... ಪ್ರೆಸಿಡೆಂಟ್ ರೂಸ್‌ವೆಲ್ಟ ಭಾಷಣಮಾಡಿದರು. ಒಂದು ದಿನ ಕೆನಡಾವೂ ಈ ಸ್ಟೇಟ್ಸುಗಳಲ್ಲಿ ಸೇರಬಹುದೆಂಬ ಆಸೆಯಿದೆ

ರೋಮ್:—ವಿಮಾನಗಳು ... ಹತ್ತಿ, 1¼ ... ಸತ್ತ ...

ಜೆರೂಸಲೆಮ್:—ಪುನಃ 6 ಜನ ... ಗಳಲ್ಲಿದ್ದವು ... ಬಸ್ಸಿನ ಮೇಲೆ ಸಿಡಿಗುಂಡು ಚೆಲ್ಲಿದ ಫಲ

ಏಕರ್:—37 ದರೋಡೆಖೋರರನ್ನು ಕೊಲ್ಲಲಾಗಿದೆ. ಇಬ್ಬರು ಬ್ರಿಟಿಷರು ಸತ್ತರು. ... ಬ್ರಿಟಿಷ್ ಸೈನಿಕರಿಗೆ ಗಾಯವಾಗಿದೆ. ... ಯುದ್ಧದಲ್ಲಿ.

ಪಾರಿಸ್:—ಚಿನ್ನವನ್ನು ಇನ್ನು ಖಜಾನೆಯಿಂದ ಪರರಾಷ್ಟ್ರಗಳಿಗೆ ... ದಾಸ್ತಾನಾದ ಚಿನ್ನವೇ ಲೋಕಶಾಂತಿಯ ಭಂಗಕ್ಕೆ ಕಾರಣ ... ಮಂತ್ರಿಗಳ ಭಾಷಣ

ರಂಗೂನ್:—32 ಮರಮುಟ್ಟಿನ ದಾಸ್ತಾನು ಅಂಗಡಿಗಳನ್ನು ಯಾರೋ ... ಹಾಕಿರುವ ಕಾರಣ ಒಂದು ಲಕ್ಷ ರೂಪಾಯಿ. ನಷ್ಟವು ಧನಿಗಳಾದ ಹಿಂದೀಯರಿಗಾಗಿದೆ.

'ಶ್ರಾರ್ನ್‌ಜ್' ಹಡಗು:—ಜನರಲ್ ಪೆಸಿಫುಮರನ್ನು ಕಂಡಾಗ, ಹಿಂದೀ ಸೈನ್ಯದ ಖರ್ಚಿನಲ್ಲಿ ಕಡಿಮೆಮಾಡುವಂತೆ ಸಧ್ಯದಲ್ಲೇ ಬ್ರಿಟಿಷ್ ಮಂತ್ರಿಗಳು ಪ್ರಕಟಿಸುವರೆಂದು ತಿಳಿಸಿದ್ದಾರೆ.
ವಿಮಾನಗಳಿಂದ ಹಾವಳಿಯನ್ನು ತಡೆಯುವುದಕ್ಕೆ ಅರ್ಧ ಮಿಲಿಯ ಸಹಾಯಕರು ದೊರೆತಿದ್ದಾರೆ, ಇನ್ನು ಅರ್ಧ ಮಿಲ್ಲಿಯ ಜನರು ಬೇಕು—ಇಂಗ್ಲಾಂಡಿಗೆ.

ಹಂಗೇರಿ:—ಜರ್ಮನ್ ಸೈನ್ಯಗಳು ಹಂಗೇರಿಯ ಗಡಿಯಲ್ಲೇ ಇವೆ. ಇನ್ನು ಮಾಡುವುದೇನು? ಹಂಗೇರಿಯಿಂದ ಕೆಲ ಪ್ರತಿನಿಧಿಗಳು ಬರ್ಲಿನಿಗೆ ತೆರಳುವರಾಗಿ ತಿಳಿದು ಬಂದಿದೆ. ಇವರಿಗೆ ಮುಸೋಲಿನಿಗೆ ಕೊಟ್ಟಂಥ ಬಹುಮಾನಗಳನ್ನೆ ಕೊಡುವರು. ಹಂಗೇರಿಯೂ/ರೋಮ್—ಬರ್ಲಿನ್ ಸರಕಾರಗಳೊಡನೆ ಸೇರುವಂತೆ ಈ ಭೇಟಿಯ ಮೂಲಕ ಸಾಧಿಸಲಾದೀತು. ಹಂಗೇರಿಯ ಗೋರು ಅವೆರಡು ಸರಕಾರಗಳಿಗೂ ಬೇಕು.

ಝೆಕ್ಕೊಸ್ಲೊವಾಕಿಯ:—ಜರ್ಮನಿಗೂ ಝೆಕ್ಕರಿಗೂ ಒಪ್ಪಂದವಾಗುವ ರೀತಿ ಪರಿಶೀಲನೆಕ್ಕಾಗಿ ತೆರಳುವ ಲೋರ್ಡ್ ರನ್ಸಿಮೆನರು ಜರ್ಮನ್ ಮುಖಂಡರನ್ನು ಕಂಡಿದ್ದಾರೆ. ಈ ಸಂಭಾಷಣೆಯಿಂದ ಮಾತ್ರ ಒಪ್ಪಂದವಾಗುವುದಿದ್ದರೆ ಸಾಧ್ಯವಾದೀತು. ವಿದ್ಯಮಾನಗಳು ಅಷ್ಟು ಕಠಿನವಾಗಿದೆ.

ಬರ್ಲಿನ್:—ಹಿಟ್ಲರನು ಫ್ರೆಂಚ ವಿಮಾನ ಪಥಕದ ನಾಯಕನನ್ನು ಕಂಡನು.

ಆಕೆಯ ತಲೆಯು ಸೀಸದ ತಲೆಯಂತೆ ಭಾರವಾಗಿತ್ತು

ಬಾಲ್ಯದಿಂದ ಶಿರೋವೇದನೆಯಿದ್ದಿತು ದಿನನಿತ್ಯ ಕ್ರುಶನ್ ಸೇವನೆಯಿಂದ ಆಕೆಯ ಆರೋಗ್ಯ ನೆಟ್ಟಗಾಗಿರುವುದು

ಇಪ್ಪತ್ತು ವರ್ಷಗಳ ಸಮಯ ಅತಿ ಕಠಿಣ ತರದ ಶಿರೋವೇದನೆಯನ್ನು ಅನುಭವಿಸಿ, ಕೊನೆಗೆ ಕ್ರುಶನ್ ಲವಣಗಳ ಸೇವನೆಯಿಂದ ಒಳ್ಳೆ ಗುಣಲಾಭವನ್ನು ಹೊಂದಿದ ಈ ಸ್ತ್ರೀಗೆ ಈಗ ಸ್ವರ್ಗ ಕಂಡಂತಾಗಿದೆ. ಈಗ ಆಕೆಯು ನಿತ್ಯವೂ ಕ್ರುಶನ್ ಲವಣವನ್ನು ಸೇವಿಸಲು ಮರೆಯುವುದಿಲ್ಲ. ಆಕೆಯು ಹಿಂದಿನ ಸಂಕಟಾನುಭವಗಳನ್ನು ವಿವರಿಸುವ ಆಕೆಯ ಪತ್ರವು ಇಲ್ಲಿ ಕೊಡಲಾಗಿದೆ

"ಅನೇಕ ವರ್ಷಗಳ ತನಕ ಶಿರೋವೇದನೆಯನ್ನು ಅನುಭವಿಸಿದವಳು ನಾನು. ನನ್ನ ಗಿಣೇ ವಯಸ್ಸಿನಲ್ಲಿ ಪ್ರಾರಂಭವಾದ ಅದು ಮೊನ್ನಿನ ತನಕ ನನ್ನನ್ನು ಪೀಡಿಸುತಿತ್ತು. ಈಗ ನನ್ನ ಪ್ರಾಯವು ಖಂ ... ಎಲ್ಲೆಲ್ಲೂ ಕ್ರುಶನ್ ಲವಣಗಳ ... ಜಾಹೀರು ಆಗುವುದನ್ನು ಕಂಡು, ಅದನ್ನು ಸೇವಿಸಬೇಕಾಗಿ ಅಪೇಕ್ಷಿಸಿ ಒಂದು ಬಾಟ್ಲಿಯನ್ನು ಪಡಕೊಂಡೆ. ಬರಿ ಎರಡು ತಿಂಗಳ ಸೇವನೆಯಿಂದ ನನಗೆ ವಿಚಿತ್ರ ತರದ ಫಲವು ದೊರಕಿರುತ್ತದೆ. ನನ್ನಲ್ಲಿರುವ ಶಿರೋವೇದನೆಯು ... ಮಾಯವಾಗಿರುತ್ತದೆ. ಕ್ರುಶನ್ ಔಷಧವು ನಿಜವಾಗಿಯೂ ವಿಚಿತ್ರ ತರದ್ದು." ಮಿ॥ ಇ. ಡಿ.

... ಶಿರೋವೇದನೆಯ ಕಾರಣವೆಂದು ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ. ದೇಹದೊಳಗೆ ಉಂಟಾಗುವ ... ರಕ್ತವು ಹೀರಿಕೊಂಡಿರುವುದರಿಂದಲೆ, ಶಿರೋವೇದನೆಯುಂಟಾಗುವುದು. ಈ ವಿಷ ... ಗಳನ್ನು ತೆಗೆದುಬಿಡಿರಿ. ಅವುಗಳು ಇನ್ನೊಮ್ಮೆ ಉಂಟಾಗದಂತೆ ನೋಡಿಕೊಳ್ಳಿರಿ. ಆಗ್ಗೆ ನೀವು ಸಂಕಟದಿಂದ ಪಾರಾಗುವಿರಿ. ನಿಮ್ಮ ಅಂಗಾಂಗಗಳನ್ನು ಪರಿಶುದ್ಧವಾಗಿಡಲು ಕ್ರುಶನ್ ಲವಣಗಳು ನಿಸರ್ಗದೊಡನೆ ಸಹಾಯಿಸುತ್ತದೆ. ಅದು ನಿಮ್ಮ ದೇಹದೊಳಗಿರುವ ವಿಷ ... ಗಳನ್ನು ಹೊರ

ಡಿಸುತ್ತದೆ. ಅದರಿಂದಲೆ ಕ್ರುಶನ್ ಲವಣಗಳಿಂದ ಶಾಶ್ವತವಾದ ಗುಣವು ದೊರಕುತ್ತದೆ.

ಎಲ್ಲಾ ಸ್ಟೋರುಗಳಲ್ಲೂ ಬಜಾರುಗಳಲ್ಲೂ ಕ್ರುಶನ್ ಲವಣವು ಮಾರಲ್ಪಡುತ್ತದೆ

ಎಂತಹ ಪ್ರಸಂಗ.

ಈ ಪ್ರಸಂಗವು ಕಾಂಗ್ರೆಸಿನವರಿಗೆ ತುಬಾ ತೊಂದರೆಯನ್ನು ಕೊಡಬಹುದಾಗಿದ್ದರೆ ಇದರ ಪ್ರತಿಕ್ರಿಯೆಯು. ಕೊಮ್ಯೂನಿಷ್ಟ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿದ. ಜಿನ್ನಾ ಭೋಸರ ಸತ್ಯನ್ನದಹಾಳು ಪ್ರಕಟನೆಯು ಈಗಾಗಲೇ ಲೀಗಿನ ಒಡ್ಡವನ್ನ ಹೊರಗೆಡವಿರುವುದು.

ಈ ಬಿಲ್ಲು ಎಸೆಂಬ್ಲಿಯಿಂದ ಹೊರಬೀಳುವ ವೈಸರಾಯರು ಅದನ್ನು ಸ್ವೀಕರಿಸುವರೆ, ಹಾಗೆ ಮಾಡಲು ಲೀಗಿನವರೇ ಕಾರಣವೆಂಬುದೊಂದು ಕಳಂಕವಲ್ಲದೆ ಇದರಿಂದ ಲೀಗಿಗೆ ಬೇರೆ ಯಾವ ಪ್ರಯೋಜನವು ಆಗುವಂತಿಲ್ಲ. ಕಾಂಗ್ರೆಸನ್ನು ಕೊಂದರೆಗೀಡುಮಾಡಬೇಕೆಂದು ಬಗೆದು ಲೀಗಿನವರು ಮಾನಗೇಡಿ ಕೈಯನ್ನು ಕೊಳ್ಳುತ್ತಿರುವರು. ಕಾಂಗ್ರೆಸ್ ಜಾತೀಯ ಸಂಸ್ಥೆ, ಲೀಗು ಸ್ವದೇಶೀಯ ಸಂಸ್ಥೆಯೆಂಬ ಜಿನ್ನರ ಮಾತಿಗೆ ಇದು ಇನ್ನೊಂದು ನಿದರ್ಶನವಲ್ಲವೆ?

ಮಧ್ಯ ಯುರೋಪ್ಯದಲ್ಲಿ . . . . ಜರ್ಮನಿಯ ಗುರಿಗಳು

ಜೆಕೊಸ್ಲೊವೆಕಿಯಾವು ಒಂದೆ ಅಡ್ಡಿ.

ಜರ್ಮನ್ ಪ್ರಭಾವಕ್ಕೆ ಅಥವಾ ಪ್ರೇರಣೆಗೆ ಜೆಕ್ಸರು ಒಂದು ಅಡ್ಡಿಯಾಗಿರುವುದು, ಒಂದು ಸಾಂಪ್ರದಾಯವಾಗಿರುತ್ತದೆ. ಈ ಒಂದು ಅಡ್ಡಿಯನ್ನು ನಾಶಮಾಡಬೇಕೆಂಬುದೇ ಹಿಟ್ಲರನ ಮುಖ್ಯ ಉದ್ದೇಶ. ಅದೊಂದು ಅಡ್ಡಿಯು ನಿವಾರಣೆಯಾದರೆ-ಆಗ ಮಧ್ಯ ಮತ್ತು ಪೂರ್ವ ಯುರೋಪ್ಯದಲ್ಲಿ ಜರ್ಮನಿಯು ಅತ್ಯಂತ ಪ್ರಾಮುಖ್ಯ ಸ್ಥಾನವನ್ನು ಹೊಂದುವುದು.

ಯುರೋಪ್ಯದಲ್ಲಿ ವಿಸ್ತಾರವಾದ ನಾಜಿ ಸಾಮ್ರಾಜ್ಯವನ್ನು ಸ್ಥಾಪಿಸುವುದು ಜರ್ಮನಿಯು ಉದ್ದೇಶವೆಂದು ಹೇಳಬರುವುದಿಲ್ಲ. ಆದರೆ ಜರ್ಮನ್ ವರ್ಗದವರೆಲ್ಲರೂ ಒಟ್ಟಾಗಿ ಇರಬೇಕೆಂಬುದೇ ಹಿಟ್ಲರನ ಧ್ಯೇಯ. ಈ ಧ್ಯೇಯ ಸಾಧನೆಗಾಗಿ ಆತನು ಇನ್ನೊಂದು ಮಹಾಯುದ್ಧದಲ್ಲಿ ಕೈಹಾಕಲು ಹಿಂಜರಿಯನು.

ಆಂಗ್ಲೋ-ಜರ್ಮನ್ ಯುದ್ಧ ಉಂಟಾಗುವುದೆ?

ಪೂರ್ವ ಯುರೋಪ್ಯದಲ್ಲಿ ಅಧಿನಾಯಕ ಸ್ಥಾನವನ್ನು ಪಡೆಯುವುದು ಈಗಿನ ಜರ್ಮನ್ ಸರಕಾರದ ಮುಖ್ಯ ಗುರಿಯಾಗಿರುತ್ತದೆ.

ಜೆಕೊಸ್ಲೊವೆಕಿಯಾಕ್ಕೂ, ಜರ್ಮನಿಗೂ, ಜೆಕೊಸ್ಲೊವೆಕಿಯಾದಲ್ಲಿರುವ ಜರ್ಮನ್ ಅಲ್ಪಸಂಖ್ಯಾಕರ ಕುರಿತು ಉಂಟಾದ ಕಲಹ ನಿವಾರಣೆಯನ್ನು ಮಾಡಿ ಜೆಕ್‌ರಿಗೂ ಜರ್ಮನರಿಗೂ ಒಳ್ಳೆಯ ಮನಸ್ಸು ಉಂಟಾಗುವಂತೆ ಸಾಧಿಸುವುದು ಬ್ರಿಟನಿನ ಸದ್ಯದ ಗುರಿಯಾಗಿರಬಹುದು. ಆದರೆ, ಜರ್ಮನ್ ಮೈತ್ರಿಯಾಗಬೇಕಾದರೆ, ಜೆಕೊಸ್ಲೊವೆಕಿಯಾವು ತಾನು ರಷ್ಯಾದೊಡನೆ ಮಾಡಿಕೊಂಡ ಎಲ್ಲಾ ಒಪ್ಪಂದ, ಸಂಬಂಧಗಳನ್ನು ಕಳಚಿಬಿಡಬೇಕಾಗುವುದು. ಜೆಕೊಸ್ಲೊವೆಕಿಯು ಸುಡಾಟನ್ ಜರ್ಮನರಿಗೆ ಹೆಚ್ಚಿನ ಪ್ರೇರಣೆ ನಡೆಯಿಸುವರೆ ಅವರು ಅಸ್ಪದಮಾಡಿ ಕೊಡಬೇಕಾಗುವುದು.

ಈ ರೀತಿ ಜರ್ಮನರಿಗೆ ತಾವೊಂದು ಅಡ್ಡಿಯಾಗಿರುವುದನ್ನು ಅವರು ನಿವಾರಿಸಬೇಕಾಗುವುದು. ಈ ಅಡ್ಡಿಯು ಹಾಗೆನೆ ಇದ್ದುಬಿಟ್ಟರೆ, ಜರ್ಮನಿಯು ಅದರ ನಿವಾರಣೆಗಾಗಿ ಯುದ್ಧಮಾಡದೆ ಇರದು.

ಮೇಲಿನದು ಜರ್ಮನ್ ಫ್ಯೂಹರ್ ವ್ಯವಹಾರದ ಧೋರಣೆಯ ಮರ್ಮವಾಗಿರುವುದು. ಇದು ಜರ್ಮನಿಯ ಧೋರಣೆಯಾದರೆ, ಆಗ ಜರ್ಮನಿಗೂ, ಬ್ರಿಟನ್ ಯಾ ಪಶ್ಚಿಮದ ಇತರ ಯಾವತ್ತು ರಾಷ್ಟ್ರಗಳಿಗೂ ತಿಕ್ಕಾಟ ಉಂಟಾಗದು. ಈ ಜಗತ್ತಿನಲ್ಲಿ ತನಗೊಂದು ಪ್ರಾಮುಖ್ಯ ಸ್ಥಾನವನ್ನು ಒದಗಿಸಿಕೊಳ್ಳುವರೆ, ಬ್ರಿಟಿಷ್ ಸಾಮ್ರಾಜ್ಯವನ್ನು ಬಡಿಯುವ ಉದ್ದೇಶವು ಜರ್ಮನಿಯಲ್ಲಿ ಇಷ್ಟರ ತನಕ ಕಾಣಿಸಿಕೊಳ್ಳಲಿಲ್ಲ.

ಜೆಕೊಸ್ಲೊವಾಕಿಯಾದಲ್ಲಿ ತನ್ನ ಉದ್ದೇಶ ಸಾಧನಾ ಕಾರ್ಯಗಳು ಯಶಸ್ವಿಯಾಗಿ ನಡೆದುಬಿಟ್ಟ ದಿವಸ, ಯುರೋಪ್ಯದ ಇತರ ರಾಷ್ಟ್ರಗಳೊಡನೆ ಜರ್ಮನಿಯ ಕೋರಿಕೆಗಳೆಲ್ಲಾ ಪೂರೈಸಲಾಗುವವು. ತದನಂತರ ಅದು ಯುದ್ಧಶಸ್ತ್ರ ತಯಾರಿ, ವ್ಯಾಪಾರ ವಾಣಿಜ್ಯ ಇತ್ಯಾದಿಗಳ ಕುರಿತು ಬ್ರಿಟನಿನೊಡನೆ ಒಪ್ಪಂಧ ಮಾಡಿಕೊಳ್ಳಲು ಸಾಧಿಸುವುದು.

ನಾಜಿಗಳಿಗೆ ಮಹತ್ವ ಬೇಕಾಗಿದೆ

ತನ್ನ ಧ್ಯೇಯ ಸಾಧನೆಯನ್ನು ಯುದ್ಧೋಪಾಯ ರೀತಿಯಿಂದ ಸಾಧಿಸುವುದು ಹಿಟ್ಲರನ ಮತವಲ್ಲ. ಕಾರಣ ಯುದ್ಧವು ಇತರ ಜನಾಂಗಗಳಿಗೆ ಎಷ್ಟು ಅಸಂಯುಕರವೆನಿಸಿದೆ ಅದರಕ್ಕಿಂತ ಹೆಚ್ಚಿಗಿನ ರೀತಿಯಲ್ಲಿ ಜರ್ಮನರು ಯುದ್ಧದ ಕಡು ವಿರೋಧಿಗಳಾಗಿರುವರು.

ನಾಜಿಗಳಿಗೆ ಬೇಕಾದುದು, ಮಧ್ಯ ಮತ್ತು ಪೂರ್ವ ಯುರೋಪ್ಯದಲ್ಲಿ ಮಹತ್ವದ ಸ್ಥಾನ. ಇನ್ನೊಂದು ಯುದ್ಧವು, ಅವರ ಈ ಧ್ಯೇಯಸಾಧನೆಗೆ ಒಂದು ಮಹಾ ಅಡ್ಡಿಯಾಗದೆ ಇರದು.

ಎಚ್. ಪಾವೆಲ್ ಕ್ರಿಸ್‌ವೆಲ್ (ಲಂಡನ್) ಬುಲೆಟಿನ್

ಅಮೇರಿಕಾಕ್ಕೆ ಯುರೋಪ್ಯದ ಗಣ್ಯವೇ ಇಲ್ಲ.

ಯುರೋಪ್ಯ ಖಂಡದ ರಾಜಕೀಯ ಪರಿಸ್ಥಿತಿಯಲ್ಲಿ ಎರಡು ಅಮೇರಿಕಾ ಖಂಡಗಳ ಧೋರಣೆ ಯಾವುದು? ಯುರೋಪ್ಯದ ಗೋಜಿಯೇ ಅವಕ್ಕೆ ಬೇಡವಾಗಿದೆ. ತಾವೇಕೆ ಯುರೋಪ್ಯದ ಕಲಹದಲ್ಲಿ ಭಾಗವಹಿಸಬೇಕು? ಸ್ವಾತಂತ್ರರಾಗಿಯೆ ತಮ್ಮ ಕಾರ್ಯಸಾಧನೆಗಳನ್ನು ಮಾಡಿಬಿಡುವುದು ಅಮೇರಿಕಾ ಖಂಡಗಳ ಸದ್ಯದ ವರ್ತನೆಯಾಗಿರುತ್ತದೆ. ಯುರೋಪ್ಯದಲ್ಲಿ ಮಹಾಯುದ್ಧವು ತಲೆದೋರಲಿ, ಆಗ ನಾವು ಇನ್ನಷ್ಟು ಲಾಭ ಮಾಡಿಕೊಳ್ಳಬಹುದು ಎಂಬುದು ಅಮೇರಿಕಾದವರ ಅಭಿಪ್ರಾಯವಾಗಿರುತ್ತದೆ.

ಈ ದೃಷ್ಟಿಯಿಂದ ಉತ್ತರ ಮತ್ತು ದಕ್ಷಿಣ ಅಮೇರಿಕಾ ಖಂಡಗಳೊಳಗೆ ಪರಸ್ಪರ ಹಿತಸಾಧನಯುಕ್ತವಾದ ಒಪ್ಪಂದ ಕರಾರುಗಳಾಗಿವೆ. ವ್ಯಾಪಾರ ವಾಣಿಜ್ಯದ ಒಂದು ಕರಾರಾಗಿ, ದಕ್ಷಿಣ ಅಮೇರಿಕಾದ ವ್ಯಾಪಾರವೆಲ್ಲಾ ಸಂಯುಕ್ತ ಅಮೇರಿಕಾದ ರಾಷ್ಟ್ರಗಳಿಗೆ ಸೇರುವಂತಾಗಿದೆ. ಸಂಯುಕ್ತ ಅಮೇರಿಕಾದಿಂದ ದಕ್ಷಿಣ ಅಮೇರಿಕಾಕ್ಕೆ ಬೇಕಾದ ಹಣವನ್ನು ಸಾಲರೂಪದಲ್ಲಿ ಒದಗಿಸಲು ಮಹಾ ವ್ಯವಸ್ಥೆಗಳಾಗಿವೆ.



ದಮ್ಮು ಪೂರ್ಣ ಗುಣವಾಗುವ ಉಪಾಯವನ್ನೇ ಕೈಕೊಳ್ಳಬೇಕು.

ಕೆಮ್ಮು ಮತ್ತು ಕಫದ ಕಾರವಿದ್ದವರು ಎಫಿಡಿನ್ ಮುಂತಾದ ತಾತ್ಕಾಲಿಕ ಶಮನಗೊಳಿಸುವ ಔಷಧಗಳನ್ನು ಎಂದೂ ಉಪಯೋಗಿಸಬಾರದು. ಈ ಔಷಧಗಳು ರೋಗವನ್ನು ಪೂರ್ಣ ಗುಣಪಡಿಸಲು ನಿರುಪಯೋಗಿ. ಎಂದಲ್ಲದೆ ನಿಶ್ಶಕ್ತಿ ಮತ್ತು ಇಂಥ ಔಷಧಗಳು ಶ್ವಾಸನಳಿಕೆಯಲ್ಲಿ ಹೆಚ್ಚಿಗೆ ನೋವು ಉಂಟುಮಾಡಿ ರೋಗವನ್ನು ಶಾಶ್ವತಮಾಡುತ್ತವೆ.

ರೋಗ ಲಕ್ಷಣವನ್ನು ಪೂರ್ಣ ವಿಚಾರಮಾಡಿ, ರೋಗಿಗೆ ಬೇಗನೆ ಮತ್ತು ಸಾವಧಾನವಾಗಿ ಪೂರ್ಣ ಗುಣಮಾಡುವ ಔಷಧವೇ ನಿಜವಾದ ಉಪಾಯವು ಮತ್ತು ಇದೇ ದೃಷ್ಟಿಯಿಂದ ಡಾ. ಪುರೋಹಿತ ಇವರ

‘ಶ್ವಾಸಹಾರಿ ಪ್ಲೇನ’

ಮತ್ತು

‘ಶ್ವಾಸಹಾರಿ ಕಾಂಪೌಂಡ’

ಈ ಎರಡೂ ಔಷಧಗಳು ದಮ್ಮು ವಿಕಾರವನ್ನು ಪೂರ್ಣ ಗುಣಪಡಿಸುವ ದಿವ್ಯೌಷಧಿಯಲ್ಲಿ ಅಗ್ರೇಸರವೆನಿಸಿವೆ. ದಮ್ಮು, ಶ್ವಾಸ, ದಂಬಾನೆಯ ಲಸಿಕೆ, ಗಂಟಲು ಕೆರೆಯುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲ ರೋಗ ಗುಣಪಡಿಸಲು “ಶ್ವಾಸಹಾರಿ ಪ್ಲೇನ” ಉಪಯೋಗಿಸಬೇಕು. ಅಮ್ಲಪಿತ್ತವಿದ್ದವರು “ಶ್ವಾಸಹಾರಿ ಕಂಪೌಂಡ” (ಕೆಂಪು ಪ್ಯಾಕಿಂಗ) ಉಪಯೋಗಿಸುವದು ಹೆಚ್ಚು ಲಾಭಕರವು.

ಬಹುಕರವಾಗಿ ಎಲ್ಲ ಶಹರಗಳಲ್ಲಿ ಕೆಮಿಸ್ಟಸ್ಟೋರ್ಸ ಮತ್ತು ಅಂಗಡಿಗಳಲ್ಲಿ ಈ ಔಷಧಗಳು ರೂ. ೩, ೧-೮-೦ ಮತ್ತು ೫ ಹೀಗೆ ಬೇರೆ ಬೇರೆ ಬೆಲೆಯ ೩ ಬಾಟ್ಲು ಸೈಜದಲ್ಲಿ ಸಿಗುತ್ತವೆ.

ಮುಂಬಾಯಿ ಏಜಂಟ:-

ಮೆಸರ್ಸ ಓರಿಯಂಟಲ್ ಮೆಡಿಕಲ್ ಸ್ಟೋರ್ಸ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ
ಮೆಸರ್ಸ ವನಮಾಳಿ ಭಿಕಾ ಆಂಡ ಕೋ.

ಚೀನಾ ಯುದ್ಧದ ಒಂದು ವರುಷ

ಹೊರಗಿಂದ ನೋಡುವಾಗ ಜಪಾನು ವಿಜಯಿಯಾದುದಾಗಿ ಕಾಣಿಸುತ್ತದೆ. ಜಪಾನು ಒಗ್ಗಿಸುದಕ್ಕಿಂತ ಹೆಚ್ಚಿನ ಮಟ್ಟಿಗೆ ಅದು ಚೀನಾವನ್ನು ಉಪಕ್ರಮಿಸಿಬಿಟ್ಟಿದೆ. ಆದರೆ ಒಂದು—ಜಪಾನು ವಿಜಯಿ ನಿಜವಾದರೂ, ವಿಜಯ ಯಾತ್ರೆಯನ್ನು ನಡೆಯಿಸಲು, ವಿಜಯಿ ಜನಾಂಗದಂತೆ ಶರ್ತಗಳನ್ನು ಹೇಳಲು ಅದಕ್ಕೆ ಮಾತ್ರ ಸಾಧ್ಯವಿಲ್ಲ.

ಚೀನಾದಲ್ಲಿನ ವ್ಯಾಪಾರ ಇತ್ಯಾದಿಗಳನ್ನು ಬೆಳೆಯಿಸುವುದು ಒಂದೆಡೆ, ಅದರ ಮೇಲೆ ತನ್ನ ಹಿತಕ್ಕಾಗಿ ಸಫಲಕರಣೆ ನಡೆಯಿಸುವುದು ಇನ್ನೊಂದೆಡೆ, ಹೀಗೆ ಉದ್ದೇಶ ದ್ವಯಗಳುಳ್ಳ ಮಹಾಯೋಜನೆಗಳನ್ನು ಜಪಾನು ಮಾಡಿಕೊಂಡಿದೆ. ಆದರೆ ಈಗ ಪ್ರಕೃತಕ್ಕೆ ಸಂಗ್ರಾಮದಲ್ಲಿ ತೊಡಗಬೇಕಾಗಿ ಬಂದ ಅದಕ್ಕೆ ಈ ಉದ್ದೇಶಸಾಧನೆಗಾಗಿ ಏನೂ ಮಾಡಲು ಅಸಾಧ್ಯವೆನಿಸಿದೆ. ಜಪಾನಿನೊಡನೆ ಇರುವ ಹಣವೆಲ್ಲಾ ಈಗ ಸಂಗ್ರಾಮ ಕಾರ್ಯಗಳಲ್ಲಿ ವಿನಿಯೋಗವಾಗುತ್ತಿದೆ.

ಚೀನಾದಲ್ಲಿ ವಶೀಕರಿಸಿದ ಸ್ಥಳಗಳಲ್ಲಿ ಜಪಾನು ರಾಜ್ಯಾಡಳಿತ ನಡೆಯಿಸುತ್ತಿದೆ [illegible] ಮೊದಲಾದ ವರ್ತಮಾನ ಪತ್ರಿಕೆಗಳಲ್ಲಿ ಬಂದ ವಾರ್ತೆಗಳು [illegible] ಸ್ಥಿತಿಯು ಬೇರೆಯೇ ಇರುವುದು.

ನಿಶಕ್ತವಾದ ಸೈನ್ಯವರ್ಗ

ಜಪಾನಿಗೆ ವ್ಯಕ್ತ [illegible] ಇನ್ನೊಂದ [illegible] ಚೀನಾದಲ್ಲಿ ಅದಕ್ಕೆ [illegible] ಸೈನ್ಯ [illegible] ಅದು [illegible] ಹೆಚ್ಚಿಸ [illegible] 30 000 [illegible] ಕಾರಣ [illegible] ಸಂಗ್ರಾಮ [illegible] ಯುದ್ಧದಲ್ಲಿ ನಡೆದ [illegible] 20000 [illegible] ಪ್ರಕಟವಾಗಿತ್ತು [illegible] ಕದನಗಳ ನಡೆವ [illegible] ರಣರಂಗದಲ್ಲಿ ಮಡಿದ ಜಪಾನೀಯ ಸೈನ್ಯ

ಜಪಾನಿನ ಜಯ ಕಾಗದದಲ್ಲಿ ಮಾತ್ರ

ಯು ಒಂದು ಲಕ್ಷ ಗಾಯ ಇತ್ಯಾದಿ ವಿಶೇಷ ಜಖಂ ಹೊಂದಿದವರ ಸಂಖ್ಯೆಯು 2¼ ಲಕ್ಷ.

ಈಗ್ಯ ಸಾಧಾರಣ 5 ಲಕ್ಷ ಜಪಾನೀಯ ಸೈನಿಕರು ಚೀನಾ ರಣರಂಗದಲ್ಲಿರುವರು. ಸಾಧಾರಣ 4¼ ಲಕ್ಷ ಸೈನಿಕರಿರುವ ದಂಡೊಂದು ರಷ್ಯನಂಗೆ ವಿರೋಧವಾಗಿ ಮಂಚೂಕ್ಯೂ ಪ್ರದೇಶದಲ್ಲಿರುವುದು. ಅಂದರೆ ಸಾಧಾರಣ 1¼ ಮಿಲ್ಲಿಯ ಸೈನಿಕರಿರುವ ಇದು ಜಪಾನಿನ ಸಂಪೂರ್ಣ ಸೈನ್ಯ ಬಲದ ಅಧಿಕಾಂಶವು ಈಗ ರಣರಂಗಕ್ಕೆ ಇಳಿದಿರುತ್ತದೆ.

ಸಾಂಪತ್ತಿಕ ತೊಂದರೆಗಳು

ಜಪಾನಿಗೆ ಈ ಯುದ್ಧವು ಇನ್ನು ಆರು ತಿಂಗಳು ಅಥವಾ ಒಂದು ವರ್ಷಕಾಲ ನಡೆಯಿಸಬೇಕಾದರೆ ತನ್ನನ್ನು ಬಹಿಷ್ಕರಿಸಿ ಇತರ ಜಗತ್ತನ್ನೂ, ಸೋತ ಸೈನ್ಯ ವರ್ಗಗಳನ್ನೂ ಅದು ಇದಿರು ನೋಡಬೇಕಾಗುತ್ತದೆ.

ಜಪಾನಿನ ಸಾಂಪತ್ತಿಕ ಸ್ಥಿತಿಯು ಬಹಳ ವಾಗಿ ಕೆಟ್ಟಿರುತ್ತದೆ.

ಇತ್ತೀಚೆಗೆ ಜಪಾನಿನಲ್ಲಿ ಹೊರಟ [illegible] ಫಗಳನ್ನು ನೋಡಿದರೆ ಅಲ್ಲಿ ಒಡವೆಗಳ [illegible] ವವು [illegible] ಖಚಿತ ಮಾಡಿ [illegible] ಹಣವನ್ನು [illegible] ಸರ್ಕಾರದ [illegible] ಹೊರಡಿಸುತ್ತದೆ [illegible]

ಜೆಕಸ್ಲೊವಕಿಯಾ ಪ್ರಕರಣದಲ್ಲಿ ಬ್ರಿಟಿಷರು

[illegible] ಚೀನಾ ಸಮಸ್ಯೆಯಲ್ಲಿ [illegible] ಬ್ರಿಟಿಷ [illegible] ಪ್ರಸ್ತಾವ [illegible] ಜೆಕೊಸ್ಲೊವೇಕಿಯಾ [illegible] ಹೊರಬೀಳುವುದುಂಟಾದರೆ [illegible] ಬೇಕಾಗುವುದಂತೆ.

ಹಿಟ್ಲರ್ [illegible] ಬೇಕಾಗುವುದೋ ?

NOTICE

In the Court of the District Munsiff of Kasaragod

O P No 111/1938

1 K Ramayya Shenoy son of Ganapathi Shenoy 2 K. Vittal Shenoy son of 1st Petitioner, both are residing at Kasaragod Kasaba
—**Petitioners**

Please take notice that the Petitioners have applied for the grant of a Succession Certificate in the name of the 2nd Petitioner to Collect the outstanding due to the deceased Padmanabha Shenoy and that the said Petition is posted to 2[illegible]—8—1938

Kasaragod 18—8—38 **K. ANANTHA RAO** Advocate for Petitioners

ನೋಟೀಸು

ಕಾಸ್ರಗೋಡು ಡಿ. ಮುನ್ಸಿ ಕೋರ್ಟಿನಲ್ಲಿ

O S No 110/1938

[illegible]

ಇವರೊಳಗೆ

ಅರ್ಜಿದಾರರು [illegible] 1100[illegible] ಕೊಡಬೇಕಾದ [illegible] 300 [illegible] 360 [illegible] 29 [illegible]

Kasaragod [illegible] **C M KunhambuNair,** Vakil for Petitioner

ಹೊಟ್ಟೆನೋವಿನಿಂದ ನರಳುವವರು 'ಎಲುಬಿನ ಒಂದು ಅಸ್ಥಿಪಂಜರ'

ನಿಮ್ಮನ್ನು 'ಕೃಶಾಂಗರಾಗಿ' ಮಾಡಲಿಕ್ಕೆ ಜಠರ ಬಾಧೆಗಿಂತ ಭಯಂಕರವಾದುದು ಯಾವುದೂ ಇಲ್ಲ. ಉದಾಹರಣೆಯಾಗಿ ಮಿಸೆಸ್. ಎಲ್ ಎಚ್ ಎಂಬವರು ಬಹಳ ಕೃಶರಾದರು ಮತ್ತು ತೀವ್ರ ಯಾತನೆಯಿಂದ ನರಳಿದರು.

ಅವರು ಹೀಗೆ ಬರೆಯುತ್ತಾರೆ:—

ಶಿಖಿಯ ವಾತಾವರಣದಲ್ಲಿ ಕೆಲಸ ಮಾಡಿದ್ದರಿಂದ ನನಗೆ ಅಜೀರ್ಣವೂ ಜಠರ ವೇದನೆಯೂ ಉಂಟಾಗಿ ಅನೇಕ ಮದ್ದುಗಳನ್ನು ಉಪಯೋಗಿಸಿದೆನು. ಆದರೆ ಒಂದೂ ಫಲದಾಯಕವಾಗಲಿಲ್ಲ. ಹೊಟ್ಟೆನೋವು—ಎಷ್ಟು ನಿಕೃಷ್ಟವಾಯಿತೆಂದು ಒಂದು ಗುಟುಕು ಬಿಸಿನೀರನ್ನು ಸೇವಿಸಿದರೂ ವಾಂತಿಯಾಗುತಿತ್ತು. ನಾನು ಕೇವಲ ಒಂದ ಅಸ್ಥಿಪಂಜರದಂತಾದೆನು. ಹೊಟ್ಟೆನೋವು ಕಠಿಣವಾಗಿತ್ತು. ಕಡೆಯ ಒಂದೇ ಉಪಾಯವೆಂದು ನಾನು ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಾಕ್ ಪೌಡರನ್ನು ತೆಗೆದುಕೊಳ್ಳಲು ಯೋಚಿಸಿದೆನು. ಕೇವಲ ಒಂದಾವರ್ತಿ ಸೇವಿಸಿದುದರಿಂದಲೇ ನನಗೆ ಗುಣವು ಕಂಡಿತು, ವೇದನೆಯು ನಿಂತಿತು. ಕೂಡಲೇ ನಾನು ಆಹಾರವನ್ನು ತೆಗೆದುಕೊಳ್ಳಲುಪಕ್ರಮಿಸಿದೆನು. ಈಗ ನಾನು ಏನನ್ನೂ ಬೇಕಾದರೂ ಜಠರ ಬಾಧೆ ಇಲ್ಲದೆ ಸೇವಿಸುತ್ತಿದ್ದೇನೆ.

ಸ್ವಪ್ನದಲ್ಲೆಂದು ಕಂಡ [illegible] ವರೂ ನಿಮ್ಮ ಜಠರ ವೇದನೆಯ [illegible] ನಿವಾರಿಸಲಿ. ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಾಕ್ ಪೌಡರನ್ನು ಉಪಯೋಗಿಸಿ. ಎಲ್ಲಾ ಕಡೆಗಳಲ್ಲಿ [illegible] ಭಯಂಕರವಾದ ಹೊಟ್ಟೆನೋವಿದ್ದವರಿಗೆ ಸುಖವನ್ನು ತಂದುಕೊಟ್ಟ ಔಷಧವಿದು. ಆದರೆ ಗುಣಪಡಿಸುವ ನಿಜವಾದ ಮೆಕ್ಲೀನ್ ಬ್ರಾಂಡನ್ನೇ ತೆಗೆದುಕೊಳ್ಳಿರಿ. [illegible] ಎಲೆಕ್ಸ್ ಸಿ ಮೆಕ್ಲೀನ್ಸ್

Alex C Maclean

[illegible] ಬಾಟ್ಲಿಯ ಮೇಲೂ [illegible] ಇರುವುದು [illegible] ಪೆಟ್ಟಿಗೆಯಲ್ಲಿ [illegible] ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.



84

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಸೀಲು ಮತ್ತು "ಗೊನೊಕಿಲರ್" ಇರುವುದು ಎಂಬುದನ್ನು ನೋಡಿರಿ.

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೋ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೊನೊಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವು, [illegible] ಸರ್ವ ಪ್ರಕಾರದ ಪ್ರಮೇಹ(ವಿಪ್ಪೆಚರಕು [illegible]), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮುಂತಾದ [illegible] ಸ್ವಾಭಾವಿಕವಾಗಿ ಕುಣಿಯುವುದು ಇದೇ ಮೊದಲಾದ ಯಾವತ್ತು ಗೊನೋರಿಯಾಸಂಬಂಧವಾದ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ಶಿ0 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3—0—0 (ಮೂರು) ವಿ ಪಿ. ಖರ್ಚು [illegible] ಆಣೆ ಹೆಚ್ಚು.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer, **Dr. D. N JASANI,** Vithalbhai Patel Road, BOMBAY 4

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ

S. U. N. & Co.,

Silk Merchants,

Chaukhambha BENARES CITY

ಈಗಿನ ಕಾಶಿ(ಕಾಶಿ) ದೇಶಿ ಸೀರೆ ತರುಗಿ ಬೇಕಾದರೆ ನಮ್ಮನ್ನು ಮರೆಯಬೇಡಿ. ಈಗ ಕಡಿಮೆ ಕ್ರಯಕ್ಕೆ ಸಿಗುವ ಮಾಲು: 18 ಮೊಳದ 2¼ ಅಗಲದ ಸಣ್ಣ ಬುಟ್ಟ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18ಮೊಳ ಸಣ್ಣ ಸೀರೆಗಳು ರೂ 35ರಿಂದ ರೂ 55. ಸಾದಾ ಸೀರೆ 18 ಮೊಳ ರೂ 32ರಿಂದ ರೂ 65. ಉದ್ದ ಮೊಳ 16, ಅಗಲ 2¼ ರೂ 3[illegible]ರಿಂದ 35ರ ವರೆಗೆ. ಬೇರೆ ಮಾಲುಗಳ [illegible] ಉತ್ತಮವಾಗಿ ಕಳುಹಿಸಲಾದೀತು.

ವಿಳಾಸ —

ಶಿರೋಮಣಿ ನಾರಾಯಣಾಚಾರ್ಯ [illegible]

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ
ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

ಮಂಗಳೂರಿನ ಪೇಟೆ ಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಬೆಳ್ತಿಗೆ ಗುಡ್ಡೆ ಮು.	1 — 14	1 — 14
ರಾಶಿ ಅಕ್ಕಿ ...	3 — 8	4 — 0
ಸುಗ್ಗಿ ...	4 — 0	4 — 8
ಗುಡ್ಡು ...	4 — 10	4 — 10
ಊರ ಅವ್ವಲ್ ಬೆಳ್ತಿಗೆ ...	4 — 7	4 — 7
ರಂಗೂನು ಬೆ. ಗೋ. ಗಳ್ಳೆ ...	7 — 2	7 — 4
ಎಲ್ಲೂರು ಬೆ. ಮು. ಗಳ್ಳೆ ...	3 — 14	4 — 0
ಗೋದಿ ಗೋಣಿ ಗಳ್ಳೆ ...	13 — 0	14 — 8
ತೊಗರಿ ಗೋಣಿ ಗಳ್ಳೆ ...	11 — 8	18 — 8
ಹುರುಳಿ ಗೋಣಿ ಗಳ್ಳೆ ...	6 — 0	6 — 2
ಕಡಲೆ ಗೋಣಿ ಗಳ್ಳೆ ...	9 — 8	10 — 8
ತೊಗರಿಬೇಳೆ ಗೋಣಿ ಗಳ್ಳೆ ...	17 — 8	18 — 0
ಉದ್ದು ಗೋಣಿ ಗಳ್ಳೆ ...	9 — 0	9 — 8
ಹೆಸರು ಗೋಣಿ ಗಳ್ಳೆ ...	9 — 12	10 — 8
ಊರುಬೆಲ್ಲ ಖಂಡಿ ಗಳ್ಳೆ ...	36 — 0	40 — 0
ಉಪ್ಪು ಗೋಣಿ ಗಳ್ಳೆ ...	4 — 8	5 — 4
ಕೊಬ್ರಿ ಖಂಡಿ ಗಳ್ಳೆ ...	46 — 8	46 — 8
ಎಣ್ಣೆಂಡಿ ಖಂಡಿ ಗಳ್ಳೆ ...	25 —	26 — 0
ತೆಂಗಿನ ಎಣ್ಣೆ ಮುಡಿ ಗಳ್ಳೆ ...	3 — 5	3 — 6
ಎಳ್ಳೆಣ್ಣೆ ಮುಡಿ ಗಳ್ಳೆ ...	6 — 0	7 — 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ ...	6 — 5	7 — 5
ಮೋರಿಸ ಸಕ್ಕರೆ ಮು. ಗಳ್ಳೆ ...	2 — 13	2 — 14
ಮೆಣಸು ...	4 — 8	6 — 0
ಸಾಸಿವೆ ಮುಡಿ ಗಳ್ಳೆ ...	5 — 8	6 — 8
ಕಾಳುಮೆಣಸು ಹ ಪೇರ ...	16 — 0	17 — 8
ಯೇಲಕ್ಕಿ ಬೀಜ ಮುಡಿಗಳ್ಳೆ ..	80 — 0	85 — 0
ಜೀರುಬೀಜ ಮು. ಗಳ್ಳೆ ..	3 — 14	3 — 15
ಕಬ್ಬಿಣ ಖಂಡಿ ಗಳ್ಳೆ ...	50 — 0	55 — 0
ತಾಂಬ್ರ ತಗಡು ಮು. ಗಳ್ಳೆ ..	14 — 12	15 — 0
ತಾಂಬ್ರಪಾತ್ರಗಳು ಮು. ಗಳ್ಳೆ	14 — 8	15 — 0
ಜೀನಿಬೆಳ್ಳಿ ಸೇರು ಗಳ್ಳೆ ..	13 — 8	14 — 0
ಹಿತ್ತಾಳೆ ತಗಡು ಮು. ಗಳ್ಳೆ ..	12 — 0	12 — 0
ಪವನು ಗಳ್ಳೆ ..	22 — 8	23 — 0
ಹೊಗೆಸೊಪ್ಪು ಖಂಡಿ ಗಳ್ಳೆ	40 — 0	45 — 8
ನೇಟಿವ್ ಕಾಫಿ ಖಂಡಿ ಗಳ್ಳೆ	140 — 0	148 — 0
ಪ್ಲಾಂಟೇರ ಕಾಫಿ ಖಂಡಿ ಗಳ್ಳೆ	185 — 0	198 — 0
ಮಡಿಕೇರಿ ಏಲಕ್ಕಿ ಮುಡಿ	35 — 0	39 — 0

ಓದದೆ ಬಿಡತಕ್ಕ
ವಿಚಾರಗಳೊಂದೂ ಇಲ್ಲದ

ಸ್ವದೇಶಾಭಿಮಾನಿ

ದಕ್ಷಿಣ ಕನ್ನಡದ ಪ್ರಥಮ
ಸಾಪ್ತಾಹಿಕ ಪತ್ರಿಕೆ
ಎಂದಿನಂತೆ
ಇಂದಿಗೂ ಆದರಣೀಯವಾಗಿದೆ.

ಡೋಂಗರೆ ಬಾಲಾಮೃತ

ಇದರಿಂದ
ಸೊರಗಿ ಕಡ್ಡಿಯಂತಾದ ಮಕ್ಕಳು
ಆರೋಗ್ಯ ಹೊಂದಿ
ದೃಢಕಾಯರೂ ಪುಷ್ಟರೂ ಆಗುತ್ತಾರೆ

ಸದ್ವೈದ್ಯ ಶಾಲಾ, ನಂಜನಗೂಡು.

ದಕ್ಷಿಣ ಭಾರತದ
ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ

ಜೀವರತ್ನಗಳು

ಶ್ರೀಕರ ಕಸ್ತೂರಿ ಮಾತ್ರೆ.

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ಸತ್ಪ್ರಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ ಜ್ವರ, ವಕ್ಕೆ ಶೀತಗಳಿಗೂ ಅಮೃತ ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ ಬೆಲೆ 0-4-

ನಮ್ಮ ರಿಜಿಸ್ಟರ್ಡ್

ನಂಜನಗೂಡು ಟೂತ್ ಪೌಡರನ್ನು

ಉಪಯೋಗಿಸಿರಿ ಅನುಕರಣಗಳಿಗೆ ಮೋಸಹೋಗಬೇಡಿರಿ

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ
ಬೆಲೆ 0-8-0, 0-4-0

ಸುಕುಮಾರತೈಲ

ಬಿಸಿಲು ಹೆಚ್ಚಿದ ಹಾಗೆಲ್ಲಾ ಉಂಟಾಗುವ ತಲೆ ನೋವು, ಒತ್ತಲೆ ನೋವು, ತಲೆ ತಿರುಗುವಿಕೆ ಮುಂತಾದ ಸಮಸ್ತ ನೇತ್ರ ಶಿರೋವ್ಯಾಧಿಗಳಿಗೂ ಸಂಜೀವನ. ಬೆಲೆ 1-0-0

ಪ್ರೊಪ್ರೈಟರ್:
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಶಾಲಿವಾಹನ ಶಕ ೧೮೫೯ನೆಯ ಈಶ್ವರ ನಾಮ ಸಂವತ್ಸರದ ಭಾದ್ರಪದ ಶು ೬ ಶನಿವಾರದಿಂದ ಭಾದ್ರಪದ ಶು ೧೨ ಶುಕ್ರವಾರದ ವರೆಗಿನ ಪಂಚಾಂಗ (ಗ್ರೆಗೋರಿಯನ್ [illegible])

27	ಶನಿ	೬	[illegible]	ಉತ್ತರಾ	[illegible]		
28	ರವಿ	೭	[illegible]	ಹಸ್ತಾ	[illegible]	[illegible]	
29	ಸೋ	೮	[illegible]	ಚಿತ್ರಾ	[illegible]	[illegible]	
30	ಕುಜ	೯	[illegible]	ಸ್ವಾತಿ	[illegible]	[illegible]	
31	ಬುಧ	೧೦	[illegible]	ವಿಶಾಖಾ	[illegible]	[illegible]	
1	ಗುರು	೧೧	[illegible]	ಅನುರಾಧಾ	[illegible]	[illegible]	
2	ಶುಕ್ರ	೧೨	[illegible]	ಜ್ಯೇಷ್ಠಾ	[illegible]	[illegible]	

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines [illegible] Banking facilities to Businessmen and interested Public

Apply for particulars-K R. GURU, *Managing Director*

ಬನ್ನಿರಿ! ಪರೀಕ್ಷಿಸಿರಿ!

ನಮ್ಮಲ್ಲಿ

ಎಲ್ಲಾ ತರದ ಪುಸ್ತಕಗಳೂ, ಲಗ್ನ ಪತ್ರಿಕೆ ಮುಂತಾದವುಗಳು ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema Ringworm, Sinus Fistula axillary-Abscess

There is no need of dressing the wounds, nor are baths prohibited.

Price Rs. 2. Postage extra.

TAHIR DIN,
Anarkali, LAHORE.



ಸಹಸ್ರ ಗುಣಗಳ ಪಾನೀಯ

ವಿಚಿತ್ರ ವಸ್ತುಗಳನ್ನು ನೋಡಿ ಆಶ್ಚರ್ಯಪಡುವಾಗ ಅಲ್ಪ ವಸ್ತುವಾದ ಆದರೆ ಸಹಸ್ರ ಗುಣಗಳನ್ನು ಹೊಂದಿರುವ ಟೀಯನ್ನು ಮರೆಯಬೇಡಿರಿ. ಟೀಯ ಸಹಸ್ರಾರ್ಧ ಗುಣಗಳನ್ನು ಇಲ್ಲಿ ಬರೆಯಲು ನಾವು ಇಚ್ಛಿಸುವುದಿಲ್ಲ. ನಿಮಗೆ ಟೀ ಕುಡಿಯುವ ಅಭ್ಯಾಸವಿದ್ದರೆ ಈ ವಿಷಯವನ್ನು ನೀವು ತಿಳಿದೇ ಇರುವಿರಿ. ನೀವು ಕುಡಿಯುವ ಅಭ್ಯಾಸವಿಲ್ಲವೆಂದರೆ ಇಂದಿನಿಂದ ಟೀ ಕುಡಿಯಲು ಆರಂಭಿಸುವುದೇ ಉತ್ತಮವಾದ ಮಾರ್ಗ

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿರಿ. ಶುಚಿಯಾಗಿರುವ (ಪಿಂಗಾಣಿ) ಮಣ್ಣಿನ ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ. ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗೆ ಒಂದು ಚಮಚ ಜಾತಿಯಾದ ಟೀ ಸೊಪ್ಪನ್ನು ಹಾಕಿರಿ. ನೀರು ಕುದಿಯಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ. ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿರಿ

ಇಂಡಿಯದ ಆನಂದ ಮತ್ತು ಹೆಮ್ಮೆಯ ನೆಲೆ ಇಂಡಿಯದ ಟೀ

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪ್ಯಾನ್‌ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟದ್ದು IK 107 ಸ

ಮಾತಾಡುವ ಅಂಕೆ-ಸಂಖ್ಯೆಗಳು

ಮದ್ರಾಸು ಅಧಿಪತ್ಯದ ಪೊಲೀಸ್ ವರದಿಯಲ್ಲಿ ತೋರುವಂತೆ,—ಸ್ಥಳೀಯ ಕಾನೂನುಗಳೂ ಪೆನಲ್ ಕೋಡೂ ನಿರ್ಧರಿಸಿರುವ ನ್ಯೂನ್ಸೆ ತಪ್ಪಿತಗಳು ಕಳೆದ ವರ್ಷ 38422; ಹಿಂದಣ ವರ್ಷ 39457. ಇವುಗಳಲ್ಲಿ ಅತಿ ಹೆಚ್ಚಿನವು ಮದ್ರಾಸು ನಗರದಲ್ಲೇ 8018; ಹಿಂದಣ ವರ್ಷ 3019. ವರ್ಷದಲ್ಲೊಂದು ಪವಾಡ!

1936ನೆ ಇಸ್ವಿಯಿಂದ ತಕ್ಸೀರುಗಳು ಪತ್ತೆಯಾಗುತ್ತ ಬರುವ ಸೇಕಡಾ ಸಂಖ್ಯೆ ಹೆಚ್ಚಾಗಿದೆ. ಕಳೆದ ವರ್ಷ ಪ್ರತಿಶಾವಿರಕ್ಕೆ 453 ರಂತೆ ಪತ್ತೆಯಾಗಿದೆ.

ಮಜೂರರ ಸಂಬಂಧವಾದ ಮುಷ್ಕರಾಧಿಗಳಿಂದಲೇ ತಕ್ಸೀರುಗಳು ಹೆಚ್ಚಿದುವು. ಮುಷ್ಕರಗಳು ಕಳೆದ ವರ್ಷ 68, ಹಿಂದಣ ವರ್ಷ 22. ಕಾಂಗ್ರೆಸ್ ಅಧಿಕಾರ ವಹಿಸಿದರಿಂದ ಮಜೂರರ ಜಗಳಗಳು ಹೆಚ್ಚಾಗಿ ಪ್ರಕಟವಾದುವು. ಇದರ ಪರಿಣಾಮ ನೂರು ಪಾಲು ಮುಷ್ಕರಗಳು. ಇವುಗಳಲ್ಲಿ ಮೂರರಲ್ಲೊಂದು ಅಂಶದಲ್ಲಿ ಮಜೂರರ ಹೇಳಿಕೆಯಲ್ಲಿ ಕಾರ್ಖಾನೆಗಳು ಒಪ್ಪಿದುವು. ಇನ್ನೊಂದು ಮೂರರಲ್ಲೊಂದು ಅಂಶದಲ್ಲಿ ಮಜೂರರ ಹೇಳಿಕೆಗೆ ಬಿಗೊಡಲಾಗುವುದೆಂದು ಧನಿಗಳು ಹೇಳಿದಲ್ಲೇ ಮುಷ್ಕರ ಮುಗಿಯಿತು. ಕೊನೆಯ ತೃತೀಯಾಂಶವು ವ್ಯರ್ಥವಾಯಿತು.

ಅಧಿಪತ್ಯದಲ್ಲಿ ಒಟ್ಟು ರಿಜಿಸ್ಟರಾಗಿರುವ ಮೋಟರು ವಾಹನಗಳ ಸಂಖ್ಯೆ 21466. ಇವುಗಳಲ್ಲಿ 1456 ಬಸ್ಸುಗಳು ಬಾಡಿಗೆಗಾಗಿದ್ದುವು. ಕಳೆದ ವರ್ಷ ಇವು 4364 ಆಗಿದ್ದುವು.

ನ್ಯೂಸೆನ್ಸ ಅಲ್ಲದ ಇತರ ಪ್ರಾಮುಖ್ಯ ತಕ್ಸೀರುಗಳಲ್ಲಿ ಸೇಕಡಾ 49 ಡಕಾಯಿತಿ, 33 ಕಳವು, 7 ಮನೆಮುರಿದುದು, 4 ದನಕಳವು, ಕೊಲೆ 1, ಸೇರಿದ್ದುವು.

ಕೊಲೆಗಳಿಗೆ ಕಾರಣವೇನಿತ್ತು? ಕಾಮೋತ್ತೇಜನದಿಂದ 274, ಕುಟುಂಬ ಕಲಹಗಳಿಂದ 187, ಪಂಗಡಗಳನ್ನು ಕಟ್ಟಿಕೊಂಡು 155, ಕಳವುಗಳಲ್ಲಿ 92, ಇತರ ಕಾರಣಗಳಿಂದ 348, ಅಂತೂ 1056 ಕೊಲೆಗಳಾಗಿವೆ. ಕಳೆದ ವರ್ಷ 1075.

ಕೊಲೊಂಬೋದಲ್ಲಿನ ಚುರುಟು ಕಾರ್ಖಾನೆಗಳಿಂದ ಮುಷ್ಕರ ಹಿಡಿಯಲು ಸಿದ್ಧರಾಗಿರುವ ಕೆಲಸಗಾರರ ಸಂಖ್ಯೆ 25000.

ಮದ್ರಾಸು ಬೋಯ್ ಸ್ಕೌಟರಿಗೆ ಸರಕಾರವು ಹಿಂದೆ ತೆರುತ್ತಿದ್ದ ಸಹಾಯಧನ ರೂ. 10000, 1938ರಿಂದ ಅದನ್ನು 7600 ರೂಪಾಯಿಗೆ ಇಳಿಸಲಾಗಿತ್ತು; ಇನ್ನು ಅದು ಹಿಂದೂಸ್ಥಾನೀ ಸೇವಾದಳದ ಜತೆಗೆ ಸೇರುವ ವರೆಗೆ ಇದೂ ಮನ್ನಾ ಆಗಿದೆ

ಜರ್ಮನಿಯ ವ್ಯಾಪಾರವು ಜಲೈ-ತಿಂಗಳಲ್ಲಿ ಸ್ವಲ್ಪ ಹೆಚ್ಚಿರುವಂತಿದೆ. ರಫ್ತುಗಳು ನಾನೂರೆಪ್ಪತ್ತು ಮಿಲ್ಲಿಯ ಮಾರ್ಕ್, ಆಮದುಗಳು 472 ಮಿಲ್ಲಿಯ ಮಾರ್ಕ್. ಒಪ್ಪಿಸಮಾ ಕಲಹವಿದು.

ಜಪಾನ್ ಸರಕಾರವು ಈ ತಿಂಗಳಲ್ಲಿ 397 ಮಿಲ್ಲಿಯ ಎನ್ (ಒಂದೂವರೆ ರೂಪಾಯಿ.) ಸಾಲ ಎತ್ತುವುದು. ಇದು ಯುದ್ಧಸಾಲ. 17 ವರ್ಷಗಳಲ್ಲಿ ಹಿಂತೆರ ಬರುವುದು. ಬಡ್ಡಿ ಸೇಕಡಾ 3½ಯಂತೆ.

ಮದ್ರಾಸು ಸರಕಾರಕ್ಕೆ ತಿಳಿದು ಬರುವಂತೆ, ಈಗ ಬರ್ಮಾದಲ್ಲಾದ ದಂಗೆಗಳಲ್ಲಿ 60000 ಹಿಂದೀಯರು ನಿರ್ಗತಿಕರಾಗಿದ್ದಾರೆ. ಇವರೊಳಗೆ 36000 ಹಿಂದುಗಳು; ಉಳಿದವರು ಮುಸ್ಲಿಮರು.

ನಮ್ಮ ಹಿಂದೀ ಸೈನ್ಯವೊಂದರಲ್ಲಿ 179000 ಸೈನಿಕರಿದ್ದಾರೆ. ಆದರೆ, ಯುದ್ಧರಂಗಕ್ಕೆ ಇಳಿವಾಗ, ಇವರಲ್ಲಿ ಬರೇ 69000 ಮಾತ್ರ ಸನ್ನದ್ಧರು. ಮಹಾಯುದ್ಧದಿಂದೀಚೆಗೆ ಕಡಮೆಯಾದ ಸೈನಿಕರ ಸಂಖ್ಯೆ 58000 ಹೀಗಿದ್ದರೂ ಖರ್ಚಿನಲ್ಲಿ ಕಡಮೆಯಾದುದು ಇಷ್ಟರಿಂದಾಗಿದೆ. ಈಗ ಇನ್ನೂ ಸಂಬಳ ಹೆಚ್ಚಿಸಿದ್ದಾರೆ 'ಇಂಡಿಯನ್ನಿನಲ್ಲಿ' ಅಂದರೆ, ನಾವು ಕಾರ್ಖಾನೆಯಿಂದ ತೆತ್ತದ್ದಾಯಿತು.

ಕೆಲವು ವಿದ್ಯಾಧಿಕಾರಿಗಳನ್ನು ರದ್ದು ಮಾಡಿ, ಮಧ್ಯಪ್ರಾಂತ್ಯವು 40000 ರೂಪಾಯಿ ಉಳಿಸಿತು

ಕಳೆದ ನೊವೆಂಬರಿಂದ ಬಂಗಾಳ ಸರಕಾರವು ಬಿಡುಗಡೆ ಮಾಡಿದ ಡೆಟೆನ್ಯೂಗಳ ಸಂಖ್ಯೆ 1100. ಈ ವಾರ 144ರ ಬಿಡುಗಡೆಯಾಗಿದೆ. 316 ಮಂದಿ ರಾಜಕೀಯ ಕೈದಿಗಳು ಇನ್ನೂ ಇದ್ದಾರೆ.

ಬಂಗಾಳದ ಐ. ಸಿ. ಎಸ್. ಆಫೀಸರರುಗಳಲ್ಲಿ ಈ ವರ್ಷ ಮೂವರು ರಾಜಿನಾಮೆ ಕೊಟ್ಟರು. ಮೂವರೂ ಯುರೋಪಿಯರೇ!

ಸಂಯುಕ್ತಪ್ರಾಂತ್ಯದಲ್ಲಿ ನೆರೆಯಿಂದ ನಿರ್ಗತಿಕರಾದವರು 10000ಕ್ಕೆ ಕಡಮೆಯಿಲ್ಲ. ನೀರು 5000 ಚದರ ಮೈಲು ವಿಸ್ತೀರ್ಣವನ್ನು ಹಾಳಾಗಿಸಿದೆ.

ಝೆಕೊಸ್ಲೊವಾಕಿಯದಿಂದ ಈ ವರ್ಷ ಆಮದಾದ ಮೋಟಾರುಗಳ ಸಂಖ್ಯೆ 6,066. ಕಳೆದ ವರ್ಷ 5,470.

ವಿದ್ಯಾಮಂದಿರ ಶಿಕ್ಷಣ ಕ್ರಮ

ವಿದ್ಯಾಮಂದಿರ ಶಿಕ್ಷಣ ಕ್ರಮವು ವಾರ್ಧಾ ಶಿಕ್ಷಣ ಕ್ರಮದಿಂದ ಹಲವು ಸಂಗತಿಗಳಲ್ಲಿ ಹೋಲುವದಾಗಿಯೂ ಕೆಲವು ವಿಷಯಗಳಲ್ಲಿ ಅದರಿಂದ ಭಿನ್ನವಾಗಿಯೂ ಇರುತ್ತದೆ. ಈಗಿನ ಆರ್ಥಿಕ ವಿಪನ್ನಾವಸ್ಥೆಯಲ್ಲಿ ಪ್ರಾಂತಿಕ ಸರಕಾರಗಳು ಎಲ್ಲಾ ಖರ್ಚನ್ನು ತಾವೇ ವಹಿಸಿಕೊಂಡು ಪ್ರಾಥಮಿಕ ಶಿಕ್ಷಣದ ಸರ್ವತ್ರ ಪ್ರಚಾರಮಾಡಲಿಕ್ಕೆ ಸಮರ್ಥವಾಗಿರುವುದಿಲ್ಲ. ಆದರೆ ಅಂಥ ಸಾಮರ್ಥ್ಯವು ಬರುವ ತನಕ ಶಿಕ್ಷಣ ಪ್ರಚಾರದಂಥ ಅವಶ್ಯಕ ಕಾರ್ಯವನ್ನು ಮುಂದಗಿಡಲಿಕ್ಕೂ ಆಗುವದಿಲ್ಲ. ಆದ್ದರಿಂದ ಕಡಿಮೆ ಖರ್ಚಿನಿಂದ ಆದಷ್ಟು ಹೆಚ್ಚು ಮಂದಿಗೆ ಉಪಯುಕ್ತ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ವಿದ್ಯಾ ಮಂದಿರ ಶಿಕ್ಷಣ ಯೋಜನೆಯು ಸಿದ್ಧವಾಗಿರುತ್ತದೆ.

ಒಂದು ಗ್ರಾಮ ಅಥವಾ ಕೆಲವು ಗ್ರಾಮಗಳ ಒಂದು ಕೇಂದ್ರದಲ್ಲಿ ಈ ಮೊದಲು ಯಾವ ಶಾಲೆಯೂ ಇಲ್ಲದಿದ್ದು, ಅಲ್ಲಿ 40 ಕ್ಕಿಂತ ಹೆಚ್ಚು ಮಂದಿ ಶಾಲೆಗೆ ಹೋಗುವ ಪ್ರಾಯದ ಮಕ್ಕಳಿರುವರಾದರೆ, ಅಂಥಲ್ಲಿ ವಿದ್ಯಾಮಂದಿರದ ಸ್ಥಾಪನೆಯಾಗುವದು. ವಿದ್ಯಾಮಂದಿರವೆಂದರೆ ವಿದ್ಯೆಯನ್ನು ಕೊಡತಕ್ಕ ಮಂದಿರವೆಂದು ಅರ್ಥ. ಈ ಮಂದಿರದಲ್ಲಿ ನಾಲ್ಕು ವರ್ಷಗಳ ತನಕ ಶಿಕ್ಷಣ ಕಾರ್ಯವು ನಡೆಯುತ್ತದೆ. ಒಂದೊಂದು ವಿದ್ಯಾಮಂದಿರದಲ್ಲಿ ಒಬ್ಬೊಬ್ಬನೇ ಉಪಾಧ್ಯಾಯನು ಇರುವನು. ಗ್ರಾಮ ಅಥವಾ ಕೇಂದ್ರದಲ್ಲಿ 40 ಕ್ಕಿಂತ ಅಧಿಕ ಮಕ್ಕಳು ಇರುವರಾದರೆ ಬೆಳಗ್ಗೆ ಕೆಲವರಿಗೆ, ಮಧ್ಯಾಹ್ನ ಕೆಲವರಿಗೆ ಶಿಕ್ಷಣವು ಕೊಡಲಾಗುತ್ತದೆ. ಅದು ಸಾಧ್ಯವಾಗುವುದಿಲ್ಲವಾದರೆ 'ಮೊನಿಟರ್ ಕ್ರಮ'ಕ್ಕೆ ಮೊರೆಹೋಗುತ್ತದೆ. ಶಿಕ್ಷಣವೆಲ್ಲಾ ಮಾತ್ರಭಾಷೆಯಲ್ಲೇ ನಡೆಯುವುದು. ಆದರೆ ಒಂದೇ ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚು ಮಾತೃಭಾಷೆಯುಳ್ಳ ಹೆಚ್ಚು ಬಾಲಕರು ಇರುವರಾದರೆ, ಅವರಿಗೆ ಪ್ರತ್ಯೇಕ ಪ್ರತ್ಯೇಕ ವಿದ್ಯಾಮಂದಿರಗಳು ಸ್ಥಾಪನೆಯಾಗುವುವು.

ವಿದ್ಯಾಮಂದಿರದಲ್ಲಿ ಶಿಕ್ಷಣವನ್ನು ಕೊಡುವ ಹಲವು ಉದ್ದೇಶಗಳಿವೆ. ಕಲಿತುದನ್ನು ಮರೆಯದ ಹಾಗೆ ಉತ್ತಮ ರೀತಿಯಿಂದ ಓದು ಬರಹ ಜ್ಞಾನವನ್ನು ಕೊಡುವದು ಮೊದಲನೆಯ ಮುಖ್ಯ ಉದ್ದೇಶವಾಗಿದೆ. ಸುತ್ತಮುತ್ತಲಿನ ವಾತಾವರಣಕ್ಕೆ ಅನುಕೂಲವಾಗಿ, ಗ್ರಾಮಗಳ ಅವಶ್ಯಕತೆಗೆ ತಕ್ಕಂತೆ ಶಿಕ್ಷಣವನ್ನು ಕೊಡುವದು ಎರಡನೆ ಉದ್ದೇಶವಾಗಿದೆ. ಹೀಗಿರುವದರಿಂದ ಗ್ರಾಮವಾಸಿಗಳಿಗೂ ವಿದ್ಯಾಮಂದಿರಕ್ಕೂ ಅತ್ಯಂತ ನಿಕಟ ಸಂಬಂಧವು ಇರುತ್ತದೆ. ಪಾಠಕ್ರಮವು ಕೃಷಿ ಗ್ರಾಮೋದ್ಯೋಗಗಳಿಗೆ ಪ್ರಾಧಾನ್ಯವನ್ನು ಕೊಡುತ್ತದೆ. ಉಪಾಧ್ಯಾಯರು, ಹೆತ್ತವರು, ರಕ್ಷಕರು ಮತ್ತು ಮಕ್ಕಳು ಕೂಡಿ ಪರಸ್ಪರ ಸಹಾಯ, ಸಹಕಾರ ಸಹಾನುಭೂತಿಗಳಿಂದ ಸಮಾಜ ಮತ್ತು ರಾಷ್ಟ್ರದ ಕಲ್ಯಾಣವನ್ನು ಸಾಧಿಸುವದು ಸಾಧ್ಯವಾಗುತ್ತದೆ. ಆದ್ದರಿಂದ ದೇಶವನ್ನು ಗೊಂದಲಕ್ಕೆ ಹಚ್ಚಿರುವ ರಾಷ್ಟ್ರೀಯ, ಸಾಮಾಜಿಕ, ಶಿಕ್ಷಣಿಕ ಮೊದಲಾದ ಹಲವು ಸಮಸ್ಯೆಗಳನ್ನು ಬಿಡಿಸುವುದು ಸುಲಭವಾಗಿದೆ.

ವಿದ್ಯಾಮಂದಿರದ ಉಪಾಧ್ಯಾಯನು ಇತರ ಶಾಲೆಗಳ ಉಪಾಧ್ಯಾಯರಂತಿರುವದಿಲ್ಲ. ಅವನು ಜಗತ್ಸ್ವರೂಪೀ ಜನಾರ್ಧನನ ಸೇವಕನಾಗಿರುತ್ತಾನೆ. ಹಣದಾಸೆ ಅಥವಾ ಪ್ರಾಪಂಚಿಕ ಸುಖದಾಸೆಯು ಅವನಿಗಿಲ್ಲ. ಜನರ ಸುಖವೇ ಅವನ ಸುಖ, ಜನರ ದುಃಖವೇ ಅವನ ದುಃಖ — ಎಂಬ ಹಾಗೆ ಇರುತ್ತದೆ. ಮೊದಲು 5 ವರ್ಷಗಳ ತನಕ ಹಂಗಾಮಿಯಾಗಿ ಕೆಲಸಮಾಡಿ, ಕೆಲಸವನ್ನು ಕಾಯಮ್ ಮಾಡಿಸಿಕೊಂಡ ತರುವಾಯ ಮುಂದೆ 20 ವರ್ಷಗಳ ತನಕವೂ ತಿಂಗಳೊಂದರ ಬರೇ 15 ರೂಪಾಯಿ ಸಂಬಳ ಪಡೆದು ಕೆಲಸಮಾಡುವನೆಂದು ಅವನು ಪ್ರತಿಜ್ಞಾ ಬದ್ಧನಾಗಬೇಕು. ಕೆಲಸ ಕಾಯಂ ಆದ ತರುವಾಯ ಸರಕಾರವು 600 ರೂಪಾಯಿಗೆ ವಿಮೆಮಾಡಿದ ವಿಮಾಪತ್ರವೇ ಅವನ ಪ್ರಾಪಂಚಿಕ ಸೊತ್ತಾಗಿ ಉಳಿಯುತ್ತದೆ. ಕೆಲಸವು ಅಯೋಗ್ಯ ಅಥವಾ ಅತೃಪ್ತಿಕರವೆಂದು ತಿಳಿದು ಬಂದರೆ ಯಾವಾಗ ಬೇಕಾದರೂ ಅವನನ್ನು ಕೆಲಸದಿಂದ ತಳ್ಳಿಹಾಕಬಹುದು. ಆದ್ದರಿಂದ ಹೆಸರು ಪಡೆದು ಕಾರ್ಯಸಾಧಿಸಿ ಜೀವನವನ್ನು ಸಾರ್ಥಕಮಾಡಬೇಕೆಂದಿರುವವನು ಬಹಳ ಎಚ್ಚರಿಕೆಯಿಂದ ಇರಬೇಕಾಗಿದೆ. ಅವನು ಯಾವದೇ ತರಹದ ವ್ಯಾಮೋಹಕ್ಕೆ ಬಲಿಯಾಗದೆ ಇರಬೇಕಾಗಿದೆ.

ಹೀಗಿದ್ದರೂ ಅಜ್ಞಾನ ಅಂಧಕಾರವು ಕುಂಬಿಕೊಂಡಿರುವ ನಮ್ಮ ದೇಶದ ಗ್ರಾಮಗಳಲ್ಲಿ ವಿದ್ಯಾಮಂದಿರದ ಉಪಾಧ್ಯಾಯನು ಜ್ಞಾನಜ್ಯೋತಿಯಾಗಿ ಇರುತ್ತಾನೆ. ಗ್ರಾಮವಾಚನಾಲಯ ವಸ್ತು ಸಂಗ್ರಹಾಲಯಗಳ ಸಂಚಾಲಕನು ವಿದ್ಯಾಮಂದಿರದ ಉಪಾಧ್ಯಾಯನು. ಗ್ರಾಮಕೂಟಗಳ ಮಾರ್ಗದರ್ಶಕನೂ ಅವನೇ. ಗ್ರಾಮೋದ್ಧಾರ ಗ್ರಾಮೋನ್ನತಿಗಳಿಗೆ ಸಂಬಂಧಪಟ್ಟ ಇನ್ನೂ ಹತ್ತು ಹಲವು ಚಟುವಟಿಕೆಗಳ ಸೂತ್ರಧಾರನು ವಿದ್ಯಾಮಂದಿರದ ಉಪಾಧ್ಯಾಯನಾಗುವನು. ಅವನಿಲ್ಲದೆ ಗ್ರಾಮದ ಯಾವ ಸಾರ್ವಜನಿಕ ಕಾರ್ಯವೂ ಸಾಂಗವಾಗಿ ನಡೆಯುವಂತಿರುವುದಿಲ್ಲ. ಅವನೇ ಗ್ರಾಮದ ಮುಖಂಡನೂ ಕೆಲಸಗಾರನೂ ಆಗಿರುವನು. ಗ್ರಾಮವಾಸಿಗಳ ಶಾರೀರಿಕ ಮಾನಸಿಕ ಆತ್ಮೀಕ ಉನ್ನತಿಗೆ, ಅವನೇ ಕಾರಣೀಭೂತನಾಗಿರುವನು.

ಸರಕಾರದ ಪ್ರಜಾಭಿವೃದ್ಧಿಯ ಹಲವು ಕಾರ್ಯಗಳಿಗೆ ವಿದ್ಯಾಮಂದಿರವು ಕೇಂದ್ರವಾಗಿರುವುದು. ಶಿಕ್ಷಣ ಖಾತೆಯು ವಿದ್ಯಾಮಂದಿರದ ಮೂಲಕ ನವೀನ ಕೃಷಿಕ್ರಮವನ್ನು ಗ್ರಾಮವಾಸಿಗಳಿಗೆ ಕಲಿಸಿಕೊಡುವುದು. ಹಾಗೆಯೇ ಗೋರಕ್ಷಣ, ಕೈಗಾರಿಕೆ, ವೈದ್ಯ, ಆರೋಗ್ಯ, ಸಹಕಾರ ಮೊದಲಾದ ಇಲಾಖೆಗಳು ಗ್ರಾಮದಲ್ಲಿ ಈ ವಿದ್ಯಾಮಂದಿರದ ಮೂಲಕವೇ ತಮ್ಮ ಕಾರ್ಯಗಳನ್ನು ಮಾಡಿ ಜನಹಿತವನ್ನು ಚಿಂತಿಸುವವು. ಗ್ರಾಮದ ಉದ್ಧಾರ ಉನ್ನತಿ ಕಾರ್ಯಗಳನ್ನು ಕೈಕೊಳ್ಳುವವು.

ಇಂಥ ವಿದ್ಯಾಮಂದಿರಗಳನ್ನು ಸರಕಾರವೇ ಎಲ್ಲ ಕಡೆಗಳಲ್ಲಿ ಸ್ಥಾಪಿಸುವದು ಸಾಧ್ಯವಲ್ಲ. ಆದ್ದರಿಂದ ವಿದ್ಯಾಮಂದಿರ ಯೋಜನೆಯಂತೆ ಗ್ರಾಮದಲ್ಲಿ ಆಸ್ತಿಪಾಸ್ತಿ ಇರುವ ಜಮೀನುದಾರರು ಶ್ರೀಮಂತರು ಮೊದಲಾದವರು ವರ್ಷಕ್ಕೆ 200 ರೂಪಾಯಿಗಳಿಗೆ ಕಡಿಮೆಯಾಗದಷ್ಟು ಉತ್ಪತ್ತಿಯನ್ನು ಕೊಡುವ ಭೂಮಿಯನ್ನು ಆ ಗ್ರಾಮದ ವಿದ್ಯಾಮಂದಿರಕ್ಕೆ ದಾನ ಮಾಡಿಕೊಡಬೇಕು. ಮದುವೆ, ಮುಂಜಿ, ಜಾತ್ರೆ — ಉತ್ಸವಗಳಲ್ಲಿ ನೆರೆದ ಜನರು ಈ ಮಂದಿರದ ಸರಸ್ವತಿ ದೇವಿಗೆ ತಮ್ಮ ಭಕ್ತಿಯ ಕಾಣಿಕೆಯನ್ನು ಒಪ್ಪಿಸಬೇಕು. ಸಾಹುಕಾರರು, ವ್ಯಾಪಾರಿಗಳು, ಇತರ ಉದ್ಯೋಗಿಗಳು ತಮ್ಮ ಲಾಭ ಅಥವಾ ಸಂಪಾದನೆಯ ಒಂದಂಶವನ್ನು ವಿದ್ಯಾಮಂದಿರಕ್ಕೆ ಕೊಡಬೇಕು. ಹೀಗೆ ಹುಟ್ಟಿಬರುವ ಹಲವು ಉತ್ಪತ್ತಿಗಳಿಂದ ವಿದ್ಯಾಮಂದಿರವು ನಡೆಯಬೇಕೆಂಬುದು ಸರಕಾರದ ಉದ್ದೇಶವಾಗಿದೆ.

ವಿದ್ಯಾಮಂದಿರ ಕ್ರಮದಲ್ಲಿ ಹಲವು ಉಪಯುಕ್ತ ಸಂಗತಿಗಳು ಸೇರಿರುವದನ್ನು ನಾವು ಕಾಣಬಹುದು. ಶ್ರೀ ಬ್ರಿಜಲಾಲ್ ಎಂಬವರು ಈ ವಿಷಯವಾದ ತಮ್ಮದೊಂದು ಲೇಖನದಲ್ಲಿ ಸೂಚಿಸಿದಂತೆ ವಿದ್ಯಾಮಂದಿರಗಳನ್ನು ನಡೆಸುವ ಆರ್ಥಿಕ ಹೊಣೆಯು ಸರಕಾರದ ಮೇಲಿಲ್ಲದಿದ್ದಾದರೂ ಅದು ವಿದ್ಯಾಮಂದಿರಗಳ ಆರ್ಥಿಕ ಸುವ್ಯವಸ್ಥೆ ಮಾಡಿಕೊಡುತ್ತದೆ. ಮಂದಿರದ ಆಡಳಿತವು ಹೊರಗಿನ ವ್ಯಕ್ತಿ ಅಥವಾ ಸಂಘದ ಮೇಲಿರದೆ ಗ್ರಾಮವಾಸಿಗಳ ಮತ್ತು ಗ್ರಾಮ ಪಂಚಾಯತಿಗೆ ಸೇರಿರುತ್ತದೆ. ಉಪಾಧ್ಯಾಯನು ಶಾಲೆಯಿಂದ ಶಾಲೆಗೆ ಹಾರಾಡುವವನಾಗದೆ, ಗ್ರಾಮದಲ್ಲೇ ವಾಸಮಾಡಿಕೊಂಡು ಬರುವ ಪ್ರಮುಖ ವ್ಯಕ್ತಿಯಾಗುತ್ತಾನೆ. ಅವನ ಜೀವನವು ಗ್ರಾಮಕ್ಕಾಗಿಯೇ ನಡೆಯಿಸಲ್ಪಡುತ್ತದೆ. ಉಪಾಧ್ಯಾಯನ ಸ್ಥಿತಿಗತಿಗಳು ಸುಧಾರಿಸದಿದ್ದರೂ, ಅವನ ಸ್ಥಾನಮಾನಗಳು ಈಗಿನಕ್ಕಿಂತ ಉತ್ತಮವಾಗುತ್ತವೆ. ಸರಕಾರದ ಬೇರೆ ಬೇರೆ ಜನೋಪಕಾರಿ ಇಲಾಖೆಗಳಿಗೆ ತಮ್ಮ ಕಾರ್ಯ ನಿರ್ವಾಹಮಾಡಲಿಕ್ಕೆ ಅನುಕೂಲ ಕೇಂದ್ರವು ದೊರೆಯುತ್ತದೆ.

ಜನವರಿ ತಿಂಗಳವರೆಗೂ

ಪ್ರತಿವಾರವೂ 400 ರೂಪಾಯಿಗಳು ಬಹುಮಾನ

ಈಗಲೇ 'ನಂಬರನ್ನುಳ್ಳ ರ್‍ಯಾಪರುಗಳನ್ನು ಶೇಖರಿಸುವುದಕ್ಕೆ ಪ್ರಾರಂಭಿಸಿರಿ!



ಬರೆಯುವಕ್ರಮ

ಕಳೆದವಾರ ಬಹುಮಾನ ಪಡೆದವರು.

ಲಕ್ಸ್ ಟಾಯಿಲೆಟ್ ಸಾಬೂನು

ಇಂಡಿಯಾದಲ್ಲೇ ಸಸ್ಯಗಳ ಶೋಧಿಸಿದ ಎಣ್ಣೆಯಿಂದಲೇ ತಯಾರಿಸಿದ್ದು.

X-LTS 647-33 LEVER BROTHERS (INDIA) LIMITED KANARESE

ಶಿಶುವಿನ ಆರೋಗ್ಯವೇ ಹೆತ್ತವರ ಸಂಪತ್ತು.



ನಮ್ಮ ಈ ನಿರ್ಭಾಗ್ಯ ದೇಶದಲ್ಲಿ ಶಿಶು ಮರಣವು ಒಂದು ಮಹಾ ಶಾಪವಾಗಿರುತ್ತದೆ. ಇದಕ್ಕೆ ಸಾಮಾಜಿಕ ಮತ್ತು ಸಾಂಪತ್ತಿಕ ತರದ ಅನೇಕ ಕಾರಣಗಳಿವೆ

ಶಿಶುಗಳ ಪೀಡೆಗಳಲ್ಲಿ, ಯಕೃತ್ತು ಸಂಬಂಧ ಪೀಡೆಗೆ ಬಲಿಯಾಗುವ ಶಿಶುಗಳ ಸಂಖ್ಯೆಯು ಹೆಚ್ಚು. ಕೆಸರಿನ ಬಣ್ಣ ಮಲ, ಅಜೀರ್ಣ, ಹಸಿವೆಯಿಲ್ಲದಿರುವಿಕೆ, ಮಗು ಕರ್ಕಶವಾಗಿರುವುದು, ಮಲಬದ್ಧತೆ, ಜಾಡಸೆ, ಹೊಟ್ಟೆ ಉಬ್ಬುವಿಕೆ, ಇವುಗಳೆಲ್ಲಾ ಈ ಪೀಡೆಯಲ್ಲಿ ಕಾಣಿಸಿಕೊಳ್ಳುವ ಚಿಹ್ನೆಗಳು. ವಿಪರೀತ ಅವಸ್ಥೆಗೆ ತೆರಳಿದ ಪೀಡೆಗಳಲ್ಲಿ, ಯಾವಾಗಲೂ ಹಳದಿ ಬಣ್ಣದ ಮೂತ್ರ, ಹಳದಿ ಬಣ್ಣದ ಕಣ್ಣುಗಳು, ಕೈಕಾಲು ಬಾತುವಿಕೆ, ಹೊಟ್ಟೆಯ ಮೇಲೆ ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆ ದೊಡ್ಡದಾಗಿರುವುದು, ಇವುಗಳು ಚಿಹ್ನೆಗಳು

ನಿಮಗೆ ಸಂದೇಹಗಳಿರುವುದಾದರೆ, ಯಕೃತ ಪ್ರವೀಣರಾದ ಜಪ್ಪಿ ವೆಂಕಟ್ರಮಣಯ್ಯರವರನ್ನು ವಿಚಾರಿಸಿರಿ. ಅವರ ಅನುಭವಶಾಲಿ ಬೋಧನೆಯನ್ನು ಪಡೆದು ವರ್ತಿಸುವವರಾಗಿರಿ.

'ಲಿವರ್ ಕ್ಯೂರ್'ನ್ನೇ ಉಪಯೋಗಿಸಿರಿ - ಯಕೃತ್ತು ಮತ್ತು ಪ್ಲೀಹ ಸಂಬಂಧ ಎಲ್ಲಾ ಪೀಡೆಗಳಿಗೆ ಅದೊಂದು ಖಾತ್ರಿ ಮತ್ತು ದಿವ್ಯವಾದ ಔಷಧಿ ಎಂದು ಸರ್ವವಿಧಿತವಾಗಿರುವುದು

ಹೆಚ್ಚಿನ ವಿವರಗಳಿಗೆ—

ಡಾ॥ ಜಪ್ಪಿ ವೆಂಕಟ್ರಮಣಯ್ಯ

ಯಕೃತ್ತು ಮತ್ತು ಪ್ಲೀಹ ಸ್ಪೆಶಲಿಷ್ಟರು,

ಮೈಲಾಪುರ, ಮದರಾಸು.

ಪರರಾಷ್ಟ್ರಗಳ ಪತ್ರಿಕೆಗಳಿಂದ

ಟೈಮ್ಸ್—ಲಂಡನ್ (26-7-38)

ಜನತೆಯ ಅಭಿಪ್ರಾಯವೂ ನಾಝಿಗಳ ಅಭಿಪ್ರಾಯವೂ ಬೇರೆ ಬೇರೆ ಎನ್ನುವುದನ್ನು ಸುಲಭವಾಗಿ ಸ್ಪಷ್ಟಗೊಳಿಸುವುದಕ್ಕೋ ಎಂಬಂತೆ, ಡಾ। ಡೊಲ್‌ಫಸರನ್ನು ಕೊಂದಿದ್ದವರನ್ನೇ ವೀರರನ್ನಾಗಿ ಕೊಂಡಾಡಲು ಜರ್ಮನ್ ಸರಕಾರವು ಉತ್ಸವ ಮಾಡಿಸಿದುದೇ ಉದಾಹರಣೆಗೆ ಸಾಕು. ಅವರನ್ನು ಕೊಂದಿದ್ದ ಹದಮೂರು ಮಂದಿಯ ಆತ್ಮಗಳು ಆ ಕೃತಿ ಪ್ರಶಂಸೆಯಿಂದ ಮೆರೆವ ಹಾಗೆ ಜರ್ಮನಿ ಆಸ್ಟ್ರಿಯಾಗಳಲ್ಲಿ ಒಂದು ಹಬ್ಬವೇ ನಡೆಯಿತು! ನಾಝಿತತ್ವಕ್ಕೆ ಅನುಸಾರವಾಗಿ ಏನೇ ಮಾಡಿದರೂ ಅದು ವೀರತ್ವ ಪ್ರದರ್ಶನ,—ನಾಝಿಗಳ ಅಭ್ಯುದಯವು ಅದರಿಂದಾದರೆ! ನಾಝಿಗಳ ಕೃತಿಗಳನ್ನು ದೂರಿದರೆ ಅದು ಪಾಪ ಮಹಾಪಾತಕ.

ಐರಿಶ್ ಇಂಡಿಪೆಂಡೆಂಟ್ ಡಬ್ಲಿನ್ (25 7 38)

ಜರ್ಮನಿಯ ಇಗರ್ಜಿಗಳು ನಾಝೀಮತಕ್ಕಾಗಿವೆ. ಜರ್ಮನ್ ಕುಲವು ಶುದ್ಧ ಆರ್ಯ ಕುಲ, ಇತರ ಯಾವ ಕುಲವೂ ಯಾವ ಬಗೆಯ ಮತವೂ ಜರ್ಮನಿಯಲ್ಲಿ ನೆಲೆ ಕಾಣಬಾರದು. ಎಲ್ಲ ಕುಲಗಳು ಸಮಾನವೆನ್ನುವವರಿಗೆ ಇಲ್ಲಿ ಸ್ಥಳವಿಲ್ಲ. ಮಗುವಿಗ ಇಗರ್ಜಿಯಲ್ಲಿ 'ಸ್ನಾನ' ಇಷ್ಟಕ್ಕೆಳಿದಿದೆ—ತಂದೆ ಪವಿತ್ರ ಕ್ರೂಜಿಯ ಮುಂದೆ ನಿಂತು, ನಾಝೀ ವಂದನೆ ಮಾಡಿ, ನಾನು ಈ ಮಗುವಿನ ತಂದೆ ಶುದ್ಧ ಆರ್ಯ ವಂಶದವನು ಎಂದು ದೇವರ ಮುಂದೆ ಪ್ರಮಾಣ ಮಾಡುತ್ತೇನೆ. ಜರ್ಮನ್ ಜನಾಂಗಕ್ಕಾಗಿ ಜರ್ಮನ್ ತತ್ವಗಳಂತೆ ಈ ಮಗುವನ್ನು ಬೆಳಸಿ ತರುತ್ತೇನೆಂದೂ ಪ್ರಮಾಣ ಮಾಡುತ್ತೇನೆ' ಎಂದು ಪ್ರಮಾಣ ಮಾಡಿದರಾಯಿತು. ಯಾವ ತರದ ದೀಕ್ಷೆ, ಬೋಧೆ, ಶಾಸ್ತ್ರ ಪಾಠಗಳು ಇಲ್ಲ.

ಓರಿಯಂಟ್ ಆರಬಿ (ಶಾಂಘಾಯ್)—20 7 38

ಶಾಂಘಾಯ್ ಬಳಿಯಲ್ಲಿ 3000 ಜಪಾನೀ ಸೈನಿಕರನ್ನು ಚೀನೀಯ ಕ್ಷಾತ್ರ ಸೈನ್ಯವು ಕವಿದಿದ್ದಿರುವುದು. ಆಗ ರಾತ್ರಿಕಾಲ, ಮಳೆ ಚೆನ್ನಾಗಿ ಸುರಿಯುತ್ತಿತ್ತು. ಜಪಾನಿಯರಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಅವಕಾಶವೇ ಸಿಗಲಿಲ್ಲ. ಈ ಶಿಬಿರದಲ್ಲಿ, ಚೀನೀ ಮಹಿಳೆಯರಲ್ಲಿ ಹನ್ನೆರಡು ಮಂದಿ ಕೈದಿನಲ್ಲಿದ್ದರು. ಅವರನ್ನು ಚೀನೀ ಸೇನೆಯು ಬಿಡುಗಡೆ ಮಾಡಿದೆ. ಇವರನ್ನು ಜಪಾನ್ಯ ಸೈನಿಕರು ಕೈದು ಮಾಡಿದರಿಂದಲೇ ಜನರು ಎತ್ತಲೂ ಉದ್ವಿಗ್ನರಾಗಿದ್ದು ಚೀನೀ ಸೈನಿಕರಿಗೆ ಸಹಾಯ ಮಾಡಿದರು. ಇವರಲ್ಲೆಷ್ಟೊ ಮಂದಿಗೆ ಕೋವಿಯಿದ್ದಿಲ್ಲ. ಚೂರಿ ನೇಗಿಲ ಮೊದಲಾದುವನ್ನು ಉಪಯೋಗಿಸಿ ಜಪಾನಿಯರನ್ನು ಕೊಂದರು. ಕೆಲವೇ ಮಂದಿ ಜಪಾನಿಯರ ತಪ್ಪಿಸಿಕೊಂಡು ಓಡಿದರು. ಇವರಿಂದ ವಾರ್ತೆ ದೊರೆಯಿತಾದರೂ ಅದನ್ನು ಪ್ರಕಟಿಸಿಲ್ಲ. ಈಗ ಹಾಂಗ್‌ಕಾಂಗಿಗೆ ತಲುಪಿರುವ ಸ[illegible]ಗಳ ಬಾಯಿಂದ ಈ ವೃತ್ತಾಂತ ಹೊರಗೆ ಬಿತ್ತು.

ಆಫ್ಘನ್ ಪ್ರೋಸ್ಟನ್,—ಒಸ್ಲೊ (20 7—38)

ಸೋವಿಯಟ್ ಸರಕಾರವು ತನ್ನ ನೌಕಾ ಸೇನೆಯನ್ನು ಬಹಳವಾಗಿ ಹೆಚ್ಚಿಸ ಬಯಸಿದೆ. ಇನ್ನು ಐದು ವರ್ಷಗಳಲ್ಲಿ 4 ಲಕ್ಷ ಟನ್ನು ಭಾರದ ಹೊಸ ಹಡಗುಗಳನ್ನು ಕಟ್ಟಿಸಲು ಯೋಜನೆಯಾಗಿದೆ. ಅನಂತರ ಪ್ರತಿವರ್ಷವೂ 50000 ಟನ್ ಭಾರದ ಹೊಸ ಹಡಗುಗಳನ್ನು ಕಟ್ಟಿಸುವರು. ಇದಕ್ಕಾಗಿ ಯುನೈಟೆಡ್ ಸ್ಟೇಟ್ಸಿನ ಇಂಜಿನೀಯರರನ್ನು ಸಂಮಾನಗಳನ್ನು ತರಿಸಿ ಎರಡು ಹೊಸ ಫ್ಯಾಕ್ಟರಿಗಳನ್ನು ಕಟ್ಟಿಸಲು ತೊಡಗಿರುವರು. ಇವುಗಳಲ್ಲಿ ವರ್ಷವು 25000ದ ತ[illegible] ಭಾರದ ಹೊಸ ಹಡಗು ಕಟ್ಟಿಸಬರುವುದು. ಬಾಲ್ಟಿಕ್ ಸಮುದ್ರದಲ್ಲಿ ಮಾತ್ರ ನೌಕಾ ಬಲಕ್ಕಿಂತಲೂ ರಷ್ಯದ ಬಲವು ಹೆಚ್ಚಾಗುವುದು. ಇದೇ ವೇಳೆ, ಫ್ರಾನ್ಸು ಬ್ರಿಟನ್ನುಗಳೊಡನೆ ಸೇರಿಯೂ ತನ್ನ ಬಲಕ್ಕೆ ಸಹಾಯ ಮಾಡಿಕೊಳ್ಳಬೇಕೆಂದಿದೆ. ಜರ್ಮನಿಗೆ ಭಯ ಪಟ್ಟು ಇವು ತನ್ನೊಡನೆ ಸೇರಬಹುದಾಗಿ ವಿಶ್ವಾಸ.

ಸಂಡೇ ಟೈಮ್ಸ್,—ಜೊಹಾನ್ಸಬರ್ಗ (21 7 38)

ದಕ್ಷಿಣಾಫ್ರಿಕ ಪಡುವಲಲ್ಲಿ ನಾಝಿಗಳು ನಾನಾ ರೀತಿಯಾಗಿ ಚಳವಳ ಹಬ್ಬಿಸಿರುವರೆಂದ ತಿಳಿದು ಸರಕಾರವು ಕಂಡತೆ ಇದನ್ನು ತಡೆಗಟ್ಟಲು ಖಂಡಿತವಾಗಿಯೂ ದೃಢವಾದ ಶಾಸನವನ್ನು ಜಾರಿಗೆ ತರುವುದ[illegible] ಈ ಭಾಗವು ಹಿಂದೆ ಜರ್ಮನಿ ಸಾಮ್ರಾಜ್ಯ, ಯುದ್ಧಾನಂತರ ದಕ್ಷಿಣಾಫ್ರಿಕಾ ಸರಕಾರದ ಕೈಕೆಳಗೆ [illegible] ಇಟ್ಟಿಷ್ಟರಲ್ಲೇ ಇದು ಪುನಃ ಜರ್ಮನಿಗೆ ಸೇರುವ ಹಾಗಾಗುವುದೋ [illegible] ಸರಕಾರಕ್ಕೆ ಆ ಪ[illegible] ಹಾನಿಯ [illegible] ಕಂಡಿದ್ದಾರೆ.

ಜರ್ಮನಿಯ [illegible] ಸಂಘಗಳನ್ನು [illegible] ಸಂಭಾಷಣೆ [illegible] ಆದೊಂದಲ್ಲದೆ ಇತರ [illegible] ವಿಷಯಗಳೂ ಜರ್ಮನಿಗೂ ಬ್ರಿಟನ್ನಿಗೂ ಯಾವ [illegible] ಭಾಷಣ [illegible] (ಡೈಲಿ ಟೆಲಿಗ್ರಾಫ್) ಪ್ರಕಟವಾಗಿದೆ.

ನಿತಿ ನಿತಿ—ಟೋಕಿಯೋ (22 [illegible])

ಫ್ರಾನ್ಸ್ ಅಸ್ಸದ [illegible] ರಷ್ಯ [illegible] ಸಗಳಿಂದ [illegible] ರಷ್ಯದ ಭೂ ಜಲಸೇನೆಗಳು ಬಲದಲ್ಲೀಗ ಹೆಚ್ಚಿವೆ. ವ್ಲಾಡಿವೊಸ್ಟೊಕಿನಲ್ಲೀಗ 50,000 ಸಿಪಾಯರು ಸಂಪೂರ್ಣ ಯಂತ್ರಸನ್ನಾಹಗಳೊಡನೆ ಸಿದ್ಧರಾಗಿರುವರು. ರಷ್ಯದ ಕೊರೀಯ ಗಡಿಯಲ್ಲಿ ಅಷ್ಟೇ ಮಂದಿಯುಳ್ಳ ಒಂದು ಸೇನೆಯಿದೆ. ವ್ಲಾಡಿವೊಸ್ಟೊಕ್ ಜಿಲ್ಲೆಯಲ್ಲಿ ಒಂದು ಲಕ್ಷ ಸೈನಿಕರಿರುವರು. ಬೈಕಲ್ ಸರೋವರದ ಈಚೆಗೆ ಒಟ್ಟು 400,000 ಜನರನ್ನೊಳಗೊಂಡು ಇಪ್ಪತ್ತು ಡಿವಿಜನ್ ಸೇನೆಯಿದೆ. ರಷ್ಯದ ಈ ಭಾಗದ ಬಗ್ಗೆ ಇರುವ ನೌಕಾಬಲದ ಸಂಖ್ಯೆ 20000, ಯುದ್ಧ ವಿಮಾನಗಳು 400.

ಡೈಲಿ ಟೆಲಿಗ್ರಾಫ್—ಲಂಡನ್ (26—7—38)

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ನಿವಾಸಿಗಳಲ್ಲಿ 37ರಲ್ಲಿಬ್ಬನಂತೆ ತಸ್ಕರರಾಗಿರುವರು. ಈಗ ಜೀವಿತರಾಗಿರುವ ಅಮೇರಿಕನರಲ್ಲಿ ಎರಡು ಲಕ್ಷ ಜನರ [illegible]ವುದಕ್ಕೋಸ್ಕರ [illegible] ಕೊಲೆಪಾತಕ ಮಾಡಿದರು. ಪ್ರತಿ 22 ನಿಮಿಷಗಳಲ್ಲಿ ಒಂದರಂತೆ ಮಹಾ ತಸ್ಕರತೆಗಳು ಈ ರಾಜ್ಯದಲ್ಲಿ ಆಗುತ್ತಿವೆ. ಎಂದರೆ, ಇಂಗ್ಲಂಡಿನಲ್ಲಿರುವ ತಸ್ಕರರುಗಳ [illegible] ಹೆಚ್ಚು. ಇಂಗ್ಲಂಡಿನಲ್ಲಾಗುವ ಕೊಲೆಗಳಿಗಿಂತ ಇಲ್ಲಿನ ಖೂನಿ ಸಂಖ್ಯೆ 20 ಪಾಲು ಹೆಚ್ಚು. ಜಗತ್ತಿನ ಯಾವ ಜನಾಂಗದ ದುರಾಚಾರಕ್ಕಿಂತಲೂ ಇಲ್ಲಿನ ಕೈದಿಗಳ ದುರಾಚಾರ ಅಧಿಕವಾಗಿದೆ.

ಏನೂ ತಗಲಿ ಟರ್ಕಿಯು [illegible] ಪ್ರಿಟನಿಗೆ ವಿರೋಧವಾಗಿರುವ ಪಂಗಡಕ್ಕೆ ಸೇರದ [illegible] ಇರುವುದರಿಂದ ಸುರಕ್ಷಿತವಾಗಿರಬಹುದೆಂದು ನಮ್ಮ ಅಭಿಪ್ರಾಯವು. ಬ್ರಿಟನ್ನು ಯುದ್ಧದಲ್ಲಿ ಜಯವಾಗುವುದು ಖಂಡಿತ. ಬ್ರಿಟನ್ನಿನ ಮಹತ್ತಾದ ನೌಕಾ ಸಂಗ್ರಹವಿದೆ, ಮಹಾ ಸೈನ್ಯ ಸಂಗ್ರಹವಿದೆ, ಅದರ [illegible] ಗುಣಶ್ರೇಷ್ಠತೆಯೂ ಇದೆ" ಅಮೇರಿಕಾದಲ್ಲಿ ಟರ್ಕಿ [illegible] ಭಾರಿಗಳು.

THE

Bombay Life Assurance Company, Limited,

(Estd 1908)

45-47 Churchgate Street, Fort-BOMBAY.

Evidence of

PROGRESS. SECURITY & STABILITY.

Year	New Business completed	Premium Income	Life Fund	Business in Force
1931	73,00 000	11 00 000	3,00 000	2 [illegible] 00 000
1934	1 04 00 000	1 00 000	[illegible]8 00 00	[illegible]7 00 000
1937	1,40,00,000	31,00,000	99,00,000	6,00,00,000

The Company offers all that is best and up-to-date in

LIFE ASSURANCE.

Applications for agencies will be considered from Honest & Respectable LADIES & GENTLEMEN.

For full particulars apply to any of our following Offices —

Kochikar Brothers Limited,

Madras Branch Secretaries,

Bombay Life Building, UDIPI (S India).

(1) Visweswarapuram Circle, Bangalore City. (2) Car Street, Mangalore. (3) Puthiyara, Calicut. (4) Charni Road, Girgaum, Bombay No 4 (5) P B. 337, Mount Road, Madras (6) Ottapalam, S Malabar. (7) Central Station Road, Trivandrum

ಪ್ರಿಸು ಮೂತಿನ ಸಾಮ್ರಾಜ್ಯದಲ್ಲಿ

ಜಪಾನು–ಚೀನಾ ಯುದ್ಧದಲ್ಲಿ ಬ್ರಿಟಿಷ, ಫ್ರೆಂಚ, ಜರ್ಮನರ ಉದ್ದೇಶವೇನು?

[“ಕೆವಲ್ಕೇಡ್” ಪತ್ರದಿಂದ.]

... ಶಾಂತಿ ... ಜಪಾನಿಗೆ ... ಮತ್ತು ... ಭೂಭಾಗದಲ್ಲಿ ಸಿಗ ... ಕಾಗಬೇಕೆಂದೇ ... ಹೋರಾಟ ಎಂದು ... ಮುಖ್ಯ ಮಂತ್ರಿಗಳು ಸಾರಿರು ...

ಜಪಾನಿನ ‘ಶಾಂತಿ’ ಪದದ ಅರ್ಥ ಇಷ್ಟೇ: ತೋಳಕ್ಕೂ ಕುರಿಮರಿಗೂ ರಾಜಿ. ತೋಳದ ಹೊಟ್ಟೆಯೊಳಗೆ ಕುರಿಮರಿ ಇರುವಂತಾದರೆ, ತೋಳವು ಸುಖನಿದ್ದೆ ಮಾಡುವುದು. ಅದೇ ಶಾಂತಿ.

ಮಂಚೂರಿಯಾ, ಉತ್ತರದ ಐದು ಪ್ರಾಂತ್ಯಗಳು ಇವನ್ನು ಮುತ್ತುವಾಗಲೂ ಜಪಾನು ಇದೇ ವಾಕ್ಯವನ್ನು ಉಚ್ಚರಿಸಿತ್ತು. ಸ್ಪೈಯಿನಿನ ವಿಚಾರದಲ್ಲಿ, ಈ ವಾಕ್ಯವನ್ನು ಬರ್ಲಿನ್ ರೋಮ್‌ಗಳಲ್ಲೂ ಉಚ್ಚರಿಸಿದ್ದಾರೆ. ಸಮತಾವಾದದ ವಿರೋಧವೆಂದು, ಇತರರ ಮೇಲೆ ಯುದ್ಧಾರಂಭ,—ಈ ಮಂತ್ರೋಚ್ಚಾರದ ಫಲ.

‘ಜಪಾನು ವಿನಾಕಾರಣವಾಗಿ ಚೀನದಲ್ಲಿ ನುಗ್ಗಿ ಯುದ್ಧ ಮಾಡುತ್ತದೆ. ನಾವು ನಮ್ಮ ಜೀವರಕ್ಷಣೆಗಾಗಿಯೇ ಹೋರಾಡುತ್ತೇವೆ’ ಎಂದು ಚಿಯಾಂಗನು ಹೆಂಕೋವಿನಿಂದ ತಿಳಿಸಿರುವನು.

ಜಪಾನಿಗೆ ಈಗ ದೊರೆತಿರುವುದೇನು? ಉತ್ತರ ಚೀನ, ಮಂಗೋಲಿಯದ ಒಳಭಾಗ, ಮಧ್ಯಚೀನ, ಕೆಲ ಬಂದರುಗಳು; ಇವುಗಳ ಮೇಲೆ ನಾಮಮಾತ್ರ ಅಧಿಕಾರ. ಭಯ ಪ್ರದರ್ಶಿಸಿ ಇನ್ನು ಕೆಲ ಬಂದರುಗಳನ್ನು ಸೇರಿಸಿಕೊಳ್ಳುವ ಆಸೆಯಿದೆ.

ಇದಲ್ಲದೆ, ಹೆಂಕೋವಿನಿಂದ ಈಚೆಗೆ ೧೫೦ ಮೈಲು ದೂರದ ವರೆಗೂ, ೬೦೦೦ ಮೈಲು ರೈಲ್ವೆಯಲ್ಲಿ ೪೦೦೦ ಮೈಲು ವರೆಗೂ ಜಪಾನು ವಶಮಾಡಿಕೊಂಡಿದೆ. ಕೆಂಟನ್ ಹೆಂಕೋ, ಯುನಾನ್ ಫ್ರೆಂಚ ಚೀನ–ಇವೆರಡು ರೈಲ್ವೆಗಳು ಜಪಾನಿನ ವಶದಲ್ಲಿಲ್ಲ.

ಆರು ತಿಂಗಳಲ್ಲೇ ಮುಗಿಯಬಹುದೆಂದೆಣಿಸಿದ್ದ ಯುದ್ಧವು ಇನ್ನೂ ಮುಗಿದಿಲ್ಲದುದರಿಂದ, ಶಾಂತಿಯಾದರೆ ಜಪಾನಿಗೆ ಸಾಕಾಗಿದೆ. ಮುಂದೆ ಅವಕಾಶವಿದ್ದಂತೆ ಮಿಕ್ಕವನ್ನು ನುಂಗಬಹುದೆನ್ನುತ್ತದೆ.

ಲಂಡನ್, ಪ್ಯಾರಿಸ್, ಬರ್ಲಿನ್‌ಗಳಲ್ಲಿ ಈ ವಿಚಾರವಾಗಿ ಬಹಳ ಆಲೋಚನೆ ನಡೆದೇ ಇದೆ. ಹೀಗಾಗಿ ಚೀನವು ಶಾಂತಿಗೊಪ್ಪುವ ಹಾಗೆ ಇಲ್ಲಿಂದಲೇ ಸೂತ್ರಧಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರಿಗೇಕೆ ಈ ತಂಟೆ? ಎಂದರೆ ಜಪಾನು ಮಾತ್ರವೇ ಇನ್ನು ಚೀನದೊಡನೆ ವ್ಯಾಪಾರಮಾಡುವಂತಿದೆ. ಇವರಿಗೆ ಕೈಕಟ್ಟಿ ನಿಲ್ಲಬೇಕಾಗಿದೆ. ಅದಕ್ಕಾಗಿ ಎಲ್ಲರೂ ಶಾಂತಿಗಾಗಿ ಮುಂದೆ ಬರುತ್ತಿರುವರು.

೧೯೩೧ರಲ್ಲಿ ಮಂಚೂರಿಯವನ್ನು ಜಪಾನು ವಶಮಾಡಿಕೊಂಡಾಗಲೇ ಬ್ರಿಟಿಷರ ೬೦ ಮಿಲ್ಲಿಯ ಪವನು ನಷ್ಟವಾಯಿತು. ಜಪಾನಿನ ವಿಮಾನ ಗಾಯಪಡಿಸಿದ ಬ್ರಿಟಿಷ ರಾಯಭಾರಿಯ ಬಾಯಿಯಿಂದ ಎಲ್ಲವನ್ನೂ ತಿಳಿದು ಈಗ ಬ್ರಿಟಿಷರು ಶಾಂತಿಯ ಸಾಧಕರಾಗಿದ್ದಾರೆ.

ಶಾಂತಿಯ ಶರ್ತ ಮತ್ತು ಕ್ರಮ ಜಪಾನಿಗೆ ತಲುಪಿದೆ. ಇದು ಸೆಪ್ಟಂಬರಿನಲ್ಲಿ ಪ್ರಕಟವಾದೀತು. ಏಕೆಂದರೆ, ಜಪಾನು ಹೆಂಕೋವಿಗೆ ತಲುಪದೆ ಈ ಪತ್ರ ಪ್ರಕಟವಾಗುವುದಿಲ್ಲ.



ಚಿಯಾಂಗ್ ಕೈಶಕ್

ಜಪಾನಿನ ಒಂದೇ ಒಂದು ಪ್ರಾಣಿ ಚೀನದಲ್ಲಿರುವ ತನಕ ಈ ಪತ್ರವನ್ನು ಚಿಯಾಂಗನು ಗಣನೆಗೆ ತರುವಂತಿಲ್ಲ. ಆದರೆ, ಚಿಯಾಂಗನು ಈ ಪತ್ರಕ್ಕೊಪ್ಪಬಿದ್ದರೆ, ಸ್ಪೈಯಿನಿನಲ್ಲಿದ್ದಂತೆ, ತಟಸ್ಥಭಾವದ ಕಮಿಟಿಯನ್ನು ನೇಮಿಸಲಾದೀತೆಂದೂ ಚಿಯಾಂಗನಿಗೆ ಬ್ರಿಟಿಷರು ಸೂಚಿಸಿದ್ದಾರೆ.

ಇದೇಕೆ?

ಬ್ರಿಟಿಷರು ಇದೆಲ್ಲ ಅಲ್ಲವೆನ್ನಬಹುದು, ಬಹಿರಂಗವಾಗಿ! ಆದರೆ, ಜರ್ಮನರು ವಸಾಹತುಗಳಿಗಾಗಿ ಮಾಡುತ್ತಿರುವ ಪ್ರಯತ್ನಗಳಿಗೆ ಇಲ್ಲಿ ಸಾಫಲ್ಯವಿದೆಯೆಂದೇ ಬ್ರಿಟಿಷರ ಹಾಗೂ ಫ್ರೆಂಚರ ಹಂಚಿಕೆ. ಹೀಗೆ; ಜಪಾನಿಗಾಗಿ ಅಲ್ಲ, ಚೀನದಿಂದ ತನ್ನವರನ್ನು ಜರ್ಮನಿ ಹಿಂದೆ ಕರೆದುಕೊಂಡುದೂ ಇದಕ್ಕಾಗಿಯೆ.

ಬ್ರಿಟಿಷ ಸರಕಾರಕ್ಕೆ ಇದರಲ್ಲೆಲ್ಲ ಕೈಯಿಲ್ಲವೆನ್ನಿ. ಆದರೆ, ಎಂಗ್ಲೊ ಇಟೆಲಿಯನ್ ಕರಾರಿನಲ್ಲಿ ಕೈಯಿತ್ತೇ? ಕೆಲವು ಪ್ರಮುಖರು ಇದನ್ನೆಲ್ಲ ಮಾಡುವರು; ಸರಕಾರವು ಅನಂತರ ಕೈಯಿಕ್ಕುವುದು!

ಯುದ್ಧವು ಇನ್ನೂ ಬಾಳಿರುವುದರಿಂದಲೇ ಜಪಾನಿಗೆ ಅದೊಮ್ಮೆ ಮುಗಿದರೆ ಸಾಕಾಗಿದೆ. ಒಂದು ಮಿಲ್ಲಿಯ ಜಪಾನಿಯರು ಈಗ ಯುದ್ಧಕ್ಕೆ ನಿಲ್ಲಬೇಕಾಗಿದೆ; ಇನ್ನೆಷ್ಟೋ ಬರಬೇಕಾಗಿ ತೋರುತ್ತದೆ. ಹೀಗೆಯೆ ನಡೆದರೆ, ಹತ್ತು ವರ್ಷವೂ ಈ ಯುದ್ಧ ನಡೆಯಬಹುದೆಂದು ಚಿಯಾಂಗನಿಗೆ ಗೊತ್ತೇ ಇದೆ; ಅಷ್ಟು ದಿನ ಜಪಾನು ಸೈರಿಸಿ ಬಾಳೀತೇ?

ಈಗ ಜಪಾನಿಗೆ ದಿನಕ್ಕೊಂದು ಮಿಲ್ಲಿಯ ಪವನು ಖರ್ಚು ಬೇಕಾಗಿದೆ. ಇನ್ನೊಂದು ವರ್ಷದಲ್ಲಿ ದಿನಕ್ಕೆ ಎರಡು ಮಿಲ್ಲಿಯ ಪವನು ಬೇಕಾದೀತು. ಇತರ ದೇಶಗಳಿಂದ ಯುದ್ಧ ಸಾಮಗ್ರಿ ಚೀನಕ್ಕೆ ತಲುಪುವಂತಾದಲ್ಲಿ, ಇನ್ನೆರಡು ವರ್ಷಗಳಲ್ಲಿ ಜಪಾನು ತಾನು ಗೆದ್ದ ರಾಜ್ಯದ ಭಾರದಿಂದ ಕುಸಿದು ಸಮಾಧಿಹೊಂದುವುದು.

ಚೀನವು ಅಲ್ಲಲ್ಲಿ ಸೋತಿದೆ ನಿಜ; ಜಪಾನು ಟ್ಸಿಂಗ್‌ಟ್ಸಿಂಗ್‌ನಲ್ಲಿ ಮೊದಲನೆ ಸಲ ಸೋತುದೇನೂ ಸಾಮಾನ್ಯ ಸೋಲಲ್ಲ. ಶಂಘಾಯಿ ರಾಜನಗರವು ಮೂರು ವರೆ ಮಿಲ್ಲಿಯ ಜನರಿದ್ದುದು, ಎರಡೇ ತಿಂಗಳಲ್ಲಿ ಹಾಳು ಗಾಮದಂತಾಗಿದೆ; ಇದನ್ನು ನೋಡಿ, ಈಗಣ ಯುದ್ಧಗಳ ಹಾವಳಿಯನ್ನು ಎಲ್ಲರೂ ತಿಳಿಯುವಂತಾಗಿದೆ. ನೆಂಕಿಂಗ ರಾಜಧಾನಿ, ಬೆಂಕಿ ಗುಂಡುಗಳಿಗೆ ಆಹುತಿಯಾಗಿದೆ; ಪಶುಗಳ ಹಿಂಸೆ, ಜನರ ಕೊಲೆ—ಇಂತಹ ಪೈಶಾಚಿಕ ಕಾಟಗಳಿಗೆ ಇದು ರಂಗಮಂಚವಾಯಿತು. ಕೆಂಟನ್, ೧೫ ಲಕ್ಷ ಜನಸಂಖ್ಯೆಯದು—ಮೂರೇ ವಾರಗಳಲ್ಲೀಗ ೫೦೦೦ ಜನರ ಮರಣಭೂಮಿಯಾಗಿದೆ. ಎಲ್ಲಿ ನೋಡಿದರೂ ಕುಂಟರು, ಅಂಗಹೀನರು.

ಚೀನಿಯರು ವಿಮಾನಗಳನ್ನು ಹಾರಾಡಿ ಜಪಾನಿನ ನಗರಗಳಲ್ಲಿ ನಾನಾ ಪತ್ರಿಕೆಗಳನ್ನು ಹಂಚಿರುವರು. ಪರರಾಷ್ಟ್ರಗಳಿಗೆ ಇಷ್ಟರಲ್ಲಿ ೨೦೦ ಮಿಲ್ಲಿಯ ಪವನುಗಳಷ್ಟು ನಷ್ಟವಾಗಿದೆ.

ಜಪಾನು ಯುದ್ಧದಿಂದ ಚೀನಿಯರೆಲ್ಲ ಒಕ್ಕಟ್ಟಾಗಿ ೪೫೦ ಮಿಲ್ಲಿಯವೂ ಒಂದೇ ಮನುಷ್ಯನಂತೆ ಎದ್ದು ನಿಂತಿದೆ. ಹಿಂದೆ ಪರಸ್ಪರ ಯುದ್ಧ ಮಾಡುತ್ತಿದ್ದ ಸೈನ್ಯಗಳು ಈಗ ಜಪಾನಿಗೆ ಎದುರಾಗಿವೆ.

ಜಪಾನಿನ ಮರಣಗಳು ೨ ಲಕ್ಷಕ್ಕೆ ಕಡಮೆಯಾಗವು; ಅದರ ದುಬಾರಿ ಜನರಿಗೆ ಗಾಯಗಳಾಗಿರಬೇಕು. ಚೀನದಲ್ಲಿ ಹತಾಹತರು ೧೩ ಲಕ್ಷವಂತೆ!

ಜಪಾನು ಈಗ ಆಕ್ರಮಿಸಿರುವ ರಾಷ್ಟ್ರವು ಜಪಾನಿನ ಇಮ್ಮಡಿ ವಿಸ್ತೀರ್ಣದ್ದಾಗಿ, ೪೮೩೦೦೦ ಚದರ ಮೈಲಾಗಿದೆ. ಅಲ್ಲಿನ ಜನಸಂಖ್ಯೆ ೧೭೦ ಮಿಲ್ಲಿಯ; ಆದರೆ ಯುದ್ಧವು ೧೩೦೦ ಮೈಲು ವರೆಗೆ ನೀಡಿರುವ ಸಾಲಿನಲ್ಲಿ ನಡೆಯುತ್ತಲೇ ಇದೆ.

ನೋಟೀಸು

ಮಂಗಳೂರು ಡಿ ಮು ಕೋರ್ಟಿನಲ್ಲಿ.

ಕ್ಲೈಮ್ ನಂಬ್ರ 1153/1936–37.

ಸ್ಮಾಲ ಅಮಲ್ಜಾರಿ ನಂಬ್ರ 73/1938.

ದಿ ಕೊಂಚಾಡಿ ಕೊ-ಓಪರೇಟಿವ್ ಸೊಸೈಟಿ ನಂಬ್ರ 3863 ಇದರ ಪ್ರೆಸಿಡೆಂಟ ಕೆ. ಕೃಷ್ಣಯ್ಯ ಶ್ಯಾನುಭಾಗ	ಡಿಕ್ರಿದಾರ

ಎದ್ರು

ಶ್ರೀನಿವಾಸ ಮೂರ್ತಿ ಕೂಡಾ ರೆಸ್ಪಾಂಡೆಂಟ್ಸು 2 ನೇ ರೆಸ್ಪಾಂಡೆಂಟ— ಮಂಗ್ಳೂರು ತಾಲ್ಲೂಕ ದೇರೆಬೈಲು ಗ್ರಾಮದಲ್ಲಿರುವ ಕೆ. ಸುಬ್ರಾಯರ ಮಗ, ಬೋಳೂರು ಬೊಕ್ಕಪಟ್ಣ ಮುನ್ಸಿಪಲ್ ಎಲಿಮೆಂಟರಿ ಶಾಲಾಮಾಸ್ತರ್ ಕೆ. ಲಕ್ಷ್ಮೀನಾರಾಯಣರಾಯರಿಗೆ

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮ್ಮನು ಕೈದಿ ವಾರಂಟಿನಲ್ಲಿ ಹಿಡಿತರಿಸಿ ಸಿವಿಲ್ ಜೈಲಿಗೆ ಕಳುಹಿಸಬೇಕಾಗಿ ಡಿಕ್ರಿದಾರರು ... ಮಾಡಿದ ಸದ್ರಿ ಅರ್ಜಿಯು ಇದೇ ... 8ನೇ ಇಸವಿ ಅಕ್ಟೋಬರ ತಿಂಗಳ ತಾ. 6ನೇ ಗುರುವಾರ ದಿವಸಕ್ಕೆ ಇಟ್ಟಿರುತ್ತದೆ. ಆದುದರಿಂದ ಆ ಕುರಿತ ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಖುದ್ದಾಗಲೀ ಯಾ ಅಧಿಕಾರ ಹೊಂದಿದ ಪ್ಲೀಡರ ಮೂಲಕವಾಗಲೀ ಹಾಜರಾಗಿ ಅದನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ, ಸದ್ರಿ ಅರ್ಜಿಯು ನಿಮ್ಮ ಗೈರಹಾಜರಿನಲ್ಲಿಯೇ ಏಕಪಕ್ಷವಾಗಿ ತೀರ್ಮಾನಮಾಡಲಾಗುವುದು.

ಮಂಗ್ಳೂರು, 28-8-'38. H. Vasudev ... ath, ಡಿಕ್ರಿದಾರರ ವಕೀಲ.

THE CAVALCADE!

The Cavalcade of a Century MUST be something unusual!

The History of 'BHUVANENDRA PRODUCTS'-reads like a Novel!

A century of progress has made it the

LEADING AYURVEDIC CONCERN

OF THE DISTRICT.

Buy all your requirements from

BHUVANENDRA PRODUCTS, LTD.,

Katapady, S. Kanara.

(BRANCH—KUMTA, N. KANARA.)

Write for Catalogue to-day!

ಒಂದು ಶತಮಾನದ ಇತಿಹಾಸ!

ಒಂದು ಶತಮಾನದ ಇತಿಹಾಸವು ಸ್ವಾರಸ್ಯವಾಗಿರಲೇಬೇಕು!

ಭುವನೇಂದ್ರ ಪ್ರಾಡಕ್ಟ್ಸ್, ಲಿಮಿಟೆಡ್,

ಇದರ ಚರಿತ್ರವು ಕಾದಂಬರಿಯಂತೆ ಮನೋಹರವಾಗಿದೆ.

ಒಂದು ಶತಮಾನದ ಅಭಿವೃದ್ಧಿಯು

ಈ ಸಂಸ್ಥೆಯನ್ನು ಜಿಲ್ಲೆಯ ಪ್ರಚಂಡ ಆಯುರ್ವೇದ ಸಂಸ್ಥೆಯನ್ನಾಗಿ ಮಾಡಿದೆ! ಇಂದು ‘ಭುವನೇಂದ್ರ ಪ್ರಾಡಕ್ಟ್ಸ್’ ಎಂದರೆ ಭರವಸೆಯ ಹೆಗ್ಗುರುತು.

ಲೇಹಗಳು, ಆಸವಗಳು, ಅರಿಷ್ಟ, ತೈಲಗಳು, ಘೃತಗಳು— ಇವೆಲ್ಲವೂ ಶಾಸ್ತ್ರೋಕ್ತ ರೀತಿಯಲ್ಲಿ ತಯಾರಿಸಲ್ಪಡುವಂಥದ್ದನ್ನು ಇಲ್ಲಿಂದಲೇ ಕೊಂಡುಕೊಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸ

ಮಂಗಳೂರು. ಕೊಡಿಯಾಲಬೈಲು.

ಈ ಕೆಳಗಣ ಸ್ಥಳಗಳಿಗೆ ನಮ್ಮಲ್ಲಿಂದ ಶೀದಾಟಿಕೇಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ:-

1 ಮಂಗಳೂರಿನಿಂದ ಉಡ್ಪಿ, ಕುಂದಾಪುರ, ಗಂಗೊಳ್ಳಿಗಾಗಿ ಉಪ್ಪುಂದ ವರೆಗೆ
2 ಕುಂದಾಪುರದಿಂದ ಬಾಳಬರೆಗಾಗಿ ಶಿಮೊಗ್ಗಾ
3 ಮಂಗಳೂರಿನಿಂದ ಕಾರ್ಕಳ, ಸೋಮೇಶ್ವರ, ಆಗುಂಬೆಗಾಗಿ ಕೊಪ್ಪಾ, ಶೃಂಗೇರಿ, ತೀರ್ಥಳ್ಳಿ ಶಿಮೊಗ್ಗಾ ಹರಿಹರ ವರೆಗೆ
4 ಮಂಗಳೂರಿನಿಂದ ಬಂಟವಾಳ, ಚಾರ್ಮಾಡಿಗಡಿಗಾಗಿ ಚಿಕ್ಕಮಗಳೂರು ಕಡೂರು ವರೆಗೆ
5 ಮಂಗಳೂರಿನಿಂದ ಉಪ್ಪಿನಂಗಡಿ, ಶಿರಾಡಿಗಡಿಗಾಗಿ ಸಕ್ಲೇಶಪುರ ಹಾಸನ, ಬೇಲೂರು, ಇತ್ಯಾದಿ ಸ್ಥಳಗಳಿಗೆ
6 ಮಂಗಳೂರಿನಿಂದ ಪುತ್ತೂರು, ಸಂಪಾಜಗಾಗಿ ಮಡಕೇರಿ ವೀರರಾಜೇಂದ್ರಪೇಟೆ, ಮೈಸೂರು ಇತ್ಯಾದಿ ಸ್ಥಳಗಳಿಗೆ

ಪ್ರಯಾಣಿಕರಿಗೆ ಉಳಕೊಳ್ಳಲು ನಮ್ಮ ಭವ್ಯವಾದ ವಿಶ್ರಾಂತಿಗೃಹಗಳಿವೆ. ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ವಿಶ್ರಾಂತಿಗೃಹಗಳನ್ನು ಏರ್ಪಡಿಸಲಿರುವೆವು.

ಪ್ರಯಾಣಿಕರಿಂದ ಬರಬಹುದಾದ ಪತ್ರವ್ಯವಹಾರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

PLAN YOUR FAMILY'S FUTURE.

EVERY INDEPENDENT STATE HAS ITS OWN FIVE OR SEVEN YEARS PLANS FOR THE ECONOMIC BETTERMENT OF ITS PEOPLE EVEN SO HAS EVERY THOUGHTFUL INDIVIDUAL IN EVERY WALK OF LIFE A WELL THOUGHT OUT PLAN OF HIS OWN FOR THE FUTURE WELFARE OF HIS FAMILY

Plan your Family's Future Now

You are a Businessman our Pigmy Deposit Scheme should appeal to you most since it is a Daily Deposit collected at your door These Daily Deposits grow even as your Children do and are therefore well suited for being earmarked for your DAUGHTER S MARRIAGE or SONS EDUCATION

The Canara Industrial & Banking Syndicate, Ltd.,

(INCORPORATED IN BRITISH INDIA)

Estd. Head Office: UDIPI, S. INDIA. 1925

Member:

RESERVE BANK OF INDIA. BANKERS CLEARING HOUSE, BOMBAY

Authorised Capital	Rs	10,00,000
Issued Capital	„	8,00,000
Subscribed Capital	„	7,74,500
Paid up Capital	„	3,86,880
Reserves	„	2,16,700

TOTAL RESOURCES EXCEED RUPEES 51 LAKHS.

ಸ್ವದೇಶಾಭಿಮಾನಿ

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರವೆಂದರೆ

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ ಇಲ್ಲ.

ಶುಭ **ಲಾಭ**

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಬಿಳಿಯ ಕೆಡುಕುಗಳನ್ನು ತೋರಿಸುವುದು, ಜೀವನವನ್ನು ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು—ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ, ಗ್ರಹಗಳಿಂದ ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ವಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ—ತಂತ್ರ—ಯಂತ್ರಗಳೂ ಇಲ್ಲದೆ, ಗ್ರಹಶಾಂತಿಯೊಂದೇಯೊಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತನ್ನ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತ ಬಂದಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸುಳ್ಳೆಂದು ಹೇಳುವ ಎದೆಗಾರಿಕೆ ಯಾವನಿಗೂ ಇಲ್ಲ. ಈ ವಸ್ತುವಿನಿಂದ ಮೂರ್ಖರನೇಕರು ಸಹಾ ಲಾಭವನ್ನು ಪಡೆದಿದ್ದಾರೆ. ನೀವೇಕೆ ಈ ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ.......... ಕಳೆದುಕೊಂಡಿರುವ ಎಲ್ಲ ಸುಖಗಳೂ ಪ್ರಾಪ್ತವಾಗಬೇಕೆಂದಿದ್ದರೆ, ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. ಜ್ಯೋತಿಷಿಗಳೂ, ಪಂಡಿತರೂ ಈ ಯಂತ್ರವನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆಯುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆಯೇ ಇಲ್ಲ. ಶಾಸ್ತ್ರದ ಮೇಲೆ ವಿಶ್ವಾಸವಿಲ್ಲದಂಥ ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ ನಿಮ್ಮ ಎಲ್ಲಾ ಇಷ್ಟವಾದ ಆಸೆಗಳನ್ನೂ ಪೂರ್ತಿ ಮಾಡುವುದು.



ಒಂದು ಸಲ ತರಿಸಿ ಲಾಭವಾಯಿತೆಂದರೆ ಮತ್ತೆ ಮತ್ತೆ ತರಿಸಬೇಕೆಂದೆನಿಸುವುದು, ಎಷ್ಟೋ ಜನರು ಬೇರೆ ಬೇರೆ ಕಾರಣಾಂತರಗಳಿಂದ ಆರಾರು—ಎಂಟೆಂಟು ಅಲ್ಲ, ಹನ್ನೆರಡು—ಹನ್ನೆರಡು "ನವಗ್ರಹ ಯಂತ್ರ"ಗಳನ್ನು ತರಿಸಿದ್ದಾರೆ. ವಿಶ್ವಾಸವೆನಿಸದಿದ್ದರೆ ಸಾವಿರಾರು ಪ್ರಶಂಸನಾ ಪತ್ರಗಳನ್ನು ಪ್ರತ್ಯಕ್ಷವಾಗಿ ಬಂದು ನೋಡಬಹುದು. ಇಷ್ಟೇ ಅಲ್ಲ, ಒಂದಾನೆ ಟಿಕೇಟು ಕಳಿಸಿದ್ದಲ್ಲಿ ನಕ್ಕರಂಟೇ ಬರೆದುಕೊಡುವೆವು. ಇಷ್ಟೆಲ್ಲಾ ಇದ್ದೂ ಲಾಭವಾಗದ ಹೋದರೆ ಒಂದು ಸಂವತ್ಸರದ ಒಳಗಾಗಿ ಹಣ ಮರಳಿ ಪಡೆಯಬಹುದು ಇದು ಶಾಸ್ತ್ರೋಕ್ತವಲ್ಲವೆಂದು ಸಿದ್ಧಪಡಿಸಿ ಕೊಡುವವರಿಗೆ ೫೦೦ ರೂಪಾಯಿ ಇನಾಮು ಕೊಡುವೆವು. ಸುಮ್ಮನೆ ದುಡ್ಡು ಹಾಳು ಆಗುವದೆಂಬ ಭಾವನೆಯಿಂದ ಈ ಚಮತ್ಕಾರವನ್ನು ಸುಳ್ಳೆಂದು ತಿರಸ್ಕರಿಸಿದರೆ ಜನ್ಮಜನ್ಮಾಂತರದಲ್ಲಿಯೂ ಪಶ್ಚಾತ್ತಾಪವನ್ನು ಪಡಬೇಕಾಗುವುದು. ಈ ಮಾತನ್ನು ನೆನಪಿನಲ್ಲಿಡಿರಿ. ಇಂಥಹ ವಸ್ತುವು ಯಾವಾಗಲೂ ದೊರೆಯಲಾರದು. ಪ್ರತಿಯೊಂದು ಜೀವಕ್ಕೂ ಸ್ವರ್ಗಸುಖವು ಬೇಕಾಗಿದ್ದು, ಪ್ರತಿಯೊಬ್ಬ ಸ್ತ್ರೀ, ಪುರುಷ, ಬಾಲಕ, ವೃದ್ಧ—ಎಲ್ಲರೂ ಒಂದೊಂದು ನವಗ್ರಹ ಯಂತ್ರವನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕಾದದ್ದು ಅವರ ಧರ್ಮವಾಗಿದೆ. ಸಂತಾನ ಬೇಕೆನ್ನುವವರು ಎರಡು ನವಗ್ರಹ ಯಂತ್ರಗಳನ್ನು ತರಿಸಬೇಕು. ಸ್ತ್ರೀಯರಿಗೆ ಉಪಯೋಗಿಸುವುದಕ್ಕಾಗಿ ಮಾಡಿಟ್ಟಿರುವ ಎರಡು ಹವಳಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಪುರುಷರ ಉಪಯೋಗಕ್ಕಾಗಿ ೩ ನೀಲಮಣಿ ಯುಕ್ತವಾದ ಯಂತ್ರದ ಬೆಲೆ ೩ ರೂಪಾಯಿ. ಒಮ್ಮೆಲೆ ೩ ಯಂತ್ರಗಳನ್ನು ತರಿಸುವವರಿಗೆ ಬೆಲೆ ೫ ರೂಪಾಯಿ ೮ ಆಣೆ, ಟಪಾಲು ಖರ್ಚು ೮ ಆಣೆ, ಬೆಳ್ಳಿಯ ಯಂತ್ರ ೩ ರೂಪಾಯಿ.

ಬಂಗಾರದಲ್ಲು ಬೇಕಾಗಿದ್ದರೆ [illegible] ರೂಪಾಯಿ [illegible] ಆಣೆ [illegible]. ಒಂದರಿಂದ ನಾಲ್ಕು ಕಾರ್ಯಗಳು ಆಗಬೇಕಾಗಿದ್ದರೆ ಸ್ಪೆಶಲ್ ನವಗ್ರಹ ಯಂತ್ರವನ್ನು ತರಿಸಿರಿ. ಬೆಲೆ [illegible] ರೂ. [illegible] ಆ [illegible]. ನಾಲ್ಕಕ್ಕಿಂತ ಹೆಚ್ಚು ಕೆಲಸಗಳು ಕೈಗೂಡಬೇಕಾಗಿದ್ದರೆ ಸ್ಪೆಶಲ್ ನವಗ್ರಹ [illegible] ತರಿಸಿ. ಬೆಲೆ [illegible] ರೂ. [illegible] ಆ [illegible]. ಪ್ರತಿಯೊಂದಕ್ಕೂ [illegible] ಆಣೆ. ಅಂಚೆಯ ಖರ್ಚು ಪ್ರತ್ಯೇಕವಾಗಿ ಪರದೇಶಕ್ಕೆ ಕಳಿಸುವುದಾದರೆ ಪ್ರತಿಯೊಂದಕ್ಕೂ [illegible] ಶಿಲಿಂಗು ಖರ್ಚು ಬೀಳುವುದು. ಈ ಯಂತ್ರಗಳಿಗೆ ಬೇರೆ [illegible] ಸಾಧನಗಳೂ ಬೇಕಾಗಿಲ್ಲ.

ಧನ ಸಿದ್ಧಿ—[illegible] ಧನಪ್ರಾಪ್ತಿಯಾಗಬೇಕೆನ್ನುವವರು [illegible] ತರಿಸಬೇಕು. ಇದನ್ನು [illegible] ಧನಪ್ರಾಪ್ತಿಯಾಗುವುದಲ್ಲದೆ [illegible]. ಬೆಲೆ ೩ ರೂ. ಬೆಳ್ಳಿಯದು [illegible] ರೂ. ಬಂಗಾರದ್ದು [illegible]. ಪ್ರತಿಯೊಂದಕ್ಕೂ ಟಪಾಲು [illegible] ಆಣೆ.

ಹಸ್ತರೇಖೆ—ಹಸ್ತರೇಖೆಯನ್ನು ತೋರಿಸಬೇಕು [illegible] ಒಂದು ಚಿಟ್ಟಿಯಾಗಬೇಕು. [illegible] ಹಾಗು ಸ್ತ್ರೀಯರು ಎಡಗೈಯ ಗುರುತನ್ನು ಕಾಗದ ಮೇಲೆ ಕರೀ ಮಸಿಯಿಂದ ಮಾಡಿಸಿ, ಕಳಿಸಿಕೊಡಬೇಕು. [illegible] ರೇಖೆಯನ್ನು ನೋಡುವ ಫೀಜು ೨ ರೂ. ಪರೀಕ್ಷಿಸುವರು [illegible] ಕಾಗದದೊಂದಿಗೆ ೨ ರೂ. ೧ ಆ. ಕಳಿಸಿಕೊಡಬೇಕು.

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲೀಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು:—ಇದರ ನಕಲನ್ನು ಮಾಡಲಿಕ್ಕೆ ಅನೇಕರು ಯತ್ನಿಸಿದರು. ಯತ್ನಿಸುತ್ತಲೂ ಇದ್ದಾರೆ. ಯಂತ್ರ, ಮಂತ್ರ, ಕವಚ, ಎಂದು ಬೇರೆ [illegible] ತ್ತಾರೆ. ತಮ್ಮ ಮನಸ್ಸಿಗೆ ತೀರ ಹಾಗೆ ಬೆಲೆಯನ್ನಿಡುತ್ತಾರೆ. ಆದರೆ ಯಾರಿಗೂ ಈ ಯಂತ್ರದಂಥ ಫಲಕಾರಿಯಾದ ಯಂತ್ರವನ್ನು ಮಾಡುವುದು ಸಾಧ್ಯವಾಗಿಲ್ಲ. ಆವರಿಗೆ ಆಗುವುದು ಶಕ್ಯವೂ ಇಲ್ಲ. ಅದ್ದರಿಂದ ಈ ನವಗ್ರಹ ಯಂತ್ರದ ಅದ್ಭುತ ಕಲೆಯನ್ನೂ, ವಿಚಿತ್ರ ಶಕ್ತಿಯನ್ನೂ ನೋಡುವುದಕ್ಕಾಗಿ ಈ ಪಂಡಿತರ ವಿಳಾಸವನ್ನು ಬರೆದಿಟ್ಟುಕೊಳ್ಳಿರಿ.

ಕೆಲವು ಪ್ರಶಂಸನಾ ಪತ್ರಗಳು:—ಪಂಜಾಬ್ ಸಿವಿಲ್ ಸೆಕ್ರೆಟರಿ ಸಿಮ್ಲಾ (ಎ. ಆರ್. ಜಾರಿ) ನಾನು ತಮ್ಮಿಂದ ಮೂರು ತಿಂಗಳ ಹಿಂದೆ ಎರಡು ನವಗ್ರಹ ಯಂತ್ರಗಳನ್ನು ಒಂದು ನನಗಾಗಿ ಮತ್ತೊಂದನ್ನು ನನ್ನ ಸಹೋದರನಿಗಾಗಿ ತರಿಸಿದ್ದೆ. ಈ ಯಂತ್ರಗಳು ನಮಗೆ ಆಶ್ಚರ್ಯಕರವಾದ ಲಾಭವನ್ನುಂಟುಮಾಡಿವೆ. ನಿಮ್ಮನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಇಂಥ ವಸ್ತುವನ್ನು ಇಷ್ಟೊಂದು ಕಡಿಮೆ ಬೆಲೆಗೆ ಕೊಡುವತ್ತಿರುವ ನಿಮಗೆ ಧನ್ಯವಾದಗಳು. ಜನತೆಯು ಈ ಯಂತ್ರದಿಂದ ಲಾಭ ಪಡೆಯಲೆಂದು ಹಾರೈಸುತ್ತೇನೆ.

ಯಾರಿಗೆ ಸ್ವಾಂಪಿನ ಮೇಲೆ ಗ್ಯಾರಂಟೀ ಬರೆಸಿಕೊಳ್ಳುವ ಮನಸ್ಸಿದೆಯೋ ಅವರು ಆರ್ಡರಿನ ಜೊತೆಗೆ ಒಂದಾಣೆ ಸ್ಟಾಂಪು ಕಳುಹಿಸಬೇಕು. ಪರದೇಶದಲ್ಲಿದ್ದವರಿಗೆ ೫ ಶಿಲಿಂಗು ಬೀಳುವುದು. ಮನಿಯಾರ್ಡರಿನಿಂದ ೩ ರೂ. [illegible] ಆಣೆ ಕಳುಹಿಸಿದಲ್ಲಿ ಯಂತ್ರವು ನಿಮ್ಮ ಮನೆಗೆ ಬಂದು ತಲುಪುವುದು. ವಿ. ಪಿ.ಯಿಂದ ಬೇಡಿದಲ್ಲಿ ೩ ರೂ. ೧೦ ಆಣೆ ಬೀಳುವುದು.

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.